3

...ಸೂರ ಗೆಜೆಟ್.

ಸರ್ಕಾರದಿಂದ ಪ್ರಕಾಯಿಷ್ ಆದ್ದು. ಸ್ಸ-1884.

ಬೆಂಗಳೂರು, ಶನಿವಾರ, ಜನವರೀ ತಾ॥ 5, ಸ್ಸ-1884.

...ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

...ಜ ರಾಜಾಸಾಹೆಬ್ ಬಹದೂರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.
...ು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರಿಂಟೆಂಡೆಂಟರು, ಕಾಂಟ್ರೋಲರ ...ಡರ್ ಕಂಟ್ರೋಲರ್, ಪಬ್ಲಿಕ್ ವರ್ಕಸ ಆಫೀಸರಗಳು, ಮಿಲಿಟೇರಿ ಸಿಕ್ರಿಟೆರಿಯವರು, ರಿಜಿ...ಸ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೇ ಬಕಷೀರು, ಮ್ಯುನಿಸಿಪೆಲ ಬೋರ್ಡು ...ಡಿಸ್ಟ್ರಿಕ್ಟವ ಸೆಷನ್ ಜಡ್ಜೀರು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ...ಟೆಂಡೆಂಟರು, ಇವರುಗಳಿಂದ ಕೊಡೋಣಾವ ಇಸ್ತಿಹಾರಗಳು ವಗೈರೆ; ಕಾಲಸ್ಥಿತಿ ರಿಪೋ...ರ್ಟ್ಸ, ...ಷೀಸ ನೋಟೀಸಗಳು.
...ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್‌ಗಳು ವ ರೆಗ್ಯುಲೇಷನಗಳು—ಇಲ್ಲಾ.
...ಗಳು—ಇಲ್ಲಾ.

೧ನೇ ಭಾಗ.

...ರಾಜಾಸಾಹೇಬರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 26ನೇ ಅಕ್ಟೋಬರ 1883.

...ಸರ್ವ ಜನಗಳ ತಿಳುವಳಿಕೆ ಬಗ್ಯೆ ಪ್ರಕಟ ಪಡಿಸುವದೇನಂದರೆ, ಮೈಸೂರು ದೇಶದ ಉತ್ಪತ್ತಿ ...ಹರಾಜು ಇವರಡಿ ನಮೂದು ಮಾಡಿರುವ ಸ್ಥಳಗಳಲ್ಲಿ ಆಯಾ ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿ... ...ಗಳ ಬಾಜಾದಲ್ಲಿ ಕಾಣಿಸಿರುವ ತಾರೀಖುಗಳಲ್ಲಿ ನಡಿಸಲ್ಪಡುತ್ತೆ.

...ವಿ ಲಂಡನ್ನಲ್ಲಿ, ಸ್ಟ್ರಾಂಡ್ ...ವತೀ ಮಾಡುವ ಬಗ್ಯೇ ಅವ ... ಡಿಬೆಂಚರಗಳಿಗೆ ಬಡ್ಡಿಯನ್ನು ಬಗ್ಯೆ ಇದರಡಿ ರುಜು ಮಾಡಿರುವರ

ಡ್ರಾಫಟ್ಸ್ ಯೆಂಬ ಚೆಕ್ಕುಗಳ ಮೂಲಕ

* * *

7ನೇ ಜನವರೀ 1884
14ನೇ ಡಿಟೋ
21ನೇ ಡಿಟೋ

ಸುಮಾರು ಅಲ್‌ವಾರ್ ಸಂಸ್ಥಾನದ ರೂಪಾಯಿಗಳು.

...ಖು 24ನೇ ಡಿಸಂಬರ 1883ನೇ ಇಸವಿ.

...1874ನೇ ಇಸವಿ ಡಿಸಂಬರ 5ನೇ ಮರ್ತ್ತು 48ನೇ ನಂಬ್ರ...ಗಳ ಟ್ರಜರೀ ಆಫಿಸರಗಳಿಗೆ ತಿಳಿಸುವದೇನಂದರೆ, ಒಂದು ಭಾಗದಲ್ಲಿ "ವಿಕ್ಟೋ... ...ರಾಜುವ ಕಾಲದಲ್ಲಿ ಪೋವಲ್ಪಡುವದು. ...ಲ್ಲಿ "ಒಂದು ರೂಪಾಯಿ ಅಲ್‌ವಾರ್ ಸಂಸ್ಥಾನ" ಯೆಂತಲೂ ಒಂದು ಪಾರಸೀ ಮುದ್ರಾಂ... ...ದ ಮಸಗೊಗಾಗಿ ಸಲ್ಲಬೇಕಾದ ಮೊಬಲಗನ್ನ ಪ್ರಾ... ಯಂತೆಯೇ ತೂಕವೂ ಕಿಮ್ಮತ್ತೂ ಉಳ್ಳ ಅಲ್‌ವಾರ್ ಸಂಸ್ಥಾನದ ರೂಪಾಯಿಯು ಇಂಡ್ಯ... ...ಸ್ಸೈಸುತ್ತೆ. ...ಸ್ಥಾಪಿಸಲ್ಪಟ್ಟು, ಬ್ರಿಟಿಷ್ ಇಂಡ್ಯ ಸೀಮೆಯಲ್ಲಿ ನ್ಯಾಯವಾದ ಟೆಂಡರ್ (ಅಂದರೆ ಪಾವತೀ ಮಾಡು...

ತಾರೀಖು 14ನೇ ಡಿಶಂಬರ್ 1883.

ನಂ. 288.—ಸರ್ 1884ನೇ ಇಸವಿ ಏಪ್ರೆಲ್ 1ನೇ ಮರ್ಕ್ಯಂ ಲಾಗಾಯತು ಇದರಡೀ ಕಂ
ಗಳ ಪುನರ್ವರ್ಗಾವರ್ಗಿಗಳು ಹುಕ್ಕುಂ ಮಾಡಿರುತ್ತೆ;—

ಕಡೂರು ತಾಲ್ಲೂಕಿನಿಂದ ತರೀಕೆರೆ ತಾಲ್ಲೂಕಿಗೆ.

1 ನಂದಿಪುರ 2 ಬೈರನಹಳ್ಳಿ 3 ಬಸವಾಪುರ

ಚನ್ನಗಿರಿ ತಾಲ್ಲೂಕಿನಿಂದ ತರೀಕೆರೆ ತಾಲ್ಲೂಕಿಗೆ.

1 ದುರ್ವಿಗೆರೆ.

ತಾರೀಖು 27 ಡಿಶಂಬರ್ 1883.

ನಂ. 291.—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಯಿದರಡಿ ಕಂಡ ಮಾಜಿಸ್ಟ್ರೇಟಗಳು ಕ್ರಿಮಿನ
ಸೆಕ್ಷನ್ ಅನುಸರಿಸಿ ವಿಚಾರಣೆಯ ಬಗ್ಯೆ ಮೊಕದ್ದಮೆಗಳನ್ನು ಕಮಿಟ್ ಮಾಡುವದಕ್ಕೆ ಅಧಿಕಾರ ಕ
ಸುಬ್ಬರಾವ್, ಹೊಳೇನರಸೀಪುರದ ಮುನಸಿಫ್, ವ 2ನೇ ಕ್ಲಾಸ್ ಮಾಜಿಸ್ಟ್ರೇಟರು ಶ್ರೀರಂ
ರಾಘವೇಂದ್ರರಾಯರು.

ತಾರೀಖು 28ನೇ ಡಿಶಂಬರ್ 1883.

ನಂ. 292.—ಸರ್ 1870ನೇ ಇಸವಿಯ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 4ನೇ ಸೆಕ್ಷನ್
ಗಳಿಗೆ ಇದರಿಂದ ತಿಳಿಸಲ್ಪಡುವದೇನಂದರೆ, ತಿಪಟೂರಿಂದ ಬೀರೂರಿಗೂ, ಬೀರೂರಿಂದ ಹರಿಹರಕ್ಕೂ
ಸದರೀ ಆಕ್ಟು ಅನುಸರಿಸಿ ಕಂಪೆನ್ಸೇಷನ್ ಕೊಟ್ಟು ಗವರ್ನಮೆಂಟಿನಿಂದ ತೆಗದುಕೊಳ್ಳಲ್ಪಡುವದ
ಹಾಲೀ ಸರ್ವೇ ಮಾಡುವ ಜನಗಳು ತಮ್ಮ ಕೆಲಸ ಚಲಾಯಿಸುವದರ ದೆಸೆಯಿಂದ ಅವರನ್ನು ಪ್ರ
ಸಲ್ಪಡಕೂಡದು.

ತಾರೀಖು 21ನೇ ಮಾರ್ಚಿ 1883.

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ
...ರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಯೆ ಹಿಂದಿನ ದಿನ ಸೆಕ್ರೆಟೇರಿಯವರಿಗೆ ತ
...ರ್ಚೇದಾರರು ಶುಕ್ರವಾರಗಳ ದಿನ ಮಧ್ಯಾಹ್ನಾತ್ತರ 3 ಘಂಟೆಗೆ ಕಚ್ಚೇರಿಯಲ್ಲಿ ಕ

ತಾರೀಖು 22ನೇ ಮಾರ್ಚಿ 1883

...ಾಸಸ್ಥಾನದಲ್ಲಿ ಪ್ರತಿ ಬುಧವಾರ ಮಧ್ಯಾಹ್ನ 12
...ಕ್ಷಿಸತಕವರಿಗೆ ಭೇಟೀ ಕೊಡುವರು. ಅವರ
...ಕಳುಹಿಸತಕ್ಕದ್ದು

GEK 0+ F - ON - 88...

ಮೈಸೂರ ಗೆಜೆಟ

ಸರ್ಕಾರದಿಂದ ಛಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜನವರೀ ತಾ॥ 5, ಸ್ಱ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೧ನೇ ಭಾಗ

ಇಂಡ್ಯಗವರ್ನ್ಱಮೆಂಟ, ರೆಸಿಡೆಂಟರು, ಚೀಫ ಜಡ್ಜೀರುವಗ್ಯೆರೇರಿಂದ ಕ್ಹೊಡೋಣಾದ ಇಸ್ತಿಹಾರ್‌ನಾಮೆಗಳು.

ಫೈನಾನ್ಷಿಯಲ್ ಇಲಾಖಾ.

1882ನೇ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರ್ಯಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನ್ಱಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್ಫೇಸ್‌ಮೆಂಟ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಬ್ರಿಟಿಷ್ ಟಂಕಸಾಲೆಯಲ್ಲಿ ಛಾಪಿಸಲ್ಪಟ್ಟ ಅಲ್‌ವಾರ್ ಸಂಸ್ಥಾನದ ರೂಪಾಯಿಗಳು.

ಸರ್ಕ್ಯುಲರ್ ನಂಬರ್ 2872 ತಾರೀಖು 24ನೇ ಡಿಶಂಬರ್ 1883ನೇ ಇಸವಿ.

ಕಂಟ್ರೋಲರ್‌ಯವರು, ಡಿಸ್ಟ್ರಿಕ್ಟು ವ ತಾಲ್ಲೂಕುಗಳ ಟ್ರೆಜರೀ ಆಫಿಸರ್‌ಗಳಿಗೆ ತಿಳಿಸುವದೇನಂದರೆ, ಒಂದು ಭಾಗದಲ್ಲಿ "ವಿಕ್ಟೋರಿಯಾ ಎಂಪ್ರೆಸ್" ಯೆಂತಲೂ, ಮತ್ತೊಂದು ಭಾಗದಲ್ಲಿ "ಒಂದು ರೂಪಾಯಿ ಅಲ್‌ವಾರ್ ಸಂಸ್ಥಾನ" ಯೆಂತಲೂ ಒಂದು ಪಾರಸೀ ಮುದ್ರಾಂಕನ ದೊಡನೆ, ಇಂಡ್ಯ ಗವರ್ನ್ಱಮೆಂಟ ರೂಪಾಯಿ ಯಂತೆಯೇ ತೂಕವೂ ಕಿಮ್ಮತ್ತೂ ಉಳ್ಳ ಅಲ್‌ವಾರ್ ಸಂಸ್ಥಾನದ ರೂಪಾಯಿಯು ಇಂಡ್ಯ ಗವರ್ನ್ಱಮೆಂಟಿನ ಒಂದು ಟಂಗಸಾಲೆಯಲ್ಲಿ ಛಾಪಿಸಲ್ಪಟ್ಟು, ಬ್ರಿಟಿಷ್ ಇಂಡ್ಯ ಶೀಮೆಯಲ್ಲಿ ನ್ಯಾಯವಾದ ಟೆಂಡರ್ (ಅಂದರೆ ಪಾವತೀ ಮಾಡು

ವೆದಕ್ಕೆ ಬಂದದ್ದಾಗಿರುವದರಿಂದ) ಸದರೀ ನಾಣ್ಯವು ಕಮ್ಮಿ ತೂಕವುಳ್ಳ ಅಥವಾ ಕಡಮೆ ಮಾಡಲ್ಪಟ್ಟ, ಉಜ್ಜಿಹಾಕಲ್ಪಟ್ಟ ಅಥವಾ ವಿರೂಪ ಪಡಿಸಲ್ಪಟ್ಟ ನಾಣ್ಯಗಳ ಸಂಗತಿಯಲ್ಲಿ ಬದಸ್ತೂರ್ ವಿನಾಯಿತಿಗಳಿಗೆ ಒಳಪಟ್ಟು ಮೈಸೂರು ಶೀಮೆಯ ಖಜಾನೇಗಳಲ್ಲಿ ತೆಗದು ಕೊಳ್ಳಲ್ಪಟ್ಟು ಸಾದರ್ ಮಾಡಲ್ಪಡತಕ್ಕವು.

ಹೆಚ್. ಹಡ್‍ಸನ್,
ಕಾಂಪ್‍ಟ್ರೋಲರ್.

ರಿಜಿಸ್ಟ್ರೇಷನ್ ಇಲಾಖಾ.

1882ನೇ ಇಸವಿಯ VIನೇ ನಂಬರ್ ಇಂಡಿಯನ್ ಕಂಪೆನೀಸ್ ಆಕ್ಟಿನ ಕನ್ನಡ ತರ್ಜುಮೆ.

ತಾರೀಖು 4ನೇ ಡಿಶಂಬರ್ 1883.

ಮೇಲ್ಕಂಡ ಆಕ್ಟಿನ ಕಾಪಿಗಳು, ಇದರಡಿ ರುಜು ಮಾಡಿರುವರ ಆಫೀಸಿನಲ್ಲಿ ಕ್ರಯಕ್ಕೆ ಶಿಕ್ಕುತ್ತವೆ.

ಕಾಪಿ 1ಕ್ಕೆ ಕ್ರಯ ರೂಪಾಯಿ 1—4—3.

ಹೆಚ್. ಹಡಸನ್,
ಇನ್‍ಸ್ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್ ಮತ್ತು
ಕಂಪೆನಿಗಳ ರಿಜಿಸ್ಟ್ರಾರ್.

ಅಂಚೇ ಇಲಾಖಾ.

ನಂ. 423—219. ತಾರೀಖು 20ನೇ ಡಿಶಂಬರ್ 1883.

ಇದರಿಂದ ಸಕಲ ಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ಮಹಾರಾಜ ರಾಜಾ ಸಾಹೆಬ್ ಬಹದೂರವರ ದೀವಾನರವರ ಅಪ್ಪಣೆ ಅನುಸರಿಸಿ ಈ ಕೆಳಗೆ ಕಂಡ ಸ್ಥಳಗಳೊಳಗೆ ಹೋಬಳಿ ಅಂಚೆ ಆಫಿಸ್‍ಗಳು ಸ್ಥಾಪಿಸಲ್ಪಟ್ಟಿರುತ್ತವೆ.

ತಾಲ್ಲೂಕು.		ಅಂಚೆ ಆಫಿಸ್ ಸ್ಥಾಪಿಸಲ್ಪಟ್ಟ ಸ್ಥಳಗಳ ಹೆಸರು.
ಮಂಜರಾಬಾದ್	..	ಶುಕ್ರವಾರಸಂತೆ
ಯೆಡತೊರೆ	..	ರುದ್ರಪಟ್ಟಣ
ಅತ್ತಿಕುಪ್ಪೆ	..	ಶಿಂದಘಟ್ಟ
ಅರಸೀಕೆರೆ	.	ಬಾಗಡಿ
ಮೂಡಿಗೆರೆ	..	ಬಣಕಲ್ಲು
ತಿಪಟೂರು	..	ಹಾಲ್‍ಕುರಿಕೆ
ಮಂಡ್ಯ	..	ಬಸರಾಳು
ಚಾಮರಾಜನಗರ	..	ಪುಡಿಗಾಲ

ಬಿ. ಮರಿಗಂಗಯ್ಯ,
ಅಂಚೇ ಬಕಷಿ.

ಫಾರೆಸ್ಟು ಇಲಾಖಾ.

ತಾರೀಖು 24ನೇ ಡಿಶಂಬರ್ 1883.

ಇದರಿಂದ ತಿಳಿಸಲ್ಪಡುವದೇನಂದರೆ, ಇದರಡಿ ಕಂಡ ಪ್ಲಾಂಟೇಷನ್‍ಗಳು—1884ನೇ ಇಸವೀ ಫಿಬ್ರವರೀ 1ನೇ ಮೊದ್ಲುಂ ಲಗಾಯತ್ ಮೇ 31ರವರಿಗೆ ಬಿಸಿಲುಕಾಲದ ಬಗ್ಗೆ ಜನ ಸಂಚಾರ ತಪ್ಪಿಸಲ್ಪಟ್ಟಿರುತ್ತೆ, ಬೇಟೆಗಾರರು, ಇನ್ ಚಾರ್ಜ್ ಫಾರೆಸ್ಟು ಪ್ರೊಬೇಷನರರ ಅಪ್ಪಣೆ ಶಿವಾಯಿ ಈ ಜಂಗ್ಲೀಗಳಲ್ಲಿ ಪ್ರವೇಶಿಸಕೂಡದು.

ಜಂಗ್ಲಿಗಳು.		ತಾಲ್ಲೂಕು.
ಕಾಡುಗೋಡಿ		ಹೊಸಕೋಟೆ
ಜಡಿಗನಹಳ್ಳಿ	(ಹಳೇದು ಮತ್ತು ಹೊಸದು)	ಡಿಟೋ
ನೆಲಲು	(A B ಮತ್ತು C)	ಡಿಟೋ
ತಾತನೂರು	..	ಡಿಟೋ
ಅಪ್ಪಸಂದ್ರ	..	ಡಿಟೋ
ದೊಡ್ಡಹರಡಿ	..	ಡಿಟೋ
ಚಿಕ್ಕಹರಡಿ	..	ಡಿಟೋ
ಕುರಾಂಡಹಳ್ಳಿ	(ಹಳೇದು ಮತ್ತು ಹೊಸದು)	ಮಾಲೂರು
ಮಾರಸಂದ್ರ	..	ಡಿಟೋ
ರಾಮಚಂದ್ರಪುರ	(A ಮತ್ತು B)	ಡಿಟೋ
ಜಂಗಂಕೋಟೆ	..	ಸಿಡ್ಲಘಟ್ಟ
ಏನೂರು	..	ಬೆಂಗಳೂರು

ಕೆ. ಪ್ರಹ್ಲಾದರಾವ್,
ಪ್ಲಾಂಟೇಷನ್ ಇನ್‌ಚಾರ್ಜ್ ಫಾರೆಸ್ಟು ಪ್ರೊಬೇಷನರ.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀರವರ ಕೋರ್ಟಿನಲ್ಲಿ.

1883ನೇ ಇಸವಿ ಅರ್ಜೀ ನಂಬರ 506.

ಮೃತಪಟ್ಟ ದೊಡ್ಡಮಲ್ಲಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಪುಟ್ಟಮಲ್ಲಯ್ಯ, ಮೃತಪಟ್ಟ ಸದರೀ ದೊಡ್ಡಮಲ್ಲಯ್ಯನಿಗೆ ತಮ್ಮನಾಗಬೇಕೆಂಬ ಹಕ್ಕುದಾರೀ ಮೇಲೆ ಯಡತೊರೆ ತಾಲ್ಲೂಕು ಚಂದಗಾಲ್ ಸ್ಥಳದ ಪುಟ್ಟಮಲ್ಲಯ್ಯನು, ಸದರೀ ಸ್ಥಳದ ವಾಸಸ್ಥನಾಗಿ ಮೃತಪಟ್ಟ ದೊಡ್ಡಮಲ್ಲಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 400 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಪುಟ್ಟಮಲ್ಲಯ್ಯನ ಅರ್ಜೀಯನ್ನು 1884ನೇ ಇಸವಿ ಜನವರೀ ತಿಂಗಳು ತಾರೀಖು 8ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೊಡ್ಡಮಲ್ಲಯ್ಯನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1883ನೇ ಇಸವಿ ಡಿಸಂಬರ ತಿಂಗಳು 8ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1883ನೇ ಇಸವಿ ಅರ್ಜೀ ನಂಬರ 524.

ಮೃತಪಟ್ಟ ರಾಮಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಮರಿಯಕ್ಕಂಮ್ಮ ಮೃತಪಟ್ಟ ಸದರೀ ರಾಮಯ್ಯನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಹುಣಸೂರು ತಾಲ್ಲೂಕು ಚಟ್ಟನಪುರ ಕಸಬಾ ಸ್ಥಳದ ಮರಿಯಮ್ಮನು, ಸದರೀ ವಾಸಸ್ಥನಾಗಿ ಮೃತಪಟ್ಟ ರಾಮಯ್ಯನ ಜಿಂದಗೀ ಬಗ್ಯಾಗಿ ಬರತಕ್ಕ 800 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಮರಿಯಕಂಮ್ಮನ, ಅರ್ಜೀಯನ್ನು 1884ನೇ ಇಸವೀ ಜನವರೀ ತಿಂಗಳು ತಾರೀಖು 29ರಲ್ಲು ಮೈಸೂರು ಮೊಕ್ಕಾಂನಲ್ಲಿ ಈ ಕೋರ್ಟಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿಯಿಧೆ.

1883ನೇ ಇಸವೀ ಡಿಸಂಬರ ತಿಂಗಳು 19ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸೀ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ವಿ. ಎನ್. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜಿ.

ಶ್ರೀರಂಗಪಟ್ಟಣದ ಮುನಸಿಪಲ್ ಆಫಿಸಿನಿಂದ.

ತಾರೀಖು 18ನೇ ಡಿಶಂಬರ 1883.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸರ್ 1883ನೇ ಇಸವೀ ನವಂಬರ 15ನೇ ಮಾರ್ಕ್ಕಂ 953–686ನೇ ನಂಬರ್ ಫ್ರೆಂಚ್‌ರಾಕ್ಸ್ ಸಬ್ ಡಿವೀಜನ್ ಆಫೀಸರವರ ಹುಕ್ಕುಂ ಸಂಗಡ ತಲಪಿದ ದೀವಾನ್ ಸಾಹೆಬರವರ ಹುಕ್ಕುಂ ಅನುಸರಿಸಿ ಶ್ರೀರಂಗಪಟ್ಟಣದ ಕೋಟೇಯಲ್ಲಿರುವ ವಾರೀರ್ಸ್ ಬಂಗ್ಲೀಯೆಂಬ ಮತ್ತು ಮಹಾರಾಜರವರ ಹಳೇ ಅರಮನೆಯೆಂಬ ಹೆಸರುಳ್ಳ ಕಟ್ಟಡಗಳಲ್ಲಿರತಕ್ಕ ಕೆಲವು ಬೆಲೆವುಳ್ಳ ಚಾಬೀನೆ ಹೆಂಚು ಮುಂತಾದ ಸಾಮಾನುಗಳು, ಸರ್ 1884ನೇ ಇಸವೀ ಜನವರೀ 30ನೇ ತಾರೀಖಿನ ದಿವಸ ದಿವಿ 10 ಘಂಟೆಗೆ ಹರಾಜ್ ಮಾಡಿಸಲ್ಪಡುತ್ತೆ. ಆವಶ್ಯಕ ವಿದ್ದಲ್ಲಿ ಆ ತಾರೀಖಿನ ಮಾರನೇ ದಿವಸವು ಹರಾಜು ಮಾಡಿಸಲ್ಪಟ್ಟು, ಜಡ ದರಖಾಸ್ತುದಾರರ ಹೆಸರಿಗೆ ಖಾಯಂ ಮಾಡಲ್ಪಡುತ್ತೆ. ಹರಾಜಿನಲ್ಲಿ ಸದರೀ ಸಾಮಾನುಗಳನ್ನ ತೆಗದುಕೊಳ್ಳಲು ಯಿಚ್ಛೆವುಳ್ಳ ಜನಗಳು ಆ ತಾರೀಖಿಗೆ ಹಾಜರಾಗಬೇಕು.

ಹರಾಜು ನಿಬಂಧನೆಗಳು.

1. ಯಾರ ಜಡ ಸವಾಲ್ ವೈಸ್ ಪ್ರೆಸೀಡೆಂಟರಿಂದ ಅಂಗೀಕರಿಸಲ್ಪಡುತ್ತೋ ಆ ಜನಗಳು ತಾವು ಸವಾಲ್ ಮಾಡಿದ ಮೊಬಲಗಿನ ಪೈಕೀ ಸೇಕಡಾ 25 ರೂಪಾಯಿನಂತೆ ಆಗುವಷ್ಟು ಮೊಬಲಗನ್ನ ತತಕ್ಷಣ ಕೇವಣಿ ಹಾಜರ್ಮಾಡಬೇಕು. ಬಾಕೀ ಮೊಬಲಗನ್ನ ಹರಾಜು ತಾರೀಖು ಲಾಗಾಯತು 15 ದಿವಸದ ವಳಗಾಗಿ ತಾಲ್ಲೂಕು ಖಜಾನೇಯಲ್ಲಿ ಪಾವತೀ ಮಾಡಬೇಕು.

2. ಹರಾಜು ಪ್ರೆಸೀಡೆಂಟ್ ಸಾಹೆಬರವರ ಮಂಜೂರಾತಿಗೆ ವಳಪಟ್ಟದ್ದಾಗಿರುತ್ತೆ.

3. ಹರಾಜಿನಲ್ಲಿ ತೆಗದುಕೊಳ್ಳಲ್ಪಟ್ಟ ಸಾಮಾನುಗಳು ಹರಾಜುದಾರನ ಸುಫರ್ದು ಮಾಡಲ್ಪಟ್ಟ 30 ದಿವಸಗಳ ವಳಗಾಗಿ ಇರುವ ಸ್ಥಳದಿಂದ ಸಂಪೂರ್ಣವಾಗಿ ಸಾಗಿಸಲ್ಪಡಬೇಕು.

4. ಮೇಲೆ ನಮೂದಿಸಿದ ವಾಯಿದೆ ಗತಿಸಿದ ಮೇಲೆ ಸದರೀ ಸಾಮಾನುಗಳನ್ನ ಸಾಗಿಸದೇ ಇದ್ದ ಸ್ಥಳದಲೇ ಯಿದ್ದಲ್ಲಿ 15 ದಿವಸಗಳ ವರಿವಿಗೂ ದಿನ 1ಕ್ಕೆ 1 ರೂಪಾಯಿನಂತೆ ಹರಾಜುದಾರನು ಮ್ಯುನಿಸಿಪ್ಯಾಲಿಟಿಗೆ ಜುರ್ಮಾನೆ ಕೊಡುವದಕ್ಕೆ ಗುರಿಯಾಗುತ್ತಾನೆ, ಮತ್ತು 15 ದಿವಸ ಕಳೆದನಂತರ ಹರಾಜುದಾರನು ತೆಗದುಕೊಂಡ ಸಾಮಾನಿನ ಮೇಲು ಖಜಾನೆಗೆ ಅದುವರಿವಿಗೆ ಪಾವತೀ ಮಾಡಿರುವ ಮೊಬಲಗಿನ ಮೇಲು ಬಾಧ್ಯತೆಯನ್ನ ಕಳದುಕೊಳ್ಳುತ್ತಾನೆ.

5. ಸದರೀ ಮೇರೆಗೆ ವಾಯಿದಾ ಅತಿಕ್ರಮಿಸಿದಂಥಾ ಸಾಮಾನುಗಳು ಪುನಹ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ. ಅದರಿಂದ ಯೇನಾದರೂ ಜಾಸ್ತೀ ಹುಟ್ಟುವಳೀ ಆದಲ್ಲಿ ಅದನ್ನ ಮ್ಯುನಿಸಿಫಲ್ ಬಾಬಿಗೆ ಸೇರಿಸಿಕೊಳ್ಳೋಣವಾಗುತ್ತೆ.

6. ಹರಾಜುದಾರನು 1ನೇ ಕಲಂನಲ್ಲಿ ಕಂಡ ಮೇರಿಗೆ ಕೇವಣೀ ಹಣವನ್ನು ಮತ್ತು ಬಾಕೀ ಮೊಬಲಗನ್ನು ಹಾಜರ್ಮಾಡುವದಕ್ಕೆ ತಪ್ಪಿದ ಪಕ್ಷಕ್ಕೆ ಸಾಮಾನುಗಳು ಪುನಹಾ ಹರಾಜ್ ಮಾಡಿಸಲ್ಪಟ್ಟೀತು. ಆ ಮೇರಿಗೆ ಹರಾಜು ಮಾಡಿಸುವದರ ಲಾಗವಡು ಮತ್ತು ಅದರಿಂದ ಸಂಭವಿಸುವ ನಷ್ಟ ಯಿವುಗಳಿಗೆ ಅವ್ವಲ್ ಹರಾಜುದಾರನ್ನ ಗುರಿಮಾಡಲಾಧೀತು.

ಷರಾ,

ವಾರೀರ್ಸ್ ಬಂಗ್ಲೀ ಯೆಂಬವದು ಇನ್ನು ಸಾಬೀತು ಇದೆ, ಅದರ ಸಾಮಾನುಗಳು ಹ್ಯಾಗೆ ಇದೆಯೊ ಅದೇ ಸ್ಥಿತಿಯಲ್ಲೇ ಹರಾಜು ಮಾಡಲ್ಪಡುತ್ತೆ. ಹಳೇ ಅರಮನೆಯ ಸಾಮಾನುಗಳು ಮಾತ್ರ ಕೆಳಗೆ ಇರಿಸಲ್ಪಟಿವೆ ಹರಾಜುದಾರನು ಅವುಗಳನ್ನ ಸಾಗಿಸುವದು ಮಾತ್ರವಾಗಿದೆ.

ರಾಘವೇಂದ್ರರಾವ್,
ವೈಸ್ ಪ್ರೆಸಿಡೆಂಟ್.

ನಗರ ಡಿವೀಜನ್.

ತಾರೀಖು 10ನೇ ಡಿಶಂಬರ 1883.

ಇದರಿಂದ ಪ್ರಕಟಪಡಿಸುವದೇನಂದರೆ, ಸರ್ 1884ನೇ ಇಸವಿಯಲ್ಲಿ ಶಿವಮೊಗ್ಗಾ ಮತ್ತು ಕಡೂರು ಡಿಸ್ಟ್ರಿಕ್ಟುಗಳಿಂದ ಕಮಿಟ್ ಮಾಡೋಣಾಗುವ ಕ್ರಿಮಿನಲ್ ಮೊಕದ್ದಮೆಗಳ ಸೆಷನ್ಸ್ ವಿಚಾರಣೆಯು, ಆಯಾ ಡಿಸ್ಟ್ರಿಕ್ಟುಗಳ ಹೆಡ್ಕ್ವಾರ್ಟರ್‌ಗಳಲ್ಲಿ ಈ ಕೆಳಗೆ ನಮೂದಿಸಿರುವ ತಾರೀಖುಗಳಲ್ಲಿ ನಡಿಸಲ್ಪಡುವದು.

ಶಿವಮೊಗ್ಗಾ ಡಿಸ್ಟ್ರಿಕ್ಟು.

7ನೇ ಜನವರೀ 1884
10ನೇ ಮಾರ್ಚಿ 1884
7ನೇ ಏಪ್ರೆಲ 1884
9ನೇ ಜೂನ್ 1884
7ನೇ ಜೂಲೈ 1884
8ನೇ ಶಪ್ಟಂಬರ 1884
6ನೇ ಅಕ್ಟೋಬರ 1884
8ನೇ ಡಿಶಂಬರ 1884

ಕಡೂರು ಡಿಸ್ಟ್ರಿಕ್ಟು.

11ನೇ ಫಿಬ್ರುವರೀ 1884
19ನೇ ಮೇ 1884
11ನೇ ಆಗಸ್ಟು 1884
10ನೇ ನವಂಬರ 1884

ವಿಚಾರಣೆ ಬಗ್ಯೆ ಮೊಕ್ಕದಮೆಗಳನ್ನ ಕಮ್ಮಿಟ ಮಾಡುವದಕ್ಕೆ ಅಧಿಕಾರವುಳ್ಳ ತಮಾಂ ಮಾಜಿಸ್ಟ್ರೇಟುಗಳೂ ಅವರು ಕಮ್ಮಿಟ ಮಾಡೋಣಾಗುವ ಮೊಕ್ಕದಮೆಗಳಿಗೆ ಸಂಬಂಧಪಟ್ಟ ಫಿರಿಯಾದಿಗಳನ್ನು ಮತ್ತು ಸಾಕ್ಷಿಗಳನ್ನು ಆಯಾ ಡಿಸ್ಟ್ರಿಕ್ಟುಗಳ ಹೆಡ್‌ಕ್ವಾರ್ಟರ‌ಗಳಲ್ಲಿ ಈ ಕೋರ್ಟಿನ ಮುಂದೆ ಸದರೀ ತಾರೀಖುಗಳಲ್ಲಿ ಹಾಜರಾಗುವಂತೆ ಸರ್ನ್ಜಾಮಾಡಿ ಮುಚ್ಚಳಿಕೆ ತೆಗದುಕೊಳ್ಳಪೇಕೆಂದು ಕೇಳಿಕೊಳ್ಳಪ್ಪಟ್ಟಿರುತ್ತಾರೆ.

ಟಿ. ನರಸ್ಹರಿರಾವ್,
ಸೆಷ್ಶೆನ್ಸ ಜಡ್ಜಿ.

ಕಡೂರು ಡಿಸ್ಟ್ರಿಕ್ಟು.

ಕಡೂರು ಡಿಸ್ಟ್ರಿಕ್ಟು ಸಬಾರ್ಡಿನೇಟ ಜಡ್ಜೀಯವರ ಕೋರ್ಟಿನಲ್ಲಿ.

1883ನೇ ಇಸವೀ ಮಿಸಲೇನಿಯಸ ಅರ್ಜೀ ನಂಬರ 97.

ಮೃತಪಟ್ಟ ಚಿಕ್ಕಮಗಳೂರು ದೇವರಾಯಪೇಟೆ ಹಯಾತಸಾಬೀ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಬುರ್ಡಸಾಬಿ, ಮೃತಪಟ್ಟ ಸದರೀ ಹಯಾತಸಾಬನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಚಿಕ್ಕಮಗಳೂರು ಸ್ಥಳದ ಬುರ್ಡಸಾಬಿಯು, ಚಿಕ್ಕಮಗಳೂರು ವಾಸಸ್ಥನಾಗಿ ಮೃತಪಟ್ಟ ಹಯಾತಸಾಬಿ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಬುರ್ಡಸಾಬಿ ಅರ್ಜೀಯನ್ನು 1884ನೇ ಇಸವಿ ಜನವರೀ ತಿಂಗಳು ತಾರೀಖು 10ರಲ್ಲು ಕೇಳಿ ಸರಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹಯಾತಸಾಬಿ ಆಸ್ತಿಗೆ ಹಕ್ಕುದಾರರಾದ ವಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಪೇಕೆಂದು ಇದರಿಂದ ತಿಳಿಯಪಡಿಸಿ ಯಿಧೆ.

1883ನೇ ಇಸವಿ ಡಿಶಂಬರ ತಿಂಗಳು 1ನೇ ತಾರೀಖಿನಲ್ಲಿ ಕೋರ್ಟು ಮೊಹರ ನಮ್ಮ ದಸ್ತಖತ್ತೊಡನೆಕೊಡೋಣಾಗಿಧೆ.

1883ನೇ ಇಸವಿ ಮಿಸಲೇನಿಯಸ ಅರ್ಜೀ ನಂಬರ 99.

ಮೃತಪಟ್ಟ ಗೋವನಹಳ್ಳಿ ವೆಂಕಟಸುಬ್ಬಾಭಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಹಂಪಾಪುರ ಶೀತಾರಾಮಜೋಯಿಸರು, ಮೃತಪಟ್ಟ ಸದರೀ ವೆಂಕಟಸುಬ್ಬಾಭಟ್ಟರಿಗೆ ಅಳಿಯ ಆಗಪೇಕೆಂಬ ಹಕ್ಕುದಾರಿ ಮೇಲೆ ಹಂಪಾಪುರ ಸ್ಥಳದ ಶೀತಾರಾಮ ಜೋಯಿಸರು ಹಂಪಾಪುರ ವಾಸಸ್ಥನಾಗಿ ಮೃತಪಟ್ಟ ವೆಂಕಟಸುಬ್ಬಾಭಟ್ಟರ ಜಿಂದಗಿಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾನೆ.

ಸದರೀ ದರಖಾಸ್ತುದಾರನಾದ ಶೀತಾರಾಮಜೋಯಿಸರ ಅರ್ಜೀಯನ್ನು 1884ನೇ ಇಸವಿ ಜನವರೀ ತಿಂಗಳು ತಾರೀಖು 17ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟಸುಬ್ಬಾಭಟ್ಟನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಪೇಕೆಂದು ಇದರಿಂದ ತಿಳಿಯಪಡಿಸಿಧೆ.

1883ನೇ ಇಸವಿ ನವಂಬರು ತಿಂಗಳು ತಾರೀಖು 28ರಲ್ಲು ಕೋರ್ಟು ಮೊಹರ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1883ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 100.

ಮೃತಪಟ್ಟ ಚಿಕ್ಕಮಗಳೂರು ದೇವರಾಯಪೇಟೆ ಕಡೂರು ರಾಮಣ್ಣನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ತಿಂಮಯ್ಯನು, ಮೃತಪಟ್ಟ ಸದರೀ ರಾಮಣ್ಣನಿಗೆ ತಮ್ಮ ಆಗಬೇಕೆಂಬ ಹಕ್ಕುದಾರಿಮೇಲೆ ಚಿಗ್ಕಮಗಳೂರು ಸ್ಥಳದ ತಿಂಮಯ್ಯನು ಚಿಕ್ಕಮಗಳೂರು ವಾಸಸ್ಥನಾಗಿ ಮೃತಪಟ್ಟ ರಾಮಣ್ಣನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ತಿಮ್ಮಯ್ಯನ, ಅರ್ಜಿಯನ್ನು 1884ನೇ ಇಸವೀ. ಜನವರೀ ತಿಂಗಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಣ್ಣನ ಆಸ್ತಿಗೆ ಹಕ್ಕುದಾರ ರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1883ನೇ ಇಸವಿ ಡಿಸಂಬರ್ ತಿಂಗಳು 3ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1883ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 101.

ಮೃತಪಟ್ಟ ಚಿಕ್ಕಮಗಳೂರು ದೇವರಾಯಪೇಟೆ ಹೈದರಸಾಬನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಮೊಹರ್ದಿಸಾಬಿ, ಮೃತಪಟ್ಟ ಸದರೀ ಹೈದರಸಾಬನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಚಿಕ್ಕಮಗಳೂರು ಸ್ಥಳದ ಮೊಹರ್ದಿಸಾಬನು, ಚಿಕ್ಕಮಗಳೂರು ವಾಸಸ್ಥನಾಗಿ ಮೃತಪಟ್ಟ ಹೈದರಸಾಬನ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್‌ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಮೊಹರ್ದಿಸಾಬನ, ಅರ್ಜೀಯನ್ನು 1884ನೇ ಇಸವಿ ಜನವರೀ ತಿಂಗಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹೈದರಸಾಬನ ಆಸ್ತೀಗೆ ಹಕ್ಕುದಾರರಾದ ವಿಶಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1883ನೇ ಇಸವಿ ಡಿಸಂಬರ್ ತಿಂಗಳು 1ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1883ನೇ ಇಸವಿ ಮಿಸಲೇನಿಯಸ್ ಕೇಸ್ ನಂಬರ್ 98.

ಮೃತಪಟ್ಟ ಕೃಷ್ಣಯ್ಯಂಗಾರ್ರನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ಅಳಶಿಂಗ್ರಾಚಾರ್ಯ, ಮೃತಪಟ್ಟ ಸದರೀ ಕೃಷ್ಣಯ್ಯಂಗಾರ್ರಿಗೆ ಅಣ್ಣನ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಚಿಕ್ಕಮಗಳೂರು ತಾಲ್ಲೂಕು ಈಶ್ವರವಳ್ಳಿ ಸ್ಥಳದ ಅಳಶಿಂಗ್ರಾಚಾರ್ಯನು, ಈಶ್ವರವಳ್ಳಿ ವಾಸಸ್ಥನಾಗಿ ಮೃಪಟ್ಟ ಸದರೀ ಕೃಷ್ಣಯ್ಯಂಗಾರನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವಧಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಅಳಶಿಂಗ್ರಾಚಾರ್ಯನ ಅರ್ಜೀಯನ್ನು 1884ನೇ ಇಸವಿ ಜನವರೀ ತಿಂಗಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1883ನೇ ಇಸವಿ ಡಿಸಂಬರ್ ತಿಂಗಳು 3ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1883ನೇ ಮಿಸಲೇನಿಯಸ್ ಕೇಸ್ ನಂಬರ್ 110.

ಸಿವಿಲ್ ಪ್ರೊಸಿಡ್ಯೂರ್ ಕೋಡ್ 20ನೇ ಅಧ್ಯಾಯದಲ್ಲಿ ನಮೂದಾಗುವ ವಿಷಯದಲ್ಲಿಯೂ ಮತ್ತು ಬೇಲೂರ ತಾಲ್ಲೂಕು ಮಲ್ಲಾಪುರದ ಮಠದಲ್ಲಿ ಯಿರುವ ಮಲ್ಲಿಕಾರ್ಜುನ ವಡೇರ ಅರ್ಜೀ ವಿಷಯದಲ್ಲಿಯು ಸಹ.

ಮೇಲಿಕಂಡ ಅರ್ಜೀದಾರ 1883ನೇ ಡಿಸಂಬರ್ 20ನೇ ತಾರೀಖಿನಲ್ಲಿ ಈ ಕೋರ್ಟಿಗೆ ಕೊಟ್ಟ ಅರ್ಜಿಯು ಶಿವಿಲ್ ಪ್ರೊಸಿಡ್ಯೂರ್ ಕೋಡ್ 20ನೇ ಅಧ್ಯಾಯದಲ್ಲಿ ನಮೂದಾಗುವ ಉದಹರಣೆಗಳ ಪ್ರಯೋಜನವನ್ನ ಹೊಂದುವದರ ಮೂಲಕ ಸದರೀ ಕೋಡ್ 351ನೇ ಪ್ರಕರಣ ಪ್ರಕಾರ ದಿವಾಳೀಯಾದವರೆಂಬದಾಗಿ ಅಪ್ಪಣೇ ಆಗಬೇಕೆಂದು ಕೋರಿಕೊಂಡಿರುವದರಿಂದ, ಸ್ನ 1884ನೇ ಜನವರೀ 30ನೇ ದಿವಿ 11ಘಂಟೆಗೆ ಸದರೀ ಅರ್ಜೀ ವಿಷಯದಲ್ಲಿ ದರಿಯಾಫ್ತಿ ಮಾಡುವದರಿಂದ ಆ ಕಾಲದಲ್ಲಿ ಅರ್ಜೀದಾರು ಕೋರ್ಟು ರೂಬರೂ ಹಾಜರಾಗಿ ಕೋರ್ಟಿನವರು ಅವರ ವಿಷಯವಾಗಿ ಹುಕ್ಕುಂ ಮಾಡುವ ಮೇರಿಗೆ ಅವರು ನಡಕೊಳ್ಳತಕ್ಕದ್ದೆಂದು ಮತ್ತು ಐರ್ಜ ಲೇಣೇದಾರರಾದವರು ಹಾಜರಾಗಿ ಅವರ ಕೋರಿಕೆಯನ್ನ ಅಪೇಕ್ಷಿಸುವದಕ್ಕೆ ಸ್ವತಂತ್ರರಾಗಿರುತ್ತಾರೆಂದು ಈ ಮೂಲಕ ನೋಟೀಸ್ ಕೊಡಲ್ಪಟ್ಟು ಇರುತ್ತದೆ.

ತಾರೀಖು 22ನೇ ಡಿಸಂಬರ್ 1883ನೇ ಇಸವಿ, ಮೊಕ್ಕಾಂ ಚಿಕ್ಕಮಗಳೂರು.

ಬಿ. ತಿರುಮಲಾಚಾರ್,
ಸಬ್ ಜಡ್ಜ್.

ಮೈಸೂರು ಗೆಜೆಟ್, ಚಂದಾ ದರ ವಗೈರೆ.

	ಚಂದಾ. ರೂ. ಆ.	ಟಪ್ಪಾಲ್ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಛಷ್ ಮಾಹೆ ಯಾ ಕ್ವಾರಟರಿಗೆ	ದಾವಾಪ್ರಾಯಿ ಪ್ರಕಾರ ದರಗಳು.	

		ರೂ.	ಆ.
ಶಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಗೆ ನೋಟೀಸುಗಳು:—			
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಗೆ (ಇಂಗ್ಲೀಷು ಅಥವಾ ಕನ್ನಡ)	..	2	8
ಯರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ　ಡಿಟೋ ..	..	1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ, ದಿವಾಳೀ ಅಪ್ಲಿಕೇಷನ್‌ಗಳ ಬಗ್ಗೆ ನೋಟೀಸ್‌ಗಳಿಗೆ:—			
ಮೊದಲನೇ ದಫಾ	..	5	0
ಯೆರಡನೇ ವ ಆ ತರುವಾಯ ಪ್ರತಿ ದಫಾಕ್ಕೆ ..	..	2	8
ಶಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.			
ಡ್ಯುಪ್ಲಿಕೇಟ್ ಕಾಫೀಪಟ್ಟೇ ವಗೈರೇ ಕೊಡುವ ಬಗ್ಗೆ ರೆವಿನ್ಯೂ ಆಫೀಸರಗಳು ಕೊಡುವ ನೋಟೀಸ್‌ಗಳಿಗೆ:—			
ಮೊದಲನೇ ಸಲಕ್ಕೆ ..	ಪುಟ1ಕ್ಕೆ ..	10	0
ಯೆರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	„ ..	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್‌ಮಾಡಲ್ಪಡುತ್ತೆ:—			
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ1ಕ್ಕೆ ..	0	8
ಯೆರಡನೇ ದಫಾ　ಡಿಟೋ	ಡಿಟೋ ..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ	.. ..	0	4

ಬಮೋಜಿಬ್ ಹುಕ್ಕುಂ,

ಹೆಚ್. ಹಡರ್ಸನ್,

ಮೈ. ಗೆ. ಕಂಪೈಲರ್.

ಗವರ್ನಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನಮೆಂಟ್ ಆಫೀಸರಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೋಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಶೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡು ಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 4—8—0; ಎಂಟು ಔನ್ಸ್‌ವುಳ್ಳ ಡಬಿಗೆ ರೂ. 8—8—0; ಒಂದು ಪೌಂಡ್ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೋಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಇದರಡೀ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿ ಒಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌಂಡ್ ವುಳ್ಳ ಡಬ್ಬಿಗೆ 20 ರೂಪಾಯಿ. ಈ ಔಷಧವು, ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯನ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬೀಗೆ ಎಂಟುಆಣೆ ಟಪ್ಪಾಲ್ ಹಾಸಲೂ, ಒಂದು ಪೌಂಡ್ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

Mysore Government Press, Bangalore.—1883.

ಮೈಸೂರ ಗೆಜೆಟ್.

ನಂ. 2 ಸರ್ಕಾರದಿಂದ ಛಾಯಿಷ್ ಆದ್ದು. ಸನ್ 1884.

ಬೆಂಗಳೂರು, ಶನಿವಾರ, ಜನವರೀ ತಾ॥ 12, ಸನ್ 1884.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ಚೀಫ್ ಜಡ್ಜೀಯವರು, ಸರ್ವೇ ವ ಸೆಟಿಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ರಿಂಟೆಂಡೆಂಟರು, ಕಾಂಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮಿಲಿಟೇರಿ ಸಿಕ್ರೆಟೆರಿಯವರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟ್‌ಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲಾ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲಾ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 26ನೇ ಅಕ್ಟೋಬರ್ 1883.

ನಂ. 256.—ಇದರಿಂದ ಸರ್ವ ಜನಗಳ ತಿಳುವಳಿಕೆ ಬಗ್ಯೆ ಪ್ರಕಟ ಪಡಿಸುವದೇನಂದರೆ, ಮೈಸೂರು ದೇಶದ **ಉತ್ಪತ್ತೀ ಬಾಬತು** ಗಂಧದ ಮರಗಳ ಸಾಲೀಯಾನಾ ಹರಾಜು ಇದರಡಿ ನಮೂದು ಮಾಡಿರುವ ಸ್ಥಳಗಳಲ್ಲಿ ಆಯಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್‌ಗಳು ವ ಫಾರೆಸ್ಟ್ ಆಫೀಸರರಿಂದ ಆಯಾ ಸ್ಥಳಗಳ ಬಾಜೂದಲ್ಲಿ ಕಾಣಿಸಿರುವ ತಾರೀಖುಗಳಲ್ಲಿ ನಡಿಸಲ್ಪಡುತ್ತೆ.

* * *

* * *

ಚಿಕ್ಕಮಗಳೂರು	14ನೇ ಜನವರೀ 1884	ಸುಮಾರು 200 ಟನ್‌ಗಳು.
ಹಾಸನ	21ನೇ ಡಿಟೋ	ಡಿಟೋ 350 ,,

ಹರಾಜಿನ ಷರತ್ತುಗಳು—1874ನೇ ಇಸವಿ ಡಿಶಂಬರ್ 5ನೇ ಮರ್ಕುಂ 48ನೇ ನಂಬರ್ ಮೈಸೂರು ಗೆಜೆಟಿನಲ್ಲಿ ಛಾಯಿಷ್ ಮಾಡಲ್ಪಟ್ಟ ಪ್ರಕಾರ ಇರುವದು ಮತ್ತು ಹರಾಜಾಗುವ ಕಾಲದಲ್ಲಿ ಪೋದಲ್ಪಡುವದು. ತೀರ್ಥಹಳ್ಳಿ, ಚಿಕ್ಕಮಗಳೂರು, ಮತ್ತು ಹಾಸನ ಈ ಸ್ಥಳಗಳಲ್ಲಿ ಖರೀದಿಮಾಡಲ್ಪಡುವ ಗಂಧದ ಮರಗಳಿಗಾಗಿ ಸಲ್ಲಬೇಕಾದ ಮೊಬಲಗನ್ನ ಪಾವತಿ ಮಾಡುವ ಮಾಯಿದೆಯು, 1884ನೇ ಇಸವಿ ಮಾರ್ಚಿ 25ನೇ ಮರ್ಕು ಮಿಗಿ ಪೂರೈಸುತ್ತೆ.

ತಾರೀಖು 14ನೇ ಡಿಸಂಬರ್ 1883.

ನಂ. 288.—ಸರ್ 1884ನೇ ಇಸವಿ ಏಪ್ರೆಲ್ 1ನೇ ಮುಕ್ಕಾಂ ಲಾಗಾಯತು ಇದರಡೀ ಕಂಡ ಕಡೂರು ಡಿಸ್ಟ್ರಿಕ್ಟಿನಲ್ಲಿಯ ಗ್ರಾಮಗಳ ಪುನರ್ವರ್ಗಾವರ್ಗಿಗಳು ಹುಕ್ಕುಂ ಮಾಡಿರುತ್ತೆ;—

ಕಡೂರು ತಾಲ್ಲೂಕಿನಿಂದ ತರೀಕೆರೆ ತಾಲ್ಲೂಕಿಗೆ.

1 ನಂದಿಪುರ 2 ಭೈರನಹಳ್ಳಿ 3 ಬಸವಾಪುರ

ಚಿಕ್ಕನಗಿರಿ ತಾಲ್ಲೂಕಿನಿಂದ ತರೀಕೆರೆ ತಾಲ್ಲೂಕಿಗೆ.

1 ದುರ್ವಿಗೆರೆ.

ತಾರೀಖು 28ನೇ ಡಿಸಂಬರ್ 1883.

ನಂ. 292.—ಸರ್ 1870ನೇ ಇಸವಿಯ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 4ನೇ ಸೆಕ್ಷನ್ ಅನುಸರಿಸಿ ಇದಕ್ಕೆ ಸಂಬಂಧಿಸಿದ ಜನಗಳಿಗೆ ಇದರಿಂದ ತಿಳಿಸಲ್ಪಡುವದೇನಂದರೆ, ತಿಪಟೂರಿಂದ ಬೀರೂರಿಗೂ, ಬೀರೂರಿಂದ ಹರಿಹರಕ್ಕೂ ರೆಯಿಲ್ ಯೇಪಾರ್ಡು ಮಾಡುವ ಬಗ್ಯೆ ಸದರೀ ಆಕ್ಟು ಅನುಸರಿಸಿ ಕಂರ್ವೆಸೇಷನ್ ಕೊಟ್ಟು ಗವರ್ನಮೆಂಟಿನಿಂದ ತೆಗದುಕೊಳ್ಳಲ್ಪಡುವದು, ಮೇಲೆ ಕಂಡ ರೆಯಿಲ್ವೇ ಲೈನನ್ನು ಹ್ಯಾಲ್ಟ್ಲಿ-ಸರ್ವೇ ಮಾಡುವ ಜನಗಳು ತಮ್ಮ ಕೆಲಸ ಚಲಾಯಿಸುವದರ ದೆಸೆಯಿಂದ ಅವರನ್ನು ಪ್ರಜೆಗಳು ಯಾವ ವಿಧದಿಂದಲೂ ನಿರೋಧಿಸಲ್ಪಡಕೂಡದು.

ತಾರೀಖು 9ನೇ ಜನವರಿ 1884.

ನಂ. 295.—ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮೀಷನರಾದ ಮೆಸ್ಟರ್ ಪಿ. ಯನ್. ಕೃಷ್ಣಮೂರ್ತಿಯವರಿಗೆ, 5ನೇ ಭಾಗದ ಸಿವಿಲ್ ಲೀವ್ ಕೋಡಿನ 139ನೇ ಸೆಕ್ಷನ್ ಅನುಸರಿಸಿ, ಸರ್ 1883ನೇ ಇಸವಿ ಏಪ್ರೆಲ್ 30ನೇ ಮುಕ್ಕಾಂ ಲಾಗಾಯಿತು ಇಂಡ್ಯ ದೇಶದಲ್ಲಿ ಒಂದು ವರ್ಷದ ಫರಲೋ ರಜಾ ಕೊಡಲ್ಪಟ್ಟಿರುತ್ತೆ.

ಈ ಇಸ್ತಿಹಾರ್ ನಾಮೆಯಿಂದ ಯಿದೇ ಆಫೀಸ್ 1883ನೇ ಇಸವಿಯ 132—182—229ನೇ ಇಸ್ತಿಹಾರ್ ನಾಮೆಗಳು ರದ್ದು ಮಾಡಲ್ಪಟ್ಟಿರುತೆ.

ತಾರೀಖು 8ನೇ ಜನವರೀ 1884.

ನಂ. 293.—ಯಳಂದೂರು ತಾಲ್ಲೂಕು ಅಮಲ್ದಾರ್ ಟಿ. ಯಸ್. ಕೃಷ್ಣರಾಯರಿಗೆ, 3ನೇ ಕ್ಲಾಸ ಮಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತೆ.

ತಾರೀಖು 21ನೇ ಮಾರ್ಚಿ 1883.

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾಹ್ನಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಯೆ ಹಿಂದಿನ ದಿನ ಸೆಕ್ರೆಟೇರಿಯವರಿಗೆ ತಮ್ಮ ಕಾರ್ಡುಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾಹ್ನಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಬಮೋಜೀಬ್ ಹುಕ್ಕುಂ,
ಆರ್. ವಿಜಯೀಂದ್ರರಾವ್,
ಸೆಕ್ರೆಟರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಫಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜನವರೀ ತಾ|| 12, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ

ಇಂಡ್ಯಾಗವರ್ನ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ರೆಸೀಡೆಂಟರ ಇಸ್ತಿಹಾರ್ ನಾಮೆ.

ನಂ. 22. ತಾರೀಖು 3ನೇ ಡಿಶಂಬರ್ 1883.

ರೆಸೀಡೆಂಟರವರ ಮಂಜೂರಾತಿನಿಸಿ 1884ನೇ ಇಸವಿಯ ಬಾಬತು ಕೋರ್ಟುಗ ರಜಾ ದಿವಸಗಳ ಇದರಡಿ ಕಂಡ ಪಟ್ಟಿಯು ಆಕ್ಟಿಂಗ್ ಚೀಫ್ ಜಡ್ಜರವರಿಂದ ತಯಾರ್ಮಾಡಲ್ಪಟ್ಟು, ತಿಳುವಳಿಕೆ ಬಗ್ಯೆ ಇದರ ದೆಶೆಯಿಂದ ಫಾಯಿಷ್ಮಾಡಲ್ಪಟ್ಟಿರುತ್ತೆ.

ಸದರೀ ದಿವಸಗಳು ಬೆಂಗಳೂರು ಶಿವಿಲ್ ವ ಮಿಲಿಟೇರಿ ಸ್ಟೇಷನಿನ ಶಿವಿಲ್ ಕೋರ್ಟುಗಳಿಂದ ಪೂರಾ ರಜಾ ದಿವಸಗಳಾಗಿ ಆಚರಿಸಲ್ಪಡತಕ್ಕದ್ದು.

ರಜಾ ದಿವಸಗಳ ಪಟ್ಟಿ.

ಜನವರೀ	1ರ ವೊದಲು 3ರ ವರಿಗೆ ಯರಡು ದಿವಸಗಳೂ ಸೇರಿ	ಕ್ರಿಸ್‌ಮಸ್ ರಜಾದಿವಸಗಳು.
ಡಿಟ್ಟೋ	12ರಲ್ಲು	ಪೊಂಗಲು.
ಫಿಬ್ರುವರೀ	25ರಲ್ಲು	ಸಿವರಾತ್ರಿ.
ಡಿಟ್ಟೋ	27ರಲ್ಲು	ಬೂಧಿಬುಧವಾರ.
ಮಾರ್ಚಿ	10ರಲ್ಲು	ಹೋಳಿಹಬ್ಬ.
ಡಿಟ್ಟೋ	25ರಲ್ಲು	ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕೋತ್ಸವದ ವರ್ಷವರ್ಧಂತಿ.
ಡಿಟ್ಟೋ	28ರಲ್ಲು	ಯುಗಾದಿಹಬ್ಬ.
ಏಪ್ರೈಲ್	4ರಲ್ಲು	ಶ್ರೀರಾಮನವಮಿ.
ಡಿಟ್ಟೋ	10ರ ವೊದಲು 15ರ ವರಿಗೆ ಉಭಯ ದಿವಸಗಳೂ ಶೇರಿ ..	ಈಸ್ಟರ್ ರಜಾ ದಿವಸಗಳು.
ಡಿಟ್ಟೋ	16ರ ವೊದಲು 27ನೇ ವೇ ವರಿಗೆ ಉಭಯದಿವಸಗಳೂ ಶೇರಿ	ಸಾಲಿಯಾನಾ 6 ವಾರಗಳ ಬರಖಾಸ್ತಿ.

ಆಗಸ್ಟು	6ರಲ್ಲು	ಶ್ರಾವಣಿ.
ಡಿಟೋ	23ರಲ್ಲು	ಗೌರಿಹಬ್ಬ.
ಸೆಪ್ಟಂಬರ	4ರಲ್ಲು	ಅನಂತಚತುರ್ದಶಿ.
ಡಿಟೋ	19ರಲ್ಲು	ಮಹಾಲಯ ಅಮಾವಾಸ್ಯೆ.
ಡಿಟೋ	20ರಲ್ಲು	ನವರಾತ್ರಿ ಆರಂಭ.
ಡಿಟೋ	29ರಲ್ಲು	ವಿಜಯದಶಮಿ.
ಅಕ್ಟೋಬರ್	17ರಲ್ಲು	ದೀಪಾವಳಿ.
ಡಿಸಂಬರ್ 24ರ ಮೊದಲು 31ರ ವರಿಗೆ ಉಭಯದಿವಸಗಳೂ ಸೇರಿ	..	ಕ್ರಿಸ್ಮಸ್ ರಜಾ ದಿವಸಗಳು.

ಷರಾ—ಸದರೀ ಸಾಲಿನ ಯಲ್ಲಾ ಭಾನುವಾರಗಳು, ಪೊಂಗಲ್ ಹಬ್ಬದ 2ನೇ ದಿವಸ, ಶ್ರೀಮನ್ಮಹಾರಾಜರವರ ವರ್ಷವರ್ಧಂತಿ ಗಣೇಶನಹಬ್ಬ, ಮಹಾನವಮಿ, ಬಲಿಪಾಡ್ಯಮಿ, ಪ್ರಿನ್ಸ್ ಆಫ್ ವೇಲ್ಸರವರು ಹುಟ್ಟಿದ ದಿವಸ, ಇವುಗಳು ಆದಿವಾರಗಳಾಗುವದ್ದರಿಂದ ವಿನಾಯಿಸಿ ಇರುತ್ತೆ.

ಆರ್ಸೆಷ್ಷಡೇ, ಚಕ್ರವರ್ತಿನಿಯವರು ಹುಟ್ಟಿದ ದಿವಸ, ಇವುಗಳು ಸಾಲಿಯಾನಾ ಬರಖಾಸ್ತು ಕಾಲದಲ್ಲಿ ಪ್ರಾಪ್ತವಾಗುವದ್ದರಿಂದ ಅವುಗಳೂ ವಿನಾಯಿಸಲ್ಪಟ್ಟಿರುತ್ತೆ.

ಹುಕ್ಕುಂ ಬಮೋಜಿಬ್
ಹೆಚ್. ವೈಲಿ, ಮೇಜರ್
ರೆಸಿಡೆಂಟರ ಅಸಿಸ್ಟೆಂಟ್.

ಚೀಫ್ ಜಡ್ಜೀಯವರ ಇಸ್ತಿಹಾರ್ ನಾಮೆ.

ತಾರೀಖು 3ನೇ ಡಿಸಂಬರ್ 1883.

ಶ್ರೀಮನ್ಮಹಾರಾಜಾ ಸರ್ಕಾರದವರ ಮಂಜೂರಾತಿನಿಶಿ, ಸೆ 1884ನೇ ಇಸವೀ ಬಾಬತು ಕೋರ್ಟು ರಜಾದಿನಗಳ ಈ ಕೆಳಗೆ ಬರುವ ಪಟ್ಟೀಯು, ಅಕ್ಟಿಂಗ್ ಚೀಫ್ ಜಡ್ಜೀಯವರಿಂದ ತಯಾರ್ ಮಾಡಲ್ಪಟ್ಟು, ತಿಳುವಳಿಕೇ ಬಗ್ಯೆ ಇದರಿಂದ ಪ್ರಕಟಿಸಲ್ಪಟ್ಟಿರುತ್ತೆ.

ಈ ದಿವಸಗಳು ಬದಸ್ತೂರ್, ಈ ಶೀಮೆಯು ಸರ್ವತ್ರ ಇರುವ ತಮಾಂ ಸಿವಿಲ್ ಕೋರ್ಟುಗಳಿಂದಲೂ ಪೂರಾ ರಜಾದಿವಸಗಳಾಗಿ ಆಚರಿಸಲ್ಪಡತಕ್ಕದ್ದು.

ರಜಾ ದಿನಗಳ ಪಟ್ಟಿ.

ಜನವರೀ 1ರ ಮೊದಲು 3ರ ವರಿಗೆ ಸದರೀ ಉಭಯ ದಿನಗಳೂ ಸೇರಿ	..	ಕ್ರಿಸ್ಮಸ್ ರಜಾದಿವಸಗಳು.
ಡಿಟೋ	12ರಲ್ಲು	ಪೊಂಗಲ್.
ಫೆಬ್ರುವರೀ	25ರಲ್ಲು	ಶಿವರಾತ್ರಿ.
ಡಿಟೋ	27ರಲ್ಲು	ಆಷ್ವೆಡ್ ನೆಸ್ಡೆ.
ಮಾರ್ಚಿ	10ರಲ್ಲು	ಕಾಮನ ಹಬ್ಬ.
ಡಿಟೋ	25ರಲ್ಲು	ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕ ವರುಷ ವರ್ಧಂತಿ.
ಡಿಟೋ	28ರಲ್ಲು	ಯುಗಾದಿ ಹಬ್ಬ.
ಏಪ್ರೈಲ್	4ರಲ್ಲು	ಶ್ರೀರಾಮನವಮಿ.
ಡಿಟೋ	10ರ ಮೊದಲು 15ರ ವರಿಗೆ ಉಭಯ ದಿನಗಳೂ ಸೇರಿ ..	ಈಸ್ಟರ್ ಹಬ್ಬಗಳು.
ಡಿಟೋ	16ರ ಮೊದಲು ಮೇ 27ರ ವರಿಗೆ ಉಭಯ ದಿನಗಳೂ ಸೇರಿ	ಆರು ವಾರಗಳ ಸಾಲೀಯಾನಾ ಕೋರ್ಟು ಬರಖಾಸ್ತು.
ಆಗಸ್ಟು	6ರಲ್ಲು	ಶ್ರಾವಣಿ.
ಡಿಟೋ	23ರಲ್ಲು	ಗೌರಿಹಬ್ಬ.

ಸೆಪ್ಟಂಬರ್	4ರಲ್ಲು	.. .. ..	ಅನಂತ ಚತುರ್ದಶಿ.
ಡಿಟೋ	19ರಲ್ಲು	.. .. ..	ಮಹಾಲಯ ಅಮಾವಾಸ್ಯೆ.
ಡಿಟೋ	20ರಲ್ಲು	.. .. ..	ನವರಾತ್ರಿ ಆರಂಭ.
ಡಿಟೋ	29ರಲ್ಲು	.. .. ..	ವಿಜಯ ದಶಮಿ.
ಅಕ್ಟೋಬರ್	17ರಲ್ಲು	.. .. ..	ದೀಪಾವಳಿ.
ಡಿಶಂಬರ್	24ರ ಮೊದಲು 31ರ ವರಿಗೆ ಉಭಯ ದಿನಗಳೂ ಸೇರಿ	..	ಕ್ರಿಸ್‌ಮಸ್ ರಜಾಗಳು.

ಷರಾ—ಸಂವತ್ಸರದಲ್ಲಿನ ತಮಾಂ ಭಾನುವಾರಗಳೂ, ಪೊಂಗಲ್ ಹಬ್ಬದ ಎರಡನೇ ದಿನ, ಶ್ರೀಮನ್ಮಹಾರಾಜರವರ ವರ್ಷ ವರ್ಧಂತಿ, ಗಣೇಶನ ಚೌತಿ, ಮಹಾನವಮಿ, ಬಲಿಪಾಡ್ಯಮಿ, ಪ್ರಿನ್ಸಾಫ್ ವೇಲ್ಸ್‌ರವರ ವರ್ಷ ವರ್ಧಂತಿ, ಯಿವು ಭಾನುವಾರಗಳಲ್ಲಿ ಪ್ರಾಪ್ತವಾಗುವದರಿಂದ ಅವುಗಳು ಬಿಡಲ್ಪಟ್ಟಿವೆ. ಅಸ್ಟೆರ್ಷಡೇ, ಚಕ್ರವರ್ತಿನಿಯವರ ವರ್ಷ ವರ್ಧಂತಿ, ಯಿವು ಕೋರ್ಟು ಬರಖಾಸ್ತು ದಿನಗಳಲ್ಲಿ ಪ್ರಾಪ್ತವಾಗುವದರಿಂದ ಅವುಗಳೂ ಬಿಡಲ್ಪಟ್ಟಿವೆ.

ಚೀಫ್‌ಕೋರ್ಟ್ ಹುಕ್ಕುಂ,
ಎಸ್. ಹಿಮಾಜೀರಾವ್,
ರಿಜಿಸ್ಟ್ರಾರ್.

ಫಿನಾನ್ಷಿಯಲ್ ಇಲಾಖಾ.

1882ನೇ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರ್ಯಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ್ದ ಮೆಸ್ಸರ್ಸ್ ಕೌಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗೆದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟೂದ ಡಿಮಾಂಡ್ ಡ್ರಾಫ್ಟ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್ಟ್ರೋಲರ್.

ಅಂಚೇ ಇಲಾಖಾ.

ನಂ. 423—219. ತಾರೀಖು 20ನೇ ಡಿಶಂಬರ್ 1883.

ಇದರಿಂದ ಸಕಲ ಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ಮಹಾರಾಜ ರಾಜಾ ಸಾಹೇಬ್ ಬಹದೂರವರ ದೀವಾನರವರ ಅಪ್ಪಣೆ ಅನುಸರಿಸಿ ಈ ಕೆಳಗೆ ಕಂಡ ಸ್ಥಳಗಳೊಳಗೆ ಪ್ರೋಬಳಿ ಅಂಚೆ ಆಫೀಸ್‌ಗಳು ಸ್ಥಾಪಿಸಲ್ಪಟ್ಟಿರುತ್ತವೆ.

ತಾಲ್ಲೂಕು.	ಅಂಚೆ ಆಫಿಸ್ ಸ್ಥಾಪಿಸಲ್ಪಟ್ಟ ಸ್ಥಳಗಳ ಹೆಸರು.
ಮಂಜರಾಬಾದ್ ..	ಶುಕ್ರವಾರಸಂತೆ
ಯೆಡತೊರೆ ..	ರುದ್ರಾಪಟ್ಣ

ತಾಲ್ಲೂಕು	ಅಂಚೇ ಆಫಿಸ್ ಸ್ಥಾಪಿಸಲ್ಪಟ್ಟ ಸ್ಥಳಗಳ ಹೆಸರು.
ಅತ್ತಿಕುಪ್ಪ ..	ಶಿಂದಘಟ್ಟ
ಅರಸೀಕೆರೆ ..	ಬಾಗಡಿ
ಮೂಡಿಗೆರೆ ..	ಬಿಂಣಕಲ್ಲು
ತಿಪಟೂರು ..	ಹಾಲ್‌ಕುರಿಕೆ
ಮಂಡ್ಯ ..	ಬಸರಾಳು
ಚಾಮರಾಜನಗರ ..	ಪುಡಿಗಾಲ

ಬಿ. ಮರಿಗಂಗಯ್ಯ,
ಅಂಚೇ ಬಕ್ಷಿ.

ಫಾರೆಸ್ಟು ಇಲಾಖಾ.

ತಾರೀಖು 24ನೇ ಡಿಶಂಬರ್ 1883.

ಇದರಿಂದ ತಿಳಿಸಲ್ಪಡುವದೇನಂದರೆ, ಇದರಡಿ ಕಂಡ ಪ್ಲಾಂಟೇಷನುಗಳು—1884ನೇ ಇಸವೀ ಫಿಬ್ರುವರೀ 1ನೇ ಮೊದಲ್ಗೊಂಡು ಲಗಾಯತ್ ಮೇ 31ರವರಿಗೆ ಬಿಸಿಲುಕಾಲದ ಬಗ್ಯೆ ಬಂದು ಮಾಡಲ್ಪಟ್ಟಿರುತ್ತೆ, ಜನರುಗಳು, ಇನ್‌ಚಾರ್ಜ್ ಫಾರೆಸ್ಟು ಪ್ರೊಟೇಷನರವರ ಅಪ್ಪಣೆ ಶಿವಾಯಿ ಈ ಜಂಗ್ಲೀಗಳಲ್ಲಿ ಪ್ರವೇಶಿಸಕೂಡದು.

ಜಂಗ್ಲೀಗಳು.		ತಾಲ್ಲೂಕು.
ಕಾಡುಗೋಡಿ		ಹೊಸಕೋಟೆ
ಜಡಿಗನಹಳ್ಳಿ	(ಹಳೇದು ಮತ್ತು ಹೊಸದು)	ಡಿಟೋ
ನೆಲಾಲ್	(A B ಮತ್ತು C)	ಡಿಟೋ
ತಾತನೂರು	..	ಡಿಟೋ
ಅಪ್ಪಸಂದ್ರ	..	ಡಿಟೋ
ದೊಡ್ಡಹರಡಿ		ಡಿಟೋ
ಚಿಕ್ಕಹರಡಿ		ಡಿಟೋ
ಕುರಾಂಡಪಳ್ಳಿ	(ಹಳೇದು ಮತ್ತು ಹೊಸದು)	ಮಾಲೂರು
ಮಾರಸಂದ್ರ	..	ಡಿಟೋ
ರಾಮಚಂದ್ರಪುರ	(A ಮತ್ತು B)	ಡಿಟೋ
ಜಂಗಂಕೋಟೆ	..	ಸಿಡ್ಲಘಟ್ಟ
ಏನೂರು		ಬೆಂಗಳೂರು

ಕೆ. ಪ್ರಹ್ಲಾದರಾವ್,
ಪ್ಲಾಂಟೇಷನ್ ಇನ್‌ಚಾರ್ಜ್ ಫಾರೆಸ್ಟು ಪ್ರೊಟೇಷನರ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀರವರ ಕೋರ್ಟಿನಲ್ಲಿ.

1883ನೇ ಇಸವಿ ಅರ್ಜೀ ನಂಬರ್ 524.

ಮೃತಪಟ್ಟ ರಾಮಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಮರಿಯಕ್ಕಂಮ್ಮ, ಮೃತಪಟ್ಟ ಸದರೀ ರಾಮಯ್ಯನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಹುಣಸೂರು-ತಾಲ್ಲೂಕು ಬೆಟ್ಟದಪುರ ಕಸಬಾ ಸ್ಥಳದ ಮರಿಯಮ್ಮನು, ಸದರೀ ವಾರಸ್ಥನಾಗಿ ಮೃತಪಟ್ಟ ರಾಮಯ್ಯನ ಜಿಂದಗೀ ಬಗ್ಯಾಗಿ ಬರತಕ್ಕ 800 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಮರಿಯಕಂಮ್ಮನ, ಅರ್ಜೀಯನ್ನು 1884ನೇ ಇಸವೀ ಜನವರೀ ತಿಂಗಳು ತಾರೀಖು 29ರಲ್ಲು ಮೈಸೂರು ಮೊಕ್ಕಾಂನಲ್ಲಿ ಈ ಕೋರ್ಟಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿಯಿದೆ.

1883ನೇ ಇಸವೀ ಡಿಸಂಬರ ತಿಂಗಳು 19ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸೀ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ವಿ. ಎಲ್. ನರಸಿಂಹಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜ.

ಶ್ರೀರಂಗಪಟ್ಟಣದ ಮುನಸಿಫ್ ಆಫೀಸಿನಿಂದ.

ತಾರೀಖು 18ನೇ ಡಿಸಂಬರ 1883.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸ್ನ 1883ನೇ ಇಸವೀ ನವಂಬರ 15ನೇ ಮುಕ್ಕಾಂ 953—686ನೇ ನಂಬರ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸರವರ ಹುಕ್ಕುಂ ಸಂಗಡ ತಲಪಿದ ದೀವಾನ್ ಸಾಹೆಬರವರ ಹುಕ್ಕುಂ ಅನುಸರಿಸಿ ಶ್ರೀರಂಗಪಟ್ಟಣದ ಕೋಟೇಯಲ್ಲಿರುವ ಮಾರೀಸ್ನ ಬಂಗ್ಲೇಯೆಂಬ ಮತ್ತು ಮಹಾರಾಜರವರ ಹಳೇ ಅರಮನೆಯೆಂಬ ಹೆಸರುಳ್ಳ ಕಟ್ಟಡಗಳಲ್ಲಿರತಕ್ಕ ಕೆಲವು ಪಲೆವುಳ್ಳ ಚೌಬೀನೆ ಹೆಂಚು ಮುಂತಾದ ಸಾಮಾನುಗಳು, ಸ್ನ 1884ನೇ ಇಸವೀ ಜನವರೀ 30ನೇ ತಾರೀಖಿನ ದಿವಸ ದಿವಿ 10 ಘಂಟೆಗೆ ಹರಾಜ್ ಮಾಡಿಸಲ್ಪಡುತ್ತೆ. ಆವಶ್ಯಕ ವಿದ್ದಲ್ಲಿ ಆ ತಾರೀಖಿನ ಮಾರನೇ ದಿವಸವು ಹರಾಜು ಮಾಡಿಸಲ್ಪಟ್ಟು, ಕಡೆ ದರಖಾಸ್ತುದಾರರ ಹೆಸರಿಗೆ ಖಾಯಂ ಮಾಡಲ್ಪಡುತ್ತೆ. ಹರಾಜಿನಲ್ಲಿ ಸದರೀ ಸಾಮಾನುಗಳನ್ನ ತೆಗದುಕೊಳ್ಳಲು ಯಿಚ್ಛೆವುಳ್ಳ ಜನಗಳು ಆ ತಾರೀಖಿಗೆ ಹಾಜರಾಗಬೇಕು.

ಹರಾಜು ನಿಬಂಧನೆಗಳು.

1. ಯಾರ ಕಡೆ ಸವಾಲ್ ವೈಸ್ ಪ್ರೆಸೀಡೆಂಟರಿಂದ ಅಂಗೀಕರಿಸಲ್ಪಡುತ್ತೋ ಆ ಜನಗಳು ತಾವು ಸವಾಲ್ ಮಾಡಿದ ಮೊಬಲಗಿನ ಪೈಕೀ ಸೇಕಡಾ 25 ರೂಪಾಯಿನಂತೆ ಆಗುವಷ್ಟು ಮೊಬಲಗನ್ನ ತತ್‌ಕ್ಷಣ ಠೇವಣಿ ಹಾಜರ್‍ಮಾಡಬೇಕು. ಬಾಕೀ ಮೊಬಲಗನ್ನ ಹರಾಜು ತಾರೀಖು ಲಾಗಾಯತು 15 ದಿವಸದ ವಳಗಾಗಿ ತಾಲ್ಲೂಕು ಖಜಾನೇಯಲ್ಲಿ ಪಾವತೀ ಮಾಡಬೇಕು.

2. ಹರಾಜು ಪ್ರೆಸೀಡೆಂಟ್ ಸಾಹೆಬರವರ ಮಂಜೂರಾತಿಗೆ ವಳಪಟ್ಟಿದ್ದಾಗಿರುತ್ತೆ.

3. ಹರಾಜಿನಲ್ಲಿ ತೆಗದುಕೊಳ್ಳಲ್ಪಟ್ಟ ಸಾಮಾನುಗಳು ಹರಾಜುದಾರನ ಸುಪರ್ದು ಮಾಡಲ್ಪಟ್ಟ 30 ದಿವಸಗಳ ವಳಗಾಗಿ ಇರುವ ಸ್ಥಳದಿಂದ ಸಂಪೂರ್ಣವಾಗಿ ಸಾಗಿಸಲ್ಪಡಬೇಕು.

4. ಮೇಲೆ ನಮೂದಿಸಿದ ವಾಯಿದೆ ಗತಿಸಿದ ಮೇಲೆ ಸದರೀ ಸಾಮಾನುಗಳನ್ನ ಸಾಗಿಸದೇ ಇದ್ದ ಸ್ಥಳದಲ್ಲೇ ಯಿದ್ದಲ್ಲಿ 15 ದಿವಸಗಳ ವರಿವಿಗೂ ದಿನ 1ಕ್ಕೆ 1 ರೂಪಾಯಿನಂತೆ ಹರಾಜುದಾರನು ಮ್ಯುನಸಿಪ್ಯಾಲಿಟಿಗೆ ಜುರ್ಮಾನೆ ಕೊಡುವದಕ್ಕೆ ಗುರಿಯಾಗುತ್ತಾನೆ, ಮತ್ತು 15 ದಿವಸ ಕಳೆದನಂತರ ಹರಾಜುದಾರನು ತೆಗದುಕೊಂಡ ಸಾಮಾನಿನ ಮೇಲು ಖಜಾನೆಗೆ ಅದುವರಿವಿಗೆ ಪಾವತೀ ಮಾಡಿರುವ ಮೊಬಲಗಿನ ಮೇಲು ಬಾಧ್ಯತೆಯನ್ನ ಕಳದುಕೊಳ್ಳುತ್ತಾನೆ.

5. ಸದರೀ ಮೇರೆಗೆ ವಾಯಿದಾ ಅತಿಕ್ರಮಿಸಿದಂಥಾ ಸಾಮಾನುಗಳು ಪುನಹ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ. ಅದರಿಂದ ಯೇನಾದರೂ ಜಾಸ್ತೀ ಹುಟ್ಟುವಳೀ ಆದಲ್ಲಿ ಅದನ್ನ ಮ್ಯುನಸಿಫಲ್ ಬಾಬಿಗೆ ಸೇರಿಸಿಕೊಳ್ಳೋಣವಾಗುತ್ತೆ.

6. ಹರಾಜುದಾರನು 1ನೇ ಕಲಂನಲ್ಲಿ ಕಂಡ ಮೇರಿಗೆ ಠೇವಣೀ ಹಣವನ್ನು ಮತ್ತು ಬಾಕೀ ಮೊಬಲಗನ್ನು ಹಾಜರ್‍ಮಾಡುವದಕ್ಕೆ ತಪ್ಪಿದ ಪಕ್ಷಕ್ಕೆ ಸಾಮಾನುಗಳು ಪುನಹಾ ಹರಾಜ್ ಮಾಡಿಸಲ್ಪಟ್ಟೀತು. ಆ ಮೇರಿಗೆ ಹರಾಜು ಮಾಡಿಸುವದರ ಲಾಗವಡು ಮತ್ತು ಅದರಿಂದ ಸಂಭವಿಸುವ ನಷ್ಟ ಯಿವುಗಳಿಗೆ ಅವ್ವಲ್ ಹರಾಜುದಾರನ್ನ ಗುರಿಮಾಡಲಾಧೀತು.

ಷ ರಾ ,

ಮಾರೀಸ್ನ ಬಂಗ್ಲೇ ಯಂಬವದು ಇನ್ನು ಸಾಬೀತು ಇದೆ, ಅದರ ಸಾಮಾನುಗಳು ಹ್ಯಾಗೆ ಇದೆಯೊ ಅದೇ ಸ್ಥಿತಿಯಲ್ಲೇ ಹರಾಜು ಮಾಡಲ್ಪಡುತ್ತೆ. ಹಳೇ ಅರಮನೆಯ ಸಾಮಾನುಗಳು ಮಾತ್ರ ಕೆಳಗೆ ಇರಿಸಲ್ಪಟಿವೆ ಹರಾಜುದಾರನು ಅವುಗಳನ್ನ ಸಾಗಿಸುವದು ಮಾತ್ರವಾಗಿದೆ.

ರಾಘವೇಂದ್ರರಾವ್,
ವೈಸ್ ಪ್ರೆಸಿಡೆಂಟ್.

ನಗರ ಡಿವೀಜನ್.

ತಾರೀಖು 10ನೇ ಡಿಶಂಬರ 1883.

ಇದರಿಂದ ಪ್ರಕಟಪಡಿಸುವದೇನಂದರೆ, ಸ್ನ 1884ನೇ ಇಸವಿಯಲ್ಲಿ ಶಿವಮೊಗ್ಗಾ ಮತ್ತು ಕಡೂರು ಡಿಸ್ಟ್ರಿಕ್ಟುಗಳಿಂದ ಕಮಿಟ್ ಮಾಡೋಣಾಗುವ ಕ್ರಿಮಿನಲ್ ಮೊಕದ್ದಮೆಗಳ ಸೆರ್ಷನ್ ವಿಚಾರಣೆಯು, ಆಯಾ ಡಿಸ್ಟ್ರಿಕ್ಟುಗಳ ಹೆಡ್ ಕ್ವಾರ್ಟರಗಳಲ್ಲಿ ಈ ಕೆಳಗೆ ನಮೂದಿಸಿರುವ ತಾರೀಖುಗಳಲ್ಲಿ ನಡಿಸಲ್ಪಡುವದು.

ಶಿವಮೊಗ್ಗಾ ಡಿಸ್ಟ್ರಿಕ್ಟು.

7ನೇ ಜನವರೀ 1884
10ನೇ ಮಾರ್ಚಿ 1884
7ನೇ ಏಪ್ರೆಲ್ 1884
9ನೇ ಜೂನ್ 1884
7ನೇ ಜುಲೈ 1884
8ನೇ ಶಪ್ಟಂಬರ 1884
6ನೇ ಅಕ್ಟೋಬರ 1884
8ನೇ ಡಿಶಂಬರ 1884

ಕಡೂರು ಡಿಸ್ಟ್ರಿಕ್ಟು.

11ನೇ ಫಿಬ್ರುವರೀ 1884
19ನೇ ಮೇ 1884
11ನೇ ಆಗಸ್ಟು 1884
10ನೇ ನವಂಬರ 1884

ವಿಚಾರಣೆ ಬಗ್ಗೆ ಮೊಕದ್ದಮೆಗಳನ್ನು ಕಮ್ಮಿಟ ಮಾಡುವದಕ್ಕೆ ಅಧಿಕಾರವುಳ್ಳ ತಮಾಂ ಮಾಜಿಸ್ಟ್ರೇಟುಗಳೂ ಅವರು ಕಮ್ಮಿಟ ಮಾಡೋಣಾಗುವ ಮೊಕದ್ದಮೆಗಳಿಗೆ ಸಂಬಂಧಪಟ್ಟ ಫಿರಿಯಾದಿಗಳನ್ನು ಮತ್ತು ಸಾಕ್ಷಿಗಳನ್ನು ಆಯಾ ಡಿಸ್ಟ್ರಿಕ್ಟುಗಳ ಹೆಡ್‌ಕ್ವಾರ್ಟರಗಳಲ್ಲಿ ಈ ಕೋರ್ಟಿನ ಮುಂದೆ ಸದರೀ ತಾರೀಖುಗಳಲ್ಲಿ ಹಾಜರಾಗುವಂತೆ ಸರ್ಮಮಾಡಿ ಮುಚ್ಚಳಿಕೆ ತೆಗದುಕೊಳ್ಳಬೇಕೆಂದು ಕೇಳಿಕೊಳ್ಳಲ್ಪಟ್ಟಿರುತ್ತಾರೆ.

ಟಿ. ನರಹರಿರಾವ್,
ಸೆರ್ಷನ್ ಜಡ್ಜ್.

ಕಡೂರು ಡಿಸ್ಟ್ರಿಕ್ಟು.

ಕಡೂರು ಡಿಸ್ಟ್ರಿಕ್ಟು ಸಬಾರ್ಡಿನೇಟ ಜಡ್ಜಿಯವರ ಕೋರ್ಟಿನಲ್ಲಿ.

1883ನೇ ಇಸವಿ ಮಿಸಲೇನಿಯಸ್ ಕೇಸ್ ನಂಬರ 98.

ಮೃತಪಟ್ಟ ಕೃಷ್ಣಯ್ಯಂಗಾರ್ರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಅಳಿಂಗ್ರಾಚಾರ್ರು, ಮೃತಪಟ್ಟ ಸದರೀ ಕೃಷ್ಣಯ್ಯಂಗಾರ್ರಿಗೆ ಅಂಣನ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಚಿಕ್ಕಮಗಳೂರು ತಾಲ್ಲೂಕು ಈಶ್ವರವಳ್ಳಿ ಸ್ಥಳದ ಅಳಿಂಗ್ರಾಚಾರ್ರನು, ಈಶ್ವರವಳ್ಳಿ ವಾಸಸ್ಥನಾಗಿ ಮೃತಪಟ್ಟ ಸದರೀ ಕೃಷ್ಣಯ್ಯಂಗಾರನ ಜಿಂದಗಿ ಬಗ್ಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಅಪ್ಲಿಕೇಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಅಳಿಂಗ್ರಾಚಾರ್ರನ ಅರ್ಜಿಯನ್ನು 1884ನೇ ಇಸವಿ ಜನವರೀ ತಿಂಗಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂಬು ಇದರಿಂದ ತಿಳಿಯಪಡಿಸಿ ಇಧೆ.

1883ನೇ ಇಸವಿ ಡಿಶಂಬರ ತಿಂಗಳು 3ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿ ನಮ್ಮ ದಸ್ತುಖತ್ತೊ ಪನೆ ಕೊಡೋಣಾಗಿದೆ.

1883ನೇ ಮಿಸಲೇನಿಯಸ್ ಕೇಸ್ ನಂಬರ 110.

ಸಿವಿಲ್ ಪ್ರೊಸಿಡ್ಯೂರ್ ಕೋಡ್ 20ನೇ ಅಧ್ಯಾಯದಲ್ಲಿ ನಮೂದಾಗುವ ವಿಷಯದಲ್ಲಿಯೂ ಮತ್ತು ಬೇಲೂರ ತಾಲ್ಲೂಕು ಮಲ್ಲಾಪುರದ ಮಠದಲ್ಲಿ ಯಿರುವ ಮಲ್ಲಿಕಾರ್ಜುನ ವಡೇರ ಅರ್ಜೀ ವಿಷಯದಲ್ಲಿಯು ಸಹ.

ಮೇಲಿಕಂಡ ಅರ್ಜೀದಾರ 1883ನೇ ಡಿಶಂಬರ 20ನೇ ತಾರೀಖಿನಲ್ಲಿ ಈ ಕೋರ್ಟಿಗೆ ಕೊಟ್ಟ ಅರ್ಜಿಯು ಸಿವಿಲ್ ಪ್ರೊಸಿಡ್ಯೂರ್ ಕೋಡ್ 20ನೇ ಅಧ್ಯಾಯದಲ್ಲಿ ನಮೂದಾಗುವ ಉದಹರಣೆಗಳ ಪ್ರಯೋಜನವನ್ನ ಹೊಂದುವದರ ಮೂಲಕ ಸದರೀ ಕೋಡ್ 351ನೇ

ಪ್ರಕರಣ ಪ್ರಕಾರ ದಿವಾಳೀಯಾದವರೆಂಬದಾಗಿ ಅಪ್ಪಣೇ ಆಗಬೇಕೆಂದು ಕೋರಿಕೊಂಡಿರುವದರಿಂದ, ಸರ್ 1884ನೇ ಜನವರೀ 30ನೇ ದಿವಿ 11ಘಂಟೆಗೆ ಸದರೀ ಅರ್ಜೀ ವಿಷಯದಲ್ಲಿ ದರಿಯಾಫ್ತು ಮಾಡುವದರಿಂದ ಆ ಕಾಲದಲ್ಲಿ ಅರ್ಜೀದಾರು ಕೋರ್ಟು ರೂಬರೂ ಹಾಜರಾಗಿ ಕೋರ್ಟಿನವರು ಅವರ ವಿಷಯುವಾಗಿ ಹುಕ್ಕುಂ ಮಾಡುವ ಮೇರಿಗೆ ಅವರು ನಡಕೊಳ್ಳತಕ್ಕದ್ದೆಂದು ಮತ್ತು ಐರ್ಜ ಲೇಣೇದಾರರಾದವರು ಹಾಜರಾಗಿ ಅವರ ಕೋರಿಕೆಯನ್ನ ಆಪೇಕ್ಷಿಸುವದಕ್ಕೆ ಸ್ವತಂತ್ರರಾಗಿರುತ್ತಾರೆಂದು ಈ ಮೂಲಕ ನೋಟೀಸ್ ಕೊಡಲ್ಪಟ್ಟು ಇರುತ್ತದೆ.

ತಾರೀಖು 22ನೇ ಡಿಶಂಬರ್ 1883ನೇ ಇಸವಿ, ಮೊಕ್ಕಾಂ ಚಿಕ್ಕಮಗಳೂರು.

ಬಿ. ತಿರುಮಲಾಚಾರ್,
ಸಬ್ ಜಡ್ಜ್.

ನಂದೀದುರ್ಗ ಡಿವೀಜನ್.

ನಂದೀದುರ್ಗ ಡಿವೀಜನ್ ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1883ನೇ ಇಸವಿ ಅರ್ಜೀ ನಂಬರ್ 495.

ಮೃತಪಟ್ಟ ನಂಜಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಮುನಿವೆಂಕಟಪ್ಪ, ಮುನಿಯಪ್ಪ, ಮೃತಪಟ್ಟ ಸದರೀ ನಂಜಪ್ಪನಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ತಾಲ್ಲೂಕು ಗಂಗಮ್ಮನಗುಡಿ ಪಾಳ್ಯ ಸ್ಥಳದ ಮುನಿವೆಂಕಟಪ್ಪ, ಮುನಿಯಪ್ಪ, ಇವರು ಡಿಟೋ ವಾಸಸ್ಥನಾಗಿ ಮೃತಪಟ್ಟ ನಂಜಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ಮೈನರ್ ಕಾಳಪ್ಪಾ, ಕೊನೇರಪ್ಪ, ಇವರಿಗೋಸ್ಕರ ಗಾರ್ಡಿಯನ್ನಾಗಿ ವಸೂಲ್ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾರೆ.

ಸದರೀ ದರಖಾಸ್ತುದಾರರಾದ ಮುನಿವೆಂಕಟಪ್ಪ, ಮುನಿಯಪ್ಪ, ಇವರ ಅರ್ಜಿಯನ್ನು 1884ನೇ ಇಸವಿ ಜನವರೀ ತಿಂಗಳು ತಾರೀಖು 31ರಲ್ಲು ಬೆಂಗಳೂರು ಮೊಕ್ಕಾಮಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲವಲ್ಲಿ ಸದರೀ ಮೃತಪಟ್ಟ ನಂಜಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1883ನೇ ಇಸವಿ ಅರ್ಜೀ ನಂಬರ್ 496.

ಮೃತಪಟ್ಟ ದೇವಾಂಗದ ವುಗ್ರಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಚಿಕ್ಕಆದೆಪ್ಪ, ಮೃತಪಟ್ಟ ಸದರೀ ವುಗ್ರಪ್ಪನವರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ದೇವನಹಳ್ಳಿ ಸ್ಥಳದ ಚಿಕ್ಕ ಆದೆಪ್ಪನವರು, ಡಿಟೋ ವಾಸಸ್ಥರಾಗಿ ಮೃತಪಟ್ಟ ವುಗ್ರಪ್ಪನವರ ಜಿಂದಗೀ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ,

ಸದರೀ ದರಖಾಸ್ತುದಾರರಾದ ಚಿಕ್ಕ ಆದೆಪ್ಪನವರ ಅರ್ಜೀಯನ್ನು 1884ನೇ ಇಸವಿ ಜನವರೀ ತಿಂಗಳು ತಾರೀಖು 31ರಲ್ಲು ಬೆಂಗಳೂರು ಮೊಕ್ಕಾಂನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವುಗ್ರಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1883ನೇ ಇಸವಿ ಡಿಶಂಬರ್ ತಿಂಗಳು 22ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1884ನೇ ಇಸವೀ ಅರ್ಜೀ ನಂಬರ್ 1.

ಮೃತಪಟ್ಟ ಅಕ್ಕಂಣೆಮ್ಮನ ಆಸ್ತಿ ವಿಷಯದಲ್ಲಿ—

ಅರ್ಜೀದಾರು ಲಕ್ಷ್ಮೀನಾರಾಯಣಶಾಸ್ತ್ರಿ, ಮೃತಪಟ್ಟ ಸದರೀ ಅಕ್ಕಂಣೆಮ್ಮನಿಗೆ ದತ್ತು ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಕೋಲಾರ ತಾಲ್ಲೂಕು ವಡುಗೂರು ಸ್ಥಳದ ಲಕ್ಷ್ಮೀನಾರಾಯಣಶಾಸ್ತ್ರಿ, ಡಿಟೋ ವಾಸಸ್ಥಳಾಗಿ ಮೃತಪಟ್ಟ ಅಕ್ಕಂಣೆಮ್ಮನ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಲಕ್ಷ್ಮೀನಾರಾಯಣಶಾಸ್ತ್ರಿ ಅರ್ಜೀಯನ್ನು 1884ನೇ ಇಸವಿ ಫಿಬ್ರುವರೀ ತಿಂಗಳು ತಾರೀಖು 13ರಲ್ಲು; ಬೆಂಗಳೂರು ಮೊಕ್ಕಾಂನಲ್ಲಿ ಕೇಳಿ ಸರ್ಟಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಕ್ಕಂಣಿಮ್ಮನ ಆಸ್ತಿಗೆ ಹಕ್ಕುದಾರರಾದ ವಿಷಿಷ್ಟರೂ ಈ ಕೋರ್ಟನಲ್ಲಿ ಹಾಜರಿರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಜನವರೀ ತಿಂಗಳು 8ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ಆರ್. ಎ. ತಂಬುಚೆಟ್ಟಿ,
ಡಿಸ್ಟ್ರಿಕ್ಟು ಜಡ್ಜಿ.

ವ್ಯೆಸೂರು ಗೆಜೆಟ್, ಚಂದಾ ದರ ವಗ್ಯೆರೆ.

	ಚಂದಾ. ರೂ.	ಅ.	ಟಪ್ಪಾಲ್ ಹಾಸಲು ಮ್ಯೆಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ. ರೂ.	ಅ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸ.ದಾ 12 ತಿಂಗಳಿಗೆ	7	0	3	8
ಛಷ್ ಮಾಹೆ ಯಾ ಕ್ವಾರಟರಿಗೆ	ದಾಮಾಷಾಯಿ ಪ್ರಕಾರ ದರಗಳು.			

ಶಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟೀಸುಗಳು;—

	ರೂ.	ಅ.
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ) ..	2	8
ಯರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ	1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ, ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆನೋಟೀಸ್‌ಗಳಿಗೆ:—		
ಮೊದಲನೇ ದಫಾ	5	0
ಯೆರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	2	8

ಶಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಡ್ಯುಪ್ಲಿಕೇಟ್ ಕಾಫೀಪಟ್ಟೀ ವಗ್ಯೆರೇ ಕೊಡುವ ಬಗ್ಯೆ ರೆವಿನ್ಯೂ ಆಫೀಸರ್‌ಗಳು ಕೊಡುವ ನೋಟೀಸ್‌ಗಳಿಗೆ:—

			ರೂ.	ಅ.
ಮೊದಲನೇ ಸಲಕ್ಕೆ ..	ಪುಟ1ಕ್ಕೆ	..	10	0
ಯೆರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	„	..	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್‌ಮಾಡಲ್ಪಡುತ್ತೆ;—

				ರೂ.	ಅ.
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ		ಪಙ್ತಿ1ಕ್ಕೆ	..	0	8
ಯೆರಡನೇ ದಫಾ	ಡಿಟೋ	ಡಿಟೋ	..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ		..	..	0	4

ಬಮೋಜಿಬ್ ಹುಕ್ಕುಂ,
ಹೆಚ್. ಹಡರ್ಸನ್,
ಮ್ಯೆ. ಗೆ. ಕಂಪೈಲರ್.

Mysore Government Press, Bangalore.—1884.

ಮೈಸೂರ ಗೆಜೆಟ್.

ನಂ. 3 ಸರ್ಕಾರದಿಂದ ಘಾಯಿಷ್ ಆದ್ದು. ಸನ್ 1884.

ಬೆಂಗಳೂರು, ಶನಿವಾರ, ಜನವರೀ ತಾ॥ 19, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೇ ಭಾಗ—ಚೀಫ್ ಜಡ್ಜೀಯವರು, ಸರ್ವೇ ವ ಸೆಟಿಲ್ಮೆಂಟ್ ಕಮ್ಮಿಷನರು, ಇನಾಂ ಸೂಪರಿಂಟೆಂಡೆಂಟರು, ಕಾಂಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ್ ವರ್ಕ್ಸ ಆಫೀಸರ್ಗಳು, ಮಿಲಿಟೇರಿ ಸಿಕ್ರಿಟೆರಿಯವರು, ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡುಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್ಗಳು—ಇಲ್ಲಾ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲಾ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್.

ಇಸ್ತಿಹಾರ್ನಾಮೆಗಳು.

ತಾರೀಖು 26ನೇ ಅಕ್ಟೋಬರ್ 1883.

ನಂ. 256.—ಇದರಿಂದ ಸರ್ವ ಜನಗಳ ತಿಳುವಳಿಕೆ ಬಗ್ಯೆ ಪ್ರಕಟ ಪಡಿಸುವದೇನಂದರೆ, ಮೈಸೂರು ದೇಶದ ಉತ್ಪತ್ತೀ ಬಾಬತು ಗಂಧದ ಮರಗಳ ಸಾಲೀಯಾನಾ ಹರಾಜು ಇದರಡಿ ನಮೂದು ಮಾಡಿರುವ ಸ್ಥಳಗಳಲ್ಲಿ ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ಗಳು ವ ಫಾರೆಸ್ಟ್ ಆಫೀಸರರಿಂದ ಆಯಾ ಸ್ಥಳಗಳ ಬಾಜೂದಲ್ಲಿ ಕಾಣಿಸಿರುವ ತಾರೀಖುಗಳಲ್ಲಿ ನಡಿಸಲ್ಪಡುತ್ತೆ.

*　　　*　　　*

*　　　*　　　*

ಹಾಸನ	21ನೇ ಡಿಟೋ	ಡಿಟೋ 350 ,,

ಹರಾಜಿನ ಷರತ್ತುಗಳು—1874ನೇ ಇಸವಿ ಡಿಶಂಬರ್ 5ನೇ ಮಸ್ಕೂರ 48ನೇ ನಂಬರ್ ಮೈಸೂರು ಗೆಜೆಟಿನಲ್ಲಿ ಘಾಯಿಷ್ ಮಾಡಲ್ಪಟ್ಟ ಪ್ರಕಾರ ಇರುವದು ಮತ್ತು ಹರಾಜಾಗುವ ಕಾಲದಲ್ಲಿ ಓದಲ್ಪಡುವದು. ತೀರ್ಥಹಳ್ಳಿ ಚಿಕ್ಕಮಗಳೂರು, ಮತ್ತು ಹಾಸನ ಈ ಸ್ಥಳಗಳಲ್ಲಿ ಖರೀದಿಮಾಡಲ್ಪಡುವ ಗಂಧದ ಮರಗಳಿಗಾಗಿ ಸಲ್ಲಬೇಕಾದ ಮೊಬಲಗನ್ನ ಪಾವತಿ ಮಾಡುವ ವಾಯಿದೆಯು, 1884ನೇ ಇಸವಿ ಮಾರ್ಚಿ 25ನೇ ಮಸ್ಕೂರಿಗೆ ಪೂರೈಸುತ್ತೆ.

ತಾರೀಖು 28ನೇ ಡಿಶಂಬರ್ 1883.

ನಂ. 292.—ಸರ್ 1870ನೇ ಇಸವಿಯ ಲ್ಯಾಂಡ್ ಅಕ್ವಿಜಿಷರ್ ಅಕ್ಟಿನ 4ನೇ ಸೆಕ್ಷರ್ ಅನುಸರಿಸಿ ಇದಕ್ಕೆ ಸಂಬಂಧಿಸಿದ ಜನಗಳಿಗೆ ಇದರಿಂದ ತಿಳಿಸಲ್ಪಡುವದೇನಂದರೆ, ತಿಪಟೂರಿಂದ ಬೀರೂರಿಗೂ, ಬೀರೂರಿಂದ ಹರಿಹರಕ್ಕೂ ರೆಯಿಲ್ ಯೇಪಾರ್ಡು ಮಾಡುವ ಬಗ್ಯೆ ಸದರೀ ಆಕ್ಟು ಅನುಸರಿಸಿ ಕಂಪೆನೇಷರ್ ಕೊಟ್ಟು ಗವರ್ನಮೆಂಟಿನಿಂದ ತೆಗದುಕೊಳ್ಳಲ್ಪಡುವದು, ಮೇಲೆ ಕಂಡ ರೆಯಿಲ್‌ವೇ ಲೈನನ್ನು ಹಾಲೀ ಸರ್ವೇ ಮಾಡುವ ಜನಗಳು ತಮ್ಮ ಕೆಲಸ ಚಲಾಯಿಸುವದರ ದೆಸೆಯಿಂದ ಅವರನ್ನು ಪ್ರಜೆಗಳು ಯಾವ ವಿಧದಿಂದಲೂ ನಿರೋಧಿಸಲ್ಪಡಕೂಡದು.

ತಾರೀಖು 18ನೇ ಜನವರೀ 1884.

ನಂ. 299.—ಲೇಟ್ ನರಶೀಪುರ ತಾಲ್ಲೂಕಿನಿಂದ ಚನ್ನರಾಯಪಟ್ಣ ತಾಲ್ಲೂಕಿಗೆ ವರ್ಗ ಮಾಡಲ್ಪಟ್ಟ ಇದರಡಿ ಕಂಡ ಗ್ರಾಮವು ಅದರ ಸಮೀಪವಾದ ಅಸಲೀ ಗ್ರಾಮಕ್ಕೆ ಶೇರಿಸಿರುತ್ತೆ.

ಮಾಗಣಿ ಹೆಸರು.	ನಂಬರು	ಅಸಲೀ ಗ್ರಾಮದ ಹೆಸರು.	ನಂಬರು	ಮೂರನೇ ಮೇಸ್ತಿಕಿನಲ್ಲಿ ದಾಖಲ್ಮಾಡಿರುವ ಗ್ರಾಮಕ್ಕೆ ಶೇರಿಸಿದ ಗ್ರಾಮ.	ಸರ್ವೆ ನಂಬರು	ಷರಾ
1	2	3	4	5	6	7
1 ಗಣ್ಣಿ	1	ಗುಲಹಳ್ಳಿ	1	ಸಾಸಲಪುರ	187	..

ನಂ. 300—ಕೋಲಾರ ಮುನಸಿಫ್ ಇ. ಸಿ. ಸಿವಜ್ಞಾನಂಪಿಳ್ಳೆ ಯವರಿಗೆ. ಈ ಆಫೀಸ್ 1883ನೇ ಇಸವಿ ನವಂಬರ್ 15ನೇ ಮರ್ಕುಂ 272ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟ ರಜಾಕ್ಕೆ ಜಾಸ್ತಿಯಾಗಿ ಮೆಡಿಕೆಲ್ ಸರಟಿಫಿಕೇಟ್ ಮೇಲೆ 2 ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 18ನೇ ಜನವರೀ 1884.

ನಂ. 301.—ರೆಸಿಡೆಂಟರ ಅಪ್ಪಣೆ ಪ್ರಕಾರ ಬೆಂಗಳೂರು ಶಿವಿಲ್ ವ ಮಿಲಿಟರಿ ಸ್ಟೇಷರ್ ಶೇರಿ, ಬೆಂಗಳೂರು ಷಹರ್ ದೇಖೀಲ್ ಬೆಂಗಳೂರುಡಿಸ್ಟ್ರಿಕ್ಟಿನಲ್ಲಿ 1884ನೇ ಇಸವಿ ಏಪ್ರಿಲ್ 1ನೇ ತಾರೀಖು ಮೊದಲು 1887ನೇ ಇಸವಿ ಮಾರ್ಚೀ 31ನೇ ತಾರೀಖುವರಿಗೆ ಆಗುವ ಮೂರುವರುಷ ಕಾಲಪರಿಯಂತ ಶೇಂದೀ ಬಿಕ್ರೀ ಮಾಡುವ ವಟ್ಟು ಸ್ವಾತಂತ್ರ್ಯದಬಗ್ಯೆ ದರಖಾಸ್ತುಗಳು ಕೋರಲ್ಪಟ್ಟಿವೆ. ಬೆಂಗಳೂರು ಡಿಸ್ಟ್ರಿಕ್ಟಿಗೆ, ದೀವಾನರವರ 1882ನೇ ಇಸವಿ ನವಂಬರ್ 25ನೇ ಮರ್ಕುಂ 13 ವ 137ನೇ ನಂಬರ್ ಮತ್ತು ಅದೇ ಇಸವಿ ಡಿಶಂಬರ್ 9ನೇ ಮರ್ಕುಂ ನಂಬರ್ 147—148 ಮತ್ತು 1882ನೇ ಇಸವಿ ಡಿಶಂಬರ್ 22ನೇ ಮರ್ಕುಂ 166ನೇ ನಂಬರ್ ಇಸ್ತಿಹಾರ್‌ನಾಮೆಗಳಲ್ಲಿ ತಿದ್ದುಪಡಿ ಮಾಡಲ್ಪಟ್ಟ ಪ್ರಕಾರ ಇದರಡಿ ಕಂಡ ತಾಲ್ಲೂಕುಗಳು ಶೇರಿ ಇರುತ್ತವೆ:—

1 ಬೆಂಗಳೂರು	4 ನೆಲಮಂಗಲ	7 ಕೋಲಾರಸ್ಪೇಟೆ
2 ಹೊಸಕೋಟೆ	5 ಕಾನಖಾನಹಳ್ಳಿ	8 ಆನೆಕಲ್
3 ದೊಡ್ಡಬಳ್ಳಾಪುರ	6 ಮಾಗಡಿ	9 ಕುಣಿಗಲ್

2. ಯಷ್ಟುರ ಮೊಬಲಗಿಗೆ ಕೇಳುತ್ತಾರೋ ಅಂತಾ ಸಾಲೀಯಾನಾ ಮೊಬಲಗು ಪ್ರತಿ ದರಖಾಸ್ತಿನಲ್ಲಿಯೂ ನಮೂದಿಸಲ್ಪಟ್ಟು ಆದರ ಸಂಗಡ ನಗದಾಗಿಯಾಗಲಿ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ 1,000 ರೂಪಾಯಿಗಳ ಡಿಪಾಜಿಟನಿಶಿ ಲಿಫಾಪೆಯೊಳಗೆ ಹಾಕಿ ಬಂದ್ ಮಾಡಲ್ಪಟ್ಟು "ಬೆಂಗಳೂರು ಡಿಸ್ಟ್ರಿಕ್ಟಿನೊಳಗೆ ಶೇಂದಿ ಬಿಕ್ರಿ ಮಾಡತಕ್ಕ ಬಟ್ಟು ಸ್ವಾತಂತ್ರದ ಬಗ್ಯೆ ದರಖಾಸ್ತು" ಯಂತ ಲಿಫಾಪೆ ಮೇಲೆ ಬರೆದು ಕಳುಹಿಸತಕ್ಕದ್ದು.

3. ದರಖಾಸ್ತುಗಳು, ಸರ್ 1884ನೇ ಇಸವಿ ಫಿಬ್ರವರೀ 15ನೇ ಮರ್ಕುಮಿನ ಮಧ್ಯಾನ್ಹದೊಳಗಾಗಲಿ, ತತ್ಪೂರ್ವವಾಗಲಿ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಆಫಿಸಿನಲ್ಲಿ ಪಾವತೀ ಮಾಡಲ್ಪಡತಕ್ಕದ್ದು. ಆಗ ಸದರೀ ದರಖಾಸ್ತುಗಳು ದರಖಾಸ್ತುದಾರರ

ರೂಬರೂ ಖುಲ್ಲಾ ಮಾಡಲ್ಪಡುವವು. ಯಾವ ದರಖಾಸ್ತುದಾರನ ದರಖಾಸ್ತನ್ನು, ದೀವಾನರವರಿಗೆ ಶಿಫಾರಸ್ ಮಾಡುವ ಬಗ್ಯೆ ಡೆಪ್ಯುಟಿ ಕಮ್ಮಿಷನರು ಚುನಾಯಿಸಿಕೊಳ್ಳುತ್ತಾರೋ ಅಂಥಾ ದರಖಾಸ್ತುದಾರನು ಕೂಡ್ಲೆ ನಗದಾಗಿಯಾಗಲಿ, ಗವರ್ನ್ಮೆಂಟ್ ಪತ್ರಗಳ ಮೂಲಕವಾಗಲಿ ದರಖಾಸ್ತು ಮಾಡಿದ ಸಾಲೀಯಾನಾ ಇಜಾರೇ ಮೊಬಲಗು ಪೈಕೀ ಹನ್ನೆರಡರಲ್ಲಿ ಒಂದು ಭಾಗವಾಗಲಿ (ಅಥವಾ ಒಂದು ತಿಂಗಳ ಖಿಸ್ತು ಮೊಬಲಗಾಗಲಿ) ಜಾಸ್ತಿಯಾಗಿ ಡಿಪಾಜಿಟ್ ಇಡತಕ್ಕದ್ದು, ಇದಕ್ಕೆ ತಪ್ಪಿದರೆ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಡಿಪಾಜಿಟ್ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

4. ದೀವಾನರವರ ತೀರ್ಮಾನ ಫಾಯಿಷ್ ಮಾಡಲ್ಪಟ್ಟಾಗ ಯಾವ ದರಖಾಸ್ತುದಾರರ ದರಖಾಸ್ತುಗಳು ತಿರಸ್ಕರಿಸಲ್ಪಟ್ಟಿರುತ್ತವೋ ಅಂತಾ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್‌ಗಳು, ಅವರು ಖಾಯಿಷ್ ಮಾಡಿದಾಗ ಅವರಿಗೆ ವಾಪಸ್ ಮಾಡಲ್ಪಡುವದು: ಚಡದರಖಾಸ್ತನ್ನಾಗಲೀ, ಯಾವ ದರಖಾಸ್ತನ್ನಾಲೀ ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದೀವಾನರವರು ತಮ್ಮಲ್ಲಿ ಉಳಿಸಿಕೊಂಡಿರುತ್ತಾರೆ.

5. ಯಾರ ದರಖಾಸ್ತು ಮಂಜೂರ್ಮಾಡಲ್ಪಡುತ್ತೋ ಅವರಿಗೆ ದೀವಾನರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ ಯೆಂಟು ದಿನಗಳೊಳಗಾಗಲಿ, 3ನೇ ಕಲಂ ಅನುಸರಿಸಿ ಮೊದಲು ಡಿಪಾಜಿಟ್ ಯಿಟ್ಟಿರುವ ಮೊಬಲಗ್ ದೇಖಿಲ್, ದರಖಾಸ್ತು ಮಾಡಲ್ಪಟ್ಟ ಸಾಲೀಯಾನಾ ಇಜಾರೇ ಮೊಬಲಗ್ ಪೈಕೀ ಹಾಗಪಾಲಿಗೆ ಸಮನಾಗಿರುವ ಒಂದು ಮೊಬಲಗನ್ನು ನಗದಾಗಿಯಾಗಲೀ ಕ್ರಮಪ್ರಕಾರ ಇಂಡಾರ್ಸ್ ಮಾಡಲ್ಪಟ್ಟ ಗವರ್ನ್‌ಮೆಂಟ್ ಪತ್ರಗಳ ಮೂಲಕವಾಗಿಯಾಗಲೀ, ಡೆಪ್ಯುಟಿ ಕಮ್ಮಿಷನ್ನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತ್ತುಗಳಿಗೆ ಬದ್ಧರಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾಕಾಗದದ ಮೇಲೆ, ಒಂದು ಕರಾರ್ ಬರದುಕೊಡತಕ್ಕದ್ದು, ಆತನು ಕರಾರಿಗೆ ರುಜುಮಾಡುವದಕ್ಕಾಗಲಿ, ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲೀ, ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವೇ ಇಡಲ್ಪಟ್ಟ ಡಿಪಾಜಿಟ್‌ಗಳು, ಗವರ್ನ್‌ಮೆಂಟಿಗೆ ಸೇರಿಸಕೊಳ್ಳಲ್ಪಟ್ಟು ಇಜಾರೆಯು ಅನ್ಯಥಾ ವಿಲಾ ಮಾಡಲ್ಪಡುವದು.

ಷರತ್ತುಗಳು.

1. ಸಾಲೀಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಒಂದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್ ಸೆಸ್ ದೇಖೀಲ್ ಅಂತಾ ಇಜಾರೇ ಮೊಬಲಗನ್ನು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದಕ್ಕೆ ಮುಂದಾಗಿಯಾಗಲಿ, ಡಿಸ್ಟ್ರಿಕ್ಟು ಖಜಾನೆಯಲ್ಲಿ ಮಾಹೆಯಾನಾ ಸಮನಾದ ಖಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು, ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕೀಗಳಿಗೂ, ಸೇಕಡಾ ಸಾಲಿಯಾನಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕೊಡತಕ್ಕದ್ದು: ಅಂತಾ ಬಾಕೀ ಮೊಬಲಗ್‌ಗಳು ಪಾವತೀಯಾಗತಕ್ಕ ತಿಂಗಳು ಕಳೆದ ಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜಮೀನ್ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಇರುವ ರೂಲ್ಸಿನಲ್ಲಿ ವಿಧಿಸಲ್ಪಟ್ಟರೀತಿಯಾಗಿ ಇಜಾರೇದಾರನ ಸ್ವತ್ತು ಜಫ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು. ಮತ್ತು ಇಜಾರೇ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನೀಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀದೇಖೀಲ್ ತಮಾಂ ಬಾಕೀಗಳನ್ನೂ ಹಾಗೆ ಇಜಾರೇ ಪುನಃ ಹರಾಜ್ ಹಾಕುವದರಿಂದಾಗಲಿ, ವಿಲಾ ಮಾಡುವದರಿಂದಾಗಲಿ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ, ಜಾಮೀನಿ ಮೊಬಲಗ್ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದೀವಾನರವರ ಮಂಜೂರಾತೀನಿಶೀ ಡೆಪ್ಯುಟಿ ಕಮ್ಮಿಷನರವರಿಗೆ ಯಖ್ತ್ಯಾರೀ ಯಿರತಕ್ಕದ್ದು.

2. ಚಿಲ್ಲರೇ ಫುರೋಖ್ತುದಾರ್ರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸ್‌ಗಳು, ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂಠೋಕ್ತವಾದ ಮಂಜೂರಾತಿ ಇಲ್ಲದೆ, ಇಜಾರೇದಾರನು ಹಾಲೀ ಶೇಂದೀ ಫುರೋಖ್ತು ಬಗ್ಯೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖ್ಯೆಯ ವಿಷಯದಲ್ಲಾಗಲಿ, ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬ್‌ಗಳ ಮೇಲೆ ಯಾವ ಅಂಗಡಿಗಳನ್ನಾದರೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷನರು ಅರ್ಹರಾಗಿರುತ್ತಾರೆ.

3. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ, ಧಾನ್ಯವನ್ನಾಗಲಿ, ಸರುಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

4. ಇಜಾರೇದಾರನು, ದೀವಾನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಬದ್ಧನಾಗಿ ನಡದುಕೊಳ್ಳತಕ್ಕದ್ದು.

5. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರಿಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗೈರೇಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರ ಹಕ್ಕುದಾರೀಗಳಲ್ಲಿ, ಗುತ್ತಿಗೇದಾರನು ಎಷ್ಟುಮಟ್ಟಿಗೂ ಪ್ರವೇಶಿಸಕೂಡದು. ಅಂತಾ ಹಕ್ಕುಗಳ ವಿಷಯದಲ್ಲಿ ಉಂಟಾಗುವ ತಕರಾರ್‌ಗಳನ್ನು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರು ಫೈಸಲ್ ಮಾಡತಕ್ಕದ್ದು. ಅಂತಾ ಫೈಸಲಿಗೆ ಗುತ್ತಿಗೇದಾರನು ಬದ್ಧನಾಗಿರತಕ್ಕದ್ದು. ಪರಂತು, ಸದರೀ ಫೈಸಲ್ ಅಪ್ಪೀಲ್‌ನಲ್ಲಿ ದೀವಾನರವರಿಂದ ಕಾಯಂಮಾಡಲ್ಪಡಲಿಕ್ಕಾಗಲಿ ಅನ್ಯಥಾ ಆಗಲಿ ಗುರಿಯಾಗತಕ್ಕದ್ದು.

6. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಶೇಂದಿ ಅಂಗಡಿಗಳ್ಯಾವವೂ ತೆಗೆಯಲ್ಪಡಕೂಡದು, ಮತ್ತು ತಾಂ ಅಂಗಡಿಗಳೂ ಡೆಪ್ಯುಟಿ ಕಮ್ಮಿಷನರಿಂದ ವಿಶೇಷ ಸಂದರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

7. ಯೂರೋಪಿಯನ್ ಸೋಲ್ಜರುಗಳ ವಂದು ರಿಜಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯಃ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದಿ ಪುರೋಖ್ತು ಬಗ್ಯೆ ಇರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು. ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟು ಮಾಡಲ್ಪಟ್ಟಿತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು, ಅಂಥಾ ಫೌಜಿನವರು ತಮ್ಮ ಕಡೇ ಅಬ್ಕಾರೀ ಕಂಟ್ರಾಕ್ಟರನ್ನು ಇಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿ ಇರತಕ್ಕದ್ದು.

8. ಇಜಾರೇದಾರನು ಡಿಸ್ಟ್ರಿಕ್ಟಿನ ಸರಕಾರದ ಬಂಜರ್ ಜಮೀನ್‌ನಲ್ಲಿ ಇರುವ ಈಚಲು ಮರಗಳನ್ನು, ಇಜಾರೇಗಳ ಸ್ಥಳ ಸರಹದ್ದಿನೊಳಗೆ ಪುರೋಖ್ತು ಬಗ್ಯಾಗಲಿ ಜಲ್ಲ ತಯಾರ್ ಮಾಡುವ ಬಗ್ಯಾಗಲಿ ಶೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿಕೊಳ್ಳಬಹುದು, ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಐಯಿಂದಾ ಅನುಭವಿಸಲ್ಪಡತಕ್ಕ ಜಮೀನುಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕಿರುವದಿಲ್ಲ, ಮತ್ತು ಗವರ್ನಮೆಂಟಿನವರು ಯಾವಾಗಲಾದರೂ, ಇತರ ಕೆಲಸಗಳಿಗೋಸ್ಕರವಾಗಲಿ, ಇತರ ಡಿಸ್ಟ್ರಿಕ್ಟುಗಳಿಗೆ ಶೇಂದೀ ವದಗಿಸುವದಕ್ಕೋಸ್ಕರವಾಗಲಿ ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ, ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ. ಡೆಪ್ಯುಟಿ ಕಮ್ಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ, ವ ಷರತ್‌ಗಳ ಪ್ರಕಾರವೂ ಮಾತ್ರವೇ ಜಲ್ಲ ತಯಾರ್ಮಾಡಲ್ಪಡತಕ್ಕದ್ದು.

9. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಶೇಂದಿ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟ್ ವಿಷಯದಲ್ಲಾಗಲಿ, ಗವರ್ನಮೆಂಟಿನವರು ಮಾಡತಕ್ಕ ಯಾವ ಏರ್ಪಾಡುಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ಸೋಡೀಗೆ ಬಾಧ್ಯತೆ ಉಳ್ಳವನಾಗಿರುವದಿಲ್ಲ. ಡಿಸ್ಟ್ರಿಕ್ಟು ಪೈಕೀ ಯಾವ ಭಾಗದಲ್ಲಾಗಲಿ, ಸರ್ಕಾರೀ ಕಾರಣಗಳಮೇಲೆ ಇಜಾರೇಯನ್ನು ಮವ್ಕೂಫ್ ಮಾಡಿ ಆ ಬಗ್ಯೆ ನ್ಯಾಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದೀವಾನರವರು, ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

10. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯೂರೇಷಿಯನ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದ ಮೇಲಿರುವಲ್ಲಿ ಒಬ್ಬ ಶಿಪಾಯಿಗಾಗಲಿ, ಪೋಲೀಸಿನವರಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರ್ಕಿಲಾಫಾಗಲಿ ನಡೆದಲ್ಲಿ ಅದರಿಂದ ಗುತ್ತಿಗೇದಾರ ಯಾ ಪುರೋಖ್ತುದಾರ, ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಪುರೋಖ್ತುದಾರನ ಲೈಸೆನ್ಸು ರದ್ದಾಗಲಿಕ್ಕೂ, ಗುರಿಯಾಗುತ್ತೆ.

11. ಗುತ್ತಿಗೇದಾರನು, ತನ್ನ ನೌಕರರು ಯಾ ಮುತಾಲೀಕರು, ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಒಂದು ಗಜದ ಎತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಯಾವೇ ಈಚಲು ಮರಗಳಿಂದ ಶೇಂದೀ ಇಳಿಸದೇಯೂ, ಮತ್ತು ಶೇಂದಿ ಇಳಿಸುವದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ಉಪಯೋಗಿಸದೆಯೂ, ಇರುವ ಬಗ್ಯೆ ಜವಾಬ್‌ದಾರನಾಗಿರತಕ್ಕದ್ದು. ಈ ನಿಬಂಧನೆಗಳಿಗೆ ಏನಾದರೂ ಬರ್ಕಿಲಾಫ್ ನಡದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, 100 ರೂಪಾಯಿಗಳ ಜುರ್ಮಾನೆಗೂ ಇಜಾರೇದಾರನು ಗುರಿಯಾಗತಕ್ಕದ್ದು.

12. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೂ, ರೊಟ್ಟೀ ಮಾಡತಕ್ಕವರಿಗೂ ಮಾರಲ್ಪಡತಕ್ಕದ್ದು.

	ಜಾಸ್ತಿ. ಶೇರು ಬಂದಕ್ಕೆ ಕ್ರಯ. ರೂ. ಆ. ಪೈ.	ಕಮ್ಮಿ. ರೂ. ಆ. ಪೈ.	ರೊಟ್ಟಿ ಮಾಡುವವರಿಗೆ ಶೇರು ಬಂದಕ್ಕೆ ಕಾಯಂ ಖರೀದಿ. ರೂ. ಆ. ಪೈ.
ಸಿವಿಲ್ ವ ಮಿಲಟೇರಿ ಸ್ಟೇಷರ್ ದೇಖೀಲ್			
ಬೆಂಗಳೂರು ಷಹರನಲ್ಲಿ.	0 1 6	0 1 0	0 1 0
ಬೆಂಗಳೂರು ಡಿಸ್ಟ್ರಿಕ್ಟಿನ ತಾಲ್ಲೂಕು			
ಕಸಬೆಗಳಲ್ಲಿ	0 1 3	0 0 10	
ಡಿಟೋ ಗಾಪಗಾನೆಗಳಲ್ಲಿ	0 1 0	0 0 8	

6. ಶೇಂದಿ ಸಾಗಿಸುವಬಗ್ಯೆ ಉಪಯೋಗಿಸಲ್ಪಡುವ ಭಂಡಿಗಳಿಗಾಗಿ, ವಿಧಿಸಲ್ಪಟ್ಟ ಮೊಹತರ್ಫಾ ಭಂಡೀ ಕಂದಾಯವನ್ನು ಪಾವತೀ ಮಾಡಬೇಕಾಗಿರುತ್ತೆ.

7. ಹಿಂದಿನ ಹುಟ್ಟುವಳಿಯನ್ನೂ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಗಳನ್ನೂ, ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

ತಾರೀಖು 18ನೇ ಜನವರಿ 1884.

ನಂ. 302.—ಕೋಲಾರ ಡಿಸ್ಟ್ರಿಕ್ಟಿನಲ್ಲಿ ಸರ್ 1884ನೇ ಇಸವಿ ಏಪ್ರೆಲ್ 1ನೇ ತಾರೀಖಿಲಾಗಾಯಿತು 1887ನೇ ಇಸವಿ ಮಾರ್ಚಿ 31ನೇ ತಾರೀಖು ವರಿಗೆ ಆಗುವ 3 ವರುಷಗಳ ಕಾಲದಪರ್ಯಂತ್ರ ಶೇಂದಿ ಬಿಕರೀಮಾಡುವ ವಟ್ಟು ಸ್ವಾತಂತ್ರ್ಯದಬಗ್ಯೆ ದರಖಾಸ್ತುಗಳು ಮಾಡಬಹುದೆಂದು ಇದರಿಂದ ಕೋರಲ್ಪಟ್ಟಿರುತ್ತೆ. ಕೋಲಾರ ಡಿಸ್ಟ್ರಿಕ್ಟಿಗೆ, ದೀವಾನರವರ ಸರ್ 1882ನೇ ಇಸವಿ 25ನೇ ನವಂಬರ್ 156ನೇ ನಂಬರು ಮತ್ತು ಅದೇ ಇಸವಿ ಡಿಸಂಬರ 9ನೇ ಮುಕ್ಕಾಂ 147 ವ 148ನೇ ನಂಬರುಳ್ಳ ಇಸ್ತಿಹಾರ್ ನಾಮೆಗಳಿಂದ ಪರಿಷ್ಕರಿಸಲ್ಪಟ್ಟಂತೆ ಇದರಡಿಕಂಡ ತಾಲ್ಲೂಕುಗಳು ಶೇರಿಯಿರುತ್ತವೆ.

1. ಕೋಲಾರ.
2. ಬಾರಿಂಗಪೇಟೆ.
3. ಚಿಂತಾಮಣಿ.
4. ಮುಳಬಾಗಲ್.
5. ಸಿಡ್ಲಘಟ್ಟ.
6. ಚಿಕ್ಕಬಳ್ಳಾಪುರ.
7. ಬಾಗೇಪಲ್ಲಿ.
8. ಗೋರಿಬಿದನೂರು.

2. ಯಷ್ಕ್ಯರ ಮೊಬಲಗಿಗೆ ಕೇಳುತ್ತಾರೋ ಅಂತಾ ಸಾಲೀಯಾನಾ ಮೊಬಲಗು ಪ್ರತಿ ದರಖಾಸ್ತಿನಲ್ಲಿಯೂ ನಮೂದಿಸಲ್ಪಟ್ಟು ಅದರ ಸಂಗಡ ನಗದಾಗಿಯಾಗಲಿ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ 1,000 ರೂಪಾಯಿಗಳ ಡಿಪಾಜಿಟನಿಕೀ ಲಿಫಾಪೆಯೊಳಗೆ ಹಾಕಿ ಬಂದ್ ಮಾಡಲ್ಪಟ್ಟು "ಕೋಲಾರ ಡಿಸ್ಟ್ರಿಕ್ಟಿನೊಳಗೆ ಶೇಂದಿ ಬಿಕ್ರಿ ಮಾಡತಕ್ಕ ಬಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತು ಯಂತ ಲಿಫಾಫೆ ಮೇಲೆ ಬರೆದುಕಳುಹಿಸತಕ್ಕದ್ದು.

3. ದರಖಾಸ್ತುಗಳು, ಸರ್ 1884ನೇ ಇಸವಿ ಫೆಬ್ರವರಿ 13ನೇ ಮುಕ್ಕಾಮಿನ ಸಾಯಿಂಕಾಲ 6 ಘಂಟೆಗಳ ವಳಗಾಗಿಯಾಗಲಿ, ತತ್ಪೂರ್ವವಾಗಲಿ, ಕೋಲಾರದಲ್ಲಿ ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಆಫಿಸಿನಲ್ಲಿ ಪಾವತೀ ಮಾಡಲ್ಪಡತಕ್ಕದ್ದು; ಅಥವಾ 1884ನೇ ಇಸವಿ ಫಿಬ್ರವರಿ 15ನೇ ಮುಕ್ಕಾಮಿನ ಮಧ್ಯಾನ್ಹದಲ್ಲಿ ಯಾ ತತ್ಪೂರ್ವದಲ್ಲಿಯಾಗಲಿ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಆಫಿಸಿನಲ್ಲಿ ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರಿಗೆ ಪಾವತಿ ಮಾಡತಕ್ಕದ್ದು. ಆಗ ಸದರೀ ದರಖಾಸ್ತುಗಳು ದರಖಾಸ್ತುದಾರರ ರೂಬರೂ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರ ಆಫಿಸಿನಲ್ಲಿ ಖುಲ್ಲಾ ಮಾಡಲ್ಪಡುವವು. ಯಾವ ದರಖಾಸ್ತುದಾರನ ದರಖಾಸ್ತನ್ನು, ದೀವಾನರವರಿಗೆ ಫಾರಸ್ ಮಾಡುವ ಬಗ್ಯೆ ಡೆಪ್ಯುಟಿ ಕಮ್ಮಿಷನರು ಚುನಾಯಿಸಿ ಕೊಳ್ಳುತ್ತಾರೋ ಅಂತಾ ದರಖಾಸ್ತುದಾರನು ಕೂಡ್ಲೆ ನಗದಾಗಿಯಾಗಲಿ, ಗವರ್ನಮೆಂಟ್ ಪತ್ರಗಳ ಮೂಲಕವಾಗಲಿ ದರಖಾಸ್ತು ಮಾಡಿದ ಸಾಲೀಯಾನಾ ಇಜಾರೇ ಮೊಬಲಗು ಪೈಕೀ ಹನ್ನೆರಡಲ್ಲಿ ವಂದು ಭಾಗವಾಗಲಿ (ಅಥವಾ ವಂದು ತಿಂಗಳ ಖಿಸ್ತು ಮೊಬಲಗಾಗಲಿ) ಜಾಸ್ತಿಯಾಗಿ ಡಿಪಾಜಿಟ್ ಇಡತಕ್ಕದ್ದು. ಇದಕ್ಕೆ ತಪ್ಪಿದರೆ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಡಿಪಾಜಿಟ್ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

4. ದೀವಾನರವರ ತೀರ್ಮಾನ ಫಾಯಿಷ್ ಮಾಡಲ್ಪಟ್ಟಾಗ ಯಾವ ದರಖಾಸ್ತುದಾರರ ದರಖಾಸ್ತುಗಳು ತಿರಸ್ಕರಿಸಲ್ಪಟ್ಟಿರುತ್ತವೋ ಅಂತಾ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟಗಳು, ಅವರು ಖಾಯಿಷ್ ಮಾಡಿದಾಗ ಅವರಿಗೆ ವಾಪಸ್ ಮಾಡಲ್ಪಡುವದು; ಜಾಸದರಖಾಸ್ತನ್ನಾಗಲೀ ಯಾವ ದರಖಾಸ್ತನ್ನಾಗಲೀ, ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದೀವಾನರವರು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ.

5. ಯಾರ ದರಖಾಸ್ತು ಮಂಜೂರ್ಮಾಡಲ್ಪಡುತ್ತೊ ಅವರಿಗೆ ದೀವಾನರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ ಯೆಂಟು ದಿನಗಳೊಳಗಾಗಿ, 3ನೇ ಕಲಂ ಅನುಸರಿಸಿ ಮೊದಲು ಡಿಪಾಜಿಟ್ ಯಿಟ್ಟಿರುವ ಮೊಬಲಗ್ ದೇಖೀಲ್, ದರಖಾಸ್ತು ಮಾಡಲ್ಪಟ್ಟ ಸಾಲೀಯಾನಾ ಇಜಾರೇ ಮೊಬಲಗ್ ಪೈಕೀ ಹಾಗಪಾಲಿಗೆ ಸಮಿನಾಗಿರುವ ಒಂದು ಮೊಬಲಗನ್ನು ನಗದಾಗಿಯಾಗಲೀ ಕ್ರಮಪ್ರಕಾರ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲೀ, ಡೆಪ್ಯುಟಿ ಕಮ್ಮಿಷನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತ್ತುಗಳಿಗೆ ಬದ್ಧರಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾ ಕಾಗದದ ಮೇಲೆ, ಒಂದು ಕರಾರ್ ಬರದುಕೊಡತಕ್ಕದ್ದು. ಆತನು ಕರಾರಿಗೆ ರುಜು ಮಾಡುವದಕ್ಕಾಗಲೀ, ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲೀ, ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವವೇ ಇಡಲ್ಪಟ್ಟ ಡಿಪಾಜಿಟ್‌ಗಳು, ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು ಇಜಾರೆಯು ಅನ್ಯಥಾ ವಿಲಾ ಮಾಡಲ್ಪಡುವದು.

ಷರತ್ತುಗಳು.

1. ಸಾಲೀಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಒಂದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್ ಸೆಸ್ ದೇಖೀಲ್ ಅಂತಾ ಇಜಾರೇ ಮೊಬಲಗನ್ನು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದಕ್ಕೆ ಮುಂದಾಗಿಯಾಗಲಿ, ಡಿಸ್ಟ್ರಿಕ್ಟ ಖಜಾನೆಯಲ್ಲಿ ಮಾಹೇಯಾನಾ ಸಮನಾದ ಖಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು. ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕಿಗಳಿಗೂ, ಸೇಕಡಾ ಸಾಲೀಯಾನಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕೊಡತಕ್ಕದ್ದು. ಅಂತಾ ಬಾಕೀ ಮೊಬಲಗ್‌ಗಳು ಪಾವತಿಯಾಗತಕ್ಕ ತಿಂಗಳು ಕಳೆದ ಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜಮೀನ್ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಇರುವ ರೂಲ್ಸ್‌ನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೇದಾರನ ಸ್ವತ್ತು ಜಪ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು. ಮತ್ತು ಇಜಾರೇ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನೀ ಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಖೀಲ್ ತಮಾಂ ಬಾಕಿಗಳನ್ನೂ, ಹಾಗೆ ಇಜಾರೇ ಪುನಃ ಹರಾಜ್ ಹಾಕುವದರಿಂದಾಗಲಿ, ವಿಲಾ ಮಾಡುವದರಿಂದಾಗಲಿ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ ಜಾಮೀನಿ ಮೊಬಲಗ್ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಪ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದೀವಾನರವರ ಮಂಜೂರಾತೀನಿಶೀ ಡೆಪ್ಯುಟಿ ಕಮ್ಮಿಷನರವರಿಗೆ ಯಿಖ್ತ್ಯಾರಿಯಿರತಕ್ಕದ್ದು.

2. ಚಿಲ್ಲರೇ ಪುರೋಖ್ತುದಾರ್ರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸ್‌ಗಳು ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂಠೋಕ್ತವಾದ ಮಂಜೂರಾತಿ ಇಲ್ಲದೆ, ಇಜಾರೇದಾರನು ಹಾಲೀ ಶೇಂದೀ ಪುರೋಖ್ತು ಬಗ್ಯೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖೆಯ ವಿಷಯದಲ್ಲಾಗಲಿ, ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬುಗಳ ಮೇಲೆ ಯಾವ ಅಂಗಡಿಗಳನ್ನಾದರೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಡಿ ಕಮ್ಮಿಷನರು ಅರ್ಹರಾಗಿರುತ್ತಾರೆ.

3. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ ಧಾನ್ಯವನ್ನಾಗಲಿ, ಸರುಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

4. ಇಜಾರೇದಾರನು, ದೀವಾನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಬದ್ಧನಾಗಿ ನಡದುಕೊಳ್ಳತಕ್ಕದ್ದು.

ಈ ಖೂನಿಯು ಅಕ್ಟೋಬರ ಮಾಹೆ 10ನೇ ತಾರೀಖಿನ ರಾತ್ರಿ $9\frac{1}{2}$ ಮತ್ತು $11\frac{1}{2}$ ಘಂಟೆ ಸಮಯದಲ್ಲಿ ನಡಿಸಲ್ಪಟ್ಟಿಧೆ.

ಖೂನಿ ಮಾಡಲ್ಪಟ್ಟಂಥಾವಳು ಈ ಘಂಟೆಗಳ ಮಧ್ಯದಲ್ಲಿ ಯಾವ ಯಾವ ಸ್ಥಳದಲ್ಲಿ ಹ್ಯಾಗೆ ಇದ್ದಳು ವಗೈರೆ ವರ್ತಮಾನ ಕೊಟ್ಟಂಥಾವರಿಗು ಸಹ ಇನಾಂ ಕೊಡಲ್ಪಡುವದು. ಆದರೆ ಸದರೀ ಇನಾಮಿನ ಮೊಬಲಗು ಸದರೀ ವರ್ತಮಾನದ ಯೋಗ್ಯತಾನುಸಾರವಾಗಿರುವದು.

ಇಂಥಾ ವರ್ತಮಾನ ಕೊಡುವಂಥಾವರು ಯಾವ ಕಾಲದಲ್ಲೀ ಆಗಲಿ ಈ ಕೆಳಗೆ ಸೈನ್ ಮಾಡಿರುವಂಥಾ ಸಾಹೇಬರನ್ನ ಅವರ ಮನೆ ಯಲ್ಲೀ ಆಗಲಿಅಥವಾ ಕಚೇರಿಯಲ್ಲೀ ಆಗಲಿ ನೋಡಬಹುದು.

ಈ. ಹ್ಯೂಟೆರ್ಸ,
ಪೋಲಿಸ್ ಡಿ॥ ಸೂಪರಿಂಟೆಂಡೆಂಟ್.

ತುಮಕೂರು ಡಿಸ್ಟ್ರಿಕ್ಟ್.

ಇಸ್ತಿಹಾರನಾಮೆ.

ತಾರೀಖು 14ನೇ ಜನವರೀ 1884.

ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 23ನೇ ಸೆಕ್ಷನಿಗನುಗುಣವಾಗಿ ತುಮಕೂರು ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾದ ನಾಗೇಶ್ವರಯ್ಯನವರಿಗೆ, 1872ನೇ ಇಸವಿ Xನೇ ಆಕ್ಟೆಂಬ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 23ನೇ ಸೆಕ್ಷನ್ (ಬಿ) ಕ್ಲಾಜ್‌ನಲ್ಲಿ ವಿವರಿಸಲ್ಪಟ್ಟಿರುವ ಮೇರಿಗೆ ಅವರು ತಾಲ್ಲೂಕು ಚಾರ್ಜಿನಲ್ಲಿ ಯಿರುವ ಕಾಲದಲ್ಲಿ ಚಲಾಯಿಸಲ್ಪಡತಕ್ಕ ಬಗ್ಯೆ ಇದರಡೀ ಕಂಡ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ.

1. ಲಾಷ್ ವಿಚಾರಣೆ ಬಗ್ಯೆ ಅಧಿಕಾರ (ಸೆಕ್ಷನ್ 135.)
2. ವಿಚಾರಣೆ ಬಗ್ಯೆ ತಮಿಗೆ ಅಧಿಕಾರ ವಿರುವ ಮೊಕದ್ದಮೆಗಳಲ್ಲಿ ತಕರೀರುಗಳ ಬಾಬತು ಫಿರಿಯಾದಿಗಳನ್ನು ದಾಖಲ್ಮಾಡಿ ಕೊಳ್ಳುವದಕ್ಕೆ ಅಧಿಕಾರ (ಸೆಕ್ಷನ್ 141.)
3. ನಿರೋಧ ವಗೈರೇಗಳನ್ನ ಅಡ್ಡೀ ಮಾಡುವಂತೆ ಹುಕ್ಕುಂ ಕೊಡುವದಕ್ಕೆ ಅಧಿಕಾರ (ಸೆಕ್ಷನ್ 518.)
4. ಬಾರ್ ಬಾರ್ ಹೇಸಿಗೆ ಮಾಡುವದನ್ನ ನಿಷೇಧಿಸಿ ಹುಕ್ಕುಂ ಕೊಡುವ ಬಗ್ಯೆ ಅಧಿಕಾರ (ಸೆಕ್ಷನ್ 517.)

ಮಹಮ್ಮದ್‌ಅಲ್ಲಿ, ಕೆ. ಬಿ.
ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಸಬಾರ್ಡಿನೆಟ್ ಜಡ್ಜೀಯವರ ಕೋರ್ಟಿನಲ್ಲಿ.

1883ನೇ ಇಸವಿ ಅರ್ಜೀ ನಂಬರ್ 553.

ಮೃತಪಟ್ಟ ಸೀತಾರಾಮಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಮಂಜಯ್ಯ, ಮೈನರ್ ಗಾರ್ಡಿಯನ್ ಮತ್ತು ತಾಯಿ ನರಸಮ್ಮ, ಮೃತಪಟ್ಟ ಸದರೀ ಸೀತಾರಾಮಯ್ಯನಿಗೆ ಮಗ ಆಗ ಬೇಕೆಂಬ ಹಕ್ಕುದಾರಿ ಮೇಲೆ ಹೊಳೇನರಸಿಪುರ ಕಸಬಾ ಸ್ಥಳದ ಸದರೀ ಮಂಜಯ್ಯ ಮೈನರ್ ಗಾರ್ಡಿಯನ್ ಮತ್ತು ತಾಯಿ ನರಸಮ್ಮ, ಸದರೀ ವಾಸಸ್ಥನಾಗಿ ಮೃತಪಟ್ಟ ಸೀತಾರಾಮಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 600 ರೂಪಾಯಿಗಳ ಸಾಲವನ್ನು ವಸೂಲ್ಮಾಡುವಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮಂಜಯ್ಯ ಮೈನರ್ ಗಾರ್ಡಿಯನ್ ಮತ್ತು ತಾಯಿ ನರಸಮ್ಮನ ಅರ್ಜೀಯನ್ನು 1884ನೇ ಇಸವಿ ಫಿಬ್ರುವರೀ ತಿಂಗಳು ತಾರೀಖು 19ರಲ್ಲು ಮೈಸೂರು ಮೊಕ್ಕಾಂನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪ ಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೀತಾರಾಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂ ದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ್ 2.

ಮೃತಪಟ್ಟ ತಮ್ಮಯ್ಯ ಜೋಯಿಸನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಗೋಪಾಲಕೃಷ್ಣಸ್ವಾಮಿ ಮೈನರ್ ಗಾರ್ಡಿಯನ್ ಮತ್ತು ತಾಯಿ ಗೌರಮ್ಮ, ಮೃತಪಟ್ಟ ಸದರೀ ತಮ್ಮಯ್ಯ ಜೋ ಯಿಸನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಅತ್ತಿಕುಪ್ಪ ತಾಲ್ಲೂಕು ಕನ್ನಂಬಾಡಿ ಸ್ಥಳದ ಸದರೀ ಗೋಪಾಲ ಕೃಷ್ಣ ಸ್ವಾಮಿ ಮೈ ನರ್ ಗಾರ್ಡಿಯನ್ ಮತ್ತು ತಾಯಿ ಗೌರಮ್ಮ, ಡಿಟ್ಟೋ ವಾಸಸ್ಥನಾಗಿ ಮೃತಪಟ್ಟ ತಮ್ಮಯ್ಯ ಜೋಯಿಸನ ಜಿಂದಗೀ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ಧರಖಾಸ್ತುದಾರರಾದ ಗೋಪಾಲಕೃಷ್ಣಸ್ವಾಮಿ ಮೈನರ್ ಗಾರ್ಡಿಯನ್ ಮತ್ತು ತಾಯಿ ಗೌರಮ್ಮನ ಅರ್ಜಿಯನ್ನು 1884ನೇ ಇಸವಿ ಫೆಬ್ರುವರೀ ತಿಂಗಳು ತಾರೀಖು 19ರಲ್ಲು ಮೈಸೂರು ಮೊಕ್ಕಾಮಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಗಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಮ್ಮಯ್ಯ ಜೋಯಿಸನ ಆಸ್ತಿಗೆ ಹಕ್ಕುದಾರರಾದ ವಿಸ್ಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಯಿರಬೇಕೆಂದು ಇದರಿಂದ ತಿಳಿಯಪಡಿಸಿ ಯಿಧೆ.

1884ನೇ ಇಸವಿ ಜನವರೀ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರಸಿಸಿನವನ್ನ ದಸ್ತಖತ್ತಿನೊಡನೆ ಕೊಡೋಣಾಗಿಧೆ.

ತಾರೀಖು 9ನೇ ಜನವರೀ 1884.

ಇದರಿಂದ ಪ್ರಕಟಿಸುವದೇನಂದರೆ, 1884ನೇ ಇಸವಿಯಲ್ಲಿ ಮೈಸೂರು ಡಿಸ್ಟ್ರಿಕ್ಟಿನಿಂದ ವಿಚಾರಣೆ ಬಗ್ಯೆ ಕಮ್ಮಿಟ್ ಮಾಡಲ್ಪಡುವ ಮೊಕದ್ದಮೆಗಳ ಸೆರ್ಷಸು ದರ್ಯಾಫ್ತಿಯು, ಮೈಸೂರು ಮೊಕ್ಕಾಂನಲ್ಲಿ ಇದರಡೀ ಕಂಡ ತಾರೀಖುಗಳಲ್ಲಿ ನಡಿಸಲ್ಪಡುವದು.

15ನೇ	ಜನವರೀ 1884	ಮಂಗಳವಾರ
11ನೇ	ಫೆಬ್ರುವರೀ ,,	ಸೋಮವಾರ
11ನೇ	ಮಾರ್ಚೀ ,,	ಮಂಗಳವಾರ
1ನೇ	ಏಪ್ರಿಲ್ ,,	ಗುರುವಾರ
9ನೇ	ಜೂನ್ ,,	ಸೋಮವಾರ
14ನೇ	ಜುಲೈ ,,	ಡಿಟೋ
11ನೇ	ಆಗಸ್ಟು ,,	ಡಿಟೋ
8ನೇ	ಸೆಪ್ಟಂಬರ್ ,,	ಡಿಟೋ
13ನೇ	ಅಕ್ಟೋಬರ್ ,,	ಡಿಟೋ
10ನೇ	ನವಂಬರ್ ,,	ಡಿಟೋ
8ನೇ	ಡಿಸಂಬರ್ ,,	ಡಿಟೋ

ಧರ್ಯಾಫ್ತೀ ಬಗ್ಯೆ ಕಮ್ಮಿಟ್ ಮಾಡುವ ಅಧಿಕಾರವುಳ್ಳ ತಮಾಂ ಮಾಜೀಸ್ಟ್ರೇಟರುಗಳೂ, ಅವರಿಂದ ಕಮ್ಮಿಟ್ ಮಾಡಲ್ಪಡುವ ಮೊಕದ್ದಮೆಗಳಲ್ಲಿ ಫಿರ್ಯಾದಿ ವ ಸಾಕ್ಷಿಗಾರರ ಹಾಜರಾತಿ ಬಗ್ಯೆ ಸದರೀ ತಾರೀಖುಗಳಲ್ಲಿ ತಕ್ಕ ಏರ್ಪಾಡು ಮಾಡತಕ್ಕದ್ದೆಂದು ಕೇಳಿ ಕೊಳ್ಳಲ್ಪಟ್ಟಿರುತ್ತಾರೆ.

ವಿ. ಎಸ್. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ತಾರೀಖು 4ನೇ ಜನವರೀ 1884.

...ರಿಂದ ತಿಳಿಸುವದೇನಂದರೆ, ಶಿವಮೊಗ್ಗಾ ಜೈಲ್‌ನಲ್ಲಿ ಖೈದು ಮಾಡಲ್ಪಟ್ಟಿರುವ ಖೈದಿಗಳ ವುಪಯೋಗದ ಬಗ್ಯೆ ಸರ್ 1884ನೇ ... ಗುರ್ರೇ ತಾರೀಖು ಮೊದಲು 1885ನೇ ಮಾರ್ಚೀ 31ನೇ ತಾರೀಖುವರಿಗೆ ಎರಡು ದಿನಗಳೂ ಸೇರಿ ಬೇಕಾದ ಆಹಾರ ...ಬಸ್ತು ಜಿನಸುಗಳನ್ನೂ ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಬರುವ ಬಂದು ಮಾಡಲ್ಪಟ್ಟ ದರಖಾಸ್ತುಗ... ಜೈಲ್ ಸೂಪರಿಂಟೆಂಡೆಂಟರವರು, ಜೈಲ್‌ಗಳ ಇನ್ಸ್‌ಪೆಕ್ಟರ್ ಜನರಲ್ಲವರಿಂದ ಕಾಯಂ ಮಾಡಲ್ಪಡಲಿಕ್ಕೆ ಗುರಿಯಾಗಿ ...ಸವಿ ಮಾರ್ಚೀ 1ನೇ ತಾರೀಖುವರಿಗೆ ತೆಗದುಕೊಳ್ಳುವರು.

...ತಾರೀಖು ತರುವಾಯ ಯಾವ ದರಖಾಸ್ತುಗಳು'' ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

...ಗ್ಗಾ ಜೈಲ್‌ಗಾಗಿ ಆಹಾರ ಪದಾರ್ಥಗಳ ಸರಬರಾಯಿ ಬಗ್ಯೆ ದರಖಾಸ್ತುಗಳು'' ಯಂಬದಾಗಿ ವಿಳಾಸ ಬರೆಯಲ್ಪಡ...

...ಯಿಗಳು ನಗದಾಗಿ ಅಥವಾ ಕರೆನ್ಸೀ ನೋಟುಗಳ ಮೂಲಕ ಡಿಪಾಜಿಟ್‌ನಿಸೀ ಕಳುಹಿಸಲ್ಪಟ್ಟ ಹೊರತು ಯಾ... ...ದುಕೊಳ್ಳಲ್ಪಡಲಾರವು.

...ಗಳು ಶಿವಮೊಗ್ಗಾ ಡಿಸ್ಟ್ರಿಕ್ಟು ಜೈಲ್ ಆಫೀಸಿನಲ್ಲಿ, ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರ ರೂಬರೂ ...ಳಗೆ ಶಿವಮೊಗ್ಗಾ ಡಿಸ್ಟ್ರಿಕ್ಟು ಜೈಲ್ ಸೂಪರಿಂಟೆಂಡೆಂಟರಿಂದ ಖುಲ್ಲಾ ಮಾಡಲ್ಪಡುವವು.

... ದರಖಾಸ್ತುಗಳಲ್ಲಿಯೂ, ಈ ಕೆಳಗೆ ನಮೂದಿಸುವ ತರಗತಿಯ ಪ್ರತಿ ಖೈದಿಗೂ ದಿನ ಬಂದಕ್ಕೆ ಆಗತಕ್ಕ ದರ

ಸದರೀ ಧರಖಾಸ್ತುದಾರರಾದ ಗೋಪಾಲಕೃಷ್ಣಸ್ವಾಮಿ ಮೈನರ್ ಗಾರ್ಡಿಯನ್ ಮತ್ತು ತಾಯಿ ಗೌರಮ್ಮನ ಅರ್ಜಿಯನ್ನು 1884ನೇ ವಿ ಫಿಬ್ರವರೀ ತಿಂಗಳು ತಾರೀಖು 19ರಲ್ಲು ಮೈಸೂರು ಮೊಕ್ಕಾಮಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಗಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಮ್ಮಯ್ಯ ಜೋಯಿಸನ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟ್ಯರೂ ಈ ಕೋರ್ಟಿನಲ್ಲಿ ಜರ್ ಯಿರಬೇಕೆಂದು ಇದರಿಂದ ತಿಳಿಯಪಡಿಸಿ ಯಿಧೆ.

1884ನೇ ಇಸವಿ ಜನವರೀ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿನಮ್ಮ ದಸ್ತಖತ್ತಿನೊಡನೆ ಕೊಡೋಣಾಗಿಧೆ.

ತಾರೀಖು 9ನೇ ಜನವರೀ 1884.

ಇದರಿಂದ ಪ್ರಕಟಿಸುವದೇನಂದರೆ, 1884ನೇ ಇಸವಿಯಲ್ಲಿ ಮೈಸೂರು ಡಿಸ್ಟ್ರಿಕ್ಟಿನಿಂದ ವಿಚಾರಣೆ ಬಗ್ಯೆ ಕಮ್ಮಿಟ್ ಮಾಡಲ್ಪಡುವ ಕದ್ದಮೆಗಳ ಸೆರ್ಷನು ದರ್ಯಾಫ್ತಿಯು, ಮೈಸೂರು ಮೊಕ್ಕಾಂನಲ್ಲಿ ಇದರಡೀ ಕಂಡ ತಾರೀಖುಗಳಲ್ಲಿ ನಡಿಸಲ್ಪಡುವದು.

15ನೇ	ಜನವರೀ	1884	ಮಂಗಳವಾರ
11ನೇ	ಫಿಬ್ರವರೀ	,,	ಸೋಮವಾರ
11ನೇ	ಮಾರ್ಚಿ	,,	ಮಂಗಳವಾರ
1ನೇ	ಏಪ್ರಿಲ್	,,	ಗುರುವಾರ
9ನೇ	ಜೂನ್	,,	ಸೋಮವಾರ
14ನೇ	ಜುಲೈ	,,	ಡಿಟೋ
11ನೇ	ಆಗಸ್ಟು	,,	ಡಿಟೋ
8ನೇ	ಸೆಪ್ಟಂಬರ್	,,	ಡಿಟೋ
13ನೇ	ಅಕ್ಟೋಬರ್	,,	ಡಿಟೋ
10ನೇ	ನವಂಬರ್	,,	ಡಿಟೋ
8ನೇ	ಡಿಸಂಬರ್	,,	ಡಿಟೋ

ಧರ್ಯಾಫ್ತಿ ಬಗ್ಯೆ ಕಮ್ಮಿಟ್ ಮಾಡುವ ಅಧಿಕಾರವುಳ್ಳ ತಮಾಂ ಮಾಜೀಸ್ಟ್ರೇಟರುಗಳೂ, ಅವರಿಂದ ಕಮ್ಮಿಟ್ ಮಾಡಲ್ಪಡುವ ಮೊಕದ್ದಮೆಗಳಲ್ಲಿ ಫಿರ್ಯಾದಿ ವ ಸಾಕ್ಷಿಗಾರರ ಹಾಜರಾತಿ ಬಗ್ಯೆ ಸದರೀ ತಾರೀಖುಗಳಲ್ಲಿ ತಕ್ಕ ಏರ್ಪಾಡು ಮಾಡತಕ್ಕದ್ದೆಂದು ಕೇಳಿ ಕೊಳ್ಳಲ್ಪಟ್ಟಿರುತ್ತಾರೆ.

ವಿ. ಎನ್. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ತಾರೀಖು 4ನೇ ಜನವರೀ 1884.

ಇದರಿಂದ ತಿಳಿಸುವದೇನಂದರೆ, ಶಿವಮೊಗ್ಗಾ ಜೈಲ್‌ನಲ್ಲಿ ಖೈದು ಮಾಡಲ್ಪಟ್ಟಿರುವ ಖೈದಿಗಳ ವುಪಯೋಗದ ಬಗ್ಯೆ ಸರ್ಕ 1884ನೇ ಇಸವಿ ಏಪ್ರಿಲ್ ಗುರ್ರೇ ತಾರೀಖು ಮೊದಲು 1885ನೇ ಮಾರ್ಚಿ 31ನೇ ತಾರೀಖುವರಿಗೆ ಎರಡು ದಿನಗಳೂ ಸೇರಿ ಬೇಕಾದ ಆಹಾರ ವಗೈರೆ ದರೋಬಸ್ತು ಜಿನಸುಗಳನ್ನೂ ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಬರುವ ಬಂದು ಮಾಡಲ್ಪಟ್ಟ ದರಖಾಸ್ತುಗಳನ್ನು ಶಿವಮೊಗ್ಗಾ ಜೈಲ್ ಸೂಪರ್ರಿಂಟೆಂಡೆಂಟರವರು, ಜೈಲ್‌ಗಳ ಇನ್ಸ್‌ಪೆಕ್ಟರ್ ಜನರಲ್ಲವರಿಂದ ಕಾಯಂ ಮಾಡಲ್ಪಡಲಿಕ್ಕೆ ಗುರಿಯಾಗಿ 1884ನೇ ಇಸವಿ ಮಾರ್ಚಿ 1ನೇ ತಾರೀಖುವರಿಗೆ ತೆಗದುಕೊಳ್ಳುವರು.

2. ಸದರೀ ತಾರೀಖು ತರುವಾಯ ಯಾವ ದರಖಾಸ್ತುಗಳು'' ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

3. "ಶಿವಮೊಗ್ಗಾ ಜೈಲ್‌ಗಾಗಿ ಆಹಾರ ಪದಾರ್ಥಗಳ ಸರಬರಾಯಿ ಬಗ್ಯೆ ದರಖಾಸ್ತುಗಳು'' ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು,

4. 500 ರೂಪಾಯಿಗಳು ನಗದಾಗಿ ಅಥವಾ ಕರ್ರೆನ್ಸೀ ನೋಟುಗಳ ಮೂಲಕ ಡಿಪಾಜಿಟ್‌ನಿಸೀ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಶಿವಮೊಗ್ಗಾ ಡಿಸ್ಟ್ರಿಕ್ಟು ಜೈಲ್ ಆಫೀಸಿನಲ್ಲಿ, ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರ ರೂಬರೂ ಮೇಲ್ಕಂಡ ತಾರೀಖಿನೊಳಗೆ ಶಿವಮೊಗ್ಗಾ ಡಿಸ್ಟ್ರಿಕ್ಟು ಜೈಲ್ ಸೂಪರ್ರಿಂಟೆಂಡೆಂಟರಿಂದ ಖುಲ್ಲಾ ಮಾಡಲ್ಪಡುವವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ, ಈ ಕೆಳಗೆ ನಮೂದಿಸುವ ತರಗತಿಯ ಪ್ರತಿ ಖೈದಿಗೂ ದಿನ ಒಂದಕ್ಕೆ ಆಗತಕ್ಕ ದರ ನಮೂದಿಸಲ್ಪಡತಕ್ಕದ್ದು.

ನೇಟಿವ್ ಕೂಲಿಯವರಾದ ಗಂಡಸರು A ಕ್ಲಾಸ್	..	..	ರೂ. ಆ. ಪೈ.
ಡಿಟ್ಟೋ ಡಿಟ್ಟೋ B ,,	..	..	
ಡಿಟ್ಟೋ ಡಿಟ್ಟೋ C ,,	..	..	
ಡಿಟ್ಟೋ ಹುಡುಗರಾದ ಖೈದಿರು	..	..	
ಡಿಟ್ಟೋ ಕೂಲೀ ಮಾಡದ ಗಂಡಸರು, ಹೆಂಗಸರು, ವಿಚಾರಣೆಯಲ್ಲಿ ಇರತಕ್ಕವರು D ಕ್ಲಾಸ್			
ಯೂರೋಪಿರ್ಯನಗಳು ವ ಈಸ್ಟ್ ಇಂಡಿರ್ಯನಗಳು	..	..	

7. ದರಖಾಸ್ತು ಮಾಡಲ್ಪಟ್ಟ ದರಗಳು ಆಹಾರ ಜಿನಸೀಗಳ ಸ್ಕೇಲ್ ಪಟ್ಟಿಯಲ್ಲಿ ನಮೂದಿರುವ ಪದಾರ್ಥಗಳು ಮಾತ್ರವಲ್ಲದೆ ಆಸಪತ್ರಿ ಪಥ್ಯಪದಾರ್ಥಗಳು, ಕಾಹಿಲೇ ಮನುಷ್ಯರಿಗೆ ವಿಶೇಷ ಪದಾರ್ಥಗಳು, ನಷ್ಟವಾಗತಕ್ಕ ಪದಾರ್ಥಗಳು, ದೀಪದ ಯಂತ್ರ, ಲಾಂದ್ರಗಳು, ಮತ್ತು ಅವುಗಳ ರಿಪೇರಿ ಮಾಡಿಸುವಣ, ಸ್ನಾನ ಮಾಡಲಿಕ್ಕೆ ಶೀಗೇಕಾಯಿ, ತವಾಂ ತಾಂಬ್ರ ಪಾತ್ರೆಗಳ ರಿಪೇರಿ ವ ಕಲಾಯಿ, ಪರಕೆಗಳು, ಗೂಡೆ ಚಾಪೆ ಮಾಡಲಿಕ್ಕೆ ಬಿದುರು, ಮಡಿಕೆ ಸುಡುವದಕ್ಕೆ ಸಾದೆ, ಹೆಣ್ಣು ಖೈದೀರ ಮಕ್ಕಳಿಗೆ ಬೇಕಾದ ಹಾಲು, ರೊಟ್ಟಿ, ಸಕ್ಕರೆ ವಗೈರೇ ಪದಾರ್ಥಗಳು, ಹೊಗೆ ಹಾಕುವದಕ್ಕೆ ಗಂಧಕ, ಕವಳುಮಣ್ಣು, ಮತ್ತು ಖೈದಿಗಳಿಗೆ ಕ್ರಮವಾಗಿ ಸರಬರಾಯಿ ಮಾಡಲ್ಪಡುವ ಬಟ್ಟೆ ಶಿವಾಯಿ, ತವಾಂ ಚಿಲ್ಲರೇ ಪದಾರ್ಥಗಳೂ ಸಹ ಅಡಗಿರತಕ್ಕದ್ದು.

8. ಸೂಪರ್ರಿಟೆಂಡೆಂಟರವರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ಉಳಿಸಿಕೊಂಡಿರುತ್ತಾರೆ, ಹೀಗೆ ತಿರಸ್ಕರಿಸಲಿಕ್ಕೆ ಯಾವ ನಿಮಿತ್ತವನ್ನೂ ಅವರು ತಿಳಿಸಬೇಕಾದ್ದಿಲ್ಲವು.

9. ಮುಂಜೂರಾದ ದರಖಾಸ್ತುದಾರನ, ಡಿಪಾಜಿಟ್ ಮೊಬಲಗು ನಿಲ್ಲಿಸಿಕೊಳ್ಳಲ್ಪಟ್ಟು, ಆತನು ಕಂಟ್ರಾಕ್ಟು ಮುಕ್ತ್ಯಲಿಕ್ಕೆ ಬರದು ಕೊಡಲಿಕ್ಕಾಗಲಿ, ನಗದಾದರೂ ಗವರ್ನಮೆಂಟ್ ಪತ್ರಗಳ ಮೂಲಕವಾದರೂ 1,000 ರೂಪಾಯಿಗಳ ಮೊಬಲಗಿಗೆ ಜಾಮೀನನ್ನು ತನ್ನ ದರಖಾಸ್ತು ಮಂಜೂರಾದ ಸಂಗತಿ ತನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು ಒಂದು ವಾರದ ವಳಗಾಗಿ ಕೊಡಲಿಕ್ಕೆ ತಪ್ಪಿದರೆ, ಸದರಿ ಡಿಪಾಜಿಟ್ ಸರಕಾರಕ್ಕೆ ಸೇರಿಸಿ ಕೊಳ್ಳಲ್ಪಡುವದು.

10. ಕಂಟ್ರಾಕ್ಟುದಾರನಿಗೆ ನಗದು ಅಡ್ವಾನ್ಸು ಯಾವದೂ ಕೊಡಲ್ಪಡಲಾರದು, ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳಿಗೆ ಪ್ರತಿ ತಿಂಗಳು 1ನೇ ತಾರೀಖಿಗೆ ತರುವಾಯ ಸಾಧ್ಯವಾದಷ್ಟು ತ್ವರೆಯಾಗಿ ಶಿವಮೊಗ್ಗಾ ಜೈಲ್ ಸೂಪರ್ರಿಟೆಂಡೆಂಟರವರಿಂದ ಮೊಬಲಗು ಕೊಡಲ್ಪಡುವದು.

11. ಕಂಟ್ರಾಕ್ಟುದಾರನಿಗೆ ಒಂದು ಖೋಲಿಯು ಬಿಡಲ್ಪಟ್ಟು ಅದರಲ್ಲಿ ಆತನು ನಷ್ಟವಾಗದ ದರೋಬಸ್ತು ಪದಾರ್ಥಗಳನ್ನೂ ಇಟ್ಟು ಕೊಳ್ಳಬಹುದು. ಮಾಂಸ ವಗೈರೇ ನಷ್ಟವಾಗುವ ಪದಾರ್ಥಗಳು ಪ್ರತಿ ದಿನ ಬೆಳಿಗ್ಗೆ $7\frac{1}{4}$ ಘಂಟೆಗೆ ಜೈಲ್‌ನಲ್ಲಿ ಇರತಕ್ಕದ್ದು.

12. ಕಂಟ್ರಾಕ್ಟು ವಳ ಷಿಕ್ಮಿಗೆ ಕೊಡಲ್ಪಡಬಹುದು.

13. ಕಂಟ್ರಾಕ್ಟಿನ ನಿಬಂಧನೆಗೆ ತಪ್ಪಿ ನಡೆಯುವ ಬಗ್ಯಾಗಲಿ, ಕಿರದು ತರದ ಯಾವ ಪದಾರ್ಥಗಳನ್ನು ಕೊಡುವ ಬಗ್ಯಾಗಲಿ ಶಿವಮೊಗ್ಗಾ ಜೈಲ್ ಸೂಪರ್ರಿಟೆಂಡೆಂಟರವರ ಯಖ್ತ್ಯಾರಿಯಿಂದ 50 ರೂಪಾಯಿಗೆ ಮೀರದ ಒಂದು ಜುರ್ಮಾನೆಯು ಹಾಕಲ್ಪಡುವದು, ಬಾರ್ ಬಾರ್ ಆ ಮೇರೆ ತಪ್ಪಿದರೆ ಕಂಟ್ರಾಕ್ಟು ರದ್ದು ಮಾಡಲ್ಪಟ್ಟು ಜಾಮೀನ್ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

14. ಕಂಟ್ರಾಕ್ಟು ತಪ್ಪಿ ನಡಿಯುವ ದರೋಬಸ್ತು ಸಂಗತಿಗಳೊಳಗೂ ಶಿವಮೊಗ್ಗಾ ಜೈಲ್ ಸೂಪರ್ರಿಟೆಂಟೆಂಟರವರ ನಿರ್ಣಯವೇ ಆಖೈರಾಗಿರತಕ್ಕದ್ದು.

15. ಕಂಟ್ರಾಕ್ಟುದಾರನು ಖೈದಿಗಳ ವುಪಯೋಗಾರ್ಥ ತರಕಾರಿಗಳನ್ನು ದರ ಪಾನಿಗೆ 4 ಕಾಸುಗಳ ಮೇರಿಗೆ ಖಾಯಂ ದರ ಪ್ರಕಾರ ಜೈಲ್ ತೋಟದಿಂದಲೇ ಕೊಳ್ಳುವದಕ್ಕೆ ಬದ್ಧನಾಗಿರತಕ್ಕದ್ದು.

16. ಇನ್ಯಾವ ಸಂಗತಿಯನ್ನಾದರೂ ತಿಳಿಯಬೇಕಾದರೆ ಜೈಲ್ ಸೂಪರ್ರಿಟೆಂಡೆಂಟರವರನ್ನು ಕೇಳಿ ತಿಳದುಕೊಳ್ಳಬಹುದು.

17. ಅಡಿಗೆ ಮಾಡುವಲ್ಲಿ ಮಡಿಕೆಗಳು ವಡದು ಹೋಗುವದರಿಂದ ಆಹಾರವೇನಾದರೂ ಅಕಸ್ಮಾತ್ ನಷ್ಟವಾದರೆ ಅದರ ಲು ನನ್ನು ಕಂಟ್ರಾಕ್ಟುದಾರನೇ ಕಟ್ಟಿಕೊಡತಕ್ಕದ್ದು.

18. ಹಾಲೀ ಶಿವಮೊಗ್ಗಾ ಜೈಲ್‌ನಲ್ಲಿ 250 ಮಂದಿ ಖೈದೀರಿದ್ದಾರೆ, ಈ ಸಾಲ್‌ನಲ್ಲಿ ಷುಮಾರ್ 300ರ ವರಿಗೆ ಜಾಸ್ತಿಯ ಹುದಾಗಿ ಅಂದಾಜ್ ಇರುತ್ತೆ.

19. ಆಹಾರ ದರದ ಪಟ್ಟಿಯನ್ನು 1880ನೇ ಇಸವಿ ಜನವರೀ 10ನೇ ಮರ್ಕ್ಯುಮಿನ ಮೈಸೂರು ಗೆಜೆಟ್ಟಿನಿಂದಾಗಲಿ, ಶಿವ ಜೈಲ್ ಸೂಪರ್ರಿಟೆಂಡೆಂಟರವರನ್ನು ಕೇಳಿ ಆಗಲಿ ತಿಳದುಕೊಳ್ಳಬಹುದು.

ಬಿ. ಪಂಚಣನಾಥರಾವ್
ಜೈಲ್ ಸೂಪರ್ರಿಟೆಂ

ಕಡೂರು ಡಿಸ್ಟ್ರಿಕ್ಟು.

ತಾರೀಖು 14ನೇ ಜನವರೀ 1884.

ಇದರಿಂದ ತಿಳಿಯಪಡಿಸುವದೇನಂದರೆ, ಚಿಕ್ಕಮಗಳೂರು ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗಿ ಯಿರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜುಗಳನ್ನ ಹಾಜರ್ಮಾಡಿದವರೆ ಆಗಲಿ, ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾದ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರರೇ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ವಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರವರ ರೂಬರೂ ಹಾಜರಾಗಿ ಅವುಗಳನ್ನ ವಾಪಸ್ ತೆಗದುಕೊಳ್ಳಬೇಕು, ತಪ್ಪಿದರೆ ಸರ್ಕ 1877ನೇ ಇಸವಿ 3ನೇ ನಂಬರ ರಿಜಿಸ್ಟ್ರೇಷರ್ಷ ಆಕ್ಟು 85ನೇ ಸೆಕ್ಷರ್ಷ ಅನುಸರಿಸಿ ಅವುಗಳು ನಾಶಪಡಿಸಲ್ಪಡುವವು.

ಅಂಕದ ನಂಬರು.	ದಸ್ತಾವೇಜು ನಂಬರ್.	ದಸ್ತಾವೇಜು ತಾರೀಖು.	ರಿಜಿಸ್ಟ್ರಾರದ ತಾರೀಖು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
1	147 / 1880—81	20–3–80	23–7–80	ದೇವರಾಯಪೇಟೇಲಿರುವ ಯೋಗಪ್ಪನ ಹೆಂಡತಿ ಚನ್ನಮ್ಮ	ದೇವರಾಯಪೇಟೇಲಿರುವ ತೆಲಗರ ಶಿಂಗಪ್ಪನ ಮಗ ಷರಾಬು ಅಂಗಡಿ ನರಸಿಹ್ಮಯ್ಯ	ಗೊಣಕಲ್ ಗ್ರಾಮದಲ್ಲಿ ಯಿರತಕ್ಕ ಕಟ್ಟುಮನೆಯಾನೆ ಕಬ್ಬಿನಮನೆ ಹಿತ್ತಲ್ ಯೆಂಬ ಬೊಂದು ತೋಟ 40 ರೂಪಾಯಿಗೆ ಕ್ರಯ.
2	154	15–3–80	26–7–80	ದೇವರಾಯಪೇಟೇಲಿರುವ ವೈಶ್ಯರ ಪಾಳ್ಯದ ಶೇಷಯ್ಯನ ಮಗ ರಾಮಣ್ಣ	ಬಸವನಹಳ್ಳಿಯಲ್ಲಿರುವ ಕೊತ್ವಾಲ್ ಚನ್ನಪ್ಪನಮಗಸೂರ್ಯನಾರಣಪ್ಪ	ಬಾಕೀ ಸಲ್ಲತಕ್ಕ 150 ರೂಪಾಯಿಗಳು ಸರ್ಕ 1881ನೇ ಇಸವಿ ಏಪ್ರೆಲ್ ಆಖೈರಿಗೆ ಪಾವತೀ ಮಾಡುವದಾಗಿಯು ತಪ್ಪಿದರೆ ದಸ್ತಾವೇಜು ತಾರೀಖು ಲಾಗಾಯತು ಶೇಕಡಾ 1ಕ್ಕೆ ತಿಂಗಳು 1ಕ್ಕೆ 1–8–0 ಯಂತೆ ಬಡ್ಡಿ ನಿಸಿ ಅಸಲ್ ಮೊಬಲಗ್ಯೆಸಲಾಯಿಸುವದಲ್ಲದೆ ಯಿದಕ್ಕಾಗಿ ಟವರ್ಕ ದೇವರಾಯ ಪೇಟೇಲಿರುವ ಹಂಚಿನಮನೆ ಮಳಿಗೆ ಸಹ ದೃಶ್ಯಾಧಾರ ಮಾಡಿರುವದಾಗಿ.
3	175	2—7—80	8—8—80	ಜೋಳದಾಳುಪೇಟೇಲಿರತಕ್ಕ ವ್ಯಾಪಾರದ ಸಣ್ಣವೀರಶೆಟ್ಟಿ ಮಗ ರುದ್ರಶೆಟ್ಟಿ	ಹೊಸಹಳ್ಳೀ ಪೇಟೇಲಿರುವ ಯಾಕೂಪ ಸಾಬಿ ಮಗ ಬುಡ್ಡಾ ಸಾಬಿ	ವಂದುನೂರು ರೂಪಾಯಿ ತೆಗದುಕೊಂಡು ಯಿರುವದ್ದರಿಂದ ಯಿದಕ್ಕೆ ಶೇಕಡಾ 1ಕ್ಕೆ ತಿಂಗಳು 1ಕ್ಕೆ 1 ರೂಪಾಯಿಸಂತೆ ಬಡ್ಡೀ ಕೊಡಿಸಿ ಅಸಲ್ ಬಡ್ಡೀ ಸಹಾ ನಡದ ದಿವಸಕ್ಕೆ ಪಾವತೀ ಮಾಡುವದಲ್ಲದೆ ಯಿದಕ್ಕಾಗಿ ಜೋಳದಾಳು ಪೇಟೇಲಿ ತಾನು ವಾಸವಾಗಿರುವ ಹಂಚಿನಮನೆ ಖಣದ ಹಿತ್ತಲ್ ಕಾಫಿತೋಟ ತೋಟದ ಗದ್ದೆ ಸಹಾ ತೋರಡವುಮಾಡಿ ಯಿರುವಂತೆ.
4	207	12–7–80	26–8–80	ಬೆಳವಾಡಿ ಸಣ್ಣ ಸುಬ್ಬಣನಮಗ ಅಪ್ಪಣ್ಣಯ್ಯ	ಬೆಳವಾಡಿ ಮಣೇಗಾರ ರಾಮಣ್ಣ	ಬೆಳವಾಡಿ ಕೆರೆ ಕೆಳಗಣ ಮಲಕುಪ್ಪು ಹಾಳು ಯಂಬ ತೆಂಗಿನ ತೋಟವು ವಂದುನೂರು ರೂಪಾಯಿಗೆ ಮೂರುವರುಷ ಭೋಗ್ಯ.
5	59 / 1881—82	19–5–81	27–5–81	ಹಾಲೇನಹಳ್ಳಿಲಿರುವ ಅಬ್ದುಲ್‌ಖಾನ ಸಾಬಿಮಗ ಗುಲಾಂ ಮೊಹದ್ದೀನ್ ಖಾ	ಬಾಳೇಹಳ್ಳಿಲ್ಲಿರುವ ಆದಂಸಾಬಿಮಗ ಸೈಯದ್ ಅಬ್ಬಾ ಸಾಬಿ	70 ರೂಪಾಯಿಗೆ ತಿಂಗಳು 1ಕ್ಕೆ ಶೇ1ಕ್ಕೆ $1\frac{1}{2}$ ರೂಪಾಯಿನಂತೆ ಬಡ್ಡಿ ಶೇರಿಸಿ ಅಸಲ್ ಬಡ್ಡಿ ಸಹ ವಂದೂವರೆ ವರುಷದಲ್ಲಿ ಪಾವತೀ ಮಾಡುವದಲ್ಲದೆ ಇದಕ್ಕಾಗಿ ಬಿಳೀಹಳ್ಳಿ ದಾಖಲೇ ಹಾಳೇನಹಳ್ಳಿಲಿರುವ ಹೆಂಚಿನ ಮನೆ ಜಮೀನು 1 ಸಹ ಆಧಾರಮಾಡಿರುವಂತೆ.

ಜಂಜರ್ ನಂಬರ್.	ದಸ್ತಾವೇಜು ನಂಬರ್.	ದಸ್ತಾವೇಜು ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
6	79	10-4-81	16-6-81	ಸಕ್ಕರೇಪಟ್ಟಣದ ದೊಡ್ಡಬೀರನ ಮಗ ಮುದಿಬೀರ	ಸಕ್ಕರೆಪಟ್ಟಣದಲ್ಲಿರುವ ಕುರುಬರ ಕಾಡನ ಮಗ ಕುರುಡ	ಸಕ್ಕರೇ ಪಟ್ಟಣದಲ್ಲಿರುವ ಹೆಂಚಿನ ಮನೆ 30 ರೂಪಾಯಿಗೆ ಕ್ರಯ.
7	235	14-10-81	15-10-81	ಚಿಕ್ಕಮಗಳೂರು ಪೋಟರ ಪೇಟೇಲಿರುವ ಶಿವಮೊಗ್ಗಾ ರುಪ್ರುಲಿಂಗ್ಯಾನೆ ಹರಿಲಿಂಗ್‌ಮಗ ಮೋಹನಲಿಂಗ್	ಪೋರಟರಪೇಟೇಲಿರುವ ಮುನಾರ ಲಿಂಗನ ಮಗ ಶಿವಮೊಗ್ಗಾ ಹರಿಲಿಂಗಯ್ಯಾ	100 ರೂಪಾಯಿಗೆ ಶೇಕಡಾ ಸಾಲೀಯಾನ 12 ರೂಪಾಯಿನಂತೆ ಯೇರುವ ಬಡ್ಡೀ ಮತ್ತು ಅಸಲ್ ಸಹಾ ಈ ಲಾಗಾಯತು 3 ವರುಷದಲ್ಲಿ ಪಾವತೀ ಮಾಡುವದಲ್ಲದೆ ಇದಕ್ಕಾಗಿ ಪೋರಟರ ಪೇಟೇಲಿರುವ ಹುಲಿನಮನೆ ತೋರಡವು ಮೊಡಿರುವದಾಗಿ.
8	245	19-10-81	27-10-81	ಗಾಳೀಪೂಜೆ ಹೊಲಿಗೆರೆಯಲ್ಲಿರುವ ಮಲ್ಲನಮಗ ಮೂಳ	ಗೊಣಕಲ್ ಗ್ರಾಮದ ವೀರೇಗೌಡನ ಮಗ ಚನ್ನಬಸವೇಗೌಡ	100 ರೂಪಾಯಿಗೆ ಶೇಕಡಾ 1ಕ್ಕೆ ತಿಂಗಳು 1ಕ್ಕೆ 1 ರೂಪಾಯಿ ಪ್ರಕಾರ ನಡದು ದಿವಸದ ಬಡ್ಡೀ ಅಂಶಕ್ಕಾಗಿ ಗಾಳೀಪೂಜೆ ಗ್ರಾಮದ ತರೀ ಜಮೀನು 4 ಮನೆ ಹಿತ್ತಲ್ ವಗೈರೆ ಭೋಗ್ಯಾದಿಗೆ ಕೊಟ್ಟಿರುವದಾಗಿ.
9	275	18-11-81	21-11-81	ದೇವರಾಯ ಪೇಟೇಲಿರುವ ಶಿವಮೊಗ್ಗಾ ಜಾಜಪ್ಪನ ಮಗ ಮಾರ್ತಾಂಡಪ್ಪ	ದೇವರಾಯಪೇಟೇಲಿರುವ ವೈಶ್ಯರ ಮೈಸೂರು ನಿರ್ವಾಣಪ್ಪನ ಮಗ ಅಣ್ಣಪ್ಪ	ತಗರಿಹಂಕಲ್ ಗ್ರಾಮದ ಸಟ್ಯಹಳ್ಳೀ ಹಳಿಯೂರೆಂಬ ಬೋಂದುತೋಟವು ವಂದುನೂರು ರೂಪಾಯಿಗೆ ಕ್ರಯ.
10	ತಿರಸ್ಕಾರ 5 1881—81	22—9—79	27—7—80	ಬಸವನಹಳ್ಳೀಲಿರುವ ಹರಿಹರದ ಮುರಲಿ ಕೃಷ್ಣಪ್ಪ ನಾಯಕರಮಗ ರಂಗರಾವ್ 1 ಮತ್ತಾ ವಾರದ ಜೈನರ ಸಣಪಾಯಶೆಟ್ಟಿ 1 ಈ 2 ಜನರು	ಯಮಸಂದೀಲಿರುವ ಪಟೇಲ್ ದ್ಯಾವೇಗೌಡನ ಮಗ ಹೊಟ್ಟೇಗೌಡ	ತಿಪ್ಪಾಜನಹಳ್ಳಿ ಗ್ರಾಮದಲ್ಲಿ ಇರುವ ಹೊಂಬಳದಹಟ್ಟಿ ಕೂಲ್ ಕಾಫೀ ತೋಟ ಮತ್ತು ತೊಗರಿ ಹಂಕಲ್ ಗ್ರಾಮದಲ್ಲಿ ಸದರೀ ತೋಟದ ವತ್ತಿನಲ್ಲಿರುವ ಹೊಂಬಳದಹಟ್ಟಿ ತೋಟ ಸಹ 4,000 ರೂಪಾಯಿಗಳಿಗೆ ಕ್ರಯ.
11	3 1881—82	19—7—80	14—5—81	ಮೂರುಮನೆ ಹಳ್ಳೀಲಿರುವ ರಾಮಾಜಟ್ಟಿ 1 ಇವನ ತಮ್ಮ ಚೌಡಾಜಟ್ಟಿ ಸಹಾ	ಚಿಕ್ಕಮಗಳೂರು ಕೋಟೇ ಬಸವೇಗೌಡರ ಮಗ ಅಣ್ಣೆಗೌಡ	ನೂರು ಅರವತ್ತು ರೂಪಾಯಿ ಐದಾಣಿ ನಾಲ್ಕುಪೈಗೆ ತಿಂಗಳು 1ಕ್ಕೆ ಶೇಕಡಾ 1 ರೂಪಾಯಿನಂತೆ ಬಡ್ಡೀ ಕೂಡಿಸಿ ಅಸಲ್ ಬಡ್ಡೀ ಸಹ್ಹಾ ವಂದು ವರುಷದಲ್ಲಿ ಸಲ್ಲಿಸುವದಲ್ಲದೆ ಇದಕ್ಕಾಗಿ ಚಿಕ್ಕಮಗಳೂರಲ್ಲಿ ಇರುವ ತರೀ ಜಮೀನುಗಳು 2, ಮೂರುಮನೆ ಹಳ್ಳೀಲಿರುವ ಮನೆ ಸಹ ಆಧಾರಮಾಡಿ ಯಿರುವದಾಗಿ.

ಜೀ. ಎಫ್. ಮೈಕಲ್‌ಜಾನ್,
ರಿಜಿಸ್ಟ್ರಾರ್.

ಗೈರ್‌ವಿಲಾ ಆದ ಪೂರಾ ನೋಟು.

ನಂಬರು.	ಸರ್ಕಿಲ್.	ಕ್ರಯ.	ಹಕ್ಕುದಾರ.
7914	ಮದರಾಸ್.	ರೂಪಾಯಿ 20	ಮೈಸೂರು ಡಿಸ್ಟ್ರಿಕ್ಟು ಮಂಡ್ಯ ತಾಲ್ಲೂಕು ರೆವಿನ್ಯೂ ಗುಮಾಸ್ತೆ ಪುಟ್ಟಣ್ಣ.

ಮೈಸೂರು ಗೆಜೆಟ್, ಚಂದಾ ದರ ವಗೈರೆ.

	ಚಂದಾ. ರೂ.	ಆ.	ಟಪ್ಪಾಲ್ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ.	
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛಷ್ ಮಾಹೆ ಯಾ ಕ್ವಾರಟರಿಗೆ	ದಾವಮೂಷಾಯಿ ಪ್ರಕಾರ ದರಗಳು.			

ಶಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟೀಸುಗಳು;— ರೂ. ಆ.

				ರೂ.	ಆ.
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ)			..	2	8
ಯರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ	ಡಿಟೋ	..	..	1	4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್‌ಷನ್ ಅನುಸರಿಸಿ, ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆನೋಟೀಸ್‌ಗಳಿಗೆ:—

ಮೊದಲನೇ ದಫಾ ..	..	..	..	5	0
ಯಿರಡನೇ ವ ಆ ತರುವಾಯ ಪ್ರತಿ ದಫಾಕ್ಕೆ		..	..	2	8

ಶಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್‌ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಡ್ಯುಪ್ಲಿಕೇಟ್ ಕಾಫೀಪಟ್ಟೀ ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫೀಸರ್‌ಗಳು ಕೊಡುವ ನೋಟೀಸ್‌ಗಳಿಗೆ:—

ಮೊದಲನೇ ಸಲಕ್ಕೆ	..	ಪುಟ 1ಕ್ಕೆ	.	10	0
ಯಿರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ		„	..	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್‌ಮಾಡಲ್ಪಡುತ್ತೆ;—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ		ಪಙ್ತಿ 1ಕ್ಕೆ	..	0	8
ಯಿರಡನೇ ದಫಾ	ಡಿಟೋ	ಡಿಟೋ	..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ		..	..	0	4

ಬಮೋಜೀಬ್ ಹುಕ್ಕುಂ,
ಹೆಚ್. ಹಡರ್ಸ್ನ,
ಮೈ. ಗೆ. ಕಂಪೈಲರ್.

ಗವರ್ನಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌನ್‌ಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್‌ಸೂಪರ್ನಟೆಂಡೆಂಟರ ದೆಶೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡು ಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 4—8—0; ಎಂಟು ಔನ್ಸ್‌ವುಳ್ಳ ಡಬಿಗೆ ರೂ. 8—8—0; ಒಂದು ಪೌನ್ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರ್ನಟೆಂಡೆಂಟರು ಇದರಡೀ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿ ಒಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌನ್ ವುಳ್ಳ ಡಬ್ಬಿಗೆ 20 ರೂಪಾಯಿ. ಈ ಔಷಧವು, ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯನ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬೀಗೆ ಎಂಟುಆಣೆ ಟಪ್ಪಾಲ್ ಹಾಸಲೂ, ಒಂದು ಪೌನ್ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

Mysore Government Press, Bangalore.—1884.

ಮೈಸೂರ ಗೆಜೆಟ್.

ನಂ. 5 ಸರ್ಕಾರದಿಂದ ಛಾಯಿಷ್ ಆದ್ದು. ಸನ್ 1884.

ಬೆಂಗಳೂರು, ಶನಿವಾರ, ಫೆಬ್ರುವರೀ ತಾ॥ 2, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೇಬ್ ಬಹದೂರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ಚೀಫ್ ಜಡ್ಜೀಯವರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರಿಂಟೆಂಡೆಂಟರು, ಕಾಂಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ್ ವರ್ಕ್ಸ್ ಆಫೀಸರಗಳು, ಮಿಲಿಟೇರಿ ಸಿಕ್ರಿಟೆರಿಯವರು, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟಿನ ಸೆಷನ್ ಜಡ್ಜೀರು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟ್‌ಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲಾ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲಾ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 10ನೇ ಜನವರೀ 1884.

ನಂ. 297.—ಕಳೆದ ಫೆಬ್ರುವರೀ 6ನೇ ಮರ್ಕೂಂ 39ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಛಾಯಿಷ್ ಮಾಡಲ್ಪಟ್ಟ ತಖ್ತೇ ವಿಷಯದಲ್ಲಿ ಸದರೀ ತಖ್ತೇಯ 70ನೇ ನಂಬರ್ ಬಾಬತು ಯಳದಬಾಗಿ ಗ್ರಾಮವನ್ನ ಗಿರಿಯನಹಳ್ಳಿಗೆ ಸೇರಿಸಿ ಯಿದ್ದದ್ದು, ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 18ನೇ ಜನವರೀ 1884.

ನಂ. 299.—ಲೇಟ್ ನರಶೀಪುರ ತಾಲ್ಲೂಕಿನಿಂದ ಚೆನ್ನರಾಯಪಟ್ಣ ತಾಲ್ಲೂಕಿಗೆ ವರ್ಗ ಮಾಡಲ್ಪಟ್ಟ ಇದರಡಿ ಕಂಡ ಗ್ರಾಮವು ಅದರ ಸಮೀಪವಾದ ಅಸಲೀ ಗ್ರಾಮಕ್ಕೆ ಶೇರಿಸಿರುತ್ತೆ.

ಮಾಗಣಿ ಹೆಸರು.	ನಂಬರು.	ಅಸಲೀ ಗ್ರಾಮದ ಹೆಸರು.	ನಂಬರು.	ಮೂರನೇ ಮೇಸ್ತ್ರಿಕಿನಲ್ಲಿ ದಾಖಲ್ಮಾಡಿರುವ ಗ್ರಾಮಕ್ಕೆ ಶೇರಿಸಿದ ಗ್ರಾಮ.	ಖಾನೇಷು.	ಷರಾ.
1	2	3	4	5	6	7
1 ಗಣ್ಣಿ	1	ಗುಲಹಳ್ಳಿ	1	ಸಾಸಲಪುರ	187	..

ತಾರೀಖು 18ನೇ ಜನವರೀ 1884.

ನಂ. 301.—ರೆಸೀಡೆಂಟರ ಅಪ್ಪಣೆ ಪ್ರಕಾರ ಬೆಂಗಳೂರು ಸಿವಿಲ್ ವ ಮಿಲಿಟೆರಿ ಸ್ಟೇಷನ್ ಶೇರಿ, ಬೆಂಗಳೂರು ಷಹರ್ ದೇಖೀಲ್ ಬೆಂಗಳೂರುಡಿಸ್ಟ್ರಿಕ್ಟಿನಲ್ಲಿ 1884ನೇ ಇಸವಿ ಏಪ್ರೆಲ್ 1ನೇ ತಾರೀಖು ಮೊದಲು 1887ನೇ ಇಸವಿ ಮಾರ್ಚೀ 31ನೇ ತಾರೀಖುವರಿಗೆ ಆಗುವ ಮೂರುವರುಷ ಕಾಲಪರಿಯಂತ ಶೇಂದೀ ಬಿಕ್ರೀ ಮಾಡುವ ಪಟ್ಟು ಸ್ವಾತಂತ್ರ್ಯದಬಗ್ಯೆ ದರಖಾಸ್ತುಗಳು ಕೋರಲ್ಪಟ್ಟಿವೆ. ಬೆಂಗಳೂರು ಡಿಸ್ಟ್ರಿಕ್ಟಿಗೆ, ದೀವಾನರವರ 1882ನೇ ಇಸವಿ ನವಂಬರ್ 25ನೇ ಮರ್ಕುಂ 1ಃ ವ 137ನೇ ನಂಬರ್ ಮತ್ತು ಅದೇ ಇಸವಿ ಡಿಸಂಬರ್ 9ನೇ ಮರ್ಕುಂ ನಂಬರ್ 147—148 ಮತ್ತು 1882ನೇ ಇಸವಿ ಡಿಸಂಬರ್ 22ನೇ ಮರ್ಕುಂ 166ನೇ ನಂಬರ್ ಇಸ್ತಿಹಾರ್‌ನಾಮೆಗಳಲ್ಲಿ ತಿದ್ದುಪಡಿ ಮಾಡಲ್ಪಟ್ಟ ಪ್ರಕಾರ ಇದರಡಿ ಕಂಡ ತಾಲ್ಲೂಕುಗಳು ಶೇರಿ ಇರುತ್ತವೆ:—

1 ಬೆಂಗಳೂರು	4 ನೆಲಮಂಗಲ	7 ಕ್ಲೋಸ್‌ಪೇಟೆ
2 ಹೊಸಕೋಟೆ	5 ಕಾನಖಾನಹಳ್ಳಿ	8 ಆನೆಕಲ್
3 ದೊಡ್ಡಬಳ್ಳಾಪುರ	6 ಮಾಗಡಿ	9 ಕುಣಿಗಲ್

2. ಯಷ್ಟರ ಮೊಬಲಗಿಗೆ ಕೇಳುತ್ತಾರೋ ಅಂತಾ ಸಾಲೀಯಾನಾ ಮೊಬಲಗು ಪ್ರತಿ ದರಖಾಸ್ತಿನಲ್ಲಿಯೂ ನಮೂದಿಸಲ್ಪಟ್ಟು ಆದರ ಸಂಗಡ ನಗದಾಗಿಯಾಗಲಿ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ 1,000 ರೂಪಾಯಿಗಳ ಡಿಪಾಜಿಟನಿಶಿ ಲಿಫಾಫೆಯೊಳಗೆ ಹಾಕಿ ಬಂದ್ ಮಾಡಲ್ಪಟ್ಟು "ಬೆಂಗಳೂರು ಡಿಸ್ಟ್ರಿಕ್ಟಿನೊಳಗೆ ಶೇಂದಿ ಬಿಕ್ರಿ ಮಾಡತಕ್ಕ ಪಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತು" ಯಂತ ಲಿಫಾಪೆ ಮೇಲೆ ಬರೆದು ಕಳುಹಿಸತಕ್ಕದ್ದು.

3. ದರಖಾಸ್ತುಗಳು, ಸನ್ 1884ನೇ ಇಸವಿ ಫೆಬ್ರವರೀ 15ನೇ ಮರ್ಕುಮಿನ ಮಧ್ಯಾನ್ಹದೊಳಗಾಗಲಿ, ತತ್ಪೂರ್ವವಾಗಲಿ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಆಫಿಸಿನಲ್ಲಿ ಪಾವತೀ ಮಾಡಲ್ಪಡತಕ್ಕದ್ದು. ಆಗ ಸದರೀ ದರಖಾಸ್ತುಗಳು ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು. ಯಾವ ದರಖಾಸ್ತುದಾರನ ದರಖಾಸ್ತನ್ನು, ದೀವಾನರವರಿಗೆ ಶಿಫಾರಸ್ ಮಾಡುವ ಬಗ್ಯೆ ಡೆಪ್ಯುಟಿ ಕಮ್ಮಿಷನರು ಚುನಾಯಿಸಿಕೊಳ್ಳುತ್ತಾರೋ ಅಂಥಾ ದರಖಾಸ್ತುದಾರನು ಕೂಡ್ಲೆ ನಗದಾಗಿಯಾಗಲಿ, ಗವರ್ನಮೆಂಟ್ ಪತ್ರಗಳ ಮೂಲಕವಾಗಲಿ ದರಖಾಸ್ತು ಮಾಡಿದ ಸಾಲೀಯಾನಾ ಇಜಾರೇ ಮೊಬಲಗು ಪೈಕೀ ಹನ್ನೆರಡರಲ್ಲಿ ಒಂದು ಭಾಗವಾಗಲಿ (ಅಥವಾ ಒಂದು ತಿಂಗಳ ಖಿಸ್ತು ಮೊಬಲಗಾಗಲಿ) ಜಾಸ್ತಿಯಾಗಿ ಡಿಪಾಜಿಟ್ ಇಡತಕ್ಕದ್ದು, ಇದಕ್ಕೆ ತಪ್ಪಿದರೆ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಡಿಪಾಜಿಟ್ ಸರಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡುವದು.

4. ದೀವಾನರವರ ತೀರ್ಮಾನ ಫಾಯಿಷ್ ಮಾಡಲ್ಪಟ್ಟ ಮೇಲೆ ಯಾವ ದರಖಾಸ್ತುದಾರರ ದರಖಾಸ್ತುಗಳು ತಿರಸ್ಕರಿಸಲ್ಪಟ್ಟಿರುತ್ತವೋ ಅಂತಾ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್‌ಗಳು, ಅವರು ಖ್ವಾಯಿಷ್ ಮಾಡಿದಾಗ ಅವರಿಗೆ ವಾಪಸ್ ಮಾಡಲ್ಪಡುವದು: ಚಡದರಖಾಸ್ತನ್ನಾಗಲೀ, ಯಾವ ದರಖಾಸ್ತನ್ನಾಗಲೀ ಯಾವ ಸಬಬನ್ನೂ ಗೊತ್ತುಪಡಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದೀವಾನರವರು ತಮ್ಮಲ್ಲಿ ಉಳಿಸಿಕೊಂಡಿರುತ್ತಾರೆ.

5. ಯಾರ ದರಖಾಸ್ತು ಮಂಜೂರ್ ಮಾಡಲ್ಪಡುತ್ತೋ ಅವರಿಗೆ ದೀವಾನರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ ಯಂಟು ದಿನಗಳೊಳಗಾಗಲಿ, 3ನೇ ಕಲಂ ಅನುಸರಿಸಿ ಮೊದಲು ಡಿಪಾಜಿಟ್ ಯಿಟ್ಟಿರುವ ಮೊಬಲಗ್ ದೇಖಿಲ್, ದರಖಾಸ್ತು ಮಾಡಲ್ಪಟ್ಟ ಸಾಲೀಯಾನಾ ಇಜಾರೇ ಮೊಬಲಗ್ ಪೈಕೀ ಹಾಗಪಾಲಿಗೆ ಸಮನಾಗಿರುವ ಒಂದು ಮೊಬಲಗನ್ನು ನಗದಾಗಿಯಾಗಲೀ ಕ್ರಮಪ್ರಕಾರ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲೀ, ಡೆಪ್ಯುಟಿ ಕಮ್ಮಿಷನ್ನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತ್ತುಗಳಿಗೆ ಬದ್ಧರಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾಕಾಗದದ ಮೇಲೆ, ಒಂದು ಕರಾರ್ ಬರದುಕೊಡತಕ್ಕದ್ದು, ಆತನು ಕರಾರಿಗೆ ರುಜುಮಾಡುವದಕ್ಕಾಗಲಿ, ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲೀ, ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವೇ ಇಡಲ್ಪಟ್ಟ ಡಿಪಾಜಿಟ್‌ಗಳು, ಗವರ್ನಮೆಂಟಿಗೆ ಸೇರಿಸಕೊಳ್ಳಲ್ಪಟ್ಟು ಇಜಾರೆಯು ಅನ್ಯಥಾ ವಿಲಾ ಮಾಡಲ್ಪಡುವದು.

ಷರತ್ತುಗಳು.

1. ಸಾಲೀಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಒಂದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್ ಸೆಸ್ ದೇಖೀಲ್ ಅಂತಾ ಇಜಾರೇ ಮೊಬಲಗನ್ನು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದಕ್ಕೆ ಮುಂದಾಗಿಯಾಗಲಿ, ಡಿಸ್ಟ್ರಿಕ್ಟು ಖಜಾನೆಯಲ್ಲಿ ಮಾಹೆವಾರು ಸಮನಾದ ಖಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು, ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕೀಗಳಿಗೂ, ಸೇಕಡಾ ಸಾಲಿಯಾನಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕೊಡತಕ್ಕದ್ದು: ಅಂತಾ ಬಾಕೀ ಮೊಬಲಗ್‌ಗಳು ಪಾವತೀಯಾಗತಕ್ಕ ತಿಂಗಳು ಕಳೆದ ಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜಮೀನ್ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಇರುವ ರೂಲ್ಸ್‌ನಲ್ಲಿ ವಿಧಿಸಲ್ಪಟ್ಟರೀತಿಯಾಗಿ ಇಜಾರೇದಾರನ ಸ್ವತ್ತು ಜಫ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು. ಮತ್ತು ಇಜಾರೇ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು

ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನೀಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀದೇಖೀಲ್ ತಮಾಂ ಬಾಕೀಗಳನ್ನೂ ಹಾಗೆ ಇಜಾರೇ ಪುನಃ ಹರಾಜ್ ಹಾಕುವದರಿಂದಾಗಲಿ, ವಿಲಾ ಮಾಡುವದರಿಂದಾಗಲಿ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ, ಜಾಮೀನಿ ಮೊಬಲಗ್ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಗೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದೀವಾನರವರ ಮಂಜೂರಾತೀಸಹಿ ಡೆಪ್ಯುಟಿ ಕಮಿಷನರವರಿಗೆ ಯಖ್ತ್ಯಾರೀ ಯಿರತಕ್ಕದ್ದು.

2. ಚಿಲ್ಲರೇ ಫುರೋಖ್ತುದಾರ್ರಿಗೆ ಡೆಪ್ಯುಟಿ ಕಮಿಷನರವರಿಂದ ಮಾಮೂಲ್ ಲೈಸೆನ್ಸಗಳು, ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮಿಷನರವರ ಕಂಠೋಕ್ತವಾದ ಮಂಜೂರಾತಿ ಇಲ್ಲದೆ, ಇಜಾರೇದಾರನು ಹಾಲೀ ಶೇಂದೀ ಫುರೋಖ್ತು ಬಗ್ಗೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖ್ಯೆಯ ವಿಷಯದಲ್ಲಾಗಲಿ, ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬ್‌ಗಳ ಮೇಲೆ ಯಾವ ಅಂಗಡಿಗಳನ್ನಾದರೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮಿಷನರು ಅರ್ಹರಾಗಿರುತ್ತಾರೆ.

3. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ, ಧಾನ್ಯವನ್ನಾಗಲಿ, ಸರುಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗೆದುಕೊಳ್ಳಕೂಡದು.

4. ಇಜಾರೇದಾರನು, ದೀವಾನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಬದ್ಧನಾಗಿ ನಡದುಕೊಳ್ಳತಕ್ಕದ್ದು.

5. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರಿಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗೈರೇಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರ ಹಕ್ಕುದಾರೀಗಳಲ್ಲಿ, ಗುತ್ತಿಗೇದಾರನು ಎಷ್ಟುಮಾತ್ರಕ್ಕೂ ಪ್ರವೇಶಿಸಕೂಡದು. ಅಂತಾ ಹಕ್ಕುಗಳ ವಿಷಯದಲ್ಲಿ ಉಂಟಾಗುವ ತಕರಾರ್‌ಗಳನ್ನು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರು ಫೈಸಲ್ ಮಾಡತಕ್ಕದ್ದು. ಅಂತಾ ಫೈಸಲಿಗೆ ಗುತ್ತಿಗೇದಾರನು ಬದ್ಧನಾಗಿರತಕ್ಕದ್ದು. ಪರಂತು, ಸದರೀ ಫೈಸಲ್, ಅಪ್ಪೀಲ್‌ನಲ್ಲಿ ದೀವಾನರವರಿಂದ ಕಾಯಂಮಾಡಲ್ಪಡಲಿಕ್ಕಾಗಲಿ ಅನ್ಯಥಾ ಆಗಲಿ ಗುರಿಯಾಗತಕ್ಕದ್ದು.

6. ಬೆಳಗ್ಯೆ 6 ಘಂಟೆಗೆ ಮುಂದಾಗಿ ಶೇಂದಿ ಅಂಗಡಿಗಳ್ಯಾವವೂ ತೆಗೆಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡೆಪ್ಯುಟಿ ಕಮಿಷನರಿಂದ ವಿಶೇಷ ಸಂದರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

7. ಯೂರೋಪಿಯನ್ ಸೋಲ್ಜರುಗಳ ಒಂದು ರಿಜಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯಃ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದಿ ಫುರೋಖ್ತು ಬಗ್ಗೆ ಇರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು. ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟು ಮಾಡಲ್ಪಟ್ಟಿತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು, ಅಂಥಾ ಫೌಜಿನವರು ತಮ್ಮ ಕಡೇ ಆಬ್ಕಾರೀ ಕಂಟ್ರಾಕ್ಟರನ್ನ ಇಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿ ಇರತಕ್ಕದ್ದು.

8. ಇಜಾರೇದಾರನು ಡಿಸ್ಟ್ರಿಕ್ಟಿನ ಸರಕಾರದ ಬಂಜರ್ ಜಮೀನಲ್ಲಿ ಇರುವ ಈಚಲು ಮರಗಳನ್ನು, ಇಜಾರೇಗಳ ಸ್ಥಳ ಸರಹದ್ದಿನೊಳಗೆ ಫುರೋಖ್ತು ಬಗ್ಯಾಗಲಿ ಕಲ್ಲ ತಯಾರ್ ಮಾಡುವ ಬಗ್ಯಾಗಲಿ ಶೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿಕೊಳ್ಳಬಹುದು, ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಐಯಿಂದಾ ಅನುಭವಿಸಲ್ಪಡತಕ್ಕ ಜಮೀನುಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕಿರುವದಿಲ್ಲ, ಮತ್ತು ಗವರ್ನಮೆಂಟಿನವರು ಯಾವಾಗಲಾದರೂ, ಇತರ ಕೆಲಸಗಳಿಗೋಸ್ಕರವಾಗಲಿ, ಇತರ ಡಿಸ್ಟ್ರಿಕ್ಟುಗಳಿಗೆ ಶೇಂದೀ ಒದಗಿಸುವದಕ್ಕೋಸ್ಕರವಾಗಲಿ ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ, ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ. ಡೆಪ್ಯುಟಿ ಕಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ, ವ ಷರತ್ತುಗಳ ಪ್ರಕಾರವೂ ಮಾತ್ರವೇ ಕಲ್ಲ ತಯಾರ್ ಮಾಡಲ್ಪಡತಕ್ಕದ್ದು.

9. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಶೇಂದಿ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟ್ ವಿಷಯದಲ್ಲಾಗಲಿ, ಗವರ್ನಮೆಂಟಿನವರು ಮಾಡತಕ್ಕ ಯಾವ ಏರ್ಪಾಡುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ಸೋಡೀಗೆ ಬಾಧ್ಯತೆ ಉಳ್ಳವನಾಗಿರುವದಿಲ್ಲ. ಡಿಸ್ಟ್ರಿಕ್ಟು ಪೈಕೀ ಯಾವ ಭಾಗದಲ್ಲಾಗಲಿ, ಸರ್ಕಾರೀ ಕಾರಣಗಳಮೇಲೆ ಇಜಾರೇಯನ್ನು ಮವುಕೂಫ್ ಮಾಡಿ ಆ ಬಗ್ಯೆ ನ್ಯಾಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದೀವಾನರವರು, ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

10. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯೂರೇಶಿಯನ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದ ಮೇಲಿರುವಲ್ಲಿ ಒಬ್ಬ ಶಿಪಾಯಿಗಾಗಲಿ, ಪೊಲೀಸಿನವರಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರಕಿಲಾಫಾಗಲಿ ನಡೆದಲ್ಲಿ ಅದರಿಂದ ಗುತ್ತಿಗೇದಾರ ಯಾ ಫುರೋಖ್ತುದಾರ, ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಫುರೋಖ್ತುದಾರನ ಲೈಸೆನ್ಸು ರದ್ದಾಗಲಿಕ್ಕೂ, ಗುರಿಯಾಗುತ್ತೆ.

11. ಗುತ್ತಿಗೇದಾರನು, ತನ್ನ ನೌಕರರು ಯಾ ಮುತಾಲೀಕರು, ಭೂಮಿಯಿಂದ ಗರೀ ಬಿಡುವ ಭಾಗದವರೆಗೆ ಒಂದು ಗಜದ ಎತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಯಳೀ ಈಚಲು ಮರಗಳಿಂದ ಶೇಂದೀ ಇಳಿಸದೇಯೂ, ಮತ್ತು ಶೇಂದಿ ಇಳಿಸುವ ದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ಉಪಯೋಗಿಸದೆಯೂ, ಇರುವ ಬಗ್ಗೆ ಜವಾಬ್‌ದಾರನಾಗಿರತಕ್ಕದ್ದು. ಈ ನಿಬಂಧನೆಗಳಿಗೆ ಏನಾದರೂ ಬರಕಿಲಾಫ್ ನಡದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, 100 ರೂಪಾಯಿಗಳ ಜುರ್ಮಾನೆಗೂ ಇಜಾರೇದಾರನು ಗುರಿಯಾಗತಕ್ಕದ್ದು.

12. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೂ, ರೊಟ್ಟೀ ಮಾಡತಕ್ಕವರಿಗೂ ಮಾರಲ್ಪಡತಕ್ಕದ್ದು.

	ಜಾಸ್ತಿ.			ಕಮ್ಮಿ.			ರೊಟ್ಟಿ ಮಾಡುವವರಿಗೆ ಶೇರು ಒಂದಕ್ಕೆ ಕಾಯಂ ಖರೀದಿ.		
	ಶೇರು ಒಂದಕ್ಕೆ ಕ್ರಯ.								
	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.
ಸಿವಿಲ್ ವ ಮಿಲಟೇರಿ ಸ್ಟೇಷನ್ ದೇಖೀಲ್ ಬೆಂಗಳೂರು ಷಹರನಲ್ಲಿ.	0	1	6	0	1	0	0	1	0
ಬೆಂಗಳೂರು ಡಿಸ್ಟ್ರಿಕ್ಟಿನ ತಾಲ್ಲೂಕು ಕಸಬೆಗಳಲ್ಲಿ	0	1	3	0	0	10			
ಡಿಟೋ ಗಾವ್‌ಗಾನೆಗಳಲ್ಲಿ	0	1	0	0	0	8			

6. ಶೇಂದಿ ಸಾಗಿಸುವಬಗ್ಗೆ ಉಪಯೋಗಿಸಲ್ಪಡುವ ಭಂಡಿಗಳಿಗಾಗಿ, ವಿಧಿಸಲ್ಪಟ್ಟ ಮೊಹತರ್ಫಾ ಭಂಡೀ ಕಂದಾಯವನ್ನು ಪಾವತೀ ಮಾಡಬೇಕಾಗಿರುತ್ತೆ.

7. ಹಿಂದಿನ ಹುಟ್ಟುವಳಿಯನ್ನೂ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಗಳನ್ನೂ, ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

ತಾರೀಖು 18ನೇ ಜನವರಿ 1884.

ನಂ. 302.—ಕೋಲಾರ ಡಿಸ್ಟ್ರಿಕ್ಟಿನಲ್ಲಿ ಸರ್ 1884ನೇ ಇಸವಿ ಏಪ್ರೆಲ್ 1ನೇ ತಾರೀಖಿಲಾಗಾಯಿತು 1887ನೇ ಇಸವಿ ಮಾರ್ಚಿ 31ನೇ ತಾರೀಖು ವರಿಗೆ ಆಗುವ 3 ವರುಷಗಳ ಕಾಲದಪರ್ಯಂತ್ರ ಶೇಂದಿ ಬಿಕರೀಮಾಡುವ ವಟ್ಟು ಸ್ವಾತಂತ್ರ್ಯದಬಗ್ಗೆ ದರಖಾಸ್ತುಗಳು ಮಾಡಬಹುದೆಂದು ಇದರಿಂದ ಕೋರಲ್ಪಟ್ಟಿರುತ್ತೆ. ಕೋಲಾರ ಡಿಸ್ಟ್ರಿಕ್ಟಿಗೆ, ದೀವಾನರವರ ಸರ್ 1882ನೇ ಇಸವಿ 25ನೇ ನವಂಬರ 136ನೇ ನಂಬರು ಮತ್ತು ಅದೇ ಇಸವಿ ಡಿಶಂಬರ 9ನೇ ಮರ್ಸ್ಕೂರು 147 ವ 148ನೇ ನಂಬರುಳ್ಳ ಇಸ್ತಿಹಾರ್ ನಾಮೆಗಳಿಂದ ಪರಿಷ್ಕರಿಸಲ್ಪಟ್ಟಂತೆ ಇದರಡಿಕಂಡ ತಾಲ್ಲೂಕುಗಳು ಶೇರಿಯಿರುತ್ತವೆ.

1. ಕೋಲಾರ.	4. ಮುಳಬಾಗಲ್.	7. ಬಾಗೇಪಲ್ಲಿ.
2. ಬೌರಿಂಗಪೇಟೆ.	5. ಸಿಡ್ಲಘಟ್ಟ.	8. ಗೋರಿಬಿದನೂರು.
3. ಚಿಂತಾಮಣಿ.	6. ಚಿಕ್ಕಬಳ್ಳಾಪುರ.	

2. ಯಷ್ಟರ ಮೊಬಲಗಿಗೆ ಕೇಳುತ್ತಾರೋ ಅಂತಾ ಸಾಲೀಯಾನಾ ಮೊಬಲಗು ಪ್ರತಿ ದರಖಾಸ್ತಿನಲ್ಲಿಯೂ ನಮೂದಿಸಲ್ಪಟ್ಟು ಅದರ ಸಂಗಡ ನಗದಾಗಿಯಾಗಲಿ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ 1,000 ರೂಪಾಯಿಗಳ ಡಿಪಾಜಿಟನಿಕ್ಕೆ ಲಿಫಾಫೆಯೊಳಗೆ ಹಾಕಿ ಬಂದ್ ಮಾಡಲ್ಪಟ್ಟು "ಕೋಲಾರ ಡಿಸ್ಟ್ರಿಕ್ಟಿನೊಳಗೆ ಶೇಂದಿ ಬಿಕ್ರಿ ಮಾಡತಕ್ಕ ಒಟ್ಟು ಸ್ವಾತಂತ್ರ್ಯದ ಬಗ್ಗೆ ದರಖಾಸ್ತು" ಯಂತ ಲಿಫಾಫೆ ಮೇಲೆ ಬರೆದುಕಳುಹಿಸತಕ್ಕದ್ದು.

3. ದರಖಾಸ್ತುಗಳು, ಸನ್ 1884ನೇ ಇಸವಿ ಫೆಬ್ರುವರಿ 13ನೇ ಮಿತೀ ಮಿನ ಸಾಯಂಕಾಲ 6 ಘಂಟೆಗಳ ವಳಗಾಗಿಯಾಗಲಿ, ತತ್ಪೂರ್ವವಾಗಲಿ, ಕೋಲಾರದಲ್ಲಿ ಕೋಲಾರ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಆಫೀಸಿನಲ್ಲಿ ಪಾವತೀ ಮಾಡಲ್ಪಡತಕ್ಕದ್ದು; ಅಥವಾ 1884ನೇ ಇಸವಿ ಫೆಬ್ರುವರಿ 15ನೇ ಮಿತೀ ಮಿನ ಮಧ್ಯಾನ್ಹದಲ್ಲಿ ಯಾ ತತ್ಪೂರ್ವದಲ್ಲಿಯಾಗಲಿ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಆಫೀಸಿನಲ್ಲಿ ಕೋಲಾರ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರಿಗೆ ಪಾವತಿ ಮಾಡತಕ್ಕದ್ದು. ಆಗ ಸದರೀ ದರಖಾಸ್ತುಗಳು ದರಖಾಸ್ತುದಾರರ ರೂಬರೂ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರ ಆಫೀಸಿನಲ್ಲಿ ಖುಲ್ಲಾ ಮಾಡಲ್ಪಡುವವು. ಯಾವ ದರಖಾಸ್ತುದಾರನ ದರಖಾಸ್ತನ್ನು, ದೀವಾನರವರಿಗೆ ಶಿಫಾರಸ್ ಮಾಡುವ ಬಗ್ಯೆ ಡೆಪ್ಯೂಟಿ ಕಮ್ಮಿಷನರು ಚುನಾಯಿಸಿ ಕೊಳ್ಳುತ್ತಾರೋ ಅಂತಾ ದರಖಾಸ್ತುದಾರನು ಕೂಡ್ಲೆ ನಗದಾಗಿಯಾಗಲಿ, ಗವರ್ನಮೆಂಟ್ ಪತ್ರಗಳ ಮೂಲಕವಾಗಲಿ ದರಖಾಸ್ತು ಮಾಡಿದ ಸಾಲೀಯಾನಾ ಇಜಾರೇ ಮೊಬಲಗು ಪೈಕೀ ಹನ್ನೆರಡಲ್ಲಿ ವಂದು ಭಾಗವಾಗಲಿ (ಅಥವಾ ವಂದು ತಿಂಗಳ ಖಿಸ್ತು ಮೊಬಲಗಾಗಲಿ) ಜಾಸ್ತಿಯಾಗಿ ಡಿಪಾಜಿಟ್ ಇಡತಕ್ಕದ್ದು. ಇದಕ್ಕೆ ತಪ್ಪಿದರೆ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಡಿಪಾಜಿಟ್ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

4. ದೀವಾನರವರ ತೀರ್ಮಾನ ಫಾಯಿಷ್ ಮಾಡಲ್ಪಟ್ಟಾಗ ಯಾವ ದರಖಾಸ್ತುದಾರರ ದರಖಾಸ್ತುಗಳು ತಿರಸ್ಕರಿಸಲ್ಪಟ್ಟಿರುತ್ತವೋ ಅಂತಾ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್‌ಗಳು, ಅವರು ಖಾಯಿಷ್ ಮಾಡಿದಾಗ ಅವರಿಗೆ ವಾಪಸ್ ಮಾಡಲ್ಪಡುವದು; ಚಡದರಖಾಸ್ತನ್ನಾಗಲೀ ಯಾವ ದರಖಾಸ್ತನ್ನಾಗಲೀ, ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದೀವಾನರವರು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ.

5. ಯಾರ ದರಖಾಸ್ತು ಮಂಜೂರ್ಮಾಡಲ್ಪಡುತ್ತೋ ಅವರಿಗೆ ದೀವಾನರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ ಯೆಂಟು ದಿನಗಳೊಳಗಾಗಿ, 3ನೇ ಕಲಂ ಅನುಸರಿಸಿ ಮೊದಲು ಡಿಪಾಜಿಟ್ ಯಿಟ್ಟಿರುವ ಮೊಬಲಗ್ ದೇಖೀಲ್, ದರಖಾಸ್ತು ಮಾಡಲ್ಪಟ್ಟ ಸಾಲೀಯಾನಾ ಇಜಾರೇ ಮೊಬಲಗ್ ಪೈಕೀ ಹಾಗಪಾಲಿಗೆ ಸಮನಾಗಿರುವ ಬಂದು ಮೊಬಲಗನ್ನು ನಗದಾಗಿಯಾಗಲೀ ಕ್ರಮಪ್ರಕಾರ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲೀ, ಡೆಪ್ಯೂಟಿ ಕಮ್ಮಿಷನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತ್‌ಗಳಿಗೆ ಬದ್ಧರಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾ ಕಾಗದದ ಮೇಲೆ, ಬಂದು ಕರಾರ್ ಬರದುಕೊಡತಕ್ಕದ್ದು, ಆತನು ಕರಾರಿಗೆ ರುಜು ಮಾಡುವದಕ್ಕಾಗಲೀ, ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲೀ, ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವವೇ ಇಡಲ್ಪಟ್ಟ ಡಿಪಾಜಿಟ್‌ಗಳು, ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು ಇಜಾರೆಯು ಅನ್ಯಥಾ ವಿಲಾ ಮಾಡಲ್ಪಡುವದು.

ಷರತ್ತುಗಳು.

1. ಸಾಲೀಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಬಂದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್ ಸೆಸ್ ದೇಖೀಲ್ ಅಂತಾ ಇಜಾರೇ ಮೊಬಲಗನ್ನು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದಕ್ಕೆ ಮುಂದಾಗಿಯಾಗಲಿ, ಡಿಸ್ಟ್ರಿಕ್ಟು ಖಜಾನೆಯಲ್ಲಿ ಮಾಹೇಯಾನಾ ಸಮನಾದ ಖಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು. ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕಿಗಳಿಗೂ, ಸೇಕಡಾ ಸಾಲೀಯಾನಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕೊಡತಕ್ಕದ್ದು. ಅಂತಾ ಬಾಕೀ ಮೊಬಲಗಗಳು ಪಾವತಿಯಾಗತಕ್ಕ ತಿಂಗಳು ಕಳೆದ ಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜಮೀನ್ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಇರುವ ರೂಲ್ಸ್‌ನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೇದಾರನ ಸ್ವತ್ತು ಜಫ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು. ಮತ್ತು ಇಜಾರೇ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನೀ ಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಖೀಲ್ ತಮಾಂ ಬಾಕಿಗಳನ್ನೂ, ಹಾಗೆ ಇಜಾರೇ ಪುನಃ ಹರಾಜ್ ಹಾಕುವದರಿಂದಾಗಲಿ, ವಿಲಾ ಮಾಡುವದರಿಂದಾಗಲಿ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ ಜಾಮೀನಿ ಮೊಬಲಗ್ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದೀವಾನರವರ ಮಂಜೂರಾತೀನಿಶೇ ಡೆಪ್ಯೂಟಿ ಕಮ್ಮಿಷನರವರಿಗೆ ಯಿಖ್ತ್ಯಾರಿಯಿರತಕ್ಕದ್ದು.

2. ಚಿಲ್ಲರೇ ಫುರೋಖ್ತುದಾರ್ರಿಗೆ ಡೆಪ್ಯೂಟಿ ಕಮ್ಮಿಷ್ನರವರಿಂದ ಮಾಮೂಲ್ ಲೈಸೆನ್ಸ್‌ಗಳು ಕೊಡಲ್ಪಡುವವು, ಮತ್ತು ಡೆಪ್ಯೂಟಿ ಕಮ್ಮಿಷನರವರ ಕಂಠೋಕ್ತವಾದ ಮಂಜೂರಾತಿ ಇಲ್ಲದೆ, ಇಜಾರೇದಾರನು ಹಾಲೀ ಶೇಂದೀ ಫುರೋಖ್ತು ಬಗ್ಯೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖ್ಯೆಯ ವಿಷಯದಲ್ಲಾಗಲಿ, ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬಗಳ ಮೇಲೆ ಯಾವ ಅಂಗಡಿಗಳನ್ನಾದರೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯೂಟಿ ಕಮ್ಮಿಷ್ನರು ಅರ್ಹರಾಗಿರುತ್ತಾರೆ.

3. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ ಧಾನ್ಯವನ್ನಾಗಲಿ, ಸರುಕುಗಳನ್ನಾಗಲಿ, ಬಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

4. ಇಜಾರೇದಾರನು, ದೀವಾನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಬದ್ಧನಾಗಿ ನಡದು ಕೊಳ್ಳತಕ್ಕದ್ದು.

5. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರೀಗಳನ್ನು ಚಲಾಯಿಸುವದಕ್ಕೆ ಸನ್ನದ ವಗ್ಯೆರೇಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರ ಹಕ್ಕುದಾರೀಗಳಲ್ಲಿ, ಗುತ್ತಿಗೇದಾರನು ಎಷ್ಟುಮಟ್ಟಿಗೂ ಪ್ರವೇಶಿಸಕೂಡದು. ಅಂತಾ ಹಕ್ಕುಗಳ ವಿಷಯದಲ್ಲಿ ಉಂಟಾಗುವ ತಕರಾರ್‌ಗಳನ್ನು ಡಿಸ್ಟ್ರಿಕ್ಟು ಡೆಪ್ಯೂಟಿ ಕಮಿಷನರು ಫೈಸಲ್ ಮಾಡತಕ್ಕದ್ದು. ಅಂಥಾ ಫೈಸಲಿಗೆ ಗುತ್ತಿಗೇದಾರನು ಬದ್ಧನಾಗಿರತಕ್ಕದ್ದು. ಪರಂತು, ಸದರೀ ಫೈಸಲ್ ಅಪ್ಪೀಲ್‌ನಲ್ಲಿ ದೀವಾನರವರಿಂದ ಕಾಯಂಮಾಡಲ್ಪಡಲಿಕ್ಕಾಗಲಿ ಅನ್ಯಥಾ ಆಗಲಿ ಗುರಿಯಾಗತಕ್ಕದ್ದು.

6. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಶೇಂದಿ ಅಂಗಡಿಗಳ್ಯಾವವೂ ತೆಗಿಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡೆಪ್ಯೂಟಿ ಕಮಿಷನರಿಂದ ವಿಶೇಷ ಸಂಧರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

7. ಯೂರೋಪಿಯನ್ ಸೋಲ್ಜರುಗಳ ಒಂದು ರಿಜಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆಪ್ರಾಂತ್ಯದಲ್ಲಿ ಸದ್ಯ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದಿ ಪುರೋಖ್ತು ಬಗ್ಯೆ ಯಿರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು, ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟುಮಾಡಲ್ಪಟ್ಟಿತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು, ಅಂಥಾ ಫೌಜಿನವರು ತಮ್ಮಕಡೇ ಅಬ್ಕಾರೀ ಕಂಟ್ರಾಕ್ಟರನ್ನ ಇಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿ ಯಿರತಕ್ಕದ್ದು.

8. ಇಜಾರೇದಾರನು ಡಿಸ್ಟ್ರಿಕ್ಟಿನ ಸರಕಾರದ ಬಂಜರ್ ಜಮೀನಲ್ಲಿ ಇರುವ ಈಚಲು ಮರಗಳನ್ನು, ಇಜಾರೆಗಳ ಸ್ಥಳ ಸರಹದ್ದಿನೊಳಗೆ ಪುರೋಖ್ತು ಬಗ್ಯಾಗಲಿ ಬೆಲ್ಲ ತಯಾರ್ ಮಾಡುವ ಬಗ್ಯಾಗಲಿ ಶೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿ ಕೊಳ್ಳಬಹುದು, ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಐಯಿಂದ ಅನುಭವಿಸಲ್ಪಡತಕ್ಕ ಜಮೀನುಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕಿರುವದಿಲ್ಲ, ಮತ್ತು ಗವರ್ನಮೆಂಟಿನವರು ಯಾವಾಗಲಾದರೂ, ಇತರ ಕೆಲಸಗಳಿಗೋಸ್ಕರವಾಗಲಿ ಇತರ ಡಿಸ್ಟ್ರಿಕ್ಟುಗಳಿಗೆ ಶೇಂದೀ ಒದಗಿಸುವದಕ್ಕೋಸ್ಕರ ವಾಗಲಿ, ಉಳಿಸಿಕ್ಕೊಳ್ಳುವದು ಜರೂರೆಂದು ಭಾವಿಸುವಂತಹ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ, ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ, ಡೆಪ್ಯೂಟಿ ಕಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ, ಷರತ್‌ಗಳ ಪ್ರಕಾರವೂ ಮಾತ್ರವೇ ಬೆಲ್ಲ ತಯಾರ್ಮಾಡಲ್ಪಡತಕ್ಕದ್ದು.

9. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಶೇಂದಿ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟ್‌ಗಳ ವಿಷಯದಲ್ಲಾಗಲಿ, ಗವರ್ನಮೆಂಟಿನವರು ಮಾಡತಕ್ಕ ಯಾವ ಯೇರ್ಪಾಟುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ನೋಡೀಗೆ ಬಾಧ್ಯತೆ ವುಳ್ಳವನಾಗಿರುವದಿಲ್ಲ. ಡಿಸ್ಟ್ರಿಕ್ಟು ಪೈಕೀ ಯಾವ ಭಾಗದಲ್ಲಾಗಲಿ ಸರ್ಕಾರೀ ಕಾರಣಗಳ ಮೇಲೆ ಇಜಾರೇಯನ್ನು ಮೌಕೂಫ್ ಮಾಡಿ ಆ ಬಗ್ಯೆ ನ್ಯಾಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದೀವಾನರವರು ತಮ್ಮಲ್ಲಿಯೇ ವುಳಿಸಿಕೊಂಡಿರುತ್ತಾರೆ.

10. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯೂರೇಷಿಯನ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದ ಮೇಲಿರುವಲ್ಲ ಒಬ್ಬ ಶಿಪಾಯಿಗಾಗಲಿ, ಪೋಲೀಸಿನವರಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರಖಿಲಾಫಾಗಲಿ ನಡೆದಲ್ಲಿ ಅದರಿಂದ ಗುತ್ತಿಗೇದಾರ ಯಾ ಪುರೋಖ್ತುದಾರ, ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಪುರೋಖ್ತುದಾರನ ಲೈಸೆನ್ಸು ರದ್ದಾಗಲಿಕ್ಕೆ ಗುರಿಯಾಗುತ್ತೆ.

11. ಗುತ್ತಿಗೇದಾರನು ತನ್ನ ನೌಕರರು ಯಾ ಮುತಾಲೀಕರು ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಒಂದು ಗಜದ ಯತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಯಾವ ಈಚಲು ಮರಗಳಿಂದ ಶೇಂದೀ ಇಳಿಸದೇಯೂ, ಮತ್ತು ಶೇಂದಿ ಇಳಿಸುವದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ವುಪಯೋಗಿಸದೆಯೂ, ಇರುವ ಬಗ್ಯೆ ಜವಾಬ್ದಾರನಾಗಿರತಕ್ಕದ್ದು. ಈ ನಿಬಂಧನೆಗಳಿಗೆ ಯೇನಾದರೂ ಬರಖಿಲಾಫ್ ನಡದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ 100 ರೂಪಾಯಿಗಳ ಜುರ್ಮಾನೆಗೂ ಗುತ್ತಿಗೇದಾರ ಗುರಿಯಾಗತಕ್ಕದ್ದು.

12. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ ಮಾರಲ್ಪಡತಕ್ಕದ್ದು.

	ಶೇರು ವಂದಕ್ಕೆ ಕ್ರಯ.	
	ಜಾಸ್ತಿ.	ಕಮ್ಮಿ.
	ರೂ. ಅ. ಪೈ.	ರೂ. ಅ. ಪೈ.
ಕೋಲಾರ ಡಿಸ್ಟ್ರಿಕ್ಟಿನ ತಾಲ್ಲೂಕು ಕಸಬೆಗಳಲ್ಲಿ	0—1—3	0—0—10
ಡಿಟೋ ಗಾವ್‌ಗಾನೆಗಳಲ್ಲಿ	0—1—0	0—0—8

6. ಶೇಂದಿ ರವಾನೇಬಗ್ಯೆ ಉಪಯೋಗಿಸಲ್ಪಡುವ ಛಂಡಿಗಳು, ಅವುಗಳಿಗಾಗಿ ವಿಧಿಸಲ್ಪಟ್ಟ ಮೊಹತರ್ಫಾ ಛಂಡಿ ಕಂದಾಯದ ವಸೂಲಿಯಿಂದ ವಿನಾಯಿಸಲ್ಪಟ್ಟಿರುವದಿಲ್ಲಾ.

7. ಹಿಂದಿನ ಹುಟ್ಟುವಳಿಯನ್ನೂ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಯನ್ನೂ, ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳದುಕೊಳ್ಳಬಹುದು.

ತಾರೀಖು 18ನೇ ಜನವರೀ 1884.

ನಂ.303.—ತುಮಕೂರು ಡಿಸ್ಟ್ರಿಕ್ಟಿನಲ್ಲಿ 1884ನೇ ಇಸವಿ ಏಪ್ರೆಲ್ 1ನೇ ತಾರೀಖು ಮೊದಲು 1887ನೇ ಇಸವಿ ಮಾರ್ಚಿ 31ನೇ ತಾರೀಖುವರಿಗೆ ಆಗುವ ಮೂರುವರುಷಗಳ ಕಾಲದಲ್ಲಿ ಶೇಂದಿಯನ್ನು ಬಿಕರೀಮಾಡುವ ಚಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತುಗಳು ಕೋರಲ್ಪಟ್ಟಿವೆ. ತುಮಕೂರು ಡಿಸ್ಟ್ರಿಕ್ಟಿಗೆ, ದೀವಾನರವರ 1882ನೇ ಇಸವಿ 25ನೇ ನವಂಬರ್ ಮತ್ತು 21ನೇ ಡಿಶಂಬರ್ ಮರ್ಸ್ತುಂಗಳುಳ್ಳ 129—136 ವ 165ನೇ ಇಸ್ತಿಹಾರ್‌ನಾಮೆಗಳಿಂದ ತಿದ್ದುಪಡಿ ಮಾಡಲ್ಪಟ್ಟ ಪ್ರಕಾರ ಇದರಡಿ ಕಂಡ ತಾಲ್ಲೂಕುಗಳು ಶೇರಿ ಇರುತ್ತವೆ.

1 ತುಮಕೂರು	7 ಪಾವಗಡ	ಚಿತ್ರದುರ್ಗದ ಸಬ್ ಡಿವಿಜನ್
2 ಮದ್ದಗಿರಿ	8 ಚಿತ್ರದುರ್ಗ	
3 ಚಿಕ್ಕನಾಯಕನಹಳ್ಳಿ	9 ಚಳ್ಳಕೆರೆ	
4 ಶಿರಾ	10 ಹಿರಿಯೂರು	
5 ಗುಬ್ಬಿ	11 ಹೊಳಲಕೆರೆ	
6 ತಿಪಟೂರು		

2. ಎಷ್ಟರ ಮೊಬಲಗಿಗೆ ಕೇಳುತ್ತಾರೋ ಅಂತಾ ಸಾಲೀಯಾನಾ ಮೊಬಲಗು ಪ್ರತಿ ದರಖಾಸ್ತಿನಲ್ಲಿಯೂ ನಮೂದಿಸಲ್ಪಟ್ಟು ಅದರ ಸಂಗಡ ನಗದಾಗಿಯಾಗಲಿ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ 1,000 ರೂಪಾಯಿಗಳ ಡಿಪಾಜಿಟ್‌ನಿಸೀ ಲಿಫಾಫೆಯೊಳಗೆ ಹಾಕಿ ಬಂದ್ ಮಾಡಲ್ಪಟ್ಟು "ತುಮಕೂರು ಡಿಸ್ಟ್ರಿಕ್ಟಿನೊಳಗೆ ಶೇಂದಿ ಬಿಕ್ರಿ ಮಾಡತಕ್ಕ ಚಟ್ಟು ಸ್ವಾತಂತ್ರದಬಗ್ಯೆ ದರಖಾಸ್ತು" ಎಂತ ಲಿಫಾಫೆಮೇಲೆ ಬರದುಕಳುಹಿಸತಕ್ಕದ್ದು.

3. ದರಖಾಸ್ತುಗಳು ಸರ್ಕ 1884ನೇ ಇಸವಿ ಫಿಬ್ರವರಿ 13ನೇ ಮರ್ಸ್ಕುಮಿನ ಮಧ್ಯಾನ್ಹದೊಳಗಾಗಲಿ, ತತ್ಪೂರ್ವವಾಗಲಿ, ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಹೆಸರಿಗೆ ಬರೆಯಲ್ಪಟ್ಟು ತುಮಕೂರಲ್ಲಿ ಡೆಪ್ಯುಟಿ ಕಮ್ಮಿಷ್ನರವರ ಆಫೀಸಿನಲ್ಲಿ ಪಾವತೀಮಾಡಲ್ಪಡತಕ್ಕದ್ದು. ಅಥವಾ ಅವರಿಗೆ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷ್ನರವರ ಆಫೀಸಿನಲ್ಲಿ 1884ನೇ ಇಸವಿ ಫಿಬ್ರವರೀ 15ನೇ ಮರ್ಸ್ತುಮಿನ ಮಧ್ಯಾನ್ಹದಲ್ಲಿ ಯಾ ತತ್ಪೂರ್ವದಲ್ಲಿ ಪಾವತೀ ಮಾಡತಕ್ಕದ್ದು. ಆಗ ಸದರೀ ದರಖಾಸ್ತುಗಳು ದರಖಾಸ್ತುದಾರರ ರೂಬರೂ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷ್ನರವರ ಆಫೀಸಿನಲ್ಲಿ ಖುಲ್ಲಾ ಮಾಡಲ್ಪಡುವವು. ಯಾವ ದರಖಾಸ್ತುದಾರನ ದರಖಾಸ್ತನ್ನು, ದೀವಾನರವರಿಗೆ ಶಿಫಾರಸ್ ಮಾಡುವ ಬಗ್ಯೆ ಡೆಪ್ಯುಟಿ ಕಮ್ಮಿಷನರು ಚುನಾಯಿಸಿ ಕೊಳ್ಳುತ್ತಾರೋ ಅಂಥಾ ದರಖಾಸ್ತುದಾರನು ಕೂಡ್ಲೆ ನಗದಾಗಿಯಾಗಲಿ ಗವರ್ನಮೆಂಟ್ ಪತ್ರಗಳಮೂಲಕವಾಗಲಿ ದರಖಾಸ್ತುಮಾಡಿದ ಸಾಲೀಯಾನಾ ಇಜಾರೇ ಮೊಬಲಗು ಪೈಕೀ ಹನ್ನೆರಡರಲ್ಲಿ ಒಂದು ಭಾಗವಾಗಲಿ (ಅಥವಾ ವಂದು ತಿಂಗಳ ಕಿಸ್ತು ಮೊಬಲಗಾಗಲಿ) ಜಾಸ್ತಿಯಾಗಿ ಡಿಪಾಜಿಟ್ ಇಡತಕ್ಕದ್ದು, ಇದಕ್ಕೆ ತಪ್ಪಿದರೆ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಡಿಪಾಜಿಟ್ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

4. ದೀವಾನರವರ ತೀರ್ಮಾನ ಫಾಯಿಷ್ ಮಾಡಲ್ಪಟ್ಟಾಗ ಯಾವ ದರಖಾಸ್ತುದಾರರ ದರಖಾಸ್ತುಗಳು ತಿರಸ್ಕರಿಸಲ್ಪಟ್ಟಿರುತ್ತವೋ ಅಂತಾ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್‌ಗಳು, ಅವರು ಖಾಯಿಷ್‌ಮಾಡಿದಾಗ ಅವರಿಗೆ ವಾಪಸ್ ಮಾಡಲ್ಪಡುವವು; ಚಡದರಖಾಸ್ತನ್ನಾಗಲೀ ಯಾವ ದರಖಾಸ್ತನ್ನಾಗಲೀ, ಯಾವ ಸಬಬನ್ನೂ ತಿಳಿಸದೇಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದೀವಾನರವರು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ.

5. ಯಾರ ದರಖಾಸ್ತು ಮಂಜೂರ್‌ಮಾಡಲ್ಪಡುತ್ತೋ ಅವರಿಗೆ ದೀವಾನರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ ಎಂಟು ದಿನಗಳೊಳಗಾಗಿ, 3ನೇ ಕಲಂ ಅನುಸರಿಸಿ ಮೊದಲು ಡಿಪಾಜಿಟ್ ಇಟ್ಟಿರುವ ಮೊಬಲಗ್ ದೇಖೀಲ್, ದರಖಾಸ್ತು ಮಾಡಲ್ಪಟ್ಟ ಸಾಲೀಯಾನಾ ಇಜಾರೇ

ಮೊಬಲಗ್ ಪೈಕೀ ಹಾಗಪಾಲಿಗೆ ಸಮನಾಗಿರುವ ಒಂದು ಮೊಬಲಗನ್ನು ನಗದಾಗಿಯಾಗಲೀ ಕ್ರಮ ಪ್ರಕಾರ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲೀ, ಡೆಪ್ಯುಟಿ ಕಮ್ಮಿಷನ್ನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತುಗಳಿಗೆ ಬದ್ಧರಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾಕಾಗದದ ಮೇಲೆ, ಒಂದು ಕರಾರ್ ಬರದುಕೊಡತಕ್ಕದ್ದು, ಆತನು ಕರಾರಿಗೆ ರುಜು ಮಾಡುವದಕ್ಕಾಗಲೀ, ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲೀ, ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವವೇ ಇಡಲ್ಪಟ್ಟ ಡಿಪಾಜಿಟುಗಳು, ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು ಇಜಾರೆಯು ಅನ್ಯಥಾ ವಿಲಾ ಮಾಡಲ್ಪಡುವದು.

ಷರತ್ತುಗಳು.

1. ಸಾಲೀಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಒಂದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್ ಸೆಸ್ ದೇಖೀಲ್ ಅಂತಾ ಇಜಾರೇ ಮೊಬಲಗನ್ನು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದಕ್ಕೆ ಮುಂದಾಗಿಯಾಗಲಿ, ಡಿಸ್ಟ್ರಿಕ್ಟ್ ಖಜಾನೆಯಲ್ಲಿ ಮಾಹೇಯಾನಾ ಸಮನಾದ ಖಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು. ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕಿಗಳಿಗೂ, ಸೇಕಡಾ ಸಾಲೀಯಾನಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕೊಡತಕ್ಕದ್ದು; ಅಂತಾ ಬಾಕೀ ಮೊಬಲಗ್‌ಗಳು ಪಾವತೀಯಾಗತಕ್ಕ ತಿಂಗಳು ಕಳೆದಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜಮೀನ್ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಇರುವ ರೂಲ್ಸ್‌ನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೇದಾರನ ಸ್ವತ್ತು ಜಫ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು. ಮತ್ತು ಇಜಾರೇ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನೀಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಖೀಲ್ ತಮಾಂ ಬಾಕಿಗಳನ್ನೂ, ಹಾಗೆ ಇಜಾರೇ ಪುನಃ ಹರಾಜ್ ಹಾಕುವದರಿಂದಾಗಲಿ, ವಿಲಾ ಮಾಡುವದರಿಂದಾಗಲಿ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ, ಜಾಮೀನೀ ಮೊಬಲಗ್ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದೀವಾನರವರ ಮಂಜೂರಾತೀನಿಸೀ ಡೆಪ್ಯುಟಿ ಕಮ್ಮಿಷನರವರಿಗೆ ಯಿಖ್ತ್ಯಾರೀ ಇರತಕ್ಕದ್ದು.

2. **ಚಿಲ್ಲರೇ ಪುರೋಖ್ತುದಾರ್ರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸ್‌ಗಳು,** ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂಠೋಕ್ತವಾದ ಮಂಜೂರಾತಿ ಇಲ್ಲದೆ, ಇಜಾರೇದಾರನು ಹಾಲೀ ಶೇಂದೀ ಪುರೋಖ್ತು ಬಗ್ಯೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖೆಯ ವಿಷಯದಲ್ಲಾಗಲಿ, ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬ್‌ಗಳ ಮೇಲೆ ಯಾವ ಅಂಗಡಿಗಳನ್ನಾದರೂ ತೆಗದು ಹಾಕುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷನರು ಅರ್ಹರಾಗಿರುತ್ತಾರೆ.

3. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ, ಧಾನ್ಯವನ್ನಾಗಲಿ, ಸರುಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

4. ಇಜಾರೇದಾರನು, ದೀವಾನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಬದ್ಧನಾಗಿ ನಡದುಕೊಳ್ಳತಕ್ಕದ್ದು.

5. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರೀಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗೈರೆಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರ ಹಕ್ಕುದಾರೀಗಳಲ್ಲಿ, ಗುತ್ತಿಗೇದಾರನು ಎಷ್ಟುಮಟ್ಟಿಗೂ ಪ್ರವೇಶಿಸಕೂಡದು. ಅಂತಾ ಹಕ್ಕುಗಳ ವಿಷಯದಲ್ಲಿ ಉಂಟಾಗುವ ತಕರಾರ್‌ಗಳನ್ನು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರು ಫೈಸಲ್ ಮಾಡತಕ್ಕದ್ದು. ಅಂತಾ ಫೈಸಲಿಗೆ ಗುತ್ತಿಗೇದಾರನು ಬದ್ಧನಾಗಿರತಕ್ಕದ್ದು. ಪರಂತು, ಸದರೀ ಫೈಸಲ್ ಅಪ್ಪೀಲ್‌ನಲ್ಲಿ ದೀವಾನರವರಿಂದ ಕಾಯಂಮಾಡಲ್ಪಡಲಿಕ್ಕಾಗಲಿ ಅನ್ಯಥಾ ಆಗಲಿ ಗುರಿಯಾಗತಕ್ಕದ್ದು.

6. ಬೆಳಿಗ್ಯೆ 6 ಘಂಟೆಗೆ **ಮುಂದಾಗಿ** ಶೇಂದಿ ಅಂಗಡಿಗಳ್ಯಾವವೂ ತೆಗೆಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡೆಪ್ಯುಟಿ ಕಮ್ಮಿಷನರಿಂದ ವಿಶೇಷ ಸಂದರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

7. ಯೂರೋಪಿಯನ್ ಸೋಲ್ಜರುಗಳ ಒಂದು ರಿಜಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯಃ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದಿ ಪುರೋಖ್ತು ಬಗ್ಯೆ ಯಿರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು, ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟು ಮಾಡಲ್ಪಟ್ಟಿತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು, ಅಂಥಾ ಫೌಜಿನವರು ತಮ್ಮ ಕಡೇ ಅಬ್ಕಾರೀ ಕಂಟ್ರಾಕ್ಟರನ್ನು ಇಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿ ಯಿರತಕ್ಕದ್ದು.

8. ಇಜಾರೇದಾರನು ಡಿಸ್ಟ್ರಿಕ್ಟಿನ ಸರಕಾರದ ಬಂಜರ ಜಮೀನಲ್ಲಿ ಇರುವ ಈಚಲು ಮರಗಳನ್ನು, ಇಜಾರೇಗಳ ಸ್ಥಳ ಸರಹದ್ದಿನೊಳಗೆ ಪುರೋಖ್ಖು ಬಗ್ಯಾಗಲಿ ಬೆಲ್ಲ ತಯೂರ ಮಾಡುವ ಬಗ್ಯಾಗಲಿ ಶೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿಕೊಳ್ಳಬಹುದು, ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಐಯಿಂದಾ ಅನುಭವಿಸಲ್ಪಡತಕ್ಕ ಜಮೀನುಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕಿರುವದಿಲ್ಲ, ಮತ್ತು ಗವರ್ನಮೆಂಟಿನವರ ಯಾವಾಗಲಾದರೂ,- ಇತರ ಕೆಲಸಗಳಿಗೋಸ್ಕರವಾಗಲಿ, ಇತರ ಡಿಸ್ಟ್ರಿಕ್ಟುಗಳಿಗೆ ಶೇಂದೀ ವದಗಿಸುವದಕೋಸ್ಕರವಾಗಲಿ, ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಕೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ. ಡೆಪ್ಯುಟಿ ಕಮ್ಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ, ವ ಷರತ್‌ಗಳ ಪ್ರಕಾರವೂ ಮಾತ್ರವೇ ಬೆಲ್ಲ ತಯೂರ್ಮಾಡಲ್ಪಡತಕ್ಕದ್ದು.

9. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಶೇಂದಿ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟಗಳ ವಿಷಯದಲ್ಲಾಗಲಿ, ಗವರ್ನಮೆಂಟಿನವರು ಮಾಡತಕ್ಕ ಯಾವ ಯೇರ್ಪಾಡುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ನೋಡೀಗೆ ಬಾಧ್ಯತೆ ಉಳ್ಳವನಾಗಿರುವದಿಲ್ಲ. ಡಿಸ್ಟ್ರಿಕ್ಟು ಪೈಕೀ ಯಾವ ಭಾಗದಲ್ಲಾಗಲಿ, ಸರ್ಕಾರೀ ಕಾರಣಗಳ ಮೇಲೆ ಇಜಾರೇಯನ್ನು ಮಾಕೂಫ್ ಮಾಡಿ ಆ ಬಗ್ಯೆ ನ್ಯಾಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದೀವಾನರವರು, ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

10. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯೂರೇಜಿಯನ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದ ಮೇಲಿರುವಲ್ಲಿ ಒಬ್ಬ ಶಿಪಾಯಿಗಾಗಲಿ, ಪೋಲೀಸಿನವರಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರಕಿಲಾಫಾಗಲಿ ನಡೆದಲ್ಲಿ ಅದರಿಂದ ಗುತ್ತಿಗೇದಾರ ಯಾ ಪುರೋಖ್ಖುದಾರ, ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಪುರೋಖ್ಖುದಾರನ ಲೈಸೆನ್ಸು ರದ್ದಾಗಲಿಕ್ಕೂ, ಗುರಿಯಾಗುತ್ತೆ.

11. ಗುತ್ತಿಗೇದಾರನು ತನ್ನ ನೌಕರರು ಯಾ ಮುತಾಲೀಕರು, ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಒಂದು-ಗಜದ-ಯತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಎಳೇ ಈಚಲು ಮರಗಳಿಂದ ಶೇಂದೀ ಇಳಿಸದೇಯೂ, ಮತ್ತು ಶೇಂದಿ ಇಳಿಸುವದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ದುರುಪಯೋಗಿಸದೇಯೂ, ಇರುವಬಗ್ಯೆ ಜವಾಬ್ದಾರನಾಗಿರತಕ್ಕದ್ದು. ಈ ನಿಬಂಧನೆಗಳಿಗೆ ಯೇನಾದರೂ ಬರಕಿಲಾಫ್ ನಡದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, 100 ರೂಪಾಯಿಗಳ ಜುರ್ಮಾನೆಗೂ ಗುತ್ತಿಗೆದಾರ ಗುರಿಯಾಗತಕ್ಕದ್ದು.

12. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ ಮಾರಲ್ಪಡತಕ್ಕದ್ದು.

	ಜಾಸ್ತಿ.			ಕಮ್ಮಿ.		
	ಶೇರು ಬಂದಕ್ಕೆ ಕ್ರಯ.					
	ರೂ.	ಆ.	ಪೈ.	ರೂ.	ಆ.	ಪೈ.
ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು, ಹೊಳಲಕೆರೆ ಈ ತಾಲ್ಲೂಕುಗಳ ಕಸಬಾ ವ ಗಾವಗಾನೆಗಳಲ್ಲಿ	0	1	0	0	0	6
ತುಮಕೂರು ಡಿಸ್ಟ್ರಿಕ್ಟಿನ ಇತರ ತಾಲ್ಲೂಕು ಕಸಬಾಗಳಲ್ಲಿ	0	1	3	0	0	10
ಡಿಟೋ ಡಿಟೋ ಗಾವಗಾನೆಗಳಲ್ಲಿ	0	1	0	0	0	8

6. ಶೇಂದಿ ರವಾನೆ ಬಗ್ಯೆ ಉಪಯೋಗಿಸಲ್ಪಡುವ ಭಂಡಿಗಳು, ನಿರ್ನಯಿಸಲ್ಪಟ್ಟ ಮೊಹತರ್ಫಾ ಭಂಡೀ ಕಂದಾಯದ ವಸೂಲಿಯಿಂದ ವಿನಾಯಿಸಲ್ಪಟ್ಟಿರುವದಿಲ್ಲ.

7. ಹಿಂದಿನ ಹುಟ್ಟುವಳಿಯನ್ನೂ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಯನ್ನೂ, ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳದುಕೊಳ್ಳಬಹುದು.

ತಾರೀಖು 21ನೇ ಜನವರೀ 1884.

ನಂ. 304.—ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಟೇಷನಿನಲ್ಲಿಯೂ, ಮೈಸೂರು ಷಹರಿನಲ್ಲಿಯೂ, ಬೆಂಗಳೂರು ಮತ್ತು ತುಮಕೂರು, ಕೋಲಾರ, ಮೈಸೂರು ಈ ಡಿಸ್ಟ್ರಿಕ್ಟುಗಳಿಗೂ ಮತ್ತು ಕಡೂರು ಡಿಸ್ಟ್ರಿಕ್ಟಿನ ಹಾಸನದ ಸಬ್ ಡಿವೀಜನ್ನಿಗೆ ಸಹಾ ಶೇರಿದ 46 ತಾಲ್ಲೂಕುಗಳಲ್ಲಿಯೂ, ಷರಾಬ್ ತಯಾರಿ ವ ಬಟ್ಟಿ ಬಿಕರೀ ಮಾಡುವ ಬಟ್ಟಿ ಸ್ವಾತಂತ್ರ್ಯದ ಬಗ್ಗೆ ದರಖಾಸ್ತುಗಳು ಕೊಡಬಹುದೆಂದು ಇದರಿಂದ ತಿಳಿಸೋಣಾಗುತ್ತೆ.

2. ಮೇಲ್ಕಂಡ ಡಿಸ್ಟ್ರಿಕ್ಟುಗಳಿಗೂ, ಸಬ್ ಡಿವಿಜನ್ನಿಗೂ, ದೀವಾನರವರ 1882ನೇ ಇಸವಿ ನವಂಬರ್ 13ನೇ ಮರ್ಕುಂ 129ನೇ ನಂಬರು, ಅದೇ ಇಸವಿ ನವಂಬರ್ 21ನೇ ಮರ್ಕುಂ 131ನೇ ನಂಬರು, ಅದೇ ಇಸವೀ ನವಂಬರ್ 25ನೇ ಮರ್ಕುಂ 136—137—138ನೇ ನಂಬರು, ಅದೇ ಇಸವಿ ಡಿಶಂಬರ್ 9ನೇ ಮರ್ಕುಂ 147—148ನೇ ನಂಬರು, ಅದೇ ಇಸವಿ ಡಿಶಂಬರ್ 21ನೇ ಮರ್ಕುಂ 165ನೇ ನಂಬರು, ಅದೇ ಇಸವಿ ಡಿಶಂಬರ್ 22ನೇ ಮರ್ಕುಂ 166ನೇ ನಂಬರು, ಅದೇ ಇಸವಿ ಡಿಶಂಬರ್ 23ನೇ ಮರ್ಕುಂ 183ನೇ ನಂಬರು, 1883ನೇ ಇಸವಿ ಜನವರೀ 4ನೇ ಮರ್ಕುಂ 1—2—3ನೇ ನಂಬರು, ಮತ್ತು ಅದೇ ಇಸವಿ ನವಂಬರು 16ನೇ ಮರ್ಕುಂ 274ನೇ ನಂಬರು, ಈ ಇಸ್ತಿಹಾರ್‌ನಾಮೆಗಳಿಂದ ಪರಿಷ್ಕರಿಸಲ್ಪಟ್ಟ ಪ್ರಕಾರ ಇದರಡೀ ಕಂಡ ತಾಲ್ಲೂಕುಗಳು ಶೇರಿರುತ್ತವೆ.

ಮೈಸೂರು ಡಿಸ್ಟ್ರಿಕ್ಟು.	ಬೆಂಗಳೂರು ಡಿಸ್ಟ್ರಿಕ್ಟು.	ಕೋಲಾರ ಡಿಸ್ಟ್ರಿಕ್ಟು.	ತುಮಕೂರು ಡಿಸ್ಟ್ರಿಕ್ಟು	ಕಡೂರು ಡಿಸ್ಟ್ರಿಕ್ಟಿನ ಪೈಕೀ ಹಾಸನದ ಸಬ್ ಡಿವೀಜನ್.
1 ಮೈಸೂರು	1 ಬೆಂಗಳೂರು	1 ಕೋಲಾರ	1 ತುಮಕೂರು	1 ಹಾಸನ
2 ಯಡತೊರೆ	2 ಕ್ಲೋಸ್‌ಪೇಟೆ, ಚನ್ನಪಟ್ಣ ಡಿ॥ ಅಮಲ್‌ದಾರ್ರು ಚಾರ್ಜು ದೇಖೀಲ್	2 ಚಿಕ್ಕಬಳ್ಳಾಪುರ, ದೇವನಹಳ್ಳಿ ಡಿ॥ ಅಮಲ್‌ದಾರ್ರು ಚಾರ್ಜು ದೇಖೀಲ್	2 ಗುಬ್ಬಿ	2 ಬೇಲೂರು
3 ಹುಣಸೂರು	3 ನೆಲಮಂಗಲ	3 ಶಿಡ್ಲಘಟ್ಟ	3 ಮದ್ದಗಿರಿ, ಕೊರಟಗೆರೆ ಡಿ॥ ಅಮಲ್‌ದಾರ್ರು ಚಾರ್ಜು ದೇಖೀಲ್	3 ಮಂಜರಾಬಾದು
4 ನಂಜನಗೂಡು	4 ದೊಡ್ಡಬಳ್ಳಾಪುರ	4 ಬವರಿಂಗಪೇಟೆ, ಮಾಲೂರು ಡಿ॥ ಅಮಲ್‌ದಾರ್ರು ತರ್ಫು ದೇಖೀಲ್	4 ತಿಪಟೂರು, ತುರ್ವೇಕೆರೆ ಡಿ॥ ಅಮಲ್‌ದಾ ಚಾರ್ಜು ದೇಖೀಲ್	4 ಅರಸೀಕೆರೆ
5 ಚಾಮರಾಜನಗರ	5 ಕಾನಖಾನಹಳ್ಳಿ	5 ಚಿಂತಾಮಣಿ, ಶ್ರೀನಿವಾಸಪುರದ ಡಿ॥ ಅಮಲ್‌ದಾರ ಚಾರ್ಜು ದೇಖೀಲ್	5 ಚಿಕ್ಕನಾಯಕನಹಳ್ಳಿ, ಹುಳಿಯಾರ ಡಿ॥ ಅಮಲ್‌ದಾರ ಚಾರ್ಜು ದೇಖೀಲ್	
6 ತಿರಂಕೂಡ್ಲು ನರಸೀಪುರ, ಮಳವಳ್ಳಿ ಡಿ॥ ಅಮಲ್‌ದಾರ್ರು ಚಾರ್ಜು ಸಹ	6 ಆನೇಕಲ್ಲು	6 ಬಾಗೇಪಲ್ಲಿ, ಗುಡಿಬಂಡೆ ಡಿ॥ ಅಮಲ್‌ದಾರ್ರು ಚಾರ್ಜು ದೇಖೀಲ್	6 ಶಿರಾ	
7 ಹೆಗ್ಗಡದೇವನ ಕೋಟೆ	7 ಕುಣಿಗಲು	7 ಗೋರಿಬಿದನೂರು	7 ಪಾವಗಡ	
8 ಗುಂಡ್ಲುಪೇಟೆ	8 ಮಾಗಡಿ	8 ಮುಳಬಾಗಲು	8 ಚಿತ್ರದುರ್ಗ, ಜಗಲೂರು ಡಿ॥ ಅಮಲ್‌ದಾರ್ರು ಚಾರ್ಜು ದೇಖೀಲ್	
9 ಹೊಳೇನರಸೀಪುರ, ಅರಕಲ್‌ಗೂಡು ಡಿ॥ ಅಮಲ್‌ದಾರ್ರು ತರ್ಫು ಸಹ	9 ಹೊಸಕೋಟೆ		9 ಹಿರಿಯೂರು	
10 ಶ್ರೀರಂಗಪಟ್ಣ			10 ಹೊಳಲಕೆರೆ, ಹೊಸದುರ್ಗ ಡಿ॥ ಅಮಲ್‌ದಾರ್ರು ತರ್ಫು ಸಹ	
11 ಮಂಡ್ಯ, ಮದ್ದೂರು ಡಿ॥ ಅಮಲ್‌ದಾರ್ರು ತರ್ಫು ಸಹ			11 ಚಳ್ಳಕೆರೆ, ಹಾನಗಲ್ಲು ಡಿ॥ ಅಮಲ್‌ದಾರ್ರು ಚಾರ್ಜು ದೇಖೀಲ್	
12 ಅತ್ತಿಕುಪ್ಪ				
13 ಚನ್ನರಾಯಪಟ್ಣ				
14 ನಾಗಮಂಗಲ				

ಬೆಂಗಳೂರು ಶಿವಿಲ್ ವ ಮಿಲಿಟೇರಿ ಸ್ಟೇಷನಿನ ಕಂಟ್ರಾಕ್ಟು, ರೆಸಿಡೆಂಟರವರ ಅಪ್ಪಣೆ ಮೇರಿಗೆ ಈ ಇಸ್ತಿಹಾರಿನಲ್ಲಿ ದಾಖಲ್ಮಾಡಿರುತ್ತೆ.

3. ಈಗ ಯಾವ ಸ್ವಾತಂತ್ರ್ಯದ ಬಗ್ಗೆ ದರಖಾಸ್ತುಗಳು ಖಾಯಿಷ್ ಮಾಡಲ್ಪತವೆಯೋ ಅಂಥಾ ಸ್ವಾತಂತ್ರ್ಯಗಳು, ಯಿದರ ಮುಂದೆ ವಿಧಿಸಲ್ಪಟ್ಟ ಷರತ್ತುಗಳಿಗೆ ವಳಪಟ್ಟು, 1884ನೇ ಇಸವಿ ಏಪ್ರಿಲ್ 1ನೇ ಮರ್ಕುಂ ಮೊದಲು 1887ನೇ ಇಸವಿ ಮಾರ್ಚಿ 31ನೇ ಮರ್ಕುಂ ವರಿಗೆ ಆಗುವ ಮೂರು ವರುಷಗಳ ಕಾಲಕ್ಕೆ ಕೊಡಲ್ಪಡುವದು. ಅಂಥಾ ಸ್ವಾತಂತ್ರ್ಯವು ಶೇಂದಿ, ಯೂರೋಪ್ ದೇಶದ ವೈನ್ ಯಂಬ ಸರಾಯಿ, ಸ್ಪಿರಿಟ್ ಸಾರಾಯಿ, ಯಾ ಬಿಯರು ಇವುಗಳ ತಯಾರಿ ಯಾ ಮಾರಾಟವನ್ನು ಅಡಗಿಸಿ ಕೊಂಡಿರುವದಿಲ್ಲ.

4. ದರಖಾಸ್ತುದಾರರು ತಮ್ಮ ದರಖಾಸ್ತುಗಳಲ್ಲಿ ಸಾಲಿಯಾನಾ ಸರಕಾರಕ್ಕೆ ಕಮ್ಮೀ ಮೊಬಲಗು ಯೆಷ್ಟು ಕೊಡುತ್ತೇವೆಂದು ಕರಾರ್ ಮಾಡುವರೋ ಅದನ್ನು ನಮೂದಿಸತಕ್ಕದ್ದು. ತೆರಿಗೆ ಮೊಬಲಗಿನ ರೂಪಾಯಿ 1ಕ್ಕೆ ವಂದಾಣೆಯಂತೆ ತೆರಬೇಕಾದ ಲೋಕಲ್ ಸೆಸ್ ದೇಖೀಲ್ ತೆರಿಗೆಯ ದರಗಳು ಮತ್ತು ಕಂಟ್ರಾಕ್ಟುದಾರರಿಂದ ಯಾವ ಖರೀದಿಗೆ ಷರಾಬ್ ಕೊಡಲ್ಪಡತಕ್ಕದ್ದೋ ಅಂಥಾ ವಟ್ಟು ಖರೀದೀ ಮೊಬಲಗುಗಳು ಸುದಾ, ಮುಂದೆ ವಿಧಿಸಲ್ಪಟ್ಟ ರೀತಿಯಾಗಿ ಗವರ್ನಮೆಂಟಿನವರಿಂದ, ಗೊತ್ತು ಮಾಡಲ್ಪಡುವದ್ದರಿಂದ ಅಂಥಾ ದರಗಳಿಗಾಗಿ ಬರುವ ಯಾವ ದರಖಾಸ್ತುಗಳೂ ಆಲೋಚಿಸಲ್ಪಡಲಾರದು.

5. ಪ್ರತಿ ದರಖಾಸ್ತಿನ ಸಂಗಡಲೂ ನಗದಾಗಿ ಯಾಗಲಿ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ, 1,000 ರೂಪಾಯಿಗಳ ಠೇವಣೀ ಮೊಬಲಗು ಕಳುಹಿಸಲ್ಪಟ್ಟು "ಷರಾಬ್ ತಯಾರೀ ವ ಬಟ್ಟು ಫುರೋಖ್ತಿನ ಬಟ್ಟು ಸ್ವಾತಂತ್ರ್ಯದ ಬಗ್ಗೆ ದರಖಾಸ್ತು" ಯಂಬ ಮಾತುಗಳು ವಿಳಾಸ ಬರೆಯಲ್ಪಟ್ಟ ಲಿಫಾಫೆಯಲ್ಲಿ ಹಾಕಿ ಸನ್ 1884ನೇ ಇಸವಿ ಫೆಬ್ರವರೀ 22ನೇ ಶುಕ್ರವಾರದ ದಿವಸವಾಗಲಿ, ತತ್ಪೂರ್ವದಲ್ಲಾಗಲಿ ಬೆಂಗಳೂರಿನಲ್ಲಿ ದೀವಾನರವರ ಸೆಕ್ರೇಟೇರಿಯವರಿಗೆ ತಲಪುವಂತೆ ಕಳುಹಿಸತಕ್ಕದ್ದು. ಸದರೀ ತಾರೀಖಿನ ತರುವಾಯ ಯಾವ ದರಖಾಸ್ತೂ ತೆಗದುಕೊಳ್ಳಲ್ಪಡುವದಿಲ್ಲ. ದರಖಾಸ್ತುಗಳು 1884ನೇ ಇಸವೀ ಫೆಬ್ರವರೀ 22ನೇ ಮರ್ಕುಮಿನ ಮಧ್ಯಾನ್ಹ 12 ಘಂಟೆಗೆ ಹಾಜರಾಗತಕ್ಕ ದರಖಾಸ್ತುದಾರರ ರೂಬರು ದೀವಾನರವರ ಆಫೀಸಿನಲ್ಲಿ ಸೆಕ್ರೇಟೇರಿಯವರಿಂದಲೂ ಬೆಂಗಳೂರು ಡಿ॥ ಡೆಪ್ಯುಟಿ ಕಮ್ಮಿಷನರವರಿಂದಲೂ ಖುಲ್ಲಾ ಮಾಡಲ್ಪಡುವವು. ದರಖಾಸ್ತುಗಳ ಆಖ್ಯೈರ್ ವ್ಯವಸ್ಥೆ ದೀವಾನರವರಿಗೆ ಶೇರಿದ್ದಾಗಿರುತ್ತೆ. ಸದರೀಯವರು ಯಾವ ದರಖಾಸ್ತನ್ನಾಗಲಿ, ತಮಾಂ ದರಖಾಸ್ತುಗಳನ್ನಾಗಲಿ ಯಾವ ಸಬಬನ್ನು ತಿಳಿಸದೇಯೇ ತಿರಸ್ಕರಿಸತಕ್ಕ ಸಂಪೂರ್ಣ ಅಧಿಕಾರವನ್ನು ತಾವೇ ಉಳಿಸಿಕೊಂಡಿರುತ್ತಾರೆ. ತಿರಸ್ಕರಿಸಲ್ಪಟ್ಟ ದರಖಾಸ್ತುದಾರರಿಂದ ಇಡಲ್ಪಟ್ಟ ಠೇವಣಿಗಳು ಅವರುಗಳು ಕೇಳಿದಾಗ ವಾಪಸ್ ಕೊಡಲ್ಪಡುವವು.

6. ದೀವಾನರವರಿಗೆ ಸಿಫಾರಸ್ ಮಾಡುವ ಬಗ್ಗೆ ಚುನಾಯಿಸಲ್ಪಡುವ ದರಖಾಸ್ತುದಾರರು ಕೂಡ್ಲೇ ನಗದಾಗಿಯಾಗಲಿ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ, (ದರಖಾಸ್ತುದಾರರು ಒಡಂಬಡಿಕೆ ಮಾಡಿಕೊಂಡ ಸಾಲೀಯಾನಾ ಕಮ್ಮೀ ಹುಟ್ಟುವಳಿಯ ಹನ್ನೆರಡರಲ್ಲೊಂದು ಭಾಗಕ್ಕೆ (ಅಥವಾ ಒಂದು ತಿಂಗಳ ಖಿಸ್ತಿಗೆ) ಸಮನಾದ ಮೊಬಲಗನ್ನು ಕೂಡ್ಲೆ ಠೇವಣೆ ಯಿಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಠೇವಣಿ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

7. ಯಾವ ದರಖಾಸ್ತುದಾರರ ದರಖಾಸ್ತು ದೀವಾನರವರಿಂದ ಆಖ್ಯೈರಾಗಿ ಮಂಜೂರ್ಮಾಡಲ್ಪಡುತ್ತದೋ ಅಂಥಾವನು, ತನ್ನ ದರಖಾಸ್ತು ಮಂಜೂರಾದ ಸಂಗತಿ ತನಿಗೆ ತಿಳಿಸಲ್ಪಟ್ಟ ಯಂಟು ದಿವಸಗಳೊಳಗಾಗಿ ಮೊದಲೇ ಯಿಡಲ್ಪಟ್ಟ ಡಿಪಾಜಿಟ್ ಮೊಬಲಗಿನೊಡನೆ, ಕರಾರ್ ಮಾಡಿಕೊಳ್ಳಲ್ಪಟ್ಟ ಸಾಲಿಯಾನಾ ಹುಟ್ಟುವಳಿ ಪೈಕಿ, ಕಾಲು ಭಾಗದ ಮೊಬಲಗಿಗೆ ಸಮನಾಗುವಂತೆ ಇನ್ನೂ ಕೆಲವು ಮೊಬಲಗನ್ನು ನಗದಾಗಿಯಾಗಲಿ, ಗವರ್ನಮೆಂಟ್ ಪತ್ರಗಳ ಮೂಲಕವಾಗಿ ಯಾಗಲಿ ಬೆಂಗಳೂರು ಡೆಪ್ಯುಟಿ ಕಮ್ಮಿಷನರಲ್ಲಿ ಠೇವಣೀ ಯಿಡತಕ್ಕದಲ್ಲದೇ ಇದರಲ್ಲಿ ಮುಂದೆ ವಿಧಿಸಲ್ಪಡುವ ಷರತುಗಳಿಗೆ ಬದ್ಧನಾಗಿ, ತಕ್ಕೆ ಛಾಪಾಕಾಗದದ ಮೇಲೆ, ವಿಧಿಸಲ್ಪಟ್ಟ ನಮೂನೇ ಪ್ರಕಾರ, ಒಂದು ಕರಾರು ಬರೆದು ಕೊಡತಕ್ಕದ್ದು. ಮತ್ತು ಸದರೀ ದರಖಾಸ್ತುದಾರನು ಕರಾರಿಗೆ ರುಜು ಮಾಡಲಿಕ್ಕಾಗಲಿ, ನೇಮಿಸಲ್ಪಟ್ಟ ಡಿಪಾಜಿಟ್ಟನ್ನು ಯಿಡಲಿಕ್ಕಾಗಲಿ, ತಪ್ಪಿದರೆ ಯಾ ನಿರಾಕರಿಸಿದರೆ ಮೊದಲೇ ಯಿಡಲ್ಪಟ್ಟ ಠೇವಣಿ ಮೊಬಲಗುಗಳು ಸರ್ಕಾರಕ್ಕೆ ಸೇರಿಸಿ ಕೊಳ್ಳಲ್ಪಟ್ಟು ಇಜಾರೇ ಅನ್ಯಥಾ ವಿಲೇ ಮಾಡಲ್ಪಡುವದು.

ಷರತ್ತುಗಳು.

I. ಕರಾರ್ ಮಾಡಿಕೊಳ್ಳಲ್ಪಟ್ಟ ಸಾಲಿಯಾನಾ ಕಮ್ಮೀ ಹುಟ್ಟುವಳೀ ಮೊಬಲಗು, ಸಮನಾದ ಹನ್ನೆರಡು ಮಾಹೇವಾರೀ ಖಿಸ್ತುಗಳ ಪ್ರಕಾರ ಸರ್ಕಾರಕ್ಕೆ ಪಾವತೀ ಮಾಡಲ್ಪಡತಕ್ಕದ್ದು. ಇಜಾರೇದಾರನು ಪ್ರತಿ ತಿಂಗಳಲ್ಲಿ ಡಿಸ್ಟಿಲೇರಿಯಿಂದ ಕೊಡಲ್ಪಟ್ಟ ಷರಾಬಿನ ಮೇಲೆ ಸರ್ಕಾರಕ್ಕೆ ಸಲ್ಲತಕ್ಕ ಲೋಕಲ್ ಸೆಸ್ ದೇಖೀಲ್ ಸರ್ಕಾರದಿಂದ ಗೊತ್ತು ಮಾಡಲ್ಪಟ್ಟ ದರಗಳ ಪ್ರಕಾರ ವಿಸಿಷ್ಟ ತೆರಿಗೆ ಮೊಬಲಗನ್ನೂ ಆ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ, ತತ್ಪೂರ್ವವಾಗಲಿ, ಬೆಂಗಳೂರು ಡಿಸ್ಟ್ರಿಕ್ಟ ಟ್ರೆಜರೀಯಲ್ಲಿ ಪಾವತೀ ಮಾಡತಕ್ಕದ್ದು. ಯಾವ ತಿಂಗಳ ಆಖ್ಯೈರ್ ವರಿವಿಗೆ ಕೊಡಲ್ಪಡುವ ಷರಾಬಿನ ಮೇಲೆ ಸಲ್ಲತಕ್ಕ ತೆರಿಗೆ ಮೊಬಲಗು, ಕರಾರ್ ಮಾಡಿಕೊಂಡ ಕಮ್ಮೀ ಹುಟ್ಟುವಳೀ ಪೈಕೀ ಮಾಹೇವಾರಿ ಖಿಸ್ತು ಮೊಬಲಗ ಭರ್ತಿಗೆ ಸಾಲದೆ ಹೋದರೆ, ಅಂತಾ ಕಮ್ಮೀ ಮೊಬಲಗನ್ನು ಭರ್ತೀ ಮಾಡುವದಕ್ಕೆ ಬೇಕಾದಷ್ಟು ಮೊಬಲಗನ್ನು ಇಜಾರೇದಾರನು ಹೆಚ್ಚಾಗಿ ಪಾವತೀ ಮಾಡತಕ್ಕದ್ದು. ಯಾವದಾದರೂ ಮಾಹೇಯಲ್ಲಿ ನಡೆದ ಜಾಸ್ತಿ ಫುರೋಖ್ತು ಅದೇ ಸರ್ಕಾರ್ ಸಾಲಿನ ಯಾವದಾದರೂ ಮಾಹೇಯ ಕಮ್ಮೀ ಫುರೋಖ್ತಿಗೆ ಉಪಯೋಗಿಸಲ್ಪಡತಕ್ಕದ್ದು. ಯಾವ ತಿಂಗಳಿಗೆ ಸದರೀ ಮೊಬಲಗುಗಳು ಸಲ್ಲತಕ್ಕದ್ದೋ ಅದರ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ತತ್ಪೂರ್ವವಾಗಲಿ ಅವು ಪಾವತೀ ಯಾಗದೇ ಹೋದರೆ ಬಾಕೀ ನಿಲ್ಲುವ ತಮಾಂ ಮೊಬಲಗಿನ ಮೇಲೂ ಸದರೀ ತಾರೀಖು ಲಾಗಾಯತು ಸಾಲಿಯಾನಾ ಸೇಕಡಾ 6 ರೂಪಾಯಿಗಳ ಪ್ರ

ಕಾರ ಬಡ್ಡೀ ಕಟ್ಟಲ್ಪಡುವದು, ಮತ್ತು ಯಾವ ತಿಂಗಳಲ್ಲಿ ಮೊಬಲಗುಗಳು ಬಾಕೀ ಯಾಗುತವೋ ಆ ತಿಂಗಳು ಕಳದ ತರುವಾಯವೂ ಮೊಬಲಗು ಸಲ್ಲದೇ ಹೋದರೆ ಬಡ್ಡೀ ದಾಖೀಲ್ ಸಲ್ಲತಕ್ಕ ಬಾಕೀ ಮೊಬಲಗ್ ಜರ್ಮಿ ಕಂದಾಯದ ಬಾಕೀ ವಸೂಲೀ ಬಗ್ಯೆ ತತ್ಕಾಲದಲ್ಲಿ ಜಾರೀ ಯಿರುವ ರೂಲ್ಸನಿಂದ ವಿಧಿಸಲ್ಪಟ್ಟ ಪ್ರಕಾರವಾಗಿ, ಕಂಟ್ರಾಕ್ಟುದಾರನ ಸ್ವತ್ತಿನ ಜಫ್ತೀ ಹರಾಜು ಮೂಲಕ ವಸೂಲ್ ಮಾಡಲ್ಪಡತಕ್ಕದ್ದು. ಮತ್ತು ಬೆಂಗಳೂರು ಡೆಪ್ಯುಟಿ ಕಮ್ಮಿಷನರವರ ರಿಪೋರ್ಟಿನ ಮೇಲೆ, ಕಂಟ್ರಾಕ್ಟು ರದ್ದು ಮಾಡಲ್ಪಟ್ಟಿರುತ್ತೆಂದು ತಿಳಿಸುವದಕ್ಕೂ, ಕಂಟ್ರಾಕ್ಟುದಾರನಿಂದ ಇಡಲ್ಪಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳುವಂತೆ ಅಪ್ಪಣೆ ಮಾಡುವದಕ್ಕೂ, ಮತ್ತು ಕಂಟ್ರಾಕ್ಟು ಕಾಲದ ಪೈಕೀ ಉಳಿದ ಕಾಲದಲ್ಲಿ ಕಂಟ್ರಾಕ್ಟುದಾರನ ಖರ್ಚಿಗೂ ಲುಕ್ಸಾನಿಗೂ ವಳಪಟ್ಟು ಬಾಬು ಅಮಾನಿಯಲ್ಲಾಗಲಿ ಅನ್ಯಥಾ ಆಗಲಿ ಇಡುವದಕ್ಕೂ ಸಹ ದೀವಾನರವರ ಯಿಖ್ತ್ಯಾರಿಗೆ ಸೇರಿರುತ್ತದೆ.

II. ಪ್ರತಿ ಸಾಲಿನ ಲೆಖ್ಖಗಳೂ ಪ್ರತ್ಯೇಕ ಪ್ರತ್ಯೇಕವಾಗಿ ಫೈಸಲ್ ಮಾಡಲ್ಪಡತಕ್ಕದ್ದು. ಒಂದು ಸಾಲಿನಲ್ಲಿ ಕೊಡಲ್ಪಟ್ಟ ಸಾರಾಯಿ ಮೇಲೆ ಗವರ್ನಮೆಂಟಿಗೆ ಸಲ್ಲತಕ್ಕ ತೆರಿಗೆಯು ಆ ಸಾಲಿಗೆ ಕರಾರ್ ಮಾಡಿದ ಕಮ್ಮೀ ಹುಟ್ಟುವಳಿಗೆ ಜಾಸ್ತೀ ಆದರೆ, ಅಂತಾ ಜಾಸ್ತೀಯಾದ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 1 ಆಣೆಗೆ ಸಮನಾಗಿ, ಇಜಾರೇದಾರನಿಂದ ಸಲ್ಲಬೇಕಾದ ತೆರಿಗೆ ದೆಸೆಯಿಂದ ವಜಾ ಕೊಡಲ್ಪಡುವದು, ಆದರೆ ಒಂದು ವರುಷದ ಜಾಸ್ತೀ ಮೊಬಲಗು ಇಜಾರೇ ಪೈಕೀ ಯಾವದಾದರೂ ಇತರ ಸಾಲಿನ ಕರಾರ್ ಮಾಡಿದ ಹುಟ್ಟುವಳೀ ಮೊಬಲಗಿನಲ್ಲಿ ಕಮ್ಮೀ ಬೀಳತಕ್ಕ ಯಾವ ಮೊಬಲಗನ್ನಾಗಲಿ ಭರ್ತೀ ಮಾಡುವ ಬಗ್ಯೆ ಉಪಯೋಗಿಸುವದಿಲ್ಲ.

III. ಕಂಟ್ರಾಕ್ಟುದಾರನು ಬೆಂಗಳೂರು ಬಳಿಯಣ ಸರ್ಕಾರ್ ಡಿಸ್ಟಿಲೇರಿಯ ಆವರಣದೊಳಗಾಗಲಿ ಅಥವಾ ಡೆಪ್ಯುಟಿ ಕಮ್ಮಿಷನರಿಂದ ಗೊತ್ತು ಮಾಡಲ್ಪಡಬಹುದಾದ ಇತರ ಸ್ಥಳದಲ್ಲಾಗಲಿ ಷರಾಬ್ ತಯಾರ ಮಾಡುವಂತೆಯೂ, ಮತ್ತು ಡೆಪ್ಯುಟಿ ಕಮ್ಮಿಷನರಿಂದ ಮೊಕರರ್ ಮಾಡಲ್ಪಡತಕ್ಕಂಥಾ ಸ್ಥಳಗಳೊಳಗೆ ಒಟ್ಟು ಕೋಠಿಗಳನ್ನು ಸ್ಥಾಪಿಸುವಂತೆಯೂ, ನಿಯಮಿಸಲ್ಪಡತಕ್ಕದ್ದು. ಡೆಪ್ಯುಟಿ ಕಮ್ಮಿಷನರಿಂದಾಗಲಿ, ಅಥವಾ ಅಜಮಾಯಿಷೀ ಬಗ್ಯೆ ಮೊಕರರ್ ಮಾಡಲ್ಪಟ್ಟಿರತಕ್ಕ ಯಾವ ಉದ್ಯೋಗಸ್ಥರಿಂದಲಾಗಲಿ ತನಿಖೀ ನೋಡುವ ಬಗ್ಯೆ ಸರ್ವಕಾಲಗಳಲ್ಲಿಯೂ ಡಿಸ್ಟಿಲೇರಿ ಮತ್ತು ಕೋಠೀಗಳು ಖುಲ್ಲಾವಾಗಿರತಕ್ಕದ್ದು. ಯಾವ ಷರಾಬನ್ನೂ ಸದರೀ ಬಗ್ಯೆ ಮೊಕರರ್ ಮಾಡಲ್ಪಡುವ ಒಬ್ಬ ಉದ್ಯೋಗಸ್ಥನಿಂದ ಅಳತೆ ಮಾಡಲ್ಪಟ್ಟು ಅಜಮಾಯಿಷಿ ಮಾಡಲ್ಪಟ್ಟ ಹೊರತು ಡಿಸ್ಟಿಲೇರಿಯಿಂದ ಹೊರಗೆ ತೆಗದುಕೊಂಡು ಹೋಗಕೂಡದು. ಡಿಸ್ಟಿಲೇರಿ ಕಟ್ಟಡಗಳನ್ನು ಉಪಯೋಗಿಸತಕ್ಕ ಬಗ್ಯೆ 150 ರೂಪಾಯಿಗಳ ಬಾಡಿಗೆಯನ್ನು ಕಂಟ್ರಾಕ್ಟುದಾರನು ಮಾಹೇಯಾನಾ ಗವರ್ನಮೆಂಟಿಗೆ ಸಂದಾಯ ಮಾಡಲ್ಪಡುವಂತೆಯೂ, ಸದರೀ ಕಟ್ಟಡಗಳನ್ನು ಪೂರಾ ದುರಸ್ತು ಸ್ಥಿತಿಯಲ್ಲಿ ಯಿಟ್ಟು ಕೊಂಡಿರುವಂತೆಯೂ ನೇಮಿಸಲ್ಪಡತಕ್ಕದ್ದು. ಇಜಾರೇದಾರನು ಪೂರ್ವದ ಇಜಾರೇದಾರನಿಂದ ಬಟ್ಟಿ ಯಿಳಿಸಲ್ಪಟ್ಟು, ಸ್ನ 1884ನೇ ಇಸವಿ ಏಪ್ರೈಲ್ 1ನೆ ತಾರೀಖಿನಲ್ಲಿ ಹಾಜರಿರಬಹುದಾದ ಯಾವ ಸಾರಾಯಿಯನ್ನಾಗಲಿ, ಆ ಬಗ್ಯೆ ದೀವಾನರವರ ಮಂಜೂರಾತಿನಿಸೀ ಡೆಪ್ಯುಟಿ ಕಮ್ಮಿಷನರವರಿಂದ ಕರಾವು ಮಾಡಲ್ಪಡಬಹುದಾದಂಥಾ ಈಡು ಮೊಬಲಗನ್ನು ಕೊಟ್ಟು ತನ್ನ ವಶಕ್ಕೆ ತೆಗದುಕೊಳ್ಳತಕ್ಕದ್ದು.

IV. ತಯಾರ್ಮಾಡಲ್ಪಡುವ ಸಾರಾಯಿ ಒಳ್ಳೇ ಗುಣವುಳ್ಳದ್ದಾಗಿರತಕ್ಕದ್ದು. ಬಟ್ಟಿ ಯಿಳಿಸುವಲ್ಲಿ ಉಪಯೋಗಿಸಲ್ಪಡತಕ್ಕ ಪದಾರ್ಥಗಳು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಟ್ಟು ಒಳ್ಳೇ ಗುಣವುಳ್ಳವಾಗಿರಬೇಕಾದ್ದಲ್ಲದೆ ಅವುಗಳು ಡಿಸ್ಟಿಲೇರಿಯಲ್ಲಿ ತೆಗದುಕೊಳ್ಳಲ್ಪಡುವದಕ್ಕೆ ಮುಂದಾಗಿ ಡಿಸ್ಟಿಲೇರಿ ಸೂಪರ್ ವೈಜರಿಗೆ ಅಥವಾ ಈ ಬಗ್ಯೆ ಮೊಕರ್ ಮಾಡಲ್ಪಡತಕ್ಕ ಇತರ ಉದ್ಯೋಗಸ್ಥನಿಗೆ ತೋರಿಸಲ್ಪಟ್ಟು ಅವರಿಂದ ಪ್ಯಾಸ್ ಮಾಡಲ್ಪಡತಕ್ಕದ್ದು. ಸಾರಾಯಿ ಬಟ್ಟಿ ಯಿಳಿಸುವಲ್ಲಿ ಆರೋಗ್ಯಕ್ಕೆ ವಿರುದ್ಧವಾದ ಯಾವ ಪದಾರ್ಥಗಳನ್ನೂ ಉಪಯೋಗಿಸಕೂಡದು ಅಥವಾ ಷರಾಬ್ ತಯಾರ್ಮಾಡಲ್ಪಟ್ಟ ತರುವಾಯ ಅದರಲ್ಲಿ ಹಾಕಲೂಕೂಡದು ಮತ್ತು ಉಪಯೋಗಿಸಲ್ಪಡುವ ಯೆಲ್ಲಾ ಪದಾರ್ಥಗಳೂ ಪ್ರತಮತಃ ವಿಧಿಸಲ್ಪಟ್ಟ ದಾಮೂಷಾಯಿ ಪ್ರಕಾರ ಇರತಕ್ಕವು, ಅಥವಾ ಕಂಟ್ರಾಕ್ಟುದಾರನಿಂದ ರೋಜೇನಾ ತಯಾರ್ಮಾಡಲ್ಪಡುವವರ ಫಲಿತಾಂಶಗಳು ಸರ್ಕಾರ್ ಆಫೀಸರುಗಳಿಂದ ನ್ಯಾಯವಾದ ತನಿಖಿ ನಡಿಸಲ್ಪಡಲಿಕ್ಕೋಸ್ಕರ ಐಯಿಂದ ಗವರ್ನಮೆಂಟಿನವರಿಂದ ನಿರ್ಣಯಿಸಲ್ಪಡುವ ದಾಮೂಷಾಯಿ ಪ್ರಕಾರವಾಗಲಿ ಇರತಕ್ಕದ್ದು.

V. ಇಜಾರೇದಾರನು, ಡಿಸ್ಟಿಲೇರಿಯಲ್ಲಿಯೂ, ಪ್ರತಿ ಕೋಠಿಯಲ್ಲಿಯೂ, ತಯಾರ್ಮಾಡಲ್ಪಡುವ ಸಾರಾಯಿಗಳ ಜಮಾಖರ್ಚುಗಳು, ತೇದಾದು, ವ ಸ್ಟ್ರೆಂಗ್ತ್, ಇವುಗಳ ಕರಾರ್ವಾಕಾ ಲೆಖ್ಖಗಳನ್ನೂ, ಮತ್ತು ಡಿಸ್ಟಿಲೇರಿಯಲ್ಲಿ ರೋಜೇನಾ ಜಮಾಖರ್ಚು ಆದ, ಯೆಲ್ಲಾ ಪದಾರ್ಥಗಳ ಲೆಕ್ಕಗಳನ್ನೂ ಸುದಾ ವಿಧಿಸಲ್ಪಟ್ಟ ನಮೂನೆಗಳಲ್ಲಿ ಇಡತಕ್ಕದ್ದು, ಆತನು ಡೆಪ್ಯುಟಿ ಕಮ್ಮಿಷನರವರಿಂದಾಗಲಿ, ಹೆಡ್ ಸೂಪರ್ವೈಜರಿಂದಾಗಲಿ, ಈ ಬಗ್ಯೆ ಮೊಕರರ್ಮಾಡಲ್ಪಡುವ ಯಾವ ಉದ್ಯೋಗಸ್ಥನಿಂದಾಗಲಿ ತನಿಖೀ ನೋಡುವ ಬಗ್ಯೆ ಹಾಜರ್ ಮಾಡುವಂತೆ ಕೇಳಲ್ಪಟ್ಟಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

VI. ಒಂದು ತಿಂಗಳಿಗೆ ಆಗುವಷ್ಟು ಮತ್ತು 14,000 ಗ್ಯಾಲನ್‌ಗಳಿಗೆ ಕಡಿಮೆ ಯಿಲ್ಲದ ಸಾರಾಯಿಯನ್ನು ಯಾವಾಗ್ಯೂ ಹಾಜರೀಯಲ್ಲಿಟ್ಟುಕೊಂಡಿರಲಿಕ್ಕೆ ಬಟ್ಟೀದಾರನು ಬದ್ಧನಾಗಿರತಕ್ಕದ್ದು; ಸ್ನ 1884ನೇ ಏಪ್ರೈಲ್ ಗುರ್ರೇ ತಾರೀಖು ಮೊದಲು,

ಈ ಮೇರೆ ಹಾಜರಿರುವ ಬಗ್ಗೆ ಸದರೀ ತಾರೀಖಿಗೆ ಮುಂದೆಯೇ ಬಟ್ಟೀ ಯಿಳಿಸಲಿಕ್ಕೆ ಷುರು ಮಾಡತಕ್ಕದ್ದು, ಪರಂತು ಹಾಗೆ ಬಟ್ಟೀ ಯಿಳಿಸಲ್ಪಟ್ಟ ಯಾವ ಸಾರಾಯಿಯೂ, ಸರ್ನ 1884ನೇ ಏಪ್ರೆಲ್ 1ನೇ ತಾರೀಖಿಗೆ ಮುಂದಾಗಿ ತನ್ನ ವಶದಿಂದಲಾಗಲಿ, ತನ್ನ ಕೈಕೆಳಗಣ ಉದ್ಯೋಗಸ್ಥನ ವಶದಿಂದಲಾಗಲಿ, ಮಾರಲ್ಪಡಕೂಡದು, ಯಾ ಸಾಗಿಸಲ್ಪಡಕೂಡದು. ಇಜಾರೇದಾರನು, ತಮ್ಮ ತಾಲ್ಲೂಕು ಕಸಬಾ ಜಾಗಗಳಲ್ಲಿಯೂ, ಡೆಪ್ಯುಟಿ ಕಮ್ಮಿಷನರಿಂದ ಅಥವಾ ಅವು ಇರತಕ್ಕ ಸ್ಥಳ ಸರಹದ್ದು ಅಧಿಕಾರವುಳ್ಳ ಸಬ್ ಡಿವೀಜನ್ ಆಫೀಸರಿಂದ ಮಂಜೂರ್ಮಾಡಲ್ಪಡುವ ದೊಡ್ಡ ಷಹರ್‌ಗಳೊಳಗೂ, ಬಟ್ಟು ಪುರೋಖ್ತು ಅಂಗಡಿಗಳನ್ನು ಇಡುವದಕ್ಕೆ ಅಪ್ಪಣೆ ವುಂಟಾಗತಕ್ಕದ್ದು. ಸದರೀ ಯಲ್ಲಾ ಜಾಗಗಳ ಪಟ್ಟಿಯು, ಕೇಳಿದಾಗ ಡೆಪ್ಯುಟಿ ಕಮ್ಮಿಷನರವರಿಗೂ ಅಥವಾ ಸಬ್ ಡಿವೀಜನ್ ಆಫೀಸರರಿಗೂ, ಕೊಡಲ್ಪಡತಕ್ಕದ್ದು, ಮತ್ತು ಕಂಟ್ರಾಕ್ಟುದಾರನು ಅಂಗಡಿ ಒಂದಕ್ಕೆ ಮಾಹೆಯಾನಾ ವಿಧಿಸಲ್ಪಟ್ಟ 2 ರೂಪಾಯಿಗಳ ಲೈಸೆನ್ಸ್‌ಫೀಯನ್ನು ಕೊಡತಕ್ಕದ್ದು.

VII. ಷರತ್ತುಗಳ X ವ XIIನೇ ರೂಲಸಗಳಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಹೊರ್ತು, ಡಿಸ್ಟಿಲೇರಿಯಲ್ಲಾಗಲೀ ಬಟ್ಟು ಪುರೋಖ್ತು ಅಂಗಡಿಗಳಲ್ಲಾಗಲೀ ಸಾರಾಯಿಯನ್ನು ಚಿಲ್ಲರೇ ಪುರೋಖ್ತು ಮಾಡಕೂಡದು.

VIII. ಚಿಲ್ಲರೇ ಪುರೋಖ್ತು ಅಂಗಡಿಗಳು, ಡಿಸ್ಟ್ರಿಕ್ಟ್ ಜಾತ್ ಡೆಪ್ಯುಟಿ ಕಮ್ಮಿಷನರುಗಳು ಮತ್ತು ಡಿಸ್ಟ್ರಿಕ್ಟಿನ ಸಬ್ ಡಿವೀಜನ್ ಆಫೀಸರ್‌ಗಳ ವಿಚಾರಣೆಯಲ್ಲಿಯೂ, ಮ್ಯುನಿಸಿಪಲ್ ಷಹರ್‌ಗಳಲ್ಲಿ, ದೀವಾನರವರಿಂದ ಹುಕ್ಕುಂ ಮಾಡಲ್ಪಟ್ಟರೆ, ಅಂತಾ ಷಹರ್‌ಗಳ ಮ್ಯುನಿಸಿಪಲ್ ಪ್ರೆಸಿಡೆಂಟರ ಯಾ ವೈಸ್ ಪ್ರೆಸಿಡೆಂಟರ ವಿಚಾರಣೆಯಲ್ಲಿಯೂ ಇರತಕ್ಕದ್ದು; ಮತ್ತು ಅವರುಗಳ ಮಂಜೂರಾತಿ ಯಿಲ್ಲದೆ ಅವರುಗಳಿಂದ ಮೊಕರರ್ ಮಾಡಲ್ಪಡುವ ಅಂಥಾ ಸ್ಥಳಗಳಲ್ಲದೆ ಚಿಲ್ಲರೇ ಅಂಗಡಿ ಯಾವವೂ ಇಡಲ್ಪಡತಕ್ಕದ್ದಲ್ಲ. ಯಾವ ಅಂಗಡಿಗಳನ್ನಾಗಲಿ, ಪಬ್ಲಿಕ್ ಜರೂರಾತಿ ಸಬಬ್‌ನಿಂದ ಇಜಾರೇದಾರನು ತನಿಗೆ ಈಡು ಕೊಡಬೇಕೆಂದು ಕೇಳುವ ಹಕ್ಕಿಲ್ಲದೇನೆ ಮುಚ್ಚುವಂತೆ ಹುಕ್ಕುಂ ಮಾಡಲಿಕ್ಕೆ ಅವರು ಅರ್ಹರಾಗಿರತಕ್ಕದ್ದು.

IX. ಚಿಲ್ಲರೇ ಅಂಗಡಿಗಳಿಗೆ ಲೈಸೆನ್ಸ್‌ಗಳು ಗವರ್ನಮೆಂಟಿನವರಿಂದ ಆಗಿಂದಾಗ್ಗೆ ಮೊಕರರ್ ಮಾಡಲ್ಪಡಬಹುದಾದಂಥಾ ಲೈಸೆನ್ಸ್ ರುಸುಂಗಳನ್ನು ಕೊಟ್ಟಮೇಲೆ ಸದರೀ ಆಫೀಸರ್‌ಗಳಿಂದ ಮಾಮೂಲ್ ನಮೂನೆಯಲ್ಲಿ ಕೊಡಲ್ಪಡುವದು.

ಕ್ರಮ ಪಡಿಸಲ್ಪಟ್ಟ ದಾರಣೆಗೆ ಮತ್ತು ವಿಧಿಸಲ್ಪಟ್ಟ ಸ್ಟ್ರೆಂಗ್ತ್‌ನಿಂದ ಸಾರಾಯಿಯನ್ನು ಪುರೋಖ್ತು ಮಾಡುವದಕ್ಕೂ, ಜರೂರಾದ ಇತರ ಷರತ್ತುಗಳ ಬಗ್ಗೂ ಲೈಸೆನ್ಸ್‌ಗಳಲ್ಲಿ ನಿಬಂಧನೆ ಮಾಡಲ್ಪಡುವದು. ಚಿಲ್ಲರೇ ಪುರೋಖ್ತುದಾರರು ಅವರಿಗೆ ಅತ್ಯಂತ ಸಮೀಪದಲ್ಲಿನ ಅಥವಾ ಅವರು ಸಾಲೀಯಾನಾ ತೆಗದುಕೊಳ್ಳುವದಕ್ಕೆ ಚುನಾಯಿಸುವ ಬಟ್ಟು ಅಂಗಡಿಗಳಿಂದಲೇ ಸಾರಾಯಿಯನ್ನು ಕೊಂಡುಕೊಳ್ಳತಕ್ಕದ್ದು. ಸದರೀ ಚಿಲ್ಲರೇ ಪುರೋಖ್ತುದಾರರು, ಅಕ್ರಮವಾದ ವಿಷಯಗಳೇನೂ ನಡೆಯದೇ ಇರುವದನ್ನು ನೋಡುವ ಬಗ್ಗೆ ತಮ್ಮ ಅಂಗಡಿಗಳೊಳಗೆ ಇಜಾರೇದಾರರಿಗಾಗಲೀ ಅವರ ಮುತಾಲೀಕರಿಗಾಗಲಿ ಆಬ್ಕಾರಿ ಆಫೀಸರುಗಳಿಗಾಗಲೀ ಕ್ರಮ ಪ್ರಕಾರ ಅಧಿಕಾರ ಹೊಂದಿದ ಯಾವ ಸರ್ಕಾರ್ ನವುಕರನಿಗಾಗಲಿ ಅವಕಾಶ ಸಹ ಕೊಡತಕ್ಕದ್ದು, ಮತ್ತು ಪ್ರತಿದಿನ ತಾವು ತೆಗದುಕೊಳ್ಳುವ ಸಾರಾಯಿಯ ತೇದಾದ್ ವ ಸ್ಟ್ರೆಂಗ್ತ್ ಮತ್ತು ಸದರೀ ಬಗ್ಗೆ ಹಾಕಲ್ಪಡುವ ಖರೀದಿಗಳು ಇವುಗಳ ನಿಜವಾಗಿಯೂ ಕರಾರ್‌ವಾಕಾ ಆಗಿಯೂ ಇರುವ ಲೆಖ್ಖಗಳನ್ನು ಇಡತಕ್ಕದ್ದಲ್ಲದೇ ಇಜಾರೇ ದಾರನಿಂದಾಗಲಿ ಅವನ ಮುತಾಲೀಕನಿಂದಾಗಲೀ ಸದರೀ ಲೆಕ್ಕ ಕೇಳುವಂತೆ ಅಧಿಕಾರ ಕೊಡಲ್ಪಟ್ಟ ಯಾವ ಸರಕಾರದ ಉದ್ಯೋಗಸ್ಥನಿಂದಾಗಲಿ ಹಾಗೆ ಅಪೇಕ್ಷಿಸಲ್ಪಟ್ಟಾಗ ತನಿಖಿ ನೋಡುವ ಬಗ್ಗೆ ಅವುಗಳನ್ನು ಹಾಜರ್ ಮಾಡತಕ್ಕದ್ದು.

X. ಡಿಸ್ಟಿಲೇರಿಯಿಂದ ಸಾರಾಯಿ ಕೊಡುವದನ್ನು ಕುರಿತ ಈ ಕೆಳಗೆ ಬರುವ ರೂಲ್ಸ್ ಅನುಸರಿಸಲ್ಪಡತಕ್ಕದ್ದು.

(*a*) ಸಾಧಾರಣವಾಗಿ 20 ಡಿಗ್ರಿ ಅಂಡರ್ ಪ್ರೂಫಿಗೆ ಹೆಚ್ಚಿದ ಸ್ಟ್ರೆಂಗ್ತ್‌ನಿಂದ ಯಾವ ಸಾರಾಯಿಯನ್ನೂ ಕೊಡತಕ್ಕದ್ದಲ್ಲವು ಆದರೆ ಕಂಟ್ರಾಕ್ಟುದಾರನಾಗಲಿ, ಚಿಲ್ಲರೇ ಪುರೋಖ್ತುದಾರನಾಗಲೀ ಮೇಲೆಕಂಡ ಸ್ಟ್ರೆಂಗ್ತ್‌ಗಿಂತ ಹೆಚ್ಚಾದ ಸ್ಟ್ರೆಂಗ್ತ್‌ನಲ್ಲಿ ಸಾರಾಯಿ ಕೊಡಲಿಕ್ಕೆ ಅಪೇಕ್ಷಿಸಿದರೆ ಹಾಗೆ ಕೊಡಲ್ಪಡುವ ಸ್ಪಿರಿಟ್ ಸಾರಾಯಿಯು ಪ್ರೂಫಿಗಿಂತ ಹೆಚ್ಚು ಸ್ಟ್ರೆಂಗ್ತ್ ವುಳ್ಳದ್ದಾಗಿರಕೂಡದು. ಪ್ರೂಫಿಗೆ ಸಮನಾದ ಬಲವುಳ್ಳ ಸಾರಾಯಿಯು ಯರಡು ಡಜನ್ ಕ್ವಾರಟ್ ಶೀಶೆಗಳಲ್ಲಿಯೂ, ನಾಲ್ಕು ಡಜನ್ ಪಯಿಂಟ್ ಶೀಶೆಗಳಲ್ಲಿಯೂ, ಇಂಗ್ಲೀಷ್ ಮತ್ತು ಪರಾಯಿ ದೇಶದಂತೆಯೇ ಕಮ್ಮೀ ತೇದಾದಿನ ಡಬ್ಬಿಗಳಲ್ಲಿ ಡಿಸ್ಟಿಲೇರಿಯಿಂದ ಕೊಡಲ್ಪಡುವದು; ಅದು ಡಿಸ್ಟಿಲೇರಿಯಲ್ಲಿ ಹೆಡ್ ಸೂಪರ್ ವೈಜರವರಿಂದ ಮೊಹರ್ಮಾಡಲ್ಪಟ್ಟ ಪ್ರಕಾರವೇ ಬದಲಾಯಿಸದಂತೆಯೂ ಹೆಡ್ ಸೂಪರ್ ವೈಜರವರ ಪ್ಯಾಶಿನ ಆಧಾರದ ಮೇಲೂ ಬಟ್ಟು ಅಂಗಡಿಗಳಿಂದ ಚಿಲ್ಲರೇ ಬಿಕರಿದಾರ್ರಿಗೆ ಪುರೋಖ್ತು ಮಾಡಲ್ಪಡತಕ್ಕದ್ದು. ಚಿಲ್ಲರೇ ಬಿಕರೀದಾರರು ಅಂಥಾ ಷರಾಬನ್ನು ಅವರಿಗೆ ಗೊತ್ತಿರುವಂತಾ ಮರ್‍ಯಾದೆವುಳ್ಳ ಜನಗಳಿಗೆ ಮಾತ್ರವೇ ಹೆಡ್ ಸೂಪರ್ ವೈಜರವರಿಂದ ಕೊಡಲ್ಪಟ್ಟ ಅಲಾಹಿದ ಪ್ಯಾಸುಗಳೊಂದಿಗೆ ಕೊಡತಕ್ಕದ್ದು. ಮತ್ತು ಬಟ್ಟು ಬಿಕರೀದಾರರು ವ ಚಿಲ್ಲರೇ ಪುರೋಖ್ತುದಾರರು ಸುದಾ ಅಂಥಾ ಬಿಕರೀಗಳಿಗೆ ವಿಧಿಸಲ್ಪಟ್ಟನಮೂನೆಯಲ್ಲಿ ಲೆಕ್ಕ ಕೊಡತಕ್ಕದ್ದು.

(*b*) ಪ್ರೂಫಿಗಿಂತ ಹೆಚ್ಚು ಸ್ಟ್ರೆಂಗ್ತಿನ ಸಾರಾಯಿಯನ್ನು ಇಜಾರೇದಾರನು ಕೊಡಲಿಕ್ಕೆ ಅಪೇಕ್ಷಿಸಿದರೆ, ಆ ಬಗ್ಗೆ, ಹೆಡ್ ಸೂಪರ್‌ವೈಜರ್ ಮೂಲಕ ಡೆಪ್ಯುಟಿ ಕಮ್ಮಿಷನರವರ ವಿಶೇಷ ಹುಕ್ಕುಂಗಳನ್ನು ಪಡೆಯತಕ್ಕದ್ದು, ಸದರೀ ಸೂಪರ್‌ವೈಜರು ಸದರೀ ಅಂಶಗಳನ್ನು ಸೂಚಿಸಿ, ಅದರಂತೆ ಬಟ್ಟು ಬಿಕ್ರಿ ಅಗಂಡಿಗಳಿಗೆ ಪ್ಯಾಸಗಳುಯಾನೇ ರಾಹದಾರೀಗಳನ್ನು ಕೊಡತಕ್ಕದ್ದು. ಹಾಗೆಕೊಡಲ್ಪಟ್ಟ ಸಾರಾಯಿಯು, ಈ ಪ್ಯಾರಾ (*a*) ಕ್ಲಾಜ್‌ನಲ್ಲಿ ವಿಧಿಸಲ್ಪಟ್ಟ ಪ್ರಕಾರ ವಿಕ್ರಯಿಸಲ್ಪಟ್ಟ ಲೆಕ್ಕ ಇಡಲ್ಪಡತಕ್ಕದ್ದು.

(*c*) ಅಂಡರ್ ಪ್ರೂಫ್ ಬಾಬತು 20° ಡಿಗ್ರೀಗೆ ಮೇಲ್ಪಟ್ಟ ಸ್ಟ್ರೆಂಗ್ತ್ ವುಂಟಾಗಿ ಮತ್ತು ಪ್ರೂಫಿನವರಿಗೆ ಇದ್ದು, ಕೊಡಲ್ಪಡುವ ತಮಾಂ ಸಾರಾಯಿಗೂ, ಪ್ರೂಫಿನ ಮೇಲೆ ತೀರ್ವೆಯನ್ನು ವಿಧಿಸತಕ್ಕದ್ದು. ಪ್ರೂಫಿನ ಮೇಲಣ ದರವು ಜಲಪರಿಮಾಪಕ ಯಂತ್ರದ ದರಗಳ ಪ್ರಕಾರ ದಾಮೊಷಾಯಿ ಮೇಲೆ ಜಾಸ್ತಿ ಮಾಡಲ್ಪಡತಕ್ಕದ್ದು.

(*d*) ಅಂಡರ್ ಪ್ರೂಫಿನ 20° ಡಿಗ್ರೀಗೆ ಕೀಳ್ಪಟ್ಟ ಯಾವ ಸಾರಾಯಿಯೂ, ಸಾಧಾರಣವಾಗಿ ಡಿಸ್ಟಿಲೇರಿಯಿಂದ ಕೊಡಲ್ಪಡಕೂಡದು; ಪರಂತು, ಅಂಡರ್‌ಪ್ರೂಫಿನ 20° ಡಿಗ್ರೀ ಸ್ಟ್ರೆಂಗ್ತಿಗಿಂತ ಕಡಮೆ ಶಕ್ತಿಯುಳ್ಳ ಸಾರಾಯಿ ಬಗ್ಯೆ ತಗಾದೇ ಉಂಟಾದರೆ, ಅಂಡರ್‌ಪ್ರೂಫಿನ 30° ಡಿಗ್ರೀ ಸಾರಾಯಿಯು, ದಾಮೊಷಾಯಿ ಪ್ರಕಾರ ಕಮ್ಮಿ ಮಾಡಲ್ಪಟ್ಟ ತೀರ್ವೆಯ ದರಗಳ ಮೇರೆ, ಡಿಸ್ಟಿಲ್ಲೆರಿಯಿಂದ ವಿಶೇಷತಃ ಕೊಡಲ್ಪಡಬಹುದು. ಅಂತಾ ಸಾರಾಯಿಯು, ಒಟ್ಟು ಕೋಠೀಗಳಲ್ಲಿಯೂ, ಚಿಲ್ಲರೇ ದುಕಾನ್‌ಗಳೊಳಗೂ ಪ್ರತ್ಯೇಕ ಪ್ರತ್ಯೇಕವಾಗಿ ಇಡಲ್ಪಟ್ಟು ಲೆಕ್ಕ ಕೊಡತಕ್ಕದ್ದು.

XI. ಸಾರಾಯಿಯು ಡಿಸ್ಟಿಲ್ಲೆರಿಯಿಂದ ಕೊಡಲ್ಪಟ್ಟ ಮೇರೆ ಪುರೋಖ್ತು ಮಾಡಲ್ಪಡತಕ್ಕದ್ದೇ ಹೊರತು, ಒಟ್ಟು ಬಿಕ್ರಿಯ ಅಥವಾ ಚಿಲ್ಲರೇ ಅಂಗಡಿಗಳಲ್ಲಿ ಯಾವ ರೀತಿಯಲ್ಲಾಗಲಿ ಇತರ ಪದಾರ್ಥ ಬೆರಿಕೇ ಮಾಡಕೂಡದು ಅಥವಾ ನೀರು ಬೆರಿಸಕೂಡದು.

XII. ಅಂಡರ್‌ಪ್ರೂಫಿನ ಬಾಬತು 20° ಡಿಗ್ರೀಯ ಸ್ಟ್ರೆಂಗ್ತಿನ ಸಾರಾಯಿಯ ಮೇಲೆ ಸಲ್ಲತಕ್ಕ ರೂಪಾಯಿಗೆ ಒಂದಾಣೆ ಮೇರೆ ಲೋಕಲ್‌ಸೆಸ್ ದೇಖಿಲ್ ಗವರ್ನಮೆಂಟ್ ತೀರ್ವೆಯೂ, ಸದರೀ ಸಾರಾಯಿ, (ಇತರ ಪದಾರ್ಥ ಬೇರಿಕೆ ಇಲ್ಲದೆಯೂ, ನೀರು ಬೆರಿಕೆಯಾಗದೆಯೂ) ಒಟ್ಟು ಪುರೋಖ್ತು ಅಂಗಡಿಯಲ್ಲಿಯೂ ಚಿಲ್ಲರೆ ಅಂಗಡಿಗಳೊಳಗೂ ಯಾವ ಖರೀದೀ ಪ್ರಕಾರ ಪುರೋಖ್ತಾಗತಕ್ಕದ್ದೋ ಅದು ಇದರಡಿ ಕಂಡ ತಖ್ತೇಯಲ್ಲಿ ವಿವರಿಸಲ್ಪಟ್ಟಮೇರೆ ಇದರಿಂದ ನಿಶ್ಚಯಿಸಲ್ಪಟ್ಟಿರುತ್ತೆ:—

	ಟರ್ವ ಅಥವಾ ಡಿಸ್ಟ್ರಿಕ್ಟು.	20° ಅಂಡರ್ ಪ್ರೂಫ್ ಸ್ಪಿರಿಟ್ ಸಾರಾಯಿಗಳು.											
		ಗ್ಯಾಲನ್ ಒಂದಕ್ಕೆ ತೆರಿಗೆ.			ಗ್ಯಾಲನ್ ಒಂದಕ್ಕೆ ಒಟ್ಟು ಬಿಕರಿ ಕ್ರಯ.			ಚಿಲ್ಲರೇ ಪುರೋಖ್ತು ಕ್ರಯ.					
								ಗ್ಯಾಲನ್‌ವಂದಕ್ಕೆ.			ಡ್ರಾಮುವಂದಕ್ಕೆ.		
		ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.
1	ಬೆಂಗಳೂರು ಷಹರ್ ಮತ್ತು ಸಿವಿಲ್ ವ ಮಿಲಿಟೆರಿ ಸ್ಟೇಷನ್.												
2	ಮೈಸೂರು ಷಹರ್.	3	5	0	4	6	0	5	0	0	0	1	8
3	ಬೆಂಗಳೂರು ಡಿಸ್ಟ್ರಿಕ್ಟು, (ಸಿವಿಲ್ ವ ಮಿಲಿಟೇರಿ ಸ್ಟೇಷನ್ ವಿನಾ.)												
4	ಮೈಸೂರು ಷಹರುವಿನಾ, ಪ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಒಳಗೆ ಅಡಗಿರುವ ತಾಲ್ಲೂಕುಗಳು ವಳಿತವಾಗಿ ಮೈಸೂರುಡಿಸ್ಟ್ರಿಕ್ಟು.												
5	ಕೋಲಾರ ಡಿಸ್ಟ್ರಿಕ್ಟು.	2	4	0	3	6	0	4	0	0	0	1	4
6	ಚಿತ್ರದುರ್ಗ ಸಬ್ ಡಿವಿಜನ್ನಲ್ಲಿ ಅಡಗಿರುವ ತಾಲ್ಲೂಕುಗಳು ಸಹಿತ ತುಮಕೂರು ಡಿಸ್ಟ್ರಿಕ್ಟು.												
7	ಕಡೂರು ಡಿಸ್ಟ್ರಿಕ್ಟಿಗೆ ಸೇರಿದಹಾಸನ ಸಬ್ ಡಿವಿಜನ್.												

ಪ್ರೂಫ್‌ಗಾಗಿಯೂ, ಅಂಡರ್ ಪ್ರೂಫಿನ ಬಾಬತು 30°ಗೂ ಖರೀದಿಗಳು ಮತ್ತು ಅದರ ಮೇಲೆ ಕಟ್ಟತಕ್ಕ ತೀರ್ವೆಬಗ್ಯೆ ಸದರೀ ಸ್ಟ್ರೆಂಗ್ತ್‌ಗಳ ಮೇಲೆ ಅಥವಾ ಸ್ಟ್ರೆಂಗ್ತ್‌ಗಳ ವಳಗೆ ತಮಾಂ ಸ್ಟ್ರೆಂಗ್ತ್‌ಗಳಿಗೂ ತೀರ್ವೆಸಹ ಗವರ್ನಮೆಂಟ್ ಹೈಡ್ರಾಮಿಟೆಸ್ ಯಂತ್ರಗಳ ಪ್ರತಿ ಪಟ್ಟಿಗೆ ಸಂಗಡಲೂ ಕಳುಹಿಸಲ್ಪಡುವ ಕ್ಯಾಸಿಲಾ ಯವರ ರೂಲ್ಸ್ ಅನುಸರಿಸಿ ಅಂಡರ್ ಪ್ರೂಫ್ ಬಾಬತು 20°ಗೆ ಮೇಲೆ ವಿವರಿಸಲ್ಪಟ್ಟ ದರಗಳಮೇಲೆ ದಾಮೊಷಾಯಿ ಪ್ರಕಾರ ಕ್ರಮಪಡಿಸಲ್ಪಡತಕ್ಕದ್ದು. ಈ ರೂಲ್ಸಿನಲ್ಲಿರುವ ಯಾವ ಅಂಶವೂ, ಗೌರವಶಾಲಿಗಳಾದ ಖುಷ

ಬ್ರಾಷ್ ಜನಗಳಿಗೂ ಆಸ್ಪತ್ರೆಗಳಿಗೂ, ಮ್ಯುಜಿಯಂಯಾನೆ ವಿವಿಧವಸ್ತುಶಾಲೆಗಳಿಗೂ ಮತ್ತು ಇತರ ಪಬ್ಲಿಕ್ ಸ್ಥಾಪನೆಗಳಿಗೂ ಅಂಡರ್ ಪ್ರೂಫಿನ ಬಾಬತ್ತು 20° ಮೇಲೆ ಮತ್ತು ಓವರ್ ಪ್ರೂಫಿನ ಬಾಬತು 30° ವರಿಗೆಸಾರಾಯಿಯನ್ನು ಸಾಧಾರಣ ವಂದು ಕ್ವಾರ್ಟು ಶೀಷೆಗಿಂತ ಕಡಮೆಇಲ್ಲದೆ ಮತ್ತು ವಟ್ಟು ಬಿಕರಿಯ ಖರೀದಿ ಪ್ರಕಾರ 2 ಗ್ಯಾಲನ್‌ಗೆ ಮೀರದ ತೇದಾದ್ ಪ್ರಕಾರ ಸಾರಾಯಿಯನ್ನು ಕೊಡುವದನ್ನು ನಿರೋಧಿಸತಕ್ಕ ಅಂಶ ಯಾವದೂ ಇಲ್ಲವು. ಹೆಚ್ಚು ಸ್ಟ್ರಾಂಗ್ತು ಸಾರಾಯಿಯು ಜರೂರಿಯಾತ್ ಸಂಗತಿಗಳಲ್ಲಿಯೂ ಬೆಂಗಳೂರು ಡೆಪ್ಯುಟಿ ಕಮಿಷ್ಣನರವರ ವಿಶೇಷ ಮಂಜೂರಾತಿ ಮೇಲೆಯೂ ವಿನಹಾ ಕೊಡಲ್‌ಪಡತಕ್ಕದ್ದಲ್ಲ.

XIII. ಸಾರಾಯಿ ಕಮ್ಮಿಬಂದ ಬಗ್ಯೆ, ಬೆಂಗಳೂರು ಷಹರ್ ಮತ್ತು ಸಿವಿಲ್ ವ ಮಿಲಿಟೇರಿ ಸ್ಟೇಷನ್ ಮ್ಯುನಿಸಿಪಲ್ ಸರಹದ್ದುಗಳ ಆಚಿಗೆ ಪುರೋಖ್ತು ಬಗ್ಯೆ ಡಿಸ್ಟಿಲೇರಿಯಿಂದ ಕೊಡಲ್ಪಟ್ಟ ಸಾರಾಯಿಯ ಮೇಲೆ ಸಲ್ಲತಕ್ಕ ತೆರಿಗೆಯ ಮೇಲೆ ಸೇಕಡಾ 2ರ ಪ್ರಕಾರ ಸೋಡಿ ಯಾ ವಜಾ ಕೊಡಲ್ಪಡತಕ್ಕದ್ದು.

XIV. ಇಜಾರೇದಾರನು, ಡಿಸ್ಟಿಲ್ಲೇರಿಗಳನ್ನಾಗಲಿ, ಬಟ್ಟಿ ಪುರೋಖ್ತು ಅಂಗಡಿಗಳನ್ನಾಗಲಿ, ಕೋಠೀಗಳನ್ನಾಗಲಿ, ಮೇಲ್ವಿಚಾರಣೆ ಮಾಡಲಿಕ್ಕೆ ಯಾವನನ್ನು ಮೊಕರರ್ ಮಾಡುತ್ತಾನೋ ಅಂತಾ ಪ್ರತಿ ಮನುಷ್ಯನನ್ನೂ ಹಾಗೆ ಮೊಕರರ್ ಮಾಡುವದಕ್ಕೆ ಮುಂದಾಗಿ ಮೇಲೆ ಕಂಡ ಷರತ್‌ಗಳಿಗೆ ಅನುಗುಣವಾಗಿ ಕರಾರ್‌ಗಳನ್ನು ಬರೆದು ಕೊಡುವಂತೆ ಮಾಡತಕ್ಕದ್ದು. ಅಂಥಾ ಕರಾರ್‌ಗಳು, 1884ನೇ ಇಸವೀ ಏಪ್ರೆಲ್ ಒಂದನೇ ತಾರೀಖು ಲಾಗಾಯತ್ ಒಂದು ತಿಂಗಳೊಳಗಾಗಿ, ಅಂಥಾ ನೌಕರನು ಯಾವ ಡಿಸ್ಟ್ರಿಕ್ಟಿನಲ್ಲಿ ಮೊಕರರ್ ಮಾಡಲ್ಪಡುತ್ತಾನೋ ಆ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರಲ್ಲಿ ಯಿಡಲ್ಪಡತಕ್ಕದ್ದು. ಮತ್ತು ಸದರೀ ಇಜಾರೇದಾರನು, ಷರಾಬ್ ತಯಾರಿ, ಸಾಗಿಸುವಣಿ ಮತ್ತು ಪುರೋಖ್ತು ಈ ಕೆಲಸಗಳಲ್ಲಿ ತನ್ನಿಂದ ಮೊಕರರ್ ಮಾಡಲ್ಪಡುವ ತಮಾಂ ಜನಗಳೂ, ತಮ್ಮಿಂದ ಮಾಡಿಕೊಳ್ಳಲ್ಪಟ್ಟ ಕರಾರ್‌ಗಳ ವ ಕಾನೂನಿನ ನಿಬಂಧನೆಗಳನ್ನು ಖಂಡಿತವಾಗಿ ಅನುಸರಿಸುವಂತೆ ಮಾಡುವದಕ್ಕೆ ಪೂರಾ ತರದೂದ್ ಮಾಡತಕ್ಕದ್ದು; ಮತ್ತು ಸದರೀ ನಿಬಂಧನೆಗಳಿಗೆ ಬರ್‌ಕಿಲಾಫ್ ನಡಿಸಲ್ಪಟ್ಟಂತೆ ಆತನ ತಿಳುವಳಿಕೆಗೆ ಬಂದರೆ, ಸದರೀ ಅಪರಾಧಕ್ಕೆ ವಿಧಿಸಲ್ಪಟ್ಟ ದಂಡನೆ ವಿಧಿಸುವ ಬಗ್ಯೆ, ಯಾವ ಡಿಸ್ಟ್ರಿಕ್ಟಿನಲ್ಲಿ ಬರ್‌ಕಿಲಾಫ್ ನಡೆಯಿತೋ ಅಂತಾ ಡಿಸ್ಟ್ರಿಕ್ಟಿನ ಡೆ॥ ಕಮ್ಮಿಷನರ ಜಾಹೀರಾತಿಗೆ ಸದರೀ ಸಂಗತಿಯನ್ನು ತರತಕ್ಕದ್ದು, ಮತ್ತು ಸದರೀ ಅಪರಾಧಿಯನ್ನು ತಗ್ಯೆರ್ ಮಾಡುವಂತೆ ಡೆ॥ ಕಮ್ಮಿಷನರಿಂದ ಅಪೇಕ್ಷಿಸಲ್ಪಟ್ಟರೆ, ಅದೇ ಮೇರೆ ಅವನನ್ನು ತಗ್ಯೆರ್ ಮಾಡತಕ್ಕದ್ದು.

XV. ಇಜಾರೇಯ ಷರತ್‌ಗಳಿಗೆ ವಿರುದ್ಧವಿಲ್ಲದೆ, ಗವರ್ನಮೆಂಟಿನಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಇಜಾರೇದಾರನು ಅನುಗುಣವಾಗಿ ನಡೆಯತಕ್ಕದ್ದು, ಮತ್ತು ಆತನ ನೌಕರ್‌ಮಾನೆಯರೆಲ್ಲಾ, ಬಟ್ಟೀ ಇಳಿಸಲ್ಪಟ್ಟು ಕೊಡಲ್ಪಟ್ಟ ಸಾರಾಯಿಯ ಬಂದೋಬಸ್ತು ಮತ್ತು ಕ್ರಮ, ಉಪಯೋಗಿಸಲ್ಪಟ್ಟ ತಮಾಂ ಪಾತ್ರೆಗಳ ಪಾಕೀಜೀ, ಲೋಹ ಪಾತ್ರೆಗಳ ಕಲಾಯಿಹಾಕಿಸುವಣಿ, ಕಾವಲು, ಆವರಣದ ತನಿಖೀ ಮತ್ತು ಆರೋಗ್ಯಕರವಾದ ಸ್ಥಿತಿ ಮತ್ತು ಗವರ್ನಮೆಂಟಿನವರ ಅಥವಾ ಇಜಾರೇದಾರರ ಅಥವಾ ಉಭಯತ್ರರ ಪ್ರಯೋಜನಗಳಿಗೆ ಸಂಬಂಧಪಟ್ಟ ಇತರ ವಿಷಯಗಳು, ಇವುಗಳ ಬಗ್ಯೆ ಗವರ್ನಮೆಂಟಿನವರು ಜಾರೀಮಾಡಿದ ರೂಲ್ಸನ್ನೂ, ಹುಕ್ಕುಂಗಳನ್ನೂ, ಪೂರಾ ಜಾರೀಗೆ ತರುವ ಅಂಶಗಳಿಗೆ ನಿಗೇ ಕೊಡತಕ್ಕದ್ದು.

XVI. ಮೇಲೆ ಕಂಡ ಷರತ್‌ಗಳ ಪೈಕೀ ಯಾವ ಷರತ್‌ಗಳಿಗಾಗಲಿ, ಇಜಾರೇದಾರನಿಂದ ಅಥವಾ, ಷರಾಬ್ ತಯಾರಿ, ಸಾಗಿಸುವಣಿ, ಯಾ ಪುರೋಖ್ತು ಇಂತಾದ್ದರಲ್ಲಿ, ಆತನಿಂದ ಮೊಕರರ್ ಮಾಡಲ್ಪಟ್ಟ ಜನಗಳ ಪೈಕೀ ಯಾರಿಂದಾದರೂ, ಸದರೀ ಇಜಾರೇದಾರನು ನೋಡಿಯೂ ನೋಡದಹಾಗೆ ಇರುವದರಿಂದ ಅಥವಾ ರಹಸ್ಯವಾದ ಷಾಮೀಲಾತೀಯಿಂದ ಮನಃಪೂರ್ವಕವಾಗಿ ಬರ್‌ಕಿಲಾಫ್ ಯೇನಾದರೂ ನಡಿಸಲ್ಪಟ್ಟರೆ, ಇಜಾರೇಯನ್ನು ರದ್ದುಮಾಡುವದಕ್ಕೂ, ಠೇವಣೀ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಟ್ಟಿತೆಂದು ತಿಳಿಸುವದಕ್ಕೂ, Iನೇ ಷರತ್‌ನಲ್ಲಿ ವಿಧಿಸಲ್ಪಟ್ಟ ಪ್ರಕಾರ ಅಮಲ್ ನಡಿಸುವದಕ್ಕೂ ದೀವಾನರವರಿಗೆ ಯಿಖ್ತೀಯಾರಿ ಇರತಕ್ಕದ್ದು.

XVII. ಗವರ್ನಮೆಂಟಿನವರಿಂದ ಸದರೀ ಬಗ್ಯೆ ವಿಧಿಸಲ್ಪಡಬಹುದಾದ ಅಂತಾ ಷರತ್‌ಗಳಿಗೆ ಒಳಪಟ್ಟು, ಇಜಾರೇದಾರನಿಂದ, ಕೊಲಂಬೋ ಸಾರಾಯಿಯನ್ನು ಅಥವಾ ಇತರ ವಿಧಗಳುಳ್ಳ ಆರೆಕ್ ಸಾರಾಯಿ, ಲಿಕ್ಕರ್ ಸಾರಾಯಿ ಇವುಗಳನ್ನು ತಯಾರ್ಮಾಡಲ್ಪಡಲಿಕ್ಕೂ, ಪುರೋಖ್ತು ಮಾಡಲ್ಪಡಲಿಕ್ಕೂ, ಗವರ್ನಮೆಂಟಿನವರು ಅಂಗೀಕರಿಸಬಹುದು, ಪರಂತು ಈ ಇಸ್ತಿಹಾರ್‌ನಾಮೆಯಲ್ಲಿ ಕಂಡ ಸಾಧಾರಣ ಕಂಟ್ರಿ ಸಾರಾಯಿಯಿಂದ ಆಗುವ ಹುಟ್ಟುವಳಿಯ ಮೇಲೆ ಸದರೀ ಬಗ್ಯೆ ವಜಾ ಯಾವದೂ ಕೊಡಲ್ಪಡಲಾರದು.

XVIII. ಮೇಲೆ ಕಂಡ ಷರತ್‌ಗಳಿಂದ, ಡೆ॥ ಕಮ್ಮಿಷನರಿಗೆ ಕೊಡಲ್ಪಟ್ಟ ಅಧಿಕಾರಗಳೂ, ವಿಧಿಸಲ್ಪಟ್ಟ ಕೃತ್ಯಗಳೂ ಸುದ್ಧಾ, ರೆಸೀಡೆಂಟರು ಮೊಕರರ್ ಮಾಡಬಹುದಾದ ಅಂಥಾ ಆಫೀಸರಿಂದ ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಟೇಷನ್‌ನೊಳಗೆ ಚಲಾಯಿಸಲ್ಪಡತಕ್ಕದು, ಮತ್ತು ನಿರ್ವಹಿಸಲ್ಪಡತಕ್ಕದ್ದು.

8. ಕಳೆದ ವರುಷಗಳಲ್ಲಿ ಕೊಡಲ್ಪಟ್ಟ ಷರಾಬಿನ ತೇದಾದು ಇದರಡಿ ಕಂಡ ತಖ್ತೆಯಲ್ಲಿ ಕಾಣಿಶಿರುತ್ತೆ.

	1870—71 ಗ್ಯಾಲನ್‌ಗಳು.	1871—72 ಗ್ಯಾಲನ್‌ಗಳು.	1872—73 ಗ್ಯಾಲನ್‌ಗಳು.	1873—74 ಗ್ಯಾಲನ್‌ಗಳು.	1874—75 ಗ್ಯಾಲನ್‌ಗಳು.	1875—76 ಗ್ಯಾಲನ್‌ಗಳು.	1876—77 ಗ್ಯಾಲನ್‌ಗಳು.	1877—78 ಗ್ಯಾಲನ್‌ಗಳು.	1878—79 ಗ್ಯಾಲನ್‌ಗಳು.	1879—80 ಗ್ಯಾಲನ್‌ಗಳು.	1880—81 ಗ್ಯಾಲನ್‌ಗಳು.	1881—82 ಗ್ಯಾಲನ್‌ಗಳು.	1882—83 ಗ್ಯಾಲನ್‌ಗಳು.
ಬೆಂಗಳೂರು ಷಹರ್ ಮತ್ತು ಸಿವಿಲ್ ವ ಮಿಲಿಟರಿ ಸ್ಟೇಷನ್ ..	77,149	83,345	85,099	90,760	78,872	75,125	68,782	71,207	69,710	85,162	95,395	97,314	106,433
ಮೈಸೂರು ಷಹರ್ ..	12,529	12,567	13,160	10,249	11,000	9,433	8,030	4,814	5,921	7,514	9,163	10,466	10,904
ವಟ್ಟು, ಷಹರ್‌ಗಳಲ್ಲಿ ಕೊಡಲ್ಪಟ್ಟದ್ದು.	89,678	95,912	98,259	101,009	89,872	84,558	76,812	76,021	75,631	92,676	104,558	107,780	117,337
ಬೆಂಗಳೂರು ಡಿಸ್ಟ್ರಿಕ್ಟು. ..	45,190	40,061	39,884	43,408	35,456	29,773	22,095	14,279	17,505	28,724	38,342	42,231	42,739
ಕೋಲಾರ ಡಿಸ್ಟ್ರಿಕ್ಟು ..	18,515	20,046	21,658	28,080	23,182	18,160	11,746	5,043	8,619	12,858	16,290	21,786	24,008
ತುಮಕೂರು ಡಿಸ್ಟ್ರಿಕ್ಟು, ಚಿತ್ರದುರ್ಗದ ಸಬ್ ಡಿವಿಜನ್ ಸಹ ..	*16,356	*16599	*18,842	*18,143	*12,980	*8,066	*6,881	*5,225	*5,266	*6,279	*7,566	6,738	6,866
ಮೈಸೂರು ಡಿಸ್ಟ್ರಿಕ್ಟು, ಫ್ರೆಂಚ್‌ರಾಕ್ಸ ಸಬ್ ಡಿವಿಜನ್ ದೇಖೀಲ್ .. / ಕಡೂರು ಡಿಸ್ಟ್ರಿಕ್ಟಿನ ಹಾಸನ್ ಸಬ್ ಡಿವಿಜನ್ ..	18,465	18,332	20,977	20,483	18,666	17,064	18,203	11,137	9,564	13,253	14,694	19,030	17,970
ಒಟ್ಟು ಗಾವಗಾನೆಗಳಲ್ಲಿ ಕೊಡಲ್ಪಟ್ಟದ್ದು ..	98,526	95,038	101,361	110,114	90,284	73,063	58,925	35,684	40,954	61,114	76,892	89,785	91,583
ಜುಮ್ಲಾ ಕೊಡಲ್ಪಟ್ಟದ್ದು ..	188,204	190,950	199,620	211,123	180,156	157,621	135,737	111,705	116,585	153,790	181,450	197,565	208,920

* ಈ ಅಂಕೆಗಳು 1870—71ರ ಲಾಗಾಯಿತು 1880—81ರವರಿಗೆ ಹಾಲಿ ಶಿವಮೊಗ್ಗಾ ಡಿಸ್ಟ್ರಿಕ್ಟು ದಾವಣಗೆರೆ ತಾಲ್ಲೂಕಿಗೆ ಕೊಡಲ್ಪಟ್ಟ ತೇದಾದನ್ನೂ ಅಡಗಿಸಿಕೊಂಡಿರುತ್ತದೆ.

"ಬಮೋಜೀಬ್ ಹುಕ್ಕುಂ"

ಆರ್. ವಿಜಯೀಂದ್ರರಾವ್,

ಸೆಕ್ರೆಟೇರಿ.

ಮೈಸೂರ ಗೆಜೆಟ

ಸರ್ಕಾರದಿಂದ ಪ್ರಕಾಯಿಷ ಆದ್ದು.

ಬೆಂಗಳೂರು, ಶನಿವಾರ, ಫೆಬ್ರುವರೀ ತಾ॥ 2, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರುವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಿನಾನ್ಷಿಯಲ್ ಇಲಾಖಾ.

1882ನೇ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್‌ಟ್ರೋಲರ್.

ಶಿವಿಲ್ ವ ಮಿಲಿಟೆರಿ ಸ್ಟೇಷನ್.

ತಾರೀಖು 15ನೇ ಜನವರೀ 1884.

ಇಲಾಖಾ ಮಜಕೂರು 1883ನೇ ಇಸವಿ 15ನೇ ತಾರೀಖಿನ ನೋಟೀಸ್ ರದ್ದುಪಡಿಸಿ ಇದರಿಂದ ತಿಳಿಯಪಡಿಸುವದೇನಂದರೆ:—

ತಿಮ್ಮಯ್ಯ ರೋಡಿನಲ್ಲಿ ಪೆನ್ಷನ್‌ದಾರ ಹಾರ್‌ಪರ್ ಯಂಬವರ ಸಂಗಡ ವಾಸ ಮಾಡಿಕೊಂಡು ಇದ್ದ ಮಿಸ್ಟ್ರಸ್ ಬರ್‌ಬಿಡ್ಜ್ ಯೆಂಬುವ

ಳನ್ನ ಖೂನಿ ಮಾಡಿದವರನ್ನ ಪತ್ತೇ ಮಾಡುವದಕ್ಕೂ ಮತ್ತು ಸಜಾ ವಿಧಿಸುವದಕ್ಕೂ ರಹ ವುಂಟು ಮಾಡತಕ್ಕಂಥಾ ವರ್ತಮಾನವನ್ನು ಯಾರು ಕೊಡುತ್ತಾರೋ ಅಂಥಾವರಿಗೆ 1,000 ಒಂದು ಸಾವಿರ ರೂಪಾಯಿಗಳ ಇನಾಂ ಕೊಡಲಾಧೀತು

ಈ ಖೂನಿಯು ಅಕ್ಟೋಬರ್ ಮಾಹೆ 10ನೇ ತಾರೀಖಿನ ರಾತ್ರಿ $9\frac{1}{2}$ ಮತ್ತು $11\frac{1}{2}$ ಘಂಟೆ ಸಮಯದಲ್ಲಿ ನಡಿಸಲ್ಪಟ್ಟಿಧೆ.

ಖೂನಿ ಮಾಡಲ್ಪಟ್ಟಂಥಾವಳು ಈ ಘಂಟೆಗಳ-ಮಧ್ಯದಲ್ಲಿ ಯಾವ ಯಾವ ಸ್ಥಳದಲ್ಲಿ ಹ್ಯಾಗೆ ಇದ್ದಳು ವಗೈರೆ ವರ್ತಮಾನ ಕೊಟ್ಟಂಥಾವರಿಗು ಸಹ ಇನಾಂ ಕೊಡಲ್ಪಡುವದು. ಆದರೆ ಸದರೀ ಇನಾಮಿನ ಮೊಬಲಗು ಸದರೀ ವರ್ತಮಾನದ ಯೋಗ್ಯತಾನುಸಾರವಾಗಿರುವದು.

ಇಂಥಾ ವರ್ತಮಾನ ಕೊಡುವಂಥಾವರು ಯಾವ ಕಾಲದಲ್ಲೀ ಆಗಲಿ ಈ ಕೆಳಗೆ ಸೈನ್ ಮಾಡಿರುವಂಥಾ ಸಾಹೇಬರನ್ನ ಅವರ ಮನೆಯಲ್ಲೀ ಆಗಲಿ ಅಥವಾ ಕಚೇರಿಯಲ್ಲೀ ಆಗಲಿ ನೋಡಬಹುದು.

1881 ... ಈ. ಹ್ಯೂಟ್ಸನ್,
ಪೋಲಿಸ್ ಡಿ॥ ಸೂಪರಿಂಟೆಂಡೆಂಟ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

1883ನೇ ಇಸವಿ ಅರ್ಜೀ ನಂಬರ್ 553.

... ಮೃತಪಟ್ಟ ಶೀತಾರಾಮಯ್ಯನ ಆಸ್ತಿ ವಿಷಯದಲ್ಲಿ— ...

ಅರ್ಜೀದಾರ ಮಂಜಯ್ಯ, ಮೈನರ್ ಗಾರ್ಡಿಯನ್ ಮತ್ತು ತಾಯಿ ನರಸಮ್ಮ, ಮೃತಪಟ್ಟ ಸದರೀ ಶೀತಾರಾಮಯ್ಯನಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಹೊಳೇನರಸೀಪುರ ಕಸಬಾ ಸ್ಥಳದ ಸದರೀ ಮಂಜಯ್ಯ ಮೈನರ್ ಗಾರ್ಡಿಯನ್ ಮತ್ತು ತಾಯಿ ನರಸಮ್ಮ, ಸದರೀ ವಾಸಸ್ಥನಾಗಿ ಮೃತಪಟ್ಟ ಶೀತಾರಾಮಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 600 ರೂಪಾಯಿಗಳ ಸಾಲವನ್ನು ವಸೂಲ್ಮಾಡುವಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮಂಜಯ್ಯ ಮೈನರ್ ಗಾರ್ಡಿಯನ್ ಮತ್ತು ತಾಯಿ ನರಸಮ್ಮನ ಅರ್ಜೀಯನ್ನು 1884ನೇ ಇಸವಿ ಫಿಬ್ರುವರೀ ತಿಂಗಳು ತಾರೀಖು 19ರಲ್ಲು ಮೈಸೂರು ಮೊಕ್ಕಾಂನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶೀತಾರಾಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ್ 2.

... ಮೃತಪಟ್ಟ ತಮ್ಮಯ್ಯ ಜೋಯಿಸನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಗೋಪಾಲಕೃಷ್ಣಸ್ವಾಮಿ ಮೈನರ್ ಗಾರ್ಡಿಯನ್ ಮತ್ತು ತಾಯಿ ಗೌರಮ್ಮ, ಮೃತಪಟ್ಟ ಸದರೀ ತಮ್ಮಯ್ಯ ಜೋಯಿಸನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಅತ್ತಿಕುಪ್ಪಾ ತಾಲ್ಲೂಕು ಕನ್ನಂಬಾಡಿ ಸ್ಥಳದ ಸದರೀ ಗೋಪಾಲಕೃಷ್ಣಸ್ವಾಮಿ ಮೈನರ್ ಗಾರ್ಡಿಯನ್ ಮತ್ತು ತಾಯಿ ಗೌರಮ್ಮ, ಡಿಟ್ಟೋ ವಾಸಸ್ಥನಾಗಿ ಮೃತಪಟ್ಟ ತಮ್ಮಯ್ಯ ಜೋಯಿಸನ ಜಿಂದಗೀ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಗೋಪಾಲಕೃಷ್ಣಸ್ವಾಮಿ ಮೈನರ್ ಗಾರ್ಡಿಯನ್ ಮತ್ತು ತಾಯಿ ಗೌರಮ್ಮನ ಅರ್ಜಿಯನ್ನು 1884ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 19ರಲ್ಲು ಮೈಸೂರು ಮೊಕ್ಕಾಮಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಗಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಮ್ಮಯ್ಯ ಜೋಯಿಸನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಯಿರಬೇಕೆಂದು ಇದರಿಂದ ತಿಳಿಯಪಡಿಸಿ ಯಿಧೆ.

1884ನೇ ಇಸವಿ ಜನವರೀ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ನಿಸಿನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1884ನೇ ಇಸವಿ ಅರ್ಜೀ ನಂಬರ್ 5.

ಮೃತಪಟ್ಟ ಗೊಲ್ಲರ ಮೈಲಾರಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಮಲ್ಲಮ್ಮ, ಮೃತಪಟ್ಟ ಸದರೀ ಮೈಲಾರಯ್ಯನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ನಂಜನಗೂಡು ಕಸಬಾದಲ್ಲಿರುವ ಸದರೀ ಮಲ್ಲಮ್ಮನು ಸದರೀ ವಾಸಸ್ಥನಾಗಿ ಮೃತಪಟ್ಟ ಮೈಲಾರಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 62—12—6 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಮಲ್ಲಮ್ಮನ ಅರ್ಜಿಯನ್ನು 1884ನೇ ಇಸವಿ ಫೆಬ್ರುವರೀ ತಿಂಗಳು ತಾರೀಖು 19ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮೈಲಾರಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ್ 19.

ಮೃತಪಟ್ಟ ಪೊನ್ನುಸಾಮಿ ಮೊದಲಿಯಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಮನೋನ್ಮಣಿ ಅಮ್ಮಾಳ್, ಮೃತಪಟ್ಟ ಸದರೀ ಪೊನ್ನುಸಾಮಿ ಮೊದಲಿಯಾರ್ರಿಗೆ ಹಿರೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಸ್ಥಳದ ಸದರೀ ಮನೋನ್ಮಣಿ ಅಮ್ಮಾಳ್, ಸದರೀ ವಾಸಸ್ಥನಾಗಿ ಮೃತಪಟ್ಟ ಪೊನ್ನುಸಾಮಿ ಮೊದಲಿಯಾರ್ರ ಜಿಂದಗಿ ಬಗ್ಯಾಗಿ ಬರತಕ್ಕ 700 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಮನೋನ್ಮಣಿ ಅಮ್ಮಾಳ್ ಅರ್ಜೀಯನ್ನು 1884ನೇ ಇಸವಿ ಫೆಬ್ರುವರೀ ತಿಂಗಳು ತಾರೀಖು 27ರಲ್ಲ ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪೊನ್ನುಸಾಮಿ ಮೊದಲಿಯಾರ್ರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ್ 22.

ಮೃತಪಟ್ಟ ವೆಂಕಟಗಿರಿ ನಾಯಕನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಕಂಕನಾಯಕ, ಮೃತಪಟ್ಟ ಸದರೀ ವೆಂಕಟಗಿರಿ ನಾಯಕನಿಗೆ ಅಣ್ಣನ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಹುಣಸೂರು ತಾಲ್ಲೂಕು ಬಿಳಿಕೆರೇ ಹೋಬಳಿ ಲಿಂಗಪುರದಹಳ್ಳಿ ಸ್ಥಳದ ಸದರೀ ಕಂಕನಾಯಕನು, ಸದರೀ ವಾಸಸ್ಥನಾಗಿ ಮೃತಪಟ್ಟ ವೆಂಕಟಗಿರಿ ನಾಯಕನ ಜಿಂದಗಿ ಬಗ್ಯಾಗಿ ಬರತಕ್ಕ 150 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾನೆ.

ಸದರೀ ದರಖಾಸ್ತುದಾರನಾದ ಕಂಕನಾಯಕನ ಅರ್ಜೀಯನ್ನು 1884ನೇ ಇಸವಿ ಫೆಬ್ರುವರೀ ತಿಂಗಳು ತಾರೀಖು 28ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟಗಿರಿ ನಾಯಕನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿಧೆ.

1884ನೇ ಇಸವಿ ಜನವರೀ ತಿಂಗಳು ತಾರೀಖು 21ರಲ್ಲು ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ತಾರೀಖು 9ನೇ ಜನವರೀ 1884.

ಇದರಿಂದ ಪ್ರಕಟಿಸುವದ್ದೇನಂದರೆ, 1884ನೇ ಇಸವಿಯಲ್ಲಿ ಮೈಸೂರು ಡಿಸ್ಟ್ರಿಕ್ಟಿನಿಂದ ವಿಚಾರಣೆ ಬಗ್ಯೆ ಕಮ್ಮಿಟ್ ಮಾಡಲ್ಪಡುವ ಮೊಕದ್ದಮೆಗಳ ಸೆಷನ್ಸು ದರ್ಯಾಫ್ತಿಯು, ಮೈಸೂರು ಮೊಕ್ಕಾಂನಲ್ಲಿ ಇದರಡೀ ಕಂಡ ತಾರೀಖುಗಳಲ್ಲಿ ನಡಿಸಲ್ಪಡುವದು.

15ನೇ ಜನವರೀ	1884	ಮಂಗಳವಾರ
11ನೇ ಫಿಬ್ರುವರೀ	,,	ಸೋಮವಾರ
11ನೇ ಮಾರ್ಚೀ	,,	ಮಂಗಳವಾರ
1ನೇ ಏಪ್ರೈಲ್	,,	ಗುರುವಾರ
9ನೇ ಜೂನ್	,,	ಸೋಮವಾರ
14ನೇ ಜೂಲೈ	,,	ಡಿಟೋ
11ನೇ ಆಗಸ್ಟು	,,	ಡಿಟೋ
8ನೇ ಸೆಪ್ಟಂಬರ್	,,	ಡಿಟೋ
13ನೇ ಅಕ್ಟೋಬರ್	,,	ಡಿಟೋ
10ನೇ ನವಂಬರ್	,,	ಡಿಟೋ
8ನೇ ಡಿಸಂಬರ್	,,	ಡಿಟೋ

ಧರ್ಮಾಫಿಸ್ಟ್ರೀ ಬಗ್ಯೆ ಕಮ್ಮಿಟ್ ಮಾಡುವ ಅಧಿಕಾರವುಳ್ಳ ತಮ್ಮಾಂ ಮಾಜೇಸ್ಟ್ರೇಟರುಗಳೂ, ಅವರಿಂದ ಕಮ್ಮಿಟ್ ಮಾಡಲ್ಪಡುವ ಮೊಕದ್ದಮೆಗಳಲ್ಲಿ ಫಿರ್ಯಾದಿ ವ ಸಾಕ್ಷಿಗಾರರ ಹಾಜರಾತಿ ಬಗ್ಯೆ ಸದರೀ ತಾರೀಖುಗಳಲ್ಲಿ ತಕ್ಕ ಏರ್ಪಾಡು ಮಾಡತಕ್ಕದ್ದೆಂದು ಕೇಳಿ ಕೊಳ್ಳಲ್ಪಟ್ಟಿರುತ್ತಾರೆ.

ವಿ. ಎಸ್. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ತಾರೀಖು 4ನೇ ಜನವರೀ 1884.

ಇದರಿಂದ ತಿಳಿಸುವದೇನಂದರೆ, ಶಿವಮೊಗ್ಗಾ ಜೈಲ್‌ನಲ್ಲಿ ಖೈದು ಮಾಡಲ್ಪಟ್ಟಿರುವ ಖೈದಿಗಳ ಉಪಯೋಗದ ಬಗ್ಯೆ ಸ್ಠ 1884ನೇ ಇಸವಿ ಏಪ್ರೈಲ್ ಗುರ್ರೇ ತಾರೀಖು ಮೊದಲು 1885ನೇ ಮಾರ್ಚೀ 31ನೇ ತಾರೀಖುವರಿಗೆ ಎರಡು ದಿನಗಳೂ ಸೇರಿ ಬೇಕಾದ ಆಹಾರ ವೆಗೈರೇ ದರೋಬಸ್ತು ಜಿನಸುಗಳನ್ನೂ ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಬರುವ ಬಂದು ಮಾಡಲ್ಪಟ್ಟ ದರಖಾಸ್ತುಗಳನ್ನು ಶಿವಮೊಗ್ಗಾ ಜೈಲ್ ಸೂಪರ್ರಿಂಟೆಂಡೆಂಟರವರು, ಜೈಲ್‌ಗಳ ಇನ್‌ಸ್ಪೆಕ್ಟರ್ ಜನರಲ್ಲವರಿಂದ ಕಾಯಂ ಮಾಡಲ್ಪಡಲಿಕ್ಕೆ ಗುರಿಯಾಗಿ ಸ್ಠ 1884ನೇ ಇಸವಿ ಮಾರ್ಚೀ 1ನೇ ತಾರೀಖುವರಿಗೆ ತೆಗದುಕೊಳ್ಳುವರು.

2. ಸದರೀ ತಾರೀಖು ತರುವಾಯ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರದು.

3. "ಶಿವಮೊಗ್ಗಾ ಜೈಲ್‌ಗಾಗಿ ಆಹಾರ ಪದಾರ್ಥಗಳ ಸರಬರಾಯಿ ಬಗ್ಯೆ ದರಖಾಸ್ತುಗಳು'' ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

4. 500 ರೂಪಾಯಿಗಳು ನಗದಾಗಿ ಅಥವಾ ಕರೆನ್ಸೀ ನೋಟುಗಳ ಮೂಲಕ ಡಿಪಾಜಿಟ್‌ನಿಶೀ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಶಿವಮೊಗ್ಗಾ ಡಿಸ್ಟ್ರಿಕ್ಟು ಜೈಲ್ ಆಫೀಸಿನಲ್ಲಿ, ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರ ರೂಬರೂ ಮೇಲ್ಕಂಡ ತಾರೀಖಿನೊಳಗೆ ಶಿವಮೊಗ್ಗಾ ಡಿಸ್ಟ್ರಿಕ್ಟು ಜೈಲ್ ಸೂಪರ್ರಿಂಟೆಂಡೆಂಟರಿಂದ ಖುಲ್ಲಾ ಮಾಡಲ್ಪಡುವವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ, ಈ ಕೆಳಗೆ ನಮೂದಿಸುವ ತರಗತಿಯ ಪ್ರತಿ ಖೈದಿಗೂ ದಿನ ಒಂದಕ್ಕೆ ಆಗತಕ್ಕ ದರವು ನಮೂದಿಸಲ್ಪಡತಕ್ಕದ್ದು.

ನೇಟಿವ್ ಕೂಲಿಯವರಾದ ಗಂಡಸರು	A ಕ್ಲಾಸ್	..	..	ರೂ. ಆ. ಪೈ.
ಡಿಟೋ	ಡಿಟೋ B ,,	..	..	
ಡಿಟೋ	ಡಿಟೋ C ,,	..	..	
ಡಿಟೋ	ಹುಡುಗರಾದ ಖೈದೀರು	..	..	
ಡಿಟೋ ಕೂಲೀ ಮಾಡದ ಗಂಡಸರು, ಹೆಂಗಸರು, ವಿಚಾರಣೆಯಲ್ಲಿ ಇರತಕ್ಕವರು	D ಕ್ಲಾಸ್	..	..	
ಯೂರೋಪಿಯನ್‌ಗಳು ವ ಈಸ್ಟ್ ಇಂಡಿಯನ್‌ಗಳು		..	..	

7. ದರಖಾಸ್ತು ಮಾಡಲ್ಪಟ್ಟ ದರಗಳು ಆಹಾರ ಜಿನಸೀಗಳ ಸ್ಕೇಲ್ ಪಟ್ಟಿಯಲ್ಲಿ ನಮೂದಿರುವ ಪದಾರ್ಥಗಳು ಮಾತ್ರವಲ್ಲದೆ ಆಸಪತ್ರಿ ಪಥ್ಯಪದಾರ್ಥಗಳು, ಕಾಹಿಲೇ ಮನುಷ್ಯರಿಗೆ ವಿಶೇಷ ಪದಾರ್ಥಗಳು, ನಷ್ಟವಾಗತಕ್ಕ ಪದಾರ್ಥಗಳು, ದೀಪದ ಯಂಣೆ, ಲಾಂದ್ರಗಳು, ಮತ್ತು ಅವುಗಳ ರಿಪೇರಿ ಮಾಡಿಸುವಣ್ಣ, ಸ್ನಾನ ಮಾಡಲಿಕ್ಕೆ ಶೀಗೇಕಾಯಿ, ತಮಾಂ ತಾಂಬ್ರ ಪಾತ್ರೆಗಳ ರಿಪೇರಿ ವ ಕಲಾಯಿ, ಪರಕೆಗಳು, ಗೂಡೆ ಚಾಪೆ ಮಾಡಲಿಕ್ಕೆ ಬಿದುರು, ಮಡಿಕ್ಕೆ ಸುಡುವದಕ್ಕೆ ಸಾದೆ, ಹೆಣ್ಣು ಖೈದೀರ ಮಕ್ಕಳಿಗೆ ಬೇಕಾದ ಹಾಲು, ರೊಟ್ಟಿ, ಸಕ್ಕರೆ ವಗೈರೇ ಪದಾರ್ಥಗಳು, ಹೊಗೆ ಹಾಕುವದಕ್ಕೆ ಗಂಧಕ, ಚವಳುಮಂಣ್ಣು, ಮತ್ತು ಖೈದಿಗಳಿಗೆ ಕ್ರಮವಾಗಿ ಸರಬರಾಯಿ ಮಾಡಲ್ಪಡುವ ಬಟ್ಟೆ ಶಿವಾಯಿ, ತಮಾಂ ಚಿಲ್ಲರೇ ಪದಾರ್ಥಗಳೂ ಸಹ ಅಡಗಿರತಕ್ಕದ್ದು.

8. ಸೂಪರ್ರಿಟೆಂಡೆಂಟರವರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ, ಹೀಗೆ ತಿರಸ್ಕರಿಸಲಿಕ್ಕೆ ಯಾವ ನಿಮಿತ್ತವನ್ನೂ ಅವರು ತಿಳಿಸಬೇಕಾದ್ದಿಲ್ಲವು.

9. ಮುಂಜೂರಾದ ದರಖಾಸ್ತುದಾರನ, ಡಿಪಾಜಿಟ್ ಮೊಬಲಗು ನಿಲ್ಲಿಸಿಕೊಳ್ಳಲ್ಪಟ್ಟು, ಆತನು ಕಂಟ್ರಾಕ್ಟು ಮುಚ್ಚಳಿಕ್ಕೆ ಬರದು ಕೊಡಲಿಕ್ಕಾಗಲಿ, ನಗದಾದರೂ ಗವರ್ನಮೆಂಟ್ ಪತ್ರಗಳ ಮೂಲಕವಾದರೂ 1,000 ರೂಪಾಯಿಗಳ ಮೊಬಲಗಿಗೆ ಜಾಮೀನನ್ನು ತನ್ನ ದರಖಾಸ್ತು ಮಂಜೂರಾದ ಸಂಗತಿ ತನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು ಒಂದು ವಾರದ ವಳಗಾಗಿ ಕೊಡಲಿಕ್ಕೆ ತಪ್ಪಿದರೆ, ಸದರಿ ಡಿಪಾಜಿಟ್ ಸರಕಾರಕ್ಕೆ ಸೇರಿಸಿ ಕೊಳ್ಳಲ್ಪಡುವದು.

10. ಕಂಟ್ರಾಕ್ಟುದಾರನಿಗೆ ನಗದು ಅಡ್ವಾನ್ಸು ಯಾವದೂ ಕೊಡಲ್ಪಡಲಾರದು, ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳಿಗೆ ಪ್ರತಿ ತಿಂಗಳು 1ನೇ ತಾರೀಖಿಗೆ ತರುವಾಯ ಸಾಧ್ಯವಾದಷ್ಟು ತ್ವರೆಯಾಗಿ ಶಿವಮೊಗ್ಗಾ ಜೈಲ್ ಸೂಪರ್ರಿಟೆಂಡೆಂಟರವರಿಂದ ಮೊಬಲಗು ಕೊಡಲ್ಪಡುವದು.

11. ಕಂಟ್ರಾಕ್ಟುದಾರನಿಗೆ ಒಂದು ಖೋಲಿಯು ಬಿಡಲ್ಪಟ್ಟು ಅದರಲ್ಲಿ ಆತನು ನಷ್ಟವಾಗದ ದರೋಬಸ್ತು ಪದಾರ್ಥಗಳನ್ನೂ, ಇಟ್ಟು ಕೊಳ್ಳಬಹುದು. ಮಾಂಸ ವಗೈರೇ ನಷ್ಟವಾಗುವ ಪದಾರ್ಥಗಳು ಪ್ರತಿ ದಿನ ಬೆಳಿಗ್ಯೆ $7\frac{1}{4}$ ಘಂಟೆಗೆ ಜೈಲ್‌ನಲ್ಲಿ ಇರತಕ್ಕದ್ದು.

12. ಕಂಟ್ರಾಕ್ಟು ವಳ ಷಿಕ್ಮಿಗೆ ಕೊಡಲ್ಪಡಕೂಡದು.

13. ಕಂಟ್ರಾಕ್ಟಿನ ನಿಬಂಧನೆಗೆ ತಪ್ಪಿ ನಡೆಯುವ ಬಗ್ಯಾಗಲಿ, ಕಿರದು ತರದ ಯಾವ ಪದಾರ್ಥಗಳನ್ನು ಕೊಡುವ ಬಗ್ಯಾಗಲಿ ಶಿವಮೊಗ್ಗಾ ಜೈಲ್ ಸೂಪರ್ರಿಟೆಂಡೆಂಟರವರ ಯಖ್ತ್ಯಾರಿಯಿಂದ 50 ರೂಪಾಯಿಗೆ ಮೀರದ ಒಂದು ಜುರ್ಮಾನೆಯು ಹಾಕಲ್ಪಡುವದು, ಬಾರ್ ಬಾರ್ ಆ ಮೇರೆ ತಪ್ಪಿದರೆ ಕಂಟ್ರಾಕ್ಟು ರದ್ದು ಮಾಡಲ್ಪಟ್ಟು ಜಾಮೀನ್ ಮೊಬಲಗು ಸರ್ಕಾರಕ್ಕೆ ಶೇರಿಸಿಕೊಳ್ಳಲ್ಪಡುವದು.

14. ಕಂಟ್ರಾಕ್ಟು ತಪ್ಪಿ ನಡಿಯುವ ದರೋಬಸ್ತು ಸಂಗತಿಗಳೊಳಗೂ ಶಿವಮೊಗ್ಗಾ ಜೈಲ್ ಸೂಪರ್ರಿಟೆಂಟೆಂಟರವರ ನಿರ್ಣಯವೇ ಆಖೈರಾಗಿರತಕ್ಕದ್ದು.

15. ಕಂಟ್ರಾಕ್ಟುದಾರನು ಖೈದಿಗಳ ವುಪಯೋಗಾರ್ಥ ತರಕಾರಿಗಳನ್ನು ದರ ಪಾನಿಗೆ 4 ಕಾಸುಗಳ ಮೇರಿಗೆ ಖಾಯಂ ದರದ ಪ್ರಕಾರ ಜೈಲ್ ತೋಟದಿಂದಲೇ ಕೊಳ್ಳುವದಕ್ಕೆ ಬದ್ಧನಾಗಿರತಕ್ಕದ್ದು.

16. ಇನ್ಯಾವ ಸಂಗತಿಯನ್ನಾದರೂ ತಿಳಿಯಬೇಕಾದರೆ ಜೈಲ್ ಸೂಪರ್ರಿಟೆರಡೆಂಟರವರನ್ನು ಕೇಳಿ ತಿಳದುಕೊಳ್ಳಬಹುದು.

17. ಅಡಿಗೆ ಮಾಡುವಲ್ಲಿ ಮಡಿಕೆಗಳು ವಡದು ಹೋಗುವದರಿಂದ ಆಹಾರವೇನಾದರೂ ಅಕಸ್ಮಾತ್ ನಷ್ಟವಾದರೆ ಅದರ ಲುಕ್ಸಾನನ್ನು ಕಂಟ್ರಾಕ್ಟುದಾರನೇ ಕಟ್ಟಿಕೊಡತಕ್ಕದ್ದು.

18. ಹಾಲೀ ಶಿವಮೊಗ್ಗಾ ಜೈಲ್‌ನಲ್ಲಿ 250 ಮಂದಿ ಖೈದೀರಿದ್ದಾರೆ, ಈ ಸಾಲ್‌ನಲ್ಲಿ ಷುಮಾರ್ 300ರ ವರಿಗೆ ಜಾಸ್ತೀಯಾಗಬಹುದಾಗಿ ಅಂದಾಜ್ ಇರುತ್ತೆ.

19. ಆಹಾರ ದರದ ಪಟ್ಟಿಯನ್ನು 1880ನೇ ಇಸವಿ ಜನವರೀ 10ನೇ ಮುರ್ಕುಮಿನ ಮೈಸೂರು ಗೆಜಿಟ್ಟಿನಿಂದಾಗಲಿ, ಶಿವಮೊಗಾ ಜೈಲ್ ಸೂಪರ್ರಿಟೆಂಡೆಂಟರವರನ್ನ ಕೇಳಿ ಆಗಲಿ ತಿಳದುಕೊಳ್ಳಬಹುದು.

ಪಿ. ಪಂಚನಾಥರಾವ್,
ಜೈಲ್ ಸೂಪರ್ರಿಟೆಂಡೆಂಟ್.

ಕಡೂರು ಡಿಸ್ಟ್ರಿಕ್ಟು.

ತಾರೀಖು 14ನೇ ಜನವರೀ 1884.

ಇದರಿಂದ ತಿಳಿಯಪಡಿಸುವದೇನಂದರೆ, ಚಿಕ್ಕಮಗಳೂರು ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗಿ ಯಿರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜುಗಳನ್ನ ಹಾಜರ್ಮಾಡಿದವರೆ ಆಗಲಿ, ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾದ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರರೇ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ವಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರವರ ರೂಬರೂ ಹಾಜರಾಗಿ ಅವುಗಳನ್ನ ವಾಪಸ್ ತೆಗೆದುಕೊಳ್ಳಬೇಕು, ತಪ್ಪಿದರೆ ಸನ್ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅವುಗಳು ನಾಶಪಡಿಸಲ್ಪಡುವವು.

ಅಂಕಿತ ನಂಬರ್.	ದಸ್ತಾವೇಜು ನಂಬರ್.	ದಸ್ತು ಕೊಟ್ಟ ತಾರೀಖು.	ರಿಜಿಸ್ಟರಾದ ತಾರೀಖು.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1	147 1880—81	20–3–80	23–7–80	ದೇವರಾಯಪೇಟೇಲಿರುವ ಯೋಗಪ್ಪನ ಹೆಂಡತಿ ಚನ್ನಮ್ಮ	ದೇವರಾಯಪೇಟೇಲಿರುವ ತೇಗರ ಶಿಂಗಪ್ಪನ ಮಗ ಷರಾಬು ಅಂಗಡಿ ನರಸಿಂಹಯ್ಯ	ಗೋಣಿಕಲ್ ಗ್ರಾಮದಲ್ಲಿ ಯಿರತಕ್ಕ ಕಟ್ರಿಮನೆಯಾನೆ ಕಬ್ಬಿನಮನೆ ಹಿತ್ತಲ್ ಯೆಂಬ ಬೊಂದು ತೋಟ 40 ರೂಪಾಯಿಗೆ ಕ್ರಯ.
2	154	15–3–80	26–7–80	ದೇವರಾಯಪೇಟೇಲಿರುವ ವೈಶ್ಯರ ಪಾಳ್ಯದ ಶೇಷಯ್ಯನ ಮಗ ರಾಮಣ್ಣ	ಬಸವನಹಳ್ಳಿಯಲ್ಲಿರುವ ಕೊತ್ವಾಲ್ ಚನ್ನಪ್ಪನಮಗ ಸೂರ್ಯನಾರಣಪ್ಪ	ಬಾಕೀ ಸಲ್ಲತಕ್ಕ 150 ರೂಪಾಯಿಗಳು ಸನ್ 1881ನೇ ಇಸವಿ ಏಪ್ರೆಲ್ ಆಖೈರಿಗೆ ಪಾವತೀ ಮಾಡುವದಾಗಿಯು ತಪ್ಪಿದರೆ ದಸ್ತಾವೇಜು ತಾರೀಖು ಲಾಗಾಯತು ಶೇಕಡಾ 1ಕ್ಕೆ ತಿಂಗಳು 1ಕ್ಕೆ 1–8–0 ಯಂತೆ ಬಡ್ಡಿ ನಿಸಿ ಅಸಲ್ ಮೊಬಲಗ್ಯೆ ಸಲಾಯಿಸುವದಲ್ಲದೆ ಯಿದಕ್ಕಾಗಿ ಟರ್ವ್ ದೇವರಾಯ ಪೇಟೇಲಿರುವ ಹಂಚಿನಮನೆ ಮಳಿಗೆ ಸಹ ದ್ರವ್ಯಾಧಾರ ಮಾಡಿರುವದಾಗಿ.
3	175	2—7—80	8—8—80	ಜೋಳದಾಳುಪೇಟೇಲಿರತಕ್ಕ ಶಿವಾಚಾರದ ಸಣ್ಣ ವೀರಶೆಟ್ಟಿ ಮಗ ರುದ್ರಶೆಟ್ಟಿ	ಹೊಸಹಳ್ಳೀ ಪೇಟೇಲಿರುವ ಮಾಕೂಪಸಾಬಿ ಮಗ ಬುಡ್ನಾಸಾಬಿ	ವಂದುನೂರು ರೂಪಾಯಿ ತೆಗದುಕೊಂಡು ಯಿರುವದ್ದರಿಂದ ಯಿದಕ್ಕೆ ಶೇಕಡಾ 1ಕ್ಕೆ ತಿಂಗಳು 1ಕ್ಕೆ 1 ರೂಪಾಯಿನಂತೆ ಬಡ್ಡೀ ಕೊಡಿಸಿ ಅಸಲ್ ಬಿಡ್ಡೀ ಸಹಾ ನಡದ ದಿವಸಕ್ಕೆ ಪಾವತೀ ಮಾಡುವದಲ್ಲದೆ ಯಿದಕ್ಕಾಗಿ ಜೋಳದಾಳು ಪೇಟೇಲಿ ತಾನು ವಾಸವಾಗಿರುವ ಹಂಚಿನಮನೆ ಖಣದ ಹಿತ್ತಲ್ ಕಾಪಿತೋಟ ತೋಟದ ಗದ್ದೆ ಸಹಾ ತೋರಡವುಮಾಡಿ ಯಿರುವಂತೆ.
4	207	12–7–80	26–8–80	ಬೆಳವಾಡಿ ಸಣ್ಣ ಸುಬ್ಬಣನಮಗ ಅಪ್ಪಣ್ಣಯ್ಯ	ಬೆಳವಾಡಿ ಮಣೇಗಾರ ರಾಮಣ್ಣ	ಬೆಳವಾಡಿ ಕೆರೆ ಕೆಳಗಣ ಮಲಕುಪ್ಪ ಹಾಳು ಯಂಬ ತೆಂಗಿನ ತೋಟವು ವಂದುನೂರು ರೂಪಾಯಿಗೆ ಮೂರುವರುಷ ಭೋಗ್ಯ.
5	59 1881—82	19–5–81	27–5–81	ಹಾಲೇನಹಳ್ಳಿಲೀರುವ ಅಬ್ದುಲ್ ಖಾನ್ ಸಾಬಿಮಗ ಗುಲಾಂ ಮೊಹದ್ದೀನ್ ಖಾ	ಬಿಳೇಹಳ್ಳಿಲ್ಲಿರುವ ಆದಂಸಾಬಿಮಗ ಸೈಯದ್ ಅಬ್ಬಾಸಾಬಿ	70 ರೂಪಾಯಿಗೆ ತಿಂಗಳು 1ಕ್ಕೆ ಶ॥1ಕ್ಕೆ $1\frac{1}{2}$ ರೂಪಾಯಿನಂತೆ ಬಡ್ಡಿಶೇರಿಸಿ ಅಸಲ್ ಬಡ್ಡಿಸಹ ವಂದೂವರೆ ವರುಷದಲ್ಲಿ ಪಾವತೀ ಮಾಡುವದಲ್ಲದೆ ಇದಕ್ಕಾಗಿ ಬಿಳೀಹಳ್ಳಿ ದಾಖಲೇ ಹಾಳೇನಹಳ್ಳಿಲಿರುವ ಹೆಂಚಿನ ಮನೆ ಜಮೀನು 1 ಸಹ ಆಧಾರಮೂಡಿರುವಂತೆ.

ಅಂಕಿತ ನಂಬರು.	ದಸ್ತಾವೇಜು ನಂಬರ್.	ದಸ್ತಾವೇಜು ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜು ಬರೆದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ದಸಾವೇಜಿನ ಸ್ವಭಾವ ಮತ್ತು ಕಿಮ್ಮತು.
6	79	10–4–81	16–6–81	ಸಕ್ಕರೇಪಟ್ಟಣದ ದೊಡ್ಡಬೀರನ ಮಗ ಮುದಿಬೀರ	ಸಕ್ಕರೆಪಟ್ಟಣದಲ್ಲಿರುವ ಕುರುಬರ ಕಾಡನ ಮಗ ಕುರುಡ	ಸಕ್ಕರೇ ಪಟ್ಟಣದಲ್ಲಿರುವ ಹೆಂಚಿನ ಮನೆ 30 ರೂಪಾಯಿಗೆ ಕ್ರಯ.
7	235	14–10–81	15–10–81	ಚಿಕ್ಕಮಗಳೂರು ಪೋಟರ ಪೇಟೇಲಿರುವ ಶಿವಮೊಗ್ಗಾ ರುಪ್ಪುಲಿಂಗ್ಯಾನೆ ಹರಿಲಿಂಗಮಗ ಮೋಹನಲಿಂಗ.	ಪೋಟರ್ ಪೇಟೇಲಿರುವ ಮಲಾರ ಲಿಂಗನ ಮಗ ಶಿವಮೊಗ್ಗಾ ಹರಿಲಿಂಗಯ್ಯ	100 ರೂಪಾಯಿಗೆ ಶೇಕಡಾ ಸಾಲೀಯಾನ 12 ರೂಪಾಯಿನಂತೆ ಯೇರುವ ಬಡ್ಡೀ ಮತ್ತು ಅಸಲ ಸಹಾ ಈ ಲಾಗಾಯತು 3 ವರುಷದಲ್ಲಿ ಪಾವತೀ ಮಾಡುವದಲ್ಲದೆ ಇದಕ್ಕಾಗಿ ಪೋಟರ ಪೇಟೇಲಿರುವ ಹುಲಿನಮನೆ ತೋರಡವು ಮಾಡಿರುವದಾಗಿ.
8	245	19–10–81	27–10–81	ಗಾಳೀಪೂಜೆ ಹೋಲಿಗೆರೆಯಲ್ಲಿರುವ ಮಲ್ಲನಮಗ ಮೂಳ	ಗೋಣಕಲ್ ಗ್ರಾಮದ ವೀರೇಗೌಡನ ಮಗ ಚನ್ನಬಸವೆಗೌಡ	100 ರೂಪಾಯಿಗೆ ಶೇಕಡಾ 1ಕ್ಕೆ ತಿಂಗಳು 1ಕ್ಕೆ 1 ರೂಪಾಯಿ ಪ್ರಕಾರ ನಡದು ದಿವಸದ ಬಡ್ಡೀ ಅಂಶಕ್ಕಾಗಿ ಗಾಳೀಪೂಜೆ ಗ್ರಾಮದ ತರೀ ಜಮೀನು 4 ಮನೆ ಹಿತ್ತಲ್ ವಗೈರೆ ಭೋಗ್ಯಾದಿಗೆ ಕೊಟ್ಟಿರುವದಾಗಿ.
9	275	18–11–81	21–11–81	ದೇವರಾಯ ಪೇಟೇಲಿರುವ ಶಿವಮೊಗ್ಗಾ ಜಜಪ್ಪನಮಗವರ್ತಾಂಡಪ್ಪ	ದೇವರಾಯಪೇಟೇಲಿರುವ ವೈಶ್ಯರ ಮೈಸೂರು ನಿರ್ವಾಣಪ್ಪನ ಮಗ ಅಣಪ್ಪ	ತಗರಿಹಂಕಲ್ ಗ್ರಾಮದ ಸಟ್ಟಹಳ್ಳೀ ಹಳಿಯೂರೆಂಬ ಬೋಂದುತೋಟವು ವಂದುನೂರು ರೂಪಾಯಿಗೆ ಕ್ರಯ.
10	ತಿರಸ್ಕಾರ 5 1881—81	22—9—79	27—7—80	ಬಸವನಹಳ್ಳೀಲಿರುವ ಹರಿಹರದ ಬುರಲಿ ಕೃಷ್ಣಪ್ಪನಾಯಕರಮಗ ರಂಗರಾವ್ 1 ಮತ್ತಾವಾರದ ಜೈನರ ಸಣಪಾಯಶೆಟ್ಟಿ 1 ಈ 2 ಜನರು	ಯಮಸಂದೀಲಿರುವ ಪಟೇಲ್ ದ್ಯಾವೇಗೌಡನ ಮಗ ಹೊಟ್ಟೇಗೌಡ	ತಿಪ್ಪಾಜಿನಹಳ್ಳಿ ಗ್ರಾಮದಲ್ಲಿ ಇರುವ ಹೊಂಬಳದಹಟ್ಟಿ ಕೂಲ್ ಕಾಫೀ ತೋಟ ಮತ್ತು ತೊಗರಿ ಹಂಕಲ್ ಗ್ರಾಮದಲ್ಲಿ ಸದರೀ ತೋಟದ ವತ್ತಿನಲ್ಲಿರುವಬು 6 ಳದಹಟ್ಟಿ ತೋಟ ಸಹ 4,000 ರೂಪಾಯಿಗಳಿಗೆ ಕ್ರಯ.
11	3 1881—82	19—7—80	14—5—81	ಮೂರುಮನೆ ಹಳ್ಳೀಲಿರುವ ರಾಮಾಜಟ್ಟಿ 1 ಇವನ ತಮ್ಮ ಚೌಡಾಜಟ್ಟಿ ಸಹಾ	ಚಿಕ್ಕಮಗಳೂರು ಕೋಟೇ ಬಸವೇಗೌಡರ ಮಗ ಶಿವಣ್ಣಗೌಡ	ನೂರು ಅರವತ್ತು ರೂಪಾಯಿ ಐದಾಣಿ ನಾಲ್ಕುಪೈಗೆ ತಿಂಗಳು 1ಕ್ಕೆ ಶೇಕಡಾ 1 ರೂಪಾಯಿನಂತೆ ಬಡ್ಡೀ ಕೂಡಿಸಿ ಅಸಲ್ ಬಡ್ಡೀ ಸಹಾ ವಂದು ವರುಷದಲ್ಲಿ ಸಲ್ಲಿಸುವದಲ್ಲದೆ ಇದಕ್ಕಾಗಿ ಚಿಕ್ಕಮಗಳೂರಲ್ಲಿ ಇರುವ ತರೀ ಜಮೀನುಗಳು 2, ಮೂರುಮನೆ ಹಳ್ಳೀಲಿರುವ ಮನೆ ಸಹ ಆಧಾರಮಾಡಿ ಯಿರುವದಾಗಿ.

ಜೆ. ಎಫ್. ಮೈಕಲ್‌ಜಾನ್,
ರಿಜಿಸ್ಟ್ರಾರ್.

ಕಡೂರು ಡಿಸ್ಟ್ರಿಕ್ಟು ಸಬಾರ್ಡಿನೇಟ್ ಜಡ್ಜೀಯವರ ಕೋರ್ಟಿನಲ್ಲಿ.

1884ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 4.

ಮೃತಪಟ್ಟ ಬೇಲೂರ ತಾಲ್ಲೂಕು ನಡುಪಾಲ ಫಿರಕಾ ಶನಿವಾರ ಸಂತೆ ಹೋಬಳಿ ಕಳಸೆರಿ ಗ್ರಾಮದ ಚನ್ನೇಗೌಡಯಾನೆ ಬಿಳೇಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ಚನ್ನಮ್ಮ ಹೆಗ್ಗಡತಿಯು, ಮೃತಪಟ್ಟ ಬಿಳೇಗವುಡನು ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಕಳಸೆರಿ ಚನ್ನಮ್ಮನು ಕಳಸೆರಿ ವಾಸಸ್ಥನಾಗಿ ಮೃತಪಟ್ಟ ಬಿಳೇಗವುಡನ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಚನ್ನಮ್ಮನ ಅರ್ಜೀಯನ್ನು 1884ನೇ ಇಸವೀ ಫಿಬ್ರವರೀ ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಿಳೇಗವುಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿಧೆ.

1884ನೇ ಇಸವಿ ಜನವರೀ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಬಿ. ತಿರುಮಲಾಚಾರ್,
ಸಬ್ ಜಡ್ಜ.

ಆನೇಕಪ್ಪಿನ ಕೆಲಸಕ್ಕೆ ಜಮ್ಮಾದಾರ್.

ತಾರೀಖು 15ನೇ ಜನವರೀ 1884.

1884ನೇ ಇಸವಿ ಮೇ 1ನೇ ತಾರೀಖು ಲಾಗಾಯತು ಆನೆಗಳನ್ನು ಹಿಡಿಯುವದರಲ್ಲಿ ಮೊಹೆತ್‌ದಾರನಾದ ಒಬ್ಬ ಲಾಯಖ್ ಜಮೆದಾರ್ ಇಸಂ ಒಂದು (ಮುಸಲ್ಮಾನರಾಗಿದ್ದರೆ ವಳ್ಳೇದು) ಬೇಕಾಗಿರುತ್ತೆ. ಕನ್ನಡ ಭಾಷೇಯಲ್ಲಿ ಸಂಪೂರ್ಣವಾಗಿ ವ್ಯಾವಹಾರಿಕ ಜ್ಞಾನವು ಮುಖ್ಯವಾಗಿರುತ್ತೆ. ಕಾಡುಗಳಲ್ಲಿ ವಾಸಮಾಡುವದಕ್ಕೆ ವಾಡಿಕೆಯಾದ ದೃಢವಾದ ದೇಹಸ್ಥಿತಿಯುಳ್ಳವನು ವಿನಾ ಇತರರು ದರಖಾಸ್ತು ಮಾಡಬೇಕಾದ್ದಿಲ್ಲವು.

ದರಖಾಸ್ತುದಾರರ ಲಾಯಖೀಗಳು, ಪೂರ್ವದ ಯೋಗ್ಯತೆಗಳು, ಖಾಯಿಷ್ ಮಾಡುವ ಸಂಬಳಗಳ ದರ, ವಯಸ್ಸು ವಗೈರೇಯನ್ನು ನಮೂದಿಸಿ ಅವರ ಸರಟಿಫಿಕೇಟುಗಳನ್ನು ಮೈಸೂರು ಫಾರೆಸ್ಟು ವ ಫಾರಂಗಳ ಸೂಪರ್ಇಂಟೆಂಡೆಂಟರವರಿಗೆ ಕೂಡ್ಲೆ ಕಳುಹಿಸತಕ್ಕದ್ದು.

ಹಳೇ ಆನೆಗಳ ಸರಪಣಿಗಳು.

ತಾರೀಖು 15ನೇ ಜನವರೀ 1884.

ಹೊಸ ಸರಪಣಿಗಳ ಅರ್ಜ್ ಬಾಜಾರ್ ನಿರಖಿಗೆ ಬಹಳ ಕಡಮೆಯಾದ ದರಗಳ ಪ್ರಕಾರ, ಆಕಾರಗಳ ಬಾಬತು ಉಪಯೋಗಿಸಲ್ಪಟ್ಟ ಆನೆಯ ಸರಪಣಿಗಳನ್ನು ಮೈಸೂರಲ್ಲಿ ಒದಗಿಸುವ ಬಗ್ಯೆ ದರಖಾಸ್ತುಗಳನ್ನು ಕೊಡಬಹುದೆಂದು ಇದರಡಿ ರುಜು ಮಾಡಿರುವವರಿಂದ ಕೋರಲ್ಪಡುತ್ತೆ. ಪ್ರತಿ ದರಖಾಸ್ತಿನಲ್ಲಿಯೂ, ಸದರೀಯವರ ವಶದಲ್ಲಿರುವ ಸರಪಣಿಗಳ ಸಂಖ್ಯೆ ಮತ್ತು ಆಕೃತಿ, ವಿಸಿಷ್ಟ ಸರಪಣಿಗಳ ತೂಕ, ಸದರೀ ಸರಪಣಿಗಳನ್ನು ಯಾವ ದರಕ್ಕೆ ಒದಗಿಸುವಂತೆ ಹೇಳುತ್ತಾರೋ ಆ ಬಾಬತು ದರ ಯಿವುಗಳನ್ನು ನಮೂದಿಸತಕ್ಕದ್ದು.

ವಳ್ಳೆಯ ಸ್ಥಿತಿಯಲ್ಲಿಲ್ಲದ ಯಾವ ಸರಪಣಿಗಳಾಗಲಿ ತಿರಸ್ಕರಿಸಲ್ಪಡುವವು.

ಸಿ. ಇ. ಯಂ. ರಸ್ಸಲ್,
ಮೈಸೂರು ಡಿ|| ಫಾರೆಸ್ಟು ವ ಗವರ್ನಮೆಂಟ್
ಫಾರಂಗಳ ಸೂಪರ್ಇಂಟೆಂಡೆಂಟ್.

76

ತುಮಕೂರು ಡಿಸ್ಟ್ರಿಕ್ಟು.

ತುಮಕೂರು ಡಿಸ್ಟ್ರಿಕ್ಟು ಸಬಾರ್ಡಿನೇಟ ಜಡ್ಜೀಯವರ ಕೋರ್ಟಿನಲ್ಲಿ.

1884ನೇ ಇಸವೀ ಅರ್ಜೀ ನಂಬರ6—1.

ಮೃತಪಟ್ಟ ವೆಂಕಟರಾಮಯ್ಯ—ರಾಮಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ನಾರಣಯ್ಯ—ರಾಮಚಂದ್ರಯ್ಯ, ಮೃತಪಟ್ಟ ಸದರೀ ವೆಂಕಟರಾಮಯ್ಯ—ರಾಮಯ್ಯನಿಗೆ ವೆಂಕಟರಾಮಯ್ಯ ತಂದೆ ಮತ್ತು ರಾಮಯ್ಯನು ಸಹೋದರ ಆಗಬೇಕೆಂಬ ಹಕ್ಕುದಾರೀ ಮೇಲೆ ತುಮಕೂರು ತಾ|| ಪೊತ್ತಗಾನಹಳ್ಳಿ ಸ್ಥಳದ ನಾರಣಯ್ಯ ರಾಮಚಂದ್ರಯ್ಯನು ಡಿಟೋ ಗ್ರಾಮ ವಾಸಸ್ಥನಾಗಿ ಮೃತಪಟ್ಟ ವೆಂಕಟರಾಮಯ್ಯ—ರಾಮಯ್ಯನ ಜಿಂದಗೀ ಬಗ್ಯಾಗಿ ಬರತಕ್ಕ 1980 ರೂಪಾಯಿನ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಾರಣಯ್ಯ ರಾಮಚಂದ್ರಯ್ಯನ ಅರ್ಜೀಯನ್ನು 1884ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 29ರಲ್ಲು ಕೇಳಿ ಸರಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕರಾಮಯ್ಯ ರಾಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿಥೆ.

1884ನೇ ಇಸವಿ ಜನವರೀ ತಿಂಗಳು 29ನೇ ತಾರೀಖಿನಲ್ಲಿ ಕೋರ್ಟು ಮೊಹರ ನಮ್ಮ ದಸ್ತಖತ್ತೊಡನೆಕೊಡೋಣಾಗಿಥೆ.

ಸಿ. ಕ್ರೆಸ್,
ಸಬ ಜಡ್ಜ.

ತಪ್ಪು ದುರಸ್ತು.

1884ನೇ ಜನವರೀ 19–26ನೇ ತಾರೀಖಿನಮೈಸೂರು ಗೆಜಟನ 2ನೇ ಭಾಗದ 20—25ನೇ ಪುಟಗಳಲ್ಲಿ ಖಾಯಿಷ ಮಾಡಿರುವ ಶಿವಮೊಗ್ಗಾ ಡಿಸ್ಟ್ರಿಕ್ಟಿನ 4ನೇ ಜನವರೀ ಮರ್ಕುಂವುಳ್ಳ ಇಸ್ತಿಹಾರನಾಮೆಯ 2ನೇ ಪ್ಯಾರಾದಲ್ಲಿ "ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು" ಯೆಂಬದಕ್ಕೆ ಬದಲಾಗಿ "ತೆಗದುಕೊಳ್ಳಲ್ಪಡಲಾರದು" ಯಂತಾ ಓದಿಕೊಳ್ಳತಕ್ಕದ್ದು. ಮತ್ತು ಸದರೀ ಗೆಜಟನ 21—26ನೇ ಪುಟದಲ್ಲಿ ಖಾಯಿಷ ಮಾಡಲ್ಪಟ್ಟ ಅದೇ ಇಸ್ತಿಹಾರನಾಮೆಯ 12ನೇ ಪ್ಯಾರಾದಲ್ಲಿ "ಕೊಡಲ್ಪಡಬಹುದು" ಯಂಬದಕ್ಕೆ ಬದಲಾಗಿ "ಕೊಡಲ್ಪಡಕೂಡದು" ಯೆಂದು ಓದಿಕೊಳ್ಳತಕ್ಕದ್ದು.

1883ನೇ ಇಸವಿ ಡಿಶಂಬರ ತಿಂಗಳ ಕಾಲಸ್ಥಿತಿ ರಿಪೋರ್ಟು.

ಬೆಂಗಳೂರು ಡಿಸ್ಟ್ರಿಕ್ಟು.

ಮಳೆ.—ಹೆಡ ಕ್ವಾರಟರಗಳಲ್ಲಿ 2 ಅಂಗುಲವು, 35 ಸೆಂಟ್ಸ ಮಳೆ ಅಳೆಯಲ್ಪಟ್ಟಿತು.

ಫಸಲ.—ಬೆಳೆಯಲ್ಲಿರತಕ್ಕ ಫಸಲಗಳು ಒಳ್ಳೇ ಸ್ಥಿತಿಯಲ್ಲಿರುವದಾಗಿ ರಿಪೋರ್ಟಾಗಿರುತ್ತೆ. ಹಾರಕ, ಎಳ್ಳು ಮತ್ತು ಭತ್ತ, ಕೆಲವು ಸ್ಥಳಗಳಲ್ಲಿ ರಾಗಿ ಮತ್ತು ಹುರಳಿ ಕಟಾವಾದವು. ಯಾವ ಧಾನ್ಯವೂ ಪೇರಾವಾಗಲಿಲ್ಲ.

ಜನಾರೋಗ್ಯ—ಸಾಧಾರಣವಾಗಿ ಚನ್ನಾಗಿದೆ. ಖಾರ್ಕಾಹಳ್ಳಿ, ಕ್ಲೋಸ್‌ಪೇಟೆ ಮತ್ತು ಮಾಗಡಿ ತಾಲ್ಲೂಕುಗಳಲ್ಲಿ ಜ್ವರವು ವ್ಯಾಪಿಸಿತ್ತು.

ಜಾನವಾರಗಳು.—ಕೆಲವು ಭಾಗಗಳಲ್ಲಿ ಗೋಮಾರಿ ರೋಗವು ಸ್ವಲ್ಪ ಮಟ್ಟಿಗೆ ವುಂಟಾಗಿತ್ತು. ಯೆಲ್ಲಾ ಕಾರಣಗಳಿಂದಲೂ 1,907 ಕಾಲ್ನಡೆಗಳು ಮೃತಪಟ್ಟವು, ಇವುಗಳ ಪೈಕೀ 195 ದುಷ್ಟ ಮೃಗಗಳಿಂದ ಕೊಲ್ಲಲ್ಪಟ್ಟವು.

ಜನಮರಣ— ನವಂಬರ ಮಾಹೆಯಲ್ಲಿ 689 ಮಂದಿಯೂ ಅದರ ಹಿಂದಿನ ತಿಂಗಳಲ್ಲಿ 607 ಮಂದಿಯೂ ಮೃತಪಟ್ಟರು. ಹೊಕಾಬಿಲಾ 82 ಜಾಸ್ತಿ.

ಜಮೀನುಗಳು—815—12—9 ರೂಪಾಯಿಗಳ ಕಂದಾಯವುಳ್ಳ ಜಮೀನುಗಳು ಸಾಗುವಳಿಗೆ ತೆಗದುಕೊಳ್ಳಲ್ಪಟ್ಟವು. ರಾಜೀನಾಮೆ ಯಾವದು ಇಲ್ಲ.

ಎ. ಹೆಚ್. ಮೆಕ್ಕಿಂಟೈರ,
ಡೆಪ್ಯುಟಿ ಕಮ್ಮಿಷನರ.

ಸರ್ 1883ನೇ ಇಸವಿ ನವೆಂಬರ್ ಮಾಹೇ ಬಾಬತು ಕಾಲಸ್ಥಿತೀ ರಿಪೋರ್ಟು.

ತುಮಕೂರು ಡಿಸ್ಟ್ರಿಕ್ಟು.

ಮಳೆ.—ಮಳೆಯು ತಿಂಗಳ ಆದಿಭಾಗದಲ್ಲಿ ಸ್ವಲ್ಪಹೆಚ್ಚು ಕಡಿಮೆ ಯಲ್ಲಾ ತಾಲ್ಲೂಕುಗಳಲ್ಲಿಯೂ ಸಾಧಾರಣವಾಗಿ ಬಿದ್ದಿರುತ್ತೆ, ಮತ್ತು ತಾಲ್ಲೂಕು ಹೆಡ್‌ಕ್ವಾರ್ಟರಗಳಲ್ಲಿ ಈ ಕೆಳಗೆ ಕಂಡ ಮೇರೆ ಮಳೆ ಪರಿಮಾಣವು ಅಳೆಯಲ್ಪಟ್ಟಿತ್ತು.

ತಾಲ್ಲೂಕು.	ಇಂ.	ಸೆಂ.	ತಾಲ್ಲೂಕು.	ಇಂ.	ಸೆಂ.
ತುಮಕೂರು	2	4	ತಿಪಟೂರು	1	65
ಮದ್ದಗಿರಿ	0	50	ಪಾವಗಡ	0	40
ಚಿಕ್ಕನಾಯಕನಹಳ್ಳಿ	2	10	ಚಿತ್ರದುರ್ಗ	4	65
ಸೀರಾ	3	0	ಚಳ್ಳಕೆರೆ	1	30
ಗುಬ್ಬಿ	2	60	ಹೊಳಲ್‌ಕೆರೆ	2	30
			ಹಿರಿಯೂರು	2	87½

ಹವಾ—ಬೆಳಗಿನ ಹೊತ್ತು ಸಾಯಂಕಾಲದ ಹೊತ್ತು ಛಳಿಯಾಗಿತ್ತು.

ಫಸಲ್‌ಗಳು—ಭತ್ತ, ಕಡಲೆ, ಜೋಳ, ಕೊತ್ತಂಬರಿ, ಮೆಂತ್ಯ, ಮತ್ತು ಕಬ್ಬು, ವಗೈರೇಗಳು, ಕೆಲವುಭಾಗಗಳಲ್ಲಿ ಪೈರಾದವು; ರಾಗಿ, ಪುಣಜೆ ಭತ್ತ, ಸಾಮೆ, ನವಣೆ, ಬರಗು, ಹಾರಕ, ಮೆಣಸಿನಕಾಯಿ, ಹರಳು, ಅಡಿಕೆ, ತೆಂಗಿನಕಾಯಿ, ಕೊರಲೆ, ಹುದ್ದು ಮತ್ತು ಹೆಸರು, ಸಜ್ಜೆ, ಅಲಸಂದಿ ಮತ್ತು ಹುಚ್ಚೆಳ್ಳು, ಗೋಧಿ ಯಲ್ಲಾ ತಾಲ್ಲೂಕುಗಳಲ್ಲಿಯೂ ಕಟಾವಾದವು. ಸದರೀ ಮಾಹೆಯಲ್ಲಿ ಫಸಲುಗಳ ಸ್ಥಿತಿ ಚೆನ್ನಾಗಿತ್ತು.

ಜನಾರೋಗ್ಯ—ತುಮಕೂರು, ಮದ್ದಗಿರಿ ಮತ್ತು ಚಿತ್ರದುರ್ಗ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಜ್ವರವು ವ್ಯಾಪಿಸಿತ್ತು. ಚಳ್ಳಕೆರೆ ತಾಲ್ಲೂಕಿನ ಪರಸುರಾಮಪುರ ಸಮ್ಮತಿನಲ್ಲಿ ಸಿಡಬು ವ್ಯಾಪಿಸಿತ್ತು. ಇತರ ಸ್ಥಳಗಳಲ್ಲೂ ಆರೋಗ್ಯ ಚೆನ್ನಾಗಿತ್ತು. ಯೆಲ್ಲಾ ಕಾರಣಗಳಿಂದಲೂ ಅಕ್ಟೋಬರ ಮಾಹೆಯಲ್ಲಿ 713 ಮಂದಿಯೂ, ಸರ್ 1883ನೇ ಇಸವಿ ಸೆಪ್ಟಂಬರ್‌ನಲ್ಲಿ 706 ಮಂದಿಯೂ ಮೃತಪಟ್ಟರು.

ಜಾನವಾರ್—ಮದ್ದಗಿರಿ, ಚಳ್ಳಕೆರೆ, ಚಿತ್ರದುರ್ಗ, ಹಿರಿಯೂರು, ಪಾವಗಡ ಮತ್ತು ಸೀರಾ ತಾಲ್ಲೂಕುಗಳಲ್ಲಿ ಕಾಲುಬಾಯಿಜ್ವರವೂ ಮತ್ತು ಚಪ್ಪೆರೋಗವು ಇನ್ನು ವ್ಯಾಪಿಸಿದೆ. ಜಾನವಾರ್‌ಗಳಲ್ಲಿ ಉಂಟಾದ ಮರಣ ಸಂಖ್ಯೆಗಳು ಈ ಕೆಳಗೆ ಕಂಡಮೇರಿಗೆ ತೋರಿಸಿದೆ:—

ಹಸುಗಳು	177	ಕತ್ತೆಗಳು	5
ಎತ್ತುಗಳು	173	ಕುದುರೆಗಳು	11
ಎಮ್ಮೇಕೋಣಗಳು	176		
ಕುರೀ ಮತ್ತು ಮೇಕೆಗಳು	1,972	ಜುಮ್ಲಾ	2,514.

ಜಮೀನ್‌ಗಳು.—5,893 ರೂಪಾಯಿಗಳ ಕಂದಾಯವುಳ್ಳ ಜಮೀನ್‌ಗಳು ಹೊಸದಾಗಿ ಸಾಗುವಳಿಗೆ ತಗದುಕೊಳ್ಳಲ್ಪಟ್ಟವು, ಮತ್ತು ರಾಜಿನಾಮೆ ಯಾವದು ಇಲ್ಲ.

ದಾರಣೆವಾಸಿ—ಮುಖ್ಯವಾದ ಆಹಾರ ಜಿನಿಸೀಗಳು ಇದರಡೀ ಕಂಡ ದಾರಣೇ ಪ್ರಕಾರ ಮಾರಲ್ಪಟ್ಟಿತು:—

	ಶೇರು.	ಚಟಾಕು.		ಶೇರು.	ಚಟಾಕು.	
ಅಕ್ಕಿ, ಅವ್ವಲ್ ತರಹಾ	12	0	ಲಾಗಾಯತು	15	0	ವರಿಗೆ
ಡಿಟೋ, ದುಯ್ಯಂ ತರಹಾ	14	0	,,	16	8	,,
ರಾಗಿ	40	0	,,	55	0	,,
ಅವರೆ	25	0	,,	42	0	,,
ಹುರಳಿ	38	0	,,	50	0	,,
ಗೋಧಿ, ಅವ್ವಲ್ ತರಹಾ	11	0	,,	16	0	,,
ಡಿಟೋ, ದುಯ್ಯಂ ತರಹಾ	10	0	,,	22	0	,,

ಮಹಮ್ಮದಲ್ಲಿ, ಕೆ. ಬಿ.,
ಆಫಿಷಿಯೇಟಿಂಗ ಡೆಪ್ಯುಟಿ ಕಮ್ಮಿಷನರ.

ಮೈಸೂರು ಗೆಜೆಟ್, ಚಂದಾ ದರ ವಗೈರೆ.

	ಚಂದಾ. ರೂ. ಆ.		ಟಪ್ಪಾಲ್ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ.	
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛಷ್ ಮಾಹೆ ಯಾ ಕ್ವಾರಟರಿಗೆ	ದಾಮೂಷಾಯಿ ಪ್ರಕಾರ ದರಗಳು.			

ಶಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ ಬಗ್ಯೆ ನೋಟೀಸುಗಳು;—

	ರೂ.	ಆ.
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ) ..	2	8
ಯರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ	1	4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷರ್ಷ ಅನುಸರಿಸಿ, ದಿವಾಳೀ ಅಪ್ಲಿಕೇಷನ್ಗಳ ಬಗ್ಯೆನೋಟೀಸ್‌ಗಳಿಗೆ:—

ಕಡೂರು ಡಿಸ್ಟ್ರಿಕ್ಟು.

ಮೊದಲನೇ ದಫಾ	5	0
ಯರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	2	8

ಶಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷರ್ಷ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಡ್ಯುಪ್ಲಿಕೇಟ ಕಾಫೀಪಟ್ಟೀ ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫೀಸರಗಳು ಕೊಡುವ ನೋಟೀಸ್‌ಗಳಿಗೆ:—

ಮೊದಲನೇ ಸಲಕ್ಕೆ ..	ಪುಟ 1ಕ್ಕೆ ..	10	0
ಯರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	" ..	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್‌ಮಾಡಲ್ಪಡುತ್ತೆ;—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ ..	0	8
ಯರಡನೇ ದಫಾ ಡಿಟೋ	ಡಿಟೋ ..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ	.. ..	0	4

ಬಮೋಜಿಬ್ ಹುಕ್ಕುಂ,

ಹೆಚ್. ಹಡರ್ಸ್ನ,

ಮೈ. ಗೆ. ಕಂಪೈಲರ್.

ಗವರ್ನಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನಮೆಂಟ್ ಆಫೀಸರಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡ್ಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಶೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡು ಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 4—8—0; ಎಂಟು ಔನ್ಸ್‌ವುಳ್ಳ ಡಬಿಗೆ ರೂ. 8—8—0; ಒಂದು ಪೌಂಡ್ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಇದರಡೀ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿ ಒಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌಂಡ್ ವುಳ್ಳ ಡಬ್ಬಿಗೆ 20 ರೂಪಾಯಿ. ಈ ಔಷಧವು, ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯನ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬೀಗೆ ಎಂಟುಆಣೆ ಟಪ್ಪಾಲ್ ಹಾಸಲೂ, ಒಂದು ಪೌಂಡ್ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

Mysore Government Press, Bangalore.—1884.

ಮೈಸೂರ ಗೆಜೆಟ್.

ನಂ. 6 ಸರ್ಕಾರದಿಂದ ಪ್ರಾಯಿಷ್ ಆದ್ದು. ಸ್ನ 1884.

ಬೆಂಗಳೂರು, ಶನಿವಾರ, ಫೆಬ್ರುವರೀ ತಾ॥ 9, ಸ್ನ 1884.

☞ ಈ ಭಾಗವನ್ನು ಪ್ರತ್ಯೇಕ ಸ್ವೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ರಿಟೆಂಡೆಂಟರು, ಕಾಂಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ್ ವರ್ಕ್ಸ್ ಆಫೀಸರಗಳು, ಮಿಲಿಟೇರಿ ಸಿಕ್ರೆಟೆರಿಯವರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ರಿಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲಾ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲಾ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 10ನೇ ಜನವರೀ 1884.

ನಂ. 297.—ಕಳೆದ ಫೆಬ್ರುವರೀ 6ನೇ ಮರ್ಕುಂ 39ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಪ್ರಾಯಿಷ್ ಮಾಡಲ್ಪಟ್ಟ ತಖ್ತೇ ವಿಷಯದಲ್ಲಿ ಸದರೀ ತಖ್ತೇಯ 70ನೇ ನಂಬರ್ ಬಾಬತು ಯಳದಬಾಗಿ ಗ್ರಾಮವನ್ನ ಗಿರಿಯನಹಳ್ಳಿಗೆ ಸೇರಿಸಿ ಯಿದ್ದದ್ದು, ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 21ನೇ ಜನವರೀ 1884.

ನಂ. 304.—ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಟೇಷನಿನಲ್ಲಿಯೂ, ಮೈಸೂರು ಷಹರಿನಲ್ಲಿಯೂ, ಬೆಂಗಳೂರು ಮತ್ತು ತುಮಕೂರು, ಕೋಲಾರ, ಮೈಸೂರು ಈ ಡಿಸ್ಟ್ರಿಕ್ಟುಗಳಿಗೂ ಮತ್ತು ಕಡೂರು ಡಿಸ್ಟ್ರಿಕ್ಟಿನ ಹಾಸನದ ಸಬ್ ಡಿವೀಜನ್ನಿಗೆ ಸಹಾ ಶೇರಿದ 46 ತಾಲ್ಲೂಕುಗಳಲ್ಲಿಯೂ, ಷರಾಬ್ ತಯೂರಿ ವ ಬಟ್ಟು ಬಿಕರೀ ಮಾಡುವ ಬಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತುಗಳು ಕೊಡಬಹುದೆಂದು ಇದರಿಂದ ತಿಳಿಸೋಣಾಗುತ್ತೆ.

2. ಮೇಲ್ಕಂಡ ಡಿಸ್ಟ್ರಿಕ್ಟುಗಳಿಗೂ, ಸಬ್ ಡಿವಿಜನ್ನಿಗೂ, ದೀವಾನರವರ 1882ನೇ ಇಸವಿ ನವಂಬರ 13ನೇ ಮರ್ಕುಂ 129ನೇ ನಂಬರು, ಅದೇ ಇಸವಿ ನವಂಬರ 21ನೇ ಮರ್ಕುಂ 131ನೇ ನಂಬರು, ಅದೇ ಇಸವೀ ನವಂಬರ 25ನೇ ಮರ್ಕುಂ 136—137—138ನೇ ನಂಬರು, ಅಧೇ ಇಸವಿ ಡಿಶಂಬರ 9ನೇ ಮರ್ಕುಂ 147—148ನೇ ನಂಬರು, ಅದೇ ಇಸವಿ ಡಿಶಂಬರ 21ನೇ ಮರ್ಕುಂ 165ನೇ ನಂಬರು, ಅದೇ ಇಸವಿ ಡಿಶಂಬರ 22ನೇ ಮರ್ಕುಂ 166ನೇ ನಂಬರು, ಅದೇ ಇಸವಿ ಡಿಶಂಬರ 23ನೇ ಮರ್ಕುಂ 183ನೇ ನಂಬರು, 1883ನೇ ಇಸವಿ ಜನವರೀ 4ನೇ ಮರ್ಕುಂ 1—2—3ನೇ ನಂಬರು, ಮತ್ತು ಅದೇ ಇಸವಿ ನವಂಬರು 16ನೇ ಮರ್ಕುಂ 274ನೇ ನಂಬರು, ಈ ಇಸ್ತಿಹಾರ್‌ನಾಮೆಗಳಿಂದ ಪರಿಷ್ಕರಿಸಲ್ಪಟ್ಟ ಪ್ರಕಾರ ಇದರಡೀ ಕಂಡ ತಾಲ್ಲೂಕುಗಳು ಶೇರಿರುತ್ತವೆ.

ಮೈಸೂರು ಡಿಸ್ಟ್ರಿಕ್ಟು.	ಬೆಂಗಳೂರು ಡಿಸ್ಟ್ರಿಕ್ಟು.	ಕೋಲಾರ ಡಿಸ್ಟ್ರಿಕ್ಟು.	ತುಮಕೂರು ಡಿಸ್ಟ್ರಿಕ್ಟು.	ಕಡೂರು ಡಿಸ್ಟ್ರಿಕ್ಟಿನ ಪೈಕೀ ಹಾಸನದ ಸಬ್ ಡಿವೀಜನ್.
1 ಮೈಸೂರು	1 ಬೆಂಗಳೂರು	1 ಕೋಲಾರ	1 ತುಮಕೂರು	1 ಹಾಸನ
2 ಯಡತೊರೆ	2 ಕ್ಲೋಸೇಪೇಟೆ, ಚನ್ನಪಟ್ಣ ಡೆ|| ಅಮಲ್ದಾರ್ರ ಚಾರ್ಜ್ ದೇಖೀಲ್	2 ಚಿಕ್ಕಬಳ್ಳಾಪುರ, ದೇವನಹಳ್ಳಿ ಡೆ|| ಅಮಲ್ದಾರ್ರ ಚಾರ್ಜ್ ದೇಖೀಲ್	2 ಗುಬ್ಬಿ	2 ಬೇಲೂರು
3 ಹುಣಸೂರು	3 ನೆಲಮಂಗಲ	3 ಶಿಡ್ಲಘಟ್ಟ	3 ಮದ್ದಗಿರಿ, ಕೊರಟಗೆರೆ ಡೆ|| ಅಮಲ್ದಾರ್ರ ಚಾರ್ಜ್ ದೇಖೀಲ್	3 ಮಂಜರಾಬಾದು
4 ನಂಜನಗೂಡು	4 ದೊಡ್ಡಬಳ್ಳಾಪುರ	4 ಬವರಿಂಗ್‌ಪೇಟೆ, ಮಾಲೂರು ಡೆ|| ಅಮಲ್ದಾರ್ರ ತರ್ಫ್ ದೇಖೀಲ್	4 ತಿಪಟೂರು, ತುರ್ವೇಕೆರೆ ಡೆ|| ಅಮಲ್ದಾರ್ರ ಚಾರ್ಜ್ ದೇಖೀಲ್	4 ಅರಸೀಕೆರೆ
5 ಚಾಮರಾಜನಗರ	5 ಕಾನಕಾನಹಳ್ಳಿ	5 ಚಿಂತಾಮಣಿ, ಶ್ರೀನಿವಾಸಪುರದ ಡೆ|| ಅಮಲ್ದಾರ್ರ ಚಾರ್ಜ್ ದೇಖೀಲ್	5 ಚಿಕ್ಕನಾಯಕನಹಳ್ಳಿ, ಹುಳಿಯಾರ ಡೆ|| ಅಮಲ್ದಾರ್ರ ಚಾರ್ಜ್ ದೇಖೀಲ್	
6 ತಿರಂಕೊಡ್ಲು ನರಸೀಪುರ, ಮಳವಳ್ಳಿ ಡೆ|| ಅಮಲ್ದಾರ್ರ ಚಾರ್ಜ್ ಸಹ	6 ಅನೇಕಲ್ಲು	6 ಬಾಗೇಪಲ್ಲಿ, ಗುಡಿಬಂಡೆ ಡೆ|| ಅಮಲ್ದಾರ್ರ ಚಾರ್ಜ್ ದೇಖೀಲ್	6 ಶಿರಾ	
7 ಹೆಗ್ಗಡದೇವನ ಕೋಟೆ	7 ಕುಣಿಗಲು	7 ಗೋರಿಬಿದನೂರು	7 ಪಾವಗಡ	
8 ಗುಂಡ್ಲು ಪೇಟೆ	8 ಮಾಗಡಿ	8 ಮುಳಬಾಗಲು	8 ಚಿತ್ರದುರ್ಗ, ಜಗಲೂರು ಡೆ|| ಅಮಲ್ದಾರ್ರ ಚಾರ್ಜ್ ದೇಖೀಲ್	
9 ಹೊಳೇನರಸೀಪುರ, ಅರಕಲಗೂಡು ಡೆ|| ಅಮಲ್ದಾರ್ರ ತರ್ಫ್ ಸಹ	9 ಹೊಸಕೋಟೆ		9 ಹಿರಿಯೂರು	
10 ಶ್ರೀರಂಗಪಟ್ಣ			10 ಹೊಳಲಕೆರೆ, ಹೊಸದುರ್ಗದ ಡೆ|| ಅಮಲ್ದಾರ್ರ ತರ್ಫ್ ಸಹ	
11 ಮಂಡ್ಯ, ಮದ್ದೂರು ಡೆ|| ಅಮಲ್ದಾರ್ರ ತರ್ಫ್ ಸಹ			11 ಚಳ್ಳಕೆರೆ, ಹಾನಗಲ್ಲು ಡೆ|| ಅಮಲ್ದಾರ್ರ ಚಾರ್ಜ್ ದೇಖೀಲ್	
12 ಅತ್ತಿಕುಪ್ಪೆ				
13 ಚನ್ನರಾಯಪಟ್ಣ				
14 ನಾಗಮಂಗಲ				

ಬೆಂಗಳೂರು ಶಿವಿಲ್ ವ ಮಿಲಿಟೇರಿ ಸ್ಟೇಷನಿನ ಕಂಟ್ರಾಕ್ಟು, ರೆಸಿಡೆಂಟರವರ ಅಪ್ಪಣೆ ಮೇರಿಗೆ ಈ ಇಸ್ತಿಹಾರಿನಲ್ಲಿ ದಾಖಲ್ಮಾಡಿರುತ್ತೆ.

3. ಈಗ ಯಾವ ಸ್ವಾತಂತ್ರ್ಯದ ಬಗ್ಯೆ ದರಖಾಸ್ತುಗಳು ಖಾಯಿಷ್ ಮಾಡಲ್ಪಡುತವೆಯೋ ಅಂಥಾ ಸ್ವಾತಂತ್ರ್ಯಗಳು, ಯಿದರ ಮುಂದೆ ವಿಧಿಸಲ್ಪಟ್ಟ ಷರತ್ತುಗಳಿಗೆ ವಳಪಟ್ಟು, 1884ನೇ ಇಸವಿ ಏಪ್ರಿಲ್ 1ನೇ ಮರ್ಕುಂ ಮೊದಲು 1887ನೇ ಇಸವಿ ಮಾರ್ಚಿ 31ನೇ ಮರ್ಕುಂ ವರಿಗೆ ಆಗುವ ಮೂರು ವರುಷಗಳ ಕಾಲಕ್ಕೆ ಕೊಡಲ್ಪಡುವದು. ಅಂಥಾ ಸ್ವಾತಂತ್ರ್ಯವು ಶೇಂದಿ, ಯೂರೋಪ್ ದೇಶದ ವೈನ್ ಯಂಬ ಸರಾಯಿ, ಸ್ಪಿರಿಟ್ ಸಾರಾಯಿ, ಯಾ ಬಿಯರು ಇವುಗಳ ತಯಾರಿ ಯಾ ಮಾರಾಟವನ್ನು ಅಡಗಿಸಿ ಕೊಂಡಿರುವದಿಲ್ಲ.

4. ದರಖಾಸ್ತುದಾರರು ತಮ್ಮ ದರಖಾಸ್ತುಗಳಲ್ಲಿ ಸಾಲಿಯಾನಾ ಸರಕಾರಕ್ಕೆ ಕಮ್ಮೀಮೊಬಲಗು ಯೆಷ್ಟು ಕೊಡುತ್ತೇವೆಂದು ಕರಾರ್ ಮಾಡುವರೋ ಅದನ್ನು ನಮೂದಿಸತಕ್ಕದ್ದು. ತೆರಿಗೆ ಮೊಬಲಗಿನ ರೂಪಾಯಿ 1ಕ್ಕೆ ವಂದಾಣೆಯಂತೆ ತೆರಬೇಕಾದ ಲೋಕಲ್ ಸೆಸ್ ದೇಬೀಲ್ ತೆರಿಗೆಯ ದರಗಳು ಮತ್ತು ಕಂಟ್ರಾಕ್ಟುದಾರರಿಂದ ಯಾವ ಖರೀದಿಗೆ ಷರಾಬ್ ಕೊಡಲ್ಪಡತಕ್ಕದ್ದೋ ಅಂಥಾ ವಟ್ಟು ಖರೀದೀ ಮೊಬಲಗುಗಳು ಸುದಾ, ಮುಂದೆ ವಿಧಿಸಲ್ಪಟ್ಟ ರೀತಿಯಾಗಿ ಗವರ್ನಮೆಂಟಿನವರಿಂದ, ಗೊತ್ತು ಮಾಡಲ್ಪಡುವದ್ದರಿಂದ ಅಂಥಾ ದರಗಳಿಗಾಗಿ ಬರುವ ಯಾವ ದರಖಾಸ್ತುಗಳೂ ಆಲೋಚಿಸಲ್ಪಡಲಾರದು.

5. ಪ್ರತಿ ದರಖಾಸ್ತಿನ ಸಂಗಡಲೂ ನಗದಾಗಿ ಯಾಗಲಿ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ, 1,000 ರೂಪಾಯಿಗಳ ಠೇವಣೀ ಮೊಬಲಗು ಕಳುಹಿಸಲ್ಪಟ್ಟು "ಷರಾಬ್ ತಯಾರೀ ವ ಬಟ್ಟು ಫುರೋಖ್ತಿನ ಬಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತು" ಯಂಬ ಮಾತುಗಳು ವಿಳಾಸ ಬರೆಯಲ್ಪಟ್ಟ ಲಿಫಾಫೆಯಲ್ಲಿ ಹಾಕಿ ಸರ್ 1884ನೇ ಇಸವಿ ಫೆಬ್ರುವರೀ 22ನೇ ಶುಕ್ರವಾರದ ದಿವಸವಾಗಲಿ, ತತ್ಪೂರ್ವದಲ್ಲಾಗಲಿ ಬೆಂಗಳೂರಿನಲ್ಲಿ ದೀವಾನರವರ ಸೆಕ್ರೆಟೇರಿಯವರಿಗೆ ತಲಪುವಂತೆ ಕಳುಹಿಸತಕ್ಕದ್ದು. ಸದರೀ ತಾರೀಖಿನ ತರುವಾಯ ಯಾವ ದರಖಾಸ್ತೂ ತೆಗದುಕೊಳ್ಳಲ್ಪಡುವದಿಲ್ಲ. ದರಖಾಸ್ತುಗಳು 1884ನೇ ಇಸವೀ ಫೆಬ್ರುವರೀ 22ನೇ ಮುಕ್ಕಾಮಿನ ಮಧ್ಯಾಹ್ನ 12 ಘಂಟೆಗೆ ಹಾಜರಾಗತಕ್ಕ ದರಖಾಸ್ತುದಾರರ ರೂಬರು ದೀವಾನರವರ ಆಫೀಸಿನಲ್ಲಿ ಸೆಕ್ರೆಟೇರಿಯವರಿಂದಲೂ ಬೆಂಗಳೂರು ಡಿ॥ ಡೆಪ್ಯುಟಿ ಕಮ್ಮಿಷನರವರಿಂದಲೂ ಖುಲ್ಲಾ ಮಾಡಲ್ಪಡುವವು. ದರಖಾಸ್ತುಗಳ ಆಖೈರ್ ವ್ಯವಸ್ಥೆ ದೀವಾನರವರಿಗೆ ಸೇರಿದ್ದಾಗಿರುತ್ತೆ. ಸದರೀಯವರು ಯಾವ ದರಖಾಸ್ತನ್ನಾಗಲಿ, ತಮಾಂ ದರಖಾಸ್ತುಗಳನ್ನಾಗಲಿ ಯಾವ ಸಬಬನ್ನು ತಿಳಿಸದೇಯೇ ತಿರಸ್ಕರಿಸತಕ್ಕ ಸಂಪೂರ್ಣ ಅಧಿಕಾರವನ್ನು ತಾವೇ ಉಳಿಸಿಕೊಂಡಿರುತ್ತಾರೆ. ತಿರಸ್ಕರಿಸಲ್ಪಟ್ಟ ದರಖಾಸ್ತುದಾರರಿಂದ ಇಡಲ್ಪಟ್ಟ ಠೇವಣಿಗಳು ಅವರುಗಳು ಕೇಳಿದಾಗ ವಾಪಸ್ ಕೊಡಲ್ಪಡುವವು.

6. ದೀವಾನರವರಿಗೆ ಸಿಫಾರಸ್ ಮಾಡುವ ಬಗ್ಯೆ ಚುನಾಯಿಸಲ್ಪಡುವ ದರಖಾಸ್ತುದಾರರು ಕೂಡ್ಲೇ ನಗದಾಗಿಯಾಗಲಿ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ, ದರಖಾಸ್ತುದಾರರು ಬಡಂಬಡಿಕೆ ಮಾಡಿಕೊಂಡ ಸಾಲೀಯಾನಾ ಕಮ್ಮೀ ಹುಟ್ಟುವಳಿಯ ಹನ್ನೆರಡರಲ್ಲೊಂದು ಭಾಗಕ್ಕೆ (ಅಥವಾ ಬಂದು ತಿಂಗಳ ಖಿಸ್ತಿಗೆ) ಸಮನಾದ ಮೊಬಲಗನ್ನು ಕೂಡ್ಲೆ ಠೇವಣಿ ಯಿಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಠೇವಣಿ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

7. ಯಾವ ದರಖಾಸ್ತುದಾರರ ದರಖಾಸ್ತು ದೀವಾನರವರಿಂದ ಆಖೈರಾಗಿ ಮಂಜೂರ್ಮಾಡಲ್ಪಡುತ್ತದೋ ಅಂಥಾವನು, ತನ್ನ ದರಖಾಸ್ತು ಮಂಜೂರಾದ ಸಂಗತಿ ತನಗೆ ತಿಳಿಸಲ್ಪಟ್ಟ ಯಂಟು ದಿವಸಗಳೊಳಗಾಗಿ ಮೊದಲೇ ಯಿಡಲ್ಪಟ್ಟ ಡಿಪಾಜಿಟ್ ಮೊಬಲಗಿನೊಡನೆ, ಕರಾರ್ ಮಾಡಿಕೊಳ್ಳಲ್ಪಟ್ಟ ಸಾಲಿಯಾನಾ ಹುಟ್ಟುವಳಿ ಪೈಕಿ, ಕಾಲು ಭಾಗದ ಮೊಬಲಗಿಗೆ ಸಮನಾಗುವಂತೆ ಇನ್ನೂ ಕೆಲವು ಮೊಬಲಗನ್ನು ನಗದಾಗಿಯಾಗಲಿ, ಗವರ್ನಮೆಂಟ್ ಪತ್ರಗಳ ಮೂಲಕವಾಗಿ ಯಾಗಲಿ ಬೆಂಗಳೂರು ಡೆಪ್ಯುಟಿ ಕಮ್ಮಿಷನರಲ್ಲಿ ಠೇವಣೀ ಯಿಡತಕ್ಕದ್ದಲ್ಲದೇ ಇದರಲ್ಲಿ ಮುಂದೆ ವಿಧಿಸಲ್ಪಡುವ ಷರತಗಳಿಗೆ ಬದ್ಧನಾಗಿ, ತಕ್ಕಛಾಪಾಕಾಗದದ ಮೇಲೆ, ವಿಧಿಸಲ್ಪಟ್ಟ ನಮೂನೇ ಪ್ರಕಾರ, ಬಂದು ಕರಾರು ಬರೆದು ಕೊಡತಕ್ಕದ್ದು. ಮತ್ತು ಸದರೀ ದರಖಾಸ್ತುದಾರನು ಕರಾರಿಗೆ ರುಜು ಮಾಡಲಿಕ್ಕಾಗಲಿ, ನೇಮಿಸಲ್ಪಟ್ಟ ಡಿಪಾಜಿಟ್ಟನ್ನ ಯಿಡಲಿಕ್ಕಾಗಲಿ, ತಪ್ಪಿದರೆ ಯಾ ನಿರಾಕರಿಸಿದರೆ ಮೊದಲೇ ಯಿಡಲ್ಪಟ್ಟ ಠೇವಣಿ ಮೊಬಲಗಗುಳು ಸರ್ಕಾರಕ್ಕೆ ಸೇರಿಸಿ ಕೊಳ್ಳಲ್ಪಟ್ಟು ಇಜಾರೇ ಅನ್ಯಥಾ ವಿಲೇ ಮಾಡಲ್ಪಡುವದು.

ಷರತ್ತುಗಳು.

I. ಕರಾರ್ ಮಾಡಿಕೊಳ್ಳಲ್ಪಟ್ಟ ಸಾಲಿಯಾನಾ ಕಮ್ಮೀ ಹುಟ್ಟುವಳೀ ಮೊಬಲಗು, ಸಮನಾದ ಹನ್ನೆರಡು ಮಾಹೇವಾರೀ ಖಿಸ್ತುಗಳ ಪ್ರಕಾರ ಸರ್ಕಾರಕ್ಕೆ ಪಾವತೀ ಮಾಡಲ್ಪಡತಕ್ಕದ್ದು. ಇಜಾರೇದಾರನು ಪ್ರತಿ ತಿಂಗಳಲ್ಲಿ ಡಿಸ್ಟಿಲೇರಿಯಿಂದ ಕೊಡಲ್ಪಟ್ಟ ಷರಾಬಿನ ಮೇಲೆ ಸರ್ಕಾರಕ್ಕೆ ಸಲ್ಲತಕ್ಕ ಲೋಕಲ್ ಸೆಸ್ ದೇಬೀಲ್ ಸರ್ಕಾರದಿಂದ ಗೊತ್ತು ಮಾಡಲ್ಪಟ್ಟ ದರಗಳ ಪ್ರಕಾರ ವಿಸಿಷ್ಟ ತೆರಿಗೆ ಮೊಬಲಗನ್ನೂ ಆ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ, ತತ್ಪೂರ್ವವಾಗಲಿ, ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಜರೀಯಲ್ಲಿ ಪಾವತೀ ಮಾಡತಕ್ಕದ್ದು. ಯಾವ ತಿಂಗಳ ಆಖೈರ್ ವರಿವಿಗೆ ಕೊಡಲ್ಪಡುವ ಷರಾಬಿನ ಮೇಲೆ ಸಲ್ಲತಕ್ಕ ತೆರಿಗೆ ಮೊಬಲಗು, ಕರಾರ್ ಮಾಡಿಕೊಂಡ ಕಮ್ಮೀ ಹುಟ್ಟುವಳೀ ಪೈಕೀ ಮಾಹೇವಾರಿ ಖಿಸ್ತು ಮೊಬಲಗ್ ಭರ್ತಿಗೆ ಸಾಲದೆ ಹೋದರೆ, ಅಂತಾ ಕಮ್ಮೀ ಮೊಬಲಗನ್ನು ಭರ್ತೀ ಮಾಡುವದಕ್ಕೆ ಬೇಕಾದಷ್ಟು ಮೊಬಲಗನ್ನು ಇಜಾರೇದಾರನು ಹೆಚ್ಚಾಗಿ ಪಾವತೀ ಮಾಡತಕ್ಕದ್ದು. ಯಾವದಾದರೂ ಮಾಹೇಯಲ್ಲಿ ನಡೆದ ಜಾಸ್ತಿ ಫುರೋಖ್ತು ಅದೇ ಸರ್ಕಾರ್ ಸಾಲಿನ ಯಾವದಾದರೂ ಮಾಹೇಯ ಕಮ್ಮೀ ಫುರೋಖ್ತಿಗೆ ಉಪಯೋಗಿಸಲ್ಪಡತಕ್ಕದ್ದು. ಯಾವ ತಿಂಗಳಿಗೆ ಸದರೀ ಮೊಬಲಗುಗಳು ಸಲ್ಲತಕ್ಕದ್ದೋ ಅದರ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ತತ್ಪೂರ್ವವಾಗಲಿ ಅವು ಪಾವತೀ ಯಾಗದೇ ಹೋದರೆ ಬಾಕೀ ನಿಲ್ಲುವ ತಮಾಂ ಮೊಬಲಗಿನ ಮೇಲೂ ಸದರೀ ತಾರೀಖು ಲಾಗಾಯತು ಸಾಲಿಯಾನಾ ಸೇಕಡಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕಟ್ಟಲ್ಪಡುವದು, ಮತ್ತು ಯಾವ ತಿಂಗಳಲ್ಲಿ ಮೊಬಲಗುಗಳು ಬಾಕೀ ಯಾಗುತವೋ ಆ ತಿಂಗಳು ಕಳದ ತರುವಾಯವೂ ಮೊಬಲಗು ಸಲ್ಲದೇ ಹೋದರೆ ಬಡ್ಡೀ ದೇಬೀಲ್ ಸಲ್ಲತಕ್ಕ ಬಾಕೀ ಮೊಬಲಗ್ ಜರ್ಮಾನ ಕಂದಾಯದ ಬಾಕೀ ವ

ಸೂಲೀ ಬಗ್ಗೆ ತತ್ಕಾಲದಲ್ಲಿ ಜಾರೀ ಯಿರುವ ರೂಲ್ಸ್‌ನಿಂದ ವಿಧಿಸಲ್ಪಟ್ಟ ಪ್ರಕಾರವಾಗಿ, ಕಂಟ್ರ್ಯಾಕ್ಟುದಾರನ ಸ್ವತ್ತಿನ ಜಫ್ತೀ ಹರಾಜು ಮೂಲಕ ವಸೂಲ್ ಮಾಡಲ್ಪಡತಕ್ಕದ್ದು. ಮತ್ತು ಬೆಂಗಳೂರು ಡೆಪ್ಯುಟಿ ಕಮ್ಮಿಷನರವರ ರಿಪೋರ್ಟಿನ ಮೇಲೆ, ಕಂಟ್ರ್ಯಾಕ್ಟು ರದ್ದು ಮಾಡಲ್ಪಟ್ಟಿರುತ್ತೆಂದು ತಿಳಿಸುವದಕ್ಕೂ, ಕಂಟ್ರ್ಯಾಕ್ಟುದಾರನಿಂದ ಇಡಲ್ಪಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳುವಂತೆ ಅಪ್ಪಣೆ ಮಾಡುವದಕ್ಕೂ, ಮತ್ತು ಕಂಟ್ರ್ಯಾಕ್ಟು ಕಾಲದ ಪೈಕೀ ಉಳಿದ ಕಾಲದಲ್ಲಿ ಕಂಟ್ರ್ಯಾಕ್ಟುದಾರನ ಖರ್ಚಿಗೂ ಲುಕಸಾನಿಗೂ ಒಳಪಟ್ಟು ಬಾಬು ಅಮಾನಿಯಲ್ಲಾಗಲಿ ಅನ್ಯಥಾ ಆಗಲಿ ಇಡುವದಕ್ಕೂ ಸಹ ದೀವಾನರವರ ಯಖ್ತ್ಯಾರಿಗೆ ಸೇರಿರುತ್ತದೆ.

II. ಪ್ರತಿ ಸಾಲಿನ ಲೆಖ್ಖಗಳೂ ಪ್ರತ್ಯೇಕ ಪ್ರತ್ಯೇಕವಾಗಿ ಖೈದ್ ಮಾಡಲ್ಪಡತಕ್ಕದ್ದು. ಒಂದು ಸಾಲಿನಲ್ಲಿ ಕೊಡಲ್ಪಟ್ಟ ಸಾರಾಯಿ ಮೇಲೆ ಗವರ್ನಮೆಂಟಿಗೆ ಸಲ್ಲತಕ್ಕ ತೆರಿಗೆಯು ಆ ಸಾಲಿಗೆ ಕರಾರ್ ಮಾಡಿದ ಕಮ್ಮೀ ಹುಟ್ಟುವಳಿಗೆ ಜಾಸ್ತೀ ಆದರೆ, ಅಂತಾ ಜಾಸ್ತೀಯಾದ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 1 ಆಣೆಗೆ ಸಮನಾಗಿ, ಇಜಾರೇದಾರನಿಂದ ಸಲ್ಲಬೇಕಾದ ತೆರಿಗೆ ದೆಸೆಯಿಂದ ವಜಾ ಕೊಡಲ್ಪಡುವದು, ಆದರೆ ಒಂದು ವರುಷದ ಜಾಸ್ತೀ ಮೊಬಲಗು ಇಜಾರೇ ಪೈಕೀ ಯಾವದಾದರೂ ಇತರ ಸಾಲಿನ ಕರಾರ್ ಮಾಡಿದ ಹುಟ್ಟುವಳೀ ಮೊಬಲಗಿನಲ್ಲಿ ಕಮ್ಮೀ ಬೀಳತಕ್ಕ ಯಾವ ಮೊಬಲಗನ್ನಾಗಲಿ ಭರ್ತೀ ಮಾಡುವ ಬಗ್ಗೆ ಉಪಯೋಗಿಸುವದಿಲ್ಲ.

III. ಕಂಟ್ರ್ಯಾಕ್ಟುದಾರನು ಬೆಂಗಳೂರು ಬಳಿಯಣ ಸರ್ಕಾರ್ ಡಿಸ್ಟಿಲೇರಿಯ ಆವರಣದೊಳಗಾಗಲಿ ಅಥವಾ ಡೆಪ್ಯುಟಿ ಕಮ್ಮಿಷನರಿಂದ ಗೊತ್ತು ಮಾಡಲ್ಪಡಬಹುದಾದ ಇತರ ಸ್ಥಳದಲ್ಲಾಗಲಿ ಷರಾಬ್ ತಯಾರ ಮಾಡುವಂತೆಯೂ, ಮತ್ತು ಡೆಪ್ಯುಟಿ ಕಮ್ಮಿಷನರಿಂದ ಮೊಕರರ್ ಮಾಡಲ್ಪಡತಕ್ಕಂಥಾ ಸ್ಥಳಗಳೊಳಗೆ ಬಟ್ಟಿ ಕೋಠಿಗಳನ್ನು ಸ್ಥಾಪಿಸುವಂತೆಯೂ, ನಿಯಮಿಸಲ್ಪಡತಕ್ಕದ್ದು. ಡೆಪ್ಯುಟಿ ಕಮ್ಮಿಷನರಿಂದಾಗಲಿ, ಅಥವಾ ಅಜಮಾಯಿಷೀ ಬಗ್ಗೆ ಮೊಕರರ್ ಮಾಡಲ್ಪಟ್ಟಿರತಕ್ಕ ಯಾವ ಉದ್ಯೋಗಸ್ಥರಿಂದಲಾಗಲಿ. ತನಿಖೀ ನೋಡುವ ಬಗ್ಗೆ ಸರ್ವಕಾಲಗಳಲ್ಲಿಯೂ ಡಿಸ್ಟಿಲೇರಿ ಮತ್ತು ಕೋಠೀಗಳು ಖುಲ್ಲಾವಾಗಿರತಕ್ಕದ್ದು. ಯಾವ ಷರಾಬನ್ನೂ ಸದರೀ ಬಗ್ಗೆ ಮೊಕರರ್ ಮಾಡಲ್ಪಡುವ ಒಬ್ಬ ಉದ್ಯೋಗಸ್ಥನಿಂದ ಅಳತೆ ಮಾಡಲ್ಪಟ್ಟು ಅಜಮಾಯಿಷಿ ಮಾಡಲ್ಪಟ್ಟ ಹೊರತು ಡಿಸ್ಟಿಲೇರಿಯಿಂದ ಹೊರಗೆ ತೆಗದುಕೊಂಡು ಹೋಗಕೂಡದು. ಡಿಸ್ಟಿಲೇರಿ ಕಟ್ಟಗಳನ್ನು ಉಪಯೋಗಿಸತಕ್ಕ ಬಗ್ಗೆ 150 ರೂಪಾಯಿಗಳ ಬಾಡಿಗೆಯನ್ನು ಕಂಟ್ರ್ಯಾಕ್ಟುದಾರನು ಮಾಹೇಯಾನಾ ಗವರ್ನಮೆಂಟಿಗೆ ಸಂದಾಯ ಮಾಡಲ್ಪಡುವಂತೆಯೂ, ಸದರೀ ಕಟ್ಟಗಳನ್ನು ಪೂರಾ ದುರಸ್ತು ಸ್ಥಿತಿಯಲ್ಲಿ ಯಿಟ್ಟು ಕೊಂಡಿರುವಂತೆಯೂ ನೇಮಿಸಲ್ಪಡತಕ್ಕದ್ದು. ಇಜಾರೇದಾರನು ಪೂರ್ವದ ಇಜಾರೇದಾರರಿಂದ ಬಟ್ಟಿ ಯಿಳಿಸಲ್ಪಟ್ಟು, ಸನ್ 1884ನೇ ಇಸವಿ ಏಪ್ರೆಲ್ 1ನೆ ತಾರೀಖಿನಲ್ಲಿ ಹಾಜರಿರಬಹುದಾದ ಯಾವ ಸಾರಾಯಿಯನ್ನಾಗಲಿ, ಆ ಬಗ್ಗೆ ದೀವಾನರವರ ಮಂಜೂರಾತಿನಿಸೀ ಡೆಪ್ಯುಟಿ ಕಮ್ಮಿಷನರವರಿಂದ ಠರಾವು ಮಾಡಲ್ಪಡಬಹುದಾದಂಥಾ ಈಡು ಮೊಬಲಗನ್ನು ಕೊಟ್ಟು ತನ್ನ ವಶಕ್ಕೆ ತೆಗದುಕೊಳ್ಳತಕ್ಕದ್ದು.

IV. ತಯಾರ್ಮಾಡಲ್ಪಡುವ ಸಾರಾಯಿ ಒಳ್ಳೇ ಗುಣವುಳ್ಳದ್ದಾಗಿರತಕ್ಕದ್ದು. ಬಟ್ಟಿ ಯಿಳಿಸುವಲ್ಲಿ ಉಪಯೋಗಿಸಲ್ಪಡತಕ್ಕ ಪದಾರ್ಥಗಳು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಟ್ಟು ಒಳ್ಳೇ ಗುಣವುಳ್ಳವಾಗಿರಬೇಕಾದ್ದಲ್ಲದೆ ಅವುಗಳು ಡಿಸ್ಟಿಲೇರಿಯಲ್ಲಿ ತೆಗದುಕೊಳ್ಳಲ್ಪಡುವದಕ್ಕೆ ಮುಂದಾಗಿ ಡಿಸ್ಟಿಲೇರಿ ಸೂಪರ್ ವೈಜರಿಗೆ ಅಥವಾ ಈ ಬಗ್ಗೆ ಮೊಕರರ್ ಮಾಡಲ್ಪಡತಕ್ಕ ಇತರ ಉದ್ಯೋಗಸ್ಥನಿಗೆ ತೋರಿಸಲ್ಪಟ್ಟು ಅವರಿಂದ ಪ್ಯಾಸ್ ಮಾಡಲ್ಪಡತಕ್ಕದ್ದು. ಸಾರಾಯಿ ಬಟ್ಟಿ ಯಿಳಿಸುವಲ್ಲಿ ಆರೋಗ್ಯಕ್ಕೆ ವಿರುದ್ಧವಾದ ಯಾವ ಪದಾರ್ಥಗಳನ್ನೂ ಉಪಯೋಗಿಸಕೂಡದು, ಅಥವಾ ಷರಾಬ್ ತಯಾರ್ಮಾಡಲ್ಪಟ್ಟ ತರುವಾಯ ಅದರಲ್ಲಿ ಹಾಕಲೂಕೂಡದು; ಮತ್ತು ಉಪಯೋಗಿಸಲ್ಪಡುವ ಯೆಲ್ಲಾ ಪದಾರ್ಥಗಳೂ ಪ್ರತಮತಃ ವಿಧಿಸಲ್ಪಟ್ಟ ದಾಮೂಷಾಯಿ ಪ್ರಕಾರ ಇರತಕ್ಕನ್ನು, ಅಥವಾ ಕಂಟ್ರ್ಯಾಕ್ಟುದಾರನಿಂದ ರೋಜ್ನಾ ತಯಾರ್ಮಾಡಲ್ಪಡುವದರ ಫಲಿತಾಂಶಗಳು ಸರ್ಕಾರ್ ಆಫೀಸರುಗಳಿಂದ ನ್ಯಾಯವಾದ ತನಿಖಿ ನಡಿಸಲ್ಪಡಲಿಕ್ಕೋಸ್ಕರ ಐಯಿಂದ ಗವರ್ನಮೆಂಟಿನವರಿಂದ ನಿರ್ನಯಿಸಲ್ಪಡುವ ದಾಮೂಷಾಯಿ ಪ್ರಕಾರವಾಗಲಿ ಇರತಕ್ಕದ್ದು.

V. ಇಜಾರೇದಾರನು, ಡಿಸ್ಟಿಲೇರಿಯಲ್ಲಿಯೂ, ಪ್ರತಿ ಕೋಠಿಯಲ್ಲಿಯೂ. ತಯಾರ್ಮಾಡಲ್ಪಡುವ ಸಾರಾಯಿಗಳ ಜಮಾಖರ್ಚುಗಳು, ತೇದಾದು, ವ ಸ್ಟ್ರೆಂಗ್ತ್, ಇವುಗಳ ಕರಾರ್ವಾಕಾ ಲೆಖ್ಖಗಳನ್ನೂ, ಮತ್ತು ಡಿಸ್ಟಿಲೇರಿಯಲ್ಲಿ ರೋಜ್ನಾ ಜಮಾಖರ್ಚು ಆದ ಯಲ್ಲಾ ಪದಾರ್ಥಗಳ ಲೆಕ್ಕಗಳನ್ನೂ ಸುದಾ ವಿಧಿಸಲ್ಪಟ್ಟ ನಮೂನೆಗಳಲ್ಲಿ ಇಡತಕ್ಕದ್ದು, ಆತನು ಡೆಪ್ಯುಟಿ ಕಮ್ಮಿಷನರವರಿಂದಾಗಲಿ, ಹೆಡ್ ಸೂಪರ್‌ವೈಜರಿಂದಾಗಲಿ, ಈ ಬಗ್ಗೆ ಮೊಕರರ್ಮಾಡಲ್ಪಡುವ ಯಾವ ಉದ್ಯೋಗಸ್ಥನಿಂದಾಗಲಿ ತನಿಖೀ ನೋಡುವ ಬಗ್ಗೆ ಹಾಜರ್ ಮಾಡುವಂತೆ ಕೇಳಲ್ಪಟ್ಟಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

VI. ಒಂದು ತಿಂಗಳಿಗೆ ಆಗುವಷ್ಟು ಮತ್ತು 14,000 ಗ್ಯಾಲನ್‌ಗಳಿಗೆ ಕಡಿಮೆ ಯಿಲ್ಲದ ಸಾರಾಯಿಯನ್ನು ಯಾವಾಗ್ಯೂ ಹಾಜರೀಯಲ್ಲಿಟ್ಟುಕೊಂಡಿರಲಿಕ್ಕೆ ಬಟ್ಟೀದಾರನು ಬದ್ಧನಾಗಿರತಕ್ಕದ್ದು; ಸನ್ 1884ನೇ ಏಪ್ರೆಲ್ ಗುರ್ರೇ ತಾರೀಖು ಮೊದಲು,

ಈ ಮೇರೆ ಹಾಜರಿರುವ ಬಗ್ಯೆ ಸದರೀ ತಾರೀಖಿಗೆ ಮುಂದೆಯೇ ಬಟ್ಟೀ ಯಿಳಿಸಲಿಕ್ಕೆ ಷುರು ಮಾಡತಕ್ಕದ್ದು, ಪರಂತು
ಹಾಗೆ ಬಟ್ಟೀ ಯಿಳಿಸಲ್ಪಟ್ಟ ಯಾವ ಸಾರಾಯಿಯೂ, ಸ॥ 1884ನೇ ಏಪ್ರೆಲ್ 1ನೇ ತಾರೀಖಿಗೆ ಮುಂದಾಗಿ ತನ್ನ ವಶದಿಂದ
ಲಾಗಲಿ, ತನ್ನ ಕೈಕೆಳಗಣ ಉದ್ಯೋಗಸ್ಥನ ವಶದಿಂದಲಾಗಲಿ, ಮಾರಲ್ಪಡಕೂಡದು, ಯಾ ಸಾಗಿಸಲ್ಪಡಕೂಡದು. ಇ
ಜಾರೇದಾರನು, ತಮೂಂ ತಾಲ್ಲೂಕು ಕಸಬಾ ಜಾಗಗಳಲ್ಲಿಯೂ, ಡೆಪ್ಯುಟಿ ಕಮ್ಮಿಷನರಿಂದ ಅಥವಾ ಅವ್ರ ಇರತಕ್ಕ ಸ್ಥಳ
ಸರಹದ್ದು ಅಧಿಕಾರವುಳ್ಳ ಸಬ್ ಡಿವೀಜನ್ ಆಫೀಸರಿಂದ ಮಂಜೂರ್ಮಾಡಲ್ಪಡುವ ದೊಡ್ಡ ಷಹರ್‌ಗಳೊಳಗೂ, ಬಟ್ಟು ಫುರೋಖ್ತು
ಅಂಗಡಿಗಳನ್ನು ಇಡುವದಕ್ಕೆ ಅಪ್ಪಣೆ ವುಂಟಾಗತಕ್ಕದ್ದು. ಸದರೀ ಯಲ್ಲಾ ಜಾಗಗಳ ಪಟ್ಟಿಯು, ಕೇಳಿದಾಗ ಡೆಪ್ಯುಟಿ ಕ
ಮ್ಮಿಷನರವರಿಗೂ ಅಥವಾ ಸಬ್ ಡಿವೀಜನ್ ಆಫೀಸರರಿಗೂ, ಕೊಡಲ್ಪಡತಕ್ಕದ್ದು, ಮತ್ತು ಕಂಟ್ರಾಕ್ಟುದಾರನು ಅಂಗಡಿ ಒಂ
ದಕ್ಕೆ ಮಾಹೇಯಾನಾ ವಿಧಿಸಲ್ಪಟ್ಟ 2 ರೂಪಾಯಿಗಳ ಲೈಸೆನ್ಸ್‌ಫೀಯನ್ನು ಕೊಡತಕ್ಕದ್ದು.

VII. ಷರತ್ತುಗಳ X ವ XIIನೇ ರೂಲಸಗಳಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಹೊರ್ತು, ಡಿಸ್ಟಿಲೇರಿಯಲ್ಲಾಗಲೀ ಬಟ್ಟು ಫುರೋ
ಖ್ತು ಅಂಗಡಿಗಳಲ್ಲಾಗಲೀ ಸಾರಾಯಿಯನ್ನು ಚಿಲ್ಲರೇ ಫುರೋಖ್ತು ಮಾಡಕೂಡದು.

VIII. ಚಿಲ್ಲರೇ ಫುರೋಖ್ತು ಅಂಗಡಿಗಳು, ಡಿಸ್ಟ್ರಿಕ್ಟು ಜಾತ್ ಡೆಪ್ಯುಟಿ ಕಮ್ಮಿಷನರುಗಳು ಮತ್ತು ಡಿಸ್ಟ್ರಿಕ್ಟಿನ ಸಬ್ ಡಿವೀಜನ್
ಆಫೀಸರ್‌ಗಳ ವಿಚಾರಣೆಯಲ್ಲಿಯೂ, ಮ್ಯುನಿಸಿಪಲ್ ಷಹರ್‌ಗಳಲ್ಲಿ, ದೀವಾನರವರಿಂದ ಹುಕ್ಕುಂ ಮಾಡಲ್ಪಟ್ಟರೆ, ಅಂತಾ ಷಹರ್
ಗಳ ಮ್ಯುನಿಸಿಪಲ್ ಪ್ರೆಸಿಡೆಂಟರ ಯಾ ವೈಸ್ ಪ್ರೆಸಿಡೆಂಟರ ವಿಚಾರಣೆಯಲ್ಲಿಯೂ ಇರತಕ್ಕದ್ದು; ಮತ್ತು ಅವರುಗಳ ಮಂ
ಜೂರಾತಿ ಯಿಲ್ಲದೆ ಅವರುಗಳಿಂದ ಮೊಕರರ್ ಮಾಡಲ್ಪಡುವ ಅಂಥಾ ಸ್ಥಳಗಳಲ್ಲದೆ ಚಿಲ್ಲರೇ ಅಂಗಡಿ ಯಾವವೂ ಇಡಲ್ಪಡತ
ಕ್ಕದ್ದಲ್ಲ. ಯಾವ ಅಂಗಡಿಗಳನ್ನಾಗಲಿ, ಪಬ್ಲಿಕ್ ಜರೂರಾತಿ ಸಬಬ್‌ನಿಂದ ಇಜಾರೇದಾರನು ತನಿಗೆ ಈಡು ಕೊಡಬೇಕೆಂ
ದು ಕೇಳುವ ಹಕ್ಕಿಲ್ಲದೇನೆ ಮುಚ್ಚುವಂತೆ ಹುಕ್ಕುಂ ಮಾಡಲಿಕ್ಕೆ ಅವರು ಅರ್ಹರಾಗಿರತಕ್ಕದ್ದು.

IX. ಚಿಲ್ಲರೇ ಅಂಗಡಿಗಳಿಗೆ ಲೈಸೆನ್ಸ್‌ಗಳು ಗವರ್ನಮೆಂಟಿನವರಿಂದ ಆಗಿಂದಾಗ್ಯೆ ಮೊಕರರ್ ಮಾಡಲ್ಪಡಬಹುದಾದಂಥಾ ಲೈಸೆನ್ಸ್
ರುಸುಂಗಳನ್ನು ಕೊಟ್ಟಮೇಲೆ ಸದರೀ ಆಫೀಸರ್‌ಗಳಿಂದ ಮಾಮೂಲ್ ನಮೂನೆಯಲ್ಲಿ ಕೊಡಲ್ಪಡುವದು.
ಕ್ರಮ ಪಡಿಸಲ್ಪಟ್ಟ ಧಾರಣೆಗೆ ಮತ್ತು ವಿಧಿಸಲ್ಪಟ್ಟ ಸ್ಟ್ರೆಂಗ್ತಿನಿಂದ ಸಾರಾಯಿಯನ್ನು ಫುರೋಖ್ತು ಮಾಡುವದಕ್ಕೂ, ಜರೂರಾದ
ಇತರ ಷರತ್ತುಗಳ ಬಗ್ಯೂ ಲೈಸೆನ್ಸ್‌ಗಳಲ್ಲಿ ನಿಬಂಧನೆ ಮಾಡಲ್ಪಡುವದು. ಚಿಲ್ಲರೇ ಫುರೋಖ್ತುದಾರರು ಅವರಿಗೆ ಅತ್ಯಂತ
ಸಮೀಪದಲ್ಲಿನ ಅಥವಾ ಅವರು ಸಾಲೀಯಾನಾ ತೆಗದುಕೊಳ್ಳುವದಕ್ಕೆ ಚುನಾಯಿಸುವ ಬಟ್ಟು ಅಂಗಡಿಗಳಿಂದಲೇ ಸಾರಾಯಿ
ಯನ್ನು ಕೊಂಡುಕೊಳ್ಳತಕ್ಕದ್ದು. ಸದರೀ ಚಿಲ್ಲರೇ ಫುರೋಖ್ತುದಾರರು, ಅಕ್ರಮವಾದ ವಿಷಯಗಳೇನೂ ನಡೆಯದೇ ಇರು
ವದನ್ನು ನೋಡುವ ಬಗ್ಯೆ ತಮ್ಮ ಅಂಗಡಿಗಳೊಳಗೆ ಇಜಾರೇದಾರರಿಗಾಗಲೀ ಅವರ ಮುತಾಲೀಕರಿಗಾಗಲಿ ಆಬ್ಕಾರಿ ಆಫೀಸ
ರುಗಳಿಗಾಗಲೀ ಕ್ರಮ ಪ್ರಕಾರ ಅಧಿಕಾರ ಹೊಂದಿದ ಯಾವ ಸರ್ಕಾರ್ ನವುಕರನಿಗಾಗಲಿ ಅವಕಾಶ ಸಹ ಕೊಡತಕ್ಕದ್ದು.
ಮತ್ತು ಪ್ರತಿದಿನ ತಾವು ತೆಗದುಕೊಳ್ಳುವ ಸಾರಾಯಿಯ ತೇದಾದ್ ವ ಸ್ಟ್ರೆಂಗ್ತು ಮತ್ತು ಸದರೀ ಬಗ್ಯೆ ಹಾಕಲ್ಪಡುವ ಖರೀ
ದಿಗಳು ಇವುಗಳ ನಿಜವಾಗಿಯೂ ಕರಾರ್‌ವಾಕಾ ಆಗಿಯೂ ಇರುವ ಲೆಖ್ಖಗಳನ್ನು ಇಡತಕ್ಕದ್ದಲ್ಲದೇ ಇಜಾರೇ ದಾರನಿಂದಾ
ಗಲಿ ಅವನ ಮುತಾಲೀಕನಿಂದಾಗಲೀ ಸದರೀ ಲೆಕ್ಕ ಕೇಳುವಂತೆ ಅಧಿಕಾರ ಕೊಡಲ್ಪಟ್ಟ ಯಾವ ಸರಕಾರದ ಉದ್ಯೋಗಸ್ಥ
ನಿಂದಾಗಲಿ ಹಾಗೆ ಅಪೇಕ್ಷಿಸಲ್ಪಟ್ಟಾಗ ತನಿಖಿ ನೋಡುವ ಬಗ್ಯೆ ಅವುಗಳನ್ನು ಹಾಜರ್ ಮಾಡತಕ್ಕದ್ದು.

X. ಡಿಸ್ಟಿಲೇರಿಯಿಂದ ಸಾರಾಯಿ ಕೊಡುವದನ್ನು ಕುರಿತ ಈ ಕೆಳಗೆ ಬರುವ ರೂಲ್ಸ್ ಅನುಸರಿಸಲ್ಪಡತಕ್ಕದ್ದು.

(*a*) ಸ್ಥಾಧಾರಣವಾಗಿ 20 ಡಿಗ್ರಿ ಅಂಡರ್ ಪ್ರೂಫಿಗೆ ಹೆಚ್ಚಿದ ಸ್ಟ್ರೆಂಗ್ತಿನಿಂದ ಯಾವ ಸಾರಾಯಿಯನ್ನೂ ಕೊಡತಕ್ಕದ್ದಲ್ಲವು,
ಆದರೆ ಕಂಟ್ರಾಕ್ಟುದಾರನಾಗಲಿ, ಚಿಲ್ಲರೇ ಫುರೋಖ್ತುದಾರನಾಗಲೀ ಮೇಲೆಕಂಡ ಸ್ಟ್ರೆಂಗ್ತಿಗಿಂತ ಹೆಚ್ಚಾದ ಸ್ಟ್ರೆಂಗ್ತಿನಲ್ಲಿ ಸಾ
ರಾಯಿ ಕೊಡಲಿಕ್ಕೆ ಅಪೇಕ್ಷಿಸಿದರೆ ಹಾಗೆ ಕೊಡಲ್ಪಡುವ ಸ್ಪಿರಿಟ್ ಸಾರಾಯಿಯು ಪ್ರೂಫಿಗಿಂತ ಹೆಚ್ಚು ಸ್ಟ್ರೆಂಗ್ತು ವುಳ್ಳದ್ದಾಗಿರ
ಕೂಡದು. ಪ್ರೂಫಿಗೆ ಸಮನಾದ ಬಲವುಳ್ಳ ಸಾರಾಯಿಯು, ಯರಡು ಡಜನ್ ಕ್ವಾರಟ್ ಶೀಶೆಗಳಲ್ಲಿಯೂ, ನಾಲ್ಕು ಡಜನ್ ಪಯಿಂಟ್
ಶೀಶೆಗಳಲ್ಲಿಯೂ, ಇಂಗ್ಲೀಷ್ ಮತ್ತು ಪರಾಯಿ ದೇಶದಂತೆಯೇ ಕಮ್ಮೀ ತೇದಾದಿನ ಡಬ್ಬಗಳಲ್ಲಿ ಡಿಸ್ಟಿಲೇರಿಯಿಂದ
ಕೊಡಲ್ಪಡುವದು; ಅದು ಡಿಸ್ಟಿಲೇರಿಯಲ್ಲಿ ಹೆಡ್ ಸೂಪರ್ ವೈಜರವರಿಂದ ಮೊಹರ್ಮಾಡಲ್ಪಟ್ಟ ಪ್ರಕಾರವೇ ಬದಲಾಯಿಸ
ದಂತೆಯೂ ಹೆಡ್ ಸೂಪರ್ ವೈಜರವರ ಪ್ಯಾಶಿನ ಆಧಾರದ ಮೇಲೂ ಬಟ್ಟು ಅಂಗಡಿಗಳಿಂದ ಚಿಲ್ಲರೇ ಬಿಕರಿದಾರ್ರಿಗೆಫುರೋ
ಖ್ತು ಮಾಡಲ್ಪಡತಕ್ಕದ್ದು. ಚಿಲ್ಲರೇ ಬಿಕರೀದಾರರು ಅಂಥಾ ಷರಾಬನ್ನು ಅವರಿಗೆ ಗೊತ್ತಿರುವಂತಾ ಮರ್ಯಾದೆವುಳ್ಳ ಜನ
ಗಳಿಗೆ ಮಾತ್ರವೇ ಹೆಡ್ ಸೂಪರ್ ವೈಜರವರಿಂದ ಕೊಡಲ್ಪಟ್ಟ ಅಲಾಹಿದ ಪ್ಯಾಸುಗಳೊಂದಿಗೆ ಕೊಡತಕ್ಕದ್ದು. ಮತ್ತು
ಬಟ್ಟು ಬಿಕರೀದಾರರು ವ ಚಿಲ್ಲರೇ ಫುರೋಖ್ತುದಾರರು ಸುದಾ ಅಂಥಾ ಬಿಕರೀಗಳಿಗೆ ವಿಧಿಸಲ್ಪಟ್ಟನಮೂನೆಯಲ್ಲಿ ಲೆಕ್ಕ
ಕೊಡತಕ್ಕದ್ದು.

(*b*) ಪ್ರೂಫಿಗಿಂತ ಹೆಚ್ಚು ಸ್ಟ್ರೆಂಗ್ತಿನ ಸಾರಾಯಿಯನ್ನು ಇಜಾರೇದಾರನು ಕೊಡಲಿಕ್ಕೆ ಅಪೇಕ್ಷಿಸಿದರೆ, ಆ ಬಗ್ಯೆ, ಹೆಡ್ ಸೂಪರ್‌ವೈಜ
ರ್ ಮೂಲಕ ಡೆಪ್ಯುಟಿ ಕಮ್ಮಿಷನರವರ ವಿಶೇಷ ಹುಕ್ಕುಂಗಳನ್ನು ಪಡೆಯತಕ್ಕದ್ದು, ಸದರೀ ಸೂಪರ್‌ವೈಜರು ಸದರೀ ಅಂಶಗ
ಳನ್ನು ಸೂಚಿಸಿ, ಅದರಂತೆ ಬಟ್ಟು ಬಿಕ್ರಿ ಅಗಂಡಿಗಳಿಗೆ ಪ್ಯಾಸ್‌ಗಳುಯಾನೇ ರಾಹದಾರೀಗಳನ್ನು ಕೊಡತಕ್ಕದ್ದು. ಹಾಗೆಕೊ
ಡಲ್ಪಟ್ಟ ಸಾರಾಯಿಯು, ಈ ಪ್ಯಾರಾ (*a*) ಕ್ಲಾಜ್‌ನಲ್ಲಿ ವಿಧಿಸಲ್ಪಟ್ಟ ಪ್ರಕಾರ ವಿಕ್ರಯಿಸಲ್ಪಟ್ಟು ಲೆಕ್ಕ ಇಡಲ್ಪಡತಕ್ಕದ್ದು.

(c) ಅಂಡರ್ ಪ್ರೂಫ್' ಬಾಬತು 20° ಡಿಗ್ರೀಗೆ ಮೇಲ್ಪಟ್ಟ ಸ್ಟ್ರೆಂಗ್ತ್ ವುಂಟಾಗಿ ಮತ್ತು ಪ್ರೂಫಿನವರಿಗೆ ಇದ್ದು, ಕೊಡಲ್ಪಡುವ ತಮಾಂ ಸಾರಾಯಿಗೂ, ಪ್ರೂಫಿನ ಮೇಲೆ ತೀರ್ವೆಯನ್ನು ವಿಧಿಸತಕ್ಕದ್ದು. ಪ್ರೂಫಿನ ಮೇಲಣ ದರವು ಜಲಪರಿಮಾಪಕ ಯಂತ್ರದ ದರಗಳ ಪ್ರಕಾರ ದಾಮೊಷಾಯಿ ಮೇಲೆ ಜಾಸ್ತಿ ಮಾಡಲ್ಪಡತಕ್ಕದ್ದು.

(d) ಅಂಡರ್ ಪ್ರೂಫಿನ 20° ಡಿಗ್ರೀಗೆ ಕೀಳ್ಪಟ್ಟ ಯಾವ ಸಾರಾಯಿಯೂ, ಸಾಧಾರಣವಾಗಿ ಡಿಸ್ಟಿಲೇರಿಯಿಂದ ಕೊಡಲ್ಪಡಕೂಡದು; ಪರಂತು, ಅಂಡರ್‌ಪ್ರೂಫಿನ 20° ಡಿಗ್ರೀ ಸ್ಟ್ರೆಂಗ್ತಿಗಿಂತ ಕಡಮೆ ಶಕ್ತಿಯುಳ್ಳ ಸಾರಾಯಿ ಬಗ್ಯೆ ತಗಾದೇ ಉಂಟಾದರೆ, ಅಂಡರ್‌ಪ್ರೂಫಿನ 30° ಡಿಗ್ರೀ ಸಾರಾಯಿಯು, ದಾಮೊಷಾಯಿ ಪ್ರಕಾರ ಕಮ್ಮಿ ಮಾಡಲ್ಪಟ್ಟ ತೀರ್ವೆಯ ದರಗಳ ಮೇರೆ ಡಿಸ್ಟಿಲೆರಿಯಿಂದ ವಿಶೇಷತಃ ಕೊಡಲ್ಪಡಬಹುದು. ಅಂಥಾ ಸಾರಾಯಿಯು, ಬಟ್ಟು ಕೋಠೀಗಳಲ್ಲಿಯೂ, ಚಿಲ್ಲರೇ ದುಕಾನ್‌ಗಳೊಳಗೂ ಪ್ರತ್ಯೇಕ ಪ್ರತ್ಯೇಕವಾಗಿ ಇಡಲ್ಪಟ್ಟು ಲೆಕ್ಕ ಕೊಡತಕ್ಕದ್ದು.

XI. ಸಾರಾಯಿಯು ಡಿಸ್ಟಿಲ್ಲೆರಿಯಿಂದ ಕೊಡಲ್ಪಟ್ಟ ಮೇರೆ ಫರೋಖ್ತು ಮಾಡಲ್ಪಡತಕ್ಕದ್ದೇ ಹೊರತು, ಬಟ್ಟು ಬಿಕ್ರಿಯ ಅಥವಾ ಚಿಲ್ಲರೇ ಅಂಗಡಿಗಳಲ್ಲಿ ಯಾವ ರೀತಿಯಲ್ಲಾಗಲಿ ಇತರ ಪದಾರ್ಥ ಬೆರಿಕೇ ಮಾಡಕೂಡದು ಅಥವಾ ನೀರು ಬೆರಿಸಕೂಡದು.

XII. ಅಂಡರ್‌ಪ್ರೂಫಿನ ಬಾಬತು 20° ಡಿಗ್ರೀಯ ಸ್ಟ್ರೆಂಗ್ತಿನ ಸಾರಾಯಿಯ ಮೇಲೆ ಸಲ್ಲತಕ್ಕ ರೂಪಾಯಿಗೆ ಬಂದಾಣೆ ಮೇರೆ ಲೋಕಲ್‌ಸೆಸ್ ದೇಖೀಲ್ ಗವರ್ನಮೆಂಟ್ ತೀರ್ವೆಯೂ, ಸದರೀ ಸಾರಾಯಿ, (ಇತರ ಪದಾರ್ಥ ಬೇರಿಕೆ ಇಲ್ಲದೆಯೂ, ನೀರು ಬೆರಿಕೆಯಾಗದೆಯೂ) ಬಟ್ಟು ಫರೋಖ್ತು ಅಂಗಡಿಯಲ್ಲಿಯೂ ಚಿಲ್ಲರೆ ಅಂಗಡಿಗಳೊಳಗೂ ಯಾವ ಖರೀದೀ ಪ್ರಕಾರ ಫರೋಖ್ತಾಗತಕ್ಕದ್ದೋ ಅದು ಇದರಡಿ ಕಂಡ ತಖ್ತೇಯಲ್ಲಿ ವಿವರಿಸಲ್ಪಟ್ಟಮೇರೆ ಇದರಿಂದ ನಿಶ್ಚಯಿಸಲ್ಪಟ್ಟಿರುತ್ತೆ:—

	ಟರ್ವ್ ಅಥವಾ ಡಿಸ್ಟ್ರಿಕ್ಟ್.	20° ಅಂಡರ್ ಪ್ರೂಫ್' ಸ್ಪಿರಿಟ್ ಸಾರಾಯಿಗಳು.											
		ಗ್ಯಾಲನ್ ವಂದಕ್ಕೆ ತೆರಿಗೆ.			ಗ್ಯಾಲನ್ ವಂದಕ್ಕೆ ಬಟ್ಟು ಬಿಕರಿ ಕ್ರಯ.			ಚಿಲ್ಲರೇ ಫರೋಖ್ತು ಕ್ರಯ.					
								ಗ್ಯಾಲನ್‌ವಂದಕ್ಕೆ.			ಡ್ರಾಮ್‌ವಂದಕ್ಕೆ.		
		ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.
1	ಬೆಂಗಳೂರು ಷಹರ್ ಮತ್ತು ಸಿವಿಲ್ ವ ಮಿಲಿಟೆರಿ ಸ್ಟೇಷನ್.	3	5	0	4	6	0	5	0	0	0	1	8
2	ಮೈಸೂರು ಷಹರ್.												
3	ಬೆಂಗಳೂರು ಡಿಸ್ಟ್ರಿಕ್ಟ್ (ಸಿವಿಲ್ ವ ಮಿಲಿಟೇರಿ ಸ್ಟೇಷನ್ ವಿನಾ.)												
4	ಮೈಸೂರು ಷಹರುವಿನಾ, ಫ್ರೆಂಚ್‌ರಾಕ್ಸ ಸಬ್ ಡಿವಿಜನ್ ಒಳಗೆ ಅಡಗಿರುವ ತಾಲ್ಲೂಕುಗಳು ವಳಿತವಾಗಿ ಮೈಸೂರುಡಿಸ್ಟ್ರಿಕ್ಟ್.	2	4	0	3	6	0	4	0	0	0	1	4
5	ಕೋಲಾರ ಡಿಸ್ಟ್ರಿಕ್ಟ್.												
6	ಚಿತ್ರದುರ್ಗ ಸಬ್ ಡಿವಿಜನ್‌ನಲ್ಲಿ ಅಡಗಿರುವ ತಾಲ್ಲೂಕುಗಳು ಸಹಿತ ತುಮಕೂರು ಡಿಸ್ಟ್ರಿಕ್ಟ್.												
7	ಕಡೂರು ಡಿಸ್ಟ್ರಿಕ್ಟಿಗೆ ಸೇರಿದಹಾಸನ್ ಸಬ್ ಡಿವಿಜನ್.												

ಪ್ರೂಫ್'ಗಾಗಿಯೂ, ಅಂಡರ್ ಪ್ರೂಫಿನ ಬಾಬತು 30°ಗೂ ಖರೀದಿಗಳು ಮತ್ತು ಅದರ ಮೇಲೆ ಕಟ್ಟತಕ್ಕ ತೀರ್ವೆಬಗ್ಯೆ ಸದರೀ ಸ್ಟ್ರೆಂಗ್ತ್‌ಗಳ ಮೇಲೆ ಅಥವಾ ಸ್ಟ್ರೆಂಗ್ತ್‌ಗಳ ವಳಗೆ ತಮಾಂ ಸ್ಟ್ರೆಂಗ್ತ್‌ಗಳಿಗೂ ತೀರ್ವೆಸಹ ಗವರ್ನಮೆಂಟ್ ಹೈಡ್ರಾಮಿಟರ್ಸ್ ಯಂತ್ರಗಳ ಪ್ರತಿ ಪೆಟ್ಟಿಗೆ ಸಂಗಡಲೂ ಕಳುಹಿಸಲ್ಪಡುವ ಕ್ಯಾಸಿಲಾ ಯವರ ರೂಲ್ಸ್ ಅನುಸರಿಸಿ ಅಂಡರ್ ಪ್ರೂಫ್' ಬಾಬತು 20°ಗೆ ಮೇಲೆ ವಿವರಿಸಲ್ಪಟ್ಟ ದರಗಳಮೇಲೆ ದಾಮೊಷಾಯಿ ಪ್ರಕಾರ ಕ್ರಮಪಡಿಸಲ್ಪಡತಕ್ಕದ್ದು. ಈ ರೂಲ್ಸಿನಲ್ಲಿರುವ ಯಾವ ಅಂಶವೂ, ಗೌರವಶಾಲಿಗಳಾದ ಖುಷ್

ಬಾಷ್ ಜನಗಳಿಗೂ ಆಸ್‌ಪತ್ರೆಗಳಿಗೂ, ಮ್ಯುಜಿಯಂ ಯಾನೆ ವಿವಿಧವಸ್ತುಶಾಲೆಗಳಿಗೂ ಮತ್ತು ಇತರ ಪಬ್ಲಿಕ್ ಸ್ಥಾಪನೆಗಳಿಗೂ ಅಂಡರ್ ಪ್ರೂಫಿನ ಬಾಬತ್ತು 20° ಮೇಲೆ ಮತ್ತು ಓವರ್ ಪ್ರೂಫಿನ ಬಾಬತು 30° ವರಿಗೆ ಸಾರಾಯಿಯನ್ನು ಸಾಧಾರಣ ವಂದು ಕ್ವಾರ್ಟ್ಸು ಶೀಷೆಗಿಂತ ಕಡಮೆಇಲ್ಲದೆ ಮತ್ತು ವಟ್ಟು ಬಿಕರಿಯ ಖರೀದಿ ಪ್ರಕಾರ 2 ಗ್ಯಾಲನ್‌ಗೆ ಮೀರದ ತೇದಾದ್ ಪ್ರಕಾರ ಸಾರಾಯಿಯನ್ನು ಕೊಡುವದನ್ನು ನಿರೋಧಿಸತಕ್ಕ ಅಂಶ ಯಾವದೂ ಇಲ್ಲವು. ಹೆಚ್ಚು ಸ್ಟ್ರೆಂಗ್ತು ಸಾರಾಯಿಯು ಜರೂರಿಯಾತ್ ಸಂಗತಿಗಳಲ್ಲಿಯೂ ಬೆಂಗಳೂರು ಡೆಪ್ಯುಟಿ ಕಮಿಷ್ನರವರ ವಿಶೇಷ ಮಂಜೂರಾತಿ ಮೇಲೆಯೂ ವಿನಹಾ ಕೊಡಲ್‌ಪಡತಕ್ಕದ್ದಲ್ಲ.

XIII. ಸಾರಾಯಿ ಕಮ್ಮೀಬಂದ ಬಗ್ಯೆ, ಬೆಂಗಳೂರು ಷಹರ್ ಮತ್ತು ಸಿವಿಲ್ ವ ಮಿಲಿಟೇರಿ ಸ್ಟೇಷನ್ ಮ್ಯುನಿಸಿಪಲ್ ಸರಹದ್ದುಗಳ ಆಚೆಗೆ ಫರೋಖ್ತು ಬಗ್ಯೆ ಡಿಸ್ಟಿಲೇರಿಯಿಂದ ಕೊಡಲ್ಪಟ್ಟ ಸಾರಾಯಿಯ ಮೇಲೆ ಸಲ್ಲತಕ್ಕ ತೆರಿಗೆಯ ಮೇಲೆ ಸೇಕಡಾ 2ರ ಪ್ರಕಾರ ಸೋಡ ಯಾ ವಜಾ ಕೊಡಲ್ಪಡತಕ್ಕದ್ದು.

XIV. ಇಜಾರೇದಾರನು, ಡಿಸ್ಟಿಲ್ಲೇರಿಗಳನ್ನಾಗಲಿ, ಬಟ್ಟು ಫರೋಖ್ತು ಅಂಗಡಿಗಳನ್ನಾಗಲಿ, ಕೋಠೀಗಳನ್ನಾಗಲಿ, ಮೇಲ್ವಿಚಾರಣೆ ಮಾಡಲಿಕ್ಕೆ ಯಾವನನ್ನು ಮೊಕರರ್ ಮಾಡುತ್ತಾನೋ ಅಂತಾ ಪ್ರತಿ ಮನುಷ್ಯನನ್ನೂ ಹಾಗೆ ಮೊಕರರ್ ಮಾಡುವದಕ್ಕೆ ಮುಂದಾಗಿ ಮೇಲೆ ಕಂಡ ಷರತ್‌ಗಳಿಗೆ ಅನುಗುಣವಾಗಿ ಕರಾರ್‌ಗಳನ್ನು ಬರೆದು ಕೊಡುವಂತೆ ಮಾಡತಕ್ಕದ್ದು. ಅಂಥಾ ಕರಾರ್‌ಗಳು, 1884ನೇ ಇಸವೀ ಏಪ್ರೆಲ್ ಒಂದನೇ ತಾರೀಖು ಲಾಗಾಯತ್ ಒಂದು ತಿಂಗಳೊಳಗಾಗಿ, ಅಂಥಾ ನೌಕರನು ಯಾವ ಡಿಸ್ಟ್ರಿಕ್ಟಿನಲ್ಲಿ ಮೊಕರರ್ ಮಾಡಲ್ಪಡುತ್ತಾನೋ ಆ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರಲ್ಲಿ ಯಿಡಲ್ಪಡತಕ್ಕದ್ದು. ಮತ್ತು ಸದರೀ ಇಜಾರೇದಾರನು, ಷರಾಬ್ ತಯಾರಿ, ಸಾಗಿಸುವಣಿ ಮತ್ತು ಫರೋಖ್ತು ಈ ಕೆಲಸಗಳಲ್ಲಿ ತನ್ನಿಂದ ಮೊಕರರ್ ಮಾಡಲ್ಪಡುವ ತಮಾಂ ಜನಗಳೂ, ತಮ್ಮಿಂದ ಮಾಡಿಕೊಳ್ಳಲ್ಪಟ್ಟ ಕರಾರ್‌ಗಳ ವ ಕಾನೂನಿನ ನಿಬಂಧನೆಗಳನ್ನು ಖಂಡಿತವಾಗಿ ಅನುಸರಿಸುವಂತೆ ಮಾಡುವದಕ್ಕೆ ಪೂರಾ ತರದೂದ್ ಮಾಡತಕ್ಕದ್ದು; ಮತ್ತು ಸದರೀ ನಿಬಂಧನೆಗಳಿಗೆ ಬರಖಿಲಾಫ್ ನಡಿಸಲ್ಪಟ್ಟಂತೆ ಆತನ ತಿಳುವಳಿಕೆಗೆ ಬಂದರೆ, ಸದರೀ ಅಪರಾಧಕ್ಕೆ ವಿಧಿಸಲ್ಪಟ್ಟ ದಂಡನೆ ವಿಧಿಸುವ ಬಗ್ಯೆ, ಯಾವ ಡಿಸ್ಟ್ರಿಕ್ಟಿನಲ್ಲಿ ಬರಖಿಲಾಫ್ ನಡೆಯಿತೋ ಅಂತಾ ಡಿಸ್ಟ್ರಿಕ್ಟಿನ ಡೆ|| ಕಮ್ಮಿಷನರ ಜಾಹೀರಾತಿಗೆ ಸದರೀ ಸಂಗತಿಯನ್ನು ತರತಕ್ಕದ್ದು, ಮತ್ತು ಸದರೀ ಅಪರಾಧಿಯನ್ನು ತಗೈರ್ ಮಾಡುವಂತೆ ಡೆ|| ಕಮ್ಮಿಷನರಿಂದ ಅಪೇಕ್ಷಿಸಲ್ಪಟ್ಟರೆ, ಅದೇ ಮೇರೆ ಅವನನ್ನು ತಗೈರ್ ಮಾಡತಕ್ಕದ್ದು.

XV. ಇಜಾರೇಯ ಷರತ್‌ಗಳಿಗೆ ವಿರುದ್ಧವಿಲ್ಲದೆ, ಗವರ್ನ್‌ಮೆಂಟಿನಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಇಜಾರೇದಾರನು ಅನುಗುಣವಾಗಿ ನಡೆಯತಕ್ಕದ್ದು, ಮತ್ತು ಆತನ ನೌಕರ್‌ಮಾನೆಯರೆಲ್ಲಾ, ಬಟ್ಟೀ ಇಳಿಸಲ್ಪಟ್ಟು ಕೊಡಲ್ಪಟ್ಟ ಸಾರಾಯಿಯ ಬಂದೋಬಸ್ತು ಮತ್ತು ಕ್ರಮ, ಉಪಯೋಗಿಸಲ್ಪಟ್ಟ ತಮಾಂ ಪಾತ್ರೆಗಳ ಪಾಕೀಜೇ, ಲೋಹ ಪಾತ್ರೆಗಳ ಕಲಾಯಿಹಾಕಿಸುವಣಿ, ಕಾವಲು, ಆವರಣದ ತನಿಖೀ ಮತ್ತು ಆರೋಗ್ಯಕರವಾದ ಸ್ಥಿತಿ ಮತ್ತು ಗವರ್ನ್‌ಮೆಂಟಿನವರ ಅಥವಾ ಇಜಾರೇದಾರರ ಅಥವಾ ಉಭಯತ್ರರ ಪ್ರಯೋಜನಗಳಿಗೆ ಸಂಬಂಧಪಟ್ಟ ಇತರ ವಿಷಯಗಳು, ಇವುಗಳ ಬಗ್ಯೆ ಗವರ್ನ್‌ಮೆಂಟಿನವರು ಜಾರೀಮಾಡಿದ ರೂಲ್ಸನ್ನೂ, ಹುಕ್ಕುಂಗಳನ್ನೂ, ಪೂರಾ ಜಾರೀಗೆ ತರುವ ಅಂಶಗಳಿಗೆ ನಿಗೇ ಕೊಡತಕ್ಕದ್ದು.

XVI. ಮೇಲೆ ಕಂಡ ಷರತ್‌ಗಳ ಪೈಕೀ ಯಾವ ಷರತ್‌ಗಳಿಗಾಗಲಿ, ಇಜಾರೇದಾರನಿಂದ ಅಥವಾ, ಷರಾಬು ತಯಾರಿ, ಸಾಗಿಸುವಣಿ, ಯಾ ಫರೋಖ್ತು ಇಂತಾದ್ದರಲ್ಲಿ, ಆತನಿಂದ ಮೊಕರರ್ ಮಾಡಲ್ಪಟ್ಟ ಜನಗಳ ಪೈಕೀ ಯಾರಿಂದಾದರೂ, ಸದರೀ ಇಜಾರೇದಾರನು ನೋಡಿಯೂ ನೋಡದಹಾಗೆ ಇರುವದರಿಂದ ಅಥವಾ ರಹಸ್ಯವಾದ ಷಾಮಿಲಾತೀಯಿಂದ ಮನಃಪೂರ್ವಕವಾಗಿ ಬರಖಿಲಾಫ್ ಯೇನಾದರೂ ನಡಿಸಲ್ಪಟ್ಟರೆ, ಇಜಾರೇಯನ್ನು ರದ್ದುಮಾಡುವದಕ್ಕೂ, ಠೇವಣೀ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಟ್ಟಿತೆಂದು ತಿಳಿಸುವದಕ್ಕೂ, Iನೇ ಷರತ್‌ನಲ್ಲಿ ವಿಧಿಸಲ್ಪಟ್ಟ ಪ್ರಕಾರ ಅಮಲ್ ನಡಿಸುವದಕ್ಕೂ ದೀವಾನರವರಿಗೆ ಯಿಖ್ತೀಯಾರಿ ಇರತಕ್ಕದ್ದು.

XVII. ಗವರ್ನ್‌ಮೆಂಟಿನವರಿಂದ ಸದರೀ ಬಗ್ಯೆ ವಿಧಿಸಲ್ಪಡಬಹುದಾದ ಅಂತಾ ಷರತ್‌ಗಳಿಗೆ ಒಳಪಟ್ಟು, ಇಜಾರೇದಾರನಿಂದ, ಕೊಲಂಬೋ ಸಾರಾಯಿಯನ್ನು ಅಥವಾ ಇತರ ವಿಧಗಳುಳ್ಳ ಆರೆಕ್ ಸಾರಾಯಿ, ಲಿಕ್ಕರ್ ಸಾರಾಯಿ ಇವುಗಳನ್ನು ತಯಾರ್ಮಾಡಲ್ಪಡಲಿಕ್ಕೂ, ಫರೋಖ್ತು ಮಾಡಲ್ಪಡಲಿಕ್ಕೂ, ಗವರ್ನ್‌ಮೆಂಟಿನವರು ಅಂಗೀಕರಿಸಬಹುದು, ಪರಂತು ಈ ಇಸ್ತಿಹಾರ್‌ನಾಮೆಯಲ್ಲಿ ಕಂಡ ಸಾಧಾರಣ ಕಂಟ್ರಿ ಸಾರಾಯಿಯಿಂದ ಆಗುವ ಹುಟ್ಟುವಳಿಯ ಮೇಲೆ ಸದರೀ ಬಗ್ಯೆ ವಜಾ ಯಾವದೂ ಕೊಡಲ್ಪಡಲಾರದು.

XVIII. ಮೇಲೆ ಕಂಡ ಷರತ್‌ಗಳಿಂದ, ಡೆ|| ಕಮ್ಮಿಷನರಿಗೆ ಕೊಡಲ್ಪಟ್ಟ ಅಧಿಕಾರಗಳೂ, ವಿಧಿಸಲ್ಪಟ್ಟ ಕೃತ್ಯಗಳೂ ಸುದ್ಧಾ, ರೆಸೀಡೆಂಟರು ಮೊಕರರ್ ಮಾಡಬಹುದಾದ ಅಂಥಾ ಆಫೀಸರಿಂದ ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಟೇಷನ್‌ನೊಳಗೆ ಚಲಾಯಿಸಲ್ಪಡತಕ್ಕದು, ಮತ್ತು ನಿರ್ವಹಿಸಲ್ಪಡತಕ್ಕದ್ದು.

8. ಕಳೆದ ವರುಷಗಳಲ್ಲಿ ಕೊಡಲ್ಪಟ್ಟ ಷರಾಬಿನ ತೇದಾದು ಇದರಡಿ ಕಂಡ ತಖ್ತೆಯಲ್ಲಿ ಕಾಣಿಸಿರುತ್ತೆ.

	1870—71 ಗ್ಯಾಲನ್‌ಗಳು.	1871—72 ಗ್ಯಾಲನ್‌ಗಳು.	1872—73 ಗ್ಯಾಲನ್‌ಗಳು.	1873—74 ಗ್ಯಾಲನ್‌ಗಳು.	1874—75 ಗ್ಯಾಲನ್‌ಗಳು.	1875—76 ಗ್ಯಾಲನ್‌ಗಳು.	1876—77 ಗ್ಯಾಲನ್‌ಗಳು.	1877—78 ಗ್ಯಾಲನ್‌ಗಳು.	1878—79 ಗ್ಯಾಲನ್‌ಗಳು.	1879—80 ಗ್ಯಾಲನ್‌ಗಳು.	1880—81 ಗ್ಯಾಲನ್‌ಗಳು.	1881—82 ಗ್ಯಾಲನ್‌ಗಳು.	1882—83 ಗ್ಯಾಲನ್‌ಗಳು.
ಬೆಂಗಳೂರು ಷಹರ್ ಮತ್ತು ಸಿವಿಲ್ ವ ಮಿಲಿಟರಿ ಸ್ಟೇಷನ್ ..	77,149	83,345	85,099	90,760	78,872	75,125	68,782	71,207	69,710	85,162	95,395	97,314	106,433
ಮೈಸೂರು ಷಹರ್ ..	12,529	12,567	13,160	10,249	11,000	9,433	8,030	4,814	5,921	7,514	9,163	10,466	10,904
ಒಟ್ಟು, ಷಹರ್‌ಗಳಲ್ಲಿ ಕೊಡಲ್ಪಟ್ಟದ್ದು.	89,678	95,912	98,259	101,009	89,872	84,558	76,812	76,021	75,631	92,676	104,558	107,780	117,337
ಬೆಂಗಳೂರು ಡಿಸ್ಟ್ರಿಕ್ಟು. ..	45,190	40,061	39,884	43,408	35,456	29,773	22,095	14,279	17,505	28,724	38,342	42,231	42,739
ಕೋಲಾರ ಡಿಸ್ಟ್ರಿಕ್ಟು ..	18,515	20,046	21,658	28,080	23,182	18,160	11,746	5,043	8,619	12,858	16,290	21,786	24,008
ತುಮಕೂರು ಡಿಸ್ಟ್ರಿಕ್ಟು, ಚಿತ್ರದುರ್ಗದ ಸಬ್ ಡಿವಿಜನ್ ಸಹ ..	*16,356	*16599	*18,842	*18,143	*12,980	*8,066	*6,881	*5,225	*5,266	*6,279	*7,566	6,738	6,866
ಮೈಸೂರು ಡಿಸ್ಟ್ರಿಕ್ಟು, ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ದೇಖೀಲ್ .. ಕಡೂರು ಡಿಸ್ಟ್ರಿಕ್ಟಿನ ಹಾಸನ ಸಬ್ ಡಿವಿಜನ್ ..	18,465	18,332	20,977	20,483	18,666	17,064	18,203	11,137	9,564	13,253	14,694	19,030	17,970
ಒಟ್ಟು ಗಾವಗಾನೆಗಳಲ್ಲಿ ಕೊಡಲ್ಪಟ್ಟದ್ದು ..	98,526	95,038	101,361	110,114	90,284	73,063	58,925	35,684	40,954	61,114	76,892	89,785	91,583
ಜುಮ್ಲಾ ಕೊಡಲ್ಪಟ್ಟದ್ದು ..	188,204	190,950	199,620	211,123	180,156	157,621	135,737	111,705	116,585	153,790	181,450	197,565	208,920

* ಈ ಅಂಕೆಗಳು 1870—71ರ ಲಾಗಾಯಿತು 1880—81ರವರಿಗೆ ಹಾಲಿ ಶಿವಮೊಗ್ಗಾ ಡಿಸ್ಟ್ರಿಕ್ಟು ದಾವಣಗೆರೆ ತಾಲ್ಲೂಕಿಗೆ ಕೊಡಲ್ಪಟ್ಟ ತೇದಾದನ್ನೂ ಅಡಗಿಸಿಕೊಂಡಿರುತ್ತದೆ.

ತಾರೀಖು 22ನೇ ಜನವರೀ 1884.

ನಂ. 305.—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 23ನೇ ಸೆಕ್ಷನಿಗನುಗುಣವಾಗಿ ಯಳಂದೂರು ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ ಮಾಜಿಸ್ಟ್ರೇಟ ಟಿ. ಕೃಷ್ಣರಾಯರಿಗೆ ಇದರಡೀಕಂಡ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ.

(1.) ಲಾಷ್ ವಿಚಾರಣೆ ಬಗ್ಯೆ ಅಧಿಕಾರ (ಸೆಕ್ಷರ್ 135.)

(2.) ತಕಸೀರುಗಳ ಬಾಬತು ಫಿರ್ಯಾದುಗಳನ್ನ ದಾಖಲ್ಮಾಡಿಕೊಳ್ಳುವದಕ್ಕೂ ಮತ್ತು ಪೋಲೀಸ್ ರಿಪೋರ್ಟುಗಳನ್ನು ತೆಗದುಕೊಳ್ಳುವದಕ್ಕೂ ಅಧಿಕಾರ (ಸೆಕ್ಷರ್ 141.)

(3.) ನಿರೋಧ ವಗ್ಯೆರೇಗಳನ್ನ ಅಡ್ಡೀ ಮಾಡುವಂತೆ ಹುಕ್ಕುಂ ಕೊಡುವದಕ್ಕೆ ಅಧಿಕಾರ (ಸೆಕ್ಷರ್ 518.)

(4.) ಬಾರ್ ಬಾರ್ ಹೇಸಿಗೆ ಮಾಡುವದನ್ನ ನಿಷೇಧಿಸಿ ಹುಕ್ಕುಂ ಕೊಡುವ ಬಗ್ಯೆ ಅಧಿಕಾರ (ಸೆಕ್ಷರ್ 519.)

2. ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 335ನೇ ಸೆಕ್ಷನಿಗನುಗುಣವಾಗಿ ಟಿ. ಕೃಷ್ಣರಾಯರು ಫಿರ್ಯಾದಿಗಳ ಮತ್ತು ಸಾಕ್ಷಿಗಳ ಸಾಕ್ಷ್ಯತ್ವವನ್ನ ಕನ್ನಡ ಭಾಷೆಯಲ್ಲಿ ಸ್ವದಸ್ತೂರು ತೆಗದುಕೊಳ್ಳುವಂತೆ ಹುಕ್ಕುಂ ಮಾಡಲ್ಪಟ್ಟಿರುತ್ತಾರೆ.

ನಂ. 306.—ಶಿವಮೊಗ್ಗಾ ಡಿಸ್ಟ್ರಿಕ್ಟು ನಗರ ತಾಲ್ಲೂಕು ಅಮಲ್ದಾರ್ ಲಾಜರಸ್ ಡುಮಿಂಗೊ ಯವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ವಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಸದರೀ ತಾಲ್ಲೂಕು ಶಿರಸ್ತೇದಾರ್ ಬಾಬುರಾಯರು, ಲಾಜರಸ್ ಡುಮಿಂಗೊಯವರ ಗ್ಯೆರ್ ಹಾಜರಿಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ವರಿಗೆ, ನಗರ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ ಮಾಜಸ್ಟ್ರೇಟರಾಗಿ ಆಕ್ಟಿಂಗ್ ತರೀಕೆ ಕೆಲಸ ನೋಡುವಂತೆ ಮೊಕರರ್.

ತಾರೀಖು 23ನೇ ಜನವರೀ 1884.

ನಂ. 307.—ಬೆಂಗಳೂರು ಷಹರ್ ಮ್ಯುನಿಸಿಪೆಲ್ ಇಲಾಖಾ ಅಸ್ಸೆಸ್ಸರ್ ವ ಕಲೆಕ್ಟರ್ ಪಿ. ಸ್ವಾಮಿದಾಸಪಿಳ್ಳೆ ಯವರಿಗೆ, ಅವರು ವುಪಯೋಗಿಸಿಕ್ಕೊಂಡ ತಾರೀಖು ಲಾಗಾಯತು ವಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 29ನೇ ಜನವರೀ 1884.

ನಂ. 308.—1879ನೇ ಇಸವಿ 1ನೇ ನಂಬರ್ ಇಂಡಿಯನ್ ಸ್ಟಾಂಪ್ ಆಕ್ಟನ್ನು ಮೈಸೂರು ದೇಶಕ್ಕೆ ಜಾರಿಗೆ ತಂದ ಇಂಡ್ಯಾ ಗವರ್ನಮೆಂಟಿನವರ 1879ನೇ ಇಸವಿ 22ನೇ ಮೇ ಮಾಹೆ 99. I. J. ನಂಬರವುಳ್ಳ ಇಸ್ತಿಹಾರ್ನಾಮೆಯ (ಸಿ) ಕ್ಲಾಜ್ ಅನುಸರಿಸಿ ಶ್ರೀಮನ್ ಮಹಾರಾಜಾ ಸರ್ಕಾರದವರು ಹುಕ್ಕುಂ ಮಾಡುವದೇನಂದರೆ, ವಂದು ಡಿಸ್ಟ್ರಿಕ್ಟಿನ ಸಬ್ ಡಿವಿಜನ್ ಚಾರ್ಜಿನಲ್ಲಿರತಕ್ಕ ಆಫೀಸರರು, ಸದರೀ ಆಕ್ಟಿನ ಅರ್ಥ ಪ್ರಕಾರ ವಬ್ಬ ಕಲೆಕ್ಟರೆಂದು ಎಣಿಸಲ್ಪಡತಕ್ಕದ್ದು.

ನಂ. 309.—ಬೆಂಗಳೂರು ಡಿಸ್ಟ್ರಿಕ್ಟು ಮಾಗಡಿ ತಾಲ್ಲೂಕು ಅಮಲ್ದಾರ್ ಸಿ. ಕೃಷ್ಣರಾಯರಿಗೆ ಮಾಹೆ ಮಜಕೂರ್ 4ನೇ ಮುರ್‍ಕುಂ, ಯಾ ಅವರು ವುಪಯೋಗಿಸಿಕೊಂಡ ತಾರೀಖು ಲಾಗಾಯತು 3 ವಾರಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 310.—ತುಮಕೂರು ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ವ 3ನೇ ಕ್ಲಾಸ ಮಾಜಿಸ್ಟ್ರೇಟರಾದ ನಾಗೇಶ್ವರಯ್ಯನವರಿಗೆ, ಅವರು ಸದರೀ ತಾಲ್ಲೂಕು ಚಾರ್ಜಿನಲ್ಲಿರುವ ಕಾಲದಲ್ಲಿ ಫಿರ್ಯಾದಿಗಳ ವ ಸಾಕ್ಷಿಗಾರರ ಸಾಕ್ಷತ್ವವನ್ನು ಕನ್ನಡ ಭಾಷೆಯಲ್ಲಿ ಸ್ವದಸ್ತೂರು ತೆಗದುಕೊಳ್ಳುವಂತೆ ಹುಕ್ಕುಂ ಕೊಡಲ್ಪಟ್ಟಿರುತ್ತೆ.

ತಾರೀಖು 5ನೇ ಫಬ್ರವರೀ 1884.

ನಂ. 311.—ಇದರಿಂದ ಪ್ರಕಟಿಸಲ್ಪಡುವದೇನಂದರೆ, ಕಡೂರು ಡಿಸ್ಟ್ರಿಕ್ಟು ವುತ್ಪತ್ತೀ ಬಾಬತು ಇದರಡಿ ಕಂಡ ನಾಟಾಗಳು ಅವುಗಳ ಚಾರ್ಜುವುಳ್ಳ ಡೆಪ್ಯುಟಿ ಕಮ್ಮಿಷನರಿಂದ, ಅಥವಾ ಸದರೀ ಬಗ್ಯೆ ಅಹೆರು ನೇಮಿಸಬಹುದಾದ ಇತರ ಆಫೀಸರರಿಂದ ಈ ಕೆಳಗೆ ವಿವರಿಸಲ್ಪಟ್ಟ ತಾರೀಖಿನಲ್ಲಿಯೂ, ಸ್ಥಳದೊಳಗೂ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ಹರಾಜ್ ಹಾಕುವ ಸ್ಥಳದ ಹೆಸರು.	ಹರಾಜ್ ಮಾಡುವ ತಾರೀಖು.	ತೇಗದಮರ.	ವುಳಿಸಿಕೊಳ್ಳಲ್ಪಟ್ಟದ್ದು.	ವುಳಿಸಿಕೊಳ್ಳಲ್ಪಡದೆ ಇರುವದು.	ಕೂಚಗಳು.
ಚಿಕ್ಕಮಗಳೂರು ಕೋಠಿ.	1884ನೇ ಫಿಬ್ರುವರೀ 21ನೇ ಮರ್ಕುಂ.	22	10	37	400

ಜುಮ್ಲಾ ಹೆಚ್ಚು ಕಡಿಮೆ—469

ಹರ್ರಾಜಿನ ಷರತಗಳು—ಸರ್ಕ 1873ನೇ ಜೂನ್ 12ನೇ ಮರ್ಕುಂ 20ನೇ ನಂಬರ್ ಮೈಸೂರು ಗೆಜೆಟಿನಲ್ಲಿ ಪ್ರಕಟಿಸಲ್ಪಟ್ಟ ಪ್ರಕಾರ ಇರತಕ್ಕದ್ದು ಮತ್ತು ಇವುಗಳು ಹರಾಜ್ ಕಾಲದಲ್ಲಿ ಪ್ರಕಟವಾಗಿ ಓದಲ್ಪಡುವದು.

ತಾರೀಖು 21ನೇ ಮಾರ್ಚಿ 1883.

ನಂ. 84.—ಕಾರ್‍ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಯೆ ಹಿಂದಿನ ದಿನ ಸೆಕ್ರಿಟೇರಿಯವರಿಗೆ ತಮ್ಮ ಕಾರ್ಡಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

"ಬಮೋಜೀಬ್ ಹುಕ್ಕುಂ"

ಆರ್. ವಿಜಯೀಂದ್ರರಾವ್,
ಸೆಕ್ರೆಟೇರಿ.

ತಾರೀಖು 22ನೇ ಮಾರ್ಚಿ 1883

ನಂ. 85.—ದೀವಾನರವರು ತಮ್ಮ ವಾಸಸ್ಥಾನದಲ್ಲಿ ಪ್ರತಿ ಬುಧವಾರ ಮಧ್ಯಾನ್ಹ 12 ಘಂಟೆಯಲ್ಲೂ, ಗುರುವಾರಗಳಲ್ಲಿ ಬೆಳಿಗ್ಯೆ 8 ಘಂಟೆಯಲ್ಲೂ, ತಮ್ಮ ಭೇಟೀ ತೆಗದುಕೊಳ್ಳಲಪೇಕ್ಷಿಸತಕ್ಕವರಿಗೆ ಭೇಟೀ ಕೊಡುವರು. ಅವರು ತಮ್ಮ ಕಾರ್ಡ ಚೀಟಿಗಳನ್ನು ದೀವಾನರವರ ಪ್ರೈವೇಟ್ ಸೆಕ್ರಿಟೇರಿಯವರಿಗೆ ಹಿಂದಿನ ದಿನದಲ್ಲಿ ಕಳುಹಿಸತಕ್ಕದ್ದು.

"ಬಮೋಜೀಬ್ ಹುಕ್ಕುಂ,"

ಸಿ. ರಾಘವಾಚಾರ್ರು,
ಪ್ರೈವೇಟ್ ಸೆಕ್ರೆಟೇರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಛಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಫೆಬ್ರುವರೀ ತಾ|| 9, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೧ನೇ ಭಾಗ

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರುವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ರೆಸೀಡೆಂಟರ ಇಲಾಖಾ.

ಇಸ್ತಿಹಾರ್ ನಾಮಾ.

ನಂ. 24. ತಾರೀಖು 30ನೇ ಜನವರೀ 1884.

ಸನ್ 1883ನೇ ಇಸವಿಯ ಬೆಂಗಳೂರು ಮ್ಯುನಿಸಿಪೆಲ್ ರೆಗ್ಯೂಲೇಷನ್‌ಗಳ 5ನೇ ಸೆಕ್ಷನ್ ನಿಬಂಧನೆಗಳನುಸರಿಸಿ, ಮೈಸೂರು ಶೀಮೆಯ ರೆಸೀಡೆಂಟರವರು ಅಪ್ಪಣೆಕೊಡಿಸುವದೇನಂದರೆ, ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಟೇಷನಿನ, ಉದ್ಯೋಗಧರ್ಮತಃ ಮೆಂಬರ್‌ಗಳಲ್ಲದ, ಮ್ಯುನಿಸಿಪೆಲ್ ಕಮ್ಮಿಷನರ್‌ಗಳು, ಇದರಡಿಕಂಡ ರೂಲ್ಸ್ ಪ್ರಕಾರ ಐಯಿಂದ ಚುನಾವಣೀ ಮೂಲಕ ಮೊಕರರ್‌ಮಾಡಲ್ಪಡತಕ್ಕದ್ದು:

1. ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಟೇಷನ್ ಮ್ಯುನಿಸಿಪೆಲ್ ಬೋರ್ಡಿನ ಸರ್ಕಾರ್ ನೌಕರರಲ್ಲದ ಮೆಂಬರ್‌ಗಳ ಸಂಖ್ಯೆಯು, ಪ್ರಜೆಗಳ ಪೈಕಿ ಇದರಡಿ ಕಂಡ ತರಗತಿಗಳ ಪ್ರತಿನಿಧಿಗಳು 18 ಮಂದಿ ಇರತಕ್ಕದ್ದು.

    (1) ಯೂರೋಪಿಯನ್‌ಗಳು ಮತ್ತು ಯೂರೇಜಿಯನ್‌ಗಳು.
    (2) ಮಹಮ್ಮದೀಯರು.
    (3) ಹಿಂದುಗಳು ಮತ್ತು ಇತರರು

2. ಈ ತರಗತಿಯ ಜನಗಳು ಇದರಡಿ ಕಂಡಮೇರೆ ಬೋರ್ಡಿಗೆ ಪ್ರತಿನಿಧಿಗಳನ್ನು ಒದಗಿಸತಕ್ಕದು:—

ಯೂರೋಪಿಯನ್ ವ ಯೂರೇಜಿಯನ್‌ಗಳು	6
ಮಹಮ್ಮದೀಯರು	4
ಹಿಂದುಗಳು ಮತ್ತು ಇತರರು	8

3. ಯಾವ ಮನುಷ್ಯನಾಗಲಿ, ಮ್ಯುನಿಸಿಪೆಲ್ ಕಮ್ಮಿಷನರಾಗಿ ಚುನಾಯಿಸಲ್ಪಡುವದಕ್ಕೆ ಮುಂಚೆ, ಇದರಡಿ ಕಂಡ ಷರತುಗಳನ್ನು ನೆರವೇರಿಸತಕ್ಕದ್ದು.

(*a*) ಅವನು ಗಂಡಸಾಗಿರತಕ್ಕದ್ದು.
(*b*) ಅವನಿಗೆ 25 ವರುಷಗಳ ವಯಸ್ಸು ಪೂರ್ತಿಯಾಗಿರಬೇಕು.
(*c*) ಇಂಗ್ಲಿಷ್‌ಭಾಷೆಯಲ್ಲಿ ಆತಗೆ ಒಳ್ಳೆಯ ಜ್ಞಾನವಿರಬೇಕು.

(*d*) ಅವನು ಮ್ಯೂನಿಸಿಪೆಲ್ ಸರಹದ್ದುಗಳೊಳಗೆ ವಾಸಸ್ಥನಾಗಿರಬೇಕು.

(*e*) ಅವನು, ಯಾವ ಸಾಲ್‌ನಲ್ಲಿ ಚುನಾಯಿಸಲ್ಪಡುತ್ತಾನೋ ಅದರ ಹಿಂದಿನ ಸಾಲ್ ಬಗ್ಯೆ, ಈ ಮಾರ್ಜಿನ್ನಲ್ಲಿ ಕಂಡ ವಿಧಗಳ ಪೈಕಿ ಒಂದು ಅಥವಾ ಹೆಚ್ಚು ಮ್ಯುನಿಸಿಪೆಲ್ ತೀರ್ವೆಗಳನ್ನಾಗಲಿ ತೆರಿಗೆಗಳನ್ನಾಗಲಿ, ಆ ಸಾಲಿಗಾಗಿ ಮ್ಯುನಿಸಿಪಾಲಿಟಿಗೆ ಜಮೆಕಟ್ಟಲ್ಪಟ್ಟ, ಗವರ್ನ್‌ಮೆಂಟ್ ಜಮೀನ್ ಕಂದಾಯಕ್ಕೆ 20 ರೂಪಾಯಿಗಳಿಗೆ ಕಡಮೆ ಇಲ್ಲದ ಒಂದು ಮೊಬಲಗನ್ನಾಗಲಿ ಪಾವತಿ ಮಾಡಿರತಕ್ಕದ್ದು, ಅಥವಾ ಅವನು ಮಾಹೆಯಾನಾ 30 ರೂಪಾಯಿಗಳಿಗೆ ಕಡಮೆಯಿಲ್ಲದ ಬಾಡಿಗೆ ಕೊಡತಕ್ಕ ಮ್ಯುನಿಸಿಪೆಲ್ ಸರಹದ್ದಿನಲ್ಲಿರುವ ಒಂದುಮನೆಯಲ್ಲಿ ವಾಸಮಾಡತಕ್ಕದ್ದು.

(A) ಬಂಡಿಗಳು, ಕುದುರೆಗಳು ಅಥವಾ ಇತರ ಜಾನವರ್‌ಗಳು, ಇವುಗಳ ಮೇಲೆ ತೆರಿಗೆ.

(B) ಕುಶಲ ವಿದ್ಯೆಗಳು, ಕಸಬ್‌ಗಳು, ವ್ಯಾಪಾರಗಳು, ಯಾ ವೃತ್ತಿಗಳು, ಇವುವಳಮೇಲೆ ತೆರಿಗೆ.

(C) ಮನೆಗಳು, ಕಟ್ಟಡಗಳು, ಅಥವಾ ಜಮೀನ್‌ಗಳು ಇವುಗಳ ಮೇಲೆ ಬಟ್ಟು ಕೆಲಸಗಳಿಗಾಗಿ ಯಾಗಲಿ, ಬೆಳಕು ಉಂಟುಮಾಡುವ ಬಗ್ಯೆ ಅಥವಾ ನೀರಾವರೀ ಬಗ್ಯೆ ಆಗಲಿ, ಅವುಗಳ ಸಾಲಿಯಾನಾ ಹುಟ್ಟುವಳೀ ಪ್ರಕಾರ ಹಾಕತಕ್ಕ ತೀರ್ವೆಗಳು.

ಪರಂತು, ಅವಿಭಕ್ತರಾದ ಒಂದು ಹಿಂದೂ ಕುಟುಂಬವು, (*e*) ಕ್ಲಾಜ್‌ನಲ್ಲಿ ನಮೂದಿರುವ ತೀರ್ವೆಗಳನ್ನಾಗಲಿ, ತೆರಿಗೆಗಳನ್ನಾಗಲಿ ಕೊಟ್ಟಾಗ, ಆ ಕುಟುಂಬದ ಒಬ್ಬ ಮೆಂಬರು, ಆವಶ್ಯಕಗಳಾದ ಇತರ ಯೋಗ್ಯತೆಗಳನ್ನು ಪಡೆದಿರುವದರಿಂದ, ಒಬ್ಬ ಕಮ್ಮಿಷನರಾಗಿ ಚುನಾಯಿಸಲ್ಪಡಲಿಕ್ಕೆ ಅರ್ಹನಾಗಿರತಕ್ಕದ್ದು.

4. ಮ್ಯುನಿಸಿಪಾಲಿಟಿಯ ಯಾವ ಆಫಿಸರಾಗಲಿ, ನೌಕರನಾಗಲಿ, ಮ್ಯುನಿಸಿಪಾಲಿಟಿಯ ನೌಕರಿಯಲ್ಲಿರುವತನಕ, ಒಬ್ಬ ಮ್ಯುನಿಸಿಪೆಲ್ ಕಮ್ಮಿಷನರಾಗಿ ಚುನಾಯಿಸಲ್ಪಡಲಿಕ್ಕೆ ಅರ್ಹನಾಗಿರತಕ್ಕದ್ದಲ್ಲವು.

5. ಯಾವದಾದರೂ ತಕಸೀರಿಗಾಗಿ ಕ್ರೈದ್ ಸಜಾ ವಿಧಿಸಲ್ಪಟ್ಟಿರುವ, ಅಥವಾ ಚುನಾವಣೆಗೆ ಪೂರ್ವ ಸಂವತ್ಸರದಲ್ಲಿ ದಿವಾಳೀಯೆಂದು ತಿಳಿಸಲ್ಪಟ್ಟಿರುವ ಅಥವಾ ಸಮಷ್ಟಿಯಾದ ವ್ಯಾಪಾರ ಸಂಘದಲ್ಲಿಯಾಗಲಿ, ಕಮ್ಮಿಷನರ್‌ಗಳೊಡನೆ, ಯಾ ಕಮ್ಮಿಷನರ್‌ಗಳಿಗಾಗಿ ಮಾಡಲ್ಪಟ್ಟ ಯಾವದಾದರೂ ಒಡಂಬಡಿಕೆಯಲ್ಲಿಯಾಗಲಿ, ಕೆಲಸದಲ್ಲಾಗಲಿ ಒಬ್ಬ ಹಿಸ್ಸೇದಾರನಾಗಿರುವದಕ್ಕಿಂತ ಅನ್ಯಥಾ ಸಂಬಂಧವುಳ್ಳ ಯಾವ ಮನುಷ್ಯನೂ, ಒಬ್ಬ ಮ್ಯುನಿಸಿಪೆಲ್ ಕಮ್ಮಿಷನರಾಗಿ ಚುನಾಯಿಸಲ್ಪಡಲಿಕ್ಕೆ ಅರ್ಹನಾಗಿರತಕ್ಕದಲ್ಲವು.

6. ಸ್ತ್ರೀಯಾಗಲಿ ಪುರುಷನಾಗಲಿ, ಪ್ರತಿ ವ್ಯಕ್ತಿಯೂ, 21 ವರುಷಗಳ ವಯಸ್ಸು ಪೂರೈಸಿ ಸ್ವದೇಶಭಾಷೆಯನ್ನು ಓದುವದಕ್ಕೂ ಬರಿಯುವದಕ್ಕೂ ತಿಳಿದಿದ್ದು ಇದರಡಿ ಕಂಡ ಷರತ್‌ಗಳ ಪೈಕಿ ಒಂದನ್ನಾಗಲಿ ಇತರವನ್ನಾಗಲಿ ನೆರವೇರಿಸಿದರೆ ಅಭಿಪ್ರಾಯ ಕೊಡಲಿಕ್ಕೆ ಅರ್ಹನಾಗಿರತಕ್ಕದ್ದು; ಯಾವವಂದರೆ:—

(*a*) ಮ್ಯುನಿಸಿಪಾಲಿಟಿ ಸರಹದ್ದುಗಳೊಳಗೆ, ಬಟ್ಟು ಮ್ಯುನಿಸಿಪೆಲ್ ಕೆಲಸಗಳಿಗಾಗಿ ತೀರ್ವೆಗಳು ಮೊಕರರ್ ಮಾಡಲ್ಪಟ್ಟ ಒಂದು ಮನೆಯು, ಕಟ್ಟಡ, ಯಾ ಜಮೀನಿನ ಬಾಬತು ಅವನ ಅಥವಾ ಅವಳ ಹಕ್ಕುದಾರೀ ವಿಷಯದಲ್ಲಿ ಯಥಾರ್ಥವಾಗಿ ಸ್ವಂತಗಾರರಾಗಿರತಕ್ಕದ್ದು.

(*b*) ಅವನಾಗಲಿ ಅವಳಾಗಲಿ ಮ್ಯುನಿಸಿಪೆಲ್ ಸರಹದ್ದುಗಳೊಳಗೆ ವಾಸಮಾಡುತ್ತಾ, ಚುನಾವಣೆಗೆ ಹಿಂದಿನ ಸಂವತ್ಸರದಲ್ಲಿ ಈ ಮಾರ್ಜಿನ್ನಲ್ಲಿ ಕಂಡ ವಿಧಗಳ ಪೈಕಿ ಒಂದು ಅಥವಾ ಹೆಚ್ಚು ಮ್ಯುನಿಸಿಪೆಲ್ ತೆರಿಗೆಗಳನ್ನಾಗಲಿ, ಬಟ್ಟು 5 ರೂಪಾಯಿಗಳ ತನಕ ಅಥವಾ ಇನ್ನೂ ಹೆಚ್ಚಾಗಿ ಪಾವತೀ ಮಾಡಿರತಕ್ಕದ್ದು.

A. ಬಂಡೀಗಳು, ಕುದುರೆಗಳು, ಅಥವಾ ಇತರಜಾನವರ್‌ಗಳು ಇವುಗಳ ಮೇಲಣ ತೆರಿಗೆ.

B. ಕುಶಲವಿದ್ಯೆ, ಕಸಬ್‌ದಾರೀ ಕೆಲಸಗಳು, ವ್ಯಾಪಾರಗಳು, ಅಥವಾ ವೃತ್ತಿಗಳು ಇವುಗಳಿಗಾಗಿ ತೀರ್ವೆ.

C. ಮನೆಗಳು, ಕಟ್ಟಡಗಳು, ಅಥವಾ ಜಮೀನ್‌ಗಳು ಇವುಗಳಮೇಲೆ ಬಟ್ಟು ಕೆಲಸಗಳಿಗಾಗಿಯಾಗಲಿ, ಬೆಳಕು ಉಂಟುಮಾಡುವ ಬಗ್ಯೆ ಅಥವಾ ನೀರಾವರಿ ಕೆಲಸಗಳಿಗಾಗಿಯಾಗಲಿ, ಅವುಗಳ ಸಾಲೀಯಾನಾ ಹುಟ್ಟುವಳಿ ಪ್ರಕಾರ ತೆರಿಗೆಗಳು.

(*c*) ಅವನಾಗಲಿ, ಅವಳಾಗಲಿ, ಚುನಾವಣೆಗೆ ಹಿಂದಿನ ಸಾಲ್‌ನಲ್ಲಿ ತಮ್ಮ ಸ್ವಂತ ಹಕ್ಕುದಾರೀ ಮೇಲೆ ಮ್ಯುನಿಸಿಪೆಲ್ ಸರಹದ್ದುಗಳೊಳಗೆ, 8 ರೂಪಾಯಿಗಳಿಗೆ ಕಡಮೆಯಿಲ್ಲದ ಮಾಹೇಯಾನಾ ಬಾಡಿಗೆ ಒಂದು ಮನೆಯ ಹಿಡುವಳೀದಾರರಾಗಿರತಕ್ಕದ್ದು.

7. ಮ್ಯುನಿಸಿಪೆಲ್ ಕಮ್ಮಿಷನರ್‌ಗಳ ಬೋರ್ಡಿನಲ್ಲಿ ಒಂದು ಅಥವಾ ಹೆಚ್ಚು ಖಾಲೀಗಳು ಉಂಟಾದರೆ, ಸದರೀ ಖಾಲೀಯಿರುವ ಉದ್ಯೋಗಗಳು ಚುನಾವಣೇ ಮೂಲಕ ಭರ್ತೀಯಾಗತಕ್ಕವೆಂದು ರೆಸೀಡೆಂಟರು ನೇಮಿಸಿ ಯಿರುವ ಪಕ್ಷಕ್ಕೆ, ಮ್ಯುನಿಸಿಪೆಲ್ ಕಮ್ಮಿಷರ್ಷ ಪ್ರೆ

ಸೀಡೆಂಟರು, ಬೆಂಗಳೂರು ಸಿವಿಲ್ ವ ಮಿಲಿಟೆರಿ ಸ್ಟೇಷನ್ನಲ್ಲಿ ಖಾಲೀ ಮಾಡಿಸಿದ ಕಮ್ಮಿಷನರು ಯಾವ ತರಗತಿಗೆ ಸೇರಿ ಯಿರುತ್ತಾರೋ ಅಂತಾ ತರಗತಿಯ ಚುನಾವಣೀದಾರರ ಒಂದು ಸಮಾಜವನ್ನು ಸೇರಿಸತಕ್ಕದ್ದು. ಮತ್ತು ಅಂತಾ ತಾರೀಖಿನಲ್ಲಿ ಯಾವ ಬಗ್ಯೆ ಅಥವ ಪಕ್ಷ 7 ದಿನಗಳ ನೋಟೀಸ ಕೊಡಲ್ಪಟ್ಟಿರತಕ್ಕದ್ದೋ ಅಂತಾ ಖಾಲೀ ಯಿರುವ ಕೆಲಸವನ್ನು ಯಾ ಕೆಲಸಗಳನ್ನು ಭರ್ತೀ ಮಾಡಲಿಕ್ಕೆ ಜನಗಳ ಹೆಸರುಗಳು ತಿಳಿಸಲ್ಪಟ್ಟು ಘೋಷಿಸಲ್ಪಡತಕ್ಕದ್ದು. ಖಾಲೀ ಯಿರುವ ಪ್ರತಿ ಕೆಲಸಕ್ಕೂ ಒಬ ಮನುಷ್ಯನು ಮಾತ್ರವೇ ತಿಳಿಸಲ್ಪಟ್ಟು ಘೋಷಿಸಲ್ಪಟ್ಟರೆ ಅವನು ಕ್ರಮಪ್ರಕಾರ ಚುನಾಯಿಸಲ್ಪಟ್ಟಂತೆ ಪ್ರಕಟಿಸಲ್ಪಡತಕ್ಕದ್ದು. ಒಬ್ಬನಿಗಿಂತ ಹೆಚ್ಚು ಮಂದಿ ನಮೂದಿಸಲ್ಪಟ್ಟು ಘೋಷಿಸಲ್ಪಟ್ಟರೆ ಅಭಿಪ್ರಾಯದ ಮೂಲಕ ಚುನಾವಣೆಯು ನಿಶ್ಚಯಿಸಲ್ಪಡತಕ್ಕದ್ದು, ಮತ್ತು ಸದರೀ ಚುನಾವಣೆಯು, ಮ್ಯುನಿಸಿಪೆಲ್ ಕಮ್ಮಿರ್ಷ ಪ್ರೆಸೀಡೆಂಟರಿಂದ ಹಾಗೆ ತಿಳಿಸಲ್ಪಡತಕ್ಕ ಮತ್ತು ಸಮಾಜ ಸೇರಿದ ತಾರೀಖು ಲಾಗಾಯತು 3 ದಿನಗಳಿಗೆ ಕಡಮೆ ಯಿಲ್ಲದ ಒಂದು ತಾರೀಖಿನಲ್ಲಿ ಮಾಡಲ್ಪಡತಕ್ಕದ್ದು.

8. ಚುನಾವಣೆಗಳು, ಚೀಟೀಹಾಕುವದರ ಮೂಲಕ ಆಗತಕ್ಕವು, ಅದರ ಬಾಬತು ಲಾಗವಡು ಮ್ಯುನಿಸಿಪೆಲ್ ಫಂಡಿನಿಂದ ಕೊಡಲ್ಪಡತಕ್ಕದ್ದು.

9. ಪ್ರತಿಚುನಾವಣೀದಾರನೂ, ಭರ್ತೀಯಾಗತಕ್ಕ ಖಾಲೀಯಿರುವ ಕೆಲಸಗಳು ಎಷ್ಟುಯಿದ್ದರೆ ಅಷ್ಟು ಅಭಿಪ್ರಾಯ ಉಂಟಾಗತಕ್ಕದ್ದು, ಆದರೆ, ಪ್ರತಿ ಚುನಾವಣೀದಾರನಿಂದ, ಯಾವನಾದರೂ ಒಬ್ಬ ಉಮೇದವಾರನಿಗೆ, ಒಂದು ಅಭಿಪ್ರಾಯಕ್ಕಿಂತ ಹೆಚ್ಚಾಗಿ ಕೊಡಲ್ಪಡಲಾಗದು.

10. ಯಾವ ಕಮ್ಮಿಷನರಾಗಲಿ, ಆತನ ಪಕ್ಷದಲ್ಲಿ ಅಥವಪಕ್ಷ 20 ಅಭಿಪ್ರಾಯಗಳು ಕೊಡಲ್ಪಟ್ಟು ಹೊರತು ಚುನಾಯಿಸಡತಕ್ಕದ್ದಲ್ಲ, ಮತ್ತು ಯಾವ ಉಮೇದವಾರನ ಪಕ್ಷದಲ್ಲಾಗಲಿ, ಇಪ್ಪತ್ತು ಅಭಿಪ್ರಾಯಗಳು ಉಂಟಾಗದ ಸಂಗತಿಯಲ್ಲಿ, ಪ್ರೆಸೀಡೆಂಟರು, ಖಾಲೀಯಿರುವ ಕೆಲಸವನ್ನು ಭರ್ತೀಮಾಲಿಕ್ಕೆ ಒಬ್ಬ ಕಮ್ಮಿಷನರನ್ನು ನೇಮಿಸಬಹುದು. ಅವನು ಚುನಾಯಿಸಲ್ಪಟ್ಟಿದ್ದರೆ ಹ್ಯಾಗೋ ಗೆ ಬದಸ್ತೂರ ಅಧಿಕಾರಗಳನ್ನು ಪಡೆದಿರತಕ್ಕದ್ದು.

11. ಈ ರೂಲ್ಸ ಅನುಸರಿಸಿ, ಯಾವ ಚುನಾವಣೆಯಲ್ಲಾಗಲಿ, ಯಾರಾದರೂ ಇಬ್ಬರು ಅಥವಾ ಹೆಚ್ಚುಮಂದಿ ಉಮೇದವಾರರಲ್ಲಿ ಅಭಿಪ್ರಾಯಗಳ ಸಾಮ್ಯ ವುಂಟಾಗಿರುವಂತೆ ಕಾಣಬಂದು, ಒಂದು ಅಭಿಪ್ರಾಯ ಜಾಸ್ತೀಯಾದರೆ ಅಂತಾ ಉಮೇದವಾರರ ಪೈಕಿ ಒಬ್ಬನು ಒಬ್ಬ ಕಮ್ಮಿಷನರಾಗಿ ಚುನಾಯಿಸಲ್ಪಡಲಿಕ್ಕೆ ಅರ್ಹನಾಗುವದಾದರೆ, ಮ್ಯುನಿಸಿಪೆಲ್ ಕಮ್ಮಿರ್ಷ ಪ್ರೆಸೀಡೆಂಟರು, ಅಂತಾ ಜಾಸ್ತೀ ಅಭಿಪ್ರಾಯವನ್ನು ಕೊಡಬಹುದು. ಅಂತಾ ಜಾಸ್ತೀ ಅಭಿಪ್ರಾಯ ಕೊಡಲ್ಪಟ್ಟ ವುಮೇದವಾರನು ಅದರ ಮೇಲೆ ಒಬ್ಬ ಕಮ್ಮಿಷನರಾಗಿ ಚುನಾಯಿಸಲ್ಪಟ್ಟಂತೆ ಯೆಣಿಸಲ್ಪಡತಕ್ಕದ್ದು.

12. 3, 4, 5 ಮತ್ತು 6 ಈ ರೂಲ್ಸನಿಂದ ವಿಧಿಸಲ್ಪಟ್ಟಂತೆ ಚುನಾಯಿಸಲ್ಪಡಲಿಕ್ಕೂ, ಅಭಿಪ್ರಾಯ ಕೊಡಲಿಕ್ಕೂ ಅರ್ಹರಾದ ಜನಗಳ ಪಟ್ಟಿಗಳನ್ನು ಸಾಧ್ಯವಾದಷ್ಟು ಕ್ಷಿಪ್ರದಲ್ಲಿ, ಮತ್ತು ಈ ರೂಲ್ಸ ಜಾರೀಗೆ ಬಂದತರುವಾಯ ಮೂರು ತಿಂಗಳ ವೊಳಗಾಗಿ, ಮ್ಯುನಿಸಿಪೆಲ್ ಕಮ್ಮಿರ್ಷ ಪ್ರೆಸೀಡೆಂಟರಿಂದ ತಯಾರ್‌ಮಾಡಲ್ಪಟ್ಟು, ಛಾಪಿಸಲ್ಪಟ್ಟು, ಪ್ರಕಟಿಸಲ್ಪಡತಕ್ಕದ್ದು.

13. ಮೇಲೆ ಕಂಡ 1ನೇ ರೂಲಿನಲ್ಲಿ ಸೂಚಿಸಲ್ಪಟ್ಟ ತೆರಿಗೆ ಕೊಡತಕ್ಕ ತರಗತಿಗಳ ಪೈಕಿ ಪ್ರತಿ ಬಗೆಯವರಲ್ಲಿಯೂ ಅಂತಾ ಪಟ್ಟಿ ಒಂದು ಯಿರತಕ್ಕದ್ದು. ಪಟ್ಟೀಗಳು, ಮ್ಯುನಿಸಿಪೆಲ್ ಕಮ್ಮಿಷನರ್‌ಗಳ ಆಫಿಸನಲ್ಲಿ ಅಥವಾ ಆಫೀಸಬಳಿ ಯಾವದಾದರೂ ಪ್ರಸಿದ್ಧವಾದ ಸ್ಥಳದೊಳಗೆ ಮತ್ತು ಸ್ಟೇಷನಿನ ಇತರ ಪ್ರದೇಶಗಳಲ್ಲಿ ಚಿಕಟಾಯಿಸುವದರ ಮೂಲಕ ಪ್ರಸಿದ್ಧಪಡಿಸಲ್ಪಡತಕ್ಕದ್ದು.

14. ಮೇಲೆಕಂಡಂತೆ ಪ್ರಕಟಿಸಲ್ಪಟ್ಟ ಪಟ್ಟೀಗಳು, ಅದರಲ್ಲಿ ನಮೂದಿರುವ, ಚುನಾಯಿಸಲ್ಪಡತಕ್ಕ ಅಥವಾ ಅಭಿಪ್ರಾಯ ಕೊಡತಕ್ಕ ಜನಗಳ ಯೋಗ್ಯತೆಗಳ ವಿಷಯದಲ್ಲಿ ಆಖೈರಾದ್ದಾಗಿ ಭಾವಿಸಲ್ಪಡತಕ್ಕದ್ದಲ್ಲವು, ಮತ್ತು ಸದರೀ ಪಟ್ಟೀಗಳು, ಮೂವರು ಅಥವಾ ಹೆಚ್ಚು ಮಂದಿ ಕಮ್ಮಿಷನರ್‌ಗಳಿಂದ ಕುಮ್ಮಕ್ ಮಾಡಲ್ಪಟ್ಟ ಮ್ಯುನಿಸಿಪೆಲ್ ಕಮ್ಮಿರ್ಷ ಪ್ರೆಸೀಡೆಂಟರಿಂದ ಆಗಿಂದಾಗ್ಯೆ ವಿಮರ್ಶಿಸಲ್ಪಡಲಿಕ್ಕೆ ಸಾಧ್ಯವಾಗಿರತಕ್ಕದ್ದು.

15. ಪ್ರೆಸೀಡೆಂಟರು, ಸ್ಥಳದ ನ್ಯೂಸ್‌ಪೇಪರ್‌ಗಳ ಪೈಕಿ ಒಂದು ಅಥವಾ ಹೆಚ್ಚುನ್ಯೂಸ ಪೇಪರಗಳಲ್ಲಿ ಸದರೀ ಪಟ್ಟಿಗಳನ್ನು ಪ್ರಕಟಿಸಿದ್ದನ್ನು ಕುರಿತು ನೋಟೀಸ ಕೊಡತಕ್ಕದ್ದು. ಸದರೀ ಪಟ್ಟೀಗಳು ಅಂತಾ ನೋಟೀಸ ಪ್ರಕಟಿಸಲ್ಪಟ್ಟ ತಾರೀಖಿಗೆ ತರುವಾಯ ಹದಿನೈದು ದಿನಗಳಲ್ಲಿ ಯುಕ್ತಗಳಾದ ಯೆಲ್ಲ ಕಾಲಗಳಲ್ಲಿಯೂ, ಜನಗಳು ತನಖೀ ಮಾಡುವ ಬಗ್ಯೆ ಖುಲ್ಲಾ ಇರತಕ್ಕದ್ದು.

16. ಪಟ್ಟೀಗಳ ನಕ್ಕಲ್‌ಗಳು, ಮ್ಯುನಿಸಿಪೆಲ್ ಕಮ್ಮಿಷನರ್‌ಗಳ ಕಚ್ಚೇರಿಯಲ್ಲಿ ಲಾಗವಡು ಖರೀದಿಗೆ ಜನಗಳಿಗೆ ಒದಗಿಸಲ್ಪಡತಕ್ಕದ್ದು.

17. ಪ್ರೆಸೀಡೆಂಟರು ಮೂವರು ಅಥವಾ ಹೆಚ್ಚು ಮಂದಿ ಕಮ್ಮಿಷನರ್‌ಗಳ ಕುಮ್ಮಕ್ಕಿನಿಂದ, ಪ್ರತಿಸಾಲ್ ಮೊದಲನೆಯ ತಿಂಗಳಲ್ಲಿ ಸದರೀ ಪಟ್ಟೀಯಲ್ಲಿ ದಾಖಲ್ಮಾಡಲ್ಪಡಲಿಕ್ಕೆ ಲಾಯಖಲ್ಲದ ಯಾವನ್ನಾದರೂ ಮನುಷ್ಯನ ಹೆಸರನ್ನು ತೆಗದುಹಾಕುವ ಬಗ್ಯೆ, ಅಥವಾ ಲಾಯಖಾದ ಯಾವನಾದರೂ ಮನುಷ್ಯನ ಹೆಸರನ್ನು ಸೇರಿಸುವ ಬಗ್ಯೆ ಸದರೀ ಪಟ್ಟಿಗಳನ್ನು ವಿಮರ್ಶಿಸತಕ್ಕದ್ದು. ಯಾವ ಹೆಸರನ್ನಾಗಲಿ, ದಾಖಲ್‌ಮಾಡುವದಕ್ಕೆ ಉಂಟಾದ ಯೆಲ್ಲ ಆಕ್ಷೇಪಗಳೂ, ಯಾವ ಹೆಸರನ್ನಾಗಲಿ ಸೇರಿಸುವ ವಿಷಯದಲ್ಲಿ ಉಂಟಾದ ಯೆಲ್ಲಬಾಧ್ಯತೆಗಳೂ, ಪ್ರೆಸೀಡೆಂಟರಿಂದಲೂ ಸದರೀ ಕಮ್ಮಿಷನರ್‌ಗಳಿಂದಲೂ, ನಿರ್ಣಯಿಸಲ್ಪಡತಕ್ಕವು. ಬೇರೆ ಅಭಿಪ್ರಾಯ ಉಂಟಾದ ಸಂದರ್ಭದಲ್ಲಿ ಬಹಳ ಮಂದಿಯ ತಾತ್ಪರ್ಯದಿಂದ ನಿರ್ಣಯಿಸಲ್ಪಡತಕ್ಕವು. ಪ್ರೆಸೀಡೆಂಟರಿಗೆ ಅಂಗೀಕಾರ ಸ್ವಾತಂತ್ರ್ಯವಿರುತ್ತೆ.

ಹುಕ್ಕುಂ ಬಮೋಜೀಬ
ಹೆಚ್. ವೈಲಿ, ಮೇಜರ್
ರೆಸೀಡೆಂಟರ ಅಸಿಸ್ಟೆಂಟ್.

ಮೈಸೂರು ರೆವಿನ್ಯೂ ಸರ್ವೇ ಮತ್ತು ಸೆಟಲ್‌ಮೆಂಟ್ ಇಲಾಖಾ.

ನಂ. 702. ತಾರೇಖು 6ನೇ ಫಿಬ್ರುವರೀ 1884.

ಇದರಿಂದ ಪ್ರಕಟಿಸಲ್ಪಡುವದೇನಂದರೆ, ಮೈಸೂರು ಡಿಸ್ಟ್ರಿಕ್ಟು ಹೆಗ್ಗಡದೇವನಕೋಟೆ ತಾಲ್ಲೂಕಿನ ಸೆಟಲ್‌ಮೆಂಟ್‌ಯಾನೆ ತರಂ ಜಮಾಬಂದಿಯು, ಸನ್ 1884ನೇ ಮಾಹೆ ಮಾರ್ಚಿ ಗುರ್ರೇ ತಾರೀಖು, ದರಾ ಆ ಸುಮಾರಿಗೆ ಪ್ರಾರಂಭಿಸಲ್ಪಡುತ್ತೆ.

ಜೆ. ಪಿ. ಗ್ರ್ಯಾಂಟ್,
ಸೂ|| ಮೈಸೂರ್ ರೆ|| ಸರ್ವೆ ಅಂಡ್ ಅಸೆಸ್‌ಮೆ

ಫಿನಾನ್ಷಿಯಲ್ ಇಲಾಖಾ.

1882ನೇ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರ್ಯಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್‌ಟ್ರೋಲರ್.

ನಂದೀದುರ್ಗ ಡಿವೀಜನ್.

ನಂದೀದುರ್ಗ ಡಿವೀಜನ್ ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳೀಯಾದ ಡಿಕ್ರೀ ದೇಣೇದಾರ ಬೆಂಗಳೂರು ಸ್ಕೂಲ್‌ಮಾಸ್ಟರ್ ವಸ್ತಾದ ಗುಲಾಂಖಾದರನ ವಿಷಯದಲ್ಲಿ—

ಸನ್ 1883ನೇ ಇಸವಿ ದಿವಾಳಿ ವ್ಯಾಜ್ಯ ನಂಬರು 492.

ಹುಕ್ಕುಂ

ಮೇಲ್ಕಂಡ ವಸ್ತಾದಗುಲಾಂಖಾದರನು, ಖುಲಾಸೇಯಾಗಬೇಕೆಂದು ಕೋರಿ ಬರದುಕೊಂಡಅರ್ಜೀಯು ಟಿ. ಅರ್. ಯೆ. ತಂಬುಚೆಟ್ಟಿಯಾರ್ ಯಸ್ಕ್ವಾಯರ್, ಡಿ|| ಜಡ್ಜಿಯವರ ರೂಬರೂ ಅರ್ಜೀದಾರನ ಪರವಾಗಿ ಇವನ ಈ ಸಮಕ್ಷಮದಲ್ಲಿಯೂ ಮತ್ತು ಐವರ್ ಲೇಣೇದಾ

ರರಾದ 2ನೇ ಹಿಂದೂಬ್ಯಾಂಕ ಲಿಮಿಟೆಡ್ ಲಿಕ್ವಿಡೇಟರ್ ಮಲ್ಲಿಕಾರ್ಜುನಯ್ಯನ ಯದುರಾಗಿಯೂ ದರ್ಯಾಫ್ತೀ ಮಾಡಲ್ಪಟ್ಟಿತು. ಈ ಕೆಳ ಗೆ ನಮೂದ್ಮಾಡಲ್ಪಡುವ ಲೇಣೇದಾರ್ರಿಗೆ ಈ ದರ್ಯಾಫ್ತೀನೋಟೀಸ ಜಾರೀಯಾಗಿದ್ದಾಗ್ಯೂ ತಾವೇ ಖುದ್ದಾಗಿಯಾಗಲಿ ಲಾಯರ್ ಮೂಲಕ ವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ 1ನೇ ಸಾಲಗಾರ—ಬೆಂಗಳೂರು ಕರ್ನಾಟಿಕ ಬ್ಯಾಂಕ್ ಲಿಮಿಟೆಡ್.

ಸದರೀ ವಸ್ತಾದ್ ಗುಲಾಂಖಾದರನು, ದಿವಾಳಿಯಾದವನೆಂದುನ್ನು ಸಿವಿಲ್ ಪ್ರೊಸೀಡ್ಯೂರ್ ಕೋಡಿನ 20ನೇ ಅಧ್ಯಾಯದಲ್ಲಿನ ನಿರೂಪಣೆಗಳ ಫಲವನ್ನ ಹೊಂದುವದಕ್ಕೆ ಹಕ್ಕುದಾರನಾಗಿರುತ್ತಾನೆಂದುನ್ನೂ ಇದರಿಂದ ತೀರ್ಮಾನಿಸಲ್ಪಟ್ಟಿರುತ್ತದೆ. ಈ ಕೋರ್ಟಿನ ಶಿರಸ್ತೇದಾರು) ಐರ್ಜ ದಿವಾಳೀಯಾದವರ ಜಿಂದಗಿಗೆ ರಿಸೀವರಾಗಿ ಮೊಕರರ್ಮಾಡಲ್ಪಡತಕ್ಕದ್ದೆಂದುನ್ನು ಸದರೀ ರಿಸೀವರಾದವರು ವಡನೆ ದಿವಾಳೀಯಾದವನ ಜಿಂದಗಿಗೆ ಜವಾಬ್ ಮಾಡತಕ್ಕ ಬಗ್ಯೂ ನಿಗೇವಾನೀ ಮಾಡತಕ್ಕ ಬಗ್ಯೂ ಸಹ ತನ್ನ ರಿಸೀವರ ಕೆಲಸಗಳಿಗೆ ಉದ್ಯುಕ್ತ ಪಡತಕ್ಕದ್ದೆಂದುನ್ನು ಮತ್ತು ಸದರೀ ರಿಸೀವರು ತಾನು ನಡಸಿದ ಕೆಲಸಗಳ ಪ್ರತಿ ಫಲಕ್ಕಾಗಿ ದಿವಾಳೀಯಾದವನ ಲೇಣೇದಾರರಿಗೆ ಬಟವಾಡೆ ಮಾಡಿದ ಮೊಬಲಗಿನ ಬಾಕೀ ಹಣದಲ್ಲಿ ದರ ಶೇಕಡಾ 5 ರೂಪಾಯಿ ಮೇರೆ ಕಮ್ಮಿಶನ್ ನಿಲ್ಲಿಸಿಕೊಳ್ಳತಕ್ಕದ್ದೆಂದುನ್ನು ಸಹ ಹುಕ್ಕುಂ ಮಾಡಲ್ಪಟ್ಟಿದೆ.

1884ನೇ ಇಸವಿ ಜನವರೀ ತಿಂಗಳು 31ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ ನಮ್ಮ ದಸ್ತಖತ್ತುನಿಸೀ ಕೊಡಲ್ಪಟ್ಟಿತು.

ದಿವಾಳೀಯಾದ ಡಿಕ್ರೀ ದೇಣೇದಾರ ಚಿಕ್ಕಬಳ್ಳಾಪುರ ತಾಲ್ಲೂಕು ಗುಂಡ್ಲುಗುರಕೀಲಿರುವ ದೇವಂಡಹಳ್ಳಿ ಭೀಮಣ್ಣನ ಮಗ ವೆಂಕಟಸಾಮಿಯಂಬುವನ ವಿಷಯದಲ್ಲಿ—

ಸರ್ 1883ನೇ ಇಸವಿ ದಿವಾಳಿ ವ್ಯಾಜ್ಯ ನಂಬರ್ 438.

ಹುಕ್ಕುಂ.

ಮೇಲ್ಕಂಡ ಭೀಮಣ್ಣನ ಮಗ ವೆಂಕಟಸಾಮಿಯಂಬುವನು ಖುಲಾಸೆಯಾಗಬೇಕೆಂದು ಕೋರಿ ಬರದುಕೊಂಡ ಅರ್ಜಿಯು ಟಿ. ಆರ್. ಯಿ. ತಂಬುಚಟ್ಟಿಯಾರ್ ಯಸ್ಕ್ವಯರ್ ಡಿ॥ ಜಡ್ಜಿಯವರ ರೂಬರೂ ಅರ್ಜೀದಾರನ ಪರವಾಗಿ ಇವನ ಸಮಕ್ಷಮದಲ್ಲಿಯೂ ಮತ್ತು ಐರ್ಜ ಅರ್ಜೀದಾರನ ಲೇಣೇದಾರರಾದ 2ನೇ ಗೋಪಾಲಪ್ಪ 4ನೇ ಅರಳಪ್ಪ ಇವರ ಯದುರಾಗಿಯೂ ದರ್ಯಾಫ್ತೀಮಾಡಲ್ಪಟ್ಟಿತು. ಈ ಕೆಳಗೆ ನಮೂದ್ಮಾಡಲ್ಪಡುವ ಲೇಣೇದಾರ್ರಿಗೆ ಈ ದರ್ಯಾಫ್ತೀನೋಟೀಸ ಜಾರೀಯಾಗಿದ್ದಾಗ್ಯೂ ತಾವೇ ಖುದ್ದಾಗಿಯಾಗಲಿ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—1ನೇ ವೀರಶಟ್ಟಪ್ಪ 3ನೇ ಪುಟ್ಟಣ್ಣ, 5ನೇ ಮುನಿಯಪ್ಪ, 6ನೇ ಪಾಪಣ್ಣ.

ಸದರೀ ಭೀಮಣ್ಣನ ಮಗ ವೆಂಕಟಸಾಮಿಯಂಬುವನು ದಿವಾಳಿಯಾದವನೆಂದುನ್ನು ಸಿವಿಲ್ ಪ್ರೊಸೀಡ್ಯೂರ್ ಕೋಡಿನ 20ನೇ ಅಧ್ಯಾಯದಲ್ಲಿನ ನಿರೂಪಣೆಗಳ ಫಲವನ್ನ ಹೊಂದುವದಕ್ಕೆ ಹಕ್ಕುದಾರನಾಗಿರುತ್ತಾನೆಂದು ಇದರಿಂದ ತೀರ್ಮಾನಿಸಲ್ಪಟ್ಟಿರುತ್ತದೆ. ಈ ಕೋರ್ಟಿನ ಶಿರಸ್ತೇದಾರು)ಐರ್ಜ ದಿವಾಳೀಯಾದವನ ಜಿಂದಗಿಗೆ ರಿಸೀವರಾಗಿ ಮೊಕರರ್ಮಾಡಲ್ಪಡತಕ್ಕದ್ದೆಂದುನ್ನು ಸದರೀ ರಿಸೀವರಾದವರು ವಡನೆ ದಿವಾಳೀಯಾದವನ ಜಿಂದಗಿಗೆ ಜವಾಬ್ ಮಾಡತಕ್ಕ ಬಗ್ಯೂ ನಿಗೇವಾನೀ ಮಾಡತಕ್ಕ ಬಗ್ಯೂ ಸಹ ತನ್ನ ರಿಸೀವರ ಕೆಲಸಗಳಿಗೆ ಉದ್ಯುಕ್ತ ಪಡತಕ್ಕದ್ದೆಂದನ್ನು ಮತ್ತು ಸದರೀ ರಿಸೀವರು ತಾನು ನಡಸಿದ ಕೆಲಸಗಳ ಪ್ರತಿ ಫಲಕ್ಕಾಗಿ ದಿವಾಳೀಯಾದವನ ಲೇಣೇ ದಾರರಿಗೆ ಬಟವಾಡೆ ಮಾಡಿದ ಮೊಬಲಗಿನ ಬಾಕೀ ಹಣದಲ್ಲಿ ದರ ಶೇಕಡಾ 5 ರೂಪಾಯಿ ಮೇರೆ ಕಮ್ಮಿಶನ್ ನಿಲ್ಲಿಸಿಕೊಳ್ಳತಕ್ಕದ್ದೆಂದುನ್ನು ಸಹ ಹುಕ್ಕುಂ ಮಾಡಲ್ಪಟ್ಟಿದೆ.

1883ನೇ ಇಸವಿ ಡಿಸಂಬರ್ ತಿಂಗಳು 14ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ ನಮ್ಮ ದಸ್ತಖತ್ತುನಿಸೀ ಕೊಡಲ್ಪಟ್ಟಿತು.

1884ನೇ ಇಸವಿ ಅರ್ಜೀ ನಂಬರ್ 5.

ಮೃತಪಟ್ಟ ಎಂ. ಆರ್. ಪೊನ್ನಸಾಮಿ ಮೊದಲಿಯಾರ್ರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಪಾಪಾತಿ ಯಂಮಾಳ್, ಮೃತಪಟ್ಟ ಸದರೀ ಪೊನ್ನಸಾಮಿ ಮೊದಲ್ಯಾರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಹಾಲೀ ಬೆಂಗಳೂರು ಸ್ಥಳದ ಪಾಪಾತಿ ಯಮ್ಮಾಳ್, ಪಾಲಾಜಿ ಪೇಟೇಲಿ ವಾಸಸ್ಥರಾಗಿ ಮೃತಪಟ್ಟ ಪೊನ್ನಸಾಮಿ ಮೊದಲ್ಯಾರ್ರ ಜಿಂದಗೀ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರಳಾದ ಪಾಪಾತಿ ಯಮ್ಮಾಳ್ ಅರ್ಜಿಯನ್ನು 1884ನೇ ಇಸವಿ ಫಿಬ್ರುವರೀ ತಿಂಗಳು ತಾರೀಖು 18ರಲ್ಲು ಬೆಂಗಳೂರು ಮೊಕ್ಕಾಮಿನಲ್ಲಿ ಕೇಳಿ ಸರಟೀಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಗಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪೊನ್ನಸಾಮಿ ಮೊದಲ್ಯಾರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಯಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಜನವರೀ ತಿಂಗಳು 17ನೇ ತಾರೀಖಿನಲ್ಲಿ ಕೋರ್ಟಿನ ಮೊಹರನಿಸಿನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1884ನೇ ಇಸವಿ ಅರ್ಜೀ ನಂಬರ್ 22.

ವೃತಪಟ್ಟ ಕೃಷ್ಣಯ್ಯಂಗಾರ್ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ರುಕ್ಮಿಣಿಮ್ಮ, ವೃತಪಟ್ಟ ಸದರೀ ಕೃಷ್ಣಸಾಮಯ್ಯಂಗಾರ್ರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಕಂಟೋನ್ಮೆಂಟ್ ಪುಳಿಯೂರ್ ಕೋವಿಲ್ ಸ್ಟ್ರೀಟ್ ಸ್ಥಳದ ರುಕ್ಮಿಣಿಮ್ಮನು, ಡಿಟೋ ವಾಸಸ್ಥರಾಗಿ ವೃತಪಟ್ಟ ಕೃಷ್ಣಸಾಮಯ್ಯಂಗಾರ್ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರುಕ್ಮಿಣಿಮ್ಮನ ಅರ್ಜಿಯನ್ನು 1884ನೇ ಇಸವಿ ಫಿಬ್ರುವರೀ ತಿಂಗಳು ತಾರೀಖು 26ರಲ್ಲು ಬೆಂಗಳೂರು ಮೊಕ್ಕಾಂನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವೃತಪಟ್ಟ ಕೃಷ್ಣಸಾಮಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಜನವರೀ ತಿಂಗಳು 23ನೇ ತಾರೀಖಿನಲ್ಲಿ ಕೋರ್ಟುಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1884ನೇ ಇಸವಿ ಅರ್ಜೀ ನಂಬರ್ 26.

ವೃತಪಟ್ಟ ತಿಮ್ಮರಾಯಶಟ್ಟಿ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ರು. ಮುನಿಯಂಮ್ಮ, ರಾಮಂಣ, ವೃತಪಟ್ಟ ಸದರೀ ತಿಮ್ಮರಾಯಶಟ್ರ್ಯಿಗೆ ವೈದ ಆಗಬೇಕೆಂಬ ಹಕ್ಕುದಾರೀ ಮೇಲೆ ಮುಳಬಾಗಲ್ ತಾಲ್ಲೂಕು ಮಲ್ಲೆನಾಯಿಕನಹಳ್ಳಿ ಸ್ಥಳದ ಮುನಿಯಮ್ಮ, ರಾಮಂಣ, ಡಿಟೋ ವಾಸಸ್ಥರಾಗಿ ವೃತಪಟ್ಟ ತಿಮ್ಮರಾಯಶಟ್ಟಿ ಜಿಂದಗಿಬಗ್ಯಾಗಿ ಬರತಕ್ಕ ಸಾಲವನ್ನು ಮೈನರ್ ಮಕ್ಕಳಾದ ವೆಂಕಟೋಚಲೈಯ ಪಟ್ಟಾಭಿರಾಮಶಟ್ಟಿ ಯಿವರಿಗೆ ಗಾರ್ಡಿಯನ್ನಾಗಿ ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್‌ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮುನಿಯಮ್ಮ, ರಾಮಂಣ, ಅರ್ಜೀಯನ್ನು 1884ನೇ ಇಸವಿ ಫಿಬ್ರುವರೀ ತಿಂಗಳು ತಾರೀಖು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ಬೆಂಗಳೂರು ಮೊಕ್ಕಾಂನಲ್ಲಿ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವೃತಪಟ್ಟ ತಿಮ್ಮರಾಯಶಟ್ಟಿ ಆಸ್ತೀಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಜನವರೀ ತಿಂಗಳು 23ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1884ನೇ ಇಸವಿ ಅರ್ಜೀ ನಂಬರ್ 34.

ವೃತಪಟ್ಟ ಸರಾಫ ರಾಮಶಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಸಂಪ್ಪಂಗಿರಾಮಶಟ್ಟಿ, ವೃತಪಟ್ಟ ಸದರೀ ರಾಮಶಟ್ಟರಿಗೆ ಮಗ ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ನಗರ್ತಪೇಟೆ ಸ್ತಳದ ಸಂಪಂಗಿರಾಮಶಟ್ಟರು, ಡಿಟೋ ವಾಸಸ್ಥನಾಗಿ ವೃತಪಟ್ಟ ರಾಮಶೆಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಸಂಪಂಗಿರಾಮಶೆಟ್ಟರ ಅರ್ಜಿಯನ್ನು 1884ನೇ ಇಸವೀ ಮಾರ್ಚೀ ತಿಂಗಳು ತಾರೀಖು 21ರಲ್ಲು ಬೆಂಗಳೂರು ಮೊಕ್ಕಾಂನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವೃತಪಟ್ಟ ರಾಮಶೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಫಿಬ್ರುವರೀ ತಿಂಗಳು 2ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1884ನೇ ಇಸವಿ ಅರ್ಜೀ ನಂಬರ್ 36.

ವೃತಪಟ್ಟ ಸಾಂತಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ನಂಜಮ್ಮ ವೃತಪಟ್ಟ ಸದರೀ ಸಾಂತಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ನಗರ್ತಪೇಟೆ ಸ್ಥಳದ ನಂಜಮ್ಮ, ಡಿಟೋ ವಾಸಸ್ಥನಾಗಿ ವೃತಪಟ್ಟ ಸಾಂತಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ನಂಜಮ್ಮನ ಅರ್ಜಿಯನ್ನು 1884ನೇ ಇಸವಿ ಮಾರ್ಚಿ ತಿಂಗಳು ತಾರೀಖು 21ರಲ್ಲು ಬೆಂಗಳೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿಸದರೀ ಮೃತಪಟ್ಟ ಸಾಂತಪ್ಪನವರ ಅಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿಇಧೆ.

1884ನೇ ಇಸವಿ ಫಿಬ್ರುವರೀ ತಿಂಗಳು 1ನೇ ತಾರೀಖಿನಲ್ಲಿ ಕೋರ್ಟು ಮೊಹರ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ಆರ್. ಎ. ತಂಬುಚೆಟ್ಟಿ,
ಡಿಸ್ಟ್ರಿಕ್ಟು ಜಡ್ಜಿ.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ 5.

ಮೃತಪಟ್ಟ ಗೊಲ್ಲರ ಮೈಲಾರಯ್ಯನ ಅಸ್ತಿ ವಿಷಯದಲ್ಲಿ—

ಅರ್ಜೀದಾರಳು ಮಲ್ಲಮ್ಮ, ಮೃತಪಟ್ಟ ಸದರೀ ಮೈಲಾರಯ್ಯನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ನಂಜನಗೂಡು ಕಸಬಾದಲ್ಲಿರುವ ಸದರೀ ಮಲ್ಲಮ್ಮನು, ಸದರೀ ವಾಸಸ್ಥನಾಗಿ ಮೃತಪಟ್ಟ ಮೈಲಾರಯ್ಯನ ಜೆಂದಗಿ ಬಗ್ಯಾಗಿ ಬರತಕ್ಕ 62—12—6 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಅಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಮಲ್ಲಮ್ಮನ ಅರ್ಜಿಯನ್ನು 1884ನೇ ಇಸವಿ ಫಿಬ್ರುವರೀ ತಿಂಗಳು ತಾರೀಖು 19ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮೈಲಾರಯ್ಯನ ಅಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ 19.

ಮೃತಪಟ್ಟ ಪೊನ್ನುಸಾಮಿ ಮೊದಲಿಯಾರ್ರ ಅಸ್ತೀ ವಿಷಯದಲ್ಲಿ—

ಅರ್ಜೀದಾರ ಮನೋನ್ಮಣಿ ಅಮ್ಮಾಳ್, ಮೃತಪಟ್ಟ ಸದರೀ ಪೊನ್ನುಸಾಮಿ ಮೊದಲಿಯಾರ್ರಿಗೆ ಹಿರೆ ಹೆಂಡತಿ ಅಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಸ್ಥಳದ ಸದರೀ ಮನೋನ್ಮಣಿ ಅಮ್ಮಾಳ್, ಸದರೀ ವಾಸಸ್ಥನಾಗಿ ಮೃತಪಟ್ಟ ಪೊನ್ನಸಾಮಿ ಮೊದಲಿಯಾರ್ರ ಜೆಂದಗಿ ಬಗ್ಯಾಗಿ ಬರತಕ್ಕ 700 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಮನೋನ್ಮಣಿ ಅಮ್ಮಾಳ್ ಅರ್ಜೀಯನ್ನು 1884ನೇ ಇಸವಿ ಫಿಬ್ರುವರೀ ತಿಂಗಳು ತಾರೀಖು 27ರಲ್ಲ ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರಟಿಫಿಕೇಟ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪೊನ್ನುಸಾಮಿ ಮೊದಲಿಯಾರ್ರ ಅಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ 22.

ಮೃತಪಟ್ಟ ವೆಂಕಟಗಿರಿ ನಾಯಕನ ಅಸ್ತೀ ವಿಷಯದಲ್ಲಿ—

ಅರ್ಜೀದಾರ ಕಂಕನಾಯಕ, ಮೃತಪಟ್ಟ ಸದರೀ ವೆಂಕಟಗಿರಿನಾಯಕನಿಗೆ ಅಂಣನ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಹುಣಸೂರು ತಾಲ್ಲೂಕು ಬಿಳಿಕೆರೇ ಹೋಬಳಿ ಲಿಂಗಪುರನಹಳ್ಳಿ ಸ್ಥಳದ ಸದರೀ ಕಂಕನಾಯಕನು, ಸದರೀ ವಾಸಸ್ಥನಾಗಿ ಮೃತಪಟ್ಟ ವೆಂಕಟಗಿರಿ ನಾಯಕನ ಜೆಂದಗಿ ಬಗ್ಯಾಗಿ ಬರತಕ್ಕ 150 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ ಮಾಡಿ ಇರುತ್ತಾನೆ.

ಸದರೀ ದರಖಾಸ್ತುದಾರನಾದ ಕಂಕನಾಯಕನ ಅರ್ಜೀಯನ್ನು 1884ನೇ ಇಸವಿ ಫೆಬ್ರುವರೀ ತಿಂಗಳು ತಾರೀಖು 28ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟಗಿರಿ ನಾಯಕನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿದೆ.

1884ನೇ ಇಸವಿ ಜನವರೀ ತಿಂಗಳು ತಾರೀಖು 21ರಲ್ಲು ಕೋರ್ಟು ಮೊಹರ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1884ನೇ ಇಸವಿ ಅರ್ಜೀ ನಂಬರ 27.

ಮೃತಪಟ್ಟ ಸುಬ್ಬರಾಯಶೆಟ್ಟಿ ಆಸ್ತೀ ವಿಷಯದಲ್ಲಿ—

ಅರ್ಜೀದಾರು ರಾಮಕೃಷ್ಣಶೆಟ್ಟಿಯು, ಮೃತಪಟ್ಟ ಸದರೀ ಸುಬ್ಬರಾಯಶೆಟ್ಟಿಗೆ ಮಗ ಆಗಪೇಕೆಂಬ ಹಕ್ಕುದಾರೀ ಮೇಲೆ ಯಡತೊರೆ ತಾಲ್ಲೂಕು ಕೋಣನೂರು ಸ್ಥಳದ ಸದರೀ ರಾಮಕೃಷ್ಣಶೆಟ್ಟಿಯು, ಸದರೀ ವಾಸಸ್ಥರಾಗಿ ಮೃತಪಟ್ಟ ಸುಬ್ಬರಾಯಶೆಟ್ಟಿಯ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರನಾದ ರಾಮಕೃಷ್ಣಶೆಟ್ಟಿಯ ಅರ್ಜೀಯನ್ನು 1884ನೇ ಇಸವಿ ಫೆಬ್ರುವರೀ ತಿಂಗಳು ತಾರೀಖು 28ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬರಾಯಶೆಟ್ಟಿ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಪೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ 30.

ಮೃತಪಟ್ಟ ಕೆಂಪೇಗವುಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಚಿಕ್ಕೇಗವುಡನು, ಮೃತಪಟ್ಟ ಸದರೀ ಕೆಂಪೇಗವುಡನಿಗೆ ಯರಡನೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ನಾಗಮಂಗಲ ತಾಲ್ಲೂಕು ಬಿಂಡಿಗನವಲೆ ಸ್ಥಳದ ಚಿಕ್ಕೇಗವುಡನು, ಡಿಟೋ ವಾಸಸ್ಥನಾಗಿ ಮೃತಪಟ್ಟ ಕೆಂಪೇಗವುಡನ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾನೆ.

ಸದರೀ ದರಖಾಸ್ತುದಾರನಾದ ಚಿಕ್ಕೇಗವುಡನ ಅರ್ಜೀಯನ್ನು 1884ನೇ ಇಸವಿ ಫೆಬ್ರುವರೀ ತಿಂಗಳು ತಾರೀಖು 28ರಲ್ಲು ಮೈಸೂರು ಮೊಕ್ಕಾಂಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೆಂಪೇಗವುಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಜನವರೀ ತಿಂಗಳು 25ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1884ನೇ ಇಸವೀ ಅರ್ಜೀ ನಂಬರ 26.

ಮೃತಪಟ್ಟ ಕೃಷ್ಣಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಸುಬ್ಬಮ್ಮ ಮೃತಪಟ್ಟ ಸದರೀ ಕೃಷ್ಣಪ್ಪನಿಗೆ ಹೆಂಡತಿ ಅಗಬೇಕೆಂಬ ಹಕ್ಕುದಾರಿ ಮೇಲೆ ಅತ್ತಿಕುಪ್ಪೆ ತಾಲ್ಲೂಕು ಕನ್ನಂಬಾಡಿ ಸ್ಥಳದ ಸುಬ್ಬಮ್ಮನು, ಡಿಟೋ ವಾಸಸ್ಥನಾಗಿ ಮೃತಪಟ್ಟ ಕೃಷ್ಣಪ್ಪನ ಜಿಂದಗೀ ಬಗ್ಯಾಗಿ ಬರತಕ್ಕ 800 ರೂಪಾಯಿನ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಸುಬ್ಬಮ್ಮನ ಅರ್ಜೀಯನ್ನು 1884ನೇ ಇಸವಿ ಫೆಬ್ರುವರೀ ತಿಂಗಳು ತಾರೀಖು 28ರಲ್ಲು ಮೈಸೂರು ಮೊಕ್ಕಾಂಈ ಕೋರ್ಟಿನಲ್ಲಿ ಕೇಳಿ ಸರ್ಟಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸದರೀಕೃಷ್ಣಪ್ಪನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಫೆಬ್ರುವರೀ ತಿಂಗಳು 1ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ವಿ. ಎಸ್. ನರಸಿಂಹಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜ.

ತಾರೀಖು 30ನೇ ಜನವರೀ 1884.

ಇದರಿಂದ ತಿಳಿಯಪಡಿಸುವದೇನಂದರೆ, ಮಳವಳ್ಳಿ ಸಬ್ ರಿಜಿಸ್ಟ್ರೀ ಆಫೀಸಿನಲ್ಲಿ ಬೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತೈವಜನ್ನು ಹಾಜರ್ಮಾಡಿದವನೆ ಆಗಲಿ ಅಥವಾ ವಾಪಸುಪಡಿಯಲಿಕ್ಕೆ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರನೆ ಆಗಲಿ ಈ ನೋಟೀಸ್ ತಾರೀಖು ಲಾಗಾಯಿತು ಒಂದು ತಿಂಗಳವಳಗಾಗಿ ಸಬ್ ರಿಜಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸ್ ತೆಗದುಕ್ಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರು ರಿಜಿಸ್ಟ್ರೇಷ಼ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಶಪಡಿಸಲ್ಪಡುವದು.

ನಂಬರು.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
213 / 81—82	ಪೂರಿಗಾಲಿ ಕಸಬೇಲಿರುವ ವೆಂಕಟರಮಣಾಚಾರಿ ಮಗ ಶೀನಪ್ಪ, ಕ್ರಿಷ್ಣಪ್ಪಬ್ರಾಹ್ಮಣ	ಪೂರಿಗಾಲಿ ಹೋಬಳಿ ಪೈಕಿ ಮರಳಹಳ್ಳಿ ಗ್ರಾಮ ದಾಖಲೆ ಕೃಷ್ಣಯ್ಯಂಗಾರ್ ಹುಂಡೀಲಿರುವ ವೆಂಕಟನರಸಿಂಹ್ಮಾಚಾರ್ ಮಗ ಕೃಷ್ಣಾಚಾರಿ	20—1—82	20—1—82	(50) ರೂಪಾಯಿನ ಮನೆ ಆಧಾರ ಪತ್ರ.

ಅಬ್ದುಲ್ ಖಾದರ್, ಕೆ. ಬಿ, ರಿಜಿಸ್ಟ್ರಾರ್.

ತಾರೀಖು 1ನೇ ಫೆಬ್ರವರೀ 1884.

ಇದರಿಂದ ತಿಳಿಸುವದೇನಂದರೆ, ಮೈಸೂರು ಜೈಲ್‌ನಲ್ಲಿ ಖೈದು ಮಾಡಲ್ಪಟ್ಟಿರುವ ಖೈದಿಗಳ ವುಪಯೋಗದ ಬಗ್ಯೆ ಸ೯ 1884ನೇ ಇಸವಿ ಏಪ್ರೈಲ್ ಗುರ್ರ್ಯ ತಾರೀಖು ಮೊದಲು 1885ನೇ ಮಾರ್ಚೀ 31ನೇ ತಾರೀಖುವರಿಗೆ ಎರಡು ದಿನಗಳೂ ಸೇರಿ ಬೇಕಾದ ಆಹಾರ ವಗ್ಯೆರೇ ದರೋಬಸ್ತು ಜಿನಸುಗಳನ್ನೂ ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಬರುವ ಬಂದು ಮಾಡಲ್ಪಟ್ಟ ದರಖಾಸ್ತುಗಳನ್ನು ಮೈಸೂರು ಜೈಲ್ ಸೂಪರ್ರಿಟೆಂಡೆಂಟರವರು, ಸ೯ 1884ನೇ ಇಸವಿ ಮಾರ್ಚೀ 15ನೇ ತಾರೀಖುವರಿಗೆ ತೆಗದುಕೊಳ್ಳುವರು.

2. ಸದರೀ ತಾರೀಖು ತರುವಾಯ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರದು.

3. "ಮೈಸೂರು ಜೈಲ್‌ಗಾಗಿ ಆಹಾರ ಪದಾರ್ಥಗಳ ಸರಬರಾಯಿ ಬಗ್ಯೆ ದರಖಾಸ್ತುಗಳು" ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

4. 500 ರೂಪಾಯಿಗಳು ನಗದಾಗಿ ಅಥವಾ ಕರ್ರೆನ್ಸೀ ನೋಟುಗಳ ಮೂಲಕ ಡಿಪಾಜಿಟೆನಿಸೀ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಮೈಸೂರು ಜೈಲ್ ಆಫೀಸಿನಲ್ಲಿ, ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರ ರೂಬರೂ ಮೇಲ್ಕಂಡ ತಾರೀಖಿನೊಳಗೆ ಪ್ರಾತಃಕಾಲ 7 ಘಂಟೆಗೆ ಮೈಸೂರು ಜೈಲ್ ಸೂಪರ್ರಿಟೆಂಡೆಂಟರಿಂದ ಖುಲ್ಲಾ ಮಾಡಲ್ಪಡುವವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ, ಈ ಕೆಳಗೆ ನಮೂದಿಸುವ ತರಗತಿಯ ಪ್ರತಿ ಖೈದಿಗೂ ದಿನ ಒಂದಕ್ಕೆ ಆಗತಕ್ಕ ದರವು ನಮೂದಿಸಲ್ಪಡತಕ್ಕದ್ದು.

ನೇಟಿವ್ ಕೂಲಿಯವರಾದ ಗಂಡಸರು		A ಕ್ಲಾಸ್		ರೂ. ಆ. ಪೈ.
ಡಿಟ್ಟೋ	ಡಿಟ್ಟೋ	B	,,	
ಡಿಟ್ಟೋ	ಡಿಟ್ಟೋ	C	,,	
ಡಿಟ್ಟೋ ಕೂಲೀ ಮಾಡದ ಗಂಡಸರು, ಹೆಂಗಸರು, ಸಾದಾ ಖೈದಿನಲ್ಲಿ ಮತ್ತು ವಿಚಾರಣೆಯಲ್ಲಿ ಇರತಕ್ಕವರು		D ಕ್ಲಾಸ್		
ಡಿಟ್ಟೋ	ಹುಡುಗರಾದ ಖೈದೀರು			

ಯೂರೋಪಿಯರ್ಗಳು ವ ಈಸ್ಟ ಇಂಡಿಯರ್ಗಳು

ರಾಗಿ ಸಹಿತ ಆಸಪತ್ರೆ ಪಥ್ಯ ... ...

ಅಕ್ಕಿ ಸಹಿತ ಡಿಟೋ ... ...

7. ದರಖಾಸ್ತು ಮಾಡಲ್ಪಟ್ಟ ದರಗಳು ಆಹಾರ ಜಿನಸೀಗಳ ಸ್ಕೇಲ್ ಪಟ್ಟಿಯಲ್ಲಿ ನಮೂದಿರುವ ಪದಾರ್ಥಗಳು ಮಾತ್ರವಲ್ಲದೆ, ಸ್ಕೇಲ್ ಪಟ್ಟೀ ಪ್ರಕಾರ ಆಸಪತ್ರಿ ಪಥ್ಯಪದಾರ್ಥಗಳು, ಕಾಹಿಲೀ ಮನುಷ್ಯರಿಗೆ ವಿಶೇಷ ಪದಾರ್ಥಗಳು, ನಷ್ಟವಾಗತಕ್ಕ ಪದಾರ್ಥಗಳು, ದೀಪದ ಯಂಣೆ, ಲಾಂದ್ರಗಳು, ಮತ್ತು ಅವುಗಳ ರಿಪೇರಿ ಮಾಡುವಣ್ಣ, ಅಡಿಗೆ ಮಾಡುವ ಬಗ್ಯೆ ತಾಂಬ್ರ ಮತ್ತು ಮಣ್ಣಿನ ಪಾತ್ರೆಗಳು, ಖೈದೀರು ಊಟ ಮಾಡುವ ಹರಿವಾಣಗಳು, ಪಾಯಖಾನೆ ಮತ್ತು ವಣಗಿದ ಮಣ್ಣಿನ ಬಗ್ಯೆ ಗೂಡೆಗಳು, ಜೈಲನಲ್ಲಿರತಕ್ಕ ಖೈದೀರು ಸ್ನಾನ ಮಾಡಲಿಕ್ಕೆ ಶೀಗೇಕಾಯಿ, ತಮಾಂ ತಾಂಬ್ರ ಪಾತ್ರೆಗಳ ರಿಪೇರಿ ವ ಕಲಾಯಿ, ಪರಕೆಗಳು, ಕುಡಿಯುವ ಬಗ್ಯೆ ಮೊಗೆಗಳು, ಹೆಣ್ಣು ಖೈದೀರ ಮಕ್ಕಳಿಗೆ ಬೇಕಾದ ಹಾಲು, ರೊಟ್ಟಿ, ಸಕ್ಕರೆ ವಗೈರೇ ಪದಾರ್ಥಗಳು, ಹೊಗೆ ಹಾಕುವದಕ್ಕೆ ಗಂಧಕ, ಚಕವಳುಮಣ್ಣು, ಮತ್ತು ಖೈದಿಗಳಿಗೆ ಕ್ರಮವಾಗಿ ಸರಬರಾಯಿ ಮಾಡಲ್ಪಡುವ ಬಟ್ಟೆ ಶಿವಾಯಿ, ತಮಾಂ ಚಿಲ್ಲರೇ ಪದಾರ್ಥಗಳೂ ಸಹ ಅಡಗಿರತಕ್ಕದ್ದು.

8. ಸೂಪರ್ರಿಂಟೆಂಡೆಂಟರವರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ಉಳಿಸಿಕೊಂಡಿರುತ್ತಾರೆ ಹೀಗೆ ತಿರಸ್ಕರಿಸಲಿಕ್ಕೆ ಯಾವ ನಿಮಿತ್ತವನ್ನೂ ಅವರು ತಿಳಿಸಬೇಕಾದ್ದಿಲ್ಲವು.

9. ಮುಂಜೂರಾದ ದರಖಾಸ್ತುದಾರನ ಡಿಪಾಜಿಟ ಮೊಬಲಗು ನಿಲ್ಲಿಸಿಕೊಳ್ಳಲ್ಪಟ್ಟು, ಆತನು ಕಂಟ್ರಾಕ್ಟು ಮುಚ್ಚಳಿಕ್ಕೆ ಬರದು ಕೊಡಲಿಕ್ಕಾಗಲಿ, ನಗದಾದರೂ ಗವರ್ನಮೆಂಟ ಪತ್ರಗಳ ಮೂಲಕವಾದರೂ 500 ರೂಪಾಯಿಗಳ ಮೊಬಲಗಿಗೆ ಜಾಮೀನನ್ನು ತನ್ನ ದರಖಾಸ್ತು ಮಂಜೂರಾದ ಸಂಗತಿ ತನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು ಒಂದು ವಾರದ ವಳಗಾಗಿ ಕೊಡಲಿಕ್ಕೆ ತಪ್ಪಿದರೆ, ಸದರಿ ಡಿಪಾಜಿಟ ಸರಕಾರಕ್ಕೆ ಸೇರಿಸಿ ಕೊಳ್ಳಲ್ಪಡುವದು.

10. ಕಂಟ್ರಾಕ್ಟದಾರನಿಗೆ ನಗದು ಅಡ್ವಾನ್ಸು ಯಾವದೂ ಕೊಡಲ್ಪಡಲಾರದು, ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳಿಗೆ ಪ್ರತಿ ತಿಂಗಳು 1ನೇ ತಾರೀಖಿಗೆ ತರುವಾಯ ಸಾಧ್ಯವಾದಷ್ಟು ತ್ವರೆಯಾಗಿ ಮೈಸೂರು ಜೈಲ ಸೂಪರ್ರಿಂಟೆಂಡೆಂಟರವರಿಂದ ಮೊಬಲಗು ಕೊಡಲ್ಪಡುವದು.

11. ಕಂಟ್ರಾಕ್ಟುದಾರನಿಗೆ ಒಂದು ಖೋಲಿಯು ಬಿಡಲ್ಪಟ್ಟು ಅದರಲ್ಲಿ ಆತನು ನಷ್ಟವಾಗದ ದರೋಬಸ್ತು ಪದಾರ್ಥಗಳನ್ನೂ ಇಟ್ಟುಕೊಳ್ಳಬಹುದು. ಮಾಂಸ ವಗೈರೇ ನಷ್ಟವಾಗುವ ಪದಾರ್ಥಗಳು ಪ್ರತಿ ದಿನ ಬೆಳಗ್ಯೆ $7\frac{1}{4}$ ಘಂಟೆಗೆ ಜೈಲನಲ್ಲಿ ಇರತಕ್ಕದ್ದು.

12. ಕಂಟ್ರಾಕ್ಟು ವಳ ಷಿಕ್ಮಿಗೆ ಕೊಡಲ್ಪಡಕೂಡದು.

13. ಕಂಟ್ರಾಕ್ಟಿನ ನಿಬಂಧನೆಗೆ ತಪ್ಪಿ ನಡೆಯುವ ಬಗ್ಯಾಗಲಿ, ಕಿರದು ತರದ ಯಾವ ಪದಾರ್ಥಗಳನ್ನು ಕೊಡುವ ಬಗ್ಯಾಗಲಿ ಮೈಸೂರು ಜೈಲ ಸೂಪರ್ರಿಂಟೆಂಡೆಂಟರವರ ಯಖ್ತ್ಯಾರಿಯಿಂದ 50 ರೂಪಾಯಿಗೆ ಮೀರದ ಒಂದು ಜುರ್ಮಾನೆಯು ಹಾಕಲ್ಪಡುವದು, ಬಾರ್ ಬಾರ್ ಆ ಮೇರೆ ತಪ್ಪಿದರೆ ಕಂಟ್ರಾಕ್ಟು ರದ್ದು ಮಾಡಲ್ಪಟ್ಟು ಜಾಮೀನ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

14. ಕಂಟ್ರಾಕ್ಟು ತಪ್ಪಿ ನಡಿಯುವ ದರೋಬಸ್ತು ಸಂಗತಿಗಳೊಳಗೂ ಮೈಸೂರು ಜೈಲ ಸೂಪರ್ರಿಂಟೆಂಡೆಂಟರವರ ನಿರ್ಣಯವೇ ಆಖೈರಾಗಿರತಕ್ಕದ್ದು.

ಕಂಟ್ರಾಕ್ಟುದಾರನು ಖೈದಿಗಳ ಉಪಯೋಗಾರ್ಥ ತರಕಾರಿಗಳನ್ನು ದರ ಪಾನಿಗೆ 4 ಕಾಸುಗಳ ಮೇರಿಗೆ ಖಾಯಂ ದರದ ಪ್ರಕಾರ ಜೈಲ ತೋಟದಿಂದಲೇ ಕೊಳ್ಳುವದಕ್ಕೆ ಬದ್ಧನಾಗಿರತಕ್ಕದ್ದು.

15. ಆಹಾರ ದರದ ಪಟ್ಟಿಯನ್ನು ಇತರ ಹೆಚ್ಚಿಗೆ ತಪಶೀಲಗಳನ್ನು ಸುದಾ ಸೂಪರ್ರಿಂಟೆಂಡೆಂಟರವರನ್ನ ಕೇಳಿ ತಿಳದುಕೊಳ್ಳಬಹುದು.

ಪಿ. ಹೆಚ್. ಪೆರ್ಸ,
ಮೈಸೂರು ಜೈಲ ಸೂಪರ್ರಿಂಟೆಂಡೆಂಟ.

ಆನೇಕಪ್ಪಿನ ಕೆಲಸಕ್ಕೆ ಜವ್ಮಾದಾರ್.

ತಾರೀಖು 15ನೇ ಜನವರೀ 1884.

1884ನೇ ಇಸವಿ ಮೇ 1ನೇ ತಾರೀಖು ಲಾಗಾಯತು ಆನೆಗಳನ್ನು ಹಿಡಿಯುವದರಲ್ಲಿ ಮಾಹೆತ್‌ದಾರನಾದ ಒಬ್ಬ ಲಾಯಖ್ ಜವಾದಾರ್ ಇಸಂ ವಂದು (ಮುಸಲ್‌ಮಾನರಾಗಿದ್ದರೆ ವಳ್ಳೇದು) ಬೇಕಾಗಿರುತ್ತೆ. ಕನ್ನಡ ಭಾಷೆಯಲ್ಲಿ ಸಂಪೂರ್ಣವಾಗಿ ವ್ಯಾವಹಾರಿಕ ಜ್ಞಾನವು ಮುಖ್ಯವಾಗಿರುತ್ತೆ. ಕಾಡುಗಳಲ್ಲಿ ವಾಸಮಾಡುವದಕ್ಕೆ ವಾಡಿಕೆಯಾದ ದೃಢವಾದ ದೇಹಸ್ಥಿತಿಯುಳ್ಳವನು ವಿನಾ ಇತರರು ದರಖಾಸ್ತು ಮಾಡಬೇಕಾದ್ದಿಲ್ಲವು.

ದರಖಾಸ್ತುದಾರರ ಲಾಯಖೀಗಳು, ಪೂರ್ವದ ಯೋಗ್ಯತೆಗಳು, ಖಾಯಿಷ್ ಮಾಡುವ ಸಂಬಳಗಳ ದರ, ವಯಸ್ಸು ವಗೈರೆಯನ್ನು ನಮೂದಿಸಿ ಅವರ ಸರಟಿಫಿಕೇಟುಗಳನ್ನು ಮೈಸೂರು ಫಾರೆಸ್ಟು ವ ಫಾರಂಗಳ ಸೂಪರ್ಇಂಟೆಂಡೆಂಟರವರಿಗೆ ಕೂಡ್ಲೆ ಕಳುಹಿಸತಕ್ಕದ್ದು.

ಹಳೇ ಆನೆಗಳ ಸರಪಣಿಗಳು.

ತಾರೀಖು 15ನೇ ಜನವರೀ 1884.

ಹೊಸ ಸರಪಣಿಗಳ ಅರ್ಜ್ ಬಾಜಾರ್ ನಿರಖಿಗೆ ಬಹಳ ಕಡಮೆಯಾದ ದರಗಳ ಪ್ರಕಾರ, ಆಕಾರಗಳ ಬಾಬತು ಉಪಯೋಗಿಸಲ್ಪಟ್ಟ ಆನೆಯ ಸರಪಣಿಗಳನ್ನು ಮೈಸೂರಲ್ಲಿ ಒದಗಿಸುವ ಬಗ್ಯೆ ದರಖಾಸ್ತುಗಳನ್ನು ಕೊಡಬಹುದೆಂದು ಇದರಡಿ ರುಜು ಮಾಡಿರುವವರಿಂದ ಕೋರಲ್ಪಡುತ್ತೆ. ಪ್ರತಿ ದರಖಾಸ್ತಿನಲ್ಲಿಯೂ, ಸದರೀಯವರ ವಶದಲ್ಲಿರುವ ಸರಪಣಿಗಳ ಸಂಖ್ಯೆ ಮತ್ತು ಆಕೃತಿ, ವಿಸಿಷ್ಟ ಸರಪಣಿಗಳ ತೂಕ, ಸದರೀ ಸರಪಣಿಗಳನ್ನು ಯಾವ ದರಕ್ಕೆ ಒದಗಿಸುವಂತೆ ಹೇಳುತ್ತಾರೋ ಆಬಾಬತು ವರ ಯಿವುಗಳನ್ನು ನಮೂದಿಸತಕ್ಕದ್ದು.

ವಳ್ಳೆಯ ಸ್ಥಿತಿಯಲ್ಲಿಲ್ಲದ ಯಾವ ಸರಪಣಿಗಳಾಗಲಿ ತಿರಸ್ಕರಿಸಲ್ಪಡುವವು.

ಸಿ. ಇ. ಯಂ. ರಸ್ಸಲ್,
ಮೈಸೂರು ಡಿ॥ ಫಾರೆಸ್ಟು ವ ಗವರ್ನಮೆಂಟ್
ಫಾರಂಗಳ ಸೂಪರ್ಇಂಟೆಂಡೆಂಟ್.

ಅಮೃತ ಮಹಲ್ ಇಲಾಖಾ.

ತಾರೀಖು 5ನೇ ಫಿಬ್ರುವರಿ 1884.

ಇದರಿಂದ ಪ್ರಕಟಪಡಿಸುವದೇನಂದರೆ, 1884ನೇ ಇಸವಿ ಫಿಬ್ರುವರೀ 14ನೇ ತಾರೀಖಿಗೆ ಬೀರೂರಲ್ಲಿ ಗೊತ್ತುಮಾಡಿದ್ದ ದನಗಳ ಹರಾಜು ಮಾಹೆ ಮಜಕೂರು 25ನೇ ತಾರೀಖಿಗೆ ಅಡ್‌ಜರ್ನ ಮಾಡಿ ಇರುತ್ತೆ.

ವಿ. ಸಿ. ಹೇ. ಕರ್ನಲ್,
ಇನ್‌ಚಾರ್ಜ್ ಅಮೃತಮಹಲ್ ಡಿ॥

ಕಡೂರು ಡಿಸ್ಟ್ರಿಕ್ಟು ಸಬಾರ್ಡಿನೇಟ್ ಜಡ್ಜಿಯವರ ಕೋರ್ಟಿನಲ್ಲಿ.

1884ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 4.

ಮೃತಪಟ್ಟ ಬೇಲೂರ ತಾಲ್ಲೂಕು ನಡುಮಾಲ ಫಿರಕಾ ಶನಿವಾರ ಸಂತೆ ಹೋಬಳಿ ಕಳನೆರಿ ಗ್ರಾಮದ ಚನ್ನೇಗೌಡಯಾನೆ ಬಿಳೇಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ಚನ್ನಮ್ಮ ಹೆಗ್ಗಡತಿಯು, ಮೃತಪಟ್ಟ ಬಿಳೇಗವುಡನು ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಕಳನೆರಿ ಚನ್ನಮ್ಮನು ಕಳನೆರಿ ವಾಸಸ್ಥನಾಗಿ ಮೃತಪಟ್ಟ ಬಿಳೇಗವುಡನ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಚನ್ನಮ್ಮನ ಅರ್ಜೀಯನ್ನು 1884ನೇ ಇಸವೀ ಫಿಬ್ರುವರೀ ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಿಳೇಗವುಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿಥೆ.

1884ನೇ ಇಸವಿ ಜನವರೀ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶೆ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಥೆ.

ಬಿ. ತಿರುಮಲಾಚಾರ್,
ಸಬ್ ಜಡ್ಜ್.

ಕಡೂರು ಡಿಸ್ಟ್ರಿಕ್ಟು.

ತಾರೀಖು 14ನೇ ಜನವರೀ 1884.

ಇದರಿಂದ ತಿಳಿಯಪಡಿಸುವದೇನಂದರೆ, ಚಿಕ್ಕಮಗಳೂರು ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗಿ ಯಿರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜುಗಳನ್ನ ಹಾಜರ್ಮಾಡಿದವರೆ ಆಗಲಿ, ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾದ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರರೇ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ವಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರವರ ರೂಬರೂ ಹಾಜರಾಗಿ ಅವುಗಳನ್ನ ವಾಪಸ್ ತೆಗದುಕೊಳ್ಳಬೇಕು, ತಪ್ಪಿದರೆ ಸರ್ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷರ್ ಆಕ್ಟು 85ನೇ ಸೆಕ್ಷರ್ ಅನುಸರಿಸಿ ಅವುಗಳು ನಾಶಪಡಿಸಲ್ಪಡುವವು.

ಖಂಡಿಕ ನಂಬರ.	ದಸ್ತಾವೇಜು ನಂಬರ.	ದಸ್ತಾವೇಜು ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮುತ್ತು ವಾಸಸ್ಥಳ.	ದಸ್ತಾವೇಜು ಬರಸಿಕೊಂಡವರ ಹೆಸರು ಮುತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮುತ್ತು ಕಿಮ್ಮತು.
1	147 1880—81	20-3-80	23-7-80	ದೇವರಾಯಪೇಟೇಲಿರುವ ಯೋಗಪ್ಪನ ಹೆಂಡತಿ ಚನ್ನಮ್ಮ	ದೇವರಾಯಪೇಟೇಲಿರುವ ತೆಲಗರ ತಿಂಗಪ್ಪನ ಮಗ ಷರಾಬು ಅಂಗಡಿ ನರಸಿಹ್ಮಯ್ಯ	ಗೋಣಕಲ್ ಗ್ರಾಮದಲ್ಲಿ ಯಿರತಕ್ಕ ಕಟ್ಟುಮನೆಯಾನೆ ಕಬ್ಬಿನಮನೆ ಹಿತ್ತಲ್ ಯೆಂಬ ಹೋಂದು ತೋಟ 40 ರೂಪಾಯಿಗೆ ಕ್ರಯ.
2	154	15-3-80	26-7-80	ದೇವರಾಯಪೇಟೇಲಿರುವ ವೈಶ್ಯರ ಪಾಳ್ಯದ ಶೇಷಯ್ಯನ ಮಗ ರಾಮಣ್ಣ	ಬಸವನಹಳ್ಳಿಯಲ್ಲಿರುವ ಕೊತ್ವಾಲ್ ಚನ್ನಪ್ಪನಮಗ ಸೂರ್ಯನಾರಣಪ್ಪ	ಬಾಕೀ ಸಲ್ಲತಕ್ಕ 150 ರೂಪಾಯಿಗಳು ಸರ್ 1881ನೇ ಇಸವಿ ಏಪ್ರೆಲ್ ಆಖ್ಯೆರಿಗೆ ಪಾವತೀ ಮಾಡುವದಾಗಿಯು ತಪ್ಪಿದರೆ ದಸ್ತಾವೇಜು ತಾರೀಖು ಲಾಗಾಯತು ಶೇಕಡಾ 1ಕ್ಕೆ ತಿಂಗಳು 1ಕ್ಕೆ 1-8-0 ಯಂತೆ ಬಡ್ಡಿನಿಸಿ ಅಸಲ್ ಮೊಬಲ್ಗೆ ಸಲಾಯಿಸುವದಲ್ಲದೆ ಯಿದಕ್ಕಾಗಿ ಟರ್ವ ದೇವರಾಯ ಪೇಟೇಲಿರುವ ಹಂಚಿನಮನೆ ಮಳಿಗೆ ಸಹ ದ್ರಿಶ್ಯಾಧಾರ ಮಾಡಿರುವದಾಗಿ.
3	175	2—7—80	8—8—80	ಜೋಳದಾಳುಪೇಟೇಲಿರತಕ್ಕ ಶಿವಾಚಾರದ ಸಣ್ಣವೀರಶೆಟ್ಟಿ ಮಗ ರುದ್ರಶೆಟ್ಟಿ.	ಹೊಸಹಳ್ಳೀ ಪೇಟೇಲಿರುವ ಯಾಕೂಪಸಾಬಿ ಮಗ ಬುಡ್ಡಾಸಾಬಿ	ವಂದುನೂರು ರೂಪಾಯಿ ತೆಗದುಕೊಂಡು ಯಿರುವದ್ದರಿಂದ ಯಿದಕ್ಕೆ ಶೇಕಡಾ 1ಕ್ಕೆ ತಿಂಗಳು 1ಕ್ಕೆ 1 ರೂಪಾಯಿನಂತೆ ಬಡ್ಡೀ ಕೂಡಿಸಿ ಅಸಲ್ ಬಡ್ಡೀ ಸಹಾ ನಡದ ದಿವಸಕ್ಕೆ ಪಾವತೀ ಮಾಡುವದಲ್ಲದೆ ಯಿದಕ್ಕಾಗಿ ಜೋಳದಾಳು ಪೇಟೇಲಿ ತಾನು ವಾಸವಾಗಿರುವ ಹಂಚಿನಮನೆ ಖಣದ ಹಿತ್ತಲ್ ಕಾಫಿತೋಟ ತೋಟದ ಗದ್ದೆ ಸಹಾ ತೋರಿಸವುಮಾಡಿ ಯಿರುವಂತೆ.
4	207	12-7-80	26-8-80	ಬೆಳವಾಡಿ ಸಣ್ಣ ಸುಬ್ಬಣನಮಗ ಅಪ್ಪಣ್ಣಯ್ಯ	ಬೆಳವಾಡಿ ಮಣೇಗಾರ ರಾಮಣ್ಣ	ಬೆಳವಾಡಿ ಕೆರೆ ಕೆಳಗಣ ಮಲಕುಪ್ಪ ಹಾಳು ಯಂಬ ತೆಂಗಿನ ತೋಟವು ವಂದುನೂರು ರೂಪಾಯಿಗೆ ಮೂರುವರುಷ ಭೋಗ್ಯ.
5	59 1881—82	19-5-81	27-5-81	ಹಾಲೇನಹಳ್ಳಿಲೀರುವ ಅಬ್ದುಲ್ ಖಾರ್ ಸಾಬಿಮಗ ಗುಲಾಂ ಮೊಹದ್ದೀನ್ ಖಾ	ಬಾಳೇಹಳ್ಳಿಲ್ಲಿರುವ ಅದಂಸಾಬಿಮಗ ಸೈಯದ್ ಅಬ್ಬಾಸಾಬಿ	70 ರೂಪಾಯಿಗೆ ತಿಂಗಳು 1ಕ್ಕೆ ಶೇ|1ಕ್ಕೆ $1\frac{1}{4}$ ರೂಪಾಯಿನಂತೆ ಬಡ್ಡಿ ಶೇರಿಸಿ ಅಸಲ್ ಬಡ್ಡಿಸಹ ವಂದೂವರೆ ವರುಷದಲ್ಲಿ ಪಾವತೀ ಮಾಡುವದಲ್ಲದೆ ಇದಕ್ಕಾಗಿ ಬಿಳೀಹಳ್ಳಿ ದಾಖಲೇ ಹಾಲೇನಹಳ್ಳಿಲಿರುವ ಹಂಚಿನ ಮನೆ ಜಮೀನು 1 ಸಹ ಆಧಾರವಮಾಡಿರುವಂತೆ.

ಜಂಜರ ನಂಬರ.	ದಸ್ತಾವೇಜು ನಂಬರ.	ದಸ್ತಾವೇಜು ತಾರೀಖು.	ರಿಜಿಸ್ಟರಿನ ತಾರೀಖು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ದಸಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
6	79	10–4–81	16–6–81	ಸಕ್ಕರೇಪಟ್ಟಣದ ದೊಡ್ಡಬೀರನ ಮಗ ಮುದಿಬೀರ	ಸಕ್ಕರೆಪಟ್ಟಣದಲ್ಲಿರುವ ಕುರುಬರ ಕಾಡನ ಮಗ ಕುರುಡ	ಸಕ್ಕರೇ ಪಟ್ಟಣದಲ್ಲಿರುವ ಹೆಂಚಿನ ಮನೆ 30 ರೂಪಾಯಿಗೆ ಕ್ರಯ.
7	235	14–10–81	15–10–81	ಚಿಕ್ಕಮಗಳೂರು ಪ್ರೊಟರ ಪೇಟೇಲಿರುವ ಶಿವಮೊಗ್ಗಾ ರುಪುಲಿಂಗ್ಯಾನೆ ಹರಿಲಿಂಗಿ ಮಗ ಮೋಹನಲಿಂಗ	ಪ್ರೋಟ ರ ಪೇಟೇಲಿರುವ ಮಲಾರ ಲಿಂಗನ ಮಗ ಶಿವಮೊಗ್ಗಾ ಹರಿಲಿಂಗಯ್ಯ	100 ರೂಪಾಯಿಗೆ ಶೇಕಡಾ ಸಾಲೀಯಾನ 1[illegible] ರೂಪಾಯಿನಂತೆ ಯೇರುವ ಬಡ್ಡೀ ಮತ್ತು ಅಸಲ್ ಸಹಾ ಈ ಲಾಗಾಯತು 3 ವರುಷದಲ್ಲಿ ಪಾವತೀ ಮಾಡುವದಲ್ಲದೆ ಇದಕ್ಕಾಗಿ ಪ್ರೋರಟರ ಪೇಟೇಲಿರುವ ಹುಲಿನಮನೆ ತೋರಡವು ಮೊಡಿರುವದಾಗಿ.
8	245	19–10–81	27–10–81	ಗಾಳೀಪೂಜೆ ಹೊಲಿಗೆರೆಯಲ್ಲಿರುವ ಮಲ್ಲನ ಮಗ ಮೂಳ	ಗೊಣಕಲ್ ಗ್ರಾಮದ ವೀರೇಗೌಡನ ಮಗ ಚಿನ್ನಬಸವೇಗೌಡ	100 ರೂಪಾಯಿಗೆ ಶೇಕಡಾ 1ಕ್ಕೆ ತಿಂಗಳು 1ಕ್ಕೆ 1 ರೂಪಾಯಿ ಪ್ರಕಾರ ನಡದು ದಿವಸದ ಬಡ್ಡೀ ಅಂಶಕ್ಕಾಗಿ ಗಾಳೀಪೂಜೆ ಗ್ರಾಮದ ತರೀ ಜಮೀನು 4 ಮನೆ ಹಿತ್ತಲ್ ವಗೈರೆ ಭೋಗ್ಯಾದಿಗೆ ಕೊಟ್ಟಿರುವದಾಗಿ.
9	275	18–11–81	21–11–81	ದೇವರಾಯ ಪೇಟೇಲಿರುವ ಶಿವಮೊಗ್ಗಾ ಜಜಪ್ಪನ ಮಗ ಮಾರ್ತಾಂಡಪ್ಪ.	ದೇವರಾಯಪೇಟೇಲಿರುವ ವೈಶ್ಯರ ಮೈಸೂರು ನಿರ್ವಾಣಪ್ಪನ ಮಗ ಅಣ್ಣಪ್ಪ	ತಗರಿಹಂಕಲ್ ಗ್ರಾಮದ ಸಟ್ಟಿಹಳ್ಳೀ ಹಳಿಯೂರೆಂಬ ಬೋಂದುತೋಟವು ವಂದುನೂರು ರೂಪಾಯಿಗೆ ಕ್ರಯ.
10	ತಿರಸ್ಕಾರ 5 1881—81	22—9—79	27—7—80	ಬಸವನಹಳ್ಳೀಲಿರುವ ಹರಿಹರದ ಬುರಲಿ ಕೃಷ್ಣಪ್ಪ ನಾಯಕರ ಮಗ ರಂಗರಾವ್ 1 ಮತ್ತು ವಾರದ ಜೈನರ ಸಣಪಾಯ ಶೆಟ್ಟಿ 1 ಈ 2 ಜನರು	ಯಮಸಂದೀಲಿರುವ ಪಟೇಲ್ ದ್ಯಾವೇಗೌಡನ ಮಗ ಹೊಟ್ಟೇಗೌಡ	ತಿಪ್ಪಾಜನಹಳ್ಳಿ ಗ್ರಾಮದಲ್ಲಿ ಇರುವ ಹೊಂಬಳದಘಟ್ಟೆ ಕೂಲ್ ಕಾಫೀ ತೋಟ ಮತ್ತು ತೊಗರಿ ಹಂಕಲ್ ಗ್ರಾಮದಲ್ಲಿ ಸದರೀ ತೋಟದ ವತ್ತಿನಲ್ಲಿರುವ ಬ 6 ಳದಹಟ್ಟಿ ತೋಟ ಸಹ 4,000 ರೂಪಾಯಿಗಳಿಗೆ ಕ್ರಯ.
11	3 1881—82	19—7—80	14—5—81	ಮೂರುಮನೆ ಹಳ್ಳೀಲಿರುವ ರಾಮಾಜಟ್ಟಿ 1 ಇವನ ತಮ್ಮ ಚೌಡಾಜಟ್ಟಿ ಸಹಾ	ಚಿಕ್ಕಮಗಳೂರು ಕೋಟೇ ಬಸವೇಗೌಡರ ಮಗ ಶಿವಣ್ಣಗೌಡ	ನೂರು ಅರವತ್ತು ರೂಪಾಯಿ ಐದಾಣೆ ನಾಲ್ಕು ಪೈಗೆ ತಿಂಗಳು 1ಕ್ಕೆ ಶೇಕಡಾ 1 ರೂಪಾಯಿನಂತೆ ಬಡ್ಡೀ ಕೂಡಿಸಿ ಅಸಲ್ ಬಡ್ಡೀ ಸಹಾ ವಂದು ವರುಷದಲ್ಲಿ ಸಲ್ಲಿಸುವದಲ್ಲದೆ ಇದಕ್ಕಾಗಿ ಚಿಕ್ಕಮಗಳೂರಲ್ಲಿ ಇರುವ ತರೀ ಜಮೀನುಗಳು 2, ಮೂರುಮನೆ ಹಳ್ಳೀಲಿರುವ ಮನೆ ಸಹ ಆಧಾರಮಾಡಿ ಯಿರುವದಾಗಿ.

ಜಿ. ಎಫ್. ಮೈಕಲ್‌ಜಾನ್,
ರಿಜಿಸ್ಟ್ರಾರ್.

ಮೈಸೂರು ಗೆಜೆಟ್, ಚಂದಾ ದರ ವಗ್ಯೆರೆ.

	ಚಂದಾ.	ಟಪ್ಪಾಲ್ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ.
	ರೂ. ಆ.	
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲೀಷು ಮತ್ತು ಕನ್ನಡ ಸಹಾ 12 ತಿಂಗಳಿಗೆ	7 0	3 8
ಛಷ್ ಮಾಹೆ ಯಾ ಕ್ವಾರಟರಿಗೆ	ದಾವಮಾಷಾಯಿ ಪ್ರಕಾರ ದರಗಳು.	

	ರೂ. ಆ.
ಶಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟೀಸುಗಳು;—	
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ)	2 8
ಯರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ	1 4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ, ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟೀಸ್‌ಗಳಿಗೆ:— ಕಡೂರು ಡಿಸ್ಟ್ರಿಕ್ಟು.	
ಮೊದಲನೇ ದಫಾ	5 0
ಯೆರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	2 8
ಶಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.	
ಡ್ಯುಪ್ಲಿಕೇಟ್ ಕಾಫೀಪಟ್ಟೇ ವಗ್ಯೆರೇ ಕೊಡುವ ಬಗ್ಯೆ ರೆವಿನ್ಯೂ ಆಫೀಸರ‍ಗಳು ಕೊಡುವ ನೋಟೀಸ್‌ಗಳಿಗೆ:—	
ಮೊದಲನೇ ಸಲಕ್ಕೆ .. ಪುಟ 1ಕ್ಕೆ	10 0
ಯೆರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೆ " ..	5 0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ;—	
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಙ್ತಿ 1ಕ್ಕೆ ..	0 8
ಯೆರಡನೇ ದಫಾ ಡಿಟೋ ಡಿಟೋ ..	0 6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ	0 4

ಬಮೋಜೀಬ್ ಹುಕ್ಕುಂ,

ಹೆಚ್. ಹಡರ್ಸ,

ಮೈ. ಗೆ. ಕಂಪೈಲರ್.

ಗವರ್ನಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನಮೆಂಟ್ ಆಫೀಸರಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಶೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡು ಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 4—8—0; ಎಂಟು ಔನ್ಸ್‌ವುಳ್ಳ ಡಬಿಗೆ ರೂ. 8—8—0; ಒಂದು ಪೌಂಡು ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಇದರಡೀ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿ ಒಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌಂಡು ವುಳ್ಳ ಡಬ್ಬಿಗೆ 20 ರೂಪಾಯಿ. ಈ ಔಷಧವು, ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯನ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬೀಗೆ ಎಂಟು ಆಣೆ ಟಪ್ಪಾಲ್ ಹಾಸಲೂ, ಒಂದು ಪೌಂಡು ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

ಮೈಸೂರ ಗೆಜೆಟ್.

ನಂ. 7 ಸರ್ಕಾರದಿಂದ ಛಾಯಿಸ್ಲ್ಪಟ್ಟದ್ದು. ಸನ್ 1884.

ಬೆಂಗಳೂರು, ಶನಿವಾರ, ಫಿಬ್ರುವರೀ ತಾ॥ 16, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್‌ಟೆಂಡೆಂಟರು, ಕಾಂಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ ವರ್ಕಸ್ ಆಫೀಸರಗಳು, ಮಿಲಿಟೇರಿ ಸಿಕ್ರಿಟೆರಿಯವರು, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೇ ಬಕಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್‌ಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲಾ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲಾ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 29ನೇ ಜನವರೀ 1884.

ನಂ. 308.—1879ನೇ ಇಸವಿ 1ನೇ ನಂಬರ್ ಇಂಡಿಯನ್ ಸ್ಟಾಂಪ್ ಆಕ್ಟನ್ನು ಮೈಸೂರು ದೇಶಕ್ಕೆ ಜಾರೀಗೆ ತಂದ ಇಂಡ್ಯಾ ಗವರ್ನಮೆಂಟಿನವರ 1879ನೇ ಇಸವಿ 22ನೇ ಮೇ ಮಾಹೆ 99. I. J. ನಂಬರುವುಳ್ಳ ಇಸ್ತಿಹಾರನಾಮೆಯ (ಸಿ) ಕ್ಲಾಜ್ ಅನುಸರಿಸಿ ಶ್ರೀಮನ್ ಮಹಾರಾಜಾ ಸರ್ಕಾರದವರು ಹುಕ್ಕುಂ ಮಾಡುವದೇನಂದರೆ, ವಂದು ಡಿಸ್ಟ್ರಿಕ್ಟಿನ ಸಬ್ ಡಿವಿಜನ್ ಚಾರ್ಜಿನಲ್ಲಿರತಕ್ಕ ಆಫೀಸರರು, ಸದರೀ ಆಕ್ಟಿನ ಅರ್ಥ ಪ್ರಕಾರ, ವಬ್ಬ ಕಲೆಕ್ಟರೆಂದು ಎಣಿಸಲ್ಪಡತಕ್ಕದ್ದು.

ತಾರೀಖು 5ನೇ ಫಿಬ್ರುವರೀ 1884.

ನಂ. 311.—ಇದರಿಂದ ಪ್ರಕಟಿಸಲ್ಪಡುವದೇನಂದರೆ, ಕಡೂರು ಡಿಸ್ಟ್ರಿಕ್ಟು ವುತ್ಪತ್ತೀ ಬಾಬತು ಇದರಡಿ ಕಂಡ ನಾಟಾಗಳು ಅವುಗಳ ಚಾರ್ಜುವುಳ್ಳ ಡೆಪ್ಯುಟಿ ಕಮ್ಮಿಷನರಿಂದ, ಅಥವಾ ಸದರೀ ಬಗ್ಯೆ ಅವರು ನೇಮಿಸಬಹುದಾದ ಇತರ ಆಫೀಸರರಿಂದ ಈ ಕೆಳಗೆ ವಿವರಿಸಲ್ಪಟ್ಟ ತಾರೀಖಿನಲ್ಲಿಯೂ, ಸ್ಥಳದೊಳಗೂ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ಹರಾಜ್ ಹಾಕುವ ಸ್ಥಳದ ಹೆಸರು.	ಹರಾಜ್ ಮಾಡುವ ತಾರೀಖು.	ತೇಗದಮರ.	ವುಳಿಸಿಕೊಳ್ಳಲ್ಪಟ್ಟದ್ದು.	ವುಳಿಸಿಕೊಳ್ಳಲ್ಪಡದೆ ಇರುವದು.	ಕೂಪಗಳು.
ಚಿಕ್ಕಮಗಳೂರು ಕೋಠಿ.	1884ನೇ ಫೆಬ್ರುವರೀ 21ನೇ ಮರ್ಸ್ಕುಂ	22	10	37	400

ಜುಮ್ಲಾ ಹೆಚ್ಚುಕಡಮೆ—469

ಹರ್ರಾಜಿನ ಷರತಗಳು—ಸರ್ 1873ನೇ ಜೂನ್ 12ನೇ ಮರ್ಸ್ಕುಂ 20ನೇ ನಂಬರ್ ಮೈಸೂರು ಗೆಜೆಟಿನಲ್ಲಿ ಪ್ರಕಟಿಸಲ್ಪಟ್ಟ ಪ್ರಕಾರ ಇರತಕ್ಕದ್ದು ಮತ್ತು ಇವುಗಳು ಹರಾಜ್ ಕಾಲದಲ್ಲಿ ಪ್ರಕಟವಾಗಿ ಓದಲ್ಪಡುವದು.

ತಪ್ಪು ದುರಸ್ತು.

ತಾರೀಖು 7ನೇ ಫೆಬ್ರುವರೀ 1884.

ನಂ. 312—1884ನೇ ಇಸವಿ ಜನವರೀ 18ನೇ ಮರ್ಸ್ಕುಂ 300ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ "1883ನೇ ಇಸವಿ ನವಂಬರ್ 15ನೇ ಮರ್ಸ್ಕುಂ 272ನೇ ನಂಬರು" ಯಂಬ ಮಾತುಗಳಿಗೆ ಬದಲಾಗಿ "1883ನೇ ಇಸವಿ ಡಿಸಂಬರ್ 13ನೇ ಮರ್ಸ್ಕುಂ 287ನೇ ನಂಬರು" ಯಂಬದಾಗಿ ಓದಿಕೊಳ್ಳತಕ್ಕದ್ದು.

ತಾರೀಖು 9ನೇ ಫೆಬ್ರುವರೀ 1884.

ನಂ. 314.—ಚಿಕ್ಕಮಗಳೂರು ಷಹರಿನಲ್ಲಿಯೂ, ಕಡೂರು ಡಿಸ್ಟ್ರಿಕ್ಟಿನಲ್ಲಿಯೂ, ಷರಾಬ್ ತಯಾರಿ ವ ಬಟ್ಟಿ ಬಿಕರೀ ಮಾಡುವ ಬಟ್ಟಿ ಸ್ವಾತಂತ್ರ್ಯದ ಬಗ್ಯೆ ದರಖಾಸ್ತುಗಳು ಕೊಡಬಹುದೆಂದು ಇದರಿಂದ ತಿಳಿಸೋಣಾಗುತ್ತೆ. ಸದರೀ ಡಿಸ್ಟ್ರಿಕ್ಟಿಗೆ ದೀವಾನರವರ 1882ನೇ ಇಸವಿ ನವಂಬರ್ 21ನೇ ಮರ್ಸ್ಕುಂ 131ನೇ ನಂಬರು, ಅದೇ ಇಸವೀ ನವಂಬರ್ 25ನೇ ಮರ್ಸ್ಕುಂ 138ನೇ ನಂಬರು, ಅದೇ ಇಸವಿ ಡಿಸಂಬರ್ 7ನೇ ಮರ್ಸ್ಕುಂ 146ನೇ ನಂಬರು, 1883ನೇ ಇಸವಿ ಜನವರೀ 4ನೇ ಮರ್ಸ್ಕುಂ 2ನೇ ನಂಬರು, ಮತ್ತು ಅದೇ ಇಸವಿ ನವಂಬರು 16ನೇ ಮರ್ಸ್ಕು 274ನೇ ನಂಬರು, ಮತ್ತು ಅದೇ ಇಸವಿ ಡಿಸಂಬರ್ 14ನೇ ಮರ್ಸ್ಕುಂ 288ನೇ ನಂಬರ್, ಈ ಇಸ್ತಿಹಾರ್ ನಾಮೆಗಳಿಂದ ಪರಿಷ್ಕರಿಸಲ್ಪಟ್ಟ ಪ್ರಕಾರ ಇದರಡೀ ಕಂಡ ತಾಲ್ಲೂಕುಗಳು ಶೇರಿರುತ್ತವೆ.

1. ಚಿಕ್ಕಮಗಳೂರು
2. ಕಡೂರು
3. ಮೂಡಿಗೆರೆ
4. ತರೀಕೆರೆ
5. ಕೊಪ್ಪ, ಯಡೆಹಳ್ಳಿ ಡೆಪ್ಯುಟಿ ಅಮಲ್ದಾರ್ರ ಚಾರ್ಜು ದೇಖೀಲ್.

2. ಈಗ ಯಾವ ಸ್ವಾತಂತ್ರ್ಯದ ಬಗ್ಯೆ ದರಖಾಸ್ತುಗಳು ಖಾಯಿಷ್ ಮಾಡಲ್ಪತವೆಯೋ ಅಂಥಾ ಸ್ವಾತಂತ್ರ್ಯಗಳು, ಯಿದರಡಿ ಮುಂದೆ ವಿಧಿಸಲ್ಪಟ್ಟ ಷರತ್ತುಗಳಿಗೆ ವಳಪಟ್ಟು, 1884ನೇ ಇಸವಿ ಏಪ್ರೆಲ್ 1ನೇ ಮರ್ಸ್ಕುಂ ಮೊದಲು 1887ನೇ ಇಸವಿ ಮಾರ್ಚಿ 31ನೇ ಮರ್ಸ್ಕುಂ ವರಿಗೆ ಆಗುವ ಮೂರು ವರುಷಗಳ ಕಾಲಕ್ಕೆ ಕೊಡಲ್ಪಡುವದು. ಅಂಥಾ ಸ್ವಾತಂತ್ರ್ಯವು ಶೇಂದಿ, ಯೂರೋಪ್ ದೇಶದ ವೈನ್ ಯಂಬ ಸರಾಯಿ, ಸ್ಪಿರಿಟ್ ಸಾರಾಯಿ, ಯಾ ಬಿಯರು ಇವುಗಳ ತಯಾರಿ ಯಾ ಮಾರಾಟವನ್ನು ಅಡಗಿಸಿ ಕೊಂಡಿರುವದಿಲ್ಲ.

3. ದರಖಾಸ್ತುದಾರರು ತಮ್ಮ ದರಖಾಸ್ತುಗಳಲ್ಲಿ ಸಾಲಿಯಾನಾ ಸರಕಾರಕ್ಕೆ ಈಮ್ಮೀವೊಬಲಗು ಯೆಷ್ಟು ಕೊಡುತ್ತೇವೆಂದು ಕರಾರ್ ಮಾಡುವರೋ ಅದನ್ನು ನಮೂದಿಸತಕ್ಕದ್ದು. ತೆರಿಗೆ ಮೊಬಲಗಿನ ರೂಪಾಯಿ 1ಕ್ಕೆ ವಂದಾಣೆಯಂತೆ ತೆರಬೇಕಾದ ಲೋಕಲ್ ಸೆಸ್ ದೇಖೀಲ್ ತೆರಿಗೆಯ ದರಗಳು ಮತ್ತು ಕಂಟ್ರಾಕ್ಟುದಾರರಿಂದ ಯಾವ ಖರೀದಿಗೆ ಷರಾಬ್ ಕೊಡಲ್ಪಡತಕ್ಕದ್ದೋ ಅಂಥಾ ವಟ್ಟು ಖರೀದೀ ಮೊಬಲಗುಗಳು ಸುದಾ, ಮುಂದೆ ವಿಧಿಸಲ್ಪಟ್ಟ ರೀತಿಯಾಗಿ ಗವರ್ನಮೆಂಟಿನವರಿಂದ, ಗೊತ್ತು ಮಾಡಲ್ಪಡುವದ್ದರಿಂದ ಅಂಥಾ ದರಗಳಿಗಾಗಿ ಬರುವ ಯಾವ ದರಖಾಸ್ತುಗಳೂ ಆಲೋಚಿಸಲ್ಪಡಲಾರದು.

4. ಪ್ರತಿ ದರಖಾಸ್ತಿನ ಸಂಗಡಲೂ ನಗದಾಗಿ ಯಾಗಲಿ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ, 200 ರೂಪಾಯಿಗಳ ಠೇವಣೀ ಮೊಬಲಗು ಕಳುಹಿಸಲ್ಪಟ್ಟು "ಷರಾಬ್ ತಯಾರೀ ವ ಬಟ್ಟಿ ಪುರೋಕ್ತಿನ ಬಟ್ಟಿ ಸ್ವಾತಂತ್ರ್ಯದ ಬಗ್ಯೆ ದರಖಾಸ್ತು" ಯಂಬ ಮಾತುಗಳು ವಿಳಾಸ ಬರೆಯಲ್ಪಟ್ಟ ಲಿಪಾಫೆಯಲ್ಲಿ ಹಾಕಿ ಸರ್ 1884ನೇ ಇಸವಿ ಫೆಬ್ರುವರೀ 26ನೇ ಮಂಗಳವಾರದ ದಿವಸವಾಗಲಿ, ತತ್ಪೂರ್ವದಲ್ಲಾಗಲಿ ಡೆಪ್ಯುಟಿ ಕಮ್ಮಿಷನರವರಿಗೆ ತಲಪುವಂತೆ ಕಳುಹಿಸತಕ್ಕದ್ದು. ಸದರೀ ತಾರೀಖಿನ ತರುವಾಯ ಯಾವ ದರಖಾಸ್ತೂ

ತೆಗದುಕೊಳ್ಳಲ್ಪಡುವದಿಲ್ಲ. ದರಖಾಸ್ತುಗಳು 1884ನೇ ಇಸವೀ ಫೆಬ್ರುವರೀ 26ನೇ ಮಂಗಳವಾರ ಮಧ್ಯಾನ್ಹ 1 ಘಂಟೆಗೆ ಹಾಜರಾಗತಕ್ಕ ದರಖಾಸ್ತುದಾರರ ರೂಬರು ಡೆಪ್ಯುಟಿ ಕಮ್ಮಿಷನರವರಿಂದ ಚಿಕ್ಕಮಗಳೂರು ಮೊಕ್ಕಾಂ ಅವರ ಆಫೀಸಿನಲ್ಲಿ ಖುಲ್ಲಾ ಮಾಡಲ್ಪಡುವವು. ದರಖಾಸ್ತುಗಳ ಆಖೈರ್ ವ್ಯವಸ್ಥೆ ದೀವಾನರವರಿಗೆ ಸೇರಿದ್ದಾಗಿರುತ್ತೆ. ಸದರೀಯವರು ಯಾವ ದರಖಾಸ್ತನ್ನಾಗಲಿ, ತಮಾಂ ದರಖಾಸ್ತುಗಳನ್ನಾಗಲಿ ಯಾವ ಸಬಬನ್ನು ತಿಳಿಸದೇಯೇ ತಿರಸ್ಕರಿಸತಕ್ಕ ಸಂಪೂರ್ಣ ಅಧಿಕಾರವನ್ನು ತಾವೇ ಉಳಿಸಿಕೊಂಡಿರುತ್ತಾರೆ. ತಿರಸ್ಕರಿಸಲ್ಪಟ್ಟ ದರಖಾಸ್ತುದಾರರಿಂದ ಇಡಲ್ಪಟ್ಟ ಠೇವಣಿಗಳು ಅವರುಗಳು ಕೇಳಿದಾಗ ವಾಪಸ್ ಕೊಡಲ್ಪಡುವವು.

5. ದೀವಾನರವರಿಗೆ ಸಿಫಾರಸ್ ಮಾಡುವ ಬಗ್ಯೆ ಡೆಪ್ಯುಟಿ ಕಮ್ಮಿಷನರಿಂದ ಚುನಾಯಿಸಲ್ಪಡುವ ದರಖಾಸ್ತುದಾರರು, ಕೂಡ್ಲೇ ನಗದಾಗಿಯಾಗಲಿ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ, ದರಖಾಸ್ತುದಾರರು ಒಡಂಬಡಿಕೆ ಮಾಡಿಕೊಂಡ ಸಾಲೀಯಾನಾ ಕಮ್ಮೀ ಹುಟ್ಟುವಳಿಯ ಹನ್ನೆರಡರಲ್ಲೊಂದು ಭಾಗಕ್ಕೆ (ಅಥವಾ ಒಂದು ತಿಂಗಳ ಖಿಸ್ತಿಗೆ) ಸಮನಾದ ಮೊಬಲಗನ್ನು ಕೂಡ್ಲೆ ಠೇವಣಿ ಯಿಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಠೇವಣಿ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

6. ಯಾವ ದರಖಾಸ್ತುದಾರರ ದರಖಾಸ್ತು ದೀವಾನರವರಿಂದ ಆಖೈರಾಗಿ ಮಂಜೂರ್ಮಾಡಲ್ಪಡುತ್ತದೋ ಅಂಥಾವನು, ತನ್ನ ದರಖಾಸ್ತು ಮಂಜೂರಾದ ಸಂಗತಿ ತನಿಗೆ ತಿಳಿಸಲ್ಪಟ್ಟ ಯೆಂಟು ದಿವಸಗಳೊಳಗಾಗಿ ಮೊದಲೇ ಯಿಡಲ್ಪಟ್ಟ ಡಿಪಾಜಿಟ್ ಮೊಬಲಗಿನೊಡನೆ, ಕರಾರ್ ಮಾಡಿಕೊಳ್ಳಲ್ಪಟ್ಟ ಸಾಲಿಯಾನಾ ಹುಟ್ಟುವಳಿ ಪೈಕಿ, ಕಾಲು ಭಾಗದ ಮೊಬಲಗಿಗೆ ಸಮನಾಗುವಂತೆ ಇನ್ನೂ ಕೆಲವು ಮೊಬಲಗನ್ನು ನಗದಾಗಿಯಾಗಲಿ, ಗವರ್ನಮೆಂಟ್ ಪತ್ರಗಳ ಮೂಲಕವಾಗಿ ಯಾಗಲಿ ಕಡೂರು ಡೆಪ್ಯುಟಿ ಕಮ್ಮಿಷನರಲ್ಲಿ ಠೇವಣೀ ಯಿಡತಕ್ಕದ್ದಲ್ಲದೇ ಇದರಲ್ಲಿ ಮುಂದೆ ವಿಧಿಸಲ್ಪಡುವ ಷರತ್‌ಗಳಿಗೆ ಬದ್ಧನಾಗಿ, ತಕ್ಕ ಜಾಮೀನು ಕೊಡುವದರ ಮೇಲೆ, ವಿಧಿಸಲ್ಪಟ್ಟ ನಮೂನೇ ಪ್ರಕಾರ, ಒಂದು ಕರಾರು ಬರೆದು ಕೊಡತಕ್ಕದ್ದು. ಮತ್ತು ಸದರೀ ದರಖಾಸ್ತುದಾರನು ಕರಾರಿಗೆ ರುಜು ಮಾಡಲಿಕ್ಕಾಗಲಿ, ನೇಮಿಸಲ್ಪಟ್ಟ ಡಿಪಾಜಿಟ್ಟನ್ನ ಯಿಡಲಿಕ್ಕಾಗಲಿ, ತಪ್ಪಿದರೆ ಯಾ ನಿರಾಕರಿಸಿದರೆ ಮೊದಲೇ ಯಿಡಲ್ಪಟ್ಟ ಠೇವಣಿ ಮೊಬಲಗುಗಳು ಸರ್ಕಾರಕ್ಕೆ ಸೇರಿಸಿ ಕೊಳ್ಳಲ್ಪಟ್ಟು ಇಜಾರೇ ಅನ್ಯಥಾ ವಿಲೇ ಮಾಡಲ್ಪಡುವದು.

ಷರತ್ತುಗಳು.

I. ಕರಾರ್ ಮಾಡಿಕೊಳ್ಳಲ್ಪಟ್ಟ ಸಾಲಿಯಾನಾ ಕಮ್ಮೀ ಹುಟ್ಟುವಳೀ ಮೊಬಲಗು, ಸಮನಾದ ಹನ್ನೆರಡು ಮಾಹೇವಾರೀ ಖಿಸ್ತುಗಳ ಪ್ರಕಾರ ಸರ್ಕಾರಕ್ಕೆ ಪಾವತೀ ಮಾಡಲ್ಪಡತಕ್ಕದ್ದು. ಇಜಾರೇದಾರನು ಪ್ರತಿ ತಿಂಗಳಲ್ಲಿ ಡಿಸ್ಟಿಲೇರಿಯಿಂದ ಕೊಡಲ್ಪಟ್ಟ ಷರಾಬಿನ ಮೇಲೆ ಸರ್ಕಾರಕ್ಕೆ ಸಲ್ಲತಕ್ಕ ಲೋಕಲ್ ಸೆಸ್ ದೇಖೀಲ್ ಸರ್ಕಾರದಿಂದ ಗೊತ್ತು ಮಾಡಲ್ಪಟ್ಟ ದರಗಳ ಪ್ರಕಾರ ವಿಸಿಷ್ಟ ತೆರಿಗೆ ಮೊಬಲಗನ್ನೂ ಆ ಮೂರನೇ ತಿಂಗಳ 15ನೇ ತಾರೀಖಿನಲ್ಲಾಗಲಿ, ತತ್ಪೂರ್ವವಾಗಲಿ. ಕಡೂರು ಡಿಸ್ಟ್ರಿಕ್ಟ ಟ್ರೆಜರೀಯಲ್ಲಿ ಪಾವತೀ ಮಾಡತಕ್ಕದ್ದು. ಯಾವದಾದರೂ ತಿಂಗಳ ಆಖೈರ್‌ವರಿವಿಗೆ ಕೊಡಲ್ಪಡುವ ಷರಾಬಿನಮೇಲೆ ಸಲ್ಲತಕ್ಕ ತೆರಿಗೆ ಮೊಬಲಗು, ಕರಾರ್ ಮಾಡಿಕೊಂಡ ಕಮ್ಮೀ ಹುಟ್ಟುವಳೀ ಪೈಕೀ ಮಾಹೇವಾರಿ ಖಿಸ್ತು ಮೊಬಲಗ್ ಭರ್ತಿಗೆ ಸಾಲದೆ ಹೋದರೆ, ಅಂತಾ ಕಮ್ಮೀ ಮೊಬಲಗನ್ನು ಭರ್ತೀ ಮಾಡುವದಕ್ಕೆ ಬೇಕಾದಷ್ಟು ಮೊಬಲಗನ್ನು ಇಜಾರೇದಾರನು ಹೆಚ್ಚಾಗಿ ಪಾವತೀ ಮಾಡತಕ್ಕದ್ದು. ಯಾವದಾದರೂ ಮಾಹೇಯಲ್ಲಿ ನಡೆದ ಜಾಸ್ತಿ ವುರೋಖ್ತು ಅದೇ ಸರ್ಕಾರ್ ಸಾಲಿನ ಯಾವದಾದರೂ ಮಾಹೇಯ ಕಮ್ಮೀ ವುರೋಖ್ತಿಗೆ ಉಪಯೋಗಿಸಲ್ಪಡತಕ್ಕದ್ದು. ಯಾವ ತಿಂಗಳಿಗೆ ಸದರೀ ಮೊಬಲಗುಗಳು ಸಲ್ಲತಕ್ಕದ್ದೋ ಅದರ ಮೂರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ತತ್ಪೂರ್ವವಾಗಲಿ ಅವು ಪಾವತೀ ಯಾಗದೇ ಹೋದರೆ ಬಾಕೀ ನಿಲ್ಲುವ ತಮಾಂ ಮೊಬಲಗಿನ ಮೇಲೂ ಸದರೀ ತಾರೀಖು ಲಾಗಾಯತು ಸಾಲಿಯಾನಾ ಸೇಕಡಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕಟ್ಟಲ್ಪಡುವದು; ಮತ್ತು ಯಾವ ತಿಂಗಳಲ್ಲಿ ಮೊಬಲಗುಗಳು ಬಾಕೀ ಯಾಗುತವೋ ಆ ತಿಂಗಳು ಕಳದ ತರುವಾಯವೂ ಮೊಬಲಗು ಸಲ್ಲದೇ ಹೋದರೆ ಬಡ್ಡೀ ದೇಖೀಲ್ ಸಲ್ಲತಕ್ಕ ಬಾಕೀ ಮೊಬಲಗ್ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ತತ್ಕಾಲದಲ್ಲಿ ಜಾರೀ ಯಿರುವ ರೂಲ್ಸ್‌ನಿಂದ ವಿಧಿಸಲ್ಪಟ್ಟ ಪ್ರಕಾರವಾಗಿ, ಕಂಟ್ರಾಕ್ಟುದಾರನ ಸ್ವತ್ತಿನ ಜಪ್ತೀ ಹರಾಜು ಮೂಲಕ ವಸೂಲ್ ಮಾಡಲ್ಪಡತಕ್ಕದ್ದು. ಮತ್ತು ಕಡೂರು ಡೆಪ್ಯುಟಿ ಕಮ್ಮಿಷನರವರ ರಿಪೋರ್ಟಿನ ಮೇಲೆ, ಕಂಟ್ರಾಕ್ಟು ರದ್ದು ಮಾಡಲ್ಪಟ್ಟಿರುತ್ತೆಂದು ತಿಳಿಸುವದಕ್ಕೂ, ಕಂಟ್ರಾಕ್ಟುದಾರನಿಂದ ಇಡಲ್ಪಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳುವಂತೆ ಅಪ್ಪಣೆ ಮಾಡುವದಕ್ಕೂ, ಮತ್ತು ಕಂಟ್ರಾಕ್ಟು ಕಾಲದ ಪೈಕೀ ಉಳಿದ ಕಾಲದಲ್ಲಿ ಕಂಟ್ರಾಕ್ಟುದಾರನ ಖರ್ಚಿಗೂ ಲುಕ್‌ಸಾನಿಗೂ ವಳಪಟ್ಟು ಬಾಬು ಅಮಾನಿಯಲ್ಲಾಗಲಿ ಅನ್ಯಥಾ ಆಗಲಿ ಇಡುವದಕ್ಕೂ ಸಹ ದೀವಾನರವರ ಯಿಖ್ತ್ಯಾರಿಗೆ ಸೇರಿರುತ್ತದೆ.

II. ಪ್ರತಿ ಸಾಲಿನ ಲೆಖ್ಖಗಳೂ ಪ್ರತ್ಯೇಕ ಪ್ರತ್ಯೇಕವಾಗಿ ಖೈದ್ ಮಾಡಲ್ಪಡತಕ್ಕದ್ದು. ಒಂದು ಸಾಲಿನಲ್ಲಿ ಕೊಡಲ್ಪಟ್ಟ ಸಾರಾಯಿ ಮೇಲೆ ಗವರ್ನಮೆಂಟಿಗೆ ಸಲ್ಲತಕ್ಕ ತೆರಿಗೆಯು ಆಸಾಲಿಗೆ ಕರಾರ್ ಮಾಡಿದ ಕಮ್ಮೀ ಹುಟ್ಟುವಳಿಗೆ ಜಾಸ್ತೀ ಆದರೆ, ಅಂತಾ ಜಾಸ್ತೀಯಾದ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 1 ಆಣೆಗೆ ಸಮನಾಗಿ, ಇಜಾರೇದಾರನಿಂದ ಸಲ್ಲಬೇಕಾದ ತೆರಿಗೆ ದೆಸೆ

ಯಿಂದ ವಜಾ ಕೊಡಲ್ಪಡುವದು, ಆದರೆ ಒಂದು ವರುಷದ ಜಾಸ್ತೀ ಮೊಬಲಗು ಇಜಾರೇ ಪೈಕೀ ಯಾವದಾದರೂ ಇತರ ಸಾಲಿನ ಕರಾರ್ ಮಾಡಿದ ಹುಟ್ಟುವಳೀ ಮೊಬಲಗಿನಲ್ಲಿ ಕಮ್ಮೀ ಬೀಳತಕ್ಕ ಯಾವ ಮೊಬಲಗನ್ನಾಗಲಿ ಭರ್ತೀ ಮಾಡುವ ಬಗ್ಗೆ ಉಪಯೋಗಿಸುವದಿಲ್ಲ.

III. ಕಂಟ್ರಾಕ್ಟದಾರನು ಚಿಕ್ಕ ಮಗಳೂರಲ್ಲಿರುವ ಸರ್ಕಾರ್ ಡಿಸ್ಟಿಲೇರಿಯ ಆವರಣದೊಳಗಾಗಲಿ ಅಥವಾ ಡೆಪ್ಯುಟಿ ಕಮ್ಮಿಷನರಿಂದ ಗೊತ್ತು ಮಾಡಲ್ಪಡಬಹುದಾದ ಇತರ ಸ್ಥಳದಲ್ಲಾಗಲಿ ಷರಾಬ್ ತಯಾರ ಮಾಡುವಂತೆಯೂ, ಮತ್ತು ಡೆಪ್ಯುಟಿ ಕಮ್ಮಿಷನರಿಂದ ಮೊಕರರ್ ಮಾಡಲ್ಪಡತಕ್ಕಂಥಾ ಸ್ಥಳಗಳೊಳಗೆ ಬಟ್ಟಿ ಕೋಠಿಗಳನ್ನು ಸ್ಥಾಪಿಸುವಂತೆಯೂ, ನಿಯಮಿಸಲ್ಪಡತಕ್ಕದ್ದು. ಡೆಪ್ಯುಟಿ ಕಮ್ಮಿಷನರಿಂದಾಗಲಿ, ಅಥವಾ ಅಜಮಾಯಿಷೀ ಬಗ್ಗೆ ಮೊಕರರ್ ಮಾಡಲ್ಪಟ್ಟಿರತಕ್ಕ ಯಾವ ಉದ್ಯೋಗಸ್ಥರಿಂದಲಾಗಲಿ ತನಿಖೀ ನೋಡುವ ಬಗ್ಗೆ ಸರ್ವಕಾಲಗಳಲ್ಲಿಯೂ ಡಿಸ್ಟಿಲೇರಿ ಮತ್ತು ಕೋಠೀಗಳು ಖುಲ್ಲಾವಾಗಿರತಕ್ಕದ್ದು. ಯಾವ ಷರಾಬನ್ನೂ ಸದರೀ ಬಗ್ಗೆ ಮೊಕರರ್ ಮಾಡಲ್ಪಡುವ ಒಬ್ಬ ಉದ್ಯೋಗಸ್ಥನಿಂದ ಅಳತೆ ಮಾಡಲ್ಪಟ್ಟು ಅಜಮಾಯಿಷಿ ಮಾಡಲ್ಪಟ್ಟ ಹೊರತು ಡಿಸ್ಟಿಲೇರಿಯಿಂದ ಹೊರಗೆ ತೆಗದುಕೊಂಡು ಹೋಗಕೂಡದು. ಡಿಸ್ಟಿಲೇರಿ ಕಟ್ಟಡಗಳನ್ನು ಉಪಯೋಗಿಸತಕ್ಕ ಬಗ್ಗೆ ಸದರೀ ಕಟ್ಟಡಗಳ ಮೌಲ್ಯದ ಮೇಲೆ ಶೆಕಡಾ ಆರರ ಪ್ರಕಾರ ಲೆಖ್ಖ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಗೊತ್ತು ಮಾಡಲ್ಪಡುವಂಥಾ ಸಾಲಿಯಾನಾ ಬಾಡಿಗೆಯನ್ನು ಕಂಟ್ರಾಕ್ಟದಾರನು ಮಾಹೇಯಾನಾ ಗವರ್ನಮೆಂಟಿಗೆ ಸಂದಾಯ ಮಾಡಲ್ಪಡುವಂತೆಯೂ, ಸದರೀ ಕಟ್ಟಡಗಳನ್ನು ಪೂರಾ ದುರಸ್ತು ಸ್ಥಿತಿಯಲ್ಲಿ ಯಿಟ್ಟು ಕೊಂಡಿರುವಂತೆಯೂ ನೇಮಿಸಲ್ಪಡತಕ್ಕದ್ದು. ಇಜಾರೇದಾರನು ಪೂರ್ವದ ಇಜಾರೇದಾರರಿಂದ ಬಟ್ಟಿ ಯಿಳಿಸಲ್ಪಟ್ಟು, ಸನ್ 1884ನೇ ಇಸವಿ ಏಪ್ರೈಲ್ 1ನೇ ತಾರೀಖಿನಲ್ಲಿ ಹಾಜರಿರಬಹುದಾದ ಯಾವ ಸಾರಾಯಿಯನ್ನಾಗಲಿ, ಆ ಬಗ್ಗೆ ದೀವಾನರವರ ಮಂಜೂರಾತಿ ನಿಸೀ ಡೆಪ್ಯುಟಿ ಕಮ್ಮಿಷನರವರಿಂದ ಠರಾವು ಮಾಡಲ್ಪಡಬಹುದಾದಂಥಾ ಈಡು ಮೊಬಲಗನ್ನು ಕೊಟ್ಟು ತನ್ನ ವಶಕ್ಕೆ ತೆಗದುಕೊಳ್ಳತಕ್ಕದ್ದು.

IV. ತಯಾರ್ಮಾಡಲ್ಪಡುವ ಸಾರಾಯಿ ಒಳ್ಳೇ ಗುಣವುಳ್ಳದ್ದಾಗಿರತಕ್ಕದ್ದು. ಬಟ್ಟಿ ಯಿಳಿಸುವಲ್ಲಿ ಉಪಯೋಗಿಸಲ್ಪಡತಕ್ಕ ಪದಾರ್ಥಗಳು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಟ್ಟು ಒಳ್ಳೇ ಗುಣವುಳ್ಳವಾಗಿರಬೇಕಾದ್ದಲ್ಲದೆ ಅವುಗಳು ಡಿಸ್ಟಿಲೇರಿಯಲ್ಲಿ ತೆಗದುಕೊಳ್ಳಲ್ಪಡುವದಕ್ಕೆ ಮುಂದಾಗಿ ಡಿಸ್ಟಿಲೇರಿ ಸೂಪರ್ ವೈಜರಿಗೆ ಅಥವಾ ಈ ಬಗ್ಗೆ ಮೊಕರರ್ ಮಾಡಲ್ಪಡತಕ್ಕ ಇತರ ಉದ್ಯೋಗಸ್ಥನಿಗೆ ತೋರಿಸಲ್ಪಟ್ಟು ಅವರಿಂದ ಪ್ಯಾಸ್ ಮಾಡಲ್ಪಡತಕ್ಕದ್ದು. ಸಾರಾಯಿ ಬಟ್ಟಿ ಯಿಳಿಸುವಲ್ಲಿ ಆರೋಗ್ಯಕ್ಕೆ ವಿರುದ್ಧವಾದ ಯಾವ ಪದಾರ್ಥಗಳನ್ನೂ ಉಪಯೋಗಿಸಕೂಡದು, ಅಥವಾ ಷರಾಬು ತಯಾರ್ಮಾಡಲ್ಪಟ್ಟ ತರುವಾಯ ಅದರಲ್ಲಿ ಹಾಕಲೂಕೂಡದು; ಮತ್ತು ಉಪಯೋಗಿಸಲ್ಪಡುವ ಯೆಲ್ಲಾ ಪದಾರ್ಥಗಳೂ ಪ್ರಥಮತಃ ವಿಧಿಸಲ್ಪಟ್ಟ ದಾಮೂಷಾಯಿ ಪ್ರಕಾರ ಇರತಕ್ಕವು, ಅಥವಾ ಕಂಟ್ರಾಕ್ಟದಾರನಿಂದ ರೋಜೀನಾ ತಯಾರ್ಮಾಡಲ್ಪಡುವದರ ಫಲಿತಾಂಶಗಳು ಸರ್ಕಾರ್ ಆಫೀಸರುಗಳಿಂದ ನ್ಯಾಯವಾದ ತನಿಖಿ ನಡಿಸಲ್ಪಡಲಿಕ್ಕೋಸ್ಕರ ಐಯಿಂದ ಗವರ್ನಮೆಂಟಿನವರಿಂದ ನಿರ್ಣಯಿಸಲ್ಪಡುವ ದಾಮೂಷಾಯಿ ಪ್ರಕಾರವಾಗಲಿ ಇರತಕ್ಕದ್ದು.

V. ಇಜಾರೇದಾರನು, ಡಿಸ್ಟಿಲೇರಿಯಲ್ಲಿಯೂ, ಪ್ರತಿ ಕೋಠಿಯಲ್ಲಿಯೂ, ತಯಾರ್ಮಾಡಲ್ಪಡುವ ಸಾರಾಯಿಗಳ ಜಮಾಖರ್ಚುಗಳು, ತೇದಾದು, ವ ಸ್ಟ್ರೆಂಗ್ತ್, ಅವುಗಳ ಕರಾರ್ವಾಕಾ ಲೆಖ್ಖಗಳನ್ನೂ, ಮತ್ತು ಡಿಸ್ಟಿಲೇರಿಯಲ್ಲಿ ರೋಜೀನಾ ಜಮಾಖರ್ಚು ಆದ ಯೆಲ್ಲಾ ಪದಾರ್ಥಗಳ ಲೆಕ್ಕಗಳನ್ನೂ ಸುದಾ ವಿಧಿಸಲ್ಪಟ್ಟ ನಮೂನೆಗಳಲ್ಲಿ ಇಡತಕ್ಕದ್ದು, ಆತನು ಡೆಪ್ಯುಟಿ ಕಮ್ಮಿಷನರವರಿಂದಾಗಲಿ, ಸೂಪರ್ವೈಜರಿಂದಾಗಲಿ, ಈ ಬಗ್ಗೆ ಮೊಕರರ್ಮಾಡಲ್ಪಡುವ ಯಾವ ಉದ್ಯೋಗಸ್ಥನಿಂದಾಗಲಿ ತನಿಖೀ ನೋಡುವ ಬಗ್ಗೆ ಹಾಜರ್ ಮಾಡುವಂತೆ ಕೇಳಲ್ಪಟ್ಟಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

VI. ಒಂದು ತಿಂಗಳಿಗೆ ಆಗುವಷ್ಟು ಸಾರಾಯಿಯನ್ನು ಯಾವಾಗ್ಯೂ ಹಾಜರೀಯಲ್ಲಿಟ್ಟುಕೊಂಡಿರಲಿಕ್ಕೆ ಬಟ್ಟೀದಾರನು ಬದ್ಧನಾಗಿರತಕ್ಕದ್ದು; ಸನ್ 1884ನೇ ಏಪ್ರೈಲ್ ಗುರ್ರೇ ತಾರೀಖು ಮೊದಲು, ಈ ಮೇರೆ ಹಾಜರಿರುವ ಬಗ್ಗೆ ಸದರೀ ತಾರೀಖಿಗೆ ಮುಂದೆಯೇ ಬಟ್ಟೀ ಯಿಳಿಸಲಿಕ್ಕೆ ಷುರು ಮಾಡತಕ್ಕದ್ದು, ಪರಂತು ಹಾಗೆ ಬಟ್ಟೀ ಯಿಳಿಸಲ್ಪಟ್ಟ ಯಾವ ಸಾರಾಯಿಯೂ ಸನ್ 1884ನೇ ಏಪ್ರೈಲ್ 1ನೇ ತಾರೀಖಿಗೆ ಮುಂದಾಗಿ ತನ್ನ ವಶದಿಂದಲಾಗಲಿ, ತನ್ನ ಕೈಕೆಳಗಣ ಉದ್ಯೋಗಸ್ಥನ ವಶದಿಂದಲಾಗಲಿ, ಮಾರಲ್ಪಡಕೂಡದು, ಯಾ ಸಾಗಿಸಲ್ಪಡಕೂಡದು. ಇಜಾರೇದಾರನು, ತಮೂಂ ತಾಲ್ಲೂಕು ಕಸಬಾ ಜಾಗಗಳಲ್ಲಿಯೂ, ಡೆಪ್ಯುಟಿ ಕಮ್ಮಿಷನರಿಂದ ಮಂಜೂರ್ಮಾಡಲ್ಪಡುವ ದೊಡ್ಡ ಷಹರ್ಗಳೊಳಗೂ, ಒಟ್ಟು ಫುರೋಖ್ತು ಅಂಗಡಿಗಳನ್ನು ಇಡುವದಕ್ಕೆ ಅಪ್ಪಣೆ ವುಂಟಾಗತಕ್ಕದ್ದು. ಸದರೀ ಯೆಲ್ಲಾ ಜಾಗಗಳ ಪಟ್ಟಿಯು, ಕೇಳಿದಾಗ ಡೆಪ್ಯುಟಿ ಕಮ್ಮಿಷನರವರಿಗೆ ಕೊಡಲ್ಪಡತಕ್ಕದ್ದು, ಮತ್ತು ಕಂಟ್ರಾಕ್ಟದಾರನು ಅಂಗಡೀ ಒಂದಕ್ಕೆ ಮಾಹೇಯಾನಾ ವಿಧಿಸಲ್ಪಟ್ಟ 2 ರೂಪಾಯಿಗಳ ಲೈಸೆನ್ಸ್ ಫೀಯನ್ನು ಕೊಡತಕ್ಕದ್ದು.

VII. ಷರತ್ತುಗಳ X ವ XIIನೇ ರೂಲಸಗಳಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಹೊರ್ತು, ಡಿಸ್ಟಿಲೇರಿಯಲ್ಲಾಗಲೀ ಒಟ್ಟು ಫುರೋಖ್ತು ಅಂಗಡಿಗಳಲ್ಲಾಗಲೀ ಸಾರಾಯಿಯನ್ನು ಚಿಲ್ಲರೇ ಫುರೋಖ್ತು ಮಾಡಕೂಡದು.

VIII. ಚಿಲ್ಲರೇ ಫುರೋಖ್ತು ಅಂಗಡಿಗಳು, ಡಿಸ್ಟ್ರಿಕ್ಟು ಜಾತ್ ಡೆಪ್ಯುಟಿ ಕಮ್ಮಿಷನರ ವಿಚಾರಣೆಯಲ್ಲಿಯೂ, ಮ್ಯುನಿಸಿಪಲ್ ಷಹರ್‌ಗಳಲ್ಲಿ, ದೀವಾನರವರಿಂದ ಹುಕ್ಕುಂ ಮಾಡಲ್ಪಟ್ಟರೆ, ಅಂತಾ ಷಹರ್‌ಗಳ ಮ್ಯುನಿಸಿಪಲ್ ಪ್ರೆಸಿಡೆಂಟರ ಯಾ ವೈಸ್ ಪ್ರೆಸಿಡೆಂಟರ ವಿಚಾರಣೆಯಲ್ಲಿಯೂ ಇರತಕ್ಕದ್ದು; ಮತ್ತು ಅವರುಗಳ ಮಂಜೂರಾತಿ ಯಿಲ್ಲದೆ ಅವರುಗಳಿಂದ ಮೊಕರರ್ ಮಾಡಲ್ಪಡುವ ಅಂಥಾ ಸ್ಥಳಗಳಲ್ಲದೆ ಚಿಲ್ಲರೇ ಅಂಗಡಿ ಯಾವವೂ ಇಡಲ್ಪಡತಕ್ಕದ್ದಲ್ಲ. ಯಾವ ಅಂಗಡಿಗಳನ್ನಾಗಲಿ, ಪಬ್ಲಿಕ್ ಜರೂರಾತಿ ಸಬಬನಿಂದ ಇಜಾರೇದಾರನು ತನಿಗೆ ಈಡು ಕೊಡಬೇಕೆಂದು ಕೇಳುವ ಹಕಿಲ್ಲದೇನೆ ಮುಚ್ಚುವಂತೆ ಹುಕ್ಕುಂ ಮಾಡಲಿಕ್ಕೆ ಅವರು ಅರ್ಹರಾಗಿರತಕ್ಕದ್ದು.

IX. ಚಿಲ್ಲರೇ ಅಂಗಡಿಗಳಿಗೆ ಲೈಸೆನ್ಸಗಳು ಗವರ್ನಮೆಂಟಿನವರಿಂದ ಆಗಿಂದಾಗ್ಯೆ ಮೊಕರರ್ ಮಾಡಲ್ಪಡಬಹುದಾದಂಥಾ ಲೈಸೆನ್ಸ್ ರುಸುಂಗಳನ್ನು ಕೊಟ್ಟಮೇಲೆ ಸದರೀ ಆಫೀಸರ್‌ಗಳಿಂದ ಮಾಮೂಲ್ ನಮೂನೆಯಲ್ಲಿ ಕೊಡಲ್ಪಡುವದು.

ಕ್ರಮ ಪಡಿಸಲ್ಪಟ್ಟ ದಾರಣೆಗೆ ಮತ್ತು ವಿಧಿಸಲ್ಪಟ್ಟ ಸ್ಟ್ರೆಂಗ್ತಿನಿಂದ ಸಾರಾಯಿಯನ್ನು ಫುರೋಖ್ತು ಮಾಡುವದಕ್ಕೂ, ಜರೂರಾದ ಇತರ ಷರತ್ತುಗಳ ಬಗ್ಯೂ ಲೈಸೆನ್ಸಗಳಲ್ಲಿ ನಿಬಂಧನೆ ಮಾಡಲ್ಪಡುವದು. ಚಿಲ್ಲರೇ ಫುರೋಖ್ತುದಾರರು ಅವರಿಗೆ ಅತ್ಯಂತ ಸಮೀಪದಲ್ಲಿನ ಅಥವಾ ಅವರು ಸಾಲೀಯೂನಾ ತೆಗದುಕೊಳ್ಳುವದಕ್ಕೆ ಚುನಾಯಿಸುವ ಒಟ್ಟು ಅಂಗಡಿಗಳಿಂದಲೇ ಸಾರಾಯಿಯನ್ನು ಕೊಂಡುಕೊಳ್ಳತಕ್ಕದ್ದು. ಸದರೀ ಚಿಲ್ಲರೇ ಫುರೋಖ್ತುದಾರರು, ಅಕ್ರಮವಾದ ವಿಷಯಗಳೇನೂ ನಡೆಯದೇ ಇರುವದನ್ನು ನೋಡುವ ಬಗ್ಯೆ ತಮ್ಮ ಅಂಗಡಿಗಳೊಳಗೆ ಇಜಾರೇದಾರರಿಗಾಗಲೀ ಅವರ ಮುತಾಲೀಕರಿಗಾಗಲಿ ಅಬ್ಕಾರಿ ಆಫೀಸರುಗಳಿಗಾಗಲೀ ಕ್ರಮ ಪ್ರಕಾರ ಅಧಿಕಾರ ಹೊಂದಿದ ಯಾವ ಸರ್ಕಾರ್ ನವುಕರನಿಗಾಗಲಿ ಅವಕಾಶ ಸಹ ಕೊಡತಕ್ಕದ್ದು. ಮತ್ತು ಪ್ರತಿದಿನ ತಾವು ತೆಗದುಕೊಳ್ಳುವ ಸಾರಾಯಿಯ ತೇದಾದ್ ವ ಸ್ಟ್ರೆಂಗ್ತು ಮತ್ತು ಸದರೀ ಬಗ್ಯೆ ಹಾಕಲ್ಪಡುವ ಖರೀದಿಗಳು ಇವುಗಳ ನಿಜವಾಗಿಯೂ ಕರಾರ್‌ವಾಕಾ ಆಗಿಯೂ ಇರುವ ಲೆಖ್ಖಗಳನ್ನು ಇಡತಕ್ಕದ್ದಲ್ಲದೇ ಇಜಾರೇ ದಾರನಿಂದಾಗಲಿ ಅವನ ಮುತಾಲೀಕನಿಂದಾಗಲೀ ಸದರೀ ಲೆಕ್ಕ ಕೇಳುವಂತೆ ಅಧಿಕಾರ ಕೊಡಲ್ಪಟ್ಟ ಯಾವ ಸರಕಾರದ ಉದ್ಯೋಗಸ್ಥನಿಂದಾಗಲಿ ಹಾಗೆ ಅಪೇಕ್ಷಿಸಲ್ಪಟ್ಟಾಗ ತನಿಖಿ ನೋಡುವ ಬಗ್ಯೆ ಅವುಗಳನ್ನು ಹಾಜರ್ ಮಾಡತಕ್ಕದ್ದು.

X. ಡಿಸ್ಟಿಲೇರಿಯಿಂದ ಸಾರಾಯಿ ಕೊಡುವದನ್ನು ಕುರಿತ ಈ ಕೆಳಗೆ ಬರುವ ರೂಲ್ಸ್ ಅನುಸರಿಸಲ್ಪಡತಕ್ಕದ್ದು.

(*a*) ಸಾಧಾರಣವಾಗಿ 20 ಡಿಗ್ರಿ ಅಂಡರ್ ಪ್ರೂಫಿಗೆ ಹೆಚ್ಚಿದ ಸ್ಟ್ರೆಂಗ್ತಿನಿಂದ ಯಾವ ಸಾರಾಯಿಯನ್ನೂ ಕೊಡತಕ್ಕದ್ದಲ್ಲವು, ಆದರೆ ಕಂಟ್ರಾಕ್ಟುದಾರನಾಗಲಿ, ಚಿಲ್ಲರೇ ಫುರೋಖ್ತುದಾರನಾಗಲೀ ಮೇಲೆಕಂಡ ಸ್ಟ್ರೆಂಗ್ತಿಗಿಂತ ಹೆಚ್ಚಾದ ಸ್ಟ್ರೆಂಗ್ತಿನಲ್ಲಿ ಸಾರಾಯಿ ಕೊಡಲಿಕ್ಕೆ ಅಪೇಕ್ಷಿಸಿದರೆ ಹಾಗೆ ಕೊಡಲ್ಪಡುವ ಸ್ಪಿರಿಟ್ ಸಾರಾಯಿಯು ಪ್ರೂಫಿಗಿಂತ ಹೆಚ್ಚು ಸ್ಟ್ರೆಂಗ್ತು ವುಳ್ಳದ್ದಾಗಿರಕೂಡದು. ಪ್ರೂಫಿಗೆ ಸಮನಾದ ಬಲವುಳ್ಳ ಸಾರಾಯಿಯು, ಯರಡು ಡಜನ್ ಕ್ವಾರಟ್ ಶೀಶೆಗಳಲ್ಲಿಯೂ, ನಾಲ್ಕು ಡಜನ್ ಪಯಿಂಟ್ ಶೀಶೆಗಳಲ್ಲಿಯೂ, ಇಂಗ್ಲೀಷ್ ಮತ್ತು ಪರಾಯಿ ದೇಶದಂತೆಯೇ ಕಮ್ಮೀ ತೇದಾದಿನ ಡಬ್ಬಿಗಳಲ್ಲಿ ಡಿಸ್ಟಿಲೇರಿಯಿಂದ ಕೊಡಲ್ಪಡುವದು; ಅದು ಡಿಸ್ಟಿಲೇರಿಯಲ್ಲಿ ಸೂಪರ್ ವೈಜರವರಿಂದ ಮೊಹರ್ಮಾಡಲ್ಪಟ್ಟ ಪ್ರಕಾರವೇ ಬದಲಾಯಿಸದಂತೆಯೂ ಸೂಪರ್ ವೈಜರವರ ಪ್ಯಾಸಿನ ಆಧಾರದ ಮೇಲೂ ಒಟ್ಟು ಅಂಗಡಿಗಳಿಂದ ಚಿಲ್ಲರೇ ಬಿಕರಿದಾರ್ರಿಗೆಫುರೋಖ್ತು ಮಾಡಲ್ಪಡತಕ್ಕದ್ದು. ಚಿಲ್ಲರೇ ಬಿಕರೀದಾರರು ಅಂಥಾ ಷರಾಬನ್ನು ಅವರಿಗೆ ಗೊತ್ತಿರುವಂಥಾ ಮರ್ಯಾದೆವುಳ್ಳ ಜನಗಳಿಗೆ ಮಾತ್ರವೇ ಸೂಪರ್ ವೈಜರವರಿಂದ ಕೊಡಲ್ಪಟ್ಟ ಅಲಾಹಿದ ಪ್ಯಾಸುಗಳೊಂದಿಗೆ ಕೊಡತಕ್ಕದ್ದು. ಮತ್ತು ಒಟ್ಟು ಬಿಕರೀದಾರರು ವ ಚಿಲ್ಲರೇ ಫುರೋಖ್ತುದಾರರು ಸುದಾ ಅಂಥಾ ಬಿಕರೀಗಳಿಗೆ ವಿಧಿಸಲ್ಪಟ್ಟನಮೂನೆಯಲ್ಲಿ ಲೆಕ್ಕ ಕೊಡತಕ್ಕದ್ದು.

(*b*) ಪ್ರೂಫಿಗಿಂತ ಹೆಚ್ಚು ಸ್ಟ್ರೆಂಗ್ತಿನ ಸಾರಾಯಿಯನ್ನು ಇಜಾರೇದಾರನು ಕೊಡಲಿಕ್ಕೆ ಅಪೇಕ್ಷಿಸಿದರೆ, ಆ ಬಗ್ಯೆ, ಸೂಪರ್‌ವೈಜರ್ ಮೂಲಕ ಡೆಪ್ಯುಟಿ ಕಮ್ಮಿಷನರವರ ವಿಶೇಷ ಹುಕ್ಕುಂಗಳನ್ನು ಪಡೆಯತಕ್ಕದ್ದು, ಸದರೀ ಸೂಪರ್‌ವೈಜರು ಸದರೀ ಅಂಶಗಳನ್ನು ಸೂಚಿಸಿ, ಅದರಂತೆ ಒಟ್ಟು ಬಿಕ್ರಿ ಅಗಂಡಿಗಳಿಗೆ ಪ್ಯಾಸ್‌ಗಳುಯಾನೇ ರಹದಾರೀಗಳನ್ನು ಕೊಡತಕ್ಕದ್ದು. ಹಾಗೆಕೊಡಲ್ಪಟ್ಟ ಸಾರಾಯಿಯು, ಈ ಪ್ಯಾರಾ (*a*) ಕ್ಲಾಜ್‌ನಲ್ಲಿ ವಿಧಿಸಲ್ಪಟ್ಟ ಪ್ರಕಾರ ವಿಕ್ರಯಿಸಲ್ಪಟ್ಟು ಲೆಕ್ಕ ಇಡಲ್ಪಡತಕ್ಕದ್ದು.

(*c*) ಅಂಡರ್ ಪ್ರೂಫ್ ಬಾಬತು 20° ಡಿಗ್ರೀಗೆ ಮೇಲ್ಪಟ್ಟ ಸ್ಟ್ರೆಂಗ್ತು ವುಂಟಾಗಿ ಮತ್ತು ಪ್ರೂಫಿನವರಿಗೆ ಇದ್ದು, ಕೊಡಲ್ಪಡುವ ತಮಾಂ ಸಾರಾಯಿಗೂ, ಪ್ರೂಫಿನ ಮೇಲೆ ತೀರ್ವೆಯನ್ನು ವಿಧಿಸತಕ್ಕದ್ದು. ಪ್ರೂಫಿನ ಮೇಲಣ ದರವು ಜಲಪರಿಮಾಪಕ ಯಂತ್ರದ ದರಗಳ ಪ್ರಕಾರ ದಾಮಾಷಾಯಿ ಮೇಲೆ ಜಾಸ್ತಿ ಮಾಡಲ್ಪಡತಕ್ಕದ್ದು.

(*d*) ಅಂಡರ್ ಪ್ರೂಫಿನ 20° ಡಿಗ್ರೀಗೆ ಕೀಳ್ಪಟ್ಟ ಯಾವ ಸಾರಾಯಿಯೂ, ಸಾಧಾರಣವಾಗಿ ಡಿಸ್ಟಿಲೇರಿಯಿಂದ ಕೊಡಲ್ಪಡಕೂಡದು; ಪರಂತು, ಅಂಡರ್‌ಪ್ರೂಫಿನ 20° ಡಿಗ್ರೀ ಸ್ಟ್ರೆಂಗ್ತಿಂಗಿಂತ ಕಡಮೆ ಶಕ್ತಿಯುಳ್ಳ ಸಾರಾಯಿ ಬಗ್ಯೆ ತಗಾದೇ ಉಂಟಾದರೆ ಅಂಡರ್‌ಪ್ರೂಫಿನ 30° ಡಿಗ್ರೀ ಸಾರಾಯಿಯು, ದಾಮೊಷಾಯಿ ಪ್ರಕಾರ ಕಮ್ಮಿ ಮಾಡಲ್ಪಟ್ಟ ತೀರ್ವೆಯ ದರಗಳ ಮೇರೆ ಡಿಸ್ಟಿಲೇರಿಯಿಂದ ವಿಶೇಷತಃ ಕೊಡಲ್ಪಡಬಹುದು. ಅಂತಾ ಸಾರಾಯಿಯು, ಒಟ್ಟು ಕೋಠೀಗಳಲ್ಲಿಯೂ, ಚಿಲ್ಲರೇ ದುಕಾನ್‌ಗಳೊಳಗೂ ಪ್ರತ್ಯೇಕ ಪ್ರತ್ಯೇಕವಾಗಿ ಇಡಲ್ಪಟ್ಟು ವಿಕ್ರ ಕೊಡಲ್ಪಡತಕ್ಕದ್ದು.

XI. ಸಾರಾಯಿಯು ಡಿಸ್ಟಿಲ್ಲೆರಿಯಿಂದ ಕೊಡಲ್ಪಟ್ಟ ಮೇಲೆ ಪುರೋಖ್ತು ಮಾಡಲ್ಪಡತಕ್ಕದ್ದೇ ಹೊರತು, ಒಟ್ಟು ಬಿಕ್ರಿಯ ಅಥವಾ ಚಿಲ್ಲರೇಅಂಗಡಿಗಳಲ್ಲಿ ಯಾವ ರೀತಿಯಲ್ಲಾಗಲಿ ಇತರ ಪದಾರ್ಥ ಬೆರಿಕೇ ಮಾಡಕೂಡದು ಅಥವಾ ನೀರು ಬೆರಿಸಕೂಡದು.

XII. ಅಂಡರ್‌ಪ್ರೂಫಿನ ಬಾಬತು 20° ಡಿಗ್ರೀಯ ಸ್ಟ್ರೆಂಗ್ತಿನ ಸಾರಾಯಿಯ ಮೇಲೆ ಸಲ್ಲತಕ್ಕ ರೂಪಾಯಿಗೆ ಬಂದಾಣೆ ಮೇರೆ ಲೋಕಲ್‌ಸೆಸ್ ದೇಖೀಲ್ ಗವರ್ನಮೆಂಟ್ ತೀರ್ವೆಯೂ, ಸದರೀ ಸಾರಾಯಿ, (ಇತರ ಪದಾರ್ಥ ಬೇರಿಕೆ ಇಲ್ಲದೆಯೂ, ನೀರು ಬೆರಿಕೆಯಾಗದೆಯೂ) ಒಟ್ಟು ಪುರೋಖ್ತು ಅಂಗಡಿಯಲ್ಲಿಯೂ ಚಿಲ್ಲರೆ ಅಂಗಡಿಗಳೊಳಗೂ ಯಾವ ಖರೀದೀ ಪ್ರಕಾರ ಪುರೋಖ್ತಾಗತಕ್ಕದ್ದೋ ಅದು ಇದರಡಿ ಕಂಡ ತಖ್ತೀಯಲ್ಲಿ ವಿವರಿಸಲ್ಪಟ್ಟಮೇರೆ ಇದರಿಂದ ನಿಶ್ಚಯಿಸಲ್ಪಟ್ಟಿರುತ್ತೆ:—

ಷಹರ್ ಅಥವಾ ಡಿಸ್ಟ್ರಿಕ್ಟು.	20° ಅಂಡರ್ ಪ್ರೂಫ್ ಸ್ಪಿರಿಟ್ ಸಾರಾಯಿಗಳು.											
	ಗ್ಯಾಲನ್ ವಂದಕ್ಕೆ ತೆರಿಗೆ.			ಗ್ಯಾಲನ್ ವಂದಕ್ಕೆ ಒಟ್ಟು ಬಿಕರಿ ಕ್ರಯ.			ಚಿಲ್ಲರೇ ಪುರೋಖ್ತು ಕ್ರಯ.					
							ಗ್ಯಾಲನ್‌ವಂದಕ್ಕೆ.			ಡ್ರಾಂವಂದಕ್ಕೆ.		
	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.
ಚಿಕ್ಕಮಗಳೂರು ಷಹರ್.	3	0	0	4	6	4	5	0	0	0	1	8
ಡಿಸ್ಟ್ರಿಕ್ಟಿನ ಇತರ ಯಲ್ಲ ಸ್ಥಳಗಳು	2	4	0	3	14	0	4	8	0	0	1	6

ಪ್ರೂಫ್‌ಗಾಗಿಯೂ, ಅಂಡರ್ ಪ್ರೂಫಿನ ಬಾಬತು 30°ಗೂ ಖರೀದಿಗಳು ಮತ್ತು ಅದರ ಮೇಲೆ ಕಟ್ಟತಕ್ಕ ತೀರ್ವೆಬಗ್ಯೆ ಸದರೀ ಸ್ಟ್ರೆಂಗ್ತ್‌ಗಳ ಮೇಲೆ ಅಥವಾ ಸ್ಟ್ರೆಂಗ್ತ್‌ಗಳ ವಳಗೆ ತಮಾಂ ಸ್ಟ್ರೆಂಗ್ತ್‌ಗಳಿಗೂ ತೀರ್ವೆಸಹ ಗವರ್ನಮೆಂಟ್ ಹೈಡ್ರಾಮಿಟರ್ಸ್ ಯಂತ್ರಗಳ ಪ್ರತಿ ಪೆಟ್ಟಿಗೆ ಸಂಗಡಲೂ ಕಳುಹಿಸಲ್ಪಡುವ ಕ್ಯಾಸಿಲಾ ಯವರ ರೂಲ್ಸ್ ಅನುಸರಿಸಿ ಅಂಡರ್ ಪ್ರೂಫ್ ಬಾಬತು 20°ಗೆ ಮೇಲೆ ವಿವರಿಸಲ್ಪಟ್ಟ ದರಗಳಮೇಲೆ ದಾಮಾಷಾಯಿ ಪ್ರಕಾರ ಕ್ರಮಪಡಿಸಲ್ಪಡತಕ್ಕದ್ದು. ಈ ರೂಲ್ಸಿನಲ್ಲಿರುವ ಯಾವ ಅಂಶವೂ, ಗೌರವಶಾಲಿಗಳಾದ ಖುಷ್‌ಬಾಷ್ ಜನಗಳಿಗೂ ಆಸ್ಪತ್ರೆಗಳಿಗೂ, ಮ್ಯೂಜಿಯಂಯಾನೆ ವಿವಿಧವಸ್ತುಶಾಲೆಗಳಿಗೂ ಮತ್ತು ಇತರ ಪಬ್ಲಿಕ್ ಸ್ಥಾಪನೆಗಳಿಗೂ ಅಂಡರ್ ಪ್ರೂಫಿನ ಬಾಬತ್ತು 20° ಮೇಲೆ ಮತ್ತು ಓವರ್ ಪ್ರೂಫಿನ ಬಾಬತು 30° ವರಿಗೆಸಾರಾಯಿಯನ್ನು ಸಾಧಾರಣ ವಂದು ಕ್ವಾರ್ಟು ಶೀಷೆಗಿಂತ ಕಡಮೆಇಲ್ಲದೆ ಮತ್ತು ವಟ್ಟು ಬಿಕರಿಯ ಖರೀದಿ ಪ್ರಕಾರ 2 ಗ್ಯಾಲನ್‌ಗೆ ಮೀರದ ತೇದಾದ್ ಪ್ರಕಾರ ಸಾರಾಯಿಯನ್ನು ಸೂಪರ್‌ವೈಜರು ತಮಗೆ ಬರಹಮೂಲಕ ಕೇಳಿಕೊಂಡ ಮೇರೆ ಕೊಡಲ್ಪಡುವದನ್ನು ನಿರೋಧಿಸತಕ್ಕ ಅಂಶ ಯಾವದೂ ಇಲ್ಲವು. ಹೆಚ್ಚು ಸ್ಟ್ರೆಂಗ್ತು ಸಾರಾಯಿಯು ಜರೂರಿಯಾತ್ ಸಂಗತಿಗಳಲ್ಲಿಯೂ ಡೆಪ್ಯುಟಿಕಮಿಷನರವರ ವಿಶೇಷ ಮಂಜೂರಾತಿ ಮೇಲೆಯೂ ವಿನಹಾ ಕೊಡಲ್ಪಡತಕ್ಕದ್ದಲ್ಲ.

XIII. ಸಾರಾಯಿ ಕಮ್ಮಿಬಂದ ಬಗ್ಯೆ, ಚಿಕ್ಕಮಗಳೂರು ಷಹರ್ ಮ್ಯುನಿಸಿಪೆಲ್ ಸರಹದ್ದುಗಳಆಚೆಗೆ ಪುರೋಖ್ತು ಬಗ್ಯೆ ಡಿಸ್ಟಿಲೇರಿಯಿಂದ ಕೊಡಲ್ಪಟ್ಟ ಸಾರಾಯಿಯ ಮೇಲೆ ಸಲ್ಲತಕ್ಕ ತೆರಿಗೆಯ ಮೇಲೆ ಸೇಕಡಾ 2ರಪ್ರಕಾರ ಸೋಡಿ ಯಾ ವಜಾ ಕೊಡಲ್ಪಡತಕ್ಕದ್ದು.

XIV. ಇಜಾರೇದಾರನು, ಡಿಸ್ಟಿಲೇರಿಗಳನ್ನಾಗಲಿ, ಒಟ್ಟು ಪುರೋಖ್ತು ಅಂಗಡಿಗಳನ್ನಾಗಲಿ, ಕೋಠೀಗಳನ್ನಾಗಲಿ, ಮೇಲ್ವಿಚಾರಣೆ ಮಾಡಲಿಕ್ಕೆ ಯಾವನನ್ನು ಮೊಕರರ್ ಮಾಡುತ್ತಾನೋ ಅಂತಾ ಪ್ರತಿ ಮನುಷ್ಯನನ್ನೂ ಹಾಗೆ ಮೊಕರರ್ ಮಾಡುವದಕ್ಕೆ ಮುಂದಾಗಿ ಮೇಲೆ ಕಂಡ ಷರತ್‌ಗಳಿಗೆ ಅನುಗುಣವಾಗಿ ಕರಾರ್‌ಗಳನ್ನು ಬರೆದು ಕೊಡುವಂತೆ ಮಾಡತಕ್ಕದ್ದು. ಅಂಥಾ

ಕರಾರ್‌ಗಳು, 1884ನೇ ಇಸವೀ ಏಪ್ರೆಲ್ ಒಂದನೇ ತಾರೀಖು ಲಾಗಾಯತ್ ಒಂದು ತಿಂಗಳೊಳಗಾಗಿ, ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರಲ್ಲಿ ಯಿಡಲ್ಪಡತಕ್ಕದ್ದು. ಮತ್ತು ಸದರೀ ಇಜಾರೇದಾರನು, ಷರಾಬ್ ತಯಾರಿ, ಸಾಗಿಸುವಣಿ ಮತ್ತು ಪುರೋಖ್ತು ಈ ಕೆಲಸಗಳಲ್ಲಿ ತನ್ನಿಂದ ನೌಕರರ್ ಮಾಡಲ್ಪಡುವ ತಮಾಂ ಜನಗಳೂ, ತಮ್ಮಿಂದ ಮಾಡಿಕೊಳ್ಳಲ್ಪಟ್ಟ ಕರಾರ್‌ಗಳ ವ ಕಾನೂನಿನ ನಿಬಂಧನೆಗಳನ್ನು ಖಂಡಿತವಾಗಿ ಅನುಸರಿಸುವಂತೆ ಮಾಡುವದಕ್ಕೆ ಪೂರಾ ತರದೂದ್ ಮಾಡತಕ್ಕದ್ದು; ಮತು ಸದರೀ ನಿಬಂಧನೆಗಳಿಗೆ ಬರ್‌ಕಿಲಾಫ್ ನಡಿಸಲ್ಪಟ್ಟಂತೆ ಆತನ ತಿಳುವಳಿಕೆಗೆ ಬಂದರೆ, ಸದರೀ ಅಪರಾಧಕ್ಕೆ ವಿಧಿಸಲ್ಪಟ್ಟ ದಂಡನೆ ವಿಧಿಸುವ ಬಗ್ಯೆ, ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರ ಜಾಹೀರಾತಿಗೆ ಸದರೀ ಸಂಗತಿಯನ್ನು ತರತಕ್ಕದ್ದು, ಮತ್ತು ಸದರೀ ಅಪರಾಧಿಯನ್ನು ತಗ್ಯೆರ್ ಮಾಡುವಂತೆ ಡೆ॥ ಕಮ್ಮಿಷನರಿಂದ ಅಪೇಕ್ಷಿಸಲ್ಪಟ್ಟರೆ, ಅದೇ ಮೇರೆ ಅವನನ್ನು ತಗ್ಯೆರ್ ಮಾಡತಕ್ಕದ್ದು.

XV. ಇಜಾರೇಯು ಷರತ್‌ಗಳಿಗೆ ವಿರುದ್ಧವಿಲ್ಲದೆ, ಗವರ್ನಮೆಂಟಿನಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಇಜಾರೇದಾರನು ಅನುಗುಣವಾಗಿ ನಡೆಯತಕ್ಕದ್ದು, ಮತ್ತು ಆತನ ನೌಕರ್‌ಮಾನೆಯರೆಲ್ಲಾ, ಬಟ್ಟೀ ಇಳಿಸಲ್ಪಟ್ಟ ಕೊಳ್ಳಲ್ಪಟ್ಟ ಸಾರಾಯಿಯ ಬಂದೋಬಸ್ತು ಮತ್ತು ಕ್ರಮ, ಉಪಯೋಗಿಸಲ್ಪಟ್ಟ ತಮಾಂ ಪಾತ್ರೆಗಳ ಪಾಕೀಜೀ, ಲೋಹ ಪಾತ್ರೆಗಳ ಕಲಾಯಿಹಾಕಿಸುವಣಿ, ಕಾವಲು, ಆವರಣದ ತನಿಖೀ ಮತ್ತು ಆರೋಗ್ಯಕರವಾದ ಸ್ಥಿತಿ ಮತ್ತು ಗವರ್ನಮೆಂಟಿನವರ ಅಥವಾ ಇಜಾರೇದಾರರ ಅಥವಾ ಉಭಯತ್ರರ ಪ್ರಯೋಜನಗಳಿಗೆ ಸಂಬಂಧಪಟ್ಟ ಇತರ ವಿಷಯಗಳು, ಇವುಗಳ ಬಗ್ಯೆ ಗವರ್ನಮೆಂಟಿನವರು ಜಾರೀಮಾಡಿದ ರೂಲ್ಸನ್ನೂ, ಹುಕ್ಕುಂಗಳನ್ನೂ, ಪೂರಾ ಜಾರೀಗೆ ತರುವ ಅಂಶಗಳಿಗೆ ನಿಗೇ ಕೊಡತಕ್ಕದ್ದು.

XVI. ಮೇಲೆ ಕಂಡ ಷರತ್‌ಗಳ ಪೈಕೀ ಯಾವ ಷರತ್‌ಗಳಿಗಾಗಲಿ, ಇಜಾರೇದಾರನಿಂದ ಅಥವಾ, ಷರಾಬ್ ತಯಾರಿ, ಸಾಗಿಸುವಣಿ, ಯಾ ಪುರೋಖ್ತು ಇಂತಾದ್ದರಲ್ಲಿ ಆತನಿಂದ ನೌಕರರ್ ಮಾಡಲ್ಪಟ್ಟ ಜನಗಳ ಪೈಕೀ ಯಾರಿಂದಾದರೂ, ಸದರೀ ಇಜಾರೇದಾರನು ನೋಡಿಯೂ ನೋಡದಹಾಗೆ ಇರುವದರಿಂದ ಅಥವಾ ರಹಸ್ಯವಾದ ಷಾಮಿಲಾತೀಯಿಂದ ಮನಃಪೂರ್ವಕವಾಗಿ ಬರ್‌ಕಿಲಾಫ್ ಯೇನಾದರೂ ನಡಿಸಲ್ಪಟ್ಟರೆ, ಇಜಾರೇಯನ್ನು ರದ್ದುಮಾಡುವದಕ್ಕೂ, ಠೇವಣೀ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಟ್ಟಿತೆಂದು ತಿಳಿಸುವದಕ್ಕೂ, Iನೇ ಷರತ್‌ನಲ್ಲಿ ವಿಧಿಸಲ್ಪಟ್ಟ ಪ್ರಕಾರ ಅಮಲ್ ನಡಿಸುವದಕ್ಕೂ ದೀವಾನರವರಿಗೆ ಯಿಖ್ತಿಯಾರಿ ಇರತಕ್ಕದ್ದು.

XVII. ಗವರ್ನಮೆಂಟಿನವರಿಂದ ಸದರೀ ಬಗ್ಯೆ ವಿಧಿಸಲ್ಪಡಬಹುದಾದ ಅಂತಾ ಷರತ್‌ಗಳಿಗೆ ಒಳಪಟ್ಟು, ಇಜಾರೇದಾರನಿಂದ, ಕೊಲಂಬೋ ಸಾರಾಯಿಯನ್ನು ಅಥವಾ ಇತರ ವಿಧಗಳುಳ್ಳ ಆರೆಕ್ ಸಾರಾಯಿ, ಲಿಕ್ಕರ್ ಸಾರಾಯಿ ಇವುಗಳನ್ನು ತಯಾರ್ಮಾಡಲ್ಪಡಲಿಕ್ಕೂ, ಪುರೋಖ್ತು ಮಾಡಲ್ಪಡಲಿಕ್ಕೂ, ಗವರ್ನಮೆಂಟಿನವರು ಅಂಗೀಕರಿಸಬಹುದು, ಪರಂತು ಈ ಇಸ್ತಿಹಾರ್‌ನಾಮೆಯಲ್ಲಿ ಕಂಡ ಸಾಧಾರಣ ಕಂಟ್ರಿ ಸಾರಾಯಿಯಿಂದ ಆಗುವ ಹುಟ್ಟುವಳಿಯ ಮೇಲೆ ಸದರೀ ಬಗ್ಯೆ ವಜಾ ಯಾವದೂ ಕೊಡಲ್ಪಡಲಾರದು,

7. ಕಳೆದ ವರುಷಗಳಲ್ಲಿ ಕೊಡಲ್ಪಟ್ಟ ಷರಾಬಿನ ತೇದಾದು ಇದರಡಿ ಕಂಡ ತಖ್ತೆಯಲ್ಲಿ ಕಾಣಿಸಿರುತ್ತೆ.

	1870—71 ಗ್ಯಾಲನ್‌ಗಳು.	1871—72 ಗ್ಯಾಲನ್‌ಗಳು.	1872—73 ಗ್ಯಾಲನ್‌ಗಳು.	1873—74 ಗ್ಯಾಲನ್‌ಗಳು.	1874—75 ಗ್ಯಾಲನ್‌ಗಳು.	1875—76 ಗ್ಯಾಲನ್‌ಗಳು.	1876—77 ಗ್ಯಾಲನ್‌ಗಳು.	1877—78 ಗ್ಯಾಲನ್‌ಗಳು.	1878—79 ಗ್ಯಾಲನ್‌ಗಳು.	1879—80 ಗ್ಯಾಲನ್‌ಗಳು.	1880—81 ಗ್ಯಾಲನ್‌ಗಳು.	1881—82 ಗ್ಯಾಲನ್‌ಗಳು.	1882—83 ಗ್ಯಾಲನ್‌ಗಳು.
ಕಡೂರು ಡಿಸ್ಟ್ರಿಕ್ಟು.	22,396	20,657	22,791	28,378	17,680	14,360	15,336	13,483	10,178	11,242	14,707	17,175	14,966

ತಾರೀಖು 9ನೇ ಫೆಬ್ರವರಿ 1884.

ನಂ. 315.—ಶಿವಮೊಗ್ಗಾ ಷಹರ್‌ನಲ್ಲಿಯೂ, ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ಸೇರಿದ ತಾಲ್ಲೂಕುಗಳಲ್ಲಿಯೂ, ಷರಾಬ್ ತಯಾರಿವ ಬಟ್ಟು ಬಿಕರೀಮಾಡುವ ಬಟ್ಟು ಸ್ವಾತಂತ್ರ್ಯದಬಗ್ಯೆ ದರಖಾಸ್ತುಗಳು ಕೊಡಬಹುದೆಂದು ಇದರಿಂದ ತಿಳಿಸೋಣಾಗುತ್ತೆ: ಸದರೀ ಡಿಸ್ಟ್ರಿ

ಕ್ಟಿಗೆ ದೀವಾನರವರ 1882ನೇ ಇಸವಿ ನವಂಬರ 13ನೇ ಮುಕ್ಕಾಂ 129ನೇ ನಂಬರು, ಅದೇ ಇಸವಿ ನವಂಬರ 21ನೇ ಮುಕ್ಕಾಂ 130–131ನೇ ನಂಬರು, ಅದೇ ಇಸವಿ ಡಿಸೆಂಬರ 7ನೇ ಮುಕ್ಕಾಂ 146ನೇ ನಂಬರು, ಈ ಇಸ್ತಿಹಾರ್‌ನಾಮೆಗಳಿಂದ ಪರಿಷ್ಕರಿಸಲ್ಪಟ್ಟ ಪ್ರಕಾರ ಇದರಡೀಕಂಡ ತಾಲ್ಲೂಕುಗಳು ಸೇರಿರುತ್ತವೆ.

1. ಶಿವಮೊಗ್ಗಾ, ಕುಂಸಿ ಡೆಪ್ಯುಟಿ ಅಮಲ್ದಾರ್ರು ಚಾರ್ಜು ದೇಖೀಲ್.
2. ತೀರ್ಥಹಳ್ಳಿ
3. ಚನ್ನಗಿರಿ
4. ಸಾಗರ
5. ನಗರ
6. ಸೊರಬ
7. ಹೊನ್ನಾಳಿ
8. ಷಿಕಾರಿಪುರ
9. ದಾವಣಗೆರೆ

2. ಈಗ ಯಾವ ಸ್ವಾತಂತ್ರ್ಯದಬಗ್ಯೆ ದರಖಾಸ್ತುಗಳು ಖಾಯಿಷ್ ಮಾಡಲ್ಪಡುತ್ತವೆಯೋ ಅಂತಾ ಸ್ವಾತಂತ್ರ್ಯಗಳು, ಇದರ ಮುಂದೆ ವಿಧಿಸಲ್ಪಟ್ಟ ಷರತ್ತುಗಳಿಗೆ ವಳಪಟ್ಟು, 1884ನೇ ಇಸವಿ ಏಪ್ರೆಲ್ 1ನೇ ಮುಕ್ಕಾಂ ಮೊದಲು 1887ನೇ ಇಸವಿ ಮಾರ್ಚಿ 31ನೇ ಮುಕ್ಕಾಂವರಿಗೆ ಆಗುವ ಮೂರು ವರುಷಗಳ ಕಾಲಕ್ಕೆ ಕೊಡಲ್ಪಡುವವು. ಅಂತಾ ಸ್ವಾತಂತ್ರ್ಯವು ಸೇಂದಿ, ಯೂರೋಪ್ ದೇಶದ ವೈನ್ ಎಂಬ ಸಾರಾಯಿ, ಸ್ಪಿರಿಟ್ ಸಾರಾಯಿ, ಯಾ ಬಿಯರು ಇವುಗಳ ತಯಾರಿ ಯಾ ಮಾರಾಟವನ್ನು ಅಡಗಿಸಿಕೊಂಡಿರುವದಿಲ್ಲ.

3. ದರಖಾಸ್ತುದಾರು ತಮ್ಮ ದರಖಾಸ್ತುಗಳಲ್ಲಿ ಸಾಲಿಯಾನಾ ಸರಕಾರಕ್ಕೆ ಕಮ್ಮಿ ಮೊಬಲಗು ಎಷ್ಟು ಕೊಡುತ್ತೇವೆಂದು ಕರಾರ್ ಮಾಡುವರೋ ಅದನ್ನು ನಮೂದಿಸತಕ್ಕದ್ದು. ತೆರಿಗೆ ಮೊಬಲಗಿನ ರೂಪಾಯಿ 1ಕ್ಕೆ ವಂದಾಣೆಯಂತೆ ತೆರಬೇಕಾದ ಲೋಕಲ್ ಸೆಸ್ ದೇಖೀಲ್ ತೆರಿಗೆಯ ದರಗಳು ಮತ್ತು ಕಂಟ್ರಾಕ್ಟುದಾರರಿಂದ ಯಾವ ಖರೀದಿಗೆ ಷರಾಬು ಕೊಡಲ್ಪಡತಕ್ಕದ್ದೋ ಅಂತಾ ವಟ್ಟು ಖರೀದೀ ಮೊಬಲಗುಗಳು ಸುದಾ, ಮುಂದೆ ವಿಧಿಸಲ್ಪಟ್ಟ ರೀತಿಯಾಗಿ ಗವರ್ನಮೆಂಟಿನವರಿಂದ ಗೊತ್ತು ಮಾಡಲ್ಪಡುವದ್ದರಿಂದ ಅಂತಾ ದರಗಳಿಗಾಗಿ ಬರುವ ಯಾವ ದರಖಾಸ್ತುಗಳೂ ಆಲೋಚಿಸಲ್ಪಡಲಾರದು.

4. ಪ್ರತಿ ದರಖಾಸ್ತಿನ ಸಂಗಡಲೂ ನಗದಾಗಿಯಾಗಲಿ ಗವರ್ನಮೆಂಟ್‌ಪತ್ರಗಳ ಮೂಲಕವಾಗಿಯಾಗಲಿ, 200 ರೂಪಾಯಿಗಳ ಸೇವಣೀ ಮೊಬಲಗು ಕಳುಹಿಸಲ್ಪಟ್ಟು "ಷರಾಬ್ ತಯಾರೀ ವ ಬಟ್ಟು ಪುರೋಖ್ತಿನ ಬಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತು" ಎಂಬ ಮಾತುಗಳು ವಿಳಾಸ ಬರೆಯಲ್ಪಟ್ಟ ಲಿಫಾಫೆಯಲ್ಲಿ ಹಾಕಿ ಸನ್ 1884ನೇ ಇಸವಿ ಫೆಬ್ರುವರಿ 29ನೇ ಶುಕ್ರವಾರದ ದಿವಸ ಹಗಲು 1 ಘಂಟೆಗಾಗಲಿ, ತತ್ಪೂರ್ವದಲ್ಲಾಗಲಿ ಡೆಪ್ಯುಟಿ ಕಮ್ಮಿಷನರವರಿಗೆ ತಲಪುವಂತೆ ಕಳುಹಿಸತಕ್ಕದ್ದು. ಸದರೀ ತಾರೀಖಿನ ತರುವಾಯ ಯಾವ ದರಖಾಸ್ತೂ ತೆಗದುಕೊಳ್ಳಲ್ಪಡುವದಿಲ್ಲ. ದರಖಾಸ್ತುಗಳು 1884ನೇ ಇಸವೀ ಫೆಬ್ರುವರೀ 29ನೇ ಮುಕ್ಕಾಮಿನ ಮಧ್ಯಾಹ್ನ 1 ಘಂಟೆಗೆ ಹಾಜರಾಗತಕ್ಕ ದರಖಾಸ್ತುದಾರರ ರೂಬರೂ ಶಿವಮೊಗ್ಗಾ ಮೊಕ್ಕಾಂ ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಖುಲ್ಲಾ ಮಾಡಲ್ಪಡುವವು. ದರಖಾಸ್ತುಗಳ ಆಖೈರ್ ವ್ಯವಸ್ಥೆ ದೀವಾನರವರಿಗೆ ಸೇರಿದ್ದಾಗಿರುತ್ತೆ. ಸದರೀಯವರು ಯಾವ ದರಖಾಸ್ತನ್ನಾಗಲಿ, ತಮಾಂ ದರಖಾಸ್ತುಗಳನ್ನಾಗಲಿ ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸಂಪೂರ್ಣ ಅಧಿಕಾರವನ್ನು ತಾವೇ ಉಳಿಸಿಕೊಂಡಿರುತ್ತಾರೆ. ತಿರಸ್ಕರಿಸಲ್ಪಟ್ಟ ದರಖಾಸ್ತುದಾರರಿಂದ ಇಡಲ್ಪಟ್ಟ ಸೇವಣಿಗಳು ಅವರುಗಳು ಕೇಳಿದಾಗ ವಾಪಸ್ ಕೊಡಲ್ಪಡುವವು.

5. ದೀವಾನರವರಿಗೆ ಸಿಫಾರಸ್ ಮಾಡುವ ಬಗ್ಯೆ ಚುನಾಯಿಸಲ್ಪಡುವ ದರಖಾಸ್ತುದಾರರು ಕೂಡ್ಲೇ ನಗದಾಗಿಯಾಗಲಿ ಗವರ್ನಮೆಂಟ್ ಪತ್ರಗಳಮೂಲಕವಾಗಿಯಾಗಲಿ, ದರಖಾಸ್ತುದಾರರು ಒಡಂಬಡಿಕೆ ಮಾಡಿಕೊಂಡ ಸಾಲೀಯಾನಾ ಕಮ್ಮೀ ಹುಟ್ಟುವಳಿಯ ಹನ್ನೆರಡರಲ್ಲೊಂದು ಭಾಗಕ್ಕೆ (ಅಥವಾ ಒಂದು ತಿಂಗಳ ಖಿಸ್ತಿಗೆ) ಸಮನಾದ ಮೊಬಲಗನ್ನು ಕೂಡ್ಲೇ ಸೇವಣಿ ಇಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಸೇವಣೀ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

6. ಯಾವ ದರಖಾಸ್ತುದಾರರ ದರಖಾಸ್ತು ದೀವಾನರವರಿಂದ ಆಖೈರಾಗಿ ಮಂಜೂರ್ಮಾಡಲ್ಪಡುತ್ತದೋ ಅಂಥಾವನು, ತನ್ನ ದರಖಾಸ್ತು ಮಂಜೂರಾದ ಸಂಗತಿ ತನಗೆ ತಿಳಿಸಲ್ಪಟ್ಟ ಎಂಟು ದಿವಸಗಳೊಳಗಾಗಿ ಮೊದಲೇ ಇಡಲ್ಪಟ್ಟ ಡಿಪಾಜಿಟ್ ಮೊಬಲಗಿನೊಡನೆ, ಕರಾರ್ ಮಾಡಿಕೊಳ್ಳಲ್ಪಟ್ಟ ಸಾಲಿಯಾನಾ ಹುಟ್ಟುವಳಿ ಪೈಕಿ, ಕಾಲುಭಾಗದ ಮೊಬಲಗಿಗೆ ಸಮನಾಗುವಂತೆ ಇನ್ನೂ ಕೆಲವು ಮೊಬಲಗನ್ನು ನಗದಾಗಿಯಾಗಲಿ, ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ, ಶಿವಮೊಗ್ಗಾ ಡೆಪ್ಯುಟಿ ಕಮ್ಮಿಷನರಲ್ಲಿ ಸೇವಣೀ ಇಡತಕ್ಕದ್ದಲ್ಲದೇ ಇದರಲ್ಲಿ ಮುಂದೆ ವಿಧಿಸಲ್ಪಡುವ ಷರತ್ತುಗಳಿಗೆ ಬದ್ಧನಾಗಿ, ತಕ್ಕ ಛಾಪಾಕಾಗದಮೇಲೆ, ವಿಧಿಸಲ್ಪಟ್ಟ ನಮೂನೇ ಪ್ರಕಾರ, ಒಂದು ಕರಾರು ಬರೆದು ಕೊಡತಕ್ಕದ್ದು. ಮತ್ತು ಸದರೀ ದರಖಾಸ್ತುದಾರನು ಕರಾರಿಗೆ ರಾಜು ಮಾಡಲಿಕ್ಕಾಗಲಿ, ನೇಮಿಸಲ್ಪಟ್ಟ ಡಿಪಾಜಿಟನ್ನ ಇಡಲಿಕ್ಕಾಗಲಿ, ತಪ್ಪಿದರೆ ಯಾ ನಿರಾಕರಿಸಿದರೆ ಮೊದಲೇ ಇಡಲ್ಪಟ್ಟ ಸೇವಣೀ ಮೊಬಲಗುಗಳು ಸರಕಾರಕ್ಕೆ ಸೇರಿಸಿಕೊಳ್ಳಲ್ಪಟ್ಟು ಇಜಾರೇ ಅನ್ಯಥಾ ವಿಲೇ ಮಾಡಲ್ಪಡುವದು.

ಷರತ್ತುಗಳು.

1. ಕರಾರ್ ಮಾಡಿಕೊಳ್ಳಲ್ಪಟ್ಟ ಸಾಲಿಯಾನಾ ಕಮ್ಮಿ ಹುಟ್ಟುವಳೀ ಮೊಬಲಗು, ಸಮನಾದ ಹನ್ನೆರಡು ಮಾಹೇವಾರೀ ಖಿಸ್ತುಗಳ ಪ್ರಕಾರ ಸರಕಾರಕ್ಕೆ ಪಾವತೀ ಮಾಡಲ್ಪಡತಕ್ಕದ್ದು. ಇಜಾರೇದಾರನು ಪ್ರತಿ ತಿಂಗಳಲ್ಲಿ ಡಿಸ್ಟಿಲೇರಿಯಿಂದ ಕೊಡಲ್ಪಟ್ಟ

ಷರಾಬಿನ ಮೇಲೆ ಸರ್ಕಾರಕ್ಕೆ ಸಲ್ಲತಕ್ಕ ಲೋಕಲ್‌ಸೆಸ್ ದೇಖೀಲ್ ಸರ್ಕಾರದಿಂದ ಗೊತ್ತುಮಾಡಲ್ಪಟ್ಟ ದರಗಳ ಪ್ರಕಾರ ವಿಸಿಷ್ಟ ತೆರಿಗೆ ಮೊಬಲಗನ್ನೂ ಆ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ, ತತ್ಪೂರ್ವವಾಗಲಿ, ಶಿವಮೊಗ್ಗಾ ಡಿಸ್ಟ್ರಿಕ್ಟ ಟ್ರೆಜರೀಯಲ್ಲಿ ಪಾವತೀ ಮಾಡತಕ್ಕದ್ದು. ಯಾವದಾದರೂ ತಿಂಗಳ ಆಖೈರವರಿವಿಗೆ ಕೊಡಲ್ಪಡುವ ಷರಾಬಿನಮೇಲೆ ಸಲ್ಲತಕ್ಕ ತೆರಿಗೆ ಮೊಬಲಗು, ಕರಾರ್ ಮಾಡಿಕೊಂಡ ಕಮ್ಮಿ ಹುಟ್ಟುವಳೀ ಪೈಕೀ ಮಾಹೇವಾರಿ ಖಿಸ್ತು ಮೊಬಲಗ್ ಭರ್ತಿಗೆ ಸಾಲದೆ ಹೋದರೆ, ಅಂತಾ ಕಮ್ಮಿ ಮೊಬಲಗನ್ನು ಭರ್ತೀ ಮಾಡುವದಕ್ಕೆ ಬೇಕಾದಷ್ಟು ಮೊಬಲಗನ್ನು ಇಜಾರೇದಾರನು ಹೆಚ್ಚಾಗಿ ಪಾವತೀ ಮಾಡತಕ್ಕದ್ದು. ಯಾವದಾದರೂ ಮಾಹೇಯಲ್ಲಿ ನಡೆದ ಜಾಸ್ತಿ ಪುರೋಖ್ತು ಅದೇ ಸರ್ಕಾರ್ ಸಾಲಿನ ಯಾವದಾದರೂ ಮಾಹೇಯ ಕಮ್ಮಿ ಪುರೋಖ್ತಿಗೆ ಉಪಯೋಗಿಸಲ್ಪಡತಕ್ಕದ್ದು. ಯಾವ ತಿಂಗಳಿಗೆ ಸದರೀ ಮೊಬಲಗುಗಳು ಸಲ್ಲತಕ್ಕದ್ದೋ ಅದರ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ತತ್ಪೂರ್ವವಾಗಲಿ ಅವು ಪಾವತೀಯಾಗದೇ ಹೋದರೆ ಬಾಕೀ ನಿಲ್ಲುವ ತಮಾಂ ಮೊಬಲಗಿನಮೇಲೂ ಸದರೀ ತಾರೀಖು ಲಾಗಾಯತು ಸಾಲೀಯಾನಾ ಸೇಕಡಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕಟ್ಟಲ್ಪಡುವದು, ಮತ್ತು ಯಾವ ತಿಂಗಳಲ್ಲಿ ಮೊಬಲಗುಗಳು ಬಾಕೀ ಯಾಗುತ್ತವೋ ಆ ತಿಂಗಳು ಕಳದ ತರುವಾಯವೂ ಮೊಬಲಗು ಸಲ್ಲದೇ ಹೋದರೆ ಬಡ್ಡೀ ದೇಖೀಲ್ ಸಲ್ಲತಕ್ಕ ಬಾಕೀ ಮೊಬಲಗ್ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಗೆ ತತ್ಕಾಲದಲ್ಲಿ ಜಾರೀ ಯಿರುವ ರೂಲ್ಸ್‌ನಿಂದ ವಿಧಿಸಲ್ಪಟ್ಟ ಪ್ರಕಾರವಾಗಿ, ಕಂಟ್ರಾಕ್ಟುದಾರನ ಸ್ವತ್ತಿನ ಜಪ್ತೀ ಹರ್ರಾಜು ಮೂಲಕ ವಸೂಲ್ ಮಾಡಲ್ಪಡತಕ್ಕದ್ದು. ಮತ್ತು ಶಿವಮೊಗ್ಗಾ ಡೆಪ್ಯುಟಿ ಕಮ್ಮಿಷನರವರ ರಿಪೋರ್ಟಿನ ಮೇಲೆ, ಕಂಟ್ರಾಕ್ಟು ರದ್ದು ಮಾಡಲ್ಪಟ್ಟಿರುತ್ತೆಂದು ತಿಳಿಸುವದಕ್ಕೂ, ಕಂಟ್ರಾಕ್ಟುದಾರನಿಂದ ಇಡಲ್ಪಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳುವಂತೆ ಅಪ್ಪಣೆ ಮಾಡುವದಕ್ಕೂ, ಮತ್ತು ಕಂಟ್ರಾಕ್ಟು ಕಾಲದ ಪೈಕೀ ಉಳಿದ ಕಾಲದಲ್ಲಿ ಕಂಟ್ರಾಕ್ಟುದಾರನ ಖರ್ಚಿಗೂ ಲುಕ್ಸಾನಿಗೂ ವಳಪಟ್ಟು ಬಾಬು ಅಮಾನಿಯಲ್ಲಾಗಲಿ ಅನ್ಯಥಾ ಆಗಲಿ ಇಡುವದಕ್ಕೂ ಸಹ ದೀವಾನರವರ ಯಿಖ್ತ್ಯಾರಿಗೆ ಸೇರಿರುತ್ತದೆ.

II. ಪ್ರತಿ ಸಾಲಿನ ಲೆಕ್ಕಗಳೂ ಪ್ರತ್ಯೇಕ ಪ್ರತ್ಯೇಕವಾಗಿ ಖೈದ್ ಮಾಡಲ್ಪಡತಕ್ಕದ್ದು. ಒಂದು ಸಾಲಿನಲ್ಲಿ ಕೊಡಲ್ಪಟ್ಟ ಸಾರಾಯಿ ಮೇಲೆ ಗವರ್ನಮೆಂಟಿಗೆ ಸಲ್ಲತಕ್ಕ ತೆರಿಗೆಯು ಆ ಸಾಲಿಗೆ ಕರಾರ್ ಮಾಡಿದ ಕಮ್ಮಿ ಹುಟ್ಟುವಳಿಗೆ ಜಾಸ್ತೀ ಆದರೆ, ಅಂತಾ ಜಾಸ್ತೀಯಾದ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 1 ಆಣೆಗೆ ಸಮನಾಗಿ, ಇಜಾರೇದಾರನಿಂದ ಸಲ್ಲಬೇಕಾದ ತೆರಿಗೆ ದೆಸೆಯಿಂದ ವಜಾ ಕೊಡಲ್ಪಡುವದು, ಆದರೆ ಒಂದು ವರುಷದ ಜಾಸ್ತೀ ಮೊಬಲಗು ಇಜಾರೇ ಪೈಕೀ ಯಾವದಾದರೂ ಇತರ ಸಾಲಿನ ಕರಾರ್ ಮಾಡಿದ ಹುಟ್ಟುವಳೀ ಮೊಬಲಗಿನಲ್ಲಿ ಕಮ್ಮೀ ಬೀಳತಕ್ಕ ಯಾವ ಮೊಬಲಗನ್ನಾಗಲಿ ಭರ್ತೀ ಮಾಡುವ ಬಗ್ಗೆ ಉಪಯೋಗಿಸುವದಿಲ್ಲ.

III. ಕಂಟ್ರಾಕ್ಟುದಾರನು ಶಿವಮೊಗ್ಗಾ ಬಳಿಯಣ ಸರ್ಕಾರ್ ಡಿಸ್ಟಿಲೇರಿಯ ಆವರಣದೊಳಗಾಗಲಿ ಅಥವಾ ಡೆಪ್ಯುಟಿ ಕಮ್ಮಿಷನರಿಂದ ಗೊತ್ತು ಮಾಡಲ್ಪಡಬಹುದಾದ ಇತರ ಸ್ಥಳದಲ್ಲ್ಯಾಗಲಿ ಷರಾಬ್ ತಯಾರ್ ಮಾಡುವಂತೆಯೂ, ಮತ್ತು ಡೆಪ್ಯುಟಿ ಕಮ್ಮಿಷನರಿಂದ ಮೊಕರರ್ ಮಾಡಲ್ಪಡತಕ್ಕಂಥಾ ಸ್ಥಳಗಳೊಳಗೆ ಬಟ್ಟಿ ಕೋಠಿಗಳನ್ನು ಸ್ಥಾಪಿಸುವಂತೆಯೂ, ನಿಯಮಿಸಲ್ಪಡತಕ್ಕದ್ದು. ಡೆಪ್ಯುಟಿ ಕಮ್ಮಿಷನರಿಂದಾಗಲಿ, ಅಥವಾ ಅಜಮಾಯಿಷೀ ಬಗ್ಗೆ ಮೊಕರರ್ ಮಾಡಲ್ಪಟ್ಟಿರತಕ್ಕ ಯಾವ ಉದ್ಯೋಗಸ್ಥರಿಂದಲಾಗಲಿ ತನಖೀ ನೋಡುವ ಬಗ್ಗೆ ಸರ್ವಕಾಲಗಳಲ್ಲಿಯೂ ಡಿಸ್ಟಿಲೇರಿ ಮತ್ತು ಕೋಠಿಗಳು ಖುಲ್ಲಾವಾಗಿರತಕ್ಕದ್ದು. ಯಾವ ಷರಾಬನ್ನೂ ಸದರೀ ಬಗ್ಗೆ ಮೊಕರರ್ ಮಾಡಲ್ಪಡುವ ಖಬ್ಬ ಉದ್ಯೋಗಸ್ಥನಿಂದ ಅಳತೆ ಮಾಡಲ್ಪಟ್ಟು ಅಜಮಾಯಿಷಿ ಮಾಡಲ್ಪಟ್ಟ ಹೊರತು ಡಿಸ್ಟಿಲೇರಿಯಿಂದ ಹೊರಗೆ ತೆಗದುಕೊಂಡು ಹೋಗಕೂಡದು. ಡಿಸ್ಟಿಲೇರಿ ಕಟ್ಟಡಗಳನ್ನು ಉಪಯೋಗಿಸತಕ್ಕ ಬಗ್ಗೆ ಅಂಥಾ ಕಟ್ಟಡಗಳ ಮೌಲ್ಯದ ಮೇಲೆ ಶೇಕಡಾ ಆರರಂತೆ ಡೆಪ್ಯುಟಿ ಕಮ್ಮಿಷನರು ಗೊತ್ತು ಮಾಡುವ ಸಾಲಿಯಾನಾ ಬಾಡಿಗೆಯನ್ನು ಕಂಟ್ರಾಕ್ಟುದಾರನು ಮಾಹೇಯಾನಾ ಗವರ್ನಮೆಂಟಿಗೆ ಸಂದಾಯಮಾಡಲ್ಪಡುವಂತೆಯೂ, ಸದರೀ ಕಟ್ಟಡಗಳನ್ನು ಪೂರಾ ದುರಸ್ತು ಸ್ಥಿತಿಯಲ್ಲಿ ಯಿಟ್ಟು ಕೊಂಡಿರುವಂತೆಯೂ ನೇಮಿಸಲ್ಪಡತಕ್ಕದ್ದು. ಇಜಾರೇದಾರನು ಪೂರ್ವದ ಇಜಾರೇದಾರನಿಂದ ಬಟ್ಟಿ ಯಿಳಿಸಲ್ಪಟ್ಟು, ಸರ್ನ 1884ನೇ ಇಸವಿ ಏಪ್ರೈಲ್ 1ನೇ ತಾರೀಖಿನಲ್ಲಿ ಹಾಜರಿರಬಹುದಾದ ಯಾವ ಸಾರಾಯಿಯನ್ನಾಗಲಿ, ಆ ಬಗ್ಗೆ ದೀವಾನರವರ ಮಂಜೂರಾತಿಸಿಸೀ ಡೆಪ್ಯುಟಿ ಕಮ್ಮಿಷನರವರಿಂದ ಠರಾವು ಮಾಡಲ್ಪಡಬಹುದಾದಂಥಾ ಈಡು ಮೊಬಲಗನ್ನು ಕೊಟ್ಟು ತನ್ನ ವಶಕ್ಕೆ ತೆಗದುಕೊಳ್ಳತಕ್ಕದ್ದು.

IV. ತಯಾರ್ಮಾಡಲ್ಪಡುವ ಸಾರಾಯಿ ಒಳ್ಳೇ ಗುಣವುಳ್ಳದ್ದಾಗಿರತಕ್ಕದ್ದು. ಬಟ್ಟಿ ಯಿಳಿಸುವಲ್ಲಿ ಉಪಯೋಗಿಸಲ್ಪಡತಕ್ಕ ಪದಾರ್ಥಗಳು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಟ್ಟು ಒಳ್ಳೇ ಗುಣವುಳ್ಳವಾಗಿರಬೇಕಾದ್ದಲ್ಲದೆ ಅವುಗಳು ಡಿಸ್ಟಿಲೇರಿಯಲ್ಲಿ ತೆಗದುಕೊಳಲ್ಪಡುವದಕ್ಕೆ ಮುಂದಾಗಿ ಡಿಸ್ಟಿಲೇರಿ ಸೂಪರ್ ವೈಜರಿಗೆ ಅಥವಾ ಈ ಬಗ್ಗೆ ಮೊಕರರ್ಮಾಡಲ್ಪಡತಕ್ಕ ಇತರ ಉದ್ಯೋಗಸ್ಥನಿಗೆ ತೋರಿಸಲ್ಪಟ್ಟು ಅವರಿಂದ ಪ್ಯಾಸ್ ಮಾಡಲ್ಪಡತಕ್ಕದ್ದು. ಸಾರಾಯಿ ಬಟ್ಟಿ ಯಿಳಿಸುವಲ್ಲಿ ಆರೋಗ್ಯಕ್ಕೆ ವಿರುದ್ಧವಾದ ಯಾವ ಪದಾರ್ಥಗಳನ್ನೂ ಉಪಯೋಗಿಸಕೂಡದು ಅಥವಾ ಷರಾಬ ತಯಾರ್ಮಾಡಲ್ಪಟ್ಟ ತರುವಾಯ

ಅದರಲ್ಲಿ ಹಾಕಲೂಕೂಡದು ಮತ್ತು ಉಪಯೋಗಿಸಲ್ಪಡುವ ಯೆಲ್ಲಾ ಪದಾರ್ಥಗಳೂ ಪ್ರಥಮತಃ ವಿಧಿಸಲ್ಪಟ್ಟ ದಾಮಾಷಾಯಿ ಪ್ರಕಾರ ಇರತಕ್ಕವು, ಅಥವಾ ಕಂಟ್ರಾಕ್ಟುದಾರನಿಂದ ರೋಜಿನಾ ತಯಾರ್ಮಾಡಲ್ಪಡುವದರ ಫಲಿತಾಂಶಗಳು ಸರ್ಕಾರ್ ಆಫೀಸರುಗಳಿಂದ ನ್ಯಾಯವಾದ ತನಿಖಿ ನಡಿಸಲ್ಪಡಲಿಕೋಸ್ಕರ. ಐಯಿಂದ ಗವರ್ನಮೆಂಟಿನವರಿಂದ ನಿರ್ಣಯಿಸಲ್ಪಡುವ ದಾಮಾಷಾಯಿ ಪ್ರಕಾರವಾಗಲಿ ಇರತಕ್ಕದ್ದು.

V. ಇಜಾರೇದಾರನು, ಡಿಸ್ಟಿಲೇರಿಯಲ್ಲಿಯೂ, ಪ್ರತಿ ಕೋಠಿಯಲ್ಲಿಯೂ ತಯಾರ್ಮಾಡಲ್ಪಡುವ ಸಾರಾಯಿಗಳ ಜಮಾಖರ್ಚುಗಳು, ತೇದಾದು, ವ ಸ್ಟ್ರೆಂಗ್ತ್, ಇವುಗಳ ಕರಾರ್‌ವಾಕಾ ಲೆಖ್ಖಗಳನ್ನೂ, ಮತ್ತು ಡಿಸ್ಟಿಲೇರಿಯಲ್ಲಿ ರೋಜೇನಾ ಜಮಾಖರ್ಚು ಆದ ಯೆಲ್ಲಾ ಪದಾರ್ಥಗಳ ಲೆಖ್ಖಗಳನ್ನೂ ಸುದಾ ವಿಧಿಸಲ್ಪಟ್ಟ ನಮೂನೆಗಳಲ್ಲಿ ಇಡತಕ್ಕದ್ದು, ಆತನು ಡೆಪ್ಯುಟಿ ಕಮ್ಮಿಷನರವರಿಂದಾಗಲೀ ಸೂಪರ್‌ವೈಜರಿಂದಾಗಲಿ ಈ ಬಗ್ಗೆ ಮೊಕರರ್ಮಾಡಲ್ಪಡುವ ಯಾವ ಉದ್ಯೋಗಸ್ಥನಿಂದಾಗಲಿ ತನಖಿ, ನೋಡುವ ಬಗ್ಯೆ ಹಾಜರ್ ಮಾಡುವಂತೆ ಕೇಳಲ್ಪಟ್ಟಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

VI. ಒಂದು ತಿಂಗಳಿಗೆ ಆಗುವಷ್ಟು ಸಾರಾಯಿಯನ್ನು ಯಾವಾಗ್ಯೂ ಹಾಜರೀಯಲ್ಲಿಟ್ಟುಕೊಂಡಿರಲಿಕ್ಕೆ ಬಟ್ಟೀದಾರನು ಬದ್ಧನಾಗಿರತಕ್ಕದ್ದು: ಸರ್ಕ 1884ನೇ ಏಪ್ರೆಲ್ ಗುರ್ರೇ ತಾರೀಖು ಮೊದಲು ಈ ಮೇರೆ ಹಾಜರಿರುವ ಬಗ್ಯೆ ಸದರೀ ತಾರೀಖಿಗೆ ಮುಂದೆಯೇ ಬಟ್ಟೀ ಯಿಳಿಸಲಿಕ್ಕೆ ಷುರು ಮಾಡತಕ್ಕದ್ದು, ಇರಂತು ಹಾಗೆ ಬಟ್ಟೀ ಯಿಳಿಸಲ್ಪಟ್ಟ ಯಾವ ಸಾರಾಯಿಯೂ, ಸರ್ಕ 1884ನೇ ಏಪ್ರೆಲ್ 1ನೇ ತಾರೀಖಿಗೆ ಮುಂದಾಗಿ ತನ್ನ ವಶದಿಂದಲಾಗಲಿ, ತನ್ನ ಕೈಕೆಳಗಣ ಉದ್ಯೋಗಸ್ಥನ ವಶದಿಂದಾಗಲಿ ಮಾರಲ್ಪಡಕೂಡದು, ಯಾ ಸಾಗಿಸಲ್ಪಡಕೂಡದು. ಇಜಾರೇದಾರನು, ತಮಾಂ ತಾಲೂಕು ಕಸಬಾ ಜಾಗಗಳಲ್ಲಿಯೂ, ಡೆಪ್ಯುಟಿ ಕಮ್ಮಿಷನರಿಂದ ಮಂಜೂರ್ಮಾಡಲ್ಪಡುವ ದೊಡ್ಡ ಷಹರ್‌ಗಳೊಳಗೂ, ಬಟ್ಟು ಫರೋಖ್ತು ಅಂಗಡಿಗಳನ್ನು ಇಡುವದಕ್ಕೆ ಅಪ್ಪಣೆ ವುಂಟಾಗತಕ್ಕದ್ದು. ಸದರೀ ಯೆಲ್ಲಾ ಜಾಗಗಳ ಪಟ್ಟಿಯು, ಕೇಳಿದಾಗ ಡೆಪ್ಯುಟಿ ಕಮ್ಮಿಷನರವರಿಗೆ ಕೊಡಲ್ಪಡತಕ್ಕದ್ದು. ಮತ್ತು ಕಂಟ್ರಾಕ್ಟುದಾರನು ಅಂಗಡಿ ಒಂದಕ್ಕೆ ಮಾಹೇಯಾನಾ ವಿಧಿಸಲ್ಪಟ್ಟ 2 ರೂಪಾಯಿಗಳ ಲೈಸೆನ್ಸ ಫೀಯನ್ನು ಕೊಡತಕ್ಕದ್ದು.

VII. ಷರತ್ತುಗಳ X ವ XIIನೇ ರೂಲಸಗಳಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಹೊರ್ತು, ಡಿಸ್ಟಿಲೇರಿಯಲ್ಲಾಗಲೀ ಬಟ್ಟು ಫರೋಖ್ತು ಅಂಗಡಿಗಳಲ್ಲಾಗಲೀ ಸಾರಾಯಿಯನ್ನು ಚಿಲ್ಲರೇ ಫರೋಖ್ತು ಮಾಡಕೂಡದು.

VIII. ಚಿಲ್ಲರೇ ಫರೋಖ್ತು ಅಂಗಡಿಗಳು, ಡಿಸ್ಟ್ರಿಕ್ಟುಜಾತ ಡೆಪ್ಯುಟಿ ಕಮ್ಮಿಷನರ ವಿಚಾರಣೆಯಲ್ಲಿಯೂ, ಮ್ಯುನಿಸಿಪೆಲ್ ಷಹರ್‌ಗಳಲ್ಲಿ ದೀವಾನರವರಿಂದ ಹುಕ್ಕುಂ ಮಾಡಲ್ಪಟ್ಟರೆ ಅಂತಾ ಷಹರ್‌ಗಳ ಮ್ಯುನಿಸಿಪೆಲ್ ಪ್ರೆಸಿಡೆಂಟರ ಯಾ ವೈಸ್ ಪ್ರೆಸೀಡೆಂಟರ ವಿಚಾರಣೆಯಲ್ಲಿಯೂ ಇರತಕ್ಕದ್ದು; ಮತ್ತು ಅವರುಗಳ ಮಂಜೂರಾತಿ ಯಿಲ್ಲದೆ ಅವರುಗಳಿಂದ ಮೊಕರರ್ ಮಾಡಲ್ಪಡುವ ಅಂಥಾ ಸ್ಥಳಗಳಲ್ಲದೆ ಚಿಲ್ಲರೇ ಅಂಗಡಿ ಯಾವವೂ ಇಡಲ್ಪಡತಕ್ಕದ್ದಲ್ಲ. ಯಾವ ಅಂಗಡಿಗಳನ್ನಾಗಲಿ, ಪಬ್ಲಿಕ್ ಜರೂರಾತಿ ಸಬಬಿನಿಂದ ಇಜಾರೇದಾರನು ತನಿಗೆ ಈಡು ಕೊಡಬೇಕೆಂದು ಕೇಳುವ ಹಕ್ಕಿಲ್ಲದೇನೇ ಮುಚ್ಚುವಂತೆ ಹುಕ್ಕುಂ ಮಾಡಲಿಕ್ಕೆ ಅವರು ಅರ್ಹರಾಗಿರತಕ್ಕದ್ದು.

XI. ಚಿಲ್ಲರೇ ಅಂಗಡಿಗಳಿಗೆ ಲೈಸೆನ್ಸಗಳು ಗವರ್ನಮೆಂಟಿನವರಿಂದ ಆಗಿಂದಾಗ್ಯೆ ಮೊಕರರ್ ಮಾಡಲ್ಪಡಬಹುದಾದಂಥಾ ಲೈಸೆನ್ಸ ರುಸುಂಗಳನ್ನು ಕೊಟ್ಟಮೇಲೆ ಸದರೀ ಆಫಿಸರ್‌ಗಳಿಂದ ಮಾಮೂಲ್ ನಮೂನೆಯಲ್ಲಿ ಕೊಡಲ್ಪಡುವದು.

ಕ್ರಮ ಪಡಿಸಲ್ಪಟ್ಟ ದಾರಣೆಗೆ ಮತ್ತು ವಿಧಿಸಲ್ಪಟ್ಟ ಸ್ಟ್ರೆಂಗ್ತ್‌ನಿಂದ ಸಾರಾಯಿಯನ್ನು ಫರೋಖ್ತು ಮಾಡುವದಕ್ಕೂ, ಜರೂರಾದ ಇತರ ಷರತ್ತುಗಳ ಬಗ್ಗೂ ಲೈಸೆನ್ಸಗಳಲ್ಲಿ ನಿಬಂಧನೆ ಮಾಡಲ್ಪಡುವದು. ಚಿಲ್ಲರೇ ಫರೋಖ್ತುದಾರರು ಅವರಿಗೆ ಅತ್ಯಂತ ಸಮೀಪದಲ್ಲಿನ ಅಥವಾ ಅವರು ಸಾಲೀಯಾನಾ ತೆಗೆದುಕೊಳ್ಳುವದಕ್ಕೆ ಚುನಾಯಿಸುವ ವಟ್ಟು ಅಂಗಡೀಗಳಿಂದಲೇ ಸಾರಾಯಿಯನ್ನು ಕೊಂಡುಕೊಳ್ಳತಕ್ಕದ್ದು. ಸದರೀ ಚಿಲ್ಲರೇ ಫರೋಖ್ತುದಾರರು, ಅಕ್ರಮವಾದ ವಿಷಯಗಳೇನೂ ನಡೆಯದೇ ಇರುವದನ್ನು ನೋಡುವ ಬಗ್ಯೆ ತಮ್ಮ ಅಂಗಡಿಗಳೊಳಗೆ ಇಜಾರೇದಾರರಿಗಾಗಲೀ ಅವರ ಮುತಾಲೀಕರಿಗಾಗಲಿ ಅಬ್ಕಾರಿ ಆಫೀಸರುಗಳಿಗಾಗಲೀ ಕ್ರಮ ಪ್ರಕಾರ ಅಧಿಕಾರ ಹೊಂದಿದ ಯಾವ ಸರ್ಕಾರ್ ನವುಕರನಿಗಾಗಲಿ ಅವಕಾಶ ಸಹ ಕೊಡತಕ್ಕದ್ದು, ಮತ್ತು ಪ್ರತಿದಿನ ತಾವು ತೆಗದುಕೊಳ್ಳುವ ಸಾರಾಯಿಯ ತೇದಾದ್ ವ ಸ್ಟ್ರೆಂಗ್ತ್ ಮತ್ತು ಸದರೀ ಬಗ್ಯೆ ಹಾಕಲ್ಪಡುವ ಖರೀದಿಗಳು ಇವುಗಳ ನಿಜವಾಗಿಯೂ ಕರಾರ್‌ವಾಕಾ ಆಗಿಯೂ ಇರುವ ಲೆಖ್ಖಗಳನ್ನು ಇಡತಕ್ಕದ್ದಲ್ಲದೇ ಇಜಾರೇ ದಾರನಿಂದಾಗಲಿ ಅವನ ಮುತಾಲೀಕನಿಂದಾಗಲೀ ಸದರೀ ಲೆಕ್ಕ ಕೇಳುವಂತೆ ಅಧಿಕಾರ ಕೊಡಲ್ಪಟ್ಟ ಯಾವ ಸರಕಾರದ ಉದ್ಯೋಗಸ್ಥನಿಂದಾಗಲಿ ಹಾಗೆ ಅಪೇಕ್ಷಿಸಲ್ಪಟ್ಟಾಗ ತನಿಖಿ ನೋಡುವ ಬಗ್ಯೆ ಅವುಗಳನ್ನು ಹಾಜರ್ ಮಾಡತಕ್ಕದ್ದು.

X. ಡಿಸ್ಟಿಲೇರಿಯಿಂದ ಸಾರಾಯಿ ಕೊಡುವದನ್ನು ಕುರಿತ ಈ ಕೆಳಗೆ ಬರುವ ರೂಲ್ಸ್ ಅನುಸರಿಸಲ್ಪಡತಕ್ಕದ್ದು.

(a) ಸಾಧಾರಣವಾಗಿ 20 ಡಿಗ್ರಿ ಅಂಡರ್ ಪ್ರೂಫಿಗೆ ಹೆಚ್ಚಿದ ಸ್ಟ್ರೆಂಗ್ತ್‌ನಿಂದ ಯಾವ ಸಾರಾಯಿಯನ್ನೂ ಕೊಡತಕ್ಕದ್ದಲ್ಲವು, ಆದರೆ ಕಂಟ್ರಾಕ್ಟುದಾರನಾಗಲಿ, ಚಿಲ್ಲರೇ ಫರೋಖ್ತುದಾರನಾಗಲೀ ಮೇಲೆಕಂಡ ಸ್ಟ್ರೆಂಗ್ತ್‌ಗಿಂತ ಹೆಚ್ಚಾದ ಸ್ಟ್ರೆಂಗ್ತ್‌ನಲ್ಲಿ ಸಾ

ರಾಯಿ ಕೊಡಲಿಕ್ಕೆ ಅಪೇಕ್ಷಿಸಿದರೆ ಹಾಗೆ ಕೊಡಲ್ಪಡುವ ಸ್ಪಿರಿಟ್ ಸಾರಾಯಿಯು ಪ್ರೂಫಿಗಿಂತ ಹೆಚ್ಚು ಸ್ಟ್ರೆಂಗ್ತು ವುಳ್ಳದ್ದಾಗಿರ ಕೂಡದು. ಪ್ರೂಫಿಗೆ ಸಮನಾದ ಬಲವುಳ್ಳ ಸಾರಾಯಿಯು ಯರಡು ಡಜನ್ ಕ್ವಾರಟ್ ಶೀಶೆಗಳಲ್ಲಿಯೂ, ನಾಲ್ಕು ಡಜನ್ ಪರ್ಯಿಂಟ್ ಶೀಶೆಗಳಲ್ಲಿಯೂ, ಇಂಗ್ಲೀಷ್ ಮತ್ತು ಪರಾಯಿ ದೇಶದಂತೆಯೇ ಕಮ್ಮೀ ತೇದಾದಿನ ಡಬ್ಬಿಗಳಲ್ಲಿ ಡಿಸ್ಟಿಲೇರಿಯಿಂದ ಕೊಡಲ್ಪಡುವದು. ಅದು ಡಿಸ್ಟಿಲೇರಿಯಲ್ಲಿ ಸೂಪರ್ ವೈಜರಿಂದ ಮೊಹರ್ಮಾಡಲ್ಪಟ್ಟ ಪ್ರಕಾರವೇ ಬದಲಾಯಿಸದಂತೆಯೂ ಸೂಪರ್ ವೈಜರವರ ಪ್ಯಾಶಿನ ಆಧಾರದ ಮೇಲೂ ಒಟ್ಟು ಅಂಗಡಿಗಳಿಂದ ಚಿಲ್ಲರೇ ಬಿಕರಿದಾರ್ರಿಗೆ ಪುರೋಖ್ತು ಮಾಡಲ್ಪಡತಕ್ಕದ್ದು. ಚಿಲ್ಲರೇ ಬಿಕರೀದಾರರು ಅಂಥಾ ಷರಾಬನ್ನು ಅವರಿಗೆ ಗೊತ್ತಿರುವಂಥಾ ಮರ್ಯಾದೆವುಳ್ಳ ಜನಗಳಿಗೆ ಮಾತ್ರವೇ ಸೂಪರ್ ವೈಜರಿಂದ ಕೊಡಲ್ಪಟ್ಟ ಅಲಾಹಿದ ಪ್ಯಾಸುಗಳೊಂದಿಗೆ ಕೊಡತಕ್ಕದ್ದು. ಮತ್ತು ಒಟ್ಟು ಬಿಕರೀದಾರರು ವ ಚಿಲ್ಲರೇ ಪುರೋಖ್ತುದಾರರು ಸುದಾ ಅಂಥಾ ಬಿಕರೀಗಳಿಗೆ ವಿಧಿಸಲ್ಪಟ್ಟ ನಮೂನೆಯಲ್ಲಿ ಲೆಕ್ಕ ಕೊಡತಕ್ಕದ್ದು.

(*b*) ಪ್ರೂಫಿಗಿಂತ ಹೆಚ್ಚು ಸ್ಟ್ರೆಂಗ್ತಿನ ಸಾರಾಯಿಯನ್ನು ಇಜಾರೇದಾರನು ಕೊಡಲಿಕ್ಕೆ ಅಪೇಕ್ಷಿಸಿದರೆ ಆ ಬಗ್ಯೆ ಸೂಪರ್‌ವೈಜರ್ ಮೂಲಕ ಡೆಪ್ಯುಟಿ ಕಮ್ಮಿಷನರವರ ವಿಶೇಷ ಹುಕ್ಕುಂಗಳನ್ನು ಪಡೆಯತಕ್ಕದ್ದು. ಸದರೀ ಸೂಪರ್‌ವೈಜರು ಸದರೀ ಅಂಶಗಳನ್ನು ಸೂಚಿಸಿ, ಅದರಂತೆ ಒಟ್ಟು ಬಿಕ್ರಿ ಅಂಗಡಿಗಳಿಗೆ ಪಾಸ್‌ಗಳ ಯಾನೇ ರಹದಾರೀಗಳನ್ನು ಕೊಡತಕ್ಕದ್ದು. ಹಾಗೆ ಕೊಡಲ್ಪಟ್ಟ ಸಾರಾಯಿಯು ಈ ಪ್ಯಾರಾ (*a*) ಕ್ಲಾಜ್‌ನಲ್ಲಿ ವಿಧಿಸಲ್ಪಟ್ಟ ಪ್ರಕಾರ ವಿಕ್ರಯಿಸಲ್ಪಟ್ಟು ಲೆಕ್ಕ ಇಡಲ್ಪಡತಕ್ಕದ್ದು.

(*c*) ಅಂಡರ್ ಪ್ರೂಫ್ ಬಾಬತು 20° ಡಿಗ್ರೀಗೆ ಮೇಲ್ಪಟ್ಟ ಸ್ಟ್ರೆಂಗ್ತು ವುಂಟಾಗಿ ಮತ್ತು ಪ್ರೂಫಿನವರಿಗೆ ಇದ್ದು, ಕೊಡಲ್ಪಡುವ ತಮಾಂ ಸಾರಾಯಿಗೂ, ಪ್ರೂಫಿನ ಮೇಲೆ ತೀರ್ವೆಯನ್ನು ವಿಧಿಸತಕ್ಕದ್ದು. ಪ್ರೂಫಿನ ಮೇಲಣ ದರವು ಜಲಪರಿಮಾಪಕ ಯಂತ್ರದ ದರಗಳ ಪ್ರಕಾರ ದಾಮಾಷಾಯಿ ಮೇಲೆ ಜಾಸ್ತಿ ಮಾಡಲ್ಪಡತಕ್ಕದ್ದು.

(*d*) ಅಂಡರ್ ಪ್ರೂಫಿನ 20° ಡಿಗ್ರೀಗೆ ಕೀಳ್ಪಟ್ಟ ಯಾವ ಸಾರಾಯಿಯೂ, ಸಾಧಾರಣವಾಗಿ ಡಿಸ್ಟಿಲೇರಿಯಿಂದ ಕೊಡಲ್ಪಡಕೂಡದು: ಪರಂತು, ಅಂಡರ್ ಪ್ರೂಫಿನ 20° ಡಿಗ್ರೀ ಸ್ಟ್ರೆಂಗ್ತಿಗಿಂತ ಕಡಮೆ ಶಕ್ತಿಯುಳ್ಳ ಸಾರಾಯಿ ಬಗ್ಯೆ ತಗಾದೇ ಉಂಟಾದರೆ, ಅಂಡರ್ ಪ್ರೂಫಿನ 30° ಡಿಗ್ರೀ ಸಾರಾಯಿಯು, ದಾಮಾಷಾಯಿ ಪ್ರಕಾರ ಕಮ್ಮಿ ಮಾಡಲ್ಪಟ್ಟ ತೀರ್ವೆಯ ದರಗಳ ಮೇರೆ, ಡಿಸ್ಟಿಲ್ಲೆರಿಯಿಂದ ವಿಶೇಷತಃ ಕೊಡಲ್ಪಡಬಹುದು. ಅಂತಾ ಸಾರಾಯಿಯು, ಒಟ್ಟು ಕೋಠಿಗಳಲ್ಲಿಯೂ, ಚಿಲ್ಲರೇ ದುಕಾನ್‌ಗಳೊಳಗೂ ಪ್ರತ್ಯೇಕ ಪ್ರತ್ಯೇಕವಾಗಿ ಇಡಲ್ಪಟ್ಟು ಲೆಕ್ಕ ಕೊಡತಕ್ಕದ್ದು.

XI. ಸಾರಾಯಿಯು ಡಿಸ್ಟಿಲ್ಲೆರಿಯಿಂದ ಕೊಡಲ್ಪಟ್ಟ ಮೇರೆ ಪುರೋಖ್ತು ಮಾಡಲ್ಪಡತಕ್ಕದ್ದೇ ಹೊರತು, ಒಟ್ಟು ಬಿಕ್ರಿಯ ಅಥವಾ ಚಿಲ್ಲರೇ ಅಂಗಡಿಗಳಲ್ಲಿ ಯಾವ ರೀತಿಯಲ್ಲಾಗಲಿ ಇತರ ಪದಾರ್ಥ ಬೆರಿಕೇ ಮಾಡಕೂಡದು ಅಥವಾ ನೀರು ಬೆರಿಸಕೂಡದು.

XII. ಅಂಡರ್ ಪ್ರೂಫಿನ ಬಾಬತು 20° ಡಿಗ್ರೀಯ ಸ್ಟ್ರೆಂಗ್ತಿನ ಸಾರಾಯಿಯ ಮೇಲೆ ಸಲ್ಲತಕ್ಕ ರೂಪಾಯಿಗೆ ಒಂದಾಣೆ ಮೇರೆ ಲೋಕಲ್‌ಸೆಸ್ ದೇಖೀಲ್ ಗವರ್ನಮೆಂಟ್ ತೀರ್ವೆಯು, ಸದರೀ ಸಾರಾಯಿ, (ಇತರ ಪದಾರ್ಥ ಬೇರಿಕೆ ಇಲ್ಲದೆಯೂ, ನೀರ ಬೆರಿಕೆಯಾಗದೆಯೂ) ಒಟ್ಟು ಪುರೋಖ್ತು ವ ಚಿಲ್ಲರೆ ಅಂಗಡಿಗಳಲ್ಲಿ ಯಾವ ಖರೀದೀ ಪ್ರಕಾರ ಪುರೋಖ್ತಾಗತಕ್ಕದ್ದೋ ಅದು ಇದರಡಿ ಕಂಡ ತಖ್ತೇಯಲ್ಲಿ ವಿವರಿಸಲ್ಪಟ್ಟ ಮೇರೆ ಇದರಿಂದ ನಿಶ್ಚಯಿಸಲ್ಪಟ್ಟಿರುತ್ತೆ:

ಷಹರ್ ಅಥವಾ ಡಿಸ್ಟ್ರಿಕ್ಟು.	20° ಅಂಡರ್ ಪ್ರೂಫ್ ಸ್ಪಿರಿಟ್ ಸಾರಾಯಿಗಳು.											
	ಗ್ಯಾಲನ್ ವಂದಕ್ಕೆ ತೆರಿಗೆ.			ಗ್ಯಾಲನ್ ವಂದಕ್ಕೆ ಒಟ್ಟು ಬಿಕರಿ ಕ್ರಯ.			ಚಿಲ್ಲರೇ ಪುರೋಖ್ತು ಕ್ರಯ.					
							ಗ್ಯಾಲನ್ ವಂದಕ್ಕೆ			ಡ್ರಾಮ್‌ವಂದಕ್ಕೆ		
	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.
ಶಿವಮೊಗ್ಗಾ ಷಹರ್	2	12	0	4	6	4	5	0	0	0	1	8
ಡಿಸ್ಟ್ರಿಕ್ಟಿನ ತಮಾಂ ಇತರ ಸ್ಥಳಗಳು	2	2	0	3	14	0	4	8	0	0	1	6

ಪ್ರೂಫ'ಗಾಗಿಯೂ ಅಂಡರ್ ಪ್ರೂಫಿನ ಬಾಬತು 30°ಗೂ ಖರೀದಿಗಳು ಮತ್ತು ಅದರ ಮೇಲೆ ಕಟ್ಟತಕ್ಕ ತೀರ್ವೆಬಗ್ಯೆ ಸದರೀ ಸ್ಟ್ರೋಂಗ್ರೂಗಳ ಮೇಲೆ ಅಥವಾ ಸ್ಟ್ರೋಂಗ್ರೂಗಳ ವಳಗೆ ತಮಾಂ ಸ್ಟ್ರೋಂಗ್ರೂಗಳಿಗೂ ತೀರ್ವೆ ಸಹ ಗವರ್ನಮೆಂಟ್ ಹೈಡ್ರಾಮಿಟರ್ಸ ಯಂತ್ರಗಳ ಪ್ರತಿ ಪೆಟ್ಟಿಗೆ ಸಂಗಡಲೂ ಕಳುಹಿಸಲ್ಪಡುವ ಕ್ಯಾಸಿಲಾ ಯವರ ರೂಲ್ಸ ಅನುಸರಿಸಿ ಅಂಡರ್ ಪ್ರೂಫ ಬಾಬತು 20°ಗೆ ಮೇಲೆ ವಿವರಿಸಲ್ಪಟ್ಟ ದರಗಳ ಮೇಲೆ ದಾಮಾಷಾಯಿ ಪ್ರಕಾರ ಕ್ರಮಪಡಿಸಲ್ಪಡತಕ್ಕದ್ದು. ಈ ರೂಲ್ಸಿನಲ್ಲಿರುವ ಯಾವ ಅಂಶವೂ, ಗೌರವಶಾಲಿಗಳಾದ ಖುಷ ಖಾಷ ಜನಗಳಿಗೂ ಆಸ್ಪತ್ರೆಗಳಿಗೂ, ಮ್ಯುಜಿಯಂ ಯಾನೆ ವಿವಿಧವಸ್ತು ಶಾಲೆಗಳಿಗೂ ಮತ್ತು ಇತರ ಪಬ್ಲಿಕ ಸ್ಥಾಪನೆಗಳಿಗೂ ಅಂಡರ್ ಪ್ರೂಫಿನ ಬಾಬತು 20° ಮೇಲೆ ಮತ್ತು ಓವರ್ ಪ್ರೂಫಿನ ಬಾಬತು 30° ವರೆಗೆ ಸಾರಾಯಿಯನ್ನು ಸಾಧಾರಣ ವಂದು ಕ್ವಾರ್ಟ್ಸ ಶೀಷೆಗಿಂತ ಕಡಮೆಇಲ್ಲದೆ ಮತ್ತು ವಟ್ಟು ಬಿಕರಿಯ ಖರೀದಿ ಪ್ರಕಾರ 2 ಗ್ಯಾಲನ್‌ಗೆ ಮೀರದ ತೇದಾದ ಪ್ರಕಾರ ಸಾರಾಯಿಯನ್ನು ಸೂಪರ್ ವೈಜರು ಅವರಿಗೆ ಬರಹ ಮೂಲಕ ಕೇಳಿ ಕೊಂಡಾಗ ಸರಬರಾಯಿ ಮಾಡುವದನ್ನು ನಿರೋಧಿಸತಕ್ಕ ಅಂಶ ಯಾವದೂ ಇಲ್ಲವು. ಹೆಚ್ಚು ಸ್ಟ್ರೋಂಗ್ರೂ ಸಾರಾಯಿಯು ಜರೂರಿಯಾತ ಸಂಗತಿಗಳಲ್ಲಿಯೂ ಡೆಪ್ಯುಟಿ ಕಮ್ಮಿಷನರವರ ವಿಶೇಷ ಮಂಜೂರಾತಿ ಮೇಲೆಯೂ ವಿನಹಾ ಕೊಡಲ್ಪಡತಕ್ಕದ್ದಲ್ಲ.

XIII. ಸಾರಾಯಿ ಕಮ್ಮೀಬಂದ ಬಗ್ಯೆ ಶಿವಮೊಗ್ಗಾ ಷಹರ್ ಮ್ಯುನಿಸಿಪಲ್ ಸರಹದ್ದುಗಳ ಆಚೆಗೆ ಫುರೋಖ್ತು ಬಗ್ಯೆ ಡಿಸ್ಟಿಲೇರಿಯಿಂದ ಕೊಡಲ್ಪಟ್ಟ ಸಾರಾಯಿಯ ಮೇಲೆ ಸಲ್ಲತಕ್ಕ ತೆರಿಗೆಯ ಮೇಲೆ ಸೇಕಡಾ 2ರ ಪ್ರಕಾರ ಸೋಡಿ ಯಾ ವಜಾ ಕೊಡಲ್ಪಡತಕ್ಕದ್ದು.

XIV. ಇಜಾರೇದಾರನು, ಡಿಸ್ಟಿಲ್ಲೇರಿಗಳನ್ನಾಗಲಿ, ಬಟ್ಟಿ ಫುರೋಖ್ತು ಅಂಗಡಿಗಳನ್ನಾಗಲಿ, ಕೋಠಿಗಳನ್ನಾಗಲಿ ಮೇಲ್ವಿಚಾರಣೆ ಮಾಡಲಿಕ್ಕೆ ಯಾವನನ್ನು ಮೋಕರರ್ ಮಾಡುತ್ತಾನೋ ಅಂತಾ ಪ್ರತಿ ಮನುಷ್ಯನನ್ನೂ ಹಾಗೆ ಮೋಕರರ್ ಮಾಡುವದಕ್ಕೆ ಮುಂದಾಗಿ ಮೇಲೆ ಕಂಡ ಷರತ'ಗಳಿಗೆ ಅನುಗುಣವಾಗಿ ಕರಾರಿಗಳನ್ನು ಬರೆದು ಕೊಡುವಂತೆ ಮಾಡತಕ್ಕದ್ದು. ಅಂಥಾ ಕರಾರ್‌ಗಳು 1884ನೇ ಇಸವಿ ಏಪ್ರೆಲ್ ಒಂದನೇ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಆ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರಲ್ಲಿ ಯಿಡಲ್ಪಡತಕ್ಕದ್ದು. ಮತ್ತು ಸದರೀ ಇಜಾರೇದಾರನು, ಷರಾಬ್ ತಯಾರಿ, ಸಾಗಿಸುವಣಿ, ಮತ್ತು ಫುರೋಖ್ತು ಈ ಕೆಲಸಗಳಲ್ಲಿ ತನ್ನಿಂದ ಮೋಕರರ್ ಮಾಡಲ್ಪಡುವ ತಮಾಂ ಜನಗಳೂ, ತಮ್ಮಿಂದ ಮಾಡಿಕೊಳ್ಳಲ್ಪಟ್ಟ ಕರಾರ್‌ರಳ ವ ಕಾನೂನಿನ ನಿಬಂಧನೆಗಳನ್ನು ಖಂಗಿತವಾಗಿ ಅನುಸರಿಸುವಂತೆ ಮಾಡುವದಕ್ಕೆ ಪೂರಾ ತರದೂದ್ ಮಾಡತಕ್ಕದ್ದು; ಮತ್ತು ಸದರೀ ನಿಬಂಧನೆಗಳಿಗೆ ಬರ್‌ಕಿಲಾಫ'ನ ಡಿಸಲ್ಪಟ್ಟಂತೆ ಆತನ ತಿಳುವಳಿಕೆಗೆ ಬಂದರೆ ಸದರೀ ಅಪರಾಧಕ್ಕೆ ವಿಧಿಸಲ್ಪಟ್ಟ ದಂಡನೆ ವಿಧಿಸುವ ಬಗ್ಯೆ, ಸದರೀ ಡಿಸ್ಟ್ರಿಕ್ಟಿನ ಡೆ|| ಕಮ್ಮಿಷನರ ಜಾಹೀರಾತಿಗೆ ಸದರೀ ಸಂಗತಿಯನ್ನು ತರತಕ್ಕದ್ದು. ಮತ್ತು ಸದರೀ ಅಪರಾಧಿಯನ್ನು ತಗ್ಯೆರ್ ಮಾಡುವಂತೆ ಡೆ|| ಕಮ್ಮಿಷನರಿಂದ ಅಪೇಕ್ಷಿಸಲ್ಪಟ್ಟರೆ, ಅದೇ ಮೇರೆ ಅವನನ್ನು ತಗ್ಯೆರ ಮಾಡತಕ್ಕದ್ದು.

XV. ಇಜಾರೇಯ ಷರತ'ಗಳಿಗೆ ವಿರುದ್ಧವಿಲ್ಲದೆ, ಗವರ್ನಮೆಂಟಿನಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಇಜಾರೇದಾರನು ಅನುಗುಣವಾಗಿ ನಡೆಯತಕ್ಕದ್ದು. ಮತ್ತು ಆತನ ನೌಕರ್ ಮಾನೆಯರೆಲ್ಲಾ ಬಟ್ಟೀ ಇಳಿಸಲ್ಪಟ್ಟು ಕೊಡಲ್ಪಟ್ಟ ಸಾರಾಯಿಯ ಬಂದೋಬಸ್ತು ಮತ್ತು ಕ್ರಮ, ಉಪಯೋಗಿಸಲ್ಪಟ್ಟ ತಮಾಂ ಪಾತ್ರೆಗಳ ಪಾಕೀಜೀ, ಲೋಹ ಪಾತ್ರೆಗಳ ಕಲಾಯಿಹಾಕಿಸುವಣಿ, ಕಾವಲು, ಆವರಣದ ತನಿಖೀ ಮತ್ತು ಆರೋಗ್ಯಕರವಾದ ಸ್ಥಿತಿ ಮತ್ತು ಗವರ್ನಮೆಂಟಿನವರ ಅಥವಾ ಇಜಾರೇದಾರರ ಅಥವಾ ಉಭಯತ್ರರ ಪ್ರಯೋಜನಗಳಿಗೆ ಸಂಬಂಧಪಟ್ಟ ಇತರ ವಿಷಯಗಳು, ಇವುಗಳ ಬಗ್ಯೆ ಗವರ್ನಮೆಂಟಿನವರು ಜಾರೀಮಾಡಿದ ರೂಲ್ಸನ್ನೂ, ಹುಕ್ಕುಂಗಳನ್ನೂ, ಪೂರಾ ಜಾರೀಗೆ ತರುವ ಅಂಶಗಳಿಗೇ ನಿಗೇ ಕೊಡತಕ್ಕದ್ದು.

XVI. ಮೇಲೆ ಕಂಡ ಷರತ'ಗಳ ಪೈಕೀ ಯಾವ ಷರತ'ಗಳಿಗಾಗಲಿ, ಇಜಾರೇದಾರನಿಂದ ಅಥವಾ, ಷರಾಬ್ ತಯಾರಿ, ಸಾಗಿಸುವಣಿ, ಯಾ ಫುರೋಖ್ತು ಇಂತಾದ್ದರಲ್ಲಿ, ಆತನಿಂದ ಮೋಕರರ್ ಮಾಡಲ್ಪಟ್ಟ ಜನಗಳ ಪೈಕೀ ಯಾರಿಂದಾದರೂ, ಸದರೀ ಇಜಾರೇದಾರನು ನೋಡಿಯೂ ನೋಡದಹಾಗೆ ಇರುವದರಿಂದ ಅಥವಾ ರಹಸ್ಯವಾದ ಷಾಮಿಲಾತೀಯಿಂದ ಮನಃಪೂರ್ವಕವಾಗಿ ಬರ್‌ಕಿಲಾಫ' ಯೇನಾದರೂ ನಡಿಸಲ್ಪಟ್ಟರೆ, ಇಜಾರೇಯನ್ನು ರದ್ದು ಮಾಡುವದಕ್ಕೂ, ಠೇವಣೀ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಟ್ಟಿತೆಂದು ತಿಳಿಸುವದಕ್ಕೂ, 1ನೇ ಷರತ'ನಲ್ಲಿ ವಿಧಿಸಲ್ಪಟ್ಟ ಪ್ರಕಾರ ಅಮಲ್ ನಡಿಸುವದಕ್ಕೂ ದೀವಾನರವರಿಗೆ ಯಿಖ್ತಿಯಾರಿ ಇರತಕ್ಕದ್ದು.

XVII. ಗವರ್ನಮೆಂಟಿನವರಿಂದ ಸದರೀ ಬಗ್ಯೆ ವಿಧಿಸಲ್ಪಡಬಹುದಾದ ಅಂತಾ ಷರತ'ಗಳಿಗೆ ಬಳಪಟ್ಟು, ಇಜಾರೇದಾರನಿಂದ ಕೊಲಂಬೋ ಸಾರಾಯಿಯನ್ನು ಅಥವಾ ಇತರ ವಿಧಗಳುಳ್ಳ ಆರೆಕ ಸಾರಾಯಿ, ಲಿಕ್ಕರ ಸಾರಾಯಿ ಇವುಗಳನ್ನು ತಯಾರ್ಮಾಡಲ್ಪಡಲಿಕ್ಕೂ, ಫುರೋಖ್ತು ಮಾಡಲ್ಪಡಲಿಕ್ಕೂ, ಗವರ್ನಮೆಂಟಿನವರು ಅಂಗೀಕರಿಸಬಹುದು, ಪರಂತು ಈ ಇಸ್ತಿಹಾರ್‌ನಾಮೆಯಲ್ಲಿ ಕಂಡ ಸಾಧಾರಣ ಕಂಟ್ರಿ ಸಾರಾಯಿಯಿಂದ ಆಗುವ ಹುಟ್ಟುವಳಿಯ ಮೇಲಿನ ಸದೇ ಬಗ್ಯೆ ವಜಾ ಯಾವದೂ ಕೊಡಲ್ಪಡಲಾರದು.

115

7. ಕಳೆದ ವರುಷಗಳಲ್ಲಿ ಕೊಡಲ್ಪಟ್ಟ ಷರಾಬಿನ ತೇದಾದು ಇದರಡಿ ಕಂಡ ತಖ್ತೆಯಲ್ಲಿ ಕಾಣಿಸಿರುತ್ತೆ.

	1870—71 ಗ್ಯಾಲನ್‌ಗಳು.	1871—72 ಗ್ಯಾಲನ್‌ಗಳು.	1872—73 ಗ್ಯಾಲನ್‌ಗಳು.	1873—74 ಗ್ಯಾಲನ್‌ಗಳು.	1874—75 ಗ್ಯಾಲನ್‌ಗಳು.	1875—76 ಗ್ಯಾಲನ್‌ಗಳು.	1876—77 ಗ್ಯಾಲನ್‌ಗಳು.	1877—78 ಗ್ಯಾಲನ್‌ಗಳು.	1878—79 ಗ್ಯಾಲನ್‌ಗಳು.	1879—80 ಗ್ಯಾಲನ್‌ಗಳು.	1880—81 ಗ್ಯಾಲನ್‌ಗಳು.	1881—82 ಗ್ಯಾಲನ್‌ಗಳು.	1882—83 ಗ್ಯಾಲನ್‌ಗಳು.
ಶಿವಮೊಗ್ಗಾ ಡಿಸ್ಟ್ರಿಕ್ಟು	* 27,259	* 26,877	* 32,202	* 33,850	* 23,590	* 18,008	* 19,821	* 13,789	* 10,789	* 14,222	* 14,590	21,855	20,253

* ಈ ಅಂಕೆಗಳು 1870—71ರ ಲಾಗಾಯತು 1880—81ರ ವರಿಗೆ ಈಚೆಗೆ ಡಿಸ್ಟ್ರಿಕ್ಟಿಗೆ ಶೇರಿಸೋಣಾದ ದಾವಣಗೆರೆ ತಾಲ್ಲೂಕಿಗೆ ಕೊಡಲ್ಪಟ್ಟ ತೇದಾದನ್ನು ಅಡಗಿಸಿಕೊಂಡಿರುವದಿಲ್ಲಾ.

ತಾರೀಖು 9ನೇ ಫೆಬ್ರುವರೀ 1884.

ನಂ. 316.—ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ನಿಗೆ ಶೇರಿದ ಇದರಡಿ ಕಂಡ ಮೂರು ತಾಲ್ಲೂಕುಗಳಲ್ಲಿಯೂ ಮತ್ತು ಮೈಸೂರು ಡಿಸ್ಟ್ರಿಕ್ಟಿಗೆ ಶೇರಿದ ಹೊಳೇನರಸೀಪುರ ತಾಲ್ಲೂಕಿನಲ್ಲಿಯೂ, 1884ನೇ ಇಸವಿ ಏಪ್ರಲ್ 1ನೇ ತಾರೀಖು ಮೊದಲು 1887ನೇ ಇಸವಿ ಮಾರ್ಚಿ 31ನೇ ತಾರೀಖು ವರಿಗೆ ಆಗುವ ಮೂರು ವರುಷ ಕಾಲಪರಿಯಂತ ಶೇಂದೀ ಬಿಕ್ರೀ ಮಾಡುವ ಪಟ್ಟು ಸಾತಂತ್ರ್ಯದ ಬಗ್ಗೆ ದರಖಾಸ್ತುಗಳು ಕೋರಲ್ಪಟ್ಟಿವೆ. ದೀವಾನರವರ 1882ನೇ ಇಸವಿ ನವಂಬರ್ 25ನೇ ಮುರ್ಖಂ 136 137, ವ 138ನೇ ನಂಬರ್, ಮತ್ತು 1882ನೇ ಇಸವಿ ಡಿಶಂಬರ್ 21ನೇ ಮುರ್ಖಂ 165ನೇ ನಂಬರ್, 1882ನೇ ಇಸವಿ ಡಿಶಂಬರ್ 23ನೇ ಮುರ್ಖಂ 183ನೇ ನಂಬರ್, 1883ನೇ ಇಸವಿ ಜನವರೀ 4ನೇ ಮುರ್ಖಂ 1—3ನೇ ನಂಬರ್, ಮತ್ತು ಅದೇ ಇಸವಿ ನವಂಬರ್ 16ನೇ ಮುರ್ಖಂ 274ನೇ ನಂಬರು, ಈ ಇಸ್ತಿಹಾರನಾಮೆಗಳಿಂದ ತಿದ್ದುಪಡಿ ಮಾಡಲ್ಪಟ್ಟ ಪ್ರಕಾರ ಇದರಡಿ ಕಂಡ ತಾಲ್ಲೂಕುಗಳು ಶೇರಿರೃತ್ತೆ.

1 ಅತ್ತಿಕುಪ್ಪಾ.	3 ಚನ್ನರಾಯಪಟ್ಣ.
2 ನಾಗಮಂಗಲ.	4 ಹೊಳೇನರಸೀಪುರ, ಅರಕಲಗೂಡು ಡೆಪ್ಯುಟಿ ಅಮಲ್‌ದಾರ್ರ ಚಾರ್ಜು ಶೇರಿ.

2. ಯಷ್ಟರ ಮೊಬಲಗಿಗೆ ಕೇಳುತ್ತಾರೋ ಅಂತಾ ಸಾಲೀಯಾನಾ ಮೊಬಲಗು ಪ್ರತಿ ದರಖಾಸ್ತಿನಲ್ಲಿಯೂ ನಮೂದಿಸಲ್ಪಟ್ಟು ಅದರ ಸಂಗಡ ನಗದಾಗಿಯಾಗಲಿ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ 500 ರೂಪಾಯಿಗಳ ಡಿಪಾಜಿಟ್‌ನೀ ಲಿಫಾಪೆಯೊಳಗೆ ಹಾಕಿ ಬಂದ್ ಮಾಡಲ್ಪಟ್ಟು "ಅತ್ತಿಕುಪ್ಪ, ನಾಗಮಂಗಲ, ಚನ್ನರಾಯಪಟ್ಣ, ಮತ್ತು ಹೊಳೇನರಸೀಪುರ ತಾಲ್ಲೂಕುಗಳೊಳಗೆ ಶೇಂದಿ ಬಿಕ್ರಿ ಮಾಡತಕ್ಕ ಬಟ್ಟು ಸ್ವಾತಂತ್ರ್ಯದ ಬಗ್ಗೆ ದರಖಾಸ್ತು" ಯೆಂತ ಲಿಫಾಪೆ ಮೇಲೆ ಬರೆದು ಕಳುಹಿಸತಕ್ಕದ್ದು.

3. ದರಖಾಸ್ತುಗಳು, ಸ್ 1884ನೇ ಇಸವಿ ಫೆಬ್ರುವರೀ 28ನೇ ಮುರ್ಖ ಮಿನ ಮಧ್ಯಾಹ್ನದೊಳಗಾಗಲಿ, ತತ್ಪೂರ್ವವಾಗಲಿ, ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಆಫೀಸಿನಲ್ಲಿ ಪಾವತೀ ಮಾಡಲ್ಪಡತಕ್ಕದ್ದು. ಆಗ ಸದರೀ ದರಖಾಸ್ತುಗಳು ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು. ಯಾವ ದರಖಾಸ್ತುದಾರನ ದರಖಾಸ್ತನ್ನು, ದೀವಾನರವರಿಗೆ ಸಿಫಾರಸ್ ಮಾಡುವ ಬಗ್ಗೆ ಡೆಪ್ಯುಟಿ ಕಮ್ಮಿಷನರು ಚುನಾಯಿಸಿಕೊಳ್ಳುತ್ತಾರೋ ಅಂಥಾ ದರಖಾಸ್ತುದಾರನು ಕೂಡ್ಲೆ ನಗದಾಗಿಯಾಗಲಿ, ಗವರ್ನಮೆಂಟ್ ಪತ್ರಗಳ ಮೂಲಕವಾಗಲಿ ದರಖಾಸ್ತು ಮಾಡಿದ ಸಾಲೀಯಾನಾ ಇಜಾರೇ ಮೊಬಲಗು ಪೈಕಿ ಹನ್ನೆರಡರಲ್ಲಿ ವಂದು ಭಾಗವಾಗಲಿ (ಅಥವಾ ವಂದು ತಿಂಗಳ ಖಿಸ್ತು ಮೊಬಲಗಾಗಲಿ) ಜಾಸ್ತಿಯಾಗಿ ಡಿಪಾಜಿಟ್ ಇಡತಕ್ಕದ್ದು, ಇದಕ್ಕೆ ತಪ್ಪಿದರೆ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಡಿಪಾಜಿಟ್ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

4. ದೀವಾನರವರ ತೀರ್ಮಾನ ಫಾಯಿಷ್ ಮಾಡಲ್ಪಟ್ಟಾಗ ಯಾವ ದರಖಾಸ್ತುದಾರರ ದರಖಾಸ್ತುಗಳು ತಿರಸ್ಕರಿಸಲ್ಪಟ್ಟಿರುತ್ತವೋ ಅಂತಾ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್‌ಗಳು, ಅವರು ಖಾಯಿಷ್ ಮಾಡಿದಾಗ ಅವರಿಗೆ ವಾಪಸ್ ಮಾಡಲ್ಪಡುವದು. ಚಡದರಖಾಸ್ತನ್ನಾಗಲೀ, ಯಾವ ದರಖಾಸ್ತನ್ನಾಗಲೀ ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದೀವಾನರವರು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ.

5. ಯಾರ ದರಖಾಸ್ತು ಮಂಜೂರ್ಮಾಡಲ್ಪಡುತ್ತೋ ಅವನಿಗೆ ದೀವಾನರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ ಯಂಟು ದಿನಗಳೊಳಗಾಗಲಿ, 3ನೇ ಕಲಂ ಅನುಸರಿಸಿ ಮೊದಲು ಡಿಪಾಜಿಟ್ ಯಿಟ್ಟಿರುವ ಮೊಬಲಗ್ ದೇಖೀಲ್ ದರಖಾಸ್ತು ಮಾಡಲ್ಪಟ್ಟ ಸಾಲೀಯಾನಾ

ಇಜಾರೇ ಮೊಬಲಗ್ ಪೈಕೀ ಹಾಗಪಾಲಿಗೆ ಸಮನಾಗಿರುವ ಒಂದು ಮೊಬಲಗನ್ನು ನಗದಾಗಿಯಾಗಲೀ ಕ್ರಮ ಪ್ರಕಾರ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲೀ, ಡೆಪ್ಯುಟಿ ಕಮ್ಮಿಷನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತ್ತುಗಳಿಗೆ ಬದ್ಧರಾಗಿ ಮಾಮೂಲ್ ಸಮೂನೆಯಲ್ಲಿ ಸರಿಯಾದ ಛಾಪಾಕಾಗದದ ಮೇಲೆ, ಒಂದು ಕರಾರ್ ಬರದುಕೊಡತಕ್ಕದ್ದು; ಆತನು ಕರಾರಿಗೆ ರುಜುಮಾಡುವದಕ್ಕಾಗಲಿ, ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲೀ, ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವವೆ ಇಡಲ್ಪಟ್ಟ ಡಿಪಾಜಿಟುಗಳು, ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು ಇಜಾರೆಯು ಅನ್ಯಥಾ ವಿಲಾ ಮಾಡಲ್ಪಡುವದು.

ಷ ರ ತ್ತು ಗ ಳು .

1. ಸಾಲೀಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಒಂದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್ ಸೆಸ್ ದೇಖೀಲ್ ಅಂತಾ ಇಜಾರೇ ಮೊಬಲಗನ್ನು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದಕ್ಕೆ ಮುಂದಾಗಿಯಾಗಲಿ, ಡಿಸ್ಟ್ರಿಕ್ಟು ಖಜಾನೆಯಲ್ಲಿ ಮಾಹೆಯಾನಾ ಸಮನಾದ ಖಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು, ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕಿಗಳಿಗೂ, ಸೇಕಡಾ ಸಾಲೀಯಾನಾ 6ರ ಪ್ರಕಾರ ಬಡ್ಡೀ ಕೊಡತಕ್ಕದ್ದು: ಅಂತಾ ಬಾಕೀ ಮೊಬಲಗುಗಳು ಪಾವತೀಯಾಗತಕ್ಕ ತಿಂಗಳು ಕಳೆದ ಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜಮೀನ್ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಇರುವ ರೂಲ್ಸಿನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೇದಾರನ ಸ್ವತ್ತು ಜಫ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು. ಮತ್ತು ಇಜಾರೇ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನೀ ಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಖೀಲ್ ತಮಾಂ ಬಾಕಿಗಳನ್ನೂ ಹಾಗೆ ಇಜಾರೇ ಪುನಃ ಹರಾಜ್ ಹಾಕುವದರಿಂದಾಗಲಿ, ವಿಲಾ ಮಾಡುವದರಿಂದಾಗಲಿ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ, ಜಾಮೀನಿ ಮೊಬಲಗ್ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಗೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದೀವಾನರವರ ಮಂಜೂರಾತೀನಿಸೇ ಡೆಪ್ಯುಟಿ ಕಮ್ಮಿಷನರವರಿಗೆ ಯಖ್ತ್ಯಾರೀ ಯಿರತಕ್ಕದ್ದು.

2. ಚಿಲ್ಲರೇ ಫುರೋಖ್ತುದಾರ್ರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸಗಳು, ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ, ಕಂಠೋಕ್ತವಾದ ಮಂಜೂರಾತಿ ಇಲ್ಲದೆ, ಇಜಾರೇದಾರನು ಹಾಲೀ ಶೇಂದೀ ಫುರೋಖ್ತು ಬಗ್ಗೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖ್ಯೆಯ ವಿಷಯದಲ್ಲಾಗಲಿ, ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬ್‌ಗಳ ಮೇಲೆ ಯಾವ ಅಂಗಡಿಗಳನ್ನಾದರೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷನರು ಅರ್ಹರಾಗಿರುತ್ತಾರೆ.

3. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ, ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

4. ಇಜಾರೇದಾರನು, ದೀವಾನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಬದ್ಧನಾಗಿ ನಡದುಕೊಳ್ಳತಕ್ಕದ್ದು.

5. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರಿಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗೈರೆಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರ ಹಕ್ಕುದಾರೀಗಳಲ್ಲಿ, ಗುತ್ತಿಗೆದಾರನು ಎಷ್ಟು ಮಟ್ಟಿಗೂ ಪ್ರವೇಶಿಸಕೂಡದು. ಅಂತಾ ಹಕ್ಕುಗಳ ವಿಷಯದಲ್ಲಿ ಉಂಟಾಗುವ ತಕರಾರ್‌ಗಳನ್ನು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರು ಫೈಸಲ್ ಮಾಡತಕ್ಕದ್ದು. ಅಂತಾ ಫೈಸಲಿಗೆ ಗುತ್ತಿಗೇದಾರನು ಬದ್ಧನಾಗಿರತಕ್ಕದ್ದು. ಪರಂತು, ಸದರೀ ಫೈಸಲ್ ಅಪ್ಪೀಲಿನಲ್ಲಿ ದೀವಾನರವರಿಂದ ಕಾಯಂಮಾಡಲ್ಪಡಲಿಕ್ಕಾಗಲಿ ಅನ್ಯಥಾ ಆಗಲಿ ಗುರಿಯಾಗತಕ್ಕದ್ದು.

6. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಶೇಂದಿ ಅಂಗಡಿಗಳ್ಯಾವವೂ ತೆಗಿಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡೆಪ್ಯುಟಿ ಕಮ್ಮಿಷನರಿಂದ ವಿಶೇಷ ಸಂದರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

7. ಯೂರೋಪಿಯನ್ ಸೋಲ್ಜರುಗಳ ಒಂದು ರಿಜಿಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯಃ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದಿ ಫುರೋಖ್ತು ಬಗ್ಗೆ ಇರುವ ತಮಾಂ

ಅಂಗಡಿಗಳೂ ಮುಚ್ಚಲ್ಪಡತಕ್ಕವು. ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟು ಮಾಡಲ್ಪಟ್ಟಿತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು, ಅಂಥಾ ಫೌಜಿನವರು ತಮ್ಮ ಕಡೇ ಆಬ್ಕಾರೀ ಕಂಟ್ರಾಕ್ಟರನ್ನ ಇಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿ ಇರತಕ್ಕದ್ದು.

8. ಇಜಾರೇದಾರನು ಸರಕಾರದ ಬಂಜರ್ ಜಮೀನಲ್ಲಿ ಇರುವ ಈಚಲು ಮರಗಳನ್ನು, ಇಜಾರೇಗಳ ಸ್ಥಳ ಸರಹದ್ದಿನೊಳಗೆ ಪುರೋಖ್ತು ಬಗ್ಯಾಗಲಿ ಬೆಲ್ಲ ತಯಾರ್ಮಾಡುವ ಬಗ್ಯಾಗಲಿ ಶೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿಕೊಳ್ಳಬಹುದು, ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಐಯಿಂದಾ ಅನುಭವಿಸಲ್ಪಡತಕ್ಕ ಜಮೀನುಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕಿರುವದಿಲ್ಲ, ಮತ್ತು ಗವರ್ನಮೆಂಟಿನವರು ಯಾವಾಗಲಾದರೂ, ಇತರ ಕೆಲಸಗಳಿಗೋಸ್ಕರವಾಗಲಿ, ಇತರ ಡಿಸ್ಟ್ರಿಕ್ಟುಗಳಿಗೆ ಶೇಂದೀ ವದಗಿಸುವದಕ್ಕೋಸ್ಕರವಾಗಲಿ ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ, ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ. ಡೆಪ್ಯುಟಿ ಕಮ್ಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ ವ ಷರತುಗಳ ಪ್ರಕಾರವೂ ಮಾತ್ರವೇ ಬೆಲ್ಲ ತಯಾರ್ಮಾಡಲ್ಪಡತಕ್ಕದ್ದು.

9. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಶೇಂದೀ ವಿನಾ ಇತರ ತರಹೇಯು ಷರಾಬ್ ಯಾ ಸ್ಪಿರಿಟ್ ವಿಷಯದಲ್ಲಾಗಲಿ, ಗವರ್ನಮೆಂಟಿನವರು ಮಾಡತಕ್ಕ ಯಾವ ಯೇರ್ಪಾಡುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ನೋಡಿಗೆ ಬಾಧ್ಯತೆ ಉಳ್ಳವನಾಗಿರುವದಿಲ್ಲ. ಡಿಸ್ಟ್ರಿಕ್ಟು ಪೈಕೀ ಯಾವ ಭಾಗದಲ್ಲಾಗಲಿ, ಸರ್ಕಾರೀ ಕಾರಣಗಳಮೇಲೆ ಇಜಾರೆಯನ್ನು ಮವುಕೂಫ಼ ಮಾಡಿ ಆ ಬಗ್ಯೆ ನ್ಯಾಯವಾದ ಈಡು ವೊಬಲಗು ಕೊಡತಕ್ಕ ಅಧಿಕಾರವನ್ನು ದೀವಾನರವರು, ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

10. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯೂರೇಜಿಯನ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದ ಮೇಲಿರುವಲ್ಲಿ ಒಬ್ಬ ಶಿಪಾಯಿಗಾಗಲಿ, ಪೊಲೀಸಿನವರಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರಕಿಲಾಫಾಗಲಿ ನಡೆದಲ್ಲಿ ಅದರಿಂದ ಗುತ್ತಿಗೇದಾರ ಯಾ ಪುರೋಖ್ತುದಾರ, ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಪುರೋಖ್ತುದಾರನ ಲೈಸೆನ್ಸು ರದ್ದಾಗಲಿಕ್ಕೂ, ಗುರಿಯಾಗುತ್ತೆ.

11. ಗುತ್ತಿಗೇದಾರನು, ತನ್ನ ನೌಕರರು ಯಾ ಮುತಾಲೀಕರು, ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಒಂದು ಗಜದ ಎತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಯಳೇ ಈಚಲು ಮರಗಳಿಂದ ಶೇಂದೀ ಇಳಿಸದೇಯೂ, ಮತ್ತು ಶೇಂದಿ ಇಳಿಸುವದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ಉಪಯೋಗಿಸದೆಯೂ, ಇರುವ ಬಗ್ಯೆ ಜವಾಬ್ದಾರನಾಗಿರತಕ್ಕದ್ದು. ಈ ನಿಬಂಧನೆಗಳಿಗೆ ಏನಾದರೂ ಬರಕಿಲಾಫ಼ ನಡದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ 100 ರೂಪಾಯಿಗಳ ಜುರ್ಮಾನೆಗೂ ಇಜಾರೇದಾರನು ಗುರಿಯಾಗತಕ್ಕದ್ದು.

12. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ, ಮಾರಲ್ಪಡತಕ್ಕದ್ದು.

ಶೇರು ವಂದಕ್ಕೆ ಕ್ರಯ.

	ಜಾಸ್ತಿ.			ಕಮ್ಮಿ.		
ತಾಲ್ಲೂಕು ಕಸಬೆಗಳಲ್ಲಿ	0	1	0	0	0	6
ಗಾವ್ಗಾನೆಗಳಲ್ಲಿ	0	0	6	0	0	4

6 ಶೇಂದಿ ಸಾಗಿಸುವಬಗ್ಯೆ ಉಪಯೋಗಿಸಲ್ಪಡುವ ಭಂಡಿಗಳಿಗಾಗಿ, ವಿಧಿಸಲ್ಪಟ್ಟ ಮೊಹತರಫಾ ಭಂಡೀ ಕಂದಾಯವನ್ನು ಪಾವತೀ ಮಾಡಬೇಕಾಗಿರುತ್ತೆ.

7. ಹಿಂದಿನ ಹುಟ್ಟುವಳಿಯನ್ನೂ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಯನ್ನೂ, ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲ ಕೇಳಿ ತಿಳಿದುಕೊಳ್ಳಬಹುದು.

ತಾರೀಖು 9ನೇ ಫೆಬ್ರುವರೀ 1884.

ನಂ. 317.—ಹಾಸನ ಸಬ್ ಡಿವಿಜನ್‌ಗೆ ಸೇರಿದ 4 ತಾಲ್ಲೂಕುಗಳು ದೇಖೀಲ್ ಕಡೂರು ಡಿಸ್ಟ್ರಿಕ್ಟಿನಲ್ಲಿ 1884ನೇ ಇಸವಿ 1ನೇ ಏಪ್ರೆಲ್ ಲಾಗಾಯತು 1887ನೇ ಇಸವಿ ಮಾರ್ಚಿ 31ನೇ ತಾರೀಖು ವರುವಿಗೆ ಆಗುವ 3 ಸಂವತ್ಸರಗಳ ಕಾಲ ಪರಿಯಂತ್ರ ಕೇಂದಿ ಬಿಕರೀ ಮಾಡುವ ವಟ್ಟು ಸ್ವಾತಂತ್ರ್ಯದ ಯಾ ಇಜಾರೇಯು, ತಾಲ್ಲೂಕುವಾರಾಗಲಿ ಅನೇಕ ತಾಲ್ಲೂಕುಗಳ ಸೇರಿಕೆಯಾಗಿ ಯಾಗಲಿ ಇದರಮುಂದೆ ತಿಳಿಸಲ್ಪಟ್ಟ ಷರತಗಳಿಗೆ ವಳಪಟ್ಟು, 1884ನೇ ಇಸವಿ ಮಾರ್ಚಿ 3ನೇ ಮುರ್ಕ್ಕಂ ಮಧ್ಯಾನ್ಹ 12 ಘಂಟೆಗೆ ಚಿಕ್ಕಮಗಳೂರು ಮೊಕ್ಕಾಂನಲ್ಲಿ ಕಡೂರು ಡೆಪ್ಯುಟಿ ಕಮಿಷನರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ಇಜಾರೇಯು ಮೇಲ್ಕಂಡ 3 ವರುಷಗಳ ಕಾಲದಲ್ಲಿ ಮಲ್‌ನಾಡು ತಾಲ್ಲೂಕುಗಳಲ್ಲಿ ಬಗನಿ ಕೇಂದಿಯನ್ನು ಪುರೋಖ್ತು ಮಾಡುವ ಸ್ವಾತಂತ್ರ್ಯವನ್ನು ಅಡಿಗಿಸಿಕೊಂಡಿರುವದಿಲ್ಲ; ಸದರೀ ಬಗನಿ ಕೇಂದಿ ಪುರೋಖ್ತು ಮಾಡುವ ಸ್ವಾತಂತ್ರ್ಯವು ಗ್ರಾಮವಾರಾಗಲಿ ಅನೇಕ ಗ್ರಾಮಗಳು ಸೇರಿಯಾಗಿ ಯಾಗಲಿ ಅಲಾಹಿದ ಇಜಾರೆಗೆ ಕೊಡಲ್ಪಡುವದು. ಕಡೂರು ಡಿಸ್ಟ್ರಿಕ್ಟಿಗೂ ಹಾಸನದ ಸಬ್ ಡಿವಿಜನ್ನಿಗೂ ಸುದಾ ದೀವಾನರವರ 1882ನೇ ಇಸವಿ 21ನೇ ನವಂಬರ 131ನೆ ನಂಬರ್, ಅದೇ ಇಸವಿ 25ನೇ ನವಂಬರ 138ನೇ ನಂಬರ್, ಅದೇ ಇಸವಿ ಡಿಸಂಬರ 7ನೇ ಮುರ್ಕ್ಕಂ 146ನೇ ನಂಬರ್, 1883ನೇ ಇಸವಿ 4ನೇ ಜನವರೀ ಮುರ್ಕ್ಕಂ 2–3ನೇ ನಂಬರ್, ಅದೇ ಇಸವಿ ನವಂಬರ 16ನೇ ಮುರ್ಕ್ಕಂ 274ನೇ ನಂಬರ್, ಮತ್ತು ಅದೇ ಇಸವಿ ಡಿಸಂಬರ 14ನೇ ಮುರ್ಕ್ಕಂ 288ನೇ ನಂಬರ್ ಈ ನಂಬರ್‌ಗಳ ಇಸ್ತಿಹಾರ್ ನಾಮೆಗಳಿಂದ ಪರಿಷ್ಕರಿಸಲ್ಪಟ್ಟ ಪ್ರಕಾರ ಇದರಡಿ ಕಂಡ ತಾಲ್ಲೂಕುಗಳು ಸೇರಿರುತ್ತವೆ.

1 ಚಿಕ್ಕಮಗಳೂರು	4 ತರೀಕೆರೆ	6 ಹಾಸನ	ಹಾಸನ ಸಬ್ ಡಿವಿಜನ್
2 ಕಡೂರು	5 ಕೊಪ್ಪ, ಯಡೇಹಳ್ಳಿ ಡೆ|| ಅಮಲ್‌ದಾರ್ರ ಚಾರ್ಜ ದೇಖೀಲ್	7 ಮಂಜಿರಾಬಾದ	
3 ಮೂಡಿಗೆರೆ		8 ಬೇಲೂರು	
		9 ಅರಸೀಕೆರೆ	

2. ಪ್ರತಿ ಸಂದರ್ಭದೊಳಗೂ ಇಜಾರೆಯು, ಸಾಲಿಯಾನಾ ಹುಟ್ಟುವಳಿ ಮೇಲೆ ಗೊತ್ತಾಗುವ ಸರಕಾರದ ಸವಾಲಿಗೆ ಮೇಲ್ಪಟ್ಟು ಬರತಕ್ಕ ಚಡ ದರಖಾಸ್ತುದಾರಗೆ ಹರಾಜು ಮೂಲಕ ದೀವಾನರವರ ಮಂಜೂರಾತಿಗೆ ವಳಪಟ್ಟು ವಿಕ್ರಯಿಸಲ್ಪಡುವದು, ಸದರೀ ಸಾಲಿಯಾನಾ ಹುಟ್ಟುವಳಿ ಸಂಗತಿ ಹರಾಜು ಕಾಲದಲ್ಲಿ ಫಾಯಿಷ್ ಮಾಡಲ್ಪಡುತ್ತೆ. ಚಡ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದೀವಾನರವರು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ.

3. ದರಖಾಸ್ತು ಮಾಡತಕ್ಕವರು, ಖುದ್ದಾಗಿಯಾಗಲಿ ಕ್ರಮಪ್ರಕಾರ ಮೊಕರರ್ ಮಾಡಲ್ಪಟ್ಟ ಮುತಾಲೀಕರ ಮೂಲಕವಾಗಿಯಾಗಲಿ ಹಾಜರಾಗತಕ್ಕದ್ದು. ಸಾಲಿಯಾನಾ ಹುಟ್ಟುವಳಿ ಮೇಲೆ ಗೊತ್ತಾದ ಸರಕಾರದ ಸವಾಲಿನ ಮೊಬಗಿನ ಮೇಲೆ ಶೇಕಡಾ 5ರ ಪ್ರಕಾರ ಆಗುವ ಮೊಬಲಗು ಡಿಪಾಜಿಟ್ ಯಿಡಲ್ಪಡುವ ತನಕ ಯಾವ ಮನುಷ್ಯನೂ ದರಖಾಸ್ತು ಮಾಡತಕ್ಕದ್ದಲ್ಲ. ತಿರಸ್ಕರಿಸಲ್ಪಟ್ಟ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್ ಮೊಬಲಗು ಹರಾಜ್ ಅಖೈರ್ ಕಾಲದಲ್ಲಿ ಅವರಿಗೆ ವಾಪಸ್ ವಾವತೀ ಮಾಡಲ್ಪಡುವದು.

4. ಯಾವ ಚಡದರಖಾಸ್ತುದಾರನ ದರಖಾಸ್ತು ದೀವಾನರವರ ಮಂಜೂರಾತಿ ಬಗ್ಯೆ ಚುನಾಯಿಸಿಕೊಳ್ಳಲ್ಪಡುತ್ತೊ ಅಂಥಾ ಚಡ ದರಖಾಸ್ತುದಾರನು ಮೊದಲೇ ಡಿಪಾಜಿಟ್ ಇಟ್ಟಿರುವ ಮೊಬಲಗು ದೇಖೀಲ್, ದರಖಾಸ್ತು ಮಾಡಲ್ಪಟ್ಟ ಸಾಲಿಯಾನಾ ಇಜಾರೆ ಮೊಬಲಗು ಪೈಕಿ ಹನ್ನೆರಡರಲ್ಲಿ ಒಂದುಭಾಗಕ್ಕೆ ಸಮನಾದ ಮೊಬಲಗನ್ನು ಕೂಡ್ಲೆ ಠೇವಣಿ ಇಡತಕ್ಕದ್ದು. ಆತನು ದೀವಾನರವರ ತೀರ್ಮಾನ ತಿಳಸಲ್ಪಟ್ಟ ತರುವಾಯ ಎಂಟು ದಿನಗಳೊಳಗಾಗಿ ಪೂರ್ವ ಡಿಪಾಜಿಟ್ ಇಟ್ಟಿರುವ ಮೊಬಲಗುಗಳು ದೇಖೀಲ್, ದರಖಾಸ್ತು ಮಾಡಲ್ಪಟ್ಟ ಸಾಲಿಯಾನಾ ಇಜಾರೇ ಮೊಬಲಗು ಪೈಕೀ ಹಾಗವಾಲಿಗೆ ಸಮನವಾಗಿರುವ ಒಂದು ಮೊಬಲಗನ್ನು ಇಜಾರೇ ಷರತ್ತುಗಳಂತೆ ಕ್ರಮಪ್ರಕಾರ ನಡದುಕೊಳ್ಳುವ ಬಗ್ಯೆ ಜಾಮಿನಿ ತರೀಕ್ ನಗದಾಗಿಯಾಗಲಿ ಕ್ರಮಪ್ರಕಾರ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ, ಡೆಪ್ಯುಟಿ ಕಮಿಷ್ನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಅಥವಾ ದರಖಾಸ್ತುದಾರನು ಮೇಲೆ ಹೇಳಿದ ಜಾಮಿನಿ ಪೈಕೀ ಅರ್ಧಭಾಗವನ್ನ ನಗದಾಗಿಯಾಗಲಿ ಗವರ್ನಮೆಂಟ್ ಪ್ರತ್ರಗಳ ಮೂಲಕವಾಗಿಯಾಗಲಿ ಹಾಜರ್ಮಾಡಿ ಬಾಕಿ ಅರ್ಧವನ್ನ ಸದರೀ ಮೊಬಲಗ್ಯೆ ಯೆರಡರಷ್ಟು ಕ್ರಯಬಾಳುವ ಮತ್ತು ಯಾವ ಬಾಧ್ಯತೆ ವ ದೇಣೆಗಳು ಇಲ್ಲದ ಸ್ಥಾವರ ಸ್ವತ್ತಿನ ಮೂಲಕವಾಗಿಯಾಗಲಿ ಹಾಜರ್ಮಾಡತಕ್ಕದ್ದು. ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತಗಳಿಗೆ ಬದ್ಧನಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾಕಾಗದದ ಮೇಲೆ, ಒಂದು ಕರಾರ ಬರದುಕೊಡತಕ್ಕದ್ದು.

5. ಆತನು ಕರಾರಿಗೆ ರುಜುಮಾಡುವದಕ್ಕಾಗಲಿ, ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲಿ ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವವೇ ಇಡಲ್ಪಟ್ಟ ಡಿಪಾಜಿಟ್‌ಗಳು, ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು, ಇಜಾರೆಯು ಪುನಹ ಹರಾಜು ಮಾಡಲ್ಪಡುವದು ಯಾ ಅನ್ಯಥಾ ವಿಲಾಮಾಡಲ್ಪಡುವದು. ಹಾಗೆ ಪುನಹಾ ಹರಾಜು ಮಾಡುವದರಿಂದ ಯಾ ವಿಲಾಮಾಡುವದರಿಂದ ವುಂಟಾಗುವ ನಷ್ಟಕ್ಕೆ ಅವನನ್ನು ಗುರಿಮಾಡಿ, ಜಮೀನು ಕಂದಾಯದ ಬಾಕೀ ವಸೂಲಿ ಬಗ್ಯೆ ಜಾರಿಯಿರುವ ರೂಲ್ಸ್ ಅನುಸರಿಸಿ ಜಪ್ತಿ ಹರಾಜಿನಿಂದ ವಸೂಲ್ಮಾಡಲ್ಪಡುವದು.

ಷರತ್ತುಗಳು.

1. ಸಾಲೀಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಬಂದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್ ಸೆಸ್ ದೇಖೀಲ್ ಅಂತಾ ಇಜಾರೇ ಮೊಬಲಗು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದಕ್ಕೆ ಮುಂದಾಗಿಯಾಗಲಿ, ಡಿಸ್ಟ್ರಿಕ್ಟು ಖಜಾನೆಯಲ್ಲಿ ಮಾಹೇಯಾನಾ ಸಮನಾದ ಖಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು. ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕಿಗಳಿಗೂ, ಸೇಕಡಾ ಸಾಲೀಯಾನಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕೊಡತಕ್ಕದ್ದು. ಅಂತಾ ಬಾಕೀ ಮೊಬಲಗ್‌ಗಳು ಪಾವತಿಯಾಗತಕ್ಕ ತಿಂಗಳು ಕಳೆದ ಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜಮೀನ್ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಇರುವ ರೂಲ್ಸ್‌ನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೇದಾರನ ಸ್ವತ್ತು ಜಪ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು. ಮತ್ತು ಇಜಾರೇ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನೀ ಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಖೀಲ್ ತಮಾಂ ಬಾಕಿಗಳನ್ನೂ, ಹಾಗೆ ಇಜಾರೇ ಪುನಶ್ಚ ಹರಾಜ್ ಹಾಕುವದರಿಂದಾಗಲಿ, ವಿಲಾ ಮಾಡುವದರಿಂದಾಗಲಿ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ ಜಾಮೀನಿ ಮೊಬಲಗ್ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದೀವಾನರವರ ಮಂಜೂರಾತೀನಿಶೀ ಡೆಪ್ಯುಟಿ ಕಮಿಷನರವರಿಗೆ ಯಿಖ್ತ್ಯಾರಿಯಿರತಕ್ಕದ್ದು.

2. ಚಿಲ್ಲರೇ ಫುರೋಖ್ತುದಾರರಿಗೆ ಡೆಪ್ಯುಟಿ ಕಮಿಷನರವರಿಂದ ಮಾಮೂಲ್ ಲೈಸೆನ್ಸ್‌ಗಳು ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮಿಷನರವರ ಕಂಠೋಕ್ತವಾದ ಮಂಜೂರಾತಿ ಇಲ್ಲದೆ, ಇಜಾರೇದಾರನು ಹಾಲೀ ಶೇಂದೀ ಫುರೋಖ್ತು ಬಗ್ಯೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖೆಯ ವಿಷಯದಲ್ಲಾಗಲಿ, ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಆವಶ್ಯಕತೆಯ ಸಬಬ್‌ಗಳ ಮೇಲೆ ಯಾವ ಅಂಗಡಿಗಳನ್ನಾದರೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮಿಷನರು ಅರ್ಹರಾಗಿರುತ್ತಾರೆ.

3. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ ಧಾನ್ಯವನ್ನಾಗಲಿ, ಸರುಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

4. ಇಜಾರೇದಾರನು, ದೀವಾನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ; ಬದ್ಧನಾಗಿ ನಡದುಕೊಳ್ಳತಕ್ಕದ್ದು.

5. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರೀಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗೈರೇಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರ ಹಕುದಾರೀಗಳಲ್ಲಿ, ಗುತ್ತಿಗೇದಾರನು ಎಷ್ಟುಮಟ್ಟಿಗೂ ಪ್ರವೇಶಿಸಕೂಡದು. ಅಂತಾ ಹಕ್ಕುಗಳ ವಿಷಯದಲ್ಲಿ ಉಂಟಾಗುವ ತಕರಾರ್‌ಗಳನ್ನು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರು ಫೈಸಲ್ ಮಾಡತಕ್ಕದ್ದು. ಅಂಥಾ ಫೈಸಲಿಗೆ ಗುತ್ತಿಗೇದಾರನು ಬದ್ಧನಾಗಿರತಕ್ಕದ್ದು. ಪರಂತು, ಸದರೀ ಫೈಸಲ್ ಅಪ್ಪೀಲಿನಲ್ಲಿ ದೀವಾನರವರಿಂದ ಕಾಯಂ ಮಾಡಲ್ಪಡಲಿಕ್ಕಾಗಲಿ ಅನ್ಯಥಾ ಆಗಲಿ ಗುರಿಯಾಗತಕ್ಕದ್ದು.

6. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಶೇಂದಿ ಅಂಗಡಿಗಳ್ಯಾವವೂ ತೆಗಿಯಲ್ಪಡಕೂಡದು, ಮತ್ತು ತಮಾಂಅಂಗಡಿಗಳೂ, ಡೆಪ್ಯುಟಿ ಕಮಿಷನರಿಂದ ವಿಶೇಷ ಸಂಧರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

7. ಯೂರೋಪಿಯನ್ ಸೋಲ್ಜರುಗಳ ಮಂದು ರಿಜಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯಃ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದಿ ಫುರೋಖ್ತು ಬಗ್ಯೆ ಯಿರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು, ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟುಮಾಡಲ್ಪಟ್ಟಿತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು, ಅಂಥಾ ಫೌಜಿನವರು ತಮ್ಮ ಕಡೇ ಅಬ್ಕಾರೀ ಕಂಟ್ರಾಕ್ಟರನ್ನ ಯಿಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿರತಕ್ಕದ್ದು.

8. ಇಜಾರೇದಾರನು ಡಿಸ್ಟ್ರಿಕ್ಟಿನ ಮತ್ತು ಸಬ್ ಡಿವೀಜನ್ನಿನ ಸರಕಾರದ ಬಂಜರ್ ಜಮೀನ್‌ನಲ್ಲಿ ಇರುವ ಈಚಲು ಮರಗಳನ್ನು, ಇಜಾರೆಗಳ ಸ್ಥಳ ಸರಹದ್ದಿನೊಳಗೆ ಫುರೋಖ್ತು ಬಗ್ಯಾಗಲಿ ಪಲ್ಲ ತಯಾರ್ ಮಾಡುವ ಬಗ್ಯಾಗಲಿ ಶೇಂದೀ ಇಳಿಸುವದಕ್ಕೂ

ಸ್ಕರ ಉಪಯೋಗಿಸಿಕೊಳ್ಳಬಹುದು. ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಖಯಿಂದ ಅನುಭವಿಸಲ್ಪಡತಕ್ಕ ಜಮೀನುಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕಿರುವದಿಲ್ಲ, ಮತ್ತು ಗವರ್ನಮೆಂಟಿನವರು ಯಾವಾಗಲಾದರೂ, ಇತರ ಕೆಲಸಗಳಿಗೋಸ್ಕರವಾಗಲಿ ಇತರ ಡಿಸ್ಟ್ರಿಕ್ಟುಗಳಿಗೆ ಶೇಂದೀ ಸ್ಪದಗಿಸುವದಕ್ಕೋಸ್ಕರ ವಾಗಲಿ, ಉಳಿಸಿಕ್ಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ, ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ, ಡೆಪ್ಯುಟಿ ಕಮ್ಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ, ಷರತ್‌ಗಳಪ್ರಕಾರವೂ ಮಾತ್ರವೇ ಹೆಲ್ಲ ತಯಾರ್ಮಾಡಲ್ಪಡತಕ್ಕದ್ದು.

9. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಶೇಂದಿ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟ್‌ಗಳ ವಿಷಯದಲ್ಲಾಗಲಿ, ಗವರ್ನಮೆಂಟಿನವರು ಮಾಡತಕ್ಕ ಯಾವ ಯೇರ್ಪಾಡುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ಸೋಡೀಗೆ ಬಾಧ್ಯತೆವುಳ್ಳವನಾಗಿರುವದಿಲ್ಲ. ಡಿಸ್ಟ್ರಿಕ್ಟು ಪೈಕೀ ಯಾವ ಭಾಗದಲ್ಲಾಗಲಿ ಅಥವಾ ಸಬ್‌ಡಿವಿಜನ್ನಿನ ಯಾವ ಭಾಗದಲ್ಲಾಗಲಿ ಸರ್ಕಾರೀ ಕಾರಣಗಳ ಮೇಲೆ ಇಜಾರೆಯನ್ನು ಮೌಕೂಫ್‌ಮಾಡಿ ಆ ಬಗ್ಯೆ ನ್ಯಾಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದೀವಾನರವರು ತಮ್ಮಲ್ಲಿಯೇ ವುಳಿಸಿಕೊಂಡಿರುತ್ತಾರೆ.

10. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯೂರೇಶಿಯನ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದ ಮೇಲಿರುವಲ್ಲಿ ಬಬ್ಬ ಸಿಪಾಯಿಗಾಗಲಿ, ಪೊಲೀಸಿನವರಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರಕಿಲಾಫಾಗಲಿ ನಡೆದಲ್ಲಿ ಅದರಿಂದ ಗುತ್ತಿಗೇದಾರ ಯಾ ಪುರೋಖ್ತುದಾರ, ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಪುರೋಖ್ತುದಾರನ ಲೈಸೆನ್ಸು ರದ್ದಾಗಲಿಕ್ಕೆ ಗುರಿಯಾಗುತ್ತೆ.

11. ಗುತ್ತಿಗೇದಾರನು ತನ್ನ ನೌಕರರು ಯಾ ಮುತಾಲೀಕರು ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಬಂದು ಗಜದ ಯತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಯಳೇ ಈಚಲು ಮರಗಳಿಂದ ಶೇಂದೀ ಇಳಿಸದೇಯೂ, ಮತ್ತು ಶೇಂದಿ ಇಳಿಸುವದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ವುಪಯೋಗಿಸದೆಯೂ, ಇರುವ ಬಗ್ಯೆ ಜವಾಬ್‌ದಾರನಾಗಿರತಕ್ಕದ್ದು. ಈ ನಿಬಂಧನೆಗಳಿಗೆ ಯೇನಾದರೂ ಬರಕಿಲಾಫ್ ನಡದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ 100 ರೂಪಾಯಿಗಳ ಜುರ್ಮಾನೆಗೂ ಗುತ್ತಿಗೇದಾರ ಗುರಿಯಾಗತಕ್ಕದ್ದು.

12. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ ಮಾರಲ್ಪಡತಕ್ಕದ್ದು.

ಸೇರು ಬಂದಕ್ಕೆ ಕ್ರಯ.

	ಜಾಸ್ತಿ.			ಕಮ್ಮಿ.		
	ರೂ.	ಆ.	ಪೈ.	ರೂ.	ಆ.	ಪೈ.
ತಾಲ್ಲೂಕು ಕಸಬೆಗಳಲ್ಲಿ	0	1	4	0	0	6
ಗ್ರಾಮಾನೆಗಳಲ್ಲಿ	0	1	0	0	0	6

6. ಶೇಂದಿ ರವಾನೆಬಗ್ಯೆ ಉಪಯೋಗಿಸಲ್ಪಡುವ ಭಂಡಿಗಳು, ಅವುಗಳಿಗಾಗಿ ವಿಧಿಸಲ್ಪಟ್ಟ ಮೊಹತರ್ಫಾ ಭಂಡೀ ಕಂದಾಯದ ವಸೂಲಿಯಿಂದ ವಿನಾಯಿಸಲ್ಪಟ್ಟಿರುವದಿಲ್ಲಾ.

7. ಹಿಂದಿನ ಹುಟ್ಟುವಳಿಯನ್ನೂ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಗಳನ್ನೂ, ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

ತಾ|| 9ನೇ ಫೆಬ್ರುವರಿ 1884.

ನಂ. 318.—ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಮೂರು ವರುಷಗಳ ಕಾಲ ಅಂದರೆ, ಸರ್ 1884ನೇ ಏಪ್ರೇಲ್ 1ನೇ ಮುಕ್ಕಾಂ ಲಾಗಾಯತ್ 1887ನೇ ಮಾರ್ಚಿ 31ರ ಮಿನಹು ಶೇಂದೀ ಇಜಾರೇಯಾಗಲಿ, ಶೇಂದೀ ಪುರೋಖ್ತು ಮಾಡುವ ಸ್ವತಂತ್ರವಾದ ಬಾಧ್ಯತೆಯಾಗಲಿ, ಶಿವಮೊಗ್ಗಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರಿಂದ ಅವರ ಆಫೀಸ್‌ನಲ್ಲಿ, ಸರ್ 1884ನೇ ಮಾರ್ಚಿ 7ನೇ ಮುಕ್ಕಾಂ ಮಧ್ಯಾಹ್ನ 12 ಘಂಟೆಗೆ, ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತ್‌ಗಳಿಗೆ ಬಳಪಟ್ಟು, ತಾಲ್ಲೂಕುವಾರಾಗಿಯಾಗಲಿ, ತಾಲ್ಲೂಕುಗಳ ಸಮುದಾಯ ಪ್ರಕಾರವಾಗಲಿ,

ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು; ಮಲ್‌ನಾಡ್ ತಾಲ್ಲೂಕುಗಳಲ್ಲಿ ಬಗನಿ ಕೇಂದಿಯನ್ನು ಪುರೋಖ್ತು ಮಾಡುವ ಹಕು ದಾರಿಯು ಗ್ರಾಮವಾರಾಗಿಯಾಗಲಿ ಯಾ ಗ್ರಾಮಗಳ ಸಮುದಾಯ ಪ್ರಕಾರವಾಗಲಿ ಅಲಾಹಿದಾ ಇಜಾರೆಗೆ ಕೊಡಲ್ಪಡುವದರಿಂದ, ಮೇಲ್ಕಂಡ ಇಜಾರೆಯು, ಸದರೀ ಮೂರು ವರ್ಷಗಳ ಕಾಲದಲ್ಲಿ ಸದರೀ ಬಗನಿ ಕೇಂದಿಯನ್ನು ಪುರೋಖ್ತು ಮಾಡುವ ಸ್ವಾತಂತ್ರವನ್ನು ಅಡಗಿಸಿ ಕ್ಕೊಂಡಿರುವದಿಲ್ಲಾ. ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ, ದೀವಾನರವರ 1882ನೇ ಇಸವಿ ನವಂಬರ 13ನೇ ಮುರ್ಕ್ಕಂ 129ನೇ ನಂಬರು, 1882ನೇ ಇಸವಿ ನವಂಬರ್ 21ನೇ ಮುರ್ಕ್ಕಂ 130—131ನೇ ನಂಬರು, ಅದೇ ಇಸವಿ ಡಿಶಂಬರ್ 7ನೇ ಮುರ್ಕ್ಕಂ 146ನೇ ನಂಬರು, ಈ ಇಸ್ತಿಹಾರ್‌ನಾಮೆಗಳಿಂದ ಪರಿಷ್ಕರಿಸಲ್ಪಟ್ಟ ಪ್ರಕಾರಾ ಇದರಡೀ ಕಂಡ ತಾಲ್ಲೂಕುಗಳು ಸೇರಿ ಇರುತ್ತವೆ.

1. ಶಿವಮೊಗ್ಗಾ, ಕುಂಶಿ ಡೆಪ್ಯುಟಿ ಅಮಲ್‌ದಾರ್ರ ಚಾರ್ಜು ದೇಖೀಲ್.
2. ತೀರ್ಥಹಳ್ಳಿ.
3. ಚನ್ನಗಿರಿ.
4. ಸಾಗರ.
5. ನಗರ.
6. ಸೊರಬ.
7. ಹೊನ್ನಾಳಿ.
8. ಷಿಕಾರಿಪುರ.
9. ದಾವಣಗೆರೆ.

2. ಪ್ರತೀ ಸಂದರ್ಭದೊಳಗೂ ಇಜಾರೆಯು, ಸಾಲಿಯಾನಾ ಹುಟ್ಟುವಳಿ ಮೇಲೆ ಗೊತ್ತಾಗುವ ಸರ್ಕಾರದ ಸವಾಲಿಗೆ ಮೇಲ್ಪಟ್ಟು ಬರತಕ್ಕ ಚಡದರಖಾಸ್ತುದಾರನಿಗೆ ಹರಾಜು ಮೂಲಕ ದೀವಾನರವರ ಮಂಜೂರಾತಿಗೆ ಒಳಪಟ್ಟು ವಿಕ್ರಯಿಸಲ್ಪಡುವದು; ಸದರೀ ಸಾಲೀಯಾನಾ ಹುಟ್ಟುವಳಿ ಸಂಗತಿ ಹರಾಜ್ ಕಾಲದಲ್ಲಿ ಫಾಯಿಷ್ ಮಾಡಲ್ಪಡುತ್ತೆ; ಚಡದರಖಾಸ್ತನ್ನಾಗಲಿ, ಯಾವ ದರಖಾಸ್ತನ್ನಾಗಲಿ ಯಾವಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದೀವಾನರವರು ತಮ್ಮಲ್ಲಿಯೇ ಉಳಿಸಿಕೊಳ್ಳುತ್ತಾರೆ.

3. ದರಖಾಸ್ತು ಮಾಡತಕ್ಕವರು, ಖುದ್ದಾಗಿಯಾಗಲಿ ಕ್ರಮಪ್ರಕಾರ ಮೊಕರರ್ ಮಾಡಲ್ಪಟ್ಟ ಮುತಾಲೀಕರ ಮೂಲಕವಾಗಿಯಾಗಲಿ ಹಾಜರಾಗತಕ್ಕದ್ದು; ಸಾಲಿಯಾನಾ ಹುಟ್ಟುವಳಿಮೇಲೆ ಗೊತ್ತಾದ ಸರ್ಕಾರ್ ಸವಾಲಿನ ಮೊಬಲಗಿನಮೇಲೆ ಸೇಕಡ 5ರ ಪ್ರಕಾರ ಆಗುವ ಮೊಬಲಗು ಡಿಪಾಜಿಟ್ ಯಿಡಲ್ಪಡುವತನಕ ಯಾವ ಮನುಷ್ಯನೂ ದರಖಾಸ್ತು ಮಾಡತಕ್ಕದ್ದಲ್ಲ. ತಿರಸ್ಕರಿಸಲ್ಪಟ್ಟ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್ ಮೊಬಲಗು ಹರಾಜು ಆಖೈರ್ ಕಾಲದಲ್ಲಿ ಅವರಿಗೆ ವಾಪಸು ಪಾವತಿ ಮಾಡಲ್ಪಡುವದು.

4. ಯಾವ ಚಡದರಖಾಸ್ತುದಾರನ ದರಖಾಸ್ತು ದೀವಾನರವರ ಮಂಜೂರಾತಿಬಗ್ಯೆ ಚುನಾಯಿಸಿಕೊಳ್ಳಲ್ಪಡುತ್ತೋ ಅಂಥಾ ಚಡದರಖಾಸ್ತುದಾರನು ಮೊದಲೇ ಡಿಪಾಜಿಟ್ ಯಿಟ್ಟಿರುವ ಮೊಬಲಗ್ ದೇಖೀಲ್, ದರಖಾಸ್ತು ಮಾಡಲ್ಪಟ್ಟ ಸಾಲಿಯಾನಾ ಇಜಾರೆ ಮೊಬಲಗ್ ಪೈಕಿ ಹನ್ನೆರಡರಲ್ಲಿ ಒಂದು ಭಾಗಕ್ಕೆ ಸಮನಾದ ಮೊಬಲಗನ್ನು ಕೂಡ್ಲೆ ಠೇವಣಿ ಯಿಡತಕ್ಕದ್ದು. ದೀವಾನರವರ ತಿರ್ಮಾನ ತಿಳಿಸಲ್ಪಟ್ಟ ತರುವಾಯ 8 ದಿವಸಗಳೊಳಗಾಗಿ, ಪೂರ್ವ ಡಿಪಾಜಿಟ್ ಯಿಟ್ಟಿರುವ ಮೊಬಲಗುಗಳ ದೇಖೀಲ್ ದರಖಾಸ್ತು ಮಾಡಲ್ಪಟ್ಟ ಸಾಲಿಯಾನಾ ಇಜಾರೆ ಮೊಬಲಗು ಪೈಕಿ ಹಾಗಪಾಲಿಗೆ ಸಮನಾಗಿರುವ ಒಂದು ಮೊಬಲಗನ್ನು ಇಜಾರೆ ಷರತ್ತುಗಳಂತೆ ಕ್ರಮಪ್ರಕಾರ ನಡದುಕೊಳ್ಳುವ ಬಗ್ಯೆ ಜಾಮೀನಿ ತರೀಕ್ ನಗದಾಗಿಯಾಗಲೀ ಕ್ರಮಪ್ರಕಾರ ಇಂಡಾರ್ಸ್‌ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ ಡಿಪ್ಯುಟಿ ಕಮಿಷನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಅಥವಾ ದರಖಾಸ್ತುದಾರನು ಮೇಲೆ ಹೇಳಿದ ಜಾಮೀನಿ ಪೈಕಿ ಅರ್ಧಭಾಗವನ್ನ ನಗದಾಗಿಯಾಗಲಿ, ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲೀ ಹಾಜರ್ಮಾಡಿ ಬಾಕೀ ಅರ್ಧವನ್ನ ಸದರೀ ಮೊಬಲಗ್ಯೆ ಎರಡರಷ್ಟು ಕ್ರಯಬಾಳುವ ಮತ್ತು ಯಾವ ಬಾಧ್ಯತೆ ಧೇಣೆಗಳೂ ಇಲ್ಲದ ಸ್ಥಾವರ ಸ್ವತ್ತಿನ ಮೂಲಕವಾಗಿ ಯಾಗಲೀ ಹಾಜರ್ಮಾಡತಕ್ಕದ್ದು; ಮತ್ತು ಇದರಲ್ಲಿ ಮುಂದೇ ವಿಧಿಸಲ್ಪಟ್ಟ ಷರತ್ತುಗಳಿಗೆ ಬದ್ಧನಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾಕಾಗದದ ಮೇಲೆ ಒಂದು ಕರಾರು ಬರೆದು ಕೊಡತಕ್ಕದ್ದು.

5. ಆತನು ಕರಾರಿಗೆ ರುಜು ಮಾಡುವದಕ್ಕಾಗಲೀ ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲೀ ತಪ್ಪಿದರೆ ಯಾ ನಿರಾಕರಿಸಿದರೆ ಪೂರ್ವವೇ ಇಡಲ್ಪಟ್ಟ ಡಿಪಾಜಿಟ್‌ಗಳು ಗವರ್ನಮೆಂಟಿಗೆ ಶೇರಿಕ್ಕೊಳ್ಳಲ್ಪಟ್ಟು ಇಜಾರೆಯು ಪುನಹಾ ಹರಾಜು ಮಾಡಲ್ಪಡುವದು ಯಾ ಅನ್ಯಥಾ ವಿಲಾಮಾಡಲ್ಪಡುವದು. ಹಾಗೆ ಪುನಹಾ ಹರಾಜು ಮಾಡುವದರಿಂದ ಯಾ ವಿಲಾಮಾಡುವದರಿಂದ ಉಂಟಾಗುವ ನಷ್ಟಕ್ಕೆ ಇಜಾರೇದಾರನನ್ನು ಗುರಿಮಾಡಿ, ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರಿ ಇರುವ ರೂಲ್‌ಸ್ ಅನುಸರಿಸಿ ಇಜಾರೇದಾರನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡಲ್ಪಡುವದು.

ಷರತ್ತುಗಳು.

1. ಸಾಲೀಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಒಂದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ, ಲೋಕಲ್ ಸೆಸ ದೇಖೀಲ್ ಅಂತಾ ಇಜಾರೇ ಮೊಬಲಗನ್ನು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದಕ್ಕೆ ಮುಂದಾಗಿಯಾಗಲೀ ಡಿಸ್ಟ್ರಿಕ್ಟು ಖಜಾನೆಯಲ್ಲಿ ಮಾಹೇಯಾನಾ ಸಮನಾದ ಖಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು.

ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕಿಗಳಿಗೂ, ಸೇಕಡಾ ಸಾಲೀಯಾನಾ 6 ರ ಪ್ರಕಾರ ಬಡ್ಡೀ ಕೊಡತಕ್ಕದ್ದು; ಅಂತಾ ಬಾಕೀ ಮೊಬಲಗ್‍ಗಳು ಪಾವತೀ ಯಾಗತಕ್ಕ ತಿಂಗಳು ಕಳೆದಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜಮೀನ್ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಯಿರುವ ರೂಲ್ಸ್‍ನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೇದಾರನ ಸ್ವತ್ತು ಜಫ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು. ಮತ್ತು ಇಜಾರೇ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನೀಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಖೀಲ್ ತಮಾಂ ಬಾಕಿಗಳನ್ನೂ, ಹಾಗೆ ಇಜಾರೇ ಪುನಃ ಹರಾಜ್ ಹಾಕುವದರಿಂದಾಗಲಿ, ವಿಲಾ ಮಾಡುವದರಿಂದಾಗಲಿ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ, ಜಾಮಿನೀ ಮೊಬಲಗ್ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದೀವಾನರವರ ಮಂಜೂರಾತೀನಿಸ್ಸೀ ಡೆಪ್ಯುಟಿ ಕಮ್ಮಿಷನರವರಿಗೆ ಯಿಖ್ತ್ಯಾರೀ ಇರತಕ್ಕದ್ದು.

2. ಚಿಲ್ಲರೇ ಪುರೋಖ್ತುದಾರ್ರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸ್‍ಗಳು, ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂಠೋಕ್ತವಾದ ಮಂಜೂರಾತಿ ಇಲ್ಲದೆ, ಇಜಾರೇದಾರನು ಹಾಲೀ ಶೇಂದೀ ಪುರೋಖ್ತು ಬಗ್ಯೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖೆಯ ವಿಷಯದಲ್ಲಾಗಲಿ ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬ್‍ಗಳ ಮೇಲೆ ಯಾವ ಅಂಗಡಿಗಳನ್ನಾದರೂ ತೆಗದು ಹಾಕುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷನರು ಅರ್ಹರಾಗಿರುತ್ತಾರೆ.

3. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ, ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

4. ಇಜಾರೇದಾರನು, ದೀವಾನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಬದ್ಧನಾಗಿ ನಡದುಕೊಳ್ಳತಕ್ಕದು.

5. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರೀಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗೈರೆಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರ ಹಕ್ಕುದಾರೀಗಳಲ್ಲಿ, ಗುತ್ತಿಗೇದಾರನು ಎಷ್ಟುಮಟ್ಟಿಗೂ ಪ್ರವೇಶಿಸಕೂಡದು. ಅಂತಾ ಹಕ್ಕುಗಳ ವಿಷಯದಲ್ಲಿ ಉಂಟಾಗುವ ತಕರಾರ್‍ಗಳನ್ನು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರು ಫೈಸಲ್ ಮಾಡತಕ್ಕದ್ದು. ಅಂತಾ ಫೈಸಲಿಗೆ ಗುತ್ತಿಗೇದಾರನು ಬದ್ಧನಾಗಿರತಕ್ಕದ್ದು, ಪರಂತು, ಸದರೀ ಫೈಸಲ್ ಅಪ್ಪೀಲ್‍ನಲ್ಲಿ ದೀವಾನರವರಿಂದ ಕಾಯಂಮಾಡಲ್ಪಡಲಿಕ್ಕಾಗಲಿ ಅನ್ಯಥಾ ಆಗಲಿ ಗುರಿಯಾಗತಕ್ಕದ್ದು.

6. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಶೇಂದಿ ಅಂಗಡಿಗಳ್ಯಾವವೂ ತೆಗೆಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡೆಪ್ಯುಟಿ ಕಮ್ಮಿಷನರಿಂದ ವಿಶೇಷ ಸಂದರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

7. ಯೂರೋಪಿಯನ್ ಸೋಲ್ಜರುಗಳ ವಂದು ರಿಜಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯಃ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದಿ ಪುರೋಖ್ತು ಬಗ್ಯೆ ಯಿರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು, ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟು ಮಾಡಲ್ಪಟ್ಟಿತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು, ಅಂಥಾ ಫೌಜಿನವರು ತಮ್ಮ ಕಡೇ ಅಬ್ಕಾರೀ ಕಂಟ್ರಾಕ್ಟರನ್ನ ಇಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿ ಯಿರತಕ್ಕದ್ದು.

8. ಇಜಾರೇದಾರನು ಡಿಸ್ಟ್ರಿಕ್ಟಿನ ಸರಕಾರದ ಬಂಜರ್ ಜಮೀನ್‍ಗಳಲ್ಲಿ ಇರುವ ಈಚಲು ಮರಗಳನ್ನು, ಇಜಾರೇಗಳ ಸ್ಥಳ ಸರಹದ್ದಿನೊಳಗೆ ಪುರೋಖ್ತು ಬಗ್ಯಾಗಲಿ ಬೆಲ್ಲ ತಯಾರ್ ಮಾಡುವ ಬಗ್ಯಾಗಲಿ ಶೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿಕೊಳ್ಳಬಹುದು, ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಐಯಿಂದಾ ಅನುಭವಿಸಲ್ಪಡತಕ್ಕ ಜಮೀನ್‍ಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕಿರುವದಿಲ್ಲ, ಮತ್ತು ಗವರ್ನಮೆಂಟಿನವರು ಯಾವಾಗಲಾದರೂ ಇತರ ಕೆಲಸಗಳಿಗೋಸ್ಕರವಾಗಲಿ, ಇತರ ಡಿಸ್ಟ್ರಿಕ್ಟುಗಳಿಗೆ ಶೇಂದೀ ವದಗಿಸುವದಕ್ಕೋಸ್ಕರವಾಗಲಿ,

ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ. ಡೆಪ್ಯುಟಿ ಕಮ್ಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ, ವ ಷರತ್ತುಗಳ ಪ್ರಕಾರವೂ ಮಾತ್ರವೇ ಬೆಲ್ಲ ತಯಾರ್ಮಾಡಲ್ಪಡತಕ್ಕದ್ದು.

9. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಶೇಂದೀ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟ್‌ಗಳ ವಿಷಯದಲ್ಲಾಗಲಿ, ಗವರ್ನ್‌ಮೆಂಟಿನವರು ಮಾಡತಕ್ಕ ಯಾವ ಏರ್ಪಾಡುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ಸೋಡೀಗೆ ಬಾಧ್ಯತೆವುಳ್ಳವನಾಗಿರುವದಿಲ್ಲ. ಡಿಸ್ಟ್ರಿಕ್ಟು ಪೈಕೀ ಯಾವ ಭಾಗದಲ್ಲಾಗಲಿ, ಸರ್ಕಾರೀ ಕಾರಣಗಳಮೇಲೆ ಇಜಾರೇಯನ್ನು ಮವುಕೂಫ್ ಮಾಡಿ ಆ ಬಗ್ಯೆ ನ್ಯಾಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದೀವಾನರವರು, ತಮ್ಮಲ್ಲಿಯೇ ಉಳಿಸಿಕ್ಕೊಂಡಿರುತ್ತಾರೆ.

10. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯೂರೇಜಿಯನ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದಮೇಲಿರುವಲ್ಲಿ ಒಬ್ಬ ಶಿಪಾಯಿಗಾಗಲಿ, ಪೋಲೀಸಿನವರಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರ್‌ಕಿಲಾಫಾಗಲಿ ನಡದಲ್ಲಿ ಅದರಿಂದ ಗುತ್ತಿಗೇದಾರ ಯಾ ಪುರೋಖ್ತುದಾರ, ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಪುರೋಖ್ತುದಾರನ ಲೈಸೆನ್ಸು ರದ್ದಾಗಲಿಕ್ಕೂ, ಗುರಿಯಾಗುತ್ತೆ.

11. ಗುತ್ತಿಗೇದಾರನು, ತನ್ನ ನೌಕರರು ಯಾ ಮುತಾಲೀಕರು, ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಒಂದು ಗಜದ ಎತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಯಳೇ ಈಚಲು ಮರಗಳಿಂದ ಶೇಂದೀ ಇಳಿಸದೇಯೂ, ಮತ್ತು ಶೇಂದಿ ಇಳಿಸುವದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ಉಪಯೋಗಿಸದೆಯೂ, ಇರುವ ಬಗ್ಯೆ ಜವಾಬ್‌ದಾರನಾಗಿರತಕ್ಕದ್ದು. ಈ ನಿಬಂಧನೆಗಳಿಗೆ ಏನಾದರೂ ಬರಕಿಲಾಫ್ ನಡದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, 100 ರೂಪಾಯಿಗಳ ಜುರ್ಮಾನೆಗೂ ಗುತ್ತಿಗೇದಾರನು ಗುರಿಯಾಗತಕ್ಕದ್ದು.

12. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ ಮಾರಲ್ಪಡತಕ್ಕದ್ದು.

	ಜಾಸ್ತಿ.	ಕಮ್ಮಿ.
	ಶೇರು ಮಂದಕ್ಕೆ ಕ್ರಯ.	
	ರೂ. ಆ. ಪೈ.	ರೂ. ಆ. ಪೈ.
ಶಿವಮೊಗ್ಗಾ ಷಹರು	0—1—6	0—1—0
ಚನ್ನಗಿರಿ ಹೊನ್ನಾಳಿ ತಾಲ್ಲೂಕುಗಳಲ್ಲಿ	0—1—0	0—0—6
ಡಿಸ್ಟ್ರಿಕ್ಟಿನ ಇತರ ಎಲ್ಲಾ ಸ್ಥಳಗಳಲ್ಲಿ	0—1—6	0—0—6

6. ಶೇಂದಿ ರವಾನೇಬಗ್ಯೆ ಉಪಯೋಗಿಸಲ್ಪಡುವ ಭಂಡಿಗಳು, ನಿರ್ಣಯಿಸಲ್ಪಟ್ಟ ಮೊಹತರ್ಫಾ ಭಂಡಿ ಕಂದಾಯದ ವಸೂಲಿಯಿಂದ ವಿನಾಯಿಸಲ್ಪಟ್ಟಿರುವದಿಲ್ಲಾ.

7. ಹಿಂದಿನ ಹುಟ್ಟುವಳಿಯನ್ನೂ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಯನ್ನೂ, ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳದುಕೊಳ್ಳಬಹುದು.

"ಬಮೋಜೀಬ್ ಹುಕ್ಕುಂ"

ಆರ್. ವಿಜಯಿರಂಗರಾವ್,

ಸೆಕ್ರೆಟೇರಿ.

124

ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಫಿಬ್ರುವರೀ ತಾ॥ 16, ಸರ್ನ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರುವಗೈರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ರೆಸೀಡೆಂಟರ ಇಲಾಖಾ.

ಇಸ್ತಿಹಾರ್ ನಾಮಾ.

ನಂ. 24. ತಾರೀಖು 30ನೇ ಜನವರೀ 1884.

ಸರ್ನ 1883ನೇ ಇಸವಿಯ ಬೆಂಗಳೂರು ಮ್ಯುನಿಸಿಪೆಲ್ ರೆಗ್ಯೂಲೇಷರ್ನಗಳ 5ನೇ ಸೆಕ್ಷರ್ನ ನಿಬಂಧನೆಗಳನುಸರಿಸಿ, ಮೈಸೂರು ಸೀಮೆಯ ರೆಸೀಡೆಂಟರವರು ಅಪ್ಪಣೆಕೊಡಿಸುವದೇನಂದರೆ, ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಟೇಷನಿನ, ಉದ್ಯೋಗಧರ್ಮತಃ ಮೆಂಬರಗೆಳಲ್ಲದ, ಮ್ಯುನಿಸಿಪೆಲ್ ಕಮ್ಮಿಷನರಗಳು, ಇದರಡಿಕಂಡ ರೂಲ್ಸ ಪ್ರಕಾರ ಐಯಿಂದ ಚುನಾವಣೀ ಮೂಲಕ ಮೊಕರರವಾಡಲ್ಪಡತಕ್ಕದ್ದು:

1. ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಟೇಷರ್ನ ಮ್ಯುನಿಸಿಪೆಲ್ ಬೋರ್ಡಿನ ಸರ್ಕಾರ ನೌಕರರಲ್ಲದ ಮೆಂಬರಗಳ ಸಂಖ್ಯೆಯು, ಪ್ರಜೆಗಳ ಪೈಕಿ ಇದರಡಿ ಕಂಡ ತರಗತಿಗಳ ಪ್ರತಿನಿಧಿಗಳು 18 ಮಂದಿ ಇರತಕ್ಕದ್ದು.

(1) ಯೂರೋಪಿಯರ್ನಗಳು ಮತ್ತು ಯೂರೇಜಿಯರ್ನಗಳು.
(2) ಮಹಮ್ಮದೀಯರು.
(3) ಹಿಂದುಗಳು ಮತ್ತು ಇತರರು

2. ಈ ತರಗತಿಯ ಜನಗಳು ಇದರಡಿ ಕಂಡಮೇರೆ ಬೋರ್ಡಿಗೆ ಪ್ರತಿನಿಧಿಗಳನ್ನು ಒದಗಿಸತಕ್ಕದು:—

ಯೂರೋಪಿಯರ್ನ ವ ಯೂರೇಜಿಯರ್ನಗಳು	6
ಮಹಮ್ಮದೀಯರು	4
ಹಿಂದುಗಳು ಮತ್ತು ಇತರರು	8

3. ಯಾವ ಮನುಷ್ಯನಾಗಲಿ, ಮ್ಯುನಿಸಿಪೆಲ್ ಕಮ್ಮಿಷನರಾಗಿ ಚುನಾಯಿಸಲ್ಪಡುವದಕ್ಕೆ ಮುಂಚೆ, ಇದರಡಿ ಕಂಡ ಷರತಗಳನ್ನು ನೆರವೇರಿಸತಕ್ಕದ್ದು.

(a) ಅವನು ಗಂಡಸಾಗಿರತಕ್ಕದ್ದು.
(b) ಅವನಿಗೆ 25 ವರುಷಗಳ ವಯಸ್ಸು ಪೂರ್ತಿಯಾಗಿರಬೇಕು.
(c) ಇಂಗ್ಲಿಷುಭಾಷೆಯಲ್ಲಿ ಆತಗೆ ವಳ್ಳೆಯ ಜ್ಞಾನವಿರಬೇಕು.

(*d*) ಅವನು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ವಾಸಸ್ಥನಾಗಿರಬೇಕು.

(*e*) ಅವನು, ಯಾವ ಸಾಲ್‌ನಲ್ಲಿ ಚುನಾಯಿಸಲ್ಪಡುತ್ತಾನೋ ಅದರ ಹಿಂದಿನ ಸಾಲ್ ಬಗ್ಯೆ, ಈ ಮಾರ್ಜಿನ್ನಲ್ಲಿ ಕಂಡ ವಿಧಗಳ ಪೈಕಿ ಒಂದು ಅಥವಾ ಹೆಚ್ಚು ಮ್ಯುನಿಸಿಪೆಲ್ ತೀರ್ವೆಗಗಳನ್ನಾಗಲಿ ತೆರಿಗೆಗಳನ್ನಾಗಲಿ, ಆ ಸಾಲಿಗಾಗಿ ಮ್ಯುನಿಸಿಪಾಲಿಟಿಗೆ ಜಮೆಕಟ್ಟಲ್ಪಟ್ಟ, ಗವರ್ನ ಮೆಂಟ್ ಜಮೀನ್ ಕಂದಾಯಕ್ಕೆ 20 ರೂಪಾಯಿಗಳಿಗೆ ಕಡಮೆ ಇಲ್ಲದ ಒಂದು ಮೊಬಲಗನ್ನಾಗಲಿ ಪಾವತಿ ಮಾಡಿರತಕ್ಕದ್ದು, ಅಥವಾ ಅವನು ಮಾಹೆಯಾನಾ 30 ರೂಪಾಯಿಗಳಿಗೆ ಕಡಮೆಯಿಲ್ಲದ ಬಾಡಿಗೆ ಕೊಡತಕ್ಕ ಮ್ಯುನಿಸಿಪೆಲ್ ಸರಹದ್ದಿನಲ್ಲಿರುವ ಒಂದುಮನೆಯಲ್ಲಿ ವಾಸಮಾಡತಕ್ಕದ್ದು.

(A) ಬಂಡಿಗಳು, ಕುದುರೆಗಳು ಅಥವಾ ಇತರ ಜಾನವರಗಳು, ಇವುಗಳ ಮೇಲೆ ತೆರಿಗೆ.

(B) ಕುಶಲ ವಿದ್ಯೆಗಳು, ಕಸಬ್‌ಗಳು, ವ್ಯಾಪಾರಗಳು, ಯಾ ವೃತ್ತಿಗಳು, ಇವುವಳಮೇಲೆ ತೆರಿಗೆ.

(C) ಮನೆಗಳು, ಕಟ್ಟಣಗಳು, ಅಥವಾ ಜಮೀನ್‌ಗಳು ಇವುಗಳ ಮೇಲೆ ಒಟ್ಟು ಕೆಲಸಗಳಿಗಾಗಿ ಯಾಗಲಿ, ಬೆಳಕು ಉಂಟುಮಾಡುವ ಬಗ್ಯೆ ಅಥವಾ ನೀರಾವರೀ ಬಗ್ಯೆ ಆಗಲಿ, ಅವುಗಳ ಸಾಲಿಯಾನಾ ಹುಟ್ಟುವಳೀ ಪ್ರಕಾರ ಹಾಕತಕ್ಕ ತೀರ್ವೆಗಳು.

ಪರಂತು, ಅವಿಭಕ್ತರಾಧ ಒಂದು ಹಿಂದೂ ಕುಟುಂಬವು, (*e*) ಕ್ಲಾಜ್‌ನಲ್ಲಿ ನಮೂದಿರುವ ತೀರ್ವೆಗಳನ್ನಾಲಿ, ತೆರಿಗೆಗಳನ್ನಾಗಲಿ ಕೊಟ್ಟಾಗ, ಆ ಕುಟುಂಬದ ಒಬ್ಬ ಮೆಂಬರು, ಆವಶ್ಯಕಗಳಾದ ಇತರ ಯೋಗ್ಯತೆಗಳನ್ನು ಪಡೆದಿರುವದರಿಂದ, ಒಬ್ಬ ಕಮ್ಮಿಷನರಾಗಿ ಚುನಾಯಿಸಲ್ಪಡಲಿಕ್ಕೆ ಅರ್ಹನಾಗಿರತಕ್ಕದ್ದು.

4. ಮ್ಯುನಿಸಿಪಾಲಿಟಿಯ ಯಾವ ಆಫಿಸರಾಗಲಿ, ನೌಕರನಾಗಲಿ, ಮ್ಯುನಿಸಿಪಾಲಿಟಿಯ ನೌಕರಿಯಲ್ಲಿರುವತನಕ, ಒಬ್ಬ ಮ್ಯುನಿಸಿಪೆಲ್ ಕಮ್ಮಿಷನರಾಗಿ ಚುನಾಯಿಸಲ್ಪಡಲಿಕ್ಕೆ ಅರ್ಹನಾಗಿರತಕ್ಕದ್ದಲ್ಲವು.

5. ಯಾವದಾದರೂ ತಕಸೀರಿಗಾಗಿ ಖೈದ್ ಸಜಾ ವಿಧಿಸಲ್ಪಟ್ಟಿರುವ, ಅಥವಾ ಚುನಾವಣೆಗೆ ಪೂರ್ವ ಸಂವತ್ಸರದಲ್ಲಿ ದಿವಾಳೀಯೆಂದು ತಿಳಿಸಲ್ಪಟ್ಟಿರುವ ಅಥವಾ ಸಮಷ್ಟಿಯಾದ ವ್ಯಾಪಾರ ಸಂಘದಲ್ಲಿಯಾಗಲಿ, ಕಮ್ಮಿಷನರ್‌ಗಳೊಡನೆ, ಯಾ ಕಮ್ಮಿಷನರ್‌ಗಳಿಗಾಗಿ ಮಾಡಲ್ಪಟ್ಟ ಯಾವದಾದರೂ ಒಡಂಬಡಿಕೆಯಲ್ಲಿಯಾಗಲಿ, ಕೆಲಸದಲ್ಲಾಗಲಿ ಒಬ್ಬ ಹಿಸ್ಸೇದಾರನಾಗಿರುವದಕ್ಕಿಂತ ಅನ್ಯಥಾ ಸಂಬಂಧವುಳ್ಳ ಯಾವ ಮನುಷ್ಯನೂ, ಒಬ್ಬ ಮ್ಯುನಿಸಿಪೆಲ್ ಕಮ್ಮಿಷನರಾಗಿ ಚುನಾಯಿಸಲ್ಪಡಲಿಕ್ಕೆ ಅರ್ಹನಾಗಿರತಕ್ಕದಲ್ಲವು.

6. ಸ್ತ್ರೀಯಾಗಲಿ ಪುರುಷನಾಗಲಿ, ಪ್ರತಿ ವ್ಯಕ್ತಿಯೂ, 21 ವರುಷಗಳ ವಯಸ್ಸು ಪೂರೈಸಿ ಸ್ವದೇಶಭಾಷೆಯನ್ನು ಓದುವದಕ್ಕೂ ಬರಿಯುವದಕ್ಕೂ ತಿಳಿದಿದ್ದು ಇದರಡಿ ಕಂಡ ಷರತ್‌ಗಳ ಪೈಕಿ ಒಂದನ್ನಾಗಲಿ ಇತರವನ್ನಾಗಲಿ ನೆರವೇರಿಸಿದರೆ ಅಭಿಪ್ರಾಯ ಕೊಡಲಿಕ್ಕೆ ಅರ್ಹನಾಗಿರತಕ್ಕದ್ದು; ಯಾವವಂದರೆ:—

(*a*) ಮ್ಯುನಿಸಿಪಾಲಿಟಿ ಸರಹದ್ದುಗಳೊಳಗೆ, ಒಟ್ಟು ಮ್ಯುನಿಸಿಪೆಲ್ ಕೆಲಸಗಳಿಗಾಗಿ ತೀರ್ವೆಗಳು ಮೊಕರರ್ ಮಾಡಲ್ಪಟ್ಟ ಒಂದು ಮನೆಯು, ಕಟ್ಟಣದ, ಯಾ ಜಮೀನಿನ ಬಾಬತು ಅವನ ಅಥವಾ ಅವಳ ಹಕ್ಕುದಾರೀ ವಿಷಯದಲ್ಲಿ ಯಥಾರ್ಥವಾಗಿ ಸ್ವಂತಗಾರರಾಗಿರತಕ್ಕದ್ದು.

(*b*) ಅವನಾಗಲಿ ಅವಳಾಗಲಿ ಮ್ಯುನಿಸಿಪೆಲ್ ಸರಹದ್ದುಗಳೊಳಗೆ ವಾಸಮಾಡುತ್ತಾ, ಚುನಾವಣೆಗೆ ಹಿಂದಿನ ಸಂವತ್ಸರದಲ್ಲಿ ಈ ಮಾರ್ಜಿನ್ನಲ್ಲಿ ಕಂಡ ವಿಧಗಳ ಪೈಕಿ ಒಂದು ಅಥವಾ ಹೆಚ್ಚು ಮ್ಯುನಿಸಿಪೆಲ್ ತೆರಿಗೆಗಳನ್ನಾಗಲಿ, ಒಟ್ಟು 5 ರೂಪಾಯಿಗಳ ತನಕ ಅಥವಾ ಇನ್ನೂ ಹೆಚ್ಚಾಗಿ ಪಾವತೀ ಮಾಡಿರತಕ್ಕದ್ದು.

A. ಬಂಡೀಗಳು, ಕುದುರೆಗಳು, ಅಥವಾ ಇತರಜಾನವರ್‌ಗಳು ಇವುಗಳ ಮೇಲಣ ತೆರಿಗೆ.

B. ಕುಶಲವಿದ್ಯೆ, ಕಸಬ್‌ದಾರೀ ಕೆಲಸಗಳು, ವ್ಯಾಪಾರಗಳು, ಅಥವಾ ವೃತ್ತಿಗಳು ಇವುಗಳಿಗಾಗಿ ತೀರ್ವೆ.

C. ಮನೆಗಳು, ಕಟ್ಟಣಗಳು, ಅಥವಾ ಜಮೀನ್‌ಗಳು ಇವುಗಳಮೇಲೆ ಒಟ್ಟು ಕೆಲಸಗಳಿಗಾಗಿಯಾಗಲಿ, ಬೆಳಕು ಉಂಟುಮಾಡುವ ಬಗ್ಯೆ ಅಥವಾ ನೀರಾವರಿ ಕೆಲಸಗಳಿಗಾಗಿಯೂಗಲಿ, ಅವುಗಳ ಸಾಲೀಯಾನಾ ಹುಟ್ಟುವಳಿ ಪ್ರಕಾರ ತೆರಿಗೆಗಳು.

(*c*) ಅವನಾಗಲಿ, ಅವಳಾಗಲಿ, ಚುನಾವಣೆಗೆ ಹಿಂದಿನ ಸಾಲ್‌ನಲ್ಲಿ ತಮ್ಮ ಸ್ವಂತ ಹಕ್ಕುದಾರೀ ಮೇಲೆ ಮ್ಯುನಿಸಿಪೆಲ್ ಸರಹದ್ದುಗಳೊಳಗೆ, 8 ರೂಪಾಯಿಗಳಿಗೆ ಕಡಮೆಯಿಲ್ಲದ ಮಾಹೇಯಾನಾ ಬಾಡಿಗೆಗೆ ಒಂದು ಮನೆಯ ಹಿಡುವಳೀದಾರರಾಗಿರತಕ್ಕದ್ದು.

7. ಮ್ಯುನಿಸಿಪೆಲ್ ಕಮ್ಮಿಷನರ್‌ಗಳ ಬೋರ್ಡಿನಲ್ಲಿ ಒಂದು ಅಥವಾ ಹೆಚ್ಚು ಖಾಲೀಗಳು ಉಂಟಾದರೆ, ಸದರೀ ಖಾಲೀಯಿರುವ ಉದ್ಯೋಗಗಳು ಚುನಾವಣೀ ಮೂಲಕ ಭರ್ತೀಯಾಗತಕ್ಕವೆಂದು ರೆಸೀಡೆಂಟರು ನೇಮಿಸಿ ಯಿರುವ ಪಕ್ಷಕ್ಕೆ, ಮ್ಯುನಿಸಿಪೆಲ್ ಕಮ್ಮಿಷನ್ ಪ್ರ

ಸೀಡೆಂಟರು, ಬೆಂಗಳೂರು ಸಿವಿಲ್ ವ ಮಿಲಿಟೆರಿ ಸ್ಟೇಷನ್ನಲ್ಲಿ ಖಾಲೀ ಮಾಡಿಸಿದ ಕಮ್ಮಿಷನರು ಯಾವ ತರಗತಿಗೆ ಸೇರಿ ಯಿರುತ್ತಾರೋ ಅಂತಾ ತರಗತಿಯ ಚುನಾವಣೀದಾರರ ಒಂದು ಸಮಾಜವನ್ನು ಸೇರಿಸತಕ್ಕದ್ದು. ಮತ್ತು ಅಂತಾ ತಾರೀಖಿನಲ್ಲಿ ಯಾವ ಬಗ್ಯೆ ಅಧಮ ಪಕ್ಷ 7 ದಿನಗಳ ನೋಟೀಸ್ ಕೊಡಲ್ಪಟ್ಟಿರತಕ್ಕದ್ದೋ ಅಂತಾ ಖಾಲೀ ಯಿರುವ ಕೆಲಸವನ್ನು ಯಾ ಕೆಲಸಗಳನ್ನು ಭರ್ತೀ ಮಾಡಲಿಕ್ಕೆ ಜನಗಳ ಹೆಸರುಗಳು ತಿಳಿಸಲ್ಪಟ್ಟು ಘೋಷಿಸಲ್ಪಡತಕ್ಕದ್ದು. ಖಾಲೀ ಯಿರುವ ಪ್ರತಿ ಕೆಲಸಕ್ಕೂ ಒಬ ಮನುಷ್ಯನು ಮಾತ್ರವೆ ತಿಳಿಸಲ್ಪಟ್ಟು ಘೋಷಿಸಲ್ಪಟ್ಟರೆ ಅವನು ಕ್ರಮಪ್ರಕಾರ ಚುನಾಯಿಸಲ್ಪಟ್ಟಂತೆ ಪ್ರಕಟಿಸಲ್ಪಡತಕ್ಕದ್ದು. ಒಬ್ಬನಿಗಿಂತ ಹೆಚ್ಚು ಮಂದಿ ನಮೂದಿಸಲ್ಪಟ್ಟು ಘೋಷಿಸಲ್ಪಟ್ಟರೆ ಅಭಿಪ್ರಾಯದ ಮೂಲಕ ಚುನಾವಣೆಯುನಿಶ್ಚಯಿಸಲ್ಪಡತಕ್ಕದ್ದು, ಮತ್ತು ಸದರೀ ಚುನಾವಣೆಯು, ಮ್ಯುನಿಸಿಪೆಲ್ ಕಮ್ಮಿಷರ್ನ ಪ್ರೆಸೀಡೆಂಟರಿಂದ ಹಾಗೆ ತಿಳಿಸಲ್ಪಡತಕ್ಕ ಮತ್ತು ಸಮಾಜ ಸೇರಿದ ತಾರೀಖು ಲಾಗಾಯತು 3 ದಿನಗಳಿಗೆ ಕಡಮೆಯಿಲ್ಲದ ಒಂದು ತಾರೀಖಿನಲ್ಲಿ ಮಾಡಲ್ಪಡತಕ್ಕದ್ದು.

8. ಚುನಾವಣೆಗಳು, ಚೀಟೀಹಾಕುವದರ ಮೂಲಕ ಆಗತಕ್ಕವು, ಅದರ ಬಾಬತು ಲಾಗವಡು ಮ್ಯುನಿಸಿಪೆಲ್ ಫಂಡಿನಿಂದ ಕೊಡಲ್ಪಡತಕ್ಕದ್ದು.

9. ಪ್ರತಿಚುನಾವಣೀದಾರನೂ, ಭರ್ತೀಯಾಗತಕ್ಕ ಖಾಲೀಯಿರುವ ಕೆಲಸಗಳು ಎಷ್ಟುಯಿದ್ದರೆ ಅಷ್ಟು ಅಭಿಪ್ರಾಯ ಉಂಟಾಗತಕ್ಕದ್ದು, ಆದರೆ, ಪ್ರತಿ ಚುನಾವಣೀದಾರನಿಂದ, ಯಾವನಾದರೂ ಒಬ್ಬ ಉಮೇದವಾರನಿಗೆ, ಒಂದು ಅಭಿಪ್ರಾಯಕ್ಕಿಂತ ಹೆಚ್ಚಾಗಿ ಕೊಡಲ್ಪಡಲಾಗದು.

10. ಯಾವ ಕಮ್ಮಿಷನರಾಗಲಿ, ಆತನ ಪಕ್ಷದಲ್ಲಿ ಅಧಮಪಕ್ಷ 20 ಅಭಿಪ್ರಾಯಗಳು ಕೊಡಲ್ಪಟ್ಟ ಹೊರತು ಚುನಾಯಿಸಲ್ಪಡತಕ್ಕದ್ದಲ್ಲ, ಮತ್ತು ಯಾವ ಉಮೇದವಾರನ ಪಕ್ಷದಲ್ಲಾಗಲಿ, ಇಪ್ಪತ್ತುಅಭಿಪ್ರಾಯಗಳು ಉಂಟಾಗದ, ಸಂಗತಿಯಲ್ಲಿ, ರೆಸೀಡೆಂಟರು ಖಾಲೀಯಿರುವ ಕೆಲಸವನ್ನು ಭರ್ತೀಮಾಲಿಕ್ಕೆ ಒಬ್ಬ ಕಮ್ಮಿಷನರನ್ನು ನೇಮಿಸಬಹುದು. ಅವನು ಚುನಾಯಿಸಲ್ಪಟ್ಟದ್ದರೆ ಹ್ಯಾಗೋ ಹಾಗೆ ಬದಸ್ತೂರ್ ಅಧಿಕಾರಗಳನ್ನು ಪಡೆದಿರತಕ್ಕದ್ದು.

11. ಈ ರೂಲ್ಸ ಅನುಸರಿಸಿ, ಯಾವ ಚುನಾವಣೆಯಲ್ಲಾಗಲಿ, ಯಾರಾದರೂ ಇಬ್ಬರು ಅಥವಾ ಹೆಚ್ಚು ಮಂದಿ ಉಮೇದವಾರರಲ್ಲಿ ಭಿಪ್ರಾಯಗಳ ಸಾಮ್ಯ ವುಂಟಾಗಿರುವಂತೆ ಕಾಣಬಂದು, ಒಂದು ಅಭಿಪ್ರಾಯ ಜಾಸ್ತೀಯಾದರೆ ಅಂತಾ ಉಮೇದವಾರರ ಪೈಕಿ ಒಬ್ಬ ಒಬ್ಬ ಕಮ್ಮಿಷನರಾಗಿ ಚುನಾಯಿಸಲ್ಪಡಲಿಕ್ಕೆ ಅರ್ಹನಾಗುವದಾದರೆ, ಮ್ಯುನಿಸಿಪೆಲ್ ಕಮ್ಮಿಷರ್ನ ಪ್ರೆಸೀಡೆಂಟರು, ಅಂತಾ ಜಾಸ್ತೀ ಅಭಿಪ್ರಾಯವನ್ನು ಕೊಡಬಹುದು. ಅಂತಾ ಜಾಸ್ತೀ ಅಭಿಪ್ರಾಯ ಕೊಡಲ್ಪಟ್ಟ ವುಮೇದವಾರನು ಆದರ ಮೇಲೆ ಒಬ್ಬ ಕಮ್ಮಿಷನರಾಗಿ ಚುನಾಯಿಸಲ್ಪಟ್ಟಂತೆ ಯೆಣಿಸಲ್ಪಡತಕ್ಕದ್ದು.

12. 3, 4, 5 ಮತ್ತು 6 ಈ ರೂಲ್ಸನಿಂದ ವಿಧಿಸಲ್ಪಟ್ಟಂತೆ ಚುನಾಯಿಸಲ್ಪಡಲಿಕ್ಕೂ, ಅಭಿಪ್ರಾಯ ಕೊಡಲಿಕ್ಕೂ ಅರ್ಹರಾದ ಜನಗಳ ಪಟ್ಟಿಗಳನ್ನು ಸಾಧ್ಯವಾದಷ್ಟು ಕ್ಷಿಪ್ರದಲ್ಲಿ, ಮತ್ತು ಈ ರೂಲ್ಸ ಜಾರೀಗೆ ಬಂದತರುವಾಯ ಮೂರು ತಿಂಗಳ ವಳಗಾಗಿ, ಮ್ಯುನಿಸಿಪೆಲ್ ಕಮ್ಮಿಷರ್ನ ಪ್ರೆಸೀಡೆಂಟರಿಂದ ತಯಾರ್ಮಾಡಲ್ಪಟ್ಟು, ಛಾಪಿಸಲ್ಪಟ್ಟು, ಪ್ರಕಟಿಸಲ್ಪಡತಕ್ಕದ್ದು.

13. ಮೇಲೆ ಕಂಡ 1ನೇ ರೂಲ್‌ನಲ್ಲಿ ಸೂಚಿಸಲ್ಪಟ್ಟ ತೆರಿಗೆ ಕೊಡತಕ್ಕ ತರಗತಿಗಳ ಪೈಕಿ ಪ್ರತಿ ಬಗೆಯವರಲ್ಲಿಯೂ ಅಂತಾ ಪಟ್ಟಿ ಒಂದು ಯಿರತಕ್ಕದ್ದು. ಪಟ್ಟೀಗಳು, ಮ್ಯುನಿಸಿಪೆಲ್ ಕಮ್ಮಿಷನರ್‌ಗಳ ಆಫಿಸ್‌ನಲ್ಲಿ ಅಥವಾ ಆಫೀಸ್‌ಬಳಿ ಯಾವದಾದರೂ ಪ್ರಸಿದ್ಧವಾದ ಸ್ಥಳದೊಳಗೆ ಮತ್ತು ಸ್ಟೇಷನಿನ ಇತರ ಪ್ರದೇಶಗಳಲ್ಲಿ ಚಿಕಟಾಯಿಸುವದರ ಮೂಲಕ ಪ್ರಸಿದ್ಧಪಡಿಸಲ್ಪಡತಕ್ಕದ್ದು.

14. ಮೇಲೆಕಂಡಂತೆ ಪ್ರಕಟಿಸಲ್ಪಟ್ಟ ಪಟ್ಟೀಗಳು, ಅದರಲ್ಲಿ ನಮೂದಿರುವ, ಚುನಾಯಿಸಲ್ಪಡತಕ್ಕ ಅಥವಾ ಅಭಿಪ್ರಾಯ ಕೊಡತಕ್ಕ ಜನಗಳ ಯೋಗ್ಯತೆಗಳ ವಿಷಯದಲ್ಲಿ ಅಖೈರಾದ್ದಾಗಿ ಭಾವಿಸಲ್ಪಡತಕ್ಕದ್ದಲ್ಲವು, ಮತ್ತು ಸದರೀ ಪಟ್ಟೀಗಳು, ಮೂವರು ಅಥವಾ ಹೆಚ್ಚು ಮಂದಿ ಕಮ್ಮಿಷನರ್‌ಗಳಿಂದ ಕುಮ್ಮಕ್ ಮಾಡಲ್ಪಟ್ಟ ಮ್ಯುನಿಸಿಪೆಲ್ ಕಮ್ಮಿಷರ್ನ ಪ್ರೆಸೀಡೆಂಟರಿಂದ ಆಗಿಂದಾಗ್ಯೆ ಪಿಮರ್ಶಿಸಲ್ಪಡಲಿಕ್ಕೆ ಸಾಧ್ಯವಾಗಿರತಕ್ಕದ್ದು.

15. ಪ್ರೆಸೀಡೆಂಟರು, ಸ್ಥಳದ ನ್ಯೂಸ್‌ಪೇಪರ್‌ಗಳ ಪೈಕಿ ಒಂದು ಅಥವಾ ಹೆಚ್ಚುನ್ಯೂಸ್ ಪೇಪರ್‌ಗಳಲ್ಲಿ ಸದರೀ ಪಟ್ಟಿಗಳನ್ನು ಪ್ರಕಟಿಸಿದ್ದನ್ನು ಕುರಿತು ನೋಟೀಸ್ ಕೊಡತಕ್ಕದ್ದು. ಸದರೀ ಪಟ್ಟೀಗಳು ಅಂತಾ ನೋಟೀಸ್ ಪ್ರಕಟಿಸಲ್ಪಟ್ಟ ತಾರೀಖಿಗೆ ತರುವಾಯ ಹದಿನೈದು ದಿನಗಳಲ್ಲಿ ಯುಕ್ತಗಳಾದ ಯೆಲ್ಲ ಕಾಲಗಳಲ್ಲಿಯೂ, ಜನಗಳು ತನಖೀ ಮಾಡುವ ಬಗ್ಯೆ ಖುಲ್ಲಾ ಇರತಕ್ಕದ್ದು.

16. ಪಟ್ಟೀಗಳ ನಕ್ಕಲ್‌ಗಳು, ಮ್ಯುನಿಸಿಪೆಲ್ ಕಮ್ಮಿಷನರ್‌ಗಳ ಕಚ್ಚೇರಿಯಲ್ಲಿ ಲಾಗವಡು ಖರೀದಿಗೆ ಜನಗಳಿಗೆ ಒದಗಿಸಲ್ಪಡತಕ್ಕದ್ದು.

17. ಪ್ರೆಸೀಡೆಂಟರು ಮೂವರು ಅಥವಾ ಹೆಚ್ಚುಮಂದಿ ಕಮ್ಮಿಷನರಗಳ ಕುಮ್ಮಕ್ಕನಿಂದ, ಪ್ರತಿಸಾಲ್ ಮೊದಲನೆಯ ತಿಂಗಳಲ್ಲಿ ಸದರೀ ಪಟ್ಟೀಯಲ್ಲಿ ದಾಖಲ್ಮಾಡಲ್ಪಡಲಿಕ್ಕೆ ಲಾಯಖಲ್ಲದ ಯಾವನಾದರೂ ಮನುಷ್ಯನ ಹೆಸರನ್ನು ತೆಗದುಹಾಕುವ ಬಗ್ಯೆ, ಅಥವಾ ಲಾಯಖಾದ ಯಾವನಾದರೂ ಮನುಷ್ಯನ ಹೆಸರನ್ನು ಸೇರಿಸುವ ಬಗ್ಯೆ ಸದರೀ ಪಟ್ಟೆಗಳನ್ನು ವಿಮರ್ಶಿಸತಕ್ಕದ್ದು. ಯಾವ ಹೆಸರನ್ನಾಗಲಿ, ದಾಖಲ್‌ಮಾಡುವದಕ್ಕೆ ಉಂಟಾದ ಯೆಲ್ಲ ಆಕ್ಷೇಪಗಳೂ, ಯಾವ ಹೆಸರನ್ನಾಗಲಿ ಸೇರಿಸುವ ವಿಷಯದಲ್ಲಿ ಉಂಟಾದ ಯೆಲ್ಲಬಾಧ್ಯತೆಗಳೂ, ಪ್ರೆಸೀಡೆಂಟರಿಂದಲೂ ಸದರೀ ಕಮ್ಮಿಷನರಗಳಿಂದಲೂ, ನಿರ್ಣಯಿಸಲ್ಪಡತಕ್ಕವು. ಬೇರೆ ಅಭಿಪ್ರಾಯ ಉಂಟಾದ ಸಂದರ್ಭದಲ್ಲಿ ಬಹಳ ಮಂದಿಯ ತಾತ್ಪರ್ಯದಿಂದ ನಿರ್ಣಯಿಸಲ್ಪಡತಕ್ಕವು. ಪ್ರೆಸೀಡೆಂಟರಿಗೆ ಅಂಗೀಕಾರ ಸ್ವಾತಂತ್ರ್ಯವಿರುತ್ತೆ.

ಹುಕ್ಕುಂ ಬಮೋಜೀಬ್
ಹೆಚ್. ವೈಲಿ, ಮೇಜರ್
ರೆಸೀಡೆಂಟರ ಅಸಿಸ್ಟೆಂಟ್.

ಮೈಸೂರು ರೆವಿನ್ಯೂ ಸರ್ವೇ ಮತ್ತು ಸೆಟಲ್‌ಮೆಂಟ್ ಇಲಾಖಾ.

ನಂ. 702. ತಾರೀಖು 6ನೇ ಫೆಬ್ರುವರೀ 1884.

ಇದರಿಂದ ಪ್ರಕಟಿಸಲ್ಪಡುವದೇನಂದರೆ, ಮೈಸೂರು ಡಿಸ್ಟ್ರಿಕ್ಟು ಹೆಗ್ಗಡದೇವನಕೋಟೆ ತಾಲ್ಲೂಕಿನ ಸೆಟಲ್‌ಮೆಂಟಿಯಾನೆ ತರಂ ಜಮಾಬಂದಿಯು, ಸರ್ 1884ನೇ ಮಾಹೆ ಮಾರ್ಚಿ ಗುರ್ರೇ ತಾರೀಖು, ಯಾ ಆ ಸುಮಾರಿಗೆ ಪ್ರಾರಂಭಿಸಲ್ಪಡುತ್ತೆ.

ಜೆ. ಪಿ. ಗ್ರ್ಯಾಂಟ್,
ಸೂ॥ ಮೈಸೂರ್ ರೆ॥ ಸರ್ವೆ ಅಂಡ್ ಅಸೆಸ್‌ಮೆಂಟ್.

ಫೈನಾನ್ಷಿಯಲ್ ಇಲಾಖಾ.

ಇಂಡ್ಯಾ ಗವರ್ನಮೆಂಟ್ ಪ್ರೊನೋಟಗಳಿಗೆ ಡಿಸ್ಟ್ರಿಕ್ಟು ಯಾ ತಾಲ್ಲೂಕು ಖಜಾನೇಗಳಲ್ಲಿ ಬಡ್ಡೀ ಪಾವತೀಮಾಡುವದನ್ನು ಕುರಿತು.

ಸರ್ಕ್ಯುಲರ್ ನಂಬರ್ 1574, ತಾರೀಖು 31ನೇ ಜನವರೀ 1884ನೇ ಇಸವಿ.

ಕಾಂಫ್‌ಟ್ರೋಲರಯವರು ಟ್ರೆಜರೀ ಆಫೀಸರಗಳ ಮತ್ತು ಇಂಡ್ಯಾಗವರ್ನಮೆಂಟಿನ ಪ್ರಾಮಿಸೋರೀ ನೋಟಗಳ ಸ್ವತ್ವದಾರರ ನಡವಳಿತದ ಬಗ್ಯೆ, ಇಂಡ್ಯಾ ಗವರ್ನಮೆಂಟ್, ಫೈನಾನ್ಸ್ ವ ಕಾಮರ್ಸ್ ಇಲಾಖೆಯ ಸರ್ 1884ನೇ ಜನವರೀ 18ನೇ ಮರ್ಕುಂ 378ನೇ ನಂಬರ್‌ವುಳ್ಳ ಈ ಕೆಳಗೆ ಬರುವ ಇಷ್ತಿಹಾರ್‌ನಾಮೆಯನ್ನು ಪ್ರಕಟಿಸುತ್ತಾರೆ.

ಹೆಚ್. ಹಡ್‌ಸನ್,
ಕಾಂಪ್‌ಟ್ರೋಲರ್.

ನಂ. 378, ಫೋರ್ಟುವಿಲ್ಲಿಯಂ, ತಾರೀಖು 18ನೇ ಜನವರೀ 1884ನೇ ಇಸವಿ.

ಸರ್ 1832ನೇ ಇಸ್ವೀ ಮೇ 22ನೇ ಮರ್ಕುಮಿನ, (ಅದೇಸಾಲ್ ಮಾಹೇ 26ನೇ ಮರ್ಕುಮಿನ ಕಲಕತ್ತಾ ಗೆಜೆಟಿನಲ್ಲಿ ಫಾಯಿಷ್ ಮಾಡಲ್ಪಟ್ಟ) ಫೈನಾನ್ಷಿಯಲ್ ಇಲಾಖೇಯಿಂದ ಕೊಡಲ್ಪಟ್ಟ, ಇಷ್ತಿಹಾರ್‌ನಾಮೆಯು ವಿಷಯದಲ್ಲಿ ಇದರಡಿ ಬರುವದು ಸಾರಾಂಶವಾಗಿರುತ್ತೆ.

"ಇದರಿಂದ ತಿಳಿಸಲ್ಪಡುವದೇನಂದರೆ, ಬಳಸೀಮೆಯಲ್ಲಿ ವಾಸಮಾಡುವ, ತಮ್ಮಗಳ ನೋಟಗಳ ಮೇಲೆ ಆಗುವ ಬಡ್ಡೀಯನ್ನು ಯಾವದಾದರೂ ಡಿಸ್ಟ್ರಿಕ್ಟು ಯಾ ತಾಲ್ಲೂಕು ಜಾತ್ ಖಜಾನೇಯಿಂದ ಪಡೆಯಲಿಕ್ಕೆ ಖಾಯಿಷ್ ಮಾಡಬಹುದಾದ, ಸುಪ್ರೀಂ ಗವರ್ನಮೆಂಟ್ ಪ್ರಾಮಿಸೋರಿ ನೋಟಗಳ ಸ್ವತ್ವದಾರರಿಂದ ಬಂದ ದರಖಾಸ್ತುಗಳ ಪ್ರಕಾರ ತಮ್ಮ ಯುಖ್ತ್ಯಾರೀ ಮೇಲೆ ನಡಿಸಲಿಕ್ಕೆ ಅಕ್ಕೌಂಟೆಂಟ್ ಜನರಲ್ಲವರು ಅಧಿಕಾರ ಕೊಡಲ್ಪಟ್ಟಿರುತ್ತಾರೆ. ಯಾವದಾದರೂ ನೋಟಿನ ಬಡ್ಡೀಯು, ಬಂದು ಮುಫಸ್ಸಿಲ್ ಖಜಾನೇಯಲ್ಲಿ ಹಣ ಪಾವತೀಯಾಗತಕ್ಕದ್ದಾಗಿ ಮಾಡಲ್ಪಡಬಹುದಾದ ಪಕ್ಷಕ್ಕೆ, ಸದರೀ ಬಗ್ಯೆ ಬಂದು ಹುಕ್ಕುಮನ್ನು ನೋಟಿನ ಮುಖಭಾಗದಲ್ಲಿ ಅಡ್ಡವಾಗಿ ಬರೆಯಲ್ಪಡತಕ್ಕದ್ದು. ಹಣ ಪಾವತಿಯ ಸ್ಥಳವನ್ನು ಬದಲಾಯಿಸುವದಕ್ಕೆ ಖಾಯಿಷ್ ಮಾಡುವ ಜನಗಳು, ಪ್ರೆಸೀಡೆನ್ಸೀಯಲ್ಲಿ ಅಕ್ಕೌಂಟೆಂಟ್ ಜನರಲ್ ಆಫೀಸಿನೊಳಗೆ ಮಾಮೂಲ್ ರೀತಿಯಾಗಿ ನೋಟಗಳನ್ನು ಬದಲಾಯಿಸುವಂತೆ ನಿಯಮಿಸಲ್ಪಡತಕ್ಕದ್ದು."

ಇದರಿಂದ ಪ್ರಕಟಿಸಲ್ಪಡುವದೇನಂದರೆ, ಇಂಡ್ಯಗವರ್ರಮೆಂಟಿನ ಪ್ರಾಮಿಸೋರೀ ನೋಟ್‌ಗಳ ಮೇಲೆ ಆಗುವ ಬಡ್ಡೀಯು, ಇದರಡೀ ಕಂಡ ಷರತ್‌ಗಳಿಗೆ ಒಳಪಟ್ಟು ಮಫಸ್ಸಿಲ್ ಖಜಾನೇಗಳಲ್ಲಿ ಹಣ ಪಾವತೀ ಮಾಡಲ್ಪಡತಕ್ಕದ್ದು; ಅಂದರೆ—

ಒಂದನೇದು.—ಯಾವನ ಅಥವಾ ಯಾವನ ಮುತಾಲೀಕನ ರಸೀದೀ ಪ್ರಕಾರ ಹಣ ಪಾವತೀ ಮಾಡಲ್ಪಡುತ್ತೋ ಅಂತಾವನು ತನ್ನ ಹೆಸರಿನಲ್ಲಿ ಪ್ರಥಮತಃ ನೋಟ್ ಕೊಡಲ್ಪಟ್ಟಿತೋ ಅಥವಾ ಇದರಡೀ ಕಂಡ 2ನೇ ಪ್ಯಾರಾದಲ್ಲಿ ವಿವರಿಸಲ್ಪಟ್ಟ ನಮೂನೆಯ ಇಂಡಾರ್ಸ್‌ಮೆಂಟ್‌ಗಳ ಕ್ರಮವಾದ ಸಂಬಂಧದಿಂದ ತನ್ನ ಬಾಧ್ಯತೆಯನ್ನು ಪಡೆಯುತ್ತಾನೋ ಅಂತಾವನಾಗಿರುತ್ತಾನೆ.

ಎರಡನೇದು.—ನೋಟಿನ ಮೇಲಣ, ತಮಾಂ ಇಂಡಾರ್ಸ್‌ಮೆಂಟ್‌ಗಳೂ, ವರ್ಗಾವರ್ಗಿಯನ್ನು ಕುರಿತದ್ದಾಗಲಿ, ಬಡ್ಡೀ ಪಾವತೀಯನ್ನು ಕುರಿತದ್ದಾಗಲಿ ಪರಂತು ಅಡ್ಡ ಇಂಡಾರ್ಸ್‌ಮೆಂಟ್‌ಗಳು ಯಾವವೂ ಇಲ್ಲವೆಂತಲೂ, ವ್ಯವಸ್ಥೆ ಮಾಡುವ ಬಗ್ಯೆ ಸ್ಪಷ್ಟವಾದ ಮತ್ತು ಭಿನ್ನವಾದ ಸ್ಥಳವು ಇರುತಿದೆ.

ಮೂರನೆಯದು—ನೋಟು ಛೇದಿಸಲ್ಪಡಲೂ ಇಲ್ಲವು ಹರಿಯಲ್ಪಡಲೂ ಇಲ್ಲವು (ಎರಡು ಅರ್ಧಗಳು ಘಟ್ಟಿಯಾಗಿ ಜಂಟಿಸಲ್ಪಟ್ಟರೆ ಮೇಲಣ ಅಥವಾ ಕೆಳಗಣ ವಿಭಾಗವು ಛೇದನವೆಂದು ಯೆಣಿಸಲ್ಪಡುವದಿಲ್ಲ.)

2. ಮೊದಲನೆಯ ಷರತಿನಲ್ಲಿ ಸೂಚಿಸಲ್ಪಟ್ಟ ಇಂಡಾರ್ಸ್‌ಮೆಂಟ್ ನಮೂನೆಯು ಇದರಡಿಕಂಡ ಮೂರು ನಮೂನೆಗಳ ಪೈಕೀ ಒಂದಾಗಿರತಕ್ಕದ್ದು.

(ರುಜು) A B	C. D. ಯೆಂಬವರಿಗೆ ಪಾವತೀಮಾಡತಕದ್ದು (ರುಜು) A B	C. D. ಯೆಂಬವರಿಗೆ ಅಥವಾ ಆರ್ಡ ಗೆ ಪಾವತೀ ಮಾಡತಕ್ಕದ್ದು (ರುಜು) A B.

ಸದರೀ ನಮೂನೆಯಲ್ಲಿ, A. B ಎಂಬ ಇಂಡಾರ್ಸ ದಾರನ ಹೆಸರು (ವಿಚಾರಣೆ ಕರ್ತ ವಗೈರೇ) ಉದ್ಯೋಗ ಧರ್ಮದ ಅಥವಾ ನ್ಯಾಯ ಸಂಬಂಧವಾದ ಹೆಚ್ಚಿಗೇ ಹೆಸರಿಲ್ಲದೆ ಸ್ವಂತ ಹೆಸರಾಗಿ ಅಥವಾ, ಪ್ರಸಿದ್ಧವಾದ ಒಂದು ಬ್ಯಾಂಕಿನ ಹೆಸರಾಗಿ ಅಥವಾ ರುಜುವಾಗಿರು[illegible]; A. B. ಎಂಬವನು ತನ್ನಿಂದಲೇ ರುಜು ಮಾಡಲ್ಪಟ್ಟ ಹಿಂದಿನ ನೋಟ್ ವ ಇಂಡಾರ್ಸ್‌ಮೆಂಟ್‌ಗಳ ಅಭಿಪ್ರಾಯ ಪ್ರಕಾರ ಸ್ವತ್ವದಾರ[illegible]ಗಿರುತ್ತಾನೆ.

3. ಬಡ್ಡೀ ಪಾವತೀ ಬಗ್ಯೆ ನೋಟ್ ಹಾಜರ್ ಮಾಡುವ ಮನುಷ್ಯನು ಯಾವ ಮಾರ್ಗವಾಗಿ ಯಾಗಲಿ, ಮೇಲೆ ವಿವರಿಸಲ್ಪಟ್ಟ ನಮೂನೇಗಿಂತ ಇತರ ಯಾವದಾದರೂ ನಮೂನೆಯ ಇಂಡಾರ್ಸ್‌ಮೆಂಟ್ ಪ್ರಕಾರ ವಾಗಲಿ. ಖಾಯಿಷ್ ಮಾಡಿದರೆ, ಅಥವಾ ಇಂಡಾರ್ಸ್‌ಮೆಂಟ್‌ಗಳು ವ್ಯಕ್ತಗಳಲ್ಲದೆಯೂ, ಸ್ಪಷ್ಟಗಳಲ್ಲದೆಯೂ ಯಿದ್ದರೆ, ಅಥವಾ ನೋಟ್ ಛೇದಿಸಲ್ಪಟ್ಟಿದ್ದರೆ ಯೂ ಹರಿಯಲ್ಪಟ್ಟಿದ್ದರೆ, ಟ್ರೆಜರೀ ಆಫಿಸರರು ಬಡ್ಡೀ ಹಣ ಕೊಡುವದಕ್ಕೆ ತಿರಸ್ಕರಿಸತಕ್ಕದಲ್ಲದೆ ಹಕ್ಕುದಾರನು ಸದರೀ ಮೇರೆ ಪಾವತೀ ಮಾಡುತ್ತಿರತಕ್ಕದ್ದೆಂದು ಕೋರುವ ಪಕ್ಷಕ್ಕೆ ತನ್ನ ಸ್ವಂತ ಹೆಸರಿನಲ್ಲಿ ಪರಿಷ್ಕರಿಸಲ್ಪಟ್ಟ ಒಂದು ನೋಟನ್ನು ಪಡೆಯುವ ಬಗ್ಯೆ ವಿಧಿಸಲ್ಪಟ್ಟ ರೂಲ್ಸ್‌ಗಳ ಕ್ರಮ ಪ್ರಕಾರ ನಡೆಸತಕ್ಕದ್ದು.

4. ತಿಳಿಸಲ್ಪಡತಕ್ಕದ್ದೇನಂದರೆ, ನೋಟಿನ ಅಥವಾ ಇಂಡಾರ್ಸ್‌ಮೆಂಟುಗಳ ನಿಬಂಧನೆ ಪ್ರಕಾರ ಅವನ ಸ್ವಂತ ಅಧಿಕಾರಕ್ಕಿಂತ ಇತರ ಯಾವದಾದರೂ ಅಧಿಕಾರದ ಹಿಡುವಳಿದಾರನಾಗಿದ್ದ ಪಕ್ಷಕ್ಕೆ, ಒಂದು ಇಂಡಾರ್ಸ್‌ಮೆಂಟು ಅವನ ಸ್ವಂತ ಅಧಿಕಾರ ಧರ್ಮದಲ್ಲಿ ಮಾತ್ರ ಮಾಡಲ್ಪಟ್ಟರೆ ಅದು ನ್ಯಾಯತಃ ಬಲವಾದ್ದಲ್ಲ: ಅದು ಬೇರೆ ಯಾವ ಧರ್ಮದಲ್ಲಿಯಾಗಲಿ ಮಾಡಲ್ಪಟ್ಟರೆ, ಟ್ರೆಜರಿ ಆಫೀಸರರು ಚಾಲ್ತಿ ಹುಕುಂಗಳಿಗೆ ಅನುಸಾರವಾಗಿ ಅದರ ಪರಿಷ್ಕಾರವನ್ನು ಮಾಡತಕ್ಕದ್ದೆಂದು ಖಾಯಿಷ್ ಮಾಡತಕ್ಕದ್ದು. ಆದದರಿಂದ ಈ ಹುಕ್ಕುಮಿನ ಒಂದು ಫಲಿತಾಂಶವೇನಂದರೆ, ಇಂಡಾರ್ಸ್‌ಮೆಂಟಿನ ಪ್ರತಿ ಸಂಗತಿಯಲ್ಲಿಯೂ, ಅಂತಾ ಹಿಡುವಳೀದಾರರಿಂದ ಪಬ್ಲಿಕ್ ಡೆಟ್ ಆಫಿಸಿಗೆ ರಿಫರೆನ್ಸ್ ಮಾಡತಕ್ಕದ್ದು.

1882ನೇ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸಿನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ತ್ವಾಪ್ಲಿ ಕೇಟೂದ ಡಿಮಾಂಡ್ ಡ್ರಾಫ್ಟ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಏಂಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸರ್,
ಕಾಂಪ್‌ಟ್ರೋಲರ್.

ನಂದೀದುರ್ಗ ಡಿವೀಜನ್.

ನಂದೀದುರ್ಗ ಡಿವೀಜನ್ ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 44.

—ಮೃತಪಟ್ಟ ಶಾ॥ ರಂಗಪ್ಪನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರು ರಾಮಣ್ಣ, ಮೃತಪಟ್ಟ ಸದರೀ ರಂಗಪ್ಪನವರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಕೋಲಾರ ಸ್ಥಳದ ರಾಮಣ್ಣನವರು, ಬವರಿಂಗ್‌ಪ್ಯಾಟೆ ತಾಲ್ಲೂಕು ಜೋಡಿ ದೊಡ್ಡಗುಂಡ್ಲಹಳ್ಳಿ ವಾಸಸ್ಥರಾಗಿ ಮೃತಪಟ್ಟ ರಂಗಪ್ಪನವರ ಜೆಂದಗಿಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಾಮಣ್ಣನವರ, ಅರ್ಜೀಯನ್ನು 1884ನೇ ಇಸವಿ ಮಾರ್ಚೀ ತಿಂಗಳು ತಾರೀಖು 31ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ಬೆಂಗಳೂರು ಮೊಕ್ಕಾಂನಲ್ಲಿ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ ರಂಗಪ್ಪನವರ ಆಸ್ತೀಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ್ 47.

ಮೃತಪಟ್ಟ ಚನ್ನಪ್ಪನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರು ಪಾಪಯ್ಯ, ಮೃತಪಟ್ಟ ಸದರೀ ಚನ್ನಪ್ಪನವರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಹೊಸಕೋಟೆ ತಾಲ್ಲೂಕು ಸೂಲಿಬೆಲೆ ಸ್ಥಳದ ಪಾಪಯ್ಯನವರು, ಡಿಟೋ ವಾಸಸ್ಥರಾಗಿ ಮೃತಪಟ್ಟ ಚನ್ನಪ್ಪನವರ ಜೆಂದಗೀ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪಾಪಯ್ಯನವರ ಅರ್ಜಿಯನ್ನು 1884ನೇ ಇಸವಿ ಮಾರ್ಚೀ ತಿಂಗಳು ತಾರೀಖು 21ರಲ್ಲು ಬೆಂಗಳೂರು ಮೊಕ್ಕಾಮಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚನ್ನಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಯಿರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ್ 48.

ಮೃತಪಟ್ಟ ಕೊಲ್ಲಂ ಚಿಕ್ಕವೀರಣ್ಣನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರು ರುದ್ರಮುನಿಯಪ್ಪ, ಮೃತಪಟ್ಟ ಸದರೀ ಚಿಕ್ಕವೀರಣ್ಣನವರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಶಿಡ್ಲಘಟ್ಟ ಸ್ಥಳದ ರುದ್ರಮುನಿಯಪ್ಪನವರು, ಡಿಟೋ ವಾಸಸ್ಥರಾಗಿ ಮೃತಪಟ್ಟ ಚಿಕ್ಕವೀರಣ್ಣನವರ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರುದ್ರಮುನಿಯಪ್ಪನವರ ಅರ್ಜೀಯನ್ನು 1884ನೇ ಇಸವಿ ಮಾರ್ಚೀ ತಿಂಗಳು ತಾರೀಖು 21ರಲ್ಲು ಬೆಂಗಳೂರು ಮೊಕ್ಕಾಂನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕವೀರಣ್ಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಫೆಬ್ರುವರೀ ತಿಂಗಳು 8ನೇ ತಾರೀಖಿನಲ್ಲಿ ಕೋರ್ಟುಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1884ನೇ ಇಸವಿ ಅರ್ಜೀ ನಂಬರ್ 52.

ಮೃತಪಟ್ಟ ಚಿಕ್ಕಲಕ್ಕೇಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ನರಸಮ್ಮ, ಮೃತಪಟ್ಟ ಸದರೀ ಚಿಕ್ಕಲಕ್ಕೇಗೌಡರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಕುಣಿಗಲ್ ತಾಲ್ಲೂಕು ತವಸಂದ್ರ ಸ್ಥಳದ ನರಸಮ್ಮ, ಡಿಟೋ ವಾಸಸ್ಥರಾಗಿ ಮೃತಪಟ್ಟ ಚಿಕ್ಕಲಕ್ಕೇಗೌಡರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ನರಸಮ್ಮನ ಅರ್ಜೀಯನ್ನು 1884ನೇ ಇಸವಿ ಮಾರ್ಚೀ ತಿಂಗಳು ತಾರೀಖು 31ರಲ್ಲು ಬೆಂಗಳೂರು ಮೊಕ್ಕಾಂನಲ್ಲಿ ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕಲಕ್ಕೇಗೌಡನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿದೆ.

1884ನೇ ಇಸವಿ ಅರ್ಜೀ ನಂಬರ್ 54.

ಮೃತಪಟ್ಟ ಚಿಕ್ಕಲಕ್ಕೇಗೌಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಲಕ್ಕಂಣ, ಮೃತಪಟ್ಟ ಸದರೀ ಚಿಕ್ಕಲಕ್ಕೇಗೌಡರಿಗೆ ಮಗ ಆಗಬೇಕೆಂಬ ಹಕ್ಕುದಾರಿಮೇಲೆ ಕುಣಿಗಲ್ ತಾಲ್ಲೂಕು ಯಾಚಗಟ್ಟ ಸ್ಥಳದ ಲಕ್ಕಂಣ, ಡಿಟೋ ವಾಸಸ್ಥರಾಗಿ ಮೃತಪಟ್ಟ ಚಿಕ್ಕಲಕ್ಕೇಗೌಡರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಲಕ್ಕಂಣನ ಅರ್ಜಿಯನ್ನು 1884ನೇ ಇಸವೀ ಮಾರ್ಚೀ ತಿಂಗಳು ತಾರೀಖು 31ರಲ್ಲು ಬೆಂಗಳೂರು ಮೊಕ್ಕಾಂನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕಲಕ್ಕೇಗೌಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 55.

ಮೃತಪಟ್ಟ ಶಿವಾಚಾರದ ದೇವೀರಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರಳು ನಂಜಮ್ಮ, ಮೃತಪಟ್ಟ ಸದರೀ ದೇವೀರಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಚಿಂತಾಮಣಿ ತಾಲ್ಲೂಕು ಇರಗಂಪಲ್ಲಿ ಸ್ಥಳದ ನಂಜಮ್ಮ, ಡಿಟೋ ವಾಸಸ್ಥನಾಗಿ ಮೃತಪಟ್ಟ ದೇವೀರಪ್ಪನವರ ಜಿಂದಗೀ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ನಂಜಮ್ಮನ ಅರ್ಜೀಯನ್ನು 1884ನೇ ಇಸವಿ ಮಾರ್ಚೀ ತಿಂಗಳು ತಾರೀಖು 31ರಲ್ಲು ಬೆಂಗಳೂರು ಮೊಕ್ಕಾಮಿನಲ್ಲಿ ಕೇಳಿ ಸರಟಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೇವೀರಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಫೆಬ್ರುವರೀ ತಿಂಗಳು ತಾರೀಖು 13ರಲ್ಲು ಕೋರ್ಟಿನ ಮೊಹರ್ ಮುತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಆರ್. ಎ. ತಂಬುಚೆಟ್ಟಿ,
ಡಿಸ್ಟ್ರಿಕ್ಟು ಜಡ್ಜಿ.

ತುಮುಕೂರು ಡಿಸ್ಟ್ರಿಕ್ಟು.

ತುಮುಕೂರು ಡಿಸ್ಟ್ರಿಕ್ಟು ಸಬಾರ್ಡಿನೇಟ್ ಜಡ್ಜೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 8—2.

ಮೃತಪಟ್ಟ ಮರಳೀಗವುಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರು 1ನೇ ಕೊಟ್ಟೂರಯ್ಯ, 2ನೇ ರಾಮಯ್ಯ 3ನೇ ಶಿದ್ದಯ್ಯ 4ನೇ ಚಿಕ್ಕಲಿಂಗಯ್ಯ 2—3—4ನೇ ಯವರು ಮೈನರ್ ಪೋಷಕ 1ನೇ ಕೊಟ್ಟೂರಯ್ಯ 5ನೇ ಮರುಳಶಿದ್ದೇಗವುಡ 6ನೇ ದೊಡ್ಡೀಗವುಡ ಮೈನರ್ ಪೋಷಕ 5ನೇ ಮರಳಶಿದ್ದೇಗವುಡ, ಇವರು ಮೃತಪ

ಟ್ಟಿ ಸದರೀ ಮರಳೇಗವುಡನಿಗೆ 5–6ನೇ ಯವರು ಅಣ್ಣನ ಮಕ್ಕಳು 1–2–3–4ನೇ ಯವರು ಮಕ್ಕಳು ಆಗಬೇಕೆಂಬ ಹಕ್ಕುದಾರೀ ಮೇಲೆ ತಿಪಟೂರು ತಾ|| ಬಳವನೇರ್ಲ ಫಿರಕಾ ಹೊಸೂರು ಸ್ಥಳದ 1–2–3–4–5–6ನೇ ಯವರು ಡಿಟೋ ಗ್ರಾಮ ವಾಸಸ್ಥನಾಗಿ ಮೃತಪಟ್ಟ ಮರಳೇಗವುಡನ ಜಿಂದಗೀ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1–2–3–4–5–6ನೇ ಯವರುಗಳ ಅರ್ಜೀಯನ್ನು 1884ನೇ ಇಸವೀ ಮಾರ್ಚೀ ತಿಂಗಳು ತಾರೀಖು 5ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮರಳೇಗವುಡನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಫಿಬ್ರವರೀ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1884ನೇ ಇಸವಿ ಅರ್ಜೀ ನಂಬರ್ 11—3.

ಮೃತಪಟ್ಟ ನಂಜುಂಡಶಟ್ಟಿ ಯೆಂಬವನ ಆಸ್ತೀ ವಿಷಯದಲ್ಲಿ—

ಅರ್ಜೀದಾರ 1ನೇ ನಂಜಯ್ಯ, 2ನೇ ಮರಳಯ್ಯ, 3ನೇ ಗುರುನಂಜಯ್ಯ, ಇವರಗಳು ಮೈನರ್ ಗಾರ್ಡಿಯನ್ ತಾಯಿ ಈರಮ್ಮ, ಮೃತಪಟ್ಟ ಸದರೀ ನಂಜುಂಡಶಟ್ಟಿ ಯೆಂಬವನಿಗೆ ಹೆಂಡತಿ ಮಕ್ಕಳು ಆಗಬೇಕೆಂಬ ಹಕ್ಕುದಾರೀ ಮೇಲೆ ತಿಪಟೂರು ತಾಲ್ಲೂಕು ಸೂರನಹಳ್ಳಿ ಸ್ಥಳದ ಡಿಟೋ ಮೈನರ್‌ಗಳ ತಾಯಿ ಈರಮ್ಮ, ಡಿಟೋ ತಾಲ್ಲೂಕು ವೆಂಕಟಗಿರಿಯನಹಳ್ಳಿ ವಾಸಸ್ಥನಾಗಿ ಮೃತಪಟ್ಟ ನಂಜುಂಡಶಟ್ಟಿಯ ಜಿಂದಗಿ ಬಗ್ಯಾಗಿ ಬರತಕ್ಕ 700 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾಳೆ.

ಸದರೀ ದರಖಾಸ್ತುದಾರಳಾದ ಈರಮ್ಮನ ಅರ್ಜಿಯನ್ನು 1884ನೇ ಇಸವಿ ಮಾರ್ಚೀ ತಿಂಗಳು ತಾರೀಖು 12ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜುಂಡಶಟ್ಟಿಯ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿಇಧೆ.

1884ನೇ ಇಸವಿ ಫಿಬ್ರವರೀ ತಿಂಗಳು 9ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಕೈನ್ಸ್,
ಸಬ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 27.

ಮೃತಪಟ್ಟ ಸುಬ್ಬರಾಯಶಟ್ಟಿ ಆಸ್ತೀ ವಿಷಯದಲ್ಲಿ—

ಅರ್ಜೀದಾರು ರಾಮಕೃಷ್ಣಶಟ್ಟಿಯು, ಮೃತಪಟ್ಟ ಸದರೀ ಸುಬ್ಬರಾಯಶಟ್ಟಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಯಡತೊರೆ ತಾಲ್ಲೂಕು ಕೋಣನೂರು ಸ್ಥಳದ ಸದರೀ ರಾಮಕೃಷ್ಣಶಟ್ಟಿಯು, ಸದರೀ ವಾಸಸ್ಥರಾಗಿ ಮೃತಪಟ್ಟ ಸುಬ್ಬರಾಯಶಟ್ಟಿಯ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರನಾದ ರಾಮಕೃಷ್ಣಶಟ್ಟಿಯ ಅರ್ಜೀಯನ್ನು 1884ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 28ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬರಾಯಶಟ್ಟಿ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

132

1884ನೇ ಇಸವಿ ಅರ್ಜೀ ನಂಬರ 30.

ಮೃತಪಟ್ಟ ಕೆಂಪೇಗವುಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಚಿಕ್ಕೇಗವುಡನು, ಮೃತಪಟ್ಟ ಸದರೀ ಕೆಂಪೇಗವುಡನಿಗೆ ಯರಡನೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ನಾಗಮಂಗಲ ತಾಲ್ಲೂಕು ಬಿಂಡಿಗನವಲೆ ಸ್ಥಳದ ಚಿಕ್ಕೇಗವುಡನು, ಡಿಟೋ ವಾಸಸ್ಥನಾಗಿ ಮೃತಪಟ್ಟ ಕೆಂಪೇಗವುಡನ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾನೆ.

ಸದರೀ ದರಖಾಸ್ತುದಾರನಾದ ಚಿಕ್ಕೇಗವುಡನ ಅರ್ಜಿಯನ್ನು 1884ನೇ ಇಸವಿ ಫೆಬ್ರುವರೀ ತಿಂಗಳು ತಾರೀಖು 28ರಲ್ಲು ಮೈಸೂರು ಮೊಕ್ಕಾಂಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೆಂಪೇಗವುಡನ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಜನವರೀ ತಿಂಗಳು 25ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

1884ನೇ ಇಸವೀ ಅರ್ಜೀ ನಂಬರ 26.

ಮೃತಪಟ್ಟ ಕೃಷ್ಣಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಸುಬ್ಬಮ್ಮ ಮೃತಪಟ್ಟ ಸದರೀ ಕೃಷ್ಣಪ್ಪನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಅತ್ತಿಕುಪ್ಪಾ ತಾಲ್ಲೂಕು ಕನ್ನಂಬಾಡಿ ಸ್ಥಳದ ಸುಬ್ಬಮ್ಮನು, ಡಿಟೋ ವಾಸಸ್ಥನಾಗಿ ಮೃತಪಟ್ಟ ಕೃಷ್ಣಪ್ಪನ ಜಿಂದಗೀ ಬಗ್ಯಾಗಿ ಬರತಕ್ಕ 800 ರೂಪಾಯಿನ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೇ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಸುಬ್ಬಮ್ಮನ ಅರ್ಜೀಯನ್ನು 1884ನೇ ಇಸವಿ ಫೆಬ್ರುವರೀ ತಿಂಗಳು ತಾರೀಖು 28ರಲ್ಲು ಮೈಸೂರು ಮೊಕ್ಕಾಂಈ ಕೋರ್ಟಿನಲ್ಲಿ ಕೇಳಿ ಸರ್ಟಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸದರೀಕೃಷ್ಣಪ್ಪನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರಿರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಫೆಬ್ರುವರೀ ತಿಂಗಳು 1ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

1884ನೇ ಇಸವಿ ಅರ್ಜೀ ನಂಬರ 45.

ಮೃತಪಟ್ಟ ವೆಂಕಟಸುಬ್ಬಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ವೆಂಕಟರಾಮಯ್ಯ ಮೈನರ ಗಾರ್ಡಿಯರ್ನ ಮತ್ತು ಚಿಕ್ಕಪ್ಪ ಗಿರಿಅಪ್ಪಯ್ಯ, ಮೃತಪಟ್ಟ ಸದರೀ ವೆಂಕಟಸುಬ್ಬಯ್ಯನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮಂಡ್ಯ ತಾಲ್ಲೂಕು ಸಾತನೂರಲ್ಲಿರುವ ಸದರೀ ವೆಂಕಟರಾಮಯ್ಯ, ಸದರೀ ವಾಸಸ್ಥನಾಗಿ ಮೃತಪಟ್ಟ ವೆಂಕಟಸುಬ್ಬಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟರಾಮಯ್ಯನ ಅರ್ಜಿಯನ್ನು 1884ನೇ ಇಸವಿ ಮಾರ್ಚೀ ತಿಂಗಳು ತಾರೀಖು 26ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟಸುಬ್ಬಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ 50.

ಮೃತಪಟ್ಟ ಭೀಮಸೇನಾಚಾರ್ಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ವೇದವ್ಯಾಸಾಚಾರ್ಯರು, ಮೃತಪಟ್ಟ ಸದರೀ ಭೀಮಸೇನಾಚಾರ್ಯರಿಗೆ ದೊಡ್ಡಪ್ಪನ ಮಗ ಅಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರಲ್ಲಿರುವ ಸುಮತಿ ಅನಂತಾಚಾರ್ಯರ ಮಕ್ಕಳು ವೇದವ್ಯಾಸಾಚಾರ್ಯರು, ಶ್ರೀರಂಗಪಟ್ನ ವಾಸಸ್ಥನಾಗಿ ಮೃತಪಟ್ಟ ಭೀಮಸೇನಾಚಾರ್ಯರ ಜಿಂದಗೀ ಬಗ್ಯಾಗಿ ಬರತಕ್ಕ 330 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೇದವ್ಯಾಸಾಚಾರ್ಯರ ಅರ್ಜೀಯನ್ನು 1884ನೇ ಇಸವಿ ಮಾರ್ಚೀ ತಿಂಗಳು ತಾರೀಖು 26ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರಟಿಫಿಕೇಟ್ ಪಡೆಯುತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಭೀಮಶೇನಾಚಾರ್ಯರ ಆಸ್ತಿಗೆ ಹಕ್ಕುದಾರರಾದ ವಿಶ್ವಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಥೆ.

1884ನೇ ಇಸವಿ ಫಿಬ್ರುವರೀ ತಿಂಗಳು 2ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಥೆ.

ವಿ. ಎ. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜ್.

ತಾರೀಖು 30ನೇ ಜನವರೀ 1884.

ಇದರಿಂದ ತಿಳಿಯಪಡಿಸುವದೇನಂದರೆ, ಮಳವಳ್ಳಿ ಸಬ್ ರಿಜಿಸ್ಟ್ರೀ ಆಫೀಸಿನಲ್ಲಿ ಬೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತೈವಜನ್ನು ಹಾಜರ್ಮಾಡಿದವನೆ ಆಗಲಿ ಅಥವಾ ವಾಪಸುಪಡಿಯಲಿಕ್ಕೆ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರನೆ ಆಗಲಿ ಈ ನೋಟೀಸ್ ತಾರೀಖು ಲಾಗಾಯಿತು ಬಂದು ತಿಂಗಳವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸ್ ತೆಗದುಕ್ಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರು ರಿಜಿಸ್ಟ್ರೇಷನ್ ಆಕ್ಟು '85ನೇ ಸೆಕ್ಷನ್' ಅನುಸರಿಸಿ ಅದು ನಾಶಪಡಿಸಲ್ಪಡುವದು.

ನಂಬರು.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
213 / 81—82	ಪೂರಿಗಾಲಿ ಕಸಬೇಲಿರುವ ವೆಂಕಟರಮಣಾಚಾರಿ ಮಗ ಶೀನಪ್ಪ, ಕ್ರಿಷ್ಣಪ್ಪಬ್ರಾಹ್ಮಣ	ಪೂರಿಗಾಲಿ ಹೋಬಳಿ ಪೈಕಿ ಮರಳಹಳ್ಳಿ ಗ್ರಾಮ ದಾಖಲೆ ಕೃಷ್ಣಯ್ಯಂಗಾರ್ ಹುಂಡೀಲಿರುವ ವೆಂಕಟನರಸಿಂಹ್ಮಾಚಾರ್ ಮಗ ಕೃಷ್ಣಾಚಾರಿ	20—1—82	20—1—82	(50) ರೂಪಾಯಿನ ಮನೆ ಆಧಾರ ಪತ್ರ.

ಅಬ್ದುಲ್ ಖಾದರ್, ಕೆ. ಬಿ, ರಿಜಿಸ್ಟ್ರಾರ್.

ತಾರೀಖು 1ನೇ ಫಿಬ್ರುವರೀ 1884.

ಇದರಿಂದ ತಿಳಿಸುವದೇನಂದರೆ, ಮೈಸೂರು ಜೈಲ್‌ನಲ್ಲಿ ಖೈದು ಮಾಡಲ್ಪಟ್ಟಿರುವ ಖೈದಿಗಳ ವುಪಯೋಗದ ಬಗ್ಯೆ ಸ್ಟ 1884ನೇ ಇಸವಿ ಏಪ್ರೆಲ್ ಗುರ್‍ರೇ ತಾರೀಖು ಮೊದಲು 1885ನೇ ಮಾರ್ಚೀ 31ನೇ ತಾರೀಖುವರಿಗೆ ಎರಡು ದಿನಗಳೂ ಸೇರಿ ಬೇಕಾದ ಆಹಾರ ವಗೈರೇ ದರೋಬಸ್ತು ಜಿನಸುಗಳನ್ನೂ ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಬರುವ ಬಂದು ಮಾಡಲ್ಪಟ್ಟ ದರಖಾಸ್ತುಗಳನ್ನು ಮೈಸೂರು ಜೈಲ್ ಸೂಪರಿಂಟೆಂಡೆಂಟರವರು, ಸ್ಟ 1884ನೇ ಇಸವಿ ಮಾರ್ಚೀ 15ನೇ ತಾರೀಖುವರಿಗೆ ತೆಗದುಕೊಳ್ಳುವರು.

2. ಸದರೀ ತಾರೀಖು ತರುವಾಯ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರದು.

3. "ಮೈಸೂರು ಜೈಲ್‌ಗಾಗಿ ಆಹಾರ ಪದಾರ್ಥಗಳ ಸರಬರಾಯಿ ಬಗ್ಯೆ ದರಖಾಸ್ತುಗಳು" ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

4. 500 ರೂಪಾಯಿಗಳು ನಗದಾಗಿ ಅಥವಾ ಕರ್ರೆಸೀ ನೋಟುಗಳ ಮೂಲಕ ಡಿಪಾಜಿಟ್‌ನಿಶೇ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಮೈಸೂರು ಜೈಲ್ ಆಫೀಸಿನಲ್ಲಿ, ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರ ರೂಬರೂ ಮೇಲ್ಕಂಡ ತಾರೀಖಿನೊಳಗೆ ಪ್ರಾತಃಕಾಲ 7 ಘಂಟೆಗೆ ಮೈಸೂರು ಜೈಲ್ ಸೂಪರಿಂಟೆಂಡೆಂಟರಿಂದ ಖುಲ್ಲಾ ಮಾಡಲ್ಪಡುವವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ, ಈ ಕೆಳಗೆ ನಮೂದಿಸುವ ತರಗತಿಯ ಪ್ರತಿ ಖೈದಿಗೂ ದಿನ ಬಂದಕ್ಕೆ ಆಗತಕ್ಕ ದರವು ನಮೂದಿಸಲ್ಪಡತಕ್ಕದ್ದು.

ನೇಟಿವ ಕೂಲಿಯವರಾದ ಗಂಡಸರು A ಕ್ಲಾಸ	..	ರೂ. ಆ. ಪೈ.
ಡಿಟೋ ಡಿಟೋ B ,,	..	..
ಡಿಟೋ ಡಿಟೋ C ,,	..	..
ಡಿಟೋ ಕೂಲೀ ಮಾಡದ ಗಂಡಸರು, ಹೆಂಗಸರು, ಸಾದಾ ಖೈದಿನಲ್ಲಿ ಮತ್ತು ವಿಚಾರಣೆಯಲ್ಲಿ ಇರತಕ್ಕವರು D ಕ್ಲಾಸ		
ಡಿಟೋ ಹುಡುಗರಾದ ಖೈದೀರು	..	..
ಯೂರೋಪಿಯರ್ನಗಳು ವ ಈಸ್ಟ ಇಂಡಿಯರ್ನಗಳು	..	..
ರಾಗಿ ಸಹಿತ ಆಸಪತ್ರೆ ಪಥ್ಯ ..	...	...
ಅಕ್ಕಿ ಸಹಿತ ಡಿಟೋ ..	...	..

7. ದರಖಾಸ್ತು ಮಾಡಲ್ಪಟ್ಟ ದರಗಳು ಆಹಾರ ಜಿನಸೀಗಳ ಸ್ಕೇಲ್ ಪಟ್ಟಿಯಲ್ಲಿ ನಮೂದಿರುವ ಪದಾರ್ಥಗಳು ಮಾತ್ರವಲ್ಲದೆ, ಸ್ಕೇಲ್ ಪಟ್ಟೀ ಪ್ರಕಾರ ಆಸಪತ್ರೆ ಪಥ್ಯಪದಾರ್ಥಗಳು, ಕಾಹಿಲೇ ಮನುಷ್ಯರಿಗೆ ವಿಶೇಷ ಪದಾರ್ಥಗಳು, ನಷ್ಟವಾಗತಕ್ಕ ಪದಾರ್ಥಗಳು, ದೀಪದ ಯಂಣೆ, ಲಾಂದ್ರಗಳು, ಮತ್ತು ಅವುಗಳ ರಿಪೇರಿ ಮಾಡಿಸುವಣ, ಅಡಿಗೆ ಮಾಡುವ ಬಗ್ಯೆ ತಾಂಬ್ರ ಮತ್ತು ಮಣ್ಣಿನ ಪಾತ್ರೆಗಳು, ಖೈದೀರು ವೂಟಾ ಮಾಡುವ ಪರಿವಾಣಗಳು, ಪಾಯಖಾನೆ ಮತ್ತು ವಣಗಿದ ಮಣ್ಣಿನ ಬಗ್ಯೆ ಗೂಡೆಗಳು, ಜೈಲ್‌ನಲ್ಲಿರತಕ್ಕ ಖೈದೀರು ಸ್ನಾನ ಮಾಡಲಿಕ್ಕೆ ಶೀಗೇಕಾಯಿ, ತಮಾಂ ತಾಂಬ್ರ ಪಾತ್ರೆಗಳ ರಿಪೇರಿ ವ ಕಲಾಯಿ, ಪರಕೆಗಳು, ಕುಡಿಯುವ ಬಗ್ಯೆ ಮೊಗೆಗಳು, ಹೆಣ್ಣು ಖೈದೀರ ಮಕ್ಕಳಿಗೆ ಬೇಕಾದ ಹಾಲು, ರೊಟ್ಟಿ, ಸಕ್ಕರೆ ವಗ್ಯೆರೇ ಪದಾರ್ಥಗಳು, ಹೊಗೆ ಹಾಕುವದಕ್ಕೆ ಗಂಧಕ, ಚವಳುಮಣ್ಣು, ಮತ್ತು ಖೈದಿಗಳಿಗೆ ಕ್ರಮವಾಗಿ ಸರಬರಾಯಿ ಮಾಡಲ್ಪಡುವ ಬಟ್ಟೆ ಶಿವಾಯಿ, ತಮಾಂ ಚಿಲ್ಲರೇ ಪದಾರ್ಥಗಳೂ ಸಹ ಅಡಗಿರತಕ್ಕದ್ದು.

8. ಸೂಪರ್ರಿಟೆಂಡೆಂಟರವರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ, ಹೀಗೆ ತಿರಸ್ಕರಿಸಲಿಕ್ಕೆ ಯಾವ ನಿಮಿತ್ತವನ್ನೂ ಅವರು ತಿಳಿಸಬೇಕಾದ್ದಿಲ್ಲವು.

9. ಮುಂಜೂರಾದ ದರಖಾಸ್ತುದಾರನ, ಡಿಪಾಜಿಟ ಮೊಬಲಗು ನಿಲ್ಲಿಸಿಕೊಳ್ಳಲ್ಪಟ್ಟು, ಆತನು ಕಂಟ್ರಾಕ್ಟು ಮುಚ್ಚಳಿಕ್ಕೆ ಬರದು ಕೊಡಲಿಕ್ಕಾಗಲಿ, ನಗದಾದರೂ ಗವರ್ನಮೆಂಟ ಪತ್ರಗಳ ಮೂಲಕವಾದರೂ 500 ರೂಪಾಯಿಗಳ ಮೊಬಲಗಿಗೆ ಜಾಮೀನನ್ನು ತನ್ನ ದರಖಾಸ್ತು ಮಂಜೂರಾದ ಸಂಗತಿ ತನಗೆ ತಿಳಿಸಲ್ಪಟ್ಟ ತಾರೀಖು ಮೊದಲು ಒಂದು ವಾರದ ವಳಗಾಗಿ ಕೊಡಲಿಕ್ಕೆ ತಪ್ಪಿದರೆ, ಸದರಿ ಡಿಪಾಜಿಟ ಸರಕಾರಕ್ಕೆ ಸೇರಿಸಿ ಕೊಳ್ಳಲ್ಪಡುವದು.

10. ಕಂಟ್ರಾಕ್ಟುದಾರನಿಗೆ ನಗದು ಅಡ್ವಾನ್ಸು ಯಾವದೂ ಕೊಡಲ್ಪಡಲಾರದು, ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳಿಗೆ ಪ್ರತಿ ತಿಂಗಳು 1ನೇ ತಾರೀಖಿಗೆ ತರುವಾಯ ಸಾಧ್ಯವಾದಷ್ಟು ತ್ವರೆಯಾಗಿ ಮೈಸೂರು ಜೈಲ ಸೂಪರ್ರಿಟೆಂಡೆಂಟರವರಿಂದ ಮೊಬಲಗು ಕೊಡಲ್ಪಡುವದು.

11. ಕಂಟ್ರಾಕ್ಟುದಾರನಿಗೆ ಒಂದು ಖೋಲಿಯು ಬಿಡಲ್ಪಟ್ಟು ಅದರಲ್ಲಿ ಆತನು ನಷ್ಟವಾಗದ ದರೋಬಸ್ತು ಪದಾರ್ಥಗಳನ್ನೂ ಇಟ್ಟುಕೊಳ್ಳಬಹುದು. ಮಾಂಸ ವಗ್ಯೆರೇ ನಷ್ಟವಾಗುವ ಪದಾರ್ಥಗಳು ಪ್ರತಿ ದಿನ ಬೆಳಿಗ್ಯೆ $7\frac{1}{4}$ ಘಂಟೆಗೆ ಜೈಲ್‌ನಲ್ಲಿ ಇರತಕ್ಕದ್ದು.

12. ಕಂಟ್ರಾಕ್ಟು ವಳ ಷಿಕ್ಮಿಗೆ ಕೊಡಲ್ಪಡಕೂಡದು.

13. ಕಂಟ್ರಾಕ್ಟಿನ ನಿಬಂಧನೆಗೆ ತಪ್ಪಿ ನಡೆಯುವ ಬಗ್ಯಾಗಲಿ, ಕಿರದು ತರದ ಯಾವ ಪದಾರ್ಥಗಳನ್ನು ಕೊಡುವ ಬಗ್ಯಾಗಲಿ ಮೈಸೂರು ಜೈಲ ಸೂಪರ್ರಿಟೆಂಡೆಂಟರವರ ಯಖ್ತ್ಯಾರಿಯಿಂದ 50 ರೂಪಾಯಿಗೆ ಮೀರದ ಒಂದು ಜುರ್ಮಾನೆಯು ಹಾಕಲ್ಪಡುವದು, ಬಾರ ಬಾರ ಆ ಮೇರೆ ತಪ್ಪಿದರೆ ಕಂಟ್ರಾಕ್ಟು ರದ್ದು ಮಾಡಲ್ಪಟ್ಟು ಜಾಮೀನ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

14. ಕಂಟ್ರಾಕ್ಟಿ ತಪ್ಪಿ ನಡೆಯುವ ದರೋಬಸ್ತು ಸಂಗತಿಗಳೊಳಗೂ ಮೈಸೂರು ಜೈಲ ಸೂಪರ್ರಿಟೆಂಡೆಂಟರವರ ನಿರ್ಣಯವೇ ಆಖ್ಯೆರಾಗಿರತಕ್ಕದ್ದು.

ಕಂಟ್ರಾಕ್ಟುದಾರನು ಖೈದಿಗಳ ವುಪಯೋಗಾರ್ಥ ತರಕಾರಿಗಳನ್ನು ದರ ಪಾನಿಗೆ 4 ಕಾಸುಗಳ ಮೇರಿಗೆ ಖಾಯಂ ದರದ ಪ್ರಕಾರ ಜೈಲ ತೋಟದಿಂದಲೇ ಕೊಳ್ಳುವದಕ್ಕೆ ಬದ್ಧನಾಗಿರತಕ್ಕದ್ದು.

15. ಆಹಾರ ದರದ ಪಟ್ಟಿಯನ್ನು ಇತರ ಹೆಚ್ಚಿಗೆ ತಪಶೀಲಗಳನ್ನು ಸುದಾ ಸೂಪರ್ರಿಟೆಂಡೆಂಟರವರನ್ನ ಕೇಳಿ ತಿಳದುಕೊಳ್ಳಬಹುದು.

ಪಿ. ಹೆಚ. ಬೇರ್ನ,
ಮೈಸೂರು ಜೈಲ ಸೂಪರ್ರಿಟೆಂಡೆಂಟ.

ಅನೇಕಪ್ಪಿನ ಕೆಲಸಕ್ಕೆ ಜಮ್ಮಾದಾರ್.

ತಾರೀಖು 15ನೇ ಜನವರೀ 1884.

1884ನೇ ಇಸವಿ ಮೇ 1ನೇ ತಾರೀಖು ಲಾಗಾಯತು ಆನೆಗಳನ್ನು ಹಿಡಿಯುವದರಲ್ಲಿ ಮಾಹಿತ'ದಾರನಾದ ಒಬ್ಬ ಲಾಯಖ್ ಜಮಾದಾರ್ ಇಸಂ ವಂದು (ಮುಸಲ್ಮಾನರಾಗಿದ್ದರೆ ವಳ್ಳೇದು) ಬೇಕಾಗಿರುತ್ತೆ. ಕನ್ನಡ ಭಾಷೇಯಲ್ಲಿ ಸಂಪೂರ್ಣವಾಗಿ ವ್ಯಾವಹಾರಿಕ ಜ್ಞಾನವು ಮುಖ್ಯವಾಗಿರುತ್ತೆ. ಕಾಡುಗಳಲ್ಲಿ ವಾಸವಮಾಡುವದಕ್ಕೆ ವಾಡಿಕೆಯಾದ ದೃಢವಾದ ದೇಹಸ್ಥಿತಿಯುಳ್ಳವನು ವಿನಾ ಇತರರು ದರಖಾಸ್ತು ಮಾಡಬೇಕಾದ್ದಿಲ್ಲವು.

ದರಖಾಸ್ತುದಾರರ ಲಾಯಖೀಗಳು, ಪೂರ್ವದ ಯೋಗ್ಯತೆಗಳು, ಖಾಯಿಷ್ ಮಾಡುವ ಸಂಬಳಗಳ ದರ, ವಯಸ್ಸು ವಗ್ಯೆರೇಯನ್ನು ನಮೂದಿಶಿ ಅವರ ಸರಟಿಫಿಕೇಟುಗಳನ್ನು ಮೈಸೂರು ಫಾರೆಸ್ಟು ವ ಫಾರಂಗಳ ಸೂಪರ್ರಿಂಟೆಂಡೆಂಟರವರಿಗೆ ಕೂಡ್ಲೆ ಕಳುಹಿಸತಕ್ಕದ್ದು.

ಹಳೇ ಆನೆಗಳ ಸರಪಣಿಗಳು.

ತಾರೀಖು 15ನೇ ಜನವರೀ 1884.

ಹೊಸ ಸರಪಣಿಗಳ ಅರ್ಜೆ ಬಾಜಾರ್ ನಿರಖಿಗೆ ಬಹಳ ಕಡಮೆಯಾದ ದರಗಳ ಪ್ರಕಾರ, ಆಕಾರಗಳ ಬಾಬತು ಉಪಯೋಗಿಸಲ್ಪಟ್ಟ ಆನೆಯ ಸರಪಣಿಗಳನ್ನು ಮೈಸೂರಲ್ಲಿ ಒದಗಿಸುವ ಬಗ್ಯೆ ದರಖಾಸ್ತುಗಳನ್ನು ಕೊಡಬಹುದೆಂದು ಇದರಡಿ ರುಜು ಮಾಡಿರುವವರಿಂದ ಕೋರಲ್ಪಡುತ್ತೆ. ಪ್ರತಿ ದರಖಾಸ್ತಿನಲ್ಲಿಯೂ, ಸದರೀಯವರ ವಶದಲ್ಲಿರುವ ಸರಪಣಿಗಳ ಸಂಖ್ಯೆ ಮತ್ತು ಆಕೃತಿ, ವಿಸಿಷ್ಟ ಸರಪಣಿಗಳ ತೂಕ, ಸದರೀ ಸರಪಣಿಗಳನ್ನು ಯಾವ ದರಕ್ಕೆ ಒದಗಿಸುವಂತೆ ಹೇಳುತ್ತಾರೋ ಆಬಾಬತು ದರ ಯಿವುಗಳನ್ನು ನಮೂದಿಸತಕ್ಕದ್ದು.

ವಳ್ಳೆಯ ಸ್ಥಿತಿಯಲ್ಲಿಲ್ಲದ ಯಾವ ಸರಪಣಿಗಳಾಗಲಿ ತಿರಸ್ಕರಿಸಲ್ಪಡುವವು.

ಸಿ. ಇ. ಯಂ. ರಸ್ಸಲ್,
ಮೈಸೂರು ಡಿ|| ಫಾರೆಸ್ಟು ವ ಗವರ್ನಮೆಂಟ್
ಫಾರಂಗಳ ಸೂಪರ್ರಿಂಟೆಂಡೆಂಟ್.

ಕಡೂರು ಡಿಸ್ಟ್ರಿಕ್ಟು ಸಬಾರ್ಡಿನೇಟ್ ಜಡ್ಜೀಯವರ ಕೋರ್ಟಿನಲ್ಲಿ.

1884ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 4.

ಮೃತಪಟ್ಟ ಬೇಲೂರ ತಾಲ್ಲೂಕು ನಡುವಾಲ ಫಿರಕಾ ಶನಿವಾರ ಸಂತೆ ಹೋಬಳಿ ಕಳಸಿರಿ ಗ್ರಾಮದ ಚನ್ನೇಗೌಡಯಾನೆ

ಬಿಳೇಗೌಡನ ಆಸ್ತಿ ವಿಷಯವಲ್ಲಿ—

ಅರ್ಜೀದಾರ್ ಚನ್ನಮ್ಮ ಹೆಗ್ಗಡತಿಯು, ಮೃತಪಟ್ಟ ಬಿಳೇಗವುಡನು ವಗ ಆಗಬೇಕೆಂಬ ಹಕ್ಕುದಾರೀ ಮೇಲೆ ಕಳಸಿರಿ ಚನ್ನಮ್ಮನು ಕಳಸಿರಿ ವಾಸಸ್ಥನಾಗಿ ಮೃತಪಟ್ಟ ಬಿಳೇಗವುಡನ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಚನ್ನಮ್ಮನ ಅರ್ಜೀಯನ್ನು 1884ನೇ ಇಸವೀ ಫೆಬ್ರವರೀ ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಿಳೇಗವುಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿದೆ.

1884ನೇ ಇಸವಿ ಜನವರೀ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಬಿ. ತಿರುಮಲಾಚಾರ್,
ಸಬ್ ಜಡ್ಜ್.

Mysore Government Press, Bangalore.—1884.

22841

136

ಮೈಸೂರ ಗೆಜೆಟ್.

ನಂ. 8 ಸರ್ಕಾರದಿಂದ ಪ್ರಾಯಿಷ್ ಆದ್ದು. ಸ್ 1884.

ಬೆಂಗಳೂರು, ಶನಿವಾರ, ಫಿಬ್ರುವರೀ ತಾ॥ 23, ಸ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದೀರ್ವಾರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ರಿಟೆಂಡೆಂಟರು, ಕಾಂಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ ವರ್ಕಸ್ ಆಫೀಸರ್‌ಗಳು, ಮಿಲಿಟೇರಿ ಸಿಕ್ರೆಟರಿಯವರು, ರಿಜಿಸ್ಟ್ರೇಷ್ ಇನ್ಸ್‌ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೇ ಬಕಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟುವ ಸೆ[illegible]ಜಡ್ಜೀರು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ರಿಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮತ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ. ರೆಗ್ಯುಲೇಷನ್‌ಗಳು—ಇಲ್ಲಾ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲಾ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 29ನೇ ಜನವರೀ 1884.

ನಂ. 308.—1879ನೇ ಇಸವಿ 1ನೇ ನಂಬರ್ ಇಂಡಿಯನ್ ಸ್ಟ್ಯಾಂಪ್ ಆಕ್ಟನ್ನು ಮೈಸೂರು ದೇಶಕ್ಕೆ ಜಾರೀಗೆ ತಂದ ಇಂಡ್ಯಾ ಗವರ್ನಮೆಂಟಿನವರ 1879ನೇ ಇಸವಿ 22ನೇ ಮೇ ಮಾಹೆ 99. I. J. ನಂಬರ್‌ವುಳ್ಳ ಇಸ್ತಿಹಾರ್‌ನಾಮೆಯ (ಸಿ) ಕ್ಲಾಜ್ ಅನುಸರಿಸಿ ಶ್ರೀಮತ್ ಮಹಾರಾಜಾ ಸರ್ಕಾರದವರು ಹುಕ್ಕುಂ ಮಾಡುವದೇನಂದರೆ, ವಂದು ಡಿಸ್ಟ್ರಿಕ್ಟಿನ ಸಬ್ ಡಿವಿಜನ್ ಚಾರ್ಜಿನಲ್ಲಿರತಕ್ಕ ಆಫೀಸರರು, ಸದರೀ ಆಕ್ಟಿನ ಅರ್ಥ ಪ್ರಕಾರ ವಬ್ಬ ಕಲೆಕ್ಟರೆಂದು ಎಣಿಸಲ್ಪಡತಕ್ಕದ್ದು.

ತಾರೀಖು 5ನೇ ಫಿಬ್ರುವರೀ 1884.

ನಂ. 311.—ಇದರಿಂದ ಪ್ರಕಟಿಸಲ್ಪಡುವದೇನಂದರೆ, ಕಡೂರು ಡಿಸ್ಟ್ರಿಕ್ಟು ವುತ್ಪತ್ತೀ ಬಾಬತು ಇದರಡಿ ಕಂಡ ನಾಟೂಗಳು ಅವುಗಳ ಚಾರ್ಜುವುಳ್ಳ ಡೆಪ್ಯುಟಿ ಕಮ್ಮಿಷನರಿಂದ, ಅಥವಾ ಸದರೀ ಬಗ್ಯೆ ಅವರು ನೇಮಿಸಬಹುದಾದ ಇತರ ಆಫಿಸರರಿಂದ ಈ ಕೆಳಗೆ ವಿವರಿಸಲ್ಪಟ್ಟ ತಾರೀಖಿನಲ್ಲಿಯೂ, ಸ್ಥಳದೊಳಗೂ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ಹರಾಜ್ ಹಾಕುವ ಸ್ಥಳದ ಹೆಸರು.	ಹರಾಜ್ ಮಾಡುವ ತಾರೀಖು.	ತೇಗದಮರ.	ವುಳಿಸಿಕೊಳ್ಳಲ್ಪಟ್ಟದ್ದು.	ವುಳಿಸಿಕೊಳ್ಳಲ್ಪಡದೆ ಇರುವದು.	ಕೂಪಗಳು.
ಚಿಕ್ಕಮಗಳೂರು ಕೋಠಿ.	1884ನೇ ಫಿಬ್ರುವರೀ 21ನೇ ಮುಕ್ಕಾಂ.	22	10	37	400

ಜುಮ್ಲಾ ಹೆಚ್ಚುಕಡಮೆ—469

ಹರ್‍ರಾಜಿನ ಷರತ್‌ಗಳು—ಸನ್ 1873ನೇ ಜೂನ್ 12ನೇ ಮುಕ್ಕಾಂ 20ನೇ ನಂಬರ್ ಮೈಸೂರು ಗೆಜೆಟಿನಲ್ಲಿ ಪ್ರಕಟಿಸಲ್ಪಟ್ಟ ಪ್ರಕಾರ ಇರತಕ್ಕದ್ದು ಮತ್ತು ಇವುಗಳು ಹರಾಜ್ ಕಾಲದಲ್ಲಿ ಪ್ರಕಟವಾಗಿ ಓದಲ್ಪಡುವದು.

ತಪ್ಪು ದುರಸ್ತು.

ತಾರೀಖು 7ನೇ ಫಿಬ್ರುವರೀ 1884.

ನಂ. 312—1884ನೇ ಇಸವಿ ಜನವರೀ 18ನೇ ಮುಕ್ಕಾಂ 300ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ "1883ನೇ ಇಸವಿ ನವೆಂಬರ್ 15ನೇ ಮುಕ್ಕಾಂ 272ನೇ ನಂಬರು" ಯಂಬ ಮಾತುಗಳಿಗೆ ಬದಲಾಗಿ "1883ನೇ ಇಸವಿ ಡಿಸೆಂಬರ್ 13ನೇ ಮುಕ್ಕಾಂ 287ನೇ ನಂಬರು" ಯಂಬದಾಗಿ ಓದಿಕೊಳ್ಳತಕ್ಕದ್ದು.

ತಾರೀಖು 9ನೇ ಫಿಬ್ರುವರೀ 1884.

ನಂ. 314.—ಚಿಕ್ಕಮಗಳೂರು ಷಹರಿನಲ್ಲಿಯೂ, ಕಡೂರು ಡಿಸ್ಟ್ರಿಕ್ಟಿನಲ್ಲಿಯೂ, ಷರಾಬ್ ತಯಾರಿ ವ ಬಟ್ಟಿ ಬಿಕರೀ ಮಾಡುವ ಬಟ್ಟಿ ಸ್ವಾತಂತ್ರ್ಯದ ಬಗ್ಯೆ ದರಖಾಸ್ತುಗಳು ಕೊಡಬಹುದೆಂದು ಇದರಿಂದ ತಿಳಿಸೋಣಾಗುತ್ತೆ. ಸದರೀ ಡಿಸ್ಟ್ರಿಕ್ಟಿಗೆ ದೀವಾನರವರ 1882ನೇ ಇಸವಿ ನವೆಂಬರ್ 21ನೇ ಮುಕ್ಕಾಂ 131ನೇ ನಂಬರು, ಅದೇ ಇಸವೀ ನವೆಂಬರ್ 25ನೇ ಮುಕ್ಕಾಂ 138ನೇ ನಂಬರು, ಅದೇ ಇಸವಿ ಡಿಸೆಂಬರ್ 7ನೇ ಮುಕ್ಕಾಂ 146ನೇ ನಂಬರು, 1883ನೇ ಇಸವಿ ಜನವರೀ 4ನೇ ಮುಕ್ಕಾಂ 2ನೇ ನಂಬರು, ಮತ್ತು ಅದೇ ಇಸವಿ ನವೆಂಬರು 16ನೇ ಮುಕ್ಕಾ 274ನೇ ನಂಬರು, ಮತ್ತು ಅದೇ ಇಸವಿ ಡಿಸೆಂಬರ್ 14ನೇ ಮುಕ್ಕಾಂ 288ನೇ ನಂಬರ್, ಈ ಇಸ್ತಿಹಾರ್ ನಾಮೆಗಳಿಂದ ಪರಿಷ್ಕರಿಸಲ್ಪಟ್ಟ ಪ್ರಕಾರ ಇದರಡೀ ಕಂಡ ತಾಲ್ಲೂಕುಗಳು ಶೇರಿರುತ್ತವೆ.

1. ಚಿಕ್ಕಮಗಳೂರು
2. ಕಡೂರು
3. ಮೂಡಿಗೆರೆ
4. ತರೀಕೆರೆ
5. ಕೊಪ್ಪ, ಯಡೆಹಳ್ಳಿ ಡೆಪ್ಯುಟಿ ಅಮಲ್ದಾರ್‌ರ ಚಾರ್ಜು ದೇಖೀಲ್.

2. ಈಗ ಯಾವ ಸ್ವಾತಂತ್ರ್ಯದ ಬಗ್ಯೆ ದರಖಾಸ್ತುಗಳು ಖಾಯಿಷ್ ಮಾಡಲ್ಪಡುತವೆಯೋ ಅಂಥಾ ಸ್ವಾತಂತ್ರ್ಯಗಳು, ಯಿದರಡಿ ಮುಂದೆ ವಿಧಿಸಲ್ಪಟ್ಟ ಷರತ್ತುಗಳಿಗೆ ವಳಪಟ್ಟು, 1884ನೇ ಇಸವಿ ಏಪ್ರಲ್ 1ನೇ ಮುಕ್ಕಾಂ ಮೊದಲು 1887ನೇ ಇಸವಿ ಮಾರ್ಚಿ 31ನೇ ಮುಕ್ಕಾಂ ವರಿಗೆ ಆಗುವ ಮೂರು ವರುಷಗಳ ಕಾಲಕ್ಕೆ ಕೊಡಲ್ಪಡುವದು. ಅಂಥಾ ಸ್ವಾತಂತ್ರ್ಯವು ಶೇಂದಿ, ಯೂರೋಪ್ ದೇಶದ ವೈನ್ ಯಂಬ ಸರಾಯಿ, ಸ್ಪಿರಿಟ್ ಸಾರಾಯಿ, ಯಾ ಬಿಯರು ಇವುಗಳ ತಯಾರಿ ಯಾ ಮಾರಾಟವನ್ನು ಅಡಗಿಸಿ ಕೊಂಡಿರುವದಿಲ್ಲ.

3. ದರಖಾಸ್ತುದಾರರು ತಮ್ಮ ದರಖಾಸ್ತುಗಳಲ್ಲಿ ಸಾಲಿಯಾನಾ ಸರಕಾರಕ್ಕೆ ಕಮ್ಮೀವೇಶಿ ಬಲಗು ಯೆಷ್ಟು ಕೊಡುತ್ತೇವೆಂದು ಕರಾರ್ ಮಾಡುವರೋ ಅದನ್ನು ನಮೂದಿಸತಕ್ಕದ್ದು. ತೆರಿಗೆ ಮೊಬಲಗಿನ ರೂಪಾಯಿ 1ಕ್ಕೆ ಮಂದಾಣೆಯಂತೆ ತೆರಬೇಕಾದ ಲೋಕಲ್ ಸೆಸ್ ದೇಖೀಲ್ ತೆರಿಗೆಯ ದರಗಳು ಮತ್ತು ಕಂಟ್ರಾಕ್ಟುದಾರರಿಂದ ಯಾವ ಖರೀದಿಗೆ ಷರಾಬ್ ಕೊಡಲ್ಪಡತಕ್ಕದ್ದೋ ಅಂಥಾ ವಟ್ಟು ಖರೀದೀ ಮೊಬಲಗುಗಳು ಸುದಾ, ಮುಂದೆ ವಿಧಿಸಲ್ಪಟ್ಟ ರೀತಿಯಾಗಿ ಗವರ್ನಮೆಂಟಿನವರಿಂದ, ಗೊತ್ತು ಮಾಡಲ್ಪಡುವದ್ದರಿಂದ ಅಂಥಾ ದರಗಳಿಗಾಗಿ ಬರುವ ಯಾವ ದರಖಾಸ್ತುಗಳೂ ಆಲೋಚಿಸಲ್ಪಡಲಾರದು.

4. ಪ್ರತಿ ದರಖಾಸ್ತಿನ ಸಂಗಡಲೂ ನಗದಾಗಿ ಯಾಗಲಿ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ, 200 ರೂಪಾಯಿಗಳ ಠೇವಣೀ ಮೊಬಲಗು ಕಳುಹಿಸಲ್ಪಟ್ಟು "ಷರಾಬ್ ತಯಾರೀ ವ ಬಟ್ಟಿ ಫುರೋಖ್ತಿನ ಬಟ್ಟಿ ಸ್ವಾತಂತ್ರ್ಯದ ಬಗ್ಯೆ ದರಖಾಸ್ತು" ಯಂಬ ಮಾತುಗಳು ವಿಳಾಸ ಬರೆಯಲ್ಪಟ್ಟ ಲಿಫಾಫೆಯಲ್ಲಿ ಡಾಕಿ ಸನ್ 1884ನೇ ಇಸವಿ ಫಿಬ್ರುವರೀ 26ನೇ ಮಂಗಳವಾರದ ದಿವಸವಾಗಲಿ, ತತ್ಪೂರ್ವದಲ್ಲಾಗಲಿ ಡೆಪ್ಯುಟಿ ಕಮ್ಮಿಷನರವರಿಗೆ ತಲಪುವಂತೆ ಕಳುಹಿಸತಕ್ಕದ್ದು. ಸದರೀ ತಾರೀಖಿನ ತರುವಾಯ ಯಾವ ದರಖಾಸ್ತೂ

ತೆಗೆದುಕೊಳ್ಳಲ್ಪಡುವದಿಲ್ಲ. ದರಖಾಸ್ತುಗಳು 1884ನೇ ಇಸವೀ ಫೆಬ್ರುವರೀ 26ನೇ ಮರ್ಸ್ಕಮಿನ ಮಧ್ಯಾಹ್ನ 1 ಘಂಟೆಗೆ ಹಾಜರಾಗತಕ್ಕ ದರಖಾಸ್ತುದಾರರ ರೂಬರು ಡೆಪ್ಯುಟಿ ಕಮ್ಮಿಷನರವರಿಂದ ಚಿಕ್ಕಮಗಳೂರು ಮೊಕ್ಕಾಂ ಅವರ ಆಫೀಸಿನಲ್ಲಿ ಖುಲ್ಲಾ ಮಾಡಲ್ಪಡುವವು. ದರಖಾಸ್ತುಗಳ ಆಖೈರ್ ವ್ಯವಸ್ಥೆ ದೀವಾನರವರಿಗೆ ಸೇರಿದ್ದಾಗಿರುತ್ತೆ. ಸದರೀಯವರು ಯಾವ ದರಖಾಸ್ತನ್ನಾಗಲಿ, ತಮಾಂ ದರಖಾಸ್ತುಗಳನ್ನಾಗಲಿ ಯಾವ ಸಬಬನ್ನು ತಿಳಿಸದೇಯೇ ತಿರಸ್ಕರಿಸತಕ್ಕ ಸಂಪೂರ್ಣ ಅಧಿಕಾರವನ್ನು ತಾವೇ ಉಳಿಸಿಕೊಂಡಿರುತ್ತಾರೆ. ತಿರಸ್ಕರಿಸಲ್ಪಟ್ಟ ದರಖಾಸ್ತುದಾರರಿಂದ ಇಡಲ್ಪಟ್ಟ ಠೇವಣಿಗಳು ಅವರುಗಳು ಕೇಳಿದಾಗ ವಾಪಸ್ ಕೊಡಲ್ಪಡುವವು.

5. ದೀವಾನರವರಿಗೆ ಸಿಫಾರಸ್ ಮಾಡುವ ಬಗ್ಯೆ ಡೆಪ್ಯುಟಿ ಕಮ್ಮಿಷ್ನರಿಂದ ಚುನಾಯಿಸಲ್ಪಡುವ ದರಖಾಸ್ತುದಾರರು, ಕೂಡ್ಲೇ ನಗದಾಗಿಯಾಗಲಿ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ, ದರಖಾಸ್ತುದಾರರು ಒಡಂಬಡಿಕೆ ಮಾಡಿಕೊಂಡ ಸಾಲೀಯಾನಾ ಕಮ್ಮೀ ಹುಟ್ಟುವಳಿಯ ಹನ್ನೆರಡರಲ್ಲೊಂದು ಭಾಗಕ್ಕೆ (ಅಥವಾ ಒಂದು ತಿಂಗಳ ಖಿಸ್ತಿಗೆ) ಸಮನಾದ ಮೊಬಲಗನ್ನು ಕೂಡ್ಲೆ ಠೇವಣಿ ಯಿಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಠೇವಣಿ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

6. ಯಾವ ದರಖಾಸ್ತುದಾರರ ದರಖಾಸ್ತು ದೀವಾನರವರಿಂದ ಆಖೈರಾಗಿ ಮಂಜೂರ್ಮಾಡಲ್ಪಡುತ್ತದೋ ಅಂಥಾವನು, ತನ್ನ ದರಖಾಸ್ತು ಮಂಜೂರಾದ ಸಂಗತಿ ತನಿಗೆ ತಿಳಿಸಲ್ಪಟ್ಟ ಯೆಂಟು ದಿವಸಗಳೊಳಗಾಗಿ ಮೊದಲೇ ಯಿಡಲ್ಪಟ್ಟ ಡಿಪಾಜಿಟ್ ಮೊಬಲಗಿನೊಡನೆ, ಕರಾರ್ ಮಾಡಿಕೊಳ್ಳಲ್ಪಟ್ಟ ಸಾಲಿಯಾನಾ ಹುಟ್ಟುವಳಿ ಪೈಕಿ, ಕಾಲು ಭಾಗದ ಮೊಬಲಗಿಗೆ ಸಮನಾಗುವಂತೆ ಇನ್ನೂ ಕೆಲವು ಮೊಬಲಗನ್ನು ನಗದಾಗಿಯಾಗಲಿ, ಗವರ್ನಮೆಂಟ್ ಪತ್ರಗಳ ಮೂಲಕವಾಗಿ ಯಾಗಲಿ ಕಡೂರು ಡೆಪ್ಯುಟಿ ಕಮ್ಮಿಷನರಲ್ಲಿ ಠೇವಣೀ ಯಿಡತಕ್ಕದ್ದಲ್ಲದೇ ಇದರಲ್ಲಿ ಮುಂದೆ ವಿಧಿಸಲ್ಪಡುವ ಷರತುಗಳಿಗೆ ಬದ್ಧನಾಗಿ, ತಕ್ಕ ಛಾಪಾಕಾಗದದ ಮೇಲೆ, ವಿಧಿಸಲ್ಪಟ್ಟ ನಮೂನೇ ಪ್ರಕಾರ, ಒಂದು ಕರಾರು ಬರೆದು ಕೊಡತಕ್ಕದ್ದು. ಮತ್ತು ಸದರೀ ದರಖಾಸ್ತುದಾರನು ಕರಾರಿಗೆ ರುಜು ಮಾಡಲಿಕ್ಕಾಗಲಿ, ನೇಮಿಸಲ್ಪಟ್ಟ ಡಿಪಾಜಿಟ್ಟನ್ನ ಯಿಡಲಿಕ್ಕಾಗಲಿ, ತಪ್ಪಿದರೆ ಯಾ ನಿರಾಕರಿಸಿದರೆ ಮೊದಲೇ ಯಿಡಲ್ಪಟ್ಟ ಠೇವಣಿ ಮೊಬಲಗುಗಳು ಸರ್ಕಾರಕ್ಕೆ ಸೇರಿಸಿ ಕೊಳ್ಳಲ್ಪಟ್ಟು ಇಜಾರೇ ಅನ್ಯಥಾ ವಿಲೇ ಮಾಡಲ್ಪಡುವದು.

ಷರತ್ತುಗಳು.

I. ಕರಾರ್ ಮಾಡಿಕೊಳ್ಳಲ್ಪಟ್ಟ ಸಾಲಿಯಾನಾ ಕಮ್ಮೀ ಹುಟ್ಟುವಳೀ ಮೊಬಲಗು, ಸಮನಾದ ಹನ್ನೆರಡು ಮಾಹೇವಾರೀ ಖಿಸ್ತುಗಳ ಪ್ರಕಾರ ಸರ್ಕಾರಕ್ಕೆ ಪಾವತೀ ಮಾಡಲ್ಪಡತಕ್ಕದ್ದು. ಇಜಾರೇದಾರನು ಪ್ರತಿ ತಿಂಗಳಲ್ಲಿ ಡಿಸ್ಟಿಲೇರಿಯಿಂದ ಕೊಡಲ್ಪಟ್ಟ ಷರಾಬಿನ ಮೇಲೆ ಸರ್ಕಾರಕ್ಕೆ ಸಲ್ಲತಕ್ಕ ಲೋಕಲ್ ಸೆಸ್ ದೇಖೀಲ್ ಸರ್ಕಾರದಿಂದ ಗೊತ್ತು ಮಾಡಲ್ಪಟ್ಟ ಧರಗಳ ಪ್ರಕಾರ ವಿಸಿಷ್ಟ ತೆರಿಗೆ ಮೊಬಲಗನ್ನೂ ಆ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ, ತತ್ಪೂರ್ವವಾಗಲಿ, ಕಡೂರು ಡಿಸ್ಟ್ರಿಕ್ಟ್ ಟ್ರೆಜರೀಯಲ್ಲಿ ಪಾವತೀ ಮಾಡತಕ್ಕದ್ದು. ಯಾವದಾದರೂ ತಿಂಗಳ ಆಖೈರ್‌ವರಿವಿಗೆ ಕೊಡಲ್ಪಡುವ ಷರಾಬಿನಮೇಲೆ ಸಲ್ಲತಕ್ಕ ತೆರಿಗೆ ಮೊಬಲಗು, ಕರಾರ್ ಮಾಡಿಕೊಂಡ ಕಮ್ಮೀ ಹುಟ್ಟುವಳೀ ಪೈಕೀ ಮಾಹೇವಾರಿ ಖಿಸ್ತು ಮೊಬಲಗ್ ಭರ್ತಿಗೆ ಸಾಲದೆ ಹೋದರೆ, ಅಂತಾ ಕಮ್ಮೀ ಮೊಬಲಗನ್ನು ಭರ್ತೀ ಮಾಡುವದಕ್ಕೆ ಬೇಕಾದಷ್ಟು ಮೊಬಲಗನ್ನು ಇಜಾರೇದಾರನು ಹೆಚ್ಚಾಗಿ ಪಾವತೀ ಮಾಡತಕ್ಕದ್ದು. ಯಾವದಾದರೂ ಮಾಹೇಯಲ್ಲಿ ನಡೆದ ಜಾಸ್ತಿ ವುರೋಖ್ತು ಅದೇ ಸರ್ಕಾರ್ ಸಾಲಿನ ಯಾವದಾದರೂ ಮಾಹೇಯ ಕಮ್ಮೀ ವುರೋಖ್ತಿಗೆ ಉಪಯೋಗಿಸಲ್ಪಡತಕ್ಕದ್ದು. ಯಾವ ತಿಂಗಳಿಗೆ ಸದರೀ ಮೊಬಲಗುಗಳು ಸಲ್ಲತಕ್ಕದ್ದೋ ಅದರ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ತತ್ಪೂರ್ವವಾಗಲಿ ಅವು ಪಾವತೀ ಯಾಗದೇ ಹೋದರೆ ಬಾಕೀ ನಿಲ್ಲುವ ತಮಾಂ ಮೊಬಲಗಿನ ಮೇಲೂ ಸದರೀ ತಾರೀಖು ಲಾಗಾಯತು ಸಾಲಿಯಾನಾ ಸೇಕಡಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕಟ್ಟಲ್ಪಡುವದು, ಮತ್ತು ಯಾವ ತಿಂಗಳಲ್ಲಿ ಮೊಬಲಗುಗಳು ಬಾಕೀ ಯಾಗುತವೋ ಆ ತಿಂಗಳು ಕಳದ ತರುವಾಯವೂ ಮೊಬಲಗು ಸಲ್ಲದೇ ಹೋದರೆ ಬಡ್ಡೀ ದೇಖೀಲ್ ಸಲ್ಲತಕ್ಕ ಬಾಕೀ ಮೊಬಲಗ್ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ತತ್ಕಾಲದಲ್ಲಿ ಜಾರೀ ಯಿರುವ ರೂಲ್ಸ್‌ನಿಂದ ವಿಧಿಸಲ್ಪಟ್ಟ ಪ್ರಕಾರವಾಗಿ, ಕಂಟ್ರ್ಯಾಕ್ಟುದಾರನ ಸ್ವತ್ತಿನ ಜಫ್ತೀ ಹರಾಜು ಮೂಲಕ ವಸೂಲ್ ಮಾಡಲ್ಪಡತಕ್ಕದ್ದು. ಮತ್ತು ಕಡೂರು ಡೆಪ್ಯುಟಿ ಕಮ್ಮಿಷನರವರ ರಿಪೋರ್ಟಿನ ಮೇಲೆ, ಕಂಟ್ರ್ಯಾಕ್ಟು ರದ್ದು ಮಾಡಲ್ಪಟ್ಟಿರುತ್ತೆಂದು ತಿಳಿಸುವದಕ್ಕೂ, ಕಂಟ್ರ್ಯಾಕ್ಟುದಾರನಿಂದ ಇಡಲ್ಪಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳುವಂತೆ ಅಪ್ಪಣೆ ಮಾಡುವದಕ್ಕೂ, ಮತ್ತು ಕಂಟ್ರ್ಯಾಕ್ಟು ಕಾಲದ ಪೈಕೀ ಉಳಿದ ಕಾಲದಲ್ಲಿ ಕಂಟ್ರ್ಯಾಕ್ಟುದಾರನ ಖರ್ಚಿಗೂ ಲುಕ್‌ಸಾನಿಗೂ ವಳಪಟ್ಟು ಬಾಬು ಅಮಾನಿಯಲ್ಲಾಗಲಿ ಅನ್ಯಥಾ ಆಗಲಿ ಇಡುವದಕ್ಕೂ ಸಹ ದೀವಾನರವರ ಯಿಖ್ತ್ಯಾರಿಗೆ ಸೇರಿರುತ್ತದೆ.

II. ಪ್ರತಿ ಸಾಲಿನ ಲೆಖ್ಖಗಳೂ ಪ್ರತ್ಯೇಕ ಪ್ರತ್ಯೇಕವಾಗಿ ಖೈದ್ ಮಾಡಲ್ಪಡತಕ್ಕದ್ದು. ಒಂದು ಸಾಲಿನಲ್ಲಿ ಕೊಡಲ್ಪಟ್ಟ ಸಾರಾಯಿ ಮೇಲೆ ಗವರ್ನಮೆಂಟಿಗೆ ಸಲ್ಲತಕ್ಕ ತೆರಿಗೆಯು ಆಸಾಲಿಗೆ ಕರಾರ್ ಮಾಡಿದ ಕಮ್ಮೀ ಹುಟ್ಟುವಳಿಗೆ ಜಾಸ್ತೀ ಆದರೆ, ಅಂತಾ ಜಾಸ್ತೀಯಾದ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 1 ಆಣೆಗೆ ಸಮನಾಗಿ, ಇಜಾರೇದಾರನಿಂದ ಸಲ್ಲಬೇಕಾದ ತೇಗೆ ದೆಸೆ

ಯಿಂದ ವಜಾ ಕೊಡಲ್ಪಡುವದು, ಆದರೆ ಒಂದು ವರುಷದ ಜಾಸ್ತೀ ಮೊಬಲಗು ಇಜಾರೇ ಪೈಕೀ ಯೂವದಾದರೂ ಇತರ ಸಾಲಿನ ಕರಾರ್ ಮೊಡಿದ ಹುಟ್ಟುವಳೀ ಮೊಬಲಗಿನಲ್ಲಿ ಕಮ್ತೀ ಬೀಳತಕ್ಕ ಯೂವ ಮೊಬಲಗನ್ನಾಗಲಿ ಭರ್ತೀ ಮಾಡುವ ಬಗ್ಯೆ ಉಪಯೋಗಿಸುವದಿಲ್ಲ.

III. ಕಂಟ್ರ್ಯಾಕ್ಟುದಾರನು ಚಿಕ್ಕಮಗಳೂರಲ್ಲಿರುವ ಸರ್ಕಾರ್ ಡಿಸ್ಟಿಲೇರಿಯ ಆವರಣದೊಳಗಾಗಲಿ ಅಥವಾ ಡೆಪ್ಯುಟಿ ಕಮ್ಮಿಷನರಿಂದ ಗೊತ್ತು ಮೊಡಲ್ಪಡಬಹುದಾದ ಇತರ ಸ್ಥಳದಲ್ಲ್ಯಾಗಲಿ ಷರಾಬ್ ತಯೂರ ಮೊಡುವಂತೆಯೂ, ಮತ್ತು ಡೆಪ್ಯುಟಿ ಕಮ್ಮಿಷನರಿಂದ ಮೊಕರರ್ ಮೊಡಲ್ಪಡತಕ್ಕಂಥಾ ಸ್ಥಳಗಳೊಳಗೆ ಬಟ್ಟಿ ಕೋಠಿಗಳನ್ನು ಸ್ಥಾಪಿಸುವಂತೆಯೂ, ನಿಯಮಿಸಲ್ಪಡತಕ್ಕದ್ದು. ಡೆಪ್ಯುಟಿ ಕಮ್ಮಿಷನರಿಂದಾಗಲಿ, ಅಥವಾ ಅಜಮಾಯಿಷೀ ಬಗ್ಯೆ ಮೊಕರರ್ ಮಾಡಲ್ಪಟ್ಟಿರತಕ್ಕ ಯಾವ ಉದ್ಯೋಗಸ್ಥರಿಂದಲಾಗಲಿ. ತನಿಖೀ ನೋಡುವ ಬಗ್ಯೆ ಸರ್ವಕಾಲಗಳಲ್ಲಿಯೂ ಡಿಸ್ಟಿಲೇರಿ ಮತ್ತು ಕೋಠೀಗಳು ಖುಲ್ಲಾವಾಗಿರತಕ್ಕದ್ದು. ಯಾವ ಷರಾಬನ್ನೂ ಸದರೀ ಬಗ್ಯೆ ಮೊಕರರ್ ಮಾಡಲ್ಪಡುವ ಒಬ್ಬ ಉದ್ಯೋಗಸ್ಥನಿಂದ ಅಳತೆ ಮೊಡಲ್ಪಟ್ಟು ಅಜಮಾಯಿಷಿ ಮೊಡಲ್ಪಟ್ಟ ಹೊರತು ಡಿಸ್ಟಿಲೇರಿಯಿಂದ ಹೊರಗೆ ತೆಗದುಕೊಂಡು ಹೋಗಕೂಡದು. ಡಿಸ್ಟಿಲೇರಿ ಕಟ್ಟಡಗಳನ್ನು ಉಪಯೊಗಿಸತಕ್ಕ ಬಗ್ಯೆ ಸದರೀ ಕಟ್ಟಡಗಳ ಮೌಲ್ಯದ ಮೇಲೆ ಶೆಕಡಾ ಆರರ ಪ್ರಕಾರ ಲೆಖ್ಖ ಮೊಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಗೊತ್ತು ಮಾಡಲ್ಪಡುವಂಥಾ ಸಾಲಿಯಾನಾ ಬಾಡಿಗೆಯನ್ನು ಕಂಟ್ರ್ಯಾಕ್ಟುದಾರನು ಮಾಹೇಯಾನಾ ಗವರ್ನಮೆಂಟಿಗೆ ಸಂದಾಯ ಮಾಡಲ್ಪಡುವಂತೆಯೂ, ಸದರೀ ಕಟ್ಟಡಗಳನ್ನು ಪೂರಾ ದುರಸ್ತು ಸ್ಥಿತಿಯಲ್ಲಿ ಯಿಟ್ಟು ಕೊಂಡಿರುವಂತೆಯೂ ನೇಮಿಸಲ್ಪಡತಕ್ಕದ್ದು. ಇಜಾರೇದಾರನು ಪೂರ್ವದ ಇಜಾರೇದಾರರಿಂದ ಬಟ್ಟಿ ಯಿಳಿಸಲ್ಪಟ್ಟು, ಸನ್ 1884ನೇ ಇಸವಿ ಏಪ್ರೈಲ್ 1ನೇ ತಾರೀಖಿನಲ್ಲಿ ಹಾಜರಿರಬಹುದಾದ ಯಾವ ಸಾರಾಯಿಯನ್ನಾಗಲಿ, ಆ ಬಗ್ಯೆ ದೀವಾನರವರ ಮಂಜೂರಾತಿ ನಿಸೀ ಡೆಪ್ಯುಟಿ ಕಮ್ಮಿಷನರವರಿಂದ ಠರಾವು ಮಾಡಲ್ಪಡಬಹುದಾದಂಥಾ ಈಡು ಮೊಬಲಗನ್ನು ಕೊಟ್ಟು ತನ್ನ ವಶಕ್ಕೆ ತೆಗದುಕೊಳ್ಳತಕ್ಕದ್ದು.

IV. ತಯಾರ್ಮಾಡಲ್ಪಡುವ ಸಾರಾಯಿ ಒಳ್ಳೇ ಗುಣವುಳ್ಳದ್ದಾಗಿರತಕ್ಕದ್ದು. ಬಟ್ಟಿ ಯಿಳಿಸುವಲ್ಲಿ ಉಪಯೋಗಿಸಲ್ಪಡತಕ್ಕ ಪದಾರ್ಥಗಳು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಟ್ಟು ಒಳ್ಳೇ ಗುಣವುಳ್ಳವಾಗಿರಬೇಕಾದ್ದಲ್ಲದೆ ಅವುಗಳು ಡಿಸ್ಟಿಲೇರಿಯಲ್ಲಿ ತೆಗದುಕೊಳ್ಳಲ್ಪಡುವದಕ್ಕೆ ಮುಂದಾಗಿ ಡಿಸ್ಟಿಲೇರಿ ಸೂಪರ್ ವೈಜರಿಗೆ ಅಥವಾ ಈ ಬಗ್ಯೆ ಮೊಕರ್ ಮಾಡಲ್ಪಡತಕ್ಕ ಇತರ ಉದ್ಯೋಗಸ್ಥನಿಗೆ ತೋರಿಸಲ್ಪಟ್ಟು ಅವರಿಂದ ಪ್ಯಾಸ್ ಮಾಡಲ್ಪಡತಕ್ಕದ್ದು. ಸಾರಾಯಿ ಬಟ್ಟಿ ಯಿಳಿಸುವಲ್ಲಿ ಆರೋಗ್ಯಕ್ಕೆ ವಿರುದ್ಧವಾದ ಯಾವ ಪದಾರ್ಥಗಳನ್ನೂ ಉಪಯೋಗಿಸಕೂಡದು, ಅಥವಾ ಷರಾಬ್ ತಯಾರ್ಮಾಡಲ್ಪಟ್ಟ ತರುವಾಯ ಅದರಲ್ಲಿ ಹಾಕಲೂಕೂಡದು; ಮತ್ತು ಉಪಯೋಗಿಸಲ್ಪಡುವ ಯೆಲ್ಲಾ ಪದಾರ್ಥಗಳೂ ಪ್ರಥಮತಃ ವಿಧಿಸಲ್ಪಟ್ಟ ದಾಮೊಷಾಯಿ ಪ್ರಕಾರ ಇರತಕ್ಕವು; ಅಥವಾ ಕಂಟ್ರ್ಯಾಕ್ಟುದಾರನಿಂದ ರೋಜೇನಾ ತಯಾರ್ಮಾಡಲ್ಪಡುವದರ ಫಲಿತಾಂಶಗಳು ಸರ್ಕಾರ್ ಆಫೀಸರುಗಳಿಂದ ನ್ಯಾಯವಾದ ತನಿಖಿ ನಡಿಸಲ್ಪಡಲಿಕ್ಕೋಸ್ಕರ ಐಯಿಂದ ಗವರ್ನಮೆಂಟಿನವರಿಂದ ನಿರ್ಣಯಿಸಲ್ಪಡುವ ದಾಮೊಷಾಯಿ ಪ್ರಕಾರವಾಗಲಿ ಇರತಕ್ಕದ್ದು.

V. ಇಜಾರೇದಾರನು, ಡಿಸ್ಟಿಲೇರಿಯಲ್ಲಿಯೂ, ಪ್ರತಿ ಕೋಠಿಯಲ್ಲಿಯೂ, ತಯಾರ್ಮಾಡಲ್ಪಡುವ ಸಾರಾಯಿಗಳ ಜಮಾಖರ್ಚುಗಳು, ತೇದಾದು, ವ ಸ್ಟ್ರೆಂಗ್ತ್, ಇವುಗಳ ಕರಾರ್‌ವಾಕಾ ಲೆಖ್ಖಗಳನ್ನು, ಮತ್ತು ಡಿಸ್ಟಿಲೇರಿಯಲ್ಲಿ ರೋಜೇನಾ ಜಮಾಖರ್ಚು ಆದ ಯೆಲ್ಲಾ ಪದಾರ್ಥಗಳ ಲೆಕ್ಕಗಳನ್ನೂ ಸುದಾ ವಿಧಿಸಲ್ಪಟ್ಟ ನಮೂನೆಗಳಲ್ಲಿ ಇಡತಕ್ಕದ್ದು, ಆತನು ಡೆಪ್ಯುಟಿ ಕಮ್ಮಿಷನರವರಿಂದಾಗಲಿ, ಸೂಪರ್‌ವೈಜರಿಂದಾಗಲಿ, ಈ ಬಗ್ಯೆ ಮೊಕರರ್ಮಾಡಲ್ಪಡುವ ಯೂವ ಉದ್ಯೋಗಸ್ಥನಿಂದಾಗಲಿ ತನಿಖೀ ನೋಡುವ ಬಗ್ಯೆ ಹಾಜರ್ ಮಾಡುವಂತೆ ಕೇಳಲ್ಪಟ್ಟಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

VI. ಒಂದು ತಿಂಗಳಿಗೆ ಆಗುವಷ್ಟು ಸಾರಾಯಿಯನ್ನು ಯಾವಾಗ್ಯೂ ಹಾಜರೀಯಲ್ಲಿಟ್ಟುಕೊಂಡಿರಲಿಕ್ಕೆ ಬಟ್ಟೀದಾರನು ಬದ್ಧನಾಗಿರತಕ್ಕದ್ದು; ಸನ್ 1884ನೇ ಏಪ್ರೈಲ್ ಗುರ್ರೇ ತಾರೀಖು ಮೊದಲು, ಈ ಮೇರೆ ಹಾಜರಿರುವ ಬಗ್ಯೆ ಸದರೀ ತಾರೀಖಿಗೆ ಮುಂದೆಯೇ ಬಟ್ಟೀ ಯಿಳಿಸಲಿಕ್ಕೆ ಷುರು ಮಾಡತಕ್ಕದ್ದು, ಪರಂತು ಹಾಗೆ ಬಟ್ಟೀ ಯಿಳಿಸಲ್ಪಟ್ಟ ಯಾವ ಸಾರಾಯಿಯೂ, ಸನ್ 1884ನೇ ಏಪ್ರೈಲ್ 1ನೇ ತಾರೀಖಿಗೆ ಮುಂದಾಗಿ ತನ್ನ ವಶದಿಂದಲಾಗಲಿ, ತನ್ನ ಕೈಕೆಳಗಣ ಉದ್ಯೋಗಸ್ಥನ ವಶದಿಂದಲಾಗಲಿ, ಮಾರಲ್ಪಡಕೂಡದು, ಯಾ ಸಾಗಿಸಲ್ಪಡಕೂಡದು. ಇಜಾರೇದಾರನು, ತಮೂಂ ತಾಲ್ಲೂಕು ಕಸಬಾ ಜಾಗಗಳಲ್ಲಿಯೂ, ಡೆಪ್ಯುಟಿ ಕಮ್ಮಿಷನರಿಂದ ಮಂಜೂರ್ಮಾಡಲ್ಪಡುವ ದೊಡ್ಡ ಷಹರ್‌ಗಳೊಳಗೂ, ಒಟ್ಟು ಫುರೋಖ್ತು ಅಂಗಡಿಗಳನ್ನು ಇಡುವದಕ್ಕೆ ಅಪ್ಪಣೆ ವುಂಟಾಗತಕ್ಕದ್ದು. ಸದರೀ ಯೆಲ್ಲಾ ಜಾಗಗಳ ಪಟ್ಟಿಯು, ಕೇಳಿದಾಗ ಡೆಪ್ಯುಟಿ ಕಮ್ಮಿಷನರವರಿಗೆ ಕೊಡಲ್ಪಡತಕ್ಕದ್ದು, ಮತ್ತು ಕಂಟ್ರ್ಯಾಕ್ಟುದಾರನು ಅಂಗಡೀ ಒಂದಕ್ಕೆ ಮಾಹೇಯಾನಾ ವಿಧಿಸಲ್ಪಟ್ಟ 2 ರೂಪಾಯಿಗಳ ಲೈಸೆನ್ಸ್ ಫೀಯನ್ನು ಕೊಡತಕ್ಕದ್ದು.

VII. ಷರತ್ತುಗಳ X ವ XIIನೇ ರೂಲುಸಗಳಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಹೊರ್ತು, ಡಿಸ್ಟಿಲೇರಿಯಲ್ಲಾಗಲೀ ಬಟ್ಟು ಫುರೋಖ್ತು ಅಂಗಡಿಗಳಲ್ಲಾಗಲೀ ಸಾರಾಯಿಯನ್ನು ಚಿಲ್ಲರೇ ಫುರೋಖ್ತು ಮಾಡಕೂಡದು.

VIII. ಚಿಲ್ಲರೇ ಫುರೋಖ್ತು ಅಂಗಡಿಗಳು, ಡಿಸ್ಟ್ರಿಕ್ಟು ಜಾತ' ಡೆಪ್ಯುಟಿ ಕಮ್ಮಿಷನರ ವಿಚಾರಣೆಯಲ್ಲಿಯೂ, ಮ್ಯುನಿಸಿಪಲ್ ಷಹರ ಗಳಲ್ಲಿ, ದೀವಾನರವರಿಂದ ಹುಕ್ಕುಂ ಮಾಡಲ್ಪಟ್ಟರೆ, ಅಂತಾ ಷಹರಗಳ ಮ್ಯುನಿಸಿಪಲ್ ಪ್ರೆಸಿಡೆಂಟರ ಯಾ ವೈಸ್ ಪ್ರೆಸಿಡೆಂಟರ ವಿಚಾರಣೆಯಲ್ಲಿಯೂ ಇರತಕ್ಕದ್ದು; ಮತ್ತು ಅವರುಗಳ ಮಂಜೂರಾತಿ ಯಿಲ್ಲದೆ ಅವರುಗಳಿಂದ ಮೊಕರರ್ ಮಾಡಲ್ಪಡುವ ಅಂಥಾ ಸ್ಥಳಗಳಲ್ಲದೆ ಚಿಲ್ಲರೇ ಅಂಗಡಿ ಯಾವವೂ ಇಡಲ್ಪಡತಕ್ಕದ್ದಲ್ಲ. ಯಾವ ಅಂಗಡಿಗಳನ್ನಾಗಲಿ, ಪಬ್ಲಿಕ್ ಜರೂರಾತಿ ಸಬಬಿನಿಂದ ಇಜಾರೇದಾರನು ತನಿಗೆ ಈಡು ಕೊಡಬೇಕೆಂದು ಕೇಳುವ ಹಕಿ ಲ್ಲದೇನೆ ಮುಚ್ಚುವಂತೆ ಹುಕ್ಕುಂ ಮಾಡಲಿಕ್ಕೆ ಅವರು ಅರ್ಹರಾಗಿರತಕ್ಕದ್ದು.

IX. ಚಿಲ್ಲರೇ ಅಂಗಡಿಗಳಿಗೆ ಲೈಸೆನ್ಸಗಳು ಗವರ್ನಮೆಂಟಿನವರಿಂದ ಆಗಿಂದಾಗ್ಯೆ ಮೊಕರರ್ ಮಾಡಲ್ಪಡಬಹುದಾದಂಥಾ ಲೈಸೆನ್ಸ ರುಸುಂಗಳನ್ನು ಕೊಟ್ಟಮೇಲೆ ಸದರೀ ಆಫೀಸರಗಳಿಂದ ಮಾಮೂಲ್ ನಮೂನೆಯಲ್ಲಿ ಕೊಡಲ್ಪಡುವದು.

ಕ್ರಮ ಪಡಿಸಲ್ಪಟ್ಟ ದಾರಣೆಗೆ ಮತ್ತು ವಿಧಿಸಲ್ಪಟ್ಟ ಸ್ಟ್ರೆಂಗ್ತಿನಿಂದ ಸಾರಾಯಿಯನ್ನು ಫುರೋಖ್ತು ಮಾಡುವದಕ್ಕೂ, ಜರೂರಾದ ಇತರ ಷರತ್ತುಗಳ ಬಗ್ಯೂ ಲೈಸೆನ್ಸಗಳಲ್ಲಿ ನಿಬಂಧನೆ ಮಾಡಲ್ಪಡುವದು. ಚಿಲ್ಲರೇ ಫುರೋಖ್ತುದಾರರು ಅವರಿಗೆ ಅತ್ಯಂತ ಸಮೀಪದಲ್ಲಿನ ಅಥವಾ ಅವರು ಸಾಲೀಯೊನಾ ತೆಗದುಕೊಳ್ಳುವದಕ್ಕೆ ಚುನಾಯಿಸುವ ಬಟ್ಟು ಅಂಗಡಿಗಳಿಂದಲೇ ಸಾರಾಯಿಯನ್ನು ಕೊಂಡುಕೊಳ್ಳತಕ್ಕದ್ದು. ಸದರೀ ಚಿಲ್ಲರೇ ಫುರೋಖ್ತುದಾರರು, ಅಕ್ರಮವಾದ ವಿಷಯಗಳೇನೂ ನಡೆಯದೇ ಇರುವದನ್ನು ನೋಡುವ ಬಗ್ಯೆ ತಮ್ಮ ಅಂಗಡಿಗಳೊಳಗೆ ಇಜಾರೇದಾರರಿಗಾಗಲೀ ಅವರ ಮುತಾಲೀಕರಿಗಾಗಲಿ ಅಬ್ಕಾರಿ ಆಫೀಸರುಗಳಿಗಾಗಲೀ ಕ್ರಮಪ್ರಕಾರ ಅಧಿಕಾರ ಹೊಂದಿದ ಯಾವ ಸರ್ಕಾರ್ ನವುಕರನಿಗಾಗಲಿ ಅವಕಾಶ ಸಹ ಕೊಡತಕ್ಕದ್ದು. ಮತ್ತು ಪ್ರತಿದಿನ ತಾವು ತೆಗದುಕೊಳ್ಳುವ ಸಾರಾಯಿಯ ತೇದಾದ್ ವ ಸ್ಟ್ರೆಂಗ್ತ ಮತ್ತು ಸದರೀ ಬಗ್ಯೆ ಹಾಕಲ್ಪಡುವ ಖರೀದಿಗಳು ಇವುಗಳ ನಿಜವಾಗಿಯೂ ಕರಾರ್‌ವಾಕಾ ಆಗಿಯೂ ಇರುವ ಲೆಖ್ಖಗಳನ್ನು ಇಡತಕ್ಕದ್ದಲ್ಲದೇ ಇಜಾರೇ ದಾರನಿಂದಾಗಲಿ ಅವನ ಮುತಾಲೀಕನಿಂದಾಗಲೀ ಸದರೀ ಲೆಕ್ಕ ಕೇಳುವಂತೆ ಅಧಿಕಾರ ಕೊಡಲ್ಪಟ್ಟ ಯಾವ ಸರಕಾರದ ಉದ್ಯೋಗಸ್ಥನಿಂದಾಗಲಿ ಹಾಗೆ ಅಪೇಕ್ಷಿಸಲ್ಪಟ್ಟಾಗ ತನಿಖಿ ನೋಡುವ ಬಗ್ಯೆ ಅವುಗಳನ್ನು ಹಾಜರ್ ಮಾಡತಕ್ಕದ್ದು.

X. ಡಿಸ್ಟಿಲೇರಿಯಿಂದ ಸಾರಾಯಿ ಕೊಡುವದನ್ನು ಕುರಿತ ಈ ಕೆಳಗೆ ಬರುವ ರೂಲ್ಸ್ ಅನುಸರಿಸಲ್ಪಡತಕ್ಕದ್ದು.

(*a*) ಸಾಧಾರಣವಾಗಿ 20 ಡಿಗ್ರಿ ಅಂಡರ್ ಪ್ರೂಫಿಗೆ ಹೆಚ್ಚಿದ ಸ್ಟ್ರೆಂಗ್ತಿನಿಂದ ಯಾವ ಸಾರಾಯಿಯನ್ನೂ ಕೊಡತಕ್ಕದ್ದಲ್ಲವು, ಆದರೆ ಕಂಟ್ರಾಕ್ಟುದಾರನಾಗಲಿ, ಚಿಲ್ಲರೇ ಫುರೋಖ್ತುದಾರನಾಗಲೀ ಮೇಲೆಕಂಡ ಸ್ಟ್ರೆಂಗ್ತಿಗಿಂತ ಹೆಚ್ಚಾದ ಸ್ಟ್ರೆಂಗ್ತಿನಲ್ಲಿ ಸಾರಾಯಿ ಕೊಡಲಿಕ್ಕೆ ಅಪೇಕ್ಷಿಸಿದರೆ ಹಾಗೆ ಕೊಡಲ್ಪಡುವ ಸ್ಪಿರಿಟ್ ಸಾರಾಯಿಯು ಪ್ರೂಫಿಗಿಂತ ಹೆಚ್ಚು ಸ್ಟ್ರೆಂಗ್ತ ವುಳ್ಳದ್ದಾಗಿರಕೂಡದು. ಪ್ರೂಫಿಗೆ ಸಮನಾದ ಬಲವುಳ್ಳ ಸಾರಾಯಿಯು, ಯರಡು ಡಜನ್ ಕ್ವಾರಟ್ ಶೀಶೆಗಳಲ್ಲಿಯೂ, ನಾಲ್ಕು ಡಜನ್ ಪಯಿಂಟ್ ಶೀಶೆಗಳಲ್ಲಿಯೂ, ಇಂಗ್ಲೀಷ್ ಮತ್ತು ಪರಾಯಿ ದೇಶದಂತೆಯೇ ಕಮ್ಮೀ ತೇದಾದಿನ ಡಬ್ಬಗಳಲ್ಲಿ ಡಿಸ್ಟಿಲೇರಿಯಿಂದ ಕೊಡಲ್ಪಡುವದು; ಅದು ಡಿಸ್ಟಿಲೇರಿಯಲ್ಲಿ ಸೂಪರ್ ವೈಜರವರಿಂದ ಮೊಹರ್ಮಾಡಲ್ಪಟ್ಟ ಪ್ರಕಾರವೇ, ಬದಲಾಯಿಸದಂತೆಯೂ ಸೂಪರ್ ವೈಜರವರ ಪ್ಯಾಸಿನ ಆಧಾರದ ಮೇಲೂ ಬಟ್ಟು ಅಂಗಡಿಗಳಿಂದ ಚಿಲ್ಲರೇ ಬಿಕರಿದಾರರಿಗೆ ಫುರೋಖ್ತು ಮಾಡಲ್ಪಡತಕ್ಕದ್ದು. ಚಿಲ್ಲರೇ ಬಿಕರೀದಾರರು ಅಂಥಾ ಷರಾಬನ್ನು ಅವರಿಗೆ ಗೊತ್ತಿರುವಂಥಾ ಮರ್ಯಾದೆವುಳ್ಳ ಜನಗಳಿಗೆ ಮಾತ್ರವೇ ಸೂಪರ್ ವೈಜರವರಿಂದ ಕೊಡಲ್ಪಟ್ಟ ಅಲಾಹಿದ ಪ್ಯಾಸುಗಳೊಂದಿಗೆ ಕೊಡತಕ್ಕದ್ದು. ಮತ್ತು ಬಟ್ಟು ಬಿಕರಿದಾರರು ವ ಚಿಲ್ಲರೇ ಫುರೋಖ್ತುದಾರರು ಸುದಾ ಅಂಥಾ ಬಿಕರೀಗಳಿಗೆ ವಿಧಿಸಲ್ಪಟ್ಟ ನಮೂನೆಯಲ್ಲಿ ಲೆಕ್ಕ ಕೊಡತಕ್ಕದ್ದು.

(*b*) ಪ್ರೂಫಿಗಿಂತ ಹೆಚ್ಚು ಸ್ಟ್ರೆಂಗ್ತಿನ ಸಾರಾಯಿಯನ್ನು ಇಜಾರೇದಾರನು ಕೊಡಲಿಕ್ಕೆ ಅಪೇಕ್ಷಿಸಿದರೆ, ಆ ಬಗ್ಯೆ, ಸೂಪರ್‌ವೈಜರ್ ಮೂಲಕ ಡೆಪ್ಯುಟಿ ಕಮ್ಮಿಷನರವರ ವಿಶೇಷ ಹುಕ್ಕುಂಗಳನ್ನು ಪಡೆಯತಕ್ಕದ್ದು, ಸದರೀ ಸೂಪರ್‌ವೈಜರು ಸದರೀ ಅಂಕಗಳನ್ನು ಸೂಚಿಸಿ, ಅದರಂತೆ ಬಟ್ಟು ಬಿಕ್ರಿ ಅಂಗಡಿಗಳಿಗೆ ಪ್ಯಾಸಗಳುಯಾನೇ ರಹದಾರೀಗಳನ್ನು ಕೊಡತಕ್ಕದ್ದು. ಹಾಗೆಕೊಡಲ್ಪಟ್ಟ ಸಾರಾಯಿಯು, ಈ ಪ್ಯಾರಾ (*a*) ಕ್ಲಾಜಿನಲ್ಲಿ ವಿಧಿಸಲ್ಪಟ್ಟ ಪ್ರಕಾರ ವಿಕ್ರಯಿಸಲ್ಪಟ್ಟ ಲೆಕ್ಕ ಇಡಲ್ಪಡತಕ್ಕದ್ದು.

(*c*) ಅಂಡರ್ ಪ್ರೂಫ್ ಬಾಬತು 20° ಡಿಗ್ರೀಗೆ ಮೇಲ್ಪಟ್ಟ ಸ್ಟ್ರೆಂಗ್ತ ವುಂಟಾಗಿ ಮತ್ತು ಪ್ರೂಫಿನವರಿಗೆ ಇದ್ದು, ಕೊಡಲ್ಪಡುವ ತಮಾಂ ಸಾರಾಯಿಗೂ, ಪ್ರೂಫಿನ ಮೇಲೆ ತೀರ್ವೆಯನ್ನು ವಿಧಿಸತಕ್ಕದ್ದು. ಪ್ರೂಫಿನ ಮೇಲಣ ದರವು ಜಲಪರಿಮಾಪಕ ಯಂತ್ರದ ದರಗಳ ಪ್ರಕಾರ ದಾಮಾಷಾಯಿ ಮೇಲೆ ಜಾಸ್ತಿ ಮಾಡಲ್ಪಡತಕ್ಕದ್ದು.

(*d*) ಅಂಡರ್ ಪ್ರೂಫಿನ 20° ಡಿಗ್ರೀಗೆ ಕೀಳ್ಪಟ್ಟ ಯಾವ ಸಾರಾಯಿಯೂ, ಸಾಧಾರಣವಾಗಿ ಡಿಸ್ಟಿಲೇರಿಯಿಂದ ಕೊಡಲ್ಪಡಕೂಡದು; ಪರಂತು, ಅಂಡರ್‌ಪ್ರೂಫಿನ 20° ಡಿಗ್ರೀ ಸ್ಟ್ರೆಂಗ್ತಿಂಗಿಂತ ಕಡಮೆ ಶಕ್ತಿಯುಳ್ಳ ಸಾರಾಯಿ ಬಗ್ಯೆ ತಗಾದೇ ಉಂಟಾದರೆ ಅಂಡರ್‌ಪ್ರೂಫಿನ 30° ಡಿಗ್ರೀ ಸಾರಾಯಿಯು, ದಾಮೂಷಾಯಿ ಪ್ರಕಾರ ಕಮ್ಮಿ ಮಾಡಲ್ಪಟ್ಟ ತೀರ್ವೆಯ ದರಗಳ ಮೇರೆ ಡಿಸ್ಟಿಲೇರಿಯಿಂದ ವಿಶೇಷತಃ ಕೊಡಲ್ಪಡಬಹುದು. ಅಂತಾ ಸಾರಾಯಿಯು, ಬಟ್ಟು ಕೋಠೀಗಳಲ್ಲಿಯೂ, ಚಿಲ್ಲರೇ ದುಕಾನಗಳೊಳಗೂ ಪ್ರತ್ಯೇಕ ಪ್ರತ್ಯೇಕವಾಗಿ ಇಡಲ್ಪಟ್ಟು ಲೆಕ್ಕ ಕೊಡಲ್ಪಡತಕ್ಕದ್ದು.

XI. ಸಾರಾಯಿಯು ಡಿಸ್ಟಿಲ್ಲೆರಿಯಿಂದ ಕೊಡಲ್ಪಟ್ಟ ಮೇರೆ ಪುರೋಖ್ತು ಮಾಡಲ್ಪಡತಕ್ಕದ್ದೇ ಹೊರತು, ಬಟ್ಟು ಬಿಕ್ರಿಯ ಅಥವಾ ಚಿಲ್ಲರೇಅಂಗಡಿಗಳಲ್ಲಿ ಯಾವ ರೀತಿಯಲ್ಲಾಗಲಿ ಇತರ ಪದಾರ್ಥ ಬೆರಿಕೇ ಮಾಡಕೂಡದು ಅಥವಾ ನೀರು ಬೆರಿಸಕೂಡದು.

XII. ಅಂಡರ್‌ಪ್ರೂಫಿನ ಬಾಬತು 20° ಡಿಗ್ರೀಯ ಸ್ಟ್ರೆಂಗ್ತಿನ ಸಾರಾಯಿಯ ಮೇಲೆ ಸಲ್ಲತಕ್ಕ ರೂಪಾಯಿಗೆ ಬಂದಾಣೆ ಮೇರೆ ಲೋಕಲ್‌ಸೆಸ್ ದೇಖೀಲ್ ಗವರ್ನಮೆಂಟ್ ತೀರ್ವೆಯೂ, ಸದರೀ ಸಾರಾಯಿ, (ಇತರ ಪದಾರ್ಥ ಬೇರಿಕೆ ಇಲ್ಲದೆಯೂ, ನೀರು ಬೆರಿಕೆಯಾಗದೆಯೂ) ಬಟ್ಟು ಪುರೋಖ್ತು ಅಂಗಡಿಯಲ್ಲಿಯೂ ಚಿಲ್ಲರೆ ಅಂಗಡಿಗಳೊಳಗೂ ಯಾವ ಖರೀದೀ ಪ್ರಕಾರ ಪುರೋಖ್ತಾಗತಕ್ಕದ್ದೋ ಅದು ಇದರಡಿ ಕಂಡ ತಖ್ತೇಯಲ್ಲಿ ವಿವರಿಸಲ್ಪಟ್ಟಮೇರೆ ಇದರಿಂದ ನಿಶ್ಚಯಿಸಲ್ಪಟ್ಟಿರುತ್ತೆ:—

ಷಹರ್ ಅಥವಾ ಡಿಸ್ಟ್ರಿಕ್ಟು.	20° ಅಂಡರ್ ಪ್ರೂಫ್ ಸ್ಪಿರಿಟ್ ಸಾರಾಯಿಗಳು.											
	ಗ್ಯಾಲನ್ ವಂದಕ್ಕೆ ತೆರಿಗೆ.			ಗ್ಯಾಲನ್ ವಂದಕ್ಕೆ ಬಟ್ಟು ಬಿಕರಿ ಕ್ರಯ.			ಚಿಲ್ಲರೇ ಪುರೋಖ್ತು ಕ್ರಯ.					
							ಗ್ಯಾಲನ್ ವಂದಕ್ಕೆ.			ಡ್ರಾಂ ವಂದಕ್ಕೆ.		
	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.
ಚಿಕ್ಕಮಗಳೂರು ಷಹರ್.	3	0	0	4	6	4	5	0	0	0	1	8
ಡಿಸ್ಟ್ರಿಕ್ಟಿನ ಇತರ ಯಲ್ಲಾ ಸ್ಥಳಗಳು	2	4	0	3	14	0	4	8	0	0	1	6

ಪ್ರೂಫ್‌ಗಾಗಿಯೂ, ಅಂಡರ್ ಪ್ರೂಫಿನ ಬಾಬತು 30°ಗೂ ಖರೀದಿಗಳು ಮತ್ತು ಅದರ ಮೇಲೆ ಕಟ್ಟತಕ್ಕ ತೀರ್ವೆಬಗ್ಯೆ ಸದರೀ ಸ್ಟ್ರೆಂಗ್ತಿಗಳ ಮೇಲೆ ಅಥವಾ ಸ್ಟ್ರೆಂಗ್ತಿಗಳ ವಳಗೆ ತಮಾಂ ಸ್ಟ್ರೆಂಗ್ತಿಗಳಿಗೂ ತೀರ್ವೆಸಹ ಗವರ್ನಮೆಂಟ್ ಹೈಡ್ರಾಮಿಟರ್ಸ್ ಯಂತ್ರಗಳ ಪ್ರತಿ ಪೆಟ್ಟಿಗೆ ಸಂಗಡಲೂ ಕಳುಹಿಸಲ್ಪಡುವ ಸ್ಯಾಸಿಲಾ ಯವರ ರೂಲ್ಸ್ ಅನುಸರಿಸಿ ಅಂಡರ್ ಪ್ರೂಫ್ ಬಾಬತು 20°ಗೆ ಮೇಲೆ ವಿವರಿಸಲ್ಪಟ್ಟ ದರಗಳಮೇಲೆ ದಾಮೂಷಾಯಿ ಪ್ರಕಾರ ಕ್ರಮಪಡಿಸಲ್ಪಡತಕ್ಕದ್ದು. ಈ ರೂಲ್ಸಿನಲ್ಲಿರುವ ಯಾವ ಅಂಶವೂ, ಗೌರವಶಾಲಿಗಳಾದ ಖುಷ್ ಬಾಷ್ ಜನಗಳಿಗೂ ಆಸ್ಪತ್ರೆಗಳಿಗೂ, ಮ್ಯುಜಿಯಂಯಾನೆ ವಿವಿಧವಸ್ತುಶಾಲೆಗಳಿಗೂ ಮತ್ತು ಇತರ ಪಬ್ಲಿಕ್ ಸ್ಥಾಪನೆಗಳಿಗೂ ಅಂಡರ್ ಪ್ರೂಫಿನ ಬಾಬತ್ತು 20° ಮೇಲೆ ಮತ್ತು ಓವರ್ ಪ್ರೂಫಿನ ಬಾಬತು 30° ವರಿಗೆಸಾರಾಯಿಯನ್ನು ಸಾಧಾರಣ ವಂದು ಕ್ವಾರ್ಟು ಶೀಷೆಗಿಂತ ಕಡಮೆಇಲ್ಲದೆ ಮತ್ತು ಪಟ್ಟು ಬಿಕರಿಯ ಖರೀದಿ ಪ್ರಕಾರ 2 ಗ್ಯಾಲನ್‌ಗೆ ಮೀರದ ತೇದಾದ್ ಪ್ರಕಾರ ಸಾರಾಯಿಯನ್ನು ಸೂಪರ್‌ವೈಜರು ತಮಗೆ ಬರಹಮೂಲಕ ಕೇಳಿಕೊಂಡ ಮೇರೆ ಕೊಡಲ್ಪಡುವದನ್ನು ನಿರೋಧಿಸತಕ್ಕ ಅಂಶ ಯಾವದೂ ಇಲ್ಲವು. ಹೆಚ್ಚು ಸ್ಟ್ರೆಂಗ್ತ ಸಾರಾಯಿಯು ಜರೂರಿಯಾತ್ ಸಂಗತಿಗಳಲ್ಲಿಯೂ ಡೆಪ್ಯುಟಿಕಮಿಷನರವರ ವಿಶೇಷ ಮಂಜೂರಾತಿ ಮೇಲೆಯೂ ವಿನಹಾ ಕೊಡಲ್‌ಪಡತಕ್ಕದ್ದಲ್ಲ.

XIII. ಸಾರಾಯಿ ಕಮ್ಮೀಬಂದ ಬಗ್ಯೆ, ಚಿಕ್ಕಮಗಳೂರು ಷಹರ್ ಮ್ಯುನಿಸಿಪಲ್ ಸರಹದ್ದುಗಳಆಚೆಗೆ ಪುರೋಖ್ತು ಬಗ್ಯೆ ಡಿಸ್ಟಿಲೇರಿಯಿಂದ ಕೊಡಲ್ಪಟ್ಟ ಸಾರಾಯಿಯ ಮೇಲೆ ಸಲ್ಲತಕ್ಕ ತೆರಿಗೆಯ ಮೇಲೆ ಸೇಕಡಾ 2ರಪ್ರಕಾರ ಸೋಡಿ ಯಾ ವಜಾ ಕೊಡಲ್ಪಡತಕ್ಕದ್ದು.

XIV. ಇಜಾರೇದಾರನು, ಡಿಸ್ಟಿಲೇರಿಗಳನ್ನಾಗಲಿ, ಬಟ್ಟು ಪುರೋಖ್ತು ಅಂಗಡಿಗಳನ್ನಾಗಲಿ, ಕೋಠೀಗಳನ್ನಾಗಲಿ, ಮೇಲ್ವಿಚಾರಣೆ ಮಾಡಲಿಕ್ಕೆ ಯಾವನನ್ನು ಮೊಕರರ್ ಮಾಡುತ್ತಾನೋ ಅಂತಾ ಪ್ರತಿ ಮನುಷ್ಯನನ್ನೂ ಹಾಗೆ ಮೊಕರರ್ ಮಾಡುವದಕ್ಕೆ ಮುಂದಾಗಿ ಮೇಲೆ ಕಂಡ ಷರತ್‌ಗಳಿಗೆ ಅನುಗುಣವಾಗಿ ಕರಾರ್‌ಗಳನ್ನು ಬರೆದು ಕೊಡುವಂತೆ ಮಾಡತಕ್ಕದ್ದು. ಅಂಥಾ

ಕರಾರ್‌ಗಳು, 1884ನೇ ಇಸವೀ ಏಪ್ರೆಲ್ ಬಂದನೇ ತಾರೀಖು ಲಾಗಾಯತ್ ಬಂದು ತಿಂಗಳೊಳಗಾಗಿ, ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರಲ್ಲಿ ಯಿಡಲ್ಪಡತಕ್ಕದ್ದು. ಮತ್ತು ಸದರೀ ಇಜಾರೇದಾರನು, ಷರಾಬ್ ತಯಾರಿ, ಸಾಗಿಸುವಣಿ ಮತ್ತು ಫುರೋಖ್ತು ಈ ಕೆಲಸಗಳಲ್ಲಿ ತನ್ನಿಂದ ಮೊಕರರ್ ಮಾಡಲ್ಪಡುವ ತಮಾಂ ಜನಗಳೂ, ತಮ್ಮಿಂದ ಮಾಡಿಕೊಳ್ಳಲ್ಪಟ್ಟ ಕರಾರ್‌ಗಳ ವ ಕಾನೂನಿನ ನಿಬಂಧನೆಗಳನ್ನು ಖಂಡಿತವಾಗಿ ಅನುಸರಿಸುವಂತೆ ಮಾಡುವದಕ್ಕೆ ಪೂರಾ ತರದೂದ್ ಮಾಡತಕ್ಕದ್ದು; ಮತು ಸದರೀ ನಿಬಂಧನೆಗಳಿಗೆ ಬರ್ಕಿಲಾಫ್ ನಡಿಸಲ್ಪಟ್ಟಂತೆ ಆತನ ತಿಳುವಳಿಕೆಗೆ ಬಂದರೆ, ಸದರೀ ಅಪರಾಧಕ್ಕೆ ವಿಧಿಸಲ್ಪಟ್ಟ ದಂಡನೆ ವಿಧಿಸುವ ಬಗ್ಯೆ, ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರ ಜಾಹೀರಾತಿಗೆ ಸದರೀ ಸಂಗತಿಯನ್ನು ತರತಕ್ಕದ್ದು, ಮತ್ತು ಸದರೀ ಅಪರಾಧಿಯನ್ನು ತಗ್ಬೀರ್ ಮಾಡುವಂತೆ ಡೆ|| ಕಮ್ಮಿಷನರಿಂದ ಅಪೇಕ್ಷಿಸಲ್ಪಟ್ಟರೆ, ಅದೇ ಮೇರೆ ಅವನನ್ನು ತಗ್ಬೀರ್ ಮಾಡತಕ್ಕದ್ದು.

XV. ಇಜಾರೇಯ ಷರತ್‌ಗಳಿಗೆ ವಿರುದ್ಧವಿಲ್ಲದೆ, ಗವರ್ನಮೆಂಟಿನಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಬ್ತೇ, ರೂಲ್ಸಿಗಾಗಲಿ, ಇಜಾರೇದಾರನು ಅನುಗುಣವಾಗಿ ನಡೆಯತಕ್ಕದ್ದು, ಮತ್ತು ಆತನ ನೌಕರ್‌ಮಾನೆಯರೆಲ್ಲಾ, ಬಟ್ಟೀ ಇಳಿಸಲ್ಪಟ್ಟು ಕೊಡಲ್ಪಟ್ಟ ಸಾರಾಯಿಯ ಬಂದೋಬಸ್ತು ಮತ್ತು ಕ್ರಮ, ಉಪಯೋಗಿಸಲ್ಪಟ್ಟ ತಮಾಂ ಪಾತ್ರೆಗಳ ಪಾಕೀಜೇ, ಲೋಹ ಪಾತ್ರೆಗಳ ಕಲಾಯಿಹಾಕಿಸುವಣಿ, ಕಾವಲು, ಆವರಣದ ತನಿಖೀ ಮತ್ತು ಆರೋಗ್ಯಕರವಾದ ಸ್ಥಿತಿ ಮತ್ತು ಗವರ್ನಮೆಂಟಿನವರ ಅಥವಾ ಇಜಾರೇದಾರರ ಅಥವಾ ಉಭಯತ್ರರ ಪ್ರಯೋಜನಗಳಿಗೆ ಸಂಬಂಧಪಟ್ಟ ಇತರ ವಿಷಯಗಳು, ಇವುಗಳ ಬಗ್ಯೆ ಗವರ್ನಮೆಂಟಿನವರು ಜಾರೀಮಾಡಿದ ರೂಲ್ಸನ್ನೂ, ಹುಕ್ಕುಂಗಳನ್ನೂ, ಪೂರಾ ಜಾರೀಗೆ ತರುವ ಅಂಶಗಳಿಗೆ ನಿಗೇ ಕೊಡತಕ್ಕದ್ದು.

XVI. ಮೇಲೆ ಕಂಡ ಷರತ್‌ಗಳ ಪೈಕೀ ಯಾವ ಷರತ್‌ಗಳಿಗಾಗಲಿ, ಇಜಾರೇದಾರನಿಂದ ಅಥವಾ, ಷರಾಬ್ ತಯಾರಿ, ಸಾಗಿಸುವಣಿ, ಯಾ ಫುರೋಖ್ತು ಇಂತಾದ್ದರಲ್ಲಿ ಆತನಿಂದ ಮೊಕರರ್ ಮಾಡಲ್ಪಟ್ಟ ಜನಗಳ ಪೈಕೀ ಯಾರಿಂದಾದರೂ, ಸದರೀ ಇಜಾರೇದಾರನು ನೋಡಿಯೂ ನೋಡದಹಾಗೆ ಇರುವದರಿಂದ ಅಥವಾ ರಹಸ್ಯವಾದ ಷಾಮೀಲಾತೀಯಿಂದ ಮನಃಪೂರ್ವಕವಾಗಿ ಬರ್ಕಿಲಾಫ್ ಯೇನಾದರೂ ನಡಿಸಲ್ಪಟ್ಟರೆ, ಇಜಾರೇಯನ್ನು ರದ್ದುಮಾಡುವದಕ್ಕೂ, ಠೇವಣೀ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಟ್ಟಿತೆಂದು ತಿಳಿಸುವದಕ್ಕೂ, Iನೇ ಷರತ್‌ನಲ್ಲಿ ವಿಧಿಸಲ್ಪಟ್ಟ ಪ್ರಕಾರ ಅಮಲ್ ನಡಿಸುವದಕ್ಕೂ ದೀವಾನರವರಿಗೆ ಯಿಖ್ತಿಯಾರ ಇರತಕ್ಕದ್ದು.

XVII. ಗವರ್ನಮೆಂಟಿನವರಿಂದ ಸದರೀ ಬಗ್ಯೆ ವಿಧಿಸಲ್ಪಡಬಹುದಾದ ಅಂತಾ ಷರತ್‌ಗಳಿಗೆ ಬಳಪಟ್ಟು, ಇಜಾರೇದಾರನಿಂದ, ಕೊಲಂಬೋ ಸಾರಾಯಿಯನ್ನು ಅಥವಾ ಇತರ ವಿಧಗಳುಳ್ಳ ಆರೆಕ್ ಸಾರಾಯಿ, ಲಿಕ್ಕರ್ ಸಾರಾಯಿ ಇವುಗಳನ್ನು ತಯಾರ್ಮಾಡಲ್ಪಡಲಿಕ್ಕೂ, ಫುರೋಖ್ತು ಮಾಡಲ್ಪಡಲಿಕ್ಕೂ, ಗವರ್ನಮೆಂಟಿನವರು ಅಂಗೀಕರಿಸಬಹುದು, ಪರಂತು ಈ ಇಸ್ತಿಹಾರ್‌ನಾಮೆಯಲ್ಲಿ ಕಂಡ ಸ್ಸಾಧಾರಣ ಕಂಟ್ರಿ ಸಾರಾಯಿಯಿಂದ ಆಗುವ ಹುಟ್ಟುವಳಿಯ ಮೇಲೆ ಸದರೀ ಬಗ್ಯೆ ವಜಾ ಯಾವದೂ ಕೊಡಲ್ಪಡಲಾರದು.

7. ಕಳೆದ ವರುಷಗಳಲ್ಲಿ ಕೊಡಲ್ಪಟ್ಟ ಷರಾಬಿನ ತೇದಾದು ಇದರಡಿ ಕಂಡ ತಖ್ತೆಯಲ್ಲಿ ಕಾಣಿಸಿರುತ್ತೆ.

	1870—71 ಗ್ಯಾಲನ್‌ಗಳು.	1871—72 ಗ್ಯಾಲನ್‌ಗಳು.	1872—73 ಗ್ಯಾಲನ್‌ಗಳು.	1873—74 ಗ್ಯಾಲನ್‌ಗಳು.	1874—75 ಗ್ಯಾಲನ್‌ಗಳು.	1875—76 ಗ್ಯಾಲನ್‌ಗಳು.	1876—77 ಗ್ಯಾಲನ್‌ಗಳು.	1877—78 ಗ್ಯಾಲನ್‌ಗಳು.	1878—79 ಗ್ಯಾಲನ್‌ಗಳು.	1879—80 ಗ್ಯಾಲನ್‌ಗಳು.	1880—81 ಗ್ಯಾಲನ್‌ಗಳು.	1881—82 ಗ್ಯಾಲನ್‌ಗಳು.	1882—83 ಗ್ಯಾಲನ್‌ಗಳು.
ಕಡೂರು ಡಿಸ್ಟ್ರಿಕ್ಟು.	22,396	20,657	22,791	28,378	17,680	14,360	15,336	13,483	10,178	11,242	14,707	17,175	14,966

ತಾರೀಖು 9ನೇ ಫೆಬ್ರವರಿ 1884.

ನಂ. 315.—ಶಿವಮೊಗ್ಗಾ ಷಹರ್‌ನಲ್ಲಿಯೂ, ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ಶೇರಿದ ತಾಲ್ಲೂಕುಗಳಲ್ಲಿಯೂ, ಷರಾಬ್ ತಯಾರಿವ ಬಟ್ಟಿ ಬಿಕರೀಮಾಡುವ ಬಟ್ಟಿ ಸ್ವಾತಂತ್ರ್ಯದಬಗ್ಯೆ ದರಖಾಸ್ತುಗಳು ಕೊಡಬಹುದೆಂದು ಇದರಿಂದ ತಿಳಿಸೋಣಾಗುತ್ತೆ: ಸದರೀ ಡಿಸ್ಟ್ರಿ

ಕ್ಕೆಗೆ ದೀವಾನರವರ 1882ನೇ ಇಸವಿ ನವಂಬರ 13ನೇ ಮುಕ್ಕಾಂ 129ನೇ ನಂಬರು, ಅದೇ ಇಸವಿ ನವಂಬರ 21ನೇ ಮುಕ್ಕಾಂ 130–131ನೇ ನಂಬರು, ಅದೇ ಇಸವಿ ಡಿಶಂಬರ 7ನೇ ಮುಕ್ಕಾಂ 146ನೇ ನಂಬರು, ಈ ಇಸ್ತಿಹಾರನಾಮೆಗಳಿಂದ ಪರಿಷ್ಕರಿಸಲ್ಪಟ್ಟಪ್ರಕಾರ ಇದರಡೀಕಂಡ ತಾಲ್ಲೂಕುಗಳು ಶೇರಿರುತ್ತವೆ.

1. ಶಿವಮೊಗ್ಗಾ, ಕುಂಸಿ ಡೆಪ್ಯುಟಿ ಅಮಲ್ದಾರ್ರ ಚಾರ್ಜು ದೇಖೀಲ್.
2. ತೀರ್ಥಹಳ್ಳಿ
3. ಚನ್ನಗಿರಿ
4. ಸಾಗರ
5. ನಗರ
6. ಸೊರಬ
7. ಹೊನ್ನಾಳಿ
8. ಶಿಕಾರಿಪುರ
9. ದಾವಣಗೆರೆ

2. ಈಗ ಯಾವ ಸ್ವಾತಂತ್ರ್ಯದಬಗ್ಯೆ ದರಖಾಸ್ತುಗಳು ಖಾಯಿಷ್ ಮಾಡಲ್ಪಡುತ್ತವೆಯೋ ಅಂತಾ ಸ್ವಾತಂತ್ರ್ಯಗಳು, ಇದರ ಮುಂದೆ ವಿಧಿಸಲ್ಪಟ್ಟ ಷರತ್ತುಗಳಿಗೆ ವಳಪಟ್ಟು, 1884ನೇ ಇಸವಿ ಏಪ್ರೆಲ್ 1ನೇ ಮುಕ್ಕಾಂ ಮೊದಲು 1887ನೇ ಇಸವಿ ಮಾರ್ಚಿ 31ನೇ ಮುಕ್ಕಾಂವರಿಗೆ ಆಗುವ ಮೂರು ವರುಷಗಳ ಕಾಲಕ್ಕೆ ಕೊಡಲ್ಪಡುವವು. ಅಂತಾ ಸ್ವಾತಂತ್ರ್ಯವು ಶೇಂದಿ, ಯೂರೋಪ್ ದೇಶದ ವೈನ್ ಎಂಬ ಸಾರಾಯಿ, ಸ್ಪಿರಿಟ್ ಸಾರಾಯಿ, ಯಾ ಬಿಯರು ಇವುಗಳ ತಯಾರಿ ಯಾ ಮಾರಾಟವನ್ನು ಅಡಗಿಸಿಕೊಂಡಿರುವದಿಲ್ಲ.

3. ದರಖಾಸ್ತುದಾರು ತಮ್ಮ ದರಖಾಸ್ತುಗಳಲ್ಲಿ ಸಾಲಿಯಾನಾ ಸರಕಾರಕ್ಕೆ ಕಮ್ತಿ ಮೊಬಲಗು ಎಷ್ಟು ಕೊಡುತ್ತೇವೆಂದು ಕರಾರ ಮಾಡುವರೋ ಅದನ್ನು ನಮೂದಿಸತಕ್ಕದ್ದು. ತೆರಿಗೆ ಮೊಬಲಗಿನ ರೂಪಾಯಿ 1ಕ್ಕೆ ವಂದಾಣೆಯಂತೆ ತೆರಬೇಕಾದ ಲೋಕಲ್ ಸೆಸ್ ದೇಖೀಲ್ ತೆರಿಗೆಯ ದರಗಳು ಮತ್ತು ಕಂಟ್ರ್ಯಾಕ್ಟದಾರರಿಂದ ಯಾವ ಖರೀದಿಗೆ ಷರಾಬು ಕೊಡಲ್ಪಡತಕ್ಕದ್ದೋ ಅಂತಾ ವಟ್ಟು ಖರೀದೀ ಮೊಬಲಗುಗಳು ಸುದಾ, ಮುಂದೆ ವಿಧಿಸಲ್ಪಟ್ಟ ರೀತಿಯಾಗಿ ಗವರ್ನಮೆಂಟಿನವರಿಂದ ಗೊತ್ತು ಮಾಡಲ್ಪಡುವದ್ದರಿಂದ ಅಂತಾ ದರಗಳಿಗಾಗಿ ಬರುವ ಯಾವ ದರಖಾಸ್ತುಗಳೂ ಆಲೋಚಿಸಲ್ಪಡಲಾರದು.

4. ಪ್ರತಿ ದರಖಾಸ್ತಿನ ಸಂಗಡಲೂ ನಗದಾಗಿಯಾಗಲಿ ಗವರ್ನಮೆಂಟಪತ್ರಗಳ ಮೂಲಕವಾಗಿಯಾಗಲಿ, 200 ರೂಪಾಯಿಗಳ ಶೇವಣೀ ಮೊಬಲಗು ಕಳುಹಿಸಲ್ಪಟ್ಟು "ಷರಾಬು ತಯಾರೀ ವ ಒಟ್ಟು ಪುರೋಖ್ತಿನ ಒಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತು" ಎಂಬ ಮಾತುಗಳು ವಿಳಾಸ ಬರೆಯಲ್ಪಟ್ಟ ಲಿಪಾಫೆಯಲ್ಲಿ ಹಾಕಿ ಸ್ನ 1884ನೇ ಇಸವಿ ಫಿಬ್ರವರಿ 29ನೇ ಶುಕ್ರವಾರದ ದಿವಸ ಹಗಲು 1 ಘಂಟೆಗಾಗಲಿ, ತತ್ಪೂರ್ವದಲ್ಲಾಗಲಿ ಡೆಪ್ಯುಟಿ ಕಮ್ಮಿಷ್ನರವರಿಗೆ ತಲಪುವಂತೆ ಕಳುಹಿಸತಕ್ಕದ್ದು. ಸದರೀ ತಾರೀಖಿನ ತರುವಾಯ ಯಾವ ದರಖಾಸ್ತೂ ತೆಗದುಕೊಳ್ಳಲ್ಪಡುವದಿಲ್ಲ. ದರಖಾಸ್ತುಗಳು 1884ನೇ ಇಸವೀ ಫಿಬ್ರವರೀ 29ನೇ ಮುಕ್ಕಾಮಿನ ಮಧ್ಯಾನ್ಹ 1 ಘಂಟೆಗೆ ಹಾಜರಾಗತಕ್ಕ ದರಖಾಸ್ತುದಾರರ ರೂಬರೂ ಶಿವಮೊಗ್ಗಾ ಮೊಕ್ಕಾಂ ಡೆಪ್ಯುಟಿ ಕಮ್ಮಿಷ್ನರವರ ಆಫೀಸಿನಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಖುಲ್ಲಾ ಮಾಡಲ್ಪಡುವವು. ದರಖಾಸ್ತುಗಳ ಆಖ್ಯೆರ ವ್ಯವಸ್ಥೆ ದೀವಾನರವರಿಗೆ ಶೇರಿದ್ದಾಗಿರುತ್ತೆ. ಸದರೀಯವರು ಯಾವ ದರಖಾಸ್ತನ್ನಾಗಲಿ, ತಮಾಂ ದರಖಾಸ್ತುಗಳನ್ನಾಗಲಿ ಯಾವ ಸಬಬನ್ನು ತಿಳಿಸದೆಯೇ ತಿರಸ್ಕರಿಸತಕ್ಕ ಸಂಪೂರ್ಣ ಅಧಿಕಾರವನ್ನು ತಾವೇ ಉಳಿಸಿಕೊಂಡಿರುತ್ತಾರೆ. ತಿರಸ್ಕರಿಸಲ್ಪಟ್ಟ ದರಖಾಸ್ತುದಾರರಿಂದ ಇಡಲ್ಪಟ್ಟ ಶೇವಣಿಗಳು ಅವರುಗಳು ಕೇಳಿದಾಗ ವಾಪಸ್ ಕೊಡಲ್ಪಡುವವು.

5. ದೀವಾನರವರಿಗೆ ಸಿಫಾರಸ್ ಮಾಡುವ ಬಗ್ಯೆ ಚುನಾಯಿಸಲ್ಪಡುವ ದರಖಾಸ್ತುದಾರರು ಕೂಡ್ಲೇ ನಗದಾಗಿಯಾಗಲಿ ಗವರ್ನಮೆಂಟ ಪತ್ರಗಳಮೂಲಕವಾಗಿಯಾಗಲಿ, ದರಖಾಸ್ತುದಾರರು ಒಡಂಬಡಿಕೆ ಮಾಡಿಕೊಂಡ ಸಾಲೀಯಾನಾ ಕಮ್ತೀ ಹುಟ್ಟುವಳಿಯ ಹನ್ನೆರಡರಲ್ಲೊಂದು ಭಾಗಕ್ಕೆ (ಅಥವಾ ಒಂದು ತಿಂಗಳ ಖಿಸ್ತಿಗೆ) ಸಮನಾದ ಮೊಬಲಗನ್ನು ಕೂಡ್ಲೇ ಶೇವಣಿ ಇಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಶೇವಣೀ ಮೊಬಲಗು ಸರಕಾರಕ್ಕೆ ಶೇರಿಸಿಕೊಳ್ಳಲ್ಪಡುವದು.

6. ಯಾವ ದರಖಾಸ್ತುದಾರರ ದರಖಾಸ್ತು ದೀವಾನರವರಿಂದ ಆಖ್ಯೆರಾಗಿ ಮಂಜೂರ್ಮಾಡಲ್ಪಡುತ್ತದೋ ಅಂಥಾವನು, ತನ್ನ ದರಖಾಸ್ತು ಮಂಜೂರಾದ ಸಂಗತಿ ತನಗೆ ತಿಳಿಸಲ್ಪಟ್ಟ ಎಂಟು ದಿವಸಗಳೊಳಗಾಗಿ ಮೊದಲೇ ಇಡಲ್ಪಟ್ಟ ಡಿಪಾಜಿಟ ಮೊಬಲಗಿನೊಡನೆ, ಕರಾರ ಮಾಡಿಕೊಳ್ಳಲ್ಪಟ್ಟ ಸಾಲಿಯಾನಾ ಹುಟ್ಟುವಳಿ ಪೈಕಿ, ಕಾಲುಭಾಗದ ಮೊಬಲಗಿಗೆ ಸಮನಾಗುವಂತೆ ಇನ್ನೂ ಕ್ಯೆಲವು ಮೊಬಲಗನ್ನು ನಗದಾಗಿಯಾಗಲಿ, ಗವರ್ನಮೆಂಟ ಪತ್ರಗಳ ಮೂಲಕವಾಗಿಯಾಗಲಿ, ಶಿವಮೊಗ್ಗಾ ಡೆಪ್ಯುಟಿ ಕಮ್ಮಿಷನರಲ್ಲಿ ಶೇವಣೀ ಇಡತಕ್ಕದ್ದಲ್ಲದೇ ಇದರಲ್ಲಿ ಮುಂದೆ ವಿಧಿಸಲ್ಪಡುವ ಷರತ್ತುಗಳಿಗೆ ಬದ್ಧನಾಗಿ, ತಕ್ಕ ಛಾಪಾಕಾಗದದಮೇಲೆ, ವಿಧಿಸಲ್ಪಟ್ಟ ನಮೂನೇ ಪ್ರಕಾರ, ಒಂದು ಕರಾರು ಬರೆದು ಕೊಡತಕ್ಕದ್ದು. ಮತ್ತು ಸದರೀ ದರಖಾಸ್ತುದಾರನು ಕರಾರಿಗೆ ರುಜು ಮಾಡಲಿಕ್ಕಾಗಲಿ, ನೇಮಿಸಲ್ಪಟ್ಟ ಡಿಪಾಜಿಟನ್ನು ಇಡಲಿಕ್ಕಾಗಲಿ, ತಪ್ಪಿದರೆ ಯಾ ನಿರಾಕರಿಸಿದರೆ ಮೊದಲೇ ಇಡಲ್ಪಟ್ಟ ಶೇವಣೀ ಮೊಬಲಗುಗಳು ಸರಕಾರಕ್ಕೆ ಶೇರಿಸಿಕೊಳ್ಳಲ್ಪಟ್ಟು ಇಜಾರೇ ಅನ್ಯಥಾ ವಿಲೇ ಮಾಡಲ್ಪಡುವದು.

ಷರತ್ತುಗಳು.

1. ಕರಾರ ಮಾಡಿಕೊಳ್ಳಲ್ಪಟ್ಟ ಸಾಲಿಯಾನಾ ಕಮ್ತಿ ಹುಟ್ಟುವಳೀ ಮೊಬಲಗು, ಸಮನಾದ ಹನ್ನೆರಡು ಮಾಹೇವಾರೀ ಖಿಸ್ತುಗಳ ಪ್ರಕಾರ ಸರಕಾರಕ್ಕೆ ಪಾವತೀ ಮಾಡಲ್ಪಡತಕ್ಕದ್ದು. ಇಜಾರೇದಾರನು ಪ್ರತಿ ತಿಂಗಳಲ್ಲಿ ಡಿಸ್ಟಿಲೇರಿಯಿಂದ ಕೊಡಲ್ಪಟ್ಟ

ಷರಾಬಿನ ಮೇಲೆ ಸರ್ಕಾರಕ್ಕೆ ಸಲ್ಲತಕ್ಕ ಲೋಕಲ್‌ಸೆಸ್ ದೇಖೀಲ್ ಸರ್ಕಾರದಿಂದ ಗೊತ್ತುಮಾಡಲ್ಪಟ್ಟ ದರಗಳ ಪ್ರಕಾರ ವಿಸಿಷ್ಟ ತೆರಿಗೆ ಮೊಬಲಗನ್ನೂ ಆ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ, ತತ್ಪೂರ್ವವಾಗಲಿ, ಶಿವಮೊಗ್ಗಾ ಡಿಸ್ಟ್ರಿಕ್ಟು ಟ್ರೆಜರೀಯಲ್ಲಿ ಪಾವತೀ ಮಾಡತಕ್ಕದ್ದು. ಯಾವದಾದರೂ ತಿಂಗಳ ಆಖೈರ್‌ವರಿವಿಗೆ ಕೊಡಲ್ಪಡುವ ಷರಾಬಿನಮೇಲೆ ಸಲ್ಲತಕ್ಕ ತೆರಿಗೆ ಮೊಬಲಗು, ಕರಾರ್ ಮಾಡಿಕೊಂಡ ಕಮ್ಮಿ ಹುಟ್ಟುವಳೀ ಪೈಕೀ ಮಾಹೇವಾರಿ ಖಿಸ್ತು ಮೊಬಲಗ್ ಭರ್ತಿಗೆ ಸಾಲದೆ ಹೋದರೆ, ಅಂತಾ ಕಮ್ಮಿ ಮೊಬಲಗನ್ನು ಭರ್ತೀ ಮಾಡುವದಕ್ಕೆ ಬೇಕಾದಷ್ಟು ಮೊಬಲಗನ್ನು ಇಜಾರೇದಾರನು ಹೆಚ್ಚಾಗಿ ಪಾವತೀ ಮಾಡತಕ್ಕದ್ದು. ಯಾವದಾದರೂ ಮಾಹೇಯಲ್ಲಿ ನಡೆದ ಜಾಸ್ತಿ ಫರೋಖ್ತು ಅದೇ ಸರ್ಕಾರ್ ಸಾಲಿನ ಯಾವದಾದರೂ ಮಾಹೇಯ ಕಮ್ಮಿ ಫರೋಖ್ತಿಗೆ ಉಪಯೋಗಿಸಲ್ಪಡತಕ್ಕದು. ಯಾವ ತಿಂಗಳಿಗೆ ಸದರೀ ಮೊಬಲಗುಗಳು ಸಲ್ಲತಕ್ಕದ್ದೋ ಅದರ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ತತ್ಪೂರ್ವವಾಗಲಿ ಅವು ಪಾವತೀಯಾಗದೇ ಹೋದರೆ ಬಾಕೀ ನಿಲ್ಲುವ ತಮಾಂ ಮೊಬಲಗಿನಮೇಲೂ ಸದರೀ ತಾರೀಖು ಲಗಾಯತು ಸಾಲೀಯಾನಾ ಸೇಕಡಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕಟ್ಟಲ್ಪಡುವದು, ಮತ್ತು ಯಾವ ತಿಂಗಳಲ್ಲಿ ಮೊಬಲಗುಗಳು ಬಾಕೀ ಯಾಗುತ್ತವೋ ಆ ತಿಂಗಳು ಕಳದ ತರುವಾಯವೂ ಮೊಬಲಗು ಸಲ್ಲದೇ ಹೋದರೆ ಬಡ್ಡೀ ದೇಖೀಲ್ ಸಲ್ಲತಕ್ಕ ಬಾಕೀ ಮೊಬಲಗ್ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ತತ್ಕಾಲದಲ್ಲಿ ಜಾರೀ ಯಿರುವ ರೂಲ್ಸಿನಿಂದ ವಿಧಿಸಲ್ಪಟ್ಟ ಪ್ರಕಾರವಾಗಿ, ಕಂಟ್ರಾಕ್ಟುದಾರನ ಸ್ವತ್ತಿನ ಜಫ್ತೀ ಹರಾಜು ಮೂಲಕ ವಸೂಲ್ ಮಾಡಲ್ಪಡತಕ್ಕದ್ದು. ಮತ್ತು ಶಿವಮೊಗ್ಗಾ ಡೆಪ್ಯುಟಿ ಕಮ್ಮಿಷನರವರ ರಿಪೋರ್ಟಿನ ಮೇಲೆ, ಕಂಟ್ರಾಕ್ಟು ರದ್ದು ಮಾಡಲ್ಪಟ್ಟಿರುತ್ತೆಂದು ತಿಳಿಸುವದಕ್ಕೂ, ಕಂಟ್ರಾಕ್ಟುದಾರನಿಂದ ಇಡಲ್ಪಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳುವಂತೆ ಅಪ್ಪಣೆ ಮಾಡುವದಕ್ಕೂ, ಮತ್ತು ಕಂಟ್ರಾಕ್ಟು ಕಾಲದ ಪೈಕೀ ಉಳಿದ ಕಾಲದಲ್ಲಿ ಕಂಟ್ರಾಕ್ಟುದಾರನ ಖರ್ಚಿಗೂ ಲುಕ್ಸಾನಿಗೂ ಒಳಪಟ್ಟು ಬಾಬು ಅಮಾನಿಯಲ್ಲಾಗಲಿ ಅನ್ಯಥಾ ಆಗಲಿ ಇಡುವದಕ್ಕೂ ಸಹ ದೀವಾನರವರ ಯಿಖ್ತ್ಯಾರಿಗೆ ಸೇರಿರುತ್ತದೆ.

II. ಪ್ರತಿ ಸಾಲಿನ ಲೆಖ್ಖಗಳೂ ಪ್ರತ್ಯೇಕ ಪ್ರತ್ಯೇಕವಾಗಿ ಫೈಸಲ್ ಮಾಡಲ್ಪಡತಕ್ಕದ್ದು. ಒಂದು ಸಾಲಿನಲ್ಲಿ ಕೊಡಲ್ಪಟ್ಟ ಸಾರಾಯಿ ಮೇಲೆ ಗವರ್ನಮೆಂಟಿಗೆ ಸಲ್ಲತಕ್ಕ ತೆರಿಗೆಯು ಆ ಸಾಲಿಗೆ ಕರಾರ್ ಮಾಡಿದ ಕಮ್ಮಿ ಹುಟ್ಟುವಳಿಗೆ ಜಾಸ್ತೀ ಆದರೆ, ಅಂತಾ ಜಾಸ್ತೀಯಾದ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 1 ಆಣೆಗೆ ಸಮನಾಗಿ, ಇಜಾರೇದಾರನಿಂದ ಸಲ್ಲಬೇಕಾದ ತೆರಿಗೆ ದೆಸೆಯಿಂದ ವಜಾ ಕೊಡಲ್ಪಡುವದು, ಆದರೆ ಒಂದು ವರುಷದ ಜಾಸ್ತೀ ಮೊಬಲಗು ಇಜಾರೇ ಪೈಕೀ ಯಾವದಾದರೂ ಇತರ ಸಾಲಿನ ಕರಾರ್ ಮಾಡಿದ ಹುಟ್ಟುವಳೀ ಮೊಬಲಗಿನಲ್ಲಿ ಕಮ್ಮೀ ಬೀಳತಕ್ಕ ಯಾವ ಮೊಬಲಗನ್ನಾಗಲಿ ಭರ್ತೀ ಮಾಡುವ ಬಗ್ಯೆ ಉಪಯೋಗಿಸುವದಿಲ್ಲ.

III. ಕಂಟ್ರಾಕ್ಟುದಾರನು ಶಿವಮೊಗ್ಗಾ ಬಳಿಯಣ ಸರ್ಕಾರ್ ಡಿಸ್ಟಿಲೇರಿಯ ಆವರಣದೊಳಗಾಗಲಿ ಅಥವಾ ಡೆಪ್ಯುಟಿ ಕಮ್ಮಿಷನರಿಂದ ಗೊತ್ತು ಮಾಡಲ್ಪಡಬಹುದಾದ ಇತರ ಸ್ಥಳದಲ್ಲಾಗಲಿ ಷರಾಬ್ ತಯಾರ್ ಮಾಡುವಂತೆಯೂ, ಮತ್ತು ಡೆಪ್ಯುಟಿ ಕಮ್ಮಿಷನರಿಂದ ಮೊಕರರ್ ಮಾಡಲ್ಪಡತಕ್ಕಂಥಾ ಸ್ಥಳಗಳೊಳಗೆ ಬಟ್ಟಿ ಕೋಠಿಗಳನ್ನು ಸ್ಥಾಪಿಸುವಂತೆಯೂ, ನಿಯಮಿಸಲ್ಪಡತಕ್ಕದ್ದು. ಡೆಪ್ಯುಟಿ ಕಮ್ಮಿಷನರಿಂದಾಗಲಿ, ಅಥವಾ ಅಜಮಾಯಿಷೀ ಬಗ್ಯೆ ಮೊಕರರ್ ಮಾಡಲ್ಪಟ್ಟಿರತಕ್ಕ ಯಾವ ಉದ್ಯೋಗಸ್ಥರಿಂದಲಾಗಲಿ ತನಖೀ ನೋಡುವ ಬಗ್ಯೆ ಸರ್ವಕಾಲಗಳಲ್ಲಿಯೂ ಡಿಸ್ಟಿಲೇರಿ ಮತ್ತು ಕೋಠಿಗಳು ಖುಲ್ಲಾವಾಗಿರತಕ್ಕದ್ದು. ಯಾವ ಷರಾಬನ್ನೂ ಸದರೀ ಬಗ್ಯೆ ಮೊಕರರ್ ಮಾಡಲ್ಪಡುವ ಒಬ್ಬ ಉದ್ಯೋಗಸ್ಥನಿಂದ ಅಳತೆ ಮಾಡಲ್ಪಟ್ಟು ಅಜಮಾಯಿಷಿ ಮಾಡಲ್ಪಟ್ಟ ಹೊರತು ಡಿಸ್ಟಿಲೇರಿಯಿಂದ ಹೊರಗೆ ತೆಗದುಕೊಂಡು ಹೋಗಕೂಡದು. ಡಿಸ್ಟಿಲೇರಿ ಕಟ್ಟಡಗಳನ್ನು ಉಪಯೋಗಿಸತಕ್ಕ ಬಗ್ಯೆ ಅಂಥಾ ಕಟ್ಟಡಗಳ ಮೌಲ್ಯದ ಮೇಲೆ ಶೇಕಡಾ ಆರರಂತೆ ಡೆಪ್ಯುಟಿ ಕಮ್ಮಿಷನರು ಗೊತ್ತು ಮಾಡುವ ಸಾಲಿಯಾನಾ ಬಾಡಿಗೆಯನ್ನು ಕಂಟ್ರಾಕ್ಟುದಾರನು ಮಾಹೇಯಾನಾ ಗವರ್ನಮೆಂಟಿಗೆ ಸಂದಾಯಮಾಡಲ್ಪಡುವಂತೆಯೂ, ಸದರೀ ಕಟ್ಟಡಗಳನ್ನು ಪೂರಾ ದುರಸ್ತು ಸ್ಥಿತಿಯಲ್ಲಿ ಯಿಟ್ಟುಕೊಂಡಿರುವಂತೆಯೂ ನೇಮಿಸಲ್ಪಡತಕ್ಕದ್ದು. ಇಜಾರೇದಾರನು ಪೂರ್ವದ ಇಜಾರೇದಾರನಿಂದ ಬಟ್ಟಿ ಯಿಳಿಸಲ್ಪಟ್ಟು, ಸನ್ 1884ನೇ ಇಸವಿ ಏಪ್ರೆಲ್ 1ನೇ ತಾರೀಖಿನಲ್ಲಿ ಹಾಜರಿರಬಹುದಾದ ಯಾವ ಸಾರಾಯಿಯನ್ನಾಗಲಿ, ಆ ಬಗ್ಯೆ ದೀವಾನರವರ ಮಂಜೂರಾತಿನಿಸೀ ಡೆಪ್ಯುಟಿ ಕಮ್ಮಿಷನರವರಿಂದ ಠರಾವು ಮಾಡಲ್ಪಡಬಹುದಾದಂಥಾ ಈಡು ಮೊಬಲಗನ್ನು ಕೊಟ್ಟು ತನ್ನ ವಶಕ್ಕೆ ತೆಗದುಕೊಳ್ಳತಕ್ಕದ್ದು.

IV. ತಯಾರ್ಮಾಡಲ್ಪಡುವ ಸಾರಾಯಿ ಒಳ್ಳೇ ಗುಣವುಳ್ಳದ್ದಾಗಿರತಕ್ಕದ್ದು. ಬಟ್ಟಿ ಯಿಳಿಸುವಲ್ಲಿ ಉಪಯೋಗಿಸಲ್ಪಡತಕ್ಕ ಪದಾರ್ಥಗಳು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಟ್ಟು ಒಳ್ಳೇ ಗುಣವುಳ್ಳವಾಗಿರಬೇಕಾದ್ದಲ್ಲದೆ ಅವುಗಳು ಡಿಸ್ಟಿಲೇರಿಯಲ್ಲಿ ತೆಗದುಕೊಳಲ್ಪಡುವದಕ್ಕೆ ಮುಂದಾಗಿ ಡಿಸ್ಟಿಲೇರಿ ಸೂಪರ್ ವೈಜರಿಗೆ ಅಥವಾ ಈ ಬಗ್ಯೆ ಮೊಕರರ್ಮಾಡಲ್ಪಡತಕ್ಕ ಇತರ ಉದ್ಯೋಗಸ್ಥನಿಗೆ ತೋರಿಸಲ್ಪಟ್ಟು ಅವರಿಂದ ಪ್ಯಾಸ್ ಮಾಡಲ್ಪಡತಕ್ಕದ್ದು. ಸಾರಾಯಿ ಬಟ್ಟಿ ಯಿಳಿಸುವಲ್ಲಿ ಆರೋಗ್ಯಕ್ಕೆ ವಿರುದ್ಧವಾದ ಯಾವ ಪದಾರ್ಥಗಳನ್ನೂ ಉಪಯೋಗಿಸಕೂಡದು ಅಥವಾ ಷರಾಬ್ ತಯಾರ್ಮಾಡಲ್ಪಟ್ಟ ತರುವಾಯ

ಅದರಲ್ಲಿ ಹಾಕಲೂಕೂಡದು ಮತ್ತು ಉಪಯೋಗಿಸಲ್ಪಡುವ ಯೆಲ್ಲಾ ಪದಾರ್ಥಗಳೂ ಪ್ರಥಮತಃ ವಿಧಿಸಲ್ಪಟ್ಟ ದಾಮಾಷಾಯಿ ಪ್ರಕಾರ ಇರತಕ್ಕವು, ಅಥವಾ ಕಂಟ್ರಾಕ್ಟುದಾರನಿಂದ ರೋಜಿನಾ ತಯಾರ್ಮಾಡಲ್ಪಡುವದರ ಫಲಿತಾಂಶಗಳು ಸರ್ಕಾರ್ ಆಫೀಸರುಗಳಿಂದ ನ್ಯಾಯವಾದ ತನಿಖಿ ನಡಿಸಲ್ಪಡಲಿಕ್ಕೋಸ್ಕರ ಐಯಿಂದ ಗವರ್ನಮೆಂಟಿನವರಿಂದ ನಿರ್ನಯಿಸಲ್ಪಡುವ ದಾಮಾಷಾಯಿ ಪ್ರಕಾರವಾಗಲಿ ಇರತಕ್ಕದ್ದು.

V. ಇಜಾರೇದಾರನು, ಡಿಸ್ಟಿಲೇರಿಯಲ್ಲಿಯೂ, ಪ್ರತಿ ಕೋಠಿಯಲ್ಲಿಯೂ ತಯಾರ್ಮಾಡಲ್ಪಡುವ ಸಾರಾಯಿಗಳ ಜಮಾಖರ್ಚುಗಳು, ತೇದಾದು, ವ ಸ್ಟ್ರೆಂಗ್ತು, ಇವುಗಳ ಕರಾರ್ವಾಕಾ ಲೆಖ್ಖಗಳನ್ನೂ, ಮತ್ತು ಡಿಸ್ಟಿಲೇರಿಯಲ್ಲಿ ರೋಜೀನಾ ಜಮಾಖರ್ಚು ಆದ ಯೆಲ್ಲಾ ಪದಾರ್ಥಗಳ ಲೆಖ್ಖಗಳನ್ನೂ ಸುದಾ ವಿಧಿಸಲ್ಪಟ್ಟ ನಮೂನೆಗಳಲ್ಲಿ ಇಡತಕ್ಕದ್ದು, ಆತನು ಡೆಪ್ಯುಟಿ ಕಮ್ಮಿಷನರವರಿಂದಾಗಲೀ ಸೂಪರ್ವೈಜರಿಂದಾಗಲಿ ಈ ಬಗ್ಯೆ ಮೊಕರರ್ಮಾಡಲ್ಪಡುವ ಯಾವ ಉದ್ಯೋಗಸ್ಥನಿಂದಾಗಲಿ ತನಖಿ, ನೋಡುವ ಬಗ್ಯೆ ಹಾಜರ್ ಮಾಡುವಂತೆ ಕೇಳಲ್ಪಟ್ಟಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

VI. ಒಂದು ತಿಂಗಳಿಗೆ ಆಗುವಷ್ಟು ಸಾರಾಯಿಯನ್ನು ಯಾವಾಗ್ಯೂ ಹಾಜರೀಯಲ್ಲಿಟ್ಟುಕೊಂಡಿರಲಿಕ್ಕೆ ಬಟ್ಟೀದಾರನು ಬದ್ಧನಾಗಿ ರತಕ್ಕದ್ದು: ಸರ್ಸ 1884ನೇ ಏಪ್ರೆಲ್ ಗುರ್ರೇ ತಾರೀಖು ಮೊದಲು ಈ ಮೇರೆ ಹಾಜರಿರುವ ಬಗ್ಯೆ ಸದರೀ ತಾರೀಖಿಗೆ ಮುಂದೆಯೇ ಬಟ್ಟೀ ಯಿಳಿಸಲಿಕ್ಕೆ ಷುರು ಮಾಡತಕ್ಕದ್ದು, ಪರಂತು ಹಾಗೆ ಬಟ್ಟೀ ಯಿಳಿಸಲ್ಪಟ್ಟ ಯಾವ ಸಾರಾಯಿಯೂ, ಸರ್ಸ 1884ನೇ ಏಪ್ರೆಲ್ 1ನೇ ತಾರೀಖಿಗೆ ಮುಂದಾಗಿ ತನ್ನ ವಶದಿಂದಲಾಗಲಿ, ತನ್ನ ಕೈಕೆಳಗಣ ಉದ್ಯೋಗಸ್ಥನ ವಶದಿಂದಾಗಲಿ ಮಾರಲ್ಪಡಕೂಡದು, ಯಾ ಸಾಗಿಸಲ್ಪಡಕೂಡದು. ಇಜಾರೇದಾರನು, ತಮಾಂ ತಾಲೂಕು ಕಸಬಾ ಜಾಗಗಳಲ್ಲಿಯೂ; ಡೆಪ್ಯುಟಿ ಕಮ್ಮಿಷನರಿಂದ ಮಂಜೂರ್ಮಾಡಲ್ಪಡುವ ದೊಡ್ಡ ಷಹರ್‌ಗಳೊಳಗೂ, ಬಟ್ಟು ಪುರೋಖ್ತು ಅಂಗಡಿಗಳನ್ನು ಇಡುವದಕ್ಕೆ ಅಪ್ಪಣ್ಣೆ ಪೊಂದಾಗತಕ್ಕದ್ದು. ಸದರೀ ಯೆಲ್ಲಾ ಜಾಗಗಳ ಪಟ್ಟಿಯು, ಕೇಳಿದಾಗ ಡೆಪ್ಯುಟಿ ಕಮ್ಮಿಷನರವರಿಗೆ ಕೊಡಲ್ಪಡತಕ್ಕದ್ದು. ಮತ್ತು ಕಂಟ್ರಾಕ್ಟುದಾರನು ಅಂಗಡಿ ಒಂದಕ್ಕೆ ಮಾಹೇಯಾನಾ ವಿಧಿಸಲ್ಪಟ್ಟ 2 ರೂಪಾಯಿಗಳ ಲೈಸೆನ್ಸ್ ಫೀಯನ್ನು ಕೊಡತಕ್ಕದ್ದು.

VII. ಷರತ್ತುಗಳ X ವ XIIನೇ ರೂಲಸಗಳಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಹೊರ್ತು, ಡಿಸ್ಟಿಲೇರಿಯಲ್ಲಾಗಲೀ ಬಟ್ಟು ಪುರೋಖ್ತು ಅಂಗಡಿಗಳಲ್ಲಾಗಲೀ ಸಾರಾಯಿಯನ್ನು ಚಿಲ್ಲರೇ ಪುರೋಖ್ತು ಮಾಡಕೂಡದು.

VIII. ಚಿಲ್ಲರೇ ಪುರೋಖ್ತು ಅಂಗಡಿಗಳು, ಡಿಸ್ಟ್ರಿಕ್ಟುಜಾತ ಡೆಪ್ಯುಟಿ ಕಮ್ಮಿಷನರ ವಿಚಾರಣೆಯಲ್ಲಿಯೂ, ಮ್ಯುನಿಸಿಪಲ್ ಷಹರ್‌ಗಳಲ್ಲಿ ದೀವಾನರವರಿಂದ ಹುಕ್ಕುಂ ಮಾಡಲ್ಪಟ್ಟರೆ ಅಂತಾ ಷಹರ್‌ಗಳ ಮ್ಯುನಿಸಿಪಲ್ ಪ್ರೆಸಿಡೆಂಟರ ಯಾ ವೈಸ್ ಪ್ರೆಸೀಡೆಂಟರ ವಿಚಾರಣೆಯಲ್ಲಿಯೂ ಇರತಕ್ಕದ್ದು; ಮತ್ತು ಅವರುಗಳ ಮಂಜೂರಾತಿ ಯಿಲ್ಲದೆ ಅವರುಗಳಿಂದ ಮೊಕರರ್ ಮಾಡಲ್ಪಡುವ ಅಂಥಾ ಸ್ಥಳಗಳಲ್ಲದೆ ಚಿಲ್ಲರೇ ಅಂಗಡಿ ಯಾವವೂ ಇಡಲ್ಪಡತಕ್ಕದ್ದಲ್ಲ. ಯಾವ ಅಂಗಡಿಗಳನ್ನಾಗಲಿ, ಪಬ್ಲಿಕ ಜರೂರಾತಿ ಸಬಬಿನಿಂದ ಇಜಾರೇದಾರನು ತನಿಗೆ ಈಡು ಕೊಡಬೇಕೆಂದು ಕೇಳುವ ಹಕ್ಕಿಲ್ಲದೇನೇ ಮುಚ್ಚುವಂತೆ ಹುಕ್ಕುಂ ಮಾಡಲಿಕ್ಕೆ ಅವರು ಅರ್ಹರಾಗಿರತಕ್ಕದ್ದು.

XI. ಚಿಲ್ಲರೇ ಅಂಗಡಿಗಳಿಗೆ ಲೈಸೆನ್ಸಗಳು ಗವರ್ನಮೆಂಟಿನವರಿಂದ ಆಗಿಂದಾಗ್ಯೆ ಮೊಕರರ್ ಮಾಡಲ್ಪಡಬಹುದಾದಂಥಾ ಲೈಸೆನ್ಸ್ ರುಸುಂಗಳನ್ನು ಕೊಟ್ಟಮೇಲೆ ಸದರೀ ಆಫೀಸರ್‌ಗಳಿಂದ ಮಾಮೂಲ್ ನಮೂನೆಯಲ್ಲಿ ಕೊಡಲ್ಪಡುವದು.

ಕ್ರಮ ಪಡಿಸಲ್ಪಟ್ಟ ದಾರಣೆಗೆ ಮತ್ತು ವಿಧಿಸಲ್ಪಟ್ಟ ಸ್ಟ್ರೆಂಗ್ತಿನಿಂದ ಸಾರಾಯಿಯನ್ನು ಪುರೋಖ್ತು ಮಾಡುವದಕ್ಕೂ, ಜರೂರಾದ ಇತರ ಷರತ್ತುಗಳ ಬಗ್ಗೂ ಲೈಸೆನ್ಸಗಳಲ್ಲಿ ನಿಬಂಧನೆಮಾಡಲ್ಪಡುವದು. ಚಿಲ್ಲರೇ ಪುರೋಖ್ತುದಾರರು ಅವರಿಗೆ ಅತ್ಯಂತ ಸಮೀಪದಲ್ಲಿನ ಅಥವಾ ಅವರು ಸಾಲೀಯಾನಾ ತೆಗದುಕೊಳ್ಳುವದಕ್ಕೆ ಚುನಾಯಿಸುವ ಬಟ್ಟು ಅಂಗಡೀಗಳಿಂದಲೇ ಸಾರಾಯಿಯನ್ನು ಕೊಂಡುಕೊಳ್ಳತಕ್ಕದ್ದು. ಸದರೀ ಚಿಲ್ಲರೇ ಪುರೋಖ್ತುದಾರರು, ಅಕ್ರಮವಾದ ವಿಷಯಗಳೇನೂ ನಡೆಯದೇ ಇರುವದನ್ನು ನೋಡುವ ಬಗ್ಯೆ ತಮ್ಮ ಅಂಗಡಿಗಳೊಳಗೆ ಇಜಾರೇದಾರರಿಗಾಗಲೀ ಅವರ ಮುತಾಲೀಕರಿಗಾಲಿ ಅಬ್ಕಾರಿ ಆಫೀಸರುಗಳಿಗಾಗಲೀ ಕ್ರಮ ಪ್ರಕಾರ ಅಧಿಕಾರ ಹೊಂದಿದ ಯಾವ ಸರ್ಕಾರ್ ನವುಕರನಿಗಾಗಲಿ ಅವಕಾಶ ಸಹ ಕೊಡತಕ್ಕದ್ದು, ಮತ್ತು ಪ್ರತಿದಿನ ತಾವು ತೆಗದುಕೊಳ್ಳುವ ಸಾರಾಯಿಯ ತೇದಾದ್ ವ ಸ್ಟ್ರೆಂಗ್ತು ಮತ್ತು ಸದರೀ ಬಗ್ಯೆ ಹಾಕಲ್ಪಡುವ ಖರೀದಿಗಳು ಇವುಗಳ ನಿಜವಾಗಿಯೂ ಕರಾರ್ವಾಕಾ ಆಗಿಯೂ ಇರುವ ಲೆಖ್ಖಗಳನ್ನು ಇಡತಕ್ಕದ್ದಲ್ಲದೇ ಇಜಾರೇ ದಾರನಿಂದಾಗಲಿ ಅವನ ಮುತಾಲೀಕನಿಂದಾಗಲೀ ಸದರೀ ಲೆಕ್ಕ ಕೇಳುವಂತೆ ಅಧಿಕಾರ ಕೊಡಲ್ಪಟ್ಟ ಯಾವ ಸರಕಾರದ ಉದ್ಯೋಗಸ್ಥನಿಂದಾಗಲಿ ಹಾಗೆ ಅಪೇಕ್ಷಿಸಲ್ಪಟ್ಟಾಗ ತನಿಖಿ ನೋಡುವ ಬಗ್ಯೆ ಅವುಗಳನ್ನು ಹಾಜರಿ ಮಾಡತಕ್ಕದ್ದು.

X. ಡಿಸ್ಟಿಲೇರಿಯಿಂದ ಸಾರಾಯಿ ಕೊಡುವದನ್ನು ಕುರಿತ ಈ ಕೆಳಗೆ ಬರುವ ರೂಲ್ಸ್ ಅನುಸರಿಸಲ್ಪಡತಕ್ಕದ್ದು.

(a) ಸಾಧಾರಣವಾಗಿ 20 ಡಿಗ್ರಿ ಅಂಡರ್ ಪ್ರೂಫಿಗೆ ಹೆಚ್ಚಿದ ಸ್ಟ್ರೆಂಗ್ತಿನಿಂದ ಯಾವ ಸಾರಾಯಿಯನ್ನೂ ಕೊಡತಕ್ಕದ್ದಲ್ಲವು, ಆದರೆ ಕಂಟ್ರಾಕ್ಟುದಾರನಾಗಲಿ, ಚಿಲ್ಲರೇ ಪುರೋಖ್ತುದಾರನಾಗಲೀ ಮೇಲಕಂಡ ಸ್ಟ್ರೆಂಗ್ತಿಗಿಂತ ಹೆಚ್ಚಾದ ಸ್ಟ್ರೆಂಗ್ತಿನಲ್ಲಿ ಸಾ

ರಾಯಿ ಕೊಡಲಿಕ್ಕೆ ಅಪೇಕ್ಷಿಸಿದರೆ ಹಾಗೆ ಕೊಡಲ್ಪಡುವ ಸ್ಪಿರಿಟ್ ಸಾರಾಯಿಯು ಪ್ರೂಫಿಗಿಂತ ಹೆಚ್ಚು ಸ್ಟ್ರೆಂಗ್ತ್ ವುಳ್ಳದ್ದಾಗಿರ ಕೂಡದು. ಪ್ರೂಫಿಗೆ ಸಮನಾದ ಬಲವುಳ್ಳ ಸಾರಾಯಿಯು ಯರಡು ಡಜನ್ ಕ್ವಾರ್ಟ್ ಸೀಸೆಗಳಲ್ಲಿಯೂ, ನಾಲ್ಕು ಡಜನ್ ಪರ್ಯಿಂಟ್ ಸೀಸೆಗಳಲ್ಲಿಯೂ, ಇಂಗ್ಲೀಷ್ ಮತ್ತು ಪರಾಯಿ ದೇಶದಂತೆಯೇ ಕಮ್ಮೀ ತೇದಾದಿನ ಡಬ್ಬಿಗಳಲ್ಲಿ ಡಿಸ್ಟಿಲೇರಿಯಿಂದ ಕೊಡಲ್ಪಡುವದು. ಅದು ಡಿಸ್ಟಿಲೇರಿಯಲ್ಲಿ ಸೂಪರ್ ವೈಜರಿಂದ ಮೊಹರ್ಮಾಡಲ್ಪಟ್ಟ ಪ್ರಕಾರವೇ ಬದಲಾಯಿಸದಂತೆಯೂ ಸೂಪರ್ ವೈಜರವರ ಪ್ಯಾಸಿನ ಆಧಾರದ ಮೇಲೂ ಒಟ್ಟು ಅಂಗಡಿಗಳಿಂದ ಚಿಲ್ಲರೇ ಬಿಕರಿದಾರ್ರಿಗೆ ಪುರೋಖ್ತು ಮಾಡಲ್ಪಡತಕ್ಕದ್ದು. ಚಿಲ್ಲರೇ ಬಿಕರೀದಾರರು ಅಂಥಾ ಷರಾಬನ್ನು ಅವರಿಗೆ ಗೊತ್ತಿರುವಂಥಾ ಮರ್ಯಾದೆವುಳ್ಳ ಜನಗಳಿಗೆ ಮಾತ್ರವೇ, ಸೂಪರ್ ವೈಜರಿಂದ ಕೊಡಲ್ಪಟ್ಟ ಅಲಾಹಿದ ಪ್ಯಾಸುಗಳೊಂದಿಗೆ ಕೊಡತಕ್ಕದ್ದು. ಮತ್ತು ಒಟ್ಟು ಬಿಕರೀದಾರರು ವ ಚಿಲ್ಲರೇ ಪುರೋಖ್ತುದಾರರು ಸುದಾ ಅಂಥಾ ಬಿಕರೀಗಳಿಗೆ ವಿಧಿಸಲ್ಪಟ್ಟ ನಮೂನೆಯಲ್ಲಿ ಲೆಕ್ಕ ಕೊಡತಕ್ಕದ್ದು.

(*b*) ಪ್ರೂಫಿಗಿಂತ ಹೆಚ್ಚು ಸ್ಟ್ರೆಂಗ್ತಿನ ಸಾರಾಯಿಯನ್ನು ಇಜಾರೇದಾರನು ಕೊಡಲಿಕ್ಕೆ ಅಪೇಕ್ಷಿಸಿದರೆ ಆ ಬಗ್ಯೆ ಸೂಪರ್‌ವೈಜರ್ ಮೂಲಕ ಡೆಪ್ಯುಟಿ ಕಮ್ಮಿಷನರವರ ವಿಶೇಷ ಹುಕ್ಕುಂಗಳನ್ನು ಪಡೆಯತಕ್ಕದ್ದು. ಸದರೀ ಸೂಪರ್‌ವೈಜರು ಸದರೀ ಅಂಶಗಳನ್ನು ಸೂಚಿಸಿ, ಅದರಂತೆ ಒಟ್ಟು ಬಿಕ್ರಿ ಅಂಗಡಿಗಳಿಗೆ ಪ್ಯಾಸ್‌ಗಳ ಯಾನೇ ರಹದಾರೀಗಳನ್ನು ಕೊಡತಕ್ಕದ್ದು. ಹಾಗೇಕೊಡಲ್ಪಟ್ಟ ಸಾರಾಯಿಯು ಈ ಪ್ಯಾರಾ (*a*) ಕ್ಲಾಜ್‌ನಲ್ಲಿ ವಿಧಿಸಲ್ಪಟ್ಟ ಪ್ರಕಾರ ವಿಕ್ರಯಿಸಲ್ಪಟ್ಟ ಲೆಕ್ಕ ಇಡಲ್ಪಡತಕ್ಕದ್ದು.

(*c*) ಅಂಡರ್ ಪ್ರೂಫ್ ಬಾಬತು 20° ಡಿಗ್ರೀಗೆ ಮೇಲ್ಪಟ್ಟ ಸ್ಟ್ರೆಂಗ್ತ್ ವುಂಟಾಗಿ ಮತ್ತು ಪ್ರೂಫಿನವರಿಗೆ ಇದ್ದು, ಕೊಡಲ್ಪಡುವ ತಮಾಂ ಸಾರಾಯಿಗೂ, ಪ್ರೂಫಿನ ಮೇಲೆ ತೀರ್ವೆಯನ್ನು ವಿಧಿಸತಕ್ಕದ್ದು. ಪ್ರೂಫಿನ ಮೇಲಣ ದರವು ಜಲಪರಿಮಾಪಕ ಯಂತ್ರದ ದರಗಳ ಪ್ರಕಾರ ದಾಮಾಷಾಯಿ ಮೇಲೆ ಜಾಸ್ತಿ ಮಾಡಲ್ಪಡತಕ್ಕದ್ದು.

(*d*) ಅಂಡರ್ ಪ್ರೂಫಿನ 20° ಡಿಗ್ರೀಗೆ ಕೀಳ್ಪಟ್ಟ ಯಾವ ಸಾರಾಯಿಯೂ, ಸಾಧಾರಣವಾಗಿ ಡಿಸ್ಟಿಲೇರಿಯಿಂದ ಕೊಡಲ್ಪಡಕೂಡದು. ಪರಂತು, ಅಂಡರ್ ಪ್ರೂಫಿನ 20° ಡಿಗ್ರೀ ಸ್ಟ್ರೆಂಗ್ತಿಗಿಂತ ಕಡಮೆ ಶಕ್ತಿಯುಳ್ಳ ಸಾರಾಯಿ ಬಗ್ಯೆ ತಗಾದೇ ಉಂಟಾದರೆ, ಅಂಡರ್ ಪ್ರೂಫಿನ 30° ಡಿಗ್ರೀ ಸಾರಾಯಿಯು, ದಾಮಾಷಾಯಿ ಪ್ರಕಾರ ಕಮ್ಮಿ ಮಾಡಲ್ಪಟ್ಟ ತೀರ್ವೆಯ ದರಗಳ ಮೇರೆ, ಡಿಸ್ಟಿಲ್ಲೇರಿಯಿಂದ ವಿಶೇಷತಃ ಕೊಡಲ್ಪಡಬಹುದು. ಅಂತಾ ಸಾರಾಯಿಯು, ಒಟ್ಟು ಕೋಠಿಗಳಲ್ಲಿಯೂ, ಚಿಲ್ಲರೇ ದುಕಾನಗಳೊಳಗೂ ಪ್ರತ್ಯೇಕ ಪ್ರತ್ಯೇಕವಾಗಿ ಇಡಲ್ಪಟ್ಟು ಲೆಕ್ಕ ಕೊಡತಕ್ಕದ್ದು.

XI. ಸಾರಾಯಿಯು ಡಿಸ್ಟಿಲ್ಲೇರಿಯಿಂದ ಕೊಡಲ್ಪಟ್ಟ ಮೇರೆ ಪುರೋಖ್ತು ಮಾಡಲ್ಪಡತಕ್ಕದ್ದೇ ಹೊರತು, ಒಟ್ಟು ಬಿಕ್ರಿಯ ಅಥವಾ ಚಿಲ್ಲರೇ ಅಂಗಡಿಗಳಲ್ಲಿ ಯಾವ ರೀತಿಯಲ್ಲಾಗಲಿ ಇತರ ಪದಾರ್ಥ ಬೆರಿಕೇ ಮಾಡಕೂಡದು ಅಥವಾ ನೀರು ಬೆರಿಸಕೂಡದು.

XII. ಅಂಡರ್ ಪ್ರೂಫಿನ ಬಾಬತು 20° ಡಿಗ್ರೀಯ ಸ್ಟ್ರೆಂಗ್ತಿನ ಸಾರಾಯಿಯ ಮೇಲೆ ಸಲ್ಲತಕ್ಕ ರೂಪಾಯಿಗೆ ಬಂದಾಸ ಮೇರೆ ಲೋಕಲ್‌ಸೆಸ್ ದೇಖೀಲ್ ಗವರ್ನಮೆಂಟ್ ತೀರ್ವೆಯು, ಸದರೀ ಸಾರಾಯಿ, (ಇತರ ಪದಾರ್ಥ ಬೇರಿಕೆ ಇಲ್ಲದೆಯೂ, ನೀರ ಬೆರಿಕೆಯಾಗದೆಯೂ) ಒಟ್ಟು ಪುರೋಖ್ತು ವ ಚಿಲ್ಲರೆ ಅಂಗಡಿಗಳಲ್ಲಿ ಯಾವ ಖರೀದೀ ಪ್ರಕಾರ ಪುರೋಖ್ತಾಗತಕ್ಕದ್ದೋ ಅದು ಇದರಡಿ ಕಂಡ ತಖ್ತೇಯಲ್ಲಿ ವಿವರಿಸಲ್ಪಟ್ಟ ಮೇರೆ ಇದರಿಂದ ನಿಶ್ಚಯಿಸಲ್ಪಟ್ಟಿರುತ್ತೆ:

ಷಹರ್ ಅಥವಾ ಡಿಸ್ಟ್ರಿಕ್ಟ್.	20° ಅಂಡರ್ ಪ್ರೂಫ್ ಸ್ಪಿರಿಟ್ ಸಾರಾಯಿಗಳು.											
	ಗ್ಯಾಲನ್ ವಂದಕ್ಕೆ ತೆರಿಗೆ.			ಗ್ಯಾಲನ್ ವಂದಕ್ಕೆ ಒಟ್ಟು ಬಿಕರಿ ಕ್ರಯ.			ಚಿಲ್ಲರೇ ಪುರೋಖ್ತು ಕ್ರಯ.					
							ಗ್ಯಾಲನ್‌ವಂದಕ್ಕೆ			ಡ್ರಾಮ್‌ವಂದಕ್ಕೆ		
	ರೂ.	ಆ.	ಪ್ರ.	ರೂ.	ಆ.	ಪ್ರ.	ರೂ.	ಆ	ಪ್ರ.	ರೂ.	ಆ.	ಪ್ರ.
ಶಿವಮೊಗ್ಗಾ ಷಹರ್	2	12	0	4	6	4	5	0	0	0	1	8
ಡಿಸ್ಟ್ರಿಕ್ಟಿನ ತಮಾಂ ಇತರ ಸ್ಥಳಗಳು	2	2	0	3	14	0	4	8	0	0	1	6

೧೪೭

ಪ್ರೂಫ್‌ಗಾಗಿಯೂ ಅಂಡರ್ ಪ್ರೂಫಿನ ಬಾಬತು 30°ಗೂ ಖರೀದಿಗಳು ಮತ್ತು ಅದರ ಮೇಲೆ ಕಟ್ಟತಕ್ಕ ತೀರ್ವೆಬಗ್ಗೆ ಸದರೀ ಸ್ಟ್ರೆಂಗ್ತ್‌ಗಳ ಮೇಲೆ ಅಥವಾ ಸ್ಟ್ರೆಂಗ್ತ್‌ಗಳ ವಳಗೆ ತವೂಂ ಸ್ಟ್ರೆಂಗ್ತ್‌ಗಳಿಗೂ ತೀರ್ವೆ ಸಹ ಗವರ್ನ್‌ಮೆಂಟ್ ಹೈಡ್ರಾಮೀಟರ್ಸ್ ಯಂತ್ರಗಳ ಪ್ರತಿ ಪೆಟ್ಟಿಗೆ ಸಂಗಡಲೂ ಕಳುಹಿಸಲ್ಪಡುವ ಕ್ಯಾಸಿಲಾ ಯವರ ರೂಲ್ಸ್ ಅನುಸರಿಸಿ ಅಂಡರ್ ಪ್ರೂಫ್ ಬಾಬತು 20°ಗೆ ಮೇಲೆ ವಿವರಿಸಲ್ಪಟ್ಟ ದರಗಳ ಮೇಲೆ ದಾಮಾಷಾಯಿ ಪ್ರಕಾರ ಕ್ರಮಪಡಿಸಲ್ಪಡತಕ್ಕದ್ದು. ಈ ರೂಲ್ಸಿನಲ್ಲಿರುವ ಯಾವ ಅಂಶವೂ, ಗೌರವಶಾಲಿಗಳಾದ ಖುಷ್ ಬಾಷ್ ಜನಗಳಿಗೂ ಆಸ್ಪತ್ರೆಗಳಿಗೂ, ಮ್ಯೂಜಿಯಂಯೆಂಬ ವಿವಿಧವಸ್ತುಶಾಲೆಗಳಿಗೂ ಮತ್ತು ಇತರ ಪಬ್ಲಿಕ್ ಸ್ಥಾಪನೆಗಳಿಗೂ ಅಂಡರ್ ಪ್ರೂಫಿನ ಬಾಬತು 20° ಮೇಲೆ ಮತ್ತು ಓವರ್ ಪ್ರೂಫಿನ ಬಾಬತು 30° ವರಿಗೆ ಸಾರಾಯಿಯನ್ನು ಸಾಧಾರಣ ವಂದು ಕ್ವಾರ್ಟ್ಸು ಶೀಷೆಗಿಂತ ಕಡಮೆಯಿಲ್ಲದೆ ಮತ್ತು ವಟ್ಟು ಬಿಕರಿಯ ಖರೀದಿ ಪ್ರಕಾರ 2 ಗ್ಯಾಲನ್ಗೆ ಮೀರದ ತೇದಾದ್ ಪ್ರಕಾರ ಸಾರಾಯಿಯನ್ನು ಸೂಪರ್ ವೈಜರು ಅವರಿಗೆ ಬರಹ ಮೂಲಕ ಕೇಳಿ ಕೊಂಡಾಗ ಸರಬರಾಯಿ ಮಾಡುವದನ್ನು ನಿರೋಧಿಸತಕ್ಕ ಅಂಶ ಯಾವದೂ ಇಲ್ಲವು. ಹೆಚ್ಚು ಸ್ಟ್ರೆಂಗ್ತ್ ಸಾರಾಯಿಯು ಜರೂರಿಯಾತ ಸಂಗತಿಗಳಲ್ಲಿಯೂ ಡೆಪ್ಯುಟಿ ಕಮ್ಮಿಷನರವರ ವಿಶೇಷ ಮಂಜೂರಾತಿ ಮೇಲೆಯೂ ವಿನಹಾ ಕೊಡಲ್ಪಡ ತಕ್ಕದ್ದಲ್ಲ.

XIII. ಸಾರಾಯಿ ಕಮ್ಮೀಬಂದ ಬಗ್ಗೆ ಶಿವಮೊಗ್ಗಾ ಷಹರ್ ಮ್ಯುನಿಸಿಪಲ್ ಸರಹದ್ದುಗಳ ಆಚೆಗೆ ಪುರೋಖ್ತು ಬಗ್ಗೆ ಡಿಸ್ಟಿಲೇರಿಯಿಂದ ಕೊಡಲ್ಪಟ್ಟ ಸಾರಾಯಿಯ ಮೇಲೆ ಸಲ್ಲತಕ್ಕ ತೆರಿಗೆಯ ಮೇಲೆ ಸೇಕಡಾ 2ರ ಪ್ರಕಾರ ಸೋಡಿ ಯಾ ವಜಾ ಕೊಡಲ್ಪಡ ತಕ್ಕದ್ದು.

XIV. ಇಜಾರೇದಾರನು ಡಿಸ್ಟಿಲ್ಲೇರಿಗಳನ್ನಾಗಲಿ, ಬಟ್ಟಿ ಪುರೋಖ್ತು ಅಂಗಡಿಗಳನ್ನಾಗಲಿ, ಕೋಠಿಗಳನ್ನಾಗಲಿ ಮೇಲ್ವಿಚಾರಣೆ ಮಾಡಲಿಕ್ಕೆ ಯಾವನನ್ನು ನೌಕರರ್ ಮಾಡುತ್ತಾನೋ ಅಂತಾ ಪ್ರತಿ ಮನುಷ್ಯನನ್ನೂ ಹಾಗೆ ನೌಕರರ್ ಮಾಡುವದಕ್ಕೆ ಮುಂದಾಗಿ ಮೇಲೆ ಕಂಡ ಷರತ್‌ಗಳಿಗೆ ಅನುಗುಣವಾಗಿ ಕರಾರುಗಳನ್ನು ಬರೆದು ಕೊಡುವಂತೆ ಮಾಡತಕ್ಕದ್ದು. ಅಂಥಾ ಕರಾರ್‌ಗಳು 1884ನೇ ಇಸವಿ ಏಪ್ರಿಲ್ ಒಂದನೇ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಆ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರಲ್ಲಿ ಯಿಡಲ್ಪಡತಕ್ಕದ್ದು. ಮತ್ತು ಸದರೀ ಇಜಾರೇದಾರನು, ಷರಾಬ್ ತಯಾರಿ, ಸಾಗಿಸುವಣ, ಮತ್ತು ಪುರೋಖ್ತು ಈ ಕೆಲಸಗಳಲ್ಲಿ ತನ್ನಿಂದ ನೌಕರರ್ ಮಾಡಲ್ಪಡುವ ತವೂಂ ಜನಗಳೂ, ತಮ್ಮಿಂದ ಮಾಡಿಕೊಳ್ಳಲ್ಪಟ್ಟ ಕರಾರ್‌ಗಳ ವ ಕಾನೂನಿನ ನಿಬಂಧನೆಗಳನ್ನು ಖಂಡಿತವಾಗಿ ಅನುಸರಿಸುವಂತೆ ಮಾಡುವದಕ್ಕೆ ಪೂರಾ ತರದೂದ್ ಮಾಡತಕ್ಕದ್ದು; ಮತ್ತು ಸದರೀ ನಿಬಂಧನೆಗಳಿಗೆ ಬರ್‌ಖಿಲಾಫ್ ನಡಿಸಲ್ಪಟ್ಟಂತೆ ಆತನ ತಿಳುವಳಿಕೆಗೆ ಬಂದರೆ ಸದರೀ ಅಪರಾಧಕ್ಕೆ ವಿಧಿಸಲ್ಪಟ್ಟ ದಂಡನೆ ವಿಧಿಸುವ ಬಗ್ಗೆ, ಸದರೀ ಡಿಸ್ಟ್ರಿಕ್ಟಿನ ಡೆ॥ ಕಮ್ಮಿಷನರ ಜಾಹೀರಾತಿಗೆ ಸದರೀ ಸಂಗತಿಯನ್ನು ತರತಕ್ಕದ್ದು. ಮತ್ತು ಸದರೀ ಅಪರಾಧಿಯನ್ನು ತಗ್ಗೈರ್ ಮಾಡುವಂತೆ ಡೆ॥ ಕಮ್ಮಿಷನರಿಂದ ಅಪೇಕ್ಷಿಸಲ್ಪಟ್ಟರೆ, ಅದೇ ಮೇರೆ ಅವನನ್ನು ತಗ್ಗೈರ್ ಮಾಡತಕ್ಕದ್ದು.

XV. ಇಜಾರೇಯ ಷರತ್‌ಗಳಿಗೆ ವಿರುದ್ಧವಿಲ್ಲದೆ, ಗವರ್ನ್‌ಮೆಂಟಿನಿಂದ ಆಗಿಂದಾಗ್ಗೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಇಜಾರೇದಾರನು ಅನುಗುಣವಾಗಿ ನಡೆಯತಕ್ಕದ್ದು. ಮತ್ತು ಆತನ ನೌಕರ್ ಮಾನೆಯರೆಲ್ಲಾ ಬಟ್ಟೀ ಇಳಿಸಲ್ಪಟ್ಟು ಕೊಡಲ್ಪಟ್ಟ ಸಾರಾಯಿಯ ಬಂದೋಬಸ್ತು ಮತ್ತು ಕ್ರಮ, ಉಪಯೋಗಿಸಲ್ಪಟ್ಟ ತವೂಂ ಪಾತ್ರೆಗಳ ಪಾಕೀಜೀ, ಲೋಹ ಪಾತ್ರೆಗಳ ಕಲಾಯಿಹಾಕಿಸುವಣ, ಕಾವಲು, ಆವರಣದ ತನಿಖೀ ಮತ್ತು ಆರೋಗ್ಯಕರವಾದ ಸ್ಥಿತಿ ಮತ್ತು ಗವರ್ನ್‌ಮೆಂಟಿನವರ ಅಥವಾ ಇಜಾರೇದಾರರ ಅಥವಾ ಉಭಯತ್ರರ ಪ್ರಯೋಜನಗಳಿಗೆ ಸಂಬಂಧಪಟ್ಟ ಇತರ ವಿಷಯಗಳು, ಇವುಗಳ ಬಗ್ಗೆ ಗವರ್ನ್‌ಮೆಂಟಿನವರು ಜಾರೀಮಾಡಿದ ರೂಲ್ಸನ್ನೂ, ಹುಕ್ಕುಂಗಳನ್ನೂ, ಪೂರಾ ಜಾರೀಗೆ ತರುವ ಅಂಶಗಳಿಗೇ ನಿಗೇ ಕೊಡತಕ್ಕದ್ದು.

XVI. ಮೇಲೆ ಕಂಡ ಷರತ್‌ಗಳ ಪೈಕೀ ಯಾವ ಷರತ್‌ಗಳಿಗಾಗಲಿ ಇಜಾರೇದಾರನಿಂದ ಅಥವಾ, ಷರಾಬ್ ತಯಾರಿ, ಸಾಗಿಸುವಣ ಯಾ ಪುರೋಖ್ತು ಇಂತಾದ್ದರಲ್ಲಿ, ಆತನಿಂದ ನೌಕರರ್ ಮಾಡಲ್ಪಟ್ಟ ಜನಗಳ ಪೈಕೀ ಯಾರಿಂದಾದರೂ, ಸದರೀ ಇಜಾರೇದಾರನು ನೋಡಿಯೂ ನೋಡದಹಾಗೆ ಇರುವದರಿಂದ ಅಥವಾ ರಹಸ್ಯವಾದ ಷಾಮೀಲಾತೀಯಿಂದ ಮನಃಪೂರ್ವಕವಾಗಿ ಬರ್‌ಖಿಲಾಫ್ ಯೇನಾದರೂ ನಡಿಸಲ್ಪಟ್ಟರೆ, ಇಜಾರೇಯನ್ನು ರದ್ದು ಮಾಡುವದಕ್ಕೂ, ಠೇವಣೀ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಟ್ಟಿತೆಂದು ತಿಳಿಸುವದಕ್ಕೂ, 1ನೇ ಷರತ್‌ನಲ್ಲಿ ವಿಧಿಸಲ್ಪಟ್ಟ ಪ್ರಕಾರ ಅಮಲ್ ನಡಿಸುವದಕ್ಕೂ ದೀವಾನರವರಿಗೆ ಯೆಖ್ತಿಯಾರಿ ಇರತಕ್ಕದ್ದು.

XVII. ಗವರ್ನ್‌ಮೆಂಟಿನವರಿಂದ ಸದರೀ ಬಗ್ಗೆ ವಿಧಿಸಲ್ಪಡಬಹುದಾದ ಅಂತಾ ಷರತ್‌ಗಳಿಗೆ ಬಳಪಟ್ಟು, ಇಜಾರೇದಾರನಿಂದ ಕೊಲಂಬೋ ಸಾರಾಯಿಯನ್ನು ಅಥವಾ ಇತರ ವಿಧಗಳುಳ್ಳ ಆರಕ್ ಸಾರಾಯಿ, ಲಿಕ್ಕರ್ ಸಾರಾಯಿ ಇವುಗಳನ್ನು ತಯಾರ್ ಮಾಡಲ್ಪಡಲಿಕ್ಕೂ, ಪುರೋಖ್ತು ಮಾಡಲ್ಪಡಲಿಕ್ಕೂ, ಗವರ್ನ್‌ಮೆಂಟಿನವರು ಅಂಗೀಕರಿಸಬಹುದು, ಪರಂತು ಈ ಇಸ್ತಿಹಾರ್‌ನಾಮೆಯಲ್ಲಿ ಕಂಡ ಸಾಧಾರಣ ಕಂಟ್ರಿ ಸಾರಾಯಿಯಿಂದ ಆಗುವ ಹುಟ್ಟುವಳಿಯ ಮೇಲೆ ಸದೇ ಬಗ್ಗೆ ವಜಾ ಯಾವದೂ ಕೊಡಲ್ಪಡಲಾರದು.

7. ಕಳೆದ ವರುಷಗಳಲ್ಲಿ ಕೊಡಲ್ಪಟ್ಟ ಷರಾಬಿನ ತೇದಾದು ಇದರಡಿ ಕಂಡ ತಖ್ತೆಯಲ್ಲಿ ಕಾಣಿಸಿರುತ್ತೆ.

	1870—71 ಗ್ಯಾಲನ್‌ಗಳು.	1871—72 ಗ್ಯಾಲನ್‌ಗಳು.	1872—73 ಗ್ಯಾಲನ್‌ಗಳು.	1873—74 ಗ್ಯಾಲನ್‌ಗಳು.	1874—75 ಗ್ಯಾಲನ್‌ಗಳು.	1875—76 ಗ್ಯಾಲನ್‌ಗಳು.	1876—77 ಗ್ಯಾಲನ್‌ಗಳು.	1877—78 ಗ್ಯಾಲನ್‌ಗಳು.	1878—79 ಗ್ಯಾಲನ್‌ಗಳು.	1879—80 ಗ್ಯಾಲನ್‌ಗಳು.	1880—81 ಗ್ಯಾಲನ್‌ಗಳು.	1881—82 ಗ್ಯಾಲನ್‌ಗಳು.	1882—83 ಗ್ಯಾಲನ್‌ಗಳು.
ಶಿವಮೊಗ್ಗಾ ಡಿಸ್ಟ್ರಿಕ್ಟು	* 27,259	* 26,877	* 32,202	* 33,850	* 23,590	* 18,008	* 19,821	* 13,789	* 10,789	* 14,222	* 14,590	21,855	20,253

* ಈ ಅಂಕೆಗಳು 1870—71ರ ಲಾಗಾಯತು 1880—81ರ ವರಿಗೆ ಈಚಿಗೆ ಡಿಸ್ಟ್ರಿಕ್ಟಿಗೆ ಸೇರಿಸೋಣಾದ ದಾವಣಗೆರೆ ತಾಲ್ಲೂಕಿಗೆ ಕೊಡಲ್ಪಟ್ಟ ತೇದಾದನ್ನು ಅಡಗಿಸಿಕೊಂಡಿರುವದಿಲ್ಲಾ.

ತಾರೀಖು 9ನೇ ಫೆಬ್ರುವರೀ 1884.

ನಂ. 316.—ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ನಿಗೆ ಸೇರಿದ ಇದರಡಿ ಕಂಡ ಮೂರು ತಾಲ್ಲೂಕುಗಳಲ್ಲಿಯೂ ಮತ್ತು ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಹೊಳೇನರಸೀಪುರ ತಾಲ್ಲೂಕಿನಲ್ಲಿಯೂ, 1884ನೇ ಇಸವಿ ಏಪ್ರಲ್ 1ನೇ ತಾರೀಖು ಮೊದಲು 1887ನೇ ಇಸವಿ ಮಾರ್ಚಿ 31ನೇ ತಾರೀಖು ವರಿಗೆ ಆಗುವ ಮೂರು ವರುಷ ಕಾಲಪರಿಯಂತ ಸೇಂದೀ ಬಿಕ್ರೀ ಮಾಡುವ ಪಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತುಗಳು ಕೋರಲ್ಪಟ್ಟಿವೆ. ದೀವಾನರವರ 1882ನೇ ಇಸವಿ ನವಂಬರ್ 25ನೇ ಮುರ್ಕುಂ 136 137, ವ 138ನೇ ನಂಬರ್, ಮತ್ತು 1882ನೇ ಇಸವಿ ಡಿಸೆಂಬರ್ 21ನೇ ಮುರ್ಕುಂ 165ನೇ ನಂಬರ್, 1882ನೇ ಇಸವಿ ಡಿಸೆಂಬರ್ 23ನೇ ಮುರ್ಕುಂ 183ನೇ ನಂಬರ್, 1883ನೇ ಇಸವಿ ಜನವರೀ 4ನೇ ಮುರ್ಕುಂ 1—3ನೇ ನಂಬರ್, ಮತ್ತು ಅದೇ ಇಸವಿ ನವಂಬರ್ 16ನೇ ಮುರ್ಕುಂ 274ನೇ ನಂಬರು, ಈ ಇಸ್ತಿಹಾರ್‌ನಾಮೆಗಳಿಂದ ತಿದ್ದುಪಡಿ ಮಾಡಲ್ಪಟ್ಟ ಪ್ರಕಾರ ಇದರಡಿ ಕಂಡ ತಾಲ್ಲೂಕುಗಳು ಸೇರಿರುತ್ತೆ.

1 ಅತ್ತಿಕುಪ್ಪಾ.	3 ಚನ್ನರಾಯಪಟ್ಣ.
2 ನಾಗಮಂಗಲ.	4 ಹೊಳೇನರಸೀಪುರ, ಅರಕಲಗೂಡು ಡೆಪ್ಯುಟಿ ಅಮಲ್‌ದಾರ್ರ ಚಾರ್ಜು ಸೇರಿ.

2. ಯಪ್ಪರ ಮೊಬಲಗಿಗೆ ಕೇಳುತ್ತಾರೋ ಅಂತಾ ಸಾಲೀಯಾನಾ ಮೊಬಲಗು ಪ್ರತಿ ದರಖಾಸ್ತಿನಲ್ಲಿಯೂ ನಮೂದಿಸಲ್ಪಟ್ಟು ಅದರ ಸಂಗಡ ನಗದಾಗಿಯಾಗಲಿ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ 500 ರೂಪಾಯಿಗಳ ಡಿಪಾಜಿಟನ್ನಿ ಲಿಫಾಪೆಯೊಳಗೆ ಹಾಕಿ ಬಂದ್ ಮಾಡಲ್ಪಟ್ಟು "ಅತ್ತಿಕುಪ್ಪ, ನಾಗಮಂಗಲ, ಚನ್ನರಾಯಪಟ್ಣ, ಮತ್ತು ಹೊಳೇನರಸೀಪುರ ತಾಲ್ಲೂಕುಗಳೊಳಗೆ ಸೇಂದಿ ಬಿಕ್ರಿ ಮಾಡತಕ್ಕ ಬಟ್ಟು ಸ್ವಾತಂತ್ರದ ಬಗ್ಯೆ ದರಖಾಸ್ತು" ಯೆಂತ ಲಿಫಾಪೆ ಮೇಲೆ ಬರೆದು ಕಳುಹಿಸತಕ್ಕದ್ದು.

3. ದರಖಾಸ್ತುಗಳು, ಸ್ನ 1884ನೇ ಇಸವಿ ಫೆಬ್ರುವರೀ 28ನೇ ಮುರ್ಕುಮಿನ ಮಧ್ಯಾನ್ಹದೊಳಗಾಗಲಿ, ತತ್ಪೂರ್ವವಾಗಲಿ, ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಆಫೀಸಿನಲ್ಲಿ ಪಾವತೀ ಮಾಡಲ್ಪಡತಕ್ಕದ್ದು. ಆಗ ಸದರೀ ದರಖಾಸ್ತುಗಳು ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು. ಯಾವ ದರಖಾಸ್ತುದಾರನ ದರಖಾಸ್ತನ್ನು, ದೀವಾನರವರಿಗೆ ಸಿಫಾರಸ್ ಮಾಡುವ ಬಗ್ಯೆ ಡೆಪ್ಯುಟಿ ಕಮ್ಮಿಷನರು ಚುನಾಯಿಸಿಕೊಳ್ಳುತ್ತಾರೋ ಅಂಥಾ ದರಖಾಸ್ತುದಾರನು ಕೂಡ್ಲೆ ನಗದಾಗಿಯಾಗಲಿ, ಗವರ್ನಮೆಂಟ್ ಪತ್ರಗಳ ಮೂಲಕವಾಗಲಿ ದರಖಾಸ್ತು ಮಾಡಿದ ಸಾಲೀಯಾನಾ ಇಜಾರೇ ಮೊಬಲಗು ಪೈಕಿ ಹನ್ನೆರಡರಲ್ಲಿ ವಂದು ಭಾಗವಾಗಲಿ (ಅಥವಾ ವಂದು ತಿಂಗಳ ಖಿಸ್ತು ಮೊಬಲಗಾಗಲಿ) ಜಾಸ್ತಿಯಾಗಿ ಡಿಪಾಜಿಟ್ ಇಡತಕ್ಕದ್ದು, ಇದಕ್ಕೆ ತಪ್ಪಿದರೆ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಡಿಪಾಜಿಟ್ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

4. ದೀವಾನರವರ ತೀರ್ಮಾನ ಫಾಯಿಷ್ ಮಾಡಲ್ಪಟ್ಟಾಗ ಯಾವ ದರಖಾಸ್ತುದಾರರ ದರಖಾಸ್ತುಗಳು ತಿರಸ್ಕರಿಸಲ್ಪಟ್ಟಿರುತ್ತವೋ ಅಂತಾ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟುಗಳು, ಅವರು ಖಾಯಿಷ್ ಮಾಡಿದಾಗ ಅವರಿಗೆ ವಾಪಸ್ ಮಾಡಲ್ಪಡುವದು. ಚಡದರಖಾಸ್ತನ್ನಾಗಲೀ, ಯಾವ ದರಖಾಸ್ತನ್ನಾಗಲೀ ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದೀವಾನರವರು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ.

5. ಯಾರ ದರಖಾಸ್ತು ಮಂಜೂರ್ಮಾಡಲ್ಪಡುತ್ತೋ ಅವರಿಗೆ ದೀವಾನರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ ಯೆಂಟು ದಿನಗಳೊಳಗಾಗಲಿ, 3ನೇ ಕಲಂ ಅನುಸರಿಸಿ ಮೊದಲು ಡಿಪಾಜಿಟ್ ಯಿಟ್ಟಿರುವ ಮೊಬಲಗ್ ದೇಖೀಲ್ ದರಖಾಸ್ತು ಮಾಡಲ್ಪಟ್ಟ ಸಾಲೀಯಾನಾ

ಇಜಾರೇ ಮೊಬಲಗ್ ಪೈಕೀ ಹಾಗಪಾಲಿಗೆ ಸಮನಾಗಿರುವ ಒಂದು ಮೊಬಲಗನ್ನು ನಗದಾಗಿಯಾಗಲೀ ಕ್ರಮ ಪ್ರಕಾರ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ ಪತ್ರಗಳ ಮೂಲಕವಾಗಿಯಾಗಲೀ, ಡೆಪ್ಯುಟಿ ಕಮ್ಮಿಷನರಲ್ಲಿ ಡಿಪಾಜಿಟ ಇಡತಕ್ಕದ್ದು. ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತ್ತುಗಳಿಗೆ ಬದ್ಧರಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾಕಾಗದದ ಮೇಲೆ ಒಂದು ಕರಾರ್ ಬರದುಕೊಡತಕ್ಕದ್ದು. ಆತನು ಕರಾರಿಗೆ ರುಜುಮಾಡುವದಕ್ಕಾಗಲಿ, ಅಪೇಕ್ಷಿಸಲ್ಪಟ್ಟ ಡಿಪಾಜಿಟ ಇಡಲಿಕ್ಕಾಗಲೀ, ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವವೆ ಇಡಲ್ಪಟ್ಟ ಡಿಪಾಜಿಟಗಳು, ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು ಇಜಾರೆಯು ಅನ್ಯಥಾ ವಿಲಾ ಮಾಡಲ್ಪಡುವದು.

ಷರತ್ತುಗಳು.

1. ಸಾಲೀಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಒಂದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್ ಸೆಸ್ ದೇಖೀಲ್ ಅಂತಾ ಇಜಾರೇ ಮೊಬಲಗನ್ನು ಅದು ಬಾಕಿ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದಕ್ಕೆ ಮುಂದಾಗಿಯಾಗಲಿ, ಡಿಸ್ಟ್ರಿಕ್ಟು ಖಜಾನೆಯಲ್ಲಿ ಮಾಹೇಯಾನಾ ಸಮನಾದ ಕಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು, ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕಿಗಳಿಗೂ, ಸೇಕಡಾ ಸಾಲೀಯಾನಾ 6ರ ಪ್ರಕಾರ ಬಡ್ಡೀ ಕೊಡತಕ್ಕದ್ದು: ಅಂತಾ ಬಾಕೀ ಮೊಬಲಗಗಳು ಪಾವತೀಯಾಗತಕ್ಕ ತಿಂಗಳು ಕಳೆದ ಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜಮೀನ್ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಇರುವ ರೂಲ್ಸನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೇದಾರನ ಸ್ವತ್ತು ಜಫ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು. ಮತ್ತು ಇಜಾರೇ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನೀ ಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಖೀಲ್ ತಮಾಂ ಬಾಕಿಗಳನ್ನೂ ಹಾಗೆ ಇಜಾರೇ ಪುನಃ ಹರಾಜ್ ಹಾಕುವದರಿಂದಾಗಲಿ, ವಿಲಾ ಮಾಡುವದರಿಂದಾಗಲಿ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ, ಜಾಮೀನಿ ಮೊಬಲಗ್ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದೀವಾನರವರ ಮಂಜೂರಾತೀನಿಶೇ ಡೆಪ್ಯುಟಿ ಕಮ್ಮಿಷನರವರಿಗೆ ಯಖ್ತ್ಯಾರೀ ಯಿರತಕ್ಕದ್ದು.

2. ಚಿಲ್ಲರೇ ಫುರೋಖ್ತುದಾರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸಗಳು, ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂಠೋಕ್ತವಾದ ಮಂಜೂರಾತಿ ಇಲ್ಲದೆ, ಇಜಾರೇದಾರನು ಹಾಲೀ ಶೇಂದೀ ಫುರೋಖ್ತು ಬಗ್ಯೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖ್ಯೆಯ ವಿಷಯದಲ್ಲಾಗಲಿ, ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬಗಳ ಮೇಲೆ ಯಾವ ಅಂಗಡಿಗಳನ್ನಾದರೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷನರು ಅರ್ಹರಾಗಿರುತ್ತಾರೆ.

3. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ, ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

4. ಇಜಾರೇದಾರನು, ದೀವಾನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಬದ್ಧನಾಗಿ ನಡದುಕೊಳ್ಳತಕ್ಕದ್ದು.

5. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರಿಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗ್ಯೆರೆಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರ ಹಕ್ಕುದಾರೀಗಳಲ್ಲಿ, ಗುತ್ತಿಗೆದಾರನು ಎಷ್ಟು ಮಟ್ಟಿಗೂ ಪ್ರವೇಶಿಸಕೂಡದು. ಅಂತಾ ಹಕ್ಕುಗಳ ವಿಷಯದಲ್ಲಿ ಉಂಟಾಗುವ ತಕರಾರ್‌ಗಳನ್ನು ಡಿಸ್ಟ್ರಿಕ್ಟು ಡೆಪ್ಯುಟಿ, ಕಮ್ಮಿಷನರು ಫೈಸಲ್ ಮಾಡತಕ್ಕದ್ದು. ಅಂತಾ ಫೈಸಲಿಗೆ ಗುತ್ತಿಗೇದಾರನು ಬದ್ಧನಾಗಿರತಕ್ಕದ್ದು. ಪರಂತು, ಸದರೀ ಫೈಸಲ್ ಅಪ್ಪೀಲ್‌ನಲ್ಲಿ ದೀವಾನರವರಿಂದ ಕಾಯಂಮಾಡಲ್ಪಡಲಿಕ್ಕಾಗಲಿ ಅನ್ಯಥಾ ಆಗಲಿ ಗುರಿಯಾಗತಕ್ಕದ್ದು.

6. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಶೇಂದಿ ಅಂಗಡಿಗಳ್ಯಾವತ್ತೂ ತೆಗಿಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡೆಪ್ಯುಟಿ ಕಮ್ಮಿಷನರಿಂದ ವಿಶೇಷ ಸಂದರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

7. ಯೂರೋಪಿಯನ್ ಸೋಲ್ಜರುಗಳ ವಂದು ರಿಜಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯಃ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದಿ ಫುರೋಖ್ತು ಬಗ್ಯೆ ಇರುವ ತಮಾಂ

ಅಂಗಡಿಗಳೂ ಮುಚ್ಚಲ್ಪಡತಕ್ಕವು. ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟು ಮಾಡಲ್ಪಟ್ಟಿತೆಂಬ ನಷ್ಟದ ಬಗ್ಗೆ ಈಡು ಕೊಡುವಂತೆ ಕೇಳಕೂಡದು. ಅಂಥಾ ಫಾಜಿನವರು ತಮ್ಮ ಕಡೇ ಆಬ್ಕಾರೀ ಕಂಟ್ರ್ಯಾಕ್ಟರ್ರನ್ನ ಇಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿ ಇರತಕ್ಕದ್ದು.

8. ಇಜಾರೇದಾರನು ಸರಕಾರದ ಬಂಜರ್ ಜಮೀನಲ್ಲಿ ಇರುವ ಈಚಲು ಮರಗಳನ್ನು, ಇಜಾರೇಗಳ ಸ್ಥಳ ಸರಹದ್ದಿನೊಳಗೆ ಫುರೋಖ್ತು ಬಗ್ಗಾಗಲಿ ಬೆಲ್ಲ ತಯಾರ್ಮಾಡುವ ಬಗ್ಗಾಗಲಿ ಶೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿಕೊಳ್ಳಬಹುದು. ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಏಯಿಂದಾ ಅನುಭವಿಸಲ್ಪಡತಕ್ಕ ಜಮೀನುಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕಿರುವದಿಲ್ಲ, ಮತ್ತು ಗವರ್ನಮೆಂಟಿನವರು ಯಾವಾಗಲಾದರೂ, ಇತರ ಕೆಲಸಗಳಿಗೋಸ್ಕರವಾಗಲಿ, ಇತರ ಡಿಸ್ಟ್ರಿಕ್ಟುಗಳಿಗೆ ಶೇಂದೀ ವದಗಿಸುವದಕ್ಕೋಸ್ಕರವಾಗಲಿ ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ, ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ. ಡೆಪ್ಯುಟಿ ಕಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ ವ ಷರತುಗಳ ಪ್ರಕಾರವೂ ಮಾತ್ರವೇ ಬೆಲ್ಲ ತಯಾರ್ಮಾಡಲ್ಪಡತಕ್ಕದ್ದು.

9. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಶೇಂದೀ ವಿನಾ ಇತರ ತರಹೇಯು ಷರಾಬ್ ಯಾ ಸ್ಪಿರಿಟ್ ವಿಷಯದಲ್ಲಾಗಲಿ, ಗವರ್ನಮೆಂಟಿನವರು ಮಾಡತಕ್ಕ ಯಾವ ಯೇರ್ಪಾಡುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ನೋಡಿಗೆ ಬಾಧ್ಯತೆ ಉಳ್ಳವನಾಗಿರುವದಿಲ್ಲ. ಡಿಸ್ಟ್ರಿಕ್ಟು ಪೈಕೀ ಯಾವ ಭಾಗದಲ್ಲಾಗಲಿ, ಸರ್ಕಾರೀ ಕಾರಣಗಳಮೇಲೆ ಇಜಾರೆಯನ್ನು ಮವ್ಕೂಫ್ ಮಾಡಿ ಆ ಬಗ್ಯೆ ನ್ಯಾಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದೀವಾನರವರು, ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

10. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯುರೇಜಿಯನ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದ ಮೇಲಿರುವಲ್ಲಿ ಒಬ್ಬ ಶಿಪಾಯಿಗಾಗಲಿ, ಪೊಲೀಸಿನವರಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರಕಿಲಾಫಾಗಲಿ ನಡೆದಲ್ಲಿ ಆದರಿಂದ ಗುತ್ತಿಗೇದಾರ ಯಾ ಫುರೋಖ್ತುದಾರ, ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಫುರೋಖ್ತುದಾರನ ಲೈಸೆನ್ಸು ರದ್ಧಾಗಲಿಕ್ಕೂ, ಗುರಿಯಾಗುತ್ತೆ.

11. ಗುತ್ತಿಗೇದಾರನು, ತನ್ನ ನೌಕರರು ಯಾ ಮುತಾಲೀಕರು, ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಒಂದು ಗಜದ ಎತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಯಳೇ ಈಚಲು ಮರಗಳಿಂದ ಶೇಂದೀ ಇಳಿಸದೇಯೂ, ಮತ್ತು ಶೇಂದಿ ಇಳಿಸುವದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ಉಪಯೋಗಿಸದೆಯೂ, ಇರುವ ಬಗ್ಯೆ ಜವಾಬ್‌ದಾರನಾಗಿರತಕ್ಕದ್ದು. ಈ ನಿಬಂಧನೆಗಳಿಗೆ ಏನಾದರೂ ಬರಕಿಲಾಫ್ ನಡದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ 100 ರೂಪಾಯಿಗಳ ಜುರ್ಮಾನೆಗೂ ಇಜಾರೇದಾರನು ಗುರಿಯಾಗತಕ್ಕದ್ದು.

12. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ, ಮಾರಲ್ಪಡತಕ್ಕದ್ದು.

ಶೇರು ವಂದಕ್ಕೆ ಕ್ರಯ.

	ಜಾಸ್ತಿ.	ಕಮ್ಮಿ.
ತಾಲ್ಲೂಕು ಕಸಬೆಗಳಲ್ಲಿ	0 1 0	0 0 6
ಗಾವಗಾನೆಗಳಲ್ಲಿ	0 0 6	0 0 4

6 ಶೇಂದಿ ಸಾಗಿಸುವಬಗ್ಯೆ ಉಪಯೋಗಿಸಲ್ಪಡುವ ಭಂಡಿಗಳಿಗಾಗಿ, ವಿಧಿಸಲ್ಪಟ್ಟ ಮೊಹತರಫಾ ಭಂಡೀ ಕಂದಾಯವನ್ನು ಪಾವತೀ ಮಾಡಬೇಕಾಗಿರುತ್ತೆ.

7. ಹಿಂದಿನ ಹುಟ್ಟುವಳಿಯನ್ನೂ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಯನ್ನೂ, ಡೆಪ್ಯುಟಿ ಕಮಿಷನರವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

ತಾರೀಖು 9ನೇ ಫೆಬ್ರುವರೀ 1884.

ನಂ. 317.—ಹಾಸನ ಸಬ್ ಡಿವೀಜನಿಗೆ ಸೇರಿದ 4 ತಾಲ್ಲೂಕುಗಳು ದೇಖೀಲ್ ಕಡೂರು ಡಿಸ್ಟ್ರಿಕ್ಟಿನಲ್ಲಿ 1884ನೇ ಇಸವಿ 1ನೇ ಏಪ್ರೆಲ್ ಲಾಗಾಯತು 1887ನೇ ಇಸವಿ ಮಾರ್ಚಿ 31ನೇ ತಾರೀಖು ವರುವಿಗೆ ಆಗುವ 3 ಸಂವತ್ಸರಗಳ ಕಾಲ ಪರಿಯಂತ್ರ ಶೇಂದಿ ಬಿಕರೀ ಮಾಡುವ ವಟ್ಟು ಸ್ವಾತಂತ್ರ್ಯ ಯಾ ಇಜಾರೇಯು, ತಾಲ್ಲೂಕುವಾರಾಗಿಆಗಲಿ ಅನೇಕ ತಾಲ್ಲೂಕುಗಳ ಸೇರಿಕೆಯಾಗಿ ಯಾಗಲಿ ಇದರಮುಂದೆ ತಿಳಿಸಲ್ಪಟ್ಟ ಷರತಗಳಿಗೆ ವಳಪಟ್ಟು, 1884ನೇ ಇಸವಿ ಮಾರ್ಚಿ 3ನೇ ಮುಕ್ಕಾಂ ಮಧ್ಯಾನ್ಹ 12 ಘಂಟೆಗೆ ಚಿಕ್ಕಮಗಳೂರು ಮೊಕ್ಕಾಂನಲ್ಲಿ ಕಡೂರು ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ಇಜಾರೆಯು ಮೇಲ್ಕಂಡ 3 ವರುಷಗಳ ಕಾಲದಲ್ಲಿ ಮಲ್‌ನಾಡು ತಾಲ್ಲೂಕುಗಳಲ್ಲಿ ಬಗನಿ ಶೇಂದಿಯನ್ನು ಪುರೋಖ್ತು ಮಾಡುವ ಸ್ವಾತಂತ್ರ್ಯವನ್ನು ಅಡಿಗಿಸಿಕೊಂಡಿರುವದಿಲ್ಲ; ಸದರೀ ಬಗನಿ ಶೇಂದಿ ಪುರೋಖ್ತು ಮಾಡುವ ಸ್ವಾತಂತ್ರ್ಯವು ಗ್ರಾಮವಾರಾಗಲಿ ಅನೇಕ ಗ್ರಾಮಗಳು ಸೇರಿಯಾಗಿ ಯಾಗಲಿ ಅಲಾಹಿದ ಇಜಾರೆಗೆ ಕೊಡಲ್ಪಡುವದು. ಕಡೂರು ಡಿಸ್ಟ್ರಿಕ್ಟಿಗೂ ಹಾಸನದ ಸಬ್ ಡಿವೀಜನ್ನಿಗೂ ಸುದಾ ದೀವಾನರವರ 1882ನೇ ಇಸವಿ 21ನೇ ನವಂಬರ 131ನೆ ನಂಬರ್, ಅದೇ ಇಸವಿ 25ನೇ ನವಂಬರ 138ನೇ ನಂಬರ್, ಅದೇ ಇಸವಿ ಡಿಶಂಬರ 7ನೇ ಮುಕ್ಕಾಂ 146ನೇ ನಂಬರ್, 1883ನೇ ಇಸವಿ 4ನೇ ಜನವರೀ ಮುಕ್ಕಾಂ 2—3ನೇ ನಂಬರ್, ಅದೇ ಇಸವಿ ನವಂಬರ್ 16ನೇ ಮುಕ್ಕಾಂ 274ನೇ ನಂಬರ್, ಮತ್ತು ಅದೇ ಇಸವಿ ಡಿಶಂಬರ್ 14ನೇ ಮುಕ್ಕಾಂ 288ನೇ ನಂಬರ್ ಈ ನಂಬರಗಳ ಇಸ್ತಿಹಾರ್ ನಾಮೆಗಳಿಂದ ಪರಿಷ್ಕರಿಸಲ್ಪಟ್ಟ ಪ್ರಕಾರ ಇದರಡಿ ಕಂಡ ತಾಲ್ಲೂಕುಗಳು ಶೇರಿರುತ್ತವೆ.

1 ಚಿಕ್ಕಮಗಳೂರು	4 ತರೀಕೆರೆ	6 ಹಾಸನ	ಹಾಸನ ಸಬ್ ಡಿವಿಜನ್
2 ಕಡೂರು	5 ಕೊಪ್ಪ, ಯಡೇಹಳ್ಳಿ ಡೆ॥ ಅಮಲ್‌ದಾರ್ರ ಚಾರ್ಜ ದೇಖೀಲ್	7 ಮಂಜಿರಾಬಾದ್	
3 ಮೂಡಿಗೆರೆ		8 ಬೇಲೂರು	
		9 ಅರಶೀಕೆರೆ	

2. ಪ್ರತಿ ಸಂದರ್ಭದೊಳಗೂ ಇಜಾರೆಯು, ಸಾಲಿಯಾನಾ ಹುಟ್ಟುವಳಿ ಮೇಲೆ ಗೊತ್ತಾಗುವ ಸರಕಾರದ ಸವಾಲಿಗೆ ಮೇಲ್ಪಟ್ಟು ಬರತಕ್ಕ ಚಡ ದರಖಾಸ್ತುದಾರಗೆ ಹರಾಜು ಮೂಲಕ ದೀವಾನರವರ ಮಂಜೂರಾತಿಗೆ ವಳಪಟ್ಟು ವಿಕ್ರಯಿಸಲ್ಪಡುವದು, ಸದರೀ ಸಾಲಿಯಾನಾ ಹುಟ್ಟುವಳಿ ಸಂಗತಿ ಹರಾಜು ಕಾಲದಲ್ಲಿ ಥಾಯಿಷ್ ಮಾಡಲ್ಪಡುತ್ತೆ. ಚಡ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದೀವಾನರವರು ತಮ್ಮಲ್ಲಿ ವುಳಸಿಕೊಂಡಿರುತ್ತಾರೆ.

3. ದರಖಾಸ್ತು ಮಾಡತಕ್ಕವರು, ಖುದ್ದಾಗಿಯಾಗಲಿ ಕ್ರಮಪ್ರಕಾರ ಮೊಕರರ್ ಮಾಡಲ್ಪಟ್ಟ ಮುತಾಲೀಕರ ಮೂಲಕವಾಗಿಯಾಗಲಿ ಹಾಜರಾಗತಕ್ಕದ್ದು. ಸಾಲಿಯಾನಾ ಹುಟ್ಟುವಳಿ ಮೇಲೆ ಗೊತ್ತಾದ ಸರಕಾರದ ಸವಾಲಿನ ಮೊಬಗಿನ ಮೇಲೆ ಶೇಕಡಾ 5ರ ಪ್ರಕಾರ ಆಗುವ ಮೊಬಲಗು ಡಿಪಾಜಿಟ್ ಯಿಡಲ್ಪಡುವ ತನಕ ಯಾವ ಮನುಷ್ಯನೂ ದರಖಾಸ್ತು ಮಾಡತಕ್ಕದ್ದಲ್ಲ. ತಿರಸ್ಕರಿಸಲ್ಪಟ್ಟ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್ ಮೊಬಲಗು ಹರಾಜ್ ಆಖೈರ್ ಕಾಲದಲ್ಲಿ ಅವರಿಗೆ ವಾಪಸ್ ಪಾವತೀ ಮಾಡಲ್ಪಡುವದು.

4. ಯಾವ ಚಡದರಖಾಸ್ತುದಾರನ ದರಖಾಸ್ತು ದೀವಾನರವರ ಮಂಜೂರಾತಿ ಬಗ್ಯೆ ಚುನಾಯಿಸಿಕೊಳ್ಳಲ್ಪಡುತ್ತೊ ಅಂಥಾ ಚಡ ದರಖಾಸ್ತುದಾರನು ಮೊದಲೇ ಡಿಪಾಜಿಟ್ ಇಟ್ಟಿರುವ ಮೊಬಲಗು ದೇಖೀಲ್, ದರಖಾಸ್ತು ಮಾಡಲ್ಪಟ್ಟ ಸಾಲಿಯಾನಾ ಇಜಾರೆ ಮೊಬಲಗು ಪೈಕಿ ಹನ್ನೆರಡರಲ್ಲಿ ಒಂದುಭಾಗಕ್ಕೆ ಸಮನಾದ ಮೊಬಲಗನ್ನು ಕೂಡ್ಲೆ ಶೇವಣಿ ಇಡತಕ್ಕದ್ದು. ಆತನು ದೀವಾನರವರ ತೀರ್ಮಾನ ತಿಳಸಲ್ಪಟ್ಟ ತರುವಾಯ ಎಂಟು ದಿನಗಳೊಳಗಾಗಿ ಪೂರ್ವ ಡಿಪಾಜಿಟ್ ಇಟ್ಟಿರುವ ಮೊಬಲಗುಗಳು ದೇಖೀಲ್, ದರಖಾಸ್ತು ಮಾಡಲ್ಪಟ್ಟ ಸಾಲಿಯಾನಾ ಇಜಾರೇ ಮೊಬಲಗು ಪೈಕೀ ಹಾಗಪಾಲಿಗೆ ಸಮನವಾಗಿರುವ ಬಾಕಿ ಮೊಬಲಗನ್ನು ಇಜಾರೇ ಷರತ್ತುಗಳಂತೆ ಕ್ರಮಪ್ರಕಾರ ನಡದುಕೊಳ್ಳುವ ಬಗ್ಯೆ ಜಾಮೀನಿ ತರೀಕ್ ನಗದಾಗಿಯಾಗಲಿ ಕ್ರಮಪ್ರಕಾರ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ, ಡೆಪ್ಯುಟಿ ಕಮ್ಮಿಷ್ನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಅಥವಾ ದರಖಾಸ್ತುದಾರನು ಮೇಲೆ ಹೇಳಿದ ಜಾಮೀನಿ ಪೈಕೀ ಅರ್ಧಭಾಗವನ್ನ ನಗದಾಗಿಯಾಗಲಿ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ ಹಾಜರ್ಮಾಡಿ ಬಾಕಿ ಅರ್ಧವನ್ನ ಸದರೀ ಮೊಬಲಗ್ಯೆ ಯರಡರಷ್ಟು ಕ್ರಯಬಾಳುವ ಮತ್ತು ಯಾವ ಬಾಧ್ಯತೆ ವ ದೇಣಿಗಳು ಇಲ್ಲದ ಸ್ಥಾವರ ಸ್ವತ್ತಿನ ಮೂಲಕವಾಗಿಯಾಗಲಿ ಹಾಜರ್ಮಾಡತಕ್ಕದ್ದು. ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತಗಳಿಗೆ ಬದ್ಧನಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾಕಾಗದದ ಮೇಲೆ, ಒಂದು ಕರಾರ ಬರದುಕೊಡತಕ್ಕದ್ದು.

5. ಆತನು ಕರಾರಿಗೆ ರುಜುಮಾಡುವದಕ್ಕಾಗಲಿ, ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲಿ ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವವೇ ಇಡಲ್ಪಟ್ಟ ಡಿಪಾಜಿಟಗಳು, ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು, ಇಜಾರೆಯು ಪುನಹ ಹರಾಜು ಮಾಡಲ್ಪಡುವದು ಯಾ ಅನ್ಯಥಾ ವಿಲಾಮಾಡಲ್ಪಡುವದು. ಹಾಗೆ ಪುನಹಾ ಹರಾಜು ಮಾಡುವದರಿಂದ ಯಾ ವಿಲಾಮಾಡುವದರಿಂದ ವುಂಟಾಗುವ ನಷ್ಟಕ್ಕೆ ಅವನನ್ನು ಗುರಿಮಾಡಿ, ಜಮೀನು ಕಂದಾಯದ ಬಾಕೀ ವಸೂಲಿ ಬಗ್ಯೆ ಜಾರಿಯಿರುವ ರೂಲ್ಸ್ ಅನುಸರಿಸಿ ಜಪ್ತಿ ಹರಾಜಿನಿಂದ ವಸೂಲ್ಮಾಡಲ್ಪಡುವದು.

ಷರತ್ತುಗಳು.

1. ಸಾಲೀಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಒಂದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್ ಸೆಸ ದೇಖೀಲ್ ಅಂತಾ ಇಜಾರೇ ಮೊಬಲಗು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದಕ್ಕೆ ಮುಂದಾಗಿಯಾಗಲಿ, ಡಿಸ್ಟ್ರಿಕ್ಟು ಖಜಾನೆಯಲ್ಲಿ ಮಾಹೇಯಾನಾ ಸಮನಾಗ ಖಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು. ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕಿಗಳಿಗೂ, ಸೇಕಡಾ ಸಾಲೀಯಾನಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕೊಡತಕ್ಕದ್ದು. ಅಂತಾ ಬಾಕೀ ಮೊಬಲಗ್‌ಗಳು ಪಾವತಿಯಾಗತಕ್ಕ ತಿಂಗಳು ಕಳೆದ ಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜಮೀನ್ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಇರುವ ರೂಲ್ಸ್‌ನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೇದಾರನ ಸ್ವತ್ತು ಜಪ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು. ಮತ್ತು ಇಜಾರೇ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನೀ ಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಖೀಲ್ ತಮಾಂ ಬಾಕಿಗಳನ್ನೂ, ಹಾಗೆ ಇಜಾರೇ ಪುನಃ ಹರಾಜ್ ಹಾಕುವದರಿಂದಾಗಲಿ, ವಿಲಾ ಮಾಡುವದರಿಂದಾಗಲಿ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ ಜಾಮೀನಿ ಮೊಬಲಗ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಪ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದೀವಾನರವರ ಮಂಜೂರಾತೀನಿಶೀ ಡೆಪ್ಯುಟಿ ಕಮ್ಮಿಷನರವರಿಗೆ ಯಿಖ್ತ್ಯಾರಿಯಿರತಕ್ಕದ್ದು.

2. ಚಿಲ್ಲರೇ ಪುರೋಖ್ತುದಾರ್ರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸ್‌ಗಳು ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂಠೋಕ್ತವಾದ ಮಂಜೂರಾತಿ ಇಲ್ಲದೆ, ಇಜಾರೇದಾರನು ಹಾಲೀ ಶೇಂದೀ ಪುರೋಖ್ತು ಬಗ್ಯೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖ್ಯೆಯ ವಿಷಯದಲ್ಲಾಗಲಿ, ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬ್‌ಗಳ ಮೇಲೆ ಯಾವ ಅಂಗಡಿಗಳನ್ನಾದರೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷ್ನರು ಅರ್ಹರಾಗಿರುತ್ತಾರೆ.

3. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ ಧಾನ್ಯವನ್ನಾಗಲಿ, ಸರುಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

4. ಇಜಾರೇದಾರನು, ದೀವಾನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಬದ್ಧನಾಗಿ ನಡದುಕೊಳ್ಳತಕ್ಕದ್ದು.

5. ಪೂರ್ವವೇ ನಿರ್ಣಯಿಸಲ್ಪಟ್ಟ ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರೀಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗ್ಯೆರೇಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರ ಹಕು ದಾರೀಗಳಲ್ಲಿ, ಗುತ್ತಿಗೇದಾರನು ಎಷ್ಟುಮಟ್ಟಿಗೂ ಪ್ರವೇಶಿಸಕೂಡದು. ಅಂತಾ ಹಕ್ಕುಗಳ ವಿಷಯದಲ್ಲಿ ಉಂಟಾಗುವ ತಕರಾರ್‌ಗಳನ್ನು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರು ಫೈಸಲ್ ಮಾಡತಕ್ಕದ್ದು. ಅಂಥಾ ಫೈಸಲಿಗೆ ಗುತ್ತಿಗೇದಾರನು ಬದ್ಧನಾಗಿರತಕ್ಕದ್ದು. ಪರಂತು, ಸದರೀ ಫೈಸಲ್ ಅಪ್ಪೀಲಿನಲ್ಲಿ ದೀವಾನರವರಿಂದ ಕಾಯಂ ಮಾಡಲ್ಪಡಲಿಕ್ಕಾಗಲಿ ಅನ್ಯಥಾ ಆಗಲಿ ಗುರಿಯಾಗತಕ್ಕದ್ದು.

6. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಶೇಂದಿ ಅಂಗಡಿಗಳ್ಯಾವವೂ ತೆಗಿಯಲ್ಪಡಕೂಡದು, ಮತ್ತು ತಮಾಂಅಂಗಡಿಗಳೂ, ಡೆಪ್ಯುಟಿ ಕಮ್ಮಿಷನರಿಂದ ವಿಶೇಷ ಸಂಧರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

7. ಯೂರೋಪಿಯನ್ ಸೋಲ್ಜರುಗಳ ವಂದು ರಿಜಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯಃ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದಿ ಪುರೋಖ್ತು ಬಗ್ಯೆ ಯಿರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು, ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟುಮಾಡಲ್ಪಟ್ಟಿತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು, ಅಂಥಾ ಫೌಜಿನವರು ತಮ್ಮಕಡೇ ಆಬ್ಕಾರೀ ಕಂಟ್ರಾಕ್ಟರನ್ನ ಯಿಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿರತಕ್ಕದ್ದು.

8. ಇಜಾರೇದಾರನು ಡಿಸ್ಟ್ರಿಕ್ಟಿನ ಮತ್ತು ಸಬ್ ಡಿವೀಜನ್ನಿನ ಸರಕಾರದ ಬಂಜರ್ ಜಮೀನ್‌ನಲ್ಲಿ ಇರುವ ಈಚಲು ಮರಗಳನ್ನು, ಇಜಾರೆಗಳ ಸ್ಥಳ ಸರಹದ್ದಿನೊಳಗೆ ಪುರೋಖ್ತು ಬಗ್ಯಾಗಲಿ ಪಲ್ಲ ತಯಾರ್ ಮಾಡುವ ಬಗ್ಯಾಗಲಿ ಶೇಂದೀ ಇಳಿಸುವದಕ್ಕೂ,

ಸ್ಕರ ಉಪಯೋಗಿಸಿಕೊಳ್ಳಬಹುದು, ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಐಯಿಂದ ಅನುಭವಿಸಲ್ಪಡತಕ್ಕ ಜಮೀನುಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕಿರುವದಿಲ್ಲ, ಮತ್ತು ಗವರ್ನಮೆಂಟಿನವರು ಯಾವಾಗಲಾದರೂ, ಇತರ ಕೆಲಸಗಳಿಗೋಸ್ಕರವಾಗಲಿ ಇತರ ಡಿಸ್ಟ್ರಿಕ್ಟುಗಳಿಗೆ ಶೇಂದೀ ಒದಗಿಸುವದಕ್ಕೋಸ್ಕರವಾಗಲಿ, ಉಳಿಸಿಕ್ಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ, ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ, ಡೆಪ್ಯುಟಿ ಕಮ್ಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ, ಷರತ್ತುಗಳಪ್ರಕಾರವೂ ಮಾತ್ರವೇ ಬೆಲ್ಲ ತಯಾರ್ಮಾಡಲ್ಪಡತಕ್ಕದ್ದು.

9. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಶೇಂದಿ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟ್ಟುಗಳ ವಿಷಯದಲ್ಲಾಗಲಿ, ಗವರ್ನಮೆಂಟಿನವರು ಮಾಡತಕ್ಕ ಯಾವ ಯೇರ್ಪಾಡುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ಸೋಡೀಗೆ ಬಾಧ್ಯತೆವುಳ್ಳವನಾಗಿರುವದಿಲ್ಲ. ಡಿಸ್ಟ್ರಿಕ್ಟು ಪೈಕೀ ಯಾವ ಭಾಗದಲ್ಲಾಗಲಿ ಅಥವಾ ಸಬ್‍ಡಿವೀಜನ್ನಿನ ಯಾವ ಭಾಗದಲ್ಲಾಗಲಿ ಸರ್ಕಾರೀ ಕಾರಣಗಳ ಮೇಲೆ ಇಜಾರೆಯನ್ನು ಮೌಕೂಫ್‍ಮಾಡಿ ಆ ಬಗ್ಯೆ ನ್ಯಾಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದೀವಾನರವರು ತಮ್ಮಲ್ಲಿಯೇ ವುಳಿಸಿಕೊಂಡಿರುತ್ತಾರೆ.

10. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯೂರೇಷಿಯನ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದ ಮೇಲಿರುವಲ್ಲಿ ಒಬ್ಬ ಸಿಪಾಯಿಗಾಗಲಿ, ಪೋಲೀಸಿನವರಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರಕಿಲಾಫಾಗಲಿ ನಡೆದಲ್ಲಿ ಅದರಿಂದ ಗುತ್ತಿಗೇದಾರ ಯಾ ಪುರೋಖ್ತುದಾರ, ಪ್ರತ್ಯೇಕವಾಗಿ ಯಾ ಸಹುಪ್ಪಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಪುರೋಖ್ತುದಾರನ ಲೈಸೆನ್ಸು ರದ್ದಾಗಲಿಕ್ಕೆ ಗುರಿಯಾಗುತ್ತೆ.

11. ಗುತ್ತಿಗೇದಾರನು ತನ್ನ ನೌಕರರು ಯಾ ಮುತಾಲೀಕರು ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಒಂದು ಗಜದ ಯತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಯಳೇ ಈಚಲು ಮರಗಳಿಂದ ಶೇಂದೀ ಇಳಿಸದೇಯೂ, ಮತ್ತು ಶೇಂದಿ ಇಳಿಸುವದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ವುಪಯೋಗಿಸದೆಯೂ, ಇರುವ ಬಗ್ಯೆ ಜವಾಬ್‍ದಾರನಾಗಿರತಕ್ಕದ್ದು, ಈ ನಿಬಂಧನೆಗಳಿಗೆ ಯೇನಾದರೂ ಬರಕಿಲಾಫ್ ನಡದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ 100 ರೂಪಾಯಿಗಳ ಜುರ್ಮಾನೆಗೂ ಗುತ್ತಿಗೇದಾರ ಗುರಿಯಾಗತಕ್ಕದ್ದು.

12. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ ಮಾರಲ್ಪಡತಕ್ಕದ್ದು.

ಶೇರು ಒಂದಕ್ಕೆ ಕ್ರಯ.

	ಜಾಸ್ತಿ.			ಕಮ್ಮಿ.		
	ರೂ.	ಆ.	ಪೈ.	ರೂ.	ಆ.	ಪೈ.
ತಾಲ್ಲೂಕು ಕಸಬೆಗಳಲ್ಲಿ	0	1	4	0	0	6
ಗಾವ್‍ಗಾನೆಗಳಲ್ಲಿ	0	1	0	0	0	6

6. ಶೇಂದಿ ರವಾನೆಬಗ್ಯೆ ಉಪಯೋಗಿಸಲ್ಪಡುವ ಬಂಡಿಗಳು, ಅವುಗಳಿಗಾಗಿ ವಿಧಿಸಲ್ಪಟ್ಟ ಮೊಹತರ್ಫಾ ಭಂಡೀ ಕಂದಾಯದ ವಸೂಲಿಯಿಂದ ವಿನಾಯಿಸಲ್ಪಟ್ಟಿರುವದಿಲ್ಲಾ.

7. ಹಿಂದಿನ ಹುಟ್ಟುವಳಿಯನ್ನೂ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಗಳನ್ನೂ, ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

ತಾ॥ 9ನೇ ಫಿಬ್ರುವರಿ 1884.

ನಂ. 318.—ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಮೂರು ವರುಷಗಳ ಕಾಲ ಅಂದರೆ, ಸನ್ 1884ನೇ ಏಪ್ರೇಲ್ 1ನೇ ಮಾರ್ಕ್ಕಂ ಲಾಗಾಯತ್ 1887ನೇ ಮಾರ್ಚಿ 31ರ ಮಿನಹಾ ಶೇಂದೀ ಇಜಾರೇಯಾಗಲಿ, ಶೇಂದೀ ಪುರೋಖ್ತು ಮಾಡುವ ಸ್ವತಂತ್ರವಾದ ಬಾಧ್ಯತೆಯಾಗಲಿ, ಶಿವಮೊಗ್ಗಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರಿಂದ ಅವರ ಆಫೀಸಿನಲ್ಲಿ, ಸನ್ 1884ನೇ ಮಾರ್ಚಿ 7ನೇ ಮಾರ್ಕ್ಕಂ ಮಧ್ಯಾಹ್ನ 12 ಘಂಟೆಗೆ ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತ್ತುಗಳಿಗೆ ಬಳಪಟ್ಟು, ತಾಲ್ಲೂಕುವಾರಾಗಿಯಾಗಲಿ, ತಾಲ್ಲೂಕುಗಳ ಸಮುದಾಯ ಪ್ರಕಾರವಾಗಲಿ,

ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು; ಮಲ್‌ನಾಡ್ ತಾಲ್ಲೂಕುಗಳಲ್ಲಿ ಬಗನಿ ಕೇಂದಿಯನ್ನು ಪುರೋಖ್ತು ಮಾಡುವ ಹಕು ದಾರಿಯು ಗ್ರಾಮವಾರಾಗಿಯಾಗಲಿ ಯಾ ಗ್ರಾಮಗಳ ಸಮುದಾಯ ಪ್ರಕಾರವಾಗಲಿ ಅಲಾಹಿದಾ ಇಜಾರೆಗೆ ಕೊಡಲ್ಪಡುವದರಿಂದ, ಮೇಲ್ಕಂಡ ಇಜಾರೆಯು, ಸದರೀ ಮೂರು ವರ್ಷಗಳ ಕಾಲದಲ್ಲಿ ಸದರೀ ಬಗನಿ ಕೇಂದಿಯನ್ನು ಪುರೋಖ್ತು ಮಾಡುವ ಸ್ವಾತಂತ್ರವನ್ನು ಅಡಗಿಸಿ ಕೊಂಡಿರುವದಿಲ್ಲಾ. ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ, ದೀವಾನರವರ 1882ನೇ ಇಸವಿ ನವಂಬರ 13ನೇ ಮರ್ಸ್ಕಂ 129ನೇ ನಂಬರು, 1882ನೇ ಇಸವಿ ನವಂಬರ 21ನೇ ಮರ್ಸ್ಕಂ 130—131ನೇ ನಂಬರು, ಅದೇ ಇಸವಿ ಡಿಶಂಬರ 7ನೇ ಮರ್ಸ್ಕಂ 146ನೇ ನಂಬರು, ಈ ಇಸ್ತಿಹಾರ್‌ನಾಮೆಗಳಿಂದ ಪರಿಷ್ಕರಿಸಲ್ಪಟ್ಟ ಪ್ರಕಾರಾ ಇದರಡೀ ಕಂಡ ತಾಲ್ಲೂಕುಗಳು ಸೇರಿ ಇರುತ್ತವೆ.

1. ಶಿವಮೊಗ್ಗಾ, ಕುಂಶಿ ಡೆಪ್ಯುಟಿ ಅಮಲ್‌ದಾರ್ರ ಚಾರ್ಜು ದೇಖೀಲ್.
2. ತೀರ್ಥಹಳ್ಳಿ.
3. ಚನ್ನಗಿರಿ.
4. ಸಾಗರ.
5. ನಗರ.
6. ಸೊರಬ.
7. ಹೊನ್ನಾಳಿ.
8. ಶಿಕಾರಿಪುರ.
9. ದಾವಣಗೆರೆ.

2. ಪ್ರತಿ ಸಂದರ್ಭದೊಳಗೂ ಇಜಾರೆಯು, ಸಾಲಿಯಾನಾ ಹುಟ್ಟುವಳಿ ಮೇಲೆ ಗೊತ್ತಾಗುವ ಸರ್ಕಾರದ ಸವಾಲಿಗೆ ಮೇಲ್ಪಟ್ಟು ಖರತಕ್ಕ ಚಡದರಖಾಸ್ತುದಾರನಿಗೆ ಹರಾಜು ಮೂಲಕ ದೀವಾನರವರ ಮಂಜೂರಾತಿಗೆ ವಳಪಟ್ಟು ವಿಕ್ರಯಿಸಲ್ಪಡುವದು; ಸದರೀ ಸಾಲೀಯಾನಾ ಹುಟ್ಟುವಳಿ ಸಂಗತಿ ಹರಾಜು ಕಾಲದಲ್ಲಿ ಫಾಯಿಷ್ ಮಾಡಲ್ಪಡುತ್ತೆ; ಚಡದರಖಾಸ್ತನ್ನಾಗಲಿ, ಯಾವ ದರಖಾಸ್ತನ್ನಾಗಲಿ ಯಾವಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದೀವಾನರವರು ತಮ್ಮಲ್ಲಿಯೇ ವ್ವಳಸಿಕೊಳ್ಳುತ್ತಾರೆ.

3. ದರಖಾಸ್ತು ಮಾಡತಕ್ಕವರು, ಖುದ್ದಾಗಿಯಾಗಲಿ ಕ್ರಮಪ್ರಕಾರ ಮೊಕರರ್ ಮಾಡಲ್ಪಟ್ಟ ಮುತಾಲೀಕರ ಮೂಲಕವಾಗಿಯಾಗಲಿ ಹಾಜರಾಗತಕ್ಕದ್ದು; ಸಾಲಿಯಾನಾ ಹುಟ್ಟುವಳಿಮೇಲೆ ಗೊತ್ತಾದ ಸರ್ಕಾರ್ ಸವಾಲಿನ ಮೊಬಲಗಿನಮೇಲೆ ಸೇಕಡ 5ರ ಪ್ರಕಾರ ಆಗುವ ಮೊಬಲಗು ಡಿಪಾಜಿಟ್ ಯಿಡಲ್ಪಡುವತನಕ ಯಾವ ಮನುಷ್ಯನೂ ದರಖಾಸ್ತು ಮಾಡತಕ್ಕದ್ದಲ್ಲ. ತಿರಸ್ಕರಿಸಲ್ಪಟ್ಟ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್ ಮೊಬಲಗು ಹರಾಜು ಆಖೈರ್ ಕಾಲದಲ್ಲಿ ಅವರಿಗೆ ವಾಪಸು ಪಾವತಿ ಮಾಡಲ್ಪಡುವದು.

4. ಯಾವ ಚಡದರಖಾಸ್ತುದಾರನ ದರಖಾಸ್ತು ದೀವಾನರವರ ಮಂಜೂರಾತಿಬಗ್ಗೆ ಚುನಾಯಿಸಿಕೊಳ್ಳಲ್ಪಡುತ್ತೋ ಅಂಥಾ ಚಡದರಖಾಸ್ತುದಾರನು ಮೊದಲೇ ಡಿಪಾಜಿಟ್ ಯಿಟ್ಟಿರುವ ಮೊಬಲಗ್ ದೇಖೀಲ್, ದರಖಾಸ್ತು ಮಾಡಲ್ಪಟ್ಟ ಸಾಲಿಯಾನಾ ಇಜಾರೆ ಮೊಬಲಗ್ ಪೈಕಿ ಹನ್ನೆರಡರಲ್ಲಿ ವಂದು ಭಾಗಕ್ಕೆ ಸಮನಾದ ಮೊಬಲಗನ್ನು ಕೂಡ್ಲೆ ಕೇವಣಿ ಯಿಡತಕ್ಕದ್ದು. ದೀವಾನರವರ ತಿರ್ಮಾನ ತಿಳಿಸಲ್ಪಟ್ಟ ತರುವಾಯ 8 ದಿವಸಗಳೊಳಗಾಗಿ, ಪೂರ್ವ ಡಿಪಾಜಿಟ್ ಯಿಟ್ಟಿರುವ ಮೊಬಲಗುಗಳ ದೇಖೀಲ್ ದರಖಾಸ್ತು ಮಾಡಲ್ಪಟ್ಟ ಸಾಲಿಯಾನಾ ಇಜಾರೆ ಮೊಬಲಗು ಪೈಕಿ ಹಾಗಪಾಲಿಗೆ ಸಮನಾಗಿರುವ ಬಂದು ಮೊಬಲಗನ್ನು ಇಜಾರೆ ಷರತ್ತುಗಳಂತೆ ಕ್ರಮಪ್ರಕಾರ ನಡದುಕೊಳ್ಳುವ ಬಗ್ಯೆ ಜಾಮೀನಿ ತರೀಕ ನಗದಾಗಿಯಾಗಲೀ ಕ್ರಮಪ್ರಕಾರ ಇಂಡಾರ್ಸ ಮಾಡಲ್ಪಟ್ಟ ಗವರ್ನಮೆಂಟ ಪತ್ರಗಳ ಮೂಲಕವಾಗಿಯಾಗಲಿ ಡಿಪ್ಯುಟಿ ಕಮಿಷ್ನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಅಥವಾ ದರಖಾಸ್ತುದಾರನು ಮೇಲೆ ಹೇಳಿದ ಜಾಮೀನಿ ಪೈಕಿ ಅರ್ಧಭಾಗವನ್ನ ನಗದಾಗಿಯಾಗಲಿ, ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲೀ ಹಾಜರ್ಮಾಡಿ ಬಾಕೀ ಅರ್ಧವನ್ನ ಸದರೀ ಮೊಬಲಗ್ಯೆ ಎರಡರಷ್ಟು ಕ್ರಯಬಾಳುವ ಮತ್ತು ಯಾವ ಬಾಧ್ಯತೆ ದೇಣೆಗಳೂ ಇಲ್ಲದ ಸ್ಥಾವರ ಸ್ವತ್ತಿನ ಮೂಲಕವಾಗಿ ಯಾಗಲೀ ಹಾಜರ್ಮಾಡತಕ್ಕದ್ದು; ಮತ್ತು ಇದರಲ್ಲಿ ಮುಂದೇ ವಿಧಿಸಲ್ಪಟ್ಟ ಷರತ್ತುಗಳಿಗೆ ಬದ್ಧನಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾಕಾಗದದ ಮೇಲೆ ಬಂದು ಕರಾರು ಬರೆದು ಕೊಡತಕ್ಕದ್ದು.

5. ಆತನು ಕರಾರಿಗೆ ರುಜು ಮಾಡುವದಕ್ಕಾಗಲೀ ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲೀ ತಪ್ಪಿದರೆ ಯಾ ನಿರಾಕರಿಸಿದರೆ ಪೂರ್ವವೇ ಇಡಲ್ಪಟ್ಟ ಡಿಪಾಜಿಟಗಳು ಗವರ್ನಮೆಂಟಿಗೆ ಶೇರಿಕೊಳ್ಳಲ್ಪಟ್ಟು ಇಜಾರೆಯು ಪುನಹಾ ಹರಾಜು ಮಾಡಲ್ಪಡುವದು ಯಾ ಅನ್ಯಥಾ ವಿಲಾಮಾಡಲ್ಪಡುವದು. ಹಾಗೆ ಪುನಹಾ ಹರಾಜು ಮಾಡುವದರಿಂದ ಯಾ ವಿಲಾಮಾಡುವದರಿಂದ ಉಂಟಾಗುವ ನಷ್ಟಕ್ಕೆ ಇಜಾರೇದಾರನನ್ನು ಗುರಿಮಾಡಿ, ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರಿ ಇರುವ ರೂಲ್‌ಸ ಅನುಸರಿಸಿ ಇಜಾರೇದಾರನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡಲ್ಪಡುವದು.

ಷರತ್ತುಗಳು.

1. ಸಾಲೀಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಬಂದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್ ಸೆಸ್ ದೇಖೀಲ್ ಅಂತಾ ಇಜಾರೇ ಮೊಬಲಗನ್ನು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದಕ್ಕೆ ಮುಂದಾಗಿಯಾಗಲೀ ಡಿಸ್ಟ್ರಿಕ್ಟು ಖಜಾನೆಯಲ್ಲಿ ಮಾಹೇಯಾನಾ ಸಮನಾದ ಖಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು.

ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕಿಗಳಿಗೂ, ಸೇಕಡಾ ಸಾಲೀಯಾನಾ 6 ರ ಪ್ರಕಾರ ಬಡ್ಡೀ ಕೊಡತಕ್ಕದ್ದು; ಅಂತಾ ಬಾಕೀ ಮೊಬಲಗಗಳು ಪಾವತಿ ಯಾಗತಕ್ಕ ತಿಂಗಳು ಕಳೆದಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜಮೀನ್ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಯಿರುವ ರೂಲ್ಸ್‌ನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೇದಾರನ ಸ್ವತ್ತು ಜಫ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು. ಮತ್ತು ಇಜಾರೇ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನೀಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಖೀಲ್ ತಮಾಂ ಬಾಕಿಗಳನ್ನೂ, ಹಾಗೆ ಇಜಾರೇ ಪುನಃ ಹರಾಜ್ ಹಾಕುವದರಿಂದಾಗಲಿ, ವಿಲಾ ಮಾಡುವದರಿಂದಾಗಲಿ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ, ಜಾಮೀನೀ ಮೊಬಲಗ್ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಗೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದೀವಾನರವರ ಮಂಜೂರಾತೀನಿಸ್ಬೀ ಡೆಪ್ಯುಟಿ ಕಮ್ಮಿಷನರವರಿಗೆ ಯೆಖ್ತ್ಯಾರೀ ಇರತಕ್ಕದ್ದು.

2\. ಚಿಲ್ಲರೇ ಪುರೋಖ್ತುದಾರ್ರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸಗಳು, ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂಠೋಕ್ತವಾದ ಮಂಜೂರಾತಿ ಇಲ್ಲದೆ, ಇಜಾರೇದಾರನು ಹಾಲೀ ಶೇಂದೀ ಪುರೋಖ್ತು ಬಗ್ಗೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖೆಯ ವಿಷಯದಲ್ಲಾಗಲಿ ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬ್‌ಗಳ ಮೇಲೆ ಯಾವ ಅಂಗಡಿಗಳನ್ನಾದರೂ ತೆಗದು ಹಾಕುವಂತೆ ಹುಕ್ಮಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷ್ನರು ಅರ್ಹರಾಗಿರುತ್ತಾರೆ.

3\. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ, ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

4\. ಇಜಾರೇದಾರನು, ದೀವಾನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಬದ್ಧನಾಗಿ ನಡದುಕೊಳ್ಳತಕ್ಕದು.

5\. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮುಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರೀಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗೈರೆಗಳಿಂದ ಅಧಿಕಾರ ಕೊಡಲ್ಪಟ್ಟ, ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮುಗಳ ಹಿಡುವಳೀದಾರರ ಹಕ್ಕುದಾರೀಗಳಲ್ಲಿ, ಗುತ್ತಿಗೇದಾರನು ಎಷ್ಟುಮಟ್ಟಿಗೂ ಪ್ರವೇಶಿಸಕೂಡದು. ಅಂತಾ ಹಕ್ಕುಗಳ ವಿಷಯದಲ್ಲಿ ಉಂಟಾಗುವ ತಕರಾರ್‌ಗಳನ್ನು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರು ಫೈಸಲ್ ಮಾಡತಕ್ಕದ್ದು. ಅಂತಾ ಫೈಸಲಿಗೆ ಗುತ್ತಿಗೇದಾರನು ಬದ್ಧನಾಗಿರತಕ್ಕದ್ದು, ಪರಂತು, ಸದರೀ ಫೈಸಲ್ ಅಪ್ಪೀಲ್‌ನಲ್ಲಿ ದೀವಾನರವರಿಂದ ಕಾಯಂಮಾಡಲ್ಪಡಲಿಕ್ಕಾಗಲಿ ಅನ್ಯಥಾ ಆಗಲಿ ಗುರಿಯಾಗತಕ್ಕದ್ದು.

6\. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಶೇಂದಿ ಅಂಗಡಿಗಳ್ಯಾವವೂ ತೆಗೆಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡೆಪ್ಯುಟಿ ಕಮ್ಮಿಷನರಿಂದ ವಿಶೇಷ ಸಂದರ್ಭಗಳಲ್ಲಿ ಅನ್ಯಥಾ ಹುಕ್ಮಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

7\. ಯೂರೋಪಿಯನ್ ಸೋಲ್ಜರುಗಳ ವಂದು ರಿಜಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯಃ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದಿ ಪುರೋಖ್ತು ಬಗ್ಯೆ ಯಿರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು, ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟು ಮಾಡಲ್ಪಟ್ಟಿತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು, ಅಂಥಾ ಫೌಜಿನವರು ತಮ್ಮಕಡೇ ಅಬ್ಕಾರೀ ಕಂಟ್ರಾಕ್ಟರನ್ನ ಇಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿ ಯಿರತಕ್ಕದ್ದು.

8\. ಇಜಾರೇದಾರನು ಡಿಸ್ಟ್ರಿಕ್ಟಿನ ಸರಕಾರದ ಬಂಜರ್ ಜಮೀನ್‌ಗಳಲ್ಲಿ ಇರುವ ಈಚಲು ಮರಗಳನ್ನು, ಇಜಾರೇಗಳ ಸ್ಥಳ ಸರಹದ್ದಿನೊಳಗೆ ಪುರೋಖ್ತು ಬಗ್ಯಾಗಲಿ ಬೆಲ್ಲ ತಯಾರ್ ಮಾಡುವ ಬಗ್ಯಾಗಲಿ ಶೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿ ಕೊಳ್ಳಬಹುದು, ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಖಯಿಂದಾ ಅನುಭವಿಸಲ್ಪಡತಕ್ಕ ಜಮೀನ್‌ಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕುರುವದಿಲ್ಲ, ಮತ್ತು ಗವರ್ನಮೆಂಟಿನವರು ಯಾವಾಗಲಾದರೂ ಇತರ ಕೆಲಸಗಳಿಗೋಸ್ಕರವಾಗಲಿ, ಇತರ ಡಿಸ್ಟ್ರಿಕ್ಟುಗಳಿಗೆ ಶೇಂದೀ ವದಗಿಸುವದಕ್ಕೋಸ್ಕರವಾಗಲಿ,

ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ. ಡೆಪ್ಯುಟಿ ಕಮ್ಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ, ವ ಷರತ್ತುಗಳ ಪ್ರಕಾರವೂ ಮಾತ್ರವೇ ಹೆಲ್ಲ ತಯಾರ್ಮಾಡಲ್ಪಡತಕ್ಕದ್ದು.

9. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಶೇಂದೀ ವಿನಾ ಇತರ ತರಹೇಯು ಷರಾಬ್ ಯಾ ಸ್ಪಿರಿಟ್‌ಗಳ ವಿಷಯದಲ್ಲಾಗಲಿ, ಗವರ್ನಮೆಂಟಿನವರು ಮಾಡತಕ್ಕ ಯಾವ ಏರ್ಪಾಡುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ಸೋಡೀಗೆ ಬಾಧ್ಯತೆವುಳ್ಳವನಾಗಿರುವದಿಲ್ಲ. ಡಿಸ್ಟ್ರಿಕ್ಟು ಪೈಕೀ ಯಾವ ಭಾಗದಲ್ಲಾಗಲಿ, ಸರ್ಕಾರೀ ಕಾರಣಗಳಮೇಲೆ ಇಜಾರೇಯನ್ನು ಮವುಕೂಫ್ ಮಾಡಿ ಆ ಬಗ್ಯೆ ನ್ಯಾಯವಾದ ಈಡು ವೊಬಲಗು ಕೊಡತಕ್ಕ ಅಧಿಕಾರವನ್ನು ದೀವಾನರವರು, ತಮ್ಮಲ್ಲಿಯೇ ಉಳಿಸಿಕ್ಕೊಂಡಿರುತ್ತಾರೆ.

10. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯೂರೇಜಿಯನ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದಮೇಲಿರುವಲ್ಲಿ ಒಬ್ಬ ಶಿಪಾಯಿಗಾಗಲಿ, ಪೋಲೀಸಿನವರಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಖಿಲಾಫಾಗಲಿ ನಡದಲ್ಲಿ ಅದರಿಂದ ಗುತ್ತಿಗೇದಾರ ಯಾ ಪುರೋಖ್ತುದಾರ, ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಪುರೋಖ್ತುದಾರನ ಲೈಸೆನ್ಸು ರದ್ದಾಗಲಿಕ್ಕೂ, ಗುರಿಯಾಗುತ್ತೆ.

11. ಗುತ್ತಿಗೇದಾರನು, ತನ್ನ ನೌಕರರು ಯಾ ಮುತಾಲೀಕರು, ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಒಂದು ಗಜದ ಎತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಯಳೇ ಈಚಲು ಮರಗಳಿಂದ ಶೇಂದೀ ಇಳಿಸದೇಯೂ, ಮತ್ತು ಶೇಂದಿ ಇಳಿಸುವದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ಉಪಯೋಗಿಸದೆಯೂ, ಇರುವ ಬಗ್ಯೆ ಜವಾಬ್‌ದಾರನಾಗಿರತಕ್ಕದ್ದು. ಈ ನಿಬಂಧನೆಗಳಿಗೆ ಏನಾದರೂ ಖಿಲಾಫ್ ನಡದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, 100 ರೂಪಾಯಿಗಳ ಜುರ್ಮಾನೆಗೂ ಗುತ್ತಿಗೇದಾರನು ಗುರಿಯಾಗತಕ್ಕದ್ದು.

12. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ ಮಾರಲ್ಪಡತಕ್ಕದ್ದು.

	ಜಾಸ್ತಿ.	ಕಮ್ಮಿ.
	ಶೇರು ವಂದಕ್ಕೆ ಕ್ರಯ.	
	ರೂ. ಆ. ಪೈ.	ರೂ. ಆ. ಪೈ.
ಶಿವಮೊಗ್ಗಾ ಷಹರು	0—1—6	0—1—0
ಚನ್ನಗಿರಿ ಹೊನ್ನಾಳಿ ತಾಲ್ಲೂಕುಗಳಲ್ಲಿ	0—1—0	0—0—6
ಡಿಸ್ಟ್ರಿಕ್ಟಿನ ಇತರ ಎಲ್ಲಾ ಸ್ಥಳಗಳಲ್ಲಿ	0—1—6	0—0—6

6. ಶೇಂದಿ ರವಾನೇಬಗ್ಯೆ ಉಪಯೋಗಿಸಲ್ಪಡುವ ಭಂಡಿಗಳು, ನಿರ್ಣಯಿಸಲ್ಪಟ್ಟ ಮೊಹತರ್ಫಾ ಭಂಡಿ ಕಂದಾಯದ ವಸೂಲಿಯಿಂದ ವಿನಾಯಿಸಲ್ಪಟ್ಟಿರುವದಿಲ್ಲಾ.

7. ಹಿಂದಿನ ಹುಟ್ಟುವಳಿಯನ್ನೂ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಯನ್ನೂ, ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳದುಕೊಳ್ಳಬಹುದು.

ತಾರೀಖು 13ನೇ ಫೆಬ್ರುವರೀ 1884.

ನಂ. 319.—ಅಟಾಚಿ ಮ॥ ಡಿ. ದೇವರಾಜೇ ಅರಸಿನವರಿಗೆ, ಈ ಆಫೀಸ್ 1883ನೇ ಇಸವಿ ನವಂಬರ್ 27ನೇ ಮಾರ್ಕಂ 277ನೇ ನಂಬರ್ ಇಸ್ತಿಹಾರ್ ನಾಮೆಯಲ್ಲಿ ಕೊಡಲ್ಪಟ್ಟ ರಜಾಕ್ಕೆ ಜಾಸ್ತಿಯಾಗಿ ಬಗರ್ ತಲಬ್ ನಾಲ್ಕು ತಿಂಗಳ ರಜಾ ಕೊಡಲ್ಪಟ್ಟಿರುತ್ತೆ:

ತಾರೀಖು 15ನೇ ಫೆಬ್ರುವರೀ 1884.

ನಂ. 320.—ಹೊಳೇನರಸೀಪುರ ತಾಲ್ಲೂಕಿಗೆ ವರ್ಗಾಯಿಸಲ್ಪಟ್ಟ ಇದರಡಿ ಕಂಡ ಲೇಟ್ ಅರಕಲಗೂಡು ತಾಲ್ಲೂಕಿನ ಯರಡು ಗ್ರಾಮಗಳು ಅವುಗಳ ಸಮಿಾಪದಲ್ಲಿನ ಅಸಲೀ ಗ್ರಾಮಗಳಿಗೆ ಶೇರಿಸಲ್ಪಟ್ಟಿರುತ್ತೆ:—

ಮಾಗಣಿ ಹೆಸರು.	ನಂಬರು.	ಅಸಲೀ ಗ್ರಾಮದ ಹೆಸರು.	ನಂಬರು.	ಮೂರನೇ ಕಲಂನಲ್ಲಿ ಕಂಡ ಗ್ರಾಮಗಳಲ್ಲಿ ಶೇರಿಸಬೇಕಾದ ಗ್ರಾಮಗಳ ಹೆಸರು.	[illegible]	ಷರಾ
1	2	3	4	5	6	
ಅರಕಲ್‌ಗೂಡು	1	ನೆಯಗಿರಿ	1	ಬಯಚನಹಳ್ಳಿ	160	
ನಿಲವಾಗಲು	2	ಅಕ್ಕಲವಾಡ	1	ಧರ್ಮಪುರ	30	

ತಾರೀಖು 18ನೇ ಫೆಬ್ರವರೀ 1884.

ನಂ. 321.—ಷರಾಬ್ ಗುತ್ತಿಗೆಗೋಸ್ಕರ ಒಡಂಬಡಿಕೆ ಮಾಡಿಕೊಂಡ ಸಾಲೀಯಾನಾ ಹುಟ್ಟುವಳೀ ಪೈಕೀ ನಾಲ್ಕರಲ್ಲಿ ಒಂದು ಹಿಸ್ಸೆ ಡಿಪಾಜಿಟ್ಟನ್ನು ಯಂಟರಲ್ಲಿ ಒಂದು ಹಿಸ್ಸೆಗೆ ತಗ್ಗಿಸುವಣ.

ಬೆಂಗಳೂರು, ಮೈಸೂರು ಮತ್ತು ಇತರ ಸ್ಥಳಗಳಲ್ಲಿ ಷರಾಬ್ ಇಜಾರೇ ಬಗ್ಯೆ ದರಖಾಸ್ತುಗಳು ಅಪೇಕ್ಷಿಸಿರುವ 1884ನೇ ಇಸವಿ ಜನವರೀ 21ನೇ ಮರ್ಕುಂ 304ನೇ ನಂಬರ್ ವುಳ್ಳ ದೀವಾನರವರ ಇಸ್ತಿಹಾರ್ ನಾಮೆಯ 7ನೇ ಪ್ಯಾರಾದಲ್ಲಿ "ಕರಾರ್ ಮಾಡಿಕೊಳ್ಳಲ್ಪಟ್ಟ ಸಾಲೀಯಾನಾ ಹುಟ್ಟುವಳೀ ಪೈಕೀ ಕಾಲುಭಾಗದ ಮೊಬಲಗಿಗೆ ಸಮನಾಗುವ ಒಂದು ಮೊಬಲಗು" ಯಂಬ ಮಾತುಗಳಿಗೆ ಬದಲಾಗಿ "ಕರಾರ್ ಮಾಡಿಕೊಳ್ಳಲ್ಪಟ್ಟ ಸಾಲೀಯಾನಾ ಹುಟ್ಟುವಳೀ ಪೈಕೀ ಎಂಟರಲ್ಲಿ ಒಂದು ಭಾಗಕ್ಕೆ ಸಮನಾದ ಮೊಬಲಗು" ಯಂತ ಓದಿಕೊಳ್ಳತಕ್ಕದ್ದು.

ತಾರೀಖು 21ನೇ ಮಾರ್ಚಿ 1883.

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಯೆ ಹಿಂದಿನ ದಿನ ಸೆಕ್ರೆಟೇರಿಯವರಿಗೆ ತಮ್ಮ ಕಾರ್ಡುಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

"ಬಮೋಜೀಬ್ ಹುಕ್ಕುಂ"

ಆರ್. ವಿಜಯೀಂದ್ರರಾವ್,
ಸೆಕ್ರೆಟೇರಿ.

ತಾರೀಖು 22ನೇ ಮಾರ್ಚಿ 1883.

ನಂ. 85.—ದೀವಾನರವರು ತಮ್ಮ ವಾಸಸ್ಥಾನದಲ್ಲಿ ಪ್ರತಿ ಬುಧವಾರ ಮಧ್ಯಾನ್ಹ 12 ಘಂಟೆಯಲ್ಲೂ, ಗುರುವಾರಗಳಲ್ಲಿ ಬೆಳಗ್ಯೆ 8 ಘಂಟೆಯಲ್ಲೂ, ತಮ್ಮ ಭೇಟೀ ತೆಗದುಕೊಳ್ಳಲಪೇಕ್ಷಿಸತಕ್ಕವರಿಗೆ ನೇಟೀ ಕೊಡುವರು. ಅವರು ತಮ್ಮ ಕಾರ್ಡ್ ಚೀಟಿಗಳನ್ನು ದೀವಾನರವರ ಪ್ರೈವೇಟ್ ಸೆಕ್ರೆಟೇರಿಯವರಿಗೆ ಹಿಂದಿನ ದಿನದಲ್ಲಿ ಕಳುಹಿಸತಕ್ಕದ್ದು.

"ಬಮೋಜೀಬ್ ಹುಕ್ಕುಂ,"

ಸಿ. ರಾಘವಾಚಾರ್ಲು,
ಪ್ರೈವೇಟ್ ಸೆಕ್ರೆಟೇರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಫೆಬ್ರುವರೀ ತಾ|| 23, ಸರ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಾಗವರ್ನ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರುವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ರೆಸೀಡೆಂಟರ ಇಲಾಖಾ.

ಇಸ್ತಿಹಾರ್ ನಾಮಾ.

ನಂ. 24. ತಾರೀಖು 30ನೇ ಜನವರೀ 1884.

ಸರ್ 1883ನೇ ಇಸವಿಯ ಬೆಂಗಳೂರು ಮ್ಯುನಿಸಿಪೆಲ್ ರೆಗ್ಯೂಲೇಷರ್‌ಗಳ 5ನೇ ಸೆಕ್ಷರ್ ನಿಬಂಧನೆಗಳನುಸರಿಸಿ, ಮೈಸೂರು ಶೀಮೆಯ ರೆಸೀಡೆಂಟರವರು ಅಪ್ಪಣೆಕೊಡಿಸುವದೇನಂದರೆ, ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಟೇಷನಿನ, ಉದ್ಯೋಗಧರ್ಮತಃ ಮೆಂಬರ್‌ಗಳಲ್ಲದ, ಮ್ಯುನಿಸಿಪೆಲ್ ಕಮ್ಮಿಷನರ್‌ಗಳು, ಇದರಡಿಕಂಡ ರೂಲ್ಸ್ ಪ್ರಕಾರ ಜಯಿಂದ ಚುನಾವಣೀ ಮೂಲಕ ಮೊಕರರ್‌ಮಾಡಲ್ಪಡತಕ್ಕದ್ದು:

1. ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಟೇಷರ್ ಮ್ಯುನಿಸಿಪೆಲ್ ಬೋರ್ಡಿನ ಸರ್ಕಾರ್ ನೌಕರರಲ್ಲದ ಮೆಂಬರ್‌ಗಳ ಸಂಖ್ಯೆಯು, ಪ್ರಜೆಗಳ ಪೈಕಿ ಇದರಡಿ ಕಂಡ ತರಗತಿಗಳ ಪ್ರತಿನಿಧಿಗಳು 18 ಮಂದಿ ಇರತಕ್ಕದ್ದು.

(1) ಯೂರೋಪಿಯರ್‌ಗಳು ಮತ್ತು ಯೂರೇಜಿಯರ್‌ಗಳು.
(2) ಮಹಮ್ಮದೀಯರು.
(3) ಹಿಂದುಗಳು ಮತ್ತು ಇತರರು

2. ಈ ತರಗತಿಯ ಜನಗಳು ಇದರಡಿ ಕಂಡಮೇರೆ ಬೋರ್ಡಿಗೆ ಪ್ರತಿನಿಧಿಗಳನ್ನು ಒದಗಿಸತಕ್ಕದ್ದು:—

ಯೂರೋಪಿಯರ್ ವ ಯೂರೇಜಿಯರ್‌ಗಳು	6
ಮಹಮ್ಮದೀಯರು	4
ಹಿಂದುಗಳು ಮತ್ತು ಇತರರು	8

3. ಯಾವ ಮನುಷ್ಯನಾಗಲಿ, ಮ್ಯುನಿಸಿಪೆಲ್ ಕಮ್ಮಿಷನರಾಗಿ ಚುನಾಯಿಸಲ್ಪಡುವದಕ್ಕೆ ಮುಂಚೆ, ಇದರಡಿ ಕಂಡ ಷರತುಗಳನ್ನು ನೆರವೇರಿಸತಕ್ಕದ್ದು.

(*a*) ಅವನು ಗಂಡಸಾಗಿರತಕ್ಕದ್ದು.
(*b*) ಅವನಿಗೆ 25 ವರುಷಗಳ ವಯಸ್ಸು ಪೂರ್ತಿಯಾಗಿರಬೇಕು.
(*c*) ಇಂಗ್ಲಿಷ್‌ಭಾಷೆಯಲ್ಲಿ ಆತಗೆ ವಳ್ಳೆಯ ಜ್ಞಾನವಿರಬೇಕು.

15[9]

(d) ಅವನು ಮ್ಯೂನಿಸಿಪೆಲ್ ಸರಹದ್ದುಗಳೊಳಗೆ ವಾಸಸ್ಥನಾಗಿರಬೇಕು.

(e) ಅವನು, ಯಾವ ಸಾಲ್‌ನಲ್ಲಿ ಚುನಾಯಿಸಲ್ಪಡುತ್ತಾನೋ ಅದರ ಹಿಂದಿನ ಸಾಲ್ ಬಗ್ಯೆ, ಈ ಮಾರ್ಜಿನ್ನಲ್ಲಿ ಕಂಡ ವಿಧಗಳ ಪೈಕಿ ಒಂದು ಅಥವಾ ಹೆಚ್ಚು ಮ್ಯುನಿಸಿಪೆಲ್ ತೀರ್ವೆಗಳನ್ನಾಗಲಿ ತೆರಿಗೆಗಳನ್ನಾಗಲಿ, ಆ ಸಾಲಿಗಾಗಿ ಮ್ಯುನಿಸಿಪಾಲಿಟಿಗೆ ಜಮೆಕಟ್ಟಲ್ಪಟ್ಟ, ಗವರ್ನಮೆಂಟ್ ಜಮೀನ್ ಕಂದಾಯಕ್ಕೆ 20 ರೂಪಾಯಿಗಳಿಗೆ ಕಡಮೆ ಇಲ್ಲದ ಒಂದು ಮೊಬಲಗನ್ನಾಗಲಿ ಪಾವತಿ ಮಾಡಿರತಕ್ಕದ್ದು, ಅಥವಾ ಅವನು ಮಾಹೆಯೂನಾ 30 ರೂಪಾಯಿಗಳಿಗೆ ಕಡಮೆಯಿಲ್ಲದ ಬಾಡಿಗೆ ಕೊಡತಕ್ಕ ಮ್ಯುನಿಸಿಪೆಲ್ ಸರಹದ್ದಿನಲ್ಲಿರುವ ಒಂದುಮನೆಯಲ್ಲಿ ವಾಸಮಾಡತಕ್ಕದ್ದು.

(A) ಬಂಡಿಗಳು, ಕುದುರೆಗಳು ಅಥವಾ ಇತರ ಜಾನವರಗಳು, ಇವುಗಳ ಮೇಲೆ ತೆರಿಗೆ.

(B) ಕುಶಲ ವಿದ್ಯೆಗಳು, ಕಸಬುಗಳು, ವ್ಯಾಪಾರಗಳು, ಯಾ ವೃತ್ತಿಗಳು, ಇವುವಳಮೇಲೆ ತೆರಿಗೆ.

(C) ಮನೆಗಳು, ಕಟ್ಟಗಳು, ಅಥವಾ ಜಮೀನ್‌ಗಳು ಇವುಗಳ ಮೇಲೆ ಬಟ್ಟು ಕೆಲಸಗಳಿಗಾಗಿ ಯಾಗಲಿ, ಬೆಳಕು ಉಂಟುಮಾಡುವ ಬಗ್ಯೆ ಅಥವಾ ನೀರಾವರೀ ಬಗ್ಯೆ ಆಗಲಿ, ಅವುಗಳ ಸಾಲಿಯಾನಾ ಹುಟ್ಟುವ ಳೀ ಪ್ರಕಾರ ಹಾಕತಕ್ಕ ತೀರ್ವೆಗಳು.

ಪರಂತು, ಅವಿಭಕ್ತರಾಧ ಒಂದು ಹಿಂದೂ ಕುಟುಂಬವು, (e) ಕ್ಲಾಜ್‌ನಲ್ಲಿ ನಮೂದಿರುವ ತೀರ್ವೆಗಳನ್ನಾಲಿ, ತೆರಿಗೆಗಳನ್ನಾಗಲಿ ಕೊಟ್ಟಾಗ, ಆ ಕುಟುಂಬದ ಒಬ್ಬ ಮೆಂಬರು, ಆವಶ್ಯಕಗಳಾದ ಇತರ ಯೋಗ್ಯತೆಗಳನ್ನು ಪಡೆದಿರುವದರಿಂದ, ಒಬ್ಬ ಕಮ್ಮಿಷನರಾಗಿ ಚುನಾಯಿಸಲ್ಪಡಲಿಕ್ಕೆ ಅರ್ಹನಾಗಿರತಕ್ಕದ್ದು.

4. ಮ್ಯುನಿಸಿಪಾಲಿಟಿಯ ಯಾವ ಆಫಿಸರಾಗಲಿ, ನೌಕರನಾಗಲಿ, ಮ್ಯುನಿಸಿಪಾಲಿಟಿಯ ನೌಕರಿಯಲ್ಲಿರುವತನಕ, ಒಬ್ಬ ಮ್ಯುನಿಸಿಪೆಲ್ ಕಮ್ಮಿಷನರಾಗಿ ಚುನಾಯಿಸಲ್ಪಡಲಿಕ್ಕೆ ಅರ್ಹನಾಗಿರತಕ್ಕದ್ದಲ್ಲವು.

5. ಯಾವದಾದರೂ ತಕಸೀರಿಗಾಗಿ ಕ್ರೈದ್ ಸಜಾ ವಿಧಿಸಲ್ಪಟ್ಟಿರುವ, ಅಥವಾ ಚುನಾವಣೆಗೆ ಪೂರ್ವ ಸಂವತ್ಸರದಲ್ಲಿ ದಿವಾಳೀಯೆಂದು ತಿಳಿಸಲ್ಪಟ್ಟಿರುವ ಅಥವಾ ಸಮಷ್ಟಿಯಾದ ವ್ಯಾಪಾರ ಸಂಘದಲ್ಲಿಯಾಗಲಿ, ಕಮ್ಮಿಷನರಗಳೊಡನೆ, ಯಾ ಕಮ್ಮಿಷನರಗಳಿಗಾಗಿ ಮಾಡಲ್ಪಟ್ಟ ಯಾವದಾದರೂ ಒಡಂಬಡಿಕೆಯಲ್ಲಿಯಾಗಲಿ, ಕೆಲಸದಲ್ಲಾಗಲಿ ಒಬ್ಬ ಹಿಸ್ಸೇದಾರನಾಗಿರುವದಕೆ ಇತ ಅನ್ಯಥಾ ಸಂಬಂಧವುಳ್ಳ ಯಾವ ಮನುಷ್ಯನೂ, ಒಬ್ಬ ಮ್ಯುನಿಸಿಪೆಲ್ ಕಮ್ಮಿಷನರಾಗಿ ಚುನಾಯಿಸಲ್ಪಡಲಿಕ್ಕೆ ಅರ್ಹನಾಗಿರತಕ್ಕದ್ದಲ್ಲವು.

6. ಸ್ತ್ರೀಯಾಗಲಿ ಪುರುಷನಾಗಲಿ, ಪ್ರತಿ ವ್ಯಕ್ತಿಯೂ, 21 ವರುಷಗಳ ವಯಸ್ಸು ಪೂರೈಸಿ ಸ್ವದೇಶಭಾಷೆಯನ್ನು ಓದುವದಕ್ಕೂ ಬರಿಯುವದಕ್ಕೂ ತಿಳಿದಿದ್ದು ಇದರಡಿ ಕಂಡ ಷರತುಗಳ ಪೈಕಿ ಒಂದನ್ನಾಗಲಿ ಇತರವನ್ನಾಗಲಿ ನೆರವೇರಿಸಿದರೆ ಅಭಿಪ್ರಾಯ ಕೊಡಲಿಕ್ಕೆ ಅರ್ಹವಾಗಿರತಕ್ಕದ್ದು; ಯಾವವಂದರೆ:—

(a) ಮ್ಯುನಿಸಿಪಾಲಿಟಿ ಸರಹದ್ದುಗಳೊಳಗೆ, ಬಟ್ಟು ಮ್ಯುನಿಸಿಪೆಲ್ ಕೆಲಸಗಳಿಗಾಗಿ ತೀರ್ವೆಗಳು ಮೊಕರರ್ ಮಾಡಲ್ಪಟ್ಟ ಒಂದು ಮನೆಯ, ಕಟ್ಟದ, ಯಾ ಜಮೀನಿನ ಬಾಬತು ಅವನ ಅಥವಾ ಅವಳ ಹಕ್ಕುದಾರೀ ವಿಷಯದಲ್ಲಿ ಯಥಾರ್ಥವಾಗಿ ಸ್ವಂತಗಾರರಾಗಿರತಕ್ಕದ್ದು.

(b) ಅವನಾಗಲಿ ಅವಳಾಗಲಿ ಮ್ಯುನಿಸಿಪೆಲ್ ಸರಹದ್ದುಗಳೊಳಗೆ ವಾಸಮಾಡುತ್ತಾ, ಚುನಾವಣೆಗೆ ಹಿಂದಿನ ಸಂವತ್ಸರದಲ್ಲಿ ಈ ಮಾರ್ಜಿನ್ನಲ್ಲಿ ಕಂಡ ವಿಧಗಳ ಪೈಕಿ ಒಂದು ಅಥವಾ ಹೆಚ್ಚು ಮ್ಯುನಿಸಿಪೆಲ್ ತೆರಿಗೆಗಳನ್ನಾಗಲಿ, ಬಟ್ಟು 5 ರೂಪಾಯಿಗಳ ತನಕ ಅಥವಾ ಇನ್ನೂ ಹೆಚ್ಚಾಗಿ ಪಾವತೀ ಮಾಡಿರತಕ್ಕದ್ದು.

A. ಬಂಡೀಗಳು, ಕುದುರೆಗಳು, ಅಥವಾ ಇತರಜಾನವರಗಳು ಇವುಗಳ ಮೇಲಣ ತೆರಿಗೆ.

B. ಕುಶಲವಿದ್ಯೆ, ಕಸಬ್‌ದಾರೀ ಕೆಲಸಗಳು, ವ್ಯಾಪಾರಗಳು, ಅಥವಾ ವೃತ್ತಿಗಳು ಇವುಗಳಿಗಾಗಿ ತೀರ್ವೆ.

C. ಮನೆಗಳು, ಕಟ್ಟಗಳು, ಅಥವಾ ಜಮೀನ್‌ಗಳು ಇವುಗಳಮೇಲೆ ಬಟ್ಟು ಕೆಲಸಗಳಿಗಾಗಿಯಾಗಲಿ, ಬೆಳಕು ಉಂಟುಮಾಡುವ ಬಗ್ಯೆ ಅಥವಾ ನೀರಾವರಿ ಕೆಲಸಗಳಿಗಾಗಿಯಾಗಲಿ, ಅವುಗಳ ಸಾಲೀಯಾನಾ ಹುಟ್ಟುವಳಿ ಪ್ರಕಾರ ತೆರಿಗೆಗಳು.

(c) ಅವನಾಗಲಿ, ಅವಳಾಗಲಿ, ಚುನಾವಣೆಗೆ ಹಿಂದಿನ ಸಾಲ್‌ನಲ್ಲಿ ತಮ್ಮ ಸ್ವಂತ ಹಕ್ಕುದಾರೀ ಮೇಲೆ ಮ್ಯುನಿಸಿಪೆಲ್ ಸರಹದ್ದುಗಳೊಳಗೆ, 8 ರೂಪಾಯಿಗಳಿಗೆ ಕಡಮೆಯಿಲ್ಲದ ಮಾಹೇಯಾನಾ ಬಾಡಿಗೆಗೆ ಒಂದು ಮನೆಯ ಹಿಡುವಳೀದಾರರಾಗಿರತಕ್ಕದ್ದು.

7. ಮ್ಯುನಿಸಿಪೆಲ್ ಕಮ್ಮಿಷನರಗಳ ಬೋರ್ಡಿನಲ್ಲಿ ಒಂದು ಅಥವಾ ಹೆಚ್ಚು ಖಾಲೀಗಳು ಉಂಟಾದರೆ, ಸದರೀ ಖಾಲೀಯಿರುವ ಉದ್ಯೋಗಗಳು ಚುನಾವಣೇ ಮೂಲಕ ಭರ್ತೀಯಾಗತಕ್ಕವೆಂದು ರೆಸಿಡೆಂಟರು ನೇಮಿಸಿ ಯಿರುವ ಪಕ್ಷಕ್ಕೆ, ಮ್ಯುನಿಸಿಪೆಲ್ ಕಮ್ಮಿಷನ್ ಪ್ರೆ

ಸೀಡೆಂಟರು, ಬೆಂಗಳೂರು ಸಿವಿಲ್ ವ ಮಿಲಿಟೆರಿ ಸ್ಟೇಷನ್ನಲ್ಲಿ ಖಾಲೀ ಮಾಡಿಸಿದ ಕಮ್ಮಿಷನರು ಯಾವ ತರಗತಿಗೆ ಸೇರಿ ಯಿರುತ್ತಾರೋ ಅಂತಾ ತರಗತಿಯ ಚುನಾವಣೇದಾರರ ಒಂದು ಸಮಾಜವನ್ನು ಸೇರಿಸತಕ್ಕದ್ದು. ಮತ್ತು ಅಂತಾ ತಾರೀಖಿನಲ್ಲಿ ಯಾವ ಬಗ್ಯೆ ಅಥವ ಪಕ್ಷ 7 ದಿನಗಳ ನೋಟೀಸ್ ಕೊಡಲ್ಪಟ್ಟಿರತಕ್ಕದ್ದೋ ಅಂತಾ ಖಾಲೀ ಯಿರುವ ಕೆಲಸವನ್ನು ಯಾ ಕೆಲಸಗಳನ್ನು ಭರ್ತೀ ಮಾಡಲಿಕ್ಕೆ ಜನಗಳ ಹೆಸರುಗಳು ತಿಳಿಸಲ್ಪಟ್ಟು ಘೋಷಿಸಲ್ಪಡತಕ್ಕದ್ದು. ಖಾಲೀ ಯಿರುವ ಪ್ರತಿ ಕೆಲಸಕ್ಕೂ ಒಬ ಮನುಷ್ಯನು ಮಾತ್ರವೆ ತಿಳಿಸಲ್ಪಟ್ಟು ಘೋಷಿಸಲ್ಪಟ್ಟರೆ ಅವನು ಕ್ರಮಪ್ರಕಾರ ಚುನಾಯಿಸಲ್ಪಟ್ಟಂತೆ ಪ್ರಕಟಿಸಲ್ಪಡತಕ್ಕದ್ದು. ಒಬ್ಬನಿಗಿಂತ ಹೆಚ್ಚು ಮಂದಿ ನಮೂದಿಸಲ್ಪಟ್ಟು ಘೋಷಿಸಲ್ಪಟ್ಟರೆ ಅಭಿಪ್ರಾಯದ ಮೂಲಕ ಚುನಾವಣೆಯುನಿಶ್ಚಯಿಸಲ್ಪಡತಕ್ಕದ್ದು, ಮತ್ತು ಸದರೀ ಚುನಾವಣೆಯು, ಮ್ಯುನಿಸಿಪೆಲ್ ಕಮ್ಮಿಷರ್ಷ ಪ್ರೆಸೀಡೆಂಟರಿಂದ ಹಾಗೆ ತಿಳಿಸಲ್ಪಡತಕ್ಕ ಮತ್ತು ಸಮಾಜ ಸೇರಿದ ತಾರೀಖು ಲಾಗಾಯತು 3 ದಿನಗಳಿಗೆ ಕಡಮ್ಮೆ ಯಿಲ್ಲದ ಒಂದು ತಾರೀಖಿನಲ್ಲಿ ಮಾಡಲ್ಪಡತಕ್ಕದ್ದು.

8. ಚುನಾವಣೆಗಳು, ಚೀಟೀಹಾಕುವದರ ಮೂಲಕ ಆಗತಕ್ಕವು, ಅದರ ಬಾಬತು ಲಾಗವಡು ಮ್ಯುನಿಸಿಪೆಲ್ ಫಂಡಿನಿಂದ ಕೊಡಲ್ಪಡತಕ್ಕದ್ದು.

9. ಪ್ರತಿಚುನಾವಣೇದಾರನೂ, ಭರ್ತೀಯಾಗತಕ್ಕ ಖಾಲೀಯಿರುವ ಕೆಲಸಗಳು ಎಷ್ಟುಯಿದ್ದರೆ ಅಷ್ಟು ಅಭಿಪ್ರಾಯ ಉಂಟಾಗತಕ್ಕದ್ದು, ಆದರೆ, ಪ್ರತಿ ಚುನಾವಣೇದಾರನಿಂದ, ಯಾವನಾದರೂ ಒಬ್ಬ ಉಮೇದವಾರನಿಗೆ, ಒಂದು ಅಭಿಪ್ರಾಯಕ್ಕಿಂತ ಹೆಚ್ಚಾಗಿ ಕೊಡಲ್ಪಡಲಾಗದು.

10. ಯಾವ ಕಮ್ಮಿಷನರಾಗಲಿ, ಆತನ ಪಕ್ಷದಲ್ಲಿ ಅಥವಪಕ್ಷ 20 ಅಭಿಪ್ರಾಯಗಳು ಕೊಡಲ್ಪಟ್ಟ ಹೊರತು ಚುನಾಯಿಸಲ್ಪಡತಕ್ಕದ್ದಲ್ಲ, ಮತ್ತು ಯಾವ ಉಮೇದವಾರನ ಪಕ್ಷದಲ್ಲಾಗಲಿ, ಇಪ್ಪತ್ತು ಅಭಿಪ್ರಾಯಗಳು ಉಂಟಾಗದ ಸಂಗತಿಯಲ್ಲಿ, ಲೆಸೀಡೆಂಟರು ಖಾಲೀಯಿರುವ ಕೆಲಸವನ್ನು ಭರ್ತೀಮಾಲಿಕ್ಕೆ ಒಬ್ಬ ಕಮ್ಮಿಷನರನ್ನು ನೇಮಿಸಬಹುದು. ಅವನು ಚುನಾಯಿಸಲ್ಪಟ್ಟಿದ್ದರೆ ಹ್ಯಾಗೋ ಹಾಗೆ ಬದಸ್ತೂರ ಅಧಿಕಾರಗಳನ್ನು ಪಡೆದಿರತಕ್ಕದ್ದು.

11. ಈ ರೂಲ್ಸ್ ಅನುಸರಿಸಿ, ಯಾವ ಚುನಾವಣೆಯಲ್ಲಾಗಲಿ, ಯಾರಾದರೂ ಇಬ್ಬರು ಅಥವಾ ಹೆಚ್ಚು ಮಂದಿ ಉಮೇದವಾರರಲ್ಲಿ ಅಭಿಪ್ರಾಯಗಳ ಸಾಮ್ಯ ವುಂಟಾಗಿರುವಂತೆ ಕಾಣಬಂದು, ಒಂದು ಅಭಿಪ್ರಾಯ ಜಾಸ್ತೀಯಾದರೆ ಅಂತಾ ಉಮೇದವಾರರ ಪೈಕಿ ಒಬ್ಬನು ಒಬ್ಬ ಕಮ್ಮಿಷನರಾಗಿ ಚುನಾಯಿಸಲ್ಪಡಲಿಕ್ಕೆ ಅರ್ಹನಾಗುವದಾದರೆ, ಮ್ಯುನಿಸಿಪೆಲ್ ಕಮ್ಮಿಷರ್ಷ ಪ್ರೆಸೀಡೆಂಟರು, ಅಂತಾ ಜಾಸ್ತೀ ಅಭಿಪ್ರಾಯವನ್ನು ಕೊಡಬಹುದು. ಅಂತಾ ಜಾಸ್ತೀ ಅಭಿಪ್ರಾಯ ಕೊಡಲ್ಪಟ್ಟ ವುಮೇದವಾರನು ಅದರ ಮೇಲೆ ಒಬ್ಬ ಕಮ್ಮಿಷನರಾಗಿ ಚುನಾಯಿಸಲ್ಪಟ್ಟಂತೆ ಯೆಣಿಸಲ್ಪಡತಕ್ಕದ್ದು.

12. 3, 4, 5 ಮತ್ತು 6 ಈ ರೂಲ್ಸಿನಿಂದ ವಿಧಿಸಲ್ಪಟ್ಟಂತೆ ಚುನಾಯಿಸಲ್ಪಡಲಿಕ್ಕೂ, ಅಭಿಪ್ರಾಯ ಕೊಡಲಿಕ್ಕೂ ಅರ್ಹರಾದ ಜನಗಳ ಪಟ್ಟಿಗಳನ್ನು ಸಾಧ್ಯವಾದಷ್ಟು ಶೀಘ್ರದಲ್ಲಿ, ಮತ್ತು ಈ ರೂಲ್ಸ್ ಜಾರೀಗೆ ಬಂದತರುವಾಯ ಮೂರು ತಿಂಗಳ ವಳಗಾಗಿ, ಮ್ಯುನಿಸಿಪೆಲ್ ಕಮ್ಮಿಷರ್ಷ ಪ್ರೆಸೀಡೆಂಟರಿಂದ ತಯಾರ್ಮಾಡಲ್ಪಟ್ಟು, ಛಾಪಿಸಲ್ಪಟ್ಟು, ಪ್ರಕಟಿಸಲ್ಪಡತಕ್ಕದ್ದು.

13. ಮೇಲೆ ಕಂಡ 1ನೇ ರೂಲ್‌ನಲ್ಲಿ ಸೂಚಿಸಲ್ಪಟ್ಟ ತೆರಿಗೆ ಕೊಡತಕ್ಕ ತರಗತಿಗಳ ಪೈಕಿ ಪ್ರತಿ ಬಗೆಯವರಲ್ಲಿಯೂ ಅಂತಾ ಪಟ್ಟಿ ಒಂದು ಯಿರತಕ್ಕದ್ದು. ಪಟ್ಟೀಗಳು, ಮ್ಯುನಿಸಿಪೆಲ್ ಕಮ್ಮಿಷನರ್‌ಗಳ ಆಫೀಸ್‌ನಲ್ಲಿ ಅಥವಾ ಆಫೀಸ್‌ಬಳಿ ಯಾವದಾದರೂ ಪ್ರಸಿದ್ಧವಾದ ಸ್ಥಳದೊಳಗೆ ಮತ್ತು ಸ್ಟೇಷನಿನ ಇತರ ಪ್ರದೇಶಗಳಲ್ಲಿ ಚಿಕಟಾಯಿಸುವದರ ಮೂಲಕ ಪ್ರಸಿದ್ಧಪಡಿಸಲ್ಪಡತಕ್ಕದ್ದು.

14. ಮೇಲೆಕಂಡಂತೆ ಪ್ರಕಟಿಸಲ್ಪಟ್ಟ ಪಟ್ಟೀಗಳು, ಅದರಲ್ಲಿ ನಮೂದಿರುವ, ಚುನಾಯಿಸಲ್ಪಡತಕ್ಕ ಅಥವಾ ಅಭಿಪ್ರಾಯ ಕೊಡತಕ್ಕ ಜನಗಳ ಯೋಗ್ಯತೆಗಳ ವಿಷಯದಲ್ಲಿ ಅಖೈರಾದ್ದಾಗಿ ಭಾವಿಸಲ್ಪಡತಕ್ಕದ್ದಲ್ಲವು, ಮತ್ತು ಸದರೀ ಪಟ್ಟೀಗಳು, ಮೂವರು ಅಥವಾ ಹೆಚ್ಚು ಮಂದಿ ಕಮ್ಮಿಷನರ್‌ಗಳಿಂದ ಕುಮ್ಮಕ್ ಮಾಡಲ್ಪಟ್ಟ ಮ್ಯುನಿಸಿಪೆಲ್ ಕಮ್ಮಿಷರ್ಷ ಪ್ರೆಸೀಡೆಂಟರಿಂದ ಆಗಿಂದಾಗ್ಯೆ ವಿಮರ್ಶಿಸಲ್ಪಡಲಿಕ್ಕೆ ಸಾಧ್ಯವಾಗಿರತಕ್ಕದ್ದು.

15. ಪ್ರೆಸೀಡೆಂಟರು, ಸ್ಥಳದ ನ್ಯೂಸ್ ಪೇಪರ್‌ಗಳ ಪೈಕಿ ಒಂದು ಅಥವಾ ಹೆಚ್ಚುನ್ಯೂಸ್ ಪೇಪರ್‌ಗಳಲ್ಲಿ ಸದರೀ ಪಟ್ಟಿಗಳನ್ನು ಪ್ರಕಟಿಸಿದ್ದನ್ನು ಕುರಿತು ನೋಟೀಸ್ ಕೊಡತಕ್ಕದ್ದು. ಸದರೀ ಪಟ್ಟೀಗಳು ಅಂತಾ ನೋಟೀಸ್ ಪ್ರಕಟಿಸಲ್ಪಟ್ಟ ತಾರೀಖಿಗೆ ತರುವಾಯ ಹದಿನೈದು ದಿನಗಳಲ್ಲಿ ಯುಕ್ತಗಳಾದ ಯೆಲ್ಲ ಕಾಲಗಳಲ್ಲಿಯೂ, ಜನಗಳು ತನಖೀ ಮಾಡುವ ಬಗ್ಯೆ ಖುಲ್ಲಾ ಇರತಕ್ಕದ್ದು.

16. ಪಟ್ಟೀಗಳ ನಕ್ಕಲ್‌ಗಳು, ಮ್ಯುನಿಸಿಪೆಲ್ ಕಮ್ಮಿಷನರ್‌ಗಳ ಕಚ್ಚೇರಿಯಲ್ಲಿ ಲಾಗವಡು ಖರೀದಿಗೆ ಜನಗಳಿಗೆ ಒದಗಿಸಲ್ಪಡತಕ್ಕದ್ದು.

17. ಪ್ರೆಸೀಡೆಂಟರು ಮೂವರು ಅಥವಾ ಹೆಚ್ಚುಮಂದಿ ಕಮ್ಮಿಷನರ್‌ಗಳ ಕುಮ್ಮಕ್ಕಿನಿಂದ, ಪ್ರತಿಸಾಲ್ ಮೊದಲನೆಯ ತಿಂಗಳಲ್ಲಿ ಸದರೀ ಪಟ್ಟೀಯಲ್ಲಿ ದಾಖಲ್ಮಾಡಲ್ಪಡಲಿಕ್ಕೆ ಲಾಯಖಿಲ್ಲದ ಯಾವನಾದರೂ ಮನುಷ್ಯನ ಹೆಸರನ್ನು ತೆಗದುಹಾಕುವ ಬಗ್ಯೆ, ಅಥವಾ ಲಾಯಖಾದ ಯಾವನಾದರೂ ಮನುಷ್ಯನ ಹೆಸರನ್ನು ಸೇರಿಸುವ ಬಗ್ಯೆ ಸದರೀ ಪಟ್ಟಿಗಳನ್ನು ವಿಮರ್ಶಿಸತಕ್ಕದ್ದು. ಯಾವ ಹೆಸರನ್ನಾಗಲಿ, ದಾಖಲ್ಮಾಡುವದಕ್ಕೆ ಉಂಟಾದ ಯೆಲ್ಲ ಆಕ್ಷೇಪಗಳೂ, ಯಾವ ಹೆಸರನ್ನಾಗಲಿ ಸೇರಿಸುವ ವಿಷಯದಲ್ಲಿ ಉಂಟಾದ ಯೆಲ್ಲಬಾಧ್ಯತೆಗಳೂ,

ಪ್ರೆಸೀಡೆಂಟರಿಂದಲೂ ಸದರೀ ಕಮ್ಮಿಷನರ್‌ಗಳಿಂದಲೂ, ನಿರ್ಣಯಿಸಲ್ಪಡತಕ್ಕವು. ಬೇರೆ ಅಭಿಪ್ರಾಯ ಉಂಟಾದ ಸಂದರ್ಭದಲ್ಲಿ ಬಹಳ ಮಂದಿಯ ತಾತ್ಪರ್ಯದಿಂದ ನಿರ್ಣಯಿಸಲ್ಪಡತಕ್ಕವು. ಪ್ರೆಸೀಡೆಂಟರಿಗೆ ಅಂಗೀಕಾರ ಸ್ವಾತಂತ್ರ್ಯವಿರುತ್ತೆ.

ಹುಕ್ಕುಂ ಬಮೋಜೀಬ್
ಹೆಚ್. ವೈಲಿ, ಮೇಜರ್
ರೆಸೀಡೆಂಟರ ಅಸಿಸ್ಟೆಂಟ್.

ಮೈಸೂರು ರೆವಿನ್ಯೂ ಸರ್ವೇ ಮತ್ತು ಸೆಟಲ್‌ಮೆಂಟ್ ಇಲಾಖಾ.

ನಂ. 702. ತಾರೀಖು 6ನೇ ಫೆಬ್ರುವರೀ 1884.

ಇದರಿಂದ ಪ್ರಕಟಿಸಲ್ಪಡುವದೇನಂದರೆ, ಮೈಸೂರು ಡಿಸ್ಟ್ರಿಕ್ಟು ಹೆಗ್ಗಡದೇವನಕೋಟೆ ತಾಲ್ಲೂಕಿನ ಸೆಟಲ್‌ಮೆಂಟ್‌ಯಾನೆ ತರಂ ಜಮಾಬಂದಿಯು, ಸರ್ 1884ನೇ ಮಾಹೆ ಮಾರ್ಚಿ ಗುರ್ರೇ ತಾರೀಖು, ಯಾ ಆ ಸುಮಾರಿಗೆ ಪ್ರಾರಂಭಿಸಲ್ಪಡುತ್ತೆ.

ಜೆ. ಪಿ. ಗ್ರ್ಯಾಂಟ್,
ಸೂ॥ ಮೈಸೂರ್ ರೆ॥ ಸರ್ವೆ ಅಂಡ್ ಅಸೆಸ್‌ಮೆಂಟ್.

ಫೈನಾನ್ಷಿಯಲ್ ಇಲಾಖಾ.

1882ನೇ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರ್ಯಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನ್‌ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗೆದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಗೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರ್ಯಾಫ್ಟ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್‌ಟ್ರೋಲರ್.

ರಿಜಿಸ್ಟ್ರೇಷನ್ ಇಲಾಖಾ.

ಕೋರ್ಟ್ ವಿಕ್ರಯದ ಸರ್ಟಿಫಿಕೇಟ್‌ಗಳ ಮೇಲೆ ಮಾಡಲ್ಪಡತಕ್ಕ ಇಂಡಾರ್ಸ್‌ಮೆಂಟ್ ನಮೂನೆ.

ಸರ್ 1883–84ನೇ ಇಸವಿಯ ಸರ್ಕ್ಯುಲರ್ ಮಿಮೊರಾಂಡಂ ನಂಬರ 5—84.

ಮೈಸೂರು ಶೀಮೆಯಲ್ಲಿ ರಜಿಸ್ಟ್ರಿಂಗ್ ಆಫೀಸರ್‌ಗಳಿಗೆ.

ತಾರೀಖು 15ನೇ ಫೆಬ್ರುವರೀ 1884.

ವಾಡಿಕೆಯನ್ನು ಏಕರೂಪವಾಗಿ ಮಾಡುವ ಬಗ್ಗೆ, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಸರ್ಟಿಫಿಕೇಟ್‌ದಾರರಿಂದ ರಿಜಿಸ್ಟ್ರೇಷನ್ ಬಗ್ಗೆ ಹಾಜರ್‌ಮಾಡಲ್ಪಟ್ಟ ಕೋರ್ಟ್ ವಿಕ್ರಯದ ಸರ್ಟಿಫಿಕೇಟ್‌ಗಳ ಮೇಲೆ ಮಾಡಲ್ಪಡತಕ್ಕ ಈ ಕೆಳಗೆ ಕಂಡ ಇಂಡಾರ್ಸ್‌ಮೆಂಟ್ ನಮೂನೆಯನ್ನು ರಿಜಿಸ್ಟ್ರಿಂಗ್ ಆಫಿಸರ್‌ಗಳ ನಡವಳಿತದ ಬಗ್ಗೆ ವಿಧಿಸುತ್ತಾರೆ.

(ಹಾಜರಾತಿಯ ಇಂಡಾರ್ಸ್‌ಮೆಂಟ್ ತರುವಾಯ)

"ಇದರಡಿ ರುಜು ಮಾಡುವವರು ಈ ವಿಕ್ರಯದ ಸರ್ಟಿಫಿಕೇಟಿನ ಖಿನಾತೀ ವಿಷಯದಲ್ಲಿ ಸಮಾಧಾನಪಡುತ್ತಾರೆ"

(ರಿಜಿಸ್ಟ್ರಿಂಗ್ ಆಫಿಸರ್‌ಗಳ ರುಜು.)

ಹೆಚ್. ಹಡ್ಸನ್,
ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್.

ತುಮಕೂರು ಡಿಸ್ಟ್ರಿಕ್ಟು.

ತುಮಕೂರು ಡಿಸ್ಟ್ರಿಕ್ಟು ಸಬಾರ್ಡಿನೇಟ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಶಿರಾ ತಾಲ್ಲೂಕು ಲಕ್ಕನಹಳ್ಳಿಲಿರುವ ಗುಜ್ಜಾರಪ್ಪನ ಮಗ ಕರೀತಿಮ್ಮನ ವಿಷಯದಲ್ಲಿ.—

1884ನೇ ಇಸವಿ ದಿವಾಳಿ ಕೇಸ್ ನಂಬರ್ 2.

ಹುಕ್ಕುಂ.

ಮೇಲ್ಕಂಡ ಕರೀತಿಮ್ಮನು ನಿರ್ಬಂಧದಿಂದ ಖುಲಾಸೆ ಯಾಗಬೇಕೆಂದು ಕೋ[illegible] ಅರ್ಜಿ ಅ[illegible]ನು ರೂಬರೂ ಅರ್ಜೀದಾರನಾದ ಕರೀತಿಮ್ಮನ ಪರವಾಗಿ ಅವನನ್ನು ಮತ್ತು ಸದರೀಯವನ ಲೇಣೇದಾರ್‍ರಾದ ಸೋ[illegible]ಲಿಂಗಂಣ 1, [illegible]ದ್ದೇಗೌಡ 1, ಇವರ ತರಫ್ ಹಾಜರಾದ ಶಿದ್ದೇಗೌಡರಿಗೂ ದರ್ಯಾಫ್ತಿ ಮಾಡಲ್ಪಟ್ಟಿತು.

ಈ ಕೆಳಗೆ ಸಮೂದು ಮಾಡಲ್ಪಡುವ ಲೇಣೇದಾರ್‍ರು ತಮಗೆ ಈ ದರ್ಯಾಫ್ತಿ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರೆಂದರೆ—ಶೀರಾ ತಾಲ್ಲೂಕು ಪಟ್ಟನಾಯಕನಹಳ್ಳಿಲಿರುವ ಶಿರಿಯಂಣನ ಮಗ ಸೋಮಲಿಂಗಂಣ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಕರಿತಿಮ್ಮನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀ ಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸಾಲದ ಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರ್‍ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರಗಳ ವಾಸಸ್ಥಳ.	ಮೊಬಲಗು.	ಸಾಲಮಾಡಿದ ಅಂದಾಜು ತಾರೀಖು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರು ಇದ್ದರೆ.	ಷರಾ.
1	ಶಿರಾ ತಾಲ್ಲೂಕು ಪಟ್ಟನಾಯಕನಹಳ್ಳಿಲಿರುವ ಸೋಮಲಿಂಗಂಣ ..	144—8—0	16ನೇ ನವಂಬರ್ 1883.	ಮದ್ದಗಿರಿ ಮುನ್ಸಿಫ್ ಕೋರ್ಟು 1880ನೇ ಇಸವಿ 190ನೇ ನಂಬರ್ ಡಿಕರಿ.	
2	ಶಿರಾ ತಾಲ್ಲೂಕು ಪುಲಿಕುಂಟೇಲಿರುವ ಶಿದ್ದೇಗೌಡ	10—0—0	ಡಿಟೋ	ಸಾಲ ತಕ್ಕೊಂಡ ಬಗೆ.	

1884ನೇ ಇಸವಿ ಫಿಬ್ರುವರೀ 13ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಿ. ಕ್ರೌಸ್,
ಸಬ್ ಜಡ್ಜ.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 45.

ಮೃತಪಟ್ಟ ವೆಂಕಟಸುಬ್ಬಯ್ಯನ ಆಸ್ತಿ ವಿಷಯದಲ್ಲಿ.—

ಅರ್ಜೀದಾರ ವೆಂಕಟರಾಮಯ್ಯ ಮೈನರ್ ಗಾರ್ಡಿಯನ್ ಮತ್ತು ಚಿಕ್ಕಪ್ಪ ಗಿರಿಅಪ್ಪಯ್ಯ, ಮೃತಪಟ್ಟ ಸದರೀ ವೆಂಕಟಸುಬ್ಬಯ್ಯನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮಂಡ್ಯ ತಾಲ್ಲೂಕು ಸಾತನೂರಲ್ಲಿರುವ ಸದರೀ ವೆಂಕಟರಾಮಯ್ಯ, ಸದರೀ ವಾಸಸ್ಥನಾಗಿ ಮೃತಪಟ್ಟ ವೆಂಕಟಸುಬ್ಬಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟರಾಮಯ್ಯನ ಅರ್ಜಿಯನ್ನು 1884ನೇ ಇಸವಿ ಮಾರ್ಚೀ ತಿಂಗಳು ತಾರೀಖು 26ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟಸುಬ್ಬಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯ ಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ 50.

ಮೃತಪಟ್ಟ ಭೀಮಶೇನಾಚಾರ್ಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ವೆದವ್ಯಾಸಾಚಾರ್ಯರು, ಮೃತಪಟ್ಟ ಸದರೀ ಭೀಮಶೇನಾಚಾರ್ಯರಿಗೆ ದೊಡ್ಡಪ್ಪನ ಮಗ ಅಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರಲ್ಲಿರುವ ಸುಮತಿ ಅನಂ[illegible]ಚಾರ್ಯ[illegible] ವೇದವ್ಯಾಸಾಚಾರ್ಯರು, ಶ್ರೀರಂಗಪಟ್ಣ ವಾಸಸ್ಥನಾಗಿ ಮೃತಪಟ್ಟ ಭೀಮಶೇನಾಚಾರ್ಯರ ಜೆಂದಗೀ ಬಗ್ಯಾಗಿ ಬರತಕ್ಕ [illegible]30 ರೂಪಾಯಿಗ[illegible] ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋ[illegible] ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೇದವ್ಯಾಸಾಚಾರ್ಯರ ಅರ್ಜೀಯನ್ನು 1884ನೇ ಇಸವಿ ಮಾರ್ಚೀ ತಿಂಗಳು ತಾರೀಖು 26ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಭೀಮಶೇನಾಚಾರ್ಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಫೆಬ್ರುವರೀ ತಿಂಗಳು 2ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1884ನೇ ಇಸವಿ ಅರ್ಜೀ ನಂಬರ 53.

ಮೃತಪಟ್ಟ ಸೋಮೇಶ್ವರಗಿರಿಗೋಸಾಯಿ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಹರಿಗಿರಿಗೋಸಾಯಿ, ಮೃತಪಟ್ಟ ಸದರೀ ಸೋಮೇಶ್ವರಗಿರಿಗೊಸಾಯಿಗೆ ಅಂಣ, ದರ್ಯಾವುಗಿರಿಗೋಸಾಯಿಗೆ ಸಿಷ್ಯ ಅಗಬೇಕೆಂಬ ಹಕ್ಕುದಾರಿಮೇಲೆ ಮೈಸೂರು ಮಂಡಿಮೊಹಲಾ ಸ್ಥಳದ ಹರಿಗಿರಿಗೋಸಾಯಿ ಸದರೀ ವಾಸಸ್ಥರಾಗಿ ಮೃತಪಟ್ಟ ಸೋಮೇಶ್ವರಗಿರಿಗೋಸಾಯಿ ಜೆಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹರಿಗಿರಿಗೋಸಾಯಿ ಅರ್ಜಿಯನ್ನು 1884ನೇ ಇಸವೀ ಮಾರ್ಚೀ ತಿಂಗಳು ತಾರೀಖು 26ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ ಪಡಿಯುತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೋಮೇಶ್ವರಗಿರಿಗೋಸಾಯಿ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಫೆಬ್ರುವರೀ ತಿಂಗಳು 7ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮದಸ್ತಖತ್ತೊಡನೆ ಕೊಡೋಣಾಗಿಧೆ.

1884ನೇ ಇಸವಿ ಅರ್ಜೀ ನಂಬರ 59.

ಮೃತಪಟ್ಟ ಶಿದ್ದಲಿಂಗೇಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರಳಾದ ನಂಜಮ್ಮ, ಮೃತಪಟ್ಟ ಸದರೀ ಶಿದ್ದಲಿಂಗೇಗೌಡನಿಗೆ ಹೆಂಡತಿ ಅಗಬೇಕೆಂಬ ಹಕ್ಕುದಾರೀ ಮೇಲೆ ಹೆಗ್ಗಡದೇವನಕೋಟೆ ತಾಲ್ಲೂಕು ಗಿಣಾಹಳ್ಳಿ ಸ್ಥಳದ ಸದರೀ ನಂಜಮ್ಮನು, ಸದರೀ ವಾಸಸ್ಥರಾಗಿ ಮೃತಪಟ್ಟ ಶಿದ್ದಲಿಂಗೇಗೌಡನ ಜೆಂದಗೀ ಬಗ್ಯಾಗಿ ಬರತಕ್ಕ 200 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ನಂಜಮ್ಮನ ಅರ್ಜಿಯನ್ನು 1884ನೇ ಇಸವಿ ಮಾರ್ಚೀ ತಿಂಗಳು ತಾರೀಖು 26ಲ್ಲು ಮೈಸೂರು ಮೊಕ್ಕಾಮಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿದ್ದಲಿಂಗೇಗೌಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಯಿರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಫೆಬ್ರುವರೀ ತಿಂಗಳು ತಾರೀಖು 11ರಲ್ಲು ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

164

1884ನೇ ಇಸವಿ ಅರ್ಜೀ ನಂಬರ 60.

ಮೃತಪಟ್ಟ ಭೂಪಂಣನ ಆಸ್ತಿವಿಷಯದಲ್ಲಿ—

ಅರ್ಜೀದಾರ ಗಿರಿಯಂಣ, ಮೃತಪಟ್ಟ ಸದರೀ ಭೂಪಂಣನಿಗೆ ಅಂಣ ಆಗಬೇಕೆಂಬ ಹಕ್ಕುದಾರೀ ಮೇಲೆ ಶ್ರೀರಂಗಪಟ್ಣ ತಾಲ್ಲೂಕು ಗಂಜಾಂ ಸ್ಥಳದ ಸದರೀ ಗಿರಿಯಂಣನು, ಸದರೀ ವಾಸಸ್ಥನಾಗಿ ಮೃತಪಟ್ಟ ಭೂಪಂಣನ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಗಿರಿಯಂಣನ ಅರ್ಜೀಯನ್ನು 1884ನೇ ಇಸವಿ ಮಾರ್ಚೀ ತಿಂಗಳು ತಾರೀಖು 26ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಭೂಪಂಣನ ಆಸ್ತೀಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ 70.

ಮೃತಪಟ್ಟ ಕಾಶಯ್ಯ ವುರಫ್ ಅಕ್ಕಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ನಾರಣಪ್ಪ, ಮೃತಪಟ್ಟ ಸದರೀ ಕಾಶಯ್ಯ ವುರಫ್ ಅಕ್ಕಯ್ಯನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಹುಣಸೂರು ತಾಲ್ಲೂಕು ಬಿಳಿಕುಂದದ ಹೋಬಳಿ ಹರವೆಗ್ರಾಮದಲ್ಲಿರುವ ಸದರೀ ನಾರಣಪ್ಪನು, ಡಿಟೋ ವಾಸಸ್ಥರಾಗಿ ಮೃತಪಟ್ಟ ಕಾಶಯ್ಯ ವುರಫ್ ಅಕ್ಕಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ನಾರಣಪ್ಪನ ಅರ್ಜೀಯನ್ನು 1884ನೇ ಇಸವಿ ಮಾರ್ಚೀ ತಿಂಗಳು ತಾರೀಖು 26ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕಾಶಯ್ಯ, ವುರಫ್ ಅಕ್ಕಯ್ಯನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿದೆ.

1884ನೇ ಇಸವಿ ಫೆಬ್ರುವರೀ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ವಿ. ಎನ್. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜಿ.

ತಾರೀಖು 30ನೇ ಜನವರೀ 1884.

ಇದರಿಂದ ತಿಳಿಯಪಡಿಸುವದೇನಂದರೆ, ಮಳವಳ್ಳಿ ಸಬ್ ರಿಜಿಸ್ಟ್ರೀ ಆಫೀಸಿನಲ್ಲಿ ಬೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತೈವಜನ್ನು ಹಾಜರ್ಮಾಡಿದವನೆ ಆಗಲಿ ಅಥವಾ ವಾಪಸುಪಡಿಯಲಿಕ್ಕೆ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರನೆ ಆಗಲಿ ಈ ನೋಟೀಸ್ ತಾರೀಖು ಲಾಗಾಯಿತು ಒಂದು ತಿಂಗಳವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸ್ ತೆಗದುಕ್ಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರು ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಶಪಡಿಸಲ್ಪಡುವದು.

ನಂಬರು.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಿಯಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
213 81—82	ಪೂರಿಗಾಲಿ ಕಸಬೇಲಿರುವ ವೆಂಕಟರಮಣಾಚಾರಿ ಮಗ ಶೀನಪ್ಪ, ಕ್ರಿಷ್ಣಪ್ಪಬ್ರಾಹ್ಮಣ	ಪೂರಿಗಾಲಿ ಹೋಬಳಿ ಪೈಕಿ ಮರಳಹಳ್ಳಿ ಗ್ರಾಮ ದಾಖಲೆ ಕೃಷ್ಣಯ್ಯಂಗಾರ್ ಹುಂಡೀಲಿರುವ ವೆಂಕಟನರಸಿಂಹ್ಮಾಚಾರ್ ಮಗ ಕೃಷ್ಣಾಚಾರಿ	20—1—82	20—1—82	(50) ರೂಪಾಯಿನ ಮನೆ ಆಧಾರಪತ್ರ.

ಅಬ್ದುಲಖಾದರ, ಕೆ. ಬಿ. ರಿಜಿಸ್ಟ್ರಾರ್.

ತಾರೀಖು 1ನೇ ಫಿಬ್ರವರೀ 1884.

ಇದರಿಂದ ತಿಳಿಸುವದೇನಂದರೆ, ಮೈಸೂರು ಜೈಲ್‍ನಲ್ಲಿ ಖೈದು ಮಾಡಲ್ಪಟ್ಟಿರುವ ಖೈದಿಗಳ ವುಪಯೋಗದ ಬಗ್ಯೆ ಸನ್ 1884ನೇ ಇಸವಿ ಏಪ್ರೈಲ್ ಗುರ್‍ರೇ ತಾರೀಖು ಮೊದಲು 1885ನೇ ಮಾರ್ಚೀ 31ನೇ ತಾರೀಖುವರಿಗೆ ಎರಡು ದಿನಗಳೂ ಸೇರಿ ಬೇಕಾದ ಆಹಾರ ವಗೈರೇ ದರೋಬಸ್ತು ಜಿನಸುಗಳನ್ನೂ ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಬರುವ ಬಂದು ಮಾಡಲ್ಪಟ್ಟ ದರಖಾಸ್ತುಗಳನ್ನು ಮೈಸೂರು ಜೈಲ್ ಸೂಪರಿಂಟೆಂಡೆಂಟರವರು, ಸನ್ 1884ನೇ ಇಸವಿ ಮಾರ್ಚೀ 15ನೇ ತಾರೀಖುವರಿಗೆ ತೆಗದುಕೊಳ್ಳುವರು.

2. ಸದರೀ ತಾರೀಖು ತರುವಾಯ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರದು.

3. "ಮೈಸೂರು ಜೈಲ್‍ಗಾಗಿ ಆಹಾರ ಪದಾರ್ಥಗಳ ಸರಬರಾಯಿ ಬಗ್ಯೆ ದರಖಾಸ್ತುಗಳು" ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

4. 500 ರೂಪಾಯಿಗಳು ನಗದಾಗಿ ಅಥವಾ ಕರ್ರೆನ್ಸೀ ನೋಟುಗಳ ಮೂಲಕ ಡಿಪಾಜಿಟ್‍ನಿಶೀ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಮೈಸೂರು ಜೈಲ್ ಆಫೀಸಿನಲ್ಲಿ, ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರ ರೂಬರೂ ಮೇಲ್ಕಂಡ ತಾರೀಖಿನೊಳಗೆ ಪ್ರಾತಃಕಾಲ 7 ಘಂಟೆಗೆ ಮೈಸೂರು ಜೈಲ್ ಸೂಪರಿಂಟೆಂಡೆಂಟರಿಂದ ಖುಲ್ಲಾ ಮಾಡಲ್ಪಡುವವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ, ಈ ಕೆಳಗೆ ನಮೂದಿಸುವ ತರಗತಿಯ ಪ್ರತಿ ಖೈದಿಗೂ ದಿನ ಒಂದಕ್ಕೆ ಆಗತಕ್ಕ ದರವು ನಮೂದಿಸಲ್ಪಡತಕ್ಕದ್ದು.

			ರೂ.	ಆ.	ಪೈ.
ನೇಟಿವ್ ಕೂಲಿಯವರಾದ ಗಂಡಸರು A ಕ್ಲಾಸ್	..	..			
ಡಿಟೋ ಡಿಟೋ B ,,	..	..			
ಡಿಟೋ ಡಿಟೋ C ,,	..	..			
ಡಿಟೋ ಕೂಲೀ ಮಾಫದ ಗಂಡಸರು, ಹೆಂಗಸರು, ಸಾದಾ ಖೈದಿನಲ್ಲಿ ಮತ್ತು ವಿಚಾರಣೆಯಲ್ಲಿ ಇರತಕ್ಕವರು D ಕ್ಲಾಸ್					
ಡಿಟೋ ಹುಡುಗರಾದ ಖೈದೀರು	..	..			
ಯೂರೋಪಿಯರ್ನಗಳು ವ ಈಸ್ಟ್ ಇಂಡಿಯರ್ನಗಳು	..	..			
ರಾಗಿ ಸಹಿತ ಆಸಪತ್ರೆ ಪಥ್ಯ ..	...	...			
ಅಕ್ಕಿ ಸಹಿತ ಡಿಟೋ ..	...	..			

7. ದರಖಾಸ್ತು ಮಾಡಲ್ಪಟ್ಟ ದರಗಳು ಆಹಾರ ಜಿನಸೀಗಳ ಸ್ಕೇಲ್ ಪಟ್ಟಿಯಲ್ಲಿ ನಮೂದಿರುವ ಪದಾರ್ಥಗಳು ಮಾತ್ರವಲ್ಲದೆ, ಸ್ಕೇಲ್ ಪಟ್ಟೀ ಪ್ರಕಾರ ಆಸಪತ್ರೆ ಪಥ್ಯಪದಾರ್ಥಗಳು, ಕಾಹಿಲೇ ಮನುಷ್ಯರಿಗೆ ವಿಶೇಷ ಪದಾರ್ಥಗಳು, ನಷ್ಟವಾಗತಕ್ಕ ಪದಾರ್ಥಗಳು, ದೀಪದ ಯಣ್ಣೆ, ಲಾಂದ್ರಗಳು, ಮತ್ತು ಅವುಗಳ ರಿಪೇರಿ ಮಾಡಿಸುವದು, ಅಡಿಗೆ ಮಾಡುವ ಬಗ್ಯೆ ತಾಂಬ್ರ ಮತ್ತು ಮಣ್ಣಿನ ಪಾತ್ರೆಗಳು, ಖೈದೀರು ವೂಟಾ ಮಾಡುವ ಹರಿವಾಣಗಳು, ಪಾಯಖಾನೆ ಮತ್ತು ಮಣಗಿದ ಮಣ್ಣಿನ ಬಗ್ಯೆ ಗೂಡೆಗಳು, ಜೈಲ್‍ನಲ್ಲಿರತಕ್ಕ ಖೈದೀರು ಸ್ನಾನ ಮಾಡಲಿಕ್ಕೆ ಶೀಗೇಕಾಯಿ, ತಮಾಂ ತಾಂಬ್ರ ಪಾತ್ರೆಗಳ ರಿಪೇರಿ ವ ಕಲಾಯಿ, ಪರಕೆಗಳು, ಕುಡಿಯುವ ಬಗ್ಯೆ ಮೊಗೆಗಳು, ಹೆಣ್ಣು ಖೈದೀರ ಮಕ್ಕಳಿಗೆ ಬೇಕಾದ ಹಾಲು, ರೊಟ್ಟಿ, ಸಕ್ಕರೆ ವಗೈರೇ ಪದಾರ್ಥಗಳು, ಹೊಗೆ ಹಾಕುವದಕ್ಕೆ ಗಂಧಕ, ಚವಳುಮಣ್ಣು, ಮತ್ತು ಖೈದಿಗಳಿಗೆ ಕ್ರಮವಾಗಿ ಸರಬರಾಯಿ ಮಾಡಲ್ಪಡುವ ಬಟ್ಟೆ ಸಿವಾಯಿ, ತಮಾಂ ಚಿಲ್ಲರೇ ಪದಾರ್ಥಗಳೂ ಸಹ ಅಡಗಿರತಕ್ಕದ್ದು.

8. ಸೂಪರಿಂಟೆಂಡೆಂಟರ ಯಾವವರು ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ, ಹೀಗೆ ತಿರಸ್ಕರಿಸಲಿಕ್ಕೆ ಯಾವ ನಿಮಿತ್ತವನ್ನೂ ಅವರು ತಿಳಿಸಬೇಕಾದ್ದಿಲ್ಲವು.

9. ಮುಂಜೂರಾದ ದರಖಾಸ್ತುದಾರನ, ಡಿಪಾಜಿಟ್ ಮೊಬಲಗು ನಿಲ್ಲಿಸಿಕೊಳ್ಳಲ್ಪಟ್ಟು, ಆತನು ಕಂಟ್ರಾಕ್ಟು ಮುಚ್ಚಲಿಕ್ಕೆ ಬರದು ಕೊಡಲಿಕ್ಕಾಗಲಿ, ನಗದಾದರೂ ಗವರ್ನಮೆಂಟ್ ಪತ್ರಗಳ ಮೂಲಕವಾದರೂ 500 ರೂಪಾಯಿಗಳ ಮೊಬಲಗಿಗೆ ಜಾಮೀನನ್ನು ತನ್ನ ದರಖಾಸ್ತು ಮಂಜೂರಾದ ಸಂಗತಿ ತನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು ಒಂದು ವಾರದ ವಳಗಾಗಿ ಕೊಡಲಿಕ್ಕೆ ತಪ್ಪಿದರೆ, ಸದರಿ ಡಿಪಾಜಿಟ್ ಸರಕಾರಕ್ಕೆ ಸೇರಿಸಿ ಕೊಳ್ಳಲ್ಪಡುವದು.

10. ಕಂಟ್ರಾಕ್ಟುದಾರನಿಗೆ ನಗದು ಅಡ್ವಾನ್ಸು ಯಾವದೂ ಕೊಡಲ್ಪಡಲಾರದು, ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳಿಗೆ ಪ್ರತಿ ತಿಂಗಳು 1ನೇ ತಾರೀಖಿಗೆ ತರುವಾಯ ಸಾಧ್ಯವಾದಷ್ಟು ತ್ವರೆಯಾಗಿ ಮೈಸೂರು ಜೈಲ್ ಸೂಪರಿಂಟೆಂಡೆಂಟರವರಿಂದ ಮೊಬಲಗು ಕೊಡಲ್ಪಡುವದು.

166

11. ಕಂಟ್ರಾಕ್ಟುದಾರನಿಗೆ ಒಂದು ಖೋಲಿಯು ಬಿಡಲ್ಪಟ್ಟು ಅದರಲ್ಲಿ ಆತನು ನಷ್ಟವಾಗದ ದರೋಬಸ್ತು ಪದಾರ್ಥಗಳನ್ನೂ, ಇಟ್ಟುಕೊಳ್ಳಬಹುದು. ಮಾಂಸ ವಗ್ಯೆರೇ ನಷ್ಟವಾಗುವ ಪದಾರ್ಥಗಳು ಪ್ರತಿ ದಿನ ಬೆಳಿಗ್ಯೆ $7\frac{1}{4}$ ಘಂಟೆಗೆ ಜ್ಯೆಲ್‌ನಲ್ಲಿ ಇರತಕ್ಕದ್ದು.

12. ಕಂಟ್ರಾಕ್ಟು ವಳ ಷಿಕ್ಮಿಗೆ ಕೊಡಲ್ಪಡಕೂಡದು.

13. ಕಂಟ್ರಾಕ್ಟಿನ ನಿಬಂಧನೆಗೆ ತಪ್ಪಿ ನಡೆಯುವ ಬಗ್ಯಾಗಲಿ, ಕಿರದು ತರದ ಯಾವ ಪದಾರ್ಥಗಳನ್ನು ಕೊಡುವ ಬಗ್ಯಾಗಲಿ ಮೈಸೂರು ಜ್ಯೆಲ್ ಸೂಪರ್ರಿಟೆಂಡೆಂಟರವರ ಯಖ್ತ್ಯಾರಿಯಿಂದ 50 ರೂಪಾಯಿಗೆ ಮೀರದ ಒಂದು ಜುರ್ಮಾನೆಯು ಹಾಕಲ್ಪಡುವದು, ಬಾರ್ ಬಾರ್ ಆ ಮೇರೆ ತಪ್ಪಿದರೆ ಕಂಟ್ರಾಕ್ಟು ರದ್ದು ಮಾಡಲ್ಪಟ್ಟು ಜಾಮೀನ್ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

14. ಕಂಟ್ರಾಕ್ಟು ತಪ್ಪಿ ನಡಿಯುವ ದರೋಬಸ್ತು ಸಂಗತಿಗಳೊಳಗೂ ಮೈಸೂರು ಜ್ಯೆಲ್ ಸೂಪರ್ರಿಟೆಂಟೆಂಟರವರ ನಿರ್ಣಯವೇ ಆಖೈರಾಗಿರತಕ್ಕದ್ದು.

ಕಂಟ್ರಾಕ್ಟುದಾರನು ಖೈದಿಗಳ ವುಪಯೋಗಾರ್ಥ ತರಕಾರಿಗಳನ್ನು ದರ ಪಾನಿಗೆ 4 ಕಾಸುಗಳ ಮೇರಿಗೆ ಖಾಯಂ ದರದ ಪ್ರಕಾರ ಜ್ಯೆಲ್ ತೋಟದಿಂದಲೇ ಕ್ರೊಳ್ಳುವದಕ್ಕೆ ಒದ್ಧನಾಗಿರತಕ್ಕದ್ದು.

15. ಆಹಾರ ದರದ ಪಟ್ಟಿಯನ್ನು ಇತರ ಹೆಚ್ಚಿಗೆ ತಪಶೀಲ್‌ಗಳನ್ನು ಸುದಾ ಸೂಪರ್ರಿಟೆಂಡೆಂಟರವರನ್ನ ಕೇಳಿ ತಿಳದುಕೊಳ್ಳಬಹುದು.

ಪಿ. ಹೆಚ್. ಪೆರ್ಸ್,
ಮೈಸೂರು ಜ್ಯೆಲ್ ಸೂಪರ್ರಿಟೆಂಡೆಂಟ್.

ಕಡೂರು ಡಿಸ್ಟ್ರಿಕ್ಟು ಸಬಾರ್ಡಿನೇಟ್ ಜಡ್ಜೀಯವರ ಕೋರ್ಟಿನಲ್ಲಿ.

1884ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 4.

ಮೃತಪಟ್ಟ ಬೇಲೂರ ತಾಲ್ಲೂಕು ನಡುವಾಲ ಫಿರಕಾ ಶನಿವಾರ ಸಂತೆ ಹೋಬಳಿ ಕಳಸೆರಿ ಗ್ರಾಮದ ಚನ್ನೇಗೌಡಯಾನೆ ಬಿಳೇಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ಚನ್ನಮ್ಮ ಹೆಗ್ಗಡತಿಯು, ಮೃತಪಟ್ಟ ಬಿಳೇಗವುಡನು ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಕಳಸೆರಿ ಚನ್ನಮ್ಮನು ಕಳಸೆರಿ ವಾಸಸ್ಥನಾಗಿ ಮೃತಪಟ್ಟ ಬಿಳೇಗವುಡನ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಚನ್ನಮ್ಮನ ಅರ್ಜೀಯನ್ನು 1884ನೇ ಇಸವೀ ಫಿಬ್ರವರೀ ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಿಳೇಗವುಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿಥೆ.

1884ನೇ ಇಸವಿ ಜನವರೀ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಥೆ

ಬಿ. ತಿರುಮಲಾಚಾರ್,
ಸಬ್ ಜಡ್ಜ.

ನಗರ ಡಿವೀಜನ್.

ನಗರ ಡಿವೀಜನ್ ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 11.

ಮೃತಪಟ್ಟ ತೀರ್ಥಹಳ್ಳಿ ಹಾಜಿ ಇಬ್ರಾಹಿಂಸೇಟಿನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಇಸ್ಮಾಯಿಲ್‌ಸೇಟ್, ಮೃತಪಟ್ಟ ಸದರೀ ಹಾಜಿ ಇಬ್ರಾಹಿಂಸೇಟಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗಾ ಸ್ಥಳದ ಇಸ್ಮಾಯಿಲ್‌ಸೇಟನು, ತೀರ್ಥಹಳ್ಳಿ ಮತ್ತು ಶಿವಮೊಗ್ಗಾ ವಾಸಸ್ಥರಾಗಿ ಮೃತಪಟ್ಟ ಹಾಜಿ ಇಬ್ರಾಹಿಂಸೇಟಿನ ಜಿಂದಗಿ ಬಗ್ಯಾಗಿ -

ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ಮಾಡುವಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಇಸಮಾಯಿಲ್‌ಸೇಟನ ಅರ್ಜೀಯನ್ನು 1884ನೇ ಇಸವಿ ಏಪ್ರೆಲ್ ತಿಂಗಳು ತಾರೀಖು 2ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹಾಜಿ ಇಬ್ರಾಹಿಂಸೇಟಿನ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಫೆಬ್ರವರೀ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟುಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟು ಜಡ್ಜ್.

ಸ್ನ 1883ನೇ ಇಸವಿ ಡಿಶಂಬರ್ ಮೊಹೇ ಬಾಬತು ಕಾಲಸ್ಥಿತೀ ರಿಪೋರ್ಟು.

ತುಮಕೂರು ಡಿಸ್ಟ್ರಿಕ್ಟು.

ಮಳೆ—ಪಾವಗಡ ವಿನಾ ತವಾಂ ತಾಲ್ಲೂಕುಗಳಲ್ಲಿಯೂ ಮಳೆ ಬಿದ್ದಿರುತ್ತೆ; ತಾಲ್ಲೂಕು ಹೆಡ್ ಕ್ವಾರ್ಟರ್‌ಗಳಲ್ಲಿ ಈ ಕೆಳಗೆ ಕಂಡ ಮೇರೆ ಮಳೆ ಪರಿಮಾಣವು ಅಳಿಯಲ್ಪಟ್ಟಿತು:—

ತಾಲ್ಲೂಕು.	ಇಂ.	ಸೆಂ.	ತಾಲ್ಲೂಕು.	ಇಂ.	ಸೆಂ.
ತುಮಕೂರು ..	0	72	ತಿಪಟೂರು ..	0	95
ಮದ್ದಗಿರಿ ..	2	10	ಪಾವಗಡ	0	0
ಚಿಕ್ಕನಾಯಕನಹಳ್ಳಿ ..	2	75	ಚಿತ್ರದುರ್ಗ ..	0	84
ಸೀರಾ ..	1	25	ಚಳ್ಳಕೆರೆ ..	0	15
ಗುಬ್ಬಿ ..	0	60	ಹೊಳಲ್ಕೆರೆ ..	1	20
			ಹಿರಿಯೂರು ..	1	30

ಹವಾ.—ಬೆಳಗಿನ ಹೊತ್ತು ಸಾಯಂಕಾಲದ ಹೊತ್ತು ಛಳಿಯಾಗಿತ್ತು.

ಫಸಲ್‌ಗಳು—ಭತ್ತ, ಜೋಳ, ಕಡಲೆ, ಗೋಧಿ, ಕೊತ್ತಂಬರಿ, ಮೆಂತ್ಯ, ಗನ್ನ, ಹುರಳಿ, ಹೊಗೆಸೊಪ್ಪು, ಈರುಳ್ಳಿ, ಬೆಳ್ಳುಳ್ಳಿ, ಮತ್ತು ಜೀರಿಗೆ, ಕೆಲವು ಭಾಗಾಗಳಲ್ಲಿ ಪೇರಾವಾದವು. ಅಡಿಕೆ, ತೆಂಗಿನಕಾಯಿ, ರಾಗಿ, ಭತ್ತ, ಮೆಣಸಿನಕಾಯಿ, ಹರಳು, ಕಡಲೆ, ಕೊರಲೆ, ನವಣೆ, ಸಾಮೆ, ಸಜ್ಜೆ, ಹೆಳ್ಳು, ಹುಚ್ಚೆಳ್ಳು, ಹೆಸರು, ಜೋಳ, ಹುರಳಿ, ಅಲಸಂದಿ, ಅವರೆ, ಮತ್ತು ತೊಗರಿ ಪ್ರಾಯಶಃ ಯಲ್ಲಾ ತಾಲ್ಲೂಕುಗಳಲ್ಲಿಯೂ ಕಟಾವಾದವು. ಸದರೀ ಮಾಹೇಯಲ್ಲಿ ಫಸಲ್‌ಗಳ ಸ್ಥಿತಿ ಚನ್ನಾಗಿತ್ತು.

ಜನಾರೋಗ್ಯ.—ತುಮಕೂರು, ಮದ್ದಗಿರಿ ಮತ್ತು ಸೀರಾ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಜ್ವರವು ವ್ಯಾಪಿಸಿತ್ತು. ಚಳ್ಳಕೆರೆ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಸಿಡುಬು ವ್ಯಾಪಿಸಿತ್ತು; ಇತರ ಸ್ಥಳಗಳಲ್ಲಿ ಆರೋಗ್ಯ ಚನ್ನಾಗಿತ್ತು. ಯೆಲ್ಲಾ ಕಾರಣಗಳಿಂದಲೂ ನವಂಬರ್ ಮಾಹೆಯಲ್ಲಿ 827 ಮಂದಿಯೂ, ಸ್ನ 1883ನೇ ಇಸವಿ ಅಕ್ಟೋಬರ್‌ನಲ್ಲಿ 713 ಮಂದಿಯೂ ಮೃತಪಟ್ಟರು.

ಜಾನವಾರ್.—ಕಾಲುಬಾಯಿ ಜ್ವರ, ಚಪ್ಪೆರೋಗ, ದೊಮ್ಮೆರೋಗ ಮತ್ತು ಬೊಬ್ಬೆ ರೋಗ ಕೆಲವು ಭಾಗಗಳಲ್ಲಿ ವ್ಯಾಪಿಸಿದೆ. ಜಾನವಾರಗಳಲ್ಲಿ ವುಂಟಾದ ಮರಣ ಸಂಖ್ಯೆಗಳು ಈ ಕೆಳಗೆ ಕಂಡ ಮೇರೆ ತೋರಿಸಿದೆ:—

ಹಸುಗಳು ..	145	ಕುದುರೆಗಳು ..	6
ಎತ್ತುಗಳು ..	163	ಕತ್ತೆಗಳು ..	10
ಎಮ್ಮೆಕೋಣಗಳು ..	164		
ಕುರೀ ಮತ್ತು ಮೇಕೆಗಳು ..	2,473	ಜುಮ್ಲಾ	2,961

ಜವಿರ್ಮಾನಗಳು.—1,344—14—0 ರೂಪಾಯಿಗಳ ಕಂದಾಯವುಳ್ಳ ಜವಿರ್ಮಾನಗಳು ಹೊಸದಾಗಿ ಸಾಗುವಳಿಗೆ ತೆಗದುಕೊಳ್ಳಲ್ಪಟ್ಟವು. ರಾಜೀನಾಮೆ ಯಾವದೂ ಇಲ್ಲವು.

168

ಧಾರಣೆವಾಸಿ.—ಮುಖ್ಯವಾದ ಅಹಾರ ಜಿನಸೀಗಳು ಇದರಡೀ ಕಂಡ ಧಾರಣೆ ಪ್ರಕಾರ ಮಾರಲ್ಪಟ್ಟವು:—

	ಶೇರು.	ಚಟಾಕು.		ಶೇರು.	ಚಟಾಕು.	
ಅಕ್ಕಿ, ಅವ್ವಲ್ ತರಹಾ	12	0	ಲಾಗಾಯತು	15	8	ವರಿಗೆ
ಡಿಟ್ಟೋ, ದುಯ್ಯಂ ತರಹಾ	14	0	„	17	0	„
ರಾಗಿ ..	40	0	„	60	0	„
ಅವರೆ ..	25	0	„	48	0	„
ಹುರಳಿ ..	38	0	„	48	0	„
ಗೋಧಿ, ಅವ್ವಲ್ ತರಹಾ	12	0	„	16	0	„
ಡಿಟೋ, ದುಯ್ಯಂ ತರಹಾ	11	0	„	22	0	„

ಮಹಮ್ಮದಲ್ಲಿ, ಕೆ. ಬಿ.,
ಅಫಿಷೀಯೇಟಿಂಗ ಡೆಪ್ಯುಟಿ ಕಮ್ಮಿಷನರ.

ಮೈಸೂರು ಗೆಜೆಟ್, ಚಂದಾ ದರ ವಗೈರೆ.

	ಚಂದಾ. ರೂ. ಆ.	ಟಪ್ಪಾಲ್ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲೀಷು ಮತ್ತು ಕನ್ನಡ ಸುಧಾ 12 ತಿಂಗಳಿಗೆ	7 0	3 8

ಛಷ್ ಮಾಹೆ ಯಾ ಕ್ವಾರಟರಿಗೆ ದಾಮಾಷಾಯಿ ಪ್ರಕಾರ ದರಗಳು.

ಶಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟೀಸುಗಳು;— ರೂ. ಆ.

ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ) .. 2 8

ಯರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ 1 4

ಸಿವಿಲ್ ಪ್ರೊಸಿಜ್ಯೂರ್ ಕ್ಹೋಡಿನ 347ನೇ ಸೆಕ್ಷನ್ ಅನುಸರಿಸಿ, ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆನೋಟೀಸ್‌ಗಳಿಗೆ:—

ಕಡೂರು ಡಿಸ್ಟ್ರಿಕ್ಟು.

ಮೊದಲನೇ ದಫಾ 5 0

ಯೆರಡನೇ ವ ಆ ತರುವಾಯ ಪ್ರತಿ ದಫಾಕ್ಕೆ 2 8

ಶಿವಿಲ್ ಪ್ರೊಸಿಜ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಡ್ಯುಪ್ಲಿಕೇಟ್ ಕಾಫೀಪಟ್ಟೀ ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫೀಸರಗಳು ಕೊಡುವ ನೋಟೀಸ್‌ಗಳಿಗೆ:—

ಮೊದಲನೇ ಸಲಕ್ಕೆ .. ಪುಟ1ಕ್ಕೆ .. 10 0

ಯೆರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ „ .. 5 0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್‌ಮಾಡಲ್ಪಡುತ್ತೆ;—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಙ್ತಿ1ಕ್ಕೆ .. 0 8

ಯೆರಡನೇ ದಫಾ ಡಿಟೋ ಡಿಟೋ .. 0 6

ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ 0 4

ಬಮೋಜಿಬ್ ಹುಕ್ಕುಂ,
ಹೆಚ್. ಹಡರ್ಸ,
ಮೈ. ಗೆ. ಕಂಪೈಲರ.

Mysore Government Press, Bangalore.—1884.

ಶ 3-5-84

169.

ಮೈಸೂರ ಗೆಜೆಟ್.

ನಂ. 9 ಸರ್ಕಾರದಿಂದ ಪ್ರಾಯಿಷ್ ಆದ್ದು. ಸನ್ 1884.

ಬೆಂಗಳೂರು, ಶನಿವಾರ, ಮಾರ್ಚಿ ತಾ॥ 1, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರಿಂಟೆಂಡೆಂಟರು, ಕಾಂಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮಿಲಿಟೇರಿ ಸಿಕ್ರಿಟೆರಿಯವರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೇ ಬಕಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗ್ಯೆರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲಾ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲಾ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 9ನೇ ಫಿಬ್ರುವರೀ 1884.

ನಂ. 317.—ಹಾಸನ ಸಬ್ ಡಿವಿಜನ್‌ಗೆ ಸೇರಿದ 4 ತಾಲ್ಲೂಕುಗಳು ದೇಖೀಲ್ ಕಡೂರು ಡಿಸ್ಟ್ರಿಕ್ಟಿನಲ್ಲಿ 1884ನೇ ಇಸವಿ 1ನೇ ಏಪ್ರಿಲ್ ಲಾಗಾಯತು 1887ನೇ ಇಸವಿ ಮಾರ್ಚಿ 31ನೇ ತಾರೀಖು ವರುವಿಗೆ ಆಗುವ 3 ಸಂವತ್ಸರಗಳ ಕಾಲ ಪರಿಯಂತ್ರ ಶೇಂದಿ ಬಿಕರೀ ಮಾಡುವ ವಟ್ಟು ಸ್ವಾತಂತ್ರ್ಯಯ ಯಾ ಇಜಾರೇಯು, ತಾಲ್ಲೂಕುವಾರಾಗಿಆಗಲಿ ಅನೇಕ ತಾಲ್ಲೂಕುಗಳ ಸೇರಿಕೆಯಾಗಿ ಯಾಗಲಿ ಇದರಮುಂದೆ ತಿಳಿಸಲ್ಪಟ್ಟ ಷರತ್‌ಗಳಿಗೆ ವಳಪಟ್ಟು, 1884ನೇ ಇಸವಿ ಮಾರ್ಚಿ 3ನೇ ಮುಕ್ಕಾಂ ಮಧ್ಯಾನ್ಹ 12 ಘಂಟೆಗೆ ಚಿಕ್ಕಮಗಳೂರು ಮೊಕ್ಕಾಂನಲ್ಲಿ ಕಡೂರು ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ಇಜಾರೆಯು ಮೇಲ್ಕಂಡ 3 ವರುಷಗಳ ಕಾಲದಲ್ಲಿ ಮಲ್‌ನಾಡು ತಾಲ್ಲೂಕುಗಳಲ್ಲಿ ಬಗನಿ ಶೇಂದಿಯನ್ನು ಪುರೋಖ್ತು ಮಾಡುವ ಸ್ವಾತಂತ್ರ್ಯವನ್ನು ಅಡಗಿಸಿಕೊಂಡಿರುವದಿಲ್ಲ; ಸದರೀ ಬಗನಿ ಶೇಂದಿ ಪುರೋಖ್ತು ಮಾಡುವ ಸ್ವಾತಂತ್ರ್ಯವು ಗ್ರಾಮವಾರ ಗಲಿ ಅನೇಕ ಗ್ರಾಮಗಳು ಸೇರಿಯಾಗಿ ಯೂಗಲಿ ಅಲಾಹಿದ ಇಜಾರೆಗೆ ಕೊಡಲ್ಪಡುವದು. ಕಡೂರು ಡಿಸ್ಟ್ರಿಕ್ಟಿಗೂ ಹಾಸನದ ಸಬ್ ಡಿವಿಜನ್ನಿಗೂ ಸುದಾ ದೀವಾನರವರ 1882ನೇ ಇಸವಿ 21ನೇ ನವಂಬರ್ 131ನೆ ನಂಬರ್, ಅದೇ ಇಸವಿ 25ನೇ ನವಂಬರ್ 138ನೇ ನಂಬರ್, ಅದೇ ಇಸವಿ ಡಿಶಂಬರ್ 7ನೇ ಮುಕ್ಕಾಂ 146ನೇ ನಂಬರ್, 1883ನೇ ಇಸವಿ 4ನೇ ಜನವರೀ ಮುಕ್ಕಾಂ 2–3ನೇ ನಂಬರ್, ಅದೇ ಇಸವಿ ನವಂಬರ್ 16ನೇ ಮುಕ್ಕಾಂ 274ನೇ ನಂಬರ್, ಮತ್ತು ಅದೇ ಇಸವಿ ಡಿಶಂಬರ್ 14ನೇ ಮುಕ್ಕಾಂ 288ನೇ ನಂಬರ್ ಈ ನಂಬರ್‌ಗಳ ಇಸ್ತಿಹಾರ್ ನಾಮೆಗಳಿಂದ ಪರಿಷ್ಕರಿಸಲ್ಪಟ್ಟ ಪ್ರಕಾರ ಇದರಡಿ ಕಂಡ ತಾಲ್ಲೂಕುಗಳು ಶೇರಿರುತ್ತವೆ.

1 ಚಿಕ್ಕಮಗಳೂರು 2 ಕಡೂರು 3 ಮೂಡಿಗೆರೆ	4 ತರೀಕೆರೆ 5 ಕೊಪ್ಪ, ಯಡೇಹಳ್ಳಿ ಡಿ॥ ಅಮಲ್ದಾರ ಚಾರ್ಜ್ ದೇಖೀಲ್	6 ಹಾಸನ 7 ಮಂಜಿರಾಬಾದ್ 8 ಬೇಲೂರು 9 ಅರಸೀಕೆರೆ	ಹಾಸನ ಡಿಸ್ಟ್ರಿಕ್ಟು

2. ಪ್ರತಿ ಸಂದರ್ಭದೊಳಗೂ ಇಜಾರೆಯು, ಸಾಲಿಯಾನಾ ಹುಟ್ಟುವಳಿ ಮೇಲೆ ಗೊತ್ತಾಗುವ ಸರಕಾರದ ಸವಾಲಿಗೆ ಮೇಲ್ಪಟ್ಟು ಬರತಕ್ಕ ಚಡ ದರಖಾಸ್ತುದಾರಗೆ ಹರಾಜು ಮೂಲಕ ದೀವಾನರವರ ಮಂಜೂರಾತಿಗೆ ವಳಪಟ್ಟು ವಿಕ್ರಯಿಸಲ್ಪಡುವದು, ಸದರೀ ಸಾಲಿಯಾನಾ ಹುಟ್ಟುವಳಿ ಸಂಗತಿ ಹರಾಜು ಕಾಲದಲ್ಲಿ ಫಾಯಿಷ್ ಮಾಡಲ್ಪಡುತ್ತೆ. ಚಡ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದೀವಾನರವರು ತಮ್ಮಲ್ಲಿ ವುಳಸಿಕೊಂಡಿರುತ್ತಾರೆ.

3. ದರಖಾಸ್ತು ಮಾಡತಕ್ಕವರು, ಖುದ್ದಾಗಿಯಾಗಲಿ ಕ್ರಮಪ್ರಕಾರ ಮೊಕರರ್ ಮಾಡಲ್ಪಟ್ಟ ಮುತಾಲೀಕರ ಮೂಲಕವಾಗಿಯಾಗಲಿ ಹಾಜರಾಗತಕ್ಕದ್ದು. ಸಾಲಿಯಾನಾ ಹುಟ್ಟುವಳಿ ಮೇಲೆ ಗೊತ್ತಾದ ಸರಕಾರದ ಸವಾಲಿನ ಮೊಬಗಿನ ಮೇಲೆ ಶೇಕಡಾ 5ರ ಪ್ರಕಾರ ಆಗುವ ಮೊಬಲಗು ಡಿಪಾಜಿಟ್ ಯಿಡಲ್ಪಡುವ ತನಕ ಯಾವ ಮನುಷ್ಯನೂ ದರಖಾಸ್ತು ಮಾಡತಕ್ಕದ್ದಲ್ಲ. ತಿರಸ್ಕರಿಸಲ್ಪಟ್ಟ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್ ಮೊಬಲಗು ಹರಾಜ್ ಆಖೈರ್ ಕಾಲದಲ್ಲಿ ಅವರಿಗೆ ವಾಪಸ್ ಪಾವತೀ ಮಾಡಲ್ಪಡುವದು.

4. ಯಾವ ಚಡದರಖಾಸ್ತುದಾರನ ದರಖಾಸ್ತು ದೀವಾನರವರ ಮಂಜೂರಾತಿ ಬಗ್ಯೆ ಚುನಾಯಿಸಿಕೊಳ್ಳಲ್ಪಡುತ್ತೊ ಅಂಥಾ ಚಡ ದರಖಾಸ್ತುದಾರನು ಮೊದಲೇ ಡಿಪಾಜಿಟ್ ಇಟ್ಟಿರುವ ಮೊಬಲಗು ದೇಖೀಲ್, ದರಖಾಸ್ತು ಮಾಡಲ್ಪಟ್ಟ ಸಾಲಿಯಾನಾ ಇಜಾರೆ ಮೊಬಲಗು ಪೈಕಿ ಹನ್ನೆರಡರಲ್ಲಿ ಒಂದುಭಾಗಕ್ಕೆ ಸಮನಾದ ಮೊಬಲಗನ್ನು ಕೂಡ್ಲೆ ಠೇವಣಿ ಇಡತಕ್ಕದ್ದು. ಆತನು ದೀವಾನರವರ ತೀರ್ಮಾನ ತಿಳಸಲ್ಪಟ್ಟ ತರುವಾಯ ಎಂಟು ದಿನಗಳೊಳಗಾಗಿ ಪೂರ್ವ ಡಿಪಾಜಿಟ್ ಇಟ್ಟಿರುವ ಮೊಬಲಗುಗಳು ದೇಖೀಲ್, ದರಖಾಸ್ತು ಮಾಡಲ್ಪಟ್ಟ ಸಾಲಿಯಾನಾ ಇಜಾರೇ ಮೊಬಲಗು ಪೈಕೀ ಹಾಗಪಾಲಿಗೆ ಸಮನವಾಗಿರುವ ಒಂದು ಮೊಬಲಗನ್ನು ಇಜಾರೇ ಷರತ್ತುಗಳಂತೆ ಕ್ರಮಪ್ರಕಾರ ನಡದುಕೊಳ್ಳುವ ಬಗ್ಯೆ ಜಾಮಿನಿ ತರೀಕ್ ನಗದಾಗಿಯಾಗಲಿ ಕ್ರಮಪ್ರಕಾರ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ, ಡೆಪ್ಯುಟಿ ಕಮ್ಮಿಷ್ನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಅಥವಾ ದರಖಾಸ್ತುದಾರನು ಮೇಲೆ ಹೇಳಿದ ಜಾಮಿನಿ ಪೈಕೀ ಅರ್ಧಭಾಗವನ್ನ ನಗದಾಗಿಯಾಗಲಿ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ ಹಾಜರ್ಮಾಡಿ ಬಾಕಿ ಅರ್ಧವನ್ನ ಸದರೀ ಮೊಬಲಗ್ಯೆಯರಡರಷ್ಟು ಕ್ರಯಬಾಳುವ ಮತ್ತು ಯಾವ ಬಾಧ್ಯತೆ ವ ದೇಣೆಗಳು ಇಲ್ಲದ ಸ್ಥಾವರ ಸ್ವತ್ತಿನ ಮೂಲಕವಾಗಿಯಾಗಲಿ ಹಾಜರ್ಮಾಡತಕ್ಕದ್ದು. ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತಗಳಿಗೆ ಬದ್ಧನಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾಕಾಗದದ ಮೇಲೆ, ಒಂದು ಕರಾರ ಬರದುಕೊಡತಕ್ಕದ್ದು.

5. ಆತನು ಕರಾರಿಗೆ ರುಜುಮಾಡುವದಕ್ಕಾಗಲಿ, ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲಿ ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವವೇ ಇಡಲ್ಪಟ್ಟ ಡಿಪಾಜಿಟಗಳು, ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು, ಇಜಾರೆಯು ಪುನಹ ಹರಾಜು ಮಾಡಲ್ಪಡುವದು ಯಾ ಅನ್ಯಥಾ ವಿಲಾಮಾಡಲ್ಪಡುವದು. ಹಾಗೆ ಪುನಹಾ ಹರಾಜು ಮಾಡುವದರಿಂದ ಯಾ ವಿಲಾಮಾಡುವದರಿಂದ ವುಂಟಾಗುವ ನಷ್ಟಕ್ಕೆ ಅವನನ್ನು ಗುರಿಮಾಡಿ, ಜಮಿನು ಕಂದಾಯದ ಬಾಕೀ ವಸೂಲಿ ಬಗ್ಯೆ ಜಾರಿಯಿರುವ ರೂಲ್ಸ್ ಅನುಸರಿಸಿ ಜಫ್ತಿ ಹರಾಜಿನಿಂದ ವಸೂಲ್ಮಾಡಲ್ಪಡುವದು.

ಷರತ್ತುಗಳು.

1. ಸಾಲೀಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಒಂದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್ ಸೆಸ್ ದೇಖೀಲ್ ಅಂತಾ ಇಜಾರೇ ಮೊಬಲಗು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದಕ್ಕೆ ಮುಂದಾಗಿಯಾಗಲಿ, ಡಿಸ್ಟ್ರಿಕ್ಟು ಖಜಾನೆಯಲ್ಲಿ ಮಹಾಹೇಯಾನಾ ಸಮನಾದ ಕಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು. ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕಿಗಳಿಗೂ, ಸೇಕಡಾ ಸಾಲೀಯಾನಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕೊಡತಕ್ಕದ್ದು. ಅಂತಾ ಬಾಕೀ ಮೊಬಲಗಗಳು ಪಾವತಿಯಾಗತಕ್ಕ ತಿಂಗಳು ಕಳೆದ ಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜಮೀನ್ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಇರುವ ರೂಲ್ಸ್‌ನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೇದಾತನ ಸ್ವತ್ತು ಜಫ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು. ಮತ್ತು ಇಜಾರೇ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನೀ ಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಖೀಲ್ ತಮಾಂ ಬಾಕಿಗಳನ್ನೂ, ಹಾಗೆ ಇಜಾರೇ ಪುನಹ ಹರಾಜ್ ಹಾಕುವದರಿಂದಾಗಲಿ, ವಿಲಾ ಮಾಡುವದರಿಂದಾಗಲಿ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ, ಜಾಮಿನಿ ಮೊಬಲಗ್ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಫ್ತೀ

ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದೀವಾನರವರ ಮಂಜೂರಾತೀನಿಶೀ ಡೆಪ್ಯುಟಿ ಕಮ್ಮಿಷನರವರಿಗೆ ಯಿಖ್ತ್ಯಾರಿಯಿರತಕ್ಕದ್ದು.

2. ಚಿಲ್ಲರೇ ಫುರೋಖ್ತುದಾರ್ರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸ್‌ಗಳು ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂಠೋಕ್ತವಾದ ಮಂಜೂರಾತಿ ಇಲ್ಲದೆ, ಇಜಾರೇದಾರನು ಹಾಲೀ ಶೇಂದೀ ಫುರೋಖ್ತು ಬಗ್ಯೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖೆಯ ವಿಷಯದಲ್ಲಾಗಲಿ, ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬ್‌ಗಳ ಮೇಲೆ ಯಾವ ಅಂಗಡಿಗಳನ್ನಾದರೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷ್ನರು ಅರ್ಹರಾಗಿರುತ್ತಾರೆ.

3. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ ಧಾನ್ಯವನ್ನಾಗಲಿ, ಸರುಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗೆದುಕೊಳ್ಳಕೂಡದು.

4. ಇಜಾರೇದಾರನು, ದೀವಾನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೋಲ್ಸಿಗಾಗಲಿ, ಬದ್ಧನಾಗಿ ನಡದುಕೊಳ್ಳತಕ್ಕದ್ದು.

5. ಪೂರ್ವವೇ ನಿರ್ನಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರೀಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗೈರೇಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರ ಹಕುದಾರೀಗಳಲ್ಲಿ, ಗುತ್ತಿಗೇದಾರನು ಎಷ್ಟುಮಟ್ಟಿಗೂ ಪ್ರವೇಶಿಸಕೂಡದು. ಅಂತಾ ಹಕ್ಕುಗಳ ವಿಷಯದಲ್ಲಿ ಉಂಟಾಗುವ ತಕರಾರ್‌ಗಳನ್ನು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರು ಫೈಸಲ್ ಮಾಡತಕ್ಕದ್ದು. ಅಂಥಾ ಫೈಸಲಿಗೆ ಗುತ್ತಿಗೇದಾರನು ಬದ್ಧನಾಗಿರತಕ್ಕದ್ದು. ಪರಂತು, ಸದರೀ ಫೈಸಲ್ ಅಪ್ಪೀಲಿನಲ್ಲಿ ದೀವಾನರವರಿಂದ ಕಾಯಂ ಮಾಡಲ್ಪಡಲಿಕ್ಕಾಗಲಿ ಅನ್ಯಥಾ ಆಗಲಿ ಗುರಿಯಾಗತಕ್ಕದ್ದು.

6. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಶೇಂದಿ ಅಂಗಡಿಗಳ್ಯಾವವೂ ತೆಗಿಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡೆಪ್ಯುಟಿ ಕಮ್ಮಿಷನರಿಂದ ವಿಶೇಷ ಸಂಧರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

7. ಯೂರೋಪಿಯನ್ ಸೋಲ್ಜರುಗಳ ವಂದು ರಿಜಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯಃ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದಿ ಫುರೋಖ್ತು ಬಗ್ಯೆ ಯಿರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು, ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟುಮಾಡಲ್ಪಟ್ಟಿತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು, ಅಂಥಾ ಫೌಜಿನವರು ತಮ್ಮ ಕಡೇ ಆಬ್ಕಾರೀ ಕಂಟ್ರಾಕ್ಟರನ್ನ ಯಿಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿರತಕ್ಕದ್ದು.

8. ಇಜಾರೇದಾರನು ಡಿಸ್ಟ್ರಿಕ್ಟಿನ ಮತ್ತು ಸಬ್ ಡಿವೀಜನ್ನಿನ ಸರಕಾರದ ಬಂಜರ್ ಜಮೀನಿನಲ್ಲಿ ಇರುವ ಈಚಲು ಮರಗಳನ್ನು, ಇಜಾರೆಗಳ ಸ್ಥಳ ಸರಹದ್ದಿನೊಳಗೆ ಫುರೋಖ್ತು ಬಗ್ಯಾಗಲಿ ಬೆಲ್ಲ ತಯಾರ್ ಮಾಡುವ ಬಗ್ಯಾಗಲಿ ಶೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿಕೊಳ್ಳಬಹುದು, ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಮುಂದೆ ಅನುಭವಿಸಲ್ಪಡತಕ್ಕ ಜಮೀನುಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕಿರುವದಿಲ್ಲ, ಮತ್ತು ಗವರ್ನಮೆಂಟಿನವರು ಯಾವಾಗಲಾದರೂ, ಇತರ ಕೆಲಸಗಳಿಗೋಸ್ಕರವಾಗಲಿ ಇತರ ಡಿಸ್ಟ್ರಿಕ್ಟುಗಳಿಗೆ ಶೇಂದೀ ವದಗಿಸುವದಕ್ಕೋಸ್ಕರವಾಗಲಿ, ಉಳಿಸಿಕ್ಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ, ಈಡು ಕೇಳುವದಕ್ಕೆ ಹಕಿರುವದಿಲ್ಲ, ಡೆಪ್ಯುಟಿ ಕಮ್ಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ, ಷರತ್‌ಗಳಪ್ರಕಾರವೂ ಮಾತ್ರವೇ ಬೆಲ್ಲ ತಯಾರ್ಮಾಡಲ್ಪಡತಕ್ಕದ್ದು.

9. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಶೇಂದಿ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟ್‌ಗಳ ವಿಷಯದಲ್ಲಾಗಲಿ, ಗವರ್ನಮೆಂಟಿನವರು ಮಾಡತಕ್ಕ ಯಾವ ಯೇರ್ಪಾಡುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ಸೋಡೀಗೆ ಬಾಧ್ಯತೆವುಳ್ಳವನಾಗಿರುವದಿಲ್ಲ. ಡಿಸ್ಟ್ರಿಕ್ಟು ಪೈಕೀ ಯಾವ ಭಾಗದಲ್ಲಾಗಲಿ ಅಥವಾ ಸಬ್‌ಡಿವೀಜನ್ನಿನ ಯಾವ ಭಾಗದಲ್ಲಾಗಲಿ ಸರ್ಕಾರೀ ಕಾರಣಗಳ ಮೇಲೆ ಇಜಾರೆಯನ್ನು ಮೌಕೂಫ್‌ಮಾಡಿ ಆ ಬಗ್ಯೆ ನ್ಯಾಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದೀವಾನರವರು ತಮ್ಮಲ್ಲಿಯೇ ವುಳಿಸಿಕೊಂಡಿರುತ್ತಾರೆ.

10. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯೂರೇಜಿಯನ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದ ಮೇಲಿರುವಲ್ಲಿ ಒಬ್ಬ ಸಿಪಾಯಿಗಾಗಲಿ, ಪೋಲೀಸಿನವರಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರಖಿಲಾಫಾಗಲಿ ನಡೆದಲ್ಲಿ ಅದರಿಂದ ಗುತ್ತಿಗೇದಾರ ಯಾ ಪುರೋಖ್ತುದಾರ, ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ, ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಪುರೋಖ್ತುದಾರನ ಲೈಸೆನ್ಸು ರದ್ದಾಗಲಿಕ್ಕೆ ಗುರಿಯಾಗುತ್ತೆ.

11. ಗುತ್ತಿಗೇದಾರನು ತನ್ನ ನೌಕರರು ಯಾ ಮುತಾಲೀಕರು ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಒಂದು ಗಜದ ಯತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಯಾವೇ ಈಚಲು ಮರಗಳಿಂದ ಶೇಂದೀ ಇಳಿಸದೇಯೂ, ಮತ್ತು ಶೇಂದಿ ಇಳಿಸುವ ದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ; ವುಪಯೋಗಿಸದೆಯೂ, ಇರುವ ಬಗ್ಗೆ ಜವಾಬ್‌ದಾರನಾಗಿರತಕ್ಕದ್ದು. ಈ ನಿಬಂಧನೆಗಳಿಗೆ ಯೇನಾದರೂ ಬರಖಿಲಾಫ್ ನಡದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ 100 ರೂಪಾಯಿಗಳ ಜುರ್ಮಾನೆಗೂ ಗುತ್ತಿಗೇದಾರ ಗುರಿಯಾಗತಕ್ಕದ್ದು.

12. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ ಮಾರಲ್ಪಡತಕ್ಕದ್ದು.

ಶೇರು ಒಂದಕ್ಕೆ ಕ್ರಯ.

	ಜಾಸ್ತಿ.			ಕಮ್ಮಿ.		
	ರೂ.	ಆ.	ಪೈ.	ರೂ.	ಆ.	ಪೈ.
ತಾಲ್ಲೂಕು ಕಸಬೆಗಳಲ್ಲಿ	0	1	4	0	0	6
ಗಾವ್‌ಗಾನೆಗಳಲ್ಲಿ	0	1	0	0	0	6

6. ಶೇಂದಿ ರವಾನೆಬಗ್ಗೆ ಉಪಯೋಗಿಸಲ್ಪಡುವ ಭಂಡಿಗಳು, ಅವುಗಳಿಗಾಗಿ ವಿಧಿಸಲ್ಪಟ್ಟ ಮೊಹತರ್ಫಾ ಭಂಡೀ ಕಂದಾಯದ ವಸೂಲಿಯಿಂದ ವಿನಾಯಿಸಲ್ಪಟ್ಟಿರುವದಿಲ್ಲಾ.

7. ಹಿಂದಿನ ಹುಟ್ಟುವಳಿಯನ್ನೂ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಗಳನ್ನೂ, ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

ತಾ|| 9ನೇ ಫಿಬ್ರವರಿ 1884.

ನಂ. 318.—ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಮೂರು ವರುಷಗಳ ಕಾಲ ಅಂದರೆ, ಸನ್ 1884ನೇ ಏಪ್ರೇಲ್ 1ನೇ ಮರ್ಸ್ಕಂ ಲಾಗಾಯತ್ 1887ನೇ ಮಾರ್ಚಿ 31ರ ಮಿನಹು ಶೇಂದೀ ಇಜಾರೇಯಾಗಲಿ, ಶೇಂದೀ ಪುರೋಖ್ತು ಮಾಡುವ ಸ್ವತಂತ್ರವಾದ ಬಾಧ್ಯತೆಯಾಗಲಿ, ಶಿವಮೊಗ್ಗಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರಿಂದ ಅವರ ಆಫೀಸ್‌ನಲ್ಲಿ, ಸನ್ 1884ನೇ ಮಾರ್ಚಿ 7ನೇ ಮರ್ಸ್ಕಂ ಮಧ್ಯಾಹ್ನ 12 ಘಂಟೆಗೆ ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತ್‌ಗಳಿಗೆ ಒಳಪಟ್ಟು, ತಾಲ್ಲೂಕುವಾರಾಗಿಯಾಗಲಿ, ತಾಲ್ಲೂಕುಗಳ ಸಮುದಾಯ ಪ್ರಕಾರವಾಗಲಿ, ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು; ಮಲ್‌ನಾಡ್ ತಾಲ್ಲೂಕುಗಳಲ್ಲಿ ಬಗನಿ ಶೇಂದಿಯನ್ನು ಪುರೋಖ್ತು ಮಾಡುವ ಹಕ್ಕುದಾರಿಯು ಗ್ರಾಮವಾರಾಗಿಯಾಗಲಿ ಯಾ ಗ್ರಾಮಗಳ ಸಮುದಾಯ ಪ್ರಕಾರವಾಗಲಿ ಅಲಾಹಿದಾ ಇಜಾರೆಗೆ ಕೊಡಲ್ಪಡುವದರಿಂದ, ಮೇಲ್ಕಂಡ ಇಜಾರೆಯು, ಸದರೀ ಮೂರು ವರ್ಷಗಳ ಕಾಲದಲ್ಲಿ ಸದರೀ ಬಗನಿ ಶೇಂದಿಯನ್ನು ಪುರೋಖ್ತು ಮಾಡುವ ಸ್ವಾತಂತ್ರವನ್ನು ಅಡಗಿಸಿ ಕೊಂಡಿರುವದಿಲ್ಲಾ. ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ, ದೀವಾನರವರ 1882ನೇ ಇಸವಿ ನವಂಬರ್ 13ನೇ ಮರ್ಸ್ಕಂ 129ನೇ ನಂಬರು, 1882ನೇ ಇಸವಿ ನವಂಬರ್ 21ನೇ ಮರ್ಸ್ಕಂ 130—131ನೇ ನಂಬರು, ಅದೇ ಇಸವಿ ಡಿಶಂಬರ್ 7ನೇ ಮರ್ಸ್ಕಂ 146ನೇ ನಂಬರು, ಈ ಇಸ್ತಿಹಾರ್‌ನಾಮೆಗಳಿಂದ ಪರಿಷ್ಕರಿಸಲ್ಪಟ್ಟ ಪ್ರಕಾರಾ ಇದರಡೀ ಕಂಡ ತಾಲ್ಲೂಕುಗಳು ಸೇರಿ ಇರುತ್ತವೆ.

1. ಶಿವಮೊಗ್ಗಾ, ಕುಂಸಿ ಡೆಪ್ಯುಟಿ ಅಮಲ್‌ದಾರ್ರ ಚಾರ್ಜ್ ದೇಖೀಲ್.
2. ತೀರ್ಥಹಳ್ಳಿ.
3. ಚನ್ನಗಿರಿ.
4. ಸಾಗರ.
5. ನಗರ.
6. ಸೊರಬ.
7. ಹೊನ್ನಾಳಿ.
8. ಶಿಕಾರಿಪುರ.
9. ದಾವಣಗೆರೆ.

2. ಪ್ರತಿ ಸಂದರ್ಭದೊಳಗೂ ಇಜಾರೆಯು, ಸಾಲಿಯಾನಾ ಹುಟ್ಟುವಳಿ ಮೇಲೆ ಗೊತ್ತಾಗುವ ಸರ್ಕಾರದ ಸವಾಲಿಗೆ ಮೇಲ್ಪಟ್ಟು ಖರತಕ್ಕ ಚಡದರಖಾಸ್ತುದಾರನಿಗೆ ಹರಾಜು ಮೂಲಕ ದೀವಾನರವರ ಮಂಜೂರಾತಿಗೆ ಒಳಪಟ್ಟು ವಿಕ್ರಯಿಸಲ್ಪಡುವದು; ಸದರೀ ಸಾಲೀಯಾನಾ ಹುಟ್ಟುವಳಿ ಸಂಗತಿ ಹರಾಜು ಕಾಲದಲ್ಲಿ ಫಾಯಿಷ್ ಮಾಡಲ್ಪಡುತ್ತೆ; ಚಡದರಖಾಸ್ತನ್ನಾಗಲಿ, ಯಾವ ದರಖಾಸ್ತನ್ನಾಗಲಿ ಯಾವಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದೀವಾನರವರು ತಮ್ಮಲ್ಲಿಯೇ ವುಳಿಸಿಕೊಳ್ಳುತ್ತಾರೆ.

3. ದರಖಾಸ್ತು ಮಾಡತಕ್ಕವರು, ಖುದ್ದಾಗಿಯಾಗಲಿ ಕ್ರಮಪ್ರಕಾರ ಮೊಕರರ್ ಮಾಡಲ್ಪಟ್ಟ ಮುತಾಲೀಕರ ಮೂಲಕವಾಗಿಯಾಗಲಿ ಹಾಜರಾಗತಕ್ಕದ್ದು; ಸಾಲಿಯಾನಾ ಹುಟ್ಟುವಳಿಮೇಲೆ ಗೊತ್ತಾದ ಸರ್ಕಾರ್ ಸವಾಲಿನ ಮೊಬಲಗಿನಮೇಲೆ ಸೇಕಡ 5ರ ಪ್ರಕಾರ ಆಗುವ ಮೊಬಲಗು ಡಿಪಾಜಿಟ್ ಯಿಡಲ್ಪಡುವತನಕ ಯಾವ ಮನುಷ್ಯನೂ ದರಖಾಸ್ತು ಮಾಡತಕ್ಕದ್ದಲ್ಲ; ತಿರಸ್ಕರಿಸಲ್ಪಟ್ಟ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್ ಮೊಬಲಗು ಹರಾಜು ಆಖೈರ್ ಕಾಲದಲ್ಲಿ ಅವರಿಗೆ ವಾಪಸು ಪಾವತಿ ಮಾಡಲ್ಪಡುವದು.

4. ಯಾವ ಚಡದರಖಾಸ್ತುದಾರನ ದರಖಾಸ್ತು ದೀವಾನರವರ ಮಂಜೂರಾತಿಬಗ್ಗೆ ಚುನಾಯಿಸಿಕೊಳ್ಳಲ್ಪಡುತ್ತೋ ಅಂಥಾ ಚಡದರಖಾಸ್ತುದಾರನು ಮೊದಲೇ ಡಿಪಾಜಿಟ್ ಯಿಟ್ಟಿರುವ ಮೊಬಲಗ್ ದೇಖೀಲ್, ದರಖಾಸ್ತು ಮಾಡಲ್ಪಟ್ಟ ಸಾಲಿಯಾನಾ ಇಜಾರೆ ಮೊಬಲಗ್ ಪೈಕಿ ಹನ್ನೆರಡರಲ್ಲಿ ವಂದು ಭಾಗಕ್ಕೆ ಸಮನಾದ ಮೊಬಲಗನ್ನು ಕೂಡ್ಲೆ ಠೇವಣಿ ಯಿಡತಕ್ಕದ್ದು. ದೀವಾನರವರ ತಿರ್ಮಾನ ತಿಳಿಸಲ್ಪಟ್ಟ ತರುವಾಯ 8 ದಿವಸಗಳೊಳಗಾಗಿ, ಪೂರ್ವ ಡಿಪಾಜಿಟ್ ಯಿಟ್ಟಿರುವ ಮೊಬಲಗುಗಳ ದೇಖೀಲ್ ದರಖಾಸ್ತು ಮಾಡಲ್ಪಟ್ಟ ಸಾಲಿಯಾನಾ ಇಜಾರೆ ಮೊಬಲಗು ಪೈಕಿ ಹಾಗಪಾಲಿಗೆ ಸಮನಾಗಿರುವ ಒಂದು ಮೊಬಲಗನ್ನು ಇಜಾರೆ ಷರತ್ತುಗಳಂತೆ ಕ್ರಮಪ್ರಕಾರ ನಡದುಕೊಳ್ಳುವ ಬಗ್ಗೆ ಜಾಮೀನಿ ತರೀಕ ನಗದಾಗಿಯಾಗಲೀ ಕ್ರಮಪ್ರಕಾರ ಇಂಡಾರ್ಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ ಡಿಪ್ಯುಟಿ ಕಮಿಷನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಅಥವಾ ದರಖಾಸ್ತುದಾರನು ಮೇಲೆ ಹೇಳಿದ ಜಾಮೀನಿ ಪೈಕಿ ಅರ್ಧಭಾಗವನ್ನ ನಗದಾಗಿಯಾಗಲಿ, ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲೀ ಹಾಜರ್ಮಾಡಿ ಬಾಕೀ ಅರ್ಧವನ್ನ ಸದರೀ ಮೊಬಲಗ್ಗೆ ಎರಡರಷ್ಟು ಕ್ರಯಬಾಳುವ ಮತ್ತು ಯಾವ ಬಾಧ್ಯತೆ ದೇಣೆಗಳೂ ಇಲ್ಲದ ಸ್ಥಾವರ ಸ್ವತ್ತಿನ ಮೂಲಕವಾಗಿ ಯಾಗಲೀ ಹಾಜರ್ಮಾಡತಕ್ಕದ್ದು; ಮತ್ತು ಇದರಲ್ಲಿ ಮುಂದೇ ವಿಧಿಸಲ್ಪಟ್ಟ ಷರತ್ತುಗಳಿಗೆ ಬದ್ಧನಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾಕಾಗದದ ಮೇಲೆ ಒಂದು ಕರಾರು ಬರೆದು ಕೊಡತಕ್ಕದ್ದು.

5. ಆತನು ಕರಾರಿಗೆ ರುಜು ಮಾಡುವದಕ್ಕಾಗಲೀ ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲೀ ತಪ್ಪಿದರೆ ಯಾ ನಿರಾಕರಿಸಿದರೆ ಪೂರ್ವವೇ ಇಡಲ್ಪಟ್ಟ ಡಿಪಾಜಿಟ್‌ಗಳು ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು ಇಜಾರೆಯು ಪುನಹಾ ಹರಾಜು ಮಾಡಲ್ಪಡುವದು ಯಾ ಅನ್ಯಥಾ ವಿಲಾಮಾಡಲ್ಪಡುವದು. ಹಾಗೆ ಪುನಹಾ ಹರಾಜು ಮಾಡುವದರಿಂದ ಯಾ ವಿಲಾಮಾಡುವದರಿಂದ ಉಂಟಾಗುವ ನಷ್ಟಕ್ಕೆ ಇಜಾರೇದಾರನನ್ನು ಗುರಿಮಾಡಿ, ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಗೆ ಜಾರಿ ಇರುವ ರೂಲ್‌ಸ್ ಅನುಸರಿಸಿ ಇಜಾರೇದಾರನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡಲ್ಪಡುವದು.

ಷರತ್ತುಗಳು.

1. ಸಾಲೀಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಒಂದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್ ಸೆಸ್ ದೇಖೀಲ್ ಅಂತಾ ಇಜಾರೇ ಮೊಬಲಗನ್ನು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದಕ್ಕೆ ಮುಂದಾಗಿಯಾಗಲೀ ಡಿಸ್ಟ್ರಿಕ್ಟು ಖಜಾನೆಯಲ್ಲಿ ಮಾಹೇಯಾನಾ ಸಮನಾದ ಖಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು. ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕಿಗಳಿಗೂ, ಸೇಕಡಾ ಸಾಲೀಯಾನಾ 6 ರ ಪ್ರಕಾರ ಬಡ್ಡೀ ಕೊಡತಕ್ಕದ್ದು; ಅಂತಾ ಬಾಕೀ ಮೊಬಲಗಗಳು ಪಾವತೀ ಯಾಗತಕ್ಕ ತಿಂಗಳು ಕಳೆದಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜಮೀನ್ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಯಿರುವ ರೂಲ್ಸ್‌ನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೆದಾರನ ಸ್ವತ್ತು ಜಫ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು. ಮತ್ತು ಇಜಾರೇ ರದ್ದಾಗಿರುತ್ತೆಂದು ತಿಳಿಸುವದಕ್ಕೂ ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನೀಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಖೀಲ್ ತಮಾಂ ಬಾಕಿಗಳನ್ನೂ, ಹಾಗೆ ಇಜಾರೇ ಪುನಃ ಹರಾಜ್ ಹಾಕುವದರಿಂದಾಗಲಿ, ವಿಲಾ ಮಾಡುವದರಿಂದಾಗಲಿ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ, ಜಾಮೀನೀ ಮೊಬಲಗ್ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಗೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದೀವಾನರವರ ಮಂಜೂರಾತೀನಿಸೀ ಡೆಪ್ಯುಟಿ ಕಮ್ಮಿಷನರವರಿಗೆ ಯಿಖ್ತ್ಯಾರೀ ಇರತಕ್ಕದ್ದು.

2. ಚಿಲ್ಲರೇ ಫುರೋಖ್ತುದಾರ್ರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್‌ಸ್‌ಗಳು, ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂಠೋಕ್ತವಾದ ಮಂಜೂರಾತಿ ಇಲ್ಲದೆ, ಇಜಾರೇದಾರನು ಹಾಲೀ ಶೇಂದೀ ಫುರೋಖ್ತು ಬಗ್ಗೆ ಇಡಲ್ಪಟ್ಟಿರುವ

ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖೆಯ ವಿಷಯದಲ್ಲಾಗಲಿ ಯಾವ ಬದಲಾವಣೆಯನ್ನೂ ಮಾಡ ಕೂಡದು. ಸರಕಾರದ ಅವಶ್ಯಕತೆಯ ಸಬಬ್‌ಗಳ ಮೇಲೆ ಯಾವ ಅಂಗಡಿಗಳನ್ನಾದರೂ ತೆಗದು ಹಾಕುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷ್ನರು ಅರ್ಹರಾಗಿರುತ್ತಾರೆ.

3. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ, ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

4. ಇಜಾರೇದಾರನು, ದೀವಾನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಬದ್ಧನಾಗಿ ನಡದುಕೊಳ್ಳತಕ್ಕದು.

5. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರೀಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗ್ಯೆರೆಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರ ಹಕ್ಕುದಾರೀಗಳಲ್ಲಿ, ಗುತ್ತಿಗೇದಾರನು ಎಷ್ಟುಮಟ್ಟಿಗೂ ಪ್ರವೇಶಿಸಕೂಡದು. ಅಂತಾ ಹಕ್ಕುಗಳ ವಿಷಯದಲ್ಲಿ ಉಂಟಾಗುವ ತಕರಾರ್‌ಗಳನ್ನು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರು ಫೈಸಲ್ ಮಾಡತಕ್ಕದ್ದು. ಅಂತಾ ಫೈಸಲಿಗೆ ಗುತ್ತಿಗೇದಾರನು ಬದ್ಧನಾಗಿರತಕ್ಕದ್ದು, ಪರಂತು, ಸದರೀ ಫೈಸಲ್ ಅಪ್ಪೀಲ್‌ನಲ್ಲಿ ದೀವಾನರವರಿಂದ ಕಾಯಂಮಾಡಲ್ಪಡಲಿಕ್ಕಾಗಲಿ ಅನ್ಯಥಾ ಆಗಲಿ ಗುರಿಯಾಗತಕ್ಕದ್ದು.

6. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಶೇಂದಿ ಅಂಗಡಿಗಳ್ಯಾವವೂ ತೆಗೆಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡೆಪ್ಯುಟಿ ಕಮ್ಮಿಷನರಿಂದ ವಿಶೇಷ ಸಂದರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

7. ಯೂರೋಪಿಯನ್ ಸೋಲ್ಜರುಗಳ ವಂದು ರಿಜಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯಃ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದಿ ಫುರೋಖ್ತು ಬಗ್ಯೆ ಯಿರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು, ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟು ಮಾಡಲ್ಪಟ್ಟಿತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು, ಅಂಥಾ ಫೌಜಿನವರು ತಮ್ಮ ಕಡೇ ಅಬ್ಕಾರೀ ಕಂಟ್ರಾಕ್ಟರನ್ನ ಇಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿ ಯಿರತಕ್ಕದ್ದು.

8. ಇಜಾರೇದಾರನು ಡಿಸ್ಟ್ರಿಕ್ಟಿನ ಸರಕಾರದ ಬಂಜರ್ ಜಮೀನ್‌ಗಳಲ್ಲಿ ಇರುವ ಈಚಲು ಮರಗಳನ್ನು, ಇಜಾರೇಗಳ ಸ್ಥಳ ಸರಹದ್ದಿನೊಳಗೆ ಫುರೋಖ್ತು ಬಗ್ಯಾಗಲಿ ಬೆಲ್ಲ ತಯಾರ್ ಮಾಡುವ ಬಗ್ಯಾಗಲಿ ಶೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿಕೊಳ್ಳಬಹುದು, ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಐಯಿಂದಾ ಅನುಭವಿಸಲ್ಪಡತಕ್ಕ ಜಮೀನ್‌ಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕಿರುವದಿಲ್ಲ, ಮತ್ತು ಗವರ್ನಮೆಂಟಿನವರು ಯಾವಾಗಲಾದರೂ ಇತರ ಕೆಲಸಗಳಿಗೋಸ್ಕರವಾಗಲಿ, ಇತರ ಡಿಸ್ಟ್ರಿಕ್ಟುಗಳಿಗೆ ಶೇಂದೀ ವದಗಿಸುವದಕ್ಕೋಸ್ಕರವಾಗಲಿ, ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ. ಡೆಪ್ಯುಟಿ ಕಮ್ಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ, ವ ಷರತ್ತುಗಳ ಪ್ರಕಾರವೂ ಮಾತ್ರವೇ ಬೆಲ್ಲ ತಯಾರ್ಮಾಡಲ್ಪಡತಕ್ಕದ್ದು.

9. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಶೇಂದೀ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟ್‌ಗಳ ವಿಷಯದಲ್ಲಾಗಲಿ, ಗವರ್ನಮೆಂಟಿನವರು ಮಾಡತಕ್ಕ ಯಾವ ಏರ್ಪಾಡುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ಸೋಡೀಗೆ ಬಾಧ್ಯತೆವುಳ್ಳವನಾಗಿರುವದಿಲ್ಲ. ಡಿಸ್ಟ್ರಿಕ್ಟು ಪೈಕೀ ಯಾವ ಭಾಗದಲ್ಲಾಗಲಿ, ಸರ್ಕಾರೀ ಕಾರಣಗಳಮೇಲೆ ಇಜಾರೇಯನ್ನು ಮವುಕೂಫ್ ಮಾಡಿ ಆ ಬಗ್ಯೆ ನ್ಯಾಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದೀವಾನರವರು, ತಮ್ಮಲ್ಲಿಯೇ ಉಳಿಸಿಕ್ಕೊಂಡಿರುತ್ತಾರೆ.

10. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯೂರೇಜಿಯನ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದಮೇಲಿರುವಲ್ಲಿ ಒಬ್ಬ ಶಿಪಾಯಿಗಾಗಲಿ, ಪೋಲೀಸಿನವರಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಖಿಲಾಫಾಗಲಿ ನಡದಲ್ಲಿ ಅದರಿಂದ ಗುತ್ತಿಗೇದಾರ

ಯೂ ಪುರೋಖ್ತುದಾರ, ಪ್ರತ್ಯೇಕವಾಗಿ ಯೂ ಸಮಷ್ಟಿಯೂಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯು ನಡೆಯುವ ಪ್ರತಿ ತಪ್ಪಿತಕ್ಕೂ, ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಪುರೋಖ್ತುದಾರನ ಲೈಸೆನ್ಸು ರದ್ದಾಗಲಿಕ್ಕೂ, ಗುರಿಯಾಗುತ್ತೆ.

11. ಗುತ್ತಿಗೇದಾರನು, ತನ್ನ ನೌಕರರು ಯೂ ಮುತಾಲೀಕರು, ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಒಂದು ಗಜದ ಎತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಯಳೇ ಈಚಲು ಮರಗಳಿಂದ ಶೇಂದೀ ಇಳಿಸದೇಯೂ, ಮತ್ತು ಶೇಂದಿ ಇಳಿಸುವ ದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ಉಪಯೋಗಿಸದೆಯೂ, ಇರುವ ಬಗ್ಯೆ ಜವಾಬ್‌ದಾರನಾಗಿರತಕ್ಕದ್ದು. ಈ ನಿಬಂಧನೆಗಳಿಗೆ ಏನಾದರೂ ಬರಕಿಲಾಫ್ ನಡದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, 100 ರೂಪಾಯಿಗಳ ಜುರ್ಮಾನೆಗೂ ಗುತ್ತಿಗೇದಾರನು ಗುರಿಯಾಗತಕ್ಕದ್ದು.

12. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ ಮಾರಲ್ಪಡತಕ್ಕದ್ದು.

	ಜಾಸ್ತಿ.	ಕಮ್ಮಿ.
	ಶೇರು ಒಂದಕ್ಕೆ ಕ್ರಯ.	
	ರೂ. ಆ. ಪೈ.	ರೂ. ಆ. ಪೈ.
ಶಿವಮೊಗ್ಗಾ ಷಹರು	0—1—6	0—1—0
ಚನ್ನಗಿರಿ ಹೊನ್ನಾಳಿ ತಾಲ್ಲೂಕುಗಳಲ್ಲಿ	0—1—0	0—0—6
ಡಿಸ್ಟ್ರಿಕ್ಟಿನ ಇತರ ಎಲ್ಲಾ ಸ್ಥಳಗಳಲ್ಲಿ	0—1—6	0—0—6

6. ಶೇಂದಿ ರವಾನೇಬಗ್ಯೆ ಉಪಯೋಗಿಸಲ್ಪಡುವ ಭಂಡಿಗಳು, ನಿರ್ಣಯಿಸಲ್ಪಟ್ಟ ಮೊಹತರ್ಫಾ ಭಂಡಿ ಕಂದಾಯದ ವಸೂಲಿಯಿಂದ ವಿನಾಯಿಸಲ್ಪಟ್ಟಿರುವದಿಲ್ಲಾ.

7. ಹಿಂದಿನ ಹುಟ್ಟುವಳಿಯನ್ನೂ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಯನ್ನೂ, ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳದುಕೊಳ್ಳಬಹುದು.

ತಾರೀಖು 15ನೇ ಫೆಬ್ರುವರೀ 1884.

ನಂ. 320.—ಹೊಳೇನರಸೀಪುರ ತಾಲ್ಲೂಕಿಗೆ ವರ್ಗಾಯಿಸಲ್ಪಟ್ಟ ಇದರಡಿ ಕಂಡ ಲೇಟ್ ಅರಕಲಗೂಡು ತಾಲ್ಲೂಕಿನ ಯರಡು ಗ್ರಾಮಗಳು ಅವುಗಳ ಸಮೀಪದಲ್ಲಿನ ಅಸಲೀ ಗ್ರಾಮಗಳಿಗೆ ಶೇರಿಸಲ್ಪಟ್ಟಿರುತ್ತೆ:—

ಮಾಗಣಿ ಹೆಸರು.	ನಂಬರು.	ಅಸಲೀ ಗ್ರಾಮದ ಹೆಸರು.	ನಂಬರು.	ಮೂರನೇ ಕಲಂನಲ್ಲಿ ಕಂಡ ಗ್ರಾಮಗಳಲ್ಲಿ ಶೇರಿಸಬೇಕಾದ ಗ್ರಾಮಗಳ ಹೆಸರು.	[illegible]	ಷರಾ
1	2	3	4	5	6	
ಅರಕಲಗೂಡು	1	ನೆಯಗಿರಿ	1	ಬಯಚನಹಳ್ಳಿ	160	
ನಿಲವಾಗಲು	2	ಅಕ್ಕಲವಾಡ	1	ಧರ್ಮಪುರ	30	

ತಾರೀಖು 18ನೇ ಫೆಬ್ರುವರೀ 1884.

ನಂ. 322.—ತಿಪಟೂರು ಅಮಲ್‌ದಾರ್ ವೇಲಾಯುಧಂ ಪಿಳ್ಳೆಯವರಿಗೆ, ಸನ್ 1884ನೇ ಫೆಬ್ರುವರೀ 4ನೇ ಮೊದಲ್ಗೊಂಡು ಲಗಾಯತು ಮೂರು ತಿಂಗಳ ಕಾಹಿಲೆ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 22ನೇ ಫೆಬ್ರುವರೀ 1884.

ನಂ. 323.—ಕಡೂರು ಡಿಸ್ಟ್ರಿಕ್ಟು ಯೆಡೇಹಳ್ಳಿ ಡೆಪ್ಯುಟಿ ಅಮಲ್ದಾರ್ ಮಹಮ್ಮದಲ್ಲೀಖಾನರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಗಾಯತು ಯೆರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಕಚ್ಚೇರಿ ಹೆಡ್ ಅಕೌಂಟೆಂಟ್ ವೆಂಕಟವರದಯ್ಯಂಗಾರ್ರಿಗೆ, ಮಹಮ್ಮದಲ್ಲೀಖಾನರ ಗೈರ್ ಹಾಜರೀಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವತನಕ, ಯೆಡೇಹಳ್ಳಿ ಡೆಪ್ಯುಟಿ ಅಮಲ್ದಾರ್ ಮತ್ತು 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್.

ನಂ. 324.—ಸನ್ 1877ನೇ ಇಸವಿಯ IIIನೇ ರಿಜಿಸ್ಟ್ರೇಷನ್ ಆಕ್ಟಿನ 6ನೇ ಸೆಕ್ಷನ್ ಅನುಸರಿಸಿ, ಮೈಸೂರು ಅ॥ ಕಮ್ಮಿಷನರ ಕೋರ್ಟು ಶಿರಸ್ತೇದಾರ್ ತಿರುಮಲಾಚಾರ್ಯರು, ಮತ್ತೊಂದು ಹುಕ್ಕುಂ ಕೊಡುವ ತನಕ, ಬೇರೆ ಕೆಲಸಕ್ಕೆ ಮೊಕರರ್ ಮಾಡಲ್ಪಟ್ಟ ರಂಗರಾಯರಿಗೆ ಬದಲಾಗಿ, ಮೈಸೂರು ತಾಲ್ಲೂಕು ಸ್ಪೆಷಲ್ ಸಬ್ ರಿಜಿಸ್ಟ್ರಾರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್.

ನಂ. 325.—ಮಂಡ್ಯ ತಾಲ್ಲೂಕು ಅಮಲ್ದಾರ್ ಮಹಾಬಲ್ರಾಯರು, ಮೈಸೂರು ಡಿಸ್ಟ್ರಿಕ್ಟು ಚಾಮರಾಜನಗರ ತಾಲ್ಲೂಕಿನ ಹಂಗಾಮೀ ಚಾರ್ಜನ್ನು ವಹಿಸುವಂತೆ ನೇಮಿಸಲ್ಪಟ್ಟಿರುತ್ತಾರೆ.

ನಂ. 326.—ತುರುವೇಕೆರೆ ಡೆ॥ ಅಮಲ್ದಾರ್ ಮೀರ್‌ನಿಜಾಮುದ್ದೀನ್ ಅಲ್ಲೀಖಾನರು, ರಜಾದ ಮೇಲಿರುವ ಅಮಲ್ದಾರ್ ವೇಲಾಯುಧಂ ಪಿಳ್ಳೆಯವರ ಗೈರ್ ಹಾಜರೀಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ತನಕ ತುಮಕೂರು ಡಿಸ್ಟ್ರಿಕ್ಟು ತಿಪಟೂರು ತಾಲ್ಲೂಕಿನ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್.

ಗುಬ್ಬಿ ಪೊಲೀಸ್ ಇನ್ಸ್‌ಪೆಕ್ಟರ್ ನಾಗೇಶ್ವರಯ್ಯನವರು, ಮೀರ್ ನಿಜಾಮುದ್ದೀನ್ ಅಲ್ಲೀಖಾನರ ಗೈರ್ ಹಾಜರೀಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ತನಕ, ತುರುವೇಕೆರೆ ಡೆ॥ ಅಮಲ್ದಾರ್ ಮತ್ತು 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್.

ತಾರೀಖು 21ನೇ ಮಾರ್ಚಿ 1883.

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಗೆ ಹಿಂದಿನ ದಿನ ಸೆಕ್ರೇಟೇರಿಯವರಿಗೆ ತಮ್ಮ ಕಾರ್ಡುಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

"ಬಮೋಜೀಬ್ ಹುಕ್ಕುಂ"

ಆರ್. ವಿಜಯೀಂದ್ರರಾವ್,

ಸೆಕ್ರೇಟೇರಿ.

ತಾರೀಖು 22ನೇ ಮಾರ್ಚಿ 1883.

ನಂ. 85.—ದೀವಾನರವರು ತಮ್ಮ ವಾಸಸ್ಥಾನದಲ್ಲಿ ಪ್ರತಿ ಬುಧವಾರ ಮಧ್ಯಾನ್ಹ 12 ಘಂಟೆಯಲ್ಲೂ, ಗುರುವಾರಗಳಲ್ಲಿ ಬೆಳಿಗ್ಗೆ 8 ಘಂಟೆಯಲ್ಲೂ, ತಮ್ಮ ಭೇಟೀ ತೆಗೆದುಕೊಳ್ಳಲಪೇಕ್ಷಿಸತಕ್ಕವರಿಗೆ ಭೇಟೀ ಕೊಡುವರು. ಅವರು ತಮ್ಮ ಕಾರ್ಡು ಚೀಟಿಗಳನ್ನು ದೀವಾನರವರ ಪ್ರೈವೇಟ್ ಸೆಕ್ರೇಟೇರಿಯವರಿಗೆ ಹಿಂದಿನ ದಿನದಲ್ಲಿ ಕಳುಹಿಸತಕ್ಕದ್ದು.

"ಬಮೋಜೀಬ್ ಹುಕ್ಕುಂ,"

ಸಿ. ರಾಘವಾಚಾರ್ಲು,

ಪ್ರೈವೇಟ್ ಸೆಕ್ರೇಟೇರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಮಾರ್ಚಿ ತಾ॥ 1, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೧ನೇ ಭಾಗ.

ಇಂಡ್ಯಾಗವರ್ನ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರುವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫೈನಾನ್ಷಿಯಲ್ ಇಲಾಖಾ.

1882ನೇ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನ್‌ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್‌ಟ್ರೋಲರ್.

ಬೆಂಗಳೂರು ತಾಲ್ಲೂಕು ಕಚ್ಚೇರಿಯಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಯಲಹಂಕದ ಕಸಬೆಯಲ್ಲಿರುವ ಹಳೇ ತಾಲ್ಲೂಕು ಕಚ್ಚೇರಿಯನ್ನು ಹರಾಜು ಮಾಡಬಹುದೆಂದು ದೀವಾನ್ ಸಾಹೆಬರವರ ಸಾಂಗರ್ಷ ಪ್ರೊಸೀಡಿಂಗ್ಸ್ ಅನುಸರಿಸಿ ಡಿಸ್ಟ್ರಿಕ್ಟ್ ಹುಜೂರಿಂದ ಮಾಹೇ ಗುಜಸ್ತಾ 21ನೇ ಮುಕ್ಕಾಂ 932ನೇ ನಂಬರ್ ಹುಕ್ಕುಂ ಸಾದರಾಗಿರುವ ಪ್ರಕಾರ ಹರಾಜು ಆಗತಕ್ಕ ಕಚ್ಚೇರಿ ನಿವೇಶನದ ಚಕ್ಕಬಂದಿ ತಪಸೀಲ್.

1 ಪೂರ್ವಕ್ಕೆ ಮುನಿಶೆಟ್ಟಿ ಹರಾಜಿನಲ್ಲಿ ಪಡದ ಖಾಲೀ ಜಮೀನುಮತ್ತು ಸರಕಾರದ ಖಾಲೀ ಜಮೀನು ಸಹಾ. 1 ಉತ್ತರಕ್ಕೆ ಹೊನ್ನಪ್ಪನ ಮನೆ.

1 ಪಶ್ಚಿಮಕ್ಕೆ ಕೋಟೇ ವಳಕ್ಕೆ ಹೋಗುವದಾರಿ, 1 ದಕ್ಷಿಣಕ್ಕೆ ಕೋಟೇವಳಕ್ಕೆ ಹೋಗುವ ದಾರಿ.

ಈ ಚತುರ್ಮಧ್ಯೆ ಇರುವ ಕಟ್ಟಿದ ಕಟ್ಟಡ ಅಂಕಣ 6 ಮಧ್ಯೆ ತೊಟ್ಟಿ ಖಾಲೀ ಜಮೀನು ಅಂಕಣ 2 ಸಹ ಹಾಲತೀ ಇಸವೀ ಏಪ್ರೆಲ್ 7ನೇ ತಾರೀಖು ಸೋಮವಾರ ಹಗಲು 12 ಘಂಟೆ ಲಾಗಾಯತು 4 ಘಂಟೆ ವರಿವಿಗೂ ಸದರೀ ಕಟ್ಟಡದ ಬಳಿ ತಾಲ್ಲೂಕು ಆಫೀಸ ರವರಿಂದ ಹರಾಜು ಹಾಕಲ್ಪಡುತ್ತೆ. ಯಿಷ್ಟವುಳ್ಳ ಜನಗಳು ಸದರೀ ಟೈಮಿಗೆ ಸರಿಯಾಗಿ ಕಟ್ಟಡದ ಬಳಿ ಹಾಜರ್ ಯಿದ್ದು ಧಾರಾಳವಾಗಿ ಚಡ ಸವಾಲ್ ಮಾಡಬಹುದು. ಹರಾಜ್ ಖೈದಾದ ನಂತರ ಮಾಡತಕ್ಕ ಸವಾಲ್‌ಗಳು ಅಂಗೀಕರಿಸುವದಿಲ್ಲ. ಹರಾಜಿನಲ್ಲಿ ಆಖೈರ್ ಸವಾಲ್ ನಿಂತ ದರಖಾಸ್ತುದಾರನು 4ರಲ್ಲಿ ವೊಂದು ಹಿಸ್ಸೆ ಮೊಬಲಗು ತಕ್ಷಣ ಹಾಜರ್ ಮಾಡಿ ರಶೀತಿ ಪಡೆಯಬೇಕು. ಬಾಕೀ ಮೂರು ಹಿಸ್ಸೇ ಮೊಬಲಗಿಗೆ ಖಾತರ ಜಾಮೀನು ಕೊಡಬೇಕು. ಈ ಹರಾಜು ಮಂಜೂರಿಯು ಡೆಪ್ಯುಟಿ ಕಮ್ಮಿಷನ್ನರ್ ಸಾಹೇಬರವರು, ವ ದೀವಾನ್ ಸಾಹೆಬ ರವರ ಮಂಜೂರಿಗೆ ವಳಪಟ್ಟದ್ದಾಗಿದೆ. ಮಂಜೂರಿ ಹುಕ್ಕುಂ ಬಂದು ಬಾಕೀ ಮೊಬಲಗಿಗೆ ತಗಾದೆ ಮಾಡಿದ ವೊಡನೆಯೇ ಪೂರಾ ಮೊಬಲಗು ದರಖಾಸ್ತುದಾರನಾಗಲಿ ಜಾಮೀನ್ದಾರನಾಗಲಿ ಕೊಟ್ಟು ರಶೀದಿ ಪಡಿಯಬೇಕು. ಹಾಗೆ ಮೊಬಲಗು ಕೊಡದೆ ಯಿದ್ದರೆ ದುಸರಾ ಹರಾಜು ಆಗುವದರಲ್ಲಿ ಕಮ್ಮಿ ಬೀಳತಕ್ಕ ಮೊಬಲಗು ಅವ್ವಲ್ ದರಖಾಸ್ತುದಾರನು ಜಾಮೀನುದಾರನು ಸಹ ತೆರಬೇಕಾಗಿರುತ್ತೆ. ಈ ಮೊಬಲಗು ಇವರ ಚರ ಯಾ ಸ್ಥಿರಸ್ವತ್ತುಗಳ ಮೇಲೆ ವಿಲೇ ಮಾಡಲ್ಪಡುತ್ತೆ. ಶಿವಾಯಿ ಡಿಪಾಜಿಟ್ ಯಿಟ್ಟು ಯಿರುವ ಹಣವು ಸರಕಾರಕ್ಕೆ ದಂಡವಾಗಿ ಸೇರಿಸಿಕ್ಕೊಳ್ಳಲಾಧೀತು.

ತಾರೀಖು 16ನೇ ಮಾಹೇ ಫಿಬ್ರುವರೀ ಸನ್ 1884.

ಡಿ. ಶಾಮರಾವ್,
ಅಮಲ್ದಾರ್.

ತುಮಕೂರು ಡಿಸ್ಟ್ರಿಕ್ಟು.

ತುಮಕೂರು ಡಿಸ್ಟ್ರಿಕ್ಟು ಸಬಾರ್ಡಿನೇಟ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಶಿರಾ ತಾಲ್ಲೂಕು ಲಕ್ಕನಹಳ್ಳಿಲಿರುವ ಗುಜ್ಜಾರಪ್ಪನ ಮಗ ಕರೀತಿಮ್ಮನ ವಿಷಯದಲ್ಲಿ—

1884ನೇ ಇಸವಿ ದಿವಾಳಿ ಕೇಸ್ ನಂಬರ್ 2.

ಹುಕ್ಕುಂ.

ಮೇಲ್ಕಂಡ ಕರೀತಿಮ್ಮನು ನಿರ್ಬಂಧದಿಂದ ಖುಲಾಸೆ ಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ರೂಬರೂ ಅರ್ಜೀದಾರನಾದ ಕರೀತಿಮ್ಮನ ಪರವಾಗಿ ಅವನನ್ನು ಮತ್ತು ಸದರೀಯವನ ಲೇಣೇದಾರರ್‍ರಾದ ಸೋಮಲಿಂಗಣ 1, ಸಿದ್ದೇಗೌಡ 1 ಇವರ ತರಫ ಹಾಜರಾದ ಸಿದ್ದೇಗೌಡರಿಗೂ ದರ್ಯಾಫ್ತಿ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತಿ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರೆಂದರೆ—ಶಿರಾ ತಾಲ್ಲೂಕು ಪಟ್ಟನಾಯಕನಹಳ್ಳಿಲಿರುವ ಗಿರಿಯಣ್ಣನ ಮಗ ಸೋಮಲಿಂಗಣ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಕರಿತಿಮ್ಮನು ಹೊಂದುವದಕ್ಕೆ ಹಕ್ಕುದಾರ ನಾಗುವದರ ಮೂಲಕ ದಿವಾಳೀ ಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬುದಾರಿಯಿಂದ ಸಹ ಅವನ್ನ ನಿಖಾಲಸ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸಾಲದ ಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿತಿಳಿಯ ಬಂದ ಅವರಗಳ ವಾಸಸ್ಥಳ.	ಮೊಬಲಗು.	ಬಾಕಿಯಾಗಿ ಹೋದ ತಾರೀಖು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರು ಇದ್ದರೆ.	ಷರಾ.
1	ಶಿರಾ ತಾಲ್ಲೂಕು ಪಟ್ಟನಾಯಕನಹಳ್ಳಿಲಿರುವ ಸೋಮಲಿಂಗಣ್ಣ	144–8–0	16ನೇ ನವಂಬರ 1883.	ಮದ್ದಗಿರಿ ಮುನ್ಸಿಫ್ ಕೋರ್ಟು 1880ನೇ ಇಸವಿ 190ನೇ ನಂಬರ್ ಡಿಕರಿ.	
2	ಶಿರಾ ತಾಲ್ಲೂಕು ಹುಲಿಕುಂಟೇಲಿರುವ ಶಿದ್ದೇಗೌಡ	10–0–0	ಡಿಟ್ಟೋ	ಸಾಲ ತಕ್ಕೊಂಡ ಬಗ್ಗೆ.	

1884ನೇ ಇಸವಿ ಫಿಬ್ರುವರೀ 13ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತ ಖತ್‌ನಿಸಿ ಕೊಡಲ್ಪಟ್ಟಿತು.

ಸಿ. ಕೈನ್ಸ್,

ಸಬ್ ಜಡ್ಜ.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 53.

ಮೃತಪಟ್ಟ ಸೋಮೇಶ್ವರಗಿರಿಗೋಸಾಯಿ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಹರಿಗಿರಿಗೋಸಾಯಿ, ಮೃತಪಟ್ಟ ಸದರೀ ಸೋಮೇಶ್ವರಗಿರಿಗೊಸಾಯಿಗೆ ಅಣ್ಣ, ದರ್ಯಾವುಗಿರಿಗೋಸಾಯಿಗೆ ಶಿಷ್ಯ ಆಗಬೇಕೆಂಬ ಹಕ್ಕುದಾರಿಮೇಲೆ ಮೈಸೂರು ಮಂಡಿಮೊಹಲಾಸ್ಥಳದ ಹರಿಗಿರಿಗೋಸಾಯಿ ಸದರೀ ವಾಸಸ್ಥರಾಗಿ ಮೃತಪಟ್ಟ ಸೋಮೇಶ್ವರಗಿರಿಗೋಸಾಯಿ ಜಿಂದಗಿ ಬಗ್ಗಾಗಿ ಬರತಕ್ಕ 500 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹರಿಗಿರಿಗೋಸಾಯಿ ಅರ್ಜಿಯನ್ನು 1884ನೇ ಇಸವೀ ಮಾರ್ಚಿ ತಿಂಗಳು ತಾರೀಖು 26ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೋಮೇಶ್ವರಗಿರಿಗೋಸಾಯಿ ಆಸ್ತಿಗೆ ಹಕ್ಕುದಾರರಾದ ವಿಸಿಷ್ಠರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಫಿಬ್ರುವರೀ ತಿಂಗಳು 7ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮದಸ್ತಖತ್ತೊಡನೆ ಕೊಡೋಣಾಗಿಧೆ.

1884ನೇ ಇಸವಿ ಅರ್ಜೀ ನಂಬರ್ 59.

ಮೃತಪಟ್ಟ ಶಿದ್ದಲಿಂಗೇಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರಳಾದ ನಂಜಮ್ಮ, ಮೃತಪಟ್ಟ ಸದರೀ ಶಿದ್ದಲಿಂಗೇಗೌಡನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಹೆಗ್ಗಡದೇವನಕೋಟೆ ತಾಲ್ಲೂಕು ಗಿಣಹಳ್ಳಿ ಸ್ಥಳದ ಸದರೀ ನಂಜಮ್ಮನು ಸದರೀ ವಾಸಸ್ಥನಾಗಿ ಮೃತಪಟ್ಟ ಶಿದ್ದಲಿಂಗೇಗೌಡನ ಜಿಂದಗೀ ಬಗ್ಗಾಗಿ ಬರತಕ್ಕ 200 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ನಂಜಮ್ಮನ ಅರ್ಜಿಯನ್ನು 1884ನೇ ಇಸವಿ ಮಾರ್ಚಿ ತಿಂಗಳು ತಾರೀಖು 26ಲ್ಲು ಮೈಸೂರು

ಮೊಕ್ಕಾಮಿನಲ್ಲಿ ಕೇಳಿ ಸರಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿದ್ದಲಿಂಗೇಗೌಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಯಿರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಫಿಬ್ರುವರೀ ತಿಂಗಳು ತಾರೀಖು 11ರಲ್ಲು ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೂಡನೆ ಕೊಡೋಣಾಗಿಧೆ.

1884ನೇ ಇಸವಿ ಅರ್ಜೀ ನಂಬರ್ 60.

ಮೃತಪಟ್ಟ ಭೂಪಂಣನ ಆಸ್ತಿವಿಷಯದಲ್ಲಿ—

ಅರ್ಜೀದಾರ ಗಿರಿಯಂಣ, ಮೃತಪಟ್ಟ ಸದರೀ ಭೂಪಂಣನಿಗೆ ಅಂಣ ಆಗಬೇಕೆಂಬ ಹಕ್ಕುದಾರೀ ಮೇಲೆ ಶ್ರೀರಂಗಪಟ್ಣ ತಾಲ್ಲೂಕು ಗಂಜಾಂ ಸ್ಥಳದ ಸದರೀ ಗಿರಿಯಂಣನು, ಸದರೀ ವಾಸಸ್ಥನಾಗಿ ಮೃತಪಟ್ಟ ಭೂಪಂಣನ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಗಿರಿಯಂಣನ ಅರ್ಜೀಯನ್ನು 1884ನೇ ಇಸವಿ ಮಾರ್ಚಿ ತಿಂಗಳು ತಾರೀಖು 26ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಭೂಪಂಣನ ಆಸ್ತೀಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ್ 70.

ಮೃತಪಟ್ಟ ಕಾಶಯ್ಯ ವುರಫ್ ಅಚ್ಚಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ನಾರಣಪ್ಪ, ಮೃತಪಟ್ಟ ಸದರೀ ಕಾಶಯ್ಯ ವುರಫ್ ಅಚ್ಚಯ್ಯನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಹುಣಸೂರು ತಾಲ್ಲೂಕು ಬಿಳಿಕುಂದದ ಹೋಬಳಿ ಹರವೆಗ್ರಾಮದಲ್ಲಿರುವ ಸದರೀ ನಾರಣಪ್ಪನು, ಡಿಟೋ ವಾಸಸ್ಥರಾಗಿ ಮೃತಪಟ್ಟ ಕಾಶಯ್ಯ ವುರಫ್ ಅಚ್ಚಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ನಾರಣಪ್ಪನ ಅರ್ಜೀಯನ್ನು 1884ನೇ ಇಸವಿ ಮಾರ್ಚಿ ತಿಂಗಳು ತಾರೀಖು 26ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕಾಶಯ್ಯ; ವುರಫ್' ಅಚ್ಚಯ್ಯನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿಧೆ.

1884ನೇ ಇಸವಿ ಫಿಬ್ರುವರೀ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಂ ನಮ್ಮ ದಸ್ತಖತ್ತೂಡನೆ ಕೊಡೋಣಾಗಿಧೆ.

ವಿ. ಎಸ್. ನರಸಿಂಹಯ್ಯಂಗಾರ್,
ಡಿಸ್ಟ್ರಿಕ್ಟು ಜಜ್ಜ್.

ಗೈರವಿಲಾ.

ಪೂರಾ ನೋಟ್.

ನಂಬರ್.	ಸರ್ಕಲ್.	ಕ್ರಯ.	
35691	ಮದರಾಸ್	ರೂ. 20	ಹಕ್ಕುದಾರ—ಚನ್ನಗಿರಿ ತಾಲ್ಲೂಕು ಸಂತೇಬನ್ನೂರು ಶೇಕದಾರ ಶ್ರೀನಿವಾಸಯ್ಯ.

ಮೈಸೂರು ಗೆಜೆಟ್, ಚಂದಾ ದರ ವಗ್ಯೆರೆ.

	ಚಂದಾ.		ಟಪ್ಪಾಲ್ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಅ.		
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛಷ್ ಮಾಹೆ ಯಾ ಕ್ವಾರಟರಿಗೆ	ದಾಮಾಷಾಯಿ ಪ್ರಕಾರ ದರಗಳು.			

	ರೂ.	ಅ.
ಶಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ ಬಗ್ಯೆ ನೋಟೀಸುಗಳು;—		
ಮೊದಲನೇ ದಫಾ ಛಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ)	2	8
ಯೆರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ	1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ, ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟೀಸಗಳಿಗೆ:— ಕಡೂರು ಡಿಸ್ಟ್ರಿಕ್ಟು.		
ಮೊದಲನೇ ದಫಾ	5	0
ಯೆರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	2	8

ಶಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕ್ಕುಂಗಳು ಬಗರ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಡ್ಯೂಪ್ಲಿಕೇಟ ಕಾಕೀಪಟ್ಟೀ ವಗ್ಯೆರೇ ಕೊಡುವ ಬಗ್ಯೆ ರವಿನ್ಯೂ ಆಫೀಸರಗಳು ಕೊಡುವ ನೋಟೀಸಗಳಿಗೆ:—			
ಮೊದಲನೇ ಸಲಕ್ಕೆ	ಪುಟ1ಕ್ಕೆ	10	0
ಯೆರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	„	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್‌ಮಾಡಲ್ಪಡುತ್ತೆ;—			
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ1ಕ್ಕೆ	0	8
ಯೆರಡನೇ ದಫಾ ಡಿಟೋ	ಡಿಟೋ	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ		0	4

ಬಮೋಜೀಬ್ ಹುಕ್ಕುಂ,

ಹೆಚ್. ಹಡರ್ಸನ್,

ಮೈ. ಗೆ. ಕಂಪೈಲರ್.

ಕ್ರಿಸ್ಟಲ್ಲೈನ್ ಸಿಂಕೋನಾ ಫೆಬ್ರಿಫ್ಯೂಜ್.

5. ಯಾರ ದರಖಾಸ್ತು ಮಂಜೂರ್ಮಾಡಲ್ಪಡುವದೋ ಅಂತಾ ದರಖಾಸ್ತುದಾರನು ತನಿಗೆ ಗವರ್ನಮೆಂಟಿನವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ 8 ದಿವಸಗಳ ವಳಗಾಗಿ ನಗದಾಗಿಯಾಗಲೀ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ ಪತ್ರಗಳ ಮೂಲಕವಾಗಿಯಾಗಲೀ ಒಂದು ಮೊಬಲಗು ಡೆಪ್ಯೂಟಿ ಕಮ್ಮಿಷನರ್ ಯಾ ಸಂದರ್ಭಾನುಸಾರ ಸಬ್ ಡಿವಿಜನ್ ಆಫೀಸರಲ್ಲಿ ಠೇವಣೀ ಇಡತಕ್ಕದ್ದು, ಸದರೀ ಮೊಬಲಗೂ ಮತ್ತು 3ನೇ ಕಲಂ ಅನುಗುಣನಾಗಿ ಮೊದಲೇ ಇಡಲ್ಪಟ್ಟ ಠೇವಣೀ ಮೊಬಲಗು ಸುದಾ ಸೇರಿ, ವಪ್ಪಿಕೊಂಡ ಇಜಾರೇ ಮೊಬಲಗಿನ ನಾಲ್ಕರಲ್ಲಿ ಒಂದು ಭಾಗಕ್ಕೆ ಸಮನಾಗಿರತಕ್ಕದ್ದು: ಮತ್ತು ಇದರಲ್ಲಿ ಮುಂದೆ ವಿವರಿಸಲ್ಪಟ್ಟ ಷರತ್ತುಗಳಿಗೆ ಬದ್ಧನಾಗಿ ನಡಕೊಳ್ಳುವ ಬಗ್ಯೆ ಮಾಮೂಲ್ ನಮೂನೆಯಲ್ಲಿ ತಕ್ಕ ಛಾಪಾ ಕಾಗದದಮೇಲೆ ಒಂದು ಕರಾರು ಬರೆದು ಕೊಡತಕ್ಕದ್ದು; ಮತ್ತು ಇಜಾರೇದಾರನು ಸದರೀ ಕರಾರಿಗೆ ರುಜು ಮಾಡುವದಕ್ಕಾಗಲಿ, ಅವಶ್ಯಕವಾದ ಠೇವಣೀ ಕಟ್ಟುವದಕ್ಕಾಗಲಿ, ತಪ್ಪಿದರೆ ಮೊದಲೇ ಹಾಜರ್ಮಾಡಿದ ಡಿಪಾಜಿಟ ಮೊಬಲಗುಗಳು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಟ್ಟು ಇಜಾರೆಯು ಅನ್ಯಥಾ ವಿಲಾ ಮಾಡಲ್ಪಡುವದು.

6. ಇಜಾರೆದಾರನಿಂದ ಲೈಸೆನ್ಸ್ ಹೊಂದಿದ ಪುರೋಖ್ತುದಾರರಿಗೆ ಮಾಡಲ್ಪಡುವ ಗಾಂಜಾವಿನ ವ ಅದರ ತಯಾರೀ ಬಾಬತು ಪದಾರ್ಥಗಳ ಪುರೋಖ್ತುಗಳು ಕೌಲ್ ಮಾಡಿಕೊಂಡ ಮೊಬಲಗಿಗೆ ಜಾಸ್ತಿಯಾದರೆ, ಹಾಗೆ ಜಾಸ್ತಿಯಾದ ಮೊಬಲಗಿನ ಪೈಕೀ ಸೇಕಡಾ 25ನ್ನು ಇಜಾರೆ ಕಾಲಕ್ಕೆ ಸಲ್ಲತಕ್ಕ ಆಖೈರ್ ಖಿಸ್ತಿನ ಸಂಗಡ ಕ್ರಮಪ್ರಕಾರ ಗವರ್ನಮೆಂಟಿಗೆ ಪಾವತೀ ಮಾಡತಕ್ಕದ್ದು.

ಷರತ್ತುಗಳು.

I. ಇಜಾರೆಯು ಡೆಪ್ಯೂಟಿ ಕಮ್ಮಿಷನರವರ ಯಾ ಸಂದರ್ಭಾನುಸಾರ ಸಬ್ ಡಿವಿಜನ್ ಆಫೀಸರರ ಮಂಜೂರಾತೀ ವಿನಾ ವರ್ಗಾ ಮಾಡಲ್ಪಡತಕ್ಕದ್ದಲ್ಲಾ.

II. ಈ ಇಜಾರೆ ಕೆಲಸಗಳಿಗೋಸ್ಕರ ಗವರ್ನಮೆಂಟಿನವರು, ಇಜಾರೇ ಕಾಲದಲ್ಲಿ ಇಜಾರೇದಾರನಿಂದ ಮೊಕರರ್ ಮಾಡಲ್ಪಟ್ಟ ಯಾ ಅಂಗೀಕರಿಸಲ್ಪಟ್ಟ ಯಾವ ಪ್ರತಿನಿಧಿಯಾದ ಮುತಾಲೀಕನನ್ನಾಗಲಿ ಹಿಸ್ಸೇದಾರನನ್ನಾಗಲಿ ಅಂಗೀಕರಿಸಲಿಕ್ಕೆ, ಅಂಥಾ ಪ್ರತಿನಿಧಿಯಾದ ಮುತಾಲೀಕನು ಯಾ ಹಿಸ್ಸೇದಾರನು ತಾತ್ಕಾಲಿಕ ಡೆಪ್ಯುಟಿ ಕಮ್ಮಿಷನರಿಂದ ಯಾ ಸಂದರ್ಭಾನುಸಾರ ಸಬ್ ಡಿವಿಜರ್ನ ಆಫೀಸರರಿಂದ ಮೊದಲು ಮಂಜೂರ್ಮಾಡಲ್ಪಡದೇ ಯಿದ್ದರೆ, ಗವರ್ನಮೆಂಟಿನವರು ನಿರಾಕರಿಸಬಹುದು.

III. ಕೌಲ್ ಮಾಡಲ್ಪಟ್ಟ ಕಮ್ಮಿಯಾದ ಇಜಾರೆ ಮೊಬಲಗು ಮತ್ತು ಅದರ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆ ಪ್ರಕಾರ ಆಗುವ ಲೋಕಲ್‌ಸೆಸ್ ಮೊಬಲಗು ಸುದಾ, ಕಂಟ್ರಾಕ್ಟುದಾರನು, ಮೈಸೂರು ಡಿಸ್ಟ್ರಿಕ್ಟು ಟ್ರೆಜರಿಯಲ್ಲಿ ಮಾಹೆಯಾನಾ ಸಮನಾದ ಖಿಸ್ತು ಪ್ರಕಾರ ಪ್ರತಿ ಮಾಹೆಯ 20ನೇ ತಾರೀಖಿನ ಒಳಗಾಗಿ ಪಾವತೀ ಮಾಡತಕ್ಕದ್ದು. ಇಜಾರೆ ಕಾಲಕ್ಕೆ ಪಾವತಿಯಾಗಬೇಕಾದ ಆಖೈರ್ ಖಿಸ್ತಿನ ಸಂಗಡ ಜಾಸ್ತೀ ಪುರೋಖ್ತಿನ ದೆಸೆಯಿಂದ ಕೌಲ್ ಮಾಡಿಕೊಂಡ ಮೊಬಲಗಿಗಿಂತಲೂ ಹೆಚ್ಚಾಗಿ ಆಗುವ ಹುಟ್ಟುವಳೀ ಮೇಲೆ ಸೇಕಡಾ 25ರಂತೆ ಆಗುವ ಮೊಬಲಗುಗಳನ್ನು ಪಾವತೀ ಮಾಡತಕ್ಕದ್ದು. ಮೇಲೆ ಹೇಳಿದ ಖಿಸ್ತು ಪೈಕಿ ಯಾವದನ್ನಾಗಲಿ ಪಾವತಿ ಮಾಡದೇ ತಪ್ಪುವ ಪಕ್ಷಕ್ಕೆ, ಡಿಪಾಜಿಟ್ ದಂಡವಾಗಿ ತೆಗದುಕೊಳ್ಳಲ್ಪಟ್ಟಿತೆಂದು ತಿಳಿಸುವದಕ್ಕೂ, ಕಂಟ್ರಾಕ್ಟುದಾರನನ್ನು ಲುಕ್‌ಸಾನಿಗೆ ಗುರಿಮಾಡಿ ಇಜಾರೆಯನ್ನು ಅಮಾನಿ ಕೆಳಗೆ ತೆಗದುಕೊಳ್ಳುವಂತೆ ಹುಕ್ಕುಂ ಮಾಡುವದಕ್ಕೂ, ಅಥವಾ ಇಜಾರೇ ತಪ್ಪಿಸಿರುತ್ತೆಂದು ತಿಳಿಸುವದಕ್ಕೂ, ಕಂಟ್ರಾಕ್ಟುದಾರನ ಅಪಾಯಕ್ಕೂ ನಷ್ಟಕ್ಕೂ ಒಳಪಟ್ಟು ಇಜಾರೆಯನ್ನು ಮರಳಿ ವಿಕ್ರಯಿಸುವದಕ್ಕೂ, ಮತ್ತು ಯಲ್ಲ ಬಾಕಿಗಳನ್ನೂ ಸಾಲೀಯಾನಾ 6ರ ಪ್ರಕಾರ ಬಡ್ಡೀ ಸಹಿತವಾಗಿ ಅವನ ಸ್ಥಾವರ ಜಂಗಮ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ತಾತ್ಕಾಲಿಕ ಡೆಪ್ಯುಟಿ ಕಮ್ಮಿಷನರಿಗೆ ಯಾ ಸಂದರ್ಭಾನುಸಾರ ಸಬ್ ಡಿವಿಜರ್ನ ಆಫಿಸರರಿಗೆ ನ್ಯಾಯುವಾಗಿರತಕ್ಕದ್ದು.

IV. ಡೆಪ್ಯುಟಿ ಕಮ್ಮಿಷನರವರಿಂದ ಯಾ ಸಂದರ್ಭಾನುಸಾರ ಸಬ್ ಡಿವಿಜರ್ನ ಆಫೀಸರರಿಂದ ಗಾಂಜಾ ವ ಅದರಿಂದ ತಯಾರ್ ಮಾಡಲ್ಪಟ್ಟ ವಸ್ತುಗಳನ್ನು ವಿಕ್ರಯಿಸತಕ್ಕ ಅಂಗಡಿಗಳ ಸಂಖ್ಯೆಯು, ಮತ್ತು ಅವು ಇಡಲ್ಪಡಬೇಕಾದ ಸ್ಥಳಗಳು ಸುದಾ ಗೊತ್ತು ಮಾಡಲ್ಪಡತಕ್ಕದ್ದು, ಮತ್ತು ಕಂಟ್ರಾಕ್ಟುದಾರನು ಹಾಗೆ ಗೊತ್ತು ಮಾಡಲ್ಪಟ್ಟ ಸ್ಥಳಗಳಲ್ಲಿ ಮಾತ್ರವೇ ಗಾಂಜಾ ವ ಅದರ ತಯಾರೀಗಳನ್ನು ಮಾರುವದಕ್ಕೆ ಒಪ್ಪತಕ್ಕದ್ದು; ಅಂಗಡಿಗಳ ಸ್ಥಳಗಳ ವಿಷಯದಲ್ಲಾಗಲಿ, ಸಂಖ್ಯೆಯ ವಿಷಯದಲ್ಲಾಗಲಿ, ಆವಶ್ಯಕವಾದ ಯಾವ ಬದಲಾವಣೆಯನ್ನಾದರೂ ಆಗಿಂದಾಗ್ಯೆ ಮಾಡುವದಕ್ಕೂ, ಯಾವ ಅಂಗಡಿಯನ್ನಾದರೂ ಕಂಟ್ರಾಕ್ಟುದಾರನು ಈಡು ಮೊಬಲಗು ಕೇಳುವದಕ್ಕೆ ಹಕ್ಕಿಲ್ಲದೇನೇ ಈ ಇಸ್ತಿಹಾರ್ ನಮೆಯ 9ನೇ ಪ್ಯಾರಾದಲ್ಲಿ ವಿಧಿಸಲ್ಪಟ್ಟ ಷರತ್ತು ರೀತಿಯಾಗಿಯೂ, ಮತ್ತು ಅದನ್ನು ಅನುಸರಿಸಿ ಮುಚ್ಚುವದಕ್ಕೂ, ಡೆಪ್ಯುಟಿ ಕಮ್ಮಿಷನರವರು ಮತ್ತು ಸಬ್ ಡಿವಿಜರ್ನ ಆಫೀಸರರು ಸ್ವತಂತ್ರರಾಗಿರುತ್ತಾರೆ.

V. ಹಾಲಿ ಇರುವ ಚಿಲ್ಲರೆ ಪುರೋಖ್ತುದಾರರನ್ನ ಕಾಯಂ ಮಾಡುವಣ, ಹೊಸ ಪುರೋಖ್ತುದಾರರನ್ನ ಮೊಕರರ್ ಮಾಡುವಣ, ಲೈಸೆನ್ಸುಗಳನ್ನು ರದ್ದು ಮಾಡುವಣ, ಇವುಗಳು ಜಾರೀಲಿ ಇರುವ ರೂಲ್ಸ್ ಅನುಸರಿಸಿ ಡೆಪ್ಯುಟಿ ಕಮ್ಮಿಷನರವರಿಗೆ ಯಾ ಸಂದರ್ಭಾನುಸಾರ ಸಬ್ ಡಿವಿಜರ್ನ ಆಫೀಸರರಿಗೆ ಸೇರಿ ಇರತಕ್ಕದ್ದು. ಡೆಪ್ಯುಟಿ ಕಮ್ಮಿಷನರವರು ಯಾ ಸಂದರ್ಭಾನುಸಾರ ಸಬ್ ಡಿವಿಜರ್ನ ಆಫೀಸರರು ವಿಧಿಸಲ್ಪಟ್ಟ ನಮೂನೆಗಳಲ್ಲಿ ಲೈಸೆನ್ಸುಗಳನ್ನು ಇತರ ಪದಾರ್ಥಗಳ ವಿಷಯದಲ್ಲಿ ಹ್ಯಾಗೋ ಹಾಗೆ ಚಿಲ್ಲರೆ ಪುರೋಖ್ತುದಾರರಿಗೆ ಪರಭಾರೆಯಾಗಿ ಕೊಡತಕ್ಕದ್ದು.

VI. ಇಜಾರೇದಾರನು ಗಾಂಜಾವನ್ನು ವ ಅದರಿಂದ ತಯಾರಾದ ಪದಾರ್ಥಗಳನ್ನು ಅಂಥಾ ಲೈಸೆನ್ಸ್ ಹೊಂದಿದ ಪುರೋಖ್ತುದಾರಗೆ ಮಾತ್ರವೇ ವಿಕ್ರಯಿಸತಕ್ಕದ್ದೇ ಹೊರ್ತು ಚಿಲ್ಲರೇ ಪುರೋಖ್ತುದಾರಗೆ ಯಾವ ವಿಧದಿಂದಲೂ ಬಾಧಕ ಪಡಿಸಕೂಡದು.

VII. ವಿಕ್ರಯಿಸಲ್ಪಡತಕ್ಕ ಗಾಂಜಾ ಒಳ್ಳೇದಾಗಿ ಯಿರಬೇಕು, ಬೆರಿಕೆಯಾದ್ದಾಗಿರಕೂಡದು, ಮತ್ತು ಇಜಾರೇದಾರನು ಯಾವಾಗಲೂ ಅಧಮ ಪಕ್ಷ ಒಂದು ತಿಂಗಳಿಗೆ ಆಗುವಷ್ಟು ಗಾಂಜಾ ಸರಕನ್ನು ತನ್ನ ವಶದಲ್ಲಿ ಇಟ್ಟುಕೊಳ್ಳತಕ್ಕದ್ದು.

VIII. ಇಜಾರೇದಾರನಿಂದ ಚಿಲ್ಲರೇ ಪುರೋಖ್ತುದಾರಗೆ ಗಾಂಜಾ ಯಾವ ಖರೀದಿಗೆ ವಿಕ್ರಯಿಸಲ್ಪಡತಕ್ಕದ್ದೋ ಅಂತಾ ಖರೀದಿಯು 24 ತೊಲೆಗಳುಳ್ಳ ಒಂದು ಸೇರಿಗೆ 8 ಆಣೇ ಮೇರೆ ನಿಷ್ಕರ್ಷೆ ಮಾಡಲ್ಪಡತಕ್ಕದ್ದು. ಮತ್ತು ಚಿಲ್ಲರೇ ಪುರೋಖ್ತುದಾರನು ಸೇರು ಒಂದಕ್ಕೆ ಹನ್ನೊಂದು ಆಣೆಮೇರೆ ಜನಗಳಿಗೆ ಪುರೋಖ್ತು ಮಾಡತಕ್ಕದ್ದು. ಮಾಜುಮು ಇಜಾರೇದಾರನಿಂದ ಸೇರು ಒಂದಕ್ಕೆ 3 ಆಣೇ ಮೇರೆಗೂ, ಚಿಲ್ಲರೇ ಪುರೋಖ್ತುದಾರನಿಂದ 5 ಆಣೇ ಮೇರೆಗೂ ವಿಕ್ರಯಿಸಲ್ಪಡತಕ್ಕದ್ದು. ಗಾಂಜಾ ಮತ್ತು ಅದರ ತಯಾರೀ ಬಾಬತು ಪದಾರ್ಥಗಳ ಪುರೋಖ್ತುಗಳಿಗೆ, ಆಧಾರವಾಗಿ ವಿಧಿಸಲ್ಪಟ್ಟ ನಮೂನೆಯಲ್ಲಿ ಇಜಾರೆದಾರನಿಂದಾಗಲಿ, ಅಧಿಕಾರ ಕೊಡಲ್ಪಟ್ಟ ಅವನ ಮುತಾಲೀಕನಿಂದಾಗಲಿ ರುಜುಮಾಡಲ್ಪಟ್ಟ ಪ್ಯಾಸ್ ಯೆಂಬ ರಹದಾರಿಯು ಕೊಡಲ್ಪಡತಕ್ಕದ್ದು. ಚಿಲ್ಲರೇ ಪುರೋಖ್ತುದಾರನು ಒಬ್ಬ ಮನುಷ್ಯನಿಗೆ, ಒಂದೇದಿನದಲ್ಲಿ, ಒಬ್ಬ ಮಾಜಿಸ್ಟ್ರೇಟರಿಂದ ಕೊಡಲ್ಪಟ್ಟರಹದಾರೀಗಳ ಮೇಲೆ ವೈದ್ಯವಿಷಯಗಳಿಗಾಗಿ ವಿನಾ, ಅನ್ಯಥಾ ನಾಲ್ಕು ತೊಲೇ ಗಾಂಜಾಕಿಂತ ಹೆಚ್ಚಾಗಿ ಮಾರಕೂಡದು.

IX. ಡೆಪ್ಯುಟಿ ಕಮ್ಮಿಷನರು ಯಾ ಸಂಧರ್ಭಾನುಸಾರ ಸಬ್ ಡಿವಿಜರ್ನ ಆಫೀಸರರು ಯಾವದಾದರೊಂದು ಅಂಗಡಿಯನ್ನು ಯಾ ಅಂಗಡಿಗಳನ್ನು ಮಿಲಿಟೇರಿ ಅಧಿಕಾರಿಗಳ ಯಾ ಮಾಜಿಸ್ಟ್ರೇಟಗಳ ಕೋರಿಕೆಮೇಲೆ, ಹಂಗಾಮಿಯಾಗಿ, ಯಾ ಕಾಯಮಾಗಿ, ಮುಚ್ಚುವ

ದಕ್ಕೆ ಅಧಿಕಾರವನ್ನು ಪಡೆದಿರತಕ್ಕದ್ದು; ಮತ್ತು ಇಜಾರೇದಾರನು, ಸದರೀ ಬಗ್ಯೆ ಯಾವ ಈಡು ದ್ರವ್ಯಕ್ಕೂ ಹಕ್ಕು ಉಂಟಾಗಿರತಕ್ಕದ್ದಲ್ಲವು. ಆದರೆ ಡೆಪ್ಯುಟಿ ಕಮ್ಮಿಷನರವರ ಯಾ ಸಂದರ್ಭಾನುಸಾರ ಸಬ್ ಡಿವಿಜನ್ ಆಫೀಸರರ ಮಂಜೂರಾತೀನಿಸೀ ಹಾಗೆ ಕಡಮೆಮಾಡಲ್ಪಟ್ಟ ಸಂಖ್ಯೆಯು ಜನಗಳ ಗಿರಾಕಿಗೆ ಬೇಕಾಗಿ ಇದ್ದ ಪಕ್ಷಕ್ಕೆ ಯುಕ್ತಗಳಾದ ಇತರ ಸ್ಥಳಗಳಲ್ಲಿ ಪುನಃ ಸ್ಥಾಪಿಸಲ್ಪಡಬಹುದು. ಪರಂತು, ಹಾಲಿ ಯಿರುವ ದುಕಾನುಗಳ ಸಂಖ್ಯೆ, ಸನ್ 1883—84ನೇ ಇಸವೀಯಲ್ಲಿ ಲೈಸೆನ್ಸ್ ಕೊಡಲ್ಪಟ್ಟ ದುಕಾನುಗಳಿಗೆ ಹೆಚ್ಚಿದರೆ, ಅಂತಾ ಅಂಗಡಿಗಳನ್ನು ಪುನಃ ಇಡುವದಕ್ಕೆ ಸದರೀ ಆಫೀಸರರ ಯಿಖ್ತ್ಯಾರೀ ಮೇಲೆ ನಿರಾಕರಿಸತಕ್ಕದ್ದು; ಮತ್ತು ಇಜಾರೇದಾರನು ಹಾಗೆ ಸ್ಥಾಪಿಸಲ್ಪಟ್ಟ ಸಂಖ್ಯೆಯುಳ್ಳ ದುಕಾನುಗಳು ಅನ್ಯತ್ರ ಇಡಬೇಕೆಂದು ಕೋರಲಿಕ್ಕೆ ಮಾತ್ರ ಅಧಿಕಾರ ಉಂಟಾಗಿರತಕ್ಕದ್ದು. ಅನ್ಯಥಾ ಸಂಸ್ಥಾನದ ಜರೂರೀಯಾತ್ ವಿಷಯಗಳಿಂದ, ಹಾಗೆ ನಿಷ್ಕರ್ಷಿಸಲ್ಪಟ್ಟ ದುಕಾನುಗಳಿಗೆ ಒಳಪಟ್ಟು ಯಿಷ್ಟು ದುಕಾನುಗಳನ್ನಾಗಲಿ ಮುಚ್ಚಿಬಿಡಬೇಕಾಗಿದ್ದರೆ ಹಾಗೆ ಮುಚಲ್ಪಟ್ಟ ಸಂಖ್ಯೆಗೆ, ಸದರೀ ಸಾಲಿನಲ್ಲಿ ಲೈಸೆನ್ಸ್ ಕೊಡಲ್ಪಟ್ಟ ಅಂಗಡಿಗಳಿಗೆ ಕೊಡಲ್ಪಡತಕ್ಕ ಕೌಲ್ ಮೊಬಲಗಿನ ಮೇಲೆ, ಇಜಾರೇದಾರನಿಗೆ ದುಕಾನುಗಳ ಸಂಖ್ಯೆಯನ್ನು ಹಾಗೆ ಕಮ್ಮಿ ಮಾಡಿದ್ದರಿಂದ ನುಕ್ಸಾನಪಟ್ಟಿದ್ದಾನೆಂದು ರುಜುವಾದರೆ, ದಾಮಾಷಾಯಿ ಪ್ರಕಾರ ಈಡು ಮೊಬಲಗ್ ಕೊಡಲ್ಪಡತಕ್ಕದ್ದೇ ಹೊರತು ಅನ್ಯಥಾ ಕೊಡದು.

X. ಇಜಾರೇದಾರನು, ತನ್ನ ಬಟ್ಟಿ ಕೋಠೀಯಲ್ಲಿ ನಡೆಯುವ ಬಿಕರೀಗಳ ಬಾಬತು, ಸಾಚಾ ಆಗಿಯೂ, ಕರಾರ್ವಾಕಾ ಆಗಿಯೂ ಇರುವ ಲೆಕ್ಕವನ್ನು ಡೆಪ್ಯುಟಿಕಮ್ಮಿಷನರವರಿಗೆ ಅಥವಾ ಸಂದರ್ಭಾನುಸಾರ ಸಬ್ ಡಿವಿಜನ್ ಆಫೀಸರರಿಗೆ ಕೇಳಿದಾಗ ತಯಾರ್ ಮಾಡಿಕೊಡಬೇಕಾಗಿರುತ್ತೆ ಮತ್ತು ಸುಂಕದ ಇಲಾಖಾ ಆಫಿಸರ್‌ಗಳಿಗೆ, ಇಜಾರೇದಾರನಿಂದ ಇಡಲ್ಪಡುವ ತಮಾಂ ಲೆಕ್ಕಗಳನ್ನೂ ನೋಡಲಿಕ್ಕೆ ಯಾವಾಗಲೂ, ಯೆಲ್ಲಸಮಯಗಳಲ್ಲಿಯೂ ಅವಕಾಶ ಕೊಡತಕ್ಕದ್ದು. ಅಂತಾ ಲೆಕ್ಕಗಳು ಸಾಚಾ ಆಗಿಯೂ, ಕರಾರ್ವಾಕಾ ಆಗಿಯೂ ಮತ್ತು ಡೆಪ್ಯುಟಿ ಕಮ್ಮಿಷನರು ಯಾ ಸಂದರ್ಭಾನುಸಾರ ಸಬ್ ಡಿವಿಜನ್ ಆಫೀಸರರು ಆಗಿಂದಾಗ್ಯೆ ಮಂಜೂರ್ ಮಾಡಬಹುದಾದ ನಮೂನೇಗಳಲ್ಲಿಯೂ ಇರತಕ್ಕವು.

XI. ಬಟ್ಟಿ ಕೋಠಿಗಳಲ್ಲಿ ಇಜಾರೇದಾರನ ಮುತಾಲೀಕನಾಗಲಿ, ನೌಕರನಾಗಲಿ, ಕೆಟ್ಟನಡತೆಗೂ ಅಕ್ರಮಗಳಾದ ಕೃತಗಳಿಗೂ, ಅವಕಾಶ ಕೊಡಕೂಡದು, ಅವರುಗಳಿಗೆ, ಕರಾರ್ವಾಕಾ ತ್ರಾಸುಗಳನ್ನೂ ತೂಕಗಳನ್ನೂ ಕೊಡತಕ್ಕದ್ದು. ತೂಕಗಳಿಗೆ ಕ್ರಮವಾಗಿ ಗವರ್ನಮೆಂಟಿನಿಂದ ಮುದ್ರೆಹಾಕಲ್ಪಡತಕ್ಕದ್ದು. ಮತ್ತು, ಅಂತಾ ನೌಕರರೆಲ್ಲರೂ, ಇಜಾರೇದಾರನಿಂದ ಕರಾರಿಗೆ ರುಜು ಮಾಡಲ್ಪಟ್ಟ 15 ದಿನಗಳ ತರುವಾಯ ಇಜಾರೇದಾರನಿಗೂ, ಗವರ್ನಮೆಂಟಿನವರಿಗೂ, ನಡೆದಿರುವ ಒಡಂಬಡಿಕೆಗಳ ತಾತ್ಪರ್ಯಕ್ಕೂ ಅರ್ಥಕ್ಕೂ ಜಾರೀಯೊಳಗಿರುವ ಕಾನೂನುಗಳಿಗೂ, ನಿಬಂಧನೆಗಳಿಗೂ, ಬದ್ಧರಾಗಿ ನಡೆದುಕೊಳ್ಳುವದಾಗಿ ಮುಚ್ಚಲಿಕೆ ಬರೆದುಕೊಡತಕ್ಕದ್ದು; ಅಂತಾ ಮುಚ್ಚಲಿಕೆಗಳು ತಪ್ಪದೆ ಸದರೀ ಮಾಹೆ 20ನೇ ತಾರೀಖಿನೊಳಗಾಗಿ, ಡೆಪ್ಯುಟಿ ಕಮ್ಮಿಷನರ ಅಥವಾ ಸಂದರ್ಭಾನುಸಾರ ಸಬ್ ಡಿವಿಜನ್ ಆಫೀಸರರ ಆಫೀಸಿನಲ್ಲಿ ಇಡಲ್ಪಡತಕ್ಕದ್ದು.

XII. ಮೇಲೆಕಂಡ ಷರತುಗಳ ಯಾವ ಉಲ್ಲಂಘನೆಗಾಗಲಿ, ಇಜಾರೇದಾರನು ಡೆಪ್ಯುಟಿ ಕಮ್ಮಿಷನರವರ ಯಾ ಸಂದರ್ಭಾನುಸಾರ ಸಬ್ ಡಿವಿಜನ್ ಆಫಿಸರರ ಯಿಖ್ತ್ಯಾರೀ ಮೇಲೆ ವಸೂಲ್ ಮಾಡಲ್ಪಡತಕ್ಕ 100 ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೂ, ಜರೂರೆಂದು ಭಾವಿಸಿದರೆ, ಗವರ್ನಮೆಂಟಿನವರ ಮಂಜೂರಾತೀನಿಸೀ ಆತನ ಇಜಾರೇಯನ್ನು ಕಳಕೊಳ್ಳುವದಕ್ಕೂ, ಅಥವಾ ಕಂಟ್ರಾಕ್ಟಿನ ಉಲ್ಲಂಘನೆಗಾಗಿ ಅಥವಾ ಗವರ್ನಮೆಂಟಿನಿಂದ ಕಲ್ಪಿಸಲ್ಪಟ್ಟ ರೂಲ್ಸಿನ ಉಲ್ಲಂಘನೆಗಾಗಿ ಹಾಲೀ ಜಾರೀಯಿರುವ ಕಾನೂನುಗಳಿಂದ ವಿಧಿಸಲ್ಪಟ್ಟ ಮತ್ತಾವ ದಂಡಗಳಿಗಾಗಲಿ ಒಳಪಡತಕ್ಕದ್ದು; ಯಿನ್ನಾವ ತಪಸೀಲ್‌ಗಳನ್ನಾದರೂ, ಡೆಪ್ಯುಟಿ ಕಮ್ಮಿಷನರವರ ಆಫಿಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

XIII. ಕಂಟ್ರಾಕ್ಟುದಾರನು, ಗವರ್ನಮೆಂಟಿನಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ನಿಬಂಧನೆಗಳಿಗಾಗಲಿ ಅನುಗುಣವಾಗಿ ನಡಿಯಬೇಕಾಗಿರುತ್ತೆ.

ತಾರೀಖು 21ನೇ ಮಾರ್ಚಿ 1883.

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಯೆ ಹಿಂದಿನ ದಿನ ಸೆಕ್ರೆಟೇರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಬಮೋಜೀಬ್ ಹುಕ್ಕುಂ,

ಆರ್. ವಿಜಯೀಂದ್ರರಾವ್,

ಸೆಕ್ರೆಟೇರಿ.

ಮೈಸೂರ ಗೆಜೆಟ

ಸರ್ಕಾರದಿಂದ ಫ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜೂನ್ ತಾ॥ 7, ಸನ್ 1884.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರುವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ರೆಸಿಡೆಂಟರ ಇಲಾಖಾ.

ಇಸ್ತಿಹಾರ್ ನಾಮೆ.

ಫಿನಾನ್ಷಿಯಲ್ ಇಲಾಖಾ.

1882ನೇ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್‌ಸನ್,
ಕಾಂಪ್‌ಟ್ರೋಲರ್.

ಅಂಚೇ ಇಲಾಖಾ.

ನಂ. 77—47. ತಾರೀಖು 13ನೇ ಮೇ 1884.

ಇದರಿಂದ ಸಕಲಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ಮಹಾರಾಜ ರಾಜಾಸಾಹೇಬ್ ಬಹದೂರವರ ದೀವಾನರವರ ಅಪ್ಪಣೆ ಅನುಸರಿಸಿ ಈ ಕೆಳಗೆ ಕಂಡ ಸ್ಥಳಗಳೊಳಗೆ ಹೋಬಳಿ ಅಂಚೆ ಆಫೀಸ್‌ಗಳು ಸ್ಥಾಪಿಸಲ್ಪಟ್ಟಿರುತ್ತವೆ:—

ತಾಲ್ಲೂಕು.	ಅಂಚೇ ಆಫೀಸ್ ಸ್ಥಾಪಿಸಲ್ಪಟ್ಟ ಸ್ಥಳಗಳ ಹೆಸರು.
ಆನೆಕಲ್	ದೊಮ್ಮಸಂದ್ರ.
ನಂಜನಗೂಡು	ಹುಲ್‌ಹಳ್ಳಿ.

ಬಿ. ಮರಿಗಂಗಯ್ಯ,
ಅಂಚೇ ಬಕಷಿ.

ತುಮಕೂರು ಡಿಸ್ಟ್ರಿಕ್ಟು.

ತಾರೀಖು 4ನೇ ಜೂನ್ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ತಿಪಟೂರು ಸಬ್ ರಿಜಿಸ್ಟ್ರೀ ಆಫೀಸ್‌ನಲ್ಲಿ ಬೇವಾರಸಾಗಿ ಯಿರತಕ್ಕ ಈ ಕೆಳಗೆ ವಿವರಿಸೋಣಾದ ದಸ್ತೈವಜನ್ನು ಹಾಜರ್ ಮಾಡಿದವನೇ ಯಾಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರನೇ ಯಾಗಲೀ ಈ ನೋಟೀಸ್ ತಾರೀಖು ಲಗಾಯಿತು ವೆಂದು ತಿಂಗಳೊಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂಬು ಹಾಜರಾಗಿ ಅದನ್ನು ವಾಪಸು ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರು ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಶಪಡಿಸಲಪಡುವದು.

ದಸ್ತಾವೇಜು ನಂಬರು.	ದಸ್ತಾವೇಜು ತಾರೀಖು.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ದಸ್ತಾವೇಜು ರಿಜಿಸ್ಟರಿಗೆ ಸ್ವೀಕಾರ ಮಾಡದೇ ಇದ್ದ ತಾರೀಖು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು
..	17—8—81	29—12—81	24—5—82	ಹೊನ್ನವಳ್ಳಿ ಕಸಬಾ ಗ್ರಾಮದಲ್ಲಿ ಇರುವ ಚಿಕ್ಕ ಬೈರಪ್ಪನ ಮಗ ತಿಮ್ಮಣ್ಣಯ್ಯ.	ತಿಪಟ್ಟೂರು ಗ್ರಾಮದಲ್ಲಿ ಯಿರುವ ಸೋಲೂರು ನಾರಣಪ್ಪನಮಗ ರಾಮಶೆಟ್ಟಿ	45 ರೂಪಾಯಿಗೆ ಹೊನ್ನವಳ್ಳಿ ಕಸಬೇಯಲ್ಲಿ ಯಿರುವ 5 ಅಂಕಣದ ಹೆಂಚಿನ ಮನೆ ಆಧಾರ ಪತ್ರ.

ಕೆ. ಮುಹಮ್ಮದಲ್ಲಿ,
ಫಾರ್ ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟು.

ತಾರೀಖು 21ನೇ ಏಪ್ರೆಲ್ 1884.

ಇದರಿಂದ ತಿಳಿಸಲ್ಪಡುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿನಲ್ಲಿ ಹಿಡುವಳೀಯಲ್ಲಿಲ್ಲದ ಕಂದಾಯ ಕರಾಯಿಸಲ್ಪಟ್ಟ ಮತ್ತು ಕಂದಾಯ ಕರಾಯಿಸಲ್ಪಡದ ತಮಾಂ ಜಮೀನುಗಳು, ಗ್ರಾಮ ಪೇಲೀಗಳು, ಅಮರಾಯಿ ವ ಅಮರಾಯಿ ಪೇಲೀಗಳು, ಇವುಗಳು ಅಡಗಿರುವ ಡಿಸ್ಟ್ರಿಕ್ಟು ಜಂಗ್ಲೀಗಳ ಪಸಾರೀ ಹುಟ್ಟುವಳೀಯನ್ನು, 1885ನೇ ಮಾರ್ಚಿ 31ರ ವರಿಗೆ ಜಮಾಇಸುವ ಹಕ್ಕುದಾರೀಯು, ತಾಲ್ಲೂಕುವಾರಾಗಿ ಬಹಿರಂಗವಾದ ಹರಾಜು ಮೂಲಕ ಡೆಪ್ಯುಟಿ ಕಮ್ಮಿಷನರ ಆಫೀಸಿನಲ್ಲಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಪ್ರೊಬೇಷನರಿಂದ, 1884ನೇ ಜೂನ್ 5ನೇ ಮಧ್ಯಾಹ್ನ ವಿಕ್ರಯಿಸಲ್ಪಡುವದು.

ತಾಲ್ಲೂಕು.	ಹುಟ್ಟುವಳಿಯ ತಪಸೀಲ್.
ಮೈಸೂರು ಹೆಗ್ಗಡದೇವನಕೋಟೆ ಹುಣಸೂರು ಗುಂಡ್ಲು ಪೇಟೆ ನಂಜನಗೂಡು ಚಾಮರಾಜನಗರ ತಿರುಮಕೋಡ್ಲು ನರಸೀಪುರ ಮಂಡ್ಯ ಶ್ರೀರಂಗಪಟ್ಟಣ ಯಡತೋರೆ	1 ಅಳಲೇಕಾಯಿ, 2 ತಾರೇಕಾಯಿ, 3 ಸೀಗೇಕಾಯಿ, 4 ಅಂಟುವಾಳದ ಕಾಯಿ, 5 ದಿಂಡಗದ ಬಂಕೆ 6 ಕಾಡು ಅರಿಸಿನ, 7 ಜೇನುಮೇಣ, ವ ಜೇನುತುಪ್ಪ, 8 ಅರಗು, 9 ಕಪಿಲೇರಂಗು, 10 ಪಪ್ಲೀಚಕ್ಕೆ, 11 ಪತಂಗ, 12 ಮಡ್ಡಿ, 13 ಚಳ್ಳದಬೀಜ, 14 ಚೆಗಚೆ ಬೀಜ, 15 ಹೊಂಗೇಬೀಜ, 16 ಗೇರುಬೀಜ, 17, ಹಾಲು ಮಡ್ಡಿ, ಅವರಿಕೇ ಬಂಕೆ, 19 ಸಾರಗದ ಕೊಂಬು, 20 ಗುಗ್ಗಳ ವಗೈರೇ.

ಇಜಾರೇದಾರರಿಗೆ, ಹಿಡುವಳೀ ಜಮೀನುಗಳಲ್ಲೂ ಸ್ವಂತ ಅಮರಾಯಿಗಳಲ್ಲೂ ಯಿರುವ ಮರಗಳ ಹುಟ್ಟುವಳೀ ವಿಷಯದಲ್ಲಿ ಯಾವ ಹಕ್ಕುದಾರಿಯೂ ಉಂಟಾಗತಕ್ಕದ್ದಲ್ಲವು.

ಖಡ ದರಖಾಸ್ತುದಾರನು, ದರಖಾಸ್ತು ಮೊಬಲಗ್ ಪೈಕೀ ಸೇಕಡಾ 25ರ ಪ್ರಕಾರ ಕೂಡ್ಲೇ ಠೇವಣೀ ಯಿಟ್ಟು ಬಾಕೀ ಮೊಬಲಗನ್ನು ಡಿಸ್ಟ್ರಿಕ್ಟು ಯಾ ತಾಲ್ಲೂಕು ಖಜಾನೇಯಲ್ಲಿ ಸಮನಾದ ಮೂರು ಖಿಸ್ತುಗಳ ಪ್ರಕಾರ ಸ್ನ 1884ನೇ ಇಸವಿ ಅಕ್ಟೋಬರ್ 1ನೇ ತಾರೀಖಿನಲ್ಲಿಯೂ, 1884ನೇ ನವಂಬರ್ 1ನೇ ಮರ್ಕುಂನಲ್ಲಿಯೂ, 1884ನೇ ಡಿಶಂಬರ್ 1ನೇ ತಾರೀಖಿನಲ್ಲಿಯೂ, ಪಾವತಿ ಮಾಡತಕ್ಕದ್ದು

ಯಾವ ಖಿಸ್ತಾಗಲಿ ಬಾಕೀಯಾದಾಗ ಪಾವತೀ ಮಾಡಲಿಕ್ಕೆ ತಪ್ಪಿದರೆ, 1885ನೇ ಇಸವೀ ಮಾರ್ಚೀ 31ರ ವರಿಗೆ ಸಾಲಿನ ಉಳಿದ ಭಾಗಕ್ಕೆ ಜಂಗ್ಲೀ ಹುಟ್ಟುವಳೀಯನ್ನು ಜಮಾಇಸುವ ಹಕ್ಕು ಫಾರೆಸ್ಟು ಇಲಾಖೇಯವರಿಂದ ಪುನಃ ಹರಾಜು ಮಾಡಲ್ಪಡುವದು, ಅಥವಾ ಅಮಾನೀಯಲ್ಲಿ ಸದರೀ ಇಲಾಖೇಯವರಿಂದ ರೂಢಿಸಲ್ಪಡತಕ್ಕದ್ದು, ಹಣ ಕೊಡಲಿಕ್ಕೆ ತಪ್ಪಿದವನು ಅದರ ದೆಸೆಯಿಂದ ಉಂಟಾಗುವ ಯಾವ ನುಕ್ಸಾನಿಗಾಗಲಿ ಜವಾಬ್‌ದಾರನಾಗಿ ಮಾಡಲ್ಪಡತಕ್ಕದ್ದು.

ಫಾರೆಸ್ಟು ಪ್ರೊಬೇಷನರವರು, ದರಖಾಸ್ತು ಮಾಡಲಿಕ್ಕೆ ಖಾಯಿಷ್ ಮಾಡತಕ್ಕವರಿಗೆ ಬೇಕಾದ ಯಾವ ಸಂಗತಿಯನ್ನಾಗಲಿ; ಹರಾಜು ತಾರೀಖಿಗೆ ಮುಂದೆ ಅವರ ಆಫೀಸಿನಲ್ಲಿ ಖುದ್ ಖಾಯಿಷ್ ಮಾಡಿಕೊಂಡರೆ ತಿಳಿಸತಕ್ಕದ್ದು.

ಅಬ್ದುಲ್‌ಖಾದರ್ ಕೆ. ಬಿ.,
ಡೆಪ್ಯುಟಿ ಕಮ್ಮಿಷನರ್.

ತಾರೀಖು 14ನೇ ಮೇ 1884.

ಇದರಿಂದ ತಿಳಿಯಪಡಿಸುವದೇನಂದರೆ, ತಿರುಮಕೂಡ್ಲು ನರಸೀಪುರ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಬೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜನ್ನು ಹಾಜರ್ಮಾಡಿದವನೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರನಾಗಲಿ ಈ ನೋಟೀಸ್ ತಾರೀಖು ಲಾಗಾಯತು ಒಂದು ತಿಂಗಳ ಒಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸ್ ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಶ ಪಡಿಸಲ್ಪಡುವದು

ನಂಬರ್.	ದಸ್ತಾವೇಜು ಬರದುಕೊಟ್ಟವನ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
491 1881—82	ಕೇತಗ್ಗಾಲದ ಗ್ರಾಮದ ಮಲ್ಲಯ್ಯನ ಬಸವಯ್ಯನ ಮಗ ಮರಿದೇವರು, ಶಿವಾಚಾರದ ಜಾತಿ, ಪಟೇಲ್	ಕೇತಗ್ಗಾಲದ ಗ್ರಾಮದಲ್ಲಿ ಯಿರುವ ಕುರುಬರಜಾತಿ ಮುಂಜ್ಯನಯ ಮಗ ಸುಬ್ಬ	14—12—81	14—12—81	90 ರೂಪಾಯಿನ ಭೂಸ್ಥಿತಿ ಕ್ರಯಪತ್ರ.

ಅಬ್ದುಲ್‌ಖಾದರ್, ಕೆ. ಬಿ., ರಿಜಿಸ್ಟ್ರಾರ್.

ಗವರ್ನಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು, ಒಂದು ಸೇರಕ್ಕೆ ಇಪ್ಪತ್ತು ಪೌಂಡ್‌ಗಳು ತೆಗೆದುಕೊಳ್ಳುವ ಯಾವ ಮನುಷ್ಯನಾದರೂ ಕಲ್ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಸೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟು ಕೊಂಡು ಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 4—8—0; ಎಂಟು ಔನ್ಸವುಳ್ಳ ಡಬ್ಬಿಗೆ ರೂ. 8—8—0; ಒಂದು ಪೌಂಡ್ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಇದರಡೀ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸವುಳ್ಳ ಡಬ್ಬಿ ಒಂದಕ್ಕೆ ರೂ. 5—8—0, ಎಂಟು ಔನ್ಸವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌಂಡ್ ವುಳ್ಳ ಡಬ್ಬಿಗೆ 20 ರೂಪಾಯಿ. ಈ ಔಷಧವು, ಕಲ್ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯನ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತ್ತಿನೊಂದಿಗೆ ದರ 4 ವ 8 ಔನ್ಸ ತಗರದ ಡಬ್ಬೀಗೆ ಎಂಟು ಆಣೆ ಟಪ್ಪಾಲ್ ಹಾಸಲೂ, ಒಂದು ಪೌಂಡ್ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

ಮೈಸೂರು ಗೆಜೆಟ್, ಚಂದಾ ದರ ವಗೈರೆ.

	ಚಂದಾ. ರೂ.	ಆ.	ಟಪ್ಪಾಲ್ ಹಾಸಲು ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ. ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸಹಾ 12 ತಿಂಗಳಿಗೆ	7	0	3	8
ಛಷ್ ಮಾಹೆ ಯಾ ಕ್ವಾರಟರಿಗೆ	ದಾವಾಮಾಫಾಯಿ ಪ್ರಕಾರ ದರಗಳು.			

		ರೂ.	ಆ.
ಶಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟೀಸುಗಳು:—			
ಮೊದಲನೇ ದಫಾ ಪಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ) ..		2	8
ಯರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ		1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ, ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟೀಸಗಳಿಗೆ:—			
ಮೊದಲನೇ ದಫಾ		5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ		2	8
ಶಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.			
ಡ್ಯೂಪ್ಲಿಕೇಟ್ ಕಾಫೀ ಪಟ್ಟೇ, ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟೀಸಗಳಿಗೆ:—			
ಮೊದಲನೇ ಸಲಕ್ಕೆ ..	ಪುಟ 1ಕ್ಕೆ	10	0
ಯೆರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ ..	„	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್‌ಮಾಡಲ್ಪಡುತ್ತೆ:—			
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ ..	0	8
ಯೆರಡನೇ ದಫಾ ಡಿಟೋ	ಡಿಟೋ ..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ ..	..	0	4

ಬಮೋಜೀಬ್ ಹುಕ್ಕುಂ,
ಹೆಚ್. ಹಡರ್ನ್,
ಮೈ. ಗೆ. ಕಂಪೈಲ

ಮೈಸೂರ ಗೆಜೆಟ್.

ಸರ್ಕಾರದಿಂದ ಫಾಯಿಷ್ ಆದದ್ದು.

ಬೆಂಗಳೂರು, ಶನಿವಾರ, ಜೂನ್ ತಾ 7, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೩ನೇ ಭಾಗ.

ಮೈಸೂರು ಶ್ರೀಮನ್ ಮಹಾರಾಜರವರಿಂದ ಮಂಜೂರ್ ಮಾಡಲ್ಪಟ ಆಕ್ಟುಗಳು ವ ರೆಗ್ಯೂಲೇಷನ್‌ಗಳು.

ಸನ್ 1884ನೇ ಇಸವಿಯ 1ನೇ ರೆಗ್ಯೂಲೇಷನ್.

ಸನ್ 1884ನೇ ಇಸವಿಯ ಮೈಸೂರು ಚೀಫ್ ಕೋರ್ಟು ರೆಗ್ಯೂಲೇಷನ್.

ಮೈಸೂರು ಶೀಮೆಯ ಚೀಫ್ ಕೋರ್ಟು ಏರ್ಪಾಡನ್ನು ತಿದ್ದುಪಡಿ ಮಾಡುವದು ಆವಶ್ಯಕವಾದದರಿಂದ ಮೈಸೂರು ಶೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರು ಯಿದರಡಿ ಕಂಡ ಪ್ರಕಾರ ವಿಧಿಸುತ್ತಾರೆ:—

ಚಿಕ್ಕ ಹೆಸರು.

1ನೇ ಸೆಕ್ಷನ್.—ಈ ರೆಗ್ಯೂಲೇಷನ್ "1884ನೇ ಇಸವಿಯ ಮೈಸೂರು ಶೀಮೆ ಚೀಫ್ ಕೋರ್ಟು ರೆಗ್ಯೂಲೇಷನ್" ಯೆಂದು ಕರೆಯಲ್ಪಡತಕ್ಕದ್ದು.

ವ್ಯಾಪ್ತಿ.

ಈ ರೆಗ್ಯೂಲೇಷನ್ ಮೈಸೂರು ರಾಷ್ಟ್ರದ ತಮಾಂ ಪ್ರದೇಶಗಳಿಗೂ ವ್ಯಾಪಿಸಿ ಅದು 1884ನೇ ಮೇ ಯಿಪ್ಪತ್ತೆಂಟನೇ ತಾರೀಖಿನಲ್ಲಿ ಜಾರೀಗೆ ಬರತಕ್ಕದ್ದು. ಆದರೆ, ಇದರಲ್ಲಿ ಅಡಗಿರುವ ಯಾವ ಅಂಶವೂ, ಬ್ರಿಟಿಷ್ ಸರ್ಕಾರದವರಿಗೆ ಉಂಟು ಮಾಡಲ್ಪಟ್ಟ ಯಾವ ಅಧಿಕಾರವನ್ನಾಗಲಿ ಬಾಧಕ ಪಡಿಸತಕ್ಕದ್ದಲ್ಲವು.

ರದ್ದೀಯೂತಿ.

2ನೇ ಸೆಕ್ಷನ್.—ಸದರೀ ತಾರೀಖಿನಲ್ಲಿ ಮತ್ತು ಆ ತರುವಾಯ, 1879ನೇ ಆಗಸ್ಟು 27ನೇ ಮರ್ಕುಂ 236ನೇ I J, ನಂಬರ್ ಮತ್ತು 1879ನೇ ಇಸವಿ 10ನೇ ಅಕ್ಟೋಬರ್ 281ನೇ I J, ವ 282ನೇ I J, ನಂಬರ್‌ಗಳ ಇಂಡ್ಯ ಗವರ್ನ್‌ಮೆಂಟ್ ಫಾರೆನ್ ಇಲಾಖಾ ಇಸ್ತಿಹಾರ್ ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೂಲ್ಸ್ ಯಾನೆ ನಿಬಂಧನೆಗಳು ರದ್ದು ಮಾಡಲ್ಪಡತಕ್ಕವು.

ಅರ್ಥವಿವರಣೆಯ ಕಲಂ.

3ನೇ ಸೆಕ್ಷನ್.—ಈ ರೆಗ್ಯೂಲೇಷನ್‌ನಲ್ಲಿ ಸಂದರ್ಭದ ದೆಸೆಯಿಂದ ವಿರುದ್ಧವಾದ ಅಭಿಪ್ರಾಯ ಕಾಣಬಾರದೆ ಯಿದ್ದರೆ, "ಚೀಫ್ ಕೋರ್ಟು." ಅಂದರೆ, ಈ ರೆಗ್ಯೂಲೇಷನ್ ಅನುಸರಿಸಿ ಏರ್ಪಡಿಸೋಣಾದ ಮೈಸೂರು ಚೀಫ್ ಕೋರ್ಟು ಎಂತಲೂ "ಚೀಫ್ ಜಡ್ಜಿ" ಅಂದರೆ, ಈ ರೆಗ್ಯೂಲೇಷನ್ ಅನುಸರಿಸಿ ನೇಮಿಸಲ್ಪಟ್ಟ ಸದರೀ ಚೀಫ್ ಕೋರ್ಟಿನ ಚೀಫ್ ಜಡ್ಜಿ ಯೆಂತಲೂ ಯೆಣಿಸಲ್ಪಡತಕ್ಕದ್ದು: ಮತ್ತು ಹಾಲೀಜಾರೀಲಿರುವ ಯಾವದಾದರೂ

ರೆಗ್ಯೂಲೇಷನ್, ಆಕ್ಟು, ಅಥವಾ ಇತರ ಕಾನೂನಿನಲ್ಲಿ "ಚೀಫ್ ಕೋರ್ಟಿಗಾಗಲಿ, ಹೈ ಕೋರ್ಟಿಗಾಗಲಿ, ಸೂಚನೆಯು, ಈ ರೆಗ್ಯೂಲೇಷನ್ ಅನುಸರಿಸಿ ಏರ್ಪಾಡಾದ ಚೀಫ್ ಕೋರ್ಟಿಗೆ ಮಾಡಲ್ಪಟ್ಟಂತೆ ಎಣಿಸಲ್ಪಡತಕ್ಕದ್ದು.

"ಫುಲ್ ಬೆಂಚ್" ಅಂದರೆ ಚೀಫ್ ಕೋರ್ಟಿನ ತಮಾಂ ಜಡ್ಜೀಗಳೂ ಸೇರಿ ಯಿರತಕ್ಕ ಒಂದು ನ್ಯಾಯ ಸ್ಥಾನವೆಂದರ್ಥವು.

ಚೀಫ್ ಕೋರ್ಟಿನ ಏರ್ಪಾಡು.

4ನೇ ಸೆಕ್ಷನ್.—ಮೈಸೂರು ಶೀಮೆಯು ಚೀಫ್ ಕೋರ್ಟಿನಲ್ಲಿ ಮೂವರು ಅಥವಾ ಹೆಚ್ಚು ಮಂದಿ ಜಡ್ಜೀಗಳು ಶೇರಿ ಯಿರತಕ್ಕದ್ದು; ಸದರೀ ಜಡ್ಜೀಗಳು ಮೈಸೂರು ದೇಶದ ಶ್ರೀಮನ್ ಮಹಾರಾಜರವರಿಂದ ನೇಮಿಸಲ್ಪಟ್ಟು ಅವರಿಗೆ ಇಷ್ಟ ವುಂಟಾದ ಕಾಲದಲ್ಲಿ ತಮ್ಮ ತಮ್ಮ ಉದ್ಯೋಗಗಳನ್ನು ವಹಿಸತಕ್ಕದ್ದು.

ಚೀಫ್ ಕೋರ್ಟಿನ ಜಡ್ಜೀಗಳ ಪೈಕಿ ಒಬ್ಬರು ಸದರೀ ಕೋರ್ಟಿನ ಚೀಫ್ ಜಡ್ಜೀರಾಗಿ ಶ್ರೀಮನ್ ಮಹಾರಾಜರವರಿಂದ ಮೊಕರರ್ ಮಾಡಲ್ಪಡತಕ್ಕದ್ದು, ಪರಂತು ಈ ರೆಗ್ಯೂಲೇಷನ್ ಜಾರೀಗೆ ಬರುವ ಕಾಲದಲ್ಲಿ ಚೀಫ್ ಜಡ್ಜೀ ಉದ್ಯೋಗವನ್ನು ವಹಿಸಿರುವ ಆಫಿಸರರು ಜಾಸ್ತೀ ಮೊಕರರಾತೀ ಯಾವದೂ ಯಿಲ್ಲದೆ, ಈ ರೆಗ್ಯೂಲೇಷನ್ ಅನುಸರಿಸಿ ಯೇರ್ಪಾಡಾದ ಮೈಸೂರು ಚೀಫ್ ಕೋರ್ಟಿನ ಚೀಫ್ ಜಡ್ಜೀರಾಗಿರತಕ್ಕದ್ದು.

ಜಡ್ಜೀರುಗಳ ಪ್ರಾಧಾನ್ಯ.

5ನೇ ಸೆಕ್ಷನ್.—ಚೀಫ್ ಜಡ್ಜೀರು, ಚೀಫ್ ಕೋರ್ಟಿನ ಇತರ ಜಡ್ಜೀಗಳ ಮುಂದೆ ದರಜೇಯನ್ನೂ, ಪ್ರಾಧಾನ್ಯವನ್ನೂ, ಪಡೆಯತಕ್ಕದ್ದು, ಸದರೀ ಇತರ ಜಡ್ಜೀಗಳು ತಮ್ಮಲ್ಲಿ ಪರಸ್ಪರ ಇರುವಂತೆ ಅಂತಾ ಜಡ್ಜೀಗಳ ಮೊಕರರಾತಿಗಳ ಪೂರ್ವತ್ವ ಪ್ರಕಾರ ದರಜೇಯನ್ನೂ ಪ್ರಾಧಾನ್ಯವನ್ನೂ ಪಡೆಯತಕ್ಕದ್ದು.

ಚೀಫ್ ಕೋರ್ಟಿನ ಮೊಹರ್

6ನೇ ಸೆಕ್ಷನ್.—"ಮೈಸೂರು ಚೀಫ್ ಕೋರ್ಟು" ಎಂದು ಇಂಗ್ಲೀಷಿನಲ್ಲಿಯೂ, ಕನ್ನಡದೊಳಗೂ ಕೆತ್ತಲ್ಪಟ್ಟ ಅಕ್ಷರಗಳೊಡನೆ ಶ್ರೀಮನ್ ಮೈಸೂರು ಮಹಾರಾಜರವರ ಕುಲಬಿರುದಿನ ಚಿನ್ಹ ಮತ್ತು ಮುದ್ರೆಯುಳ್ಳ ಒಂದು ಮೊಹರನ್ನು ಚೀಫ್ ಕೋರ್ಟಿನವರು ಪಡೆದು ಸಂದರ್ಭಾನುಸಾರ ಅದನ್ನು ಉಪಯೋಗಿಸತಕ್ಕದ್ದು. ಸದರೀ ಮೊಹರ್ ಸಾಧಾರಣವಾಗಿ ಚೀಫ್ ಜಡ್ಜೀಯವರ ಜಿಮ್ಮೆಯಲ್ಲಿ ಯಿಡಲ್ಪಡತಕ್ಕದ್ದು.

ಚೀಫ್ ಕೋರ್ಟಿನಿಂದ ಕೊಡಲ್ಪಟ್ಟ ತಮಾಂ ಡಿಕ್ರೀಗಳೂ, ಹುಕ್ಕುಂಗಳೂ, ಇತರ ಪ್ರೋಸೆಸ್‌ಗಳೂ ಸದರೀ ಮೊಹರಿನಿಂದ ಮೊಹರ್ ಮಾಡಲ್ಪಟ್ಟು, ಚೀಫ್ ಕೋರ್ಟಿನ ಒಬ್ಬ ಜಡ್ಜೀಯಿಂದಾಗಲಿ, ರಿಜಿಸ್ಟ್ರಾರಿಂದಾಗಲಿ, ರುಜು ಮಾಡಲ್ಪಡತಕ್ಕದ್ದು.

ಮಿನಿಸ್ಟೀರಿಯಲ್ ಯಾನೆ ಮುಖ್ಯತಾಬೇದಾರೀ ಆಫೀಸರಗಳ ಮೊಕರರಾತಿ.

7ನೇ ಸೆಕ್ಷನ್.—(1) ಚೀಫ್ ಕೋರ್ಟಿನವರು, ಆಗಿಂದಾಗ್ಯೆ ಮತ್ತು ಮೈಸೂರು ಗವರ್ನಮೆಂಟಿನಿಂದ ವಿಧಿಸಲ್ಪಡಬಹುದಾದ ಯಾವ ರೂಲ್ಸಿಗೂ, ನಿರ್ಬಂಧಗಳಿಗೂ, ಒಳಪಟ್ಟು ಚೀಫ್ ಕೋರ್ಟಿನಿಂದ ನ್ಯಾಯ ವಿಚಾರಣೆ ಮಾಡುವ ಬಗ್ಗ್ಯೆ, ಈ ರೆಗ್ಯೂಲೇಷನ್ ಮೂಲಕ ಸದರೀ ಕೋರ್ಟಿಗೆ ಕೊಡಲ್ಪಟ್ಟ, ಮತ್ತು ವಿಧಿಸಲ್ಪಟ್ಟ, ಅಧಿಕಾರಗಳನ್ನು ಚಲಾಯಿಸುವ ಬಗ್ಗ್ಯೆ, ಕೆಲಸಗಳನ್ನು ನೆರವೇರಿಸುವ ಬಗ್ಗ್ಯೆ, ಜರೂರಾಗಿರಬಹುದಾದ ಒಬ್ಬ ರಿಜಿಸ್ಟ್ರಾರನ್ನೂ, ಒಬ್ಬ ಡಿಪ್ಟಿ ರಿಜಿಸ್ಟ್ರಾರನ್ನೂ, ಅಂತಾ ಇತರ ಮಿನಿಸ್ಟೀರಿಯಲ್ ಆಫಿಸರರನ್ನೂ ಮೊಕರರ್ ಮಾಡಬಹುದು.

(2) ರಿಜಿಸ್ಟ್ರಾರ ಮತ್ತು ಡಿಪ್ಟಿ ರಿಜಿಸ್ಟ್ರಾರ ಮೊಕರರಾತಿಯು ಮೈಸೂರು ಸರ್ಕಾರದ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು.

(3) ಈ ರೆಗ್ಯೂಲೇಷನ್ ಜಾರೀಗೆ ಬರುವ ತಾರೀಖಿನಲ್ಲಿ ಕೆಲಸಗಳುಳ್ಳ ಚೀಫ್ ಕೋರ್ಟಿನ ರಿಜಿಸ್ಟ್ರಾರ್ ಮತ್ತು ಇತರ ಮಿನಿಸ್ಟೀರಿಯಲ್ ಆಫೀಸರಗಳು ಯಿದನ್ನು ಅನುಸರಿಸಿ ಮೊಕರರ್ ಮಾಡಲ್ಪಟ್ಟಿರುವದಾಗಿ ಭಾವಿಸಲ್ಪಡತಕ್ಕದ್ದು.

ಮಿನಿಸ್ಟೀರಿಯಲ್ ಆಫಿಸರಗಳ ಕೆಲಸಗಳು.

8ನೇ ಸೆಕ್ಷನ್.—ಹಿಂದಿನಕಡೇ ಸೆಕ್ಷನ್ ಅನುಸರಿಸಿ ಮೊಕರರ್ ಮಾಡಲ್ಪಟ್ಟ ಆಫಿಸರಗಳು, ಚೀಫ್ ಕೋರ್ಟಿನವರು ಆಗಿಂದಾಗ್ಯೆ ನಿಯಮಿಸ ಬಹುದಾದ ಮಿನಿಸ್ಟೀರಿಯಲ್ ಸ್ವರೂಪವುಳ್ಳ ಅಧಿಕಾರಗಳನ್ನು ಚಲಾಯಿಸತಕ್ಕದ್ದು, ಕೆಲಸಗಳನ್ನು ನಿರ್ವಹಿಸತಕ್ಕದ್ದು.

ಮಿನಿಸ್ಟೀರಿಯಲ್ ಆಫಿಸರಗಳ ಸಸ್ಪೆನ್ಷನ್ ಮತ್ತು ಬರತರಫ್.

9ನೇ ಸೆಕ್ಷನ್.—ಅಂತಾ ಯಾವ ಆಫಿಸರರಾಗಲಿ, ಚೀಫ್ ಕೋರ್ಟಿನ ಹುಕ್ಕುಂನಿಂದ ಸಸ್ಪೆಂಡ್ ಅಥವಾ ಬರತರಫ್ ಮಾಡಲ್ಪಡಬಹುದು, ಪರಂತು ಮೈಸೂರು ಸರ್ಕಾರದ ಮಂಜೂರಾತಿಯನ್ನು ಮುಂದಾಗಿ ಪಡಕೊಳ್ಳದೇ ರಿಜಿಸ್ಟ್ರಾರೂ, ಡೆಪ್ಯುಟಿ ರಿಜಿಸ್ಟ್ರಾರೂ, ಬರತರಫ್ ಮಾಡಲ್ಪಡ ಕೂಡದು.

ಚೀಫ್ ಕೋರ್ಟು, ಮಿಕ್ಕ ತಮಾಂ ಕೋರ್ಟುಗಳ ಮೇಲೂ ಅಧಿಕಾರ ಉಳ್ಳ ಹೈ ಕೋರ್ಟಾಗಿರತಕ್ಕದ್ದು.

10ನೇ ಸೆಕ್ಷನ್.—ಚೀಫ್ ಕೋರ್ಟು, ತತ್ಕಾಲದಲ್ಲಿ ಜಾರೀಯಲ್ಲಿರುವ ತಮಾಂ ಆಕ್ಟುಗಳ ಕೆಲಸಕ್ಕಾಗಿ, ಮೈಸೂರು, ಶೀಮೆಯಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್, ರಿಫರೆನ್ಸ್ ಮತ್ತು ಪುನರ್ವಿಮರ್ಶೆ ಇವುಗಳ ಬಾಬತ್ತು ಎಲ್ಲಕ್ಕೂ ಮೇಲ್ಪಟ್ಟ ಕೋರ್ಟಾಗಿ ಯೆಣಿಸಲ್ಪಟ್ಟು, ಸದರೀ ರಾಜ್ಯದಲ್ಲಿ ಸಿವಿಲ್ ವ ಕ್ರಿಮಿನಲ್ ಬಾಬತು ತಮಾಂ ಕೋರ್ಟುಗಳೂ, ಚೀಫ್ ಕೋರ್ಟಿನ ಮೇಲ್ವಿಚಾರಣೆ ಮತ್ತು ಅಧಿಕಾರಕ್ಕೆ ಒಳಪಡತಕ್ಕದ್ದು.

ಪಾರಂಪರ್ಯ ವಗೈರೇ ಮೊಕದ್ದಮೆಗಳಲ್ಲಿ ಕಾನೂನ್.

11ನೇ ಸೆಕ್ಷನ್.—ಯಾವ ವ್ಯಾಜ್ಯದಲ್ಲಿ ಯಾಗಲಿ, ನಡವಳಿತದಲ್ಲಾಗಲಿ, ಪಾರಂಪರ್ಯ, ದಾಯ ವಿವಾಹ, ಅಥವಾ ಜಾತಿ, ಯಾವದಾದರೂ ಮತ ಸಂಬಂಧವಾದ ವಾಡಿಕೆ ನಿಬಂಧನೆ ಇಂತಾದ್ದನ್ನು ಕುರಿತ ಯಾವ ವಿಚಾರವನ್ನಾಗಲಿ, ತೀರ್ಮಾನ ಮಾಡಲಿಕ್ಕೆ ಚೀಫ್ ಕೋರ್ಟಿಗೆ ಆವಶ್ಯಕವಾಗಿದ್ದರೆ,

(*a.*) ಕಕ್ಷಿಗಾರರು ಮಹಮ್ಮದೀಯರಾಗಿದ್ದರೆ, ಮಹಮ್ಮದೀಯ ಲಾ, ಮತ್ತು ಕಕ್ಷಿಗಾರರು ಹಿಂದುಗಳಾಗಿದ್ದರೆ ಹಿಂದು ಧರ್ಮಶಾಸ್ತ್ರ, ಅಥವಾ,

(*b.*) ಕಾನೂನಿನ ಬಲವುಳ್ಳ ಮತ್ತು ಕಕ್ಷಿಗಾರರಿಗಾಗಲಿ, ಅವರಿಗೆ ಸಂಬಂಧಿಸಿದ, ಸ್ವತ್ತಿಗಾಗಲಿ, ಅಧಿಕಾರ ಉಂಟು ಮಾಡುವ ಮಾಮೂಲ್ ಯಾವದಾದರೂ ಯಿದ್ದರೆ ಅಂತಾ ಕಾನೂನ್ ಯಾ ಮಾಮೂಲ್ ನ್ಯಾಯವಿಧಾಯಕ ಆಕ್ಟಿನ ದೆಸೆಯಿಂದ ಬದಲಾಯಿಸಲ್ಪಡದೆ ಅಥವಾ ರದ್ದು ಮಾಡಲ್ಪಡದೆ ಯಿದ್ದರೆ ಅಂಥಾ ಮಾಮೂಲು, ಫೈಸಲಿನ ನಿಬಂಧನೆಯನ್ನು ಏರ್ಪಡಿಸತಕ್ಕದ್ದು.

(*c.*) ವಿಶೇಷವಾದ ರೂಲ್ ನೆಲಗೊಳ್ಳದೆ ಯಿರುವ ಮೊಕದ್ದಮೆಗಳಲ್ಲಿ ಚೀಫ್ ಕೋರ್ಟಿನವರು, ನ್ಯಾಯಕ್ಕು, ಧರ್ಮಕ್ಕೂ, ಯುಕ್ತಾ ಯುಕ್ತ ವಿಚಾರಕ್ಕೂ ಅನುಗುಣವಾಗಿ ಕೆಲಸವನ್ನು ನಿರ್ವಹಿಸತಕ್ಕದ್ದು.

ಚೀಫ್ ಕೋರ್ಟಿನ ಸಾಧಾರಣ ಅಸಲ್ ಸಿವಿಲ್ ಅಧಿಕಾರ.

12ನೇ ಸೆಕ್ಷನ್—ಮೈಸೂರು ಸರ್ಕಾರದವರು ಆಗಿಂದಾಗ್ಯೆ, ಇಸ್ತಿಹಾರ್‌ನಾಮೇ ಮೂಲಕ ಸರ್ಕಾರೀ ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡಿ ನಿಯಮಿಸ ಬಹುದಾದ ಅಂತಾ ಸ್ಥಳ ಸರಹದ್ದುಗಳೊಳಗೆ ಉಂಟಾಗತಕ್ಕ ಸಿವಿಲ್ ಸ್ವರೂಪವುಳ್ಳ ತಮಾಂವ್ಯಾಜ್ಯಗಳಲ್ಲೂ, ನಡವಳಿತಗಳಲ್ಲೂ, ಚೀಫ್ ಕೋರ್ಟಿನವರು, ಒಂದು ಡಿಸ್ಟ್ರಿಕ್ಟು ಕೋರ್ಟಿನ ಸಾಧಾರಣ, ಅಸಲ್ ಸಿವಿಲ್ ಅಧಿಕಾರವುಂಟಾಗಿ ಅದನ್ನು ಚಲಾಯಿಸತಕ್ಕದ್ದು. ಹಾಗೆ ಪ್ರಾಯಿಷ್‌ಮಾಡಲ್ಪಟ್ಟ ಮತ್ತು ನೇಮಿಸಲ್ಪಟ್ಟ ಸ್ಥಳ ಸರಹದ್ದುಗಳು, ಸಿವಿಲ್ ಪ್ರೊಸೀಡ್ಯೂರ್ ಕೋಡಿನ ಅರ್ಥರೀತ್ಯಾ ಒಂದು ಡಿಸ್ಟ್ರಿಕ್ಟೆಂದು ಭಾವಿಸಲ್ಪಡತಕ್ಕದ್ದು. ಈ ಸೆಕ್ಷನ್ನಿಂದ ಚೀಫ್‌ಕೋರ್ಟಿಗೆ ಉಂಟುಮಾಡಲ್ಪಟ್ಟ ಅಸಲ್ ಸಿವಿಲ್ ಅಧಿಕಾರವನ್ನು ಚಲಾಯಿಸುವ ಬಗ್ಗೆ, ಚೀಫ್ ಕೋರ್ಟಿನವರು, ಅಂತಾ ಕೋರ್ಟಿನ ಜಡ್ಜಿಗಳ ಪೈಕೀ ಒಬ್ಬರನ್ನು ನೇಮಿಸತಕ್ಕದ್ದು, ಸದರೀ ಜಡ್ಜಿಯು ಮೇಲೆಕಂಡ ವಿಷಯಕ್ಕಾಗಿ, "1883ನೇ ಇಸಿವಿಯ ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನ್" ಅನುಸರಿಸಿ ಮೇಲೆ ಕಂಡ ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟು ಜಡ್ಜಿಯಾಗಿ ಅವರು ಮೊಕರರ್ ಮಾಡಲ್ಪಟ್ಟಿದ್ದರೆ ಹ್ಯಾಗೋ ಅದೇ, ರೀತಿಯಾಗಿ ಮತ್ತು ಅದೇ ನಡವಳಿತಗಳಿಗೆ ಒಳಪಟ್ಟು ತಮ್ಮ ಕೆಲಸಗಳನ್ನು ನಡಿಸತಕ್ಕದ್ದು.

ಚೀಫ್‌ಕೋರ್ಟಿನ ಸಾಧಾರಣವಾದ ಅಸಲ್ ಕ್ರಿಮಿನಲ್ ಅಧಿಕಾರ.

13ನೇ ಸೆಕ್ಷನ್.—ಮೈಸೂರು ಗವರ್ನಮೆಂಟಿನವರು ಆಗಿಂದಾಗ್ಯೆ ಸರ್ಕಾರೀ ಗೆಜೆಟ್ಟಿನಲ್ಲಿ ಇಸ್ತಿಹಾರ್‌ನಾಮೆ ಮೂಲಕ ಪ್ರಕಟಿಸಲ್ಪಡತಕ್ಕ ಮತ್ತು ಮೊಕರರ್ ಮಾಡಲ್ಪಡತಕ್ಕ ಸ್ಥಳ ಸರಹದ್ದುಗಳೊಳಗೆ, ಚೀಫ್ ಕೋರ್ಟಿನವರು ಒಂದು ಸೆಷನ್‌ಕೋರ್ಟಿನ ಸಾಧಾರಣ ಅಸಲ್ ಕ್ರಿಮಿನಲ್ ಅಧಿಕಾರವನ್ನು ಪಡೆದು ಚಲಾಯಿಸತಕ್ಕದ್ದು. ಹಾಗೆ ಪ್ರಕಟಿಸಲ್ಪಟ್ಟ ಮತ್ತು ಮೊಕರರ್‌ಮಾಡಲ್ಪಟ್ಟ, ಸ್ಥಳ ಸರಹದ್ದುಗಳು ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ ಅರ್ಥರೀತ್ಯಾ ಒಂದು ಸೆಷನ್ ಡಿವಿಜನ್ನಾಗಿ ಭಾವಿಸಲ್ಪಡತಕ್ಕದ್ದು. ಈ ಸೆಕ್ಷನ್‌ನಿಂದ ಚೀಫ್ ಕೋರ್ಟಿನವರಿಗೆ ಉಂಟುಮಾಡಲ್ಪಟ್ಟ ಅಸಲ್ ಕ್ರಿಮಿನಲ್ ಅಧಿಕಾರವನ್ನು ಚಲಾಯಿಸುವ ಬಗ್ಯೆ ಚೀಫ್ ಕೋರ್ಟಿನವರು, ಅಂತಾ ಕೋರ್ಟಿನ ಜಡ್ಜಿಗಳ ಪೈಕೀ ಒಬ್ಬರನ್ನು ನೇಮಿಸತಕ್ಕದ್ದು, ಅವರು ಕ್ರಿಮಿನಲ್ ಪ್ರೊಸೀಡ್ಯೂರ್ ಅನುಸರಿಸಿ ಮೇಲೆ ಕಂಡ ಸೆಷನ್ ಡಿವಿಜನ್‌ಗೋಸ್ಕರ ಸೆಷನ್‌ಕೋರ್ಟು ಜಡ್ಜಿರಾಗಿ ಮೊಕರರ್ ಮಾಡಲ್ಪಟ್ಟಿದ್ದರೆ ಹ್ಯಾಗೋ ಅದೇರಿತಿಯಾಗಿ ಮತ್ತು ಬದಸ್ತೂರ್ ನಡವಳಿತಕ್ಕೆ ಒಳಪಟ್ಟು, ತಮ್ಮ ಕೆಲಸಗಳನ್ನು ನಡಿಸತಕ್ಕದ್ದು.

ಚೀಫ್ ಕೋರ್ಟಿನ ಸಾಧಾರಣ ಅಸಲ್ ಅಧಿಕಾರದ ಸರಹದ್ದಿನೊಳಗೆ, ಕೆಳ ಕೋರ್ಟುಗಳ ಫೈಸಲ್‌ಗಳ ಮೇಲೆ ಅಪ್ಪೀಲ್‌ಗಳು.

14ನೇ ಸೆಕ್ಷನ್—12 ವ 13ನೇ ಸೆಕ್ಷನ್‌ಗಳಲ್ಲಿ ಕಂಡ ಸ್ಥಳಸರಹದ್ದುಗಳೊಳಗೆ ಯಾವ ತಾಬೇದಾರೀ ಕೋರ್ಟಿನಿಂದಾಗಲಿ, ಕೊಡಲ್ಪಟ್ಟ, ಸಿವಿಲ್ ಯಾ ಕ್ರಿಮಿನಲ್ ಬಾಬತ ಫೈಸಲ್‌ಗಳು, ಹುಕ್ಕುಂಗಳು, ಡಿಕ್ರೀಗಳು ಯಾ ಸೆಂಟೆನ್ಸ್ ಯಾನೇ ತೀರ್ಪುಗಳು ಇಂತಾದ್ದರ ಮೇಲೆ ಬರತಕ್ಕ ಅಪ್ಪೀಲ್‌ಗಳು, ಒಂದು ಡಿಸ್ಟ್ರಿಕ್ಟು ಕೋರ್ಟಿಗಾಗಲಿ, ಸೆಷನ್ ಕೋರ್ಟಿಗಾಗಲಿ, ಕಾನೂನಿಂದ ಅವಕಾಶ ವುಂಟಾದರೆ, ಚೀಫ್ ಕೋರ್ಟಿಗೆ ದಾಖಲಾಗತಕ್ಕದ್ದು.

ಒಂದು ಡಿಸ್ಟ್ರಿಕ್ಟು ಕೋರ್ಟಿನಿಂದಲೂ, ಸೆಷನ್‌ಕೋರ್ಟಿನಿಂದಲೂ, ಮೇಲೆ ಕಂಡ ಸ್ಥಳ ಸರಹದ್ದುಗಳೊಳಗೆ ಸಾಮಾನ್ಯವಾಗಿ ಚಲಾಯಿಸಲ್ಪಡತಕ್ಕ ಇತರ ತಮಾಂ ಅಧಿಕಾರಗಳೂ, ಚೀಫ್ ಕೋರ್ಟಿನಿಂದ ಚಲಾಯಿಸಲ್ಪಡತಕ್ಕದ್ದು.

ಚೀಫ್ ಕೋರ್ಟಿನವರು ಅಸಲ್ ಅಧಿಕಾರವನ್ನು ಚಲಾಇಸುವಲ್ಲಿ ಕೊಟ್ಟ ಫೈಸಲಿನ ಮೇಲೆ ಅಪ್ಪೀಲ್‌ಗಳು.

15ನೇ ಸೆಕ್ಷನ್—(1) ಚೀಫ್ ಕೋರ್ಟಿಗೆ ಉಂಟುಮಾಡಲ್ಪಟ್ಟ ಸಾಧಾರಣ ಅಸಲ್ ಸಿವಿಲ್ ಮತ್ತು ಕ್ರಿಮಿನಲ್ ಅಧಿಕಾರವನ್ನು ಚಲಾಯಿಸುವಲ್ಲಿ ಸದರೀ ಚೀಫ್ ಕೋರ್ಟಿನ ಒಬ್ಬ ಜಡ್ಜೀಯಿಂದ ಕೊಡಲ್ಪಟ್ಟ ತೀರ್ಪುಗಳು, ಹುಕ್ಕುಂಗಳು, ಅಥವಾ ಫೈಸಲ್‌ಗಳು ಇವುಗಳ ಮೇಲಣ ಅಪ್ಪೀಲ್‌ಗಳು ಅವುಗಳನ್ನು ಕುರಿತ ದಾಖಲೆಗಳು ಮತ್ತು, ಅವುಗಳ ಪುನರ್ವಿಮರ್ಶೆಯ ಬಗ್ಯೆ ಅರ್ಜೀಗಳು ನ್ಯಾಯ ಸಮ್ಮತವಾದರೆ, ಚೀಫ್‌ಕೋರ್ಟಿನ ಫುಲ್ ಬೆಂಚ್‌ನಿಂದ ವಿಚಾರಿಸಲ್ಪಡತಕ್ಕದ್ದು.

ಚೀಫ್ ಕೋರ್ಟಿಗೆ ಇತರ ಅಪ್ಪೀಲ್‌ಗಳು.

(2) ತತ್ಕಾಲದಲ್ಲಿ ಜಾರೀಯಿರುವ ಯಾವ ಕಾನೂನು ಅನುಸರಿಸಿ ಯಾಗಲಿ ಚೀಫ್ ಕೋರ್ಟಿಗೆ ದಾಖಲಾಗತಕ್ಕ ಸಿವಿಲ್ ವ ಕ್ರಿಮಿನಲ್ ಬಾಬತು ಪ್ರತಿ ಅಪ್ಪೀಲೂ ಮತ್ತು ಫಾಸೀ ಸಜಾವನ್ನು ಕಾಯಂಮಾಡುವ ಬಗ್ಯೆ ಚೀಫ್ ಕೋರ್ಟಿಗೆ ರಿಫರ್ ಮಾಡಲ್ಪಟ್ಟ ಪ್ರತಿ ಮೊಕದ್ದಮೆಯೂ, ಸದರೀ ಕೋರ್ಟಿನ ಇಬ್ಬರು ಜಡ್ಜೀಗಳಿಗೆ ಕಡಮೆ ಇಲ್ಲದೆ, ಅಡಗಿರುವ ಒಂದು ನ್ಯಾಯಾಸನದಿಂದ ದರ್ಯಾಪ್ತು ಮಾಡಲ್ಪಡತಕ್ಕದ್ದು.

ಫುಲ್ ಬೆಂಚಿಗೆ (ಯಾನೆ ಯಲ್ಲ ಜಡ್ಜಿಗಳೂ ಸೇರಿದ ಕೋರ್ಟಿಗೆ) ದಾಖಲೆ.

(3) ಕಾನೂನಿನ ಅಥವಾ ಕಾನೂನು ಬಲವುಳ್ಳ ವಾಡಿಕೆಯ, ಮತ್ತು ಯಾವದಾದರೂ ದಸ್ತಾವೇಜಿನ ಅಭಿಪ್ರಾಯ ಅಥವಾ ಸದರೀ ಜಡ್ಜಿಯ ಮುಂದೆಯಾಗಲಿ, ಕೋರ್ಟಿನ ಮುಂದೆಯಾಗಲಿ ವಿಚಾರಣೆಯೊಳಗಿರುವ ಯಾವ ವ್ಯಾಜ್ಯದಲ್ಲಿಯಾಗಲಿ ಇತರ ನಡವಳಿತದಲ್ಲಾಗಲಿ, ತತ್ಕಾಲದೊಳಗೆ ಜಾರೀಯಿರುವ ಕಾನೂನು ಅನುಸರಿಸಿ ಮತ್ತೇನೂ ಅಪ್ಪೀಲಿರುವದಿಲ್ಲವೋ ಅಂತಾ ದಾವೆ ಯಾ ನಡವಳಿತದಲ್ಲಿ ಯಾವದಾದರೂ ಸಾಕ್ಷ್ಯದ ಅಂಗೀಕಾರ ಇಂತಾದ್ದರ ಯಾವ ಅಂಶವನ್ನಾಗಲಿ ಚೀಫ್ ಕೋರ್ಟಿನ ಯಾವ ಜಡ್ಜೀಯಾಗಲಿ, ಸದರೀ ಕೋರ್ಟಿನ ಒಂದು ಫುಲ್‌ಬೆಂಚಿಗೆ, ರಿಫರ್ ಮಾಡಬಹುದು.

ಅಧಿಕ ಸಂಖ್ಯೆಯವರ ತೀರ್ಪು ವ್ಯಾಪಕವಾಗಿರತಕ್ಕದ್ದು.

(4) ಚೀಫ್ ಕೋರ್ಟಿನ ಯಾವ ಫುಲ್ ಬೆಂಚಿಗಾಗಲಿ ಸೇರಿಯಿರುವ ಜಡ್ಜೀಗಳ ಪೈಕೀ ಅಧಿಕ ಸಂಖ್ಯೆಯವರ ತೀರ್ಪು ಚೀಫ್ ಕೋರ್ಟಿನ ತೀರ್ಪಾಗಿರತಕ್ಕದ್ದು. ಚೀಫ್ ಕೋರ್ಟಿನ ಒಂದು ನ್ಯಾಯಸ್ಥಾನಕ್ಕೆ ಇಬ್ಬರು ಜಡ್ಜೀಗಳು ಮಾತ್ರ ಸೇರ್ರಿಯಿದ್ದ ಪಕ್ಷಕ್ಕೆ ಮತ್ತು, ಅಂತಾ ಕೋರ್ಟಿನ ಮುಂದೆ ವಿಚಾರಣೆಯಲ್ಲಿರುವ ಯಾವದಾದರೂ ಮುಖ್ಯಾಂಶದಲ್ಲಿ ಅಂತಾ ಜಡ್ಜೀಗಳೊಳಗೆ ಪರಸ್ಪರ ಅಭಿಪ್ರಾಯ ಭೇದ ವುಂಟಾಗಿದ್ದರೆ, ಅಂತಾ ಅಂಶವು, ಒಂದು ಫುಲ್ ಬೆಂಚಿಗೆ ರಿಫರ್ ಮಾಡಲ್ಪಟ್ಟು, ಅಂತಾ ಫುಲ್ ಬೆಂಚಿನಲ್ಲಿ ಹೆಚ್ಚು ಸಂಖ್ಯೆಯುಳ್ಳ ಜಡ್ಜೀಗಳ ಫೈಸಲು ಚೀಫ್ ಕೋರ್ಟಿನ ಫೈಸಲಾಗಿರತಕ್ಕದ್ದು.

ಚೀಫ್ ಕೋರ್ಟಿನವರು ಮೊಕದ್ದಮೆಗಳನ್ನು ವರ್ಗಮಾಡಬಹುದು.

16ನೇ ಸೆಕ್ಷನ್—ಚೀಫ್ ಕೋರ್ಟಿನವರು, ತಮಗೆ ಯುಕ್ತ ತೋರಿದಾಗ ತಮ್ಮಲ್ಲಿ ವಿಚಾರಣೆಯೊಳಗಿರುವ ಯಾವದಾದರೂ ಮೊಕದ್ದಮೆ, ಸಿವಿಲ್ ಅಥವಾ ಕ್ರಿಮಿನಲ್ ಸ್ವರೂಪವುಳ್ಳದ್ದಾಗಿರುವಲ್ಲಿ, ಅಸಲ್ ಅಥವಾ ಅಪ್ಪಲ್ಲೇಟಾಗಿದ್ದಲ್ಲಿ ಪರಂತು ತಕ್ಕ ಅಧಿಕಾರವುಳ್ಳ, ಯಾವ ಕೋರ್ಟಿಗಾಗಲಿ, ಅದು ಈ ರೆಗ್ಯೂಲೇಷನಿನ 12 ಮತ್ತು 13ನೇ ಸೆಕ್ಷನ್‌ಗಳಲ್ಲಿ ಕಂಡ ಸ್ಥಳ ಸರಹದ್ದುಗಳೊಳಗಿರಲಿ, ಅವುಗಳ ಆಚೆಗಿರಲಿ, ವರ್ಗಮಾಡಬಹುದು.

ಚೀಫ್ ಕೋರ್ಟು ಸೇರುವ ಸ್ಥಳ.

17ನೇ ಸೆಕ್ಷನ್.—ಮೈಸೂರು ಸರ್ಕಾರದವರು, ಕೋರ್ಟು ಮಾಡುವ ಬಗ್ಯೆ ಆಗಿಂದಾಗ್ಯೆ ಮೊಕರರ್ ಮಾಡಬಹುದಾದ ಸ್ಥಳದಲ್ಲಿ ಚೀಫ್ ಕೋರ್ಟಿನವರು ತಮ್ಮ ಕೋರ್ಟು ಮಾಡತಕ್ಕದ್ದು.

ಈ ರೆಗ್ಯೂಲೇಷನ್ನಿಂದಾಗಲಿ, ತತ್ಕಾಲದೊಳಗೆ ಜಾರೀ ಇರುವ ಯಾವದಾದರೂ ಇತರ ಕಾನೂನಿನಿಂದಾಗಲಿ, ಚೀಫ್ ಕೋರ್ಟಿಗೆ ವುಂಟು ಮಾಡಲ್ಪಟ್ಟ ಅಧಿಕಾರಗಳು, ಈ ಸೆಕ್ಷನಿನ 1ನೇ ಪ್ಯಾರಾ ಅನುಸರಿಸಿ ಮೊಕರರ್ಮಾಡಲ್ಪಟ್ಟ ಸ್ಥಳ ಶಿವಾಯಿ ಯಾವ ಸ್ಥಳದೊಳಗಾಗಲಿ, ಸರ್ಕ್ಯೂಟ್ ದ್ವಾರಾ ಅಂತಾ ಇತರ ಕೆಲವು ಸ್ಥಳಗಳಲ್ಲಿಯಾಗಲಿ, ಚಲಾಯಿಸುವದು ಅನುಕೂಲವೆಂದು ಮೈಸೂರು ಗವರ್ನಮೆಂಟಿಗೆ ಕಾಣಬಂದರೆ, ಸದರೀ ಮೈಸೂರು ಗವರ್ನಮೆಂಟಿನವರು ಹುಕ್ಕುಂ ಮೂಲಕ, ಅಂತಾ ಹುಕ್ಕುಂ ಮೂಲಕ ನೇಮಿಸಲ್ಪಡಬಹುದಾದ ಅಂತಾ ಸ್ಥಳ ಯಾ ಸ್ಥಳದಲ್ಲಿ ಕೋರ್ಟು ಮಾಡುವಂತೆ, ಅಂತಾ ಕೋರ್ಟಿನ ಜಡ್ಜಿಗಳ ಪೈಕಿ ಒಬ್ಬರು ಅಥವಾ ಹೆಚ್ಚು ಮಂದಿ ಜಡ್ಜಿಗಳಿಗೆ ಅಧಿಕಾರ ಕೊಡತಕ್ಕದ್ದು ಮತ್ತು ನೇಮಿಸತಕ್ಕದ್ದು. ಅಂತಾ ಹುಕ್ಕುಂ ಅನುಸರಿಸಿ ಕೆಲಸ ನೋಡುವ ಜಡ್ಜೀಯಾಗಲಿ ಜಡ್ಜಿಗಳಾಗಲಿ ಸಾಧಾರಣವಾಗಿ ಕೋರ್ಟು ಮಾಡುವ ಸ್ಥಳದಲ್ಲಿ, ಸಂದರ್ಭಾನುಸಾರ, ಚೀಫ್ ಕೋರ್ಟಿನ ಒಬ್ಬ ಜಡ್ಜಿಯಿಂದ ಅಥವಾ ಜಡ್ಜಿಗಳಿಂದ ಪಡೆಯಬಹುದಾದ ಮತ್ತು ಚಲಾಯಿಸಲ್ಪಡತಕ್ಕಂತಾ ಅಧಿಕಾರವನ್ನೇ ಪಡೆದು ಚಲಾಯಿಸತಕ್ಕದ್ದು.

18ನೇ ಸೆಕ್ಷನ್.—ಮೈಸೂರು ಗವರ್ನಮೆಂಟಿನವರು, ಈ ಸೆಕ್ಷನ್ನಲ್ಲಿ ವಿವರಿಸಲ್ಪಟ್ಟ ವಿಶಿಷ್ಟ ಅಧಿಕಾರಗಳನ್ನಾಗಲಿ ಯಾವದಾದರೂ ಅಧಿಕಾರಗಳನ್ನಾಗಲಿ ಒಬ್ಬ ಚೀಫ್ ಜಡ್ಜೀಗೆ ಉಂಟುಮಾಡತಕ್ಕದ್ದು ಯುಕ್ತವೆಂದು ಭಾವಿಸಿದರೆ ಆಮೇರೆ ಉಂಟುಮಾಡಬಹುದು, ಮತ್ತು ಅಂಥಾ ಯಾವ ಹುಕ್ಕುಮನ್ನಾಗಲಿ ಆಗಿಂದಾಗ್ಯೆ ರದ್ದು ಮಾಡಬಹುದು.

ಚೀಫ್ ಜಡ್ಜಿಯವರಿಗೆ ವುಂಟುಮಾಡಲ್ಪಡಬಹುದಾದ ಅಧಿಕಾರಗಳು.

ಈ ಸೆಕ್ಷನ್ ಅನುಸರಿಸಿ ಅಧಿಕಾರ ಕೊಡಲ್ಪಟ್ಟ ಚೀಫ್ ಜಡ್ಜಿಯು, ಈ ಸೆಕ್ಷನ್ ಅನುಸರಿಸಿ ತಮಗೆ ವುಂಟುಮಾಡಲ್ಪಟ್ಟ ವಿಶಿಷ್ಟ ಅಧಿಕಾರಗಳನ್ನೂ ಚಲಾಯಿಸತಕ್ಕದ್ದು. ಮತ್ತು ತಮ್ಮಿಂದ ಅಂತಾ ಅಧಿಕಾರಗಳು ಚಲಾಯಿಸುವಣವು ಈ ರೆಗ್ಯೂಲೇಷನ್ ಅನುಸರಿಸಿ ಚೀಫ್ ಕೋರ್ಟಿನಿಂದ ಸದರೀ ಅಧಿಕಾರವು ಚಲಾಯಿಸಲ್ಪಟ್ಟಂತೆ ಭಾವಿಸಲ್ಪಡತಕ್ಕದ್ದು.

ಈ ಸೆಕ್ಷನ್ನಲ್ಲಿ ಸೂಚಿಸಲ್ಪಟ್ಟ ಅಧಿಕಾರಗಳ್ಯಾವವೆಂದರೆ—

1ನೇದು—7ನೇ ಸೆಕ್ಷನ್ 1ನೇ ಪ್ಯಾರ ಅನುಸರಿಸಿ ಮಿನಿಸ್ಟೀರಿಯಲ್ ಆಫಿಸರಿಗಳ ಮೊಕರರಾತಿ.

2ನೇದು.—8ನೇ ಸೆಕ್ಷನ್ ಅನುಸರಿಸಿ ಮಿನಿಸ್ಟೀರಿಯಲ್ ಆಫಿಸರಗಳ ಅಧಿಕಾರಗಳನ್ನೂ ಕೆಲಸಗಳನ್ನೂ ಕುರಿತು ಅಪ್ಪಣೆ.

3ನೇದು—ಚೀಫ್ ಕೋರ್ಟಿನ ಕೆಲಸವನ್ನು ತಮಗೂ ಸದರೀ ಕೋರ್ಟಿನ ಇತರ ಜಡ್ಜಿಗಳಿಗೂ ಹಂಚುವಿಕೆ.

19ನೇ ಸೆಕ್ಷನ್.—ಇದರಲ್ಲಿ ಕಂಡ ಮೇರೆ ಅಥವಾ ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಇತರ ಆಕ್ಟಿನ ಮೂಲಕವಾಗಿ ಅನ್ಯಥಾ ವಿಧಿಸಲ್ಪಟ್ಟ ಹೊರತು, ಚೀಫ್ ಕೋರ್ಟಿನವರು ತಮ್ಮ ಜಡ್ಜಿಗಳ ಪೈಕಿ ಒಬ್ಬರಿಂದಾಗಲಿ ಹೆಚ್ಚು ಮಂದಿಯಿಂದಾಗಲಿ ಈ ರೆಗ್ಯೂಲೇಷನ್ನಿಂದ ಅಥವಾ ತತ್ಕಾಲದೊಳಗೆ ಜಾರೀಯಿರುವ ಯಾವದಾದರೂ ಇತರ ಆಕ್ಟಿನಿಂದ ಸದರೀ ಕೋರ್ಟಿಗೆ ವುಂಟು ಮಾಡಲ್ಪಟ್ಟ ಯಾವದಾದರೂ ಅಧಿಕಾರಗಳನ್ನು ಚಲಾಯಿಸುವ ಬಗ್ಯೆ ತಮಗೆ ಯುಕ್ತ ತೋರುವರೀತಿಯಾಗಿ ಯೇರ್ಪಾಡು ಮಾಡುವದಕ್ಕೆ ರೂಲ್ಸನ್ನು ಮಾಡಬಹುದು.

ಚೀಫ್ ಕೋರ್ಟಿನವರಿಗೆ ವುಂಟುಮಾಡಲ್ಪಟ್ಟ ಅಧಿಕಾರಗಳನ್ನು ಒಬ್ಬ ಜಡ್ಜಿಯಾಗಲಿ ಅನೇಕ ಜಡ್ಜಿಗಳಾಗಲಿ ಚಲಾಯಿಸುವ ಬಗ್ಯೆ ರೂಲ್ಸ್.

ಪರಂತು ಯಾವ ಕೋರ್ಟಿನಿಂದಾಗಲಿ ಕೊಡಲ್ಪಟ್ಟ ಡಿಕ್ರೀ, ಹುಕ್ಕುಂ ಸರ್ಟಿಸು, ಯಾ ತೀರ್ಪು ಇಂತಾದ್ದು ಒಬ್ಬರಾಗಿ ಕೋರ್ಟು ಮಾಡುವ ಚೀಫ್ ಕೋರ್ಟಿನ ಯಾವ ಜಡ್ಜೀಯಿಂದಾಗಲಿ ತಿರಿಗಿಸಲ್ಪಡತಕ್ಕದ್ದಲ್ಲವು.

20ನೇ ಸೆಕ್ಷನ್.—ಚೀಫ್ ಕೋರ್ಟಿನವರು ಆಗಿಂದಾಗ್ಯೆ—

ರೂಲ್ಸ್ ಮಾಡುವದಕ್ಕೆ ಚೀಫ್ ಕೋರ್ಟಿನ ಅಧಿಕಾರ.

(a) ಈ ರೆಗ್ಯೂಲೇಷನಿಗೆ ಅನುಸಾರವಾಗಿ ಕೋರ್ಟುಗಳ ಮಿನಿಸ್ಟೀರಿಯಲ್ ಆಫೀಸರಗಳಿಗೆ ಸದರೀ ಕೋರ್ಟಿನ ಮೇಲ್ವಿಚಾರಣೆಗೆ ಒಳಪಟ್ಟು ಮಿನಿಸ್ಟೀರಿಯಲ್ ಸ್ವರೂಪವುಳ್ಳ ತಮಗೆ ಯುಕ್ತ ತೋರುವ ಅಂತಾ ಅಧಿಕಾರಗಳನ್ನು ವ ಕೆಲಸಗಳನ್ನು ವುಂಟುಮಾಡುವ, ವಿಧಿಸುವ ಬಗ್ಯೂ ಮತ್ತು ಹಾಗೆ ವುಂಟುಮಾಡಲ್ಪಟ್ಟ ಮತ್ತು ವಿಧಿಸಲ್ಪಟ್ಟ ಅಧಿಕಾರಗಳು ಕೆಲಸಗಳು ಯಾವ ರೀತಿಯಾಗಿ ಚಲಾಯಿಸಲ್ಪಡತಕ್ಕದ್ದೋ ಮತ್ತು ನೆರವೇರಿಸಲ್ಪಡತಕ್ಕದ್ದೋ ಅದನ್ನು ಕ್ರಮ ಪಡಿಸುವಬಗ್ಯೂ ರೂಲ್ಸ್ ಮಾಡತಕ್ಕದ್ದು.

(b) ಅಂತಾ ಕೋರ್ಟುಗಳಲ್ಲಿ ವ್ಯವಹರಿಸುವ ಪ್ಲೀಡರಗಳು ಯಾವ ಮೊಕದ್ದಮೆಗಳಲ್ಲಿ ಇಂಗ್ಲಿಷನೊಳಗೆ ಅಜ್ರೆಸ್ಯಾನೆ ಅರಜ್ ಮಾಡುವದಕ್ಕೆ ಅವಕಾಶ ಕೊಡಲ್ಪಡತಕ್ಕದ್ದೊ ಅದನ್ನು ನಿಶ್ಚಯಿಸುವ ಬಗ್ಯೆ ಈ ರೆಗ್ಯೂಲೇಷನಿಗೆ ಅನುಸಾರವಾಗಿ ರೂಲ್ಸ್ ಮಾಡತಕ್ಕದ್ದು.

(c) ಅಂತಾ ಬುಕ್ಕುಗಳಿಗೂ, ಖತಾಯಿತಿಗಳಿಗೂ, ಖಾನೇಷುಮಾರೀಗಳಿಗೂ, ಲೆಕ್ಕಗಳಿಗೂ ಸದರೀ ಕೋರ್ಟಿನವರು ಜರೂರೆಂದ್ಯ ಯೆಣಿಸುವ ನಮೂನೆಗಳನ್ನು ವಿಧಿಸತಕ್ಕದ್ದು. ಅಂತಾ ನಮೂನೇಗಳು ಅಂತಾ ಕೋರ್ಟುಗಳಲ್ಲಿ ಇಡಲ್ಪಟ್ಟು, ಅಥವಾ ಮಾಡಲ್ಪಟ್ಟು ಅಥವಾ ಸೇರಿಸಲ್ಪಡತಕ್ಕದ್ದು ಅಥವಾ ಯಾವ ಅಧಿಕಾರಿಗಾಗಲಿ ಕಳುಹಿಸಲ್ಪಡತಕ್ಕದ್ದು.

(d) ಈ ರೆಗ್ಯೂಲೇಷನಿಗೆ ಅನುಗುಣವಾಗಿ ಅಂತಾ ಕೋರ್ಟುಗಳ ತನಿಖೀ ಬಗ್ಯೂ ಅದರ ಕೆಲಸ ನಡಿಯುವದರ ಮೇಲ್ವಿಚಾರಣೆಗಾಗಿಯೂ ಯೇರ್ಪಾಡನ್ನು ಮಾಡಿ ರೂಲ್ಸ್ ಮಾಡತಕ್ಕದ್ದು.

(e) ಈ ರೆಗ್ಯೂಲೇಷನಿಗೆ ಅನುಗುಣವಾಗಿ ಅಂತಾ ರೂಲ್ಸನ್ನು ಮಾಡತಕ್ಕದ್ದು. ಅಂತಾ ವಿಚಾರಣೆಗಳನ್ನು ಏರ್ಪಡಿಸತಕ್ಕದ್ದು. ಮತ್ತು ಮೈಸೂರು ಗವರ್ನಮೆಂಟಿಗೆ ಯುಕ್ತ ತೋರಬಹುದಾದ ಮೇರೆ ಅಂತಾ ಕೋರ್ಟುಗಳ ಜುಡಿಷಿಯಲ್ ಮತ್ತು ಮಿನಿಸ್ಟೀರಿಯಲ್ ಆಫಿಸರಗಳ ಲಾಯಖೀಯನ್ನು ಅಭಿವೃದ್ಧಿ ಪಡಿಸುವ ಮತ್ತು ಅಂತಾ ಆಫಿಸರಗಳಲ್ಲಿ ಯುಕ್ತವಾದ ಶಿಕ್ಷೆಯನ್ನು ಕಾಪಾಡುವ ಉದ್ದೇಶಂದಿದ ಸದರೀ ಗವರ್ನಮೆಂಟಿಗೆ ಅಂತಾ ಸಿಫಾರಸಗಳನ್ನು ಮಾಡತಕ್ಕದ್ದು.

19ನೇ ಮತ್ತು 20ನೇ ಸೆಕ್ಷನ್‌ಗಳನುಸರಿಸಿ ರೂಲ್ಸ್ ವ ನಮೂನೆಗಳನ್ನು ಮೈಸೂರು ಗವರ್ನಮೆಂಟಿಗೆ ಮಂಜೂರಾತೀ ಬಗ್ಗೆ ಕಳುಹಿಸತಕ್ಕದ್ದು.

21ನೇ ಸೆಕ್ಷನ್.—19 ಮತ್ತು 20ನೇ ಸೆಕ್ಷನ್‌ಗಳನುಸರಿಸಿ ಮಾಡಲ್ಪಟ್ಟ ವಿಸಿಷ್ಟ ರೂಲ್ಸುಗಳೂ, ವಿಧಿಸಲ್ಪಟ್ಟ ವಿಶಿಷ್ಟ ನಮೂನೆಗಳೂ ಮೈಸೂರು ಗವರ್ನಮೆಂಟಿನ ಮಂಜೂರಾತಿಯಬಗ್ಗೆ ಕಳುಹಿಸಲ್ಪಡತಕ್ಕದ್ದು, ಮತ್ತು ಅಂತಾ ಮಂಜೂರಾತಿ ಬಂದ ಮೇಲೆ ಸರ್ಕಾರೀ ಗೆಜೆಟ್‌ನಲ್ಲಿ ಪ್ರಕಟಿಸಲ್ಪಟ್ಟು ಆ ಮೇಲೆ ಕಾನೂನ್ ಬಲವನ್ನು ಪಡೆಯತಕ್ಕದ್ದು.

ಚೀಫ್ ಕೋರ್ಟಿನವರು ರಿಜಿಸ್ಟರ್ ವಗೈರೇಯನ್ನು ಯಿಡತಕ್ಕದ್ದು.

22ನೇ ಸೆಕ್ಷನ್—ಕೋರ್ಟಿನ ಕೆಲಸ ನಡೆಯುವ ಬಗ್ಗೆ ಜರೂರಾಗಿರಬಹುದಾದ ಅಂತಾ ರಿಜಿಸ್ಟರ್‌ಗಳನ್ನೂ, ಪಹಿಗಳನ್ನೂ ಲೆಕ್ಕಗಳನ್ನೂ, ಚೀಫ್ ಕೋರ್ಟಿನವರು ಯಿಡತಕ್ಕದ್ದಲ್ಲದೆ, ಸದರೀ ರಿಜಿಸ್ಟರ್‌ಗಳ, ಪಹಿಗಳ ಮತ್ತು ಲೆಕ್ಕಗಳ ನಕ್ಕಲ್‌ಗಳನ್ನೂ ಯಾ ಯೆಕ್ಸ್‌ಟ್ರಾಕ್ಟುಗಳನ್ನೂ, ಚೀಫ್ ಕೋರ್ಟಿನಲ್ಲಿಯೂ ಅದಕ್ಕೆ ತಾಬೇದಾರೀಯಾದ ಕೋರ್ಟುಗಳಲ್ಲಿಯೂ, ನಡಿಸಲ್ಪಟ್ಟ ಕೆಲಸದ ಬಾಬತು ಅಂತಾ ತಖ್ತೇಗಳನ್ನೂ ಮೈಸೂರು ಗವರ್ನಮೆಂಟ್‌ನಿಂದ ಅಪೇಕ್ಷಿಸಲ್ಪಟ್ಟಾಗ ಅವರಿಗೆ ಕಳುಹಿಸತಕ್ಕದ್ದು.

ವಿಚಾರಣೆಯೊಳಗಿರುವ ಮೊಕದ್ದಮೆಗಳು, ಅಪ್ಪೀಲ್‌ಗಳು ಮತ್ತು ಅರ್ಜೀಗಳು.

23ನೇ ಸೆಕ್ಷನ್—ನಂದೀದುರ್ಗ ಡಿವೀಜನ್ ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರ ಕೋರ್ಟಿನ ಮುಂದೆ ಸನ್ 1884ನೇ ಮೇ 28ನೇ ಮರ್ಸ್ಕಂನಲ್ಲಿ ವಿಚಾರಣೆಯಲ್ಲಿರತಕ್ಕ ತಮಾಂ ಶಿವಿಲ್ ಯಾ ಕ್ರಿಮಿನಲ್ ಮೊಕದ್ದಮೆಗಳೂ, ಅಪ್ಪೀಲ್‌ಗಳೂ, ಅರ್ಜೀಗಳೂ, (ಬಿಟ್ಟು ಸಬಾರ್ಡಿನೇಟ್ ಜಡ್ಜೀ ಕೋರ್ಟಿನ ಸ್ಥಳ ಅಧಿಕಾರದೊಳಗೆ ಇರತಕ್ಕ ಅಂತಾ ಸಿವಿಲ್ ಮೊಕದ್ದಮೆಗಳೂ ಅರ್ಜೀಗಳೂ ಹೊರತು) ಈ ರೆಗ್ಯೂಲೇಷನ್ ಅನುಸರಿಸಿ ಚೀಫ್ ಕೋರ್ಟಿನಿಂದ ವಿಚಾರಿಸಲ್ಪಟ್ಟು ಫೈಸಲ್ ಮಾಡಲ್ಪಡತಕ್ಕದ್ದು.

ಬೆಂಗಳೂರು,
21ನೇ ಮೇ 1884.

ಕೆ. ಶೇಷಾದ್ರಿ ಐಯ್ಯರ್,
ದಿವಾನ್.

Mysore Government Press, Bangalore.—1884.

ಮೈಸೂರ ಗೆಜೆಟ್.

ನಂ. 24. ಸರ್ಕಾರದಿಂದ ಛಾಯಿಸಿದ್ದು. ಸ್ನ 1884

ಬೆಂಗಳೂರು, ಶನಿವಾರ, ಜೂನ್ ತಾ|| 14, ಸ್ನ 1884.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ರಿಂಟೆಂಡೆಂಟರು, ಕಾಂಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ್ ವರ್ಕ್ಸ್ ಆಫೀಸರಗಳು, ಮಿಲಿಟೇರಿ ಸಿಕ್ರಿಟೆರಿಯವರು, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡ್ಸ್ ಪ್ರಸಿಡೆಂಟರು, ಡಿಸ್ಟ್ರಿಕ್ಟಿನ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು, 1884ನೇ ಇಸವಿಯ ಮೈಸೂರು ಚೀಫ್ ಕೋರ್ಟು ರೆಗ್ಯೂಲೇಷನ್ ನಂಬರು I.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲಾ, ಅಪಾಯಕರವಾಗಿಯೂ ಅಂಟು ಸಂಬಂಧವಾಗಿಯೂ ಇರುವ ರೋಗದ ವಿಷಯದಲ್ಲಿ ಮ್ಯುನಿಸಿಪೆಲ್ ಕಮ್ಮಿಟಿಯವರಿಗೂ ಅವರುಗಳ ನೌಕರ್‌ಮಾನೇರಿಗೂ ಬಟ್ಟು ತಿಳುವಳಿಕೆ:—

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 4ನೇ ಜೂನ್ 1884.

ನಂ. 52.—(ಆರನೇ ಛಾಪೆ) ಸಿವಿಲ್ ಲೀವ್ ಕೋಡಿನ 132ನೇ ಸೆಕ್ಷನ್ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮ|| ಪಿ. ಯನ್. ಪೂರ್ಣಯ್ಯನವರು 1883ನೇ ಇಸವಿ ಅಕ್ಟೋಬರ್ 22ನೇ ಮಾರ್ಭ್ಯಂ ಲಾಗಾಯತು 6 ತಿಂಗಳು 22 ದಿವಸಗಳ ಫರಲೋ ರಜಾ ಕೊಡಲ್ಪಟ್ಟಿರುತ್ತಾರೆ.

2. ಮ|| ಪಿ. ಯನ್. ಪೂರ್ಣಯ್ಯನವರು ಮರಳಿ ಉದ್ಯೋಗದ ಮೇಲೆ ಹಾಜರಾಗಿ ಅಸಿಸ್ಟೆಂಟ್ ಕಮ್ಮಿಷನರ್ ಮ|| ಜಿ. ರಘುನಾಥರಾಯರಿಂದ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಆಫೀಸು ಛಾರ್ಜನ್ನು 1884ನೇ ಇಸವಿ ಮೇ 13ನೇ ಮಾರ್ಭ್ಯಮಿನ ಪೂರ್ವಾಹ್ನದಲ್ಲಿ ವಹಿಸಿರುತ್ತಾರೆ.

ತಾರೀಖು 24ನೇ ಏಪ್ರೈಲ್ 1884.

ನಂ. 12.—ಇದರಿಂದ ಪ್ರಕಟಪಡಿಸುವದೇನಂದರೆ, ಶಿವಮೊಗ್ಗಾ ವ ಕಡೂರು ಡಿಸ್ಟ್ರಿಕ್ಟು ವೃತ್ಪತ್ತೀ ಬಾಬತು ಇದರಡೀ ಕಂಡ ನಾಕೂಗಳು ಅಸಿಸ್ಟೆಂಟ ಕಮಿಷನರ ಸರ್ವೇಟರವರಿಂದ ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿ ಆಯಾ ತಾರೀಖಿನೊಳಗೆ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು :—

ಹರಾಜ್ ನಡಿಯತಕ್ಕ ಸ್ಥಳ.		ಹರಾಜಿನ ತಾರೀಖು.		ತೆಂಗಿನ ಮರಗಳು.	ತಾಡಮರದ ಮರಗಳು.	ಈಚಲ ಮತ್ತು ಬಗನಿ ಮರದ ಕಾಳುಗಳು.	ಒಟ್ಟು.
*	*	*		*	*	*	*
*	*	*		*	*	*	*
*	*	*		*	*	*	*
ಚನ್ನಗಿರಿ	(ಚನ್ನಗಿರಿ ತಾಲ್ಲೂಕು)	6ನೇ ಜೂನ 1884.		50	0	400	450
ಕುಂಟನಮಡು	(ತರೀಕೆರೆ ತಾಲ್ಲೂಕು)	11	ಡಿಟೋ	0	0	100	100
ತರೀಕೆರೆ	ಡಿಟೋ	13	ಡಿಟೋ	50	50	100	200
ಲಕ್ಕವಳ್ಳಿ	ಡಿಟೋ	16	ಡಿಟೋ	600	600	0	1200
ಕಣಬೂರು	(ಕೊಪ್ಪ ತಾಲ್ಲೂಕು)	20	ಡಿಟೋ	200	300	0	500
ಆಯನೂರು	(ಶಿವಮೊಗ್ಗ ತಾಲ್ಲೂಕು)	23	ಡಿಟೋ	50	150	100	300
ಶಿವಮೊಗ್ಗಾ	ಡಿಟೋ	25	ಡಿಟೋ	150	350	600	1100

ಹರಾಜಿನ ಷರತ್ತುಗಳು.—ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷ ಮಾಡಲ್ಪಟ್ಟ 1873ನೇ ಇಸವಿ ಜೂನ 12ನೇ ಮರ್ಕುಂ 20ನೇ ನಂಬರ ಇಸ್ತಿಹಾರನಾಮೆ ಪ್ರಕಾರ ಇರುವದು ಮತ್ತು ಹರಾಜ್ ಕಾಲದಲ್ಲಿ ಓದಲ್ಪಡುವದು.

ತಾರೀಖು 12ನೇ ಮೇ 1884.

ನಂ. 25—ತಪ್ಪು ದುರಸ್ತು:—ಸರ್ಕಾ 1883ನೇ ಇಸವೀ ನವಂಬರ 16ನೇ ಮರ್ಕುಂ 274ನೇ ನಂಬರುಳ್ಳ ದೀವಾನರವರ ಇಸ್ತಿಹಾರನಾಮೆಯ 7ನೇ ಕಲಂನಲ್ಲಿ ಗಂಗೇನಹಳ್ಳಿ ಯೆಂಬದಕ್ಕೆ ಬದಲಾಗಿ ಗಂಗದಹಳ್ಳಿ ಯೆಂದು ಓದಿಕೊಳ್ಳತಕ್ಕದ್ದು.

ತಾರೀಖು 30ನೇ ಮೇ 1884.

ನಂ. 48.—(1) ಫ್ರೆಂಚ್‌ರಾಕ್ಸ್ ಸಬ ಡಿವೀಜನ್ನಿಗೆ ಶೇರಿದ ತಾಲ್ಲೂಕುಗಳಲ್ಲಿಯೂ (2) ಮೈಸೂರು ಡಿಸ್ಟ್ರಿಕ್ಟಿನ ಇತರ ತಾಲ್ಲೂಕುಗಳಲ್ಲಿಯೂ 1884ನೇ ಜುಲೈ 1ನೇ ಮರ್ಕುಂ ಲಾಗಾಯತು 1885ನೇ ಮಾರ್ಚಿ 31ರವರಿಗೆ ಎರಡುದಿವಸಗಳೂ ಶೇರಿ ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತ್ತುಗಳಿಗೆ ವಳಪಟ್ಟು ಗಾಂಜಾ ವ ಅದರ ತಯಾರಿ ಪದಾರ್ಥ ಇವುಗಳ ವಟ್ಟು ಬಿಕ್ರಿಯ ವಿಶೇಷ ಸ್ವಾತಂತ್ರ್ಯದ ಬಗ್ಗೆ ಇದರಿಂದ ಬೇರೆಬೇರೆ ದರಖಾಸ್ತುಗಳು ಕೋರಲ್ಪಡುತ್ತೆ.

2. ಪ್ರತಿ ದರಖಾಸ್ತುದಾರನೂ, ಗವರ್ನಮೆಂಟಿಗೆ ಎಷ್ಟರ ಮೊಬಲಗಿಗೆ ಕೌಲ್ ಮಾಡುತ್ತಾನೋ ಅಂತಾ ಕಮ್ಮಿ ಹುಟ್ಟುವಳೀಯನ್ನು ಪ್ರತಿ ದರಖಾಸ್ತಿನಲ್ಲಿಯೂ ನಮೂದಿಸತಕ್ಕದ್ದಲ್ಲದೆ, ನಗದು 50 ರೂಪಾಯಿಗಳ ಠೇವಣೀ ಸಹಿತ ಲಿಫಾಫೆಯೊಳಗೆ ಹಾಕಿ ಬಂದ ಮಾಡಿ, "ಗಾಂಜಾವನ್ನು ಅದರಿಂದ ತಯಾರಾದ ಪದಾರ್ಥವನ್ನು ಫ್ರೆಂಚ್‌ರಾಕ್ಸ್ ಸಬ ಡಿವೀಜನ್ನಿಗೆ ಶೇರಿದ ತಾಲ್ಲೂಕುಗಳಲ್ಲಿ" ಅಥವಾ ಸಂದರ್ಭಾನುಸಾರ "ಫ್ರೆಂಚ್‌ರಾಕ್ಸ್ ಸಬ ಡಿವೀಜನ್ನಿಗೆ ಶೇರಿದ ತಾಲ್ಲೂಕುಗಳು ವಿನಹಾ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಬಿಕ್ರೀ ಮಾಡುವ ವಿಶೇಷ ಸ್ವಾತಂತ್ರ್ಯದ ಬಗ್ಗೆ ದರಖಾಸ್ತು" ಎಂದು ವಿಳಾಸ ಬರೆದು ಕಳುಹಿಸತಕ್ಕದ್ದು.

3. ದರಖಾಸ್ತುಗಳು, ಸನ್ 1884ನೇ ಇಸವಿ ಜೂನ್ 20ನೇ ಮಧ್ಯಾಹ್ನದ ಪೂರ್ವಾಹ್ನದಲ್ಲಾಗಲಿ ತತ್ಪೂರ್ವದಲ್ಲಾಗಲಿ ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಒಪ್ಪಿಸಲ್ಪಡತಕ್ಕದ್ದು, ಆಗ ಅವುಗಳು ದರಖಾಸ್ತುದಾರರ ರೂಬರೂ ಡೆಪ್ಯುಟಿ ಕಮ್ಮಿಷನರವರಿಂದಲೂ, ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಇನ್ ಚಾರ್ಜ್ ಆಫೀಸರರಿಂದಲೂ ಖುಲ್ಲಾ ಮಾಡಲ್ಪಡುವವು. ಗವರ್ನಮೆಂಟಿಗೆ ಶಿಫಾರಸ್ ಮಾಡುವ ಬಗ್ಯೆ ಯಾರ ದರಖಾಸ್ತು ಚುನಾಯಿಸಲ್ಪಡುತ್ತೊ ಆ ದರಖಾಸ್ತುದಾರನು ತಾನು ಒಪ್ಪಿಕೊಂಡ ಇಜಾರೇ ಮೊಬಲಗು ಪೈಕೀ ಹನ್ನೆರಡರಲ್ಲಿ ಒಂದು ಭಾಗಕ್ಕೆ ಸಮನಾದ ಮೊಬಲಗು (ಅಥವಾ ಒಂದು ತಿಂಗಳ ಖಿಸ್ತು ಮೊಬಲಗು) ನಗದಾಗಿಯಾಗಲಿ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ ಕೂಡ್ಲೇ ಡಿಪಾಜಿಟ್ ಕಟ್ಟತಕ್ಕದ್ದು: ಇದಕ್ಕೆ ತಪ್ಪಿದರೆ, ದರಖಾಸ್ತಿನ ಸಂಗಡ ಹಾಜರ್‌ಮಾಡಿದ ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುವದು.

4. ಗವರ್ನಮೆಂಟಿನ ತೀರ್ಮಾನವು ತಿಳಿಸಲ್ಪಟ್ಟಾಗ, ಯಾರ ದರಖಾಸ್ತು ತಿರಸ್ಕರಿಸಲ್ಪಟ್ಟವೋ ಅಂತಾ ದರಖಾಸ್ತುದಾರರಿಂದ ಹಾಜರ್‌ಮಾಡಲ್ಪಟ್ಟ ಡಿಪಾಜಿಟ್ ಮೊಬಲಗುಗಳು ಅವರುಗಳು ಕೇಳಿದಾಗ ವಾಪಸು ಮಾಡಲ್ಪಡುವವು. ಚಡ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸುವ ಅಧಿಕಾರವನ್ನು ಗವರ್ನಮೆಂಟಿನವರು ತಮ್ಮಲ್ಲಿ ಉಳಿಸಿಕೊಂಡಿರುತ್ತಾರೆ.

5. ಯಾರ ದರಖಾಸ್ತು ಮಂಜೂರ್‌ಮಾಡಲ್ಪಡುವದೋ ಅಂತಾ ದರಖಾಸ್ತುದಾರನು ತನಿಗೆ ಗವರ್ನಮೆಂಟಿನವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ 8 ದಿವಸಗಳ ವಳಗಾಗಿ ನಗದಾಗಿಯಾಗಲೀ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲೀ ಒಂದು ಮೊಬಲಗು ಡೆಪ್ಯುಟಿ ಕಮ್ಮಿಷನರ್ ಯಾ ಸಂದರ್ಭಾನುಸಾರ-ಸಬ್ ಡಿವಿಜನ್ ಆಫೀಸರಲ್ಲಿ ಠೇವಣೀ ಇಡತಕ್ಕದ್ದು, ಸದರೀ ಮೊಬಲಗೂ ಮತ್ತು 3ನೇ ಕಲಂ ಅನುಗುಣವಾಗಿ ಮೊದಲೇ ಇಡಲ್ಪಟ್ಟ ಠೇವಣೀ ಮೊಬಲಗು ಸುದಾ ಶೇರಿ, ಒಪ್ಪಿಕೊಂಡ ಇಜಾರೇ ಮೊಬಲಗಿನ ನಾಲ್ಕರಲ್ಲಿ ಒಂದು ಭಾಗಕ್ಕೆ ಸಮನಾಗಿರತಕ್ಕದ್ದು: ಮತ್ತು ಇದರಲ್ಲಿ ಮುಂದೆ ವಿವರಿಸಲ್ಪಟ್ಟ ಷರತ್ತುಗಳಿಗೆ ಬದ್ಧನಾಗಿ ನಡಕೊಳ್ಳುವ ಬಗ್ಯೆ ಮಾಮೂಲ್ ನಮೂನೆಯಲ್ಲಿ ತಕ್ಕ ಛಾಪಾ ಕಾಗದದಮೇಲೆ ಒಂದು ಕರಾರು ಬರೆದು ಕೊಡತಕ್ಕದ್ದು; ಮತ್ತು ಇಜಾರೇದಾರನು ಸದರೀ ಕರಾರಿಗೆ ರುಜೂ ಮಾಡುವದಕ್ಕಾಗಲಿ, ಅವಶ್ಯಕವಾದ ಠೇವಣೀ ಕಟ್ಟುವದಕ್ಕಾಗಲಿ, ತಪ್ಪಿದರೆ ಮೊದಲೇ ಹಾಜರ್‌ಮಾಡಿದ ಡಿಪಾಜಿಟ್ ಮೊಬಲಗುಗಳು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಟ್ಟು ಇಜಾರೆಯು ಅನ್ಯಥಾ ವಿಲಾ ಮಾಡಲ್ಪಡುವದು.

6. ಇಜಾರೆದಾರನಿಂದ ಲೈಸೆನ್ಸ್ ಹೊಂದಿದ ಫುರೋಖ್ತುದಾರರಿಗೆ ಮಾಡಲ್ಪಡುವ ಗಾಂಜಾವಿನ ವ ಅದರ ತಯಾರೀ ಬಾಬತು ಪದಾರ್ಥಗಳ ಫುರೋಖ್ತುಗಳು ಕೌಲ್ ಮಾಡಿಕೊಂಡ ಮೊಬಲಗಿಗೆ ಜಾಸ್ತಿಯಾದರೆ, ಹಾಗೆ ಜಾಸ್ತಿಯಾದ ಮೊಬಲಗಿನ ಪೈಕೀ ಸೇಕಡಾ 25ನ್ನು ಇಜಾರೆ ಕಾಲಕ್ಕೆ ಸಲ್ಲತಕ್ಕ ಅಬ್ಕಾರ್ ಖಿಸ್ತಿನ ಸಂಗಡ ಕ್ರಮಪ್ರಕಾರ ಗವರ್ನಮೆಂಟಿಗೆ ಪಾವತೀ ಮಾಡತಕ್ಕದ್ದು.

ಷರತ್ತುಗಳು.

I. ಇಜಾರೆಯು ಡೆಪ್ಯುಟಿ ಕಮ್ಮಿಷನರವರ ಯಾ ಸಂದರ್ಭಾನುಸಾರ ಸಬ್ ಡಿವಿಜನ್ ಆಫೀಸರರ ಮಂಜೂರಾತೀ ವಿನಾ ವರ್ಗ ಮಾಡಲ್ಪಡತಕ್ಕದ್ದಲ್ಲಾ.

II. ಈ ಇಜಾರೆ ಕೆಲಸಗಳಿಗೋಸ್ಕರ ಗವರ್ನಮೆಂಟಿನವರು, ಇಜಾರೇ ಕಾಲದಲ್ಲಿ ಇಜಾರೇದಾರನಿಂದ ಮೊಕರರ್ ಮಾಡಲ್ಪಟ್ಟ ಯಾ ಅಂಗೀಕರಿಸಲ್ಪಟ್ಟ ಯಾವ ಪ್ರತಿನಿಧಿಯಾದ ಮುತಾಲೀಕನನ್ನಾಗಲಿ ಹಿಸ್ಸೇದಾರನನ್ನಾಗಲಿ ಅಂಗೀಕರಿಸಲಿಕ್ಕೆ, ಅಂಥಾ ಪ್ರತಿನಿಧಿಯಾದ ಮುತಾಲೀಕನು ಯಾ ಹಿಸ್ಸೇದಾರನು ತಾತ್ಕಾಲಿಕ ಡೆಪ್ಯುಟಿ ಕಮ್ಮಿಷನರಿಂದ ಯಾ ಸಂದರ್ಭಾನುಸಾರ ಸಬ್ ಡಿವಿಜನ್ ಆಫೀಸರರಿಂದ ಮೊದಲು ಮಂಜೂರ್‌ಮಾಡಲ್ಪಡದೇ ಯಿದ್ದರೆ, ಗವರ್ನಮೆಂಟಿನವರು ನಿರಾಕರಿಸಬಹುದು.

III. ಕೌಲ್ ಮಾಡಲ್ಪಟ್ಟ ಕಮ್ಮಿಯಾದ ಇಜಾರೆ ಮೊಬಲಗು ಮತ್ತು ಅದರ ಮೇಲೆ ರೂಪಾಯಿ ವಂದಕ್ಕೆ ವಂದಾಣೆ ಪ್ರಕಾರ ಆಗುವ ಲೋಕಲ್‌ಸೆಸ್ ಮೊಬಲಗು ಸುದಾ, ಕಂಟ್ರಾಕ್ಟುದಾರನು, ಮೈಸೂರು ಡಿಸ್ಟ್ರಿಕ್ಟು ಟ್ರೆಜರಿಯಲ್ಲಿ ಮಾಹೆಯಾನಾ ಸಮನಾದ ಖಿಸ್ತು ಪ್ರಕಾರ ಪ್ರತಿ ಮಾಹೆಯ 20ನೇ ತಾರೀಖಿನ ವಳಗಾಗಿ ಪಾವತೀ ಮಾಡತಕ್ಕದ್ದು. ಇಜಾರೆ ಕಾಲಕ್ಕೆ ಪಾವತಿಯಾಗಬೇಕಾದ ಅಬ್ಕಾರ್ ಖಿಸ್ತಿನ ಸಂಗಡ ಜಾಸ್ತೀ ಫುರೋಖ್ತಿನ ದೆಸೆಯಿಂದ ಕೌಲ್ ಮಾಡಿಕೊಂಡ ಮೊಬಲಗಿಗಿಂತಲೂ ಹೆಚ್ಚಾಗಿ ಆಗುವ ಹುಟ್ಟುವಳೀ ಮೇಲೆ ಸೇಕಡಾ 25ರಂತೆ ಆಗುವ ಮೊಬಲಗುಗಳನ್ನು ಪಾವತೀ ಮಾಡತಕ್ಕದ್ದು. ಮೇಲೆ ಹೇಳಿದ ಖಿಸ್ತು ಪೈಕಿ ಯಾವದನ್ನಾಗಲಿ ಪಾವತಿ ಮಾಡದೇ ತಪ್ಪುವ ಪಕ್ಷಕ್ಕೆ, ಡಿಪಾಜಿಟ್ ದಂಡವಾಗಿ ತೆಗದುಕೊಳ್ಳಲ್ಪಟ್ಟಿತೆಂದು ತಿಳಿಸುವದಕ್ಕೂ, ಕಂಟ್ರಾಕ್ಟುದಾರನನ್ನು ಲುಕ್‌ಸಾನಿಗೆ ಗುರಿಮಾಡಿ ಇಜಾರೆಯನ್ನು ಅಮಾನಿ ಕೆಳಗೆ ತೆಗದುಕೊಳ್ಳುವಂತೆ ಹುಕ್ಕುಂ ಮಾಡುವದಕ್ಕೂ, ಅಥವಾ ಇಜಾರೇ ತಪ್ಪಿಸಿರುತ್ತೆಂದು ತಿಳಿಸುವದಕ್ಕೂ, ಕಂಟ್ರಾಕ್ಟುದಾರನ ಅಪಾಯಕ್ಕೂ ನಷ್ಟಕ್ಕೂ ವಳಪಟ್ಟು ಇಜಾರೆಯನ್ನು ಮರಳಿ ವಿಕ್ರಯಿಸುವದಕ್ಕೂ, ಮತ್ತು ಯಲ್ಲ ಬಾಕಿಗಳನ್ನೂ ಸಾಲೀಯಾನಾ 6ರ ಪ್ರಕಾರ ಬಡ್ಡೀ ಸಹಿತವಾಗಿ ಅವನ ಸ್ಥಾವರ ಜಂಗಮ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ತಾತ್ಕಾಲಿಕ ಡೆಪ್ಯುಟಿ ಕಮ್ಮಿಷನರಿಗೆ ಯಾ ಸಂದರ್ಭಾನುಸಾರ ಸಬ್ ಡಿವಿಜನ್ ಆಫಿಸರರಿಗೆ ನ್ಯಾಯವಾಗಿರತಕ್ಕದ್ದು.

IV. ಡೆಪ್ಯುಟಿ ಕಮ್ಮಿಷನರವರಿಂದ ಯಾ ಸಂದರ್ಭಾನುಸಾರ ಸಬ್ ಡಿವಿಜನ್ ಆಫೀಸರರಿಂದ ಗಾಂಜಾ ವ ಅದರಿಂದ ತಯಾರ್ ಮಾಡಲ್ಪಟ್ಟ ವಸ್ತುಗಳನ್ನು ವಿಕ್ರಯಿಸತಕ್ಕ ಅಂಗಡಿಗಳ ಸಂಖ್ಯೆಯು, ಮತ್ತು ಅವು ಇಡಲ್ಪಡಬೇಕಾದ ಸ್ಥಳಗಳು ಸುದಾ ಗೊತ್ತು ಮಾಡಲ್ಪಡತಕ್ಕದ್ದು, ಮತ್ತು ಕಂಟ್ರಾಕ್ಟುದಾರನು ಹಾಗೆ ಗೊತ್ತು ಮಾಡಲ್ಪಟ್ಟ ಸ್ಥಳಗಳಲ್ಲಿ ಮಾತ್ರವೇ ಗಾಂಜಾ ವ ಅದರ ತಯಾರೀಗಳನ್ನು ಮಾರುವದಕ್ಕೆ ಒಪ್ಪತಕ್ಕದ್ದು; ಅಂಗಡಿಗಳ ಸ್ಥಳಗಳ ವಿಷಯದಲ್ಲಾಗಲಿ, ಸಂಖ್ಯೆಯ ವಿಷಯದಲ್ಲಾಗಲಿ, ಆವಶ್ಯಕವಾದ ಯಾವ ಬದಲಾವಣೆಯನ್ನಾದರೂ ಆಗಿಂದಾಗ್ಯೆ ಮಾಡುವದಕ್ಕೂ, ಯಾವ ಅಂಗಡಿಯನ್ನಾದರೂ ಕಂಟ್ರಾಕ್ಟುದಾರನು ಈಡು ಮೊಬಲಗು ಕೇಳುವದಕ್ಕೆ ಹಕ್ಕಿಲ್ಲದೇನೇ ಈ ಇಸ್ತಿಹಾರ್ ನಾಮೆಯ 9ನೇ ಪ್ಯಾರಾದಲ್ಲಿ ವಿಧಿಸಲ್ಪಟ್ಟ ಷರತ್ ರೀತಿಯಾಗಿಯೂ, ಮತ್ತು ಅದನ್ನು ಅನುಸರಿಸಿ ಮುಚ್ಚುವದಕ್ಕೂ, ಡೆಪ್ಯುಟಿ ಕಮ್ಮಿಷನರವರು ಮತ್ತು ಸಬ್ ಡಿವಿಜನ್ ಆಫೀಸರರು ಸ್ವತಂತ್ರರಾಗಿರುತ್ತಾರೆ.

V. ಹಾಲಿ ಇರುವ ಚಿಲ್ಲರೆ ಫರೋಖ್ತುದಾರರನ್ನ ಕಾಯಂ ಮಾಡುವಣ, ಹೊಸ ಫರೋಖ್ತುದಾರರನ್ನ ಮೊಕರರ್ ಮಾಡುವಣ, ಲೈಸನ್ಸುಗಳನ್ನು ರದ್ದು ಮಾಡುವಣ, ಇವುಗಳು ಜಾರೀಲಿ ಇರುವ ರೂಲ್ಸ್ ಅನುಸರಿಸಿ ಡೆಪ್ಯುಟಿ ಕಮ್ಮಿಷನರವರಿಗೆ ಯಾ ಸಂದರ್ಭಾನುಸಾರ ಸಬ್ ಡಿವಿಜನ್ ಆಫೀಸರರಿಗೆ ಶೇರಿ ಇರತಕ್ಕದ್ದು. ಡೆಪ್ಯುಟಿ ಕಮ್ಮಿಷನರವರು ಯಾ ಸಂದರ್ಭಾನುಸಾರ ಸಬ್ ಡಿವಿಜನ್ ಆಫೀಸರರು ವಿಧಿಸಲ್ಪಟ್ಟ ನಮೂನೆಗಳಲ್ಲಿ ಲೈಸನ್ಸ್‌ಗಳನ್ನು ಇತರ ಪದಾರ್ಥಗಳ ವಿಷಯದಲ್ಲಿ ಹ್ಯಾಗೋ ಹಾಗೆ ಚಿಲ್ಲರೆ ಫರೋಖ್ತುದಾರರಿಗೆ ಪರಭಾರೆಯಾಗಿ ಕೊಡತಕ್ಕದ್ದು.

VI. ಇಜಾರೇದಾರನು ಗಾಂಜಾವನ್ನು ವ ಅದರಿಂದ ತಯಾರಾದ ಪದಾರ್ಥಗಳನ್ನು ಅಂಥಾ ಲೈಸನ್ಸ್ ಹೊಂದಿದ ಫರೋಖ್ತುದಾರಗೆ ಮಾತ್ರವೇ ವಿಕ್ರಯಿಸತಕ್ಕದ್ದೇ ಹೊರತು ಚಿಲ್ಲರೇ ಫರೋಖ್ತುದಾರರಿಗೆ ಯಾವ ವಿಧದಿಂದಲೂ ಬಾಧಕ ಪಡಿಸಕೂಡದು.

VII. ವಿಕ್ರಯಿಸಲ್ಪಡತಕ್ಕ ಗಾಂಜಾ ಒಳ್ಳೇದಾಗಿ ಯಿರಬೇಕು, ಜರಿಕೆಯಾದ್ದಾಗಿರಕೂಡದು, ಮತ್ತು ಇಜಾರೇದಾರನು ಯಾವಾಗಲೂ ಅಧಮ ಪಕ್ಷ ಒಂದು ತಿಂಗಳಿಗೆ ಆಗುವಷ್ಟು ಗಾಂಜಾ ಸರಕನ್ನು ತನ್ನ ವಶದಲ್ಲಿ ಇಟ್ಟುಕೊಳ್ಳತಕ್ಕದ್ದು.

VIII. ಇಜಾರೇದಾರನಿಂದ ಚಿಲ್ಲರೇ ಫರೋಖ್ತುದಾರಗೆ ಗಾಂಜಾ ಯಾವ ಖರೀದಿಗೆ ವಿಕ್ರಯಿಸಲ್ಪಡತಕ್ಕದ್ದೋ ಅಂತಾ ಖರೀದಿಯು 24 ತೊಲೆಗಳುಳ್ಳ ಒಂದು ಶೇರಿಗೆ 8 ಆಣೇ ಮೇರೆ ನಿಷ್ಕರ್ಷೆ ಮಾಡಲ್ಪಡತಕ್ಕದ್ದು. ಮತ್ತು ಚಿಲ್ಲರೇ ಫರೋಖ್ತುದಾರನು ಶೇರು ಒಂದಕ್ಕೆ ಹನ್ನೊಂದು ಆಣೆಮೇರೆ ಜನಗಳಿಗೆ ಫರೋಖ್ತು ಮಾಡತಕ್ಕದ್ದು. ಮಾಜುಮು ಇಜಾರೇದಾರನಿಂದ ಶೇರು ಒಂದಕ್ಕೆ 3 ಆಣೇ ಮೇರೆಗೂ, ಚಿಲ್ಲರೇ ಫರೋಖ್ತುದಾರನಿಂದ 5 ಆಣೇ ಮೇರೆಗೂ ವಿಕ್ರಯಿಸಲ್ಪಡತಕ್ಕದ್ದು. ಗಾಂಜಾ ಮತ್ತು ಅದರ ತಯಾರೀ ಬಾಬತು ಪದಾರ್ಥಗಳ ಫರೋಖ್ತುಗಳಿಗೆ, ಆಧಾರವಾಗಿ ವಿಧಿಸಲ್ಪಟ್ಟ ನಮೂನೆಯಲ್ಲಿ ಇಜಾರೆದಾರನಿಂದಾಗಲಿ, ಅಧಿಕಾರ ಕೊಡಲ್ಪಟ್ಟ ಅವನ ಮುತಾಲೀಕನಿಂದಾಗಲಿ ರುಜುಮಾಡಲ್ಪಟ್ಟ ಪ್ಯಾಸ್ ಯೆಂಬ ರಹದಾರಿಯು ಕೊಡಲ್ಪಡತಕ್ಕದ್ದು. ಚಿಲ್ಲರೇ ಫರೋಖ್ತುದಾರನು ಒಬ್ಬ ಮನುಷ್ಯನಿಗೆ, ಒಂದೇದಿನದಲ್ಲಿ, ಒಬ್ಬ ಮಾಜಿಸ್ಟ್ರೇಟರಿಂದ ಕೊಡಲ್ಪಟ್ಟರಹದಾರೀಗಳ ಮೇಲೆ ವೈದ್ಯವಿಷಯಗಳಿಗಾಗಿ ವಿನಾ, ಅನ್ಯಥಾ ನಾಲ್ಕು ತೊಲೇ ಗಾಂಜಾಕಿಂತ ಹೆಚ್ಚಾಗಿ ಮಾರಕೂಡದು.

IX. ಡೆಪ್ಯುಟಿ ಕಮ್ಮಿಷನರು ಯಾ ಸಂದರ್ಭಾನುಸಾರ ಸಬ್ ಡಿವಿಜನ್ ಆಫೀಸರರು ಯಾವದಾದರೊಂದು ಅಂಗಡಿಯನ್ನು ಯಾ ಅಂಗಡಿಗಳನ್ನು ಮಿಲಿಟೇರಿ ಅಧಿಕಾರಿಗಳ ಯಾ ಮಾಜಿಸ್ಟ್ರೇಟಗಳ ಕೋರಿಕೆಮೇಲೆ, ಹಂಗಾಮಿಯಾಗಿ, ಯಾ ಕಾಯಮಾಗಿ ಮುಚ್ಚುವದಕ್ಕೆ ಅಧಿಕಾರವನ್ನು ಪಡೆದಿರತಕ್ಕದ್ದು; ಮತ್ತು ಇಜಾರೇದಾರನು, ಸದರೀ ಬಗ್ಯೆ ಯಾವ ಈಡು ದ್ರವ್ಯಕ್ಕೂ ಹಕ್ಕು ಉಂಟಾಗಿರತಕ್ಕದ್ದಲ್ಲವು. ಆದರೆ ಡೆಪ್ಯುಟಿ ಕಮ್ಮಿಷನರವರ ಯಾ ಸಂದರ್ಭಾನುಸಾರ ಸಬ್ ಡಿವಿಜನ್ ಆಫೀಸರರ ಮಂಜೂರಾತೀನಿಂ ಹಾಗೆ ಕಡಮೆಮಾಡಲ್ಪಟ್ಟ ಸಂಖ್ಯೆಯು ಜನಗಳ ಗಿರಾಕಿಗೆ ಬೇಕಾಗಿ ಇದ್ದ ಪಕ್ಷಕ್ಕೆ ಯುಕ್ತಗಳಾದ ಇತರ ಸ್ಥಳಗಳಲ್ಲಿ ಪುನಃ ಸ್ಥಾಪಿಸಲ್ಪಡಬಹುದು. ಪರಂತು, ಹಾಲಿ ಯಿರುವ ದುಕಾನಗಳ ಸಂಖ್ಯೆ, ಸನ್ 1883—84ನೇ ಇಸವೀಯಲ್ಲಿ ಲೈಸನ್ಸ್ ಕೊಡಲ್ಪಟ್ಟ ದುಕಾನಗಳಿಗೆ ಹೆಚ್ಚಿದರೆ, ಅಂತಾ ಅಂಗಡಿಗಳನ್ನು ಪುನಃ ಇಡುವದಕ್ಕೆ ಸದರೀ ಅಫೀಸರರ ಯಿಖ್ತ್ಯಾರೀ ಮೇಲೆ ನಿರಾಕರಿಸತಕ್ಕದ್ದು; ಮತ್ತು ಇಜಾರೇದಾರನು ಹಾಗೆ ಸ್ಥಾಪಿಸಲ್ಪಟ್ಟ ಸಂಖ್ಯೆಯುಳ್ಳ ದುಕಾನಗಳು ಅನ್ಯತ್ರ ಇಡಬೇಕೆಂದು ಕೋರಲಿಕ್ಕೆ ಮಾತ್ರ ಅಧಿಕಾರ ಉಂಟಾಗಿರತಕ್ಕದ್ದು. ಅನ್ಯಥಾ ಸಂಸ್ಥಾನದ ಜರೂರೀಯಾತ್ ವಿಷಯಗಳಿಂದ, ಹಾಗೆ ನಿಷ್ಕರ್ಷಿಸಲ್ಪಟ್ಟ ದುಕಾನಗಳಿಗೆ ಒಳಪಟ್ಟು ಯೆಷ್ಟು ದುಕಾನಗಳನ್ನಾಗಲಿ ಮುಚ್ಚಿಬಿಡಬೇಕಾಗಿದ್ದರೆ ಹಾಗೆ ಮುಚಲ್ಪಟ್ಟ ಸಂಖ್ಯೆಗೆ, ಸದರೀ ಸಾಲಿನಲ್ಲಿ ಲೈಸನ್ಸ್ ಕೊಡಲ್ಪಟ್ಟ ಅಂಗಡಿಗಳಿಗೆ ಕೊಡಲ್ಪಡತಕ್ಕ ಕೌಲ್ ಮೊಬಲಗಿನ ಮೇಲೆ, ಇಜಾರೇದಾರನಿಗೆ ದುಕಾನಗಳ ಸಂಖ್ಯೆಯನ್ನು ಹಾಗೆ ಕಮ್ಮಿ ಮಾಡಿದ್ದರಿಂದ ನುಕ್ಸಾನಪಟ್ಟಿದ್ದಾನೆಂದು ರುಜುವಾದರೆ, ದಾಮಾಷಾಯಿ ಪ್ರಕಾರ ಈಡು ಮೊಬಲಗ್ ಕೊಡಲ್ಪಡತಕ್ಕದ್ದೇ ಹೊರತು ಅನ್ಯಥಾ ಕೂಡದು.

X. ಇಜಾರೇದಾರನು, ತನ್ನ ಒಟ್ಟು ಕೋರೀನಲ್ಲಿ ನಡೆಯುವ ಬಿಕರೀಗಳ ಬಾಬತು, ಸಾಜಾ ಆಗಿಯೂ, ಕರಾರ್‌ವಾಕಾ ಆಗಿಯೂ ಇರುವ ಲೆಕ್ಕವನ್ನು ಡೆಪ್ಯುಟಿಕಮ್ಮಿಷನರವರಿಗೆ ಅಥವಾ ಸಂದರ್ಭಾನುಸಾರ ಸಬ್ ಡಿವಿಜನ್ ಆಫೀಸರರಿಗೆ ಕೇಳಿದಾಗ ತಯಾರ್ ಮಾಡಿಕೊಡಬೇಕಾಗಿರುತ್ತೆ ಮತ್ತು ಸುಂಕದ ಇಲಾಖಾ ಆಫಿಸರ್‌ಗಳಿಗೆ, ಇಜಾರೇ ದಾರನಿಂದ ಇಡಲ್ಪಡುವ ತಮಾಂ ಲೆಕ್ಕಗಳನ್ನೂ ನೋಡ

ಲಿಕ್ಕೆ ಯಾವಾಗಲೂ, ಯಿಲ್ಲಸಮಯಗಳಲ್ಲಿಯೂ ಅವಕಾಶ ಕೊಡತಕ್ಕದ್ದು. ಅಂತಾ ಲೆಕ್ಕಗಳು ಸಾಚಾ ಆಗಿಯೂ, ಕರಾರ್ವಾಕಾ ಆ ಯೂ ಮತ್ತು ಡೆಪ್ಯುಟಿ ಕಮ್ಮಿಷನರು ಯಾ ಸಂದರ್ಭಾನುಸಾರ ಸಬ್ ಡಿವಿಜನ್ ಆಫೀಸರರು ಆಗಿಂದಾಗ್ಯೆ ಮಂಜೂರ್ ಮಾಡಬಹುದಾದ ನಮೂನೇಗಳಲ್ಲಿಯೂ ಇರತಕ್ಕವು.

XI. ಬಟ್ಟಿ ಕೋಠಿಗಳಲ್ಲಿ ಇಜಾರೇದಾರನ ಮುತಾಲೀಕನಾಗಲಿ, ನೌಕರನಾಗಲಿ, ಕೆಟ್ಟನಡತೆಗೂ ಅಕ್ರಮಗಳಾದ ಕೃತ್ಯಗಳಿಗೂ, ಅವಕಾಶ ಕೊಡಕೂಡದು, ಅವರುಗಳಿಗೆ, ಕರಾರ್ವಾಕಾ ತ್ರಾಸುಗಳನ್ನೂ ತೂಕಗಳನ್ನೂ ಕೊಡತಕ್ಕದ್ದು. ತೂಕಗಳಿಗೆ ಕ್ರಮವಾಗಿ ಗವರ್ನಮೆಂಟಿನಿಂದ ಮುದ್ರೆಹಾಕಲ್ಪಡತಕ್ಕದ್ದು. ಮತ್ತು, ಅಂತಾ ನೌಕರರೆಲ್ಲರೂ, ಇಜಾರೇದಾರನಿಂದ ಕರಾರಿಗೆ ರುಜು ಮಾಡಲ್ಪಟ್ಟ 15 ದಿನಗಳ ತರುವಾಯ ಇಜಾರೇದಾರನಿಗೂ, ಗವರ್ನಮೆಂಟಿನವರಿಗೂ, ನಡೆದಿರುವ ಒಡಂಬಡಿಕೆಗಳ ತಾತ್ಪರ್ಯಕ್ಕೂ ಅಥ-ಕ್ಕೂ ಜಾರೀಯೊಳಗಿರುವ ಕಾನೂನುಗಳಿಗೂ, ನಿಬಂಧನೆಗಳಿಗೂ, ಬದ್ಧರಾಗಿ ನಡೆದುಕೊಳ್ಳುವದಾಗಿ ಮುಚ್ಚಳಿಕೆ ಬರೆದುಕೊಡತಕ್ಕದ್ದು; ಅಂತಾ ಮುಚ್ಚಳಿಕೆಗಳು ತಪ್ಪದೆ ಸವರೀ ಮಾಹೆ 20ನೇ ತಾರೀಖಿನೊಳಗಾಗಿ, ಡೆಪ್ಯುಟಿ ಕಮ್ಮಿಷನರ ಅಥವಾ ಸಂದರ್ಭಾನುಸಾರ ಸಬ್ ಡಿವಿಜನ್ ಆಫೀಸರರ ಆಫೀಸಿನಲ್ಲಿ ಇಡಲ್ಪಡತಕ್ಕದ್ದು.

XII. ಮೇಲೆಕಂಡ ಷರತುಗಳ ಯಾವ ಉಲ್ಲಂಘನೆಗಾಗಲಿ, ಇಜಾರೇದಾರನು ಡೆಪ್ಯುಟಿ ಕಮ್ಮಿಷನರವರ ಯಾ ಸಂದರ್ಭಾನುಸಾರ ಸಬ್ ಡಿವಿಜನ್ ಆಫೀಸರರ ಯಖ್ತ್ಯಾರೀ ಮೇಲೆ ವಸೂಲ್ ಮಾಡಲ್ಪಡತಕ್ಕ 100 ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೂ, ಜರೂರೆಂದು ಭಾವಿಸಿದರೆ, ಗವರ್ನಮೆಂಟಿನವರ ಮಂಜೂರಾತೀನಿಂ ಆತನ ಇಜಾರೇಯನ್ನು ಕಳಕೊಳ್ಳುವದಕ್ಕೂ, ಅಥವಾ ಕಂಟ್ರಾಕ್ಟಿನ ಉಲ್ಲಂಘನೆಗಾಗಿ ಅಥವಾ ಗವರ್ನಮೆಂಟಿನಿಂದ ಕಲ್ಪಿಸಲ್ಪಟ್ಟ ರೂಲ್ಸಿನ ಉಲ್ಲಂಘನೆಗಾಗಿ ಹಾಲೀ ಜಾರೀಯಿರುವ ಕಾನೂನುಗಳಿಂದ ವಿಧಿಸಲ್ಪಟ್ಟ ಮತ್ತಾವ ದಂಡಗಳಿಗಾಗಲಿ ಒಳಪಡತಕ್ಕದ್ದು; ಯಿನ್ನ್ಯಾವ ತಪಸೀಲ್‌ಗಳನ್ನಾದರೂ, ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

XIII. ಕಂಟ್ರಾಕ್ಟುದಾರನು, ಗವರ್ನಮೆಂಟಿನಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ನಿಬಂಧನೆಗಳಿಗಾಗಲಿ ಅನುಗುಣವಾಗಿ ನಡಿಯಬೇಕಾಗಿರುತ್ತೆ.

ತಾರೀಖು 21ನೇ ಮಾರ್ಚಿ 1883.

ನಂ. 84.—ಕಾರ್ಯಾರ್ಥ ದಿವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಯೆ ಹಿಂದಿನ ದಿನ ಸೆಕ್ರೆಟೇರಿಯವರಿಗೆ ತಮ್ಮ ಕಾರ್ಡುಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಬಮೋಜಿಬ್ ಹುಕ್ಕುಂ,

ಆರ್. ವಿಜಯೀಂದ್ರರಾವ್,

ಸೆಕ್ರೆಟೇರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜೂನ್ ತಾ॥ 14, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ

ಇಂಡ್ಯಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರುವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ರೆಸಿಡೆಂಟರ ಇಲಾಖಾ.

ಇಸ್ತಿಹಾರ್ ನಾಮೆ.

ಫಿನಾನ್ಷಿಯಲ್ ಇಲಾಖಾ.

1882ನೇ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರ್ಯಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸಿನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್‌ಟ್ರೋಲರ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 11ನೇ ಜೂನ್ 1884.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ, ಇದರಡಿ ವಿವರಿಸಿರುವ ತಂಸೂಕುಗಳು ಕೋಲಾರ ಸಬ್ ರಿಜಿಸ್ಟ್ರೇ ಆಫೀಸಿನಲ್ಲಿ 2 ವರುಷಗಳಿಂದ ಬೇವಾರಸಾಗಿ ನಿಂತಿರುತ್ತವೆ, ಅವುಗಳನ್ನ ಹಾಜರ್ಮಾಡಿದವರಾಗಲಿ, ಯಾ ಅವುಗಳನ್ನು ವಾಪಸುಪಡಿಯುವ ಬಾಧ್ಯತೆ ಅಥವಾ ಅಧಿಕಾರವುಳ್ಳವರಾಗಲಿ ಈ ನೋಟಿಫಿಕೇಷನ್ ತಾರೀಖು ಲಾಗಾಯತು ಒಂದು ತಿಂಗಳವಳಗಾಗಿ ಡಿಟೋ ಸಬ್ ರಿಜಿಸ್ಟ್ರಾರಲ್ಲಿ ಹಾಜರಾಗಿ ವಾಪಸ್ ತೆಗದುಕೊಳ್ಳಬಹುದು, ಇಲ್ಲದ ಪಕ್ಷದಲ್ಲಿ ಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುವವು.

ಆಫೀಸಿನ ಹೆಸರು	ಪುಸ್ತಕ ಸಂಪುಟ ಮತ್ತು ನಂಬರು	ತಮಸೂಕು ಬರೆದು ಕೊಟ್ಟವನ ಹೆಸರು	ಬರೆಸಿಕೊಂಡವನ ಹೆಸರು	ತಮಸೂಕಿನ ತಾರೀಖು	ರಿಜಿಸ್ಟ್ರೇಷನ್ ತಾರೀಖು	ತಮಸೂಕಿನ ತಪಶೀಲ.
ಕೋಲಾರ ಸಬ್ ರಿಜಿಸ್ಟ್ರೇ ಆಫೀಸು	1ನೇ ಬುಕ್ಕು 1880—81 ನಂಬರ್ 193	ಕೋಲಾರ ತಾಲ್ಲೂಕು ನರಸಾಪುರದಲ್ಲಿ ಇರುವ ದೇವಾಂಗದ ಕಸ್ತೂರಪ್ಪನ ಮಗ ಮುನಿಯಪ್ಪ	ಕೋಲಾರದಲ್ಲಿರುವ ದೇವಾಂಗದ ವೀರಣ್ಣನ ಮಗ ಮುನಿಯಪ್ಪ	1881ನೇ ಇಸವಿ ಮಾರ್ಚಿ 11	12ನೇ ಮಾರ್ಚಿ 1881	ಕೋಲಾರದ ದೇವಾಂಗದ ಪೇಟೇಲಿರುವ ಮ್ಯುನಿಸಿಪಲ್ 1367ನೇ ನಂಬರ್ ಪಟ್ಟೇಲಿ ಕಂಡ 1730ನೇ ನಂಬರ್ ಮನೆಯನ್ನ 85 ರೂಪಾಯಿಗಳಿಗೆ ಭೋಗ್ಯಮಾಡಿ ಯಿರುವಂತೆ.
ಡಿಟೋ	1881—82 ನಂಬರ್ 195	ಕೋಲಾರದಲ್ಲಿ ಇರುವ ದೇವರಾಯದುರ್ಗದ ವೆಂಕಟನರಸಪ್ಪ	ಇಂಜನಿಯರ್ ಇಲಾಖಾ ಪೆನ್ಷನ್ ಕ್ಯಾಷಿಯರ್ ಮೆ॥ ಡೆವಿಡ್ಸ್	1882ನೇ ಸಸವಿ ಜನವರೀ ತಾರೀಖು 21	31ನೇ ಜನವರೀ 1882	ಕೋಲಾರ ತಾಲ್ಲೂಕು ಕಾರಹಳ್ಳಿ ಬಳಿಯಣ 96ನೇ ನಂಬರ್ ಜಮೀನಿನ ಫಸಲಿನಲ್ಲಿ ಅರ್ಧ ಮೇಡಿವಾರ ಕೊಡುವದಾಗಿ ಕರಾರು.
ಡಿಟೋ	2ನೇ ಬುಕ್ಕು 1881—82 ನಂಬರ್ 2	ಮಾದಮುತ್ತನಹಳ್ಳಿ ನಾರಣಪ್ಪ, ನೀಲಕಂಠಪ್ಪ	ಕೋಲಾರದ ಕುರುಬ ಪ್ಯಾಟೆಲಿರುವ ಗುರಪ್ಪ	1880ನೇ ಇಸವಿ ಆಗಸ್ಟ್ ತಾರೀಖು 8	ನಿರಾಕರಿಸಿದ ತಾರೀಖು 1ನೇ ನವಂಬರ್ 1881	ಕೋಲಾರ ಕುರುಬಪೇಟೇಲಿರುವ ಜಮೀನಿನಲ್ಲಿನ 155ನೇ ನಂಬರ್ ಕೆರೆವಾರೆ ಹೊಲ ೪೦ ಜಮೀನನ್ನ 186—4—0 ಗೆ ಖರೀದೀ ಮಾಡಿ ಯಿಧೆನೆಂದು.
ಡಿಟೋ	2ನೇ ಬುಕ್ಕು 1881—82 ನಂಬರ್ 1	ಕೋಲಾರ ತಾಲ್ಲೂಕು ಮರಗಲ್ಲಿನಲ್ಲಿರುವ ದ್ಯಾವೀರಿ	ಡಿಟೋ ಗ್ರಾಮದ ದೇವಿರಪ್ಪನ ಮಗ ಸೋಂಣಪ್ಪ	1880ನೇ ಇಸವಿ ಅಕ್ಟೋಬರ್ 16	ಡಿಟೋ	ವಿವಾಹ ಪರಿತ್ಯಜನೆ ಕರಾರು.
ಡಿಟೋ	ಡಿಟೋ ನಂಬರ್ 3	ಕೋಲಾರ ಕಸಬೆ ವೆಂಕಟರಮಣಯ್ಯ	ಕೋಲಾರ ಕಠಾರಿಪಾಳ್ಯದ ಹೆಡಿಗೆ ಮುನಿಕ್ಕನ ಮಗ ಮುನೆಪ್ಪ	1881ನೇ ಇಸವಿ ಏಪ್ರೆಲ್ ತಾರೀಖು 21	ಡಿಟೋ ಇಸವಿ ಡಿಶಂಬರ್ 13	ಕೋಲಾರ ತಾಲ್ಲೂಕು ಸುಲ್ತಾನ್ ತಿಪ್ಪಸಂದ್ರದ ಬಳಿ ಇರುವ 21ನೇ ನಂಬರ್ ಹೊಲ ಬೀಜವರೀ ೧॥ ವೃಕ್ಷ ಜಮೀನಿನಲ್ಲಿ ಅರ್ಧ ಹೊಲ 80 ರೂಪಾಯಿಗೆ ಭೋಗ್ಯ ಮಾಡಿರುವದಾಗಿ.

ಸಿ. ಸುಬ್ಬಾರಾವ್,
ರಿಜಿಸ್ಟ್ರಾರ್.

ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷ್ನರ ಸಾಹೆಬರವರ ಕೋರ್ಟಿನಿಂದ.

ತಾರೀಖು 6ನೇ ಜೂನ್ 1884.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ, ಡಿಸ್ಟ್ರಿಕ್ಟ್ ಮಜಕೂರ್ ಮದ್ದಗಿರಿ, ಪಾವಗಡ, ಶಿರಾ, ಗುಬ್ಬಿ ಈ ತಾಲ್ಲೂಕುಗಳಲ್ಲಿ 1884—85ನೇ ತಾರಣಸಂವತ್ಸರದಲ್ಲಿ ಸರ್ಕಾರದ ಜಮೀನಿನಲ್ಲಿ ಕುರಂಗದ ಕಲ್ಲುಗಳನ್ನು ಜಮಾಯಿಸತಕ್ಕ ಹಕ್ಕನ್ನು ಆಯಾಯ ತಾಲ್ಲೂಕು ಆಮಿಲರ ರೂಬರೂ ತಾಲ್ಲೂಕು ಕಚ್ಚೇರಿಯಲ್ಲಿ ಇದರಡೀಲಿ ಕಂಡ ತಾರೀಖುಗಳಲ್ಲಿ ದಿವಿ 11 ಘಂಟೆ ಲಾಗಾಯತು ಹರಾಜು ಮಾಡಲಾಧೀತು.

ಷರತ್ತುಗಳು.

1. ಹರಾಜು ಕೈದಾದಕೂಡ್ಲೆ ಆಖೈರ್ ಸವಾಲ್‌ದಾರನು ಶೇಕಡಾ 25 ರೂಪಾಯಿ ಮೇರಿಗೆ ನಗದು ಠೇವಣಿಯನ್ನು ಇಡಬೇಕು, ಹರಾಜು ದೀವಾನ್ ಸಾಹೆಬರಿಂದ ಮಂಜೂರಾದ ವಡನೆ 15 ದಿವಸದಲ್ಲಿ ಪೂರಾ ಮೊಬಲಗನ್ನು ಹಾಜರ್ಮಾಡಬೇಕು, ಹಾಗೆ ಮಾಡದೆ ತಪ್ಪಿದರೆ ಪುನಹಾ ಹರಾಜು ಮಾಡಲ್ಪಟ್ಟು ನಷ್ಟ ಬಂದ ಮೊಬಲಗಿಗೆ ಮೊದಲಿನ ಚಡ ಸವಾಲ್‌ದಾರನನ್ನು ಗುರಿಮಾಡಲಾಧೀತು, ಮತ್ತು ಠೇವಣಿಯನ್ನು ಸರ್ಕಾರಕ್ಕೆ ಶೇರಿಸಿ ಕೊಳ್ಳಲಾಧೀತು.

2. ಕುರಂಗಡ ಕಲ್ಲುಗಳನ್ನು ತೆಗಿಯುವ ವೃದ್ಧಿಶ್ಯ ಭೂಮಿ ಸಾಗುವಳಿಗೆ ನಾಲಾಯಖಾಗುವಂತೆ ಮಾಡಕೂಡದು ಗುಂಡಿಗಳನ್ನು ಇಜಾರದಾರನೇ ಮುಚ್ಚಿಸಬೇಕು.

3. ಹಿಡುವಳಿಯಲ್ಲಿರುವ ಭೂಮಿಯ ಕುರಂಗದ ಕಲ್ಲುಗಳನ್ನು ಹಿಡುವಳಿದಾರನ ಅನುಮತಿ ಪಡದು ತೆಗದುಕೊಳ್ಳಬೇಕು.

4. ಬಂಜರು ಭೂಮಿಗಳನ್ನು ಹುಲ್ಲುಬನ್ನಿ ಮತ್ತು ಸಾಗುವಳಿಗೆ ಕೊಡಲಾಧೀತು, ಹಾಗೆ ಕೊಡೋಣವರಿಂದ ಕುರಂಗದ ಕಲ್ಲು ಇಜಾರದಾರನಿಗೇನಾದರೂ ನಷ್ಟವಾದರೆ ಅದಕ್ಕೆ ಸರ್ಕಾರದವರು ಜವಾಬ್‌ದಾರ್ರಲ್ಲಾ.

5. ಹರಾಜು ಮೊಬಲಗಿನ ಮೇಲೆ ಶೇಕಡಾ $6\frac{1}{4}$ ರೂಪಾಯಿ ಮೇರಿಗೆ ಲೋಕಲ್ ಫಂಡನ್ನು ಕೊಡಬೇಕು.

ಈ ವಿಷಯದಲ್ಲಿ ಮತ್ತೇನಾದರೂ ತಪಸೀಲ್ ತಿಳಿಯಬೇಕಾಗಿದ್ದರೆ ಆಯಾಯ ತಾಲ್ಲೂಕು ಅಮಿಲರಿಗೆ ಬರದು ತಿಳದುಕೊಳ್ಳಬಹುದು.

ಹರಾಜು ತಾರೀಖು.

ಮದ್ದಗಿರಿ ತಾಲ್ಲೂಕು	1884ನೇ ಜುಲೈ 15.	ಪಾವಗಡ ತಾಲ್ಲೂಕು	1884ನೇ ಜುಲೈ 21.
ಶಿರಾ ತಾಲ್ಲೂಕು	.. ಡಿಟೋ 26.	ಗುಬ್ಬಿ ತಾಲ್ಲೂಕು	.. ಡಿಟೋ 31.

ಮಹಮ್ಮದಲ್ಲಿ,
ಫಾರ್ ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟ್.

ತಾರೀಖು 2ನೇ ಜೂನ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ತಿರುಮಕೂಡ್ಲು ನರಸೀಪುರ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಬೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜನ್ನು ಹಾಜರ್ಮಾಡಿದವನೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರನಾಗಲಿ ಈ ನೋಟೀಸ್ ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸ್ ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಶ ಪಡಿಸಲ್ಪಡುವದು.

ನಂಬರ್.	ದಸ್ತಾವೇಜು ಬರದುಕೊಟ್ಟವನ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
404 / 1881—82	ತಿರುಮಕೂಡ್ಲು ನಲ್ಲಿರುವ ಕೆಂಪನ ಮುದ್ದಲಿಂಗಮ್ಮನ ಚೆವುಡಯ್ಯನ ಮಗಮುದ್ದಲಿಂಗಾ	ತಿರುಮಕೂಡ್ಲು ಗ್ರಾಮದಲ್ಲಿರುವ ನಾಯಕಸಾನಿ ದೊಡ್ಡ ಮಿನಾಕ್ಷಮ್ಮನ ಮಗಳಾದ ರಾಜಿ	17—10—81	17—10—1	ವಿಭಾಗಪತ್ರ ಕಿಮ್ಮತು 485 ರೂಪಾಯಿ.
405 / 1881—82	ತಿರುಮಕೊಡ್ಲು ಗ್ರಾಮದಲ್ಲಿ ಯಿರುವ ನಾಯಕಸಾನಿ ದೊಡ್ಡ ಮಿನಾಕ್ಷಮ್ಮನ ಮಗಳಾದ ರಾಜಿ	ತಿರುಮಕೂಡ್ಲು ಕೆಂಪನ ಮುದ್ದಲಿಂಗಮ್ಮನ ಚೆನ್ನಡಯ್ಯನ ಮಗ ಮುದ್ದಲಿಂಗಾ	ಡಿಟ್ಟೋ	ಡಿಟ್ಟೋ	ವಿಭಾಗ ಪತ್ರ ಕಿಮ್ಮತು 995 ರೂಪಾಯಿ.

ಅಬ್ದುಲ್ ಖಾದರ್, ಕೆ. ಬಿ.,
ರಿಜಿಸ್ಟ್ರಾರ್.

ವೈಸೂರು ಗೆಜೆಟ್, ಚಂದಾ ದರ ವಗ್ಯೆರೆ.

	ಚಂದಾ. ರೂ. ಆ.	ಟಪ್ಪಾಲ್ ಹಾಸಲು ವೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲೀಷು ಮತ್ತು ಕನ್ನಡ ಸಹಾ 12 ತಿಂಗಳಿಗೆ	7 0	3 8
ಛಷ್ ಮಾಹೆ ಯಾ ಕ್ವಾರಟರಿಗೆ	ದಾವಾಮಾಷಾಯಿ ಪ್ರಕಾರ ದರಗಳು.	

ಶಿವಿಲ್ ಕೋರ್ಟನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಫಿಕೇಟ್ ಬಗ್ಯೆ ನೋಟೀಸುಗಳು:— ರೂ. ಆ.

ವೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ) . . 2 8

ಯರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟ್ಟೋ 1 4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ, ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟೀಸ್‌ಗಳಿಗೆ:—

ವೊದಲನೇ ದಫಾ 5 0

ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ 2 8

ಶಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಡ್ಯುಪ್ಲಿಕೇಟ್ ಕಾಫೀ ಪಟ್ಟೇ, ವಗ್ಯೆರೇ ಕೊಡುವ ಬಗ್ಯೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟೀಸ್‌ಗಳಿಗೆ:—

ವೊದಲನೇ ಸಲಕ್ಕೆ . . ಪುಟ 1ಕ್ಕೆ . . 10 0

ಯೆರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ ,, . . 5 0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

ವೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಙ್ತಿ 1ಕ್ಕೆ . . 0 8

ಯೆರಡನೇ ದಫಾ ಡಿಟ್ಟೋ ಡಿಟ್ಟೋ . . 0 6

ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ 0 4

ಬವೋಜೇಬ್ ಹುಕ್ಕುಂ,
ಹೆಚ್. ಹಡರ್ಸನ್,
ವೈ. ಗೆ. ಕಂಪೈಲ

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಯಿಷ್ ಆದದ್ದು.

ಬೆಂಗಳೂರು, ಶನಿವಾರ, ಜೂನ್ ತಾ 14, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೧ನೇ ಭಾಗ.

ಸರ್ಕಾರೀ ಕಾಗದಪತ್ರಗಳು.

ಅಪಾಯಕರವಾಗಿಯೂ ಅಂಟು ಸಂಬಂಧವಾಗಿಯೂ ಇರುವ ರೋಗದ ವಿಷಯದಲ್ಲಿ ಮ್ಯುನಿಸಿಪಲ್ ಕಮ್ಮಿಟಿಯವರಿಗೂ ಅವರುಗಳ ನೌಕರ್ ಮಾನೇರಿಗೂ ಬಟ್ಟು ತಿಳುವಳಿಕೆ:—

1. ಅಂಟು ಸಂಬಂಧವಾದ ವ್ಯಾಧಿಯುಳ್ಳ ಒಬ್ಬ ಮನುಷ್ಯನು ಒಂದು ಸಾಂಕ್ರಾಮಿಕ ವ್ಯಾಧಿಯನ್ನು ಉಂಟುಮಾಡಬಹುದು.

2. ಉಖಾಲ್‌ಜುಲಾಬಿನ ಸ್ಥಳದಿಂದ ಬರುವ ಮನುಷ್ಯನು ಮತ್ತು ಅತಿಸಾರದಿಂದ ಮಾತ್ರ ಅನುಭವಿಸುತಿದ್ದಾಗ್ಯೂ, ವ್ಯಾಧಿಯನ್ನು ಸ್ಥಳಾಂತರದಿಂದ ಆಮದ್‌ಮಾಡಬಹುದು.

3. ರೈಲ್‌ವೇ ಬಂಡಿಗಳು ಸ್ವಲ್ಪ ಕಾಲದೊಳಗಾಗಿ ಬಹುದೂರ ಅಂಟುವ್ಯಾಧಿಯನ್ನು ಸಾಗಿಸಬಹುದು.

4. ಅಪಾಯಕರವಾದ ವ್ಯಾಧಿ ಕಾಣಬರುವ ಜನಗಳ ವಿಶಿಷ್ಟ ಸಮೂಹಗಳೂ, ಅದು ತ್ವರೆಯಾಗಿ ವ್ಯಾಪಿಸುವದಕ್ಕೂ ಕೆಟ್ಟ ಚಿಕಿತ್ಸೆಯ ಸಂಬಂಧವಾದ ಅದರ ಸ್ಥಿತಿಗೂ, ಸಾಂಕ್ರಾಮಿಕದ ವೇಗಕ್ಕೂ ಅನುಕೂಲಗಳಾಗಿರುತ್ತವೆ.

5. ಪ್ರಯಾಣ ಮಾಡುತ್ತಿರುವ ರಿಜಮೆಂಟುಗಳು, ಸಂತೆಗಳು, ಯಾತ್ರಾರ್ಥಿಗಳು, ಇವರುಗಳಿಂದ ಅಂಟು ವ್ಯಾಧಿಯ ಮೂಲಗಳು ವುಂಟಾಗುತ್ತವೆ. ಮತ್ತು ಅವರುಗಳು ಪ್ರಯಾಣ ಮಾಡುವ ಗ್ರಾಮಗಳ ದ್ವಾರಾ ವ್ಯಾಧಿಯನ್ನು ಸಾಗಿಸುತ್ತಾರೆ.

6. ಜನಸಮೂಹಗಳು ಸಮಯೋಚಿತವಾಗಿ ಚದರಿ ಹೋಗುವದರಿಂದ ಒಂದು ಸಾಂಕ್ರಾಮಿಕ ರೋಗದ ವೇಗವು ತಗ್ಗುತ್ತದೆ; ಪರಂತು ಅಭಿವೃದ್ಧಿಯ ವಿಶೇಷವಾದ ಅಪಾಯವನ್ನು ಉಂಟುಮಾಡುತ್ತದೆ.

7. ಸಾಂಕ್ರಾಮಿಕಗಳಾದ ರೋಗಗಳ ಆಧಿಕ್ಯಕ್ಕೆ ಅನುಕೂಲಗಳಾದ ಸ್ಥಿತಿಗಳ್ಯಾವವೆಂದರೆ, ಅನ್ನಕ್ಕಿಲ್ಲದೆ ಇರುವಣ, ಜನಗಳ ಸಂಘ ಸೇರುವಣ, ಅವರುಗಳ ಅನಾರೋಗ್ಯವಾದ ಸ್ಥಿತಿ, ಬೇಸಿಗೆ ಕಾಲ, ಗಾಳಿ ಇಲ್ಲದೆ ಇರುವಣ, ಮತ್ತು ಶರೀರ ಸಂಬಂಧವಾದ ಪದಾರ್ಥ ಅಡಗಿರುವ ಭೂಮಿಯಿಂದ ಯೇಳುವ ಹಬೆ, ನೀರು ಸಾಲದೆಯೂ ಅಶುದ್ಧವಾಗಿಯೂ ಇರುವಣ, ಪಾಯಖಾನೆಗಳಿಂದಲೂ, ಚರಂಡಿಗಳಿಂದಲೂ ಹೊರಡುವ ದುರ್ಗಂಧ.

8. ಉಖಾಲ್ ಜುಲಾಬಿಗೆ ಸಂಬಂಧಿಸಿದ ಪದಾರ್ಥಗಳು ಒಂದಾವರ್ತಿ ಅಡಗಿರುವ ಭೂಮಿಯು ಬಹುಕಾಲ ವಿಷವನ್ನು ವುಳಿಸಿಕ್ಕೊಂಡು ಅದು ನಷ್ಟವಾದಾಗ ಅದನ್ನು ಪುನಃ ವುಂಟುಮಾಡುತ್ತದೆ.

9 ಅಂಟುವ್ಯಾಧಿಯನ್ನು ಸಾಗಿಸುವ ಬಗ್ಗೆ ಗಾಳಿಯು ಬಂದು ಯಾನವಾಗಿರುತ್ತೆ. ಆದರೆ, ಹಾಗೆ ಕಳುಹಿಸಲ್ಪಡುವಣ ಬಹಳ ಕೊಂಚವಾದ ಫಾಸಲೆಗೆ ಹದ್ದುಪಡಿಸಲ್ಪಟ್ಟಿರುತ್ತೆ. ನೀರೂ ಹೊಟ್ಟೆಯಲ್ಲಿರುವ ಆಹಾರವೂ, ಶರೀರದಲ್ಲಿ ಉಖಾಲ್ ಜುಲಾಬ್ ಸಂಬಂಧಿಯಾದ ವಿಷ ಹುಟ್ಟಿಸುತ್ತವೆ. ಮತ್ತು ಮುಖ್ಯವಾಗಿ ಉಸುರು ಬಿಡುವ ಮತ್ತು ಅಹಾರ ತಿನ್ನುವ ದ್ವಾರಗಳಿಂದ ವಿಷವು ಪ್ರವೇಶಿಸುತ್ತದೆ.

10. ಅಂಟು ರೋಗದ ಮುಖ್ಯಾಧಾರಗಳ್ಯಾವವೆಂದರೆ, ಉಖಾಲ್‌ಜುಲಾಬ ವಿಷಯದಲ್ಲಿ ಅಧೈರ್ಯ ಪಡುವಣ, ಮತ್ತು ಕಿಡುಬಿನ ವಿಷಯದಲ್ಲಿಯೂ ಕೊಕ್ಕು ಕಟ್ಟುವಣ; ಇವುಗಳ ದೆಸೆಯಿಂದ ದೀರ್ಘ ಕಾಲ ಮಧ್ಯಾವಕಾಶ ವುಂಟಾದ ಬಳಿಕಲೂ ಅನುಕೂಲ ವಿದ್ಯಮಾನಗಳನು ಸರಿಸಿ ವ್ಯಾಧಿ ವ್ಯಾಪಿಸ ಬಹುದು.

11. ನೆಮಲಿಗುಟ್ಟ ಯೆಂಬ ಗಿಡ ಬೆಳೆಯುವ ಸ್ಥಳಗಳಲ್ಲಿ ಉಖಾಲ್‌ಜಲಾಬ್ ತಗಲುವದಿಲ್ಲವೆಂತಲೂ ಕರ್ನೂಲ್ ಡಿಸ್ಟ್ರಿಕ್ಟಿನಲ್ಲಿ ಪಲ್ಲವರಂ ಯೆಂಬ ಸ್ಥಳದಲ್ಲಿ ಬಿಳೀ ಹುವ್ವುಳ್ಳ ಬಂದು ಮರ ಬೆಳೆಯುತ್ತಾಗಿ ಉಖಾಲ್‌ಜಲಾಬ್ ತಗಲುವದಿಲ್ಲವೆಂತಲೂ ಸಾರ್ವಜನೀನವಾಗಿ ನಂಬಲ್ಪಟ್ಟಿದೆ, ಸದರೀ ಹುವ್ವಿನ ವಾಸನೆಯು ಸಾವಿರ ಅಡಿಗಳ ಫಾಸಲೆಗೆ ವ್ಯಾಪಿಸುತ್ತೆ.

12. ಇದರಡಿ ನಮೂದಿರುವದು, ಉಖಾಲ್ ಜಲಾಬ್ ವುಂಟಾಗುವದಕ್ಕೆ ಹೇತುವಾಗುತ್ತೆಂದು ಊಹಿಸಲ್ಪಟ್ಟಿದೆ; ಹೊಸ ಧಾನ್ಯ ಮುಗ್ಗಿ ಹೋದ ಧಾನ್ಯ, ಬಿಸಿಲುಕಾಲದಲ್ಲಿ ಹಣ್ಣು, ಸೌತೇಕಾಯಿ, ಅತಿಪಕ್ವಫಲ, ಆಹಾರದ ದೌರ್ಲಭ್ಯ, ಮತ್ತು ಜಂತುಸಂಬಂಧವಾದ ಅಥವಾ ಸೊಪ್ಪುಸೆದೆ ಸಂಬಂಧವಾದ ಅಶುದ್ಧತೆ ವುಂಟಾದ ನೀರು—

13. ಅಂಟು ರೋಗ ತಗಲಿದ ಬಂದು ಸ್ಥಳವನ್ನು ಸ್ವಸ್ಥಪಡಿಸಲಿಕ್ಕೆ ವಾಡಿಕೆಯಾದ ಕ್ರಮಗಳ್ಯಾವವೆಂದರೆ, ಜನಾವಾಸಗಳಾದ ಕಟ್ಟಗಳಲ್ಲಿ ಜನಗಳ ಹೆಚ್ಚು ಗುಂಪನ್ನು ನಿರೋಧಿಸುವಣ, ವಿಶಾಲಗಳಾದ ರಸ್ತೆಗಳು, ಮ್ರೈರ್ದಾ ನೆಲಗಳು ಪಾಯಖಾನೆ ಗುಂಡಿಗಳನ್ನು ಮಾವುಕೂಫ್ ಮಾಡುವಣ, ಜಂತುಸಂಬಂಧವಾದ ಮತ್ತು ಸೊಪ್ಪು ಸೆದೆ ಸಂಬಂಧವಾದ ತಮಾಂ ಕಚರಾ ಗಲೀಜ್‌ಗಳನ್ನೂ ಸಾಗಿಸುವಣ, ಮನೆಗಳಿಂದಲೂ, ಬೀದಿಗಳಿಂದಲೂ, ಹರಿಯುವ ಗಲೀಜ್ ಚರಂಡಿಯನ್ನು ತ್ವರೆಯಾಗಿ ಸಾಗಿಸುವಿಕೆ, ಬಚ್ಚಲು, ಚರಂಡೀ, ಬಂಡಿ ಮಿಟ್ಟೆಗಳು, ಸ್ಮಶಾನಭೂಮಿ ಇವುಗಳನ್ನು ಭಾವಿಗಳ ಮತ್ತು ಕೆರೆಗಳ ಸಮೀಪದಿಂದ ತೆಗಿಯುವದರ ದೆಶೆಯಿಂದ ನೀರನ್ನು ಶುದ್ಧವಾಗಿ ಇಡುವಣ, ಸುಣ್ಣ ಬಳದು ಮನೆಗಳಿಗೆ ಅಂಟುರೋಗ ತಗಲದಂತೆ ಮಾಡುವಣ, ಹಳ್ಳಗಳನ್ನು ಕೊರಕಲುಗಳನ್ನೂ ಸಮಪಡಿಸುವಣ, ಹಾಳು ಗೋಡೆಗಳನ್ನು ತಳ್ಳಿಹಾಕುವಣ, ಜನಾವಾಸಗಳಿಂದ ತಮಾಂ ದನಗಳನ್ನು ಸಾಗಿಸಿಬಿಡುವಣ, ರೋಗ ತಗಲಿದ ಬಟ್ಟೆಗಳನ್ನು ತೊಳೆಯುವಣ ಅಥವಾ ನಾಶಪಡಿಸುವಣ, ಮೈ ತೊಳೆಯುವ ಬಗ್ಗೆ ಸಾಧನಗಳನ್ನು ಏರ್ಪಡಿಸುವಣ, ತಮಾಂ ಆಹಾರ ಪದಾರ್ಥಗಳನ್ನು ಅಜಮಾಯಿಷೀ ಮಾಡುವಣ, ಮುಂಜಾಗ್ರತೆಯ ಲಕ್ಷಣಗಳನ್ನು ಕುರಿತ ಚಿಕಿತ್ಸೆಯ ಬಗ್ಗೆ ಸಾಮಾನ್ಯ ಬುದ್ಧಿವಾದಗಳನ್ನು ತಿಳಿಯಪಡಿಸುವಣ, ಔಷಧಗಳನ್ನು ಧರ್ಮಾರ್ಥವಾಗಿ ಒದಗಿಸುವಿಕೆ, ಗಂಧಕ, ಮರದೆಣ್ಣೆ, ಕೀಲೆಣ್ಣೆ, ಕರ್ಪೂರ ಅಥವಾ ಪ್ರಸಿದ್ಧಗಳಾಗಿಯೂ ಸುಲಭಗಳಾಗಿಯೂ ಇರತಕ್ಕ ಶುದ್ಧಿ ಪಡಿಸುವ ಇತರ ಪದಾರ್ಥಗಳು ಇವುಗಳಿಂದ ಮನೆಗಳಲ್ಲೂ ಬೀದಿಗಳಲ್ಲೂ ಹೊಗೆ ಹಾಕುವಣ.

14. ಯಾವದಾದರೂ ಮುಖ್ಯವಾದ ಸ್ಥಳದಲ್ಲಿಯಾಗಲಿ ಬಂದು ಷಹರಿನ ಪೇಟೆಯಲ್ಲಿಯಾಗಲಿ, ಉಖಾಲ್‌ಜುಲಾಬ್ ವ್ಯಾಪಿಸಿದರೆ ನಿವಾಸಿಗಳು ಯುಕ್ತವಾಗಿ ವೈದ್ಯ ಸಹಾಯ ವುಂಟಾಗಬಹುದಾದ ಮೇಲೆ ಪ್ರತ್ಯೇಕ ಪ್ರತ್ಯೇಕ ಶಿಬಿರಗಳಾಗಿ ಹೋಗುವಂತೆ ಪ್ರೇರಿಸಲ್ಪಡತಕ್ಕದ್ದು, ಅಂತಾ ಶಿಬಿರ ಸ್ಥಾನ ಗ್ರಾಮ ಅಥವಾ ಷಹರಿನಿಂದ ಮತ್ತು ನಿಬ್ಬವು ನೀರುಳ್ಳ ಗದ್ದೆಗಳು ಅಥವಾ ಮಡುವುಗಳು ಇಂತಾದ್ದರಿಂದ ತಕ್ಕಷ್ಟುದೂರ ಆಚೆಗೆ ಸಾಗಿಸಲ್ಪಟ್ಟು, ಎತ್ತರವಾಗಿಯೂ ವಣಗಿಯೂ ಇರುವ ಸ್ಥಾನಗಳಲ್ಲಿ ಚುನಾಯಿಸಲ್ಪಡತಕ್ಕದ್ದು. ಹೊಳೆಗಳ ದಡಗಳನ್ನು ಹಿಂದೆ ಯಾವದಾದರೂ ಕಾಲದಲ್ಲಿ ಉಖಾಲ್‌ಜುಲಾಬ್ ಕಾಣಿಸಿಕೊಂಡ ನೆಲವನ್ನು ಬಿಟ್ಟುಬಿಡತಕ್ಕದ್ದು, ತಮಾಂ ಬಟ್ಟೆಗಳ ಸಂಪೂರ್ಣವಾದ ಒಗೆಯುವಿಕೆ ಮತ್ತು ಶಿಬಿರಕ್ಕೆ ಸಾಗಿಸಲ್ಪಟ್ಟ ಗೃಹಕೃತ್ಯದ ತಮಾಂ ಸಾಮಾನುಗಳನ್ನು ಶುದ್ಧಪಡಿಸುವಣ ಇಂತಾದ್ದು ಅವಶ್ಯಮಾಡಲ್ಪಡತಕ್ಕದ್ದು. ಬಹುಕಾಲ ವುಪಯೋಗಿಸಲ್ಪಡದೆ ಇರುವ ಭಾವಿಗಳನ್ನು ಅಂತಾ ಸಂದರ್ಭಗಳಲ್ಲಿ ವುಪಯೋಗಿಸಕೂಡದು

ಸಂತೆಗಳ ಮತ್ತು ವುತ್ಸವಗಳ ವಿಚಾರಣೆ ಮತ್ತು ಸಂರಕ್ಷಣೆ ಇಂತಾದ್ದರ ವಿಷಯದಲ್ಲಿ ಮಾಡಲ್ಪಡತಕ್ಕ ಏರ್ಪಾಡುಗಳಿಗಾಗಿ ರೂಲ್ಸ್.

1 ವಸತಿ.

1. ಜನಸಮುದಾಯದ ಸ್ಥಳಕ್ಕೆ ಕೇವಲ ಸಮೀಪವಾಗಿಯೂ ಎತ್ತರವಾಗಿಯೂ ಖುಷ್ಕಿಯಾಗಿಯೂ ವಿಶುದ್ಧವಾಗಿಯೂ ಮತ್ತು ನಿರ್ದುಷ್ಟವಾದ ಜಮೀನಿನ ಮೇಲೆ ವ್ಯಾಪಿಸುವ ಗಾಳಿಗಳ ವಿಷಯದಲ್ಲಿಯೂ ಪರಿಶುದ್ಧವಾದ ಗಾಳಿಯ ವಿಷಯದೊಳಗೂ ಯುಕ್ತವಾದ ಶಿಬಿರ ಸ್ಥಾನವನ್ನು ಚುನಾಯಿಸಿ ಯೋರ್ಪಡಿಸತಕ್ಕದ್ದು.

2. ಜಮೀನನ್ನು ಡಿವಿಜನ್‌ಗಳಾಗಿಯೂ, ಭಾಗಗಳಾಗಿಯೂ, ವಿಭಾಗಿಸಿ 40ರಿಂದ 20 ಅಡಿ ವರಿಗೆ ಅಗಲವುಳ್ಳ ದೊಡ್ಡಬೀದಿಗಳಾಗಿಯೂ ಸಣ್ಣ ಬೀದಿಗಳಾಗಿಯೂ ವಿಂಗಡಿಸತಕ್ಕದ್ದು.

3. ಜಾತಿಗಳ ಪ್ರಕಾರ ಹಂಗಾಮಿಯಾಗಿ ಚಪ್ಪರಗಳನ್ನೂ, ಗುಡಿಸಲುಗಳನ್ನೂ ಕಲ್ಪಿಸತಕ್ಕದ್ದು.

4. ಬಂಡಿಗಳಿಗಾಗಿಯೂ, ದನಗಳಿಗೋಸ್ಕರವೂ ಪ್ರತಿ ಸೆಕಿಷನಿನ ಮುಂಭಾಗಕ್ಕೆ ಜಾಗಾವನ್ನು ಬಿಡತಕ್ಕದ್ದು.

II ಸಂರಕ್ಷಣೆಯ ವಿಷಯ.

1. ಶಿಬಿರದ ಜರೂರಾತಿಗೆ ಬೇಕಾದ ಪ್ರತಿ ಡಿವಿಜನ್ನಿನ ಮುಂಭಾಗದಲ್ಲಿ ಹಂಗಾಮಿ ಚರಂಡೀಗಳನ್ನು ಕಟ್ಟಿಸತಕ್ಕದ್ದು.

2. ಗ್ರಾಮದಿಂದ ಅಥವಾ ಷಹರ್‌ನಿಂದ ಮತ್ತು ಶಿಬಿರದಿಂದ ಪ್ರತಿ ದಿನವೂ ತಮಾಂ ಕಸವನ್ನೂ, ಸಗಣಿಯನ್ನೂ ಗಲೀಜನ್ನೂ ತೆಗೆಯಿಸಿ ಹಾಕತಕ್ಕದ್ದು.

3. ವಾಸಸ್ಥಾನಗಳಿಂದ ತಮಾಂ ಜಲ ಮಲಾದಿಗಳನ್ನೂ ದಿನಕ್ಕೆ ಯೆರಡಾವರ್ತಿ ತೆಗೆಯಿಸಿ ಪಾಯಖಾನೇ ಗುಂಡೀಗಳ ಮೇಲೆ ಮಣ್ಣು ಹಾಕತಕ್ಕದ್ದು,

4. ತಮಾಂ ಕಚಕರೇಗಳನ್ನೂ ಸುಟ್ಟು ಬಿಟ್ಟು, ಗಲೀಜನ್ನು ಹೂಳಿ ಬಿಡತಕ್ಕದ್ದು.

III. ನೀರು ಒದಗಿಸುವಿಕೆ.

ನೀರು ಒದಗಿಸುವ ಬಗ್ಗೆ ಯೋಗ್ಯವಾದ ಪರಂತು ಪ್ರತ್ಯೇಕ ಪ್ರತ್ಯೇಕಗಳಾದ ಕೆರೆಗಳು, ಭಾವಿಗಳು, ಕಟ್ಟೆಗಳು, ಅಥವಾ ಯಿತರ ಜಲಾಧಾರಗಳನ್ನು ಚುನಾಯಿಸತಕ್ಕದ್ದು.

(a) ಪಾನಕ್ಕೂ, ಗೃಹಕೃತ್ಯ ಕೆಲಸಗಳಿಗೂಗಿಯೂ ಮಾತ್ರವೇ.
(b) ಸ್ನಾನ ಕಾರ್ಯಕ್ಕೆ ಮತ್ತೂ,
(c) ದನಗಳು ನೀರು ಕುಡಿಯುವ ಬಗ್ಯೂ,

2. ಪಾಕಾರ್ಥ ಚುನಾಯಿಸಲ್ಪಟ್ಟಿರುವ ನೀರು ಕೆಡದೆ ಯಿರುವದಕ್ಕೋಸ್ಕರ ನೀರಿನ ಮೂಲಸ್ಥಾನದ ಬಳಿ ಒಂದು ಪೊಲೀಸ್ ಪಹರೇಯನ್ನು ಯಿಡತಕ್ಕದ್ದು.

3. ಅರವಟ್ಟಿಗೆಗಳನ್ನು ಯಿಡಿಸತಕ್ಕದ್ದು.

IV. ವೈದ್ಯ ಸಂಬಂಧವಾದ ಮೇಲ್ ವಿಚಾರಣೆ.

1. ಒಬ್ಬ ಮೆಡಿಕಲ್ ತಾಪೇದಾರನು ಆರೋಗ್ಯದ ಯೇರ್ಪಾಡುಗಳನ್ನು ಮೇಲ್ ವಿಚಾರಣೆ ಮಾಡಿ ಔಷಧಗಳನ್ನು ಹಂಚತಕ್ಕದ್ದಲ್ಲದೆ, ಜನಸಂಘದ ಆರೋಗ್ಯವನ್ನು ಷರಾ ಬರೆದುಕೊಂಡು ತಮಾಂ ಮರಣಗಳನ್ನೂ ರಿಜಿಸ್ಟರ್ ಮಾಡಿ, ಹಂಗಾಮಿ ಆಸ್ಪತ್ರಿಯ ಚಾರ್ಜನ್ನು ವಹಿಸತಕ್ಕದ್ದು.

2. ಜನಗಳು ಬರುವದನ್ನು ಅಡ್ಡಿ ಪಡಿಸುವ ಸ್ಥಾನಗಳಲ್ಲಿ ತಮಾಂ ಪ್ರಯಾಣಸ್ಥರನ್ನು ಪರೀಕ್ಷಿಸುವ ಬಗ್ಯೂ, ಮತ್ತು ಜರೂರಿದ್ದಲ್ಲಿ ಕೂಡಲೆ ಉಪಯೋಗಿಸುವ ಬಗ್ಯೂ ಉಖಾಲ್ ಜುಲಾಬ್ ಮಾತ್ರೆಗಳನ್ನು ಹಂಚುವ ಬಗ್ಯೂ, ಮತ್ತು ಉಖಾಲ್ ಜುಲಾಬ್ ತಗಲಿದ ಮನುಷ್ಯರನ್ನ ಮುಖ್ಯಗಳಾದ ಚಪ್ಪರಗಳಲ್ಲಿ ಸಾಗಿಸುವದಕ್ಕೂ, ಏಜಂಟನ್ನು ನಿಯಮಿಸತಕ್ಕದ್ದು.

V. ಆಕಸ್ಮಿಕಗಳಾದ ಸಂಭವಗಳ ವಿಷಯದಲ್ಲಿ ಮುಂಜಾಗ್ರತೆ.

1. ರೋಗ ತಗಲಿದ ಜನಗಳು ಬಹಳವಾಗಿರುವ ಸಂಗತಿಗಳಲ್ಲಿ, ಪ್ರತಿ ಷಹರ್, ದೇವಸ್ಥಾನ ಅಥವಾ ಪುಣ್ಯಸ್ಥಾನ, ಯಿಂತಾದ್ದರಲ್ಲಿ ಒಳಗೆ ಹೋಗುವದಕ್ಕೂ ಹೊರಗೆ ಬರುವದಕ್ಕೂ ಗೇಟ್‌ಗಳೆಂಬ ಬಾಗಿಲುಗಳನ್ನು ನಿಯಮಿಸಿ ಹದ್ದು ಮಾಡಲ್ಪಟ್ಟ ಪ್ರದೇಶಗಳಲ್ಲಿ ಭಕ್ತಾದಿಗಳು ಬಹುಮಂದಿ ಅಕ್ರಮವಾಗಿ ಸೇರುವದನ್ನ ನಿರೋಧಿಸುವ ಬಗ್ಯೆ ಕಟಕಟೆಗಳನ್ನು ಕಟ್ಟಿಸತಕ್ಕದ್ದು.

2. ಜೆಂಕಿಗಳು ತಗಲದಂತೆ ಯೇರ್ಪಾಡು ಮಾಡತಕ್ಕದ್ದು.

VI. ಪೊಲೀಸ್‌ನವರು ಮಾಡತಕ್ಕ (ಆರೋಗ್ಯ ವಿಷಯದ ವಿಚಾರಣೆ.)

1. ರೋಗ ತಗಲಿದ ಮತ್ತು ಮರಣ ವುಂಟಾದ ತಮಾಂ ಸಂಗತಿಗಳನ್ನೂ, ಮೆಡಿಕಲ್ ತಾಪೇದಾರನ ಜಾಹೀರಾತಿಗೆ ತರತಕ್ಕದ್ದು.
2. ಔಷಧಗಳು ಕೊಡುವ ಬಗ್ಯೆ ಆಸ್‌ಪತ್ರಿಗಳ ಮತ್ತು ಡಿಪೋಗಳ ಜನಗಳಿಗೆ ಜಾಹಿರ್ ಮಾಡತಕ್ಕದ್ದು.
3. ರೋಗದ ಮುಂದು ಲಕ್ಷಣಗಳು ಕಾಣಬಂದಲ್ಲಿ ಔಷಧಗಳನ್ನು ಕೇಳಿ ಕೊಳ್ಳುವಂತೆ ಯಾತ್ರೆಯ ಜನಗಳಿಗೆ ಎಚ್ಚರಿಕೆ ಮಾಡತಕ್ಕದ್ದು.

VII. ಪಾಯಖಾನೆಗಳನ್ನು ಕಟ್ಟುವಿಕೆ.

1. ಪಾಯಖಾನೆಗಳ ಸುತ್ತಲೂ ಆವರಣಗಳಿರತಕ್ಕದ್ದು, ಸದರೀ ಆವರಣಗಳಲ್ಲಿ 2 ಅಡಿ ಅಗಲವೂ 3 ಅಡಿ ಆಳವೂ ಉಳ್ಳ ಸಮಾನಗಳಾದ ಕಾಲ್ವೆಗಳು ಅಗಿಯಲ್ಪಡತಕ್ಕದ್ದು; ತೆಗೆಯಿಸಿ ಹಾಕಲ್ಪಟ್ಟ ಮಣ್ಣು ಅವುಗಳ ಪಕ್ಕಗಳಲ್ಲೇ ಜಮಾಯಿಸಿ ಯಿಡಲ್ಪಡತಕ್ಕದ್ದು, ಆ ಪೈಕೀ ಒಂದು ಭಾಗವು ದಿನಕ್ಕೆರಡಾವರ್ತಿ ಮಲವನ್ನು ಮುಚ್ಚುವದಕ್ಕೋಸ್ಕರ ಉಪಯೋಗಿಸಲ್ಪಡತಕ್ಕದ್ದು.

2. ಜಾತ್ರೆ ಆಖೈರಾದಾಗ ಈ ಚರಂಡೀಗಳು ಪೂರಾ ಮುಚ್ಚಲ್ಪಡತಕ್ಕದ್ದು.

VIII. ಬಟ್ಟು ವಿಷಯ.

1. ಜಾತ್ರೆಗಳಿಗೂ ಸಂತೆಗಳು ವಗೈರೇಗಳಿಗೂ ಪೂರ್ವದಲ್ಲಿ ಛತ್ರಗಳು, ಮಂಟಪಗಳು, ಮತ್ತು ಜಮೀನುಗಳು, ಶಿಬಿರ ಮಾಡತಕ್ಕ ಅಥವಾ ಮೊಕ್ಕಾಂ ಮಾಡತಕ್ಕ ಜಾಗಾಗಳಾಗಿ ಪ್ರಯಾಣಸ್ಥರು ವಗೈರೇರಿಂದ ಸಾಧಾರಣವಾಗಿ ಪರಿಗ್ರಹಿಸುವ ಜಮೀನುಗಳು ಇವು ಡಿಸ್ಟ್ರಿಕ್ಟು ಅಧಿಕಾರಿಗಳಿಂದ ವಳ್ಳೆಯ ಆರೋಗ್ಯ ಸ್ಥಿತಿಯಲ್ಲಿ ಯಿಡಲ್ಪಡತಕ್ಕದ್ದು, ಮತ್ತು ತಮಾಂ ಜಲಾಧಾರಗಳೂ, ಶುದ್ಧಪಡಿಸಲ್ಪಡತಕ್ಕದ್ದು; ಮತ್ತು ಪ್ರಯಾಣಸ್ಥರು, ಯಾತ್ರಾರ್ಥಿಗಳು ಯಥಾಯಥರಾಗಿ ಚೆದರಿ ಹೋಗುವ ತನಕ ಯೋಗ್ಯವಾದ ಆರೋಗ್ಯ ಸ್ಥಿತಿಯಲ್ಲಿ ಸದರೀ ವಿಷಯಗಳು ಪೋಷಿಸಲ್ಪಡತಕ್ಕದ್ದು.

2. ಔಷಧಗಳನ್ನು ಬಗರ ರುಸುಂ ಕೊಡುವ ಬಗ್ಯೆ ಆಸ್ಪಿಟಲ್‌ಗಳೂ ಡಿಪೋಗಳೂ ಸ್ಥಾಪಿಸಲ್ಪಟ್ಟವೆ ಯೆಂತಲೂ, ಪ್ರಥಮತಃ ರೋಗ ಹುಟ್ಟಿದಾಗ ಜನಗಳು ಸದರೀ ಔಷಧಗಳನ್ನು ಪಡಕೊಳ್ಳತಕ್ಕದ್ದೆಂತಲೂ, ನೋಟೀಸ್‌ಗಳಲ್ಲಿ ನಮೂದಿಸಿ ಶಿಬಿರದಲ್ಲಿಯೂ ಮತ್ತು ಷಹರ್ ನೊಳಗೂ ಸರ್ವತ್ರ ದೇಶಭಾಷೆಯೊಳಗೆ ಬರೆಯಲ್ಪಟ್ಟು ಚಿಕಟಾಯಿಸಲ್ಪಡತಕ್ಕದ್ದು, ಮತ್ತು ಸದರೀ ನೋಟೀಸ್‌ಗಳನ್ನು ಬಟವಾಡೇ ಮಾಡುವಂತೆ ಪೋಲೀಸ್‌ನವರು ನೇಮಿಸಲ್ಪಡತಕ್ಕದ್ದು.

3. ಜನಗಳ ಅನುಕೂಲಕ್ಕೋಸ್ಕರ ಮಾಡಲ್ಪಟ್ಟ ಯೇರ್ಪಾಡುಗಳನ್ನು ಕುರಿತ ನೋಟೀಸ್‌ಗಳು ಶಿಬಿರದಲ್ಲಿಯೂ, ಶಿಬಿರಕ್ಕೆ ಹೋಗತಕ್ಕ ಆಖೈರ್ ಮೊಕ್ಕಾಂಗಳೊಳಗೂ ಚಿಕಟಾಯಿಸಲ್ಪಡತಕ್ಕದ್ದು.

4. ಉತ್ಸವ, ಪರಷೆಗಳು ಅಥವಾ ಸಂತೆಗಳು ಇಂತಾದ್ದರ ಸಮಾಪ್ತಿಯ ಕಾಲದಲ್ಲಿ ಜನಗಳೊಳಗೆ ಟಬಾಲ್ ಜಾಲಾಬ್ ವ್ಯಾಪಿಸಿ ಯಿದ್ದರೆ, ಮೊಕ್ಕಾಂ ಭೂಮಿಗಳನ್ನು ಉತ್ತು ಸಾಧ್ಯವಾದರೆ ಕೆಲವು ಹಸುರು ಧಾನ್ಯಗಳನ್ನು ಪೇರಾಪ್ ಮಾಡತಕ್ಕದ್ದಲ್ಲದೆ, ಛತ್ರಗಳಲ್ಲೂ ಛಾವಡೀಗಳಲ್ಲೂ ಹೊಗೆ ಹಾಕಿ ಸುಣ್ಣ ಬೋಳಿಯತಕ್ಕದ್ದು.

ತಾರೀಖು 1ನೇ ಏಪ್ರೆಲ್ 1884.

ಸ್ಟ್ಯಾಂಡಿಷ್ ಲೀ,
ಸ್ಯಾನಿಟೇರಿ ಇಂಜನಿಯರ್.

Mysore Government Press, Bangalore—1884.

ಮೈಸೂರ ಗೆಜೆಟ್.

ನಂ. 25. ಸರ್ಕಾರದಿಂದ ಪ್ರಾಯಿಷ್ ಆದ್ದು. ಸನ್ 1884.

ಬೆಂಗಳೂರು, ಶನಿವಾರ, ಜೂನ್ ತಾ|| 21, ಸನ್ 1884.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೇಬ್ ಬಹದೂರವರ ದೀವಾನರವರಿಂದ ಹೊರಡಿಸಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಸೆಟಿಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರಿಂಟೆಂಡೆಂಟರು, ಕಾಂಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ್ ವರ್ಕ್ಸ್ ಆಫೀಸರಗಳು, ಮಿಲಿಟೇರಿ ಸಿಕ್ರೆಟರಿಯವರು, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟುವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು, ಇವರುಗಳಿಂದ ಹೊರಡಿಸಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರರವರಿಂದ ಮಂಜೂರ್ ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು, 1884ನೇ ಇಸವಿಯ IIನೇ ರೆಗ್ಯುಲೇಷನ್.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲಾ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದೀವಾನರವರಿಂದ ಹೊರಡಿಸಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 24ನೇ ಏಪ್ರೈಲ್ 1884.

ನಂ. 12.—ಇದರಿಂದ ಪ್ರಕಟಪಡಿಸುವದೇನಂದರೆ, ಶಿವಮೊಗ್ಗಾ ವ ಕಡೂರು ಡಿಸ್ಟ್ರಿಕ್ಟು ವುತ್ಪತ್ತೀ ಬಾಬತು ಇದರಡೀ ಕಂಡ ನಾಟಾಗಳು ಅಸಿಸ್ಟೆಂಟ್ ಕನ್‌ಸರ್‌ವೇಟರವರಿಂದ ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿ ಆಯಾ ತಾರೀಖಿನೊಳಗೆ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು:—

ಹರಾಜ್ ನಡಿಯತಕ್ಕ ಸ್ಥಳ.		ಹರಾಜಿನ ತಾರೀಖು.	ತೇಗದ ದಿಮ್ಮಿಗಳು.	ಹೊನ್ನೆಮರದ ದಿಮ್ಮಿಗಳು.	ಇತರ ಜಾತಿ ಮರದ ದಿಮ್ಮಿಗಳು.	ಒಟ್ಟು.
ಆಯನೂರು	(ಶಿವಮೊಗ್ಗ ತಾಲ್ಲೂಕು) ..	23ನೇ ಜೂನ್ 1884.	50	150	100	300
ಶಿವಮೊಗ್ಗಾ	ಡಿಟೋ ..	25 ಡಿಟೋ	150	350	600	1100

ಹರಾಜಿನ ಷರತ್ತುಗಳು.—ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡಲ್ಪಟ್ಟ 1873ನೇ ಇಸವಿ ಜೂನ್ 12ನೇ ಮರ್ಕುಂ 20ನೇ ನಂಬರ್ ಇಸ್ತಿಹಾರ್‌ನಾಮೆ ಪ್ರಕಾರ ಇರುವದು ಮತ್ತು ಹರಾಜ್ ಕಾಲದಲ್ಲಿ ಓದಲ್ಪಡುವದು.

ತಾರೀಖು 12ನೇ ಜೂನ್ 1884.

ನಂ. 54.—ಶಿವಮೊಗ್ಗಾ ಡಿಸ್ಟ್ರಿಕ್ಟ್ 1ನೇ ಅಸಿಸ್ಟೆಂಟ್ ಕಮಿಷನರ್ ಮ॥ ಸೈಯದ್ ನಸೀರುದ್ದೀನ್ ಯವರಿಗೆ, ಸನ್ 1884ನೇ ಏಪ್ರಿಲ್ 20ನೇ ಮರ್ಕುಂ 9ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟ ರಜಾಕ್ಕೆ ಜಾಸ್ತಿಯಾಗಿ ಯೆರಡುವಾರಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 13ನೇ ಜೂನ್ 1884.

ನಂ. 55.—ಆನೆಕಲ್ ತಾಲ್ಲೂಕು ಅಮಲ್ದಾರ್ ಸ್ವೇತಾದ್ರಿ ಅಯ್ಯಂಗಾರ್ರು, 1884ನೇ ಮೇ 24ನೇ ಮರ್ಕುಂನಲ್ಲಿ ಕೆಲಸದ ಮೇಲೆ ವಾಪಸ್ ಬಂದದರಿಂದ, ಸನ್ 1884ನೇ ಮೇ 12ನೇ ಮರ್ಕುಂ 26ನೇ ನಂಬರ್‌ಉಳ್ಳ ಈ ಆಫೀಸ್ ಇಸ್ತಿಹಾರ್‌ನಾಮೆಯಲ್ಲಿ ಅವರಿಗೆ ಕೊಡಲ್ಪಟ್ಟ ಪ್ರಿವಿಲೀಜ್ ರಜಾ ಪೈಕೀ ಉಳಿದ ಭಾಗವು ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 21ನೇ ಮಾರ್ಚಿ 1883.

ನಂ. 84.—ಕಾರ್ಯಾರ್ಥ ದಿವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಗೆ ಹಿಂದಿನ ದಿನ ಸೆಕ್ರೆಟೇರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಬಮೋಜೀಬ್ ಹುಕ್ಕುಂ,

ಆರ್. ವಿಜಯೀಂದ್ರರಾವ್,

ಸೆಕ್ರೆಟೇರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್‌ನಾಮೆ.

ತಾರೀಖು 7ನೇ ಜೂನ್ 1884.

ನಂ. 2096.—ವಿಶೇಷ ಕೆಲಸದಲ್ಲಿರುವ ಎಗ್ಸಿಕ್ಯೂಟಿವ್ ಇಂಜನಿಯರ್ ಮ॥ ಎಫ್. ಜೆ. ಮೆಕಲಾರ್ಲಿಯವರಿಗೆ, 1884ನೇ ಜುಲೈ 7ನೇ ಮರ್ಕುಂ ಲಗಾಯತು ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಬಮೋಜೀಬ್ ಹುಕ್ಕುಂ,

ಸಿ. ಹೆಚ್. ಎಂ. ಕೆನ್ಸಿಂಗ್ಟನ್, ಕೆಪ್ಟನ್, ರಾ. ಇ.

ಮೈಸೂರು ಮರಮತ್ ಇಲಾಖಾ ಸೆಕರಟೇರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜೂನ್ ತಾ॥ 21, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರುವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ರೆಸಿಡೆಂಟರ ಇಲಾಖಾ.

ಇಸ್ತಿಹಾರ್ ನಾಮೆ.

ಇಂಡ್ಯಸ್ಟಾರ್.

ಇಸ್ತಿಹಾರ್‌ನಾಮೆ.

ಸಿಮ್ಲಾ, ತಾರೀಖು 24ನೇ ಮೇ 1884.

ನಂಬರ್ 8 S. I.

ಘನವನ್ನು ಹೊಂದಿದ ಗ್ರಾಂಡ್ ಮಾಸ್ಟರ್ ಆಫ್ ಮೋಸ್ಟ್ ಎಗ್ಸಾಲ್‌ಟೆಡ್ ಆರ್ಡರ್ ಆಫ್‌ದಿಸ್ಟಾರ್ ಆಫ್ ಇಂಡ್ಯ ಯವರು, ಪ್ರಕಟಿಸುವದೇನಂದರೆ–ಘನವನ್ನು ಹೊಂದಿದ ಶ್ರೀಮನ್ಮಹಾರಾಣೀಯವರಾದ ಇಂಡ್ಯ ಚಕ್ರವರ್ತಿನೀಯವರು ಮೇಲೆ ಕಂಡ ಹುದ್ದೆಗೆ ಇದರಡೀ ಕಂಡವರನ್ನು ಕೃಪಾಪುರಸ್ಸರವಾಗಿ ಮೊಕರರ್ ಮಾಡಿರುತ್ತಾರೆ:—

ನೈಟ್‌ಗ್ರಾಂಡ್ ಕಮ್ಮಾಂಡರಾಗಿರತಕ್ಕದ್ದು.

ಮೈಸೂರು ಮಹಾರಾಜರಾದ ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರ್ ಬಹದೂರ್ ಯವರು.

* * * * * *

ಗ್ರಾಂಡ್ ಮಾಸ್ಟರ್ ಹುಕ್ಕುಂ ಬಮೋಜೀಬ್,

ಸಿ. ಗ್ರಾಂಟ್,

ಇಂಡ್ಯಸ್ಟಾರಿನ ಅತ್ಯಂತ ಘನವನ್ನು ಹೊಂದಿದ ಅರ್ಡರಿಗೆ ಸೆಕರಟರಿ.

ಇಂಡ್ಯನ್ ಎಂಪೈಯರ್.

ಇಸ್ತಿಹಾರ್ ನಾಮೆ.

ನಂಬರ 15. I. E.

ಸಿಂಲಾ, 24ನೇ ಮೇ 1884.

ಇದರಡೀ ಕಂಡ ದೊಡ್ಡಮನುಷ್ಯರು ತಮ್ಮ ನೌಕರಿಯ ದೆಸೆಯಿಂದ ಮಹಾರಾಣೀಯವರ ದಯಗೆ ಪಾತ್ರರಾಗಿ, ಇಂಡ್ಯನ್ ಎಂಪಯರ್ ಯೆಂಬ ಘನತೆಯ ಕಂಪ್ಯಾನಿಯನ್ಗಳಾಗಿರತಕ್ಕದ್ದೆಂದು ಘನವನ್ನು ಹೊಂದಿದ ಮಹಾರಾಣೀಯವರಾದ ಇಂಡ್ಯ ಚಕ್ರವರ್ತಿನೀಯವರು ನೊಕರರ್ ಮಾಡುತ್ತಾರೆ:—

* * * * * * *

ಯೆಡ್ಯೂಕೇಷನ್ ಕಮ್ಮಿಷನ್ನಿಗೆ ಸಾಬಕಿಸೆಕರೇರಿಯಾದ ಮೈಸೂರು ಸೀಮೆಯ ಪಬ್ಲಿಕ ಇನ್ಸ್ಟ್ರಕ್ಷನ್ ಡೈರೆಕ್ಟರಾದ ಬೆಂಜಮೆನ್ ಲ್ಯೂಯಿಸ ರೈಸ್ ಎಸ್ಕ್ವೈಯರ್ ಯವರು.

* * * * * *

ಗ್ರಾಂಡ್ ಮಾಸ್ಟರ ಹುಕ್ಕುಂ ಬಮೋಜೀಬ್,

ಸಿ. ಗ್ರಾಂಟ್,
ಇಂಡ್ಯನ್ ಎಂಪೈಯರ್ ಆರಡರಿನ ಸೆಕರಟೇರಿ.

ಫಿನಾನ್ಷಿಯಲ್ ಇಲಾಖಾ.

1882ನೇ ಮೈಸೂರು ರೆಯಿಲ್ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರಗಳ ಮೇಲೆ ಲಂಡನ್ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ ಕಟ್ಟದಲ್ಲಿರುವ ಬ್ಯಾಂಕರಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್ ಕೋಯವರು ಬಡ್ಡಿಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ ಜನಗಳು ತಮ್ಮ ಡಿಬೆಂಚರಗಳನ್ನು ಎನ್ಫೇಸಮೆಂಟ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್ಫೇಸಮೆಂಟ ಬಗ್ಯೆ ಫೀ ಯೇನೂ ಚಾರ್ಜ ಮಾಡಲ್ಪಡಲಾರದು.

ಹೆಚ್. ಹಡರ್ಸನ,
ಕಾಂಪ್ಟ್ರೋಲರ.

371

ಕೋಲಾರ ಡಿಸ್ಟ್ರಿಕ್ಟು.

ತಾರೀಖು 11ನೇ ಜೂನ್ 1884.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ, ಇದರಡಿ ವಿವರಿಸಿರುವ ತಂಸೂಕುಗಳು ಕೋಲಾರ ಸಬ್ ರಿಜಿಸ್ಟ್ರೀ ಆಫೀಸಿನಲ್ಲಿ 2 ವರುಷಗಳಿಂದ ಬೇವಾರಸಾಗಿ ನಿಂತಿರುತ್ತವೆ, ಅವುಗಳನ್ನ ಹಾಜರ್ಮಾಡಿದವರಾಗಲಿ, ಯಾ ಅವುಗಳನ್ನು ವಾಪಸುಪಡಿಯುಲು ಬಾಧ್ಯತೆ ಅಥವಾ ಅಧಿಕಾರವುಳ್ಳವರಾಗಲಿ ಈ ನೋಟಫಿಕೇಷನ್ ತಾರೀಖು ಲಾಗಾಯತು ಬಂದು ತಿಂಗಳವಳಗ್ಗಾಗಿ ಡಿಟೋ ಸಬ್ ರಿಜಿಸ್ಟ್ರಾರಲ್ಲಿ ಹಾಜರಾಗಿ ವಾಪಸ್ ತೆಗದುಕ್ಕೊಳ್ಳಬಹುದು, ಇಲ್ಲದ ಪಕ್ಷದಲ್ಲಿ ಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುವವು.

ಆಫೀಸಿನ ಹೆಸರು	ಪುಸ್ತಕ ಮತ್ತು ನಂಬರು	ತಮಸೂಕು ಬರೆದು ಕೊಟ್ಟವರ ಹೆಸರು	ಬರೆಯಿಸಿಕೊಂಡವರ ಹೆಸರು	ತಮಸೂಕಿನ ತಾರೀಖು	ರಿಜಿಸ್ಟ್ರಿ ತಾರೀಖು	ತಮಸೂಕಿನ ತಪಶೀಲ:
ಕೋಲಾರ ಸಬ್ ರಿಜಿಸ್ಟ್ರಿ	1ನೇ ಬುಕ್ಕು 1880—81 ನಂಬರ್ 193	ಕೋಲಾರ ತಾಲ್ಲೂಕು ನರಸಾಪುರದಲ್ಲಿ ಇರುವ ದೇವಾಂಗದ ಕಸ್ತೂರಪ್ಪನ ಮಗ ಮುನಿಯಪ್ಪ	ಕೋಲಾರದಲ್ಲಿರುವ ದೇವಾಂಗದ ವೀರಣ್ಣನ ಮಗ ಮುನಿಯಪ್ಪ	1881ನೇ ಇಸವಿ ಮಾರ್ಚಿ 11	12ನೇ ಮಾರ್ಚಿ 1881	ಕೋಲಾರದ ದೇವಾಂಗದ ಪೇಟೇಲಿರುವ ಮ್ಯುನಿಸಿಪೆಲ್ 1367ನೇ ನಂಬರ್ ಪಟ್ಟೇಲಿ ಕಂಡ 1730ನೇ ನಂಬರ್ ಮನೆಯನ್ನ 85 ರೂಪಾಯಿಗಳಿಗೆ ಭೋಗ್ಯಮಾಡಿ ಯಿರುವಂತೆ.
ಡಿಟೋ	1881—82 ನಂಬರ್ 195	ಕೋಲಾರದಲ್ಲಿ ಇರುವ ದೇವರಾಯ ದುರ್ಗದ ವೆಂಕಟ ನರಸಪ್ಪ	ಇಂಜನಿಯರ್ ಇಲಾಖಾ ಪೆನ್ಷನ್ ಕ್ಯಾಷಿಯರ್ ಮೆ|| ಡೆವಿಡ್ಸ್	1882ನೇ ಇಸವಿ ಜನವರೀ ತಾರೀಖು 21	31ನೇ ಜನವರೀ 1882	ಕೋಲಾರ ತಾಲ್ಲೂಕು ಕಾರಹಳ್ಳಿ ಬಳಿಯಣ 96ನೇ ನಂಬರ್ ಜಮೀನಿನ ಫಸಲಿನಲ್ಲಿ ಅರ್ಧ ಮೇಡಿವಾರ ಕೊಡುವದಾಗಿ ಕರಾರು.
ಡಿಟೋ	2ನೇ ಬುಕ್ಕು 1881—82 ನಂಬರ್ 2	ಮೂದಮುತ್ತನಹಳ್ಳಿ ನಾರಣಪ್ಪ, ನೀಲಕಂಠಪ್ಪ	ಕೋಲಾರದ ಕುರುಬ ಪ್ಯಾಟೆಲಿರುವ ಗುರಪ್ಪ	1880ನೇ ಇಸವಿ ಆಗಸ್ಟ್ ತಾರೀಖು 8	ನಿರಾಕರಿಸಿದ ತಾರೀಖು 1ನೇ ನವಂಬರ 1881	ಕೋಲಾರ ಕುರುಬಪೇಟೇಲಿರುವ ಜಮೀನಿನಲ್ಲಿನ 155ನೇ ನಂಬರ್ ಕೆರೆವಾರೆ ಹೊಲ ೦|೦ ಜಮೀನನ್ನ 186—4—0 ಗೆ ಖರೀದೀ ಮಾಡಿ ಯಿಧನೆಂದು.
ಡಿಟೋ	2ನೇ ಬುಕ್ಕು 1881—82 ನಂಬರ್ 1	ಕೋಲಾರ ತಾಲ್ಲೂಕು ಮರಗಲ್ಲಿನಲ್ಲಿರುವ ದ್ಯಾವೀರಿ	ಡಿಟೋ ಗ್ರಾಮದ ದೇವಿರಪ್ಪನ ಮಗ ಸೊಣಪ್ಪ	1880ನೇ ಇಸವಿ ಅಕ್ಟೋಬರ್ 16	ಡಿಟೋ	ವಿವಾಹ ಪರಿತ್ಯಜನೆ ಕರಾರು.
ಡಿಟೋ	ಡಿಟೋ ನಂಬರ್ 3	ಕೋಲಾರ ಕಸಬ ವೆಂಕಟರಮಣಯ್ಯ	ಕೋಲಾರ ಕಠಾರಿ ಪಾಳ್ಯದ ಹಡಿಗೆ ಮುನಕ್ಕನ ಮಗ ಮುನೆಪ್ಪ	1881ನೇ ಇಸವಿ ಏಪ್ರೆಲ್ ತಾರೀಖು 21	ಡಿಟೋ ಇಸವಿ ಡಿಶಂಬರ್ 13	ಕೋಲಾರ ತಾಲ್ಲೂಕು ಸುಲತಾನ್ ತಿಪ್ಪಸಂದ್ರದ ಬಳಿ ಇರುವ 21ನೇ ನಂಬರ್ ಹೊಲ ಬೀಜವರೀ ೦|–||| ವುಳ್ಳ ಜಮೀನಿನಲ್ಲಿ ಅರ್ಧ ಹೊಲ 80 ರೂಪಾಯಿಗೆ ಭೋಗ್ಯ ಮಾಡಿರುವದಾಗಿ.

ಸಿ. ಸುಬ್ಬಾರಾವ್,
ರಿಜಿಸ್ಟ್ರಾರ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜೀರವರ ಕೋರ್ಟಿನಲ್ಲಿ

1884ನೇ ಇಸವಿ ಅರ್ಜೀ ನಂಬರ 34.

ಮೃತಪಟ್ಟ ನರಸುಹ್ಮಯ್ಯ ಮತ್ತು ಗಂಗಮ್ಮನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ರಂಗನು, ಮೃತಪಟ್ಟ ಸದರೀ ನರಸುಹ್ಮಯ್ಯ, ಗಂಗಮ್ಮನಿಗೆ ದತ್ತು ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಚಿಕ್ಕನಾಯಕನಹಳ್ಳಿ ಸ್ಥಳದ ಗೊಲ್ಲರ ನರಸುಹ್ಮಯ್ಯನ ಮಗ ರಂಗನು, ಡಿಪೋ ವಾಸಸ್ಥರಾಗಿ ಮೃತಪಟ್ಟ ನರಸುಹ್ಮಯ್ಯ, ಗಂಗಮ್ಮನ ಜಿಂದಗೀ ಬಗ್ಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರನಾದ ರಂಗನ ಅರ್ಜೀಯನ್ನು 1884ನೇ ಇಸವೀ ಜುಲೈ ತಿಂಗಳು ತಾರೀಖು 3ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನರಸುಹ್ಮಯ್ಯ, ಗಂಗಮ್ಮ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಜೂನ್ ತಿಂಗಳು 5ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1884ನೇ ಇಸವಿ ಅರ್ಜೀ ನಂಬರ 39.

ಮೃತಪಟ್ಟ ನಾಗೂಸಾನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ವೆಂಕೂಸಾ, ಮೃತಪಟ್ಟ ಸದರೀ ಖತ್ರಿ ಕುಬಾಡಿ ನಾಗೂಸಾಗೆ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ತೆಲಗಪೇಟೇಲಿರುವ ವೆಂಕೂಸಾ ಯೆಂಬವನು, ಡಿಪೋ ವಾಸಸ್ಥನಾಗಿ ಮೃತಪಟ್ಟ ನಾಗೂಸಾನ ಜಿಂದಗಿ ಬಗ್ಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾನೆ.

ಸದರೀ ದರಖಾಸ್ತುದಾರನಾದ ವೆಂಕೂಸಾ ಅರ್ಜಿಯನ್ನು 1884ನೇ ಇಸವಿ ಜೂನ್ ತಿಂಗಳು ತಾರೀಖು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾಗೂಸಾನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಜೂನ್ ತಿಂಗಳು 2ನೇ ತಾರೀಖಿನಲ್ಲಿನ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕ್ರೈಸ,
ಸಬ್ ಜಡ್ಜ್.

ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರ ಕೋರ್ಟಿನಿಂದ.

ತಾರೀಖು 6ನೇ ಜೂನ್ 1884

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ, ಡಿಸ್ಟ್ರಿಕ್ಟು ಮಜಕೂರ ಮಧ್ದಗಿರಿ, ಪಾವಗಡ, ಸಿರಾ, ಗುಬ್ಬಿ ಈ ತಾಲ್ಲೂಕುಗಳಲ್ಲಿ 1884 -85ನೇ ತಾರಣಸಂವತ್ಸರದಲ್ಲಿ ಸರ್ಕಾರದ ಜಮೀನಿನಲ್ಲಿ ಕುರಂಗದ ಕಲ್ಲುಗಳನ್ನು ಜಮಾಯಿಸತಕ್ಕ ಹಕ್ಕನ್ನು ಆಯಾಯ ತಾಲ್ಲೂಕು ಆಮಿಲರ ರೂಬರೂ ತಾಲ್ಲೂಕು ಕಚ್ಚೇರಿಯಲ್ಲಿ ಇದರಡೀಲಿ ಕಂಡ ತಾರೀಖುಗಳಲ್ಲಿ ದಿವಿ 11 ಘಂಟೆ ಲುಗಾಯತು ಹರಾಜು ಮಾಡಲಾಧೀತು.

ಷರತ್ತುಗಳು.

1. ಹರಾಜು ಕೈದಾದಕೂಡ್ಲೆ ಆಖೈರ್ ಸವಾಲ್ದಾರನು ಶೇಕಡಾ 25 ರೂಪಾಯಿ ಮೇರಿಗೆ ನಗದು ಠೇವಣಿಯನ್ನು ಇಡಬೇಕು, ಹರಾಜು ದೀವಾನ್ ಸಾಹೆಬರಿಂದ ಮಂಜೂರಾದ ಪಜನೆ 15 ದಿವಸದಲ್ಲಿ ಪೂರಾ ಮೊಬಲಗನ್ನು ಹಾಜರ್ಮಾಡಬೇಕು, ಹಾಗೆ ಮಾಡದೆ ತಪ್ಪಿದರೆ ಪುನಹಾ ಹರಾಜು ಮಾಡಲ್ಪಟ್ಟ ನಷ್ಟ ಬಂದ ಮೊಬಲಗಿಗೆ ಮೊದಲಿನ ಚಡ ಸವಾಲ್ದಾರನನ್ನು ಗುರಿಮಾಡಲಾಧೀತು, ಮತ್ತು ಠೇವಣಿಯನ್ನು ಸರ್ಕಾರಕ್ಕೆ ಸೇರಿಸಿ ಕೊಳ್ಳಲಾಧೀತು.

2. ಕುರಂಗದ ಕಲ್ಲುಗಳನ್ನು ತೆಗಿಯುವ ವೃದ್ಧಿಶ್ಯ ಭೂಮಿ ಸಾಗುವಳಿಗೆ ನಾಲಾಯಖಾಗುವಂತೆ ಮಾಡಕೂಡದು ಗುಂಡಿಗಳನ್ನು ಇಜಾರದಾರನೇ ಮುಚ್ಚಿಸಬೇಕು.

3. ಹಿಡುವಳಿಯಲ್ಲಿರುವ ಭೂಮಿಯು ಕುರಂಗದ ಕಲ್ಲುಗಳನ್ನು ಹಿಡುವಳಿದಾರನ ಅನುಮತಿ ಪಡದು ತೆಗದುಕೊಳ್ಳಬೇಕು.

4. ಬಂಜರು ಭೂಮಿಗಳನ್ನು ಹುಲ್ಲುಬನ್ನಿ ಮತ್ತು ಸಾಗುವಳಿಗೆ ಕೊಡಲಾಧೀತು, ಹಾಗೆ ಕೊಡೋಣದರಿಂದ ಕುರಂಗದ ಕಲ್ಲು ಇಜಾರದಾರನಿಗೇನಾದರೂ ನಷ್ಟವಾದರೆ ಅದಕ್ಕೆ ಸರ್ಕಾರದವರು ಜವಾಬ್‌ದಾರರಲ್ಲಾ.

5. ಹರಾಜು ಮೊಬಲಗಿನ ಮೇಲೆ ಶೇಕಡಾ $6\frac{1}{4}$ ರೂಪಾಯಿ ಮೇರಿಗೆ ಲೋಕಲ್ ಫಂಡನ್ನು ಕೊಡಬೇಕು.

ಈ ವಿಷಯದಲ್ಲಿ ಮತ್ತೇನಾದರೂ ತಪಸೀಲ್ ತಿಳಿಯಬೇಕಾಗಿದ್ದರೆ ಆಯಾಯ ತಾಲ್ಲೂಕು ಅಮಿಲ್ದಾರರಿಗೆ ಬರದು ತಿಳದುಕೊಳ್ಳ ಬಹುದು.

ಹರಾಜು ತಾರೀಖು.

ಮದ್ದಗಿರಿ ತಾಲ್ಲೂಕು	1884ನೇ ಜುಲೈ 15.	ಪಾವಗಡ ತಾಲ್ಲೂಕು	1884ನೇ ಜುಲೈ 21.
ಶಿರಾ ತಾಲ್ಲೂಕು	.. ಡಿಟೋ 26.	ಗುಬ್ಬಿ ತಾಲ್ಲೂಕು	.. ಡಿಟೋ 31.

ತಾರೀಖು 17ನೇ ಜೂನ್ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ತಿಪಟೂರು ಸಬ್ ರಿಜಿಸ್ಟ್ರೀ ಆಫೀಸ್‌ನಲ್ಲಿ ಬೇವಾರಸಾಗಿ ಯಿರತಕ್ಕ ಈ ಕೆಳಗೆ ವಿವರಿಸೋಣಾದ ದಸ್ತೈವಜನ್ನು ಹಾಜರ್ ಮಾಡಿದವನೇ ಯಾಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವನಿಂದ ಕ್ರಮವಾದ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರನೇ ಯಾಗಲೀ ಈ ನೋಟೀಸ್ ತಾರೀಖು ಲಗಾಯಿತು ಒಂದು ತಿಂಗಳ ವಳಗಾಗಿ ಡಿಟೋ ಸಬ್ ರಿಜಿಸ್ಟ್ರಾರ್ ರೂಬರೂಬ ಹಾಜರಾಗಿ ಅದನ್ನು ವಾಪಸು ತೆಗದುಕೊಳ್ಳಬೇಕು, ಇದಕ್ಕೆ ತಪ್ಪಿದರೆ 1877ನೇ ಇಸವಿ 3ನೇ ನಂಬರ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಶಪಡಿಸಲಪಡುವದು.

ದಸ್ತಾವೇಜು ನಂಬರ	ದಸ್ತಾವೇಜು ತಾರೀಖು	ರಿಜಿಸ್ಟರಿಗೆ ಹಾಜರಾದ ತಾರೀಖು	ದಸ್ತಾವೇಜು ರಿಜಿಸ್ಟ್ರಿ ಆದ ತಾರೀಖು	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು
60 / 1882—83	1—6—82	5—6—82	5—6—82	ಲಿಂಗದಹಳ್ಳಿ ಮೇಲಣಮನೆ ಲಿಂಗಂಣ.	ಹೊನ್ನವಳ್ಳಿ ತಾಲ್ಲೂಕು ಗುರುಗದಹಳ್ಳಿ ಮಲ್ಲಸಟ್ಟಿ.	45 ರೂಪಾಯಿಗೆ ಲಿಂಗದಹಳ್ಳಿ ಗ್ರಾಮದಲ್ಲಿ ಇರುವ ಸರ್ವೆ 49ನೇ ನಂಬರ ಬಾಗಾಯತು ಜಮೀನು ಪೈಕೀ ತನ್ನ ಹಿಸ್ಸೆ ಬಾಬತು ಜಮೀನು ಕ್ರಯಕ್ಕೆ ಕೊಟ್ಟಿರುವದಾಗಿ ವಗೈರೆ.

ಮಹಮ್ಮದಲ್ಲಿ,
ಫಾರ್ ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟು.

ತಾರೀಖು 2ನೇ ಜೂನ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ತಿರುಮುಕೂಡ್ಲು ನರಸೀಪುರ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಬೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜನ್ನು ಹಾಜರ್ಮಾಡಿದವನೇ ಅಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರನಾಗಲಿ ಈ ನೋಟೀಸ್ ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸ್ ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಶ ಪಡಿಸಲ್ಪಡುವದು.

ನಂಬರ್.	ದಸ್ತಾವೇಜು ಬರದುಕೊಟ್ಟವನ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
404 / 1881—82	ತಿರುಮಕೂಡು ನಲ್ಲಿರುವ ಕೆಂಪನ ಮುದ್ದಲಿಂಗಮ್ಮನ ಚೆವುಡಯ್ಯನ ಮಗಮುದ್ದಲಿಂಗಾ	ತಿರುಮಕೂಡು ಗ್ರಾಮದಲ್ಲಿರುವ ನಾಯಕಸಾನಿ ದೊಡ್ಡ ಮಿನಾಕ್ಷಮ್ಮನ ಮಗಳಾದ ರಾಜಿ	17–10–81	17–10–1	ವಿಭಾಗಪತ್ರ ಕಿಮ್ಮತು 485 ರೂಪಾಯಿ.
405 / 1881—82	ತಿರುಮಕೂಡು ಗ್ರಾಮದಲ್ಲಿ ಯಿರುವ ನಾಯಕಸಾನಿ ದೊಡ್ಡ ಮಿನಾಕ್ಷಮ್ಮನ ಮಗಳಾದ ರಾಜಿ	ತಿರುಮಕೂಡು ಕೆಂಪ ಮುದ್ದಲಿಂಗಮ್ಮನ ಚೆವುಡಯ್ಯನ ಮಗ ಮುದ್ದಲಿಂಗಾ	ಷಟ್ಟೋ	ಷಟ್ಟೋ	ವಿಭಾಗ ಪತ್ರ ಕಿಮ್ಮತು 995 ರೂಪಾಯಿ.

ಅಬ್ದುಲ್ ಖಾದರ್, ಕೆ. ಬಿ.,
ರಿಜಿಸ್ಟ್ರಾರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ತಾರೀಖು 4ನೇ ಜೂನ್ 1884.

ಶಿವಮೊಗ್ಗಾ ತಾಲ್ಲೂಕು ಆಕ್ಟಿಂಗ್ ಅಮಲ್‌ದಾರ್ ಮತ್ತು 3ನೇ ಕ್ಲಾಸ್ ಮಾಜಿಸ್ಟ್ರೇಟ್ ನಾರಣಯ್ಯಂಗಾರ್ರಿಗೆ, ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡ್ 23ನೇ ಸೆಕ್ಷನ್ (ಬಿ) ಕ್ಲಾಜ್ ಅನುಸರಿಸಿ ಇದರಡೀಕಂಡ ಅಧಿಕಾರಗಳು ಕೊಡಲ್ಪಟ್ಟಿರುತವೆ.

1. ನಿರೋಧ ವಗೈರೇಯನ್ನು ಅಡ್ಡಿಪಡಿಸಲಿಕ್ಕೆ ಹುಕ್ಕುಂ ಕೊಡುವಣ 518ನೇ ಸೆಕ್ಷನ್.
2. ಕೇಸಿಗೆಯನ್ನು ಬಾರ್ ಬಾರ್ ಮಾಡುವದನ್ನು ನಿರೋಧಿಸಲಿಕ್ಕೆ ಹುಕ್ಕುಂ ಕೊಡುವಣ 519ನೇ ಸೆಕ್ಷನ್.

ಎಸ್. ವೆಂಕಟವರದಯ್ಯಂಗಾರ್,
ಡಿಸ್ಟ್ರಿಕ್ಟು ಮಾಜಿಸ್ಟ್ರೇಟ್.

ತಾರೀಖು 31ನೇ ಮೇ 1884.

ಷಿಕಾರಿಪುರದಲ್ಲಿ ಹೊಸ ತಾಲ್ಲೂಕು ಕಚ್ಚೇರಿ ಕಟ್ಟವನ್ನು ಕಟ್ಟುವದಕ್ಕೆ ಮೈಸೂರು ಗವರ್ನಮೆಂಟಿನಿಂದ ಮಂಜೂರಾಗಿರುತ್ತೇಯಾಗಿ ಸದರೀ ಕೆಲಸವನ್ನು ನೆರವೇರಿಸುವದಕ್ಕೆ ಇದರಿಂದ ದರಖಾಸ್ತು ಅಪೇಕ್ಷಿಸಲ್ಪಡುತ್ತೆ.

1. ತಾಲ್ಲೂಕು ಕಚ್ಚೇರಿಗೆ ಗೊತ್ತಾದ ನಮೂನೇ ಪ್ರಕಾರ ಕಟ್ಟವು ಕಟ್ಟಿಸಲ್ಪಡತಕ್ಕದ್ದು. ಮತ್ತು ಷುಮಾರ್ 15,000 ರೂಪಾಯಿಗಳು ಲಾಗವಡು ಹಿಡಿಯತಕ್ಕದ್ದು.

2. ದರಖಾಸ್ತಿನಲ್ಲಿ ಕೆಲಸದ ಪ್ರತಿ ಷರತ್ತಿಗೂ ಖಾಯಿಷ್ ಮಾಡಿದ ದರ, ಪೂರಾ ಕೆಲಸವು ಪೂರೈಸುವ ಕಾಲ, ಯಾವ ತಪ್ಪಾಗಲಿ ಉಂಟಾದರೆ ಆ ಬಗ್ಯೆ ದಂಡ ಇಂತಾದ್ದನ್ನು ನಮೂದಿಸತಕ್ಕದ್ದು.

3. ದರಖಾಸ್ತು ಬಂದು ಮಾಡಲ್ಪಟ್ಟು "ಶಿಕಾರಿಪುರದಲ್ಲಿ ಹೊಸತಾಲ್ಲೂಕು ಕಚ್ಚೇರಿಯನ್ನು ಕಟ್ಟುವ ಬಗ್ಯೆ ದರಖಾಸ್ತು" ಯೆಂದು ವಿಲಾಸ ಬರಯಲ್ಪಟ್ಟು, ಶಿವಮೊಗ್ಗೇಯಲ್ಲಿ ಶಿವಮೊಗ್ಗಾ ಡಿವೀಜನ್ ಎಗ್ಜಿಕ್ಯೂಟಿವ್ ಇಂಜನಿಯರಿಗೆ ಕಳುಹಿಸಲ್ಪಡತಕ್ಕದ್ದು.

ಸನ್ 1884ನೇ ಜೂನ್ 30ನೇ ಮಧ್ಯಾಹ್ನ ಮಿಗೆ ತರುವಾಯ ಯಾವ ದರಖಾಸ್ತೂ ತೆಗದುಕೊಳ್ಳಲ್ಪಡಲಾರದು.

4. ಇನ್ನೂ ಹೆಚ್ಚಿಗೇ ಸಂಗತಿಯೂ, ಸಬ್ ಹೆಡಗಳ ಷೆಡ್ಯೂಲ್ ಪಟ್ಟಿಯೂ, ಇದರಡಿ ರುಜು ಮಾಡಿರುವವರಿಗೆ ಅರಖಾಸ್ತು ಮಾಡಿ ಪಡಕೊಳ್ಳಬಹುದು.

5. ಇದರಡಿ ರುಜು ಮಾಡಿರುವವರು ಕಮ್ಮಿ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಹಾಗೆ ಮಾಡಲಿಕ್ಕೆ ಯಾವ ಸಬಬನ್ನೂ ನಮೂದಿಸದೆ ಮಂಜೂರ್ಮಾಡತಕ್ಕ ಅಧಿಕಾರವನ್ನು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

ಪಿ. ಎಸ್. ನಾಗಲ್‌ಕರ್, ಎಲ್. ಸಿ. ಇ.
ಎಗ್ಜಿಕ್ಯೂಟಿವ್ ಇಂಜನಿಯರ್.

ಪ್ರಕಟನೆ.

ಮೈದಾನ್ ತಾಲ್ಲೂಕುಗಳಲ್ಲಿ, ಮೇಲ್ಪಟ್ಟ ಅಥವಾ ತಾಲ್ಲೂಕು ಪಾಠಶಾಲೆಗಳ ಬಗ್ಗೆ ಕೊಡಗು ವಿದ್ಯಾಭ್ಯಾಸದ ಇಲಾಖೇಗಾಗಿ ಇಬ್ಬರು ಹೆಡ್ ಮಾಸ್ಟರುಗಳು ಬೇಕಾಗಿರುವದರಿಂದ ಉಮೇದ್ವಾರರು ಕನ್ನಡ ಪದ್ಯವನ್ನೂ ವ್ಯಾಕರಣವನ್ನೂ ಚನ್ನಾಗಿ ತಿಳಿದಿರತಕ್ಕದ್ದು, ಅವರುಗಳು ಇಂಗ್ಲೀಷನ್ನು ಶುದ್ಧಾಂಗ ತಿಳಿದಿರಬೇಕಾದ ಆವಶ್ಯಕವಿಲ್ಲವು, ಪರಂತು ಗಣಿತಶಾಸ್ತ್ರವೂ, ಭೂಗೋಳ ತಂತ್ರವೂ, ಇಂಗ್ಲಿಷದ್ವಾರಾ ಕಲಿಸಲ್ಪಟ್ಟಿರುವ ಉಮೇದ್ವಾರು ಚುನಾಯಿಸಲ್ಪಡುವರು.

ಹಾಲೀ ತಲಬು 20 ರೂಪಾಯಿಗಳು ಕೊಡಲ್ಪಡುವದು, ವಯಸ್ಸು, ಜಾತಿ, ಸ್ವದೇಶ, ಲಾಯಖೀಗಳು, ಟೀಚರಾಗಿದ್ದ ಪೂರ್ವದ ಅನುಭವ, ಮತ್ತು ಹಾಲೀ ಯಿರುವ ಕೆಲಸ ಈ ಮುಂತಾದ ತಪಸೀಲ್‌ಗಳ ಸಮೇತ ಇದರಡಿ ರುಜು ಮಾಡಿರುವವರ ಆಫೀಸಿಗೆ ದರಖಾಸ್ತು ಮಾಡತಕ್ಕದ್ದು.

ಇ. ಮಾರ್ಸ್ಡೆನ್,
ಕೊಡಗು ಸ್ಕೂಲ್‌ಗಳ ಇನ್‌ಸ್ಪೆಕ್ಟರ್.

ಮೈಸೂರು ಗೆಜೆಟ್, ಚಂದಾ ದರ ವಗೈರೆ.

		ಚಂದಾ.		ಟಪ್ಪಾಲ್ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ.	
		ರೂ.	ಆ.		
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ		3	8.	1	12
ಇಂಗ್ಲೀಷು ಮತ್ತು ಕನ್ನಡ ಸಹಾ 12 ತಿಂಗಳಿಗೆ		7	0	3	8
ಛಷ್ ಮಾಹೆ ಯಾ ಕ್ವಾರಟರಿಗೆ		ದಾಮಾಷಾಯಿ ಪ್ರಕಾರ ದರಗಳು.			
ಶಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಫಿಕೇಟ ಬಗ್ಗೆ ನೋಟೀಸುಗಳು:—				ರೂ.	ಆ.
ಮೊದಲನೇ ದಫಾ ಷಾಯಿಷ್ ಮಾಡತಕ್ಕ ಬಗ್ಗೆ (ಇಂಗ್ಲೀಷು ಅಥವಾ ಕನ್ನಡ) ..				2	8
ಯಿರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ				1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ, ದಿವಾಳೀ ಅಪ್ಲಿಕೇಷನ್‌ಗಳ ಬಗ್ಗೆ ನೋಟೀಸುಗಳಿಗೆ:—					
ಮೊದಲನೇ ದಫಾ				5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ				2	8
ಶಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿಕೋರ್ಟುಗಳಿಂದಕೊಡಲ್ಪಡುವ ದಿವಾಳಿ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.					
ಡ್ಯುಪ್ಲಿಕೇಟ ಕಾಫೀ ಪಟ್ಟೇ, ವಗೈರೇ ಕೊಡುವ ಬಗ್ಗೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟೀಸುಗಳಿಗೆ:—					
ಮೊದಲನೇ ಸಲಕ್ಕೆ ..	ಪುಟ 1ಕ್ಕೆ .			10	0
ಯಿರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	„ ..			5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್‌ಮಾಡಲ್ಪಡುತ್ತೆ;—					
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ ..			0	8
ಯಿರಡನೇ ದಫಾ ಡಿಟೋ	ಡಿಟೋ ..			0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ ..	..			0	4

ಬಮೋಜಿಬ್ ಹುಕ್ಕುಂ,
ಹೆಚ್. ಹಡರ್ನ,
ಮೈ. ಗೆ. ಕಾಂಪೈಲರ್.

ಗವರ್ನಮೆಂಟ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡ್‌ಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ವಶಿಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡು ಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 4—8—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 8—8—0; ಒಂದು ಪೌಂಡ್ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಇದರಡೀ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿ ಒಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌಂಡ್ ವುಳ್ಳ ಡಬ್ಬಿಗೆ 20 ರೂಪಾಯಿ. ಈ ಔಷಧವು, ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯನ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬೀಗೆ ಎಂಟು ಆಣೆ ಟಪ್ಪಾಲ್ ಹಾಸಲೂ, ಒಂದು ಪೌಂಡ್ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

ಕ್ರಿಸ್ಟಲ್ಲೈಜ್ಡ್ ಸಿಂಕೋನಾ ಫೆಬ್ರಿಫ್ಯೂಜ್.

ಗವರ್ನಮೆಂಟ ಕೋಠೀಯಲ್ಲಿ ಕೆಂಪುವರ್ಣದ ಸಿಂಕೋನಾ ಪಟ್ಟೆಯಿಂದ ತಯಾರ್ ಮಾಡಲ್ಪಟ್ಟ ಹೊಸದಾದ ಮತ್ತು ಅಭಿವೃದ್ಧಿಯಾದ ತಯಾರಿ—ಇದು ಸಾಧಾರಣವಾದ ಕ್ರಿಸ್ಟಲ್ಲೈಜ್ಡ್ ಅಲ್ಲದ ಫೆಬ್ರಿಫ್ಯೂಜಿಗಿಂತ ಕ್ವಿನೈನಿಗೆ ಸಂಪೂರ್ಣವಾದ ಪ್ರತಿನಿಧಿಯಾಗಿದೆ. ಇದನ್ನು ಕಲ್‌ಕತ್ತೆ ಬಳಿ ಸೀಬ್‌ಪೂರ್ ಸಮೀಪದಲ್ಲಿ ರಾಯಲ್‌ಬೊಟಾನಿಕ್ ಗಾರ್ಡನ್ ಸೂಪರಿಂಟೆಂಡೆಂಟರಿಂದ ಗವರ್ನಮೆಂಟ್ ಆಫಿಸರ್‌ಗಳು ಸರ್ಕಾರಿಯಾದ ಮತ್ತು ಧರ್ಮಾರ್ಥವಾದ ಕೆಲಸಗಳಿಗಾಗಿ ಮತ್ತು ಒಂದು ಸಲಕ್ಕೆ ಇಪ್ಪತ್ತು ಪೌಂಡು ಮತ್ತು ಅದಕ್ಕೆ ಮೇಲ್ಪಟ್ಟು ತೆಗದುಕೊಳ್ಳುವರು ನಗದಿಗಾಗಿಯೇ ಪೌಂಡ್ ಒಂದಕ್ಕೆ 24 ರೂಪಾಯಿಗಳ ದರ ಪ್ರಕಾರ, ಕೊಂಡುಕೊಳ್ಳಬಹುದು. ರಾಯಲ್ ಬೊಟಾನಿಕ್ ಗಾರ್ಡನ್ ಸೂಪರಿಂಟೆಂಡೆಂಟರು ನಗದಿಗೇನೇ ಸಮುದಾಯವಾಗಿ ಪ್ರಜೆಗಳಿಗೆ ಮತ್ತು ಪೌಂಡ್ ಒಂದಕ್ಕೆ 32 ರೂಪಾಯಿಗಳ ಪ್ರಕಾರ ಮುಖ್ಯರಾದ ಯೂರೋಪಿಯನ್ ಮತ್ತು ನೇಟಿವ್ ಡ್ರಗ್ಗಿಸ್ಟ್‌ಗಳು ಸರಬರಾಯಿ ಮಾಡತಕ್ಕದ್ದು. ಟಪ್ಪಾಲ್ ಹಾಸಲ್ ಹನ್ನೆರಡಾಣೆ ಜಾಸ್ತಿ.

ಮೈಸೂರ ಗೆಜೆಟ್.

ಸರ್ಕಾರದಿಂದ ಫಾಯಿಷ್ ಆದದ್ದು.

ಬೆಂಗಳೂರು, ಶನಿವಾರ, ಜೂನ್ ತಾ 21, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಮೈಸೂರು ಶ್ರೀಮನ್ ಮಹಾರಾಜರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯೂಲೇಷನ್ಗಳು.

ಸನ್ 1884ನೇ ಇಸವಿಯ IIನೇ ರೆಗ್ಯೂಲೇಷನ್.

ಸನ್ 1879ನೇ ಇಸವಿಯ XIIನೇ ಆಕ್ಟಿನಿಂದ ತಿದ್ದುಪಡಿಯಾದ 1877ನೇ ಇಸವಿಯ Xನೇ ಆಕ್ಟನ್ನು ರದ್ದು ಮಾಡಿದ 1882ನೇ ಇಸವಿಯ XIVನೇ ಆಕ್ಟೆಂಬ ಸಿವಿಲ್ ಪ್ರೊಸೀಡ್ಯೂರ್ ಕೋಡನ್ನು ಮೈಸೂರು ಶೀಮೆಯಲ್ಲಿ ಜಾರೀಗೆ ತರುವ ಬಗ್ಗೆ ಹುಟ್ಟಿದ ರೆಗ್ಯೂಲೇಷನ್.

ಇಂಡ್ಯ ಗವರ್ನರ್ ಜನರಲ್ಲವರ ಮಂತ್ರಾಲೋಚಕ ಸಮಾಜದ ಸನ್ 1882ನೇ ಇಸವಿಯ XIVನೇ ಆಕ್ಟನ್ನು ಮೈಸೂರು ರಾಜ್ಯಕ್ಕೆ ಲಗಾವ್ ಮಾಡುವದು ಯುಕ್ತವಾಗಿರುವದರಿಂದ ಮೈಸೂರು ಶೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರು ಅಪ್ಪಣೆಕೊಡುವದೇನಂದರೆ, ಮೇಲೆ ಕಂಡ ಸನ್ 1882ನೇ ಇಸವಿಯ XIVನೇ ಆಕ್ಟು, ಮೈಸೂರು ರಾಜ್ಯದಲ್ಲಿ ಈ ಕೆಳಗೆ ಕಂಡ ತಿದ್ದುಪಾಟುಗಳು, ಮತ್ತು ತಳ್ಳುಪಡಿಗಳು ದೇಖೀಲ್ ಕಾನೂನ್ ಬಲವುಳ್ಳದ್ದಾಗಿರತಕ್ಕದ್ದು, ಯಾವದಂದರೆ:—

1. "ಬ್ರಿಟಿಷ್ ಇಂಡ್ಯ" ಯೆಂಬದಕ್ಕೆ ಬದಲಾಗಿ, 229ನೇ ಸೆಕ್ಷನ್‌ನಲ್ಲಿ ವಿನಾ, "ಮೈಸೂರು ಶೀಮೆ" ಯೆಂದು ಓದತಕ್ಕದ್ದು.

2. "ಸ್ಥಳೀಕ ಗವರ್ನಮೆಂಟ್" ಎಂಬದಕ್ಕೆ ಬದಲಾಗಿ "ಮೈಸೂರು ಗವರ್ನಮೆಂಟ್" ಯೆಂದು ಓದತಕ್ಕದ್ದು.

3. "ಒಂದು ಹೈ ಕೋರ್ಟು" "ಸದರೀ ಹೈ ಕೋರ್ಟು" "ಅದೇ ಹೈ ಕೋರ್ಟು" "ಹೈ ಕೋರ್ಟುಗಳು" ಅಥವಾ "ಅಂತಾ" ಹೈ ಕೋರ್ಟೆಂಬದಕ್ಕೆ ಬದಲಾಗಿ "ಚೀಫ್ ಕೋರ್ಟು" ಎಂದು ಓದತಕ್ಕದ್ದು.

4. "ಕಲೆಕ್ಟರ್" ಅಥವಾ "ಜಮೀನ್ ಕಂದಾಯದ ಕಲೆಕ್ಟರ್" ಯೆಂಬದಕ್ಕೆ ಬದಲಾಗಿ "ಡೆಪ್ಯುಟಿ ಕಮ್ಮಿಷನರ್" ಯೆಂದು ಓದತಕ್ಕದ್ದು.

5. 1, 3, ಮತ್ತು 99 *A* ಸೆಕ್ಷನ್‌ಗಳಲ್ಲಿ "ಸನ್ 1882ನೇ ಜೂನ್ ಎಂಬದಕ್ಕೆ" ಬದಲಾಗಿ "ಸನ್ 1884ನೇ ಜುಲೈ" ಯೆಂದು ಓದತಕ್ಕದ್ದು.

6. 1ನೇ ಸೆಕ್ಷನಿನ 2ನೇ ಪ್ಯಾರಾಗ್ರಾಫಿಗೆ ಬದಲಾಗಿ ಈ ಕೆಳಗೆ ಬರತಕ್ಕದ್ದನ್ನು ಉಪಯೋಗಿಸತಕ್ಕದ್ದು:—

"ಇದು ಮೈಸೂರು ಶೀಮೆಯ ಸರ್ವತ್ರ ವ್ಯಾಪಿಸುತದೆ."

7. 2ನೇ ಸೆಕ್ಷನ್ನಲ್ಲಿ "ಮತ್ತು ಒಂದು ಹೈ ಕೋರ್ಟಿನ ಒಬ್ಬ ಅಡ್ವೋಕೇಟ್ ಒಬ್ಬ ವಕೀಲ್ ಮತ್ತು ಒಬ್ಬ ಅಟ್ಟಾರ್ನಿಯ "ನ್ನು ಅಡಗಿಸಿಕೊಳ್ಳುತದೆ" ಯೆಂಬ ಮಾತುಗಳಿಗೆ ಬದಲಾಗಿ "ಲೀಗಲ್ ಪ್ರಾಕ್ಟಿಷನರ್‌ಗಳನ್ನು ಕುರಿತು ಮೈಸೂರು ಶೀಮೆಯೊಳಗೆ ತತ್ಕಾಲ "ದಲ್ಲಿ ಜಾರೀ ಯಿರುವ ಕಾನೂನ್ ಅನುಸರಿಸಿ ದಾಖಲ್ ಮಾಡಲ್ಪಟ್ಟದ್ದನ್ನು" ಯೆಂಬದಾಗಿ ಉಪಯೋಗಿಸತಕ್ಕದ್ದು; ಮತ್ತು ಅದೇ ಸೆಕ್ "ಷನ್ನಲ್ಲಿ ಈ ಕೆಳಗೆ ಬರುವದನ್ನು ಬಿಟ್ಟು ಬಿಡತಕ್ಕದ್ದು.

"ಮತ್ತು ಒಂದು ಹೈ ಕೋರ್ಟಿನ ಸಾಧಾರಣ ಅಸಲ್ ಸಿವಿಲ್ ಅಧಿಕಾರದ ಸ್ಥಳ ಸರಹದ್ದುಗಳನ್ನು ಅಡಗಿಸಿಕೊಳ್ಳುತದೆ;"

"ಮತ್ತು ಬ್ರಿಟಿಷ್ ಇಂಡ್ಯ ಶೀಮೆಯಲ್ಲಿ ಅಧಿಕಾರ ವುಂಟಾಗಿರುವದಿಲ್ಲವು ಮತ್ತು ಮಂತ್ರಾಲೋಚಕ ಸಮಾಜದಲ್ಲಿ ಗವರ್ನರ್ "ಜನರಲ್ ಸಾಹೇಬರವರಿಂದ ಸ್ಥಾಪಿಸಲ್ಪಟ್ಟಿರುವದಿಲ್ಲವು;"

"ಮಹಾರಾಣೀಯವರ ಪ್ರತಿ ಕವಿನಾಂಟೆಡ್ ನಾಕರನೂ;"

"ಗವರ್ನಮೆಂಟಿನ ಕೆಳಗೆ ನೌಕರಿ ಮಾಡುತಿರುವಲ್ಲಿ ಮಹಾರಾಣೀಯವರ ಮಿಲಿಟೇರಿ ಅಥವಾ ನಾವಿಕ ಸೈನ್ಯಗಳಲ್ಲಿ ಕಮ್ಮಿಷನ್ "ಹೊಂದಿದ ಪ್ರತಿ ಆಫೀಸರರು;"

ಮತ್ತು "ಈ ಕೋಡ್ ಬ್ರಿಟಿಷ್ ಇಂಡ್ಯ ಶೀಮೆಯ ಪೈಕೀ ಯಾವ ಭಾಗದಲ್ಲಿ ಯಾಗಲಿ ಪ್ರವರ್ತಿಸುತ್ತದೋ ಅಂತಾ ಭಾಗದಲ್ಲಿ 'ಗವ ರ್ನಮೆಂಟ್' ಯೆಂಬದು ಇಂಡ್ಯ ಗವರ್ನಮೆಂಟನ್ನೂ ಲೋಕಲ್ ಗವರ್ನಮೆಂಟನ್ನೂ, ಅಡಗಿಸಿಕೊಳ್ಳುತದೆ."

8. 3ನೇ ಸೆಕ್ಷನ್ನಲ್ಲಿ "ಸನ್ 1879ನೇ ಜುಲೈ ಯಿಪ್ಪತ್ತೊಂಭತ್ತನೇ ದಿನಕ್ಕೆ" ಬದಲಾಗಿ "1879ನೇ ನವಂಬರ ಹತ್ತೊಂ "ಭತ್ತನೇ ದಿನವೆಂದು" ಓದತಕ್ಕದ್ದು.

9. 4ನೇ ಸೆಕ್ಷನನ್ನು ಬಿಡತಕ್ಕದ್ದು.

10. 5ನೇ ಸೆಕ್ಷನ್ನಲ್ಲಿ "(ಕಲ್‌ಕತ್ತಾ, ಮದರಾಸ್ ಮತ್ತು ಮುಂಬೈ ಷಹರ್‌ಗಳಲ್ಲಿ ಸ್ಮಾಲ್‌ಕಾಜ್ ಕೋರ್ಟುಗಳು ವಾಯಿ "ಯಿತರ ಕೋರ್ಟುಗಳು" ಯೆಂಬ ಮಾತುಗಳನ್ನು ಬಿಟ್ಟು ಬಿಡತಕ್ಕದ್ದು.

11. 6ನೇ ಸೆಕ್ಷನ್ನಲ್ಲಿ,

"(a) ಮಿಲಿಟೇರಿ ರಿಕ್ವೆಸ್ಟು ಕೋರ್ಟುಗಳ;

"(b) ಮುಂಬೈ ಪ್ರೆಸಿಡೆನ್ಸಿಯು ಫೌಜುಗಳು ವಾಸಮಾಡುವ ಕಂಟೋನ್ಮೆಂಟುಗಳಲ್ಲೂ ಸ್ಟೇಷನ್‌ಗಳಲ್ಲೂ ಮಿಲಿಟೇರಿ ಬಜಾರ್‌ಗಳ "ಲ್ಲೂ ಬರುವ ಜುಜುವೀ ದಾವೆಗಳನ್ನು ವಿಚಾರಣೆ ಮಾಡಲಿಕ್ಕೆ ಆ ಪ್ರೆಸಿಡೆನ್ಸೀಯಲ್ಲಿ ಕ್ರಮವಾಗಿ ಮೊಕರರ್ ಮಾಡಲ್ಪಟ್ಟ ಒಬ್ಬ ಆಫಿಸ "ರರ; ಅಥವಾ

"(c) ಮದರಾಸ್ ಕೋಡ್ ನಿಬಂಧನೆಗಳನುಸರಿಸಿ ಗ್ರಾಮ ಮುನ್ಸಿಫ್‌ಗಳ ಅಥವಾ ಗ್ರಾಮ ಪಂಚಾಯತರ;

"(d) ರಂಗೂನ್, ಮೋಲ್‌ಮಿನ್, ಆಕ್ಯಾಬ್ ಅಥವಾ ಬಸೀನ್, ಈ ಸ್ಥಳದ ಇನ್‌ಸಾಲ್‌ವೆಂಟ್ ಕೋರ್ಟು ತರೀಕೆ ಕೋರ್ಟು "ಮಾಡುವ ರಂಗೂನಿನ ರಿಕಾರ್ಡರಿನ ಅಧಿಕಾರವನ್ನಾಗಲಿ ನಡವಳಿತವನ್ನಾಗಲಿ ಬಾಧಿಸುತ್ತದೆ ಅಥವಾ" ಯೆಂಬ ಮಾತುಗಳನ್ನು ಬಿಟ್ಟುಬಿಡತಕ್ಕದ್ದು.

12. 7 ಮತ್ತು 8ನೇ ಸೆಕ್ಷನ್‌ಗಳನ್ನು ಬಿಟ್ಟು ಬಿಡತಕ್ಕದ್ದು.

13. 9ನೇ ಸೆಕ್ಷನ್ನಲ್ಲಿ "ಒಂಭತ್ತನೇ ಭಾಗ: ಶಾಸನ ಕೊಡಲ್ಪಟ್ಟ ಹೈ ಕೋರ್ಟುಗಳಿಗೆ ಸಂಬಂಧಿಸಿದ ವಿಶೇಷ ರೂಲ್ಸ್" ಯೆಂಬದನ್ನ ಬಿಟ್ಟು ಬಿಡತಕ್ಕದ್ದು.

14. 12ನೇ ಸೆಕ್ಷನ್ನಲ್ಲಿ, "ಅಥವಾ ಅಧಿಕಾರವುಳ್ಳ ಬದಸ್ತೂರ್ ಮಂತ್ರಾಲೋಚಕ ಸಮಾಜದಲ್ಲಿ ಗವರ್ನರ್ ಜನರಲ್ಲವರಿಂದ "ಬ್ರಿಟಿಷ್ ಇಂಡ್ಯ ಶೀಮೆಯ ಸರಹದ್ದುಗಳ ಆಚೆ ಸ್ಥಾಪಿಸಲ್ಪಟ್ಟ ಯಾವ ಕೋರ್ಟಿನಲ್ಲಾಗಲಿ ಅಥವಾ ಮಂತ್ರಾಲೋಚಕ ಸಮಾಜದಲ್ಲಿ "ಶ್ರೀಮನ್ಮಹಾರಾಣೀಯವರ "ಮುಂದಾಗಲಿ" ಯೆಂಬದನ್ನು ಬಿಟ್ಟು ಬಿಡತಕ್ಕದ್ದು.

15. 24ನೇ ಸೆಕ್ಷನನ್ನು ಬಿಟ್ಟು ಬಿಡತಕ್ಕದ್ದು.

16. 25ನೇ ಸೆಕ್ಷನಿನ ಯೆರಡನೇ ಪ್ಯಾರೇಗ್ರಾಫನ್ನು ಬಿಟ್ಟು ಬಿಡತಕ್ಕದ್ದು.

17. 37ನೇ ಸೆಕ್ಷನಿನ ಕಡೇ ಪ್ಯಾರೇಗ್ರಾಫನ್ನು ಬಿಟ್ಟು ಬಿಡತಕ್ಕದ್ದು.

18. 39ನೇ ಸೆಕ್ಷರ್ಷ ಕಡೇ ಪ್ಯಾರೇಗ್ರಾಫನ್ನು ಬಿಟ್ಟುಬಿಡತಕ್ಕದ್ದು.

19. 86ನೇ ಸೆಕ್ಷನನ್ನು ಬಿಟ್ಟುಬಿಡತಕ್ಕದ್ದು.

20. 90ನೇ ಸೆಕ್ಷನನ್ನು ಬಿಟ್ಟುಬಿಡತಕ್ಕದ್ದು.

21. 95ನೇ ಸೆಕ್ಷರ್ಷನಲ್ಲಿ "ಮಂತ್ರಾಲೋಚಕ ಸಮಾಜದಲ್ಲಿ ಗವರ್ನರ್ ಜನರಲ್ ಸಾಹೇಬರವರ ಮುಂದಾಗಿ ಮಂಜೂರಾತಿನಿಸೀ" ಯೆಂಬದನ್ನು ಬಿಟ್ಟುಬಿಡತಕ್ಕದ್ದು.

22. 223ನೇ ಸೆಕ್ಷರ್ಷನಲ್ಲಿ 5ನೇ ಪ್ಯಾರೆಗ್ರಾಫನ್ನು ಬಿಟ್ಟುಬಿಡತಕ್ಕದ್ದು.

23. 229ನೇ ಸೆಕ್ಷನಿಗೆ ಬದಲಾಗಿ ಇದರಡಿ ಬರುವದನ್ನು ವುಪಯೋಗಿಸತಕ್ಕದ್ದು:—

"ಬ್ರಿಟಿಷ್ ಇಂಡ್ಯ ಶೀಮೆಯಲ್ಲಿ ಯಾವದಾದರೂ ಕೋರ್ಟಿನ ಡಿಕ್ರಿಯು, ಯಾವ ಕೋರ್ಟಿನಿಂದ ಕೊಡಲ್ಪಟ್ಟಿತೋ ಅಂತಾ ಕೋ
"ರ್ಟಿನ ಅಧಿಕಾರದೊಳಗೆ ಅಮಲ್‌ಜಾರಿ ಮಾಡಲ್ಪಡಲಿಕ್ಕೆ ಆಗದೆ ಇದ್ದರೆ ಅದು ಮೈಸೂರು ಶೀಮೆಯಲ್ಲಿ ಯಾವದಾದರೂ ಕೋರ್ಟಿನ ಅಧಿ
"ಕಾರದೊಳಗೆ ಇದರಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಅಮಲ್‌ಜಾರೀ ಮಾಡಲ್ಪಡಬಹುದು."

24. 273ನೇ ಸೆಕ್ಷನಿನ ಮೊದಲನೆಯ ಪ್ಯಾರೇಗ್ರಾಫಿಗೆ, "ಸದರೀ ಕೋರ್ಟು ಆ ಬಗ್ಗೆ ಹಾಗೆ ಜಫ್ತೀ ಮಾಡಲ್ಪಟ್ಟ ಡಿಕ್ರಿಯ ಅಮಲ್‌ಜಾರೀಯನ್ನು ಹುಕ್ಕುಂ ಮಾಡಬಹುದು" ಯೆಂಬದನ್ನು ಸೇರಿಸತಕ್ಕದ್ದು.

25. 287ನೇ ಸೆಕ್ಷರ್ಷನಲ್ಲಿ, "ತನ್ನ ಸ್ವಂತ ಕೋರ್ಟಿನ ವಿಷಯದಲ್ಲಿಯೂ, ರಂಗೂರ್ನಲ್ಲಿ ಸ್ಮಾಲ್‌ಕಾಜ್ ಕೋರ್ಟುಗಳ ವಿಷ
"ಯದೊಳಗೂ, ರಂಗೂರ್ ರಿಕಾರ್ಡರು, ಈ ಪ್ಯಾರಾಗ್ರಾಫಿನ ಅರ್ಥರೀತ್ಯ, ಒಂದು ಹೈ ಕೋರ್ಟಾಗಿರತಕ್ಕದೆಂದು ಭಾವಿಸಲ್ಪಡತಕ್ಕದ್ದು." ಎಂಬದನ್ನು ಬಿಟ್ಟುಬಿಡತಕ್ಕದ್ದು.

26. 320ನೇ ಸೆಕ್ಷರ್ಷನಲ್ಲಿ "ಮಂತ್ರಾಲೋಚಕ ಸಮಾಜದಲ್ಲಿ ಗವರ್ನರ್ ಜನರಲ್ಲವರ ಮಂಜೂರಾತೀನಿಶೀ" ಯಂಬದನ್ನು ಬಿಟ್ಟುಬಿಡತಕ್ಕದ್ದು.

27. 327ನೇ ಸೆಕ್ಷರ್ಷನಲ್ಲಿ, "ಮಂತ್ರಾಲೋಚಕ ಸಮಾಜದಲ್ಲಿ ಗವರ್ನರ್ ಜನರಲ್ಲವರ ಮಂಜೂರಾತೀನಿಶೀ" ಯೆಂಬದನ್ನು ಬಿಟ್ಟು ಬಿಡತಕ್ಕದ್ದು.

28. 339ನೇ ಸೆಕ್ಷರ್ಷನಲ್ಲಿ "ಕೋರ್ಟಿನ ತಕ್ಕ ಆಫೀಸರರು" ಯೆಂಬ ಮಾತುಗಳಿಗೆ ಬದಲಾಗಿ "ಸಿವಿಲ್ ಜೈಲಿನ ಇರ್ಚಾರ್ಜ್
"ಆಫೀಸರರು" ಯೆಂದು ಉಪಯೋಗಿಸತಕ್ಕದ್ದು.

29. 341ನೇ ಸೆಕ್ಷನಿನ ನಿಯಮದಲ್ಲಿ "ಮೂರನೇ" ಯೆಂಬ ಮಾತನ್ನು ಬಿಟ್ಟುಬಿಡತಕ್ಕದ್ದು.

30. 360ನೇ ಸೆಕ್ಷನಿನ ಕಡೇಪ್ಯಾರೇಗ್ರಾಫನ್ನು ಬಿಟ್ಟುಬಿಡತಕ್ಕದ್ದು.

31. 386ನೇ ಸೆಕ್ಷರ್ಷನಲ್ಲಿ "ಅಥವಾ ರಂಗೂನಿನ ರಿಕಾರ್ಡರ ಕೋರ್ಟು" ಯೆಂಬದನ್ನು ಬಿಟ್ಟುಬಿಟತಕ್ಕದ್ದು.

32. 391ನೇ ಸೆಕ್ಷರ್ಷನಲ್ಲಿ, "ಮತ್ತು ಶ್ರೀಮರ್ಜ ಮಹಾರಾಣೀಯವರ ಅಥವಾ ಮಂತ್ರಾಲೋಚಕ ಸಮಾಜದಲ್ಲಿ ಗವರ್ನರ್ ಜನರ
"ಲ್ಲವರ ಅಧಿಕಾರದಿಂದ ಸ್ಥಾಪಿಸಲ್ಪಟ್ಟ, ಅಥವಾ,

"(*b*) ಬ್ರಿಟಿಷ್ ಇಂಡ್ಯ ಶಿವಾಯಿ ಇತರ ಬ್ರಿಟಿಷ್ ರಾಜ್ಯದ ಯಾವ ಭಾಗದಲ್ಲಿ ಯಾಗಲಿ ಇರತಕ್ಕ ಕೋರ್ಟುಗಳು, ಅಥವಾ

"(*c*) ಶ್ರೀಮನ್ಮಹಾರಾಣೀಯವರೊಡನೆ ತತ್ಕಾಲದಲ್ಲಿ ಮಿತ್ರತ್ವವುಳ್ಳ ಯಾವದಾದರೂ ಅನ್ಯದೇಶದ ಕೋರ್ಟುಗಳು" ಯೆಂಬದನ್ನು ಬಿಡತಕ್ಕದ್ದು.

33. 416ನೇ ಸೆಕ್ಷನಿಗೆ ಬದಲಾಗಿ ಇದರಡಿಬರುವ ಸೆಕ್ಷನನ್ನು ಉಪಯೋಗಿಸತಕ್ಕದ್ದು:—
"ಗವರ್ನಮೆಂಟಿನಿಂದ ತರಲ್ಪಡುವ ವ್ಯಾಜ್ಯಗಳು ಮೈಸೂರು ಸರ್ಕಾರದಿಂದ ಏರ್ಪಡಿಸಲ್ಪಡತಕ್ಕದ್ದು."

34. 418ನೇ ಸೆಕ್ಷನಿಗೆ ಬದಲಾಗಿ ಈ ಕೆಳಗೆ ಬರುವ ಸೆಕ್ಷನನ್ನು ಉಪಯೋಗಿಸತಕ್ಕದ್ದು:—"ಮೈಸೂರು ಸರ್ಕಾರದಿಂದ
"ದಾಖಲ್ ಮಾಡಲ್ಪಡುವ ವ್ಯಾಜ್ಯಗಳಲ್ಲಿ, ದಾವಾ ಅರ್ಜೀಯೊಳಗೆ ವಾದಿಯ ಹೆಸರನ್ನೂ ತಪಶೀಲನ್ನೂ ವಾಸಸ್ಥಳವನ್ನೂ ದಾಖಲ್
"ಮಾಡುವದಕ್ಕೆ ಬದಲಾಗಿ ಮೈಸೂರು ಸರ್ಕಾರ್ ಎಂಬದನ್ನು ದಾಖಲ್ ಮಾಡುವಣವು ಸಾಕಾಗಿರತಕ್ಕದ್ದು."

35. 419, 420 ಮತ್ತು 421ನೇ ಸೆಕ್ಷರ್ಷಗಳನ್ನು ಬಿಟ್ಟುಬಿಡತಕ್ಕದ್ದು.

36. 424ನೇ ಸೆಕ್ಷನ್ನಲ್ಲಿ, "ಮಂತ್ರಾಲೋಚಕ ಸಮಾಜದೊಳಗೆ ಸದರೀ ಸ್ಟೇಟ್ ಸೆಕ್ರೆಟೇರಿಯವರ ಮೇಲೆ ಅಥವಾ" ಮತ್ತು "ಮಂತ್ರಾಲೋಚಕ ಸಮಾಜದಲ್ಲಿ ಸ್ಟೇಟ್ ಸೆಕ್ರೆಟೇರಿಯವರ ವಿಷಯದೊಳಗೆ ಲೋಕಲ್ ಗವರ್ನಮೆಂಟಿನ ಸೆಕ್ರೆಟೇರಿಯವರಿಗೆ ಅಥವಾ "ಲೋಕಲ್ ಗವರ್ನಮೆಂಟ್ ಸೆಕ್ರೆಟೇರಿಯವರ ಆಫೀಸಿನಲ್ಲಿ ಅಥವಾ ಡಿ। ಕಲೆಕ್ಟರವರಿಗೆ ಒಪ್ಪಿಸಿದ್ದ, ಅಥವಾ ಅವರ ಆಫೀಸಿಗೆ ಪಾವತೀ "ಮಾಡಿದ ಮತ್ತು ಒಬ್ಬ ಪಬ್ಲಿಕ್ ಆಫೀಸರರ ಸಂಗತಿಯಲ್ಲಿ" ಯೆಂಬದನ್ನು ಬಿಟ್ಟುಬಿಡತಕ್ಕದ್ದು.

37. 429ನೇ ಸೆಕ್ಷನ್ನಲ್ಲಿ "ಮಂತ್ರಾಲೋಚಕ ಸಮಾಜದೊಳಗೆ ಸದರೀ ಸ್ಟೇಟ್ ಸೆಕರಟೇರಿಯವರ ಮೇಲೆ ಅಥವಾ" ಎಂಬದನ್ನು ಬಿಟ್ಟುಬಿಡತಕ್ಕದ್ದು.

38. XXVIIIನೇ ಅಧ್ಯಾಯವನ್ನು ಬಿಟ್ಟುಬಿಡತಕ್ಕದ್ದು.

39. 443ನೇ ಸೆಕ್ಷನ್ನಲ್ಲಿ "ಸ್ನ 1875ನೇ ಇಸವಿಯ ಇಂಡಿಯನ್ ಮೇಜಾರಿಟಿ ಆಕ್ಟಿನ 3ನೇ ಸೆಕ್ಷನ್" ಎಂಬ ಮಾತುಗಳಿಗೆ ಬದಲಾಗಿ ಈ ಕೆಳಗೆ ಬರತಕ್ಕದ್ದನ್ನು ಉಪಯೋಗಿಸತಕ್ಕದ್ದು.—

"ಸ್ನ 1872ನೇ ಇಸವಿ ಏಪ್ರೆಲ್ 25ನೇ ಮರ್ಸ್ಕಂ 75ನೇ J. ನಂಬರ್ ಇಂಡ್ಯ ಗವರ್ನಮೆಂಟ್ ಇಸ್ತಿಹಾರ್ನಾಮೆನಿಸೀ ಪ್ರಕಟಿಸ "ಲ್ಪಟ್ಟ ಮನುಷ್ಯನ ಮತ್ತು ಮೈನರ್‌ಗಳ ಸ್ವತ್ತಿನ ಉಸ್ತುವಾರೀ ಬಗ್ಯೆ ರೂಲ್ಸ್."

40. 463ನೇ ಸೆಕ್ಷನ್ನಲ್ಲಿ "ಸ್ನ 1858ನೇ ಇಸವೀ XXXVನೇ ನಂಬರ್ ಆಕ್ಟು" ಯೆಂಬ ಮಾತುಗಳಿಗೂ ಅಂಕೆಗಳಿಗೂ "ಬದಲಾಗಿ, "ಸ್ನ 1874ನೇ ಜುಲೈ 31ನೇ ಮರ್ಸ್ಕಂ 141ನೇ ನಂಬರ್‌ತ್ರಿಳ್ಳ ಸಾಬಕ್ ಚೀಫ್ ಕಮ್ಮಿಷನರವರ ಇಸ್ತಿಹಾರ್ನಾಮೆ ಸಂಗಡ "ಥಾಯಿಷ್ ಮಾಡಲ್ಪಟ್ಟ, ಚಿತ್ತ ಸ್ವಾಸ್ಥ್ಯವಿಲ್ಲದ ಜನಗಳಿಗೆ ಸಂಬಂಧಿಸಿದ ರೂಲ್ಸ್" ಯೆಂಬ ಮಾತುಗಳು ಉಪಯೋಗಿಸತಕ್ಕದ್ದು.

41. 464ನೇ ಸೆಕ್ಷನ್ನಲ್ಲಿ "ಕೋರ್ಟ್ ಆಫ್ ವಾರ್ಡ್ಸ್‌ಯಿಂದ ಅಥವಾ" ಮತ್ತು "ಸ್ಥಳ ಸಂಬಂಧಿಯಾದ" ಎಂಬ ಮಾತುಗಳನ್ನು ಬಿಟ್ಟುಬಿಡತಕ್ಕದ್ದು.

42. 538ನೇ ಸೆಕ್ಷನ್ನಲ್ಲಿ ಈ ಕೆಳಗೆ ಬರತಕ್ಕದ್ದನ್ನು ಬಿಟ್ಟುಬಿಡತಕ್ಕದ್ದು:—

"(a) ಫೋರ್ಟ್‌ವಿಲಿಯಂ, ಮದರಾಸ್ ಮತ್ತು ಮುಂಬೈ ಈ ಸ್ಥಳಗಳಲ್ಲಿ ನ್ಯಾಯವಿಮರ್ಶೆಯ ಹೈಕೋರ್ಟು.

"(b) ರಂಗೂನಿನ ರಿಕಾರ್ಡರ ಕೋರ್ಟು.

"(c) ಕಲ್‌ಕತ್ತಾ, ಮದರಾಸ್, ಮುಂಬೈ, ಈ ಸ್ಥಳಗಳಲ್ಲಿ ಸ್ಮಾಲ್‌ಕಾಜ್ ಕೋರ್ಟುಗಳು.

"(d) ಕರಾಚೀ ಸ್ಥಳದ ಜಡ್ಜಿಯಕೋರ್ಟು, ಮತ್ತು"

ಅದೇ ಸೆಕ್ಷನ್ನಲ್ಲಿ "(e) ಯಾವದಾದರೂ ಇತರ ಕೋರ್ಟು" ಯೆಂಬದಕ್ಕೆ ಬದಲಾಗಿ "ಯಾವದಾದರೂಕೋರ್ಟು" ಯೆಂದು ಉಪಯೋಗಿಸತಕ್ಕದ್ದು.

43. 539ನೇ ಸೆಕ್ಷನ್ 1ನೇ ಪ್ಯಾರೇಗ್ರಾಫಿನಲ್ಲಿ, "ಉದ್ಯೋಗಧರ್ಮತಃ ಕೆಲಸ ನೋಡುವ ಅಡ್ವೋಕೇಟ್ ಜನರಲ್" ಯೆಂಬದಕ್ಕೆ ಬದಲಾಗಿ "ಡೆಪ್ಯುಟಿ ಕಮ್ಮಿಷನರು ಅಥವಾ, ಈ ಬಗ್ಯೆ ಮೈಸೂರು ಸರ್ಕಾರದವರು ಮೊಕರರ್ ಮಾಡಬಹುದಾದಂತಾ ಇತರ "ಆಫೀಸರರು, ಯಂತಲೂ ಮತ್ತು "ಅಡ್ವೋಕೇಟ್ ಜನರಲ್" ಯೆಂಬದಕ್ಕೆ ಬದಲಾಗಿ ''"ಡೆಪ್ಯುಟಿ ಕಮ್ಮಿಷನರನ್ನಾಗಲಿ, ಮೇಲ್ಕಂಡ "ಪ್ರಕಾರ ಮೊಕರರ್ ಮಾಡಲ್ಪಟ್ಟ ಇತರ ಆಫೀಸರನ್ನಾಗಲಿ ಯಂದುನ್ನು" ಬದಲಾಯಿಸಲ್ಪಡತಕ್ಕದ್ದು, ಮತ್ತು "ಹೈಕೋರ್ಟು ಅಥವಾ" ಯೆಂಬ ಮಾತುಗಳನ್ನು ಬಿಟ್ಟುಬಿಡತಕ್ಕದ್ದು. ಮತ್ತು 2—3ನೇ ಪ್ಯಾರೆಗ್ರಾಫ್‌ಗಳನ್ನು ಸಹ ಬಿಟ್ಟುಬಿಡತಕ್ಕದ್ದು.

44. 547ನೇ ಸೆಕ್ಷನ್ನಲ್ಲಿ "ಮಂತ್ರಾಲೋಚಕ ಸಮಾಜದಲ್ಲಿ ಇಂಡ್ಯ ಸ್ಟೇಟ್ ಸೆಕರಟೇರಿ ಯವರು" ಯೆಂಬ ಮಾತುಗಳಿಗೆ ಬದಲಾಗಿ "ಮೈಸೂರು ಸರ್ಕಾರದವರು" ಯೆಂಬದನ್ನು ಉಪಯೋಗಿಸತಕ್ಕದ್ದು.

45. 584ನೇ ಸೆಕ್ಷನಿಗೆ ಈ ಕೆಳಗೆ ಬರತಕ್ಕದ್ದನ್ನು ಸೇರಿಸತಕ್ಕದ್ದು:—

"(d), ಯಾವ ಮೊಕದ್ದಮೆಗಳಲ್ಲಿ ನಿಜಸ್ಥಿತಿಯ ಅಂತಾ ಯಾವ ಅಂಶದ ಮೇಲಾಗಲಿ ಅಪ್ಪೀಲ್ ಕೋರ್ಟಿನ ತೀರ್ಮಾನವು ಅಸಲ್ ಕೋರ್ಟಿನ ತೀರ್ಮಾನದ ದೆಸೆಯಿಂದ ಭಿನ್ನಿಸುತ್ತದೋ ಅಂತಾ ಮೊಕದ್ದಮೆಗಳಲ್ಲಿ ವಸ್ತುಸ್ಥಿತಿಗಳ ಮೇಲೆ ಫೈಸಲ್ ಕೊಡಬೇಕಾದಾಗ ವಸ್ತುಸ್ಥಿತಿಗಳ ಮುಖ್ಯಾಂಶವನ್ನು ಕುರಿತು ತಪ್ಪು ತೀರ್ಮಾನ ವುಂಟಾಗಿರುವಣ.

46. 586ನೇ ಸೆಕ್ಷನ್ನಲ್ಲಿ "ಐನೂರು ರೂಪಾಯಿಗಳು" ಯೆಂಬದಕ್ಕೆ ಬದಲಾಗಿ "ಐವತ್ತು ರೂಪಾಯಿಗಳು" ಯೆಂದು ವುಪಯೋಗಿಸತಕ್ಕದ್ದು.

47. XLVನೇ ಅಧ್ಯಾಯವನ್ನು ಬಿಟ್ಟುಬಿಡತಕ್ಕದ್ದು.

48. XLVIIIನೇ ಅಧ್ಯಾಯವನ್ನು ಬಿಟ್ಟುಬಿಡತಕ್ಕದ್ದು.

49. 644ನೇ ಸೆಕ್ಷನ್‌ನಲ್ಲಿ, " 639ನೇ ಸೆಕ್ಷನ್‌ನಿಂದ ಮತ್ತು ಇಪ್ಪತ್ತು ನಾಲ್ಕು ಮತ್ತು ಇಪ್ಪತ್ತೈದನೇವಿಕ್ಟೋರಿಯಾ ಚಾ " ಪ್ಟರ್ 104, ಸೆಕ್ಷನ್ 15ರಿಂದ ಹೈ ಕೋರ್ಟಿಗೆ ವುಂಟುಮಾಡಲ್ಪಟ್ಟ ಅಧಿಕಾರಕ್ಕೆ ಒಳಪಟ್ಟು" ಯೆಂಬವಾತುಗಳನ್ನೂ ಅಂಕೆಗಳ ನ್ನೂ ಬಿಟ್ಟುಬಿಡತಕ್ಕದ್ದು.

50. 645 *A* ಮತ್ತು 646ನೇ ಸೆಕ್ಷನ್‌ಗಳನ್ನು ಬಿಟ್ಟುಬಿಡತಕ್ಕದ್ದು.

51. 650 *A* ಸೆಕ್ಷನ್‌ನಲ್ಲಿ "ಪರಂತು ಅಂತಾ ಸರ್ಮ್ಮಗಳನ್ನು ಸಾದರಮಾಡುವ ಕೋರ್ಟುಗಳು ಮಂತ್ರಾಲೋಚಕ ಸಮಾ " ಜದಲ್ಲಿ ಗವರ್ನರ್ ಜನರಲ್ಲವರ ಅಪ್ಪಣೆಯಿಂದ ಸ್ಥಾಪಿಸಲ್ಪಟ್ಟಿರುತವೆ, ಅಥವಾ ಮಂತ್ರಾಲೋಚಕ ಸಮಾಜದಲ್ಲಿ ಗವರ್ನರ್ ಜನರಲ್ಲವರು " ಇಂಡ್ಯ ಗೆಜೆಟಿನಲ್ಲಿ ಇಸ್ತಿಹಾರ್‌ನಾಮೆ ಮೂಲಕ ಈಸೆಕ್ಷನಿನ ನಿಬಂಧನೆಗಳು ಅಂತಾ ಕೋರ್ಟುಗಳಿಗೆ ಲಗಾವಾಗತಕ್ಕದ್ದೆಂದು ಘಾಯಿಷ್ " ಮಾಡಿರುತ್ತಾರೆ" ಎಂಬದನ್ನೂ, 2ನೇ ಪ್ಯಾರೇಗ್ರಾಫನ್ನೂ ಬಿಟ್ಟುಬಿಡತಕ್ಕದ್ದು.

52. (ಸಿವಿಲ್ ಪ್ರೊಸೀಡ್ಯೂರ್ ಕೋಡೆಂಬ) 1877ನೇ ಇಸವಿಯ Xನೇ ನಂಬರ್ ಆಕ್ಟನ್ನು ಮೈಸೂರು ಶೀಮೆಗೆ ವ್ಯಾಪಕಪಡಿಸುವ, ಇಂಡ್ಯ ಗವರ್ನಮೆಂಟ್ ಫಾರೆನ್ ಇಲಾಖಾ ಸನ್ 1878ನೇ ಇಸವಿ ಮೇ 27ನೇ ಮರ್ಕುಂ 47ನೇ J ನಂಬರ್ ಇಸ್ತಿಹಾರ್‌ನಾಮೆಯೂ, (ಸಿವಿಲ್ ಪ್ರೊಸೀಡ್ಯೂರ್ ಕೋಡನ್ನು ತಿದ್ದುಪಡಿ ಮಾಡುವ ಬಗ್ಯೆ ಹುಟ್ಟಿದ ಆಕ್ಟೆಂಬ) ಸನ್ 1879ನೇ ಇಸವಿ XIIನೇ ಆಕ್ಟಿನ 1 ಮೊದಲು 103ರ ವರಿಗಿನ ಸೆಕ್ಷನ್‌ಗಳನ್ನು ಮೈಸೂರು ಶೀಮೆಗೆ ವ್ಯಾಪಕಪಡಿಸುವ ಸನ್ 1879ನೇ ನವಂಬರ್ 19ನೇ ಮರ್ಕುಂ 320 I.-J.ನೇ ನಂಬರ್ ಇಸ್ತಿಹಾರ್‌ನಾಮೆಯೂ, ಸನ್ 1884ನೇ ಜುಲೈ 1ನೇ ಮರ್ಕುಂ ಲಾಗಾಯತ್ ಇದರಿಂದ ರದ್ದುಮಾಡಲ್ಪಟ್ಟಿರುತವೆ.

ಬೆಂಗಳೂರು,
2ನೇ ಜೂನ್ 1884.

ಕೆ. ಶೇಷಾದ್ರಿ ಅಯ್ಯರ್,
ಮೈಸೂರು ದೀವಾನ್.

Mysore Government Press, Bangalore.—1884.

ಮೈಸೂರ ಗೆಜೆಟ್.

ನಂ. 26. ಸರ್ಕಾರದಿಂದ ಪ್ರಾಯಿಷ ಆದ್ದು. ಸೆ 1884.

ಬೆಂಗಳೂರು, ಶನಿವಾರ, ಜೂ॥ ತಾ॥ 28, ಸೆ 1884.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಸೆಟಿಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ರಿಟೆಂಡೆಂಟರು, ಕಾಂಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮಿಲಿಟೇರಿ ಸಿಕ್ರೆಟೆರಿಯವರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ರಿಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು, 1884ನೇ ಇಸವಿಯ IIನೇ ರೆಗ್ಯುಲೇಷನ್.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲಾ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 17ನೇ ಜೂ॥ 1884.

ನಂ. 56.—ಮೈಸೂರು ಸ್ಟೇಟ್ ರೈಲ್ವೆ ಇಲಾಖಾ ಯಗ್ಜಿಕ್ಯೂಟಿವ್ ಇಂಜನಿಯರ್ ಮೆ॥ ಟ. ಇರ್ವಿನ್‌ಯವರಿಗೆ ಅವರು ಉಪಯೋಗಿಸಿಕೊಂಡ ತಾರೀಖು ಲಾಗಾಯತು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 57.—ಮೈಸೂರು ಡಿಸ್ಟ್ರಿಕ್ಟ್ ಹೊಳೇನರಸೀಪುರ ತಾಲ್ಲೂಕಿನ ಇದರಡೀ ಕಂಡ ಗ್ರಾಮಗಳು ಹಾಸನದ ತಾಲ್ಲೂಕಿಗೂ ಹೊಳೆನರಸೀಪುರದ ತಾಲ್ಲೂಕಿಗೂ ಮಧ್ಯೆ ಸರಹದ್ದು ಲೈನ್ ಯೇಕವಾಗಿ ಇರುವ ಬಗ್ಗೆ ಕಡೂರು ಡಿಸ್ಟ್ರಿಕ್ಟ್ ಹಾಸನದ ತಾಲ್ಲೂಕಿಗೆ ವರ್ಗ ಮಾಡಲ್ಪಟ್ಟಿರುತ್ತೆ. ಚಿಕ್ಕನಹಳ್ಳಿ ಚಿಕ್ಕನಾಯಕನಹಳ್ಳಿ.

ತಾರೀಖು 18ನೇ ಜೂನ 1884.

ನಂ. 58.—ಇದರಡಿ ಕಂಡ ಮಾಜಿಸ್ಟ್ರೇಟರುಗಳು, ಕ್ರಿಮಿನಲ ಪ್ರೊಸಿಡ್ಯೂರ್ ಕೋಡಿನ 335ನೇ ಸೆಕ್ಷನಿನ ನಿಯಮವನ್ನನುಸರಿಸಿ, ಫಿರ್ಯಾದಿಗಳ ವ ಸಾಕ್ಷಿಗಳ ವಾಂಗ್ಮೂಲಗಳನ್ನು ಅವರ ಹೆಸರಿಗೆ ಸರಿಯಾಗಿ ಬರೆದಿರುವ ಭಾಷೆಗಳಲ್ಲಿ ಸ್ವದಸ್ತೂರು ತೆಗದುಕ್ಕೊಳ್ಳುವಂತೆ ನಿಯಮಿಸಲ್ಪಟ್ಟಿರುತ್ತಾರೆ:—

ಚಿತ್ರದುರ್ಗದ ಮೂರ್ತೀಫ ವ 2ನೇ ಕ್ಲಾಸ ಮಾಜಿಸ್ಟ್ರೇಟ ಶ್ರೀನಿವಾಸರಾಯರು. ಇಂಗ್ಲೀಷ್ ಭಾಷೆಯಲ್ಲಿ.

ಕೊರಟಗೆರೆ ಆಕ್ಟಿಂಗ ಡೆಪ್ಯುಟಿ ಅಮಲ್ದಾರ್ ವ 3ನೇ ಕ್ಲಾಸ ಮಾಜಿಸ್ಟ್ರೇಟ್ ಶ್ಯಾಮರಾಯರು. ಕನ್ನಡ ಭಾಷೆಯಲ್ಲಿ.

ತಾರೀಖು 20ನೇ ಜೂನ 1884.

ನಂ. 59.—ತುಮಕೂರು ಡಿಸ್ಟ್ರಿಕ್ಟಿ ಜನರಲ್ ಅಸಿಸ್ಟೆಂಟ ಕಮ್ಮಿಷನರ ಮೆ॥ ಬಿ. ಜಿ. ಕೃಷ್ಣಯ್ಯಂಗಾರ್ರಿಗೆ, 1884ನೇ ಇಸವಿ 18ನೇ ಮೇ 26ನೇ ನಂಬರ ವುಳ್ಳ ಈ ಆಫೀಸು ಇಸ್ತಿಹಾರ್ನಾಮೆಯಿಂದ ಕೊಡಲ್ಪಟ್ಟ ರಜಾಕ್ಕೆ ಜಾಸ್ತಿಯಾಗಿ 15 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ 60.—ಮೈಸೂರು ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ ವ ಸೆಷನ ಜಡ್ಜರಾದ ಮೆ॥ ವಿ. ಯಲ. ನರಸಿಹ್ಮಯ್ಯಂಗಾರ್ರಿಗೆ, ಅವರು ಉಪಯೋಗಿಸಿಕೊಂಡ ತಾರೀಖು ಲಾಗಾಯತು 15 ದಿವಸಗಳ ಪ್ರಿವಿಲೀಜ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 26ನೇ ಜೂನ 1884.

ನಂ. 61.—ಶಿವಮೊಗ್ಗ ಡಿಸ್ಟ್ರಿಕ್ಟು ತೀರ್ಥಹಳ್ಳಿ ತಾಲ್ಲೂಕು ಅಮಲದಾರ ತಿರುಮಲಾಚಾರ್ರಿಗೆ ಅವರು ವುಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು ವೊಂದು ತಿಂಗಳ ಪ್ರಿವಿಲೀಜ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 21ನೇ ಮಾರ್ಚಿ 1883.

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾಹ್ನಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಗೆ ಹಿಂದಿನ ದಿನ ಸೆಕ್ರೆಟೇರಿಯವರಿಗೆ ತಮ್ಮ ಕಾರ್ಡಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾಹ್ನಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಬಮೋಜೀಬ ಹುಕ್ಕುಂ,

ಆರ. ವಿಜಯೇಂದ್ರರಾವ,
ಸೆಕ್ರೆಟೇರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜೂನ್ ತಾ॥ 28, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಾಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರುವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ರೆಸಿಡೆಂಟರ ಇಲಾಖಾ.

ಇಸ್ತಿಹಾರ್ ನಾಮೆ.

ಫಿನಾನ್ಷಿಯಲ್ ಇಲಾಖಾ.

1882ನೇ ಮೈಸೂರು ರೆಯಿಲ್ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೇಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್ಫೇಸ್ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್ಫೇಸ್ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್ಟ್ರೋಲರ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 11ನೇ ಜ್ಯಾ 1884.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ, ಇದರಡಿ ವಿವರಿಸಿರುವ ತಂಸೂಕುಗಳು ಕೋಲಾರ ಸಬ್ ರಿಜಿಸ್ಟ್ರೀ ಆಫೀಸಿನಲ್ಲಿ 2 ವರುಷಗಳಿಂದ ಬೇವಾರಸಾಗಿ ನಿಂತಿರುತ್ತವೆ, ಅವುಗಳನ್ನ ಹಾಜರ್ಮಾಡಿದವರಾಗಲಿ, ಯಾ ಅವುಗಳನ್ನು ವಾಪಸುಪಡಿಯಲು ಬಾಧ್ಯತೆ ಅಥವಾ ಅಧಿಕಾರವುಳ್ಳವರಾಗಲಿ ಈ ನೋಟಿಫಿಕೇಷನ್ ತಾರೀಖು ಲಾಗಾಯುತು ಒಂದು ತಿಂಗಳವಳಗಾಗಿ ಡಿಟೋ ಸಬ್ ರಿಜಿಸ್ಟ್ರಾರಲ್ಲಿ ಹಾಜರಾಗಿ ವಾಪಸ್ ತೆಗದುಕೊಳ್ಳಬಹುದು, ಇಲ್ಲದ ಪಕ್ಷದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುವವು.

ಆಫೀಸಿನ ಹೆಸರು	ಬುಕ್ಕು ಮತ್ತು ನಂಬರು	ತಮಸೂಕನ್ನು ಬರೆದು ಕೊಟ್ಟವರ ಹೆಸರು	ಬರೆಸಿಕೊಂಡವರ ಹೆಸರು	ತಮಸೂಕಿನ ತಾರೀಖು	ರಿಜಿಸ್ಟ್ರಿಯ ತಾರೀಖು	ತಮಸೂಕಿನ ತಪಸೀಲ.
ಕೋಲಾರ ಸಬ್ ರಿಜಿಸ್ಟ್ರಿ ಆಫೀಸು	1ನೇ ಬುಕ್ಕು 1880—81 ನಂಬರ್ 193	ಕೋಲಾರ ತಾಲ್ಲೂಕು ನರಸಾಪುರದಲ್ಲಿ ಇರುವ ದೇವಾಂಗದ ಕಸ್ತೂರಪ್ಪನ ಮಗ ಮುನಿಯಪ್ಪ	ಕೋಲಾರದಲ್ಲಿರುವ ದೇವಾಂಗದ ವೀರಣ್ಣನ ಮಗ ಮುನಿಯಪ್ಪ	1881ನೇ ಇಸವಿ ಮಾರ್ಚಿ 11	12ನೇ ಮಾರ್ಚಿ 1881	ಕೋಲಾರದ ದೇವಾಂಗದ ಪೇಟೇಲಿರುವ ಮ್ಯುನಿಸಿಪಲ್ 1367ನೇ ನಂಬರ್ ಪಟ್ಟೇಲಿ ಕಂಡ 1730ನೇ ನಂಬರ್ ಮನೆಯನ್ನ 85 ರೂಪಾಯಿಗಳಿಗೆ ಭೋಗ್ಯಮಾಡಿ ಯಿರುವಂತೆ.
ಡಿಟೋ	1881—82 ನಂಬರ್ 195	ಕೋಲಾರದಲ್ಲಿ ಇರುವ ದೇವರಾಯದುರ್ಗದ ವೆಂಕಟನರಸಪ್ಪ	ಇಂಜಿನಿಯರ್ ಇಲಾಖಾ ವರ್ಕ್ಷಾಪ್ ಕ್ಯಾಷಿಯರ್ ಮೆ॥ ಡೆವಿಡ್ಸ	1882ನೇ ಇಸವಿ ಜನವರೀ ತಾರೀಖು 21	31ನೇ ಜನವರೀ 1882	ಕೋಲಾರ ತಾಲ್ಲೂಕು ಕಾರಹಳ್ಳಿ ಬಳಿಯಣ 96ನೇ ನಂಬರ್ ಜಮೀನಿನ ಫಸಲಿನಲ್ಲಿ ಅರ್ಧ ಮೇಡಿವಾರ ಕೊಡುವದಾಗಿ ಕರಾರು.
ಡಿಟೋ	2ನೇ ಬುಕ್ಕು 1881—82 ನಂಬರ್ 2	ಮೂಢಮುತ್ತನಹಳ್ಳಿನಾರಣಪ್ಪ, ನೀಲಕಂಠಪ್ಪ	ಕೋಲಾರದ ಕುರುಬ ಪ್ಯಾಟೆಲಿರುವ ಗುರಪ್ಪ	1880ನೇ ಇಸವಿ ಆಗಸ್ಟ್ ತಾರೀಖು 8	ನಿರಾಕರಿಸಿದ ತಾರೀಖು 1ನೇ ನವಂಬರ್ 1881	ಕೋಲಾರ ಕುರುಬಪೇಟೇಲಿರುವ ಜಮೀನಿನಲ್ಲಿನ 155ನೇ ನಂಬರ್ ಕೆರೆವಾರೆ ಹೊಲ ೦।೦ ಜಮೀನನ್ನ 186—4—0 ಗೆ ಖರೀದೀ ಮಾಡಿ ಯಿಧನೆಂದು.
ಡಿಟೋ	2ನೇ ಬುಕ್ಕು 1881—82 ನಂಬರ್ 1	ಕೋಲಾರ ತಾಲ್ಲೂಕು ಮರಗಲ್ಲಿನಲ್ಲಿರುವ ದ್ಯಾವೀರಿ	ಡಿಟೋ ಗ್ರಾಮದ ದೇವಿರಪ್ಪನ ಮಗ ಸೊಂಣಪ್ಪ	1880ನೇ ಇಸವಿ ಅಕ್ಟೋಬರ್ 16	ಡಿಟೋ	ವಿವಾಹ ಪರಿತ್ಯಜನೆ ಕರಾರು.
ಡಿಟೋ	ಡಿಟೋ ನಂಬರ್ 3	ಕೋಲಾರ ಕಸಬೆ ವೆಂಕಟರಮಣಯ್ಯ	ಕೋಲಾರ ಕಠಾರಿ ಪಾಳ್ಯದ ಹೆಡಿಗೆ ಮುನಕ್ಕನ ಮಗ ಮುನೆಪ್ಪ	1881ನೇ ಇಸವಿ ಏಪ್ರೆಲ್ ತಾರೀಖು 21	ಡಿಟೋ ಇಸವಿ ಡಿಸಂಬರ್ 13	ಕೋಲಾರ ತಾಲ್ಲೂಕು ಸುಲತಾನ್ ತಿಪ್ಪಸಂದ್ರದ ಬಳಿ ಇರುವ 21ನೇ ನಂಬರ್ ಹೊಲ ಬೀಜವರೀ ೦।॥ ವುಳ್ಳ ಜಮೀನಿನಲ್ಲಿ ಅರ್ಧ ಹೊಲ 80 ರೂಪಾಯಿಗೆ ಭೋಗ್ಯ ಮಾಡಿರುವದಾಗಿ.

ಸಿ. ಸುಬ್ಬಾರಾವ್,
ರಿಜಿಸ್ಟ್ರಾರ್.

ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷ್ನರವರ ಕೋರ್ಟಿನಿಂದ.

ತಾರೀಖು 6ನೇ ಜೂನ್ 1884.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ, ಡಿಸ್ಟ್ರಿಕ್ಟು ಮಜಕೂರ್ ಮದ್ದಗಿರಿ, ಪಾವಗಡ, ಶಿರಾ, ಗುಬ್ಬಿ ಈ ತಾಲ್ಲೂಕುಗಳಲ್ಲಿ 1884—85ನೇ ತಾರಣಸಂವತ್ಸರದಲ್ಲಿ ಸರ್ಕಾರದ ಜಮೀನಿನಲ್ಲಿ ಕುರಂಗದ ಕಲ್ಲುಗಳನ್ನು ಜವಾಯಿಸತಕ್ಕ ಹಕ್ಕನ್ನು ಆಯಾಯ ತಾಲ್ಲೂಕು ಅಮಿಲರ ರೂಬರೂ ತಾಲ್ಲೂಕು ಕಚ್ಚೇರಿಯಲ್ಲಿ ಇದರಡೀಲಿ ಕಂಡ ತಾರೀಖುಗಳಲ್ಲಿ ದಿವಿ 11 ಘಂಟೆ ಲಾಗಾಯತು ಹರಾಜು ಮಾಡಲಾಧೀತು.

ಷರತ್ತುಗಳು.

1. ಹರಾಜು ಕೈದಾದಕೂಡ್ಲೆ ಆಖೈರ್ ಸವಾಲ್‌ದಾರನು ಶೇಕಡಾ 25 ರೂಪಾಯಿ ಮೇರಿಗೆ ನಗದು ಠೇವಣಿಯನ್ನು ಇಡಬೇಕು, ಹರಾಜು ದೀವಾನ್ ಸಾಹೆಬರಿಂದ ಮಂಜೂರಾದ ವಡನೆ 15 ದಿವಸದಲ್ಲಿ ಪೂರಾ ಮೊಬಲಗನ್ನು ಹಾಜರ್ಮಾಡಬೇಕು, ಹಾಗೆ ಮಾಡದೆ ತಪ್ಪಿದರೆ ಪುನಹಾ ಹರಾಜು ಮಾಡಲ್ಪಟ್ಟು ನಷ್ಟ ಬಂದ ಮೊಬಲಗಿಗೆ ಮೊದಲಿನ ಚಡ ಸವಾಲ್‌ದಾರನನ್ನು ಗುರಿಮಾಡಲಾಧೀತು, ಮತ್ತು ಠೇವಣಿಯನ್ನು ಸರ್ಕಾರಕ್ಕೆ ಶೇರಿಸಿ ಕೊಳ್ಳಲಾಧೀತು.
2. ಕುರಂಗದ ಕಲ್ಲುಗಳನ್ನು ತೆಗಿಯುವ ವುದ್ದಿಶ್ಯ ಭೂಮಿ ಸಾಗುವಳಿಗೆ ನಾಲಾಯಖಾಗುವಂತೆ ಮಾಡಕೂಡದು ಗುಂಡಿಗಳನ್ನು, ಇಜಾರದಾರನೇ ಮುಚ್ಚಿಸಬೇಕು.
3. ಹಿಡುವಳಿಯಲ್ಲಿರುವ ಭೂಮಿಯ ಕುರಂಗದ ಕಲ್ಲುಗಳನ್ನು ಹಿಡುವಳಿದಾರನ ಅನುಮತಿ ಪಡದು ತೆಗದುಕೊಳ್ಳಬೇಕು.
4. ಬಂಜರು ಭೂಮಿಗಳನ್ನು ಹುಲ್ಲುಬನ್ನಿ ಮತ್ತು ಸಾಗುವಳಿಗೆ ಕೊಡಲಾಧೀತು, ಹಾಗೆ ಕೊಡೋಣದರಿಂದ ಕುರಂಗದ ಕಲ್ಲು ಇಜಾರದಾರನಿಗೇನಾದರೂ ನಷ್ಟವಾದರೆ ಅದಕ್ಕೆ ಸರ್ಕಾರದವರು ಜವಾಬ್‌ದಾರ್ರಲ್ಲಾ.
5. ಹರಾಜು ಮೊಬಲಗಿನ ಮೇಲೆ ಶೇಕಡಾ $6\frac{1}{4}$ ರೂಪಾಯಿ ಮೇರಿಗೆ ಲೋಕಲ್ ಫಂಡನ್ನು ಕೊಡಬೇಕು.

ಈ ವಿಷಯದಲ್ಲಿ ಮತ್ತೇನಾದರೂ ತಪಸೀಲ್ ತಿಳಿಯಬೇಕಾಗಿದ್ದರೆ ಆಯಾಯ ತಾಲ್ಲೂಕು ಅಮಿಲರಿಗೆ ಬರದು ತಿಳದುಕೊಳ್ಳ ಬಹುದು.

ಹರಾಜು ತಾರೀಖು.

ಮದ್ದಗಿರಿ ತಾಲ್ಲೂಕು	1884ನೇ ಜುಲೈ 15.	ಪಾವಗಡ ತಾಲ್ಲೂಕು	1884ನೇ ಜುಲೈ 21.
ಶಿರಾ ತಾಲ್ಲೂಕು	ಡಿಟೋ 26.	ಗುಬ್ಬಿ ತಾಲ್ಲೂಕು	ಡಿಟೋ 31.

ತಾರೀಖು 17ನೇ ಜೂನ್ 1884.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ, ತಿಪಟೂರು ಸಬ್ ರಿಜಿಸ್ಟ್ರೀ ಆಫೀಸಿನಲ್ಲಿ ಬೇವಾರಸಾಗಿ ಯಿರತಕ್ಕ ಈ ಕೆಳಗೆ ವಿವರಿಸೋಣಾದ ದಸ್ತೈವಜನ್ನು ಹಾಜರ್ ಮಾಡಿದವನೇ ಯಾಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವನಿಂದ ಕ್ರಮವಾದ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರನೇ ಯಾಗಲೀ ಈ ನೋಟೀಸ್ ತಾರೀಖು ಲಗಾಯಿತು ವಂದು ತಿಂಗಳ ವಳಗಾಗಿ ಡಿಟೋ ಸಬ್ ರಿಜಿಸ್ಟ್ರಾರ್ ರೂಬರೂಬ ಹಾಜರಾಗಿ ಅದನ್ನು ವಾಪಸು ತೆಗದುಕೊಳ್ಳಬೇಕು, ಇದಕ್ಕೆ ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಶಪಡಿಸಲ್‌ಪಡುವದು.

ದಸ್ತೈವಜಿ ನಂಬರ್	ದಸ್ತೈವಜಿ ತಾರೀಖು.	ರಿಜಿಸ್ಟರಿಗೆ ಹಾಜರಾದ ತಾರೀಖು.	ದಸ್ತೈವಜಿ ರಿಜಿಸ್ಟರಾದ ತಾರೀಖು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು
605 / 1882—83	1—6—82	5—6—82	5—6—82	ಲಿಂಗದಹಳ್ಳಿ ಮೇಲಣಮನೆ ಲಿಂಗಂಣ.	ಹೊನ್ನವಳ್ಳಿ ತಾಲ್ಲೂಕು ಗುರುಗದಹಳ್ಳಿ ಮಲ್ಲಶೆಟ್ಟಿ.	45 ರೂಪಾಯಿಗೆ ಲಿಂಗದಹಳ್ಳಿ ಗ್ರಾಮದಲ್ಲಿ ಇರುವ ಸರ್ವೆ 49ನೇ ನಂಬರ್ ಬಾಗಾಯತು ಜಮೀನು ಪೈಕೀ ತನ್ನ ಹಿಸ್ಸೆ ಬಾಬತು ಜಮೀನು ಕ್ರಯಕ್ಕೆ ಕೊಟ್ಟಿರುವದಾಗಿ ವಗೈರೆ.

ಮಹಮ್ಮದಲ್ಲಿ,
ಫಾರ್ ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟು.

ತಾರೀಖು 2ನೇ ಜೂನ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ತಿರುಮಕೂಡ್ಲು ನರಸೀಪುರ ಸಬ್ ರಿಜಿಸ್ಟ್ರಾರ್ ಆಫೀಸನಲ್ಲಿ ಬೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜನ್ನು ಹಾಜರ್ಮಾಡಿದವನೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರನಾಗಲಿ ಈ ನೋಟೀಸ್ ತಾರೀಖು ಲಾಗಾಯತು ಎಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸ್ ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ ||ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಶ ಪಡಿಸಲ್ಪಡುವದು.

ನಂಬರ್.	ದಸ್ತಾವೇಜು ಬರದುಕೊಟ್ಟವನ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
404 / 1881—82	ತಿರುಮಕೂಡ್ಲುನಲ್ಲಿರುವ ಕೆಂಪನ ಮುದ್ದಲಿಂಗಮ್ಮನ ಚೆವುಡಯ್ಯನ ಮಗ ಮುದ್ದಲಿಂಗಾ	ತಿರುಮಕೂಡ್ಲು ಗ್ರಾಮದಲ್ಲಿರುವ ನಾಯಕಸಾನಿ ದೊಡ್ಡ ಮಿನಾಕ್ಷಮ್ಮನ ಮಗಳಾದ ರಾಜಿ	17—10—81	17—10—1	ವಿಭಾಗಪತ್ರ ಕಿಮ್ಮತು 485 ರೂಪಾಯಿ.
405 / 1881—82	ತಿರುಮಕೂಡ್ಲು ಗ್ರಾಮದಲ್ಲಿ ಯಿರುವ ನಾಯಕಸಾನಿ ದೊಡ್ಡ ಮಿನಾಕ್ಷಮ್ಮನ ಮಗಳಾದ ರಾಜಿ	ತಿರುಮಕೂಡ್ಲು ಕೆಂಪ ಮುದ್ದಲಿಂಗಮ್ಮನ ಚವುಡಯ್ಯನ ಮಗ ಮುದ್ದಲಿಂಗಾ	ಡಿಟೋ	ಡಿಟೋ	ವಿಭಾಗ ಪತ್ರ ಕಿಮ್ಮತು 995 ರೂಪಾಯಿ.

ಅಬ್ದುಲ್‌ಖಾದರ್, ಕೆ. ಬಿ.,
ರಿಜಿಸ್ಟ್ರಾರ್.

ಅರಮನೆ ಇಲಾಖಾ ಅಸಿಸ್ಟೆಂಟ್ ಕಮಿಷನರವರ ಆಫಿಸಿನಿಂದ.

ತಾರೀಖು 25ನೇ ಜೂನ್ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಲವು ಪ್ರೈವೇಟ್ ಜನಗಳ ಸಾಲಗಳನ್ನ ನಿವರ್ತಿ ಮಾಡುವದಕ್ಕೋಸ್ಕರ ಈ ಕೆಳಗೆ ನಮೂದು ಮಾಡುವ ಜವಾಹಿರು ವಗ್ಯೆರೆ ವಡವೆಗಳನ್ನು ಸನ್ ಮಜಕೂರು ಜುಲೈ ತಾರೀಖು 15ನೇ ಮಂಗಳವಾರ ದಿವಿ 12 ಘಂಟೆ ಲಾಗಾಯಿತು ಅದರ ಮುಂದಣ ದಿನಗಳಲ್ಲೂ ಸಹಾ ಮೈಸೂರು ಅರಮನೆ ಖಜಾನೆ ಬಳಿ ಹರಾಜ್ ಮಾಡಿಸುವದರಿಂದ ಇಚ್ಛೆಯುಳ್ಳ ಜನಗಳು ಬಂದು ಚಡದರಖಾಸ್ತಿನಲ್ಲಿ ಪಡದು ತಕ್ಷಣ ಐವಜನ್ನ ಹಾಜರ್ಮಾಡತಕ್ಕದ್ದೆಂತ ನಿಬಂಧನೆ ಮಾಡಿರುತ್ತೆ.

ಜ|| ನಂ.	ಪಟ್ಟಿ ನಂ.	ನಗದ ಹೆಸರು.	ಪಟ್ಟೀಮೇರೆ ಅಂದಾಜ್ ರೂಪಾಯಿ.
1	4	ಕೆಂಪಿನ ಅಡ್ಡಬಿಲ್ಲೆ 1ಕ್ಕೆ	300
2	6	ಡಿಟೋ ಚೌರಿಕಟ್ಟು 1ಕ್ಕೆ	300
3	11	ಮಲಕಿನ ಅಡ್ಡಿಕೆ	300
4	32	ಮುಖುರಾ 1ಕ್ಕೆ	800
5	203	ವಜ್ರದ ಜಡೆಕುಚ್ಚು 3ಕ್ಕೆ	250

388

ಜಾ ನಂ.	ಪಟ್ಟಿ ನಂ.	ನಗದ ಹೆಸರು.	ಪಟ್ಟೀ ಮೇರೆ ಅಂದಾಜ್ ರೂ.
6	209	ಯೇಕಾವಳಿ ಸರ 1ಕ್ಕೆ	275
7	221	ಚಿನ್ನದ ಡಾಬು 1ಕ್ಕೆ	1,080
8	234	ಚಿನ್ನದ ವೀಳ್ಯ ಡಬ್ಬಿ	500
9	235	ಚಿನ್ನದ ವೀಳ್ಯ ಸಂಚಿಕೆ	1,850
10	237	ಚಿನ್ನದ ಕುಜಾಯಿ 1ಕ್ಕೆ	2,130
11	239	ಚಿನ್ನದ ಚೆಂಬೂ 1ಕ್ಕೆ	115
12	242	ಹವಳದ ಚೆಂಡು 1ಕ್ಕೆ	10
13	243	ಚಿನ್ನದ ಚೆಂಬು 1ಕ್ಕೆ	2,740
14	276	ಚಿನ್ನದ ಪಾದಬಟ್ಲು 6ಕ್ಕೆ	940
15	277	ಚಿನ್ನದ ಪಂಚಪಾತ್ರೆ 1ಕ್ಕೆ	185
16	278	ಚಿನ್ನದ ಕಾಲುಂಗರ ಫರದು 2ಕ್ಕೆ	520
17	280	ಚಿನ್ನದ ಲಾಹಿರಿ ಬಳೆ 8ಕ್ಕೆ	166
18	294	ಚಿನ್ನದ ತಟ್ಟೆ 1ಕ್ಕೆ	560
19	296	ಚಿನ್ನದ ಗುಂಡುಬಟ್ಲು 4ಕ್ಕೆ	1410
20	297	ಚಿನ್ನದ ಸ್ಟೂಲಿ 1ಕ್ಕೆ	385
21	298	[illegible]ನ್ನದ ಕಾಳಂಚಿ 1ಕ್ಕೆ	335
22	303	[illegible]ದ ದ್ವಿಮುಖಿ 1ಕ್ಕೆ	1,536
23	388	ವಲಂದಾಕಮಲದ ಪೆಂಡವಾಲೆ ಜೋಡಿ 1ಕ್ಕೆ	500
24	396	ವಜ್ರದ ಚೌಕಿ ವುಂಗುರ 1ಕ್ಕೆ	50
25	423	ವಜ್ರದ ಹಣಿಬಟ್ಟು 1ಕ್ಕೆ	250
26	439	ಜವಾಹಿರು ಹುವ್ವು	200
27	455	ವಜ್ರದ ಮೂಗಬಟ್ಟು 1ಕ್ಕೆ	40
28	240	ಚಿನ್ನದ ಪಾಸಾಲೆ 1ಕ್ಕೆ	2,400
29	534	ಚಿನ್ನದ ಬಂದೀತಾಳಿ 1ಕ್ಕೆ	120
30	286	ಯೇಕಾವಳಿ ಸರ 1ಕ್ಕೆ	300
31	460	ಭಾಷಿಂಗ	150
32	496	ಮುತ್ತಿನ ದಂಡೆ	20
33	497	ಚಿನ್ನದ ಮಹನ್ಮೋಮಿ ಕೋಲು 1ಕ್ಕೆ	600
34	558	ಬೆಳ್ಳಿ ಮಸ್ತುಕದ ಕಂಬಿ 4ಕ್ಕೆ	250
35	503	ಚಿನ್ನದ ಘಂಟೆ ಹಾಕಿದ ಶೀರೆ 1ಕ್ಕೆ	2,100
36	506	ಚಮಕಿ ಕೆಲಸದ ಪೀತಾಂಬರ 1ಕ್ಕೆ	300
37	480	ಚಿನ್ನದ ಗೊಂಬೆ ನಗ 24ಕ್ಕೆ	520
38	465	ಮಲಕು ವಗೈರೆ ಗೊಂಬೆ ನಗ 4ಕ್ಕೆ	100
39	0	ಜವಾಹಿರು ಪಾದಸರ ಜೋಡಿ 1ಕ್ಕೆ	3,850
			28,437
40	15	ಕೆಂಪಿನ ಮುಂಗುರುಳು ಪಟ್ಟಿ	600
41	50	ವಜ್ರದ ಕಣುಸೋಗೆ ಜೋಡಿ 1ಕ್ಕೆ	100
42	58	ವಜ್ರದ ಪಂಟಿ ಜೋಡಿ 1ಕ್ಕೆ	300
43	62	ಪಚ್ಚೆ ಬುಗಡಿ ಜೋಡಿ 1ಕ್ಕೆ	100
44	79	ಕೆಂಪಿನ ಹೊನ್ನುವ್ವು ಜೋಡಿ 1ಕ್ಕೆ	1,400
45	9	ವಜ್ರದ ಚೂಟನಗಗಳು	2,500

ಜಾ|| ನಂ.	ಪಟ್ಟಿ ನಂ.	ನಗದ ಹೆಸರು	ಪಟ್ಟೀ ಮೇರೆ ಅಂದಾಜ್ ರೂ
46	89	ವಜ್ರದ ಬೆಂಡವಾಲೆ ಜೋಡಿ 1ಕ್ಕೆ	1,000
47	91	ಪಚ್ಚೆ ವಜ್ರದ ಕರ್ನಫೂಲ್ ಜೋಡಿ 1ಕ್ಕೆ	600
48	139	ವಜ್ರದ ತೋಟ್ಟಬಳೆ ಜೋಡಿ 1ಕ್ಕೆ ಕೆಂಪು ಸಹಾ	11,700
49	144	ವಜ್ರ ಮುತ್ತಿನ ಕಂಕಣಿ ಜೋಡಿ 1ಕ್ಕೆ	1,500
50	353	ಚಿನ್ನದ ಕಾಲಕಪ್ಪ ಗೆಜ್ಜೆ ಜೋಡಿ 1ಕ್ಕೆ	154
51	445	ವಜ್ರದ ಅಕ್ಕಿಪಿಲ್ಲಿ ಜೋಡಿ 1ಕ್ಕೆ	550
52	476	ವಂಟಿ ಕೆಂಪಿನ ವುಂಗುರ 1ಕ್ಕೆ	20
53	486	ಡಿಟೋ ವುಂಗ್ರ 1ಕ್ಕೆ	10
54	511	ಕೆಂಪಿನ ಅಡ್ಡಿಕೆ 1ಕ್ಕೆ	560
55	357	ಚಿನ್ನದ ಕಾಲಂದಿಗೆ ಜೋಡಿ 1ಕ್ಕೆ	22
56	530	ತಸಬೀರು ವುಂಗುರ 1ಕ್ಕೆ	15
57	554	ಗೊಂಬೆಚಂದಮಾವು	75
58	555	ಕೆಂಪುಪಚ್ಚೆ ಅರ್ಧ ಚಂದ್ರ	100
59	527	ಪಚ್ಚೆ ವುಂಗುರ 1ಕ್ಕೆ	10
60	117	ಕೆಂಪಿನ ಮಕರಕಂಠಿ 1ಕ್ಕೆ	4,000
			24,316
61	57	ಕೆಂಪಿನ ಪನ್ನೆ ಜೋಡಿ 1ಕ್ಕೆ	250
62	92	ಕೆಂಪಿನ ಬೆಂಡವಾಲೆ ಜೋಡಿ 1ಕ್ಕೆ	470
63	148	ವಜ್ರದ ಕಂಕಣಿ ಜೋಡಿ 1ಕ್ಕೆ	2,500
64	27	ಮುತ್ತಿನ ಕುಚ್ಚು 1ಕ್ಕೆ	750
65	134	ವಜ್ರದ ಬಳೆ 2ಕ್ಕೆ	1,000
66	433	ವಜ್ರದ ಹಾತ ಪಾಂಚಿ ಜೋಡಿ 1ಕ್ಕೆ	450
67	434	ಡಿಟೋ ಬಾಜೂಬಂದು 1ಕ್ಕೆ	800
68	179	ಚುಂಚಪಟ್ಟಿ 1ಕ್ಕೆ	600
69	35	ಮುತ್ತಿನ ಮೂಗುತಿ 2ಕ್ಕೆ	500
			7,320
		ಗ್ರಾಂಡ್ ಟೋಟಲ್	60,073

ಇ. ಸಿ. ಚಿದಂಬರಂ ಐಯ್ಯರ್,
ಪ್ಯಾಲೆಸ್ ಅ|| ಕಮ್ಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ತಾರೀಖು 31ನೇ ಮೇ 1884.

ಷಿಕಾರಿಪುರದಲ್ಲಿ ಹೊಸ ತಾಲ್ಲೂಕು ಕಚ್ಚೇರಿ ಕಟ್ಟವನ್ನು ಕಟ್ಟುವದಕ್ಕೆ ಮೈಸೂರು ಗವರ್ನಮೆಂಟಿನಿಂದ ಮಂಜೂರಾಗಿರುತ್ತೆಯಾಗಿ ಸದರೀ ಕೆಲಸವನ್ನು ನೆರವೇರಿಸುವದಕ್ಕೆ ಇದರಿಂದ ದರಖಾಸ್ತು ಅಪೇಕ್ಷಿಸಲ್ಪಡುತ್ತೆ.

1. ತಾಲ್ಲೂಕು ಕಚ್ಚೇರಿಗೆ ಗೊತ್ತಾದ ನಮೂನೇ ಪ್ರಕಾರ ಕಟ್ಟವು ಕಟ್ಟಲ್ಪಡತಕ್ಕದ್ದು- ಮತ್ತು ಷುಮಾರ್ 15,000 ರೂಪಾಯಿಗಳು ಲಾಗವಡು ಹಿಡಿಯತಕ್ಕದ್ದು.

2. ದರಖಾಸ್ತಿನಲ್ಲಿ ಕೆಲಸದ ಪ್ರತಿ ಷರತ್ತಿಗೂ ಖಾಯಿಷ್ ಮಾಡಿದ್ದರೆ, ಪೂರಾ ಕೆಲಸವು ಪೂರೈಸುವ ಕಾಲ, ಯಾವ ತಪ್ಪಲಿ ಉಂಟಾದರೆ ಆ ಬಗ್ಗೆ ದಂಡ ಇಂತಾದ್ದನ್ನು ನಮೂದಿಸತಕ್ಕದ್ದು.

3. ದರಖಾಸ್ತು ಬಂದು ಮಾಡಲ್ಪಟ್ಟು “ಶಿಕಾರಿಪುರದಲ್ಲಿ ಹೊಸತಾಲ್ಲೂಕು ಕಚ್ಚೇರಿಯನ್ನು ಕಟ್ಟುವ ಬಗ್ಗೆ ದರಖಾಸ್ತು” ಯೆಂದು ವಿಲಾಸ ಬರಯಲ್ಪಟ್ಟು, ಶಿವಮೊಗ್ಗೇಯಲ್ಲಿ ಶಿವಮೊಗ್ಗಾ ಡಿವಿಜನ ಎಗ್ಜಿಕ್ಯೂಟಿವ ಇಂಜನಿಯರಿಗೆ ಕಳುಹಿಸಲ್ಪಡತಕ್ಕದ್ದು.

ಸನ 1884ನೇ ಜೂನ 30ನೇ ಮರ್ಕ್ಕುಮಿಗೆ ತರುವಾಯ ಯಾವ ದರಖಾಸ್ತೂ ತೆಗದುಕೊಳ್ಳಲ್ಪಡಲಾರದು.

4. ಇನ್ನೂ ಹೆಚ್ಚಿಗೇ ಸಂಗತಿಯೂ, ಸಬ ಹೆಡಗಳ ಷೆಡ್ಯೂಲ ಪಟ್ಟಿಯೂ, ಇದರಡಿ ರುಜು ಮಾಡಿರುವವರಿಗೆ ದರಖಾಸ್ತು ಮಾಡಿ ಪಡಕೊಳ್ಳಬಹುದು.

5. ಇದರಡಿ ರುಜು ಮಾಡಿರುವವರು ಕಮ್ಮಿ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಹಾಗೆ ಮಾಡಲಿಕ್ಕೆ ಯಾವ ಸಬಬನ್ನೂ ನಮೂದಿಸದೆ ಮಂಜೂರ್ಮಾಡತಕ್ಕ ಅಧಿಕಾರವನ್ನು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

ಪಿ. ಎಸ. ನಾಗವಕರ, ಎಲ. ಸಿ. ಇ.
ಎಗ್ಜಿಕ್ಯೂಟಿವ ಇಂಜನಿಯರ.

ಶಿವಮೊಗ್ಗಾ ಸಬ ಡಿವಿಜನ ಮುನಸಿಫ ಮಾಜಿಸ್ಟ್ರೇಟ ಕೋರ್ಟನಿಂದ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ, ಈ ಕೋರ್ಟು 1883ನೇ ಇಸವಿ ಅರಿಜನಲ ಕೇಸ ನಂಬರ 70ನೇ ಮೊಕದ್ದಮಾದಲ್ಲಿ ಹಾಜರಾದ ಪೊಲೀಸಿನವರು ಗುಮಾನಿಮೇಲೆ ಹಿಡದು ಹಾಜರ ಪಡಿಸಿದ ನಂಬರ 4735ನೇ ಸನ 1878ನೇ ಇಸವಿ ಬೆಂಗಳೂರಿ ನೋಟ 10 ರೂಪಾಯಿನ ಬಾಬತು ಎಡಭಾಗದ ಅರ್ಧ ತುಕಡೆ ಬೇದಾವೆ ಸೊತ್ತಾಗಿ ಸೇರಿಸಿಕೊಂಡಿಧೆ, ಯಿದಕ್ಕೆ ಯಾರಾದರು ವಾರಸದಾರು ಯಿದ್ದರೆ ಈ ತಾರೀಖು ಲಾಗಾಯತು 6 ತಿಂಗಳ ವಳಗಾಗಿ ಕೋರ್ಟು ರೂಬರೂ ಹಾಜರಾಗಿ ಬಾಧ್ಯತೆ ವ್ಯವಹರಿಸಿಕೊಳ್ಳಬೇಕು ಆ ಮೇರೆ ಯಾರೂ ಬಾರದಿದ್ದರೆ ವಾಯಿದಾನಂತರ ಸರಕಾರಕ್ಕೆ ಸೇರಿಸಿಕೊಳ್ಳಲಾಧೀತು.

ತಾರೀಖು 7ನೇ ಮಾಹೆ ಜೂನ 1884ನೇ ಇಸವಿ.

ವಿ. ಡಿ. ಪೊನ್ನರಂಗಂ ಮೊದಲಿಯಾರ,
ಸಕೆಂಡ ಕ್ಲಾಸ ಮಾಜಿಸ್ಟ್ರೇಟ.

ಕಡೂರು ಡಿಸ್ಟ್ರಿಕ್ಟು.

ತಾರೀಖು 13ನೇ ಜೂನ 1884

ಮಂಜಿರಾಬಾದ ತಾಲ್ಲೂಕು ಆಕ್ಟಿಂಗ ಅಮಲ್ದಾರ ವೆಂಕಟರಮಣಯ್ಯನವರಿಗೆ, 1872ನೇ ಇಸವಿ Xನೇ ನಂಬರ ಆಕ್ಟಿಂಬ ಕ್ರಿಮಿನಲ ಪ್ರೊಸಿಡ್ಯೂರ ಕೋಡಿನ 23ನೇ ಬಿ. ಸೆಕ್ಷನ ಅನುಸರಿಸಿ ಇದರಡಿ ಕಂಡ ಅಧಿಕಾರಗಳು ಕೊಡಲ್ಪಟ್ಟಿರುತ್ತೆ,—

1. ಲಾಷ ವಿಚಾರಣೆ ಬಗ್ಗೆ ಅಧಿಕಾರ, (ಸೆಕ್ಷನ 135)
2. ಅವರಿಗೆ ದರ್ಯಾಫ್ತು ಮಾಡುವದಕ್ಕೆ ಅಧಿಕಾರ ವಿರುವ ಮೊಕದ್ದಮೆಗಳಲ್ಲಿ ತಕರೇರುಗಳ ಫಿರ್ಯಾದುಗಳನ್ನ ದಾಖಲ್ಮಾಡಿಕೊಳ್ಳುವದಕ್ಕೆ ಅಧಿಕಾರ (ಸೆಕ್ಷನ 141)
3. ನಿರೋಧ ವಗೈರೆಗಳನ್ನು ಅಡ್ಡಿಪಡಿಸುವಂತೆ ಹುಕ್ಕುಂ ಮಾಡುವದಕ್ಕೆ ಅಧಿಕಾರ (ಸೆಕ್ಷನ 518)
4. ಹೇಸಿಗೆಗಳು ಬಾರ ಬಾರ ನಡಿಯುವದನ್ನು ಅಡ್ಡಿ ಪಡಿಸುವಂತೆ ಹುಕ್ಕುಂ ಕೊಡುವದಕ್ಕೆ ಅಧಿಕಾರ (ಸೆಕ್ಷನ 519.)

ಜಿ. ಎಫ. ಮೈಕಲಜಾನ,
ಡಿಸ್ಟ್ರಿಕ್ಟು ಮಾಜಿಸ್ಟ್ರೇಟ.

ಸನ 1884ನೇ ಇಸವಿ ಮೇ ತಿಂಗಳ ಕಾಲಸ್ಥಿತಿ ರಿಪೋರ್ಟು.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಮಳೆ—ಈ ತಿಂಗಳೊಳಗೆ ಇದರಡಿ ಕಂಡಂತೆ ಮಳೆ ಬಿದ್ದಿರುತ್ತೆ:—

ತಾಲ್ಲೂಕು.	ಅಂ.	ಸೆಂಟ್ಸ.	ತಾಲ್ಲೂಕು	ಅಂ.	ಸೆಂಟ್ಸ
ಶಿವಮೊಗ್ಗಾ	0	24	ಸೊರಬ ..	0	0
ಚನ್ನಗಿರಿ ..	0	59	ಸಾಗರ ..	0	0
ಹೊನ್ನಾಳಿ ..	1	10	ನಗರ ..	1	60
ಶಿಕಾರಿಪುರ ..	1	45	ತೀರ್ಥಹಳ್ಳಿ ..	1	6
			ದಾವಣಗೆರೆ ..	1	45

391

ಬೀಜ ಪೇರಾವಾದ್ದು.—ಈ ತಿಂಗಳೊಳಗೆ ನೆಲ್ಲು, ಉದ್ದು, ಗನ್ನಾ, ಯೆಳ್ಳು ವಗ್ಯೆರೆ ಬಿತ್ತಲ್ಪಟ್ಟವು.

ಬೆಳೆಗಳ ಸ್ಥಿತಿ.—ಗನ್ನಾ ಮತ್ತು ಇತರ ಬೆಳೆಗಳು ಒಣಗುತ್ತಿವೆ. ಉಳುವ ಮತ್ತು ಬಿತ್ತುವ ಕೆಲಸಗಳು ಮಳೆ ಇಲ್ಲದೆ ಹರಕತ್ತಾಗಿರುತ್ತೆ.

ಫಸಲ್ ಕಟಾವಾದ್ದು.—ನಗರ ತಾಲ್ಲೂಕಿನಲ್ಲಿ ಕಾರ್‌ನೆಲ್ಲು ಕಟಾವಾಯಿತು.

ಜನಾರೋಗ್ಯ.—ಜನಾರೋಗ್ಯವು ಚನ್ನಾಗಿಲ್ಲ. ಡಿಸ್ಟ್ರಿಕ್ಟ್‌ಮುಳೆ ಜ್ವರ ಉಪದ್ರವವು ಇನ್ನು ವ್ಯಾಪಿಸಿದೆ. ದಾವಣಗೆರೆಯಲ್ಲಿ ಮೂರು ಮಂದಿಗೆ ಖೈ ಜಲಾಬ್ ತಗಲಿದ್ದಾಗಿ ರಿಪೋರ್ಟಾಗಿರುತ್ತೆ.

ಧಾರಣೆಗಳು.—ದಾರಣೆಗಳು ಸ್ವಲ್ಪ ಚೆಡಾವಾಗಿರುತ್ತೆ.

ಎಸ್. ವೆಂಕಟವರದಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಪ್ರಕಟಣೆ.

ಮೈದಾನ್ ತಾಲ್ಲೂಕುಗಳಲ್ಲಿ, ಮೇಲ್ಪಟ್ಟ ಅಥವಾ ತಾಲ್ಲೂಕು ಪಾಠಶಾಲೆಗಳ ಬಗ್ಯೆ ಕೊಡಗು ವಿದ್ಯಾಭ್ಯಾಸದ ಇಲಾಖೆಗಾಗಿ ಇಬ್ಬರು ಹೆಡ್ ಮಾಸ್ಟರುಗಳು ಬೇಕಾಗಿರುವದರಿಂದ ಉಮೇದವಾರರು ಕನ್ನಡ ಪದ್ಯವನ್ನೂ ವ್ಯಾಕರಣವನ್ನೂ ಚನ್ನಾಗಿ ತಿಳಿದಿರತಕ್ಕದ್ದು, ಅವರುಗಳು ಇಂಗ್ಲೀಷನ್ನು ಶುದ್ಧಾಂಗ ತಿಳಿದಿರಬೇಕಾದ ಆವಶ್ಯಕವಿಲ್ಲವು, ಪರಂತು ಗಣಿತಶಾಸ್ತ್ರವೂ, ಭೂಗೋಳ ತಂತ್ರವೂ, ಇಂಗ್ಲಿಷ್ದ್ವಾರಾ ಕಲಿಸಲ್ಪಟ್ಟಿರುವ ಉಮೇದವಾರು ಚುನಾಯಿಸಲ್ಪಡುವರು.

ಹಾಲೀ ತಲಬ್ 20 ರೂಪಾಯಿಗಳು ಕೊಡಲ್ಪಡುವದು, ವಯಸ್ಸು, ಜಾತಿ ಸ್ವದೇಶ, ಲಾಯಖೀಗಳು, ಟೀಚರಾಗಿದ್ದ ಪೂರ್ವದ ಅನುಭವ, ಮತ್ತು ಹಾಲೀ ಯಿರುವ ಕೆಲಸ ಈ ಮುಂತಾದ ತಪಸೀಲ್‌ಗಳ ಸಮೇತ ಇದರಡಿ ರುಜು ಮಾಡಿರುವವರ ಆಫೀಸಿಗೆ ದರಖಾಸ್ತು ಮಾಡತಕ್ಕದ್ದು.

ಇ. ಮಾರ್ಸ್‌ಡೆನ್,
ಕೊಡಗು ಸ್ಕೂಲ್‌ಗಳ ಇನ್‌ಸ್ಪೆಕ್ಟರ್.

ಗವರ್ನ್‌ಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನ್‌ಮೆಂಟ್ ಆಫೀಸರುಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಸೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡು ಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 4—8—0; ಎಂಟು ಔನ್ಸುವುಳ್ಳ ಡಬ್ಬಿಗೆ ರೂ. 8—8—0; ಒಂದು ಪೌಂಡ್ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಇದರಡೀ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸುವುಳ್ಳ ಡಬ್ಬಿ ಒಂದಕ್ಕೆ ರೂ. 5—8—0, ಎಂಟು ಔನ್ಸುವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌಂಡ್ ವುಳ್ಳ ಡಬ್ಬಿಗೆ 20 ರೂಪಾಯಿ. ಈ ಔಷಧವು, ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯನ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬೀಗೆ ಎಂಟು ಆಣೆ ಟಪ್ಪಾಲ್ ಹಾಸಲೂ, ಒಂದು ಪೌಂಡ್ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

392

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಯಿಷ್ ಆದದ್ದು.

ಬೆಂಗಳೂರು, ಶನಿವಾರ, ಜ್ಯೂ ತಾ 28, ಸ್ನ 1884.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2ನೇ ಭಾಗ.

ಮೈಸೂರು ಶ್ರೀಮನ್ ಮಹಾರಾಜರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯೂಲೇಷನ್‌ಗಳು.

ಸನ್ 1884ನೇ ಇಸಿವಿಯ IIನೇ ರೆಗ್ಯೂಲೇಷನ್.

ಸನ್ 1879ನೇ ಇಸಿವಿಯ XIIನೇ ಆಕ್ಟಿನಿಂದ ತಿದ್ದುಪಡಿಯಾದ 1877ನೇ ಇಸಿವಿಯ Xನೇ ಆಕ್ಟನ್ನು ರದ್ದು ಮಾಡಿದ 1882ನೇ ಇಸಿವಿಯ XIVನೇ ಆಕ್ಟೆಂಬ ಸಿವಿಲ್ ಪ್ರೊಸೀಜ್ಯೂರ್ ಕೋಡನ್ನು ಮೈಸೂರು ಶೀಮೆಯಲ್ಲಿ ಜಾರೀಗೆ ತರುವ ಬಗ್ಗೆ ಹುಟ್ಟಿದ ರೆಗ್ಯೂಲೇಷನ್.

ಇಂಡ್ಯ ಗವರ್ನರ್ ಜನರಲ್ಲವರ ಮಂತ್ರಾಲೋಚಕ ಸಮಾಜದ ಸನ್ 1882ನೇ ಇಸವಿಯ XIVನೇ ಆಕ್ಟನ್ನು ಮೈಸೂರು ರಾಜ್ಯಕ್ಕೆ ಲಗಾವ್ ಮಾಡುವದು ಯುಕ್ತವಾಗಿರುವದರಿಂದ ಮೈಸೂರು ಶೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರು ಅಪ್ಪಣೆಕೊಡುವದೇನಂದರೆ, ಮೇಲೆ ಕಂಡ ಸನ್ 1882ನೇ ಇಸವಿಯ XIVನೇ ಆಕ್ಟು, ಮೈಸೂರು ರಾಜ್ಯದಲ್ಲಿ ಈ ಕೆಳಗೆ ಕಂಡ ತಿದ್ದುಪಾಟುಗಳು, ಮತ್ತು ತಳ್ಳುಪಡಿಗಳು ದೇಖೀಲ್ ಕಾನೂನ್ ಬಲವುಳ್ಳದ್ದಾಗಿರತಕ್ಕದ್ದು, ಯಾವವಂದರೆ—

1. "ಬ್ರಿಟಿಷ್ ಇಂಡ್ಯ" ಯೆಂಬದಕ್ಕೆ ಬದಲಾಗಿ, 229ನೇ ಸೆಕ್ಷನ್‌ನಲ್ಲಿ ವಿನಾ, "ಮೈಸೂರು ಶೀಮೆ" ಯೆಂದು ಓದತಕ್ಕದ್ದು.
2. "ಸ್ಥಳಿಕ ಗವರ್ನಮೆಂಟ್" ಎಂಬದಕ್ಕೆ ಬದಲಾಗಿ "ಮೈಸೂರು ಗವರ್ನಮೆಂಟ್" ಯೆಂದು ಓದತಕ್ಕದ್ದು.
2. 1882—83 ಮತ್ತು 83—84ನೇ ಇಸವಿಗಳಲ್ಲಿ ಪ್ರತಿ ಗ್ರಾಮದೊಳಗಣ ಸರಾಸರಿ ಹುಲ್ಲುಬನ್ನೀ ಹುಟ್ಟುವಳಿಯನ್ನು ಕರಾರ್ವಾಕಾ ಲೆಕ್ಕಮಾಡಿ ತನ್ಮೂಲಕ ಗೊತ್ತಾದ ಮೊಬಲಗ್ಯೆ ಆ ಗ್ರಾಮದೊಳು ಹಿಡುವಳಿಯಲ್ಲಿಲ್ಲದಿರುವ ಸರ್ಕಾರ್ ಜಮೀನುಗಳಲ್ಲಿ ಮೇಯಿಸುವ ಹಕ್ಕನ್ನು ಸಾಲ್‌ಮಜಕೂರಿಗೆ ಸದರೀ ಗ್ರಾಮ ನಿವಾಸಿಗಳಿಗೆ ಕೊಡತಕ್ಕದ್ದು.

3. ಈ ಷರತುಗಳನ್ನು ಅನುಸರಿಸಿ ಗ್ರಾಮಸ್ಥರು ಮೇಯಿಸುವ ಹಕ್ಕನ್ನು ಅಂಗೀಕರಿಸಿದರೆ ಗ್ರಾಮಸ್ಥರೆಲ್ಲರಿಂದ ಕೊಡಲ್ಪಡತಕ್ಕ ಮೊಬಲಗನ್ನು ವಿಶಿಷ್ಟ ಜಮೀನುದಾರರುಗಳೂ ಗ್ರಾಮದ ಇತರ ನಿವಾಸಿಗಳು ಸಹ ತಮ್ಮೊಳು ತಾವೇ ಹಂಚಿಕೊಂಡು ಅಂತಾ ವಿಭಾಗ ಪ್ರಕಾರ ಪ್ರತಿ ಮನುಷ್ಯನೂ ಕೊಡಬೇಕಾದ ಮೊಬಲಗನ್ನು ತೋರಿಸುವ ಒಂದು ಪಟ್ಟಿಯನ್ನು ತಯಾರ್ಮಾಡಿ, ಅದಕ್ಕೆ ಸಂಬಂಧಪಟ್ಟ ಗ್ರಾಮಸ್ಥರೆಲ್ಲರೂ ಸದರೀ ಪಟ್ಟಿಗೆ ರುಜು ಮಾಡಬೇಕಲ್ಲದೆ, ಪಟೇಲ್ ಶಾನುಭೋಗರು ಸಹ ರುಜು ಮಾಡತಕ್ಕದ್ದು. ಗ್ರಾಮದಿಂದ ಕೊಡಲ್ಪಡಬೇಕಾದ ವೊಟ್ಟು ಮೊಬಲಗನ್ನು ಗ್ರಾಮದ ಪ್ರತಿ ಮನುಷ್ಯನೂ ಹಂಚಿಕೊಳ್ಳಬೇಕಾದ್ದು ಅವರು ಪರಸ್ಪರ ಮಾಡಿಕೊಂಡ ಸ್ವಂತಕರಾರಾಗಿರುತ್ತೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

4. ಅಮಲ್‌ದಾರರು ಅಂತಾ ಪಟ್ಟಿಗಳನ್ನು ತನಿಖೀ ಮಾಡಿ ಅದರಲ್ಲಿ ನಮೂದಿಸಿರುವ ಯೇರ್ಪಾಡುಗಳು ತೃಪ್ತಿಕರವಾಗಿದೆಯೇ ಯೆಂದು ಗ್ರಾಮಸ್ಥರನ್ನು ಕೇಳತಕ್ಕದ್ದು. ಯಾವನ ಹೆಸರಿಗೆ ಮೊಬಲಗು ದಾಖಲ್ಮಾಡಲ್ಪಟ್ಟಿರುತಿದೆಯೋ ಅಂತಾ ಪ್ರತಿ ಮನುಷ್ಯನನ್ನು ಬದಸ್ತೂರ್ ಕೇಳತಕ್ಕದ್ದು. ಅಂತಾ ವಿಚಾರಣೆಯಲ್ಲಿ, ಸದರೀ ಯೇರ್ಪಾಡು ಅದಕ್ಕೆ ಸಂಬಂಧಪಟ್ಟವರೆಲ್ಲರಿಗೂ ಸಮ್ಮತವಾದದ್ದೆಂದು ಅಮಲ್‌ದಾರರಿಗೆ ತೃಪ್ತಿಕರವಾಗಿ ಕಂಡು ಬಂದರೆ ಸದರೀ ಅಂಶವನ್ನು ಪ್ರಸಕ್ತ ಪಟ್ಟಿಯಲ್ಲಿ ಸ್ವಹಸ್ತೂರ್ ಬರೆದು ದಾಖಲೆಯ ಬಗ್ಯೆ ಶಾನಭೋಗನ ವಶದಲ್ಲಿಡತಕ್ಕದ್ದು. ತರುವಾಯ ಯಾವ ಮನುಷ್ಯನ ಹೆಸರಿಗಾಗಲಿ ಸದರೀ ಪಟ್ಟಿಗಳಲ್ಲಿ ದಾಖಲ್ಮಾಡಲ್ಪಟ್ಟಿರುವ ಮೊಬಲಗನ್ನು ಅವನಿಂದ ವಸೂಲ್ಮಾಡತಕ್ಕ ಬಾಕೀಯೆಂದು ಅವನ ಖಾತೆಯಲ್ಲಿ ದಾಖಲ್ಮಾಡಿ ಅದು ಜಮೀನ್ ಕಂದಾಯದಂತೆ ವಸೂಲ್ಮಾಡಲ್ಪಡತಕ್ಕದ್ದು.

5. ಯಾವ ಗ್ರಾಮಸ್ಥರೇ ಆಗಲಿ ಸದರೀ ಗ್ರಾಮದೊಳು ಹಿಡುವಳಿಯಲ್ಲಿರದೇ ಯಿರುವ ಸರ್ಕಾರ್ ಜಮೀನಿನಲ್ಲಿ ಮೇಯಿಸುವ ಹಕ್ಕನ್ನು ಯೆರಡನೇ ಕಲಮಿನ ಪ್ರಕಾರ ಗೊತ್ತು ಮಾಡಲ್ಪಟ್ಟ ಮೊಬಲಗಿಗೆ ಅಂಗೀಕರಿಸುವದಕ್ಕೆ ಅಸಮಾಧಾನ ಪಟ್ಟಾಗ್ಯೂ, ಅಥವಾ ಈ ಮೊಬಲಗಿನ ವಿಭಾಗ ವಿಷಯದಲ್ಲಿ ಅವರು ಪರಸ್ಪರ ಸಮ್ಮತಿಸದೇ ಹೋದರೂ, ಅಥವಾ ಅಮಲ್‌ದಾರರ ವಿಚಾರಣೆಯಲ್ಲಿ ಅಂತಾ ಮೊಬಲಗಿನ ವಿಷಯವನ್ನು ಕುರಿತಾಗಲಿ, ಅದರ ವಿಭಾಗವನ್ನು ಕುರಿತಾಗಲಿ, ತಕರಾರ್ ವುಂಟಾದರೂ ಆಗ ಗ್ರಾಮಕ್ಕೆ ಸಂಬಂಧಪಟ್ಟ ಮೇಯಿಸುವ ಹಕ್ಕುದಾರಿಂಗು ಆಸ್ಥಳದಲ್ಲಿ ಮಾಮೂಲ್‌ನಂತೆಯೇ ಹರಾಜ್ ಮಾಡಲ್ಪಡತಕ್ಕದ್ದು.

6. ಮೇಲೆಕಂಡ ಕರಾರ್‌ಗಳ ಪ್ರಕಾರ ಮೇಯಿಸುವ ಹಕ್ಕು ಗ್ರಾಮಸ್ಥರಿಗೆ ಕೊಡಲ್ಪಟ್ಟರೆ ಅಂತಾ ಗ್ರಾಮಗಳೊಳಗಣ ಹಿಡುವಳೀಯಲ್ಲಿ ಯಿರದ ಸರ್ಕಾರ್ ಜಮೀನುಗಳಲ್ಲಿ ಸದರೀ ಗ್ರಾಮದ ದನಗಳು ಮೇಯುವದಕ್ಕೆ ಯಾವ ನಿರ್ಬಂಧಗಳೂ ವುಂಟುಮಾಡಲ್ಪಡಕೂಡದು.

7. ಪ್ರತಿ ಗ್ರಾಮದ ಹುಲ್ಲುಗಾವಲನ್ನು ಮೇಲೆ ವಿಧಿಸಲ್ಪಟ್ಟಂತೆ ವಿಲೇಮಾಡುವದಕ್ಕೆ ಬದಲಾಗಿ ಅಮಲ್‌ದಾರರು ತಮಗೆ ಆವಶ್ಯಕ ತೋರಿ ಬಂದಾಗ ಗ್ರಾಮಗಳನ್ನು ಅನುಕೂಲವಾದ ಗುಂಪುಗಳಾಗಿ ಮಾಡಿ ಅಂತಾ ಪ್ರತಿ ಗುಂಪಿನ ಮೇಯಿಸುವ ಹಕ್ಕನ್ನು ಪ್ರತ್ಯೇಕವಾಗಿ ವಿಲೇ ಮಾಡಬಹುದು. ಹಾಗೆ ಗುಂಪು ಮಾಡುವಣದರಲ್ಲಿ, ಹಾಲೀ ಜಾರೀಯಲ್ಲಿರುವ ಮೇಯಿಸುವ ಯೇರ್ಪಾಡುಗಳಿಗೆ ಪೂರಾನಿಗೇ ಕೊಡಬೇಕಲ್ಲದೆ ಸಾಧ್ಯವಾದ ಮಟ್ಟಿಗೆ ಅದಕ್ಕೆ ಸಂಬಂಧಪಟ್ಟ ಗ್ರಾಮಸ್ಥರ ಸಮ್ಮತಿಯನ್ನು ಹೊಂದಿ ಯಿರತಕ್ಕದ್ದು.

ತಾರೀಖು 17ನೇ ಜುಲೈ 1884.

ನಂ. 80.—ಇದರಿಂದ ಪ್ರಕಟಪಡಿಸುವದೇನಂದರೆ, ಬೆಂಗಳೂರು ಡಿಸ್ಟ್ರಿಕ್ಟ್ ಕನಕಪುರ ತಾಲ್ಲೂಕಿನಲ್ಲಿ ಅಂದರೆ (ಬಸವನಪಟ್ಟ ಮತ್ತು ಚೆಲ್ಲಂದಾಡಿ ದೇಖೀಲ್) ಕಾವೇರಿ ಜಂಗ್ಲೀಗಳಲ್ಲಿ ಸ್ಲೀಪರಗಳಿಗೋಸ್ಕರ ಕಡಿಯಲ್ಪಟ್ಟ ಸುಮಾರು 20615 ಘನ ಅಡಿಗಳುಳ್ಳ ಕಾ

ಡು ಜಾತಿ ನಾಟಾಗಳು ಮತ್ತು ಮರಗಳು, ಕಾನಕಾನಹಳ್ಳಿ ತಾಲ್ಲೂಕು ಬೂವಳ್ಳಿ ಗ್ರಾಮದಲ್ಲಿ 1884ನೇ ಇಸವಿ ಸೆಪ್ಟಂಬರ್ 10ನೇ ಮರ್ಕ್ಕು ಮಿನೊಳು ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕನ್ಸರ್ವೇಟರಿಂದ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತವೆ.

2. ಹರಾಜ್ ಷರತುಗಳು—ಮೈಸೂರು ಗೆಜೆಟ 1873ನೇ ಇಸವಿ ಜೂನ 12ನೇ ಮರ್ಕ್ಕಂ 20ನೇ ನಂಬರ ಇಸ್ತಿಹಾರ ನಾಮೆಯಲ್ಲಿ ಫಾಯಿಷ್ ಮಾಡಲ್ಪಟ್ಟ ಪ್ರಕಾರ ಇದ್ದು ಹರಾಜ್ ಕಾಲದಲ್ಲಿ ಓದಲ್ಪಡುವದು.

3. ಹರಾಜ್ ವಿಷಯಕವಾದ ಇತರ ಜಾಸ್ತೀ ತಪಸೀಲಗಳನ್ನು ಡಿಸ್ಟ್ರಿಕ್ಟಿನ ಫಾರೆಸ್ಟು ಇಲಾಖೇಯಿಂದ ತಿಳಿದುಕೊಳ್ಳಬಹುದು.

ತಾರೀಖು 21ನೇ ಜುಲೈ 1884.

ನಂ. 84.—ಹಾಲಿ ಚಿತ್ರದುರ್ಗದ ಮುನ್ಸಿಫರಾದ, ಚೀಫ್ ಕೋರ್ಟು ಟ್ರಾನ್ಸಲೇಟರ್ ಬಿ. ಶ್ರೀನಿವಾಸರಾಯರು, ಮೃತಪಟ್ಟ ಖಾದರ ಮೊಹರ್ರಿರಿಗೆ ಬದಲಾಗಿ 3ನೇ ಕ್ಲಾಸ ಮುನ್ಸಿಫರಾಗಿ ಮೊಕರರ ಮಾಡಲ್ಪಟ್ಟಿರುತ್ತಾರೆ. ಸದರೀ ಶ್ರೀನಿವಾಸರಾಯರು ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಚಿತ್ರದುರ್ಗದ ಮುನ್ಸಿಫ ಕೆಲಸವನ್ನು ನೋಡುತ್ತಾ ಯಿರತಕ್ಕದ್ದು.

ಚೀಫ್ ಕೋರ್ಟಿನಲ್ಲಿ ಜುಡಿಷಿಯಲ್ ರಿಟರ್ನಗಳ ಯಗ್ಜಾಮಿನರ ಆದ ಬುರ್ಹಾಷರೀಫರು, ಯಡೆಹಳ್ಳಿಯ 3ನೇ ಕ್ಲಾಸ ಮುನ್ಸಿಫರಾಗಿ ಆಕ್ಟಿಂಗ ತರೀಕ ಕೆಲಸ ನೋಡುವಂತೆ ಮೊಕರರ. ಹಾಸನದಲ್ಲಿ ವೆಂಕಟರಾಯರಿಗೆ ಚಾರ್ಜು ವಪ್ಪಿಸಿದ ನಂತರ ಸದರೀ ಕೆಲಸದ ಮೇಲೆ ಹೋಗತಕ್ಕದ್ದು.

ತಾರೀಖು 24ನೇ ಜುಲೈ 1884.

ನಂ. 85—ಮೈಸೂರು ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟ್ ಕರ್ನಲ್ ಜೆ. ಪಿ. ಗ್ರ್ಯಾಂಟಯವರು, ಆರನೇ ಛಾಪ ಸಿವಿಲ ಲೀವ ಕೋಡಿನ 71ನೇ ಸೆಕ್ಷನ ಅನುಸರಿಸಿ, 1884ನೇ ಇಸವಿ ಆಗಸ್ಟು 1ನೇ ಮರ್ಕ್ಕಂ ಯಾ ಅವರು ರಜಾ ವುಪಯೋಗಿಸಿಕೊಂಡ ತಾರೀಖುಲಾಗಾಯಿತು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ರೆವಿನ್ಯೂ ಸರ್ವೆ ಡೆಪ್ಯುಟಿ ಸೂಪರಿಂಟೆಂಡೆಂಟ ಮೇಜರ್ ಜೆ. ರೂಧರಿಫರ್ಡ್ಯವರು, ಕರ್ನಲ ಗ್ರ್ಯಾಂಟಯವರ ಗೈರ ಹಾಜರಿಯಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟ ಕೆಲಸಕ್ಕೆ ಆಕ್ಟಿಂಗ ತರೀಕ ಮೊಕರರ ಮಾಡಲ್ಪಟ್ಟಿರುತ್ತಾರೆ.

ನಂ. 86—ಡೆಪ್ಯುಟಿ ಅಮಲ್ದಾರ್ ನಂಜುಂಡಮೊದಲಿಯಾರ್ರಿಗೆ, 1884ನೇ ಇಸವಿ ಜುಲೈ 4ನೇ ಮರ್ಕ್ಕಂ 66ನೇ ನಂಬರವುಳ್ಳ ಈ ಆಫೀಸು ಇಸ್ತಿಹಾರನಾಮೆಯಿಂದ ಕೊಡಲ್ಪಟ್ಟ ಪ್ರಿವಿಲೀಜ್ ರಜಾವನ್ನ ಅವರ ಖಾಯಿಷ್ ಪ್ರಕಾರ ರದ್ದು ಮಾಡಿರುತ್ತೆ.

ತಾರೀಖು 25ನೇ ಜುಲೈ 1884.

ನಂ. 87.—1879ನೇ ಇಸವಿ ಫಿಬ್ರುವರೀ 18ನೇ ಮರ್ಕ್ಕು ಮಿನ ರೂಲ್ಸ ಅನುಸರಿಸಿ ದಾಖಲ್ಮಾಡಲ್ಪಟ್ಟ ಅಡ್ವೋಕೇಟ ಮತ್ತು 1—2ನೇ ಕ್ಲಾಸ ಪ್ಲೀಡರುಗಳಿಗೆ ಯಿದರ ದೆಸೆಯಿಂದ ತಿಳಿಯಪಡಿಸೋದೇನಂದರೆ, (ಮೈಸೂರು ಲೀಗಲ್ ಪ್ರಾಕ್ಟಿಷನರ‍ಸ ರೆಗ್ಯೂಲೇಷನ) ಯಂಬ 1884ನೇ ಇಸವಿ IIIನೇ ನಂಬರ ರೆಗ್ಯೂಲೇಷನು ಅವರ ಸ್ಥಿತಿಯನ್ನು ಬಾಧಿಸುವದಿಲ್ಲ, ಮತ್ತು ಅವರು ಯಾವ ಕೋರ್ಟುಗಳಿಗೆ ದಾಖಲ್ಮಾಡಲ್ಪಟ್ಟಿರುತ್ತಾರೋ ಅಂಥಾ ಕೋರ್ಟುಗಳಲ್ಲಿ 1884ನೇ ಇಸವಿ ಡಿಶಂಬರ 31ನೇ ಮರ್ಕ್ಕು ಮಿನವರಿಗೆ ವಕಾಲತ್ತು ಮಾಡುವದಕ್ಕೆ ಅರ್ಹರಾಗಿರುತ್ತಾರೆ, ಅವರುಗಳು ಸದರೀ ತಾರೀಖಿನ ತರುವಾಯಲೂ ವಕಾಲತ್ತು ಮಾಡಲಿಚ್ಛೈಸಿದರೆ, ಸದರೀ ರೆಗ್ಯೂಲೇಷನಿನ 11ನೇ ಸೆಕ್ಷನ ಅನುಸರಿಸಿ ಚೀಫ್ ಕೋರ್ಟಿನಿಂದ ಒಂದು ಸರಟಫಿಕೇಟ್ ಪಡೆಯತಕ್ಕದ್ದು.

2. ಸದರೀ ರೆಗ್ಯೂಲೇಷನಿನ 10ನೇ ಸೆಕ್ಷನ ಅನುಸಾರವಾಗಿ ಏರ್ಪಾಟಾಗುವ ರೂಲ್ಸಗಳಿಂದ ಚೀಫ್ ಕೋರ್ಟಿನವರು 1879ನೇ ಇಸವಿ ಫಿಬ್ರುವರೀ 18ನೇ ಮರ್ಕ್ಕು ಮಿನ ರೂಲ್ಸಗಳನುಸರಿಸಿ ದಾಖಲ್ಮಾಡಲ್ಪಟ್ಟ ಯಲ್ಲ ಮನುಷ್ಯರುಗಳಿಗೂ ಅಂಥಾ ಸರಟಫಿಕೇಟಗಳನ್ನು ಕೊಡುವದಕ್ಕೆ ಶಕ್ತರಾಗಿರುವರು.

ತಾರೀಖು 25ನೇ ಜುಲೈ 1884.

ನಂ. 89—ತುಮಕೂರು ಡಿಸ್ಟ್ರಿಕ್ಟು ಮದ್ದಗಿರೀ ತಾಲ್ಲೂಕು ಕೊರಟಗೆರೆ ಡೆಪ್ಯುಟಿ ಅಮಲ್ದಾರ್ ಜಿ. ತಿರುನಾರಣಯ್ಯಂಗಾರ್ರಿಗೆ 1884ನೇ ಇಸವಿ ಮೇ 2ನೇ ಮರ್ಕ್ಕಂ 16ನೇ ನಂಬರವುಳ್ಳ ಈ ಆಫೀಸ ಇಸ್ತಿಹಾರನಾಮೆಯಲ್ಲಿ ಕೊಡಲ್ಪಟ್ಟ ರಜಾಕ್ಕೆ ಜಾಸ್ತಿಯಾಗಿ ಸ್ವಂತ ಕೆಲಸದ ಮೇಲೆ ಮೂರು ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ನಂ. 90—ಶಿವಮೊಗ್ಗಾ ಡೆಪ್ಯುಟಿಕಮ್ಮಿಷನರ್ ಮ॥ ಯಸ್. ವೆಂಕಟವರದಯ್ಯಂಗಾರ್ ಬಿ. ಯೆ. ಯಂ. ಯಲ್. ಯವರು, ಪೋಲೀಸು ವ ಲೆಜಿಸ್ಲೇಟಿವ್ ಇಲಾಖೆಗಳಲ್ಲಿ ದಿವಾನರವರಿಗೆ ಆಫಿಷಿಯೇಟಿಂಗ ಸೆಕ್ರೇಟರಿಯಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ, ಅವರು ಶಿವಮೊಗ್ಗಾ ಡಿಸ್ಟ್ರಿಕ್ಟು ವ ಟ್ರೆಜರಿ ಚಾರ್ಜನ್ನು, ಶಿವಮೊಗ್ಗಾದಲ್ಲಿರುವ ಮೇಲ್ದರ್ಜೆಯ ಅಸಿಸ್ಟೆಂಟ್ ಕಮ್ಮಿಷನರಿಗೆ ವಪ್ಪಿಸಿ ಕೂಡ್ಲೆ ಮೊಕರರ್ ಕೆಲಸದ ಮೇಲೆ ಬರತಕ್ಕದ್ದು.

ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಮ॥ ಜಿ. ಯಫ್. ಮೈಕಲ್‌ಜಾನ್‌ಯವರು, ಶಿವಮೊಗ್ಗಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರ್ ಮತ್ತು ಡಿಸ್ಟ್ರಿಕ್ಟು ಮಾಜಿಸ್ಟ್ರೇಟ್ ಕೆಲಸಕ್ಕೆ ವರ್ಗ ಮಾಡಲ್ಪಟ್ಟಿರುತ್ತಾರೆ.

ಬೆಂಗಳೂರು ಟವರ್ನ ಮಾಜಿಸ್ಟ್ರೇಟರಾದ ಮ॥ ಮಹಮ್ಮದಲ್ಲೀ ಖಾನ್‌ಬಹದೂರ್‌ಯವರು, ಮ॥ ರಿಕೆಟ್ಸ್‌ಯವರು ರಜಾದ ಮೇಲಿರುವಲ್ಲಿಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಕಡೂರು ಡೆಪ್ಯುಟಿ ಕಮ್ಮಿಷನರಾಗಿಯೂ ವ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಾಗಿಯೂ ಆಕ್ಟಿಂಗ ತರೀಕ್ ಮೊಕರರ್ಮಾಡಲ್ಪಟ್ಟಿರುತ್ತಾರೆ, ಕೂಡ್ಲೆ ಕೆಲಸದ ಮೇಲೆ ಹೋಗತಕ್ಕದ್ದು.

ಕೋಲಾರ ಡಿಸ್ಟ್ರಿಕ್ಟು 2ನೇ ಗ್ರೇಡ ಅಸಿಸ್ಟೆಂಟ್ ಕಮ್ಮಿಷನರ್ ಮ॥ ಪಿ. ಯನ್. ಪೂರ್ಣಯ್ಯನವರು, ಮ॥ ಮಹಮ್ಮದಲ್ಲೀಯವರು ಬೇರೆ ಕೆಲಸದ ಮೇಲಿರುವಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ, ಬೆಂಗಳೂರು ಟವರ್ನ ಮಾಜಿಸ್ಟ್ರೇಟರಾಗಿ ಆಕ್ಟಿಂಗ ತರೀಕ ಮೊಕರರ್ಮಾಡಲ್ಪಟ್ಟಿರುತ್ತಾರೆ, ಕೂಡ್ಲೆ ಕೆಲಸದ ಮೇಲೆ ಹೋಗತಕ್ಕದ್ದು.

ಶಿವಮೊಗ್ಗಾ ಅಮಲ್‌ದಾರ್ ಮ॥ ನಾಗೇಶರಾಯರು, 4ನೇ ಗ್ರೇಡ ಅಸಿಸ್ಟೆಂಟ್ ಕಮ್ಮಿಷನರಾಗಿ ಆಕ್ಟು ಮಾಡುತ್ತಾ ಇರತಕ್ಕದ್ದು. ಮತ್ತು ಅವರನ್ನ ಕಡೂರು ಡಿಸ್ಟ್ರಿಕ್ಟಿಗೆ ದಾಖಿಲ್ಮಾಡಲ್ಪಡತಕ್ಕದ್ದು.

ಅಟ್ಯಾಚಿಯಾದ ಮ॥ ದಳವಾಯಿ ದೇವರಾಜೇಅರಸಿನವರು ಅವರ ರಜಾ ವಾಯಿದೆಯು ಕಳೆದ ನಂತರಾ ಮೈಸೂರು ಡೆಪ್ಯುಟಿ ಕಮ್ಮಿಷನರಿಗೆ ರಿಪೋರ್ಟು ಮಾಡತಕ್ಕದ್ದು ಮತ್ತು ಅವರು ಮೈಸೂರು ಡಿಸ್ಟ್ರಿಕ್ಟು ಟ್ರೆಜರಿ ಚಾರ್ಜಿನಲ್ಲಿರತಕ್ಕದ್ದು.

ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಮ॥ ಪಿ. ಯನ್. ಕೃಷ್ಣಮೂರ್ತಿಯವರು, 1884ನೇ ಇಸವಿ ಆಗಸ್ಟು 1ನೇ ಮರ್ಕುಂ ಲಾಗಾಯತು, ಹಾಲಿಯಿತಕ್ಕ ಖಾಲಿಯನ್ನು ಭರ್ತಿಮಾಡುವ ವೃದ್ಧಿಯ 4ನೇ ಕ್ಲಾಸಿನಿಂದ 3ನೇ ಕ್ಲಾಸಿಗೆ ಬಡ್ತಿ ಮಾಡಲ್ಪಟ್ಟಿರುತ್ತಾರೆ.

ನಾಲ್ಕನೇ ಕ್ಲಾಸ್ ಆಫಿಷಿಯೇಟಿಂಗ ಅಸಿಸ್ಟೆಂಟ್ ಕಮ್ಮಿಷನರಾದ ಮ॥ ಬಿ. ಕೃಷ್ಣಯ್ಯಂಗಾರ್ಯು, 1884ನೇ ಇಸವಿ ಆಗಸ್ಟು 1ನೇ ಮರ್ಕುಂ ಲಾಗಾಯತು ಸದರೀ ಕೆಲಸದಲ್ಲಿ ಕಾಯಂ ಮಾಡಲ್ಪಟ್ಟಿರುತ್ತಾರೆ.

ನಂ. 91—ಇದರ ಕೆಳಗೆ ಕಾಣಿಸಿರುವ ಅಮಲ್‌ದಾರ್ ವ ಡೆಪ್ಯುಟಿ ಅಮಲ್‌ದಾರಗಳ ಮೊಕರರಾತಿಗಳೂ, ಅಮಲ್‌ದಾರ್ರುಗಳ ವರ್ಗಾವರ್ಗಿಗಳೂ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಮೊಕರರಾತಿಗಳು—ಮಾಲೂರು ಡೆಪ್ಯುಟಿ ಅಮಲ್‌ದಾರ್ ಕೆ. ಶ್ರೀನಿವಾಸರಾಯರು 5ನೇ ಗ್ರೇಡ ಅಮಲ್‌ದಾರ್ರಾಗಿ ಅಜಮಾಯಿಷಿ ತರೀಕ್ ಮೊಕರರ್ಮಾಡಲ್ಪಟ್ಟು ಮಂಡ್ಯತಾಲ್ಲೂಕು ಚಾರ್ಜಿಗೆ ನೇಮಿಸಲ್ಪಟ್ಟಿರುತ್ತಾರೆ.

ಮೈಸೂರು ಮ್ಯುನಿಸಿಪಲ್ ಅಸ್ಸೆಸರ್‌ಆದ ಯಂ. ಗುಲಾಂ ಮೊಹದೀನ್‌ಯವರ್ರು, 2ನೇ ಗ್ರೇಡ ಡೆಪ್ಯುಟಿ ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಮೊಕರರ್ ಮಾಡಲ್ಪಟ್ಟು ಮಾಲೂರಿಗೆ ನೇಮಿಸಲ್ಪಟ್ಟಿರುತ್ತಾರೆ.

ವರ್ಗಾವರ್ಗಿಗಳು.—ಕಡೂರು ಡಿಸ್ಟ್ರಿಕ್ಟು ಮೂಡಗೆರೇ ತಾಲ್ಲೂಕು ಅಮಲ್‌ದಾರ್ ಕುಪ್ಪುಸಾಮಿನಾಯಿಡರಿಗೆ ಬೆಂಗಳೂರು ಡಿಸ್ಟ್ರಿಕ್ಟು ಕುಣಿಗಲ್ ತಾಲ್ಲೂಕಿಗೆ ವರ್ಗ.

ಅಮಲ್‌ದಾರ್ ಅಲ್ಲೀನಕ್ಕೀಖಾನ್‌ರಿಗೆ, ಕುಣಿಗಲ್ ತಾಲ್ಲೂಕಿನಿಂದ ಮಾಗಡೀ ತಾಲ್ಲೂಕಿಗೆ.

ಅಮಲ್‌ದಾರ್ ಸಿ. ಕೃಷ್ಣರಾಯರಿಗೆ, ಮಾಗಡೀತಾಲ್ಲೂಕಿನಿಂದ ಕಾನಕಾನಹಳ್ಳೀ ತಾಲ್ಲೂಕಿಗೆ.

ಅಮಲ್‌ದಾರ್ ತಿರುಮಲರಾಯರಿಗೆ, ಕಾನಕಾನಹಳ್ಳಿ ತಾಲ್ಲೂಕಿನಿಂದ ಹೊಸಕೋಟೆ ತಾಲ್ಲೂಕಿಗೆ.

ನಂ. 92—ಅಸಿಸ್ಟೆಂಟ್ ಕಮ್ಮಿಷನರ್ ವ ಫಸ್ಟ್‌ಕ್ಲಾಸ್ ಮಾಜಿಸ್ಟ್ರೇಟ್ ಮ॥ ಅಬದ್ದುಲ್‌ರಹಮಾನ್ ಯವರು, ಕ್ಲೋಸ್‌ಪೇಟೆಯಲ್ಲಿ ಮೊಕ್ಕಾಂ ಮಾಡಲ್ಪಟ್ಟು, ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ವ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರವರ ಆರಡರನಲ್ಲಿ ಕ್ಲೋಸ್‌ಪೇಟೆ, ಕಾನಕಾನಹಳ್ಳಿ ವ ಮಾಗಡಿ ಈ ತಾಲ್ಲೂಕುಗಳ ಚಾರ್ಜನ್ನು ವಹಿಸತಕ್ಕದ್ದು.

2. ಕ್ಲೋಸ್‌ಪೇಟೆ ಅಮಲ್‌ದಾರ್ ಶ್ಯಾಮಯ್ಯಂಗಾರ್ರಿಗೆ, 1881ನೇ ಇಸವಿ ಜೂನ್ 27ನೇ ಮರ್ಕುಂ 63ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ಯರಡನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳು, ಇಯಿಂದ ಅನಾವಶ್ಯಕವಾಗಿರುವದರಿಂದ ವಾಪಸು ತೆಗದುಕೊಳ್ಳಲ್ಪಟ್ಟಿರುತ್ತೆ.

ಬಮೋಜೇಬ್ ಹುಕ್ಕುಂ,

ಆರ್. ವಿಜಯೇಂದ್ರರಾವ್,

ಸೆಕ್ರೇಟರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಸಿದ್ಧಿಸಲ್ಪಟ್ಟದ್ದು.

ಬೆಂಗಳೂರು, ಶನಿವಾರ, ಆಗಸ್ಟ್ ತಾ॥ 2, ಸನ್ 1884.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಾಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರುವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ರೆಸಿಡೆಂಟರ ಇಲಾಖಾ.

ಇಸ್ತಿಹಾರ್ ನಾಮೆ.

ಫೈನಾನ್ಷಿಯಲ್ ಇಲಾಖಾ.

1882ನೇ ಮೈಸೂರು ರೈಯಿಲ್ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರ್ಯಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸಿನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡರ್ಸನ್,
ಕಾಂಪ್ಟ್ರೋಲರ್.

ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 1ನೇ ಜುಲೈ 1884.

ಬೆಂಗಳೂರಲ್ಲಿರತಕ್ಕ ಮೈಸೂರು ಗವರ್ನಮೆಂಟ್ ಸೇವಿಂಗಸ್ ಬ್ಯಾಂಕಿನ ಡಿಪಾಜಿಟ್‌ದಾರ್ರಿಗೆ ಕೇಳಿ, ಕೊಳ್ಳುವದೇನಂದರೆ, 1884ನೇ ಇಸವಿ ಮಾರ್ಚಿ 31ನೇ ಮರ್ತ್ಯಂ ವರಿಗಿನ ಬಡ್ಡಿಯನ್ನ ಫೈಸಲ್ಮಾಡುವ ಬಗ್ಯಾಗಿ ಅವರವರ ಪ್ಯಾಸ ಬುಕ್ಕುಗಳನ್ನು ಬೆಂಗಳೂರು ಡಿಸ್ಟ್ರಿಕ್ಟು ಟ್ರಿಜರೀಯಲ್ಲಿ ಹಾಜರ್ಮಾಡತಕ್ಕದ್ದು.

ಎ. ರಂಗಸ್ವಾಮಯ್ಯಂಗಾರ್,
ಥಾರ್ ಟ್ರೆಜರಿ ಆಫೀಸರ್.

ಬೆಂಗಳೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ—

1884ನೇ ಇಸವಿ ಅರ್ಜೀ ನಂಬರು 116.

ಬೆಂಗಳೂರು ರಾಮಂಣನ ಪೇಟೆಲಿರುವ ಮರುಳು ಶಿದ್ದಯ್ಯ ಬೆಂಗಳೂರು ಸ್ಥಳದ ದೊಡ್ಡಹೊನ್ನಯ್ಮಾ ವುರಫ್ ರುದ್ರಯ್ಯ

ಅರ್ಜೀದಾರ ಯೆದರಿ ಮೈನರಾದ ಬೆಂಗಳೂರು ರಾಮಂಣನ ಪೇಟೆ ಸ್ಥಳದ ಅಕ್ಕಿ ಹೊನ್ನಮ್ಮನ ಆಸ್ತಿವಿಷಯದಲ್ಲಿ—

ಸದರೀ ಮೈನರಾದ ಅಕ್ಕಿ ಹೊನ್ನಮ್ಮನಿಗೆ ಮಾವನಾಗಬೇಕೆಂಬ ಹಕ್ಕಿನ ಮೇಲೆ ಬೆಂಗಳೂರು ಸ್ಥಳದ ಮರುಳು ಶಿದ್ದಯ್ಯನು, ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾನೆ.

ಸದರೀ ಅರ್ಜೀ ಹಿಯರಿಂಗ್ ಬಗ್ಯೆ 1884ನೇ ಇಸವಿ ಆಗಸ್ಟು ತಾರೀಖು 21ರಲ್ಲು ಮೊಕರರು ಮಾಡಿರುವದಾಗಿ ಇದರಿಂದ ನೋಟೀಸ್ ಕೊಡಲಾಗಿದೆ.

1884ನೇ ಇಸವಿ ಅರ್ಜೀ ನಂಬರ್ 122.

ಮೃತಪಟ್ಟ ಅಂಗಡೀ ನಂಜಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ತಾಲ್ಲೂಕು ಯಶವಂತಪುರದ ಹೋಬಳಿ ಬಿಜೆಗೌಡನ ಕೊಡಗೇಹಳ್ಳಿ ಮುನಿಶಾಮಪ್ಪ, ಮೃತಪಟ್ಟ ಸದರೀ ಅಂಗಡೀ ನಂಜಪ್ಪನವರಿಗೆ ಅಳಿಯನಾಗಬೇಕೆಂಬ ಹಕ್ಕುದಾರೀ ಮೇಲೆ ಕೊಡಗೇಹಳ್ಳಿ ಸ್ಥಳದ ಮುನಿಶಾಮಪ್ಪನವರು ಕೊಡಗೇಹಳ್ಳಿ ವಾಸಸ್ಥರಾಗಿ ಮೃತಪಟ್ಟ ಸದರೀ ನಂಜಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮುನಿಶಾಮಪ್ಪನವರ ಅರ್ಜಿಯನ್ನು 1884ನೇ ಇಸವಿ ಆಗಸ್ಟು ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ... ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜಪ್ಪನವರ ಆಸ್ತಿಗೆ ಹಕ್ಕುದಾರರಾದ ಪಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದ್ದು ಇದರಿಂದ ತಿಳಿಯಪಡಿಸಿ ಯಿದೆ.

1884ನೇ ಇಸವಿ ಜುಲೈ ತಿಂಗಳು 28ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ಮತ್ತು ನನ್ನ ದಸ್ತಖತ್ತಿನೊಡನೆ ಕೊಡೋಣಾಗಿದೆ.

ದಿವಾಳಿಯಾದ ಡಿಕ್ರೀದಾರ ಚಿಕ್ಕಬಳ್ಳಾಪುರ ತಾ|| ದಾಸರಹಳ್ಳಿಯಲ್ಲಿ ಇರುವ ವಡ್ಡರ ಗುರುವನ ಮಗ ಮುನಿಗನ ವಿಷಯದಲ್ಲಿ.
ಸರ್ 1884ನೇ ಇಸವಿ ದಿವಾಳಿ ಕೇಸ್ ನಂಬರ್ 22ರಲ್ಲಿ.

ಹುಕ್ಮಂ.

ಮೇಲ್ಕಂಡ ವಡ್ಡರ ಗುರುವನ ಮಗ ಮುನಿಗನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜೀ ರಾದ ಸಿ. ಕ್ರೆಸ್ ಸಾಹೇಬರವರ ರೂಬರೂ ಅರ್ಜಿದಾರನಾದ ವಡ್ಡರ ಗುರುವನ ಮಗ ಮುನಿಗನ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು ತಮಗೆ ಈ ದರ್ಯಾಫ್ತಿ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ, 1ನೇ ರಾಯಪ್ಪನಹಳ್ಳಿ ಮಲ್ಲಪ್ಪ, 2ನೇ ಹನುಮಂತಗೌಡ, 3ನೇ ತಮ್ಮಣ್ಣ, 4ನೇ ವೆಂಕಟಪ್ಪ.

ಸಿವಿಲ್ ಪ್ರೊಸೀಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಮುನಿಗನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಅರ್ಜೀದಾರನ ಸಾಲತೋರಿಸತಕ್ಕ ಷೆಡ್ಯೂಲ್.

ನಂಬರು.	ಲೇಣೇದಾರು ಅಥವಾ ದಾವಾದಾರು ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯ ಬಂದವರಗಳ ವಾಸಸ್ಥಳ.	ಮೊಬಲಗು.	ಯಾವಾಗ ಸಾಲ ಮಾಡಿದ್ದು	ದೇಣೆಯು ಸ್ವಭಾವ ಮತ್ತು ಅದರ ಪ್ರತಿಫಲ ಹುತ್ತು ಗಿರ್ವಿ ಯೇನಾದರು ಇದ್ದರೆ.	ಷರಾ.
1	ಚಿಕ್ಕಬಳ್ಳಾಪುರ ತಾ|| ರಾಯಪ್ಪನಹಳ್ಳಿ ಮಲ್ಲಪ್ಪನಿಗೆ.	125-5-0	1884	ಚಿಕ ಬಳ್ಳಾಪುರ ಸ|| ಡಿ|| ಮುನಸಿಫ್ ಕೋರ್ಟು 1884ನೇ ಇಸವಿ ಜಾರಿ 195.	
2	ದಿಬ್ಬೂರು ಪಟೇಲ್ ಹನುಮಂತಗೌಡ ..	44	1882	1882ನೇ ಇಸವಿ ಮಾರ್ಚಿ ಕೈಸಾಲದ ಬಾಬತು.	
3	ದಿಬ್ಬೂರಲ್ಲಿ ಗೆಜ್ಜಿಗನ ತಮ್ಮಣ್ಣ ..	12	1883	1883ನೇ ಇಸವಿ ಫಿಬ್ರುವರಿ ತಿಂಗಳು ಕೈಸಾಲದ ಬಾಬತು.	
4	ಡಿಟ್ಟೋ ಸ್ಥಳದ ಕಂದೂರು ವೆಂಕಟಪ್ಪ ..	24	1879	18879ನೇ ಇಸವಿ ಭೋಗ್ಯಪತ್ರದ ಬಾಬತು.	

ಸ‌ನ್ 1884ನೇ ಇಸವಿ ಜುಲೈ 24ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ ನಮ್ಮ ದಸ್ತಖತನಿಂ ಕೊಡಲ್ಪಟ್ಟಿತು.

ದಿವಾಳೀಯಾದ ಡಿ. ದೇಣೇದಾರ ಬೆಂಗಳೂರು ಪ್ರಿಂಟಿಂಗ್ ಆಫೀಸ್ ಕಂಪಾಜಿಟರ್ ರಾಮಸ್ವಾಮಯ್ಯನ ವಿಷಯದಲ್ಲಿ.
1884ನೇ ಇಸವಿ ದಿವಾಳೀ ಕೇಸ ನಂಬರ 47ರಲ್ಲಿ.

ಹುಕ್ಕುಂ.

ಮೇಲ್ಕಂಡ ರಾಮಸ್ವಾಮಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜೀ ಸಿ. ಕ್ರೆಸ್ ಸಾಹೇಬರವರ ರೂಬರೂ ಅರ್ಜೀದಾರನಾದ ರಾಮಸ್ವಾಮಯ್ಯನ ಪರವಾಗಿ ಮೆ|| ನರಸಿಹ್ಮೈಯ್ಯಂಗಾರ್ ಪ್ಲೀಡರನ್ನು ಮತ್ತು ಸದಿರೀಯವನ ಲೇಣೇದಾರಾದ 1ನೇ ಮುನಿಶಾಮಪ್ಪ, 2ನೇ ಪುತ್ತ್ಯಾಲನಾಯುಡು, 3ನೇ ಬೆಂಗಳೂರು ಹಿಂದೂಬ್ಯಾಂಕ್, 4ನೇ ಬೆಂಗಳೂರು ರಾಜಧಾನಿ ಬ್ಯಾಂಕ್ ನವರಿಗೂ ದರ್ಯಾಫ್ತು ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿ ಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರೆಂದರೆ, 1ನೇ ಮುನಿಶಾಮಪ್ಪ, 4ನೇ ಬೆಂಗಳೂರು ರಾಜಧಾನಿ ಬ್ಯಾಂಕ್.

ಸಿವಿಲ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ರಾಮಸ್ವಾಮಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೆ ಇವಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗೀರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸಾಲದ ಪಟ್ಟಿ.

ನಂಬರು	ಲೇಣೇದಾರು) ಅಥವಾ ದಾವಾದಾರ್ರು ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯ ಬಂದವರಗಳ ವಾಸಸ್ಥಳ.	ಮೊಬಲಗು	ಸಾಲಮಾಡಿದ ತಾರೀಖು	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರು ಇದ್ದರೆ.	ಷರಾ
1	ಬೆಂಗಳೂರು ಯಲಹಂಕದ ಬಾಗಲ್ ಬಳಿ ಇರುವ ಪಟ್ಟಡಿ ಮುನಿಶಾಮಪ್ಪಗೆ ಅರ್ಜಿದಾರ ಇವನ ತಂದೆ ಮತ್ತು ಇವನ ತಮ್ಮ ಸಹಾ ಮಾಡಿದ್ದು.	ರೂ. ಆ. ಪೈ 22-15 8	1884	ಬೆಂಗಳೂರು ಅಡಿಷನಲ್ ಮುನಸಿಫ ಕೋರ್ಟು 1884ನೇ ಇಸವಿ ಸ್ಮಾಲ್ ಕಾಜ್ 361ನೇ ಡಿಕ್ರಿ ಬಾಬತು	
2	ಮೆಜೋಲ್ ವಾದಿ ಬೆಂಗಳೂರು ಕಲಾಸಿಪಾಳ್ಯದಲ್ಲಿ ಇರುವ ಮುತ್ತ್ಯಾಲನಾಯಡರಿಗೆ ಅರ್ಜಿದಾರ ಮತ್ತು ಈತನ ತಂದೆ ಸಹಾ ಮಾಡಿದ್ದು.	93-9-0	1877	1877ನೇ ಇಸವಿ ಲೇಟ್ ಸ್ಮಾಲ್‌ಕಾಜ್ ಕೋರ್ಟು 5454ನೇ ನಂ. ಡಿಕ್ರಿ ಬಾಬತು	
3	ಬೆಂಗಳೂರು ಹಿಂದೂ ಬ್ಯಾಂಕಿಗೆ ಅರ್ಜಿದಾರ ಮತ್ತು ಈತನ ತಂದೆ ಮಾಡಿದ್ದು.	76–0–0	1875	ಲೇಟ್ ಸ್ಮಾಲ್‌ಕಾಜ್ ಕೋರ್ಟು 1875ನೇ ಇಸವಿ 6552ನೇ ನಂಬರ್ ಡಿಕ್ರಿ ಬಾಬತು	
4	ಬೆಂಗಳೂರು ರಾಜಧಾನಿ ಬ್ಯಾಂಕಿಗೆ ಅರ್ಜಿದಾರ ಮತ್ತು ಇವನ ತಂದೆ ಮತ್ತು ಇವನ ತಮ್ಮ ಮತ್ತು ಇವನ ಭಾವಮೈದನಿಂದ ಮಾಡಿದ್ದು.	162 0 0	1877	ಲೇಟ್ ಸ್ಮಾಲ್‌ಕಾಜ್ ಕೋರ್ಟು 1877ನೇ ಇಸವಿ 2693ನೇ ನಂಬರ್ ಡಿಕ್ರಿ ಬಾಬತು	

1884ನೇ ಇಸವಿ ಜುಲೈ ತಿಂಗಳು 10ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಕ್ರೇಸ್,
ಸಬ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 230.

ಮೃತಪಟ್ಟ ನಂಜಪ್ಪನ ಆಸ್ತಿ ವಿಷಯದಲ್ಲಿ—.

ಅರ್ಜೀದಾರ ಗರಳಪುರಯ್ಯ, ಮೃತಪಟ್ಟ ಸದರೀ ನಂಜಪ್ಪನಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ನಂಜನಗೂಡು ತಾಲ್ಲೂಕು ಕಡಬೂರು ಸ್ಥಳದ ಸದರೀ ಗರಳಪುರಯ್ಯನು, ಸದರೀ ವಾಸಸ್ಥರಾಗಿ ಮೃತಪಟ್ಟ ನಂಜಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ 75 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಗರಳಪುರಯ್ಯನ ಅರ್ಜಿಯನ್ನು 1884ನೇ ಇಸವಿ ಆಗಸ್ಟು ತಿಂಗಳು ತಾರೀಖು 19ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ್ 233.

ಮೃತಪಟ್ಟ ಸೈದಬುರ್ಹಾ ಸಾಬಿ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಸೈದ್ ಅಹಮ್ಮದ್‌ಸಾಬಿ, ಮೃತಪಟ್ಟ ಸದರೀ ಸೈದ ಬುರ್ಹಾಸಾಬಿಗೆ ಅಣ್ಣನಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಯಡತೊರೆ ತಾಲ್ಲೂಕು ಸಾಲಿಗ್ರಾಮ ಸ್ಥಳದ ಸದರೀ ಸೈದ್ ಅಹಮ್ಮದ್ ಸಾಬಿಯು, ಸದರೀ ವಾಸಸ್ಥನಾಗಿ ಮೃತಪಟ್ಟ ಸೈದ್‌ಬುರ್ಹಾಸಾಬಿ

ಜೆಂದಗಿ ಬಗ್ಗ್ಯಾಗಿ ಬರತಕ್ಕ 395 ರೂಪಾಯಿಗಳ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಸೈದ್ ಅಹಮ್ಮದ್ ಸಾಬಿ ಅರ್ಜೀಯನ್ನು 1884ನೇ ಇಸವಿ ಆಗಸ್ಟು ತಿಂಗಳು ತಾರೀಖು 19ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೈದ್ ಖುರ್ದಸಾಬಿ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ್ 234.

ಮೃತಪಟ್ಟ ಹಿಂಡಶಿಗೆರೆ ಪುಟ್ಟಂಣನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಪುಟ್ಟಂಣ, ಮೃತಪಟ್ಟ ಸದರೀ ಹಿಂಡಶಿಗೆರೆ ಪುಟ್ಟಣ್ಣನಿಗೆ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ನಾಗಮಂಗಲದ ತಾಲ್ಲೂಕು ಬೆಳ್ಳೂರು ಸ್ಥಳದ ಸದರೀ ಪುಟ್ಟಣ್ಣನು, ಸದರೀ ವಾಸಸ್ಥನಾಗಿ ಮೃತಪಟ್ಟ ಹಿಂಡಶಿಗೆರೆ ಪುಟ್ಟಣ್ಣನ ಜೆಂದಗಿ ಬಗ್ಗ್ಯಾಗಿ ಬರತಕ್ಕ 300 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಪುಟ್ಟಣ್ಣನ ಅರ್ಜೀಯನ್ನು 1884ನೇ ಇಸವಿ ಆಗಸ್ಟು ತಿಂಗಳು ತಾರೀಖು 19ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟು ರೂಬರೂ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹಿಂಡಶಿಗೆರೆ ಪುಟ್ಟಣ್ಣನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿಧೆ.

ಸನ್ 1884ನೇ ಇಸವಿ ಅರ್ಜೀ ನಂಬರ್ 235.

ಮೃತಪಟ್ಟ ಶೇಷಮ್ಮನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಶ್ರೀನಿವಾಸಯ್ಯಂಗಾರು, ಮೃತಪಟ್ಟ ಸದರೀ ಶೇಷಮ್ಮನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮಂಡ್ಯ ತಾಲ್ಲೂಕು ಮುತ್ತಗೆರೆ ಹೋಬಳಿ ಕಸಬಾ ಮುತ್ತಗೆರೆ ಸ್ಥಳದ ಸದರೀ ಶ್ರೀನಿವಾಸಯ್ಯಂಗಾರು, ಸದರೀ ವಾಸಸ್ಥನಾಗಿ ಮೃತಪಟ್ಟ ಶೇಷಮ್ಮನ ಜೆಂದಗಿ ಬಗ್ಗ್ಯಾಗಿ ಬರತಕ್ಕ 150 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶ್ರೀನಿವಾಸಯ್ಯಂಗಾರು ಅರ್ಜೀಯನ್ನು 1884ನೇ ಇಸವೀ ಆಗಸ್ಟು ತಿಂಗಳು ತಾರೀಖು 19ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟು ರೂಬರು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶೇಷಮ್ಮನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ್ 238.

ಮೃತಪಟ್ಟ ಕರಿಯಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಗೋವಿಂದ[illegible] ಗಂಜಾಂ ಸ್ಥಳದ ಸದರೀ ಗೋ[illegible] ತಪಟ್ಟ ಸದರೀ ಕರಿಯಪ್ಪನಿಗೆ ಅಂಣ ಆಗಬೇಕೆಂಬ ಹಕ್ಕುದಾರೀ ಮೇಲೆ [illegible]ರಂಗಪಟ್ಣ ತಾಲ್ಲೂ[illegible]ಪ್ಪನು, ಸದರೀ ವಾಸಸ್ಥನಾಗಿ ಮೃತಪಟ್ಟ ಕರಿಯಪ್ಪನ ಜೆಂದಗಿ ಬಗ್ಗ್ಯಾಗಿ ಬರತಕ್ಕ 250 ರೂಪಾ[illegible]ಗಳ ಸಾಲಗಳನ್ನು ವಸೂಲ್[illegible]ಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಖಾ[illegible]ಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರ[illegible] ಗೋವಿಂದಪ್ಪನ ಅರ್ಜೀಯನ್ನು 1884ನೇ ಇಸವಿ ಆಗಸ್ಟು ತಿಂಗಳು ತಾರೀಖು 19ರಲ್ಲು ಮೈಸೂ[illegible] ಮೊಕ್ಕಾಂ ಈ ಕೋರ್ಟಿ[illegible] ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ [illegible]ತಪಟ್ಟ ಕರಿಯಪ್ಪನ[illegible] ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ [illegible] ಜುಲೈ ತಿಂಗಳು 14ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮುತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ವಿ ಎನ್. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜ.

ತಾರೀಖು 24ನೇ ಜುಲೈ 1884.

ಇದರಿಂದ ತಿಳಿಯಪಡಿಸುವದೇನಂದರೆ, ತಿರ್ಮುಕೂಡ್ಲು ನರಸೀಪುರ ಮತ್ತು ಮೈಸೂರು ಸಬ್‌ರಿಜಿಸ್ಟ್ರೀ ಆಫೀಸುಗಳಲ್ಲಿ ಬೇವಾರಸಾ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜುಗಳನ್ನು ಹಾಜರ್‌ಮಾಡಿದವರೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾ ಅಧಿಕಾರ ಹೊಂದಿದ ಮುಕ್ತಾಲೀಕ ಯಾ ಹಕ್ಕುದಾರರು ಆಗಲೀ ಈ ನೋಟಿಸ್ ತಾರೀಖು ಲಾಗಾಯಿತು ವೊಂದು ತಿಂಗಳವಳಗಾಗಿ ಸಬ್ ರಿ ಸ್ಟ್ರಾರ್ ರೂಬರೂಬ ಹಾಜರಾಗಿ ಅವುಗಳನ್ನು ವಾಪಸ ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ ರಿಜಿಸ್ಟ್ರೇಷ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅವುಗಳನ್ನು ನಾಶ ಪಡಿಸಲ್ಪಡುವವು.

ನಂಬರ್.	ದಸ್ತಾವೇಜು ಬರೆದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರೆಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟರಾದ ತಾರೀಖು.	ದಸ್ತಾವೇಜಿನ ಸ್ವಭಾವ ವ... ಕಿಮ್ಮತ್ತು.
118 / 1882—83	ಮೈಸೂರು ಕಿಲ್ಲೇಯಲ್ಲಿರುವ ಕೋಳತೂರು ಲಿಂಗಾಪಂತರ ಹೆಂಡತಿ ಪುಟ್ಟಮ್ಮಣ್ಣಮ್ಮ	ತಲ್ಕಾಡು ತಾಲ್ಲೂಕು ಹಾಲೀ ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಗರ್ಗೇಶ್ವರಿಯಲ್ಲಿರುವ ಫಕೀರ್ ಅಹಮ್ಮದ್‌ಸಾಬರ ಮಗ ಚಿಕ್ಕ ಯಿಮಾಂಸಾಬಿ	1—5—82	1—5—82	10 ರೂಪಾಯಿನ ಕ್ರಯಪ...
151 / 1882—83	ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಪಿಳ್ಳಹಳ್ಳಿಯಲ್ಲಿರುವ ಅಂಕೇಗೌಡನ ಮಗ 1ನೇ ಪುಟ್ಟಣ್ಣ 2ನೇ ಭೈರಣ್ಣ	ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಜೋಡೀ ಅಶ್ವತ್ಥಪುರದ ಅಗ್ರಹಾರದಲ್ಲಿರುವ ರಾಘವೇಂದ್ರಾಚಾರ್ರ ಮಕ್ಕಳು ಶ್ರೀನಿವಾಸಾಚಾರ್	9—5—82	9—5—82	14—4—0 ರೂಪಾಯಿನ ಗು...ಗೆ ದಸ್ತಾವೇಜು.
157 / 1882—83	ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಚಿದರವಳ್ಳಿಯಲ್ಲಿರುವ ಬಲಗೈ ಜಾತಿ ಚಿಕ್ಕಸಿದ್ದನ ಮಗ ಕುಳ್ಳಮಾದ	ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಚಿದರವಳ್ಳಿಯಲ್ಲಿರುವ ಮಾದಶೆಟ್ಟಿಮಗ ವೆಂಕಟಶೆಟ್ಟಿ	11—1—82	11—5—82	95 ರೂಪಾಯಿನ ಭೋಗ್ಯ... / ...ಪಾಯಿನ ಆಧಾರ ಪತ್ರ
282 / 1882—83	ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಗರ್ಗೇಶ್ವರಿಯಲ್ಲಿರುವ ಸ್ಮಾರ್ತ ಬ್ರಾಹ್ಮಣ ಕಿತ್ತೂರು ಸುಬಯ್ಯನ ಹೆಂಡತಿ ಲಕ್ಷ್ಮಮ್ಮ	ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಗರ್ಗೇಶ್ವರಿಯಲ್ಲಿರುವ ವೈಷ್ಣವ ಬ್ರಾಹ್ಮಣ ವೆಂಕೋಬರಾವ್	13—6—82	...6—82	90 ರೂಪಾಯಿನ ವಿಭಾಗ ಪತ್ರ
635 / 1881—82	ಮೈಸೂರು ಯಿಟ್ಟಿಗೆ ಗೂಡಿನಲ್ಲಿ ಯಿರುವ ಪಂಚಾಳ ಜಾತಿ ಕಾತಮೇಸ್ತ್ರಿ ಮಗ ಚಾಮುಂಡಾಚಾರಿ 1 ನಾರಣಾಚಾರಿ 1 ಲಕ್ಷ್ಮಣಾಚಾರಿ 1	ಮೈಸೂರು ಯಿಟ್ಟಿಗೆ ಗೂಡಿನಲ್ಲಿರುವ ಪಂಚಾಳ ಜಾತಿ ಕಾತಮೇಸ್ತ್ರಿ ಮಗ ಚಾಮುಂಡಾಚಾರಿ 1 ನಾರಣಾಚಾರಿ 1 ಲಕ್ಷ್ಮಣಾಚಾರಿ 1	20—1—82	23—1—8	150 ರೂಪಾಯಿನ ಭೋಗ್ಯಪತ್ರ.
556 / ಡಿಟೋ	ಮೈಸೂರು ಬಸವನ ಮಹಲೇಲಿರುವ ಶಿವಾಚಾರದ ವ್ಯಾಪಾರದ ಜೀವನದ ಯಜೂರಯ್ಯನಮಗ ಪುಟ್ಟಣ್ಣ	ಮೈಸೂರು ಬಸವನಮಹಲೇಲಿರುವ ಅಕಸಾಲೆ ಜಾತಿ ಸೊನಾರು ಕಸಬು ಚೆನ್ನವೀರಪ್ಪನ ಮಗ ವೀರಣ್ಣ	15—12—81	17—12—81	...1ಕ್ಕೆ 8 ರೂಪಾಯಿ ... ...ಲಿಂಗಡಿಬಾಡಿಗೆ ಕರಾ... ...ಪತ್ರಕ್ಕೆ
475 / ಡಿಟೋ	ಮೈಸೂರು ಬಸವನ ಮಹಲೇಲಿ ಯಿರುವ ಮುಸಲ್ಮಾನ್ ಚೌದ್ರಿ ಲಾಲಾಮಿಯ್ಯಾ ಮಗ ಮಹಮದ್ ಖಾಸಿಂಸಾಬಿ	ಮೈಸೂರುನಲ್ಲಿ ಯಿರುವ ದೇಶದ ಯಜಮಾನ್ ವೀರಣ್ಣಶೆಟ್ಟರ ಮಗ ರುದ್ರಶೆಟ್ಟಿ ಶಿವಾಚಾರ ಜಾತಿ	29—8—81	21—11—81	

...ರಿಜಿಸ್ಟ್ರಾರ್.

ನಗರ ಡಿವೀಜನ್.

ನಗರ ಡಿವೀಜನ್ ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ 66.

ಮೃತಪಟ್ಟ ಹಿರಿಯಂಣಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ರಂಗಂಣ, ಮೃತಪಟ್ಟ ಸದರೀ ಹಿರಿಯಂಣಪ್ಪನಿಗೆ ಮಗನು ಆಗಬೇಕೆಂಬ ಹಕ್ಕು ದಾರೀ ಮೇಲೆ ಕಡೂರು ತಾಲೂಕು ಪಟ್ಟಗೆರೆ ಸ್ಥಳದ ರಂಗಂಣನು ಸದರೀ ಪಟ್ಟಗೆರೆ ವಾಸಸ್ಥನಾಗಿ ಮೃತಪಟ್ಟ ಹಿರಿಯಂಣಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ 4000 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ರಂಗಂಣನ ಅರ್ಜೀಯನ್ನು 1884ನೇ ಇಸವಿ ಆಗಸ್ಟು ತಿಂಗಳು ತಾರೀಖು 30ರಲ್ಲಾ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನು ವಿಮರ್ಶೆ ಮಾಡಲ್ಪಡುತ್ತೆ! ಆ ಕಾಲದಲ್ಲಿ ಸದರೀ ಮೃತಪಟ್ಟ ಹಿರಿಯಣಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿಧೆ.

1884ನೇ ಇಸವಿ ಜುಲೈ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ

ಟಿ. ನರಹರಿರಾವ್,
ಡಿಸ್ಟ್ರಿಕ್ಟು ಜಡ್ಜ.

ಕಡೂರು ಡಿಸ್ಟ್ರಿಕ್ಟು ಟ್ರೆಜರಿ ಆಫಿಸಿನಿಂದ.

ತಾರೀಖು 11ನೇ ಜುಲೈ 1884.

ಇದರಿಂದ ತಿಳಿಯಪಡಿಸುವದೇನಂದರೆ, ಕಾಂಪ್‌ಟ್ರೋಲರ ಸಾಹೇಬರವರ ಆಫಿಸಿನ ಸ್ 1883ನೇ ಇಸವಿ ಅಕ್ಟೋಬರ್ 30ನೇ ... ರ್ಕ್ಯುಂ 2256ನೇ ನಂಬರ್ ಡಾಕೆಟ್ ಮೇರಿಗೆ ಕತ್ತರಿಸಲ್ಪಟ್ಟ 69 ಮಣ 15 ಪಾಂಡ್ 36 ತೊಲಾ ಯಿರುವ ಮೈಸೂರು ದುಡ್ಡುಗಳು ... ತ್ತು ಅರದುಡ್ಡುಗಳು ಯಿವುಗಳ ಬಾಬತು ತಾಂಬ್ರವನ್ನ ಪಡಿಯುವ ಬಗ್ಯೆ ಬರುವ ಮೊಹರ್ ಮಾಡಲ್ಪಟ್ಟ ಲಖೋಟೆಯಲ್ಲಿ ಅಡಗಿ ... ರ ದರಖಾಸ್ತುಗಳನ್ನು ಕಡೂರು ಡಿಸ್ಟ್ರಿಕ್ಟು ಟ್ರೆಜರಿ ಆಫಿಸರವರು, 1884ನೇ ಇಸವಿ ಆಗಸ್ಟು 14ನೇ ಬೃಹಸ್ಪತಿವಾರದ ವರಿಗೆ ತೆಗ... ಕೊಳ್ಳುವರು.

2. ಸದರೀ ತಾರೀಖಿನ ತರುವಾಯ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರದು.

3. ಆ ದರಖಾಸ್ತು ಲಿಫಾಫೆ ಮೇಲೆ "ಕಡೂರು ಡಿಸ್ಟ್ರಿಕ್ಟು ಟ್ರೆಜರೀಯಲ್ಲಿ ಕತ್ತರಿಸಲ್ಪಟ್ಟ ಮೈಸೂರು ತಾಂಬ್ರದ ದುಡ್ಡುಗಳನ್ನ ... ಕ್ರಯಕ್ಕೆ ತೆಗದುಕೊಳ್ಳತಕ್ಕ ದರಖಾಸ್ತು" ಯಂತ ಬರಿಯಬೇಕು.

4. ... 50 ರೂಪಾಯಿಗಳು ನಗದಾಗಿ ಅಥವಾ ಕರ್ರೆನ್ಸಿ ನೋಟಗಳ ಮೂಲಕ ಡಿಪಾಜಿಟನಿಸಿ ಕಳುಹಿಸಲ್ಪಟ್ಟ ಹೊರ್ತು ದರಖಾಸ್ತುಗಳು ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಚಿಕ್ಕಮಗಳೂರಲ್ಲಿ ಯಿರುವ ಕಡೂರು ಡಿಸ್ಟ್ರಿಕ್ಟು ಟ್ರೆಜರೀ ಆಫಿಸಿನಲ್ಲಿ ಹಾಜರಾಗಲಿಕ್ಕೆ ಯಿಷ್ಟವುಳ್ಳ ದರಖಾಸ್ತುದಾರರುಗಳ ರೂಬರೂ ಮೇಲ್ಕಂಡ ತಾರೀಖಿನ ಮಧ್ಯಾಹ್ನ 1 ಘಂಟೆಗೆ ಕಡೂರು ಡಿಸ್ಟ್ರಿಕ್ಟು ಟ್ರೆಜರಿ ಆಫಿಸರವರಿಂದ ಖುಲ್ಲಾ ಮಾಡ... ನವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ ಇಂಗ್ಲಿಷ ತೂಕ 25 ಪಾವ್‌ಗೆ ಒಂದು ಮಣದಂತೆ ಆಗತಕ್ಕ ತಾಂಬ್ರಕ್ಕೆ ಅವರಿಗೆ ... ಷ್ ಯಿರುವ ದರವು ಅಕ್ಷರದಿಂದಲೂ ಅಂಕಿಯಿಂದಲೂ ಸಾಫ್ ನಮೂದಿಸತಕ್ಕದ್ದು.

7. ಟ್ರೆಜರಿ ಆಫೀಸರವರು ಯಾವ ದರಖಾಸ್ತನ್ನಾಗಲಿ ಕಾರಣಗಳನ್ನ ಹೇಳದೆ ತಿರಸ್ಕರಿಸುವ ಸ್ವಾತಂತ್ರವನ್ನು ತಮ್ಮಲ್ಲಿ ವುಳಸಿಕೊಂಡಿರುತ್ತಾರೆ.

8. ಮಂಜೂರಾದ ದರಖಾಸ್ತುದಾರನು ಡಿಪಾಜಿಟ್ ಮೊಬಲಗು ಶಿವಾಯಿ ಬಾಕೀ ಸದರೀ ತಾಂಬ್ರಕ್ಕೆ ಅವನು ಮಂಜೂರಾದ ದರದಂತೆ ಕೊಡಬೇಕಾದ ಪೂರಾ ಮೊಬಲಗನ್ನ ದರಖಾಸ್ತು ಮಂಜೂರಾದ ಕೂಡ್ಲೇ ಕೊಡಲಿಕ್ಕೆ ತಪ್ಪಿದರೆ ಸದರೀ ಡಿಪಾಜಿಟ್ ಸರಕಾರಕೆ ಸೇರಿಸಿಕೊಳ್ಳುವದಲ್ಲದೆ ಸದರೀ ತಾಂಬ್ರವನ್ನ ಪುನಹಾ ಹರಾಜು ಮಾಡಿಸಿ ಆ ಯರಡನೆ ಹರಾಜಿನಲ್ಲಿ ನಷ್ಟಬರುವ ಮೊಬಲಗನ್ನ ತಪ್ಪಿದ ದರಖಾಸ್ತುದಾರನು ಕೊಡುವದಕ್ಕೆ ಬದ್ಧನಾಗಿ ಯಿರುತ್ತಾನೆ.

ಕೆ. ನಾಗೇಶರಾವ್,
ಫಾರ್ ಡೆಪ್ಯುಟಿ ಕಮ್ಮಿಷನರ್
ಟ್ರೆಜರಿ ಡಿಪಾರ್ಟಮೆಂಟ್.

ಹಾಸನ ಸಬ

ಯಾದಾಸ್ತು ಜಫ್ತೀ ಸ್ಟೇಟಮೆಂಟ ತಾಲ್ಲೂಕು

ನಂಬರು.	ಪಟ್ಟೇ ನಂಬರು	ಸರ್ವೆ ನಂಬರು.	ಹಣ ಕೊಡಲಿಕ್ಕೆ ತಪ್ಪಿದವರ ಹೆಸರು.	ತಾಲ್ಲೂಕು—ಗ್ರಾಮ.	ಎಸ್ಟೇಟಿನ ಹೆಸರು.	ಜಮೀನಿನ ನಂ. ಎಕರೆ.	ಹಾಲಿ ಕಂದಾಯ.			ಬಾಕಿಗಳು. 81—82.			ಬಾಕಿಗಳು. 82—83.		
1	72	19	ಮೆ॥ ಚಾರ್ಲಿಸ ವರ್ತ್‌ಸಾಹೆಬರು	ಬೇಲೂರು, ಕೊಳಲು	ಕೊಳಲಿಗ್ರಾಮದ ವುಡುವೆ	66-32	106	12	0	31	3	2	41	12	0
2	11	17	ಡಿಟೋ	ಬೇಲೂರು ಪಳೋಳಿ	ಪಳೋಳಿ ವುಡುವೆ	1-16	2	3	0	5	7	0	5	13	3
3	11	18	ಡಿಟೋ	ಡಿಟೋ	ಪಳೋಳಿ ಗ್ರಾಮದ ಕೊಪ್ಪ	5-0	1	8	0						
4	12	110	ಡಿಟೋ	ಡಿಟೋ ಕುಂಬಾರಹಳ್ಳಿ ಗ್ರಾಮ	ಕುಂಬಾರಹಳ್ಳಿ ಗ್ರಾಮ	224-8	132	3	0						
5	12	111	ಡಿಟೋ	ಡಿಟೋ	ಡಿಟೋ	18-25	18	3	0	162	3				
6	57	114	ಡಿಟೋ	ಡ್ಯಾಟಿ	ಕೊಪ್ಪ	3-17	0	12	0						
7	46	85	ಡಿಟೋ	ಡಿಟೋ ಶಿರಗರು ಗ್ರಾಮ	ಈಗ್ರಾಮದ ವುಡುವೆ	79-15	38	9	0	81	7	0	81		
8	46	83	ಡಿಟೋ	ಡಿಟೋ	ಡಿಟೋ	77-6	38	1	0						
					ಒಟ್ಟು ಜುಮ್ಲಾ		414	13	0	280	4	2	289	9	

14ನೇ ಜುಲೈ 1884.

ಹಾಸನ ಸಬ

ಯಾದಾಸ್ತು ಇಫ್ತ್ರೀ ಸ್ಟೇಟಮೆಂಟ ತಾಲ್ಲೂಕು

ನಂಬರು.	ಪಟ್ಟೆ ನಂಬರು	ಸರ್ವೆ ನಂಬರು.	ಜಮೀನು ಹೊಂದಿದ್ದ ದಾರರ ಹೆಸರು.	ತಾಲ್ಲೂಕು—ಗ್ರಾಮ.	ಸ್ಥಳದ ಹೆಸರು.	ವಿಸ್ತೀರ್ಣ ಎ. ಗುಂ.	ಜಾರಿ ಕಂದಾಯ.			ಬಾಕಿಗಳು. 81—82.			82—83.		
1	72	19	ಮೆ॥ ಚಾರ್ಲಿಸ ವರ್ತ್ಸಾಹೆಬರು	ಬೇಲೂರು, ಕೊಳಲು	ಕೊಳಲಿಗ್ರಾಮದ ವುಡುವೆ	66–32	106	12	0	31	3	2	41	12	0
2	11	17	ಡಿಟೋ	ಬೇಲೂರು ಬಳೋಲಿ	ಬೆಳೋಲಿ ವುಡುವೆ.	1-16	2	3	0	5	7	0	5	13	3
3	11	18	ಡಿಟೋ	ಡಿಟೋ	ಬಳೋಲಿ ಗ್ರಾಮದ ಕೊಪ್ಪ	5—0	1	8	0						
4	12	110	ಡಿಟೋ	ಡಿಟೋ ಕುಂಬಾರಹಳ್ಳಿ ಗ್ರಾಮ	ಕುಂಬಾರಹಳ್ಳಿ ಗ್ರಾಮ	224–8	132	3	0	162	3	0	160	9	0
5	12	111	ಡಿಟೋ	ಟಿಟೋ	ಡಿಟೋ	18-25	18	3	0						
6	57	114	ಡಿಟೋ	ಡ್ಯೂಟಿ	ಕೊಪ್ಪ	3–17	0	12	0						
7	46	85	ಡಿಟೋ	ಡಿಟೋ ಶಿರಗರು ಗ್ರಾಮ	ಈಗ್ರಾಮದ ವುಡುವೆ	79-15	38	9	0	81	7	0	81	7	0
8	46	83	ಡಿಟೋ	ಡಿಟೋ	ಡಿಟೋ	77—6	38	1	0						
					ಒಟ್ಟು ಜುಮ್ಲಾ..		414	13	0	280	4	2	289	9	3

14ನೇ ಜುಲೈ 1884.

460

ಡಿವಿಜನ್.

ಬೇಲೂರು ಸಂಮತು ಅರೇಹಳ್ಳಿ ಹೋಬಳಿ.

83—84.			ಜುಮ್ಲಾ.			ಚತುರ್ಸಡಿ. ಪೂರ್ವ.	ಪಶ್ಚಿಮ.	ದಕ್ಷಿಣ.	ಉತ್ತರ.	ಷರಾ
						ಸರ್ವೆ 19ನೇ ನಂ. ಜಮೀನಿಗೆ				
109	4	0	182	3	2	ಸರ್ವೆ ನಂ. 14—133ನೇ ನಂಬರ್	ಬೆಳಳ್ಳಿ ಗ್ರಾಮದ ಗಡಿ	ಸರ್ವೆ 118–119 120–121ನೇ ನಂ. ಜಮೀನು	ಸರ್ವೆ 20–22–17–16ನೇ ಜಮೀನು	
						ಸರ್ವೆ 17ನೇ ನಂ. ಜಮೀನಿಗೆ				
5	2	0	16	6	3	17ನೇ ನಂಬರಿಗೆ ಚಕ್ಕು ಬಂದಿ ಕೊಳಲಿಗಡಿ	ಇವರ ಪಟ್ಟೆ 18ನೇ ನಂಬರು	ಇವರ ಪಟ್ಟೆ 18ನೇ ನಂಬರು	16ನೇ ನಂ. ಕಾಫಿ ತೋಟ	
						ಸರ್ವೆ 18ನೇ ನಂ. ಜಮೀನಿಗೆ				
						ಕೊಳಲಿಗಡಿ	ಸರ್ವೆ 19–20ನೇ ನಂಬರು	ಸರ್ವೆ 37ನೇ ಜಮೀನು	ಸರ್ವೆ 17ನೇ ನಂ. ಜಮೀನು	
						ಸರ್ವೆ 110ನೇ ನಂಬರಿಗೆ				
						ಸರ್ವೆ 111–96ನೇ ಜಮೀನು	ಗೋಣೀಬೀಡು ಗಡಿ	ಗೋಣೀಬೀಡು ಮತ್ತು ಶಿರಗೂರಿನ ಗಡಿ	ಸರ್ವೆ 123–114–113–109ನೇ ನಂ. ಜಮೀನು	
						ಸರ್ವೆ 111ನೇ ಜಮೀನಿಗೆ				
184	12	8	507	8	8	ಪೂರ್ವ 110ನೇ ನಂ. ಕಾಫಿ ತೋಟ	ಸರ್ವೆ 110ನೇ ನಂ.	110ನೇ ನಂ. ಜಮೀನು	ಸರ್ವೆ 112ನೇನಂ.	
						ಸರ್ವೆ 114ನೇ ನಂಬರಿಗೆ				
						ಸರ್ವೆ 113ನೇ ನಂ. ಜಮೀನು	110ನೇ ನಂ. ಜಮೀನು	110ನೇ ನಂ. ಜಮೀನು	115ನೇ ನಂ. ಜಮೀನು	
						85ನೇ ನಂಬರಿಗೆ				
83	7	0	246	5	0	ಸರ್ವೆ 84–86ನೇ ನಂಬರು	ಸರ್ವೆ 83ನೇ ನಂಬರ್	83–82ನೇ ನಂ.	81ನೇ ನಂಬರು	
						83ನೇ ನಂಬರಿಗೆ				
						ಸರ್ವೆ 84–82ನೇ ನಂಬರು	ಹೊಸಳ್ಳಿ ಗ್ರಾಮದ ಗಡಿ	ಹೊಸಹಳ್ಳಿ ಗ್ರಾಮದ ಗಡಿ	85ನೇ ನಂ. ಜಮೀನು	
382	9	8	952	7	1					

ಟಿ. ಆನಂದರಾವ್, ಸಬ್ ಡಿವಿಜನ್ ಆಫೀಸರ್.

ಕ್ರಿಸ್ಟಲ್ಲೈಜ್ ಸಿಂಕೋನಾ ಫೆಬ್ರಿಫ್ಯೂಜ್.

ಗವರ್ನ್‌ಮೆಂಟ್ ಕೋಠೀಯಲ್ಲಿ ಕೆಂಪುವರ್ಣದ ಸಿಂಕೋನಾ ಚಕ್ಕೆಯಿಂದ ತಯಾರ್ ಮಾಡಲ್ಪಟ್ಟ ಹೊಸದಾದ ಮತ್ತು ಅಭಿವೃದ್ಧಿಯಾದ ತಯಾರಿ—ಇದು ಸಾಧಾರಣವಾದ ಕ್ರಿಸ್ಟಲ್ಲೈಜ್ಡ್ ಅಲ್ಲದ ಫೆಬ್ರಿಫ್ಯೂಜಿಗಿಂತ ಕ್ವಿನೈನಿಗೆ ಸಂಪೂರ್ಣವಾದ ಪ್ರತಿನಿಧಿಯಾಗಿದೆ. ಇದನ್ನು ಕಲ್‌ಕತ್ತೆ ಬಳಿ ಸೀಬ್‌ಪೂರ್ ಸಮೀಪದಲ್ಲಿ ರಾಯಲ್‌ಬೊಟಾನಿಕ್ ಗಾರ್ಡನ್ ಸೂಪರಿಂಟೆಂಡೆಂಟರಿಂದ ಗವರ್ನ್‌ಮೆಂಟ್ ಆಫಿಸರಗಳು ಸರ್ಕಾರಿಯಾದ ಮತ್ತು ಧರ್ಮಾರ್ಥವಾದ ಕೆಲಸಗಳಿಗಾಗಿ ಮತ್ತು ಒಂದು ಸಲಕ್ಕೆ ಇಪ್ಪತ್ತು ಪೌಂಡು ಮತ್ತು ಅದಕ್ಕೆಮೇಲ್ಪಟ್ಟು ತೆಗದುಕೊಳ್ಳುವರು ನಗದಿಗಾಗಿಯೇ ಪೌಂಡ್ ಒಂದಕ್ಕೆ 24 ರೂಪಾಯಿಗಳ ದರ ಪ್ರಕಾರ, ಕೊಂಡುಕೊಳ್ಳಬಹುದು. ರಾಯಲ್ ಬೊಟಾನಿಕ್ ಗಾರ್ಡನ್ ಸೂಪರಿಂಟೆಂಡೆಂಟರು ನಗದಿಗೇನೇ ಸಮುದಾಯವಾಗಿ ಪ್ರಜೆಗಳಿಗೆ ಮತ್ತು ಪೌಂಡ್ ಒಂದಕ್ಕೆ 32 ರೂಪಾಯಿಗಳ ಪ್ರಕಾರ ಮುಖ್ಯರಾದ ಯೂರೋಪಿಯನ್ ಮತ್ತು ನೇಟಿವ್ ಡ್ರಗ್ಗಿಸ್ಟಗಳು ಸರಬರಾಯಿ ಮಾಡತಕ್ಕದ್ದು. ಟಪ್ಪಾಲ್ ಹಾಸಲ್ ಹನ್ನೆರಡಾಣೆ ಜಾಸ್ತಿ.

ಮೈಸೂರು ಗೆಜೆಟ್, ಚಂದಾ ದರ ವಗೈರೆ.

	ಚಂದಾ. ರೂ.	ಆ.	ಟಪ್ಪಾಲ್ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ. ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛಷ್ ಮಾಹೆ ಯಾ ಕ್ವಾರಟರಿಗೆ	ದಾಮಾಷಾಯಿ ಪ್ರಕಾರ ದರಗಳು.			

ಶಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟೀಸುಗಳು:—

			ರೂ.	ಆ.
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ)		..	2	8
ಯರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟ್ಟೋ	..	..	1	4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ, ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟೀಸ್‌ಗಳಿಗೆ:—

ಮೊದಲನೇ ದಫಾ ..	..	..	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	..	..	2	8

ಶಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಡ್ಯುಪ್ಲಿಕೇಟ್ ಕಾಫೀ ಪಟ್ಟೇ, ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫಿಸರಗಳು ಕೊಡುವ ನೋಟೀಸ್‌ಗಳಿಗೆ:—

ಮೊದಲನೇ ಸಲಕ್ಕೆ ..	ಪುಟ 1ಕ್ಕೆ	..	10	0
ಯೆರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	„	..	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್‌ಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ		ಪಜ್ತಿ 1ಕ್ಕೆ	..	0	8
ಯೆರಡನೇ ದಫಾ	ಡಿಟ್ಟೋ	ಡಿಟ್ಟೋ	..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ		..	..	0	4

ಬಮೋಜೀಬ್ ಹುಕ್ಕುಂ,
ಹೆಚ್. ಹಡರ್ನ್,
ಮೈ. ಗೆ. ಕಂಪೈಲರ್.

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಾಯಿಷ್ ಆದದ್ದು.

ಬೆಂಗಳೂರು, ಶನಿವಾರ, ಆಗಸ್ಟ್ ತಾ|| 2, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೩ನೇ ಭಾಗ.

ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು.

ಇದರಡಿ ಬರುವ ರೆಗ್ಯೂಲೇಷನ್, 1884ನೇ ಇಸವಿ ಜುಲೈ 21ನೇ ಮರ್ಕುಮಿನಲ್ಲಿ ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದ್ದೂರವರ ಅನುಮತಿಯನ್ನು ಪಡೆದು ಇದರ ದೆಶೆಯಿಂದ ಸರ್ವರ ತಿಳುವಳಿಕೆಯ ಬಗ್ಗೆ ಪ್ರಕಟಿಸಲ್ಪಡುತ್ತೆ.

ಸನ್ 1884ನೇ ಇಸವಿಯ IIIನೇ ರೆಗ್ಯೂಲೇಷನ್.

ಮೈಸೂರು ದೇಶದ ಕೋರ್ಟುಗಳಲ್ಲಿ ವಕಾಲತ್ತು ಮಾಡುವ ಲೀಗಲ್ ಪ್ರಾಕ್ಟೀಷನರಿಗೆ (ಅಂದರೆ ವಕಾಲತ್ತು ಮಾಡತಕ್ಕವರಿಗೆ) ಸಂಬಂಧಪಟ್ಟ ಕಾನೂನನ್ನು ತಿದ್ದುಪಾಟು ಮಾಡುವದಕ್ಕೆ ಹುಟ್ಟಿದ ರೆಗ್ಯೂಲೇಷನ್.

ಮೈಸೂರು ದೇಶದಲ್ಲಿ ವಕಾಲತ್ತು ಮಾಡತಕ್ಕವರಿಗೆ ಸಂಬಂಧಪಟ್ಟ ಕಾನೂನನ್ನು ತಿದ್ದುಪಡಿಮಾಡಿ ದೃಢಪಡಿಸುವದು ಆವಶ್ಯಕವಾಗಿರುವದರಿಂದ, ಶ್ರೀಮನ್ ಮಹಾರಾಜರವರು ಇದರಡಿಕಂಡ ಮೇರೆ ವಿಧಿಸುತ್ತಾರೆ:—

ಅಧ್ಯಾಯ I.

ಅವತರಣಿಕೆ.

ಚಿಕ್ಕ ಹೆಸರು.
ಪ್ರಾರಂಭ.

ಸೆಕ್ಷನ್ 1.—ಈ ರೆಗ್ಯೂಲೇಷನ್ನು "1884ನೇ ಇಸವಿಯ ಮೈಸೂರು ಲೀಗಲ್ ಪ್ರಾಕ್ಟೀಷನರಗಳ ರೆಗ್ಯೂಲೇಷನ್" ಯಂಬದಾಗಿ ಕರೆಯಲ್ಪಡಬಹುದು, ಮತ್ತು ಯಿದು 1884ನೇ ಇಸವಿ ಸೆಪ್ಟಂಬರ್ 1ನೇ ತಾರೀಖಿನಲ್ಲಿ ಜಾರೀಗೆ ಬರತಕ್ಕದ್ದು.

ಸ್ಥಳ ವ್ಯಾಪ್ತಿ.

ಯಿದು ಮೈಸೂರು ದೇಶದಲ್ಲಿ ಸರ್ವತ್ರ ವ್ಯಾಪಿಸುತ್ತದೆ.

ರೂಲ್‌ಸ್‌ಗಳ ರದ್ದೀಯಾತಿ.

ಸೆಕ್ಷನ್ 2.—1884ನೇ ಇಸವಿ ಸೆಪ್ಟಂಬರ್ 1ನೇ ಮರ್ಕುಂ ಮತ್ತು ಆತರುವಾಯ, 1879ನೇ ಇಸವಿ ಫಿಬ್ರವರೀ 18ನೇ ಮರ್ಕುಂ 273ನೇ ನಂಬರ್‌ವುಳ್ಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಯಲ್ಲಿ ಪ್ರಾಯಿಷ್ ಮಾಡಲ್ಪಟ್ಟ (ಅಡ್ವೋಕೇಟ್ ವ ಪ್ಲೀಡರುಗಳಿಗೆ ಸಂಬಂಧಪಟ್ಟ) ರೂಲ್‌ಸ್‌ಗಳೂ, ಮತ್ತು 1880ನೇ ಇಸವಿ ಮಾರ್ಚಿ 12ನೇ ಮರ್ಕುಂ 306ನೇ ನಂಬರ್‌ವುಳ್ಳ ಚೀಫ್ ಕಮ್ಮಿಷನರವರ ಇಸ್ತಿಹಾರ್‌ನಾಮೆಯಲ್ಲಿ ಪ್ರಾಯಿಷ್ ಮಾಡಲ್ಪಟ್ಟ (ಲೀಗಲ್ ಪ್ರಾಕ್ಟೀಷನರಗಳು ಕಕ್ಷಿಗಾರ ವಗೈರೆಯೊಂದಿಗೆ ಮಾಡುವ ಒಡಂಬಡಿಕೆಗಳಿಗೆ ಸಂಬಂಧಪಟ್ಟ) ರೂಲ್‌ಸ್‌ಗಳೂ, ರದ್ದು ಮಾಡಲ್ಪಡತಕ್ಕವು.

ಯಿದರಲ್ಲಿ ಯೇನು ಅಡಗಿಯಿದ್ದಾಗ್ಯೂಸರಿ, ಅಡ್ವೋಕೇಟ ವ ಪ್ಲೀಡರುಗಳಿಗೆ ಸಂಬಂಧಪಟ್ಟ 1879ನೇ ಇಸವಿ ಫೆಬ್ರವರೀ 18ನೇ ಮರ್ಕ್ಕುಮಿನ ರೂಲ್ಸ ಅನುಸರಿಸಿ ಮೊದಲೇ ದಾಖಲ್ಮಾಡಲ್ಪಟ್ಟ ಅಡ್ವೋಕೇಟ, ಮತ್ತು 1 ವ 2ನೇ ಕ್ಲಾಸ ಪ್ಲೀಡರುಗಳು, ಮೇಲ್ಕಂಡ ರೂಲ್ಸಗಳ ಷರತ್ತುಗಳನುಸರಿಸಿ 1884ನೇ ಇಸವಿ ಡಿಶಂಬರ 31ನೇ ಮರ್ಕ್ಕುಂ ವರಿಗೆ ವಕಾಲತ್ತು ನಡಸತಕ್ಕದ್ದು.

ಅರ್ಥ ವಿವರಣೆ.

ಸೆಕ್ಷನ್ 3.—ಈ ರೆಗ್ಯೂಲೇಷನಿನಲ್ಲಿ ಸಂದರ್ಭಕ್ಕಾಗಲೀ ಪ್ರಮೇಯಕ್ಕಾಗಲೀ ವಿರುದ್ಧಾಂಶವೇನೂ ಯಿಲ್ಲದೆ ಯಿರುವ ಪಕ್ಷಕ್ಕೆ.—

"ಲೀಗಲ ಪ್ರಾಕ್ಟೀಷನರ" ಅಂದರೆ ಈ ರೆಗ್ಯೂಲೇಷನ್ ಅನುಸರಿಸಿ ದಾಖಲ ಮಾಡಲ್ಪಟ್ಟ ವಬ್ಬ ಅಡ್ವೋಕೇಟ ಯಾ ಪ್ಲೀಡರೆಂದು ಅರ್ಥವು.

"ಜಡ್ಜ" ಅಂದರೆ ಪ್ರತಿ ಸಿವಿಲ ವ ಕ್ರಿಮಿನಲ ಕೋರ್ಟಿನ ವಿಚಾರಣೆ ಅಧಿಕಾರವುಳ್ಳ ಜ್ಯುಡಿಷಿಯಲ ಆಫೀಸರೆಂದು ಅರ್ಥವಾಗುತ್ತದೆ, ಅವರು ಯಾವ ಹೆಸರಿನಿಂದ ಕರೆಯಲ್ಪಟ್ಟಾಗ್ಯೂ ಚಿಂತೆಯಿಲ್ಲ.

"ಗವರ್ನಮೆಂಟ" ಅಂದರೆ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರವೆಂದರ್ಥವು.

ಅಧ್ಯಾಯ II.

ಅಡ್ವೋಕೇಟ ವ ಪ್ಲೀಡರುಗಳು.

ಕೋರ್ಟುಗಳಮುಂದೆ ಯಾರು ವಕಾಲತ್ತು ಮಾಡತಕ್ಕದ್ದು.

ಸೆಕ್ಷನ್ 4.—ಶಿವಿಲ ವ ಕ್ರಿಮಿನಲ ಪ್ರೊಸಿಡ್ಯೂರ ಕೋಡುಗಳಲ್ಲಾಗಲೀ ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಯಿತರ ಕಾನೂನಿನಲ್ಲಾಗಲಿ ವಿಧಿಸಿರುವ ರೀತೀಲಿ ಹೊರ್ತು, ಯಾವ ಮನುಷ್ಯನಾಗಲೀ ಆತನು ಈ ರೆಗ್ಯೂಲೇಷನ್ ಅನುಸರಿಸಿ ವಬ್ಬ ಅಡ್ವೋಕೇಟ ಯಾ ಪ್ಲೀಡರ ತರೀಕ ದಾಖಲ ಮಾಡಲ್ಪಟ್ಟಿದ್ದರೇನೆ ಶಿವಾಯಿ, ಮೈಸೂರು ದೇಶದ ಯಾವ ಕೋರ್ಟಿನಲ್ಲಾಗಲಿ ಮತ್ತೊಬ್ಬನಿಗೋಸ್ಕರ ಹಾಜರಾಗಕೂಡದು, ವಕಾಲತ್ತು ನಡಿಸಕೂಡದು ಯಾ ಕೆಲಸ ನಡಿಸಕೂಡದು.

ಪರಂತು, ಯಾವ ಕ್ರಿಮಿನಲ ಕೋರ್ಟಿನ ಮುಂದಾಗಲಿ ವಂದು ತಕ್ಸೀರ ಆಪಾದಿಸಲ್ಪಟ್ಟ ಪ್ರತಿ ಮನುಷ್ಯನೂ, ತನ್ನ ಬಚಾವಣೆ ವುದ್ದಿಶ್ಯ ತನಿಗೆ ಸಹಾಯ ಮಾಡುವ ಬಗ್ಯೆ ಯಾವ ಮನುಷ್ಯನನ್ನಾಗಲೀ ಕೋರ್ಟಿನವರ ಅಪ್ಪಣೆ ಪಡೆದು ನೇಮಿಸಬಹುದೇ ಹೊರ್ತು ಅನ್ಯಥಾ ನೇಮಿಸಕೂಡದು;

ಪರಂತು, ಯಾವ ಜ್ಯುಡಿಷಿಯಲ ಪ್ರೊಸಿಡಿಂಗ್ಸ್‌ಯಾನೆ ನಡವಳಿತದ ವಿಷಯದಲ್ಲಾಗಲಿ ಗವರ್ನಮೆಂಟಿನ ತರಫ ಕೆಲಸ ನಡಿಸುವದಕ್ಕೆ ವುದ್ಯೋಗತಃ ಆಗಲೀ ಅನ್ಯಥಾ ಆಗಲಿ ಅಧಿಕಾರ ಹೊಂದಿದ ಯಾವ ಮನುಷ್ಯನಾದರು ಗವರ್ನಮೆಂಟ ತರಫನಲ್ಲಿ ಅವನ ಅಧಿಕಾರಕ್ಕೆ ಒಳಪಟ್ಟು ಕೆಲಸಗಳು ನಡಿಸಬಹುದು, ಹಾಜರಾಗಬಹುದು, ಮತ್ತು ಅರ್ಜಿಗಳು ಕೊಡಬಹುದು.

ಯಾವ ಕೋರ್ಟುಗಳಲ್ಲಿ ಅಡ್ವೋಕೇಟರುಗಳು ವಕಾಲತ್ತು ಮಾಡಬಹುದು.

ಸೆಕ್ಷನ್ 5.—ಈ ರೆಗ್ಯೂಲೇಷನಿನ ನಿಯಮಗಳನುಸರಿಸಿ ಕ್ರಮವಾಗಿ ದಾಖಲ ಮಾಡಲ್ಪಟ್ಟ ಅಡ್ವೋಕೇಟರುಗಳು, ಮೈಸೂರು ಚೀಫ ಕೋರ್ಟಿನಲ್ಲಿಯೂ, ಅದಕ್ಕೆ ತಾಬೇದಾರಿಯಾದ ತಮಾಂ ಸಿವಲ ವ ಕ್ರಿಮಿನಲ ಕೋರ್ಟುಗಳಲ್ಲಿಯೂ ಹಾಜರಾಗುವದಕ್ಕೂ, ವಕಾಲತ್ತು ಮಾಡುವದಕ್ಕೂ, ಮತ್ತು ಕೆಲಸ ನಡಿಸುವದಕ್ಕೂ ಅರ್ಹರಾಗಿರತಕ್ಕದ್ದು.

ಪ್ಲೀಡರುಗಳು.

ಸೆಕ್ಷನ್ 6.—ಪ್ಲೀಡರುಗಳಲ್ಲಿ 1ನೇ ಗ್ರೇಡ ಪ್ಲೀಡರುಗಳು ವ 2ನೇ ಗ್ರೇಡ ಪ್ಲೀಡರುಗಳು ಯಂಬದಾಗಿ ಯೆರಡು ತರಗತಿಯ ಪ್ಲೀಡರುಗಳಿರತಕ್ಕದ್ದು.

ಯಾವ ಕೋರ್ಟುಗಳಲ್ಲಿ ವಂದನೇ ಗ್ರೇಡ ಪ್ಲೀಡರುಗಳು ವಕಾಲತ್ತು ಮಾಡಬಹುದು.

ಸೆಕ್ಷನ್ 7.—ವಂದನೇ ತರಗತಿಯ ವಬ್ಬ ಪ್ಲೀಡರು, ಸಿವಿಲ ಪ್ರೊಸಿಡ್ಯೂರ ಕೋಡಿನಲ್ಲಿ ವಿವರಿಸಿರುವ ರೀತ್ಯಾ ಯಾವ ಡಿಸ್ಟ್ರಿಕ್ಟಿಗಾಗಿ ಆತನು ದಾಖಲ್ಮಾಡಲ್ಪಡುತ್ತಾನೋ ಅಂಥಾ ಡಿಸ್ಟ್ರಿಕ್ಟಿನೊಳಗೆ ಯಿರುವ ಯಾವ ಶಿವಿಲ ಕೋರ್ಟಿನಲ್ಲಾಗಲೀ ಮತ್ತು ಯಲ್ಲಾ ಕ್ರಿಮಿನಲ ಕೋರ್ಟಿನಲ್ಲಾಗಲೀ ಹಾಜರಾಗಲಿಕ್ಕೂ, ವಕಾಲತ್ತು ಮಾಡಲಿಕ್ಕೂ ಮತ್ತು ಕೆಲಸ ನಡಸಲಿಕ್ಕೂ ಅರ್ಹನಾಗಿರತಕ್ಕದ್ದು; ಪರಂತು, ಆತನು ಚೀಫ ಕೋರ್ಟಿನಲ್ಲಿ ವಕಾಲತ್ತು ಮಾಡುವದಕ್ಕೆ ಅರ್ಹನಾಗಿರತಕ್ಕದ್ದಲ್ಲವು.

ಯಾವ ಕೋರ್ಟುಗಳಲ್ಲಿ ಯರಡನೇ ತರಗತಿಯ ಪ್ಲೀಡರುಗಳು ವಕಾಲತ್ತು ಮಾಡಬಹುದು.

ಸೆಕ್ಷರ್ನ 8.—ಯರಡನೇ ತರಗತಿಯ ವಬ್ಬ ಪ್ಲೀಡರು, ಆತನು ಯಾವ ಕೋರ್ಟಿಗಾಗಿ ದಾಖಲ್ ಮಾಡಲ್ಪಡುತ್ತಾನೋ ಅಂಥಾ ಯಾವ ಮುಣ್ಸಿಫ್ ಕೋರ್ಟಿನಲ್ಲಾಗಲೀ ಯಲ್ಲಾ ಮಾಜಿಸ್ಟ್ರೇಟ್ ಕೋರ್ಟುಗಳಲ್ಲಾಗಲೀ ಹಾಜರಾಗಲಿಕ್ಕೂ, ವಕಾಲತ್ತು ಮಾಡಲಿಕ್ಕೂ ಮತ್ತು ಕೆಲಸ ನಡಸಲಿಕ್ಕೂ ಅರ್ಹನಾಗಿರತಕ್ಕದ್ದು.

ಯರಡನೇ ತರಗತಿಯ ಪ್ಲೀಡರುಗಳು, ಸಬಾರ್ಡಿನೇಟ್ ಜಡ್ಜೀರ ಕೋರ್ಟುಗಳಲ್ಲಿ ವಕಾಲತ್ತು ಮಾಡುವದಕ್ಕೆ ಅಧಿಕಾರ ಕೊಡಲ್ಪಡುವಣ.

ಸೆಕ್ಷರ್ನ 9.—ವಂದು ಸಬಾರ್ಡಿನೇಟ್ ಜಡ್ಜೀರ ಕೋರ್ಟು ಸ್ಥಾಪಿಸಲ್ಪಟ್ಟ ಸ್ಥಳದಲ್ಲಿ ವಕಾಲತ್ತು ಮಾಡುವಂಥಾ ಮೂವರು ಅಡ್ವೋಕೇಟರುಗಳಾಗಲೀ 1ನೇ ತರಗತಿಯ ಪ್ಲೀಡರುಗಳಾಗಲೀ ವಾಸವಾಗಿ ಯಿಲ್ಲದಿದ್ದರೆ, ಚೀಫ್ ಕೋರ್ಟಿನವರು ತಮ್ಮ ಅಂಥಾ ಷ್ರುದ್ದೇಶ್ಯವನ್ನ ಸರ್ಕಾರಿ ಗೆಜೆಟಿನಲ್ಲಿ ನೋಟೀಸ್ ಮೂಲಕ ಘಾಯಿಷ್ ಮಾಡಲ್ಪಟ್ಟ ಆರು ತಿಂಗಳ ತರುವಾಯ ಅಂಥಾ ಸಬಾರ್ಡಿನೇಟ್ ಜಡ್ಜೀರ ಕೋರ್ಟಿನಲ್ಲಿ ವಕಾಲತ್ತು ಮಾಡುವ ಬಗ್ಗೆಗಿ ಅವಶ್ಯಕವಾದ ಸಂಖ್ಯೆಯುಳ್ಳ ಯರಡನೇ ಗ್ರೇಡ್ ಪ್ಲೀಡರುಗಳಿಗೆ ಹೆಸರು ನಮೂದಿಸಿ ಅಧಿಕಾರ ಕೊಡಬಹುದು.

ಚೀಫ್ ಕೋರ್ಟಿನವರು, ಯೋಗ್ಯತೆ ವಿಷಯದಲ್ಲಿಯೂ, ದಾಖಲ್ಮಾಡುವ ವಿಷಯದಲ್ಲಿಯೂ ರೂಲ್‌ಸ್ ಮಾಡತಕ್ಕದ್ದು.

ಸೆಕ್ಷರ್ನ 10.—ಚೀಫ್ ಕೋರ್ಟಿನವರು, ಈ ರೆಗ್ಯೂಲೇಷರ್ನ ಅನುಸಾರವಾಗಿಯಿದರಡೀಕಂಡ ವಿಷಯಗಳಿಗೋಸ್ಕರ ಆಗಿಂದಾಗ್ಯೆ ರೂಲ್‌ಸ್ ಮಾಡಬಹುದು, ಯಾವ ಬಗ್ಯೆಂದರೆ;—

(1) ಈ ರೆಗ್ಯೂಲೇಷರ್ನ ಅನುಸಾರವಾಗಿ ಅಡ್ವೋಕೇಟರುಗಳಾಗಿಯಾಗಲಿ, 1ನೇ ಗ್ರೇಡ್ ಅಥವಾ 2ನೇ ಗ್ರೇಡ್ ಪ್ಲೀಡರುಗಳಾಗಿಯಾಗಲಿ ದಾಖಲ್ಮಾಡಲ್ಪಡತಕ್ಕ ಬಗ್ಯೆ ಆವಶ್ಯಕಗಳಾದ ಯೋಗ್ಯತೆಗಳು;

(2) ಅಂಥಾ ದಾಖಲಾತಿಗೋಸ್ಕರ ಕೊಡಲ್ಪಡುವ ದರಖಾಸ್ತುಗಳೊಂದಿಗೆ ಕಳುಹಿಸಲ್ಪಡಬೇಕಾದ, ಸರ್ಟಿಫಿಕೇಟುಗಳು: ಮತ್ತು—

(3) ಚೀಫ್ ಕೋರ್ಟಿನವರಿಂದ ಈ ರೆಗ್ಯೂಲೇಷನಿನ 11ನೇ ಸೆಕ್ಷರ್ನ ಅನುಸರಿಸಿ ಕೊಡಲ್ಪಡುವ ದಾಖಲಾತಿ ಸರ್ಟಿಫಿಕೇಟುಗಾಗಲಿ, ಅಥವಾ 12ನೇ ಸೆಕ್ಷರ್ನ ಅನುಸಾರವಾದ ರೆನ್ಯೂಯಲ್ ಸರ್ಟಿಫಿಕೇಟುಗಾಗಲಿ ಕೊಡಲ್ಪಡಬೇಕಾದ ಸ್ಟಾಂಪು ಮೊಬಲಗು.

ಈ ಸೆಕ್ಷರ್ನ ಅನುಸಾರವಾಗಿ ಮಾಡಲ್ಪಟ್ಟ ರೂಲ್ಸ್‌ಗಳು, ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟು ಸರ್ಕಾರಿ ಗೆಜೆಟ್ಟಿನಲ್ಲಿ ಘಾಯಿಷ್ ಮಾಡಲ್ಪಟ್ಟಾಗ ಕಾನೂನಿನ ಬಲವುಳ್ಳದ್ದಾಗಿರತಕ್ಕದ್ದು.

ದಾಖಲಾತೀ ಬಗ್ಯೆ ದರಖಾಸ್ತುಗಳು.

ಸೆಕ್ಷರ್ನ 11.—ಹತ್ತನೇ ಸೆಕ್ಷರ್ನ ಅನುಗುಣವಾಗಿ ಏರ್ಪಡಿಸೋಣಾದ ರೂಲ್‌ಸ್‌ಗಳನುಸರಿಸಿ ಕ್ರಮವಾಗಿ ಯೋಗ್ಯತಾವುಳ್ಳ ಪ್ರತಿ ಮನುಷ್ಯನೂ, ಈ ರೆಗ್ಯೂಲೇಷರ್ನ ಅನುಸರಿಸಿ ಅಡ್ವೋಕೇಟಾಗಿಯಾಗಲೀ ಪ್ಲೀಡರಾಗಿಯಾಗಲಿ ದಾಖಲ್ಮಾಡಲ್ಪಡುವ ಬಗ್ಯೆ ಮೈಸೂರು ಚೀಫ್ ಕೋರ್ಟಿಗೆ ದರಖಾಸ್ತು ಕೊಡಬಹುದು. ದರಖಾಸ್ತಿನ ಸಂಗಡ ಸದರೀ ರೂಲ್ಸ್‌ಗಳಿಂದ ಅಪೇಕ್ಷಿಸಲ್ಪಟ್ಟ ಸರ್ಟಿಫಿಕೇಟುಯಾನೇ ಯೋಗ್ಯತಾ ಪತ್ರಿಕೆಗಳನ್ನೂ ಸ್ಟಾಂಪು ಮೊಬಲಗನ್ನೂ ಹಾಜರ್ಮಾಡತಕ್ಕದ್ದು.

ಚೀಫ್ ಕೋರ್ಟಿನವರು ಅವರಿಗೆ ಯುಕ್ತ ಕಂಡು ಬಂದರೆ ದರಖಾಸ್ತನ್ನು ಮಂಜೂರ್ಮಾಡಬಹುದು ಮತ್ತು ದರಖಾಸ್ತು ಮಂಜೂರ್ಮಾಡಿದ ನಂತರ ಹತ್ತನೇ ಸೆಕ್ಷರ್ನ ಅನುಸಾರವಾಗಿ ಮಾಡೋಣಾದ ರೂಲ್ಸ್‌ನಲ್ಲಿ ವಿಧಿಸಲ್ಪಟ್ಟ ತಕ್ಕ ಛಾಪಾಕಾಗದದ ಮೇಲೆ ವಂದು ಸರ್ಟಿಫಿಕೇಟನ್ನು ಕೊಡತಕ್ಕದ್ದು.

ಈ ಸೆಕ್ಷರ್ನ ಪ್ರಕಾರ 1 ಯಾ 2ನೇ ತರಗತಿಯ ಪ್ಲೀಡರಿಗೆ ಕೊಡಲ್ಪಡುವ ಸರ್ಟಿಫಿಕೇಟಿನಲ್ಲಿ ದರಖಾಸ್ತುದಾರನು ಯಾವ ಕೋರ್ಟುಗಳಿಗೆ 7 ಯಾ 8ನೇ ಸೆಕ್ಷರ್ನ ಅನುಸಾರವಾಗಿ ಸಂದರ್ಭಾನುಸಾರ ದಾಖಲ್ಮಾಡಲ್ಪಟ್ಟಿರುತ್ತಾನೋ ಆ ತಪಶೀಲ್ ನಮೂದಿಸತಕ್ಕದ್ದು.

ಸರ್ಟಿಫಿಕೇಟ್.

ಸೆಕ್ಷರ್ನ 12.—ಈ ರೆಗ್ಯೂಲೇಷರ್ನ ಅನುಸರಿಸುಬ್ಬ ಪ್ಲೀಡರಿಗೆ ಕೊಡಲ್ಪಟ್ಟ ಪ್ರತಿ ಸರ್ಟಿಫಿಕೇಟೂ, ಅದು ಆತನಿಗೆ ಯಾವಸಾಲಿಗೆ ಕೊಡಲ್ಪಟ್ಟಿತೋ ಆ ಕ್ಯಾಲೆಂಡರ್ ಸಾಲಿನ ಆಖೈರವರೆಗೆ ವಕಾಲತ್ ಮಾಡುವ ಬಗ್ಯೆ ಅಧಿಕಾರ ಕೊಡುತ್ತದೆ.

ಸದರೀ ಮಾಯಿದೆಯು ಪೂರೈಸಿದಾಗ ಯಾ ಅದಕ್ಕೆ ಪೂರ್ವದಲ್ಲಿ ಅಂತಾ ಸರ್ಟಿಫಿಕೇಟ್ ಪಡೆದವನು, ವಕಾಲತು ಮಾಡುತ್ತಿರುವ ಬಗ್ಯೆ ಇಚ್ಛೆ ಪಟ್ಟರೆ ಆತನು ಸಾಧಾರಣವಾಗಿ ವಕಾಲತು ಮಾಡುತ್ತಿರುವ ಸ್ಥಳಅಧಿಕಾರವುಳ್ಳ ಡಿಸ್ಟ್ರಿಕ್ಟ್ ಜಡ್ಜಿಯವರ ಮುಖಾಂತ್ರ ಸರ್ಟಿಫಿಕೇಟನ್ನು ರೆನ್ಯೂ ಮಾಡುವ ಬಗ್ಯೆ ಚೀಫ್ ಕೋರ್ಟಿಗೆ ದರಖಾಸ್ತು ಮಾಡತಕ್ಕದ್ದು; ಚೀಫ್ ಕೋರ್ಟಿನವರು ಅದರ ಮೇಲೆ ಚಾಲತಿ ವರು

ಷಕ್ಕಾಗಲೀ ಯಾ ಮೂರನೇ ಕ್ಯಾಲಂಡರ್ ವರುಷಕ್ಕಾಗಲಿ ಸಂದರ್ಭಾನುಸಾರ ಸರ್ಟಿಫಿಕೇಟನ್ನು ರೆನ್ಯೂ ಮಾಡತಕ್ಕದ್ದು. ಪರಂತು, ದರಖಾಸ್ತುದಾರನು ವ್ಯಕ್ತವಾದ ದುರ್ನಡತೆಗೋಸ್ಕರವಾಗಲೀ ಇತರ ಕಾರಣಕ್ಕೋಸ್ಕರವಾಗಲೀ ಒಬ್ಬ ಲೀಗಲ್ ಪ್ರಾಕ್ಟಿಷನರಾಗಿರಲಿಕ್ಕೆ ಯೋಗ್ಯನಲ್ಲವೆಂದು ಚೀಫ್ ಕೋರ್ಟಿನವರ ಅಭಿಪ್ರಾಯದಲ್ಲಿ ಕಾಣಬಂದರೆ ಅವರು ಅಂಥಾವನ ದರಖಾಸ್ತನ್ನು ತಿರಸ್ಕರಿಸಬಹುದು.

ರೆನ್ಯೂ ಮಾಡಲ್ಪಟ್ಟ ಸರ್ಟಿಫಿಕೇಟ್ ಹತ್ತನೇ ಸೆಕ್ಷನ್ ಅನುಸಾರವಾದ ರೂಲ್ಸಗಳಿಂದ ವಿಧಿಸೋಣಾದ ತಕ್ಕ ಕಿಮ್ಮತ್ತಿನ ಛಾಪಾಕಾಗದದ ಮೇಲೆ ಕೊಡಲ್ಪಡತಕ್ಕದ್ದು.

ರೆನ್ಯೂ ಮಾಡುವ ಅಂಥಾ ಪ್ರತಿ ಸಂದರ್ಭದಲ್ಲಿಯೂ, ಆಗ್ಯೆ ಪ್ಲೀಡರಿನ ವಶದಲ್ಲಿರತಕ್ಕ ಸರ್ಟಿಫಿಕೇಟ್ ಚೀಫ್ ಕೋರ್ಟಿಗೆ ಒಪ್ಪಿಸಲ್ಪಟ್ಟು ರದ್ದು ಮಾಡಲ್ಪಟ್ಟು ಸದರಿ ಕೋರ್ಟಿನವರಿಂದ ಮುಳಿಸಿಕ್ಕೊಳ್ಳಲ್ಪಡತಕ್ಕದ್ದು.

ಲೀಗಲ್ ಪ್ರಾಕ್ಟಿಷನರುಗಳ ಸಸ್ಪೆಂಡು ವ ತಗ್ಯೆರ್.

ಸೆಕ್ಷನ್ 13.—ಚೀಫ್ ಕೋರ್ಟಿನವರು, ಮೇಲ್ಕಂಡ ನಿಯಮುಗಳನುಸರಿಸಿ ದಾಖಲ್ಮಾಡಲ್ಪಟ್ಟ ಯಾವ ಲೀಗಲ್ ಪ್ರಾಕ್ಟಿಷನರಾಗಲಿ ಆತನು ಒಬ್ಬ ಲೀಗಲ್ ಪ್ರಾಕ್ಟಿಷನರಾಗಿರುವದಕ್ಕೆ ಅನರ್ಹನನ್ನಾಗಿ ಮಾಡುವಂಥಾ ಒಂದು ದುಷ್ಟ ಸ್ವಭಾವವುಳ್ಳ ಯಾವ ಕ್ರಿಮಿನಲ್ ತಕಶೀರಾಗಲಿ ಹೊರಿಸಲ್ಪಟ್ಟರೆ, ಅಥವಾ ಆತನು ತನ್ನ ಉದ್ಯೋಗದ ಕೆಲಸ ಜರಗಿಸುವದರಲ್ಲಿ ಮೋಸಕರವಾದ ಯಾ ಅಕ್ರಮವಾದ ಕೆಟ್ಟ ನಡತೆಯ ತಪ್ಪಿತಸ್ತನಾದರೆ ಅಂಥಾವನನ್ನು ಸಸ್ಪೆಂಡ್ ಯಾ ತಗ್ಯೆರ್ ಮಾಡಬಹುದು.

ಲೀಗಲ್ ಪ್ರಾಕ್ಟಿಷನರುಗಳ ಅಕ್ರಮವಾದ ನಡತೆ ವಿಷಯದಲ್ಲಿ ವಿಚಾರಣೆ.

ಸೆಕ್ಷನ್ 14.—ಚೀಫ್ ಕೋರ್ಟಿನಲ್ಲಾಗಲೀ ಅದಕ್ಕೆ ತಾಬೇದಾರಿಯಾದ ಯಾವ ಕೋರ್ಟಿನಲ್ಲಾಗಲಿ ವಕಾಲತು ಮಾಡುತ್ತಿರುವ ಯಾವ ಲೀಗಲ್ ಪ್ರಾಕ್ಟಿಷನರಾದರೂ, ತನ್ನ ಉದ್ಯೋಗದ ಕೆಲಸ ಜರಗಿಸುವದರಲ್ಲಿ ಮೋಸಕರವಾದ ಯಾ ನೀಚವಾದ ಅಕ್ರಮ ನಡತೆ ಉಳ್ಳವನೆಂದು ತಪ್ಪು ಆಪಾದಿಸಲ್ಪಟ್ಟರೆ ಯಾ ಕಾಣಬಂದರೆ ಅಂಥಾ ಕೋರ್ಟಿನ ಯಾವ ಜಡ್ಜಿಯಾದರೂ ಹಾಂಗೆ ತಿಳಿಸಲ್ಪಟ್ಟ ದುರ್ನಡತೆಯನ್ನು ಸಂಕ್ಷೇಪವಾಗಿಯೂ ಕರಾರ್ವಾಕಾ ಆಗಿಯೂ ನಮೂದಿನಿಂದ ಒಂದು ಕ್ರಮವಾದ ಛಾರ್ಜನಾಮೆಯನ್ನು ತಯಾರ್ಮಾಡಿಸಿ ಅದರ ಒಂದು ನಕಲನ್ನು ಮತ್ತು ಸದರೀ ಛಾರ್ಜ ಪರ್ಯಾಲೋಚಿಸುವದಕ್ಕೆ ಗೊತ್ತುಮಾಡೋಣಾದ ದಿವಸವನ್ನು ನಮೂದು ಮಾಡಿದ ಒಂದು ನೋಟೀಸನ್ನು ಸುದಾ ಸದರೀ ಲೀಗಲ್ ಪ್ರಾಕ್ಟಿಷನರಿಗೆ ಕಳುಹಿಸತಕ್ಕದ್ದು. ಅಂಥಾ ನಕ್ಕಲು ಮತ್ತು ನೋಟೀಸ್ ಸುದಾ ಹಾಂಗೆ ಗೊತ್ತು ಮಾಡೋಣಾದ ತಾರೀಖಿಗೆ ಅಥವಾಪಕ್ಷ ಹತ್ತು ದಿವಸಕ್ಕೆ ಮುಂಚಿತವಾಗಿ ಲೀಗಲ್ ಪ್ರಾಕ್ಟಿಷನರ ಮೇಲೆ ಜಾರಿ ಮಾಡಲ್ಪಡತಕ್ಕದ್ದು. ಅಂತಾ ತಾರೀಖಿನಲ್ಲಾಗಲೀ ಯಾ ವಿಚಾರಣೆಯು ಅಡ್ಜರ್ನ್ ಯಾನೆ ನಿಲ್ಲಿಸಿ ಇಡಲ್ಪಟ್ಟ ಮತ್ತ್ಯಾವ ತಾರೀಖಿನಲ್ಲಾಗಲೀ ಕೋರ್ಟಿನವರು ಛಾರ್ಜ ರುಜುವಾತಿ ಬಗ್ಯೆ ಯಾ ಲೀಗಲ್ ಪ್ರಾಕ್ಟಿಷನರಿಂದ ಕ್ರಮವಾಗಿ ಹಾಜರಾದ ಯಲ್ಲ ಸಾಕ್ಷ್ಯವನ್ನೂ ತೆಗದುಕ್ಕೊಂಡು ರೆಕಾರ್ಡು ಮಾಡಿ ಛಾರ್ಜ ವಿಷಯ ಫೈಸಲ್ಮಾಡುವದಕ್ಕೆ ಉದ್ಯುಕ್ತರಾಗತಕ್ಕದ್ದು.

ಚೀಫ್ ಕೋರ್ಟಿಗೆ ರಿಪೋರ್ಟು.

ಸೆಕ್ಷನ್ 15.—ಚೀಫ್ ಕೋರ್ಟಿಗೆ ತಾಬೇದಾರಿಯಾದ ಯಾವದಾದರು ಕೋರ್ಟಿನ ಜಡ್ಜಿಯು, ತಕಶೀರು ಸ್ಥಾಪಿತವಾದ ಕಾರಣ ಲೀಗಲ್ ಪ್ರಾಕ್ಟಿಷನರು ಸಸ್ಪೆಂಡ್ ಯಾ ತಗ್ಯೆರ್ ಮಾಡಲ್ಪಡತಕ್ಕದ್ದೆಂದು ಯೋಚಿಸಿದರೆ ಅವರು ತಮ್ಮ ಅಭಿಪ್ರಾಯವನ್ನು ಕಾರಣ ಸಮೇತ ರಿಕಾರ್ಡು ಮಾಡಿ ಅದನ್ನು ಪ್ರೊಸಿಡಿಂಗ್ಸನ್ನು ಚೀಫ್ ಕೋರ್ಟಿಗೆ ಕಳುಹಿಸತಕ್ಕದ್ದು, ಚೀಫ್ ಕೋರ್ಟಿನವರು ಸದರೀ ಲೀಗಲ್ ಪ್ರಾಕ್ಟಿಷನರನ್ನು ಬಿಡುಗಡೆ ಮಾಡಬಹುದು, ಸಸ್ಪೆಂಡ್ ಮಾಡಬಹುದು ಯಾ ತಗ್ಯೆರ್ ಮಾಡಬಹುದು.

ತಾಬೇದಾರಿ ಕೋರ್ಟುಗಳ ರಿಪೋರ್ಟುಗಳು ಡಿಸ್ಟ್ರಿಕ್ಟು ಕೋರ್ಟಿನ ವ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರ ಮೂಲಕ ಕಳುಹಿಸಲ್ಪಡತಕ್ಕದ್ದು.

ಸೆಕ್ಷನ್ 16.—ಅಂಥಾ ರಿಪೋರ್ಟು ಡಿಸ್ಟ್ರಿಕ್ಟು ಕೋರ್ಟಿಗೆ ತಾಬೇದಾರಿಯಾದ ಯಾವ ಕೋರ್ಟಿನ ಜಡ್ಜಿಯಿಂದಾಗಲೀ ಅಥವಾ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಿಗೆ ತಾಬೇದಾರಿಯಾದ ಯಾವ ಮಾಜಿಸ್ಟ್ರೇಟರಿಂದಾಗಲೀ ಮಾಡಲ್ಪಟ್ಟಾಗ ಅದು ಡಿಸ್ಟ್ರಿಕ್ಟು ಜಡ್ಜಿರಿಗಾಗಲಿ ಯಾ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಿಗಾಗಲಿ ಕಳುಹಿಸಲ್ಪಡತಕ್ಕದ್ದು. ಅವರು ಸದರೀ ರಿಪೋರ್ಟಿನೊಂದಿಗೆ ತಮಗೆ ತೋರುವ ಅವಶ್ಯಕವಾದ ಷರಾಗಳನ್ನು ಬರೆದು ಮೊಕದ್ದಮೆಯ ಕುರಿತು ತಮ್ಮ ಸ್ವಂತ ಅಭಿಪ್ರಾಯವನ್ನು ವಿವರಿಸಿ ಚೀಫ್ ಕೋರ್ಟಿನ ಆರ್ಡರ್ ಬಗ್ಯೆ ಸದರೀ ರೆಕಾರ್ಡನ್ನು ರವಾನಿಸತಕ್ಕದ್ದು.

ಕೂಡ್ಲೆ ಸಸ್ಪೆಂಡ ಮಾಡುವಣ.

ಸೆಕ್ಷನ್ 17.—ಸದರೀ ಜಡ್ಜಿ ಯಾ ಮಾಜಿಸ್ಟ್ರೇಟರು, ಚೀಫ್ ಕೋರ್ಟಿನಿಂದ ವಿಚಾರಣೆ ಮಾಡಲ್ಪಟ್ಟು ಹುಕ್ಕುಂಕೊಡುವ ನಿರೀಕ್ಷಣೆ ಮೇಲೆ, ತಮ್ಮ ಸ್ವಂತ ಕೋರ್ಟಿನ ಮತ್ತು ತಮಗೆ ತಾಬೇದಾರಿ ಕೋರ್ಟುಗಳ ಯಾವ ಪ್ಲೀಡರನ್ನಾಗಲೀ ಸಸ್ಪೆಂಡ ಮಾಡಬಹುದು.

ರೆಕಾರ್ಡುಗಳನ್ನು ತರಿಸಿಕೊಳ್ಳುವದಕ್ಕೆ ಚೀಫ್ ಕೋರ್ಟನವರ ಅಧಿಕಾರ.

ಸೆಕ್ಷನ್ 18.—ಚೀಫ್ ಕೋರ್ಟನವರು, ತಮ್ಮಿಂದಕೊಡಲ್ಪಟ್ಟ ಹುಕ್ಕುಂ ಪ್ರಕಾರವಲ್ಲದೇ ಅನ್ಯಥಾ ವಬ್ಬ ಅಡ್ವೊಕೇಟ್ ಯಾ ಪ್ಲೀಡರು ಬಿಡುಗಡೆ ಮಾಡಲ್ಪಟ್ಟ ಯಾವ ಮೊಕದ್ದಮೆಯಲ್ಲಾಗಲೀ ರೆಕಾರ್ಡು ತರಿಸಿ ತವಿಗೆ ಯುಕ್ತ ತೋರುವ ಅರಡರ್ ಮಾಡಬಹುದು.

ಚಾರ್ಜನ್ನು ವರ್ಗಾ ಮಾಡುವದಕ್ಕೆ ಚೀಫ್ ಕೋರ್ಟನವರಿಗೆ ಅಧಿಕಾರ.

ಸೆಕ್ಷನ್ 19.—ಚೀಫ್ ಕೋರ್ಟನವರು ತಮ್ಮ ಕೋರ್ಟಿಗೆ ತಾಪೇದಾರಿಯಾದ ಯಾವ ಕೋರ್ಟನಲ್ಲಾಗಲೀ ವಬ್ಬ ಲೀಗಲ್ ಪ್ರಾಕ್ಟೀಷನರ ಮೇಲೆ ತರಲ್ಪಟ್ಟ ಚಾರ್ಜು ಫೈಸಲ್ ಬಗ್ಯೆ ತಮ್ಮ ಕೋರ್ಟಿಗೆ ಆಗಲೀ ಚಾರ್ಜು ಮಾಡೋಣಾದ ಕೋರ್ಟಿನ ದರ್ಜೆಗೆ ಸರಿಯಾದ ಯಾ ಮೇಲ್ಪಟ್ಟ ಮತ್ಯಾವ ಯಿತರ ಕೋರ್ಟಿಗಾಗಲಿ ವರ್ಗಮಾಡಲ್ಪಡತಕ್ಕದ್ದೆಂದು ಹುಕ್ಕುಂ ಮಾಡಬಹುದು.

ಸಸ್ಪೆನ್ಷನನ್ನು ನೋಟ್ ಯಾನೇ ಗುರ್ತು ಮಾಡುವಣ.

ಸೆಕ್ಷನ್ 20.—ಯಾವದಾದರು ಲೀಗಲ್ ಪ್ರಾಕ್ಟೀಷನರಿನ ಸಸ್ಪೆನ್ಷನನ್ನು ಚೀಫ್ ಕೋರ್ಟನಲ್ಲಿ ಯಿಡಲ್ಪಡಬೇಕಾದ ಪಟ್ಟಿಯಲ್ಲಿ ನೋಟ್ ಯಾನೆ ಗುರ್ತು ಮಾಡಲ್ಪಡತಕ್ಕದ್ದು, ಮತ್ತು ಆಸಂಗತಿ ಕುರಿತು ತವರ್ಮಾ ತಾಬೇದಾರೀ ಕೋರ್ಟುಗಳಿಗೂ ನೋಟೀಸ್ ಕಳುಹಿಸತಕ್ಕದ್ದು.

ತಗ್ಯೆರ್ ಮಾಡೋಣಾದ ಲೀಗಲ್ ಪ್ರಾಕ್ಟೀಷನರಿನ ಹೆಸರನ್ನು ತೆಗದುಹಾಕುವಣ.

ಸೆಕ್ಷನ್ 21.—ಮೇಲ್ಕಂಡ ಕಲಂಗಳ ಅನುಸಾರವಾಗಿ ತಗ್ಯೆರ್ ಮಾಡಲ್ಪಟ್ಟ ಯಾವ ಲೀಗಲ್ ಪ್ರಾಕ್ಟೀಷನರಿನ ಹೆಸರಾಗಲೀ, ಚೀಫ್ ಕೋರ್ಟನಲ್ಲಿಯ ಲೀಗಲ್ ಪ್ರಾಕ್ಟೀಷನರುಗಳ ಪಟ್ಟಿಯಿಂದ ತೆಗೆದು ಹಾಕಲ್ಪಟ್ಟು, ಆ ಬಗ್ಯೆ ತಾಪೇದಾರಿಯಾದ ತವರ್ಮಾ ಕೋರ್ಟುಗಳಿಗೂ ನೋಟೀಸು ಕಳುಹಿಸತಕ್ಕದ್ದು.

ಅಧ್ಯಾಯ III.

ಫೀಜು.

ಸೆಕ್ಷನ್ 22.—ಚೀಫ್ ಕೋರ್ಟನವರು, ಆಗಿಂದಾಗ್ಯೆ ಮತ್ತು ಗವರ್ನಮೆಂಟನವರ ಮಂಜೂರಾತಿನಿಸಿ ಯವನಾಗಲಿ ಕಕ್ಷಿಗಾರನಿರವ; ಚೀಫ್ ಕೋರ್ಟನಲ್ಲಿಯೂ ಮತ್ತು ಅದಕ್ಕೆ ತಾಪೇದಾರಿಯಾದ ಕೋರ್ಟುಗಳಲ್ಲಿಯೂ ನಡಿಯುವ ಯಲ್ಲ ನಡವಳಿತಗಳ ಮೇಲೆ ಅತನ ಪರಪಕ್ಷದ ಲೀಗಲ್ ಪ್ರಾಕ್ಟೀಷನರಿಗೆ ಪಾವತೀ ಮಾಡಲ್ಪಡಬೇಕಾದ ಫೀಜು ಮೊಬಲಗನ್ನು ಗೊತ್ತು ಮಾಡುವದಕ್ಕೂ ಮತ್ತು ಕ್ರಮಪಡಿಸುವದಕ್ಕೂ ರೂಲ್‌ಸನ್ನು ಮಾಡಬಹುದು.

ಪರಂತು, ಅಂಥಾ ಫೀಜುಗಳ ವಿಷಯದಲ್ಲಿ ಹಾಲೀ ಜಾರೀ ಯಿರುವ ರೂಲ್‌ಸ್‌ಗಳು ಈ ಸೆಕ್ಷನ್ ಅನುಸರಿಸಿ ಮಾಡಲ್ಪಟ್ಟಂತೆ ಯಣಿಸಲ್ಪಡತಕ್ಕದ್ದು.

ಲೀಗಲ್ ಪ್ರಾಕ್ಟೀಷನರುಗಳಿಗೆ ರುಸುಮು.

ಸೆಕ್ಷನ್ 23.—ಲೀಗಲ್ ಪ್ರಾಕ್ಟೀಷನರುಗಳು ಅವರ ರುಸುಮಿಗೋಸ್ಕರ ತಮ್ಮ ಕಕ್ಷಿಗಾರರೊಂದಿಗೆ ತಾವೇ ಏರ್ಪಾಟು ಮಾಡಿಕೊಳ್ಳಬಹುದು.

ರುಸುಮಿನ ಬಗ್ಯೆ ಹುಟ್ಟುವ ಕರಾರು ಕೋರ್ಟನಲ್ಲಿ ಫೈಲ್ ಮಾಡಲ್ಪಡತಕ್ಕದ್ದು.

ಸೆಕ್ಷನ್ 24.—ಯಾವ ಲೀಗಲ್ ಪ್ರಾಕ್ಟೀಷನರಿಂದಾಗಲೀ ತನ್ನನ್ನು ಯಿಟ್ಟುಕೊಳ್ಳುವ ಯಾ ನೇಮಿಸುವ ಯಾವ ಮನುಷ್ಯನೊಂದಿಗಾದರೂ, ತನ್ನಿಂದ ಪೂರಾ ಆಗಲೀ ಕೆಲವು ಭಾಗವಾಗಲೀ ನೆರವೇರಿಸಲ್ಪಟ್ಟ ಯಾ ನೆರವೇರಿಸಲ್ಪಡಬೇಕಾದ ಕೆಲಸಗಳ ವಿಷಯದಲ್ಲಿ ಪಾವತೀ ಮಾಡಲ್ಪಡಬೇಕಾದ ಮೊಬಲಗು ವ ಅದರ ರೀತಿ ಯಿವುಗಳ ಕುರಿತಾಗಲೀ, ಮತ್ತು ತನ್ನಿಂದ ವುದ್ಯೋಗತಃ ನಡಸಿದ ಯಾ ನಡಿಸಲ್ಪಡಬೇಕಾದ ಕೃತ್ಯೆಗಳು, ಫೀಜುಗಳು, ಚಾರ್ಜುಗಳು, ವ ಖರ್ಚುಗಳು ಯಿವುಗಳು ಕುರಿತು ಮಾಡಲ್ಪಟ್ಟ ಯಾವ ಕರಾರೇ ಆಗಲೀ ಅದು ಬರೆಯಲ್ಪಟ್ಟು ಅಂಥಾ ಮನುಷ್ಯನಿಂದ ರುಜುಮಾಡಲ್ಪಟ್ಟು ಮತ್ತು ಅದು ಹುಟ್ಟಿದ ತಾರೀಖು ಮೊದಲು ಹದಿನೈದು ದಿವಸಗಳ ವಳಗಾಗಿ ಡಿಸ್ಟ್ರಿಕ್ಟ್ ಕೋರ್ಟನಲ್ಲಾಗಲೀ ಅಥವಾ ಆ ಕರಾರು ಯಾವ ಬಗ್ಯೆ ಹುಟ್ಟಿತ್ತೋ ಆಸಂಬಂಧವಾದ ಕೆಲಸದ ಪೈಕೀ ವಂದುಭಾಗ ನಡೆಯಿತೋ ಯಾ ನಡಯಪೇಕೋ ಅಂಥಾ ಯಾವ ಕೋರ್ಟನಲ್ಲಿಯಾಗಲೀ, ದಾಖಲ್ ಮಾಡಲ್ಪಟ್ಟ ಹೊರತು, ಅನ್ಯಥಾ ಅಂಥಾ ಕರಾರು ಅದರ ಅಮಲ್‌ಜಾರಿ ಬಗ್ಯೆ ತರಲ್ಪಡುವ ದಾವೇಗಳಲ್ಲಿ ರುಜುವಾತ್ತಾಗಿರತಕ್ಕದ್ದಲ್ಲವು.

ಅನ್ಯಾಯವಾದ ಕರಾರು.

ಸೆಕ್ಷನ್ 25.—ಅಂಥಾ ಯಾವ ಕರಾರಾಗಲೀ ಅಮಲ್‌ಜಾರಿ ಮಾಡಲ್ಪಡಲಿಕ್ಕೆ ದಾವಾ ತರೋಣಾದರೆ, ಸದರೀ ಕರಾರು ಯೋಗ್ಯವಾದ್ದೆಂದುನ್ನೂ ನ್ಯಾಯವಾದ್ದೆಂದುನ್ನೂ ರುಜು ಮಾಡಿಕೊಡದಿದ್ದರೆ, ಕೋರ್ಟಿನವರು ಅದರ ದೆಶೆಯಿಂದ ಪಾವತೀ ಮಾಡಲ್ಪಡಬೇಕಾದ ಮೊಬಲಗನ್ನ ಕಮ್ಮೀ ಮಾಡಬಹುದು ಯಾ ಅದು ರದ್ದು ಮಾಡಲ್ಪಡತಕ್ಕದ್ದೆಂದು ಹುಕ್ಕುಂ ಮಾಡಬಹುದು. ಮತ್ತು ನಡಸಿದ ಕೆಲಸಗಳಿಗಾಗಿ ಆದ ಖರ್ಚುಗಳು, ಫೀಜುಗಳು ಲಾಗವಡುಗಳು ವ ಸಲಿಕೆಗಳು ಯಿವುಗಳನ್ನ ಅಂಥಾ ಕರಾರು ಯಿಲ್ಲದಿದ್ದರೆ ಹ್ಯಾಗೊ ಹಾಗೆ ತಿಳಿದುಕೊಳ್ಳತಕ್ಕದ್ದು.

ಕರಾರು, ಇತರ ಬಾಧ್ಯತೆಗಳನ್ನು ವಿನಾಯಿಸುವಣ.

ಸೆಕ್ಷನ್ 26.—ಅಂಥಾ ವಂದು ಕರಾರು, ಅದು ಯಾವ ಬಗ್ಗೆ ಹುಟ್ಟಿತೋ ಆಸಂಬಂಧವಾದ ಕೆಲಸಗಳು ನಡಿಸುವ ಬಗ್ಯೂ ಪೂರ್ತಿ ಮಾಡುವ ಬಗ್ಯೂ ಸಂಬಂಧಪಟ್ಟ ಯಾವದಾದರೂ ಕೆಲಸಗಳು, ಫೀಜುಗಳು, ಚಾರ್ಜುಗಳು ಯಾ ಖರ್ಚುಗಳು ಯಿವುಗಳಿಗೋಸ್ಕರ ಕರಾರಿನಲ್ಲಿ ಕಂಡ ಷರತ್ತುಗಳಿಗೆ ಮಿಾರಿದಂಥಾ ಲೀಗಲ್ ಪ್ರಾಕ್ಟೀಷನರಿನ ಯಲ್ಲ ಬಾಧ್ಯತೆಗಳನ್ನೂ ವಿನಾಯಿಸುತ್ತದೆ, ಪರಂತು ಸದರೀ ಕರಾರಿನಲ್ಲಿ ಐದಂಪರ್ಯ್ಯೇಣ ಬಿಡಲ್ಪಟ್ಟ ಕೆಲಸಗಳು, ಚಾರ್ಜುಗಳು, ಫೀಜುಗಳು ಯಾ ಖರ್ಚುಗಳು ಯಾವದಾದರೂ ಯಿದ್ದರೆ ಅವುಗಳನ್ನು ಕುರಿತ ಬಾಧ್ಯತೆಯನ್ನು ವಿನಾಯಿಸುವದಿಲ್ಲಾ.

ರದ್ದಾದ ಕರಾರು.

ಸೆಕ್ಷನ್ 27.—ಅಂಥಾ ಯಾವ ಕರಾರಿನಲ್ಲಾಗಲೀ ಲೀಗಲ್ ಪ್ರಾಕ್ಟೀಷನರನು ಅಶ್ರದ್ಧೆಗೆ ಜವಾಬ್‌ದಾರನಲ್ಲವೆಂತಾಗಲೀ ಯಾವದಾದರು ಅಂಥಾ ಜವಾಬ್‌ದಾರೀಗೆ ಲೀಗಲ್ ಪ್ರಾಕ್ಟೀಷನರಾಗಿದ್ದು ಅನ್ಯಥಾ ತಾನು ವಳಪಡುವನೊ ಅಂಥಾ ಜವಾಬ್‌ದಾರಿಯಿಂದ ನಿವೃತ್ತನಾಗತಕ್ಕದ್ದೆಂತಾಗಲೀ ವಂದು ಕಲಮು ಯಿದ್ದಲ್ಲಿ ಅಂಥಾ ಕಲಮು ಪೂರ್ತಿಯಾಗಿ ರದ್ದಾಗತಕ್ಕದ್ದು.

ಮಧ್ಯಸ್ಥ ಮಾಡಿದರೆ ದಂಡನೆ.

ಸೆಕ್ಷನ್ 28.—ಯಿದರಡೀ ಬರುವ ಯಾವ ತಪ್ಪಿತವನ್ನಾಗಲೀ ಯಾವ ಮನುಷ್ಯನಾದರು ಮಾಡಿದರೆ;—

(*a*) ಯಾವದಾದರೂ ನ್ಯಾಯಸಂಬಂಧವಾದ ಕೆಲಸಗಳಲ್ಲಿ ವಬ್ಬ ಲೀಗಲ್ ಪ್ರಾಕ್ಟೀಷನರಿಗೆ ವುದ್ಯೋಗವನ್ನು ಸಂಪಾದಿಸಿ ಕೊಡುತ್ತೇನೆಂಬ ಯಾ ಕೊಟ್ಟಿರುತ್ತೇನೆಂಬ ಆಧಾರದ ಮೇಲೆ ಯಾವ ರುಸುಮಾಗಲಿ ಅಂಥಾ ಲೀಗಲ್ ಪ್ರಾಕ್ಟೀಷನರಿಂದ ಪಡೆದರೆ ಯಾ ಅವನನ್ನ ಕೇಳಿದರೆ.

(*b*) ಅಂಥಾ ವುದ್ಯೋಗಕ್ಕಾಗಿ ಯಾವದಾದರೂ ಲೀಗಲ್ ಪ್ರಾಕ್ಟೀಷನರಿಗೆ ಪಾವತಿ ಮಾಡಿದ, ಕೊಡೋಣಾದ ಯಾ ಪಾವತೀ ಮಾಡುವದಕ್ಕೆ ಯಾ ಕೊಡುವದಕ್ಕೆ ಕರಾರಾದ ರುಸುಮಿನ ಪೈಕಿ ಯಾವ ರುಸುಮಾಗಲೀ ಉಳಿಕೊಂಡರೆ.

(*c*) ವಬ್ಬ ಲೀಗಲ್ ಪ್ರಾಕ್ಟೀಷನರಾಗಿದ್ದು ಯಾವದಾದರೂ ನ್ಯಾಯಸಂಬಂಧವಾದ ಕೆಲಸಗಳಲ್ಲಿ ತನಿಗೆಆಗಲಿ ಯಾ ಯಿತರ ಲೀಗಲ್ ಪ್ರಾಕ್ಟೀಷನರಿಗೆ ಆಗಲಿ ಉದ್ಯೋಗವನ್ನು ಸಂಪಾದಿಸುವದಕ್ಕಾಗಿ ಯಾ ಸಂಪಾದಿಸಿದ್ದಕ್ಕಾಗಿ ಯಾವ ರುಸುಮನ್ನಾಗಲೀ ಕೊಡುವದಾಗಿ ಹೇಳಿದರೆ, ಕೊಟ್ಟರೆ ಯಾ ಉಳಿಸಿಕೊಳ್ಳುವದಕ್ಕೆ ಸಮ್ಮತಿಸಿದರೆ;

ಅಂಥಾ ಯಾವ ಮನುಷ್ಯನಾಗಲೀ ಆರು ತಿಂಗಳ ವರಿಗೆ ವ್ಯಾಪಿಸುವಂಥಾ ಸಾದಾ ಕೈದಿನ ಮೂಲಕವಾಗಿಯಾಗಲಿ ಐನೂರು ರೂಪಾಯಿಗಳ ವರಿಗಿನ ಜುರ್ಮಾನೆಯ ಮೂಲಕವಾಗಿ ಯಾಗಲಿ ಅಥವಾ ಈ ಯರಡರ ಮೂಲಕವಾಗಿ ಯಾಗಲೀ ಶಿಕ್ಷಿಸಲ್ಪಡತಕ್ಕದ್ದು.

ಬೆಂಗಳೂರು,
21ನೇ ಜುಲೈ 1884.

ಕೆ. ಶೇಷಾದ್ರಿಅಯ್ಯರ್,
ಮೈಸೂರು ದಿವಾನ್.

Mysore Government Press, Bangalore—1884.

ಮೈಸೂರ ಗೆಜೆಟ್.

ನಂ. 32 ಸರ್ಕಾರದಿಂದ ಪ್ರಾಯಿಷ ಆದ್ದು. ಸರ್ 1884.

ಬೆಂಗಳೂರು, ಶನಿವಾರ, ಆಗಸ್ಟ್ ತಾ|| 9, ಸರ್ 1884.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೇಬ್ ಬಹದೂರವರ ದಿವಾನರವರಿಂದ ಹೊರೋಣಾದ ಇಸ್ತಿಹಾರನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರಿಂಟೆಂಡೆಂಟರು, ಕಾಂಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ್ ವರ್ಕಸ್ ಆಫೀಸರಗಳು, ಮಿಲಿಟೇರಿ ಸಿಕ್ರಿಟೆರಿಯವರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು, ಇವರುಗಳಿಂದ ಹೊರೋಣಾದ ಇಸ್ತಿಹಾರಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನಗಳು,

1884ನೇ ಇಸವಿಯ IIIನೇ ನಂಬರ್ ರೆಗ್ಯುಲೇಷನ್.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಹೊರೋಣಾದ ಇಸ್ತಿಹಾರನಾಮೆಗಳು.

ಜನರಲ್.

ಇಸ್ತಿಹಾರನಾಮೆಗಳು.

ತಾರೀಖು 16ನೇ ಜುಲೈ 1884.

ನಂ. 79.—ಹಿಡುವಳಿಯಲ್ಲಿ ಯಿರದೇ ಯಿರತಕ್ಕ ಸರಕಾರದ ಜಮೀನುಗಳೊಳಗಣ ಹುಲ್ಲುಗಾವಲ್ ಹರಾಜ್ ವಿಷಯವನ್ನು ಕುರಿತು ಇದರಡಿಕಂಡ ನಿಬಂಧನೆಗಳು ಅಜಮಾಯಿಷೀ ತರೀಕ್ ಮಂಜೂರ್ಮಾಡಲ್ಪಟ್ಟು ಸಕಲಜನಗಳ ತಿಳುವಳಿಕೆಯ ಬಗ್ಗೆ ಪ್ರಾಯಿಷ್ ಮಾಡಲ್ಪಟ್ಟಿರುತಿವೆ:—

1. ಅಜಮಾಯಿಷೀ ತರೀಕ್ ಈ ಸಾಲಿನಲ್ಲಿ ಹುಲ್ಲುಬನ್ನೀ ಹರಾಜುಗಳು ಹಾಕಲ್ಪಡಕೂಡದು.
2. 1882—83 ಮತ್ತು 83—84ನೇ ಇಸವಿಗಳಲ್ಲಿ ಪ್ರತಿ ಗ್ರಾಮದೊಳಗಣ ಸರಾಸರಿ ಹುಲ್ಲುಬನ್ನೀ ಹುಟ್ಟುವಳಿಯನ್ನು ಕರಾರ್ವಾಕಾ ಲೆಕ್ಕ ಮಾಡಿ ತನ್ಮೂಲಕ ಗೊತ್ತಾದ ಮೊಬಲಗ್ಯೆ ಆ ಗ್ರಾಮದೊಳು ಹಿಡುವಳಿಯಲ್ಲಿಲ್ಲದಿರುವ ಸರ್ಕಾರ್ ಜಮೀನುಗಳಲ್ಲಿ ಮೇಯಿಸುವ ಹಕ್ಕನ್ನು ಸಾಲ್‌ಮಜಕೂರಿಗೆ ಸದರೀ ಗ್ರಾಮ ನಿವಾಸಿಗಳಿಗೆ ಕೊಡತಕ್ಕದ್ದು.

3. ಈ ಷರತ್ತುಗಳನ್ನು ಅನುಸರಿಸಿ ಗ್ರಾಮಸ್ಥರು ಮೇಯಿಸುವ ಹಕ್ಕನ್ನು ಅಂಗೀಕರಿಸಿದರೆ ಗ್ರಾಮಸ್ಥರೆಲ್ಲರಿಂದ ಕೊಡಲ್ಪಡತಕ್ಕ ಮೊಬಲಗನ್ನು ವಿಶಿಷ್ಟ ಜಮೀನ್ದಾರರುಗಳೂ ಗ್ರಾಮದ ಇತರೆ ನಿವಾಸಿಗಳು ಸಹ ತಮ್ಮೊಳು ತಾವೇ ಹಂಚಿಕೊಂಡು ಅಂತಾ ವಿಭಾಗ ಪ್ರಕಾರ ಪ್ರತಿ ಮನುಷ್ಯನೂ ಕೊಡಬೇಕಾದ ಮೊಬಲಗನ್ನು ತೋರಿಸುವ ಒಂದು ಪಟ್ಟಿಯನ್ನು ತಯಾರ್ಮಾಡಿ, ಅದಕ್ಕೆ ಸಂಬಂಧಪಟ್ಟ ಗ್ರಾಮಸ್ಥರೆಲ್ಲರೂ ಸದರೀ ಪಟ್ಟಿಗೆ ರುಜು ಮಾಡಬೇಕಲ್ಲದೆ, ಪಟೇಲ್ ಶಾನಭೋಗರು ಸಹ ರುಜು ಮಾಡತಕ್ಕದ್ದು. ಗ್ರಾಮದಿಂದ ಕೊಡಲ್ಪಡಬೇಕಾದ ಒಟ್ಟು ಮೊಬಲಗನ್ನು ಗ್ರಾಮದ ಪ್ರತಿ ಮನುಷ್ಯನೂ ಹಂಚಿಕೊಳ್ಳಬೇಕಾದ್ದು ಅವರು ಪರಸ್ಪರ ಮಾಡಿಕೊಂಡ ಸ್ವಂತಕರಾರಾಗಿರುತ್ತೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

4. ಅಮಲ್ದಾರರು ಅಂತಾ ಪಟ್ಟಿಗಳನ್ನು ತನಿಖೀ ಮಾಡಿ ಅದರಲ್ಲಿ ನಮೂದಿಸಿರುವ ಯೇರ್ಪಾಡುಗಳು ತೃಪ್ತಿಕರವಾಗಿದೆಯೋ ಯೆಂದು ಗ್ರಾಮಸ್ಥರನ್ನು ಕೇಳತಕ್ಕದ್ದು. ಯಾವನ ಹೆಸರಿಗೆ ಮೊಬಲಗು ದಾಖಲ್ಮಾಡಲ್ಪಟ್ಟಿರುತಿದೆಯೋ ಅಂತಾ ಪ್ರತಿ ಮನುಷ್ಯನನ್ನು ಬದಸ್ತೂರ್ ಕೇಳತಕ್ಕದ್ದು. ಅಂತಾ ವಿಚಾರಣೆಯಲ್ಲಿ, ಸದರೀ ಯೇರ್ಪಾಡು ಅದಕ್ಕೆ ಸಂಬಂಧಪಟ್ಟವರೆಲ್ಲರಿಗೂ ಸಮ್ಮತವಾದದ್ದೆಂದು ಅಮಲ್ದಾರರಿಗೆ ತೃಪ್ತಿಕರವಾಗಿ ಕಂಡು ಬಂದರೆ ಸದರೀ ಅಂಶವನ್ನು ಪ್ರಸಕ್ತ ಪಟ್ಟಿಯಲ್ಲಿ ಸ್ವಹಸ್ತೂರ್ ಬರೆದು ದಾಖಲೆಯ ಬಗ್ಗೆ ಶಾನಭೋಗನ ವಶದಲ್ಲಿಡತಕ್ಕದ್ದು. ತರುವಾಯ ಯಾವ ಮನುಷ್ಯನ ಹೆಸರಿಗಾಗಲಿ ಸದರೀ ಪಟ್ಟಿಗಳಲ್ಲಿ ದಾಖಲ್ಮಾಡಲ್ಪಟ್ಟಿರುವ ಮೊಬಲಗನ್ನು ಅವನಿಂದ ವಸೂಲ್ಮಾಡತಕ್ಕ ಬಾಕೀಯೆಂದು ಅವನ ಖಾತೆಯಲ್ಲಿ ದಾಖಲ್ಮಾಡಿ ಅದು ಜಮೀನ್ ಕಂದಾಯದಂತೆ ವಸೂಲ್ಮಾಡಲ್ಪಡತಕ್ಕದ್ದು.

5. ಯಾವ ಗ್ರಾಮಸ್ಥರೇ ಆಗಲಿ ಸದರೀ ಗ್ರಾಮದೊಳು ಹಿಡುವಳಿಯಲ್ಲಿರದೇ ಯಿರುವ ಸರ್ಕಾರ್ ಜಮೀನಿನಲ್ಲಿ ಮೇಯಿಸುವ ಹಕ್ಕನ್ನು ಯೆರಡನೇ ಕಲಮಿನ ಪ್ರಕಾರ ಗೊತ್ತು ಮಾಡಲ್ಪಟ್ಟ ಮೊಬಲಗಿಗೆ ಅಂಗೀಕರಿಸುವದಕ್ಕೆ ಅಸಮಾಧಾನ ಪಟ್ಟಾಗ್ಯೂ, ಅಥವಾ ಈ ಮೊಬಲಗಿನ ವಿಭಾಗ ವಿಷಯದಲ್ಲಿ ಅವರು ಪರಸ್ಪರ ಸಮ್ಮತಿಸದೇ ಹೋದರೂ, ಅಥವಾ ಅಮಲ್ದಾರರ ವಿಚಾರಣೆಯಲ್ಲಿ ಅಂತಾ ಮೊಬಲಗಿನ ವಿಷಯವನ್ನು ಕುರಿತಾಗಲಿ, ಅದರ ವಿಭಾಗವನ್ನು ಕುರಿತಾಗಲಿ, ತಕರಾರ್ ವುಂಟಾದರೂ ಆಗ ಗ್ರಾಮಕ್ಕೆ ಸಂಬಂಧಪಟ್ಟ ಮೇಯಿಸುವ ಹಕ್ಕುದಾರಿಯು ಆಸ್ಥಳದಲ್ಲಿ ಮಾಮೂಲ್‌ನಂತೆಯೇ ಹರಾಜ್ ಮಾಡಲ್ಪಡತಕ್ಕದ್ದು.

6. ಮೇಲೆಕಂಡ ಕರಾರ್‌ಗಳ ಪ್ರಕಾರ ಮೇಯಿಸುವ ಹಕ್ಕು ಗ್ರಾಮಸ್ಥರಿಗೆ ಕೊಡಲ್ಪಟ್ಟರೆ ಅಂತಾ ಗ್ರಾಮಗಳೊಳಗಣ ಹಿಡುವಳೀಯಲ್ಲಿ ಯಿರದ ಸರ್ಕಾರ್ ಜಮೀನ್‌ಗಳಲ್ಲಿ ಸದರೀ ಗ್ರಾಮದ ದನಗಳು ಮೇಯುವದಕ್ಕೆ ಯಾವ ನಿರ್ಬಂಧಗಳೂ ವುಂಟುಮಾಡಲ್ಪಡಕೂಡದು.

7. ಪ್ರತಿ ಗ್ರಾಮದ ಹುಲ್ಲುಗಾವಲನ್ನು ಮೇಲೆ ವಿಧಿಸಲ್ಪಟ್ಟಂತೆ ವಿಲೇಮಾಡುವದಕ್ಕೆ ಬದಲಾಗಿ ಅಮಲ್ದಾರರು ತಮಗೆ ಆವಶ್ಯಕ ತೋರಿ ಬಂದಾಗ ಗ್ರಾಮಗಳನ್ನು ಅನುಕೂಲವಾದ ಗುಂಪುಗಳಾಗಿ ಮಾಡಿ ಅಂತಾ ಪ್ರತಿ ಗುಂಪಿನ ಮೇಯಿಸುವ ಹಕ್ಕನ್ನು ಪ್ರತ್ಯೇಕವಾಗಿ ವಿಲೇ ಮಾಡಬಹುದು. ಹಾಗೆ ಗುಂಪು ಮಾಡುವಣದರಲ್ಲಿ, ಹಾಲೀ ಜಾರೀಯಲ್ಲಿರುವ ಮೇಯಿಸುವ ಯೇರ್ಪಾಡುಗಳಿಗೆ ಪೂರಾನಿಗೇ ಕೊಡಬೇಕಲ್ಲದೆ ಸಾಧ್ಯವಾದ ಮಟ್ಟಿಗೆ ಅದಕ್ಕೆ ಸಂಬಂಧಪಟ್ಟ ಗ್ರಾಮಸ್ಥರ ಸಮ್ಮತಿಯನ್ನು ಹೊಂದಿ ಯಿರತಕ್ಕದ್ದು.

ತಾರೀಖು 25ನೇ ಜುಲೈ 1884.

ನಂ. 87.—1879ನೇ ಇಸವಿ ಫೆಬ್ರುವರೀ 18ನೇ ಮಾರ್ಚು ಮಿನ ರೂಲ್‌ಸ್ ಅನುಸರಿಸಿ ದಾಖಲ್ಮಾಡಲ್ಪಟ್ಟ ಅಡ್ವೋಕೇಟ್ ಮತ್ತು 1—2ನೇ ಕ್ಲಾಸ್ ಪ್ಲೀಡರುಗಳಿಗೆ ಯಿದರ ದೆಶೆಯಿಂದ ತಿಳಿಯಪಡಿಸುದೇನಂದರೆ, (ಮೈಸೂರು ಲೀಗಲ್ ಪ್ರಾಕ್ಟಿಷನರ್‌ಸ್-ರೆಗ್ಯೂಲೇಷನ್) ಯೆಂಬ 1884ನೇ ಇಸವಿ IIIನೇ ನಂಬರ್ ರೆಗ್ಯೂಲೇಷನು ಅವರ ಸ್ಥಿತಿಯನ್ನು ಬಾಧಿಸುವದಿಲ್ಲ, ಮತ್ತು ಅವರು ಯಾವ ಕೋರ್ಟುಗಳಿಗೆ ದಾಖಲ್ಮಾಡಲ್ಪಟ್ಟಿರುತ್ತಾರೋ ಅಂಥಾ ಕೋರ್ಟುಗಳಲ್ಲಿ 1884ನೇ ಇಸವಿ ಡಿಶಂಬರ್ 31ನೇ ಮಾರ್ಚು ಮಿನವರಿಗೆ ವಕಾಲತ್ತು ಮಾಡುವದಕ್ಕೆ ಅರ್ಹರಾಗಿರುತ್ತಾರೆ, ಅವರುಗಳು ಸದರೀ ತಾರೀಖಿನ ತರುವಾಯಲೂ ವಕಾಲತ್ತು ಮಾಡಲಿಛ್ಛೈಸಿದರೆ, ಸದರೀ ರೆಗ್ಯೂಲೇಷನಿನ 11ನೇ ಸೆಕ್ಷನ್ ಅನುಸರಿಸಿ ಚೀಫ್ ಕೋರ್ಟಿನಿಂದ ಒಂದು ಸರಟಿಫಿಕೇಟ್ ಪಡೆಯತಕ್ಕದ್ದು.

2. ಸದರೀ ರೆಗ್ಯೂಲೇಷನಿನ 10ನೇ ಸೆಕ್ಷನ್ ಅನುಸಾರವಾಗಿ ಏರ್ಪಾಟಾಗುವ ರೂಲ್‌ಸ್‌ಗಳಿಂದ ಚೀಫ್ ಕೋರ್ಟಿನವರು 1879ನೇ ಇಸವಿ ಫೆಬ್ರುವರೀ 18ನೇ ಮಾರ್ಚು ಮಿನ ರೂಲ್‌ಸ್‌ಗಳನುಸರಿಸಿ ದಾಖಲ್ಮಾಡಲ್ಪಟ್ಟ ಯಲ್ಲ ಮನುಷ್ಯರುಗಳಿಗೂ ಅಂಥಾ ಸರಟಿಫಿಕೇಟ್‌ಗಳನ್ನು ಕೊಡುವದಕ್ಕೆ ಶಕ್ತರಾಗಿರುವರು.

ತಾರೀಖು 28ನೇ ಜುಲೈ 1884.

ನಂ. 93.—ಇದರಡೀಕಂಡ ಆಸ್ಪಿಟಲ ಅಸಿಸ್ಟೆಂಟರುಗಳು ಅವಶ್ಯಕವಾದ ಸಾರವೈಸು ಪೂರ್ತಿ ಮಾಡಿ ಪರೀಕ್ಷೆಯಲ್ಲಿ ಯೋಗ್ಯರಾಗಿ, ಕಾಣಬಂದದರಿಂದ ಕೆಳಗೆ ಕಾಣಿಸಿರುವ ತಾರೀಖು ಮೊದಲು ಬಡತಿ ಮಾಡಲ್ಪಟ್ಟಿರುತ್ತಾರೆ :—

3ನೇ ಕ್ಲಾಸ್ ಆಸ್ಪಿಟಲ್ ಅಸಿಸ್ಟೆಂಟ್ ಡಿ. ಯಂ. ಜ್ಞಾನಪ್ರಿಯಂ ಪಿಳ್ಳೆ 2ನೇ ಕ್ಲಾಸಿಗೆ 1884ನೇ ಮೇ 26ರ್ರ ಲಾಗಾಯತು.

ಡಿಟ್ಟೋ	ಡಿಟ್ಟೋ ಜಾಬ್ ಬಸಪ್ಪಚಟ್ಟಿ.	ಡಿಟ್ಟೋ	ಡಿಟ್ಟೋ.
ಡಿಟ್ಟೋ	ಡಿಟ್ಟೋ. ಸಿ. ಡೇವಿಡ್	ಡಿಟ್ಟೋ	ಡಿಟ್ಟೋ.
ಡಿಟ್ಟೋ	ಡಿಟ್ಟೋ ವಿ. ಸದಾಶಿವರಾವ್	ಡಿಟ್ಟೋ	ಡಿಟ್ಟೋ.

ತಾರೀಖು 30ನೇ ಜುಲೈ 1884.

ನಂ. 94.—ಹಾಸನದ ಫಾರೆಸ್ಟು ಸಬ್ ಅಸಿಸ್ಟೆಂಟ್ ಕನ್ಸರ್ವೇಟರಾದ ಮೆ|| ಜೆ. ಸ್ಟ್ರೀವರ್ಸ್ಯವರು, ಕೆಲಸಕ್ಕೆ ವಾಪಸ್ ಬಂದು 1884ನೇ ಇಸವಿ ಜುಲೈ 17ನೇ ಮಾರ್ಕ್ಕುಮಿನ ಮಧ್ಯಾನ್ಹಾತ್ಪರ ಅವರ ಆಫೀಸ್ ಚಾರ್ಜನ್ನು ಫಾರೆಸ್ಟು ಪ್ರೊಬೇಷನರ್ ಮೆ|| ಪ್ರಹ್ಲಾದರಾಯರಿಂದ ವಹಿಸಿಕೊಂಡಿರುವದರಿಂದ, ಅವರಿಗೆ 1884ನೇ ಇಸವಿ ಜುಲೈ 11ನೇ ಮಾರ್ಕ್ಕಂ 71ನೇ ನಂಬರ್‌ವುಳ್ಳ ಈ ಆಫೀಸ್ ಇಸ್ತಿಹಾರ್ ನಾಮೆಯಿಂದ ಕೊಡಲ್ಪಟ್ಟ ಪ್ರಿವಿಲೀಜ್ ರಜಾ ಪೈಕಿ ಉಳಿದ ಭಾಗವು ರದ್ದು ಮಾಡಲ್ಪಟ್ಟಿರುತ್ತೆ.

ನಂ. 95.—ಬೆಂಗಳೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಇ. ಸಿ. ಷಣ್ಮುಗವೇಲುಪಿಳ್ಳೇ ಯವರಿಗೆ, 1884ನೇ ಇಸವಿ ಜುಲೈ 18ನೇ ಮಾರ್ಕ್ಕಂ 82ನೇ ನಂಬರ್‌ವುಳ್ಳ ಈ ಆಫೀಸ್ ಇಸ್ತಿಹಾರ್ ನಾಮೆಯಿಂದ ಕೊಡಲ್ಪಟ್ಟ ರಜಾಕ್ಕೆ ಜಾಸ್ತೀಯಾಗಿ ವಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 96.—ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಪಂಚನಾಥರಾಯರು, 1884ನೇ ಇಸವಿ ಜುಲೈ 21ನೇ ಮಾರ್ಕ್ಕುಮಿನ ಪೂರ್ವಾನ್ಹದಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟು 1ನೇ ಅಸಿಸ್ಟೆಂಟ್ ಕಮ್ಮಿಷನರ್ ಕೋರ್ಟಿನ ಚಾರ್ಜನ್ನು, ಮೆ|| ಅಸಿಸ್ಟೆಂಟ್ ಕಮ್ಮಿಷನರ್ ಸೈಯ್ಯದ್ ನಸಿರುದ್ದೀನ್‌ಯವರಿಗೆ ಒಪ್ಪಿಸಿರುತ್ತಾರೆ.

ತಾರೀಖು 31ನೇ ಜುಲೈ 1884.

ನಂ. 97.—ಪ್ಲಾಂಟೇಷನ್‌ಗಳ ಫಾರೆಸ್ಟು ಪ್ರೊಬೇಷನರ್ ಮೆ|| ಕೆ. ಪ್ರಹ್ಲಾದರಾಯರ ನೌಕರಿಯು, ಅವರು ತಮ್ಮ ಕೆಲಸದ ಚಾರ್ಜ ವಪ್ಪಿಸಿದ ತಾರೀಖು ಮೊದಲು ಪಬ್ಲಿಕ ವರಕಸ್ ಇಲಾಖೆಗೆ ವರ್ಗಮಾಡಲ್ಪಟ್ಟಿರುತ್ತೆ.

ನಂ. 98.—ಹಾಸನದ ಮುನ್ಸಿಫ್ ಸಿ. ವೆಂಕಟರಾಯರಿಗೆ, 1884ನೇ ಇಸವಿ ಮೇ 27ನೇ ಮಾರ್ಕ್ಕಂ 45ನೇ ನಂಬರ್ ಇಸ್ತಿಹಾರ್ ನಾಮೆಯಿಂದ ಕೊಡಲ್ಪಟ್ಟ ರಜಾಕ್ಕೆ ಜಾಸ್ತೀಯಾಗಿ ಮೆಡಿಕಲ್ ಸರ್ಟಿಫಿಕೇಟ್ ಮೇಲೆ ಮೂರು ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ನಗರ ಡಿವಿಜನ್ ಡಿಸ್ಟ್ರಿಕ್ಟು ಜಡ್ಜೀರ ಕೋರ್ಟಿನ ಶಿರಸ್ತೇದಾರ್ ಬಿ. ವೆಂಕಟಾಚಾರ್ರು, ಖುದ್ದ ಷರೀಫರು ಹಾಸನದಲ್ಲಿ ಕೆಲಸ ನೋಡುತ್ತಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಯಡೇಹಳ್ಳಿ ಮುನ್ಸಿಫರಾಗಿ ಆಕ್ಟಿಂಗ್ ತರೀಕ ಕೆಲಸ ನೋಡುವಂತೆ ಮೊಕರರ್.

ತಾರೀಖು 1ನೇ ಆಗಸ್ಟು 1884.

ನಂ. 99.—ಸಕಲಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಕೆಲವು ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ವೃತ್ತಿವಾರಾಗಿ ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು, ಮತ್ತು ಸದರೀ ತಾರೀಖಿನಲ್ಲಿ ಪಗ್ಯೆ 11 ಘಂಟೆಗೆ ಹರಾಜ್ ಷುರುವಾಗಿ, ಉಳಿಕೆ ಯಾವದೂ ಇಲ್ಲದೆ ವೃತ್ತಿಗಳು ಚಡ ದರಖಾಸ್ತುದಾರನಿಗೆ ಹರಾಜ್ ನಿಲ್ಲುವದು.

2. ಪರಂತು ಬಾಕೀ ಬರಬೇಕಾದ ವೃತ್ತಿಗಳು ಹರಾಜ್ ಮಾಡುವದರಿಂದ ಕಂದಾಯದಬಾಕೀ ಮೊಬಲಗು ಪೂರಾ ವಸೂಲಾಗದೇ ಯಿದ್ದರೆ ಪೂರಾ ಗ್ರಾಮವು ನಂತರ ವಿಕ್ರಯಿಸಲ್ಪಡುವದು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಸ್ಯೆ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜ್ ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಿ ಹರಾಜ್ ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬವನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು, ಹಾಗಿಲ್ಲದಪಕ್ಷಕ್ಕೆ ಅಂತವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫ್‌ನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜ್ ಮಾಕೂಫ್ ಮಾಡಲ್ಪಡತಕ್ಕದ್ದು; ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನದಿನದ ಸೂರ್ಯಾಸ್ತಮಯುಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ಹರಾಜ್ ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಕಾಯಮಾದ್ದಾಗಿರುವದಿಲ್ಲ.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಕಾಯಂ ಮಾಡಿದ ಕೂಡ್ಲೆ ವೃತ್ತಿಗಳು ಆತನ ಸುಪರ್ದು ಮಾಡಲ್ಪಟ್ಟು ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಸಬ್ ಡಿವಿಜನ್ ಆಫೀಸರರಿಂದ ರುಜು ಮೊಹರ್ ಮಾಡೋಣಾದ ಒಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲ್ಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು, ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕೆ ಸ್ವತಂತ್ರರಿರುತ್ತಾರೆ. ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಜೋಡೀಜು.	ಸಾಲಿಯಾನಾ ಸರಕಾರಕ್ಕೆ ಕೊಡತಕ್ಕಾದ ಕ್ವಿಟರೆಂಟ್.	ಯಾವಬಾಕೀಗೋಸ್ಕರ ಗ್ರಾಮ ಹರಾಜ್ ಮಾಡಲ್ಪಡುತ್ತೊ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
					ಖಂ. ಕೊ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಕಡೂರು	ಹಸನ	ಕಸ್ಬಾ	ಸಮುದ್ರವಳ್ಳಿ	ನರಸಿಹ್ಮಶಾಸ್ತ್ರಿ ಇತರ 3 ಮಂದಿ	23 4 1	150 6 5	147 6 4	715 8 5	ಡೆಪ್ಯುಟಿ ಅಮಲ್ದಾರ) ಕಚ್ಚೇರಿಯಲ್ಲಿ 1884ನೇ ಇಸವಿ ಸೆಪ್ಟಂಬರ್ 2ನೇ ವಾರ್ತ ದಿನದಲ್ಲಿ.
			ಆಲದಹಳ್ಳಿ	ನರಸಿಹ್ಮಭಟ್ಟ ಇತರ 18 ಮಂದಿ	31 2 4	234 3 10	230 10 2	926 12 5	

ತಾರೀಖು 1ನೇ ಆಗಸ್ಟು 1884.

ನಂ. 100.—ಸ್ನ 1882ನೇ ಇಸವಿ ನವಂಬರ 25ನೇ ಮುಸ್ಕಂ. 138ನೇ ನಂಬರವುಳ್ಳ ಇಸ್ತಿಹಾರನಾಮೆಯಿಂದ ಅರಸೀಕೆರೆ ತಾಲ್ಲೂಕಿಗೆ ವರ್ಗಮಾಡಲ್ಪಟ್ಟ ಹಾಸನದ ತಾಲ್ಲೂಕು ಹೊನ್ನಾವಾರ ಹೋಬಳಿಗೆ ಶೇರಿದ ಬಸರೀಹಳ್ಳೀ ಗ್ರಾಮವು, ಮರಳಿ ಹಾಸನದ ತಾಲ್ಲೂಕಿಗೆ ವರ್ಗಮಾಡಲ್ಪಟ್ಟಿರುತ್ತೆ.

ಹಾಸನ ತಾಲ್ಲೂಕು ಗ್ರಾಮದ ಹೋಬಳೀಗೆ ಶೇರಿದ ಕಳ್ಳಿಬಿಟ್ಟಗೋನಹಳ್ಳಿ ಗ್ರಾಮವು, ಹೊಳೇನರಸೀಪುರ ತಾಲ್ಲೂಕಿಗೆ ವರ್ಗಮಾಡಲ್ಪಟ್ಟಿರುತ್ತೆ.

ನಂ. 101.—ಇದರಡೀ ಕಂಡ ಚಿಕ್ಕ ಚಿಕ್ಕ ಬೇಚಿರಾಕ್ ಗ್ರಾಮಗಳು ಅವುಗಳ ಅಜೂಬಾಜೂದಲ್ಲಿರತಕ್ಕ ದೊಡ್ಡ ದೊಡ್ಡ ಅಸಲೀ ಗ್ರಾಮಗಳಿಗೆ ಶೇರಿಸಿರುತವೆ:—

ಮಾಗಣಿ ಹೆಸರು.	ನಂಬ್ರು	ಅಸಲೀ ಗ್ರಾಮದ ಹೆಸರು.	ನಂಬ್ರು	3ನೇ ಕಾಲಂನಲ್ಲಿ ಕಾಣಿಸಿರುವ ಗ್ರಾಮಗಳಲ್ಲಿ ಶೇರಿಸಬೇಕಾದ ಗ್ರಾಮಗಳ ಹೆಸರು.	ಷರಾ.
1	2	3	4	5	6
		(1). ಬೇಲೂರು ತಾಲ್ಲೂಕು.			
	1	ಬಸವಾಪುರ ..	1	ಲಿಂಗಾಪುರ	
	2	ಕೆಸವಾಪುರ ..	1	ನಾಗನಹಳ್ಳಿ	
		(2). ಹೊಳೇನರಸೀಪುರ ತಾಲ್ಲೂಕು.			
	1	ಬಿಟ್ಟಗನಹಳ್ಳಿ ..	1	ಕಳ್ಳಿಬಿಟ್ಟಗನಹಳ್ಳಿ	
		(3). ಅರಶೀಕೆರೆ ತಾಲ್ಲೂಕು.			
	1	ಮುತ್ತಕೆರೆ ..	1	ಕಾಮನಹಳ್ಳಿ	
			2	ಮುತ್ತಹಳ್ಳಿ	
	2	ಹೊಸಹಳ್ಳಿ ..	1	ಹಾಳಿಜೊಂಡನಹಳ್ಳಿ	
		(4). ಹಾಸನ ತಾಲ್ಲೂಕು.			
ಹಾಸನ	1	ಆಡವಳ್ಳಿ ..	1	ರಾಗಟ್ಟ	
	2	ಕುರಾ ..	1	ಬಸವನಪುರ	
	3	ಕೆಂಚಟವಳ್ಳಿ ..	1	ಚೆನ್ನಾಪುರ	
	4	ಕಾಟಿಹಳ್ಳಿ ..	1	ಶಿವನೇನಹಳ್ಳಿ	
ಕಾನಗಲ್	5	ಮುಗಲೂರು ..	1	ಕಿನಡಿಪುರ	
	6	ಮೂಮದೇವರಹಳ್ಳಿ ..	1	ಕಾಳೇನಹಳ್ಳಿ	
	7	ರಾಜನಹಳ್ಳಿ ..	1	ಚಿಕ್ಕನಹಳ್ಳಿ	
	8	ಬೈಲಹಳ್ಳಿ ..	1	ಮುಂಡದಾಸನಹಳ್ಳಿ	
	9	ಕಾನವನಹಳ್ಳಿ ..	1	ಅಪ್ಪಂಣನಹಳ್ಳಿ	
	10	ಕಾಲತಮ್ಮನಹಳ್ಳಿ ..	1	ರಂಗಾಪುರ	
	11	ಲಕ್ಕನಹಳ್ಳಿ ..	1	ಕಾವೇರಹಳ್ಳಿ	
			2	ಭಂಡಿಹಳ್ಳಿ	

ಮಾಗಣಿ ಹೆಸರು.	ನಂಬರು.	ಅಸಲೀ ಗ್ರಾಮದ ಹೆಸರು.	ನಂಬರು.	3ನೇ ಕಾಲಂನಲ್ಲಿ ಕಾಣಿಸಿರುವ ಗ್ರಾಮಗಳಲ್ಲಿ ಶೇರಿಸಬೇಕಾದ ಗ್ರಾಮಗಳ ಹೆಸರು.	ಷರಾ.
1	2	3	4	5	6
ಮೂದಿಹಳ್ಳಿ	12	ಉಜ್ಜಿನಿ ..	1	ಬೆಂಗೇನಹಳ್ಳಿ	
			2	ಹುಲಿಹಳ್ಳಿ	
	13	ಗಣದಗೆರಿ ..	1	ಕನ್ನಾಪುರ	
ಲಾಲಗಣಿ	14	ಯಲಗೇನಹಳ್ಳಿ ..	1	ಶ್ರೀರಂಗಪುರ	
	15	ಚಿಕ್ಕನಹಳ್ಳಿ ..	1	ಸಾಂಚಿಹಳ್ಳಿ	
			2	ರಾಮದೇವರಪುರ	
ಗ್ರಾಮ	16	ಮಾರಕುಳಿ ..	1	ಕ್ಯಾತನಹಳ್ಳಿ	
	17	ಹೆಗಡೀಹಳ್ಳಿ ..	1	ವಿರುಪಾಕ್ಷಿಪುರ	
	18	ಬ್ಯಾಡರಹಳ್ಳಿ ..	1	ಮಾರನಾಯಕನಹಳ್ಳಿ	
			2	ಹುಪ್ಪಿನಹಳ್ಳಿ	
	19	ಜ್ಯಾಗರವಳ್ಳಿ ..	1	ಗೋಪಾಲಪುರ	
	20	ಟಂಜನಹಳ್ಳಿ ..	1	ಜಕ್ಕನಹಳ್ಳಿ	
			2	ವೆಂಕಟಾಪುರ	
	21	ಹೊನ್ನಗೆರೆ ..	1	ಪಡದಹಳ್ಳಿ	
			2	ಕೊಂಗರವಳ್ಳಿ	
	22	ಮಾಲನಾಯಕನಹಳ್ಳಿ ..	1	ದಾಸನಕೊಪ್ಪಲು	
	23	ಗಡನಹಳ್ಳಿ ..	1	ಐಜೇನಹಳ್ಳಿ	
ಅಟ್ಟಾವಾರ	24	ಕಿತ್ತನಕೆರಿ ..	1	ತಿಮ್ಮನಹಳ್ಳಿ	
			2	ಭಂಡಿಹಳ್ಳಿ	
			3	ಕಟ್ಟೆಹಳ್ಳಿ	
	25	ತಿಮ್ಲಾಪುರ ..	1	ಸಾಸಲಗೆರಿ	
	26	ಕೃಷ್ಣಾಪುರ ..	1	ಗೋಪನಹಳ್ಳಿ	
ಕಾಸಿಕ	27	ಕಾಚನಾಯಕನಹಳ್ಳಿ ..	1	ಚಿಕ್ಕಹೊನ್ನೇನಹಳ್ಳಿ	
	28	ಸಾತೇನಹಳ್ಳಿ ..	1	ಶೆಟ್ಟಿಹಳ್ಳಿ	
	29	ಹೊಸಹಳ್ಳಿ ..	1	ಸಾಣೇನಹಳ್ಳಿ	
			2	ಹೋರಿಕೊಪ್ಪಲು	
	30	ಅಮ್ಮಗೋನಹಳ್ಳಿ ..	1	ತಮಲಾಪುರ	
ಹೊನ್ನಾವಾರ	31	ಬಮ್ಮನಹಳ್ಳಿ ..	1	ಬಸವನಹಳ್ಳಿ	
	32	ಕಂಕೆರಿ	1	ರಾಮೇನಹಳ್ಳಿ	
			2	ವಡೇರಹಳ್ಳಿ	

ಬಮೋಜಿಬ್ ಹುಕ್ಕುಂ,

ಆರ್. ವಿಜಯೀಂದ್ರರಾವ್,

ಸೆಕ್ರೆಟೇರಿ.

ಮೈಸೂರ ಗೆಜೆಟ

ಸರ್ಕಾರದಿಂದ ಘಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಅಗಸ್ಟ ತಾ॥ 9, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ, ರೆಸಿಡೆಂಟರು, ಚೀಫ ಜಡ್ಜೀಕ್ಷು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ರೆಸಿಡೆಂಟರ ಇಲಾಖಾ.

ಇಸ್ತಿಹಾರ್ ನಾಮೆ.

ಫಿನಾನ್ಷಿಯಲ್ ಇಲಾಖಾ.

1882ನೇ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ ಜನಗಳು ತಮ್ಮ ಡಿಬೆಂಚರ್‌ಗಳನ್ನೆ ಎನ್‌ಫೇಸ್‌ಮೆಂಟ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ ಬಗ್ಯೆ ಫೀ ಯೇನೂ ಚಾರ್ಜ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್ಟ್ರೋಲರ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್‌ಜಡ್ಜೀಯವರ ಕೋರ್ಟಿನಲ್ಲಿ—

ಸಣ 1884ನೇ ಇಸವಿ ಅರ್ಜೀ ನಂಬರ್ 121.

ಮೃತಪಟ್ಟ ನರಸಿಂಹಯ್ಯನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರು ಮದ್ದಗಿರಿ ತಾ॥ ಕೊಡಗೇಹಳ್ಳಿ ಹೋಬಳಿ ಶೇಕದಾರ್ ಹಂಚನಾಳು ಸುಬ್ಬಣ್ಣನು, ಮೃತಪಟ್ಟ ಸದರೀ ನರಸಿಂಹಯ್ಯನವರಿಗೆ ಅವಿಭಕ್ತ ಸಹೋದರನಾಗಬೇಕೆಂಬ ಹಕ್ಕುದಾರಿ ಮೇಲೆ ಕೊಡಗೇಹಳ್ಳಿ ಸ್ಥಳದ ಶೇಕದಾರ ಸುಬ್ಬಣ್ಣನವರು ಹಂಚನಾಳು ವಾಸಸ್ಥರಾಗಿ ಮೃತಪಟ್ಟ ನರಸಿಂಹಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸುಬ್ಬಣ್ಣನವರ ಅರ್ಜೀಯನ್ನು 1884ನೇ ಇಸವಿ ಆಗಸ್ಟು ತಿಂಗಳು ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನರಸಿಂಹಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 124.

ಮೃತಪಟ್ಟ ಹುಚ್ಚಯ್ಯನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ಸ್ಥಳದ ಕೆಂಪಣ್ಣನು ಮೃತಪಟ್ಟ ಸದರೀ ಹುಚ್ಚಯ್ಯನವರಿಗೆ ಅವಿಭಕ್ತ ದೊಡ್ಡಪ್ಪನಾಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ಸ್ಥಳದ ಕೆಂಪಣ್ಣನು ಡಿಟೋ ವಾಸಸ್ಥರಾಗಿ ಮೃತಪಟ್ಟ ಹುಚ್ಚಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೆಂಪಣ್ಣನವರ ಅರ್ಜೀಯನ್ನು 1884ನೇ ಇಸವಿ ಆಗಸ್ಟು ತಿಂಗಳು ತಾರೀಖು 28ರಲ್ಲು ಕೇಳಿ ಸರಟಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹುಚ್ಚಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಜುಲೈ ತಿಂಗಳು 30ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕ್ರೆಸ್,
ಸಬ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 265.

ಮೃತಪಟ್ಟ ಪಟೇಲ್ ಬೆಟ್ಟೇಗವುಡನ ಆಸ್ತಿ ವಿಷಯದಲ್ಲಿ—

ಡಿಟ್ಟೋಯವನ ಮಗ ಬೆಟ್ಟ ಮೈನರ್, ಗಾರ್ಡಿಯನ್ ಇವನ ತಾಯಿ ಅರ್ಜೀದಾರಳಾದ ದ್ಯಾವಮ್ಮ, ಮೃತಪಟ್ಟ ಸದರೀ ಪಟೇಲ್ ಬೆಟ್ಟೇಗವುಡನಿಗೆ ಹೆಂಡತಿ ಮತ್ತು ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಶ್ರೀರಂಗಪಟ್ಟಣದ ತಾ॥ ಕ್ಯಾತನಹಳ್ಳಿ ಹೋಬಳಿ ಮಂಚನಹಳ್ಳಿ ಗ್ರಾಮದ ಸ್ಥಳದ ಬೆಟ್ಟ ಮೈನರ್, ಗಾರ್ಡಿಯನ್ ದ್ಯಾವಮ್ಮನು ಡಿಟೋ ಸ್ಥಳದ ವಾಸಸ್ಥನಾಗಿ ಮೃತಪಟ್ಟ ಬೆಟ್ಟೇಗವುಡನ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾರೆ.

ಸದರೀ ದರಖಾಸ್ತುದಾರರಾದ ಬೆಟ್ಟ ಮೈನರ್, ಗಾರ್ಡಿಯನ್ ದ್ಯಾವಮ್ಮ ಇವರ ಅರ್ಜಿಯನ್ನು 1884ನೇ ಆಗಸ್ಟು ತಿಂಗಳು ತಾರೀಖು 29ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಟೇಲ್ ಬೆಟ್ಟೇಗವುಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1884ನೇ ಇಸವಿ ಅರ್ಜೀ ನಂಬರ್ 266.

ಮೃತಪಟ್ಟ ಕುಂಬಾರ ಚಿಂತಿ ರಾಮಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಡಿಟೋಯವನ ಮಗನಾದ ವೆಂಕಟಸಾಮಿ, ಮೃತಪಟ್ಟ ಸದರೀ ಕುಂಬಾರ ಚಿಂತಿ ರಾಮಯ್ಯನಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ತಾಲ್ಲೂಕು ಪಡವಾರಹಳ್ಳಿ ಸ್ಥಳದ ವೆಂಕಟಸಾಮಯ್ಯ ಸದರೀ ಸ್ಥಳದ ವಾಸಸ್ಥನಾಗಿ ಮೃತಪಟ್ಟ ರಾಮಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ವೆಂಕಟಸಾಮಯ್ಯನ ಅರ್ಜೀಯನ್ನು 1884ನೇ ಇಸವಿ ಆಗಸ್ಟು ತಿಂಗಳು ತಾರೀಖು 29ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರಟಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕುಂಬಾರ ಚಿಂತಿ ರಾಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 296.

ಮೃತಪಟ್ಟ ಶಿವಾಚಾರದ ಮಾರಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರಳಾದ ಡಿಟೋಯವನ ಹೆಂಡತಿ ಬಸಮ್ಮನು, ಮೃತಪಟ್ಟ ಸದರೀ ಮಾರಯ್ಯನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಗುಂಡ್ಲು ತಾ॥ ತೆರಕಣಾಂಬಿ ಹೋಬಳಿ ಬೊಮ್ಮನಹಳ್ಳಿ ಸ್ಥಳದ ಬಸಮ್ಮನು ಡಿಟೋ ಸ್ಥಳದ ವಾಸಸ್ಥನಾಗಿ ಮೃತಪಟ್ಟ ಮಾರಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 300 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಬಸಮ್ಮನ ಅರ್ಜೀಯನ್ನು 1884ನೇ ಇಸವಿ ಅಕ್ಟೋಬರ ತಿಂಗಳು ತಾರೀಖು 21ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಾರಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಜುಲೈ ತಿಂಗಳು 30ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತು ಸಹ ಕೊಡೋಣಾಗಿದೆ.

ವಿ. ಎನ್. ನರಸಿಂಹಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜ್.

ನಂ. 6. ತಾರೀಖು 4ನೇ ಆಗಸ್ಟು 1884.

ಇದರಿಂದ ತಿಳಿಯಪಡಿಸುವದೇನಂದರೆ, ಹೊಳೇನರಸೀಪುರದ ಸಬ್ ರಿಜಿಸ್ಟ್ರೀ ಆಫೀಸಿನಲ್ಲಿ ಬೇವಾರಸಾಗಿಯಿರತಕ್ಕ ಕೆಳಗೆ ವಿವರ ಸೋಣಾದ ದಸ್ತೈವಜನ್ನು ಹಾಜರ್ ಮಾಡಿದವರೇ ಆಗಲೀ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾದ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರ್ರೇ ಯಾಗಲೀ ಈ ನೋಟೀಸ್ ತಾರೀಖು ಲಗಾಯತು ಒಂದು ತಿಂಗಳ ಒಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸು ತೆಗೆದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಶಪಡಿಸಲ್ಪಡುವದು.

ನಂಬರು.		ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
39.	1881—82	ನರಸೀಪುರದ ತಾಲ್ಲೂಕು ಸೂರನಹಳ್ಳಿ ಗ್ರಾಮದಲ್ಲಿರುವ ಸ್ಮಾರ್ತ ಬ್ರಾಹ್ಮಣ ಕೇಶವಯ್ಯನ ಹೆಂಡತಿ ಜೆರಾಯಿತು ಜೀವನದ ನರಸಮ್ಮ	ಲೇಟ್ ಅರಕಲಗೂಡು ತಾಲ್ಲೂಕು ಗುಬ್ಬಿ ವಾಸಸ್ಥ ಸ್ಮಾರ್ತ ಬ್ರಾಹ್ಮಣ ಗೋಣಿಬೀಡು ಸುಬ್ಬಾಭಟ್ಟರ ಮಗ ವೈದೀಕ ವೃತ್ತಿ ಜೀವನದ ನಂಜಪ್ಪ.	27—7—82	27—7—82	1,183—0—10 ರೂಪಾಯಿನ ಜಮೀನ್ ಕ್ರಯಪತ್ರ.

ತಾರೀಖು 24ನೇ ಜುಲೈ 1884.

ಇದರಿಂದ ತಿಳಿಯಪಡಿಸುವದೇನಂದರೆ, ತಿರ್ಮುಕೂಡ್ಲು ನರಸೀಪುರ ಮತ್ತು ಮೈಸೂರು ಸಬ್‌ರಿಜಿಸ್ಟ್ರೀ ಆಫೀಸ್‌ಗಳಲ್ಲಿ ಬೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತೈವಜುಗಳನ್ನು ಹಾಜರ್ಮಾಡಿದವರೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರ್ರು ಆಗಲೀ ಈ ನೋಟೀಸ್ ತಾರೀಖು ಲಾಗಾಯಿತು ವೊಂದು ತಿಂಗಳವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅವುಗಳನ್ನು ವಾಪಸ್ ತೆಗೆದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅವುಗಳನ್ನು ನಾಶ ಪಡಿಸಲ್ಪಡುವವು.

ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟರಾದ ತಾರೀಖು.	ದಸ್ತಾವೇಜಿನ ಸ್ವಭಾವ ವ ಕಿಮ್ಮತು.
118 / 1882—83	ಮೈಸೂರು ಕಿಲ್ಲೇಯಲ್ಲಿರುವ ಕೊಳತೂರು ಲಿಂಗಾಪಂತರ ಹೆಂಡತಿ ಪುಟ್ಟಮ್ಮಣ್ಣಮ್ಮ	ತಲ್ಕಾಡು ತಾಲ್ಲೂಕು ಹಾಲೀ ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಗರ್ಗೇಶ್ವರಿಯಲ್ಲಿರುವ ಫಕೀರ್ ಅಹಮ್ಮದ್‌ಸಾಬರ ಮಗ ಚಿಕ್ಕ ಯಿಮಾಂಸಾಬಿ	1—5—82	1—5—82	10 ರೂಪಾಯಿನ ಕ್ರಯಪತ್ರ.
151 / 1882—83	ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಪಿಳ್ಳಹಳ್ಳಿಯಲ್ಲಿರುವ ಅಂಣೇಗೌಡನ ಮಗ 1ನೇ ಪುಟ್ಟಂಣ 2ನೇ ಭೈರಂಣ	ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಜೋಡೀ ಅಶ್ವತ್ಥಪುರದ ಅಗ್ರಹಾರದಲ್ಲಿರುವ ರಾಘವೇಂದ್ರಾಚಾರ್ರ ಮಕ್ಕಳು ಶ್ರೀನಿವಾಸಾಚಾರ್	9—5—82	9—5—82	14–4–0 ರೂಪಾಯಿನ ಗುತ್ತಿಗೆ ದಸ್ತಾವೇಜು.
157 / 1882—83	ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಚಿದರವಳ್ಳಿಯಲ್ಲಿರುವ ಬಲಗೈಜಾತಿ ಚಿಕ್ಕಸಿದ್ದನ ಮಗ ಕುಳ್ಳಮಾದ	ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಚಿದರವಳ್ಳಿಯಲ್ಲಿರುವ ಮಾದಶೆಟ್ಟಿಮಗ ವೆಂಕಟಶೆಟ್ಟಿ	11—1—82	11—5—82	95 ರೂಪಾಯಿನ ಭೋಗ್ಯಪತ್ರ.
282 / 1882—83	ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಗರ್ಗೇಶ್ವರಿಯಲ್ಲಿರುವ ಸ್ಮಾರ್ತ ಬ್ರಾಹ್ಮಣ ಕಿತ್ತೂರುಸುಬ್ಬಯ್ಯನ ಹೆಂಡತಿ ಲಕ್ಷ್ಮಮ್ಮ	ತಿರ್ಮುಕೂಡ್ಲು ನರಸೀಪುರ ತಾಲ್ಲೂಕುಗರ್ಗೇಶ್ವರಿಯಲ್ಲಿರುವ ವೈಷ್ಣವ ಬ್ರಾಹ್ಮಣ ವೆಂಕೋಬರಾವ್	13—6—82	13—6—82	100 ರೂಪಾಯಿನ ಆಧಾರ ಪತ್ರ.
635 / 1881—82	ಮೈಸೂರು ಯಿಟ್ಟಿಗೆ ಗೂಡಿನಲ್ಲಿ ಯಿರುವ ಪಂಚಾಳ ಜಾತಿ ಕಾತಮೇಸ್ತ್ರಿ ಮಗ ಚಾಮುಂಡಾಚಾರಿ 1 ನಾರಣಾಚಾರಿ 1 ಲಕ್ಷ್ಮಣಾಚಾರಿ 1	ಮೈಸೂರು ಯಿಟ್ಟಿಗೆ ಗೂಡಿನಲ್ಲಿರುವ ಪಂಚಾಳ ಜಾತಿ ಕಾತಮೇಸ್ತ್ರಿ ಮಗ ಚಾಮುಂಡಾಚಾರಿ 1 ನಾರಣಾಚಾರಿ 1 ಲಕ್ಷ್ಮಣಾಚಾರಿ 1	20—1—82	23—1—82	90 ರೂಪಾಯಿನ ವಿಭಾಗ ಪತ್ರ.
556 / ಡಿಟೋ.	ಮೈಸೂರು ಬಸವನ ಮಹಲೇಲಿರುವ ಶಿವಾಚಾರದ ವ್ಯಾಪಾರದ ಜೀವನದ ಯಡೂರಯ್ಯನಮಗಪುಟ್ಟಂಣ	ಮೈಸೂರು ಬಸವನಮಹಲೇಲಿರುವ ಅಕ್ಕಸಾಲೆ ಜಾತಿ ಸೊನಾರು ಕಸಬು ಚನ್ವೀರಪ್ಪನ ಮಗ ವೀರಂಣ	15—12—81	17—12—81	150 ರೂಪಾಯಿನ ಭೋಗ್ಯಪತ್ರ.
475 / ಡಿಟೋ	ಮೈಸೂರು ಬಸವನ ಮಹಲೇಲಿ ಯಿರುವ ಮುಸಲ್ಮಾನ್ ಚೌದ್ರಿ ಲಾಲಾಮಿಯ್ಯಾನ ಮಗ ಮಹಮದ್ ಖಾಸಿಂಸಾಬಿ	ಮೈಸೂರುನಲ್ಲಿ ಯಿರುವ ದೇಶದ ಯಜಮಾನ ವೀರಂಣಶೆಟ್ಟರ ಮಗ ರುದ್ರಶೆಟ್ಟಿ ಶಿವಾಚಾರ ಜಾತಿ	29—8—81	21–11–81	ಮಾಹೆ 1ಕ್ಕೆ 8 ರೂಪಾಯಿ ಕೊಡತಕ್ಕ ಅಂಗಡಿಬಾಡಿಗೆ ಕರಾರು.

ಅಬ್ದುಲ್‌ಖಾದರ್, ಕೆ. ಬಿ., ರಿಜಿಸ್ಟ್ರಾರ್.

ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್.

ತಾರೀಖು 1ನೇ ಆಗಸ್ಟ್ 1884.

ಇದರಿಂದ ತಿಳಿಯಪಡಿಸುವದೇನೆಂದರೆ, ಈ ಕೆಳಗೆ ನಮೂದಿಸುವ ಸಬ್ ರಿಜಿಸ್ಟ್ರಿ ಆಫೀಸುಗಳಲ್ಲಿ ಜೇವಾರಸಾಗಿ ಇರತಕ್ಕ ಈ ಮುಂದೆ ವಿವರಿಸುವ ದಸ್ತಾವೇಜುಗಳನ್ನು ಹಾಜರ್‌ಮಾಡಿದವರೇ ಆಗಲಿ ಅಥವಾ ವಾಪಸುಪಡಿಯಲು ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರರೇ ಆಗಲಿ ಈ ನೋಟೀಸು ತಾರೀಖು ಲಾಗಾಯತು ಒಂದು ತಿಂಗಳಲ್ಲಿ ಸದರೀ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ವಾಪಸ್ ಪಡಿಯದೆ ತಪ್ಪಿದರೆ ರಿಜಿಸ್ಟ್ರೇಷನ್ ನಿಬಂಧನೆ ಪ್ರಕಾರ ಅವು ನಾಶಪಡಿಸಲ್ಪಡುವವು.

ಯಾವ ಸಬ್ ರಿಜಿಸ್ಟ್ರೀ ಆಫೀಸು.	ದಸ್ತೈವಜಿನ ನಂಬರ್.	ದಸ್ತಾವೇಜು ಬರದು ಕೊಟ್ಟವನ ಹೆಸರು ವ ವಾಸಸ್ಥಳ.	ದಸ್ತಾವೇಜು ಬರಸಿ ಕೊಂಡವನ ಹೆಸರು ವ ವಾಸಸ್ಥಳ.	ದಸ್ತೈವಜು ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
ಅತ್ತಿಕುಪ್ಪಾ	43 / 1882—83	ನಳ್ಳೇನಹಳ್ಳಿ ಗ್ರಾಮದಲ್ಲಿ ಯಿರುವ ತಿರುಮಲನ ಹೆಂಡತಿ ಸುಡುಗಾಡಿ	ಚಿನಕುರಳಿ ಗ್ರಾಮದಲ್ಲಿ ಇರುವ ಕೊತ್ವಾಲ್ ರಾಮರಾಯ	25—4—82.	27—4—82	ನಳ್ಳೇನಹಳ್ಳಿ ಗ್ರಾಮದಲ್ಲಿ ಇರುವ ನಂಬರು-113—114ನೇ ಕಲ್ಲು ಹೊಲ, ನಂಬರು 128ನೇ ಅಡಿಕೆ ತೆಂಗಿನತೋಟದ ಪೈಕಿ ತನ್ನ ಹಿಸ್ಸೆಯನ್ನು 99 ರೂಪಾಯಿಗೆ ಕ್ರಯಕ್ಕೆ ಕೊಟ್ಟಿರುವದಾಗಿ.
ಮಂಡ್ಯ	1 / 1881—82	ಜೆಸಗರ ಹಳ್ಳಿ ಗ್ರಾಮದಲ್ಲಿರುವ ಜೇಯಪ್ಪನ ಮಗ ವೆಂಕಟರಂಗಯ್ಯ	ಜೆಸಗರಹಳ್ಳಿ ಗ್ರಾಮದಲ್ಲಿ ಇರುವ ಚನ್ನಪ್ಪನ ಮಗ ಶಿದ್ದಲಿಂಗಪ್ಪ	13—10—81	5—6—82	ಜೆಸಗರಹಳ್ಳಿ ಗ್ರಾಮದ ಕೆರೆಕೆಳಗೆ ನಂಬರು 212—213ನೇ ತರೀಜಮೀನನ್ನು (145) ರೂಪಾಯಿಗೆ ಕ್ರಯಕ್ಕೆ ಕೊಟ್ಟಿರುವದಾಗಿ.

ವಿ. ಪಿ. ಮಾಧವರಾವ್,
ರಿಜಿಸ್ಟ್ರಾರ್.

ಮೈಸೂರು ಸ್ಟೇಟ್ ರೈಲ್‌ವೆ.

ಪ್ರಕಟನೆ.

ಬೆಂಗಳೂರು—ತುಮಕೂರು ರೈಲ್ವೆ ತೆರಿಯೋಣವು.

ಸ್ 1884ನೇ ಇಸವಿ ಆಗಸ್ಟು ತಾರೀಖು 11ನೇ ಲಾಗಾಯ್ತು ಬೆಂಗಳೂರಿಂದ 43 ಮೈಲಿ ದೂರದಲ್ಲಿ ಇರುವ ತುಮಕೂರುವರಿಗೆ ರೈಲ್‌ವೆ ಭಂಡಿಗಳ ಮೇಲೆ ಪ್ರಯಾಣಸ್ಥರು ಅವರ ಲಗ್ಗೇಜ್, ಕುದುರೆಗಳು, ಭಂಡಿಗಳು, ನಾಯಿಗಳು, ಪಾರಸಲ್‌ಗಳು ಮತ್ತು ಗೂಡ್ಸು ಯಾನೆ ಸಾಮಾನುಗಳು ಮೈಸೂರು ರೈಲ್‌ವೆಯ ತಮಾಂ ಸ್ಟೇಷನ್‌ಗಳಿಂದ ಸಾಗಿಸಲ್ಪಡುವವು.

ತುಮಕೂರು ಲೈನ್‌ನಲ್ಲಿ ಇರತಕ್ಕ ಸ್ಟೇಷನ್‌ಗಳು ಯಾವವಂದರೆ:—

ಬೆಂಗಳೂರು, ಬಾಣಾವಾರ, ಗೊಲ್ಲಹಳ್ಳಿ, ದೊಡ್ಡಬೆಲೆ, ನಿಡವಂಡ, ಹಿರೇಹಳ್ಳಿ, ತುಮಕೂರು.

ಸ್ಟೇಷನ್‌ಗಳು.		ಪ್ರಯಾಣಸ್ಥರ ಭಂಡಿ.	ಚಾರ್ಜ್‌ಗಳು.								
			೧ನೇ ತರಗತಿ.			೨ನೇ ತರಗತಿ.			೩ನೇ ತರಗತಿ.		
		ಬೆಳಿಗ್ಗೆ.									
ಬೆಂಗಳೂರು	ಹೊರಡುವದು ..	7–30	2	11	0	1	5	6	0	10	9
ತುಮಕೂರು	ಶೇರುವದು ..	10–37									
		ಸಾಯಿಂತ್ರ.									
ತುಮಕೂರು	ಹೊರಡುವದು ..	2–18	2	11	0	1	5	6	0	10	9
ಬೆಂಗಳೂರು	ಶೇರುವದು ..	5–25									

ವಿಶೇಷ ತಪಶೀಲುಗಳು ಪ್ರತ್ಯೇಕ ಇಸ್ತಿಹಾರಿನಲ್ಲಿ ಛಾಪಿಸಲ್ಪಟ್ಟಿರುತ್ತೆ.

ಬೆಂಗಳೂರು,
4ನೇ ಆಗಸ್ಟು 1884ನೇ ಇಸವಿ.

ಏ. ರೀಡ್ ಬೀಚರ್,
ಮ್ಯಾನೆಜರ್.

ಮೈಸೂರು ಗೆಜೆಟ್, ಚಂದಾದರ ವಗೈರೆ.

	ಚಂದಾ. ರೂ.	ಆ.	ಟಪ್ಪಾಲ್ ಹಾಸಲು ಮೈಸೂರು ಶೀವ ಶಿವಾಯಿ ಇತರ ಸ್ಥಳಗಳಿಗೆ.	
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛಷ್ ಮಾಹೆ ಯಾ ಕ್ವಾರಟರಿಗೆ	ದಾವಮಾಷಾಯಿ ಪ್ರಕಾರ ದರಗಳು.			

ಶಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟೀಸುಗಳು :—

	ರೂ.	ಆ.
ಮೊದಲನೇ ದಫಾ ಛಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ) ..	2	8
ಯರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ	1	4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ, ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟೀಸ್‌ಗಳಿಗೆ:—

ಮೊದಲನೇ ದಫಾ	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	2	8

ಶಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಸಲ್ಪಡುತ್ತವೆ.

ಡ್ಯುಪ್ಲಿಕೇಟ್ ಕಾಫೀ ಪಟ್ಟೇ, ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫೀಸರ್‌ಗಳು ಕೊಡುವ ನೋಟೀಸ್‌ಗಳಿಗೆ :—

ಮೊದಲನೇ ಸಲಕ್ಕೆ ..	ಫುಟ1ಕ್ಕೆ ..	10	0
ಯೆರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	„ ..	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್‌ಮಾಡಲ್ಪಡುತ್ತೆ :—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ		ಪಙ್ತಿ1ಕ್ಕೆ ..	0	8
ಯೆರಡನೇ ದಫಾ	ಡಿಟೋ	ಡಿಟೋ ..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ		.. ..	0	4

ಬಮೋಜೀಬ್ ಹುಕ್ಕುಂ,
ಹೆಚ್. ಹಡರ್ಸನ್,
ಮೈ. ಗೆ. ಕಂಪೈಲರ್.

ಮೈಸೂರ ಗೆಜೆಟ್.

ಸರ್ಕಾರದಿಂದ ಫಾಯಿಷ್ ಆದದ್ದು.

ಬೆಂಗಳೂರು, ಶನಿವಾರ, ಆಗಸ್ಟ್ ತಾ॥ 9, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು.

ಇದರಡಿ ಬರುವ ರೆಗ್ಯುಲೇಷನ್, 1884ನೇ ಇಸವಿ ಜುಲೈ 21ನೇ ಮುರ್ಕುಮಿನಲ್ಲಿ ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದ್ದೂರವರ ಅನುಮತಿಯನ್ನು ಪಡೆದು ಇದರ ದೆಶೆಯಿಂದ ಸರ್ವರ ತಿಳುವಳಿಕೆಯ ಬಗ್ಗೆ ಪ್ರಕಟಿಸಲ್ಪಡುತ್ತೆ.

ಸನ್ 1884ನೇ ಇಸಿವಿಯ IIIನೇ ರೆಗ್ಯುಲೇಷನ್.

ಮೈಸೂರು ದೇಶದ ಕೋರ್ಟುಗಳಲ್ಲಿ ವಕಾಲತ್ತು ಮಾಡುವ ಲೀಗಲ್ ಪ್ರಾಕ್ಟೀಷನರಿಗೆ (ಅಂದರೆ ವಕಾಲತ್ತು ಮಾಡತಕ್ಕವರಿಗೆ) ಸಂಬಂಧಪಟ್ಟ ಕಾನೂನನ್ನು ತಿದ್ದುಪಾಟು ಮಾಡುವದಕ್ಕೆ ಹುಟ್ಟಿದ ರೆಗ್ಯುಲೇಷನ್.

ಮೈಸೂರು ದೇಶದಲ್ಲಿ ವಕಾಲತ್ತು ಮಾಡತಕ್ಕವರಿಗೆ ಸಂಬಂಧಪಟ್ಟ ಕಾನೂನನ್ನು ತಿದ್ದುಪಡಿಮಾಡಿ ದೃಢಪಡಿಸುವದು ಆವಶ್ಯಕವಾಗಿರುವದರಿಂದ, ಶ್ರೀಮನ್ ಮಹಾರಾಜರವರು ಇದರಡಿಕಂಡ ಮೇರೆ ವಿಧಿಸುತ್ತಾರೆ:—

ಅಧ್ಯಾಯ I.

ಅವತರಣಿಕೆ.

ಚಿಕ್ಕ ಹೆಸರು.
ಪ್ರಾರಂಭ.

ಸೆಕ್ಷನ್ 1.—ಈ ರೆಗ್ಯುಲೇಷನ್ನು "1884ನೇ ಇಸವಿಯ ಮೈಸೂರು ಲೀಗಲ್ ಪ್ರಾಕ್ಟೀಷನರಗಳ ರೆಗ್ಯುಲೇಷನ್" ಯಂಬದಾಗಿ ಕರೆಯಲ್ಪಡಬಹುದು, ಮತ್ತು ಯಿದು 1884ನೇ ಇಸವಿ ಸೆಪ್ಟಂಬರ್ 1ನೇ ತಾರೀಖಿನಲ್ಲಿ ಜಾರೀಗೆ ಬರತಕ್ಕದ್ದು.

ಸ್ಥಳ ವ್ಯಾಪ್ತಿ.

ಯಿದು ಮೈಸೂರು ದೇಶದಲ್ಲಿ ಸರ್ವತ್ರ ವ್ಯಾಪಿಸುತ್ತದೆ.

ರೂಲ್ಸ್‌ಗಳ ರದ್ದೀಯಾತಿ.

ಸೆಕ್ಷನ್ 2.—1884ನೇ ಇಸವಿ ಸೆಪ್ಟಂಬರ್ 1ನೇ ಮುರ್ಕುಂ ಮತ್ತು ಆತರುವಾಯ, 1879ನೇ ಇಸವಿ ಫಿಬ್ರುವರೀ 18ನೇ ಮುರ್ಕುಂ 273ನೇ ನಂಬರ್‌ವುಳ್ಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಯಲ್ಲಿ ಫಾಯಿಷ್ ಮಾಡಲ್ಪಟ್ಟ (ಅಡ್ವೋಕೇಟ್ ವ ಪ್ಲೀಡರುಗಳಿಗೆ ಸಂಬಂಧಪಟ್ಟ) ರೂಲ್ಸ್‌ಗಳೂ, ಮತ್ತು 1880ನೇ ಇಸವಿ ಮಾರ್ಚೀ 12ನೇ ಮುರ್ಕುಂ 306ನೇ ನಂಬರ್‌ವುಳ್ಳ ಚೀಫ್ ಕಮ್ಮಿಷನರವರ ಇಸ್ತಿಹಾರ್‌ನಾಮೆಯಲ್ಲಿ ಫಾಯಿಷ್ ಮಾಡಲ್ಪಟ್ಟ (ಲೀಗಲ್ ಪ್ರಾಕ್ಟೀಷನರಗಳು ಕಕ್ಷಿಗಾರ ವಗೈರೇಯೊಂದಿಗೆ ಮಾಡುವ ಒಡಂಬಡಿಕೆಗಳಿಗೆ ಸಂಬಂಧಪಟ್ಟ) ರೂಲ್ಸ್‌ಗಳೂ, ರದ್ದು ಮಾಡಲ್ಪಡತಕ್ಕವು.

ಯಿದರಲ್ಲಿ ಯೇನು ಅಡಗಿಯಿದ್ದಾಗ್ಯೂಸರಿ, ಅಡ್ವೋಕೇಟ್ ವ ಪ್ಲೀಡರಗಳಿಗೆ ಸಂಬಂಧಪಟ್ಟ 1879ನೇ ಇಸವಿ ಫಿಬ್ರವರೀ 18ನೇ ಮರ್ಕುಮಿನ ರೂಲ್‌ಸ್ ಅನುಸರಿಸಿ ಮೊದಲೇ ದಾಖಲ್ಮಾಡಲ್ಪಟ್ಟ ಅಡ್ವೋಕೇಟ್, ಮತ್ತು 1 ವ 2ನೇ ಕ್ಲಾಸ ಪ್ಲೀಡರುಗಳು, ಮೇಲ್ಕಂಡ ರೂಲ್‌ಸ್‌ಗಳ ಷರತ್ತುಗಳನುಸರಿಸಿ 1884ನೇ ಇಸವಿ ಡಿಶಂಬರ್ 31ನೇ ಮರ್ಕುಂ ವರಿಗೆ ವಕಾಲತ್ತು ನಡಸತಕ್ಕದ್ದು.

ಅರ್ಥ ವಿವರಣೆ.

ಸೆಕ್ಷನ್ 3.—ಈ ರೆಗ್ಯೂಲೇಷನಿನಲ್ಲಿ ಸಂದರ್ಭಕ್ಕಾಗಲೀ ಪ್ರಮೇಯಕ್ಕಾಗಲೀ ವಿರುದ್ಧಾಂಶವೇನೂ ಯಿಲ್ಲದೆ ಯಿರುವ ಪಕ್ಷಕ್ಕೆ.—

"ಲೀಗಲ್ ಪ್ರಾಕ್ಟೀಷನರ್" ಅಂದರೆ ಈ ರೆಗ್ಯೂಲೇಷನ್ ಅನುಸರಿಸಿ ದಾಖಲ್ ಮಾಡಲ್ಪಟ್ಟ ವಬ್ಬ ಅಡ್ವೋಕೇಟ್ ಯಾ ಪ್ಲೀಡರೆಂದು ಅರ್ಥವು.

"ಜಡ್ಜ್" ಅಂದರೆ ಪ್ರತಿ ಸಿವಿಲ್ ವ ಕ್ರಿಮಿನಲ್ ಕೋರ್ಟಿನ ವಿಚಾರಣೆ ಅಧಿಕಾರವುಳ್ಳ ಜ್ಯುಡಿಷಿಯಲ್ ಆಫೀಸರೆಂದು ಅರ್ಥವಾಗುತ್ತದೆ, ಅವರು ಯಾವ ಹೆಸರಿನಿಂದ ಕರೆಯಲ್ಪಟ್ಟಾಗ್ಯೂ ಚಿಂತೆಯಿಲ್ಲ.

"ಗವರ್ನಮೆಂಟ್" ಅಂದರೆ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರವೆಂದರ್ಥವು.

ಅಧ್ಯಾಯ II.

ಅಡ್ವೋಕೇಟ್ ವ ಪ್ಲೀಡರುಗಳು.

ಕೋರ್ಟುಗಳಮುಂದೆ ಯಾರು ವಕಾಲತ್ತು ಮಾಡತಕ್ಕದ್ದು.

ಸೆಕ್ಷನ್ 4.—ಶಿವಿಲ್ ವ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡುಗಳಲ್ಲಾಗಲೀ ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಯಿತರ ಕಾನೂನಿನಲ್ಲಾಗಲಿ ವಿಧಿಸಿರುವ ರೀತೀಲಿ ಹೊರ್ತು, ಯಾವ ಮನುಷ್ಯನಾಗಲೀ ಆತನು ಈ ರೆಗ್ಯೂಲೇಷನ್ ಅನುಸರಿಸಿ ವಬ್ಬ ಅಡ್ವೋಕೇಟ್ ಯಾ ಪ್ಲೀಡರ್ ತರೀಕ ದಾಖಲ್ ಮಾಡಲ್ಪಟ್ಟಿದ್ದರೇನೆ ಶಿವಾಯಿ, ಮೈಸೂರು ದೇಶದ ಯಾವ ಕೋರ್ಟಿನಲ್ಲಾಗಲಿ ಮತ್ತೊಬ್ಬನಿಗೋಸ್ಕರ ಹಾಜರಾಗಕೂಡದು, ವಕಾಲತ್ತು ನಡಿಸಕೂಡದು ಯಾ ಕೆಲಸ ನಡಿಸಕೂಡದು.

ಪರಂತು, ಯಾವ ಕ್ರಿಮಿನಲ್ ಕೋರ್ಟಿನ ಮುಂದಾಗಲಿ ವಂದು ತಕ್ಷೀರ್ ಆಪಾದಿಸಲ್ಪಟ್ಟ ಪ್ರತಿ ಮನುಷ್ಯನೂ, ತನ್ನ ಬಚಾವಣಿ ವೃದ್ಧಿಕ್ಕೆ ತನಗೆ ಸಹಾಯ ಮಾಡುವ ಬಗ್ಯೆ ಯಾವ ಮನುಷ್ಯನನ್ನಾಗಲೀ ಕೋರ್ಟಿನವರ ಅಪ್ಪಣೆ ಪಡೆದು ನೇಮಿಸಬಹುದೇ ಹೊರ್ತು ಅನ್ಯಥಾ ನೇಮಿಸಕೂಡದು;

ಪರಂತು, ಯಾವ ಜ್ಯುಡಿಷಿಯಲ್ ಪ್ರೊಸಿಡಿಂಗ್ಸ್‌ಯಾನೆ ನಡವಳಿತದ ವಿಷಯದಲ್ಲಾಗಲಿ ಗವರ್ನಮೆಂಟಿನ ತರಫ ಕೆಲಸ ನಡಿಸುವದಕ್ಕೆ ವುದ್ಯೋಗತಃ ಆಗಲೀ ಅನ್ಯಥಾ ಆಗಲಿ ಅಧಿಕಾರ ಹೊಂದಿದ ಯಾವ ಮನುಷ್ಯನಾದರು ಗವರ್ನಮೆಂಟ್ ತರಫನಲ್ಲಿ ಅವನ ಅಧಿಕಾರಕ್ಕೆ ಒಳಪಟ್ಟು ಕೆಲಸಗಳು ನಡಿಸಬಹುದು, ಹಾಜರಾಗಬಹುದು, ಮತ್ತು ಅರ್ಜಿಗಳು ಕೊಡಬಹುದು.

ಯಾವ ಕೋರ್ಟುಗಳಲ್ಲಿ ಅಡ್ವೋಕೇಟರುಗಳು ವಕಾಲತ್ತು ಮಾಡಬಹುದು.

ಸೆಕ್ಷನ್ 5.—ಈ ರೆಗ್ಯೂಲೇಷನಿನ ನಿಯಮಗಳನುಸರಿಸಿ ಕ್ರಮವಾಗಿ ದಾಖಲ್ ಮಾಡಲ್ಪಟ್ಟ ಅಡ್ವೋಕೇಟರುಗಳು, ಮೈಸೂರು ಚೀಫ್ ಕೋರ್ಟಿನಲ್ಲಿಯೂ, ಅದಕ್ಕೆ ತಾಬೇದಾರಿಯಾದ ತಮಾಂ ಸಿವಿಲ್ ವ ಕ್ರಿಮಿನಲ್ ಕೋರ್ಟುಗಳಲ್ಲಿಯೂ ಹಾಜರಾಗುವದಕ್ಕೂ, ವಕಾಲತ್ತು ಮಾಡುವದಕ್ಕೂ, ಮತ್ತು ಕೆಲಸ ನಡಿಸುವದಕ್ಕೂ ಅರ್ಹರಾಗಿರತಕ್ಕದ್ದು.

ಪ್ಲೀಡರುಗಳು.

ಸೆಕ್ಷನ್ 6.—ಪ್ಲೀಡರುಗಳಲ್ಲಿ 1ನೇ ಗ್ರೇಡ್ ಪ್ಲೀಡರುಗಳು ವ 2ನೇ ಗ್ರೇಡ್ ಪ್ಲೀಡರುಗಳು ಯಂಬದಾಗಿ ಯೆರಡು ತರಗತಿಯ ಪ್ಲೀಡರುಗಳಿರತಕ್ಕದ್ದು.

ಯಾವ ಕೋರ್ಟುಗಳಲ್ಲಿ ವಂದನೇ ಗ್ರೇಡ್ ಪ್ಲೀಡರುಗಳು ವಕಾಲತ್ತು ಮಾಡಬಹುದು.

ಸೆಕ್ಷನ್ 7.—ವಂದನೇ ತರಗತಿಯ ವಬ್ಬ ಪ್ಲೀಡರು, ಸಿವಿಲ್ ಪ್ರೊಸಿಡ್ಯೂರ್ ಕೋಡಿನಲ್ಲಿ ವಿವರಿಸಿರುವ ರೀತ್ಯಾ ಯಾವ ಡಿಸ್ಟ್ರಿಕ್ಟಗಾಗಿ ಆತನು ದಾಖಲ್ಮಾಡಲ್ಪಡುತ್ತಾನೋ ಅಂಥಾ ಡಿಸ್ಟ್ರಿಕ್ಟಿನೊಳಗೆ ಯಿರುವ ಯಾವ ಶಿವಿಲ್ ಕೋರ್ಟಿನಲ್ಲಾಗಲೀ ಮತ್ತು ಯಿಲ್ಲಾ ಕ್ರಿಮಿನಲ್ ಕೋರ್ಟಿನಲ್ಲಾಗಲೀ ಹಾಜರಾಗಲಿಕ್ಕೂ, ವಕಾಲತ್ತು ಮಾಡಲಿಕ್ಕೂ ಮತ್ತು ಕೆಲಸ ನಡಸಲಿಕ್ಕೂ ಅರ್ಹನಾಗಿರತಕ್ಕದ್ದು; ಪರಂತು, ಆತನು ಚೀಫ್ ಕೋರ್ಟಿನಲ್ಲಿ ವಕಾಲತ್ತು ಮಾಡುವದಕ್ಕೆ ಅರ್ಹನಾಗಿರತಕ್ಕದ್ದಲ್ಲವು.

ಯಾವ ಕೋರ್ಟುಗಳಲ್ಲಿ ಯರಡನೇ ತರಗತಿಯ ಪ್ಲೀಡರುಗಳು ವಕಾಲತ್ತು ಮಾಡಬಹುದು.

ಸೆಕ್ಷನ್ 8.—ಯರಡನೇ ತರಗತಿಯ ಪ್ರತ್ಯಿ ಪ್ಲೀಡರು, ಆತನು ಯಾವ ಕೋರ್ಟಿಗಾಗಿ ದಾಖಲ್ ಮಾಡಲ್ಪಡುತ್ತಾನೋ ಅಂಥಾ ಯಾವ ಮುನ್ಸಿಫ್ ಕೋರ್ಟಿನಲ್ಲಾಗಲೀ ಯಲ್ಲಾ ಮಾಜಿಸ್ಟ್ರೇಟ ಕೋರ್ಟುಗಳಲ್ಲಾಗಲೀ ಹಾಜರಾಗಲಿಕ್ಕೂ, ವಕಾಲತ್ತು ಮಾಡಲಿಕ್ಕೂ ಮತ್ತು ಕೆಲಸ ನಡಸಲಿಕ್ಕೂ ಅರ್ಹನಾಗಿರತಕ್ಕದ್ದು.

ಯರಡನೇ ತರಗತಿಯ ಪ್ಲೀಡರುಗಳು, ಸಬಾರ್ಡಿನೇಟ್ ಜಡ್ಜೀರ ಕೋರ್ಟುಗಳಲ್ಲಿ ವಕಾಲತ್ತು ಮಾಡುವದಕ್ಕೆ ಅಧಿಕಾರ ಕೊಡಲ್ಪಡುವಣ.

ಸೆಕ್ಷನ್ 9.—ವಂದು ಸಬಾರ್ಡಿನೇಟ್ ಜಡ್ಜೀರ ಕೋರ್ಟು ಸ್ಥಾಪಿಸಲ್ಪಟ್ಟ ಸ್ಥಳದಲ್ಲಿ, ವಕಾಲತ್ತು ಮಾಡುವಂಥಾ ಮೂವರು ಅಡ್ವೋಕೇಟರುಗಳಾಗಲೀ 1ನೇ ತರಗತಿಯ ಪ್ಲೀಡರುಗಳಾಗಲೀ ವಾಸವಾಗಿ ಯಿಲ್ಲದಿದ್ದರೆ, ಚೀಫ್ ಕೋರ್ಟಿನವರು ತಮ್ಮ ಅಂಥಾ ವುದ್ದೇಶ್ಯವನ್ನ ಸರ್ಕಾರಿ ಗೆಜೆಟಿನಲ್ಲಿ ನೋಟೀಸ ಮೂಲಕ ಫಾಯಿಷ್ ಮಾಡಲ್ಪಟ್ಟ ಆರು ತಿಂಗಳ ತರುವಾಯ ಅಂಥಾ ಸಬಾರ್ಡಿನೇಟ್ ಜಡ್ಜೀರ ಕೋರ್ಟಿನಲ್ಲಿ ವಕಾಲತ್ತು ಮಾಡುವ ಬಗ್ಯೆಗಿ ಅವಶ್ಯಕವಾದ ಸಂಖ್ಯೆಯುಳ್ಳ ಯರಡನೇ ಗ್ರೇಡ ಪ್ಲೀಡರುಗಳಿಗೆ ಹೆಸರು ನಮೂದಿಸಿ ಅಧಿಕಾರ ಕೊಡಬಹುದು.

ಚೀಫ್ ಕೋರ್ಟಿನವರು, ಯೋಗ್ಯತೆ ವಿಷಯದಲ್ಲಿಯೂ, ದಾಖಲ್ಮಾಡುವ ವಿಷಯದಲ್ಲಿಯೂ ರೂಲ್ಸ ಮಾಡತಕ್ಕದ್ದು.

ಸೆಕ್ಷನ್ 10.—ಚೀಫ್ ಕೋರ್ಟಿನವರು, ಈ ರೆಗ್ಯೂಲೇಷನ್ ಅನುಸಾರವಾಗಿ ಯಿದರಡೀಕಂಡ ವಿಷಯಗಳಿಗೋಸ್ಕರ ಆಗಿಂದಾಗ್ಯೆ ರೂಲ್ಸ ಮಾಡಬಹುದು, ಯಾವ ಬಗ್ಯೆಂದರೆ;—

(1) ಈ ರೆಗ್ಯೂಲೇಷನ್ ಅನುಸಾರವಾಗಿ ಅಡ್ವೋಕೇಟರುಗಳಾಗಿಯಾಗಲಿ, 1ನೇ ಗ್ರೇಡ ಅಥವಾ 2ನೇ ಗ್ರೇಡ ಪ್ಲೀಡರುಗಳಾಗಿಯಾಗಲಿ ದಾಖಲ್ಮಾಡಲ್ಪಡತಕ್ಕ ಬಗ್ಯೆ ಆವಶ್ಯಕಗಳಾದ ಯೋಗ್ಯತೆಗಳು;

(2) ಅಂಥಾ ದಾಖಲಾತಿಗೋಸ್ಕರ ಕೊಡಲ್ಪಡುವ ದರಖಾಸ್ತುಗಳೊಂದಿಗೆ ಕಳುಹಿಸಲ್ಪಡಬೇಕಾದ ಸರ್ಟಿಫಿಕೇಟಗಳು: ಮತ್ತು—

(3) ಚೀಫ್ ಕೋರ್ಟಿನವರಿಂದ ಈ ರೆಗ್ಯೂಲೇಷನಿನ 11ನೇ ಸೆಕ್ಷನ್ ಅನುಸರಿಸಿ ಕೊಡಲ್ಪಡುವ ದಾಖಲಾತಿ ಸರ್ಟಿಫಿಕೇಟಗಾಗಲಿ, ಅಥವಾ 12ನೇ ಸೆಕ್ಷನ್ ಅನುಸಾರವಾದ ರೆನ್ಯೂಯಲ್ ಸರ್ಟಿಫಿಕೇಟಗಾಗಲಿ ಕೊಡಲ್ಪಡಬೇಕಾದ ಸ್ಟಾಂಪು ಮೊಬಲಗು.

ಈ ಸೆಕ್ಷನ್ ಅನುಸಾರವಾಗಿ ಮಾಡಲ್ಪಟ್ಟ ರೂಲ್ಸಗಳು, ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟು ಸರ್ಕಾರಿ ಗೆಜೆಟ್ಟಿನಲ್ಲಿ ಫಾಯಿಷ್ ಮಾಡಲ್ಪಟ್ಟಾಗ ಕಾನೂನಿನ ಬಲವುಳ್ಳದ್ದಾಗಿರತಕ್ಕದ್ದು.

ದಾಖಲಾತೀ ಬಗ್ಯೆ ದರಖಾಸ್ತುಗಳು.

ಸೆಕ್ಷನ್ 11.—ಹತ್ತನೇ ಸೆಕ್ಷನ್ ಅನುಗುಣವಾಗಿ ಏರ್ಪಡಿಸೋಣಾದ ರೂಲ್ಸಗಳನುಸರಿಸಿ ಕ್ರಮವಾಗಿ ಯೋಗ್ಯತಾವುಳ್ಳ ಪ್ರತಿ ಮನುಷ್ಯನೂ, ಈ ರೆಗ್ಯೂಲೇಷನ್ ಅನುಸರಿಸಿ ಅಡ್ವೋಕೇಟಾಗಿಯಾಗಲೀ ಪ್ಲೀಡರಾಗಿಯಾಗಲಿ ದಾಖಲ್ಮಾಡಲ್ಪಡುವ ಬಗ್ಯೆ ಮೈಸೂರು ಚೀಫ್ ಕೋರ್ಟಿಗೆ ದರಖಾಸ್ತು ಕೊಡಬಹುದು. ದರಖಾಸ್ತಿನ ಸಂಗಡ ಸದರೀ ರೂಲ್ಸಗಳಿಂದ ಅಪೇಕ್ಷಿಸಲ್ಪಟ್ಟ ಸರ್ಟಿಫಿಕೇಟಯಾನೇ ಯೋಗ್ಯತಾ ಪತ್ರಿಕೆಗಳನ್ನೂ, ಸ್ಟಾಂಪು ಮೊಬಲಗನ್ನೂ ಹಾಜರ್ಮಾಡತಕ್ಕದ್ದು.

ಚೀಫ್ ಕೋರ್ಟಿನವರು ಅವರಿಗೆ ಯುಕ್ತ ಕಂಡು ಬಂದರೆ ದರಖಾಸ್ತನ್ನು ಮಂಜೂರ್ಮಾಡಬಹುದು ಮತ್ತು ದರಖಾಸ್ತು ಮಂಜೂರ್ಮಾಡಿದ ನಂತರ ಹತ್ತನೇ ಸೆಕ್ಷನ್ ಅನುಸಾರವಾಗಿ ಮಾಡೋಣಾದ ರೂಲ್ಸನಲ್ಲಿ ವಿಧಿಸಲ್ಪಟ್ಟ ತಕ್ಕ ಛಾಪಾಕಾಗದದ ಮೇಲೆ ವಂದು ಸರ್ಟಿಫಿಕೇಟನ್ನು ಕೊಡತಕ್ಕದ್ದು.

ಈ ಸೆಕ್ಷನ್ ಪ್ರಕಾರ 1 ಯಾ 2ನೇ ತರಗತಿಯ ಪ್ಲೀಡರಿಗೆ ಕೊಡಲ್ಪಡುವ ಸರ್ಟಿಫಿಕೇಟಿನಲ್ಲಿ ದರಖಾಸ್ತುದಾರನು ಯಾವ ಕೋರ್ಟುಗಳಿಗೆ 7. ಯಾ 8ನೇ ಸೆಕ್ಷನ್ ಅನುಸಾರವಾಗಿ ಸಂದರ್ಭಾನುಸಾರ ದಾಖಲ್ಮಾಡಲ್ಪಟ್ಟಿರುತ್ತಾನೋ ಆ ತಪಶೀಲ್ ನಮೂದಿಸತಕ್ಕದ್ದು.

ಸರ್ಟಿಫಿಕೇಟ.

ಸೆಕ್ಷನ್ 12.—ಈ ರೆಗ್ಯೂಲೇಷನ್ ಅನುಸರಿಸಿಬುಬ್ಬ ಪ್ಲೀಡರಿಗೆ ಕೊಡಲ್ಪಟ್ಟ ಪ್ರತಿ ಸರ್ಟಿಫಿಕೇಟೂ, ಅದು ಆತನಿಗೆ ಯಾವಸಾಲಿಗೆ ಕೊಡಲ್ಪಟ್ಟಿತ್ತೋ ಆ ಕ್ಯಾಲಂಡರ್ ಸಾಲಿನ ಆಖೈರವರಿಗೆ ವಕಾಲತ್ ಮಾಡುವ ಬಗ್ಯೆ ಅಧಿಕಾರ ಕೊಡುತ್ತದೆ.

ಸದರೀ ವಾಯಿದೆಯು ಪೂರೈಸಿದಾಗ ಯಾ ಅದಕ್ಕೆ ಪೂರ್ವದಲ್ಲಿ ಅಂತಾ ಸರ್ಟಿಫಿಕೇಟ ಪಡೆದವನು, ವಕಾಲತು ಮಾಡುತ್ತಿರುವ ಬಗ್ಯೆ ಇಚ್ಛೆ ಪಟ್ಟರೆ ಆತನು ಸಾಧಾರಣವಾಗಿ ವಕಾಲತು ಮಾಡುತ್ತಿರುವ ಸ್ಥಳಅಧಿಕಾರವುಳ್ಳ ಡಿಸ್ಟ್ರಿಕ್ಟ ಜಡ್ಜಿಯವರ ಮುಖಾಂತ್ರ ಸರ್ಟಿಫಿಕೇಟನ್ನು ರೆನ್ಯೂ ಮಾಡುವ ಬಗ್ಯೆ ಚೀಫ್ ಕೋರ್ಟಿಗೆ ದರಖಾಸ್ತು ಮಾಡತಕ್ಕದ್ದು; ಚೀಫ್ ಕೋರ್ಟಿನವರು ಅದರ ಮೇಲೆ ಚಾಲತಿ ವರು

ಷಕ್ಕಾಗಲೀ ಯಾ ಮೂರನೇ ಕ್ಯಾಲಂಡರ್ ವರುಷಕ್ಕಾಗಲಿ ಸಂದರ್ಭಾನುಸಾರ ಸರ್ಟಿಫಿಕೇಟನ್ನು ರೆನ್ಯೂ ಮಾಡತಕ್ಕದ್ದು. ಪರಂತು, ದರಖಾಸ್ತುದಾರನು ವ್ಯಕ್ತವಾದ ದುರ್ನಡತೆಗೋಸ್ಕರವಾಗಲೀ ಇತರ ಕಾರಣಕ್ಕೋಸ್ಕರವಾಗಲೀ ಒಬ್ಬ ಲೀಗಲ್ ಪ್ರಾಕ್ಟಿಷನರಾಗಿರಲಿಕ್ಕೆ ಯೋಗ್ಯನಲ್ಲವೆಂದು ಚೀಫ್ ಕೋರ್ಟಿನವರ ಅಭಿಪ್ರಾಯದಲ್ಲಿ ಕಾಣಬಂದರೆ ಅವರು ಅಂಥಾವನ ದರಖಾಸ್ತನ್ನು ತಿರಸ್ಕರಿಸಬಹುದು.

ರೆನ್ಯೂ ಮಾಡಲ್ಪಟ್ಟ ಸರ್ಟಿಫಿಕೇಟ್ ಹತ್ತನೇ ಸೆಕ್ಷನ್ ಅನುಸಾರವಾದ ರೂಲ್ಸ್‌ಗಳಿಂದ ವಿಧಿಸೋಣಾದ ತಕ್ಕ ಕಿಮ್ಮತ್ತಿನ ಛಾಪಾಕಾಗದದ ಮೇಲೆ ಕೊಡಲ್ಪಡತಕ್ಕದ್ದು.

ರೆನ್ಯೂ ಮಾಡುವ ಅಂಥಾ ಪ್ರತಿ ಸಂದರ್ಭದಲ್ಲಿಯೂ, ಆಗ್ಯೇ ಪ್ಲೀಡರಿನ ವಶದಲ್ಲಿರತಕ್ಕ ಸರ್ಟಿಫಿಕೇಟ್ ಚೀಫ್ ಕೋರ್ಟಿಗೆ ಒಪ್ಪಿಸಲ್ಪಟ್ಟು ರದ್ದುಮಾಡಲ್ಪಟ್ಟು ಸದರಿ ಕೋರ್ಟಿನವರಿಂದ ವುಳಿಸಿಕೊಳ್ಳಲ್ಪಡತಕ್ಕದ್ದು.

ಲೀಗಲ್ ಪ್ರಾಕ್ಟಿಷನರುಗಳ ಸಸ್‌ಪೆಂಡು ವ ತಗೈರ್.

ಸೆಕ್ಷನ್ 13.—ಚೀಫ್ ಕೋರ್ಟಿನವರು, ಮೇಲ್ಕಂಡ ನಿಯಮಗಳನುಸರಿಸಿ ದಾಖಲ್ಮಾಡಲ್ಪಟ್ಟ ಯಾವ ಲೀಗಲ್ ಪ್ರಾಕ್ಟಿಷನರಾಗಲಿ ಆತನು ಒಬ್ಬ ಲೀಗಲ್ ಪ್ರಾಕ್ಟಿಷನರಾಗಿರುವದಕ್ಕೆ ಅನರ್ಹನನ್ನಾಗಿ ಮಾಡುವಂಥಾ ಒಂದು ದುಷ್ಟ ಸ್ವಭಾವವುಳ್ಳ ಯಾವ ಕ್ರಿಮಿನಲ್ ತಕ್ಸೀರಾಗಲಿ ಹೊರಿಸಲ್ಪಟ್ಟರೆ, ಅಥವಾ ಆತನು ತನ್ನ ವುದ್ಯೋಗದ ಕೆಲಸ ಜರಿಗಿಸುವದರಲ್ಲಿ ಮೋಸಕರವಾದ ಯಾ ಅಕ್ರಮವಾದ ಕೆಟ್ಟ ನಡತೆಯ ತಪ್ಪಿತಸ್ತನಾದರೆ ಅಂಥಾವನನ್ನು ಸಸ್‌ಪೆಂಡ್ ಯಾ ತಗೈರ್ ಮಾಡಬಹುದು.

ಲೀಗಲ್ ಪ್ರಾಕ್ಟಿಷನರುಗಳ ಅಕ್ರಮವಾದ ನಡತೆ ವಿಷಯದಲ್ಲಿ ವಿಚಾರಣೆ.

ಸೆಕ್ಷನ್ 14.—ಚೀಫ್ ಕೋರ್ಟಿನಲ್ಲಾಗಲೀ ಅದಕ್ಕೆ ತಾಬೇದಾರಿಯಾದ ಯಾವ ಕೋರ್ಟಿನಲ್ಲಾಗಲಿ ವಕಾಲತು ಮಾಡುತ್ತಿರುವ ಯಾವ ಲೀಗಲ್ ಪ್ರಾಕ್ಟಿಷನರಾದರೂ, ತನ್ನ ವುದ್ಯೋಗದ ಕೆಲಸ ಜರಗಿಸುವದರಲ್ಲಿ ಮೋಸಕರವಾದ ಯಾ ನೀಚವಾದ ಅಕ್ರಮ ನಡತೆ ವುಳ್ಳವನೆಂದು ತಪ್ಪು ಆಪಾದಿಸಲ್ಪಟ್ಟರೆ ಯಾ ಕಾಣಬಂದರೆ ಅಂಥಾ ಕೋರ್ಟಿನ ಯಾವ ಜಡ್ಜಿಯಾದರೂ ಹಾಂಗೆ ತಿಳಿಸಲ್ಪಟ್ಟ ದುರ್ನಡತೆಯನ್ನು ಸಂಕ್ಷೇಪವಾಗಿಯೂ ಕರಾರ್‌ವಾಕಾ ಆಗಿಯೂ ನಮೂದಿನಿಂದ ಒಂದು ಕ್ರಮವಾದ ಛಾರ್ಜ್‌ನಾಮೆಯನ್ನು ತಯಾರ್ಮಾಡಿಸಿ ಅದರ ವಂದು ನಕಲನ್ನು ಮತ್ತು ಸದರೀ ಛಾರ್ಜು ಪರ್ಯಾಲೋಚಿಸುವದಕ್ಕೆ ಗೊತ್ತುಮಾಡೋಣಾದ ದಿವಸವನ್ನು ನಮೂದು ಮಾಡಿದ ಒಂದು ನೋಟೀಸನ್ನು ಸುದಾ ಸದರೀ ಲೀಗಲ್ ಪ್ರಾಕ್ಟಿಷನರಿಗೆ ಕಳುಹಿಸತಕ್ಕದ್ದು. ಅಂಥಾ ನಕ್ಕಲು ಮತ್ತು ನೋಟೀಸ್ ಸುದಾ ಹಾಂಗೆ ಗೊತ್ತು ಮಾಡೋಣಾದ ತಾರೀಖಿಗೆ ಅಥಮಪಕ್ಷ ಹತ್ತು ದಿವಸಕ್ಕೆ ಮುಂಚಿತವಾಗಿ ಲೀಗಲ್ ಪ್ರಾಕ್ಟಿಷನರ ಮೇಲೆ ಜಾರಿ ಮಾಡಲ್ಪಡತಕ್ಕದ್ದು. ಅಂತಾ ತಾರೀಖಿನಲ್ಲಾಗಲೀ ಯಾ ವಿಚಾರಣೆಯು ಅಡ್‌ಜರ್ನಯಾನೆ ನಿಲ್ಲಿಸಿ ಇಡಲ್ಪಟ್ಟ ಮತ್ತಾವ ತಾರೀಖಿನಲ್ಲಾಗಲೀ ಕೋರ್ಟಿನವರು ಛಾರ್ಜು ರುಜುವಾತಿ ಬಗ್ಯೆ ಯಾ ಲೀಗಲ್ ಪ್ರಾಕ್ಟಿಷನರಿಂದ ಕ್ರಮವಾಗಿ ಹಾಜರಾದ ಯಲ್ಲ ಸಾಕ್ಷ್ಯವನ್ನೂ ತೆಗದುಕೊಂಡು ರೆಕಾರ್ಡು ಮಾಡಿ ಛಾರ್ಜು ವಿಷಯ ಫೈಸಲ್ಮಾಡುವದಕ್ಕೆ ಉದ್ಯುಕ್ತರಾಗತಕ್ಕದ್ದು.

ಚೀಫ್ ಕೋರ್ಟಿಗೆ ರಿಪೋರ್ಟು.

ಸೆಕ್ಷನ್ 15.—ಚೀಫ್ ಕೋರ್ಟಿಗೆ ತಾಬೇದಾರಿಯಾದ ಯಾವದಾದರು ಕೋರ್ಟಿನ ಜಡ್ಜಿಯು, ತಕ್ಸೀರು ಸ್ಥಾಪಿತವಾದ ಕಾರಣ ಲೀಗಲ್ ಪ್ರಾಕ್ಟಿಷನರು ಸಸ್‌ಪೆಂಡ್ ಯಾ ತಗೈರ್ ಮಾಡಲ್ಪಡತಕ್ಕದ್ದೆಂದು ಯೋಚಿಸಿದರೆ ಅವರು ತಮ್ಮ ಅಭಿಪ್ರಾಯವನ್ನು ಕಾರಣ ಸಮೇತ ರಿಕಾರ್ಡು ಮಾಡಿ ಅದನ್ನು ವ ಪ್ರೊಸಿಡಿಂಗ್ಸನ್ನು ಚೀಫ್ ಕೋರ್ಟಿಗೆ ಕಳುಹಿಸತಕ್ಕದ್ದು, ಚೀಫ್ ಕೋರ್ಟಿನವರು ಸದರೀ ಲೀಗಲ್ ಪ್ರಾಕ್ಟಿಷನರನ್ನು ಬಿಡುಗಡೆ ಮಾಡಬಹುದು, ಸಸ್‌ಪೆಂಡ್ ಮಾಡಬಹುದು ಯಾ ತಗೈರ್ ಮಾಡಬಹುದು.

ತಾಬೇದಾರಿ ಕೋರ್ಟುಗಳ ರಿಪೋರ್ಟುಗಳು ಡಿಸ್ಟ್ರಿಕ್ಟು ಕೋರ್ಟಿನ ವ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರ ಮೂಲಕ ಕಳುಹಿಸಲ್ಪಡತಕ್ಕದ್ದು.

ಸೆಕ್ಷನ್ 16.—ಅಂಥಾ ರಿಪೋರ್ಟು ಡಿಸ್ಟ್ರಿಕ್ಟು ಕೋರ್ಟಿಗೆ ತಾಬೇದಾರಿಯಾದ ಯಾವ ಕೋರ್ಟಿನ ಜಡ್ಜಿಯಿಂದಾಗಲೀ ಅಥವಾ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಿಗೆ ತಾಬೇದಾರಿಯಾದ ಯಾವ ಮಾಜಿಸ್ಟ್ರೇಟರಿಂದಾಗಲೀ ಮಾಡಲ್ಪಟ್ಟಾಗ ಅದು ಡಿಸ್ಟ್ರಿಕ್ಟು ಜಡ್ಜಿರಿಗಾಗಲಿ ಯಾ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಿಗಾಗಲಿ ಕಳುಹಿಸಲ್ಪಡತಕ್ಕದ್ದು. ಅವರು ಸದರೀ ರಿಪೋರ್ಟಿನೊಂದಿಗೆ ತಮಗೆ ತೋರುವ ಅವಶ್ಯಕವಾದ ಷರಾಗಳನ್ನು ಬರೆದು ಮೊಕದ್ದಮೆಯ ಕುರಿತು ತಮ್ಮ ಸ್ವಂತ ಅಭಿಪ್ರಾಯವನ್ನು ವಿವರಿಸಿ ಚೀಫ್ ಕೋರ್ಟಿನ ಆರ್ಡರ್ ಬಗ್ಯೆ ಸದರೀ ರೆಕಾರ್ಡನ್ನು ರವಾನಿಸತಕ್ಕದ್ದು.

ಕೂಡ್ಲೆ ಸಸ್‌ಪೆಂಡ್ ಮಾಡುವಣ.

ಸೆಕ್ಷನ್ 17.—ಸದರೀ ಜಡ್ಜಿ ಯಾ ಮಾಜಿಸ್ಟ್ರೇಟರು, ಚೀಫ್ ಕೋರ್ಟಿನಿಂದ ವಿಚಾರಣೆ ಮಾಡಲ್ಪಟ್ಟು ಹುಕ್ಕುಂಕೊಡುವ ನಿರೀಕ್ಷಣೆ ಮೇಲೆ, ತಮ್ಮ ಸ್ವಂತ ಕೋರ್ಟಿನ ಮತ್ತು ತಮಗೆ ತಾಬೇದಾರಿ ಕೋರ್ಟುಗಳ ಯಾವ ಪ್ಲೀಡರನ್ನಾಗಲೀ ಸಸ್‌ಪೆಂಡ್ ಮಾಡಬಹುದು.

ರೆಕಾರ್ಡುಗಳನ್ನು ತರಸಿಕೊಳ್ಳುವದಕ್ಕೆ ಚೀಫ್ ಕೋರ್ಟಿನವರ ಅಧಿಕಾರ.

ಸೆಕ್‌ಷನ್ 18.—ಚೀಫ್ ಕೋರ್ಟಿನವರು, ತಮ್ಮಿಂದ ಕೊಡಲ್ಪಟ್ಟ ಹುಕ್ಕುಂ ಪ್ರಕಾರವಲ್ಲದೇ ಅನ್ಯಥಾ ವಬ್ಬ ಅಡ್ವೊಕೇಟ್ ಯಾ ಪ್ಲೀಡರು ಬಿಡುಗಡೆ ಮಾಡಲ್ಪಟ್ಟ ಯಾವ ಮೊಕದ್ದಮೆಯಲ್ಲಾಗಲೀ ರೆಕಾರ್ಡು ತರಸಿ ತಮಗೆ ಯುಕ್ತ ತೋರುವ ಅರಡರ ಮಾಡಬಹುದು.

ಚಾರ್ಜನ್ನು ವರ್ಗಾ ಮಾಡುವದಕ್ಕೆ ಚೀಫ್ ಕೋರ್ಟಿನವರಿಗೆ ಅಧಿಕಾರ.

ಸೆಕ್‌ಷನ್ 19.—ಚೀಫ್ ಕೋರ್ಟಿನವರು ತಮ್ಮ ಕೋರ್ಟಿಗೆ ತಾಬೇದಾರಿಯಾದ ಯಾವ ಕೋರ್ಟಿನಲ್ಲಾಗಲೀ ವಬ್ಬ ಲೀಗಲ್ ಪ್ರಾಕ್ಟೀಷನರ ಮೇಲೆ ತರಲ್ಪಟ್ಟ ಚಾರ್ಜು ಫೈಸಲ್ ಬಗ್ಯೆ ತಮ್ಮ ಕೋರ್ಟಿಗೆ ಆಗಲೀ ಚಾರ್ಜು ಮಾಡೋಣಾದ ಕೋರ್ಟಿನ ದರ್ಜೆಗೆ ಸರಿಯಾದ ಯಾ ಮೇಲ್ಪಟ್ಟ ಮತ್ಯಾವ ಯಿತರ ಕೋರ್ಟಿಗಾಗಲಿ ವರ್ಗಮಾಡಲ್ಪಡತಕ್ಕದ್ದೆಂದು ಹುಕ್ಕುಂ ಮಾಡಬಹುದು.

ಸಸ್ಪೆಂಷನನ್ನು ನೋಟ್ ಯಾನೇ ಗುರ್ತು ಮಾಡುವಣ.

ಸೆಕ್‌ಷನ್ 20.—ಯಾವದಾದರು ಲೀಗಲ್ ಪ್ರಾಕ್ಟೀಷನರಿನ ಸಸ್ಪೆಂಷನನ್ನು ಚೀಫ್ ಕೋರ್ಟಿನಲ್ಲಿ ಯಿಡಲ್ಪಡಬೇಕಾದ ಪಟ್ಟಿಯಲ್ಲಿ ನೋಟ್‌ಯಾನೆ ಗುರ್ತು ಮಾಡಲ್ಪಡತಕ್ಕದ್ದು, ಮತ್ತು ಅಸಂಗತಿ ಕುರಿತು ತಮಾಂ ತಾಬೇದಾರೀ ಕೋರ್ಟುಗಳಿಗೂ ನೋಟೀಸ್ ಕಳುಹಿಸತಕ್ಕದ್ದು.

ತಗ್ಯೆರ್ ಮಾಡೋಣಾದ ಲೀಗಲ್ ಪ್ರಾಕ್ಟೀಷನರಿನ ಹೆಸರನ್ನು ತೆಗದುಹಾಕುವಣ.

ಸೆಕ್‌ಷನ್ 21.—ಮೇಲ್ಕಂಡ ಕಲಂಗಳ ಅನುಸಾರವಾಗಿ ತಗ್ಯೆರ್ ಮಾಡಲ್ಪಟ್ಟ ಯಾವ ಲೀಗಲ್ ಪ್ರಾಕ್ಟೀಷನರಿನ ಹೆಸರಾಗಲೀ, ಚೀಫ್ ಕೋರ್ಟಿನಲ್ಲಿಯ ಲೀಗಲ್ ಪ್ರಾಕ್ಟೀಷನರುಗಳ ಪಟ್ಟಿಯಿಂದ ತೆಗೆದು ಹಾಕಲ್ಪಟ್ಟು, ಆ ಬಗ್ಯೆ ತಾಬೇದಾರಿಯಾದ ತಮಾಂ ಕೋರ್ಟುಗಳಿಗೂ ನೋಟೀಸು ಕಳುಹಿಸತಕ್ಕದ್ದು.

ಅಧ್ಯಾಯ III.

ಫೀಜು.

ಸೆಕ್‌ಷನ್ 22.—ಚೀಫ್ ಕೋರ್ಟಿನವರು, ಆಗಿಂದಾಗ್ಯೆ ಮತ್ತು ಗವರ್ನಮೆಂಟಿನವರ ಮಂಜೂರಾತಿನಿಸಿ ಯವನಾಗಲಿ ಕಕ್ಷಿಗಾರನಿಂದ, ಚೀಫ್ ಕೋರ್ಟಿನಲ್ಲಿಯೂ ಮತ್ತು ಅದಕ್ಕೆ ತಾಬೇದಾರಿಯಾದ ಕೋರ್ಟುಗಳಲ್ಲಿಯೂ ನಡಿಯುವ ಯುಲ್ಲ ನಡವಳಿತಗಳ ಮೇಲೆ ಆತನ ಪರವಕ್ಷದ ಲೀಗಲ್ ಪ್ರಾಕ್ಟೀಷನರಿಗೆ ಪಾವತೀ ಮಾಡಲ್ಪಡಬೇಕಾದ ಫೀಜು ವೊಬಲಗನ್ನು ಗೊತ್ತು ಮಾಡುವದಕ್ಕೂ ಮತ್ತು ಕ್ರಮಪಡಿಸುವದಕ್ಕೂ ರೂಲ್ಸನ್ನು ಮಾಡಬಹುದು.

ಪರಂತು, ಅಂಥಾ ಫೀಜುಗಳ ವಿಷಯದಲ್ಲಿ ಹಾಲೀ ಜಾರೀ ಯಿರುವ ರೂಲ್ಸ್‌ಗಳು ಈ ಸೆಕ್‌ಷನ್ ಅನುಸರಿಸಿ ಮಾಡಲ್ಪಟ್ಟಂತೆ ಯಣಿಸಲ್ಪಡತಕ್ಕದ್ದು.

ಲೀಗಲ್ ಪ್ರಾಕ್ಟೀಷನರುಗಳಿಗೆ ರುಸುಮು.

ಸೆಕ್‌ಷನ್ 23.—ಲೀಗಲ್ ಪ್ರಾಕ್ಟೀಷನರುಗಳು ಅವರ ರುಸುಮಿಗೋಸ್ಕರ ತಮ್ಮ ಕಕ್ಷಿಗಾರರೊಂದಿಗೆ ತಾವೇ ಏರ್ಪಾಟು ಮಾಡಿಕೊಳ್ಳಬಹುದು.

ರುಸುಮಿನ ಬಗ್ಯೆ ಹುಟ್ಟುವ ಕರಾರು ಕೋರ್ಟಿನಲ್ಲಿ ಫೈಲ್ ಮಾಡಲ್ಪಡತಕ್ಕದ್ದು.

ಸೆಕ್‌ಷನ್ 24.—ಯಾವ ಲೀಗಲ್ ಪ್ರಾಕ್ಟೀಷನರಿಂದಾಗಲೀ ತನ್ನನ್ನು ಯಿಟ್ಟುಕೊಳ್ಳುವ ಯಾ ನೇಮಿಸುವ ಯಾವ ಮನುಷ್ಯನೊಂದಿಗಾದರೂ, ತನ್ನಿಂದ ಪೂರಾ ಆಗಲೀ ಕೆಲವು ಭಾಗವಾಗಲೀ ನೆರವೇರಿಸಲ್ಪಟ್ಟ ಯಾ ನೆರವೇರಿಸಲ್ಪಡಬೇಕಾದ ಕೆಲಸಗಳ ವಿಷಯದಲ್ಲಿ ಪಾವತೀ ಮಾಡಲ್ಪಡಬೇಕಾದ ವೊಬಲಗು ವ ಅವರ ರೀತಿ ಯಿವುಗಳ ಕುರಿತಾಗಲೀ, ಮತ್ತು ತನ್ನಿಂದ ವುದ್ಯೋಗತಃ ನಡೆಸಿದ ಯಾ ನಡಿಸಲ್ಪಡಬೇಕಾದ ಕೃತ್ಯಗಳು, ಫೀಜುಗಳು, ಚಾರ್ಜುಗಳು, ವ ಖರ್ಚುಗಳು ಯಿವುಗಳು ಕುರಿತು ಮಾಡಲ್ಪಟ್ಟ ಯಾವ ಕರಾರೇ ಆಗಲೀ ಅದು ಬರೆಯಲ್ಪಟ್ಟು ಅಂಥಾ ಮನುಷ್ಯನಿಂದ ರುಜುಮಾಡಲ್ಪಟ್ಟು ಮತ್ತು ಅದು ಹುಟ್ಟಿದ ತಾರೀಖು ಮೊದಲು ಹದಿನೈದು ದಿವಸಗಳ ವಳಗಾಗಿ ಡಿಸ್ಟ್ರಿಕ್ಟು ಕೋರ್ಟಿನಲ್ಲಾಗಲೀ ಅಥವಾ ಆ ಕರಾರು ಯಾವ ಬಗ್ಯೆ ಹುಟ್ಟಿತ್ತೋ ಆಸಂಬಂಧವಾದ ಕೆಲಸದ ಪೈಕೀ ವಂದುಭಾಗ ನಡೆಯಿತೋ ಯಾ ನಡಯಬೇಕೋ ಅಂಥಾ ಯಾವ ಕೋರ್ಟಿನಲ್ಲಿಯಾಗಲೀ, ದಾಖಲ್ ಮಾಡಲ್ಪಟ್ಟ ಹೊರತು, ಅನ್ಯಥಾ ಅಂಥಾ ಕರಾರು ಅದರ ಅಮಲ್‌ಜಾರಿ ಬಗ್ಯೆ ತರಲ್ಪಡುವ ದಾವೇಗಳಲ್ಲಿ ರುಜುವಾತ್ತಾಗಿರತಕ್ಕದ್ದಲ್ಲವು.

ಸೆಕ್ಷನ್ 25.—ಅಂಥಾ ಯಾವ ಕರಾರಾಗಲೀ ಅಮಲ್‌ಜಾರಿ ಮಾಡಲ್ಪಡಲಿಕ್ಕೆ ದಾವಾ ತರೋಣಾದರೆ, ಸದರೀ ಕರಾರು ಯೋಗ್ಯ ವಾದ್ದೆಂದುನ್ನೂ ನ್ಯಾಯವಾದ್ದೆಂದುನ್ನೂ ರುಜು ಮಾಡಿಕೊಡದಿದ್ದರೆ, ಕೋರ್ಟಿನವರು ಅದರ ದೆಶೆಯಿಂದ ಪಾವತೀ ಮಾಡಲ್ಪಡಬೇಕಾದ ಮೊಬಲಗನ್ನು ಕಮ್ಮೀ ಮಾಡಬಹುದು ಯಾ ಅದು ರದ್ದು ಮಾಡಲ್ಪಡತಕ್ಕದ್ದೆಂದು ಹುಕ್ಕುಂ ಮಾಡಬಹುದು. ಮತ್ತು ನಡಸಿದ ಕೆಲಸಗಳಿಗಾಗಿ ಆದ ಖರ್ಚುಗಳು, ಫೀಜುಗಳು ಲಾಗವಡುಗಳು ವ ಸಲಿಕೆಗಳು ಯಿವುಗಳನ್ನ ಅಂಥಾ ಕರಾರು ಯಿಲ್ಲದಿದ್ದರೆ ಹ್ಯಾಗೊ ಹಾಗೆ ತಿಳಿದುಕೊಳ್ಳತಕ್ಕದ್ದು.

ಅನ್ಯಾಯವಾದ ಕರಾರು.

ಸೆಕ್ಷನ್ 26.—ಅಂಥಾ ವಂದು ಕರಾರು, ಅದು ಯಾವ ಬಗ್ಯೆ ಹುಟ್ಟಿತೋ ಅಸಂಬಂಧವಾದ ಕೆಲಸಗಳು ನಡಿಸುವ ಬಗ್ಯೂ ಪೂರ್ತಿ ಮಾಡುವ ಬಗ್ಯೂ ಸಂಬಂಧಪಟ್ಟ ಯಾವದಾದರೂ ಕೆಲಸಗಳು, ಫೀಜುಗಳು, ಚಾರ್ಜುಗಳು ಯಾ ಖರ್ಚುಗಳು ಯಿವುಗಳಿಗೋಸ್ಕರ ಕರಾರಿನಲ್ಲಿ ಕಂಡ ಷರತ್ತುಗಳಿಗೆ ಮಿಾರಿದಂಥಾ ಲೀಗಲ್ ಪ್ರಾಕ್ಟೀಷನರಿನ ಯಲ್ಲ ಬಾಧ್ಯತೆಗಳನ್ನೂ ವಿನಾಯಿಸುತ್ತದೆ, ಪರಂತು ಸದರೀ ಕರಾರಿನಲ್ಲಿ ಐದಂಪರ್ಯೇಣ ಬಿಡಲ್ಪಟ್ಟ ಕೆಲಸಗಳು, ಚಾರ್ಜುಗಳು, ಫೀಜುಗಳು ಯಾ ಖರ್ಚುಗಳು ಯಾವದಾದರೂ ಯಿದ್ದರೆ ಅವುಗಳನ್ನು ಕುರಿತ ಬಾಧ್ಯತೆಯನ್ನು ವಿನಾಯಿಸುವದಿಲ್ಲಾ.

ಕರಾರು, ಇತರ ಬಾಧ್ಯತೆಗಳನ್ನು ವಿನಾಯಿಸುವದು.

ಸೆಕ್ಷನ್ 27.—ಅಂಥಾ ಯಾವ ಕರಾರಿನಲ್ಲಾಗಲೀ ಲೀಗಲ್ ಪ್ರಾಕ್ಟೀಷನರನು ಅಶ್ರದ್ಧೆಗೆ ಜವಾಬ್‌ದಾರನಲ್ಲವೆಂತಾಗಲೀ ಯಾವದಾದರು ಅಂಥಾ ಜವಾಬ್‌ದಾರೀಗೆ ಲೀಗಲ್ ಪ್ರಾಕ್ಟೀಷನರಾಗಿದ್ದು ಅನ್ಯಥಾ ತಾನು ವಳಪಡುವನೊ ಅಂಥಾ ಜವಾಬ್‌ದಾರಿಯಿಂದ ನಿವೃತ್ತನಾಗತಕ್ಕದ್ದೆಂತಾಗಲೀ ವಂದು ಕಲಮು ಯಿದ್ದಲ್ಲಿ ಅಂಥಾ ಕಲಮು ಪೂರ್ತಿಯಾಗಿ ರದ್ದಾಗತಕ್ಕದ್ದು.

ರದ್ದಾದ ಕರಾರು.

ಮಧ್ಯಸ್ಥ ಮಾಡಿದರೆ ದಂಡನೆ.

ಸೆಕ್ಷನ್ 28.—ಯಿದರಡೀ ಬರುವ ಯಾವ ತಪ್ಪಿತವನ್ನಾಗಲೀ ಯಾವ ಮನುಷ್ಯನಾದರು ಮಾಡಿದರೆ;—

(*a*) ಯಾವದಾದರೂ ನ್ಯಾಯಸಂಬಂಧವಾದ ಕೆಲಸಗಳಲ್ಲಿ ವಬ್ಬ ಲೀಗಲ್ ಪ್ರಾಕ್ಟೀಷನರಿಗೆ ವುದ್ಯೋಗವನ್ನು ಸಂಪಾದಿಸಿ ಕೊಡುತ್ತೇನೆಂಬ ಯಾ ಕೊಟ್ಟಿರುತ್ತೇನೆಂಬ ಆಧಾರದ ಮೇಲೆ ಯಾವ ರುಸುಮಾಗಲಿ ಅಂಥಾ ಲೀಗಲ್ ಪ್ರಾಕ್ಟೀಷನರಿಂದ ಪಡೆದರೆ ಯಾ ಅವನನ್ನ ಕೇಳಿದರೆ.

(*b*) ಅಂಥಾ ವುದ್ಯೋಗಕ್ಕಾಗಿ ಯಾವದಾದರೂ ಲೀಗಲ್ ಪ್ರಾಕ್ಟೀಷನರಿಗೆ ಪಾವತಿ ಮಾಡಿದ, ಕೊಡೋಣಾದ ಯಾ ಪಾವತೀ ಮಾಡುವದಕ್ಕೆ ಯಾ ಕೊಡುವದಕ್ಕೆ ಕರಾರಾದ ರುಸುಮಿನ ಪೈಕಿ ಯಾವ ರುಸುಮಾಗಲೀ ಉಳಿಕೊಂಡರೆ.

(*c*) ವಬ್ಬ ಲೀಗಲ್ ಪ್ರಾಕ್ಟೀಷನರಾಗಿದ್ದು ಯಾವದಾದರೂ ನ್ಯಾಯಸಂಬಂಧವಾದ ಕೆಲಸಗಳಲ್ಲಿ ತನಿಗೆ ಆಗಲಿ ಯಾ ಯಿತರ ಲೀಗಲ್ ಪ್ರಾಕ್ಟೀಷನರಿಗೆ ಆಗಲಿ ಉದ್ಯೋಗವನ್ನು ಸಂಪಾದಿಸುವದಕ್ಕಾಗಿ ಯಾ ಸಂಪಾದಿಸಿದ್ದಕ್ಕಾಗಿ ಯಾವ ರುಸುಮನ್ನಾಗಲೀ ಕೊಡುವದಾಗಿ ಹೇಳಿದರೆ, ಕೊಟ್ಟರೆ ಯಾ ಉಳಿಸಿಕೊಳ್ಳುವದಕ್ಕೆ ಸಮ್ಮತಿಸಿದರೆ;

ಅಂಥಾ ಯಾವ ಮನುಷ್ಯನಾಗಲೀ ಆರು ತಿಂಗಳ ವರಿಗೆ ವ್ಯಾಪಿಸುವಂಥಾ ಸಾದಾ ಖೈದಿನ ಮೂಲಕವಾಗಿಯಾಗಲಿ ಐನೂರು ರೂಪಾಯಿಗಳ ವರಿಗಿನ ಜುರ್ಮಾನೆಯ ಮೂಲಕವಾಗಿ ಯಾಗಲಿ ಅಥವಾ ಈ ಯೆರಡರ ಮೂಲಕವಾಗಿ ಯಾಗಲೀ ಶಿಕ್ಷಿಸಲ್ಪಡತಕ್ಕದ್ದು.

ಬೆಂಗಳೂರು,
21ನೇ ಜುಲೈ 1884.

ಕೆ. ಶೇಷಾದ್ರಿಅಯ್ಯರ್,
ಮೈಸೂರು ದಿವಾನ್.

Mysore Government Press, Bangalore—1884.

481

ಮೈಸೂರ ಗೆಜೆಟ್.

ನಂ. 32 ಸರ್ಕಾರದಿಂದ ಛಾಯಿಷ್ ಆದ್ದು. ಸರ್ 1884.

ಬೆಂಗಳೂರು, ಶನಿವಾರ, ಆಗಸ್ಟ್ ತಾ॥ 9, ಸರ್ 1884.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಹೊರಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರಿಂಟೆಂಡೆಂಟರು, ಕಾಂಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮಿಲಿಟೇರಿ ಸೆಕ್ರಟೆರಿಯವರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೇ ಬಕಷೀರು, ಮ್ಯುನಿಸಿಪಲ್ ಬೋರ್ಡ್ ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು, ಇವರುಗಳಿಂದ ಹೊರಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು ; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು, 1884ನೇ ಇಸವಿಯ IIIನೇ ನಂಬರ್ ರೆಗ್ಯೂಲೇಷನ್.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಹೊರಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 16ನೇ ಜುಲೈ 1884.

ನಂ. 79.—ಹಿಡುವಳಿಯಲ್ಲಿ ಯಿರದೇ ಯಿರತಕ್ಕ ಸರಕಾರದ ಜಮೀನುಗಳೊಳಗಣ ಹುಲ್ಲುಗಾವಲ್ ಹರಾಜ್ ವಿಷಯವನ್ನು ಕುರಿತು ಇದರಡಿಕಂಡ ನಿಬಂಧನೆಗಳು ಅಜಮಾಯಿಷೀ ತರೀಕ್ ಮಂಜೂರ್ಮಾಡಲ್ಪಟ್ಟು ಸಕಲಜನಗಳ ತಿಳುವಳಿಕೆಯ ಬಗ್ಗೆ ಛಾಯಿಷ್ ಮಾಡಲ್ಪಟ್ಟಿರುತಿವೆ:—

1. ಅಜಮಾಯಿಷೀ ತರೀಕ್ ಈ ಸಾಲ್‌ನಲ್ಲಿ ಹುಲ್ಲುಬನ್ನೀ ಹರಾಜುಗಳು ಹಾಕಲ್ಪಡಕೂಡದು.
2. 1882—83 ಮತ್ತು 83—84ನೇ ಇಸವಿಗಳಲ್ಲಿ ಪ್ರತಿ ಗ್ರಾಮದೊಳಗಣ ಸರಾಸರಿ ಹುಲ್ಲುಬನ್ನೀ ಹುಟ್ಟುವಳಿಯನ್ನು ಕರಾರ್ವಾಕಾ ಲೆಕ್ಕಮಾಡಿ ತನ್ಮೂಲಕ ಗೊತ್ತಾದ ಮೊಬಲಗ್ಯೆ ಆ ಗ್ರಾಮದೊಳು ಹಿಡುವಳಿಯಲ್ಲಿಲ್ಲದಿರುವ ಸರ್ಕಾರ್ ಜಮೀನುಗಳಲ್ಲಿ ಮೇಯಿಸುವ ಹಕ್ಕನ್ನು ಸಾಲ್‌ಮಜಕೂರಿಗೆ ಸದರೀ ಗ್ರಾಮ ನಿವಾಸಿಗಳಿಗೆ ಕೊಡತಕ್ಕದ್ದು.

3. ಈ ಷರತುಗಳನ್ನು ಅನುಸರಿಸಿ ಗ್ರಾಮಸ್ಥರು ಮೇಯಿಸುವ ಹಕ್ಕನ್ನು ಅಂಗೀಕರಿಸಿದರೆ ಗ್ರಾಮಸ್ಥರೆಲ್ಲರಿಂದ ಕೊಡಲ್ಪಡತಕ್ಕ ಮೊಬಲಗನ್ನು ವಿಶಿಷ್ಟ ಜಮೀನ್ದಾರರುಗಳೂ ಗ್ರಾಮದ ಇತರ ನಿವಾಸಿಗಳು ಸಹ ತಮ್ಮೊಳು ತಾವೇ ಹಂಚಿಕೊಂಡು ಅಂತಾ ವಿಭಾಗ ಪ್ರಕಾರ ಪ್ರತಿ ಮನುಷ್ಯನೂ ಕೊಡಬೇಕಾದ ಮೊಬಲಗನ್ನು ತೋರಿಸುವ ಒಂದು ಪಟ್ಟಿಯನ್ನು ತಯಾರ್ಮಾಡಿ, ಅದಕ್ಕೆ ಸಂಬಂಧಪಟ್ಟ ಗ್ರಾಮಸ್ಥರೆಲ್ಲರೂ ಸದರೀ ಪಟ್ಟಿಗೆ ರುಜು ಮಾಡಬೇಕಲ್ಲದೆ, ಪಟೇಲ್ ಶಾನಭೋಗರು ಸಹ ರುಜು ಮಾಡತಕ್ಕದ್ದು. ಗ್ರಾಮದಿಂದ ಕೊಡಲ್ಪಡಬೇಕಾದ ಒಟ್ಟು ಮೊಬಲಗನ್ನು ಗ್ರಾಮದ ಪ್ರತಿ ಮನುಷ್ಯನೂ ಹಂಚಿಕೊಳ್ಳಬೇಕಾದ್ದು ಅವರು ಪರಸ್ಪರ ಮಾಡಿಕೊಂಡ ಸ್ವಂತಕರಾರಾಗಿರುತ್ತೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

4. ಅಮಲ್ದಾರರು ಅಂತಾ ಪಟ್ಟಿಗಳನ್ನು ತನಿಖೀ ಮಾಡಿ ಅವುಗಳಲ್ಲಿ ನಮೂದಿಸಿರುವ ಯೇರ್ಪಾಡುಗಳು ತೃಪ್ತಿಕರವಾಗಿದೆಯೇ ಯೆಂದು ಗ್ರಾಮಸ್ಥರನ್ನು ಕೇಳತಕ್ಕದ್ದು. ಯಾವನ ಹೆಸರಿಗೆ ಮೊಬಲಗು ದಾಖಲ್ಮಾಡಲ್ಪಟ್ಟಿರುತಿದೆಯೋ ಅಂತಾ ಪ್ರತಿ ಮನುಷ್ಯನನ್ನು ಬದಸ್ತೂರ್ ಕೇಳತಕ್ಕದ್ದು. ಅಂತಾ ವಿಚಾರಣೆಯಲ್ಲಿ, ಸದರೀ ಯೇರ್ಪಾಡು ಅದಕ್ಕೆ ಸಂಬಂಧಪಟ್ಟವರೆಲ್ಲರಿಗೂ ಸಮ್ಮತವಾದದ್ದೆಂದು ಅಮಲ್ದಾರರಿಗೆ ತೃಪ್ತಿಕರವಾಗಿ ಕಂಡು ಬಂದರೆ ಸದರೀ ಅಂಶವನ್ನು ಪ್ರಸಕ್ತ ಪಟ್ಟೀಯಲ್ಲಿ ಸ್ವದಸ್ತೂರ್ ಬರೆದು ದಾಖಲೆಯ ಬಗ್ಗೆ ಶಾನಭೋಗನ ವಶದಲ್ಲಿಡತಕ್ಕದ್ದು. ತರುವಾಯ ಯಾವ ಮನುಷ್ಯನ ಹೆಸರಿಗಾಗಲಿ ಸದರೀ ಪಟ್ಟಿಗಳಲ್ಲಿ ದಾಖಲ್ಮಾಡಲ್ಪಟ್ಟಿರುವ ಮೊಬಲಗನ್ನು ಅವನಿಂದ ವಸೂಲ್ಮಾಡತಕ್ಕ ಬಾಕೀಯೆಂದು ಅವನ ಖಾತೆಯಲ್ಲಿ ದಾಖಲ್ಮಾಡಿ ಅದು ಜಮೀನ್ ಕಂದಾಯದಂತೆ ವಸೂಲ್ಮಾಡಲ್ಪಡತಕ್ಕದ್ದು.

5. ಯಾವ ಗ್ರಾಮಸ್ಥರೇ ಆಗಲಿ ಸದರೀ ಗ್ರಾಮದೊಳು ಹಿಡುವಳಿಯಲ್ಲಿರದೇ ಯಿರುವ ಸರ್ಕಾರ್ ಜಮೀನಿನಲ್ಲಿ ಮೇಯಿಸುವ ಹಕ್ಕನ್ನು ಯೆರಡನೇ ಕಲಮಿನ ಪ್ರಕಾರ ಗೊತ್ತು ಮಾಡಲ್ಪಟ್ಟ ಮೊಬಲಗಿಗೆ ಅಂಗೀಕರಿಸುವದಕ್ಕೆ ಅಸಮಾಧಾನ ಪಟ್ಟಾಗ್ಯೂ, ಅಥವಾ ಈ ಮೊಬಲಗಿನ ವಿಭಾಗ ವಿಷಯದಲ್ಲಿ ಅವರು ಪರಸ್ಪರ ಸಮ್ಮತಿಸದೇ ಹೋದರೂ, ಅಥವಾ ಅಮಲ್ದಾರರ ವಿಚಾರಣೆಯಲ್ಲಿ ಅಂತಾ ಮೊಬಲಗಿನ ವಿಷಯವನ್ನು ಕುರಿತಾಗಲಿ, ಅದರ ವಿಭಾಗವನ್ನು ಕುರಿತಾಗಲಿ, ತಕರಾರ್ ಹುಂಟಾದರೂ ಆಗ ಗ್ರಾಮಕ್ಕೆ ಸಂಬಂಧಪಟ್ಟ ಮೇಯಿಸುವ ಹಕ್ಕುದಾರಿಯು ಆಸ್ಥಳದಲ್ಲಿ ಮಾಮೂಲ್‌ನಂತೆಯೇ ಹರಾಜ್ ಮಾಡಲ್ಪಡತಕ್ಕದ್ದು.

6. ಮೇಲೆಕಂಡ ಕರಾರ್‌ಗಳ ಪ್ರಕಾರ ಮೇಯಿಸುವ ಹಕ್ಕು ಗ್ರಾಮಸ್ಥರಿಗೆ ಕೊಡಲ್ಪಟ್ಟರೆ ಅಂತಾ ಗ್ರಾಮಗಳೊಳಗಣ ಹಿಡುವಳೀಯಲ್ಲಿ ಯಿರದ ಸರ್ಕಾರ್ ಜಮೀನ್‌ಗಳಲ್ಲಿ ಸದರೀ ಗ್ರಾಮದ ದನಗಳು ಮೇಯುವದಕ್ಕೆ ಯಾವ ನಿರ್ಬಂಧಗಳೂ ಹುಂಟು ಮಾಡಲ್ಪಡಕೂಡದು.

7. ಪ್ರತಿ ಗ್ರಾಮದ ಹುಲ್ಲುಗಾವಲನ್ನು ಮೇಲೆ ವಿಧಿಸಲ್ಪಟ್ಟಂತೆ ವಿಲೇಮಾಡುವದಕ್ಕೆ ಬದಲಾಗಿ ಅಮಲ್ದಾರರು ತಮಗೆ ಆವಶ್ಯಕ ತೋರಿ ಬಂದಾಗ ಗ್ರಾಮಗಳನ್ನು ಅನುಕೂಲವಾದ ಗುಂಪುಗಳಾಗಿ ಮಾಡಿ ಅಂತಾ ಪ್ರತಿ ಗುಂಪಿನ ಮೇಯಿಸುವ ಹಕ್ಕನ್ನು ಪ್ರತ್ಯೇಕವಾಗಿ ವಿಲೇ ಮಾಡಬಹುದು. ಹಾಗೆ ಗುಂಪು ಮಾಡುವಣದರಲ್ಲಿ, ಹಾಲೀ ಜಾರೀಯಲ್ಲಿರುವ ಮೇಯಿಸುವ ಯೇರ್ಪಾಡುಗಳಿಗೆ ಪೂರಾನಿಗೇ ಕೊಡಬೇಕಲ್ಲದೆ ಸಾಧ್ಯವಾದ ಮಟ್ಟಿಗೆ ಅದಕ್ಕೆ ಸಂಬಂಧಪಟ್ಟ ಗ್ರಾಮಸ್ಥರ ಸಮ್ಮತಿಯನ್ನು ಹೊಂದಿ ಯಿರತಕ್ಕದ್ದು.

ತಾರೀಖು 25ನೇ ಜುಲೈ 1884.

ನಂ. 87.—1879ನೇ ಇಸವಿ ಫಿಬ್ರವರೀ 18ನೇ ಮುರ್ಕುಮಿನ ರೂಲ್ಸ್ ಅನುಸರಿಸಿ ದಾಖಲ್ಮಾಡಲ್ಪಟ್ಟ ಅಡ್ವೋಕೇಟ್ ಮತ್ತು 1—2ನೇ ಕ್ಲಾಸ್ ಪ್ಲೀಡರುಗಳಿಗೆ ಯಿದರ ದೆಶೆಯಿಂದ ತಿಳಿಯಪಡಿಸುವದೇನಂದರೆ, (ಮೈಸೂರು ಲೀಗಲ್ ಪ್ರಾಕ್ಟಿಷನರ್ಸ್ ರೆಗ್ಯೂಲೇಷನ್) ಯಂಬ 1884ನೇ ಇಸವಿ IIIನೇ ನಂಬರ್ ರೆಗ್ಯೂಲೇಷನು ಅವರ ಸ್ಥಿತಿಯನ್ನು ಬಾಧಿಸುವದಿಲ್ಲ, ಮತ್ತು ಅವರು ಯಾವ ಕೋರ್ಟುಗಳಿಗೆ ದಾಖಲ್ಮಾಡಲ್ಪಟ್ಟಿರುತ್ತಾರೋ ಅಂಥಾ ಕೋರ್ಟುಗಳಲ್ಲಿ 1884ನೇ ಇಸವಿ ಡಿಶಂಬರ್ 31ನೇ ಮುರ್ಕುಮಿನವರಿಗೆ ವಕಾಲತ್ತು ಮಾಡುವದಕ್ಕೆ ಅರ್ಹರಾಗಿರುತ್ತಾರೆ, ಅವರುಗಳು ಸದರೀ ತಾರೀಖಿನ ತರುವಾಯಲೂ ವಕಾಲತ್ತು ಮಾಡಲಿಚ್ಛೈಸಿದರೆ, ಸದರೀ ರೆಗ್ಯೂಲೇಷನಿನ 11ನೇ ಸೆಕ್ಷನ್ ಅನುಸರಿಸಿ ಚೀಫ್ ಕೋರ್ಟಿನಿಂದ ಒಂದು ಸರಟಿಫಿಕೇಟ್ ಪಡೆಯತಕ್ಕದ್ದು.

2. ಸದರೀ ರೆಗ್ಯೂಲೇಷನಿನ 10ನೇ ಸೆಕ್ಷನ್ ಅನುಸಾರವಾಗಿ ಏರ್ಪಾಟಾಗುವ ರೂಲ್ಸ್‌ಗಳಿಂದ ಚೀಫ್ ಕೋರ್ಟಿನವರು 1879ನೇ ಇಸವಿ ಫಿಬ್ರವರೀ 18ನೇ ಮುರ್ಕುಮಿನ ರೂಲ್ಸ್‌ಗಳನುಸರಿಸಿ ದಾಖಲ್ಮಾಡಲ್ಪಟ್ಟ ಯಲ್ಲ ಮನುಷ್ಯರುಗಳಿಗೂ ಅಂಥಾ ಸರಟಿಫಿಕೇಟುಗಳನ್ನು ಕೊಡುವದಕ್ಕೆ ಶಕ್ತರಾಗಿರುವರು.

ತಾರೀಖು 29ನೇ ಜುಲೈ 1884.

ನಂ. 93.—ಇದರಡೀಕಂಡ ಆಸ್‌ಪಿಟಲ್ ಅಸಿಸ್ಟೆಂಟರುಗಳು ಅವಶ್ಯಕವಾದ ಸಾರವೈಸು ಪೂರ್ತಿ ಮಾಡಿ ಪರೀಕ್ಷೆಯಲ್ಲಿ ಯೋಗ್ಯರಾಗಿ ಕಾಣಬಂದದರಿಂದ ಕೆಳಗೆ ಕಾಣಿಸಿರುವ ತಾರೀಖು ಮೊದಲು ಬಡತಿ ಮಾಡಲ್ಪಟ್ಟಿರುತ್ತಾರೆ :—

3ನೇ ಕ್ಲಾಸ್ ಆಸ್ಪಿಟಲ್ ಅಸಿಸ್ಟೆಂಟ್	ಡಿ. ಯಂ. ಜ್ಞಾನಪ್ರುಯಂ ಪಿಳ್ಳೆ	2ನೇ ಕ್ಲಾಸಿಗೆ	1884ನೇ ಮೇ 26ರ್ರ ಲಾಗಾಯಿತು.
ಡಿಟೋ	ಡಿಟೋ ಜಾಬ್ ಬಸಪ್ಪಚಟ್ಟಿ	ಡಿಟೋ	ಡಿಟೋ.
ಡಿಟೋ	ಡಿಟೋ ಸಿ. ಜೇವಿಡ್	ಡಿಟೋ	ಡಿಟೋ.
ಡಿಟೋ	ಡಿಟೋ ವಿ. ಸದಾಶಿವರಾವ್	ಡಿಟೋ	ಡಿಟೋ.

ತಾರೀಖು 30ನೇ ಜುಲೈ 1884.

ನಂ. 94.—ಹಾಸನದ ಫಾರೆಸ್ಟು ಸಬ್ ಅಸಿಸ್ಟೆಂಟ್ ಕನ್‌ಸರ್‌ವೇಟರಾದ ಮೆ|| ಜೆ. ಸ್ಟೀವರ್ನ್‌ಸ್‌ಯವರು, ಕೆಲಸಕ್ಕೆ ವಾಪಸ್ ಬಂದು 1884ನೇ ಇಸವಿ ಜುಲೈ 17ನೇ ಮರ್ಸ್ಕು ಮಿನ ಮಧ್ಯಾನ್ನಾತ್ಪರ ಅವರ ಆಫೀಸ್ ಚಾರ್ಜನ್ನು ಫಾರೆಸ್ಟು ಪ್ರೊಬೇಷನರ್ ಮೆ|| ಪ್ರಹಲ್ಲಾದರಾಯರಿಂದ ವಹಿಸಿಕೊಂಡಿರುವದರಿಂದ, ಅವರಿಗೆ 1884ನೇ ಇಸವಿ ಜುಲೈ 11ನೇ ಮರ್ಸ್ಕುಂ 71ನೇ ನಂಬರ್‌ವುಳ್ಳ ಈ ಆಫೀಸ್ ಇಸ್ತಿಹಾರ್ ನಾಮೆಯಿಂದ ಕೊಡಲ್ಪಟ್ಟ ಪ್ರಿವಿಲೀಜ್ ರಜಾ ಪೈಕಿ ಉಳಿದ ಭಾಗವು ರದ್ದು ಮಾಡಲ್ಪಟ್ಟಿರುತ್ತೆ.

ನಂ. 95.—ಬೆಂಗಳೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಇ. ಸಿ. ಷಣ್ಮುಗವೇಲುಪಿಳ್ಳೇ ಯವರಿಗೆ, 1884ನೇ ಇಸವಿ ಜುಲೈ 18ನೇ ಮರ್ಸ್ಕುಂ 82ನೇ ನಂಬರ್‌ವುಳ್ಳ ಈ ಆಫೀಸ್ ಇಸ್ತಿಹಾರ್ ನಾಮೆಯಿಂದ ಕೊಡಲ್ಪಟ್ಟ ರಜಾಕ್ಕೆ ಜಾಸ್ತೀಯಾಗಿ ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 96.—ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಪಂಚನಾಥರಾಯರು, 1884ನೇ ಇಸವಿ ಜುಲೈ 21ನೇ ಮರ್ಸ್ಕು ಮಿನ ಪೂರ್ವಾಹ್ನದಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟು 1ನೇ ಅಸಿಸ್ಟೆಂಟ್ ಕಮ್ಮಿಷನರ್ ಕೋರ್ಟು ಚಾರ್ಜನ್ನು ಮೆ|| ಅಸಿಸ್ಟೆಂಟ್ ಕಮ್ಮಿಷನರ್ ಸೈಯ್ಯದ್ ನಸಿರುದ್ದೀನ್‌ಯವರಿಗೆ ಒಪ್ಪಿಸಿರುತ್ತಾರೆ.

ತಾರೀಖು 31ನೇ ಜುಲೈ 1884.

ನಂ. 97.—ಸ್ಲ್ಯಾಟೇರ್ಷಗಳ ಫಾರೆಸ್ಟು ಪ್ರೊಬೇಷನರ್ ಮೆ|| ಕೆ. ಪ್ರಹ್ಲಾದರಾಯರ ನೌಕರಿಯು, ಅವರು ತಮ್ಮ ಕೆಲಸದ ಚಾರ್ಜ್ ಒಪ್ಪಿಸಿದ ತಾರೀಖು ಮೊದಲು ಪಬ್ಲಿಕ್ ವರಕಸ ಇಲಾಖೆಗೆ ವರ್ಗಮಾಡಲ್ಪಟ್ಟಿರುತ್ತೆ.

ನಂ. 98.—ಹಾಸನದ ಮುನ್ಸಿಫ್ ಸಿ. ವೆಂಕಟರಾಯರಿಗೆ, 1884ನೇ ಇಸವಿ ಮೇ 27ನೇ ಮರ್ಸ್ಕುಂ 45ನೇ ನಂಬರ್ ಇಸ್ತಿಹಾರ್ ನಾಮೆಯಿಂದ ಕೊಡಲ್ಪಟ್ಟ ರಜಾಕ್ಕೆ ಜಾಸ್ತೀಯಾಗಿ ಮೆಡಿಕಲ್ ಸರಟಿಫಿಕೇಟ್ ಮೇಲೆ ಮೂರು ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ನಗರ ಡಿವಿಜನ್ ಡಿಸ್ಟ್ರಿಕ್ಟು ಜಡ್ಜೀರ ಕೋರ್ಟಿನ ಶಿರಸ್ತೇದಾರ್ ಬಿ. ವೆಂಕಟಾಚಾರ್ರು, ಬುರ್ಹ ಷರೀಫರು ಹಾಸನದಲ್ಲಿ ಕೆಲಸ ನೋಡುತ್ತಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಯಡೇಹಳ್ಳಿ ಮುನ್ಸಿಫರಾಗಿ ಆಕ್ಟಿಂಗ್ ತರೀಕ ಕೆಲಸ ನೋಡುವಂತೆ ಮೊಕರರ್.

ತಾರೀಖು 1ನೇ ಆಗಸ್ಟು 1884.

ನಂ. 99.—ಸಕಲಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನೆಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಕೆಲವು ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ವೃತ್ತೀವಾರಾಗಿ ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು, ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜ್ ಷುರುವಾಗಿ, ಉಳಿಕೆ ಯಾವದೂ ಇಲ್ಲದೆ ವೃತ್ತಿಗಳು ಕಡ ಧರಖಾಸ್ತುದಾರನಿಗೆ ಹರಾಜ್ ನಿಲ್ಲುವದು.

2.—ಪರಂತು ಬಾಕೀ ಬರಬೇಕಾದ ವೃತ್ತಿಗಳು ಹರಾಜ್ ಮಾಡುವದರಿಂದ ಕಂದಾಯದಬಾಕೀ ಮೊಬಲಗು ಪೂರಾ ವಸೂಲಾಗದೇ ಯಿದ್ದರೆ ಪೂರಾ ಗ್ರಾಮವು ನಂತರ ವಿಕ್ರಯಿಸಲ್ಪಡುವದು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ ಡಿಪಾಜಿಟ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜ್ ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು, ಹಾಗಿಲ್ಲದಪಕ್ಷಕ್ಕೆ ಅಂತವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜ್ ಮವುಕೂಫ್ ಮಾಡಲ್ಪಡತಕ್ಕದ್ದು; ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ಹರಾಜ್ ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಕಾಯಮೂದ್ದಾಗಿರುವದಿಲ್ಲ.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಕಾಯಂ ಮಾಡಿದ ಕೊಡ್ಲೆ ವೃತ್ತಿಗಳು ಆತನ ಸುಪರ್ದು ಮಾಡಲ್ಪಟ್ಟು ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಸಬ್ ಡಿವಿಜನ್ ಆಫೀಸರರಿಂದ ರುಜು ಮೊಹರ್ ಮಾಡೋಣಾದ ಒಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು ತಪಸೀಲ್‌ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತುಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು, ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕೆ ಸ್ವತಂತ್ರರಿರುತ್ತಾರೆ. ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.			ಅಂದಾಜಾ ಹುಟ್ಟುವಳೀ (ಬಾಬೇರೀಜು).			ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.			ಯಾವಬಾಕೀಗೋಸ್ಕರ ಗ್ರಾಮ ಹರಾಜ್ ಮಾಡಲ್ಪಡುತ್ತೊ ಅಂಥಾ ಸರಕಾರದ ಕಂದಾಯದ ಬಾಕಿ.			ಹರಾಜು ತಾರೀಖು ವಗೈರೆ.
					ಖಂ.	ಕೊ.	ಪ.	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.	
ಹಾಸನ	ಹಾಸನ	ಕಸಬಾ	ಸಮುದ್ರವಳ್ಳಿ	ನರಸಿಹ್ಮಶಾಸ್ತ್ರಿ. ಇತರ 3 ಮಂದಿ	23	4	1	150	6	5	147	6	4	715	8	5	ಡಿಸ್ಟ್ರಿಕ್ಟ್ ಆಫೀಸಿನಲ್ಲಿ 1884ನೇ ಇಸವಿ ಸೆಪ್ಟಂಬರ್ ತಿಂಗಳು 3ನೇ ತಾರೀಖು
			ಅಲದಹಳ್ಳಿ	ನರಸಿಹ್ಮಭಟ್ಟ ಇತರ 18 ಮಂದಿ	31	2	4	234	3	10	230	10	2	926	12	5	

ತಾರೀಖು 1ನೇ ಆಗಸ್ಟು 1884.

ನಂ. 100.—ಸ್ 1882ನೇ ಇಸವಿ ನವಂಬರ 25ನೇ ಮಸ್ಕೂಂ 138ನೇ ನಂಬರವುಳ್ಳ ಇಸ್ತಿಹಾರನಾಮೆಯಿಂದ ಅರಸೀಕೆರೆ ತಾಲ್ಲೂಕಿಗೆ ವರ್ಗಮಾಡಲ್ಪಟ್ಟ ಹಾಸನದ ತಾಲ್ಲೂಕು ಹೊನ್ನಾವಾರ ಹೋಬಳಿಗೆ ಸೇರಿದ ಬಸರೀಹಳ್ಳೀ ಗ್ರಾಮವು, ಮರಳಿ ಹಾಸನದ ತಾಲ್ಲೂಕಿಗೆ ವರ್ಗಮಾಡಲ್ಪಟ್ಟಿರುತ್ತೆ.

ಹಾಸನ ತಾಲ್ಲೂಕು ಗ್ರಾಮದ ಹೋಬಳೀಗೆ ಸೇರಿದ ಕಳ್ಳಿಬಿಟ್ಟಗೋನಹಳ್ಳಿ ಗ್ರಾಮವು, ಹೊಳೇನರಸೀಪುರ ತಾಲ್ಲೂಕಿಗೆ ವರ್ಗಮಾಡಲ್ಪಟ್ಟಿರುತ್ತೆ.

ನಂ. 101.—ಇದರಡೀ ಕಂಡ ಚಿಕ್ಕ ಚಿಕ್ಕ ಬೇಚಿರಾಕ್ ಗ್ರಾಮಗಳು ಅವುಗಳ ಅಜಾಬಾಜಾದಲ್ಲಿರತಕ್ಕ ದೊಡ್ಡ ದೊಡ್ಡ ಅಸಲೀ ಗ್ರಾಮಗಳಿಗೆ ಸೇರಿಸಿರುತವೆ:—

ಮಾಗಣಿ ಹೆಸರು.	ನಂಬರು	ಅಸಲೀ ಗ್ರಾಮದ ಹೆಸರು.	ನಂಬರು	3ನೇ ಕಾಲಂನಲ್ಲಿ ಕಾಣಿಸಿರುವ ಗ್ರಾಮಗಳಲ್ಲಿ ಸೇರಿಸಬೇಕಾದ ಗ್ರಾಮಗಳ ಹೆಸರು.	ಷರಾ.
1	2	3	4	5	6
		(1). ಬೇಲೂರು ತಾಲ್ಲೂಕು.			
	1	ಬಸವಾಪುರ ..	1	ರಂಗಾಪುರ	
	2	ಕೇಸವಾಪುರ ..	1	ನಾಗನಹಳ್ಳಿ	
		(2). ಹೊಳೇನರಸೀಪುರ ತಾಲ್ಲೂಕು.			
	1	ಬಿಟ್ಟಗನಹಳ್ಳಿ ..	1	ಕಳ್ಳಿಬಿಟ್ಟಗನಹಳ್ಳಿ	
		(3). ಅರಸೀಕೆರೆ ತಾಲ್ಲೂಕು.			
	1	ಮುತ್ತಕೆರೆ ..	1	ಕಾಮನಹಳ್ಳಿ	
			2	ಮತ್ತಹಳ್ಳಿ	
	2	ಹೊಸಹಳ್ಳಿ ..	1	ಹಾಳಿಜೋಂಡನಹಳ್ಳಿ	
		(4). ಹಾಸನ ತಾಲ್ಲೂಕು.			
ಹಾಸನ	1	ಆಡವಳ್ಳಿ ..	1	ರಾಗಟ್ಟ	
	2	ಕುರಾ ..	1	ಬಸವನಪುರ	
	3	ಕೆಂಚಟವಳ್ಳಿ ..	1	ಚನ್ನಾಪುರ	
	4	ಕಾಟಿಹಳ್ಳಿ ..	1	ಸಿವನೇನಹಳ್ಳಿ	
ಕಾನಗಲ	5	ಮುಗಲೂರು ..	1	ಸಿನಡಿಪುರ	
	6	ಮೂಮದೇವರಹಳ್ಳಿ ..	1	ಕಾಳೇನಹಳ್ಳಿ	
	7	ರಾಜನಹಳ್ಳಿ ..	1	ಚಿಕ್ಕನಹಳ್ಳಿ	
	8	ಜೈಲಹಳ್ಳಿ ..	1	ಮುಂಡದಾಸನಹಳ್ಳಿ	
	9	ಕಾನವನಹಳ್ಳಿ ..	1	ಅಪ್ಪಂಣನಹಳ್ಳಿ	
	10	ಕಾಲತಮ್ಮನಹಳ್ಳಿ ..	1	ರಂಗಾಪುರ	
	11	ಲಕ್ಕನಹಳ್ಳಿ ..	1	ಕಾವೇರಹಳ್ಳಿ	
			2	ಭಂಡಿಹಳ್ಳಿ	

ಮಾಗಣಿ ಹೆಸರು.	ನಂಬರು.	ಅಸಲೀ ಗ್ರಾಮದ ಹೆಸರು.	ನಂಬರು.	3ನೇ ಕಾಲಂನಲ್ಲಿ ಕಾಣಿಸಿರುವ ಗ್ರಾಮಗಳಲ್ಲಿ ಸೇರಿಸಬೇಕಾದ ಗ್ರಾಮಗಳ ಹೆಸರು.	ಷರಾ.
1	2	3	4	5	6
ಮೋದಿಹಳ್ಳಿ	12	ಉಜ್ಜನಿ ..	1	ಬೆಂಗೇನಹಳ್ಳಿ	
			2	ಹುಲಿಹಳ್ಳಿ	
	13	ಗಣದಗೆರೆ ..	1	ಕನ್ನಾಪುರ	
ಲಾಲ್ಗಣಿ	14	ಯಲಗೇನಹಳ್ಳಿ ..	1	ಶ್ರೀರಂಗಪುರ	
	15	ಚಿಕ್ಕನಹಳ್ಳಿ ..	1	ಸಾಂಚಿಹಳ್ಳಿ	
			2	ರಾಮದೇವರಪುರ	
ಗ್ರಾಮ	16	ಮಾರಕುಳಿ ..	1	ಕ್ಯಾತನಹಳ್ಳಿ	
	17	ಹೆಗಡೀಹಳ್ಳಿ ..	1	ವಿರೂಪಾಕ್ಷಿಪುರ	
	18	ಬ್ಯಾಡರಹಳ್ಳಿ ..	1	ಮಾರನಾಯಕನಹಳ್ಳಿ	
			2	ಹುವ್ವಿನಹಳ್ಳಿ	
	19	ಜ್ಯಾಗರವಳ್ಳಿ ..	1	ಗೋಪಾಲಪುರ	
	20	ಜಂಬನಹಳ್ಳಿ ..	1	ಜಕ್ಕನಹಳ್ಳಿ	
			2	ವೆಂಕಟಾಪುರ	
	21	ಹೊನ್ನಗೆರೆ ..	1	ದಡದಹಳ್ಳಿ	
			2	ಕೊಂಗರವಳ್ಳಿ	
	22	ಮೂಲನಾಯಕನಹಳ್ಳಿ ..	1	ದಾಸನಕೊಪ್ಪಲು	
	23	ಗಡನಹಳ್ಳಿ ..	1	ಐಜೇನಹಳ್ಳಿ	
ಅಟ್ಟಾವಾರ	24	ಕಿತ್ತನಕೆರೆ ..	1	ತಿಮ್ಮನಹಳ್ಳಿ	
			2	ಭಂಡಿಹಳ್ಳಿ	
			3	ಕಟ್ಟೆಹಳ್ಳಿ	
	25	ತಿಮ್ಲಾಪುರ ..	1	ಸಾಸಲಗೆರೆ	
	26	ಕೃಷ್ಣಾಪುರ ..	1	ಗೋಪನಹಳ್ಳಿ	
ಕೌಸಿಕ	27	ಕಾಚನಾಯಕನಹಳ್ಳಿ ..	1	ಚಿಕ್ಕಹೊನ್ನೇನಹಳ್ಳಿ	
	28	ಸಾತೇನಹಳ್ಳಿ ..	1	ಕೆಟ್ಟೆಹಳ್ಳಿ	
	29	ಹೊಸಹಳ್ಳಿ ..	1	ಸಾಣೇನಹಳ್ಳಿ	
			2	ಹೋರಿಕೊಪ್ಪಲು	
	30	ಅಮ್ಮಗೋನಹಳ್ಳಿ ..	1	ತಮಲಾಪುರ	
ಹೊನ್ನಾವಾರ	31	ಬಮ್ಮನಹಳ್ಳಿ ..	1	ಬಸವನಹಳ್ಳಿ	
	32	ಕಂಕೆರೆ ..	1	ರಾಮೇನಹಳ್ಳಿ	
			2	ವಡೇರಹಳ್ಳಿ	

ಬಮೋಜಿಬ್ ಹುಕ್ಕುಂ,

ಆರ್. ವಿಜಯೇಂದ್ರರಾವ್,

ಸೆಕ್ರೇಟರಿ.

492

ಮೈಸೂರ ಗೆಜೆಟ

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಆಗಸ್ಟ್ ತಾ॥ 9, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ, ರೆಸಿಡೆಂಟರು, ಚೀಫ ಜಡ್ಜೀರುವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ರೆಸಿಡೆಂಟರ ಇಲಾಖಾ.

ಇಸ್ತಿಹಾರ್ ನಾಮೆ.

ಫಿನಾನ್ಷಿಯಲ್ ಇಲಾಖಾ.

1882ನೇ ಮೈಸೂರು ರೆಯಿಲ್ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಗೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್‌ಟ್ರೋಲರ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್‌ಜಡ್ಜೀಯವರ ಕೋರ್ಟಿನಲ್ಲಿ—

ಸರ್ 1884ನೇ ಇಸವಿ ಅರ್ಜೀ ನಂಬರ್ 121.

ಮೃತಪಟ್ಟ ನರಶಿಹ್ಮಯ್ಯನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರು ಮದ್ದಗಿರಿ ತಾ॥ ಕೊಡಗೇಹಳ್ಳಿ ಹೋಬಳಿ ಶೇಕದಾರ್ ಹಂಚನಾಳು ಸುಬ್ಬಣ್ಣನು, ಮೃತಪಟ್ಟ ಸದರೀ ನರಶಿಹ್ಮಯ್ಯನವರಿಗೆ ಅವಿಭಕ್ತ ಸಹೋದರನಾಗಬೇಕೆಂಬ ಹಕ್ಕುದಾರಿ ಮೇಲೆ ಕೊಡಗೇಹಳ್ಳಿ ಸ್ಥಳದ ಶೇಕದಾರ ಸುಬ್ಬಣ್ಣನವರು ಹಂಚನಾಳು ವಾಸಸ್ಥರಾಗಿ ಮೃತಪಟ್ಟ ನರಶಿಹ್ಮಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸುಬ್ಬಣ್ಣನವರ ಅರ್ಜೀಯನ್ನು 1884ನೇ ಇಸವಿ ಆಗಸ್ಟು ತಿಂಗಳು ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನರಶಿಹ್ಮಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ್ 124.

ಮೃತಪಟ್ಟ ಹುಚ್ಚಯ್ಯನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ಸ್ಥಳದ ಕೆಂಪಣ್ಣನು ಮೃತಪಟ್ಟ ಸದರೀ ಹುಚ್ಚಯ್ಯನವರಿಗೆ ಅವಿಭಕ್ತ ದೊಡ್ಡಪ್ಪನಾಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ಸ್ಥಳದ ಕೆಂಪಣ್ಣನು ಡಿಟ್ಟೋ ವಾಸಸ್ಥರಾಗಿ ಮೃತಪಟ್ಟ ಹುಚ್ಚಯ್ಯನವರ ಜೀಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೆಂಪಣ್ಣನವರ ಅರ್ಜೀಯನ್ನು 1884ನೇ ಇಸವಿ ಆಗಸ್ಟು ತಿಂಗಳು ತಾರೀಖು 28ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹುಚ್ಚಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಜುಲೈ ತಿಂಗಳು 30ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಕ್ರೆಸ್,
ಸಬ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 265.

ಮೃತಪಟ್ಟ ಪಟೇಲ್ ಚಟ್ಟೇಗವುಡನ ಆಸ್ತಿ ವಿಷಯದಲ್ಲಿ—

ಡಿಟ್ಟೋಯವನ ಮಗ ಚಟ್ಟು ಮೈನರ್, ಗಾರ್ಡಿಯರ್ ಇವನ ತಾಯಿ ಅರ್ಜೀದಾರಳಾದ ದ್ಯಾವಮ್ಮ, ಮೃತಪಟ್ಟ ಸದರೀ ಪಟೇಲ್ ಚಟ್ಟೇಗವುಡನಿಗೆ ಹೆಂಡತಿ ಮತ್ತು ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಶ್ರೀರಂಗಪಟ್ಟಣದ ತಾ॥ ಕ್ಯಾತನಹಳ್ಳಿ ಹೋಬಳಿ ಮಂಚನಹಳ್ಳಿ ಗ್ರಾಮದ ಸ್ಥಳದ ಚಟ್ಟು ಮೈನರ್, ಗಾರ್ಡಿಯರ್ ದ್ಯಾವಮ್ಮನು ಡಿಟ್ಟೋ ಸ್ಥಳದ ವಾಸಸ್ಥನಾಗಿ ಮೃತಪಟ್ಟ ಚಟ್ಟೇಗವುಡನ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾಳೆ.

ಸದರೀ ದರಖಾಸ್ತುದಾರರಾದ ಚಟ್ಟು ಮೈನರ್, ಗಾರ್ಡಿಯರ್ ದ್ಯಾವಮ್ಮ ಇವರ ಅರ್ಜಿಯನ್ನು 1884ನೇ ಆಗಸ್ಟು ತಿಂಗಳು ತಾರೀಖು 29ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಟೇಲ್ ಚಟ್ಟೇಗವುಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂಧ ತಿಳಿಯಪಡಿಸಿ ಇಧೆ.

ಸನ್ 1884ನೇ ಇಸವಿ ಅರ್ಜೀ ನಂಬರ 266.

ಮೃತಪಟ್ಟ ಕುಂಬಾರ ಚಿಂತಿ ರಾಮಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಡಿಟೋಯವನ ಮಗನಾದ ವೆಂಕಟಸಾಮಿ, ಮೃತಪಟ್ಟ ಸದರೀ ಕುಂಬಾರ ಚಿಂತಿ ರಾಮಯ್ಯನಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ತಾಲ್ಲೂಕು ಪಡವಾರಹಳ್ಳಿ ಸ್ಥಳದ ವೆಂಕಟಸಾಮಯ್ಯ ಸದರೀ ಸ್ಥಳದ ವಾಸಸ್ಥನಾಗಿ ಮೃತಪಟ್ಟ ರಾಮಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ವೆಂಕಟಸಾಮಯ್ಯನ ಅರ್ಜೀಯನ್ನು 1884ನೇ ಇಸವಿ ಆಗಸ್ಟು ತಿಂಗಳು ತಾರೀಖು 29ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರಟಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕುಂಬಾರ ಚಿಂತಿ ರಾಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ 296.

ಮೃತಪಟ್ಟ ಶಿವಾಚಾರದ ಮಾರಯ್ಯನ ಆಸ್ತಿ ವಿಷಯದಲ್ಲಿ—

ಅರ್ಜಿದಾರಳಾದ ಡಿಟೋಯವನ ಹೆಂಡತಿ ಬಸವಮ್ಮನು, ಮೃತಪಟ್ಟ ಸದರೀ ಮಾರಯ್ಯನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಗುಂಡ್ಲು ತಾ॥ ತೆರಕಣಾಂಬಿ ಹೋಬಳಿ ಜೊಮ್ಮನಹಳ್ಳಿ ಸ್ಥಳದ ಬಸವಮ್ಮನು ಡಿಟೋ ಸ್ಥಳದ ವಾಸಸ್ಥನಾಗಿ ಮೃತಪಟ್ಟಮಾರಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 300 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಬಸವಮ್ಮನ ಅರ್ಜೀಯನ್ನು 1884ನೇ ಇಸವಿ ಅಕ್ಟೋಬರ ತಿಂಗಳು ತಾರೀಖು 21ರಲ್ಲು ಮೈಸೂರು ಮೊಕ್ಕಾಂ ಈಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ಮಾರಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಜುಲೈ ತಿಂಗಳು 30ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಏ. ಎನ್. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜ.

ನಂ. 6. ತಾರೀಖು 4ನೇ ಆಗಸ್ಟು 1884.

ಇದರಿಂದ ತಿಳಿಯಪಡಿಸುವದೇನಂದರೆ, ಹೊಳೇನರಸೀಪುರದ ಸಬ್ ರಿಜಿಸ್ಟ್ರೀ ಆಫೀಸಿನಲ್ಲಿ ಬೇವಾರಸಾಗಿಯಿರತಕ್ಕ ಕೆಳಗೆ ವಿವರಿಸೋಣಾದ ದಸ್ತೈವಜನ್ನ ಹಾಜರ್ ಮಾಡಿದವರೇ ಆಗಲೀ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾದ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರ್ರೇ ಯಾಗಲೀ ಈ ನೋಟೀಸ್ ತಾರೀಖು ಲಗಾಯತು ವಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸು ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಶಪಡಿಸಲ್‌ಪಡುವದು.

ನಂಬ್ರ		ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿಕೋಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರು ಮಾಡಿದ ತಾರೀಖು.	ರಿಜಿಸ್ಟ್ರಿ ಆದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
39	1881—82	ನರಸೀಪುರದ ತಾಲ್ಲೂಕು ಸೂರನಹಳ್ಳಿ ಗ್ರಾಮದಲ್ಲಿರುವ ಸ್ಮಾರ್ತ ಬ್ರಾಹ್ಮಣ ಕೇಶವಯ್ಯನ ಹೆಂಡತಿ ಜಿರಾಯಿತು ಜೀವನದ ನರಸಮ್ಮ	ಲೇಟ್ ಅರಕಲಗೂಡು ತಾಲ್ಲೂಕು ಗುಬ್ಬಿ ವಾಸಸ್ಥ ಸ್ಮಾರ್ತ ಬ್ರಾಹ್ಮಣ ಗೋಣಿಬೀಡು ಸುಬ್ಬಾಭಟ್ಟರ ಮಗ ವೈದೀಕ ವೃತ್ತಿ ಜೀವನದ ನಂಜಪ್ಪ.	27—7—82	27—7—82	1,183—0—10ರೂಪಾಯಿನ ಜಮೀನ್ ಕ್ರಯಪತ್ರ.

ತಾರೀಖು 24ನೇ ಜುಲೈ 1884.

ಇದರಿಂದ ತಿಳಿಯಪಡಿಸುವದೇನಂದರೆ, ತಿರ್ಮುಕೂಡ್ಲು ನರಸೀಪುರ ಮತ್ತು ಮೈಸೂರು ಸಬ್‌ರಿಜಿಸ್ಟ್ರೀ ಆಫೀಸ್‌ಗಳಲ್ಲಿ ಬೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತೈವೇಜುಗಳನ್ನು ಹಾಜರ್ಮಾಡಿದವರೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರ್ರು ಆಗಲೀ ಈ ನೋಟೀಸ್ ತಾರೀಖು ಲಾಗಾಯಿತು ವೊಂದು ತಿಂಗಳವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅವುಗಳನ್ನು ವಾಪಸ್ ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅವುಗಳನ್ನು ನಾಶ ಪಡಿಸಲ್ಪಡುವವು.

ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರೆಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ಬರೆದುಕೊಟ್ಟ ತಾರೀಖು.	ರಿಜಿಸ್ಟರಾದ ತಾರೀಖು.	ದಸ್ತಾವೇಜಿನ ಸ್ವಭಾವ ವ ಕಿಮ್ಮತು.
118 / 1882—83	ಮೈಸೂರು ಕಿಲ್ಲೇಯಲ್ಲಿರುವ ಕೊಳತೂರು ಲಿಂಗಾಪಂತರ ಹೆಂಡತಿ ಪುಟ್ಟಮ್ಮಣ್ಣಮ್ಮ	ತಲ್ಕಾಡು ತಾಲ್ಲೂಕು ಹಾಲೀ ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಗರ್ಗೇಶ್ವರಿಯಲ್ಲಿರುವ ಫಕೀರ್ ಅಹಮ್ಮದ್‌ಸಾಬರ ಮಗ ಚಿಕ್ಕ ಯಿಮಾಂಸಾಬಿ	1—5—82	1—5—82	10 ರೂಪಾಯಿನ ಕ್ರಯಪತ್ರ.
151 / 1882—83	ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಪಿಳ್ಳಹಳ್ಳಿಯಲ್ಲಿರುವ ಅಂಣೇಗೌಡನ ಮಗ 1ನೇ ಪುಟ್ಟಂಣ 2ನೇ ಭೈರಂಣ	ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಜೋಡೀ ಅಶ್ವತ್ಥಪುರದ ಅಗ್ರಹಾರದಲ್ಲಿರುವ ರಾಘವೇಂದ್ರಾಚಾರ್ರ ಮಕ್ಕಳು ಶ್ರೀನಿವಾಸಾಚಾರ್	9—5—82	9—5—82	14–4–0 ರೂಪಾಯಿನ ಗುತ್ತಿಗೆ ದಸ್ತಾವೇಜು.
157 / 1882—83	ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಚಿದರವಳ್ಳಿಯಲ್ಲಿರುವ ಬಲಗೈಜಾತಿ ಚಿಕ್ಕತಿದ್ದನ ಮಗ ಕುಳ್ಳಮಾದ	ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಚಿದರವಳ್ಳಿಯಲ್ಲಿರುವ ಮಾದಶೆಟ್ಟಿಮಗ ವೆಂಕಟಶೆಟ್ಟಿ	11—1—82	11—5—82	95 ರೂಪಾಯಿನ ಭೋಗ್ಯಪತ್ರ.
282 / 1882—83	ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಗರ್ಗೇಶ್ವರಿಯಲ್ಲಿರುವ ಸ್ಮಾರ್ತ ಬ್ರಾಹ್ಮಣ ಕಿತ್ತೂರು ಸುಬ್ಬಯ್ಯನ ಹೆಂಡತಿ ಲಕ್ಷ್ಮಮ್ಮ	ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಗರ್ಗೇಶ್ವರಿಯಲ್ಲಿರುವ ವೈಷ್ಣವ ಬ್ರಾಹ್ಮಣ ವೆಂಕೋಬರಾವ್	13—6—82	13—6—82	100 ರೂಪಾಯಿನ ಆಧಾರ ಪತ್ರ.
635 / 1881—82	ಮೈಸೂರು ಯಿಟ್ಟಿಗೆ ಗೂಡಿನಲ್ಲಿ ಯಿರುವ ಪಂಚಾಳ ಜಾತಿ ಕಾತಮೇಸ್ತ್ರಿ ಮಗ ಚಾಮುಂಡಾಚಾರಿ 1 ನಾರ ಣಾಚಾರಿ 1 ಲಕ್ಷ್ಮಣಾಚಾರಿ 1	ಮೈಸೂರು ಯಿಟ್ಟಿಗೆ ಗೂಡಿನಲ್ಲಿರುವ ಪಂಚಾಳ ಜಾತಿ ಕಾತಮೇಸ್ತ್ರಿ ಮಗ ಚಾಮುಂಡಾಚಾರಿ 1 ನಾರಣಾಚಾರಿ 1 ಲಕ್ಷ್ಮಣಾಚಾರಿ 1	20—1—82	23—1—82	90 ರೂಪಾಯಿನ ವಿಭಾಗ ಪತ್ರ.
556 / ಡಿಟೋ	ಮೈಸೂರು ಬಸವನ ಮಹಲೇಲಿರುವ ಶಿವಾಚಾರದ ವ್ಯಾಪಾರದ ಜೇವನದ ಯಡೂರಯ್ಯನಮಗಪುಟ್ಟಂಣ	ಮೈಸೂರು ಬಸವನಮಹಲೇಲಿರುವ ಅಕ್ಕಸಾಲೆ ಜಾತಿ ಸೊನಾರು ಕಸಬು ಚನ್ನೀರಪ್ಪನ ಮಗ ವೀರಂಣ	15—12—81	17—12—81	150 ರೂಪಾಯಿನ ಭೋಗ್ಯಪತ್ರ.
475 / ಡಿಟೋ	ಮೈಸೂರು ಬಸವನ ಮಹಲೇಲಿ ಯಿರುವ ಮುಸಲ್ಮಾನ್ ಚಾದ್ರಿ ಲಾಲಾಮಿರ್ಯ್ಯನ ಮಗ ಮಹಮದ್ ಖಾಸಿಂಸಾಬಿ	ಮೈಸೂರಿನಲ್ಲಿ ಯಿರುವ ದೇಶದ ಯಜಮಾನ್ ವೀರಂಣಶೆಟ್ಟಿರ ಮಗ ರುದ್ರಶೆಟ್ಟಿ ಶಿವಾಚಾರ ಜಾತಿ	29—8—81	21-11-81	ಮಾಹೆ 1ಕ್ಕೆ 8 ರೂಪಾಯಿ ಕೊಡತಕ್ಕ ಅಂಗಡಿಬಾಡಿಗೆ ಕರಾರು.

ಅಬ್ದುಲ್‌ಖಾದರ್, ಕೆ. ಬಿ., ರಿಜಿಸ್ಟ್ರಾರ್.

ಫ್ರೆಂಚ್‌ರಾಕ್ಸ್ ಸಬ್ ಡಿವಿಜರ್ನ.

ತಾರೀಖು 1ನೇ ಆಗಸ್ಟ 1884.

ಇದರಿಂದ ತಿಳಿಯಪಡಿಸುವದೇನಂದರೆ, ಈ ಕೆಳಗೆ ನಮೂದಿಸುವ ಸಬ್ ರಿಜಿಸ್ಟ್ರಿ ಆಫೀಸುಗಳಲ್ಲಿ ಬೇವಾರಸಾಗಿ ಇರತಕ್ಕ ಈ ಮುಂದೆ ವಿವರಿಸುವ ದಸ್ತಾವೇಜುಗಳನ್ನು ಹಾಜರ್‌ಮಾಡಿದವರೇ ಆಗಲಿ ಅಥವಾ ವಾಪಸುಪಡಿಯಲು ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರರೇ ಆಗಲಿ ಈ ನೋಟೀಸು ತಾರೀಖು ಲಾಗಾಯತು ಒಂದು ತಿಂಗಳಲ್ಲಿ ಸದರೀ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ವಾಪಸ್ ಪಡಿಯದೆ ತಪ್ಪಿದರೆ ರಿಜಿಸ್ಟ್ರೇಷನ್ ನಿಬಂಧನೆ ಪ್ರಕಾರ ಅವು ನಾಶಪಡಿಸಲ್ಪಡುವವು.

ಯಾವ ಸಬ್ ರಿಜಿಸ್ಟ್ರಿ ಆಫೀಸು.	ದಸ್ತೈವಜಿನ ನಂಬರ್.	ದಸ್ತಾವೇಜು ಬರದು ಕೊಟ್ಟವನ ಹೆಸರು ವ ವಾಸಸ್ಥಳ.	ದಸ್ತಾವೇಜು ಬರಸಿ ಕೊಂಡವನ ಹೆಸರು ವ ವಾಸಸ್ಥಳ.	ದಸ್ತೈವಜು ತಾರೀಖು.	ರಿಜಿಸ್ಟ್ರಿದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
ಅತ್ತಿಕುಪ್ಪಾ	43 / 1882—83	ನಳ್ಳೇನಹಳ್ಳಿ ಗ್ರಾಮದಲ್ಲಿ ಯಿರುವ ತಿರುಮಲನ ಹೆಂಡತಿ ಸುಡುಗಾಡಿ	ಚಿನಕುರಳಿ ಗ್ರಾಮದಲ್ಲಿ ಇರುವ ಕೊತ್ವಾಲ್ ರಾಮರಾಯ	25—4—82	27—4—82	ನಳ್ಳೇನಹಳ್ಳಿ ಗ್ರಾಮದಲ್ಲಿ ಇರುವ ನಂಬರು 113—114ನೇ ಕಲ್ಲು ಹೊಲ, ನಂಬರು 128ನೇ ಅಡಿಕೆ ತೆಂಗಿನತೋಟದ ಪೈಕಿ ತನ್ನ ಹಿಸ್ಸೆಯನ್ನು 99 ರೂಪಾಯಿಗೆ ಕ್ರಯಕ್ಕೆ ಕೊಟ್ಟಿರುವದಾಗಿ.
ಮಂಡ್ಯ	1 / 1881—82	ಬೆಸಗರ ಹಳ್ಳಿ ಗ್ರಾಮದಲ್ಲಿರುವ ಬೇಯಪ್ಪನ ಮಗ ವೆಂಕಟರಂಗಯ್ಯ	ಬೆಸಗರಹಳ್ಳಿ ಗ್ರಾಮದಲ್ಲಿ ಇರುವ ಚನ್ನಪ್ಪನ ಮಗ ಶಿದ್ದಲಿಂಗಪ್ಪ	13—10—81	5—6—82	ಬೆಸಗರಹಳ್ಳಿ ಗ್ರಾಮದ ಕೆರೆಕೆಳಗೆ ನಂಬರು 212—213ನೇ ತರೀಜಮೀನನ್ನು (145) ರೂಪಾಯಿಗೆ ಕ್ರಯಕ್ಕೆ ಕೊಟ್ಟಿರುವದಾಗಿ.

ವಿ. ಪಿ. ಮಾಧವರಾವ್,
ರಿಜಿಸ್ಟ್ರಾರ್.

ಮೈಸೂರು ಸ್ಟೇಟ್ ರೈಲ್‌ವೆ.

ಪ್ರಕಟನೆ.

ಬೆಂಗಳೂರು—ತುಮುಕೂರು ರೈಲ್ವೆ ತೆರಿಯೋಣವು.

ಸರ್ 1884ನೇ ಇಸವಿ ಆಗಸ್ಟು ತಾರೀಖು 11ನೇ ಲಾಗಾಯತು ಬೆಂಗಳೂರಿಂದ 43 ಮೈಲಿ ದೂರದಲ್ಲಿ ಇರುವ ತುಮುಕೂರುವರಿಗೆ ರೈಲ್‌ವೆ ಭಂಡಿಗಳ ಮೇಲೆ ಪ್ರಯಾಣಸ್ಥರು ಅವರ ಲಗ್ಗೇಜ್, ಕುದುರೆಗಳು, ಭಂಡಿಗಳು, ನಾಯಿಗಳು, ಪಾರಸಲ್‌ಗಳು ಮತ್ತು ಗೂಡ್ಸು ಯಾನೆ ಸಾಮಾನುಗಳು ಮೈಸೂರು ರೈಲ್‌ವೆಯ ತಮಾಂ ಸ್ಟೇಷನ್‌ಗಳಿಂದ ಸಾಗಿಸಲ್ಪಡುವವು.

ತುಮುಕೂರು ಲೈನ್‌ನಲ್ಲಿ ಇರತಕ್ಕ ಸ್ಟೇಷನ್‌ಗಳು ಯಾವವಂದರೆ:—

ಬೆಂಗಳೂರು, ಬಾಣಾವಾರ, ಗೊಲ್ಲಹಳ್ಳಿ, ದೊಡ್ಡಬೆಲೆ, ನಿಡವಂಡ, ಹಿರೇಹಳ್ಳಿ, ತುಮುಕೂರು.

ಸ್ಟೇಷನ್‌ಗಳು.		ಪ್ರಯಾಣಸ್ಥರ ಭಂಡಿ.	ಚಾರ್ಜಿಗಳು. ೧ನೇ ತರಗತಿ.			ಚಾರ್ಜಿಗಳು. ೨ನೇ ತರಗತಿ.			ಚಾರ್ಜಿಗಳು. ೩ನೇ ತರಗತಿ.		
		ಬೆಳಿಗ್ಗೆ.									
ಬೆಂಗಳೂರು	ಹೊರಡುವದು ..	7–30	2	11	0	1	5	6	0	10	9
ತುಮಕೂರು	ಸೇರುವದು ..	10–37									
		ಸಾಯಿಂತ್ರ.									
ತುಮಕೂರು	ಹೊರಡುವದು ..	2–18	2	11	0	1	5	6	0	10	9
ಬೆಂಗಳೂರು	ಸೇರುವದು ..	5–25									

ವಿಶೇಷ ತಪಸೀಲುಗಳು ಪ್ರತ್ಯೇಕ ಇಸ್ತಿಹಾರಿನಲ್ಲಿ ಛಾಪಿಸಲ್ಪಟ್ಟಿರುತ್ತೆ.

ಬೆಂಗಳೂರು,
4ನೇ ಆಗಸ್ಟು 1884ನೇ ಇಸವಿ.

ಏ. ರೀಡ್ ಬೀಚರ್,
ಮ್ಯಾನೆಜರ್.

ಮೈಸೂರು ಗೆಜೆಟ, ಚಂದಾದರ ವಗೈರೆ.

	ಚಂದಾ. ರೂ.	ಆ.	ಟಪ್ಪಾಲ್ ಹಾಸಲು ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸಹಾ 12 ತಿಂಗಳಿಗೆ	7	0	3	8
ಛಷ್ ಮಾಹೆ ಯಾ ಕ್ವಾರಟರಿಗೆ	ದಾಮೂಷ್ಠಾಯಿ ಪ್ರಕಾರ ದರಗಳು.			

			ರೂ.	ಆ.
ಶಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸ್ತರಿಸಿ ಸರ್ಟಿಫಿಕೇಟ ಬಗ್ಯೆ ನೋಟೀಸುಗಳು :—				
ಮೊದಲನೇ ದಫಾ ಪಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ)		..	2	8
ಯರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ	..	..	1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ, ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟೀಸ್‌ಗಳಿಗೆ:—				
ಮೊದಲನೇ ದಫಾ ..	..	..	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	..	..	2	8
ಶಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕ್ಕುಂಗಳು ಬಗರ್ ಚಾರ್ಜಿ ಪ್ರಕಟಿಸಲ್ಪಡುತ್ತವೆ.				
ಡ್ಯುಪ್ಲಿಕೇಟ ಕಾಫೀ ಪಟ್ಟೀ, ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟೀಸ್‌ಗಳಿಗೆ :—				
ಮೊದಲನೇ ಸಲಕ್ಕೆ	ಪುಟ 1ಕ್ಕೆ	..	10	0
ಯೆರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	„	..	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜಿಮಾಡಲ್ಪಡುತ್ತೆ ;—				
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ	..	0	8
ಯೆರಡನೇ ದಫಾ ಡಿಟೋ	ಡಿಟೋ	..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ	..	..	0	4

ಬಮೋಜಿಬ್ ಹುಕ್ಕುಂ,
ಹೆಚ್. ಹಡರ್ಸನ್,
ಮೈ. ಗೆ. ಕಂಪೈಲರ್.

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಯಿಷ್ ಆದದ್ದು.

ಬೆಂಗಳೂರು, ಶನಿವಾರ, ಆಗಸ್ಟ್, ತಾ॥ 9, ಸರ್ಕ 1884.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೩ನೇ ಭಾಗ.

ಶ್ರೀಮರ್ಕ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷರ್ಕಗಳು.

ಇದರಡಿ ಬರುವ ರೆಗ್ಯೂಲೇಷರ್ಕ, 1884ನೇ ಇಸವಿ ಜುಲೈ 21ನೇ ಮರ್ಕುಮಿನಲ್ಲಿ ಶ್ರೀಮರ್ಕಮಹಾರಾಜ ರಾಜಾಸಾಹೆಬ್ ಬಹದ್ದೂರವರ ಅನುಮತಿಯನ್ನು ಪಡೆದು ಇದರ ದೆಶೆಯಿಂದ ಸರ್ವರ ತಿಳುವಳಿಕೆಯ ಬಗ್ಗೆ ಪ್ರಕಟಿಸಲ್ಪಡುತ್ತೆ.

ಸರ್ಕ 1884ನೇ ಇಸಿವಿಯ IIIನೇ ರೆಗ್ಯೂಲೇಷರ್ಕ.

ಮೈಸೂರು ದೇಶದ ಕೋರ್ಟುಗಳಲ್ಲಿ ವಕಾಲತ್ತು ಮಾಡುವ ಲೀಗಲ್ ಪ್ರಾಕ್ಟೀಷನರಿಗೆ (ಅಂದರೆ ವಕಾಲತ್ತು ಮಾಡತಕ್ಕವರಿಗೆ), ಸಂಬಂಧಪಟ್ಟ ಕಾನೂನನ್ನು ತಿದ್ದುಪಾಟು ಮಾಡುವದಕ್ಕೆ ಹುಟ್ಟಿದ ರೆಗ್ಯೂಲೇಷರ್ಕ.

ಮೈಸೂರು ದೇಶದಲ್ಲಿ ವಕಾಲತ್ತು ಮಾಡತಕ್ಕವರಿಗೆ ಸಂಬಂಧಪಟ್ಟ ಕಾನೂನನ್ನು ತಿದ್ದುಪಡಿಮಾಡಿ ದೃಢಪಡಿಸುವದು ಆವಶ್ಯಕವಾಗಿರುವದರಿಂದ, ಶ್ರೀಮರ್ಕ ಮಹಾರಾಜರವರು ಇದರಡಿಕಂಡ ಮೇರೆ ವಿಧಿಸುತ್ತಾರೆ:—

ಅಧ್ಯಾಯ I.

ಅವತರಣಿಕೆ.

ಚಿಕ್ಕ ಹೆಸರು.

ಪ್ರಾರಂಭ.

ಸೆಕ್ಷರ್ಕ 1.—ಈ ರೆಗ್ಯೂಲೇಷನ್ನು "1884ನೇ ಇಸವಿಯ ಮೈಸೂರು ಲೀಗಲ್ ಪ್ರಾಕ್ಟೀಷನರಗಳ ರೆಗ್ಯೂಲೇಷರ್ಕ" ಯಂಬದಾಗಿ ಕರೆಯಲ್ಪಡಬಹುದು, ಮತ್ತು ಯಿದು 1884ನೇ ಇಸವಿ ಸೆಪ್ಟಂಬರ್ 1ನೇ ತಾರೀಖಿನಲ್ಲಿ ಜಾರೀಗೆ ಬರತಕ್ಕದ್ದು.

ಸ್ಥಳ ವ್ಯಾಪ್ತಿ.

ಯಿದು ಮೈಸೂರು ದೇಶದಲ್ಲಿ ಸರ್ವತ್ರ ವ್ಯಾಪಿಸುತ್ತದೆ.

ರೂಲ್ಸಗಳ ರದ್ದೀಯಾತಿ.

ಸೆಕ್ಷರ್ಕ 2.—1884ನೇ ಇಸವಿ ಸೆಪ್ಟಂಬರ್ 1ನೇ ಮರ್ಕುಂ ಮತ್ತು ಆತರುವಾಯ, 1879ನೇ ಇಸವಿ ಫೆಬ್ರುವರೀ 18ನೇ ಮರ್ಕುಂ 273ನೇ ನಂಬರ್‌ವುಳ್ಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಯಲ್ಲಿ ಛಾಯಿಷ್ ಮಾಡಲ್ಪಟ್ಟ (ಆಡ್ವೋಕೇಟ್ ವ ಪ್ಲೀಡರುಗಳಿಗೆ ಸಂಬಂಧಪಟ್ಟ) ರೂಲ್ಸಗಳೂ, ಮತ್ತು 1880ನೇ ಇಸವಿ ಮಾರ್ಚಿ 12ನೇ ಮರ್ಕುಂ 306ನೇ ನಂಬರ್‌ವುಳ್ಳ ಚೀಫ್ ಕಮ್ಮಿಷರ್ಕರವರ ಇಸ್ತಿಹಾರ್‌ನಾಮೆಯಲ್ಲಿ ಛಾಯಿಷ್ ಮಾಡಲ್ಪಟ್ಟ (ಲೀಗಲ್ ಪ್ರಾಕ್ಟೀಷನರಗಳು ಕಕ್ಷಿಗಾರ ವಗೈರೇರೊಂದಿಗೆ ಮಾಡುವ ವಡಂಬಡಿಕೆಗಳಿಗೆ ಸಂಬಂಧಪಟ್ಟ) ರೂಲ್ಸಗಳೂ, ರದ್ದು ಮಾಡಲ್ಪಡತಕ್ಕವು.

ಯಿದರಲ್ಲಿ ಯೇನು ಅಡಗಿಯಿದ್ದಾಗ್ಯೂಸರಿ, ಅಡ್ವೋಕೇಟ್ ವ ಪ್ಲೀಡರುಗಳಿಗೆ ಸಂಬಂಧಪಟ್ಟ 1879ನೇ ಇಸವಿ ಫೆಬ್ರುವರೀ 18ನೇ ಮಕ್ಕಾಮಿನ ರೂಲ್ಸ್ ಅನುಸರಿಸಿ ಮೊದಲೇ ದಾಖಲ್ಮಾಡಲ್ಪಟ್ಟ ಅಡ್ವೋಕೇಟ್, ಮತ್ತು 1 ವ 2ನೇ ಕ್ಲಾಸ್ ಪ್ಲೀಡರುಗಳು, ಮೇಲ್ಕಂಡ ರೂಲ್ಸ್‌ಗಳ ಷರತ್ತುಗಳನುಸರಿಸಿ 1884ನೇ ಇಸವಿ ಡಿಶಂಬರ 31ನೇ ಮಕ್ಕಾಂ ವರೆಗೆ ವಕಾಲತ್ತು ನಡಸತಕ್ಕದ್ದು.

ಅರ್ಥ ವಿವರಣೆ.

ಸೆಕ್ಷನ್ 3.—ಈ ರೆಗ್ಯೂಲೇಷನಿನಲ್ಲಿ ಸಂದರ್ಭಕ್ಕಾಗಲೀ ಪ್ರಮೇಯಕ್ಕಾಗಲೀ ವಿರುದ್ಧಾಂಶವೇನೂ ಯಿಲ್ಲದೆ ಯಿರುವ ಪಕ್ಷಕ್ಕೆ.—

"ಲೀಗಲ್ ಪ್ರಾಕ್ಟೀಷನರ್" ಅಂದರೆ ಈ ರೆಗ್ಯೂಲೇಷನ್ ಅನುಸರಿಸಿ ದಾಖಲ್ ಮಾಡಲ್ಪಟ್ಟ ವಬ್ಬ ಅಡ್ವೋಕೇಟ್ ಯಾ ಪ್ಲೀಡರೆಂದು ಅರ್ಥವು.

"ಜಡ್ಜ್" ಅಂದರೆ ಪ್ರತಿ ಸಿವಿಲ್ ವ ಕ್ರಿಮಿನಲ್ ಕೋರ್ಟಿನ ವಿಚಾರಣೆ ಅಧಿಕಾರವುಳ್ಳ ಜ್ಯುಡಿಷಿಯಲ್ ಆಫೀಸರೆಂದು ಅರ್ಥವಾಗುತ್ತದೆ, ಅವರು ಯಾವ ಹೆಸರಿನಿಂದ ಕರೆಯಲ್ಪಟ್ಟಾಗ್ಯೂ ಚಿಂತೆಯಿಲ್ಲ.

"ಗವರ್ನಮೆಂಟ್" ಅಂದರೆ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರವೆಂದರ್ಥವು.

ಅಧ್ಯಾಯ II.

ಅಡ್ವೋಕೇಟ್ ವ ಪ್ಲೀಡರುಗಳು.

ಕೋರ್ಟುಗಳ ಮುಂದೆ ಯಾರು ವಕಾಲತ್ತು ಮಾಡತಕ್ಕದ್ದು.

ಸೆಕ್ಷನ್ 4.—ಶಿವಿಲ್ ವ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡುಗಳಲ್ಲಾಗಲೀ ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಯಿತರ ಕಾನೂನಿನಲ್ಲಾಗಲಿ ವಿಧಿಸಿರುವ ರೀತೀಲಿ ಹೊರ್ತು, ಯಾವ ಮನುಷ್ಯನಾಗಲೀ ಆತನು ಈ ರೆಗ್ಯೂಲೇಷನ್ ಅನುಸರಿಸಿ ವಬ್ಬ ಅಡ್ವೋಕೇಟ್ ಯಾ ಪ್ಲೀಡರ್ ತರೀಕ್ ದಾಖಲ್ ಮಾಡಲ್ಪಟ್ಟಿದ್ದರೇನೆ ಶಿವಾಯಿ, ಮೈಸೂರು ದೇಶದ ಯಾವ ಕೋರ್ಟಿನಲ್ಲಾಗಲಿ ಮತ್ತೊಬ್ಬ ನಿಗೋಸ್ಕರ ಹಾಜರಾಗಕೂಡದು, ವಕಾಲತ್ತು ನಡಿಸಕೂಡದು ಯಾ ಕೆಲಸ ನಡಿಸಕೂಡದು.

ಪರಂತು, ಯಾವ ಕ್ರಿಮಿನಲ್ ಕೋರ್ಟಿನ ಮುಂದಾಗಲಿ ವಂದು ತಕ್ಸೀರ್ ಆಪಾದಿಸಲ್ಪಟ್ಟ ಪ್ರತಿ ಮನುಷ್ಯನೂ, ತನ್ನ ಬಚಾವಣೆ ವೃದ್ಧಿಸ್ಯೆ ತನಿಗೆ ಸಹಾಯ ಮಾಡುವ ಬಗ್ಯೆ ಯಾವ ಮನುಷ್ಯನನ್ನಾಗಲೀ ಕೋರ್ಟಿನವರ ಅಪ್ಪಣೆ ಪಡೆದು ನೇಮಿಸಬಹುದೇ ಹೊರ್ತು ಅನ್ಯಥಾ ನೇಮಿಸಕೂಡದು;

ಪರಂತು, ಯಾವ ಜ್ಯುಡಿಷಿಯಲ್ ಪ್ರೊಸಿಡಿಂಗ್ಸ್‌ಯಾನೆ ನಡವಳಿತದ ವಿಷಯದಲ್ಲಾಗಲಿ ಗವರ್ನಮೆಂಟಿನ ತರಫ಼ ಕೆಲಸ ನಡಿಸುವದಕ್ಕೆ ವುದ್ಯೋಗತಃ ಆಗಲೀ ಅನ್ಯಥಾ ಆಗಲಿ ಅಧಿಕಾರ ಹೊಂದಿದ್ದ ಯಾವ ಮನುಷ್ಯನಾದರು ಗವರ್ನಮೆಂಟ್ ತರಫ಼ನಲ್ಲಿ ಅವನ ಅಧಿಕಾರಕ್ಕೆ ಒಳಪಟ್ಟು ಕೆಲಸಗಳು ನಡಿಸಬಹುದು, ಹಾಜರಾಗಬಹುದು, ಮತ್ತು ಅರ್ಜಿಗಳು ಕೊಡಬಹುದು.

ಯಾವ ಕೋರ್ಟುಗಳಲ್ಲಿ ಅಡ್ವೋಕೇಟರುಗಳು ವಕಾಲತ್ತು ಮಾಡಬಹುದು.

ಸೆಕ್ಷನ್ 5.—ಈ ರೆಗ್ಯೂಲೇಷನಿನ ನಿಯಮಗಳನುಸರಿಸಿ ಕ್ರಮವಾಗಿ ದಾಖಲ್ ಮಾಡಲ್ಪಟ್ಟ ಅಡ್ವೋಕೇಟರುಗಳು, ಮೈಸೂರು ಚೀಫ಼ ಕೋರ್ಟಿನಲ್ಲಿಯೂ, ಅದಕ್ಕೆ ತಾಬೇದಾರಿಯಾದ ತಮಾಂ ಸಿವಿಲ್ ವ ಕ್ರಿಮಿನಲ್ ಕೋರ್ಟುಗಳಲ್ಲಿಯೂ ಹಾಜರಾಗುವದಕ್ಕೂ, ವಕಾಲತ್ತು ಮಾಡುವದಕ್ಕೂ, ಮತ್ತು ಕೆಲಸ ನಡಿಸುವದಕ್ಕೂ ಅರ್ಹರಾಗಿರತಕ್ಕದ್ದು.

ಪ್ಲೀಡರುಗಳು.

ಸೆಕ್ಷನ್ 6.—ಪ್ಲೀಡರುಗಳಲ್ಲಿ 1ನೇ ಗ್ರೇಡ್ ಪ್ಲೀಡರುಗಳು ವ 2ನೇ ಗ್ರೇಡ್ ಪ್ಲೀಡರುಗಳು ಯಂಬದಾಗಿ ಯರಡು ತರಗತಿಯ ಪ್ಲೀಡರುಗಳಿರತಕ್ಕದ್ದು.

ಯಾವ ಕೋರ್ಟುಗಳಲ್ಲಿ ವಂದನೇ ಗ್ರೇಡ್ ಪ್ಲೀಡರುಗಳು ವಕಾಲತ್ತು ಮಾಡಬಹುದು.

ಸೆಕ್ಷನ್ 7.—ವಂದನೇ ತರಗತಿಯ ವಬ್ಬ ಪ್ಲೀಡರು, ಸಿವಿಲ್ ಪ್ರೊಸಿಡ್ಯೂರ್ ಕೋಡಿನಲ್ಲಿ ವಿವರಿಸಿರುವ ರೀತ್ಯಾ ಯಾವ ಡಿಸ್ಟ್ರಿಕ್ಟಿಗಾಗಿ ಆತನು ದಾಖಲ್ಮಾಡಲ್ಪಡುತ್ತಾನೋ ಅಂಥಾ ಡಿಸ್ಟ್ರಿಕ್ಟಿನೊಳಗೆ ಯಿರುವ ಯಾವ ಶಿವಿಲ್ ಕೋರ್ಟಿನಲ್ಲಾಗಲೀ ಮತ್ತು ಯಲ್ಲಾ ಕ್ರಿಮಿನಲ್ ಕೋರ್ಟಿನಲ್ಲಾಗಲೀ ಹಾಜರಾಗಲಿಕ್ಕೂ, ವಕಾಲತ್ತು ಮಾಡಲಿಕ್ಕೂ ಮತ್ತು ಕೆಲಸ ನಡಿಸಲಿಕ್ಕೂ ಅರ್ಹನಾಗಿರತಕ್ಕದ್ದು; ಪರಂತು, ಆತನು ಚೀಫ಼ ಕೋರ್ಟಿನಲ್ಲಿ ವಕಾಲತ್ತು ಮಾಡುವದಕ್ಕೆ ಅರ್ಹನಾಗಿರತಕ್ಕದ್ದಲ್ಲವು.

ಯಾವ ಕೋರ್ಟುಗಳಲ್ಲಿ ಯರಡನೇ ತರಗತಿಯ ಪ್ಲೀಡರುಗಳು ವಕಾಲತ್ತು ಮಾಡಬಹುದು.

ಸೆಕ್ಷನ್ 8.—ಯರಡನೇ ತರಗತಿಯ ಪಬ್ಬ ಪ್ಲೀಡರು, ಆತನು ಯಾವ ಕೋರ್ಟಿಗಾಗಿ ದಾಖಲ್ ಮಾಡಲ್ಪಡುತ್ತಾನೋ ಅಂಥಾ ಯಾವ ಮುನ್ಸಿಫ್ ಕೋರ್ಟಿನಲ್ಲಾಗಲೀ ಯಲ್ಲಾ ಮಾಜಿಸ್ಟ್ರೇಟ್ ಕೋರ್ಟುಗಳಲ್ಲಾಗಲೀ ಹಾಜರಾಗಲಿಕ್ಕೂ, ವಕಾಲತ್ತು ಮಾಡಲಿಕ್ಕೂ ಮತ್ತು ಕೆಲಸ ನಡಸಲಿಕ್ಕೂ ಅರ್ಹನಾಗಿರತಕ್ಕದ್ದು.

ಯರಡನೇ ತರಗತಿಯ ಪ್ಲೀಡರುಗಳು, ಸಬಾರ್ಡಿನೇಟ್ ಜಡ್ಜೀರ ಕೋರ್ಟುಗಳಲ್ಲಿ ವಕಾಲತ್ತು ಮಾಡುವದಕ್ಕೆ ಅಧಿಕಾರ ಕೊಡಲ್ಪಡುವಣ.

ಸೆಕ್ಷನ್ 9.—ವಂದು ಸಬಾರ್ಡಿನೇಟ್ ಜಡ್ಜೀರ ಕೋರ್ಟು ಸ್ಥಾಪಿಸಲ್ಪಟ್ಟ ಸ್ಥಳದಲ್ಲಿ, ವಕಾಲತ್ತು ಮಾಡುವಂಥಾ ಮೂವರು ಅಡ್ವೋಕೇಟರುಗಳಾಗಲೀ 1ನೇ ತರಗತಿಯ ಪ್ಲೀಡರುಗಳಾಗಲೀ ವಾಸವಾಗಿ ಯಿಲ್ಲದಿದ್ದರೆ, ಚೀಫ್ ಕೋರ್ಟಿನವರು ತಮ್ಮ ಅಂಥಾ ವುದ್ದೇಶ್ಯವನ್ನ ಸರ್ಕಾರಿ ಗೆಜೆಟಿನಲ್ಲಿ ನೋಟೀಸ್ ಮೂಲಕ ಫಾಯಿಷ್ ಮಾಡಲ್ಪಟ್ಟ ಆರು ತಿಂಗಳ ತರುವಾಯ ಅಂಥಾ ಸಬಾರ್ಡಿನೇಟ್ ಜಡ್ಜೀರ ಕೋರ್ಟಿನಲ್ಲಿ ವಕಾಲತ್ತು ಮಾಡುವ ಬಗ್ಯಾಗಿ ಅವಶ್ಯಕವಾದ ಸಂಖ್ಯೆಯುಳ್ಳ ಯರಡನೇ ಗ್ರೇಡ್ ಪ್ಲೀಡರುಗಳಿಗೆ ಹೆಸರು ನಮೂದಿಸಿ ಅಧಿಕಾರ ಕೊಡಬಹುದು.

ಚೀಫ್ ಕೋರ್ಟಿನವರು, ಯೋಗ್ಯತೆ ವಿಷಯದಲ್ಲಿಯೂ, ದಾಖಲ್ಮಾಡುವ ವಿಷಯದಲ್ಲಿಯೂ ರೂಲ್ಸ್ ಮಾಡತಕ್ಕದ್ದು.

ಸೆಕ್ಷನ್ 10.—ಚೀಫ್ ಕೋರ್ಟಿನವರು, ಈ ರೆಗ್ಯೂಲೇಷನ್ ಅನುಸಾರವಾಗಿ ಯಿದರಡೀಕಂಡ ವಿಷಯಗಳಿಗೋಸ್ಕರ ಆಗಿಂದಾಗ್ಯೆ ರೂಲ್ಸ್ ಮಾಡಬಹುದು, ಯಾವ ಬಗ್ಯೆಂದರೆ;—

(1) ಈ ರೆಗ್ಯೂಲೇಷನ್ ಅನುಸಾರವಾಗಿ ಅಡ್ವೋಕೇಟರುಗಳಾಗಿಯಾಗಲಿ, 1ನೇ ಗ್ರೇಡ್ ಅಥವಾ 2ನೇ ಗ್ರೇಡ್ ಪ್ಲೀಡರುಗಳಾಗಿಯಾಗಲಿ ದಾಖಲ್ಮಾಡಲ್ಪಡತಕ್ಕ ಬಗ್ಯೆ ಆವಶ್ಯಕಗಳಾದ ಯೋಗ್ಯತೆಗಳು ;

(2) ಅಂಥಾ ದಾಖಲಾತಿಗೋಸ್ಕರ ಕೊಡಲ್ಪಡುವ ದರಖಾಸ್ತುಗಳೊಂದಿಗೆ ಕಳುಹಿಸಲ್ಪಡಬೇಕಾದ ಸರ್ಟಿಫಿಕೇಟುಗಳು; ಮತ್ತು—

(3) ಚೀಫ್ ಕೋರ್ಟಿನವರಿಂದ ಈ ರೆಗ್ಯೂಲೇಷನಿನ 11ನೇ ಸೆಕ್ಷನ್ ಅನುಸರಿಸಿ ಕೊಡಲ್ಪಡುವ ದಾಖಲಾತಿ ಸರ್ಟಿಫಿಕೇಟಿಗಾಗಲಿ, ಅಥವಾ 12ನೇ ಸೆಕ್ಷನ್ ಅನುಸಾರವಾದ ರಿನ್ಯೂಯಲ್ ಸರ್ಟಿಫಿಕೇಟಿಗಾಗಲಿ ಕೊಡಲ್ಪಡಬೇಕಾದ ಸ್ಟಾಂಪು ಮೊಬಲಗು.

ಈ ಸೆಕ್ಷನ್ ಅನುಸಾರವಾಗಿ ಮಾಡಲ್ಪಟ್ಟ ರೂಲ್ಸ್‌ಗಳು, ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟು ಸರ್ಕಾರಿ ಗೆಜೆಟ್ಟಿನಲ್ಲಿ ಫಾಯಿಷ್ ಮಾಡಲ್ಪಟ್ಟಾಗ ಕಾನೂನಿನ ಬಲವುಳ್ಳದ್ದಾಗಿರತಕ್ಕದ್ದು.

ದಾಖಲಾತೀ ಬಗ್ಯೆ ದರಖಾಸ್ತುಗಳು.

ಸೆಕ್ಷನ್ 11.—ಹತ್ತನೇ ಸೆಕ್ಷನ್ ಅನುಗುಣವಾಗಿ ಏರ್ಪಡಿಸೋಣಾದ ರೂಲ್ಸ್‌ಗಳನುಸರಿಸಿ ಕ್ರಮವಾಗಿ ಯೋಗ್ಯತಾವುಳ್ಳ ಪ್ರತಿ ಮನುಷ್ಯನೂ, ಈ ರೆಗ್ಯೂಲೇಷನ್ ಅನುಸರಿಸಿ ಅಡ್ವೋಕೇಟಾಗಿಯಾಗಲೀ ಪ್ಲೀಡರಾಗಿಯಾಗಲಿ ದಾಖಲ್ಮಾಡಲ್ಪಡುವ ಬಗ್ಯೆ ಮೈಸೂರು ಚೀಫ್ ಕೋರ್ಟಿಗೆ ದರಖಾಸ್ತು ಕೊಡಬಹುದು. ದರಖಾಸ್ತಿನ ಸಂಗಡ ಸದರೀ ರೂಲ್ಸ್‌ಗಳಿಂದ ಅಪೇಕ್ಷಿಸಲ್ಪಟ್ಟ ಸರ್ಟಿಫಿಕೇಟಿಯಾನೇ ಯೋಗ್ಯತಾ ಪತ್ರಿಕೆಗಳನ್ನೂ ಸ್ಟಾಂಪು ಮೊಬಲಗನ್ನೂ ಹಾಜರ್ಮಾಡತಕ್ಕದ್ದು.

ಚೀಫ್ ಕೋರ್ಟಿನವರು ಅವರಿಗೆ ಯುಕ್ತ ಕಂಡು ಬಂದರೆ ದರಖಾಸ್ತನ್ನ ಮಂಜೂರ್ಮಾಡಬಹುದು ಮತ್ತು ದರಖಾಸ್ತು ಮಂಜೂರ್ಮಾಡಿದ ನಂತರ ಹತ್ತನೇ ಸೆಕ್ಷನ್ ಅನುಸಾರವಾಗಿ ಮಾಡೋಣಾದ ರೂಲ್ಸ್‌ನಲ್ಲಿ ವಿಧಿಸಲ್ಪಟ್ಟ ತಕ್ಕ ಛಾಪಾಕಾಗದದ ಮೇಲೆ ವಂದು ಸರ್ಟಿಫಿಕೇಟನ್ನು ಕೊಡತಕ್ಕದ್ದು.

ಈ ಸೆಕ್ಷನ್ ಪ್ರಕಾರ 1 ಯಾ 2ನೇ ತರಗತಿಯ ಪ್ಲೀಡರಿಗೆ ಕೊಡಲ್ಪಡುವ ಸರ್ಟಿಫಿಕೇಟಿನಲ್ಲಿ ದರಖಾಸ್ತುದಾರನು ಯಾವ ಕೋರ್ಟುಗಳಿಗೆ 7 ಯಾ 8ನೇ ಸೆಕ್ಷನ್ ಅನುಸಾರವಾಗಿ ಸಂದರ್ಭಾನುಸಾರ ದಾಖಲ್ಮಾಡಲ್ಪಟ್ಟಿರುತ್ತಾನೋ ಆ ತಪಸೀಲ್ ನಮೂದಿಸತಕ್ಕದ್ದು.

ಸರ್ಟಿಫಿಕೇಟ್.

ಸೆಕ್ಷನ್ 12.—ಈ ರೆಗ್ಯೂಲೇಷನ್ ಅನುಸರಿಸಿ ಪಬ್ಬ ಪ್ಲೀಡರಿಗೆ ಕೊಡಲ್ಪಟ್ಟ ಪ್ರತಿ ಸರ್ಟಿಫಿಕೇಟೂ, ಅದು ಆತನಿಗೆ ಯಾವಸಾಲಿಗೆ ಕೊಡಲ್ಪಟ್ಟಿತೋ ಆ ಕ್ಯಾಲಂಡರ್ ಸಾಲಿನ ಆಖೈರವರಿಗೆ ವಕಾಲತ್ ಮಾಡುವ ಬಗ್ಯೆ ಅಧಿಕಾರ ಕೊಡುತ್ತದೆ.

ಸದರೀ ವಾಯಿದೆಯು ಪೂರೈಸಿದಾಗ ಯಾ ಅದಕ್ಕೆ ಪೂರ್ವದಲ್ಲಿ ಅಂತಾ ಸರ್ಟಿಫಿಕೇಟ್ ಪಡೆದವನು, ವಕಾಲತು ಮಾಡುತ್ತಿರುವ ಬಗ್ಯೆ ಇಚ್ಛೆ ಪಟ್ಟರೆ ಆತನು ಸಾಧಾರಣವಾಗಿ ವಕಾಲತು ಮಾಡುತ್ತಿರುವ ಸ್ಥಳಅಧಿಕಾರವುಳ್ಳ ಡಿಸ್ಟ್ರಿಕ್ಟು ಜಡ್ಜಿಯವರ ಮುಖಾಂತ್ರ ಸರ್ಟಿಫಿಕೇಟನ್ನು ರೆನ್ಯೂ ಮಾಡುವ ಬಗ್ಯೆ ಚೀಫ್ ಕೋರ್ಟಿಗೆ ದರಖಾಸ್ತು ಮಾಡತಕ್ಕದ್ದು; ಚೀಫ್ ಕೋರ್ಟಿನವರು ಅದರ ಮೇಲೆ ಚಾಲತಿ ವರು

ಷಕ್ಕಾಗಲೀ ಯಾ ಮೂರನೇ ಕ್ಯಾಲಂಡರ್ ವರುಷಕ್ಕಾಗಲಿ ಸಂದರ್ಭಾನುಸಾರ ಸರ್ಟಿಫಿಕೇಟನ್ನು ರೆನ್ಯೂ ಮಾಡತಕ್ಕದ್ದು. ಪರಂತು, ದರಖಾಸ್ತುದಾರನು ವ್ಯಕ್ತವಾದ ದುರ್ನಡತೆಗೋಸ್ಕರವಾಗಲೀ ಇತರ ಕಾರಣಕ್ಕೋಸ್ಕರವಾಗಲೀ ಒಬ್ಬ ಲೀಗಲ್ ಪ್ರಾಕ್ಟಿಷನರಾಗಿರಲಿಕ್ಕೆ ಯೋಗ್ಯನಲ್ಲವೆಂದು ಚೀಫ್ ಕೋರ್ಟಿನವರ ಅಭಿಪ್ರಾಯದಲ್ಲಿ ಕಾಣಬಂದರೆ ಅವರು ಅಂಥಾವನ ದರಖಾಸ್ತನ್ನು ತಿರಸ್ಕರಿಸಬಹುದು.

ರೆನ್ಯೂ ಮಾಡಲ್ಪಟ್ಟ ಸರ್ಟಿಫಿಕೇಟ್ ಹತ್ತನೇ ಸೆಕ್ಷನ್ ಅನುಸಾರವಾದ ರೂಲ್ಸ್‌ಗಳಿಂದ ವಿಧಿಸೋಣಾದ ತಕ್ಕ ಕಿಮ್ಮತ್ತಿನ ಛಾಪಾಕಾಗದದ ಮೇಲೆ ಕೊಡಲ್ಪಡತಕ್ಕದ್ದು.

ರೆನ್ಯೂ ಮಾಡುವ ಅಂಥಾ ಪ್ರತಿ ಸಂದರ್ಭದಲ್ಲಿಯೂ, ಆಗ್ಯೆ ಪ್ಲೀಡರಿನ ವಶದಲ್ಲಿರತಕ್ಕ ಸರ್ಟಿಫಿಕೇಟ್ ಚೀಫ್ ಕೋರ್ಟಿಗೆ ಒಪ್ಪಿಸಲ್ಪಟ್ಟು ರದ್ದು ಮಾಡಲ್ಪಟ್ಟು ಸದರಿ ಕೋರ್ಟಿನವರಿಂದ ಉಳಿಸಿಕೊಳ್ಳಲ್ಪಡತಕ್ಕದ್ದು.

ಲೀಗಲ್ ಪ್ರಾಕ್ಟಿಷನರುಗಳ ಸಸ್ಪೆಂಡು ವ ತಗ್ಗೈರ್.

ಸೆಕ್ಷನ್ 13.—ಚೀಫ್ ಕೋರ್ಟಿನವರು, ಮೇಲ್ಕಂಡ ನಿಯಮಗಳನುಸರಿಸಿ ದಾಖಲ್ಮಾಡಲ್ಪಟ್ಟ ಯಾವ ಲೀಗಲ್ ಪ್ರಾಕ್ಟಿಷನರಾಗಲಿ ಆತನು ಒಬ್ಬ ಲೀಗಲ್ ಪ್ರಾಕ್ಟಿಷನರಾಗಿರುವದಕ್ಕೆ ಅನರ್ಹನನ್ನಾಗಿ ಮಾಡುವಂಥಾ ಒಂದು ದುಷ್ಟ ಸ್ವಭಾವವುಳ್ಳ ಯಾವ ಕ್ರಿಮಿನಲ್ ತಕಸೀರಾಗಲಿ ಹೊರಿಸಲ್ಪಟ್ಟರೆ, ಅಥವಾ ಆತನು ತನ್ನ ಉದ್ಯೋಗದ ಕೆಲಸ ಜರಗಿಸುವದರಲ್ಲಿ ಮೋಸಕರವಾದ ಯಾ ಅಕ್ರಮವಾದ ಕೆಟ್ಟ ನಡತೆಯ ತಪ್ಪಿತಸ್ಥನಾದರೆ ಅಂಥಾವನನ್ನು ಸಸ್ಪೆಂಡ್ ಯಾ ತಗ್ಗೈರ್ ಮಾಡಬಹುದು.

ಲೀಗಲ್ ಪ್ರಾಕ್ಟಿಷನರುಗಳ ಅಕ್ರಮವಾದ ನಡತೆ ವಿಷಯದಲ್ಲಿ ವಿಚಾರಣೆ.

ಸೆಕ್ಷನ್ 14.—ಚೀಫ್ ಕೋರ್ಟಿನಲ್ಲಾಗಲೀ ಅದಕ್ಕೆ ತಾಬೇದಾರಿಯಾದ ಯಾವ ಕೋರ್ಟಿನಲ್ಲಾಗಲಿ ವಕಾಲತು ಮಾಡುತ್ತಿರುವ ಯಾವ ಲೀಗಲ್ ಪ್ರಾಕ್ಟಿಷನರಾದರೂ, ತನ್ನ ಉದ್ಯೋಗದ ಕೆಲಸ ಜರಗಿಸುವದರಲ್ಲಿ ಮೋಸಕರವಾದ ಯಾ ನೀಚವಾದ ಅಕ್ರಮ ನಡತೆ ಉಳ್ಳವನೆಂದು ತಪ್ಪು ಆಪಾದಿಸಲ್ಪಟ್ಟರೆ ಯಾ ಕಾಣಬಂದರೆ ಅಂಥಾ ಕೋರ್ಟಿನ ಯಾವ ಜಡ್ಜಿಯಾದರೂ ಹಾಂಗೆ ತಿಳಿಸಲ್ಪಟ್ಟ ದುರ್ನಡತೆಯನ್ನು ಸಂಕ್ಷೇಪವಾಗಿಯೂ ಕರಾರ್ವಾಕಾ ಆಗಿಯೂ ನಮೂದ್‌ನಿಂದ ಒಂದು ಕ್ರಮವಾದ ಛಾರ್ಜನಾಮೆಯನ್ನು ತಯಾರ್ಮಾಡಿಸಿ ಅದರ ಒಂದು ನಕಲನ್ನು ಮತ್ತು ಸದರೀ ಛಾರ್ಜ್ ಪರ್ಯಾಲೋಚಿಸುವದಕ್ಕೆ ಗೊತ್ತುಮಾಡೋಣಾದ ದಿವಸವನ್ನು ನಮೂದು ಮಾಡಿದ ಒಂದು ನೋಟೀಸನ್ನು ಸುದಾ ಸದರೀ ಲೀಗಲ್ ಪ್ರಾಕ್ಟಿಷನರಿಗೆ ಕಳುಹಿಸತಕ್ಕದ್ದು. ಅಂಥಾ ನಕ್ಕಲು ಮತ್ತು ನೋಟೀಸ್ ಸುದಾ ಹಾಂಗೆ ಗೊತ್ತು ಮಾಡೋಣಾದ ತಾರೀಖಿಗೆ ಅಥಮಪಕ್ಷ ಹತ್ತು ದಿವಸಕ್ಕೆ ಮುಂಚಿತವಾಗಿ ಲೀಗಲ್ ಪ್ರಾಕ್ಟಿಷನರ ಮೇಲೆ ಜಾರಿ ಮಾಡಲ್ಪಡತಕ್ಕದ್ದು. ಅಂತಾ ತಾರೀಖಿನಲ್ಲಾಗಲೀ ಯಾ ವಿಚಾರಣೆಯು ಅಡ್‌ಜರ್ನ್‌ಯಾನೆ ನಿಲ್ಲಿಸಿ ಇಡಲ್ಪಟ್ಟ ಮತ್ತ್ಯಾವ ತಾರೀಖಿನಲ್ಲಾಗಲೀ ಕೋರ್ಟಿನವರು ಛಾರ್ಜ್ ರುಜುವಾತಿ ಬಗ್ಗೆ ಯಾ ಲೀಗಲ್ ಪ್ರಾಕ್ಟಿಷನರಿಂದ ಕ್ರಮವಾಗಿ ಹಾಜರಾದ ಯಲ್ಲಾ ಸಾಕ್ಷ್ಯವನ್ನೂ ತೆಗದುಕೊಂಡು ರೆಕಾರ್ಡು ಮಾಡಿ ಛಾರ್ಜ್ ವಿಷಯ ಫೈಸಲ್ಮಾಡುವದಕ್ಕೆ ಉದ್ಯುಕ್ತರಾಗತಕ್ಕದ್ದು.

ಚೀಫ್ ಕೋರ್ಟಿಗೆ ರಿಪೋರ್ಟು.

ಸೆಕ್ಷನ್ 15.—ಚೀಫ್ ಕೋರ್ಟಿಗೆ ತಾಬೇದಾರಿಯಾದ ಯಾವದಾದರು ಕೋರ್ಟಿನ ಜಡ್ಜಿಯು, ತಕಸೀರು ಸ್ಥಾಪಿತವಾದ ಕಾರಣ ಲೀಗಲ್ ಪ್ರಾಕ್ಟಿಷನರು ಸಸ್ಪೆಂಡ್ ಯಾ ತಗ್ಗೈರ್ ಮಾಡಲ್ಪಡತಕ್ಕದ್ದೆಂದು ಯೋಚಿಸಿದರೆ ಅವರು ತಮ್ಮ ಅಭಿಪ್ರಾಯವನ್ನು ಕಾರಣ ಸಮೇತ ರಿಕಾರ್ಡುಮಾಡಿ ಅದನ್ನು ವ ಪ್ರೊಸಿಡಿಂಗ್ಸನ್ನು ಚೀಫ್ ಕೋರ್ಟಿಗೆ ಕಳುಹಿಸತಕ್ಕದ್ದು, ಚೀಫ್ ಕೋರ್ಟಿನವರು ಸದರೀ ಲೀಗಲ್ ಪ್ರಾಕ್ಟಿಷನರನ್ನು ಬಿಡುಗಡೆ ಮಾಡಬಹುದು, ಸಸ್ಪೆಂಡ್ ಮಾಡಬಹುದು ಯಾ ತಗ್ಗೈರ್ ಮಾಡಬಹುದು.

ತಾಬೇದಾರಿ ಕೋರ್ಟುಗಳ ರಿಪೋರ್ಟುಗಳು ಡಿಸ್ಟ್ರಿಕ್ಟು ಕೋರ್ಟಿನ ವ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರ ಮೂಲಕ ಕಳುಹಿಸಲ್ಪಡತಕ್ಕದ್ದು.

ಸೆಕ್ಷನ್ 16.—ಅಂಥಾ ರಿಪೋರ್ಟು ಡಿಸ್ಟ್ರಿಕ್ಟು ಕೋರ್ಟಿಗೆ ತಾಬೇದಾರಿಯಾದ ಯಾವ ಕೋರ್ಟಿನ ಜಡ್ಜಿಯಿಂದಾಗಲೀ ಅಥವಾ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಿಗೆ ತಾಬೇದಾರಿಯಾದ ಯಾವ ಮಾಜಿಸ್ಟ್ರೇಟರಿಂದಾಗಲೀ ಮಾಡಲ್ಪಟ್ಟಾಗ ಅದು ಡಿಸ್ಟ್ರಿಕ್ಟು ಜಡ್ಜರಿಗಾಗಲಿ ಯಾ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಿಗಾಗಲಿ ಕಳುಹಿಸಲ್ಪಡತಕ್ಕದ್ದು. ಅವರು ಸದರೀ ರಿಪೋರ್ಟಿನೊಂದಿಗೆ ತಮಗೆ ತೋರುವ ಅವಶ್ಯಕವಾದ ಷರಾಗಳನ್ನು ಬರೆದು ಮೊಕದ್ದಮೆಯ ಕುರಿತು ತಮ್ಮ ಸ್ವಂತ ಅಭಿಪ್ರಾಯವನ್ನು ವಿವರಿಸಿ ಚೀಫ್ ಕೋರ್ಟಿನ ಆರ್ಡರ್ ಬಗ್ಗೆ ಸದರೀ ರೆಕಾರ್ಡನ್ನು ರವಾನಿಸತಕ್ಕದ್ದು.

ಕೂಡ್ಲೆ ಸಸ್ಪೆಂಡ್ ಮಾಡುವಣ.

ಸೆಕ್ಷನ್ 17.—ಸದರೀ ಜಡ್ಜ ಯಾ ಮಾಜಿಸ್ಟ್ರೇಟರು, ಚೀಫ್ ಕೋರ್ಟಿನಿಂದ ವಿಚಾರಣೆ ಮಾಡಲ್ಪಟ್ಟು ಹುಕ್ಕುಂಕೊಡುವ ನಿರೀಕ್ಷಣೆ ಮೇಲೆ, ತಮ್ಮ ಸ್ವಂತ ಕೋರ್ಟಿನ ಮತ್ತು ತಮಗೆ ತಾಬೇದಾರಿ ಕೋರ್ಟುಗಳ ಯಾವ ಪ್ಲೀಡರನ್ನಾಗಲೀ ಸಸ್ಪೆಂಡ್ ಮಾಡಬಹುದು.

502

ರೆಕಾರ್ಡುಗಳನ್ನು ತರಸಿಕೊಳ್ಳುವದಕ್ಕೆ ಚೀಫ್ ಕೋರ್ಟನವರ ಅಧಿಕಾರ.

ಸೆಕ್ಷನ್ 18.—ಚೀಫ್ ಕೋರ್ಟನವರು, ತಮ್ಮಿಂದ ಕೊಡಲ್ಪಟ್ಟ ಹುಕ್ಕುಂ ಪ್ರಕಾರವಲ್ಲದೇ ಅನ್ಯಥಾ ವಬ್ಬ ಅಡ್ವೋಕೇಟ್ ಯಾ ಪ್ಲೀಡರು ಬಿಡುಗಡೆ ಮಾಡಲ್ಪಟ್ಟ ಯಾವ ಮೊಕದ್ದಮೆಯಲ್ಲಾಗಲೀ ರೆಕಾರ್ಡು ತರಸಿ ತಮಗೆ ಯುಕ್ತ ತೋರುವ ಅರಡರ ಮಾಡಬಹುದು.

ಚಾರ್ಜನ್ನು ವರ್ಗಾ ಮಾಡುವದಕ್ಕೆ ಚೀಫ್ ಕೋರ್ಟನವರಿಗೆ ಅಧಿಕಾರ.

ಸೆಕ್ಷನ್ 19.—ಚೀಫ್ ಕೋರ್ಟನವರು ತಮ್ಮ ಕೋರ್ಟಿಗೆ ತಾಬೇದಾರಿಯಾದ ಯಾವ ಕೋರ್ಟನಲ್ಲಾಗಲೀ ವಬ್ಬ ಲೀಗಲ್ ಪ್ರಾಕ್ಟೀಷನರ ಮೇಲೆ ತರಲ್ಪಟ್ಟ ಚಾರ್ಜು ಫೈಸಲ ಬಗ್ಯೆ ತಮ್ಮ ಕೋರ್ಟಿಗೆ ಆಗಲೀ ಚಾರ್ಜು ಮಾಡೋಣಾದ ಕೋರ್ಟಿನ ದರ್ಜೆಗೆ ಸರಿಯಾದ ಯಾ ಮೇಲ್ಪಟ್ಟ ಮತ್ಯಾವ ಯಿತರ ಕೋರ್ಟಿಗಾಗಲಿ ವರ್ಗಮಾಡಲ್ಪಡತಕ್ಕದ್ದೆಂದು ಹುಕ್ಕುಂ ಮಾಡಬಹುದು.

ಸಸ್ಪೆಂಷನನ್ನು ನೋಟ್ ಯಾನೇ ಗುರ್ತು ಮಾಡುವಣ.

ಸೆಕ್ಷನ್ 20.—ಯಾವದಾದರು ಲೀಗಲ್ ಪ್ರಾಕ್ಟೀಷನರಿನ ಸಸ್ಪೆಂಷನನ್ನು ಚೀಫ್ ಕೋರ್ಟನಲ್ಲಿ ಯಿಡಲ್ಪಡಬೇಕಾದ ಪಟ್ಟಿಯಲ್ಲಿ ನೋಟ್ ಯಾನೆ ಗುರ್ತು ಮಾಡಲ್ಪಡತಕ್ಕದ್ದು, ಮತ್ತು ಆ ಸಂಗತಿ ಕುರಿತು ತಮಾಂ ತಾಬೇದಾರೀ ಕೋರ್ಟುಗಳಿಗೂ ನೋಟೀಸ್ ಕಳುಹಿಸತಕ್ಕದ್ದು.

ತಗ್ಯೆರ್ ಮಾಡೋಣಾದ ಲೀಗಲ್ ಪ್ರಾಕ್ಟೀಷನರಿನ ಹೆಸರನ್ನು ತೆಗದುಹಾಕುವಣ.

ಸೆಕ್ಷನ್ 21.—ಮೇಲ್ಕಂಡ ಕಲಂಗಳ ಅನುಸಾರವಾಗಿ ತಗ್ಯೆರ್ ಮಾಡಲ್ಪಟ್ಟ ಯಾವ ಲೀಗಲ್ ಪ್ರಾಕ್ಟೀಷನರಿನ ಹೆಸರಾಗಲೀ, ಚೀಫ್ ಕೋರ್ಟನಲ್ಲಿಯ ಲೀಗಲ್ ಪ್ರಾಕ್ಟೀಷನರುಗಳ ಪಟ್ಟಿಯಿಂದ ತೆಗೆದು ಹಾಕಲ್ಪಟ್ಟು, ಆ ಬಗ್ಯೆ ತಾಬೇದಾರಿಯಾದ ತಮಾಂ ಕೋರ್ಟುಗಳಿಗೂ ನೋಟೀಸು ಕಳುಹಿಸತಕ್ಕದ್ದು.

ಅಧ್ಯಾಯ III.

ಫೀಜು.

ಸೆಕ್ಷನ್ 22.—ಚೀಫ್ ಕೋರ್ಟನವರು, ಆಗಿಂದಾಗ್ಯೆ ಮತ್ತು ಗವರ್ನಮೆಂಟನವರ ಮಂಜೂರಾತಿನಿಸಿ ಯವನಾಗಲಿ ಕಕ್ಷಿಗಾರನಿಂದ, ಚೀಫ್ ಕೋರ್ಟನಲ್ಲಿಯೂ ಮತ್ತು ಅದಕ್ಕೆ ತಾಬೇದಾರಿಯಾದ ಕೋರ್ಟುಗಳಲ್ಲಿಯೂ ನಡಿಯುವ ಯಲ್ಲ ನಡವಳಿಕೆಗಳ ಮೇಲೆ ಆತನ ಪರಪಕ್ಷದ ಲೀಗಲ್ ಪ್ರಾಕ್ಟೀಷನರಿಗೆ ಪಾವತೀ ಮಾಡಲ್ಪಡಬೇಕಾದ ಫೀಜು ಮೊಬಲಗನ್ನು ಗೊತ್ತು ಮಾಡುವದಕ್ಕೂ ಮತ್ತು ಕ್ರಮಪಡಿಸುವದಕ್ಕೂ ರೂಲ್‌ಸನ್ನು ಮಾಡಬಹುದು.

ಪರಂತು, ಅಂಥಾ ಫೀಜುಗಳ ವಿಷಯದಲ್ಲಿ ಹಾಲೀ ಜಾರೀ ಯಿರುವ ರೂಲ್‌ಸ್‌ಗಳು ಈ ಸೆಕ್ಷನ್ ಅನುಸರಿಸಿ ಮಾಡಲ್ಪಟ್ಟಂತೆ ಯೆಣಿಸಲ್ಪಡತಕ್ಕದ್ದು.

ಲೀಗಲ್ ಪ್ರಾಕ್ಟೀಷನರುಗಳಿಗೆ ರುಸುಮು.

ಸೆಕ್ಷನ್ 23.—ಲೀಗಲ್ ಪ್ರಾಕ್ಟೀಷನರುಗಳು ಅವರ ರುಸುಮಿಗೋಸ್ಕರ ತಮ್ಮ ಕಕ್ಷಿಗಾರರೊಂದಿಗೆ ತಾವೇ ಏರ್ಪಾಟು ಮಾಡಿಕೊಳ್ಳಬಹುದು.

ರುಸುಮಿನ ಬಗ್ಯೆ ಹುಟ್ಟುವ ಕರಾರು ಕೋರ್ಟನಲ್ಲಿ ಫೈಲ್ ಮಾಡಲ್ಪಡತಕ್ಕದ್ದು.

ಸೆಕ್ಷನ್ 24.—ಯಾವ ಲೀಗಲ್ ಪ್ರಾಕ್ಟೀಷನರಿಂದಾಗಲೀ ತನ್ನನ್ನು ಯಿಟ್ಟುಕೊಳ್ಳುವ ಯಾ ನೇಮಿಸುವ ಯಾವ ಮನುಷ್ಯನೊಂದಿಗಾದರೂ, ತನ್ನಿಂದ ಪೂರಾ ಆಗಲೀ ಕೆಲವು ಭಾಗವಾಗಲೀ ನೆರವೇರಿಸಲ್ಪಟ್ಟ ಯಾ ನೆರವೇರಿಸಲ್ಪಡಬೇಕಾದ ಕೆಲಸಗಳ ವಿಷಯದಲ್ಲಿ ಪಾವತೀ ಮಾಡಲ್ಪಡಬೇಕಾದ್ದ ಮೊಬಲಗು ವ ಅದರ ರೀತಿ ಯಿವುಗಳ ಕುರಿತಾಗಲೀ, ಮತ್ತು ತನ್ನಿಂದ ವುದ್ಯೋಗತಃ ನಡಸಿದ ಯಾ ನಡಿಸಲ್ಪಡಬೇಕಾದ ಕೃತ್ಯಗಳು, ಫೀಜುಗಳು, ಚಾರ್ಜುಗಳು, ವ ಖರ್ಚುಗಳು ಯಿವುಗಳು ಕುರಿತು ಮಾಡಲ್ಪಟ್ಟ ಯಾವ ಕರಾರೇ ಆಗಲೀ ಅದು ಬರೆಯಲ್ಪಟ್ಟು ಅಂಥಾ ಮನುಷ್ಯನಿಂದ ರುಜುಮಾಡಲ್ಪಟ್ಟು ಮತ್ತು ಅದು ಹುಟ್ಟಿದ ತಾರೀಖು ಮೊದಲು ಹದಿನೈದು ದಿವಸಗಳ ವಳಗಾಗಿ ಡಿಸ್ಟ್ರಿಕ್ಟು ಕೋರ್ಟನಲ್ಲಾಗಲೀ ಅಥವಾ ಆ ಕರಾರು ಯಾವ ಬಗ್ಯೆ ಹುಟ್ಟಿತ್ತೋ ಆ ಸಂಬಂಧವಾದ ಕೆಲಸದ ಪೈಕೀ ವಂದುಭಾಗ ನಡೆಯಿತೋ ಯಾ ನಡೆಯಬೇಕೋ ಅಂಥಾ ಯಾವ ಕೋರ್ಟಿನಲ್ಲಿಯಾಗಲೀ, ದಾಖಲ್ ಮಾಡಲ್ಪಟ್ಟ ಹೊರತು, ಅನ್ಯಥಾ ಅಂಥಾ ಕರಾರು ಅದರ ಅಮಲ್‌ಜಾರಿ ಬಗ್ಯೆ ತರಲ್ಪಡುವ ದಾವೇಗಳಲ್ಲಿ ರುಜುವಾತಾಗಿರತಕ್ಕದ್ದಲ್ಲವು.

ಅನ್ಯಾಯವಾದ ಕರಾರು.

ಸೆಕ್ಷನ್ 25.—ಅಂಥಾ ಯಾವ ಕರಾರಾಗಲೀ ಅಮಲ್‌ಜಾರಿ ಮಾಡಲ್ಪಡಲಿಕ್ಕೆ ದಾವಾ ತರೋಣಾದರೆ, ಸದರೀ ಕರಾರು ಯೋಗ್ಯವಾದ್ದೆಂದುನ್ನೂ ನ್ಯಾಯವಾದ್ದೆಂದುನ್ನೂ ರುಜು ಮಾಡಿಕೊಡದಿದ್ದರೆ, ಕೋರ್ಟಿನವರು ಅದರ ದೆಸೆಯಿಂದ ಪಾವತೀ ಮಾಡಲ್ಪಡಬೇಕಾದ ಮೊಬಲಗನ್ನ ಕಮ್ಮೀ ಮಾಡಬಹುದು ಯಾ ಅದು ರದ್ದು ಮಾಡಲ್ಪಡತಕ್ಕದ್ದೆಂದು ಹುಕ್ಕುಂ ಮಾಡಬಹುದು. ಮತ್ತು ನಡಸಿದ ಕೆಲಸಗಳಿಗಾಗಿ ಆದ ಖರ್ಚುಗಳು, ಫೀಜುಗಳು ಲಾಗವಡುಗಳು ವ ಸಲಿಕೆಗಳು ಯಿವುಗಳನ್ನ ಅಂಥಾ ಕರಾರು ಯಿಲ್ಲದಿದ್ದರೆ ಹ್ಯಾಗೊ ಹಾಗೆ ತಿಳಿದುಕೊಳ್ಳತಕ್ಕದ್ದು.

ಕರಾರು, ಇತರ ಬಾಧ್ಯತೆಗಳನ್ನು ವಿನಾಯಿಸುವಣ.

ಸೆಕ್ಷನ್ 26.—ಅಂಥಾ ವಂದು ಕರಾರು; ಅದು ಯಾವ ಬಗ್ಯೆ ಹುಟ್ಟಿತೋ ಆಸಂಬಂಧವಾದ ಕೆಲಸಗಳು ನಡಿಸುವ ಬಗ್ಯೂ ಪೂರ್ತಿ ಮಾಡುವ ಬಗ್ಯೂ ಸಂಬಂಧಪಟ್ಟ ಯಾವದಾದರೂ ಕೆಲಸಗಳು, ಫೀಜುಗಳು, ಚಾರ್ಜುಗಳು ಯಾ ಖರ್ಚುಗಳು ಯಿವುಗಳಿಗೋಸ್ಕರ ಕರಾರಿನಲ್ಲಿ ಕಂಡ ಷರತ್ತುಗಳಿಗೆ ಮಿಾರಿದಂಥಾ ಲೀಗಲ್ ಪ್ರಾಕ್ಟೀಷನರಿನ ಯಲ್ಲ ಬಾಧ್ಯತೆಗಳನ್ನೂ ವಿನಾಯಿಸುತ್ತದೆ, ಪರಂತು ಸದರೀ ಕರಾರಿನಲ್ಲಿ ಖಿದಂಸತ್ಯೇಣಾ ಬಿಡಲ್ಪಟ್ಟ ಕೆಲಸಗಳು, ಚಾರ್ಜುಗಳು, ಫೀಜುಗಳು ಯಾ ಖರ್ಚುಗಳು ಯಾವದಾದರೂ ಯಿದ್ದರೆ ಅವುಗಳನ್ನು ಕುರಿತ ಬಾಧ್ಯತೆಯನ್ನು ವಿನಾಯಿಸುವದಿಲ್ಲಾ.

ರದ್ದಾದ ಕರಾರು.

ಸೆಕ್ಷನ್ 27.—ಅಂಥಾ ಯಾವ ಕರಾರಿನಲ್ಲಾಗಲೀ ಲೀಗಲ್ ಪ್ರಾಕ್ಟೀಷನರನು ಅಶ್ರದ್ಧೆಗೆ ಜವಾಬ್‌ದಾರನಲ್ಲವೆಂತಾಗಲೀ ಯಾವದಾದರು ಅಂಥಾ ಜವಾಬ್‌ದಾರೀಗೆ ಲೀಗಲ್ ಪ್ರಾಕ್ಟೀಷನರಾಗಿದ್ದು ಅನ್ಯಥಾ ತಾನು ವಳಪಡುವನೊ ಅಂಥಾ ಜವಾಬ್‌ದಾರಿಯಿಂದ ನಿವೃತ್ತನಾಗತಕ್ಕದ್ದೆಂತಾಗಲೀ ವಂದು ಕಲಮು ಯಿದ್ದಲ್ಲಿ ಅಂಥಾ ಕಲಮು ಪೂರ್ತಿಯಾಗಿ ರದ್ದಾಗತಕ್ಕದ್ದು.

ಮಧ್ಯಸ್ಥ ಮಾಡಿದರೆ ದಂಡನೆ.

ಸೆಕ್ಷನ್ 28.—ಯಿದರಡೀ ಬರುವ ಯಾವ ತಪ್ಪಿತವನ್ನಾಗಲೀ ಯಾವ ಮನುಷ್ಯನಾದರು ಮಾಡಿದರೆ;—

(*a*) ಯಾವದಾದರೂ ನ್ಯಾಯಸಂಬಂಧವಾದ ಕೆಲಸಗಳಲ್ಲಿ ವಬ್ಬ ಲೀಗಲ್ ಪ್ರಾಕ್ಟೀಷನರಿಗೆ ವುದ್ಯೋಗವನ್ನು ಸಂಪಾದಿಸಿ ಕೊಡುತ್ತೇನೆಂಬ ಯಾ ಕೊಟ್ಟಿರುತ್ತೇನೆಂಬ ಆಧಾರದ ಮೇಲೆ ಯಾವ ರುಸುಮಾಗಲೀ ಅಂಥಾ ಲೀಗಲ್ ಪ್ರಾಕ್ಟೀಷನರಿಂದ ಪಡೆದರೆ ಯಾ ಅವನನ್ನ ಕೇಳಿದರೆ.

(*b*) ಅಂಥಾ ವುದ್ಯೋಗಕ್ಕಾಗಿ ಯಾವದಾದರೂ ಲೀಗಲ್ ಪ್ರಾಕ್ಟೀಷನರಿಗೆ ಪಾವತಿ ಮಾಡಿದ, ಕೊಡೋಣಾದ ಯಾ ಪಾವತೀ ಮಾಡುವದಕ್ಕೆ ಯಾ ಕೊಡುವದಕ್ಕೆ ಕರಾರಾದ ರುಸುಮಿನ ಪೈಕಿ ಯಾವ ರುಸುಮಾಗಲೀ ಉಳಿಸಿಕೊಂಡರೆ.

(*c*) ವಬ್ಬ ಲೀಗಲ್ ಪ್ರಾಕ್ಟೀಷನರಾಗಿದ್ದು ಯಾವದಾದರೂ ನ್ಯಾಯಸಂಬಂಧವಾದ ಕೆಲಸಗಳಲ್ಲಿ ತನಿಗೆಆಗಲಿ ಯಾ ಯಿತರ ಲೀಗಲ್ ಪ್ರಾಕ್ಟೀಷನರಿಗೆ ಆಗಲಿ ಉದ್ಯೋಗವನ್ನು ಸಂಪಾದಿಸುವದಕ್ಕಾಗಿ ಯಾ ಸಂಪಾದಿಸಿದ್ದಕ್ಕಾಗಿ ಯಾವ ರುಸುಮನ್ನಾಗಲೀ ಕೊಡುವದಾಗಿ ಹೇಳಿದರೆ, ಕೊಟ್ಟರೆ ಯಾ ಉ ಸಿಕೊಳ್ಳುವದಕ್ಕೆ ಸಮ್ಮತಿಸಿದರೆ;

ಅಂಥಾ ಯಾವ ಮನುಷ್ಯನಾಗಲೀ ಆರು ತಿಂಗಳ ವರಿಗೆ ವ್ಯಾಪಿಸುವಂಥಾ ಸಾದಾ ಖೈದಿನ ಮೂಲಕವಾಗಿಯಾಗಲಿ ಐನೂರು ರೂಪಾಯಿಗಳ ವರಿಗಿನ ಜುರ್ಮಾನೆಯ ಮೂಲಕವಾಗಿ ಯಾಗಲಿ ಅಥವಾ ಈ ಯರಡರ ಮೂಲಕವಾಗಿ ಯಾಗಲೀ ಶಿಕ್ಷಿಸಲ್ಪಡತಕ್ಕದ್ದು.

ಬೆಂಗಳೂರು,
21ನೇ ಜುಲೈ 1884.

ಕೆ. ಶೇಷಾದ್ರಿಅಯ್ಯರ್,
ಮೈಸೂರು ದಿವಾನ್.

Mysore Government Press, Bangalore—1884.

508

ಮೈಸೂರ ಗೆಜೆಟ್.

ನಂ. 33 ಸರ್ಕಾರದಿಂದ ಪ್ರಾಯಿಷ್ ಆದ್ದು. ಸನ್ 1884.

ಬೆಂಗಳೂರು, ಶನಿವಾರ, ಆಗಸ್ಟ್, ತಾ|| 16, ಸನ್ 1884.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ಇಂಟೆಂಡೆಂಟರು, ಕಾಂಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ ವರಕ್ಕಸ ಆಫೀಸರ್‌ಗಳು, ಮಿಲಿಟೇರಿ ಸಿಕ್ರೆಟರಿಯವರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ಇಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗ್ಯೆರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು, 1884ನೇ ಇಸವಿಯ IIIನೇ ನಂಬರ್ ರೆಗ್ಯೂಲೇಷನ್.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 16ನೇ ಜುಲೈ 1884.

ನಂ. 79.—ಹಿಡುವಳಿಯಲ್ಲಿ ಯಿರದೇ ಯಿರತಕ್ಕ ಸರಕಾರದ ಜಮೀನುಗಳೊಳಗಣ ಹುಲ್ಲುಗಾವಲ್ ಹರಾಜ್ ವಿಷಯವನ್ನು ಕುರಿತು ಇದರಡಿಕಂಡ ನಿಬಂಧನೆಗಳು ಅಜಮಾಯಿಷೀ ತರೀಕ್ ಮಂಜೂರ್ಮಾಡಲ್ಪಟ್ಟು ಸಕಲಜನಗಳ ತಿಳುವಳಿಕೆಯ ಬಗ್ಯೆ ಪ್ರಾಯಿಷ್ ಮಾಡಲ್ಪಟ್ಟಿರುತಿವೆ:—

1. ಅಜಮಾಯಿಷೀ ತರೀಕ್ ಈ ಸಾಲ್‌ನಲ್ಲಿ ಹುಲ್ಲುಬನ್ನೀ ಹರಾಜುಗಳು ಹಾಕಲ್ಪಡಕೂಡದು.
2. 1882—83 ಮತ್ತು 83—84ನೇ ಇಸವಿಗಳಲ್ಲಿ ಪ್ರತಿ ಗ್ರಾಮದೊಳಗಣ ಸರಾಸರಿ ಹುಲ್ಲುಬನ್ನೀ ಹುಟ್ಟುವಳಿಯನ್ನು ಕರಾರ್ವಾಕಾ ಲೆಕ್ಕಮಾಡಿ ತನ್ಮೂಲಕ ಗೊತ್ತಾದ ಮೊಬಲಗ್ಯೆ ಆ ಗ್ರಾಮದೊಳು ಹಿಡುವಳಿಯಲ್ಲಿಲ್ಲದಿರುವ ಸರ್ಕಾರ್ ಜಮೀನುಗಳಲ್ಲಿ ಮೇಯಿಸುವ ಹಕ್ಕನ್ನು ಸಾಲ್‌ಮಜಕೂರಿಗೆ ಸದರೀ ಗ್ರಾಮ ನಿವಾಸಿಗಳಿಗೆ ಕೊಡತಕ್ಕದ್ದು.

3. ಈ ಷರತಗಳನ್ನು ಅನುಸರಿಸಿ ಗ್ರಾಮಸ್ಥರು ಮೇಯಿಸುವ ಹಕ್ಕನ್ನು ಅಂಗೀಕರಿಸಿದರೆ ಗ್ರಾಮಸ್ಥರೆಲ್ಲರಿಂದ ಕೊಡಲ್ಪಡತಕ್ಕ ಮೊಬಲಗನ್ನು ವಿಶಿಷ್ಟ ಜಮೀನುದಾರರುಗಳೂ ಗ್ರಾಮದ ಇತರ ನಿವಾಸಿಗಳು ಸಹ ತಮ್ಮೊಳು ತಾವೇ ಹಂಚಿಕೊಂಡು ಅಂತಾ ವಿಭಾಗ ಪ್ರಕಾರ ಪ್ರತಿ ಮನುಷ್ಯನೂ ಕೊಡಬೇಕಾದ ಮೊಬಲಗನ್ನು ತೋರಿಸುವ ಒಂದು ಪಟ್ಟಿಯನ್ನು ತಯಾರ್ಮಾಡಿ, ಅದಕ್ಕೆ ಸಂಬಂಧಪಟ್ಟ ಗ್ರಾಮಸ್ಥರೆಲ್ಲರೂ ಸದರೀ ಪಟ್ಟಿಗೆ ರುಜು ಮಾಡಬೇಕಲ್ಲದೆ, ಪಟೇಲ್ ಶಾನಭೋಗರು ಸಹ ರುಜು ಮಾಡತಕ್ಕದ್ದು. ಗ್ರಾಮದಿಂದ ಕೊಡಲ್ಪಡಬೇಕಾದ ಪೈಟ್ಟು ಮೊಬಲಗನ್ನು ಗ್ರಾಮದ ಪ್ರತಿ ಮನುಷ್ಯನೂ ಹಂಚಿಕೊಳ್ಳಬೇಕಾದ್ದು ಅವರು ಪರಸ್ಪರ ಮಾಡಿಕೊಂಡ ಸ್ವಂತಕರಾರಾಗಿರುತ್ತೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

4. ಅಮಲ್‌ದಾರರು ಅಂತಾ ಪಟ್ಟಿಗಳನ್ನು ತನಿಖೀ ಮಾಡಿ ಅದರಲ್ಲಿ ನಮೂದಿಸಿರುವ ಏರ್ಪಾಡುಗಳು ತೃಪ್ತಿಕರವಾಗಿದೆಯೋ ಯೆಂದು ಗ್ರಾಮಸ್ಥರನ್ನು ಕೇಳತಕ್ಕದ್ದು. ಯಾವನ ಹೆಸರಿಗೆ ಮೊಬಲಗು ದಾಖಿಲ್ಮಾಡಲ್ಪಟ್ಟಿರುತಿದೆಯೋ ಅಂತಾ ಪ್ರತಿ ಮನುಷ್ಯನನ್ನೂ ಬದಸ್ತೂರ್ ಕೇಳತಕ್ಕದ್ದು. ಅಂತಾ ವಿಚಾರಣೆಯಲ್ಲಿ, ಸದರೀ ಏರ್ಪಾಡು ಅದಕ್ಕೆ ಸಂಬಂಧಪಟ್ಟವರೆಲ್ಲರಿಗೂ ಸಮ್ಮತವಾದದ್ದೆಂದು ಅಮಲ್‌ದಾರರಿಗೆ ತೃಪ್ತಿಕರವಾಗಿ ಕಂಡು ಬಂದರೆ ಸದರೀ ಅಂಶವನ್ನು ಪ್ರಸಕ್ತ ಪಟ್ಟೀಯಲ್ಲಿ ಸ್ವದಸ್ತೂರ್ ಬರೆದು ದಾಖಲೆಯ ಬಗ್ಗೆ ಶಾನಭೋಗನ ವಶದಲ್ಲಿಡತಕ್ಕದ್ದು. ತರುವಾಯ ಯಾವ ಮನುಷ್ಯನ ಹೆಸರಿಗಾಗಲಿ ಸದರೀ ಪಟ್ಟಿಗಳಲ್ಲಿ ದಾಖಿಲ್ಮಾಡಲ್ಪಟ್ಟಿರುವ ಮೊಬಲಗನ್ನು ಅವನಿಂದ ವಸೂಲ್ಮಾಡತಕ್ಕ ಬಾಕೀಯೆಂದು ಅವನ ಖಾತೆಯಲ್ಲಿ ದಾಖಿಲ್ಮಾಡಿ ಅದು ಜಮೀನು ಕಂದಾಯದಂತೆ ವಸೂಲ್ಮಾಡಲ್ಪಡತಕ್ಕದ್ದು.

5. ಯಾವ ಗ್ರಾಮಸ್ಥರೇ ಆಗಲಿ ಸದರೀ ಗ್ರಾಮದೊಳು ಹಿಡುವಳಿಯಲ್ಲಿರದೇ ಯಿರುವ ಸರ್ಕಾರ್ ಜಮೀನಿನಲ್ಲಿ ಮೇಯಿಸುವ ಹಕ್ಕನ್ನು ಯೆರಡನೇ ಕಲಮಿನ ಪ್ರಕಾರ ಗೊತ್ತು ಮಾಡಲ್ಪಟ್ಟ ಮೊಬಲಗಿಗೆ ಅಂಗೀಕರಿಸುವದಕ್ಕೆ ಅಸಮಾಧಾನ ಪಟ್ಟಾಗ್ಯೂ, ಅಥವಾ ಈ ಮೊಬಲಗಿನ ವಿಭಾಗ ವಿಷಯದಲ್ಲಿ ಅವರು ಪರಸ್ಪರ ಸಮ್ಮತಿಸದೇ ಹೋದರೂ, ಅಥವಾ ಅಮಲ್‌ದಾರರ ವಿಚಾರಣೆಯಲ್ಲಿ ಅಂತಾ ಮೊಬಲಗಿನ ವಿಷಯವನ್ನು ಕುರಿತಾಗಲಿ, ಅದರ ವಿಭಾಗವನ್ನು ಕುರಿತಾಗಲಿ, ತಕರಾರ್ ವುಂಟಾದರೂ ಆಗ ಗ್ರಾಮಕ್ಕೆ ಸಂಬಂಧಪಟ್ಟ ಮೇಯಿಸುವ ಹಕ್ಕುದಾರಿಯು ಆಸ್ಥಳದಲ್ಲಿ ಮಾಮೂಲ್‌ನಂತೆಯೇ ಹರಾಜ್ ಮಾಡಲ್ಪಡತಕ್ಕದ್ದು.

6. ಮೇಲೆಕಂಡ ಕರಾರ್‌ಗಳ ಪ್ರಕಾರ ಮೇಯಿಸುವ ಹಕ್ಕು ಗ್ರಾಮಸ್ಥರಿಗೆ ಕೊಡಲ್ಪಟ್ಟರೆ ಅಂತಾ ಗ್ರಾಮಗಳೊಳಗಣ ಹಿಡುವಳೀಯಲ್ಲಿ ಯಿರದ ಸರ್ಕಾರ್ ಜಮೀನುಗಳಲ್ಲಿ ಸದರೀ ಗ್ರಾಮದ ದನಗಳು ಮೇಯುವದಕ್ಕೆ ಯಾವ ನಿರ್ಬಂಧಗಳೂ ವುಂಟು ಮಾಡಲ್ಪಡಕೂಡದು.

7. ಪ್ರತಿ ಗ್ರಾಮದ ಹುಲ್ಲುಗಾವಲನ್ನು ಮೇಲೆ ವಿಧಿಸಲ್ಪಟ್ಟಂತೆ ವಿಲೇಮಾಡುವದಕ್ಕೆ ಬದಲಾಗಿ ಅಮಲ್‌ದಾರರು ತಮಗೆ ಆವಶ್ಯಕ ತೋರಿ ಬಂದಾಗ ಗ್ರಾಮಗಳನ್ನು ಅನುಕೂಲವಾದ ಗುಂಪುಗಳಾಗಿ ಮಾಡಿ ಅಂತಾ ಪ್ರತಿ ಗುಂಪಿನ ಮೇಯಿಸುವ ಹಕ್ಕನ್ನು ಪ್ರತ್ಯೇಕವಾಗಿ ವಿಲೇ ಮಾಡಬಹುದು. ಹಾಗೆ ಗುಂಪು ಮಾಡುವಣದರಲ್ಲಿ, ಹಾಲೀ ಜಾರೀಯಲ್ಲಿರುವ ಮೇಯಿಸುವ ಏರ್ಪಾಡುಗಳಿಗೆ ಪೂರಾನಿಗೇ ಕೊಡಬೇಕಲ್ಲದೆ ಸಾಧ್ಯವಾದ ಮಟ್ಟಿಗೆ ಅದಕ್ಕೆ ಸಂಬಂಧಪಟ್ಟ ಗ್ರಾಮಸ್ಥರ ಸಮ್ಮತಿಯನ್ನು ಹೊಂದಿ ಯಿರತಕ್ಕದ್ದು.

ತಾರೀಖು 1ನೇ ಆಗಸ್ಟು 1884.

ನಂ. 99.—ಸಕಲಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನೆಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿನ ಪ್ರಕಾರ) ಕೆಲವು ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ವೃತ್ತೀವಾರಾಗಿ ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು, ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜ್ ಷುರುವಾಗಿ, ಉಳಿಕೆ ಯಾವದೂ ಇಲ್ಲದೆ ವೃತ್ತಿಗಳು ಚಡ ದರಖಾಸ್ತುದಾರನಿಗೆ ಹರಾಜ್ ನಿಲ್ಲುವದು.

2. ಪರಂತು ಬಾಕೀ ಬರಬೇಕಾದ ವೃತ್ತಿಗಳು ಹರಾಜ್ ಮಾಡುವದರಿಂದ ಕಂದಾಯದಬಾಕೀ ಮೊಬಲಗು ಪೂರಾ ವಸೂಲಾಗದೇ ಯಿದ್ದರೆ ಪೂರಾ ಗ್ರಾಮವು ನಂತರ ವಿಕ್ರಯಿಸಲ್ಪಡುವದು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜ್ ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದಪಕ್ಷಕ್ಕೆ ಅಂತವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫ್‌ನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜ್ ಮುವುಕೂಫ್ ಮಾಡಲ್ಪಡತಕ್ಕದ್ದು; ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ಹರಾಜ್ ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಕಾಯಮ್ಮಾಗಿರುವದಿಲ್ಲ.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಕಾಯಂ ಮಾಡಿದ ಕೂಡ್ಲೆ ವೃತ್ತಿಗಳು ಆತನ ಸುಪರ್ದು ಮಾಡಲ್ಪಟ್ಟು ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಸಬ್ ಡಿವೀಜನ್ ಆಫೀಸರರಿಂದ ರುಜು ಮೊಹರ್ ಮಾಡೋಣಾದ ಒಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲಿನಲ್ಲಾಗಲ್ಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು, ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕೆ ಸ್ವತಂತ್ರರಿರುತ್ತಾರೆ. ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.			ಅಂದಾಜಾ ಹುಟ್ಟುವಳೀ ಯಾ ಬೇರೀಜು.			ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.			ಯಾವಬಾಕೀಗೋಸ್ಕರ ಗ್ರಾಮ ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.			ಹರಾಜು ತಾರೀಖು ವಗೈರೆ.
					ಖಂ.	ಕೊ.	ಪ.	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.	
ಕಡೂರು	ಹಾಸನ	ಕಾಳ್ಯ	ಸಮುದ್ರವಳ್ಳಿ	ನರಸಿಹ್ಮಶಾಸ್ತ್ರಿ, ಇತರ 3 ಮಂದಿ	23	4	1	150	6	5	147	6	4	715	8	5	ಡೆಪ್ಯುಟಿ ಅಮಲ್ದಾರ್) ಕಚ್ಚೇರಿಯಲ್ಲಿ 1884ನೇ ಇಸವಿ ಸೆಪ್ಟಂಬರ್ 2ನೇ ಮ [illegible] ಮಿನಲ್ಲಿ.
			ಅಲದಹಳ್ಳಿ	ನರಸಿಹ್ಮಭಟ್ಟ ಇತರ 18 ಮಂದಿ	31	2	4	234	3	10	230	10	2	926	12	5	

ತಾರೀಖು 1ನೇ ಆಗಸ್ಟು 1884.

ನಂ. 100.—ಸರ್ 1882ನೇ ಇಸವಿ ನವಂಬರ 25ನೇ ಮುಸ್ತ್ಕಂ 138ನೇ ನಂಬರವುಳ್ಳ ಇಸ್ತಿಹಾರ್‌ನಾಮೆಯಿಂದ ಅರಶೀಕೆರೇ ತಾಲ್ಲೂಕಿಗೆ ವರ್ಗಮಾಡಲ್ಪಟ್ಟ ಹಾಸನದ ತಾಲ್ಲೂಕು ಹೊನ್ನಾವಾರ ಹೋಬಳಿಗೆ ಸೇರಿದ ಬಸರೀಹಳ್ಳಿ ಗ್ರಾಮವು, ಮರಳಿ ಹಾಸನದ ತಾಲ್ಲೂಕಿಗೆ ವರ್ಗಮಾಡಲ್ಪಟ್ಟಿರುತ್ತೆ.

ಹಾಸನ ತಾಲ್ಲೂಕು ಗ್ರಾಮದ ಹೋಬಳೀಗೆ ಸೇರಿದ ಕಳ್ಳಿಬಿಟ್ಟಗೋನಹಳ್ಳಿ ಗ್ರಾಮವು, ಹೊಳೇನರಸೀಪುರ ತಾಲ್ಲೂಕಿಗೆ ವರ್ಗಮಾಡಲ್ಪಟ್ಟಿರುತ್ತೆ.

ನಂ. 101.—ಇದರಡೀ ಕಂಡ ಚಿಕ್ಕ ಚಿಕ್ಕ ಬೇಚಿರಾಕ್ ಗ್ರಾಮುಗಳು ಅವುಗಳ ಅಜಾಬಾಜಾದಲ್ಲಿರತಕ್ಕ ದೊಡ್ಡ ದೊಡ್ಡ ಅಸಲೀ ಗ್ರಾಮುಗಳಿಗೆ ಸೇರಿಸಿರುತವೆ:—

ಮಾಗಣಿ ಹೆಸರು.	ನಂಬರು	ಅಸಲೀ ಗ್ರಾಮದ ಹೆಸರು.	ನಂಬರು	3ನೇ ಕಾಲಂನಲ್ಲಿ ಕಾಣಿಸಿರುವ ಗ್ರಾಮುಗಳಲ್ಲಿ ಸೇರಿಸಬೇಕಾದ ಗ್ರಾಮುಗಳ ಹೆಸರು.	ಷರಾ.
1	2	3	4	5	6
		(1). ಬೇಲೂರು ತಾಲ್ಲೂಕು.			
	1	ಬಸವಾಪುರ ..	1	ಲಿಂಗಾಪುರ	
	2	ಕೇಸವಾಪುರ ..	1	ನಾಗನಹಳ್ಳಿ	
		(2). ಹೊಳೇನರಸೀಪುರ ತಾಲ್ಲೂಕು.			
	1	ಬಿಟ್ಟಗನಹಳ್ಳಿ ..	1	ಕಳ್ಳಿಬಿಟ್ಟಗನಹಳ್ಳಿ	
		(3). ಅರಶೀಕೆರೇ ತಾಲ್ಲೂಕು.			
	1	ಮುತ್ತಕೆರೆ ..	1	ಕಾಮನಹಳ್ಳಿ	
			2	ಮುತ್ತಹಳ್ಳಿ	
	2	ಹೊಸಹಳ್ಳಿ ..	1	ಹಾಳಿಜೊಂಡನಹಳ್ಳಿ	
		(4). ಹಾಸನ ತಾಲ್ಲೂಕು.			
ಹಾಸನ	1	ಆಡವಳ್ಳಿ ..	1	ರಾಗಟ್ಟ	
	2	ಕುರಾ ..	1	ಬಸವನಪುರ	
	3	ಕೆಂಚಟವಳ್ಳಿ ..	1	ಚೆನ್ನಾಪುರ	
	4	ಕಾಟಿಹಳ್ಳಿ ..	1	ಶಿವನೇನಹಳ್ಳಿ	
ಕಾನಗಲ್	5	ಮುಗಲೂರು ..	1	ನಡಿಪುರ	
	6	ಮೂಮದೇವರಹಳ್ಳಿ ..	1	ಕಾಳೇನಹಳ್ಳಿ	
	7	ರಾಜನಹಳ್ಳಿ ..	1	ಚಿಕ್ಕನಹಳ್ಳಿ	
	8	ಬೈಲಹಳ್ಳಿ ..	1	ಮುಂಡದಾಸನಹಳ್ಳಿ	
	9	ಕಾನವನಹಳ್ಳಿ ..	1	ಅಪ್ಪಣಿನಹಳ್ಳಿ	
	10	ಕಾಲತಮ್ಮನಹಳ್ಳಿ ..	1	ರಂಗಾಪುರ	
	11	ಲಕ್ಕನಹಳ್ಳಿ ..	1	ಕಾವೇರಹಳ್ಳಿ	
			2	ಭಂಡಿಹಳ್ಳಿ	

ಮಾಗಣಿ ಹೆಸರು.	ನಂಬರು	ಅಸಲೀ ಗ್ರಾಮದ ಹೆಸರು.	ನಂಬರು	3ನೇ ಕಾಲಂನಲ್ಲಿ ಕಾಣಿಸಿರುವ ಗ್ರಾಮಗಳಲ್ಲಿ ಸೇರಿಸಬೇಕಾದ ಗ್ರಾಮಗಳ ಹೆಸರು.	ಷರಾ.
1	2	3	4	5	6
ಮಾದಿಹಳ್ಳಿ	12	ಉಜ್ಜನಿ	1	ಜಂಗೇನಹಳ್ಳಿ	
			2	ಹುಲಿಹಳ್ಳಿ	
	13	ಗಣದಗೆರೆ	1	ಕನ್ನಾಪುರ	
ಲಾಲಗಣಿ	14	ಯಲಗೇನಹಳ್ಳಿ	1	ಶ್ರೀರಂಗಪುರ	
	15	ಚಿಕ್ಕನಹಳ್ಳಿ	1	ಸಾಂಚಿಹಳ್ಳಿ	
			2	ರಾಮದೇವರಪುರ	
ಗ್ರಾಮ	16	ಮಾರಕುಳಿ	1	ಕ್ಯಾತನಹಳ್ಳಿ	
	17	ಹೆಗಡೀಹಳ್ಳಿ	1	ವಿರುಪಾಕ್ಷಿಪುರ	
	18	ಬ್ಯಾಡರಹಳ್ಳಿ	1	ಮಾರನಾಯಕನಹಳ್ಳಿ	
			2	ಹುವ್ವಿನಹಳ್ಳಿ	
	19	ಜ್ಯಾಗರವಳ್ಳಿ	1	ಗೋಪಾಲಪುರ	
	20	ಜಾಂಜನಹಳ್ಳಿ	1	ಜಕ್ಕನಹಳ್ಳಿ	
			2	ವೆಂಕಟಾಪುರ	
	21	ಹೊನ್ನಗೆರೆ	1	ದಡದಹಳ್ಳಿ	
			2	ಕೊಂಗರವಳ್ಳಿ	
	22	ಮಾಲನಾಯಕನಹಳ್ಳಿ	1	ದಾಸನಕೊಪ್ಪಲು	
	23	ಗಡನಹಳ್ಳಿ	1	ಐಜೇನಹಳ್ಳಿ	
ಅಟ್ಟಾವಾರ	24	ಕಿತ್ತನಕೆರೆ	1	ತಿಮ್ಮನಹಳ್ಳಿ	
			2	ಭಂಡಿಹಳ್ಳಿ	
			3	ಕಟ್ಟೆಹಳ್ಳಿ	
	25	ತಿಮ್ಮಾಪುರ	1	ಸಾಸಲಗೆರೆ	
	26	ಕೃಷ್ಣಾಪುರ	1	ಗೋಪನಹಳ್ಳಿ	
ಕೌಶಿಕ	27	ಕಾಚನಾಯಕನಹಳ್ಳಿ	1	ಚಿಕ್ಕಹೊನ್ನೇನಹಳ್ಳಿ	
	28	ಸಾತೇನಹಳ್ಳಿ	1	ಕೆಟ್ಟೆಹಳ್ಳಿ	
	29	ಹೊಸಹಳ್ಳಿ	1	ಸಾಣೇನಹಳ್ಳಿ	
			2	ಹೋರಿಕೊಪ್ಪಲು	
	30	ಅಮ್ಮಗೋನಹಳ್ಳಿ	1	ತಮಲಾಪುರ	
ಹೊನ್ನಾವಾರ	31	ಬಮ್ಮನಹಳ್ಳಿ	1	ಬಸವನಹಳ್ಳಿ	
	32	ಕಂಕೆರೆ	1	ರಾಮೇನಹಳ್ಳಿ	
			2	ವಡೇರಹಳ್ಳಿ	

ತಾರೀಖು 2ನೇ ಆಗಸ್ಟ್ 1884.

ನಂ. 102.—ಚಿಕ್ಕಬಳ್ಳಾಪುರ ತಾಲ್ಲೂಕಿನ ಕೆಲವು ಚಿಕ್ಕಚಿಕ್ಕ ಮತ್ತು ಬೇಚಿರಾಖ್ ಗ್ರಾಮಗಳು, ಅವುಗಳ ಬಾಜೂದಲ್ಲಿರುವ ದೊಡ್ಡ ಅಸಲೀ ಗ್ರಾಮಗಳಿಗೆ ಶೇರಿಸಲ್ಪಟ್ಟದ್ದನ್ನು ತೋರಿಸುವ ಇದರಡಿ ಕಂಡ ತಖ್ತೆಯು, ಸರ್ವರ ತಿಳುವಳಿಕೆ ಖಬ್ರೆ ಪ್ರಕಟಿಸಲ್ಪಡುತ್ತೆ.

ಮಾಗಣಿ ಹೆಸರು.	ನಂಬರು.	ಅಸಲೀ ಗ್ರಾಮದ ಹೆಸರು.	ನಂಬರು.	3ನೇ ಕಾಲಂನಲ್ಲಿ ಕಾಣಿಸಿರುವ ಗ್ರಾಮಗಳಲ್ಲಿ ಶೇರಿಸಲ್ಪಟ್ಟ ಗ್ರಾಮಗಳ ಹೆಸರು.	ಷರಾ.
ಪೂರ್ಣಸಾಗರ.	1	ಮುಮ್ಮಿಂಚನಹಳ್ಳಿ ..	1	ಗಾಡೆಮನಾಗೇನಹಳ್ಳಿ	ಬೇಚಿರಾಖ್
	2	ಮಾರಪ್ಪನಹಳ್ಳಿ ..	1	ಜಂಗಮಮಾರಹಳ್ಳಿ	
			2	ಅರಳೀಮರದಹಳ್ಳಿ	
			3	ತೊಗರಿಘಟ್ಟ	ಡಿಟೋ
	3	ಗುವಲ್ಕನಹಳ್ಳಿ ..	1	ಜಂಭಹಳ್ಳಿ	
			2	ಕಲ್‌ಕುಂಟೆ	
	4	ಮಾರಗನಹಳ್ಳಿ ..	1	ತಿಮ್ಮರಸನಹಳ್ಳಿ	ಡಿಟೋ
	5	ದೊಡ್ಡ ಪಾಯಲ್‌ಕುರ್ಕಿ ..	1	ಪೂವಲ್‌ನಾಗೇನಹಳ್ಳಿ	ಡಿಟೋ
	6	ಗಂಗಾರೆಕಾಲ್ವೆ ..	1	ಅನುಪಹಳ್ಳಿ	ಡಿಟೋ
			2	ಚಿಕ್ಕತೇಕಹಳ್ಳಿ	ಡಿಟೋ
			3	ನಾಲ್‌ಕದರೇನಹಳ್ಳಿ	ಡಿಟೋ
	7	ವೆಂಕಟಾಪುರ ..	1	ವಡಿಯಲ್ಪಟ್ಟ ಗಂಗಾರೆ ಕಾಲ್ವೇ ಗ್ರಾಮದ ಭಾಗ	
	8	ಆವಲ್‌ಗುರ್ಕಿ ..	1	ಕುರುಬರಹಳ್ಳಿ	
			2	ಬರಲಹಳ್ಳಿ (ಚಿಕ್ಕಬಳ್ಳಾಪುರ ಮಾಗಣಿ)	ಡಿಟೋ
	9	ಯುರವಾರನಹಳ್ಳಿ ..	1	ನಾರೇನಹಳ್ಳಿ	
	10	ಕೇತನಹಳ್ಳಿ ..	1	ತಿಮ್ಮಸಂದ್ರ	ಡಿಟೋ
			2	ಅಂಮದಾಲಪೊದೆ	ಡಿಟೋ
	11	ಸಾದೇನಹಳ್ಳಿ ..	1	ಮಾರಶೆಟ್ಟಿಹಳ್ಳಿ	ಡಿಟೋ
			2	ದೊಂಣಗಾನಹಳ್ಳಿ	ಡಿಟೋ
	12	ಆನೆಮಡಗು ..	1	ವೆಡವರ್ತಿ	ಡಿಟೋ
			2	ವಡಿಯಲ್ಪಟ್ಟ ಸಾದೇನಹಳ್ಳಿ ಭಾಗ	
	13	ಹರಿಸ್ಥಳ ..	1	ಗೌಡನಹಳ್ಳಿ	
ಪೆರೆಸಂದ್ರ.	14	ರಡ್ಡಿಹಳ್ಳಿ ..	1	ತುಂಗೆಹಳ್ಳಿ	ಬೇಚಿರಾಖ್
			2	ತೆಲಗೆನಹಳ್ಳಿ	ಡಿಟೋ
			3	ಉಡಬಂಡಹಳ್ಳಿ	ಡಿಟೋ
	15	ನಲಗುತ್ತಹಳ್ಳಿ ..	1	ಮುನಗವಾರಹಳ್ಳಿ	
	16	ನಂದನಾಗನಹಳ್ಳಿ ..	1	ಪೆರೆಸಂದ್ರಕ್ಕೆ ಶೇರಿಸಲ್ಪಟ್ಟ ಮುತ್ತುಕದಹಳ್ಳಿಯ ವಡದ ಎಲ್ಲಾ ಭಾಗಗಳು	
	17	ಜೋಂಮಹಳ್ಳಿ ..	1	ಮಾರ್ವೆಹಳ್ಳಿ	
	18	ಉಪ್ಪುಮುದ್ದನಹಳ್ಳಿ ..	1	ಚಿಗರಲೆದಿಂಣೆ	ಡಿಟೋ

ಮಾಗಣಿ ಹೆಸರು.	ನಂಬರು	ಅಸಲೀ ಗ್ರಾಮಗಳ ಹೆಸರು.	ನಂಬರು	3ನೇ ಕಾಲಂನಲ್ಲಿ ಕಂಡ ಗ್ರಾಮಗಳಿಗೆ ಶೇರಿಸಲ್ಪಟ್ಟ ಗ್ರಾಮಗಳು.	ಷರಾ.
ಪೆರೆಸಂದ್ರ.	19	ಕವ್ಮಾತನಹಳ್ಳಿ ..	1	ಚಾಮಲಬಂಡಹಳ್ಳಿ	
	20	ಕೋಡೂರು ..	1	ಕೊಟ್ಟೂರು	ಬೇಚಿರಾಖ್
			2	ತಿರಮಲ್‌ದೇವರಹಳ್ಳಿ	ಡಿಟೋ
			3	ಬಾಲಗನಹಳ್ಳಿ	ಡಿಟೋ
			4	ಬೈಗನಹಳ್ಳಿ	
ಮಂಚಕನಬೆಲೆ.	21	ದೇವಸ್ಥಾನಹೊಸಹಳ್ಳಿ ..	1	ಜಾಡೇನಹಳ್ಳಿ	
	22	ನೆಲ್ಲೀಮರದಹಳ್ಳಿ ..	1	ದಾಸರಹಳ್ಳಿ	
	23	ಕುರುಬರಹಳ್ಳಿ ..	1	ವ್ಯಾಕಲವಾರಹಳ್ಳಿ	ಬೇಚಿರಾಖ್
	24	ಸೊಪ್ಪಹಳ್ಳಿ ..	1	ಗಂಡ್ಲಹಳ್ಳಿ	
			2	ಪುಲತಿಮ್ಮನಹಳ್ಳಿ	
	25	ಕತ್ತರಗುಪ್ಪೆ ..	1	ಹೊಸೂರು	ಡಿಟೋ
	26	ಹಾವಲಹಳ್ಳಿ ..	1	ವಾರೇನಹಳ್ಳಿ	ಡಿಟೋ
			2	ಹೊನ್ನಪ್ಪನಹಳ್ಳಿ	
			3	ರಂಗಯ್ಯನಹಳ್ಳಿ	ಡಿಟೋ
	27	ಅಂಗರೇಖನಹಳ್ಳಿ ..	1	ಚಿಕ್ಕತಿಮ್ಮನಹಳ್ಳಿ	ಡಿಟೋ
	28	ಕಂದಕನಹಳ್ಳಿ ..	1	ಅಬಲದಹೊಸಹಳ್ಳಿ	ಡಿಟೋ
	29	ಹಿರಿಯಂಣನಹಳ್ಳಿ ..	1	ಗಂಡ್ಲವಾರಹಳ್ಳಿ	ಡಿಟೋ
			2	ದೊಂಟಲವಾರಹಳ್ಳಿ	ಡಿಟೋ
	30	ಬಡನಿಗನಹಳ್ಳಿ ..	1	ಕುರಕಾಲ್‌ಚಿಂಣೇನಹಳ್ಳಿ	ಡಿಟೋ
			2	ಹೊಸಕದರೇನಹಳ್ಳಿ	
			3	ಬುಡುಗದಾಸರಹಳ್ಳಿ	
			4	ಕಾಡೆವ್ಯಾಕಲವಾರಹಳ್ಳಿ	ಡಿಟೋ
	31	ಗೊಲ್ಲು ..	1	ವಕರೆವರ್ತಿ	ಡಿಟೋ
	32	ಕಾಮಶೆಟ್ಟಿಹಳ್ಳಿ ..	1	ಕೆಂಗನಾಯಕನಹಳ್ಳಿ	ಡಿಟೋ
	33	ಸಬ್ಬೇನಹಳ್ಳಿ ..	1	ಜೈಚಮ್ಮನಹಳ್ಳಿ	ಡಿಟೋ
	34	ಹಾರೋಬಂಡಿ ..	1	ಗುಂಡಪ್ಪನಹಳ್ಳಿ	
	35	ಈವರೇನಹಳ್ಳಿ ..	1	ಹರಿಹರಪುರ.	
ಚಿಕ್ಕಬಳ್ಳಾಪುರ.	36	ಗಂಗನಮಿದ್ದಿ ..	1	ಗ್ರಾಮ ಆವರಣ ಶಿವಾಯಿ ಉಳಿದ ಚಿಕ್ಕಬಳ್ಳಾಪುರ ಪೂರಾ	
	37	ತಿಪ್ಪೇನಹಳ್ಳಿ ..	1	ಜೊಡಗನಹಳ್ಳಿ	
	38	ಕಾಲವಾರ ..	1	ಕುರುಬರಹಳ್ಳಿ	ಬೇಚಿರಾಖ್
	39	ಪತ್ರೇನಹಳ್ಳಿ ..	1	ಪೂಜೇನಹಳ್ಳಿ	ಡಿಟೋ
	40	ತಂಡ್ಲಮರದಹಳ್ಳಿ ..	1	ವಂತಿಗುರುವಿನಹಳ್ಳಿ	ಡಿಟೋ
	41	ದಿಣ್ಣೆಹೊಸಹಳ್ಳಿ ..	1	ರಂಗಧಾಮನಕೆರೆ	

ಮಾಗಣಿ ಹೆಸರು.	ನಂಬರು.	ಅಸಲೀ ಗ್ರಾಮಗಳ ಹೆಸರು.	ನಂಬರು.	3ನೇ ಕಾಲಂನಲ್ಲಿ ಕಂಡ ಗ್ರಾಮಗಳಿಗೆ ಶೇರಿಸಲ್ಪಟ್ಟ ಗ್ರಾಮಗಳು.	ಷರಾ.
ಮಂಚೇನಹಳ್ಳಿ.	42	ಬಂದೆಮ್ಮನಹಳ್ಳಿ ..	1	ಕುಡಲ್ತಿಮ್ಮೇನಹಳ್ಳಿ	ಬೇಚಿರಾಖ್
	43	ಬಾಲಕುಂಟಹಳ್ಳಿ ..	1	ಕೊಟಗಾರಲಹಳ್ಳಿ	
			2	ಯಲಗಲಹಳ್ಳಿ	ಡಿಟ್ಟೋ
	44	ನಾಲ್ಕದರೇನಹಳ್ಳಿ ..	1	ಕೆರೆಕೆಳಗಿನಹಳ್ಳಿ	ಡಿಟ್ಟೋ
			2	ಮರಬಹಳ್ಳಿ	ಡಿಟ್ಟೋ
	45	ಮೋತಲೂತು ..	1	ವೆಂಕಟಾಪುರ	ಡಿಟ್ಟೋ
	46	ಜಕ್ಕಲಮಡಗು ..	1	ಗುಂಗರಲಹಳ್ಳಿ	
	47	ಕೊರಲಹಳ್ಳಿ ..	1	ಗಟ್ಟಕೆಳಗಿನಹಳ್ಳಿ	
	48	ತುಮಕಲಹಳ್ಳಿ ..	1	ತುಬುಕಿಬಸವನಹಳ್ಳಿ	ಡಿಟ್ಟೋ
	49	ಚಂದಲಪುರ ..	1	ಗವಿಗನಹಳ್ಳಿ	
	50	ಬನ್ನಿಕುಪ್ಪೆ ..	1	ಮಾರ್ವೆಹೊಸಹಳ್ಳಿ	ಡಿಟ್ಟೋ
	51	ತೀರ್ನಹಳ್ಳಿ ..	1	ಅಡೋಚಿಕ್ಕನಹಳ್ಳಿ	ಡಿಟ್ಟೋ
	52	ನಾರೆಮ್ಮನಹಳ್ಳಿ ..	1	ಭೈರನಾಯಕನಹಳ್ಳಿ	
	53	ನೂಗತಿಹಳ್ಳಿ ..	1	ಕೊಟಮರದಹಳ್ಳಿ	ಡಿಟ್ಟೋ
			2	ತಿಪ್ಪನಹಳ್ಳಿ	
			3	ಚಿಲ್ಲಾರೆಪ್ಪೈರು	
	54	ಯಲೆಹಳ್ಳಿ ..	1	ಚಿಕ್ಕರುಗುಂಬಿ	
ನಂದಿ.	55	ನಂದಿ ..	1	ಲಕ್ಷ್ಮಿಸಾಗರ ಅಮಾನಿಕೆರೆ	
	56	ಆನಘಟ್ಟ ..	1	ಗೋಪಿನಾಥಪುರ	ಬೇಚಿರಾಖ್
	57	ಕೂದುವಟ್ಟಿ ..	1	ಬಂಡೆಹೊಸಹಳ್ಳಿ	ಡಿಟ್ಟೋ
			2	ವೀರೇನಹಳ್ಳಿ	
	58	ಸುಲ್ತಾನ್‌ಪೇಟೆ ..	1	ಬಕರೇನಹಳ್ಳಿ	
			2	ವೀರಚಿಂತೇನಹಳ್ಳಿ	
			3	ನಾಗಸಂದ್ರ	
	59	ಸಿಂಗದಕದರೇನಹಳ್ಳಿ ..	1	ರಾಯಮದ್ದೇನಹಳ್ಳಿ	
	60	ಯಲವಹಳ್ಳಿ ..	1	ಗುಲಿಗನಹಳ್ಳಿ	
	61	ದೊಡ್ಡಕಿರುಗುಂಬಿ ..	1	ಚಲಮೇನಹಳ್ಳಿ	
			2	ನಂಬರ್ 53—8ಕ್ಕೆ ದಾಖಲಾದ ಚಿಲ್ಲಾರೆಪೈರು ಗ್ರಾಮದ ವಡದ ಮೂರು ಭಾಗಗಳು.	
ಆವತಿ.	62	ಹೊಸಹಳ್ಳಿ ..	1	ಚಿಕ್ಕಮರಳಿ (ನಂದಿಸಂಮತು)	
	63	ಪಾಸರಹಳ್ಳಿ ..	1	ಅಸಗೊಂಡಹಳ್ಳಿ	ಬೇಚಿರಾಖ್
	64	ದೊಡ್ಡಸಾಗರಹಳ್ಳಿ ..	1	ಸಿಂಗಾವಾರ	
	65	ತೇಲಗೆರೆ ..	1	ದಿಬ್ಬೇಶ್ವರ	
	66	ಮಿಸಿಗನಹಳ್ಳಿ ..	1	ಗೇರಹಳ್ಳಿ	ಡಿಟ್ಟೋ

ತಾರೀಖು 2ನೇ ಆಗಸ್ಟ್ 1884.

ನಂ. 103—ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ಮೇಲ್ಕಂಡ ಇಸ್ತಿಹಾರ್ನಾಮೆಯಿಂದ ವರ್ಗಾವರ್ಗಿ ಮಾಡಲ್ಪಟ್ಟ ಗ್ರಾಮಗಳ ತಖ್ತೆಗೆ ಸೇರಬೇಕಾದ ಇದರಡಿ ಕಂಡ ಪಟ್ಟೀಯು ಸರ್ವರ ತಿಳುವಳಿಕೆ ಬಗ್ಯೆ ಇದರಿಂದ ಪ್ರಕಟಿಸಲ್ಪಡುತ್ತೆ:—

ನಂಬರ್.	ಗ್ರಾಮಗಳ ಹೆಸರು.	ವರ್ಗಮಾಡಲ್ಪಟ್ಟದ್ದು.	
		ತಾಲ್ಲೂಕಿನಿಂದ.	ತಾಲ್ಲೂಕಿಗೆ.
1	ತಪಸಿಪುರಾ	ಚಿಕ್ಕಬಳ್ಳಾಪುರದಿಂದ	ದೊಡ್ಡಬಳ್ಳಾಪುರಕ್ಕೆ.
2	ಅಜ್ಜಿಯಾರಲಹಳ್ಳಿ		

ತಾರೀಖು 5ನೇ ಆಗಸ್ಟ್ 1884.

ನಂ. 104.—ಲೇಟ್ ಚೀಫ್ ಕಮ್ಮಿಷನರವರ 1871ನೇ ಇಸವಿ ಮೇ 18ನೇ ಮಕ್ಕು ಮಿನ 69ನೇ ನಂಬರ್ ಇಸ್ತಿಹಾರ್ನಾಮೆಯನ್ನು ಬದಲಾಯಿಸಿ ಮತ್ತು ಬೆಂಗಳೂರು ಷಹರ್‌ನಲ್ಲಿ ಮ್ಯುನಿಸಿಪಲ್ ಕೆಲಸಗಳನ್ನು ನಿರ್ವಹಿಸುವದಕ್ಕೋಸ್ಕರವಾದ ರೆಗ್ಯೂಲೇಷನಿನ 4ನೇ ಸೆಕ್ಷನ್ ಅನುಸಸಿ, ಸೆಂಟ್ರಲ್ ಕಾಲೇಜಿನ ಮುಖ್ಯ ಅಸಿಸ್ಟೆಂಟರು, ಆರಡರ್ನೇಶಿನ ಕಮ್ಮಿಸಾರಿಯವರಿಗೆ ಬದಲಾಗಿ, ಬೆಂಗಳೂರು ಷಹರ್ ಮ್ಯುನಿಸಿಪಲ್ ಬೋರ್ಡಿನ ಯಕ್ಸ್ ಆಫಿಷಿಯೋ (ಯಾನೆ ಉದ್ಯೋಗತಃ) ಮೆಂಬರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 8ನೇ ಆಗಸ್ಟ್ 1884.

ನಂ. 105.—ತುಮಕೂರು ಡಿಸ್ಟ್ರಿಕ್ಟು ಚಿಕ್ಕನಾಯಕನಹಳ್ಳೀ ತಾಲ್ಲೂಕು ಅಮಲ್ದಾರ್ ರಾಮಸ್ವಾಮಯ್ಯನವರಿಗೆ, ಅವರು ಉಪಯೋಗಿಸಿಕೊಂಡ ತಾರೀಖು ಲಾಗಾಯತು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಳಿಯಾರದ ಡೆಪ್ಯುಟಿ ಅಮಲ್ದಾರ್ ಶ್ರೀನಿವಾಸರಾಯರು, 5ನೇ ಗ್ರೇಡ್ ಆ್ಯಕ್ಟಿಂಗ್ ಅಮಲ್ದಾರರಾಗಿ ಮೊಕರರ್ ಮಾಡಲ್ಪಟ್ಟು, ರಾಮಸ್ವಾಮಯ್ಯನವರ ಗೈರ್ ಹಾಜರೀಯಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ, ಅವರ ಕೆಲಸದೊಂದಿಗೆ ಚಿಕ್ಕನಾಯಕನಹಳ್ಳೀ ತಾಲ್ಲೂಕಿನ ಚಾರ್ಜು ವಹಿಸಿ ಯಿರತಕ್ಕದ್ದು.

ತಾರೀಖು 19ನೇ ಆಗಸ್ಟ್ 1884.

ನಂ. 106.—ಮೈಸೂರು ಮೆಡಿಕಲ್ ಇಲಾಖೆಗೆ ಸೇರಿದ ಅನರೇರಿ ಸರ್ಜನ್ ಮ|| ಜೆ. ಸಾಸ್‌ರ್ನೆಯವರು, ಶಿವಮೊಗ್ಗಾ ಡಿಸ್ಟ್ರಿಕ್ಟಿನ ಸಿವಿಲ್ ಸರ್ಜನರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 11ನೇ ಆಗಸ್ಟ್ 1884.

ನಂ. 107.—ಶಿವಮೊಗ್ಗಾ ಡಿಸ್ಟ್ರಿಕ್ಟು ಖಜಾಂಚಿ ನಾಗೇಶರಾಯರು, ಮತ್ತೊಂದು ಹುಕ್ಕುಂ ಕೊಡುವ ಪರಿಯಂತರ ಶಿವಮೊಗ್ಗಾ ತಾಲ್ಲೂಕಿನ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆ್ಯಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್ಮಾಡಲ್ಪಟ್ಟಿರುತ್ತಾರೆ.

ಬಮೋಜೀಬ್ ಹುಕ್ಕುಂ,
ಆರ್. ವಿಜಯೀಂದ್ರರಾವ್,
ಸೆಕ್ರೆಟೇರಿ.

ಮಿಲಿಟೇರಿ ಇಲಾಖಾ.

ಇಸ್ತಿಹಾರ್ ನಾಮಾ.

ತಾರೀಖು 12ನೇ ಮಾಹೆ ಆಗಸ್ಟ್ ಸನ್ 1884ನೇ ಇಸವಿ ಮೊಕ್ಕಾಂ ಬೆಂಗಳೂರು.

ಸವಾರ್ ಮತ್ತು ಬಾರ್ ಇಲಾಖಾ ನೌಕರಿಯಲ್ಲಿ ದಾಖಲಾಗತಕ್ಕದ್ದಕ್ಕಾಗಿ ಮಿಲಿಟೇರಿ ಸಿಕ್ರಿಟೇರೀ ಸಾಹೆಬರವರ ಆಫೀಸನಲ್ಲಿ ರಿಜಿಸ್ಟರ್ ಆಗಿರತಕ್ಕ ವಿಶಿಷ್ಟ ವುಮೇದವಾರರುಗಳೂ ಇಂತಿಹಾರ್ ಬಗ್ಯೆ ಈ ಕೆಳಗೆ ನಮೂದಿಸಿರುವ ಸ್ಥಳಗಳು ಮತ್ತು ತಾರೀಖುಗಳಲ್ಲಿ ಹಾಜರಾಗತಕ್ಕದ್ದು, ಆಗ್ಯೆ ಅವರ ಹಕ್ಕುದಾರಿ ಬಾಬ್ ವೆವಸ್ಥೆ ಮಾಡಲಾಧೀತ.

ಹಾಗೆ ಸದರೀ ತಾರೀಖುಗಳಲ್ಲಿ ಹಾಜರಾಗಲು ತಪ್ಪುವ ಯಿಲ್ಲಾ ವುಮೆದವಾರಗಳ ಹೆಸರುಗಳೂ ರಿಜಿಸ್ಟರನಿಂದ ತೆಗದು ಹಾಕಲ್ಪಡುತ್ತೆ.

ಸ್ಥಳಾ.	ತಾರೀಖು.
1 ಬೆಂಗಳೂರು. ಮಿಲಟೇರಿ ಸೆಕ್ರಟೇರೀ ಸಾಹೆಬರವರ ಅಫೀಸು	ಸವಾರ್ ವುಮೇದ್‌ವಾರು. 8ನೇ ಶಪ್ಟಂಬರ್ ಸನ್ 1884ನೇ ಇಸವಿ ಸೋಮವಾರ. ಬಾರ್ ವುಮೇದವಾರು 9ನೇ ಶಪ್ಟಂಬರ್ ಸನ್ 1884ನೇ ಇಸವಿ ಮಂಗಳವಾರ.
2 ಮೈಸೂರು. ಮಿಲಟೇರೀ ಸೆಕ್ರಟೇರೀ ಸಾಹೆಬರವರ ಕ್ಯಾಂಪ್ ಅಫೀಸು	ಸವಾರ್ ವುಮೇದ್‌ವಾರು 1ನೇ ಅಕ್ಟೋಬರ್ ಸನ್ 1884ನೇ ಇಸವಿ ಬುಧವಾರ. ಬಾರ್ ವುಮೇದ್‌ವಾರು 2ನೇ ಅಕ್ಟೋಬರ್ ಸನ್ 1884ನೇ ಇಸವಿ ಗುರುವಾರ.

ಎ. ಸಿ. ಹೇ, ಕರ್ನಲ್,
ಆ॥ ಮಿಲಿಟೇರೀ ಸೆಕ್ರಟೇರಿ.

ಮೈಸೂರ ಗೆಜೆಟ

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಆಗಸ್ಟ್ ತಾ॥ 16, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರುವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ರೆಸಿಡೆಂಟರ ಇಲಾಖಾ.

ಇಸ್ತಿಹಾರ್ ನಾಮೆ.

ಫಿನಾನ್ಷಿಯಲ್ ಇಲಾಖಾ.

1882ನೇ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸಿನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್‌ಟ್ರೋಲರ್.

ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟಲ್‌ಮೆಂಟ್ ಇಲಾಖಾ.

ನಂಬರು 332. ತಾರೀಖು 9ನೇ ಆಗಸ್ಟು 1884.

ಸಕಲಜನಗಳಿಗೂ ತಿಳಿಯುವ ಬಗ್ಯೆ ಯಿದರಿಂದ ಪ್ರಕಟಿಸಲ್ಪಡುವದೇನಂದರೆ, 1884ನೇ ಇಸವಿ ನವೆಂಬರ್ 1ನೇ ಮರ್ಕ್ಕಂ ಲಾಗಾಯಿತು ಪ್ರಾರಂಭಿಸುವ ಸರ್ವೆ ಕೆಲಸದ ಕಾಲದಲ್ಲಿ ಇದರಡಿ ನಮೂದಿಸುವ ತಾಲ್ಲೂಕುಗಳಲ್ಲಿ ಮೆಜರಿಂಗ್ ಯಾನೆ ಮೋಜಣಿ, ಕ್ಲಾಸಿಫಿಕೇಷನ್, ಯಾನೆ ಪ್ರತಿಬಂದಿ ಮತ್ತು ಸೆಟಲ್‌ಮೆಂಟ್ ಯಾನೆ ತರಂ ಫೈಸಲ್ ಕೆಲಸಗಳು ನಡಿಸಲ್ಪಡುವವು.

ಡಿಸ್ಟ್ರಿಕ್ಟು.	ತಾಲ್ಲೂಕು.	ಕೆಲಸ ಷುರು ಆಗತಕ್ಕ ಷುಮಾರ್ ತಾರೀಖು.
	ಮೋಜಣಿಯು.	
ಕೋಲಾರ ..	ಬವರಿಂಗಪೇಟೆ ..	5ನೇ ನವೆಂಬರ್ 1884.
ಕೋಲಾರ ..	ಕೋಲಾರ ..	ಡಿಟೋ
ಮೈಸೂರು ..	ನಾಗಮಂಗಲ್ ..	ಡಿಟೋ
.. ..	ಮೈಸೂರು ..	ಡಿಟೋ
.. ..	ಶ್ರೀರಂಗಪಟ್ಣ ..	ಡಿಟೋ
.. ..	ಮಂಡ್ಯ ..	1ನೇ ಫಿಬ್ರುವರೀ 1885.
	ಪ್ರತಿಬಂದಿಯು.	
ಕೋಲಾರ ..	ಮುಳಬಾಗಲ್ ..	5ನೇ ನವೆಂಬರ 1884
.. ..	ಚಿಂತಾಮಣಿ ..	
ಮೈಸೂರು ..	ಅತ್ತಿಕುಪ್ಪಾ ..	ಡಿಟೋ
ಬೆಂಗಳೂರು ..	ಹೊಸಕೋಟೆ ..	1ನೇ ಮೇ 1885.
	ತರಂಫೈಸಲ್.	
ಮೈಸೂರು ..	ಚನ್ನರಾಯಪಟ್ಣ ..	ಫಿಬ್ರುವರೀ 1885
.. ..	ಎಡತೊರೆ (ಸರ್ವೆ ಜಮಾಬಂದಿಯು ಲಗಾವು ಆಗದೇಇದ್ದ ಭಾಗವು ..	ಮಾರ್ಚೀ 1885.
.. ..	ಹೊಳೇನರಸೀಪುರ (ಎಡತೊರೇ ತಾಲ್ಲೂಕಿನಿಂದ ವರ್ಗವಾಗಿ ಬಂದ ಗ್ರಾಮಗಳು) ..	
ಕೋಲಾರ ..	ಬಾಗೇಪಲ್ಲಿ ..	ಏಪ್ರೀಲ್ 1885.
.. ..	ಶಿಡ್ಲಗಟ್ಟಾ ..	ಮೇ 1885.
ಬೆಂಗಳೂರು ..	ಬೆಂಗಳೂರು * ..	ಜೂನ್ 1885.
.. ..	ದೊಡ್ಡಬಳ್ಳಾಪುರ * ..	
.. ..	ನೆಲಮಂಗಲ್ * ..	ಡಿಟೋ
ಕೋಲಾರ ..	ಚಿಕ್ಕಬಳ್ಳಾಪುರ * ..	

* ಇವುಗಳು ಲೇಟ್ ದೇವನಹಳ್ಳಿ ತಾಲ್ಲೂಕಿನ ಗ್ರಾಮಗಳಿಗೆ ಅನ್ವಯಿಸುತ್ತವೆ.

ಟೀಪು—ಸೆಟ್ಲಾದ, ಯಾನೆ ತರಂ ಫೈಸಲಾದ, ಕಾಫಿ ಡಿಸ್ಟ್ರಿಕ್ಟುಗಳಲ್ಲಿ ಚಿಲ್ಲರೆ ಕೆಲಸವು ಕೂಡಾ ಚಲಾಯಿಸಲ್ಪಡುವದು.

ಜೆ. ಪಿ. ಗ್ರ್ಯಾಂಟ್,
ಸೂ|| ರೆ|| ಸರ್ವೆ ಮತ್ತು ಸೆಟಲ್‌ಮೆಂಟ್, ಮೈಸೂರ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್‌ಜಡ್ಜೀಯವರ ಕೋರ್ಟಿನಲ್ಲಿ—

1884ನೇ ಇಸವಿ ಅರ್ಜೀ ನಂಬರ 136.

ಮೃತಪಟ್ಟ ವೆಂಕಟರಾಯರ ಆಸ್ತಿ ವಿಷಯದಲ್ಲಿ—

ಅರ್ಜೀದಾರು ಬವರಿಂಗಪ್ಯಾಟೆ ತಾಲ್ಲೂಕು ಹಂಗಳದ ರಾಮಪ್ಪನವರ ಮಗ ಭಾಸ್ಕರ ಶೀತಾರಾಮಯ್ಯ, ಮೃತಪಟ್ಟ ಸದರೀ ವೆಂಕಟರಾಯರಿಗೆ ತಮ್ಮನು ಆಗಬೇಕೆಂಬ ಹಕ್ಕುದಾರೀ ಮೇಲೆ, ಬವರಿಂಗಪ್ಯಾಟೆ ತಾಲ್ಲೂಕು ಹಂಗಳದ ಸ್ಥಳದ ಭಾಸ್ಕರ ಶೀತಾರಾಮಯ್ಯನವರು ಹಂಗಳದ ವಾಸಸ್ಥರಾಗಿ ಮೃತಪಟ್ಟ ವೆಂಕಟರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಭಾಸ್ಕರ ಶೀತಾರಾಮಯ್ಯನವರ ಅರ್ಜೀಯನ್ನು 1884ನೇ ಇಸವಿ ಶಪ್ಟಂಬರ್ ತಿಂಗಳು ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್‌ನಿಶಿ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಥೆ.

1884ನೇ ಇಸವಿ ಆಗಸ್ಟು ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮದಸ್ತಖತ್ತೊಡನೆ ಕೊಡೋಣಾಗಿಥೆ.

ಸಿ. ಕ್ರೆಸ್,
ಸಬ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ 265.

ಮೃತಪಟ್ಟ ಪಟೇಲ್ ಬೆಟ್ಟೇಗವುಡನ ಆಸ್ತಿ ವಿಷಯದಲ್ಲಿ—

ಡಿಟೋಯವನ ಮಗ ಬೆಟ್ಟ ಮೈನರ್, ಗಾರ್ಡಿಯನ್ ಇವನ ತಾಯಿ ಅರ್ಜೀದಾರಳಾದ ದ್ಯಾವಮ್ಮ, ಮೃತಪಟ್ಟ ಸದರೀ ಪಟೇಲ್ ಬೆಟ್ಟೇಗವುಡನಿಗೆ ಹೆಂಡತಿ ಮತ್ತು ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಶ್ರೀರಂಗಪಟ್ಟಣದ ತಾ|| ಕ್ಯಾತನಹಳ್ಳಿ ಹೋಬಳಿ ಮಂಚನಹಳ್ಳಿ ಗ್ರಾಮದ ಸ್ಥಳದ ಬೆಟ್ಟ ಮೈನರ್, ಗಾರ್ಡಿಯನ್ ದ್ಯಾವಮ್ಮನು ಡಿಟೋ ಸ್ಥಳದ ವಾಸಸ್ಥನಾಗಿ ಮೃತಪಟ್ಟ ಬೆಟ್ಟೇಗವುಡನ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾರೆ.

ಸದರೀ ದರಖಾಸ್ತುದಾರರಾದ ಬೆಟ್ಟ ಮೈನರ್, ಗಾರ್ಡಿಯನ್ ದ್ಯಾವಮ್ಮ ಇವರ ಅರ್ಜಿಯನ್ನು 1884ನೇ ಆಗಸ್ಟು ತಿಂಗಳು ತಾರೀಖು 29ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಟೇಲ್ ಬೆಟ್ಟೇಗವುಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಥೆ.

ಸರ್ 1884ನೇ ಇಸವಿ ಅರ್ಜೀ ನಂಬರ 266.

ಮೃತಪಟ್ಟ ಕುಂಬಾರ ಚಿಂತಿ ರಾಮಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಡಿಟೋಯವನ ಮಗನಾದ ವೆಂಕಟಸಾಮಿ, ಮೃತಪಟ್ಟ ಸದರೀ ಕುಂಬಾರ ಚಿಂತಿ ರಾಮಯ್ಯನಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ತಾಲ್ಲೂಕು ಪಡವಾರಹಳ್ಳಿ ಸ್ಥಳದ ವೆಂಕಟಸಾಮಯ್ಯ ಸದರೀ ಸ್ಥಳದ ವಾಸಸ್ಥನಾಗಿ ಮೃತಪಟ್ಟ ರಾಮಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ವೆಂಕಟಸಾಮಯ್ಯನ ಅರ್ಜೀಯನ್ನು 1884ನೇ ಇಸವಿ ಆಗಸ್ಟು ತಿಂಗಳು ತಾರೀಖು 29ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕುಂಬಾರ ಚಿಂತಿ ರಾಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಥೆ.

1884ನೇ ಇಸವಿ ಅರ್ಜೀ ನಂಬರ್ 296.

ಮೃತಪಟ್ಟ ಶಿವಾಚಾರದ ಮಾರಯ್ಯನ ಆಸ್ತಿ ವಿಷಯದಲ್ಲಿ—

ಅರ್ಜಿದಾರಳಾದ ಡಿಟೋಯವನ ಹೆಂಡತಿ ಬಸಮ್ಮನು, ಮೃತಪಟ್ಟ ಸದರೀ ಮಾರಯ್ಯನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಗುಂಡ್ಲು ತಾ॥ ತೆರಕಣಾಂಬಿ ಹೋಬಳಿ ಬೊಮ್ಮನಹಳ್ಳಿ ಸ್ಥಳದ ಬಸಮ್ಮನು ಡಿಟೋ ಸ್ಥಳದ ವಾಸಸ್ಥನಾಗಿ ಮೃತಪಟ್ಟ ಮಾರಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 300 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಬಸಮ್ಮನ ಅರ್ಜೀಯನ್ನು 1884ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ಮಾರಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಸ್ವರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಥೆ.

1884ನೇ ಇಸವಿ ಜುಲೈ ತಿಂಗಳು 30ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಥೆ.

ವಿ. ಎನ್. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟ್ಸು ಜಡ್ಜ್.

ಮೈಸೂರು ಡಿಸ್ಟ್ರಿಕ್ಟು ಹೊಳೇನರಸೀಪುರದ ಮುನಸೀಫ್ ಕೋರ್ಟಿನಲ್ಲಿ.

ತಿರಮಕೂಡ್ಲು ನರಸೀಪುರದ ತಾಲ್ಲೂಕು ಮಳವಳ್ಳಿಯಲ್ಲಿರುವ ಹೊಳೇನರಸೀಪುರ ತಾಲ್ಲೂಕು ಗುರ್ನಹಳ್ಳಿ ಗುಂಡಪ್ಪನವರಿಗೆ, ತಿಳಿಯಪಡಿಸುವದೇನಂದರೆ,—ಹೊಳೆ ನರಸೀಪುರದಲ್ಲಿರುವ ಕುಂಭಕೋಣ ಸುಬ್ಬಣ್ಣಾಚಾರು ನಿಮ್ಮ ಮೇಲೆ 1880ನೇ ಇಸವಿ ಫೆಬ್ರವರೀ 18ನೇ ಮುಕ್ಕಾಂ ದಸ್ತೈವಜು ಬಗೆ 240 ರೂಪಾಯಿಗಾಗಿ ತಂದ ದಾವೆಯು, ಈ ಕೋರ್ಟು ಚಾಲ್ತೀ ಇಸವಿ ಸಿವಿಲ್ 315ನೇ ನಂಬರಿಗೆ ದಾಖಲಾಗಿ 1884ನೇ ಇಸವಿ ಸೆಪ್ಟಂಬರ್ 6ನೇ ತಾರೀಖಿಗೆ ಹಿಯರಿಂಗ್ ಯಿಟ್ಟಿರುತ್ತೇಯಾಗಿ ಆ ತಾರೀಖಿಗೆ ನೀವಾಗಲಿ ನಿಮ್ಮ ಪ್ಲೀಡರಾಗಲಿ ಹಾಜರಾಗಿ ಜವಾಬ್ ಕೊಡದೇ ಹೋದಲ್ಲಿ ಮೊಕದ್ದಮೆಯು ನಿಮ್ಮ ಗೈರ್ ಹಾಜರಿಯಲ್ಲಿ ಫೈಸಲ್ ಮಾಡಲ್ಪಡುತ್ತೆ, ಪ್ರಕಾರಾಂತರ ಸರ್ವಿಸ್ ಅಪ್ಪಣೆ ಆಗಿರುವ ಮೇರಿಗೆ ಸಾಲ ಕೊಂಚ ದೊಡ್ಡ ಮೊಬಲಗಾಗಿರುವದ್ದರಿಂದ ಈ ಪ್ರಕಟನೆಯು ಮಾಡಲ್ಪಟ್ಟಿಥೆ.

1884ನೇ ಇಸವಿ ಆಗಸ್ಟು 7ನೇ ತಾರೀಖಿನಲ್ಲಿ ಕೋರ್ಟು ಮೋಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಥೆ.

ಸಿ. ಸುಬ್ಬರಾವ್,
ಮುನ್ಸೀಫ್.

ನಂ. 6. ತಾರೀಖು 4ನೇ ಆಗಸ್ಟು 1884.

ಇದರಿಂದ ತಿಳಿಯಪಡಿಸುವದೇನಂದರೆ, ಹೊಳೇನರಸೀಪುರದ ಸಬ್ ರಿಜಿಸ್ಟ್ರೀ ಆಫೀಸಿನಲ್ಲಿ ಬೇವಾರಸಾಗಿಯಿರತಕ್ಕ ಕೆಳಗೆ ವಿವರಿಸೋಣಾದ ದಸ್ತೈವಜನ್ನ ಹಾಜರ್ ಮಾಡಿದವರೇ ಆಗಲೀ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾದ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರ್ರೇ ಯಾಗಲೀ ಈ ನೋಟೀಸ್ ತಾರೀಖು ಲಗಾಯತು ಒಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸು ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಶಪಡಿಸಲ್‌ಪಡುವದು.

ನಂಬರು		ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
39	1881—82	ನರಸೀಪುರದ ತಾಲ್ಲೂಕು ಸೂರನಹಳ್ಳಿ ಗ್ರಾಮದಲ್ಲಿರುವ ಸ್ಮಾರ್ತ ಬ್ರಾಹ್ಮಣ ಕೇಶವಯ್ಯನ ಹೆಂಡತಿ ಜಿಥಾಯಿತು ಜೀವನದ ನರಸಮ್ಮ	ಲೇಟ್ ಅರಕಲಗೂಡು ತಾಲ್ಲೂಕು ಗುಬ್ಬಿ ವಾಸಸ್ಥ ಸ್ಮಾರ್ತ ಬ್ರಾಹ್ಮಣ ಗೋಣಿಬೀಡು ಸುಬ್ಬಾಭಟ್ಟರ ಮಗ ವೈದೀಕ ವೃತ್ತಿ ಜೀವನದ ನಂಜಪ್ಪ.	27—7—82	27—7—82	1,183—0—10 ರೂಪಾಯಿನ ಜಮೀನ್ ಕ್ರಯಪತ್ರ.

ತಾರೀಖು 24ನೇ ಜುಲೈ 1884.

ಇದರಿಂದ ತಿಳಿಯಪಡಿಸುವದೇನಂದರೆ, ತಿರಂಕೂಡ್ಲು ನರಸೀಪುರ ಮತ್ತು ಮೈಸೂರು ಸಬ್‌ರಿಜಿಸ್ಟ್ರೀ ಆಫೀಸಗಳಲ್ಲಿ ಬೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತೈವಜುಗಳನ್ನು ಹಾಜರ್ಮಾಡಿದವರೇ ಆಗಲಿ ಅಥವಾ ವಾಪಸ ಪಡಿಯಲಿಕ್ಕೆ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರ್ರೆ ಆಗಲೀ ಈ ನೋಟೀಸ್ ತಾರೀಖು ಲಾಗಾಯಿತು ವೊಂದು ತಿಂಗಳವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅವುಗಳನ್ನು ವಾಪಸ ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷ್ಣ ಆಕ್ಟು 85ನೇ ಸೆಕ್ಷ್ಣ ಅನುಸರಿಸಿ ಅವುಗಳು ನಾಶ ಪಡಿಸಲ್ಪಡುವವು.

ನಂಬರ.	ದಸ್ತಾವೇಜು, ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟರಾದ ತಾರೀಖು.	ದಸ್ತಾವೇಜಿನ ಸ್ವಭಾವ ವ ಕಿಮ್ಮತು.
118 / 1882—83	ಮೈಸೂರು ಕಿಲ್ಲೇಯಲ್ಲಿರುವ ಕೊಳತೂರು ಲಿಂಗಾಪಂತರ ಹೆಂಡತಿ ಪುಟ್ಟಮ್ಮಣ್ಣಮ್ಮ	ತಲ್ಕಾಡು ತಾಲ್ಲೂಕು ಹಾಲೀ ತಿರಂಕೂಡ್ಲು ನರಸೀಪುರ ತಾಲ್ಲೂಕು ಗರ್ಗೇಶ್ವರಿಯಲ್ಲಿರುವ ಫಕೀರ್ ಅಹಮ್ಮದಿಸಾಬರ ಮಗ ಚಿಕ್ಕ ಯಿಮಾಂಸಾಬಿ	1—5—82	1—5—82	10 ರೂಪಾಯಿನ ಕ್ರಯಪತ್ರ.
151 / 1882—83	ತಿರಂಕೂಡ್ಲು ನರಸೀಪುರ ತಾಲ್ಲೂಕು ಪಿಳ್ಳಹಳ್ಳಿಯಲ್ಲಿರುವ ಅಂಕೇಗೌಡನ ಮಗ 1ನೇ ಪುಟ್ಟಂಣ 2ನೇ ಭೈರಂಣ	ತಿರಂಕೂಡ್ಲು ನರಸೀಪುರ ತಾಲ್ಲೂಕು ಜೋಡೀ ಅಶ್ವತ್ಥಪುರದ ಅಗ್ರಹಾರದಲ್ಲಿರುವ ರಾಘವೇಂದ್ರಾಚಾರ್ರು ಮಕ್ಕಳು ಶ್ರೀನಿವಾಸಾಚಾರ್	9—5—82	9—5—82	14—4—0 ರೂಪಾಯಿನ ಗುತ್ತಿಗೆ ದಸ್ತಾವೇಜು.
157 / 1882—83	ತಿರಂಕೂಡ್ಲು ನರಸೀಪುರ ತಾಲ್ಲೂಕು ಚಿದರವಳ್ಳಿಯಲ್ಲಿರುವ ಬಲಗೈಜಾತಿ ಚಿಕ್ಕತಿದ್ದನ ಮಗ ಕುಳ್ಳಮಾದ	ತಿರಂಕೂಡ್ಲು ನರಸೀಪುರ ತಾಲ್ಲೂಕು ಚಿದರವಳ್ಳಿಯಲ್ಲಿರುವ ಮಾದಶೆಟ್ಟಿಮಗ ವೆಂಕಟಶೆಟ್ಟಿ	11—1—82	11—5—82	95 ರೂಪಾಯಿನ ಭೋಗ್ಯಪತ್ರ.
282 / 1882—83	ತಿರಂಕೂಡ್ಲು ನರಸೀಪುರ ತಾಲ್ಲೂಕು ಗರ್ಗೇಶ್ವರಿಯಲ್ಲಿರುವ ಸ್ಮಾರ್ತ ಬ್ರಾಹ್ಮಣ ಕಿತ್ತೂರುಸುಬ್ಬಯ್ಯನ ಹೆಂಡತಿ ಲಕ್ಷ್ಮಮ್ಮ	ತಿರಂಕೂಡ್ಲು ನರಸೀಪುರ ತಾಲ್ಲೂಕುಗರ್ಗೇಶ್ವರಿಯಲ್ಲಿರುವ ವೈಷ್ಣವ ಬ್ರಾಹ್ಮಣ ವೆಂಕೋಬರಾವ್	13—6—82	13—6—82	100 ರೂಪಾಯಿನ ಆಧಾರ ಪತ್ರ.
635 / 1881—82	ಮೈಸೂರು ಯಿಟ್ಟಿಗೆ ಗೂಡಿನಲ್ಲಿ ಯಿರುವ ಪಂಚಾಳ ಜಾತಿ ಕಾತಮೇಸ್ತ್ರಿ ಮಗ ಚಾಮುಂಡಾಚಾರಿ 1 ನಾರಣಾಚಾರಿ 1 ಲಕ್ಷ್ಮಣಾಚಾರಿ 1	ಮೈಸೂರು ಯಿಟ್ಟಿಗೆ ಗೂಡಿನಲ್ಲಿರುವ ಪಂಚಾಳ ಜಾತಿ ಕಾತಮೇಸ್ತ್ರಿ ಮಗ ಚಾಮುಂಡಾಚಾರಿ 1 ನಾರಣಾಚಾರಿ 1 ಲಕ್ಷ್ಮಣಾಚಾರಿ 1	20—1—82	23—1—82	90 ರೂಪಾಯಿನ ವಿಭಾಗ ಪತ್ರ.
556 / ಡಿಟೋ	ಮೈಸೂರು ಬಸವನ ಮಹಲೇಲಿರುವ ಶಿವಾಚಾರದ ವ್ಯಾಪಾರದ ಜೀವನದ ಯುಡೂರಯ್ಯನಮಗಪುಟ್ಟಂಣ	ಮೈಸೂರು ಬಸವನಮಹಲೇಲಿರುವ ಅಕ್ಕಸಾಲೆ ಜಾತಿ ಸೊನಾರು ಕಸಬು ಚನ್ವೀರಪ್ಪನ ಮಗ ವೀರಂಣ	15—12—81	17—12—81	150 ರೂಪಾಯಿನ ಭೋಗ್ಯ ಪತ್ರ.
475 / ಡಿಟೋ	ಮೈಸೂರು ಬಸವನ ಮಹಲೇಲಿ ಯಿರುವ ಮುಸಲ್ಮಾನ್ ಚೌದ್ರಿ ಲಾಲಾಮಿಯ್ಯನ ಮಗ ಮಹಮದ್ ಖಾಸಿಂಸಾಬಿ	ಮೈಸೂರುನಲ್ಲಿ ಯಿರುವ ದೇಶದ ಯಜಮಾನ್ ವೀರಂಣಶೆಟ್ಟರ ಮಗ ರುದ್ರಶೆಟ್ಟಿ ಶಿವಾಚಾರ ಜಾತಿ	29—8—81	21—11—81	ಮಾಹೆ 1ಕ್ಕೆ 8 ರೂಪಾಯಿ ಕೊಡತಕ್ಕ ಅಂಗಡಿಬಾಡಿಗೆ ಕರಾರು.

ಅಬ್ದುಲ್‌ಖಾದರ್, ಕೆ. ಬಿ., ರಿಜಿಸ್ಟ್ರಾರ್.

ಮೈಸೂರು ಸ್ಟೇಟ್ ರೈಲ್ವೆ.

ಪ್ರಕಟನೆ.

ಬೆಂಗಳೂರು—ತುಮಕೂರು ರೈಲ್ವೆ ತೆರಿಯೋಣವು.

ಸನ್ 1884ನೇ ಇಸವಿ ಆಗಸ್ಟು ತಾರೀಖು 11ನೇ ಲಾಗಾಯತು ಬೆಂಗಳೂರಿಂದ 43 ಮೈಲಿ ಧೂರದಲ್ಲಿ ಇರುವ ತುಮಕೂರುವರಿಗೆ ರೈಲ್‌ವೆ ಭಂಡಿಗಳ ಮೇಲೆ ಪ್ರಯಾಣಸ್ಥರು ಅವರ ಲಗ್ಗೇಜ್, ಕುದುರೆಗಳು, ಭಂಡಿಗಳು, ನಾಯಿಗಳು, ಪಾರಸಲ್‌ಗಳು ಮತ್ತು ಗೂಡ್ಸು ಯಾನೆ ಸಾಮಾನುಗಳು ಮೈಸೂರು ರೈಲ್‌ವೆಯ ತಮಾಂ ಸ್ಟೇಷನ್‌ಗಳಿಂದ ಸಾಗಿಸಲ್ಪಡುವವು.

ತುಮಕೂರು ಲೈನ್‌ನಲ್ಲಿ ಇರತಕ್ಕ ಸ್ಟೇಷನ್‌ಗಳು ಯಾವವಂದರೆ:—

ಬೆಂಗಳೂರು, ಬಾಣಾವಾರ, ಗೊಲ್ಲಹಳ್ಳಿ, ದೊಡ್ಡಬಲೆ, ನಿಡವಂಡ, ಹಿರೇಹಳ್ಳೀ, ತುಮಕೂರು.

ಸ್ಟೇಷನ್‌ಗಳು.		ಪ್ರಯಾಣಸ್ಥರ ಭಂಡಿ.	ಚಾರ್ಜುಗಳು.								
			೧ನೇ ತರಗತಿ.			೨ನೇ ತರಗತಿ.			೩ನೇ ತರಗತಿ.		
		ಬೆಳಿಗ್ಯೆ.									
ಬೆಂಗಳೂರು	ಹೊರಡುವದು	7–30	2	11	0	1	5	6	0	10	9
ತುಮಕೂರು	ಸೇರುವದು	10–37									
		ಸಾಯಿಂತ್ರ.									
ತುಮಕೂರು	ಹೊರಡುವದು	2–18	2	11	0	1	5	6	0	10	9
ಬೆಂಗಳೂರು	ಸೇರುವದು	5–25									

ವಿಶೇಷ ತಪಶೀಲುಗಳು ಪ್ರತ್ಯೇಕ ಇಸ್ತಿಹಾರಿನಲ್ಲಿ ಛಾಪಿಸಲ್ಪಟ್ಟಿರುತ್ತೆ.

ಬೆಂಗಳೂರು,
4ನೇ ಆಗಸ್ಟು 1884ನೇ ಇಸವಿ.

ಏ. ರೀಡ ಬೀಚರ,
ಮ್ಯಾನೆಜರ.

ಕ್ರಿಸ್ಟಲ್ಲೈನ್ ಸಿಂಕೋನಾ ಫೆಬ್ರಿಪ್ಯೂಜ್.

ಗವರ್ನಮೆಂಟ್ ಕೋಠಿಯಲ್ಲಿ ಕೆಂಪುವರ್ಣದ ಸಿಂಕ್ಕೋನಾ ಪಟ್ಟೆಯಿಂದ ತಯಾರ್ ಮಾಡಲ್ಪಟ್ಟ ಹೊಸದಾದ ಮತ್ತು ಅಭಿವೃದ್ಧಿಯಾದ ತಯಾರಿ—ಇದು ಸಾಧಾರಣವಾದ ಕ್ರಿಸ್ಟಲೈಜ್‌ಡ ಅಲ್ಲದ ಫೆಬ್ರಿಫ್ಯೂಜಿಗಿಂತ ಕ್ವಿನೈನಿಗೆ ಸಂಪೂರ್ಣವಾದ ಪ್ರತಿನಿಧಿಯಾಗಿಧೆ. ಇದನ್ನು ಕಲ್‌ಕತ್ತೆ ಬಳಿ ಸೀಬ್‌ಪೂರ ಸಮೀಪದಲ್ಲಿ ರಾಯಲ್‌ಬೊಟೊನಿಕ ಗಾರ್ಡನ ಸೂಪರಿಂಟೆಂಡೆಂಟರಿಂದ ಗವರ್ನಮೆಂಟ್ ಆಫಿಸರಗಳು ಸರ್ಕಾರಿಯಾದ ಮತ್ತು ಧರ್ಮಾರ್ಥವಾದ ಕೆಲಸಗಳಿಗಾಗಿ ಮತ್ತು ಒಂದು ಸಲಕ್ಕೆ ಇಪ್ಪತ್ತು ಪಾಂಡು ಮತ್ತು ಅದಕ್ಕೆ ಮೇಲ್ಪಟ್ಟು ತೆಗದುಕೊಳ್ಳೆವರು ನಗದಿಗಾಗಿಯೇ ಪಾಂಡ ಒಂದಕ್ಕೆ 24 ರೂಪಾಯಿಗಳ ದರ ಪ್ರಕಾರ, ಕೊಂಡುಕೊಳ್ಳಬಹುದು. ರಾಯಲ ಬೊಟೊನಿಕ ಗಾರ್ಡನ ಸೂಪರಿಂಟೆಂಡೆಂಟರು ನಗದಿಗೇನೇ ಸಮುದಾಯವಾಗಿ ಪ್ರಜೆಗಳಿಗೆ ಮತ್ತು ಪಾಂಡ ಒಂದಕ್ಕೆ 32 ರೂಪಾಯಿಗಳ ಪ್ರಕಾರ ಮುಖ್ಯರಾದ ಯೂರೋಪಿಯನ್ ಮತ್ತು ನೇಟಿವ್ ಡ್ರಗ್ಗಿಸ್ಟಗಳು ಸರಬರಾಯಿ ಮಾಡತಕ್ಕದ್ದು. ಟಪ್ಪಾಲ್ ಹಾಸಲ್ ಹನ್ನೆರಡಾಣೆ ಜಾಸ್ತಿ.

اشتہار نامہ

سوار اور بارقہ کی نوکری واسطے صاحب ملٹری سکرتری عیس کے رجسٹرون مین داخل ہوی ہین سو تمام امیدواران امتحان کے واسطے نیچے نمود ہین سو جگہ ؤن اور تاریخون مین حاضر ہونا چاہیے اُنکی حقداریکا باب تب فیصل کیا جائیگا۔ اُن تاریخون مین حاضر ہونے چک گئے تو نام ایسے امیدوارون کا رجسٹر سے نکال دیے جاینگا۔

جگہ بنگلور ملٹری سکرتری آفس	سوار روز پیر آٹھوین سیپتمبر ۱۸۸۴ء روز منگل بارقہ نوین سیپتمبر ۱۸۸۴ء
جگہ مہسور کیانپ ملٹری سکرتری آفس A. C. Hay.	سوار روز چہارشنبہ پہلی اکتوبر ۱۸۸۴ء روز جمعرات بارقہ دوسری اکتوبر ۱۸۸۴ء

صحیح کرنل اے - سی - ہے صاحب افیشیٹنگ ملٹری سکرتری
ملٹری سکرتری آفس بارہوین اگست ۱۸۸۴ع بنگلور

خط مرزا محمد علی فارسی منشی

521

ಮೈಸೂರ ಗೆಜೆಟ್.

ನಂ. 34 ಸರ್ಕಾರದಿಂದ ಛಾಯಿಷ್ ಆದ್ದು. ಸ್ರ್ 1884.

ಬೆಂಗಳೂರು, ಶನಿವಾರ, ಆಗಸ್ಟ್ ತಾ॥ 23, ಸ್ರ್ 1884.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾ್ನರವರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.
2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ರಿಂಟೆಂಡೆಂಟರು, ಕಾಂಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ ವರಕ್ಸ್ ಆಫೀಸರಗಳು, ಮಿಲಿಟೇರಿ ಸಿಕ್ರಟೆರಿಯವರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೇ ಬಕಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.
3ನೇ ಭಾಗ–ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲ.
4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್.

ಇಸ್ತಿಹಾರ್ನಾಮೆ.

ತಾರೀಖು 15ನೇ ಆಗಸ್ಟ್ 1884.

ನಂ. 119.—(1870ನೇ ಇಸವಿ VIIನೇ ನಂಬರ್ ಆಕ್ಟೆಂಬ) ಕೋರ್ಟ್‌ಫೀಸ್ ಆಕ್ಟಿನ 35ನೇ ಸೆಕ್ಷನಿನಿಂದ ಉಂಟುಮಾಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರು ಹುಕ್ಕುಂ ಮಾಡುವದೇನಂದರೆ, ಮೈಸೂರು ಚೀಫ್ ಕೋರ್ಟಿನಲ್ಲಿ ವಕ್ಲು ಅಡ್ವೊಕೇಟ್‌ರಾಗಿ ದಾಖಲ್ಮಾಡಲ್ಪಟ್ಟ, ಇಂಗ್ಲೆಂಡ್ ಯಾ ಐರ್ಲೆಂಡ್ ಕೋರ್ಟಿನ ಯಾವದಾದರೂ ಇನ್‌ಗಳ ಬ್ಯಾರಿಸ್ಟರ್–ಆಟ್–ಲಾ ಯವರುಗಳಿಂದಲಾಗಲಿ, ಸ್ಕಾಟ್‌ಲೆಂಡಿನ ಫ್ಯಾಕಲ್ಟಿ ಆಫ್ ಅಡ್ವೊಕೇಟ್ಸ್ ಯೆಂಬದರ ಯಾವ ಮೆಂಬರ್‌ನಿಂದಾಗಲಿ, ಮೈಸೂರು ದೇಶದಲ್ಲಿನ ಕೋರ್ಟುಗಳಲ್ಲಿ ದಾಖಲ್ಮಾಡಲ್ಪಡುವ ವಕಾಲತ್‌ನಾಮೆಗಳ ಮೇಲೆ, ಸದರೀ ಆಕ್ಟಿನ IIನೇ ಷೆಡ್ಯೂಲ್ 10ನೇ ಕಲಂ ಅನುಸರಿಸಿ ಪಾವತೀಮಾಡಲ್ಪಡಬೇಕಾದ ಫೀಜು ಪೂರ್ತಿಯಾಗಿ ಮಾಫಾಗತಕ್ಕದ್ದು.

ಕೆ. ಶೇಷಾದ್ರಿಅಯ್ಯರ್,
ದಿವಾ್ನ.

ಇಸ್ತಿಹಾರ್ ನಾಮೆಗಳು.

ತಾರೀಖು 1ನೇ ಆಗಸ್ಟು 1884.

ನಂ. 99.—ಸಕಲಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಕೆಲವು ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ವೃತ್ತಿವಾರಾಗಿ ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು, ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜ್ ಷುರುವಾಗಿ, ಉಳಿಕೆ ಯಾವದೂ ಇಲ್ಲದೆ ವೃತ್ತಿಗಳು ಚಡ ದರಖಾಸ್ತುದಾರನಿಗೆ ಹರಾಜ್ ನಿಲ್ಲುವವು.

2. ಪರಂತು ಬಾಕೀ ಬರಬೇಕಾದ ವೃತ್ತಿಗಳು ಹರಾಜ್ ಮಾಡುವದರಿಂದ ಕಂದಾಯದಬಾಕೀ ಮೊಬಲಗು ಪೂರಾ ವಸೂಲಾಗದೇ ಯಿದ್ದರೆ ಪೂರಾ ಗ್ರಾಮವು ನಂತರ ವಿಕ್ರಯಿಸಲ್ಪಡುವದು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜ್ ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು, ಹಾಗಿಲ್ಲದಪಕ್ಷಕ್ಕೆ ಅಂತವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜ್ ಮವುಕೂಫ್ ಮಾಡಲ್ಪಡತಕ್ಕದ್ದು; ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ಹರಾಜ್ ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಕಾಯಮಾದ್ದಾಗಿರುವದಿಲ್ಲ.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಕಾಯಂ ಮಾಡಿದ ಕೂಡ್ಲೆ ವೃತ್ತಿಗಳು ಆತನ ಸುಫರ್ದು ಮಾಡಲ್ಪಟ್ಟು ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಸಬ್ ಡಿವಿಜನ್ ಆಫೀಸರರಿಂದ ರುಜು ಮೊಹರ್ ಮಾಡೋಣಾದ ಒಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲ್ಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂಬು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು, ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ. ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.			ಅಂದಾಜಾ ಹುಟ್ಟುವಳೀ ಯಾ ಬೇರೀಜು.			ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.			ಯಾವಬಾಕೀಗೋಸ್ಕರ ಗ್ರಾಮ ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.			ಹರಾಜು ತಾರೀಖು ವಗೈರೆ.
					ಖಂ.	ಕೊ.	ಪ.	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.	
ಕಡೂರು	ಹಾಸನ	ಕಾಳ್ಯ	ಸಮುದ್ರವಳ್ಳಿ	ನರಸಿಹ್ಮಶಾಸ್ತ್ರಿ, ಇತರ 3 ಮಂದಿ	23	4	1	150	6	5	147	6	4	715	8	5	ಡೆಪ್ಯುಟಿ ಅಮಲ್ದಾರ್ರ ಕಚ್ಚೇರಿಯಲ್ಲಿ 1884ನೇ ಇಸವಿ ಸೆಪ್ಟಂಬರ್ 2ನೇ ಮುಕ್ಕಾಮಿನಲ್ಲಿ.
			ಆಲದಹಳ್ಳಿ	ನರಸಿಹ್ಮಭಟ್ಟ ಇತರ 18 ಮಂದಿ	31	2	4	234	3	10	230	10	2	926	12	5	

ತಾರೀಖು 1ನೇ ಆಗಸ್ಟು 1884.

ನಂ. 100.—ಸನ 1882ನೇ ಇಸವಿ ನವಂಬರ 25ನೇ ಮುಕ್ಕಾಂ 138ನೇ ನಂಬರ್‌ವುಳ್ಳ ಇಸ್ತಿಹಾರ್‌ನಾಮೆಯಿಂದ ಅರಶೀಕೆರೆ ತಾಲ್ಲೂಕಿಗೆ ವರ್ಗಮಾಡಲ್ಪಟ್ಟ ಹಾಸನದ ತಾಲ್ಲೂಕು ಹೊನ್ನಾವಾರ ಹೋಬಳಿಗೆ ಸೇರಿದ ಬಸರೀಹಳ್ಳೀ ಗ್ರಾಮವು, ಮರಳಿ ಹಾಸನದ ತಾಲ್ಲೂಕಿಗೆ ವರ್ಗಮಾಡಲ್ಪಟ್ಟಿರುತ್ತೆ.

ಹಾಸನ ತಾಲ್ಲೂಕು ಗ್ರಾಮದ ಹೋಬಳೀಗೆ ಸೇರಿದ ಕಳ್ಳಿಬಿಟ್ಟಗೋನಹಳ್ಳಿ ಗ್ರಾಮವು, ಹೊಳೇನರಸೀಪುರ ತಾಲ್ಲೂಕಿಗೆ ವರ್ಗಮಾಡಲ್ಪಟ್ಟಿರುತ್ತೆ.

ನಂ. 101.—ಇದರಡೀ ಕಂಡ ಚಿಕ್ಕ ಚಿಕ್ಕ ಬೇಚಿರಾಕ ಗ್ರಾಮುಗಳು ಅವುಗಳ ಆಜೂಬಾಜೂದಲ್ಲಿರತಕ್ಕ ದೊಡ್ಡ ದೊಡ್ಡ ಅಸಲೀ ಗ್ರಾಮುಗಳಿಗೆ ಸೇರಿಸಿರುತವೆ:—

ಮಾಗಣಿ ಹೆಸರು.	ನಂಬರು	ಅಸಲೀ ಗ್ರಾಮದ ಹೆಸರು.	ನಂಬರು	3ನೇ ಕಾಲಂನಲ್ಲಿ ಕಾಣಿಸಿರುವ ಗ್ರಾಮುಗಳಲ್ಲಿ ಸೇರಿಸಬೇಕಾದ ಗ್ರಾಮುಗಳ ಹೆಸರು.	ಷರಾ.
1	2	3	4	5	6
		(1). ಬೇಲೂರು ತಾಲ್ಲೂಕು.			
	1	ಬಸವಾಪುರ ..	1	ಲಿಂಗಾಪುರ	
	2	ಕೆಸವಾಪುರ ..	1	ನಾಗನಹಳ್ಳಿ	
		(2). ಹೊಳೇನರಸೀಪುರ ತಾಲ್ಲೂಕು.			
	1	ಬಿಟ್ಟಗನಹಳ್ಳಿ ..	1	ಕಳ್ಳಿಬಿಟ್ಟಗನಹಳ್ಳಿ	
		(3). ಅರಶೀಕೆರೇ ತಾಲ್ಲೂಕು.			
	1	ಮುತ್ತಕೆರೆ ..	1	ಕಾಮನಹಳ್ಳಿ	
			2	ಮುತ್ತಹಳ್ಳಿ	
	2	ಹೊಸಹಳ್ಳಿ ..	1	ಹಾಳಿಜೊಂಡನಹಳ್ಳಿ	
		(4). ಹಾಸನ ತಾಲ್ಲೂಕು.			
ಹಾಸನ	1	ಆಡವಳ್ಳಿ ..	1	ರಾಗಟ್ಟ	
	2	ಕುರಾ ..	1	ಬಸವನಪುರ	
	3	ಕೆಂಚಟವಳ್ಳಿ ..	1	ಚನ್ನಾಪುರ	
	4	ಕಾಟಿಹಳ್ಳಿ ..	1	ಶಿವನೇನಹಳ್ಳಿ	
ಕಾನಗಲ್	5	ಮುಗಲೂರು ..	1	ಶಿನಡಿಪುರ	
	6	ಮೂಮದೇವರಹಳ್ಳಿ ..	1	ಕಾಳೇನಹಳ್ಳಿ	
	7	ರಾಜನಹಳ್ಳಿ ..	1	ಬೆಕ್ಕನಹಳ್ಳಿ	
	8	ಬೈಲಹಳ್ಳಿ ..	1	ಮುಂಡದಾಸನಹಳ್ಳಿ	
	9	ಕಾನವನಹಳ್ಳಿ ..	1	ಅಪ್ಪಂಣನಹಳ್ಳಿ	
	10	ಕಾಲತಮ್ಮನಹಳ್ಳಿ ..	1	ರಂಗಾಪುರ	
	11	ಲಕ್ಕನಹಳ್ಳಿ ..	1	ಕಾವೇರಹಳ್ಳಿ	
			2	ಭಂಡಿಹಳ್ಳಿ	

ಮಾಗಣಿ ಹೆಸರು.	ನಂಬ್ರು.	ಅಸಲೀ ಗ್ರಾಮದ ಹೆಸರು.	ನಂಬ್ರು.	3ನೇ ಕಾಲಂನಲ್ಲಿ ಕಾಣಿಸಿರುವ ಗ್ರಾಮಗಳಲ್ಲಿ ಸೇರಿಸಬೇಕಾದ ಗ್ರಾಮಗಳ ಹೆಸರು.	ಷರಾ.
1	2	3	4	5	6
ಮಾದಿಹಳ್ಳಿ	12	ಉಜ್ಜನಿ ..	1	ಜೆಂಗೇನಹಳ್ಳಿ	
			2	ಹುಲಿಹಳ್ಳಿ	
	13	ಗಣದಗೆರೆ ..	1	ಕನ್ನಾಪುರ	
ಲಾಲ್‌ಗಣಿ	14	ಯಲಗೇನಹಳ್ಳಿ ..	1	ಶ್ರೀರಂಗಪುರ	
	15	ಚಿಕ್ಕನಹಳ್ಳಿ ..	1	ಸಾಂಚಿಹಳ್ಳಿ	
			2	ರಾಮದೇವರಪುರ	
ಗ್ರಾಮ	16	ಮಾರಕುಳಿ ..	1	ಕ್ಯಾತನಹಳ್ಳಿ	
	17	ಹೆಗಡೀಹಳ್ಳಿ ..	1	ವಿರೂಪಾಕ್ಷಿಪುರ	
	18	ಬ್ಯಾಡರಹಳ್ಳಿ ..	1	ಮಾರನಾಯಕನಹಳ್ಳಿ	
			2	ಹುವ್ವಿನಹಳ್ಳಿ	
	19	ಜ್ಯಾಗರವಳ್ಳಿ ..	1	ಗೋಪಾಲಪುರ	
	20	ಜುಂಜನಹಳ್ಳಿ ..	1	ಜಕ್ಕನಹಳ್ಳಿ	
			2	ವೆಂಕಟಾಪುರ	
	21	ಹೊನ್ನಗೆರೆ ..	1	ದಡದಹಳ್ಳಿ	
			2	ಕೊಂಗರವಳ್ಳಿ	
	22	ಮಾಲನಾಯಕನಹಳ್ಳಿ ..	1	ದಾಸನಕೊಪ್ಪಲು	
	23	ಗಡನಹಳ್ಳಿ ..	1	ಐಜೇನಹಳ್ಳಿ	
ಅಟ್ಟಾವಾರ	24	ಕಿತ್ತನಕೆರೆ ..	1	ತಿಮ್ಮನಹಳ್ಳಿ	
			2	ಭಂಡಿಹಳ್ಳಿ	
			3	ಕಟ್ಟೆಹಳ್ಳಿ	
	25	ತಿಮ್ಲಾಪುರ ..	1	ಸಾಸಲಗೆರೆ	
	26	ಕೃಷ್ಣಾಪುರ ..	1	ಗೋಪನಹಳ್ಳಿ	
ಕಾಸಿಕ	27	ಕಾಚನಾಯಕನಹಳ್ಳಿ ..	1	ಚಿಕ್ಕಹೊನ್ನೇನಹಳ್ಳಿ	
	28	ಸಾತೇನಹಳ್ಳಿ ..	1	ಕಟ್ಟೆಹಳ್ಳಿ	
	29	ಹೊಸಹಳ್ಳಿ ..	1	ಸಾಣೇನಹಳ್ಳಿ	
			2	ಹೋರಿಕೊಪ್ಪಲು	
	30	ಅಮ್ಮಗೋನಹಳ್ಳಿ ..	1	ತಮಲಾಪುರ	
ಹೊನ್ನಾವಾರ	31	ಬಮ್ಮನಹಳ್ಳಿ ..	1	ಬಸವನಹಳ್ಳಿ	
	32	ಕಂಕೆರೆ ..	1	ರಾಮೇನಹಳ್ಳಿ	
			2	ವಡೇರಹಳ್ಳಿ	

ತಾರೀಖು 2ನೇ ಆಗಸ್ಟ್ 1884.

ನಂ. 102.—ಚಿಕ್ಕಬಳ್ಳಾಪುರ ತಾಲ್ಲೂಕಿನ ಕೆಲವು ಚಿಕ್ಕ ಚಿಕ್ಕ ಮತ್ತು ಬೇಚಿರಾಖ್ ಗ್ರಾಮಗಳು, ಅವುಗಳ ಬಾಜೂವಲ್ಲಿರುವ ದೊಡ್ಡ ಅಸಲೀ ಗ್ರಾಮಗಳಿಗೆ ಶೇರಿಸಲ್ಪಟ್ಟದ್ದನ್ನು ತೋರಿಸುವ ಇದರಡಿ ಕಂಡ ತಖ್ತೆಯು, ಸರ್ವರ ತಿಳುವಳಿಕೆ ಖಿಗ್ಯೆ ಪ್ರಕಟಿಸಲ್ಪಡುತ್ತೆ.

ಮಾಗಣಿ ಹೆಸರು.	ನಂಬರು.	ಅಸಲೀ ಗ್ರಾಮದ ಹೆಸರು.	ನಂಬರು.	3ನೇ ಕಾಲಂನಲ್ಲಿ ಕಾಣಿಸಿರುವ ಗ್ರಾಮಗಳಲ್ಲಿ ಶೇರಿಸಲ್ಪಟ್ಟ ಗ್ರಾಮಗಳ ಹೆಸರು.	ಷರಾ.
	1	ಮುಮಿಂಚೆನಹಳ್ಳಿ ..	1	ಗಾಡೆಮನಾಗೇನಹಳ್ಳಿ	ಬೇಚಿರಾಖ್.
	2	ಮಾರಪ್ಪನಹಳ್ಳಿ ...	1	ಜಂಗಮೊರಹಳ್ಳಿ	
			2	ಅರಳೀಮರದಹಳ್ಳಿ	
			3	ತೊಗರಿಘಟ್ಟ	ಡಿಟೋ
	3	ಗುವಲ್ಕನಹಳ್ಳಿ ..	1	ಜಂಭಳ್ಳಿ	
			2	ಕಲ್‌ಕುಂಟೆ	
	4	ಮಾರಗನಹಳ್ಳಿ ..	1	ತಿಮ್ಮರಸನಹಳ್ಳಿ	ಡಿಟೋ
	5	ದೊಡ್ಡ ಪಾಯಲ್‌ಕುರ್ಕಿ ..	1	ಪೂವಲ್‌ನಾಗೇನಹಳ್ಳಿ	ಡಿಟೋ
	6	ಗಂಗಾರ್‌ಕಾಲ್ವೆ ..	1	ಅನುಪಹಳ್ಳಿ	ಡಿಟೋ
			2	ಚಿಕ್ಕತೇಕಹಳ್ಳಿ	ಡಿಟೋ
			3	ನಾಲ್‌ಕದರೇನಹಳ್ಳಿ	ಡಿಟೋ
ಪೂರ್ಣಸಾಗರ.	7	ವೆಂಕಟಾಪುರ ..	1	ವಡಿಯಲ್ಪಟ್ಟ ಗಂಗಾರೆ ಕಾಲ್ವೇ ಗ್ರಾಮದ ಭಾಗ	
	8	ಆವಲ್‌ಗುರ್ಕಿ ..	1	ಕುರುಬರಹಳ್ಳಿ	
			2	ಬರಲಹಳ್ಳಿ (ಚಿಕ್ಕಬಳ್ಳಾಪುರ ಮಾಗಣಿ)	ಡಿಟೋ
	9	ಯರವಾರಸಹಳ್ಳಿ ..	1	ನಾರೇನಹಳ್ಳಿ	
	10	ಕೇತನಹಳ್ಳಿ ..	1	ತಿಮ್ಮಸಂದ್ರ	ಡಿಟೋ
			2	ಅಂಮದಾಲಪೊದೆ	ಡಿಟೋ
	11	ಸಾದೇನಹಳ್ಳಿ ..	1	ಮಾರಶಟ್ಟಿಹಳ್ಳಿ	ಡಿಟೋ
			2	ದೊಂಣಗಾನಹಳ್ಳಿ	ಡಿಟೋ
	12	ಆನೆಮಡಗು ..	1	ಪೆಡವರ್ತಿ	ಡಿಟೋ
			2	ವಡಿಯಲ್ಪಟ್ಟ ಸಾದೇನಹಳ್ಳಿ ಭಾಗ	
	13	ಹರಿಸ್ಥಳ ..	1	ಗೌಡನಹಳ್ಳಿ	
ಪೆರೆಸಂದ್ರ.	14	ರಡ್ಡಿಹಳ್ಳಿ ..	1	ತುಂಗೆತ್ಳಿ	ಬೇಚಿರಾಖ್.
			2	ತೆಲಗೆನಹಳ್ಳಿ	ಡಿಟೋ
			3	ಉಡಬಂಡಹಳ್ಳಿ	ಡಿಟೋ
	15	ನಲಗುತ್ತಳ್ಳಿ ...	1	ಮುನಗವಾರಹಳ್ಳಿ	
	16	ನಂದನಾಗನಹಳ್ಳಿ ..	1	ಪೆರೆಸಂದ್ರಕ್ಕೆ ಶೇರಿಸಲ್ಪಟ್ಟ ಮುತ್ತುಕದಹಳ್ಳಿಯ ವಡದ ಎಲ್ಲಾ ಭಾಗಗಳು	
	17	ಬೊಂಮಹಳ್ಳಿ ..	1	ಮಾರ್ವೆಹಳ್ಳಿ	
	18	ಉಪ್ಪುಮುದ್ದನಹಳ್ಳಿ ..	1	ಚಿಗರೆಲೆದಿಂಣೆ	ಡಿಟೋ

ಮಾಗಣಿ ಹೆಸರು.	ನಂಬರು	ಅಸಲೀ ಗ್ರಾಮಗಳ ಹೆಸರು.	ನಂಬರು	3ನೇ ಕಾಲಂನಲ್ಲಿ ಕಂಡ ಗ್ರಾಮಗಳಿಗೆ ಸೇರಿಸಲ್ಪಟ್ಟ ಗ್ರಾಮಗಳು.	ಷರಾ.
ಪೆರೆಸಂದ್ರ.	19	ಕಮ್ಮಾತನಹಳ್ಳಿ ..	1	ಚಾಮಲಬಂಡಹಳ್ಳಿ	
	20	ಕೋಡೂರು ..	1	ಕೊಟ್ಟೂರು	ಬೇಚಿರಾಖ್
			2	ತಿರಮಲದೇವರಹಳ್ಳಿ	ಡಿಟೋ
			3	ಬಾಲಗನಹಳ್ಳಿ	ಡಿಟೋ
			4	ಬೈಗನಹಳ್ಳಿ	
ಮಂಚನಬೆಲೆ.	21	ದೇವಸ್ಥಾನಹೊಸಹಳ್ಳಿ ..	1	ಜಾಡೇನಹಳ್ಳಿ	
	22	ನೆಲ್ಲೀಮರದಹಳ್ಳಿ ..	1	ದಾಸರಹಳ್ಳಿ	
	23	ಕುರುಬರಹಳ್ಳಿ ..	1	ವ್ಯಾಕಲವಾರಹಳ್ಳಿ	ಬೇಚಿರಾಖ್
	24	ಸೊಪ್ಪಹಳ್ಳಿ ..	1	ಗಂಡ್ಲಹಳ್ಳಿ	
			2	ಪುಲತಿಮ್ಮನಹಳ್ಳಿ	
	25	ಕತ್ತರಗುಪ್ಪೆ ..	1	ಹೊಸೂರು	ಡಿಟೋ
	26	ಹಾವಲಹಳ್ಳಿ ..	1	ಮಾರೇನಹಳ್ಳಿ	ಡಿಟೋ
			2	ಹೊನ್ನಪ್ಪನಹಳ್ಳಿ	
			3	ರಂಗಯ್ಯನಹಳ್ಳಿ	ಡಿಟೋ
	27	ಅಂಗರೇಖನಹಳ್ಳಿ ..	1	ಚಿಕ್ಕತಿಮ್ಮನಹಳ್ಳಿ	ಡಿಟೋ
ಆಫೀಸಿನ ಹೆಸರು.	ಬುಕ್ಕು ನಂಬರ್ ಮತ್ತು ದಸ್ತೈವಜಿನ ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ವಗೈರೇ.	ಬರೆಸಿಕೊಂಡವರ ಹೆಸರು ವಗೈರೇ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ತಪಶೀಲು.
ಮುಳಬಾಗಲ್ ಸಬ್ ರಿಜಿಸ್ಟ್ರಿ ಆಫೀಸ್.	1ನೇ ನಂಬರ್ ಬುಕ್ಕು 1880-1881ನೇ ಇಸವಿ 72ನೇ ನಂಬರ್.	ಕೋಲಾರ ತಾಲ್ಲೂಕು ಕಾಮಸಂದ್ರದಲ್ಲಿ ಇರುವ ವೈಶ್ಯತಿಪ್ಪಾರು ಚಂಗಲರಾಯಶೆಟ್ಟಿಮಗ ನಾಗಿಶೆಟ್ಟಿ	ಕೋಲಾರದಲ್ಲಿ ಇರುವ ವೈಶ್ಯ ಬೊಗರಂ ವೆಂಕಟಶಾಮಯ್ಯನ ಮಗ ಲಕ್ಷ್ಮಯ್ಯ	7ನೇ ಡಿಸೆಂಬರ್ 1880	7ನೇ ಡಿಸೆಂಬರ್ 1880	50 ರೂಪಾಯಿನ ಜಮೀನ್ ಕ್ರಯಪತ್ರ.
	ಡಿಟೋ ಬುಕ್ಕು 1881-82ನೇ ಇಸವಿ 79ನೇ ನಂಬರ್	ಮುಳಬಾಗಲ್‌ನಲ್ಲಿಯಿರುವ ಸ್ಮಾರ್ತ ಬ್ರಾಹ್ಮಣ. ರೇವಣೂರ ವೆಂಕಟನಾರಣಭಟ್ಟರಮಗ ತಿಮ್ಮಣ್ಣಭಟ್ಟ	ಮುಳಬಾಗಲ್ ತಾಲ್ಲೂಕು ಮುಡಿಯನೂರಲ್ಲಿರುವ ಸ್ಮಾರ್ತ ಬ್ರಾಹ್ಮಣ ವೆಂಕಟಸುಬ್ಬಾಶಾಸ್ತ್ರಿಗಳ ಮಗ ವೆಂಕಟೇಶ ಶಾಸ್ತ್ರಿ	17ನೇ ಫೆಬ್ರವರಿ 1882	17ನೇ ಫೆಬ್ರವರಿ 1882	80 ರೂಪಾಯಿನ ವೃತ್ತಿ ಜಮೀನ್‌ಗಳನ್ನು ಆಧಾರಮಾಡಿ ಬರದುಕೊಟ್ಟ ಪತ್ರ.
	ಡಿಟೋ ಬುಕ್ಕು 1882-83ನೇ ಇಸವಿ 17ನೇ ನಂಬರ್	ಮುಳಬಾಗಲ್ ತಾಲ್ಲೂಕು ಬಾದೆನಹಳ್ಳಿಯಲ್ಲಿರುವ ಕಮ್ಮಜಾತಿ ಸುಬ್ಬಣ್ಣನ ಮಗ ದೊಡ್ಡ ಗಂಗಣ್ಣ	ಮುಳಬಾಗಲ್ ತಾಲ್ಲೂಕು ಬಾದೆನಹಳ್ಳಿಯಲ್ಲಿರುವ ಕಮ್ಮಜಾತಿ ರಂಗೇಗೌಡನ ಮಗ ವೆಂಕಟಸುಬ್ಬಣ್ಣ	29ನೇ ಜೂನ್ 1882	29ನೇ ಜೂನ್ 1882	190 ರೂಪಾಯಿನ ಜಮೀನ್ ಕ್ರಯಪತ್ರ.

ತಿ. ಸುಬ್ಬರಾವ್,
ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟು.

ನಂ. 7.

ತಾರೀಖು 16ನೇ ಆಗಸ್ಟ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಚಾಮರಾಜನಗರದ ಸಬ್ ರಿಜಿಸ್ಟ್ರಿ ಆಫೀಸಿನಲ್ಲಿ ಬೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜುಗಳನ್ನ ಹಾಜರ್‌ಮಾಡಿದ್ದವರೇ ಆಗಲಿ ಅಥವಾ ವಾಪಸುಪಡಿಯಲಿಕ್ಕೆ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ್, ಯಾ ಹಕ್ಕುದಾರರೇ ಆಗಲಿ ಈ ನೋಟೀಸು ತಾರೀಖು ಲಾಗಾಯತು ಒಂದು ತಿಂಗಳಲ್ಲಿ ಸದರೀ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅವುಗಳನ್ನ ವಾಪಸ್ ತೆಗದುಕೊಳ್ಳಬೇಕು. ತಪ್ಪಿದರೆ 1877ನೇ ಇಸವಿ 3ನೇ ನಂಬರಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅವುಗಳನ್ನ ನಾಶಪಡಿಸಲ್ಪಡುವದು.

ನಂಬರ್.	ದಸ್ತಾವೇಜು ಬರದು ಕೊಟ್ಟವನ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿ ಕೊಂಡವನ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
31–5–82ಲ್ಲಿ ತಿರಸ್ಕರಿಸಿದ್ದು 1882—83	ಚಾಮರಾಜನಗರದ ತಾಲ್ಲೂಕು ಕಸಬೂ ಹೊಂಗನೂರು ಗ್ರಾಮದಲ್ಲಿರುವ ಕೊಳೂರು ಲಿಂಗೇಗೌಡ	ಚಾಮರಾಜನಗರ ತಾಲ್ಲೂಕು ಕಸಬೂ ಹೊಂಗನೂರು ಗ್ರಾಮದಲ್ಲಿರುವ ಉಪ್ಪಲಿಗರ ಜಾತಿ ರಂಗೀಮಗ ಮಾದ	27–5–82	31–5–82	66 ರೂಪಾಯಿನ ಭೂಸ್ಥಿತಿ ಕ್ರಯಪತ್ರ.
1-6–82ರಲ್ಲು ತಿರಸ್ಕರಿಸಿದ್ದು 1882—83	ತಲ್ಕಾಡು ತಾಲ್ಲೂಕು ಮೂಗೂರು ಹೋಬಳಿ ಸರ್ವಮಾನ್ಯ ಕೆಂಪನಪುರ ಗ್ರಾಮದಲ್ಲಿರುವ ಶಿಂಗನಪುರದ ಶಾನುಭಾಗ ಶ್ರೀಕಂಠಯ್ಯನ ಮಗ ಶಂಕರಪ್ಪ	ಚಾಮರಾಜನಗರ ತಾಲ್ಲೂಕು ಆಲೂರು ಹೋಬಳಿ ಶಿಂಗನಪುರ ಗ್ರಾಮದಲ್ಲಿರುವ ಪಟೇಲ್ ಪುಟ್ಟೇಗವುಡ	1—6—82	1—6—82	10 ವರುಷದ ವಾಯಿದೆ ಉಳ್ಳ ಜಮೀನ್ ಸಾಗುವಳಿ ದಸ್ತೈವಜು. ವಾಯಿದೆನಂತರ ಬರದುಕೊಟ್ಟವನು ತೆಗದುಕೊಂಡಿರುವ 50 ರೂಪಾಯಿ ವಾಪಸ್ ಕೊಟ್ಟು ಜಮೀನನ್ನ ವಾಪಸ್ ಪಡಿಯತಕ್ಕದ್ದು.

ಅಬ್ದುಲ್ ಖಾದರ್, ಕೆ. ಬಿ.,
ಸ. ರಿಜಿಸ್ಟ್ರಾರ್.

ಕಡೂರು ಡಿಸ್ಟ್ರಿಕ್ಟ್.

ತಾರೀಖು 21ನೇ ಆಗಸ್ಟ್ 1884.

ಯಡಹಳ್ಳಿ ಆಕ್ಟಿಂಗ್ ಮುನಸಿಫ್ ವ ಯರಡನೇ ಕ್ಲಾಸ್ ಮಾಜಿಸ್ಟ್ರೇಟ್ ಬಿ. ವೆಂಕಟಾಚಾರ್ರಿಗೆ, 1872ನೇ ಇಸವಿಯ Xನೇ ಆಕ್ಟಿಂಬ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 25, (b) ಸೆಕ್ಷನ್ ಅನುಸರಿಸಿ, ಇದರಡೀ ಕಂಡ ಅಧಿಕಾರಗಳು ಕೊಡಲ್ಪಟ್ಟಿರುತವೆ :—

1. ಲಾಷ್ ವಿಚಾರಣೆಬಗ್ಗೆ ಅಧಿಕಾರ, (ಸೆಕ್ಷನ್ 135.)
2. ಅವರಿಗೆ ದರ್ಯಾಫ್ತಿ ಮಾಡುವದಕ್ಕೆ ಅಥವಾ ದರಿಯಾಫ್ತಿ ಬಗ್ಗೆ ಕಮ್ಮಿಟ್ ಮಾಡುವದಕ್ಕೆ ಅಧಿಕಾರ ವಿರುವ ಮೊಕದ್ದಮೆಗಳಲ್ಲಿ ಫಿರ್ಯಾದುಗಳನ್ನು ದಾಖಲ್ಮಾಡಿಕೊಳ್ಳುವದಕ್ಕೂ ಪೊಲೀಸ್ ರಿಪೋರ್ಟುಗಳನ್ನು ತೆಗದುಕೊಳ್ಳುವದಕ್ಕೂ ಅಧಿಕಾರ, (ಸೆಕ್ಷನ್ 141.)
3. ನಿರೋಧ ವಗೈರೇಯನ್ನು ಅಡ್ಡಿಪಡಿಸುವಂತೆ ಹುಕ್ಕುಂ ಮಾಡುವದಕ್ಕೆ ಅಧಿಕಾರ, (ಸೆಕ್ಷನ್ 518.)
4. ಹೇಸಿಗೆಯು ಬಾರ್‌ಬಾರ್ ನಡಿಯದಂತೆ ಅಡ್ಡಿಪಡಿಸುವದಕ್ಕೆ ಹುಕ್ಕುಂ ಕೊಡಲು ಅಧಿಕಾರ (ಸೆಕ್ಷನ್ 519.)

ಮಹ್ಮದಲ್ಲಿ, ಕೆ. ಬಿ.
ಆಫಿಷಿಯೇಟಿಂಗ್ ಡಿಸ್ರಿಕ್ಟ್ ಮಾಜಿಸ್ಟ್ರೇಟ್.

ಸರ್ 1884ನೇ ಇಸವಿ ಜುಲೈ ತಿಂಗಳ ಕಾಲಸ್ಥಿತೀ ರಿಪೋರ್ಟುಗಳು.

ಬೆಂಗಳೂರು ಡಿಸ್ಟ್ರಿಕ್ಟ್.

ಮಳೆ—ಬೆಂಗಳೂರು ಷಹರಿನಲ್ಲಿ, 1 ಅಂಗುಲ 45 ಸೆಂಟ್ಸ್ ಮಳೆ ಅಳಿಯಲ್ಪಟ್ಟಿರುತ್ತೆ.

ಬೆಳೆಗಳ ಸ್ಥಿತಿ ಮತ್ತು ಕಾಲಸ್ಥಿತಿ—ಡಿಸ್ಟ್ರಿಕ್ಟಿನ ಅನೇಕಭಾಗಗಳಲ್ಲಿ ಈಚೆಗೆ ಪೇರಾದ ಬೆಳೆಗಳಿಗೆ ಮಳೆ ಅತ್ಯಾವಶ್ಯಕವಾಗಿರುತ್ತೆ. ರಾಗಿ, ಅವರೆ, ತೊಗರಿ ಮತ್ತು ನೆಲ್ಲು ಯಿವು ಕೆಲವು ಭಾಗದಲ್ಲಿ ಬಿತ್ತಲ್ಪಟ್ಟಿರುತವೆ. ಕಾಲಸ್ಥಿತಿ ಚನ್ನಾಗಿಲ್ಲ, ಆದರೆ ವಂದೆರಡು ಭಾರಿಮಳೆ ಬಂದದ್ದಾದರೆ ಕಾಲಸ್ಥಿತಿ ಅಭಿವೃದ್ಧಿ ಆಗಬಹುದು.

ಜನಾರೋಗ್ಯ—ಸಾಧಾರಣವಾಗಿ ಚನ್ನಾಗಿಧೆ.

ಕಾಲ್ನಡೆಗಳು—ಆರೋಗ್ಯವಾಗಿವೆ. ಕೆಲವು ಸ್ಥಳಗಳಲ್ಲಿ ಕಾಲುಬಾಯಿ ಜ್ವರ ವ್ಯಾಪಿಸಿಧೆ. ಯಲ್ಲಾಕಾರಣಗಳಿಂದಲೂ 2,113 ಕಾಲ್ನಡೆಗಳು ಹೋದವು, ಆ ಹಿಂದಿನ ತಿಂಗಳಲ್ಲಿ 1,808 ಹೋದವು, ಈ ಪೈಕಿ 285 ಕಾಲ್ನಡೆಗಳು ಕಾಡುಮೃಗಗಳಿಂದ ಕೊಲ್ಲಲ್ಪಟ್ಟವು.

ಜನಮರಣ—ಜುಲೈ ತಿಂಗಳಲ್ಲಿ 629 ಮಂದಿಯೂ ಆ ಹಿಂದಿನ ತಿಂಗಳಲ್ಲಿ 656 ಮಂದಿಯೂ ಮೃತಪಟ್ಟರು, ಮೊಕಾಬಿಲ 27 ಕಮ್ಮಿ, ಮುಖ್ಯವಾಗಿ ಜ್ವರದಿಂದಲೆ ಮೃತಪಟ್ಟಿರುತ್ತಾರೆ.

ಜರ್ಮಾನೆಗಳು—ಸಾಗುವಳೀ ಬಗ್ಯಾಗಿ 4,857—1—8 ರೂಪಾಯಿಗಳು ಕಂದಾಯವುಳ್ಳ ಜರ್ಮಾನೆಗಳು ತೆಗದುಕೊಳ್ಳಲ್ಪಟ್ಟವು. ರಾಜೀನಾಮೆ ಯಾವದೂ ಬರಲಿಲ್ಲವು.

ಎ. ಯಚ್. ಮೆಕ್ಇನ್‌ಟೈರ್,
ಡೆಪ್ಯುಟಿ ಕಮ್ಮಿಷನರ್.

ಕಡೂರು ಡಿಸ್ಟ್ರಿಕ್ಟು.

ಮಳೆ.—ಡಿಸ್ಟ್ರಿಕ್ಟು ವ ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಇದರಡೀ ಕಂಡಂತೆ ಮಳೆ ಅಳೆಯಲ್ಪಟ್ಟಿರುತ್ತೆ:—

ತಾಲ್ಲೂಕುಗಳು		ಮಳೆ ಅಂ.	ಸೆಂಟ್ಸ್	ತಾಲ್ಲೂಕುಗಳಲ್ಲಿ		ಮಳೆ ಅಂ.	ಸೆಂಟ್ಸ್
ತರೀಕೆರೆ	..	4	0	ಯಡೆಹಳ್ಳಿ	..	14	95
ಕೊಪ್ಪ	..	38	40	ಹಾಸನ	..	2	26
ಚಿಕ್ಕಮಗಳೂರು	..	3	59	ಬೇಲೂರು	..	3	44
ಕಡೂರು	..	0	56	ಮಂಜಿರಾಬಾದ್	..	24	9
ಮೂಡಿಗೆರೆ	..	18	76	ಅರಸೀಕೆರೆ	..	0	53¾

ಬೀಜ ಪೇರಾವಾದ್ದು—ತರೀಕೆರೆ, ಚಿಕ್ಕಮಗಳೂರು ಮೂಡಿಗೆರೆ, ಮಂಜಿರಾಬಾದು ವ ಬೇಲೂರು ಈ ತಾಲ್ಲೂಕುಗಳಲ್ಲಿ ನೆಲ್ಲು ಮತ್ತು ರಾಗಿ, ಪೇರಾವಾದವು. ಅರಸೀಕೆರೆ ವ ಕೊಪ್ಪ ತಾಲ್ಲೂಕುಗಳಲ್ಲಿ ನೆಲ್ಲು ಮಾತ್ರ ಪೇರಾವಾಯಿತು. ಹಾಸನದಲ್ಲಿ ನೆಲ್ಲು, ರಾಗಿ, ಅವರೆ, ಮೆಣಸಿನ ಕಾಯಿ ಮತ್ತು ಕಡೂರು ತಾಲ್ಲೂಕಿನಲ್ಲಿ ನೆಲ್ಲು, ಜೋಳ, ಹೆಸರು, ಉದ್ದು ಪೇರಾವಾದವು.

ಫಸಲ್‌ಗಳ ಸ್ಥಿತಿ—ತರೀಕೆರೆ ವ ಬೇಲೂರು ತಾಲ್ಲೂಕುಗಳಲ್ಲಿ ಚನ್ನಾಗಿವೆ; ಮೂಡಿಗೆರೆ, ಕೊಪ್ಪ ವ ಮಂಜಿರಾಬಾದು ತಾಲ್ಲೂಕುಗಳಲ್ಲಿ ಸಾಧಾರಣವಾಗಿರುತ್ತೆ. ಇತರ ತಾಲ್ಲೂಕುಗಳಲ್ಲಿ ಮಧ್ಯಸ್ತವಾಗಿರುತ್ತೆ.

ಫಸಲ್ ಕಟಾವಾದ್ದು—ಇಲ್ಲ.

ಕಾಲಸ್ಥಿತಿ— ಚನ್ನಾಗಿದೆ.

ಜನಾರೋಗ್ಯ—ಜ್ವರ ವ್ಯಾಪಿಸಿರುವ ಚಿಕ್ಕಮಗಳೂರು, ಕಡೂರು, ಕೊಪ್ಪ ವ ಮೂಡಗೆರೆ ತಾಲ್ಲೂಕುಗಳಲ್ಲಿ ವಿನಾ, ಮಿಕ್ಕ ತಾಲ್ಲೂಕುಗಳಲ್ಲಿ ಚನ್ನಾಗಿರುತ್ತೆ.

ಕಾಲ್ನಡೆ—ತರೀಕೆರೆ, ಮೂಡಿಗೆರೆ ವ ಹಾಸನ ತಾಲ್ಲೂಕುಗಳಲ್ಲಿ ಚಪ್ಪೆ ಮತ್ತು ಬಾಯಿಜ್ವರ ವ್ಯಾಪಿಸಿರುತ್ತೆ. ಈ ತಿಂಗಳಲ್ಲಿ 1,243 ಆ ಹಿಂದಿನ ತಿಂಗಳಲ್ಲಿ 1,103 ಕಾಲ್ನಡೆಗಳು ಹೋಗಿರುತ್ತವೆ.

ಜರ್ಮಾನೆಗಳು—ಸಾಗುವಳೀ ಬಗ್ಯಾಗಿ 4,022—12—0 ರೂಪಾಯಿಗಳು ಕಂದಾಯವುಳ್ಳ ಜರ್ಮಾನೆಗಳು ತೆಗದುಕೊಳ್ಳಲ್ಪಟ್ಟವು. ರಾಜೀನಾಮೆ ಯಾವದೂ ಬರಲಿಲ್ಲವು.

ದಾರಣೆಗಳು—ಜಾಸ್ತಿಯಾಗುವ ಹಾಗೆ ಕಾಣುತ್ತೆ.

ಜಿ. ಯಫ್. ಮೈಕಲ್‌ಜಾನ್,
ಡೆಪ್ಯುಟಿ ಕಮ್ಮಿಷನರ್.

ಕ್ರಿಸ್ಟಲೈಸ್ಡ್ ಸಿಂಕೋನಾ ಫೆಬ್ರಿಫ್ಯೂಜ್.

ಗವರ್ನಮೆಂಟ್ ಕೋಠೀಯಲ್ಲಿ ಕೆಂಪುವರ್ಣದ ಸಿಂಕೋನಾ ಪಟ್ಟೆಯಿಂದ ತಯಾರ್ ಮಾಡಲ್ಪಟ್ಟ ಹೊಸದಾದ ಮತ್ತು ಅಭಿವೃದ್ಧಿಯಾದ ತಯಾರಿ—ಇದು ಸಾಧಾರಣವಾದ ಕ್ರಿಸ್ಟಲೈಜ್‌ಡ್ ಅಲ್ಲದ ಫೆಬ್ರಿಫ್ಯೂಜಿಗಿಂತ ಕ್ವಿನೈನಿಗೆ ಸಂಪೂರ್ಣವಾದ ಪ್ರತಿನಿಧಿಯಾಗಿಧೆ. ಇದನ್ನು ಕಲ್‌ಕತ್ತೆ ಬಳಿ ಸೀಬ್‌ಪೂರ್ ಸಮೀಪದಲ್ಲಿ ರಾಯಲ್‌ಬೊಟಾನಿಕ್ ಗಾರ್ಡನ್ ಸೂಪರಿಂಟೆಂಡೆಂಟರಿಂದ ಗವರ್ನಮೆಂಟ್ ಆಫಿಸರ್‌ಗಳು ಸರ್ಕಾರಿಯಾದ ಮತ್ತು ಧರ್ಮಾರ್ಥವಾದ ಕೆಲಸಗಳಿಗಾಗಿ ಮತ್ತು ಒಂದು ಸಲಕ್ಕೆ ಇಪ್ಪತ್ತು ಪೌಂಡು ಮತ್ತು ಅದಕ್ಕೆ ಮೇಲ್ಪಟ್ಟು ತೆಗದುಕೊಳ್ಳುವರು ನಗದಿಗಾಗಿಯೇ ಪೌಂಡ್ ಒಂದಕ್ಕೆ 24 ರೂಪಾಯಿಗಳ ದರ ಪ್ರಕಾರ, ಕೊಂಡುಕೊಳ್ಳಬಹುದು. ರಾಯಲ್ ಬೊಟಾನಿಕ್ ಗಾರ್ಡನ್ ಸೂಪರಿಂಟೆಂಡೆಂಟರು ನಗದಿಗೇನೇ ಸಮುದಾಯವಾಗಿ ಪ್ರಜೆಗಳಿಗೆ ಮತ್ತು ಪೌಂಡ್ ಒಂದಕ್ಕೆ 32 ರೂಪಾಯಿಗಳ ಪ್ರಕಾರ ಮುಖ್ಯರಾದ ಯೂರೋಪಿಯನ್ ಮತ್ತು ನೇಟಿವ್ ಡ್ರಗ್ಗಿಸ್ಟ್‌ಗಳು ಸರಬರಾಯಿ ಮಾಡತಕ್ಕದ್ದು. ಟಪ್ಪಾಲ್ ಹಾಸಲ್ ಹನ್ನೆರಡಾಣೆ ಜಾಸ್ತಿ.

ಮೈಸೂರು ಸ್ಟೇಟ್ ರೈಲ್‌ವೆ.

ಮೈಸೂರಿನಲ್ಲಿ ನಡಿಯುವ ದಸರಾ ಉತ್ಸವ.

ತಾರೀಖು 3ನೇ ಸೆಪಟಂಬರ್ 1884.

ಇದರಿಂದ ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಿಸಲ್ಪಡುವದೇನಂಬರೆ, ಮಾಹೆ ಮಜಕೂರು 22ನೇ ಮರ್‍ಕುಂ ಸೋಮವಾರ ಮೊದಲು 30ನೇ ಸೆಪ್ಟಂಬರ್ ಮಂಗಳವಾರದವರಿಗೆ ಉಭಯ ದಿನಗಳೂ ಶೇರಿ, ಮೈಸೂರು ಸ್ಟೇಟ್ ರೇಯಿಲ್‌ವೆಯ ಯಲ್ಲಾ ಸ್ಟೇಷನ್‌ಗಳಿಂದಲೂ ಮೈಸೂರಿಗೆ ಹೋಗಿ ವಾಪಸ್ ಬರತಕ್ಕ ಬಗ್ಯೆ ಒಂದೂವರೆ ಛಾರ್ಜಿಗೆ ಮೂರನೇಕ್ಲಾಸ್ ರಿಟರ್ನ್ ಟಿಕೆಟ್‌ಗಳು ಕೊಡಲ್ಪಡುವವು; ಮತ್ತು ಅವು 1884ನೇ ಇಸವಿ ಅಕ್ಟೋಬರ್ 5ನೇ ಮರ್‍ಕುಂ ಆದಿವಾರದವರಿಗೆ ಯಾವ ದಿನದಲ್ಲಾದರೂ ವಾಪಸ್ ಬರುವ ಬಗ್ಯೆ ಉಪಯೋಗಿಸಲ್ಪಡುವವು.

ಬೆಂಗಳೂರಿಂದಲೂ ಮತ್ತು ತುಮಕೂರಿಂದಲೂ ಮೈಸೂರಿಗೆ ಸ್ಪೆಷಲ್ ಬಂಡಿಗಳು ಬಿಡಲ್ಪಡುತವೆ; ಇನ್ನೂ ಜಾಸ್ತಿ ತಪಶೀಲ್‌ಗಳು ತಿಳಿಯಬೇಕಾದರೆ ಮೈಸೂರು ಸ್ಟೇಟ್ ರೇಯಿಲ್‌ವೇ ಟ್ರಾಫಿಕ್ ಸೂಪರ್‌ಟೆಂಡೆಂಟರಿಗೆ ಬರೆದುಕೊಳ್ಳತಕ್ಕದ್ದು.

ಪ್ರಕಟನೆ.

ಬೆಂಗಳೂರು—ತುಮಕೂರು ರೈಲ್ವೆ ತೆರಿಯೋಣವು.

ಸನ್ 1884ನೇ ಇಸವಿ ಆಗಸ್ಟು ತಾರೀಖು 11ನೇ ಲಾಗಾಯತು ಬೆಂಗಳೂರಿಂದ 43 ಮೈಲಿ ಧೂರದಲ್ಲಿ ಇರುವ ತುಮಕೂರುವರಿಗೆ ರೈಲ್‌ವೆ ಭಂಡಿಗಳ ಮೇಲೆ ಪ್ರಯಾಣಸ್ಥರು ಅವರ ಲಗ್ಗೇಜ್, ಕುದುರೆಗಳು, ಭಂಡಿಗಳು, ನಾಯಿಗಳು, ಪಾರಸಲ್‌ಗಳು ಮತ್ತು ಗೂಡ್ಸು ಯಾನೆ ಸಾಮಾನುಗಳು ಮೈಸೂರು ರೈಲ್‌ವೆಯ ತಮಾಂ ಸ್ಟೇಷನ್‌ಗಳಿಂದ ಸಾಗಿಸಲ್ಪಡುವವು.

ತುಮಕೂರು ಲೈನ್‌ನಲ್ಲಿ ಇರತಕ್ಕ ಸ್ಟೇಷನ್‌ಗಳು ಯಾವವೆಂದರೆ:—

ಬೆಂಗಳೂರು, ಬಾಣಾವಾರ, ಗೊಲ್ಲಹಳ್ಳಿ, ದೊಡ್ಡಬಲೆ, ನಿಡವಂಡ, ಹಿರೇಹಳ್ಳೀ, ತುಮಕೂರು.

ಸ್ಟೇಷನ್‌ಗಳು.		ಪ್ರಯಾಣಸ್ಥರ ಭಂಡಿ.	ಛಾರ್ಜಗಳು. ೧ನೇ ತರಗತಿ.			೨ನೇ ತರಗತಿ.			೩ನೇ ತರಗತಿ.		
		ಬೆಳಗ್ಯೆ.									
ಬೆಂಗಳೂರು	ಹೊರಡುವದು ..	7—30	2	11	0	1	5	6	0	10	9
ತುಮಕೂರು	ಶೇರುವದು ..	10—37									
		ಸಾಯಿಂತ್ರ.									
ತುಮಕೂರು	ಹೊರಡುವದು ..	2—18	2	11	0	1	5	6	0	10	9
ಬೆಂಗಳೂರು	ಶೇರುವದು ..	5—25									

ವಿಶೇಷ ತಪಶೀಲುಗಳು ಪ್ರತ್ಯೇಕ ಇಸ್ತಿಹಾರಿನಲ್ಲಿ ಛಾಪಿಸಲ್ಪಟ್ಟಿರುತ್ತೆ.

ಬೆಂಗಳೂರು,
4ನೇ ಆಗಸ್ಟು 1884ನೇ ಇಸವಿ.

ಏ. ರೀಡ್ ಬೀಚರ್,
ಮ್ಯಾನೇಜರ್.

ಗೈರ್ ವಿಲಾ.

ಕರ್ರೆನ್ಸೀ ನೋಟಿನ ಅರ್ಧ ತುಕಡಿ.

ನಂಬರ್.	ಸರ್ಕ್ಕಲ್.	ಮೊಬಲಗು.	
58387	ಮದರಾಸ್	ರೂ. 50	ಹಕ್ಕುದಾರ—ಚಿಕ್ಕಮಗಳೂರು ತಾಲ್ಲೂಕು ವಗರು ಬಂಗ್ಲೆ ರೈಟರ್ ನಾರಣಪ್ಪ. ಪತ್ತೇಮಾಡಿ ಕೊಟ್ಟವರಿಗೆ 10 ರೂಪಾಯಿ ಇನಾಂ ಕೊಡುವದಾಗಿ ಹೇಳುತ್ತಾನೆ.

ವ್ಯೆಸೂರು ಗೆಜೆಟ್, ಚಂದಾದರ ವಗ್ಯೆರೆ.

	ಚಂದಾ. ರೂ. ಆ.		ಟಪ್ಪಾಲ್ ಹಾಸಲು ವ್ಯೆಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ.	
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8

ಛಷ್ ಮಾಹೆ ಯಾ ಕ್ವಾರಟರಿಗೆ ದಾಮಾಷಾಯಿ ಪ್ರಕಾರ ದರಗಳು.

			ರೂ.	ಆ.
ಶಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟೀಸುಗಳು :—				
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ)			2	8
ಯರಡನೇ ಸಲ ವ ಆ ತರುವಾಯ, ಪ್ರತಿ ಆವರ್ತಿಗೂ.	ಡಿಟೋ		1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ, ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟೀಸ್‌ಗಳಿಗೆ:—				
ಮೊದಲನೇ ದಫಾ			5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ			2	8
ಶಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.				
ಡ್ಯುಪ್ಲಿಕೇಟ್ ಕಾಫೀ ಪಟ್ಟೇ, ವಗ್ಯೆರೇ ಕೊಡುವ ಬಗ್ಯೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟೀಸ್‌ಗಳಿಗೆ :—				
ಮೊದಲನೇ ಸಲಕ್ಕೆ		ಪುಟ 1ಕ್ಕೆ	10	0
ಯೆರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ		"	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ ;—				
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ		ಪಙ್ತಿ 1ಕ್ಕೆ	0	8
ಯೆರಡನೇ ದಫಾ	ಡಿಟೋ	ಡಿಟೋ	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ			0	4

ಬಮೋಜಿಬ್ ಹುಕ್ಕುಂ,

ಹೆಚ್. ಹಡರ್ಸ್,

ಮೈ. ಗೆ. ಕಂಪೈಲರ್.

اشتہارنامہ

سوار اور بارقہ کی نوکری واسطے صاحب ملتری سکرتری آفیس کے رجسترونمین داخل ہین سو تمام امیدواران امتحان کے واسطے نیچے نمودہین سو جگہ ون اور تاریخون مین حاضر ہونا چاہئے انکی حقداریکا باب تب فیصل کیا جایگا ۔ ان تاریخون مین حاضر ہوے چوک گئے تو نام ایسے امیدوارون کا رجستر سے نکال دیے جایگا ۔

جگہ بنگلور ملتری سکرتری آفس	سوار روز پیر اٹھوین ستمبر ۱۸۹۰ع روز منگل بارقہ نوین ستمبر ۱۸۹۰ع
جگہ مہسور کیاینپ ملتری سکرتری آفس A.C.Hay.	سوار روز چہارشنبہ پہلی اکتوبر ۱۸۹۰ع روز جمعرات بارقہ دوسری اکتوبر ۱۸۹۰ع

صحیح کرنل اے ۔ ثی ۔ ہے صاحب افیشیٹنگ ملتری سکرتری
ملتری سکرتری آفس ۱۴ وین اگست ۱۸۹۰ع بنگلور

خط مرزا محمد علی فارسی منشی

526

ಮೈಸೂರ ಗೆಜೆಟ್.

ನಂ. 37 ಸರ್ಕಾರದಿಂದ ಪ್ರಾಯಿಷ್ ಆದ್ದು. ಸನ್ 1884

ಬೆಂಗಳೂರು, ಶನಿವಾರ, ಸೆಪ್ಟಂಬರ್ ತಾ|| 13, ಸನ್ 1884.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ಕಾಂಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮೈಸೂರು ಸ್ಟೇಟ್‌ರೇಯಿಲ್‌ವೆ, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್‌ಸೂಪರಿಂಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನುಗಳು—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಮೈಸೂರು ಸೀಮೆಯ ಲ್ಯಾಂಡ್ ರೆವಿನ್ಯು ರೆಗ್ಯುಲೇಷನಿನ ಮಸೂದಾ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 15ನೇ ಆಗಸ್ಟ್ 1884.

ನಂ. 119.—(1870ನೇ ಇಸವಿ VIIನೇ ನಂಬರ್ ಆಕ್ಟೆಂಬ) ಕೋರ್ಟ್‌ಫೀಸ್ ಆಕ್ಟಿನ 35ನೇ ಸೆಕ್ಷನಿನಿಂದ ಉಂಟುಮಾಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರು ಹುಕ್ಕುಂ ಮಾಡುವದೇನಂದರೆ, ಮೈಸೂರು ಚೀಫ್ ಕೋರ್ಟಿನಲ್ಲಿ ವಖ್ಬ ಅಡ್ವೋಕೇಟ್‌ರಾಗಿ ದಾಖಲ್ಮಾಡಲ್ಪಟ್ಟ, ಇಂಗ್ಲೆಂಡ್ ಯಾ ಐರ್‌ಲೆಂಡ್ ಕೋರ್ಟಿನ ಯಾವದಾದರೂ ಇನ್‌ಗಳ ಬ್ಯಾರಿಸ್ಟರ್—ಅಟ್—ಲಾ ಯವರುಗಳಿಂದಲಾಗಲಿ, ಸ್ಕಾಟ್‌ಲೆಂಡಿನ ಫ್ಯಾಕಲ್‌ಟಿ ಆಫ್ ಅಡ್ವೋಕೇಟ್ಸ್ ಯೆಂಬದರ ಯಾವ ಮೆಂಬರ್‌ನಿಂದಾಗಲಿ, ಮೈಸೂರು ದೇಶದಲ್ಲಿನ ಕೋರ್ಟುಗಳಲ್ಲಿ ದಾಖಲ್ಮಾಡಲ್ಪಡುವ ವಕಾಲತ್‌ನಾಮೆಗಳ ಮೇಲೆ, ಸದರೀ ಆಕ್ಟಿನ IIನೇ ಷೆಡ್ಯೂಲ್ 10ನೇ ಕಲಂ ಅನುಸರಿಸಿ ಪಾವತೀಮಾಡಲ್ಪಡಬೇಕಾದ ಫೀಜು ಪೂರ್ತಿಯಾಗಿ ಮಾಫಾಗತಕ್ಕದ್ದು.

ಕೆ. ಶೇಷಾದ್ರಿಅಯ್ಯರ್,
ದಿವಾನ್.

ತಾರೀಖು 21ನೇ ಆಗಸ್ಟು 1884.

ನಂ. 126.—ಈಚಿಗೆ ಹಾಸನ ತಾಲ್ಲೂಕಿಗೆ ವರ್ಗ ಮಾಡಲ್ಪಟ್ಟ ಮಾಜಿ ಅರಕಲ್‌ಗೂಡು ತಾಲ್ಲೂಕಿನ ಕೆಲವು ಚಿಲ್ಲರೇ ಗ್ರಾಮಗಳು ಅವುಗಳ ಬಾಜೂದಲ್ಲಿನ ಗ್ರಾಮಗಳಿಗೆ ಶೇರಿಸಲ್ಪಟ್ಟಿರುವದನ್ನು ತೋರಿಸುವ ಇದರಡೀ ಕಂಡ ತಖ್ತೆಯು ಸರ್ವರ ತಿಳುವಳಿಕೆ ಬಗ್ಗೆ ಇದರಿಂದ ಪ್ರಕಟಿಸಲ್ಪಟ್ಟಿರುತ್ತೆ:—

ಹೋಬಳಿ ಹೆಸರು.	ನಂಬರು.	ಕಾಯಂಮಾಡಲ್ಪಟ್ಟ ಗ್ರಾಮಗಳು.	ನಂಬರು.	3ನೇ ಕಾಲಂನಲ್ಲಿ ಕಾಣಿಸಿರುವ ಗ್ರಾಮಗಳಲ್ಲಿ ಶೇರಿಸಬೇಕಾದ ಗ್ರಾಮಗಳ ಹೆಸರು.	ಷರಾ.
1	2	3	4	5	6
ಶಾಂತಿಗ್ರಾಮ	1	ರಾಮನಹಳ್ಳಿ ..	1	ಗುಡಬೊಮ್ಮನಹಳ್ಳಿ	
	2	ಭಕ್ತರವಳ್ಳಿ (ಮಾರವೇ ಫಿರಕಾ) ..	1	ಮಾಯಿಗೊಂಡನಹಳ್ಳಿ	
	3	ಕೊಡಗಟ್ಟವಳ್ಳಿ ..		..	ಭರತೂರಿಗೆ ಶೇರಿದ ಈ ಎರಡು ದಾಖಲೆ ಗ್ರಾಮಗಳು ಮೂಲೆ ತಾಕಾಗಿರುವದರಿಂದ ಈ ಎರಡೂ ಬೇರೇ ಗ್ರಾಮಗಳಾಗಿರತಕ್ಕದ್ದು, ಅಸಲೀ ಭರತೂರಿಗೆ ಶೇರತಕ್ಕದ್ದಲ್ಲಾ.
	4	ಕಟ್ಟೇ ಹೊಸೂರು ..		..	
	5	ಹಂಜಲಿಗೆ ..	1	ಮೂಲಗೊಂಡನಹಳ್ಳಿ	
	6	ಮಾದಿಹಳ್ಳಿ ..	1	ಭಕ್ತರವಳ್ಳಿ (ಪೇಟೆರಾಖ)	
	7	ಚಿಕ್ಕನಹಳ್ಳಿ ..	1	ಬುಕ್ಕಾಪುರ	
	8	ಅಮಲೆಪುರ ..	1	ಮಲ್ಲೇನಹಳ್ಳಿ	
ಪಾಳ್ಯ	9	ವಲಗರಹಳ್ಳಿ	1	ಪಾಯಿಂಣನಹಳ್ಳಿ	
ಕಾಟ್ಯ	10	ದೆನಿಹಳ್ಳಿ ..	1	ಮೂಡ್ಲ ಚಿಕ್ಕನಹಳ್ಳಿ	
	11	ಮಂಚನಹಳ್ಳಿ ..	1	ಪಡು ಚಿಕ್ಕನಹಳ್ಳಿ	

ತಾರೀಖು 2ನೇ ಸೆಪ್ಟೆಂಬರ್ 1884.

ನಂ. 133.—ಮೈಸೂರು ಷಹರಿನ ಇದರಡೀ ಕಂಡ ಚಕ್ಕುಬಂದಿ ವಿವರಣೆಯು, ದಿವಾನರವರಿಂದ ಮಂಜೂರ್ಮಾಡಲ್ಪಟ್ಟು, ಸರ್ವರ ತಿಳುವಳಿಕೆ ಬಗ್ಗೆ ಇದರಿಂದ ಪ್ರಕಟಿಸಲ್ಪಡುತ್ತೆ :—

ಸರಹದ್ದು ಲೈನು, ಮೈಸೂರು–ಶ್ರೀರಂಗಪಟ್ಟಣದ ರಸ್ತೆಯ 86ನೇ ಮೈಲಿಯ 6ನೇ ಫರಲಾಂಗಿನಲ್ಲಿರುವ ಶೇತುವೆಯ ಮಧ್ಯಭಾಗದಿಂದ ಉತ್ತರಕ್ಕೆ 500 ಅಡಿಗಳ ದೂರದ ಮೊದಲು ಪೂರ್ವ ದಿಕ್ಕಿಗಾಗಿ ತೋಟಗಳ ಮಾರ್ಗವಾಗಿ ದಾರಿಯ ಉತ್ತರ ದಿಕ್ಕಿಗೆ ವ್ಯಾಪಿಸಿ, ನೀರು ಹರಿಯುವ ಹಳ್ಳದ ಮಧ್ಯದ ವರಿವಿಗೂ ಸುಮಾರು 300 ಅಡಿಗಳ ತನಕ ಹೋಗಿ, ಅನಂತರ ನೆಟ್ಟಗೆ ಹೊರಟು ಶ್ರೀರಂಗಪಟ್ಟಣದ ಹಳೆರಸ್ತೆಯನ್ನು ಯರಡು ಕಾಲುದಾರಿಗಳು ಶೇರುವ ಕಡೆ ಸಂಧಿಸುತ್ತದೆ. ಶ್ರೀರಂಗಪಟ್ಟಣದ ಹಳೇ ರಸ್ತೆಯಲ್ಲಿರುವ ಈ ಗುರ್ತು ಆರಂಭಿಸಿ ಸರಹದ್ದು ಲೈನು, ನಿರಋತಿ ದಿಕ್ಕಿಗಾಗಿ ನೆಟ್ಟಗೆ ಹೊರಟು "ಗೋಣೀಮರದ" ತೋಪಿನ ಈಶಾನ್ಯ ದಿಕ್ಕಿಗೆ 20 ಅಡಿಗಳ ದೂರದಲ್ಲಿರುವ ದಮನೂರು ಕೆರೆ ರಸ್ತೆಯಲ್ಲಿ ಗುರ್ತು ಮಾಡಿರುವ ಸ್ಥಳದ ವರೆಗೆ ವ್ಯಾಪಿಸುತ್ತದೆ, ತೋಪಿನಿಂದ ನೆಟ್ಟಗೆ ಹೊರಟು ನವಾಬರ ಭಾವಿಯ ಈಶಾನ್ಯ ದಿಕ್ಕಿನ ಕೊನೆಗೆ 20 ಅಡಿಯಲ್ಲಿರುವ ಗುರ್ತಿನ ವರಿಗೆ ಹೋಗುತ್ತದೆ.

ಸರಹದ್ದು ಲೈನು, ನವಾಬರ ಭಾವಿಯಿಂದ ನೆಟ್ಟಗೆ ಹೊರಟು ಕಾಟಮ್ಮನಹಳ್ಳಿಗೆ ಹೋಗುವ ಕೆಳಗಿನದಾರಿಯು ಕಾರಂಜೀಕೆರೆ ಕಾಲವೆಯನ್ನು ಬಿಡುವ ವರಿಗೆ ಹೋಗುತ್ತದೆ. ಅನಂತರ ನೆಟ್ಟಗೆ ಕೋಟೆಯ ಹಳೇ ಖಂದಕದ ಕೊನೆ ವರಿವಿಗೂ ಹೋಗಿ ಅಲ್ಲಿಂದ ಪೂರ್ವದಿಕ್ಕಿಗಾಗಿ ಕೋಟೆ ಖಂದಕದ ಸುತ್ತಲೂ ಈಶಾನ್ಯ ದಿಕ್ಕಿನ ಕೊನೆ ವರಿವಿಗೂ ವ್ಯಾಪಿಸುತ್ತದೆ.

ಸದರೀ ಹಳೇಕೋಟೆಯ ಈಶಾನ್ಯ ದಿಕ್ಕಿನ ಕೊನೆ ಮೊದಲುಗೊಂಡು, ಸರಹದ್ದು ಲೈನು, ಶುದ್ಧ ದಕ್ಷಿಣಕ್ಕಾಗಿ ಸುಮಾರು 920 ಅಡಿಗಳ ವರಿವಿಗೂ ವ್ಯಾಪಿಸಿ ಅನಂತರ ನೆಟ್ಟಗೆ ಬನ್ನೂರು ರಸ್ತೆಯಲ್ಲಿ ಸದರೀ ರಸ್ತೆಯು ಚಾಮುಂಡೀ ಬೆಟ್ಟದ ರಸ್ತೆಗೆ ಶೇರುವ ಸ್ಥಳ

ದಿಂದ ಪೂರ್ವ ದಿಕ್ಕಿಗೆ 290 ಅಡಿಗಳ ವರಿವಿಗೆ ವ್ಯಾಪಿಸುತ್ತದೆ. ಈ ಅಳತೆಯು ರಸ್ತೆಗಳ ವಳ ಚರಂಡಿಗಳು ಕೂಡುವ ಸ್ಥಳದಿಂದ ತೆಗೆಯಲ್ಪಟ್ಟಿ ಯಿಧೆ.

ಸರಹದ್ದು ಲೈನು, ಚಾಮುಂಡೀಬೆಟ್ಟದ ರಸ್ತೆಯನ್ನು ಶೇರಿ ಅದರ ಪೂರ್ವ ಭಾಗಕ್ಕಾಗಿ ಉದ್ದಕ್ಕೆ ಹೊರಟು ಕುಂಬಾರಹಳ್ಳಿ ಗ್ರಾಮ ಸುತ್ತಿಕೊಂಡು ಸದರೀ ರಸ್ತೆಯು ಕಾರಂಜೀ ಕೆರೆ ರಸ್ತೆಗೆ ಕೂಡುವ ಬಳಿ ಬಂದು ಶೇರುತ್ತೆ.

ಅನಂತರ ಸರಹದ್ದು ಲೈನು, ಕಾರಂಜೀಕೆರೆ ರಸ್ತೆ ಮತ್ತು ಕುದುರೆ ಜಾಜಿನ ಬೋರೆ ರಸ್ತೆ ಇವುಗಳ ದಕ್ಷಿಣಕ್ಕಾಗಿ ಹೊರಟು, ಗೊಬ್ಬಿಕೆರೆ ತಲಾವಿನ ಯೇರಿ ಮೇಲುಭಾಗಕ್ಕಾಗಿ ಚಾಮುಂಡೀ ಬೆಟ್ಟದ ರಸ್ತೆಯಬಳಿ ಕಾಲ್ವೆ ದಾಟುವ ಸ್ಥಳದ ವರೆಗೆ ವ್ಯಾಪಿಸುತ್ತೆ; ಅನಂತರ ರಸ್ತೇ ಮಾರ್ಗವಾಗಿ ಗಾಸಪ್ಪ ತೋಗಚಿ ಮಠವನ್ನ ಶೇರಿಸಿಕೊಂಡು ದೊಡ್ಡ ಕೆರೆ ತಲಾವಿನ ಹೆಚ್ಚಿಗೆ ನೀರು ಹರಿದು ಹೋಗುವ ಕಾಲ್ವೆಯ ದಕ್ಷಿಣಕ್ಕೆ 235 ಅಡಿಗಳ ದೂರದಲ್ಲಿ ಮೈಸೂರು-ನಂಜನಗೂಡು ರಸ್ತೆಯನ್ನು ಸಂಧಿಸುತ್ತದೆ. ಈ ಗುರ್ತು 89ನೇ ಮೈಲಿಯ 8ನೇ ಫರ್ಲಾಂಗಿನಲ್ಲಿರುತ್ತೆ.

ಸರಹದ್ದು ಲೈನು, ಅನಂತರ ತೋಟಗಳ ಮಾರ್ಗವಾಗಿ ಸೊಟ್ಟ ಸೊಟ್ಟಾದ ದಾರಿಯನ್ನು ಅನುಸರಿಸಿ ಹೋಗುತ್ತದೆ. ಸದರೀದಾರಿ ಯಾವತ್ತೂ ನಕ್ಷೆಯಲ್ಲಿ ಕಾಣಿಸಿ ಯಿರುವದಿಲ್ಲ; ಮತ್ತು ಸರಹದ್ದು ಲೈನು, ಹಾಗೆಯೇ ಹೊರಟು 89ನೇ ಮೈಲಿಯ 7ನೇ ಫರ್ಲಾಂಗು ಕಲ್ಲಿನಿಂದ 160 ಅಡಿಗಳ ದೂರದಲ್ಲಿ ಹಳೇ ಅಗ್ರಹಾರದ ರಸ್ತೆಯನ್ನು ಸಂಧಿಸುತ್ತದೆ.

ಸರಹದ್ದು ಲೈನು, ಅನಂತರ ನೆಟ್ಟಗೆ ದೊಡ್ಡ ಕೆರೆ ಕಾಲ್ವೆ ಕೊನೆವರಿಗೂ ಹೋಗಿ, ನೀರು ಕಾಲ್ವೆಯ ಪಶ್ಚಿಮ ಭಾಗಕ್ಕೂ, ಕನ್ನೇಗೌಡನ ಕೊಪ್ಪಲು ಗ್ರಾಮದ ಸುತ್ತಲೂ ಯಿರುವ ಕಾಲುದಾರಿಯ ದಕ್ಷಿಣದಿಕ್ಕಿಗೂ, ಮತ್ತು ಕಾಲುದಾರಿಯು ನೀರು ಸರಬರಾಯಿ ಆಗುವ ಕಾಲ್ವೆಯನ್ನು ಸಂಧಿಸುವ ಸ್ಥಳದ ಪಶ್ಚಿಮ ಭಾಗಕ್ಕೂ ಉದ್ದಕ್ಕೆ ಹೊರಟು, ಕೊರಕಲು ರಸ್ತೆಯ ಮೇಲ್ಭಾಗದಲ್ಲಿ ಸದರೀ ದೊಡ್ಡ ಕೆರೆ ಕಾಲ್ವೆಯ ಕೆಳ ಕಟ್ಟೆಯನ್ನು ಅನುಸರಿಸುತ್ತದೆ, ಅನಂತರ ಕಾಲ್ವೆ ಭೂಮಿಯ ಸರಹದ್ದನುಸರಿಸಿ ಸ್ವಲ್ಪ ದೂರದವರಿವಿಗೂ ಹೋಗಿ ಅನಂತರ ನೆಟ್ಟಗೆ ಹೊರಟು ಡಿಸ್ಟಿಲೇರಿ ಯಾನೆ ಭಟ್ಟಿಮನೆಯನ್ನ ಪೂರ್ವಭಾಗಕ್ಕೆ ಬಿಟ್ಟು ಕೂಕರಹಳ್ಳಿ ಕೆರೆಯ ಹಿಂಭಾಗದ ರಸ್ತೆಗೆ ಹೋಗಿ ಶೇರುತ್ತದೆ.

ಸರಹದ್ದು ಲೈನು, ಅನಂತರ ಕೂಕರಹಳ್ಳಿ ಕಾಲ್ವೆಯ ಪಶ್ಚಿಮಭಾಗಕ್ಕೆ 60 ಅಡಿಗಳವರಿಗೂ ನೆಟ್ಟಗೆ ಹೋಗುತ್ತದೆ, ಅನಂತರ ಉತ್ತರಕ್ಕೆ ತಿರುಗಿ ಪಡುವಾರಹಳ್ಳಿ-ಬಳಿಯಣ ಹಳೇರಸ್ತೆ ಮತ್ತು ಹೊಸರಸ್ತೆ ಇವೆರಡೂ ಶೇರುವ ಸ್ಥಳದ ಪೂರ್ವಭಾಗಕ್ಕೆ 245 ಅಡಿಗಳ ವರಿಗೂ ಹೋಗುತ್ತದೆ, ಅನಂತರ ಪಡುವಾರಹಳ್ಳಿ ಸುತ್ತಿಕೊಂಡು ಸದರೀ ಗ್ರಾಮದ ಪಶ್ಚಿಮ ಭಾಗಕ್ಕಾಗಿ ಉದ್ದಕ್ಕೆ ಜೀವಣರಾಯರ ಕೆರೆ ಕಾಲ್ವೆವರಿಗೂ ಹೋಗಿ ಧನ್ನೀಕಟ್ಟೆ ಕಾಲ್ವೆಯ ಉತ್ತರ ಭಾಗದ ಕಟ್ಟೆಯ ಅನುಸರಿಸಿ ಹಳ್ಳೀರಸ್ತೆಯ ಪಶ್ಚಿಮ ಭಾಗಕ್ಕಾಗಿ ಹುಂಡೀಹಳ್ಳದ ವರಿಗೂ ವಿಸ್ತರಿಸುತ್ತದೆ; ಅಲ್ಲಿಂದ ಹುಂಡೀಹಳ್ಳ ಅನುಸರಿಸಿ ರೈಲ್ ಶೇತುವೆ ಮಾರ್ಗವಾಗಿ ಪೂರ್ಣಯ್ಯನವರ ಕಾಲ್ವೆಗೆ ಪಶ್ಚಿಮ ಭಾಗಕ್ಕಾಗಿ ಬಳಗುಳದ ರಸ್ತೆಯಲ್ಲಿರುವ ಜೋಡೀ ತೆಂಗಿನ ಮರದ ಶೇತುವೆವರಿಗೂ ವ್ಯಾಪಿಸುತ್ತದೆ; ಅಲ್ಲಿಂದ ರಸ್ತೆಯ ಉತ್ತರದಿಕ್ಕಿಗಾಗಿ ಕೊನೆವರಿಗೂ ಹೋಗಿ ಅನಂತರ ನೆಟ್ಟಗೆ ಹೊರಟು ಶ್ರೀರಂಗಪಟ್ಣದ ರಸ್ತೆಯಲ್ಲಿ ಸರಹದ್ದು ಲೈನ್ ಆರಂಭಮಾಡಿದ ಸ್ಥಳಕ್ಕೆ ಬಂದು ಶೇರುತ್ತದೆ.

ತಾರೀಖು 5ನೇ ಸೆಪ್ಟಂಬರ್ 1884.

ನಂ. 134.—ಶಿವಮೊಗ್ಗಾ ಡಿಸ್ಟ್ರಿಕ್ಟಿನ ಸೀನಿಯರ್ ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಸೈಯದ್ ನಸೀರುದ್ದೀನಯವರು, 1884ನೇ ಇಸವಿ ಆಗಸ್ಟು 25ನೇ ಮಧ್ಯಾಹ್ನದ ಪೂರ್ವಾಹ್ನದಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟಿನ ಟ್ರೆಜರಿ ಆಫೀಸು ಚಾರ್ಜನ್ನು, ಡೆಪ್ಯೂಟಿ ಕಮಿಷನರ್ ಮೆ|| ಮೈಕಲ್‌ಜಾನಯವರಿಗೆ ಒಪ್ಪಿಸಿ ಇರುತ್ತಾರೆ.

ನಂ. 135.—ಬೆಂಗಳೂರು ಸಬಾರ್ಡಿನೇಟ್ ಜಡ್ಜ್ ಮೆ|| ಸಿ. ಕ್ರೈಸಯವರಿಗೆ, 1870ನೇ ಇಸವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 3ನೇ ಸೆಕಷನ್ ಅನುಸರಿಸಿ ಸದರೀ ಆಕ್ಟು ಪ್ರಕಾರ, ಜಿಲ್ಲಾ ಜಡ್ಜೀಯ ಅಧಿಕಾರಗಳು ಅವರ ಅಧಿಕಾರದ ಸ್ಥಳ ಸರಹದ್ದಿನಲ್ಲಿ ಅವರಿಂದ ಚಲಾಯಿಸಲ್ಪಡುವ ಬಗ್ಗೆ, ಕೊಡಲ್ಪಟ್ಟು ಇರುತ್ತವೆ.

ಬಮೋಜಿಬ್ ಹುಕ್ಕುಂ,

ಆರ್. ವಿಜಯೀಂದ್ರರಾವ್,

ಸೆಕ್ರೆಟೇರಿ.

ಮಿಲಿಟೇರಿ ಇಲಾಖಾ.

ಇಸ್ತಿಹಾರ್ ನಾಮಾ.

ತಾರೀಖು 12ನೇ ಮಾಹೆ ಆಗಸ್ಟ್ ಸರ್ 1884ನೇ ಇಸವಿ, ಮೊಕ್ಕಾಂ ಬೆಂಗಳೂರು.

ಸವಾರ್ ಮತ್ತು ಬಾರ್ ಇಲಾಖಾ ನೌಕರಿಯಲ್ಲಿ ದಾಖಲಾಗತಕ್ಕದ್ದಕ್ಕಾಗಿ ಮಿಲಿಟೇರಿ ಸಿಕ್ರೇಟೇರೀ ಸಾಹೇಬರವರ ಆಫೀಸಿನಲ್ಲಿ ರಿಜಿಸ್ಟರ್ ಆಗಿರತಕ್ಕ ವಿಶಿಷ್ಟ ವುಮೇದವಾರರುಗಳೂ ಇಂತಿಹರ್ಾ ಬಗ್ಯೆ ಈ ಕೆಳಗೆ ನಮೂದಿಸಿರುವ ಸ್ಥಳಗಳು ಮತ್ತು ತಾರೀಖುಗಳಲ್ಲಿ ಹಾಜರಾಗತಕ್ಕದ್ದು, ಆಗ್ಯೆ ಅವರ ಹಕ್ಕುದಾರಿ ಬಾಬ್ ವೆವಸ್ಥೆ ಮಾಡಲಾಧೀತು.

ಹಾಗೆ ಸದರೀ ತಾರೀಖುಗಳಲ್ಲಿ ಹಾಜರಾಗಲು ತಪ್ಪುವ ಯಲ್ಲಾ ವುಮೇದವಾರರುಗಳ ಹೆಸರುಗಳೂ ರಿಜಿಸ್ಟರಿನಿಂದ ತೆಗದು ಹಾಕಲ್ಪಡುತ್ತೆ.

ಸ್ಥಳಾ.	ತಾರೀಖು.
1 ಬೆಂಗಳೂರು. ಮಿಲಿಟೇರಿ ಸೆಕ್ರೇಟೇರೀ ಸಾಹೇಬರವರ ಆಫೀಸು	ಸವಾರ್ ವುಮೇದ್ವಾರ್ರು. 8ನೇ ಶಪ್ಟಂಬರ್ ಸರ್ 1884ನೇ ಇಸವಿ, ಸೋಮವಾರ. ಬಾರ್ ವುಮೇದವಾರ್ರು. 9ನೇ ಶಪ್ಟಂಬರ್ ಸರ್ 1884ನೇ ಇಸವಿ, ಮಂಗಳವಾರ.
2 ಮೈಸೂರು. ಮಿಲಿಟೇರಿ ಸೆಕ್ರೇಟೇರಿ ಸಾಹೇಬರವರ ಕ್ಯಾಂಪ್ ಆಫೀಸು	ಸವಾರ್ ವುಮೇದ್ವಾರ್ರು. 1ನೇ ಅಕ್ಟೋಬರ್ ಸರ್ 1884ನೇ ಇಸವಿ, ಬುಧವಾರ. ಬಾರ್ ವುಮೇದ್ವಾರ್ರು. 2ನೇ ಅಕ್ಟೋಬರ್ ಸರ್ 1884ನೇ ಇಸವಿ, ಗುರುವಾರ.

ಎ. ಸಿ. ಹೇ, ಕರ್ನಲ್,
ಆ॥ ಮಿಲಿಟೇರೀ ಸೆಕ್ರೇಟೇರಿ.

ಪಬ್ಲಿಕ್ ವರ್ಕ್ಸ ಇಲಾಖಾ.

ಇಸ್ತಿಹಾರ್ ನಾಮೆಗಳು.

ತಾರೀಖು 3ನೇ ಸೆಪ್ಟಂಬರ್ 1884.

ನಂ. 23—3612.—ಬೆಂಗಳೂರು—ತುಮಕೂರು ರೈಲ್ವೇ ಆಫಿಷಿಯೇಟಿಂಗ್ ಎಗ್ಸಿಕ್ಯೂಟೀವ್ ಇಂಜನಿಯರ್ ಮ॥ ವೈ. ಶ್ರೀನಿವಾಸರಾಯರು, ಮಾಹೇ ಮಜಕೂರ್ 15ನೇ ಮುಕ್ಕಾಂ ಲಾಗಾಯತು ಪಬ್ಲಿಕ್ ವರ್ಕ್ಸ ಇಲಾಖೆಗೆ ನೌಕರೀ ಬಗ್ಯೆ ವರ್ಗ ಮಾಡಲ್ಪಟ್ಟು, ಅದೇ ತಾರೀಖಿನಿಂದ ಅವರ ಕಾಯಂ ಹುದ್ದೆಯಾದ ಅಸಿಸ್ಟೆಂಟ್ ಇಂಜನಿಯರ್ ಕೆಲಸಕ್ಕೆ ವಾಪಸ್ ಹೋಗತಕ್ಕದ್ದು, ಅವರು ಕೋಲಾರದ ರೇಂಜಿನ ಚಾರ್ಜನ್ನು ವಹಿಸತಕ್ಕದ್ದು.

2. ಅಸಿಸ್ಟೆಂಟ್ ಇಂಜನಿಯರ್ ಸೈಯ್ಯದ್ ಯುಸೂಫ್ ಸಾಹೇಬರು ಕೋಲಾರದ ರೇಂಜಿನ ಚಾರ್ಜು ಒಪ್ಪಿಸಿದ ಬಳಿಕ ಮ॥ ಸುಬ್ಬರಾಯರವರಿಂದ ಕಡೂರು ಡಿವೀಜನಿನ ಚಾರ್ಜನ್ನು ವಹಿಸಿ ಆಫಿಷಿಯೇಟಿಂಗ್ ಎಗ್ಸಿಕ್ಯೂಟಿವ್ ಇಂಜನಿಯರಾಗಿ ಯಿರತಕ್ಕದ್ದು.

3. ಮ॥ ಸುಬ್ಬರಾಯರವರು ಕಡೂರು ಡಿವೀಜನಿನ ಛಾರ್ಜು ವಪ್ಪಿಸಿದ ಬಳಿಕ ಅವರ ಕಾಯಂ ಹುದ್ದೆಯಾದ ಅಸಿಸ್ಟೆಂಟ್ ಇಂಜನಿಯರ್ ಕೆಲಸಕ್ಕೆ ವಾಪಸಾಗಿ ಹಾಸನದ ರೇಂಜ್ ಚಾರ್ಜನ್ನು ವಹಿಸಿರತಕ್ಕದ್ದು.

ಬಮೋಜಿಬ್ ಹುಕ್ಮುಂ,
ತಿ. ಹೆಚ್. ಯಂ. ಕೆಸಿಂಗ್ಟನ್, ಕೆಪ್ಟನ್ ಆರ್. ಈ.,
ಮೈಸೂರು ಪಬ್ಲಿಕ್ ವರ್ಕ್ಸ ಇಲಾಖಾ ಸೆಕ್ರೇಟೇರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಫಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಸೆಪ್ಟಂಬರ್ ತಾ॥ 13, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ರೆಸಿಡೆಂಟರ ಇಲಾಖಾ.

ಇಸ್ತಿಹಾರ್ ನಾಮೆ.

ನಂ. 8. ತಾರೀಖು 26ನೇ ಆಗಸ್ಟ್ 1884.

ಇದರಿಂದ ಸಮಸ್ತ ಜನಗಳ ತಿಳುವಳಿಕೆಬಗ್ಯೆ ಪ್ರಕಟಿಸಲ್ಪಡುವದೇನಂದರೆ, 1883ನೇ ಇಸವಿಯ ಬೆಂಗಳೂರು ಮ್ಯುನಿಸಿಪೆಲ್ ರೆಗ್ಯುಲೇಷನ್ 5ನೇ ಸೆಕ್ಷನಿನ ನಿಬಂಧನೆಗಳನುಸರಿಸಿ, ಇದರಡಿ ಕಂಡವರು ಬೆಂಗಳೂರು ಸಿವಿಲ್ ವ ಮಿಲಿಟೆರಿ ಸ್ಟೇಷನಿನ ಯೂರೋಪಿಯನ್ ವ ಯುರೇಜಿಯನ್ ತರಗತಿಯ ಮತ್ತು ಮುಸಲ್ಮಾನ್ ತರಗತಿಗಳ ವಾಸಸ್ಥರಿಂದ, ಬೆಂಗಳೂರು ಸಿವಿಲ್ ವ ಮಿಲಿಟೆರಿ ಸ್ಟೇಷನಿನ ಮ್ಯುನಿಸಿಪೆಲ್ ಕಮ್ಮಿಷನರುಗಳಾಗಿ ಚುನಾಯಿಸಲ್ಪಟ್ಟಿರುತ್ತಾರೆ :—

1. ಮೆ॥ ಜೆ. ಡಬ್ಲ್ಯೂ. ಹೇಸ್, ಸೀನಿಯರ್.
2. ಮೆ॥ ಏ. ಮರ್ವಿನ್ ಸ್ಮಿತ್.
3. ಮೆ॥ ಸೆಂಟ್ ಜಾನ್ ಬೂರ್ಕ.

} ಯೂರೋಪಿಯನ್ ವ ಯುರೇಜಿಯನ್ ತರಗತಿಗಳ ಪ್ರತಿನಿಧಿಯಾಗಿ.

4. ಮೆ॥ ಜಿ. ಜಿ. ಬ್ರೌನ್.
5. ಮುಹಮ್ಮದ್ ಸಾಲಿಹಾ ಸಾಹೆಬ್, ಕೆ. ಬಿ.
6. ಆಗಾ ಅಬ್ದುಲ್ಲಾ ಸಾಹೆಬ್.

} ಮುಸಲ್ಮಾನ್ ತರಗತಿಯ ಪ್ರತಿನಿಧಿಯಾಗಿ.

2. ಯಿವರುಗಳು, ಅವರು ಚುನಾಯಿಸಲ್ಪಟ್ಟ ತಾರೀಖು ಮೊದಲು ಯರಡುವರುಷಗಳ ಕಾಲದ ವರಿವಿಗೂ ಯಾ ಅವರ ಬದ್ಲಿ ಮೊಕ್ಕರರ್ಮಾಡಲ್ಪಡುವ ವರಿವಿಗೂ ಉದ್ಯೋಗದಲ್ಲಿರತಕ್ಕದ್ದು.

ನಂ. 9. ತಾರೀಖು 2ನೇ ಸೆಪ್ಟಬರ್ 1884.

ಇದರಿಂದ ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಸಲ್ಪಡುವದೇನಂದರೆ, 1883ನೇ ಇಸವಿಯ ಬೆಂಗಳೂರು ಮ್ಯುನಿಸಿಪೆಲ್ ರೆಗ್ಯುಲೇಷನ 5ನೇ ಸೆಕ್ಷನಿನ ನಿಬಂಧನೆಗಳನುಸರಿಸಿ ಇದರಡಿ ಕಂಡವರು ಬೆಂಗಳೂರು ಸಿವಿಲ್ ವ ಮಿಲಿಟಿರಿ ಸ್ಟೇಷನಿನ ಹಿಂದೂ ತರಗತಿಯ ವಾಸಸ್ಥರಿಂದ ಸದರೀ ಸ್ಟೇಷನಿನ ಮ್ಯುನಿಸಿಪೆಲ್ ಕಮ್ಮಿಷನರುಗಳಾಗಿ ಚುನಾಯಿಸಲ್ಪಟ್ಟು ಇರುತ್ತಾರೆ:—

1. ರಾಯಬಹದೂರ್ ಯ. ಆರ್. ಸಭಾಪತಿ ಮೊದಲಿಯಾರ್
2. ವಿ. ಗಂಗಾಧರಚಟ್ಟಿಯಾರ್
3. ಯ. ಗೋವಿಂದರಾಜಮೊದಲಿಯಾರ್
4. ಯ. ಚೊಕ್ಕಲಿಂಗಮೊದಲಿಯಾರ್

} ಹಿಂದೂ ತರಗತಿಯ ಪ್ರತಿನಿಧಿಗಳಾಗಿ.

2. ಇವರುಗಳು ಚುನಾಯಿಸಲ್ಪಟ್ಟ ತಾರೀಖು ಮೊದಲು 2 ವರುಷದ ಕಾಲದವರಿಗೂ ಅಥವಾ ಅವರ ಬದಲಿ ನೌಕರರ್ನ್ನಾ ಡಲ್ಪಡುವವರಿಗೂ ಉದ್ಯೋಗದಲ್ಲಿ ಇರತಕ್ಕದ್ದು.

ಹುಕ್ಕುಂ ಬಮೋಜಿಬ್,
ಹೆಚ್. ವೈಲಿ, ಮೇಜರ್,
ರೆಸಿಡೆಂಟರ ಅಸಿಸ್ಟೆಂಟ್.

ಫೈನಾನ್ಷಿಯಲ್ ಇಲಾಖಾ.

1882ನೇ ಮೈಸೂರು ರೆಯಿಲ್ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡಿ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಂಡೋರ್ಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಂಡೋರ್ಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್‌ಸನ್,
ಕಾಂಟ್ರೋಲರ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್‌ಜಡ್ಜೀಯವರ ಕೋರ್ಟಿನಲ್ಲಿ.

ಸನ್ 1884ನೇ ಇಸವಿ ಅರ್ಜೀ ನಂಬರ್ 180.

ಮೃತಪಟ್ಟ ಘಟ್ಟರುದ್ರಪ್ಪನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರು 1ನೇ ಚೆನ್ನಬಸಮ್ಮ, 2ನೇ ರುದ್ರಮ್ಮ, ಮೃತಪಟ್ಟ ಸದರೀ ಘಟ್ಟರುದ್ರಯ್ಯನವರಿಗೆ, 1ನೇ ಯವಳು ಹೆಂಡತಿ, 2ನೇ ಯವಳು ಖಾಸಾ ತಂಗಿ ಆಗಬೇಕೆಂಬ ಹಕ್ಕುದಾರೀ ಮೇಲೆ ತುಮಕೂರ್ ಸ್ಥಳದ 1ನೇ ಚೆನ್ನಬಸಮ್ಮ, 2ನೇ ರುದ್ರಮ್ಮನವರು, ತುಮಕೂರ್ ವಾಸಸ್ಥರಾಗಿ ಮೃತಪಟ್ಟ ಘಟ್ಟರುದ್ರಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರೆಗೆ ಸರಟಫಿಕೇಟು ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತು ದಾರರಾದ 1ನೇ ಚನ್ನಬಸಮ್ಮ, 2ನೇ ರುದ್ರಮ್ಮನ ಅರ್ಜೀಯನ್ನು 1884ನೇ ಇಸವೀ ಅಕ್ಟೋಬರ ತಿಂಗಳು ತಾರೀಖು 9ರಲ್ಲು ಕೇಳಿ ಸರಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಘಟ್ಟಿ ರುದ್ರಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಥೆ.

1884ನೇ ಇಸವಿ ಸೆಪ್ಟಂಬರ ತಿಂಗಳು 10ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಥೆ.

ಸಿ. ಕ್ರೆಸ್,
ಸಬ್ ಜಡ್ಜ್.

ನಗರ ಡಿವಿಜನ್.

ನಗರ ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ 74.

ಮೃತಪಟ್ಟ ನಗರದ ತಾಲ್ಲೂಕು ಆರನಾಡು ಮಾಗಣಿ ಶಾನಭೋಗ ಮರಿಯಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಹೋತನಕಟ್ಟೆ ಸೇತುಮಾಧವಾಚಾರ್ಯ, ಮೃತಪಟ್ಟ ಸದರೀ ಮರಿಯಪ್ಪನ ದತ್ತು ಮಗ ಮೈನರ ಗುಂಡನಿಗೆ ಜನಕ ತಂದೆ ಆಗಬೇಕೆಂಬ ಹಕ್ಕುದಾರೀಮೇಲೆ ತೀರ್ಥಹಳ್ಳಿ ಕಸಬಾ ಸ್ಥಳದ ಸೇತುಮಾಧವಾಚಾರ್ಯನು ನಗರ ತಾಲ್ಲೂಕು ಆರನಾಡು ಮಾಗಣಿ ಪತ್ತೆಪೇಟಿ ವಾಸಸ್ಥನಾಗಿ ಮೃತಪಟ್ಟ ಶಾನಭೋಗ ಮರಿಯಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲಗಳನ್ನು ಮೈನರ ಗುಂಡನಿಗೋಸ್ಕರ ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತು ದಾರನಾದ ಸೇತುಮಾಧವಾಚಾರ್ಯನ ಅರ್ಜೀಯನ್ನು 1884ನೇ ಇಸವಿ ಅಕ್ಟೋಬರ ತಿಂಗಳು ತಾರೀಖು 16ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಾನಭೋಗ ಮರಿಯಪ್ಪನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಥೆ.

ಸ್ 1884ನೇ ಇಸವಿ ಅರ್ಜೀ ನಂಬರ 75.

ಮೃತಪಟ್ಟ ವೀರಪ್ಪಗವುಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಶಿದ್ದವೀರಪ್ಪ, ಮೃತಪಟ್ಟ ಸದರೀ ವೀರಪ್ಪಗವುಡನಿಗೆ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಸಾಗರ ತಾಲ್ಲೂಕು ಆವಿನಹಳ್ಳಿ ಮಾಗಣಿ ತೋಟದ ಕೊಪ್ಪದ ಸ್ಥಳದ ಶಿದ್ದವೀರಪ್ಪನು ಸದರೀ ತೋಟದ ಕೊಪ್ಪದ ಗ್ರಾಮದ ವಾಸಸ್ಥನಾಗಿ ಮೃತಪಟ್ಟ ವೀರಪ್ಪಗವುಡನ ಜಿಂದಗಿ ಬಗ್ಯಾಗಿ ಬರತಕ್ಕ 2,000 ರೂಪಾಯಿಗಳ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತು ದಾರನಾದ ಶಿದ್ದವೀರಪ್ಪನ ಅರ್ಜೀಯನ್ನು 1884ನೇ ಇಸವಿ ಅಕ್ಟೋಬರ ತಿಂಗಳು ತಾರೀಖು 16ರಲ್ಲು ಕೇಳಿ ಸರಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೀರಪ್ಪಗೌಡನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಥೆ.

1884ನೇ ಇಸವಿ ಸೆಪ್ಟಂಬರ ತಿಂಗಳು 2ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಥೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟು ಜಡ್ಜ್.

ಗೈರ ವಿಲಾ.

ಕರ್ರೆನ್ಸೀ ನೋಟಿನ ಅರ್ಧ ತುಕಡಿ.

ನಂಬರ.	ಸರ್ಕಲ್.	ಮೊಬಲಗು.	
58387	ಮದರಾಸ.	ರೂ. 50	ಹಕ್ಕುದಾರ—ಚಿಕ್ಕಮಗಳೂರು ತಾಲ್ಲೂಕು ವಗರು ಬಂಗ್ಲೆ ರೈಟರ ನಾರಣಪ್ಪ. ಪತ್ತೇಮಾಡಿ ಕೊಟ್ಟವರಿಗೆ 10 ರೂಪಾಯಿ ಇನಾಂ ಕೊಡುವದಾಗಿ ಹೇಳುತ್ತಾನೆ.

ಮೈಸೂರು ಸ್ಟೇಟ್ ರೈಲ್ವೆ.

ಮೈಸೂರಿನಲ್ಲಿ ನಡಿಯುವ ದಸರಾ ಉತ್ಸವ.

ತಾರೀಖು 3ನೇ ಸೆಪ್ಟೆಂಬರ 1884.

ಇದರಿಂದ ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಿಸಲ್ಪಡುವದೇನಂದರೆ, ಮಾಹೆ ಮಜಕೂರು 22ನೇ ಮುಕ್ಕಾಂ ಸೋಮವಾರ ಮೊದಲು 30ನೇ ಸೆಪ್ಟೆಂಬರ ಮಂಗಳವಾರದವರಿಗೆ ಉಭಯ ದಿನಗಳೂ ಸೇರಿ, ಮೈಸೂರು ಸ್ಟೇಟ್ ರೇಯಿಲ್ವೆಯು ಯಲ್ಲಾ ಸ್ಟೇಷನ್‌ಗಳಿಂದಲೂ ಮೈಸೂರಿಗೆ ಹೋಗಿ ವಾಪಸ ಬರತಕ್ಕ ಬಗ್ಯೆ ಬಂದೂವಸ್ತ ಛಾರ್ಜಿಗೆ ಮೂರನೇಕ್ಲಾಸ ರಿಟರ್ನ ಟಿಕೆಟಗಳು ಕೊಡಲ್ಪಡುವವು; ಮತ್ತು ಅವು 1884ನೇ ಇಸವಿ ಅಕ್ಟೋಬರ 5ನೇ ಮುಕ್ಕಾಂ ಆದಿವಾರದವರಿಗೆ ಯಾವ ದಿನದಲ್ಲಾದರೂ ವಾಪಸ ಬರುವ ಬಗ್ಯೆ ಉಪಯೋಗಿಸಲ್ಪಡುವವು.

ಬೆಂಗಳೂರಿಂದಲೂ ಮತ್ತು ತುಮಕೂರಿಂದಲೂ ಮೈಸೂರಿಗೆ ಸ್ಪೆಷಲ್ ಬಂಡಿಗಳು ಬಿಡಲ್ಪಡುತವೆ ; ಇನ್ನೂ ಜಾಸ್ತಿ ತಪಶೀಲ್‌ಗಳು ತಿಳಿಯಬೇಕಾದರೆ ಮೈಸೂರು ಸ್ಟೇಟ್ ರೇಯಿಲ್ವೇ ಟ್ರಾಫಿಕ ಸೂಪರಿಂಟೆಂಡೆಂಟರಿಗೆ ಬರೆದುಕೊಳ್ಳತಕ್ಕದ್ದು.

ಏ. ರೀಡ್ ಬೀಚರ,
ಮ್ಯಾನೇಜರ.

ಮೈಸೂರು ಗೆಜೆಟ್, ಚಂದಾದರ ವಗೈರೆ.

	ಚಂದಾ. ರೂ.	ಆ.	ಟಪ್ಪಾಲ್ ಹಾಸಲು ಮೈಸೂರು ಶೀವ ಶಿವಾಯಿ ಇತರ ಸ್ಥಳಗಳಿಗೆ.	
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛಷ್ ಮಾಹೆ ಯಾ ಕ್ವಾರಟರಿಗೆ	ದಾವಾಷಾಯಿ ಪ್ರಕಾರ ದರಗಳು.			

		ರೂ.	ಆ.
ಶಿವಿಲ್ ಕೋರ್ಟನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟೀಸುಗಳು :—			
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ)		2	8
ಯೆರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ.		1	4
ಸಿವಿಲ್ ಪ್ರೋಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ, ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟೀಸ್‌ಗಳಿಗೆ:—			
ಮೊದಲನೇ ದಫಾ ..	.. ..	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	..	2	8
ಶಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.			
ಡ್ಯುಪ್ಲಿಕೇಟ್ ಕಾಫೀ ಪಟ್ಟೇ, ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫಿಸರಗಳು ಕೊಡುವ ನೋಟೀಸ್‌ಗಳಿಗೆ :—			
ಮೊದಲನೇ ಸಲಕ್ಕೆ	ಪುಟ 1ಕ್ಕೆ ..	10	0
ಯೆರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	" ..	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ ;—			
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ ..	0	8
ಯೆರಡನೇ ದಫಾ ಡಿಟ್ಟೋ	ಡಿಟ್ಟೋ ..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ	.. ..	0	4

ಬಮೋಜೀಬ್ ಹುಕ್ಕುಂ,
ಹೆಚ್. ಹಡರ್ಸನ್,
ಮೈ. ಗೆ. ಕಂಟ್ರೋಲರ.

اشتہارنامہ

سوار اور بارقہ کی نوکری واسطے صاحب ملٹری سکرٹری آفیس کے رجسٹرونمین داخل ہین سو تمام امیدواران امتحان کے واسطے نیچے نمود ہین سو جگہ وَن اور تاریخون مین حاضر ہونا چاہئے انکی حقداریکا باب تب فیصل کیا جایگا - اَن تاریخون مین حاضر ہوے چک گئے تو نام ایسے امیدوارون کا رجسٹر سیے نکال دیے جایگا -

جگہ بنگلور ملٹری سکرٹری آفس	سوار روز پیر اٹھوین سپتمبر ۱۸۸۴ء روز منگل بارقہ نوین سپتمبر ۱۸۸۴ء
جگہ میسور کیاہپ ملٹری سکرٹری آفس A.C. Hay.	سوار روز چہارشنبہ پہلی اکتوبر ۱۸۸۴ء روز جمعرات بارقہ دوسری اکتوبر ۱۸۸۴ء

صحیح کرنل اے - ٹی - ہے صاحب اسسٹنٹ ملٹری سکرٹری
ملٹری سکرٹری آفس بارہوین اگست ۱۸۸۴ء بنگلور

خط مرزا محمد عیلی فارسی منشی

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಯಿಷ್ ಆದದ್ದು.

ಬೆಂಗಳೂರು, ಶನಿವಾರ, ಸೆಪ್ಟಂಬರ್ ತಾ॥ 13, ಸರ್ಕ 1884.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೪ನೇ ಭಾಗ

ಮೈಸೂರು ಶೀಮೆಯ ಲ್ಯಾಂಡ್ ರೆವಿನ್ಯು ರೆಗ್ಯುಲೇಷನಿನ ಮಸೂದಾ.

ಮೈಸೂರು ಶೀಮೆಯಲ್ಲಿ ರೆವಿನ್ಯುಯಾನೆ ಮುಲ್ಕೀ ಆಫೀಸರ್‌ಗಳಿಗೂ ಜಮೀನ್ ಕಂದಾಯಕ್ಕೂ ಸಂಬಂಧಿಸಿದ ಕಾನೂನನ್ನು ತಿದ್ದಿ ಪರಿಷ್ಕರಿಸುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನಿನ ಮಸೂದಾ.

ಮುಲ್ಕೀ ಆಫೀಸರ್‌ಗಳಿಗೂ, ಕಂದಾಯ ಏರ್ಪಾಡಿಗೂ, ಜಮೀನ್ ಕಂದಾಯ ವಸೂಲಿಗೂ, ಜಮೀನ್ ಕಂದಾಯ ಆಡಳತಕ್ಕೆ ಸಂಬಂಧಿಸಿದ ಇತರಾಂಶಗಳಿಗೂ ಸಂಬಂಧಿಸಿದ ಕಾನೂನನ್ನು ಒಟ್ಟು ಪಡಿಸಿ ನೆಟ್ಟಗೆಮಾಡುವದು ಆವಶ್ಯಕವಾದದರಿಂದ ಶ್ರೀಮನ್ಮಹಾರಾಜರಾಜಾಸಾಹೇಬ್ ಬಹದೂರವರು ಇದರಡಿ ಬರುವಮೇರೆ ನ್ಯಾಯವಿಧಾನವನ್ನು ಮಾಡುತ್ತಾರೆ ಹ್ಯಾಗಂದರೆ :—

1ನೇ ಚಾಪ್ಟರ್.

ಅವತರಣಿಕೆ.

ಸರ್ಕ 1879ನೇ ಇಸವಿಯ ಮುಂಬೈ ರೆವಿನ್ಯು ಕೋಡಿನ 1ನೇ ಸೆಕ್‌ಷನ್.

ಚಿಕ್ಕ ಹೆಸರು.

1. ಈ ರೆಗ್ಯುಲೇಷನು "ಸರ್ಕ 1884ನೇ ಇಸವಿಯ ಮೈಸೂರು ಲ್ಯಾಂಡ್ ರೆವಿನ್ಯು ಕೋಡ್" ಯೆಂದು ಕರೆಯಲ್ಪಡತಕ್ಕದ್ದು.

ಇದು ವಿಶಿಷ್ಟ ಮೈಸೂರು ಶೀಮೆಗೂ ವ್ಯಾಪಿಸುತ್ತದೆ.

ಸ್ಥಳವ್ಯಾಪ್ತಿ.

ಇದು ಸರ್ಕ 1884ನೇ ಇಸವಿ ಏಪ್ರೆಲ್ ಮೊದಲನೇ ತಾರೀಖಿನಲ್ಲಿ ಜಾರೀಗೆ ಬರತಕ್ಕದ್ದು.

ಆರಂಭ.

ಮುಂ. ರೆ. ಕೋ. 2ನೇ ಸೆಕ್‌ಷನ್.

ರದ್ದಾದ ಕೋಡ್‌ಗಳು.

2. ಇದಕ್ಕೆ ಲಗ್ತಾದ A ಗುರ್ತು ಷೆಡ್ಯೂಲ್‌ನಲ್ಲಿ ನಮೂದಿಸಲ್ಪಟ್ಟ ಆಕ್ಟುಗಳು, ರೂಲ್ಸ್, ಇಸ್ತಿಹಾರ್‌ನಾಮೆಗಳು, ಮತ್ತು ಹುಕುಂಗಳು, ರದ್ದುಮಾಡಲ್ಪಟ್ಟವೆ, ಆದರೆ ಅವುಗಳ ಪೈಕಿ ಯಾವದರ ಪ್ರಕಾರವಾಗಲಿ ಮಾಡಲ್ಪಟ್ಟ ಯಾವ ವಿಷಯವಾಗಲಿ ನಿಷ್ಪ್ರಮಾಣಿಕವಾಗುವದಾಗಿಲ್ಲವು.

ಯಾವ ಅಕ್ಟಿನಲ್ಲಾಗಲಿ, ರೂಲ್ಸಲ್ಲಾಗಲಿ, ಇಸ್ತಿಹಾರ್‌ನಾಮೆಯಲ್ಲಾಗಲಿ, ಹುಕ್ಕುಂನಲ್ಲಾಗಲಿ, ಇದರಿಂದ ರದ್ದು ಮಾಡಲ್ಪಟ್ಟ ಯಾವ ಯೆನಾಕ್ಟ್ಮೆಂಟ್ (ಯಾನೇ ಅಕ್ಟನ್ನು) ಕುರಿತಾಗಲಿ ಮಾಡಲ್ಪಟ್ಟ ತಮಾಂ ದಾಖಲೆಗಳೂ, ಈ ರೆಗ್ಯುಲೇಷನಿನ ಆಯಾ ಭಾಗಕ್ಕೆ ದಾಖಲ್ ಮಾಡಿದ್ದರೆ ಹ್ಯಾಗೋ ಹಾಗೆ ಓದಲ್ಪಡತಕ್ಕದ್ದು.

ಅಂಥಾ ಯಾವ ಅಕ್ಟು ಅನುಸರಿಸಿ ಯಾಗಲಿ ವಿಧಿಸಲ್ಪಟ್ಟ ತಮಾಂ ರೂಲ್‌ಗಳೂ, ಮಾಡಲ್ಪಟ್ಟ ಮೊಕರರಾತಿಗಳೂ, ಕೊಡಲ್ಪಟ್ಟ ಜಾಮೀನುಗಳೂ, ಉಂಟುಮಾಡಲ್ಪಟ್ಟ ಅಧಿಕಾರಗಳೂ, ಸಾದರ್ಮಾಡಲ್ಪಟ್ಟ ಹುಕುಂಗಳೂ, ಫಾಯಿಷ್‌ಮಾಡಲ್ಪಟ್ಟ ಇಸ್ತಿಹಾರ್ ನಾಮೆಗಳೂ, ಈ ಅಕ್ಟಿನಲ್ಲಿ ಮುಂದೆ ಸಮೂದಿಸಲ್ಪಡತಕ್ಕ ಯಾವ ಅಂಶಗಳಿಗಾಗಲಿ ಸಂಬಂಧಿಸಿದ ಹಾಲೀ ಜಾರಿಯಲ್ಲಿರುವ ಮಿಕ್ಕ ತಮಾಂ ರೂಲ್‌ಗಳೂ, (ಈ ರೆಗ್ಯುಲೇಷನನ್ನು ಅನುಸರಿಸಿ ಯಿರುವಷ್ಟು ಮಟ್ಟಿಗೆ) ಇದರ ಪ್ರಕಾರ ವಿಧಿಸಲ್ಪಟ್ಟಂತೆ, ಮಾಡಲ್ಪಟ್ಟಂತೆ, ಕೊಡಲ್ಪಟ್ಟಂತೆ, ಉಂಟುಮಾಡಲ್ಪಟ್ಟಂತೆ, ಸಾದರ್ಮಾಡಲ್ಪಟ್ಟಂತೆ, ಮತ್ತು ಫಾಯಿಷ್ ಮಾಡಲ್ಪಟ್ಟಂತೆ ಎಣಿಸತಕ್ಕದ್ದು.

ಇದರ ದೆಸೆಯಿಂದ ರದ್ದು ಮಾಡಲ್ಪಟ್ಟ ಯಾವ ಯೆನಾಕ್ಟ್ಮೆಂಟ್ ಅನುಸರಿಸಿಯಾಗಲಿ ಷುರು ಮಾಡಲ್ಪಟ್ಟ ಹಾಲೀ ಚಾಲತೀಯಲ್ಲಿರುವ ತಮಾಂ ನಡವಳಿತಗಳೂ, ಈ ರೆಗ್ಯುಲೇಷನ್ ಅನುಸರಿಸಿ ಷುರು ಮಾಡಲ್ಪಟ್ಟಂತೆ ಎಣಿಸಲ್ಪಡತಕ್ಕದ್ದು. ಮತ್ತು ಈ ರೆಗ್ಯುಲೇಷನ್ ಅನುಸರಿಸಿ ಉತ್ತರೋತ್ತರ ನಡಿಸಲ್ಪಡತಕ್ಕದ್ದು.

ಮುಂ. ರೆ. ಕೋ. 3ನೇ ಸೆಕ್ಷನ್.

3. ಈ ರೆಗ್ಯುಲೇಷನಿನಲ್ಲಿ ಅರ್ಥತಃ ಅಥವಾ ಸಂದರ್ಭತಃ ವಿರುದ್ಧಾಂಶವೇನೂ ಇಲ್ಲದಿದ್ದರೆ,—

ಅರ್ಥ ವಿವರಣೆಯ ಕಲಂ.

(1) "ರೆವಿನ್ಯೂ ಆಫೀಸರ್" ಅಂದರೆ, ಜಮೀನ್ ಕಂದಾಯದ ವಿಷಯದಲ್ಲಾಗಲಿ, ಸರ್ವೇ ಅಸೆಸ್‌ಮೆಂಟಿನ ವಿಷಯದಲ್ಲಾಗಲಿ, ಅದಕ್ಕೆ ಸಂಬಂಧಪಟ್ಟ ಲೆಖ್ಖಗಳು ಅಥವಾ ರಿಕಾರ್ಡ್‌ಗಳ ವಿಷಯದಲ್ಲಾಗಲಿ, ಮೊಕರರ್ ಮಾಡಲ್ಪಟ್ಟ ಯಾವದಾದರೂ ದರ್ಜೆಯ ಪ್ರತಿ ಆಫೀಸರೆಂದು ಅರ್ಥ:

ರೆವಿನ್ಯೂ ಆಫೀಸರ್.

(2) "ಸರ್ವೇ ಆಫೀಸರ್" ಅಂದರೆ, ಈ ರೆಗ್ಯುಲೇಷನ್ ೧೮ನೇ ಸೆಕ್ಷನ್ ಅನುಸರಿಸಿ ಅಥವಾ ಸದರೀ ಸೆಕ್ಷನ್ನಿಂದ ವಿಧಿಸಲ್ಪಟ್ಟ ರೀತಿಯಾಗಿ ಮೊಕರರ್‌ಮಾಡಲ್ಪಟ್ಟ ಒಬ್ಬ ಆಫೀಸರೆಂದರ್ಥ.

ಸರ್ವೇ ಆಫೀಸರ್.

(3) "ಜಮೀನ್" ಅಂದರೆ, ಜಮೀನ್ನಿಂದಲೂ, ಭೂಮಿಗೆ ಲಗ್ಗತ್ತಾದ ಅಥವಾ ಭೂಮಿಗೆ ಸೇರಿಸಲ್ಪಟ್ಟ ಯಾವ ವಸ್ತುವಿಗಾಗಲಿ ಸ್ಥಿರವಾಗಿ ಅಂಟಿಸೋಣಾದ ವಸ್ತುಗಳಿಂದಲೂ, ಉಂಟಾಗುವ ಪ್ರಯೋಜನಗಳನ್ನೂ, ಗ್ರಾಮಗಳ ಅಥವಾ ಶೀಮೆಯ ಇತರ ಗೊತ್ತು ಮಾಡಲ್ಪಟ್ಟ ಭಾಗಗಳ ಹುಟ್ಟುವಳಿಯಲ್ಲಿ ಅಥವಾ ಕಂದಾಯದಲ್ಲಿ ಅಥವಾ ಖರ್ಚುಗಳ ಮೇಲೆ ಹಿಸ್ಸೆಗಳನ್ನೂ ಸಹ ಅಡಗಿಸಿ ಕೊಳ್ಳುತ್ತದೆ:

ಜಮೀನ್.

(4) "ಎಸ್ಟೇಟ್" ಅಂದರೆ, ಜಮೀನ್‌ನಲ್ಲಿಯ ಯಾವದಾದರೂ ಆದಾಯ ಮತ್ತು ಅಂಥಾ ಆದಾಯವನ್ನು ವಹಿಸುವದಕ್ಕೆ ಶಕ್ತನಾದ ಒಬ್ಬ ಮನುಷ್ಯನಿಂದಾಗಲಿ ಮನುಷ್ಯರ ಸಮುದಾಯದಿಂದಾಗಲಿ ವಹಿಸಲ್ಪಟ್ಟ ಅಂಥಾ ಆದಾಯಗಳ ಸಮುದಾಯ ವೆಂಬದಾಗಿ ಅರ್ಥ:

ಎಸ್ಟೇಟ್.

ಸರ್ವೇನಂಬರ್.

(5) "ಸರ್ವೇನಂಬರ್" ಅಂದರೆ, ಯಾವದರವಿಸ್ತೀರ್ಣ ಮತ್ತು ಯಿತರ ತಪಶೀಲುಗಳನ್ನು ಬೇರೆಬೇರೆ ಯಾ ನಂಬರವಾರಾಗಿ ಅದು ಯಿರುವ ಗ್ರಾಮ, ಷಹರ್ ಅಥವಾ ಪಟ್ಟಣ ಯಿದರ ಸರ್ವೇರಿಕಾರ್ಡಿನಲ್ಲಿ ದಾಖಲ್ಮಾಡಲ್ಪಟ್ಟು ಯಿಧೆಯೋ ಅಂಥಾ ಒಂದು ಜಮೀನಿನ ಭಾಗವೆಂಬದಾಗಿ ಅರ್ಥ. ಮತ್ತು ಒಂದು ಸರ್ವೇನಂಬರಿನ ಗುರ್ತಾದ ಭಾಗವನ್ನು ಸಹ ಅಡಗಿಸಿಕೊಂಡು ಯಿರುತ್ತದೆ:

ಒಂದು ಸರ್ವೇನಂಬರಿನ ಗುರ್ತಾದಭಾಗ.

(6) "ಒಂದು ಸರ್ವೇನಂಬರಿನ ಗುರ್ತಾದಭಾಗ" ಅಂದರೆ, ಪ್ರತ್ಯೇಕ ಪ್ರತ್ಯೇಕವಾಗಿ ಕಂದಾಯ ದಾಖಲ್ಮಾಡಲ್ಪಟ್ಟು ಮತ್ತು ರಿಜಿಸ್ಟರ್ ದಾಖಲಾದ ಒಂದು ಸರ್ವೇನಂಬರಿನ ಒಂದು ಸಬ್ ಡಿವೀಜನ್ ಯೆಂದರ್ಥವು:

ಕಟ್ಟಡದನಿವೇಶನ.

(7) "ಕಟ್ಟಡದನಿವೇಶನ" ಅಂದರೆ, ಕಟ್ಟಡದ ಕೆಲಸಗಳಿಗಾಗಿ ಪಡೆದಿರುವ ಜಮೀನಿನ ಒಂದು ಹಿಸ್ಸೆಯೆಂದರ್ಥವು. ಅಂಥಾ ಹಿಸ್ಸೆಯಲ್ಲಿ ವಸ್ತುತಃ ಯಾವದಾದರೂ ಕಟ್ಟಡಕಟ್ಟಲ್ಪಟ್ಟಿರಲಿ ಯಿಲ್ಲದೆ ಇರಲಿ ಚಿಂತೆಯಿಲ್ಲವು; ಮತ್ತು ಅಂಥಾ ಜಮೀನಿನಲ್ಲಿ ಕಟ್ಟಲ್ಪಟ್ಟ ಯಾವದಾದರೂ ಕಟ್ಟಡಕ್ಕೆಸುತ್ತಯಿರುವ ಅಥವಾ ಸಮೀಪದಲ್ಲಿರುವ ಖುಲ್ಲಾ ಜಮೀನನ್ನಾಗಲಿ; ಹಜಾರವನ್ನಾಗಲಿ, ಅಡಗಿಸಿಕೊಳ್ಳುತ್ತದೆ:

ಯಲ್ಲೇಗುರುತು.

(8) "ಯೆಲ್ಲೇಗುರುತು" ಅಂದರೆ, ಒಬ್ಬ ಸರ್ವೇಆಫೀಸರರಿಂದಾಗಲಿ, ಜಮೀನಿನ ಯಾವದಾದರೂ ಭಾಗದ ಯೆಲ್ಲೆಯನ್ನು ಗೊತ್ತುಮಾಡುವದಕ್ಕಾಗಿ ಅಧಿಕಾರಪಡೆದ ಇತರ ರೆವಿನ್ಯೂ ಆಫೀಸರರಿಂದಾಗಲಿ, ಹಾಕಲ್ಪಟ್ಟ ಅಥವಾ ವುಪಯೋಗಿಸಲ್ಪಟ್ಟ ಅಥವಾ ತಪಶೀಲ್‌ನಿಶಿ ಗುರ್ತಿಸಲ್ಪಟ್ಟ, ಮಣ್ಣಿನಿಂದಾಗಲಿ ಕಲ್ಲಿನಿಂದಾಗಲಿ ಇತರ ಸಾಮಾನಿನಿಂದಾಗಲಿ ಯತ್ತರಿಸಲ್ಪಟ್ಟ ಯಾವದಾದರೂ ಒಂದು ಗುರ್ತೆಂತಲೂ ಮತ್ತು ಸ್ವಾಭಾವಿಕವಾದ ಅಥವಾ ಕಲ್ಪಿತವಾದ ಯಾವದಾದರೂ ಬೇಲಿಯೆಂತಲೂ, ಖಾಲೀಯಿರುವ ತುಂಡು ಜಮೀನು ಅಥವಾ ಯಿನ್ನು ಯಾವವಿಧವಾದ ಗುರ್ತೆಂತಲೂ ಅರ್ಥವು:

ಜಮೀನ್ ಪಡೆಯುವಣ.

(9) "ಜಮೀನ್ ಪಡೆಯುವಣ" ಅಂದರೆ, ಕೂಡಲೇಯಾಗಲಿ ಅಥವಾ ಕಾನೂನುಪ್ರಕಾರ ನಡದುಬರುವ ಹಿಡುವಳಿಗಳ ಆಖೈರ್‌ನಲ್ಲಿಯಾಗಲಿ ಆ ಭೂಮಿಯ ಸ್ವಾಧೀನತೆಗೆ ಮತ್ತು ಅನುಭವಕ್ಕೆ ಅಥವಾ ವಿನಿಯೋಗಕ್ಕೆ ಒಂದು ಬಾಧ್ಯತೆಯನ್ನು ಕಾನೂನುಪ್ರಕಾರ ಪಡಿಯೋಣ:

ಹಿಡುವಳೀದಾರ ಅಥವಾ ಜಮೀನ್ ಹಿಡುವಳೀದಾರ.

(10). "ಹಿಡುವಳೀದಾರ ಅಥವಾ ಜಮೀನ್ ಹಿಡುವಳೀದಾರ" ಅಂದರೆ, ಯಾವನಿಗೆ ತನಿಗೋಸ್ಕರವೇ ಆಗಲಿ ಅಥವಾ ಬೇರೆ ಒಬ್ಬ ಮನುಷ್ಯನಿಗಾಗಲಿ ಪೂರ್ತಿಯಾಗಿ ಅಥವಾ ಕೆಲವುಮಟ್ಟಿಗೆ ಮಾತ್ರ ಅಥವಾ ಮನುಷ್ಯರುಗಳ ಒಂದು ತರಗತಿಗಾಗಲಿ ಅಥವಾ ಜನಸಮೂಹಕ್ಕೋಸ್ಕರವಾಗಲಿ ಭೂಮಿಯನ್ನು ಪಡಿಯುವದಕ್ಕೆ ಹಕ್ಕನ್ನು ವುಂಟಾಗಿಯಿರುವ ಮನುಷ್ಯನೆಂದರ್ಥ.

ಅದು ಸ್ವಾಧೀನತೆಯ ಹಕ್ಕಿಗೆ ಬಾಧ್ಯನಾದ ಭೋಗ್ಯದಾರನನ್ನು ಕೂಡ ಶೇರಿಶಿಕೊಂಡಿರುತ್ತದೆ.

ಹಿಡುವಳಿ.

(11) "ಹಿಡುವಳಿ" ಎಂಬದು ಅಂಥಾ ಹಕ್ಕು ಪ್ರವರ್ತಿಸುವ ಜಮಿನನ್ನು ತಿಳಿಸುತ್ತೆ :

ಷಿಕ್ಮೀದಾರ.

(12) "ಷಿಕ್ಮೀದಾರ" ಅಂದರೆ, ಯಾವನು ಜಮೀನಿನ ಯಜಮಾನನಿಂದ ಅಥವಾ ಜಮೀನಿಗೆ ಹಕ್ಕುವುಳ್ಳ ಅವನ ಪೂರ್ವೀಕನಿಂದ ಜಮೀನಿಗೆ ಹಕ್ಕನ್ನು ಪಡಕೊಂಡು ಅದಕ್ಕಾಗಿ ತನ್ನ ಯಜಮಾನನಿಗೆ ಗುತ್ತಿಗೆ ಕೊಡುವದಕ್ಕೆ ಬಾಧ್ಯಸ್ಥನಾಗಿರುವನೋ ಅಥವಾ ಗುತ್ತಿಗೆ ಕೊಡತಕ್ಕದ್ದಿಲ್ಲವೆಂಬುವದಕ್ಕೆ ಕರಾರಿಲ್ಲದ ಪಕ್ಷದಲ್ಲಿ ಅದನ್ನು ಕೊಡುವದಕ್ಕೆ ಬಾಧ್ಯಸ್ಥನಾಗುವನೋ ಅವನು ಯೆಂಬು ಅರ್ಥ :

ಕಂದಾಯ.

(13) "ಕಂದಾಯ" ಅಂದರೆ, ಒಬ್ಬ ಷಿಕ್ಮೀದಾರನಿಗೆ ಕೊಡಲ್ಪಟ್ಟ ಜಮೀನಿನ ಉಪಯೋಗ ಅಥವಾ ಹಿಡುವಳಿಗೋಸ್ಕರ ಸದರೀ ಷಿಕ್ಮೀದಾರನಿಂದ ನಗದಾಗಿ ಅಥವಾ ಧಾನ್ಯರೂಪವಾಗಿ ಯಾವದು ಸಲ್ಲಿಸಲ್ಪಡುತ್ತೋ ಅಥವಾ ಒಪ್ಪಿಸಲ್ಪಡುತ್ತೋ ಅದನ್ನೂ ಅಥವಾ ಯಾವ ಚಾಕರಿ ಮಾಡಲ್ಪಡುತ್ತೋ ಅದನ್ನೂ ತಿಳಿಸುತ್ತದೆ :

ಮುಖ್ಯ ಹಿಡುವಳೀದಾರ.

(14) "ಮುಖ್ಯ ಹಿಡುವಳೀದಾರ" ಅಂದರೆ, ಯಾವನು ತನ್ನ ಹಿಡುವಳೀ ಜಮೀನುಗಳಗೋಸ್ಕರವಾಗಿ ಸರಕಾರಕ್ಕೆ ಕಂದಾಯ ಕೊಡಲಿ ಕೊಡದೇಹೋಗಲಿ ಅವನಿಂದ ಪಡದುಯಿರುವ ಸದರೀ ಜಮೀನಿನ ಇತರ ಹಿಡುವಳೀದಾರರುಗಳಿಂದ ಅವುಗಳಗಾಗಿ ಕಂದಾಯ, ಗುತ್ತಿಗೆ ಅಥವಾ ಜಮೀನು ಹುಟ್ಟುವಳಿಯನ್ನು ಹೊಂದಲಿಕ್ಕೆ ಬಾಧ್ಯಸ್ಥನಾಗಿರುವನೋ ಅವನನ್ನು ತಿಳಿಸುತ್ತದೆ :

ಕಂ ಹಿಡುವಳೀದಾರ.

(15) "ಕಂ ಹಿಡುವಳೀದಾರ" ಅಂದರೆ, ಮುಖ್ಯ ಹಿಡುವಳೀದಾರನಿಗೆ ಗುತ್ತಿಗೆಯನ್ನಾಗಲಿ ಕಂದಾಯವನ್ನಾಗಲಿ ತೆರುವದಕ್ಕೆ ಬಾಧ್ಯಸ್ಥನಾದ ಒಬ್ಬ ಹಿಡುವಳೀದಾರನನ್ನು ತಿಳಿಸುತ್ತದೆ :

ಅನುಭವದಾರ.

(16) "ಅನುಭವದಾರ" ಅಂದರೆ, ಪರಭಾರೇ ಮಾಡಲ್ಪಡದ ಜಮೀನಿನ ಒಬ್ಬ ಹಿಡುವಳೀದಾರನನ್ನಾಗಲಿ, ಬಹುಮಂದಿ ಹಿಡುವಳೀದಾರರಿರುವಪಕ್ಷಕ್ಕೆ ಅಂಥಾ ಯಾವದಾದರೂ ಜಮೀನು ವಿಷಯದಲ್ಲಿ ಉತ್ತಮನಾದ ಬಾಧ್ಯತೆಯನ್ನು ಪಡದಿರುವವನನ್ನಾಗಲಿ ಅಂಥಾ ಉತ್ತಮ ಬಾಧ್ಯತೆಯು ಅನೇಕಮಂದಿ ಹಿಡುವಳೀದಾರರಿಗೆ ಸಮನಾಗಿ ಯಿರುವ ಪಕ್ಷಕ್ಕೆ ಅಂಥಾ ಹಿಡುವಳೀದಾರರಪೈಕಿ ಯಾವನಾದರೂ ಒಬ್ಬನನ್ನಾಗಲಿ ತೋರಿಸುತ್ತದೆ :

ರಿಜಿಸ್ಟರಾದ ಅನುಭವದಾರ.

(17) "ರಿಜಿಸ್ಟರಾದ ಅನುಭವದಾರ" ಅಂದರೆ, ಗವರ್ನಮೆಂಟ ರಿಕಾರ್ಡುಗಳಲ್ಲಿ ಸಾಕ್ಷಾತ್ತಾಗಲಿ ತನ್ನ ಒಳ ಅನುಭವದಾರ, ಷಿಕ್ಮೀದಾರ, ಮುತಾಲೀಕ, ನೌಕರ ಅಥವಾ ಕಾನೂನು ಮೇರೆ ನಿಯಮಿಸಲ್ಪಟ್ಟ ಇತರ ವಿಧವಾದ ಪ್ರತಿನಿಧಿ ಇಂಥಾವರ ಮೂಲಕವಾಗಲಿ

ಅನ್ಯಾಕ್ರಾಂತವಾಗದ ಜಮೀನನ್ನು ಹಿಡುವಳಿಯಲ್ಲಿ ವಹಿಸುವಂತೆ, ಯಾರ ಹೆಸರು ಅಧಿಕಾರಪೂರ್ವಕ ಗವರ್ನಮೆಂಟ ರಿಕಾರ್ಡುಗಳಲ್ಲಿ ದಾಖಲಿರುತ್ತೋ ಅಂತಾ ಸಮಗ್ರವಾದ ಅನುಭವದಾರನನ್ನಾಗಲಿ, ಅನೇಕ ಸಮಗ್ರ ಅನುಭವದಾರರ ಪೈಕಿ ಹಿರಿಯವನು ಅಥವಾ ಮುಖ್ಯಸ್ಥನು ಇಂತಾವನನ್ನಾಗಲಿ ತಿಳಿಸುತ್ತೆ:

ಅನುಭವ.

(18) "ಅನುಭವ" ಅಂದರೆ ಒಬ್ಬ ಅನುಭವದಾರನಿಗೆ ಉಂಟಾದ ಹಕ್ಕುಗಳ ಸಮುದಾಯವನ್ನು ತಿಳಿಸುತ್ತೆ.

ಪರಭಾರೇ ಮಾಡಲ್ಪಟ್ಟದ್ದು.

(19) "ಪರಭಾರೇ ಮಾಡಲ್ಪಟ್ಟದ್ದು" ಅಂದರೆ ಗುತ್ತಿಗೆಯ ಅಥವಾ ಕಂದಾಯದ ವಸೂಲೀ ವಿಷಯದಲ್ಲಿಮಟ್ಟಿಗೆ ಗವರ್ನಮೆಂಟನವರಿಗಿರುವ ಹಕ್ಕುದಾರೀಗಳನ್ನು ಪೂರಾ ಅಥವಾ ಕೆಲವು ಮಟ್ಟಿಗೆ ಬೇರೆ ಯಾವ ಮನುಷ್ಯನ ಅನುಭವಕ್ಕೆ ವರ್ಗಾಯಿಸಲ್ಪಟ್ಟದ್ದೆಂದರ್ಥವು :—

ಪರಭಾರೆಯಾದ ಗ್ರಾಮ.

(20) "ಪರಭಾರೇಯಾದ ಗ್ರಾಮ" ಅಂದರೆ :—

(*a*) ಯಾವ ಗ್ರಾಮದ ಜಮೀನು ಕಂದಾಯವು ಪೂರಾ ಅಥವಾ ಕೆಲವು ಮಟ್ಟಿಗೆ ಪರಭಾರೆ ಮಾಡಲ್ಪಟ್ಟಿರುತ್ತೋ; ಅಥವಾ

(*b*) ಯಾವ ಗ್ರಾಮದ ಜಮೀನ್ ಕಂದಾಯದ ಪೈಕಿ ಗೊತ್ತುಮಾಡಲ್ಪಟ್ಟ ಮೊಬಲಗು ಪರಭಾರೆ ಮಾಡಲ್ಪಟ್ಟು ಇರುತ್ತೋ; ಅಥವಾ

(*c*) ಯಾವ ಗ್ರಾಮದ ಜಮೀನ್ ಕಂದಾಯದ ಪೈಕಿ ನಿಷ್ಕರ್ಷೆಯಾದ ಹಿಸ್ಸೆಯನ್ನು ಪರಭಾರೆ ಮಾಡಲ್ಪಟ್ಟು ಇರುತ್ತೋ; ಅಥವಾ

(*d*) ಯಾವ ಗ್ರಾಮದ ಜಮೀನ್ ಕಂದಾಯವು ಸ್ಥಿರವಾಗಿ ಗೊತ್ತು ಮಾಡಲ್ಪಟ್ಟಿರುತ್ತೋ;

ಅಂತಾ ಪೂರಾಗ್ರಾಮವೆಂದರ್ಥವು.

ಪರಭಾರೆಯಾದ ಜಮೀನ್.

(21) "ಪರಭಾರೇಯಾದ ಜಮೀನ್" ಅಂದರೆ, ಯಾವ ಜಮೀನಿನ ಕಂದಾಯವು ಸ್ಥಿರವಾಗಿ ಗೊತ್ತು ಮಾಡಲ್ಪಟ್ಟಿರುತ್ತೋ ಅಥವಾ ಪೂರಾ ಅಥವಾ ಕೆಲವುಮಟ್ಟಿಗೆ ಪರಭಾರೇ ಮಾಡಲ್ಪಟ್ಟಿರುತ್ತೋ ಅಂತಾ ಜಮೀನ್ಯೆಂದರ್ಥವು:

ಗ್ರಾಮ, ಷಹರ್ ಅಥವಾ ಪಟ್ಟಣ.

(22) "ಗ್ರಾಮ" "ಷಹರ್" ಅಥವಾ "ಪಟ್ಟಣ" ಯೆಂಬ ಮಾತುಗಳು, ಅಂತಾ ಗ್ರಾಮಕ್ಕೆ ಷಹರಿಗೆ ಅಥವಾ ಪಟ್ಟಣಕ್ಕೆ ಸೇರಿದ ತಮಾಂ ಜಮೀನ್‌ಗಳನ್ನೂ ಅಡಗಿಸಿಕೊಂಡು ಇರುತ್ತವೆ.

ಮುಲ್ಕೀಸಾಲ್ ಅಥವಾ ಸಾಲ್.

(23) "ಮುಲ್ಕೀ ಸಾಲ್" ಅಥವಾ "ಸಾಲ್" ಅಂದರೆ, ಒಂದು ಸಾಲಿನ ಜುಲೈ 31ನೇ ತಾರೀಖು ಲಾಗಾಯತ್ ಎರಡನೇ ಸಾಲಿನ ಜುಲೈ 31ನೇ ತಾರೀಖ್‌ವರಿಗೆಂದರ್ಥವು.

ಸೆಕ್ಷನ. (24) "ಸೆಕ್ಷನ" ಅಂದರೆ, ಈ ರೆಗ್ಯೂಲೇಷನಿನ ಒಂದು ಸೆಕ್ಷನ ಎಂದರ್ಥವು.

ಈ ಅಧ್ಯಾಯ. (25) "ಈ ಅಧ್ಯಾಯ" ಯೆಂಬ ಮಾತುಗಳು, ಯಾವದರಲ್ಲಿ ಸದರೀ ಮಾತುಗಳು ಸಂಭವಿಸುತ್ತವೋ ಅಂತಾ ಈ ರೆಗ್ಯೂಲೇಷನಿನ ಅಧ್ಯಾಯವೆಂದರ್ಥವು.

ಗ್ರಾಮ ಮುತ್ಸದ್ದಿ. (26) "ಗ್ರಾಮ ಮುತ್ಸದ್ದಿ" ಅಂದರೆ ಶ್ಯಾನುಭಾಗಿ ಕೆಲಸವನ್ನು ನೋಡುವವನೆಂದರ್ಥವು. ಮತ್ತು ಶ್ಯಾನುಭಾಗನ ಕೆಲಸಗಳ ಪೈಕಿ ಯಾವದನ್ನಾಗಲೀ ನಿರ್ವಹಿಸುವ ಪ್ರತಿ ಮನುಷ್ಯನನ್ನೂ ಅಡಗಿಸಿಕೊಳ್ಳುತ್ತದೆ.

ಸರಕಾರ. (27) "ಸರಕಾರ" ಅಂದರೆ ಮೈಸೂರು ಸರಕಾರವೆಂದರ್ಥವು.

2ನೇ ಅಧ್ಯಾಯ.

ಮುಲ್ಕೀ ಆಫೀಸರಗಳ ಯೇರ್ಪಾಡು ಮತ್ತು ಅಧಿಕಾರ.

ಮುಂ. ರೆ. ಕೋ. 4ನೇ ಸೆಕ್ಷನ.

ಮುಲ್ಕೀ ವಿಷಯಗಳಲ್ಲಿ ಮೇಲ್ವಿಚಾರಣೆಯ ಮುಖ್ಯಾಧಿಕಾರಿ.

4. ಜಮೀನ ಕಂದಾಯಕ್ಕೆ ಸಂಬಂಧಪಟ್ಟ ದರೋಬಸ್ತು ಅಂಶಗಳಲ್ಲಿಯೂ ಮೇಲ್ವಿಚಾರಣೆಯ ಅಧಿಕಾರವು ಗವರ್ನಮೆಂಟಿನವರಿಗೆ ಉಂಟಾಗಿರುತ್ತೆ.

ಗವರ್ನಮೆಂಟಿನವರು, ಕಮ್ಮಿಷನರ ಎಂದು ಕರೆಯಲ್ಪಡತಕ್ಕ ಒಬ್ಬ ಆಫೀಸರನ್ನು ಮೊಕರರ್ ಮಾಡಿ ಅಂತಾ ಆಫೀಸರರಿಗೆ ತಾವು ವಿಧಿಸತಕ್ಕ ರೂಲ್ಸಿಗೂ ಷರತ್ತುಗಳಿಗೂ ಒಳಪಡುವಹಾಗೆ ಈ ರೆಗ್ಯೂಲೇಷನ B ಷೆಡ್ಯೂಲ್‌ನಲ್ಲಿ ನಮೂದಿಸಲ್ಪಟ್ಟ ಕೆಲಸಗಳು ಅಧಿಕಾರಗಳು ಇವುಗಳ ಪೈಕಿ ವಿಶಿಷ್ಟವನ್ನಾಗಲಿ ಯಾವವನ್ನಾಗಲಿ, ಅಥವಾ, ತತ್ಕಾಲದಲ್ಲಿ ಜಾರೀ ಇರತಕ್ಕ ಯಾವದಾದರೂ ಇತರ ಕಾನೂನಿಂದ, ಮುಖ್ಯವಾದ ರೆವಿನ್ಯೂ ಮೇಲ್ವಿಚಾರಣೆಯ ಅಧಿಕಾರಿಗೆ ವಿಧಿಸಲ್ಪಟ್ಟ ಅಥವಾ ಉಂಟುಮಾಡಲ್ಪಟ್ಟ ಅಧಿಕಾರಗಳನ್ನಾಗಲಿ ಕೆಲಸಗಳನ್ನಾಗಲಿ ವಿಧಿಸತಕ್ಕದ್ದು ಮತ್ತು ಕೊಡತಕ್ಕದ್ದು.

ಮುಂ. ರೆ. ಕೋ. 5ನೇ ಸೆಕ್ಷನ.

ಕಮ್ಮಿಷನರ ಕೆಲಸಗಳು ಮತ್ತು ಅಧಿಕಾರಗಳು.

5. ಹಿಂದಿನಕಡೇ ಸೆಕ್ಷನ ಅನುಸರಿಸಿ ಮೊಕರರ್ ಮಾಡಲ್ಪಟ್ಟ ಕಮ್ಮಿಷನರು, ಗವರ್ನಮೆಂಟಿನ ಅಧಿಕಾರಕ್ಕೆ ಒಳಪಟ್ಟು, ಸದರೀ ಸೆಕ್ಷನ ಪ್ರಕಾರ ತನಗೆ ವಿಧಿಸಲ್ಪಟ್ಟ ಅಧಿಕಾರಗಳನ್ನು ಚಲಾಯಿಸತಕ್ಕದ್ದು, ಕೆಲಸಗಳನ್ನು ನಡಿಸತಕ್ಕದ್ದು. ಮತ್ತು ಈ ರೆಗ್ಯೂಲೇಷನಿಗನುಗುಣವಾಗಿರುವಷ್ಟುಮಟ್ಟಿಗೆ ಗವರ್ನಮೆಂಟಿನ ಒಟ್ಟು ಹುಕ್ಕುಂನಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಇತರ ವಿಧವಾದ ಅಧಿಕಾರಗಳನ್ನು, ಅಪ್ಪೀಲ್ ಕೆಲಸಗಳನ್ನು ಯಾ ಮೇಲ್ವಿಚಾರಣೆಯನ್ನು ಮೈಸೂರು ಶೀಮೆಯ ಒಳಗೂ ಮತ್ತು ತನ್ನ ಕೆಳಗಿನ ಆಫೀಸರುಗಳ ಮೇಲೂ ಚಲಾಯಿಸತಕ್ಕದ್ದು. ತಮಾಂ ಮುಲ್ಕೀ ಅಧಿಕಾರಿಗಳೂ ಆತಗೆ ತಾಬೇದಾರರಾಗಿರತಕ್ಕದ್ದು.

ಮುಂ. ರೆ. ಕೋ. 7ನೇ ಸೆಕ್‌ಷನ್.

ಮೈಸೂರು ಶೀಮೆಯು, ಡಿಸ್ಟ್ರಿಕ್ಟುಗಳಾಗಿ ಭಾಗಿಸಲ್ಪಡತಕ್ಕದ್ದು.

6. ಕ್ರಮಪ್ರಕಾರ ಫಾಯಿಷ್ ಮಾಡಲ್ಪಟ್ಟ ಗವರ್ನಮೆಂಟ್ ಹುಕ್ಕುಂನಿಂದ ಆಗಿಂದಾಗ್ಯೆ ನಿಯಮಿಸಲ್ಪಟ್ಟಷ್ಟು ಸಂಖ್ಯೆಯ ಡಿಸ್ಟ್ರಿಕ್ಟುಗಳಾಗಿಯೂ ಮತ್ತು ನಿಯಮಿಸಲ್ಪಟ್ಟಷ್ಟು ಹದ್ದುಗಳನ್ನೊಡಗೂಡಿಯೂ ಮೈಸೂರು ಶೀಮೆಯು ವಿಂಗಡಿಸಲ್ಪಡತಕ್ಕದ್ದು.

ಒಂದು ಡಿಸ್ಟ್ರಿಕ್ಟನ್ನು ಗವರ್ನಮೆಂಟಿನಿಂದ ವಿಧಿಸಲ್ಪಟ್ಟಷ್ಟು ಸಂಖ್ಯೆಯ ತಾಲ್ಲೂಕುಗಳಾಗಿಯೂ, ಅಂತಾಒಂದು ತಾಲ್ಲೂಕನ್ನು ಇಷ್ಟು ಗ್ರಾಮಗಳಾಗಿಯೂ ವಿಂಗಡಿಸುವದು

ಕ್ರಮಪ್ರಕಾರ ಫಾಯಿಷ್ ಮಾಡಲ್ಪಟ್ಟ ಗವರ್ನಮೆಂಟ್ ಹುಕ್ಕುಂನಿಂದ ಆಗಿಂದಾಗ್ಯೆ ನಿಯಮಿಸಲ್ಪಟ್ಟಷ್ಟು ಸಂಖ್ಯೆಯ ತಾಲ್ಲೂಕುಗಳನ್ನು ಪ್ರತಿಯೊಂದು ಡಿಸ್ಟ್ರಿಕ್ಟೂ ಅಡಗಿಸಿಕೊಂಡಿರಬೇಕು. ಪ್ರತಿಯೊಂದು ತಾಲ್ಲೂಕು ಸಹಾ ಹಾಗೆ ನಿಯಮಿಸಲ್ಪಟ್ಟಷ್ಟು ಸಂಖ್ಯೆಗಳ ಗ್ರಾಮಗಳನ್ನು ಅಡಗಿಸಿಕೊಂಡಿರಬೇಕು.

ಹಾಲೀ ಡಿಸ್ಟ್ರಿಕ್ಟುಗಳು ತಾಲೂಕುಗಳು ಮತ್ತು ಗ್ರಾಮಗಳು.

ಆದರೆ ಹಾಲೀ ಇರುವ ಡಿಸ್ಟ್ರಿಕ್ಟುಗಳೂ, ತಾಲ್ಲೂಕುಗಳೂ ಮತ್ತು ಗ್ರಾಮಗಳೂ ಗವರ್ನಮೆಂಟಿನವರಿಂದ ಬದಲಾಯಿಸಲ್ಪಡುವವರಿಗೂ ಈಗ ಇರುವಂತೆಯೇ ಇರಬೇಕು.

ಮುಂ. ರೆ. ಕೋ. 8ನೇ ಸೆಕ್‌ಷನ್.

ಡಿಸ್ಟ್ರಿಕ್ಟಿನ ಡೆಪ್ಯುಟಿಕಮ್ಮಿಷನರ್.

7. ಗವರ್ನಮೆಂಟಿನವರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್, ಎಂದು ಕರೆಯಲ್ಪಡತಕ್ಕ ಒಬ್ಬ ಆಫೀಸರನ್ನು ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಮೊಕರರ್ ಮಾಡತಕ್ಕದ್ದು. ಸದರೀ ಆಫೀಸರರು ತನ್ನ ಡಿಸ್ಟ್ರಿಕ್ಟಿನ ಒಳಗೆಲ್ಲಾ ಈ ರೆಗ್ಯೂಲೇಷನಿಂದ ಅಥವಾ ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಇತರ ಕಾನೂನಿಂದ ಒಬ್ಬ ಡೆಪ್ಯುಟಿ ಕಮ್ಮಿಷನರಿಗೆ ಅಥವಾ ಅಸಿಸ್ಟೆಂಟ್ ಕಮ್ಮಿಷನರಿಗೆ, ಕೊಡಲ್ಪಟ್ಟ ಮತ್ತು ನಿರ್ಣಯಿಸಲ್ಪಟ್ಟ ಎಲ್ಲಾ ಕೆಲಸಗಳನ್ನೂ ವಿಶಿಷ್ಟಾಧಿಕಾರಗಳನ್ನೂ ಚಲಾಯಿಸತಕ್ಕದ್ದು; ಕಾನೂನಿಂದ ಪ್ರತ್ಯೇಕವಾಗಿ ಯೇರ್ಪಾಡು ಮಾಡಲ್ಪಡದೆ ಇರುವ ತಮಾಂ ಸಂಗತಿಗಳಲ್ಲೂ ಗವರ್ನಮೆಂಟಿನ ಹುಕ್ಕುಂಗಳ ಪ್ರಕಾರ ಅಮಲ್ನಡಿಸತಕ್ಕದ್ದು.

ಮುಂ. ರೆ. ಕೋ. 9ನೇ ಸೆಕ್‌ಷನ್.

ಅಸಿಸ್ಟೆಂಟ್ ಕಮ್ಮಿಷನರ್‌ಗಳು.

8. ಗವರ್ನಮೆಂಟಿನವರು ಜರೂರೆಂದು ಭಾವಿಸುವಷ್ಟು ಮಂದಿ ಅಸಿಸ್ಟೆಂಟ್ ಕಮ್ಮಿಷನರ್‌ಗಳನ್ನು ಪ್ರತಿ ಡಿಸ್ಟ್ರಿಕ್ಟಿಗೂ ಮೊಕರರ್ ಮಾಡತಕ್ಕದ್ದು.

ಡೆಪ್ಯುಟಿ ಕಮ್ಮಿಷನರಿಗೆ ತಾಬೇದಾರರಾಗಿರತಕ್ಕದ್ದು.

ಅಂತಾ ತಮಾಂ ಅಸಿಸ್ಟೆಂಟ್ ಕಮ್ಮಿಷನರ್‌ಗಳೂ ಮತ್ತು ಡಿಸ್ಟ್ರಿಕ್ಟಿನ ಮುಲ್ಕೀ ಆಡಳಿತದಲ್ಲಿ ಮೊಕರರ್ ಮಾಡಲ್ಪಟ್ಟ ತಮಾಂ ಇತರ ಆಫೀಸರ್‌ಗಳೂ, ಡೆಪ್ಯುಟಿ ಕಮ್ಮಿಷನರಿಗೆ ತಾಬೇದಾರರಾಗಿರತಕ್ಕದ್ದು.

ಮುಂ. ರೆ. ಕೋ. 10ನೇ ಸೆಕ್‌ಷನ್.

ಅವರುಗಳ ಕೆಲಸಗಳು ಮತ್ತು ಅಧಿಕಾರಗಳು.

9. ಗವರ್ನಮೆಂಟಿನವರು, ಯಾವ ಅಸಿಸ್ಟೆಂಟ್ ಕಮ್ಮಿಷನರನ್ನಾಗಲಿ ಒಂದು ಡಿಸ್ಟ್ರಿಕ್ಟಿನಲ್ಲಿ ಒಂದು ಅಥವಾ ಹೆಚ್ಚು ತಾಲ್ಲೂಕುಗಳ ಮುಲ್ಕೀ ಆಡಳಿತದ ಚಾರ್ಜಿನಲ್ಲಿ ಇಡತಕ್ಕದ್ದು.

ಆಮೇಲೆ ಚಾರ್ಜಿನಲ್ಲಿ ಇಡಲ್ಪಟ್ಟ ಯಾವ ಅಸಿಸ್ಟೆಂಟ ಕಮ್ಮಿಷನರಾಗಲಿ, ತನ್ನ ಚಾರ್ಜಿನಲ್ಲಿರುವ ತಾಲ್ಲೂಕುಗಳ ಅಥವಾ ತಾಲ್ಲೂಕು ಆಡಳಿತಗಳ ವಹಿಟ್ಟಿಗೆ ಈ ರೆಗ್ಯೂಲೇಷನಿಂದ, ಅಥವಾ ತತ್ಕಾಲದಲ್ಲಿ ಜಾರೀಇರುವ ಯಿತರ ಯಾವದಾದರೂ ಕಾನೂನಿಂದ ಡೆಪ್ಯುಟಿ ಕಮ್ಮಿಷನರಿಗೆ ವಿಧಿಸಲ್ಪಟ್ಟ ಮತ್ತು ಕೊಡಲ್ಪಟ್ಟ ತಮಾಂ ಕೆಲಸಗಳನ್ನೂ ನಡಿಸತಕ್ಕದ್ದು: ತಮಾಂ ಅಧಿಕಾರಗಳನ್ನೂ ಚಲಾಯಿಸತಕ್ಕದ್ದು. ಮತ್ತು 21ನೇ ಸೆಕ್ಷನ್ನ ಕಾರ್ಯಗಳಿಗಾಗಿ ಆತನಿಗೆ ಮೇಲಧಿಕಾರಿಯು ಗವರ್ನಮೆಂಟ ಎಂದು ಭಾವಿಸತಕ್ಕದ್ದು.

ತಾಲ್ಲೂಕುಗಳ ಚಾರ್ಜಿನಲ್ಲಿಡಲ್ಪಡದ ಅಂತಾ ಅಸಿಸ್ಟೆಂಟ ಕಮ್ಮಿಷನರಿಗೆ ಡೆಪ್ಯುಟಿ ಕಮ್ಮಿಷನರು ಗವರ್ನಮೆಂಟಿನ ಬಟ್ಟು ಹುಕ್ಕುಂಗಳನ್ನನುಸರಿಸಿ ಯಾಗಲಿ, ವಿಶೇಷ ಹುಕ್ಕುಂಗಳನುಸರಿಸಿಯಾಗಲಿ ಅಗಾಗ್ಯೆ ತನಗೆ ಯುಕ್ತವೆಂದು ತೋರುವ ಗೊತ್ತಾದ ಕೆಲಸಗಳನ್ನೂ, ಮತ್ತು ಅಧಿಕಾರಗಳನ್ನೂ ನೇಮಿಸತಕ್ಕದ್ದು.

ಮುಂ. ರೆ. ಕೋ. 11ನೇ ಸೆಕ್ಷನ.

ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರ ಕೆಲಸ ಹಂಗಾಮಿಯಾಗಿ ಖಾಲೀ ಬೀಳುವ ಸಂಗತಿಯಲ್ಲಿ.

10. ಡೆಪ್ಯುಟಿ ಕಮ್ಮಿಷನರು ತಮ್ಮ ಕೆಲಸಗಳನ್ನು ಚಲಾಯಿಸುವದಕ್ಕೆ ಅಶಕ್ತರಾದರೆ ಅಥವಾ ಯಾವಸಬಬಿನಿಂದಾಗಲಿ ತಮ್ಮ ಉದ್ಯೋಗವನ್ನು ಖಾಲೀಮಾಡಿದರೆ, ತಮ್ಮ ಡಿಸ್ಟ್ರಿಕ್ಟನ್ನು ಬಿಟ್ಟು ಹೋದರೆ, ಅಥವಾ ಮೃತಪಟ್ಟರೆ, ಡಿಸ್ಟ್ರಿಕ್ಟಿನಲ್ಲಿ ಹಾಜರಿರುವ ಉತ್ತಮ ದರ್ಜೆಯ ಅವರ ಅಸಿಸ್ಟೆಂಟರು ಗವರ್ನಮೆಂಟಿನಿಂದ ಇತರ ಏರ್ಪಾಡು ಯಾವದೂ ಮಾಡಲ್ಪಡದೆ ಇದ್ದರೆ ಅವರ ಕೆಲಸಕ್ಕೆ ಹಂಗಾಮಿ ಬದಲೀಯಾಗಿರತಕ್ಕದ್ದು. ಮತ್ತು ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರು, ತಮ್ಮ ಡಿಸ್ಟ್ರಿಕ್ಟಿನ ಚಾರ್ಜನ್ನು ಮರಳಿ ವಹಿಸುವತನಕ ಅಥವಾ ಪೂರ್ವದ ಡೆಪ್ಯುಟಿ ಕಮ್ಮಿಷನರಿಗೆ ಬದಲೀ ಮೊಕರರ್ ಮಾಡಲ್ಪಡುವತನಕ ಮತ್ತು ಅಂತಾ ಬದಲಿಯು ತನ್ನ ಕೆಲಸದ ಚಾರ್ಜನ್ನು ತೆಗೆದುಕೊಳ್ಳುವತನಕ, ಈ ರೆಗ್ಯೂಲೇಷನ್ನ ಅನುಸರಿಸಿ ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರ್ ಎಂದು ಭಾವಿಸಲ್ಪಡತಕ್ಕದ್ದು.

ಮುಂ. ರೆ. ಕೋ. 12ನೇ ಸೆಕ್ಷನ.

ಅಮಲ್ದಾರ್ ಮತ್ತು ಅವರ ಮೊಕರರಾತಿ.

11. ಒಂದು ತಾಲ್ಲೂಕಿನ ಸ್ಥಳದ ಮುಲ್ಕೀ ಆಡಳಿತ ಒಪ್ಪಿಸಲ್ಪಟ್ಟ ಮುಖ್ಯಾಧಿಕಾರಿಯು ಅಮಲ್ದಾರ್ ಎಂದು ಕರೆಯಲ್ಪಡತಕ್ಕದ್ದು. ಆತನು ಗವರ್ನಮೆಂಟನವರಿಂದ ಮೊಕರರ್ ಮಾಡಲ್ಪಡತಕ್ಕದ್ದು.

ಆತನ ಕೆಲಸಗಳು ಮತ್ತು ಅಧಿಕಾರಗಳು.

ಆತನ ಕೆಲಸಗಳೂ, ಅಧಿಕಾರಗಳೂ, ಈ ರೆಗ್ಯೂಲೇಷನಿಂದ ವಿವರವಾಗಿ ವಿಧಿಸಲ್ಪಟ್ಟ ಅಥವಾ ಕೊಡಲ್ಪಟ್ಟವುಗಳಾಗಿರತಕ್ಕದ್ದು. ಅಥವಾ ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಇತರ ಕಾನೂನಿಂದಾಗಲಿ, ತನಗೆ, ವಿಧಿಸಲ್ಪಟ್ಟ ಅಥವಾ ಗವರ್ನಮೆಂಟಿನ ಬಟ್ಟು ಅಥವಾ ವಿಶೇಷ ಹುಕ್ಕುಂ ಅನುಸರಿಸಿ ಡೆಪ್ಯುಟಿ ಕಮ್ಮಿಷನರಿಂದ ವಿಧಿಸಲ್ಪಟ್ಟ ಅಥವಾ ನಿಯಮಿಸಲ್ಪಟ್ಟವುಗಳಾಗಿರತಕ್ಕದ್ದು. ಈ ರೆಗ್ಯೂಲೇಷನ್ನ ಜಾರೀ ಮಾಡಲ್ಪಟ್ಟ ತರುವಾಯ, ಹಾಲೀ ನೆರವೇರಿಸಲ್ಪಡುತಿರುವ ಕೆಲಸಗಳನ್ನೂ ಚಲಾಯಿಸಲ್ಪಡುತಿರುವ ಅಧಿಕಾರಗಳನ್ನೂ ತಕ್ಕ ಅಧಿಕಾರಗಳಿಂದ, ಅನ್ಯಥಾ ನಿಯಮಿಸಲ್ಪಡುವ ತನಕ ಆತನು ನೆರವೇರಿಸುತಲೂ ಚಲಾಯಿಸುತಲೂ ಇರತಕ್ಕದ್ದು.

ಮುಂ. ರೆ. ಕೋ. 13ನೇ ಸೆಕ್ಷರ್ಷ.

ಡೆಪ್ಯುಟಿ ಅಮಲ್‌ದಾರ್ ವ ಆತನ ಕೆಲಸಗಳು ಮತ್ತು ಅಧಿಕಾರಗಳು.

12. ಗವರ್ನಮೆಂಟಿನವರು, ಜರೂರೆಂದು ಕಾಣಬಂದಾಗ, ಒಂದು ತಾಲ್ಲೂಕಿನ ಒಂದು ಗೊತ್ತಾದ ಭಾಗದ ಚಾರ್ಜಿನಲ್ಲಿರುವದಕ್ಕೆ ಒಬ್ಬ ಡೆಪ್ಯುಟಿ ಅಮಲ್‌ದಾರನನ್ನು ಮೊಕರರ್ ಮಾಡಿ ಆಗಿಂದಾಗ್ಯೆ ಕಾಣಬರುವ ಹಾಗೆಲ್ಲಾ ಒಬ್ಬ ಅಮಲ್‌ದಾರನ ಕೆಲಸಗಳು ಮತ್ತು ಅಧಿಕಾರಗಳನ್ನು ತನ್ನ ಚಾರ್ಜಿನಲ್ಲಿ ಇರುವ ಸರಹದ್ದಿನಲ್ಲಿ ಮಟ್ಟಿಗೆ ಚಲಾಯಿಸುವಹಾಗೆ ನೇಮಿಸಬಹುದು. ಈ ರೆಗ್ಯುಲೇಷನಿನ 219ನೇ ಸೆಕ್ಷರ್ಷ ಕಾರ್ಯಗಳಿಗಾಗಿ, ಒಬ್ಬ ಡೆಪ್ಯುಟಿ ಅಮಲ್‌ದಾರನ ಮೇಲಧಿಕಾರಿಯು ಆ ತಾಲ್ಲೂಕಿನ ಇನ್‌ಚಾರ್ಜ್ ಅಸಿಸ್ಟೆಂಟ್ ಕಮ್ಮಿಷರ್ನರೆಂದು, ಅಥವಾ ಆತಾಲ್ಲೂಕಿನ ಚಾರ್ಜಿನಲ್ಲಿ ಅಸಿಸ್ಟೆಂಟ್ ಕಮ್ಮಿಷನರ್ ಇಡಲ್ಪಡದಿದ್ದಲ್ಲಿ ಡೆಪ್ಯುಟಿ ಕಮ್ಮಿಷನರೆಂದು ಭಾವಿಸಲ್ಪಡತಕ್ಕದ್ದು.

ಮುಂ. ರೆ. ಕೋ. 14ನೇ ಸೆಕ್ಷರ್ಷ.

ಅಮಲ್‌ದಾರರಾಗಲಿ ಡೆಪ್ಯುಟಿ ಅಮಲ್‌ದಾರರಾಗಲಿ ತಮ್ಮ ಕೆಲಸಗಳಪೈಕಿ ಕೆಲವನ್ನು ನೆರವೇರಿಸುವದಕ್ಕೆ ತಾಬೇದಾರರನ್ನ ನಿಯಮಿಸತಕ್ಕದ್ದು.

13. ಗವರ್ನಮೆಂಟಿನಿಂದಾಗಲಿ, ಡೆಪ್ಯುಟಿ ಕಮ್ಮಿಷರ್ನರಿಂದಾಗಲಿ, ಆಗಿಂದಾಗ್ಯೆ ಕೊಡಲ್ಪಟ್ಟಂತಾ ಬಟ್ಟು ಹುಕುಂಗಳಿಗೆ ಒಳಪಟ್ಟು ತನ್ನ ತಾಬೇದಾರೀ ಕೆಲಸಗಳಪೈಕಿ ಯಾವ ಭಾಗವನ್ನಾಗಲಿ ನೆರವೇರಿಸಲಿಕ್ಕೆ ತನ್ನ ತಾಬೇದಾರರಪೈಕಿ ಯಾರನ್ನಾಗಲಿ, ಮೊಕರರ್ ಮಾಡುವದಕ್ಕೆ ಒಬ್ಬ ಅಮಲ್‌ದಾರ್ರಿಗೆ ಅಥವಾ ಡೆಪ್ಯುಟಿ ಅಮಲ್‌ದಾರ್ರಿಗೆ ಎಖ್ತಿಯಾರೀಉಂಟು. ಪರಂತು ಹಾಗೆ ಮೊಕರರ್‌ಮಾಡಲ್ಪಟ್ಟ ತನ್ನ ತಾಬೇದಾರರ ತಮಾಂ ಕೆಲಸಗಳೂ ಹುಕ್ಕುಂಗಳೂ ಅಂತಾ ಅಮಲ್‌ದಾರರಿಂದಾಗಲಿ, ಡೆಪ್ಯುಟಿ ಅಮಲ್‌ದಾರರಿಂದಾಗಲಿ ವಿಮರ್ಶೆ ಮತ್ತು ಕಾಯಂ ಮಾಡಲ್ಪಡುವದಕ್ಕೂ ಒಳಪಟ್ಟಿರಬೇಕು.

ಮುಂ. ರೆ. ಕೋ. 15ನೇ ಸೆಕ್ಷರ್ಷ.

ಅಮಲ್‌ದಾರೀ ಕೆಲಸವು ಹಂಗಾಮಿಯಾಗಿ ಖಾಲೀಬೀಳುವ ಸಂಗತಿಯಲ್ಲಿ.

14. ಒಬ್ಬ ಅಮಲ್‌ದಾರನು ತನ್ನ ಕೆಲಸಗಳನ್ನು ನೆರವೇರಿಸುವದಕ್ಕೆ ಅಶಕ್ತನಾದರೆ, ಅಥವಾ ಯಾವ ಸಬಬಿನಿಂದಾಗಲಿ ತನ್ನ ಕೆಲಸವನ್ನು ಖಾಲೀಮಾಡಿದರೆ ಅಥವಾ ತನ್ನ ತಾಲ್ಲೂಕನ್ನು ಬಿಟ್ಟುಹೋದರೆ ಅಥವಾ ಮೃತಪಟ್ಟರೆ ಡೆಪ್ಯುಟಿ ಅಮಲ್‌ದಾರನಾಗಲೀ, ತಾಲ್ಲೂಕಿನಲ್ಲಿ ಡೆಪ್ಯುಟಿ ಅಮಲ್‌ದಾರ್ ಇಲ್ಲದಿದ್ದರೆ, ತಾಲ್ಲೂಕ್ ಶಿರಸ್ತೇದಾರನಾಗಲಿ ಸದರೀ ಅಮಲ್‌ದಾರನ ಕೆಲಸವನ್ನು ಹಂಗಾಮೀ ತರೀಕ್ ವಹಿಸಿ ಅಮಲ್‌ದಾರನು ತಮ್ಮ ತಾಲ್ಲೂಕ್ ಚಾರ್ಜನ್ನು ವಹಿಸುವತನಕ ಅಥವಾ ಅವರ ಬದಲೀಯು ಕ್ರಮಪ್ರಕಾರ ಮೊಕರರ್ ಮಾಡಲ್ಪಟ್ಟು ತನ್ನ ಕೆಲಸದ ಚಾರ್ಜನ್ನು ತೆಗೆದುಕೊಳ್ಳುವತನಕ ಈ ರೆಗ್ಯುಲೇಷರ್ಷ ಕಾರ್ಯಗಳಿಗಾಗಿ ಅಮಲ್‌ದಾರ್‌ಯೆಂದು ಭಾವಿಸಲ್ಪಡತಕ್ಕದ್ದು.

ಮುಂ. ರೆ. ಕೋ. 16ನೇ ಸೆಕ್ಷರ್ಷ.

ಪಾರಂಪರ್ಯವಾದ ಹಕ್ಕುದಾರೀ ಪಟೇಲ್ ಶಾನುಭೋಗ ಇಲ್ಲದಪಕ್ಷಕ್ಕೆ ತಲಬುದಾರೀ ಪಟೇಲ್ ಶ್ಯಾನುಭೋಗರು ಮೊಕರರ್ ಮಾಡಲ್ಪಡತಕ್ಕದ್ದು.

15. ಪಾರಂಪರ್ಯದ ಹಕ್ಕುದಾರಿ ಪಟೇಲರಾಗಲೀ ಶ್ಯಾನುಭೋಗರಾಗಲಿ ಇಲ್ಲದ ಗ್ರಾಮಗಳಲ್ಲಿ ಗವರ್ನಮೆಂಟಿನ ಬಟ್ಟು ಹುಕ್ಕುಂ ಅನ್ವಸರಿಸಿ ಒಬ್ಬ ತಲಬುದಾರೀ ಪಟೇಲನನ್ನಾಗಲೀ ಶ್ಯಾನುಭೋಗನನ್ನಾಗಲಿ ಮೊಕರರ್ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷನರಿಗೆ ಯುಖ್ತಿಯಾರಿ ಉಂಟು. ಸದರೀ ಪಟೇಲ್ ಯಾ ಶ್ಯಾನುಭೋಗರು ಈ ರೆಗ್ಯುಲೇಷನಿನಲ್ಲಾಗಲಿ,

584

ಅಥವಾ ಹಾಲಿ ಜಾರೀ ಇರುವ ಯಾವದಾದರೂ ಇತರ ಕಾನೂನಿನಿಂದಾಗಲಿ ಇದರಲ್ಲಿ ಉತ್ತರೋತ್ತರ ವಿಧಿಸಲ್ಪಟ್ಟ ತಮ್ಮ ತಮ್ಮ ಪಾರಂಪರ್ಯದ ಹಕ್ಕುದಾರಿ ಪಟೇಲ್ ಯಾ ಶ್ಯಾನಭಾಗಿ ವಿಶಿಷ್ಟ ಕೆಲಸಗಳನ್ನೂ, ನೆರವೇರಿಸತಕ್ಕದ್ದು. ಮತ್ತು ತಾಬೇದಾರೀ ಮುಲ್ಕೀ ಆಫಿಸರಗಳ ವಿಷಯದಲ್ಲಿ ಜಾರೀ ಇರುವ ರೂಲ್ಸ್ ಅನುಸರಿಸಿ ತಮ್ಮ ಉದ್ಯೋಗಗಳಲ್ಲಿರತಕ್ಕದ್ದು.

ಪರಭಾರೆಯಾದ ಗ್ರಾಮಗಳ ಹಿಡುವಳೀದಾರರ ಹಕ್ಕುಗಳನ್ನು ರಕ್ಷಿಸುವಿಕೆ.

ಪರಭಾರೇ ಮಾಡಲ್ಪಟ್ಟ ಅಥವಾ ಇತರ ಗ್ರಾಮಗಳಲ್ಲಿ ಪಟೇಲ ಯಾ ಶ್ಯಾನುಭಾಗಿ ಮೊಕರರ್ ವಿಷಯದಲ್ಲಿ ಅಂಥಾ ಪರಭಾರೆಯಾದ ಗ್ರಾಮಗಳ ಹಿಡುವಳೀದಾರರು ಯಾ ಇತರರ ಹಾಲೀ ಇರತಕ್ಕ ಹಕ್ಕುಗಳನ್ನು ಈ ಸೆಕ್ಷನ್ನಲ್ಲಿ ನಮೂದಿರುವ ಯಾವ ಅಂಶವೂ ಬಾಧಿಸುವಹಾಗೆ ಯೆಣಿಸತಕ್ಕದ್ದಲ್ಲವು.

ಮುಂ. ರೆ. ಕೋ. 17ನೇ ಸೆಕ್ಷನ್.

ಶ್ಯಾನುಭಾಗನು, ತಾನು ಇಡಲ್ಪಡತಕ್ಕದ್ದೆಂದು ಗವರ್ನಮೆಂಟಿನಿಂದ ನಿಯಮಿಸಲ್ಪಡಬಹುದಾದ ಲೆಕ್ಕ ಪತ್ರಗಳನ್ನು ಇಡತಕ್ಕದ್ದು.

16. ಶ್ಯಾನುಭಾಗನು, ಯಾವ ರಿಜಿಸ್ಟರಗಳನ್ನು, ಲೆಕ್ಕಗಳನ್ನು ಮತ್ತು ಇತರ ರಿಕಾರ್ಡಗಳನ್ನು ಇಡತಕ್ಕದ್ದೋ ಅದನ್ನು ಗವರ್ನಮೆಂಟಿನವರು ಆಗಿಂದಾಗ್ಯೆ ವಿಧಿಸತಕ್ಕದ್ದು ; ಮತ್ತು ಈ ಸೆಕ್ಷನ್ ಅನುಸರಿಸಿ ಕೊಡುವ ಹುಕ್ಕುಂಗಳು ಜಾರೀಗೆ ಬರುವವರೆಗೂ ಇದುವರಿಗೆ ಇಡುತಿದ್ದ ಅಂಥಾ ತಮಾಂ ರಿಜಿಸ್ಟರಗಳನ್ನೂ, ಲೆಕ್ಕಗಳನ್ನೂ ಇತರ ರಿಕಾರ್ಡಗಳನ್ನೂ, ಇಡುತ್ತಾ ಹೋಗತಕ್ಕದ್ದು.

ಮತ್ತು ಪಬ್ಲಿಕ್ ಲಿಖಿತಗಳನ್ನು ತಯಾರ್ ಮಾಡುವಣ.

ಶ್ಯಾನುಭಾಗನು ತನ್ನ ಗ್ರಾಮದ ಪಟೇಲನಿಂದಾಗಲಿ, ತಾಲ್ಲೂಕಿನ ಅಥವಾ ಡಿಸ್ಟ್ರಿಕ್ಟಿನ ಮೇಲ್ಪಟ್ಟ ಯಾರಾದರೂ ಮುಲ್ಕೀ ಅಥವಾ ಪೊಲೀಸ್ ಆಫೀಸರಿಂದಾಗಲಿ ಹುಕ್ಕುಂ ಮಾಡಲ್ಪಟ್ಟಾಗ ಗವರ್ನಮೆಂಟಿನ ಉಪಯೋಗಕ್ಕಾಗಲಿ ಜನಗಳ ಉಪಯೋಗಕ್ಕಾಗಲಿ ಬೇಕಾದ ನೋಟೀಸ್‌ಗಳು, ಲಾಷ್ ವಿಚಾರಣೆಯ ರಿಪೋರ್ಟುಗಳು ಕ್ರಿಮಿನಲ್ ಸಂಗತಿಗಳಲ್ಲಿ ಕೈಫೀಯತ್ತುಗಳು, ಮತ್ತು ದರ್ಯಾಫ್ತಿಗಳು ಇಂತಾ ಗ್ರಾಮ ವಿಷಯಗಳಿಗೆ ಸಂಬಂಧಿಸಿದ ತಮಾಂ ಕಾಗದ ಪತ್ರಗಳನ್ನೂ ತಯಾರ್ ಮಾಡುವಣ ಶ್ಯಾನುಭಾಗನ ಕೆಲಸವಾಗಿಯೂ ಇರತಕ್ಕದ್ದು.

ಪರಭಾರೇಮಾಡಲ್ಪಟ್ಟ ಗ್ರಾಮದ ಹಿಡುವಳೀದಾರನು, ಗವರ್ನಮೆಂಟಿನಿಂದ ವಿಧಿಸಲ್ಪಟ್ಟಂಥಾ ರಿಕಾರ್ಡುಗಳನ್ನು ಇಡತಕ್ಕದ್ದು.

17. (1) ಪರಭಾರೆ ಯಾದ ಒಂದು ಗ್ರಾಮದ ಪ್ರತಿ ಹಿಡುವಳೀ ದಾರನೂ, 16ನೇ ಸೆಕ್ಷನ್ನಿಂದ ವಿಧಿಸಲ್ಪಟ್ಟ ಅಥವಾ ಪರಭಾರೇ ಮಾಡಲ್ಪಟ್ಟ ಗ್ರಾಮಗಳಿಗಾಗಿ ಇಡತಕ್ಕದ್ದೆಂದು ಗವರ್ನಮೆಂಟಿನಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ರಿಜಿಸ್ಟರಗಳನ್ನೂ, ಲೆಕ್ಕಗಳನ್ನೂ, ಇತರ ರಿಕಾರ್ಡುಗಳನ್ನೂ ಇಡಲಿಕ್ಕೆ ಬದ್ಧನಾಗಿರತಕ್ಕದ್ದು. ಅವನು, ಅಂತಾ ರಿಜಿಸ್ಟರಗಳನ್ನೂ, ಲೆಕ್ಕಗಳನ್ನೂ ಇತರ ರಿಕಾರ್ಡಗಳನ್ನೂ, ಕಾಲಕ್ಕೆ ಸರಿಯಾಗಿಯೂ, ಕರಾರ್ ನಾಕಾ ಆಗಿಯೂ ತಯಾರ್ ಮಾಡುವದಕ್ಕೆ ಜವಾಬ್‌ದಾರನಾಗಿರತಕ್ಕದ್ದು. ಮತ್ತು ಅವನು, ಗವರ್ನಮೆಂಟಿನವರು ಆಗಿಂದಾಗ್ಯೆ ಒಂದು ಬಟ್ಟು ಹುಕ್ಕುಂನಿಂದಾಗಲಿ ವಿಶೇಷ ಹುಕ್ಕುಂನಿಂದಾಗಲಿ, ಅಪ್ಪಣೆ ಮಾಡಲ್ಪಡಬಹುದಾದಂತಾ

ದಾಖಲೆಗಳ ಕರಾರ್ ವಾಕಾ ನಕಲ್‌ಗಳನ್ನು ಡೆಪ್ಯುಟಿ ಕಮ್ಮಿಷನರಲ್ಲಿ ಠೇವಣೀ ಇಡ ತಕ್ಕದ್ದು.

ಪರಭಾರೆಯಾದ ಗ್ರಾಮದಲ್ಲಿ ಶ್ಯಾನುಭಾಗನು ಅಂಥಾ ರಿಕಾರ್ಡುಗಳನ್ನು ಇಡತಕ್ಕದ್ದು.

(2) ಶ್ಯಾನುಭಾಗನಿರುವ ಪಕ್ಷಕ್ಕೆ ಈ ಸೆಕ್ಷನ್ನಲ್ಲಿ ನಮೂದಿಸಲ್ಪಟ್ಟ ರಿಜಿಸ್ಟರ್‌ಗಳನ್ನೂ, ಲೆಕ್ಕಗಳನ್ನೂ ಯಿತರ ರಿಕಾರ್ಡು ಗಳನ್ನೂ, ಪರಭಾರೆಯಾದ ಗ್ರಾಮದ ಹಿಡುವಳೀದಾರ ನ ಯಾ ಅವನ ಮುತಾಲೀಕನಮೇಲ್ ವಿಚಾರಣೆಗೆ ಒಳ ಪಟ್ಟು ತಯಾರುಮಾಡಿ ಇಡತಕ್ಕದ್ದು ಅತನ ಕೇಸ ವಾಗಿರತಕ್ಕದ್ದು.

ಪರಭಾರೆಯಾದ ಗ್ರಾಮದ ಹಿಡುವಳೀದಾರನುರಿಜಿಸ್ಟರ್‌ಮುಂತಾದವುಗಳನ್ನ ಇಡುವದಕ್ಕೆ ತಪ್ಪಿದರೆ ನಡಿಸತಕ್ಕ ಕ್ರಮ.

(3) ಪರಭಾರೆಯಾದ ಗ್ರಾಮದ ಹಿಡುವಳೀದಾರನು, ಈ ಸೆಕ್ಷನ್ನ ನಿಬಂಧನೆಗಳ ಪ್ರಕಾರ ಯಿಡಬೇಕಾದ ಯಾವ ರಿಜಿಸ್ಟರ್‌ಗಳನ್ನಾಗಲಿ ಲೆಕ್ಕಗಳನ್ನಾಗಲಿ, ಇತರ ರಿಕಾರ್ಡುಗಳನ್ನಾಗಲಿ ಯಿಡುವದಕ್ಕೆ ಅಥವಾ ಅವುಗಳ ನಕಲ್‌ಗಳನ್ನು ಡೆಪ್ಯುಟಿಕಮ್ಮಿಷನರಲ್ಲಿ ಠೇವಣೀ ಯಿಡುವದಕ್ಕೆ ತಪ್ಪಿದರೆ ಯಾವನಾದರೂ ಯಿತರ ಮನುಷ್ಯನಿಂದ ಸದರೀ ರಿಜಿಸ್ಟರ್‌ಗಳನ್ನಾಗಲಿ, ಲೆಕ್ಕಗಳನ್ನಾಗಲಿ ಯಿತರ ರಿಕಾರ್ಡುಗಳನ್ನಾಗಲಿ ಅಥವಾ ಅವುಗಳ ನಕಲುಗಳನ್ನಾಗಲಿ ತಯಾರ್ಮಾಡಿಶಿ ಇದರ ಖರ್ಚನ್ನು ಪರಭಾರೆಯಾದ ಗ್ರಾಮದ ಹಿಡುವಳೀದಾರನಿಂದ ಕಂದಾಯದ ಬಾಕೀಯಂತೆಯೇ ವಸೂಲ್‌ಮಾಡುವದಕ್ಕೂ ಡೆಪ್ಯುಟಿ ಕಮ್ಮಿಷನರಿಗೆ ಯುಖ್ತಿಯಾರೀ ವುಂಟು.

ಮುಂ. ರೆ. ಕೋ. 18ನೇ ಸೆಕ್ಷನ್.

ಸರ್ವೇ ಆಫೀಸರ್‌ಗಳು.

(18) ಈ ರೆಗ್ಯೂಲೇಷನಿನ 8, 9, ಮತ್ತು 10 ಈ ಅಧ್ಯಾಯಗಳ ಉದ್ದೇಶ್ಯಗಳಿಗಾಗಿ ಗವರ್ನಮೆಂಟಿನವರು, ಆಗಿಂದಾಗ್ಯೆ ಜರೂರೆಂದು ಕಾಣಬಹುದಾದಂಥಾ ಆಫೀಸರ್‌ಗಳನ್ನು ಮೊಕರರ್ ಮಾಡಬಹುದು; ಅಂತಾ ಆಫೀಸರ್‌ಗಳು "ಸರ್ವೆ ಮತ್ತು ಸೆಟಲ್‌ಮೆಂಟಿನ ಸೂಪರ್ನಿಟೆಂಡೆಂಟ್ ಮತ್ತು ಡೆಪ್ಯುಟಿ ಸೂಪರ್ನಿಟೆಂಡೆಂಟ್ "ಸರ್ವೆ ಸೆಟಲ್‌ಮೆಂಟ್ ಆಫೀಸರ್" ಮತ್ತು "ಅಸಿಸ್ಟೆಂಟ್ ಸೂಪರ್ನಿಟೆಂಡೆಂಟ್," ಯಂತಲೂ ಅಥವಾ ಆವಶ್ಯಕ ತೋರುವ ಬೇರೇ ಹೆಸರಿನಿಂದಲೂ ಕರೆಯಲ್ಪಟ್ಟು ಗವರ್ನಮೆಂಟಿನವರಿಂದ ಹುಕುಂ ಮಾಡಲ್ಪಟ್ಟ ರೀತಿಯಲ್ಲಿ ಒಬ್ಬರಿಗೊಬ್ಬರು ತಾಬೇದಾರ್ರಾಗಿ ಇರತಕ್ಕದ್ದು.

ಅವರ ಕೆಲಸಗಳು ಮತ್ತು ಅಧಿಕಾರಗಳು.

ಗವರ್ನಮೆಂಟಿನ ಹುಕುಂಗಳಿಗೆ ಒಳಪಟ್ಟು, ಹಾಗೆ ಮೊಕರರ್ ಮಾಡಲ್ಪಟ್ಟ ಆಫೀಸರ್‌ಗಳು ಸರ್ವೇ ವ ಸೆಟಲ್ಮೆಂಟಿಗೆ ಸಂಬಂಧಿಸಿದ ದರೋಬಸ್ತು ಸಂಗತಿಗಳನ್ನೂ ನೋಡಲಿಕ್ಕೆ ಯುಖ್ತಿಯಾರಿ ಪಡೆದು ಈ ರೆಗ್ಯೂಲೇಷನ್ ಅಥವಾ ತತ್ಕಾಲದಲ್ಲಿ ಜಾರೀಲಿರುವ ಯಾವದಾದರು ಇತರ ಕಾನೂನಿನಿಂದ ವಿಧಿಸಲ್ಪಡಬಹುದಾದ ದರೋಬಸ್ತು ಅಧಿಕಾರಗಳನ್ನೂ ಚಲಾಯಿಸತಕ್ಕದ್ದು, ಅಂತಾ ದರೋಬಸ್ತು ಕೆಲಸಗಳನ್ನೂ ನೆರವೇರಿಸತಕ್ಕದ್ದು.

ಮುಂ. ರೆ. ಕೋ. 19ನೇ ಸೆಕ್ಷನ್.

ಒಬ್ಬ ಆಫೀಸರಿಗೆ ಅನೇಕ ಅಧಿಕಾರಗಳನ್ನು ಕೊಡೋಣ.

19. ಒಬ್ಬ ಆಫೀಸರು ಇತರ ವಿಷಯವಾಗಿ ಲಾಯಖ್ ಯಿದ್ದಲ್ಲಿ ಅವನನ್ನು ಈ ಅಧ್ಯಾಯದಲ್ಲಿ ವಿಧಿಸಲ್ಪಟ್ಟ ಯಾವದಾದರೂ ಯೆರಡು ಅಥವಾ ಹೆಚ್ಚು ಉದ್ಯೋಗಗಳಿಗೆ

ಮೊಕರರ್ ಮಾಡುವದಕ್ಕಾಗಲಿ, ಅಥವಾ ಒಂದು ಹೆಸರಿನ ಒಬ್ಬ ಆಫೀಸರಿಗೆ ಫಲಾನಾ ಸ್ಥಳ ಸರಹದ್ದುಗಳೊಳಗೆ ಅಥವಾ ಆವಶ್ಯಕವಾಗಿ ಕಾಣುವ ಇತರ ರೀತಿಯಾಗಿ ಇತರ ಯಾರಾದರೂ ಆಫೀಸರರ ಅಥವಾ ಆಫೀಸರ್‌ಗಳ ವಿಶಿಷ್ಟ ಅಥವಾ ಯಾವದಾದರೂ ಅಧಿಕಾರಗಳನ್ನು ಅಥವಾ ಕೆಲಸಗಳನ್ನು ಕೊಡುವದಕ್ಕಾಗಲಿ ಗವರ್ನಮೆಂಟಿಗೆ ಯಖ್ತಿಯಾರೀಯುಂಟು.

ಮುಂ. ರೆ. ಕೋ. 20ನೇ ಸೆಕ್ಷನ್.

ಕೆಲವು ಆಫೀಸರ್‌ಗಳ ಮೊಕರರಾತಿಗಳು ಖಾಯಿಷ್ ಮಾಡಲ್ಪಡತಕ್ಕದ್ದು.

20. 4, 7, 8, 9, 11, 12, 18 ಮತ್ತು 19 ಈ ಸೆಕ್ಷನ್‌ಗಳಲ್ಲಿ ನಮೂದಿಸಲ್ಪಟ್ಟ ವಿಶಿಷ್ಟ ಆಫೀಸರ್‌ಗಳ ಮೊಕರರಾತಿಯೂ ಕ್ರಮವಾಗಿ ಖಾಯಿಷ್‌ಮಾಡಲ್ಪಡತಕ್ಕದ್ದು.

ಆಕ್ಟಿಂಗ್ ಮೊಕರರಾತಿಗಳು.

ಅಂತಾ ಯಾವ ಆಫೀಸರರಿಗೋಸ್ಕರ ಹಂಗಾಮೀಯಾಗಿ ಕೆಲಸನೋಡುವಂತೆ ಮೊಕರರ್ ಮಾಡಲ್ಪಟ್ಟ ಯಾವ ಆಫೀಸರರಾಗಲಿ ಯಾರಿಗೋಸ್ಕರ ಕೆಲಸನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾನೋ ಅಂತಾ ಆಫೀಸರಿಂದ ನಿರ್ವಹಿಸಲ್ಪಡಬಹುದಾದ ಅಥವಾ ಚಲಾಯಿಸಲ್ಪಡಬಹುದಾದ ಬದಸ್ತೂರ್ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಬದಸ್ತೂರ್ ಕೆಲಸಗಳನ್ನು ನೆರವೇರಿಸತಕ್ಕದ್ದು.

ಮುಂ. ರೆ. ಕೋ. 21ನೇ ಸೆಕ್ಷನ್.

ಲವಾಜಮೆಗಳು.

(21) 241ನೇ ಸೆಕ್ಷನ್ ಅನುಸರಿಸಿ ಯಿರುವ ರೂಲ್‌ಸ್‌ಗಳು ಯಾ ಮಾಡಲ್ಪಟ್ಟ ಹುಕುಂಗಳಿಗೆ ಒಳಪಟ್ಟು ಇದರಡಿ ಕಂಡ ಆಫೀಸರ್‌ಗಳ ಲವಾಜಮೆಯ ತಮಾಂ ಮೆಂಬರ್‌ಗಳ ಮೊಕರರಾತಿಯೂ, ಗವರ್ನಮೆಂಟಿನಿಂದ ಅನ್ಯಥಾ ನಿಯಮಿಸಲ್ಪಡದೆ ಯಿದ್ದರೆ ಸದರೀ ಆಫಿಸರ್‌ಗಳಿಂದ ಮಾಡಲ್ಪಡತಕ್ಕದ್ದು, ಅವರುಗಳು ಯಾರೆಂದರೆ:—

ಡೆಪ್ಯುಟಿ ಕಮ್ಮಿಷನರ್;

ಸರ್ವೇ ಸೂಪರ್ರಿಂಟೆಂಡೆಂಟರು, ಮತ್ತು ಸರ್ವೆ ಡೆಪ್ಯುಟಿ ಸೂಪರ್ರಿಂಟೆಂಡೆಂಟರು;

ಸರ್ವೇ ಸೆಟಲ್‌ಮೆಂಟ್ ಆಫಿಸರ್;

ಈ ಅಧ್ಯಾಯದ ಹಿಂದಿನ ಸೆಕ್ಷನ್‌ಗಳಲ್ಲಿ ಕಂಡ ಇತರ ತಮಾಂ ಆಫೀಸರ್‌ಗಳ ಲವಾಜಮೆಗಳ ತಮಾಂ ಮೆಂಬರ್‌ಗಳ ಮೊಕರರಾತಿಯೂ, ಅವರವರ ಇಲಾಖೆಗಳಲ್ಲಿ ಡೆಪ್ಯುಟಿ ಕಮ್ಮಿಷನರಿಂದಲೂ, ಸರ್ವೇ ಸೂಪರ್ರಿಂಟೆಂಡೆಂಟರಿಂದಲೂ ಮಾಡಲ್ಪಡತಕ್ಕದ್ದು. ಪರಂತು ಈ ಅಧಿಕಾರದ ಪೈಕಿ ಅವರು ಯುಕ್ತವೆಂದು ಭಾವಿಸಬಹುದಾದಂಥಾ ಭಾಗವನ್ನು ಯಾವನಾದರು ಒಬ್ಬ ತಾಬೇದಾರ್ ಆಫೀಸರರಿಗೆ ಒಪ್ಪಿಸುವದಕ್ಕೆ ಅವರಿಗೆ ಯಖ್ತಿಯಾರೀವುಂಟು. ಆದರೆ, ಅಂತಾ ತಾಬೇದಾರೀ ಆಫೀಸರ್‌ಗಳಿಂದ ಮಾಡಲ್ಪಡಬಹುದಾದ ಮೊಕರರಾತಿಗಳನ್ನು ಯಾವಕಾಲದಲ್ಲಾದರೂ ವಿಮರ್ಶೆ ಮಾಡುವ ಯಖ್ತಿಯಾರೀಯನ್ನು ಅವರು ಉಳಿಸಿಕೊಂಡಿರುವರು.

ಮುಂ. ರೆ. ಕೋ. 22ನೇ ಸೆಕ್ಷನ್.

ಮೊಹರ್‌ಗಳು.

22. ಗವರ್ನಮೆಂಟಿನವರು, ಆಗಿಂದಾಗ್ಯೆ ಯಾವ ಮುಲ್ಕೀ ಆಫೀಸರ್‌ಗಳು ಒಂದು ಮೊಹರನ್ನು ಉಪಯೋಗಿಸತಕ್ಕದ್ದು, ಮತ್ತು ಅಂತಾ ಪ್ರತಿ ಆಫಿಸರಿಂದಲೂ, ಯಾವ ಆಕಾರದ ಮತ್ತು

ತಪಶೀಲಿನ ಮೊಹರ ಉಪಯೋಗಿಸಲ್ಪಡತಕ್ಕದ್ದು, ಎಂಬುವದನ್ನು ಇಸ್ತಿಹಾರ ಮೂಲಕ ವಿಧಿಸಲ್ಪಡತಕ್ಕದ್ದು. ಆದರೆ ಈ ಸೆಕ್ಷನ್ ಅನುಸರಿಸಿ ಮೊದಲನೇ ಹುಕ್ಕುಂ ಹುಟ್ಟುವತನಕ ತಪಲ್ ಉಪಯೋಗಿಸಲ್ಪಡುತ್ತಿದ್ದ ಮೊಹರಗಳು, ಅವುಗಳನ್ನು ಉಪಯೋಗಿಸುತಿದ್ದಂತಾ ಆಫೀಸರಗಳಿಂದ ಉಪಯೋಗಿಸಲ್ಪಡುತ ಇರತಕ್ಕದ್ದು.

3ನೇ ಅಧ್ಯಾಯು.

ಕೆಲವರು ಮುಲ್ಕೀ ಆಫೀಸರಗಳಿಂದ ಕೊಡಲ್ಪಡತಕ್ಕ ಜಾಮಿನಾನ್ನೂ, ಮುಖ್ಯಸ್ಥರ ಮತ್ತು ಜಾಮೀನದಾರರ ಜವಾಬದಾರೀಯನ್ನೂ ಕುರಿತು.

ಮುಂ. ರೆ. ಕೋ. 23ನೇ ಸೆಕ್ಷನ್.

ಯಾವ ಆಫೀಸರಗಳು, ಜಾಮೀನ್ ಕೊಡತಕ್ಕದ್ದೋ ಯಷ್ಟುರವೊಬಲಗಿಗೆ ಕೊಡತಕ್ಕದ್ದೋ ಅದನ್ನು ಗವರ್ನಮೆಂಟನವರು ನಿಯಮಿಸತಕ್ಕದ್ದು.

23. ಗವರ್ನಮೆಂಟನವರು, ತಮಗೆ ಯುಕ್ತ ತೋರುವಂತಾ ರೆವಿನ್ಯೂ ಆಫೀಸರಗಳು, ತವ್ಮು ತವ್ಮು ಕೆಲಸಗಳಲ್ಲಿ ಪ್ರವೇಶಿಸುವದಕ್ಕೆ ಮುಂದಾಗಿ, ಪ್ರತಿ ಸಂಗತಿಯಲ್ಲಿಯೂ ಸದರೀ ಗವರ್ನಮೆಂಟನವರು ಜರೂರೆಂದು ಭಾವಿಸುವಂತಾ ಮೊಬಲಗಿಗೆ ಕ್ರಮವಾಗಿ ಇಂಡಾರ್ಸ್ ಮಾಡಲ್ಪಟ್ಟ, ವಿಕ್ರಯಿಸುವದಕ್ಕೆ ಬಂದು ಅಧಿಕಾರನಿಶೀ ಕೊಡಲ್ಪಟ್ಟ ಗವರ್ನಮೆಂಟ ನೋಟ ಮೂಲಕ ಅಥವಾ ಗವರ್ನಮೆಂಟ ಟ್ರೆಜರೀಯಲ್ಲಾಗಲಿ, ಗವರ್ನಮೆಂಟ ಸೇವಿಂಗ್ಸ್ ಬ್ಯಾಂಕಿನಲ್ಲಾಗಲಿ, ನಗದ ಡಿಪಾಜಿಟಮೂಲಕ, ಗವರ್ನಮೆಂಟ ಹೆಸರಿಗೆ, ಅಥವಾ ಮಂಜೂರಾದ ಸ್ಥಿರಸ್ವತ್ತಿನ ಬಾಬತು ಪತ್ರದ ಮೂಲಕ ಜಾಮೀನ್ ಕೊಡತಕ್ಕದ್ದೆಂದು ನಿಯಮಿಸುವದು ಗವರ್ನಮೆಂಟಿಗೆ ನ್ಯಾಯವಾಗಿರತಕ್ಕದ್ದು, ಸದರೀ ಸ್ವತ್ತಿನ ಅಂದಾಜ ಕಿಮ್ಮತ್, ಅವಶ್ಯಕವಾದ ಜಾಮೀನ್ ಮೊಬಲಗಿಗೆ, ಗವರ್ನಮೆಂಟನಿಂದ ವಿಧಿಸಲ್ಪಟ್ಟ ದಾಮಾಷಾಯಿ ಪ್ರಕಾರ, ಅಥವಾ ಈ ರೆಗ್ಯೂಲೇಷನಿಗೆ ಲಗ್ಗತ್ತಾದ C ಷೆಡ್ಯೂಲ್‌ನಲ್ಲಿ ಅಡಗಿರುವ ನಮೂನೇ ಪ್ರಕಾರವಾಗಲಿ ಇರತಕ್ಕದ್ದು.

ಯಾವ ಬಗ್ಗೆ ಅಂತಾ ಜಾಮೀನ್ ಕೊಡತಕ್ಕದ್ದೋ ಅಂತಾ ಮೊಬಲಗು, ಗವರ್ನಮೆಂಟ ಹುಕ್ಕುಂನಿಂದ ಆಗಿಂದಾಗ್ಯೆ ಬದಲಾಯಿಸಲ್ಪಡತಕ್ಕದ್ದು, ಸದರೀ ಹುಕ್ಕುಂ, C ಷೆಡ್ಯೂಲಿನ ನಮೂನೇ ಪ್ರಕಾರ ಜಾಮೀನ್ ತೆಗೆದುಕೊಂಡಾಗ ಜಾಮೀನ್‌ದಾರರ ಸಂಖ್ಯೆಯನ್ನು ಸಹ ಗೊತ್ತು ಮಾಡತಕ್ಕದ್ದು.

ಮುಂ. ರೆ. ಕೋ. 24ನೇ ಸೆಕ್ಷನ್.

ಹೊಸದಾದ ಅಥವಾ ಜಾಸ್ತಿ ಜಾಮೀನ್.

24. ಡೆಪ್ಯುಟಿ ಕಮ್ಮಿಷನರಾಗಲಿ, ಸರ್ವೇ ಸೂಪರ್ನಟೆಂಡೆಂಟರಾಗಲಿ, ತಮಗೆ ತಾಬೇದಾರರಾದ ಒಬ್ಬ ರೆವಿನ್ಯೂ ಆಫೀಸರಿಂದ ಜಾಮೀನ್ ಕೊಡಲ್ಪಟ್ಟ ತರುವಾಯು, ಯಾವ ಕಾಲದಲ್ಲಾಗಲಿ, ತೆಗೆದುಕೊಳ್ಳಲ್ಪಟ್ಟ ಜಾಮೀನ್ ಅತೃಪ್ತಿಕರವಾಗಿ ಕಂಡರೆ, ಅಥವಾ ಹೆಚ್ಚು ಮೊಬಲಗಿನ ಜಾಮೀನ್ ಬೇಕಾದ ಬಂದು ಉದ್ಯೋಗಕ್ಕೆ ಸದರೀ ಆಫೀಸರರು ವರ್ಗ ಮಾಡಲ್ಪಟ್ಟರೆ, ಅಥವಾ ಇತರ ತಕ್ಕ ಸಬಬಿನಮೇಲೆ ಹೊಸದಾದ ಅಥವಾ ಜಾಸ್ತೀ ಜಾಮೀನನ್ನು ಕೇಳಿದ ಸದರೀ ಆಫೀಸರು ಅಂತಾ ಜಾಮೀನನ್ನು ಕೇಳಿದ ಬಂದು ತಿಂಗಳೊಳಗಾಗಿ ಅದನ್ನು ಕೊಡಲಿಕ್ಕೆ ತಪ್ಪಿದರೆ, ಸದರೀ ಆಫೀಸರರನ್ನು ಸಸಪೆಂಡ ಅಥವಾ ಡಿಸಮಿಸ್ ಮಾಡಬಹುದು.

ಪರಂತು, ಹಿಂದಿನಕಡೇ ಸೆಕ್ಷನ್ ಅನುಸರಿಸಿ ಗವರ್ನಮೆಂಟ ಹುಕುಂಗಳಿಂದ ಅಪೇಕ್ಷಿಸಲ್ಪಟ್ಟದ್ದಕ್ಕಿಂತ ಹೆಚ್ಚು ಜಾಮೀನನ್ನು ಯಾವಾಗ್ಯೂ ಕೊಡತಕ್ಕದ್ದಲ್ಲವು.

ಮುಂ. ರೆ. ಕೋ. 25ನೇ ಸೆಕ್ಷನ್.

ಹಣ, ಕಾಗದ ಪತ್ರಗಳು ವಗೈರೇ ಬಗ್ಯೆ ಅದಕ್ಕೆ ಸಂಬಂಧಿಸಿದ ಮನುಷ್ಯನನ್ನು ಬರವಣಿಗೇಮೂಲಕ ಕೇಳತಕ್ಕದ್ದು.

25. ಡೆಪ್ಯುಟಿ ಕಮ್ಮಿಷನರಾಗಲಿ, ಸರ್ವೇ ಸೂಪರ್ನಿಟೆಂಡೆಂಟರಾಗಲಿ, ಈ ಬಗ್ಯೆ ಡೆಪ್ಯುಟಿ ಕಮ್ಮಿಷನರಿಂದ ಅಥವಾ ಸರ್ವೇ ಸೂಪರ್ನಿಟೆಂಡೆಂಟರಿಂದ ನಿಯಮಿಸಲ್ಪಟ್ಟ ಇತರ ಯಾವ ಆಫಿಸರರಾಗಲಿ, ಸರ್ಕಾರ ಹಣಕ್ಕಾಗಿ, ಕಾಗದಪತ್ರಗಳಿಗಾಗಿ ಅಥವಾ ಗವರ್ನಮೆಂಟಿನ ಇತರ ಸ್ವತ್ತಿಗಾಗಿ, ಯಾವದಾದರೂ ಇತರ ರೆವಿನ್ಯೂ ಆಫೀಸರರ ಮೇಲೆ, ಅಥವಾ ತನ್ನ ಡಿಸ್ಟ್ರಿಕ್ಟಿನಲ್ಲಿ ಅಥವಾ ಇಲಾಖೆಯಲ್ಲಿ ಅಂಥಾ ರೆವಿನ್ಯೂ ಆಫೀಸರರಾಗಿ ಪೂರ್ವದಲ್ಲಿ ಮೊಕರರ್ ಮಾಡಲ್ಪಟ್ಟದ್ದ ಯಾವ ಮನುಷ್ಯನಮೇಲಾಗಲಿ, ಬಾಧ್ಯತೆ ಇರುವ ಎಲ್ಲ ಸಂಗತಿಗಳಲ್ಲೂ, ಆತನು ತನ್ನ ಉದ್ಯೋಗದ ಸೈನು, ಮೊಹರ ಯಾವದಾದರೂ ಉಪಯೋಗಿಸಿದರೆ, ಅವುಗಳು ನಿಶೀ ಬರವಣಿಗೇ ಮೂಲಕವಾಗಿ ಉಳಿಸಿಕೊಳ್ಳಲ್ಪಟ್ಟದ್ದ ಹಣವನ್ನಾಗಲಿ, ಫಲಾನಾ ಕಾಗದ ಪತ್ರಗಳನ್ನಾಗಲಿ, ಸ್ವತ್ತನ್ನಾಗಲಿ, ಸದರೀ ಬರವಣಿಗೆಯ ಹುಕುಮನ್ನು ತೆಗದುಕೊಂಡು ಬರುವ ಅಂಥಾ ಮನುಷ್ಯನಿಗೆ ಕೂಡ್ಲೇ ಕೊಡಬೇಕೆಂತಾಗಲಿ, ಸದರೀ ಬರವಣಿಗೆಯಲ್ಲಿ ನಮೂದಿಸಿ ಇರಬಹುದಾದ ಮನುಷ್ಯನಿಗೆ ಅದರಲ್ಲಿ ಕಂಡ ತಾರೀಖಿನಲ್ಲಿಯೂ ಸ್ಥಳದಲ್ಲಿಯೂ ಕೊಡಬೇಕೇಂತಾಗಲಿ ಕೇಳತಕ್ಕದ್ದು.

ಹಣಮುಂತಾದ್ದನ್ನು ಹಾಜರ್ ಮಾಡಲಿಕ್ಕೆ ಆತನು ತಪ್ಪಿದರೆ, ಆತನನ್ನು ದಸ್ತಗಿರಿಮಾಡಿ ಜೈಲ್‌ನಲ್ಲಿ ಇಡತಕ್ಕದ್ದು.

ಮೇಲೆಕಂಡಂತೆ ಆಫೀಸರ ಅಥವಾ ಇತರ ಮನುಷ್ಯನು ಹಣವನ್ನು ಫೈಸಲ್ ಮಾಡದೆಯಾಗಲಿ, ಮೇಲೆ ನಿಯಮಿಸಲ್ಪಟ್ಟಂತೆ ಕಾಗ ಪತ್ರಗಳನ್ನು ಅಥವಾ ಸ್ವತ್ತನ್ನು ಒಪ್ಪಿಸದೆಯಾಗಲಿ ಇದ್ದರೆ, ಸದರೀ ಡೆಪ್ಯುಟಿ ಕಮ್ಮಿಷನರು ಅಥವಾ ಸರ್ವೆ ಸೂಪರ್ನಿಟೆಂಡೆಂಟರು ಅಥವಾ ಇವರಿಬ್ಬರಲ್ಲಿ ಯಾರಿಂದಲಾಗಲಿ ಮೊಕರರು ಮಾಡಲ್ಪಟ್ಟಿರುವ ಇನ್ಯಾವ ಆಫೀಸರಾಗಲಿ ಹಾಗೆ ತಪ್ಪುವ ಆಫೀಸರನ್ನು ಅಥವಾ ಮನುಷ್ಯನನ್ನು ದಸ್ತಗಿರೀ ಮಾಡಿಸಿ D ಷೆಡ್ಯೂಲ್‌ನಲ್ಲಿ ಕಂಡ ನಮೂನೇ ಪ್ರಕಾರ ವಾರಂಟನಿಶೀ ಆತನಿಂದ ಕೇಳಲ್ಪಡತಕ್ಕ ಮೊಬಲಗ್‌ಗಳು ಫೈಸಲಾಗುವತನಕ ಅಥವಾ ಕಾಗದಗಳಾಗಲಿ, ಸ್ವತ್ತಾಗಲಿ, ಒಪ್ಪಿಲಸ್ಪಡುವತನಕ ಸಿವಿಲ್ ಜೈಲ್‌ನಲ್ಲಿ ಇಡಿಸಬಹುದು.

ಪರಂತು, ಒಂದುತಿಂಗಳಿಗಿಂತ ಹೆಚ್ಚಾಗಿ ಯಾವ ಮನುಷ್ಯನೂ ಖೈದನಲ್ಲಿಡಲ್ಪಡತಕ್ಕದ್ದಲ್ಲವು.

ಪರಂತು, ಯಾವ ಮನುಷ್ಯನೂ ಅಂತಾ ವಾರಂಟಿನ ಬಲದಿಂದ ಒಂದು ಕ್ಯಾಲೆಂಡರ್ ತಿಂಗಳಿಗಿಂತ ಹೆಚ್ಚಾದ ಕಾಲ ಖೈದನಲ್ಲಿ ನಿಲ್ಲಿಸಿಕೊಳ್ಳಲ್ಪಡತಕ್ಕದ್ದಲ್ಲವು.

ಮುಂ. ರೆ. ಕೋ. 26ನೇ ಸೆಕ್ಷನ್.

ಸರ್ಕಾರ ಹಣವು, ಜಮೀನ್ ಕಂದಾಯದ ಬಾಕೀ ತರೀಕ್ ಸಹ ವಸೂಲ್ಮಾಡಲ್ಪಡಬಹುದು.

26. ಆಫೀಸರರಾಗಲಿ, ಇತರ ಮನುಷ್ಯನಾಗಲಿ, ತನ್ನ ಇಲಾಖೇಯಲ್ಲಿ ಮತ್ತು ಡಿಸ್ಟ್ರಿಕ್ಟಿನಲ್ಲಿ ನೌಕರಿ ಮಾಡುತ್ತಿದ್ದರೆ, ಅಥವಾ ನೌಕರಿ ಮಾಡಿದ್ದರೆ ಡೆಪ್ಯುಟಿ ಕಮ್ಮಿಷನರು ತಮ್ಮ ಸ್ವಂತ ಅಭಿಪ್ರಾಯ ಪ್ರಕಾರವೂ ಮತ್ತು ಅಂತಾ ಆಫೀ

ಸರರಾಗಲೀ, ಮನುಷ್ಯನಾಗಲೀ, ತನ್ನ ಡಿಸ್ಟ್ರಿಕ್ಟಿನಲ್ಲಿರುವ ಸರ್ವೇ ಯಿಲಾಖೇಯೊಳಗೆ ನೌಕರಿ ಮಾಡುತ್ತಿದ್ದರೆ ಅಥವಾ ಮಾಡಿದ್ದರೆ ಸರ್ವೇ ಸೂಪರಿಂಟೆಂಡೆಂಟರ ಖಾಯಿಷ ಮೇಲೆಯೂ ಜಮೀನ ಕಂದಾಯದ ಬಾಕೀಯನ್ನು, ಬಾಕೀಕೊಡುವದಕ್ಕೆ ತಪ್ಪಿದ ಜನಗಳಿಂದ ವಸೂಲ್‌ಮಾಡುವಬಗ್ಯೆ, ಈ ರೆಗ್ಯುಲೇಷನ್ನಲ್ಲಿ ವಿಧಿಸಲ್ಪಟಂತಾ ರೀತಿಯಾಗಿಯೂ, ಬದಸ್ತೂರ ರೂಲ್ಸಿಗೆ ಒಳಪಟ್ಟು, ಸದರೀ ಆಫೀಸರಿಂದ ಅಥವಾ ಮನುಷ್ಯನಿಂದ ಬರತಕ್ಕ ಯಾವದಾದರೂ ಬಾಕೀ ಹಣವನ್ನು ವಸೂಲ್‌ಮಾಡುವಬಗ್ಯೆ ನಡವಳಿತವನ್ನು ನಡಿಸತಕ್ಕದ್ದು, ಮತ್ತು ಸರ್ಕಾರ ಕಾಗದಗಳು ಯಾ ಯಿತರ ಸ್ವತ್ತನ್ನಾಗಲಿ ವಸೂಲ್ಮಾಡುವಬಗ್ಯೆ ಝುಡ್ತಿವಾರಂಟನ್ನು ಸಾದರ್ಮಾಡತಕ್ಕದ್ದು, ಮತ್ತು 1872ನೇ ಇಸವಿಯ ಕ್ರಿಮಿನಲ ಪ್ರೊಸೀಡ್ಯೂರ ಕೋಡಿನ 27ನೇ ಸೆಕ್ಷನ ನಿಬಂಧನೆಗಳನುಸರಿಸಿ, ಒಬ್ಬ ಮಾಜಿಸ್ಟ್ರೇಟರಿಂದ ಕಾನೂನುಪ್ರಕಾರ ಚಲಾಯಿಸಲ್ಪಡತಕ್ಕಂಥಾ ತಮಾಂ ಅಧಿಕಾರಗಳನ್ನೂ ಚಲಾಯಿಸತಕ್ಕದ್ದು.

ಸರ್ಕಾರ ಕಾಗದಗಳು ಅಥವಾ ಇತರ ಸ್ವತ್ತನ್ನಾಗಲಿ ಬರಮಾಡಿಕೊಳ್ಳುವಬಗ್ಯೆ ಝುಡ್ತೀವಾರಂಟಗಳನ್ನು ಕೊಡಬಹುದು.

ಅಂತಾ ಸರ್ಕಾರ ಹಣಗಳನ್ನಾಗಲಿ, ಕಾಗದಗಳನ್ನಾಗಲಿ, ಗವರ್ನಮೆಂಟಿಗೆ ಶೇರಿದ ಇತರ ಸ್ವತ್ತನ್ನಾಗಲಿ, ಮಡಗಿಕೊಂಡಿರುವ ಯಲ್ಲ ಜನಗಳೂ, ಅವುಗಳನ್ನು ಕೂಡಲೆ ಡೆಪ್ಯುಟಿ ಕಮ್ಮಿಷನರಿಗೆ ಪಾವತಿ ಮಾಡತಕ್ಕದ್ದು ತಮ್ಮ ಕೆಲಸವೆಂದು ತಿಳಿಯುವುದು; ಅಂತಾ ಯಾವ ಸ್ವತ್ತಾಗಲಿ, ಹಜಂಮಾಡಲ್ಪಟ್ಟ ಸ್ಥಳವನ್ನು ತಿಳಿದಿರುವ ಪ್ರತಿ ಮನುಷ್ಯನೂ, ಅದನ್ನು ಕುರಿತ ಸಂಗತಿಯನ್ನು ಡೆಪ್ಯುಟಿ ಕಮ್ಮಿಷನರಿಗೆ ತಿಳಿಸಲಿಕ್ಕೆ ಬದ್ಧನಾಗಿರತಕ್ಕದ್ದು.

ಸರ್ಕಾರ ಹಣಗಳು ವಗೈರೇಯನ್ನು ಜಿಮ್ಮೇಯಲ್ಲಿ ಯುಳ್ಳ ಜನಗಳು ಅವುಗಳನ್ನು ಒಪ್ಪಿಸಿಬಿಡಲಿಕ್ಕೆ ಬದ್ಧರಾಗಿರತಕ್ಕದು.

ಮುಂ. ರೆ. ಕೋ. 27ನೇ ಸೆಕ್ಷನ.

27. C ಷೆಡ್ಯೂಲಿನ ನಮೂನೇ ಪ್ರಕಾರ ಕರಾರಿಗೆ ವಳಪಡುವ ಮೇಲೆ ಕಂಡಂಥಾ ಆಫೀಸರ ಅಥವಾ ಇತರ ಮನುಷ್ಯನ ಜಾಮೀನ್ದಾರ ಅಥವಾ ಜಾಮೀನ್ದಾರರು, ತಮ್ಮ ಯುಲ್ಲರ ಮೇಲೂ ಪ್ರತ್ಯೇಕವಾಗಿ ಒಬ್ಬೊಬ್ಬರಮೇಲೂ ಜಾಮೀನು ಕರಾರು ನಡಸಲಿಕ್ಕೆ ತಪ್ಪಿದ ಸಂಗತಿಯಲ್ಲಿ, ಆತನ ಅಥವಾ ಅವರುಗಳ ಮುಖ್ಯಸ್ಥನು ಫಿರ್ಯಾದ ಮಾಡಲ್ಪಡಲಿಕ್ಕೆ ಜವಾಬ್‌ದಾರನಾಗಿರುವಂತೆಯೇ ಫಿರ್ಯಾದಮಾಡಲ್ಪಡಲಿಕ್ಕೆ ವಳಪಡುವರು; ಪರಂತು, ಅಂತಾ ಮುಖ್ಯಸ್ಥನ ಮೇಲೆ ಹಾಗೆ ದಾವಾತರಲ್ಪಡಬಹುದಾದಾಗ್ಯೂ ಈ ಜಾಮೀನ್ದಾರ ಅಥವಾ ಜಾಮೀನ್ದಾರರುಗಳ ಮೇಲೂ ದಾವಾ ತರಲ್ಪಡಬಹುದು.

ಜಾಮೀನ್ದಾರರನು ಮುಖ್ಯಸ್ಥನಂತೆಯೇ ಜವಾಬ್ದಾರನಾಗಿರತಕ್ಕದ್ದು.

ಪರಂತು, ಸರ್ಕಾರಕ್ಕೆ ಸಲ್ಲತಕ್ಕ ಯಾವ ಮೊಬಲಗನ್ನಾಗಲೀ ಕೊಡಲಿಕ್ಕೆ ಅಥವಾ ಫೈಸಲ ಮಾಡಲಿಕ್ಕೆ ಅಥವಾ ನಿಷ್ಕೃಷ್ಟವಾದ ಕ್ರಯವುಳ್ಳ ಗವರ್ನಮೆಂಟಿನ ಯಾವ ಸ್ವತ್ತನ್ನಾಗಲಿ, ಹಾಜರ್‌ಮಾಡಲಿಕ್ಕೆ ತಪ್ಪುವ ಯಾವ ಸಂಗತಿಯಲ್ಲಾಗಲಿ, ಮುಖ್ಯಸ್ಥನು ತಪ್ಪುವದರಿಂದ ಗವರ್ನಮೆಂಟಿಗೆ ವಸ್ತುತಃ ಉಂಟಾಗಬಹುದಾದ ಯಾವ ನಷ್ಟಕ್ಕಾಗಲಿ, ಲುಕ್ಸಾನಿಗಾಗಲಿ ಭರ್ತಿಯಾಗಲಿಕ್ಕೆ ಸಾಕಾದದಕ್ಕಿಂತ ಹೆಚ್ಚು ಮೊ

ನಷ್ಟದಮೊಬಲಗು ಎಷ್ಟೆಂಬುದು.

ಬಲಗ್ ಜಾಮೀನ್ದಾರನಿಂದಾಗಲಿ, ಅಥವಾ ಜಾಮೀನ್ದಾರರುಗಳಿಂದಾಗಲಿ ಬರೆದುಕೊಡಲ್ಪಟ್ಟ, ಜಾಮೀನ್ ಪತ್ರದ ಷರತ್‌ಗಳ ಪ್ರಕಾರ ಅವರುಗಳಿಂದ ಸಲ್ಲತಕ್ಕ ಮೊಬಲಗಾಗಿ ವಸೂಲ್ಮಾಡಲ್ಪಡತಕ್ಕದ್ದಲ್ಲವು.

ಜುರ್ಮಾನೇ ಕೊಡುವಪಕ್ಷಕ್ಕೆ ಖೈದಿಗೆ ಒಳಪಡದಿರುವ ಜಾಮೀನ್ದಾರ್ ಯಾ ಜಾಮೀನ್ದಾರರು.

ಪರಂತು, ಸರ್ಕಾರ ಕಾಗದಗಳನ್ನಾಗಲಿ ಸ್ವತ್ತನ್ನಾಗಲಿ ಹಾಜರ್ಮಾಡಲಿಕ್ಕೆ ತಪ್ಪಿದ ಸಂಗತಿಗಳಲ್ಲಿ ಜಾಮೀನ್ದಾರನಾಗಲಿ ಜಾಮೀನ್ದಾರರಾಗಲಿ ಜಾಮೀನ್ ಪತ್ರದಲ್ಲಿಕಂಡ ಪೆನಲಟಿ ಯಾನೆ ಜುರ್ಮಾನೆಯ ಪಟ್ಟು ಮೊಬಲಗನ್ನಾಗಲಿ ಕೇಳಲ್ಪಡುವ ಅದರ ಯಾವ ಭಾಗವನ್ನಾಗಲಿ ಗವರ್ನಮೆಂಟು ಖಜಾನೆಗೆ ಪಾವತೀ ಮಾಡಿದರೆ ಅವನು ಅಥವಾ ಅವರುಗಳು ಖೈದಿಗೆ ಗುರಿಯಾಗತಕ್ಕದ್ದಲ್ಲವು.

ಮುಂ. ರೆ. ಕೋ. 28ನೇ ಸೆಕ್ಷನ್.

ಜೆಯಿಲ್‌ನಲ್ಲಿರುವ ಒಬ್ಬ ಆಫೀಸರಾಗಲೀ ಜಾಮೀನ್ದಾರನಾಗಲೀ ಒಂದು ಜಾಮೀನನ್ನು ಕೊಡುವದರಿಂದ ತನ್ನ ಖುಲಾಸೆಯನ್ನು ಪಡೆಯತಕ್ಕದ್ದು.

28. ಮೇಲೆ ಕಂಡಂತೆ ಒಬ್ಬ ಆಫಿಸರಾಗಲೀ, ಇತರ ಮನುಷ್ಯನಾಗಲಿ ಯಾರಮೇಲೆ ತಗಾದೇ ಮಾಡಲ್ಪಟ್ಟತೋ ಅಂತಾ ಅವನ ಜಾಮೀನ್ದಾರ ಯಾ ಜಾಮೀನ್ದಾರರಾಗಲೀ, E ಷೆಡ್ಯೂಲ್ ನಮೂನೆ ಪ್ರಕಾರ ಸಾಕಾದ ಜಾಮೀನನ್ನು ಕೊಟ್ಟರೆ, ಡೆಪ್ಯುಟಿ ಕಮ್ಮಿಷನರು, ಅಂತಾ ಆಫಿಸರಾಗಲಿ ಜಾಮೀನ್ದಾರನಾಗಲಿ ಖೈದಿನಲ್ಲಿದ್ದರೆ, ಅಂಥಾವನನ್ನು ಖುಲಾಸೇ ಮಾಡಿಸಿ, ಜಪ್ತೀ ಮಾಡಿಸಲ್ಪಟ್ಟರಬಹುದಾದ ಯಾವದಾದರೂ ಸ್ವತ್ತಿನಸಹರಾಜನ್ನು ರದ್ದುಮಾಡಿ, ಯಾವನ ವಶದಿಂದ ಅಂತಾ ಸ್ವತ್ತು ಜಪ್ತೀಮಾಡಲ್ಪಟ್ಟರುತ್ತೋ ಅಂತಾ ಸ್ವಂತಗಾರನಿಗಾಗಲಿ, ಇತರ ಮನುಷ್ಯನಿಗಾಗಲಿ, ವಾಪಸ್ ಕೊಡಿಸತಕ್ಕದ್ದು.

ಮುಂ. ರೆ. ಕೋ. 29ನೇ ಸೆಕ್ಷನ್.

ಮುಖ್ಯಸ್ಥನು ಮರಣಹೊಂದುವದರಿಂದಾಗಲೀ, ಅವನು ಬೇರೆ ಉದ್ಯೋಗವನ್ನು ವಹಿಸೋಣದರಿಂದಾಗಲಿ ಬಾಧಿಸಲ್ಪಡದ ಜಾಮೀನ್ದಾರನಜವಾಬ್‌ದಾರಿಯು.

29. ಜಾಮೀನ್ದಾರನ ಅಥವಾ ಜಾಮೀನ್ದಾರರ ಜವಾಬ್‌ದಾರೀಯು ಮುಖ್ಯಸ್ಥನ ಮರಣದಿಂದಾಗಲಿ, ಪತ್ರ ಹುಟ್ಟಿದ ಕಾಲದಲ್ಲಿ ತಾನು ಇದ್ದ ಉದ್ಯೋಗಕ್ಕಿಂತ ಬೇರೆಯಾದ ಉದ್ಯೋಗಕ್ಕೆ ಅವನು ಮೊಕರರ್ ಮಾಡಲ್ಪಟ್ಟದರಿಂದಾಗಲಿ ಬಾಧಿಸಲ್ಪಡತಕ್ಕದ್ದಲ್ಲವು, ಆದರೆ 23ನೇ ಸೆಕ್ಷನ್ ಅನುಸರಿಸಿ ಯಾವ ಉದ್ಯೋಗಕ್ಕಾಗಿ ಜಾಮೀನ್ ಕೇಳಲ್ಪಡುತ್ತೋ ಅಂಥಾ ಯಾವ ಉದ್ಯೋಗವನ್ನು ಮುಖ್ಯಸ್ಥನು ವಹಿಸಿ ಇರುವವರಿವಿಗೂ ಮತ್ತು ಜಾಮೀನ್ ಪತ್ರವು ರದ್ದು ಆಗುವವರಿವಿಗೂ ಸದರೀ ಜವಾಬ್‌ದಾರಿಯುನಡೆದು ಬರತಕ್ಕದ್ದು.

ಮೃತಪಟ್ಟ ಆಫೀಸರಗಳ ಬಾಧ್ಯಸ್ಥರ ಜವಾಬ್‌ದಾರಿ.

ಮೃತಪಟ್ಟ ಆಫಿಸರರ ಬಾಧ್ಯಸ್ಥರು, ತಮ್ಮ ವಶಕ್ಕೆ ಅಥವಾ ಮೇಲ್ವಿಚಾರಣೆಗೆ ಬಂದಿರಬಹುದಾದ ತಮಾಂ ಸರ್ಕಾರ್ ಹಣವನ್ನಾಗಲಿ, ಕಾಗದ ಪತ್ರಗಳನ್ನಾಗಲಿ, ಗವರ್ನಮೆಂಟಿನ ಇತರಸ್ವತ್ತನ್ನಾಗಲಿ, ಗವರ್ನಮೆಂಟಿಗೆ ಒಪ್ಪಿಸಲಿಕ್ಕೆ ಬದ್ಧರಾಗಿರತಕ್ಕದ್ದು; ಮತ್ತು ಮೃತಪಟ್ಟ ಆಫಿಸರರು ಜೀವಿಸಿಯಿದ್ದರೆ ಹ್ಯಾಗೆ ದಾವಾ ಮಾಡಲ್ಪಡುತ್ತಿರುವರೋ ಅದೇ ಮೇರೆ ದಾವಾ ಮಾಡಲ್ಪಡಬಹುದು, ಪರಂತು, ಹಣ ಕೇಳಲ್ಪಟ್ಟಾಗ ಮೃತಪಟ್ಟವರಿಂದ ವಾರಸ್‌ದಾರೀ ಮೇಲೆ ಪಡೆದ ಸ್ವತ್ತಿನ ಪರಿಮಾಣದಷ್ಟಕ್ಕೆ ಮಾತ್ರ ಜವಾಬ್‌ದಾರರಾಗಿರತಕ್ಕದ್ದು.

ಮುಂ. ರೆ. ಕೋ. 30ನೇ ಸೆಕ್ಷರ್ಷ.

ಮುಂದಿನ ಜವಾಬ್‌ದಾರಿಯ ದೆಶೆಯಿಂದ ಜಾಮೀನ್ದಾರನು ಹ್ಯಾಗೆ ತಪ್ಪಿಸಿಕೊಳ್ಳತಕ್ಕದ್ದು.

30. ಪ್ರತ್ಯೇಕ ಪತ್ರ ಪ್ರಕಾರವಾಗಲಿ, ಜಂಟಿ ಪತ್ರ ಪ್ರಕಾರವಾಗಲಿ, ಯೇ ಪರ್ಸಟ್ಟ ಯಾವ ಜಾಮೀನ್ದಾರನಾಗಲಿ ಯಾವ ಆಫೀಸರರಿಗೆ ಪತ್ರ ಬರೆದು ಕೊಡಲ್ಪಟ್ಟಿದ್ದೆಯೋ ಅಂತಾ ಆಫೀಸರರಿಗೆ ಆಮೇಲೆ ಜಾಮೀನ್ದಾರೀಯಿಂದ ತಪ್ಪಿಸಿಕ್ಕೊಳ್ಳಲಿಕ್ಕೆ ಖಾಯಿಷ ಮಾಡುತ್ತೇನೆಂದು ಬರವಣಿಗೇಮೂಲಕ ನಮೂದಿಸಿದ ಮೇಲೆ ಯಾವ ಕಾಲದಲ್ಲಾಗಲಿ ಜಾಮೀನ್ದಾರೀಯಿಂದ ತಪ್ಪಿಸಿಕೊಳ್ಳಬಹುದು. ಮತ್ತು ಅಂತಾ ಬರವಣಿಗೆಯನ್ನು ಯಾವ ತಾರೀಖಿನಲ್ಲಿ ಕೊಡುತ್ತಾನೋ ಅದು ಮೊದಲು ಅರವತ್ತು ದಿನಗಳು ಕಳೆದ ತರುವಾಯ ಯಾವಬ್ಬ್ಯೆ ಅವನ ಮುಖ್ಯಸ್ತನು ಜವಾಬ್‌ದಾರನಾಗುತ್ತಾನೋ ಅಂತಾ ಹಣಗಳು ಪತ್ರಗಳು, ಅಥವಾ ಇತರ ಸ್ವತ್ತು ಇಂತಾದ್ದನ್ನು ಕುರಿತು ತನ್ನ ಮುಖ್ಯಸ್ಥನಮೇಲೆ ಆ ಅರವತ್ತು ದಿವಸಗಳ ತರುವಾಯ ಬರುವ ತಮಾಂ ತಗಾದೆಗಳಿಗೂ, ಪತ್ರ ಪ್ರಕಾರದ ಅವನ ಜವಾಬದಾರಿಯು ತಪ್ಪತಕ್ಕದ್ದು. ಆದರೆ ಆ ಅರವತ್ತು ದಿವಸಗಳ ವಳಗೆ ತನ್ನ ಮುಖ್ಯಸ್ಥನು ಯಾವ ತಗಾದೆಗಳಿಗೆ ಒಳಪಡಬಹುದಾಗಿರುವನೋ ಅಂತಾ ತಗಾದೆಗಳ ವಿಷಯದಲ್ಲಿ ಸದರೀ ತಗಾದೆಗಳಿಗೆ ಗುರೀಮಾಡುವ ಸಂಗತಿಗಳು ಸದರೀ ವಾಯಿದೆ ಮೀರಿ ಹೋದ ತರುವಾಯುವೂ ಕಾಣಬರದೇ ಹೋದಾಗ್ಯೂ ಜವಾಬ್‌ದಾರಿ ತಪ್ಪತಕ್ಕದಲ್ಲವು.

4ನೇ ಅಧ್ಯಾಯ.

ಮುಲ್ಕೀ ಆಫಿಸರ್‌ಗಳಿಗೆ ನಿಷೇಧಿಸಲ್ಪಟ್ಟ ಕೆಲವು ಕೃತ್ಯಗಳನ್ನೂ, ಅವರುಗಳ ಕೆಟ್ಟನಡತೆಗಾಗಿ ದಂಡನೆಯನ್ನೂ ಕುರಿತು.

ಮುಂ. ರೆ. ಕೋ. 31ನೇ ಸೆಕ್ಷರ್ಷ.

ನಿಷಿದ್ಧ ಕೃತ್ಯಗಳು.

31. ಅವನು ತಾಬೇದಾರನಾಗಿರುವ ಗವರ್ನಮೆಂಟಿನ ಅಥವಾ ಡೆಪ್ಯುಟಿ ಕಮ್ಮಿಷನರ ಅಥವಾ ಸರ್ವೇ ಸೂಪರಿಂಟೆಂಡೆಂಟರ ಇವರಿಂದ ಕೊಡಲ್ಪಟ್ಟ ಅಪ್ಪಣೆ ಶಿವಾಯಿ ಯಾವ ರೆವಿನ್ಯೂ ಆಫೀಸರಾಗಲಿ:—

ವ್ಯಾಪಾರ ಮಾಡಕೂಡದು.

(1) ಮುಖ್ಯಸ್ಥನಂತೆ ಯಾಗಲೀ ಮುತಾಲೀಕನಂತೆಯಾಗಲಿ, ವ್ಯಾಪಾರದಲ್ಲಿ ಪ್ರವರ್ತಿಸಕೂಡದು ಅಥವಾ ಸಾಕ್ಷಾತ್ತಾಗಲೀ ಪರಂಪರೆಯಿಂದಾಗಲಿ, ಯಾವ ವ್ಯಾಪಾರದ ಕೆಲಸದಲ್ಲಿಯೂ ಪ್ರವರ್ತಿಸಕೂಡದು;

ಬಹಿರಂಗವಾದ ಹರಾಜ್‌ನಲ್ಲಿ ಕ್ರಯಮಾಡಕೂಡದು.

(2) ಈ ರೆಗ್ಯುಲೇಷನಿನ ಅಥವಾ ತತ್ಕಾಲದೊಳಗೆ ಜಾರೀಯಿರುವ ಯಾವದಾದರು ಇತರ ಕಾನೂನಿನ ನಿಬಂಧನೆಗಳನುಸರಿಸಿ, ಯಾರಾದರೂ ರೆವಿನ್ಯೂ ಅಥವಾ ಜುಡಿಷಿಯಲ್ ಆಫೀಸರರು ತತ್ಕಾಲದೊಳಗೆ ತಾನು ನೌಕರೀಯಲ್ಲಿರುವ ಡಿಸ್ಟ್ರಿಕ್ಟಿನಲ್ಲಿ ಅಂಥಾ ಆಫೀಸರ ಹುಕುಂನಿಂದ ವಿಕ್ರಯಿಸಲ್ಪಡತಕ್ಕ ಯಾವ ಸ್ವತ್ತನ್ನಾಗಲಿ ಖರೀದಿಗೆ ತೆಗೆದುಕ್ಕೊಳ್ಳಲೂ ಕೂಡದು, ಖುದ್ದಾಗಿ ಅಥವಾ ಮುತಾಲೀಕನ ಮೂಲಕ ಅಥವಾ ತನ್ನ ಹೆಸರಿನಲ್ಲಿ ಅಥವಾ ಮತ್ತೊಬ್ಬನ ಹೆಸರಿನಲ್ಲಿ ಅಥವಾ ಜಂಟಿಯಾಗಿ ಅಥವಾ ಇತರರ ಸಂಗಡ ಹಿಸ್ಸೇದಾರನಾಗಿ ಚಡದರಖಾಸ್ತು ಮಾಡಕೂಡದು:

(3) ಮತ್ತು ಯಾವ ರೆವಿನ್ಯೂ ಆಫೀಸರರೂ—

(a) ತನ್ನ ನ್ಯಾಯವಾದ ತಲಬು ಅಥವಾ ಯಾವ ಸರ್ಕಾರಿಹಣ ಯಾ ಸ್ವತ್ತಿನ ವಸೂಲಾತಿ ಯಾ ಜವಾಬ್ದಾರಿ ಯಿಂತಾದ್ದು ತನಗೆ ಒಪ್ಪಿಸಲ್ಪಟ್ಟಿರುತ್ತೋ ಅಥವಾ ಸಂಬಂಧಿಸಿ ಇರುತ್ತೋ ಅಂತಾ ಹಣ, ಯಾ ಸ್ವತ್ತಿನಿಂದ ಬರತಕ್ಕ ಅದಾಯ ಇಂತಾದ್ದಕ್ಕಿಂತ ಹೆಚ್ಚಾಗಿ ಯಾವ ನಫೆಯನ್ನಾಗಲಿ, ಪ್ರಯೋಜನವನ್ನಾಗಲಿ, ತನಗೇಯಾದರೂ ಇತರ ಯಾವ ಮನುಷ್ಯನಿಗೋಸ್ಕರವಾದರೂ ಪಡೆಯತಕ್ಕದ್ದಲ್ಲವು; ಅಥವಾ

ಸರ್ಕಾರ ಹಣವನ್ನಾಗಲೀ ಸ್ವತ್ತನ್ನಾಗಲಿ ಸ್ವಂತವಾಗಿ ಉಪಯೋಗಿಸಿಕೊಳ್ಳಕೂಡದು.

(b) ಅಂತಾ ರೆವಿನ್ಯೂ ಆಫೀಸರೆಂಬ ವ್ಯಾಜದಿಂದಲಾಗಲಿ, ಅಂತಾ ಆಫೀಸರಂತೆ ತನ್ನ ಅಧಿಕಾರವನ್ನು ಚಲಾಯಿಸುವದರಿಂದಲಾಗಲಿ, ಪಾರಿತೋಷಿಕದದ್ವಾರಾ ಆಗಲಿ ಅನ್ಯಥಾ ಆಗಲಿ, ತಗಾದೆ ಮಾಡಕೂಡದು ಅಥವಾ ತೆಗೆದುಕೊಳ್ಳಕೂಡದು; ಈ ರೆಗ್ಯೂಲೇಷನಿನ ಅಥವಾ ತತ್ಕಾಲದಲ್ಲಿ ಜಾರೀಯಿರುವ ಯಾವದಾದರೂ ಇತರ ಕಾನೂನಿನ ನಿಬಂಧನೆಗಳನುಸರಿಸಿ ತಗಾದೆ ಮಾಡಲಿಕ್ಕಾಗಲಿ ತೆಗೆದುಕೊಳ್ಳಲಿಕ್ಕಾಗಲಿ ನ್ಯಾಯತಃ ಅರ್ಹನಾಗಿರುವಷ್ಟರಮೇಲೆ ಮತ್ತು ಅದಕ್ಕೆ ಹೆಚ್ಚಾಗಿ ಯಾವ ಮೊಬಲಗನ್ನಾಗಲಿ, ಮತ್ತ್ಯಾವ ಈಡನ್ನಾಗಲಿ ಕೇಳಕೂಡದು ಅಥವಾ ತೆಗೆದುಕೊಳ್ಳಕೂಡದು.

ಅಕ್ರಮವಾಗಿ ಜುಲುಂನಿಂದ ವಸೂಲ್, ಇನಾಂಗಳು, ಇಂತಾದ್ದನ್ನು ಮಾಡಕೂಡದು ಅಥವಾ ತೆಗದುಕೊಳ್ಳಕೂಡದು.

ಮುಂ. ರೆ. ಕೋ. 32ನೇ ಸೆಕ್ಷನ್.

32. 241ನೇ ಸೆಕ್ಷನ್ ಅನುಸರಿಸಿ ಮಾಡಲ್ಪಟ್ಟ ರೂಲ್ಸ್ ಯಾ ಹುಕ್ಕುಂಗಳಿಗೆ ಒಳಪಟ್ಟು ತವಾಂ ರೆವಿನ್ಯೂ ಆಫೀಸರುಗಳೂ, ಇದರ ಹಿಂದಿನ ಕಡೇ ಸೆಕ್ಷನ್ನಲ್ಲಿ ವಿವರಿಸಲ್ಪಟ್ಟಿರುವಂಥಾ ಯಾವ ತಕಶೀರ್ ಬಗ್ಯಾಗಲಿ, ಇಲಾಖಾ ನಿಬಂಧನೆಗಳು ಅಥವಾ ಆಚರಣೆ ಇವುಗಳ ಯಾವದಾದರೂ ಉಲ್ಲಂಘನೆಯ ಬಗ್ಯಾಗಲಿ, ಅಥವಾ ಅಜಾಗರೂಕತೆ, ನಾಲಾಯಕಿ, ಕೆಲಸದಲ್ಲಿ ಅಶ್ರದ್ಧೆ ಅಥವಾ ಬೇರೆ ಯಾವದಾದರೂ ಕೆಟ್ಟ ನಡತೆ, ಈಬಗ್ಯಾಗಲಿ, ಸದರೀ ಆಫೀಸರರು ಯಾರಿಂದ ನೊಕರರ್ ಮಾಡಲ್ಪಡುತ್ತಾನೋ ಅಂತಾ ಅಧಿಕಾರಿಯಿಂದಾಗಲಿ, ಅಂತಾ ಅಧಿಕಾರಿಗೆ ಮೇಲ್ಪಟ್ಟ ಮತ್ತ್ಯಾವ ಅಧಿಕಾರಿಯಿಂದಾಗಲಿ, ಜುರ್ಮಾನೇ ವಿಧಿಸಲ್ಪಡತಕ್ಕದ್ದು, ಕಂಷರಾ ಮಾಡಲ್ಪಡತಕ್ಕದ್ದು, ಸಸ್ಪೆಂಡ್ ಮಾಡಲ್ಪಡತಕ್ಕದ್ದು, ತಗ್ಯೆರ್ ಮಾಡಲ್ಪಡತಕ್ಕದ್ದು; ಈ ಅಧಿಕಾರವು ಪೂರಾ ಅಥವಾ ಕೆಲವುಮಟ್ಟಿಗಾಗಲಿ 21ನೇ ಸೆಕ್ಷನ್ ಅನುಸರಿಸಿ ಕೊಡಲ್ಪಡಬಹುದಾದ ನೊಕರರಾತಿ ಅಧಿಕಾರದ ನಿಬಂಧನೆಯಂತೆಯೋ ಯಾವ ತಾಬೇದಾರಿ ಆಫೀಸರಿಗಾಗಲಿ ವಪ್ಪಿಸಲ್ಪಡಬಹುದು.

ಜುರ್ಮಾನೇಹಾಕುವಣ, ಕಂಷರಾ ಮಾಡುವಣ, ಸಸ್ಪೆಂಡ್ ಮಾಡುವಣ ತಗ್ಯೆರ್ ಮಾಡುವಣ ಈ ಬಾಬತು ಅಧಿಕಾರವು ಯಾರಿಗೆ ಇರತಕ್ಕದ್ದು.

ಮುಂ. ರೆ. ಕೋ. 33ನೇ ಸೆಕ್ಷನ್.

33. ಯಾವ ತಾಬೇದಾರಿ ಆಫೀಸರರನ್ನಾಗಲಿ, ಜುರ್ಮಾನೇ ಹಾಕುವ ಬಗ್ಯೆ ಕಂಷರಾ ಮಾಡುವ ಬಗ್ಯೆ ಸಸ್ಪೆಂಡ್ ಮಾಡುವ ಬಗ್ಯೆ ಅಥವಾ ತಗ್ಯೆರ್ ಮಾಡುವ ಬಗ್ಯೆ ಯಾವ ರೆವಿನ್ಯೂ ಆಫೀಸರಾಗಲಿ ಬಂದು ಹುಕ್ಕುಂ ಕೊಟ್ಟರೆ, ಅಂತಾ ಹು-

ಅಂತಾ ತವಾಂ ಹುಕ್ಕುಂಗಳೂ, ಬರವಣಿಗೆಯಲ್ಲಿರತಕ್ಕದ್ದು.

ಕ್ಕವುನ್ನು ಆ ಬಗ್ಯೆ ಕಾರಣಗಳುನಿಶೀ ಬರವಣಿಗೇಯಲ್ಲಿ ಕನ್ನಡ ಅಥವಾ ಇಂಗ್ಲಿಷ್ ಭಾಷೆಯೊಳಗೆ ತನ್ನ ದಸ್ಕತ್ತಿನೊಡನೆ ದಾಖಲೇ ಬಗ್ಯೆ ಇಡತಕ್ಕದ್ದು ಅಥವಾ ಇಡಿಸತಕ್ಕದ್ದು.

ಮುಂ. ರೆ. ಕೋ. 34ನೇ ಸೆಕ್ಷರ್.

ಜುರ್ಮಾನೆಯು ಎರಡು ತಿಂಗಳ ತಲಬನ್ನು ಮೀರಕೂಡದು.

34. ಹಿಂದಿನ ನಿಬಂಧನೆಗಳನುಸರಿಸಿ ವಿಧಿಸಲ್ಪಟ್ಟ ಜುರ್ಮಾನೆಯು ಯಾವ ಸಂಗತಿಯಲ್ಲಿಯೂ, ಅಪರಾಧಿ ತಕಸೀರ್‌ಮಾಡಿದ ಕಾಲದಲ್ಲಿ ಯಾವ ಕೆಲಸದಲ್ಲಿದ್ದನೋ ಆ ಉದ್ಯೋಗದ ಎರಡು ತಿಂಗಳ ತಲಬಿಗೆ ಮೀರಿ ಇರಕೂಡದು.

ಹ್ಯಾಗೆ ವಸೂಲ್ ಮಾಡತಕ್ಕದ್ದು.

ಈ ಅಧ್ಯಾಯ ಅನುಸರಿಸಿ ಹಾಕಲ್ಪಟ್ಟ ತಮಾಂ ಜುರ್ಮಾನೆಗಳೂ, ಆಫಿಸರನ ತಲಬ್‌ನಿಂದ ವಸೂಲ್ ಮಾಡಬಹುದು; ಅಥವಾ ಜರೂರಿದ್ದಲ್ಲಿ, ಈ ರೆಗ್ಯೂಲೇಷರ್ ಅನುಸರಿಸಿ, ಜಮೀನ್ ಕಂದಾಯದ ಬಾಕೀಯಂತೆ ವಸೂಲ್ ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 35ನೇ ಸೆಕ್ಷರ್.

ಅಪ್ಪೀಲ್‌ಗಳು.

35. ಡೆಪ್ಯುಟಿ ಕಮ್ಮಿಷನರರಾಗಲೀ ಸರ್ವೇ ಸೂಪರಿಂಟೆಂಡೆಂಟರಾಗಲೀ ತಮ್ಮ ಅಭಿಪ್ರಾಯ ಪ್ರಕಾರ ಅಥವಾ ತಾಬೇದಾರೀ ಆಫಿಸರರ ಹುಕ್ಕುಂನಿಂದ ಬರುವ ಅಪ್ಪೀಲಿನಮೇಲೆ ಮಾಹೇಯಾನಾ ಮೂವತ್ತು ರೂಪಾಯಿಗಳಿಗಿಂತ ಜಾಸ್ತೀ ತಲಬ್‌ವುಳ್ಳ ಅಂತಾ ತಮ್ಮ ಯಾವ ತಾಬೇದಾರೀ ಆಫಿಸರಿಗಾಗಲಿ ಜುರ್ಮಾನೆ ಹಾಕುವ ಬಗ್ಯೆ, ಕಂಷರಾ ಮಾಡುವಬಗ್ಯೆ, ಸಸ್‌ಪೆಂಡ್ ಮಾಡುವಬಗ್ಯೆ, ಅಥವಾ ತಗ್ಯೆರ್ ಮಾಡುವಬಗ್ಯೆ ಹುಕ್ಕುಂಮಾಡಿದರೆ ಅಂತಾ ಹುಕ್ಕುಮಿನ ಮೇಲೆ ಗವರ್ನಮೆಂಟಿಗೆ ಅಪ್ಪೀಲ್ ದಾಖಲ್ ಆಗತಕ್ಕದ್ದು.

ಮುಂ. ರೆ. ಕೋ. 36ನೇ ಸೆಕ್ಷರ್.

ಒಬ್ಬ ಆಫಿಸರು ಕ್ರಿಮಿನಲ್, ವಿಚಾರಣೆಗೆಗುರಿಯಾಗುವಣವು ಈ ರೆಗ್ಯೂಲೇಷನಿನಿಂದ ಬಾಧಿಸಲ್ಪಡುವದಿಲ್ಲ.

36. ಈ ಅಧ್ಯಾಯುದಲ್ಲಿರುವ ಯಾವ ಅಂಶವೂ ಒಬ್ಬ ಆಫೀಸರಿನ ಮೇಲೆ ಹೊರಿಸಲ್ಪಡಬಹುದಾದ ಯಾವ ತಕಸೀರಿಗೋಸ್ಕರವಾಗಲಿ ಕ್ರಿಮಿನಲ್ ವಿಚಾರಣೆಗೆ ಬಾಧಿಸತಕ್ಕದ್ದಲ್ಲವು.

ಆಫಿಸರು, ವಿಚಾರಣೆಯು ಕಾಲದಲ್ಲಿ ಸಸ್‌ಪೆಂಡ್ ಮಾಡಲ್ಪಟ್ಟು ಆ ತರುವಾಯ, ಸಸ್‌ಪೆಂಡ್ ಯಾ ಕಂಷರಾ ಯಾ ತಗ್ಯೆರ್ ಮಾಡಲ್ಪಡಬಹುದು.

ಅಂತಾ ವಿಚಾರಣೆಗೆ ಗುರಿಮಾಡಲ್ಪಟ್ಟ ಯಾವ ಆಫೀಸರಾಗಲಿ ವಿಚಾರಣೆ ಕಾಲದವರಿಗೂ ಸಸ್ಪೆಂಡ್ ಮಾಡಲ್ಪಡಬಹುದು, ಮತ್ತು ಅದುಪೂರೈಸಿದಾಗ, ಮೊಕದ್ದಮೆ ನಡೆಯುತ್ತಿರುವಲ್ಲಿ, ವ್ಯಕ್ತಪಡಿಸಲ್ಪಟ್ಟ ಅಂಶಗಳ ಆಲೋಚನೆಯ ಮೇಲೆ, ಅವನು ಅಪರಾಧಿಯೆಂದು ಸಾಬೀತುನಿಶೀ ಕಾಣಬರಲಿ ಇಲ್ಲದೆ ಇರಲಿ ಯೆಖ್ತ್ಯಾರಿಯುಳ್ಳ ಯಾವ ಅಧಿಕಾರಿಯಿಂದಲಾದರು ಸಸ್‌ಪೆಂಡ್, ಕಂಷರಾ ಅಥವಾ ತಗ್ಯೆರ್ ಮಾಡಲ್ಪಡಬಹುದು.

5ನೇ ಅಧ್ಯಾಯ.

ಜಮೀನ ಮತ್ತು ಜಮೀನ ಕಂದಾಯವನ್ನು ಕುರಿತು.

ಜಮೀನ.

ಮುಂ. ರೆ. ಕೋ. 37ನೇ ಸೆಕ್ಷನ.

ಇತರರ ಸ್ವತ್ತಲ್ಲದ ದರೋಬಸ್ತು ಪಬ್ಲಿಕ ರಸ್ತೆಗಳೂ ತಮಾಂ ಜಮೀನಗಳೂ, ಗವರ್ನಮೆಂಟ ಸ್ವತ್ತಾಗಿರುತ್ತೆ.

37. ತಮಾಂ ಪಬ್ಲಿಕ ರಸ್ತೆಗಳೂ, ಗಲ್ಲಿಗಳೂ, ಮತ್ತು ಮಾರ್ಗಗಳೂ, ಇವುಗಳಮೇಲೆ ಅಥವಾ ಪಕ್ಕದಲ್ಲಿ ಇರುವ ತಮಾಂ ಶೇತುವೆಗಳೂ, ಹಳ್ಳಗಳೂ, ದೀರ್ಘವಾದ ಅಗಳ್ತೆಗಳೂ ಬೇಲೀಗಳೂ, ಹೊಳೆಗಳ ಬಳಾಯು, ನೀರುವೋಟಗಳೂ ನಾಲಾಗಳೂ, ಕೆರೆಗಳೂ, ಕುಂಟೆಗಳೂ, ತಮಾಂ ಕಾಲ್ವೆಗಳೂ, ನೀರು ಹರಿಯುವ ಮಾರ್ಗಗಳೂ, ತಮಾಂ ನಿಲ್ಲುವನೀರೂ, ಹರಿಯುವನೀರೂ, ಮತ್ತು ಸ್ವತ್ತನ್ನು ವಹಿಸಲಿಕ್ಕೆ ಯುಕ್ತಿಯಾರಿ ಇಲ್ಲದ ಜನಗಳ ಅಥವಾ ಜನಸಮುದಾಯಗಳ ಸ್ವತ್ತಲ್ಲದ ಜಮೀನಗಳೂ ಎಲ್ಲಿಯಿದ್ದಾಗ್ಯೂ ಅಂತಾ ತಮಾಂ ಜಮೀನಗಳೂ, ಸದರೀ ಜಮೀನಗಳಲ್ಲಿ ಅಥವಾ ಅವುಗಳಮೇಲೆ, ಅಂತಾ ಜನಗಳ ಯಾವದಾದರೂ ಹಕ್ಕುದಾರೀಗಳು ಸ್ಥಾಪಿಸಲ್ಪಡಬಹುದಾದ ಮಟ್ಟಿಗೆಹೊರತು, ಮತ್ತು ತತ್ಕಾಲದೊಳಗೆ ಜಾರೀಯಿರುವ ಯಾವ ಕಾನೂನಿನಲ್ಲಿಯಾಗಲಿ, ಅನ್ಯಥಾ ವಿಧಿಸಲ್ಪಡಬಹುದಾದದುವಿನಾ, ಅವುಗಳಲ್ಲಿ ಯಾಗಲಿ, ಅವುಗಳ ಮೇಲೆಯಾಗಲಿ ಅಥವಾ ಅವುಗಳಿಗೆ ಸೇರಿಕೊಂಡೆಯಾಗಲಿ ಇರುವ ತಮಾಂ ಹಕ್ಕುದಾರಿಗಳೂ, ಗವರ್ನಮೆಂಟಿನ ಸ್ವತ್ತೆಂದು ಇದರಿಂದ ತಿಳಿಸಲ್ಪಡುತ್ತೆ; ಪ್ರಜೆಗಳ ಅಥವಾ ಆಯಾ ಮನುಷ್ಯರಿಗೆ ನ್ಯಾಯತಃ ವುಂಟಾಗಿರುವ ಮಾರ್ಗದ ಹಕ್ಕುಗಳಿಗೂ, ಇತರ ತಮಾಂ ಹಕ್ಕುಗಳಿಗೂ ಸರ್ವದಾ ವಳಪಟ್ಟು ಗವರ್ನಮೆಂಟಿನಿಂದ ನಿಯಮಿಸಲ್ಪಡಬಹುದಾದ ರೀತಿಯಾಗಿ ಅವುಗಳನ್ನು ವ್ಯವಸ್ಥೆಮಾಡುವದಕ್ಕೆ ಡೆಪ್ಯುಟಿ ಕಮ್ಮಿಷನರಿಗೆ ಯುಖ್ತ್ಯಾರಿಯುಂಟು.

38. ಗವರ್ನಮೆಂಟ ಸ್ವತ್ತಾದ ಯಾವ ಪಬ್ಲಿಕ ರಸ್ತೆ, ಬೀದಿ, ಥಾರೋಫೇರ (ಅಂದರೆ ಆಚೆಗೆ ಹೋಗುವದಕ್ಕೆ ದಾರೀಯಿರುವ ಸಂದು) ಜನಗಳು ಸೇರತಕ್ಕ ಅಥವಾ ಉಪಯೋಗಿಸಲ್ಪಡತಕ್ಕ ಯಾವದಾದರೂ ಸ್ಥಳ, ಯಾವದಾದರೂ ಹೊಳೆಯು ವಳಾಯ, ನೀರೋಟ ನಾಲೆ, ಕೆರೆ, ಯಾ ಕಾಲ್ವೆ ಇಂತಾದ್ದರ ತಳ ಯಾವ ಮನುಷ್ಯನಿಂದಾಗಲಿ ಆಕ್ರಮಿಸಲ್ಪಟ್ಟಿರುತ್ತೆಂದು ಡೆಪ್ಯುಟಿಕಮ್ಮಿಷನರ ಮುಂದೆ ಕ್ರಮವಾದ ವಿಚಾರಣೆಯಲ್ಲಿ ರುಜುವಾದರೆ, ಹಾಗೆ ಆಕ್ರಮಿಸಲ್ಪಟ್ಟ ಭಾಗವು 12 ವರುಷಗಳಿಗೆ ಕಡಮೆ ಇಲ್ಲದ ಕಾಲದ ಪರ್ಯಂತ ಅವನಿಂದ ಅನುಭವಿಸಲ್ಪಟ್ಟಿರುತ್ತೆಂದು ವ್ಯಕ್ತಪಡಿಸಲ್ಪಡದೆ ಇದ್ದರೆ ಹಾಗೆ ಆಕ್ರಮಿಸಲ್ಪಟ್ಟ ಭಾಗವನ್ನು ಡೆಪ್ಯುಟಿ ಕಮ್ಮಿಷನರು ಸ್ವಾಧೀನ ಪಡಿಸಿಕೊಳ್ಳತಕ್ಕದ್ದು. ಹಾಗೆ ಆಕ್ರಮಿಸಿಕೊಂಡಿರುವಮನುಷ್ಯನಾಗಲಿ ಅಥವಾ ಹಾಗೆ ಆಕ್ರಮಿಸಲ್ಪಟ್ಟ ಜಾಗಗಳಲ್ಲಿ ಸಂಬಂಧವುಳ್ಳ ಯಿತರ ಮನುಷ್ಯನೇ ಯಾಗಲಿ ತನಗೆ ಒಂದು ತಿಂಗಳಿಗೆ ಕಡಮೆಇಲ್ಲದ ವಾಯಿದೆ ಕೊಡುವ ಒಂದು ಬರಹ ಮೂಲಕದ ನೋಟೀಸ ಕೊಟ್ಟ ತರುವಾಯ ಯಾವ ಕಟ್ಟಣಗಳನ್ನಾಗಲಿ ಇತರ ನಿರೋಧಗಳನ್ನಾಗಲಿ ಕೆಡಿವಿಸಿ ಸದರೀ ಜಾಗವನ್ನು ಖಾಲೀಮಾಡಲಿಕ್ಕೆ ತಪ್ಪಿದರೆ, ಸದರೀ ಜಾಗದಮೇಲೆ ಇರುವ ಕಟ್ಟಣಗಳನ್ನು ಯಾ ನಿರೋಧಗಳನ್ನು ಕೆಡಿವಿಸಿ ಜಾಗವನ್ನು ಖಾಲೀಮಾಡಿಸುವದಕ್ಕೆ ಡೆಪ್ಯುಟಿ ಕಮ್ಮಿಷನರಿಗೆ ಯುಖ್ತ್ಯಾರಿಯುಂಟು.

ಅನುಭವದಾರನಾದ ಮನುಷ್ಯನು ಮತ್ತೊಬ್ಬನಿಗೆ ಷಿಕ್ಮೀದಾರನಾಗಿ ಅಥವಾ ಒಳ ಸ್ವತ್ವವುಳ್ಳವನಾಗಿದ್ದರೆ ಮತ್ತು ಯಾವ ಸಂಗತಿಯಲ್ಲಿ ಮತ್ತೊಬ್ಬ ಮನುಷ್ಯನು, ಅನುಭವದಾರನಾದ ಮನುಷ್ಯನ ತಿಳುವಳಿಕೆ ಪ್ರಕಾರ ಯಾವ ಸ್ವತ್ತಿಗೆ ಅಂತಾ ನೋಟೀಸ್ ಸಂಬಂಧಿಸಿ ಯಿರುತ್ತದೋ ಅಂತಾ ಸ್ವತ್ತಿನಲ್ಲಿ ಸಂಬಂಧವುಳ್ಳ ಪ್ರತಿ ಸಂಗತಿಯುಲ್ಲಿಯೂ, ಅನುಭವದಲ್ಲಿರುವ ಅಂತಾ ಇತರ ಮನುಷ್ಯನಿಗೆ, ಅಂತಾ ನೋಟೀಸನ್ನಾಗಲಿ ಅದರ ಒಂದು ನಕಲನ್ನಾಗಲೀ, ಅದರ ಜಾಹಿರಾತಿಯನ್ನಾಗಲಿ ಕೊಡುವದು ಅವನ ಕೃತ್ಯವಾಗಿರತಕ್ಕದ್ದು. ಅಂತಾ ಕೇಸದಲ್ಲಿ ಯೇನಾದರೂ ತಪ್ಪಿ ಅದರಿಂದ ಹಾನಿ ಬಂದರೆ ಲುಕ್ಸಾನ್‌ಗಳಿಗೆ ಜವಾಬುದಾರನಾಗಿರತಕ್ಕದ್ದು.

39. 1865ನೇ ಇಸವಿಯ 1ನೇ ನಂಬರ್ ಮುಂಬೈ ಆಕ್ಟಾಗಲಿ, 1868ನೇ ಇಸವಿಯ 4ನೇ ನಂಬರ್ ಆಕ್ಟಾಗಲಿ, ಜಾರೀಗೆ ಬಂದಿರುವ ಯಾವದಾದರೂ ಷಹರ್‌ನಲ್ಲಿ, ಹಿಂದಿನಕಡೇ ಸೆಕ್ಷನ್ ಅನುಸರಿಸಿ ಜಮೀನ್ ಸ್ವಾಧೀನಕ್ಕೆ ಪಡಕೊಂಡಾಗ, ಅಂತಾ ಆಕ್ಟು ಜಾರೀಗೆ ಬಂದದ್ದಕ್ಕೆ ಪೂರ್ವ ಕಟ್ಟಲ್ಪಟ್ಟಂತೆ ರುಜು ಮಾಡಲ್ಪಟ್ಟ ಕಟ್ಟಣಗಳ ವಿಷಯದಲ್ಲಿ ಸ್ವಂತಗಾರನಿಗಾಗಲಿ ಅವುಗಳಿಗೆ ಬಾಧ್ಯತೆವುಳ್ಳ ಇತರಮನುಷ್ಯನಿಗಾಗಲಿ ಯುಕ್ತವಾದ ಕಂಪೆನ್‌ಸೇಷನ್ ಯಾನೆ ಈಡು ಕೊಡಲ್ಪಡತಕ್ಕದ್ದು.

ಪರಂತು, ಯಾವಬಗೆಯ ಅಥವಾ ಸಾಮಾನಿನ ಪಾಯಿಖಾನೆ ಗುಂಡಿಗಳು (Cess pools) ಅಥವಾ ಬಾಗಿಲ ಮೆಟ್ಲುಗಳು, ಜಗಲಿಗಳು, ಅಥವಾ ಯಾವವಿಧವಾದ ಅಥವಾ ಸಾಮಾನಿನಿಂದ ಕಟ್ಟಲ್ಪಟ್ಟ ಮುಂದಕ್ಕೆ ಹೊರಟಿರತಕ್ಕ ಇತರ ಕಟ್ಟಣಗಳು ಇಂತಾದ್ದನ್ನು ತೆಗಿಸಿಹಾಕತಕ್ಕ ವಿಷಯದಲ್ಲಿ ಈಡು ಕೊಡತಕ್ಕದ್ದಿಲ್ಲವು. ಮತ್ತು ಡೆಪ್ಯುಟಿ ಕಮ್ಮಿಷನರು ಕೊಡುವದಕ್ಕೆ ಯತ್ನಿಸಿದ ಈಡು ಅಂಗೀಕರಿಸಲ್ಪಡದೇ ಇದ್ದರೆ, ಸಲ್ಲತಕ್ಕ ಈಡು ಮೊಬಗನ್ನು 1870ನೇ ಇಸವಿಯ 10ನೇ ಆಕ್ಟಿನ IIIನೇ ಭಾಗದ ನಿಬಂಧನೆಗಳನುಸರಿಸಿ ಗೊತ್ತು ಮಾಡಲ್ಪಡತಕ್ಕದ್ದು.

40. ಕೊಡಲ್ಪಟ್ಟ ಯಾವದಾದರೂ ಶಾಸನದ, ಅಥವಾ ತತ್ಕಾಲಕ್ಕೆ ಗವರ್ನ್‌ಮೆಂಟಿನಿಂದ ಬರೆದು ಕೊಡಲ್ಪಟ್ಟ ಯಾವದಾದರೂ ಇತರ ವರ್ಗಪತ್ರದ ನಿಬಂಧನೆಗಳಿಂದ ಅನ್ಯಥಾ ವಿಧಿಸಲ್ಪಡದೇಯಿದ್ದರೆ ಯಾವ ಜಮೀನ್‌ಗಳಿಂದಾಗಲಿ, ಗನಿ ಅಗಿಯುವ ಯಾವ ಕೆಲಸದಿಂದಾಗಲಿ, ತೆಗೆಯಲ್ಪಡತಕ್ಕ ಬೆಲೆಯುಳ್ಳ ತಮಾಂ ಲೋಹಗಳೂ, ರತ್ನಗಳೂ, ಇದ್ದಲೂ, ಇತರ ಗನಿಯಿಂದ ಹುಟ್ಟತಕ್ಕ ಪದಾರ್ಥಗಳೂ ಇವುಗಳಿಗೆ ಇರತಕ್ಕ ಹಕ್ಕುದಾರಿಯು ಶುದ್ಧಾಂಗವಾಗಿ ಗವರ್ನ‌ಮೆಂಟಿಗೆ ಯಿರತಕ್ಕದ್ದು ; ಗವರ್ನ‌ಮೆಂಟಿನವರು ಅಂತಾ ಹಕ್ಕುದಾರಿಗಳನ್ನು ಯುಕ್ತವಾಗಿ ಅನುಭವಿಸಲಿಕ್ಕಾಗಲಿ, ಅದು ವ್ಯವಸ್ಥೆಯ ಒಗ್ಯಾಗಲಿ ಅವಶ್ಯಕವಾದ ವಿಶಿಷ್ಟಾಧಿಕಾರಗಳನ್ನೂ ವುಂಟಾಗಿರತಕ್ಕದ್ದು.

ಪರಂತು, ಗವರ್ನ‌ಮೆಂಟಿನವರು ತಾವೇಆಗಲಿ ಅಥವಾ ಗವರ್ನ‌ಮೆಂಟಿನವರಿಂದಅಂತಾಹುಕ್ಕುಂಗಳನ್ನು ಹೊಂದುವ ಯಾವನಾದರೂ ಮನುಷ ಸಿಂದ ಆಗಲಿ, ಇದರಲ್ಲಿಕಂಡ ಹಕ್ಕುಗಳನ್ನು ಚಲಾಯಿಸುವಲ್ಲಿ, ಇತರರ ಹಿಡುವಳಿಯಲ್ಲಿ ಅಥವಾ ಅನುಭವದಲ್ಲಿ ಇರುವ ಯಾವ ಜಮೀನ್‌ಗಳಲ್ಲಿಯೂ ಅವರ ಅಪ್ಪಣೆಯಿಲ್ಲದೆ ಪ್ರವೇಶ ಮಾಡಕೂಡದು. ಗವರ್ನ‌ಮೆಂಟಿನವರ ಆಧೀನದಲ್ಲಿಲ್ಲದ ಯಾವ ಜಮೀನಾಗಲೀ

ಗವರ್ರ್ಣಮೆಂಟಿನವರಿಗೆ ಆಗಲಿ ಅಥವಾ ಅವರಿಂದ ಗನಿ ಅಗಿಯುವ ಹಕ್ಕುಗಳನ್ನು ಸಂಪಾದಿಸುವ ಮನುಷ್ಯರಿಗೆ, ಗನಿ ಅಗಿಯುವ ಬಗ್ಗ್ಯಾಗಿ ಬೇಕಾಗಿರುವ ಸಂಗತಿಯು ಸರ್ 1870ನೇ ಇಸವಿಯ 10ನೇ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ ನಿಬಂಧನೆಗಳನುಸರಿಸಿ ಬಂದು ಸರ್ಕಾರ ಕೆಲಸಕ್ಕಾಗಿ ಅಂತಾ ಜಮೀನನ್ನು ಸಂಪಾದಿಸುವಬಗ್ಗ್ಯೆ ಬಂದುಸಬಬಾಗಿ ಭಾವಿಸಲ್ಪಡತಕ್ಕದ್ದು.

ಪರಂತು, ಈ ಸೆಕ್ಷನ್ನಲ್ಲಿ ಸೂಚಿಸಲ್ಪಟ್ಟ ಹಕ್ಕುಗಳನ್ನು ಚಲಾಯಿಸುವಲ್ಲಿ, ಜಮೀನಿನ ಯಾವ ಹಿಡುವಳೀದಾರನಿಗಾಗಲಿ, ಅಂತಾ ಜಮೀನಿನ ಮೇಲ್ಭಾಗವನ್ನು ತೊಂದರೆಪಡಿಸುವದರಿಂದ ಲುಕ್ಸಾನ್ ಸಂಭವಿಸಿದರೆ, ಅಂತಾ ಹಿಡುವಳೀದಾರನು ಅಂತಾ ಲುಕ್ಸಾನಿಗಾಗಿ ಈಡಿಗೆ ಅರ್ಹನಾಗಿರತಕ್ಕದ್ದು. ಅಂತಾ ಈಡು ಮೊಬಲಗು, ಅವಶ್ಯಕವಿದ್ದ ವಿಷಯಗಳಲ್ಲಿ, 1870ನೇ ಇಸವಿ 10ನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ ನಿಬಂಧನೆಗಳಿಗೆ ಅನುಸಾರವಾಗಿ ನಿರ್ಣೈಸಲ್ಪಡತಕ್ಕದ್ದು.

ಮುಂ. ರೆ. ಕೋ. 38ನೇ ಸೆಕ್ಷನ್.

ವಿಶೇಷ ಕಾರ್ಯಗಳಿಗಾಗಿ ಜಮೀನ್ಗಳು ಪರಭಾರೇ ಮಾಡಲ್ಪಡಬಹುದು ; ಹಾಗೆ ಪರಭಾರೇ ಮಾಡಲ್ಪಟ್ಟಲ್ಲಿ ಗವರ್ನ್ಮೆಂಟಿನ ಮುಂಜೂರಾತಿಯಿಲ್ಲದೆ, ಅನ್ಯಥಾ ವಿನಿಯೋಗಿಸಲ್ಪಡಕೂಡದು.

41. ಗವರ್ರ್ಣಮೆಂಟಿನವರು ಯಾವ ಕಾಲದಲ್ಲಾಗಲಿ ಮತ್ತು ಗವರ್ರ್ಣಮೆಂಟಿನವರ ವಟ್ಟು ಹುಕ್ಕುಮಿಗೆ ವಳಪಟ್ಟು, ಸರ್ವೇ ಆಫೀಸರುಗಳೇ ಯಾಗಲೀ ಈ ರೆಗ್ಯುಲೇಷನಿನ VIIIನೇ ಅಧ್ಯಾಯವನ್ನು ಅನುಸರಿಸಿ ಸರ್ವೇಕೆಲಸ ಜರುಗುವಾಗ್ಯೆ ಗ್ರಾಮದ ದನಗಳ ಧರ್ಮದ ಕಾವಲ್‌ಬಗ್ಗ್ಯೆ, ಮನ್ನಾ ಕಾಡುಗಳ ಬಗ್ಗ್ಯೆ; ಅಥವಾ ಇತರ ಪ್ರಜಾಸಂಬಂಧವಾದ ಅಥವಾ ಮ್ಯುನಿಸಿಪಲ್ ಸಂಬಂಧವಾದ ಕೆಲಸಗಳ ಬಗ್ಗ್ಯಾಗಿ ಗವರ್ರ್ಣಮೆಂಟಿನ ಸ್ವತ್ತಾಗಿ ಮತ್ತು ಪರಭಾರೇಯಾಗದ ಗ್ರಾಮಗಳಲ್ಲಿ ಅಥವಾ ಗ್ರಾಮಗಳ ಪರಭಾರೆಯಾಗದ ಭಾಗಗಳಲ್ಲಿ ಯಾವನಾದರೂ ಮನುಷ್ಯನ ಅಥವಾ ಜನಸಮುದಾಯದ ಕಾನೂನು ಪ್ರಕಾರವಾದ ಅನುಭವದಲ್ಲಿಲ್ಲದ ಜಮೀನ್ಗಳನ್ನು, ಬಿಟ್ಟುಕೊಡಬಹುದು. ಅಂತಾ ಯಾವ ಕೆಲಸಕ್ಕೋಸ್ಕರವಾಗಲೀ, ವಿಶೇಷತಃ ಪರಭಾರೇ ಮಾಡಲ್ಪಟ್ಟ ಜಮೀನ್ಗಳು ಗವರ್ರ್ಣಮೆಂಟಿನ ಮುಂಜೂರಾತಿಯಿಲ್ಲದೆ ಅನ್ಯಥಾ ವಿನಿಯೋಗಿಸಲ್ಪಡಕೂಡದು, ಅಥವಾ ಪರಭಾರೇ ಮಾಡಲ್ಪಡಕೂಡದು ; ಮತ್ತು 37ನೇ ಸೆಕ್ಷನ್ ಅನುಸರಿಸಿ ಜಮೀನು ವಿಷಯವಾಗಿ ಫೈಸಲ್ ಮಾಡುವದರಲ್ಲಿ ಅಂಥಾ ತಮಾಂ ವಿಶೇಷ ವಿನಿಯೋಗಗಳಿಗೆತಕ್ಕ ನಿಗೇ ಕೊಡತಕ್ಕದ್ದು.

ಮುಂ. ರೆ. ಕೋ. 39ನೇ ಸೆಕ್ಷನ್.

ಕಾಲವನ್ನು ಉಪಯೋಗಿಸುವದನ್ನು ಕ್ರಮಪಡಿಸುವಣ.

42. ಧರ್ಮದ ಕಾವಲ್‌ಜಮೀನ್ಗಳಲ್ಲಿ ದನಗಳನ್ನು ಮೇಯಿಸುವ ಹಕ್ಕು ಅಂಥಾ ಜಮೀನ್ಗಳು ಯಾವ ಗ್ರಾಮಕ್ಕೆ ಅಥವಾ ಗ್ರಾಮಗಳಿಗೆ ಸಂಬಂಧಿಸಿ ಇರುತ್ತವೋ ಅಥವಾ ವರ್ಗಮಾಡಲ್ಪಟ್ಟಿರುತ್ತವೋ ಅಂತಾ ಗ್ರಾಮ ಯಾ ಗ್ರಾಮಗಳ ದನಗಳಿಗೆ ಮಾತ್ರವೇ ವ್ಯಾಪಿಸತಕ್ಕದ್ದು ; ಮತ್ತು ಗವರ್ರ್ಣಮೆಂಟಿನಿಂದ ವಿಧಿಸಲ್ಪಡಬಹುದಾದ ರೂಲ್ಸ್ ಯಾವದಾದರೂ ಇದ್ದರೆ ಅಂತಾ ಬಟ್ಟು ರೂಲ್ಸಿಗೆ ಒಳಪಟ್ಟು, ಡೆಪ್ಯುಟಿ ಕಮ್ಮಿಷನರಿಂದ ಆಗಿಂದಾಗ್ಯೆ ಸಾಮಾನ್ಯತಃ ಆಗಲಿ ಯಾವದಾದರೂ ವಿಶೇಷ ಸಂಗತಿಗಳಲ್ಲಾಗಲಿ ವಿಧಿಸಲ್ಪಡತಕ್ಕ ಕಾನೂನುಗಳಿಂದ ಕ್ರಮಪಡಿಸಲ್ಪಡತಕ್ಕದ್ದು. ಸದರೀ ಕಾವಲ್ ಹಕ್ಕನ್ನು ಕುರಿತು ಡೆಪ್ಯುಟಿ ಕಮ್ಮಿಷನರವರ ನಿರ್ಣಯವು ಆಖೈರಾದ್ದಾಗಿರತಕ್ಕದ್ದು.

ಮರಗಳು.

43. ಗವರ್ನಮೆಂಟಿನವರ ಮುನ್ನಾ ಜಂಗ್ಲೀಗಳಲ್ಲಿ ತಮಾಂ ಮರಗಳೂ, ಕುರುಚ್ಚಗಿಡಗಳೂ, ಕಾಡು ಅಥವಾ ಇತರಸ್ವಾಭಾವಿಕವಾದ ಹುಟ್ಟುವಳೀ ಇಂತಾದ್ದಕ್ಕೆ ಹಕ್ಕುದಾರಿಯೂ, ದನಮೇಯಿಸುವ ಹಕ್ಕೂ, ಗವರ್ನಮೆಂಟಿನವರಿಗೆ ಸೇರಿ ಇರುತ್ತೆ.

44. ಸನ್ 1865ನೇ ಇಸವಿಯ 1ನೇ ನಂಬರ್ ಮುಂಬೈ ಆಕ್ಟಿನ 32ನೇ ಸೆಕ್ಷನ್ ಅನುಸರಿಸಿ ಗವರ್ನಮೆಂಟಿನಿಂದ ಉಳಿಸಲ್ಪಡತಕ್ಕ ಜಂಗ್ಲೀಗಳ ಬಗ್ಗೆ ಮೊಕರರ್ ಮಾಡಲ್ಪಟ್ಟ ಜಮೀನ್ಗಳಲ್ಲಿ ಬೆಳೆಯುವ ಉಳಿಸಿಕೊಳ್ಳಲ್ಪಟ್ಟ ಒಂಭತ್ತು ಬಗೆ ಮರಗಳಿಗೆ ಯಿರತಕ್ಕ ಹಕ್ಕುದಾರಿಯು ಗವರ್ನಮೆಂಟಿನವರದಾಗಿರುತ್ತೆ; ಇಂಥಾ ಜಮೀನ್ಗಳಲ್ಲಿ ಬೆಳೆಯುವ ಮಿಕ್ಕ ಯಲ್ಲಾವಿಧವಾದ ಮರಗಳ ಹಕ್ಕೂ ಆ ಜಮೀನ್ಗಳು ಯಾವ ಗ್ರಾಮಕ್ಕೆ ಅಥವಾ ಗ್ರಾಮಗಳಿಗೆ ಶೇರಿರುತ್ತವೆಯೋ ಯಾ ಬಿಡಲ್ಪಟ್ಟಿರುತ್ತವೆಯೋ ಅಂಥಾ ಗ್ರಾಮ ಅಥವಾ ಗ್ರಾಮಗಳಿಗೆ ಶೇರಿರುತ್ತದೇ; ಅಂತಾ ಗ್ರಾಮ ಯಾ ಗ್ರಾಮಗಳ ಪ್ರಜೆಗಳಿಂದ ಈ ಹಕ್ಕುದಾರಿಯ ಚಲಾವಣೆಯು, ಈ ಬಗ್ಗೆ ಗವರ್ನಮೆಂಟಿನಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಂತಾ ರೂಲ್ಸಿನಿಂದ ಕ್ರಮಪಡಿಸಲ್ಪಡತಕ್ಕದ್ದು.

ಈ ಸೆಕ್ಷನ್ನಲ್ಲಿ ಕಂಡ ಉಳಿಸಿಕೊಳ್ಳಲ್ಪಟ್ಟ ಒಂಭತ್ತು ಬಗೆ ಮರಗಳು ಯಾವವಂದರೆ :—

1. ಹೊನ್ನೇ.
2. ಜಾಲಾರಿಮರ.
3. ನಂದೀಮರ.
4. ಜಂಗ್ಲೀ ಹಲಸು.
5. ಪೂನ್.
6. ಕಾರಾಚಿ.
7. ತೇಗ.
8. ಕರೇಮರ.
9. ಸಂದಲ್‌ಮರ.

45. ಸನ್ 1865ನೇ ಇಸವಿಯ 1ನೇ ನಂಬರ್ ಮುಂಬೈ ಆಕ್ಟನುಸರಿಸಿ ಯಾಗಲಿ, ಈ ರೆಗ್ಯೂಲೇಷನಿನ 8ನೇ ಅಧ್ಯಾಯ ಅನುಸರಿಸಿ ಯಾಗಲಿ, ಮಾಡಲ್ಪಟ್ಟ ಸರ್ವೇ ಸೆಟಲ್‌ಮೆಂಟಿನ ಕಾಲದಲ್ಲಿ ಸ್ವಾಧೀನ ಪಡಿಸಿಕೊಳ್ಳಲ್ಪಟ್ಟ ಜಮೀನಿನ ಅಥವಾ, ಅಂತಾ ಸೆಟಲ್‌ಮೆಂಟ್ ಕಾಲದಲ್ಲಿ ಅಥವಾ ಅದರ ತರುವಾಯ ಅನುಭವದ ಬಗ್ಗೆ ತೆಗೆದುಕೊಳ್ಳಲ್ಪಟ್ಟ ಜಮೀನಿನ ವಿಷಯದಲ್ಲಿ—

(*a*) 44ನೇ ಸೆಕ್ಷನ್ನಲ್ಲಿ ವಿವರಿಸಲ್ಪಟ್ಟ ಒಂಬತ್ತು ಬಗೆ ಉಳಿಸಿಕೊಳ್ಳಲ್ಪಟ್ಟ ಮರಗಳು ಗವರ್ನಮೆಂಟಿನ ಆಧೀನದಲ್ಲಿರತಕ್ಕದು. ಸದರೀ ಗವರ್ನಮೆಂಟಿನವರು ಸೆಟಲ್‌ಮೆಂಟ್ ತಾರೀಖು ಲಗಾಯತಾಗಲಿ, ಸರ್ವೇನಂಬರ್ ಹಾಕಲ್ಪಟ್ಟ ಜಮೀನು ತೆಗದುಕೊಳ್ಳಲ್ಪಟ್ಟ ತಾರೀಖು ಲಗಾಯತಾಗಲಿ ಯೆರಡು ವರುಷಗಳ ಕಾಲದೊಳಗೆ, ಅಂತಾ ಉಳಿಸಿಕೊಳ್ಳಲ್ಪಟ್ಟ ತಮಾಂ ಮರಗಳನ್ನೂ ತೆಗೆದು ಹಾಕತಕ್ಕದ್ದು, ಅಥವಾ ತೆಗಿಸಿ ಹಾಕತಕ್ಕದ್ದು. ಗವರ್ನಮೆಂಟಿನವರು, ಅಂತಾ ಮರವನ್ನು ಸದರೀ ಯೆರಡು ವರುಷಗಳ ಕಾಲದೊಳಗೆ ತೆಗೆದು ಹಾಕದೆ ಯಿದ್ದರೆ ಅಥವಾ ತೆಗೆದು ಹಾಕಿಸದಿದ್ದರೆ ಸಂದಲ್‌ಮರ ವಿನ ಸದರೀ ಮರಗಳು ಅನುಭವದಾರನಿಗೆ ಶೇರತಕ್ಕದ್ದು; ಮತ್ತು

(b) 44ನೇ ಸೆಕ್ಷನಿನಲ್ಲಿ ವಿವರಿಸಲ್ಪಟ್ಟ ಉಳಿಸಿಕೊಳ್ಳಲ್ಪಟ್ಟ ಒಂಬತ್ತು ಬಗೆ ಮರಗಳು ವಿನಾ, ತಮಾಂ ಮರಗಳೂ, ಕುರುಚ ಗಿಡಗಳೂ ಅಥವಾ ಜಂಗಲ್ ಇಂತಾದ್ದು ಶುದ್ಧಾಂಗವಾಗಿ ಅನುಭವದಾರನ ಅಧೀನದಲ್ಲಿಯೇ ಇರತಕ್ಕದ್ದು.

46. ಸನ್ 1865ನೇ ಇಸವಿಯ 1ನೇ ಮುಂಬೈ ಆಕ್ಟು ಅನುಸರಿಸಿಯಾಗಲಿ, ಈ ರೆಗ್ಯುಲೇಷನಿನ 8ನೇ ಅಧ್ಯಾಯ ಅನುಸರಿಸಿಯಾಗಲಿ ಸರ್ವೇ ಸೆಟಲಮೆಂಟ ಪೂರೈಸದೆ ಯಿರುವ ಗ್ರಾಮಗಳಲ್ಲಿ, 44ನೇ ಸೆಕ್ಷನೊಳಗೆ ವಿವರಿಸಲ್ಪಟ್ಟ ಒಂಬತ್ತು ಬಗೆ ಉಳಿಸಿಕೊಳ್ಳಲ್ಪಟ್ಟ ತಮಾಂ ಮರಗಳೂ, ಗವರ್ನಮೆಂಟಿನವರದಾಗಿರತಕ್ಕದ್ದು. ಯಾವ ಜಮೀನುಗಳಲ್ಲಿ ಸದರೀ ಮರಗಳಿರುತ್ತವೋ ಅಂತಾ ಜಮೀನಿನ ಅನುಭವದಾರನು ಇದ್ದರೆ ಅವನ ಅಧೀನದಲ್ಲಿ ಅಂತಾ ಇತರ ದರೋಬಸ್ತು ಮರಗಳೂ ಇರತಕ್ಕದ್ದು.

ಮುಂ. ರೆ. ಕೋ. 41ನೇ ಸೆಕ್ಷನ

ಗವರ್ನಮೆಂಟ ಮರಗಳು ಮತ್ತು ಕಾಡುಗಳು.

47. ತಮಾಂ ಮರಗಳೂ, ಕುರುಚಗಿಡಗಳೂ, ಕಾಡು ಅಥವಾ ಇತರ ಸ್ವಾಭಾವಿಕವಾದ ಉತ್ಪತ್ತಿ ಮುಂತಾದ್ದು ಯಲ್ಲಿ ಬೆಳೆದಾಗ್ಯೂ, ಅವುಗಳ ಹಕ್ಕು, ಸ್ವತ್ತನ್ನು ವಹಿಸಲಿಕ್ಕೆ ಶಕ್ತರಾದ ಮನುಷ್ಯರ ಅಥವಾ ಜನಸಮುದಾಯಗಳ ಸ್ವತ್ತಾಗಿರಬಹುದಾದಷ್ಟರ ಮಟ್ಟಿಗೆ ವಿನಾ, ಗವರ್ನಮೆಂಟಿನವರದಾಗಿರುತ್ತೆ; ಅಂತಾ ಮರಗಳಾಗಲಿ, ಕುರುಚಗಿಡಗಳಾಗಲಿ, ಜಂಗಲಿ ಅಥವಾ ಸ್ವಾಭಾವಿಕವಾಗಿ ಹುಟ್ಟುವ ಯಾವ ಇತರ ಪದಾರ್ಥವಾಗಲಿ, ಗವರ್ನಮೆಂಟಿನವರು ಆಗಿಂದಾಗ್ಯೆ ವಿಧಿಸಬಹುದಾದ ರೀತಿಯಾಗಿ ಕಾಪಾಡಲ್ಪಡತಕ್ಕದ್ದು ಅಥವಾ ಮಾರಿಸಲ್ಪಡತಕ್ಕದ್ದು.

ಮುಂ. ರೆ. ಕೋ. 42ನೇ ಸೆಕ್ಷನ.

ರಸ್ತೆಯ ಪಕ್ಕದಲ್ಲಿರುವ ಮರಗಳು.

48. ಗವರ್ನಮೆಂಟಿನಿಂದಾಗಲಿ ಅವರ ಅಪ್ಪಣೆ ಅನುಸರಿಸಿಯಾಗಲಿ, ಗವರ್ನಮೆಂಟಿನಖರ್ಚಿನಿಂದಾಗಲಿ, ಲೋಕಲ್‌ಫಂಡಿನ ಖರ್ಚಿನಿಂದಾಗಲಿ, ಹಾಕಲ್ಪಟ್ಟು ಸಾಕಲ್ಪಟ್ಟಿರುವ ತಮಾಂ ಸಾಲ್ ಮರಗಳೂ ಗವರ್ನಮೆಂಟಿನ ಸ್ವಾಧೀನದಲ್ಲಿರುತ್ತೆ. ಆದರೆ, ಅಂತಾ ಮರಗಳು ಸತ್ತುಹೋಗುವಲ್ಲಿ, ಅಥವಾ ಗಾಳಿಯಿಂದ ಬಿದ್ದುಹೋಗುವಲ್ಲಿ, ಅಥವಾ ಡೆಪ್ಯುಟಿ ಕಮ್ಮಿಷನರವರ ಹುಕುಂನಿಂದ ಕಡಿಯಲ್ಪಡುವಲ್ಲಿ, ಯಾವಜಮೀನಿನಲ್ಲಿ ಅವು ಬೆಳೆಯುತ್ತಿದ್ದವೋ ಆ ಜಮೀನಿನ ಹಿಡುವಳಿದಾರನಿಗೆ ಸ್ವತ್ತಾಗತಕ್ಕದ್ದು ; ಮತ್ತು ಕತ್ತರಿಸಲ್ಪಡುವ ಅಂತಾ ಮರಗಳ ಕೊಂಬೆಗಳು ದೇಖೀಲ್ ಅಂಥಾ ಮರಗಳ ಹಂಗಾಮೀ ತರೀಕ್ ಅನುಭವವು ಸದರೀ ಹಿಡುವಳಿದಾರನಲ್ಲಿ ಉಂಟಾಗಿರತಕ್ಕದ್ದು. ಪರಂತು, ಡೆಪ್ಯುಟಿ ಕಮ್ಮಿಷನರವರ ಹುಕುಂ ಶಿವಾಯಿ ಮರಗಳು ಕತ್ತರಿಸಲ್ಪಡಕೂಡದು.

ಅಂತಾ ಮರಗಳು ಯಾವ ಜಮೀನಿನಲ್ಲಿ ಬೆಳೆಯುತ್ತಿವೆಯೋ ಅಂತಾ ಯಾವದಾದರೂ ಜಮೀನಿನ ಹಿಡುವಳಿದಾರನು, ಈ ರೆಗ್ಯುಲೇಷನ ಜಾರೀಗೆ ಬರುವ ತಾರೀಖು ಲಾಗಾಯತು ಯರಡು ವರುಷಗಳೊಳಗೆ, ಯಾವಕಾಲದಲ್ಲಾಗಲಿ ಹೀಗೆ ಅಪೇಕ್ಷಿಸಿ ಮತ್ತು ಈ ಬಗ್ಗೆ ಡೆಪ್ಯುಟಿ ಕಮ್ಮಿಷನರಿಗೆ ಅರ್ಜಿಕೊಟ್ಟರೆ, ಡೆಪ್ಯುಟಿಕಮ್ಮಿಷನರು, ಸದರೀ ಮರಗಳು ಬೆಳೆದಿರುವ ತಾಕು ಜಮೀನನ್ನು ಅವನ ಹಿಡುವಳಿಯಿಂದ

ವಜಾಮಾಡಿ ಆ ಲಾಗಾಯಿತು, ಹಾಗೆ ವಜಾ ಮಾಡಲ್ಪಟ್ಟ ತಾಕಿಗೆ ಸಲ್ಲತಕ್ಕ ದಾಮಾಷಾಯಿ ಜಮಿರ್ಖಾ ಕಂದಾಯವನ್ನು ವಜಾ ಮಾಡತಕ್ಕದ್ದು. ಹಾಗೆ ವಜಾಮಾಡಲ್ಪಟ್ಟ ಯಾವ ತಾಕು ಜಮೀನಾಗಲಿ, ಅದರಲ್ಲಿರುವ ಗಿಡಗಳು ನಿಶೀ ಆ ತರುವಾಯ ಗವರ್ನಮೆಂಟಿನ ಸ್ವಾಧೀನದಲ್ಲಿರತಕ್ಕದ್ದು.

ಮುಂ. ರೆ. ಕೋ. 43ನೇ ಸೆಕ್ಷನ್.

ಬಗರ್ ಹುಕ್ಕುಂನಿಂದ ತೆಗದುಕೊಳ್ಳಲ್ಪಟ್ಟ ಮರಗಳು ವಗೈರೆಯ ಖರೀದಿಯನ್ನು ವಸೂಲ್ಮಾಡುವಣ.

49. ಗವರ್ನಮೆಂಟ ಸ್ವತ್ತಾದ ಯಾವ ಮರವನ್ನಾಗಲೀ ಅದರ ಯಾವ ಭಾಗವನ್ನಾಗಲೀ ಬಗರ್ ಹುಕ್ಕುಂನಿಂದ ಕಡೆದು ಉಪಯೋಗಿಸಿಕೊಳ್ಳುವ, ಅಥವಾ ಸ್ವಭಾವತಃ ಉತ್ಪತ್ತಿಯಾದ ಇತರ ಯಾವ ಪದಾರ್ಥವನ್ನಾಗಲಿ ಸಾಗಿಸಿಕೊಳ್ಳುವ, ಯಾವ ಮನುಷ್ಯನಾಗಲೀ ಅದರ ಬೆಲೆಬಗ್ಯೆ ಗವರ್ನಮೆಂಟಿಗೆ ಜವಾಬ್ದಾರನಾಗತಕ್ಕದ್ದು; ಈ ಬೆಲೆಯನ್ನು ಈ ರೆಗ್ಯುಲೇಷನನುಸರಿಸಿ ಜಮಿರ್ಖಾ ಅನುಭವದ ಬಗ್ಯಾಗಲಿ ಅನ್ಯಥಾಆಗಲಿ ಅವನು ಗುರಿಯಾಗತಕ್ಕ ದಂಡನೆಯೊಡನೆ ಜಮಿರ್ಖಾ ಕಂದಾಯದ ಬಾಕೀಯಂತೆ ವಸೂಲ್ಮಾಡಲ್ಪಡತಕ್ಕದ್ದು. ಹೀಗೆ ಅಕ್ರಮವಾಗಿ ಗವರ್ನಮೆಂಟ ಸ್ವತ್ತನ್ನು ಉಪಯೋಗಿಸಿಕೊಂಡ ಬಗ್ಯೆ ಅವನಮೇಲೆ ಯಾವದಾದರು ಕ್ರಿಮಿನಲ ವಿಚಾರಣೆ ತರಲ್ಪಟ್ಟಾಗ್ಯೂ ಮೇಲ್ಕಂಡಹಾಗೆ ಕಡಿಯಲ್ಪಟ್ಟು ಉಪಯೋಗಿಸಿಕೊಳ್ಳಲ್ಪಟ್ಟ ಮರದ ಬೆಲೆಯನ್ನು ಅದಕ್ಕಾಗಿ ದಂಡವನ್ನು ಸಹ ಅವನಿಂದ ವಸೂಲ್ಮಾಡತಕ್ಕದ್ದು.

ಅಂತಾ ಯಾವದಾದರೂ ಮರದ ಅಥವಾ ಅದರ ಭಾಗದ ಅಥವಾ ಇತರ ಸ್ವಾಭಾವಿಕವಾದ ಉತ್ಪತ್ತಿಯ ಖರೀದೀ ವಿಷಯದಲ್ಲಿ ಡೆಪ್ಯುಟಿ ಕಮ್ಮಿಷನರವರ ನಿರ್ಣಯವು ಆಖೈರಾಗಿರತಕ್ಕದ್ದು.

ಜಮಿರ್ಖಾ ಕಂದಾಯ.

ಮುಂ. ರೆ. ಕೋ. 45ನೇ ಸೆಕ್ಷನ್.

ವಿಶೇಷತಃ ವಿನಾಯಿಸಲ್ಪಟ್ಟ ಹೊರತು ತಮಾಂ ಜಮೀನಿಗೂ ಕಂದಾಯ ಕೊಡತಕ್ಕದ್ದಾಗಿರುತ್ತೆ.

50. ಸಾಗುವಳೀ ಬಗ್ಯೆ ದರಖಾಸ್ತು ಮಾಡಲ್ಪಡಲಿ ಇತರ ಕೆಲಸಗಳಿಗಾಗಿ ದರಖಾಸ್ತು ಮಾಡಲ್ಪಡಲಿ, ಪರಂತು ಅಂತಾ ದರೋಬಸ್ತು ಜಮೀನೂ ಎಲ್ಲಿಇದ್ದಾಗ್ಯೂ ಗವರ್ನಮೆಂಟಿನೊಡನೆ ವಿಶೇಷತಃ ಮಾಡಿಕೊಳ್ಳಲ್ಪಟ್ಟ ಯಾವದಾದರೂ ಒಡಂಬಡಿಕೆಯು ಅಥವಾ ತತ್ಕಾಲದಲ್ಲಿ ಜಾರೀಯಿರುವ ಯಾವದಾದರೂ ಕಾನೂನಿನ ನಿಬಂಧನೆಗಳನುಸರಿಸಿ ಶುದ್ಧಾಂಗವಾಗಿ ವಿನಾಯಿಸಲ್ಪಡಬಹುದಾದದು ವಿನಾ, ಇದರಲ್ಲಿ ಮುಂದೆ ವಿಧಿಸಲ್ಪಡಬಹುದಾದ ರೂಲ್ಸ್ ಪ್ರಕಾರ ಗವರ್ನಮೆಂಟಿಗೆ ಜಮಿರ್ಖಾ ಕಂದಾಯವನ್ನು ಕೊಡಲಿಕ್ಕೆ ಗುರಿಯಾಗಿರುತ್ತೆ. ಪರಂತು, ತಮಾಂ ಜಮಿರ್ಖಾಗಳೂ ಯಾವ ಒಡಂಬಡಿಕೆ ಅನುಸರಿಸಿ ಅನುಭವಿಸಲ್ಪಡಬಹುದಾದಾಗ್ಯೂ, ಸಂಸ್ಥಾನದ ಆವಶ್ಯಕತೆಗಳಿಂದ ಅಂತಾ ಕಂದಾಯದ ವಸೂಲಾತಿಯು ಜರೂರಾದಾಗ ಮತ್ತು ಜರೂರಾಗಬಹುದಾದ ಪರ್ಯಂತ, ಯಲ್ಲ ಜಮಿರ್ಖಾಗಳ ಮೇಲೂ ಕಂದಾಯದ ವಸೂಲಾತಿಯನ್ನು ಕಾನೂನಿಂದ ವಿಧಿಸಲಿಕ್ಕೆ ಗವರ್ನಮೆಂಟಿಗೆ ಉಂಟಾದ ಅಧಿಕಾರಕ್ಕೆ ಈ ಕಾನೂನಿನಲ್ಲಿ ಯಿರುವ ಯಾವ ಅಂಶವೂ ಬಾಧಕವಾಗುತ್ತೆಂದು ಯೆಣಿಸಕೂಡದು.

ಮುಂ. ರೆ. ಕೋ. 46ನೇ ಸೆಕ್ಷನ್.

ಜಮೀನ್ ಕಂದಾಯದ ವಿಷಯದಲ್ಲಿ ಪರಭಾರೇಯಾದಜಮೀನುಗಳ ಜವಾಬ್‌ದಾರಿ.

51. ಪರಭಾರೆಯಾದ ಜಮೀನಿನ ಯಾವನಾದರೂ ಹಿಡುವಳೀದಾರನ ಅಧಿನಕ್ಕೆ ತತ್ಕಾಲದೊಳಗೆ ಜಾರೀಯಿರುವ ಯಾವದಾದರೂ ಕಾನೂನ್ ಅನುಸರಿಸಿ ಬರತಕ್ಕ ತವಮಾಂ ಬಂಡು ಜಮೀನ್‌ಗಳೂ, ಹೊಸದಾಗಿ ಯೇರ್ಪಟ್ಟ ದ್ವೀಪಗಳೂ, ಅಥವಾ ತ್ಯಜಿಸಲ್ಪಟ್ಟ ನದೀ ಗರ್ಭಗಳೂ, ಇಂತಾವು ಜಮೀನ್ ಕಂದಾಯವನ್ನು ಕೊಡುವದಕ್ಕೆ ಜವಾಬ್‌ದಾರೀ ವಿಷಯದಲ್ಲಿ ಯಾವದರ ಬಲದಿಂದ ಅಂತಾ ಜಮೀನ್‌ಗಳು, ದ್ವೀಪಗಳು, ಅಥವಾ ನದೀಗರ್ಭಗಳು ಆಮೇಲೆ ಸದರೀ ಹಿಡುವಳೀದಾರನ ಅಧೀನಕ್ಕೆ ಬರುತ್ತವೋ ಅಂತಾ ಅಸಲು ಹಿಡುವಳಿಗೆ ಲಗಾವಾಗತಕ್ಕದ್ದಾಗಿರುವ ಬದಸ್ತೂರು ಸ್ವಾತಂತ್ರ್ಯಗಳಿಗಾಗಲೀ ಷರತ್ತುಗಳಿಗಾಗಲೀ ನಿರ್ಬಂಧಗಳಿಗಾಗಲಿ ಒಳಪಡತಕ್ಕದ್ದು; ಪರಂತು, ಅಂತಾ ಯಾವದಾದರೂ ಜಮೀನ್‌ಗಳ ದ್ವೀಪಗಳ ಅಥವಾ ನದೀ ಗರ್ಭಗಳ ವಿಷಯದಲ್ಲಿ ಅವುಗಳ ಬೀಜವರಿಯು ಅರ್ಧ ಯೆಕ್ರೇಗೆ ಮೀರುವತನಕ ಅಥವಾ ಮೀರದೆ ಯಿದ್ದರೆ ಮತ್ತು ಸದರೀ ಅಸಲ್ ಹಿಡುವಳಿಯ ಬಾಬತು ಬೀಜವರೀಯ ಪೈಕಿ ಹತ್ತರಲ್ಲೊಂದಂಶಕ್ಕೆ ಮೀರುವತನಕ ಅಥವಾ ಮೀರದೇಯಿದ್ದರೆ, ಯಾವ ಕಂದಾಯವೂ ಹಾಕತಕ್ಕದ್ದಲ್ಲ.

ಮುಂ. ರೆ. ಕೋ. 47ನೇ ಸೆಕ್ಷನ್.

ಪ್ರವಾಹವಾಗುವ ಸಂಗತಿಗಳಲ್ಲಿ ಜಮೀನ್ ಕಂದಾಯದಮೊಕರಾತಿ.

52. ಕಂದಾಯ ತೆರತಕ್ಕ ಜಮೀನಿನ ಪ್ರತಿ ಹಿಡುವಳೀದಾರನೂ, ಗವರ್ನಮೆಂಟಿನಿಂದ, ಈ ಬಗ್ಯೆ ಆಗಿಂದಾಗ್ಯೆ ಮಾಡಲ್ಪಡಬಹುದಾದ, ರೂಲ್‌ಗಳಿಗೆ ಒಳಪಟ್ಟು, ಸದರೀ ಜಮೀನಿನ ಅರ್ಧ ಯೆಕ್ರೇ ಬೀಜವರಿಗಿಂತ ಕಮ್ಮಿಯಾಗದೇನೂ ಮತ್ತು ಹಿಡುವಳಿಯ ಪೈಕಿ ಹತ್ತರಲ್ಲಿ ಒಂದು ಭಾಗಕ್ಕಿಂತ ಕಡಮೆಯಾಗದೇನೂ ಇರುವ ಯಾವಭಾಗವಾಗಲಿ ಅತಿಪ್ರವಾಹದಿಂದ ನಷ್ಟವಾದರೆ ಕಂದಾಯ ಕಮ್ಮಿಯಾಗಲಿಕ್ಕೆ ಅರ್ಹನಾಗಿರತಕ್ಕದ್ದು.

ಮುಂ. ರೆ. ಕೋ. 48ನೇ ಸೆಕ್ಷನ್.

ಜಮೀನ್‌ಕಂದಾಯವು ಯಾವಬಗೆ ಜಮೀನ್‌ಗಳಮೇಲೆ ಹಾಕತಕ್ಕದ್ದು.

53. ಈ ರೆಗ್ಯುಲೇಷನ್ ನಿಬಂಧನೆಗಳನುಸರಿಸಿ ವಸೂಲಾಗತಕ್ಕ ಜಮೀನ್ ಕಂದಾಯವು,

(a) ಸಾಗುವಳೀ ಕೆಲಸಗಳಿಗಾಗಿ ವಿನಿಯೋಗಿಸಲ್ಪಟ್ಟ ಜಮೀನಿನ ಮೇಲೆಯೂ;

(b) ವ್ಯವಸಾಯದಿಂದ ಸಾಮಾನ್ಯವಾಗಿ ಹೊಂದುವದಕ್ಕಿಂತ ಇತರ ಯಾವದಾದರೂ ನಫೆ ಯಾ ಪ್ರಯೋಜನ ಯಾವ ಜಮೀನ್‌ನಿಂದ ಉಂಟಾಗುತ್ತೋ ಅಂತಾ ಜಮೀನ್ ಮೇಲೆಯೂ;

(c) ಕಟ್ಟಡದ ನಿವೇಶನಗಳ ಬಗ್ಯೆ ವಿನಿಯೋಗಿಸಲ್ಪಡುವ ಜಮೀನ್‌ಮೇಲೆಯೂ ವಸೂಲಾಗತಕ್ಕದ್ದು.

ಯಾವಬಗ್ಯೆ ಜಮೀನ್ ಪಡಕೊಳ್ಳಲ್ಪಡುತ್ತೋ ಅಂತಾ ಕಾರ್ಯವು ಬದಲಾಯಿಸಲ್ಪಟ್ಟರೆ,

ಮೇಲೆಕಂಡ ಕೆಲಸಗಳ ಪೈಕೀ ಯಾವದಾದರೂ ಒಂದಕ್ಕೋಸ್ಕರ ವಿನಿಯೋಗಿಸಲ್ಪಟ್ಟ ಯಾವ ಜಮೀನಿಗಾಗಲಿ, ಈ ರೆಗ್ಯುಲೇಷನ್ ನಿಬಂಧನೆಗಳನುಸರಿಸಿ ಠರಾವ್ ಮಾಡಲ್ಪಟ್ಟ ಕಂದಾಯವು, ಅಂತಾ ಜಮೀನು ಇತರ ಯಾವದಾದರೂ ಕೆಲಸ

ಕಂದಾಯವು ಬದಲಾವಣೆಗೆ ಒಳಪಡತಕ್ಕದ್ದು.

ಕ್ಕೋಸ್ಕರ ವಿನಿಯೋಗಿಸಲ್ಪಟ್ಟಾಗ ಯಾವದಾದರೂ ಷರತ್ತಿಯಿದ್ದು ಯಾವಬಗ್ಗೆ ಅಂತಾ ಕಂದಾಯವು ಕರಾರ್ ಮಾಡಲ್ಪಟ್ಟಿತ್ತೋ ಅಂತಾ ಯಾವದಾದರೂ ಷರತ್ ಕಳೆದುಹೋಗದೆ ಇದ್ದರೆ, ಬೇರೇ ವರಪ್ರಕಾರ ಬದಲಾಯಿಸಲ್ಪಟ್ಟು ಕರಾಯಿಸಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

ಒಂದು ಕೆಲಸಕ್ಕೋಸ್ಕರ ಇನಾಮಾಗಿ ಅನುಭವಿಸಲ್ಪಡುವ ಜಮೀನು ಬೇರೇಕಾರ್ಯಕ್ಕಾಗಿ ಉಪಯೋಗಿಸಲ್ಪಟ್ಟರೆ ಅದಕ್ಕೆ ಕಂದಾಯ ಹಾಕತಕ್ಕದ್ದು.

ಪರಭಾರೆಯಾಗದ ಗ್ರಾಮದಲ್ಲಿರುವ ಅಥವಾ ಪರಭಾರೇಯಾದ ಗ್ರಾಮದಲ್ಲಿರುವದರಿಂದ ಅದರ ಬಾಬತು ಸ್ವತ್ತುಗಳ ದೆಸೆಯಿಂದ ವಿನಾಯಿಸಲ್ಪಟ್ಟ ಯಾವ ಜಮೀನಾಗಲಿ, ಒಂದು ಕೆಲಸಕ್ಕೆ ವಿನಿಯೋಗಿಸಲ್ಪಡತಕ್ಕದ್ದೆಂಬ ಷರತ್ತಿನಮೇಲೆ, ಕಂದಾಯವಿಲ್ಲದೆಯಾಗಲಿ, ಕಮ್ಮಿ ಕಂದಾಯಕ್ಕಾಗಲಿ, ಗವರ್ನಮೆಂಟಿನಿಂದ ಅಂಗೀಕರಿಸಲ್ಪಟ್ಟ ಪಕ್ಷಕ್ಕೆ, ಆ ಕೆಲಸಕ್ಕೋಸ್ಕರ ವಿನಿಯೋಗಿಸಲ್ಪಡತಕ್ಕದ್ದನ್ನು ಯಾವ ಕಾಲದಲ್ಲಾಗಲಿ ನಿಲ್ಲಿಸಿಬಿಟ್ಟರೆ, ಪೂರಾ ಕಂದಾಯ ಹಾಕಲ್ಪಡಲಿಕ್ಕೆ ಅದು ಗುರಿಯಾಗತಕ್ಕದ್ದು.

ಯಾವದಾದರೂ ಕೆಲಸಗಳಿಗಾಗಿ ಜಮೀನಿನ ವಿನಿಯೋಗವು ನಿಷೇಧಿಸಲ್ಪಡಬಹುದು.

ಕೆಲವು ಕಾರ್ಯಗಳಿಗಾಗಿ, ಜಮೀನ್ ಕಂದಾಯವನ್ನು ಕೊಡುವದಕ್ಕೆ ಗುರಿಯಾದ ಯಾವದಾದರೂ ಪರಭಾರೆಯಾಗದ ಜಮೀನಿನ ವಿನಿಯೋಗವನ್ನು ನಿಷೇಧಿಸುವದೂ, ಅಂತಾ ನಿಷಿದ್ಧ ಕಾರ್ಯಗಳಿಗಾಗಿ ಆ ಜಮೀನನ್ನು ವಿನಿಯೋಗಿಸಬಹುದಾದ ಅಥವಾ ವಿನಿಯೋಗಿಸುವದಕ್ಕೆ ಯತ್ನಿಸಬಹುದಾದ ಯಾವ ಹಿಡುವಳೀದಾರನನ್ನಾಗಲಿ ಫ್ರೂಟಾಗಿ ಹೊರಪಡಿಸುವದೂ, 241ನೇ ಸೆಕ್ಷನ್ ಅನುಸರಿಸಿ ಈ ಬಗ್ಗೆ ಮಾಡಲ್ಪಟ್ಟ ರೂಲ್‌ಗಳಿಗಾಗಲಿ, ಹುಕ್ಕುಂಗಳಿಗಾಗಲಿ ಒಳಪಟ್ಟು, ಡೆಪ್ಯುಟಿ ಕಮ್ಮಿಷನರಿಗಾಗಲಿ, ಒಬ್ಬ ಸರ್ವೇ ಆಫೀಸರಿಗಾಗಲಿ, ನ್ಯಾಯವಾಗಿಯೂ ಇರತಕ್ಕದ್ದು.

ಮುಂ. ರೆ. ಕೋ. 49ನೇ ಸೆಕ್ಷನ್.

ಜಮೀನಿನ ಬದಲಾಯಿಸಲ್ಪಟ್ಟ ಕಂದಾಯವು ಸರ್ಕಾರಕ್ಕೆ ಪರಂಪರೆಯಿಂದ ಸೇರುವದು.

54. (1)—ಯಾವ ಜಮೀನು, ನಾಮಮಾತ್ರ ಪೂರ್ಣವಾಗಿ ಅಥವಾ ಭಾಗಶಃ ಕಂದಾಯ ಕೊಡುವದರ ದೆಸೆಯಿಂದ ವಿನಾಯಿಸಲ್ಪಟ್ಟಾಗ್ಯೂ, ಅಂತಾ ಜಮೀನಿನ ಯಾವ ಹಿಡುವಳೀದಾರನಿಂದಾಗಲಿ, ಯಾವದಾದರೂ ವಿಶೇಷವಾದ ಅಥವಾ ಹೆಚ್ಚಾದ ತೀರ್ವೆ, ದಂಡ, ಅಥವಾ ತೆರಿಗೆ ಇಂತಾದ್ದು ಯಾವ ಮೇರೆ ಸೂಚಿಸಲ್ಪಟ್ಟಾಗ್ಯೂ ವಸೂಲ್ ಮಾಡುವದು ಮಾಮೂಲಾಗಿದ್ದ ಪಕ್ಷಕ್ಕೆ ಅಂತಾ ಜಮೀನು ಅಂತಾ ತೀರ್ವೆ; ದಂಡ ಅಥವಾ ತೆರಿಗೆ ಇದು ಪರಂಪರೆಯಿಂದ ಸರ್ಕಾರಕ್ಕೆ ಸೇರಿಯಿರುತ್ತೆ.

ಆಗಾಗ್ಯೆ ಮೊಕರರಾಗುವ ಕಂದಾಯಕ್ಕೆ ಗುರಿಯಾಗುವ ಜಮೀನ್ ಕುರಿತು.

ಅಥವಾ ಸಾಮಾನ್ಯವಾಗಿ, ಅಥವಾ ಕೆಲವು ಸಂದರ್ಭಗಳಲ್ಲಿ ಪೂರಾ ಆಗಲಿ, ಕೆಲವು ಮಟ್ಟಿಗೇ ಆಗಲಿ, ಕಂದಾಯ ಕೊಡೋಣದರಿಂದ ವಿನಾಯಿಸಲ್ಪಟ್ಟ ಯಾವ ಜಮೀನಾಗಲಿ ಆಗಾಗ್ಯೆ ಅಥವಾ ಕೆಲವು ಮುಖ್ಯ ಸಂದರ್ಭಗಳಲ್ಲಿ ಕಂದಾಯ, ಯಾವದಾದರೂ ತೀರ್ವೆ, ಯಾ ತೆರಿಗೆ ಇಂತಾದ್ದು ಯಾವ ಮೇರೆ ಕರೆಯಲ್ಪಟ್ಟಾಗ್ಯೂ;

ಸದರೀ ಕಂದಾಯು, ತೆರಿಗೆ, ದಂಡ, ತೀರ್ವೆ, ಇಂತಾದ್ದು ಯೆಲ್ಲಾ ಸಂದರ್ಭಗಳಲ್ಲಿಯೂ ಜಮೀನ್ಮೇಲೆ ಕೊಡತಕ್ಕ ಸಾಲೀಯಾನಾ ಕಂದಾಯಕ್ಕೆ ಬದಲಾಯಿಸಿಕೊಳ್ಳಲ್ಪಡಬಹುದು; ಪರಂತು, ಹಾಗೆ ಬದಲಾಯಿಸಲ್ಪಟ್ಟ ಕಂದಾಯವು ಯಾವ ಬಗ್ಗೆ ಅದು ಬದಲಾಯಿಸಲ್ಪಟ್ಟಿರುತ್ತೋ ಅಂತಾ ಕಂದಾಯು, ತೆರಿಗೆ, ದಂಡ ಅಥವಾ ತೀರ್ವೆ ಇಂತಾದ್ದಕ್ಕೆ ಸಮವಾದ್ದೆಂದು ಗೌರ್ನಮೆಂಟಿನವರು ಭಾವಿಸತಕ್ಕ ಅಂತಾ ಮೊಬಲಗಿಗೆ ಅತಿಕ್ರಮಿಸಕೂಡದು, ಮತ್ತು ಅದರ ವಿಷಯದಲ್ಲಿ ವಿನಾಯತಿಗೆ ಹಕ್ಕುದಾರೀ ಯಾವದೂ ಇಲ್ಲದೆ ಯಿದ್ದರೆ, ಯಾವ ಕಂದಾಯಕ್ಕೆ ಜಮೀನು ಸಾಧಾರಣವಾಗಿ ಒಳಗಾಗುವದೋ ಅಂತಾ ಕಂದಾಯಕ್ಕೆ ಅತಿಕ್ರಮಿಸಕೂಡದು.

ಮುಂ. ರೆ. ಕೋ. 50ನೇ ಸೆಕ್ಷನ್.

ಮೇಲ್ಪಟ್ಟ ಹಿಡುವಳೀದಾರನು ಬದಲಾಯಿಸಲ್ಪಟ್ಟ ಕಂದಾಯವನ್ನು ಕಮ್ಮಿ ಹಿಡುವಳೀದಾರನಿಂದ ವಸೂಲ್ ಮಾಡಬಹುದು.

(2) ಒಬ್ಬ ಕಮ್ಮೀ ಹಿಡುವಳೀದಾರನು, ತಹಲ್ ಕೊಡತಕ್ಕದ್ದಾಗಿರುವ ಅಂತಾ ಯಾವ ಸೆಸ್ಸಾಗಲಿ, ಜುರ್ಮಾನೆಯಾಗಲಿ, ತೆರಿಗೆಯಾಗಲಿ, ಮೇಲ್ಪಟ್ಟ ಹಿಡುವಳೀದಾರನಿಂದ ವಸೂಲಾಗಬೇಕಾದ್ದಾಗಿ ಮಾಡಲ್ಪಟ್ಟಾಗ ಅಂತಾ ತೀರ್ವೆ, ಜುರ್ಮಾನೆ ಯಾ ತೆರಿಗೆ, ಇಂತಾದ್ದಕ್ಕೆ ಬದಲಾಗಿ ಬದಲಾಯಿಸಲ್ಪಟ್ಟ ಗೊತ್ತಾದ ಕಂದಾಯದ ಮೊಬಲಗನ್ನು ಅಂತಾ ಕಮ್ಮೀ ಹಿಡುವಳೀದಾರನಿಂದ ವಸೂಲ್ ಮಾಡುವದಕ್ಕೆ ಅಂತಾ ಮೇಲ್ಪಟ್ಟ ಹಿಡುವಳೀದಾರಗೆ ಯಿಖ್ತ್ಯಾರಿ ಉಂಟು.

ಮುಂ. ರೆ. ಕೋ. 51ನೇ ಸೆಕ್ಷನ್.

ಕಮ್ಮೀಯಾಗಿ ಕಂದಾಯ ಹಾಕಲ್ಪಟ್ಟ ಹಿಡುವಳೀಯಲ್ಲಿ ಉಳ್ಳ ಜಮೀನಿಗೆ ಜಾಸ್ತೀಯಾಗಿ ಕಂದಾಯ ವಸೂಲ್ ಮಾಡಬಹುದು.

(3) ಯಾವ ಜಮೀನು, ಕಂದಾಯ ಕೊಡೋಣದರಿಂದ ಪೂರಾ ಆಗಲಿ ಕೆಲವು ಮಟ್ಟಿಗಾಗಲಿ ವಿನಾಯಿಸಲ್ಪಟ್ಟಿರುತ್ತೋ, ಅಂತಾ ಯಿತರ ಜಮೀನ್, ಯಾವದಾದರೂ ಬಂದು ಜಮೀನಿನ ಭಾಗದ ಸಂಗಡ ಅನುಭವಿಸಲ್ಪಡುವ ಕಾರಣದಿಂದ ಸದರೀ ಜಮೀನಿನ ಯಾವ ಭಾಗವಾಗಲಿ, ಸಾಧಾರಣವಾಗಿ ಅದು ಗುರಿಯಾಗುವದಕ್ಕಿಂತ ಹೆಚ್ಚು ಕಂದಾಯವನ್ನು ವಸೂಲ್ ಮಾಡುವದು ವಾಡಿಕೆಯಾಗಿದ್ದಾಗ ಸದರೀ ಜಮೀನಿನ ಭಾಗಕ್ಕೆ ಹಾಕತಕ್ಕ ಜಾಸ್ತೀ ಕಂದಾಯುವು, ತಹಲ್ ಪೂರಾ ಆಗಲಿ ಕೆಲವು ಮಟ್ಟಿಗಾಗಲಿ ವಿನಾಯಿಸಲ್ಪಟ್ಟ ಹಿಡುವಳೀಯಲ್ಲಿ ಉಳ್ಳ ಜಮೀನಿಗೆ ವಿಧಿಸಲ್ಪಡಬಹುದು.

ಮುಂ. ರೆ. ಕೋ. 52ನೇ ಸೆಕ್ಷನ್.

ಕಂದಾಯವು ಯಾರಿಂದ ಠರಾಯಿಸಲ್ಪಡತಕ್ಕದ್ದು.

55. ಜಮೀನ್ ಕಂದಾಯ ಕೊಡೋಣದರಿಂದ ಸಂಪೂರ್ಣವಾಗಿ ವಿನಾಯಿಸಲ್ಪಡದ ಮತ್ತು 112ನೇ ಸೆಕ್ಷನ್ ಅನುಸರಿಸಿ ಮಾಡಲ್ಪಟ್ಟ ಹುಕುಮಿನ ಸ್ಥಳದ ಶಿಮಲ್‌ನೊಳಗೆ ಯಿಲ್ಲದ ದರೋಬಸ್ತು ಜಮೀನ್‌ಗಳಿಗೂ, ಜಮೀನ್ ಕಂದಾಯದ ತರೀಕ್ ಕೊಡಲ್ಪಡತಕ್ಕ ಮೊಬಲಗ್ ಠರಾವಣೆಯು ಈ ಬಗ್ಗೆ 241ನೇ ಸೆಕ್ಷನ್ ಅನುಸರಿಸಿ ಮಾಡಲ್ಪಟ್ಟ ರೂಲ್‌ಗಳು, ಅಥವಾ ಹುಕುಂಗಳು ಇವುಗಳಿಗೆ ಒಳಪಟ್ಟು ಡೆಪ್ಯುಟಿ ಕಮ್ಮಿಷನರವರ ವಿತರಣೆಯಿಂದ ಗೊತ್ತು ಮಾಡಲ್ಪಡತಕ್ಕದ್ದು. ಮತ್ತು ಅಂತಾ ಠರಾವಣೀ ಪ್ರಕಾರ ಸಲ್ಲತಕ್ಕ ಮೊಬಲಗುಗಳು, ಅಂತಾ ದರೋಬಸ್ತು ಜಮೀನುಗಳಿಂದಲೂ ವಸೂಲ್ ಮಾಡಲ್ಪಡತಕ್ಕದ್ದು.

ಪರಂತು, ಜಮೀನ್ ಕಂದಾಯ ಕೊಡೋಣದರಿಂದ ಕೆಲವು ಮಟ್ಟಿಗೆ ವಿನಾಯಿಸಲ್ಪಟ್ಟ ಅಥವಾ ಜಮೀನ್ ಕಂದಾಯ ಕೊಡತಕ್ಕ ವಿಷಯದಲ್ಲಿ ಜವಾಬ್‌ದಾರಿಯು

ವಿಶೇಷ ಷರತ್ತುಗಳಿಗಾಗಲಿ, ನಿರ್ಬಂಧಗಳಿಗಾಗಲಿ, ಒಳಪಟ್ಟಿರುವ ಸಂಗತಿಗಳಲ್ಲಿ ಕಂದಾಯ ಗೊತ್ತು ಮಾಡುವದರಲ್ಲಿಯೂ ವಸೂಲ್ ಮಾಡುವದರಲ್ಲಿಯೂ ಕಾನೂನು ಮೇರೆ ನೆಲೆಗೊಂಡಿರುವ ತಮಾಂ ಹಕ್ಕುದಾರೀಗಳಿಗೂ ಅವವುಗಳ ಸ್ವರೂಪದ ಮೇರಿಗೆ ನಿಗೇ ಕೊಡತಕ್ಕದ್ದು.

ಮುಂ. ರೆ. ಕೋ. 53ನೇ ಸೆಕ್ಷನ್.

ಪರಭಾರೆಯಾದ ಜಮೀನ್ಗಳ ರಿಜಿಸ್ಟರ್.

56. ಯಾವ ಜಮೀನ್ಗಳ ಪರಭಾರಿಯು ತತ್ಕಾಲದಲ್ಲಿ ಜಾರೀ ಯಿರುವ ಯಾವದಾದರೂ ಕಾನೂನಿನ ನಿಬಂಧನೆಗಳನುಸರಿಸಿ ಸ್ಥಾಪಿಸಲ್ಪಟ್ಟು ಅಥವಾ ಅಂಗೀಕರಿಸಲ್ಪಟ್ಟಿರುತ್ತೋ ಅಂತಾ ತಮಾಂ ಜಮೀನ್ಗಳ ಒಂದು ರಿಜಿಸ್ಟರು, ಗವರ್ನಮೆಂಟಿನಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದಂತಾ ನಮೂನೆಯಲ್ಲಿ ಡೆಪ್ಯುಟಿ ಕಮ್ಮಿಷನರಿಂದ ಇಡಲ್ಪಡತಕ್ಕದ್ದು; ಮತ್ತು ಅಂತಾ ಯಾವದಾದರೂ ಪರಭಾರೆಯಾದ ಜಮೀನ್ಗಳ ವಿಷಯದಲ್ಲಿ ಕೊಡಲ್ಪಟ್ಟ ಒಂದು ಸನ್ನದು ಕಾಯವಾಗಿ ಗೈರವಿಲಾ ಆಯಿತೆಂದು ಅಥವಾ ನಷ್ಟವಾಯಿತೆಂದು ಡೆಪ್ಯುಟಿ ಕಮ್ಮಿಷನರಿಗೆ ತೃಪ್ತಿಕರವಾಗಿ ತೋರಿಸಲ್ಪಟ್ಟಲ್ಲಿ ಸದರೀ ಡೆಪ್ಯುಟಿ ಕಮ್ಮಿಷನರು 240ನೇ ಸೆಕ್ಷನ್ ಅನುಸರಿಸಿ ಗವರ್ನಮೆಂಟಿನಿಂದ ವಿಧಿಸಲ್ಪಟ್ಟ ರೂಲ್ಸಿಗೂ, ಫೀಸ್ ಕೊಡುವದಕ್ಕೂ ಒಳಪಟ್ಟು ಯಾವ ಮನುಷ್ಯನು ಸದರೀ ಬಗ್ಯೆ ಅರ್ಹನಾಗಿರುತ್ತಾನೆಂದು ಭಾವಿಸಬಹುದೋ ಅಂತಾ ಯಾವ ಮನುಷ್ಯನಿಗಾಗಲಿ, ಸದರೀ ರಿಜಿಸ್ಟರಿಂದ ಒಂದು ಯೆಕ್ಸ್ಟ್ರಾಕ್ಟನ್ನು ತಮ್ಮ ರುಜು ನಿಶಿ ಕೊಡಬಹುದು, ಸದರೀ ಎಕ್ಸ್ಟ್ರಾಕ್ಟಿಗೆ ಗೈರವಿಲಾ ಆಯಿತೆಂಬ ಅಥವಾ ನಷ್ಟವಾಯಿತೆಂಬ ಸನ್ನದಿಗೆ ಬದಲಾಗಿ ಕೊಡಲ್ಪಟ್ಟಿದೆ ಯೆಂಬದಾಗಿ ಡೆಪ್ಯುಟಿ ಕಮ್ಮಿಷನರಿಂದ ಇಂಡಾರಸ್ ಮಾಡಲ್ಪಟ್ಟು ಸದರೀ ಸನ್ನದಿನ ಹಾಗೆಯೇ ಹಕ್ಕುದಾರಿಯ ಸರಿಯಾದ ರುಜುವಾತಿನಂತೆ ಯೆಣಿಸಲ್ಪಡತಕ್ಕದ್ದು.

ಮುಂ. ರೆ. ಕೋ. 54ನೇ ಸೆಕ್ಷನ್.

ಕಂದಾಯದ ಫೈಸಲಾತಿಯನ್ನು ಗವರ್ನಮೆಂಟಿನವರು ಹಿಡುವಳೀದಾರನ ಒಡಂಬಡಿಕೆಯಿಂದಲೇ ಮಾಡತಕ್ಕದ್ದು.

57. ಜಮೀನಿನ ಅಥವಾ ಸರ್ವೇನಂಬರಿನ ಪ್ರತಿ ಭಾಗದ ಕಂದಾಯದ ಫೈಸಲಾತಿಯು, 151ನೇ ಸೆಕ್ಷನ್ ಅನುಸರಿಸಿ ಸದರೀ ಬಗ್ಯೆ ಗವರ್ನಮೆಂಟಿಗೆ ಪ್ರಥಮತಃ ಜವಾಬ್‌ದಾರನಾಗಿರುವ ಮನುಷ್ಯನೊಡನೆ ಮಾಡತಕ್ಕದ್ದು.

ಅಥವಾ ಅವನು ಗೈರ್ ಹಾಜರಾಗಿದ್ದರೆ, ಮತ್ತು ಮುಂದಿನ ಹಿಡುವಳೀದಾರನೊಡನೆ ಮುತಾಲೀಕನನ್ನು ಇಡದೆಹೋದರೆ.

ಸದರೀ ಮನುಷ್ಯನು ಗೈರ್ ಹಾಜರಾಗಿಯೂ, ಡಿಸ್ಟ್ರಿಕ್ಟಿನಲ್ಲಿ ಪ್ರಸಿದ್ಧನಾಗಿ ಅಧಿಕಾರ ಹೊಂದಿದ ಮುತಾಲೀಕನನ್ನು ಇಡದೆಯೂ ಹೋಗಿ ಆ ಕಾರಣದಿಂದ ಕಂದಾಯದ ಫೈಸಲಾತಿಯು ಅವನೊಡನೆ ಪೂರೈಸಲಾಗದ್ದಾಗಿದ್ದರೆ ಅಂತಾ ಫೈಸಲಾತಿಯು ಅವನಿಗೆ ಒಳಪಟ್ಟ ಹಿಡುವಳೀದಾರನೊಡನೆ ಅಥವಾ ಅವನ ಜಮೀನಿನ ಅನುಭವದಲ್ಲಿರುವ ಮನುಷ್ಯನೊಡನೆ ಮಾಡಲ್ಪಡಬಹುದು.

ಮುಂ. ರೆ. ಕೋ. 55ನೇ ಸೆಕ್ಷನ್.

ನೀರಿನ ಉಪಯೋಗಕ್ಕಾಗಿ ಹಾಕಲ್ಪಟ್ಟ ದರಗಳು.

58. ಯಾವ ಬಗ್ಯೆ ಹಕ್ಕುದಾರಿಯು ಗವರ್ನಮೆಂಟಿನವರಲ್ಲಿರುತ್ತೋ, ಅಥವಾ ಗವರ್ನಮೆಂಟಿನವರಿಂದಾಗಲಿ, ಅವರ ಖಾಯಿಷ್ ಮೇಲೆಯಾಗಲಿ, ಯಾವದಾದರೂ ನೀರಾವರಿ ಅಥವಾ ಇತರ ಕೆಲಸದ ಕಟ್ಟಣ, ಅಭಿವೃದ್ಧಿ ಅಥವಾ ರಿಪೇರಿ

ಇಂತಾದ್ದರ ದೆಶೆಯಿಂದ ಉಪಯೋಗಿಸುವಂತೆ ಮಾಡಲ್ಪಟ್ಟಿರುತ್ತೋ ಅಂತಾ ನೀರನ್ನು ಜಮೀನ್ ಹಿಡುವಳೀದಾರರಾಗಲಿ, ಇತರ ಮನುಷ್ಯರಾಗಲಿ, ಉಪಯೋಗಿಸಿಕೊಳ್ಳುವ ಬಗ್ಗೆ ಗವರ್ನಮೆಂಟಿನವರು, ಆಗಿಂದಾಗ್ಯೆ ಮಂಜೂರ್ ಮಾಡುವದಕ್ಕೆ ಯುಕ್ತವೆಂದು ಭಾವಿಸಬಹುದಾದ ಅಂತಾ ದರಗಳನ್ನು ಗೊತ್ತು ಮಾಡಲಿಕ್ಕೆ, ಸದರೀ ಗವರ್ನಮೆಂಟಿನವರು, ಡಿಪ್ಯುಟಿ ಕಮ್ಮಿಷನರನ್ನಾಗಲಿ, ಸರ್ವೇ ಇನ್‌ಚಾರ್ಜ ಆಫೀಸರರನ್ನಾಗಲಿ, ಅವರು ಮೇಕರರ್ ಮಾಡುವ ಅಂತಾ ಇತರ ಆಫೀಸರರನ್ನಾಗಲಿ ಅಧಿಕಾರ ಪೂರ್ವಕ ನಿಯಮಿಸಬಹುದು. ಅಂತಾ ದರಗಳು, ಗವರ್ನಮೆಂಟಿನವರು ಆಗಿಂದಾಗ್ಯೆ ನಿರ್ಣಯಿಸತಕ್ಕ ಕಾಲಗಳಲ್ಲಿ ಪುನರ್ವಿಮರ್ಶೆಗೆ ಗುರಿಯಾಗಿ, ಜಮೀನ್ ಕಂದಾಯದ ತರೀಕ್ ವಸೂಲ್ ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 56ನೇ ಸೆಕ್ಷನ್.

ಜಮೀನ್ ಕಂದಾಯವು ಜಮೀನ್ ವಿಷಯದಲ್ಲಿ ಯಲ್ಲಾದಕ್ಕಿಂತ ಜರೂರಾದ ಚಾರ್ಜ್‌ಯೂನೆ ಮಾಲ್ಯವಾಗಿರತಕ್ಕದ್ದು.

59. ಯಾವ ಜಮೀನ್ ಹಿಡುವಳೀದಾರನಿಂದಾಗಲಿ, ಜಮೀನಿಗಾಗಿ ಸಲ್ಲತಕ್ಕ ಕಂದಾಯದ ಬಾಕೀಗಳು, ಸದರೀ ಹಿಡುವಳಿಯು ಮತ್ತು ಅದರ ಪ್ರತಿಭಾಗದ ಮೇಲಿನ ಬಹಳ ಜರೂರಾದ ಚಾರ್ಜ್‌ಯಾನೆ ಕಂದಾಯುವಾಗಿರತಕ್ಕದ್ದು. ಅದನ್ನು ಕೊಡುವದಕ್ಕೆ ತಪ್ಪಿದರೆ, ತಮಾಂ ಮರಗಳೂ, ಫಸಲ್‌ಗಳೂ, ಕಟ್ಟಗಳೂ, ಜಮೀನಿಗೆ ಲಗ್ಗತ್ತಾದ ಅಥವಾ ಜಮೀನಿಗೆ ಲಗ್ಗತ್ತಾದ ಯಾವ ವಸ್ತುವಿಗಾಗಲಿ ಸ್ಥಿರವಾಗಿ ಜಂಟಿಸಲ್ಪಟ್ಟ ವಸ್ತುಗಳು ಇವುಗಳಿಗೆ ಅನುಭವದಾರನ ಅಥವಾ ಹಿಡುವಳೀದಾರನ ದರೋಬಸ್ತು ಹಕ್ಕುದಾರೀಗಳೊಡನೆ, ಅನುಭವವನ್ನಾಗಲಿ, ಪರಭಾರೇಯಾದ ಹಿಡುವಳೀಯನ್ನಾಗಲಿ, ಸರಕಾರಕ್ಕೆ ದಂಡವಾಗಿ ಸೇರುವದಕ್ಕೆ ಗುರಿಯಾಗತಕ್ಕದ್ದು. ಅದರಮೇಲೆ ಬಾಕೀ ಇರುವ ತಮಾಂ ಮೊಬಲಗುಗಳನ್ನೂ ಅನುಭವದಾರನಿಂದಾಗಲಿ, ಹಿಡುವಳೀದಾರನಿಂದಾಗಲಿ, ಸ್ವಾತಂತ್ರ್ಯವುಳ್ಳ ಪೂರ್ವಿಕರಪೈಕಿ ಯಾರಿಂದಾಗಲಿ ಉಂಟು ಮಾಡಲ್ಪಟ್ಟ ಅಥವಾ ಅಂತಾ ಅನುಭವದಾರನ ಅಥವಾ ಹಿಡುವಳೀದಾರನಮೇಲೆ ಯಾವವಿಧದಿಂದಲಾಗಲಿ ನೆಲೆಗೊಂಡಿರುವ ತಮಾಂ ಬಡಂಬಡಿಕೆಗಳಿಂದಲೂ ದೇಣೆಗಳಿಂದಲೂ ಹಕ್ಕುಗಳಿಂದಲೂ ಖುಲಾಸೆಯಾಗಲ್ಪಟ್ಟು ಸದರೀ ಅನುಭವವನ್ನಾಗಲಿ ಪರಭಾರೇಯಾದ ಹಿಡುವಳೀಯನ್ನಾಗಲಿ ಹರಾಜು ಮಾಡಿಸಿ ವಸೂಲ್ಮಾಡಬಹುದು. ಅಥವಾ 241ನೇ ಸೆಕ್ಷನ್ ಅನುಸರಿಸಿ ಇದಕ್ಕೋಸ್ಕರ ಮಾಡಲ್ಪಟ್ಟ ರೂಲ್ಸ್ ಯಾ ಹುಕುಂಗಳನುಸರಿಸಿ ಸದರೀ ಅನುಭವವನ್ನಾಗಲಿ, ಪರಭಾರೇಯಾದ ಹಿಡುವಳಿಯನ್ನಾಗಲಿ, ಬೇರೇವಿಧವಾಗಿ ವ್ಯವಸ್ಥೆ ಮಾಡಬಹುದು.

ಮುಂ. ರೆ. ಕೋ. 57ನೇ ಸೆಕ್ಷನ್.

ದಂಡವಾಗಿ ಕಳಕೊಳ್ಳಲ್ಪಟ್ಟ ಹಿಡುವಳಿಯು, ಸ್ವಾಧೀನಪಡಿಸಿಕೊಳ್ಳಲ್ಪಡಬಹುದು ಮತ್ತು ಅನ್ಯಥಾ ವಿನಿಯೋಗಿಸಲ್ಪಡಬಹುದು.

60. ಪಾವತೀ ಮಾಡುವದಕ್ಕೆ ತಪ್ಪುವದರಿಂದಲಾಗಲಿ ಇತರ ವಿಧದಿಂದ ತಪ್ಪುವದರಿಂದಲಾಗಲಿ ಕಡೇ ಸೆಕ್ಷನ್ ಅನುಸರಿಸಿ ಯಾ ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಕಾನೂನ್ ಅನುಸರಿಸಿ ಬಂದು ಹಿಡುವಳಿಯು ಕಳಕೊಳ್ಳಲ್ಪಟ್ಟರೆ, ಅಂತಾ ಹಿಡುವಳೀಯಲ್ಲಿ ಅಡಗಿರುವ ಜಮೀನನ್ನು ಕೂಡ್ಲೆ ಸ್ವಾಧೀನಪಡಿಸಿಕೊಂಡು, ಈ ರೆಗ್ಯುಲೇಷನಿನ ಅಥವಾ ತತ್ಕಾಲದಲ್ಲಿರುವ ಯಾವದಾದರೂ ಇತರ ಕಾನೂನಿನ ನಿಬಂಧನೆಗಳ ಪ್ರಕಾರ ಪಡೆಯುವದಕ್ಕೆ ಅರ್ಹನಾದ ಕ್ರಯದಾರನ

ಅಥವಾ ಇತರ ಮನುಷ್ಯನ ವಶದಲ್ಲಿ ಸದರೀ ಜಮೀನನ್ನು ಇಡುವದರಮೂಲಕ ವಿನಿಯೋಗಿಸುವದಕ್ಕೆ ಡೆಪ್ಯುಟಿ ಕಮ್ಮಿಷನರಿಗೆ ಯೆಖ್ತ್ಯಾರಿಯುಂಟು.

ಮುಂ. ರೆ. ಕೋ. 58ನೇ ಸೆಕ್ಷನ್.

ಜಮೀನ್ ಕಂದಾಯದ ಪಾವತೀ ಬಗ್ಯೆ ರೆವಿನ್ಯು ಆಫೀಸರ್‌ಗಳಿಂದ ರಸೀದಿಗಳು ಕೊಡಲ್ಪಡತಕ್ಕವು.

61. ಜಮೀನ್ ಕಂದಾಯವನ್ನು ತೆಗದುಕೊಳ್ಳುವ ಪ್ರತಿ ರೆವಿನ್ಯು ಆಫೀಸರೂ ಸದರೀ ಬಗ್ಯೆ ಬರವಣಿಗೆಯ ಮೂಲಕ ಒಂದು ರಸೀದೀಯನ್ನು ಕೊಡತಕ್ಕದ್ದು.

ಮತ್ತು ತೆರಿಗೆಯನ್ನಾಗಲೀ ಕಂದಾಯವನ್ನಾಗಲೀ ಪಾವತೀ ಮಾಡಿದ ಬಗ್ಯೆ ಕೆಲವರು ಮೇಲ್ಪಟ್ಟ ಹಿಡುವಳೀದಾರರಿಂದ ಕೊಡಲ್ಪಡತಕ್ಕದ್ದು.

ಒಂದು ಪರಭಾರೆಯಾದ ಗ್ರಾಮದ ಅಥವಾ ಒಂದು ಗ್ರಾಮದ ಪರಭಾರೇಯಾದ ಹಿಸ್ಸೆಯ ಮೇಲ್ಪಟ್ಟ ಪ್ರತಿ ಹಿಡುವಳೀದಾರನೂ, ಅಥವಾ ಅಂತಾ ಮೇಲ್ಪಟ್ಟ ಹಿಡುವಳೀದಾರನಿಂದ ಕ್ರಮವಾಗಿ ಅಧಿಕಾರ ವಹಿಸಿಯಿರುವ ಮುತಾಲೀಕನೂ, ಒಬ್ಬ ಕಮ್ಮಿ ಹಿಡುವಳೀದಾರನಿಂದ ತನಗೆ ಪಾವತೀ ಮಾಡಲ್ಪಟ್ಟ ತೆರಿಗೆಯ ಅಥವಾ ಜಮೀನ್ ಕಂದಾಯದ ಪ್ರತಿ ಪಾವತೀಬಗ್ಯೆ ಬರಹ ಮೂಲಕ ರಸೀದಿಯನ್ನು ಕೊಡತಕ್ಕದ್ದು. ಅಂತಾ ರಸೀದಿಗೆ ಶಾನುಭೋಗನು ಯಾರಾದರೂ ಇದ್ದರೆ ಅವನು ಅದ್ದರುಜು ಮಾಡತಕ್ಕದ್ದು.

ಮುಂ. ರೆ. ಕೋ. 59ನೇ ಸೆಕ್ಷನ್.

ರಸೀದಿಯನ್ನು ಕೊಡುವದಕ್ಕೆ ತಪ್ಪಿದರೆ ದಂಡನೆ.

62. ಹಿಂದಿನ ಕಡೇ ಸೆಕ್ಷನ್ ನಿಬಂಧನೆಗಳ ಉಲ್ಲಂಘನೆಗಾಗಿ ಡೆಪ್ಯುಟಿ ಕಮ್ಮಿಷನರ ಮುಂದೆ ಸ್ಟ್ರೂಟ್ ವಿಚಾರಣೆ ಆದಮೇಲೆ ತಕಸೀರ್ ಆಪಾದಿಸಲ್ಪಟ್ಟ ಯಾವ ಮನುಷ್ಯನಾಗಲಿ, ಯಾವಬಗ್ಯೆ ಒಂದು ರಸೀದಿಯು ಕ್ರಮಪ್ರಕಾರ ಕೊಡಲ್ಪಡಲಿಲ್ಲವೋ ಅಂತಾ ತೆಗದುಕೊಳ್ಳಲ್ಪಟ್ಟ ಮೊಬಲಗಿಗೆ ಮೂರರಷ್ಟಕ್ಕೆ ಜಾಸ್ತೀಯಿಲ್ಲದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು, ಮತ್ತು ಜುರ್ಮಾನೇ ಪೈಕಿ ಆರವಾಸೀ, ಡೆಪ್ಯುಟಿ ಕಮ್ಮಿಷನರ ಯೆಖ್ತ್ಯಾರೀ ಮೇಲೆ, ಖಾತೆಮೀದಾರ್ ಯಾರಾದರೂ ಇದ್ದರೆ ಅವನಿಗೆ ಕೊಡಲ್ಪಡಬಹುದು. ಅಂತಾ ವಿಚಾರಣೆಗೆ ಡೆಪ್ಯುಟಿ ಕಮ್ಮಿಷನರವರು ಯಾವ ಕಾಲದಲ್ಲಾಗಲಿ ತಮಗೆ ಆವಿಷಯದಲ್ಲಿ ಫಿರ್ಯಾದು ಬರದೇಯಿದ್ದಾಗ್ಯೂ ತಮ್ಮ ಖಾಯಿಷ್ ಮೇಲೆ ಉಪಕ್ರಮಿಸಬಹುದು.

6ನೇ ಅಧ್ಯಾಯ.

ಪರಭಾರೇಯಾಗದ ಜಮೀನಿನ ಅನುಭವ ಮತ್ತು ಅನುಭವದಾರರ ಹಕ್ಕುಗಳು.

ಅನುಭವ.

ಮುಂ. ರೆ. ಕೋ. 60ನೇ ಸೆಕ್ಷನ್.

ಅನುಭವದಲ್ಲಿಲ್ಲದ ಜಮೀನನ್ನು ಪಡೆಯಲಿಕ್ಕೆ ಪೂರ್ವ ಅಮಲ್ದಾರನ ಬರವಣಿಗೇ ಮೂಲಕವಾದ ಅಪ್ಪಣೆ ಬೇಕಾಗಿರುತ್ತೆ.

63. ಅನುಭವದಲ್ಲಿಲ್ಲದ ಜಮೀನನ್ನು ಪಡೆಯಲಿಕ್ಕೆ ಖಾಯಿಷ್ ಮಾಡುವ ಯಾವ ಮನುಷ್ಯನಾಗಲಿ ಅನುಭವದಲ್ಲಿ ಪ್ರವರ್ತಿಸುವದಕ್ಕೆ ಪೂರ್ವ್ವ, ಅಮಲ್ದಾರನ ಅಥವಾ ಡೆಪ್ಯುಟಿ ಅಮಲ್ದಾರನ ಬರವಣಿಗೇ ಯಲ್ಲಿರುವ ಅಪ್ಪಣೆ ಯನ್ನು ಪಡೆಯತಕ್ಕದ್ದು.

ಮುಂ. ರೆ. ಕೋ. 61ನೇ ಸೆಕ್ಷನ್.

ಅಧಿಕಾರವಿಲ್ಲದೆ ಜಮೀನ್ ಅನುಭವಿಸತಕ್ಕ ವಿಷಯದಲ್ಲಿ ದಂಡನೆ.

64. ಯಾವದಾದರೂ ವಿಶೇಷಕಾರ್ಯಕ್ಕೋಸ್ಕರ ನಿಲ್ಲಿಸಿಯಿಡಲ್ಪಟ್ಟ, ಯಾವ ಜಮೀನನ್ನಾಗಲಿ, ಪರಭಾರೇವಾಡಲ್ಪಡದೆ ಯಿರುವ, ಅನುಭವದಲ್ಲಿಲ್ಲದ ಯಾವ ಜಮೀನನ್ನಾಗಲಿ, ಅಧಿಕಾರವಿಲ್ಲದೆ ಅನುಭವಿಸತಕ್ಕ ಯಾವ ಮನುಷ್ಯನಾದರೂ,

ಯಾವಜಮೀನನ್ನು ಅವನು ಅಧಿಕಾರವಿಲ್ಲದೆ ಅನುಭವಿಸುತ್ತಾನೋ ಅಂತಾ ಜಮೀನು ಕಂದಾಯ ಕರಾರಾದ ಒಂದು ಸರ್ವೇನಂಬರಿನ ಭಾಗವಾಗಿದ್ದರೆ, ಅವನು ಅನುಭವಿಸುವ ವಿಷ್ಟುಕಾಲಕ್ಕೂ ಪೂರಾನಂಬರಿನ ಕಂದಾಯವನ್ನು ಕೊಡತಕ್ಕದ್ದು; ಮತ್ತು

ಹಾಗೆ ಅವನಿಂದ ಅನುಭವಿಸಲ್ಪಡುವ ಜಮೀನಿಗೆ ಕಂದಾಯ ಕರಾರಾಗದಿದ್ದರೆ ಅದೇಗ್ರಾಮದಲ್ಲಿ ಆದೇಕೆಲಸಕ್ಕಾಗಿ ನಿಯಮಿಸಲ್ಪಟ್ಟ ಅದಕ್ಕೆ ಸಮನಾದ ಜಮೀನಿನ ಬದಸ್ತೂರ್ ಬೀಜವರಿಯ ಮೇಲೆ ಸದರೀ ಕಾಲಕ್ಕೆ ವಸೂಲಾಗಬಹುದಾದ ಕಂದಾಯದ ಮೊಬಲಗನ್ನು ಅವನು ಕೊಡತಕ್ಕದ್ದು;

ಮತ್ತು ಡೆಪ್ಯುಟಿ ಕಮಿಷನರ ಯುಕ್ತಿಯಾರಿಮೇಲೆ ಐದುರೂಪಾಯಿಗೆ ಹೆಚ್ಚದ ಜುರ್ಮಾನೆಯನ್ನು ಅಥವಾ ಸದರೀ ಜುರ್ಮಾನೆಯು ಐದು ರೂಪಾಯಿಗಿಂತ ಹೆಚ್ಚಾಗಿದ್ದಲ್ಲಿ, ಅಧಿಕಾರವಿಲ್ಲದೆ ಅನುಭವಿಸಲ್ಪಡುವ ಜಮೀನು ಸಾಗುವಳೀಬಗ್ಯೆ ಆಕ್ರಮಿಸಲ್ಪಟ್ಟದ್ದಲ್ಲಿ ಸದರೀ ಜಮೀನಿಗೆ ಒಂದುಸಾಲಿಗೆ ಕಂದಾಯದ ತರೀಕು ಕೊಡಬೇಕಾಗುವ ಮೊಬಲಗಿನ ಹತ್ತರಷ್ಟು ಮೊಬಲಗನ್ನೇಯಾಗಲಿ ಅಥವಾ ಸದರೀಜಮೀನನ್ನು ವ್ಯವಸಾಯಕ್ಕಲ್ಲದ ಯಾವಬಗ್ಯಾದರೂ ಆಕ್ರಮಿಸಿಕೊಂಡಿದ್ದಲ್ಲಿ ಈ ವಿಷಯಕ್ಕಾಗಿ 241ನೇ ಸೆಕ್ಷನ್ ಅನುಸರಿಸಿ ಮಾಡಲ್ಪಟ್ಟ ರೂಲ್ಸ್ ಯಾ ಕಾನೂನುಗಳಲ್ಲಿ ಗೊತ್ತುಮಾಡಲ್ಪಡಬಹುದಾದ ಹದ್ದನ್ನು ಮೀರದ ಒಂದು ಮೊಬಲಗನ್ನು ಜುರ್ಮಾನೆಯಾಗಿ ಕೊಡುವದಕ್ಕೆ ಗುರಿಯಾಗುವನು.

ಅಧಿಕಾರವಿಲ್ಲದೆ ಅನುಭವಿಸುವ ಜಮೀನಿಗಾಗಿ ಸಲ್ಲತಕ್ಕ ಕಂದಾಯದ ಮೊಬಲಗನ್ನು ಕುರಿತು ಮಾಡಲ್ಪಟ್ಟ ಡೆಪ್ಯುಟಿ ಕಮಿಷನರವರ ತೀರ್ಮಾನವು ಆಖೈರಾಗಿರತಕ್ಕದ್ದು, ಮತ್ತು ಸದರೀ ಮೊಬಲಗನ್ನು ನಿಷ್ಕರ್ಷಿಸುವದರಲ್ಲಿ ಅನುಭವದ ಕಾಲವು ಒಂದು ವರುಷಕ್ಕಿಂತ ಕಮ್ಮಿಯಾಗಿದ್ದರೂ, ಪೂರಾ ವಂದು ವರುಷವಾಗಿ ಲೆಕ್ಕ ಮಾಡತಕ್ಕದ್ದು.

ಅಂಥಾ ಯಾವ ಜಮೀನನ್ನಾಗಲಿ ಅಧಿಕಾರವಿಲ್ಲದೆ ಅನುಭವಿಸುವ ಮನುಷ್ಯನನ್ನು ಡೆಪ್ಯುಟಿ ಕಮಿಷನರು ಸದರೀ ಅನುಭವದಿಂದ ತಪ್ಪಿಸತಕ್ಕದ್ದು. ಅಂಥಾ ಜಮೀನಿನಲ್ಲಿಡಲ್ಪಟ್ಟರುವ ಯಾವದಾದರೂ ಫಸಲು ದಂಡವಾಗಿ ಸರಕಾರಕ್ಕೆ ಶೇರತಕ್ಕದ್ದು; ಮತ್ತು ಅದರಮೇಲೆ ಕಟ್ಟಿಯಿರಬಹುದಾದ ಯಾವದಾದರೂ ಮನೆಯಾಗಲೀ ಇತರ ಕಟ್ಟಡವಾಗಲೀ ಡೆಪ್ಯುಟಿಕಮಿಷನರು ಯುಕ್ತವೆಂದು ಭಾವಿಸಬಹುದಾದ ಬರವಣಿಗೆಯ ನೋಟೀಸು ಕೊಟ್ಟಮೇಲೆ ತೆಗೆಸಿಹಾಕಲ್ಪಡದಿದ್ದರೆ ದಂಡವಾಗಿ ಶೇರಿಸಿಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

ಈ ಸೆಕ್ಷನ್ ಅನುಸರಿಸಿ ದಂಡಗಳು ಡೆಪ್ಯುಟಿಕಮ್ಮಿಷನರವರಿಂದ ಫೈಸಲ್ ಮಾಡಲ್ಪಡತಕ್ಕವು ; ಹಾಗೆ ದಂಡವಾಗಿ ಶೇರಿಸಿಕೊಳ್ಳಲ್ಪಟ್ಟ ಯಾವಸ್ವತ್ತಾಗಲೀ ಡೆಪ್ಯುಟಿ ಕಮ್ಮಿಷನರು ನಿಯಮಿಸಬಹುದಾದ ಮೇರೆ ಫೈಸಲ್ ಮಾಡಲ್ಪಡಬಹುದು.

ಮುಂ. ರೆ. ಕೋ. 62ನೇ ಸೆಕ್ಷನ.

ಅನುಭವದ ಹಕ್ಕುದಾರಿಗೆ ಖರೀದಿ ಕೊಡತಕ್ಕದ್ದು ಮತ್ತು ಕೆಲವು ಷರತ್ತುಗಳಿಗೆ ಸದರೀ ಹಕ್ಕು ಗುರಿಯಾಗತಕ್ಕದ್ದು.

65. ಗವರ್ನಮೆಂಟಿನಿಂದ ಆಗಿಂದಾಗ್ಯೆ ಮಾಡಲ್ಪಡಬಹುದಾದ ಅಂತಾ ಹುಕುಂಗಳಿಗೆ ವಳಪಟ್ಟು ಅನುಭವದಬಗ್ಯೆ ವಂದು ಖರೀದಿ ಮೊಬಲಗನ್ನು ತೆರತಕ್ಕದ್ದೆಂದು ನಿಯಮಿಸುವದಕ್ಕೂ ಅಥವಾ ಸದರೀ ಹಕ್ಕುದಾರಿಯನ್ನು ಹರಾಜುಮೂಲಕ ವಿಕ್ರಯಿಸುವದಕ್ಕೂ ಮತ್ತು 63ನೇ ಸೆಕ್ಷನ್ ಅನುಸರಿಸಿ ಅನುಭವದಬಗ್ಯೆ ಅಪ್ಪಣೆ ಕೊಡುವದಕ್ಕೆ ಮುಂದೆ ಯುಕ್ತವೆಂದು ಕಾಣಬಹುದಾದ ಅಂತಾ ಷರತ್ತುಗಳನ್ನು ಅನುಭವಕ್ಕೆ ಲಗ್ಗತ್ ಮಾಡುವದಕ್ಕೂ ಡೆಪ್ಯುಟಿಕಮ್ಮಿಷನರಿಗೆ ಯುಕ್ತಿಯಾರಿ ಉಂಟು.

ಸದರೀ ಖರೀದಿಯು ಮರಗಳ ಖರೀದಿಯನ್ನು ಅಡಗಿಸಿಕೊಳ್ಳತಕ್ಕದ್ದು.

ಅನುಭವದ ಖರೀದಿಯು, ವಿಕ್ರಯದ ಷರತ್ತುಗಳಿಂದ ಅನ್ಯಥಾ ನಿಯಮಿಸಲ್ಪಟ್ಟ ಹೊರತು, 45ನೇ ಸೆಕ್ಷನ್ ನಿಬಂಧನೆಗಳನುಸರಿಸಿ ಉಳಿಸಿಕೊಳ್ಳಲ್ಪಡದ ತಮಾಂ ಮರಗಳಿಗೂ ಗವರ್ನಮೆಂಟ್ ಹಕ್ಕುದಾರಿಯ ಖರೀದಿಸಹ ಅಡಗಿಸಿಕೊಂಡು ಯಿರತಕ್ಕದ್ದಲ್ಲದೆ ಜಮೀನ್ ಕಂದಾಯದ ಬಾಕಿತರೀಕ ವಸೂಲ್ ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 63ನೇ ಸೆಕ್ಷನ.

ಗವರ್ನಮೆಂಟ್ ಅಧೀನದಲ್ಲಿರುವ ಒಂದು ಜಮೀನಿನ ಅನುಭವವು.

66. ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಕಾನೂನ್ ಅನುಸರಿಸಿ, ಗವರ್ನಮೆಂಟಿನವರ ಅಧೀನದಲ್ಲಿರುವ ಯಾವದಾದರೂ ಒಂದು ಜಮೀನಿನ ಅನುಭವವು, ಸರ್ಕಾರ್ ಹುಟ್ಟುವಳಿಯ ಪ್ರಯೋಜನದ ವಿಷಯದಲ್ಲಿ ಯುಕ್ತವಾದ ನಿಗೆಯಿಂದ ಶಾಶ್ವಿತವಾಗಿ ವಿನಿಯೋಗಿಸಲ್ಪಡಬಹುದೆಂದು ಡೆಪ್ಯುಟಿ ಕಮ್ಮಿಷನರಿಗೆ ಕಾಣಬಂದಾಗ, ಯಾವದರ ಮೇಲೆ ಅಂತಾ ವಂದು ಜಮೀನು ಏರ್ಪಟ್ಟಿರುತ್ತೋ ಅಂತಾ ದಡದ ಯಾ ತೀರದ ಅನುಭವದಾರ ಯಾರಾದರೂ ಇದ್ದರೆ ಅವನಿಗೆ ಅನುಭವದ ಅವ್ವಲ್ ಬಾಧ್ಯತೆಯನ್ನು ಕೊಡುವಂತೆ ತಿಳಿಸತಕ್ಕದ್ದು; ಹಾಗೆ ಕೊಡುವದಕ್ಕೆ ಯುಕ್ತಿಸಲ್ಪಟ್ಟ ವಂದು ಅನುಭವದ ಖರೀದಿಯು, ಯಾವಜಮೀನಿನ ಅನುಭವವು ಕೊಡುವದಕ್ಕೆ ಯುಕ್ತಿಸಲ್ಪಡುತ್ತೋ ಅಂತಾ ಜಮೀನಿನ ಸಾಲೀಯಾನಾ ಕಂದಾಯಕ್ಕೆ ಮೂರರಷ್ಟಕ್ಕೆ ಅತಿಕ್ರಮಿಸಕೂಡದು.

ಸದರೀ ಅನುಭವದಾರ ಅಂತಾ ಅನುಭವವನ್ನು ತಿರಸ್ಕರಿಸಿದರೆ, ಡೆಪ್ಯುಟಿ ಕಮ್ಮಿಷನರು, ಅದರ ಖರೀದಿ ವಿಷಯದಲ್ಲಿ ಯಾವ ನಿರ್ಬಂಧಗಳೂ ಇಲ್ಲದೆ, ಹಿಂದಿನಕಡೇ ಸೆಕ್ಷನ್ ಅನುಸರಿಸಿ ವಿನಿಯೋಗಿಸಬಹುದು.

ಮುಂ. ರೆ. ಕೋ. 64ನೇ ಸೆಕ್ಷನ.

ಸ್ವಲ್ಪಬೀಜವರಿಯ ಬಾಬತು ಬಂಡು ಜಮೀನ್‌ಗಳಿಗೆ ಹಂಗಾಮಿ ಹಕ್ಕುದಾರಿ.

67. ಯಾವದಾದರೂ ದಡದ ಯಾ ತೀರದ ಮೇಲೆ ಬಂಡು ಜಮೀನು ಏರ್ಪಟ್ಟಲ್ಲಿ ಅಂತಾ ದಡದ ಯಾ ತೀರದ ಅನುಭವದಾರ ಯಾರಾದರೂ ಇದ್ದರೆ ಅವನು, ಸದರೀ ಜಮೀನಿನ ಬೀಜವರಿಯು ಅರ್ಧ ಯಕರೆಗೆ ಮೀರಿ ಮತ್ತು ಅವನ ಹಿಡು

608

ವಳಿಯ ಬೀಜವರಿ ಪೈಕಿ ಹತ್ತರಲ್ಲಿ ಒಂದಂಶಕ್ಕೆ ಮೀರಿದ ಹೊರತು, ಅಥವಾ ಮೀರುವತನಕ, ಸದರೀ ಜಮೀನಿನ ಹಂಗಾಮಿ ಉಪಯೋಗಕ್ಕಾಗಲಿ, ಅನುಭವಕ್ಕಾಗಲಿ, ಅರ್ಹನಾಗಿರತಕ್ಕದ್ದು, ಒಂದು ಜಮೀನಿನ ಬೀಜವರಿಯು ಮೇಲೆ ಹೇಳಿದ್ದಕ್ಕೆ ಅತಿಕ್ರಮಿಸಿದರೆ ಹಿಂದಿನ ಕಡೇ ಸೆಕ್ಷನ್ನ ನಿಬಂಧನೆಗಳಿಗೆ ಒಳಪಟ್ಟು ಡೆಪ್ಯುಟಿ ಕಮ್ಮಿಷನರವರ ಫೈಸಲಾತಿಯಂತೆ ಇರತಕ್ಕದು.

ಈ ಸೆಕ್ಷನ್ನಲ್ಲಿಯೂ 52ನೇ ಸೆಕ್ಷನ್ನಲ್ಲಿಯೂ "ಹಿಡುವಳಿ" ಎಂಬ ಮಾತಿಗೆ ಯಾವನಕ್ಕೆ ಪ್ರತ್ಯೇಕವಾದ ಅಥವಾ ಪಟ್ಟಾದ ಕಂದಾಯ ಕರಾವ್ ಮಾಡಲ್ಪಟ್ಟಿದೆಯೋ ಅಂತಾ ಒಂದು ಸರ್ವೇ ನಂಬರಾಗಲೀ ಜಮೀನಿನ ಯಾವ ಭಾಗವಾಗಲೀ ಎಂದು ಅರ್ಥವಾಗತಕ್ಕದ್ದೆಂದು ಯೆಣಿಸತಕ್ಕದು.

ಅನುಭವದಾರರ ಹಕ್ಕುಗಳು.

ಮುಂ. ರೆ. ಕೋ. 65ನೇ ಸೆಕ್ಷನ್.

ವ್ಯವಸಾಯದ ಕೆಲಸಗಳಿಗಾಗಿ ಇರುವ ಜಮೀನಿನ ಅನುಭವದಾರನು ತನ್ನ ಜಮೀನನ್ನು ಯಾವಯಾವ ಬಗ್ಗೆ ಉಪಯೋಗಿಸತಕ್ಕದ್ದು.

68. ಬೇಸಾಯದ ಕೆಲಸಗಳಿಗಾಗಿ ವಿನಿಯೋಗಿಸಲ್ಪಟ್ಟ ಜಮೀನಿನ ಅನುಭವದಾರನು ತಾನಾಗಿಯೇ ಆಗಲೀ ತನ್ನ ನೌಕರರು, ಷಿಕ್ಮೀದಾರರು, ಮುತಾಲೀಕರು ಅಥವಾ ಇತರ ವಾರಸುದಾರರು ಇವರ ಮೂಲಕವಾಗಿ ಸಾಗುವಳೀ ಬಗ್ಗೆ ಬೇಕಾದ ಕಟ್ಟಡಗಳನ್ನು ಕಟ್ಟುವದಕ್ಕೂ, ಭಾವಿಗಳನ್ನಾಗಲಿ ಕೆರೆಗಳನ್ನಾಗಲಿ ನಿರ್ಮಿಸುವದಕ್ಕೂ, ಯುಖ್ತಿಯಾರಿ ಉಳ್ಳವನಾಗಿಯೂ ಅಥವಾ ಜಮೀನನ್ನು ಇನ್ನೂ ಚನ್ನಾಗಿ ಸಾಗುವಳೀಮಾಡುವ ಬಗ್ಗೆ ಅಥವಾ ಮೇಲ್ಕಂಡ ಕೆಲಸಗಳಿಗಾಗಿ ಇನ್ನೂ ವಿಶೇಷ ಅನುಕೂಲವಾದ ಅನುಭವಕ್ಕೋಸ್ಕರ ಬೇಕಾದದ್ದನ್ನು ಮಾಡಿಕೊಳ್ಳುವದಕ್ಕೂ ಯುಖ್ತಿಯಾರಿಯುಳ್ಳವನಾಗಿರುತ್ತಾನೆ.

ಅನುಭವದಾರನು ತನ್ನ ಜಮೀನನ್ನು ಯಾವದಾದರೂ ಇತರ ಕೆಲಸಕ್ಕೆ ವಿನಿಯೋಗಿಸಬೇಕೆಂದು ಅಪೇಕ್ಷಿಸಿದರೆ ನಡಿಸತಕ್ಕ ನಡವಳಿಕೆಗಳು.

ಆದರೆ ಯಾವ ಅನುಭವದಾರನಾಗಲಿ ತನ್ನ ಹಿಡುವಳಿಯನ್ನು ಅಥವಾ ಅದರ ಯಾವದಾದರೂ ಭಾಗವನ್ನು ಬೇರೆ ಯಾವ ವಿಷಯಕ್ಕಾಗಲಿ ವಿನಿಯೋಗಿಸಬೇಕೆಂದು ಖಾಯಿಷ್ ಮಾಡಿದರೆ ರಿಜಿಸ್ಟರಾದ ಅನುಭವದಾರನು ಮೊದಲು ಡೆಪ್ಯುಟಿ ಕಮ್ಮಿಷನರ ಅಪ್ಪಣೆಯ ಬಗ್ಗೆ ಕೇಳಿಕೊಳ್ಳತಕ್ಕದ್ದು. ಡೆಪ್ಯುಟಿ ಕಮ್ಮಿಷನರು ತಮಗೆ ಅಂತಾ ಅರ್ಜೀ ಬಂದ ಮೇಲೆ ಅದು ತಲುಪಿದ್ದಕ್ಕೆ ಒಂದು ಬರವಣಿಗೆ ಮೂಲಕವಾದ ರಶೀದಿಯನ್ನು ಅರ್ಜೀದಾರನಿಗೆ ಕೂಡಲೇ ಕೊಡತಕ್ಕದ್ದು, ಮತ್ತು ವಿಚಾರಣೆ ಮಾಡಿದ ಮೇಲೆ ಸದರೀ ಅಪ್ಪಣೆಯನ್ನು ಕೊಡಲಾದರೂ ಬಹುದು ಬಿಡಲಾದರೂ ಬಹುದು, ಆದರೆ ಅಂತಾ ಅರ್ಜೀದಾರ, ಸದರೀ ರಸೀದೀ ತಾರೀಖುಲಾಗಾಯತ್ ಮೂರುತಿಂಗಳೊಳಗಾಗಿ ತನಗೆ ಜವಾಬ್ ಯೇನೂ ಬಾರದಿದ್ದರೆ, ಡೆಪ್ಯುಟಿ ಕಮ್ಮಿಷನರ ಅಪ್ಪಣೆ ತನಗೆ ಕೊಡಲ್ಪಟ್ಟಂತೆಯೇ ಭಾವಿಸಬಹುದು. ಡೆಪ್ಯುಟಿ ಕಮ್ಮಿಷನರು, ವಿಶೇಷ ಸಂಗತಿಗಳಲ್ಲಿ ಬೇರೆ ವಿಧವಾಗಿ ಹುಕುಂ ಮಾಡಿದ ಹೊರತು, ಇಂತಾ ಅರ್ಜಿಯು ರಿಜಿಸ್ಟರಾದ ಅನುಭವದಾರನಿಂದ ಕೊಡಲ್ಪಟ್ಟಿದ್ದಹೊರತು ಅಂಗೀಕರಿಸಲ್ಪಡಲಾಗದು.

ಅಂತಾ ವಿನಿಯೋಗದ ಬಗ್ಯೆ ವಿಶೇಷ ಕಂದಾಯದೊಡನೆ ಜುರ್ಮಾನೆ ವಸೂಲ್ಮಾಡಲ್ಪಡತಕ್ಕದ್ದು.

ಅಂತಾ ಯಾವ ಜಮೀನಾಗಲಿ ವ್ಯವಸಾಯಕ್ಕೆ ಸಂಬಂಧಿಸದ ಯಾವ ಕೆಲಸಕ್ಕಾದರೂ, ಆ ಮೇರೆ ವಿನಿಯೋಗಿಸಲ್ಪಟ್ಟ ಪಕ್ಷಕ್ಕೆ 53ನೇ ಸೆಕ್ಷನ್ನ ನಿಬಂಧನೆಗಳನುಸರಿಸಿ ವಸೂಲ್ಮಾಡಲ್ಪಡಬಹುದಾದ ಯಾವದಾದರೂ ಹೊಸ ಕಂದಾಯದೊಡನೆ ಒಂದು ಜುರ್ಮಾನೆ ತೆರಬೇಕೆಂದು ನಿಯಮಿಸುವದು ಗವರ್ನವೆುಂಟಿನ ಒಟ್ಟು ಹುಕುಂಗಳಿಗೆ ಒಳಪಟ್ಟು ಡೆಪ್ಯುಟಿ ಕಮ್ಮಿಷನರಿಗೆ ಯುಖ್ತ್ಯಾರಿಯುಂಟು.

ಮುಂ. ರೆ. ಕೋ. 66ನೇ ಸೆಕ್ಷನ್.

ಅಪ್ಪಣೆ ಇಲ್ಲದೆ ಜಮೀನನ್ನು ಆ ಮೇರೆ ವಿನಿಯೋಗಿಸುವ ಬಗ್ಯೆ ದಂಡನೆ.

69. ಮೊದಲು ಡೆಪ್ಯುಟಿ ಕಮ್ಮಿಷನರ ಅಪ್ಪಣೆಯನ್ನು ಪಡೆಯದೆ ಅಥವಾ ಅಂತಾ ರಸೀದಿ ತಾರೀಖಲಾಗಾಯತ್ ಮೂರುತಿಂಗಳು ಕಳೆಯುವದಕ್ಕೆ ಮುಂದಾಗಿ ಅಂತಾ ಯಾವ ಜಮೀನಾಗಲಿ ಹಾಗೆ ವಿನಿಯೋಗಿಸಲ್ಪಟ್ಟರೆ, ಅನುಭವಧಾರನೂ, ಯಾವನಾದರೂ ಷಿಕ್ಮೀದಾರನೂ, ಅಥವಾ ಅವನ ಕೈಕೆಳಗಾಗಲಿ ಅವನ ಮೂಲಕವಾಗಲಿ ಹಿಡುವಳಿಯುಳ್ಳ ಇತರ ಮನುಷ್ಯನೂ ಹಾಗೆ ವಿನಿಯೋಗಿಸಲ್ಪಟ್ಟ ಜಮೀನಿಂದಲಾಗಲಿ ಅಥವಾ ಯಾವದರ ಒಂದು ಭಾಗವಾಗಿ ಅದು ಇರಬಹುದೋ ಅಂತಾ ಪೂರಾ ತಾಕು ಯಾ ಸರ್ವೇ ನಂಬರ್‌ನಿಂದಲಾಗಲಿ ಪೂಟಾಗಿ ಹೊರಡಿಸಲ್ಪಡಲಿಕ್ಕೆ ಗುರಿಯಾಗತಕ್ಕದ್ದು. ರಿಜಿಸ್ಟರ್ ಮಾಡಲ್ಪಟ್ಟ ಅನುಭವದಾರನು 53ನೇ ಸೆಕ್ಷನ್ನ ನಿಬಂಧನೆಗಳನುಸರಿಸಿ ವಸೂಲ್ ಮಾಡಲ್ಪಡಬಹುದಾದ ಹೊಸಕಂದಾಯದೊಡನೆ ಸದರೀ ಜಮೀನು, ಯಾವ ಕಾಲದವರಿಗೆ ಹಾಗೆ ವಿನಿಯೋಗಿಸಲ್ಪಟ್ಟಿರುತ್ತೋ ಆ ಕಾಲಕ್ಕೆ, ಗವರ್ನವೆುಂಟಿನ ಒಟ್ಟು ಹುಕುಂಗಳಿಗೆ ಒಳಪಟ್ಟು ಡೆಪ್ಯುಟಿ ಕಮ್ಮಿಷನರು ನಿಯಮಿಸಬಹುದಾದ ಅಂತಾ ಜುರ್ಮಾನೆಯನ್ನು ಸಹ ತೆರಲಿಕ್ಕೆ ಗುರಿಯಾಗತಕ್ಕದ್ದು.

ಜಂಟೀ ಅನುಭವದಾರ ಯಾ ಷಿಕ್ಮೀದಾರನು, ರಿಜಿಸ್ಟರಾದ ಅನುಭವದಾರನಿಗೆ ನುಕ್ಸಾನ್ ವಿಷಯದಲ್ಲಿ ಜವಾಬ್ದಾರನಾಗತಕ್ಕದ್ದು.

ಯಾವ ಜಂಟೀ ಅನುಭವದಾರನಾಗಲಿ, ಯಾವನಾದರೂ ಅನುಭವದಾರನ ಯಾವ ಷಿಕ್ಮೀದಾರನಾಗಲಿ, ಒಬ್ಬ ಅನುಭವದಾರನ ಕೈಕೆಳಗೆ ಯಾ ಅವನ ಮೂಲಕ ಹಿಡುವಳಿಯುಳ್ಳ ಯಾವನಾದರೂ ಇತರ ಮನುಷ್ಯನಾಗಲಿ, ರಿಜಿಸ್ಟರ್ ಮಾಡಲ್ಪಟ್ಟ ಸದರೀ ಅನುಭವದಾರನ ಅನುಮತಿಯಿಲ್ಲದೆ ಅಂತಾ ಯಾವ ಜಮೀನನ್ನಾದರೂ ಅಂತಾ ಯಾವ ಕೆಲಸಕ್ಕೋಸ್ಕರವಾದರೂ ವಿನಿಯೋಗಿಸಿ ಆಮೂಲಕ ಸದರೀ ರಿಜಿಸ್ಟರಾದ ಅನುಭವದಾರನನ್ನು ಮೇಲೆ ಕಂಡ ದಂಡನೆಗಳಿಗೆ ಗುರಿಯಾಗುವಂತೆ ಮಾಡಿದಲ್ಲಿ ಅವನು ಸದರೀ ರಿಜಿಸ್ಟರ್ ಮಾಡಲ್ಪಟ್ಟ ಅನುಭವದಾರನಿಗೆ ಸದರೀ ದಂಡನೆಗಳಿಗೆ ಜವಾಬುದಾರನಾಗತಕ್ಕದ್ದು.

ಮುಂ. ರೆ. ಕೋ. 67ನೇ ಸೆಕ್ಷನ್.

ಷರತಗಳ ಮೇಲೆ ಅಪ್ಪಣೆ ಕೊಡಲ್ಪಡಬಹುದು.

70. ಗವರ್ನವೆುಂಟಿಗೂ ರಿಜಿಸ್ಟರ್ ಮಾಡಲ್ಪಟ್ಟ ಅನುಭವದಾರನಿಗೂ ಪರಸ್ಪರ ಒಡಂಬಡಿಕೆ ಮಾಡಲ್ಪಡಬಹುದಾದಂತಾ ಷರತ್ತುಗಳಮೇಲೆ ವಿಶೇಷ ಸಂಗತಿಗಳಲ್ಲಿ ಮೇಲೆಕಂಡ ಅಪ್ಪಣೆ ಕೊಡುವದಕ್ಕೆ ಮೇಲ್ಕಂಡ ಸೆಕ್ಷನ್‌ಗಳ ಯಾವ ಅಂಶವೂ ಅಡ್ಡಿಮಾಡತಕ್ಕದ್ದಲ್ಲವು.

ಮುಂ. ರೆ. ಕೋ. 68ನೇ ಸೆಕ್‌ಷನ್.

ಅನುಭವದಾರನ ಹಕ್ಕುಗಳು ಒಡಂಬಡಿಕೆಗೆ ಒಳಪಟ್ಟಿರುವವು.

71. ಒಬ್ಬ ಅನುಭವದಾರನು, ತನ್ನ ಅನುಭವವು ಯಾವ ಕಾಲದವರಿಗೆ ನಡೆದುಬರಬೇಕೆಂದು ಹದ್ದುಪಡಿಸಲ್ಪಟ್ಟಿರುತ್ತೋ ಆ ಕಾಲದ ಯಾವದಾದರೂ ಇದ್ದರೆ ಅಷ್ಟರವರಿಗೆ ತನ್ನ ಜಮೀನಿನ ಉಪಯೋಗ ಮತ್ತು ಅನುಭವಕ್ಕೆ ಯುಕ್ತಿಯಾರಿವುಳ್ಳವನಾಗಿರುತ್ತಾನೆ. ತನ್ನ ಅನುಭವವು ಗೊತ್ತಿಲ್ಲದ ಕಾಲದವರಿವಿಗೆ ನಡದು ಬರುವದಾಗಿಯಾಗಲಿ ಯಾ ಸರ್ವೇ ಸೆಟಲ್‌ಮೆಂಟು ಶಾಶ್ವತವಾಗಿ ಆ ಜಮೀನಿಗೆ ಜಾರಿಯಲ್ಲಿ ತರಲ್ಪಟ್ಟಿದ್ದರೆ ಈ ರೆಗ್ಯುಲೇಷನಿನ ಯಾ ಈ ರೆಗ್ಯುಲೇಷನ್ ಅನುಸರಿಸಿ ಮಾಡಲ್ಪಟ್ಟ ಯಾವದಾದರೂ ರೂಲ್ಸಿನ ಅಥವಾ ತತ್ಕಾಲದೊಳಗೆ ಜಾರಿಯಲ್ಲಿರುವ ಯಾವದಾದರೂ ಇತರ ಕಾನೂನಿನ ನಿಬಂಧನೆಗಳ ಪ್ರಕಾರ ಸದರೀ ಜಮೀನಿಗೆ ಸಲ್ಲತಕ್ಕ ಕಂದಾಯದ ಮೊಬಲಗುಗಳನ್ನು ಪಾವತೀ ಮಾಡಿದ ಮೇಲೆ ಮತ್ತು ಅವನ ಅನುಭವಕ್ಕೆ ನ್ಯಾಯತಃ ಲಗ್ಗತ್ತಾದ ಇತರ ಯಾವದಾದರೂ ಷರತ್ತುಗಳನ್ನು ನೆರವೇರಿಸಿದ್ದರ ಮೇಲೆ, ತನ್ನ ಜಮೀನನ್ನು ಉಪಯೋಗಿಸುವದಕ್ಕೂ ಅನುಭವಿಸುವದಕ್ಕೂ ಅರ್ಹನಾಗಿರುತ್ತಾನೆ.

ಮುಂ. ರೆ. ಕೋ. 70ನೇ ಸೆಕ್‌ಷನ್.

ಲಾಯಖಾದ ಕೋರ್ಟುಗಳ ಡಿಕ್ರಿಗಳು, ಹುಕ್ಕುಂಗಳು ಜಾರಿಯಲ್ಲಿ ತರಲ್ಪಡತಕ್ಕದ್ದು.

72. ಲಾಯಖಾದ ಕೋರ್ಟಿನ ಡಿಕ್ರಿಯಿಂದಾಗಲೀ, ಹುಕುಮಿನಿಂದಾಗಲೀ, ಯಾವದಾರೂ ಜಮೀನಿನ ರಿಜಿಸ್ಟರ್ ಮಾಡಲ್ಪಟ್ಟ ಅನುಭವದಾರನು ಮತ್ತೊಬ್ಬ ಮನುಷ್ಯನ ಕೆಳಗೆ ಕಮ್ಮಿ ಹಿಡುವಳಿದಾರನಾಗಿರುತ್ತಾನೆಂತ, ಅಥವಾ ಅನುಭವವು ಮತ್ತೊಬ್ಬ ಮನುಷ್ಯನಿಗೆ ಕೊಡಲ್ಪಟ್ಟಿದೆಯೆಂತ ಅಥವಾ, ಅಂತಾ ಡಿಕ್ರಿ ಯಾ ಆರ್ಡರಿನ ಅಮಲ್‌ಜಾರೀಯಲ್ಲಿ ಜಮೀನ್ ಅನುಭವದಾರನ ಸಂಬಂಧವು, ಹರಾಜ್ ಮೂಲಕವಾಗಲಿ, ಅನ್ಯಥಾ ಆಗಲಿ, ಮತ್ತೊಬ್ಬ ಮನುಷ್ಯನಿಗೆ ವರ್ಗಮಾಡಲ್ಪಟ್ಟಿರುತ್ತೆಂತ ಫೈಸಲ್ಮಾಡಲ್ಪಟ್ಟರೆ ಅಂತಾ ಇತರ ಮನುಷ್ಯನು, ಡಿಕ್ರಿ ಅಥವಾ ಹುಕುಂ ಅಥವಾ ಹರಾಜ್ ಅಥವಾ ಇತರ ವರ್ಗದ ವಿಷಯದಲ್ಲಿ ಸದರೀ ಕೋರ್ಟಿನವರ ಸರ್ಟಿಫಿಕೇಟನ್ನಾಗಲಿ ಯಾ ಡಿಕ್ರಿ ಅಥವಾ ಆರ್ಡರಿನ ವಾಜಬಿ ನಕಲನ್ನಾಗಲಿ ಹಾಜರ್‌ಮಾಡಿದಲ್ಲಿ ಅಂತಾ ಇತರ ಮನುಷ್ಯನು ಅನುಭವದಾರನಾಗಿ ಭಾವಿಸಲ್ಪಟ್ಟು ತದನುಗುಣವಾಗಿ ನಡಿಸಲ್ಪಡತಕ್ಕದ್ದು. ಸದರೀ ಬಗ್ಯೆ ಬರವಣಿಗೆಯಲ್ಲಿ ಡೆಪ್ಯುಟಿ ಕಮ್ಮಿಷನರಿಗೆ ದರಖಾಸ್ತು ಮಾಡಲ್ಪಟ್ಟಲ್ಲಿ ರಿಜಿಸ್ಟರಾದ ಅನುಭವದಾರನ ಹೆಸರನ್ನು ದಾಖಲ್ಮಾಡುವದರಲ್ಲಿ ಸಂದರ್ಭಾನುಸಾರವಾಗಿ ಮಾಡಬೇಕಾಗುವ ಬದಲಾವಣೆಯನ್ನು ಮಾಡತಕ್ಕದ್ದು.

ಮುಂ. ರೆ. ಕೋ. 71ನೇ ಸೆಕ್‌ಷನ್.

ರಿಜಿಸ್ಟರಾದ ಅನುಭವದಾರನು ಮೃತಪಟ್ಟರೆ ವಾರಸುದಾರನ ಹೆಸರು ರಿಜಿಸ್ಟರ್ ಮಾಡಲ್ಪಡತಕ್ಕದ್ದು.

73. ಒಬ್ಬ ರಿಜಿಸ್ಟರಾದ ಅನುಭವದಾರನು ಮೃತಪಟ್ಟಲ್ಲಿ, ಅವನ ಜೇಷ್ಟಪುತ್ರನ ಅಥವಾ, ಅವನ ವಾರಸ್‌ದಾರನಾಗಿ ಅಥವಾ ಅವನ ವಾರಸ್‌ದಾರರ ಪೈಕಿ ಮುಖ್ಯನಾಗಿ ಹಾಜರಾಗುವ ಇತರ ಮನುಷ್ಯನ ಹೆಸರನ್ನು ಮೃತಪಟ್ಟವನಿಗೆ ಬದಲಾಗಿ ಡೆಪ್ಯುಟಿ ಕಮ್ಮಿಷನರು ರಿಜಿಸ್ಟರ್ ಮಾಡಿಸತಕ್ಕದ್ದು, ಸದರೀ ವಾರಸ್‌ದಾರನು ಆಬಳಿಕ ರಿಜಿಸ್ಟರಾದ ಅನುಭವದಾರನೆಂದು ಭಾವಿಸಲ್ಪಟ್ಟು, ಹಿಂದಿನ ಕಡೇಸೆಕ್‌ಷನ್ ನಿಬಂಧನೆಗಳಿಗೆ ಒಳಪಟ್ಟು ಸದರೀ ಮೇರಿಗೆ ನಡಿಸಲ್ಪಡತಕ್ಕದ್ದು.

74. ಯಾವ ಮನುಷ್ಯನಾದರೂ ಯಾವಾಗಲಾಗಲಿ, ವಾರಸ್‌ದಾರೀ ಸರ್ಟಿಫಿಕೇಟನ್ನಾದರೂ ಒಂದು ಲಾಯಖಾದ ಕೋರ್ಟಿನ ಡಿಕ್ರಿಯನ್ನಾದರೂ ಹುಕುಮನ್ನಾದರೂ ಹಾಜರ್ಮಾಡು ವದರ ಮೂಲಕ 53ನೇ ಸೆಕ್ಷನ್ ಅನುಸರಿಸಿ ರಿಜಿಸ್ಟರ್ ಮಾಡಲ್ಪಡತಕ್ಕದ್ದೆಂದು ಯಾರ ಹೆಸರನ್ನು ಡೆಪ್ಯುಟಿ ಕಮ್ಮಿಷನರು ನೇಮಿಸಿ ಇರುತ್ತಾರೋ ಅಂತಾವನಿಗಿಂತ ಸದರೀ ಯವನು ರಿಜಿಸ್ಟರಾದ ಅನುಭವದಾರನಾಗಿರಲಿಕ್ಕೆ ಅರ್ಹನಾಗಿರುತ್ತಾನೆಂದು ಡೆಪ್ಯುಟಿ ಕಮ್ಮಿಷನರನ್ನು ತೃಪ್ತಿಪಡಿಸಿದರೆ, ಡೆಪ್ಯುಟಿ ಕಮ್ಮಿಷನರು ಅದೇಮೇರೆ ಗವರ್ನಮೆಂಟು ರಿಕಾರ್ಡ್‌ಗಳಲ್ಲಿ ದಾಖಲೇಯನ್ನು ತಿದ್ದುಪಾಟು ಮಾಡಿಸತಕ್ಕದ್ದು.

ಹಾಗೆ ರಿಜಿಸ್ಟರ್ ಮಾಡಲ್ಪಟ್ಟವನ ಹೆಸರು ಯಾವಾಗ ತಿದ್ದಿಸಲ್ಪಡತಕ್ಕದ್ದು.

ಮುಂ. ರೆ. ಕೋ. 72ನೇ ಸೆಕ್ಷನ್.

75. ಒಬ್ಬ ಅನುಭವದಾರನು, ಉಯಿಲ್ ಮಾಡದೆಯೂ, ಗೊತ್ತಾದ ವಾರಸ್‌ದಾರರಿಲ್ಲದೆಯೂ, ಮೃತಪಟ್ಟರೆ ಡೆಪ್ಯುಟಿ ಕಮ್ಮಿಷನರು, ರೆಗ್ಯುಲೇಷನಿನ ಅಥವಾ ಸರ್ಕಾರಕ್ಕೆ ಸೇರಿಹೋದ ಅನುಭವ ಸ್ವತ್ತುಗಳ ಹರಾಜ್‌ಬಗ್ಗೆ ತತ್ಕಾಲದೊಳಗೆ ಜಾರೀ ಯಿರುವ ಇತರ ಯಾವದಾದರೂ ಕಾನೂನಿನ ನಿಬಂಧನೆಗಳಿಗೆ ಒಳಪಟ್ಟು, ಅವನ ಅನುಭವದ ಸ್ವತ್ತನ್ನು, ಜಮೀನ್ ಕಂದಾಯದ ವಸೂಲಿಬಗ್ಗೆಯಾಗಿ ಹರಾಜ್ ಮೂಲಕ ವಿಕ್ರಯಿಸತಕ್ಕದ್ದು, ಉಯಿಲ್ ಮಾಡದೆಯೂ ಮತ್ತು ಗೊತ್ತಾದ ವಾರಸ್‌ದಾರರಿಲ್ಲದೆಯೂ ಮೃತಪಡುವ ಒಬ್ಬ ಮನುಷ್ಯನ ಸ್ವತ್ತನ್ನು ಕುರಿತು ತತ್ಕಾಲದಲ್ಲಿ ಜಾರೀಯಿರುವ ಕಾನೂನು ಸದರೀ ಅನುಭವಕ್ಕೆ ಲಗಾವಾಗತಕ್ಕದ್ದಾಗಿ ಭಾವಿಸಲ್ಪಡತಕ್ಕದ್ದಲ್ಲವು: ಆದರೆ, ಮೃತಪಟ್ಟವನು ಗವರ್ನಮೆಂಟಿಗೆ ಕೊಡತಕ್ಕ ದರೋಬಸ್ತು ಜಮೀನ್ ಕಂದಾಯದ ಬಾಕೀಗಳನ್ನೂ ತಮಾಂ ಹರಾಜು ಖರ್ಚುಗಳನ್ನೂ ವಜಾಮಾಡಿ ಉಳದಿರುವಂತಾ ಹರಾಜು ಹುಟ್ಟುವಳೀ ಯೆಷ್ಟೋ ಅಷ್ಟರಮಟ್ಟಿಗೆ ಲಗಾವಾಗತಕ್ಕದ್ದೆಂದು ಯೆಣಿಸತಕ್ಕದ್ದು.

ಉಯಿಲಿಲ್ಲದೆ ಮೃತಪಟ್ಟವನ ಅನುಭವವಾಗಲಿ ಹಿಡುವಳೀಯಾಗಲಿ, ವಿಕ್ರಯಿಸಲ್ಪಡತಕ್ಕದ್ದು.

ಮುಂ. ರೆ. ಕೋ. 73ನೇ ಸೆಕ್ಷನ್.

76. ಅನುಭವದ ಹಕ್ಕುದಾರಿಯು, 59ನೇ ಸೆಕ್ಷನಿನಲ್ಲಿ ಅಡಗಿರುವದಕ್ಕೆ ಅಥವಾ ಕಾನೂನಿನಿಂದ ಅನ್ಯಥಾ ವಿಧಿಸಲ್ಪಟ್ಟ ನಿಬಂಧನೆಗಳಿಗೆ ಒಳಪಟ್ಟು, ವಂಶ ಪಾರಂಪರ್ಯದ ಮತ್ತು ವರ್ಗ ಮಾಡಲ್ಪಡತಕ್ಕ ಸ್ವತ್ತೆಂದು ಭಾವಿಸಲ್ಪಟ್ಟು ಒಬ್ಬ ಅನುಭವದಾರನಾಗುವ ಬಗ್ಗೆ ಯಾವನ ಕರಾರು ಡೆಪ್ಯುಟಿ ಕಮ್ಮಿಷನರಿಂದ ಅಂಗೀಕರಿಸಲ್ಪಡತಕ್ಕದ್ದೋ ಅಂತಾ ಮನುಷ್ಯನಿಗೆ ಕೂಡ್ಲೇ ಸಲ್ಲತಕ್ಕದ್ದು.

ಅನುಭವದ ಹಕ್ಕುದಾರಿಯು ವರ್ಗ ಮಾಡಲ್ಪಡತಕ್ಕದ್ದಾಗಿಯೂ ವಂಶಪಾರಂಪರ್ಯವಾಗಿ ಅನುಭವಿಸಲ್ಪಡತಕ್ಕದ್ದಾಗಿಯೂ, ಇರತಕ್ಕದ್ದು.

ಹಿಡುವಳಿಯ ರಾಜೀನಾಮೆ.

ಮುಂ. ರೆ. ಕೋ. 74ನೇ ಸೆಕ್ಷನ್.

77. ಒಬ್ಬ ಅನುಭವದಾರನು, ಅಮಲ್‌ದಾರನಿಗಾಗಲಿ ಡೆಪ್ಯುಟಿ ಅಮಲ್‌ದಾರನಿಗಾಗಲಿ ಬರವಣಿಗೆಯ ನೋಟೀಸ್ ಕೊಡುವದರ ಮೂಲಕ ಸ್ವತಂತ್ರವಾಗಿಯಾಗಲಿ ಗೊತ್ತಾದ ಒಬ್ಬ ಮನುಷ್ಯನಿಗಾಗಿ ಯಾಗಲಿ ತನ್ನ ಅನುಭವಕ್ಕೆ ರಾಜೀನಾಮೆ ಕೊಡಬಹುದು; ಪರಂತು ಅಂತಾ ರಾಜೀನಾ

ಅನುಭವದಾರನು ತನ್ನ ಅನುಭವಕ್ಕೆ ರಾಜೀನಾಮೆ ಕೊಡಬಹುದು.

ಮೆಯು ಪೂರಾ ಅನುಭವಕ್ಕಾಗಲಿ, ಪೂರಾ ಸರ್ವೇ ನಂಬರ್‌ಗಳಿಗಾಗಲಿ, ಸರ್ವೇ ನಂಬರ್ ಗಳ ಪೈಕಿ ಅಂಗೀಕರಿಸಲ್ಪಟ್ಟ ಹಿಸ್ಸೆಗಳಿಗಾಗಲಿ, ಲಗಾವಾಗತಕ್ಕದ್ದು. ಸ್ವತಂತ್ರವಾದ ರಾಜೀನಾಮೆಯು ಸಾಲ್ ನುಜಕೂರ್ ಆಖೈರಲಾಗಾಯಿತು ಜಾರೀಗೆ ಬರತಕ್ಕದ್ದಾಗಿ ಭಾವಿಸತಕ್ಕದ್ದಲ್ಲದೆ ಅಂತಾ ಸಾಲ್ ಮಾರ್ಚಿ 31ನೇ ಮರ್ಸ್ಕುಮಿಗೆ ಮುಂದಾಗಿ ಅಥವಾ ಗವರ್ನಮೆಂಟಿನಿಂದ ಆಗಿಂದಾಗ್ಯೆ ಈ ಬಗ್ಯೆ ಪ್ರತಿ ಡಿಸ್ಟ್ರಿಕ್ಟಿಗೂ ವಿಧಿಸಲ್ಪಡಬಹು ದಾದ ಅಂತಾ ಇತರ ತಾರೀಖಿಗೆ ಮುಂದಾಗಿ ಅದರ ಬಾಬತು ನೋಟೀಸ್ ಕೊಡಲ್ಪ ಡತಕ್ಕದ್ದು. ಗೋತ್ರಾದ ಒಬ್ಬ ಮನುಷ್ಯನ ಪರವಾಗಿ ಯಾವಾಗಲಾಗಲಿ ರಾಜೀನಾ ಮೆ ಕೊಡಲ್ಪಡಬಹುದು.

ಒಬ್ಬನಿಗಿಂತ ಹೆಚ್ಚುಮಂದಿ ಅನುಭವದಾರರು ಇದ್ದಪಕ್ಷಕ್ಕೆ, ರಿಜಿಸ್ಟರಾದ ಅನುಭವದಾರನಿಂದ ರಾಜೀನಾಮೇ ನೋಟೀಸ್ ಕೊಡಲ್ಪಡತಕ್ಕದ್ದು. ಯಾವನ ಪರ ವಾಗಿ ಒಂದು ಅನುಭವಕ್ಕೆ ರಾಜೀನಾಮೆ ಕೊಡಲ್ಪಟ್ಟಿರುತ್ತೋ ಅಂತಾ ಮನುಷ್ಯ ಯಾವನಾದರೂ ಇದ್ದರೆ ಅವನು,ಅಥವಾ ಅಂತಾ ಅನುಭವವು ಒಬ್ಬನಿಗಿಂತ ಹೆಚ್ಚು ಜನಗಳ ಪರವಾಗಿ ರಾಜೀನಾಮೆ ಕೊಡಲ್ಪಟ್ಟರೆ, ಅವರುಗಳ ಪೈಕಿ ಮುಖ್ಯನು ರಿಜಿ ಸ್ಟರ್‌ಮಾಡಲ್ಪಟ್ಟ ಅನುಭವದಾರನಾಗುವಬಗ್ಯೆ ಒರವಣಿಗೇ ಮೂಲಕವಾದ ಒಡಂ ಬಡಿಕೆಯನ್ನು ಬರೆದು ಕೊಡತಕ್ಕದ್ದು. ಆ ಬಳಿಕ ಅವನ ಹೆಸರು, ಹಿಂದೆ ರಿಜಿಸ್ಟ ರಾದ ಅನುಭವದಾರನ ಹೆಸರಿಗೆ ಬದಲಾಗಿ ದಾಖಲ್‌ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 75ನೇ ಸೆಕ್ಷನ್.

ತೋಕ್ ಕಂದಾಯವನ್ನು ಕೊಡತಕ್ಕ ಜಮೀನುಗಳ ರಾಜೀನಾಮೆ.

78. ಕೆಲವು ತಾಕುಗಳಿಕೆ ಅಥವಾ ಸರ್ವೇ ನಂಬರ್‌ಗಳಿಗೆ ಒಟ್ಟಾಗಿ ತೋಕ್ ಕಂದಾಯ ಮೊಕರರ್ ಮಾಡಲ್ಪಟ್ಟರೆ, ಮುಂದಾಗಿ ಡೆ ಪ್ಯುಟಿ ಕಮ್ಮಿಷನರ ಅನುಮತಿ ವಿನಾ, ಅಂತಾ ತಾಕು ಗಳ ಅಥವಾ ಸರ್ವೇ ನಂಬರ್‌ಗಳ ಪೈಕಿ ಮೇಲೆಕಂಡಂತೆ ಯಾವುದಾದರೂ ಒಂದು ಅಥವಾ ಹೆಚ್ಚು ತಾಕುಗಳಿಗೆ ಅಥವಾ ಸರ್ವೇ ನಂಬರ್‌ಗಳಿಗೆ ರಾಜೀನಾಮೆ ಕೊಡುವದು ಅನುಭವದಾರನ ಯುಖ್ತ್ಯಾರಿಯಲ್ಲಿ ಇರತಕ್ಕದ್ದಲ್ಲವು. ಡೆಪ್ಯುಟಿ ಕಮ್ಮಿಷನರವರು ತಮ್ಮ ಅಂಗೀಕಾರವನ್ನು ಕೊಡುವದಕ್ಕಾಗಲಿ ತಿರಸ್ಕರಿಸು ವದಕ್ಕಾಗಲಿ ಅವರಿಗೆ ಯುಖ್ತ್ಯಾರಿಯುಂಟು. ಅವರು ಅದನ್ನು ಕೊಡುವಪಕ್ಷಕ್ಕೆ ಅನುಭವವು ವಿಭಾಗಿಸಲ್ಪಡತಕ್ಕದ್ದು, ಡೆಪ್ಯುಟಿ ಕಮ್ಮಿಷನರು ಸದರೀ ಜಮೀನಿನ ಪ್ರತಿಭಾಗಕ್ಕೂ ಸಲ್ಲತಕ್ಕ ಜಮೀನು ಕಂದಾಯದ ದಾಮಾಷಾಯಿ ಮೊಬಲಗನ್ನು ನಿರ್ಣಯಿಸತಕ್ಕದ್ದು. ಅಸಲ್ ಅನುಭವದಾರನೂ, ಮತ್ತು ಅವನು ಯಾರಪರವಾಗಿ ತನ್ನ ಅನುಭವದ ಒಂದು ಭಾಗಕ್ಕೆ ರಾಜೀನಾಮೆ ಕೊಡುತ್ತಾನೋ ಅಂತಾ ಮನು ಷ್ಯ ಯಾವನಾದರೂ ಯಿದ್ದರೆ ಅವನೂ, ತಮ್ಮ ಹಿಸ್ಸೆಗಳಿಗೆ ಪ್ರತ್ಯೇಕ ಪ್ರತ್ಯೇಕ ವಾಗಿ ಕಂದಾಯ ಕೊಡಲಿಕ್ಕೆ ಗುರಿಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 76ನೇ ಸೆಕ್ಷನ್.

54ನೇ ಸೆಕ್ಷನ್ 1ನೇ ಪ್ಯಾರಾದಲ್ಲಿ ವಿವರಿಸಲ್ಪಟ್ಟ ಜಮೀನಿನ ರಾಜೀನಾಮೆ.

79. ಕಡೇ ಯೆರಡು ಸೆಕ್ಷನ್‌ಗಳ ನಿಬಂಧನೆಗ ಳು ಸಾಧ್ಯವಾದಮಟ್ಟಿಗೆ ಪಠಭಾರೇಯಾದ ಜಮೀನಿನ ಹಿಡುವಳಿದಾರರಿಗೆ ಲಗಾವಾಗತಕ್ಕದ್ದು : ಪರಂತು,

(*a*) ಸಮಗ್ರವಾಗಿಯಾಗಲಿ, ಕೆಲವುಮಟ್ಟಿಗಾಗಲಿ, ಹಿಡುವಳಿಯಲ್ಲಿ ಉಳ್ಳ 54ನೇ ಸೆಕ್ಷನ್ ಒಂದನೇ ಪ್ಯಾರೆಗ್ರಾಫ್‌ನಲ್ಲಿ ವಿವರಿಸಲ್ಪಟ್ಟ ವಿದ್ಯಮಾನಗಳನುಸರಿಸಿ

ವಿನಾಯಿಸಲ್ಪಟ್ಟ, ಯಾವದಾದರೂ ಜಮೀನಿನ ಯಾವಭಾಗವನ್ನಾಗಲಿ, ಜಮೀನಿನ ಅಂತಾ ಭಾಗಕ್ಕೆ ಸಲ್ಲತಕ್ಕ ಬದಲಾಯಿಸಲ್ಪಟ್ಟ ಕಂದಾಯವು ಸದರೀ ಸೆಕ್ಷನ ನಿಬಂಧನೆಗಳನುಸರಿಸಿ ನಿರ್ಣಯಿಸಲ್ಪಡುವ ಪರ್ಯಂತ ಮೇಲೆ ಕಂಡಂತೆ, ರಾಜೀನಾಮೇ ಕೊಡುವದು ನ್ಯಾಯವಾಗಿರತಕ್ಕದಲ್ಲವು ; ಮತ್ತು

54ನೇ ಸೆಕ್ಷನನಲ್ಲಿ ವಿವರಿಸಲ್ಪಟ್ಟ ಜಮೀನಿನ ರಾಜೀನಾಮೆ.

(b) 54ನೇ ಸೆಕ್ಷನನಲ್ಲಿ ವಿವರಿಸಲ್ಪಟ್ಟ ವಿದ್ಯಮಾನಗಳನುಸರಿಸಿ ಯಾವ ಜಮೀನಿಗೆ ಸಾಧಾರಣವಾಗಿ ವಸೂಲ್‌ಮಾಡಲ್ಪಡುವದಕ್ಕಿಂತ ಜಾಸ್ತೀ ಕಂದಾಯ ವಸೂಲ್‌ಮಾಡಲ್ಪಡುತ್ತೋ ಅಂತಾ ಜಮೀನಿಗೆ ಯಾವಮನುಷ್ಯನಾಗಲಿ, ರಾಜೀನಾಮೇಕೊಟ್ಟರೆ ಅವನು ಅದರಸಂಗಡ, ಯಾವಜಮೀನು ಕಂದಾಯಕೊಡೋಣದರಿಂದ ಪೂರಾ ಆಗಲಿ ಕೆಲ್ಲವು ವಟ್ಟಿಗಾಗಲಿ ವಿನಾಯಿಸಲ್ಪಟ್ಟಿರುತ್ತೋ ಅಂತಾ ಜಮೀನಿಗೆ ಸಹ ರಾಜೀನಾಮೆ ಕೊಟ್ಟಂತೆ ಯೆಣಿಸಲ್ಪಡತಕ್ಕದ್ದು.

ಮುಂ. ರೆ. ಕೋ. 77ನೇ ಸೆಕ್ಷನ.

ರಾಜೀನಾಮೇಕೊಟ್ಟ ಜಮೀನಿಗೆ ಮಾರ್ಗದ ಹಕ್ಕು ದಾರಿ.

80. ಯಾವ ಮನುಷ್ಯನಾಗಲಿ ತನ್ನ ಅಧೀನದಲ್ಲಿರುವ ಬೇರೆ ಜಮೀನಿನ ಮಾರ್ಗವಾಗಿ ದಾರಿಉಳ್ಳಂಥಾ ಜಮೀನಿಗೆ ರಾಜೀನಾಮೆ ಕೊಟ್ಟಲ್ಲಿ, ಅಂಥಾ ತನ್ನ ಅಧೀನದಲ್ಲಿರುವ ಜಮೀನಿನ ಮಾರ್ಗವಾಗಿರುವ ದಾರಿಯು, ಹಾಗೆ ರಾಜೀನಾಮೆ ಕೊಡಲ್ಪಟ್ಟ ಜಮೀನಿನ ಮುಂದಿನ ಹಿಡುವಳೀದಾರನಿಗೆ ನಡದು ಬರತಕ್ಕದ್ದು.

ಮುಂ. ರೆ. ಕೋ. 78ನೇ ಸೆಕ್ಷನ.

78 ವ 79ಇ ಸೆಕ್ಷನಗಳ ಅಮಲಿನ ವಿನಾಯತಿ.

81. ಸೆಕ್ಷನಗಳು 78 ವ 79ರಲ್ಲಿ ಯಾವ ಅಂಶವೂ,—

(a) ಯಾವದರ ಜಮೀನ್ ಕಂದಾಯಕ್ಕಾಗಿ ಹಿಸ್ಸೇದಾರರೆಲ್ಲ, ಕಾನೂನ್ ಪ್ರಕಾರವಾಗಲಿ ಗ್ರಾಮದ ಮಾಮೂಲ್‌ಪ್ರಕಾರವಾಗಲಿ ಜಂಟಿಯಾಗಿ ಜವಾಬ್‌ದಾರರಾಗಿರುತ್ತಾರೋ ; ಅಥವಾ

(b) ಯಾವದನುಸರಿಸಿ ಜಮೀನು ಗವರ್ನಮೆಂಟಿನಿಂದ ಪಡಕೊಳ್ಳಲ್ಪಡುತ್ತೋ ಅಥವಾ ಐಯಿಂದ ಪಡಕೊಳ್ಳಲ್ಪಡಬಹುದೋ ಅಂತಾ ಯಾವದಾದರೂ ಬಡಂಬಡಿಕೆ, ಗುತ್ತಿಗೆ ಅಥವಾ ಸ್ಪಷ್ಟವಾದ ಇತರ ದಸ್ತಾವೇಜಿನ ನಿಬಂಧನೆಗಳ ಅಥವಾ ಷರತ್ತುಗಳ ನಿಜಸ್ತಿತಿಯನ್ನು ಬಾಧಿಸತಕ್ಕದ್ದಲ್ಲವು.

ಮುಂ. ರೆ. ಕೋ. 79ನೇ ಸೆಕ್ಷನ.

ಅನುಭವದಾರನಾಗಲೀ ಹಿಡುವಳೀದಾರನಾಗಲಿ ಅನುಭವ ಅಥವಾ ಹಿಡುವಳಿ, ಕ್ರಮವಾಗಿ ರಾಜೀನಾಮೇ ಕೊಡಲ್ಪಡುವತನಕ ಅಥವಾ ವರ್ಗಮಾಡಲ್ಪಡುವತನಕ ತವಾಂ ತಗಾದೇಗಳಿಗೂ ಗುರಿಯಾಗಿರತಕ್ಕದ್ದು.

82. ರಿಜಿಸ್ಟರಾದ ಅನುಭವದಾರನಾಗಲಿ, ಪರಭಾರೇಯಾದ ಜಮೀನಿನ ಹಿಡುವಳೀದಾರನಾಗಲಿ, ಅನುಭವಕ್ಕೋಸ್ಕರ ಅಥವಾ ಪರಭಾರೇಯಾದ ಹಿಡುವಳೀಗೋಸ್ಕರ ಮತ್ತು ಸದರೀ ಬಗ್ಗೆ ಗವರ್ನಮೆಂಟಿನ ನ್ಯಾಯವಾದ ಇತರ ತಗಾದೆಗಳಿಗಾಗಿ ಸಲ್ಲತಕ್ಕ ಜಮೀನ್ ಕಂದಾಯವನ್ನು, ಸದರೀ ಅನುಭವವಾಗಲಿ ಪರಭಾರೆಯಾದ ಹಿಡುವಳಿಯಾಗಲಿ ಈ ರೆಗ್ಯುಲೇಷನಿನ ಯಾವದಾದರೂ ನಿಬಂಧನೆಗಳನುಸರಿಸಿ ಬೇರೆ ಯಾವನಾದರೂ ವಬ್ಬನ ಹೆಸರಿಗೆ ಯಾವ

ಕಾಲಕ್ಕೆ ರಾಜೀನಾಮೆ ಕೊಡಲ್ಪಡುತ್ತೋ ಅಥವಾ ವರ್ಗಾಯಿಸಲ್ಪಡುತ್ತೋ ಆಕಾಲ ದವರಿಗೆ ಕೊಡುತ್ತಾ ಬರುವದಕ್ಕೆ ಗುರಿಯಾಗಿರುವೆನು ಮತ್ತು ಹಿಂದಿನ ನಿಬಂಧನೆಗೆ ಪ್ರಕಾರ ವರ್ಗಾವರ್ಗಿಯು ರೆವಿನ್ಯೂ ರಿಕಾರ್ಡುಗಳಲ್ಲಿ ದಾಖಲ್ಮಾಡಲ್ಪಟ್ಟಹೊರ್ತು ಅನುಭವದ ಅಥವಾ ಪರಭಾರೆಯಾದ ಹಿಡುವಳಿಯ ಯಾವದಾದರೂ ಭಾಗದ ವಿಷ ಯದಲ್ಲಿ ಯಾರಿಗೆ ಯಾವದಾದರೂ ಸಂಬಂಧವು ಪರಭಾರೇ ಮಾಡಲ್ಪಟ್ಟಿರುತ್ತೋ ಅಂತಾ ಯಾವ ಮನುಷ್ಯನನ್ನಾಗಲಿ, ಮಂಜೂರ್ ಮಾಡಲಿಕ್ಕೆ ಯಾವ ಸಂಗತಿಯಲ್ಲಿ ಯೂ ಡೆಪ್ಯುಟಿ ಕಮ್ಮಿಷನರು ಬದ್ಧರಾಗಿರತಕ್ಕದ್ದಲ್ಲವು.

ಅನುಭವಗಳು ಸರ್ಕಾರಕ್ಕೆ ಸೇರಿ ಹೋಗದಿರುವದಕ್ಕೆ ಪರಿಹಾರಗಳು.

ಮುಂ. ರೆ. ಕೋ. 80ನೇ ಸೆಕ್ಷನ್.

ಅನುಭವವನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುವದನ್ನು ತಳ ಕೊಳ್ಳುವದಕ್ಕೆ ರಿಜಿಸ್ಟರಾದ ಅನುಭವದಾರನಲ್ಲದೆ ಇತರ ಕೆಲವು ಮನುಷ್ಯರು ಜಮೀನ್ ಕಂದಾಯವನ್ನು ಕೊಡಬಹುದು.

83. 59ನೇ ಸೆಕ್ಷನಿನ ಅಥವಾ ತತ್ಕಾಲಕ್ಕೆ ಜಾರೀಯಿರುವ ಯಾವದಾದರೂ ಇತರ ಕಾನೂನಿನ ನಿಬಂಧನೆಗಳನುಸರಿಸಿ ಯಾವದರ ಬಗ್ಗೆ ಸಲ್ಲತಕ್ಕ ಜಮೀನ್ ಕಂದಾಯವು ರಿಜಿಸ್ಟರಾದ ಅನುಭವದಾರನಿಂದ ಪಾವತಿಯಾಗದಿರುವ ಅಂತಾ ಅನುಭವವು, ಅಂತಾ ನಪಾವತೀಬಗ್ಗಾಗಿ ಸರ್ಕಾರಕ್ಕೆ ಸೇರಿ ಹೋಗುವದನ್ನು ತಪ್ಪಿಸುವದಕ್ಕೋಸ್ಕರ ಅನುಭವದಾರ, ಯಾವನಾದರೂ ಜಂಟೀ ಷಿಕ್ಮೀದಾರ, ಭೋಗ್ಯದಾರ ಅಥವಾ ಅನುಭವವನ್ನು ನಡೆಸಿಕೊಂಡು ಬರುವದರಲ್ಲಿ ಮುತವಜ್ಜೆವುಳ್ಳ ಇತರ ಮನುಷ್ಯನು, ಜಮೀನ್ ಕಂದಾಯಕ್ಕಾಗಿ ಸಲ್ಲತಕ್ಕ ತಮಾಂ ಮೊಬಲಗ್‌ಗಳನ್ನೂ ಅಂತಾ ರಿಜಿಸ್ಟರಾದ ಅನುಭವದಾರನಿಗೋಸ್ಕರ ಪಾವತೀ ಮಾಡುವದಕ್ಕೂ ಮತ್ತು ಡೆಪ್ಯುಟಿ ಕಮ್ಮಿಷನರು ಅದನ್ನು ತೆಗೆದುಕೊಳ್ಳುವದಕ್ಕೂ ಯಖ್ತ್ಯಾರಿ ಉಳ್ಳವರಾಗಿರತಕ್ಕದ್ದು. ಮತ್ತು ಅಂತಾ ಯಾವ ಸಂಗತಿಯಲ್ಲಾಗಲಿ, ಈ ಮೇಲೆ ಕಂಡಂತೆ ಜಮೀನ್‌ಕಂದಾಯವನ್ನು ಕೊಟ್ಟಿರುವ ಮನುಷ್ಯನು ಒಂದು ಸೌಗುಜಮೀನಿನ ಅಥವಾ ಸರ್ವೇ ನಂಬರಿನ ಭಾಗಗಳ ಅನುಭವದಲ್ಲಿರುವ ಇತರ ಮನುಷ್ಯರಿಂದ ಯುಕ್ತವಾಗಿ ಪಾವತೀ ಮಾಡಲ್ಪಡತಕ್ಕದ್ದೆಂದು ಡೆಪ್ಯುಟಿ ಕಮ್ಮಿಷನರು ಭಾವಿಸಬಹುದಾದ ದಾಮಾಷಾಯ ಮೊಬಲಗ್‌ಗಳನ್ನು ವಸೂಲ್ ಮಾಡುವಬಗ್ಗೆ, ಹಾಗೆ ಪಾವತೀ ಮಾಡುವ ಜನಗಳು ರಿಜಿಸ್ಟರಾದ ಅನುಭವದಾರರಾಗಿ ಇದ್ದಿದ್ದರೆ ನ್ಯಾಯತಃ ಕೊಟ್ಟಿರಬಹುದಾದ ಅಂತಾ ಕುಮ್ಮಕ್ಕನ್ನು ಕೊಡಬಹುದು.

ಕಂದಾಯವನ್ನು ಕೊಡುವದಕ್ಕೆ ಜವಾಬ್‌ದಾರರಾದ ಇತರ ಮನುಷ್ಯರಿಂದ ಕಂದಾಯವನ್ನು ವಸೂಲ್ಮಾಡುವದರಲ್ಲಿ ಡೆಪ್ಯುಟಿ ಕಮ್ಮಿಷನರು ಕುಮ್ಮಕ್ ಮಾಡಬಹುದು.

ಪರಂತು, ಈ ಸೆಕ್ಷನಿನ ನಿಬಂಧನೆಗಳನುಸರಿಸಿ ನಿಯಮಿಸಲ್ಪಟ್ಟ ಅಥವಾ ನೆರವೇರಿಸಲ್ಪಟ್ಟ ಯಾವ ಅಂಶವೂ, ತಕ್ಕ ಅಧಿಕಾರವುಳ್ಳ ಒಂದು ಕೋರ್ಟಿನಲ್ಲಿ ಅಂತಾ ಕಕ್ಷಿಗಾರರಿಗೆ ಇರತಕ್ಕ ಯಾವದಾದರು ವ್ಯಾಜ್ಯದಲ್ಲಿ ನಿರ್ಣಯಿಸಲ್ಪಡಬಹುದಾದಂಥಾ ಅವರುಗಳ ಹಕ್ಕುಗಳಿಗೆ ಬಾಧಕವಾಗತಕ್ಕದ್ದಲ್ಲವು.

ಮುಂ. ರೆ. ಕೋ. 81ನೇ ಸೆಕ್ಷನ್.

ಡೆಪ್ಯುಟಿ ಕಮ್ಮಿಷನರು ಜಮೀನ್ ಕಂದಾಯದವಸೂಲಾತೀ

84. ರಿಜಿಸ್ಟರಾದ ಒಬ್ಬ ಅನುಭವದಾರನು ತನ್ನ ಜಂಟೀ ಅನುಭವದಾರರಿಗಾಗಲಿ ಅನುಭವನಡೆದುಬರುವದರಲ್ಲಿ ಅಕ್ಕರೆವುಳ್ಳ ಇತರ ಮನುಷ್ಯರಿಗಾಗಲೀ ನುಕ್ಸಾನ್ ಅಥವಾ ಮೋಸಪಡಿಸುವ

ಬಗ್ಗೆ ಅನುಭವವನ್ನು ಹ ರಾಜ್ ಮಾಡುವದಕ್ಕೆ ಬದಲಾಗಿ, ಕೆಲವು ಸಂಗತಿಗಳಲ್ಲಿ ಜಂಟಿ ಅನುಭವದಾರನನ್ನಾಗಲಿ ಇತರ ಮನುಷ್ಯನನ್ನಾಗಲಿ ರಿಜಿಸ್ಟರಾದ ಅನುಭವದಾರನ್ನಾಗಿ ಮಾಡಬಹುದು.

ಉದ್ದೇಶದಿಂದ ಅಥವಾ ಅನುಭವದ ವಿಕ್ರಯವಾಗುವದರಿಂದ ಅಂತಾ ಜಂಟೀ ಅನುಭವದಾರರಿಗೆ ಅಥವಾ ಇತರ ಮನುಷ್ಯರಿಗೆ ಬಾಧಕವಾಗುತ್ತೆಂಬುವ ಕೋರಿಕೆಯಿಂದ ಜಮೀನ್ದಾ ಕಂದಾಯವನ್ನು ಪಾವತಿ ಮಾಡಲಿಕ್ಕೆ ತಪ್ಪಿದನೆಂದು ಡೆಪ್ಯುಟಿ ಕಮಿಷ್ನರಿಗೆ ಕ್ಕಾಣಬಂದರೆ, ಆತನು ಅನುಭವವನ್ನು ವಿಕ್ರಯಿಸುವದಕ್ಕೆ ಬದಲಾಗಿ ಸದರೀ ಅನುಭವದಲ್ಲಿ ಸದರೀ ರಿಜಿಸ್ಟರಾದ ಅನುಭವದಾರನ ಸಂಬಂಧವನ್ನು ಮಾತ್ರ ಸರ್ಕಾರಕ್ಕೆ ಸೇರಿಸಿಕೊಂಡು, ಅಂತಾ ಯಾವನಾದರೂ ಜಂಟೀ ಅನುಭವದಾರನು ಅಥವಾ ಇತರ ಮನುಷ್ಯನು, ಅನುಭವದ ಜಮೀನ್ದಾ ಕಂದಾಯಕ್ಕಾಗಿ ಸಲ್ಲತಕ್ಕ ತಮಾಂ ಮೊಬಲಗ್‌ಗಳನ್ನೂ ಪಾವತೀ ಮಾಡಿದ ಮೇಲೆ, ಅವನ ಹೆಸರನ್ನು ರೆವಿನ್ಯು ರಿಕಾರ್ಡಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟ ಅನುಭವದಾರನ ತರೀಕ್ ದಾಖಲ್ ಮಾಡುವದಕ್ಕೆ ಡೆಪ್ಯುಟಿ ಕಮಿಷ್ನರಿಗೆ ಯಖ್ತ್ಯಾರಿಉಂಟು. ಮತ್ತು ಹಾಗೆ ರಿಜಿಸ್ಟರ್‌ದಾಖಲಾದ ಅನುಭವದಾರನಾಗತಕ್ಕ ಅಂತಾಮನುಷ್ಯನು ಅನುಭವದಲ್ಲಿರುವ ಮಿಕ್ಕ ತಮಾಂ ಜನಗಳ ವಿಷಯದಲ್ಲಿ 104ನೇ ಸೆಕ್ಷನ್ನಿಂದ ವಿಧಿಸಲ್ಪಟ್ಟ ಹಕ್ಕುಗಳನ್ನೂ ಪರಿಹಾರಗಳನ್ನೂ ಪಡೆಯತಕ್ಕದ್ದು.

7ನೇ ಅಧ್ಯಾಯ.

ಮೇಲ್ಪಟ್ಟ ಮತ್ತು ಕೀಳ್ಪಟ್ಟ ಹಿಡುವಳೀದಾರರನ್ನು ಕುರಿತು.

ಷಿಕ್ಮೀದಾರನ ಹಕ್ಕುಗಳು.

"ಕಂದಾಯದ ಷಿಕ್ಮೀದಾರ" ಎಂಬದು.

85. ಪರಭಾರೇಯಾದ ಜಮೀನು, ಪರಭಾರೆಯಾದ ಗ್ರಾಮದಲ್ಲಿರಲಿ, ಇಲ್ಲದೆ ಇರಲಿ, ಪರಂತು ಅದರ ಹಿಡುವಳೀಯುಳ್ಳ ಮತ್ತು ಅಂತಾ ಜಮೀನಿನ ಮೇಲ್ಪಟ್ಟ ಹಿಡುವಳೀದಾರನಿಗೆ, ಗುತ್ತಿಗೆ ಮೂಲಕವಾಗಲಿ ಜಮೀನ್ದಾ ಕಂದಾಯದ ಮೂಲಕವಾಗಲಿ, ಅಂತಾ ಜಮೀನ್ದಾ, ಗವರ್ನಮೆಂಟಿನಿಂದ ಪರಭಾರೇಮಾಡಲ್ಪಟ್ಟಾಗ ಜಾರೀಯಲ್ಲಿದ್ದ ದರಗಳ ಪ್ರಕಾರವಾಗಲಿ, ಗ್ರಾಮಕ್ಕೆ ಜಮೀನ್ದಾ ಕಂದಾಯದ ಏರ್ಪಾಡನುಸರಿಸಿ ಸ್ಥಾಪಿಸಲ್ಪಟ್ಟ ದರಗಳ ಪ್ರಕಾರ ಈಚಿಗೆ ಠರಾವ್ ಮಾಡಲ್ಪಟ್ಟ ದರಗಳ ಪ್ರಕಾರವಾಗಲಿ, ತಕ್ಕ ರೆವಿನ್ಯು ಅಧಿಕಾರಿಯಿಂದ, ಅಥವಾ ಸರ್ವೇ ಸೆಟಲ್‌ಮೆಂಟ್ ಮೂಲಕ ಠರಾವ್ ಮಾಡಲ್ಪಟ್ಟ ದರಗಳ ಪ್ರಕಾರವಾಗಲಿ, ಹಣದ ರೂಪವಾಗಿ ಮೊಕರರ್ಮಾಡಲ್ಪಟ್ಟ ಒಂದು ಗುತ್ತಿಗೆ ಮೊಬಲಗನ್ನು ತೆರತಕ್ಕ ಒಬ್ಬ ಷಿಕ್ಮೀದಾರನು ಅಂತಾ ಜಮೀನ್ದಾ ಬಗ್ಗೆ ತಹಲ್ ಕೊಡುತ್ತಿದ್ದ ಗುತ್ತಿಗೆ ಪ್ರಕಾರವಾಗಲಿ, ಅಂತಾ ಗುತ್ತಿಗೆ ಬದಲಾಯಿಸಲ್ಪಟ್ಟರೆ, ಹಾಗೆ ಬದಲಾಯಿಸಲ್ಪಟ್ಟದರದ ಪ್ರಕಾರವಾಗಲಿ ಕೊಟ್ಟುಕೊಂಡು ಆ ಜಮೀನನ್ನು ಪಡೆದುಕೊಂಡಿರುವದಕ್ಕೆ ಹಕ್ಕು ಉಂಟಾಗಿರತಕ್ಕದ್ದು.

ಅಂತಾ ಒಬ್ಬ ಷಿಕ್ಮೀದಾರನು "ಕಂದಾಯದ ಷಿಕ್ಮೀದಾರನೆಂದು" ಕರೆಯಲ್ಪಡತಕ್ಕದ್ದು.

"ಒಬ್ಬ ಕಂದಾಯದ ಷಿಕ್ಮೀದಾರನು" ಯಾವನಿಂದ ತನ್ನ ಬಾಧ್ಯತೆಯನ್ನು ಪಡೆಯುತ್ತಾನೋ ಅಂತಾ ಮನುಷ್ಯನಿಂದಾಗಲಿ, ಮನುಷ್ಯರಿಂದಾಗಲಿ, ವಸೂಲಾಗ ತಕ್ಕ ಗುತ್ತಿಗೆಯು ಈ ಸೆಕ್ಷನಿನ ಅರ್ಥಪ್ರಕಾರ ಅಂತಾ ಷಿಕ್ಮೀದಾರನಿಂದ ವಸೂಲಾಗತಕ್ಕ ಗುತ್ತಿಗೆಯಾಗಿರತಕ್ಕದ್ದು.

ಪರಭಾರೆಯಾಗದ ಜಮೀನಿನ ಅನುಭವದಾರನಿಗೆ, ಉಂಟುಮಾಡಲ್ಪಟ್ಟ ತಮಾಂ ಹಕ್ಕುಗಳೂ ಕಂದಾಯದ ಷಿಕ್ಮೀದಾರನಿಗೆ ಉಂಟಾಗತಕ್ಕದ್ದು.

"ಒಬ್ಬ ಕಂದಾಯದ ಷಿಕ್ಮೀದಾರನು" ಪರಭಾರೆಯಾಗದ ಜಮೀನಿನ ಅನುಭವದಾರನಿಗೆ ಈ ರೆಗ್ಯುಲೇಷನಿಂದ ಉಂಟುಮಾಡಲ್ಪಟ್ಟ ತಮಾಂ ಹಕ್ಕುಗಳನ್ನು ಪಡೆಯತಕ್ಕದ್ದು.

"ಅನುಭವ ಷಿಕ್ಮೀದಾರ್‌ರೆಂಬದರ" ವಿವರಣೆ.

86. ಬರವಣಿಗೆ ಮೂಲಕವಾದ ಗುತ್ತಿಗೆ ಅಲ್ಲದೆ ಬೇರೆವಿಧವಾಗಿ ಗೊತ್ತಾದ ಮಾಯಿದೆಗೆ ಪರಭಾರೆಯಾದ ಜಮೀನು, ಪರಭಾರೆಯಾದ ಗ್ರಾಮದಲ್ಲಿರಲಿ ಇಲ್ಲದೇ ಇರಲಿ, ಅಂತಾ ಜಮೀನನ್ನು ಹಿಡುವಳೀಯಲ್ಲಿ ಉಳ್ಳ ಮತ್ತು ಅಂತಾ ಜಮೀನನ್ನು 85ನೇ ಸೆಕ್ಷನ್ನಲ್ಲಿ ವಿವರಿಸಲ್ಪಟ್ಟ, ದರಗಳ ಪ್ರಕಾರ ಮೊಕರರಾಗದ ತೀರ್ವೆಯನ್ನು ಮೇಲ್ಪಟ್ಟ ಹಿಡುವಳೀದಾರನಿಗೆ ಕೊಡುವ ಒಬ್ಬ ಷಿಕ್ಮೀದಾರನು, ಅಂತಾ ಜಮೀನನ್ನು 12ವರುಷಗಳಕಾಲ ಅವಿಚ್ಛಿನ್ನವಾಗಿ ವಸ್ತುತಃ ಅನುಭವಿಸಿ ಅಥವಾ ಸಾಗುವಳೀಮಾಡಿ ಇದ್ದರೆ, ಹಾಗೆ ಅವನಿಂದ ಅನುಭವಿಸಲ್ಪಟ್ಟ ಅಥವಾ ಸಾಗುವಳೀಮಾಡಲ್ಪಟ್ಟ ಜಮೀನ್ನಲ್ಲಿ ಅನುಭವದ ಹಕ್ಕುದಾರಿಯನ್ನು ಪಡೆಯತಕ್ಕದ್ದು.

ಅಂತಾ ಷಿಕ್ಮೀದಾರನು "ಅನುಭವದ ಷಿಕ್ಮೀದಾರ್" ಯೆಂದು ಕರೆಯಲ್ಪಡತಕ್ಕದ್ದು.

ಅನುಭವದ ಷಿಕ್ಮೀದಾರನು ಯಾರಿಗೆ ವಾರಸ್‌ದಾರನಾಗಿರುತ್ತಾನೋ ಅಂತಾ ತಂದೆಯು ಅಥವಾ ಇತರ ಮನುಷ್ಯನ ಅನುಭವವಾಗಲಿ ಸಾಗುವಳೀಯಾಗಲಿ ಈ ಸೆಕ್ಷನಿನ ಅರ್ಥ ರೀತ್ಯ ಅಂತಾ ಷಿಕ್ಮೀದಾರನ ಅನುಭವ ಯಾ ಸಾಗುವಳೀಯೆಂದು ಎಣಿಸಲ್ಪಡತಕ್ಕದ್ದು.

ಪರಂತು ಇದಕ್ಕೆ ನಿಯಮವೇನಂದರೆ :—

(*a*) ಒಬ್ಬ ಷಿಕ್ಮೀದಾರನು, ಬರವಣಿಗೆಯಲ್ಲಿರುವ ಗುತ್ತಿಗೆ ಅನುಸರಿಸಿ, ಅಂತಾ ಭೂಮಿಯಲ್ಲಿ ಅನುಭವದ ಹಕ್ಕಿಲ್ಲದೆ, ಗೊತ್ತಾದ ಒಂದು ಕಾಲದ ಪರ್ಯಂತ ಅಂತಾ ಜಮೀನನ್ನು ವಸ್ತುತಃ ಅನುಭವಿಸಿದರೆ ಅಥವಾ ಸಾಗುವಳೀ ಮಾಡಿದರೆ, ಸದರೀ ಜಮೀನ್ನಲ್ಲಿ ಅವನಿಂದಾಗಲಿ, ಅವನ ಕೈಕೆಳಗೆ ಹಕ್ಕುಳ್ಳ ಯಾವನಿಂದಾಗಲಿ, ಅನುಭವದ ಹಕ್ಕನ್ನು ಪಡೆಯಲಿಕ್ಕೆ ಜರೂರಾದ 12 ವರುಷಗಳ ಮಾಯಿದೆಯು, ಅಂತಾ ಗುತ್ತಿಗೆಯ ಮಾಯಿದೆ ಪೂರೈಸಿದ ಮೇಲೆ ಷುರುವಾಗತಕ್ಕದ್ದು: ಅಂತಾ ಗುತ್ತಿಗೆಯ ಚಾಲ್ತೀಕಾಲದಲ್ಲಿ, ಆ ಗುತ್ತಿಗೆಯೊಳಗೆ ಅಡಗಿರುವ ಜಮೀನನ್ನು ಅನುಭವಿಸದೆ ಬಿಟ್ಟು ಅದನ್ನು ಮತ್ತೊಬ್ಬನಿಗೆ ಒಳಷಿಕ್ಮೀಗೆ ಕೊಡುವಪಕ್ಷಕ್ಕೆ ಅಂತಾ ಜಮೀನಿನಲ್ಲಿ ಅನುಭವದ ಹಕ್ಕು, ಗುತ್ತಿಗೆ ಚಲಾವಣೀಕಾಲದಲ್ಲಿ ಒಳಗುತ್ತಿಗೇದಾರನಿಂದ ಪಡಕೊಳ್ಳಲ್ಪಡತಕ್ಕದ್ದು.

(b) ಈ ಸೆಕ್ಷನ್ನಲ್ಲಿ ಸೂಚಿಸಲ್ಪಟ್ಟ ಅನುಭವದ ಹಕ್ಕುದಾರಿಯು, ಗುತ್ತಿಗೆಯು ನಗದಾಗಿಯಾಗಲಿ ಧಾನ್ಯರೂಪವಾಗಿ ಯಾಗಲಿ ಕೊಡಲ್ಪಟ್ಟಾಗ್ಯೂ, ಪಡಕೊಳ್ಳಲ್ಪಡತಕ್ಕದ್ದು.

ಕಂದಾಯದ ಷಿಕ್ಮೀದಾರನ ಹಕ್ಕು ಪಾರಂಪರ್ಯದ್ದಾಗಿಯೂ, ವರ್ಗೀಯವಾಗಿಯೂ ಇರತಕ್ಕದ್ದು.

87. "ಒಬ್ಬ ಕಂದಾಯದ ಷಿಕ್ಮೀದಾರನ" ಹಕ್ಕು, ಪಾರಂಪರ್ಯದ್ದಾದ ಮತ್ತು ವರ್ಗಮಾಡಲ್ಪಡತಕ್ಕ ಸ್ವತ್ತಾಗಿ ಯೆಣಿಸಲ್ಪಡತಕ್ಕದ್ದು. ಆದರೆ ಒಬ್ಬ "ಅನುಭವದ ಷಿಕ್ಮೀದಾರನ" ತರೀಕ್ ಹಿಡುವಳೀಯಲ್ಲಿ ವಹಿಸುವ ಹಕ್ಕು ದಾನ, ವಿಕ್ರಯ, ಗ್ರಾಂಟ್, ಉಯಿಲು ಅಥವಾ ಅನ್ಯಥಾ, ಅಂತಾ ಹಕ್ಕುದಾರೀವಿಷಯದಲ್ಲಿ ಪಾರಂಪರ್ಯದ ಮೂಲಕ ಜಂಟೀ ಹಿಸ್ಸೇದಾರರಾಗಿರುವ ಜನಗಳಲ್ಲಿ ಹ್ಯಾಗೋ ಹಾಗೆ ಹೊರತು ಅನ್ಯಥಾ ವರ್ಗವಾಗತಕ್ಕದ್ದಲ್ಲವು. "ಅನುಭವದ ಷಿಕ್ಮೀದಾರನ" ತರೀಕ್ ಹಿಡುವಳೀಯಲ್ಲಿ ವಹಿಸುವ ಹಕ್ಕುದಾರೀಗೆ ಅರ್ಹನಾದ ಯಾವ ಮನುಷ್ಯನಾಗಲಿ ಮೃತಪಟ್ಟರೆ, ಸದರೀ ಹಕ್ಕು ಜಮೀನಾಗಿದ್ದರೆ ಹ್ಯಾಗೋ ಅದೇ ಮೇರೆ ಹಕ್ಕು ಪ್ರಾಪ್ತವಾಗತಕ್ಕದ್ದು.

ಮೇಲ್ಪಟ್ಟ ಹಿಡುವಳೀದಾರನು ಪರಭಾರೇಯಾದ ಬಂಜರ್ ಜಮೀನುಗಳಿಗೆ ತನ್ನ ಸ್ವಂತ ಷರತ್ತುಗಳ ಪ್ರಕಾರ ಕಂದಾಯದ ಏರ್ಪಾಡು ಮಾಡಬಹುದು.

88. ಪರಭಾರೇಯಾದ ಯಾವ ಜಮೀನುಗಳು ಅನಾದಿ ಬಂಜರಾಗಿಯಾಗಲಿ ರಾಜೀನಾಮೇ ಮೂಲಕ ಬಂಜರು ಕೆಡಹಲ್ಪಟ್ಟರಲಿ ಅಂತಾ ಜಮೀನುವಿಷಯದಲ್ಲಿ ಬರವಣಿಗೆಯ ಕರಾರ್ ಮೂಲಕ ಅಂತಾ ಜಮೀನುಗಳಬಗ್ಗೆ ದರಖಾಸ್ತುದಾರರೊಡನೆ ತೀರ್ವೆಯ ವಿಷಯದಲ್ಲಿ ತನ್ನ ಸ್ವಂತ ಷರತ್ತುಗಳನ್ನು ಕುರಿತು ಯೇರ್ಪಾಡು ಮಾಡಿಕೊಳ್ಳುವದು ಸದರೀಮೇಲ್ಪಟ್ಟ ಹಿಡುವಳೀದಾರನಿಗೆ ನ್ಯಾಯವಾಗಿರತಕ್ಕದ್ದು; ಪರಂತು ಈ ಸೆಕ್ಷನಿನಲ್ಲಿರುವ ಯಾವ ಅಂಶವೋ, ಯಾವ ಹಕ್ಕುಗಳು ಕಾನೂನಿಂದಲಾಗಲಿ ಕಾನೂನಿನ ಬಲವುಳ್ಳ ಮಾಮೂಲ್ ನಿಂದಾಗಲಿ, ಯಾವನಾದರೂ ಮನುಷ್ಯನಿಂದ ಅಥವಾ ಮನುಷ್ಯರ ಸಮುದಾಯದಿಂದ, ಅಂತಾ ಬಂಜರ್ ಯಾ ಅನುಭವದಲ್ಲಿಲ್ಲದ ಜಮೀನುಗಳಲ್ಲಿ ಉಂಟಾಗಿರುವ ಯಾವದಾದರೂ ಮುಖ್ಯ ಹಕ್ಕುಗಳಿಗೆ ಬಾಧಕವಾಗತಕ್ಕದ್ದಲ್ಲವು.

ಒಬ್ಬ ಕಂದಾಯದ ಷಿಕ್ಮೀದಾರನಿಂದ ಸಲ್ಲತಕ್ಕ ತೀರ್ವೆ ಎಷ್ಟರಮಟ್ಟಿಗೆ ಜಾಸ್ತೀ ಮಾಡಲ್ಪಡಬಹುದು.

89. ಒಬ್ಬ "ಕಂದಾಯದ ಷಿಕ್ಮೀದಾರನಿಂದ" ಸಲ್ಲತಕ್ಕ ತೀರ್ವೆಯು, ಜಾಸ್ತೀಮಾಡಲ್ಪಡಲಿಕ್ಕೆ ಗುರೀಯಾಗತಕ್ಕದ್ದಲ್ಲವು, ಇದಕ್ಕೆ ವಿನಾಯಿತಿಗಳು ಯಾವವೆಂದರೆ:—

(a) 117, 128 ಮತ್ತು 244 ಈಸೆಕ್ಷನ್ಗಳನುಸರಿಸಿ ಒಂದು ಸರ್ವೇಯಲ್ಲಿ ಗೊತ್ತುಮಾಡಲ್ಪಟ್ಟು ರಿಕಾರ್ಡುಮಾಡಲ್ಪಟ್ಟ ಪ್ರಕಾರ ಯುಕ್ತವಾದ ಪೂರಾ ಕಂದಾಯದ ಪರಿಮಾಣ.

(b) ಮೇಲ್ಪಟ್ಟ ಹಿಡುವಳೀದಾರನಿಗೆ, ಗವರ್ನಮೆಂಟಿನವರು ಹೊಸದಾಗಿ ಕಂದಾಯ ವಿಧಿಸಬಹುದಾದ ಜಮೀನುಗಳ ಮೇಲೆ ಮೊಕರರ್ ಆಗತಕ್ಕ ಯಾವದಾದರೂ ತೀರ್ವೆಗಾಗಿ ನುಕ್ಸಾನ್ ಕಟ್ಟಿಕೊಡುವ ಬಗ್ಗೆ ಜರೂರಾದ ಪರಿಮಾಣ.

(c) ಮೇಲ್ಪಟ್ಟ ಹಿಡುವಳೀದಾರನ ಖರ್ಚಿನಿಂದ ಒಂದು ಹಿಡುವಳಿಗೆ ನೆರವೇರಿಸಲ್ಪಟ್ಟ ಯಾವದಾದರೂ ನೀರಾವರಿ ಕೆಲಸದ ಮೂಲಕವಾಗಲಿ, ಹಿಡುವಳಿಗೆ ಉಂಟಾದ ಹೆಚ್ಚು ಆದಾಯದ ಪರಿಮಾಣ ಅಥವಾ ಸರ್ಕಾರದ ನೀರನ್ನು ಉಪಯೋಗಿಸುವದರ ಮೂಲಕವಾಗಲಿ, ಗವರ್ನಮೆಂಟ್ ಖರ್ಚಿನಲ್ಲಿ ನೆರವೇರಿಸಲ್ಪಟ್ಟ ಯಾವದಾದರೂ ನೀರಾವರಿ ಕೆಲಸದಿಂದಾಗಲಿ, ಅಭಿವೃದ್ಧಿಯ ಬಾಬತು ಇತರ ಕೆಲಸದಿಂದಾಗಲಿ, ಹಿಡುವಳಿಗೆ ಜಾಸ್ತಿ ಆದಾಯವನ್ನುಂಟುಮಾಡಿದ ಸಬಬಿನಿಂದ ಗವರ್ನಮೆಂಟಿನವರು ಕೊಡಬೇಕೆಂದು ಕೇಳುವ ಹೆಚ್ಚು ತೀರ್ವೆಯ ಪರಿಮಾಣ.

ಈ ಮೂರು ಬಗೆಯಲ್ಲಿ ಹೆಚ್ಚು ತೀರ್ವೆಯನ್ನು ಕೊಡುವದಕ್ಕೆ ಕಂದಾಯದ ಷಿಕ್ಮೀದಾರನು ಗುರಿಯಾಗುವನು.

ನಿಯಮ.

ಪರಂತು, ಈ ಸೆಕ್ಷನ್ನನುಸರಿಸಿ ಒಂದು ಹಿಡುವಳಿಗೆ ಉಂಟು ಮಾಡಲ್ಪಟ್ಟ ಜಾಸ್ತೀ ಆದಾಯದಬಗ್ಗಾಗಿ ಸಲ್ಲತಕ್ಕ ತೀರ್ವೆಯ ಅಧಿಕ್ಯವು, ಗ್ರಾಮದ ಸ್ಥಾಪಿಸಲ್ಪಟ್ಟ ಸ್ಥಳವಾಡಿಕೆಯ ಪ್ರಕಾರ ಠರಾಯಿಸಲ್ಪಡತಕ್ಕದ್ದು; ಅಥವಾ ಅಂತಾ ಸ್ಥಳವಾಡಿಕೆ ಇಲ್ಲದಪಕ್ಷಕ್ಕೆ, ಪರಭಾರೇಯಾದ, ಅಥವಾ ಪರಭಾರೆಯಾಗದ ಜಮೀನುಗಳ ವಿಷಯದಲ್ಲಿ ಬದಸ್ತೂರ್ ಗುಣವೂ ಬದಸ್ತೂರ್ ಪ್ರಯೋಜನಗಳೂ ಉಳ್ಳ ಆಸ್‌ಪಾಸ್ ಗ್ರಾಮಗಳಲ್ಲಿ ಜಾರೀಯಲ್ಲಿರುವ ಕಂದಾಯದ ದರಗಳ ಪ್ರಕಾರವೂ ಠರಾವ್ ಮಾಡಲ್ಪಡತಕ್ಕದ್ದು; ಮತ್ತು

(d) ಒಂದು ಜಮೀನಿನ ಬೆಳೆಯಿಂದ ಹಿಡುವಳಿಯ ಜಾಸ್ತೀ ಬೀಜವರಿಯೆಷ್ಟರಮಟ್ಟಿಗೆ 51 ಮತ್ತು 67ನೇ ಸೆಕ್ಷನ್‌ಗಳಲ್ಲಿ ವಿವರಿಸಲ್ಪಟ್ಟ ಷರತ್ತುಗಳಿಗೆ ಒಳಪಟ್ಟಿದ್ದರೂ, ಸದರೀ ತೀರ್ವೆಯನ್ನು ಹೆಚ್ಚು ಮಾಡಬಹುದು.

ಒಬ್ಬ ಅನುಭವದ ಷಿಕ್ಮೀದಾರನಿಂದ ಸಲ್ಲತಕ್ಕ ತೀರ್ವೆಯು ಯಾವ ಸಬಬುಗಳ ಮೇಲೆ ಜಾಸ್ತೀಮಾಡಲ್ಪಡುವದು.

90. ಒಬ್ಬ "ಅನುಭವದ ಷಿಕ್ಮೀದಾರನಿಂದ" ಸಲ್ಲತಕ್ಕ ತೀರ್ವೆಯು ಈ ಕೆಳಗೆ ಕಂಡ ಸಬಬುಗಳ ಪೈಕೀ ಯಾವದರ ಮೇಲಾಗಲಿ ಜಾಸ್ತೀ ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದೇ ಹೊರತು ಇತರ ಸಬಬುಗಳಿಗೆ ಗುರಿಯಾಗತಕ್ಕದ್ದಲ್ಲವು. ಅವುಗಳ್ಯಾವವೆಂದರೆ:—

(a) ಅಂತಾ ಷಿಕ್ಮೀದಾರನಿಂದ ಕೊಡಲ್ಪಡುವ ತೀರ್ವೆಯ ದರವು, ಬದಸ್ತೂರ್ ಪ್ರಯೋಜನಗಳುಳ್ಳ ಜಮೀನಿಗಾಗಿ ಷಿಕ್ಮೀದಾರರ ಬದಸ್ತೂರ್ ತರಗತಿಯಿಂದ ಕೊಡಲ್ಪಡತಕ್ಕ ಜಾರೀಯಲ್ಲಿರುವ ದರಕ್ಕೆ ಕಮ್ಮಿಯಾಗಿರತಕ್ಕದ್ದು:

(b) ಹಿಡುವಳೀಯಲ್ಲಿ ಉಳ್ಳ ಜಮೀನಿನ ಉತ್ಪತ್ತಿಯ ಕಿಮ್ಮತು ಅಥವಾ ಜಮೀನಿನ ಉತ್ಪತ್ತಿಯ ಶಕ್ತಿಯು, ಷಿಕ್ಮೀದಾರನ ಮೂಲಕ ಅಥವಾ ಅವನ ಖರ್ಚಿನಿಂದಲ್ಲದೆ ಬೇರೆ ವಿಧವಾಗಿ ವೃದ್ಧಿ ಮಾಡಲ್ಪಟ್ಟಿರುವದು:

(c) ಷಿಕ್ಮೀ ಹಿಡುವಳೀಯಲ್ಲಿ ಉಳ್ಳ ಜಮೀನಿನ ಪರಿಮಾಣವು, [illegible] ಮೂಲಕವಾಗಲಿ, ಅನ್ಯಥಾ ಆಗಲಿ, ವೃದ್ಧಿ ಮಾಡಲ್ಪಟ್ಟಿರುವದು ಅಥವಾ ಯೆ[illegible] ತಾನು ಮೊದಲು ತೀರ್ವೆ ಕೊಡುತ್ತಿದ್ದನೋ ಅಂತಾ ಪರಿಮಾಣಕ್ಕಿಂತ [illegible] ಯಲ್ಲಿ ಜಾಸ್ತಿಯಾಗಿರುವಂತೆ ರುಜುವಾಗಿರುವದು: ಈ ಸಂಗತಿಗಳಲ್ಲಿ ಮಾತ್ರ [illegible] ತೀರ್ವೆಯನ್ನು ಕೊಡಲಿಕ್ಕೆ ಅನುಭವದ ಷಿಕ್ಮೀದಾರನು ಗುರಿಯಾಗುವನು.

ಕಂದಾಯದ ಅಥವಾ ಅನುಭವದ ಷಿಕ್ಮೀದಾರನಿಂದ ಪಾವತೀ ಮಾಡಲ್ಪಡತಕ್ಕ ತೀರ್ವೆಯನ್ನು ಕಮ್ಮಿ ಮಾಡುವಬಗ್ಗೆ ಸಬಬ್‌ಗಳು.

91. ಒಬ್ಬ "ಕಂದಾಯದ" ಅಥವಾ "ಅನುಭವದ" ಷಿಕ್ಮೀದಾರನಿಂದ ಸಲ್ಲತಕ್ಕ ತೀರ್ವೆಯು, ಅವನ ಹಿಡುವಳಿಯಲ್ಲಿ ಉಳ್ಳ ಜಮೀನಿನ ಬೀಜವರಿಯು, ಅವನ ಅಧಿಕಾರಕ್ಕೆ ಅತಿಕ್ರಮಿಸಿದ ಯಾವಕಾರಣದಿಂದಲಾಗಲಿ 'ಉಂಟಾದ ಪ್ರವಾಹದಿಂದ ಅಥವಾ ಇತರಕಾರಣದಿಂದ ಕಮ್ಮಿ ಮಾಡಲ್ಪಟ್ಟಿದೆಯೆಂಬ ಸಬಬಿನಮೇಲೆ ಕಮ್ಮಿ ಮಾಡಲ್ಪಡಲಿಕ್ಕೆ ಗುರಿಯಾಗಿರುತ್ತೆ.

ತೀರ್ವೆಯು ಜಾಸ್ತೀ ಯಾ ಕಮ್ಮಿ ಮಾಡುವಬಗ್ಗೆ ಡೆಪ್ಯುಟಿ ಕಮ್ಮಿಷನರಲ್ಲಿ ದರಖಾಸ್ತು ಮಾಡತಕ್ಕದ್ದು.

92. 89, 90 ಮತ್ತು 91ನೇ ಸೆಕ್ಷನ್‌ಗಳಲ್ಲಿ ವಿವರಿಸಲ್ಪಟ್ಟ ಯಾವ ಸಬಬಿನ ಮೇಲಾಗಲಿ, ತೀರ್ವೆ ಜಾಸ್ತಿ ಯಾ ಕಮ್ಮಿ ಬಗ್ಗೆ ಮಾಡಲ್ಪಡುವ ಪ್ರತಿದರಖಾಸ್ತನ್ನೂ, ಯಾವಬಗ್ಗೆ ಅಂತಾ ತೀರ್ವೆ ಕೊಡತಕ್ಕದ್ದೋ ಅಂತಾ ಜಮೀನು ಯಾವ ಡಿಸ್ಟ್ರಿಕ್ಟಿನಲ್ಲಿರುತ್ತೋ ಅಂತಾ ಡೆಪ್ಯುಟಿ ಕಮ್ಮಿಷನರವರಿಗೆ ಮಾಡತಕ್ಕದ್ದು. ಅವರು ಕ್ರಮವಾದ ವಿಚಾರಣೆ ಮಾಡಿ ಅಂತಾ ಪ್ರತಿ ಅರ್ಜಿಯನ್ನೂ ಫೈಸಲ್ಮಾಡತಕ್ಕದ್ದು.

85ರ ಮೊದಲು 92ರ ವರಿಗಿನ ಸೆಕ್ಷನ್‌ಗಳಲ್ಲಿರುವ ಯಾವ ಅಂಶವೂ, ಜಮೀನ್ದಾರನು ಮತ್ತು ಷಿಕ್ಮೀದಾರನು ಬರವಣಿಗೆ ಮೂಲಕವಾದ ಕರಾರಿನಿಂದ ಮಾಡಿಕೊಳ್ಳುವ ತಿರ್ವೆಯ ಜಾಸ್ತೀ ಯಾ ಕಮ್ಮಿ ಮಾಡುವದನ್ನು ಆತಂಕ ಪಡಿಸತಕ್ಕದ್ದಲ್ಲವು.

93. 85ರ ಮೊದಲು 92ರ ವರಿಗೆ (ಉಭಯ ಸೆಕ್ಷನ್‌ಗಳೂ ಒಳತವಾಗಿ) ಯಿರತಕ್ಕ ಸೆಕ್ಷನ್‌ಗಳಲ್ಲಿ ಅಡಗಿರುವ ಯಾವ ಅಂಶವೂ, ದಸ್ತಾವೇಜುಗಳ ರಿಜಿಸ್ಟರ್ ಮಾಡುವದಕ್ಕೆ ಸಂಬಂಧಿಸಿದ ತತ್ಕಾಲದಲ್ಲಿ ಜಾರೀಯಿರುವ ಯಾವದಾದರೂ ಕಾನೂನಿನ ನಿಬಂಧನೆಗಳ ಪ್ರಕಾರ ಕ್ರಮವಾಗಿ ರಿಜಿಸ್ಟರ್ ಮಾಡಲ್ಪಟ್ಟ ಷಿಕ್ಮೀದಾರನ ಮತ್ತು ಜಮೀನ್ದಾರನ ಬರವಣಿಗೆಯಲ್ಲಿರುವ ಒಡಂಬಡಿಕೆಯು ಮೂಲಕ ತೀರ್ವೆ ಜಾಸ್ತೀಯನ್ನಾಗಲಿ ಕಮ್ಮಿಯನ್ನಾಗಲಿ ಮಾಡುವದನ್ನು ಆತಂಕ ಪಡಿಸುವದಾಗಿ ಯೋಚಿಸತಕ್ಕದ್ದಲ್ಲವು. ಅಥವಾ ಅಂತಾ ಒಡಂಬಡಿಕೆಗಳ ಮೇಲೆ ಹುಟ್ಟುವ ವ್ಯಾಜ್ಯಗಳನ್ನು ದಾಖಲ್ ಮಾಡಿಕೊಳ್ಳುವದರ ದೆಸೆಯಿಂದ ಸಿವಿಲ್‌ಕೋರ್ಟುಗಳನ್ನು ಆತಂಕ ಪಡಿಸತಕ್ಕದ್ದಲ್ಲವು.

ತೀರ್ವೆ ಜಾಸ್ತೀಬಗ್ಗಾಗಲಿ, ಕಮ್ಮಿಬಗ್ಗಾಗಲಿ, ಫೈಸಲಿನ ಅಮಲ್ ಯಾವ ತಾರಿಖು ಲಾಗಾಯತು ಷುರುವಾಗತಕ್ಕದು.

94. 92ನೇ ಸೆಕ್ಷನ್ ಅನುಸರಿಸಿ ಡೆಪ್ಯುಟಿ ಕಮ್ಮಿಷನರಿಂದ ಮಂಜೂರ್ ಮಾಡಲ್ಪಟ್ಟ, ತೀರ್ವೆಯ ಜಾಸ್ತೀಬಗ್ಗಾಗಲಿ, ಕಮ್ಮಿಬಗ್ಗಾಗಲಿ, ಕೊಡಲ್ಪಟ್ಟ ಪ್ರತಿ ಫೈಸಲೂ ಅನ್ಯಥಾ ಕಂಠೋಕ್ತವಾಗಿ ನಿಯಮಿಸದೆಯಿದ್ದರೆ, ದಾವೇದಾಖಲ್ಮಾಡಲ್ಪಡುವ ತಾರೀಖಿನ ತರುವಾಯ ಬರುವ ರೆವಿನ್ಯೂ ಸಾಲ್ ಷುರು ಲಾಗಾಯತ ಜಾರೀಯಲ್ಲಿ ಬರತಕ್ಕದ್ದು.

ಮುಂ. ರೆ. ಕೋ. 84ನೇ ಸೆಕ್ಷನ್.

ಸಾಲಿಯಾನಾ ಷಿಕ್ಮಿಯು ಮಾರ್ಚಿ 31ಕ್ಕೆ ಅಖೈರಾಗತಕ್ಕದು.

95. ಸಾಲಿಯಾನಾ ಷಿಕ್ಮಿಯು, ವಿರೋಧಾಂಶಕ್ಕೆ ರುಜುವಾತು ಇಲ್ಲದಿದ್ದರೆ, ಸಾಗುವಳಿಯ ಒಂದುಸಾಲ್ ಅಖೈರ್ ಮೊದಲು ಮುಂದಿನ ಸಾಲ್ ಅಖೈರ್ ವರಿಗೆ ನಡೆಯುವಂತೆ ಯೋಚಿಸತಕ್ಕದ್ದು, ಸಾಗುವಳೀ ಕಾಲವು ಮಾರ್ಚಿ 31ಕ್ಕೆ ಅಖೈರಾಗುವಂತೆ ಭಾವಿಸಬಹುದು.

ಸಾಲಿಯಾನಾ ಷಿಕ್ಮಿಯು ಆಖೈರಾಗುವಬಗ್ಯೆ ಜಮೀನ್ದಾರನಿಂದ ಷಿಕ್ಮೀದಾರ ನಿಗೆ ಅಥವಾ ಷಿಕ್ಮೀದಾರನಿಂದ ಜಮೀನ್ದಾರನಿಗೆ, ಯಾವ ಸಾಲಿನ ಆಖೈರಿನಿಂದ ಷಿಕ್ಮಿಯು ನಿಂತು ಹೋಗುವದೆಂದು ತಿಳಿಸುತ್ತದೆಯೋ ಅಂತಾ ಷಿಕ್ಮಿಯ ಸಾಲ ಆಖೈರಿಗೆ ಮುಂದಾಗಿ ಅಧಮಪಕ್ಷ ಮೂರುತಿಂಗಳ ನೋಟೀಸ್ ಬರಹಮೂಲಕವಾಗಿ ಕೊಡತಕ್ಕದ್ದು. ಅಂತಾ ನೋಟೀಸ್ F ಷೆಡ್ಯೂಲ್ ನಮೂನೆ ಮೇರೆ ಅಥವಾ ಬದಸ್ತೂರ್ ಉದ್ದೇಶಾನುಗುಣವಾಗಿ ಇರಬಹುದು.

ಷಿಕ್ಮಿಯು ತೀರುವದಕ್ಕೆ ಜಮೀನ್ದಾರನಿಂದ ಲಾಗಲಿ, ಷಿಕ್ಮಿದಾರನಿಂದಾಗಲಿ, ಮೂರುತಿಂಗಳ ನೋಟೀಸ್ ಕೊಡತಕ್ಕದ್ದು.

96. ಪ್ರತಿ ಷಿಕ್ಮೀದಾರನೂ ಇದರಡಿಕಂಡ ತಪ್‌ಶೀಲ್‌ಗಳುಳ್ಳ ಬರವಣಿಗೆ ಮೂಲಕವಾದ ಗುತ್ತಿಗೆಯನ್ನು ತನ್ನ ಜಮೀನ್ದಾರನಿಂದ ಪಡೆಯಲಿಕ್ಕೆ ಅರ್ಹರಾಗಿರುತ್ತಾನೆ:—

ಜಮೀನ್ದಾರನು ಷಿಕ್ಮೀದಾರನಿಗೆ ಬರವಣಿಗೆ ಮೂಲಕವಾದ ಗುತ್ತಿಗೆ ಕರಾರನ್ನು ಕೊಡತಕ್ಕದ್ದು.

(*a*) ತನ್ನ ಹಿಡುವಳಿಯಲ್ಲಿರುವ ಜಮೀನಿನ ವಿಸ್ತೀರ್ಣ ಮತ್ತು ತಪ್‌ಶೀಲ್ ಮತ್ತು ಗವರ್ನಮೆಂಟ್ ಸರ್ವೆ ರಿಕಾರ್ಡುಗಳಲ್ಲಾಗಲಿ, ಇತರ ಪಬ್ಲಿಕ್ ರಿಕಾರ್ಡುಗಳಲ್ಲಾಗಲಿ, ತಾಕುಗಳಿಗೆ ನಂಬರ್ ಹಾಕಲ್ಪಟ್ಟರೆ ಪ್ರತಿ ತಾಕಿನ ನಂಬರ್;

(*b*) ಅಂತಾ ಜಮೀನಿಗೆ ಸಾಲಿಯಾನಾ ತೆರತಕ್ಕ ತೀರ್ವೆ ಮೊಬಲಗು;

(*c*) ಅಂತಾ ತೀರ್ವೆಯು ಎಷ್ಟು ಕಿಸ್ತುಗಳಲ್ಲಿ, ಯಾವತಾರೀಖುಗಳಲ್ಲಿ ಪಾವತಿ ಮಾಡಲ್ಪಡತಕ್ಕದ್ದೋ ಅಂತಾ ವಾಯಿದೆ ಮತ್ತು ತಾರೀಖು;

(*d*) ಗುತ್ತಿಗೆಯ ಯಾವದಾದರೂ ವಿಶೇಷ ಒಡಂಬಡಿಕೆಗಳು;

(*e*) ತೀರ್ವೆಯು ಧಾನ್ಯರೂಪವಾಗಿ ಕೊಡಬೇಕಾದ ಪಕ್ಷಕ್ಕೆ ಒಪ್ಪಿಸಲ್ಪಡತಕ್ಕ ಹುಟ್ಟುವಳಿಯಲ್ಲಿ ಇಷ್ಟು, ಅಥವಾ ಹುಟ್ಟುವಳಿಯಲ್ಲಿ ಇಷ್ಟು ಭಾಗ, ಒಪ್ಪಿಸತಕ್ಕ ಕಾಲ, ರೀತಿ, ಒಪ್ಪಿಸತಕ್ಕಸ್ಥಳ.

97. "ಕಂದಾಯದ" ಮತ್ತು "ಅನುಭವದ" ಷಿಕ್ಮೀದಾರರು ತಹಲ್ ಸಲ್ಲಿಸುತಲಿದ್ದ ಅಥವಾ 92ನೇ ಸೆಕ್‌ಷನ್ ಅನುಸರಿಸಿ ನಿರ್ಣಯಿಸಲ್ಪಟ್ಟ ದರಗಳ ಪ್ರಕಾರ ಗುತ್ತಾಗಳನ್ನು ಪಡೆಯಲಿಕ್ಕೆ ಅರ್ಹರಾಗಿರುತ್ತಾರೆ.

ಕಂದಾಯ ಮತ್ತು ಅನುಭವ ಷಿಕ್ಮೀದಾರರ ಗುತ್ತಿಗೆಗಳ ಷರತ್ತುಗಳು.

98. ಇತರ ತಮಾಂ ಷಿಕ್ಮೀದಾರರೂ, ತಮಗೂ ತಮ್ಮ ಜಮೀನ್ದಾರರಿಗೂ ಒಡಂಬಡಿಕೆ ಮಾಡಲ್ಪಡಬಹುದಾದಂತಾ ಷರತುಗಳಮೇಲೆ ಗುತ್ತಿಗೆಗಳನ್ನು ಪಡೆಯುವದಕ್ಕೆ ಅರ್ಹರಾಗಿರುತ್ತಾರೆ.

ಇತರ ಷಿಕ್ಮೀದಾರರಿಗೆ ಗುತ್ತಿಗೆಗಳ ಷರತುಗಳು.

99. ಗುತ್ತಿಗೆ ಪತ್ರವನ್ನು ಕೊಡುವ ಪ್ರತಿಜಮೀನ್ದಾರನೂ ಷಿಕ್ಮೀದಾರನಿಂದ, ಗುತ್ತಿಗೆಯ ಷರತುಗಳಪ್ರಕಾರ ಪರಸ್ಪರ ಬರೆದು ಕೊಡಲ್ಪಟ್ಟ ಬರವಣಿಗೆಯಮೂಲಕವಾದ ಒಡಂ

ಜಮೀನ್ದಾರನು, ಷಿಕ್ಮೀದಾರನಿಂದ ಬರವಣಿಗೆಯ ಮೂಲ

ಕವಾದ ಒಡಂಬಡಿಕೆಯನ್ನು ಪಡೆಯುವದಕ್ಕೆ ಅರ್ಹನಾಗಿರ ತಕ್ಕದ್ದು.

ಒಡಿಕೆಯನ್ನು ಹೊಂದುವದಕ್ಕೆ ಅರ್ಹನಾಗಿರುತ್ತಾನೆ. ಯಾವ ಷಿಕ್ಮೀದಾರನಾಗಲಿ ಹೊಂದಲಿಕ್ಕೆ ಅರ್ಹವಾದ ಒಂದು ಗುತ್ತಿಗೆ ಕರಾರು ಕೊಡಲ್ಪಟ್ಟಲ್ಲಿ, ಅಂತಾ ಷಿಕ್ಮೀದಾರನಿಂದ ಒರೆಯಲ್ಪಟ್ಟ ಪರಸ್ಪರ ಒಡಂಬಡಿಕೆಯನ್ನು ಹೊಂದಲಿಕ್ಕೆ ಜಮೀನ್ದಾರನನ್ನು ಅರ್ಹನನ್ನಾಗಿ ಮಾಡತಕ್ಕದ್ದು.

ಮೇಲ್ಪಟ್ಟ ಹಿಡುವಳೀದಾರನು ತಿರಸ್ಕರಿಸಿದರೆ ಷಿಕ್ಮೀದಾರನು ಡೆಪ್ಯುಟಿ ಕಮ್ಮಿಷನರಿಗೆ ಗುತ್ತಿಗೆ ಪತ್ರದಬಗ್ಗೆ ದರಖಾಸ್ತು ಮಾಡತಕ್ಕದ್ದು.

100. ಪರಭಾರೇಯಾದ ಜಮೀನಿನ ಮೇಲ್ಪಟ್ಟ ಯಾವ ಹಿಡುವಳೀದಾರನಾಗಲಿ, ತಗಾದೇಮಾಡಿದಬಳಿಕ ಮೂರುತಿಂಗಳವರಿಗೂ ಅವನ ಷಿಕ್ಮೀದಾರ ಹೊಂದಲಿಕ್ಕೆ ಅರ್ಹನಾಗಿದ್ದ ಅಂತಾ ಗುತ್ತಿಗೆಪತ್ರವನ್ನು ಕೊಡಲಿಕ್ಕೆ ತಿರಸ್ಕರಿಸಿದರೆ, ಷಿಕ್ಮೀದಾರನು ಡೆಪ್ಯುಟಿ ಕಮ್ಮಿಷನರ್‌ಸಾಹೇಬರವರಿಗೆ ಆಬಗ್ಗೆ ದರಖಾಸ್ತು ಮಾಡುವದು ಅವನಿಗೆ ನ್ಯಾಯವಾಗಿರತಕ್ಕದ್ದು. ಸದರೀ ಡೆಪ್ಯುಟಿ ಕಮ್ಮಿಷನರು, ಕ್ರಮವಾದ ವಿಚಾರಣೆಮಾಡಿ, ಯಾವದಕ್ಕೆ ದರಖಾಸ್ತುದಾರ ಅರ್ಹನಾಗಿರುತ್ತಾನೋ ಅಂತಾ ಗುತ್ತಿಗೆಯ ಷರತ್ತುಗಳನ್ನು ನಿಶ್ಚೈಸಿ ಅಂತಾ ಗುತ್ತಾ ಪತ್ರವನ್ನು ದರಖಾಸ್ತುದಾರನಿಗೆ ಕೊಡುವಂತೆ ನಿಯಮಿಸತಕ್ಕದ್ದು.

ಗುತ್ತಿಗೆಯನ್ನು ಅಂಗೀಕರಿಸುವದಕ್ಕಾಗಲಿ, ಪರಸ್ಪರ ಒಡಂಬಡಿಕೆಯನ್ನು ಬರೆದುಕೊಡುವದಕ್ಕಾಗಲಿ, ಷಿಕ್ಮೀದಾರನು ನಿರಾಕರಿಸಿದರೆ, ಮೇಲ್ಪಟ್ಟ ಹಿಡುವಳೀದಾರನು ಡೆಪ್ಯುಟಿ ಕಮ್ಮಿಷನರಿಗೆ ದರಖಾಸ್ತು ಮಾಡತಕ್ಕದ್ದು.

101. ಪರಭಾರೆಯಾದ ಜಮೀನಿನ ಹಿಡುವಳಿಉಳ್ಳ ಯಾವ ಷಿಕ್ಮೀದಾರನಾಗಲಿ, ಅಂತಾ ಜಮೀನಿನ ಮೇಲ್ಪಟ್ಟ ಹಿಡುವಳೀದಾರನು ಕೊಡುವದಕ್ಕೆ ಅರ್ಹವಾದ ಗುತ್ತಿಗೆಯನ್ನು ಅಂಗೀಕರಿಸುವದಕ್ಕಾಗಲಿ, 99ನೇ ಸೆಕ್ಷನ್ ಅನುಸರಿಸಿ ಪರಸ್ಪರ ಒಡಂಬಡಿಕೆಯನ್ನು ಬರೆದುಕೊಡಲಿಕ್ಕಾಗಲಿ, ತಗಾದೇ ಮಾಡಲ್ಪಟ್ಟ ತರುವಾಯ ಒಂದು ತಿಂಗಳವರಿಗೆ ನಿರಾಕರಿಸಿದರೆ, ಮೇಲ್ಪಟ್ಟ ಹಿಡುವಳೀದಾರನು ಡೆಪ್ಯುಟಿ ಕಮ್ಮಿಷನರಿಗೆ ದರಖಾಸ್ತು ಕೊಡಬಹುದು. ಆಮೇಲೆ ಆತನು ಕೊಡುವದಕ್ಕೆ ಯತ್ನಿಸಿದ ಗುತ್ತಿಗೆಯು ಸರಿಯಾದದ್ದು ಯನ್ನುವದನ್ನು ನಿರ್ಣಯಿಸುವಬಗ್ಗೆ ಒಂದು ಕ್ರಮವಾದ ವಿಚಾರಣೆಯನ್ನು ಮಾಡತಕ್ಕದ್ದು. ಅದು ಯುಕ್ತವೆಂದು ಆತನು ಅಭಿಪ್ರಾಯಪಟ್ಟರೆ, ಗುತ್ತಿಗೆಯನ್ನು ಅಂಗೀಕರಿಸಿ ಅದಕ್ಕೆ ಅನುಸಾರವಾಗಿ ಒಂದು ಪರಸ್ಪರ ಕರಾರ್ ಬರೆದುಕೊಡುವಂತೆ ತಾಕೀದ್ ಮಾಡತಕ್ಕದ್ದು. ಕೊಡುವದಕ್ಕೆ ಬಂದ ಗುತ್ತಿಗೆ ಪತ್ರವು ಸರಿಯಾದ್ದಲ್ಲವೆಂದು ಡೆಪ್ಯುಟಿ ಕಮ್ಮಿಷನರಿಗೆ ತೋರಿದರೆ ಯಾವ ಗುತ್ತಿಗೆ ಪತ್ರವನ್ನು ಕೊಡತಕ್ಕದ್ದೋ ಅದನ್ನು ನಿಶ್ಚೈಸಿ ಅಂತಾ ಗುತ್ತಿಗೆಯನ್ನು ಅಂಗೀಕರಿಸುವಂತೆಯೂ, ತದನುಗುಣವಾಗಿ ಒಂದು ಪರಸ್ಪರ ಒಡಂಬಡಿಕೆಯನ್ನು ಬರೆದು ಕೊಡುವಂತೆಯೂ, ಷಿಕ್ಮೀದಾರನಿಗೆ ನಿಯಮಿಸತಕ್ಕದ್ದು. ಡೆಪ್ಯುಟಿ ಕಮ್ಮಿಷನರ ಫೈಸಲ್ ತಾರೀಖಿಗೆ ತರುವಾಯ ಹತ್ತು ದಿನಗಳೊಳಗೆ, ಮೇಲೆಕಂಡರೀತಿಯಲ್ಲಿ ಡೆಪ್ಯುಟಿ ಕಮ್ಮಿಷನರಿಂದ ಮಂಜೂರ್ ಮಾಡಲ್ಪಟ್ಟ ಅಥವಾ ತಿದ್ದುಪಾಟು ಮಾಡಲ್ಪಟ್ಟ ಪ್ರಕಾರ ಷಿಕ್ಮೀದಾರನು ಸದರೀ ಗುತ್ತಿಗೆ ಪತ್ರವನ್ನು ಅಂಗೀಕರಿಸದೇಯೂ, ಅಂತಾ ಗುತ್ತಿಗೆ ಷರತ್ತುಗಳಪ್ರಕಾರ ಒಂದು ಪರಸ್ಪರ ಒಡಂಬಡಿಕೆ ಬರದು ಕೊಡ

ಷಿಕ್ಮೀದಾರನು ಡೆಪ್ಯುಟಿ ಕಮ್ಮಿಷನರಿಗೆ ವಿಧೇಯನಾಗಿ ನಡಿಯುವದಕ್ಕೆ ತಿರಸ್ಕರಿಸಿದರೆ ಹೊರಪಡಿಸಲ್ಪಡುವಣ.

ದೇನೂ ಯಿದ್ದರೆ, ಡೆಪ್ಯುಟಿ ಕಮ್ಮಿಷನರು, ಮೇಲ್ಪಟ್ಟ ಹಿಡುವಳೀದಾರನ ದರಖಾಸ್ತಿನಮೇಲೆ, ಮತ್ತು ಷಿಕ್ಮೀದಾರನಿಗೆ ನೋಟೀಸ್ ಸಾದರ್ ಮಾಡಿದಮೇಲೆ ಷಿಕ್ಮೀದಾರನನ್ನು ಹೊರಪಡಿಸಲಿಕ್ಕೆ ಹುಕುಂ ಕೊಡಬಹುದು.

ಡೆಪ್ಯುಟಿ ಕಮ್ಮಿಷನರು 100 ಮತ್ತು 101 ಈ ಸೆಕ್ಷರ್ನಗಳನುಸರಿಸಿ ವಿಚಾರಣೆ ಮಾಡೋಣವರಲ್ಲಿ 85ರಲಾ॥ 93ರ ವರಿಗೆ ಇರತಕ್ಕ ಸೆಕ್ಷರ್ನಗಳಲ್ಲಿ ನಮೂದು ಇರುವ ಕಾನೂನುಗಳಿಗೆ ಬದ್ಧರಾಗಿರತಕ್ಕದ್ದು.

102. 100 ಮತ್ತು 101ನೇ ಸೆಕ್ಷರ್ನಗಳಲ್ಲಿ ವಿಧಿಸಲ್ಪಟ್ಟ ವಿಚಾರಣೆಗಳ ಬಗ್ಗೆ ಗುತ್ತಿಗೇ ವೊಬಲಗು ಅಥವಾ ದರಗಳ ವಿಷಯವಾಗಿ ಬರುವ ತಕರಾರ್‌ಗಳನ್ನು ಫೈಸಲ್ ಮಾಡೋಣದರಲ್ಲಿ ಡೆಪ್ಯುಟಿ ಕಮ್ಮಿಷನರು, 85ರ ಮೊದಲು 93ರ ವರಿಗೆ ಇರುವ ಸೆಕ್ಷರ್ನಗಳಲ್ಲಿ ಅಡಗಿರುವ ರೂಲ್ಸನಿಂದ ಬದ್ಧರಾಗಿರತಕ್ಕದ್ದು.

ನಿಯಮಿಸಲ್ಪಟ್ಟ ಗುತ್ತಿಗೆಯನ್ನು ಕೊಡಲಿಕ್ಕೆ ಮೇಲ್ಪಟ್ಟ ಹಿಡುವಳೀದಾರನು ನಿರಾಕರಿಸಿದರೆ ನಡಿಸತಕ್ಕ ನಡವಳಿತ.

103. (1) 100ನೇ ಸೆಕ್ಷರ್ನ ಅನುಸರಿಸಿ ಬಂದು ಫೈಸಲ್‌ನಿಂದ ಒಂದು ಗುತ್ತಿಗೆ ಪತ್ರವನ್ನು ಕೊಡುವಂತ್ರ ನಿಶ್ಚಯಿಸಲ್ಪಟ್ಟ ಪ್ರಕಾರ ಮೇಲ್ಪಟ್ಟ ಹಿಡುವಳೀದಾರನು ಸದರೀ ಗುತ್ತಿಗೆಯನ್ನು ಕೊಡಲಿಕ್ಕೆ ತಿರಸ್ಕರಿಸಿದರೆ ಅಥವಾ ಸಾವಕಾಶ ಮಾಡಿದರೆ, ಡೆಪ್ಯುಟಿ ಕಮ್ಮಿಷನರು, ಫೈಸಲಿನ ಷರತ್‌ಗಳ ಪ್ರಕಾರ ತಮ್ಮ ಸೈರ್ನ ಮೊಹರ್‌ನಿಶೀ ಗುತ್ತಿಗೆಪತ್ರವನ್ನು ಕೊಡತಕ್ಕದ್ದು; ಅಂತಾ ಗುತ್ತಿಗೆಯು ಮೇಲ್ಪಟ್ಟ ಹಿಡುವಳೀದಾರನಿಂದ ಕೊಡಲ್ಪಟ್ಟಿದ್ದರೆ ಹ್ಯಾಗೋ ಹಾಗೆಜಾರಿವುಳ್ಳದ್ದಾಗಿರತಕ್ಕದ್ದು.

ಷಿಕ್ಮೀದಾರನಿಂದ ಸಲ್ಲತಕ್ಕ ತೀರ್ವೆಯ ವೊಬಲಗಿಗೆ ಡೆಪ್ಯುಟಿ ಕಮ್ಮಿಷನರ ಫೈಸಲು ಸಾಕ್ಷ್ಯವಾಗಿರತಕ್ಕದ್ದು.

(2) 101ನೇ ಸೆಕ್ಷರ್ನ ಅನುಸರಿಸಿ ಕೊಡಲ್ಪಟ್ಟ ಒಂದು ಫೈಸಲ್‌ನಿಂದ, ಬಂದು ಪರಸ್ಪರ ಒಡಂಬಡಿಕೆಯನ್ನು ಬರೆದುಕೊಡಬೇಕಾಗುವ ಷಿಕ್ಮೀದಾರನು ಅದನ್ನು ಬರೆದು ಕೊಡುವದಕ್ಕೆ ನಿರಾಕರಿಸಿದ ಪಕ್ಷಕ್ಕೆ ಅಥವಾ ತಪ್ಪಿದ ಪಕ್ಷಕ್ಕೆ ಸದರೀ ಫೈಸಲು, ಅಂತಾ ಷಿಕ್ಮೀಧಾರನಿಂದ ಬರತಕ್ಕ ತೀರ್ವೆಯ ವೊಬಲಗಿಗೆ ಸಾಕ್ಷ್ಯವಾಗಿರತಕ್ಕದ್ದು, ಮತ್ತು ಸದರೀ ಫೈಸಲು ಅವನಿಂದ ಬರೆದುಕೊಡಲ್ಪಟ್ಟ ಪರಸ್ಪರ ಒಡಂಬಡಿಕೆಯಂತೆಯೇ ಬಲವನ್ನೂ ಫಲವನ್ನೂ ಪಡೆಯತಕ್ಕದ್ದು.

ಮೇಲ್ಪಟ್ಟ ಹಿಡುವಳೀದಾರನಿಗೆ ಸಲ್ಲತಕ್ಕ ವೊಬಲಗಿನ ವಸೂಲಾತಿ.

ಮುಂ. ರೆ. ಕೋ. 86ನೇ ಸೆಕ್ಷರ್ನ.

ತೀರ್ವೇ ವಸೂಲೀ ವಿಷಯದಲ್ಲಿ ಕುಮ್ಮಕ್ಕಿಗೆ ಮೇಲ್ಪಟ್ಟ ಹಿಡುವಳೀದಾರನು ಅರ್ಹನಾಗಿರುವಣ.

104. (ಸರ್ನ 1865ನೇ ಇಸವಿಯ 1ನೇ ಮುಂಬೈ ರೆವಿನ್ಯು ಆಕ್ಟನುಸರಿಸಿಯಾಗಲಿ, ಈ ರೆಗ್ಯುಲೇಷನಿನ 8ನೇ ಅಧ್ಯಾಯ ಅನುಸರಿಸಿಯಾಗಲಿ ಯಾವ ಗ್ರಾಮಗಳ ಫೈಸಲಾತಿಯು ಪೂರೈಸಿ ಇರುವದಿಲ್ಲವೋ ಅಂತಾ ಗ್ರಾಮಗಳಲ್ಲಿ ಪರಭಾರೇಯಾಗದ ಜಮೀನ್‌ಗಳ ಅನುಭವದಾರರಲ್ಲದ ಇತರ) ಮೇಲ್ಪಟ್ಟಹಿಡುವಳೀದಾರರು ಡೆಪ್ಯುಟಿ ಕಮ್ಮಿಷನರಿಗೆ

ಬರವಣಿಗೆಯಲ್ಲಿ ದರಖಾಸ್ತು ಕೊಟ್ಟಮೇಲೆ, ತಮ್ಮ ಹಿಡುವಳಿಗಳಲ್ಲಿ ಕಮ್ಮಿಹಿಡುವಳೀದಾರರಿಂದಾಗಲಿ, ಜಂಟೀ ಹಿಸ್ಸೇದಾರರಿಂದಾಗಲಿ, ತನಗೆ ಸಲ್ಲತಕ್ಕ ಗುತ್ತಿಗೇ ಹಣವನ್ನು ಅಥವಾ ಜಮೀನ್ ಕಂದಾಯವನ್ನು ವಸೂಲ್ ಮಾಡುವ ಬಗ್ಗೆ, 152ನೇ ಸೆಕ್ಷನ್‌ನಲ್ಲಿ ಅಡಗಿರುವ ಅಂಶವಿನಾ, ಗವರ್ನ್‌ಮೆಂಟಿನಿಂದ ಜಮೀನ್ ಕಂದಾಯದ ವಸೂಲೀ ಬಗ್ಗೆ ಈ ರೆಗ್ಯುಲೇಷನಿನ 11ನೇ ಅಧ್ಯಾಯದಲ್ಲಿ ವಿವರಿಸಲ್ಪಟ್ಟ ಕಾನೂನ್‌ಗಳನುಸರಿಸಿ ಮತ್ತು ಸದರೀ ರೀತಿಯಾಗಿಯೇ ಎಚ್ಚರಿಕೆ ಮತ್ತು ಇತರ ಕ್ರಮಗಳ ಪ್ರಯೋಗದ ಸಹಾಯವನ್ನು ಹೊಂದಲಿಕ್ಕೆ ಅರ್ಹರಾಗಿರತಕ್ಕದ್ದು:

ಪರಂತು, ಯಾವ ಸಾಲ್‌ನಲ್ಲಿ ಸದರೀ ತೀರ್ವೆ ಪಾವತೀಯಾಗತಕ್ಕದ್ದಾಯಿತೋ ಅಂತಾ ರೆವಿನ್ಯೂ ಸಾಲ್ ವಳಗಾಗಲಿ, ಫಿಕ್ರೀ ಸಾಲ್ ವಳಗಾಗಲಿ, ಅಂತಾ ದರಖಾಸ್ತು ಮಾಡಲ್ಪಡತಕ್ಕದ್ದು, ಮತ್ತು, ಅಂತಾ ದರಖಾಸ್ತು ಕಮ್ಮಿ ಹಿಡುವಳೀದಾರನಿಂದ ಬರಬೇಕಾದ ತೀರ್ವೆಯ ಅಥವಾ ಜಮೀನ್ ಕಂದಾಯದ ವಸೂಲೀ ಬಗ್ಗಾಗಿ ಇದ್ದ ಪಕ್ಷಕ್ಕೆ ಅಂತಾ ದರಖಾಸ್ತು ಅಂತಾ ಕಮ್ಮಿ ಹಿಡುವಳೀದಾರನಿಂದ ಕ್ರಮವಾಗಿ ಬರೆದು ಕೊಡಲ್ಪಟ್ಟ ಬರವಣಿಗೇ ಮೂಲಕವಾದ ಒಡಂಬಡಿಕೆಯು ಆಧಾರವುಳ್ಳದ್ದಾಗಿದ್ದು ಸದರೀದರಖಾಸ್ತಿನ ಸಂಗಡ ಹಾಜರ್ಮಾಡಲ್ಪಡತಕ್ಕದ್ದಾಗಿರತಕ್ಕದ್ದು.

ಮುಂ. ರೆ. ಕೋ. 87ನೇ ಸೆಕ್ಷನ್.

ಅಂತಾ ದರಖಾಸ್ತಿನ ಮೇಲೆ ಡೆಪ್ಯುಟಿ ಕಮ್ಮಿಷನರು ಹ್ಯಾಗೆ ನಡವಳಿತ ನಡಿಸತಕ್ಕದ್ದು.

105. ಡೆಪ್ಯುಟಿ ಕಮ್ಮಿಷನರಿಗೆ 104ನೆಯ ಸೆಕ್ಷನ್ ಅನುಸರಿಸಿ ದರಖಾಸ್ತು ಮಾಡಲ್ಪಟ್ಟಲ್ಲಿ ಡೆಪ್ಯುಟಿ ಕಮ್ಮಿಷನರು, ಕಮ್ಮಿಹಿಡುವಳೀದಾರನಿಗಾಗಲಿ, ಜಂಟೀಹಿಸ್ಸೇದಾರನಿಗಾಗಲಿ, ಮೊಕದ್ದಮೆಯ ವಿಚಾರಣೆ ಬಗ್ಗೆ ಒಂದು ದಿನವನ್ನು ಮೊಕರರ್ ಮಾಡಿ ಸದರೀ ದರಖಾಸ್ತಿನ ಬಾಬತು ಒಂದು ನೋಟೀಸನ್ನು ಸಾದರ್ ಮಾಡಿಸತಕ್ಕದ್ದು. ಹಾಗೆ ಮೊಕರರಾದ ದಿನದಲ್ಲಿ ಅವರು ಪೂರ್ಣ ವಿಚಾರಣೆ ಮಾಡಿ, ತೀರ್ವೆಯ ಅಥವಾ ಜಮೀನ್ ಕಂದಾಯದ ಬಾಬತು ಅವರ ಮುಂದೆ ಇರತಕ್ಕ ಸಾಕ್ಷ್ಯದಮೇಲೆ ನ್ಯಾಯತಃ ಸಲ್ಲತಕ್ಕದ್ದಾಗಿ ಅವರಿಗೆ ಕಾಣುವಂತಾ ಮೊಬಲಗಿನ ವಸೂಲೀ ಬಗ್ಗೆ ಮೇಲ್ಪಟ್ಟ ಹಿಡುವಳೀದಾರನಿಗೆ ಕಮ್ಮಕ್ಕು ಮಾಡುವ ಬಗ್ಗೆ ಹುಕುಂ ಕೊಡತಕ್ಕದ್ದು.

ಕುಮ್ಮಕ್ಕು ನಿಷೇಧಿಸಲ್ಪಡಬಹುದು ಅಥವಾ ಕೆಲವುಮಟ್ಟಿಗೆಮಾತ್ರ ಕೊಡಲ್ಪಡಬಹುದು.

ಆದರೆ ಕಕ್ಷಿಗಾರರಲ್ಲಿ ವ್ಯವಹಾರ ವಿಷಯವಾದ ಮುಖ್ಯಾಂಶವು ತಿಳಿಯಲಿಕ್ಕೆ ಪ್ರಯಾಸವಾದ ಸ್ವರೂಪವುಳ್ಳದ್ದಾಗಿದೆಯೆಂದು ಡೆಪ್ಯುಟಿ ಕಮ್ಮಿಷನರಿಗೆ ಕಾಣಬಂದರೆ, ಅವರು, ಕೇಳಿಕೊಳ್ಳಲ್ಪಟ್ಟ ಕುಮ್ಮಕ್ಕನ್ನು ಮುನಾಸಬುಪ್ರಕಾರ ತಿರಸ್ಕರಿಸಲಾದರೂ ಬಹುದು, ಯಾವದಕ್ಕೆ ವ್ಯವಹಾರ ಸಂಬಂಧಿಸುತದೋ ಅಂತಾ ಜಮೀನಿಗೆ ಈ ರೆಗ್ಯುಲೇಷನಿನ 8ನೇ ಅಧ್ಯಾಯದ ನಿಬಂಧನೆಗಳನುಸರಿಸಿಯಾಗಲಿ ಅಥವಾ 129ನೇ ಸೆಕ್ಷನ್‌ನಿಂದ ಕಾಯಂ ಮಾಡಲ್ಪಟ್ಟ ಯಾವ ಸರ್ವೇ ಸೆಟಲ್‌ಮೆಂಟಿನಲ್ಲಾಗಲಿ ಕಂದಾಯವು ಹಾಕಲ್ಪಟ್ಟಿದ್ದರೆ ಸದರೀ ಜಮೀನಿಗೆ ಹಾಗೆ ಠರಾವ್ ಮಾಡಲ್ಪಟ್ಟ ಕಂದಾಯದ ಪರಿಮಿತಿಗೆಮಾತ್ರ ಕುಮ್ಮಕ್ಕನ್ನು ಕೊಡಲಾದರೂ ಬಹುದು.

ಮೇಲ್ಪಟ್ಟ ಹಿಡುವಳೀದಾರನು ಕೀಳ್ಪಟ್ಟ ಹಿಡುವಳೀದಾರನಿಂದ ಇನ್ನೂ ಸಲ್ಲ ಬೇಕಾಗಿ ಇರುವದಾಗಿ ಎಣಿಸಬಹುದಾದ ಮೊಬಲಗನ್ನು ವಸೂಲ್ ಮಾಡುವದಕ್ಕೆ ಸಿವಿಲ್ ಕೋರ್ಟುಗಳಿಗೆ ಹೋಗುವದಕ್ಕೆ ನಿರೋಧಿಸತಕ್ಕ ಅಂಶವು ಈ ಸೆಕ್‌ಷನ್ನಲ್ಲಿ ಯೇನೂಯಿಲ್ಲವು.

ಶಿವಿಲ್ ವ್ಯಾಜ್ಯಕ್ಕೆ ಕಾಲ ನಿಬಂಧನೆ ಇಲ್ಲವು.

ಪರಭಾರೆಯಾದ ಜಮೀನುಗಳ ಹಿಡುವಳೀದಾರರಿಗೆ ವಿಶೇಷಾಧಿಕಾರಗಳನ್ನು ಕೊಡುವಣ.

ಮುಂ. ರೆ. ಕೋ. 88ನೇ ಸೆಕ್‌ಷನ್.

106. ಪರಭಾರೆಯಾದ ಜಮೀನುಗಳ ಯಾವ ಹಿಡುವಳೀದಾರನಿಗಾಗಲಿ, ಕಮ್ಮಿಷನ್ ಅಧಿಕಾರದಲ್ಲಿ ವಿವರಿಸಲ್ಪಟ್ಟ ಜಮೀನು ವಿಷಯದಲ್ಲಿ ಇದರಡಿ ಕಂಡ ಅಧಿಕಾರಗಳ ಪೈಕಿ ವಿಶಿಷ್ಟವನ್ನಾಗಲಿ ಯಾವದನ್ನಾಗಲಿ ಉಂಟು ಮಾಡುವ ಒಂದು ಕಮ್ಮಿಷನನ್ನು ಯಾವಾಗಲಾಗಲಿ ಕೊಡುವದು ಗವರ್ನಮೆಂಟಿಗೆ ನ್ಯಾಯವಾಗಿ ಇರತಕ್ಕದ್ದು; ಅವುಗಳು ಯಾವವೆಂದರೆ:—

ಗವರ್ನಮೆಂಟನವರು, ಪರಭಾರೇಯಾದ ಕೆಲವು ಜಮೀನುಗಳ ಹಿಡುವಳೀದಾರರಿಗೆ, ಕೆಲವು ಅಧಿಕಾರ ಕಮ್ಮಿಷನುಗಳ ಮೂಲಕ ಕೊಡಬಹುದು.

(*a*) ತನಗೆ ಸಲ್ಲ ಬೇಕಾದ ಜಮೀನು ಕಂದಾಯವನ್ನಾಗಲಿ, ಗುತ್ತಿಗೆಯನ್ನಾಗಲಿ, ಸಲ್ಲಿಸುವ ಬಗ್ಗೆ ಜಾಮೀನು ಕೇಳುವಣ, ಮತ್ತು ಅದು ಕೊಡಲ್ಪಡದೆ ಇದ್ದರೆ, ಡೆಪ್ಯುಟಿ ಕಮ್ಮಿಷನರು 156ರ ಮೊದಲು 158 ರವರಿಗಿನ ಸೆಕ್‌ಷನುಗಳನುಸರಿಸಿ ತೆಗೆದು ಕೊಳ್ಳುವದಕ್ಕೆ ಅಧಿಕಾರ ಕೊಡಲ್ಪಟ್ಟ ಮುಂಜಾಗ್ರತೆಗಳನ್ನು ವಹಿಸುವಣ;

(*b*) ಮೇಲೆಕಂಡಂತೆ ಅಂತಾ ಜಮೀನು ಕಂದಾಯವನ್ನಾಗಲಿ, ಗುತ್ತಿಗೆಯನ್ನಾಗಲಿ, ತೆರಲಿಕ್ಕೆ ತಪ್ಪುವ ಜನಗಳ ಸ್ವತ್ತನ್ನು ಜಫ್ತೀ ಮಾಡುವಣ;

(*c*) ತಮಗೆ ಸಲ್ಲಬೇಕಾದ ಜಮೀನು ಕಂದಾಯವಾಗಲಿ, ಗುತ್ತಿಗೆಯಾಗಲಿ, ಯಾವ ಕಾಲಗಳಲ್ಲಿ ಮತ್ತು ಯೆಷ್ಟು ತಿಂಗಳಲ್ಲಿ ಸಲ್ಲತಕ್ಕದ್ದೋ ಅವುಗಳನ್ನೂ ಆಗಿಂದಾಗ್ಯೆ ಗೊತ್ತು ಮಾಡುವಣ;

(*d*) 68 ಮತ್ತು 69ನೆಯ ಸೆಕ್‌ಷನುಗಳನುಸರಿಸಿ ಒಬ್ಬ ಡೆಪ್ಯುಟಿ ಕಮ್ಮಿಷನರ ಅಧಿಕಾರಗಳನ್ನು ಚಲಾಯಿಸುವಣ;

(*e*) 77ನೆಯ ಸೆಕ್‌ಷನ್ ಅನುಸರಿಸಿ, ರಾಜೀನಾಮೇಯ ನೋಟೀಸುಗಳನ್ನು ತೆಗೆದುಕೊಂಡು; ಸದರೀ ಸೆಕ್‌ಷನ್ನಲ್ಲಿ ವಿಧಿಸಲ್ಪಟ್ಟ ಪ್ರಕಾರ, ಯಾವ ತಾರೀಖುಗಳವರಿಗೆ ಅಂತಾ ನೋಟೀಸುಗಳು ತೆಗೆದು ಕೊಳ್ಳಲ್ಪಡತಕ್ಕವೋ ಅಂತಾ ತಾರೀಖುಗಳನ್ನು ನಿರ್ಣಯಿಸುವಣ;

(*f*) 138ನೇ ಸೆಕ್‌ಷನ್ನಲ್ಲಿ ಸರ್ವೇ ಆಫೀಸರುಗಳಿಗೆ ವಿಧಿಸಲ್ಪಟ್ಟ ರೀತಿಯಾಗಿಯಲ್ಲೆ ಗುರುತುಗಳನ್ನು ಕಾಪಾಡುವಬಗ್ಯೆ ಮತ್ತು ದುರಸ್ತು ಮಾಡುವ ಬಗ್ಯೆ ಯೇರ್ಪಾಡುಗಳನ್ನು ಮಾಡುವಣ.

ಪರಂತು, (*c*) ಮೊದಲು (*f*) ವರಿಗಿನ ಕ್ಲಾಜುಗಳಲ್ಲಿ (ಉಭಯ ಕ್ಲಾಜುಗಳೂ ಸೇರಿ) ಯೋಚಿಸಲ್ಪಟ್ಟ ಅಧಿಕಾರಗಳು, 244ನೆ ಸೆಕ್‌ಷನ್ ನಿಬಂಧನೆಗಳನುಸರಿಸಿ, ಸರ್ವೆ ಸೆಟಲ್‌ಮೆಂಟು (ಯಾನೆ ಫೈಸಲಾತಿಯು) ವ್ಯಾಪಿಸಿ ಇರುವ ಜಮೀನುಗಳ ಹಿಡುವಳೀದಾರರಿಗೆ ಮಾತ್ರ ಉಂಟು ಮಾಡಲ್ಪಡತಕ್ಕವು.

625

ಮುಂ. ರೆ. ಕೋ. 89ನೇ ಸೆಕ್ಷನ.

ಅಂತಾ ಕಮ್ಮಿಷನಿನ ಷರತ್ತುಗಳು.

107. ಅಂತಾ ಪ್ರತಿ ಕಮ್ಮಿಷನೂ G ಷೆಡ್ಯೂಲ್ ನಮೂನೆಯಲ್ಲಿದ್ದು ಗವರ್ನ್‌ಮೆಂಟ ಇಛ್ಛಾನುಗುಣವಾಗಿ ವಾಪಸಮಾಡಿಕೊಳ್ಳುವದಕ್ಕೆ ಗುರಿಯಾಗಿರತಕ್ಕದ್ದು; ಮತ್ತು ಗವರ್ನ್‌ಮೆಂಟಿಗೆ ಯುಕ್ತತೋರಿದರೆ, ಒಂದು ಕಮ್ಮಿಷನನ್ನು ಪರಭಾರೆಯಾದ ಜಮೀನ್ಗಳ ಬಬ್ಬು ಹಿಡುವಳೀದಾರನ ಬಾಬತು ಬಬ್ಬ ಅಥವಾ ಹೆಚ್ಚು ಮಂದಿ ಮುತಾಲೀಕರಿಗೂ ಮತ್ತು ಹಿಡುವಳೀದಾರನಿಗೆ ಖುದ್ದಾಗಿಯೂ ಕೊಡಲ್ಪಡಬಹುದು.

ಮುಂ. ರೆ. ಕೋ. 90ನೇ ಸೆಕ್ಷನ.

ಕಮ್ಮಿಷನ ಹೊಂದಿದವನು ಕೆಲವು ಸಂಗತಿಗಳಲ್ಲಿ ಡೆ॥ ಕಮ್ಮಿಷನರನ್ನು ಕೇಳತಕ್ಕದ್ದು.

108. ಅಂತಾ ಯಾವ ಕಮಿಷನನ್ನು ಹೊಂದಿದವನು, ಹಣ ಪಾವತೀ ಮಾಡಲಿಕ್ಕೆ ತಪ್ಪಿದವನ ಸ್ವತ್ತನ್ನು ಜಪ್ತೀಮಾಡಿದರೆ, ಹಾಗೆ ಮಾಡಿದ್ದನ್ನು ಕುರಿತು ಆತನು ಕೂಡ್ಲೇ ಡೆ॥ ಕಮ್ಮಿಷನರಿಗೆ ರಿಪೋರ್ಟು ಮಾಡತಕ್ಕದ್ದು. ಯಾವ ತಗಾದೆಗಾಗಿ ಜಪ್ತೀ ಮಾಡಲ್ಪಟ್ಟಿರುತ್ತೋ ಅಂತಾ ತಗಾದೆಯು, ಡೆಪ್ಯುಟಿ ಕಮ್ಮಿಷನರಿಗೆ ಯುಕ್ತತೋರುವ ವಿಚಾರಣೆ ಮಾಡಿದಮೇಲೆ ನ್ಯಾಯವೆಂದು ಕಾಣಬಂದರೆ, ಸ್ವತ್ತಿನ ಹರಾಜ್ ಬಗ್ಗೆ ಹುಕುಂ ಕೊಟ್ಟು, 180ರ ಮೊದಲು 201ರ ವರಿಗಿನ ಸೆಕ್ಷನ್‌ಗಳ ನಿಬಂಧನೆಗಳಿಗೆ ಅನುಗುಣವಾಗಿ ಡೆಪ್ಯುಟಿ ಕಮ್ಮಿಷನರಿಂದಾಗಲಿ, ಅವರ ತಾಬೇದಾರರಿಂದಾಗಲಿ ಹರಾಜ್ ನಡಿಸಲ್ಪಡತಕ್ಕದ್ದು.

ಮುಂ. ರೆ. ಕೋ. 91ನೇ ಸೆಕ್ಷನ.

ಬಲಾತ್ಕಾರದ ಬಾಬತು ಪದ್ಧತಿ ಯಾವಾಗ ಮೌಕೂಫ ಗತಕ್ಕದ್ದು.

109. ತಮಾಂ ಜುಲ್ಮೀ ನಡವಳಿತಗಳೂ ಮೌಕೂಫಾಗತಕ್ಕವು; ಯಾವಾಗಂದರೆ;

ಮೊಬಲಗು ಪಾವತೀಮಾಡಲಿಕ್ಕೆ ತಪ್ಪಿದವನು, ಪಾವತೀಮಾಡುವಲ್ಲಿ ಅಥವಾ ಅವನಿಂದ ತಗಾದೆಮಾಡಲ್ಪಟ್ಟ ಮೊಬಲಗನ್ನು ಪ್ರೊಟೆಸ್ಟುಯಾನೆ ತಕರಾರುನಿಶಿ ಪಾವತೀಮಾಡುವದಕ್ಕೆ ಬರುವಲ್ಲಿ;

ಅಥವಾ ಕಮ್ಮಿಷನ್ ಹೊಂದಿದವನಿಗಾಗಲಿ, ಅವನ ಮುತಾಲೀಕ, ಯಾ ಮುತಾಲೀಕರಿಗಾಗಲಿ, ಡೆಪ್ಯುಟಿ ಕಮ್ಮಿಷನರಿಗಾಗಲಿ, E ಷೆಡ್ಯೂಲಿನ ಅಥವಾ ಬದಸ್ತೂರ್ ಫಲವುಳ್ಳ ನಮೂನೇಯಲ್ಲಿ ತೃಪ್ತಿಕರವಾದ ಜಾಮೀನನ್ನು ಕೊಟ್ಟಮೇಲೆ.

ಮತ್ತು, ಮೇಲೆಕಂಡಂತೆ ಅಂತಾ ಯಾವದಾದರೂ ಕಮಿಷನನ್ನು ಹೊಂದಿದ ಯಾವನಾಗಲಿ, ತಾನಾಗಿ ಅಥವಾ ತನ್ನ ಮುತಾಲೀಕರ ಮೂಲಕ, ಮೇಲೆ ಕಂಡಂತೆ ಮೊಬಲಗು ಪಾವತೀಮಾಡಿದ ಮೇಲೆ ಅಥವಾ ಮೇಲೆಕಂಡಂತೆ ಜುಲ್ಮೀನಡವಳಿತಗಳನ್ನು ನಡಿಸಿದರೆ, ಟೆಂಡರ (ಯಾನೆ ಕೊಡುವದಕ್ಕೆ ಹೋಗುವಣ) ಮಾಡಿದಮೇಲೆ, ಅಥವಾ ಅದರ ಬಾಬತು ಟೆಂಡರ ಮಾಡಿದ ಬಳಿಕ ಡೆಪ್ಯುಟಿ ಕಮ್ಮಿಷನರ ಮುಂದೆ ಥೂಟ ವಿಚಾರಣೆಯಲ್ಲಿ ತಕಸೀರ್ ಆಪಾದಿಸಲ್ಪಟ್ಟಮೇಲೆ ಅಂತಾ ಜುಲ್ಮೀನಡವಳಿತದಿಂದ ವಸೂಲ್‌ಮಾಡಲ್ಪಡಬೇಕಾದ ಕಂದಾಯದ ಮೊಬಲಗಿಗೆ ಮೂರರಷ್ಟಕ್ಕೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಮುಂ. ರೆ. ಕೋ. 92ನೇ ಸೆಕ್‍ಷನ್...

ಸಾಲ್ ಮಜಕೂರ್ ವ ಸಾಲ್ ಗುಜಸ್ತೇ ಬಾಕೀಗಳಿಗೆ ವ್ಯಾಪಿಸತಕ್ಕ ಬಗ್ಯೆ ಕಮಿಷ್ನರ್ ಕೆಳಗೆ ಅಧಿಕಾರ.

110. ಅಂತಾ ಯಾವ ಕಮಿಷ್ನರಿಂದಾಗಲಿ ಉಂಟುಮಾಡಲ್ಪಟ್ಟ ಅಧಿಕಾರವು, ಸಾಲ್ ಮಜಕೂರಿನ ಮತ್ತು ಕೂಡ್ಲೆ ಇದಕ್ಕೆ ಹಿಂದಿನ ಸಾಲಿನ ಕಂದಾಯದ ಅಥವಾ ಗುತ್ತಿಗೆಯ ಪಾವತೀಯ ಜಾರೀಗೆ, ವ್ಯಾಪಿಸತಕ್ಕದ್ದೇ ಹೊರತು ಇನ್ನೂ ಹಿಂದಿನಸಾಲ್‍ಗಳಿಗಲ್ಲವು.

ಮುಂ. ರೆ. ಕೋ. 93ನೇ ಸೆಕ್‍ಷನ್.

ಕಮಿಷ್ನರ್ ಹಿಡುವಳೀದಾರನು ಯಾವದಾದರೂ ಬಗರ್ ಮಾಮೂಲ್ ಯಾ ಹೆಚ್ಚು ತಗಾದೆಯನ್ನು ಚಲಾಯಿಸಲಾಗದು.

111. ಇಂತಾ ಯಾವದಾದರೂ ಕಮಿಷ್ನರಿನ ಹಿಡುವಳೀದಾರನು, ಅಂಥಾ ತಗಾದೇತಾರೀಖಿಗೆ ಮುಂದೆ ಯಾವ ಕಮಿಷ್ನ ಹಿಡುವಳೀದಾರನಾಗಲಿ ಪಾವತೀಮಾಡಿರುವದಕ್ಕಿಂತ ಅಥವಾ, (ದಸ್ತಾವೇಜುಗಳ ರಿಜಿಸ್ಟ್ರೇಷನನ್ನು ಕುರಿತು ತತ್ಕಾಲದಲ್ಲಿ ಜಾರೀ ಇರುವ ಕಾನೂನ್ ಅನುಸರಿಸಿ ಕ್ರಮ ಪ್ರಕಾರ ರಿಜಿಸ್ಟರ್‍ಮಾಡಲ್ಪಟ್ಟ) ಬರವಣಿಗೆಯಲ್ಲಿರುವ ಬಂದು ದಸ್ತಾವೇಜಿನ ಮೂಲಕ ಪಾವತೀಮಾಡುವಂತೆ, ಬಡಂಬಡಿಕೆಮಾಡಿಕೊಂಡಿರಬಹುದಾದದಕ್ಕಿಂತ ಅಥವಾ ಡೆಪ್ಯುಟಿ ಕಮಿಷ್ನರು 92, 100 ಅಥವಾ 101ನೇ ಸೆಕ್‍ಷನ್‍ಗಳನ್ನನುಸರಿಸಿ ಮಾಡಲ್ಪಟ್ಟ ವಿಚಾರಣೆಯಲ್ಲಿ ಗುತ್ತಿಗೆಯ ಯುಕ್ತವಾದ ಮೊಬಲಗೆಂದು ಫೈಸಲ್‍ಮಾಡಿ ಇರಬಹುದಾದದಕ್ಕಿಂತ ಜಾಸ್ತೀಯಾಗಿ ಕಂದಾಯ ಯಾ ಗುತ್ತಿಗೆಯ ಬಗ್ಯೆ ತಗಾದೇ ಮಾಡಕೂಡದು.

ಹಾಗೆ ಮಾಡುವ ಬಗ್ಯೆ ದಂಡನೆ.

ಯಾವದರ ಬಗೆ ಪಾವತೀಯು ನ್ಯಾಯತಃ ಜಾರೀಗೆ ತರಲ್ಪಡತಕ್ಕದ್ದೋ ಅಂತಾ ಮೊಬಲಗಿಗೆ ಜಾಸ್ತೀಯಾಗಿ ಯಾರಿಗೆ ಯಾವ ತಗಾದೇಯನ್ನಾಗಲಿ ಜಾರೀಗೆ ತರಲ್ಪಡತಕ್ಕದ್ದೋ ಅಂತಾ ಮನುಷ್ಯನು, ಡೆಪ್ಯುಟಿಕಮಿಷ್ನರ ಮುಂದೆ ಬಂದು ಪ್ಲೇಂಟ್ ವಿಚಾರಣೆಯಲ್ಲಿ, ಕಮಿಷ್ನರ್ ಹಿಡುವಳೀದಾರನ ತಕ್ಸೀರ್ ರುಜುವಾದನಂತರ ಆದಮೇಲೆ, ಸುಕ್ರಾನ್‍ಗಳ ಮೂಲಕ ಅಂತಾ ಯಾವದಾದರೂ ಜಾಸ್ತೀ ತಗಾದೇ ಮೊಬಲಗಿನ ಮೂರರಷ್ಟು ಮೊಬಲಗನ್ನು ವಸೂಲ್‍ಮಾಡುವದಕ್ಕೆ ಅರ್ಹನಾಗಿರತಕ್ಕದ್ದು. ಮತ್ತು ಹಾಗೆ ಕಮಿಷ್ನರ್ ಹಿಡಿವಳೀದಾರನಿಂದ ಬರತಕ್ಕ ಮೊಬಲಗು, ಜಮೀನ್ ಕಂದಾಯದ ಬಾಕೀ ತರೀಕ್ ವಸೂಲ್‍ಮಾಡಲ್ಪಡತಕ್ಕದ್ದು.

8ನೇ ಅಧ್ಯಾಯ.

ಸರ್ವೆ ಸೆಟಲ್‍ಮೆಂಟ್‍ಗಳು, ಸ್ವತ್ತುಗಳ ವಿಭಾಗವನ್ನು ಕುರಿತು.

ಮುಂ. ರೆ. ಕೋ. 95ನೇ ಸೆಕ್‍ಷನ್.

ಮೈಸೂರು ಶೀಮೆಯ ಯಾವ ಭಾಗದಲ್ಲಾಗಲಿ ಗವರ್ನ್‍ಮೆಂಟಿನಿಂದ ರೆವಿನ್ಯು ಸರ್ವೆಯು ಪ್ರವರ್ತಿಸಲ್ಪಡಬಹುದು.

112. ಗವರ್ನ್‍ಮೆಂಟಿನವರು ತಮಗೆ ಯುಕ್ತ ತೋರಿದಾಗ ಜಮೀನ್ ಕಂದಾಯದಫೈಸಲಾತಿ, ಮತ್ತು ಅದಕ್ಕೆ ಸಂಬಂಧಿಸಿದ ಹಕ್ಕುದಾರಿಗಳ ರಿಕಾರ್ಡು ಮತ್ತು ಕಾಪಾಡುವಣದರ ವುದ್ದೇಶದಿಂದ, ಅಥವಾ ತತ್ಸಂಬಂಧದ ಇತರ ಯಾವದಾದರೂ ಕೆಲಸಕ್ಕೋಸ್ಕರ, ಮೈಸೂರು ಶೀಮೆಯ ಯಾವ ಭಾಗದಲ್ಲಾಗಲಿ, ಯಾವದಾದರೂ ಜಮೀನಿನ

ಸರ್ವೆಯನ್ನು ನಿಯಮಿಸುವದು ಅವರಿಗೆ ನ್ಯಾಯವಾಗಿರತಕ್ಕದ್ದು. ಅಂತಾ ಸರ್ವೆಯು ಸಾಮಾನ್ಯವಾಗಿ ಯಾವದಾದರೂ ಗ್ರಾಮದ ಜಮೀನುಗಳಿಗೆ, ಷಹರಿಗೆ ಅಥವಾ ಪಟ್ಟಣಕ್ಕೆ ಅಥವಾ ಗವರ್ನಮೆಂಟಿನವರು ನಿಯಮಿಸಬಹುದಾದ ಅಂತಾ ಜಮೀನಿಗೆ ಮಾತ್ರ ವ್ಯಾಪಿಸತಕ್ಕದ್ದು; ಮತ್ತು ಗವರ್ನಮೆಂಟಿನ ಹುಕುಂಗಳಿಗೆ ಒಳಪಟ್ಟು, ಅಂತಾ ಯಾವ ಸರ್ವೇಯನ್ನಾಗಲಿ, ನಡಿಸುವ ಯಾವ ಆಫೀಸರುಗಳಾಗಲಿ ಸೆಟಿಲ್‌ಮೆಂಟ ಲಗಾವಾಗತಕ್ಕದ್ದು ಜರೂರೆಂದು ಕಾಣದೆ ಇರಬಹುದಾದ ಯಾವ ಜಮೀನನ್ನಾಗಲಿ ಸರ್ವೇ ಸೆಟಿಲ್‌ಮೆಂಟ ದೆಸೆಯಿಂದ್ದ ವಿನಾಯಿಸುವದು ನ್ಯಾಯವಾಗಿರತಕ್ಕದ್ದು.

ರೆವಿನ್ಯೂ ಸರ್ವೆಯ ಮೇಲ್ವಿಚಾರಣೆ.

ಅಂತಾ ಪ್ರತಿ ರೆವಿನ್ಯೂ ಸರ್ವೇಯ ಮೇಲ್ವಿಚಾರಣೆಯು ಗವರ್ನಮೆಂಟಿನಲ್ಲಿ ಉಂಟಾಗಿ ಮತ್ತು ಅವರಿಂದ ಚಲಾಯಿಸಲ್ಪಡತಕ್ಕದ್ದು.

ಮುಂ. ರೆ. ಕೋ. 96ನೇ ಸೆಕ್ಷನ.

ಸರ್ವೇ ಆಫೀಸರು ಬಟ್ಟು ನೋಟೀಸ ಮೂಲಕ ಯಾ ಸಮ್ಮನ್ಸ ಮೂಲಕ ಜಮೀನ ಹಿಡುವಳೀದಾರವಗೈರೇರಿಂದ ತಕ್ಕ ನೌಕರಿಯನ್ನು ಖಾಯಿಷ ಮಾಡಬಹುದು.

113. ಅಂತಾ ಯಾವ ಸರ್ವೆಯನ್ನಾಗಲಿ ನಡಿಸುವ ಬಗ್ಯೆ ಅಥವಾ ಅದರಲ್ಲಿ ಸಂಬಂಧಿಸುವ ಬಗ್ಯೆ ನಿಯಮಿಸಲಟ್ಟ ಸರ್ವೆಆಫೀಸರರು ಬಟ್ಟು ನೋಟೀಸ ಮೂಲಕವಾಗಲಿ ಸಮ್ಮನ್ಸಗಳ ಮೂಲಕವಾಗಲಿ, ಜಮೀನುಗಳ ಹಿಡುವಳೀದಾರರು, ಮತ್ತು ಅದರಲ್ಲಿ ಸಂಬಂಧವುಳ್ಳ ತಮಾಂ ಜನಗಳೂ, ತಾವು ರೂಬರೂ ಆಗಲಿ, ಕಾನೂನುಪ್ರಕಾರ ಮೊಕರರ್ಮಾಡಲ್ಪಟ್ಟು ಮುಖ್ಯವಾದ ದರೋಬಸ್ತು ಸವಾಲಗಳಿಗೂ ಜವಾಬ ಕೊಡಲಿಕ್ಕೆ ನಿಯಮಿಸಲ್ಪಟ್ಟು, ಮತ್ತು ಶಕ್ತನಾಗಿರುವ ಮುತಾಲೀಕನ ಹಾಜರಾತೀಯನ್ನು ಮತ್ತು ಆಯಾ ಸ್ಥಳಗಳಲ್ಲಿಯೂ ಅಧಿಕಾರಗಳಲ್ಲಿಯೂ ತಮ್ಮ ಉದ್ಯೋಗ ಧರ್ಮ ಪ್ರಕಾರ ನೌಕರಿ ಮಾಡಲಿಕ್ಕೆ ಕಾನೂನ ಪ್ರಕಾರ, ಅಥವಾ ವಾಡಿಕೆಯ ಪ್ರಕಾರ ಬದ್ಧರಾಗಿರುವ ತಾಲ್ಲೂಕು ವ ಗ್ರಾಮ ನೌಕರರ ಹಾಜರಾತೀಯನ್ನು ಕೋರುವದಕ್ಕೂ ಮತ್ತು ಹೀಗೆ ಕೋರಲ್ಪಟ್ಟ ಯಾವ ಮನುಷ್ಯನದರ್ಜೆಗೆ, ಅವಗುಣವಾಗದ ಅಂತಾ ಸರ್ವೇ ಚಲಾವಣೆಯಲ್ಲಿ ಸಹಾಯವನ್ನು ಮತ್ತು ತತ್ಸಂಬಂಧದಲ್ಲಿ ನೌಕರಿಯನ್ನು ಮಾಡುವ ಬಗ್ಯೆ ಕೋರುವದಕ್ಕೂ ಯೆಖ್ತ್ಯಾರೀವುಳ್ಳವರಾಗಿರುವರು.

ಮುಂ. ರೆ. ಕೋ. 97ನೇ ಸೆಕ್ಷನ.

ಜಮೀನುಗಳ ಮೋಜಣಿಯಲ್ಲಾಗಲಿ ತರಂವಾರ ವಿಂಗಡಿಸುವದರಲ್ಲಾಗಲಿ ಹಿಡುವಳೀದಾರರಿಂದಲೂ ಇತರರಿಂದಲೂ ಕೊಡಲ್ಪಡತಕ್ಕ ಕುಮ್ಮಕ.

114. ಜಮೀನಿನ ತಮಾಂ ಹಿಡುವಳೀದಾರರನ್ನೂ ಅದರಲ್ಲಿ ಸಂಬಂಧವುಳ್ಳ ಇತರ ಮನುಷ್ಯರನ್ನೂ ಯಾವದಕ್ಕೆ ಸರ್ವೇ ವ್ಯಾಪಿಸುತದೋ ಅಂತಾ ಜಮೀನುಗಳ ಮೋಜಣೀಯಲ್ಲಿಯಾಗಲಿ, ತರಂ ವಿಂಗಡಿಸುವದರಲ್ಲಾಗಲಿ, ಝಾಂಡೆಗಳು ಹಿಡಿಯುವವರನ್ನು ಒದಗಿಸುವದರ ಮೂಲಕ ಕುಮ್ಮಕ ಮಾಡುವಂತೆ ಕೋರುವದು ಸರ್ವೇ ಆಫೀಸರಿಗೆ ನ್ಯಾಯವಾಗಿರತಕ್ಕದ್ದು; ಮತ್ತು ಸರ್ವೇ ಕೆಲಸಗಳಿಗೆ ಸಂಭವಿಸುವ ಈ ವುದ್ದೇಶ ಕೋಸ್ಕರವಾಗಲಿ ಮಜೂರೀದಾರರನ್ನು ಇಟ್ಟುಕೊಳ್ಳುವದು ಆವಶ್ಯಕವಾದಸಂದರ್ಭದಲ್ಲಿ ಸದರೀ ಬಗ್ಯೆ, ಸರ್ವೇಯಾದ ಜಮೀನುಗಳ ಮೇಲೆ ಠರಾಯಿಸಿ, ಆಗುವ ಖರ್ಚನ್ನು ತಮಾಂ ಸಾದಿಲ್‌ವಾರ ಖರ್ಚುಗಳೊಡನೆ, ರೆವಿನ್ಯೂ ಬಾಕೀಯಂತೆ ವಸೂಲ್ಮಾಡುವದು ನ್ಯಾಯವಾಗಿರತಕ್ಕದ್ದು.

ಮುಂ. ರೆ. ಕೋ. 98ನೇ ಸೆಕ್ಷನ್.

ಸರ್ವೇನಂಬರಗಳು ಫಲಾನೆ ವಿಸ್ತೀರ್ಣಕ್ಕಿಂತ ಕಮ್ಮಿಯಾಗಿ ರಕೂಡದು.

115. ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಪ್ರಕಾರ ಹೊರತು ಬೇಸಾಯದಕೆಲಸಗಳಿಗೆ ಮಾತ್ರ ಉಪಯೋಗಿಸಲ್ಪಡತಕ್ಕ ಜಮೀನು ಅಡಗಿರುವ ಯಾವ ಸರ್ವೇ ನಂಬರನ್ನೂ, ಗವರ್ನಮೆಂಟಿನಿಂದ ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಜಮೀನಿನ ಆಯಾ ತರಗತಿಗಳಿಗಾಗಿ, ಆಗಿಂದಾಗ್ಯೆ ಗೊತ್ತುಮಾಡಲ್ಪಡತಕ್ಕ, ಕನಿಷ್ಟಪಕ್ಷದ ವಿಸ್ತೀರ್ಣಕ್ಕಿಂತ ಕಮ್ಮಿಯಾಗಿ ಗೊತ್ತು ಮಾಡತಕ್ಕದ್ದಲ್ಲವು. ಹಾಗೆ ಗೊತ್ತುಮಾಡಲ್ಪಟ್ಟ ಕನಿಷ್ಟಪಕ್ಷದ ವಿಸ್ತೀರ್ಣಗಳ ಬಾಬತು ಒಂದು ರಿಕಾರ್ಡು ಪ್ರತಿ ತಾಲ್ಲೂಕಿನಲ್ಲಿಯೂ, ಅಮಲ್ದಾರರ ಕಚ್ಚೇರಿಯಲ್ಲಿಡಲ್ಪಟ್ಟು ಅದು ಯುಕ್ತ ಕಾಲಗಳಲ್ಲಿ ಯೆಲ್ಲಜನಗಳೂ ನೋಡಲಿಕ್ಕೆ ಖುಲ್ಲಾ ಇರತಕ್ಕದ್ದು.

ವಿನಾಯಿತಿ.

ಈ ನಿಯಮಗಳು ಹಾಗೆ ಗೊತ್ತುಮಾಡಲ್ಪಟ್ಟ ಕನಿಷ್ಟಪಕ್ಷಕ್ಕಿಂತ ಕಮ್ಮಿ ವಿಸ್ತೀರ್ಣವುಳ್ಳದ್ದಾಗಿ ಪೂರ್ವವೇ 'ಮಾಡಲ್ಪಟ್ಟಿರುವ ಅಥವಾ ಒಟ್ಟಾಗಿಯಾಗಲಿ, ಯಾವದಾದರೂ ವಿಶೇಷ ಸಂದರ್ಭದಲ್ಲಿಯಾಗಲಿ, ಇದಕ್ಕೋಸ್ಕರ ಅಂದರೆ ಕಮ್ಮಿವಿಸ್ತೀರ್ಣವುಳ್ಳದ್ದಾಗಿ ಮಾಡುವದಕ್ಕೆ ಕೊಡಲ್ಪಟ್ಟ ಗವರ್ನಮೆಂಟಿನ ಅಧಿಕಾರ ಅನುಸರಿಸಿ ಹಾಗೆ ಕಮ್ಮಿ ವಿಸ್ತೀರ್ಣವುಳ್ಳದ್ದಾಗಿ ಮಾಡಲ್ಪಡಬಹುದಾದ ಸರ್ವೇ ನಂಬರಗಳಿಗೆ ಲಗಾವಾಗತಕ್ಕದ್ದಲ್ಲವು ಮತ್ತು ಸರ್ವೇ ರಿಕಾರ್ಡುಗಳಲ್ಲಿ ಪ್ರತ್ಯೇಕವಾಗಿ ಅಂಗೀಕರಿಸಲ್ಪಟ್ಟ ಯಾವ ಸರ್ವೇ ನಂಬರಾಗಲಿ, ಅದರ ವಿಸ್ತೀರ್ಣ ಯೆಷ್ಟರದಾಗಿದ್ದಾಗ್ಯೂ ಅಧಿಕಾರ ಪೂರ್ವಕ ಮಾಡಲ್ಪಟ್ಟಿರುವದಾಗಿ ಭಾವಿಸಲ್ಪಡತಕ್ಕದ್ದು.

ಮುಂ. ರೆ. ಕೋ. 99ನೇ ಸೆಕ್ಷನ್.

ಸರ್ವೇ ನಂಬರಗಳ ಅಂಗೀಕರಿಸಲ್ಪಟ್ಟ ಹಿಸ್ಸೆಗಳು.

116. ಸರ್ವೇ ನಂಬರಗಳ ಅಂಗೀಕರಿಸಲ್ಪಟ್ಟ ಹಿಸ್ಸೆಗಳು ಪೂರಾ ಸರ್ವೇ ನಂಬರಗಳಿಗೆ ಲಗಾವಾಗತಕ್ಕ ಈ ರೆಗ್ಯುಲೇಷನಿನ, ಬದಸ್ತೂರ್ ನಿಬಂಧನೆಗಳಿಗೆ ಒಳಪಡತಕ್ಕದ್ದು, ಇದಕ್ಕೆ ವಿನಾಯಿತಿ ಯಾವವೆಂದರೆ—

(a) ಅಂತಾ ಹಿಸ್ಸೆಗಳನ್ನು ಬೇರೆಬೇರೆಯಾಗಿ ನಿರ್ಷಾಮಾಡುವದು ಅವಶ್ಯಕರ್ತವ್ಯವಾಗಿರತಕ್ಕದ್ದಲ್ಲವು; ಮತ್ತು

(b) 77ನೇ ಸೆಕ್ಷನ್ ನಿಬಂಧನೆಗಳನುಸರಿಸಿ ಅಂತಾ ಯಾವ ಹಿಸ್ಸೆಯಾಗಲಿ, ಹಿಡುವಳೀದಾರನಿಂದ ಶುದ್ಧಾಂಗವಾಗಿ ಬಿಡಲ್ಪಟ್ಟರೆ, ಆಯಾ ಹಿಸ್ಸೇದಾರರು ತಮ್ಮ ಹಿಸ್ಸೆಗಳಿಗಾಗಿ ಕೊಡತಕ್ಕ ಕಂದಾಯದ ಮೊಬಲಗಿನ ಆಧಿಕ್ಯವನ್ನು ಅನುಸರಿಸಿ ಅದೇ ಸರ್ವೇ ನಂಬರಿನಲ್ಲಿರುವ ಇತರ ಹಿಸ್ಸೇದಾರರಾದ ಹಿಡುವಳೀದಾರರನ್ನು, ಆ ಬಾಬತು ಜಮೀನುಹಿಡುವಳೀಯನ್ನು ತೆಗೆದುಕೊಳ್ಳುತ್ತೀರಾಯೆಂದು ಕೇಳತಕ್ಕದ್ದು. ಸದರೀ ಹಿಸ್ಸೆಯ ಹಿಡುವಳೀಯನ್ನು ತೆಗೆದುಕೊಳ್ಳುವದಕ್ಕೆ ಅವರುಗಳಲ್ಲಿ ಯೆಲ್ಲರೂ ತಿರಸ್ಕರಿಸುವ ಪಕ್ಷದಲ್ಲಿ, ಅದರ ಮೇಲಣ ಕಂದಾಯವು ಪೂರಾ ನಂಬರು ಅವರುಗಳಿಂದ ಬಿಡಲ್ಪಡುವ ಕಾಲದವರಿಗೆ ಮೇಲೆ ಕಂಡಂತೆ ಅವರುಗಳಿಂದ ಸಲ್ಲತಕ್ಕ ಕಂದಾಯದ ಮೊಬಲಗುಗಳ ದಾಮಾಷಾಯಿ ಪ್ರಕಾರ ವಸೂಲ್ ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 100ನೇ ಸೆಕ್ಷನ. 117. 241ನೇ ಸೆಕ್ಷನ ಅನುಸರಿಸಿ ಈ ಬಗ್ಗೆ ಮಾಡಲ್ಪಟ್ಟ ರೂಲ್‌ಗಳಿಗೆ ಅಥವಾ ಹುಕುಂಗಳಿಗೆ ಒಳಪಟ್ಟು ಒಂದು ಸರ್ವ್ಹೆಯ ಇನ್‌ಚಾರ್ಜ ಆಫೀಸರರು, 112ನೇ ಸೆಕ್ಷನನ್ನನುಸರಿಸಿ ಮಾಡಲ್ಪಟ್ಟ ಒಂದು ಹುಕುಮಿನ ಸ್ಥಳವ್ಯಾಪ್ತಿಯೊಳಗೆ ಇರುವ ಜಮೀನ ಕಂದಾಯದ ದೆಸೆಯಿಂದ ಪೂರಾ ವಿನಾಯಿಸಲ್ಪಡದ ದರೋಬಸ್ತು ಜಮೀನಗಳಮೇಲೂ ತಮ್ಮ ಯಖ್ತ್ಯಾರೀ ಪ್ರಕಾರ ಜಮೀನ ಕಂದಾಯದಬಗ್ಗೆ ದರ ಠರಾವ ಮಾಡುವದಕ್ಕೆ ಅಧಿಕಾರ ವುಳ್ಳವರಾಗಿರತಕ್ಕದ್ದು. ಅಂತಾ ದರಪ್ರಕಾರ ಸಲ್ಲತಕ್ಕ ಮೊಬಲಗಗಳು 119ನೇ ಸೆಕ್ಷನ ನಿಬಂಧನೆಗಳಿಗೆ ಒಳಪಟ್ಟು, ಅಂತಾ ತಮಾಂ ಜಮೀನಗಳಿಂದಲೂ ವಸೂಲ್‌ಮಾಡಲ್ಪಡತಕ್ಕದ್ದು.

ಸರ್ವ್ಹೆ ಇನ್‌ಚಾರ್ಜ ಆಫೀಸರು ಕಂದಾಯಗಳನ್ನು ಠರಾವ ಮಾಡತಕ್ಕದ್ದು.

ಅಂತಾ ಕಂದಾಯ ಠರಾವ ಮಾಡುವಲ್ಲಿ 55ನೇ ಸೆಕ್ಷನಿನ ನಿಯಮದಿಂದ ವಿಹಿತಗಳಾದ ಅಂಶಗಳಿಗೆ ನಿಗೇಕೊಡತಕ್ಕದ್ದು.

55ನೇ ಸೆಕ್ಷನ ನಿಯಮಕ್ಕೆ ನಿಗೇಕೊಡತಕ್ಕದ್ದು.

ಆದರೆ ಜಮೀನ ಕಂದಾಯವನ್ನು ಪಾವತೀ ಮಾಡುವದರ ದೆಸೆಯಿಂದ ಸಂಪೂರ್ಣವಾಗಿ ವಿನಾಯಿಸಲ್ಪಟ್ಟ ಜಮೀನಗಳ ಮೇಲೆಯಾಗಲಿ, ಸರ್ವ್ಹೆ ಸೆಟಲ್‌ಮೆಂಟ ದೆಸೆಯಿಂದ, ಅಥವಾ ಯಾವ ಜಮೀನಗಳಿಗೆ ಸರ್ವ್ಹೆ ವ್ಯಾಪಿಸುತ್ತದೋ ಅಂತಾ ತಮಾಂ ಜಮೀನಗಳನ್ನು ಸರ್ವ್ಹೆ ನಂಬರಗಳಾಗಿ ವಿಭಾಗಿಸುವದರ ದೆಸೆಯಿಂದ, 112ನೇ ಸೆಕ್ಷನ ಅನುಸರಿಸಿ ಮುಖ್ಯವಾಗಿ ವಿನಾಯಿಸಲ್ಪಟ್ಟ ವಿಶಿಷ್ಟ ಜಮೀನಗಳಮೇಲಾಗಲಿ, ಕ್ರಮವಾದ ಪೂರಾ ಕಂದಾಯವನ್ನು ನಿರ್ಣಯಿಸುವದಕ್ಕೂ, ರಿಜಿಸ್ಟರ ಮಾಡುವದಕ್ಕೂ, ಮೇಲೆ ಕಂಡ ಸರ್ವ್ಹೆ ಆಫೀಸರನ್ನು ಈ ಸೆಕ್ಷನನ್ನಲ್ಲಿ ಅಡಗಿರುವ ಯಾವ ಅಂಶವೂ ಅಡ್ಡಿಮಾಡುವ ಹಾಗೆ ಯೆಣಿಸಲ್ಪಡತಕ್ಕದ್ದಲ್ಲವು.

ಮುಂ. ರೆ. ಕೋ. 101ನೇ ಸೆಕ್ಷನ. 118. ಹಿಂದಿನ ಸೆಕ್ಷನ ಅನುಸರಿಸಿ, ಕಂದಾಯ ವಿಧಿಸಲಿಕ್ಕೆ ಉಂಟಾದ ಅಧಿಕಾರವು ವ್ಯವಸಾಯದ ಕೆಲಸಗಳಿಗೆ ಮಾತ್ರ ಉಪಯೋಗಿಸಲ್ಪಟ್ಟ ಜಮೀನಗಳ ಸಂಗತಿಯಲ್ಲಿ ಜಮೀನಿನ ಮೇಲಾಗಲಿ, 58ನೇ ಸೆಕ್ಷನ ಅನುಸರಿಸಿ ಯಾವದರ ವಿಷಯದಲ್ಲಿ ಯಾವತೆರಿಗೆಯೂ ವಸೂಲ್‌ಮಾಡಲ್ಪಡುವದಿಲ್ಲವೋ ಅಂತಾ ನೀರಾವರಿಯ ಸಾಧನದಮೇಲೆ, ಒಂದು ತೆರಿಗೆಯ ಅಥವಾ ಕಂದಾಯದ ರೂಪವಾಗಿ ಯಾಗಲಿ, ಗವರ್ನಮೆಂಟಿನಿಂದ ಮಂಜೂರ್‌ಮಾಡಲ್ಪಡಬಹುದಾದ ಇತರ ಯಾವ ವಿಧದಿಂದಲಾಗಲಿ, ಕಂದಾಯ ವಿಧಿಸಲಿಕ್ಕೆ ಉಂಟಾದ ಅಧಿಕಾರವನ್ನು ಅಡಗಿಸಿಕೊಂಡಿರುತ್ತದೆ.

ಹಾಗೆ ವಿಧಿಸಲ್ಪಟ್ಟ ಕಂದಾಯವು ಜಮೀನಮೇಲಾಗಲಿ, ನೀರಾವರಿ ವಗೈರೆಯ ಸಾಧನದ ಮೇಲಾಗಲಿ, ಇರಬಹುದು.

ಮುಂ. ರೆ. ಕೋ. 102ನೇ ಸೆಕ್ಷನ. 119. ಒಂದು ಸರ್ವೆ ಇನ್‌ಚಾರ್ಜ ಆಫೀಸರಿಂದ ಠರಾಯಿಸಲ್ಪಟ್ಟ ಕಂದಾಯವು ಗವರ್ನಮೆಂಟ ಮಂಜೂರಾತಿಯಿಲ್ಲದೆ ವಸೂಲ್‌ಮಾಡಲ್ಪಡತಕ್ಕದ್ದಲ್ಲವು. ಅಂತಾ ಕಂದಾಯಗಳನ್ನು ತಾವು ಜರೂರೆಂದು ಯೆಣಿಸಬಹುದಾದ ಯಾವದಾದರೂ ತಿದ್ದುಪಾಟಿನೊಡನೆ, ವ್ಯವಸಾಯದ ಕೆಲಸಗಳಿಗೆ ಮಾ

ಹಾಗೆ ವಿಧಿಸಲ್ಪಟ್ಟ ಕಂದಾಯವು ಗವರ್ನಮೆಂಟ ಮಂಜೂರಾತಿಯಿಲ್ಲದೆ ವಸೂಲ್ ಮಾಡಲ್ಪಡತಕ್ಕದ್ದಲ್ಲವು.

ಆದರೆ ಕೆಲವು ವರುಷಗಳ ವಾಯಿದೆಗೆ ಗವರ್ರ್ನಮೆಂಟಿನಿಂದ ತಿದ್ದುಪಾಟುನೀಯಾ ತಿದ್ದುಪಾಟಿಲ್ಲದೆ ಠರಾಯಿಸಲ್ಪಡಬಹುದು.

ತ್ರ ಉಪಯೋಗಿಸಲ್ಪಡುವ ಜಮೀನುಗಳ ವಿಷಯದಲ್ಲಿ ಮೂವ್ವತ್ತು ವರುಷಗಳಿಗೆ ಮೀರದ ಮತ್ತು ಇತರ ತಮಾಂ ಜಮೀನುಗಳ ವಿಷಯದಲ್ಲಿ ತೊಂಭತ್ತೊಂಭತ್ತು ವರುಷಗಳಿಗೆ ಮೀರದ ಒಂದು ವಾಯಿದೆಯನ್ನು ಗೊತ್ತುಮಾಡಿ ತಿಳಿಸುವದು. ಗವರ್ರ್ನಮೆಂಟಿಗೆ ನ್ಯಾಯವಾಗಿರತಕ್ಕದ್ದು: ಪರಂತು, ಗವರ್ರ್ನಮೆಂಟಿನವರು ವಿಧಿಸಬಹುದಾದ ಅಂತಾ ಷರತ್‌ಗಳಿಗೆ ಒಳಪಟ್ಟು ಶಾಶ್ವಿತವಾಗಿ ಕಾಫೀಸಾಗುವಳೀಮಾಡಲ್ಪಟ್ಟ ಜಮೀನುಗಳಿಗೆ ಕಂದಾಯ ತವಾವ್ ಮಾಡುವದರಲ್ಲಿ ಈ ಸೆಕ್ಷನ್ನೊಳಗಿರುವ ಯಾವ ಅಂಶವೂ ಗವರ್ರ್ನಮೆಂಟಿನವರನ್ನು ನಿರೋಧಿಸತಕ್ಕದ್ದಲ್ಲವು.

ಮುಂ. ರೆ. ಕೋ. 103ನೇ ಸೆಕ್ಷನ್.

ಸರ್ವೇ ಸೆಟಲ್‌ಮೆಂಟ್ ಹ್ಯಾಗೆ ಪ್ರವರ್ತಿಸತಕ್ಕದ್ದು.

120. ವ್ಯವಸಾಯದ ಕೆಲಸಗಳಿಗೆಮಾತ್ರ ವುಪಯೋಗಿಸಲ್ಪಡುವ ಜಮೀನುಗಳ ವಿಷಯದಲ್ಲಿ ಗವರ್ರ್ನಮೆಂಟಿನವರು, ಸರ್ವೇ ಇನ್‌ಚಾರ್ಜ್ ಆಫೀಸರರಿಂದ ಠರಾಯಿಸಲ್ಪಟ್ಟ ಕಂದಾಯಗಳನ್ನು ಮಂಜೂರ್ ಮಾಡಿದಾಗ ಸದರೀ ಆಫೀಸರರು ಡೆಪ್ಯುಟಿ ಕಮಿಷನರು ಅಥವಾ ಅಸಿಸ್ಟೆಂಟ್ ಕಮಿಷನರು ಅಂತಾ ಪ್ರತಿ ಸರ್ವೇ ನಂಬರಿಗೆ ಠರಾಯಿಸಲ್ಪಟ್ಟ ಕಂದಾಯವನ್ನು ಬಹಿರಂಗವಾಗಿ ಫಾಯಿಷ್ ಮಾಡತಕ್ಕದ್ದು, ಅಥವಾ ಫಾಯಿಷ್ ಮಾಡಿಸತಕ್ಕದ್ದು ಅವರ ಕೆಲಸವಾಗಿರತಕ್ಕದ್ದು.

ಸದರೀ ಆಫೀಸರಾಗಲೀ ಡೆಪ್ಯುಟಿ ಕಮಿಷನರಾಗಲೀ ಅಸಿಸ್ಟೆಂಟ್ ಕಮಿಷನರಾಗಲೀ ಮೇಲೆ ಕಂಡಂತೆ ಕಂದಾಯದ ಮೊಕರರಾತಿಗಳು ಯಾವ ಕಾಲದಲ್ಲಿ ಅಥವಾ ಷುಮಾರು ಯಾವ ಕಾಲದಲ್ಲಿ ಫಾಯಿಷ್ ಮಾಡಲ್ಪಡುವವೋ, ಅಂತಾ ಕಾಲವನ್ನು ಕುರಿತು ತಮಗೆ ಯುಕ್ತ ತೋರುವ ರೀತಿಯಾಗಿ ಬಹಿರಂಗವಾದ ನೋಟೀಸನ್ನು ಮುಂದಾಗಿ ತಕ್ಕಕಾಲದಲ್ಲಿ ಕೊಡಿಸತಕ್ಕದ್ದು.

ಹಿಡುವಳೀದಾರನಾಗಲೀ ಯಾವಹಿಡುವಳಿಯೊಳಗಾದರೂ ಸಂಬಂಧವುಳ್ಳ ಇತರ ಮನುಷ್ಯನಾಗಲೀ ಖುದ್ದಾಗಿ ಅಥವಾ ಮುತಾಲೀಕರ ಮೂಲಕ ಹಾಜರಾಗದೆ ಯಿದ್ದರೆ, ಅವನು ಹಾಜರಾಗಿ ಯಿದ್ದರೆ ಹ್ಯಾಗೋ ಹಾಗೆ ಬದಸ್ತೂರ್ ಜವಾಬ್‌ದಾರೀಗಳಿಗೆ ಒಳಪಟ್ಟಿರತಕ್ಕದ್ದು.

ಕಂದಾಯಗಳು, ಈ ಸೆಕ್ಷನಿನ ಮೊದಲನೇ ಕ್ಲಾಜಿನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಫಾಯಿಷ್ ಮಾಡಲ್ಪಟ್ಟಾಗ ಸರ್ವೇ ಸೆಟಲ್‌ಮೆಂಟು ಪ್ರವರ್ತಿಸಿದಂತೆ ಯೆಣಿಸಲ್ಪಡತಕ್ಕದ್ದು.

ಮುಂ. ರೆ. ಕೋ. 104ನೇ ಸೆಕ್ಷನ್.

ಯಾವ ಸಾಲ್‌ನಲ್ಲಿ ಸರ್ವೆ ಸೆಟಲ್‌ಮೆಂಟ್ ಪ್ರವರ್ತಿಸಿಯಿರುತ್ತೋ ಆ ಸಾಲ್‌ನಲ್ಲಿ ಜಾಸ್ತೀ ಕಂದಾಯ ವಸೂಲ್ ಮಾಡಲ್ಪಡತಕ್ಕದ್ದಲ್ಲವು.

121. ಯಾವ ಸಾಲ್‌ನಲ್ಲಿ ಒಂದು ಸರ್ವೆ ಸೆಟಲ್‌ಮೆಂಟು ಅಸಲಾಗಿಯಾಗಲೀ ಪರಿಷ್ಕರಿಸಲ್ಪಟ್ಟಂತೆ ಆಗಲೀ ಹಿಂದಿನ ಕಡೇ ಸೆಕ್ಷನ್ ಅನುಸರಿಸಿ ಪ್ರವರ್ತಿಸಬಹುದೋ, ಆ ಸಾಲ್‌ನಲ್ಲಿ ಯಾವ ಜಮೀನುಗಳ ಮೇಲೆ, ಹೊಸ ಕಂದಾಯವು ಹಳೇ ಕಂದಾಯಕ್ಕಿಂತ ಜಾಸ್ತೀ ಯಿರುವದೋ ಅಂತಾ ತಮಾಂ ಜಮೀನುಗಳ ಹಳೇ ಕಂದಾಯಕ್ಕೂ ಹೊಸ ಕಂದಾಯಕ್ಕೂ ಯಿರುವ ವ್ಯತ್ಯಾಸವನ್ನು ವಜಾಮಾಡಿಶಿ

ಪರಿಷ್ಕರಿಸಲ್ಪಟ್ಟ ಕಂದಾಯವನ್ನೇ ಮುಂದಿನ ಸಾಲ್ ಲಾಗಾಯತ್ ವಸೂಲ್ ಮಾಡತಕ್ಕದ್ದು.

ನಂಬರಿಗೆ ಮುಂದಿನ ಸಾಲ್ ನಲ್ಲಿ ರಾಜೀನಾಮೇ ಕೊಡಲ್ಪಟ್ಟರೆ ಆ ಸಾಲ್‌ನಲ್ಲಿಯೂ ವಸೂಲ್ ಮಾಡಲ್ಪಡತಕ್ಕದ್ದಲ್ಲವು.

ಯಾವ ಸಾಲ್‌ನಲ್ಲಿ ಯಾವದಾದರೂ ಪರಿಷ್ಕರಿಸಲ್ಪಟ್ಟ ಸರ್ವೇ ಸೆಟಲ್‌ಮೆಂಟ್ ಪ್ರವರ್ತಿಸಿ ಯಿರುತ್ತೋ ಆ ಸಾಲಿನ ಮಾರನೇ ಸಾಲಿನಲ್ಲಿ ಯಾವಹಿಡುವಳೀದಾರನು ತನ್ನ ಹಿಡುವಳೀಯಲ್ಲಿ ಉಳ್ಳ ಸರ್ವೇ ನಂಬರ್‌ಗಳ ಪೈಕಿ ಯಾವದರ ಮೇಲಾಗಲೀ ಅಂತಾ ಹೊಸ ಕಂದಾಯದ ಮೂಲಕ ವಿಧಿಸಲ್ಪಟ್ಟ ಜಾಸ್ತೀದರದ ವಿಷಯದಲ್ಲಿ ಅತೃಪ್ತಿ ಪಡಬಹುದೋ ಅಂತಾ ಯಾವ ಹಿಡುವಳೀದಾರನಾಗಲೀ ಮಾರ್ಚಿ 31ರಲ್ಲಿ ಅಥವಾ ತತ್ಪೂರ್ವ 77 ಮತ್ತು 79ನೇ ಸೆಕ್ಷರ್ಷಗಳಿಂದ ವಿಧಿಸಲ್ಪಟ್ಟ ರೀತಿಯಾಗಿ ಅಂತಾ ನಂಬರಿಗೆ ರಾಜೀನಾಮೆ ಕೊಟ್ಟಮೇಲೆ, ಹಾಗೆ ವಿಧಿಸಲ್ಪಟ್ಟ ಜಾಸ್ತೀ ಅಂಶದ ವಜಾವನ್ನು ಪಡೆಯತಕ್ಕದ್ದು.

ಮುಂ. ರೆ. ಕೋ. 105ನೇ ಸೆಕ್ಷರ್ಷ.

119ನೇ ಸೆಕ್ಷರ್ಷ ಅನುಸರಿಸಿ ಕಂದಾಯದ ಠರಾವಣೀಯು ಸಾಮಾನ್ಯವಾದ ಜಮೀರ್ನ ಕಂದಾಯಕ್ಕೆ ಮಾತ್ರ ಲಾಗುವಾಗತಕ್ಕದ್ದು.

122. 119ನೇ ಸೆಕ್ಷರ್ಷ ನಿಬಂಧನೆಗಳನುಸರಿಸಿ ಕಂದಾಯದ ಠರಾವಣೀಯು ಸಾಮಾನ್ಯವಾದ ಜಮೀರ್ನ ಕಂದಾಯದ ಠರಾವಣೀಗೆಮಾತ್ರವೇ ಖಂಡಿತವಾಗಿ ಹದ್ದುಪಡಿಸಲ್ಪಟ್ಟು, ಪಾಠಶಾಲೆಗಳ ಕಟ್ಟಣ, ರಕ್ಷಣ ಮತ್ತು ಅಭಿವೃದ್ಧಿ, ಗ್ರಾಮ ವ ಡಿಸ್ಟ್ರಿಕ್ಟ್ ರಸ್ತೆಗಳು, ಸೇತುವೆಗಳು, ಕೆರೆಗಳು, ಬಾವಡಿಗಳು, ನೀರಾವರಿ ನಾಲಾಗಳು, ಮುಸಾಫರ್ ಬಂಗ್ಲೇಗಳು ಯಿನ್ನೂ ಇಂತಾ ಸ್ಥಿರವಾದ ಅಭಿವೃದ್ಧಿ ಕೆಲಸಗಳ ಬಗ್ಯಾಗಿ ತತ್ಕಾಲದಲ್ಲಿ ಜಾರೀಯಿರುವ ಯಾವದಾದರೂ ಕಾನೂನಿನ ನಿಬಂಧನೆಗಳನುಸರಿಸಿ ವಿಧಿಸುವದು ಗವರ್ನಮೆಂಟಿಗೆ ನ್ಯಾಯವಾಗಿರುವ ಯಾವ ತೆರಿಗೆಯನ್ನಾಗಲಿ 58ನೇ ಸೆಕ್ಷರ್ಷ ನಿಬಂಧನೆಗಳನುಸರಿಸಿ ನೀರಿನ ಉಪಯೋಗದಬಗ್ಯೆ ವಿಧಿಸಲ್ಪಡಬಹುದಾದ ಯಾವ ತೀರ್ವೆಯನ್ನಾಗಲಿ ವಸೂಲ್ಮಾಡುವದಕ್ಕೆ ಅಡ್ಡಿಯಾಗಿರತಕ್ಕದ್ದಲ್ಲವು.

ಮುಂ. ರೆ. ಕೋ. 106ನೇ ಸೆಕ್ಷರ್ಷ.

ಗವರ್ನಮೆಂಟಿನವರು ಒಂದು ಹೊಸ ರೆವಿನ್ಯೂ ಸರ್ವೇಯನ್ನೂ ಕಂದಾಯದ ವಿಮರ್ಶೆಯನ್ನೂ ವಿಧಿಸಬಹುದು.

ಆದರೆ ಸ್ವಂತ ದ್ರವ್ಯದಿಂದಲೂ, ಸಾಧನಗಳಿಂದಲೂ, ಮಾಡಲ್ಪಟ್ಟ ಅಭಿವೃದ್ಧಿಗಳಿಗೆ ಕಂದಾಯ ವಿಧಿಸ ಕೂಡದು.

123. ಒಂದು ಹೊಸ ರೆವಿನ್ಯೂ ಸರ್ವೇಯನ್ನಾಗಲಿ, ಅದಕ್ಕೆ ಒತ್ತಾಸೆಯಾಗಿರುವ ಯಾವ ಕೆಲಸವನ್ನಾಗಲಿ, ಯಾವಕಾಲದೊಳಗಾದರೂ ನಿಯಮಿಸುವದು ಗವರ್ನಮೆಂಟಿಗೆ ನ್ಯಾಯವಾಗಿರತಕ್ಕದ್ದು ; ಆದರೆ, 119ನೇ ಸೆಕ್ಷರ್ಷ ನಿಬಂಧನೆಗಳನುಸರಿಸಿ ಮೊದಲೇ ನಿಶ್ಚಯಿಸಲ್ಪಟ್ಟ ಮಿಯಾದೆಯು ಕಳೆಯುವತನಕ ಹೆಚ್ಚು ಕಂದಾಯದ ಠರಾವಣೀಯು ಜಾರೀಗೆ ಬರತಕ್ಕದ್ದಲ್ಲವು. ಈ ರೆಗ್ಯುಲೇಷನ್ ಅನುಸರಿಸಿಯಾಗಲಿ, 1865ನೇ ಇಸವಿಯ 1ನೇ ಮುಂಬೈ ಆಕ್ಟು ಅನುಸರಿಸಿ ಯಾಗಲಿ, ಮಾಡಲ್ಪಟ್ಟ ಯಾವದಾದರೂ ಸೆಟಲ್‌ಮೆಂಟಿನ ಚಲಾವಣೀಕಾಲವಲ್ಲಿ, ಸ್ವಂತ ದ್ರವ್ಯದಿಂದಲೂ, ಇತರ ಸಾಧನಗಳಿಂದಲೂ ಮಾಡಲ್ಪಟ್ಟ ಅಭಿವೃದ್ಧಿಗಳ ವಿಚಾರದಲ್ಲಲ್ಲದೇ ಭೂಗುಣ, ಭೂಮಿ ಯಿರುವಸ್ಥಳ, ಹುಟ್ಟುವ

ಳಿಯು ದಾರಣೆಗಳು, ಅಥವಾ ಆಮದರಫ್ತಿನ ಸೌಕರ್ಯ ಇಂತಾ ವಿಷಯಗಳಮೂಲಕ ಜಮೀನಿನ ಬೆಲೆಯ ಸಾಮಾನ್ಯ ವಿಚಾರಗಳಿಂದ ಪರಿಷ್ಕರಿಸ್ಪಲ್ಪಟ್ಟ ಕಂದಾಯವನ್ನು ಠರಾಯಿಸತಕ್ಕದ್ದು.

ಮುಂ. ರೆ. ಕೋ. 107ನೇ ಸೆಕ್ಷನ್.

ಪರಿಷ್ಕರಿಸಲ್ಪಟ್ಟ ಕಂದಾಯವನ್ನು ನಿಶ್ಚಯಿಸುವದರಲ್ಲಿ ಕೆಲವು ಅಭಿವೃದ್ಧಿಗಳನ್ನು ಕುರಿತು ಪರ್ಯಾಲೋಚಿಸಬಹುದು.

124. ಪರಿಷ್ಕರಿಸಲ್ಪಟ್ಟ ಕಂದಾಯವು ನಿಶ್ಚಯಿಸಲ್ಪಡುವದನ್ನು ನಿರೋಧಿಸತಕ್ಕದ್ದಾಗಿ ಹಿಂದಿನ ಕಡೇ ಸೆಕ್ಷನ್ನಲ್ಲಿರುವ ಯಾವ ಅಂಶವೂ ಭಾವಿಸಲ್ಪಡತಕ್ಕದ್ದಲ್ಲವು :—

(*a*) ಸರ್ಕಾರ್ ಖರ್ಚಿನಿಂದ ನಡಿಸಲ್ಪಟ್ಟ, ಯಾವದಾದರೂ ಅಭಿವೃದ್ಧಿಯ ವಿಷಯದಲ್ಲಿ, ಅಥವಾ

(*b*) ಸ್ವಂತ ದ್ರವ್ಯದಿಂದಲೂ, ಯಿತರ ಸಾಧನಗಳಿಂದಲೂ, ಮಾಡಿಸಲ್ಪಟ್ಟ ಅಭಿವೃದ್ಧಿಯು, ಯಾವದಾದರೂ ಸ್ವಾಭಾವಿಕವಾದ ಪ್ರಯೋಜನವನ್ನು ಉಪಯೋಗಿಸಿಕೊಳ್ಳುವದರ ಸಾಧನವನ್ನುಂಟುಮಾಡಿ ಯಿರುವದರಲ್ಲಿ ಮಾತ್ರ ಅಡಗಿ ಯಿರುವ ಪಕ್ಷಕ್ಕೆ ಅಂತಾ ಯಾವದಾದರೂ ಪ್ರಯೋಜನದ ಯೋಗ್ಯತೆಯ ವಿಷಯದಲ್ಲಿ ; ಅಥವಾ

(*c*) ವ್ಯವಸಾಯದ ಸಾಧಾರಣ ಕೆಲಸಗಳಿಂದ ಫಲಿತವಾದ ಯಾವದಾದರೂ ಅಭಿವೃದ್ಧಿಯ ವಿಷಯದಲ್ಲಿ ಪರಿಷ್ಕೃತವಾದ ಹೊಸಕಂದಾಯವನ್ನು ಠರಾಯಿಸುವದಕ್ಕೆ ಹಿಂದಿನ ಸೆಕ್ಷನಿನ ಯಾವ ಅಂಶವೂ ಅಡ್ಡಿಮಾಡತಕ್ಕದ್ದಾಗಿ ಯೆಣಿಸತಕ್ಕದ್ದಲ್ಲವು.

ಮುಂ. ರೆ. ಕೋ. 108ನೇ ಸೆಕ್ಷನ್.

ಲೆಖ್ಖಗಳು ಮತ್ತು ಹುಟ್ಟುವಳಿಯಬಾಬತು ರಿಕಾರ್ಡುಗಳನ್ನು ತಯಾರು ಮಾಡೋಣ.

125. ಜಮೀನ್ ಕಂದಾಯದ ಫೈಸಲಾತಿಯನ್ನು ಮಾಡುವ ಅಥವಾ ಪರಿಷ್ಕರಿಸುವ ಸಂದರ್ಭದಲ್ಲಿ ಪ್ರತಿ ಸರ್ವೇ ನಂಬರಿನ ಜಿಂಜವರಿ ವ ಕಂದಾಯವನ್ನೂ, ಅಂತಾ ಸರ್ವೇ ನಂಬರಿನ ರಿಜಿಸ್ಟರಾದ ಹಿಡುವಳೀದಾರನ ಹೆಸರು ಸಹಿತ, ಈ ಬಗ್ಗೆ ಗವರ್ನಮೆಂಟಿನಿಂದ ಆಗಿಂದಾಗ್ಯೆ ಮಾಡಲ್ಪಡಬಹುದಾದ ಹುಕ್ಕುಂಗಳ ಪ್ರಕಾರ ಇತರ ರಿಕಾರ್ಡುಗಳನ್ನೂ ನಮೂದಿಸಿ "ಸೆಟಿಲ್‌ಮೆಂಟ್ ರಿಜಿಸ್ಟರ್" ಯೆಂದು ಕರೆಯಲ್ಪಡತಕ್ಕ ಒಂದು ರಿಜಿಸ್ಟರನ್ನು ತಯಾರ್‌ಮಾಡುವದು ಸರ್ವೇ ಆಫೀಸರನ ಕಾರ್ಯವಾಗಿರತಕ್ಕದ್ದು.

ಮುಂ. ರೆ. ಕೋ. 109ನೇ ಸೆಕ್ಷನ್.

ಸೆಟಿಲ್‌ಮೆಂಟ್ ರಿಜಿಸ್ಟರ್‌ನಲ್ಲಿರತಕ್ಕ ಹಸ್ತ ದೋಷಗಳನ್ನೂ ಒಪ್ಪಿಕೊಳ್ಳಲ್ಪಟ್ಟ ತಪ್ಪುಗಳನ್ನೂ ಸರ್ವೇ ಆಫೀಸರಾಗಲಿ, ಡೆಪ್ಯುಟಿ ಕಮ್ಮಿಷನರ್ ಯಾ ಅಸಿ ಕಮ್ಮಿಷನರಾಗಲಿ ತಿದ್ದತಕ್ಕದ್ದು.

126. ಸರ್ವೇ ಆಫೀಸರಾಗಲಿ, 120ನೇ ಸೆಕ್ಷನ್ ನಿಯಮಗಳನ್ನು ಅನುಸರಿಸಿ ಡೆಪ್ಯುಟಿ ಕಮ್ಮಿಷನರಿಂದ ಅಥವಾ ಆಸಿಸ್ಟೆಂಟ್ ಕಮ್ಮಿಷನರಿಂದ ಸರ್ವೇ ಸೆಟಿಲ್‌ಮೆಂಟ್ ಜಾರೀಯಲ್ಲಿ ತರಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರಾಗಲಿ, ಅಸಿಸ್ಟೆಂಟ್ ಕಮ್ಮಿಷನರಾಗಲಿ ಸೆಟಿಲ್‌ಮೆಂಟ್ ರಿಜಿಸ್ಟರ್‌ನಲ್ಲಿ ಮಾಡಿರುವಂತೆ, ಸದರೀ ಸಂಗತಿಗೆ ಸಂಬಂಧಿಸಿದ ಕಕ್ಷಿಗಾರರಿಂದ ಕಬೂಲ್‌ಪಡತಕ್ಕ ಯಾವ ಹಸ್ತದೋಷಗಳನ್ನೂ ಮತ್ತು ಯಾವ ತಪ್ಪುಗಳನ್ನೂ ಯಾವ ಕಾಲದಲ್ಲಿ ಯಾಗಲಿ ತಿದ್ದತಕ್ಕದ್ದು ಅಥವಾ ತಿದ್ದಿಸತಕ್ಕದ್ದು.

ಹೆಸರುಗಳನ್ನು ಬದಲಾಯಿಸುವಬಗ್ಯೆ ಬರತಕ್ಕ ಅರ್ಜೀಗಳ ಮೇಲೆ ವಿಚಾರಣೆ ಮಾಡಿ ಹುಕುಂ ಕೊಡುವಿಕೆ.

ಸರ್ವೆ ಸೂಪರಿಂಟೆಂಡೆಂಟರಾಗಲಿ, ಡೆಪ್ಯುಟಿ ಕಮ್ಮಿಷನರಾಗಲಿ, ಸರ್ವೇ ಸೆಟಲ್‌ಮೆಂಟ ಜಾರೀಯಲ್ಲಿ ಬಂದ ಎರಡು ವರುಷಗಳೊಳಗಾಗಿ ಯಾವಾಗಲಾದರೂ, ಸದರೀ ರಿಜಿಸ್ಟರನಲ್ಲಿ ರಿಜಿಸ್ಟರಾದ ಹಿಡುವಳೀದಾರನ ಹೆಸರು, ತಪ್ಪಾಗಿ ದಾಖಲಾಗಿದ್ದು ಅದನ್ನು ತಿದ್ದತಕ್ಕ ಬಗ್ಯೆ ಕೊಡಲ್ಪಡತಕ್ಕ ಅರ್ಜಿಗಳನ್ನೆಲ್ಲಾ ಅಂಗೀಕರಿಸಿ ವಿಚಾರಣೆ ಮಾಡತಕ್ಕದ್ದಲ್ಲದೆ, ಮೋಸದಿಂದಲಾಗಲಿ, ಕಳ್ಳಯೋಚನೆಯಿಂದಾಗಲಿ, ಅಶ್ರದ್ಧೆಯಿಂದಾಗಲಿ, ಇತರ ವಿಧದಿಂದಲಾಗಲಿ, ತಪ್ಪು ಮಾಡಲ್ಪಟ್ಟದೆಯೆಂದು ತೃಪ್ತಿಕರವಾಗಿ ತಿಳಿಯಬಂದರೆ, ಅಂತಾ ತಪ್ಪಿತವನ್ನು, ಅದಕ್ಕೆ ಸಂಬಂಧಿಸಿದ ಕಕ್ಷಿಗಾರರೆಲ್ಲರೂ ಕಬೂಲ್ ಮಾಡದಿದ್ದರೂ, ಅದನ್ನು ತಿದ್ದತಕ್ಕದ್ದು ಅಥವಾ ತಿದ್ದಿಸತಕ್ಕದು; ಆದರೆ ಅವರು ಸರ್ವೇ ಸೆಟಲ್‌ಮೆಂಟ್ ಜಾರೀಗೆ ಬಂದ ತಾರೀಖ ಮೊದಲು, ಯೆರಡು ವರುಷಗಳಮೇಲೆ ಯಾವಕಾಲದಲ್ಲಾಗಲಿ ಕೊಡಲ್ಪಡುವ ಅರ್ಜಿಯ ವಿಷಯದಲ್ಲಿ ಉಂಟಾದ ಸಾವಕಾಶಕ್ಕೆ ಒಳ್ಳೆಯ ಸಬಬು ತಮಗೆ ತೃಪ್ತಿಕರವಾಗಿ ತಿಳಿಸಲ್ಪಟ್ಟ ಹೊರತು ಅಂತಾ ಅರ್ಜೀಯನ್ನು ಅವರು ಅಂಗೀಕರಿಸಕೂಡದು. ಸದರೀ ಯೆರಡು ವರುಷಗಳ ತರುವಾಯ ಅರ್ಜೀ ಬರೆದು ಕೊಳ್ಳಲ್ಪಟ್ಟಪಕ್ಷಕ್ಕೆ, ಗವರ್ನಮೆಂಟಿನ ಮುಂಜೂರಾತಿ ಮುಂದಾಗಿ ಪಡಕೊಂಡ ಹೊರತು, ಮೇಲೆ ಕಂಡ ರಿಜಿಸ್ಟರ್‌ನಲ್ಲಿ ಅಂತಾ ಯಾವ ತಪ್ಪಿತವನ್ನೂ ತಿದ್ದಕೂಡದು.

ಮುಂ. ರೆ. ಕೋ. 110ನೇ ಸೆಕ್ಷನ.

ಡೆಪ್ಯುಟಿ ಕಮ್ಮಿಷನರು ಸರ್ವೇ ರಿಕಾರ್ಡುಗಳನ್ನು ಇಟ್ಟುಕೊಂಡು ಅದಕ್ಕೆ ಅನುಗುಣವಾಗಿ ಗ್ರಾಮಕ್ಕೆ ಸಂಬಂಧಿಸುವ ರಿಕಾರ್ಡುಗಳನ್ನೂ ಲೆಕ್ಕಗಳನ್ನೂ ತಯಾರ್ ಮಾಡತಕ್ಕದ್ದು.

127. ಡೆಪ್ಯುಟಿ ಕಮ್ಮಿಷನರು ಸರ್ವೇ ಆಫೀಸರಿಂದ ತಯಾರ್ ಮಾಡಲ್ಪಟ್ಟ ಸೆಟಲ್‌ಮೆಂಟ ರಿಜಿಸ್ಟರನ್ನೂ ಮತ್ತು ಗವರ್ನಮೆಂಟಿನವರು ನಿಯಮಿಸತಕ್ಕಂಥಾ ಇತರ ರಿಕಾರ್ಡುಗಳನ್ನೂ ಇಡತಕ್ಕದು, ಮತ್ತು ತದನುಗುಣವಾಗಿ ಗ್ರಾಮ ರಿಕಾರ್ಡುಗಳನ್ನೂ ಲೆಕ್ಕಗಳನ್ನೂ ತಯಾರು ಮಾಡಿಸತಕ್ಕದು.

ಬದಲಾವಣೆಗಳು ವಗೈರೇಯನ್ನು ರಿಜಿಸ್ಟರ ಮಾಡತಕ್ಕದು.

ಸೆಟಲ್‌ಮೆಂಟ ರಿಜಿಸ್ಟರನಲ್ಲಿ ಆತನು ಯಾವ ಬದಲಾವಣೆಗಳನ್ನಾಗಲಿ ತಿದ್ದುಪಾಡುಗಳನ್ನಾಗಲಿ ಮಾಡತಕ್ಕದ್ದಲ್ಲವು, ಆದರೆ, ಗ್ರಾಮ ರಿಕಾರ್ಡುಗಳಲ್ಲಿಯೂ ಲೆಕ್ಕಗಳೊಳಗೂ, ಉಂಟಾಗಬಹುದಾದ ಎಲ್ಲಾ ಬದಲಾವಣೆಗಳನ್ನಾಗಲೀ ಅದರಲ್ಲಿ ರಿಕಾರ್ಡ ಮಾಡಲ್ಪಟ್ಟ ಯಾವದಾದರು ಹಕ್ಕುಗಳಿಗೆ ಅಥವಾ ಸಂಬಂಧಗಳಿಗೆ ಬಾಧಕವಾಗಬಹುದಾದ ಯಾವ ಅಂಶವನ್ನಾಗಲಿ ಸದರೀ ಗ್ರಾಮ ರಿಕಾರ್ಡಗಳಲ್ಲಿಯೂ ಲೆಕ್ಕಗಳೊಳಗೂ ರಿಜಿಸ್ಟರ್ ಮಾಡಿಸತಕ್ಕದ್ದು.

ಮುಂ. ರೆ. ಕೋ. 111ನೇ ಸೆಕ್ಷನ.

ಗವರ್ನಮೆಂಟ ವಿಚಾರಣೆಯಲ್ಲಿ ಹಂಗಾಮಿಯಾಗಿ ಇರಬಹುದಾದ ಗವರ್ನಮೆಂಟಿಗೆ ಸಂಬಂಧಿಸದ ಗ್ರಾಮಗಳ ಅಥವಾ ಸ್ವತ್ತುಗಳ ರೆವಿನ್ಯು ವಿಚಾರಣೆ.

128. ಪರಭಾರೇಯಾದ ಯಾವ ಗ್ರಾಮವಾಗಲಿ, ಸ್ವತ್ತಾಗಲಿ, ಗವರ್ನಮೆಂಟ ಆಫೀಸರಗಳ ಹಂಗಾಮಿ ವಿಚಾರಣೆಯೊಳಗೆ ಬರುವ ಸಂದರ್ಭದಲ್ಲಿ, ಅದರ ಬಾಬತು ಜಮೀನುಗಳನ್ನು ಒಂದು ಸರ್ವೇ ಸೆಟಲ್‌ಮೆಂಟಿನ ಮೂಲಕ ನಿರ್ಣಯಿಸಲ್ಪಟ್ಟ ದರಗಳಪ್ರಕಾರ ಅಥವಾ ಡೆಪ್ಯುಟಿ

634

ಕಮ್ಮಿಷ್ನರ್‌ರಿಗೆ ನ್ಯಾಯವೆಂದು ತೋರಬಹುದಾದ ನಿಶ್ಚಯಿಸಲ್ಪಟ್ಟ ಅಂತಾ ಇತರ ದರಗಳ ಪ್ರಕಾರ, ಅದರಬಾಬತು ಜಮೀನ್ಗಳನ್ನು ಗುತ್ತಿಗೆ ಕೊಡುವದೂ, ಹಿಡುವಳೀಯಿಲ್ಲದ ಜಮೀನ್ಗಳ ಹಿಡುವಳೀಯನ್ನು ಹರಾಜ್‌ಮೂಲಕ ವಿಕ್ರಯಿಸುವದೂ, ಪರಭಾರೇಯಾಗದ ಜಮೀನ್ಗಳ ವಿಚಾರಣೆಯಬಗ್ಗೆ ಯೇರ್ಪಟ್ಟ ರೂಲ್ಸ್ ಅನುಸರಿಸಿ ಅಂತಾ ರೂಲ್ಸ್ ಲಗಾವಾಗಬಹುದಾದ ಮಟ್ಟಿಗೂ, ಮತ್ತು ಸದರೀ ಗ್ರಾಮವಾಗಲೀ, ಸ್ವತ್ತಾಗಲಿ ಗವರ್ನಮೆಂಟ್ ಆಫೀಸರ್‌ಗಳ ವಿಚಾರಣೆಯಲ್ಲಿ ಇರುವವರೆವಿಗೂ, ಅದರ ಬಾಬತು ರೆವಿನ್ಯೂ ವಿಚಾರಣೆಯನ್ನು ನಡಿಸುವದು ಡೆಪ್ಯುಟಿ ಕಮ್ಮಿಷ್ನರ್‌ರಿಗೆ ನ್ಯಾಯವಾಗಿರತಕ್ಕದ್ದು. ಪರಂತು, ಅಂತಾ ಗ್ರಾಮದ ಯಾ ಸ್ವತ್ತಿನ ಮೇಲೆ ಹಿಡುವಳೀದಾರನಿಂದ ಮಾಡಲ್ಪಟ್ಟ ಜಮೀನಿಗೆ ಸಂಬಂಧಿಸುವ ಯಾವಲಿಖಿತ ಮೂಲಕದ ಕರಾರ್‌ಗಳೀಯಾಗಲೀ, ಸದರೀ ಜಮೀನಿನ ಮೇಲೆ ಗವರ್ನಮೆಂಟಿಗೆ ನ್ಯಾಯವಾಗಿ ವುಂಟಾಗಿರುವ ಹಕ್ಕುಗಳಿಗೆ ಬಾಧಕ ಆಗದಿದ್ದ ಪಕ್ಷಕ್ಕೆ ಈ ಸೆಕ್ಷನ್‌ನಲ್ಲಿ ಅಡಗಿರುವ ಯಾವ ನಡವಳಿತಗಳಿಂದಲೂ ಬಾಧಿಸಲ್ಪಡತಕ್ಕದ್ದಲ್ಲವು.

ಮುಂ. ರೆ. ಕೋ. 112ನೇ ಸೆಕ್ಷನ್.

ಜಮೀನ್ ಕಂದಾಯದ ವಿಷಯದಲ್ಲಿ ತಹಲ್ ಜಾರೀಲಿರುವ ಸೆಟಲ್‌ಮೆಂಟ್‌ಗಳನ್ನು ಕಾಪಾಡುವಣ.

129. ಗವರ್ನಮೆಂಟಿನ ಅಧಿಕಾರ ಪ್ರಕಾರ ಮಾಡಲ್ಪಟ್ಟ, ಒಪ್ಪಲ್ಪಟ್ಟ ಮತ್ತು ಕಾಯಂಮಾಡಲ್ಪಟ್ಟ ಜಮೀನ್ ಕಂದಾಯದ ಜಾರೀ ಇರುವ ಸರ್ವೇ ಸೆಟಲ್‌ಮೆಂಟುಗಳು, ಈ ರೆಗ್ಯುಲೇಷನಿನ ನಿಬಂಧನೆಗಳಿಗೆ ಒಳಪಟ್ಟು ಜಾರೀಯಲ್ಲಿರತಕ್ಕದ್ದೆಂದು ಇದರಿಂದ ತಿಳಿಸಲ್ಪಡುತ್ತೆ.

ಭಾಗ ಮಾಡುವಣ.

ಮುಂ. ರೆ. ಕೋ. 113ನೇ ಸೆಕ್ಷನ್.

ಗವರ್ನಮೆಂಟಿಗೆ ಕಂದಾಯ ಪಾವತೀ ಮಾಡುವ ಒಂದು ಯಸ್ಟೇಟಿನ ವಿಭಾಗದಬಗ್ಗೆ ರೂಲ್ಸ್.

130. ಗವರ್ನಮೆಂಟಿಗೆ ಕಂದಾಯ ತೆರತಕ್ಕ ಯಾವದಾದರೂ ಎಸ್ಟೇಟಿನ ವಿಭಾಗಕಾಲದಲ್ಲಿ ಇದರಡಿ ಬರುವ ರೂಲ್ಸ್ ಜಾರೀಲಿ ತರಲ್ಪಡತಕ್ಕದ್ದು ; (ಅವುಗಳು ಯಾವವಂದರೆ) :—

(1) ಯೆಸ್ಟೇಟು, ಯಾವ ನಂಬರನ್ನಾಗಲಿ, ಒಳಭಾಗಮಾಡದೆ ಸಾಧ್ಯವಾದಮಟ್ಟಿಗೆ ಸರ್ವೇ ನಂಬರ್‌ಗಳಿಗೆ ಅನುಗುಣವಾಗಿ ವಿಭಾಗಿಸಲ್ಪಡತಕ್ಕದ್ದು ; ಆದರೆ, ಒಂದು ನಂಬರನ್ನು ಒಳಭಾಗವಾಗಿ ಮಾಡದೆ ವಿಭಾಗವನ್ನು ಪೂರ್ಣವಾಗಿ ನೆರವೇರಿಸುವದಕ್ಕೆ ಆಗದೇ ಇದ್ದ ಪಕ್ಷಕ್ಕೆ ಅಂತಾ ಒಳಭಾಗವು, 115ನೇ ಸೆಕ್ಷನ್ ನಿಬಂಧನೆಗಳಿಗೆ ಒಳಪಟ್ಟು ಡೆಪ್ಯುಟಿ ಕಮ್ಮಿಷ್ನರ್‌ರಿಂದ ಮಾಡಲ್ಪಡಬಹುದು.

(2) ಹಿಂದಿನ ರೂಲ್ ಪ್ರಕಾರ ಸಾಧ್ಯವಾದ ಮಟ್ಟಿಗೆ ಭಾಗ ನಡಿಸಲ್ಪಟ್ಟಮೇಲೆ ಬಾಕೀ ಇರಬಹುದಾದ, ಯಾವ ನಂಬರೇ ಯಾಗಲಿ, ಅಥವಾ ನಂಬರಿನ ಒಳಭಾಗವಾಗಲಿ, 115ನೇ ಸೆಕ್ಷನ್ನಿನ ನಿಬಂಧನೆಗಳಿಗಾಗಿ ಒಳವಿಭಾಗ ಅಥವಾ ಇನ್ನೂ ಒಳವಿಭಾಗ ಮಾಡಲಿಕ್ಕೆ ಆಗದಿರುವಲ್ಲಿ, ಸದರೀ ನಂಬರಿನಲ್ಲಿ ಇತರ ಹಿಸ್ಸೇದಾರರುಗಳಿಗೆ ತಮ್ಮ ತಮ್ಮ ಹಿಸ್ಸೇಗಳ ಬೆಲೆಯನ್ನು ಹಣದ ರೂಪವಾಗಿ ಪಾವತೀಮಾಡುವ ಹಿಸ್ಸೇದಾರರ ಪೈಕಿ ಒಬ್ಬನಿಗೆ ಒಪ್ಪಿಸಲ್ಪಡತಕ್ಕದ್ದು, ಅಥವಾ ಅದು ಹರಾಜುಹಾಕಲ್ಪಟ್ಟು ಆ ಹುಟ್ಟುವಳಿಯು ತಮಾಂ ಹಿಸ್ಸೇದಾರರಿಗೂ ವಿಭಾಗಿಸಲ್ಪಡತಕ್ಕದ್ದು, ಅಥವಾ ಡೆಪ್ಯುಟಿ ಕಮ್ಮಿಷ್ನರು ಯುಕ್ತವೆಂದು ಭಾವಿಸುವ ಪ್ರಕಾರ ಅನ್ಯಥಾ ವಿಲೇಮಾಡಲ್ಪಡತಕ್ಕದ್ದು.

(3) ಅಂತಾ ವಿಭಾಗವನ್ನು ಮಾಡುವಲ್ಲಿ ಜರೂರಾಗಿಯೂ ಯುಕ್ತವಾಗಿಯೂ ತಗಲಿದ ಖರ್ಚುಗಳು, ಯಾರ ಖಾಯಿಷ್‌ನಿಂದ ಸದರೀ ವಿಭಾಗವು ಮಾಡಲ್ಪಟ್ಟಿತ್ತೊ ಅಂತಾ ಹಿಸ್ಸೇದಾರರಿಂದ ಅಥವಾ ಅಂತಾ ವಿಭಾಗ ಮಾಡುವದರಲ್ಲಿ ಸಂಬಂಧಪಟ್ಟ ಜನಗಳಿಂದ, ಡೆಪ್ಯುಟಿ ಕಮ್ಮಿಷ್ನರು ಯುಕ್ತವೆಂದು ಭಾವಿಸುವ ದಾಮಾಷಾಯಿ ಪ್ರಕಾರ ಕಂದಾಯದ ಬಾಕೀ ತರೀಕ್ ವಸೂಲ್‌ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 114ನೇ ಸೆಕ್ಷನ್.

ಜಂಟೀ ಹಿಸ್ಸೇದಾರರಿಂದ ದರಖಾಸ್ತು ಮಾಡಲ್ಪಟ್ಟಲ್ಲಿ, ಡೆ|| ಕಮ್ಮಿಷನರಿಂದ ಮಾಡಲ್ಪಡತಕ್ಕ ಪರಭಾರೇಯಾದ ಗ್ರಾಮದ ವಿಭಾಗವು.

131. ಯಾವ ಗ್ರಾಮದಲ್ಲಿ ರೆವಿನ್ಯೂ ಸರ್ವೆಯು ಜಾರೀಯಲ್ಲಿ ತರಲ್ಪಟ್ಟಿರುತ್ತೋ ಅಂತಾ ಪರಭಾರೇಯಾದ ಒಂದು ಗ್ರಾಮದಲ್ಲಿ ಒಬ್ಬ ಅಥವಾ ಹೆಚ್ಚು ಮಂದಿ ಜಂಟೀಹಿಸ್ಸೇದಾರರು, ಸದರೀ ಯೆಸ್ಟೇಟಿನ ವಿಭಾಗಕ್ಕೆ ಯಾವಾಗ ಸಮ್ಮತಿಸುತ್ತಾರೋ ಆಗ, ಹಿಂದಿನ ಕಡೇ ಸೆಕ್ಷನ್‌ನಲ್ಲಿ ಅಡಗಿರುವ ರೂಲ್ಸಿಗೆ ಒಳಪಟ್ಟು ಸದರೀ ಗ್ರಾಮವನ್ನು, ಜಂಟೀ ಹಿಸ್ಸೇದಾರ್ರುಗಳ ಅವರವರ ಹಕ್ಕುಗಳಪ್ರಕಾರ ವಿಭಾಗಮಾಡಿ ಅಂತಾ ಹಿಸ್ಸೇಗಳನ್ನು ಜಂಟೀ ಹಿಸ್ಸೇದಾರರಿಗೆ ಹಂಚಿಕೊಡುವದು ಡೆಪ್ಯುಟಿ ಕಮ್ಮಿಷನರಿಗಾಗಲಿ ಈಬಗ್ಗೆ ಅವರಿಂದ ಕ್ರಮವಾಗಿ ಅಧಿಕಾರ ಕೊಡಲ್ಪಟ್ಟ ಇತರ ಯಾವ ಆಫೀಸರರಿಗಾಗಲಿ ನ್ಯಾಯವಾಗಿರತಕ್ಕದ್ದು.

ಪರಂತು—

(a) ಗ್ರಾಮದಲ್ಲಿ ಅವರವರ ಹಕ್ಕುದಾರೀಗಳ ವಿಸ್ತೀರ್ಣವನ್ನು ಕುರಿತು ತಮಾಂ ಜಂಟೀ ಹಿಸ್ಸೇದಾರರೂ ಒಡಂಬಟ್ಟಿರುವ ಹೊರ್ತು, ಮತ್ತು

(b) ಅಂತಾ ವಿಭಾಗಕ್ಕೆ ಸಮ್ಮತಿಸುವ ಹಿಸ್ಸೇದಾರ್ ಯಾ ಹಿಸ್ಸೇದಾರರ ಹಿಸ್ಸೆಯು ಯಾ ಹಿಸ್ಸೇಗಳ ಕಂದಾಯವು, ಪೂರಾ ಯೆಸ್ಟೇಟಿನ ಕಂದಾಯದ ಅರವಾಸಿಗೆ ಮೀರಿದ ಹೊರ್ತು, ಅಂತಾ ವಿಭಾಗವೂ ಮಾಡಲ್ಪಡಕೂಡದು.

ಅಂತಾ ಸಂದರ್ಭಗಳಲ್ಲಿ ವಿಭಾಗದ ಖರ್ಚುಗಳು, ಹಿಂದಿನ ಕಡೇ ಸೆಕ್ಷನ್ನಿನ (3)ನೇ ರೂಲ್ ಅನುಸರಿಸಿ, ವಿಭಾಗಿಸಲ್ಪಟ್ಟ ಯೆಸ್ಟೇಟಿನಲ್ಲಿ ತಮಾಂ ಜಂಟೀ ಹಿಸ್ಸೇದಾರರಿಂದಲೂ ವಸೂಲ್‌ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 115ನೇ ಸೆಕ್ಷನ್.

ಸರ್ವೆಯ ಪುನರ್ವಿಮರ್ಶೆಯ ಕಾಲದಲ್ಲಿ ನಂಬರುಗಳ ಒಳ ವಿಭಾಗಗಳು.

132. ಸರ್ವೆಯ ಒಂದು ಪುನರ್ವಿಮರ್ಶೆಯ ಕಾಲದಲ್ಲಿ, 115ನೇ ಸೆಕ್ಷನ್ನಿನ ನಿಬಂಧನೆಗಳಿಗೂ, ಈ ಬಗ್ಗೆ ತತ್ಕಾಲದಲ್ಲಿ ಜಾರೀ ಇರುವ ಯಾವದಾದರು ಇಲಾಖಾರೂಲ್ಸ್ ಯಾ ಹುಕ್ಮುಂಗಳಿಗೂ ಒಳಪಟ್ಟು, ಯಾವ ಸರ್ವೇ ನಂಬರನ್ನಾಗಲೀ, ಯೆರಡು ಅಥವಾ ಹೆಚ್ಚು ಪ್ರತ್ಯೇಕ ನಂಬರುಗಳಾಗಿ ಒಳ ವಿಭಾಗ ಮಾಡುವದೂ, ಜನಗಳ ಹೆಸರುಗಳನ್ನೂ, ದೇಶೇಗಳನ್ನೂ ದಾಖಲ್ಮಾಡುವದೂ, ಸರ್ವೇ ಇನ್‌ಚಾರ್ಜ್ ಆಫಿಸರರ ಯಖ್ತ್ಯಾರಿಯಲ್ಲಿರತಕ್ಕದ್ದು. ಸದರೀ ಮನುಷ್ಯರನ್ನು ಸೆಟಲ್‌ಮೆಂಟ್ ರಿಜಿಸ್ಟರಿನಲ್ಲಿ ಪ್ರತ್ಯೇಕವಾಗಿ ಅಂತಾ ಒಳ ವಿಭಾಗಗಳ ರಿಜಿಸ್ಟರಾದ ಹಿಡುವಳೀದಾರರಾಗಿ ಮಂಜೂರ್ಮಾಡಲ್ಪಡಲಿಕ್ಕೆ ಅರ್ಹರಾಗಿ ಭಾವಿಸತಕ್ಕದ್ದು.

ಮುಂ. ರೆ. ಕೋ. 116ನೇ ಸೆಕ್ಷನ.

ಸೆಕ್ಷನ 68 ಅಥವಾ 70 ಅನುಸರಿಸಿ ವಿನಿಯೋಗಿಸಲ್ಪಟ್ಟ ಜಮೀನಿನ ಪ್ರತ್ಯೇಕವಾದ ಡಿ ಮಾರ್ಕೇಷನ.

133. ಸಾಗುವಳೀ ಲಾಯಖ್ ಜಮೀನಿನ ಯಾವ ಭಾಗವಾಗಲಿ ಸಾಗುವಳೀ ಲಾಯಖಿಲ್ಲದ ಯಾವ ಕೆಲಸಕ್ಕೋಸ್ಕರವಾಗಲೀ 68 ಯಾ 70ನೇ ಸೆಕ್ಷನ ನಿಬಂಧನೆಗಳನುಸರಿಸಿ ವಿನಿಯೋಗಿಸಿಕೊಳ್ಳಲ್ಪಟ್ಟರೆ, ಹಾಗೆ ವಿನಿಯೋಗಿಸಿ ಕೊಳ್ಳಲ್ಪಟ್ಟ ಭಾಗವು ಡೆಪ್ಯುಟಿ ಕಮಿಷನರ ಮಂಜೂರಾತೀ ಸಿಕ್ಕೀ ಡಿಮಾರ್ಕೇಟ್ ಯಾನೆ ಯೆಲ್ಲೀಗುರುತು ಮಾಡಲ್ಪಟ್ಟು 115ನೇ ಸೆಕ್ಷನ ನಿಬಂಧನೆಗಳ ಪ್ರಜಾರು ಯಿಡದೆ ಯಾವಾಗಲಾಗಲೀ ಪ್ರತ್ಯೇಕ ನಂಬರಾಗಿ ಯೇರ್ಪಡಿಸಲ್ಪಡತಕ್ಕದ್ದು.

9ನೇ ಅಧ್ಯಾಯ.

ಎಲ್ಲೆಗಳ ವ್ಯವಸ್ಥೆ, ಯೆಲ್ಲೀ ಗುರುತುಗಳನ್ನು ನಿರ್ಮಿಸುವಣ ಮತ್ತು ಕಾಪಾಡುವಣ.

ಮುಂ. ರೆ. ಕೋ. 118ನೇ ಸೆಕ್ಷನ.

ಗ್ರಾಮದ ಯೆಲ್ಲೆಗಳ ನಿರ್ಣಯ.

134. ಮೈಸೂರು ಶೀಮೆಯಲ್ಲಿ ಇರುವ ಗ್ರಾಮಗಳ ಯೆಲ್ಲೆಗಳೂ, ಅದಕ್ಕೆ ಸಂಬಂಧಿಸಿದ ತಮಾಂ ತಕರಾರುಗಳೂ, ಸರ್ವೇ ಆಫೀಸರುಗಳಿಂದಾಗಲಿ, ಈ ಬಗ್ಗೆ ಗವರ್ನಮೆಂಟಿನಿಂದ ನಿಯಮಿಸಲ್ಪಡಬಹುದಾದ ಅಂತಾ ಇತರ ಆಫೀಸರರಿಂದಾಗಲಿ ನಿರ್ಣಯಿಸಲ್ಪಡತಕ್ಕದ್ದು, ಸದರೀ ಆಫೀಸರರು ಈ ಕೆಳಗೆ ಬರುವ ರೂಲ್ಸಗಳ ಪ್ರಕಾರ ನಡಿಯತಕ್ಕದ್ದು.

ಗ್ರಾಮದ ಯೆಲ್ಲೀಗಳು ಒಡಂಬಡಿಕೇ ಮೂಲಕ ನಿರ್ಣಯಿಸಲ್ಪಡಬಹುದು.

ರೂಲ್ 1.—ಯಾವದಾದರೂ ಎರಡು ಅಥವಾ ಹೆಚ್ಚು ಆಸಪಾಸ್ ಗ್ರಾಮಗಳ ಪಟೇಲ್‌ಗಳಾಗಲಿ ಇತರ ಗ್ರಾಮ ನೌಕರರುಗಳಾಗಲಿ ಮತ್ತು ಒಂದು ಪರಭಾರೇಯಾದ ಗ್ರಾಮದ ಹಿಡುವಳೀದಾರನಾಗಲಿ, ಅಥವಾ ಕ್ರಮವಾಗಿ ನಿಯಮಿಸಲ್ಪಟ್ಟ ಅವನ ಮುತಾಲೀಕನಾಗಲಿ, ಅವರವರ ಗ್ರಾಮಗಳಿಗೆ ಮದ್ದಿಕವಾದ ಎಲ್ಲೆಯಾಗಿ ಗೊತ್ತಾದ ಯಾವ ಗುರುತನ್ನಾಗಲಿ ತಾವಾಗಿ ಒಪ್ಪಿದಲ್ಲಿ, ಎಲ್ಲೆಯನ್ನು ನಿರ್ಣಯಿಸುವ ಆಫೀಸರರು, ಆ ಬಗ್ಗೆ ಒಂದು ಒಡಂಬಡಿಕೆಯನ್ನು ಬರೆದುಕೊಡುವಂತೆ ಸದರೀ ಆಸಾಮಿಗಳನ್ನು ನಿಯಮಿಸಿ ಒಪ್ಪಿಕೊಳ್ಳಲ್ಪಟ್ಟ ರೀತಿಯಾಗಿ ಎಲ್ಲೆಯನ್ನು ನಿಷಾನೇ ಮಾಡತಕ್ಕದ್ದು ; ಈ ರೀತಿಯಾಗಿ ನಿಶ್ಚಯಿಸಲ್ಪಟ್ಟ ಯಾವದಾದರೂ ಗ್ರಾಮದ ಎಲ್ಲೆಯು, ಮೋಸದಿಂದಲಾಗಲಿ ಹೆದರಿಕೆಯಿಂದಲಾಗಲಿ ಯಾವದಾದರೂ ಯಿತರ ನ್ಯಾಯವಿರುದ್ಧವಾದ ಉಪಾಯಗಳಿಂದಾಗಲಿ ಸದರೀ ಒಡಂಬಡಿಕೆಯು ತೆಗೆದು ಕೊಳ್ಳಲ್ಪಟ್ಟದ್ದೆಯೆಂದು ಸದರೀ ಆಫೀಸರಿಗೆ ಕಾಣಬಾರದೇಯಿದ್ದರೆ, ಅದು ಆಖೈರಾಗಿ ವ್ಯವಸ್ಥೆಯಾದಂತೆ ಯೆಣಿಸಲ್ಪಡತಕ್ಕದ್ದು.

ಒಪ್ಪದಿರುವ ಅಥವಾ ತಕರಾರು ವಿಷಯದಲ್ಲಿ ನಡವಳಿಕೆ.

ರೂಲ್ಸ 2.—ಪಟೇಲರಾಗಲಿ ಇತರ ಗ್ರಾಮ ನೌಕರರಾಗಲಿ ಮತ್ತು ಪರಭಾರೆಯಾದ ಗ್ರಾಮದ ಹಿಡುವಳೀದಾರನಾಗಲಿ, ಕ್ರಮ ಪ್ರಕಾರ ನಿಯಮಿಸಲ್ಪಟ್ಟ ಅವನ ಮುತಾಲೀಕನಾಗಲಿ, ಹಿಂದಿನ ಸೆಕ್ಷನನಲ್ಲಿ ವಿಧಿಸಲ್ಪಟ್ಟ ಪ್ರಕಾರ ತಮ್ಮ ತಮ್ಮ ಗ್ರಾಮಗಳ ಯೆಲ್ಲೆಗಳನ್ನು ನಿಶ್ಚಯಿಸುವದಕ್ಕೆ ಒಡಂಬಡದೆ ಹೋದರೆ, ಅಥವಾ, ಒಡಂಬಡಿ

ಕೆಯು, ಮೋಸದಿಂದಲಾಗಲಿ, ಹೆದರಿಕೆಯಿಂದಲಾಗಲಿ, ಮತ್ತ್ಯಾವದಾದರು ಇತರ ನ್ಯಾಯವಿರುದ್ಧವಾದ ಸಾಧನಗಳಿಂದಾಗಲಿ, ಒಡಂಬಡಿಕೆ ಪಡಕೊಳ್ಳಲ್ಪಟ್ಟಂತೆ ಸದರೀ ಆಫಿಸರರಿಗೆ ಕಾಣಬಂದರೆ, ಅಥವಾ ಯಾವದಾದರೂ ತಕರಾರು ಫೈಸಲಾಗದೆ ಉಳಿದಿದ್ದರೆ ಸದರೀ ಆಫಿಸರರು, ತಕರಾರ್‌ನಲ್ಲಿರುವ ಜಮೀನನ್ನು ಸರ್ವೇಮಾಡಿ ನಕ್ಷೆ ಯೇರ್ಪಡಿಸತಕ್ಕದ್ದು. ಅಂತಾಪ್ರಾಂತ್ಯನಲ್ಲಿ ವ್ಯವಹಾರ ಮಾಡುವ ಕಕ್ಷಿಗಾರರು ಹಕ್ಕುದಾರೀ ಯಿಂದ ಕೇಳುವ ಜಮೀನನ್ನೂ, ಅದಕ್ಕೆ ಸಂಬಂಧಿಸಿದ ತಮಾಂ ತಪಶೀಲ್‌ಗಳನ್ನೂ ನಮೂದಿಸತಕ್ಕದ್ದು, ಮತ್ತು ಸದರೀ ಕಕ್ಷಿಗಾರರ ಹಕ್ಕುಗಳ ವಿಷಯದಲ್ಲಿ ಕ್ರಮವಾದ ವಿಚಾರಣೆಯನ್ನು ಮಾಡಿ ಬಳಿಕ ಮೊಕದ್ದಮೆಯಲ್ಲಿ ಫೈಸಲ್ ಕೊಡತಕ್ಕದ್ದು. ಇದಕ್ಕೆ ಸಂಬಧಿಸಿದ ಗ್ರಾಮಗಳಲ್ಲಿ ಯಾವದಾದರು ಪರಭಾರೇ ಮಾಡಲ್ಪಟ್ಟರೆ, ಸರ್ವೇ ಆಫಿಸರಿಂದ ಮಾಡಲ್ಪಟ್ಟ ಫೈಸಲು, ಹಾಗೆ ಫೈಸಲನ್ನು ಮಾಡುವ ಆಫಿಸರರು ಸರ್ವೇ ಸೂಪರಿಂಟೆಂಡೆಂಟರಾಗಿ ಇಲ್ಲದಿದ್ದರೆ, ಅವರಿಂದ ಕಾಯಂ ಮಾಡಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು.

ಮುಂ. ರೆ. ಕೋ. 119ನೇ ಸೆಕ್ಷನ್.

ಹೊಲ ಗದ್ದೆಗಳ ಯಲ್ಲೆ ನಿರ್ಣಯ.

135. ಸರ್ವೆ ಕಾಲದಲ್ಲಿ ಒಂದು ಹೊಲಗದ್ದೆಯ ಅಥವಾ ಹಿಡುವಳಿಯ ಯಲ್ಲೆಯು, ಬಿನ್‌ತಕರಾರ್ ಆಗಿಇದ್ದ ಪಕ್ಷಕ್ಕೆ ಮತ್ತು ತತ್ಕಾಲದಲ್ಲಿ ಹಾಜರಿದ್ದ ಗ್ರಾಮ ನೌಕರರಿಂದ ಸದರೀ ಯಲ್ಲೆಯು ಸರಿಯಾಗಿ ಯಿಧೆ ಯಂದು ಹೇಳಲ್ಪಟ್ಟರೆ ಹಿಡುವಳೀದಾರನಿಂದಾಗಲಿ ಅನುಭವದಾರನಿಂದಲಾಗಲಿ ತೋರಿಸಲ್ಪಟ್ಟ ಪ್ರಕಾರ ವಿಧಿಸಲ್ಪಡಬಹುದು ; ತಕರಾರ್ ಇದ್ದಲ್ಲಿ ಅಥವಾ ಸದರೀ ಹಿಡುವಳೀದಾರನಾಗಲಿ, ಅನುಭವದಾರನಾಗಲಿ ಹಾಜರಿಲ್ಲದಿದ್ದರೆ ಗ್ರಾಮ ರಿಕಾರ್ಡ್‌ಗಳ ಪ್ರಕಾರವೂ, ಗ್ರಾಮನೌಕರರಿಂದಲೂ, ಆಸ್‌ಪಾಸ್ ಜಮೀನ್‌ಗಳ ಹಿಡುವಳೀ ದಾರರಿಂದಲೂ ನಿರ್ಣಯಿಸಲ್ಪಟ್ಟ ಮೇರೆ ಹಿಡುವಳೀ ಪ್ರಕಾರವೂ, ಅಥವಾ ಸರ್ವೇ ಆಫಿಸರರು ಒದಗಿಸಲಿಕ್ಕೆ ಶಕ್ತರಾಗಿರಬಹುದಾದ ಅಂತಾ ಯಿತರ ಸಾಕ್ಷ್ಯ ಅಥವಾ ವರ್ತಮಾನದ ಮೇರಿಗೆ ನಿಶ್ಚಯಿಸಲ್ಪಡತಕ್ಕದ್ದು.

ಸರ್ವೇ ಮಾಡಲ್ಪಡದೆ ಇರುವ ಒಂದು ಹೊಲದ ಅಥವಾ ಹಿಡುವಳಿಯ ಯಲ್ಲೆಯ ವಿಷಯದಲ್ಲಿ ಯಾವದಾದರೂ ತಕರಾರ್ ಹುಟ್ಟಿದರೆ, ಅಥವಾ ಸರ್ವೇ ರಿಕಾರ್ಡ್‌ಗಳು ಡೆಪ್ಯುಟಿ ಕಮಿಷ್ನರರಿಗೆ ಒಪ್ಪಿಸಲ್ಪಟ್ಟಮೇಲೆ, ಯಾವಕಾಲದಲ್ಲಾಗಲಿ, ಯಾವದಾದರು ಸರ್ವೇ ನಂಬರಿನ ಯೆಲ್ಲೆಯ ವಿಷಯದಲ್ಲಿ ಒಂದು ತಕರಾರ್ ಹುಟ್ಟಿದರೆ, ಸದರೀ ತಕರಾರು, ಡೆಪ್ಯುಟಿ ಕಮಿಷ್ನರರಿಂದ ನಿರ್ಣಯಿಸಲ್ಪಡತಕ್ಕದ್ದು, ಅವರು, ಸರ್ವೇ ನಂಬರ್‌ಗಳ ವಿಷಯದಲ್ಲಿ, ಸರ್ವೇ ರಿಕಾರ್ಡ್‌ಗಳು ಮೊದಲೇ ನಿಶ್ಚಯಿಸಲ್ಪಟ್ಟ ಎಲ್ಲೆಯ ಕುರಿತು ತೃಪ್ತಿಕರವಾದ ರುಜುವಾತನ್ನುಂಟುಮಾಡಿದ ಪಕ್ಷಕ್ಕೆ ಸರ್ವೇ ರಿಕಾರ್ಡ್‌ಗಳ ಮೇರಿಗೂ, ಹಾಗಿಲ್ಲದ ಪಕ್ಷಕ್ಕೆ, ಅವರು ಪಡಿಯಲು ಶಕ್ತರಾಗಿರಬಹುದಾದ ಇತರ ರುಜುವಾತು ಮೇರಿಗೂ, ನಡಿಯತಕ್ಕದ್ದು.

ಮುಂ. ರೆ. ಕೋ. 120ನೇ ಸೆಕ್ಷನ್.

ಸರಹದ್ದುತಕರಾರು ಮಧ್ಯಸ್ಥಿಗೆಯಿಂದಫೈಸಲಾಗುವಣ.

136. ಒಂದು ಎಲ್ಲೆ ತಕರಾರ್‌ನಲ್ಲಿ ಸಂಬಂಧಿಸಿದ ಆಯಾಯ ಕಕ್ಷಿಗಾರರು ಅದರ ಫೈಸಲಾತಿಯನ್ನು ಒಂದು ಮಧ್ಯಸ್ಥರ ಸಮಾಜಕ್ಕೆ ಒಪ್ಪಿಸಲಿಕ್ಕೆ ಒಡಂಬಟ್ಟು, ಆ ಬಗ್ಗೆ ಬರವಣಿಗೆ ಯಲ್ಲಿ ಅರ್ಜೀಬರೆದುಕೊಂಡಲ್ಲಿ, ಹೀಗೆ ಅರ್ಜಿ ಬರದು

ಕೊಳ್ಳದಿದ್ದರೆ ಎಲ್ಲೆಯನ್ನು ನಿರ್ಣಯಿಸುವದು ಯಾರ ಕೃತ್ಯವಾಗಿರುವದೋ ಅಂತಾ ಆಫೀಸರರು, ಸದರೀ ಕಕ್ಷಿಗಾರರನ್ನು ಮೂರುಮಂದಿಗೆ ಕಡಮೆಯಿಲ್ಲದ ಜನಗಳುಳ್ಳ ಒಂದು ಸಮಾಜವನ್ನು ನಿರ್ಣಯಿಸಲ್ಪಟ್ಟ ವಂದುಕಾಲದ ವಳಗಾಗಿ ಏರ್ಪಡಿಸುವಂತೆ ಸದರೀ ಕಕ್ಷಿಗಾರರಿಗೆ ನಿಯಮಿಸತಕ್ಕದ್ದು. ಮತ್ತು ಸದರೀ ಆಫೀಸರಿಂದ ಗೊತ್ತು ಮಾಡಲ್ಪಡುವ ವಂದು ಕಾಲದೊಳಗೆ ಹಾಗೆ ನಿಯಮಿಸಲ್ಪಟ್ಟ ಕಮ್ಮಿಟೀಯವರಾಗಲಿ, ಸದರೀ ಕಮ್ಮಿಟಿಯ ಮೆಂಬರಗಳ ಪೈಕಿಹೆಚ್ಚು ಸಂಖೆಯುಳ್ಳವರಾಗಲಿ ವಂದು ಫೈಸಲ್‌ಮಾಡಿದರೆ, ಅಂತಾ ಫೈಸಲು, ಸದರೀಆಫೀಸರಿಂದ ಕಾಯಂ ಮಾಡಲ್ಪಟ್ಟಾಗ ಅಥವಾ ಸದರೀ ಆಫೀಸರರು, ಒಬ್ಬ ಸರ್ವೇಸೂಪರ್ರಿಂಟೆಂಡೆಂಟರಿಗಿಂತ ದರ್ಜೇಯಲ್ಲಿಕಡಮೇಯಾದ ಸರ್ವೇ ಆಫೀಸರರಾಗಿದ್ದರೆ, ಸರ್ವೇ ಸೂಪರ್ರಿಂಟೆಂಡೆಂಟರಿಂದ ಮಂಜೂರ್ ಮಾಡಲ್ಪಟ್ಟಾಗ ಆಖೈರಾದ್ದಾಗಿರತಕ್ಕದ್ದು.

ಫೈಸಲು ಪುನರಾಲೋಚನೆಯಬಗ್ಯೆ ಯಾವಾಗ ಕಳುಹಿಸಲ್ಪಡಬಹುದು.

ಪರಂತು, ಸದರೀ ಆಫೀಸರರಾಗಲಿ, ಸರ್ವೇ ಸೂಪರ್ರಿಂಟೆಂಡೆಂಟರಾಗಲಿ, ಸದರಿ ಫೈಸಲನ್ನಾಗಲಿ ಸಮಾಜಕ್ಕೆ ರಿಫರ್ ಮಾಡಲ್ಪಟ್ಟ ವಿಷಯಗಳ ಪೈಕಿ ಯಾವದನ್ನಾಗಲಿ, ಸಿವಿಲ್ ಪ್ರೊಸೀಡ್ಯೂರ್ ಕೋಡಿನ 520ನೇ ಸೆಕ್ಷನ್ನಲ್ಲಿ ವಿಧಿಸಲ್ಪಟ್ಟ ಕಾರಣಗಳ ಪೈಕಿ ಯಾವದಕ್ಕೋಸ್ಕರವಾಗಲಿ,ಅದೇ ಕಮ್ಮಿಟಿಯ ಪುನರಾಲೋಚನೆಗೆ ಕಳುಹಿಸತಕ್ಕದ್ದಕ್ಕೆ ಅಧಿಕಾರ ಉಂಟಾಗಿರತಕ್ಕದ್ದು.

ಮಧ್ಯಸ್ಥಿಗೆ ತಪ್ಪಿಹೋದರೆ ತಕರಾರನ್ನು ಸರ್ವೇ ಆಫೀಸರು ವ್ಯವಸ್ಥೆ ಮಾಡತಕ್ಕದ್ದು.

ಮೇಲೆ ಕಂಡ ರೀತಿಯಾಗಿ ಮೊಕರರ್ ಮಾಡಲ್ಪಟ್ಟ ಕಮ್ಮಿಟಿಯು ಗೊತ್ತು ಮಾಡಲ್ಪಟ್ಟ ಕಾಲದೊಳಗಾಗಿ ತಕರಾರನ್ನು ಫೈಸಲ್ ಮಾಡಲಿಕ್ಕೆ ತಪ್ಪಿದರೆ, ಮೇಲೆಕಂಡ ಆಫೀಸರರು, ಅಥವಾ ಸದರೀ ಆಫೀಸರರು ಸರ್ವೇ ಸೂಪರ್ರಿಂಟೆಂಡೆಂಟರ ದರ್ಜೆಗಿಂತ ಕಮ್ಮೀಯಾದ ಸರ್ವೇ ಆಫೀಸರಾಗಿ ಯಿದ್ದರೆ, ಸರ್ವೇ ಸೂಪರ್ರಿಂಟೆಂಡೆಂಟರು, ಅದನ್ನು ವ್ಯವಸ್ಥೆ ಮಾಡುವದಕ್ಕೆ ಕಾಲವನ್ನು ಹೆಚ್ಚಿಸುವದು ಯುಕ್ತವೆಂದು ಭಾವಿಸಿದ ಹೊರ್ತು, ಈ ರೆಗ್ಯುಲೇಷನ್ನಲ್ಲಿ ಅನ್ಯಥಾ ವಿಧಿಸಲ್ಪಟ್ಟ ಮೇರೆ ಅದನ್ನು ವ್ಯವಸ್ಥೆ ಮಾಡುವದು ಮೇಲೆ ಕಂಡ ಆಫೀಸರರ ಕಾರ್ಯವಾಗಿರತಕ್ಕದ್ದು.

ಮುಂ. ರೆ. ಕೋ. 121ನೇ ಸೆಕ್ಷನ್.

ಒಂದು ಯೆಲ್ಲೆಯ ಫೈಸಲಾತಿಯ ಫಲಿತಾಂಶ.

137. ಈ ಅಧ್ಯಾಯದ ಮೇಲೆ ಕಂಡ ಯಾವದಾದರೂ ನಿಬಂಧನೆಗಳನುಸರಿಸಿ ಒಂದು ಯೆಲ್ಲೆಯ ಫೈಸಲು—

(*a*) ಯೆಲ್ಲೇಲೈನಿನ ಅಥವಾ ಯೆಲ್ಲೆ ಗುರುತುಗಳ ಕ್ರಮವಾದ ಜಾಗಾವನ್ನು ಕುರಿತು;

(*b*) ಜಮೀನ್ ಹಿಡುವಳೀದಾರರ ಹಿಡುವಳಿಗಳಿಗೆ ಸಂಬಂಧಿಸುವಂತೆಯಾಗಲಿ ಸಂಬಂಧಿಸದಂತೆಯಾಗಲಿ ಫೈಸಲ್ ಮಾಡಲ್ಪಟ್ಟ ಜಮೀನಿನ ವಿಷಯದಲ್ಲಿ ನಿಶ್ಚಯಿಸಲ್ಪಟ್ಟ ಯೆಲ್ಲೆಯ ಉಭಯ ಪಾರ್ಶ್ವಗಳ ಮೇಲೂ, ಜಮೀನ್ ಹಿಡುವಳೀದಾರರ ಹಕ್ಕುಗಳನ್ನು ಕುರಿತು ನಿರ್ಣೀತವಾಗಿರತಕ್ಕದ್ದು.

ಎಲ್ಲೀ ಗುರುತುಗಳು.

ಮುಂ. ರೆ. ಕೋ. 122ನೇ ಸೆಕ್ಷರ್.

ಸರ್ವೇ ನಂಬರಗಳ ಮತ್ತು ಗ್ರಾಮಗಳ ಯೆಲ್ಲಿ ಗುರುತುಗಳ ತಯಾರೀ ವ ದುರಸ್ತಿ.

138. ಗ್ರಾಮಗಳು ಅಥವಾ ಸರ್ವೇ ನಂಬರಗಳು, ಸಾಗುವಳಿ ಮಾಡಲ್ಪಡಲಿ ಮಾಡಲ್ಪಡದೆ ಯಿರಲಿ ಅವುಗಳ ಯೆಲ್ಲಿ ಗುರುತುಗಳನ್ನು ತಯಾರ್ ಮಾಡಿಸಿ ಅಥವಾ ದುರಸ್ತು ಮಾಡಿಸಿ ಆ ಬಾಬತು ತಮಾಂ ಲಾಗವಡುಗಳನ್ನೂ ಹಿಡುವಳೀದಾರರಿಗಾಗಲೀ ಸದರಿ ಯೆಲ್ಲಿ ಗುರ್ತುಗಳಲ್ಲಿ ಸಂಬಂಧವುಳ್ಳ ಯಿತರರಿಗಾಗಲಿ ವಿಧಿಸತಕ್ಕದ್ದು:

ಯೆಲ್ಲಿ ಗುರುತುಗಳನ್ನು ತಯಾರ್ ಮಾಡಲಿಕ್ಕಾಗಲಿ ದುರಸ್ತು ಮಾಡ ಲಿಕ್ಕಾಗಲಿ ಜಮೀನ್ ಹಿಡುವಳೀದಾರರಿಗೆ ತಾಕೀದ.

ಸರ್ವೇ ಸೂಪರ್ರಿಂಟೆಂಡೆಂಟರಿಂದಾಗಲಿ ಸೆಟಲ್‌ಮೆಂಟು ಆಫೀಸರಿಂದಾಗಲಿ ಅಧಿಕಾರ ಹೊಂದಿದ ಯಾವ ಸರ್ವೇ ಆಫೀಸರಿಗೆಯಾಗಲಿ ನ್ಯಾಯವಾಗಿರತಕ್ಕದ್ದು: ಅಂಥಾ ಆಫೀಸರರು, ಜಮೀನ್ ಹಿಡುವಳೀದಾರರು ತಮ್ಮಗಳ ಯೆಲ್ಲಿ ಗುರುತುಗಳನ್ನು ಯಾವದಕ್ಕೆ ಸರ್ವೇ ನಡಿಯುತ್ತಿರುವ ಜಮೀನ್‌ಗಳು ಶೇರಿ ಯಿರುತ್ತವೋ ಅಂಥಾ ಗ್ರಾಮದಲ್ಲಿ ಚಾವಡೀ ಅಥವಾ ಪ್ರಸಿದ್ಧವಾದ ಯಿತರ ಸ್ಥಳದಲ್ಲಿ ಅಂಟಿಸಲ್ಪಡತಕ್ಕ ಒಂದು ಇಸ್ತಿಹಾರನಾಮೆ ಮೂಲಕ ತಮ್ಮ ತಮ್ಮ ಸರ್ವೇ ನಂಬರುಗಳ ಯೆಲ್ಲಿ ಗುರುತುಗಳನ್ನು ಒಂದು ಗೊತ್ತಾದ ಕಾಲದಲ್ಲಿ ತಯಾರ್ ಮಾಡಬೇಕೆಂದು ಅಥವಾ ದುರಸ್ತು ಮಾಡಬೇಕೆಂದು ತಾಕೀದ್ ಮಾಡಬಹುದು. ಹಾಗೆ ಮಾಡಲ್ಪಟ್ಟ ತಾಕೀದ್ ಪ್ರಕಾರ ನೆರವೇರಿಸಲಿಕ್ಕೆ ತಪ್ಪಿದರೆ, ಸರ್ವೇ ಆಫೀಸರರು, ಸದರೀ ಗುರುತುಗಳನ್ನು ತಯಾರ್ ಯಾ ದುರಸ್ತು ಮಾಡಿಸಿ ಆ ಬಾಬತು ಖರ್ಚುಗಳನ್ನೆಲ್ಲಾ ಯಿದರಲ್ಲಿ ಹಿಂದೆ ವಿಧಿಸಲ್ಪಟ್ಟ ಮೇರೆ ಠರಾಯಿಸತಕ್ಕದ್ದು.

ಒಂದು ಒಟ್ಟು ಇಸ್ತಿಹಾರ ನಾಮೆಯು ತಾಕೀದಿಗೆ ಯುಕ್ತವಾದ ಮತ್ತು ಸಾಕಾದ ನೋಟೀಸಾಗಿರತಕ್ಕದು.

ಮೇಲೆ ಕಂಡ ರೀತಿಯಾಗಿ ಫಾಯಿಷ ಮಾಡಲ್ಪಟ್ಟ ಒಂದು ಒಟ್ಟು ಇಸ್ತಿಹಾರನಾಮೆಯು, ಯಾವದಕ್ಕೆ ಸರ್ವೇ ವ್ಯಾಪಿಸುತ್ತದೊ ಅಂಥಾ ಜಮೀನ್‌ಗಳ ಹದ್ದುಗಳೊಳಗೆ ಇರುವ ಯಾವ ಸರ್ವೇ ನಂಬರಗಳಲ್ಲಿ ಯಾಗಲಿ ಯಾವ ಸಂಬಂಧವಾದರು ಉಳ್ಳ ಒಬೊಬ್ಬನಿಗೆ ಮತ್ತು ಪ್ರತಿ ಮನುಷ್ಯನಿಗೆ ಯುಕ್ತವಾಗಿಯೂ ಸಾಕಾಗಿಯೂ ಇರುವ ನೋಟೀಸಾಗಿ ಭಾವಿಸಲ್ಪಡತಕ್ಕದು.

ಎಲ್ಲೀ ಗುರುತುಗಳ ತಪಶೀಲು.

ಎಲ್ಲೀ ಗುರುತುಗಳ ಪ್ರಮಾಣವು, ಸಾಮಾನು, ಮತ್ತು ವಿವರವು, ಗವರ್ನಮೆಂಟ ಹುಕುಂಗಳನ್ನನುಸರಿಸಿ, ಸರ್ವೇ ಸೂಪರ್ರಿಟೆಂಡೆಂಟರಿಂದ, ಭೂಗುಣದ ಮತ್ತು ಹವದ ಜರೂರಾತೀ ಪ್ರಕಾರ, ನಿಶ್ಚಯಿಸಲ್ಪಡಬಹುದಾದರೀತಿಯಾಗಿರತಕ್ಕದ್ದು.

ಮುಂ. ರೆ. ಕೋ. 123ನೇ ಸೆಕ್ಷರ್.

ಎಲ್ಲೀ ಗುರುತುಗಳನ್ನು ಕಾಪಾಡುವ ಬಗ್ಗೆ ಜವಾಬ್‌ದಾರಿ

139. ಪ್ರತಿ ಜಮೀನ್ ಹಿಡುವಳೀದಾರನೂ, ತನ್ನ ಹಿಡುವಳಿಯ ಎಲ್ಲೀ ಗುರುತುಗಳ ಸಂರಕ್ಷಣೆ, ಒಳ್ಳೇದುರಸ್ತೀ ಬಗ್ಯೆ, ಅದಕ್ಕಾಗಿ ಬದಲಾವಣೆ, ನಿವೃತ್ತಿ ಅಥವಾ ಶಿಕಷ್ತಿ ಇಂಥಾ ಸಂಗತಿಗಳಲ್ಲಿ, ರೆವಿನ್ಯೂ ಆಫೀಸರಗಳಿಂದ ನ್ಯಾ

ಯವಾಗಿ ಮಾಡಲ್ಪಟ್ಟ ಖರ್ಚುಗಳಿಗಾಗಿಯೂ ಜವಾಬುದಾರನಾಗಿರತಕ್ಕದ್ದು. ಗ್ರಾಮ ಉದ್ಯೋಗಸ್ಥರು, ನೌಕರರು, ಗ್ರಾಮದ ಎಲ್ಲೇ ಗುರುತುಗಳನ್ನು ನಾಶಪಡಿಸುವದನ್ನಾಗಲಿ, ಬಗರ ಹುಕ್ಕುಂ ಬದಲಾವಣೆಯನ್ನಾಗಲಿ ಅಡ್ಡಿಮಾಡತಕ್ಕದ್ದು ಅವರ ಕೃತ್ಯವಾಗಿರತಕ್ಕದ್ದು.

ಮುಂ. ರೆ. ಕೋ. 124ನೇ ಸೆಕ್ಷನ್.

ಸರ್ವೇ ಸೆಟಲಮೆಂಟಿನ ತರುವಾಯ ಎಲ್ಲೆ ಗುರುತುಗಳ ಚಾರ್ಜನ್ನು ಡೆಪ್ಯುಟಿ ಕಮ್ಮಿಷನರು ವಹಿಸತಕ್ಕದ್ದು.

140. ಸರ್ವೇ ಸೆಟ್ಟಲ್‌ಮೆಂಟ್ ಒಂದು ಡಿಸ್ಟ್ರಿಕ್ಟಿನಲ್ಲಿ ಪ್ರವರ್ತಿಸಿದಾಗ ಎಲ್ಲೆ ಗುರುತುಗಳ ಚಾರ್ಜು ಡೆಪ್ಯುಟಿ ಕಮ್ಮಿಷನರಿಗೆ ಪ್ರಾಪ್ತವಾಗತಕ್ಕದ್ದಲ್ಲದೆ, ಸದರೀ ಗುರುತುಗಳನ್ನು ರಕ್ಷಿಸಿ ಮತ್ತು ದುರಸ್ತುಮಾಡುವ ಬಗ್ಗೆ ಏರ್ಪಾಡುಗಳನ್ನು ಮಾಡುವದು ಅವರ ಕೃತ್ಯವಾಗಿರತಕ್ಕದ್ದು. ಈ ಬಗ್ಗೆ 138ನೇ ಸೆಕ್ಷನ್‌ನಿಂದ ಸರ್ವೇ ಆಫೀಸರ್‌ಗಳಿಗೆ ವುಂಟುಮಾಡಲ್ಪಟ್ಟ ಅಧಿಕಾರಗಳು ಡೆಪ್ಯುಟಿ ಕಮ್ಮಿಷನರಲ್ಲಿ ಉಂಟಾಗತಕ್ಕದ್ದು.

ಮುಂ. ರೆ. ಕೋ. 125ನೇ ಸೆಕ್ಷನ್.

ಎಲ್ಲೇ ಗುರುತುಗಳನ್ನು ಕೆಡಿಸುವ ಬಗ್ಗೆ ದಂಡನೆ.

141. ಡೆಪ್ಯುಟಿ ಕಮ್ಮಿಷನರು, ಸರ್ವೇ ಆಫೀಸರರು, ಅಮಲ್ದಾರ್, ಅಥವಾ ಡೆ|ಅಮಲ್ದಾರ್ ಇಂತವರಮುಂದೆ, ಸ್ಪೂಟ್ ವಿಚಾರಣೆ ಆದಮೇಲೆ, ಯಾವ ಮನುಷ್ಯನಾಗಲಿ ಒಂದು ಎಲ್ಲೇ ಗುರುತನ್ನು ಮನಃಪೂರ್ವಕವಾಗಿ ಅಳಿಸುವ, ತೆಗೆದುಹಾಕಿಬಿಡುವ ಅಥವಾ ಭಿನ್ನಪಡಿಸುವ ಅಪರಾಧಕ್ಕಾಗಿ ತಕಸೀರ್ ಆಪಾದಿಸಲ್ಪಡುವ ಯಾವ ಮನುಷ್ಯನಾಗಲಿ, ಹಾಗೆ ಅಳಿಸಲ್ಪಟ್ಟ, ತೆಗೆದುಹಾಕಲ್ಪಟ್ಟ ಅಥವಾ ಭಿನ್ನಪಡಿಸಲ್ಪಟ್ಟ ಪ್ರತಿ ಗುರುತಿಗೂ, ಐವತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಈ ಸೆಕ್ಷನ್ ಅನುಸರಿಸಿ ವಿಧಿಸಲ್ಪಟ್ಟ ಪ್ರತಿ ಜುರ್ಮಾನೆಯು ಅರ್ಧಭಾಗವನ್ನು, ಅದನ್ನು ವಿಧಿಸುವ ಆಫೀಸರರು, ಈ ಸಂಗತಿ ತಿಳಿಸಿದವನು ಯಾವನಾದರು ಇದ್ದರೆ ಅವನಿಗೆ ಕೊಡಿಸಬಹುದು. ಮಿಕ್ಕ ಅರ್ಧ ಭಾಗವನ್ನು ಎಲ್ಲೇ ಗುರುತನ್ನು ಕ್ರಮಪಡಿಸುವದರ ಖರ್ಚುವಡಿಗಾಗಿ ಚಾರ್ಜ್‌ಮಾಡತಕ್ಕದ್ದು.

10ನೇ ಅಧ್ಯಾಯ.

ಗ್ರಾಮಗಳ, ಷಹರ್‌ಗಳ ವ ಪಟ್ಟಣಗಳ ನಿವೇಶನಗಳೊಳಗಣ ಜಮೀನುಗಳನ್ನು ಕುರಿತು.

ನಿವೇಶಗಳನ್ನು ನಿಶ್ಚಯಿಸುವಣ—

ಮುಂ. ರೆ. ಕೋ. 126ನೇ ಸೆಕ್ಷನ್.

ಗ್ರಾಮಗಳ, ಷಹರ್‌ಗಳ ವ ಪಟ್ಟಣಗಳ ನಿವೇಶನಗಳ ಎಲ್ಲೆಗಳನ್ನು ಹ್ಯಾಗೆ ನಿಶ್ಚಯಿಸುವದು.

142. ಯಾವ ಜಮೀನುಗಳು, ಯಾವದಾದರೂ ಗ್ರಾಮ, ಷಹರ್ ಯಾ ಪಟ್ಟಣ ಇಂತಾದ್ದರ ನಿವೇಶನದಲ್ಲಿ ಅಡಗಿ ಯಿರುತ್ತವೋ ಅದನ್ನು ನಿಶ್ಚಯಿಸುವದೂ, ಜಮೀನು ಹಿಡುವಳೀದಾರರಿಗೆ ಉಂಟಾಗಿರುವ ತಮಾಂ ಹಕ್ಕುದಾರೀಗಳಿಗೂ ನಿಗೇಯೊಡನೆ ಸದರೀ ನಿವೇಶನದ ಸರಹದ್ದುಗಳನ್ನು ಗೊತ್ತುಮಾಡುವದೂ ಮತ್ತು ಆಗಾಗ್ಯೆ ಬದಲಾಯಿಸುವದೂ, ಗವರ್ನಮೆಂಟಿನ ಬಟ್ಟು ಅಥವಾ ವಿಶೇಷ ಹುಕ್ಕುಂ ಅನುಸರಿಸಿ ಕೆಲಸ ನಡಿಸುವ ಡೆಪ್ಯುಟಿ ಕಮ್ಮಿಷನರಿಗಾಗಲಿ ಸರ್ವೇ ಆಫೀಸರರಿಗಾಗಲಿ, ನ್ಯಾಯವಾಗಿರತಕ್ಕದ್ದು.

ಜಮೀನ್ಹಾ ಕಂದಾಯದ ದೆಸೆಯಿಂದ ವಿನಾಯತಿ—

ಮುಂ. ರೆ. ಕೋ. 128ನೇ ಸೆಕ್ಷನ್.

ಯಾವ ಷಹರ್ ಯಾ ಪಟ್ಟಣಗಳಲ್ಲಿ 1868ನೇ ಯಿಸವಿಯ 4ನೇ ಮುಂಬೈ ಆಕ್ಟು ಅಮಲ್‌ನಲ್ಲಿಧೆಯೋ ಅಂಥಾ ಷಹರ್ ಯಾ ಪಟ್ಟಣಗಳೊಳಗಣ ಕೆಲವು ಜಮೀನ್ಹಾಗಳ ವಿಷಯದಲ್ಲಿ ಹಾಲೀಯಿರುವ ವಿನಾಯತಿಯು ಯಾವಾಗ ಅನುಸರಿಸತಕ್ಕದ್ದು.

143. ಇದುವರಿಗೆ ಸಾಧಾರಣವಾಗಿ ವ್ಯವಸಾಯದ ಕೆಲಸಗಳಿಗೆಮಾತ್ರ ಉಪಯೋಗಿಸಲ್ಪಟ್ಟಿರುವ ಜಮೀನ್ಹಾಗಳಲ್ಲದೆ, 1868ನೇ ಇಸವಿಯ 4ನೇ ಮುಂಬೈ ಆಕ್ಟಿನ ನಿಬಂಧನೆಗಳನು ಸರಿಶೆ ಹಕ್ಕುದಾರಿಗಳ ವಿಷಯದೊಳಗೆ, ಯಾವಷಹರುಗಳಲ್ಲಿ ಮತ್ತು ಪಟ್ಟಣಗಳಲ್ಲಿ ವಿಚಾರಣೆ ಮಾಡಲ್ಪಟ್ಟಿರುತ್ತಿದೆಯೋ ಅಂತಾ ಷಹರ್ ವ ಪಟ್ಟಣಗಳ ನಿವೇಶನಗಳಲ್ಲಿನ ಜಮೀನ್ಹಾಗಳಿಗೆ ಕಂದಾಯ ಕೊಡುವದರ ದೆಸೆಯಿಂದ ತಹಲ್ ಇರುವ ವಿನಾಯತಿಯು ಈ ಕೆಳಗಿನ ಸಂದರ್ಭಗಳಲ್ಲಿ ನಡಿಸಲ್ಪಡುತ್ತ ಬರತಕ್ಕದ್ದು :—

(1ನೇ) ಅಂಥಾ ಜಮೀನ್ಹಾಗಳು ಹಿಂದಿನ ವರುಷಗಳೊಳಗೆ ಸರ್ವೆಯಾದಂಥಾ ಯಾವ ಷಹರ ಯಾ ಪಟ್ಟಣದೊಳಗಿದ್ದು, ಅಂಥಾ ಸರ್ವೆಯನ್ನು ಈ ಸೆಕ್ಷನ್ನ ಕಾರ್ಯಕ್ಕಾಗಿ ಗವರ್ನಮೆಂಟಿನವರು ಅಂಗೀಕರಿಸಿದ್ದು ಮತ್ತು ಅಂಥಾ ಜಮೀನ್ಹಾಗಳು ಜಮೀನ್ಹಾ ಕಂದಾಯ ಕೊಡುವದರದೆಶೆಯಿಂದ ಪೂರಾ ಅಥವಾ ಕೆಲವುಮಟ್ಟಿಗೆ ವಿನಾಇಸಲ್ಪಟ್ಟಂತೆ ನಕ್ಷೆಗಳಲ್ಲಾಗಲಿ ಅಥವಾ ಅಂಥಾ ಸರ್ವೆಯ ಇತರ ರಿಕಾರ್ಡುಗಳಲ್ಲಾಗಲಿ ನಮೂದಿದ್ದಲ್ಲಿ ;

(2ನೇ) ಅಂಥಾ ಜಮೀನ್ಹಾಗಳು, ಸನ್ 1865ನೇ ಯಿಸವಿಯ 1ನೇ ನಂಬರ್ ಅಥವಾ 1868ನೇ ಯಿಸವಿ 4ನೇ ನಂಬರ ಮುಂಬೈ ಆಕ್ಟು ಅಂಥಾ ಷಹರ್ ಯಾ ಪಟ್ಟಣಕ್ಕೆ ಲಗಾವಾಗುವದಕ್ಕೆ ಪೂರ್ವ ಅಯಿದು ವರುಷಗಳಿಗೆ ಕಡಮೆ ಯಿಲ್ಲದ ಒಂದು ಕಾಲದ ಪರ್ಯಂತ ಕಂದಾಯ ಕೊಡುವದರ ದೆಸೆಯಿಂದ ಪೂರಾ ಅಥವಾ ಕೆಲವುಮಟ್ಟಿಗೆ ವಿನಾಯಿಸಲ್ಪಟ್ಟ ಹಿಡುವಳಿಯಲ್ಲಿದ್ದರೆ ;

(3ನೇ) ಅಂಥಾ ಜಮೀನ್ಹಾಗಳು, ಯೆಷ್ಟುಕಾಲಕ್ಕೆ ವಹಿಸಲ್ಪಟ್ಟಿದ್ದಾಗ್ಯೂ, ದಾನ ಶಾಸನವನ್ನಾಗಲಿ, ಬಹಲ್ ಶಾಸನವನ್ನಾಗಲಿ ಸಾದರ್‌ಮಾಡುವದಕ್ಕೆ ಲಾಯಖು ಯೆಂದು ಗವರ್ನಮೆಂಟಿನವರು ಅಂಗೀಕರಿಸುವ ಒಬ್ಬ ಆಫೀಸರರಿಂದ ಸಾದರ್ ಮಾಡಲ್ಪಟ್ಟ ಅಂಥಾ ದಾನ ಶಾಸನ ಅಥವಾ ಬಹಲ್ ಶಾಸನ ಅನುಸರಿಸಿ ಜಮೀನ್ಹಾ ಕಂದಾಯ ಕೊಡುವದರ ದೆಶೆಯಿಂದ ಪೂರಾ ಯಾ ಕೆಲವುಮಟ್ಟಿಗೆ ವಿನಾಯಿಸಲ್ಪಟ್ಟ ಹಿಡುವಳೀಯಲ್ಲಿ ಪಡೆದಿದ್ದರೆ.

ಮುಂ. ರೆ. ಕೋ. 129ನೇ ಸೆಕ್ಷನ್.

ವಿನಾಯತಿಗೆ ಹಕ್ಕುದಾರಿಯು ಡೆಪ್ಯುಟಿ ಕಮ್ಮಿಷನರಿಂದ ನಿರ್ಣಯಿಸಲ್ಪಡತಕ್ಕದ್ದು.

144. ಹಿಂದಿನ ಕಡೇ ಸೆಕ್ಷನ್ ಅನುಸರಿಸಿ ವಿನಾಯತಿಗೆ ಹಕ್ಕುಗಳು ಡೆಪ್ಯುಟಿ ಕಮ್ಮಿಷನರಿಂದ ಖುದ್ದ್ ವಿಚಾರಣೆ ಮಾಡಿದಮೇಲೆ, ನಿರ್ಣಯಿಸಲ್ಪಡತಕ್ಕದ್ದು, ಅವರ ಫೈಸಲು ಆಖೈರಾದ್ದಾಗಿರತಕ್ಕದ್ದು.

ಮುಂ. ರೆ. ಕೋ. 130ನೇ ಸೆಕ್ಷನ್.

ಕೆಲವು ಸಂಗತಿಗಳಲ್ಲಿ ಕಂದಾಯದೊಡನೆ ಕೊಡತಕ್ಕ ಹಿಡುವಳಿಯ ಖರೀದಿ.

145. ಯಾವದಕ್ಕೆ 143ನೇ ಸೆಕ್ಷನ್ ಲಗಾವಾಗುತ್ತೋ ಅಂಥಾ ಷಹರ್ ಯಾ ಪಟ್ಟಣಗಳಲ್ಲಿ, ಇದುವರಿಗೆ ವ್ಯವಸಾಯದ ಕೆಲಸಗಳಿಗೆ ಮಾತ್ರ ಉಪಯೋಗಿಸಲ್ಪಟ್ಟಿರುವ ಜಮೀನ್ಹಾಗಳು ಅಲ್ಲದೆ, ಅಂತಾ ಷಹರ್ ಯಾ ಪಟ್ಟಣಕ್ಕೆ 1865ನೇ ಇಸವಿಯ 1ನೇ ಮುಂಬೈ ಆಕ್ಟಾಗಲಿ 1868ನೇ ಇಸ

ವಿಯ 4ನೇ ಆಕ್ಟ್ಯಾಗಲಿ ಲಗಾವಾದ್ದಕ್ಕೆ ಪೂರ್ವ, ಯೆರಡು ಸಂವತ್ಸರಗಳಿಗೆ ಕಡಮೇ ಯಾದ ಕಾಲದವರಿಗೆ, ಬಗೆರ ಹುಕುಂ ಪಡೆದಿದ್ದ ದರ್ಖೋಬಸ್ತು ಜಮೀನ್ಗಳ ಹಿಡುವಳಿದಾರರೂ ಸದರೀ ಜಮೀನ್ಗಳಮೇಲೆ ವಿಧಿಸಲ್ಪಟ್ಟ ಜಮೀನ್ ಕಂದಾಯದೊಡನೆ ಸದರೀ ಜಮೀನ್ಗಳ ಹಿಡುವಳಿಯ ಖರೀದಿಯನ್ನು ಕೊಡುವದಕ್ಕೆ ಗುರಿಯಾಗತಕ್ಕದ್ದು. ಸದರಿಹಿಡುವಳೀ ಖರೀದಿಯೂ 65ನೇ ಸೆಕ್ಷನ್ ನಿಬಂಧನೆಗಳ ಪ್ರಕಾರ ನಿರ್ಣಯಿಸಲ್ಪಡತಕ್ಕದ್ದು."

ಚಿಲ್ಲರೆ ವಿಷಯ—

146. ಈ ರೆಗ್ಯುಲೇಷನಿನ 38ನೇ ಸೆಕ್ಷನಿಂದ ಆಕ್ರಮಿಸೋಣವನ್ನು ನಿಲ್ಲಿಸುವದಕ್ಕೆ ಡೆಪ್ಯುಟಿ ಕಮ್ಮಿಷ್ನರಿಗುಂಟಾದ ಅಧಿಕಾರವನ್ನು, 143ನೇ ಸೆಕ್ಷನಿನ ಯಾವ ಅಂಶವೂ ಬಾಧಿಸುವಹಾಗೆ ಎಣಿಸಲ್ಪಡತಕ್ಕದ್ದಲ್ಲವು.

ಮುಂ. ರೆ. ಕೋ. 131ನೇ ಸೆಕ್ಷನ್.

ಅಂತಾ ನಿವೇಶನಗಳಲ್ಲಿ ಜಮೀನ್ಗಳ ಸರ್ವೆಯು ಹ್ಯಾಗೆ ನಡಿಸಲ್ಪಡತಕ್ಕದ್ದು.

147. 112ನೇ ಸೆಕ್ಷನ್ ನಿಬಂಧನೆಗಳನುಸರಿಸಿ ಯಾವದಾದರೂ ಗ್ರಾಮ, ಷಹರ್ ಯಾ ಪಟ್ಟಣ ಇಂತಾದ್ದರ ನಿವೇಶನದಲ್ಲಿ ಸಾಧಾರಣವಾಗಿ ವ್ಯವಸಾಯದ ಕೆಲಸಗಳಿಗೆಮಾತ್ರ ಉಪಯೋಗಿಸಲ್ಪಟ್ಟ ಜಮೀನ್ಗಳು ಶಿವಾಯಿ ಇತರ ಜಮೀನ್ಗಳ ಸರ್ವೇಯನ್ನಾಗಲಿ, 123ನೇ ಸೆಕ್ಷನ್ ನಿಬಂಧನೆಗಳನುಸರಿಸಿ ಅವುಗಳ ಹೊಸ ಸರ್ವೇಯನ್ನಾಗಲಿ ನಿಯಮಿಸುವದು ಆವಶ್ಯಕವೆಂದು ಗವರ್ನಮೆಂಟಿನವರು ಯಾವಕಾಲದಲ್ಲಾಗಲಿ ಭಾವಿಸುವಪಕ್ಷಕ್ಕೆ ಅಂತಾ ಸರ್ವೆಯು, ಈ ರೆಗ್ಯುಲೇಷನಿನ 8 ಮತ್ತು 9ನೇ ಅಧ್ಯಾಯಗಳ ನಿಬಂಧನೆಗಳ ಪ್ರಕಾರ ನಡಿಸಲ್ಪಟ್ಟು, ಅದರ ಅಮಲ್ಗಳೆಲ್ಲ ಕ್ರಮಪಡಿಸಲ್ಪಡತಕ್ಕದ್ದು.

ನಿಯಮ.

ಪರಂತು, ಸದರೀ ರೆಗ್ಯುಲೇಷನಿನ 113, 114, 118, 120, 121 ಅಥವಾ 134ನೇ ಸೆಕ್ಷನ್ಗಳಲ್ಲಿ ಅಡಗಿರುವ ಯಾವ ಅಂಶವೂ, ಯೆರಡು ಸಾವಿರಪ್ರಜೆಗಳಿಗಿಂತ ಹೆಚ್ಚಾಗಿ ಅಡಗಿಸಿಕೊಂಡಿರುವ ಯಾವ ಷಹರ್ ಯಾ ಪಟ್ಟಣದಲ್ಲಾಗಲಿ ಅಂತಾ ಯಾವ ಸರ್ವೇಗಾದರೂ ಲಗಾವಾಗತಕ್ಕದ್ದೆಂದು ಯೆಣಿಸಲ್ಪಡತಕ್ಕದ್ದಲ್ಲವು.

ಮುಂ. ರೆ. ಕೋ. 132ನೇ ಸೆಕ್ಷನ್.

ಕೆಲವು ಸಂಗತಿಗಳಲ್ಲಿ ಸರ್ವೆ ರುಸುಂ ಚಾರ್ಜ್ ಮಾಡಲ್ಪಡತಕ್ಕದ್ದು.

148. ಒಂದು ಸರ್ವೆಯು, ಹಿಂದಿನಕಡೇ ಸೆಕ್ಷನ್ ನಿಬಂಧನೆಗಳನುಸರಿಸಿ ಯೆರಡು ಸಾವಿರ ಪ್ರಜೆಗಳಿಗಿಂತ ಹೆಚ್ಚಾಗಿ ಅಡಗಿ ಇರುವ ಯಾವದಾದರು ಷಹರ್ ಯಾ ಪಟ್ಟಣದ ನಿವೇಶನಕ್ಕೆ ವ್ಯಾಪಿಸಿದರೆ, ಒಂದು ಕಟ್ಟಣದ ನಿವೇಶನದ ಪ್ರತಿ ಹಿಡುವಳೀದಾರನೂ, ಗವರ್ನಮೆಂಟಿನಿಂದ, ಈ ಬಗ್ಯೆ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಂತಾ ರೂಲ್ಸ್ ಅನುಸರಿಸಿ ಡೆಪ್ಯುಟಿ ಕಮ್ಮಿಷ್ನರಿಂದ ವಿಧಿಸಲ್ಪಡತಕ್ಕ ಒಂದು ಸರ್ವೇ ರುಸುಂ ಕೊಡಲಿಕ್ಕೆ ಗುರಿಯಾಗತಕ್ಕದ್ದು, ಪರಂತು ಸದರೀ ಸರ್ವೇ ರುಸುಂ ಪ್ರತಿ ಸರ್ವೇ ನಂಬರಿಗೂ, ಯಾವ ಸಂಗತಿಯಲ್ಲಿಯೂ ಐದು ರೂಪಾಯಿಗೆ ಮೀರಕೂಡದು. ಸದರೀ ಸರ್ವೇ ರುಸುಂ, ಡೆಪ್ಯುಟಿ ಕಮ್ಮಿಷ್ನರಿಂದ, ಈಬಗ್ಯೆ, ಷಹರ್ ಯಾ ಪಟ್ಟದ ನಿವೇಶನದ ಒಂದು ಪಬ್ಲಿಕ ನೋಟೀಸ್ನಲ್ಲಿ

ಕಾಣುವ ಸದರೀ ಷಹರ್ ಯಾ ಪಟ್ಟಣದ ಅಂತಾ ಭಾಗದ ಸರ್ವೇಯು ಪೂರೈಸಿದ ಬಳಿಕ ಕೊಡಲ್ಪಡತಕ್ಕ ಅಂತಾ ನೋಟೀಸಿನ ತಾರೀಖು ಲಾಗಾಯತ್ 6 ತಿಂಗಳೊಳಗಾಗಿ ಕೊಡಲ್ಪಡತಕ್ಕದ್ದು.

ಈ ರೆಗ್ಯುಲೇಷನ್ ಜಾರೀಗೆ ಬರುವದಕ್ಕೆ ಮುಂದೆ, 1868ನೇ ಇಸವಿಯ 4ನೇ ಮುಂಬೈ ಆಕ್ಟು ಜಾರಿಯಲ್ಲಿದ್ದ ಯಾವದಾದರೂ ಷಹರ್ ಯಾ ಪಟ್ಟಣದಲ್ಲಿ ಈ ರೆಗ್ಯುಲೇಷನ್ ಜಾರೀಗೆ ಬಂದ ಬಳಿಕ 6 ತಿಂಗಳೊಳಗಾಗಿ ಬದಸ್ತೂರ್ ಒಂದು ಪಬ್ಲಿಕ್ ನೋಟೀಸ್ ಡೆಪ್ಯುಟಿ ಕಮ್ಮಿಷನರಿಂದ ಸಾದರ್ ಮಾಡಲ್ಪಡತಕ್ಕದ್ದು; ಪರಂತು, ಅಂತಾ ಯಾವದಾದರು ಪಟ್ಟಣದಲ್ಲಿ ಯಾ ಷಹರಿನಲ್ಲಿ ಬಿಲ್ಡಿಂಗ್ ಜಮೀನ್ ಹಿಡುವಳೀದಾರನಿಂದ, ಸದರೀ ಆಕ್ಟಿನ 10ನೇ ಸೆಕ್ಷನ್ ಅನುಸರಿಸಿ ಅವನಿಂದ ಪಡೆಕೊಳ್ಳಲ್ಪಟ್ಟ ಒಂದು ಸನ್ನದಿಗಾಗಿ ಒಂದುರುಸುಂ ಮೊದಲೇ ಪಾವತೀ ಮಾಡಲ್ಪಟ್ಟಿದ್ದರೆ, ಸರ್ವೇ ರುಸುಂ ಯಾವದೂ ಅವನಿಂದ ವಸೂಲ್ ಮಾಡತಕ್ಕದ್ದಲ್ಲವು.

ಮುಂ. ರೆ. ಕೋ. 133ನೇ ಸೆಕ್ಷನ್.

ಬೇರೆ ಯಾವ ಖರ್ಚೂ ಇಲ್ಲದೆ ಸನ್ನದ ಕೊಡಲ್ಪಡತಕ್ಕದ್ದು.

149. ಒಂದು ಕಟ್ಟಡದ ನಿವೇಶನದ ಪ್ರತಿ ಹಿಡುವಳೀದಾರನೂ, ಸದರೀ ಸರ್ವೇ ರುಸುಮನ್ನು ಪಾವತೀಮಾಡಿದ ಬಳಿಕ, ಹೆಚ್ಚು ಖರ್ಚುಇಲ್ಲದೆ, H ಗುರುತಿನ ಷೆಡ್ಯೂಲ್ ನಮೂನೆ ಮೇರಿಗೆ ನಕ್ಷೇಮೂಲಕವಾಗಿಯೂ, ವಿವರಣದಮೂಲಕವಾಗಿಯೂ, ಅವನ ಹಿಡುವಳಿಯ ವಿಸ್ತೀರ್ಣವನ್ನೂ ಷರತ್ತುಗಳನ್ನೂ ನಮೂದಿಸಿರುವ ಒಂದು ಅಥವಾ ಹೆಚ್ಚು ಸನ್ನದ್‌ಗಳನ್ನು ಡೆಪ್ಯುಟಿ ಕಮ್ಮಿಷನರಿಂದ ಪಡೆಯಲಿಕ್ಕೆ ಅರ್ಹನಾಗಿರತಕ್ಕದ್ದು:

ನಿಯಮ.

ಪರಂತು, ಅಂತಾ ಹಿಡುವಳೀದಾರನು, ಸರ್ವೇ ರುಸುಮನ್ನು ಪಾವತಿಮಾಡುವ ಕಾಲದಲ್ಲಾಗಲಿ, ಆ ತರುವಾಯ ಹಿಂದಿನ ಕಡೇಸೆಕ್ಷನ್ ಅನುಸರಿಸಿ ಡೆಪ್ಯುಟಿ ಕಮ್ಮಿಷನರಿಂದ ಸಾದರ್ ಮಾಡಲ್ಪಟ್ಟ ಪಬ್ಲಿಕ್ ನೋಟೀಸಿನ ತಾರೀಖು ಲಾಗಾಯತ ಆರುತಿಂಗಳೊಳಗಾಗಲಿ ಅಂತಾ ಸನ್ನದ ಯಾ ಸನ್ನದ್‌ಗಳಿಗೆ ಖಾಯಿಷ್ ಮಾಡದಿದ್ದರೆ ಡೆಪ್ಯುಟಿ ಕಮ್ಮಿಷನರು, ಪ್ರತಿ ಸನ್ನದಿಗೂ ಒಂದು ರೂಪಾಯಿಗೆ ಮೀರದ ಒಂದು ಜಾಸ್ತೀ ರುಸುಮನ್ನು ಪಾವತೀ ಮಾಡುವಂತೆ ನಿಯಮಿಸಬಹುದು.

ಅಂತಾ ಪ್ರತಿ ಸನ್ನದೂ, ಗವರ್ನಮೆಂಟ ತರಫಿನಲ್ಲಿ, ಅದನ್ನು ಬರೆದು ಕೊಡಲಿಕ್ಕೆ ಆಗಿಂದಾಗ್ಯೆ ನ್ಯಾಯತಃ ಅಧಿಕಾರ ಕೊಡಲ್ಪಡಬಹುದಾದ ಅಂತಾ ಆಫಿಸರರಿಂದ ಬರೆದು ಕೊಡಲ್ಪಡತಕ್ಕದ್ದು.

ಮುಂ. ರೆ. ಕೋ. 134ನೇ ಸೆಕ್ಷನ್.

ಇದುವರಿಗೆ ವ್ಯವಸಾಯದ ಕೆಲಸಗಳಿಗೆ ಮಾತ್ರ ಉಪಯೋಗಿಸಲ್ಪಟ್ಟ ಜಮೀನುಗಳ ಕಂದಾಯವು ಇತರ ಕಾರ್ಯಗಳಿಗೆ ಉಪಯೊಗಿಸಲ್ಪಡೋಣವು.

150. ತತ್ಕಾಲದಲ್ಲಿ ಜಾರೀ ಯಿರುವ ಯಾವದಾದರೂ ಕಾನೂನಿನ ನಿಬಂಧನೆಗಳನುಸರಿಸಿ ಗವರ್ನಮೆಂಟಿಗೂ ಹಿಡುವಳೀದಾರನಿಗೂ, ಯಾವದರ ವಿಷಯದಲ್ಲಿ ಒಂದು ಫೂಟ್ ಫೈಸಲಾತಿಯು ಮಾಡಲ್ಪಟ್ಟಿರುತ್ತೋ, ಅಂತಾ ಇದುವರಿಗೆ ಸಾಧಾರಣವಾಗಿ ವ್ಯವಸಾಯದ ಕೆಲಸಗಳಿಗೆ ಮಾತ್ರ ಉಪಯೋಗಿಸಲ್ಪಟ್ಟ, ಯಾವದಾದರೂ ಗ್ರಾಮ, ಷಹರ್,

ಯಾ ಪಟ್ಟಣದ ನಿವೇಶನದಲ್ಲಿನ ಯಾವ ಜಮೀನಾಗಲಿ, ಮತ್ತ್ಯಾವ ಕೆಲಸಗಳಿಗಾಗಲಿ ವಿನಿಯೋಗಿಸಲ್ಪಟ್ಟರೆ, ಅದು ಅಂತಾ ಫ್ರೂಟ್‍ಫೈಸಲಾತಿಯ ಷರತ್‍ಗಳನುಸರಿಸಿ ಸಲ್ಲತಕ್ಕ ಕ್ವಿಟರೆಂಟಿನೊಡನೆ ಅದೇಸ್ಥಳದಲ್ಲಿ ಬದಸ್ತೂರ್ ಕೆಲಸಗಳಿಗೋಸ್ಕರ ಉಪಯೋಗಿಸಲ್ಪಟ್ಟ ಪರಭಾರೇಯಾಗದ ಜಮೀನಿಗೆ ನಿಶ್ಚಯಿಸಲ್ಪಟ್ಟ ತೀರ್ವೆಯಲ್ಲಿ ಬೇಳೆ ಪಾಲನ್ನು ತೆರಲಿಕ್ಕೆ ಗುರಿಯಾಗತಕ್ಕದ್ದು.

11ನೇ ಅಧ್ಯಾಯ.

ಜಮೀನ್ ಕಂದಾಯ ವ ಯಿತರ ರೆವಿನ್ಯೂ ಬಾಕೀಗಳನ್ನು ವಸೂಲ್ ಮಾಡುವದನ್ನು ಕುರಿತು.

ಜಮೀನ್ ಕಂದಾಯಕ್ಕೆ ಜವಾಬ್‍ದಾರಿ.

ಮುಂ. ರೆ. ಕೋ. 136ನೇ ಸೆಕ್ಷನ್.

ಪ್ರಥಮ ಜವಾಬ್‍ದಾರಿ.

151. ರಿಜಿಸ್ಟರಾದ ಹಿಡುವಳೀದಾರನು, ಪರಭಾರೇಯಾಗದ ಜಮೀನಿನ ಕಂದಾಯದಬಗ್ಯೆ ಗವರ್ನಮೇಂಟಿಗೆ ಪ್ರಥಮತಃ ಜವಾಬ್‍ದಾರನಾಗಿರತಕ್ಕದ್ದು. ಮತ್ತು ಮೇಲ್ಪಟ್ಟ ಹಿಡುವಳೀದಾರನು ಪರಭಾರೆಯಾದ ಜಮೀನಿನ ಜಮೀನ್ ಕಂದಾಯದಬಗ್ಯೆ ಗವರ್ನ್‍ಮೆಂಟಿಗೆ ಪ್ರಥಮತಃ ಜವಾಬ್‍ದಾರನಾಗಿರತಕ್ಕದ್ದು.

ಪ್ರಥಮತಃ ಗವರ್ನಮೆಂಟಿಗೆ ಜವಾಬ್‍ದಾರನಾದ ಮನುಷ್ಯನು, ಜಮೀನು ಕಂದಾಯವನ್ನು ಕೊಡಲಿಕ್ಕೆ ತಪ್ಪಿದರೆ ಅಂತಾ ಜಮೀನ್ ಕಂದಾಯದ ವಸೂಲಾತಿ.

ಜಮೀನ್ ಕಂದಾಯದ ಬಗ್ಯೆ ಗವರ್ನಮೆಂಟಿಗೆ ಪ್ರಥಮತಃ ಜವಾಬ್‍ದಾರನಾದ ಮನುಷ್ಯನು, ಸದರೀ ಬಗ್ಯೆ ನ್ಯಾಯತಃ ವಿಧಿಸಲ್ಪಟ್ಟ ಕಾನೂನುಗಳ ಪ್ರಕಾರ ಅದನ್ನು ತೆರಲಿಕ್ಕೆ ತಪ್ಪಿದರೆ, ಪರಭಾರೇಯಾಗದ ಜಮೀನಿನ ಜಂಟೀ ಹಿಡುವಳೀದಾರನಿಂದಾಗಲಿ, ಪರಭಾರೆಯಾದ ಜಮೀನಿನ ಜಂಟೀಹಿಸ್ಸೇದಾರನಿಂದಾಗಲಿ, ಉಭಯಪಕ್ಷದಲ್ಲೂ ಕಮ್ಮಿ ಹಿಡುವಳೀದಾರನಿಂದಾಗಲಿ, ಖರ್ ಅನುಭವದಲ್ಲಿರುವ ಮನುಷ್ಯನಿಂದಾಗಲಿ ಸದರೀ ಕಂದಾಯವನ್ನು ವಸೂಲ್ ಮಾಡಬಹುದು.

ಕಮ್ಮೀ ಹಿಡುವಳೀದಾರನಿಂದ ವಸೂಲ್‍ಮಾಡಲ್ಪಟ್ಟ ಮೊಬಲಗಳನ್ನು ಅವನ ಹೆಸರಿಗೆ ಜಮೇ ಕಟ್ಟತಕ್ಕದ್ದು.

ಅಂತಾ ಯಾವನಾದರೂ ಜಂಟೀ ಹಿಡುವಳೀದಾರ, ಜಂಟೀ ಹಿಸ್ಸೇದಾರ, ಕಮ್ಮೀ ಹಿಡುವಳೀದಾರ ಅಥವಾ ಇತರ ಮನುಷ್ಯ ಇಂತಾವರಿಂದ ಜಮೀನ್ ಕಂದಾಯ ವಸೂಲ್ ಮಾಡಲ್ಪಟ್ಟರೆ ರಿಜಿಸ್ಟರಾದ ಹಿಡುವಳೀದಾರನಿಗಾಗಲಿ, ಮೇಲ್ಪಟ್ಟ ಹಿಡುವಳೀದಾರನಿಗಾಗಲಿ, ಅವನ ಜಮೀನ್‍ದಾರನಿಗಾಗಲಿ, ಅಂತಾ ಪಾವತೀಗಳ ಬಗ್ಯಾಗಿ ವಿಧಿಸಲ್ಪಟ್ಟ ಅಥವಾ ವಾಡಿಕೆಯಾದ ಕಾಲಗಳಲ್ಲಿ ಅಥವಾ ಆ ತರುವಾಯ ಮಾಡಲ್ಪಟ್ಟಿರಬಹುದಾದ ದರೋಬಸ್ತು ಪಾವತೀಗಳೂ, ಅವನ ಹೆಸರಿಗೆ ಜಮೇ ಕಟ್ಟಲ್ಪಡತಕ್ಕದ್ದು. ಮತ್ತು ಅವನಿಂದ ವಸೂಲ್ ಮಾಡಲ್ಪಟ್ಟ ಮೊಬಲಗು ರಿಜಿಸ್ಟರಾದ ಹಿಡುವಳೀದಾರ, ಮೇಲ್ಪಟ್ಟ ಹಿಡುವಳೀದಾರ, ಅಥವಾ ಅವನ ಜಮೀನ್‍ದಾರನಿಗಾಗಿ ಕೊಟ್ಟಂತೆ ಲೆಕ್ಕದಲ್ಲಿ ಜಮೇ ಕಟ್ಟಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

645

ಜಮೀನ್ ಕಂದಾಯಕ್ಕೆ ಗವರ್ನಮೆಂಟ್ ಹಕ್ಕುದಾರಿಯು ಮುಂದಾದದ್ದಾಗಿರುವಿಕೆ.

ಮುಂ. ರೆ. ಕೋ. 137ನೇ ಸೆಕ್ಷನ್.

ಗವರ್ನಮೆಂಟ್ ಹಕ್ಕುಗಳು ಮಿಕ್ಕ ತಮಾಂ ಹಕ್ಕುಗಳಿಗಿಂತಲೂ ಪ್ರಾಧಾನ್ಯವಾಗಿರತಕ್ಕದ್ದು.

152. ಈ ಅಧ್ಯಾಯದ ನಿಬಂಧನೆಗಳನುಸರಿಸಿ, ವಸೂಲಾಗತಕ್ಕ ಯಾವ ಹಣಗಳಿಗಾಗಲಿ, ಗವರ್ನಮೆಂಟ್ ಹಕ್ಕುದಾರಿಯು, ಯಾವದಾದರೂ ಜಮೀನ್ ಯಾ ಅದರ ಹಿಡುವಳೀದಾರನ ಮೇಲೆ ಭೋಗ್ಯ, ಜಡ್ಜಮೆಂಟ್ ಡಿಕ್ರಿ, ಅಮಲ್‌ಜಾರೀ, ಅಥವಾ ಜಫ್ತೀ ಯಿಂತಾದ್ದರ ವಿಷಯದಲ್ಲಾಗಲೀ ಅನ್ಯಥಾ ಆಗಲಿ ಉಂಟಾಗಿರುವ ಇತರ ಯಾವ ಸಾಲದ ತಗಾದೆಯ ಹಕ್ಕಿನ ಮೇಲಾಗಲಿ ಪ್ರಾಧಾನ್ಯವನ್ನು ಪಡೆದಿರತಕ್ಕದ್ದು.

ಮುಂ. ರೆ. ಕೋ. 138ನೇ ಸೆಕ್ಷನ್.

ಜಮೀನ್ ಕಂದಾಯದ ಬಗ್ಗೆ ಫಸಲಿನ ಜವಾಬ್‌ದಾರಿ.

153. ಯೆಲ್ಲ ಸಂಗತಿಗಳಲ್ಲೂ, ವ್ಯವಸಾಯದ ಕೆಲಸಗಳಿಗಾಗಿ ಉಪಯೋಗಿಸಲ್ಪಟ್ಟ ಜಮೀನಿನ ಸಾಲ್ ಮಜಕೂರ್ ಕಂದಾಯವು, ಅನ್ಯಥಾ ಪಾವತೀ ಮಾಡಲ್ಪಡದೆ ಯಿದ್ದರೆ, ಜಮೀನ್ ಕಂದಾಯಕ್ಕೆ ವಳಪಟ್ಟಿರುವ ಯಿತರ ತಮಾಂ ಹಕ್ಕುಗಳಿಗಿಂತ, ಮುಂದಾಗಿ ಜಮೀನಿನ ಫಸಲ್ ದೆಸೆಯಿಂದ ವಸೂಲ್‌ಮಾಡಲ್ಪಡತಕ್ಕದ್ದು.

ಜಮೀನ್ ಕಂದಾಯ ಯಾವಾಗ ವಸೂಲ್ ಆಗತಕ್ಕದ್ದು.

ಮುಂ. ರೆ. ಕೋ. 139ನೇ ಸೆಕ್ಷನ್.

ಜಮೀನ್ ಕಂದಾಯವು ರವಿನ್ಯೂ ಯಾನೆ ಮುಲ್ಕೀ ಸಾಲಿನಲ್ಲಿ ಯಾವಾಗಲಾಗಲಿ ವಸೂಲ್ ಮಾಡಲ್ಪಡಬಹುದು.

154. ಯಾವಸಾಲಿಗೆ ಕಂದಾಯ ವಸೂಲ್ ಆಗತಕ್ಕದ್ದೋ ಅಂತಾ ರೆವಿನ್ಯೂ ಸಾಲಿನ ಮೊದಲನೇ ತಾರೀಖಿನಲ್ಲಾಗಲಿ ತರುವಾಯ ಯಾವಾಗಲಾಗಲಿ ಜಮೀನ್ ಕಂದಾಯವು ವಸೂಲ್ ಆಗತಕ್ಕದ್ದು; ಆದರೆ 155ರ ಮೊದಲು, 159ರ ವರಿಗಿನ ಸೆಕ್ಷನ್‌ಗಳ ನಿಬಂಧನೆಗಳನುಸರಿಸಿ ಎಚ್ಚರಿಕೆಯ ಕ್ರಮಗಳು ಜರೂರೆಂದು ಭಾವಿಸಲ್ಪಟ್ಟಾಗ ಹೊರತು, ಇದರಲ್ಲಿ ಉತ್ತರೋತ್ತರ ಅಡಗಿರುವ ನಿಬಂಧನೆಗಳನುಸರಿಸಿ ನಿಶ್ಚಯಿಸಲ್ಪಡತಕ್ಕ ತಾರೀಖುಗಳಲ್ಲಿ ಮಾತ್ರ ಮೊಬಲಗ್ ಪಾವತೀ ಮಾಡಲ್ಪಡಬೇಕಾಗಿ ನಿಯಮಿಸಲ್ಪಡುವದು.

ಜಮೀನ್‌ಕಂದಾಯದ ಬಂದೋಬಸ್ತಿಯ ಬಗ್ಗೆ ಎಚ್ಚರಿಕೆಯ ಕ್ರಮಗಳು.

ಮುಂ. ರೆ. ಕೋ. 140ನೇ ಸೆಕ್ಷನ್.

ಮಾರಲ್ಪಟ್ಟಿರುವ ವಗೈರೇ ಫಸಲ್ ಸಾಗಿಸುವಣವನ್ನು ಕಂದಾಯ ಪಾವತೀ ಮಾಡುವತನಕ ಅಡ್ಡೀಮಾಡಬಹುದು.

155. ಯಾವದಾದರೂ ಜಮೀನಿನ ಅಥವಾ ಅದರ ಯಾವದಾದರೂ ಭಾಗದ ಫಸಲು, ಒಂದು ಸಿವಿಲ್ ಕೋರ್ಟು ಯಾ ಇತರ ಪಬ್ಲಿಕ್ ಅಧಿಕಾರಿಯ ಹುಕುಂನಿಂದಾಗಲಿ, ಸ್ವಂತ ಒಡಂಬಡಿಕೆಯ ಮೂಲಕವಾಗಲಿ, ವಿಕ್ರಯಿಸಲ್ಪಟ್ಟರೆ, ಅಡವು ಹಾಕಲ್ಪಟ್ಟರೆ, ಅಥವಾ ಅನ್ಯಥಾ ವಿಲಾಮಾಡಲ್ಪಟ್ಟರೆ, ಇದರಲ್ಲಿ ಮುಂದೆ ಬರುವ ಭಾಗದಲ್ಲಿರುವ ನಿಬಂಧನೆಗಳನುಸರಿಸಿ ಸದರೀ ಕಂದಾಯದ ಪಾವತೀ ಬಗ್ಗೆ ನಿಶ್ಚಯಿಸಲ್ಪಟ್ಟ ತಾರೀಖು ಪ್ರಾಪ್ತವಾಗಲಿ ಪ್ರಾಪ್ತವಾಗದೆಯಿರಲಿ, ಸದರೀ ಜಮೀನಿನ ಸಾಲ್‌ಮಜಕೂರ್ ಕಂದಾಯವು ಪಾವತೀ ಮಾಡಲ್ಪಡುವತನಕ, ಸದರೀ ಫಸಲು ಜಮೀನ್‌ದೆಸೆಯಿಂದ ಸಾಗಿಸಲ್ಪಡುವದನ್ನು ಡೆಪ್ಯುಟಿ ಕಮ್ಮಿಷನರು ಅಡ್ಡೀ ಮಾಡಬಹುದು. ಪರಂತು, ಯಾವ

ಸಂಗತಿಯಲ್ಲಿಯೂ ವಿಕ್ರಯಿಸಲ್ಪಟ್ಟಿರುವ, ಅಡವು ಹಾಕಲ್ಪಟ್ಟಿರುವ, ಅನ್ಯಥಾ ವಿಲಾವಮಾಡಲ್ಪಟ್ಟಿರುವ ಒಂದು ಫಸಲನ್ನಾಗಲಿ, ಅದರ ಯಾವ ಭಾಗವನ್ನಾಗಲಿ ಸಾಗಿಸಿಕೊಂಡು ಹೋಗುವ ವಿಷಯದಲ್ಲಿ ಒಂದು ಸಾಲ್ ಕಂದಾಯಕ್ಕಿಂತ ಜಾಸ್ತೀ ಬಗ್ಗೆ ಹರಕತ್ತು ಮಾಡಕೂಡದು.

ಮುಂ. ರೆ. ಕೋ. 141ನೇ ಸೆಕ್ಷನ್.

ಜಮೀನ್ ಕಂದಾಯವನ್ನು ಭದ್ರ ಪಡಿಸಿಕೊಳ್ಳುವ ಬಗ್ಗೆ ಡೆಪ್ಯುಟಿ ಕಮ್ಮಿಷನರು

156. ಫಸಲಿನ ಮೇಲೆ ಗವರ್ನಮೆಂಟ್ ಹಕ್ಕುದಾರೀಯನ್ನು ಜಾರೀ ಮಾಡೋಣದರ ಮೂಲಕ ಜಮೀನ್ ಕಂದಾಯದ ಪಾವತೀಯನ್ನು ಭದ್ರ ಪಡಿಸಿಕೊಳ್ಳುವಬಗ್ಗೆ ಡೆಪ್ಯುಟಿ ಕಮ್ಮಿಷನರಿಗೆ,

ಫಸಲ್ ಕಟಾವ್ಮಾಡುವದನ್ನು ನಿರೋಧಿಸತಕ್ಕದ್ದು, ಅಥವಾ

(*a*) ಜಮೀನ್ ಕಂದಾಯ ಪಾವತೀಮಾಡಲಿಕ್ಕೆ ಗುರಿಯಾದ ಯಾವ ಜಮೀನಿನಲ್ಲಾಗಲಿ ಬೆಳೆಯುವ ಫಸಲನ್ನು ಬರವಣಿಗೆಯಲ್ಲಿ ಒಂದು ನೋಟೀಸ್, ಅವರಿಗಾಗಲಿ, ಅವರಿಂದ ಈ ಬಗ್ಗೆ ನೇಮಿಸಲ್ಪಡತಕ್ಕ ಯಾರಾದರು ಇತರ ಆಫೀಸರರಿಗಾಗಲಿ, ಕೊಡಲ್ಪಡುವತನಕ ಮತ್ತು ಅಂತಾ ನೋಟೀಸು ಪಾವತೀ ಯಾದ್ದಕ್ಕೆ ರಸೀದೀಷರಾನಿಶೀ ವಾಪಸ್ಮಾಡಲ್ಪಡುವತನಕ ಕಟಾವುಮಾಡಕೂಡದೆಂದು ನಿಯಮಿಸುವದಕ್ಕೂ,

ಸದರೀ ಫಸಲನ್ನು ಸಾಗಿಸಿ ಬಿಡುವಣ.

(*b*) ಯಾವ ಜಮೀನಿನಲ್ಲಿ ಸದರೀ ಫಸಲ್ ಕಟಾವಾಗಿರುತ್ತೋ ಅಂತಾ ಜಮೀನಿನಿಂದ, ಅಥವಾ ಯಾವ ಜಮೀನಿನಲ್ಲಿ ಸದರೀ ಫಸಲು ಜಮಾಯಿಸಲ್ಪಟ್ಟಿರಬಹುದೋ ಅಂತಾ ಜಾಗಾದಿಂದ ತಂಮ ಅಥವಾ ಮೇಲೆ ಕಂಡಂತೆ ಯಾರಾದರು ಇತರ ಆಫೀಸರರ ಬರವಣಿಗೆಯಮೂಲಕವಾದ ಅಪ್ಪಣೆಯಿಲ್ಲದೆ, ಅಂತಾ ಫಸಲನ್ನು ಸಾಗಿಸಕೂಡದೆಂದು ನಿಯಮಿಸುವದಕ್ಕೂ,

ಸದರೀಫಸಲ್ಮೇಲೆ ಕಾವಲುಗಾರರನ್ನು ಇಡತಕ್ಕದ್ದು.

(c) ಅಂತಾ ಯಾವ ಫಸಲನ್ನಾಗಲಿ ಅಕ್ರಮವಾಗಿ ಕಟಾವ್ಮಾಡುವಣ ಅಥವನ್ನು ಸಾಗಿಸುವಣ ಇಂತಾದ್ದನ್ನು ಅಡ್ಡೀಮಾಡುವ ಬಗ್ಗೆ ಕಾವಲುಗಾರರನ್ನು ಇಡಿಸುವದಕ್ಕೂ ಮತ್ತು ಸದರೀ ಡೆಪ್ಯುಟಿ ಕಮ್ಮಿಷನರ ಶಿಬ್ಬಂದೀಗೆ ಸೇರಿದ ಜವಾನರಿಗೆ ಕೊಡಲ್ಪಡುವ ತಲಬ್ ದರಕ್ಕೆ ಜಾಸ್ತೀ ಇಲ್ಲದ ಅವರಿಗೆ ಯುಕ್ತ ತೋರಬಹುದಾದ ದರದಮೇರಿಗೆ ಸದರಿ ಕಾವಲುಗಾರರ ರುಸುಂಬಗ್ಗಾಗಿ ಬೇಕಾದ ಮೊಬಲಗನ್ನು ಅಂತಾ ಫಸಲ್ ಯಾವದಕ್ಕೆ ಸಂಬಂಧಿಸುತದೋ ಅಂತಾ ಜಮೀನ್ ವಿಷಯದಲ್ಲಿ ಜಮೀನ್ಕಂದಾಯದ ಬಾಕೀತರೀಕ್ ವಸೂಲ್ಮಾಡುವದಕ್ಕೂ, ಡೆಪ್ಯುಟಿ ಕಮಿಷನರಿಗೆ ನ್ಯಾಯವಾಗಿರತಕ್ಕದ್ದು.

ಮುಂ. ರೆ. ಕೋ. 142ನೇ ಸೆಕ್ಷನ್.

ಕಡೇ ಸೆಕ್ಷನ್ ಅನುಸರಿಸಿರುವ ಡೆಪ್ಯುಟಿ ಕಮ್ಮಿಷನರ ಹುಕ್ಕುಂಗಳು ಹ್ಯಾಗೆ ಫಾಯಿಷ್ ಆಗತಕ್ಕದ್ದು.

157. ಹಿಂದಿನ ಕಡೇ ಸೆಕ್ಷನಿನ (*a*) ಅಥವಾ (*b*) ಕ್ಲಾಜ್ ಅನುಸರಿಸಿ ಮಾಡಲ್ಪಡುವ ಡೆಪ್ಯುಟಿ ಕಮ್ಮಿಷನರ ಹುಕ್ಕುಂಗಳು, ಒಂದು ಗ್ರಾಮದಲ್ಲಿ, ಗವರ್ನಮೆಂಟಿಗೆ ಕಂದಾಯ ಕೊಡುವ ಜಮೀನಿನ ತಮಾಂ ಹಿಡುವಳೀದಾರರಿಗೆ ಒಟ್ಟಾಗಿ ಆಗಲಿ ಹಿಡುವಳೀದಾರರಿಗೆ ಇಸಂವಾರಾಗಿ ಆಗಲೀ ಸಾದರ್ಮಾಡಲ್ಪಡಬಹುದು.

ಹುಕ್ಕುಂ ಬಟ್ಟುಹುಕ್ಕುಂ ಆದರೆ, ಗ್ರಾಮದಲ್ಲಿ ದಂಡೂರೇ ಹೊಯಿಸುವದರ ಮೂಲಕವಾಗಿಯೂ, ಚಾವಡೀಯಲ್ಲಾಗಲಿ, ಗ್ರಾಮದಲ್ಲಿ ಯಾವದಾದರೂ ಇತರ ಬಹಿರಂಗವಾದ ಕಟ್ಟಡದಲ್ಲಾಗಲಿ, ಹುಕ್ಕುಂ ನಕಲನ್ನು ಚಿಕಟಾಯಿಸುವದರ ಮೂಲಕವಾಗಿಯೂ, ಪ್ರಕಟಿಸಲ್ಪಡತಕ್ಕ ಬಹಿರಂಗವಾದ ಇಸ್ತಿಹಾರ್‌ನಾಮೇಮೂಲಕ ಫಾಯಿಷ್ ಮಾಡಲ್ಪಡತಕ್ಕದ್ದು. ಸದರೀ ಹುಕ್ಕುಂ ಇಸಂವಾರ್ ಹಿಡುವಳೀದಾರರಿಗಾಗಿದ್ದರೆ, ಅದರಲ್ಲಿ ಸಂಬಂಧವುಳ್ಳ ಪ್ರತಿ ಹಿಡುವಳೀದಾರನಮೇಲೂ ಸದರೀ ಹುಕುಮಿನ ನಕಲನ್ನು ಜಾರೀಮಾಡತಕ್ಕದ್ದು.

ಆಜ್ಞೋಲ್ಲಂಘನೆಯ ಬಗ್ಯೆ ದಂಡನೆ.

ಅಂಥಾ ಯಾವ ಹುಕುಮಾಗಲಿ, ಹಾಗೆ ಫಾಯಿಷ್ ಮಾಡಲ್ಪಟ್ಟ ಬಳಿಕ, ಅಥವಾ ಅದರ ಬಾಬತು ಒಂದು ನೋಟೀಸ್ ಅವನಿಗೆ ಸಾದರ್ ಮಾಡಲ್ಪಟ್ಟ ತರುವಾಯ ಅಂತಾ ಹುಕುಮನ್ನು ಉಲ್ಲಂಘಿಸುವ ಅಥವಾ ಇಂಡ್ಯನ್‌ಪಿನಲ್‌ಕೋಡ್ ಅರ್ಥರೀತ್ಯಾ ಅಂತಾ ಯಾವ ಹುಕ್ಕುಂ ಉಲ್ಲಂಘನೆಯನ್ನು ಮದ್ದತ್ ಮಾಡುವ ಯಾವ ಮನುಷ್ಯನಾಗಲಿ, ಡೆಪ್ಯುಟಿ ಕಮ್ಮಿಷನರಿಂದ ಫ್ರೂಟ್ ವಿಚಾರಣೆಮಾಡಲ್ಪಟ್ಟು ತಕಶೀರ್ ಅಪಾದಿಸಲ್ಪಟ್ಟ ಮೇಲೆ, ಯಾವದರ ವಿಷಯದಲ್ಲಿ ತಕಶೀರ್‌ನಡಿಸಲ್ಪಟ್ಟಿರುತ್ತೋ ಅಂತಾ ಫಸಲ್ ಯಾವದಕ್ಕೆ ಸಂಬಂಧಿಸಿರುತ್ತೋ ಅಂತಾ ಜಮೀನಿಗೆ ಸಲ್ಲತಕ್ಕ ಕಂದಾಯದ ಮೊಬಲಗಿನ ಯೆರಡರಷ್ಟಕ್ಕೆ ಹೆಚ್ಚಾದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಮುಂ. ರೆ. ಕೋ. 143ನೇ ಸೆಕ್ಷನ್.

ಕಟಾವ್ ವಗೈರೇಯನ್ನು ಅಕ್ರಮವಾಗಿ ನಿಲ್ಲಿಸಿ ಇಡಕೂಡದು.

158. ಡೆಪ್ಯುಟಿ ಕಮ್ಮಿಷನರು, ಫಸಲಿನ ಕಟಾವನ್ನು ಸಾವಕಾಶಪಡಿಸಕೂಡದು ಅಥವಾ, ಫಸಲುಕೆಡುವಂತೆ ಅದರ ಮೆದೆಯನ್ನು ಅಕ್ರಮವಾಗಿ ಹೆಚ್ಚುಕಾಲ ಇಡಿಸಕೂಡದು; ಮತ್ತು ಫಸಲು ಮೆದೆಹಾಕಲ್ಪಟ್ಟ ತರುವಾಯ ಯೆರಡು ತಿಂಗಳೊಳಗಾಗಿ ಸಲ್ಲತಕ್ಕ ಕಂದಾಯ ವಸೂಲ್ ಆಗದಿದ್ದರೆ ಫಸಲನ್ನು ಖುಲಾಸೇಮಾಡಿ ಈ ಅಧ್ಯಾಯದಿಂದ ನಿಯಮಿಸಲ್ಪಟ್ಟ ಇತರ ಯಾವ ರೀತಿಯಾಗಿಯಾಗಲಿ, ಕಂದಾಯ ವಸೂಲ್‌ಮಾಡಲಿಕ್ಕೆ ಪ್ರವರ್ತಿಸತಕ್ಕದ್ದು ಅಥವಾ ಅದರ ಬಾಬತು, ಅವರಿಗೆ ಯುಕ್ತ ತೋರುವಷ್ಟು ಭಾಗವನ್ನು, ಬರತಕ್ಕ ಕಂದಾಯ ಮತ್ತು ನ್ಯಾಯವಾದ ತಮಾಂ ಖರ್ಚುಗಳನ್ನು ವಸೂಲ್‌ಮಾಡುವ ವಿಷಯದಲ್ಲಿ ಚರಸ್ವತ್ತಿನ ವಿಕ್ರಯದ ಬಗ್ಯೆ ಲಗಾವಾದ, ಈ ಅಧ್ಯಾಯದ ನಿಬಂಧನೆಗಳನುಸರಿಸಿ, ಹರಾಜ್‌ಬಗ್ಯೆ ತೆಗೆದುಕೊಳ್ಳತಕ್ಕದ್ದು, ಮಿಕ್ಕ ಭಾಗವನ್ನು ಖುಲಾಸೇಮಾಡತಕ್ಕದ್ದು.

ಫಸಲನ್ನು ಯಾವಾಗ ಖುಲಾಸೇ ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 144ನೇ ಸೆಕ್ಷನ್.

ಒಂದು ಗ್ರಾಮದ ಅಥವಾ ಒಂದು ಗ್ರಾಮದ ಹಿಸ್ಸೆಯ ಹಂಗಾಮಿ ಜಫ್ತೀ ವ ವಿಚಾರಣೆ.

159. ಹಿಸ್ಸೇದಾರರಲ್ಲಿ ತಕರಾರುಗಳಿಗೋಸ್ಕರವಾಗಲಿ, ಇತರ ನಿಮಿತ್ತಕ್ಕಾಗಲಿ, ಒಂದು ಪೂರಾ ಗ್ರಾಮ ಅಥವಾ ಒಂದು ಗ್ರಾಮದ ಪೈಕಿ ಒಂದು ಹಿಸ್ಸೆ ಅಡಗಿರುವ ಯಾವ ಹಿಡುವಳಿಯ ವಿಷಯದಲ್ಲಾಗಲಿ, ಸಲ್ಲತಕ್ಕ ಜಮೀನ್ ಕಂದಾಯವು ಬಾಕೀಯಾದಾಗ ಪಾವತೀ ಮಾಡಲ್ಪಡಲಾರದೆಂದು ಶಂಕಿಸಲಿಕ್ಕೆ ಡೆಪ್ಯುಟಿ ಕಮ್ಮಿಷನರಿಗೆ ಕಾರಣ ತೋರಬಂದರೆ ಗ್ರಾಮವನ್ನಾಗಲಿ, ಒಂದು ಗ್ರಾಮದ ಪೈಕಿ ಹಿಸ್ಸೆಯನ್ನಾಗಲಿ, ಜಫ್ತೀ ಮಾಡಿಸಿ ತಮ್ಮ ಸ್ವಂತ ವಿಚಾರಣೆ;

648

ಒಳಗಾಗಲಿ, ಸದರೀ ಬಗ್ಯೆ ತಾವು ಮುಕರರ್ ಮಾಡುವ ಯಾವನಾದರೂ ಮುತಾಲೀಕನ ವಿಚಾರಣೆಯೊಳಗಾಗಲಿ ಇಡಿಸಬಹುದು.

ವಿಚಾರಣೆ ಕರ್ತನ ಅಧಿಕಾರಗಳು, ಮತ್ತು ಹೆಚ್ಚಿಗೆ ಹುಟ್ಟುವಳಿಯ ವಿಲ್ಹೇವಾರಿ.

175ನೇ ಸೆಕ್ಷನಿನ ನಿಬಂಧನೆಗಳು, ಹಾಗೆ ಜಫ್ತೀಮಾಡಲ್ಪಟ್ಟ, ಯಾವದಾದರೂ ಗ್ರಾಮಕ್ಕೆ ಅಥವಾ ಒಂದು ಗ್ರಾಮದ ಹಿಸ್ಸೆಗೆ ಲಗಾವಾಗತಕ್ಕದ್ದು, ಮತ್ತು ಅಂಥಾ ಜಫ್ತಿಯ ಮತ್ತು ವಿಚಾರಣೆಯ ಖರ್ಚು, ಜಮೀನ್ ಕಂದಾಯದ ಬಗ್ಯಾಗಿ ಪಾವತೀಯಾಗತಕ್ಕವೊಬಲಗು ಮತ್ತು 128ನೇ ಸೆಕ್ಷನಿನ ನಿಬಂಧನೆಗಳನುಸರಿಸಿ ರೆವಿನ್ಯೂ ಸರ್ವೆ ಜಾರೀಗೆ ಬಂದಿದ್ದರೆ ಅಂತಾ ರೆವಿನ್ಯೂ ಸರ್ವೆಯ ಖರ್ಚುಸಹ ಜಾತಾ ವುಳದಿರುವ ಜಫ್ತಿಯಾದ ಜಮೀನಿನ ಆದಾಯವೆಲ್ಲವೂ ಅವುಗಳಿಗೆ ಹಕ್ಕುಳ್ಳ ಮನುಷ್ಯನ ಯಾ ಮನುಷ್ಯರ ಉತ್ತರೋತ್ತರ ಪ್ರಯೋಜನದ ಬಗ್ಯಾಗಿ ಅಮಾನಿಯಲ್ಲಿ ಇಡಿಸಲಪಟ್ಟು ಇರತಕ್ಕದ್ದು ಅಥವಾ ಗವರ್ನಮೆಂಟ ಹುಕುಮಿಗೆ ಒಳಪಟ್ಟು ಡೆಪ್ಯುಟಿ ಕಮ್ಮಿಷನರು ನಿಯಮಿಸಬಹುದಾದಂತೆ ಆಗಿಂದಾಗ್ಯೆ ಸದರೀ ಮನುಷ್ಯ ಯಾ ಮನುಷ್ಯರಿಗೆ ಪಾವತೀ ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 145ನೇ ಸೆಕ್ಷನ್.

ಜಾಮೀನ್ ಕೊಡಲ್ಪಟ್ಟಮೇಲೆ ಯಚ್ಚರಿಕೆಯ ಕ್ರಮಗಳನ್ನು ಬಿಟ್ಟುಬಿಡತಕ್ಕದ್ದು.

160. ಕಂದಾಯ ಕೊಡಲಿಕ್ಕೆ ಮುಖ್ಯವಾಗಿ ಜವಾಬ್ದಾರನಾದ ಮನುಷ್ಯನಾಗಲಿ, ಅಂಥಾವನು, ಕಂದಾಯ ಕೊಡಲಿಕ್ಕೆ ತಪ್ಪಿದರೆ, ಆಬಗ್ಯೆ ಜವಾಬ್ದಾರನಾಗತಕ್ಕ ಯಾವ ಮನುಷ್ಯನಾಗಲಿ ಅಂತಾ ಯೆಚ್ಚರಿಕೆಯ ಕ್ರಮಗಳನ್ನು ಬಿಟ್ಟುಬಿಡುವ ಕಾಲದವರಿಗೆ ಡೆಪ್ಯುಟಿ ಕಮ್ಮಿಷನರಿಗೆ ನ್ಯಾಯತಃ ಉಂಟಾದ ಖರ್ಚುಗಳು ಯಾವದಾದರೂ ಇದ್ದರೆ ಅದನ್ನು ಪಾವತೀಮಾಡಿ, ಇದರಲ್ಲಿ ಮುಂದೆ ಅಡಗಿರುವ ನಿಬಂಧನೆಗಳನುಸರಿಸಿ ಯಾವಕಾಲದಲ್ಲಿ ಅಥವಾ ಕಿಸ್ತು ಯಾವದಾದರೂ ಇದ್ದರೆ ಅಂತಾ ಕಿಸ್ತುಗಳ ಪ್ರಕಾರ ಪಾವತೀಯಾಗತಕ್ಕದ್ದಾಗಿರುವ ಅಂತಾ ಕಾಲದಲ್ಲಿ ಯಾ ಕಿಸ್ತುಗಳಲ್ಲಿ ಅದನ್ನು ಪಾವತೀ ಮಾಡುವಬಗ್ಯೆ ಡೆಪ್ಯುಟಿ ಕಮ್ಮಿಷನರಿಗೆ ತೃಪ್ತಿಕರವಾದ ಜಾಮೀನನ್ನು ಕೊಟ್ಟರೆ ಹಿಂದಿನಕಡೇ ಐದು ಸೆಕ್ಷನ್‌ಗಳಿಂದ ನಿಯಮಿಸಲ್ಪಟ್ಟ, ಮುಂಜಾಗ್ರತೆಯ ಬಾಬತು ಕ್ರಮಗಳನ್ನು ಬಿಟ್ಟುಬಿಡತಕ್ಕದ್ದು.

ಜಮೀನ್ ಕಂದಾಯದ ಪಾವತೀಯ ಏರ್ಪಾಡು.

ಮುಂ. ರೆ. ಕೋ. 146ನೇ ಸೆಕ್ಷನ್.

ಜಮೀನ್ ಕಂದಾಯವು ಯಾವ ತಾರೀಖ್ ವಗೈರೇಗಳಲ್ಲಿ ಪಾವತೀ ಮಾಡಲ್ಪಡತಕ್ಕದ್ದೋ ಅದನ್ನು ಗವರ್ನಮೆಂಟಿನವರು ನಿರ್ಣಯಿಸತಕ್ಕದ್ದು.

161. ಜಮೀನ್ ಕಂದಾಯವು ಹಿಂದಿನ 155 ಮೊದಲು 159ರ ವರಿಗೆ ಇರುವ ಸೆಕ್ಷನ್‌ಗಳ ನಿಬಂಧನೆಗಳನುಸರಿಸಿ ವಸೂಲ್ ಮಾಡಲ್ಪಟ್ಟ ಹೊರತು, ಗವರ್ನಮೆಂಟ ಹುಕುಂಗಳಿಂದ ಆಗಿಂದಾಗ್ಯೆ ನಿರ್ಣಯಿಸಲ್ಪಡಬಹುದಾದ ಅಂಥಾ ಕಾಲಗಳಲ್ಲಿಯೂ, ಅಂತಾ ಕಿಸ್ತುಗಳ ಪ್ರಕಾರವೂ, ಅಂತಾ ಮನುಷ್ಯರಿಗೂ, ಅಂಥಾ ಸ್ಥಳಗಳಲ್ಲಿಯೂ, ಪಾವತೀಮಾಡಲ್ಪಡತಕ್ಕದ್ದು.

ಬಾಕೀದಾರು.

ಮುಂ. ರೆ. ಕೋ. 147ನೇ ಸೆಕ್ಷನ್.

ಬಾಕೀ.
ಕಂದಾಯದ ಬಾಕೀದಾರು.

162. ಹಾಗೆ ಪಾವತೀಮಾಡಲ್ಪಡದ ಯಾವ ಮೊಬಲಗಾಗಲಿ, ಬಳಿಕ ಜಮೀನ ಕಂದಾಯದ ಬಾಕೀಯಾಗಿ ಅಬಗ್ಗೆ ಜವಾಬುದಾರರಾದವರು, 151ನೇ ಸೆಕ್ಷನಿನ ಅಥವಾ ಮತ್ಯಾವ ಇತರ ಸೆಕ್ಷನಿನ ನಿಬಂಧನೆಗಳನುಸರಿಸಿಯೇ ಯಾಗಲಿ, ಹಣ ಕೊಡಲಿಕ್ಕೆ ತಪ್ಪಿದ ಬಾಕೀದಾರರಾಗುತ್ತಾರೆ.

ಮುಂ. ರೆ. ಕೋ. 148ನೇ ಸೆಕ್ಷನ್.

ಹಣ ಕೊಡಲಿಕ್ಕೆ ತಪ್ಪುವದರಿಂದ ಉಂಟಾದ ಜವಾಬ್ದಾರಿ.

163. ಜಮೀನ ಕಂದಾಯದ ಯಾವ ಖಿಸ್ತಾಗಲಿ, ವಿಧಿಸಲ್ಪಟ್ಟ ಕಾಲದೊಳಗಾಗಿ ಪೂರಾ ಪಾವತೀಮಾಡಲ್ಪಡದೆ ಇದ್ದರೆ, ಗವರ್ನಮೆಂಟ ಹುಕುಂ ಅನುಸರಿಸಿ ಆಗ್ಗಿಂದಾಗ್ಯೆ ನಿಶ್ಚಯಿಸಲ್ಪಟ್ಟ, ಒಂದು ಸ್ಕೇಲ್ ಪಟ್ಟೀಪ್ರಕಾರ ನಿಯಮಿಸಲ್ಪಡಬಹುದಾದಂಥಾ ಜುರ್ಮಾನೇ ತರೀಕ ಅಥವಾ ಬಡ್ಡೀಮೂಲಕವಾದ ಖರ್ಚಿನೊಡನೆ, ಸಾಲ್‌ಮುಜಕೂರಿಗೆ, ಬಾಕೀದಾರನಿಂದ ಸಲ್ಲತಕ್ಕ ಕಂದಾಯದ ಪೂರಾ ಬಾಕೀಯನ್ನು ಕೂಡಲೆ ವಸೂಲ್ ಮಾಡಲಿಕ್ಕೆ ಪ್ರವರ್ತಿಸುವಣವು ಡೆಪ್ಯುಟಿ ಕಮ್ಮಿಷನರಿಗೆ ನ್ಯಾಯವಾಗಿರತಕ್ಕದ್ದು.

ಮುಂ. ರೆ. ಕೋ. 149ನೇ ಸೆಕ್ಷನ್.

ಸರ್ಟಿಫೈ ಮಾಡಲ್ಪಟ್ಟ ಲೆಕ್ಕವು ಬಾಕೀವಿಷಯದಲ್ಲಿ ಸಾಕ್ಷ್ಯವಾಗಿರತಕ್ಕದ್ದು.

164. ಡೆಪ್ಯುಟಿ ಕಮ್ಮಿಷನರಿಂದಾಗಲಿ, ಒಬ್ಬ ಅ|| ಕಮ್ಮಿಷನರಿಂದಾಗಲಿ, ಸರಟಿಫೈ ಮಾಡಲ್ಪಟ್ಟ ಲೆಕ್ಕದ ಒಂದು ತಖ್ತೆಯು, ಈ ಅಧ್ಯಾಯದ ಕಾರ್ಯಗಳಿಗಾಗಿ ಪಾವತೀಯಾಗತಕ್ಕ ಜಮೀನ ಕಂದಾಯದ ಮೊಬಲಗಿನ ಬಾಕಿಯ ಮತ್ತು ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನ ವಿಷಯದಲ್ಲೂ ತೀರ್ಗಡೆಯಾದ ಸಾಕ್ಷ್ಯವಾಗಿರತಕ್ಕದ್ದು.

ಡೆಪ್ಯುಟಿ ಕಮ್ಮಿಷನರುಗಳು ಪರಸ್ಪರ ಬಾಕೀಗಳನ್ನು ವಸೂಲ್ ಮಾಡಬಹುದು.

ಅಂತಾ ಸರಟಿಫೈ ಮಾಡಲ್ಪಟ್ಟ ತಖ್ತೆಯು ತಲಪಿದಮೇಲೆ ಒಂದು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರು, ಮತ್ಯಾವದಾದರೂ ಇತರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರ ಬಾಕೀಗಳನ್ನು, ಈ ಅಧ್ಯಾಯದ ನಿಬಂಧನೆಗಳನುಸರಿಸಿ, ತಮ್ಮ ಡಿಸ್ಟ್ರಿಕ್ಟಿನಲ್ಲಿಯೇ ಸದರೀ ತಗಾದೇ ಉಂಟಾದರೆ ಹ್ಯಾಗೋ ಹಾಗೆ, ವಸೂಲ್‌ಮಾಡಲಿಕ್ಕೆ ಪ್ರವರ್ತಿಸುವಣವು ಸದರೀ ಡೆಪ್ಯುಟಿ ಕಮ್ಮಿಷನರಿಗೆ ನ್ಯಾಯವಾಗಿರತಕ್ಕದ್ದು.

ಬಾಕೀವಸೂಲಿ.

ಮುಂ. ರೆ. ಕೋ. 150ನೇ ಸೆಕ್ಷನ್.

ಬಾಕೀಗಳನ್ನು ವಸೂಲ್ ಮಾಡುವಬಗ್ಗೆ ಕ್ರಮ.

165. ಜಮೀನ ಕಂದಾಯದ ಬಾಕಿಯು ಇದರಡಿ ಬರುವ ಕ್ರಮಗಳ ಪ್ರಕಾರ ವಸೂಲ್ ಮಾಡಲ್ಪಡಬಹುದು :—

(*a*) ಹಣ ಕೊಡಲಿಕ್ಕೆ ತಪ್ಪಿದವನಮೇಲೆ 167ನೇ ಸೆಕ್ಷನ್ ಅನುಸರಿಸಿ ಬರವಣಿಗೆಯ ತಗಾದಾ ನೋಟೀಸ್ ಸಾದರಮಾಡುವದರ ಮೂಲಕ ;

(*b*) ಯಾವದರ ವಿಷಯದಲ್ಲಿ ಬಾಕೀಸಲ್ಲಬೇಕಾಗಿರುತ್ತೋ ಅಂಥಾ ಹಿಡುವಳೀಯನ್ನು ಅಥವಾ ಪರಭಾರೇಯಾದ ಹಿಡುವಳೀಯನು 168ನೇ ಸೆಕ್ಷನ್ ಅನುಸರಿಸಿ ಸರಕಾರಕ್ಕೆ ತೆಗೆದುಕೊಳ್ಳುವದರ ಮೂಲಕ ;

(c) ಹಣಕೊಡಲಿಕ್ಕೆ ತಪ್ಪಿದವನ ಚರಸ್ವತ್ತನ್ನು 169ನೇ ಸೆಕ್ಷನ್ ಅನುಸರಿಸಿ ಜಪ್ತೀ ವ ಹರಾಜ್ ಮೂಲಕ;

(d) ಹಣಕೊಡಲಿಕ್ಕೆ ತಪ್ಪಿದವನ ಸ್ಥಿರಸ್ವತ್ತನ್ನು 170ನೇ ಸೆಕ್ಷನ್ ಅನುಸರಿಸಿ ಹರಾಜ್ ಮೂಲಕ;

(e) ಹಣಕೊಡಲಿಕ್ಕೆ ತಪ್ಪಿದವನ, 172 ಮತ್ತು 173ನೇ ಸೆಕ್ಷನ್‌ಗಳನು ಸರಿಸಿ, ದಸ್ತಗಿರೀ ವ ಖೈದ್ ಮೂಲಕ;

(f) ಪೂರಾ ಗ್ರಾಮಗಳಾಗಲಿ, ಗ್ರಾಮಗಳ ಹಿಸ್ಸೆಗಳಾಗಲಿ, ಅಡಗಿರುವ ಪರಭಾರೇಯಾದ ಹಿಡುವಳೀಗಳ ವಿಷಯದಲ್ಲಿ, 174ರ ಮೊದಲು 178ರವರಿಗೆ ಇರುವ ಸೆಕ್ಷನ್‌ಗಳನುಸರಿಸಿ ಸದರೀ ಗ್ರಾಮಗಳ ಅಥವಾ ಗ್ರಾಮಗಳ ಹಿಸ್ಸೆಗಳ ಜಪ್ತೀ ಮೂಲಕ.

ಮುಂ. ರೆ. ಕೋ. 151ನೇ ಸೆಕ್ಷನ್.

ಹಿಂದಿನ ಸಾಲ್‌ಗಳ ಕಂದಾಯದ ಬಾಕೀಗಳು ಹ್ಯಾಗೆ ವಸೂಲ್‌ಮಾಡಲ್ಪಡತಕ್ಕದ್ದು.

166. ಸಾಲ್ ಮುಜಕೂರಿನಂತೆ ಹಿಂದಿನ ಸಾಲ್‌ಗಳ ಕಂದಾಯದ ಬಾಕೀವಸೂಲೀಬಗ್ಗೆ ಸದರೀ ಕ್ರಮಗಳು ಪ್ರಯೋಗಿಸಲ್ಪಡಬಹುದು, ಆದರೆ, 152 ಮತ್ತು 153 ಈ ಸೆಕ್ಷನ್‌ಗಳಿಂದ ಉಂಟುಮಾಡಲ್ಪಟ್ಟ ಪ್ರಾಧಾನ್ಯವಾದ ಹಕ್ಕುಗಳು, ಸಾಲ್ ಮುಜಕೂರಿನ ಬಾಕೀಗಳ ವಿಷಯದಲ್ಲಿ ಮಾತ್ರ ಲಗಾವಾಗತಕ್ಕದ್ದು:

ನಿಯಮ.

ಪರಂತು, ಸಾಲ್ ಮುಜಕೂರಿನಲ್ಲಿ ಆರಂಭಿಸಲ್ಪಟ್ಟ ಯಾವ ಜಾರಿ ಕ್ರಮವಾಗಲಿ, ಆ ಸಾಲಿನೊಳಗೆ ಪೂರಾ ಜಾರೀಮಾಡಲ್ಪಡದೆ ಇರಬಹುದಾದರೂ, ಸದರೀ ಪ್ರಾಧಾನ್ಯತೆಗಳಿಗೆ ಅರ್ಹವಾಗಿರತಕ್ಕದ್ದು.

ತಗಾದೇ ನೋಟೀಸ್.

ಮುಂ. ರೆ. ಕೋ. 152ನೇ ಸೆಕ್ಷನ್.

ತಗಾದೇ ನೋಟಿಸ್ ಯಾವಾಗ ಸಾದರ್ ಆಗತಕ್ಕದ್ದು.

167. ಯಾವ ತಾರೀಖಿನಲ್ಲಿ ಬಾಕಿ ಆಗುತ್ತೋ ಆ ತಾರೀಖಿನ ಮಾರನೆ ದಿನದಲ್ಲಾಗಲಿ, ಆ ಬಳಿಕಾಗಲಿ, ಒಂದು ತಗಾದ ನೋಟೀಸ್ ಸಾದರ್ ಮಾಡಲ್ಪಡಬಹುದು. ಗವರ್ನಮೆಂಟಿನವರು ಅಂಥಾ ನೋಟಿಸ್‌ಗಳ ಸಾದರಾತೀಬಗ್ಗೆ, ಆಗಿಂದಾಗ್ಯೆ ನಿಬಂಧನೆಗಳನ್ನು ಏರ್ಪಡಿಸಿ ಕಂದಾಯದ ಬಾಕಿ ತರೀಕ್ ಹಣ ಕೊಡಲಿಕ್ಕೆ ತಪ್ಪಿದವನಿಂದ ವಸೂಲಾಗತಕ್ಕ ಖರ್ಚುಗಳನ್ನು ನಿಶ್ಚಯಿಸಿ, ಯಾವ ಆಫೀಸರರಿಂದ ಅಂಥಾ ನೋಟೀಸ್‌ಗಳು ಸಾದರ್‌ಮಾಡಲ್ಪಡತಕ್ಕವೋ ಅದನ್ನು ನಿಯಮಿಸತಕ್ಕದ್ದು.

ಹಿಡುವಳಿಯನ್ನು ಅಥವಾ ಪರಭಾರೆಯಾದ ಹಿಡುವಳಿಯನ್ನು ಸರಕಾರಕ್ಕೆ ಶೇರಿಸಿಕೊಳ್ಳೋಣ.

ಮುಂ. ರೆ. ಕೋ. 153ನೇ ಸೆಕ್ಷನ್.

ಯಾವಬಗ್ಗೆ ಬಾಕೀ ಕೊಡಬೇಕಾಗುತ್ತೋ ಅಂತಾ ಹಿಡುವಳಿ ಅಥವಾ ಪರಭಾರೇಯಾದ

168. ಯಾವದರ ವಿಷಯದಲ್ಲಿ ಜಮೀನ್ ಕಂದಾಯದ ಬಾಕೀ ಬರಬೇಕಾಗಿರುತ್ತೋ ಅಂತಾ ಹಿಡುವಳೀಯಾಗಲಿ, ಪರಭಾರೇಯಾದ ಹಿಡುವಳೀಯಾಗಲಿ, ಸರ್ಕಾರಕ್ಕೆ ಸೇರತಕ್ಕದ್ದೆಂದು ಡೆಪ್ಯುಟಿಕಮಿಷನರು ತಿಳಿಸಿ 59ಮತ್ತು 60ನೇ ಸೆಕ್ಷನ್

659

ಹಿಡುವಳಿಯು ಸರಕಾರಕ್ಕೆ ಸೇರ್ರಿ ಕೈಕೊಳ್ಳಲ್ಪಡಬಹುದು.

ಗಳ ನಿಬಂಧನೆಗಳನುಸರಿಸಿ ಸದರೀ ಹಿಡುವಳಿಯನ್ನು ವಿಕ್ರಯಿಸಿ ಅಥವಾ ಅನ್ಯಥಾ ವಿನಿಯೋಗಿಸಿ ಮತ್ತು ಅದರ ಹುಟ್ಟುವಳೀ ಯೇನಾದರೂ ಇದ್ದರೆ ಅದನ್ನು ಹಣಕೊಡಲಿಕ್ಕೆ ತಪ್ಪಿದವನಲೆಖ್ಖಕ್ಕೆ ಜಮೆ ಕಟ್ಟತಕ್ಕದ್ದು.

ಹಣ ಸಲ್ಲಿಸುವದಕ್ಕೆ ತಪ್ಪಿದವನ ಸ್ವತ್ತಿನಹರಾಜು.

ಮುಂ. ರೆ. ಕೋ. 154ನೇ ಸೆಕ್ಷನ್.

ಹಣ ಪಾವತೀಮಾಡಲಿಕ್ಕೆ ತಪ್ಪಿದವನ ಚರಸ್ವತ್ತಿನ ಜಪ್ತೀ ವ ಹರಾಜ್. ಯಾರಿಂದ ಮಾಡಿಸತಕ್ಕದ್ದು.

169. ಹಣ ಪಾವತೀಮಾಡಲಿಕ್ಕೆತಪ್ಪಿದವನ ಚರಸ್ವತ್ತನ್ನು ಡೆಪ್ಯುಟಿ ಕಮ್ಮಿಷನರು ಜಪ್ತೀ ಮತ್ತು ಹರಾಜು ಮಾಡಿಸಬಹುದು. ಅಂಥಾ ಜಪ್ತಿಯು, ಗವರ್ನಮೆಂಟಿನವರು ಆಗಿಂದಾಗ್ಯೆ ನಿಯಮಿಸ ಬಹುದಾದಂತಾ ಆಫೀಸರರಿಂದ ಅಥವಾ ಆಫೀಸರರ ತರಗತಿಯಿಂದ ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 155ನೇ ಸೆಕ್ಷನ್.

ಹಣ ಪಾವತೀಮಾಡಲಿಕ್ಕೆ ತಪ್ಪಿದವನ ಸ್ಥಿರಸ್ವತ್ತಿನ ಹರಾಜ್.

170. ಯಾವದರಮೇಲೆ ಬಾಕೀ ಸಲ್ಲಬೇಕಾಗಿರುತ್ತೋ ಅಂತಾ ಜಮೀನ್ ಅಲ್ಲದೇ ಯಾವದಾದರೂ ಸ್ಥಿರಸ್ವತ್ತಿನಲ್ಲಿ ಹಣ ಪಾವತೀ ಮಾಡಲಿಕ್ಕೆ ತಪ್ಪಿದವನ ಹಕ್ಕು ಬಾಧ್ಯತೆ ಸಂಬಂಧಗಳನ್ನು, ಡೆಪ್ಯುಟಿ ಕಮ್ಮಿಷನರು ಹರಾಜ್ ಮಾಡಿಸಲೂಬಹುದು.

ಮುಂ. ರೆ. ಕೋ. 156ನೇ ಸೆಕ್ಷನ್.

ಜಪ್ತೀ ಮತ್ತು ಹರಾಜ್ ದೆಸೆಯಿಂದ ವಿನಾಯಿತಿ.

171. ಒಂದು ಡಿಕ್ರೀ ಅಮಲ್‌ಜಾರೀಯಲ್ಲಿ ಜಪ್ತೀ ಯಾ ಹರಾಜ್ ದೆಸೆಯಿಂದ ಸಿವಿಲ್ ಪ್ರೊಸೆಡ್ಯೂರ್ ಕೋಡಿನಿಂದ ವಿನಾಯಿಸಲ್ಪಟ್ಟಿರುವಂತಾ ತಮಾಂ ಸ್ವತ್ತೂ ಸಹ, ಹಿಂದಿನಕಡೇ ಯೆರಡು ಸೆಕ್ಷನ್‌ಗಳಲ್ಲಿ ಯಾವದನ್ನನುಸರಿಸಿಯಾಗಲಿ ನಡಿಸಲ್ಪಡುವ ಜಪ್ತೀ ದೆಸೆಯಿಂದಾಗಲಿ, ಹರಾಜ್ ದೆಸೆಯಿಂದಾಗಲಿ, ವಿನಾಯಿಸಲ್ಪಡತಕ್ಕದ್ದು.

ಯಾವ ಸ್ವತ್ತು ಹಾಗೆ ವಿನಾಯಿತಿಗೆ ಅರ್ಹವಾಗಿರುವ ಅಂಶವನ್ನು ಕುರಿತು ಡೆಪ್ಯುಟಿ ಕಮ್ಮಿಷನರ ತೀರ್ಮಾನವು ಆಖೈರಾದ್ದಾಗಿರತಕ್ಕದ್ದು.

ದಸ್ತಗಿರಿ ವ ಖೈದು.

ಮುಂ. ರೆ. ಕೋ. 157ನೇ ಸೆಕ್ಷನ್.

ಹಣ ಕೊಡಲಿಕ್ಕೆ ತಪ್ಪಿದವನ ದಸ್ತಗಿರಿ ಮತ್ತು ಪಹರೇಯಲ್ಲಿಡಲ್ಪಡುವಣ.

172. ಕಂದಾಯ ಬಾಕೀಯಾದ ಮೇಲೆ ಯಾವಕಾಲದಲ್ಲಾಗಲಿ, ದಂಡ ಅಥವಾ ಬಡ್ಡಿ ಮತ್ತು, ದಸ್ತಗಿರಿಯ, ಮತ್ತು ತಗಾದಾ ನೋಟೀಸ್ ಯಾವದಾದರೂ ಯಿದ್ದು ಸಾದರ್ ಮಾಡಲ್ಪಟ್ಟರೆ, ಅದರ ಬಾಬತು ಖರ್ಚುಗಳು ಮತ್ತು ಪಹರೇಯಲ್ಲಿಡಲ್ಪಟ್ಟಿದ್ದಾಗ ತನ್ನ ಪೋಷಣೆ ಖರ್ಚು ಇವುಗಳು ದೇಖೀಲ್ ಭರತಕ್ಕ ಕಂದಾಯ ತ್ವರೆಯಾಗಿ ಪಾವತೀಮಾಡಲ್ಪಟ್ಟಹೊರತು ಬಾಕೀದಾರನು ದಸ್ತಗಿರಿ ಮಾಡಲ್ಪಟ್ಟು ಡೆಪ್ಯುಟಿಕಮ್ಮಿಷನರ ಅಥವಾ ಒಬ್ಬ ಅಮಲ್‌ದಾರರ ಅಥವಾ ಡೆಪ್ಯುಟಿ ಅಮಲ್‌ದಾರರ ಕಚ್ಚೇರಿಯಲ್ಲಿ 10 ದಿನಗಳು ಪಹರೇಯಲ್ಲಿಡಲ್ಪಡಬಹುದು.

ಸಿವಿಲ್ ಜೆಯಿಲ್‌ನಲ್ಲಿ ಖೈದ್.

10 ದಿನಗಳು ಕಳೆದಮೇಲೆ ಬಾಕೀದಾರನಿಂದ ಸಲ್ಲತಕ್ಕ ಮೊಬಲಗು, ಪಾವತೀ ಮಾಡಲ್ಪಡದೆಯಿದ್ದರೆ, ಆಗ ಅಥವಾ, ಡೆಪ್ಯುಟಿ ಕಮ್ಮಿಷನರು ಯುಕ್ತವೆಂದು ಭಾವಿಸಿದರೆ, ಮುಂದಾಗಿ ಯಾವದಿನದಲ್ಲಾಗಲಿ, ಸದರೀ ಯವನನ್ನು, D ಷೆಡ್ಯೂಲ್ ನಮೂನೇಯಲ್ಲಿ ಒಂದು

ವಾರಂಟನಿಶೀ ಡಿಸ್ಟ್ರಿಕ್ಟಿನ ಸಿವಿಲ ಜೆಯಿಲ್‌ನಲ್ಲಿ ಖೈದು ಮಾಡಲ್ಪಡುವಬಗ್ಗೆ ಡೆಪ್ಯುಟಿ ಕಮ್ಮಿಷನರಿಂದ ಕಳುಹಿಸಲ್ಪಡಬಹುದು :

ಪರಂತು ನಿಯಮಗಳೇನಂದರೆ :—

ಬಾಕೀದಾರನನ್ನು ಖೈದಿನಲ್ಲಿ ಡತಕ್ಕ ಕಾಲ.

1ನೇದು.——ಅಂತಾ ಬಾಕೀದಾರನಿಂದ ಸಲ್ಲತಕ್ಕ ಕಂದಾಯದ ಬಾಕೀ ಮೊಬಲಗಿಗೆ ಸಮನಾದ ಒಂದು ಸಾಲಕ್ಕೋಸ್ಕರ ಒಂದು ಸಿವಿಲ್ ಕೋರ್ಟಿನ ಡಿಕ್ರೀ ಅಮಲ್‌ಜಾರೀ ಮೊಕದ್ದಮೆಯಲ್ಲಿ ಕಾನೂನಿಂದ ಹದ್ದು ಪಡಿಸಲ್ಪಟ್ಟ ಕಾಲಕ್ಕಿಂತ ಹೆಚ್ಚು ಕಾಲಕ್ಕೆ ಯಾವ ಬಾಕೀದಾರನೂ ಖೈದಿನಲ್ಲಿಡಸಲ್ಪಡಕೂಡದು.

ಮೈನರು, ಹುಚ್ಚ, ಅಥವಾ ಆಜನ್ಮವಾಗಿ ಹುಚ್ಚ ಇಂತಾವನ ವಿನಾಯಿತಿ.

2ನೇದು.—ಈ ಸೆಕ್‌ಷನ ಅನುಸರಿಸಿ, ಯಾವ ಮೈನರಾಗಲಿ, ಹುಚ್ಚನಾಗಲಿ, ಆಜನ್ಮತಃ ಹುಚ್ಚನಾಗಲಿ ಜಪ್ತೀ ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದಲ್ಲವು.

ಗೊತ್ತಾದ ಸ್ಥಳಗಳನ್ನಾಗಲಿ, ಮನುಷ್ಯರನ್ನಾಗಲಿ, ವಿನಾಯಿಸಲಿಕ್ಕೆ ಗವರ್ನಮೆಂಟಿಗೆ ಅಧಿಕಾರಗಳು.

3ನೇದು.—ಗವರ್ನಮೆಂಟಿನವರು ವಿಶೇಷ ಅಥವಾ ವಟ್ಟು ಹುಕ್ಕುಂ ಮೂಲಕ, ಅಂತಾ ಹುಕ್ಕುಂನಲ್ಲಿ ನಮೂದಿಸಲ್ಪಡಬಹುದಾದ ಅಂತಾ ಕಾಲದಲ್ಲಿ ಮುಖ್ಯವಾದ ಸ್ಥಳಗಳನ್ನಾಗಲಿ, ಮನುಷ್ಯರನ್ನಾಗಲಿ, ಈ ಸೆಕ್‌ಷನ ನಿಬಂಧನೆಗಳ ದೆಶೆಯಿಂದ ವಿನಾಯಿಸಬಹುದು, ಸದರೀ ಗವರ್ನಮೆಂಟಿನವರು ಅಂತಾ ಹುಕುಮನ್ನು ಆಗಿಂದಾಗ್ಯೆ ರದ್ದು ಮಾಡಬಹುದು.

ಮುಂ. ರ. ಕೋ. 158ನೇ ಸೆಕ್‌ಷನ.

ದಸ್ತಗಿರೀ ಮಾಡುವ ಅಧಿಕಾರವು ಯಾರಿಂದ ಚಲಾಯಿಸಲ್ಪಡತಕ್ಕದ್ದು.

173. 172ನೇ ಸೆಕ್‌ಷನಿನಿಂದ ಉಂಟುಮಾಡಲ್ಪಟ್ಟ ದಸ್ತಗಿರೀ ಮಾಡುವ ಅಧಿಕಾರವು, ಯಾವ ಆಫೀಸರ್‌ಗಳಿಂದ ಅಥವಾ ಆಫೀಸರಗಳ ತರಗತಿಯಿಂದ ಚಲಾಯಿಸಲ್ಪಡಬಹುದೋ, ಅದನ್ನು ಗವರ್ನಮೆಂಟಿನವರು, ಆಗಿಂದಾಗ್ಯೆ ಫಾಯಿಷ್ ಮಾಡಬಹುದಾದ್ದಲ್ಲದೆ, ದಸ್ತಗಿರೀ ಖರ್ಚುಗಳನ್ನು ಪಹರೇ ಯಾ ಖೈದಿನಲ್ಲಿರುವ ಬಾಕೀದಾರನಿಗೆ ಗವರ್ನಮೆಂಟಿನಿಂದ ಕೊಡಲ್ಪಡತಕ್ಕ ಜೀವನದ ಖರ್ಚು ಮೊಬಲಗನ್ನು ಸಹ ನಿಶ್ಚಯಿಸತಕ್ಕದ್ದು.

ಗ್ರಾಮಗಳ ಜಪ್ತೀ.

ಮುಂ. ರ. ಕೋ. 159ನೇ ಸೆಕ್‌ಷನ.

ಬಾಕೀದಾರನ ಗ್ರಾಮವನ್ನು ಜಪ್ತೀಮಾಡಲಿಕ್ಕೂ, ವಿಚಾರಣೆ ಯೊಳಗೆ ತೆಗದುಕೊಳ್ಳಲಿಕ್ಕೂ ಅಧಿಕಾರ.

174. ಯಾವದಕ್ಕೆ ಬಾಕೀ ಬರಬೇಕಾಗುತ್ತೋ ಅಂತಾ ಹಿಡುವಳಿಯು ಒಂದು ಪೂರಾ ಗ್ರಾಮವನ್ನಾಗಲಿ, ಒಂದು ಗ್ರಾಮದ ಒಂದು ಹಿಸ್ಸೆಯನ್ನಾಗಲಿ, ಅಡಗಿಸಿಕೊಂಡು ಇದ್ದರೆ, ಮೇಲೆ ವಿವರಿಸಲ್ಪಟ್ಟ ಇತರ ಕ್ರಮಗಳಲ್ಲಿ ಯಾವದನ್ನಾದರೂ ಅವಲಂಬಿಸುವದು ಅಯುಕ್ತವೆಂದು ಭಾವಿಸಲ್ಪಟ್ಟರೆ, ಡೆಪ್ಯುಟಿ ಕಮ್ಮಿಷನರು, ಮುಂದಾಗಿ ಗವರ್ನಮೆಂಟಿನವರ ಮಂಜೂರಾತೀಸಿಶೀ ಅಂತಾ ಗ್ರಾಮವನ್ನಾಗಲಿ, ಗ್ರಾಮದ ಪೈಕಿ ಹಿಸ್ಸೆಯನ್ನಾಗಲಿ, ಜಪ್ತೀ ಮಾಡಿಸಿ, ತನ್ನ ವಿಚಾರಣೆಯಲ್ಲಾಗಲಿ, ತಾನು ಆಬಗ್ಯೆ

ಮೊಕರರ್ ಮಾಡುವ ಯಾರಾದರೂ ಮುತಾಲೀಕ ಯಾ ಆಫೀಸರರ ವಿಚಾರಣೆಯೊಳಗಾಗಲಿ, ತೆಗೆದುಕೊಳ್ಳತಕ್ಕದ್ದು.

ಮುಂ. ರೆ. ಕೋ. 160ನೇ ಸೆಕ್ಷನ್.

ಅಂತಾ ಗ್ರಾಮದ ಜಮೀನುಗಳು ಇತರರ ಯಾವ ವಿಧವಾದ ಹಕ್ಕುದಾರಿಗಳೂ ಇಲ್ಲದೆ ಸರಕಾರಕ್ಕೆ ಸೇರತಕ್ಕದ್ದು.

175. ಹಾಗೆ ಜಫ್ತೀ ಮಾಡಲ್ಪಟ್ಟ ಯಾವದಾದರೂ ಗ್ರಾಮದ ಅಥವಾ ಒಂದು ಗ್ರಾಮದ ಪೈಕೀ ಹಿಸ್ಸೆಯು ಜಮೀನುಗಳು ಸರ್ಕಾರದ ಹಣ ಎಷ್ಟೋ ಅಷ್ಟರವಟ್ಟಿಗೆ ಮೇಲ್ಪಟ್ಟ ಹಿಡುವಳೀದಾರನ ಅಥವಾ ಯಾರಾದರೂ ಹಿಸ್ಸೇದಾರರ ಕೃತ್ಯೆಗಳಿಂದ ಆಗಲಿ, ಅಂತಾ ಜಮೀನುಗಳ ಮೇಲೆ ಅಥವಾ ಅವುಗಳಲ್ಲಿ ಸಂಬಂಧವುಳ್ಳ ಅಂತಾ ಮೇಲ್ಪಟ್ಟ ಹಿಡುವಳೀದಾರನ ಅಥವಾ ಹಿಸ್ಸೇದಾರರ ಮೇಲೆ ಇರುವ ಯಾವ ಖರ್ಚುಗಳಿಂದಾಗಲಿ ಅಥವಾ ದೇಣೆಗಳಿಂದಾಗಲಿ, ಬಾಧಿಸಲ್ಪಡದೇನೂ ಪರಂತು ಜನಗಳ ಹಕ್ಕುಗಳಿಗೆ ಇತರ ವಿಷಯಗಳಲ್ಲಿ ಯಾವ ಬಾಧಕಗಳೂ ಇಲ್ಲದೇನೂ ಗವರ್ನಮೆಂಟಿಗೆ ವಾಪಸ ಸೇರತಕ್ಕದ್ದು.

ವಿಚಾರಣೆಕರ್ತರ ಅಧಿಕಾರಗಳು.

ಮತ್ತು, ಡೆಪ್ಯುಟಿ ಕಮ್ಮಿಷನರರಾಗಲಿ, ಹಾಗೆ ಮೊಕರರ್ ಮಾಡಲ್ಪಟ್ಟ ಮುತಾಲೀಕ ಯಾ ಆಫೀಸರರಾಗಲಿ, ಜಫ್ತೀ ಮಾಡಲ್ಪಟ್ಟ ಜಮೀನುಗಳ ವಿಚಾರಣೆಗೂ ಮತ್ತು ಡೆಪ್ಯುಟಿ ಕಮ್ಮಿಷನರು ಸದರೀ ವಿಚಾರಣೆಯನ್ನು ಸದರೀ ಮೇಲ್ಪಟ್ಟ ಹಿಡುವಳೀದಾರನಿಗೆ ವಾಪಸ ಕೊಡುವತನಕ, ಸದರೀ ಜಮೀನುಗಳ ಮೇಲ್ಪಟ್ಟ ಹಿಡುವಳೀದಾರ ಯಾ ಯಾವ ಹಿಸ್ಸೇದಾರ ಇವರನ್ನು ವಿನಾಯಿಸಿ ಸದರೀ ಜಮೀನುಗಳಲ್ಲುಂಟಾಗುವ ತಮಾಂ ಗುತ್ತಿಗೆ ಮತ್ತು ನಫೆಗಳ ವಸೂಲಾತೀಗೂ ಎಖ್ತ್ಯಾರಿಯುಳ್ಳವರಾಗಿರತಕ್ಕದ್ದು.

ಮುಂ. ರೆ. ಕೋ. 161ನೇ ಸೆಕ್ಷನ್.

ನಿವಳ ನಫೆಗಳ ವಿನಿಯೋಗ.

176. ಚಾಲ್ತೀ ಕಂದಾಯದ ಪಾವತೀ ಮತ್ತು ಒಂದು ರೆವಿನ್ಯೂ ಸರ್ವೆಯು ಈ ರೆಗ್ಯುಲೇಷನಿನ 128ನೇ ಸೆಕ್ಷನ್ ನಿಬಂಧನೆಗಳನುಸರಿಸಿ ಜಾರೀಯಲ್ಲಿ ತರಲ್ಪಟ್ಟರೆ ಅದರ ಲಾಗವಡು ಇವುಗಳು ದೇಖೀಲ್, ಅಂತಾ ಜಫ್ತೀ ವ ವಿಚಾರಣೆಯ ಖರ್ಚು ಇವುಗಳು ಜಾತಾ ಉಳಿಯುವ ತಮಾಂ ನಿವಳ ನಫೆಗಳೂ, ಸದರೀ ಬಾಕೀಯನ್ನು ಕೊಡುವದಕ್ಕೆ ವಿನಿಯೋಗಿಸಲ್ಪಡತಕ್ಕದ್ದು.

ಮುಂ. ರೆ. ಕೋ. 162ನೇ ಸೆಕ್ಷನ್.

ಹಾಗೆ ಜಫ್ತೀ ಮಾಡಲ್ಪಟ್ಟ ಒಂದು ಗ್ರಾಮವನ್ನು ಖುಲಾಸೇ ಮಾಡೋಣ.

177. ಹಾಗೆ ಜಫ್ತೀ ಮಾಡಲ್ಪಟ್ಟ ಗ್ರಾಮವಾಗಲಿ, ಒಂದು ಗ್ರಾಮದ ಹಿಸ್ಸೆಯಾಗಲಿ, ಜಫ್ತೀಗೆ ತರುವಾಯ ಬರುವ ಆಗಸ್ಟ 1ನೇ ತಾರೀಖು ಮೊದಲು 12 ವರುಷಗಳೊಳಗಾಗಿ ಯಾವಾಗಲಾಗಲಿ, ಖುಲಾಸೇ ಬಗ್ಗೆ ಡೆಪ್ಯುಟಿ ಕಮ್ಮಿಷನರಿಗೆ, ಸದರೀ ಮೇಲ್ಪಟ್ಟ ಹಿಡುವಳೀದಾರನು ದರಖಾಸ್ತು ಮಾಡಿ ಅಂತಾ ದರಖಾಸ್ತು ಕಾಲದಲ್ಲಿ ಬಾಕೀಯೂ ಫೈಸಲಾಗಿರುತ್ತೆಂದು ಕಾಣಬಂದರೆ ;

ಅಥವಾ ಸದರೀ ಮೇಲ್ಪಟ್ಟ ಹಿಡುವಳೀದಾರನು, ಬಾಕೀ ಯಾವದಾದರೂ ಅವನಿಂದ ಇನ್ನೂ ಬರಬೇಕಾಗಿ ಅದನ್ನು ಕೊಡಲಿಕ್ಕೆ ಇಷ್ಟವುಳ್ಳವನಾಗಿದ್ದರೆ ಮತ್ತು ಆಬಗ್ಗೆ ಡೆಪ್ಯುಟಿ ಕಮ್ಮಿಷನರು ವಿಧಿಸಬಹುದಾದ ಅಂತಾ ಕಾಲದೊಳಗೆ ಅದನ್ನು ಪಾವತೀ ಮಾಡಿದರೆ, ಸದರೀ ಗ್ರಾಮ ಯಾ ಗ್ರಾಮದ ಹಿಸ್ಸೆಯೂ ಜಫ್ತೀಯಿಂದ

ಖುಲಾಸೆ ಮಾಡಲ್ಪಟ್ಟು ಅದರ ವಿಚಾರಣೆಯು ಮೇಲ್ಪಟ್ಟ ಹಿಡುವಳೀದಾರನಿಗೆ ವಾಪಸ್ ಕೊಡಿಸಲ್ಪಡತಕ್ಕದ್ದು.

ನಪಾವತೀ ಜವಾಗಳ ವಿಲಾವಾರಿ.

ತಮಾಂ ಬಾಕಿಗಳನ್ನೂ, ಖರ್ಚುಗಳನ್ನೂ, ಫೈಸಲ್ ಮಾಡಿದ ಮೇಲೆ, ಗ್ರಾಮವನ್ನಾಗಲಿ, ಗ್ರಾಮದ ಪೈಕೀ ಹಿಸ್ಸೆಯನ್ನಾಗಲಿ, ವಾಪಸ್ ಕೊಡಿಸುವಬಗ್ಯೆ, ಮೇಲ್ಪಟ್ಟ ಹಿಡುವಳೀದಾರನ ದರಖಾಸ್ತು, ಯಾವ ಸಾಲಿನಲ್ಲಿ ಮಾಡಲ್ಪಟ್ಟಿರುತ್ತೋ ಆ ಸಾಲಿನಲ್ಲಿ ಉಂಟಾದ ನಪಾವತೀ ಜಮೆಗಳು ಯಾವದಾದರೂ ಇದ್ದವುಗಳನ್ನು ಡೆಪ್ಯುಟಿ ಕಮ್ಮಿಷನರು ಸದರೀಯವನಿಗೆ ಒಪ್ಪಿಸತಕ್ಕದ್ದು. ಪರಂತು ಹಿಂದಿನ ಸಾಲುಗಳ ಅಂತಾ ನಪಾವತೀ ಜಮೆಗಳು ಯಾವದಾದರೂ ಇದ್ದರೆ ಅವುಗಳು ಗವರ್ನಮೆಂಟ್ ವಶದಲ್ಲಿ ಇರತಕ್ಕದ್ದು.

ಮುಂ. ರೆ. ಕೋ. 163ನೇ ಸೆಕ್ಷನ್.

ಗ್ರಾಮ ವಗೈರೆಗಳು, ಹನ್ನೆರಡು ವರುಷಗಳೊಳಗಾಗಿ ಬಿಡಿಸಿಕೊಳ್ಳಲ್ಪಡದೇ ಹೋದರೆ ಗವರ್ನಮೆಂಟ್ ಅಧೀನದಲ್ಲಿ ಇರತಕ್ಕದ್ದು.

178. ಹಾಗೆ ಜಪ್ತೀ ಮಾಡಲ್ಪಟ್ಟ ಒಂದು ಗ್ರಾಮವನ್ನಾಗಲಿ, ಒಂದು ಗ್ರಾಮದ ಭಾಗವನ್ನಾಗಲಿ, ವಾಪಸ್ ಕೊಡಿಸುವಬಗ್ಯೆ ಸದರೀ ಹನ್ನೆರಡು ವರುಷಗಳ ಕಾಲದೊಳಗೆ ದರಖಾಸ್ತು ಮಾಡದೇ ಯಿದ್ದರೆ, ಅಥವಾ ಅಂತಾ ದರಖಾಸ್ತು ಮಾಡಲ್ಪಟ್ಟ ಬಳಿಕ ಮೇಲ್ಪಟ್ಟ ಹಿಡುವಳೀದಾರನು ತನ್ನಿಂದ ಯಿನ್ನೂ ಬರಬೇಕಾಗಿರುವ ಬಾಕಿ ಯಾವದಾದರೂ ಯಿದ್ದಲ್ಲಿ ಅದನ್ನು, ಡೆಪ್ಯುಟಿ ಕಮ್ಮಿಷನರು ಈಬಗ್ಯೆ ವಿಧಿಸುವ ಕಾಲದೊಳಗಾಗಿ ಪಾವತೀ ಮಾಡಲಿಕ್ಕೆ ತಪ್ಪಿದರೆ ಸದರೀ ಗ್ರಾಮವಾಗಲಿ, ಒಂದು ಗ್ರಾಮದ ಹಿಸ್ಸೆಯಾಗಲಿ, ಅದು ಮೊದಲು, ಮುಂದೆ, ಮೇಲ್ಪಟ್ಟ ಹಿಡುವಳೀದಾರನಿಂದ ಅಥವಾ ಯಾರಾದರೂ ಹಿಸ್ಸೇದಾರರಿಂದ ಅಥವಾ ಬಾಧ್ಯತೆಯುಳ್ಳ ಅವನ ಯಾ ಅವರ ಪೂರ್ವೀಕರಿಂದ ಉಂಟುಮಾಡಲ್ಪಟ್ಟ, ಅಥವಾ ಯಾವವಿಧದಿಂದಲಾಗಲಿ, ಅಂತಾ ಮೇಲ್ಪಟ್ಟ ಹಿಡುವಳೀದಾರನ ಮೇಲೆ ಅಥವಾ ಯಾರಾದರೂ ಹಿಸ್ಸೇದಾರರ ಮೇಲೆ ನೆಲೆಗೊಂಡಿರುವ ತಮಾಂ ತಗಾದೆಗಳಿಂದಲೂ ಖುಲಾಸೇಯಾಗಿ ಪರಂತು ಜಮೀನಿನ ಖರ್ ಹಿಡುವಳೀದಾರರ ಹಕ್ಕುಗಳಿಗೆ ಬಾಧಕವೇನೂ ಯಿಲ್ಲದೆ ಗವರ್ನಮೆಂಟು ವಶದಲ್ಲಿರತಕ್ಕದ್ದು.

ಅಮಲ್‌ಜಾರಿಯನ್ನು ನಿಲ್ಲಿಸೋಣ.

ಮುಂ. ರೆ. ಕೋ. 164ನೇ ಸೆಕ್ಷನ್.

ಪರಂತು, ಜಾಮೀನ್ ಕೊಟ್ಟ ಮೇಲೆ ತಮಾಂ ಅಮಲ್‌ಜಾರಿಯನ್ನೂ ನಿಲ್ಲಿಸತಕ್ಕದ್ದು.

179. ಪಹರೇಯಲ್ಲಾಗಲಿ, ಕೈದಿನಲ್ಲಾಗಲಿ ಯಿಡಲ್ಪಟ್ಟ ಯಾವ ಬಾಕೀದಾರನಾಗಲಿ ಡೆಪ್ಯುಟಿ ಕಮ್ಮಿಷನರ ಮುಂದೆ ಅಥವಾ ಈ ಬಗ್ಯೆ ಅವರಿಂದ ನಿಯಮಿಸಲ್ಪಡುವ ಇತರ ಮನುಷ್ಯನ ಮುಂದೆ, ಅಥವಾ ಸದರೀ ಬಾಕೀದಾರನು ಜೆಯಿಲ್‌ನಲ್ಲಿ ಯಿದ್ದರೆ ಅಂತಾ ಜೆಯಿಲ್ ಇನ್‌ಚಾರ್ಜ್ ಆಫೀಸರರ ಮುಂದೆ, E ಷೆಡ್ಯೂಲ್ ನಮೂನೇ ಪ್ರಕಾರ ಡೆಪ್ಯುಟಿ ಕಮ್ಮಿಷನರಿಗೆ ಅಥವಾ ಅಂತಾ ಯಿತರ ಮನುಷ್ಯನಿಗೆ ಅಥವಾ ಆಫೀಸರರಿಗೆ ತೃಪ್ತಿಕರವಾದ ಜಾಮೀನನ್ನು ಕೊಟ್ಟ ಮೇಲೆ ಕೂಡ್ಲೇ ಖುಲಾಸೇ ಮಾಡಲ್ಪಡತಕ್ಕದ್ದು. ಮತ್ತು ಅಮಲ್‌ಜಾರಿಯು ಹಾಗೆ ಜಾಮೀನ್ ಕೊಟ್ಟ ಯಾವಕಾಲದಲ್ಲಾಗಲಿ ನಿಲ್ಲಿಸಲ್ಪಡತಕ್ಕದ್ದು.

ಮತ್ತು, ಈ ಅಧ್ಯಾಯ ಅನುಸರಿಸಿ ಯಾವನ ಮೇಲೆ ಅಮಲ್‌ಜಾರೀ ನಡಿಸಲ್ಪಟ್ಟಿರುತ್ತೋ ಅಂಥಾ ಯಾವ ಮನುಷ್ಯನಾಗಲಿ, ತನ್ನಿಂದ ಕೇಳಲ್ಪಟ್ಟವೊಬಲಗನ್ನು (protest) ಪ್ರೊಟೆಸ್ಟಿಯಾನೆ ತಕರಾರುನಿಶಿ ಅಂಥಾ ಅಮಲ್‌ಜಾರೀ ನಡಿಸುವ ಆಫೀಸರರಿಗೆ ಪಾವತೀಮಾಡಬಹುದು. ಹಾಗೆ ಪಾವತೀ ಮಾಡಿದಮೇಲೆ ಅಮಲ್‌ಜಾರೀಯನ್ನು ನಿಲ್ಲಿಸತಕ್ಕದ್ದು. ಮತ್ತು ಸದರೀ ಮನುಷ್ಯನು ಪಹರೇಯಲ್ಲಿ ಯಿಡಲ್ಪಟ್ಟಿದ್ದರೆ ಕೂಡ್ಲೇ ಖುಲಾಸೇ ಮಾಡಲ್ಪಡತಕ್ಕದ್ದು.

ಅಥವಾ ತಗಾದೇ ಹಣವನ್ನು (protest) ಪ್ರೋಟೆಸ್ಟಿಯಾನೆ ತಕರಾರುನಿಶೀ ಪಾವತೀ ಮಾಡಿದಮೇಲೆ.

6

ವಿಕ್ರಯಗಳ ವಿಷಯದಲ್ಲಿ ನಡವಳಿತ.

ಮುಂ. ರೆ. ಕೋ. 165ನೇ ಸೆಕ್ಷನ.

ವಿಕ್ರಯಗಳು ನೆರವೇರಿಸುವ ವಿಷಯದಲ್ಲಿ ನಡವಳಿತ.

180. ಈ ಅಧ್ಯಾಯದ ನಿಬಂಧನೆಗಳನುಸರಿಸಿ ಚರ ಸ್ವತ್ತಿನ ಅಥವಾ ಸ್ಥಿರ ಸ್ವತ್ತಿನ ಯಾವ ವಿಕ್ರಯವಾಗಲಿ ನಿಯಮಿಸಲ್ಪಟ್ಟರೆ, ಡೆಪ್ಯುಟಿ ಕಮ್ಮಿಷನರು, ವಿಕ್ರಯದ ಕಾಲ ಮತ್ತು ಸ್ಥಳ ಚರಸ್ವತ್ತಿನ ವಿಷಯದಲ್ಲಿ ವಿಕ್ರಯ ಕಾಯಂಲಗಲಿಕ್ಕೆ ಒಳಪಟ್ಟಿರುತ್ತೆಯೋ ಯಿಲ್ಲವೋ ಯಂಬವದು, ಸರ್ಕಾರಕ್ಕೆ ಕಂದಾಯ ಕೊಡುವ ಜಮೀನನ್ನು ವಿಕ್ರಯಿಸಬೇಕಾದರೆ ಆ ಜಮೀನಿನ ಮೇಲೆ ಮೊಕರರಾದ ಕಂದಾಯ, ಯಿವುಗಳನ್ನು ಮತ್ತು ತಾವು ಜರೂರೆಂದು ಭಾವಿಸಬಹುದಾದ ಯಾವದಾದರೂ ಯಿತರ ತಪಶೀಲ್‌ಗಳೊಡನೆ ನಮೂದಿಸಿ, ಉದ್ದೇಶಿಸಲ್ಪಟ್ಟ ವಿಕ್ರಯವನ್ನು ಕುರಿತು ಕನ್ನಡದಲ್ಲಿ ಒಂದು ಇಸ್ತಿಹಾರ್ ನಾಮೆಯನ್ನು ಸಾದರ್ ಮಾಡತಕ್ಕದ್ದು.

ಹರಾಜ್ ಇಸ್ತಿಹಾರ್.

ವಿಕ್ರಯವು ಸ್ಥಿರಸ್ವತ್ತಿನದಾದರೆ, ಅಂಥಾ ಪ್ರಕಟನೆಯು, ತಾಲ್ಲೂಕು ಹೆಡ್‌ಕ್ವಾರ್ಟರ್‌ಗಳಲ್ಲಿಯೂ ಮತ್ತು ಸ್ಥಿರಸ್ವತ್ತು ಇರುವ ಗ್ರಾಮದಲ್ಲಿಯೂ ದಂಡೋರೇ ಹೊಯಿಸುವದರ ಮೂಲಕ ಪ್ರಕಟ ಪಡಿಸಲ್ಪಡತಕ್ಕದ್ದು; ಹರಾಜು ಚರಸ್ವತ್ತಿನದಾದರೆ ಯಾವ ಗ್ರಾಮದಲ್ಲಿ ಅಂಥಾ ಸ್ವತ್ತು ಜಪ್ತೀಮಾಡಲ್ಪಟ್ಟಿತೋ ಆ ಗ್ರಾಮದಲ್ಲಿಯೂ, ಡೆಪ್ಯುಟಿ ಕಮ್ಮಿಷನರು ನಿಯಮಿಸಬಹುದಾದ ಇತರ ಸ್ಥಳಗಳೊಳಗೂ, ಪ್ರಕಟನೆ ಮಾಡತಕ್ಕದ್ದು.

ಮುಂ. ರೆ. ಕೋ. 166ನೇ ಸೆಕ್ಷನ.

ಹರಾಜ್ ನೋಟೀಸ.

181. ಉದ್ದೇಶಿಸಲ್ಪಟ್ಟ ಸ್ಥಿರಸ್ವತ್ತಿನ ಹರಾಜನ್ನೂ ಅದರ ಬಾಬತು ಕಾಲವನ್ನೂ, ಸ್ಥಳವನ್ನೂ ಕುರಿತು ಒಂದು ಬರವಣಿಗೆಯ ನೋಟೀಸ್, ಇದರಡಿ ಕಂಡ ಪ್ರತಿ ಸ್ಥಳದೊಳಗೂ ಚಿಕಟಾಯಿಸಲ್ಪಡತಕ್ಕದ್ದು, ಅಂದರೆ, ಯಾವದರಲ್ಲಿ ಸ್ಥಿರಸ್ವತ್ತಿರುತ್ತೋ ಅಂಥಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರ ಆಫೀಸ್, ತಾಲ್ಲೂಕಿನ ಅಮಲ್‌ದಾರ್ ಯಾ ಡೆಪ್ಯುಟಿ ಅಮಲ್‌ದಾರರ ಆಫೀಸ್, ಯಾವದರಲ್ಲಿ ಸದರೀ ಸ್ವತ್ತಿರುತ್ತೋ ಅಂಥಾ ಗ್ರಾಮದಲ್ಲಿನ ಚಾವಡಿ ಅಥವಾ ಯಾವದಾದರೂ ಬಹಿರಂಗವಾದ ಇತರ ಕಟ್ಟಡ, ಮತ್ತು ಬಾಕೀದಾರನ ವಾಸಸ್ಥಳ ಯಿಂಥಾವುಗಳಲ್ಲಿ ಚಿಕಟಾಯಿಸಲ್ಪಡತಕ್ಕದ್ದು.

ಚರಸ್ವತ್ತಿನ ವಿಷಯದಲ್ಲಾದರೋ, ಬರವಣಿಗೆಯ ನೋಟೀಸ್ ಅಮಲ್‌ದಾರ ಯಾ ಡೆಪ್ಯುಟಿ ಅಮಲ್‌ದಾರರ ಆಫೀಸನಲ್ಲೂ ಮತ್ತು ಯಾವ ಗ್ರಾಮದಲ್ಲಿ ಅಂಥಾ ಸ್ವತ್ತು ಜಪ್ತಿಮಾಡಲ್ಪಟ್ಟಿತೋ ಅಂಥಾಗ್ರಾಮದ ಚಾವಡಿಯಲ್ಲಾಗಲಿ, ಯಾವದಾದರೂ ಯಿತರ ಬಹಿರಂಗವಾದ ಕಟ್ಟಡದಲ್ಲಾಗಲಿ, ಚಿಕಟಾಯಿಸಲ್ಪಡತಕ್ಕದ್ದು.

ಡೆಪ್ಯುಟಿ ಕಮ್ಮಿಷನರು, ಚರಸ್ವತ್ತಿನ ಅಥವಾ ಸ್ಥಿರಸ್ವತ್ತಿನ ಬಾಬತು ಯಾವದಾದರೂ ಹರಾಜಿನ ನೋಟೀಸನ್ನು ಅವರಿಗೆ ಯುಕ್ತ ತೋರುವ ಯಿತರ ಯಾವ ವಿಧದಿಂದಲಾಗಲಿ ಪ್ರಕಟಪಡಿಸಲೂಬಹುದು.

ಮುಂ. ರೆ. ಕೋ. 167ನೇ ಸೆಕ್ಷರ್ಷ.

ಯಾರಿಂದ ಹರಾಜ್ ಮಾಡಿಸಲ್ಪಡತಕ್ಕದ್ದು.

182. ವಿಕ್ರಯಗಳು, ಡೆಪ್ಯುಟಿ ಕಮ್ಮಿಷನರು ನಿಯಮಿಸಬಹುದಾದ ಅಂಥಾ ಮನುಷ್ಯರಿಂದ ಹರಾಜ್ ಮೂಲಕ ಮಾಡಿಸಲ್ಪಡತಕ್ಕವು.

ಗವರ್ನಮೆಂಟಿನಿಂದ ವಿಕ್ರಯಗಳು ಮಾಡಲ್ಪಡಬಹುದಾದ ಕಾಲ.

ಅಂಗೀಕರಿಸಲ್ಪಟ್ಟ ಒಂದು ಸರ್ವತ್ರ ರಜಾದಿನದಲ್ಲಾಗಲಿ, ಹಿಂದಿನ ಕಡೇ ಸೆಕ್ಷರ್ನಿಂದ ವಿಧಿಸಲ್ಪಟ್ಟ ಮೇರೆ ಸದರೀ ನೋಟೀಸ್‌ಗಳ ಪೈಕಿ ಯಾವದಾಗಲಿ ಯಾವ ತಾರೀಖಿನಲ್ಲಿ ಚಿಕಟಾಯಿಸಲ್ಪಟ್ಟಿರುತ್ತದೋ ಅಂಥಾ ಕೇವಲ ಸಮೀಪವಾದ ತಾರೀಖ್ ಲಾಗಾಯತು ಸ್ಥಿರಸ್ವತ್ತಿನ ವಿಷಯದಲ್ಲಾದರೆ, ಅಥವಾ ಪಕ್ಷ ಮೂವತ್ತು ದಿನಗಳು ಕಳೆದತನಕ ಆಗಲಿ, ಚರಸ್ವತ್ತಿನ ವಿಷಯದಲ್ಲಾದರೆ, ಯೇಳುದಿನಗಳು ಕಳೆದತನಕ ಆಗಲಿ, ಅಂಥಾ ವಿಕ್ರಯಗಳು ನಡೆಯತಕ್ಕದ್ದಲ್ಲವು.

ವಿಕ್ರಯವನ್ನು ಮುಂದಿನ ತಾರೀಖಿಗೆ ಇಡುವಣ.

ವಿಕ್ರಯವು, ಯಾವದಾದರೂ ತಕ್ಕ ಕಾರಣಕ್ಕೋಸ್ಕರ ಆಗಿಂದಾಗ್ಯೆ ಮುಂದಿನ ತಾರೀಖಿಗೆ ಯಿಡಿಸಲ್ಪಡಬಹುದು.

ಮುಂ. ರೆ. ಕೋ. 168ನೇ ಸೆಕ್ಷರ್ಷ.

ನಾಶವಾಗತಕ್ಕ ವಸ್ತುಗಳ ವಿಕ್ರಯ.

183. ಹಿಂದಿನ ಕಡೇ ಮೂರು ಸೆಕ್ಷರ್ಷಗಳಲ್ಲಿರುವ ಯಾವ ಅಂಶವೂ ನಾಶವಾಗತಕ್ಕ ವಸ್ತುಗಳ ವಿಕ್ರಯಕ್ಕೆ ಲಗಾವಾಗುವದಿಲ್ಲವು. ಅಂಥಾ ವಸ್ತುಗಳು, ಲೇಶವೂ ಸಾವಕಾಶವಿಲ್ಲದಂತೆ, ಆಬಗ್ಯೆ ಡೆಪ್ಯುಟಿ ಕಮ್ಮಿಷನರಿಂದ ಪಟ್ಟಾಗಿಯಾಗಲಿ, ವಿಶೇಷತಃ ಆಗಲಿ, ಆಗಿಂದಾಗ್ಯೆ ಮಾಡಲ್ಪಡಬಹುದಾದ ಅಂಥಾ ಹುಕ್ಕುಂಗಳ ಪ್ರಕಾರ ಹರಾಜ್‌ಮೂಲಕ ವಿಕ್ರಯಿಸಲ್ಪಡತಕ್ಕದ್ದು.

ಮುಂ. ರೆ. ಕೋ. 169ನೇ ಸೆಕ್ಷರ್ಷ.

ವಿಕ್ರಯವು ಯಾವಾಗ ನಿಲ್ಲಿಸಲ್ಪಡಬಹುದು.

184. ಬಾಕೀದಾರ ಅಥವಾ ಅವನ ತರಫಿನಲ್ಲಿ ಯಾವ ಮನುಷ್ಯನಾದರೂ ಯಾವಬಗ್ಯೆ ಸ್ವತ್ತು ವಿಕ್ರಯಿಸಲ್ಪಡಬೇಕಾಗಿರುತ್ತೋ ಅಂಥಾ ಬಾಕೀಯನ್ನು ಮತ್ತು ಅವನಿಂದ ನ್ಯಾಯತಃ ಸಲ್ಲಬೇಕಾದ ತಪಶೀಲುಖರ್ಚುಗಳನ್ನೂ; ಬರಬೇಕಾದ ಜೆಮೀನ್ ಕಂದಾಯದ ಪಾವತೀಯನ್ನು ಒರಮಾಡಿಕೊಳ್ಳಲಿಕ್ಕೆ 161ನೇ ಸೆಕ್ಷರ್ಷ ಅನುಸರಿಸಿ ಮೊಕರರಾದ ಮನುಷ್ಯನಿಗಾಗಲಿ ಅಥವಾ ವಿಕ್ರಯವನ್ನು ನಡಿಸಲಿಕ್ಕೆ ಮೊಕರರಾದ ಆಫೀಸರರಿಗಾಗಲಿ ವಿಕ್ರಯದ ವಿಷಯದಲ್ಲಿ ನಿಶ್ಚಯಿಸಲ್ಪಟ್ಟ ದಿನಕ್ಕೆ ಮುಂಚೆ ಯಾವಾಗಲಾಗಲಿ " ಪಾವತೀಮಾಡಿದರೆ, ಅಥವಾ 179ನೇ ಸೆಕ್ಷರ್ಷ ಅನುಸರಿಸಿ ಜಾಮೀನ್ ಕೊಟ್ಟರೆ, ವಿಕ್ರಯವು ನಿಲ್ಲಿಸಲ್ಪಡತಕ್ಕದ್ದು.

ಮುಂ. ರೆ. ಕೋ. 170ನೇ ಸೆಕ್ಷರ್ಷ.

ಚರಸ್ವತ್ತಿನ ವಿಕ್ರಯಗಳು ಯಾವಾಗ ಕಾಯಮಾಗಲಿಕ್ಕೆ ಗುರಿಯಾಗತಕ್ಕದ್ದು.

185. ನಾಶವಾಗತಕ್ಕ ವಸ್ತುಗಳ ವಿಕ್ರಯಗಳು, ಅಂಥಾ ವಿಕ್ರಯಗಳನ್ನು ನಡಿಸುವ ಆಫೀಸರರಿಂದ ಕೂಡ್ಲೆ ಆಖೈರಾಗಿ ಖೈದಾಗತಕ್ಕವು. ಚರಸ್ವತ್ತಿನ ಇತರ ತಮಾಂ ವಿಕ್ರಯಗಳೂ ಅಂಥಾ ವಿಕ್ರಯಗಳನ್ನು ನಡಿಸುವ ಆಫೀಸರರಿಂದ ಆಖೈರಾಗಿ ಖೈದಾಗತಕ್ಕದ್ದು. ಅಥವಾ ಡೆಪ್ಯುಟಿ ಕಮ್ಮಿಷನ

ರಿಂದ ಸದರೀ ಬಗ್ಗೆ ಮಾಡಲ್ಪಡತಕ್ಕ ಪಟ್ಟು ಅಥವಾ ವಿಶೇಷ ಹುಕ್ಕುಂಗಳಲ್ಲಿ ನಿಯಮಿಸಲ್ಪಡಬಹುದಾದ ಮೇರೆ ಕಾಯಂಮಾಡಲ್ಪಡಲಿಕ್ಕೆ ಒಳಪಟ್ಟಿರತಕ್ಕದ್ದು. ಕಾಯಮಾಗಲಿಕ್ಕೆ ಒಳಪಟ್ಟಿರುವ ವಿಕ್ರಯಗಳ ವಿಷಯದಲ್ಲಿ, ಅಂಥಾ ವಿಕ್ರಯಗಳು, ಯಾರಿಂದ ಕಾಯಂ ಮಾಡಲ್ಪಡಬಹುದೋ ಅದನ್ನು ಡೆಪ್ಯುಟಿ ಕಮ್ಮಿಷನರು ವಿಧಿಸತಕ್ಕದ್ದು.

ಮುಂ. ರೆ. ಕೋ. 171ನೇ ಸೆಕ್ಷನ್.

ವಿಕ್ರಯವು ಕೂಡ್ಲೆ ಪೂರೈಸಲ್ಪಟ್ಟರೆ, ಚರಸ್ವತ್ತಿಗಾಗಿ ಮೊಬಲಗ್ ಸಂದಾಯ ಮಾಡುವ ವಿಧ.

186. ವಿಕ್ರಯವು, ಅದನ್ನು ನಡಿಸುವ ಆಫೀಸರರಿಂದ ಆಖೈರಾಗಿ ಪೂರೈಸಲ್ಪಟ್ಟಾಗ ಪ್ರತಿ ಲಾಟಿನ ಕ್ರಯವೂ ವಿಕ್ರಯವೇಳೆಯಲ್ಲಾಗಲಿ, ಅಥವಾ ಅದರ ತರುವಾಯ ಸದರೀ ಆಫೀಸರರು ನಿಯಮಿಸುವಂಥಾ ಕ್ಷಿಪ್ರಕಾಲದಲ್ಲಾಗಲಿ, ಪಾವತಿ ಮಾಡಲ್ಪಡತಕ್ಕದ್ದು, ಹಾಗೆ ಕೊಡಲಿಕ್ಕೆ ತಪ್ಪಿದರೆ, ಸದರೀ ಸ್ವತ್ತು ಕೂಡ್ಲೆ ಪುನಃ ಹರಾಜ್ ಹಾಕಲ್ಪಟ್ಟು ವಿಕ್ರಯಿಸಲ್ಪಡತಕ್ಕದ್ದು. ಕ್ರಯದಮೊಬಲಗ್ ಪಾವತೀ ಮಾಡಿದಮೇಲೆ, ವಿಕ್ರಯವನ್ನು ನಡಿಸುವ ಆಫೀಸರರು ಸದರೀ ಬಗ್ಗೆ ಒಂದು ರಸೀದಿಯನ್ನು ಕೊಡತಕ್ಕದ್ದು. ಸದರೀವಿಕ್ರಯವು ತಮಾಂ ಜನಗಳ ವಿಷಯದಲ್ಲೂ ಕಾಯಂ ಯಾ ನಿರುಪಾಧಿಕವಾಗಿರತಕ್ಕದ್ದು.

ಮುಂ. ರೆ. ಕೋ. 172ನೇ ಸೆಕ್ಷನ್.

ವಿಕ್ರಯವು ಕಾಯಂಮಾಡಲ್ಪಡಲಿಕ್ಕೆ ಗುರಿಯಾಗಿರುವಾಗ ಪಾವತೀ ಮಾಡುವವಿಧ.

187. ಯಾವದಾದರೂ ಚರಸ್ವತ್ತಿನ ವಿಕ್ರಯವು ಕಾಯಂಮಾಡಲ್ಪಡಲಿಕ್ಕೆ ಗುರಿಯಾಗಿರುವಾಗ ಕ್ರಯದಾರನೆಂದು ತಿಳಿಸಲ್ಪಟ್ಟ ಆಸಾಮಿಯು ಅವನ ದರಖಾಸ್ತು ಮೊಬಲಗಿನ ಮೇಲೆ ಸೇಕಡಾ ಇಪ್ಪತ್ತೈದು ರೂಪಾಯಿಗಳನ್ನು ಕೂಡ್ಲೆ ಠೇವಣೀ ಕಟ್ಟತಕ್ಕದ್ದೆಂದು ನೇಮಿಸಲ್ಪಡತಕ್ಕದ್ದು. ಅಂಥಾ ಠೇವಣೀ ಕಟ್ಟಲಿಕ್ಕೆ ತಪ್ಪಿದರೆ, ಸ್ವತ್ತು ಪುನಃ ಕೂಡ್ಲ ಹರಾಜ್ಮೂಲಕ ವಿಕ್ರಯಿಸಲ್ಪಡತಕ್ಕದ್ದು. ವಿಕ್ರಯವು ಕಾಯಂಮಾಡಲ್ಪಟ್ಟಂತೆ, ಕ್ರಯದಾರನಿಗೆ ತಿಳಿಸಲ್ಪಟ್ಟ ಮಾರನೇ ದಿನದ ಸೂರ್ಯಾಸ್ತಮಯಕ್ಕೆ ಮುಂದಾಗಿ ಕ್ರಯದ ಹಣದ ಪೈಕೀ ಪೂರಾ ಮೊಬಲಗನ್ನು, ಸದರೀಯವನು ಪಾವತೀಮಾಡತಕ್ಕದ್ದು. ಅಥವಾ, ಸದರೀ ದಿನವು ಮಂಜೂರ್ಮಾಡಲ್ಪಟ್ಟ ರಜಾದಿನವಾಗಿದ್ದರೆ, ಅಂಥ ದಿನದ ತರುವಾಯದ ಕಚೇರಿಯ ಮೊದಲನೇ ದಿನದ ಸೂರ್ಯಾಸ್ತಮಯಕ್ಕೆ ಮುಂದಾಗಿ ಪಾವತೀಮಾಡತಕ್ಕದ್ದು. ಕ್ರಯದ ಹಣದ ಪೈಕೀ ಪೂರಾ ಮೊಬಲಗನ್ನು ಕೊಟ್ಟಮೇಲೆ, ಅದಕ್ಕಾಗಿ ಕ್ರಯದಾರನಿಗೆ ಒಂದು ರಸೀದಿಕೊಡಲ್ಪಟ್ಟು ವಿಕ್ರಯವು ತಮಾಂ ಜನಗಳ ವಿಷಯದಲ್ಲೂ ನಿರುಪಾಧಿಕವಾಗಿರತಕ್ಕದ್ದು.

ಮುಂ. ರೆ. ಕೋ. 173ನೇ ಸೆಕ್ಷನ್.

ಸ್ಥಿರಸ್ವತ್ತಿನ ವಿಕ್ರಯದ ವಿಷಯದಲ್ಲಿ ಕ್ರಯದಾರನಿಂದ ಠೇವಣಿ.

188. ಸ್ಥಿರಸ್ವತ್ತಿನ ವಿಕ್ರಯದ ತಮಾಂ ಸಂಗತಿಗಳಲ್ಲೂ ಕ್ರಯದಾರನೆಂದು ತಿಳಿಸಲ್ಪಟ್ಟ ಆಸಾಮಿಯು, ಅವನ ದರಖಾಸ್ತು ಮೊಬಲಗುಪೈಕೀ ಸೇಕಡಾ ಇಪ್ಪತ್ತೈದರ ಪ್ರಕಾರ ಕೂಡ್ಲೆ ಠೇವಣೀ ಕಟ್ಟತಕ್ಕದ್ದೆಂದು ನೇಮಿಸಲ್ಪಡತಕ್ಕದ್ದು. ಅಂಥಾ ಡಿಪಾಜಿಟ್ ಕಟ್ಟಲಿಕ್ಕೆ ತಪ್ಪಿದರೆ, ಪುನಃ ಸ್ವತ್ತು ಕೂಡ್ಲೆ ಹರಾಜ್ ಹಾಕಲ್ಪಟ್ಟು ವಿಕ್ರಯಿಸಲ್ಪಡತಕ್ಕದ್ದು.

ಮುಂ. ರೆ. ಕೋ. 174ನೇ ಸೆಕ್ಷನ್.

ಕ್ರಯದ ಮೊಬಲಗನ್ನು ಯಾವಾಗ ಪಾವತೀಮಾಡತಕ್ಕದ್ದು.

189. ಕ್ರಯದ ಹಣದ ಪೂರಾ ಮೊಬಲಗು ಕ್ರಯದಾರನಿಂದ, ಯಾವ ತಾರೀಖಿನಲ್ಲಿ ಸ್ಥಿರಸ್ವತ್ತಿನ ವಿಕ್ರಯವು ನಡಿಸಲ್ಪಟ್ಟಿತ್ತೋ ಅದು ಮೊದಲು ಹದಿನೈದನೇಯ ದಿನದ ಸೂರ್ಯಾಸ್ತಮಯಕ್ಕೆ ಮುಂದಾಗಿ ಪಾವತೀಮಾಡಲ್ಪಡತಕ್ಕದ್ದು, ಅಥವಾ ಸದರೀ ಹದಿನೈದನೆಯ ದಿನವು ಮುಂಜೂರಾದ ರಜಾದಿನವಾಗಿದ್ದರೆ, ಅಂಥಾ ಹದಿನೈದನೆಯ ದಿನದ ತರುವಾಯದ ಮೊದಲನೇ ಕಚ್ಚೇರಿದಿನದ ಸೂರ್ಯಾಸ್ತಮಯಕ್ಕೆ ಮುಂದಾಗಿ ಪಾವತೀಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 175ನೇ ಸೆಕ್ಷನ್.

ಹಣಕೊಡಲಿಕ್ಕೆ ತಪ್ಪುವದರ ಫಲಿತಾಂಶ.

190. ಚರಸ್ವತ್ತಿನದಾಗಲಿ, ಸ್ಥಿರಸ್ವತ್ತಿನದಾಗಲಿ, ಕ್ರಯದ ಹಣದಪೈಕೀ ಪೂರಾ ಮೊಬಲಗನ್ನು ವಿಧಿಸಲ್ಪಟ್ಟ ಕಾಲದೊಳಗಾಗಿ ಪಾವತೀಮಾಡಲಿಕ್ಕೆ ತಪ್ಪುವಲ್ಲಿ, ವಿಕ್ರಯದ ಬಾಬತು ಖರ್ಚುಗಳನ್ನು ಸದರೀ ಮೊಬಲಗಿನಿಂದ ಕೊಟ್ಟಬಳಿಕ ಶೇಷಣೀ ಹಣದಲ್ಲಿ ಮೊಬಲಗು ಗವರ್ನಮೆಂಟಿಗೆ ಸೇರಿಹೋಗಿ ಸ್ವತ್ತು ಪುನಃ ವಿಕ್ರಯಿಸಲ್ಪಡತಕ್ಕದ್ದು. ಹಣಕೊಡಲಿಕ್ಕೆ ತಪ್ಪಿದ ಕ್ರಯದಾರನು ಸ್ವತ್ತಿಗಾಗಲಿ, ಯಾವಬಗ್ಗೆ ಸದರೀ ಸ್ವತ್ತು ಈಚಿಗೆ ವಿಕ್ರಯಿಸಲ್ಪಡಬಹುದೋ ಅಂಥಾ ಮೊಬಲಗಿನ ಯಾವದಾದರೂ ಭಾಗಕ್ಕಾಗಲಿ, ಇರತಕ್ಕ ವಿಶಿಷ್ಟಹಕ್ಕನ್ನು ಕಳಕೊಳ್ಳತಕ್ಕದ್ದು.

ಮುಂ. ರೆ. ಕೋ. 176ನೇ ಸೆಕ್ಷನ್.

ಪುನಃವಿಕ್ರಯಿಸುವಲ್ಲಿ ಉಂಟಾಗತಕ್ಕ ನುಕ್ಸಾನಿಗೆ ಕ್ರಯದಾರನ ಜವಾಬ್ದಾರಿ.

191. ತರುವಾಯ ಮಾಡಲ್ಪಟ್ಟ ವಿಕ್ರಯದ ಹುಟ್ಟುವಳಿಯು, ಹಣಕೊಡಲಿಕ್ಕೆ ತಪ್ಪಿದ ಕ್ರಯದಾರನು ದರಖಾಸ್ತುಮಾಡಿದ ಮೊಬಲಗಿಗಿಂತ ಕಮ್ಮಿಯಾಗಿದ್ದರೆ, ವ್ಯತ್ಯಾಸವಾದ ಮೊಬಲಗು, ಜಮೀನ್ದಾರಿಕಂದಾಯದ ಬಾಕೀ ತರೀಕ್ ಡೆಪ್ಯುಟ ಕಮ್ಮಿಷನರಿಂದ ಸದರೀ ಕ್ರಯದಾರನ ದೆಸೆಯಿಂದ ವಸೂಲ್‌ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 177ನೇ ಸೆಕ್ಷನ್.

ಪುನರ್ವಿಕ್ರಯಕ್ಕೆ ಮುಂದಾಗಿ ಕೊಡತಕ್ಕ ನೋಟೀಸ್.

192. ಕ್ರಯದ ಹಣ ಪಾವತೀಮಾಡುವದಕ್ಕೆ ತಪ್ಪುವಲ್ಲಿ, ಅಥವಾ, ಮೊದಲನೆಯ ವಿಕ್ರಯವನ್ನು ನಿಲ್ಲಿಸಿ ಇಟ್ಟ ತರುವಾಯ, ಸ್ವತ್ತಿನ ಪ್ರತಿ ಪುನರ್ವಿಕ್ರಯವೂ ಕೂಡ್ಲೆ ನಡೆದಹೊರತು, ಅಸಲ್ ವಿಕ್ರಯಗಳಿಗಾಗಿ ವಿಧಿಸಲ್ಪಟ್ಟ ರೀತಿಯಲ್ಲಿ ಒಂದು ಹೊಸನೋಟೀಸನ್ನು ಸಾದರ್‌ಮಾಡಿದ ಬಳಿಕ ನಡಿಸಲ್ಪಡತಕ್ಕದ್ದು.

ಮುಂ. ರೆ. ಕೋ. 178ನೇ ಸೆಕ್ಷನ್.

ವಿಕ್ರಯವನ್ನು ವಜಾಮಾಡುವಬಗ್ಗೆ ದರಖಾಸ್ತು.

193. ಸ್ಥಿರಸ್ವತ್ತಿನ ವಿಕ್ರಯದ ತಾರೀಖು ಮೊದಲು ಮೂವತ್ತು ದಿನಗಳೊಳಗೆ ಯಾವ ಕಾಲದಲ್ಲಾಗಲಿ, ಅದನ್ನು ಪ್ರಕಟಿಸುವದರಲ್ಲಿಯಾಗಲಿ ನಡಿಸುವದರಲ್ಲಿಯಾಗಲಿ ಯಾವದಾದರೂ ಮುಖ್ಯವಾದ ಅಕ್ರಮ ಯಾ ತಪ್ಪು ಯಾ ಮೋಸಯಿಂಥಾ ಸಬಬಿನಮೇಲೆ ವಿಕ್ರಯವನ್ನು ವಜಾ ಮಾಡುವ ಬಗ್ಗೆ ಡೆಪ್ಯುಟಿ ಕಮ್ಮಿಷನರಿಗೆ ದರಖಾಸ್ತು ಮಾಡಬಹುದು; ಆದರೆ, ಇದನ್ನು ಅನುವರ್ತಿಸಿಬರುವ ಯೆರಡನೇ ಸೆಕ್ಷನ್‌ನಲ್ಲಿ ಅನ್ಯಥಾ ವಿಧಿಸಲ್ಪಟ್ಟಿರುವ ರೀತಿಯಾಗಿಹೊರತು, ಸದರೀ ದರಖಾಸ್ತುದಾರನು ದೃಢವಾದ ನುಕ್ಸಾನ್‌ಪಟ್ಟಿರುವದಾಗಿ, ಡೆಪ್ಯುಟಿಕಮ್ಮಿಷನರಿಗೆ

ತೃಪ್ತಿಕರವಾಗಿ ರುಜುವಾಡಿದ್ದ ಹೊರತು ಸದರೀ ಅಕ್ರಮ ಯಾ ತಪ್ಪಿನ ಸಬಬಿಗೋಸ್ಕರವಾಗಿ ಯಾವ ವಿಕ್ರಯವೂ ವಜಾ ಮಾಡಲ್ಪಡಕೂಡದು.

ಇಂಥಾ ದರಖಾಸ್ತು ಅಂಗೀಕರಿಸಲ್ಪಟ್ಟರೆ ಡೆಪ್ಯುಟಿ ಕಮ್ಮಿಷನರು ವಿಕ್ರಯವನ್ನು ವಜಾಮಾಡಿ ಹೊಸ ವಿಕ್ರಯವನ್ನು ನಿಯಮಿಸತಕ್ಕದ್ದು.

ಮುಂ. ರೆ. ಕೋ. 179ನೇ ಸೆಕ್ಷನ.

ವಿಕ್ರಯವನ್ನು ಕಾಯಂ ಮಾಡುವ ಯಾ ವಜಾಮಾಡುವ ಹುಕ್ಕುಂ.

194. ವಿಕ್ರಯದ ತಾರೀಖ ಲಾಗಾಯತ ಮೂವತ್ತು ದಿನಗಳು ಕಳೆದ ಮೇಲೆ ಹಿಂದಿನ ಕಡೇ ಸೆಕ್ಷನ್ನಲ್ಲಿ ನಮೂದಿರುವ ಪ್ರಕಾರ ಅಂಥಾ ದರಖಾಸ್ತು ಮಾಡಲ್ಪಡದೇ ಇದ್ದರೆ, ಅಥವಾ ಅಂಥಾ ದರಖಾಸ್ತು ಮಾಡಲ್ಪಟ್ಟು ತಿರಸ್ಕರಿಸಲ್ಪಟ್ಟರೆ, ಡೆಪ್ಯುಟಿ ಕಮ್ಮಿಷನರು ವಿಕ್ರಯವನ್ನು ಕಾಯಂಮಾಡಿ ಹುಕ್ಕುಂ ಕೊಡತಕ್ಕದ್ದು: ಪರಂತು, ಅಂಥಾ ದರಖಾಸ್ತು ಮಾಡಲ್ಪಡದೇ ಯಿದ್ದಾಗ್ಯೂ ಅಥವಾ, ಯಾವ ದರಖಾಸ್ತು ಮಾಡಲ್ಪಟ್ಟು ನಿರಾಕರಿಸಲ್ಪಟ್ಟಿರುತ್ತೋ ಅಂಥಾ ಯಾವ ದರಖಾಸ್ತಿನಲ್ಲಾಗಲಿ, ನಮೂದಿರುವ ಕಾರಣಗಳು ವಿನಾ ಇತರ ಕಾರಣಗಳಿಂದ ವಿಕ್ರಯವು ವಜಾಮಾಡಲ್ಪಡತಕ್ಕದ್ದೆಂದು ಯೆಣಿಸಲಿಕ್ಕೆ ಕಾರಣವಿದ್ದರೆ, ತಮ್ಮ ಕಾರಣಗಳನ್ನು ಬರವಣಿಗೆಯಲ್ಲಿ ರಿಕಾರ್ಡು ಮಾಡಿದ ತರುವಾಯ ವಿಕ್ರಯವನ್ನು ವಜಾಮಾಡಬಹುದು.

ಮುಂ. ರೆ. ಕೋ. 180ನೇ ಸೆಕ್ಷನ.

ವಿಕ್ರಯವು ವಜಾಮಾಡಲ್ಪಟ್ಟಾಗ ಡಿಪಾಜಿಟ್ ಯಾ ಕ್ರಯದ ಮೊಬಲಗನ್ನು ವಾಪಸ ಕೊಡುವಣ.

195. ಯಾವದಾದರೂ ಸ್ವತ್ತಿನ ವಿಕ್ರಯವು, ಕಾಯಂ ಮಾಡಲ್ಪಡದೇ ಯಿದ್ದರೆ ಅಥವಾ ವಜಾ ಮಾಡಲ್ಪಟ್ಟರೆ ಕ್ರಯದಾರನು, ತನ್ನ ಡಿಪಾಜಿಟ್ಟನ್ನಾಗಲಿ, ಅವನ ಕ್ರಯದ ಹಣವನ್ನಾಗಲಿ, ಸಂದರ್ಭವಿದ್ದಂತೆ ವಾಪಸ ಪಡೆಯಲಿಕ್ಕೆ ಅರ್ಹನಾಗಿರತಕ್ಕದ್ದು.

ಮುಂ. ರೆ. ಕೋ. 181ನೇ ಸೆಕ್ಷನ

ವಿಕ್ರಯವು ಕಾಯಂ ಮಾಡಲ್ಪಟ್ಟ ಮೇಲೆ, ಕ್ರಯದಾರನಿಗೆ ಸ್ವತ್ತು ವಶಪಡಿಸುವಣ. ಕ್ರಯದ ಸರಟಿಫಿಕೇಟ.

196. ಯಾವದಾದರೂ ಅನುಭವದ ಅಥವಾ, ಪರಭಾರೆಯಾದ ಹಿಡುವಳಿಯ ವಿಕ್ರಯವು, ಮೇಲೆ ಕಂಡ ರೀತಿಯಾಗಿ ಕಾಯಂ ಮಾಡಲ್ಪಟ್ಟ ಬಳಿಕ, ಡೆಪ್ಯುಟಿ ಕಮ್ಮಿಷನರು, ಕ್ರಯದಾರನೆಂದು ತಿಳಿಸಲ್ಪಟ್ಟ ಮನುಷ್ಯನ ವಶದಲ್ಲಿ, ಅಂಥಾ ಅನುಭವದಲ್ಲಿ, ಅಥವಾ ಪರಭಾರೆಯಾದ ಹಿಡುವಳಿಯಲ್ಲಿ ಅಡಗಿರುವ ಜಮೀನನ್ನು ಬಿಡತಕ್ಕದ್ದಲ್ಲದೆ ಅವನ ಹೆಸರನ್ನು, ಹಣ ಕೊಡಲಿಕ್ಕೆ ತಪ್ಪಿದವನ ಹೆಸರಿಗೆ ಬದಲಾಗಿ ಅನುಭವದಾರ ಯಾ ಹಿಡುವಳೀದಾರನ ತರೀಕ ರೆವಿನ್ಯೂ ರಿಕಾರ್ಡುಗಳಲ್ಲಿ ದಾಖಲ್ಮಾಡಿಸಿ, ಯಾವದಕ್ಕೆ ಸರಟಿಫಿಕೇಟ ಸಂಬಂಧಿಸುತ್ತದೋ ಅಂಥಾ ಅನುಭವವನ್ನಾಗಲಿ, ಪರಭಾರೆಯಾದ ಹಿಡುವಳೀಯನ್ನಾಗಲಿ, ಕ್ರಯಕ್ಕೆ ತೆಗೆದುಕೊಂಡು ಯಿದ್ದಾನೆಂಬುವ ಬಗ್ಗೆ ಅವನಿಗೆ ಒಂದು ಸರಟಿಫಿಕೇಟನ್ನು ಕೊಡತಕ್ಕದ್ದು.

ಮುಂ. ರೆ. ಕೋ. 182ನೇ ಸೆಕ್ಷನ.

ಸರಟಿಫಿಕೇಟ ಹೊಂದಿದ ಕ್ರಯದಾರನ ಮೇಲೆ ತರಲ್ಪಡುವ ವ್ಯಾಜ್ಯದ ನಿರ್ಬಂಧ.

197. ವಿಕ್ರಯ ಕಾಲದಲ್ಲಿ ಖರೆ ಕ್ರಯದಾರನೆಂದು ತಿಳಿಸಲ್ಪಟ್ಟ ಮನುಷ್ಯನ ಹೆಸರು ಸರ್ಟಿಫಿಕೇಟಿನಲ್ಲಿ ನಮೂದಿಸಲ್ಪಡತಕ್ಕದ್ದು, ಮತ್ತು ಕರಾರ ಪ್ರಕಾರ, ಸರ್ಟಿಫೈ ಮಾಡಲ್ಪಟ್ಟ ಕ್ರಯದಾರನ ಹೆಸರು ಉಪಯೋಗಿಸಲ್ಪಟ್ಟಾಗ್ಯೂ ಸದರೀ

ಕ್ರಯವು ಸರ್ಟಿಫೈ ಮಾಡಲ್ಪಟ್ಟ ಕ್ರಯದಾರನಲ್ಲದೆ ಮತ್ತೊಬ್ಬ ಮನುಷ್ಯನ ತರ್ಫಿನಲ್ಲಿ ಮಾಡಲ್ಪಟ್ಟಿತ್ತೆಂಬ ಸಬಬಿನಿಂದ ಸರ್ಟಿಫೈಮಾಡಲ್ಪಟ್ಟ ಕ್ರಯದಾರನ ಮೇಲೆ ಒಂದು ಸಿವಿಲ್ ಕೋರ್ಟಿನಲ್ಲಿ ತರಲ್ಪಟ್ಟ ಯಾವ ವ್ಯಾಜ್ಯವಾದರೂ ಡಿಸ್ ಮಿಸ್ ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 183ನೇ ಸೆಕ್ಷನ್.

ವಿಕ್ರಯದ ಹುಟ್ಟುವಳಿಯ ವಿನಿಯೋಗ.

198. ಈ ಅಧ್ಯಾಯಕ್ಕೆ ಅನುಸರಿಸಿ ಚರಸ್ವತ್ತಿನ ಯಾವ ವಿಕ್ರಯವಾಗಲಿ ನಿರುಪಾಧಿಕವಾದಾಗ ಮತ್ತು ಸ್ಥಿರಸ್ವತ್ತಿನ ಯಾವ ವಿಕ್ರಯವಾಗಲಿ ಕಾಯಂ ಮಾಡಲ್ಪಟ್ಟಾಗ, ವಿಕ್ರಯದ ಹುಟ್ಟುವಳಿಯು, ವಿಕ್ರಯದ ಖರ್ಚುಗಳಬಗ್ಯೂ, ಬಾಕೀದಾರನಿಂದ ಅಂಥಾ ವಿಕ್ರಯವು ಕಾಯಂಮಾಡಲ್ಪಟ್ಟ ತಾರೀಖಿನಲ್ಲಿ ಸಲ್ಲತಕ್ಕ ಮತ್ತು ಜಮೀನ್ ಕಂದಾಯದ ಬಾಕೀ ತರೀಕ್ ವಸೂಲ್‌ಮಾಡಲ್ಪಡತಕ್ಕ ಯಾವ ಬಾಕಿಯ ಪಾವತೀಬಗ್ಯೂ ವಿನಿಯೋಗಿಸಲ್ಪಡತಕ್ಕದ್ದು;

ಮತ್ತು ನಪಾವತೀ ಮೊಬಲಗು ಯಾವದಾದರೂ ಯಿದ್ದರೆ ಅದು ಯಾರ ಸ್ವತ್ತು ವಿಕ್ರಯಿಸಲ್ಪಟ್ಟಿರುತ್ತೋ ಆ ಮನುಷ್ಯನಿಗೆ, ಪಾವತೀ ಮಾಡಲ್ಪಡತಕ್ಕದ್ದು.

ವಿಕ್ರಯದ ಖರ್ಚುಗಳು ಹ್ಯಾಗೆ ಲೆಕ್ಕ ಮಾಡಲ್ಪಡತಕ್ಕದ್ದು.

ವಿಕ್ರಯದ ಖರ್ಚು ಗವರ್ನಮೆಂಟಿನಿಂದ ಆಗಿಂದಾಗ್ಯೆ ಮಂಜೂರ್ ಮಾಡಲ್ಪಡಬಹುದಾದ ದರಗಳ ಪ್ರಕಾರವಾಗಿಯೂ, ಅಂಥಾ ರೂಲ್ಸ್ ಅನುಸರಿಸಿಯೂ, ಅಂದಾಜ್ ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 184ನೇ ಸೆಕ್ಷನ್.

ನಪಾವತೀಮೊಬಲಗು, ಕೋರ್ಟಿನಹುಕ್ಕುಂ ವಿನಾ ಲೇಣೇದಾರ್ರಿಗೆ ಪಾವತೀ ಮಾಡಲ್ಪಡತಕ್ಕದ್ದಲ್ಲ.

199. ಸದರೀ ನಪಾವತೀ ಮೊಬಲಗು ಒಂದು ಸಿವಿಲ್ ಕೋರ್ಟಿನ ಹುಕ್ಕುಂ ವಿನಾ, ಯಾವನ ಸ್ವತ್ತು ವಿಕ್ರಯಿಸಲ್ಪಟ್ಟಿರುತ್ತೋ ಅಂಥಾ ಮನುಷ್ಯನ ಯಾವ ಲೇಣೇದಾರನಿಗಾಗಲಿ ಕೊಡಲ್ಪಡತಕ್ಕದ್ದಲ್ಲವು.

ಮುಂ. ರೆ. ಕೋ. 185ನೇ ಸೆಕ್ಷನ್.

ರೆವಿನ್ಯೂ ಬಗ್ಯೆ ಕ್ರಯದಾರನ ಜವಾಬ್‌ದಾರಿ.

200. ಯಾವದಾದರೂ ಜಮೀನಿನ ಕ್ರಯದಾರನಂತೆ, ಬಾಧ್ಯತೆಯ ಸರಟಿಫಿಕೇಟಿನಲ್ಲಿ ನಮೂದಿಸಲ್ಪಟ್ಟ ಮನುಷ್ಯನು ಅಂಥಾ ಜಮೀನ್ ವಿಷಯದಲ್ಲಿ ವಿಕ್ರಯದ ತಾರೀಖಿಗೆ ಈಚಿಗೆ, ಸಲ್ಲಬೇಕಾದ ಜಮೀನ್ ಕಂದಾಯದ ತಮಾಂ ಖಿಸ್ತುಗಳಿಗೂ ಜವಾಬ್ದಾರನಾಗತಕ್ಕದ್ದು.

ಮುಂ. ರೆ. ಕೋ. 186ನೇ ಸೆಕ್ಷನ್.

ಜಫ್ತೀ ಮಾಡಲ್ಪಟ್ಟ ಚರಸ್ವತ್ತಿಗೆ ಉಂಟಾಗತಕ್ಕ ಹಕ್ಕುಗಳು ಹ್ಯಾಗೆ ವ್ಯವಸ್ಥೆಯಾಗತಕ್ಕವು.

201. ಈ ಅಧ್ಯಾಯದ ನಿಬಂಧನೆಗಳನುಸರಿಸಿ ಜಫ್ತೀ ಮಾಡಲ್ಪಟ್ಟ ಚರಸ್ವತ್ತಿಗೆ, ಮೂರನೇಯವನಿಂದ ಯಾವದಾದರೂ ಹಕ್ಕು ತರಲ್ಪಟ್ಟರೆ, ಡೆಪ್ಯುಟಿ ಕಮ್ಮಿಷನರು, ಅವನ ಹಕ್ಕನ್ನು ಯುಕ್ತವಾದ ನೋಟೀಸ್ ಕೊಟ್ಟ ಮೇಲೆ ಫ್ರೂಟ್ ವಿಚಾರಣೆ ಮಾಡಿ ಅಂಗೀಕರಿಸತಕ್ಕದ್ದು, ಅಥವಾ ತಿರಸ್ಕರಿಸತಕ್ಕದ್ದು. ಹಕ್ಕು ಪೂರಾ ಆಗಲಿ, ಭಾಗಶಃ ಆಗಲಿ, ಅಂಗೀಕರಿಸಲ್ಪಟ್ಟರೆ, ಸ್ವತ್ತಿನ ವಿಷಯದಲ್ಲಿ ಅದಕ್ಕೆ ಅನುಗುಣವಾಗಿ ಅಮಲ್ ನಡಿಸತಕ್ಕದ್ದು, ಅಂಗೀಕರಿಸಲ್ಪಟ್ಟಿರುವಷ್ಟರಮಟ್ಟಿಗೆ. ಥೊರ್ತು ಮಿಕ್ಕ ಸ್ವತ್ತು ವಿಕ್ರಯಿಸ

-ಲ್ಪಟ್ಟು, ಕ್ರಯದಾರನ ಬಾಧ್ಯತೆಯು ಯಲ್ಲ ಕೆಲಸಗಳಿಗೂ ಅನುಕೂಲವಾಗಿರತಕ್ಕದ್ದಲ್ಲದೆ, ಹುಟ್ಟುವಳಿಯು ಇದರಲ್ಲಿ ಹಿಂದೆ ನಿಯಮಿಸಲ್ಪಟ್ಟಮೇರೆ ವಿನಿಯೋಗಿಸಲ್ಪಡತಕ್ಕದ್ದು.

ಈ ಅಧ್ಯಾಯದ ನಿಬಂಧನೆಗಳ ಲಗಾವಣಿ.

ಮುಂ. ರಿ. ಕೋ. 187ನೇ ಸೆಕ್ಷರ್ನ. 202. ಈ ರೆಗ್ಯುಲೇಷರ್ನ ಅನುಸರಿಸಿ ಅಥವಾ ಯಿದರಿಂದ ರದ್ದು ಮಾಡಲ್ಪಟ್ಟ ಯಾವದಾದರೂ, ಆಕ್ಟು ನಿಬಂಧನೆ ಅಥವಾ ಹುಕ್ಕುಂ, ಅಥವಾ ಜಮೀನ್ ಕಂದಾಯದ ವಿಷಯದಲ್ಲಿ ತತ್ಕಾಲದಲ್ಲಿ ಜಾರೀಯಲ್ಲಿರುವ ಯಾವದಾದರೂ ಆಕ್ಟು ಯಾ ರೆಗ್ಯುಲೇಷರ್ನ ಅನುಸರಿಸಿ, ತೆರಬೇಕಾದ ಅಥವಾ ವಸೂಲ್ ಮಾಡ ಬೇಕಾದ ಜಮೀನ್ ಕಂದಾಯಕ್ಕಾಗಿ ಬರತಕ್ಕ ತಮಾಂ ಮೊಬಲಗುಗಳೂ, ತಮಾಂ ಕ್ವಿಟರೆಂಟುಗಳೂ, ಕಳಕೊಳ್ಳಲ್ಪಟ್ಟ ದಂಡಗಳು, ಮತ್ತು ತಮಾಂ ತೀರ್ವೆಗಳು, ಜಮೀನ್‌ದೆಸೆಯಿಂದ ಬರತಕ್ಕ ನಫೆಗಳು, ಆದಾಯುಗಳು, ರುಸುಂಗಳು, ಖರ್ಚುಗಳು, ದಂಡಗಳು, ಜುರ್ಮಾನೆಗಳು ಮತ್ತು ಲಾಗವಡುಗಳು ;

ಈ ಅಧ್ಯಾಯದ ನಿಬಂಧನೆಗಳನುಸರಿಸಿ ಯಾವ ಹಣಗಳು ವಸೂಲ್ ಆಗತಕ್ಕದ್ದು.

ಮತ್ತು ಸಾಯರ್ ತೀರ್ವೆಗಳ ಅಥವಾ ಯಾವದಾದರೂ ಯಿತರ ಸುಂಕ ಯಾ ತೀರ್ವೆಯು, ಅಥವಾ ರೆವಿನ್ಯೂ ಹುಟ್ಟುವಳಿಯು ಯಾವದಾದರೂ ಯಿತರ ಬಾಬಿನ ಯಿಜಾರೇ ಬಗ್ಗ್ಯಾಗಿ ಯಾವ ಯಿಜಾರೇದಾರನಿಂದಾಗಲಿ ಬರಬೇಕಾದ ತಮಾಂ ಹಣಗಳು, ಮತ್ತು ಅಂಥಾ ಯಾವ ಯಿಜಾರೇದಾರನಾಗಲಿ, ತನ್ನ ಒಡಂಬಡಿಕೆಯ ಷರತ್‌ಗಳನುಸರಿಸಿ ತಾನು ಗುರಿಯಾಗತಕ್ಕ ಗೊತ್ತಾದ ಹಣದ ಬಾಬತು ತಮಾಂ ದಂಡಗಳು ;

ಮತ್ತು ಕಂದಾಯದ ತರೀಕ್, ರೆವಿನ್ಯೂ ತಗಾದೆ ತರೀಕ್, ಅಥವಾ ಜಮೀನ್ ಕಂದಾಯದ ಬಾಕೀ ತರೀಕ್ ವಸೂಲಾಗತಕ್ಕದ್ದಾಗಿ ಈ ರೆಗ್ಯುಲೇಷರ್ನನಿಂದಾಗಲಿ, ತತ್ಕಾಲದೊಳಗೆ ಜಾರೀ ಯಿರುವ ಯಾವದಾದರೂ ಯಿತರ ಕಾನೂರ್ನನಿಂದಾಗಲಿ, ತಿಳಿಸಲ್ಪಟ್ಟ ದರೋಬಸ್ತು ಮೊಬಲಗ್‌ಗಳೂ, ಈ ಅಧ್ಯಾಯದ ಹಿಂದಿನ ನಿಬಂಧನೆಗಳನುಸರಿಸಿ ವಸೂಲ್ಮಾಡಲ್ಪಡ ತಕ್ಕದ್ದು.

ಮತ್ತು ಈ ರೆಗ್ಯುಲೇಷನಿನ ಅಥವಾ ಯಿದರಿಂದ ರದ್ದು ಮಾಡಲ್ಪಟ್ಟ ಯಾವದಾದರೂ ಆಕ್ಟು ಯಾ ಕಾನೂನಿನ ಯಾವದಾದರೂ ನಿಬಂಧನೆಗಳನುಸರಿಸಿ ಅಥವಾ ಮೇಲೆ ಕಂಡಂತೆ ಅಂಥಾ ಯಿಜಾರೇದಾರನಿಗೋಸ್ಕರ ಯಾವ ಹಣಕ್ಕಾಗಿ ಯಾಗಲಿ, ಜಾಮೀನ್‌ದಾರರಾಗಿ ಯಿರಬಹುದಾದ ತಮಾಂ ಜನಗಳೂ, ತಮ್ಮ ಜಾಮೀನ್ ಪತ್ರದ ಷರತ್‌ಗಳ ಪ್ರಕಾರ ಜವಾಬ್‌ದಾರರಾಗಿರಬಹುದಾದ ಯಾವ ಮೊಬಲಗನ್ನಾಗಲಿ, ಆ ಪೈಕೀ ಯಾವಭಾಗವನ್ನಾಗಲಿ, ಕೊಡಲಿಕ್ಕೆ ತಪ್ಪಿದರೆ, ಕಂದಾಯ ಕೊಡಲಿಕ್ಕೆ ತಪ್ಪಿದವರ ತರೀಕ್ ಈ ಅಧ್ಯಾಯದ ನಿಬಂಧನೆಗಳನುಸರಿಸಿ ಅಮಲ್ ನಡಿಸಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

ಜಾಮೀನ್‌ದಾರರು, ಕಂದಾಯದ ಬಾಕೀದಾರರಂತೆ ಜವಾಬ್‌ದಾರರಾಗಿರತಕ್ಕದ್ದು.

ಮತ್ತು ಮೇಲೆ ಕಂಡಿರುವಂತೆ, ಅಂಥಾ ಯಾವ ಇಜಾರೆಯನ್ನಾಗಲಿ, ವಾಪಸ್ ತೆಗೆದುಕೊಳ್ಳುವ ಸಂದರ್ಭದಲ್ಲಿ ಯಾವ ಮನುಷ್ಯ್ಯನೂ ಇಜಾರೇದಾರನಿಗೆ ಮುಂದಾಗಿ ಪಾವತೀ ಮಾಡಿ

ಇಜಾರೇಯನ್ನು ವಾಪಸ್ ತೆಗದುಕೊಳ್ಳುವಲ್ಲಿ ಯಿಜಾರೇ

ದಾರನಿಗೆ ಅಡ್ವಾನ್ಸಾಗಿ ಕೊಡಲ್ಪಟ್ಟ ಮೊಬಲಗು ಅಂಗೀಕರಿಸಲ್ಪಡತಕ್ಕದ್ದಲ್ಲ.

ಯಿರಬಹುದಾದ ಯಾವದಾದರೂ ಹಣವನ್ನ ಕೇಳುವದಕ್ಕೆ ಅರ್ಹನಾಗಿರುವದಿಲ್ಲ.

ಕೊಡಲ್ಪಟ್ಟ ಅಡ್ವಾನ್ಸಗಳ ವಿಷಯದಲ್ಲಿ ನಿಬಂಧನೆ ಮಾಡಲಿಕ್ಕೆ ಗವರ್ನಮೆಂಟಗೆ ಅಧಿಕಾರ.

203. ಸನ್ 1871ನೇ ಯಿಸವಿಯ ಲ್ಯಾಂಡ್ ಇಂಪ್ರೂವ್‌ಮೆಂಟ್ ಅಂದರೆ, ಜಮೀನ ಅಭಿವೃದ್ಧಿಯ ಅಕ್ಟಿನಲ್ಲಿ ವಿವರಿಸಲ್ಪಡದೆ, ಪರಂತು ವ್ಯವಸಾಯದ ಉದ್ದೇಶಗಳಿಗೆ ಸಂಬಂಧಿಸಿದ ಕಷ್ಟ ನಿವಾರಣಾರ್ಥವಾಗಿ, ಬೀಜ ಯಾ ದನಗಳನ್ನು ಕೊಳ್ಳುವ ಬಗ್ಯೆ ಅಥವಾ ಯಿತರ ಯಾವದಾದರೂ ಕೆಲಸಕ್ಕೆ; ಸಾಗುವಳೀ ಲಾಯಖ್ ಜಮೀನಿನ ಹಿಡುವಳೀ ದಾರರಿಗೆ ಕೊಡಲ್ಪಡತಕ್ಕ ಅಡ್ವಾನ್ಸಗಳನ್ನು ಕುರಿತು ಗವರ್ನಮೆಂಟನವರು ಆಗಿಂದಾಗ್ಯೆ ನಿಬಂಧನೆಗಳನ್ನು ವಿಧಿಸಬಹುದು. ಅಂಥಾ ಪ್ರತಿ ಅಡ್ವಾನ್ಸೂ, ಪಾವತೀ ಮಾಡಬೇಕಾದಾಗ ಅದರ ಮೇಲೆ ಬಡ್ಡೀ ಯಾವದಾದರೂ ಯಿ ರ್ಟ್ಟರೆ, ಅದು ಸಹಿತ, ಯಾವ ಮನುಷ್ಯನಿಗೆ ಅಂಥಾ ಅಡ್ವಾನ್ಸ ಕೊಡಲ್ಪಟ್ಟಿತ್ತೋ ಆ ಮನುಷ್ಯನಿಂದಾಗಲಿ, ಅದರ ವಸೂಲೀ ಬಗ್ಯೆ ಜಾಮೀನ ಆಗಿದ್ದ ಯಾವ ಮನುಷ್ಯನಿಂದಾಗಲಿ, ಸದರೀ ಅಡ್ವಾನ್ಸ ಯಾವ ಮನುಷ್ಯನಿಗೆ ಮಾಡಲ್ಪಟ್ಟಿತ್ತೋ ಅವನಿಂದಾಗಲಿ, ಅವನ ಜಾಮೀನ್‌ದಾರನಿಂದಾಗಲಿ, ಸಲ್ಲತಕ್ಕ ಕಂದಾಯದ ಬಾಕೀ ತರೀಕ್ ವಸೂಲ್ಮಾಡಲ್ಪಡತಕ್ಕದ್ದು.

12ನೇ ಅಧ್ಯಾಯು.

ರೆವಿನ್ಯೂ ಆಫೀಸರ್‌ಗಳು ಚಲಾಯಿಸ ತಕ್ಕ ನಡವಳಿತ.

ಮುಂ. ರೆ. ಕೋ. 188ನೇ ಸೆಕ್ಷನ್.

ರೆವಿನ್ಯೂ ಆಫೀಸರ್‌ಗಳ ತಾಬೇದಾರೀ.

204. ತಮಾಂ ಸರಕಾರೀ ಕೆಲಸಗಳೂ, ಮತ್ತು ನಡವಳಿಕೆಗಳೂ, ಯಿವುಗಳಲ್ಲಿ ವಿರುದ್ಧವಾಗಿ ಕಾನೂನಿನಲ್ಲಿ ವಿವರಿಸಲ್ಪಟ್ಟ ನಿಬಂಧನೆಯೇನೂ ಯಿಲ್ಲದಿದ್ದರೆ, ಒಬ್ಬ ರೆವಿನ್ಯೂ ಆಫೀಸರನು ತನ್ನ ಕೆಲಸಗಳನ್ನು ನಿರ್ವಹಿಸುವ ಸ್ಥಳ, ಕಾಲ, ಮತ್ತು ರೀತಿ ಯಿವುಗಳ ವಿಷಯದಲ್ಲಿ ಯಾವ ಆಫೀಸರರಿಗೆ ತಾಬೇದಾರನಾಗಿರುತ್ತಾನೋ ಅಂಥಾ ಆಫೀಸರರ ಅಪ್ಪಣೆ ಮತ್ತು ಅಧಿಕಾರಕ್ಕೆ ಒಳಪಟ್ಟಿರತಕ್ಕದ್ದು.

ಮುಂ. ರೆ. ಕೋ. 189ನೇ ಸೆಕ್ಷನ್.

ಸಾಕ್ಷ್ಯ ಕೊಡುವದಕ್ಕೂ ದಸ್ತಾವೇಜುಗಳನ್ನು ಹಾಜರ್ ಮಾಡಲಿಕ್ಕೂ ಸಮ್ಮನ್ಸ ಮಾಡುವಬಗ್ಯೆ ಅಧಿಕಾರ.

205. (1) ಒಬ್ಬ ಡೆಪ್ಯುಟಿ ಅಮಲ್‌ದಾರರ ಅಥವಾ ಸರ್ವೇ ಅಸಿಸ್ಟೆಂಟ್ ಸೂಪರಿಂಟೆಂಡೆಂಟರ ಹುದ್ದೆಗಿಂತ ಕಡಮೆಯಿಲ್ಲದ ಪ್ರತಿ ರೆವಿನ್ಯೂ ಆಫೀಸರರೂ, ತಮ್ಮತಮ್ಮ ಇಲಾಖೆಗಳಲ್ಲಿ; ಒಬ್ಬ ಕಕ್ಷಿಗಾರನಾಗಿ ವಿಚಾರಣೆ ಮಾಡಲ್ಪಡಲಿಕ್ಕಾಗಲಿ, ಒಬ್ಬ ಸಾಕ್ಷಿಯಾಗಿ ಸಾಕ್ಷ್ಯಕೊಡಲಿಕ್ಕಾಗಲಿ, ಅಂಥಾ ಆಫೀಸರರು ಯಾವ ವಿಚಾರಣೆಯನ್ನು ಮಾಡಲಿಕ್ಕೆ ನ್ಯಾಯತಃ ಅಧಿಕಾರವುಳ್ಳವರಾಗಿರುತ್ತಾರೋ ಅಂಥಾ ಯಾವದಾದರೂ ಕಾರ್ಯಗಳಿಗಾಗಿ ದಸ್ತಾವೇಜುಗಳನ್ನು ಹಾಜರ್ ಮಾಡಲಿಕ್ಕೆ ಯಾರ ಹಾಜರಾತಿಯು ಜರೂರೆಂದು ಅವರು ಭಾವಿಸುತ್ತಾರೋ, ಅಂಥಾ ಆಸಾಮಿಗೆ ಸಮ್ಮನ್ಸ ಸಾದರ್‌ಮಾಡಲಿಕ್ಕೆ ಅಧಿಕಾರ ವುಂಟಾಗಿರತಕ್ಕದ್ದು. ದಸ್ತಾವೇಜುಗಳನ್ನು ಹಾಜರ್‌ಮಾಡಲಿಕ್ಕೋಸ್ಕರ ಹುಟ್ಟುವ ಸಮ್ಮನ್ಸು, ಗೊತ್ತಾದ ಕೆಲವು

ದಸ್ತಾವೇಜುಗಳನ್ನು ಹಾಜರ್‌ಮಾಡುವಬಗ್ಗೆ ಅಥವಾ ಸಮ್ಮನ್ಸ್ ಮಾಡಲ್ಪಟ್ಟ ಮನುಷ್ಯನ ವಶದಲ್ಲಿರುವ ಒಂದುವಿಧದ ತಮಾಂ ದಸ್ತಾವೇಜುಗಳನ್ನೂ ಹಾಜರ್ ಮಾಡುವಬಗ್ಗೆ ಇರಬಹುದು.

(2) ಹಾಗೆ ಸಮ್ಮನ್ಸ್ ಮಾಡಲ್ಪಟ್ಟ, ಯಾವಮನುಷ್ಯನಾಗಲಿ, ಖುದ್ದಾಗಿ ಅಥವಾ ಸಮ್ಮನ್ಸ್‌ನಲ್ಲಿ ನಿಯಮಿಸಲ್ಪಟ್ಟಮೇರೆ ಅಧಿಕಾರ ಹೊಂದಿದ ಒಬ್ಬ ಮುಖ್ತಾ ಲೀಕನಮೂಲಕವಾಗಲಿ ಹಾಜರಾಗಲಿಕ್ಕೆ ಮತ್ತು ಒಂದು ದಸ್ತಾವೇಜನ್ನಾಗಲಿ, ವಸ್ತುವನ್ನಾಗಲಿ, ಹಾಜರ್‌ಮಾಡುವಂತೆ ಸಮ್ಮನ್ಸ್‌ವಿಧಿಸಿದರೆ, ಅದನ್ನು ಹಾಜರ್ ಮಾಡಿಸುವದಕ್ಕೆ ಬದ್ಧನಾಗಿರತಕ್ಕದ್ದು. ಒಂದು ದಸ್ತಾವೇಜನ್ನಾಗಲಿ ಇತರ ವಸ್ತುವನ್ನಾಗಲಿ ಮಾತ್ರ ಹಾಜರ್‍ಮಾಡುವಬಗ್ಗೆ ಸಮ್ಮನ್ಸ್‌ಮಾಡಲ್ಪಟ್ಟ ಯಾವಮನುಷ್ಯನಾಗಲಿ ಸದರೀ ದಸ್ತಾವೇಜು ಯಾವ ವಸ್ತುವನ್ನು ಹಾಜರ್‍ಮಾಡುವಬಗ್ಗೆ ಖುದ್ದು ಹಾಜರಾಗಲಿಕ್ಕೆ ಬದಲಾಗಿ ಅದನ್ನು ಹಾಜರ್‍ಮಾಡಿಸುವದರಿಂದ ಸಮ್ಮನ್ಸ್ ಪ್ರಕಾರ ನೆರವೇರಿಶಿದಂತೆ ಯೆಣಿಸಲ್ಪಡತಕ್ಕದ್ದು.

(3) ಹಾಜರಾಗಲಿಕ್ಕೆ ಸಮ್ಮನ್ಸ್‌ಮಾಡಲ್ಪಟ್ಟ ಯೆಲ್ಲಮನುಷ್ಯರೂ, ಯಾವದರ ವಿಷಯದಲ್ಲಿ ವಿಚಾರಣೆ ಮಾಡಲ್ಪಡುತ್ತಾರೋ ಅಥವಾ ಕೈಫೀಯತು ಕೊಡುತ್ತಾರೋ ಅಂಥಾ ಯಾವದಾದರೂ ವಿಷಯದಲ್ಲಿ ನಿಜವನ್ನು ತಿಳಿಸಲಿಕ್ಕೂ, ಬೇಕಾಗುವ ಅಂಥಾ ದಸ್ತಾವೇಜುಗಳನ್ನೂ ಇತರ ವಸ್ತುಗಳನ್ನೂ ಹಾಜರ್‍ಮಾಡಲಿಕ್ಕೂ, ಬದ್ಧರಾಗತಕ್ಕದ್ದು.

ಕೆಲವು ಸಂದರ್ಭಗಳಲ್ಲಿ ಸಾಕ್ಷಿಯು ಕಮ್ಮಿಷನ್ ಮೂಲಕವಾಗಿ ವಿಚಾರಣೆ ಮಾಡಲ್ಪಡತಕ್ಕದ್ದು.

206. ಯಾರಸಾಕ್ಷ್ಯವು ಬೇಕಾಗಬಹುದೋ ಅಂಥಾ ಮನುಷ್ಯನು ಕಾಇಲೇ ಸಬಬ್ ಅಥವಾ ಅಶಕ್ತತೆಯಿಂದ, ಸಮ್ಮನ್ಸ್ ಸಾದರ್‍ಮಾಡುವ ಆಫೀಸರಮುಂದೆ ಹಾಜರಾಗಲಿಕ್ಕೆ ಅಶಕ್ತನಾಗಿದ್ದರೆ, ಅಥವಾ ಯಾರನ್ನು ದರಜಾ ಯಾ ಸ್ತ್ರೀಜಾತಿಯ ಸಬಬಿನಿಂದ ಸಮ್ಮನ್ಸ್ ಮಾಡುವದು ಯುಕ್ತವಾಗಿರಲಾರದೋ ಅಂಥಾ ಅಸಾಮಿಯನ್ನು ಸಮ್ಮನ್ಸ್ ಸಾದರ್‍ಮಾಡುವ ಆಫೀಸರರು ತಮ್ಮ ಯಖ್ತ್ಯಾರೀಮೇಲೆಯಾಗಲಿ ಯಾರ ಸಾಕ್ಷ್ಯವು ಅಪೇಕ್ಷಿಸಲ್ಪಟ್ಟದೆಯೋ ಅಂಥಾ ಅಸಾಮಿಯ ದರಖಾಸ್ತಿನ ಮೇಲೆ ಸದರೀ ಅಸಾಮಿಯ ಹಾಜರಾತಿಯನ್ನು ತಪ್ಪಿಶಿ ಸದರೀ ಅಸಾಮಿಯನ್ನು ಸದರೀಬಗ್ಗೆ ಅಂಥಾ ಆಫೀಸರರಿಂದ ನೇಮಿಸಲ್ಪಟ್ಟ ಒಬ್ಬ ತಾಬೇದಾರನಿಂದ ದರ್ಯಾಫ್ತೀ ಮಾಡಲ್ಪಡುವಂತೆ ಹುಕ್ಕುಂ ಮಾಡಬಹುದು.

ಮುಂ. ರಿ. ಕೋ. 190ನೇ ಸೆಕ್ಷನ್.

ಸಮ್ಮನ್ಸು ಬರವಣಿಗೆಯಲ್ಲಿದ್ದು ಸೈನ್ ಮೊಹರ್ ಆಗಿರತಕ್ಕದ್ದು.

207. ಪ್ರತಿಸಮ್ಮನ್ಸೂ, ಬರವಣಿಗೆಯಲ್ಲಿ ಯೆರಡು ಪ್ರತಿಯಾಗಿರತಕ್ಕದ್ದಲ್ಲದೆ, ಯಾವಬಗ್ಗೆ ಸದರೀ ಸಮ್ಮನ್ಸು ಸಾದರಾಯಿತೋ ಅದನ್ನು ನಮೂದಿಸಿ, ಅದನ್ನು ಸಾದರ್‌ಮಾಡುವ ಆಫೀಸರರಿಂದ ಸೈನ್ ಮಾಡಲ್ಪಟ್ಟು ಅವರಿಗೆ ಮೊಹರು ಸಹ ಇದ್ದರೆ, ಅದಕ್ಕೆ ಮೊಹರು ಹಾಕತಕ್ಕದ್ದು; ಸದರೀ ಸಮ್ಮನ್ಸ್‌ನಲ್ಲಿ ಹಾಗೆ ಸಮ್ಮನ್ಸ್ ಮಾಡಲ್ಪಟ್ಟ ಮನುಷ್ಯನು, ಗೊತ್ತಾದ ಕಾಲದಲ್ಲಿಯೂ, ಸ್ಥಳದೊಳಗೂ ಸದರೀ ಆಫೀಸರರಮುಂದೆ ಹಾಜರಾಗುವಂತೆಯೂ ನೇಮಿಸ

ತಕ್ಕದ್ದು, ಮತ್ತು ಸದರೀ ಮನುಷ್ಯನ ಹಾಜರಾತಿಯು ಸಾಕ್ಷ್ಯವನ್ನು ಕೊಡುವದಕ್ಕಾಗಿಯೋ ಅಥವಾ ಯಾವು ದಸ್ತಾವೇಜನ್ನು ಹಾಜರ್ ಮಾಡುವದಕ್ಕಾಗಿಯೋ ಅಥವಾ ಈ ಯೆರಡು ಕೆಲಸಗಳಿಗೋಸ್ಕರವಾಗಿಯೋ ಅದನ್ನು ವಿವರಿಸತಕ್ಕದ್ದು.

ಹ್ಯಾಗೆ ಜಾರೀಮಾಡಲ್ಪಡತಕ್ಕದ್ದು.

ಸದರೀ ಸಮ್ಮನ್ಸು, ಅದರ ಬಾಬತು ಒಂದು ನಕಲನ್ನು, ಸಮ್ಮನ್ಸ ಮಾಡಲ್ಪಟ್ಟ ಮನುಷ್ಯನಿಗೆ, ಅಥವಾ ಅವನು ಸಿಕ್ಕದಿದ್ದರೆ, ಅವನಸಂಗಡ ವಾಸಮಾಡುವ ಅವನ ಕುಟುಂಬಕ್ಕೆ ಸೇರಿದ ಪ್ರಾಪ್ತ ವಯಸ್ಸಿನ ಯಾರಲ್ಲಾಗಲಿ, ಒಪ್ಪಿಸುವದರ ಮೂಲಕವಾಗಲಿ, ಅವನ ವಾಡಿಕೆಯಾದ ವಾಸಸ್ಥಾನದ ಪ್ರಸಿದ್ಧವಾದ ಯಾವದಾದರೂ ಭಾಗಕ್ಕೆ ಅದನ್ನು ಚಿಕಟಾಯಿಸುವದರಮೂಲಕವಾಗಲಿ, ಸಾದರ್ಮಾಡಲ್ಪಡತಕ್ಕದ್ದು.

ಸಮ್ಮನ್ಸು ಹುಟ್ಟಿದ ಡಿಸ್ಟ್ರಿಕ್ಟಿನಲ್ಲಿ ಅಲ್ಲದೆ ಬೇರೆ ಡಿಸ್ಟ್ರಿಕ್ಟಿನಲ್ಲಿ ಜಾರಿ ಮಾಡುವಣ.

ಸದರೀಯವನ ವಾಡಿಕೆಯಾದ ವಾಸಸ್ಥಾನವು ಮತ್ತೊಂದು ಡಿಸ್ಟ್ರಿಕ್ಟಿನಲ್ಲಿದ್ದರೆ, ಆಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರಿಗೆ ಟಪ್ಪಾಲ್ ಮೂಲಕ ಸಮ್ಮನ್ಸು ಕಳುಹಿಸಲ್ಪಡಬಹುದು, ಸದರೀ ಯವರು, ಈ ಸೆಕ್ಷನಿನ ಹಿಂದಿನ ಕ್ಲಾಜ್ ಪ್ರಕಾರ ಜಾರೀಮಾಡಿಸತಕ್ಕದ್ದು.

ಮುಂ. ರೆ. ಕೋ. 191ನೇ ಸೆಕ್ಷನ್.

ನೋಟೀಸನ್ನು ಜಾರೀ ಮಾಡುವವಿಧ.

208. ಈ ರೆಗ್ಯುಲೇಷನ್ ಅನುಸರಿಸಿ ಕೊಡಲ್ಪಟ್ಟ ಪ್ರತಿನೋಟೀಸೂ ಬೇರೆವಿಧವಾಗಿ ನಮೂದಿಸಿ ವಿಧಿಸಲ್ಪಟ್ಟಹೊರತು, ಅದರ ಬಾಬತು, ಒಂದು ನಕಲನ್ನು ಯಾವಮನುಷ್ಯನಿಗೆ ಅವನ್ನು ಜಾರೀಮಾಡಬೇಕಾಗಿರುತ್ತೋ ಆ ಮನುಷ್ಯನಿಗಾಗಲಿ, ಅವನ ಮುಕಾಲೀಕ ಯಾರಾದರೂ ಯಿದ್ದರೆ ಅವನಿಗಾಗಲಿ, ಒಪ್ಪಿಸುವದರ ಮೂಲಕವಾಗಿಯಾಗಲಿ, ಪಾವತಿಮಾಡುವದರ ಮೂಲಕವಾಗಿಯಾಗಲಿ, ಸದರೀ ನೋಟೀಸ್ ಯಾವದನ್ನು ಕುರಿತದ್ದೋ ಅಂಥಾ ಜಮೀನ್ ಯಾವದಾದರೂ ಯಿದ್ದರೆ, ಅದರಲ್ಲಿ ಯಾವದಾದರೂ ಪ್ರಕಟವಾದ ಸ್ಥಳದೊಳಗೆ, ಚಿಕಟಾಯಿಸುವದರಮೂಲಕವಾಗಲಿ, ಜಾರೀಮಾಡಲ್ಪಡತಕ್ಕದ್ದು.

ಯಾವನೋಟೀಸ್‌ನಲ್ಲಿಯಾಗಲಿ ಸೂಚಿಸಲ್ಪಟ್ಟ ಯಾವನಾದರೂ ಮನುಷ್ಯನ ಹೆಸರಿನಲ್ಲಿಯಾಗಲಿ ಉದ್ಯೋಗದ ಹೆಸರಿನಲ್ಲಿಯಾಗಲಿ ಯಾವ ತಪ್ಪಿಗೋಸ್ಕರವಾದರೂ, ಅಂಥಾ ತಪ್ಪು ದೃಢವಾದ ಅನ್ಯಾಯವನ್ನು ಉಂಟುಮಾಡದೆಯಿದ್ದರೆ, ಅಂಥಾ ನೋಟೀಸು ರದ್ದಾದದ್ದಾಗಿ ಯೆಣಿಸಲ್ಪಡತಕ್ಕದ್ದಲ್ಲವು.

ಮುಂ. ರೆ. ಕೋ. 192ನೇ ಸೆಕ್ಷನ್.

ಸಾಕ್ಷಿಗಳ ಹಾಜರ್‌ಮಾಡಿಸಿಕೊಳ್ಳುವಬಗ್ಯೆ ನಡವಳಿತ.

209. ಯಾವದಾದರೂ ಕ್ರಮವಾದ ಅಥವಾ ಫೂಟ್ ವಿಚಾರಣೆಯಲ್ಲಿ ಯಾವ ಕಕ್ಷಿಗಾರನಾಗಲಿ, ಸಾಕ್ಷಿಗಳ ಹಾಜರಾತಿಯನ್ನು ಅಪೇಕ್ಷಿಸಿದರೆ, ಆತನು ಸಿವಿಲ್ ಪ್ರೊಸೀಡ್ಯೂರ್ ಕೋಡಿನ 160ನೇ ಸೆಕ್ಷನ್ನಿಂದ ವಿಧಿಸಲ್ಪಟ್ಟ ನಡವಳಿತವನ್ನು ಅನುಸರಿಸತಕ್ಕದ್ದು.

ಕ್ರಮವಾದ ವಿಚಾರಣೆ.

ಮುಂ. ರೆ. ಕೋ. 193ನೇ ಸೆಕ್ಷನ್.

210. ಕ್ರಮವಾದ ಯೆಲ್ಲವಿಚಾರಣೆಗಳಲ್ಲಿಯೂ, ಸಾಕ್ಷ್ಯವು, ವಿಚಾರಣೆಯನ್ನಾಗಲಿ, ದರ್ಯಾಪ್ತಿಯನ್ನಾಗಲಿ, ಮಾಡುವ ಆಫೀಸರರಿಂದ, ಅಥವಾ ಅವರ ರೂಬರೂ

ಕ್ರಮವಾದ ದರ್ಯಾಪ್ತಿಗಳ ವಿಧ. — ಮತ್ತು ಕೇಳುವಿಕೆಯಲ್ಲಿ ಮತ್ತು ಖುದ್ದು ಮೇಲ್ವಿಲ್ಲಿ ಸಾಕ್ಷ್ಯ ತೆಗದುಕೊಳ್ಳುವ ಚಾರಣೆ ವ ಹುಕ್ಕುಮತು ಇವುಗಳಲ್ಲಿ ಸಂಪೂರ್ಣವಾಗಿ ಬರವಣಿಗೆಯಲ್ಲಿ ಕನ್ನಡದಲ್ಲಿ ತೆಗದು ಕೊಳ್ಳಲ್ಪಟ್ಟು ಅವರಿಂದ ದಸ್ತಖತ್ ಮಾಡಲ್ಪಡತಕ್ಕದ್ದು.

ಯಾವ ಸಂಗತಿಗಳಲ್ಲಿ ಸಾಕ್ಷ್ಯವು, ದರ್ಯಾಪ್ತಿಯನ್ನು ಮಾಡುವ ಆಫೀಸರರಿಂದ ಬರವಣಿಗೆಯಲ್ಲಿ ಪೂರ್ಣವಾಗಿ ತೆಗದುಕೊಳ್ಳಲ್ಪಡುವದಿಲ್ಲವೋ ಆಸಂಗತಿಗಳಲ್ಲಿ, ಸದರೀ ಆಫೀಸರರು, ಪ್ರತಿ ಸಾಕ್ಷಿಯ ವಿಚಾರಣೆಯು ನಡೆದಹಾಗೆಲ್ಲ ಅಂಥಾ ಸಾಕ್ಷಿಯ ಕೈಫಿಯತಿನ*ಸಾರಾಂಶದ ಬಂದು ಯಾದಾಸ್ತನ್ನು ತಯಾರ್‌ಮಾಡತಕ್ಕದ್ದು; ಅಂಥಾ ಯಾದಾಸ್ತು ಅಂಥಾ ಆಫೀಸರರಿಂದ ಸ್ವದಸ್ತೂರ್ ಬರೆಯಲ್ಪಟ್ಟು, ದಸ್ತಖತ್ ಮಾಡಲ್ಪಡತಕ್ಕದ್ದಲ್ಲದೆ ರಿಕಾರ್ಡಿನ ಭಾಗವಾಗಿ ಯೇರ್ಪಡತಕ್ಕದ್ದು.

ಅಂಥಾ ಆಫೀಸರರು, ಮೇಲೆ ನಿಯಮಿಸಲ್ಪಟ್ಟಂತೆ ಬಂದು ಯಾದಾಸ್ತನ್ನು ತಯಾರ್‌ಮಾಡುವ ಅಂಶದಲ್ಲಿ ನಿರೋಧಿಸಲ್ಪಟ್ಟರೆ, ಹಾಗೆ ತಯಾರ್ ಮಾಡುವದಕ್ಕೆ ಉಂಟಾದ ತನ್ನ ಅಶಕ್ತತೆಯ ಕಾರಣವನ್ನು ರಿಕಾರ್ಡ ದಾಖಲ್ ಮಾಡತಕ್ಕದ್ದು.

ಇಂಗ್ಲೀಷ್‌ನಲ್ಲಿ ಕೊಡಲ್ಪಟ್ಟ ಸಾಕ್ಷ್ಯವನ್ನು ತೆಗದುಕೊಳ್ಳುವಿಕೆ. — ಸಾಕ್ಷ್ಯವು, ಇಂಗ್ಲಿಷನಲ್ಲಿ ಕೊಡಲ್ಪಟ್ಟರೆ, ಅಂಥಾ ಆಫೀಸರರು ಅದನ್ನು ಆಭಾಷೆಯಲ್ಲಿ ಸ್ವದಸ್ತೂರಾಗಿ ತೆಗದು ಕೊಳ್ಳಬಹುದು. ಕನ್ನಡದಲ್ಲಿ ಸದರೀ ಸಾಕ್ಷ್ಯದ ಕರಾರ್‌ವಾಕಾ ಆದ ತರ್ಜಮೆಯು ಮಾಡಲ್ಪಟ್ಟು ಅದು ರಿಕಾರ್ಡಿನ ಭಾಗವಾಗಿ ಯೇರ್ಪಡತಕ್ಕದ್ದು.

ತರ್ಜಮೆಯು ರಿಕಾರ್ಡಾಗಿ ಯಿರತಕ್ಕದ್ದು.

ಮುಂ. ರೆ. ಕೋ. 194ನೇ ಸೆಕ್ಷನ. **211.** ಕ್ರಮವಾದ ಬಂದು ವಿಚಾರಣೆ ಯಾದಮೇಲೆ ಪ್ರತಿ ಫೈಸಲೂ, ಸದರೀ ಫೈಸಲನ್ನು ಕೊಡುವ ಆಫೀಸರರಿಂದ ಸ್ವದಸ್ತೂರ್ ಬರೆಯಲ್ಪಟ್ಟು ಯಾವ ಸಬಬುಗಳ ಮೇಲೆ ಸದರೀ ಫೈಸಲು ಕೊಡಲ್ಪಟ್ಟಿತೋ ಅವುಗಳ ಬಾಬತು ಸಂಪೂರ್ಣವಾದ ವಂದು ಸ್ಟೇಟಮೆಂಟನ್ನು ಅಡಗಿಶಿಕೊಂಡಿರತಕ್ಕದ್ದು.

ಫೈಸಲಗಳನ್ನು ಬರಿಯುವಣ ಮತ್ತು ಅರ್ಥ ವಿವರಣ.

ಫೂಟ ವಿಚಾರಣೆ.

ಮುಂ. ರೆ. ಕೋ. 195ನೇ ಸೆಕ್ಷನ. **212.** ಫೂಟ ವಿಚಾರಣೆಗಳಲ್ಲಿ ಮುಖ್ಯರಾದ ಆಫೀಸರರು, ಅಂಥಾ ಯಾವ ವಿಚಾರಣೆಯಾಗಲಿ, ಜರಿಗಿದ ಹಾಗೆಲ್ಲ, ಇದಕ್ಕೆ ಸಂಬಂಧಿಸಿದ ಕಕ್ಷಿಗಾರರಿಂದ ಕೊಡಲ್ಪಟ್ಟ ಮುಖ್ಯವಾದ ಕೈಫಿಯತನ್ನೂ, ಸಾಕ್ಷ್ಯದ ಮುಖ್ಯ ಅಂಶಗಳನ್ನೂ, ಫೈಸಲನ್ನೂ, ಆಬಗ್ಯೆ ಕಾರಣಗಳನ್ನೂ, ಶೆರಿಸಿಕೊಂಡಿರುವ ನಡವಳಿತಗಳ ಬಂದು ಅಭಿಪ್ರಾಯದ ಯಾದಾಸ್ತನ್ನು ಇಂಗ್ಲಿಷನಲ್ಲಾಗಲಿ ಕನ್ನಡದೊಳಗಾಗಲಿ ಸ್ವದಸ್ತೂರ್ ರಿಕಾರ್ಡ ಮಾಡತಕ್ಕದ್ದು.

ಫೂಟ ವಿಚಾರಣೆಗಳು, ಹ್ಯಾಗೆ ನಡಿಸಲ್ಪಡತಕ್ಕದ್ದು.

ಪರಂತು, ಕ್ರಮವಾದ ಬಂದು ವಿಚಾರಣೆಗೆ, ಲಗಾವಾದ ವಿಶಿಷ್ಟ ಅಥವಾ ಯಾವ ರೂಲ್ಸ ಅನುಸರಿಸಿಯಾಗಲಿ, ಫೂಟಾಗಿರತಕ್ಕದ್ದೆಂದು ಈ ರೆಗ್ಯುಲೇಷನ ನಿಂದ ನಿಯಮಿಸಲ್ಪಟ್ಟ, ಬಂದು ವಿಚಾರಣೆಯನ್ನು ನಡಿಸುವದು ಅಂಥಾ ಆಫೀಸರರಿಗೆ ಯುಕ್ತವೆಂದು ತೋರಿದರೆ ಯಾವಕಾಲದಲ್ಲಾಗಲಿ, ನ್ಯಾಯ ಸಿದ್ಧವಾಗಿ ಯಿರತಕ್ಕದ್ದು.

ಮುಂ. ರೆ. ಕೋ. 196ನೇ ಸೆಕ್ಷರ್ಷ.

ಕ್ರಮವಾದ ಮತ್ತು ಫೂಟಾದ ವಿಚಾರಣೆಗಳು ಜುಡಿಷಿಯಲ್ ನಡವಳಿಕೆಗಳೆಂದು ಯೆಣಿಸಲ್ಪಡತಕ್ಕದ್ದು.

213. ಈ ರೆಗ್ಯೋಲೇಷರ್ಷ ಅನುಸರಿಸಿ ಮಾಡಲ್ಪಡುವ ಕ್ರಮವಾದ ಅಥವಾ ಫೂಟ ವಿಚಾರಣೆಯು ಇಂಡಿಯರ್ಷ ಪಿನಲ್‌ಕೋಡಿನ 193, 219 ಮತ್ತು 228 ಈ ಸೆಕ್ಷರ್ಷಗಳ ಅರ್ಥರೀತ್ಯಾ "ಜುಡಿಷಿಯಲ್ ನಡವಳಿಕೆ" ಯೆಂದು ಯೆಣಿಸಲ್ಪಡತಕ್ಕದ್ದು. ಮತ್ತು ಒಂದು ಕ್ರಮವಾದ ಅಥವಾ ಫೂಟಾದ ವಿಚಾರಣೆಯನ್ನು ನಡಿಸುವ ಯಾರಾದರೂ ಅಧಿಕಾರಿಯು ಕಚ್ಚೇರಿಯು ಅಂಥಾ ವಿಚಾರಣೆಯ ಕಾರ್ಯಗಳಿಗಾಗಿ ಒಂದು ಸಿವಿಲ್‌ಕೋರ್ಟೆಂದು ಭಾವಿಸಲ್ಪಡತಕ್ಕದ್ದು.

ಹಿಯರಿಂಗ್ ವ ಫೈಸಲ ಕಕ್ಷಿಗಾರರಿಗೆ ನೋಟೀಸ.

ಒಂದು ಕ್ರಮವಾದ ವಿಚಾರಣೆಯಲ್ಲೇಆಗಲಿ ಫೂಟ ವಿಚಾರಣೆಯಲ್ಲೇಆಗಲಿ ನಡಿಯುವ ಪ್ರತಿ ಹಿಯರಿಂಗ್ ಮತ್ತು ಕೊಡಲ್ಪಡುವ ಪ್ರತಿ ಫೈಸಲ್ ಸುದಾ ಬಹಿರಂಗವಾಗಿರತಕ್ಕದ್ದಲ್ಲದೆ ಕಕ್ಷಿಗಾರರು ಅಥವಾ ಅಧಿಕಾರಹೊಂದಿದ ಅವರ ಮುತಾಲೀಕರು ಹಾಜರಾಗಲಿಕ್ಕೆ ತಕ್ಕ ನೋಟೀಸನ್ನು ಪಡೆಯತಕ್ಕದ್ದು.

ಮುಂ. ರೆ. ಕೋ. 197ನೇ ಸೆಕ್ಷರ್ಷ.

ಸಾಧಾರಣ ವಿಚಾರಣೆಗಳು ಹ್ಯಾಗೆ ನಡಿಸಲ್ಪಡತಕ್ಕದ್ದು.

214. ಯಾವ ವಿಚಾರಣೆಯು ಈ ರೆಗ್ಯುಲೇಷರ್ಷ ಪ್ರಕಾರ ಕ್ರಮವಾಗಿಯಾಗಲಿ, ಫೂಟಾಗಿಯಾಗಲಿ, ಇರಬೇಕಾದ್ದಿಲ್ಲವೋ ಅಥವಾ ಯಾವದನ್ನು ಯಾವ ರೆವಿನ್ಯು ಆಫೀಸರರಾಗಲಿ ನ್ಯಾಯವಾದ ತಮ್ಮ ಕೆಲಸಗಳನ್ನು ಚಲಾಯಿಸುವಲ್ಲಿ ಅವಶ್ಯವಾಗಿ ಮಾಡಬೇಕೆಂದು ಯಾವ ಸಂದರ್ಭದಲ್ಲಾದರೂ ಭಾವಿಸುತ್ತಾರೋ ಅಂಥಾ ವಿಚಾರಣೆಯು ಗವರ್ನಮೆಂಟಿನಿಂದಾಗಲಿ, ಅಂಥಾ ವಿಚಾರಣೆಯನ್ನು ನಡಿಸುವ ಆಫೀಸರರಿಗೆ ಮೇಲ್ಪಟ್ಟ ಒಬ್ಬ ಅಧಿಕಾರಿಯಿಂದಾಗಲಿ, ವಿಧಿಸಲ್ಪಟ್ಟಿರಬಹುದಾದ ವಟ್ಟು ಅಥವಾ ವಿಶೇಷವಾದ ಅದಕ್ಕೆ ಲಗಾವಾದ ಅಂಥಾ ರೂಲ್ಸ ಪ್ರಕಾರ ನಡಿಸಲ್ಪಡತಕ್ಕದ್ದು. ಮತ್ತು ಸದರೀ ಆಫೀಸರರ ವಿತರಣೆಯು ಪ್ರಕಾರ ಅಂಥಾ ರೂಲ್ಸಗಳಿಗೆ ಒಳಪಟ್ಟಷ್ಟು ಮಟ್ಟಿಗೆ ಹೊರ್ತಾಗಿ ಮುಖ್ಯಗಳಾದ ಯಲ್ಲ ನಿಃಸ್ಥಿತಿಗಳನ್ನೂ ಪ್ರಜೆಗಳ ಕ್ಷೇಮಾಭಿವೃದ್ಧಿಯನ್ನೂ, ನಿಶ್ಚಯಿಸುವ ಬಗ್ಗೆ ಉತ್ತಮವಾಗಿರಬಹುದಾದ ರೀತಿಯಾಗಿ ನಡಿಸಲ್ಪಡತಕ್ಕದ್ದು.

ಮುಂ. ರೆ. ಕೋ. 198ನೇ ಸೆಕ್ಷರ್ಷ.

ನಕ್ಕಲಗಳು ವ ತರ್ಜುಮೆಗಳು ವಗೈರೆ ಹ್ಯಾಗೆ ಪಡೆಯತಕ್ಕದ್ದು.

215. ಒಂದು ಕ್ರಮವಾದ ಅಥವಾ ಫೂಟ ವಿಚಾರಣೆ ಮಾಡಲ್ಪಡುವ ವಿಶಿಷ್ಟ ಮೊಕದ್ದಮೆಗಳಲ್ಲೂ, ಫೈಸಲಗಳು, ಹುಕುಂಗಳು, ಅಬಗ್ಯೆ ಕಾರಣಗಳು ಮತ್ತು (exhibits) ಯೆಗ್ಜಿಬಿಟ್ಸ ಇವುಗಳ ಬಾಬತು ಸ್ವರ್ಷ ಮೊಹರಾದ ನಕ್ಕಲಗಳನ್ನೂ ತರ್ಜುಮೆಗಳನ್ನೂ ಕಕ್ಷಿಗಾರರಿಗೆ ಕೊಡತಕ್ಕದ್ದು. ಸಾಕ್ಷ್ಯದ ತರೀಕ ಉಪಯೋಗಿಸಲ್ಪಟ್ಟ, ಅಸಲ ದಸ್ತಾವೇಜುಗಳು, ಅವುಗಳನ್ನು ಹಾಜರ ಮಾಡಿದ ಜನಗಳಿಗೆಯಾಗಲಿ ಅಥವಾ, ಗವರ್ನಮೆಂಟಿನಿಂದ ಆಗಿಂದಾಗ್ಯೆ ನಿಯಮಿಸಲ್ಪಡಬಹುದಾದ ನಕ್ಕಲ ಮಾಡುವದು ವಗೈರೆಬಗ್ಯೆ ಉಂಟಾದ ಅಂಥಾ ಖರ್ಚುಗಳಿಗೆ ಒಳಪಟ್ಟು, ಸದರೀ ಬಗ್ಯೆ ಯುಕ್ತವಾದ ದರಖಾಸ್ತಿನ ಮೇಲೆ ಕೇಳುವ ಸದರೀ ಮೇಲ್ಕಂಡ ಜನಗಳ ತರಫನಿಂದ ಕೋರುವ ಜನಗಳಿಗೂ ಕೊಡಲ್ಪಡತಕ್ಕದ್ದು.

ಮುಂ. ರೆ. ಕೋ. 199ನೇ ಸೆಕ್ಷರ್ನ.

ಒಬ್ಬ ಬಾಕೀದಾರನ ದಸ್ತಗಿರಿಯು, ವಾರಂಟಿನ ಮೂಲಕ ಮಾಡಲ್ಪಡತಕ್ಕದ್ದು.

216. ಒಬ್ಬ ಬಾಕೀದಾರನಾಗಲಿ, ಇತರ ಯಾವ ಮನುಷ್ಯನಾಗಲಿ, ದಸ್ತಗಿರೀ ಮಾಡಲ್ಪಡಬಹುದೆಂದು ಈ ರೆಗ್ಯುಲೇಷರ್ನನಿಂದ ವಿಧಿಸಲ್ಪಟ್ಟಾಗಲ್ಲಾ, ಅಂಥಾ ಮನುಷ್ಯನ ದಸ್ತಗಿರಿಯನ್ನು ನಿಯಮಿಸುವದಕ್ಕೆ ಲಾಯಖಾದ ಯಾವ ಆಫಿಸರರಿಂದಾಗಲಿ ಸಾದರ್ ಮಾಡಲ್ಪಟ್ಟ ವಾರಂಟ ಅನುಸರಿಸಿ ಅಂಥಾ ದಸ್ತಗಿರಿಯು ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 200ನೇ ಸೆಕ್ಷರ್ನ.

ಮೋಜಣೀ ವಗೈರೇ ಬಗ್ಗೆ ಯಾವದಾದರೂ ಜಮೀರ್ನ ಯಾ ನಿವೇಶನಗಳಲ್ಲಿ ಪ್ರವೇಶಿಸಲಿಕ್ಕೆ ರೆವಿನ್ಯು ಆಫಿಸರರ ಅಧಿಕಾರ.

217. ಯಾವ ರೆವಿನ್ಯೂ ಆಫಿಸರಿಗೆಯಾಗಲಿ, ಯಾವಕಾಲದಲ್ಲಾದರು ಮತ್ತು ಆಗಿಂದಾಗ್ಯೆ ಜಮೀನಿನ ಮೋಜಣಿ, ಸರಹದ್ದು ನಿಷ್ಕರ್ಷೆ, ಮತ್ತು ತನಿಖೆ, ತರಂ ಏರ್ಪಾಡು, ಕಂದಾಯ ಮೊಕರ್ರರಾತಿ, ಯಾ ಈ ರೆಗ್ಯುಲೇಷನಿನ ಅಥವಾ ಜಮೀರ್ನ ಕಂದಾಯಕ್ಕೆ ಸಂಬಂಧಿಸಿದ ತತ್ಕಾಲದಲ್ಲಿ ಜಾರಿ ಇರುವ ಇತರ ಇನ್ನಾವ ಕಾನೂನಿನ ನಿಬಂಧನೆಗಳನುಸರಿಸಿದ ತನ್ನ ಉದ್ಯೋಗಕ್ಕೆ ಶೇರಿದ ನ್ಯಾಯವಾದ ಅಮಲ್‌ಗಳ ಚಲಾವಣೆಗೆ ಸಂಬಂಧಿಸಿದ ಇತರ ಇನ್ನಾವ ಕೆಲಸ ಇವುಗಳ ಬಗ್ಯಾಗಿ, ಗವರ್ನಮೆಂಟಿಗಾಗಲಿ ಅಥವಾ ಪ್ರೈವೆಟ ಜನಗಳಿಗಾಗಲಿ ಶೇರಿದ್ದ ಮತ್ತು ಜಮೀರ್ನ ಕಂದಾಯ ಪ್ರಕಾರ ಪೂರಾ ಕಂದಾಯ ಮೊಕರರು ಮಾಡಲ್ಪಟ್ಟ ಅಥವಾ ಕಂದಾಯದ ದೆಶೆಯಿಂದ ಕೆಲವುಮಟ್ಟಿಗಾಗಲಿ ಪೂರಾ ಆಗಲಿ ವಿನಾಯಿಸಲ್ಪಟ್ಟ-ಯಾವ ಜಮೀನು ಯಾ ನಿವೇಶನವನ್ನಾಗಲೀ ಅವಶ್ಯವಿದ್ದಾಗ ಪ್ರವೇಶಿಸುವದು ನ್ಯಾಯವಾಗಿರತಕ್ಕದ್ದು.

ನಿಯಮ.

ಪರಂತು, ಮನುಷ್ಯವಾಸಸ್ಥಾನವಾಗಿ ಉಪಯೋಗಿಸಲ್ಪಟ್ಟ ಯಾವ ಕಟ್ಟಣದಲ್ಲಿಯಾಗಲಿ, ಅದರ ವಾಸಸ್ಥನ ಅನುಮತಿವಿನಾ, ಸದರೀ ಕಟ್ಟಣದಲ್ಲಿ ಪ್ರವೇಶಿಸುವದಕ್ಕೆ ಮುಂದಾಗಿ ಯೇಳು ದಿನಗಳ ವಾಯಿದೆಗೆ ಕಡಮೆ ಇಲ್ಲದ ಒಂದು ನೋಟೀಸ್ ಜಾರೀಮಾಡದೆ ಅದರಲ್ಲಿ ಪ್ರವೇಶಿಸಕೂಡದು ; ಮತ್ತು ಯಲ್ಲಬಗೆ ಕಟ್ಟಣಗಳ ವಿಷಯದಲ್ಲಿಯೂ, ವಾಸಸ್ಥರ ಕೋಮಿನ ಮತ್ತು ಮತಸಂಬಂಧದ ಅಭಿಮಾನಗಳನ್ನೂ ತಕ್ಕಂತೆ ಗೌರವಿಸತಕ್ಕದ್ದು.

ಮುಂ. ರೆ. ಕೋ. 202ನೇ ಸೆಕ್ಷರ್ನ.

ಜಮೀನನ್ನು ಅಕ್ರಮವಾಗಿ ಸ್ವಾಧೀನದಲ್ಲಿಉಳ್ಳ ಯಾವನಾದರೂ ಮನುಷ್ಯನ ವಶ ತಪ್ಪಿಸಲಿಕ್ಕೆ ಡೆಪ್ಯುಟಿ ಕಮ್ಮಿಷನರು ಹ್ಯಾಗೆಪ್ರವರ್ತಿಸತಕ್ಕದ್ದು.

218. ಈ ರೆಗ್ಯುಲೇಷರ್ನನಿಂದಾಗಲಿ, ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಇತರ ಕಾನೂರ್ನನಿಂದಾಗಲಿ, ಡೆಪ್ಯುಟಿ ಕಮ್ಮಿಷನರು ಅಕ್ರಮವಾಗಿ ಜಮೀನನ್ನು ಸ್ವಾಧೀನದಲುಳ್ಳ ಯಾವ ಮನುಷ್ಯನನ್ನಾಗಲಿ, ವಶ ತಪ್ಪಿಸಬಹುದು. ಅಥವಾ ತಪ್ಪಿಸತಕ್ಕದ್ದೆಂದು ವಿಧಿಸುವ ಪಕ್ಷಕ್ಕೆ ಅಂಥಾ ತಪ್ಪಿಸುವಣಾವು ಇದರಡಿ ಕಂಡ ರೀತಿಯಾಗಿ ಮಾಡಲ್ಪಡತಕ್ಕದ್ದು, ಯಾವದಂದರೆ :—

ಒಂದು ನೋಟೀಸ್ ತಲಪಿದ ಬಳಿಕ ಯುಕ್ತವೆಂದು ಕಾಣಬಹುದಾದ ಅಂಥಾ ಕಾಲದೊಳಗಾಗಿ ಜಮೀರ್ನ ಖಾಲೀ ಮಾಡುವಂತೆ ನಿಯಮಿಸಿ ಅದರ ಸ್ವಾಧೀನತೆಯುಳ್ಳ ಮನುಷ್ಯನಿಗೆ ಅಥವಾ ಮನುಷ್ಯರಿಗೆ ಸದರೀ ನೋಟೀಸನ್ನು ಜಾರೀ ಮಾಡುವದರ ಮೂಲಕ ; ಮತ್ತು

ಅಂಥಾ ನೋಟೀಸಿನಂತೆ ನಡಿಯದಿದ್ದರೆ ಸದರೀ ಜಮೀನನ್ನು ಖಾಲೀ ಮಾಡುವದಕ್ಕೆ ನಿರಾಕರಿಸಬಹುದಾದ ಯಾವವನುಷ್ಯನನ್ನಾಗಲಿ, ತೊಲಗಿಸಿ ಬಿಡುವದರ ಮೂಲಕ ಅಥವಾ ತೊಲಗಿಸಿ ಬಿಡುವದಕ್ಕೆ ಒಬ್ಬ ತಾಬೇದಾರನನ್ನು ನೇಮಿಸುವದರ ಮೂಲಕ ; ಮತ್ತು

ಅಂಥಾ ಯಾವ ಮನುಷ್ಯನನ್ನಾಗಲಿ ತೊಲಗಿಸಿ ಬಿಡುವ ಆಫೀಸರರನ್ನು ಯಾವ ಮನುಷ್ಯನಾಗಲಿ ಅಡ್ಡೀ ಮಾಡಿದರೆ ಅಥವಾ ಆತಂಕ ಪಡಿಸಿದರೆ, ಡೆಪ್ಯುಟಿ ಕಮಿಷನರು ಮೊಕದ್ದಮೆಯ ನಿಶ್ಚವಾದ ಸಂಗತಿಗಳಲ್ಲಿ ಪೂರ್ತಿ ವಿಚಾರಣೆ ನಡಿಸತಕ್ಕದ್ದು; ಮತ್ತು ಅಂಥಾ ಅಡ್ಡಿಯೂ, ಆತಂಕವೂ ಯಾವದಾದರೂ ನ್ಯಾಯವಾದ ಕಾರಣವಿನಾ ಉಂಟಾಯಿತೆಂತಲೂ ಅಂಥಾ ಅಡ್ಡಿಯೂ ಆತಂಕವೂ ಇನ್ನು ಉಂಟಾಗುತ್ತಿದೆಯೆಂತಲೂ ಡೆಪ್ಯುಟಿ ಕಮಿಷನರು ಸಮಾಧಾನಪಟ್ಟರೆ, ಅವರು ಅಂಥಾ ಅಡ್ಡಿಯ ಅಥವಾ ಆತಂಕದ ದಂಡನೆಯ ಬಗ್ಗೆ ತತ್ಕಾಲದಲ್ಲಿ ಜಾರೀಯಿರುವ ಯಾವದಾದರೂ ಕಾನೂನು ಅನುಸರಿಸಿ ಅಂಥಾ ಮನುಷ್ಯನು ಗುರಿಯಾಗಬಹುದಾದ ಯಾವ ನಡವಳಿಕೆಗಳಿಗಾಗಲಿ ಕುಂದಕವಿಲ್ಲದೆ, ಸದರೀ ಮನುಷ್ಯನ ದಸ್ತಗಿರೀಬಗ್ಗೆ ಒಂದು ವಾರಂಟ್ ಕೊಟ್ಟು ಅವನು ಹಾಜರಾದ ಮೇಲೆ ಡೆಪ್ಯುಟಿ ಕಮಿಷನರ ಯಾರಾದರೂ ಅಮಲ್ದಾರರ ಅಥವಾ ಡೆಪ್ಯುಟಿ ಅಮಲ್ದಾರರ ಕಚ್ಚೇರಿಯಲ್ಲಿ ಸಖ್ತ ಅಂದರೆ ನಿರ್ಬಂಧಕವಾದ ಪಹರೇಯಲ್ಲಿಡಿಸಲ್ಪಡತಕ್ಕದ್ದು, ಅಥವಾ ಅಂತಾ ಆತಂಕವಾಗಲಿ ಅಡ್ಡಿಯಾಗಲಿ ನಡಿಯುತ್ತಿರುವದನ್ನು ನಿಲ್ಲಿಸುವದಕ್ಕೆ ಜರೂರಾಗಬಹುದಾದ ಮೂವತ್ತು ದಿನಗಳಿಗೆ ಮೀರದ ಅಂಥಾ ವಾಯಿದೆ ಪರ್ಯಂತ ಡಿಸ್ಟ್ರಿಕ್ಟು ಸಿವಿಲ್ ಜೈಲ್‌ನಲ್ಲಿ ಖೈದ್‌ಬಗ್ಗೆ I ಷೆಡ್ಯೂಲ್ ನಮೂನೆಯಲ್ಲಿ ಒಂದು ವಾರಂಟ್ ನಿಶಿ ಅವನನ್ನು ಕಳುಹಿಸತಕ್ಕದ್ದು.

13ನೇ ಅಧ್ಯಾಯ.

ಅಪ್ಪೀಲ್‌ಗಳು ಮತ್ತು ಪುನರ್ವಿಮರ್ಶೆ.

ಮುಂ. ರೆ. ಕೋ. 203ನೇ ಸೆಕ್‌ಷನ್.

ಒಬ್ಬ ರೆವಿನ್ಯೂ ಆಫೀಸರ್ ಯಾನೆ ಮುಲ್ಕೀ ಅಧಿಕಾರಿಯಿಂದ ಕೊಡಲ್ಪಟ್ಟ ಹುಕ್ಕುಂನಿಂದ ಅವರ ಮೇಲ್ಪಟ್ಟ ಆಫೀಸರರಿಗೆ ಅಪ್ಪೀಲ್ ದಾಖಲ್ ಆಗತಕ್ಕದ್ದು.

219. ಈ ರೆಗ್ಯುಲೇಷನಿನಲ್ಲಿ ನಮೂದಿಸಲ್ಪಟ್ಟ ಯಾವದಾದರೂ ನಿಬಂಧನೆ ಯಿಲ್ಲದಿದ್ದಾಗ ಅಥವಾ ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಖಾನೂನಿನ ವಿರುದ್ಧವಾದ ನಿಬಂಧನೆಗಳು ಯಾವದೂ ಇಲ್ಲದಿದ್ದರೆ, ಈ ರೆಗ್ಯುಲೇಷನ್ ಅನುಸರಿಸಿಯಾಗಲಿ ತತ್ಕಾಲದಲ್ಲಿ ಜಾರಿ ಯಿರುವ ಯಾವದಾದರೂ ಇತರ ಕಾನೂನು ಅನುಸರಿಸಿಯಾಗಲಿ ಒಬ್ಬ ರೆವಿನ್ಯೂ ಆಫೀಸರರಿಂದ ಕೊಡಲ್ಪಟ್ಟ ಯಾವದಾದರೂ ಫೈಸಲ್ ಯಾ ಹುಕ್ಕುಮಿನ ಮೇಲೆ, ಆ ಆಫೀಸರರ ಸಾಕ್ಷಾತ್ ಮೇಲ್ಪಟ್ಟ ಅಧಿಕಾರಿಗೆ ಅಪ್ಪೀಲ್ ದಾಖಲಾಗತಕ್ಕದ್ದು. ಅಂಥಾ ಫೈಸಲ್ ಯಾ ಹುಕ್ಕುಂ ಒಬ್ಬ ತಾಬೇದಾರೀ ಆಫೀಸರರ ಫೈಸಲ್ ಯಾ ಹುಕ್ಕುಮಿನ ಮೇಲೆ ಬಂದ ಅಪ್ಪೀಲಿನ ಮೇಲೆ ಕೊಡಲ್ಪಟ್ಟಾದರೂ ಇರಬಹುದು, ಇಲ್ಲದೆಯಾದರೂ ಇರಬಹುದು.

ಮುಂ. ರೆ. ಕೋ. 149ನೇ ಸೆಕ್ಷರ್.

ಯಾವ ವಾಯಿದೆಗಳೊಳಗೆ ಅಪ್ಪೀಲ್‌ಗಳು ತರಲ್ಪಡತಕ್ಕವು.

220. ಅಪ್ಪೀಲ್ ಮಾಡಲ್ಪಟ್ಟ ಫೈಸಲಾಗಲಿ, ಹುಕ್ಕುಮಾಗಲಿ, ದರಜೆಯಲ್ಲಿ ಒಬ್ಬ ಡೆಪ್ಯುಟಿ ಕಮ್ಮಿಷನರಿಗೆ ಅಥವಾ ಒಬ್ಬ ಸರ್ವೇ ಸೂಪರಿಂಟೆಂಡೆಂಟರಿಗೆ ಕಡಮೆಯಾದ ಒಬ್ಬ ಆಫೀಸರರಿಂದ ತಮ್ಮ ತಮ್ಮ ಇಲಾಖೆಗಳಲ್ಲಿ ಕೊಡಲ್ಪಟ್ಟರೆ, ಮೂವತ್ತು ದಿನಗಳು ಕಳೆದ ತರುವಾಯ ಅಥವಾ ಮತ್ತ್ಯಾವದಾದರೂ ಇತರ ಸಂಗತಿಯಲ್ಲಿ ಅರವತ್ತು ದಿನಗಳು ಕಳೆದ ತರುವಾಯ ಅಪ್ಪೀಲ್ ಯಾವದೂ ತರಲ್ಪಡತಕ್ಕದ್ದಲ್ಲವು.

ಸದರೀ ವಾಯಿದೆಗಳನ್ನು ಗಣಿಸುವಲ್ಲಿ, ಅಪ್ಪೀಲ್ ಮಾಡಲ್ಪಟ್ಟ ಫೈಸಲ್ ಯಾ ಹುಕ್ಕುಮಿನ ಒಂದು ನಕ್ಕಲನ್ನು ತಯಾರುಮಾಡಲಿಕ್ಕೆ ಬೇಕಾದ ಕಾಲವನ್ನು ವಿನಾಯಿಸತಕ್ಕದ್ದು.

ಮುಂ. ರೆ. ಕೋ. 206ನೇ ಸೆಕ್ಷರ್.

ಲಿಮಿಟೇಷರ್, ವಾಯಿದೆಯ ತರುವಾಯ ಅಪ್ಪೀಲನ್ನು ಅಂಗೀಕರಿಸುವಣ.

221. ಈ ಅಧ್ಯಾಯ ಅನುಸರಿಸಿಬರುವ ಯಾವ ಅಪ್ಪೀಲನ್ನಾಗಲಿ, ಅಪ್ಪೀಲ್‌ವಾದಿಯು ಸದರೀ ಬಗ್ಗೆ ವಿಧಿಸಲ್ಪಟ್ಟ ಕಾಲದೊಳಗಾಗಿ ಅಪ್ಪೀಲನ್ನು ದಾಖಲ್‌ಮಾಡದೆ ಇರಲಿಕ್ಕೆ ತಕ್ಕನಿಮಿತ್ತವಿತ್ತೆಂದು, ತಾನು ಅಪ್ಪೀಲ್‌ಮಾಡುವ ಅಧಿಕಾರಿಯನ್ನು ಸಮಾಧಾನಪಡಿಸುವಲ್ಲಿ ಸದರೀ ಕಾಲಮೀರಿಹೋದಮೇಲೂ ಅಂಗೀಕರಿಸಬಹುದು.

ಈ ಸೆಕ್ಷರ್ ಅನುಸರಿಸಿ ಒಂದು ಅಪ್ಪೀಲನ್ನು ಅಂಗೀಕರಿಸಿ ಕೊಡಲ್ಪಟ್ಟ ಒಂದು ಹುಕ್ಕುಮಿನಮೇಲೆ ಯಾವ ಅಪ್ಪೀಲೂ ದಾಖಲಾಗತಕ್ಕದ್ದಲ್ಲವು.

ಮುಂ. ರೆ. ಕೋ. 207ನೇ ಸೆಕ್ಷರ್.

ಅಪ್ಪೀಲ್‌ಬಗ್ಗೆ ಕಡೇದಿನವು ರಜಾ ದಿನದಲ್ಲಿ ಪ್ರಾಪ್ತವಾದರೆ ಯೇರ್ಪಾಡು.

222. ಈ ಅಧ್ಯಾಯದಲ್ಲಿ, ಅಪ್ಪೀಲ್ ದಾಖಲ್‌ಮಾಡುವ ಬಗ್ಗೆ ವಿಧಿಸಲ್ಪಟ್ಟ ಯಾವದಾದರೂ ಕಾಲದ ಕಡೇದಿನವು ಗವರ್ನಮೆಂಟಿನಿಂದ ಮಂಜೂರ್‌ಮಾಡಲ್ಪಟ್ಟ ಒಂದು ರಜಾದಿನದಲ್ಲಿ ಪ್ರಾಪ್ತವಾದರೆ, ರಜಾ ಆಖೈರು ದಿನದ ಮಾರನೆ ದಿನವು, ಅಂಥಾ ಆಖೈರ್‌ದಿನವಾಗಿ ಭಾವಿಸಲ್ಪಡತಕ್ಕದ್ದು.

ಮುಂ. ರೆ. ಕೋ. 208ನೇ ಸೆಕ್ಷರ್.

ಹುಕ್ಕುಂ ನಕ್ಕಲು, ಅಪ್ಪೀಲ್ ಅರ್ಜೀ ಸಂಗಡ ಕಳುಹಿಸಲ್ಪಡತಕ್ಕದ್ದು.

223. ಅಪ್ಪೀಲಿನ ಪ್ರತಿ ಅರ್ಜೀಯ ಸಂಗಡಲೂ, ಅಪ್ಪೀಲ್‌ಮಾಡಲ್ಪಟ್ಟ ಫೈಸಲ್ ಯಾ ಹುಕ್ಕುಂ, ಅಥವಾ ಅದರ ಬಾಬತು ಸೈರ್ ಮೊಹರ್‌ಮಾಡಲ್ಪಟ್ಟ ಒಂದು ನಕ್ಕಲು, ಇವುಗಳು ಕಳುಹಿಸಲ್ಪಡತಕ್ಕವು.

ಮುಂ. ರೆ. ಕೋ. 209ನೇ ಸೆಕ್ಷರ್.

ಅಪ್ಪೀಲ್ ಅಧಿಕಾರಿಯ ಅಧಿಕಾರಗಳು.

224. ಅಪ್ಪೀಲ್ ಅಧಿಕಾರಿಯು, ಅಪ್ಪೀಲ್‌ಮಾಡಲ್ಪಟ್ಟ ತಾಬೇದಾರೀ ಆಫೀಸರರ ಫೈಸಲನ್ನಾಗಲಿ, ಹುಕ್ಕುಮನ್ನಾಗಲೀ ರದ್ದುಮಾಡಬಹುದು, ಬದಲಾಯಿಸಬಹುದು, ತಿದ್ದುಪಡಿಮಾಡಬಹುದು. ಅಥವಾ ಕಾಯಂಮಾಡಬಹುದು, ಅಥವಾ ತಮಗೆ ಜರೂರೆಂದು ತೋರುವ ಅಂಥಾ ಹೆಚ್ಚು ವಿಚಾರಣೆಯನ್ನು ಮಾಡುವಂತೆ, ಅಥವಾ ಅಂಥಾ ಜಾಸ್ತೀ ಸಾಕ್ಷ್ಯವನ್ನು ತೆಗೆದುಕೊಳ್ಳುವಂತೆ ತಾಬೇದಾರೀ ಆಫೀಸರರನ್ನು ನಿಯಮಿಸಬಹುದು. ಅಥವಾ ಅಂಥಾ ಹೆಚ್ಚಾದ ಸಾಕ್ಷ್ಯವನ್ನು ತಾವಾಗಿಯೇ ತೆಗೆದುಕೊಳ್ಳಬಹುದು.

ಮುಂ. ರೆ. ಕೋ. 210ನೇ ಸೆಕ್ಷನ.

ತಾಬೇದಾರೀ ಆಫಿಸರರ ಹುಕುಮಿನ ಅಮಲ್‌ಜಾರೀಯನ್ನು ಸಸ್ಪೆಂಡ ಮಾಡುವದಕ್ಕೆ ಅಧಿಕಾರ.

225. ಅಪ್ಪೀಲ್ ದಾಖಲಾಗುವ ಯಾವ ಮೊಕದ್ದಮೆಯಲ್ಲಾಗಲಿ, ಅಪ್ಪೀಲ್ ಅಧಿಕಾರಿಯು, ಅಪ್ಪೀಲಿನ ಫೈಸಲ ಆಗುವವರಿಗೆ, ತಾಬೇದಾರೀ ಆಫೀಸರರ ಫೈಸಲ ಯಾ ಹುಕ್ಕುಂ ಅಮಲ್‌ಜಾರೀಯಾಗುವದನ್ನು ನಿಲ್ಲಿಸಿಯಿಡುವಂತೆ ನೇಮಿಸಬಹುದು.

ಮುಂ. ರೆ. ಕೋ. 211ನೇ ಸೆಕ್ಷನ.

ತಾಬೇದಾರೀ ಆಫಿಸರರ ರಿಕಾರ್ಡಗಳನ್ನೂ ನಡವಳಿತಗಳನ್ನೂ ತರಿಸಿಕೊಳ್ಳುವದಕ್ಕೂ ತನಿಖೀಮಾಡುವದಕ್ಕೂ ಗವರ್ನಮೆಂಟಿನ ಅಥವಾ ಕೆಲವ ರೆವಿನ್ಯೂ ಆಫಿಸರಗಳ ಅಧಿಕಾರ.

226. ಗವರ್ನಮೆಂಟನವರಾಗಲಿ, ಒಬ್ಬ ಡೆಪ್ಯುಟಿ ಕಮಿಶ್ನರರಾಗಲಿ, ಒಬ್ಬ ಸರ್ವೇ ಸೂಪರಿಂಟೆಂಡೆಂಟರಾಗಲಿ, ತಮಗೆ ತಾಬೇದಾರನಾದ ಒಬ್ಬ ರೆವಿನ್ಯೂ ಆಫಿಸರರಿಂದ ಕೊಡಲ್ಪಟ್ಟ ಯಾವದಾದರೂ ಫೈಸಲ ಯಾ ಹುಕ್ಕುಮಿನ ನ್ಯಾಯಸಿದ್ಧತೆ, ಅಥವಾ ಯುಕ್ತತೆ ಮತ್ತು ಅಂಥಾ ಆಫಿಸರರ ನಡವಳಿತಗಳ ಕ್ರಮ, ಇಂಥಾದ್ದನ್ನು ಕುರಿತು, ಸಮಾಧಾನಪಡುವಬಗ್ಯೆ ಅವರಿಗೆ ಯಾ ಅತಗೆ ತಾಬೇದಾರರಾದ ಯಾರಾದರೂ ರೆವಿನ್ಯೂ ಆಫೀಸರರ ಯಾವದಾದರೂ ವಿಚಾರಣೆಯ ನಡವಳಿತದ ಒಂದು ರಿಕಾರ್ಡನ್ನು ತರಿಸಿ ತಮ್ಮ ತಮ್ಮ ಇಲಾಖೆಗಳಲ್ಲಿ ತನಖೀಮಾಡಬಹುದು.

ಇದರಡಿ ಕಂಡ ಆಫಿಸರಗಳು ಒಂದು ಕ್ರಮವಾದ ವಿಚಾರಣೆಯಾಗಲಿ ಪ್ರೂಟ ವಿಚಾರಣೆಯಾಗಲಿ, ನಡೆಯದೇ ಇರುವ ಯಾವ ವಿಷಯದಲ್ಲಾಗಲಿ, ತಮಗೆ ತಾಬೇದಾರರಾದ ಯಾರಾದರೂ ಆಫಿಸರರ ನಡವಳಿತಗಳನ್ನು ಬದಸ್ತೂರ ತರಿಸಿಕೊಂಡು ತನಖೀಮಾಡಬಹುದು. ಸದರೀ ಆಫೀಸರಗಳ್ಯಾರಂದರೆ—ಒಬ್ಬ ಅಸಿಸ್ಟೆಂಟ ಕಮಿಶ್ನರ, ಒಬ್ಬ ಅಮಲ್‌ದಾರ, ಒಬ್ಬ ಡೆಪ್ಯುಟಿ ಅಮಲ್‌ದಾರ, ಒಬ್ಬ ಸರ್ವೇ ಅಸಿಸ್ಟೆಂಟ ಸೂಪರಿಂಟೆಂಡೆಂಟ, ಮತ್ತು ಅಸಿಸ್ಟೆಂಟ ಸೆಟ್ಲಮೆಂಟ ಆಫೀಸರ—

ಮತ್ತು ಅದರ ಮೇಲೆ ಹುಕ್ಕುಂಗಳನ್ನು ಕೊಡತಕ್ಕದ್ದು.

ಯಾವ ಸಂಗತಿಯಲ್ಲಾಗಲಿ, ಹಾಗೆ ತರಿಸಿಕೊಳ್ಳಲ್ಪಟ್ಟ ಯಾವದಾದರೂ ಫೈಸಲ ಯಾ ಹುಕ್ಕುಂ ಯಾ ನಡವಳಿತಗಳನ್ನು ತಿದ್ದುಪಾಟು ಮಾಡತಕ್ಕದ್ದು ಅಥವಾ ರದ್ದುಮಾಡತಕ್ಕದ್ದು ಅಥವಾ ಬದಲಾಯಿಸತಕ್ಕದ್ದೆಂದು ಮೇಲೆಕಂಡ ಆಫೀಸರರಿಗೆ ಕಾಣಬಂದರೆ, ಸದರೀ ಆಫೀಸರರು ಅದರ ಮೇಲೆ ತಮಗೆ ಯುಕ್ತತೋರುವಂಥಾ ಹುಕ್ಕುಮನ್ನು ಕೊಡಬಹುದು.

ಮುಂ. ರೆ. ಕೋ. 212ನೇ ಸೆಕ್ಷನ.

ಸ್ಪಷ್ಟವಾಗಿ ಆಖೈರಾದ ಫೈಸಲಗಳ ಅಥವಾ ಹುಕ್ಕುಂಗಳ ವಿಷಯದಲ್ಲಿ ರೂಲ್ಸ.

227. ಈ ರೆಗ್ಯುಲೇಷನ್ನಲ್ಲಿ ಒಂದು ಫೈಸಲಾಗಲಿ, ಹುಕ್ಕುಮಾಗಲಿ, ಆಖೈರಾಗಿರತಕ್ಕದ್ದೆಂದು ತಿಳಿಸಲ್ಪಟ್ಟರೆ, ಅಂಥಾ ಫೈಸಲ ಯಾ ಹುಕ್ಕುಮಿನ ಮೇಲೆ ಯಾವ ಅಪ್ಪೀಲೂ ದಾಖಲಾಗುವದಿಲ್ಲವೆಂದು ಅರ್ಥವೆಂಬದಾಗಿ ಯೋಚಿಸತಕ್ಕದ್ದು.

ಹಿಂದಿನಕಡೇ ಸೆಕ್ಷನ ನಿಬಂಧನೆಗಳನುಸರಿಸಿ ಅಂಥಾ ಯಾವ ಫೈಸಲನ್ನಾಗಲಿ, ಹುಕ್ಕುಮನ್ನಾಗಲಿ, ತಿದ್ದುಪಾಟು ಮಾಡುವದಕ್ಕೂ ರದ್ದುಮಾಡುವದಕ್ಕೂ ಯಾ ಬದಲಾಯಿಸಲಿಕ್ಕೂ ಗವರ್ನಮೆಂಟನವರು ಮಾತ್ರ ಯುಕ್ತಿಯಾರಿವುಳ್ಳವರಾಗಿ ಇರತಕ್ಕದ್ದು.

14ನೇ ಅಧ್ಯಾಯ.

ರೆವಿನ್ಯೂ ಅಧಿಕಾರ.

228. ಈ ಅಧ್ಯಾಯದಲ್ಲಿ ವಿಷಯತಃ ಆಗಲಿ ಸಂದರ್ಭತಃ ಆಗಲಿ ಯಾವ ಅರ್ಥ ವಿವರಣೆಯ ಕ್ಲಾಜ್. ದಾದರೂ ವಿರುದ್ಧಾಂಶ ಇಲ್ಲದಿದ್ದರೆ—

"ಜಮೀನ್" ಎಂಬದು ಗ್ರಾಮಗಳ ನಿವೇಶನಗಳನ್ನೂ ಪಟ್ಟಣಗಳನ್ನೂ ಷಹರಗಳನ್ನೂ ಅಡಗಿಸಿಕೊಳ್ಳುತ್ತೆ; ಮತ್ತು ಸದರೀ ಶಬ್ದವು ಮರಗಳು, ಬೆಳೆಯುವ ಫಸಲ್, ಹುಲ್ಲು, ಮರಗಳ ಮೇಲಣ ಫಲಗಳು, ಮತ್ತು ಅವುಗಳಲ್ಲಿಯ ರಸ, ಮಾರ್ಗ, ಹರಿಗೋಲುಗಳು, ಮತ್ತು ಮೀನುಹಿಡಿಯುವ ಸ್ಥಳಗಳು ಇವುಗಳನ್ನು ಸಹ ಅಡಗಿಸಿಕೊಳ್ಳುತ್ತೆ.

"ಜಮೀನ್ ಕಂದಾಯ" ಅಂದರೆ, ಗವರ್ನ್‌ಮೆಂಟಿನಿಂದ ಅಥವಾ ಗವರ್ನ್‌ಮೆಂಟ್ ತರಫಿನಲ್ಲಿ, ಯಾವ ಮನುಷ್ಯನಿಂದಾಗಲಿ, ಅವನ ಹಿಡುವಳೀಯಲ್ಲಿವುಳ್ಳ ಅಥವಾ ಅವನ ವಶಕ್ಕೆ ಕೊಡಲ್ಪಟ್ಟ ಜಮೀನಿಗಾಗಿ ಹೊಂದಿದ ಅಥವಾ ಬರತಕ್ಕದ್ದೆಂಬ ದರೋಬಸ್ತು ಮೊಬಲಗುಗಳೂ ನಗದಾದ ಅಥವಾ ಧಾನ್ಯರೂಪವಾದ ಪಾವತೀಗಳು ಮತ್ತು ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಕಾನೂನಿನ ನಿಬಂಧನೆಗಳನುಸರಿಸಿ ಗವರ್ನ್‌ಮೆಂಟಿನಿಂದ ನೇಮಿಸಲ್ಪಟ್ಟ ಯಾವದಾದರೂ ತೀರ್ವೆ ಯಾ ದರ ಯೆಂಬದಾಗಿ ಅರ್ಥವಾಗುತ್ತದೆ.

229. ಈ ಅಧ್ಯಾಯದಲ್ಲಿರುವ ಯಾವ ಅಂಶವೂ (ಪರ್ಷಿಯನ್ ಆಕ್ಟು) ಎಂಬ ಸನ್ 1871ನೇ ಇಸವೀ 23ನೇ ಆಕ್ಟಿನ ನಿಬಂಧನೆಗಳ ಪೈಕೀ ಯಾವದಕ್ಕೂ ಬಾಧಕವಾಗತಕ್ಕದ್ದಲ್ಲವು.

ಪೆರ್ಷನ್ ಆಕ್ಟಿನ ನಿಬಂಧನೆಗಳ ವಿನಾಯಿತಿ.

230. ಇದರಲ್ಲಿ ಮುಂದೇಕಾಣುವ ವಿನಾಯಿತಿಗಳಿಗೆ ಒಳಪಟ್ಟು ಇದರಲ್ಲಿ ಹಿಂದೆ ಸ್ಪಷ್ಟವಾಗಿ ವಿಧಿಸಲ್ಪಟ್ಟಂತೆ ವಿನಾ, ಇದರಡಿಕಂಡ ವಿಷಯಗಳ ಪೈಕಿ ಯಾವದನ್ನು ಕುರಿತಾಗಲಿ, ಅಧಿಕಾರವನ್ನು ಯಾವ ಸಿವಿಲ್ ಕೋರ್ಟಿನವರೂ ಚಲಾಯಿಸಕೂಡದು.

ಕೆಲವು ವ್ಯಾಜ್ಯಗಳ ನಿರ್ಬಂಧ.

(a) ಗವರ್ನ್‌ಮೆಂಟಿನಿಂದ ಮೊಕರರ್ ಮಾಡಲ್ಪಟ್ಟ ಅಥವಾ ಮಂಜೂರ್ಮಾಡಲ್ಪಟ್ಟ ವಂಶ ಪಾರಂಪರ್ಯದ ಯಾರಾದರೂ ಆಫೀಸರರ ಅಥವಾ ಯಾರಾದರೂ ಇತರ ಗ್ರಾಮಆಫೀಸರರ ಯಾ ನೌಕರರ ಉದ್ಯೋಗಕ್ಕೆ ಸಂಬಂಧಿಸಿದ ಯಾವದಾದರೂ ಸ್ವತ್ತನ್ನು ಕುರಿತು ಗವರ್ನ್‌ಮೆಂಟಿನವರಮೇಲೆ ದಾವೆ; ಅಥವಾ

ಅಂಥಾ ಯಾರಾದರೂ ಆಫೀಸರರ ಯಾ ನೌಕರನ ಕೆಲಸಗಳನ್ನು ನಿರ್ವಹಿಸಲಿಕ್ಕೆ ಅಥವಾ, ಅಂಥಾ ಉದ್ಯೋಗ ಅಥವಾ ನೌಕರಿಯ ದೆಸೆಯಿಂದ ವಿನಾಯಿಸಿದ್ದರಿಂದ ಉಂಟುಮಾಡಲ್ಪಟ್ಟ ಯಾವದಾದರೂ ನುಕ್ಸಾನ್ ವಿಷಯದಲ್ಲಿ ತರಲ್ಪಡುವ ದಾವೆಗಳು; ಅಥವಾ

ಗವರ್ನ್‌ಮೆಂಟಿನಿಂದಾಗಲಿ, ಅಬಗ್ಯೆ ಕ್ರಮಪ್ರಕಾರ ಅಧಿಕಾರ ಕೊಡಲ್ಪಟ್ಟ ಯಾರಾದರು ಆಫೀಸರಿಂದ ಕೊಡಲ್ಪಡಬಹುದಾದ, ಅಂಥಾ ಉದ್ಯೋಗ ಅಥವಾ

ನೌಕರೀ, ಅಥವಾ ಅಂಥಾ ಆಫೀಸರ ಯಾ ನೌಕರನಿಗೆ ಸಂಬಂಧಿಸಿದ ಯಾವ ಹುಕ್ಕುಮನ್ನಾಗಲಿ, ವಜ್ಞಾಮಾಡಿ ಅಥವಾ ತಪ್ಪಿಸಲಿಕ್ಕೆ ತರಲ್ಪಟ್ಟ ವ್ಯಾಜ್ಯಗಳು ; ಅಥವಾ

ಗವರ್ನಮೆಂಟಿನವರಿಂದಾಗಲಿ ಅವರ ತರಫ ಕ್ರಮಪ್ರಕಾರ ಅಧಿಕಾರಹೊಂದಿದ ಯಾವ ಆಫೀಸರಿಂದಾಗಲಿ ಯಾವದಾದರೂ ಚಾಕರಿ ಬಗ್ಗೆ ವಹಿಸಲ್ಪಡತಕ್ಕದ್ದೆಂಬದಾಗಿ ಹೇಳಲ್ಪಟ್ಟ ಜಮೀನುಗಳ ವಿಷಯದಲ್ಲಿ ಗವರ್ನಮೆಂಟಿನವರಮೇಲೆ ತರಲ್ಪಡುವ ದಾವೆಗಳು ;

(b) ಆಕ್ಷೇಪಣೆಗಳು—

ಗವರ್ನಮೆಂಟಿನಿಂದ ನಿಯಮಿಸಲ್ಪಟ್ಟ ಜಮೀನು ಕಂದಾಯದಬಗ್ಗೆ ಠರಾಯಿಸಲ್ಪಟ್ಟ ಯಾವದಾದರೂ ಮೊಬಲಗಿಗೆ ಯಾ ಕಂದಾಯ ಹಾಕುವಣ ಅಥವಾ ಕಂದಾಯ ಮೊಕರರಾತಿಯವಿಧ ಅಥವಾ ಯಾವ ಶಿಫಾರತದಮೇಲೆ ಅಂಥಾ ಕಂದಾಯ ನಿಶ್ಚಯಿಸಲ್ಪಟ್ಟಿತೋ ಅದು ; ಅಥವಾ

ಸರ್ವೇ ಅಥವಾ ಸೆಟಲ್‌ಮೆಂಟಿನ ಇಸ್ತಿಹಾರನಾಮೆಯು, ಅಥವಾ ಸೆಟಲ್‌ಮೆಂಟಿನ ಹಾಯಿದೆಯನ್ನು ನಿಶ್ಚಯಿಸತಕ್ಕ ಯಾವದಾದರೂ ಇಸ್ತಿಹಾರನಾಮೆಯು ದೃಢತ್ವ ಅಥವಾ ಫಲಿತಾಂಶ ಈ ವಿಷಯಗಳಲ್ಲಿ ಆಕ್ಷೇಪಣೆಗಳು ; ಅಥವಾ

(c) ಜಮೀನು ಕಂದಾಯದ ವಸೂಲಾತೀಬಗ್ಗೆ, ಅಥವಾ ಗವರ್ನಮೆಂಟಿನಿಂದಾಗಲಿ, ಆಬಗ್ಗೆ ಕ್ರಮವಾಗಿ ಅಧಿಕಾರ ಕೊಡಲ್ಪಟ್ಟ ಯಾವ ಆಫೀಸರರಿಂದಾಗಲಿ, ಮೇಲ್ಪಟ್ಟ ಹಿಡುವಳೀದಾರರಿಗೆ, ಕಮ್ಮಿ ಹಿಡುವಳೀದಾರರಿಂದ, ಅವರುಗಳ ಬಾಕೀಗಳನ್ನು ವಸೂಲ್‌ಮಾಡುವಬಗ್ಗೆ, ಕುಮ್ಮಕ್ ಮಾಡುವಬಗ್ಗೆ ಯಾವದಾದರೂ ನಡವಳಿತಗಳಿಗೆ ಸಂಬಂಧಿಸಿದ ಅಥವಾ ಅವುಗಳಿಂದ ವುಂಟಾಗುವ ದಾವೆಗಳು ; ಅಥವಾ

ದಗಾ ಹೊರ್ತು ಅಕ್ರಮ, ಗಲ್ಲತ್ ಅಥವಾ ಮತ್ತ್ಯಾವದಾದರೂ ಇತರ ಕಾರಣಕ್ಕಾಗಿ ಜಮೀನು ಕಂದಾಯದ ಬಾಕೀಗಳಿಗಾಗಿ ನಡಿಸಲ್ಪಡುವ ವಿಕ್ರಯಗಳನ್ನು ತಳ್ಳಿಹಾಕುವಬಗ್ಗೆ ದಾವೆಗಳು.

(d) ಗವರ್ನಮೆಂಟಿನವರಮೇಲೆ ದಾವೆಗಳು—

(1) ಜಮೀನು ಕಂದಾಯಕ್ಕೆ ಗುರಿಯಾಗಿರುವದಾಗಿ, ಅಥವಾ ಮೇಲ್ಪಟ್ಟ ಹಿಡುವಳೀದಾರನಂತೆ, ಕಮ್ಮಿ ಹಿಡುವಳೀದಾರ, ಅನುಭವದಾರ ಅಥವಾ ಷಿಕ್ಮೀದಾರನಂತೆ ರೆವಿನ್ಯೂ ಸರ್ವೇ ಅಥವಾ ಸೆಟಲ್‌ಮೆಂಟ್ ರಿಕಾರ್ಡುಗಳಲ್ಲಿ ಯಾಗಲಿ ಗ್ರಾಮದ ಕಾಗದ ಪತ್ರಗಳಲ್ಲಿಯಾಗಲಿ ದಾಖಲ್ಮಾಡಲಿಕ್ಕೆ ; ಅಥವಾ

(2) ರೆವಿನ್ಯೂಸರ್ವೆ ಅಥವಾ ಸೆಟಲ್‌ಮೆಂಟಿನ ಯಾವ ರಿಕಾರ್ಡಿನಲ್ಲಾಗಲಿ ಯಾವದಾದರೂ ಖಿತಾಯಿತಿಮಾಡಲ್ಪಡಲಿಕ್ಕೆ ; ಅಥವಾ

(3) ಅಂಥಾ ಯಾವ ಖಿತಾಯಿತಿಯನ್ನಾಗಲಿ ಬಿಡುವದಕ್ಕೆ ... ಅಥವಾ ತಿದ್ದುಪಾಟುಮಾಡಲಿಕ್ಕೆ ;

(e) ಸರ್ 1868ನೇ ಇಸವಿಯ 4ನೇ ಮುಂಬೈ ಆಕ್ಟನ ... ಅನುಸರಿಸಿ ಅಥವಾ ಈ ರೆಗ್ಯೂಲೇಷನ್ನ ಅನುಸರಿಸಿ ಅಥವಾ ತತ್ಕಾಲದಲ್ಲಿ ಜಾರೀ ಇರುವ ... ಯಾವದಾದರೂ

ಇತರ ಕಾನೂನು ಅನುಸರಿಸಿ ಯಾವದಾದರೂ ಎಸ್ಟೇಟಿನ ವಿಭಾಗದಲ್ಲಿ ಜಮೀನು ಹಂಚಿಕೆ ಅಥವಾ ಜಮೀನು ಕಂದಾಯದ ನಿರ್ಣಯು ;

(*f*) 92ನೇ ಸೆಕ್ಷನ್ ಅನುಸರಿಸಿ ಕಂದಾಯ ಜಾಸ್ತೀ ಮಾಡುವ ಬಗ್ಗೆ ಅಥವಾ ಕಮ್ಮಿ ಮಾಡುವಬಗ್ಗೆ ದಾವೆಗಳು, ಅಥವಾ, 100ನೇ ಮತ್ತು 101ನೇ ಸೆಕ್ಷನ್‌ಗಳನ್ನುಸರಿಸಿ ಗುತ್ತಿಗೆಯ ಬಗ್ಗೆ ಅಥವಾ ಪರಸ್ಪರ ಒಡಂಬಡಿಕೆಗಳ ಬಗ್ಗೆ ದಾವೆಗಳು ;

(*g*) ಜಮೀನು ಕಂದಾಯ ಪೂರಾ ಆಗಲಿ, ಕೆಲವುಮಟ್ಟಿಗಾಗಲಿ, ಕೊಡಬೇಕಾದ್ದಿಲ್ಲದೆ, ಜಮೀನನ್ನು ವಹಿಸಲಿಕ್ಕೆ ಗವರ್ನಮೆಂಟಿನ ಮೇಲೆ ದಾವೆಗಳು ; ಅಥವಾ ಜಮೀನು ಕಂದಾಯದಮೇಲೆ ಹಾಕಲ್ಪಟ್ಟ ಅಥವಾ ಅದರ ದೆಶೆಯಿಂದ ಕೊಡಲ್ಪಡತಕ್ಕ ಮೊಬಲಗ್‌ಗಳನ್ನು ಪಡೆಯಲಿಕ್ಕೆ ; ಅಥವಾ ತತ್ಕಾಲದಲ್ಲಿ ಜಾರೀ ಇರುವ ಅಥವಾ ಗವರ್ನಮೆಂಟಿಗೆ ಸೇರಿದ ಬಂಜರ್ ಯಾ ಖಾಲೀ ಜಮೀನಿನ ಅನುಭವವನ್ನು ಕುರಿತ ಯಾವದಾದರೂ ಕಾನೂನಿನ ನಿಬಂಧನೆಗಳನುಸರಿಸಿ ಗವರ್ನಮೆಂಟಿನಿಂದ ನಿಯಮಿಸಲ್ಪಟ್ಟ ಯಾವದಾದರೂ ತೆರಿಗೆ ಅಥವಾ ಕಂದಾಯವನ್ನು ವಜಾ ಮಾಡಲಿಕ್ಕೆ ತರಲ್ಪಟ್ಟ ದಾವೆಗಳು ;

(*h*) ಸನ್ 1865ನೇ ಇಸವಿಯ 1ನೇ ಮುಂಬೈ ಆಕ್ಟು ಅನುಸರಿಸಿ, ಅಥವಾ ಈ ರೆಗ್ಯೂಲೇಷನ್ ಅನುಸರಿಸಿ, ಅಥವಾ ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಇತರ ಕಾನೂನು ಅನುಸರಿಸಿ, ನಿಶ್ಚಯಿಸಲ್ಪಟ್ಟ ಸರಹದ್ದುಗಳನ್ನು ಕುರಿತು, ಅಥವಾ ಯಲ್ಲೇ ಗುರುತುಗಳ ವಿಷಯದಲ್ಲಿ ಅಂಥಾ ಯಾವ ಕಾನೂನು ಅನುಸರಿಸಿಯಾಗಲಿ, ಲಾಯಖಾದ ಒಬ್ಬ ಅಧೀಸರಿಂದ ಕೊಡಲ್ಪಟ್ಟ ಯಾವ ಹುಕ್ಕುಮನ್ನಾಗಲಿ ತಳ್ಳಿಹಾಕಲಿಕ್ಕೆ ತರಲ್ಪಟ್ಟ ದಾವೆಗಳು ;

ನಿಯಮ. ಪರಂತು, ಜಮೀನು ಕಂದಾಯ ಕೊಡುವದರ ದೆಸೆಯಿಂದ ಪೂರಾ ಆಗಲಿ ಕೆಲವುಮಟ್ಟಿಗಾಗಲಿ ವಿನಾಯಿಸಲ್ಪಟ್ಟ ಜಮೀನನ್ನು ಹಿಡುವಳೀಯಲ್ಲಿ ಪಡೆಯಲಿಕ್ಕೆ ಯಾವ ಮನುಷ್ಯನಾಗಲಿ ಈ ಕೆಳಗೆ ಬರುವ ಆಕ್ಟು ವಗೈರೇ ಅನುಸರಿಸಿ ದಾವೇ ಮಾಡಿದರೆ—

(*i*) ಒಂದು ವಿನಾಯಿತಿಯು ಪಬ್ಲಿಕ್ ರಿಕಾರ್ಡಿನಲ್ಲಿ ನಮೂದಿಸಲ್ಪಟ್ಟಿರುವ ಅಥವಾ ಸ್ಪಷ್ಟವಾಗಿ ವಿವರಿಸಲ್ಪಟ್ಟ ಕೆಲವು ವರುಷಗಳ ವಾಯಿದೆಯ ಪರ್ಯಂತ ನೆಲೆಗೊಂಡಿದ್ದ ಸಬಬಿನ ಮೇಲೆ, ಒಬ್ಬ ಮನುಷ್ಯನಪಕ್ಷದಲ್ಲಿಯಾಗಲಿ, ಜನಗಳ ಯಾವ ತರಗತಿಯಪಕ್ಷದಲ್ಲಾಗಲಿ, ಪೂರ್ವದಲ್ಲಿ ನೆಲಗೊಳ್ಳದೇ ಇದ್ದ ಒಂದು ವಿನಾಯಿತಿಯನ್ನು ವಿಶೇಷತಃ ಉಂಟು ಮಾಡುವ ಅಥವಾ ಅಂಥಾ ವಿನಾಯಿತಿಯನ್ನು ವಿಶೇಷತಃ ಕಾಯಂ ಮಾಡುವ ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಆಕ್ಟು ; ಅಥವಾ

(*j*) ಗವರ್ನಮೆಂಟಿನಿಂದಾಗಲಿ, ಗವರ್ನಮೆಂಟಿನ ಅಪ್ಪಣೆಯ ಮೇರೆಯಾಗಲಿ, ಕೊಡಲ್ಪಟ್ಟ ಒಂದು ದಸ್ತಾವೇಜು ಅಥವಾ ಸನ್ನದು ;

ಅಂಥಾ ದಾವೆಯು ಸಿವಿಲ್ ಕೋರ್ಟುಗಳಲ್ಲಿ ಹಿಡಿಯಲ್ಪಡತಕ್ಕದ್ದು.

(*i*) ಗುರುತಿನ ವಿಷಯಕ್ಕೆ ಉದಾಹರಣೆಗಳು.

(1) ವಿಧಿಸಲ್ಪಡುವದೇನಂದರೆ, ಕಂದಾಯಕ್ಕೆ ಒಂದು ಗೊತ್ತಾದ ಹದ್ದು ಸ್ಥಾಪಿಸಲ್ಪಟ್ಟು ಕಾಪಾಡಲ್ಪಟ್ಟರೆ, ಕಂದಾಯವು ಅಂಥಾ ಹದ್ದಿಗೆ ಮೀರಕೂಡದು, ಮ

ಸಲಾ A ಯಂಬವನು 100 ರೂಪಾಯಿಗಳು ಕಂದಾಯವುಳ್ಳ ಜಮೀನಿನ ಸ್ವಂತಗಾರನಾಗಿರುತ್ತಾನೆ, ಅವನ ಮತ್ತು ಅವನ ಪೂರ್ವೀಕರ ಲೇವಾದೇವಿಯಲ್ಲಿ ಯಾವಾಗಲೂ 50 ರೂಪಾಯಿಗಳಿಗೆ ಹೆಚ್ಚಾಗಿ ಕಂದಾಯ ಕರಾಯಿಸಲ್ಪಟ್ಟಿರಲಿಲ್ಲವೆಂಬ ಕಾರಣದಿಂದ ಸದರೀ 50 ರೂಪಾಯಿ ಕಂದಾಯವನ್ನೇ ಕರಾಯಿಸಬೇಕೆಂದು ದಾವಾಮಾಡುತ್ತಾನೆ. ಪೂರ್ವದಲ್ಲಿಲ್ಲದ ವಿನಾಯಿತಿಯು ಆಕ್ಟಿನ ದೆಶೆಯಿಂದ ಉಂಟುಮಾಡಲ್ಪಡಲಿಲ್ಲವಾಗಿ A ಎಂಬವನ ದಾವೆ ಬಂದು ಸಿವಿಲ್ ಕೋರ್ಟಿನಲ್ಲಿ ಹಿಡಿಯಲ್ಪಡತಕ್ಕದ್ದಲ್ಲವು.

(2) ವಿಧಿಸಲ್ಪಡುವದೇನಂದರೆ, ಹಿಡುವಳೀಯಲ್ಲಿವುಳ್ಳ ಮತ್ತು ವಿನಾಯಿಸಲ್ಪಟ್ಟಂತೆ ಜಮೀನ್ ರಿಜಿಸ್ಟರಿನಲ್ಲಿ ದಾಖಲ್ಮಾಡಲ್ಪಟ್ಟ ಯಾವ ಜಮೀನಿನಿಂದಾಗಲಿ ಜಮೀನ್ ಕಂದಾಯವನ್ನು ವಸೂಲ್ಮಾಡತಕ್ಕದ್ದಲ್ಲವು. A ಎಂಬವನು ಬಂದು ಜಮೀನನ್ನು ಆ ಮೇರೆ ವಹಿಸಿ ಇರುವ ಮತ್ತು ಆ ಮೇರೆ ಜಮೀನ್ ರಿಜಿಸ್ಟರಿನಲ್ಲಿ ದಾಖಲ್ಮಾಡಲ್ಪಟ್ಟಿರುವ ಸಬಬಿನ ಮೇಲೆ ಬಂದಾನೊಂದು ಜಮೀನನ್ನು ವಿನಾಯಿಸಲ್ಪಟ್ಟಿರುವಂತೆ ಹಿಡುವಳೀಯಲ್ಲಿ ಪಡೆಯಲಿಕ್ಕೆ ದಾವಾ ಮಾಡುತ್ತಾನೆ, ಸದರೀ ವಿನಾಯಿತಿಯು ಬಂದು ಪಬ್ಲಿಕ್ ರಿಕಾರ್ಡಿನಲ್ಲಿ ತೋರಿಸಲ್ಪಟ್ಟಿರುವ ಸಬಬಿನ ಮೇಲೆ ಸ್ಪಷ್ಟವಾಗಿ ಕಾಯಂಮಾಡಲ್ಪಟ್ಟಿರುತ್ತೆ. A ಎಂಬವನ ದಾವೆಯು ಬಂದು ಶಿವಿಲ್ ಕೋರ್ಟಿನಲ್ಲಿ ಹಿಡಿಯಲ್ಪಡತಕ್ಕದ್ದು.

(3) ಕೆಲವು ಮ್ಯಾಪ್‌ಗಳಲ್ಲಿಯಾನೆ ಪಠಗಳಲ್ಲಿ ವಿನಾಯಿಸಲ್ಪಟ್ಟಿರುವಂತೆ ತೋರಿಸಲ್ಪಟ್ಟ ತಮಾಂ ಜಮೀನ್‌ಗಳ ಹಾಲೀ ಜಾರೀಯಲ್ಲಿರುವ ವಿನಾಯಿತಿಗಳನ್ನೂ ಡೆಪ್ಯುಟಿ ಕಮ್ಮಿಷನರು ಕಾಯಂ ಮಾಡತಕ್ಕದ್ದೆಂದು ವಿಧಿಸಲ್ಪಟ್ಟಿರುತ್ತೆ. A ಎಂಬವನು ವಿನಾಯಿಸಲ್ಪಟ್ಟಿರುವದಾಗಿ ಮ್ಯಾಪ್‌ಗಳಲ್ಲಿ ತನ್ನ ಜಮೀನು ತೋರಿಸಲ್ಪಟ್ಟಿರುತ್ತೆಂದು ಹೇಳಿ ವಿನಾಯಿತೀ ಬಗ್ಯೆ ದಾವಾ ಮಾಡುತ್ತಾನೆ. A ಎಂಬವನ ದಾವೆಯು ಬಂದು ಸಿವಿಲ್ ಕೋರ್ಟಿನಲ್ಲಿ ಹಿಡಿಯಲ್ಪಡತಕ್ಕದ್ದಾಗಿರುತ್ತೆ.

(4) ವಿಧಿಸಲ್ಪಡುವದೇನಂದರೆ, ಕಂದಾಯವು ಕೆಲವು ಕಾರಣಗಳಿಂದ ನಿಷ್ಕಯಿಸಲ್ಪಡತಕ್ಕದ್ದೇ ಹೊರತು ಬೇರೇ ಕಾರಣಗಳಿಂದ ಅಲ್ಲವು. ಇದು, ಯಾವನಾದರೂ ಮನುಷ್ಯನಪರವಾಗಿ ಅಥವಾ ತರಗತಿಯಪರವಾಗಿ ಬಂದು ವಿನಾಯಿತಿಯನ್ನು ಉಂಟುಮಾಡುವ ಕಾನೂನಲ್ಲವು. ಅಂಥಾ ಕಾನೂನನ್ನನುಸರಿಸಿ ಬಂದು ಕಂದಾಯದ ವಿಷಯದಲ್ಲಿ ಆಕ್ಷೇಪಣೆಗಳು ಬಂದು ಸಿವಿಲ್‌ಕೋರ್ಟಿನಲ್ಲಿ ವಿಮರ್ಶಿಸಲ್ಪಡತಕ್ಕದ್ದಲ್ಲವು.

ಕೆಲವು ವ್ಯಾಜ್ಯಗಳ ವಿನಾಯಿತಿ.

231. ಹಿಂದಿನ ಸೆಕ್ಷನ್ನಲ್ಲಿಯು ಯಾವ ಅಂಶವೂ, ಇದರಡಿ ಕಂಡ ವ್ಯಾಜ್ಯಗಳನ್ನು ದಾಖಲ್ಮಾಡುವದರ ದೆಶೆಯಿಂದ ಸಿವಿಲ್ ಕೋರ್ಟಿನವರನ್ನು ಅಡ್ಡೀಮಾಡತಕ್ಕದ್ದಾಗಿ ಯೆಣಿಸತಕ್ಕದ್ದಲ್ಲವು:—

(a) ಗವರ್ನಮೆಂಟಿನವರಿಂದ ತಗಾದೆ ಮಾಡಲ್ಪಟ್ಟ ಮೊಬಲಗೇಯಾಗಲಿ ಅವರಿಂದ ವಸೂಲ್ಮಾಡಲ್ಪಟ್ಟ ಮೊಬಲಗೇಯಾಗಲಿ ಕಂದಾಯದಬಗ್ಯೆ ನಿಯಮಿಸಲ್ಪಟ್ಟ ಮೊಬಲಗಿಗೆ ಜಾಸ್ತೀ ಇರುತ್ತೆಂಬ ಅಥವಾ ಅಂಥಾ ಮೊಬಲಗು, ಅಂಥಾ ತಗಾದೆಗೆ ಪಾವತೀಗೆ, ಅಥವಾ ವಸೂಲಿಗೆ ಪೂರ್ವ, ಪೂರಾ ಆಗಲಿ, ಕೆಲವುಮಟ್ಟಿಗಾಗಲಿ, ಪಾವತೀ ಮಾಡಲ್ಪಟ್ಟಿರುತ್ತೆಂಬ, ಅಥವಾ ವಾದಿಯಾಗಲಿ ಅವನು ಯಾರಿಗೆ ಪ್ರತಿನಿಧಿಯಾಗಿರು

ತ್ತಾನೋ ಆ ಮನುಷ್ಯನಾಗಲಿ ಅಂಥಾ ಮೊಬಲಗಿಗೆ ಗುರಿಯಾದವನಲ್ಲವೆಂಬ ಸಬಬಿನಮೇಲೆ ಸದರೀ ತಗಾದೇ ಮೊಬಲಗಿನ ವಿಷಯದಲ್ಲೇಯಾಗಲಿ ತಕರಾರನಿಶಿ ಪಾವತೀ ಮಾಡಲ್ಪಟ್ಟ ಮೊಬಲಗಿನ ವಿಷಯದಲ್ಲೇಯಾಗಲಿ ಚರ್ಚಿಸುವಬಗ್ಗೆ ಗವರ್ನಮೆಂಟಿನಮೇಲೆ ತರಲ್ಪಡುವ ದಾವೆಗಳು :—

(*b*) ರೆವಿನ್ಯು ಸರ್ವೇ ಅಥವಾ ಸೆಟಲ್‌ಮೆಂಟಿನ ಯಾವ ರಿಕಾರ್ಡಿನಲ್ಲಾಗಲಿ, ಗ್ರಾಮದ ಯಾವಕಾಗದ ಪತ್ರಗಳಲ್ಲಿಯಾಗಲಿ ಯಾವ ದಾಖಲೆಯಿಂದಾದರೂ ಪ್ರೈವೇಟ ಜನಗಳ ಹಕ್ಕು ಬಾಧಕವಾಗಬಹುದಾದಾಗ್ಯೂ ಅಂಥಾ ಯಾವ ಹಕ್ಕುದಾರಿಯನ್ನಾಗಲಿ, ಸ್ಥಾಪಿಸುವಬಗ್ಗೆ ಜನಗಳಲ್ಲಿ ಪರಸ್ಪರ ದಾವೆಗಳು ;

(*c*) ಈ ಸೆಕ್ಷನಿನ (*a*) ಕ್ಲಾಜಿನಲ್ಲಿ ವಿವರಿಸಲ್ಪಟ್ಟ ಸಬಬ್‌ಗಳ ಪೈಕೀ ಯಾವದರಿಂದಾಗಲಿ, ಕಮ್ಮಿ ಹಿಡುವಳೀದಾರರಿಂದ ಬರತಕ್ಕದ್ದಾಗಿ ತಗಾದೆ ಮಾಡಲ್ಪಟ್ಟ ಅಥವಾ ವಸೂಲ್‌ಮಾಡಲ್ಪಟ್ಟ ಬಾಕೀಗಳ ವಿಷಯದಲ್ಲಿ ಮೇಲ್ಪಟ್ಟ ಹಿಡುವಳೀದಾರರಿಗೂ ಕಮ್ಮಿ ಹಿಡುವಳೀದಾರರಿಗೂ ದಾವೆಗಳು ;

ಮತ್ತು, ಹಿಂದಿನ ಸೆಕ್ಷನಿನ (*h*) ಕ್ಲಾಜಿನಲ್ಲಿಯ ಯಾವ ಅಂಶವೂ, ಒಂದು ಪೂರಾ ಸರ್ವೇ ನಂಬರಾದ ಅಥವಾ ಒಂದು ಸರ್ವೇ ನಂಬರಿನ ಮಂಜೂರ್‌ಮಾಡಲ್ಪಟ್ಟ ಒಂದು ಹಿಸ್ಸೇಯಾದ ಯಾವದಾದರೂ ಜಮೀನಿನ ಸ್ವಾಧೀನತೆಯಬಗ್ಗೆ ಗವರ್ನಮೆಂಟಿನ ಮೇಲೆ ತರಲ್ಪಟ್ಟ ದಾವೆಯಲ್ಲದೆ ಇತರ ದಾವೆಗಳನ್ನು ದಾಖಲ್‌ಮಾಡಿಕೊಳ್ಳುವದರಲ್ಲಿ ಸಿವಿಲ್ ಕೋರ್ಟುಗಳನ್ನು ಅಡ್ಡೀಪಡಿಸತಕ್ಕದ್ದಾಗಿ ಯೆಣಿಸತಕ್ಕದ್ದಲ್ಲವು.

ರೆವಿನ್ಯು ಆಫೀಸರಗಳ ಮೇಲೆ ತರಲ್ಪಡುವ ಕೆಲವು ದಾವೆಗಳ ಆತಂಕ.

232. ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಕಾನೂನಿನ ನಿಬಂಧನೆಗಳನುಸರಿಸಿ ಯಥಾರ್ಥವಾಗಿ ಮಾಡಲ್ಪಟ್ಟ ಅಥವಾ ಆ ಮೇರೆ ಮಾಡತಕ್ಕದ್ದೆಂದು ಅವರಿಂದ ಹುಕ್ಕುಂಮಾಡಲ್ಪಟ್ಟ ಯಾವ ಕಾರ್ಯಕ್ಕೋಸ್ಕರವಾದರೂ ಯಾವ ಸಿವಿಲ್ ಕೋರ್ಟಿನಲ್ಲಾಗಲಿ ನುಕ್ಸಾನಬಗ್ಗೆ ದಾವೇಮಾಡಲ್ಪಡಲಿಕ್ಕೆ ರೆವಿನ್ಯು ಆಫಿಸರಗಳು ಗುರಿಯಾಗತಕ್ಕದ್ದಲ್ಲವು.

ಯಾವ ರೆವಿನ್ಯು ಆಫೀಸರರಾಗಲಿ, ಫರಾರಿಯಾದರೆ, ಅಥವಾ ಆತನ ಇಲಾಖಾ ಮೊಖ್ತೇಸರರು ನೇಮಿಸಿದಾಗ ಹಾಜರಾಗದೆ ಇದ್ದರೆ, ಮತ್ತು ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರು ಈ ರೆಗ್ಯುಲೇಷನಿನ ಅಥವಾ ತತ್ಕಾಲದೊಳಗೆ ಜಾರೀ ಇರುವ ಯಾವದಾದರೂ ಕಾನೂನಿನ ನಿಬಂಧನೆಗಳನುಸರಿಸಿ, ಸರ್ಕಾರ ಹಣಕ್ಕಾಗಿ, ಪತ್ರಗಳಗಾಗಿ ಅಥವಾ ಸ್ವತ್ತಿಗಾಗಿ ಸದರೀ ರೆವಿನ್ಯು ಆಫೀಸರರ ಮೇಲೆ ಅಥವಾ ಅವನ ಜಾಮೀನ್‌ದಾರಗಳ ಮೇಲೆ ಫಿರ್ಯಾದುಮಾಡಿದರೆ, ಅಂಥಾ ಡೆಪ್ಯುಟಿ ಕಮ್ಮಿಷನರು, ಅಂಥಾ ಆಫೀಸರಿಂದ ಅಥವಾ ಜಾಮೀನ್‌ದಾರರಿಂದ, ತಮ್ಮ ಮೇಲೆ ತರಲ್ಪಟ್ಟ ಯಾವದಾವೆಯಲ್ಲಾಗಲಿ, ತಗಾದೆ ಮಾಡಲ್ಪಟ್ಟ ಮೊಬಲಗ್ ಪೈಕೀ ಆಮೇರೆ ತಪ್ಪಿಸಿಕೊಂಡುಹೋದ, ಅಥವಾ ಹಾಜರಾಗಲಿಕ್ಕೆ ತಪ್ಪಿದ ಆಫಿಸರಿಂದ ಒಂದು ಭಾಗವಮಾತ್ರವೇ ಸಲ್ಲಬೇಕಾಗಿ ಇತ್ತೆಂದು, ಯಾವ ಭಾಗವೂ ಸಲ್ಲಬೇಕಾದ್ದಿಲ್ಲವೆಂದು ಅಥವಾ ಅವನಿಂದ ತಗಾದೇ ಮಾಡಲ್ಪಟ್ಟ, ಪತ್ರಗಳು ಅಥವಾ ಸ್ವತ್ತು ಆತನ ವಶದಲ್ಲಿಲ್ಲವೆಂದು ಕಾಣಬಂದಾಗ್ಯೂ, ನುಕ್ಸಾನಗಳನ್ನಾಗಲಿ, ಖರ್ಚುಗಳನ್ನಾಗಲಿ ಕೊಡಲಿಕ್ಕೆ ಗುರಿಯಾಗತಕ್ಕದ್ದಲ್ಲವು.

ರೆವಿನ್ಯು ಆಫೀಸರಗಳ ದಂಡನೆಯಾಗಲಿ, ಕ್ರಿಮಿನಲ್ ವಿಚಾರಣೆಯಾಗಲಿ, ಸಿವಿಲತರಫನಲ್ಲಿ ಅವರಮೇಲೆ ತರಲ್ಪಟ್ಟ ದಾವೆಗಳಿಗೆ ಆತಂಕವಲ್ಲವು.

233. ಯಾವ ತಕಸೀರಗೋಸ್ಕರವಾಗಲಿ, ಕರ್ತವ್ಯದಉಲ್ಲಂಘನೆಗೋಸ್ಕರವಾಗಲಿ, ಇಲಾಖಾ ಮೂಲಕವಾದ ದಂಡನೆಯನ್ನು ಯಾರಾದರೂ ಒಬ್ಬ ರೆವಿನ್ಯು ಆಫೀಸರರಿಗೆ ವಿಧಿಸುವ ಅಥವಾ, ಅಂಥಾ ತಕಸೀರಿಗಾಗಿ ಯಾ ಉಲ್ಲಂಘನೆಗಾಗಿ ಕ್ರಿಮಿನಲತರಫ ಫಿರ್ಯಾದಮಾಡಲ್ಪಡತಕ್ಕದ್ದನ್ನು ಮಂಜೂರ ಮಾಡುವ ತತ್ಕಾಲದಲ್ಲಿ ಜಾರೀಯಿರುವ ಯಾವ ಕಾನೂನಿನಲ್ಲಿಯಾಗಲಿ, ಇರುವ ಯಾವಅಂಶವೂ, ಅಂಥಾ ಆಫೀಸರರಮೇಲೆ ಸಿವಿಲಕೋರ್ಟಿನಲ್ಲಿ ಪಡೆಯಬಹುದಾದ ಯಾವ ಪರಿಹಾರವನ್ನಾಗಲಿ, ನಿರೋಧಿಸುವದಾಗಿ ಯೋಚಿಸತಕ್ಕದ್ದಲ್ಲವು.

ವಾದಿಯು ಅಪ್ಪೀಲ ಬಾಬತಿನ ಯತ್ನಗಳನ್ನೆಲ್ಲಾ ಮಾಡಿದ ಹೊರತು ದಾವೆಗಳು ದಾಖಲ ಮಾಡಲ್ಪಡತಕ್ಕದ್ದಲ್ಲವು.

234. ಒಬ್ಬ ರೆವಿನ್ಯು ಆಫೀಸರನಿಂದ ನಡಿಸಲ್ಪಟ್ಟ ಯಾವ ಕೃತ್ಯ ಯಾ ತಪ್ಪಿಹೋಗೋಣ ಯಿಂಥಾದ್ದಕ್ಕೋಸ್ಕರ ಗವರ್ನಮೆಂಟಿನವರ ಮೇಲೆ ತರಲ್ಪಡುವ ಯಾವ ದಾವೆಯಾಗಲಿ, ವಾದಿಯೂ ತನ್ನ ದಾವೆಯನ್ನು ತರುವದಕ್ಕೆ ಮೊದಲು ತತ್ಕಾಲದಲ್ಲಿ ಜಾರೀಯಿರುವ ಕಾನೂನಿನಿಂದ ಅಂಗೀಕರಿಸಲ್ಪಟ್ಟ ಮತ್ತು ಅಂಥಾ ದಾವೆಯನ್ನು ತರುವಬಗ್ಗೆ ಅವಕಾಶ ಕೊಡಲ್ಪಟ್ಟ ಕಾಲದೊಳಗೆ ದಾಖಲ್ಮಾಡಲಿಕ್ಕೆ ಸಾಧ್ಯವಾದ ಯೆಲ್ಲಾ ಅಪ್ಪೀಲುಗಳನ್ನೂ ದಾಖಲ್ಮಾಡಿದ್ದೇನೆಯೆಂದು ರುಜುವಾತ್ ಕೊಟ್ಟಹೊರ್ತು, ಸಿವಿಲಕೋರ್ಟುಗಳಿಂದ ಹಿಡಿಯಲ್ಪಡತಕ್ಕದ್ದಲ್ಲವು.

ಚೀಫ ಕೋರ್ಟಿನ ಫೈಸಲಬಗ್ಯೆ ಆಯಾ ಅಂಶಗಳನ್ನು ರಿಫರ ಮಾಡಲಿಕ್ಕೆ ಗವರ್ನಮೆಂಟಿನ ಅಧಿಕಾರ.

235. ಈ ಅಧ್ಯಾಯದ ನಿಬಂಧನೆಗಳಿಲ್ಲದೇ ಇದ್ದರೆ ಯಾವದಾವೆ, ಹಕ್ಕು ಯಾ ಆಕ್ಷೇಪಣೆಯೂ, ಒಂದು ಸಿವಿಲ ಕೋರ್ಟಿನಿಂದ ಧರ್ಯಾಪ್ತಿ ಯಾ ತನಿಖೆ ಮಾಡಲ್ಪಟ್ಟಿರಬಹುದೋ ಅಂಥಾ ಯಾವದಾದರೂ ದಾವೆ, ಹಕ್ಕು ಯಾ ಆಕ್ಷೇಪಣೆ ಇಂಥಾದ್ದರ ದರ್ಯಾಪ್ತಿ ಯಾ ತನಿಖೆಯಲ್ಲಿ ಹುಟ್ಟುವ ಯಾವ ಅಂಶದಲ್ಲಾಗಲಿ ಗವರ್ನಮೆಂಟಿನವರು ಚೀಫ್ ಕೋರ್ಟಿನ ಫೈಸಲನ್ನು ಪಡಿಯಲಿಕ್ಕೆ ಅಪೇಕ್ಷಿಸಿದರೆ, ಗವರ್ನಮೆಂಟಿನವರು ಸದರೀ ಅಂಶದ ಒಂದು ತಪಸೀಲುಪಟ್ಟಿಯನ್ನು ತಯಾರ್ಮಾಡಿಸಿ ಅಂಥಾ ಅಂಶವನ್ನು ಚೀಫಕೋರ್ಟಿನ ಫೈಸಲಬಗ್ಯೆ ರಿಫರು ಮಾಡಬಹುದು.

ಚೀಫ್ ಕೋರ್ಟಿನವರು, ತಮಗೆ ರಿಫರಾದ ಅಂಶದ ವಿಚಾರಣೆಯಬಗ್ಯೆ ಒಂದು ಸಮೀಪದ ದಿನವನ್ನು ನಿಶ್ಚಯಿಸಿ ಅಂಥಾ ದಿನದ ನೋಟೀಸನ್ನು ಕೋರ್ಟು ಮಾಡುವಸ್ಥಳದಲ್ಲಿಡಿಸತಕ್ಕದ್ದು.

ಮೊಕದ್ದಮೆಯ ಪಕ್ಷಿಗಾರರು ರೂಬರೂ ಆಗಲಿ, ಅವರುಗಳ ಅಡ್ವೋಕೇಟ ಯಾ ಪ್ಲೀಡರಗಳಮೂಲಕವಾಗಲಿ, ಚೀಫ್ ಕೋರ್ಟಿನಲ್ಲಿ ಹಾಜರಾಗಿ ವಿಚಾರಣೆ ಮಾಡಲ್ಪಡಬಹುದು.

ಚೀಫ್ ಕೋರ್ಟಿನವರು ಮೊಕದ್ದಮೆಯನ್ನು ಕೇಳಿ ವಿಮರ್ಶಿಸಿದಲ್ಲಿ, ಸದರೀ ಕೋರ್ಟಿನ ಫೈಸಲಿನಕಲನ್ನು ಅದರ ಕಾರಣಗಳು ಸಹಿತ ಕೋರ್ಟು ಮೊಹರ

ನೊಡನೆ, ಮೊಕದ್ದಮೆ ರಿಫರ್ ಮಾಡಿದ ಗವರ್ನಮೆಂಟಿಗೆ ಕಳುಹಿಸತಕ್ಕದ್ದು. ಮೊಕದ್ದಮೆಯು, ಅಂಥಾ ಫೈಸಲಿಗೆ ಅನುಗುಣವಾಗಿ ವ್ಯವಸ್ಥೆ ಮಾಡಲ್ಪಡತಕ್ಕದ್ದು.

ಅಂಥಾ ಯಾವ ತಪಸೀಲ್‌ಪಟ್ಟಿಯಾಗಲಿ ಸಾಕಾದ ತಪಸೀಲ್‌ನಿಂದ ತಯಾರ್ ಮಾಡಲ್ಪಟ್ಟಿಲ್ಲವೆಂದು ಚೀಫ್ ಕೋರ್ಟಿನವರು ಭಾವಿಸಿದರೆ, ಸದರೀ ಚೀಫ್ ಕೋರ್ಟಿನವರು ಸದರೀ ತಪಸೀಲ್‌ಪಟ್ಟಿಯನ್ನು ತಿದ್ದುಪಾಟುಬಗ್ಗೆ ವಾಪಸ್ ಮಾಡಬಹುದು.

ಅಂಥಾ ಯಾವ ರೆಫರೆನ್ಸಿಗೋಸ್ಕರವಾಗಲಿ, ಖರ್ಚು ಯೇನಾದರೂ ಉಂಟಾದರೆ, ಪ್ರತಿ ಮೊಕದ್ದಮೆಯಲ್ಲಿಯೂ, ಚೀಫ್ ಕೋರ್ಟಿನವರು ನಿಯಮಿಸುವ ಪ್ರಕಾರ ನಡಿಸಲ್ಪಡತಕ್ಕದ್ದು.

ಅಧಿಕಾರವನ್ನು ಕುರಿತ ಸಂಗತಿಗಳನ್ನು ಚೀಫ್ ಕೋರ್ಟಿಗೆ ರಿಫರ್‌ಮಾಡಲಿಕ್ಕೆ ಸಿವಿಲ್ ಜಡ್ಜೀಯವರ ಅಧಿಕಾರ.

236. ಒಂದು ಸಿವಿಲ್‌ಕೋರ್ಟಿನಲ್ಲಿ ದಾಖಲ್ಮಾಡಲ್ಪಟ್ಟ ಯಾವ ದಾವೆಯಲ್ಲಾಗಲಿ, ಯಾವ ಅಪ್ಪೀಲ್‌ನಲ್ಲಾಗಲಿ, ಜಡ್ಜಿಯು, ತಾನು ಈ ಅಧ್ಯಾಯದಿಂದ, ಸದರೀ ದಾವೆಯನ್ನಾಗಲೀ ಅಪ್ಪೀಲನ್ನಾಗಲಿ, ವಿಮರ್ಶಿಸುವದರದೆಸೆಯಿಂದ ಅಡ್ಡೀ ಮಾಡಲ್ಪಟ್ಟಿರುತ್ತಾರೋ ಯೇನೋ ಯೆಂದು ಸಂದೇಹಪಟ್ಟರೆ, ಆ ಅಂಶವನ್ನು ಚೀಫ್ ಕೋರ್ಟಿಗೆ ರಿಫರ್ ಮಾಡಬಹುದು.

ಚೀಫ್ ಕೋರ್ಟಿನವರು, ರಿಫರ್‌ಮಾಡುವ ಜಡ್ಜಿಯನ್ನು ಮೊಕದ್ದಮೆಯನ್ನು ನಡಿಸುವಂತೆಯಾಗಲಿ, ದಾವಾ ಅರ್ಜೀಯನ್ನು ವಾಪಸ್‌ಮಾಡುವಂತೆಯಾಗಲೀ ಹುಕ್ಕುಂ ಮಾಡಬಹುದು.

ಅಂಥಾ ಯಾವ ರಿಫರೆನ್ಸಿನ ಮೇಲಾಗಲಿ, ಚೀಫ್ ಕೋರ್ಟಿನ ಹುಕ್ಕುಂ ಆಖೈರಾದ್ದಾಗಿರತಕ್ಕದ್ದು.

ಕೋರ್ಟಿನ ನ್ಯಾಯಾಧಿಪರ ಸೇರಿಕೆ.

237. ಚೀಫ್ ಕೋರ್ಟಿನಲ್ಲಿ ಮೂವರು ಅಥವಾ ಹೆಚ್ಚು ಮಂದಿ ಜಡ್ಜೀಗಳು ಯಿದ್ದಲ್ಲಿ 235ನೇ ಅಥವಾ 236ನೇ ಸೆಕ್ಷನ್ ಅನುಸರಿಸಿ ಮಾಡಲ್ಪಡುವ ಪ್ರತಿ ರಿಫರೆನ್ಸೂ ಅಂದರೆ ವಿಚಾರಣೆಗಾಗಿ ಕಳುಹಿಸಲ್ಪಡುವ ಪ್ರತಿ ಮೊಕದ್ದಮೆಯೂ, ಚೀಫ್ ಜಡ್ಜೀಯವರು ಆಗಿಂದಾಗ್ಯೆ ನಿಯಮಿಸುವಂತೆ ಮೂರು ಮಂದಿಗೆ ಕಡಮೆ ಯಿಲ್ಲದ ಜಡ್ಜೀಗಳುಳ್ಳ ಒಂದು ಕೋರ್ಟಿನಿಂದ ವಿಚಾರಿಸಲ್ಪಡತಕ್ಕದ್ದು.

ಗವರ್ನಮೆಂಟ್ ವ್ಯಾಜ್ಯಗಳನ್ನು ಡಿಸ್ಟ್ರಿಕ್ಟು ಜಡ್ಜೀಯವರಿಗೆ ರಿಫರ್ ಮಾಡುವಣ.

238. ಗವರ್ನಮೆಂಟಿನವರಾಗಲಿ, ಗವರ್ನಮೆಂಟಿನ ಯಾವ ಆಫೀಸರರಾಗಲಿ, ತಮ್ಮ ಉದ್ಯೋಗ ಧರ್ಮದಲ್ಲಿ ಯಾವ ದಾವೇಯಲ್ಲಿ ಕಕ್ಷಿಗಾರರಾಗಿರುತ್ತಾರೋ ಅಂಥಾ ದಾವೇಯನ್ನು, ಮುನ್ಸಿಫಾಗಲಿ, ಸಬಾರ್ಡಿನೇಟ್ ಜಡ್ಜೀಯಾಗಲಿ, ಸ್ಮಾಲ್‌ಕಾಜ್ ಕೋರ್ಟಾಗಲಿ, ಹಿಡಿಯಲೂ ಕೂಡದು ರಿಜಿಸ್ಟರ್ ದಾಖಲ್ ಮಾಡಿಕೊಳ್ಳಲೂ ಕೂಡದು. ಆದರೆ, ಅಂಥಾ ಪ್ರತಿ ಮೊಕದ್ದಮೆಯಲ್ಲಿಯೂ ಅಂಥಾ ಮುನ್ಸಿಫಾಗಲಿ, ಜಡ್ಜಿ ಯಾ ಕೋರ್ಟಾಗಲಿ, ವಾದಿಯನ್ನು ಡಿಸ್ಟ್ರಿಕ್ಟು ಜಡ್ಜಿಗೆ ರಿಫರ್ ಮಾಡತಕ್ಕದ್ದು: ಅಂಥಾ ಮೊಕದ್ದಮೆಯು ಸದರೀ ಡಿಸ್ಟ್ರಿಕ್ಟು ಜಡ್ಜಿಯ ಕೋರ್ಟಿನಲ್ಲಿಯೇ ದಾಖಲಾಗತಕ್ಕದ್ದು.

ಗವರ್ನಮೆಂಟಿನವರು ಪ್ರತಿವಾದ ಮಾಡಿದ ಮೊಕದ್ದಮೆಗಳಲ್ಲಿ ಅವರ ಸ್ವಾತಂತ್ರ್ಯ.

239. ಯಾವ ಡಿಸ್ಟ್ರಿಕ್ಟು ಕೋರ್ಟಿನಲ್ಲಾದರು, ಗವರ್ನಮೆಂಟಿನವರ ಮೇಲೆಅಂದರೆ,

ಯಾವ ರೆವಿನ್ಯೂ ಆಫೀಸರರ ಮೇಲೇಯಾಗಲಿ, ದಾವೇ ತರಲ್ಪಟ್ಟು, ಅದರ ಡಿಫೆನ್ಸ್ ಅಂದರೆ ಪ್ರತಿವಾದವನ್ನು ಗವರ್ನಮೆಂಟಿನವರು ವಹಿಸುವ ಪಕ್ಷಕ್ಕೆ,

ಸದರೀ ಗವರ್ನಮೆಂಟಿನ ಒಬ್ಬ ಸೆಕ್ರೆಟೇರಿಯಿಂದ ದಸ್ತಖತ್ ಮಾಡಲ್ಪಟ್ಟ, ಒಂದು ಸರ್ಟಿಫಿಕೇಟ ಮೂಲಕ ಅಂಥಾ ಯಾವದಾದರೂ ದಾವೆಯ ವಿಚಾರಣೆಯು, ಅಂಥಾ ಕೋರ್ಟಿನಲ್ಲಿ ಆಗ್ಯೆ ವಿಚಾರಣೆಯಲ್ಲಿದ್ದ ಯಾವದಾದರೂ ಯಿತರ ದಾವೆಯ ಅಥವಾ ಸಿವಿಲ್ ನಡವಳಿತದ ವಿಚಾರಣೆಗಿಂತ ಮುಂಚೆ ನಡಿಯತಕ್ಕದ್ದೆಂತ ಕೇಳುವದು ಗವರ್ನಮೆಂಟಿಗೆ ನ್ಯಾಯವಾಗಿರತಕ್ಕದ್ದು ಮತ್ತು ಸದರೀ ಕೋರ್ಟು ಸದರೀ ವಿಷಯವನ್ನು ಜಾರೀಯಲ್ಲಿ ತರತಕ್ಕದ್ದು.

ಈ ಸೆಕ್ಷನಿಂದ ಗವರ್ನಮೆಂಟಿಗೆ ಉಂಟು ಮಾಡಲ್ಪಟ್ಟ ಸ್ವಾತಂತ್ರ್ಯವು, ಜರೂರೀಯಾತ್ ಬದಲಾವಣೆಗಳು ಮಾಡಲ್ಪಟ್ಟು, ಈ ಸೆಕ್ಷನಲ್ಲಿ ವಿಧಿಸಲ್ಪಟ್ಟ ಮೇರೆ ಅಂಥಾ ಯಾವ ದಾವೆಯಲ್ಲಾಗಲಿ ಯಾವಫೈಸಲಿನ ಮೇಲಾಗಲಿ ತರಲ್ಪಡುವ ಯಾವ ಅಪ್ಪೀಲಿಗಾಗಲಿ, ಯೆರಡನೆಯ ಅಪ್ಪೀಲಿಗಾಗಲಿ ಲಗಾವಾಗತಕ್ಕದ್ದು.

15ನೇ ಅಧ್ಯಾಯ.

ಚಿಲ್ಲರೇ ವಿಷಯ.

ಮುಂ. ರೆ. ಕೋ. 213ನೇ ಸೆಕ್ಷನ.

ಮ್ಯಾಪುಗಳುಯಾನೇ ನಕ್ಷೆಗಳು, ಜಮಿನ್ ರಿಜಿಸ್ಟರಗಳು ಗ್ರಾಮ ಲೆಖ್ಖಗಳು ವಗ್ಯೆರೇ ತನಖೀ ಮಾಡಲ್ಪಡಲಿಕ್ಕೆ ಖುಲ್ಲಾ ಇರತಕ್ಕದ್ದು.

240. ಗವರ್ನಮೆಂಟಿನವರು ಈ ಬಗ್ಯೆ ಆಗಿಂದಾಗ್ಯೆ ವಿಧಿಸಬಹುದಾದ ಅಂಥಾ ರೂಲ್ಸಿಗೂ, ಅಂಥಾ ರುಸುಂಗಳ ಪಾವತೀಗೂ ಒಳಪಟ್ಟು, ತಮಾಂ ಮ್ಯಾಪ ಯಾನೆ ನಕಷೆಗಳೂ, ಸರ್ವೇ ರಿಕಾರ್ಡಗಳೂ, ಗ್ರಾಮಲೆಖ್ಖಗಳೂ, ಜಮಿನ್ ರಿಜಿಸ್ಟರಗಳೂ, ಯುಕ್ತ ಕಾಲಗಳಲ್ಲಿ ಜನಗಳು ನೋಡಲಿಕ್ಕೆ ಖುಲ್ಲಾ ಇರತಕ್ಕದ್ದಲ್ಲದೆ ಅಂಥಾ ನಕಷೆಗಳು, ರಿಜಿಸ್ಟರಗಳು, ಲೆಖ್ಖಗಳು, ಇವುಗಳ ಬಾಬತು ಸರಟಿಫೈ ಮಾಡಲ್ಪಟ್ಟ ಎಕಸ್ಟ್ರಾಕ್ಟುಗಳಾಗಲಿ, ಸರಟಿಫೈ ಮಾಡಲ್ಪಟ್ಟ ಅವುಗಳ ನಕ್ಕಲಗಳಾಗಲಿ, ಆ ಬಗ್ಯೆ ದರಖಾಸ್ತು ಮಾಡುವ ತಮಾಂ ಜನಗಳಿಗೂ ಕೊಡಲ್ಪಡತಕ್ಕದ್ದು.

ಮುಂ. ರೆ. ಕೋ. 214ನೇ ಸೆಕ್ಷನ.

ರೂಲ್ಸನ್ನು ಗವರ್ನಮೆಂಟಿನವರು ಯೇರ್ಪಾಡು ಮಾಡತಕ್ಕದ್ದು.

241. ಗವರ್ನಮೆಂಟಿನವರು ಈ ರೆಗ್ಯೂಲೇಷನಿಗೆ ವಿರುದ್ಧವಲ್ಲದ ರೂಲ್ಸನ್ನಾಗಲಿ, ಹುಕ್ಕುಂಗಳನ್ನಾಗಲಿ, ಆಗಿಂದಾಗ್ಯೆ ಮಾಡಬಹುದು, ಆಗಿಂದಾಗ್ಯೆ ಬದಲಾಯಿಸಬಹುದು, ಹೊಡದು ಹಾಕಲೂಬಹುದು, ಹ್ಯಾಗಂದರೆ:—

(*a*) 21ನೇ ಸೆಕ್ಷನ ಅನುಸರಿಸಿ ಮೊಕರರ ಮಾಡಲ್ಪಟ್ಟ ಸಿಬ್ಬಂದಿಗಳಿಗೆ ಶೇರಿದ ತಮಾಂ ಇಸಂಗಳ ಅವಶ್ಯಕಗಳಾದ ಯೋಗ್ಯತೆಗಳನ್ನು ನಿರ್ಣಯಿಸುವ ಬಗ್ಯೆ;

679

(b) 32ನೇ ಸೆಕ್ಷರ್ಷ ಅನುಸರಿಸಿ ರೆವಿನ್ಯು ಆಫೀಸರಗಳಿಗೆ ಜುರ್ಮಾನೇ ವಿಧಿಸುವ, ಕಂಷರಾ ಮಾಡುವ, ಸಸ್‌ಪೆಂಡ ವ ತಗ್ಯೆರಮಾಡುವ ಅಧಿಕಾರವನ್ನು ಕ್ರಮಪಡಿಸುವಬಗ್ಯೆ;

(c) ಜಮೀರ್ನ ಕಂದಾಯಕೊಡಲಿಕ್ಕೆ ಗುರಿಯಾದ ಜಮೀನು ಯಾವ ಬಗ್ಯೆ 53ನೇ ಸೆಕ್ಷರ್ಷ ಅನುಸರಿಸಿ ವಿನಿಯೋಗಿಸಲ್ಪಡಬಹುದೋ ಅವುಗಳನ್ನು ವಿಧಿಸುವ ಬಗ್ಯೆ;

(d) 55ನೇ ಮತ್ತು 117ನೇ ಸೆಕ್ಷರ್ಷಗಳನುಸರಿಸಿ ಜಮೀರ್ನ ಕಂದಾಯದ ವಿಷಯದಲ್ಲಿ ಜಮೀನಿಗೆ ಕಂದಾಯ ವಿಧಿಸುವ ಪದ್ಧತಿಯನ್ನೂ ರೀತಿಯನ್ನೂ ಕ್ರಮಪಡಿಸುವಬಗ್ಯೆ;

(e) 59ನೇ ಸೆಕ್ಷರ್ಷ ಅನುಸರಿಸಿ ಕಳಕೊಳ್ಳಲ್ಪಟ್ಟ ಅನುಭೋಗಗಳ ಅಥವಾ ಪರಭಾರೇಯಾದ ಹಿಡುವಳೀಗಳ ವಿಲಾವಾರೀಬಗ್ಯೆ;

(f) ಬಗರ್ ಹುಕ್ಕುಂ ಹಿಡುವಳೀಯಲ್ಲಿ ಪಡಕೊಳ್ಳಲ್ಪಟ್ಟಿರುವ ಜಮೀನು, ಬೇಸಾಯಕ್ಕೆ ಸಂಬಂಧಿಸದ ಯಾವದಾದರೂ ಕೆಲಸಕ್ಕೆ ವಿನಿಯೋಗಿಸಲ್ಪಟ್ಟರೆ, 64ನೇ ಸೆಕ್ಷರ್ಷ ಅನುಸರಿಸಿ ವಸೂಲಾಗತಕ್ಕ ಜುರ್ಮಾನೆಯು ಹೆಚ್ಚು ಮೊಬಲಗನ್ನು ನಿಶ್ಚಯಿಸುವ ಬಗ್ಯೆ;

(g) ಯಾವದಾದರೂ ಸರ್ವೇ ಸೆಟಲ್‌ಮೆಂಟಿನ ವಿಚಾರಣೆಯಬಗ್ಯೆ;

(h) ಈ ರೆಗ್ಯೂಲೇಷರ್ನ 13ನೇ ಅಧ್ಯಾಯ ಅನುಸರಿಸಿ ಅಪ್ಪೀಲ್‌ಗಳು ಬರೆಯಲ್ಪಟ್ಟು ಹಾಜರ ಮಾಡಲ್ಪಡಬೇಕಾದ ನಮೂನೆ ವ ರೀತಿ ಇವುಗಳನ್ನು ವಿಧಿಸುವ ಬಗ್ಯೆ;

(i) ಈ ರೆಗ್ಯೂಲೇಷರ್ನ ಜಾರೀಗೆ ತರಲ್ಪಡುವದಕ್ಕೆ ಸಂಬಂಧಿಸದ ವಿಷಯಗಳಲ್ಲಿ ಅಥವಾ ಅದರಲ್ಲಿ ಸ್ಪಷ್ಟವಾಗಿ ವಿಧಿಸಲ್ಪಡದಸಂಗತಿಗಳಲ್ಲಿ ಸಾಧಾರಣವಾಗಿ ತಮಾಮ್ ಜನಗಳ ನಡವಡಿಕೆಬಗ್ಯೆ;

ಮೇಲೆಕಂಡ (c), (d), (e), (f), ಅಥವಾ (i) ಈ ಕ್ಲಾಜ್‌ಗಳಪೈಕಿ ಯಾವದನುಸರಿಸಿಯಾಗಲಿ ಮಾಡಲ್ಪಟ್ಟ ರೂಲ್ಸಾಗಲಿ, ಹುಕ್ಕುಂಗಳಾಗಲಿ, ಸಾಧಾರಣವಾಗಿ ಅಥವಾ ಯಾವದಾದರೂ ಒಂದು ವಿಶೇಷ ಸಂಗತಿಯಲ್ಲಿ ಮಾಡಲ್ಪಡಬಹುದು.

ಮುಂ ರೆ. ಕೋ. 215ನೇ ಸೆಕ್ಷರ್ಷ

ಕೆಲವು ರೂಲ್ಸ ಪ್ರಕಟಿಸಲ್ಪಡತಕ್ಕದ್ದು.

242. ಹಿಂದಿನ ಕಡೇಸೆಕ್ಷರ್ಷ ಅನುಸರಿಸಿ ಗವರ್ನಮೆಂಟಿನಿಂದ ಮಾಡಲ್ಪಟ್ಟ ತಮಾಮ್ ಒಟ್ಟುರೂಲ್ಸ ಯಾ ಹುಕ್ಕುಂಗಳು, ಪ್ರಕಟಿಸಲ್ಪಡತಕ್ಕದ್ದು, ಪ್ರಕಟಿಸಲ್ಪಟ್ಟಮೇಲೆ ರದ್ದು ಮಾಡಲ್ಪಡುವ ಅಥವಾ ತಿದ್ದುಪಡಿಮಾಡಲ್ಪಡುವತನಕ ಕಾನೂರ್ನನಂತೆ ಜಾರೀಲಿ ಇರತಕ್ಕದ್ದು.

ದಂಡನೆಗಳಬಗ್ಯೆ ಏರ್ಪಾಟು ಮಾಡಲಿಕ್ಕೆ ಅಧಿಕಾರ.

243. ಇಂಥಾ ಯಾವದಾದರೂ ಒಟ್ಟು ರೂಲನ್ನು ಮಾಡುವದರಲ್ಲಿ ಅದರ ಉಲ್ಲಂಘನೆಗೆ ಸದರೀ ಉಲ್ಲಂಘನೆಯಿಂದ ಉಂಟಾಗುವ ಇತರ ಫಲಗಳಲ್ಲದೆ ಒಬ್ಬ ಮಾಜಿಸ್ಟ್ರೇಟು ಮುಂದೆ ತಪ್ಪಿತ ಅಪಾದಿಸಲ್ಪಟ್ಟ ಮೇಲೆ ಇಂಡಿಯರ್ನ ಪಿನಲ್ ಕೋಡಿನ ಅರ್ಥರೀತ್ಯ ಯೆರಡುಬಗೆಯ ಸಜಾದಲ್ಲಿ ಒಂದು ತಿಂಗಳಿಗೆ ಮೀರದ

ಯಾವ ಸಜಾವನ್ನಾಗಲಿ, 500 ರೂಪಾಯಿನ ಜುರ್ಮಾನೆಯನ್ನಾಗಲಿ, ಇವುಗಳೆರಡನ್ನಾಗಲಿ ದಂಡನೆಯಂತೆ ಶೇರಿಸತಕ್ಕದ್ದು ಗವರ್ನಮೆಂಟಿಗೆ ನ್ಯಾಯವಾಗಿರತಕ್ಕದ್ದು.

ಮುಂ. ರೆ. ಕೋ. 216ನೇ ಸೆಕ್ಷನ್.

ಪರಭಾರೇಯಾದ ಗ್ರಾಮುಗಳ ವಿಷಯದಲ್ಲಿ ೮, ೯, ೧೦ನೇ ಅಧ್ಯಾಯಗಳು ಎಷ್ಟರವಟ್ಟಿಗೆ ಲಗಾವಾಗತಕ್ಕವೆಂಬದು.

244. 128ನೇ ಸೆಕ್ಷನ್‌ನಲ್ಲಿಯೂ, ಈ ಸೆಕ್ಷನ್‌ನಲ್ಲಿ ಮುಂದೆಯೂ, ಅನ್ಯಥಾ ವಿಧಿಸಲ್ಪಟ್ಟಿರುವಂತೆ ವಿನಾ, ಈ ರೆಗ್ಯೂಲೇಷನಿನ 8ರ ಮೊದಲು 10ರವರಿಗಿನ ಅಧ್ಯಾಯಗಳ ನಿಬಂಧನೆಗಳು, ಅಂಥಾ ಯಾವದಾದರೂ ಗ್ರಾಮದ ಸರಹದ್ದುಗಳನ್ನಾಗಲಿ, ಅಂಥಾ ಗ್ರಾಮುದಿಂದ ಸಲ್ಲತಕ್ಕ ಯಾವದಾದರೂ ಕ್ವಿಟೆರೆಂಟನ್ನಾಗಲಿ, ಯಾವದಾದರೂ ಲೋಕಲ್ ಯಾ ನೀರುಸರ್ದಿ ತೀರ್ವೆಗಳನ್ನಾಗಲಿ, ನಿಶ್ಚಯಿಸುವಬಗ್ಗಾಗಿಯೂ ಮತ್ತು ಇವುಗಳಿಗೆ ಸಂಬಂಧಪಟ್ಟ ಯಾವದಾದರೂ ತಕರಾರುಗಳನ್ನು ನಿರ್ಣಯಿಸುವಬಗ್ಗಾಗಿ ಹೊರ್ತು ಪರಭಾರೇಯಾದ ಯಾವ ಗ್ರಾಮಕ್ಕೂ ಲಗಾವ್ ಮಾಡಲ್ಪಡತಕ್ಕದ್ದಲ್ಲವು, ಆದರೆ ಸದರೀ ಅಧ್ಯಾಯಗಳ ನಿಬಂಧನೆಗಳು ಈ ಕೆಳಗೆ ಬರುವ ಸಂಗತಿಗಳಿಗೆ ಲಗಾವಾಗತಕ್ಕದ್ದು—

(a) ಪರಭಾರೇಯಾದ ಒಂದು ಗ್ರಾಮುದ ಎಲ್ಲೆಗಳೊಳಗೆ ಇರುವ ಪರಭಾರೇಯಾಗದ ತಮಾಂ ಜಮೀನ್ಗಳು ;

(b) ಯಾವ ಗ್ರಾಮುಗಳ ಗೊತ್ತಾದ ಭಾಗವು ಪರಭಾರೇ ಮಾಡಲ್ಪಟ್ಟು ಪರಂತು ಮಿಕ್ಕ ಭಾಗವು ಪರಭಾರೇ ಆಗದೇ ಇರುತ್ತೋ ಅಂಥಾ ಗ್ರಾಮುಗಳು ;

(c) ಯಾವ ಗ್ರಾಮುಗಳ ಹಿಡುವಳೀದಾರರು, ಕಂದಾಯದ ಪೈಕಿ ಒಂದು ಗೊತ್ತಾದ ಮೊಬಲಗಿಗೆ ಅರ್ಹರಾಗಿ ಪರಂತು ಯಾವ ಗ್ರಾಮುಗಳ ಬಾಬತು, ಅಂಥಾ ಮೊಬಲಗಿನ ಮೇಲೆ ಜಾಸ್ತೀ ಏನಾದರೂ ಇದ್ದರೆ ಅದು ಗವರ್ನಮೆಂಟಿಗೆ ಸಂಬಂಧಿಸಿ ಇರುತ್ತೋ ಅಂಥಾ ಪರಭಾರೇಯಾದ ಗ್ರಾಮುಗಳು.

ಆದರೆ, ಅಬಗ್ಯೆ ಅಂಥಾ ಯಾವದಾದರೂ ಗ್ರಾಮುದ ಹಿಡುವಳೀದಾರನಿಂದ ಬರವಣಿಗೆಯಲ್ಲಿ ದರಖಾಸ್ತು ಮಾಡಲ್ಪಟ್ಟಲ್ಲಿ ಸದರೀ ಅಧ್ಯಾಯಗಳ ನಿಬಂಧನೆಗಳ ಪೈಕಿ ವಿಶಿಷ್ಟವನ್ನಾಗಲಿ, ಭಾವವನ್ನಾಗಲಿ, ಅಂಥಾ ಯಾವ ಗ್ರಾಮುಕ್ಕಾಗಲಿ, ವ್ಯಾಪಿಸುವದನ್ನು ನಿಯಮಿಸುವದು ಗವರ್ನಮೆಂಟಿಗೆ ನ್ಯಾಯವಾಗಿರತಕ್ಕದ್ದು.

ಮುಂ. ರೆ. ಕೋ. 217ನೇ ಸೆಕ್ಷನ್.

ಪರಭಾರೇಯಾದ ಗ್ರಾಮುಗಳಲ್ಲಿ ಹಿಡುವಳೀದಾರರು.

245. ಒಂದು ಪರಭಾರೆಯಾದ ಗ್ರಾಮುದಲ್ಲಿ ಇದರ ಕೆಳೇ ಸೆಕ್ಷನಿನ, ಅಥವಾ ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಕಾನೂನಿನ ನಿಬಂಧನೆಗಳನುಸರಿಸಿ, ಒಂದು ಸರ್ವೇ ಸೆಟಲ್‌ಮೆಂಟ್ ಜಾರೀಯಲ್ಲಿ ತರಲ್ಪಟ್ಟರೆ; ಯಾವ ಜಮೀನ್ಗಳಿಗೆ ಅಂಥಾ ಸೆಟಲ್‌ಮೆಂಟು ವ್ಯಾಪಿಸುತ್ತೋ ಅಂಥಾ ತಮಾಂ ಜಮೀನ್ಗಳ ಹಿಡುವಳೀದಾರರೂ ಈ ರೆಗ್ಯೂಲೇಷನಿನ ನಿಬಂಧನೆಗಳನುಸರಿಸಿ, ಪರಭಾರೇಯಾಗದ ಗ್ರಾಮುಗಳ ಹಿಡುವಳೀದಾರರ ತರೀಕ್, ತಮ್ಮ ಹಿಡುವಳೀಯಲ್ಲಿ ಇರುವ ಜಮೀನ್ಗಳ ವಿಷಯದೊಳಗೆ, ಬದಸ್ತೂರ್ ಹಕ್ಕುದಾರಿಗಳನ್ನು ಪಡೆದು ಬದಸ್ತೂರ್ ಜವಾಬ್‌ದಾರೀಗಳಿಗೆ ಗುರಿಯಾಗತಕ್ಕದ್ದು, ಮತ್ತು ಹಿಡುವಳೀದಾರರು ಮತ್ತು ರಿಜಿಸ್ಟರ್ ಮಾಡ

ಲ್ಪಟ್ಟ ಹಿಡುವಳೀದಾರರು ಇವರುಗಳಿಗೆ ಸಂಬಂಧಿಸುವ ಈ ರೆಗ್ಯೂಲೇಷನಿನ ನಿಬಂಧನೆಗಳೆಲ್ಲಾ ಸಾಧ್ಯವಾಗಿರುವಷ್ಟು ಮಟ್ಟಿಗೆ, ಅವರಿಗೆ, ಪರಭಾರೆಯಾದ ಗ್ರಾಮದ ಹಿಡುವಳೀದಾರರಿಗೆ ಲಗಾವಾಗತಕ್ಕದ್ದು.

ಮುಂ. ರೆ. ಕೋ. 218ನೇ ಸೆಕ್ಷನ್.

ಈ ರೆಗ್ಯೂಲೇಷನಿನ ಏರ್ಪಾಡು.

246. ಪರಭಾರೇ ಯಾಗದ ಜಮೀನಿಗೆ ಅಥವಾ ಪರಭಾರೇ ಯಾಗದ ಜಮೀನಿನ ಹಿಡುವಳೀದಾರರಿಗೆ ಮಾತ್ರವೆ ಶಬ್ದತಃ ಲಗಾವಾಗತಕ್ಕ ಈ ರೆಗ್ಯೂಲೇಷನಿನಲ್ಲಿ ಕಂಡ ಯಾವ ಅಂಶವೂ, ಪರಭಾರೇಯಾದ ಜಮೀನನ್ನಾಗಲಿ, ಪರಭಾರೆಯಾದ ಜಮೀನಿನ ಹಿಡುವಳೀದಾರರ ಹಕ್ಕುಗಳನ್ನಾಗಲಿ, ಅಥವಾ ಅಂಥಾ ಯಾವ ಜಮೀನಿನ ವಿಷಯದಲ್ಲಾದರೂ ಗವರ್ನ್ಮೆಂಟಿನ ಹಕ್ಕುಗಳನ್ನಾಗಲಿ, ಭಾಧಿಸತಕ್ಕದ್ದಾಗಿ ಎಣಿಸಲ್ಪಡತಕ್ಕದ್ದಲ್ಲವು. ಮತ್ತು, ಪರಭಾರೇಯಾಗದ ಜಮೀನಿಗೆ ಮಾತ್ರ ಶಬ್ದತಃ ಸಂಬಂಧಿಸುವ ಈ ರೆಗ್ಯೂಲೇಷನಿನ ಯಾವ ನಿಬಂಧನೆಯಿಂದಾಗಲಿ, ಪರಭಾರೇಯಾದ ಜಮೀನಿನ ಯಾವನಾದರೂ ಹಿಡುವಳೀದಾರನಿಗೆ ಅನುಕೂಲವಾದ ಯಾ ಬಾಧಕವಾದ ಊಹೆ ಯಾವದಾದರೂ ಉಂಟಾಗುವದೆಂದು ಭಾವಿಸತಕ್ಕದ್ದಲ್ಲವು.

ಕೆ. ಶೇಷಾದ್ರಿ ಅಯ್ಯರ್,
ಮೈಸೂರ್ ಸೀಮೆಯ ದಿವಾನರು.

682

A ಷೆಡ್ಯೂಲ್.

(2ನೇ ಸೆಕ್ಷನ್.)

1. ಮೈಸೂರು ಸೀಮೆಯಲ್ಲಿ, ಸನ್ 1865ನೇ ಇಸವಿಯ 1ನೇ, ಸನ್ 1868ನೇ ಇಸವಿಯ 4ನೇ, ಮುಂಬೈ ಆಕ್ಟುಗಳನ್ನು ಜಾರೀಗೆ ತರುವಬಗ್ಗೆ ಹುಟ್ಟಿದ ಸಿಂಲಾ, 1869ನೇ ಇಸವೀ ಏಪ್ರೈಲ್ 30ನೇ ಮುಕ್ಕಾಂ 83ನೇ ನಂಬರ್ ಇಂಡ್ಯಾಗವರ್ನ್‌ಮೆಂಟಿನ ಇಸ್ತಿಹಾರ್‌ನಾಮೆ.

2. ಸನ್ 1869ನೇ ಇಸವಿಯ 3ನೇ ಮದರಾಸ್ ಆಕ್ಟಿನ ನಿಬಂಧನೆಗಳನ್ನು ಮೈಸೂರು ಸೀಮೆಗೆ ಲಗಾವ್ ಮಾಡುವ 1869ನೇ ಇಸವಿ ಆಗಸ್ಟು 27ನೇ ಮುಕ್ಕಾಂ 254ನೇ ನಂಬರ್ ಇಂಡ್ಯಾಗವರ್ನ್‌ಮೆಂಟಿನ ಇಸ್ತಿಹಾರ್‌ನಾಮೆ.

3. ಜುಡಿಷಿಯಲ್ ಮೊಕದ್ದಮೆಗಳ ವಿಚಾರಣೆಯಲ್ಲಿ ರೆವಿನ್ಯೂಕೋರ್ಟುಗಳ ಅಧಿಕಾರಗಳನ್ನು ಕುರಿತ ಸನ್ 1872ನೇ ಇಸವೀ ಜೂನ್ 26ನೇ ಮುಕ್ಕಾಂ 123ನೇ ನಂಬರ್ ಇಂಡ್ಯಾಗವರ್ನ್‌ಮೆಂಟ್ ಇಸ್ತಿಹಾರ್‌ನಾಮೆ.

4. ಸನ್ 1871ನೇ ಆಗಸ್ಟು 3ನೇ ಮುಕ್ಕಾಂ 180ನೇ ನಂಬರ್‌ವುಳ್ಳ ಲೇಟ್ ಚೀಫ್ ಕಮ್ಮಿಷನರವರ ಇಸ್ತಿಹಾರ್‌ನಾಮೆಯಿಂದ ಬದಲಾಯಿಸಲ್ಪಟ್ಟ ಪ್ರಕಾರ ಸನ್ 1869ನೇ ಮೇ 1ನೇ ಮುಕ್ಕಾಂ ಮೈಸೂರು ಗೆಜೆಟ್ 87ನೇ ಪುಟದಲ್ಲಿ ಲೇಟ್ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಯೊಡನೆ ಪ್ರಾಯಿಷ್ ಮಾಡಲ್ಪಟ್ಟ, ಸರ್ವಮಾನ್ಯ, ಜೋಡಿ ಮತ್ತು ಕಾಯಂಗುತ್ತಾ ಗ್ರಾಮಗಳ ಸ್ವಂತಗಾರರಿಂದ ಕಂದಾಯ ವಸೂಲೀಯನ್ನು ಕುರಿತ ರೂಲ್ಸ್.

5. ಇನಾಂಗ್ರಾಮಗಳ ರೈತರ ಹಕ್ಕುಗಳನ್ನು ಕುರಿತ ಸನ್ 1843ನೇ ಇಸವಿ ಅಕ್ಟೋಬರ್ 25ನೇ ಮುಕ್ಕಾಂ ಲೇಟ್ ಚೀಫ್ ಕಮ್ಮಿಷನರವರ ಇಸ್ತಿಹಾರ್‌ನಾಮೆ.

6. ಲೇಟ್ ಚೀಫ್ ಕಮ್ಮಿಷನರವರ ಸರ್ಕ್ಯುಲರ್ ಹುಕ್ಕುಂ ನಂ. 522—3, ತಾ॥ 8ನೇ ಜೂನ್ 1864ನೇ ಇಸವಿ.

B ಷೆಡ್ಯೂಲ್.

(4ನೇ ಸೆಕ್ಷನ್.)

____________________ ಈ ರೆಗ್ಯುಲೇಷನಿನ

____

____

____________________ ನೇ ಸೆಕ್ಷನ್‌ಗಳು.

C ಷೆಡ್ಯೂಲ್.

23ನೇ ಸೆಕ್ಷನ್ ಅನುಸರಿಸಿ ಅಪೇಕ್ಷಿಸಲ್ಪಡತಕ್ಕ ಪತ್ರದ ನಮೂನೆ.

ನಿವಾಸಿಯಾದ

ಯೆಂಬನಾನು

ಉದ್ಯೋಗಕ್ಕೆ ಮೊಕರರ್

ಮಾಡಲ್ಪಟ್ಟಿರುವದರಿಂದಲೂ, ಸದರೀ ಉದ್ಯೋಗದ ಅಥವಾ, ಯಾವ ಉದ್ಯೋಗಕ್ಕೆ ನಾನು ಮುಂದೆ ಮೊಕರರ್ ಮಾಡಲ್ಪಡಬಹುದೋ ಅಂಥಾ ಯಾವದಾದರೂ ಇತರ ಉದ್ಯೋಗದ ಸಂಬತಕ್ಕ ಕೆಲಸಗಳನ್ನು ಕ್ರಮವಾಗಿ ನಿರ್ವಹಿಸುವಬಗ್ಗೆ, ಅಂಥಾ ಯಾವದಾದರೂ ಹುಕುಂ ನಿಮಿತ್ತದಿಂದ ನನ್ನ ವಶಕ್ಕಾಗಲಿ, ಆಧೀನಕ್ಕಾಗಲಿ, ಬರತಕ್ಕ ತಮಾಂ ಹಣಗಳ, ಪತ್ರಗಳ ವ ಇತರ ಸ್ವತ್ತಿನ ಕ್ರಮವಾದ ಜವಾಬ್ದಾರಿಗೋಸ್ಕರವೂ, ಮೈಸೂರು ಸೀಮೆಯ ಜಮೀನ್ ಕಂದಾಯದ ರೆಗ್ಯುಲೇಷನಿನ 23ನೇ ಸೆಕ್ಷನ್ ನಿಬಂಧನೆಗಳನುಸರಿಸಿ ಜಾಮೀನ್ ಕೊಡತಕ್ಕದ್ದೆಂದು ನೇಮಿಸಲ್ಪಟ್ಟಿರುವದರಿಂದಲೂ, ನನ್ನ ಲೆಖ್ಖಗಳಲ್ಲಿ ಯಾವದಾದರೂ ನಷ್ಟದ ಬಾಬತು ಅಥವಾ ಕಮ್ಮಿಬಂದ ಬಾಬತು ಮೊಬಲಗನ್ನು ಮೈಸೂರು ಗವರ್ನ್‌ಮೆಂಟಿಗೆ ಪಾವತೀ ಮಾಡಲಿಕ್ಕೂ ನಾನು ಯಾವ ಇಲಾಖೆಗೆ ಸೇರಿರುತ್ತೇನೋ ಆ ಇಲಾಖೆಯ ಮೊಖ್ತೇಸರನಿಂದ ತಗಾದೇ ಮಾಡಲ್ಪಡುವಂಥಾ ಕಾಲದೊಳಗೂ ಅಂಥಾ ಮನುಷ್ಯನಿಗೂ ಯಾವದಾದರೂ ಕಾಗದಗಳನ್ನು ಅಥವಾ ಇತರ ಸ್ವತ್ತನ್ನು

ಒಪ್ಪಿಸಲಿಕ್ಕೂ ಇದರಿಂದ ಬದ್ಧನಾಗಿದ್ದೇನೆ. ಅಂಥಾ ತಗಾದೆಯು ಬರವಣಿಗೆಯಲ್ಲಿದ್ದು ನನ್ನ ಇಲಾಖೆಯಲ್ಲಾಗಲಿ ವಾಸಸ್ಥಳದಲ್ಲಾಗಲಿ ಕೊಡಲ್ಪಟ್ಟಿರತಕ್ಕದ್ದು. ಸದರೀ ವಿಷಯಗಳಲ್ಲಿ ನಾನು ತಪ್ಪಿದರೆ ಮೈಸೂರು ಗವರ್ನಮೆಂಟಿಗೆ　　　　ರೂಪಾಯಿಗಳ ಮೊಬಲಗನ್ನು ದಂಡವಾಗಿ ಕೊಡುವದಕ್ಕೆ ಬದ್ಧನಾಗಿರುತ್ತೇನೆ.

ತಾರೀಖು

(ದಸ್ತಖತ್ತು.)

ಪತ್ರದಾರರ ಪತ್ರಕ್ಕೆ ಜಂಟಿಸಲ್ಪಡತಕ್ಕ ಜಾಮೀನ್ಗೆ ನಮೂನೆ.

ಎಂಬ ನಾವು

ಮೇಲ್ಕಂಡ　　　　　　　　　　　　ನು ಮೇಲ್ಕಂಡಂತೆ ಮಾಡಲಿಕ್ಕೂ ನೆರವೇರಿಸಲಿಕ್ಕೂ ವಹಿಸಿದ ತಮಾಂ ಅಂಶಗಳನ್ನೂ ಮಾಡಲಿಕ್ಕೂ ನೆರವೇರಿಸಲಿಕ್ಕೂ ಜಾಮೀನ್ದಾರರೆಂದು ಇದರಿಂದ ತಿಳಿಸುತ್ತೇವೆ. ಅದರಲ್ಲಿ ಸದರೀಯವನು ಯೇನಾದರೂ ತಪ್ಪಿದರೆ,　　　　　　　　　　ರಿಂದ ಅಂಥಾ ತಪ್ಪಿದ ಕಾರಣದಿಂದ ಮೈಸೂರು ಗವರ್ನಮೆಂಟಿಗೆ ಉಂಟಾಗಬಹುದಾದ ಯಾವದಾದರೂ ಹಾನಿ ಯಾ ನುಕ್ಸಾನಿಗೆ ಭರ್ತೀಮಾಡುವಬಗ್ಯೆ ನಾಕೆಂದೆಣಿಸಲ್ಪಡತಕ್ಕ ಮೊಬಲಗನ್ನು ದಂಡವಾಗಿ ಕೊಡುವದಕ್ಕೆ ನಾವು ಇದರಿಂದ ಬದ್ಧರಾಗಿರುತ್ತೇವೆ.

ತಾರೀಖು

(ದಸ್ತಖತ್ತು.)

D ಷೆಡ್ಯೂಲ್.

25 ಅಥವಾ 172ನೇ ಸೆಕ್ಷನ್ ಅನುಸರಿಸಿ ಡೆಪ್ಯುಟಿ ಕಮ್ಮಿಷನರಿಂದ ಕೊಡಲ್ಪಡತಕ್ಕ ವಾರಂಟ್ ನಮೂನೆ.

ಮೊಹರ್.

ಲ್ಲಿ ಸಿವಿಲ್ ಜೆಯಿಲ್ ಇನ್‌ಚಾರ್ಜ್ ಆಫೀಸರರಿಗೆ.

ದ A. B. ಯೆಂಬವನು ಸರ್ 188　ನೇ ಇಸವಿ

ನೇ ತಾರೀಖಿನಲ್ಲಿ　　　　　　　　　　　　ಯವರಿಂದ (ತಗಾದೇ ಮಾಡಿದ್ದರ ಸಾರಾಂಶವನ್ನು ಈ ಬಳಿ ನಮೂದಿಸತಕ್ಕದ್ದು) ಕ್ಕೆ ಹುಕ್ಕುಂ ಮಾಡಲ್ಪಟ್ಟಿರುವದರಿಂದಲೂ, ಸದರೀ A. B. ಯೆಂಬವನು, ಸದರೀ ಹುಕ್ಕುಂ ಪ್ರಕಾರ ನೆರವೇರಿಸಲಿಕ್ಕೆ ಉಪೇಕ್ಷಿಸಿಯಿರುವದರಿಂದಲೂ, ಮತ್ತು ಸದರೀ ಯವನು ಸದರೀ ಹುಕುಮಿನ ಪ್ರಕಾರ ನಡಿಯುವವರಿವಿಗೂ ಅಥವಾ ಮೈಸೂರು ಲ್ಯಾಂಡ್ ರೆವಿನ್ಯೂ ರೆಗ್ಯುಲೇಷನಿನ 25 ಅಥವಾ 28 (ಅಥವಾ ಸಂದರ್ಭಾನುಸಾರ 172 ಅಥವಾ 179)ನೇ ಸೆಕ್ಷನಿನ ನಿಬಂಧನೆಗಳನುಸರಿಸಿ ತನ್ನ ಬಿಡುಗಡೆಯನ್ನು ಪಡಿಯುವವರಿಗೂ ಸದರೀ ರೆಗ್ಯುಲೇಷನಿನ　　　　　　ನೇ ಸೆಕ್ಷನಿನ ನಿಬಂಧನೆಗಳನುಸರಿಸಿ ಸಿವಿಲ್ ಜೆಯಿಲ್‌ನಲ್ಲಿ ಇಡಿಸಲ್ಪಡತಕ್ಕದ್ದೆಂದು ನಿಯಮಿಸಲ್ಪಟ್ಟಿರುವದರಿಂದಲೂ ನೀವು ಸದರೀ A. B. ಯನ್ನು ನಿಮ್ಮ ಚಾರ್ಜಿನ ಜೆಯಿಲ್‌ನಲ್ಲಿ ಸೇರಿಸಿಕ್ಕೊಂಡು ಕಾನೂನ್ ಮೇರಿಗೆ ಮೇಲೆ ಹೇಳಿದ ಹುಕುಮನ್ನು ಜಾರೀಯಲ್ಲಿ ತರತಕ್ಕದ್ದೆಂದು ಇದರಿಂದ ವಿಧಿಸಿರುತ್ತೆ.

ಬತಾರೀಖು　　　　　　　　ನೇ　　　　　　　　　　188 .

(ದಸ್ತಖತ್ತು.)

E ಷೆಡ್ಯೂಲ್.

28 ಅಥವಾ 179ನೇ ಸೆಕ್ಷನ್ ಅನುಸರಿಸಿ ಟೀಕಾದ ಪತ್ರದ ನಮೂನೆಯು.

ಎಂಬನಾನು

ರಿಂದ

ಕ್ಕೆ (ಇಲ್ಲಿ ತಗಾದೆಯ ಸ್ವರೂಪವನ್ನು ನಮೂದಿಸತಕ್ಕದ್ದು)

ಹುಕ್ಕುಂ ಮಾಡಲ್ಪಟ್ಟಿರುವದರಿಂದಲೂ, ಸದರೀ ಹುಕ್ಕುಂ ಕೊಡಲಿಕ್ಕೆ　　　　　　　　ಯವರ ಹಕ್ಕುದಾರೀ

ವಿಷಯದಲ್ಲಿ ತಕರಾರ್ ಮಾಡುವದರಿಂದಲೂ, ತಗ್ಗಾದೆಯ ನ್ಯಾಯವನ್ನು ಆಕ್ಷೇಪಿಸಲಿಕ್ಕೆ ಡಿಸ್ಟ್ರಿಕ್ಟು ಕೋರ್ಟ ನಲ್ಲಿ, ಈ ಪತ್ರದ ತಾರೀಖು ಲಾಗಾಯತ್ತು ಹದಿನೈದು ದಿನಗಳೊಳಗಾಗಿ ದಾವಾದಾಖಲ್ ಮಾಡಲಿಕ್ಕೆ ಇದರಿಂದ ಬದ್ಧನಾಗುತ್ತೇನೆ ಮತ್ತು ನನಗೆ ಪ್ರತಿಕೂಲವಾಗಿ ಡಿಕ್ರಿ ಕೊಡಲ್ಪಟ್ಟ ಪಕ್ಷಕ್ಕೆ ಸದರೀ ಪತ್ರ ಪ್ರಕಾರ ನೆರವೇರಿಸುವದಲ್ಲದೆ, ನನ್ನಿಂದ ಸಲ್ಲಬಹುದಾದ, ಖರ್ಚುಗಳು ಬಡ್ಡೀಗಳು ದೇಖೀಲ್ ತವಾಂ ಮೊಬಲಗುಗಳನ್ನೂ ಪಾವತೀ ಮಾಡಲಿಕ್ಕೆ ಸಮ್ಮತಿಸುತ್ತೇನೆ ಅಥವಾ ಮೇಲೆಕಂಡಂತೆ ಬಂದು ದಾವೇ ಯನ್ನು ದಾಖಲ್‌ಮಾಡಲಿಕ್ಕೆ ನಾನು ತಪ್ಪಿದರೆ, ನಾನು ನೇಮಿಸಲ್ಪಟ್ಟಾಗ ಮೇಲೆಕಂಡ ರೂಪಾಯಿಗಳ ಮೊಬಲಗನ್ನು ಪಾವತೀಮಾಡುತ್ತೇನೆ (ಅಥವಾ ಸಂದರ್ಭಾನುಸಾರ ಮೇಲೆಕಂಡ ಕಾಗದಗಳನ್ನಾಗಲಿ ಸ್ವತ್ತನ್ನಾಗಲಿ ಒಪ್ಪಿಸುತ್ತೇನೆ) ಅದರಲ್ಲಿ ನಾನುಯೇ ನಾದರೂ ತಪ್ಪಿದರೆ ರೂಪಾಯಿಗಳ ಮೊಬಲಗನ್ನು ಮೈಸೂರು ಗವರ್ನಮೆಂಟಿಗೆ ದಂಡವಾಗಿ ತೆತ್ತು ಬಿಡುವದಕ್ಕೆ ಇದರಿಂದ ಬದ್ಧನಾಗುತ್ತೇನೆ.

ತಾರೀಖು

(ದಸ್ತಖತ್ತು.)

ಪ್ರಿನ್ಸಿಪಲ್ ಅಂದರೆ ಪತ್ರದಾರನ ಪತ್ರಕ್ಕೆ ಜಂಟಿಸಲ್ಲಡತಕ್ಕ ಜಾಮೀನ ಪತ್ರದ ನಮೂನೆ.

ಎಂಬನಾವು

ಬಗ್ಗೆ

ಮೇಲೆಕಂಡ

ಜಾಮೀನುದಾರರಾಗಿ ಇದರಿಂದ ತಿಳಿಸುವದೇನಂದರೇ, ಅವನು ಮಾಡುವಂತೆಯೂ, ನೆರವೇರಿಸುವಂತೆಯೂ, ಅವನು ಮೇಲೆ ವಹಿಸಿ ಯಿರುವ ಯೆಲ್ಲಾ ಅಂಶಗಳನ್ನೂ, ಮಾಡತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು, ಮತ್ತು ಅದರಲ್ಲಿ ಅವನು ತಪ್ಪಿದರೆ, ಮೈಸೂರು ಗವರ್ನಮೆಂಟಿಗೆ ರೂಪಾಯಿಗಳನ್ನು ದಂಡವಾಗಿ ತೆರಲಿಕ್ಕೆ ನಾವು ಇದರಿಂದ ಬದ್ಧರಾಗುತ್ತೇವೆ.

ತಾರೀಖು

(ದಸ್ತಖತ್ತು.)

F ಷೆಡ್ಯೂಲ್.

(95ನೇ ಸೆಕ್ಷನ ನೋಡತಕ್ಕದ್ದು.)

I.—ಜಮೀನುಬಿಡುವಂತೆ ಷಿಕ್ಮೀದಾರನಿಗೆ ಜಮೀನುದಾರನಿಂದ ಕೊಡಲ್ಪಡತಕ್ಕ ನೋಟೀಸಿನ ನಮೂನೆ.

A. B. ಗೆ

ಇದರಿಂದ ನಾನು ನಿನಗೆ ನೋಟೀಸ್ ಕೊಡುವದೇನಂದರೆ ನನ್ನ ಕೆಳಗೆ ಷಿಕ್ಮೀದಾರನಾಗಿ ಹಾಲೀ ನಿನ್ನ ಹಿಡುವಳೀಯಲ್ಲಿ ಉಳ್ಳ (ಇಲ್ಲಿ ತಪ ಸೀಲನ್ನು ತಿಳಿಸತಕ್ಕದ್ದು) ಜಮೀನ ವಿಷಯದಲ್ಲಿ ಪ್ರವರ್ತಿಸುವದಕ್ಕೂ ಅದನ್ನು ಸ್ವಾಧೀನ ಪಡಿಸಿಕೊಳ್ಳುವದಕ್ಕೂ ಖಾಯಿಷ್ ಮಾಡು ತ್ತೇನಾಗಿ ಸದರೀ ಜಮೀನನ್ನು ಸನ 188 ಗೆ ಆಖೈರಾಗುವ ಸಾಲ್ ಮಜಕೂರಿನ ಅಂತ್ಯದಲ್ಲಿ ಬಿಡುವಂತೆಯೂ ಅದರ ಸ್ವಾಧೀನವನ್ನು ಒಪ್ಪಿಸಿ ಬಿಡುವಂತೆಯೂ ನಿನಗೆ ನೇಮಿಸೋಣಾಗುತ್ತೆ.

(ರುಜು.) C. D.

ಸನ 188 ನೇ ತಾರೀಖು

II.—ಷಿಕ್ಮೀದಾರನು ಜಮೀನನ್ನು ಬಿಡತಕ್ಕ ತನ್ನ ಖಾಯಿಷನ್ನು ಕುರಿತು, ಜಮೀನುದಾರನಿಗೆ ಕೊಡತಕ್ಕ ನೋಟೀಸ್ ನಮೂನೆ.

C. D. ಗೆ

ಇದರಿಂದ ನಿಮಗೆ ನೋಟೀಸ್ ಕೊಡುವದೇನಂದರೆ ನಿಮ್ಮಿಂದ ಪಡೆಕೊಂಡಿರುವ ಜಮೀನನ್ನು ಸನ 188 ನೇ ಇಸವಿ ರಲ್ಲು ಆಖೈರಾಗುವ ಸಾಲ್‌ಮಜಕೂರಿನ ಅಂತ್ಯದಲ್ಲಿ (ಈಬಳಿ ಜಮೀನ ತಪಸೀಲನ್ನು ತಿಳಿಸತಕ್ಕದ್ದು) ಜಮೀ ನನ್ನು ಬಿಟ್ಟುಬಿಟ್ಟು, ಅದರ ಸ್ವಾಧೀನವನ್ನು ನಿಮಗೆ ಒಪ್ಪಿಸಲುಳ್ಳವನು.

ತಾರೀಖು ಸನ 188 (ರುಜು.) A. B.

G ಷೆಡ್ಯೂಲ್.

ಪರಭಾರೇಯಾದ ಜವಿಗಾಗಳ ಯಾ ಗ್ರಾಮಗಳ ಬಬ್ಬ ಹಿಡುವಳೀದಾರನಿಗಾಗಲಿ, ಅವನ ಮುತಾಲೀಕ ನಿಗಾಗಲಿ, 107ನೇ ಸೆಕ್ಷನ ಅನುಸರಿಸಿ ಸಾದರ್ಮಾಡಲ್ಪಡತಕ್ಕ ಕಮ್ಮಿಷನಿನ ನಮೂನೆ.

ಮೊಹರ.

ಗವರ್ನಮೆಂಟನವರು, ಮೈಸೂರು ಶೀಮೆಯ ಜವಿಗಾಕಂದಾಯದ ರೆಗ್ಯೂಲೇಷನ್ನಿನಿಂದ, ತಮಗೆ ಉಂಟಾಗಿರುವ ಅಧಿಕಾರಗಳ ಬಲದಿಂದ ನಿಮಗೆ (ಅಂದರೆ ಸಂದರ್ಭಾರೀತ್ಯ ಜಹಗೀರ್ದಾರರು ವಗೈರೇ, ಅಥವಾ ಮುತಾಲೀಕರು ವಗೈರೇರಿಗೆ) ಈ ಕಮ್ಮಿಷನ್ನಲ್ಲಿ ವಿವರಿಸಲ್ಪಟ್ಟ ಗ್ರಾಮಗಳು ಮತ್ತು ಜವಿಗಾಗಳಲ್ಲಿ ಯಾ ಇವುಗಳ ವಿಷಯದಲ್ಲಿ ಸದರೀ ರೆಗ್ಯೂಲೇಷನಲ್ಲಿಯಾಗಲಿ, ಅದರ ನೇ ಸೆಕ್ಷನ್ನಲ್ಲಿಯಾಗಲಿ, ವಿಧಿಸಲ್ಪಟ್ಟ ರೀತಿಯಾಗಿ ಕ್ಕೆ ನಿಮಗೆ ಅಧಿಕಾರ ಕೊಟ್ಟಿರುತ್ತಾರೆ.

ಹಾಗೆ ಕೊಡಲ್ಪಟ್ಟ ಅಧಿಕಾರವು ಯಾವಗಳ ಮೇಲೆ ವ್ಯಾಪಿಸುತ್ತದೋ ಅಂಥಾ ಗ್ರಾಮಗಳು, ಜವಿಗಾಗಳು ಯಾವವೆಂದರೆ :—

(ಈ ಬಳೀ ತಪಸೀಲನ್ನು ದಾಖಲ್ಮಾಡತಕ್ಕದ್ದು.)

ಇದರಲ್ಲಿ ಕೊಡಲ್ಪಟ್ಟ ಅಧಿಕಾರವು ಮೈಸೂರ ಗವರ್ನಮೆಂಟನವರ ಖುಷೀ ಇರುವ ಕಾಲದವರಿಗೂ ನಿಮಗೆ ಕೊಡಲ್ಪಟ್ಟು ಅವರಿಂದ ವಾಪಸ್ ತೆಗೆದುಕೊಳ್ಳಲ್ಪಡಲಿಕ್ಕೆ ಗುರಿಯಾಗಿರುವದು.

(ದಸ್ತಖತ್ತು)

H ಷೆಡ್ಯೂಲ್.

(149ನೇ ಸೆಕ್ಷನ್ ನೋಡತಕ್ಕದ್ದು.)

ಕಟ್ಟಡದ ನಿವೇಶನಗಳಿಗಾಗಿ ಕೊಡತಕ್ಕ ಸನ್ನದ ನಮೂನೆ.

ಮೊಹರ.

ಮೈಸೂರ್ ಗವರ್ನಮೆಂಟ್.

ಗೆ.

ಮೈಸೂರು ಗವರ್ನಮೆಂಟನವರು, ಜವಿಗಾ ಕಂದಾಯದ ಫೈಸಲಾತಿಯ, ಮತ್ತು ಜವಿಗಾನಿಗೆ ಸಂಬಂಧಿಸಿದ, ಸ್ವತ್ವ ಸಂಬಂಧವಾದ ಮತ್ತು ಇತರ ಹಕ್ಕುಗಳ ರಿಕಾರ್ಡುಮಾಡುವದು, ಕಾಪಾಡುವದು ಈ ಉದ್ದೇಶಗಳಿಂದ ಮೈಸೂರು ಲ್ಯಾಂಡ್ ರೆವಿನ್ಯೂ ರೆಗ್ಯೂಲೇಷನಿನ ನಿಬಂಧನೆಗಳನುಸರಿಸಿ ನ ನೊಳಗೆ ಜವಿಗಾಗಳ ಬಂದು ಸರ್ವೆಯನ್ನು ನಿಯಮಿಸಿ ಮತ್ತು, ಅದಕ್ಕೆ ಸಂಬಂಧಿಸಿದ ಜರೂರಿಯಾತ ವಿಚಾರಣೆಗಳನ್ನು ಮಾಡುವಂತೆ ನಿಯಮಿಸಿ ಇರುತ್ತಾರಾಗಿ, ಈ ಸನ್ನದು, ಸದರೀ ರೆಗ್ಯೂಲೇಷನಿನ 149ನೇ ಸೆಕ್ಷನ ಅನುಸರಿಸಿ ಕೊಡಲ್ಪಟ್ಟಿರುತ್ತೆ, ಸನ್ನದೇನೆಂತ ಅಂದರೆ—

ದ ಡಿವಿಜನ್ನಲ್ಲಿ ನಂಬರುಳ್ಳ ಗುರ್ತುಮಾಡಲ್ಪಟ್ಟ ಷೀಟಿನ ನಕ್ಷೆಯಲ್ಲಿ ನೇ ರಿಜಿಸ್ಟರ್ ನಂಬರುಳ್ಳ ಮತ್ತು ಇಂದ ಗೆ ಹೋಗುವ ರಸ್ತೆಯ ಕಡೆಗೆ ಯದುರಾಗಿರುವ ಸಲಿಗಜಗಳುಳ್ಳ ಮತ್ತು ಕೆಳಗೆ ನಮೂದಿಸಿರುವ ರೂಪ ಮತ್ತು ಕೆಳಗೆ ನಮೂದಿಸಿರುವಂತೆ ಷುಮಾರು ಪ್ರಮಾಣವುಳ್ಳ ಬಂದು ತಾಕು ಜಾಗವು ನಿನ್ನ ಅನುಭವದಲ್ಲಿರುತ್ತೆ :—

ಮೇಲೆ ವಿವರಿಸಿರುವ ಜಾಗವು ಜಮೀನ್ ಕಂದಾಯದಿಂದ ವಿನಾಯಿಸಲ್ಪಟ್ಟು (ಅಥವಾ ಜಮೀನ್ ಕಂದಾಯಕ್ಕಾಗಿ ವರುಷಕ್ಕೆ ರೂಪಾಯಿಗಳು ಕೊಡಲಿಕ್ಕೆ ಗುರಿಯಾಗಿ) ನಿನ್ನ ಅನುಭವದಲ್ಲಿ ಇದರಿಂದ ಮಂಜೂರ್ಮಾಡಲ್ಪಟ್ಟಿರುತ್ತೆ.

ನಿನ್ನ ಹಿಡುವಳಿಯ ಷರತ್ತುಗಳು ಯಾವವಂದರೆ, ನಿನ್ನ ಹಿಡುವಳಿಯು, ವರ್ಗಮಾಡಲ್ಪಡತಕ್ಕದ್ದಾಗಿಯೂ ವಂಶ ಪಾರಂಪರ್ಯದಿಂದ ಲಭ್ಯವಾಗಿಯೂ ಇರುವದಲ್ಲದೆ (ಮೈಸೂರು ಜಮೀನ್ ಕಂದಾಯದ ರೆಗ್ಯೂಲೇಷನಿನ ಅಥವಾ ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಇತರಕಾನೂನಿನ ನಿಬಂಧನೆಗಳ ಪ್ರಕಾರ ಸದರೀ ಜಮೀನ್ ಕಂದಾಯದ ಸಾಲೀಯಾನಾ ಪಾವತೀ ಬಾಬತು ಷರತ್ತಿಗೂ, ಲಾಗಾಯತು ಗಣಿಸಲ್ಪಟ್ಟ ವರುಷಗಳ ಒಂದು ವಾಯಿದೆ ಪೂರೈಸಿದಾಗಲೂ ಆ ಬಳಿಕ ಶಾಶ್ವತವಾಗಿ ವರುಷಗಳ ವಾಯಿದೆಗಳಲ್ಲೂ ಸದರೀ ಕಂದಾಯದ ದರವು ಪರಿಷ್ಕರಿಸಲ್ಪಡಲಿಕ್ಕೆ ಗುರಿಯಾಗತಕ್ಕದ್ದಕ್ಕೂ ಮತ್ತು ಸದರೀ ಕಂದಾಯ ಪಾವತಿಯ ಕಾಲ ಮತ್ತು ರೀತಿ ಈ ಬಾಬತುಗಳಲ್ಲಿ ಆಗಾಗ್ಯೆ ಜಾರೀಯಲ್ಲಿರುವ ಕಾನೂನಿನ ನಿಬಂಧನೆಗಳ ಪ್ರಕಾರ ನಡೆದುಕೊಳ್ಳುವ ಅವಶ್ಯಕಕ್ಕೂ ಮತ್ತು ಕಾನೂನಿನಲ್ಲಿ ವಿಧಿಸಲ್ಪಟ್ಟಂತೆ ಸದರೀ ಕಂದಾಯವನ್ನು ತೆರಲಿಕ್ಕೆ ನೀನು ತಪ್ಪಿದಲ್ಲಿ ಸದರೀ ಅನುಭವವನ್ನೂ ಅದಕ್ಕೆ ಸೇರಿದ ತಮಾಂ ಹಕ್ಕುಗಳನ್ನೂ ಸಂಬಂಧಗಳನ್ನೂ ಕಳೆದುಕೊಳ್ಳುವದಕ್ಕೆ ಗುರಿಯಾಗತಕ್ಕದ್ದಕ್ಕೂ ಮಾತ್ರ ಒಳಪಟ್ಟು) ಅದರ ನ್ಯಾಯವಾದ ಹಿಡುವಳೀದಾರ ಆಗಾಗ್ಯೆ ಯಾವನಾಗಿರಲಿ ಅವನಿಗೆ ಯಾವತಕರಾರು ಯಾ ಹಸ್ತುದಾರೀ ವಿಷಯದಲ್ಲಿ ಆಕ್ಷೇಪಣೆ ಇಲ್ಲದೆ ಮೈಸೂರು ಗವರ್ನಮೆಂಟಿನಿಂದ ನಡಿಸಲ್ಪಡುತ್ತಾ ಬರುವದು.

ಈ ಸನ್ನದು ಮೈಸೂರು ಗವರ್ನಮೆಂಟಿನ ತರಫಿನಲ್ಲಿ ಸನ್ 188 ನೇ ಇಸವಿ ತಾರೀಖಿನಲ್ಲಿ ಸೈನ್ ಮೊಹರ್ ನಿಂದ ಬರೆದುಕೊಡಲ್ಪಟ್ಟಿರುತ್ತೆ.

(ದಸ್ತಖತ್ತು.)

I ಷೆಡ್ಯೂಲ್.

218ನೇ ಸೆಕ್ಷನ್ ಅನುಸರಿಸಿ ಡೆ|| ಕಮ್ಮಿಷನರಿಂದ ಸಾದರಾಗತಕ್ಕ ವಾರಂಟಿನ ನಮೂನೆ.

ಮೊಹರ್.

ಲ್ಲಿ ಇರುವ ಸಿವಿಲ್ ಜೆಯಿಲ್ ಇನ್‌ಚಾರ್ಜ್ ಆಫೀಸರರಿಗೆ.

ದ A. B. ಎಂಬವನು ತಾಲ್ಲೂಕಿನಲ್ಲಿ ಗ್ರಾಮದೊಳಗೆ, ಒಂದು ಜಮೀನಿಂದ E. F. ಯೆಂಬವನನ್ನು (ಅಥವಾ ತನ್ನನ್ನೇ ಅಂದರೆ ಸದರೀ A. B. ಎಂಬವನನ್ನು) ತೊಲಗಿಸುವದರಲ್ಲಿ C. D. ಎಂಬವನನ್ನು ಆತಂಕಿಸಿ ಇರುವದರಿಂದ (ಅಥವಾ ನಿರೋಧಿಸಿಯಿರುವದರಿಂದಲೂ,) ? ಅಂಥಾ ಆತಂಕ (ಯಾ ನಿರೋಧ) ಸಂತತವಾಗಿ ನಡೆಯುವದನ್ನು ಅಡ್ಡಿಗೊಳಿಸುವಬಗ್ಯೆ, ಸದರೀ A. B. ಯನ್ನು ಸರ್ತು ಪಹರೇಗೆ ಕೊಡುವದು ಜರೂರಾದದರಿಂದಲೂ ನೀವು ಮೈಸೂರು ಜಮೀನ್ ಕಂದಾಯದ ರೆಗ್ಯೂಲೇಷನ್ 218ನೇ ಸೆಕ್ಷನ್ ನಿಬಂಧನೆಗಳನುಸರಿಸಿ, ಸದರೀ A. B. ಯನ್ನು ಜೆಯಿಲ್‌ನಲ್ಲಿ ನಿಮ್ಮ ಚಾರ್ಜಿನೊಳಗೆ ತೆಗೆದುಕೊಂಡು ದಿನಗಳ ವರಿಗೆ ಬಂದೋಬಸ್ತಾದ ಪಹರೇಯಲ್ಲಿ ಇಡತಕ್ಕದ್ದು.

ಸನ್ 188 ನೇ ಇಸವಿ ತಾರೀಖು

(ದಸ್ತಖತ್ತು.)

Mysore Government Press, Bangalore—1884.

ಮೈಸೂರ ಗೆಜೆಟ್.

ನಂ. 38 ಸರ್ಕಾರದಿಂದ ಛಾಯಿಷ್ ಆದ್ದು. ಸ್ಥ 1884

ಬೆಂಗಳೂರು, ಶನಿವಾರ, ಸೆಪ್ಟಂಬರ್ ತಾ|| 20, ಸ್ಥ 1884.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್ರಿಟೆಂಡೆಂಟರು, ಕಾಂಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮೈಸೂರು ಸ್ಟೇಟ್‌ರೇಯಿಲ್‌ವೆ, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್‌ಸೂಪರ್ರಿಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಮೈಸೂರು ಶೀಮೆಯ ಲ್ಯಾಂಡ್ ರೆವಿನ್ಯು ರೆಗ್ಯುಲೇಷನಿನ ಮಸೂದಾ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್

ಇಸ್ತಿಹಾರ್‌ನಾಮೆ.

ತಾರೀಖು 2ನೇ ಸೆಪ್ಟಂಬರ್ 1884.

ನಂ. 133.—ಮೈಸೂರು ಷಹರಿನ ಇದರಡೀ ಕಂಡ ಚಕ್ಕುಬಂದಿ ವಿವರಣೆಯು, ದಿವಾನರವರಿಂದ ಮಂಜೂರ್ಮಾಡಲ್ಪಟ್ಟು, ಸರ್ವರ ತಿಳುವಳಿಕೆ ಬಗ್ಗೆ ಇದರಿಂದ ಪ್ರಕಟಿಸಲ್ಪಡುತ್ತೆ :—

ಸರಹದ್ದು ಲೈನು, ಮೈಸೂರು—ಶ್ರೀರಂಗಪಟ್ಟಣದ ರಸ್ತೆಯ 86ನೇ ಮೈಲಿಯ 6ನೇ ಫರಲಾಂಗಿನಲ್ಲಿರುವ ಸೇತುವೆಯ ಮಧ್ಯಭಾಗದಿಂದ ಉತ್ತರಕ್ಕೆ 500 ಅಡಿಗಳ ದೂರದ ಮೊದಲು ಪೂರ್ವ ದಿಕ್ಕಿಗಾಗಿ ತೋಟಗಳ ಮಾರ್ಗವಾಗಿ ದಾರಿಯ ಉತ್ತರ ದಿಕ್ಕಿಗೆ ವ್ಯಾಪಿಸಿ, ನೀರು ಹರಿಯುವ ಹಳ್ಳದ ಮಧ್ಯದ ವರಿವಿಗೂ ಸುಮಾರು 300 ಅಡಿಗಳ ತನಕ ಹೋಗಿ, ಅನಂತರ ನೆಟ್ಟಗೆ ಹೊರಟು ಶ್ರೀರಂಗಪಟ್ಟಣದ ಹಳೆರಸ್ತೆಯನ್ನು ಯರಡು ಕಾಲುದಾರಿಗಳು ಸೇರುವ ಕಡೆ ಸಂಧಿಸುತ್ತದೆ. ಶ್ರೀರಂಗಪಟ್ಟಣದ ಹಳೇ ರಸ್ತೆಯಲ್ಲಿರುವ ಈ ಗುರ್ತು ಆರಂಭಿಸಿ ಸರಹದ್ದು ಲೈನು, ನಿರಋತಿ ದಿಕ್ಕಿಗಾಗಿ ನೆಟ್ಟಗೆ ಹೊರಟು "ಗೋಣೀಮರದ" ತೋಪಿನ ಈಶಾನ್ಯ ದಿಕ್ಕಿಗೆ 20 ಅಡಿಗಳ ದೂರದಲ್ಲಿರುವ ದಮನೂರು ಕೆರೆ ರಸ್ತೆಯಲ್ಲಿ ಗುರ್ತು ಮಾಡಿರುವ ಸ್ಥಳದ ವರಿಗೆ ವ್ಯಾಪಿಸುತ್ತದೆ, ತೋಪಿನಿಂದ ನೆಟ್ಟಗೆ ಹೊರಟು ನವಾಬರ ಭಾವಿಯ ಈಶಾನ್ಯ ದಿಕ್ಕಿನ ಕೊನೆಗೆ 20 ಅಡಿಯಲ್ಲಿರುವ ಗುರ್ತಿನ ವರಿಗೆ ಹೋಗುತ್ತದೆ.

ಸರಹದ್ದು ಲೈನು, ನವಾಬರ ಭಾವಿಯಿಂದ ನೆಟ್ಟಗೆ ಹೊರಟು ಕಾಟವ್ವನಹಳ್ಳಿಗೆ ಹೋಗುವ ಕಾಲುದಾರಿಯು ಕಾರಂಜೀಕೆರೆ ಕಾಲುವೆಯನ್ನು ಬಿಡುವ ವರಿಗೆ ಹೋಗುತ್ತದೆ. ಅನಂತರ ನೆಟ್ಟಗೆ ಕೋಟೆಯ ಹಳೇ ಖಂದಕದ ಕೊನೆ ವರಿವಿಗೂ ಹೋಗಿ ಅಲ್ಲಿಂದ ಪೂರ್ವದಿಕ್ಕಿಗಾಗಿ ಕೋಟೆ ಖಂದಕದ ಸುತ್ತಲೂ ಈಶಾನ್ಯ ದಿಕ್ಕಿನ ಕೊನೆ ವರಿವಿಗೂ ವ್ಯಾಪಿಸುತ್ತದೆ.

ಸದರೀ ಹಳೇಕೋಟೆಯ ಈಶಾನ್ಯ ದಿಕ್ಕಿನ ಕೊನೆ ಮೊದಲುಗೊಂಡು, ಸರಹದ್ದು ಲೈನು, ಶುದ್ಧ ದಕ್ಷಿಣಕ್ಕಾಗಿ ಸುಮಾರು 920 ಅಡಿಗಳ ವರಿವಿಗೂ ವ್ಯಾಪಿಸಿ ಅನಂತರ ನೆಟ್ಟಗೆ ಬನ್ನೂರು ರಸ್ತೆಯಲ್ಲಿ ಸದರೀ ರಸ್ತೆಯು ಚಾಮುಂಡೀ ಬೆಟ್ಟದ ರಸ್ತೆಗೆ ಸೇರುವ ಸ್ಥಳದಿಂದ ಪೂರ್ವ ದಿಕ್ಕಿಗೆ 290 ಅಡಿಗಳ ವರಿವಿಗೆ ವ್ಯಾಪಿಸುತ್ತದೆ. ಈ ಅಳತೆಯು ರಸ್ತೆಗಳ ಫಳ ಚರಂಡಿಗಳು ಕೂಡುವ ಸ್ಥಳದಿಂದ ತೆಗೆಯಲ್ಪಟ್ಟು ಯಿಧೆ.

ಸರಹದ್ದು ಲೈನು, ಚಾಮುಂಡೀಬೆಟ್ಟದ ರಸ್ತೆಯನ್ನು ಸೇರಿ ಅದರ ಪೂರ್ವ ಭಾಗಕ್ಕಾಗಿ ಉದ್ದಕ್ಕೆ ಹೊರಟು ಕುಂಬಾರಹಳ್ಳಿ ಗ್ರಾಮ ಸುತ್ತಿಕೊಂಡು ಸದರೀ ರಸ್ತೆಯು ಕಾರಂಜೀ ಕೆರೆ ರಸ್ತೆಗೆ ಕೂಡುವ ಬಳಿ ಬಂದು ಸೇರುತ್ತೆ.

ಅನಂತರ ಸರಹದ್ದು ಲೈನು, ಕಾರಂಜೀಕೆರೆ ರಸ್ತೆ ಮತ್ತು ಕುದುರೆ ಜೂಜಿನ ಬೋರೆ ರಸ್ತೆ ಇವುಗಳ ದಕ್ಷಿಣಕ್ಕಾಗಿ ಹೊರಟು, ಗೊಬ್ಬಿಕೆರೆ ತಲಾವಿನ ಯೇರಿ ಮೇಲುಭಾಗಕ್ಕಾಗಿ ಚಾಮುಂಡೀ ಬೆಟ್ಟದ ರಸ್ತೆಯುಬಳಿ ಕಾಲ್ವೆ ದಾಟುವ ಸ್ಥಳದ ವರಿಗೆ ವ್ಯಾಪಿಸುತ್ತೆ; ಅನಂತರ ರಸ್ತೇ ಮಾರ್ಗವಾಗಿ ಗಾಸಪ್ಪ ತೊಗಚಿ ಮಠವನ್ನ ಸೇರಿಸಿಕೊಂಡು ದೊಡ್ಡಕೆರೆ ತಲಾವಿನ ಹೆಚ್ಚಿಗೆ ನೀರು ಹರಿದು ಹೋಗುವ ಕಾಲ್ವೆಯ ದಕ್ಷಿಣಕ್ಕೆ 235 ಅಡಿಗಳ ದೂರದಲ್ಲಿ ಮೈಸೂರು-ನಂಜನಗೂಡು ರಸ್ತೆಯನ್ನು ಸಂಧಿಸುತ್ತದೆ. ಈ ಗುರ್ತು 89ನೇ ಮೈಲಿಯ 8ನೇ ಫರ್ಲಾಂಗಿನಲ್ಲಿರುತ್ತೆ.

ಸರಹದ್ದು ಲೈನು, ಅನಂತರ ತೋಟಗಳ ಮಾರ್ಗವಾಗಿ ಸೊಟ್ಟ ಸೊಟ್ಟಾದ ದಾರಿಯನ್ನು ಅನುಸರಿಸಿ ಹೋಗುತ್ತದೆ. ಸದರೀದಾರಿ ಯಾವತ್ತೂ ನಕ್ಷೆಯಲ್ಲಿ ಕಾಣಿಸಿ ಯಿರುವದಿಲ್ಲ, ಮತ್ತು ಸರಹದ್ದು ಲೈನು, ಹಾಗೆಯೇ ಹೊರಟು 89ನೇ ಮೈಲಿಯ 7ನೇ ಫರ್ಲಾಂಗು ಕಲ್ಲಿನಿಂದ 160 ಅಡಿಗಳ ದೂರದಲ್ಲಿ ಹಳೇ ಅಗ್ರಹಾರದ ರಸ್ತೆಯನ್ನು ಸಂಧಿಸುತ್ತದೆ.

ಸರಹದ್ದು ಲೈನು, ಅನಂತರ ನೆಟ್ಟಗೆ ದೊಡ್ಡಕೆರೆ ಕಾಲ್ವೆ ಕೊನೆವರಿಗೂ ಹೋಗಿ, ನೀರು ಕಾಲ್ವೆಯ ಪಶ್ಚಿಮ ಭಾಗಕ್ಕೂ, ಕನ್ನೇಗೌಡನ ಕೊಪ್ಪಲು ಗ್ರಾಮದ ಸುತ್ತಲೂ ಯಿರುವ ಕಾಲುದಾರಿಯ ದಕ್ಷಿಣದಿಕ್ಕಿಗೂ, ಮತ್ತು ಕಾಲುದಾರಿಯು ನೀರು ಸರಬರಾಯಿ ಆಗುವ ಕಾಲ್ವೆಯನ್ನು ಸಂಧಿಸುವ ಸ್ಥಳದ ಪಶ್ಚಿಮ ಭಾಗಕ್ಕೂ ಉದ್ದಕ್ಕೆ ಹೊರಟು, ಕೊರಕಲು ರಸ್ತೆಯ ಮೇಲ್ಭಾಗದಲ್ಲಿ ಸದರೀ ದೊಡ್ಡ ಕೆರೆ ಕಾಲ್ವೆಯ ಕೆಳ ಕಟ್ಟೆಯನ್ನು ಅನುಸರಿಸುತ್ತದೆ, ಅನಂತರ ಕಾಲ್ವೆ ಭೂಮಿಯು ಸರಹದ್ದನುಸರಿಸಿ ಸ್ವಲ್ಪ ದೂರದವರಿವಿಗೂ ಹೋಗಿ ಅನಂತರ ನೆಟ್ಟಗೆ ಹೊರಟು ಡಿಸ್ಟಿಲೇರಿ ಯಾನೆ ಭಟ್ಟಿಮನೆಯನ್ನ ಪೂರ್ವಭಾಗಕ್ಕೆ ಬಿಟ್ಟು ಕೂಕರಹಳ್ಳಿ ಕೆರೆಯ ಹಿಂಭಾಗದ ರಸ್ತೆಗೆ ಹೋಗಿ ಸೇರುತ್ತದೆ.

ಸರಹದ್ದು ಲೈನು, ಅನಂತರ ಕೂಕರಹಳ್ಳಿ ಕಾಲ್ವೆಯ ಪಶ್ಚಿಮಭಾಗಕ್ಕೆ 60 ಅಡಿಗಳವರಿಗೂ ನೆಟ್ಟಗೆ ಹೋಗುತ್ತದೆ, ಅನಂತರ ಉತ್ತರಕ್ಕೆ ತಿರುಗಿ ಪಡುವಾರಹಳ್ಳಿ ಬಳಿಯಣ ಹಳೇರಸ್ತೆ ಮತ್ತು ಹೊಸರಸ್ತೆ ಇವೆರಡೂ ಸೇರುವ ಸ್ಥಳದ ಪೂರ್ವಭಾಗಕ್ಕೆ 245 ಅಡಿಗಳ ವರಿಗೂ ಹೋಗುತ್ತದೆ, ಅನಂತರ ಪಡುವಾರಹಳ್ಳಿ ಸುತ್ತಿಕೊಂಡು ಸದರೀ ಗ್ರಾಮದ ಪಶ್ಚಿಮ ಭಾಗಕ್ಕಾಗಿ ಉದ್ದಕ್ಕೆ ಜೀವಣರಾಯರ ಕೆರೆ ಕಾಲ್ವೆವರಿಗೂ ಹೋಗಿ ಧನ್ನೀಕಟ್ಟೆ ಕಾಲ್ವೆಯ ಉತ್ತರ ಭಾಗದ ಕಟ್ಟೆಯ ಅನುಸರಿಸಿ ಹಳ್ಳೀರಸ್ತೆಯ ಪಶ್ಚಿಮ ಭಾಗಕ್ಕಾಗಿ ಹುಂಡೀಹಳ್ಳದ ವರಿಗೂ ವಿಸ್ತರಿಸುತ್ತದೆ; ಅಲ್ಲಿಂದ ಹುಂಡೀಹಳ್ಳ ಅನುಸರಿಸಿ ರೈಲ್ ಸೇತುವೆ ಮಾರ್ಗವಾಗಿ ಪೂರ್ಣಯ್ಯನವರ ಕಾಲ್ವೆಗೆ ಪಶ್ಚಿಮ ಭಾಗಕ್ಕಾಗಿ ಬೆಳಗುಳದ ರಸ್ತೆಯಲ್ಲಿರುವ ಜೋಡೀ ತೆಂಗಿನ ಮರದ ಸೇತುವೆವರಿಗೂ ವ್ಯಾಪಿಸುತ್ತದೆ; ಅಲ್ಲಿಂದ ರಸ್ತೆಯ ಉತ್ತರದಿಕ್ಕಿಗಾಗಿ ಕೊನೆವರಿಗೂ ಹೋಗಿ ಅನಂತರ ನೆಟ್ಟಗೆ ಹೊರಟು ಶ್ರೀರಂಗಪಟ್ಟಣದ ರಸ್ತೆಯಲ್ಲಿ ಸರಹದ್ದು ಲೈನ್ ಆರಂಭಮಾಡಿದ ಸ್ಥಳಕ್ಕೆ ಬಂದು ಸೇರುತ್ತದೆ.

ತಾರೀಖು 11ನೇ ಸೆಪ್ಟಂಬರ್ 1884.

ನಂ. 136.—ದಸರಾ ಹಬ್ಬಕ್ಕಾಗಿ ಮೈಸೂರು ಸೀಮೆಯ ಯಲ್ಲ ಪಬ್ಲಿಕ ಅಫೀಸಗಳೂ, ನವರಾತ್ರಿಯ 6ನೇ ದಿನವಾದ ಸೆಪ್ಟಂಬರ್ 25ನೇ ತಾರೀಖು ಮೊದಲು ಮುಂದಿನ ಅಕ್ಟೋಬರ್ 2ನೇ ತುರ್ಸ್ಕಂ ವರಿಗೆ ಬರಕಾಸ್ತು ಮಾಡಲ್ಪಡತಕ್ಕವು.

ಬಮೋಜೀಬ್ ಹುಕ್ಕುಂ,

ಆರ್. ವಿಜಯೀಂದ್ರರಾವ್,

ಸೆಕ್ರೇಟೇರಿ.

689

ಮಿಲಿಟೇರಿ ಇಲಾಖಾ.

ಇಸ್ತಿಹಾರ್ ನಾಮಾ.

ತಾರೀಖು 12ನೇ ಮಾಹೆ ಆಗಸ್ಟ್ ಸ್ 1884ನೇ ಇಸವಿ, ಮೊಕ್ಕಾಂ ಬೆಂಗಳೂರು.

ಸವಾರ್ ಮತ್ತು ಬಾರ್ ಇಲಾಖಾ ನೌಕರಿಯಲ್ಲಿ ದಾಖಲಾಗತಕ್ಕದ್ದಕ್ಕಾಗಿ ಮಿಲಿಟೇರಿ ಸಿಕ್ರೆಟೇರೀ ಸಾಹೆಬರವರ ಆಫೀಸಿನಲ್ಲಿ ರಿಜಿಸ್ಟರ್ ಆಗಿರತಕ್ಕ ವಿಶಿಷ್ಟ ವುಮೇದವಾರರುಗಳೂ ಇಂತಿಹಾರ್ ಬಗ್ಯೆ ಈ ಕೆಳಗೆ ನಮೂದಿಸಿರುವ ಸ್ಥಳಗಳು ಮತ್ತು ತಾರೀಖುಗಳಲ್ಲಿ ಹಾಜರಾಗತಕ್ಕದ್ದು, ಆಗ್ಯೆ ಅವರ ಹಕ್ಕುದಾರಿ ಬಾಬ್ ವೆವಸ್ಥೆ ಮಾಡಲಾಧೀತು.

ಹಾಗೆ ಸದರೀ ತಾರೀಖುಗಳಲ್ಲಿ ಹಾಜರಾಗಲು ತಪ್ಪುವ ಯಲ್ಲಾ ವುಮೇದವಾರರುಗಳ ಹೆಸರುಗಳೂ ರಿಜಸ್ಟರಿನಿಂದ ತೆಗದು ಹಾಕಲ್ ಪಡುತ್ತೆ.

ಸ್ಥಳಾ.	ತಾರೀಖು.
1 ಬೆಂಗಳೂರು. ಮಿಲಿಟೇರಿ ಸೆಕ್ರೆಟೇರೀ ಸಾಹೆಬರವರ ಆಫೀಸು	ಸವಾರ್ ವುಮೇದ್‌ವಾರು. 8ನೇ ಶಪ್ಟಂಬರ್ ಸ್ 1884ನೇ ಇಸವಿ, ಸೋಮವಾರ. ಬಾರ್ ವುಮೇದವಾರು. 9ನೇ ಶಪ್ಟಂಬರ್ ಸ್ 1884ನೇ ಇಸವಿ, ಮಂಗಳವಾರ.
2 ಮೈಸೂರು. ಮಿಲಿಟೇರಿ ಸೆಕ್ರೆಟೇರಿ ಸಾಹೆಬರವರ ಕ್ಯಾಂಪ್ ಆಫೀಸು	ಸವಾರ್ ವುಮೇದ್‌ವಾರು. 1ನೇ ಅಕ್ಟೋಬರ್ ಸ್ 1884ನೇ ಇಸವಿ, ಬುಧವಾರ. ಬಾರ್ ವುಮೇದ್‌ವಾರು. 2ನೇ ಅಕ್ಟೋಬರ್ ಸ್ 1884ನೇ ಇಸವಿ, ಗುರುವಾರ.

ಎ. ಸಿ. ಹೇ, ಕರ್ನಲ್,
ಆ|| ಮಿಲಿಟೇರೀ ಸೆಕ್ರೆಟೇರಿ.

ಮೈಸೂರ ಗೆಜೆಟ

ಸರ್ಕಾರದಿಂದ ಛಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಸೆಪ್ಟಂಬರ್ ತಾ॥ 20, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರುವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ರೆಸಿಡೆಂಟರ ಇಲಾಖಾ.

ಇಸ್ತಿಹಾರ್ ನಾಮೆ.

ನಂ. 8. ತಾರೀಖು 26ನೇ ಆಗಸ್ಟ್ 1884.

ಇದರಿಂದ ಸಮಸ್ತಜನಗಳ ತಿಳುವಳಿಕೆಬಗ್ಯೆ ಪ್ರಕಟಿಸಲ್ಪಡುವದೇನಂದರೆ, 1883ನೇ ಇಸವಿಯ ಬೆಂಗಳೂರು ಮ್ಯುನಿಸಿಪೆಲ್ ರೆಗ್ಯುಲೇಷನ್ 5ನೇ ಸೆಕ್ಷನಿನ ನಿಬಂಧನೆಗಳನುಸರಿಸಿ, ಇದರಡಿ ಕಂಡವರು ಬೆಂಗಳೂರು ಶಿವಿಲ್ ವ ಮಿಲಿಟೆರಿ ಸ್ಟೇಷನಿನ ಯೂರೋಪಿಯನ್ ವ ಯುರೇಜಿಯನ್ ತರಗತಿಯು ಮತ್ತು ಮುಸಲ್ಮಾನ್ ತರಗತಿಗಳ ವಾಸಸ್ಥರಿಂದ, ಬೆಂಗಳೂರು ಸಿವಿಲ್ ವ ಮಿಲಿಟೆರಿ ಸ್ಟೇಷನಿನ ಮ್ಯುನಿಸಿಪೆಲ್ ಕಮ್ಮಿಷನರುಗಳಾಗಿ ಚುನಾಯಿಸಲ್ಪಟ್ಟಿರುತ್ತಾರೆ :—

1. ಮೆ॥ ಜೆ. ಡಬ್ಲ್ಯೂ. ಹೇಸ್, ಸೀನಿಯರ್. 2. ಮೆ॥ ವಿ. ಮರ್ವಿನ್ ಸ್ಮಿತ್. 3. ಮೆ॥ ಸೆಂಟ್ ಜಾನ್ ಬೂರ್ಕ್. 4. ಮೆ॥ ಜಿ. ಜಿ. ಬ್ರೌನ್.	ಯೂರೋಪಿಯನ್ ವ ಯುರೇಜಿಯನ್ ತರಗತಿಗಳ ಪ್ರತಿನಿಧಿಯಾಗಿ.
5. ಮಹಮ್ಮದ್ ಸಾಲಿಹಾ ಸಾಹೆಬ್, ಕೆ. ಬಿ. 6. ಅಗಾ ಅಬ್ದುಲ್ಲಾ ಸಾಹೆಬ್.	ಮುಸಲ್ಮಾನ್ ತರಗತಿಯ ಪ್ರತಿನಿಧಿಯಾಗಿ.

2. ಯಿವರುಗಳು, ಅವರು ಚುನಾಯಿಸಲ್ಪಟ್ಟ ತಾರೀಖು ಮೊದಲು ಯೆರಡುವರುಷಗಳ ಕಾಲದ ವರಿವಿಗೂ ಯಾ ಅವರ ಬದ್ಲಿ ನೊಕರರ್ರಾಡಲ್ಪಡುವ ವರಿವಿಗೂ ಉದ್ಯೋಗದಲ್ಲಿರತಕ್ಕದ್ದು.

ನಂ. 9. ತಾರೀಖು 2ನೇ ಸೆಪ್ಟಂಬರ್ 1884.

ಇದರಿಂದ ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಿಸಲ್ಪಡುವದೇನಂದರೆ, 1883ನೇ ಇಸವಿಯ ಬೆಂಗಳೂರು ಮ್ಯುನಿಸಿಪಲ್ ರೆಗ್ಯುಲೇಷನ 5ನೇ ಸೆಕ್ಷನಿನ ನಿಬಂಧನೆಗಳನುಸರಿಸಿ ಇದರಡಿ ಕಂಡವರು ಬೆಂಗಳೂರು ಸಿವಿಲ್ ವ ಮಿಲಿಟೆರಿ ಸ್ಟೇಷನಿನ ಹಿಂದೂ ತರಗತಿಯ ವಾಸಸ್ಥರಿಂದ ಸದರೀ ಸ್ಟೇಷನಿನ ಮ್ಯುನಿಸಿಪಲ್ ಕಮ್ಮಿಷನರುಗಳಾಗಿ ಚುನಾಯಿಸಲ್ಪಟ್ಟು ಇರುತ್ತಾರೆ:—

1. ರಾಯಬಹದೂರ್ ಯೆ. ಆರ್. ಸಭಾಪತಿ ಮೊದಲಿಯಾರ್
2. ವಿ. ಗಂಗಾಧರಚಟ್ಟಿಯಾರ್
3. ಯೆ. ಗೋವಿಂದರಾಜಮೊದಲಿಯಾರ್
4. ಯೆ. ಚೊಕ್ಕಲಿಂಗಮೊದಲಿಯಾರ್

} ಹಿಂದೂ ತರಗತಿಯ ಪ್ರತಿನಿಧಿಗಳಾಗಿ.

2. ಇವರುಗಳು ಚುನಾಯಿಸಲ್ಪಟ್ಟ ತಾರೀಖು ಮೊದಲು 2 ವರುಷದ ಕಾಲದವರಿಗೂ ಅಥವಾ ಅವರ ಬದಲಿ ಮೊಕರರ್ರ್ಮಾಡಲ್ಪಡುವವರಿಗೂ ಉದ್ಯೋಗದಲ್ಲಿ ಇರತಕ್ಕದ್ದು.

ಹುಕ್ಕುಂ ಬಮೋಜಿಬ್,
ಹೆಚ್. ವೈಲಿ, ಮೇಜರ್,
ರೆಸಿಡೆಂಟರ ಅಸಿಸ್ಟೆಂಟ್.

ಜುಡಿಷಿಯಲ್ ಇಲಾಖೆ.

ಇಸ್ತಿಹಾರ್‌ನಾಮೆ.

ತಾರೀಖು 15ನೇ ಸೆಪ್ಟಂಬರ್ 1884.

ಶ್ರೀಮನ್ ಮಹಾರಾಜಾ ಸರ್ಕಾರದವರ ಅಗ್ನ್ಯಾನುಸಾರವಾಗಿ ಚೀಫ್ ಕೋರ್ಟಿನವರು ನಿಯಮಿಸುವದೇನಂದರೆ, ಮೈಸೂರು ದೇಶದ ತಮಾಂ ಸಿವಿಲ್ ಕೋರ್ಟುಗಳೂ 1884ನೇ ಇಸವಿ ಸೆಪ್ಟಂಬರ್ 25ನೇ ತಾರೀಖು ಮೊದಲು 2ನೇ ಅಕ್ಟೋಬರ್ ವರಿಗೆ ದಸರಾ ಹಬ್ಬಕ್ಕೋಸ್ಕರ ಬರಖಾಸ್ತು ಮಾಡಲ್ಪಡತಕ್ಕದ್ದು.

ಎಸ್. ಹೇಮಾಜಿರಾವ್,
ರಿಜಿಸ್ಟ್ರಾರ್.

ಫೈನಾನ್ಷಿಯಲ್ ಇಲಾಖಾ.

1882ನೇ ಮೈಸೂರು ರೈಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡಿ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡಿಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡಿಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್‌ಸನ್,
ಕಾಂಪ್‌ಟ್ರೋಲರ್.

ತುಮಕೂರು ಡಿಸ್ಟ್ರಿಕ್ಟು

ತಾರೀಖು 9ನೇ ಸೆಪ್ಟಂಬರ 1884.

ಚಿತ್ರದುರ್ಗದ ಅಮಲ್‍ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟ್ ನಾರಣಯ್ಯಂಗಾರ್ರು ಮತ್ತು ಹುಳಿಯಾರದ ಡೆಪ್ಯುಟಿ ಅಮಲ್‍ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟ್ ಕೃಷ್ಣರಾಯರು ಇವರುಗಳು, ತುಮಕೂರು ಡಿಸ್ಟ್ರಿಕ್ಟು ಮಾಜಿಸ್ಟ್ರೇಟರವರಿಂದ 1872ನೇ ಇಸವಿ Xನೇ ಆಕ್ಟೆಂಬ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 23ನೇ ಬಿ. ಸೆಕ್ಷನ್ ಅನುಸರಿಸಿ ಇದರಡಿ ಕಂಡ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ:—

1. ಲಾಷ್ ವಿಚಾರಣೆ ಬಗ್ಯೆ ಅಧಿಕಾರ, (ಸೆಕ್ಷನ್ 135.)
2. ತಮಗೆ ಅಧಿಕಾರ ವಿರುವ ಮೊಕದ್ದಮೆಗಳಲ್ಲಿ ತಕಸೀರುಗಳ ಫಿರ್ಯಾದುಗಳನ್ನು ದಾಖಲ್ಮಾಡಿಕೊಳ್ಳುವದಕ್ಕೆ ಅಧಿಕಾರ, (ಸೆಕ್ಷನ್ 141.)
3. ನಿರೋಧವಗೈರೆಗಳನ್ನು ಅಡ್ಡಿಪಡಿಸುವಂತೆ ಹುಕುಂ ಮಾಡುವದಕ್ಕೆ ಅಧಿಕಾರ, (ಸೆಕ್ಷನ್ 518.)
4. ಹೇಳಿಗೆಗಳು ಬಾರ್‍ಬಾರ್ ನಡಿಯುದಂತೆ ಅಡ್ಡಿಪಡಿಸುವದಕ್ಕೆ ಹುಕ್ಕುಂ ಕೊಡಲು ಅಧಿಕಾರ, (ಸೆಕ್ಷನ್ 519.)

ಪಿ. ಯನ್. ಕೃಷ್ಣಮೂರ್ತಿ,
ಡಿಸ್ಟ್ರಿಕ್ಟು ಮಾಜಿಸ್ಟ್ರೇಟ್.

ಕಡೂರು ಡಿಸ್ಟ್ರಿಕ್ಟು.

ತಾರೀಖು 10ನೇ ಸೆಪ್ಟಂಬರ 1884.

ಇದರಿಂದ ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಿಸಲ್ಪಡುವದೇನಂದರೆ, ಕಡೂರು ಡಿಸ್ಟ್ರಿಕ್ಟು ತರೀಕೆರೆ ತಾಲ್ಲೂಕು ಗುಡ್ಡದ ಬೀರನಹಳ್ಳಿ ಗ್ರಾಮಕ್ಕೆ ಸೇರಿದ 3ನೇ ಸರ್ವೆ ನಂಬರಿಗೆ ದಾಖಲಾದ ಬಂಜರ್ ಜಮೀನ್ ಪೈಕಿ ಸುಮಾರು 400 ಎಕರೆ ಜಮೀನಿಗಾಗಿ ಕಾಫೀ ಸಾಗುವಳೀ ಬಗ್ಯೆ ದರಖಾಸ್ತು ಬಂದಿರುವದರಿಂದ, ಸದರೀ ಜಮೀನು 1884ನೇ ಇಸವಿ ಅಕ್ಟೋಬರ 15ನೇ ಮಕ್ಕು ಮಿನಲ್ಲಿ ಅಮಲ್‍ದಾರ್ರು ರೂಬರೂ ತರೀಕೆರೆ ಮೊಕ್ಕಾಮಿನಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಪರಂತು ಸದರೀ ಕ್ರಯವು ಸದರೀ ಜಮೀನಿಗೆ ಮೊಕರರ್ ಮಾಡಲ್ಪಡುವ ಕಂದಾಯವನ್ನು ತೆರುವದಕ್ಕೂ ಮತ್ತು ಯಾವದಾದರು ನೀರಿನ ಹಕ್ಕುದಾರಿ ಮತ್ತು ಅವಶ್ಯಕವಾದ ಮಾರ್ಗದ ಹಕ್ಕುದಾರಿ ಯಿವುಗಳ ಉಳಿಸಿಕೊಳ್ಳುವಿಕೆಗೂ ವಳಪಟ್ಟಿರತಕ್ಕದ್ದು.

2. ಕ್ರಯದಾರನು ಹರಾಜು ಕೈದಾದ ಕೂಡ್ಲೆ ಕ್ರಯದ ಮೊಬಲಗ್ ಪೈಕಿ ಶೇಕಡಾ 25ರಂತೆ ಆಗುವ ಮೊಬಲಗನ್ನು ಡಿಪಾಜಿಟ್ ಯಿಡತಕ್ಕದ್ದು, ಮತ್ತು ಬಾಕೀ ಕ್ರಯದ ಮೊಬಲಗನ್ನು ಹರಾಜು ತಾರೀಖು ಮೊದಲು 15 ದಿವಸಗಳ ವಳಗಾಗಿ ಪಾವತೀ ಮಾಡದೇ ಯಿದ್ದರೆ, ಹಾಂಗೆ ಡಿಪಾಜಿಟ್ ಯಿಡೋಣಾದ ಮೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡತಕ್ಕದ್ದು.

3. ಹಾಂಗೆ ಡಿಪಾಜಿಟ್ ಕೊಡದೇ ಹೋದರೆ ಯಾ ಕ್ರಯದ ಬಾಕೀ ಮೊಬಲಗನ್ನು ಪಾವತೀ ಮಾಡದಿದ್ದರೆ ಅವ್ವಲ್ ಕ್ರಯದಾರನ ಖರ್ಚಿಗೂ ವ ಲುಕಸಾನಿಗೂ ವಳಪಟ್ಟು ಸದರೀ ಜಮೀನ್ ಪುನಹಾ ಹರಾಜು ಮಾಡಲ್ಪಡುವದು.

4. ಹರಾಜು ಡೆಪ್ಯುಟಿ ಕಮ್ಮಿಷನರಿಂದ ಕಾಯಂ ಮಾಡಲ್ಪಡುವ ತನಕ ಜಮೀನಿನ ಹರಾಜು ಕಾಯಮಾದ್ದಾಗಿರತಕ್ಕದ್ದಲ್ಲವು.

5. ಸದರೀ ಜಮೀನಿನ ಚತುರ್ಸೀಮೆಯು ಇದರಡಿ ಕಾಣಿಸಿರುತ್ತೆ, ಯಿನ್ನೂ ಹೆಚ್ಚಿಗೆ ತಪಸೀಲ್‍ಗಳು ಹರಾಜು ಕಾಲದಲ್ಲಿ ಕೇಳಿ ತಿಳಿದು ಕೊಳ್ಳಬಹುದು, ತಪಸಿಲ್‍ನಲ್ಲಾಗಲಿ ಅಂದಾಜು ಬೀಜವರೀಯಲ್ಲಾಗಲಿ ಯಿರುವ ಗಲ್ತಿಗಳಿಗೆ ಸರ್ಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

ಉತ್ತರಕ್ಕೆ—ಶಾಂತಪುರದ ಕಟ್ಟೆ ಹೊಳೆ ಬಳಿಯಣ ಮಾಸ್‍ಕಾಲ್ ಗಟ್ಟ.
ದಕ್ಷಿಣಕ್ಕೆ—ಸದರೀ ಗ್ರಾಮದ 2—13—14ನೇ ಸರ್ವೆ ನಂಬರುಗಳು.
ಪೂರ್ವಕ್ಕೆ—ತಾಯಿಗಡಬೋಗಿ ಗ್ರಾಮದ ಸರಹದ್ದು.
ಪಶ್ಚಿಮಕ್ಕೆ—ಬೀರನಹಳ್ಳಿಯಿಂದ ಹಲಸೂರಿಗೆ ಹೋಗುವ ಕಾಲುದಾರಿ.

ಮಹಮ್ಮದಲ್ಲಿ, ಕೆ. ಬಿ.
ಆಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್.

693

ಸರ್ 1884ನೇ ಇಸವಿ ಆಗಸ್ಟ್ ತಿಂಗಳ ಕಾಲಸ್ಥಿತೀ ರಿಪೋರ್ಟುಗಳು.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಮಳೆ.—ಸದರೀ ಮಾಹೆಯಲ್ಲಿ ಇದರಡೀಕಂಡ ಪ್ರಕಾರ ಮಳೆ ಬಿದ್ದಿರುತ್ತೆ:—

ತಾಲ್ಲೂಕು	ಅಂ.	ಸೆಂಟ್ಸ್.	ತಾಲ್ಲೂಕು	ಅಂ.	ಸೆಂಟ್ಸ್
ಶಿವಮೊಗ್ಗಾ	9	93	ಸೊರಬ	20	20
ಚನ್ನಗಿರಿ	2	68	ಸಾಗರ	12	35
ಹೊನ್ನಾಳಿ	3	95	ನಗರ	57	65
ಷಿಕಾರಿಪುರ	9	20	ತೀರ್ಥಹಳ್ಳಿ	43	47½
			ದಾವಣಗೆರೆ	2	75

ಪೇರಾವಾದ ಧಾನ್ಯ.—ಸದರೀ ಮಾಹೆಯಲ್ಲಿ ಹುರಳಿ, ರಾಗಿ, ಜೋಳ, ನವಣೆ ವಗೈರೆ ಬಿತ್ತಲ್ಪಟ್ಟವು. ಮೈದಾನ ತಾಲ್ಲೂಕುಗಳಲ್ಲಿ ಮಳೆ ವಿಶೇಷ ಅಪೇಕ್ಷಿತವಾಗಿಧೆ.

ಕಟಾವಾದ ಫಸಲ.—ಹೆಸರು, ಯಳ್ಳು.

ಜನಾರೋಗ್ಯ.—ಮಧ್ಯಸ್ಥವಾಗಿಧೆ. ಕೆಲವು ತಾಲ್ಲೂಕುಗಳಲ್ಲಿ ಜ್ವರ ಮತ್ತು ಸಿಡುಬು ರೋಗ ವ್ಯಾಪಿಸಿದೆ. ಉಟಾಲ ಜಾಲಾಬಿನಿಂದ ದಾವಣಗೆರೆ ತಾಲ್ಲೂಕಿನಲ್ಲಿ 22 ಮಂದಿಯೂ, ಷಿಕಾರಿಪುರದ ತಾಲ್ಲೂಕಿನಲ್ಲಿ 10 ಮಂದಿಯೂ ಮೃತಪಟ್ಟಂತೆ ರಿಪೋರ್ಟು ಆಗಿರುತ್ತೆ.

ಧಾರಣೆ.—ಯೇಕರೀತಿಯಾಗಿಧೆ.

ಪಿ. ಪಂಚನಾಥರಾವ್,
ಫಾರ ಡೆಪ್ಯುಟಿ ಕಮಿಷನರ.

ಮೈಸೂರು ಗೆಜೆಟ, ಚಂದಾದರ ವಗೈರೆ.

	ಚಂದಾ. ರೂ. ಆ.	ಟಪ್ಪಾಲ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲೀಷು ಮತ್ತು ಕನ್ನಡ ಸಃದಾ 12 ತಿಂಗಳಿಗೆ	7 0	3 8
ಛಷ ಮಾಹೆ ಯಾ ಕ್ವಾರಟರಿಗೆ	ದಾಮಾಷಾಯಿ ಪ್ರಕಾರ ದರಗಳು.	

ಶಿವಿಲ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ ಬಗ್ಯೆ ನೋಟೀಸುಗಳು:— ರೂ. ಆ.

ಮೊದಲನೇ ದಫಾ ಫಾಯಿಷ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ)	2	8
ಯರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟ್ಟೋ	1	4

ಸಿವಿಲ ಪ್ರೊಸಿಡ್ಯೂರ ಕೋಡಿನ 347ನೇ ಸೆಕ್ಷನ ಅನುಸರಿಸಿ, ದಿವಾಳೀ ಅಪ್ಲಿಕೇಷನುಗಳ ಬಗ್ಯೆ ನೋಟೀಸುಗಳಿಗೆ:—

ಮೊದಲನೇ ದಫಾ	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	2	8

ಶಿವಿಲ ಪ್ರೊಸಿಡ್ಯೂರ ಕೋಡಿನ 354ನೇ ಸೆಕ್ಷನ ಅನುಸರಿಸಿಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕ್ಕುಂಗಳು ಬಗರ ಚಾರ್ಜ ಪ್ರಕಟಿಸಲ್ಪಡುತ್ತವೆ.

ಡ್ಯುಪ್ಲಿಕೇಟ ಕಾಫೀ ಪಟ್ಟೇ, ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫೀಸರಗಳು ಕೊಡುವ ನೋಟೀಸುಗಳಿಗೆ:—

ಮೊದಲನೇ ಸಲಕ್ಕೆ	ಪುಟ1ಕ್ಕೆ	10	0
ಯೆರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ		5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜುಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ ಅಥವಾ ಕನ್ನಡಕ್ಕೆ	ಪಜ್ತಿ1ಕ್ಕೆ	0	8
ಯಿರಡನೇ ದಫಾ ಡಿಟ್ಟೋ	ಡಿಟ್ಟೋ	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ		0	4

ಬಮೋಜಬ ಹುಕ್ಕುಂ,
ಹೆಚ್. ಹಡರ್ಸ,
ಮೈ. ಗೆ. ಕಂಪೈಲರ.

اشتہار نامہ

سوار اور بارقہ کی نوکری واسطے صاحب ملٹری سکرتری آفیس کے رجسٹر مین داخل ہوئی ہین سو تمام امیدواران امتحان کے واسطے نیچے نمود ہین سو جگہون اور تاریخون مین حاضر ہونا چاہئے انکی حقداریکا تب فیصل کیا جائیگا ۔ ان تاریخون مین حاضر ہونے چوک گئے نام ایسے امیدوارون کا رجسٹر سے نکال دیے جاینگا ۔

جگہ بنگلور ملٹری سکرتری آفس	سوار روز پیر آٹھوین سیتمبر ۱۸۸۴ء روز منگل بارقہ نوین سیتمبر ۱۸۸۴ء
جگہ مہسور کیامپ ملٹری سکرتری آفس A. C. Hay.	سوار روز چہارشنبہ پہلی اکتوبر ۱۸۸۴ء روز جمعرات بارقہ دوسری اکتوبر ۱۸۸۴ء

صحیح کرنل اے ۔ سی ۔ ہے صاحب افیشیٹنگ ملٹری سکرتری
ملٹری سکرتری آفس بارہوین اگست ۱۸۸۴ع بنگلور

خط مرزا محمد علی ناسی منشی

ಮೈಸೂರ ಗೆಜೆಟ್.

ಸರ್ಕಾರದಿಂದ ಫಾಯಿಷ್ ಆದದ್ದು.

ಬೆಂಗಳೂರು, ಶನಿವಾರ, ಸೆಪ್ಟಂಬರ್ ತಾ॥ 20, ಸರ್ಕ 1884.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೪ನೇ ಭಾಗ.

ಮೈಸೂರು ಶೀಮೆಯ ಲ್ಯಾಂಡ್ ರೆವಿನ್ಯು ರೆಗ್ಯುಲೇಷನಿನ ಮಸೂದಾ.

ಮೈಸೂರು ಶೀಮೆಯಲ್ಲಿ ರೆವಿನ್ಯುಯಾನೆ ಮುಲ್ಕೀ ಆಫಿಸರಗಳಿಗೂ ಜಮೀನ್ ಕಂದಾಯಕ್ಕೂ ಸಂಬಂಧಿಸಿದ ಕಾನೂನನ್ನು ತಿದ್ದಿ ಪರಿಷ್ಕರಿಸುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನಿನ ಮಸೂದಾ.

"ಮುಲ್ಕೀ ಆಫಿಸರಗಳಿಗೂ, ಕಂದಾಯ ಏರ್ಪಾಡಿಗೂ, ಜಮೀನ್ ಕಂದಾಯ ವಸೂಲಿಗೂ, ಜಮೀನ್ ಕಂದಾಯ ಆಡಳತಕ್ಕೆ ಸಂಬಂಧಿಸಿದ ಇತರಾಂಶಗಳಿಗೂ ಸಂಬಂಧಿಸಿದ ಕಾನೂನನ್ನು ಒಟ್ಟು ಪಡಿಸಿ ನೆಟ್ಟಗೆಮಾಡುವದು ಆವಶ್ಯಕವಾದದರಿಂದ ಶ್ರೀಮನ್ಮಹಾರಾಜಾಸಾಹೇಬ್ ಬಹದೂರವರು ಇದರಡಿ ಬರುವಮೇರೆ ನ್ಯಾಯವಿಧಾನವನ್ನು ಮಾಡುತ್ತಾರೆ ಹ್ಯಾಗಂದರೆ :—

1ನೇ ಚಾಪ್ಟರ್.

ಅವತರಣಿಕೆ.

ಸರ್ಕ 1879ನೇ ಇಸವಿಯ ಮುಂಬೈ ರೆವಿನ್ಯು ಕೋಡಿನ 1ನೇ ಸೆಕ್ಷನ್.

ಚಿಕ್ಕ ಹೆಸರು.

1. ಈ ರೆಗ್ಯುಲೇಷನು "ಸರ್ಕ 1884ನೇ ಇಸವಿಯ ಮೈಸೂರು ಲ್ಯಾಂಡ್ ರೆವಿನ್ಯು ಕೋಡ್" ಯೆಂದು ಕರೆಯಲ್ಪಡತಕ್ಕದ್ದು.

ಸ್ಥಳವ್ಯಾಪ್ತಿ.

ಇದು ಏಕಿಷ್ಟ ಮೈಸೂರು ಶೀಮೆಗೂ ವ್ಯಾಪಿಸುತ್ತದೆ.

ಆರಂಭ.

ಇದು ಸರ್ಕ 1884ನೇ ಇಸವಿ ಏಪ್ರೆಲ್ ಮೊದಲನೇ ತಾರೀಖಿನಲ್ಲಿ ಜಾರೀಗೆ ಬರತಕ್ಕದ್ದು.

ಮುಂ. ರೆ. ಕೋ. 2ನೇ ಸೆಕ್ಷನ್.

ರದ್ದಾದ ಕೋಡಗಳು.

2. ಇದಕ್ಕೆ ಲಗ್ಗತ್ತಾದ A ಗುರ್ತು ಷೆಡ್ಯೂಲ್‌ನಲ್ಲಿ ನಮೂದಿಸಲ್ಪಟ್ಟ ಆಕ್ಟುಗಳು, ರೂಲ್ಸ್, ಇಸ್ತಿಹಾರನಾಮೆಗಳು, ಮತ್ತು ಹುಕುಂಗಳು, ರದ್ದುಮಾಡಲ್ಪಟ್ಟಿವೆ, ಆದರೆ ಅವುಗಳ ಪೈಕಿ ಯಾವದರ ಪ್ರಕಾರವಾಗಲಿ ಮಾಡಲ್ಪಟ್ಟ ಯಾವ ವಿಷಯವಾಗಲಿ ನಿಷ್ಪ್ರಾಮಾಣಿಕವಾಗುವಹಾಗಿಲ್ಲವು.

ಯಾವ ಆಕ್ಟಿನಲ್ಲಾಗಲಿ, ರೂಲ್‌ನಲ್ಲಾಗಲಿ, ಇಸ್ತಿಹಾರ್‌ನಾಮೆಯಲ್ಲಾಗಲಿ, ಹುಕ್ಕುಂನಲ್ಲಾಗಲಿ, ಇದರಿಂದ ರದ್ದು ಮಾಡಲ್ಪಟ್ಟ ಯಾವ ಯೆನಾಕ್ಟ್‌ಮೆಂಟ್ (ಯಾನೇ ಆಕ್ಟನ್ನು) ಕುರಿತಾಗಲಿ ಮಾಡಲ್ಪಟ್ಟ ತಮಾಂ ದಾಖಲೆಗಳೂ, ಈ ರೆಗ್ಯುಲೇಷನಿನ ಆಯಾ ಭಾಗಕ್ಕೆ ದಾಖಿಲ್ ಮಾಡಿದ್ದರೆ ಹ್ಯಾಗೋ ಹಾಗೆ ಓದಲ್ಪಡತಕ್ಕದ್ದು.

ಅಂಥಾ ಯಾವ ಆಕ್ಟು ಅನುಸರಿಸಿ ಯಾಗಲಿ ವಿಧಿಸಲ್ಪಟ್ಟ ತಮಾಂ ರೂಲ್‌ಗಳೂ, ಮಾಡಲ್ಪಟ್ಟ ಮೊಕರರಾತಿಗಳೂ, ಕೊಡಲ್ಪಟ್ಟ ಜಾಮೀನ್‌ಗಳೂ, ಉಂಟುಮಾಡಲ್ಪಟ್ಟ ಅಧಿಕಾರಗಳೂ, ಸಾದರ್‌ಮಾಡಲ್ಪಟ್ಟ ಹುಕುಂಗಳೂ, ಫಾಯಿಷ್‌ಮಾಡಲ್ಪಟ್ಟ ಇಸ್ತಿಹಾರ್ ನಾಮೆಗಳೂ, ಈ ಆಕ್ಟಿನಲ್ಲಿ ಮುಂದೆ ನಮೂದಿಸಲ್ಪಡತಕ್ಕ ಯಾವ ಅಂಶಗಳಿಗಾಗಲಿ ಸಂಬಂಧಿಸಿದ ಹಾಲೀ ಜಾರಿಯಲ್ಲಿರುವ ಮಿಕ್ಕ ತಮಾಂ ರೂಲ್‌ಗಳೂ, (ಈ ರೆಗ್ಯುಲೇಷನನ್ನು ಅನುಸರಿಸಿ ಯಿರುವಷ್ಟು ಮಟ್ಟಿಗೆ) ಇದರ ಪ್ರಕಾರ ವಿಧಿಸಲ್ಪಟ್ಟಂತೆ, ಮಾಡಲ್ಪಟ್ಟಂತೆ, ಕೊಡಲ್ಪಟ್ಟಂತೆ, ಉಂಟುಮಾಡಲ್ಪಟ್ಟಂತೆ, ಸಾದರ್‌ಮಾಡಲ್ಪಟ್ಟಂತೆ, ಮತ್ತು ಫಾಯಿಷ್ ಮಾಡಲ್ಪಟ್ಟಂತೆ ಎಣಿಸತಕ್ಕದ್ದು.

ಇದರ ದೆಸೆಯಿಂದ ರದ್ದು ಮಾಡಲ್ಪಟ್ಟ ಯಾವ ಯೆನಾಕ್ಟ್‌ಮೆಂಟ್ ಅನುಸರಿಸಿಯಾಗಲಿ ಷುರು ಮಾಡಲ್ಪಟ್ಟ ಹಾಲೀ ಚಾಲತೀಯಲ್ಲಿರುವ ತಮಾಂ ನಡವಳಿತಗಳೂ, ಈ ರೆಗ್ಯುಲೇಷನ್ ಅನುಸರಿಸಿ ಷುರು ಮಾಡಲ್ಪಟ್ಟಂತೆ ಎಣಿಸಲ್ಪಡತಕ್ಕದ್ದು. ಮತ್ತು ಈ ರೆಗ್ಯುಲೇಷನ್ ಅನುಸರಿಸಿ ಉತ್ತರೋತ್ತರ ನಡಿಸಲ್ಪಡತಕ್ಕದ್ದು.

ಮುಂ. ರೆ. ಕೋ. 3ನೇ ಸೆಕ್ಷನ್.

ಅರ್ಥ ವಿವರಣೆಯ ಕಲಂ.

3. ಈ ರೆಗ್ಯುಲೇಷನಿನಲ್ಲಿ ಅರ್ಥತಃ ಅಥವಾ ಸಂದರ್ಭತಃ ವಿರುದ್ಧಾಂಶವೇನೂ ಇಲ್ಲದಿದ್ದರೆ,—

ರೆವಿನ್ಯು ಆಫೀಸರ್.

(1) "ರೆವಿನ್ಯು ಆಫೀಸರ್" ಅಂದರೆ, ಜಮೀನ್ ಕಂದಾಯದ ವಿಷಯದಲ್ಲಾಗಲಿ, ಸರ್ವೇ ಅಸೆಸ್‌ಮೆಂಟಿನ ವಿಷಯದಲ್ಲಾಗಲಿ, ಅದಕ್ಕೆ ಸಂಬಂಧಪಟ್ಟ ಲೆಖ್ಖಗಳು ಅಥವಾ ರಿಕಾರ್ಡ್‌ಗಳ ವಿಷಯದಲ್ಲಾಗಲಿ, ಮೊಕರರ್ ಮಾಡಲ್ಪಟ್ಟ ಯಾವದಾದರೂ ದರ್ಜೆಯ ಪ್ರತಿ ಆಫೀಸರೆಂದು ಅರ್ಥ:

ಸರ್ವೇ ಆಫೀಸರ್.

(2) "ಸರ್ವೇ ಆಫೀಸರ್" ಅಂದರೆ, ಈ ರೆಗ್ಯುಲೇಷನ್ ೧೮ನೇ ಸೆಕ್ಷನ್ ಅನುಸರಿಸಿ, ಅಥವಾ ಸದರೀ ಸೆಕ್ಷನ್ನಿಂದ ವಿಧಿಸಲ್ಪಟ್ಟ ರೀತಿಯಾಗಿ ಮೊಕರರ್‌ಮಾಡಲ್ಪಟ್ಟ ಒಬ್ಬ ಆಫೀಸರೆಂದರ್ಥ.

ಜಮೀನ್.

(3) "ಜಮೀನ್" ಅಂದರೆ, ಜಮೀನ್ನಿಂದಲೂ, ಭೂಮಿಗೆ ಲಗ್ಗತ್ತಾದ ಅಥವಾ ಭೂಮಿಗೆ ಸೇರಿಸಲ್ಪಟ್ಟ ಯಾವ ವಸ್ತುವಿಗಾಗಲಿ ಸ್ಥಿರವಾಗಿ ಜಂಟಿಸೋಣಾದ ವಸ್ತುಗಳಿಂದಲೂ, ಉಂಟಾಗುವ ಪ್ರಯೋಜನಗಳನ್ನೂ, ಗ್ರಾಮಗಳ ಅಥವಾ ಶೀಮೆಯ ಇತರ ಗೊತ್ತು ಮಾಡಲ್ಪಟ್ಟ ಭಾಗಗಳ ಹುಟ್ಟುವಳಿಯಲ್ಲಿ ಅಥವಾ ಕಂದಾಯದಲ್ಲಿ ಅಥವಾ ಖರ್ಚುಗಳ ಮೇಲೆ ಹಿಸ್ಸೆಗಳನ್ನು ಸಹ ಅಡಗಿಸಿ ಕೊಳ್ಳುತ್ತದೆ:

ಎಸ್ಟೇಟ್.

(4) "ಎಸ್ಟೇಟ್" ಅಂದರೆ, ಜಮೀನ್‌ನಲ್ಲಿಯ ಯಾವದಾದರೂ ಆದಾಯ ಮತ್ತು ಅಂಥಾ ಆದಾಯವನ್ನು ವಹಿಸುವದಕ್ಕೆ ಶಕ್ತನಾದ ಒಬ್ಬ ಮನುಷ್ಯನಿಂದಾಗಲಿ ಮನುಷ್ಯರ ಸಮುದಾಯದಿಂದಾಗಲಿ ವಹಿಸಲ್ಪಟ್ಟ ಅಂಥಾ ಆದಾಯಗಳ ಸಮುದಾಯ ವೆಂಬದಾಗಿ ಅರ್ಥ:

697

(5) "ಸರ್ವೇನಂಬರ್" ಅಂದರೆ, ಯಾವದರವಿಸ್ತೀರ್ಣ ಮತ್ತು ಯಿತರ ತಪಶೀಲುಗಳನ್ನು ಬೇರೆಬೇರೆ ಯಾ ನಂಬರ್‌ವಾರಾಗಿ ಅದು ಯಿರುವ ಗ್ರಾಮ, ಷಹರ್ ಅಥವಾ ಪಟ್ಟಣ ಯಿದರ ಸರ್ವೇರಿಕಾರ್ಡಿನಲ್ಲಿ ದಾಖಲ್ಮಾಡಲ್ಪಟ್ಟು ಯಿದೆಯೋ ಅಂಥಾ ಬಂದು ಜಮೀನಿನ ಭಾಗವೆಂಬದಾಗಿ ಅರ್ಥ. ಮತ್ತು ಬಂದು ಸರ್ವೇನಂಬರಿನ ಗುರ್ತಾದ ಭಾಗವನ್ನು ಸಹ ಅಡಗಿಸಿಕ್ಕೊಂಡು ಯಿರುತ್ತದೆ:

ಸರ್ವೇನಂಬರ್.

(6) "ಬಂದು ಸರ್ವೇನಂಬರಿನ ಗುರ್ತಾದಭಾಗ" ಅಂದರೆ, ಪ್ರತ್ಯೇಕ ಪ್ರತ್ಯೇಕವಾಗಿ ಕಂದಾಯ ದಾಖಲ್ಮಾಡಲ್ಪಟ್ಟು ಮತ್ತು ರಿಜಿಸ್ಟರ್ ದಾಖಲಾದ ಬಂದು ಸರ್ವೇನಂಬರಿನ ಬಂದು ಸಬ್‌ಡಿವೀಜನ್ ಯೆಂದರ್ಥವು:

ಬಂದು ಸರ್ವೇನಂಬರಿನ ಗುರ್ತಾದಭಾಗ.

(7) "ಕಟ್ಟಡದನಿವೇಶನ" ಅಂದರೆ, ಕಟ್ಟಡದ ಕೆಲಸಗಳಾಗಿ ಪಡೆದಿರುವ ಜಮೀನಿನ ಬಂದು ಹಿಸ್ಸೆಯೆಂದರ್ಥವು. ಅಂಥಾ ಹಿಸ್ಸೆಯಲ್ಲಿ ವಸ್ತುತಃ ಯಾವದಾದರೂ ಕಟ್ಟಡಕಟ್ಟಲ್ಪಟ್ಟಿರಲಿ ಯಿಲ್ಲದೆ ಇರಲಿ ಚಿಂತೆಯಿಲ್ಲವು, ಮತ್ತು ಅಂಥಾ ಜಮೀನಿನಲ್ಲಿ ಕಟ್ಟಲ್ಪಟ್ಟ ಯಾವದಾದರೂ ಕಟ್ಟಡಕ್ಕೆಸುತ್ತಯಿರುವ ಅಥವಾ ಸಮೀಪದಲ್ಲಿರುವ ಖುಲ್ಲಾ ಜಮೀನನ್ನಾಗಲಿ, ಹಜಾರವನ್ನಾಗಲಿ, ಅಡಗಿಸಿಕೊಳ್ಳುತ್ತದೆ:

ಕಟ್ಟಡದನಿವೇಶನ.

(8) "ಯೆಲ್ಲೇಗುರುತು" ಅಂದರೆ, ಬಬ್ಬ ಸರ್ವೇಆಫೀಸರರಿಂದಾಗಲಿ, ಜಮೀನಿನ ಯಾವದಾದರೂ ಭಾಗದ ಯಲ್ಲೆಯನ್ನು ಗೊತ್ತುಮಾಡುವದಕ್ಕಾಗಿ ಅಧಿಕಾರಪಡೆದ ಇತರ ರೆವಿನ್ಯೂಆಫೀಸರರಿಂದಾಗಲಿ, ಹಾಕಲ್ಪಟ್ಟ ಅಥವಾ ಉಪಯೋಗಿಸಲ್ಪಟ್ಟ ಅಥವಾ ತಪಶೀಲ್‌ನಿಶಿಗುರ್ತಿಸಲ್ಪಟ್ಟ, ಮಣ್ಣಿನಿಂದಾಗಲಿ ಕಲ್ಲಿನಿಂದಾಗಲಿ ಇತರ ಸಾಮಾನಿನಿಂದಾಗಲಿ ಯತ್ತರಿಸಲ್ಪಟ್ಟ ಯಾವದಾದರೂ ಬಂದು ಗುರ್ತೆಂತಲೂ ಮತ್ತು ಸ್ವಾಭಾವಿಕವಾದ ಅಥವಾ ಕಲ್ಪಿತವಾದ ಯಾವದಾದರೂ ಬೇಲಿಯೆಂತಲೂ, ಖಾಲೀಯಿರುವ ತುಂಡು ಜಮೀನು ಅಥವಾ ಯಿನ್ನೂ ಯಾವವಿಧವಾದ ಗುರ್ತೆಂತಲೂ ಅರ್ಥವು:

ಯಲ್ಲೇಗುರುತು.

(9) "ಜಮೀನ್ ಪಡೆಯುವಣ" ಅಂದರೆ, ಕೂಡಲೇಯಾಗಲಿ ಅಥವಾ ಕಾನೂನುಪ್ರಕಾರ ನಡದುಬರುವ ಹಿಡುವಳಿಗಳ ಆಖೈರ್‌ನಲ್ಲಿಯಾಗಲಿ ಆ ಭೂಮಿಯ ಸ್ವಾಧೀನತೆಗೆ ಮತ್ತು ಅನುಭವಕ್ಕೆ ಅಥವಾ ವಿನಿಯೋಗಕ್ಕೆ ಬಂದು ಬಾಧ್ಯತೆಯನ್ನು ಕಾನೂನುಪ್ರಕಾರ ಪಡಿಯೋಣ:

ಜಮೀನ್ ಪಡೆಯುವಣ.

(10) "ಹಿಡುವಳೀದಾರ ಅಥವಾ ಜಮೀನ್ ಹಿಡುವಳೀದಾರ" ಅಂದರೆ, ಯಾವನಿಗೆ ತನಿಗೋಸ್ಕರವೇ ಆಗಲಿ ಅಥವಾ ಬೇರೆ ಬಬ್ಬ ಮನುಷ್ಯನಿಗಾಗಲಿ ಪೂರ್ತಿಯಾಗಿ ಅಥವಾ ಕೆಲವುಮಟ್ಟಿಗೆ ಮಾತ್ರ ಅಥವಾ ಮನುಷ್ಯರುಗಳ ಬಂದು ತರಗತಿಗಾಗಲಿ ಅಥವಾ ಜನಸಮೂಹಕ್ಕೋಸ್ಕರವಾಗಲಿ ಭೂಮಿಯನ್ನು ಪಡಿಯುವದಕ್ಕೆ ಹಕ್ಕನ್ನು ವುಂಟಾಗಿಯಿರುವ ಮನುಷ್ಯನೆಂದರ್ಥ.

ಹಿಡುವಳೀದಾರ ಅಥವಾ ಜಮೀನ್ ಹಿಡುವಳೀದಾರ.

ಅದು ಸ್ವಾಧೀನತೆಯ ಹಕ್ಕಿಗೆ ಬಾಧ್ಯನಾದ ಭೋಗ್ಯದಾರನನ್ನು ಕೂಡ ಶೇರಿ ಶಿಕ್ಕೊಂಡಿರುತ್ತದೆ.

ಹಿಡುವಳಿ.

(11) "ಹಿಡುವಳಿ" ಎಂಬದು ಅಂಥಾ ಹಕ್ಕು ಪ್ರವರ್ತಿಸುವ ಜಮೀನನ್ನು ತಿಳಿಸುತ್ತೆ:

ಷಿಕ್ಮೀದಾರ.

(12) "ಷಿಕ್ಮೀದಾರ" ಅಂದರೆ, ಯಾವನು ಜಮೀನಿನ ಯಜಮಾನನಿಂದ ಅಥವಾ ಜಮೀನಿಗೆ ಹಕ್ಕುವುಳ್ಳ ಅವನ ಪೂರ್ವಿಕನಿಂದ ಜಮೀನಿಗೆ ಹಕ್ಕನ್ನು ಪಡಕೊಂಡು ಅದಕ್ಕಾಗಿ ತನ್ನ ಯಜಮಾನನಿಗೆ ಗುತ್ತಿಗೆ ಕೊಡುವದಕ್ಕೆ ಬಾಧ್ಯಸ್ಥನಾಗಿರುವನೋ ಅಥವಾ ಗುತ್ತಿಗೆ ಕೊಡತಕ್ಕದ್ದಿಲ್ಲವೆಂಬುವದಕ್ಕೆ ಕರಾರಿಲ್ಲದ ಪಕ್ಷದಲ್ಲಿ ಅದನ್ನು ಕೊಡುವದಕ್ಕೆ ಬಾಧ್ಯಸ್ಥನಾಗುವನೋ ಅವನು ಯೆಂದು ಅರ್ಥ:

ಕಂದಾಯ.

(13) "ಕಂದಾಯ" ಅಂದರೆ, ಒಬ್ಬ ಷಿಕ್ಮೀದಾರನಿಗೆ ಕೊಡಲ್ಪಟ್ಟ ಜಮೀನಿನ ಉಪಯೋಗ ಅಥವಾ ಹಿಡುವಳಿಗೋಸ್ಕರ ಸದರೀ ಷಿಕ್ಮೀದಾರನಿಂದ ನಗದಾಗಿ ಅಥವಾ ಧಾನ್ಯರೂಪವಾಗಿ ಯಾವದು ಸಲ್ಲಿಸಲ್ಪಡುತ್ತೋ ಅಥವಾ ಒಪ್ಪಿಸಲ್ಪಡುತ್ತೋ ಅದನ್ನೂ ಅಥವಾ ಯಾವ ಚಾಕರಿ ಮಾಡಲ್ಪಡುತ್ತೋ ಅದನ್ನೂ ತಿಳಿಸುತ್ತದೆ:

ಮುಖ್ಯ ಹಿಡುವಳೀದಾರ.

(14) "ಮುಖ್ಯ ಹಿಡುವಳೀದಾರ" ಅಂದರೆ, ಯಾವನು ತನ್ನ ಹಿಡುವಳೀ ಜಮೀನುಗಳಿಗೋಸ್ಕರವಾಗಿ ಸರಕಾರಕ್ಕೆ ಕಂದಾಯ ಕೊಟಲಿ ಕೊಡದೇಹೋಗಲಿ ಅವನಿಂದ ಪಡದುಯಿರುವ ಸದರೀ ಜಮೀನಿನ ಇತರ ಹಿಡುವಳೀದಾರರುಗಳಿಂದ ಅವುಗಳಿಗಾಗಿ ಕಂದಾಯ, ಗುತ್ತಿಗೆ ಅಥವಾ ಜಮೀನು ಹುಟ್ಟುವಳಿಯುನ್ನು ಹೊಂದಲಿಕ್ಕೆ ಬಾಧ್ಯಸ್ಥನಾಗಿರುವನೋ ಅವನನ್ನು ತಿಳಿಸುತ್ತದೆ:

ಕಂ ಹಿಡುವಳೀದಾರ.

(15) "ಕಂ ಹಿಡುವಳೀದಾರ" ಅಂದರೆ, ಮುಖ್ಯ ಹಿಡುವಳೀದಾರನಿಗೆ ಗುತ್ತಿಗೆಯನ್ನಾಗಲಿ ಕಂದಾಯವನ್ನಾಗಲಿ ತೆರುವದಕ್ಕೆ ಬಾಧ್ಯಸ್ಥನಾದ ಒಬ್ಬ ಹಿಡುವಳೀದಾರನನ್ನು ತಿಳಿಸುತ್ತದೆ:

ಅನುಭವದಾರ.

(16) "ಅನುಭವದಾರ" ಅಂದರೆ, ಪರಭಾರೇ ಮಾಡಲ್ಪಡದ ಜಮೀನಿನ ಒಬ್ಬ ಹಿಡುವಳೀದಾರನನ್ನಾಗಲಿ, ಬಹುಮಂದಿ ಹಿಡುವಳೀದಾರರಿರುವಪಕ್ಷಕ್ಕೆ ಅಂಥಾ ಯಾವದಾದರೂ ಜಮೀನು ವಿಷಯದಲ್ಲಿ ಉತ್ತಮವಾದ ಬಾಧ್ಯತೆಯನ್ನು ಪಡದಿರುವವನನ್ನಾಗಲಿ ಅಂಥಾ ಉತ್ತಮ ಬಾಧ್ಯತೆಯು ಅನೇಕಮಂದಿ ಹಿಡುವಳೀದಾರರಿಗೆ ಸಮನಾಗಿ ಯಿರುವ ಪಕ್ಷಕ್ಕೆ ಅಂಥಾ ಹಿಡುವಳೀದಾರರಪೈಕಿ ಯಾವನಾದರೂ ಒಬ್ಬನನ್ನಾಗಲಿ ತೋರಿಸುತ್ತದೆ:

ರಿಜಿಸ್ಟರಾದ ಅನುಭವದಾರ.

(17) "ರಿಜಿಸ್ಟರಾದ ಅನುಭವದಾರ" ಅಂದರೆ, ಗವರ್ನಮೆಂಟ ರಿಕಾರ್ಡುಗಳಲ್ಲಿ ಸಾಕ್ಷಾತ್ತಾಗಲಿ ತನ್ನ ಒಳ ಅನುಭವದಾರ, ಷಿಕ್ಮೀದಾರ, ಮುತಾಲೀಕ, ನೌಕರ ಅಥವಾ ಕಾನೂನು ಮೇರೆ ನಿಯಮಿಸಲ್ಪಟ್ಟ ಇತರ ವಿಧವಾದ ಪ್ರತಿನಿಧಿ ಇಂಥಾವರ ಮೂಲಕವಾಗಲಿ

ಅನ್ಯಾಕ್ರಾಂತವಾಗದ ಜಮೀನನ್ನು ಹಿಡುವಳಿಯಲ್ಲಿ ವಹಿಸುವಂತೆ, ಯಾರ ಹೆಸರು ಅಧಿಕಾರಪೂರ್ವಕ ಗವರ್ನಮೆಂಟ ರಿಕಾರ್ಡುಗಳಲ್ಲಿ ದಾಖಲಿರುತ್ತೋ ಅಂತಾ ಸಮಗ್ರವಾದ ಅನುಭವದಾರನನ್ನಾಗಲಿ, ಅನೇಕ ಸಮಗ್ರ ಅನುಭವದಾರರ ಪೈಕಿ ಹಿರಿಯವನು ಅಥವಾ ಮುಖ್ಯಸ್ಥನು ಇಂತಾವನನ್ನಾಗಲಿ ತಿಳಿಸುತ್ತೆ :

ಅನುಭವ.

(18) "ಅನುಭವ" ಅಂದರೆ ಒಬ್ಬ ಅನುಭವದಾರನಿಗೆ ಉಂಟಾದ ಹಕ್ಕುಗಳ ಸಮುದಾಯವನ್ನು ತಿಳಿಸುತ್ತೆ.

ಪರಭಾರೇ ಮಾಡಲ್ಪಟ್ಟದ್ದು.

(19) "ಪರಭಾರೇ ಮಾಡಲ್ಪಟ್ಟದ್ದು" ಅಂದರೆ ಗುತ್ತಿಗೆಯ ಅಥವಾ ಕಂದಾಯದ ವಸೂಲೀ ವಿಷಯದಲ್ಲಿಮಟ್ಟಿಗೆ ಗವರ್ನಮೆಂಟನವರಿಗಿರುವ ಹಕ್ಕುದಾರೀಗಳನ್ನು ಪೂರಾ ಅಥವಾ ಕೆಲವು ಮಟ್ಟಿಗೆ ಬೇರೆ ಯಾವ ಮನುಷ್ಯನ ಅನುಭವಕ್ಕೆ ವರ್ಗಾಯಿಸಲ್ಪಟ್ಟದ್ದೆಂದರ್ಥವು :—

ಪರಭಾರೆಯಾದ ಗ್ರಾಮ.

(20) "ಪರಭಾರೇಯಾದ ಗ್ರಾಮ" ಅಂದರೆ :—

(a) ಯಾವ ಗ್ರಾಮದ ಜಮೀನು ಕಂದಾಯವು ಪೂರಾ ಅಥವಾ ಕೆಲವು ಮಟ್ಟಿಗೆ ಪರಭಾರೆ ಮಾಡಲ್ಪಟ್ಟಿರುತ್ತೋ ; ಅಥವಾ

(b) ಯಾವ ಗ್ರಾಮದ ಜಮೀನ ಕಂದಾಯದ ಪೈಕಿ ಗೊತ್ತುಮಾಡಲ್ಪಟ್ಟ ಮೊಬಲಗು ಪರಭಾರೆ ಮಾಡಲ್ಪಟ್ಟು ಇರುತ್ತೋ ; ಅಥವಾ

(c) ಯಾವ ಗ್ರಾಮದ ಜಮೀನ ಕಂದಾಯದ ಪೈಕಿ ನಿಷ್ಕರ್ಷೆಯಾದ ಹಿಸ್ಸೆಯನ್ನು ಪರಭಾರೆ ಮಾಡಲ್ಪಟ್ಟು ಇರುತ್ತೋ ; ಅಥವಾ

(d) ಯಾವ ಗ್ರಾಮದ ಜಮೀನ ಕಂದಾಯವು ಸ್ಥಿರವಾಗಿ ಗೊತ್ತು ಮಾಡಲ್ಪಟ್ಟಿರುತ್ತೋ ;

ಅಂತಾ ಪೂರಾಗ್ರಾಮವೆಂದರ್ಥವು.

ಪರಭಾರೆಯಾದ ಜಮೀನ.

(21) "ಪರಭಾರೇಯಾದ ಜಮೀನ" ಅಂದರೆ, ಯಾವ ಜಮೀನಿನ ಕಂದಾಯವು ಸ್ಥಿರವಾಗಿ ಗೊತ್ತು ಮಾಡಲ್ಪಟ್ಟಿರುತ್ತೋ ಅಥವಾ ಪೂರಾ ಅಥವಾ ಕೆಲವುಮಟ್ಟಿಗೆ ಪರಭಾರೇ ಮಾಡಲ್ಪಟ್ಟಿರುತ್ತೋ ಅಂತಾ ಜಮೀನಯೆಂದರ್ಥವು :

ಗ್ರಾಮ, ಷಹರ್ ಅಥವಾ ಪಟ್ಟಣ.

(22) "ಗ್ರಾಮ" "ಷಹರ್" ಅಥವಾ "ಪಟ್ಟಣ" ಯೆಂಬ ಮಾತುಗಳು, ಅಂತಾ ಗ್ರಾಮಕ್ಕೆ ಷಹರಿಗೆ ಅಥವಾ ಪಟ್ಟಣಕ್ಕೆ ಶೇರಿದ ತಮಾಂ ಜಮೀನಗಳನ್ನೂ ಅಡಗಿಸಿಕೊಂಡು ಇರುತ್ತವೆ :

ಮುಲ್ಕೀಸಾಲ್ ಅಥವಾ ಸಾಲ್.

(23) "ಮುಲ್ಕೀ ಸಾಲ್" ಅಥವಾ "ಸಾಲ್" ಅಂದರೆ, ಒಂದು ಸಾಲಿನ ಜುಲೈ 31ನೇ ತಾರೀಖು ಲಾಗಾಯತ್ ಎರಡನೇ ಸಾಲಿನ ಜುಲೈ 31ನೇ ತಾರೀಖ್‌ವರಿಗೆಂದರ್ಥವು.

(24) "ಸೆಕ್ಷನ್" ಅಂದರೆ, ಈ ರೆಗ್ಯೂಲೇಷನಿನ ಒಂದು ಸೆಕ್ಷನ್ ಎಂಬ ರ್ಥವು.

ಸೆಕ್ಷನ್.

(25) "ಈ ಅಧ್ಯಾಯ" ಯೆಂಬ ಮಾತುಗಳು, ಯಾವದರಲ್ಲಿ ಸದರೀ ಮಾತುಗಳು ಸಂಭವಿಸುತ್ತವ್ರೋ ಅಂತಾ ಈ ರೆಗ್ಯೂಲೇಷನಿನ ಅಧ್ಯಾಯವೆಂದರ್ಥವು.

ಈ ಅಧ್ಯಾಯ.

(26) "ಗ್ರಾಮ ಮುತ್ಸದ್ದಿ" ಅಂದರೆ ಶ್ಯಾನುಭಾಗಿ ಕೆಲಸವನ್ನು ನೋಡತಕ್ಕವನನೆಂದರ್ಥವು. ಮತ್ತು ಶ್ಯಾನುಭಾಗನ ಕೆಲಸಗಳ ಪೈಕಿ ಯಾವದನ್ನಾಗಲೀ ನಿರ್ವಹಿಸುವ ಪ್ರತಿ ಮನುಷ್ಯನನ್ನೂ ಅಡಗಿಸಿಕೊಳ್ಳುತ್ತದೆ.

ಗ್ರಾಮ ಮುತ್ಸದ್ದಿ.

(27) "ಸರಕಾರ" ಅಂದರೆ ಮೈಸೂರು ಸರಕಾರವೆಂದರ್ಥವು.

ಸರಕಾರ್.

2ನೇ ಅಧ್ಯಾಯ.

ಮುಲ್ಕೀ ಆಫೀಸರಗಳ ಯೇರ್ಪಾಡು ಮತ್ತು ಅಧಿಕಾರ.

ಮುಂ. ರೆ. ಕೋ. 4ನೇ ಸೆಕ್ಷನ್.

4. ಜಮೀನ್ ಕಂದಾಯಕ್ಕೆ ಸಂಬಂಧಪಟ್ಟ ದರೋಬಸ್ತು ಅಂಶಗಳಲ್ಲಿಯೂ ಮೇಲ್ವಿಚಾರಣೆಯ ಅಧಿಕಾರವು ಗವರ್ನಮೆಂಟಿನವರಿಗೆ ಉಂಟಾಗಿರುತ್ತೆ.

ಮುಲ್ಕೀ ವಿಷಯಗಳಲ್ಲಿ ಮೇಲ್ವಿಚಾರಣೆಯ ಮುಖ್ಯಾಧಿಕಾರಿ.

ಗವರ್ನಮೆಂಟಿನವರು, ಕಮ್ಮಿಷನರ್ ಎಂದು ಕರೆಯಲ್ಪಡತಕ್ಕ ಒಬ್ಬ ಆಫೀಸರನ್ನು ಮೊಕರರ್ ಮಾಡಿ ಅಂತಾ ಆಫೀಸರರಿಗೆ ತಾವು ವಿಧಿಸತಕ್ಕ ರೂಲ್ಸಿಗೂ ಷರತ್ತುಗಳಿಗೂ ಒಳಪಡುವಹಾಗೆ ಈ ರೆಗ್ಯೂಲೇಷನ್ B ಷೆಡ್ಯೂಲ್‌ನಲ್ಲಿ ನಮೂದಿಸಲ್ಪಟ್ಟ ಕೆಲಸಗಳು ಅಧಿಕಾರಗಳು ಇವುಗಳ ಪೈಕಿ ವಿಶಿಷ್ಟವನ್ನಾಗಲಿ ಯಾವವನ್ನಾಗಲಿ, ಅಥವಾ, ತತ್ಕಾಲದಲ್ಲಿ ಜಾರೀ ಇರತಕ್ಕ ಯಾವದಾದರೂ ಇತರ ಕಾನೂನಿನಿಂದ, ಮುಖ್ಯವಾದ ರೆವಿನ್ಯೂ ಮೇಲ್ವಿಚಾರಣೆಯ ಅಧಿಕಾರಿಗೆ ವಿಧಿಸಲ್ಪಟ್ಟ ಅಥವಾ ಉಂಟುಮಾಡಲ್ಪಟ್ಟ ಅಧಿಕಾರಗಳನ್ನಾಗಲಿ ಕೆಲಸಗಳನ್ನಾಗಲಿ ವಿಧಿಸತಕ್ಕದ್ದು ಮತ್ತು ಕೊಡತಕ್ಕದ್ದು.

ಮುಂ. ರೆ. ಕೋ. 5ನೇ ಸೆಕ್ಷನ್.

5. ಹಿಂದಿನಕಡೇ ಸೆಕ್ಷನ್ ಅನುಸರಿಸಿ ಮೊಕರರ್ ಮಾಡಲ್ಪಟ್ಟ ಕಮ್ಮಿಷನರ್, ಗವರ್ನಮೆಂಟಿನ ಅಧಿಕಾರಕ್ಕೆ ಒಳಪಟ್ಟು, ಸದರೀ ಸೆಕ್ಷನ್ ಪ್ರಕಾರ ತನಗೆ ವಿಧಿಸಲ್ಪಟ್ಟ ಅಧಿಕಾರಗಳನ್ನು ಚಲಾಯಿಸತಕ್ಕದ್ದು, ಕೆಲಸಗಳನ್ನು ನಡಿಸತಕ್ಕದ್ದು. ಮತ್ತು ಈ ರೆಗ್ಯೂಲೇಷನಿಗನುಗುಣವಾಗಿರುವಷ್ಟುಮಟ್ಟಿಗೆ ಗವರ್ನಮೆಂಟಿನ ಒಟ್ಟು ಹುಕ್ಕುಂನಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಇತರ ವಿಧವಾದ ಅಧಿಕಾರಗಳನ್ನು, ಅಪ್ಪೀಲ್ ಕೆಲಸಗಳನ್ನು ಯಾ ಮೇಲ್ವಿಚಾರಣೆಯನ್ನು ಮೈಸೂರು ಶೀಮೆಯ ಒಳಗೂ ಮತ್ತು ತನ್ನ ಕೆಳಗಿನ ಆಫೀಸರುಗಳ ಮೇಲೂ ಚಲಾಯಿಸತಕ್ಕದ್ದು. ತಮಾಂ ಮುಲ್ಕೀ ಅಧಿಕಾರಿಗಳೂ ಆತಗೆ ತಾಬೇದಾರರಾಗಿರತಕ್ಕದ್ದು.

ಕಮ್ಮಿಷನರ ಕೆಲಸಗಳು ಮತ್ತು ಅಧಿಕಾರಗಳು.

ಮುಂ. ರೆ. ಕೋ. 7ನೇ ಸೆಕ್ಷ್ಷನ್.

ಮೈಸೂರು ಶೀಮೆಯು, ಡಿಸ್ಟ್ರಿಕ್ಟುಗಳಾಗಿ ಭಾಗಿಸಲ್ಪಡತಕ್ಕದ್ದು.

6. ಕ್ರಮಪ್ರಕಾರ ಫಾಯಿಷ್ ಮಾಡಲ್ಪಟ್ಟ ಗವರ್ನಮೆಂಟ ಹುಕ್ಕುಂನಿಂದ ಆಗಿಂದಾಗ್ಯೆ ನಿಯಮಿಸಲ್ಪಟ್ಟಷ್ಟು ಸಂಖ್ಯೆಯ ಡಿಸ್ಟ್ರಿಕ್ಟುಗಳಾಗಿಯೂ ಮತ್ತು ನಿಯಮಿಸಲ್ಪಟ್ಟಷ್ಟು ಹದ್ದುಗಳನ್ನೊಳಗೊಂಡಿಯೂ ಮೈಸೂರು ಶೀಮೆಯು ವಿಂಗಡಿಸಲ್ಪಡತಕ್ಕದ್ದು.

ವಂದು ಡಿಸ್ಟ್ರಿಕ್ಟನ್ನು ಗವರ್ನಮೆಂಟನಿಂದ, ವಿಧಿಸಲ್ಪಟ್ಟಷ್ಟು ಸಂಖ್ಯೆಯ ತಾಲ್ಲೂಕುಗಳಾಗಿಯೂ, ಅಂತಾಬಂದು ತಾಲ್ಲೂಕನ್ನು ಇಷ್ಟು ಗ್ರಾಮಗಳಾಗಿಯೂ ವಿಂಗಡಿಸುವದು

ಕ್ರಮಪ್ರಕಾರ ಫಾಯಿಷ್ ಮಾಡಲ್ಪಟ್ಟ ಗವರ್ನಮೆಂಟ ಹುಕ್ಕುಂನಿಂದ ಆಗಿಂದಾಗ್ಯೆ ನಿಯಮಿಸಲ್ಪಟ್ಟಷ್ಟು ಸಂಖ್ಯೆಯ ತಾಲ್ಲೂಕುಗಳನ್ನು ಪ್ರತಿವೊಂದುಡಿಸ್ಟ್ರಿಕ್ಟೂ ಅಡಗಿಸಿಕೊಂಡಿರಬೇಕು. ಪ್ರತಿವೊಂದು ತಾಲ್ಲೂಕು ಸಹಾ ಹಾಗೆ ನಿಯಮಿಸಲ್ಪಟ್ಟಷ್ಟು ಸಂಖ್ಯೆಗಳ ಗ್ರಾಮಗಳನ್ನು ಅಡಗಿಸಿಕೊಂಡಿರಬೇಕು.

ಹಾಲೀ ಡಿಸ್ಟ್ರಿಕ್ಟುಗಳು ತಾಲೂಕುಗಳು ಮತ್ತು ಗ್ರಾಮಗಳು.

ಆದರೆ ಹಾಲೀ ಇರುವ ಡಿಸ್ಟ್ರಿಕ್ಟುಗಳೂ, ತಾಲ್ಲೂಕುಗಳೂ ಮತ್ತು ಗ್ರಾಮಗಳೂ ಗವರ್ನಮೆಂಟನವರಿಂದ ಬದಲಾಯಿಸಲ್ಪಡುವವರಿಗೂ ಈಗ ಇರುವಂತೆಯೇ ಇರಬೇಕು.

ಮುಂ. ರೆ. ಕೋ. 8ನೇ ಸೆಕ್ಷ್ಷನ್.

ಡಿಸ್ಟ್ರಿಕ್ಟಿನ ಡೆಪ್ಯುಟಿಕಮಿಷನರ.

7. ಗವರ್ನಮೆಂಟನವರು ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರ್, ಎಂದು ಕರೆಯಲ್ಪಡತಕ್ಕ ಒಬ್ಬ ಆಫೀಸರನ್ನು ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಮೊಕರರ್ ಮಾಡತಕ್ಕದ್ದು. ಸದರೀ ಆಫೀಸರರು ತನ್ನ ಡಿಸ್ಟ್ರಿಕ್ಟಿನ ವಳಗೆಲ್ಲಾ ಈ ರೆಗ್ಯೂಲೇಷನ್ನಿಂದ ಅಥವಾ ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಇತರ ಕಾನೂನಿಂದ ಒಬ್ಬ ಡೆಪ್ಯುಟಿ ಕಮ್ಮಿಷನರಿಗೆ ಅಥವಾ ಅಸಿಸ್ಟೆಂಟ ಕಮ್ಮಿಷನರಿಗೆ, ಕೊಡಲ್ಪಟ್ಟ ಮತ್ತು ನಿರ್ಣಯಿಸಲ್ಪಟ್ಟ ಎಲ್ಲಾ ಕೆಲಸಗಳನ್ನೂ ವಿಶಿಷ್ಟಾಧಿಕಾರಗಳನ್ನೂ ಚಲಾಯಿಸತಕ್ಕದ್ದು. ಕಾನೂನಿಂದ ಪ್ರತ್ಯೇಕವಾಗಿ ಯೇರ್ಪಾಡು ಮಾಡಲ್ಪಡದೆ ಇರುವ ತಮಾಂ ಸಂಗತಿಗಳಲ್ಲೂ ಗವರ್ನಮೆಂಟಿನ ಹುಕ್ಕುಂಗಳ ಪ್ರಕಾರ ಅಮಲ್ಲುಡಿಸತಕ್ಕದ್ದು.

ಮುಂ. ರೆ. ಕೋ. 9ನೇ ಸೆಕ್ಷ್ಷನ್.

ಅಸಿಸ್ಟೆಂಟ ಕಮ್ಮಿಷನರ್‌ಗಳು.

8. ಗವರ್ನಮೆಂಟನವರು ಜರೂರೆಂದು ಭಾವಿಸುವಷ್ಟುಮಂದಿ ಅಸಿಸ್ಟೆಂಟ ಕಮ್ಮಿಷನರ್‌ಗಳನ್ನು ಪ್ರತಿ ಡಿಸ್ಟ್ರಿಕ್ಟಿಗೂ ಮೊಕರರ್ ಮಾಡತಕ್ಕದ್ದು.

ಡೆಪ್ಯುಟಿ ಕಮ್ಮಿಷನರಿಗೆ ತಾಬೇದಾರರಾಗಿರತಕ್ಕದ್ದು.

ಅಂತಾ ತಮಾಂ ಅಸಿಸ್ಟೆಂಟ ಕಮ್ಮಿಷನರ್‌ಗಳೂ ಮತ್ತು ಡಿಸ್ಟ್ರಿಕ್ಟಿನ ಮುಲ್ಕೀ ಆಡಳತದಲ್ಲಿ ಮೊಕರರ್ ಮಾಡಲ್ಪಟ್ಟ ತಮಾಂ ಇತರ ಆಫೀಸರಗಳೂ, ಡೆಪ್ಯುಟಿ ಕಮ್ಮಿಷನರಿಗೆ ತಾಬೇದಾರರಾಗಿರತಕ್ಕದ್ದು.

ಮುಂ. ರೆ. ಕೋ. 10ನೇ ಸೆಕ್ಷ್ಷನ್.

ಅವರುಗಳ ಕೆಲಸಗಳು ಮತ್ತು ಅಧಿಕಾರಗಳು.

9. ಗವರ್ನಮೆಂಟನವರು, ಯಾವ ಅಸಿಸ್ಟೆಂಟ ಕಮ್ಮಿಷನರನ್ನಾಗಲಿ ಒಂದು ಡಿಸ್ಟ್ರಿಕ್ಟಿನಲ್ಲಿ ಒಂದು ಅಥವಾ ಹೆಚ್ಚು ತಾಲ್ಲೂಕುಗಳ ಮುಲ್ಕೀ ಆಡಳತದ ಚಾರ್ಜಿನಲ್ಲಿ ಇಡತಕ್ಕದ್ದು.

ಅವೋರೆ ಚಾರ್ಜಿನಲ್ಲಿ ಇಡಲ್ಪಟ್ಟ ಯಾವ ಅಸಿಸ್ಟೆಂಟ್ ಕಮ್ಮಿಷನರಾಗಲಿ, ತನ್ನ ಚಾರ್ಜಿನಲ್ಲಿರುವ ತಾಲ್ಲೂಕುಗಳ ಅಥವಾ ತಾಲ್ಲೂಕು ಅಡಳಿತಗಳ ವಿಟ್ಟಿಗೆ ಈ ರೆಗ್ಯೂಲೇಷನಿಂದ, ಅಥವಾ ತತ್ಕಾಲದಲ್ಲಿ ಜಾರೀಇರುವ ಯಿತರ ಯಾವದಾದರೂ ಕಾನೂನಿನಿಂದ ಡೆಪ್ಯುಟಿ ಕಮ್ಮಿಷನರಿಗೆ ವಿಧಿಸಲ್ಪಟ್ಟ ಮತ್ತು ಕೊಡಲ್ಪಟ್ಟ ತಮಾಂ ಕೆಲಸಗಳನ್ನೂ ನಡಿಸತಕ್ಕದ್ದು: ತಮಾಂ ಅಧಿಕಾರಗಳನ್ನೂ ಚಲಾಯಿಸತಕ್ಕದ್ದು. ಮತ್ತು 21ನೇ ಸೆಕ್ಷನ್ ಕಾರ್ಯಗಳಿಗಾಗಿ ಆತನಿಗೆ ಮೇಲಧಿಕಾರಿಯು ಗವರ್ನವೆಂಟ ಎಂದು ಭಾವಿಸತಕ್ಕದ್ದು.

ತಾಲ್ಲೂಕುಗಳ ಚಾರ್ಜಿನಲ್ಲಿಡಲ್ಪಡದ ಅಂತಾ ಅಸಿಸ್ಟೆಂಟ್ ಕಮ್ಮಿಷನರಿಗೆ ಡೆಪ್ಯುಟಿ ಕಮ್ಮಿಷನರು ಗವರ್ನವೆಂಟಿನ ಬಟ್ಟು ಹುಕ್ಕುಂಗಳನ್ನನುಸರಿಸಿ ಯಾಗಲಿ, ವಿಶೇಷ ಹುಕ್ಕುಂಗಳನುಸರಿಸಿಯಾಗಲಿ ಆಗಾಗ್ಯೆ ತನಗೆ ಯುಕ್ತವೆಂದು ತೋರುವ ಗೊತ್ತಾದ ಕೆಲಸಗಳನ್ನೂ, ಮತ್ತು ಅಧಿಕಾರಗಳನ್ನೂ ನೇಮಿಸತಕ್ಕದ್ದು.

ಮುಂ. ರೆ. ಕೋ. 11ನೇ ಸೆಕ್ಷನ್.

ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರ ಕೆಲಸ ಹಂಗಾಮಿಯಾಗಿ ಖಾಲೀ ಬೀಳುವ ಸಂಗತಿಯಲ್ಲಿ.

10. ಡೆಪ್ಯುಟಿ ಕಮ್ಮಿಷನರು ತಮ್ಮ ಕೆಲಸಗಳನ್ನು ಚಲಾಯಿಸುವದಕ್ಕೆ ಅಶಕ್ತರಾದರೆ ಅಥವಾ ಯಾವಸಬಬಿನಿಂದಾಗಲಿ ತಮ್ಮ ಉದ್ಯೋಗವನ್ನು ಖಾಲೀಮಾಡಿದರೆ, ತಮ್ಮ ಡಿಸ್ಟ್ರಿಕ್ಟನ್ನು ಬಿಟ್ಟು ಹೋದರೆ, ಅಥವಾ ಮೃತಪಟ್ಟರೆ, ಡಿಸ್ಟ್ರಿಕ್ಟಿನಲ್ಲಿ ಹಾಜರಿರುವ ಉತ್ತಮ ದರ್ಜೆಯ ಅವರ ಅಸಿಸ್ಟೆಂಟರು ಗವರ್ನವೆಂಟಿನಿಂದ ಇತರ ಏರ್ಪಾಡು ಯಾವದೂ ಮಾಡಲ್ಪಡದೆ ಇದ್ದರೆ ಅವರ ಕೆಲಸಕ್ಕೆ ಹಂಗಾಮಿ ಬದಲೀಯಾಗಿರತಕ್ಕದ್ದು. ಮತ್ತು ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರು, ತಮ್ಮ ಡಿಸ್ಟ್ರಿಕ್ಟಿನ ಚಾರ್ಜನ್ನು ಮರಳಿ ವಹಿಸುವತನಕ ಅಥವಾ ಪೂರ್ವದ ಡೆಪ್ಯುಟಿ ಕಮ್ಮಿಷನರಿಗೆ ಬದಲೀ ಮೊಕರರ್ ಮಾಡಲ್ಪಡುವತನಕ ಮತ್ತು ಅಂತಾ ಬದಲಿಯು ತನ್ನ ಕೆಲಸದ ಚಾರ್ಜನ್ನು ತೆಗೆದುಕೊಳ್ಳುವತನಕ, ಈ ರೆಗ್ಯೂಲೇಷನ್ ಅನುಸರಿಸಿ ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರ್ ಎಂದು ಭಾವಿಸಲ್ಪಡತಕ್ಕದ್ದು.

ಮುಂ. ರೆ. ಕೋ. 12ನೇ ಸೆಕ್ಷನ್.

ಅಮಲ್‌ದಾರ್ ಮತ್ತು ಅವರ ಮೊಕರರಾತಿ.

11. ಒಂದು ತಾಲ್ಲೂಕಿನ ಸ್ಥಳದ ಮುಲ್ಕೀ ಅಡಳಿತ ಒಪ್ಪಿಸಲ್ಪಟ್ಟ ಮುಖ್ಯಾಧಿಕಾರಿಯು ಅಮಲ್‌ದಾರ್ ಎಂದು ಕರೆಯಲ್ಪಡತಕ್ಕದ್ದು. ಆತನು ಗವರ್ನವೆಂಟಿನವರಿಂದ ಮೊಕರರ್ ಮಾಡಲ್ಪಡತಕ್ಕದ್ದು.

ಆತನ ಕೆಲಸಗಳು ಮತ್ತು ಅಧಿಕಾರಗಳು.

ಆತನ ಕೆಲಸಗಳೂ, ಅಧಿಕಾರಗಳೂ, ಈ ರೆಗ್ಯೂಲೇಷನಿಂದ ವಿವರವಾಗಿ ವಿಧಿಸಲ್ಪಟ್ಟ ಅಥವಾ ಕೊಡಲ್ಪಟ್ಟವುಗಳಾಗಿರತಕ್ಕದ್ದು. ಅಥವಾ ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಇತರ ಕಾನೂನಿನಿಂದಾಗಲಿ, ತನಗೆ, ವಿಧಿಸಲ್ಪಟ್ಟ ಅಥವಾ ಗವರ್ನವೆಂಟಿನ ಬಟ್ಟು ಅಥವಾ ವಿಶೇಷ ಹುಕ್ಕುಂ ಅನುಸರಿಸಿ ಡೆಪ್ಯುಟಿ ಕಮ್ಮಿಷನರಿಂದ ವಿಧಿಸಲ್ಪಟ್ಟ ಅಥವಾ ನಿಯಮಿಸಲ್ಪಟ್ಟವುಗಳಾಗಿರತಕ್ಕದ್ದು. ಈ ರೆಗ್ಯೂಲೇಷನ್ ಜಾರೀ ಮಾಡಲ್ಪಟ್ಟ ತರುವಾಯ, ಹಾಲೀ ನೆರವೇರಿಸಲ್ಪಡುತಿರುವ ಕೆಲಸಗಳನ್ನೂ ಚಲಾಯಿಸಲ್ಪಡುತಿರುವ ಅಧಿಕಾರಗಳನ್ನೂ ತಕ್ಕ ಅಧಿಕಾರಗಳಿಂದ, ಅನ್ಯಥಾ ನಿಯಮಿಸಲ್ಪಡುವ ತನಕ ಆತನು ನೆರವೇರಿಸುತಲೂ ಚಲಾಯಿಸುತಲೂ ಇರತಕ್ಕದ್ದು.

ಮುಂ. ರೆ. ಕೋ. 13ನೇ ಸೆಕ್ಷನ್.

ಡೆಪ್ಯುಟಿ ಅಮಲ್‌ದಾರ್ ವ ಆತನ ಕೆಲಸಗಳು ಮತ್ತು ಅಧಿಕಾರಗಳು.

12. ಗವರ್ನಮೆಂಟನವರು, ಜರೂರೆಂದು ಕಾಣಬಂದಾಗ, ಒಂದು ತಾಲ್ಲೂಕಿನ ಒಂದು ಗೊತ್ತಾದ ಭಾಗದ ಚಾರ್ಜಿನಲ್ಲಿರುವದಕ್ಕೆ ಒಬ್ಬ ಡೆಪ್ಯುಟಿ ಅಮಲ್‌ದಾರನನ್ನು ಮೊಕರರ್ ಮಾಡಿ ಆಗಿಂದಾಗ್ಯೆ ಕಾಣಬರುವ ಹಾಗೆಲ್ಲಾ ಒಬ್ಬ ಅಮಲ್‌ದಾರನ ಕೆಲಸಗಳು, ಮತ್ತು ಅಧಿಕಾರಗಳನ್ನು ತನ್ನ ಚಾರ್ಜಿನಲ್ಲಿ ಇರುವ ಸರಹದ್ದಿನಲ್ಲಿ ವುಟ್ಟಿಗೆ ಚಲಾಯಿಸುವಹಾಗೆ ನೇಮಿಸಬಹುದು. ಈ ರೆಗ್ಯುಲೇಷನಿನ 219ನೇ ಸೆಕ್ಷನ್ ಕಾರ್ಯಗಳಿಗಾಗಿ, ಒಬ್ಬ ಡೆಪ್ಯುಟಿ ಅಮಲ್‌ದಾರನ ಮೇಲಧಿಕಾರಿಯು ಆ ತಾಲ್ಲೂಕಿನ ಇನ್‌ಚಾರ್ಜ ಅಸಿಸ್ಟೆಂಟ್ ಕಮ್ಮಿಷನರೆಂದು, ಅಥವಾ ಆತಾಲ್ಲೂಕಿನ ಚಾರ್ಜಿನಲ್ಲಿ ಅಸಿಸ್ಟೆಂಟ್ ಕಮ್ಮಿಷನರ್ ಇಡಲ್ಪಡದಿದ್ದಲ್ಲಿ ಡೆಪ್ಯುಟಿ ಕಮ್ಮಿಷನರೆಂದು ಭಾವಿಸಲ್ಪಡತಕ್ಕದ್ದು.

ಮುಂ. ರೆ. ಕೋ. 14ನೇ ಸೆಕ್ಷನ್.

ಅಮಲ್‌ದಾರರಾಗಲಿ ಡೆಪ್ಯುಟಿ ಅಮಲ್‌ದಾರರಾಗಲಿ ತಮ್ಮ ಕೆಲಸಗಳಪೈಕಿ ಕೆಲವನ್ನು ನೆರವೇರಿಸುವದಕ್ಕೆ ತಾಬೇದಾರರನ್ನು ನಿಯಮಿಸತಕ್ಕದ್ದು.

13. ಗವರ್ನಮೆಂಟನಿಂದಾಗಲಿ, ಡೆಪ್ಯುಟಿ ಕಮ್ಮಿಷನರಿಂದಾಗಲಿ, ಆಗಿಂದಾಗ್ಯೆ ಕೊಡಲ್ಪಟ್ಟಂತಾ ಒಟ್ಟು ಹುಕುಂಗಳಿಗೆ ಒಳಪಟ್ಟು ತನ್ನ ತಾಬೇದಾರೀ ಕೆಲಸಗಳಪೈಕಿ ಯಾವ ಭಾಗವನ್ನಾಗಲಿ ನೆರವೇರಿಸಲಿಕ್ಕೆ ತನ್ನ ತಾಬೇದಾರರಪೈಕಿ ಯಾರನ್ನಾಗಲಿ, ಮೊಕರರ್ ಮಾಡುವದಕ್ಕೆ ಒಬ್ಬ ಅಮಲ್‌ದಾರ್‌ಗೆ ಅಥವಾ ಡೆಪ್ಯುಟಿ ಅಮಲ್‌ದಾರ್‌ಗೆ ಎಖ್ತಿಯಾರೀಉಂಟು. ಪರಂತು ಹಾಗೆ ಮೊಕರರ್‌ಮಾಡಲ್ಪಟ್ಟ ತನ್ನ ತಾಬೇದಾರರ ತಮಾಂ ಕೆಲಸಗಳೂ ಹುಕ್ಕುಂಗಳೂ ಅಂತಾ ಅಮಲ್‌ದಾರರಿಂದಾಗಲಿ, ಡೆಪ್ಯುಟಿ ಅಮಲ್‌ದಾರರಿಂದಾಗಲಿ ವಿಮರ್ಶೆ ಮತ್ತು ಕಾಯಂ ಮಾಡಲ್ಪಡುವದಕ್ಕೂ ಒಳಪಟ್ಟಿರಬೇಕು.

ಮುಂ. ರೆ. ಕೋ. 15ನೇ ಸೆಕ್ಷನ್.

ಅಮಲ್‌ದಾರೀ ಕೆಲಸವು ಹಂಗಾಮಿಯಾಗಿ ಖಾಲೀಬೀಳುವ ಸಂಗತಿಯಲ್ಲಿ.

14. ಒಬ್ಬ ಅಮಲ್‌ದಾರನು ತನ್ನ ಕೆಲಸಗಳನ್ನು ನೆರವೇರಿಸುವದಕ್ಕೆ ಅಶಕ್ತನಾದರೆ, ಅಥವಾ ಯಾವ ಸಬಬಿನಿಂದಾಗಲಿ ತನ್ನ ಕೆಲಸವನ್ನು ಖಾಲೀಮಾಡಿದರೆ ಅಥವಾ ತನ್ನ ತಾಲ್ಲೂಕನ್ನು ಬಿಟ್ಟುಹೋದರೆ ಅಥವಾ ಮೃತಪಟ್ಟರೆ ಡೆಪ್ಯುಟಿ ಅಮಲ್‌ದಾರನಾಗಲೀ, ತಾಲ್ಲೂಕಿನಲ್ಲಿ ಡೆಪ್ಯುಟಿ ಅಮಲ್‌ದಾರ್ ಇಲ್ಲದಿದ್ದರೆ, ತಾಲ್ಲೂಕ್ ಶಿರಸ್ತೇದಾರನಾಗಲಿ ಸದರೀ ಅಮಲ್‌ದಾರನ ಕೆಲಸವನ್ನು ಹಂಗಾಮೀ ತರೀಕ್ ವಹಿಸಿ ಅಮಲ್‌ದಾರನು ತಮ್ಮ ತಾಲ್ಲೂಕ್ ಚಾರ್ಜನ್ನು ವಹಿಸುವತನಕ ಅಥವಾ ಅವರ ಬದಲೀಯು ಕ್ರಮಪ್ರಕಾರ ಮೊಕರರ್ ಮಾಡಲ್ಪಟ್ಟು ತನ್ನ ಕೆಲಸದ ಚಾರ್ಜನ್ನು ತೆಗೆದುಕೊಳ್ಳುವತನಕ ಈ ರೆಗ್ಯುಲೇಷನ್ ಕಾರ್ಯಗಳಿಗಾಗಿ ಅಮಲ್‌ದಾರ್‌ಯೆಂದು ಭಾವಿಸಲ್ಪಡತಕ್ಕದ್ದು.

ಮುಂ. ರೆ. ಕೋ. 16ನೇ ಸೆಕ್ಷನ್.

ಪಾರಂಪರ್ಯವಾದ ಹಕ್ಕುದಾರೀ ಪಟೇಲ್ ಶಾನುಭಾಗ ಇಲ್ಲದಪಕ್ಷಕ್ಕೆ ತಲಬುದಾರೀ ಪಟೇಲ್ ಶ್ಯಾನುಭಾಗರು ಮೊಕರರ್ ಮಾಡಲ್ಪಡತಕ್ಕದ್ದು.

15. ಪಾರಂಪರ್ಯದ ಹಕ್ಕುದಾರಿ ಪಟೇಲರಾಗಲೀ ಶ್ಯಾನುಭಾಗರಾಗಲಿ ಇಲ್ಲದ ಗ್ರಾಮಗಳಲ್ಲಿ ಗವರ್ನಮೆಂಟಿನ ಒಟ್ಟು ಹುಕ್ಕುಂ ಅನುಸರಿಸಿ ಒಬ್ಬ ತಲಬುದಾರೀ ಪಟೇಲನನ್ನಾಗಲೀ ಶ್ಯಾನುಭಾಗನನ್ನಾಗಲಿ ಮೊಕರರ್ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷನರಿಗೆ ಯಖ್ತಿಯಾರಿ ಉಂಟು. ಸದರೀ ಪಟೇಲ್ ಯೂ ಶ್ಯಾನುಭಾಗರು ಈ ರೆಗ್ಯುಲೇಷನಿನಲ್ಲಾಗಲಿ,

ಅಥವಾ ಹಾಲಿ ಜಾರೀ ಇರುವ ಯಾವದಾದರೂ ಇತರ ಕಾನೂನಿನಲ್ಲಾಗಲಿ ಇದರಲ್ಲಿ ಉತ್ತರೋತ್ತರ ವಿಧಿಸಲ್ಪಟ್ಟ ತಮ್ಮ ತಮ್ಮ ಪಾರಂಪರ್ಯದ ಹಕ್ಕುದಾರಿ ಪಟೇಲ್ ಯಾ ಶ್ಯಾನಭೋಗಿ ವಿಶಿಷ್ಟ ಕೆಲಸಗಳನ್ನೂ, ನೆರವೇರಿಸತಕ್ಕದ್ದು. ಮತ್ತು ತಾಬೇದಾರೀ ಮುಲ್ಕೀ ಆಫೀಸರಗಳ ವಿಷಯದಲ್ಲಿ ಜಾರೀ ಇರುವ ರೂಲ್ಸ್ ಅನುಸರಿಸಿ ತಮ್ಮ ಉದ್ಯೋಗಗಳಲ್ಲಿರತಕ್ಕದ್ದು.

ಪರಭಾರೆಯಾದ ಗ್ರಾಮಗಳ ಹಿಡುವಳೀದಾರರ ಹಕ್ಕುಗಳ ನ್ನು ರಕ್ಷಿಸುವಿಕೆ.

ಪರಭಾರೇ ಮಾಡಲ್ಪಟ್ಟ ಅಥವಾ ಇತರ ಗ್ರಾಮಗಳಲ್ಲಿ ಪಟೇಲ ಯಾ ಶ್ಯಾನುಭಾಗಿ ಮೊಕರರ್ ವಿಷಯದಲ್ಲಿ ಅಂಥಾ ಪರಭಾರೆಯಾದ ಗ್ರಾಮಗಳ ಹಿಡುವಳೀದಾರರು ಯಾ ಇತರರ ಹಾಲೀ ಇರತಕ್ಕ ಹಕ್ಕುಗಳನ್ನು ಈ ಸೆಕ್ಷನಲ್ಲಿ ನಮೂದಿರುವ ಯಾವ ಅಂಶವೂ ಬಾಧಿಸುವಹಾಗೆ ಯೆಣಿಸತಕ್ಕದ್ದಲ್ಲವು.

ಮುಂ. ರೆ. ಕೋ. 17ನೇ ಸೆಕ್ಷನ.

ಶಾನುಭೋಗನು, ತಾನು ಇಡಲ್ಪಡತಕ್ಕದ್ದೆಂದು ಗವರ್ನಮೆಂಟಿನಿಂದ ನಿಯಮಿಸಲ್ಪಡಬಹುದಾದ ಲೆಕ್ಕ ಪತ್ರಗಳನ್ನು ಇಡತಕ್ಕದ್ದು:

16. ಶ್ಯಾನುಭೋಗನು, ಯಾವ ರಿಜಿಸ್ಟರಗಳನ್ನು, ಲೆಕ್ಕಗಳನ್ನು ಮತ್ತು ಇತರ ರಿಕಾರ್ಡಗಳನ್ನು ಇಡತಕ್ಕದ್ದೋ ಅದನ್ನು ಗವರ್ನಮೆಂಟಿನವರು ಆಗಿಂದಾಗ್ಯೆ ವಿಧಿಸತಕ್ಕದ್ದು ; ಮತ್ತು ಈ ಸೆಕ್ಷನ ಅನುಸರಿಸಿ ಕೊಡುವ ಹುಕ್ಕುಂಗಳು ಜಾರೀಗೆ ಬರುವವರಿಗೂ ಇದುವರಿಗೆ ಇಡುತಿದ್ದ ಅಂಥಾ ತಮಾಂ ರಿಜಿಸ್ಟರಗಳನ್ನೂ, ಲೆಕ್ಕಗಳನ್ನೂ ಇತರ ರಿಕಾರ್ಡಗಳನ್ನೂ ಇಡುತ್ತಾ ಹೋಗತಕ್ಕದ್ದು.

ಮತ್ತು ಪಬ್ಲಿಕ ಲಿಖಿತಗಳನ್ನು ತಯಾರ ಮಾಡುವಣ.

ಶ್ಯಾನುಭೋಗನು ತನ್ನ ಗ್ರಾಮದ ಪಟೇಲನಿಂದಾಗಲಿ, ತಾಲ್ಲೂಕಿನ ಅಥವಾ ಡಿಸ್ಟ್ರಿಕ್ಟಿನ ಮೇಲ್ಪಟ್ಟ ಯಾರಾದರೂ ಮುಲ್ಕೀ ಅಥವಾ ಪೊಲೀಸ್ ಆಫೀಸರಿಂದಾಗಲಿ ಹುಕ್ಕುಂ ಮಾಡಲ್ಪಟ್ಟಾಗ ಗವರ್ನಮೆಂಟಿನ ಉಪಯೋಗಕ್ಕಾಗಲಿ ಜನಗಳ ಉಪಯೋಗಕ್ಕಾಗಲಿ ಬೇಕಾದ ನೋಟೀಸುಗಳು, ಲಾಷ್ ವಿಚಾರಣೆಯ ರಿಪೋರ್ಟುಗಳು ಕ್ರಿಮಿನಲ್ ಸಂಗತಿಗಳಲ್ಲಿ ಕೈಫೀಯತ್ತುಗಳು, ಮತ್ತು ದರ್ಯಾಫ್ತಿಗಳು. ಇಂತಾ ಗ್ರಾಮ ವಿಷಯಗಳಿಗೆ ಸಂಬಂಧಿಸಿದ ತಮಾಂ ಕಾಗದ ಪತ್ರಗಳನ್ನೂ ತಯಾರ್ ಮಾಡುವಣ ಶ್ಯಾನುಭೋಗನ ಕೆಲಸವಾಗಿಯೂ ಇರತಕ್ಕದ್ದು.

ಪರಭಾರೇಮಾಡಲ್ಪಟ್ಟ ಗ್ರಾಮದ ಹಿಡುವಳೀದಾರನು, ಗವರ್ನಮೆಂಟಿನಿಂದ ವಿಧಿಸಲ್ಪಟ್ಟಂಥಾ ರಿಕಾರ್ಡುಗಳನ್ನು ಇಡತಕ್ಕದ್ದು.

17. (1) ಪರಭಾರೆಯಾದ ಒಂದು ಗ್ರಾಮದ ಪ್ರತಿ ಹಿಡುವಳೀ ದಾರನೂ, 16ನೇ ಸೆಕ್ಷನಿಂದ ವಿಧಿಸಲ್ಪಟ್ಟ ಅಥವಾ ಪರಭಾರೇ ಮಾಡಲ್ಪಟ್ಟ ಗ್ರಾಮಗಳಿಗಾಗಿ ಇಡತಕ್ಕದ್ದೆಂದು ಗವರ್ನಮೆಂಟಿನಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ರಿಜಿಸ್ಟರಗಳನ್ನೂ, ಲೆಕ್ಕಗಳನ್ನೂ, ಇತರ ರಿಕಾರ್ಡುಗಳನ್ನೂ ಇಡಲಿಕ್ಕೆ ಬದ್ಧನಾಗಿರತಕ್ಕದ್ದು. ಅವನು, ಅಂತಾ ರಿಜಿಸ್ಟರಗಳನ್ನೂ, ಲೆಕ್ಕಗಳನ್ನೂ ಇತರ ರಿಕಾರ್ಡಗಳನ್ನೂ, ಕಾಲಕ್ಕೆ ಸರಿಯಾಗಿಯೂ, ಕರಾರ್ ವಾಕಾ ಆಗಿಯೂ ತಯಾರ್ ಮಾಡುವದಕ್ಕೆ ಜವಾಬ್‌ದಾರನಾಗಿರತಕ್ಕದ್ದು. ಮತ್ತು ಅವನು, ಗವರ್ನಮೆಂಟಿನವರು ಆಗಿಂದಾಗ್ಯೆ ಒಂದು ಬಟ್ಟು ಹುಕ್ಕುಂನಿಂದಾಗಲಿ ವಿಶೇಷ ಹುಕ್ಕುಂನಿಂದಾಗಲಿ, ಅಪ್ಪಣೆ ಮಾಡಲ್ಪಡಬಹುದಾದಂತಾ

ದಾಖಲೆಗಳ ಕರಾರ್ ವಾಕಾ ನಕಲ್‌ಗಳನ್ನು ಡೆಪ್ಯುಟಿ ಕಮ್ಮಿಷನರಲ್ಲಿ ಠೇವಣೀ ಇಡತಕ್ಕದ್ದು.

ಪರಭಾರೆಯಾದ ಗ್ರಾಮದಲ್ಲಿ ಶ್ಯಾನುಭಾಗನು ಅಂಥಾ ರಿಕಾರ್ಡುಗಳನ್ನು ಇಡತಕ್ಕದ್ದು.

(2) ಶ್ಯಾನುಭಾಗನಿರುವ ಪಕ್ಷಕ್ಕೆ ಈ ಸೆಕ್ಷನ್ನಲ್ಲಿ ನಮೂದಿಸಲ್ಪಟ್ಟ ರಿಜಿಸ್ಟರ್‌ಗಳನ್ನೂ, ಲೆಕ್ಕಗಳನ್ನೂ ಯಿತರ ರಿಕಾರ್ಡುಗಳನ್ನೂ, ಪರಭಾರೆಯಾದ ಗ್ರಾಮದ ಹಿಡುವಳೀದಾರನ ಯಾ ಅವನ ಮುತಾಲೀಕನಮೇಲ್ ವಿಚಾರಣೆಗೆ ಒಳಪಟ್ಟು ತಯಾರುಮಾಡಿ ಇಡತಕ್ಕದ್ದು ಆತನ ಕೇಸವಾಗಿರತಕ್ಕದ್ದು.

ಪರಭಾರೆಯಾದ ಗ್ರಾಮದ ಹಿಡುವಳೀದಾರನು ರಿಜಿಸ್ಟರ್‌ವಮುಂ. ತಾವವುಗಳನ್ನ, ಇಡುವದಕ್ಕೆ ತಪ್ಪಿದರೆ ನಡಿಸತಕ್ಕ ಕ್ರಮ.

(3) ಪರಭಾರೆಯಾದ ಗ್ರಾಮದ ಹಿಡುವಳೀದಾರನು, ಈ ಸೆಕ್ಷನ್ ನಿಬಂಧನೆಗಳ ಪ್ರಕಾರ ಯಿಡಬೇಕಾದ ಯಾವ ರಿಜಿಸ್ಟರ್‌ಗಳನ್ನಾಗಲಿ ಲೆಕ್ಕಗಳನ್ನಾಗಲಿ, ಇತರ ರಿಕಾರ್ಡುಗಳನ್ನಾಗಲಿ ಯಿಡುವದಕ್ಕೆ ಅಥವಾ ಅವುಗಳ ನಕಲ್‌ಗಳನ್ನು ಡೆಪ್ಯುಟಿಕಮ್ಮಿಷನರಲ್ಲಿ ಠೇವಣೀ ಯಿಡುವದಕ್ಕೆ ತಪ್ಪಿದರೆ ಯಾವನಾದರೂ ಯಿತರ ಮನುಷ್ಯನಿಂದ ಸದರೀ ರಿಜಿಸ್ಟರ್‌ಗಳನ್ನಾಗಲಿ, ಲೆಕ್ಕಗಳನ್ನಾಗಲಿ ಯಿತರ ರಿಕಾರ್ಡುಗಳನ್ನಾಗಲಿ ಅಥವಾ ಅವುಗಳ ನಕಲುಗಳನ್ನಾಗಲಿ ತಯಾರ್‌ಮಾಡಿಸಿ ಇದರ ಖರ್ಚನ್ನು ಪರಭಾರೆಯಾದ ಗ್ರಾಮದ ಹಿಡುವಳೀದಾರನಿಂದ ಕಂದಾಯದ ಬಾಕೀಯಂತೆಯೇ ವಸೂಲ್‌ಮಾಡುವದಕ್ಕೂ ಡೆಪ್ಯುಟಿ ಕಮ್ಮಿಷನರಿಗೆ ಯುಕ್ತಿಯಾರೀ ವುಂಟು.

ಮುಂ. ರೆ. ಕೋ. 18ನೇ ಸೆಕ್ಷನ್.

ಸರ್ವೇ ಆಫಿಸರ್‌ಗಳು.

(18) ಈ ರೆಗ್ಯುಲೇಷನಿನ 8, 9, ಮತ್ತು 10 ಈ ಅಧ್ಯಾಯಗಳ ಉದ್ದೇಶ್ಯಗಳಿಗಾಗಿ ಗವರ್ನ‌ಮೆಂಟಿನವರು, ಅಗಿಂದಾಗ್ಯೆ ಜರೂರೆಂದು ಕಾಣಬಹುದಾದಂಥಾ ಆಫೀಸರ್‌ಗಳನ್ನು ಮೊಕರರ್ ಮಾಡಬಹುದು, ಅಂತಾ ಆಫೀಸರ್‌ಗಳು "ಸರ್ವೆ ಮತ್ತು ಸೆಟಲ್‌ಮೆಂಟಿನ ಸೂಪರ್ನಿಟೆಂಡೆಂಟ್ ಮತ್ತು ಡೆಪ್ಯುಟಿ ಸೂಪರ್ನಿಟೆಂಡೆಂಟ್ "ಸರ್ವೆ ಸೆಟಲ್‌ಮೆಂಟ್ ಆಫೀಸರ್" ಮತ್ತು "ಅಸಿಸ್ಟೆಂಟ್ ಸೂಪರ್ನಿಟೆಂಡೆಂಟ್," ಯಂತಲೂ ಅಥವಾ ಆವಶ್ಯಕ ತೋರುವ ಬೇರೇ ಹೆಸರಿನಿಂದಲೂ ಕರೆಯಲ್ಪಟ್ಟು ಗವರ್ನ‌ಮೆಂಟಿನವರಿಂದ ಹುಕುಂ ಮಾಡಲ್ಪಟ್ಟ ರೀತಿಯಲ್ಲಿ ಒಬ್ಬರಿಗೊಬ್ಬರು ತಾಬೇದಾರ್‌ರಾಗಿ ಇರತಕ್ಕದ್ದು.

ಅವರ ಕೆಲಸಗಳು ಮತ್ತು ಅಧಿಕಾರಗಳು.

ಗವರ್ನ‌ಮೆಂಟಿನ ಹುಕುಂಗಳಿಗೆ ಒಳಪಟ್ಟು, ಹಾಗೆ ಮೊಕರರ್ ಮಾಡಲ್ಪಟ್ಟ ಆಫೀಸರ್‌ಗಳು ಸರ್ವೇ ವ ಸೆಟಲ್ಮೆಂಟಿಗೆ ಸಂಬಂಧಿಸಿದ ದರೋಬಸ್ತು ಸಂಗತಿಗಳನ್ನೂ ನೋಡಲಿಕ್ಕೆ ಯುಕ್ತಿಯಾರಿ ಪಡೆದು ಈ ರೆಗ್ಯುಲೇಷನ್ ಅಥವಾ ತತ್ಕಾಲದಲ್ಲಿ ಜಾರೀಲಿರುವ ಯಾವದಾದರು ಇತರ ಕಾನೂನಿನಿಂದ ವಿಧಿಸಲ್ಪಡಬಹುದಾದ ದರೋಬಸ್ತು ಅಧಿಕಾರಗಳನ್ನೂ ಚಲಾಯಿಸತಕ್ಕದ್ದು, ಅಂತಾ ದರೋಬಸ್ತು ಕೆಲಸಗಳನ್ನೂ ನೆರವೇರಿಸತಕ್ಕದ್ದು.

ಮುಂ. ರೆ. ಕೋ. 19ನೇ ಸೆಕ್ಷನ್.

ಒಬ್ಬ ಆಫಿಸರಿಗೆ ಅನೇಕ ಅಧಿಕಾರಗಳನ್ನು ಕೊಡೋಣ.

19. ಒಬ್ಬ ಆಫೀಸರು ಇತರ ವಿಷಯವಾಗಿ ಲಾಯಖ್ ಯಿದ್ದಲ್ಲಿ ಅವನನ್ನು ಈ ಅಧ್ಯಾಯದಲ್ಲಿ ವಿಧಿಸಲ್ಪಟ್ಟ, ಯಾವದಾದರೂ ಯೆರಡು ಅಥವಾ ಹೆಚ್ಚು ಉದ್ಯೋಗಗಳಿಗೆ

ಮೊಕರರ5 ಮಾಡುವದಕ್ಕಾಗಲಿ, ಅಥವಾ ಒಂದು ಹೆಸರಿನ ಒಬ್ಬ ಆಫೀಸರಿಗೆ ಫಲಾನಾ ಸ್ಥಳ ಸರಹದ್ದುಗಳೊಳಗೆ ಅಥವಾ ಆವಶ್ಯಕವಾಗಿ ಕಾಣುವ ಇತರ ರೀತಿಯಾಗಿ ಇತರ ಯಾರಾದರೂ ಆಫೀಸರರ ಅಥವಾ ಆಫೀಸರಗಳ ವಿಶಿಷ್ಟ ಅಥವಾ ಯಾವದಾದರೂ ಅಧಿಕಾರಗಳನ್ನು ಅಥವಾ ಕೆಲಸಗಳನ್ನು ಕೊಡುವದಕ್ಕಾಗಲಿ ಗವರ್ನಮೆಂಟಿಗೆ ಯಖ್ತ್ಯಾರೀಯುಂಟು.

ಮುಂ. ರೆ. ಕೋ. 20ನೇ ಸೆಕ್ಷನ.

ಕೆಲವು ಆಫೀಸರಗಳ ಮೊಕರರಾತಿಗಳು ಫಾಯಿಷ ಮಾಡಲ್ಪಡತಕ್ಕದ್ದು.

20. 4, 7, 8, 9, 11, 12, 18 ಮತ್ತು 19 ಈ ಸೆಕ್ಷನಗಳಲ್ಲಿ ಸಮೂದಿಸಲ್ಪಟ್ಟ ವಿಶಿಷ್ಟ ಆಫೀಸರಗಳ ಮೊಕರರಾತಿಯೂ ಕ್ರಮವಾಗಿ ಫಾಯಿಷಮಾಡಲ್ಪಡತಕ್ಕದ್ದು.

ಅಕ್ಟಿಂಗ ಮೊಕರರಾತಿಗಳು.

ಅಂತಾ ಯಾವ ಆಫೀಸರರಿಗೋಸ್ಕರ ಹಂಗಾಮೀಯಾಗಿ ಕೆಲಸನೋಡುವಂತೆ ಮೊಕರರ ಮಾಡಲ್ಪಟ್ಟ ಯಾವ ಆಫೀಸರರಾಗಲಿ ಯಾರಿಗೋಸ್ಕರ ಕೆಲಸನೋಡುವಂತೆ ಮೊಕರರ ಮಾಡಲ್ಪಟ್ಟಿರುತ್ತಾನೋ ಅಂತಾ ಆಫೀಸರಿಂದ ನಿರ್ವಹಿಸಲ್ಪಡಬಹುದಾದ ಅಥವಾ ಚಲಾಯಿಸಲ್ಪಡಬಹುದಾದ ಬದಸ್ತೂರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಬದಸ್ತೂರ ಕೆಲಸಗಳನ್ನು ನೆರವೇರಿಸತಕ್ಕದ್ದು.

ಮುಂ. ರೆ. ಕೋ. 21ನೇ ಸೆಕ್ಷನ.

ಲವಾಜಮೆಗಳು.

(21) 241ನೇ ಸೆಕ್ಷನ ಅನುಸರಿಸಿ ಯಿರುವ ರೂಲ್ಸಗಳು ಯಾ ಮಾಡಲ್ಪಟ್ಟ ಹುಕುಂಗಳಿಗೆ ಒಳಪಟ್ಟು ಇದರಡಿ ಕಂಡ ಆಫೀಸರಗಳ ಲವಾಜಮೆಯ ತಮಾಂ ಮೆಂಬರಗಳ ಮೊಕರರಾತಿಯೂ, ಗವರ್ನಮೆಂಟಿನಿಂದ ಅನ್ಯಥಾ ನಿಯಮಿಸಲ್ಪಡದೆ ಯಿದ್ದರೆ ಸದರೀ ಆಫೀಸರಗಳಿಂದ ಮಾಡಲ್ಪಡತಕ್ಕದ್ದು, ಅವರುಗಳು ಯಾರೆಂದರೆ :—

ಡೆಪ್ಯುಟಿ ಕಮ್ಮಿಷನರ ;

ಸರ್ವೇ ಸೂಪರಿಂಟೆಂಡೆಂಟರು, ಮತ್ತು ಸರ್ವೆ ಡೆಪ್ಯುಟಿ ಸೂಪರಿಂಟೆಂಡೆಂಟರು ;

ಸರ್ವೇ ಸೆಟಿಲ್‌ಮೆಂಟ ಆಫಿಸರ ;

ಈ ಅಧ್ಯಾಯದ ಹಿಂದಿನ ಸೆಕ್ಷನಗಳಲ್ಲಿ ಕಂಡ ಇತರ ತಮಾಂ ಆಫೀಸರಗಳ ಲವಾಜಮೆಗಳ ತಮಾಂ ಮೆಂಬರಗಳ ಮೊಕರರಾತಿಯೂ, ಅವರವರ ಇಲಾಖೆಗಳಲ್ಲಿ ಡೆಪ್ಯುಟಿ ಕಮ್ಮಿಷನರಿಂದಲೂ, ಸರ್ವೇ ಸೂಪರಿಂಟೆಂಡೆಂಟರಿಂದಲೂ ಮಾಡಲ್ಪಡತಕ್ಕದ್ದು. ಪರಂತು ಈ ಅಧಿಕಾರದ ಪೈಕಿ ಅವರು ಯುಕ್ತವೆಂದು ಭಾವಿಸಬಹುದಾದಂಥಾ ಭಾಗವನ್ನು ಯಾವನಾದರು ಒಬ್ಬ ತಾಬೇದಾರ ಆಫೀಸರರಿಗೆ ಒಪ್ಪಿಸುವದಕ್ಕೆ ಅವರಿಗೆ ಯಖ್ತ್ಯಾರೀವುಂಟು. ಆದರೆ, ಅಂತಾ ತಾಬೇದಾರೀ ಆಫೀಸರಗಳಿಂದ ಮಾಡಲ್ಪಡಬಹುದಾದ ಮೊಕರರಾತಿಗಳನ್ನು ಯಾವಕಾಲದಲ್ಲಾದರೂ ವಿಮರ್ಶೆ ಮಾಡುವ ಯಖ್ತ್ಯಾರೀಯನ್ನು ಅವರು ಉಳಿಸಿಕೊಂಡಿರುವರು.

ಮುಂ. ರೆ. ಕೋ. 22ನೇ ಸೆಕ್ಷನ.

ಮೊಹರಗಳು.

22. ಗವರ್ನಮೆಂಟಿನವರು; ಆಗಿಂದಾಗ್ಯೆ ಯಾವ ಮುಲ್ಕೀ ಆಫೀಸರಗಳು ಒಂದು ಮೊಹರನ್ನು ಉಪಯೋಗಿಸತಕ್ಕದ್ದು, ಮತ್ತು ಅಂತಾ ಪ್ರತಿ ಆಫಿಸರಿಂದಲೂ, ಯಾವ ಆಕಾರದ ಮತ್ತು

ತಪಶೀಲಿನ ಮೊಹರ್ ಉಪಯೋಗಿಸಲ್ಪಡತಕ್ಕದ್ದು, ಎಂಬುವದನ್ನು ಇಸ್ತಿಹಾರ್ ಮೂಲಕ ವಿಧಿಸಲ್ಪಡತಕ್ಕದ್ದು. ಆದರೆ ಈ ಸೆಕ್ಷನ್ ಅನುಸರಿಸಿ ಮೊದಲನೇ ಹುಕ್ಕುಂ ಹುಟ್ಟುವತನಕ ತಹಲ್ ಉಪಯೋಗಿಸಲ್ಪಡುತ್ತಿದ್ದ ಮೊಹರ್‌ಗಳು, ಅವುಗಳನ್ನು ಉಪಯೋಗಿಸುತಿದ್ದಂತಾ ಆಫೀಸರ್‌ಗಳಿಂದ ಉಪಯೋಗಿಸಲ್ಪಡುತ ಇರತಕ್ಕದ್ದು.

3ನೇ ಅಧ್ಯಾಯ.

ಕೆಲವರು ಮುಲ್ಕೀ ಆಫೀಸರ್‌ಗಳಿಂದ ಕೊಡಲ್ಪಡತಕ್ಕ ಜಾಮೀನನ್ನೂ, ಮುಖ್ಯಸ್ಥರ ಮತ್ತು ಜಾಮೀನ್‌ದಾರರ ಜವಾಬ್‌ದಾರೀಯನ್ನೂ ಕುರಿತು.

ಮುಂ. ರೆ. ಕೋ. 23ನೇ ಸೆಕ್ಷನ್.

ಯಾವ ಆಫೀಸರ್‌ಗಳು, ಜಾಮೀನ್ ಕೊಡತಕ್ಕದ್ದೋ ಯೆಷ್ಟರಮೊಬಲಗಿಗೆ ಕೊಡತಕ್ಕದ್ದೋ ಅದನ್ನು ಗವರ್ನಮೆಂಟಿನವರು ನಿಯಮಿಸತಕ್ಕದ್ದು.

23. ಗವರ್ನಮೆಂಟಿನವರು, ತಮಗೆ ಯುಕ್ತ ತೋರುವಂತಾ ರೆವಿನ್ಯೂ ಆಫಿಸರ್‌ಗಳು, ತಮ್ಮ ತಮ್ಮ ಕೆಲಸಗಳಲ್ಲಿ ಪ್ರವೇಶಿಸುವದಕ್ಕೆ ಮುಂದಾಗಿ, ಪ್ರತಿ ಸಂಗತಿಯಲ್ಲಿಯೂ ಸದರೀ ಗವರ್ನಮೆಂಟಿನವರು ಜರೂರೆಂದು ಭಾವಿಸುವಂತಾ ಮೊಬಲಗಿಗೆ ಕ್ರಮವಾಗಿ ಇಂಡಾರ್ಸ್ ಮಾಡಲ್ಪಟ್ಟ, ವಿಕ್ರಯಿಸುವದಕ್ಕೆ ಒಂದು ಅಧಿಕಾರನಿಶೀ ಕೊಡಲ್ಪಟ್ಟ ಗವರ್ನಮೆಂಟ್ ನೋಟ್ ಮೂಲಕ ಅಥವಾ ಗವರ್ನಮೆಂಟ್ ಟ್ರೆಜರೀಯಲ್ಲಾಗಲಿ, ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಾಗಲಿ, ನಗದ್ ಡಿಪಾಜಿಟ್‌ಮೂಲಕ, ಗವರ್ನಮೆಂಟ್ ಹೆಸರಿಗೆ, ಅಥವಾ ಮಂಜೂರಾದ ಸ್ಥಿರಸ್ವತ್ತಿನ ಬಾಬತು ಪತ್ರದ ಮೂಲಕ ಜಾಮೀನ್ ಕೊಡತಕ್ಕದ್ದೆಂದು ನಿಯಮಿಸುವದು ಗವರ್ನಮೆಂಟಿಗೆ ನ್ಯಾಯವಾಗಿರತಕ್ಕದ್ದು, ಸದರೀ ಸ್ವತ್ತಿನ ಅಂದಾಜ್ ಕಿಮ್ಮತ್, ಅವಶ್ಯಕವಾದ ಜಾಮೀನ್ ಮೊಬಲಗಿಗೆ, ಗವರ್ನಮೆಂಟಿನಿಂದ ವಿಧಿಸಲ್ಪಟ್ಟ ದಾಮಾಷಾಯಿ ಪ್ರಕಾರ, ಅಥವಾ ಈ ರೆಗ್ಯೂಲೇಷನಿಗೆ ಲಗ್ಗತ್ತಾದ C ಷೆಡ್ಯೂಲ್‌ನಲ್ಲಿ ಅಡಗಿರುವ ನಮೂನೇ ಪ್ರಕಾರವಾಗಲಿ ಇರತಕ್ಕದ್ದು.

ಯಾವ ಬಗ್ಗೆ ಅಂತಾ ಜಾಮೀನ್ ಕೊಡತಕ್ಕದ್ದೋ ಅಂತಾ ಮೊಬಲಗು, ಗವರ್ನಮೆಂಟ್ ಹುಕ್ಕುಂನಿಂದ ಆಗಿಂದಾಗ್ಯೆ ಬದಲಾಯಿಸಲ್ಪಡತಕ್ಕದ್ದು. ಸದರೀ ಹುಕ್ಕುಂ, C ಷೆಡ್ಯೂಲಿನ ನಮೂನೇ ಪ್ರಕಾರ ಜಾಮೀನ್ ತೆಗೆದುಕೊಂಡಾಗ ಜಾಮೀನ್‌ದಾರರ ಸಂಖ್ಯೆಯನ್ನು ಸಹ ಗೊತ್ತು ಮಾಡತಕ್ಕದ್ದು.

ಮುಂ. ರೆ. ಕೋ. 24ನೇ ಸೆಕ್ಷನ್.

ಹೊಸದಾದ ಅಥವಾ ಜಾಸ್ತಿ ಜಾಮೀನ್.

24. ಡೆಪ್ಯುಟಿ ಕಮ್ಮಿಷನರಾಗಲಿ, ಸರ್ವೇ ಸೂಪರಿಂಟೆಂಡೆಂಟರಾಗಲಿ, ತಮಗೆ ತಾಬೇದಾರರಾದ ಬಬ್ಬ ರೆವಿನ್ಯೂ ಆಫಿಸರಿಂದ ಜಾಮೀನ್ ಕೊಡಲ್ಪಟ್ಟ ತರುವಾಯ, ಯಾವ ಕಾಲದಲ್ಲಾಗಲಿ, ತೆಗೆದುಕೊಳ್ಳಲ್ಪಟ್ಟ ಜಾಮೀನ್ ಅತೃಪ್ತಿಕರವಾಗಿ ಕಂಡರೆ, ಅಥವಾ ಹೆಚ್ಚು ಮೊಬಲಗಿನ ಜಾಮೀನ್ ಬೇಕಾದ ಒಂದು ಉದ್ಯೋಗಕ್ಕೆ ಸದರೀ ಆಫಿಸರರು ವರ್ಗ ಮಾಡಲ್ಪಟ್ಟರೆ, ಅಥವಾ ಇತರ ತಕ್ಕ ಸಬಬಿನಮೇಲೆ ಹೊಸದಾದ ಅಥವಾ ಜಾಸ್ತಿ ಜಾಮೀನನ್ನು ಕೇಳಿದ ಸದರೀ ಆಫಿಸರು ಅಂತಾ ಜಾಮೀನನ್ನು ಕೇಳಿದ ಒಂದು ತಿಂಗಳೊಳಗಾಗಿ ಅದನ್ನು ಕೊಡಲಿಕ್ಕೆ ತಪ್ಪಿದರೆ, ಸದರೀ ಆಫಿಸರರನ್ನು ಸಸ್‌ಪೆಂಡ್ ಅಥವಾ ಡಿಸ್‌ಮಿಸ್ ಮಾಡಬಹುದು.

ಪರಂತು, ಹಿಂದಿನಹಡೇ ಸೆಕ್ಷರ್ನ ಅನುಸರಿಸಿ ಗವರ್ರ್ನಮೆಂಟ ಹುಕುಂಗಳಿಂದ ಅಪೇಕ್ಷಿಸಲ್ಪಟ್ಟದ್ದಕ್ಕಿಂತ ಹೆಚ್ಚು ಜಾಮೀನನ್ನು ಯಾವಾಗ್ಯೂ ಕೊಡತಕ್ಕದ್ದಲ್ಲವು.

ಮುಂ. ರೆ. ಕೋ. 25ನೇ ಸೆಕ್ಷನ.

ಹಣ, ಕಾಗದ ಪತ್ರಗಳು ವಗೈರೇ ಬಗ್ಯೆ ಅದಕ್ಕೆ ಸಂಬಂಧಿಸಿದ ಮನುಷ್ಯನನ್ನು ಬರವಣಿಗೇಮೂಲಕ ಕೇಳತಕ್ಕದ್ದು.

25. ಡೆಪ್ಯುಟಿ ಕಮ್ಮಿಷನರಾಗಲಿ, ಸರ್ವೇ ಸೂಪರ್ರಿಟೆಂಡೆಂಟರಾಗಲಿ, ಈ ಬಗ್ಯೆ ಡೆಪ್ಯುಟಿ ಕಮ್ಮಿಷನರಿಂದ ಅಥವಾ ಸರ್ವೇ ಸೂಪರ್ರಿಟೆಂಡೆಂಟರಿಂದ ನಿಯಮಿಸಲ್ಪಟ್ಟ ಇತರ ಯಾವ ಆಫಿಸರರಾಗಲಿ, ಸರ್ಕಾರ ಹಣಕ್ಕಾಗಿ, ಕಾಗದಪತ್ರಗಳಿಗಾಗಿ ಅಥವಾ ಗವರ್ರ್ನಮೆಂಟಿನ ಇತರ ಸ್ವತ್ತಿಗಾಗಿ, ಯಾವದಾದರೂ ಇತರ ರೆವಿನ್ಯೂ ಆಫೀಸರರ ಮೇಲೆ, ಅಥವಾ ತನ್ನ ಡಿಸ್ಟ್ರಿಕ್ಟಿನಲ್ಲಿ ಅಥವಾ ಇಲಾಖೆಯಲ್ಲಿ ಅಂಥಾ ರೆವಿನ್ಯೂ ಆಫೀಸರರಾಗಿ ಪೂರ್ವದಲ್ಲಿ ಮೊಕರರ ಮಾಡಲ್ಪಟ್ಟಿದ್ದ ಯಾವ ಮನುಷ್ಯನಮೇಲಾಗಲಿ, ಬಾಧ್ಯತೆ ಇರುವ ಎಲ್ಲ ಸಂಗತಿಗಳಲ್ಲೂ; ಆತನು ತನ್ನ ಉದ್ಯೋಗದ ಸೈನು, ಮೊಹರ ಯಾವದಾದರೂ ಉಪಯೋಗಿಸಿದರೆ, ಅವುಗಳು ನಿಶೀ ಬರವಣಿಗೇ ಮೂಲಕವಾಗಿ ಉಳಿಸಿಕೊಳ್ಳಲ್ಪಟ್ಟದ್ದ ಹಣವನ್ನಾಗಲಿ, ಫಲಾನಾ ಕಾಗದ ಪತ್ರಗಳನ್ನಾಗಲಿ, ಸ್ವತ್ತನ್ನಾಗಲಿ, ಸದರೀ ಬರವಣಿಗೆಯ ಹುಕುಮನ್ನು ತೆಗದುಕೊಂಡು ಬರುವ ಅಂಥಾ ಮನುಷ್ಯನಿಗೆ ಕೂಡ್ಲೇ ಕೊಡಬೇಕೆಂತಾಗಲಿ, ಸದರೀ ಬರವಣಿಗೆಯಲ್ಲಿ ನಮೂದಿಸಿ ಇರಬಹುದಾದ ಮನುಷ್ಯನಿಗೆ ಅದರಲ್ಲಿ ಕಂಡ ತಾರೀಖಿನಲ್ಲಿಯೂ ಸ್ಥಳದಲ್ಲಿಯೂ ಕೊಡಬೇಕೆಂತಾಗಲಿ ಕೇಳತಕ್ಕದ್ದು.

ಹಣಮುಂತಾದ್ದನ್ನು ಹಾಜರ ಮಾಡಲಿಕ್ಕೆ ಆತನು ತಪ್ಪಿದರೆ, ಆತನನ್ನು ದಸ್ತಗಿರಿಮಾಡಿ ಜೈಲ್‌ನಲ್ಲಿ ಇಡತಕ್ಕದ್ದು.

ಮೇಲೆಕಂಡಂತೆ ಆಫೀಸರ ಅಥವಾ ಇತರ ಮನುಷ್ಯನು ಹಣವನ್ನು ಫೈಸಲ ಮಾಡದೆಯಾಗಲಿ, ಮೇಲೆ ನಿಯಮಿಸಲ್ಪಟ್ಟಂತೆ ಕಾಗಪತ್ರಗಳನ್ನು ಅಥವಾ ಸ್ವತ್ತನ್ನು ಒಪ್ಪಿಸದೆಯಾಗಲಿ ಇದ್ದರೆ, ಸದರೀ ಡೆಪ್ಯುಟಿ ಕಮ್ಮಿಷನರು ಅಥವಾ ಸರ್ವೆ ಸೂಪರ್ರಿಟೆಂಡೆಂಟರು ಅಥವಾ ಇವರಿಬ್ಬರಲ್ಲಿ ಯಾರಿಂದಲಾಗಲಿ ಮೊಕರರು ಮಾಡಲ್ಪಟ್ಟಿರುವ ಇನ್ಯಾವ ಆಫೀಸರಾಗಲಿ ಹಾಗೆ ತಪ್ಪುವ ಆಫೀಸರನ್ನು ಅಥವಾ ಮನುಷ್ಯನನ್ನು ದಸ್ತಗಿರೀ ಮಾಡಿಸಿ D ಷೆಡ್ಯೂಲ್‌ನಲ್ಲಿ ಕಂಡ ನಮೂನೇ ಪ್ರಕಾರ ವಾರಂಟನಿಶೀ ಆತನಿಂದ ಕೇಳಲ್ಪಡತಕ್ಕ ಮೊಬಲಗ್‌ಗಳು ಫೈಸಲಾಗುವತನಕ ಅಥವಾ ಕಾಗದಗಳಾಗಲಿ, ಸ್ವತ್ತಾಗಲಿ, ಒಪ್ಪಿಲಸ್ಪಡುವತನಕ ಸಿವಿಲ್ ಜೈಲ್‌ನಲ್ಲಿ ಇಡಿಸಬಹುದು.

ಪರಂತು ಒಂದುತಿಂಗಳಿಗಿಂತ ಹೆಚ್ಚಾಗಿ ಯಾವ ಮನುಷ್ಯನೂ ಖೈದನಲ್ಲಿಡಲ್ಪಡತಕ್ಕದ್ದಲ್ಲವು.

ಪರಂತು, ಯಾವ ಮನುಷ್ಯನೂ ಅಂತಾ ವಾರಂಟಿನ ಬಲದಿಂದ ಒಂದು ಕ್ಯಾಲೆಂಡರ್ ತಿಂಗಳಿಗಿಂತ ಹೆಚ್ಚಾದ ಕಾಲ ಖೈದನಲ್ಲಿ ನಿಲ್ಲಿಸಿಕೊಳ್ಳಲ್ಪಡತಕ್ಕದ್ದಲ್ಲವು.

ಮುಂ. ರೆ. ಕೋ. 26ನೇ ಸೆಕ್ಷನ.

ಸರ್ಕಾರ ಹಣವು, ಜಮೀನ ಕಂದಾಯದ ಬಾಕೀ ತರೀಕ ಸಹ ವಸೂಲ್ಮಾಡಲ್ಪಡಬಹುದು.

26. ಆಫೀಸರರಾಗಲಿ, ಇತರ ಮನುಷ್ಯನಾಗಲಿ, ತನ್ನ ಇಲಾಖೇಯಲ್ಲಿ ಮತ್ತು ಡಿಸ್ಟ್ರಿಕ್ಟಿನಲ್ಲಿ ನೌಕರಿ ಮಾಡುತ್ತಿದ್ದರೆ, ಅಥವಾ ನೌಕರಿ ಮಾಡಿದ್ದರೆ ಡೆಪ್ಯುಟಿ ಕಮ್ಮಿಷನರು ತಮ್ಮ ಸ್ವಂತ ಅಭಿಪ್ರಾಯ ಪ್ರಕಾರವೂ ಮತ್ತು ಅಂತಾ ಆಫೀ

ಸರಠಾಗಲೀ, ಮನುಷ್ಯನಾಗಲೀ, ತನ್ನ ಡಿಸ್ಟ್ರಿಕ್ಟಿನಲ್ಲಿರುವ ಸರ್ವೇ ಯಿಲಾಖೇಯೊಳಗೆ ನೌಕರಿ ಮಾಡುತ್ತಿದ್ದರೆ ಅಥವಾ ಮಾಡಿದ್ದರೆ ಸರ್ವೇ ಸೂಪರ್ರಿಟೆಂಡೆಂಟರ ಖಾಯಿಷ ಮೇಲೆಯೂ ಜರ್ಮಿ ಕಂದಾಯದ ಬಾಕೀಯನ್ನು, ಬಾಕೀಕೊಡುವದಕ್ಕೆ ತಪ್ಪಿದ ಜನಗಳಿಂದ ವಸೂಲ್‌ಮಾಡುವಬಗ್ಯೆ, ಈ ರೆಗ್ಯುಲೇಷನ್ನಲ್ಲಿ ವಿಧಿಸಲ್ಪಟಂತಾ ರೀತಿಯಾಗಿಯೂ, ಬದಸ್ತೂರ್ ರೂಲ್ಸಿಗೆ ಒಳಪಟ್ಟೊ, ಸದರೀ ಆಫೀಸರಿಂದ ಅಥವಾ ಮನುಷ್ಯನಿಂದ ಬರತಕ್ಕ ಯಾವದಾದರೂ ಬಾಕೀ ಹಣವನ್ನು ವಸೂಲ್‌ಮಾಡುವಬಗ್ಯೆ ನಡವಳಿತವನ್ನು ನಡಿಸತಕ್ಕದ್ದು, ಮತ್ತು ಸರ್ಕಾರ ಕಾಗದಗಳು ಯಾ ಯಿತರ ಸ್ವತ್ತನ್ನಾಗಲಿ ವಸೂಲ್ಮಾಡುವಬಗ್ಯೆ ಝುಡ್ತೀವಾರಂಟನ್ನು ಸಾದರ್ಮಾಡತಕ್ಕದ್ದು, ಮತ್ತು 1872ನೇ ಇಸವಿಯ ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡಿನ 27ನೇ ಸೆಕ್ಷನ್ ನಿಬಂಧನೆಗಳನುಸರಿಸಿ, ಒಬ್ಬ ಮಾಜಿಸ್ಟ್ರೇಟರಿಂದ ಕಾನೂನ್ ಪ್ರಕಾರ ಚಲಾಯಿಸಲ್ಪಡತಕ್ಕಂಥಾ ತಮಾಂ ಅಧಿಕಾರಗಳನ್ನೂ ಚಲಾಯಿಸತಕ್ಕದ್ದು.

ಸರ್ಕಾರ್ ಕಾಗದಗಳು ಅಥವಾ ಇತರ ಸ್ವತ್ತನ್ನಾಗಲಿ ಬರಮಾಡಿಕೊಳ್ಳುವಬಗ್ಯೆ ಝುಡ್ತೀವಾರಂಟಗಳನ್ನು ಕೊಡಬಹುದು.

ಅಂತಾ ಸರ್ಕಾರ ಹಣಗಳನ್ನಾಗಲಿ, ಕಾಗದಗಳನ್ನಾಗಲಿ, ಗವರ್ನಮೆಂಟಿಗೆ ಶೇರಿದ ಇತರ ಸ್ವತ್ತನ್ನಾಗಲಿ, ಮಡಗಿಕೊಂಡಿರುವಯಲ್ಲ ಜನಗಳೂ, ಅವುಗಳನ್ನು ಕೂಡಲೆ ಡೆಪ್ಯುಟಿ ಕಮ್ಮಿಷನರಿಗೆ ಪಾವತಿ ಮಾಡತಕ್ಕದ್ದು ತಮ್ಮ ಕೆಲಸವೆಂದು ತಿಳಿಯುವದು; ಅಂತಾ ಯಾವ ಸ್ವತ್ತಾಗಲಿ ಹಜಂಮಾಡಲ್ಪಟ್ಟ ಸ್ಥಳವನ್ನು ತಿಳಿದಿರುವ ಪ್ರತಿ ಮನುಷ್ಯನೂ, ಅದನ್ನು ಕುರಿತ ಸಂಗತಿಯನ್ನು ಡೆಪ್ಯುಟಿ ಕಮ್ಮಿಷನರಿಗೆ ತಿಳಿಸಲಿಕ್ಕೆ ಬದ್ಧನಾಗಿರತಕ್ಕದ್ದು.

ಸರ್ಕಾರ್ ಹಣಗಳು ವಗೈರೇಯನ್ನು ಜಿಮ್ಮೇಯಲ್ಲಿ ಯುಳ್ಳ ಜನಗಳು ಅವುಗಳನ್ನು ಒಪ್ಪಿಸಿಬಿಡಲಿಕ್ಕೆ ಬದ್ಧರಾಗಿರತಕ್ಕದು.

ಮುಂ. ರೆ. ಕೋ. 27ನೇ ಸೆಕ್ಷನ.

27. C ಷೆಡ್ಯೂಲಿನ ನಮೂನೇ ಪ್ರಕಾರ ಕರಾರಿಗೆ ವಳಪಡುವ ಮೇಲೆ ಕಂಡಂಥಾ ಆಫೀಸರ ಅಥವಾ ಇತರ ಮನುಷ್ಯನ ಜಾಮೀನ್ದಾರ ಅಥವಾ ಜಾಮೀನ್ದಾರರು, ತಮ್ಮ ಯಲ್ಲರ ಮೇಲೂ ಪ್ರತ್ಯೇಕವಾಗಿ ಒಬ್ಬೊಬ್ಬರಮೇಲೂ ಜಾಮೀನು ಕರಾರು ನಡಸಲಿಕ್ಕೆ ತಪ್ಪಿದ ಸಂಗತಿಯಲ್ಲಿ, ಆತನ ಅಥವಾ ಅವರುಗಳ ಮುಖ್ಯಸ್ಥನು ಫಿರ್ಯಾದ್ ಮಾಡಲ್ಪಡಲಿಕ್ಕೆ ಜವಾಬ್‌ದಾರನಾಗಿರುವಂತೆಯೇ ಫಿರ್ಯಾದ್‌ಮಾಡಲ್ಪಡಲಿಕ್ಕೆ ವಳಪಡುವರು; ಪರಂತು, ಅಂತಾ ಮುಖ್ಯಸ್ಥನ ಮೇಲೆ ಹಾಗೆ ದಾವಾತರಲ್ಪಡಬಹುದಾಗ್ಯೂ ಈ ಜಾಮೀನ್ದಾರ ಅಥವಾ ಜಾಮೀನ್ದಾರರುಗಳ ಮೇಲೂ ದಾವಾ ತರಲ್ಪಡಬಹುದು.

ಜಾಮೀನ್ದಾರನು ಮುಖ್ಯಸ್ಥನಂತೆಯೇ ಜವಾಬ್ದಾರನಾಗಿರತಕ್ಕದ್ದು.

ಪರಂತು, ಸರ್ಕಾರಕ್ಕೆ ಸಲ್ಲತಕ್ಕ ಯಾವ ಮೊಬಲಗನ್ನಾಗಲೀ ಕೊಡಲಿಕ್ಕೆ ಅಥವಾ ಫೈಸಲ್ ಮಾಡಲಿಕ್ಕೆ ಅಥವಾ ನಿಷ್ಕೃಷ್ಟವಾದ ಕ್ರಯವುಳ್ಳ ಗವರ್ನಮೆಂಟಿನ ಯಾವ ಸ್ವತ್ತನ್ನಾಗಲಿ, ಹಾಜರ್‌ಮಾಡಲಿಕ್ಕೆ ತಪ್ಪುವ ಯಾವ ಸಂಗತಿಯಲ್ಲಾಗಲಿ, ಮುಖ್ಯಸ್ಥನು ತಪ್ಪುವದರಿಂದ ಗವರ್ನಮೆಂಟಿಗೆ ವಸ್ತುತಃ ಉಂಟಾಗಬಹುದಾದ ಯಾವ ನಷ್ಟಕ್ಕಾಗಲಿ, ಲುಕ್ಸಾನಿಗಾಗಲಿ ಭರ್ತಿಯಾಗಲಿಕ್ಕೆ ಸಾಕಾದದಕ್ಕಿಂತ ಹೆಚ್ಚು ಮೊ

ನಷ್ಟದಮೊಬಲಗು ಎಷ್ಟೆಂಬದು.

ಬಲಗ್ ಜಾಮೀನ್ದಾರನಿಂದಾಗಲಿ, ಅಥವಾ ಜಾಮೀನ್ದಾರರುಗಳಿಂದಾಗಲಿ ಬರೆದುಕೊಡಲ್ಪಟ್ಟ, ಜಾಮೀನ್ ಪತ್ರದ ಷರತ್‌ಗಳ ಪ್ರಕಾರ ಅವರುಗಳಿಂದ ಸಲ್ಲತಕ್ಕ ಮೊಬಲಗಾಗಿ ವಸೂಲ್ಮಾಡಲ್ಪಡತಕ್ಕದ್ದಲ್ಲವು.

ಜುರ್ಮಾನೇ ಕೊಡುವಪಕ್ಷಕ್ಕೆ ಖೈದಿಗೆ ಒಳಪಡದಿರುವ ಜಾಮೀನ್ದಾರ್ ಯಾ ಜಾಮೀನ್ದಾರರು.

ಪರಂತು, ಸರ್ಕಾರ ಕಾಗದಗಳನ್ನಾಗಲಿ ಸ್ವತ್ತನ್ನಾಗಲಿ ಹಾಜರ್ಮಾಡಲಿಕ್ಕೆ ತಪ್ಪಿದ ಸಂಗತಿಗಳಲ್ಲಿ ಜಾಮೀನ್ದಾರನಾಗಲಿ ಜಾಮೀನ್ದಾರರಾಗಲಿ ಜಾಮೀನ್ ಪತ್ರದಲ್ಲಿಕಂಡ ಪೆನಲಟಿ ಯಾನೆ ಜುರ್ಮಾನೆಯ ವಟ್ಟು ಮೊಬಲಗನ್ನಾಗಲಿ ಕೇಳಲ್ಪಡುವ ಅದರ ಯಾವ ಭಾಗವನ್ನಾಗಲಿ ಗವರ್ನಮೆಂಟು ಖಜಾನೆಗೆ ಪಾವತೀ ಮಾಡಿದರೆ ಅವನು ಅಥವಾ ಅವರುಗಳು ಖೈದಿಗೆ ಗುರಿಯಾಗತಕ್ಕದ್ದಲ್ಲವು.

ಮುಂ. ರೆ. ಕೋ. 28ನೇ ಸೆಕ್ಷನ್.

ಜೆಯಿಲ್‌ನಲ್ಲಿರುವ ಒಬ್ಬ ಆಫೀಸರಾಗಲೀ ಜಾಮೀನ್ದಾರನಾಗಲೀ ಒಂದು ಜಾಮೀನನ್ನು ಕೊಡುವದರಿಂದ ತನ್ನ ಖುಲಾಸೆಯನ್ನು ಪಡೆಯತಕ್ಕದ್ದು.

28. ಮೇಲೆ ಕಂಡಂತೆ ಒಬ್ಬ ಆಫಿಸರಾಗಲೀ, ಇತರ ಮನುಷ್ಯನಾಗಲಿ ಯಾರಮೇಲೆ ತಗಾದೇ ಮಾಡಲ್ಪಟ್ಟಿತೋ ಅಂತಾ ಅವನ ಜಾಮೀನ್ದಾರ ಯಾ ಜಾಮೀನ್ದಾರರಾಗಲೀ, E ಷೆಡ್ಯೂಲ್ ನಮೂನೆ ಪ್ರಕಾರ ಸಾಕಾದ ಜಾಮೀನನ್ನು ಕೊಟ್ಟರೆ, ಡೆಪ್ಯುಟಿ ಕಮ್ಮಿಷನರು, ಅಂತಾ ಆಫಿಸರಾಗಲಿ ಜಾಮೀನ್ದಾರನಾಗಲಿ ಖೈದಿನಲ್ಲಿದ್ದರೆ, ಅಂಥಾವನನ್ನು ಖುಲಾಸೇ ಮಾಡಿಸಿ, ಜಫ್ತೀ ಮಾಡಿಸಲ್ಪಟ್ಟಿರಬಹುದಾದ ಯಾವದಾದರೂ ಸ್ವತ್ತಿನಹರಾಜನ್ನು ರದ್ದುಮಾಡಿ, ಯಾವನ ವಶದಿಂದ ಅಂತಾ ಸ್ವತ್ತು ಜಫ್ತೀಮಾಡಲ್ಪಟ್ಟಿರುತ್ತೋ ಅಂತಾ ಸ್ವಂತಗಾರನಿಗಾಗಲಿ, ಇತರ ಮನುಷ್ಯನಿಗಾಗಲಿ, ವಾಪಸ್ ಕೊಡಿಸತಕ್ಕದ್ದು.

ಮುಂ. ರೆ. ಕೋ. 29ನೇ ಸೆಕ್ಷನ್.

ಮುಖ್ಯಸ್ಥನು ಮರಣಹೊಂದುವದರಿಂದಾಗಲೀ, ಅವನು ಬೇರೆ ಉದ್ಯೋಗವನ್ನು ವಹಿಸೋದರಿಂದಾಗಲಿ ಬಾಧಿಸಲ್ಪಡದ ಜಾಮೀನ್ದಾರನಜವಾಬ್‌ದಾರಿಯು.

29. ಜಾಮೀನ್ದಾರನ ಅಥವಾ ಜಾಮೀನ್ದಾರರ ಜವಾಬ್‌ದಾರೀಯು ಮುಖ್ಯಸ್ಥನ ಮರಣದಿಂದಾಗಲಿ, ಪತ್ರ ಹುಟ್ಟಿದ ಕಾಲದಲ್ಲಿ ತಾನು ಇದ್ದ ಉದ್ಯೋಗಕ್ಕಿಂತ ಬೇರೆಯಾದ ಉದ್ಯೋಗಕ್ಕೆ ಅವನು ಮೊಕರರ್ ಮಾಡಲ್ಪಟ್ಟದರಿಂದಾಗಲಿ ಬಾಧಿಸಲ್ಪಡತಕ್ಕದ್ದಲ್ಲವು, ಆದರೆ 23ನೇ ಸೆಕ್ಷನ್ ಅನುಸರಿಸಿ ಯಾವ ಉದ್ಯೋಗಕ್ಕಾಗಿ ಜಾಮೀನ್ ಕೇಳಲ್ಪಡುತ್ತೋ ಅಂಥಾ ಯಾವ ಉದ್ಯೋಗವನ್ನು ಮುಖ್ಯಸ್ಥನು ವಹಿಸಿ ಇರುವವರಿವಿಗೂ ಮತ್ತು ಜಾಮೀನ್ ಪತ್ರವು ರದ್ದು ಆಗುವವರಿವಿಗೂ ಸದರೀ ಜವಾಬ್‌ದಾರಿಯುನಡದು ಬರತಕ್ಕದ್ದು.

ಮೃತಪಟ್ಟ ಆಫೀಸರ್‌ಗಳ ಬಾಧ್ಯಸ್ತರ ಜವಾಬ್‌ದಾರಿ.

ಮೃತಪಟ್ಟ ಆಫಿಸರರ ಬಾಧ್ಯಸ್ಥರು, ತಮ್ಮ ವಶಕ್ಕೆ ಅಥವಾ ಮೇಲ್ವಿಚಾರಣೆಗೆ ಬಂದಿರಬಹುದಾದ ತಮಾಂ ಸರ್ಕಾರ್ ಹಣವನ್ನಾಗಲಿ, ಕಾಗದ ಪತ್ರಗಳನ್ನಾಗಲಿ, ಗವರ್ನಮೆಂಟಿನ ಇತರಸ್ವತ್ತನ್ನಾಗಲಿ, ಗವರ್ನಮೆಂಟಿಗೆ ಒಪ್ಪಿಸಲಿಕ್ಕೆ ಬದ್ಧರಾಗಿರತಕ್ಕದ್ದು; ಮತ್ತು ಮೃತಪಟ್ಟ ಆಫಿಸರರು ಜೀವಿಸಿಯಿದ್ದರೆ ಹ್ಯಾಗೆ ದಾವಾ ಮಾಡಲ್ಪಡುತ್ತಿರುವರೋ ಅದೇ ಮೇರೆ ದಾವಾ ಮಾಡಲ್ಪಡಬಹುದು; ಪರಂತು, ಹಣ ಕೇಳಲ್ಪಟ್ಟಾಗ ಮೃತಪಟ್ಟವರಿಂದ ವಾರಸ್‌ದಾರೀ ಮೇಲೆ ಪಡೆದ ಸ್ವತ್ತಿನ ಪರಿಮಾಣದಷ್ಟಕ್ಕೆ ಮಾತ್ರ ಜವಾಬ್‌ದಾರರಾಗಿರತಕ್ಕದ್ದು.

ಮುಂ. ರೆ. ಕೋ. 30ನೇ ಸೆಕ್ಷನ್.

ಮುಂದಿನ ಜವಾಬ್ದಾರಿಯ ಠೆಕಯಿಂದ ಜಾಮೀನ್ದಾರನು ಹ್ಯಾಗೆ ತಪ್ಪಿಸಿಕೊಳ್ಳತಕ್ಕದ್ದು.

30. ಪ್ರತ್ಯೇಕ ಪತ್ರ ಪ್ರಕಾರವಾಗಲಿ, ಜಂಟಿ ಪತ್ರ ಪ್ರಕಾರವಾಗಲಿ, ಯೇರ್ಪಟ್ಟ ಯಾವ ಜಾಮೀನ್ದಾರನಾಗಲಿ ಯಾವ ಆಫೀಸರರಿಗೆ ಪತ್ರ ಬರೆದು ಕೊಡಲ್ಪಟ್ಟಿದ್ದಯೋ ಅಂತಾ ಆಫೀಸರರಿಗೆ ಆವೋರೆ ಜಾಮೀನ್ದಾರೀಯಿಂದ ತಪ್ಪಿಸಿಕ್ಕೊಳ್ಳಲಿಕ್ಕೆ ಖಾಯಿಷ್ ಮಾಡುತ್ತೇನೆಂದು ಬರವಣಿಗೇಮೂಲಕ ನಮೂದಿಸಿದ ಮೇಲೆ ಯಾವ ಕಾಲದಲ್ಲಾಗಲಿ ಜಾಮೀನ್ದಾರೀಯಿಂದ ತಪ್ಪಿಸಿಕೊಳ್ಳಬಹುದು. ಮತ್ತು ಅಂತಾ ಬರವಣಿಗೆಯನ್ನು ಯಾವ ತಾರೀಖಿನಲ್ಲಿ ಕೊಡುತ್ತಾನೋ ಅದು ಮೊದಲು ಅರವತ್ತು ದಿನಗಳು ಕಳೆದ ತರುವಾಯ ಯಾವಬಗ್ಯೆ ಅವನ ಮುಖ್ಯಸ್ತನು ಜವಾಬ್ದಾರನಾಗುತ್ತಾನೋ ಅಂತಾ ಹಣಗಳು ಪತ್ರಗಳು, ಅಥವಾ ಇತರ ಸ್ವತ್ತು ಇಂತಾದ್ದನ್ನು ಕುರಿತು ತನ್ನ ಮುಖ್ಯಸ್ಥನಮೇಲೆ ಆ ಅರವತ್ತು ದಿವಸಗಳ ತರುವಾಯ ಬರುವ ತಮಾಂ ತಗಾದೆಗಳಗೂ, ಪತ್ರ ಪ್ರಕಾರದ ಅವನ ಜವಾಬದಾರಿಯು ತಪ್ಪತಕ್ಕದ್ದು. ಆದರೆ ಆ ಅರವತ್ತು ದಿವಸಗಳ ವಳಗೆ ತನ್ನ ಮುಖ್ಯಸ್ಥನು ಯಾವ ತಗಾದೆಗಳಿಗೆ ಒಳಪಡಬಹುದಾಗಿರುವನೋ ಅಂತಾ ತಗಾದೆಗಳ ವಿಷಯದಲ್ಲಿ ಸದರೀ ತಗಾದೆಗಳಿಗೆ ಗುರೀಮಾಡುವ ಸಂಗತಿಗಳು ಸದರೀ ವಾಯಿದೆ ಮೀರಿ ಹೋದ ತರುವಾಯವೂ ಕಾಣಬರದೇ ಹೋದಾಗ್ಯೂ ಜವಾಬ್ದಾರಿ ತಪ್ಪತಕ್ಕದಲ್ಲನು.

4ನೇ ಅಧ್ಯಾಯ.

ಮುಲ್ಕೀ ಆಫಿಸರಗಳಿಗೆ ನಿಷೇಧಿಸಲ್ಪಟ್ಟ ಕೆಲವು ಕೃತ್ಯಗಳನ್ನೂ, ಅವರುಗಳ ಕೆಟ್ಟನಡತೆಗಾಗಿ ದಂಡನೆಯನ್ನೂ ಕುರಿತು.

ಮುಂ. ರೆ. ಕೋ. 31ನೇ ಸೆಕ್ಷನ್.

ನಿಷಿದ್ಧ ಕೃತ್ಯಗಳು.

31. ಅವನು ತಾಬೇದಾರನಾಗಿರುವ ಗವರ್ನಮೆಂಟಿನ ಅಥವಾ ಡೆಪ್ಯುಟಿ ಕಮ್ಮಿಷನರ ಅಥವಾ ಸರ್ವೇ ಸೂಪರಿಂಟೆಂಡೆಂಟರ ಇವರಿಂದ ಕೊಡಲ್ಪಟ್ಟ ಅಪ್ಪಣೆ ಶಿವಾಯಿ ಯಾವ ರೆವಿನ್ಯೂ ಆಫೀಸರಾಗಲಿ.—

ವ್ಯಾಪಾರ ಮಾಡಕೂಡದು.

(1) ಮುಖ್ಯಸ್ಥನಂತೆ ಯಾಗಲೀ ಮುತಾಲೀಕನಂತೆಯಾಗಲಿ, ವ್ಯಾಪಾರದಲ್ಲಿ ಪ್ರವರ್ತಿಸಕೂಡದು ಅಥವಾ ಸಾಕ್ಷಾತ್ತಾಗಲೀ ಪರಂಪರೆಯಿಂದಾಗಲಿ, ಯಾವ ವ್ಯಾಪಾರದ ಕೆಲಸದಲ್ಲಿಯೂ ಪ್ರವರ್ತಿಸಕೂಡದು;

ಬಹಿರಂಗವಾದ ಹರಾಜ್‌ನಲ್ಲಿ ಕ್ರಯಮಾಡಕೂಡದು.

(2) ಈ ರೆಗ್ಯುಲೇಷನಿನ ಅಥವಾ ತತ್ಕಾಲದೊಳಗೆ ಜಾರೀಯಿರುವ ಯಾವದಾದರು ಇತರ ಕಾನೂನಿನ ನಿಬಂಧನೆಗಳನುಸರಿಸಿ, ಯಾರಾದರೂ ರೆವಿನ್ಯೂ ಅಥವಾ ಜುಡಿಷಿಯಲ್ ಆಫೀಸರರು ತತ್ಕಾಲದೊಳಗೆ ತಾನು ನೌಕರೀಯಲ್ಲಿರುವ ಡಿಸ್ಟ್ರಿಕ್ಟಿನಲ್ಲಿ ಅಂಥಾ ಆಫೀಸರ ಹುಕುಂನಿಂದ ವಿಕ್ರಯಿಸಲ್ಪಡತಕ್ಕ ಯಾವ ಸ್ವತ್ತನ್ನಾಗಲಿ ಖರೀದಿಗೆ ತೆಗದುಕ್ಕೊಳ್ಳಲೂ ಕೂಡದು, ಖುದ್ದಾಗಿ ಅಥವಾ ಮುತಾಲೀಕನ ಮೂಲಕ ಅಥವಾ ತನ್ನ ಹೆಸರಿನಲ್ಲಿ ಅಥವಾ ಮತ್ತೊಬ್ಬನ ಹೆಸರಿನಲ್ಲಿ ಅಥವಾ ಜಂಟಿಯಾಗಿ ಅಥವಾ ಇತರರ ಸಂಗಡ ಹಿಶ್ಶೇದಾರನಾಗಿ ಚಡದರಖಾಸ್ತು ಮಾಡಕೂಡದು:

(3) ಮತ್ತು ಯಾವ ರೆವಿನ್ಯೂ ಆಫೀಸರರೂ—

ಸರ್ಕಾರ ಹಣವನ್ನಾಗಲೀ ಸ್ವತ್ತನ್ನಾಗಲಿ ಸ್ವಂತವಾಗಿ ಉಪಯೋಗಿಸಿಕೊಳ್ಳಕೂಡದು.

(a) ತನ್ನ ನ್ಯಾಯವಾದ ತಲಬು ಅಥವಾ ಯಾವ ಸರ್ಕಾರ್‌ಹಣ ಯಾ ಸ್ವತ್ತಿನ ವಸೂಲಾತಿ ಯಾ ಜೆವ್ಮೆ ಯಿಂತಾದ್ದು ತನಗೆ ಒಪ್ಪಿಸಲ್ಪಟ್ಟಿರುತ್ತೋ ಅಥವಾ ಸಂಬಂಧಿಸಿ ಇರುತ್ತೋ ಅಂತಾ ಹಣ ಯಾ ಸ್ವತ್ತಿನಿಂದ ಬರತಕ್ಕ ಆದಾಯ ಇಂತಾದ್ದಕ್ಕಿಂತ ಹೆಚ್ಚಾಗಿ ಯಾವ ನಫೆಯನ್ನಾಗಲಿ, ಪ್ರಯೋಜನವನ್ನಾಗಲಿ, ತನಗೇಯಾದರೂ ಇತರ ಯಾವ ಮನುಷ್ಯನಿಗೋಸ್ಕರವಾದರೂ ಪಡೆಯತಕ್ಕದ್ದಲ್ಲವು; ಅಥವಾ

ಅಕ್ರಮವಾಗಿ ಜುಲುಂನಿಂದ ವಸೂಲ್, ಇನಾಂಗಳು, ಇಂತಾದ್ದನ್ನು ಮಾಡಕೂಡದು ಅಥವಾ ತೆಗೆದುಕೊಳ್ಳಕೂಡದು.

(b) ಅಂತಾ ರೆವಿನ್ಯೂ ಆಫೀಸರೆಂಬ ವ್ಯಾಜದಿಂದಲಾಗಲಿ, ಅಂತಾ ಆಫೀಸರಂತೆ ತನ್ನ ಅಧಿಕಾರವನ್ನು ಚಲಾಯಿಸುವದರಿಂದಲಾಗಲಿ, ಪಾರಿತೋಷಿಕದದ್ವಾರಾ ಆಗಲಿ ಅನ್ಯಥಾ ಆಗಲಿ, ತಗಾದೆ ಮಾಡಕೂಡದು ಅಥವಾ ತೆಗೆದುಕೊಳ್ಳಕೂಡದು ; ಈ ರೆಗ್ಯೂಲೇಷನಿನ ಅಥವಾ ತತ್ಕಾಲದಲ್ಲಿ ಜಾರೀಯಿರುವ ಯಾವದಾದರೂ ಇತರ ಕಾನೂನಿನ ನಿಬಂಧನೆಗಳನುಸರಿಸಿ ತಗಾದೆ ಮಾಡಲಿಕ್ಕಾಗಲಿ ತೆಗೆದುಕೊಳ್ಳಲಿಕ್ಕಾಗಲಿ ನ್ಯಾಯತಃ ಅರ್ಹನಾಗಿರುವಷ್ಟರಮೇಲೆ ಮತ್ತು ಅದಕ್ಕೆ ಹೆಚ್ಚಾಗಿ ಯಾವ ಮೊಬಲಗನ್ನಾಗಲಿ, ಮತ್ತ್ಯಾವ ಈಡನ್ನಾಗಲಿ ಕೇಳಕೂಡದು ಅಥವಾ ತೆಗೆದುಕೊಳ್ಳಕೂಡದು.

ಮುಂ. ರೆ. ಕೋ. 32ನೇ ಸೆಕ್ಷನ್.

ಜುರ್ಮಾನೇಹಾಕುವಣ, ಕಂಷರಾ ಮಾಡುವಣ, ಸಸ್ಪೆಂಡ್ ಮಾಡುವಣ ತಗ್ಯೆರ್ ಮಾಡುವಣ ಈ ಬಾಬತು ಅಧಿಕಾರವು ಯಾರಿಗೆ ಇರತಕ್ಕದ್ದು.

32. 241ನೇ ಸೆಕ್ಷನ್ ಅನುಸರಿಸಿ ಮಾಡಲ್ಪಟ್ಟ ರೂಲ್ಸ್ ಯಾ ಹುಕ್ಕುಂಗೆ ಳಗೆ ಒಳಪಟ್ಟು, ತಮಾಂ ರೆವಿನ್ಯೂ ಆಫೀಸರ್‌ಗಳೂ, ಇದರ ಹಿಂದಿನ ಕಡೇ ಸೆಕ್ಷನ್‌ನಲ್ಲಿ ವಿವರಿಸಲ್ಪಟ್ಟಿರುವಂಥಾ ಯಾವ ತಕಶೀರ್ ಬಗ್ಯಾಗಲಿ, ಇಲಾಖಾ ನಿಬಂಧನೆಗಳು ಅಥವಾ ಆಚರಣೆ ಇವುಗಳ ಯಾವದಾದರೂ ಉಲ್ಲಂಘನೆಯ ಬಗ್ಯಾಗಲಿ, ಅಥವಾ ಅಜಾಗರೂಕತೆ, ನಾಲಾಯುಕಿ, ಕೆಲಸದಲ್ಲಿ ಅಶ್ರದ್ಧೆ ಅಥವಾ ಬೇರೆ ಯಾವದಾದರೂ ಕೆಟ್ಟ ನಡತೆ, ಈಬಗ್ಯಾಗಲಿ, ಸದರೀ ಆಫೀಸರರು ಯಾರಿಂದ ಮೊಕರರ್ ಮಾಡಲ್ಪಡುತ್ತಾನೋ ಅಂತಾ ಅಧಿಕಾರಿಯಿಂದಾಗಲಿ, ಅಂತಾ ಅಧಿಕಾರಿಗೆ ಮೇಲ್ಪಟ್ಟ ಮತ್ತ್ಯಾವ ಅಧಿಕಾರಿಯಿಂದಾಗಲಿ, ಜುರ್ಮಾನೇ ವಿಧಿಸಲ್ಪಡತಕ್ಕದ್ದು, ಕಂಷರಾ ಮಾಡಲ್ಪಡತಕ್ಕದ್ದು, ಸಸ್ಪೆಂಡ್ ಮಾಡಲ್ಪಡತಕ್ಕದ್ದು, ತಗ್ಯೆರ್ ಮಾಡಲ್ಪಡತಕ್ಕದ್ದು ; ಈ ಅಧಿಕಾರವು ಪೂರಾ ಅಥವಾ ಕೆಲವುಮಟ್ಟಿಗಾಗಲಿ 21ನೇ ಸೆಕ್ಷನ್ ಅನುಸರಿಸಿ ಕೊಡಲ್ಪಡಬಹುದಾದ ಮೊಕರರಾತಿ ಅಧಿಕಾರದ ನಿಬಂಧನೆಯಂತ್ಲೆಯೇ ಯಾವ ತಾಬೇದಾರಿ ಆಫೀಸರಿಗಾಗಲಿ ವಪ್ಪಿಸಲ್ಪಡಬಹುದು.

ಮುಂ. ರೆ. ಕೋ. 33ನೇ ಸೆಕ್ಷನ್.

ಅಂತಾ ತಮಾಂ ಹುಕ್ಕುಂಗಳೂ, ಬರವಣಿಗೆಯಲ್ಲಿರತಕ್ಕದ್ದು.

33. ಯಾವ ತಾಬೇದಾರಿ ಆಫೀಸರರನ್ನಾಗಲಿ, ಜುರ್ಮಾನೇ ಹಾಕುವ ಬಗ್ಯೆ ಕಂಷರಾ ಮಾಡುವ ಬಗ್ಯೆ ಸಸ್ಪೆಂಡ್ ಮಾಡುವ ಬಗ್ಯೆ ಅಥವಾ ತಗ್ಯೆರ್ ಮಾಡುವ ಬಗ್ಯೆ ಯಾವ ರೆವಿನ್ಯೂ ಆಫೀಸರಾಗಲಿ ಒಂದು ಹುಕ್ಕುಂ ಕೊಟ್ಟರೆ, ಅಂತಾ ಹು

ಕ್ಕುಮನ್ನು ಆ ಬಗ್ಯೆ ಕಾರಣಗಳುನಿಶೀ ಬರವಣಿಗ್ಗೇಯಲ್ಲಿ ಕನ್ನಡ ಅಥವಾ ಇಂಗ್ಲಿಷ್ ಭಾಷೆಯೊಳಗೆ ತನ್ನ ದಸ್ಕತ್ತಿನೊಡನೆ ದಾಖಲೇ ಬಗ್ಯೆ ಇಡತಕ್ಕದ್ದು ಅಥವಾ ಇಡಿಸತಕ್ಕದ್ದು.

ಮುಂ. ರೆ. ಕೋ: 34ನೇ ಸೆಕ್ಷನ್.

ಜುರ್ಮಾನೆಯು ಎರಡು ತಿಂಗಳ ತಲಬನ್ನು ಮೀರಕೂಡದು.

34. ಹಿಂದಿನ ನಿಬಂಧನೆಗಳನುಸರಿಸಿ ವಿಧಿಸಲ್ಪಟ್ಟ ಜುರ್ಮಾನೆಯು ಯಾವ ಸಂಗತಿಯಲ್ಲಿಯೂ, ಅಪರಾಧಿ ತಕಸೀರ್‌ಮಾಡಿದ ಕಾಲದಲ್ಲಿ ಯಾವ ಕೆಲಸದಲ್ಲಿದ್ದನೋ ಆ ಉದ್ಯೋಗದ ಎರಡು ತಿಂಗಳ ತಲಬಿಗೆ ಮೀರಿ ಇರಕೂಡದು.

ಹ್ಯಾಗೆ ವಸೂಲ್ ಮಾಡತಕ್ಕದ್ದು.

ಈ ಅಧ್ಯಾಯ ಅನುಸರಿಸಿ ಹಾಕಲ್ಪಟ್ಟ ತಮಾಂ ಜುರ್ಮಾನೆಗಳೂ, ಆಫಿಸರನ ತಲಬ್‌ನಿಂದ ವಸೂಲ್ ಮಾಡಬಹುದು; ಅಥವಾ ಜರೂರಿದ್ದಲ್ಲಿ, ಈ ರೆಗ್ಯೂಲೇಷನ್ ಅನುಸರಿಸಿ, ಜಮೀನ್ ಕಂದಾಯದ ಬಾಕೀಯಂತೆ ವಸೂಲ್ ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 35ನೇ ಸೆಕ್ಷನ್.

ಅಪ್ಪೀಲ್‌ಗಳು.

35. ಡೆಪ್ಯುಟಿ ಕಮ್ಮಿಷನರಾಗಲೀ, ಸರ್ವೇ, ಸೂಪರಿಂಟೆಂಡೆಂಟರಾಗಲೀ ತಮ್ಮ ಅಭಿಪ್ರಾಯ ಪ್ರಕಾರ ಅಥವಾ ತಾಬೇದಾರೀ ಆಫಿಸರರ ಹುಕ್ಕುಂನಿಂದ ಬರುವ ಅಪ್ಪೀಲಿನಮೇಲೆ ಮಾಹೇಯಾನಾ ಮೂವತ್ತು ರೂಪಾಯಿಗಳಿಗಿಂತ ಜಾಸ್ತೀ ತಲಬ್‌ವುಳ್ಳ ಅಂತಾ ತಮ್ಮ ಯಾವ ತಾಬೇದಾರೀ ಅಫಿಸರಿಗಾಗಲಿ ಜುರ್ಮಾನೆ ಹಾಕುವ ಬಗ್ಯೆ, ಕಂಪ್ಷರಾ ಮಾಡುವಬಗ್ಯೆ, ಸಸ್‌ಪೆಂಡ್ ಮಾಡುವಬಗ್ಯೆ, ಅಥವಾ ತಗೈರ್ ಮಾಡುವಬಗ್ಯೆ ಹುಕ್ಕುಂಮಾಡಿದರೆ ಅಂತಾ ಹುಕ್ಕುಮಿನ ಮೇಲೆ ಗವರ್ನಮೆಂಟಿಗೆ ಅಪ್ಪೀಲ್ ದಾಖಲ್ ಆಗತಕ್ಕದ್ದು.

ಮುಂ. ರೆ. ಕೋ. 36ನೇ ಸೆಕ್ಷನ್.

ಒಬ್ಬ ಆಫಿಸರು ಕ್ರಿಮಿನಲ್ ವಿಚಾರಣೆಗೆ ಗುರಿಯಾಗುವಣವು ಈ ರೆಗ್ಯೂಲೇಷನಿನಿಂದ ಬಾಧಿಸಲ್ಪಡುವದಿಲ್ಲ.

36. ಈ ಅಧ್ಯಾಯದಲ್ಲಿರುವ ಯಾವ ಅಂಶವೂ ಒಬ್ಬ ಆಫೀಸರಿನ ಮೇಲೆ ಹೊರಿಸಲ್ಪಡಬಹುದಾದ ಯಾವ ತಕಸೀರಿಗೋಸ್ಕರವಾಗಲಿ ಕ್ರಿಮಿನಲ್ ವಿಚಾರಣೆಗೆ ಬಾಧಿಸತಕ್ಕದ್ದಲ್ಲವು.

ಆಫಿಸರು, ವಿಚಾರಣೆಯ ಕಾಲದಲ್ಲಿ ಸಸ್‌ಪೆಂಡ ಮಾಡಲ್ಪಟ್ಟು ಆ ತರುವಾಯ, ಸಸ್‌ಪೆಂಡ ಯಾ ಕಂಪ್ಷರಾ ಯಾ ತಗೈರ್ ಮಾಡಲ್ಪಡಬಹುದು.

ಅಂತಾ ವಿಚಾರಣೆಗೆ ಗುರಿಮಾಡಲ್ಪಟ್ಟ ಯಾವ ಆಫೀಸರಾಗಲಿ ವಿಚಾರಣೆ ಕಾಲವವರಿಗೂ ಸಸ್ಪೆಂಡ ಮಾಡಲ್ಪಡಬಹುದು, ಮತ್ತು ಅದುಪೂರೈಸಿದಾಗ, ಮೊಕದ್ದಮೆ ನಡೆಯುತ್ತಿರುವಲ್ಲಿ, ವ್ಯಕ್ತಪಡಿಸಲ್ಪಟ್ಟ ಅಂಶಗಳ ಆಲೋಚನೆಯ ಮೇಲೆ, ಅವನು ಅಪರಾಧಿಯೆಂದು ಸಾಬೀತುನಿಶೀ ಕಾಣಬರಲಿ ಇಲ್ಲದೆ ಇರಲಿ ಯೆಖ್ತ್ಯಾರಿಯುಳ್ಳ ಯಾವ ಅಧಿಕಾರಿಯಿಂದಲಾದರು ಸಸ್‌ಪೆಂಡ್, ಕಂಪ್ಷರಾ ಅಥವಾ ತಗೈರ್ ಮಾಡಲ್ಪಡಬಹುದು.

5ನೇ ಅಧ್ಯಾಯ.

ಜಮೀನ್ ಮತ್ತು ಜಮೀನ್ ಕಂದಾಯವನ್ನು ಕುರಿತು.

ಜಮೀನ್.

ಮುಂ. ರೆ. ಕೋ. 37ನೇ ಸೆಕ್ಷನ್.

ಇತರರ ಸ್ವತ್ತಲ್ಲದ ದರೋಬಸ್ತು ಪಬ್ಲಿಕ್ ರಸ್ತೆಗಳೂ ತಮಾಂ ಜಮೀನ್‌ಗಳೂ, ಗವರ್ನಮೆಂಟ್ ಸ್ವತ್ತಾಗಿರುತ್ತೆ.

37. ತಮಾಂ ಪಬ್ಲಿಕ್ ರಸ್ತೆಗಳೂ, ಗಲ್ಲಿಗಳೂ, ಮತ್ತು ಮಾರ್ಗಗಳೂ; ಇವುಗಳಮೇಲೆ ಅಥವಾ ಪಕ್ಕದಲ್ಲಿ ಇರುವ ತಮಾಂ ಸೇತುವೆಗಳೂ, ಹಳ್ಳಗಳೂ, ದೀರ್ಘವಾದ ಅಗಳ್ತೆಗಳೂ ಬೇಲೀಗಳೂ, ಹೊಳೆಗಳ ಒಳಾಯು, ನೀರುವೋಟಗಳೂ ನಾಲಾಗಳೂ, ಕೆರೆಗಳೂ, ಕುಂಟೆಗಳೂ, ತಮಾಂ ಕಾಲ್ವೆಗಳೂ, ನೀರು ಹರಿಯುವ ಮಾರ್ಗಗಳೂ, ತಮಾಂ ನಿಲ್ಲುವನೀರೂ, ಹರಿಯುವನೀರೂ, ಮತ್ತು ಸ್ವತ್ತನ್ನು ಪಹಿಸಲಿಕ್ಕೆ ಯುಕ್ತಿಯಾರಿ ಇಲ್ಲದ ಜನಗಳ ಅಥವಾ ಜನಸಮುದಾಯಗಳ ಸ್ವತ್ತಲ್ಲದ ಜಮೀನ್‌ಗಳೂ ಎಲ್ಲಿಯಿದ್ದಾಗ್ಯೂ ಅಂತಾ ತಮಾಂ ಜಮೀನ್‌ಗಳೂ, ಸದರೀ ಜಮೀನ್‌ಗಳಲ್ಲಿ ಅಥವಾ ಅವುಗಳಮೇಲೆ, ಅಂತಾ ಜನಗಳ ಯಾವದಾದರೂ ಹಕ್ಕುದಾರೀಗಳು ಸ್ಥಾಪಿಸಲ್ಪಡಬಹುದಾದ ಮಟ್ಟಿಗೆಹೊರತು, ಮತ್ತು ತತ್ಕಾಲದೊಳಗೆ ಜಾರೀಯಿರುವ ಯಾವ ಕಾನೂನಿನಲ್ಲಿಯಾಗಲಿ, ಅನ್ಯಥಾ ವಿಧಿಸಲ್ಪಡಬಹುದಾದದುವಿನಾ, ಅವುಗಳಲ್ಲಿ ಯಾಗಲಿ, ಅವುಗಳ ಮೇಲೆಯಾಗಲಿ ಅಥವಾ ಅವುಗಳಿಗೆ ಸೇರಿಕೊಂಡೆಯಾಗಲಿ ಇರುವ ತಮಾಂ ಹಕ್ಕುದಾರಿಗಳೂ, ಗವರ್ನಮೆಂಟಿನ ಸ್ವತ್ತೆಂದು ಇದರಿಂದ ತಿಳಿಸಲ್ಪಡುತ್ತೆ; ಪ್ರಜೆಗಳ ಅಥವಾ ಆಯಾ ಮನುಷ್ಯರಿಗೆ ನ್ಯಾಯತಃ ವುಂಟಾಗಿರುವ ಮಾರ್ಗದ ಹಕ್ಕುಗಳಿಗೂ, ಇತರ ತಮಾಂ ಹಕ್ಕುಗಳಿಗೂ ಸರ್ವಥಾ ವಳಪಟ್ಟು, ಗವರ್ನಮೆಂಟಿನಿಂದ ನಿಯಮಿಸಲ್ಪಡಬಹುದಾದ ರೀತಿಯಾಗಿ ಅವುಗಳನ್ನು ವ್ಯವಸ್ಥೆಮಾಡುವದಕ್ಕೆ ಡೆಪ್ಯುಟಿ ಕಮ್ಮೀಷನರಿಗೆ ಯುಖ್ತ್ಯಾರಿಯುಂಟು.

38. ಗವರ್ನಮೆಂಟ್ ಸ್ವತ್ತಾದ ಯಾವ ಪಬ್ಲಿಕ್ ರಸ್ತೆ, ಬೀದಿ, ಥಾರೋಫೇರ್ (ಅಂದರೆ ಆಚೆಗೆ ಹೋಗುವದಕ್ಕೆ ದಾರೀಯಿರುವ ಸಂದು) ಜನಗಳು ಸೇರತಕ್ಕ ಅಥವಾ ಉಪಯೋಗಿಸಲ್ಪಡತಕ್ಕ ಯಾವದಾದರೂ ಸ್ಥಳ, ಯಾವದಾದರೂ ಹೊಳೆಯ ವಳಾಯ, ನೀರೋಟ ನಾಲೆ, ಕೆರೆ, ಯಾ ಕಾಲ್ವೆ ಇಂತಾದ್ದರ ತಳ ಯಾವ ಮನುಷ್ಯನಿಂದಾಗಲಿ ಆಕ್ರಮಿಸಲ್ಪಟ್ಟಿರುತ್ತೆಂದು ಡೆಪ್ಯುಟಿಕಮ್ಮಿಷನರ ಮುಂದೆ ಕ್ರಮವಾದ ವಿಚಾರಣೆಯಲ್ಲಿ ರುಜುವಾದರೆ, ಹಾಗೆ ಆಕ್ರಮಿಸಲ್ಪಟ್ಟ ಭಾಗವು 12 ವರುಷಗಳಿಗೆ ಕಡಮೆ ಇಲ್ಲದ ಕಾಲದ ಪರ್ಯಂತ ಆವನಿಂದ ಅನುಭವಿಸಲ್ಪಟ್ಟಿರುತ್ತೆಂದು ವ್ಯಕ್ತಪಡಿಸಲ್ಪಡದೆ ಇದ್ದರೆ ಹಾಗೆ ಆಕ್ರಮಿಸಲ್ಪಟ್ಟ ಭಾಗವನ್ನು ಡೆಪ್ಯುಟಿ ಕಮ್ಮಿಷನರು ಸ್ವಾಧೀನ ಪಡಿಸಿಕೊಳ್ಳತಕ್ಕದ್ದು. ಹಾಗೆ ಆಕ್ರಮಿಸಿಕೊಂಡಿರುವಮನುಷ್ಯನಾಗಲಿ ಅಥವಾ ಹಾಗೆ ಆಕ್ರಮಿಸಲ್ಪಟ್ಟ ಜಾಗಗಳಲ್ಲಿ ಸಂಬಂಧವುಳ್ಳ ಯಿತರ ಮನುಷ್ಯನೇ ಯಾಗಲಿ ತನಗೆ ಒಂದು ತಿಂಗಳಿಗೆ ಕಡಮೆಇಲ್ಲದ ವಾಯಿದೆ ಕೊಡುವ ಒಂದು ಬರಹ ಮೂಲಕದ ನೋಟೀಸ್ ಕೊಟ್ಟ ತರುವಾಯು ಯಾವ ಕಟ್ಟಣಗಳನ್ನಾಗಲಿ ಇತರ ನಿರೋಧಗಳನ್ನಾಗಲಿ ಕೆಡಿಸಿ ಸದರೀ ಜಾಗವನ್ನು ಖಾಲೀಮಾಡಲಿಕ್ಕೆ ತಪ್ಪಿದರೆ, ಸದರೀ ಜಾಗದಮೇಲೆ ಇರುವ ಕಟ್ಟಣಗಳನ್ನು ಯಾ ನಿರೋಧಗಳನ್ನು ಕೆಡಿಸಿ ಜಾಗವನ್ನು ಖಾಲೀಮಾಡಿಸುವದಕ್ಕೆ ಡೆಪ್ಯುಟಿ ಕಮ್ಮಿಷನರಿಗೆ ಯುಖ್ತ್ಯಾರಿಯುಂಟು.

ಅನುಭವದಾರನಾದ ಮನುಷ್ಯನು ಮತ್ತೊಬ್ಬನಿಗೆ ಷಿಕ್ಮೀದಾರನಾಗಿ ಅಥವಾ ಬಳ ಸ್ವತ್ವವುಳ್ಳವನಾಗಿದ್ದರೆ ಮತ್ತು ಯಾವ ಸಂಗತಿಯಲ್ಲಿ ಮತ್ತೊಬ್ಬ ಮನುಷ್ಯನು, ಅನುಭವದಾರನಾದ ಮನುಷ್ಯನ ತಿಳುವಳಿಕೆ ಪ್ರಕಾರ ಯಾವ ಸ್ವತ್ತಿಗೆ ಅಂತಾ ನೋಟೀಸ ಸಂಬಂಧಿಸಿಯಿರುತ್ತದೋ ಅಂತಾ ಸ್ವತ್ತಿನಲ್ಲಿ ಸಂಬಂಧವುಳ್ಳ ಪ್ರತಿ ಸಂಗತಿಯಲ್ಲಿಯೂ, ಅನುಭವದಲ್ಲಿರುವ ಅಂತಾ ಇತರ ಮನುಷ್ಯನಿಗೆ, ಅಂತಾ ನೋಟೀಸನ್ನಾಗಲಿ ಅದರ ಒಂದು ನಕಲನ್ನಾಗಲೀ, ಅದರ ಜಾಹಿರಾತಿಯನ್ನಾಗಲಿ ಕೊಡುವದು ಅವನ ಕೃತ್ಯವಾಗಿರತಕ್ಕದ್ದು. ಅಂತಾ ಕೇಸದಲ್ಲಿ ಯೇನಾದರೂ ತಪ್ಪಿ ಅದರಿಂದ ಹಾನಿ ಬಂದರೆ ಲುಕ್ಸಾನ್‌ಗಳಿಗೆ ಜವಾಬುದಾರನಾಗಿರತಕ್ಕದ್ದು.

39. 1865ನೇ ಇಸವಿಯ 1ನೇ ನಂಬರ ಮುಂಬೈ ಅಕ್ಟಾಗಲಿ, 1868ನೇ ಇಸವಿಯ 4ನೇ ನಂಬರ ಅಕ್ಟಾಗಲಿ, ಜಾರೀಗೆ ಬಂದಿರುವ ಯಾವದಾದರೂ ಷಹರನಲ್ಲಿ, ಹಿಂದಿನಕಡೇ ಸೆರ್ಕಿವ್ಹೆ ಅನುಸರಿಸಿ ಜಮೀನ ಸ್ವಾಧೀನಕ್ಕೆ ಪಡಕೊಂಡಾಗ, ಅಂತಾ ಅಕ್ಟು ಜಾರೀಗೆ ಬಂದದ್ದಕ್ಕೆ ಪೂರ್ವ ಕಟ್ಟಲ್ಪಟ್ಟಂತೆ ರುಜು ಮಾಡಲ್ಪಟ್ಟ ಕಟ್ಟಣಗಳ ವಿಷಯದಲ್ಲಿ ಸ್ವಂತಗಾರನಿಗಾಗಲಿ ಅವುಗಳಿಗೆ ಬಾಧ್ಯತೆವುಳ್ಳ ಇತರಮನುಷ್ಯನಿಗಾಗಲಿ ಯುಕ್ತವಾದ ಕಂಪೆನ್‌ಸೇಷನ ಯಾನೆ ಈಡು ಕೊಡಲ್ಪಡತಕ್ಕದ್ದು.

ಪರಂತು; ಯಾವಬಗೆಯ ಅಥವಾ ಸಾಮಾನಿನ ಪಾಯಿಖಾನೆ ಗುಂಡಿಗಳು (Cess pools) ಅಥವಾ ಬಾಗಿಲ ಮೆಟ್ಲುಗಳು, ಜಗಲಿಗಳು, ಅಥವಾ ಯಾವವಿಧವಾದ ಅಥವಾ ಸಾಮಾನಿನಿಂದ ಕಟ್ಟಲ್ಪಟ್ಟ ಮುಂದಕ್ಕೆ ಹೊರಟಿರತಕ್ಕ ಇತರ ಕಟ್ಟಣಗಳು ಇಂತಾದ್ದನ್ನು ತೆಗಿಸಿಹಾಕತಕ್ಕ ವಿಷಯದಲ್ಲಿ ಈಡು ಕೊಡತಕ್ಕದ್ದಿಲ್ಲವು. ಮತ್ತು ಡೆಪ್ಯುಟಿ ಕಮ್ಮಿಷನರು ಕೊಡುವದಕ್ಕೆ ಯತ್ನಿಸಿದ ಈಡು ಅಂಗೀಕರಿಸಲ್ಪಡದೇ ಇದ್ದರೆ, ಸಲ್ಲತಕ್ಕ ಈಡು ಮೊಬಲಗನ್ನು 1870ನೇ ಇಸವಿಯ 10ನೇ ಆಕ್ಟಿನ IIIನೇ ಭಾಗದ ನಿಬಂಧನೆಗಳನುಸರಿಸಿ ಗೊತ್ತು ಮಾಡಲ್ಪಡತಕ್ಕದ್ದು.

40. ಕೊಡಲ್ಪಟ್ಟ ಯಾವದಾದರೂ ಶಾಸನದ, ಅಥವಾ ತತ್ಕಾಲಕ್ಕೆ ಗವರ್ನಮೆಂಟನಿಂದ ಬರೆದು ಕೊಡಲ್ಪಟ್ಟ ಯಾವದಾದರೂ ಇತರ ವರ್ಗಪತ್ರದ ನಿಬಂಧನೆಗಳಿಂದ ಅನ್ಯಥಾ ವಿಧಿಸಲ್ಪಡದೇಯಿದ್ದರೆ ಯಾವ ಜಮೀನಗಳಿಂದಾಗಲಿ, ಗನಿ ಅಗಿಯುವ ಯಾವ ಕೆಲಸದಿಂದಾಗಲಿ, ತೆಗೆಯಲ್ಪಡತಕ್ಕ ಬೆಲೆಯುಳ್ಳ ತಮಾಂ ಲೋಹಗಳೂ, ರತ್ನಗಳೂ, ಇದ್ದಲೂ, ಇತರ ಗನಿಯಿಂದ ಹುಟ್ಟತಕ್ಕ ಪದಾರ್ಥಗಳೂ ಇವುಗಳಿಗೆ ಇರತಕ್ಕ ಹಕ್ಕುದಾರಿಯು ಶುದ್ಧಾಂಗವಾಗಿ ಗವರ್ನಮೆಂಟಿಗೆ ಯಿರತಕ್ಕದ್ದು ; ಗವರ್ನಮೆಂಟಿನವರು ಅಂತಾ ಹಕ್ಕುದಾರಿಗಳನ್ನು ಯುಕ್ತವಾಗಿ ಅನುಭವಿಸಲಿಕ್ಕಾಗಲಿ, ಅದು ವ್ಯವಸ್ಥೆಯ ಬಗ್ಗಾಗಲಿ ಅವಶ್ಯಕವಾದ ವಿಶಿಷ್ಟಾಧಿಕಾರಗಳನ್ನೂ ವುಂಟಾಗಿರತಕ್ಕದ್ದು.

ಪರಂತು, ಗವರ್ನಮೆಂಟಿನವರು ತಾವೇಆಗಲಿ ಅಥವಾ ಗವರ್ನಮೆಂಟಿನವರಿಂದಲಂತಾಹಕ್ಕುಗಳನ್ನು ಹೊಂದುವ ಯಾವನಾದರೂ ಮನುಷ್ಯನಿಂದ ಆಗಲಿ, ಇದರಲ್ಲಿಕಂಡ ಹಕ್ಕುಗಳನ್ನು ಚಲಾಯಿಸುವಲ್ಲಿ, ಇತರರ ಹಿಡುವಳಿಯಲ್ಲಿ ಅಥವಾ ಅನುಭವದಲ್ಲಿ ಇರುವ ಯಾವ ಜಮೀನಗಳಲ್ಲಿಯೂ ಅವರ ಅಪ್ಪಣೆಯಿಲ್ಲದೆ ಪ್ರವೇಶ ಮಾಡಕೂಡದು. ಗವರ್ನಮೆಂಟಿನವರ ಅಧೀನದಲ್ಲಿಲ್ಲದ ಯಾವ ಜಮೀನಾಗಲೀ

ಗವರ್ರ್ನಮೆಂಟಿನವರಿಗೆ ಆಗಲಿ ಅಥವಾ ಅವರಿಂದ ಗನಿ ಅಗಿಯುವ ಹಕ್ಕುಗಳನ್ನು
ಸಂಪಾದಿಸುವ ಮನುಷ್ಯರಿಗೆ, ಗನಿ ಅಗಿಯುವ ಬಗ್ಗ್ಯಾಗಿ ಬೇಕಾಗಿರುವ ಸಂಗತಿ
ಯು ಸನ್ 1870ನೇ ಇಸವಿಯು 10ನೇ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ ನಿಬಂಧನೆಗಳ
ನುಸರಿಸಿ ಬಂದು ಸರ್ಕಾರ್ ಕೆಲಸಕ್ಕಾಗಿ ಅಂತಾ ಜಮೀನನ್ನು ಸಂಪಾದಿಸುವಬಗ್ಯೆ
ಬಂದುಸಬಬಾಗಿ ಭಾವಿಸಲ್ಪಡತಕ್ಕದ್ದು.

ಪರಂತು, ಈ ಸೆಕ್ಷನ್ನಲ್ಲಿ ಸೂಚಿಸಲ್ಪಟ್ಟ ಹಕ್ಕುಗಳನ್ನು ಚಲಾಯಿಸುವ
ಲ್ಲಿ, ಜಮೀನಿನ ಯಾವ ಹಿಡುವಳೀದಾರನಿಗಾಗಲಿ, ಅಂತಾ ಜಮೀನಿನ ಮೇಲ್ಭಾಗ
ವನ್ನು ತೊಂದರೆಪಡಿಸುವದರಿಂದ ಲುಕ್ಸಾನ್ ಸಂಭವಿಸಿದರೆ, ಅಂತಾ ಹಿಡುವಳೀದಾ
ರನು ಅಂತಾ ಲುಕ್ಸಾನಿಗಾಗಿ ಈಡಿಗೆ ಅರ್ಹನಾಗಿರತಕ್ಕದ್ದು. ಅಂತಾ ಈಡು ಮೊ
ಬಲಗು, ಅವಶ್ಯಕವಿದ್ದ ವಿಷಯಗಳಲ್ಲಿ, 1870ನೇ ಇಸವಿ 10ನೇ ನಂಬರ್ ಲ್ಯಾಂಡ್
ಅಕ್ವಿಜಿಷನ್ ಆಕ್ಟಿನ ನಿಬಂಧನೆಗಳಿಗೆ ಅನುಸಾರವಾಗಿ ನಿರ್ಣೈಸಲ್ಪಡತಕ್ಕದ್ದು.

ಮುಂ. ರೆ. ಕೋ. 38ನೇ ಸೆಕ್ಷನ್.

ವಿಶೇಷ ಕಾರ್ಯಗಳಿಗಾಗಿ ಜಮೀನುಗಳು ಪರಭಾರೇ ಮಾಡಲ್ಪಡಬಹುದು ; ಹಾಗೆ ಪರಭಾರೇ ಮಾಡಲ್ಪಟ್ಟಲ್ಲಿ ಗವರ್ನಮೆಂಟಿನ ಮುಂಜುರಾತಿಯಿಲ್ಲದೆ, ಅನ್ಯಥಾ ವಿನಿಯೋಗಿಸಲ್ಪಡಕೂಡದು.

41. ಗವರ್ರ್ನಮೆಂಟಿನವರು ಯಾವ ಕಾಲದಲ್ಲಾಗಲಿ ಮತ್ತು ಗವರ್ರ್ನಮೆಂಟಿ
ನವರ ವಟ್ಟು ಹುಕ್ಕುಮಿಗೆ ಒಳಪಟ್ಟು, ಸರ್ವೇ ಆಫೀ
ಸರುಗಳೇ ಯಾಗಲೀ ಈ ರೆಗ್ಯುಲೇಷನಿನ VIIIನೇ
ಅಧ್ಯಾಯವನ್ನು ಅನುಸರಿಸಿ ಸರ್ವೇಕೆಲಸ ಜರುಗುವಾ
ಗ್ಯೆ ಗ್ರಾಮದ ದನಗಳ ಧರ್ಮದ ಕಾವಲ್‌ಬಗ್ಯೆ,
ಮನ್ನಾ ಕಾಡುಗಳ ಬಗ್ಯೆ, ಅಥವಾ ಇತರ ಪ್ರಜಾಸಂ
ಬಂಧವಾದ ಅಥವಾ ಮ್ಯುನಿಸಿಪಲ್ ಸಂಬಂಧವಾದ ಕೆಲ
ಸಗಳ ಬಗ್ಗ್ಯಾಗಿ ಗವರ್ರ್ನಮೆಂಟಿನ ಸ್ವತ್ತಾಗಿ ಮತ್ತು
ಪರಭಾರೇಯಾಗದ ಗ್ರಾಮಗಳಲ್ಲಿ ಅಥವಾ ಗ್ರಾಮಗಳ ಪರಭಾರೆಯಾಗದ ಭಾಗ
ಗಳಲ್ಲಿ ಯಾವನಾದರೂ ಮನುಷ್ಯನ ಅಥವಾ ಜನಸಮುದಾಯದ ಕಾನೂನು ಪ್ರ
ಕಾರವಾದ ಅನುಭವದಲ್ಲಿಲ್ಲದ ಜಮೀನುಗಳನ್ನು, ಬಿಟ್ಟುಕೊಡಬಹುದು. ಅಂತಾ
ಯಾವ ಕೆಲಸಕ್ಕೋಸ್ಕರವಾಗಲೀ, ವಿಶೇಷತಃ ಪರಭಾರೇ ಮಾಡಲ್ಪಟ್ಟ ಜಮೀನುಗಳು
ಗವರ್ರ್ನಮೆಂಟಿನ ಮಂಜೂರಾತಿಯಿಲ್ಲದೆ ಅನ್ಯಥಾ ವಿನಿಯೋಗಿಸಲ್ಪಡಕೂಡದು, ಅಥವಾ
ಪರಭಾರೇ ಮಾಡಲ್ಪಡಕೂಡದು ; ಮತ್ತು 37ನೇ ಸೆಕ್ಷನ್ ಅನುಸರಿಸಿ ಜ
ಮೀನು ವಿಷಯವಾಗಿ ಫೈಸಲ್ ಮಾಡುವದರಲ್ಲಿ ಅಂಥಾ ತಮಾಂ ವಿಶೇಷ ವಿನಿಯೋ
ಗಗಳಿಗೆತಕ್ಕ ನಿಗೇ ಕೊಡತಕ್ಕದ್ದು.

ಮುಂ. ರೆ. ಕೋ. 39ನೇ ಸೆಕ್ಷನ್.

ಕಾಲವನ್ನು ಉಪಯೋಗಿಸುವದನ್ನು ಕ್ರಮಪಡಿಸುವಣ.

42. ಧರ್ಮದ ಕಾವಲ್‌ಜಮೀನುಗಳಲ್ಲಿ ದನಗಳನ್ನು ಮೇಯಿಸುವ ಹಕ್ಕು
ಅಂಥಾ ಜಮೀನುಗಳು ಯಾವ ಗ್ರಾಮಕ್ಕೆ ಅಥವಾ
ಗ್ರಾಮಗಳಿಗೆ ಸಂಬಂಧಿಸಿ ಇರುತ್ತವೋ ಅಥವಾ
ವರ್ಗ ಮಾಡಲ್ಪಟ್ಟಿರುತ್ತವೋ ಅಂತಾ ಗ್ರಾಮ ಯಾ
ಗ್ರಾಮಗಳ ದನಗಳಿಗೆ ಮಾತ್ರವೇ ವ್ಯಾಪಿಸತಕ್ಕದ್ದು ; ಮತ್ತು ಗವರ್ರ್ನಮೆಂ
ಟಿನಿಂದ ವಿಧಿಸಲ್ಪಡಬಹುದಾದ ರೂಲ್ಸ್ ಯಾವದಾದರೂ ಇದ್ದರೆ ಅಂತಾ ಬಟ್ಟು
ರೂಲ್ಸಿಗೆ ಒಳಪಟ್ಟು, ಡೆಪ್ಯುಟಿ ಕಮ್ಮಿಷನರಿಂದ ಆಗಿಂದಾಗ್ಯೆ ಸಾಮಾನ್ಯತಃ ಆಗಲಿ
ಯಾವದಾದರೂ ವಿಶೇಷ ಸಂಗತಿಗಳಲ್ಲಾಗಲಿ ವಿಧಿಸಲ್ಪಡತಕ್ಕ ಕಾನೂನುಗಳಿಂದ
ಕ್ರಮಪಡಿಸಲ್ಪಡತಕ್ಕದ್ದು. ಸದರೀ ಕಾವಲ್ ಹಕ್ಕನ್ನು ಕುರಿತು ಡೆಪ್ಯುಟಿ ಕಮ್ಮಿಷ
ನರವರ ನಿರ್ಣಯವು ಆಖೈರಾದ್ದಾಗಿರತಕ್ಕದ್ದು.

ಮರಗಳು.

43. ಗವರ್ನಮೆಂಟಿನವರ ಮನ್ನಾ ಜಂಗ್ಲಿಗಳಲ್ಲಿ ತಮಾಂ ಮರಗಳೂ, ಕುರುಚಗಿಡಗಳೂ, ಕಾಡು ಅಥವಾ ಇತರಸ್ವಾಭಾವಿಕವಾದ ಹುಟ್ಟುವಳೀ ಇಂತಾದ್ದಕ್ಕೆ ಹಕ್ಕುದಾರಿಯೂ, ದನಮೇಯಿಸುವ ಹಕ್ಕೂ, ಗವರ್ನಮೆಂಟಿನವರಿಗೆ ಸೇರಿ ಇರುತ್ತೆ.

44. ಸನ್ 1865ನೇ ಇಸವಿಯ 1ನೇ ನಂಬರ ಮುಂಬೈ ಆಕ್ಟಿನ 32ನೇ ಸೆಕ್ಷನ್ ಅನುಸರಿಸಿ ಗವರ್ನಮೆಂಟಿನಿಂದ ಉಳಿಸಲ್ಪಡತಕ್ಕ ಜಂಗ್ಲಿಗಳ ಬಗ್ಯೆ ಮೊಕರರ್ ಮಾಡಲ್ಪಟ್ಟ ಜಮೀನ್ಗಳಲ್ಲಿ ಬೆಳೆಯುವ ಉಳಿಸಿಕೊಳ್ಳಲ್ಪಟ್ಟ ಒಂಭತ್ತು ಬಗೆ ಮರಗಳಿಗೆ ಯಿರತಕ್ಕ ಹಕ್ಕುದಾರಿಯು ಗವರ್ನಮೆಂಟಿನವರದಾಗಿರುತ್ತೆ; ಇಂಥಾ ಜಮೀನ್ಗಳಲ್ಲಿ ಬೆಳೆಯುವ ಮಿಕ್ಕ ಯಲ್ಲಾವಿಧವಾದ ಮರಗಳ ಹಕ್ಕೂ ಆ ಜಮೀನ್ಗಳು ಯಾವ ಗ್ರಾಮಕ್ಕೆ ಅಥವಾ ಗ್ರಾಮಗಳಿಗೆ ಶೇರಿರುತ್ತವೆಯೋ ಯಾ ಬಿಡಲ್ಪಟ್ಟಿರುತ್ತವೆಯೋ ಅಂಥಾ ಗ್ರಾಮ ಅಥವಾ ಗ್ರಾಮಗಳಿಗೆ ಶೇರಿರುತ್ತದೇ; ಅಂತಾ ಗ್ರಾಮ ಯಾ ಗ್ರಾಮಗಳ ಪ್ರಜೆಗಳಿಂದ ಈ ಹಕ್ಕುದಾರಿಯ ಚಲಾವಣಿಯು, ಈ ಬಗ್ಯೆ ಗವರ್ನಮೆಂಟಿನಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಂತಾ ರೂಲ್ಸಿನಿಂದ ಕ್ರಮಪಡಿಸಲ್ಪಡತಕ್ಕದ್ದು.

ಈ ಸೆಕ್ಷನ್ನಲ್ಲಿ ಕಂಡ ಉಳಿಸಿಕೊಳ್ಳಲ್ಪಟ್ಟ ಒಂಭತ್ತು ಬಗೆ ಮರಗಳು ಯಾವವಂದರೆ :—

1. ಹೊನ್ನೇ.
2. ಜಾಲಾರಿಮರ.
3. ನಂದೀಮರ.
4. ಜಂಗ್ಲೀ ಹಲಸು.
5. ಪೂನ್.
6. ಕಾರಾಚಿ.
7. ತೇಗ.
8. ಕರೇಮರ.
9. ಸಂದಲ್‌ಮರ.

45. ಸನ್ 1865ನೇ ಇಸವಿಯ 1ನೇ ನಂಬರ ಮುಂಬೈ ಆಕ್ಟನುಸರಿಸಿಯಾಗಲಿ, ಈ ರೆಗ್ಯೂಲೇಷನಿನ 8ನೇ ಅಧ್ಯಾಯ ಅನುಸರಿಸಿ ಯಾಗಲಿ, ಮಾಡಲ್ಪಟ್ಟ ಸರ್ವೇ ಸೆಟಲ್‌ಮೆಂಟಿನ ಕಾಲದಲ್ಲಿ ಸ್ವಾಧೀನ ಪಡಿಸಿಕೊಳ್ಳಲ್ಪಟ್ಟ ಜಮೀನಿನ ಅಥವಾ, ಅಂತಾ ಸೆಟಲ್‌ಮೆಂಟ ಕಾಲದಲ್ಲಿ ಅಥವಾ ಅದರ ತರುವಾಯ ಅನುಭವದ ಬಗ್ಯೆ ತೆಗೆದುಕೊಳ್ಳಲ್ಪಟ್ಟ ಜಮೀನಿನ ವಿಷಯದಲ್ಲಿ—

(*a*) 44ನೇ ಸೆಕ್ಷನ್ನಲ್ಲಿ ವಿವರಿಸಲ್ಪಟ್ಟ ಒಂಬತ್ತು ಬಗೆ ಉಳಿಸಿಕೊಳ್ಳಲ್ಪಟ್ಟ ಮರಗಳು ಗವರ್ನಮೆಂಟಿನ ಆಧೀನದಲ್ಲಿರತಕ್ಕದು. ಸದರೀ ಗವರ್ನಮೆಂಟಿನವರು ಸೆಟಲ್‌ಮೆಂಟ ತಾರೀಖು ಲಗಾಯತಾಗಲಿ, ಸರ್ವೇನಂಬರ ಹಾಕಲ್ಪಟ್ಟ ಜಮೀನು ತೆಗದುಕೊಳ್ಳಲ್ಪಟ್ಟ ತಾರೀಖು ಲಾಗಾಯತಾಗಲಿ ಯೆರಡು ವರುಷಗಳ ಕಾಲದೊಳಗೆ, ಅಂತಾ ಉಳಿಸಿಕೊಳ್ಳಲ್ಪಟ್ಟ ತಮಾಂ ಮರಗಳನ್ನೂ ತೆಗದು ಹಾಕತಕ್ಕದ್ದು, ಅಥವಾ ತೆಗಿಸಿ ಹಾಕತಕ್ಕದ್ದು. ಗವರ್ನಮೆಂಟಿನವರು, ಅಂತಾ ಮರವನ್ನು ಸದರೀ ಯೆರಡು ವರುಷಗಳ ಕಾಲದೊಳಗೆ ತೆಗೆದು ಹಾಕದೆ ಯಿದ್ದರೆ ಅಥವಾ ತೆಗದು ಹಾಕಿಸದಿದ್ದರೆ ಸಂದಲ್‌ಮರ ವಿನ ಸದರೀ ಮರಗಳು ಅನುಭವದಾರನಿಗೆ ಶೇರತಕ್ಕದ್ದು, ಮತ್ತು

(b) 44ನೇ ಸೆಕ್ಷನಿನಲ್ಲಿ ವಿವರಿಸಲ್ಪಟ್ಟ, ಉಳಿಸಿಕೊಳ್ಳಲ್ಪಟ್ಟ ಒಂಬತ್ತು ಬಗೆ ಮರಗಳು ವಿನಾ, ತಮಾಂ ಮರಗಳೂ, ಕುರುಚ ಗಿಡಗಳೂ ಅಥವಾ ಜಂಗಲ್ ಇಂತಾದ್ದು ಶುದ್ಧಾಂಗವಾಗಿ ಅನುಭವದಾರನ ಅಧೀನದಲ್ಲಿಯೇ ಇರತಕ್ಕದ್ದು.

46. ಸರ್ಸ 1865ನೇ ಇಸವಿಯ 1ನೇ ಮುಂಬೈ ಆಕ್ಟು ಅನುಸರಿಶಿಯಾಗಲಿ, ಈ ರೆಗ್ಯುಲೇಷನಿನ 8ನೇ ಅಧ್ಯಾಯ ಅನುಸರಿಸಿಯಾಗಲಿ ಸರ್ವೇ ಸೆಟಲ್‌ಮೆಂಟ ಪೂರೈಸದೆ ಯಿರುವ ಗ್ರಾಮಗಳಲ್ಲಿ, 44ನೇ ಸೆಕ್ಷನೊಳಗೆ ವಿವರಿಸಲ್ಪಟ್ಟ ಒಂಬತ್ತು ಬಗೆ ಉಳಿಸಿಕೊಳ್ಳಲ್ಪಟ್ಟ ತಮಾಂ ಮರಗಳೂ, ಗವರ್ನಮೆಂಟಿನವರದಾಗಿರತಕ್ಕದ್ದು. ಯಾವ ಜಮೀನುಗಳಲ್ಲಿ ಸದರೀ ಮರಗಳಿರುತ್ತವೋ ಅಂತಾ ಜಮೀನಿನ ಅನುಭವದಾರನು ಇದ್ದರೆ ಅವನ ಅಧೀನದಲ್ಲಿ ಅಂತಾ ಇತರ ದರೋಬಸ್ತು ಮರಗಳೂ ಇರತಕ್ಕದ್ದು.

ಮುಂ. ರೆ. ಕೋ. 41ನೇ ಸೆಕ್ಷನ.

ಗವರ್ನಮೆಂಟ ಮರಗಳು ಮತ್ತು ಕಾಡುಗಳು.

47. ತಮಾಂ ಮರಗಳೂ, ಕುರುಚಗಿಡಗಳೂ, ಕಾಡು ಅಥವಾ ಇತರ ಸ್ವಾಭಾವಿಕವಾದ ಉತ್ಪತ್ತಿ ಮುಂತಾದ್ದು ಯಲ್ಲಿ ಬೆಳೆ ಹೋಗ್ಯೂ, ಅವುಗಳ ಹಕ್ಕು, ಸ್ವತ್ತನ್ನು ವಹಿಸಲಿಕ್ಕೆ ಶಕ್ತರಾದ ಮನುಷ್ಯರ ಅಥವಾ ಜನಸಮುದಾಯಗಳ ಸ್ವತ್ತಾಗಿರಬಹುದಾದಷ್ಟರ ಮಟ್ಟಿಗೆ ವಿನಾ, ಗವರ್ನಮೆಂಟಿನವರದಾಗಿರುತ್ತೆ; ಅಂತಾ ಮರಗಳಾಗಲಿ, ಕುರುಚಗಿಡಗಳಾಗಲಿ, ಜಂಗಲಿ ಅಥವಾ ಸ್ವಾಭಾವಿಕವಾಗಿ ಹುಟ್ಟುವ ಯಾವ ಇತರ ಪದಾರ್ಥವಾಗಲಿ, ಗವರ್ನಮೆಂಟಿನವರು ಆಗಿಂದಾಗ್ಯೆ ವಿಧಿಸಬಹುದಾದ ರೀತಿಯಾಗಿ ಕಾಪಾಡಲ್ಪಡತಕ್ಕದ್ದು ಅಥವಾ ಮಾರಿಸಲ್ಪಡತಕ್ಕದ್ದು.

ಮುಂ. ರೆ. ಕೋ. 42ನೇ ಸೆಕ್ಷನ.

ರಸ್ತೆಯ ಪಕ್ಕದಲ್ಲಿರುವ ಮರಗಳು.

48. ಗವರ್ನಮೆಂಟಿನಿಂದಾಗಲಿ ಅವರ ಅಪ್ಪಣೆ ಅನುಸರಿಸಿಯಾಗಲಿ, ಗವರ್ನಮೆಂಟಿನಖರ್ಚಿನಿಂದಾಗಲಿ, ಲೋಕಲ್‌ಫಂಡಿನ ಖರ್ಚಿನಿಂದಾಗಲಿ, ಹಾಕಲ್ಪಟ್ಟು ಸಾಕಲ್ಪಟ್ಟಿರುವ ತಮಾಂ ಸಾಲ ಮರಗಳೂ ಗವರ್ನಮೆಂಟಿನ ಸ್ವಾಧೀನದಲ್ಲಿರುತ್ತೆ. ಆದರೆ, ಅಂತಾ ಮರಗಳು ಸತ್ತುಹೋಗುವಲ್ಲಿ, ಅಥವಾ ಗಾಳಿಯಿಂದ ಬಿದ್ದುಹೋಗುವಲ್ಲಿ, ಅಥವಾ ಡೆಪ್ಯುಟಿ ಕಮ್ಮಿಷನರವರ ಹುಕುಂನಿಂದ ಕಡಿಯಲ್ಪಡುವಲ್ಲಿ, ಯಾವಜಮೀನಿನಲ್ಲಿ ಅವು ಬೆಳೆಯುತ್ತಿದ್ದವೋ ಆ ಜಮೀನಿನ ಹಿಡುವಳಿದಾರನಿಗೆ ಸ್ವತ್ತಾಗತಕ್ಕದ್ದು; ಮತ್ತು ಕತ್ತರಿಸಲ್ಪಡುವ ಅಂತಾ ಮರಗಳ ಕೊಂಬೆಗಳು ದೇಖೀಲ ಅಂಥಾ ಮರಗಳ ಹಂಗಾಮೀ ತರೀಕ ಅನುಭವವು ಸದರೀ ಹಿಡುವಳಿದಾರನಲ್ಲಿ ಉಂಟಾಗಿರತಕ್ಕದ್ದು. ಪರಂತು, ಡೆಪ್ಯುಟಿ ಕಮ್ಮಿಷನರವರ ಹುಕುಂ ಶಿವಾಯಿ ಮರಗಳು ಕತ್ತರಿಸಲ್ಪಡಕೂಡದು.

ಅಂತಾ ಮರಗಳು ಯಾವ ಜಮೀನಿನಲ್ಲಿ ಬೆಳೆಯುತ್ತವೆಯೋ ಅಂತಾ ಯಾವದಾದರೂ ಜಮೀನಿನ ಹಿಡುವಳೀದಾರನು, ಈ ರೆಗ್ಯುಲೇಷನ ಜಾರೀಗೆ ಬರುವ ತಾರೀಖು ಲಾಗಾಯತ ಯರಡು ವರುಷಗಳೊಳಗೆ, ಯಾವಕಾಲದಲ್ಲಾಗಲಿ ಹೀಗೆ ಅಪೇಕ್ಷಿಸಿ ಮತ್ತು ಈ ಬಗ್ಗೆ ಡೆಪ್ಯುಟಿ ಕಮ್ಮಿಷನರಿಗೆ ಅರ್ಜಿಕೊಟ್ಟರೆ, ಡೆಪ್ಯುಟಿಕಮ್ಮಿಷನರು, ಸದರೀ ಮರಗಳು ಬೆಳೆದಿರುವ ತಾಕು ಜಮೀನನ್ನು ಅವನ ಹಿಡುವಳೀಯಿಂದ

ವಜಾಮಾಡಿ ಆ ಲಾಗಾಯಿತು, ಹಾಗೆ ವಜಾ ಮಾಡಲ್ಪಟ್ಟ ತಾಕಿಗೆ ಸಲ್ಲತಕ್ಕ ದಾಮಾಷಾಯಿ ಜಮೀನ್ ಕಂದಾಯವನ್ನು ವಜಾ ಮಾಡತಕ್ಕದ್ದು. ಹಾಗೆ ವಜಾಮಾಡಲ್ಪಟ್ಟ ಯಾವ ತಾಕು ಜಮೀನಾಗಲಿ, ಅದರಲ್ಲಿರುವ ಗಿಡಗಳು ನಿಶೀ ಆ ತರುವಾಯ ಗವರ್ನಮೆಂಟಿನ ಸ್ವಾಧೀನದಲ್ಲಿರತಕ್ಕದ್ದು.

ಮುಂ. ರೆ. ಕೋ. 43ನೇ ಸೆಕ್ಷನ್.

ಬಗರ್ ಹುಕ್ಕುಂನಿಂದ ತೆಗದುಕೊಳ್ಳಲ್ಪಟ್ಟ ಮರಗಳು ವಗೈರೆಯ ಖರೀದಿಯನ್ನು ವಸೂಲ್ಮಾಡುವದು.

49. ಗವರ್ನಮೆಂಟ್ ಸ್ವತ್ತಾದ ಯಾವ ಮರವನ್ನಾಗಲೀ ಅದರ ಯಾವ ಭಾಗವನ್ನಾಗಲೀ ಬಗರ್ ಹುಕ್ಕುಂನಿಂದ ಕಡಿದು ಉಪಯೋಗಿಸಿಕೊಳ್ಳುವ, ಅಥವಾ ಸ್ವಭಾವತಃ ಉತ್ಪತ್ತಿಯಾದ ಇತರ ಯಾವ ಪದಾರ್ಥವನ್ನಾಗಲಿ ಸಾಗಿಸಿಕೊಳ್ಳುವ, ಯಾವ ಮನುಷ್ಯನಾಗಲೀ ಅದರ ಬೆಲೆಬಗ್ಗೆ ಗವರ್ನಮೆಂಟಿಗೆ ಜವಾಬ್ದಾರನಾಗತಕ್ಕದ್ದು; ಈ ಬೆಲೆಯನ್ನು ಈ ರೆಗ್ಯುಲೇಷನನುಸರಿಸಿ ಜಮೀನ್ ಅನುಭವದ ಬಗ್ಗಾಗಲಿ ಅನ್ಯಥಾಆಗಲಿ ಅವನು ಗುರಿಯಾಗತಕ್ಕ ದಂಡನೆಯೊಡನೆ ಜಮೀನ್ ಕಂದಾಯದ ಬಾಕೀಯಂತೆ ವಸೂಲ್ಮಾಡಲ್ಪಡತಕ್ಕದ್ದು. ಹೀಗೆ ಅಕ್ರಮವಾಗಿ ಗವರ್ನಮೆಂಟ್ ಸ್ವತ್ತನ್ನು ಉಪಯೋಗಿಸಿಕೊಂಡ ಬಗ್ಗೆ ಅವನಮೇಲೆ ಯಾವದಾದರು ಕ್ರಿಮಿನಲ್ ವಿಚಾರಣೆ ತರಲ್ಪಟ್ಟಾಗ್ಯೂ ಮೇಲ್ಕಂಡಹಾಗೆ ಕಡಿಯಲ್ಪಟ್ಟು ಉಪಯೋಗಿಸಿಕೊಳ್ಳಲ್ಪಟ್ಟ ಮರದ ಬೆಲೆಯನ್ನು ಅದಕ್ಕಾಗಿ ದಂಡವನ್ನು ಸಹ ಅವನಿಂದ ವಸೂಲ್ಮಾಡತಕ್ಕದ್ದು.

ಅಂತಾ ಯಾವದಾದರೂ ಮರದ ಅಥವಾ ಅದರ ಭಾಗದ ಅಥವಾ ಇತರ ಸ್ವಾಭಾವಿಕವಾದ ಉತ್ಪತ್ತಿಯ ಖರೀದೀ ವಿಷಯದಲ್ಲಿ ಡೆಪ್ಯುಟಿ ಕಮ್ಮಿಷನರವರ ನಿರ್ಣಯವು ಆಖೈರಾಗಿರತಕ್ಕದ್ದು.

ಜಮೀನ್ ಕಂದಾಯ.

ಮುಂ. ರೆ. ಕೋ. 45ನೇ ಸೆಕ್ಷನ್.

ವಿಶೇಷತಃ ವಿನಾಯಿಸಲ್ಪಟ್ಟ ಹೊರತು ತಮಾಂ ಜಮೀನಿಗೂ ಕಂದಾಯ ಕೊಡತಕ್ಕದ್ದಾಗಿರುತ್ತೆ.

50. ಸಾಗುವಳೀ ಬಗ್ಗೆ ದರಖಾಸ್ತು ಮಾಡಲ್ಪಡಲಿ ಇತರ ಕೆಲಸಗಳಿಗಾಗಿ ದರಖಾಸ್ತು ಮಾಡಲ್ಪಡಲಿ, ಪರಂತು ಅಂತಾ ದರಖಾಸ್ತು ಜಮೀನೂ ಎಲ್ಲಿಇದ್ದಾಗ್ಯೂ ಗವರ್ನಮೆಂಟಿನೊಡನೆ ವಿಶೇಷತಃ ಮಾಡಿಕೊಳ್ಳಲ್ಪಟ್ಟ ಯಾವದಾದರೂ ಒಡಂಬಡಿಕೆಯು ಅಥವಾ ತತ್ಕಾಲದಲ್ಲಿ ಜಾರೀಯಿರುವ ಯಾವದಾದರೂ ಕಾನೂನಿನ ನಿಬಂಧನೆಗಳನುಸರಿಸಿ ಶುದ್ಧಾಂಗವಾಗಿ ವಿನಾಯಿಸಲ್ಪಡಬಹುದಾದದು ವಿನಾ, ಇದರಲ್ಲಿ ಮುಂದೆ ವಿಧಿಸಲ್ಪಡಬಹುದಾದ ರೂಲ್ಸ್ ಪ್ರಕಾರ ಗವರ್ನಮೆಂಟಿಗೆ ಜಮೀನ್ ಕಂದಾಯವನ್ನು ಕೊಡಲಿಕ್ಕೆ ಗುರಿಯಾಗಿರುತ್ತೆ. ಪರಂತು, ತಮಾಂ ಜಮೀನ್‌ಗಳೂ ಯಾವ ಒಡಂಬಡಿಕೆ ಅನುಸರಿಸಿ ಅನುಭವಿಸಲ್ಪಡಬಹುದಾದಾಗ್ಯೂ; ಸಂಸ್ಥಾನದ ಆವಶ್ಯಕತೆಗಳಿಂದ ಅಂತಾ ಕಂದಾಯದ ವಸೂಲಾತಿಯು ಜರೂರಾದಾಗ ಮತ್ತು ಜರೂರಾಗಬಹುದಾದ ಪರ್ಯಂತ, ಯಲ್ಲ ಜಮೀನ್‌ಗಳ ಮೇಲೂ ಕಂದಾಯದ ವಸೂಲಾತಿಯನ್ನು ಕಾನೂನಿಂದ ವಿಧಿಸಲಿಕ್ಕೆ ಗವರ್ನಮೆಂಟಿಗೆ ಉಂಟಾದ ಅಧಿಕಾರಕ್ಕೆ ಈ ಕಾನೂನಿನಲ್ಲಿ ಯಿರುವ ಯಾವ ಅಂಶವೂ ಬಾಧಕವಾಗುತ್ತೆಂದು ಯೆಣಿಸಕೂಡದು.

ಮುಂ. ರೆ. ಕೋ. 46ನೇ ಸೆಕ್ಷರ್ಷ.

ಜಮೀರ್ನ ಕಂದಾಯದ ವಿಷಯದಲ್ಲಿ ಪರಭಾರೇಯಾದಜಮೀನುಗಳ ಜವಾಬ್ದಾರಿ.

51. ಪರಭಾರೆಯಾದ ಜಮೀನಿನ ಯಾವನಾದರೂ ಹಿಡುವಳೀದಾರನ ಅಧಿನಕ್ಕೆ ತತ್ಕಾಲದೊಳಗೆ ಜಾರೀಯಿರುವ ಯಾವದಾದರೂ ಕಾನೂರ್ನ ಅನುಸರಿಸಿ ಬರತಕ್ಕ ತಮೂಂ ಬಂಡು ಜಮೀರ್ನಗಳೂ, ಹೊಸದಾಗಿ ಯೇರ್ಪಟ್ಟ ದ್ವೀಪಗಳೂ, ಅಥವಾ ತ್ಯಜಿಸಲ್ಪಟ್ಟ ನದೀ ಗರ್ಭಗಳೂ, ಇಂತಾವು ಜಮೀರ್ನ ಕಂದಾಯವನ್ನು ಕೊಡುವದಕ್ಕೆ ಜವಾಬ್ದಾರೀ ವಿಷಯದಲ್ಲಿ ಯಾವದರ ಬಲದಿಂದ ಅಂತಾ ಜಮೀರ್ನಗಳು, ದ್ವೀಪಗಳು, ಅಥವಾ ನದೀಗರ್ಭಗಳು ಆಮೇಲೆ ಸದರೀ ಹಿಡುವಳೀದಾರನ ಅಧೀನಕ್ಕೆ ಬರುತ್ತವೋ ಅಂತಾ ಅಸಲು ಹಿಡುವಳಿಗೆ ಲಗಾವಾಗತಕ್ಕದ್ದಾಗಿರುವ ಬದಸ್ತೂರು ಸ್ವಾತಂತ್ರ್ಯಗಳಾಗಲೀ ಷರತ್ತುಗಳಾಗಲೀ ನಿರ್ಬಂಧಗಳಾಗಲಿ ಒಳಪಡತಕ್ಕದು ; ಪರಂತು, ಅಂತಾ ಯಾವದಾದರೂ ಜಮೀರ್ನಗಳ ದ್ವೀಪಗಳ ಅಥವಾ ನದೀ ಗರ್ಭಗಳ ವಿಷಯದಲ್ಲಿ ಅವುಗಳ ಬೀಜವರಿಯು ಅರ್ಧ ಯೆಕ್ರೇಗೆ ಮೀರುವತನಕ ಅಥವಾ ಮೀರದೆ ಯಿದ್ದರೆ ಮತ್ತು ಸದರೀ ಅಸಲ್ ಹಿಡುವಳಿಯ ಬಾಬತು ಬೀಜವರೀಯ ಪೈಕಿ ಹತ್ತರಲ್ಲೊಂದಂಶಕ್ಕೆ ಮೀರುವತನಕ ಅಥವಾ ಮೀರದೇಯಿದ್ದರೆ, ಯಾವ ಕಂದಾಯವೂ ಹಾಕತಕ್ಕದ್ದಲ್ಲ.

ಮುಂ. ರೆ. ಕೋ. 47ನೇ ಸೆಕ್ಷರ್ಷ.

ಪ್ರವಾಹವಾಗುವ ಸಂಗತಿಗಳಲ್ಲಿ ಜಮೀರ್ನ ಕಂದಾಯದವೊಕರರಾತಿ.

52. ಕಂದಾಯ ತೆರತಕ್ಕ ಜಮೀನಿನ ಪ್ರತಿ ಹಿಡುವಳೀದಾರನೂ, ಗವರ್ರ್ನಮೆಂಟಿನಿಂದ, ಈ ಬಗ್ಯೆ ಆಗಿಂದಾಗ್ಯೆ ಮಾಡಲ್ಪಡಬಹುದಾದ, ರೂಲ್‌ಗಳಿಗೆ ಒಳಪಟ್ಟು, ಸದರೀ ಜಮೀನಿನ ಅರ್ಧ ಯೆಕ್ರೇ ಬೀಜವರಿಗಿಂತ ಕಮ್ಮಿಯಾಗದೇನೂ ಮತ್ತು ಹಿಡುವಳಿಯ ಪೈಕಿ ಹತ್ತರಲ್ಲಿ ಒಂದು ಭಾಗಕ್ಕಿಂತ ಕಡಮೆಯಾಗದೇನೂ ಇರುವ ಯಾವಭಾಗವಾಗಲಿ ಅತಿಪ್ರವಾಹದಿಂದ ನಷ್ಟವಾದರೆ ಕಂದಾಯ ಕಮ್ಮಿಯಾಗಲಿಕ್ಕೆ ಅರ್ಹನಾಗಿರತಕ್ಕದ್ದು.

ಮುಂ. ರೆ. ಕೋ. 48ನೇ ಸೆಕ್ಷರ್ಷ.

ಜಮೀರ್ನಕಂದಾಯವು ಯಾವಬಗೆ ಜಮೀರ್ನಗಳಮೇಲೆ ಹಾಕತಕ್ಕದ್ದು.

53. ಈ ರೆಗ್ಯುಲೇಷರ್ಷ ನಿಬಂಧನೆಗಳನುಸರಿಸಿ ವಸೂಲಾಗತಕ್ಕ ಜಮೀರ್ನ ಕಂದಾಯವು,

(*a*) ಸಾಗುವಳೀ ಕೆಲಸಗಳಿಗಾಗಿ ವಿನಿಯೋಗಿಸಲ್ಪಟ್ಟ ಜಮೀನಿನ ಮೇಲೆಯೂ ;

(*b*) ವ್ಯವಸಾಯದಿಂದ ಸಾಮಾನ್ಯವಾಗಿ ಹೊಂದುವದಕ್ಕಿಂತ ಇತರ ಯಾವದಾದರೂ ನಫೆ ಯಾ ಪ್ರಯೋಜನ ಯಾವ ಜಮೀರ್ನನಿಂದ ಉಂಟಾಗುತ್ತೋ ಅಂತಾ ಜಮೀರ್ನ ಮೇಲೆಯೂ ;

(*c*) ಕಟ್ಟಣದ ನಿವೇಶನಗಳ ಬಗ್ಯೆ ವಿನಿಯೋಗಿಸಲ್ಪಡುವ ಜಮೀರ್ನಮೇಲೆಯೂ ವಸೂಲಾಗತಕ್ಕದ್ದು.

ಯಾವಬಗ್ಯೆ ಜಮೀರ್ನ ಪಡಕೊಳ್ಳಲ್ಪಡುತ್ತೋ ಅಂತಾ ಕಾರ್ಯವು ಬದಲಾಯಿಸಲ್ಪಟ್ಟರೆ,

ಮೇಲೆಕಂಡ ಕೆಲಸಗಳ ಪೈಕೀ ಯಾವದಾದರೂ ಒಂದಕ್ಕೋಸ್ಕರ ವಿನಿಯೋಗಿಸಲ್ಪಟ್ಟ ಯಾವ ಜಮೀನಿಗಾಗಲಿ, ಈ ರೆಗ್ಯುಲೇಷರ್ಷ ನಿಬಂಧನೆಗಳನುಸರಿಸಿ ಠರಾವ್ ಮಾಡಲ್ಪಟ್ಟ ಕಂದಾಯವು, ಅಂತಾ ಜಮೀನು ಇತರ ಯಾವದಾದರೂ ಕೆಲಸ

ಕಂದಾಯವು ಬದಲಾವಣೆಗೆ ಒಳಪಡತಕ್ಕದ್ದು.

ಕ್ಕೋಸ್ಕರ ವಿನಿಯೋಗಿಸಲ್ಪಟ್ಟಾಗ ಯಾವದಾರೂ ಷರತ್ತಿಯಿದ್ದು ಯಾವಬಗ್ಗೆ ಅಂತಾ ಕಂದಾಯವು ಕರಾವ್ ಮಾಡಲ್ಪಟ್ಟಿತ್ತೋ ಅಂತಾ ಯಾವದಾದರೂ ಷರತ್ ಕಳೆದುಹೋಗದೆ ಇದ್ದರೆ, ಬೇರೇ ಪರಪ್ರಕಾರ ಬದಲಾಯಿಸಲ್ಪಟ್ಟು ಕರಾಯಿಸಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

ಒಂದು ಕೆಲಸಕ್ಕೋಸ್ಕರ ಇನಾಮಾಗಿ ಅನುಭವಿಸಲ್ಪಡುವ ಜಮೀನು ಬೇರೇಕಾರ್ಯಕ್ಕಾಗಿ ಉಪಯೋಗಿಸಲ್ಪಟ್ಟರೆ ಅದಕ್ಕೆ ಕಂದಾಯ ಹಾಕತಕ್ಕದ್ದು.

ಪರಭಾರೆಯಾಗದ ಗ್ರಾಮದಲ್ಲಿರುವ ಅಥವಾ ಪರಭಾರೇಯಾದ ಗ್ರಾಮದಲ್ಲಿರುವದರಿಂದ ಅದರ ಬಾಬತು ಸ್ವತ್ತುಗಳ ದೆಸೆಯಿಂದ ವಿನಾಯಿಸಲ್ಪಟ್ಟ ಯಾವ ಜಮೀನಾಗಲಿ, ಒಂದು ಕೆಲಸಕ್ಕೆ ವಿನಿಯೋಗಿಸಲ್ಪಡತಕ್ಕದ್ದೆಂಬ ಷರತ್ತಿನಮೇಲೆ, ಕಂದಾಯವಿಲ್ಲದೆಯಾಗಲಿ, ಕಮ್ಮಿ ಕಂದಾಯಕ್ಕಾಗಲಿ, ಗವರ್ನಮೆಂಟಿನಿಂದ ಅಂಗೀಕರಿಸಲ್ಪಟ್ಟ ಪಕ್ಷಕ್ಕೆ, ಆ ಕೆಲಸಕ್ಕೋಸ್ಕರ ವಿನಿಯೋಗಿಸಲ್ಪಡತಕ್ಕದ್ದನ್ನು ಯಾವ ಕಾಲದಲ್ಲಾಗಲಿ ನಿಲ್ಲಿಸಿಬಿಟ್ಟರೆ, ಪೂರಾ ಕಂದಾಯ ಹಾಕಲ್ಪಡಲಿಕ್ಕೆ ಅದು ಗುರಿಯಾಗತಕ್ಕದ್ದು.

ಯಾವದಾದರೂ ಕೆಲಸಗಳಿಗಾಗಿ ಜಮೀನಿನ ವಿನಿಯೋಗವು ನಿಷೇಧಿಸಲ್ಪಡಬಹುದು.

ಕೆಲವು ಕಾರ್ಯಗಳಿಗಾಗಿ, ಜಮೀನ್ ಕಂದಾಯವನ್ನು ಕೊಡುವದಕ್ಕೆ ಗುರಿಯಾದ ಯಾವದಾದರೂ ಪರಭಾರೆಯಾಗದ ಜಮೀನಿನ ವಿನಿಯೋಗವನ್ನು ನಿಷೇಧಿಸುವದೂ, ಅಂತಾ ನಿಷಿದ್ಧ ಕಾರ್ಯಗಳಿಗಾಗಿ ಆ ಜಮೀನನ್ನು ವಿನಿಯೋಗಿಸಬಹುದಾದ ಅಥವಾ ವಿನಿಯೋಗಿಸುವದಕ್ಕೆ ಯತ್ನಿಸಬಹುದಾದ ಯಾವ ಹಿಡುವಳೀದಾರನನ್ನಾಗಲಿ ಪ್ರೂಟಾಗಿ ಹೊರಪಡಿಸುವದೂ, 241ನೇ ಸೆಕ್ಷನ್ ಅನುಸರಿಸಿ ಈ ಬಗ್ಗೆ ಮಾಡಲ್ಪಟ್ಟ ರೂಲ್‌ಗಳಿಗಾಗಲಿ, ಹುಕ್ಕುಂಗಳಿಗಾಗಲಿ ಒಳಪಟ್ಟು, ಡೆಪ್ಯುಟಿ ಕಮ್ಮಿಷನರಿಗಾಗಲಿ, ಒಬ್ಬ ಸರ್ವೇ ಆಫೀಸರಿಗಾಗಲಿ, ನ್ಯಾಯವಾಗಿಯೂ ಇರತಕ್ಕದ್ದು.

ಮುಂ. ರೆ. ಕೋ. 49ನೇ ಸೆಕ್ಷನ್.

ಜಮೀನಿನ ಬದಲಾಯಿಸಲ್ಪಟ್ಟ ಕಂದಾಯವು ಸರ್ಕಾರಕ್ಕೆ ಪರಂಪರೆಯಿಂದ ಸೇರುವದು.

54. (1)—ಯಾವ ಜಮೀನು, ನಾಮಶಃ ಪೂರ್ಣವಾಗಿ ಅಥವಾ ಭಾಗಶಃ ಕಂದಾಯ ಕೊಡುವದರ ದೆಸೆಯಿಂದ ವಿನಾಯಿಸಲ್ಪಟ್ಟಾಗ್ಯೂ, ಅಂತಾ ಜಮೀನಿನ ಯಾವ ಹಿಡುವಳೀದಾರನಿಂದಾಗಲಿ, ಯಾವದಾದರೂ ವಿಶೇಷವಾದ ಅಥವಾ ಹೆಚ್ಚಾದ ತೀರ್ವೆ, ದಂಡ, ಅಥವಾ ತೆರಿಗೆ ಇಂತಾದ್ದು ಯಾವ ಮೇರೆ ಸೂಚಿಸಲ್ಪಟ್ಟಾಗ್ಯೂ ವಸೂಲ್ ಮಾಡುವದು ಮಾಮೂಲಾಗಿದ್ದ ಪಕ್ಷಕ್ಕೆ ಅಂತಾ ಜಮೀನು ಅಂತಾ ತೀರ್ವೆ, ದಂಡ ಅಥವಾ ತೆರಿಗೆ ಇದು ಪರಂಪರೆಯಿಂದ ಸರ್ಕಾರಕ್ಕೆ ಸೇರಿಯಿರುತ್ತೆ.

ಆಗಾಗ್ಯೆ ಮೊಕರರಾಗುವ ಕಂದಾಯಕ್ಕೆ ಗುರಿಯಾಗುವ ಜಮೀನ್ ಕುರಿತು.

ಅಥವಾ ಸಾಮಾನ್ಯವಾಗಿ, ಅಥವಾ ಕೆಲವು ಸಂದರ್ಭಗಳಲ್ಲಿ ಪೂರಾ ಆಗಲಿ, ಕೆಲವು ಮಟ್ಟಿಗೇ ಆಗಲಿ, ಕಂದಾಯ ಕೊಡೋಣದರಿಂದ ವಿನಾಯಿಸಲ್ಪಟ್ಟ ಯಾವ ಜಮೀನಾಗಲಿ ಆಗಾಗ್ಯೆ ಅಥವಾ ಕೆಲವು ಮುಖ್ಯ ಸಂದರ್ಭಗಳಲ್ಲಿ ಕಂದಾಯ, ಯಾವದಾದರೂ ತೀರ್ವೆ, ಯಾ ತೆರಿಗೆ ಇಂತಾದ್ದು ಯಾವ ಮೇರೆ ಕರೆಯಲ್ಪಟ್ಟಾಗ್ಯೂ ;

ಸದರೀ ಕಂದಾಯ, ತೆರಿಗೆ, ದಂಡ, ತೀರ್ವೆ, ಇಂತಾದ್ದು ಯಲ್ಲಾ ಸಂದರ್ಭಗಳ ಲ್ಲಿಯೂ ಜಮೀನ್‌ಮೇಲೆ ಕೊಡತಕ್ಕ ಸಾಲೀಯಾನಾ ಕಂದಾಯಕ್ಕೆ ಬದಲಾಯಿಸಿಕೊ ಳ್ಳಲ್ಪಡಬಹುದು; ಪರಂತು, ಹಾಗೆ ಬದಲಾಯಿಸಲ್ಪಟ್ಟ ಕಂದಾಯವು ಯಾವ ಬಗ್ಗೆ ಅದು ಬದಲಾಯಿಸಲ್ಪಟ್ಟಿರುತ್ತೋ ಅಂತಾ ಕಂದಾಯ, ತೆರಿಗೆ, ದಂಡ ಅಥವಾ ತೀರ್ವೆ ಇಂತಾದ್ದಕ್ಕೆ ಸಮವಾದ್ದೆಂದು ಗವರ್ನಮೆಂಟಿನವರು ಭಾವಿಸತಕ್ಕ ಅಂತಾ ಮೊಬ ಲಗಿಗೆ ಅತಿಕ್ರಮಿಸಕೂಡದು, ಮತ್ತು ಅದರ ವಿಷಯದಲ್ಲಿ ವಿನಾಯತಿಗೆ ಹಕ್ಕುದಾರೀ ಯಾವದೂ ಇಲ್ಲದೆ ಯಿದ್ದರೆ, ಯಾವ ಕಂದಾಯಕ್ಕೆ ಜಮೀನು ಸಾಧಾರಣವಾಗಿ ಬಳ ಗಾಗುವದೋ ಅಂತಾ ಕಂದಾಯಕ್ಕೆ ಅತಿಕ್ರಮಿಸಕೂಡದು.

ಮುಂ. ರೆ. ಕೋ. 50ನೇ ಸೆಕ್ಷನ್.

ಮೇಲ್ಪಟ್ಟ ಹಿಡುವಳೀದಾರ ನು ಬದಲಾಯಿಸಲ್ಪಟ್ಟ ಕಂದಾ ಯವನ್ನು ಕಮ್ಮೀ ಹಿಡುವಳೀ ದಾರನಿಂದ ವಸೂಲ್ ಮಾಡಬ ಹುದು.

(2) ಒಬ್ಬ ಕಮ್ಮೀ ಹಿಡುವಳೀದಾರನು, ತಹಲ್ ಕೊಡತಕ್ಕದ್ದಾಗಿರುವ ಅಂತಾ ಯಾವ ಸೆಸ್ಸಾಗಲಿ, ಜುರ್ಮಾನೆಯಾಗಲಿ, ತೆರಿಗೆ ಯಾಗಲಿ, ಮೇಲ್ಪಟ್ಟ ಹಿಡುವಳೀದಾರನಿಂದ ವಸೂಲಾ ಗಬೇಕಾದ್ದಾಗಿ ಮಾಡಲ್ಪಟ್ಟಾಗ ಅಂತಾ ತೀರ್ವೆ, ಜುರ್ಮಾ ನೆ ಯಾ ತೆರಿಗೆ, ಇಂತಾದ್ದಕ್ಕೆ ಬದಲಾಗಿ ಬದಲಾಯಿಸ ಲ್ಪಟ್ಟ ಗೊತ್ತಾದ ಕಂದಾಯದ ಮೊಬಲಗನ್ನು ಅಂತಾ ಕಮ್ಮೀ ಹಿಡುವಳೀದಾರನಿಂದ ವಸೂಲ್ ಮಾಡುವದಕ್ಕೆ ಅಂತಾ ಮೇಲ್ಪಟ್ಟ ಹಿಡುವಳೀ ದಾರನಿಗೆ ಯಿಖ್ತ್ಯಾರಿ ಉಂಟು.

ಮುಂ. ರೆ. ಕೋ. 51ನೇ ಸೆಕ್ಷನ್.

ಕಮ್ಮೀಯಾಗಿ ಕಂದಾಯ ಹಾಕಲ್ಪಟ್ಟ ಹಿಡುವಳೀಯಲ್ಲಿ ಉಳ್ಳ ಜಮೀನಿಗೆ ಜಾಸ್ತೀಯಾಗಿ ಕಂದಾಯ ವಸೂಲ್ ಮಾಡಬ ಹುದು.

(3) ಯಾವ ಜಮೀನು, ಕಂದಾಯ ಕೊಡೋಣದರಿಂದ ಪೂರಾ ಆಗಲಿ ಕೆ ಲವು ಮಟ್ಟಿಗಾಗಲಿ ವಿನಾಯಿಸಲ್ಪಟ್ಟಿರುತ್ತೋ, ಅಂತಾ ಯಿತರ ಜಮೀನ್, ಯಾವದಾದರೂ ಒಂದು ಜಮೀನಿನ ಭಾಗದ ಸಂಗಡ ಅನುಭವಿಸಲ್ಪಡುವ ಕಾರಣದಿಂದ ಸದ ರೀ ಜಮೀನಿನ ಯಾವ ಭಾಗವಾಗಲಿ, ಸಾಧಾರಣವಾಗಿ ಅದು ಗುರಿಯಾಗುವದಕ್ಕಿಂತ ಹೆಚ್ಚು ಕಂದಾಯವನ್ನು ವಸೂಲ್ ಮಾಡುವದು ವಾಡಿಕೆಯಾಗಿದ್ದಾಗ ಸದರೀ ಜಮೀನಿನ ಭಾಗಕ್ಕೆ ಹಾಕತಕ್ಕ ಜಾಸ್ತೀ ಕಂದಾಯವು, ತಹಲ್ ಪೂರಾ ಆಗಲಿ ಕೆಲವು ಮಟ್ಟಿಗಾಗಲಿ ವಿನಾಯಿಸಲ್ಪಟ್ಟ ಹಿಡುವಳೀಯಲ್ಲಿ ಉಳ್ಳ ಜಮೀನಿಗೆ ವಿಧಿಸಲ್ಪಡಬಹುದು.

ಮುಂ. ರೆ. ಕೋ. 52ನೇ ಸೆಕ್ಷನ್.

ಕಂದಾಯವು ಯಾರಿಂದ ಠ ರಾಯಿಸಲ್ಪಡತಕ್ಕದ್ದು.

55. ಜಮೀನ್ ಕಂದಾಯ ಕೊಡೋಣದರಿಂದ ಸಂಪೂರ್ಣವಾಗಿ ವಿನಾಯಿ ಸಲ್ಪಡದ ಮತ್ತು 112ನೇ ಸೆಕ್ಷನ್ ಅನುಸರಿಸಿ ಮಾ ಡಲ್ಪಟ್ಟ ಹುಕುಮಿನ ಸ್ಥಳದ ಅಮಲ್‌ನೊಳಗೆ ಯಿಲ್ಲದ ದರೋಬಸ್ತು ಜಮೀನ್‌ಗಳಿಗೂ, ಜಮೀನ್ ಕಂದಾಯ ದ ಕರೀಕ ಕೊಡಲ್ಪಡತಕ್ಕ ಮೊಬಲಗು ಠರಾವಣೆಯು ಈ ಬಗ್ಗೆ 241ನೇ ಸೆಕ್ಷನ್ ಅನುಸರಿಸಿ ಮಾಡಲ್ಪಟ್ಟ ರೂಲ್‌ಗಳು, ಅಥವಾ ಹುಕುಂಗಳು ಇವುಗಳಿಗೆ ಬಳಪಟ್ಟು ಡೆಪ್ಯುಟಿ ಕಮ್ಮಿಷನರವರ ವಿತರಣೆಯಿಂದ ಗೊತ್ತು ಮಾಡಲ್ಪಡತಕ್ಕದ್ದು. ಮತ್ತು ಅಂತಾ ಠರಾವಣೇ ಪ್ರಕಾರ ಸಲ್ಲತಕ್ಕ ಮೊಬಲಗುಗಳು, ಅಂತಾ ದರೋಬಸ್ತು ಜಮೀ ನುಗಳಿಂದಲೂ ವಸೂಲ್ ಮಾಡಲ್ಪಡತಕ್ಕದ್ದು.

ಪರಂತು, ಜಮೀನ್ ಕಂದಾಯ ಕೊಡೋಣದರಿಂದ ಕೆಲವು ಮಟ್ಟಿಗೆ ವಿನಾ ಯಿಸಲ್ಪಟ್ಟ ಅಥವಾ ಜಮೀನ್ ಕಂದಾಯ ಕೊಡತಕ್ಕ ವಿಷಯದಲ್ಲಿ ಜವಾಬ್‌ದಾರಿಯೂ

ವಿಶೇಷ ಷರತಿಗಳಿಗಾಗಲಿ, ನಿರ್ಬಂಧಗಳಿಗಾಗಲಿ, ಬಳಪಟ್ಟಿರುವ ಸಂಗತಿಗಳಲ್ಲಿ ಕಂದಾಯ ಗೊತ್ತು ಮಾಡುವದರಲ್ಲಿಯೂ ವಸೂಲ್ ಮಾಡುವದರಲ್ಲಿಯೂ ಕಾನೂನು ಮೇರೆ ನೆಲೆಗೊಂಡಿರುವ ತಮಾಂ ಹಕ್ಕುದಾರೀಗಳಿಗೂ ಅವವುಗಳ ಸ್ವರೂಪದ ಮೇರಿಗೆ ನಿಗೇ ಕೊಡತಕ್ಕದ್ದು.

ಮುಂ. ರೆ. ಕೋ. 53ನೇ ಸೆಕ್ಷನ. ಪರಭಾರೆಯಾದ ಜಮೀನುಗಳ ರಿಜಿಸ್ಟರ.

56. ಯಾವ ಜಮೀನುಗಳ ಪರಭಾರಿಯು ತತ್ಕಾಲದಲ್ಲಿ ಜಾರೀ ಯಿರುವ ಯಾವದಾದರೂ ಕಾನೂನಿನ ನಿಬಂಧನೆಗಳನುಸರಿಸಿ ಸ್ಥಾಪಿಸಲ್ಪಟ್ಟು ಅಥವಾ ಅಂಗೀಕರಿಸಲ್ಪಟ್ಟಿರುತ್ತೋ ಅಂತಾ ತಮಾಂ ಜಮೀನುಗಳ ಬಂದು ರಿಜಿಸ್ಟರು, ಗವರ್ನಮೆಂಟನಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದಂತಾ ನಮೂನೆಯಲ್ಲಿ ಡೆಪ್ಯುಟಿ ಕಮ್ಮಿಷನರಿಂದ ಇಡಲ್ಪಡತಕ್ಕದ್ದು; ಮತ್ತು ಅಂತಾ ಯಾವದಾದರೂ ಪರಭಾರೇಯಾದ ಜಮೀನುಗಳ ವಿಷಯದಲ್ಲಿ ಕೊಡಲ್ಪಟ್ಟ ಬಂದು ಸನ್ನದು ಕಾಯಮಾಗಿ ಗೈರವಿಲಾ ಆಯಿತೆಂದು ಅಥವಾ ನಷ್ಟವಾಯಿತೆಂದು ಡೆಪ್ಯುಟಿ ಕಮ್ಮಿಷನರಿಗೆ ತೃಪ್ತಿಕರವಾಗಿ ತೋರಿಸಲ್ಪಟ್ಟಲ್ಲಿ ಸದರೀ ಡೆಪ್ಯುಟಿ ಕಮ್ಮಿಷನರು 240ನೇ ಸೆಕ್ಷನ ಅನುಸರಿಸಿ ಗವರ್ನಮೆಂಟನಿಂದ ವಿಧಿಸಲ್ಪಟ್ಟ ರೂಲ್ಸಿಗೂ, ಫೀಸ್ ಕೊಡುವದಕ್ಕೂ ಬಳಪಟ್ಟು ಯಾವ ಮನುಷ್ಯನು ಸದರೀ ಬಗ್ಯೆ ಅರ್ಹನಾಗಿರುತ್ತಾನೆಂದು ಭಾವಿಸಬಹುದೋ ಅಂತಾ ಯಾವ ಮನುಷ್ಯನಿಗಾಗಲಿ, ಸದರೀ ರಿಜಿಸ್ಟರಿಂದ ಬಂದು ಯೆಕ್‌ಸ್ಟ್ರಾಕ್ಟನ್ನು ತಮ್ಮ ರುಜು ನಿಶಿ ಕೊಡಬಹುದು, ಸದರೀ ಎಕ್‌ಸ್ಟ್ರಾಕ್ಟಿಗೆ ಗೈರವಿಲಾ ಆಯಿತೆಂಬ ಅಥವಾ ನಷ್ಟವಾಯಿತೆಂಬ ಸನ್ನದಿಗೆ ಬದಲಾಗಿ ಕೊಡಲ್ಪಟ್ಟಿದೆ ಯೆಂಬದಾಗಿ ಡೆಪ್ಯುಟಿ ಕಮ್ಮಿಷನರಿಂದ ಇಂಡಾರಸ್ ಮಾಡಲ್ಪಟ್ಟು, ಸದರೀ ಸನ್ನದಿನ ಹಾಗೆಯೇ ಹಕ್ಕುದಾರಿಯು ಸರಿಯಾದ ರುಜುವಾತಿನಂತೆ ಯೆಣಿಸಲ್ಪಡತಕ್ಕದ್ದು.

ಮುಂ. ರೆ. ಕೋ. 54ನೇ ಸೆಕ್ಷನ. ಕಂದಾಯದ ಫೈಸಲಾತಿಯನ್ನು ಗವರ್ನಮೆಂಟನವರು ಹಿಡುವಳೀದಾರನ ಒಡಂಬಡಿಕೆಯಿಂದಲೇ ಮಾಡತಕ್ಕದ್ದು.

57. ಜಮೀನಿನ ಅಥವಾ ಸರ್ವೇನಂಬರಿನ ಪ್ರತಿ ಭಾಗದ ಕಂದಾಯದ ಫೈಸಲಾತಿಯು, 151ನೇ ಸೆಕ್ಷನ ಅನುಸರಿಸಿ ಸದರೀ ಬಗ್ಯೆ ಗವರ್ನಮೆಂಟಿಗೆ ಪ್ರಥಮತಃ ಜವಾಬ್ದಾರನಾಗಿರುವ ಮನುಷ್ಯನೊಡನೆ ಮಾಡತಕ್ಕದ್ದು.

ಅಥವಾ ಅವನು ಗೈರ ಹಾಜರಾಗಿದ್ದರೆ, ಮತ್ತು ಮುಂದಿನ ಹಿಡುವಳೀದಾರನೊಡನೆ ಮುತಾಲೀಕನನ್ನು ಇಡದೆಹೋದರೆ.

ಸದರೀ ಮನುಷ್ಯನು ಗೈರ ಹಾಜರಾಗಿಯೂ, ಡಿಸ್ಟ್ರಿಕ್ಟಿನಲ್ಲಿ ಪ್ರಸಿದ್ಧನಾಗಿ ಅಧಿಕಾರ ಹೊಂದಿದ ಮುತಾಲೀಕನನ್ನು ಇಡದೆಯೂ ಹೋಗಿ ಆ ಕಾರಣದಿಂದ ಕಂದಾಯದ ಫೈಸಲಾತಿಯು ಅವನೊಡನೆ ಪೂರೈಸಲಾಗದ್ದಾಗಿದ್ದರೆ ಅಂತಾ ಫೈಸಲಾತಿಯು ಅವನಿಗೆ ಬಳಪಟ್ಟ ಹಿಡುವಳೀದಾರನೊಡನೆ ಅಥವಾ ಅವನ ಜಮೀನಿನ ಅನುಭವದಲ್ಲಿರುವ ಮನುಷ್ಯನೊಡನೆ ಮಾಡಲ್ಪಡಬಹುದು.

ಮುಂ. ರೆ. ಕೋ. 55ನೇ ಸೆಕ್ಷನ. ನೀರಿನ ಉಪಯೋಗಕ್ಕಾಗಿ ಹಾಕಲ್ಪಟ್ಟ ವರಗಳು.

58. ಯಾವ ಬಗ್ಯೆ ಹಕ್ಕುದಾರಿಯು ಗವರ್ನಮೆಂಟಿನವರಲ್ಲಿರುತ್ತೋ, ಅಥವಾ ಗವರ್ನಮೆಂಟಿನವರಿಂದಾಗಲಿ, ಅವರ ಖಾಯಿಷ್ ಮೇಲೆಯಾಗಲಿ, ಯಾವದಾದರೂ ನೀರಾವರಿ ಅಥವಾ ಇತರ ಕೆಲಸದ ಕಟ್ಟಣಿ, ಅಭಿವೃದ್ಧಿ ಅಥವಾ ರಿಪೇರಿ

ಇಂತಾದ್ದರ ದೆಶೆಯಿಂದ ಉಪಯೋಗಿಸುವಂತೆ ಮಾಡಲ್ಪಟ್ಟಿರುತ್ತೋ ಅಂತಾ ನೀರನ್ನು ಜಮೀನ್ ಹಿಡುವಳೀದಾರರಾಗಲಿ, ಇತರ ಮನುಷ್ಯರಾಗಲಿ, ಉಪಯೋಗಿಸಿಕೊಳ್ಳುವ ಬಗ್ಯೆ ಗವರ್ನಮೆಂಟನವರು, ಆಗಿಂದಾಗ್ಯೆ ಮಂಜೂರ್ ಮಾಡುವದಕ್ಕೆ ಯುಕ್ತವೆಂದು ಭಾವಿಸಬಹುದಾದ ಅಂತಾ ದರಗಳನ್ನು ಗೊತ್ತು ಮಾಡಲಿಕ್ಕೆ, ಸದರೀ ಗವರ್ನಮೆಂಟನವರು, ಡೆಪ್ಯುಟೀ ಕಮ್ಮಿಷನರನ್ನಾಗಲಿ, ಸರ್ವೇ ಇನ್‌ಚಾರ್ಜ್ ಆಫೀಸರರನ್ನಾಗಲಿ, ಅವರು ಮೊಕರರ್ ಮಾಡುವ ಅಂತಾ ಇತರ ಆಫೀಸರರನ್ನಾಗಲಿ ಅಧಿಕಾರ ಪೂರ್ವಕ ನಿಯಮಿಸಬಹುದು. ಅಂತಾ ದರಗಳು, ಗವರ್ನಮೆಂಟನವರು ಆಗಿಂದಾಗ್ಯೆ ನಿರ್ಣಯಿಸತಕ್ಕ ಕಾಲಗಳಲ್ಲಿ ಪುನರ್ವಿಮರ್ಶೆಗೆ ಗುರಿಯಾಗಿ, ಜಮೀನ್ ಕಂದಾಯದ ತರೀಕ್ ವಸೂಲ್ ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 56ನೇ ಸೆಕ್ಷನ್.

ಜಮೀನ್ ಕಂದಾಯವು ಜಮೀನ್ ವಿಷಯದಲ್ಲಿ ಯಲ್ಲಾದಕ್ಕಿಂತ ಜರೂರಾದ ಚಾರ್ಜ್ ಯೊನೆ ಮೊಲ್ಯವಾಗಿರತಕ್ಕದ್ದು.

59. ಯಾವ ಜಮೀನ್ ಹಿಡುವಳೀದಾರನಿಂದಾಗಲಿ, ಜಮೀನಿಗಾಗಿ ಸಲ್ಲತಕ್ಕ ಕಂದಾಯದ ಬಾಕೀಗಳು, ಸದರೀ ಹಿಡುವಳಿಯ ಮತ್ತು ಅದರ ಪ್ರತಿಭಾಗದ ಮೇಲಿನ ಬಹಳ ಜರೂರಾದ ಚಾರ್ಜ್‌ಯೊನೆ ಕಂದಾಯವಾಗಿರತಕ್ಕದ್ದು. ಅದನ್ನು ಕೊಡುವದಕ್ಕೆ ತಪ್ಪಿದರೆ, ತಮಾಂ ಮರಗಳೂ, ಫಸಲ್‌ಗಳೂ, ಕಟ್ಟಗಳೂ, ಜಮೀನಿಗೆ ಲಗ್ಗತ್ತಾದ ಅಥವಾ ಜಮೀನಿಗೆ ಲಗ್ಗತ್ತಾದ ಯಾವ ವಸ್ತುವಿಗಾಗಲಿ ಸ್ಥಿರವಾಗಿ ಜಂಟಿಸಲ್ಪಟ್ಟ ವಸ್ತುಗಳು ಇವುಗಳಿಗೆ ಅನುಭವದಾರನ ಅಥವಾ ಹಿಡುವಳೀದಾರನ ದರೋಬಸ್ತು ಹಕ್ಕುದಾರೀಗಳೊಡನೆ, ಅನುಭವವನ್ನಾಗಲಿ, ಪರಭಾರೇಯಾದ ಹಿಡುವಳೀಯನ್ನಾಗಲಿ, ಸರಕಾರಕ್ಕೆ ದಂಡವಾಗಿ ಸೇರುವದಕ್ಕೆ ಗುರಿಯಾಗತಕ್ಕದ್ದು. ಅದರಮೇಲೆ ಬಾಕೀ ಇರುವ ತಮಾಂ ಮೊಬಲಗುಗಳನ್ನೂ ಅನುಭವದಾರನಿಂದಾಗಲಿ, ಹಿಡುವಳೀದಾರನಿಂದಾಗಲಿ, ಸ್ವಾತಂತ್ರ್ಯವುಳ್ಳ ಪೂರ್ವೀಕರಪೈಕಿ ಯಾರಿಂದಾಗಲಿ ಉಂಟು ಮಾಡಲ್ಪಟ್ಟ ಅಥವಾ ಅಂತಾ ಅನುಭವದಾರನ ಅಥವಾ ಹಿಡುವಳೀದಾರನಮೇಲೆ ಯಾವವಿಧದಿಂದಲಾಗಲಿ ನೆಲೆಗೊಂಡಿರುವ ತಮಾಂ ಬಡಂಬಡಿಕೆಗಳಿಂದಲೂ ದೇಣೆಗಳಿಂದಲೂ ಹಕ್ಕುಗಳಿಂದಲೂ ಖುಲಾಸೆಯಾಗಲ್ಪಟ್ಟು ಸದರೀ ಅನುಭವವನ್ನಾಗಲಿ ಪರಭಾರೇಯಾದ ಹಿಡುವಳೀಯನ್ನಾಗಲಿ ಹರಾಜು ಮಾಡಿಸಿ ವಸೂಲ್ಮಾಡಬಹುದು. ಅಥವಾ 241ನೇ ಸೆಕ್ಷನ್ ಅನುಸರಿಸಿ ಇದಕ್ಕೋಸ್ಕರ ಮಾಡಲ್ಪಟ್ಟ ರೂಲ್ಸ್ ಯಾ ಹುಕುಂಗಳನುಸರಿಸಿ ಸದರೀ ಅನುಭವವನ್ನಾಗಲಿ, ಪರಭಾರೇಯಾದ ಹಿಡುವಳಿಯನ್ನಾಗಲಿ, ಬೇರೇವಿಧವಾಗಿ ವ್ಯವಸ್ಥೆ ಮಾಡಬಹುದು.

ಮುಂ. ರೆ. ಕೋ. 57ನೇ ಸೆಕ್ಷನ್.

ದಂಡವಾಗಿ ಕಳಕೊಳ್ಳಲ್ಪಟ್ಟ ಹಿಡುವಳಿಯು, ಸ್ವಾಧೀನಪಡಿಸಿಕೊಳ್ಳಲ್ಪಡಬಹುದು ಮತ್ತು ಅನ್ಯಥಾ ವಿನಿಯೋಗಿಸಲ್ಪಡಬಹುದು.

60. ಪಾವತೀ ಮಾಡುವದಕ್ಕೆ ತಪ್ಪುವದರಿಂದಲಾಗಲಿ ಇತರ ವಿಧದಿಂದ ತಪ್ಪುವದರಿಂದಲಾಗಲಿ ಕಡೇ ಸೆಕ್ಷನ್ ಅನುಸರಿಸಿ ಯಾ ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಕಾನೂನ್ ಅನುಸರಿಸಿ ಒಂದು ಹಿಡುವಳಿಯು ಕಳಕೊಳ್ಳಲ್ಪಟ್ಟರೆ, ಅಂತಾ ಹಿಡುವಳೀಯಲ್ಲಿ ಅಡಗಿರುವ ಜಮೀನನ್ನು ಕೂಡ್ಲೆ ಸ್ವಾಧೀನಪಡಿಸಿಕೊಂಡು, ಈ ರೆಗ್ಯುಲೇಷನಿನ ಅಥವಾ ತತ್ಕಾಲದಲ್ಲಿರುವ ಯಾವದಾದರೂ ಇತರ ಕಾನೂನಿನ ನಿಬಂಧನೆಗಳ ಪ್ರಕಾರ ಪಡೆಯುವದಕ್ಕೆ ಅರ್ಹನಾದ ಕ್ರಯದಾರನ

725

ಅಥವಾ ಇತರ ಮನುಷ್ಯನ ವಶದಲ್ಲಿ ಸದರೀ ಜಮೀನನ್ನು ಇಡುವದರಮೂಲಕ ವಿನಿಯೋಗಿಸುವದಕ್ಕೆ ಡೆಪ್ಯುಟಿ ಕಮ್ಮಿಷನರಿಗೆ ಯಖ್ತ್ಯಾರಿಯುಂಟು.

ಮುಂ. ರೆ. ಕೋ. 58ನೇ ಸೆಕ್ಷನ್.

ಜಮೀನ್ ಕಂದಾಯದ ಪಾವತೀ ಬಗ್ಯೆ ರೆವಿನ್ಯು ಆಫೀಸರ್‌ಗಳಿಂದ ರಸೀದಿಗಳು ಕೊಡಲ್ಪಡತಕ್ಕವು.

61. ಜಮೀನ್ ಕಂದಾಯವನ್ನು ತೆಗೆದುಕೊಳ್ಳುವ ಪ್ರತಿ ರೆವಿನ್ಯು ಆಫೀಸರೂ ಸದರೀ ಬಗ್ಯೆ ಬರವಣಿಗೆಯ ಮೂಲಕ ಒಂದು ರಸೀದೀಯನ್ನು ಕೊಡತಕ್ಕದ್ದು.

ಮತ್ತು ತೆರಿಗೆಯನ್ನಾಗಲೀ ಕಂದಾಯವನ್ನಾಗಲೀ ಪಾವತೀ ಮಾಡಿದ ಬಗ್ಯೆ ಕೆಲವರು ಮೇಲ್ಪಟ್ಟ ಹಿಡುವಳೀದಾರರಿಂದ ಕೊಡಲ್ಪಡತಕ್ಕದ್ದು.

ಒಂದು ಪರಭಾರೆಯಾದ ಗ್ರಾಮದ ಅಥವಾ ಒಂದು ಗ್ರಾಮದ ಪರಭಾರೇಯಾದ ಹಿಸ್ಸೆಯ ಮೇಲ್ಪಟ್ಟ ಪ್ರತಿ ಹಿಡುವಳೀದಾರನೂ, ಅಥವಾ ಅಂತಾ ಮೇಲ್ಪಟ್ಟ ಹಿಡುವಳೀದಾರನಿಂದ ಕ್ರಮವಾಗಿ ಅಧಿಕಾರ ವಹಿಸಿಯಿರುವ ಮುತಾಲೀಕನೂ, ಒಬ್ಬ ಕಮ್ಮಿ ಹಿಡುವಳೀದಾರನಿಂದ ತನಗೆ ಪಾವತೀ ಮಾಡಲ್ಪಟ್ಟ ತೆರಿಗೆಯ ಅಥವಾ ಜಮೀನ್ ಕಂದಾಯದ ಪ್ರತಿ ಪಾವತೀಬಗ್ಯೂ ಬರಹ ಮೂಲಕ ರಸೀದಿಯನ್ನು ಕೊಡತಕ್ಕದ್ದು. ಅಂತಾ ರಸೀದಿಗೆ ಶಾನುಭಾಗನು ಯಾರಾದರೂ ಇದ್ದರೆ ಅವನು ಅಡ್ಡರುಜು ಮಾಡತಕ್ಕದ್ದು.

ಮುಂ. ರೆ. ಕೋ. 59ನೇ ಸೆಕ್ಷನ್.

ರಸೀದಿಯನ್ನು ಕೊಡುವದಕ್ಕೆ ತಪ್ಪಿದರೆ ದಂಡನೆ.

62. ಹಿಂದಿನ ಕಡೇ ಸೆಕ್ಷನ್ ನಿಬಂಧನೆಗಳ ಉಲ್ಲಂಘನೆಗಾಗಿ ಡೆಪ್ಯುಟಿ ಕಮ್ಮಿಷನರ ಮುಂದೆ ಸ್ಸಮ್ಮರಿ ವಿಚಾರಣೆ ಆದಮೇಲೆ ತಕಸೀರ್ ಆಪಾದಿಸಲ್ಪಟ್ಟ ಯಾವ ಮನುಷ್ಯನಾಗಲಿ, ಯಾವಬಗ್ಯೆ ಒಂದು ರಸೀದಿಯು ಕ್ರಮಪ್ರಕಾರ ಕೊಡಲ್ಪಡಲಿಲ್ಲವೋ ಅಂತಾ ತೆಗೆದುಕೊಳ್ಳಲ್ಪಟ್ಟ ಮೊಬಲಗಿಗೆ ಮೂರರಷ್ಟಕ್ಕೆ ಜಾಸ್ತೀಯಿಲ್ಲದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು, ಮತ್ತು ಜುರ್ಮಾನೇ ಪೈಕಿ ಅರವಾಸೀ, ಡೆಪ್ಯುಟಿ ಕಮ್ಮಿಷನರ ಯಖ್ತ್ಯಾರೀ ಮೇಲೆ, ಬಾತಮೀದಾರ್ ಯಾರಾದರೂ ಇದ್ದರೆ ಅವನಿಗೆ ಕೊಡಲ್ಪಡಬಹುದು. ಅಂತಾ ವಿಚಾರಣೆಗೆ ಡೆಪ್ಯುಟಿ ಕಮ್ಮಿಷನರವರು ಯಾವ ಕಾಲದಲ್ಲಾಗಲಿ ತಮಗೆ ಆವಿಷಯದಲ್ಲಿ ಫಿರ್ಯಾದು ಬರದೇಯಿದ್ದಾಗ್ಯೂ ತಮ್ಮ ಖಾಯಿಷ್ ಮೇಲೆ ಉಪಕ್ರಮಿಸಬಹುದು.

6ನೇ ಅಧ್ಯಾಯ.

ಪರಭಾರೇಯಾಗದ ಜಮೀನಿನ ಅನುಭವ ಮತ್ತು ಅನುಭವದಾರರ ಹಕ್ಕುಗಳು.

ಅನುಭವ.

ಮುಂ. ರೆ. ಕೋ. 60ನೇ ಸೆಕ್ಷನ್.

ಅನುಭವದಲ್ಲಿಲ್ಲದ ಜಮೀನನ್ನು ಪಡೆಯಲಿಕ್ಕೆ ಪೂರ್ವ ಅಮಲ್ದಾರನ ಬರವಣಿಗೇ ಮೂಲಕವಾದ ಅಪ್ಪಣೆ ಬೇಕಾಗಿರುತ್ತೆ.

63. ಅನುಭವದಲ್ಲಿಲ್ಲದ ಜಮೀನನ್ನು ಪಡೆಯಲಿಕ್ಕೆ ಖಾಯಿಷ್ ಮಾಡುವ ಯಾವ ಮನುಷ್ಯನಾಗಲಿ ಅನುಭವದಲ್ಲಿ ಪ್ರವರ್ತಿಸುವದಕ್ಕೆ ಪೂರ್ವ, ಅಮಲ್ದಾರನ ಅಥವಾ ಡೆಪ್ಯುಟಿ ಅಮಲ್ದಾರನ ಬರವಣಿಗೇ ಯಲ್ಲಿರುವ ಅಪ್ಪಣೆ ಯನ್ನು ಪಡೆಯತಕ್ಕದ್ದು.

ಮುಂ. ರೆ. ಕೋ. 61ನೇ ಸೆಕ್ಷನ್.

ಅಧಿಕಾರವಿಲ್ಲದೆ ಜಮೀನು ಅನುಭವಿಸತಕ್ಕ ವಿಷಯದಲ್ಲಿ ದಂಡನೆ.

64. ಯಾವದಾದರೂ ವಿಶೇಷಕಾರ್ಯಕ್ಕೋಸ್ಕರ ನಿಲ್ಲಿಸಿಯಿಡಲ್ಪಟ್ಟ, ಯಾವ ಜಮೀನನ್ನಾಗಲಿ, ಪರಭಾರೇಮಾಡಲ್ಪಡದೆ ಯಿರುವ, ಅನುಭವದಲ್ಲಿಲ್ಲದ ಯಾವ ಜಮೀನನ್ನಾಗಲಿ, ಅಧಿಕಾರವಿಲ್ಲದೆ ಅನುಭವಿಸತಕ್ಕ ಯಾವ ಮನುಷ್ಯನಾದರೂ,

ಯಾವಜಮೀನನ್ನು ಅವನು ಅಧಿಕಾರವಿಲ್ಲದೆ ಅನುಭವಿಸುತ್ತಾನೋ ಅಂತಾ ಜಮೀನು ಕಂದಾಯ ಕರಾವಾದ ಒಂದು ಸರ್ವೇನಂಬರಿನ ಭಾಗವಾಗಿದ್ದರೆ, ಅವನು ಅನುಭವಿಸುವ ವಿಶಿಷ್ಟಕಾಲಕ್ಕೂ ಪೂರಾನಂಬರಿನ ಕಂದಾಯವನ್ನು ಕೊಡತಕ್ಕದ್ದು, ಮತ್ತು

ಹಾಗೆ ಅವನಿಂದ ಅನುಭವಿಸಲ್ಪಡುವ ಜಮೀನಿಗೆ ಕಂದಾಯ ಕರಾರ್‌ಆಗದಿದ್ದರೆ ಅದೇಗ್ರಾಮದಲ್ಲಿ ಅದೇಕೆಲಸಕ್ಕಾಗಿ ನಿಯಮಿಸಲ್ಪಟ್ಟ ಅದಕ್ಕೆ ಸಮನಾದ ಜಮೀನಿನ ಬದಸ್ತೂರ್ ಬೀಜವರಿಯ ಮೇಲೆ ಸದರೀ ಕಾಲಕ್ಕೆ ವಸೂಲಾಗಬಹುದಾದ ಕಂದಾಯದ ಮೊಬಲಗನ್ನು ಅವನು ಕೊಡತಕ್ಕದ್ದು;

ಮತ್ತು ಡೆಪ್ಯುಟಿ ಕಮಿಷನರ್ರ ಯುಕ್ತಿಯರಿಮೇಲೆ ಐದುರೂಪಾಯಿಗೆ ಹೆಚ್ಚದ ಜುರ್ಮಾನೆಯನ್ನು ಅಥವಾ ಸದರೀ ಜುರ್ಮಾನೆಯು ಐದು ರೂಪಾಯಿಗಿಂತ ಹೆಚ್ಚಾಗಿದ್ದಲ್ಲಿ, ಅಧಿಕಾರವಿಲ್ಲದೆ ಅನುಭವಿಸಲ್ಪಡುವ ಜಮೀನು ಸಾಗುವಳೀಬಗ್ಗೆ ಆಕ್ರಮಿಸಲ್ಪಟ್ಟದ್ದಲ್ಲಿ ಸದರೀ ಜಮೀನಿಗೆ ಒಂದುಸಾಲಿಗೆ ಕಂದಾಯದ ತರೀಕು ಕೊಡಬೇಕಾಗುವ ಮೊಬಲಗಿನ ಹತ್ತರಷ್ಟು ಮೊಬಲಗನ್ನೇಯಾಗಲಿ ಅಥವಾ ಸದರೀಜಮೀನನ್ನು ವ್ಯವಸಾಯಕ್ಕಲ್ಲದ ಯಾವಬಗ್ಯಾದರೂ ಆಕ್ರಮಿಸಿಕೊಂಡಿದ್ದಲ್ಲಿ ಈ ವಿಷಯಕ್ಕಾಗಿ 241ನೇ ಸೆಕ್ಷನ್ ಅನುಸರಿಸಿ ಮಾಡಲ್ಪಟ್ಟ ರೂಲ್ಸ್ ಯಾ ಕಾನೂನುಗಳಲ್ಲಿ ಗೊತ್ತುಮಾಡಲ್ಪಡಬಹುದಾದ ಹದ್ದನ್ನು ಮೀರದ ಒಂದು ಮೊಬಲಗನ್ನು ಜುರ್ಮಾನೆಯಾಗಿ ಕೊಡುವದಕ್ಕೆ ಗುರಿಯಾಗುವನು.

ಅಧಿಕಾರವಿಲ್ಲದೆ ಅನುಭವಿಸುವ ಜಮೀನಿಗಾಗಿ ಸಲ್ಲತಕ್ಕ ಕಂದಾಯದ ಮೊಬಲಗನ್ನು ಕುರಿತು ಮಾಡಲ್ಪಟ್ಟ ಡೆಪ್ಯುಟಿ ಕಮಿಷನರವರ ತೀರ್ಮಾನವು ಆಖೈರಾಗಿರತಕ್ಕದ್ದು, ಮತ್ತು ಸದರೀ ಮೊಬಲಗನ್ನು ನಿಷ್ಕರ್ಷಿಸುವದರಲ್ಲಿ ಅನುಭವದ ಕಾಲವು ಒಂದು ವರುಷಕ್ಕಿಂತ ಕಮ್ಮಿಯಾಗಿದ್ದರೂ, ಪೂರಾ ಒಂದು ವರುಷವಾಗಿ ಲೆಕ್ಕ ಮಾಡತಕ್ಕದ್ದು.

ಅಂಥಾ ಯಾವ ಜಮೀನನ್ನಾಗಲಿ ಅಧಿಕಾರವಿಲ್ಲದೆ ಅನುಭವಿಸುವ ಮನುಷ್ಯನನ್ನು ಡೆಪ್ಯುಟಿ ಕಮಿಷನರು ಸದರೀ ಅನುಭವದಿಂದ ತಪ್ಪಿಸತಕ್ಕದ್ದು. ಅಂಥಾ ಜಮೀನಿನಲ್ಲಿಡಲ್ಪಟ್ಟಿರುವ ಯಾವದಾದರೂ ಫಸಲು ದಂಡವಾಗಿ ಸರಕಾರಕ್ಕೆ ಶೇರತಕ್ಕದ್ದು; ಮತ್ತು ಅದರಮೇಲೆ ಕಟ್ಟಿಯಿರಬಹುದಾದ ಯಾವದಾದರೂ ಮನೆಯಾಗಲೀ ಇತರ ಕಟ್ಟಡವಾಗಲೀ ಡೆಪ್ಯುಟಿಕಮಿಷನರು ಯುಕ್ತವೆಂದು ಭಾವಿಸಬಹುದಾದ ಬರವಣಿಗೆಯ ನೋಟೀಸು ಕೊಟ್ಟಮೇಲೆ ತೆಗೆಸಿಹಾಕಲ್ಪಡದಿದ್ದರೆ ದಂಡವಾಗಿ ಶೇರಿಸಿಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

727

ಈ ಸೆಕ್ಷನ್ ಅನುಸರಿಸಿ ದಂಡಗಳು ಡೆಪ್ಯುಟಿಕಮ್ಮಿಷನರವರಿಂದ ಫೈಸಲ್ ಮಾಡಲ್ಪಡತಕ್ಕವು ; ಹಾಗೆ ದಂಡವಾಗಿ ಶೇರಿಸಿಕೊಳ್ಳಲ್ಪಟ್ಟ ಯಾವಸ್ವತ್ತಾಗಲೀ ಡೆಪ್ಯುಟಿ ಕಮ್ಮಿಷನರು ನಿಯಮಿಸ ಬಹುದಾದ ಮೇರೆ ಫೈಸಲ್ ಮಾಡಲ್ಪಡಬಹುದು.

ಮುಂ. ರೆ. ಕೋ. 62ನೇ ಸೆಕ್ಷನ್.

ಅನುಭವದ ಹಕ್ಕುದಾರಿಗೆ ಖರೀದಿ ಕೊಡತಕ್ಕದ್ದು ಮತ್ತು ಕೆಲವು ಷರತ್ತುಗಳಿಗೆ ಸದರೀ ಹಕ್ಕು ಗುರಿಯಾಗತಕ್ಕದ್ದು.

65. ಗವರ್ನಮೆಂಟಿನಿಂದ ಆಗಿಂದಾಗ್ಯೆ ಮಾಡಲ್ಪಡಬಹುದಾದ ಅಂತಾ ಹುಕುಂಗಳಿಗೆ ವಳಪಟ್ಟು ಅನುಭವದಬಗ್ಯೆ ವಂದು ಖರೀದಿ ಮೊಬಲಗನ್ನು ತೆರತಕ್ಕದ್ದೆಂದು ನಿಯಮಿಸುವದಕ್ಕೂ ಅಥವಾ ಸದರೀ ಹಕ್ಕುದಾರಿಯನ್ನು ಹರಾಜುಮೂಲಕ ವಿಕ್ರಯಿಸುವದಕ್ಕೂ ಮತ್ತು 63ನೇ ಸೆಕ್ಷನ್ ಅನುಸರಿಸಿ ಅನುಭವದಬಗ್ಯೆ ಅಪ್ಪಣೆ ಕೊಡುವದಕ್ಕೆ ಮುಂದೆ ಯುಕ್ತವೆಂದು ಕಾಣಬಹುದಾದ ಅಂತಾ ಷರತ್ತುಗಳನ್ನು ಅನುಭವಕ್ಕೆ ಲಗ್ಗತ್ ಮಾಡುವದಕ್ಕೂ ಡೆಪ್ಯುಟಿಕಮ್ಮಿಷನರಿಗೆ ಯಖ್ತಿಯಾರಿ ಉಂಟು.

ಸದರೀ ಖರೀದಿಯು ಮರಗಳ ಖರೀದಿಯನ್ನು ಅಡಗಿಸಿಕೊಳ್ಳತಕ್ಕದ್ದು.

ಅನುಭವದ ಖರೀದಿಯು, ವಿಕ್ರಯದ ಷರತ್ತುಗಳಿಂದ ಅನ್ಯಥಾ ನಿಯಮಿಸಲ್ಪಟ್ಟ ಹೊರತು, 45ನೇ ಸೆಕ್ಷನ್ ನಿಬಂಧನೆಗಳನುಸರಿಸಿ ಉಳಿಸಿಕೊಳ್ಳಲ್ಪಡದ ತಮಾಂ ಮರಗಳಿಗೂ ಗವರ್ನಮೆಂಟ ಹಕ್ಕುದಾರಿಯ ಖರೀದಿಸಹ ಅಡಗಿಸಿಕೊಂಡು ಯಿರತಕ್ಕದ್ದಲ್ಲದೆ ಜಮೀನ್ ಕಂದಾಯದ ಬಾಕಿತರೀಕ್ ವಸೂಲ್ ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 63ನೇ ಸೆಕ್ಷನ್.

ಗವರ್ನಮೆಂಟ್ ಅಧೀನದಲ್ಲಿರುವ ಒಂದು ಜಮೀನಿನ ಅನುಭವವು.

66. ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಕಾನೂನ್ ಅನುಸರಿಸಿ, ಗವರ್ನಮೆಂಟಿನವರ ಅಧೀನದಲ್ಲಿರುವ ಯಾವದಾದರೂ ಒಂದು ಜಮೀನಿನ ಅನುಭವವು, ಸರ್ಕಾರ್ ಹುಟ್ಟುವಳಿಯ ಪ್ರಯೋಜನದ ವಿಷಯದಲ್ಲಿ ಯುಕ್ತವಾದ ನಿಗೆಯಿಂದ ಶಾಶ್ವಿತವಾಗಿ ವಿನಿಯೋಗಿಸಲ್ಪಡಬಹುದೆಂದು ಡೆಪ್ಯುಟಿ ಕಮ್ಮಿಷನರಿಗೆ ಕಾಣಬಂದಾಗ, ಯಾವದರ ಮೇಲೆ ಅಂತಾ ವಂದು ಜಮೀನು ಏರ್ಪಟ್ಟಿರುತ್ತೋ ಅಂತಾ ದಡದ ಯಾ ತೀರದ ಅನುಭವದಾರ ಯಾರಾದರೂ ಇದ್ದರೆ ಅವನಿಗೆ ಅನುಭವದ ಅವ್ವಲ್ ಬಾಧ್ಯತೆಯನ್ನು ಕೊಡುವಂತೆ ತಿಳಿಸತಕ್ಕದ್ದು, ಹಾಗೆ ಕೊಡುವದಕ್ಕೆ ಯತ್ನಿಸಲ್ಪಟ್ಟ ವಂದು ಅನುಭವದ ಖರೀದಿಯು, ಯಾವಜಮೀನಿನ ಅನುಭವವು ಕೊಡುವದಕ್ಕೆ ಯತ್ನಿಸಲ್ಪಡುತ್ತೋ ಅಂತಾ ಜಮೀನಿನ ಸಾಲೀಯಾನಾ ಕಂದಾಯಕ್ಕೆ ಮೂರರಷ್ಟಕ್ಕೆ ಅತಿಕ್ರಮಿಸಕೂಡದು.

ಸದರೀ ಅನುಭವದಾರ ಅಂತಾ ಅನುಭವವನ್ನು ತಿರಸ್ಕರಿಸಿದರೆ, ಡೆಪ್ಯುಟಿ ಕಮ್ಮಿಷನರು, ಅದರ ಖರೀದಿ ವಿಷಯದಲ್ಲಿ ಯಾವ ನಿರ್ಬಂಧಗಳೂ ಇಲ್ಲದೆ, ಹಿಂದಿನಕಡೇ ಸೆಕ್ಷನ್ ಅನುಸರಿಸಿ ವಿನಿಯೋಗಿಸಬಹುದು.

ಮುಂ. ರೆ. ಕೋ. 64ನೇ ಸೆಕ್ಷನ್.

ಸ್ವಲ್ಪಬೀಜವರಿಯು ಬಾಬತು ಒಂದು ಜಮೀನ್‌ಗಳಿಗೆ ಹಂಗಾಮಿ ಹಕ್ಕುದಾರಿ.

67. ಯಾವುದಾದರೂ ದಡದ ಯಾ ತೀರದ ಮೇಲೆ ಒಂದು ಜಮೀನು ಏರ್ಪಟ್ಟಲ್ಲಿ ಅಂತಾ ದಡದ ಯಾ ತೀರದ ಅನುಭವದಾರ ಯಾರಾದರೂ ಇದ್ದರೆ ಅವನು, ಸದರೀ ಜಮೀನಿನ ಬೀಜವರಿಯು ಅರ್ಧ ಯಕರೆಗೆ ಮೀರಿ ಮತ್ತು ಅವನ ಹಿಡು

ವಳಿಯ ಬೇಜವರಿ ಪೈಕಿ ಪತ್ತರಲ್ಲಿ ಒಂದಂಶಕ್ಕೆ ಮೀರಿದ ಹೊರತು, ಅಥವಾ ಮೀರುವಪರ್ಯಂತ, ಸದರೀ ಜಮೀನಿನ ಹಂಗಾಮಿ ಉಪಯೋಗಕ್ಕಾಗಲಿ, ಅನುಭವಕ್ಕಾಗಲಿ, ಅರ್ಹನಾಗಿರತಕ್ಕದ್ದು; ಒಂದು ಜಮೀನಿನ ಬೇಜವರಿಯು ಮೇಲೆ ಹೇಳಿದ್ದಕ್ಕೆ ಅತಿಕ್ರಮಿಸಿದರೆ ಹಿಂದಿನ ಕಡೇ ಸೆಕ್ಷನ್ನ ನಿಬಂಧನೆಗಳಿಗೆ ಒಳಪಟ್ಟು ಡೆಪ್ಯುಟಿ ಕಮಿಷನರವರ ಫೈಸಲಾತಿಯಂತೆ ಇರತಕ್ಕದು.

ಈ ಸೆಕ್ಷನ್ನಲ್ಲಿಯೂ 52ನೇ ಸೆಕ್ಷನ್ನಲ್ಲಿಯೂ "ಹಿಡುವಳಿ" ಎಂಬ ಮಾತಿಗೆ ಯಾವನಕ್ಕೆ ಪ್ರತ್ಯೇಕವಾದ ಅಥವಾ ವಟ್ಟಾದ ಕಂದಾಯ ಠರಾವ್ ಮಾಡಲ್ಪಟ್ಟಿ ಧ್ದೆಯೋ ಅಂತಾ ಒಂದು ಸರ್ವೇ ನಂಬರಾಗಲೀ ಜಮೀನಿನ ಯಾವ ಭಾಗವಾಗಲೀ ಎಂದು ಅರ್ಥವಾಗತಕ್ಕದ್ದೆಂದು ಯೋಚಿಸತಕ್ಕದು.

ಅನುಭವದಾರನ ಹಕ್ಕುಗಳು.

ಮುಂ. ರೆ. ಕೋ. 65ನೇ ಸೆಕ್ಷನ್.

ವ್ಯವಸಾಯದ ಕೆಲಸಗಳಿಗಾಗಿ ಇರುವ ಜಮೀನಿನ ಅನುಭವದಾರನು, ತನ್ನ ಜಮೀನನ್ನು ಯಾವಯಾವ ಬಗ್ಗೆ ಉಪಯೋಗಿಸತಕ್ಕದ್ದು.

68. ಬೇಸಾಯದ ಕೆಲಸಗಳಿಗಾಗಿ ವಿನಿಯೋಗಿಸಲ್ಪಟ್ಟ ಜಮೀನಿನ ಅನುಭವದಾರನು ತಾನಾಗಿಯೇ ಆಗಲೀ ತನ್ನ ನೌಕರರು, ಶಿಕ್ಮೀದಾರರು, ಮುತಾಲೀಕರು ಅಥವಾ ಇತರ ವಾರಸುದಾರರು ಇವರ ಮೂಲಕವಾಗಿ ಸಾಗುವಳೀ ಬಗ್ಗೆ ಬೇಕಾದ ಕಟ್ಟಗಳನ್ನು ಕಟ್ಟುವದಕ್ಕೂ, ಭಾಮಿಗಳನ್ನಾಗಲಿ ಕೆರೆಗಳನ್ನಾಗಲಿ ನಿರ್ಮಿಸುವದಕ್ಕೂ, ಯುಕ್ತಿಯಾರಿ ಉಳ್ಳವನಾಗಿಯೂ ಅಥವಾ ಜಮೀನನ್ನು ಇನ್ನೂ ಚನ್ನಾಗಿ ಸಾಗುವಳೀ ಮಾಡುವ ಬಗ್ಗೆ ಅಥವಾ ಮೇಲೆಕಂಡ ಕೆಲಸಗಳಿಗಾಗಿ ಇನ್ನೂ ವಿಶೇಷ ಅನುಕೂಲವಾದ ಅನುಭವಕ್ಕೋಸ್ಕರ ಬೇಕಾದದ್ದನ್ನು ಮಾಡಿಕೊಳ್ಳುವದಕ್ಕೂ ಯುಖ್ತಿಯಾರಿಯುಳ್ಳವನಾಗಿರುತ್ತಾನೆ.

ಅನುಭವದಾರನು ತನ್ನ ಜಮೀನನ್ನು ಯಾವದಾದರೂ ಇತರ ಕೆಲಸಕ್ಕೆ ವಿನಿಯೋಗಿಸಬೇಕೆಂದು ಅಪೇಕ್ಷಿಸಿದರೆ ನಡಿಸತಕ್ಕ ನಡವಳಿತಗಳು.

ಆದರೆ ಯಾವ ಅನುಭವದಾರನಾಗಲಿ ತನ್ನ ಹಿಡುವಳಿಯನ್ನು ಅಥವಾ ಅದರ ಯಾವದಾದರೂ ಭಾಗವನ್ನು ಬೇರೆ ಯಾವ ವಿಷಯಕ್ಕಾಗಲಿ ವಿನಿಯೋಗಿಸಬೇಕೆಂದು ಖಾಯಿಷ್ ಮಾಡಿದರೆ ರಿಜಿಸ್ಟರಾದ ಅನುಭವದಾರನು ಮೊದಲು ಡೆಪ್ಯುಟಿ ಕಮಿಷನರ ಅಪ್ಪಣೆಯ ಬಗ್ಗೆ ಕೇಳಿಕೊಳ್ಳತಕ್ಕದ್ದು; ಡೆಪ್ಯುಟಿ ಕಮಿಷನರು ತಮಗೆ ಅಂತಾ ಅರ್ಜೀಬಂದ ಮೇಲೆ ಅದು ತಲಪಿದ್ದಕ್ಕೆ ಒಂದು ಬರವಣಿಗೇ ಮೂಲಕವಾದ ರಶೀದಿಯನ್ನು ಅರ್ಜೀದಾರನಿಗೆ ಕೂಡಲೇ ಕೊಡತಕ್ಕದ್ದು, ಮತ್ತು ವಿಚಾರಣೆ ಮಾಡಿದ ಮೇಲೆ ಸದರೀ ಅಪ್ಪಣೆಯನ್ನು ಕೊಡಲಾದರೂ ಬಹುದು ಬಿಡಲಾದರೂ ಬಹುದು, ಆದರೆ ಅಂತಾ ಅರ್ಜೀದಾರ, ಸದರೀ ರಸೀದೀ ತಾರೀಖಿನಿಂದ ಮೂರುತಿಂಗಳೊಳಗಾಗಿ ತನಗೆ ಜವಾಬ್ ಯೇನೂ ಬಾರದಿದ್ದರೆ, ಡೆಪ್ಯುಟಿ ಕಮಿಷನರ ಅಪ್ಪಣೆ ತನಗೆ ಕೊಡಲ್ಪಟ್ಟಂತೆಯೇ ಭಾವಿಸಬಹುದು. ಡೆಪ್ಯುಟಿ ಕಮಿಷನರು, ವಿಶೇಷ ಸಂಗತಿಗಳಲ್ಲಿ ಬೇರೆ ವಿಧವಾಗಿ ಹುಕುಂ ಮಾಡಿದ ಹೊರತು, ಇಂತಾ ಅರ್ಜಿಯು ರಿಜಿಸ್ಟರಾದ ಅನುಭವದಾರನಿಂದ ಕೊಡಲ್ಪಟ್ಟಿದ್ದ ಹೊರತು ಅಂಗೀಕರಿಸಲ್ಪಡಲಾಗದು.

ಅಂತಾ ಯಾವ ಜಮೀನಾಗಲಿ ವ್ಯವಸಾಯಕ್ಕೆ ಸಂಬಂಧಿಸದ, ಯಾವ ಕೆಲಸಕ್ಕಾದರೂ, ಆ ಮೇರೆ ವಿನಿಯೋಗಿಸಲ್ಪಟ್ಟ ಪಕ್ಷಕ್ಕೆ 53ನೇ ಸೆಕ್ಷರ್ನ ನಿಬಂಧನೆಗಳನುಸರಿಸಿ ವಸೂಲ್ಮಾಡಲ್ಪಡಬಹುದಾದ ಯಾವದಾದರೂ ಹೊಸ ಕಂದಾಯದೊಡನೆ ಒಂದು ಜುರ್ಮಾನೆ ತೆರಬೇಕೆಂದು ನಿಯಮಿಸುವದು ಗವರ್ನಮೆಂಟಿನ ಒಟ್ಟು ಹುಕುಂಗಳಿಗೆ ಒಳಪಟ್ಟು ಡೆಪ್ಯುಟಿ ಕಮ್ಮಿಷನರಿಗೆ ಯುಖ್ತ್ಯಾರಿಯುಂಟು.

ಅಂತಾ ವಿನಿಯೋಗದ ಬಗ್ಗೆ ವಿಶೇಷ ಕಂದಾಯದೊಡನೆ ಜುರ್ಮಾನೆ ವಸೂಲ್ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 66ನೇ ಸೆಕ್ಷರ್ನ.

69. ಮೊದಲು ಡೆಪ್ಯುಟಿ ಕಮ್ಮಿಷನರ ಅಪ್ಪಣೆಯನ್ನು ಪಡೆಯದೆ ಅಥವಾ ಅಂತಾ ರಸೀದಿ ತಾರೀಖಲಾಗಾಯತ್ ಮೂರುತಿಂಗಳು ಕಳೆಯುವದಕ್ಕೆ ಮುಂದಾಗಿ ಅಂತಾ ಯಾವ ಜಮೀನಾಗಲಿ ಹಾಗೆ ವಿನಿಯೋಗಿಸಲ್ಪಟ್ಟರೆ, ಅನುಭವಧಾರನೂ, ಯಾವನಾದರೂ ಷಿಕ್ಮೀದಾರನೂ, ಅಥವಾ ಅವನ ಕೈಕೆಳಗಾಗಲಿ ಅವನ ಮೂಲಕವಾಗಲಿ ಹಿಡುವಳೀಯುಳ್ಳ ಇತರ ಮನುಷ್ಯನೂ ಹಾಗೆ ವಿನಿಯೋಗಿಸಲ್ಪಟ್ಟ ಜಮೀರ್ನಾನಿಂದಲಾಗಲಿ ಅಥವಾ ಯಾವದರ ಒಂದು ಭಾಗವಾಗಿ ಅದು ಇರಬಹುದೋ ಅಂತಾ ಪೂರಾ ತಾಕು ಯಾ ಸರ್ವೇ ನಂಬರ್‌ನಿಂದಲಾಗಲಿ ಫೂಟಾಗಿ ಹೊರಡಿಸಲ್ಪಡಲಿಕ್ಕೆ ಗುರಿಯಾಗತಕ್ಕದ್ದು. ರಿಜಿಸ್ಟರ್ ಮಾಡಲ್ಪಟ್ಟ ಅನುಭವದಾರನು 53ನೇ ಸೆಕ್ಷರ್ನ ನಿಬಂಧನೆಗಳನುಸರಿಸಿ ವಸೂಲ್ ಮಾಡಲ್ಪಡಬಹುದಾದ ಹೊಸಕಂದಾಯದೊಡನೆ ಸದರೀ ಜಮೀನು, ಯಾವ ಕಾಲದವರಿಗೆ ಹಾಗೆ ವಿನಿಯೋಗಿಸಲ್ಪಟ್ಟಿರುತ್ತೋ ಆ ಕಾಲಕ್ಕೆ, ಗವರ್ನಮೆಂಟಿನ ಒಟ್ಟು ಹುಕುಂಗಳಿಗೆ ಒಳಪಟ್ಟು ಡೆಪ್ಯುಟಿ ಕಮ್ಮಿಷನರು ನಿಯಮಿಸಬಹುದಾದ ಅಂತಾ ಜುರ್ಮಾನೆಯನ್ನು ಸಹ ತೆರಲಿಕ್ಕೆ ಗುರಿಯಾಗತಕ್ಕದ್ದು.

ಅಪ್ಪಣೆ ಇಲ್ಲದೆ ಜಮೀನನ್ನು ಆ ಮೇರೆ ವಿನಿಯೋಗಿಸುವ ಬಗ್ಗೆ ದಂಡನೆ.

ಯಾವ ಜಂಟೀ ಅನುಭವದಾರನಾಗಲಿ, ಯಾವನಾದರೂ ಅನುಭವದಾರನ ಯಾವ ಷಿಕ್ಮೀದಾರನಾಗಲಿ, ಒಬ್ಬ ಅನುಭವದಾರನ ಕೈಕೆಳಗೆ ಯಾ ಅವನ ಮೂಲಕ ಹಿಡುವಳಿಯುಳ್ಳ ಯಾವನಾದರೂ ಇತರ ಮನುಷ್ಯನಾಗಲಿ, ರಿಜಿಸ್ಟರ್ ಮಾಡಲ್ಪಟ್ಟ ಸದರೀ ಅನುಭವದಾರನ ಅನುಮತಿಯಿಲ್ಲದೆ ಅಂತಾ ಯಾವ ಜಮೀನನ್ನಾದರೂ, ಅಂತಾ ಯಾವ ಕೆಲಸಕ್ಕೋಸ್ಕರವಾದರೂ ವಿನಿಯೋಗಿಸಿ ಆಮೂಲಕ ಸದರೀ ರಿಜಿಸ್ಟರಾದ ಅನುಭವದಾರನನ್ನು ಮೇಲೆ ಕಂಡ ದಂಡನೆಗಳಿಗೆ ಗುರಿಯಾಗುವಂತೆ ಮಾಡಿದಲ್ಲಿ ಅವನು ಸದರೀ ರಿಜಿಸ್ಟರ್ ಮಾಡಲ್ಪಟ್ಟ ಅನುಭವದಾರನಿಗೆ ಸದರೀ ದಂಡನೆಗಳಿಗೆ ಜವಾಬುದಾರನಾಗತಕ್ಕದ್ದು.

ಜಂಟೀ ಅನುಭವಧಾರ ಯಾ ಷಿಕ್ಮೀದಾರನು, ರಿಜಿಸ್ಟರಾದ ಅನುಭವದಾರನಿಗೆ ನುಕ್ಸಾನ್ ವಿಷಯದಲ್ಲಿ ಜವಾಬ್‌ದಾರನಾಗತಕ್ಕದ್ದು.

ಮುಂ. ರೆ. ಕೋ. 67ನೇ ಸೆಕ್ಷರ್ನ.

70. ಗವರ್ನಮೆಂಟಿಗೂ ರಿಜಿಸ್ಟರ್ ಮಾಡಲ್ಪಟ್ಟ ಅನುಭವದಾರನಿಗೂ ಪರಸ್ಪರ ಒಡಂಬಡಿಕೆ ಮಾಡಲ್ಪಡಬಹುದಾದಂತಾ ಷರತ್ತುಗಳಮೇಲೆ ವಿಶೇಷ ಸಂಗತಿಗಳಲ್ಲಿ ಮೇಲೆಕಂಡ ಅಪ್ಪಣೆ ಕೊಡುವದಕ್ಕೆ ಮೇಲ್ಕಂಡ ಸೆಕ್ಷರ್ನಗಳ ಯಾವ ಅಂಶವೂ ಅಡ್ಡೀಮಾಡತಕ್ಕದ್ದಲ್ಲವು.

ಷರತಗಳ ಮೇಲೆ ಅಪ್ಪಣೆ ಕೊಡಲ್ಪಡಬಹುದು.

ಮುಂ. ರೆ. ಕೋ. 68ನೇ ಸೆಕ್ಷನ್.

ಅನುಭವದಾರನ ಹಕ್ಕುಗಳು ಒಡಂಬಡಿಕೆಗೆ ಬಳಪಟ್ಟರುವವು.

71. ಒಬ್ಬ ಅನುಭವದಾರನು, ತನ್ನ ಅನುಭವವು ಯಾವ ಕಾಲದವರಿಗೆ ನಡದುಬರಬೇಕೆಂದು ಹದ್ದುಪಡಿಸಲ್ಪಟ್ಟಿರುತ್ತೋ ಆ ಕಾಲ ಯಾವದಾದರೂ ಇದ್ದರೆ ಅಷ್ಟರವರಿಗೆ ತನ್ನ ಜಮೀನಿನ ಉಪಯೋಗ ಮತ್ತು ಅನುಭವಕ್ಕೆ ಯುಕ್ತಿಯಾರಿವುಳ್ಳವನಾಗಿರುತ್ತಾನೆ. ತನ್ನ ಅನುಭವವು ಗೊತ್ತಿಲ್ಲದ ಕಾಲದವರಿವಿಗೆ ನಡದು ಬರುವದಾಗಿಯಾಗಲಿ ಯಾ ಸರ್ವೇ ಸೆಟಲ್‌ಮೆಂಟು ಶಾಶ್ವತವಾಗಿ ಆ ಜಮೀನಿಗೆ ಜಾರಿಯಲ್ಲಿ ತರಲ್ಪಟ್ಟಿದ್ದರೆ ಈ ರೆಗ್ಯುಲೇಷನಿನ ಯಾ ಈ ರೆಗ್ಯುಲೇಷನ್ ಅನುಸರಿಸಿ ಮಾಡಲ್ಪಟ್ಟ ಯಾವದಾದರೂ ರೂಲ್ಸಿನ ಅಥವಾ ತತ್ಕಾಲದೊಳಗೆ ಜಾರಿಯಲ್ಲಿರುವ ಯಾವದಾದರೂ ಇತರ ಕಾನೂನಿನ ನಿಬಂಧನೆಗಳ ಪ್ರಕಾರ ಸದರೀ ಜಮೀನಿಗೆ ಸಲ್ಲತಕ್ಕ ಕಂದಾಯದ ಮೊಬಲಗುಗಳನ್ನು ಪಾವತೀ ಮಾಡಿದ ಮೇಲೆ ಮತ್ತು ಅವನ ಅನುಭವಕ್ಕೆ ನ್ಯಾಯತಃ ಲಗ್ಗತ್ತಾದ ಇತರ ಯಾವದಾದರೂ ಷರತ್ತುಗಳನ್ನು ನೆರವೇರಿಸಿದ್ದರ ಮೇಲೆ, ತನ್ನ ಜಮೀನನ್ನು ಉಪಯೋಗಿಸುವದಕ್ಕೂ ಅನುಭವಿಸುವದಕ್ಕೂ ಅರ್ಹನಾಗಿರುತ್ತಾನೆ.

ಮುಂ. ರೆ. ಕೋ. 70ನೇ ಸೆಕ್ಷನ್.

ಲಾಯಖಾದ ಕೋರ್ಟುಗಳ, ಡಿಕ್ರಿಗಳು, ಹುಕ್ಕುಂಗಳು ಜಾರಿಯಲ್ಲಿ ತರಲ್ಪಡತಕ್ಕದ್ದು.

72. ಲಾಯಖಾದ ಕೋರ್ಟಿನ ಡಿಕ್ರಿಯಿಂದಾಗಲೀ, ಹುಕುಮಿನಿಂದಾಗಲೀ, ಯಾವದಾರೂ ಜಮೀನಿನ ರಿಜಿಸ್ಟರ್ ಮಾಡಲ್ಪಟ್ಟ ಅನುಭವದಾರನು ಮತ್ತೊಬ್ಬ ಮನುಷ್ಯನ ಕೆಳಗೆ ಕಮ್ಮಿ ಹಿಡುವಳಿದಾರನಾಗಿರುತ್ತಾನೆಂತ, ಅಥವಾ ಅನುಭವವು ಮತ್ತೊಬ್ಬ ಮನುಷ್ಯನಿಗೆ ಕೊಡಲ್ಪಟ್ಟಿದೆಯೆಂತ ಅಥವಾ, ಅಂತಾ ಡಿಕ್ರಿ ಯಾ ಆರ್ಡರಿನ ಅಮಲ್‌ಜಾರೀಯಲ್ಲಿ ಜಮೀನ್ ಅನುಭವದಾರನ ಸಂಬಂಧವು, ಹರಾಜ್ ಮೂಲಕವಾಗಲಿ, ಅನ್ಯಥಾ ಆಗಲಿ, ಮತ್ತೊಬ್ಬ ಮನುಷ್ಯನಿಗೆ ವರ್ಗಮಾಡಲ್ಪಟ್ಟಿರುತ್ತೆಂತ ಫೈಸಲ್ಮಾಡಲ್ಪಟ್ಟರೆ ಅಂತಾ ಇತರ ಮನುಷ್ಯನು, ಡಿಕ್ರಿ ಅಥವಾ ಹುಕುಂ ಅಥವಾ ಹರಾಜ್ ಅಥವಾ ಇತರ ವರ್ಗದ ವಿಷಯದಲ್ಲಿ ಸದರೀ ಕೋರ್ಟಿನವರ ಸರ್ಟಿಫಿಕೇಟನ್ನಾಗಲಿ ಯಾ ಡಿಕ್ರಿ ಅಥವಾ ಆರ್ಡರಿನ ವಾಜಬಿ ನಕಲನ್ನಾಗಲಿ ಹಾಜರ್‌ಮಾಡಿದಲ್ಲಿ ಅಂತಾ ಇತರ ಮನುಷ್ಯನು ಅನುಭವದಾರನಾಗಿ ಭಾವಿಸಲ್ಪಟ್ಟು ತದನುಗುಣವಾಗಿ ನಡಿಸಲ್ಪಡತಕ್ಕದ್ದು. ಸದರೀ ಬಗ್ಗೆ ಬರವಣಿಗೆಯಲ್ಲಿ ಡೆಪ್ಯುಟಿ ಕಮ್ಮಿಷನರಿಗೆ ದರಖಾಸ್ತು ಮಾಡಲ್ಪಟ್ಟಲ್ಲಿ ರಿಜಿಸ್ಟರಾದ ಅನುಭವದಾರನ ಹೆಸರನ್ನು ದಾಖಲ್ಮಾಡುವದರಲ್ಲಿ ಸಂದರ್ಭಾನುಸಾರವಾಗಿ ಮಾಡಬೇಕಾಗುವ ಬದಲಾವಣೆಯನ್ನು ಮಾಡತಕ್ಕದ್ದು.

ಮುಂ. ರೆ. ಕೋ. 71ನೇ ಸೆಕ್ಷನ್.

ರಿಜಿಸ್ಟರಾದ ಅನುಭವದಾರನು ಮೃತಪಟ್ಟರೆ ವಾರಸ್‌ದಾರನ ಹೆಸರು ರಿಜಿಸ್ಟರ್ ಮಾಡಲ್ಪಡತಕ್ಕದ್ದು.

73. ಒಬ್ಬ ರಿಜಿಸ್ಟರಾದ ಅನುಭವದಾರನು ಮೃತಪಟ್ಟಲ್ಲಿ, ಅವನ ಜೇಷ್ಟಪುತ್ರನ ಅಥವಾ, ಅವನ ವಾರಸ್‌ದಾರನಾಗಿ ಅಥವಾ ಅವನ ವಾರಸ್‌ದಾರರ ಪೈಕಿ ಮುಖ್ಯನಾಗಿ ಹಾಜರಾಗುವ ಇತರ ಮನುಷ್ಯನ ಹೆಸರನ್ನು ಮೃತಪಟ್ಟವನಿಗೆ ಬದಲಾಗಿ ಡೆಪ್ಯುಟಿ ಕಮ್ಮಿಷನರು ರಿಜಿಸ್ಟರ್ ಮಾಡಿಸತಕ್ಕದ್ದು, ಸದರೀ ವಾರಸ್‌ದಾರನು ಆಬಳಿಕ ರಿಜಿಸ್ಟರಾದ ಅನುಭವದಾರನೆಂದು ಭಾವಿಸಲ್ಪಟ್ಟು, ಹಿಂದಿನ ಕಡೇಸೆಕ್ಷನ್ ನಿಬಂಧನೆಗಳಿಗೆ ಬಳಪಟ್ಟು ಸದರೀ ಮೇರಿಗೆ ನಡಿಸಲ್ಪಡತಕ್ಕದ್ದು.

ಹಾಗೆ ರಿಜಿಸ್ಟರ್ ಮಾಡಲ್ಪಟ್ಟವನ ಹೆಸರು ಯಾವಾಗ ತಿದ್ದಿಸಲ್ಪಡತಕ್ಕದ್ದು.

74. ಯಾವ ಮನುಷ್ಯನಾದರೂ ಯಾವಾಗಲಾಗಲಿ, ವಾರಸ್‌ದಾರೀ ಸರಟಿಫಿಕೇಟನ್ನಾದರೂ ಒಂದು ಲಾಯಖಾದ ಕೋರ್ಟಿನ ಡಿಕ್ರಿಯನ್ನಾದರೂ ಹುಕುಮನ್ನಾದರೂ ಹಾಜರ್‌ಮಾಡುವದರ ಮೂಲಕ 53ನೇ ಸೆಕ್‌ಷನ್ ಅನುಸರಿಸಿ ರಿಜಿಸ್ಟರ್ ಮಾಡಲ್ಪಡತಕ್ಕದ್ದೆಂದು ಯಾರ ಹೆಸರನ್ನು ಡೆಪ್ಯುಟಿ ಕಮ್ಮಿಷನರು ನೇಮಿಸಿ ಇರುತ್ತಾರೋ ಅಂತಾವನಿಗಿಂತ ಸದರೀ ಯವನು ರಿಜಿಸ್ಟರಾದ ಅನುಭವದಾರನಾಗಿರಲಿಕ್ಕೆ ಅರ್ಹನಾಗಿರುತ್ತಾನೆಂದು ಡೆಪ್ಯುಟಿ ಕಮ್ಮಿಷನರನ್ನು ತೃಪ್ತಿಪಡಿಸಿದರೆ, ಡೆಪ್ಯುಟಿ ಕಮ್ಮಿಷನರು, ಅದೇಮೇರೆ ಗವರ್ನಮೆಂಟು ರಿಕಾರ್ಡ್‌ಗಳಲ್ಲಿ ದಾಖಲೇಯನ್ನು ತಿದ್ದುಪಾಟು ಮಾಡಿಸತಕ್ಕದ್ದು.

ಮುಂ. ರೆ. ಕೋ. 72ನೇ ಸೆಕ್‌ಷನ್.

ಉಯಿಲಿಲ್ಲದೆ ಮೃತಪಟ್ಟವನ ಅನುಭವವಾಗಲಿ ಹಿಡುವಳೀಯಾಗಲಿ, ವಿಕ್ರಯಿಸಲ್ಪಡತಕ್ಕದ್ದು.

75. ಒಬ್ಬ ಅನುಭವದಾರನು, ಉಯಿಲ್ ಮಾಡದೆಯೂ, ಗೊತ್ತಾದ ವಾರಸ್‌ದಾರರಿಲ್ಲದೆಯೂ, ಮೃತಪಟ್ಟರೆ ಡೆಪ್ಯುಟಿ ಕಮ್ಮಿಷನರು, ಈರೆಗ್ಯುಲೇಷನಿನ ಅಥವಾ ಸರ್ಕಾರಕ್ಕೆ ಸೇರಿಹೋದ ಅನುಭವ ಸ್ವತ್ತುಗಳ ಹರಾಜ್‌ಬಗ್ಯೆ ತತ್ಕಾಲದೊಳಗೆ ಜಾರೀ ಯಿರುವ ಇತರ ಯಾವದಾದರೂ ಕಾನೂನಿನ ನಿಬಂಧನೆಗಳಿಗೆ ಒಳಪಟ್ಟು, ಅವನ ಅನುಭವದ ಸ್ವತ್ತನ್ನು, ಜಮೀನ್ ಕಂದಾಯದ ವಸೂಲಿಬಗ್ಯಾಗಿ ಹರಾಜ್ ಮೂಲಕ ವಿಕ್ರಯಿಸತಕ್ಕದ್ದು; ಉಯಿಲ್ ಮಾಡದೆಯೂ ಮತ್ತು ಗೊತ್ತಾದ ವಾರಸ್‌ದಾರರಿಲ್ಲದೆಯೂ ಮೃತವಡುವ ಒಬ್ಬ ಮನುಷ್ಯನ ಸ್ವತ್ತನ್ನು ಕುರಿತು ತತ್ಕಾಲದಲ್ಲಿ ಜಾರೀಯಿರುವ ಕಾನೂನು ಸದರೀ ಅನುಭವಕ್ಕೆ ಲಗಾವಾಗತಕ್ಕದ್ದಾಗಿ ಭಾವಿಸಲ್ಪಡತಕ್ಕದ್ದಲ್ಲವು. ಆದರೆ, ಮೃತಪಟ್ಟವನು ಗವರ್ನಮೆಂಟಿಗೆ ಕೊಡತಕ್ಕ ದರೋಬಸ್ತು ಜಮೀನ್ ಕಂದಾಯದ ಬಾಕೀಗಳನ್ನೂ ತವಮಾಂ ಹರಾಜು ಖರ್ಚುಗಳನ್ನೂ ವಜಾಮಾಡಿ ಉಳದಿರುವಂತಾ ಹರಾಜ್ ಹುಟ್ಟುವಳೀ ಯೆಷ್ಟೋ ಅಷ್ಟರಮಟ್ಟಿಗೆ ಲಗಾವಾಗತಕ್ಕದ್ದೆಂದು ಯೆಣಿಸತಕ್ಕದ್ದು.

ಮುಂ. ರೆ. ಕೋ. 73ನೇ ಸೆಕ್‌ಷನ್.

ಅನುಭವದ ಹಕ್ಕುದಾರಿಯು ವರ್ಗ ಮಾಡಲ್ಪಡತಕ್ಕದ್ದಾಗಿಯೂ ವಂಶಪಾರಂಪರ್ಯವಾಗಿ ಅನುಭವಿಸಲ್ಪಡತಕ್ಕದ್ದಾಗಿಯೂ, ಇರತಕ್ಕದ್ದು.

76. ಅನುಭವದ ಹಕ್ಕುದಾರಿಯು, 59ನೇ ಸೆಕ್‌ಷನಿನಲ್ಲಿ ಅಡಗಿರುವದಕ್ಕೆ ಅಥವಾ ಕಾನೂನಿಂದ ಅನ್ಯಥಾ ವಿಧಿಸಲ್ಪಟ್ಟ ನಿಬಂಧನೆಗಳಿಗೆ ಒಳಪಟ್ಟು, ವಂಶ ಪಾರಂಪರ್ಯದ ಮತ್ತು ವರ್ಗ ಮಾಡಲ್ಪಡತಕ್ಕ ಸ್ವತ್ತೆಂದು ಭಾವಿಸಲ್ಪಟ್ಟು ಒಬ್ಬ ಅನುಭವದಾರನಾಗುವ ಬಗ್ಯೆ ಯಾವನ ಕರಾರು ಡೆಪ್ಯುಟಿ ಕಮ್ಮಿಷನರಿಂದ ಅಂಗೀಕರಿಸಲ್ಪಡತಕ್ಕದ್ದೋ ಅಂತಾ ಮನುಷ್ಯನಿಗೆ ಕೂಡ್ಲೇ ಸಲ್ಲತಕ್ಕದ್ದು.

ಹಿಡುವಳಿಯ ರಾಜೀನಾಮೆ.

ಮುಂ. ರೆ. ಕೋ. 74ನೇ ಸೆಕ್‌ಷನ್.

ಅನುಭವದಾರನು ತನ್ನ ಅನುಭವಕ್ಕೆ ರಾಜೀನಾಮೆ ಕೊಡಬಹುದು.

77. ಒಬ್ಬ ಅನುಭವದಾರನು, ಅಮಲ್‌ದಾರನಿಗಾಗಲಿ ಡೆಪ್ಯುಟಿ ಅಮಲ್‌ದಾರನಿಗಾಗಲಿ, ಬರವಣಿಗೆಯ ನೋಟೀಸ್ ಕೊಡುವದರ ಮೂಲಕ ಸ್ವತಂತ್ರವಾಗಿಯಾಗಲಿ ಗೊತ್ತಾದ ಒಬ್ಬ ಮನುಷ್ಯನಿಗಾಗಿ ಯಾಗಲಿ ತನ್ನ ಅನುಭವಕ್ಕೆ ರಾಜೀನಾಮೆ ಕೊಡಬಹುದು; ಪರಂತು ಅಂತಾ ರಾಜೀನಾ

ಮೆಯು ಪೂರಾ ಅನುಭವಕ್ಕಾಗಲಿ, ಪೂರಾ ಸರ್ವೇ ನಂಬರ್‌ಗಳಿಗಾಗಲಿ, ಸರ್ವೇ ನಂಬರ್‌ಗಳ ಪೈಕಿ ಅಂಗೀಕರಿಸಲ್ಪಟ್ಟ ಹಿಸ್ಸೆಗಳಿಗಾಗಲಿ, ಲಗಾವಾಗತಕ್ಕದ್ದು. ಸ್ವತಂತ್ರವಾದ ರಾಜೀನಾಮೆಯು ಸಾಲ್ ಮಜಕೂರ್ ಆಖೈರ್‌ಲಾಗಾಯತು ಜಾರೀಗೆ ಬರತಕ್ಕದ್ದಾಗಿ ಭಾವಿಸತಕ್ಕದ್ದಲ್ಲದೆ ಅಂತಾ ಸಾಲ್ ಮಾರ್ಚಿ 31ನೇ ಮರ್ಕ್ಕಮಿಗೆ ಮುಂದಾಗಿ ಅಥವಾ ಗವರ್ನಮೆಂಟನಿಂದ ಆಗಿಂದಾಗ್ಯೆ ಈ ಬಗ್ಯೆ ಪ್ರತಿ ಡಿಸ್ಟ್ರಿಕ್ಟಿಗೂ ವಿಧಿಸಲ್ಪಡಬಹುದಾದ ಅಂತಾ ಇತರ ತಾರೀಖಿಗೆ ಮುಂದಾಗಿ ಅದರ ಬಾಬತು ನೋಟೀಸ್ ಕೊಡಲ್ಪಡತಕ್ಕದ್ದು. ಗೊತ್ತಾದ ಒಬ್ಬ ಮನುಷ್ಯನ ಪರವಾಗಿ ಯಾವಾಗಲಾಗಲಿ ರಾಜೀನಾಮೆ ಕೊಡಲ್ಪಡಬಹುದು.

ಒಬ್ಬನಿಗಿಂತ ಹೆಚ್ಚುಮಂದಿ ಅನುಭವದಾರರು ಇದ್ದಪಕ್ಷಕ್ಕೆ, ರಿಜಿಸ್ಟರಾದ ಅನುಭವದಾರನಿಂದ ರಾಜೀನಾಮೆ ನೋಟೀಸ್ ಕೊಡಲ್ಪಡತಕ್ಕದ್ದು. ಯಾವನ ಪರವಾಗಿ ಬಂದು ಅನುಭವಕ್ಕೆ ರಾಜೀನಾಮೆ ಕೊಡಲ್ಪಟ್ಟಿರುತ್ತೋ ಅಂತಾ ಮನುಷ್ಯ ಯಾವನಾದರೂ ಇದ್ದ ದೆ ಅವನು,ಅಥವಾ ಅಂತಾ ಅನುಭವವು ಒಬ್ಬನಿಗಿಂತ ಹೆಚ್ಚು ಜನಗಳ ಪರವಾಗಿ ರಾಜೀನಾಮೆ ಕೊಡಲ್ಪಟ್ಟರೆ, ಅವರುಗಳ ಪೈಕಿ ಮುಖ್ಯನು ರಿಜಿಸ್ಟರ್‌ಮಾಡಲ್ಪಟ್ಟ ಅನುಭವದಾರನಾಗುವಬಗ್ಯೆ ಬರವಣಿಗೆ ಮೂಲಕವಾದ ಒಡಂಬಡಿಕೆಯನ್ನು ಬರೆದು ಕೊಡತಕ್ಕದ್ದು. ಆ ಬಳಿಕ ಅವನ ಹೆಸರು, ಹಿಂದೆ ರಿಜಿಸ್ಟರಾದ ಅನುಭವದಾರನ ಹೆಸರಿಗೆ ಬದಲಾಗಿ ದಾಖಲ್‌ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 75ನೇ ಸೆಕ್ಷನ್.

ತೋಕ್ ಕಂದಾಯವನ್ನು ಕೊಡತಕ್ಕ ಜಮೀನುಗಳ ರಾಜೀನಾಮೆ.

78. ಕೆಲವು ತಾಕುಗಳಿಕೆ ಅಥವಾ ಸರ್ವೇ ನಂಬರ್‌ಗಳಿಗೆ ಒಟ್ಟಾಗಿ ತೋಕ್ ಕಂದಾಯ ಮೊಕರರ್ ಮಾಡಲ್ಪಟ್ಟರೆ, ಮುಂದಾಗಿ ಡೆಪ್ಯುಟಿ ಕಮ್ಮಿಷನರ ಅನುಮತಿ ವಿನಾ, ಅಂತಾ ತಾಕುಗಳ ಅಥವಾ ಸರ್ವೇ ನಂಬರ್‌ಗಳ ಪೈಕಿ ಮೇಲೆಕಂಡಂತೆ ಯಾವದಾದರೂ ಬಂದು ಅಥವಾ ಹೆಚ್ಚು ತಾಕುಗಳಿಗೆ ಅಥವಾ ಸರ್ವೇ ನಂಬರ್‌ಗಳಿಗೆ ರಾಜೀನಾಮೆ ಕೊಡುವದು ಅನುಭವದಾರನ ಯಖ್ತ್ಯಾರಿಯಲ್ಲಿ ಇರತಕ್ಕದ್ದಲ್ಲವು. ಡೆಪ್ಯುಟಿ ಕಮ್ಮಿಷನರು ತಮ್ಮ ಅಂಗೀಕಾರವನ್ನು ಕೊಡುವದಕ್ಕಾಗಲಿ ತಿರಸ್ಕರಿಸುವದಕ್ಕಾಗಲಿ ಅವರಿಗೆ ಯಖ್ತ್ಯಾರಿಯುಂಟು. ಅವರು ಅದನ್ನು ಕೊಡುವಪಕ್ಷಕ್ಕೆ ಅನುಭವವು ವಿಭಾಗಿಸಲ್ಪಡತಕ್ಕದ್ದು. ಡೆಪ್ಯುಟಿ ಕಮ್ಮಿಷನರು ಸದರೀ ಜಮೀನಿನ ಪ್ರತಿಭಾಗಕ್ಕೂ ಸಲ್ಲತಕ್ಕ ಜಮೀನ್ ಕಂದಾಯದ ದಾಮಾಷಾಯಿ ಮೊಬಲಗನ್ನು ನಿರ್ಣಯಿಸತಕ್ಕದ್ದು. ಅಸಲ್ ಅನುಭವದಾರನೂ, ಮತ್ತು ಅವನು ಯಾರಪರವಾಗಿ ತನ್ನ ಅನುಭವದ ಬಂದು ಭಾಗಕ್ಕೆ ರಾಜೀನಾಮೆ ಕೊಡುತ್ತಾನೋ ಅಂತಾ ಮನುಷ್ಯ ಯಾವನಾದರೂ ಯಿದ್ದರೆ ಅವನೂ, ತಮ್ಮ ಹಿಸ್ಸೆಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಕಂದಾಯ ಕೊಡಲಿಕ್ಕೆ ಗುರಿಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 76ನೇ ಸೆಕ್ಷನ್.

54ನೇ ಸೆಕ್ಷನ್ 1ನೇ ಪ್ಯಾರಾದಲ್ಲಿ ವಿವರಿಸಲ್ಪಟ್ಟ ಜಮೀನಿನ ರಾಜೀನಾಮೆ.

79. ಕಡೇ ಯೆರಡು ಸೆಕ್ಷನ್‌ಗಳ ನಿಬಂಧನೆಗಳು ಸಾಧ್ಯವಾದಮಟ್ಟಿಗೆ ಪರಭಾರೇಯಾದ ಜಮೀನಿನ ಹಿಡುವಳಿದಾರರಿಗೆ ಲಗಾವಾಗತಕ್ಕದ್ದು : ಪರಂತು,

(*a*) ಸಮಗ್ರವಾಗಿಯಾಗಲಿ, ಕೆಲವುಮಟ್ಟಿಗಾಗಲಿ, ಹಿಡುವಳಿಯಲ್ಲಿ ಉಳ್ಳ 54ನೇ ಸೆಕ್ಷನ್ ಬಂದನೇ ಪ್ಯಾರೆಗ್ರಾಫ್‌ನಲ್ಲಿ ವಿವರಿಸಲ್ಪಟ್ಟ ವಿದ್ಯಮಾನಗಳನುಸರಿಸಿ

ವಿನಾಯಿಸಲ್ಪಟ್ಟ, ಯಾವದಾದರೂ ಜಮಿನಿನ ಯಾವಭಾಗವನ್ನಾಗಲಿ, ಜಮಿನಿನ ಅಂತಾ ಭಾಗಕ್ಕೆ ಸಲ್ಲತಕ್ಕ ಬದಲಾಯಿಸಲ್ಪಟ್ಟ ಕಂದಾಯವು ಸದರೀ ಸೆಕ್ಷನ ನಿಬಂಧನೆಗಳನುಸರಿಸಿ ನಿರ್ಣಯಿಸಲ್ಪಡುವ ಪರ್ಯಂತ ಮೇಲೆ ಕಂಡಂತೆ, ರಾಜೀನಾಮೇ ಕೊಡುವದು ನ್ಯಾಯವಾಗಿರತಕ್ಕದಲ್ಲವು ; ಮತ್ತು

54ನೇ ಸೆಕ್ಷನನಲ್ಲಿ ವಿವರಿಸಲ್ಪಟ್ಟ ಜಮೀನಿನ ರಾಜೀನಾಮೆ.

(b). 54ನೇ ಸೆಕ್ಷನನಲ್ಲಿ ವಿವರಿಸಲ್ಪಟ್ಟ ವಿದ್ಯಮಾನಗಳನುಸರಿಸಿ ಯಾವ ಜಮಿನಿಗೆ ಸಾಧಾರಣವಾಗಿ ವಸೂಲ್‌ಮಾಡಲ್ಪಡುವದಕ್ಕಿಂತ ಜಾಸ್ತೀ ಕಂದಾಯ ವಸೂಲ್‌ಮಾಡಲ್ಪಡುತ್ತೋ ಅಂತಾ ಜಮಿನಿಗೆ ಯಾವಮನುಷ್ಯನಾಗಲಿ, ರಾಜೀನಾಮೇಕೊಟ್ಟರೆ ಅವನು ಅದರಸಂಗಡ, ಯಾವಜಮಿನು ಕಂದಾಯಕೊಡೋಣದರಿಂದ ಪೂರಾ ಆಗಲಿ ಕೆಲವು ಮಟ್ಟಿಗಾಗಲಿ ವಿನಾಯಿಸಲ್ಪಟ್ಟಿರುತ್ತೋ ಅಂತಾ ಜಮಿನಿಗೆ ಸಹ ರಾಜೀನಾಮೆ ಕೊಟ್ಟಂತೆ ಯೆಣಿಸಲ್ಪಡತಕ್ಕದ್ದು.

ಮುಂ. ರೆ. ಕೋ. 77ನೇ ಸೆಕ್ಷನ.

ರಾಜೀನಾಮೇಕೊಟ್ಟ ಜಮೀನಿಗೆ ಮಾರ್ಗದ ಹಕ್ಕು ದಾರಿ.

80. ಯಾವ ಮನುಷ್ಯನಾಗಲಿ ತನ್ನ ಅಧೀನದಲ್ಲಿರುವ ಬೇರೆ ಜಮಿನಿನ ಮಾರ್ಗವಾಗಿ ದಾರಿಯುಳ್ಳಂಥಾ ಜಮಿನಿಗೆ ರಾಜೀನಾಮೆ ಕೊಟ್ಟಲ್ಲಿ, ಅಂಥಾ ತನ್ನ ಅಧೀನದಲ್ಲಿರುವ ಜಮಿನಿನ ಮಾರ್ಗವಾಗಿರುವ ದಾರಿಯು, ಹಾಗೆ ರಾಜೀನಾಮೆ ಕೊಡಲ್ಪಟ್ಟ ಜಮಿನಿನ ಮುಂದಿನ ಹಿಡುವಳೀದಾರನಿಗೆ ನಡದು ಬರತಕ್ಕದ್ದು.

ಮುಂ. ರೆ. ಕೋ. 78ನೇ ಸೆಕ್ಷನ.

78 ವ 79 ಇ ಸೆಕ್ಷನಗಳ ಅಮಲಿನ ವಿನಾಯತಿ.

81. ಸೆಕ್ಷನಗಳು 78 ವ 79ರಲ್ಲಿ ಯಾವ ಅಂಶವೂ,—

(a) ಯಾವದರ ಜಮಿನ ಕಂದಾಯಕ್ಕಾಗಿ ಹಿಸ್ಸೇದಾರರೆಲ್ಲ, ಕಾನೂ ಪ್ರಕಾರವಾಗಲಿ ಗ್ರಾಮದ ಮಾಮೂಲ್‌ಪ್ರಕಾರವಾಗಲಿ ಜಂಟಿಯಾಗಿ ಜವಾಬ್‌ದಾರರಾಗಿರುತ್ತಾರೋ ; ಅಥವಾ

(b) ಯಾವದನುಸರಿಸಿ ಜಮಿನು ಗವರ್ನಮೆಂಟಿನಿಂದ ಪಡಕೊಳ್ಳಲ್ಪಡುತ್ತೋ ಅಥವಾ ಐಯಿಂದ ಪಡಕೊಳ್ಳಲ್ಪಡಬಹುದೋ ಅಂತಾ ಯಾವದಾದರೂ ಒಡಂಬಡಿಕೆ, ಗುತ್ತಿಗೆ ಅಥವಾ ಸ್ಪಷ್ಟವಾದ ಇತರ ದಸ್ತಾವೇಜಿನ ನಿಬಂಧನೆಗಳ ಅಥವಾ ಷರತ್ತುಗಳ ನಿಜಸ್ತಿತಿಯನ್ನು, ಬಾಧಿಸತಕ್ಕದ್ದಲ್ಲವು.

ಮುಂ. ರೆ. ಕೋ. 79ನೇ ಸೆಕ್ಷನ.

ಅನುಭವದಾರನಾಗಲೀ ಹಿಡುವಳೀದಾರನಾಗಲಿ, ಅನುಭವ ಅಥವಾ ಹಿಡುವಳಿ, ಕ್ರಮವಾಗಿ ರಾಜೀನಾಮೇ ಕೊಡಲ್ಪಡುವತನಕ ಅಥವಾ ವರ್ಗಮಾಡಲ್ಪಡುವತನಕ ತಮಾಂ ತಗಾದೆಗಳಿಗೂ ಗುರಿಯಾಗಿರತಕ್ಕದ್ದು.

82. ರಿಜಿಸ್ಟರಾದ ಅನುಭವದಾರನಾಗಲಿ, ಪರಭಾರೇಯಾದ ಜಮಿನಿನ ಹಿಡುವಳೀದಾರನಾಗಲಿ, ಅನುಭವಕ್ಕೋಸ್ಕರ ಅಥವಾ ಪರಭಾರೇಯಾದ ಹಿಡುವಳಿಗೋಸ್ಕರ ಮತ್ತು ಸದರೀ ಬಗ್ಗೆ ಗವರ್ನಮೆಂಟಿನ ನ್ಯಾಯವಾದ ಇತರ ತಗಾದೆಗಳಿಗಾಗಿ ಸಲ್ಲತಕ್ಕ ಜಮಿನ ಕಂದಾಯವನ್ನು ಸದರೀ ಅನುಭವವಾಗಲಿ ಪರಭಾರೆಯಾದ ಹಿಡುವಳಿಯಾಗಲಿ ಈ ರೆಗ್ಯುಲೇಷನಿನ ಯಾವದಾದರೂ ನಿಬಂಧನೆಗಳನುಸರಿಸಿ ಬೇರೆ ಯಾವನಾದರೂ ಒಬ್ಬನ ಹೆಸರಿಗೆ ಯಾವ

ಕಾಲಕ್ಕೆ ರಾಜೀನಾಮೆ ಕೊಡಲ್ಪಡುತ್ತೋ ಅಥವಾ ವರ್ಗಾಯಿಸಲ್ಪಡುತ್ತೋ ಆಕಾಲದವರಿಗೆ ಕೊಡುತ್ತಾ ಬರುವದಕ್ಕೆ ಗುರಿಯಾಗಿರುವನು ಮತ್ತು ಹಿಂದಿನ ನಿಬಂಧನೆಗ ಪ್ರಕಾರ ವರ್ಗಾವರ್ಗಿಯು ರೆವಿನ್ಯೂ ರಿಕಾರ್ಡುಗಳಲ್ಲಿ ದಾಖಲ್ಮಾಡಲ್ಪಟ್ಟಹೊರ್ತು ಅನುಭವದ ಅಥವಾ ಪರಭಾರೆಯಾದ ಹಿಡುವಳಿಯ ಯಾವದಾದರೂ ಭಾಗದ ವಿಷಯದಲ್ಲಿ ಯಾರಿಗೆ ಯಾವದಾದರೂ ಸಂಬಂಧವು ಪರಭಾರೇ ಮಾಡಲ್ಪಟ್ಟಿರುತ್ತೋ ಅಂತಾ ಯಾವ ಮನುಷ್ಯನನ್ನಾಗಲಿ, ಮಂಜೂರ್ ಮಾಡಲಿಕ್ಕೆ ಯಾವ ಸಂಗತಿಯಲ್ಲಿಯೂ ಡೆಪ್ಯುಟಿ ಕಮ್ಮಿಷನರು ಬದ್ಧರಾಗಿರತಕ್ಕದ್ದಲ್ಲವು.

ಅನುಭವಗಳು ಸರ್ಕಾರಕ್ಕೆ ಸೇರಿ ಹೋಗದಿರುವದಕ್ಕೆ
ಪರಿಹಾರಗಳು.

ಮುಂ. ರೆ. ಕೋ. 80ನೇ ಸೆಕ್ಷನ್.

ಅನುಭವವನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುವದನ್ನು ಕಳಕೊಳ್ಳುವದಕ್ಕೆ ರಿಜಿಸ್ಟರಾದ ಅನುಭವದಾರನಲ್ಲದೆ ಇತರ ಕೆಲವು ಮನುಷ್ಯರು ಜಮೀ ಕಂದಾಯವನ್ನು ಕೊಡಬಹುದು.

83. 59ನೇ ಸೆಕ್ಷನಿನ ಅಥವಾ ತತ್ಕಾಲಕ್ಕೆ ಜಾರೀಯಿರುವ ಯಾವದಾದರೂ ಇತರ ಕಾನೂನಿನ ನಿಬಂಧನೆಗಳನುಸರಿಸಿ ಯಾವದರ ಬಗ್ಗೆ ಸಲ್ಲತಕ್ಕ ಜಮೀ ಕಂದಾಯವು ರಿಜಿಸ್ಟರಾದ ಅನುಭವದಾರನಿಂದ ಪಾವತಿಯಾಗದಿರುವ ಅಂತಾ ಅನುಭವವು, ಅಂತಾ ನಪಾವತೀಬಗ್ಯಾಗಿ ಸರ್ಕಾರಕ್ಕೆ ಶೇರಿ ಹೋಗುವದನ್ನು ತಪ್ಪಿಸುವದಕ್ಕೋಸ್ಕರ ಅನುಭವದಾರ, ಯಾವನಾದರೂ ಜಂಟೀ ಷಿಕ್ಮೀದಾರ, ಭೋಗ್ಯದಾರ ಅಥವಾ ಅನುಭವವನ್ನು ನಡಿಸಿಕೊಂಡು ಬರುವದರಲ್ಲಿ ಮುತವರ್ಜೆವುಳ್ಳ ಇತರ ಮನುಷ್ಯನು, ಜಮೀ ಕಂದಾಯಕ್ಕಾಗಿ ಸಲ್ಲತಕ್ಕ ತಮಾಂ ಮೊಬಲಗ್‌ಗಳನ್ನೂ ಅಂತಾ ರಿಜಿಸ್ಟರಾದ ಅನುಭವದಾರನಿಗೋಸ್ಕರ ಪಾವತೀ ಮಾಡುವದಕ್ಕೂ ಮತ್ತು ಡೆಪ್ಯುಟಿ ಕಮ್ಮಿಷನರು ಅದನ್ನು ತೆಗೆದುಕೊಳ್ಳುವದಕ್ಕೂ ಯಖ್ತ್ಯಾರಿ ಉಳ್ಳವರಾಗಿರತಕ್ಕದ್ದು. ಮತ್ತು ಅಂತಾ ಯಾವ ಸಂಗತಿಯಲ್ಲಾಗಲಿ, ಈ ಮೇಲೆ ಕಂಡಂತೆ ಜಮೀಕಂದಾಯವನ್ನು ಕೊಟ್ಟಿರುವ ಮನುಷ್ಯನು ಒಂದು ಸಾಗುಜಮೀನಿನ ಅಥವಾ ಸರ್ವೇ ನಂಬರಿನ ಭಾಗಗಳ ಅನುಭವದಲ್ಲಿರುವ ಇತರ ಮನುಷ್ಯರಿಂದ ಯುಕ್ತವಾಗಿ ಪಾವತೀ ಮಾಡಲ್ಪಡತಕ್ಕದ್ದೆಂದು ಡೆಪ್ಯುಟಿ ಕಮ್ಮಿಷನರು ಭಾವಿಸಬಹುದಾದ ದಾಮಾಷಾಯ ಮೊಬಲಗ್‌ಗಳನ್ನು ವಸೂಲ್ ಮಾಡುವಬಗ್ಯೆ, ಹಾಗೆ ಪಾವತೀ ಮಾಡುವ ಜನಗಳು ರಿಜಿಸ್ಟರಾದ ಅನುಭವದಾರರಾಗಿ ಇದ್ದಿದ್ದರೆ ನ್ಯಾಯತಃ ಕೊಟ್ಟಿರಬಹುದಾದ ಅಂತಾ ಹುಕುಮ್ನಾಮ್ಯವನ್ನು ಕೊಡಬಹುದು.

ಕಂದಾಯವನ್ನು ಕೊಡುವದಕ್ಕೆ ಜವಾಬ್‌ದಾರರಾದ ಇತರ ಮನುಷ್ಯರಿಂದ ಕಂದಾಯವನ್ನು ವಸೂಲ್ಮಾಡುವದರಲ್ಲಿ ಡೆಪ್ಯುಟಿ ಕಮ್ಮಿಷನರು ಹುಕುಮ್ ಮಾಡಬಹುದು.

ಪರಂತು, ಈ ಸೆಕ್ಷನಿನ ನಿಬಂಧನೆಗಳನುಸರಿಸಿ ನಿಯಮಿಸಲ್ಪಟ್ಟ ಅಥವಾ ನೆರವೇರಿಸಲ್ಪಟ್ಟ ಯಾವ ಅಂಶವೂ, ತಕ್ಕ ಅಧಿಕಾರವುಳ್ಳ ಒಂದು ಕೋರ್ಟಿನಲ್ಲಿ ಅಂತಾ ಕಕ್ಷಿಗಾರರಿಗೆ ಇರತಕ್ಕ ಯಾವದಾದರು ವ್ಯಾಜ್ಯದಲ್ಲಿ ನಿರ್ಣಯಿಸಲ್ಪಡಬಹುದಾದಂಥಾ ಅವರುಗಳ ಹಕ್ಕುಗಳಿಗೆ ಬಾಧಕವಾಗತಕ್ಕದ್ದಲ್ಲವು.

ಮುಂ. ರೆ. ಕೋ. 81ನೇ ಸೆಕ್ಷನ್.

ಡೆಪ್ಯುಟಿ ಕಮ್ಮಿಷನರು ಜಮೀ ಕಂದಾಯದವಸೂಲಾತೀ

84. ರಿಜಿಸ್ಟರಾದ ಒಬ್ಬ ಅನುಭವದಾರನು ತನ್ನ ಜಂಟೀ ಅನುಭವದಾರರಿಗಾಗಲಿ ಅನುಭವನಡೆದುಬರುವದರಲ್ಲಿ ಅಕ್ಕರೆವುಳ್ಳ ಇತರ ಮನುಷ್ಯರಿಗಾಗಲೀ ನುಕ್ಸಾನ್ ಅಥವಾ ಮೋಸಪಡಿಸುವ

ಬಗ್ಯೆ ಅನುಭವವನ್ನು ಹರಾಜ್ ಮಾಡುವದಕ್ಕೆ ಬದಲಾಗಿ, ಕೆಲವು ಸಂಗತಿಗಳಲ್ಲಿ ಜಂಟಿ ಅನುಭವದಾರನನ್ನಾಗಲಿ ಇತರ ಮನುಷ್ಯನನ್ನಾಗಲಿ ರಿಜಿಸ್ಟರಾದ ಅನುಭವದಾರನ್ನಾಗಿ ಮಾಡಬಹುದು.

ಉದ್ದೇಶದಿಂದ ಅಥವಾ ಅನುಭವದ ವಿಕ್ರಯವಾಗುವದರಿಂದ ಅಂತಾ ಜಂಟೀ ಅನುಭವದಾರರಿಗೆ ಅಥವಾ ಇತರ ಮನುಷ್ಯರಿಗೆ ಬಾಧಕವಾಗುತ್ತೆಂಬುವ ಕೋರಿಕೆಯಿಂದ ಜಮೀನ್ ಕಂದಾಯವನ್ನು ಪಾವತಿ ಮಾಡಲಿಕ್ಕೆ ತಪ್ಪಿದನೆಂದು ಡೆಪ್ಯುಟಿ ಕಮ್ಮಿಷನರಿಗೆ ಕಾಣಬಂದರೆ, ಆತನು ಅನುಭವವನ್ನು ವಿಕ್ರಯಿಸುವದಕ್ಕೆ ಬದಲಾಗಿ ಸದರೀ ಅನುಭವದಲ್ಲಿ ಸದರೀ ರಿಜಿಸ್ಟರಾದ ಅನುಭವದಾರನ ಸಂಬಂಧವನ್ನು ಮಾತ್ರ ಸರ್ಕಾರಕ್ಕೆ ಸೇರಿಸಿಕೊಂಡು, ಅಂತಾ ಯಾವನಾದರೂ ಜಂಟೀ ಅನುಭವದಾರನು ಅಥವಾ ಇತರ ಮನುಷ್ಯನು, ಅನುಭವದ ಜಮೀನ್ ಕಂದಾಯಕ್ಕಾಗಿ ಸಲ್ಲತಕ್ಕ ತಮಾಂ ಮೊಬಲಗ್‌ಗಳನ್ನೂ ಪಾವತೀ ಮಾಡಿದ ಮೇಲೆ, ಅವನ ಹೆಸರನ್ನು ರೆವಿನ್ಯು ರಿಕಾರ್ಡಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟ ಅನುಭವದಾರನ ತರೀಕ್ ದಾಖಲ್ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷನರಿಗೆ ಯಖ್ತ್ಯಾರಿಯುಂಟು. ಮತ್ತು ಹಾಗೆ ರಿಜಿಸ್ಟರ್‌ದಾಖಲಾದ ಅನುಭವದಾರನಾಗತಕ್ಕ ಅಂತಾಮನುಷ್ಯನು ಅನುಭವದಲ್ಲಿರುವ ಮಿಕ್ಕ ತಮಾಂ ಜನಗಳ ವಿಷಯದಲ್ಲಿ 104ನೇ ಸೆಕ್ಷನ್‌ನಿಂದ ವಿಧಿಸಲ್ಪಟ್ಟ ಹಕ್ಕುಗಳನ್ನೂ ಪರಿಹಾರಗಳನ್ನೂ ಪಡೆಯತಕ್ಕದ್ದು.

7ನೇ ಅಧ್ಯಾಯ.

ಮೇಲ್ಪಟ್ಟ ಮತ್ತು ಕೀಳ್ಪಟ್ಟ ಹಿಡುವಳೀದಾರರನ್ನು ಕುರಿತು.

ಷಿಕ್ಮೀದಾರನ ಹಕ್ಕುಗಳು.

"ಕಂದಾಯದ ಷಿಕ್ಮೀದಾರ್" ಎಂಬದು.

85. ಪರಭಾರೇಯಾದ ಜಮೀನು, ಪರಭಾರೆಯಾದ ಗ್ರಾಮದಲ್ಲಿರಲಿ, ಇಲ್ಲದೆ ಇರಲಿ, ಪರಂತು ಅದರ ಹಿಡುವಳೀಯುಳ್ಳ ಮತ್ತು ಅಂತಾ ಜಮೀನಿನ ಮೇಲ್ಪಟ್ಟ ಹಿಡುವಳೀದಾರನಿಗೆ, ಗುತ್ತಿಗೆ ಮೂಲಕವಾಗಲಿ ಜಮೀನ್ ಕಂದಾಯದ ಮೂಲಕವಾಗಲಿ, ಅಂತಾ ಜಮೀನ್, ಗವರ್ನಮೆಂಟಿನಿಂದ ಪರಭಾರೇಮಾಡಲ್ಪಟ್ಟಾಗ ಜಾರೀಯಲ್ಲಿದ್ದ ದರಗಳ ಪ್ರಕಾರವಾಗಲಿ, ಗ್ರಾಮಕ್ಕೆ ಜಮೀನ್ ಕಂದಾಯದ ಏರ್ಪಾಡನುಸರಿಸಿ ಸ್ಥಾಪಿಸಲ್ಪಟ್ಟ ದರಗಳ ಪ್ರಕಾರ ಈಚೆಗೆ ಠರಾವ್ ಮಾಡಲ್ಪಟ್ಟ ದರಗಳ ಪ್ರಕಾರವಾಗಲಿ, ತಕ್ಕ ರೆವಿನ್ಯು ಅಧಿಕಾರಿಯಿಂದ, ಅಥವಾ ಸರ್ವೇ ಸೆಟಲ್‌ಮೆಂಟ್ ಮೂಲಕ ಠರಾವ್ ಮಾಡಲ್ಪಟ್ಟ ದರಗಳ ಪ್ರಕಾರವಾಗಲಿ, ಹಣದ ರೂಪವಾಗಿ ಮೊಕರರ್ಮಾಡಲ್ಪಟ್ಟ ಒಂದು ಗುತ್ತಿಗೆ ಮೊಬಲಗನ್ನು ತೆರತಕ್ಕ ಒಬ್ಬ ಷಿಕ್ಮೀದಾರನು ಅಂತಾ ಜಮೀನ್ ಬಗ್ಯೆ ತಹಲ್ ಕೊಡುತ್ತಿದ್ದ ಗುತ್ತಿಗೆ ಪ್ರಕಾರವಾಗಲಿ, ಅಂತಾ ಗುತ್ತಿಗೆ ಬದಲಾಯಿಸಲ್ಪಟ್ಟರೆ, ಹಾಗೆ ಬದಲಾಯಿಸಲ್ಪಟ್ಟದರದ ಪ್ರಕಾರವಾಗಲಿ ಕೊಟ್ಟುಕೊಂಡು ಆ ಜಮೀನನ್ನು ಪಡೆದುಕೊಂಡಿರುವದಕ್ಕೆ ಹಕ್ಕು ಉಂಟಾಗಿರತಕ್ಕದ್ದು.

ಅಂತಾ ಒಬ್ಬ ಷಿಕ್ಮೀದಾರನು "ಕಂದಾಯದ ಷಿಕ್ಮೀದಾರನೆಂದು" ಕರೆಯಲ್ಪಡತಕ್ಕದ್ದು.

"ಒಬ್ಬ ಕಂದಾಯದ ಷಿಕ್ಮೀದಾರನು" ಯಾವನಿಂದ ತನ್ನ ಬಾಧ್ಯತೆಯನ್ನು ಪಡೆಯುತ್ತಾನೋ ಅಂತಾ ಮನುಷ್ಯನಿಂದಾಗಲಿ, ಮನುಷ್ಯರಿಂದಾಗಲಿ, ವಸೂಲಾಗತಕ್ಕ ಗುತ್ತಿಗೆಯು ಈ ಸೆಕ್ಷನಿನ ಅರ್ಥಪ್ರಕಾರ ಅಂತಾ ಷಿಕ್ಮೀದಾರನಿಂದ ವಸೂಲಾಗತಕ್ಕ ಗುತ್ತಿಗೆಯಾಗಿರತಕ್ಕದ್ದು.

ಪರಭಾರೆಯಾಗದ ಜಮೀನಿನ ಅನುಭವದಾರನಿಗೆ, ಉಂಟುಮಾಡಲ್ಪಟ್ಟ ತಮಾಂ ಹಕ್ಕುಗಳೂ ಕಂದಾಯದ ಷಿಕ್ಮೀದಾರನಿಗೆ ಉಂಟಾಗತಕ್ಕದ್ದು.

"ಒಬ್ಬ ಕಂದಾಯದ ಷಿಕ್ಮೀದಾರನು" ಪರಭಾರೆಯಾಗದ ಜಮೀನಿನ ಅನುಭವದಾರನಿಗೆ ಈ ರೆಗ್ಯುಲೇಷನಿಂದ ಉಂಟುಮಾಡಲ್ಪಟ್ಟ ತಮಾಂ ಹಕ್ಕುಗಳನ್ನು ಪಡೆಯತಕ್ಕದ್ದು.

"ಅನುಭವ ಷಿಕ್ಮೀದಾರರೆಂಬವರ" ವಿವರಣೆ.

86. ಬರವಣಿಗೆ ಮೂಲಕವಾದ ಗುತ್ತಿಗೆ ಅಲ್ಲದೆ ಬೇರೆವಿಧವಾಗಿ ಗೊತ್ತಾದ ಹಾಯಿದೆಗೆ ಪರಭಾರೆಯಾದ ಜಮೀನು, ಪರಭಾರೆಯಾದ ಗ್ರಾಮದಲ್ಲಿರಲಿ ಇಲ್ಲದೇ ಇರಲಿ, ಅಂತಾ ಜಮೀನನ್ನು ಹಿಡುವಳೀಯಲ್ಲಿ ಉಳ್ಳ ಮತ್ತು ಅಂತಾ ಜಮೀನನ್ನು 85ನೇ ಸೆಕ್ಷನ್ನಲ್ಲಿ ವಿವರಿಸಲ್ಪಟ್ಟ ದರಗಳ ಪ್ರಕಾರ ಮೊಕರರಾಗದ ತೀರ್ವೆಯನ್ನು ಮೇಲ್ಪಟ್ಟ ಹಿಡುವಳೀದಾರನಿಗೆ ಕೊಡುವ ಒಬ್ಬ ಷಿಕ್ಮೀದಾರನು, ಅಂತಾ ಜಮೀನನ್ನು 12ವರುಷಗಳಕಾಲ ಅವಿಚ್ಛಿನ್ನವಾಗಿ ವಸ್ತುತಃ ಅನುಭವಿಸಿ ಅಥವಾ ಸಾಗುವಳೀಮಾಡಿ ಇದ್ದರೆ, ಹಾಗೆ ಅವನಿಂದ ಅನುಭವಿಸಲ್ಪಟ್ಟ ಅಥವಾ ಸಾಗುವಳೀಮಾಡಲ್ಪಟ್ಟ ಜಮೀನಿನಲ್ಲಿ ಅನುಭವದ ಹಕ್ಕುದಾರಿಯನ್ನು ಪಡೆಯತಕ್ಕದ್ದು.

ಅಂತಾ ಷಿಕ್ಮೀದಾರನು "ಅನುಭವದ ಷಿಕ್ಮೀದಾರ್" ಯೆಂದು ಕರೆಯಲ್ಪಡತಕ್ಕದ್ದು.

ಅನುಭವದ ಷಿಕ್ಮೀದಾರನು ಯಾರಿಗೆ ವಾರಸ್‌ದಾರನಾಗಿರುತ್ತಾನೋ ಅಂತಾ ತಂದೆಯು ಅಥವಾ ಇತರ ಮನುಷ್ಯನ ಅನುಭವವಾಗಲಿ ಸಾಗುವಳೀಯಾಗಲಿ ಈ ಸೆಕಷನಿನ ಅರ್ಥ ರೀತ್ಯಾ ಅಂತಾ ಷಿಕ್ಮೀದಾರನ ಅನುಭವ ಯಾ ಸಾಗುವಳೀಯೆಂದು ಎಣಿಸಲ್ಪಡತಕ್ಕದ್ದು.

ಪರಂತು ಇದಕ್ಕೆ ನಿಯಮವೇನೆಂದರೆ :—

(a) ಒಬ್ಬ ಷಿಕ್ಮೀದಾರನು, ಬರವಣಿಗೆಯಲ್ಲಿರುವ ಗುತ್ತಿಗೆ ಅನುಸರಿಸಿ, ಅಂತಾ ಭೂಮಿಯಲ್ಲಿ ಅನುಭವದ ಹಕ್ಕಿಲ್ಲದೆ, ಗೊತ್ತಾದ ಒಂದು ಕಾಲದ ಪರ್ಯಂತ ಅಂತಾ ಜಮೀನನ್ನು ವಸ್ತುತಃ ಅನುಭವಿಸಿದರೆ ಅಥವಾ ಸಾಗುವಳೀ ಮಾಡಿದರೆ, ಸದರೀ ಜಮೀನಿನಲ್ಲಿ ಅವನಿಂದಾಗಲಿ, ಅವನ ಕೈಕೆಳಗೆ ಹಕ್ಕುಳ್ಳ ಯಾವನಿಂದಾಗಲಿ, ಅನುಭವದ ಹಕ್ಕನ್ನು ಪಡೆಯಲಿಕ್ಕೆ ಜರೂರಾದ 12 ವರುಷಗಳ ವಾಯಿದೆಯು, ಅಂತಾ ಗುತ್ತಿಗೆಯ ವಾಯಿದೆ ಪೂರೈಸಿದ ಮೇಲೆ ಷುರುವಾಗತಕ್ಕದ್ದು: ಅಂತಾ ಗುತ್ತಿಗೆಯ ಚಾಲ್ತೀಕಾಲದಲ್ಲಿ, ಆ ಗುತ್ತಿಗೆಯೊಳಗೆ ಅಡಗಿರುವ ಜಮೀನನ್ನು ಅನುಭವಿಸದೆ ಬಿಟ್ಟು ಅದನ್ನು ಮತ್ತೊಬ್ಬನಿಗೆ ಒಳಷಿಕ್ಮೀಗೆ ಕೊಡುವಪಕ್ಷಕ್ಕೆ ಅಂತಾ ಜಮೀನಿನಲ್ಲಿ ಅನುಭವದ ಹಕ್ಕು ಗುತ್ತಿಗೆ ಚಲಾವಣೀಕಾಲದಲ್ಲಿ ಒಳಗುತ್ತಿಗೇದಾರನಿಂದ ಪಡೆಯಲ್ಪಡತಕ್ಕದ್ದು.

737

(b) ಈ ಸೆಕ್ಷನ್‌ನಲ್ಲಿ ಸೂಚಿಸಲ್ಪಟ್ಟ ಅನುಭವದ ಹಕ್ಕುದಾರಿಯು, ಗುತ್ತಿಗೆಯು ನಗದಾಗಿಯಾಗಲಿ ಧಾನ್ಯರೂಪವಾಗಿ ಯಾಗಲಿ ಕೊಡಲ್ಪಟ್ಟಾಗ್ಯೂ, ಪಡಕೊಳ್ಳಲ್ಪಡತಕ್ಕದ್ದು.

ಕಂದಾಯದ ಷಿಕ್ಮೀದಾರನ ಹಕ್ಕು ಪಾರಂಪರ್ಯದ್ದಾಗಿಯೂ, ವರ್ಗೀಯವಾಗಿಯೂ ಇರತಕ್ಕದ್ದು.

87. "ಒಬ್ಬ ಕಂದಾಯದ ಷಿಕ್ಮೀದಾರನ" ಹಕ್ಕು, ಪಾರಂಪರ್ಯದ್ದಾದ ಮತ್ತು ವರ್ಗಮಾಡಲ್ಪಡತಕ್ಕ ಸ್ವತ್ತಾಗಿ ಯೆಣಿಸಲ್ಪಡತಕ್ಕದ್ದು; ಆದರೆ ಒಬ್ಬ "ಅನುಭವದ ಷಿಕ್ಮೀದಾರನ" ತರೀಕ್ ಹಿಡುವಳೀಯಲ್ಲಿ ವಹಿಸುವ ಹಕ್ಕು ದಾನ, ವಿಕ್ರಯ, ಗ್ರಾಂಟ್, ವುಯಿಲು ಅಥವಾ ಅನ್ಯಥಾ, ಅಂತಾ ಹಕ್ಕುದಾರೀವಿಷಯದಲ್ಲಿ ಪಾರಂಪರ್ಯದ ಮೂಲಕ ಜಂಟೀ ಹಿಸ್ಸೇದಾರರಾಗಿರುವ ಜನಗಳಲ್ಲಿ ಹ್ಯಾಗೋ ಹಾಗೆ ಹೊರತು ಅನ್ಯಥಾ ವರ್ಗವಾಗತಕ್ಕದ್ದಲ್ಲವು. "ಅನುಭವದ ಷಿಕ್ಮೀದಾರನ" ತರೀಕ್ ಹಿಡುವಳೀಯಲ್ಲಿ ವಹಿಸುವ ಹಕ್ಕುದಾರೀಗೆ ಅರ್ಹನಾದ ಯಾವ ಮನುಷ್ಯನಾಗಲಿ ಮೃತಪಟ್ಟರೆ, ಸದರೀ ಹಕ್ಕು ಜಮೀನಾಗಿದ್ದರೆ ಹ್ಯಾಗೋ ಅದೇ ಮೇರೆ ಹಕ್ಕು ಪ್ರಾಪ್ತವಾಗತಕ್ಕದ್ದು.

ಮೇಲ್ಪಟ್ಟ ಹಿಡುವಳೀದಾರನು ಪರಭಾರೇಯಾದ ಬಂಜರ್ ಜಮೀನ್‌ಗಳಿಗೆ ತನ್ನ ಸ್ವಂತ ಷರತುಗಳ ಪ್ರಕಾರ ಕಂದಾಯದ ಏರ್ಪಾಡು ಮಾಡಬಹುದು.

88. ಪರಭಾರೇಯಾದ ಯಾವ ಜಮೀನ್‌ಗಳು ಅನಾದಿ ಬಂಜರಾಗಿಯಾಗಲಿ ರಾಜೀನಾಮೇ ಮೂಲಕ ಬಂಜರು ಕೆಡಹಲ್ಪಟ್ಟಿರಲಿ ಅಂತಾ ಜಮೀನ್‌ವಿಷಯದಲ್ಲಿ ಒರವಣಿಗೆಯ ಕರಾರ್ ಮೂಲಕ ಅಂತಾ ಜಮೀನ್‌ಗಳಬಗ್ಗೆ ದರಖಾಸ್ತುದಾರರೊಡನೆ ತೀರ್ವೆಯ ವಿಷಯದಲ್ಲಿ ತನ್ನ ಸ್ವಂತ ಷರತ್ತುಗಳನ್ನು ಕುರಿತು ಯೇರ್ಪಾಡು ಮಾಡಿಕೊಳ್ಳುವದು ಸದರೀಮೇಲ್ಪಟ್ಟ ಹಿಡುವಳೀದಾರನಿಗೆ ನ್ಯಾಯವಾಗಿರತಕ್ಕದ್ದು; ಪರಂತು ಈ ಸೆಕ್ಷನಿನಲ್ಲಿರುವ ಯಾವ ಅಂಶವೋ; ಯಾವ ಹಕ್ಕುಗಳು ಕಾನೂನಿಂದಲಾಗಲಿ ಕಾನೂನಿನ ಬಲವುಳ್ಳ ಮಾಮೂಲ್‌ನಿಂದಾಗಲಿ, ಯಾವನಾದರೂ ಮನುಷ್ಯನಿಂದ ಅಥವಾ ಮನುಷ್ಯರ ಸಮುದಾಯದಿಂದ, ಅಂತಾ ಬಂಜರ್ ಯಾ ಅನುಭವದಲ್ಲಿಇಲ್ಲದ ಜಮೀನ್‌ಗಳಲ್ಲಿ ಉಂಟಾಗಿರುವ ಯಾವದಾದರೂ ಮುಖ್ಯ ಹಕ್ಕುಗಳಿಗೆ ಬಾಧಕವಾಗತಕ್ಕದ್ದಲ್ಲವು.

ಒಬ್ಬ ಕಂದಾಯದ ಷಿಕ್ಮೀದಾರನಿಂದ ಸಲ್ಲತಕ್ಕ ತೀರ್ವೆ ಎಷ್ಟರಮಟ್ಟಿಗೆ ಜಾಸ್ತೀ ಮಾಲ್ಪಡಬಹುದು.

89. ಒಬ್ಬ "ಕಂದಾಯದ ಷಿಕ್ಮೀದಾರನಿಂದ" ಸಲ್ಲತಕ್ಕ ತೀರ್ವೆಯು, ಜಾಸ್ತೀಮಾಡಲ್ಪಡಲಿಕ್ಕೆ ಗುರೀಯಾಗತಕ್ಕದ್ದಲ್ಲವು, ಇದಕ್ಕೆ ವಿನಾಯಿತಿಗಳು ಯಾವವಂದರೆ:—

(a) 117, 128 ಮತ್ತು 244 ಈಸೆಕ್ಷನ್‌ಗಳನುಸರಿಸಿ ಒಂದು ಸರ್ವೇಯಲ್ಲಿ ಗೊತ್ತುಮಾಡಲ್ಪಟ್ಟು ರಿಕಾರ್ಡುಮಾಡಲ್ಪಟ್ಟ ಪ್ರಕಾರ ಯುಕ್ತವಾದ ಪೂರಾ ಕಂದಾಯದ ಪರಿಮಾಣ.

(b) ಮೇಲ್ಪಟ್ಟ ಹಿಡುವಳೀದಾರನಿಗೆ, ಗವರ್ನ್‌ಮೆಂಟಿನವರು ಹೊಸದಾಗಿ ಕಂದಾಯ ವಿಧಿಸಬಹುದಾದ ಜಮೀನ್‌ಗಳ ಮೇಲೆ ಮೊಕರರ್ ಆಗತಕ್ಕ ಯಾವದಾದರೂ ತೀರ್ವೆಗಾಗಿ ನುಕ್ಸಾನ್ ಕಟ್ಟಿಕೊಡುವ ಬಗ್ಗೆ ಜರೂರಾದ ಪರಿಮಾಣ.

(c) ಮೇಲ್ಪಟ್ಟ ಹಿಡುವಳೀದಾರನ ಖರ್ಚಿನಿಂದ ಒಂದು ಹಿಡುವಳಿಗೆ ನೆರವೇರಿಸಲ್ಪಟ್ಟಯಾವದಾದರೂ ನೀರಾವರಿ ಕೆಲಸದ ಮೂಲಕವಾಗಲಿ, ಹಿಡುವಳಿಗೆ ಉಂಟಾದ ಹೆಚ್ಚು ಆದಾಯದ ಪರಿಮಾಣ ಅಥವಾ ಸರ್ಕಾರದ ನೀರನ್ನು ಉಪಯೋಗಿಸುವದರ ಮೂಲಕವಾಗಲಿ, ಗವರ್ನಮೆಂಟ ಖರ್ಚಿನಲ್ಲಿ ನೆರವೇರಿಸಲ್ಪಟ್ಟ ಯಾವದಾದರೂ ನೀರಾವರಿ ಕೆಲಸದಿಂದಾಗಲಿ, ಅಭಿವೃದ್ಧಿಯ ಬಾಬತು ಇತರ ಕೆಲಸದಿಂದಾಗಲಿ, ಹಿಡುವಳಿಗೆ ಜಾಸ್ತಿ ಆದಾಯವನ್ನುಂಟುಮಾಡಿದ ಸಬಬಿನಿಂದ ಗವರ್ನಮೆಂಟಿನವರು ಕೊಡಬೇಕೆಂದು ಕೇಳುವ ಹೆಚ್ಚು ತೀರ್ವೆಯ ಪರಿಮಾಣ.

ಈ ಮೂರು ಬಗೆಯಲ್ಲಿ ಹೆಚ್ಚು ತೀರ್ವೆಯನ್ನು ಕೊಡುವದಕ್ಕೆ ಕಂದಾಯದ ಷಿಕ್ಮೀದಾರನು ಗುರಿಯಾಗುವನು.

ನಿಯಮ.

ಪರಂತು, ಈ ಸೆಕ್ಷನ್ನನುಸರಿಸಿ ಒಂದು ಹಿಡುವಳಿಗೆ ಉಂಟು ಮಾಡಲ್ಪಟ್ಟ ಜಾಸ್ತೀ ಆದಾಯದಬಗ್ಗಾಗಿ ಸಲ್ಲತಕ್ಕ ತೀರ್ವೆಯ ಅಧಿಕ್ಯವು, ಗ್ರಾಮದ ಸ್ಥಾಪಿಸಲ್ಪಟ್ಟ ಸ್ಥಳವಾಡಿಕೆಯ ಪ್ರಕಾರ ಠರಾಯಿಸಲ್ಪಡತಕ್ಕದ್ದು. ಅಥವಾ ಅಂತಾ ಸ್ಥಳವಾಡಿಕೆ ಇಲ್ಲದಪಕ್ಷಕ್ಕೆ, ಪರಭಾರೇಯಾದ, ಅಥವಾ ಪರಭಾರೆಯಾಗದ ಜಮೀನುಗಳ ವಿಷಯದಲ್ಲಿ ಬದಸ್ತೂರ್ ಗುಣವೂ ಬದಸ್ತೂರ್ ಪ್ರಯೋಜನಗಳೂ ಉಳ್ಳ ಆಸ್‌ಪಾಸ್ ಗ್ರಾಮಗಳಲ್ಲಿ ಜಾರೀಯಲ್ಲಿರುವ ಕಂದಾಯದ ದರಗಳ ಪ್ರಕಾರವೂ ಠರಾವ್ ಮಾಡಲ್ಪಡತಕ್ಕದ್ದು ; ಮತ್ತು

(d) ಒಂದು ಜಮೀನಿನ ದೆಶೆಯಿಂದ ಹಿಡುವಳಿಯು ಜಾಸ್ತೀ ಬೀಜವರಿ ಯೆಷ್ಟರಮಟ್ಟಿಗೆ 51 ಮತ್ತು 67ನೇ ಸೆಕ್ಷನ್‌ಗಳಲ್ಲಿ ವಿವರಿಸಲ್ಪಟ್ಟ ಷರತ್ತುಗಳಿಗೆ ಒಳಪಟ್ಟಿದ್ದರೂ, ಸದರೀ ತೀರ್ವೆಯನ್ನು ಹೆಚ್ಚು ಮಾಡಬಹುದು.

ಒಬ್ಬ ಅನುಭವದ ಷಿಕ್ಮೀದಾರನಿಂದ ಸಲ್ಲತಕ್ಕ ತೀರ್ವೆಯು ಯಾವ ಸಬಬುಗಳ ಮೇಲೆ ಜಾಸ್ತೀಮಾಡಲ್ಪಡುವದು.

90. ಒಬ್ಬ "ಅನುಭವದ ಷಿಕ್ಮೀದಾರನಿಂದ" ಸಲ್ಲತಕ್ಕ ತೀರ್ವೆಯು ಈ ಕೆಳಗೆ ಕಂಡ ಸಬಬುಗಳ ಪೈಕೀ ಯಾವದರ ಮೇಲಾಗಲಿ ಜಾಸ್ತೀ ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದೇ ಹೊರತು ಇತರ ಸಬಬುಗಳಿಗೆ ಗುರಿಯಾಗತಕ್ಕದ್ದಲ್ಲವು. ಅವುಗಳ್ಯಾವವೆಂದರೆ:—

(a) ಅಂತಾ ಷಿಕ್ಮೀದಾರನಿಂದ ಕೊಡಲ್ಪಡುವ ತೀರ್ವೆಯ ದರವು, ಬದಸ್ತೂರ್ ಪ್ರಯೋಜನಗಳುಳ್ಳ ಜಮೀನಿಗಾಗಿ ಷಿಕ್ಮೀದಾರರ ಬದಸ್ತೂರ್ ತರಗತಿಯಿಂದ ಕೊಡಲ್ಪಡತಕ್ಕ ಜಾರೀಯಲ್ಲಿರುವ ದರಕ್ಕೆ ಕಮ್ಮಿಯಾಗಿರತಕ್ಕದ್ದು:

(b) ಹಿಡುವಳೀಯಲ್ಲಿ ಉಳ್ಳ ಜಮೀನಿನ ಉತ್ಪತ್ತಿಯ ಕಿಮ್ಮತು ಅಥವಾ ಜಮೀನಿನ ಉತ್ಪತ್ತಿಯ ಶಕ್ತಿಯು, ಷಿಕ್ಮೀದಾರನ ಮೂಲಕ ಅಥವಾ ಅವನ ಖರ್ಚಿನಿಂದಲ್ಲದೆ ಬೇರೆ ವಿಧವಾಗಿ ವೃದ್ಧಿ ಮಾಡಲ್ಪಟ್ಟಿರುವದು:

(c) ಷಿಕ್ಮೀ ಹಿಡುವಳೀಯಲ್ಲಿ ಉಳ್ಳ ಜಮೀನಿನ ಪರಿಮಾಣವು, ಒಂದು ಮೂಲಕವಾಗಲಿ, ಅನ್ಯಥಾ ಆಗಲಿ, ವೃದ್ಧಿ ಮಾಡಲ್ಪಟ್ಟಿರುವದು ಅಥವಾ ಯೆಷ್ಟಕ್ಕೆ ತಾನು ಮೊದಲು ತೀರ್ವೆ ಕೊಡುತ್ತಿದ್ದನೋ ಅಂತಾ ಪರಿಮಾಣಕ್ಕಿಂತ ಮೋಜಣಿಯಲ್ಲಿ ಜಾಸ್ತಿಯಾಗಿರುವಂತೆ ರುಜುವಾಗಿರುವದು : ಈ ಸಂಗತಿಗಳಲ್ಲಿ ಮಾತ್ರ ಹೆಚ್ಚು ತೀರ್ವೆಯನ್ನು ಕೊಡಲಿಕ್ಕೆ ಅನುಭವದ ಷಿಕ್ಮೀದಾರನು ಗುರಿಯಾಗುವನು.

739

ಕಂದಾಯದ ಅಥವಾ ಅನುಭವದ ಷಿಕ್ಮೀದಾರನಿಂದ ಪಾವತೀ ಮಾಡಲ್ಪಡತಕ್ಕ ತೀರ್ವೆಯನ್ನು ಕಮ್ಮಿ ಮಾಡುವಬಗ್ಯೆ ಸಬಬ್‌ಗಳು.

91. ಒಬ್ಬ "ಕಂದಾಯದ" ಅಥವಾ "ಅನುಭವದ" ಷಿಕ್ಮೀದಾರನಿಂದ ಸಲ್ಲತಕ್ಕ ತೀರ್ವೆಯು, ಅವನ ಹಿಡುವಳಿಯಲ್ಲಿ ಉಳ್ಳ ಜಮೀನಿನ ಬೇಜವರಿಯು, ಅವನ ಅಧಿಕಾರಕ್ಕೆ ಅತಿಕ್ರಮಿಸಿದ ಯಾವಕಾರಣದಿಂದಲಾಗಲಿ ಉಂಟಾದ ಪ್ರವಾಹದಿಂದ ಅಥವಾ ಇತರಕಾರಣದಿಂದ ಕಮ್ಮಿ ಮಾಡಲ್ಪಟ್ಟಿದೆಯೆಂಬ ಸಬಬಿನಮೇಲೆ ಕಮ್ಮಿ ಮಾಡಲ್ಪಡಲಿಕ್ಕೆ ಗುರಿಯಾಗಿರುತ್ತೆ.

ತೀರ್ವೆಯು ಜಾಸ್ತೀ ಯಾ ಕಮ್ಮಿ ಮಾಡುವಬಗ್ಯೆ ಡೆಪ್ಯುಟಿ ಕಮ್ಮಿಷನರಲ್ಲಿ ದರಖಾಸ್ತು ಮಾಡತಕ್ಕದ್ದು.

92. 89, 90 ಮತ್ತು 91ನೇ ಸೆಕ್ಷನ್‌ಗಳಲ್ಲಿ ವಿವರಿಸಲ್ಪಟ್ಟ ಯಾವ ಸಬಬಿನ ಮೇಲಾಗಲಿ, ತೀರ್ವೆ ಜಾಸ್ತಿ ಯಾ ಕಮ್ಮಿ ಬಗ್ಯೆ ಮಾಡಲ್ಪಡುವ ಪ್ರತಿದರಖಾಸ್ತನ್ನೂ, ಯಾವಬಗ್ಯೆ ಅಂತಾ ತೀರ್ವೆ ಕೊಡತಕ್ಕದ್ದೋ ಅಂತಾ ಜಮೀನು ಯಾವ ಡಿಸ್ಟ್ರಿಕ್ಟಿನಲ್ಲಿರುತ್ತೋ ಅಂತಾ ಡೆಪ್ಯುಟಿ ಕಮ್ಮಿಷನರವರಿಗೆ ಮಾಡತಕ್ಕದ್ದು. ಅವರು ಕ್ರಮವಾದ ವಿಚಾರಣೆ ಮಾಡಿ ಅಂತಾ ಪ್ರತಿ ಅರ್ಜಿಯನ್ನೂ ಫೈಸಲ್ಮಾಡತಕ್ಕದ್ದು.

85ರ ಮೊದಲು 92ರ ವರಿಗಿನ ಸೆಕ್ಷನ್‌ಗಳಲ್ಲಿರುವ ಯಾವ ಅಂಶವೂ, ಜಮೀನ್ದಾರನು ಮತ್ತು ಷಿಕ್ಮೀದಾರನು ಬರವಣಿಗೆ ಮೂಲಕವಾದ ಕರಾರಿನಿಂದ ಮಾಡಿಕೊಳ್ಳುವ ತೀರ್ವೆಯ ಜಾಸ್ತೀ ಯಾ ಕಮ್ಮಿ ಮಾಡುವದನ್ನು ಆತಂಕ ಪಡಿಸತಕ್ಕದ್ದಲ್ಲವು.

93. 85ರ ಮೊದಲು 92ರ ವರಿಗೆ (ಉಭಯ ಸೆಕ್ಷನ್‌ಗಳೂ ಒಳತವಾಗಿ) ಯಿರತಕ್ಕ ಸೆಕ್ಷನ್‌ಗಳಲ್ಲಿ ಅಡಗಿರುವ ಯಾವ ಅಂಶವೂ, ದಸ್ತಾವೇಜುಗಳ ರಿಜಿಸ್ಟರ್ ಮಾಡುವದಕ್ಕೆ ಸಂಬಂಧಿಸಿದ ತತ್ಕಾಲದಲ್ಲಿ ಜಾರೀಯಿರುವ ಯಾವದಾದರೂ ಕಾನೂನಿನ ನಿಬಂಧನೆಗಳ ಪ್ರಕಾರ ಕ್ರಮವಾಗಿ ರಿಜಿಸ್ಟರ್ ಮಾಡಲ್ಪಟ್ಟ ಷಿಕ್ಮೀದಾರನ ಮತ್ತು ಜಮೀನ್ದಾರನ ಬರವಣಿಗೆಯಲ್ಲಿರುವ ಒಡಂಬಡಿಕೆಯು ಮೂಲಕ ತೀರ್ವೆ ಜಾಸ್ತೀಯನ್ನಾಗಲಿ ಕಮ್ಮಿಯನ್ನಾಗಲಿ ಮಾಡುವದನ್ನ ಆತಂಕ ಪಡಿಸುವದಾಗಿ ಯೆಣಿಸತಕ್ಕದ್ದಲ್ಲವು. ಅಥವಾ ಅಂತಾ ಒಡಂಬಡಿಕೆಗಳ ಮೇಲೆ ಹುಟ್ಟುವ ವ್ಯಾಜ್ಯಗಳನ್ನು ದಾಖಲ್ ಮಾಡಿಕೊಳ್ಳುವದರ ದೆಸೆಯಿಂದ ಸಿವಿಲ್‌ಕೋರ್ಟುಗಳನ್ನು ಆತಂಕ ಪಡಿಸತಕ್ಕದ್ದಲ್ಲವು.

ತೀರ್ವೆ ಜಾಸ್ತೀಬಗ್ಯಾಗಲಿ, ಕಮ್ಮಿಬಗ್ಯಾಗಲಿ, ಫೈಸಲಿನ ಅಮಲ್ ಯಾವ ತಾರಿಖು ಲಾಗಾಯತು ಷುರುವಾಗತಕ್ಕದು.

94. 92ನೇ ಸೆಕ್ಷನ್ ಅನುಸರಿಸಿ ಡೆಪ್ಯುಟಿ ಕಮ್ಮಿಷನರಿಂದ ಮಂಜೂರ್ ಮಾಡಲ್ಪಟ್ಟ, ತೀರ್ವೆಯ ಜಾಸ್ತೀಬಗ್ಯಾಗಲಿ, ಕಮ್ಮಿಬಗ್ಯಾಗಲಿ, ಕೊಡಲ್ಪಟ್ಟ ಪ್ರತಿ ಫೈಸಲೂ ಅನ್ಯಥಾ ಕಂತೋಕ್ತವಾಗಿ ನಿಯಮಿಸದೆಯಿದ್ದರೆ, ದಾವೇದಾಖಲ್ಮಾಲ್ಪಡುವ ತಾರೀಖಿನ ತರುವಾಯ ಬರುವ ರೆವಿನ್ಯೂ ಸಾಲ್ ಷುರು ಲಾಗಾಯತ ಜಾರೀಯಲ್ಲಿ ಬರತಕ್ಕದ್ದು.

ಮುಂ. ರೆ. ಕೋ. 84ನೇ ಸೆಕ್ಷನ್.

ಸಾಲಿಯಾನಾ ಷಿಕ್ಮಿಯು ಮಾರ್ಚಿ 31ಕ್ಕೆ ಆಖೈರಾಗತಕ್ಕದು.

95. ಸಾಲಿಯಾನಾ ಷಿಕ್ಮಿಯು, ವಿರೋಧಾಂಶಕ್ಕೆ ರುಜುವಾತು ಇಲ್ಲದಿದ್ದರೆ, ಸಾಗುವಳಿಯ ಒಂದುಸಾಲ್ ಆಖೈರ್ ಮೊದಲು ಮುಂದಿನ ಸಾಲ್ ಆಖೈರ್ ವರಿಗೆ ನಡೆಯುವಂತೆ ಯೆಣಿಸತಕ್ಕದ್ದು, ಸಾಗುವಳೀ ಕಾಲವು ಮಾರ್ಚಿ 31ಕ್ಕೆ ಆಖೈರಾಗುವಂತೆ ಭಾವಿಸಬಹುದು.

ಷಿಕ್ಮಿಯು ತೀರುವದಕ್ಕೆ ಜಮಿರ್ಾದಾರನಿಂದಲಾಗಲಿ, ಷಿಕ್ಮಿದಾರನಿಂದಾಗಲಿ, ಮೂರುತಿಂಗಳ ನೋಟೀಸ ಕೊಡತಕ್ಕದ್ದು.

ಸಾಲಿಯಾನಾ ಷಿಕ್ಮಿಯು, ಅಖೈರಾಗುವಬಗ್ಯೆ ಜಮಿರ್ಾದಾರನಿಂದ ಷಿಕ್ಮೀದಾರನಿಗೆ ಅಥವಾ ಷಿಕ್ಮೀದಾರನಿಂದ ಜಮಿರ್ಾದಾರನಿಗೆ, ಯಾವ ಸಾಲಿನ ಅಖೈರಿನಿಂದ ಷಿಕ್ಮಿಯು ನಿಂತು ಹೋಗುವದೆಂದು ತಿಳಿಸುತ್ತದೆಯೋ ಅಂತಾ ಷಿಕ್ಮಿಯು ಸಾಲ ಅಖೈರಿಗೆ ಮುಂದಾಗಿ ಅಥವಪಕ್ಷ ಮೂರುತಿಂಗಳ ನೋಟೀಸ್ ಬರಹಮೂಲಕವಾಗಿ ಕೊಡತಕ್ಕದ್ದು. ಅಂತಾ ನೋಟೀಸ್ F. ಷೆಡ್ಯೂಲ್ ನಮೂನೆ ಮೇರೆ ಅಥವಾ ಬದಸ್ತೂರ್ ಉದ್ದೇಶಾನುಗುಣವಾಗಿ ಇರಬಹುದು.

ಜಮಿರ್ಾದಾರನು ಷಿಕ್ಮೀದಾರನಿಗೆ ಬರವಣಿಗೆ ಮೂಲಕವಾದ ಗುತ್ತಿಗೆ ಕರಾರನ್ನು ಕೊಡತಕ್ಕದ್ದು.

96. ಪ್ರತಿ ಷಿಕ್ಮೀದಾರನೂ ಇದರಡಿಕಂಡ ತಪಶೀಲ್‌ಗಳುಳ್ಳ ಬರವಣಿಗೆ ಮೂಲಕವಾದ ಗುತ್ತಿಗೆಯನ್ನು ತನ್ನ ಜಮಿರ್ಾದಾರನಿಂದ ಪಡೆಯಲಿಕ್ಕೆ ಅರ್ಹರಾಗಿರುತ್ತಾನೆ: —

(*a*) ತನ್ನ ಹಿಡುವಳಿಯಲ್ಲಿ ವುಳ್ಳ ಜಮೀನಿನ ವಿಸ್ತೀರ್ಣ ಮತ್ತು ತಪಶೀಲ್ ಮತ್ತು ಗವರ್ನಮೆಂಟ್ ಸರ್ವೆ ರಿಕಾರ್ಡುಗಳಲ್ಲಾಗಲಿ, ಇತರ ಪಬ್ಲಿಕ್ ರಿಕಾರ್ಡುಗಳಲ್ಲಾಗಲಿ, ತಾಕುಗಳಿಗೆ ನಂಬರ್ ಹಾಕಲ್ಪಟ್ಟರೆ ಪ್ರತಿ ತಾಕಿನ ನಂಬರ್;

(*b*) ಅಂತಾ ಜಮೀನಿಗೆ ಸಾಲಿಯಾನಾ ತೆರತಕ್ಕ ತೀರ್ವೆ ವೊಬಲಗು;

(*c*) ಅಂತಾ ತೀರ್ವೆಯು ಯೆಷ್ಟು ಖಿಸ್ತುಗಳಲ್ಲಿ ಯಾವತಾರೀಖುಗಳಲ್ಲಿ ಪಾವತೀ ಮಾಡಲ್ಪಡತಕ್ಕದ್ದೋ ಅಂತಾ ವಾಯಿದೆ ಮತ್ತು ತಾರೀಖು;

(*d*) ಗುತ್ತಿಗೆಯ ಯಾವದಾದರೂ ವಿಶೇಷ ಒಡಂಬಡಿಕೆಗಳು;

(*e*) ತೀರ್ವೆಯು ಧಾನ್ಯರೂಪವಾಗಿ ಕೊಡಬೇಕಾದ ಪಕ್ಷಕ್ಕೆ ಒಪ್ಪಿಸಲ್ಪಡತಕ್ಕ ಹುಟ್ಟುವಳಿಯಲ್ಲಿ ಇಷ್ಟು, ಅಥವಾ ಹುಟ್ಟುವಳಿಯಲ್ಲಿ ಇಷ್ಟುಭಾಗ, ಒಪ್ಪಿಸತಕ್ಕ ಕಾಲ, ರೀತಿ, ಒಪ್ಪಿಸತಕ್ಕಸ್ಥಳ.

ಕಂದಾಯ ಮತ್ತು ಅನುಭವ ಷಿಕ್ಮೀದಾರರ ಗುತ್ತಿಗೆಗಳ ಷರತ್ತುಗಳು.

97. "ಕಂದಾಯದ" ಮತ್ತು "ಅನುಭವದ" ಷಿಕ್ಮೀದಾರರು ತಹಲ್ ಸಲ್ಲಿಸುತಲಿದ್ದ ಅಥವಾ 92ನೇ ಸೆಕ್ಷನ್ ಅನುಸರಿಸಿ ನಿರ್ಣಯಿಸಲ್ಪಟ್ಟ ದರಗಳ ಪ್ರಕಾರ ಗುತ್ತಾಗಳನ್ನು ಪಡೆಯಲಿಕ್ಕೆ ಅರ್ಹರಾಗಿರುತ್ತಾರೆ.

ಇತರ ಷಿಕ್ಮೀದಾರರಿಗೆ ಗುತ್ತಿಗೆಗಳ ಷರತ್ತುಗಳು.

98. ಇತರ ತಮಾಂ ಷಿಕ್ಮೀದಾರರೂ, ತಮಗೂ ತಮ್ಮ ಜಮಿರ್ಾದಾರರಿಗೂ ಒಡಂಬಡಿಕೆ ಮಾಡಲ್ಪಡಬಹುದಾದಂತಾ ಷರತಗಳಮೇಲೆ ಗುತ್ತಿಗೆಗಳನ್ನು ಪಡೆಯುವದಕ್ಕೆ ಅರ್ಹರಾಗಿರುತ್ತಾರೆ.

ಜಮಿರ್ಾದಾರನು, ಷಿಕ್ಮೀದಾರನಿಂದ ಬರವಣಿಗೆಯ ಮೂಲ

99. ಗುತ್ತಿಗೆ ಪತ್ರವನ್ನು ಕೊಡುವ ಪ್ರತಿಜಮಿರ್ಾದಾರನೂ ಷಿಕ್ಮೀದಾರನಿಂದ, ಗುತ್ತಿಗೆಯ ಷರತಗಳಪ್ರಕಾರ ಪರಸ್ಪರ ಬರೆದು ಕೊಡಲ್ಪಟ್ಟ ಬರವಣಿಗೆಯಮೂಲಕವಾದ ಒಡಂ

ಕವಾದ ಒಡಂಬಡಿಕೆಯನ್ನು ಪಡೆಯುವದಕ್ಕೆ ಅರ್ಹನಾಗಿರ ತಕ್ಕದ್ದು.

ಬಡಿಕೆಯನ್ನು ಹೊಂದುವದಕ್ಕೆ ಅರ್ಹನಾಗಿರುತ್ತಾನೆ. ಯಾವ ಷಿಕ್ಮೀದಾರನಾಗಲಿ ಹೊಂದಲಿಕ್ಕೆ ಅರ್ಹವಾದ ಒಂದು ಗುತ್ತಿಗೆ ಕರಾರು ಕೊಡಲ್ಪಟ್ಟಲ್ಲಿ, ಅಂತಾ ಷಿಕ್ಮೀದಾರನಿಂದ ಒರೆಯಲ್ಪಟ್ಟ ಪರಸ್ಪರ ಒಡಂಬಡಿಕೆಯನ್ನು ಹೊಂದಲಿಕ್ಕೆ ಜಮೀನ್ದಾರನನ್ನು ಅರ್ಹನನ್ನಾಗಿ ಮಾಡತಕ್ಕದ್ದು.

ಮೇಲ್ಪಟ್ಟ ಹಿಡುವಳೀದಾರನು ತಿರಸ್ಕರಿಸಿದರೆ ಷಿಕ್ಮೀದಾರನು ಡೆಪ್ಯುಟಿ ಕಮ್ಮಿಷನರಿಗೆ ಗುತ್ತಿಗೆ ಪತ್ರದಬಗ್ಯೆ ದರಖಾಸ್ತು ಮಾಡತಕ್ಕದ್ದು.

100. ಪರಭಾರೆಯಾದ ಜಮೀನಿನ ಮೇಲ್ಪಟ್ಟ ಯಾವ ಹಿಡುವಳೀದಾರನಾಗಲಿ, ತಗಾದೇಮಾಡಿದಬಳಿಕ ಮೂರುತಿಂಗಳವರಿಗೂ ಅವನ ಷಿಕ್ಮೀದಾರ ಹೊಂದಲಿಕ್ಕೆ ಅರ್ಹನಾಗಿದ್ದ ಅಂತಾ ಗುತ್ತಿಗೆಪತ್ರವನ್ನು ಕೊಡಲಿಕ್ಕೆ ತಿರಸ್ಕರಿಸಿದರೆ, ಷಿಕ್ಮೀದಾರನು ಡೆಪ್ಯುಟಿ ಕಮ್ಮಿಷನರ್‌ಸಾಹೇಬರವರಿಗೆ ಅಬಗ್ಯೆ ದರಖಾಸ್ತು ಮಾಡುವದು ಅವನಿಗೆ ನ್ಯಾಯವಾಗಿರತಕ್ಕದ್ದು. ಸದರೀ ಡೆಪ್ಯುಟಿ ಕಮ್ಮಿಷನರು, ಕ್ರಮವಾದ ವಿಚಾರಣೆಮಾಡಿ, ಯಾವದಕ್ಕೆ ದರಖಾಸ್ತುದಾರ ಅರ್ಹನಾಗಿರುತ್ತಾನೋ ಅಂತಾ ಗುತ್ತಿಗೆಯ ಷರತ್ತುಗಳನ್ನು ನಿಶ್ಚೈಸಿ ಅಂತಾ ಗುತ್ತಾ ಪತ್ರವನ್ನು ದರಖಾಸ್ತುದಾರನಿಗೆ ಕೊಡುವಂತೆ ನಿಯಮಿಸತಕ್ಕದ್ದು.

ಗುತ್ತಿಗೆಯನ್ನು ಅಂಗೀಕರಿಸುವದಕ್ಕಾಗಲಿ, ಪರಸ್ಪರ ಒಡಂಬಡಿಕೆಯನ್ನು ಬರೆದುಕೊಡುವದಕ್ಕಾಗಲಿ, ಷಿಕ್ಮೀದಾರನು ನಿರಾಕರಿಸಿದರೆ, ಮೇಲ್ಪಟ್ಟ ಹಿಡುವಳೀದಾರನು ಡೆಪ್ಯುಟಿ ಕಮ್ಮಿಷನರಿಗೆ ದರಖಾಸ್ತು ಮಾಡತಕ್ಕದ್ದು.

101. ಪರಭಾರೆಯಾದ ಜಮೀನಿನ ಹಿಡುವಳಿಯುಳ್ಳ ಯಾವ ಷಿಕ್ಮೀದಾರನಾಗಲಿ, ಅಂತಾ ಜಮೀನಿನ ಮೇಲ್ಪಟ್ಟ ಹಿಡುವಳೀದಾರನು ಕೊಡುವದಕ್ಕೆ ಅರ್ಹವಾದ ಗುತ್ತಿಗೆಯನ್ನು ಅಂಗೀಕರಿಸುವದಕ್ಕಾಗಲಿ, 99ನೇ ಸೆಕ್ಷನ್ ಅನುಸರಿಸಿ ಪರಸ್ಪರ ಒಡಂಬಡಿಕೆಯನ್ನು ಬರೆದುಕೊಡಲಿಕ್ಕಾಗಲಿ, ತಗಾದೇ ಮಾಡಲ್ಪಟ್ಟ ತರುವಾಯ ಒಂದು ತಿಂಗಳವರಿಗೆ ನಿರಾಕರಿಸಿದರೆ, ಮೇಲ್ಪಟ್ಟ ಹಿಡುವಳೀದಾರನು ಡೆಪ್ಯುಟಿ ಕಮ್ಮಿಷನರಿಗೆ ದರಖಾಸ್ತು ಕೊಡಬಹುದು. ಅವೇಲೆ ಆತನು ಕೊಡುವದಕ್ಕೆ ಯತ್ನಿಸಿದ ಗುತ್ತಿಗೆಯು ಸರಿಯಾದದ್ದು ಯನ್ನುವದನ್ನು ನಿರ್ಣಯಿಸುವಬಗ್ಯೆ ಒಂದು ಕ್ರಮವಾದ ವಿಚಾರಣೆಯನ್ನು ಮಾಡತಕ್ಕದ್ದು. ಅದು ಯುಕ್ತವೆಂದು ಆತನು ಅಭಿಪ್ರಾಯಪಟ್ಟರೆ, ಗುತ್ತಿಗೆಯನ್ನು ಅಂಗೀಕರಿಸಿ ಅದಕ್ಕೆ ಅನುಸಾರವಾಗಿ ಒಂದು ಪರಸ್ಪರ ಕರಾರ್ ಬರೆದುಕೊಡುವಂತೆ ತಾಕೀದ್ ಮಾಡತಕ್ಕದ್ದು. ಕೊಡುವದಕ್ಕೆ ಬಂದ ಗುತ್ತಿಗೆ ಪತ್ರವು ಸರಿಯಾದ್ದಲ್ಲವೆಂದು ಡೆಪ್ಯುಟಿ ಕಮ್ಮಿಷನರಿಗೆ ತೋರಿದರೆ ಯಾವ ಗುತ್ತಿಗೆ ಪತ್ರವನ್ನು ಕೊಡತಕ್ಕದ್ದೋ ಆದನ್ನು ನಿಶ್ಚೈಸಿ ಅಂತಾ ಗುತ್ತಿಗೆಯನ್ನು ಅಂಗೀಕರಿಸುವಂತೆಯೂ, ತದನುಗುಣವಾಗಿ ಒಂದು ಪರಸ್ಪರ ಒಡಂಬಡಿಕೆಯನ್ನು ಬರೆದು ಕೊಡುವಂತೆಯೂ, ಷಿಕ್ಮೀದಾರನಿಗೆ ನಿಯಮಿಸತಕ್ಕದ್ದು. ಡೆಪ್ಯುಟಿ ಕಮ್ಮಿಷನರ ಫೈಸಲ್ ತಾರೀಖಿಗೆ ತರುವಾಯ ಹತ್ತು ದಿನಗಳೊಳಗೆ, ಮೇಲೆಕಂಡರೀತಿಯಲ್ಲಿ ಡೆಪ್ಯುಟಿ ಕಮ್ಮಿಷನರಿಂದ ಮುಂಜೂರ್ ಮಾಡಲ್ಪಟ್ಟ ಅಥವಾ ತಿದ್ದುಪಾಟು ಮಾಡಲ್ಪಟ್ಟ ಪ್ರಕಾರ ಷಿಕ್ಮೀದಾರನು ಸದರೀ ಗುತ್ತಿಗೆ ಪತ್ರವನ್ನು ಅಂಗೀಕರಿಸದೇಯೂ, ಅಂತಾ ಗುತ್ತಿಗೆ ಷರತ್ತುಗಳಪ್ರಕಾರ ಒಂದು ಪರಸ್ಪರ ಒಡಂಬಡಿಕೆ ಬರದು ಕೊಡ

ದೇನೂ ಯಿದ್ದರೆ, ಡೆಪ್ಯುಟಿ ಕಮ್ಮಿಷನರು, ಮೇಲ್ಪಟ್ಟ ಹಿಡುವಳೀದಾರನ ದರಖಾಸ್ತಿನಮೇಲೆ, ಮತ್ತು ಷಿಕ್ಮೀದಾರನಿಗೆ ನೋಟೀಸ್ ಸಾದರ್ ಮಾಡಿದಮೇಲೆ ಷಿಕ್ಮೀದಾರನನ್ನು ಹೊರಪಡಿಸಲಿಕ್ಕೆ ಹುಕುಂ ಕೊಡಬಹುದು.

ಷಿಕ್ಮೀದಾರನು ಡೆಪ್ಯುಟಿ ಕಮ್ಮಿಷನರಿಗೆ ವಿಧೇಯನಾಗಿ ನಡಿಯುವದಕ್ಕೆ ತಿರಸ್ಕರಿಸಿದರೆ ಹೊರಪಡಿಸಲ್ಪಡುವಣ.

102. 100 ಮತ್ತು 101ನೇ ಸೆಕ್ಷನ್‍ಗಳಲ್ಲಿ ವಿಧಿಸಲ್ಪಟ್ಟ ವಿಚಾರಣೆಗಳ ಬಗ್ಗೆ ಗುತ್ತಿಗೇ ಮೊಬಲಗು ಅಥವಾ ದರಗಳ ವಿಷಯವಾಗಿ ಬರುವ ತಕರಾರ್‌ಗಳನ್ನು ಫೈಸಲ್ ಮಾಡೋಣದರಲ್ಲಿ, ಡೆಪ್ಯುಟಿ ಕಮ್ಮಿಷನರು, 85ರ ಮೊದಲು 93ರ ವರಿಗೆ ಇರುವ ಸೆಕ್ಷನ್‍ಗಳಲ್ಲಿ ಅಡಗಿರುವ ರೂಲ್ಸ್‌ನಿಂದ ಬದ್ಧರಾಗಿರತಕ್ಕದ್ದು.

ಡೆಪ್ಯುಟಿ ಕಮ್ಮಿಷನರು, 100 ಮತ್ತು 101 ಈ ಸೆಕ್ಷನ್‍ಗಳನುಸರಿಸಿ ವಿಚಾರಣೆ ಮಾಡೋಣದರಲ್ಲಿ 85ರಲಾ॥ 93ರ ವರಿಗೆ ಇರತಕ್ಕ ಸೆಕ್ಷನ್‍ಗಳಲ್ಲಿ ನಮೂದು ಇರುವ ಕಾನೂನುಗಳಿಗೆ ಬದ್ಧರಾಗಿರತಕ್ಕದ್ದು.

103. (1) 100ನೇ ಸೆಕ್ಷನ್ ಅನುಸರಿಸಿ ಬಂದು ಫೈಸಲ್‌ನಿಂದ ಒಂದು ಗುತ್ತಿಗೆ ಪತ್ರವನ್ನು ಕೊಡುವಂತೆ ನಿಶ್ಚಯಿಸಲ್ಪಟ್ಟ ಪ್ರಕಾರ ಮೇಲ್ಪಟ್ಟ ಹಿಡುವಳೀದಾರನು ಸದರೀ ಗುತ್ತಿಗೆಯನ್ನು ಕೊಡಲಿಕ್ಕೆ ತಿರಸ್ಕರಿಸಿದರೆ ಅಥವಾ ಸಾವಕಾಶ ಮಾಡಿದರೆ, ಡೆಪ್ಯುಟಿ ಕಮ್ಮಿಷನರು, ಫೈಸಲಿನ ಷರತ್‍ಗಳ ಪ್ರಕಾರ ತಮ್ಮ ಸೈನ್ ಮೊಹರ್‌ನಿಶೀ ಗುತ್ತಿಗೆಪತ್ರವನ್ನು ಕೊಡತಕ್ಕದ್ದು, ಅಂತಾ ಗುತ್ತಿಗೆಯು ಮೇಲ್ಪಟ್ಟ ಹಿಡುವಳೀದಾರನಿಂದ ಕೊಡಲ್ಪಟ್ಟಿದ್ದರೆ ಹ್ಯಾಗೋ ಹಾಗೆ ಜಾರಿವುಳ್ಳದ್ದಾಗಿರತಕ್ಕದ್ದು.

ನಿಯಮಿಸಲ್ಪಟ್ಟ ಗುತ್ತಿಗೆಯನ್ನು ಕೊಡಲಿಕ್ಕೆ ಮೇಲ್ಪಟ್ಟ ಹಿಡುವಳೀದಾರನು ನಿರಾಕರಿಸಿದರೆ ನಡಿಸತಕ್ಕ ನಡವಳಿತ.

(2) 101ನೇ ಸೆಕ್ಷನ್ ಅನುಸರಿಸಿ ಕೊಡಲ್ಪಟ್ಟ ಒಂದು ಫೈಸಲ್‌ನಿಂದ, ಬಂದು ಪರಸ್ಪರ ಒಡಂಬಡಿಕೆಯನ್ನು ಬರೆದುಕೊಡಬೇಕಾಗುವ ಷಿಕ್ಮೀದಾರನು ಅದನ್ನು ಬರೆದು ಕೊಡುವದಕ್ಕೆ ನಿರಾಕರಿಸಿದ ಪಕ್ಷಕ್ಕೆ ಅಥವಾ ತಪ್ಪಿದ ಪಕ್ಷಕ್ಕೆ ಸದರೀ ಫೈಸಲು ಅಂತಾ ಷಿಕ್ಮೀದಾರನಿಂದ ಬರತಕ್ಕ ತೀರ್ವೆಯ ಮೊಬಲಗಿಗೆ ಸಾಕ್ಷ್ಯವಾಗಿರತಕ್ಕದ್ದು, ಮತ್ತು ಸದರೀ ಫೈಸಲು ಅವನಿಂದ ಬರೆದುಕೊಡಲ್ಪಟ್ಟ ಪರಸ್ಪರ ಒಡಂಬಡಿಕೆಯಂತೆಯೇ ಬಲವನ್ನೂ ಫಲವನ್ನೂ ಪಡೆಯತಕ್ಕದ್ದು.

ಷಿಕ್ಮೀದಾರನಿಂದ ಸಲ್ಲತಕ್ಕ ತೀರ್ವೆಯ ಮೊಬಲಗಿಗೆ ಡೆಪ್ಯುಟಿ ಕಮ್ಮಿಷನರ ಫೈಸಲು ಸಾಕ್ಷ್ಯವಾಗಿರತಕ್ಕದ್ದು.

ಮೇಲ್ಪಟ್ಟ ಹಿಡುವಳೀದಾರನಿಗೆ ಸಲ್ಲತಕ್ಕ ಮೊಬಲಗಿನ ವಸೂಲಾತಿ.

ಮುಂ. ರೆ. ಕೋ. 86ನೇ ಸೆಕ್ಷನ್.

104. (ಸನ್ 1865ನೇ ಇಸವಿಯ 1ನೇ ಮುಂಬೈ ರೆವಿನ್ಯು ಆಕ್ಟನುಸರಿಸಿಯಾಗಲಿ, ಈ ರೆಗ್ಯುಲೇಷನಿನ 8ನೇ ಅಧ್ಯಾಯ ಅನುಸರಿಸಿಯಾಗಲಿ ಯಾವ ಗ್ರಾಮಗಳ ಫೈಸಲಾತಿಯು ಪೂರೈಸಿ ಇರುವದಿಲ್ಲವೋ ಅಂತಾ ಗ್ರಾಮಗಳಲ್ಲಿ ಪರಭಾರೇಯಾಗದ ಜಮೀನ್‍ಗಳ ಅನುಭವದಾರರಲ್ಲದ ಇತರ) ಮೇಲ್ಪಟ್ಟಹಿಡುವಳೀದಾರರು ಡೆಪ್ಯುಟಿ ಕಮ್ಮಿಷನರಿಗೆ

ತೀರ್ವೇ ವಸೂಲೀ ವಿಷಯದಲ್ಲಿ ಕುಮ್ಮಕ್ಕಿಗೆ ಮೇಲ್ಪಟ್ಟ ಹಿಡುವಳೀದಾರನು ಅರ್ಹನಾಗಿರುವಣ.

ಬರವಣಿಗೆಯಲ್ಲಿ ದರಖಾಸ್ತು ಕೊಟ್ಟಮೇಲೆ, ತಮ್ಮ ಹಿಡುವಳಿಗಳಲ್ಲಿ ಕಮ್ಮಾಹಿಡುವಳೀದಾರರಿಂದಾಗಲಿ, ಜಂಟೀ ಹಿಸ್ಸೇದಾರರಿಂದಾಗಲಿ, ತಮಗೆ ಸಲ್ಲತಕ್ಕ ಗುತ್ತಿಗೇ ಹಣವನ್ನು ಅಥವಾ ಜಮೀನ ಕಂದಾಯವನ್ನು ವಸೂಲ್ ಮಾಡುವ ಬಗ್ಗೆ, 152ನೇ ಸೆಕ್ಷನ್ನಲ್ಲಿ ಅಡಗಿರುವ ಅಂಶವಿನಾ, ಗವರ್ನಮೆಂಟಿನಿಂದ ಜಮೀನ ಕಂದಾಯದ ವಸೂಲೀ ಬಗ್ಗೆ ಈ ರೆಗ್ಯುಲೇಷನಿನ 11ನೇ ಅಧ್ಯಾಯದಲ್ಲಿ ವಿವರಿಸಲ್ಪಟ್ಟ ಕಾನೂನ್ಗಳನುಸರಿಸಿ ಮತ್ತು ಸದರೀ ರೀತಿಯಾಗಿಯೇ ಎಚ್ಚರಿಕೆ ಮತ್ತು ಇತರ ಕ್ರಮಗಳ ಪ್ರಯೋಗದ ಸಹಾಯವನ್ನು ಹೊಂದಲಿಕ್ಕೆ ಅರ್ಹರಾಗಿರತಕ್ಕದ್ದು:

ಪರಂತು, ಯಾವ ಸಾಲ್‌ನಲ್ಲಿ ಸದರೀ ತೀರ್ವೆ ಪಾವತೀಯಾಗತಕ್ಕದ್ದಾಯಿತೋ ಅಂತಾ ರೆವಿನ್ಯು ಸಾಲ್ ವಳಗಾಗಲಿ, ಫಿಕ್ಮೀ ಸಾಲ್ ವಳಗಾಗಲಿ, ಅಂತಾ ದರಖಾಸ್ತು ಮಾಡಲ್ಪಡತಕ್ಕದ್ದು, ಮತ್ತು, ಅಂತಾ ದರಖಾಸ್ತು ಕಮ್ಮಾ ಹಿಡುವಳೀದಾರನಿಂದ ಬರಬೇಕಾದ ತೀರ್ವೆಯು ಅಥವಾ ಜಮೀನ ಕಂದಾಯದ ವಸೂಲೀ ಬಗ್ಗಾಗಿ ಇದ್ದ ಪಕ್ಷಕ್ಕೆ ಅಂತಾ ದರಖಾಸ್ತು ಅಂತಾ ಕಮ್ಮಾ ಹಿಡುವಳೀದಾರನಿಂದ ಕ್ರಮವಾಗಿ ಬರೆದು ಕೊಡಲ್ಪಟ್ಟ ಬರವಣಿಗೇ ಮೂಲಕವಾದ ಒಡಂಬಡಿಕೆಯು ಆಧಾರವುಳ್ಳದ್ದಾಗಿದ್ದು ಸದರೀ ದರಖಾಸ್ತಿನ ಸಂಗಡ ಹಾಜರ್ಮಾಡಲ್ಪಡತಕ್ಕದ್ದಾಗಿರತಕ್ಕದ್ದು.

ಮುಂ. ರೆ. ಕೋ. 87ನೇ ಸೆಕ್ಷನ.

ಅಂತಾ ದರಖಾಸ್ತಿನ ಮೇಲೆ ಡೆಪ್ಯುಟಿ ಕಮ್ಮಿಷನರು ಹ್ಯಾಗೆ ನಡವಳಿತ ನಡಿಸತಕ್ಕದ್ದು.

105. ಡೆಪ್ಯುಟಿ ಕಮ್ಮಿಷನರಿಗೆ 104ನೆಯ ಸೆಕ್ಷನ ಅನುಸರಿಸಿ ದರಖಾಸ್ತು ಮಾಡಲ್ಪಟ್ಟಲ್ಲಿ ಡೆಪ್ಯುಟಿ ಕಮ್ಮಿಷನರು, ಕಮ್ಮಾ ಹಿಡುವಳೀದಾರನಿಗಾಗಲಿ, ಜಂಟೀಹಿಸ್ಸೇದಾರನಿಗಾಗಲಿ, ಮೊಕದ್ದಮೆಯ ವಿಚಾರಣೆ ಬಗ್ಗೆ ಒಂದು ದಿನವನ್ನು ಮೊಕರರ್ ಮಾಡಿ ಸದರೀ ದರಖಾಸ್ತಿನ ಬಾಬತು ಒಂದು ನೋಟೀಸನ್ನು ಸಾದರ್ ಮಾಡಿಸತಕ್ಕದ್ದು. ಹಾಗೆ ಮೊಕರರಾದ ದಿನದಲ್ಲಿ ಅವರು ಫೂಟ್ ವಿಚಾರಣೆ ಮಾಡಿ, ತೀರ್ವೆಯ ಅಥವಾ ಜಮೀನ ಕಂದಾಯದ ಬಾಬತು ಅವರ ಮುಂದೆ ಇರತಕ್ಕ ಸಾಕ್ಷ್ಯದಮೇಲೆ ನ್ಯಾಯತಃ ಸಲ್ಲತಕ್ಕದ್ದಾಗಿ ಅವರಿಗೆ ಕಾಣುವಂತಾ ಮೊಬಲಗಿನ ವಸೂಲೀ ಬಗ್ಗೆ ಮೇಲ್ಪಟ್ಟ ಹಿಡುವಳೀದಾರನಿಗೆ ಕುಮ್ಮಕ್ಕು ಮಾಡುವ ಬಗ್ಗೆ ಹುಕುಂ ಕೊಡತಕ್ಕದ್ದು.

ಕುಮ್ಮಕ್ಕು ನಿಷೇಧಿಸಲ್ಪಡಬಹುದು ಅಥವಾ ಕೆಲವುಮಟ್ಟಿಗೆಮಾತ್ರ ಕೊಡಲ್ಪಡಬಹುದು.

ಆದರೆ ಕಕ್ಷಿಗಾರರಲ್ಲಿ ವ್ಯವಹಾರ ವಿಷಯವಾದ ಮುಖ್ಯಾಂಶವು ತಿಳಿಯಲಿಕ್ಕೆ ಪ್ರಯಾಸವಾದ ಸ್ವರೂಪವುಳ್ಳದ್ದಾಗಿದೆಯೆಂದು ಡೆಪ್ಯುಟಿ ಕಮ್ಮಿಷನರಿಗೆ ಕಾಣಬಂದರೆ, ಅವರು, ಕೇಳಿಕೊಳ್ಳಲ್ಪಟ್ಟ ಕುಮ್ಮಕ್ಕನ್ನು ಮುನಾಸಬುಪ್ರಕಾರ ತಿರಸ್ಕರಿಸಲಾದರೂ ಬಹುದು, ಯಾವದಕ್ಕೆ ವ್ಯವಹಾರ ಸಂಬಂಧಿಸುತದೋ ಅಂತಾ ಜಮೀನಿಗೆ ಈ ರೆಗ್ಯುಲೇಷನಿನ 8ನೇ ಅಧ್ಯಾಯದ ನಿಬಂಧನೆಗಳನುಸರಿಸಿಯಾಗಲಿ ಅಥವಾ 129ನೇ ಸೆಕ್ಷನಿಂದ ಕಾಯಂ ಮಾಡಲ್ಪಟ್ಟ ಯಾವ ಸರ್ವೇ ಸೆಟಲ್ಮೆಂಟಿನಲ್ಲಾಗಲಿ ಕಂದಾಯದ ಹಾಕಲ್ಪಟ್ಟಿದ್ದರೆ ಸದರೀ ಜಮೀನಿಗೆ ಹಾಗೆ ಠರಾವ್ ಮಾಡಲ್ಪಟ್ಟ ಕಂದಾಯದ ಪರಿಮಿತಿಗೆಮಾತ್ರ ಕುಮ್ಮಕ್ಕನ್ನು ಕೊಡಲಾದರೂ ಬಹುದು.

ಸಿವಿಲ್ ವ್ಯಾಜ್ಯಕ್ಕೆ ಕಾಲ ನಿಬಂಧನೆ ಇಲ್ಲವು.

ಮೇಲ್ಪಟ್ಟ ಹಿಡುವಳೀದಾರನು ಕೀಳ್ಪಟ್ಟ ಹಿಡುವಳೀದಾರನಿಂದ ಇನ್ನೂ ಸಲ್ಲಬೇಕಾಗಿ ಇರುವದಾಗಿ ಎಣಿಸಬಹುದಾದ ಮೊಬಲಗನ್ನು ವಸೂಲ್ ಮಾಡುವದಕ್ಕೆ ಸಿವಿಲ್ ಕೋರ್ಟುಗಳಿಗೆ ಹೋಗುವದಕ್ಕೆ ನಿರೋಧಿಸತಕ್ಕ ಅಂಶವು ಈ ಸೆಕ್ಷನ್ನಲ್ಲಿ ಯೇನೂಯಿಲ್ಲವು.

ಪರಭಾರೆಯಾದ ಜಮೀನ್ಗಳ ಹಿಡುವಳೀದಾರರಿಗೆ ವಿಶೇಷಾಧಿಕಾರಗಳನ್ನು ಕೊಡುವಣ.

ಮುಂ. ರೆ. ಕೋ. 88ನೇ ಸೆಕ್ಷನ್.

ಗವರ್ನಮೆಂಟನವರು, ಪರಭಾರೇಯಾದ ಕೆಲವು ಜಮೀನ್ಗಳ ಹಿಡುವಳೀದಾರರಿಗೆ, ಕೆಲವು ಅಧಿಕಾರ ಕಮ್ಮಿಷನ್ಗಳ ಮೂಲಕ ಕೊಡಬಹುದು.

106. ಪರಭಾರೆಯಾದ ಜಮೀನ್ಗಳ ಯಾವ ಹಿಡುವಳೀದಾರನಿಗಾಗಲಿ, ಕಮ್ಮಿಷನ್ ಅಧಿಕಾರದಲ್ಲಿ ವಿವರಿಸಲ್ಪಟ್ಟ ಜಮೀನ್ ವಿಷಯದಲ್ಲಿ ಇದರಡಿ ಕಂಡ ಅಧಿಕಾರಗಳ ಪೈಕಿ ವಿಶಿಷ್ಟವನ್ನಾಗಲಿ ಯಾವದನ್ನಾಗಲಿ ಉಂಟು ಮಾಡುವ ಒಂದು ಕಮ್ಮಿಷನನ್ನು ಯಾವಾಗಲಾಗಲಿ ಕೊಡುವದು ಗವರ್ನಮೆಂಟಿಗೆ ನ್ಯಾಯವಾಗಿ ಇರತಕ್ಕದ್ದು; ಅವುಗಳು ಯಾವವೆಂದರೆ:—

(*a*) ತನಗೆ ಸಲ್ಲಬೇಕಾದ ಜಮೀನ್ ಕಂದಾಯವನ್ನಾಗಲಿ, ಗುತ್ತಿಗೆಯನ್ನಾಗಲಿ, ಸಲ್ಲಿಸುವ ಬಗ್ಯೆ ಜಾಮೀನ್ ಕೇಳುವಣ, ಮತ್ತು ಅದು ಕೊಡಲ್ಪಡದೆ ಇದ್ದರೆ, ಡೆಪ್ಯುಟಿ ಕಮ್ಮಿಷನರು 156ರ ಮೊದಲು 158 ರವರಿಗಿನ ಸೆಕ್ಷನ್ಗಳನುಸರಿಸಿ ತೆಗೆದು ಕೊಳ್ಳುವದಕ್ಕೆ ಅಧಿಕಾರ ಕೊಡಲ್ಪಟ್ಟ ಮುಂಜಾಗ್ರತೆಗಳನ್ನು ವಹಿಸುವಣ;

(*b*) ಮೇಲೆಕಂಡಂತೆ ಅಂತಾ ಜಮೀನ್ ಕಂದಾಯವನ್ನಾಗಲಿ, ಗುತ್ತಿಗೆಯನ್ನಾಗಲಿ, ತೆರಲಿಕ್ಕೆ ತಪ್ಪುವ ಜನಗಳ ಸ್ವತ್ತನ್ನು ಜಫ್ತೀ ಮಾಡುವಣ;

(*c*) ತಮಗೆ ಸಲ್ಲಬೇಕಾದ ಜಮೀನ್ ಕಂದಾಯವಾಗಲಿ, ಗುತ್ತಿಗೆಯಾಗಲಿ, ಯಾವ ಕಾಲಗಳಲ್ಲಿ ಮತ್ತು ಯೆಷ್ಟು ತಿಂಗಳಲ್ಲಿ ಸಲ್ಲತಕ್ಕದ್ದೋ ಅವುಗಳನ್ನೂ ಆಗಿಂದಾಗ್ಯೆ ಗೊತ್ತು ಮಾಡುವಣ;

(*d*) 68 ಮತ್ತು 69ನೆಯ ಸೆಕ್ಷನ್ಗಳನುಸರಿಸಿ ಒಬ್ಬ ಡೆಪ್ಯುಟಿ ಕಮ್ಮಿಷನರ ಅಧಿಕಾರಗಳನ್ನು ಚಲಾಯಿಸುವಣ;

(*e*) 77ನೆಯ ಸೆಕ್ಷನ್ ಅನುಸರಿಸಿ, ರಾಜೀನಾಮೇಯ ನೋಟೀಸ್‌ಗಳನ್ನು ತೆಗೆದುಕೊಂಡು, ಸದರೀ ಸೆಕ್ಷನ್ನಲ್ಲಿ ವಿಧಿಸಲ್ಪಟ್ಟ ಪ್ರಕಾರ, ಯಾವ ತಾರೀಖ್‌ಗಳವರಿಗೆ ಅಂತಾ ನೋಟೀಸ್‌ಗಳು ತೆಗೆದು ಕೊಳ್ಳಲ್ಪಡತಕ್ಕವೋ ಅಂತಾ ತಾರೀಖ್‌ಗಳನ್ನು ನಿರ್ಣಯಿಸುವಣ;

(*f*) 138ನೇ ಸೆಕ್ಷನ್ನಲ್ಲಿ ಸರ್ವೇ ಆಫೀಸರ್‌ಗಳಿಗೆ ವಿಧಿಸಲ್ಪಟ್ಟ ರೀತಿಯಾಗಿ ಯಲ್ಲೆ ಗುರುತುಗಳನ್ನು ಕಾಪಾಡುವಬಗ್ಯೆ ಮತ್ತು ದುರಸ್ತು ಮಾಡುವ ಬಗ್ಯೆ ಯೇರ್ಪಾಡುಗಳನ್ನು ಮಾಡುವಣ.

ಪರಂತು, (*c*) ಮೊದಲು (*f*) ವರಿಗಿನ ಕ್ಲಾಜ್‌ಗಳಲ್ಲಿ (ಉಭಯ ಕ್ಲಾಜ್‌ಗಳೂ ಸೇರಿ) ಯೋಜಿಸಲ್ಪಟ್ಟ ಅಧಿಕಾರಗಳು, 244ನೆ ಸೆಕ್ಷನ್ ನಿಬಂಧನೆಗಳನುಸರಿಸಿ, ಸರ್ವೆ ಸೆಟಲ್‌ಮೆಂಟ (ಯಾನೆ ಫೈಸಲಾತಿಯು) ವ್ಯಾಪಿಸಿ ಇರುವ ಜಮೀನ್ಗಳ ಹಿಡುವಳೀದಾರರಿಗೆ ಮಾತ್ರ ಉಂಟು ಮಾಡಲ್ಪಡತಕ್ಕವು.

ಮುಂ. ರೆ. ಕೋ. 89ನೇ ಸೆಕ್ಷನ.

ಅಂತಾ ಕಮ್ಮಿಷನಿನ ಷರತ್ತುಗಳು.

107. ಅಂತಾ ಪ್ರತಿ ಕಮ್ಮಿಷನೂ G ಷೆಡ್ಯೂಲ್ ನಮೂನೆಯಲ್ಲಿದ್ದು ಗವರ್ನಮೆಂಟ ಇಚ್ಛಾನುಗುಣವಾಗಿ ವಾಪಸಮಾಡಿಕೊಳ್ಳುವದಕ್ಕೆ ಗುರಿಯಾಗಿರತಕ್ಕದ್ದು; ಮತ್ತು ಗವರ್ನಮೆಂಟಿಗೆ ಯುಕ್ತತೋರಿದರೆ, ಒಂದು ಕಮ್ಮಿಷನನ್ನು ಪರಭಾರೆಯಾದ ಜಮೀನುಗಳ ಬಬ್ಬ ಹಿಡುವಳೀದಾರನ ಬಾಬತು ಬಬ್ಬ ಅಥವಾ ಹೆಚ್ಚು ಮಂದಿ ಮುತಾಲೀಕರಿಗೂ ಮತ್ತು ಹಿಡುವಳೀದಾರನಿಗೆ ಖುದ್ದಾಗಿಯೂ ಕೊಡಲ್ಪಡಬಹುದು.

ಮುಂ. ರೆ. ಕೋ. 90ನೇ ಸೆಕ್ಷನ.

ಕಮ್ಮಿಷನ ಹೊಂದಿದವನು ಕೆಲವು ಸಂಗತಿಗಳಲ್ಲಿ ಡೆ|| ಕಮ್ಮಿಷನರರನ್ನು ಕೇಳತಕ್ಕದ್ದು.

108. ಅಂತಾ ಯಾವ ಕಮ್ಮಿಷನನ್ನು ಹೊಂದಿದವನು, ಹಣ ಪಾವತೀ ಮಾಡಲಿಕ್ಕೆ ತಪ್ಪಿದವನ ಸ್ವತ್ತನ್ನು ಜಪ್ತೀಮಾಡಿದರೆ, ಹಾಗೆ ಮಾಡಿದ್ದನ್ನು ಕುರಿತು ಅತನು ಕೂಡ್ಲೆ ಡೆ|| ಕಮ್ಮಿಷನರಿಗೆ ರಿಪೋರ್ಟು ಮಾಡತಕ್ಕದ್ದು. ಯಾವ ತಗಾದೆಗಾಗಿ ಜಪ್ತೀ ಮಾಡಲ್ಪಟ್ಟಿರುತ್ತೋ ಅಂತಾ ತಗಾದೆಯು, ಡೆಪ್ಯುಟಿ ಕಮ್ಮಿಷನರಿಗೆ ಯುಕ್ತತೋರುವ ವಿಚಾರಣೆ ಮಾಡಿದಮೇಲೆ ನ್ಯಾಯವೆಂದು ಕಾಣಬಂದರೆ, ಸ್ವತ್ತಿನ ಹರಾಜ್ ಬಗ್ಯೆ ಹುಕುಂ ಕೊಟ್ಟು, 180ರ ಮೊದಲು 201ರ ವರಿಗಿನ ಸೆಕ್ಷನ್ನುಗಳ ನಿಬಂಧನೆಗಳಿಗೆ ಅನುಗುಣವಾಗಿ ಡೆಪ್ಯುಟಿ ಕಮ್ಮಿಷನರಿಂದಾಗಲಿ, ಅವರ ತಾಬೇದಾರರಿಂದಾಗಲಿ ಹರಾಜ್ ನಡಿಸಲ್ಪಡತಕ್ಕದ್ದು.

ಮುಂ. ರೆ. ಕೋ. 91ನೇ ಸೆಕ್ಷನ.

ಬಲಾತ್ಕಾರದ ಬಾಬತು ಪದ್ಧತಿ ಯಾವಾಗ ಮೌಕೂಫಾಗತಕ್ಕದ್ದು.

109. ತಮಾಂ ಜುಲ್ಮೀ ನಡವಳಿತಗಳೂ ಮೌಕೂಫಾಗತಕ್ಕವು; ಯಾವಾಗೆಂದರೆ,

ಮೊಬಲಗು ಪಾವತೀಮಾಡಲಿಕ್ಕೆ ತಪ್ಪಿದವನು, ಪಾವತೀಮಾಡುವಲ್ಲಿ ಅಥವಾ ಅವನಿಂದ ತಗಾದೆಮಾಡಲ್ಪಟ್ಟ ಮೊಬಲಗನ್ನು ಪ್ರೊಟೆಸ್ಟುಯಾನೆ ತಕರಾರುನಿಶಿ ಪಾವತೀಮಾಡುವದಕ್ಕೆ ಬರುವಲ್ಲಿ;

ಅಥವಾ ಕಮ್ಮಿಷನ ಹೊಂದಿದವನಿಗಾಗಲಿ, ಅವನ ಮುತಾಲೀಕ ಯಾ ಮುತಾಲೀಕರಿಗಾಗಲಿ, ಡೆಪ್ಯುಟಿ ಕಮ್ಮಿಷನರಿಗಾಗಲಿ, E ಷೆಡ್ಯೂಲಿನ ಅಥವಾ ಬದಸ್ತೂರ್ ಫಲವುಳ್ಳ ನಮೂನೇಯಲ್ಲಿ ತೃಪ್ತಿಕರವಾದ ಜಾಮೀನನ್ನು ಕೊಟ್ಟಮೇಲೆ.

ಮತ್ತು, ಮೇಲೆಕಂಡಂತೆ ಅಂತಾ ಯಾವದಾದರೂ ಕಮ್ಮಿಷನನ್ನು ಹೊಂದಿದ ಯಾವನಾಗಲಿ, ತಾನಾಗಿ ಅಥವಾ ತನ್ನ ಮುತಾಲೀಕರ ಮೂಲಕ, ಮೇಲೆ ಕಂಡಂತೆ ಮೊಬಲಗು ಪಾವತೀಮಾಡಿದ ಮೇಲೆ ಅಥವಾ ಮೇಲೆಕಂಡಂತೆ ಜುಲ್ಮೀನಡವಳಿತಗಳನ್ನು ನಡಿಸಿದರೆ, ಟೆಂಡರ (ಯಾನೆ ಕೊಡುವದಕ್ಕೆ ಹೋಗುವಣ) ಮಾಡಿದಮೇಲೆ, ಅಥವಾ ಅದರ ಬಾಬತು ಟೆಂಡರ್ ಮಾಡಿದ ಬಳಿಕ ಡೆಪ್ಯುಟಿ ಕಮ್ಮಿಷನರ ಮುಂದೆ ಸ್ಪಷ್ಟ ವಿಚಾರಣೆಯಲ್ಲಿ ತಕಸೀರ್ ಆಪಾದಿಸಲ್ಪಟ್ಟಮೇಲೆ ಅಂತಾ ಜುಲ್ಮೀನಡವಳಿತದಿಂದ ವಸೂಲ್ಮಾಡಲ್ಪಡಬೇಕಾದ ಕಂದಾಯದ ಮೊಬಲಗಿಗೆ ಮೂರರಷ್ಟಕ್ಕೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಮುಂ. ರೆ. ಕೋ. 92ನೇ ಸೆಕ್‍ಷನ.

ಸಾಲ ಮಜಕೂರ ವ ಸಾಲ ಗುಜಸ್ತೇ ಬಾಕೀಗಳಿಗೆ ವ್ಯಾಪಿಸತಕ್ಕ ಬಗ್ಗೆ ಕಮಿಶ್ನರ್ ಕೆಳಗೆ ಅಧಿಕಾರ.

110. ಅಂತಾ ಯಾವ ಕಮಿಶ್ನರನ್ನಿಂದಾಗಲಿ ಉಂಟುಮಾಡಲ್ಪಟ್ಟ ಅಧಿಕಾರವು, ಸಾಲ ಮಜಕೂರಿನ ಮತ್ತು ಕೂಡ್ಲೆ ಇದಕ್ಕೆ ಹಿಂದಿನ ಸಾಲಿನ ಕಂದಾಯದ ಅಥವಾ ಗುತ್ತಿಗೆಯ ಪಾವತೀಯ ಜಾರೀಗೆ, ವ್ಯಾಪಿಸತಕ್ಕದ್ದೇ ಹೊರತು ಇನ್ನು ಹಿಂದಿನಸಾಲಗಳಿಗಲ್ಲವು.

ಮುಂ. ರೆ. ಕೋ. 93ನೇ ಸೆಕ್‍ಷನ.

ಕಮಿಶ್ನರ್ ಹಿಡುವಳೀದಾರನು ಯಾವದಾದರೂ ಬಗರ ಮಾಮೂಲ ಯಾ ಹೆಚ್ಚು ತಗಾದೆಯನ್ನು ಚಲಾಯಿಸಲಾಗದು.

111. ಇಂತಾ ಯಾವದಾದರೂ ಕಮಿಶ್ನರನ ಹಿಡುವಳೀದಾರನು, ಅಂಥಾ ತಗಾದೇತಾರೀಖಿಗೆ ಮುಂಚೆ ಯಾವ ಕಮಿಶ್ನ ಹಿಡುವಳೀದಾರನಾಗಲಿ ಪಾವತೀಮಾಡಿರುವದಕ್ಕಿಂತ ಅಥವಾ, (ದಸ್ತಾವೇಜುಗಳ ರಿಜಿಸ್ಟ್ರೇಷನನ್ನು ಕುರಿತು ತತ್ಕಾಲದಲ್ಲಿ ಜಾರೀ ಇರುವ ಕಾನೂನ ಅನುಸರಿಸಿ ಕ್ರಮ ಪ್ರಕಾರ ರಿಜಿಸ್ಟರಮಾಡಲ್ಪಟ್ಟ) ಬರವಣಿಗೆಯಲ್ಲಿರುವ ಒಂದು ದಸ್ತಾವೇಜಿನ ಮೂಲಕ ಪಾವತೀಮಾಡುವಂತೆ, ಒಡಂಬಡಿಕೆಮಾಡಿಕೊಂಡಿರಬಹುದಾದದಕ್ಕಿಂತ ಅಥವಾ ಡೆಪ್ಯುಟಿ ಕಮಿಶ್ನರನು 92, 100 ಅಥವಾ 101ನೇ ಸೆಕ್‍ಷನಗಳನ್ನನುಸರಿಸಿ ಮಾಡಲ್ಪಟ್ಟ ವಿಚಾರಣೆಯಲ್ಲಿ ಗುತ್ತಿಗೆಯ ಯುಕ್ತವಾದ ಮೊಬಲಗೆಂದು ಫೈಸಲಮಾಡಿ ಇರಬಹುದಾದದಕ್ಕಿಂತ ಜಾಸ್ತೀಯಾಗಿ ಕಂದಾಯ ಯಾ ಗುತ್ತಿಗೆಯ ಬಗ್ಗೆ ತಗಾದೇ ಮಾಡಕೂಡದು.

ಹಾಗೆ ಮಾಡುವ ಬಗ್ಗೆ ದಂಡನೆ.

ಯಾವದರ ಬಗೆ ಪಾವತೀಯು ನ್ಯಾಯತಃ ಜಾರೀಗೆ ತರಲ್ಪಡತಕ್ಕದ್ದೋ ಅಂತಾ ಮೊಬಲಗಿಗೆ ಜಾಸ್ತೀಯಾಗಿ ಯಾರಿಗೆ ಯಾವ ತಗಾದೇಯನ್ನಾಗಲಿ ಜಾರೀಗೆ ತರಲ್ಪಡತಕ್ಕದ್ದೋ ಅಂತಾ ಮನುಷ್ಯನು, ಡೆಪ್ಯುಟಿಕಮಿಶ್ನರನ ಮುಂದೆ ಒಂದು ಫೂಟ ವಿಚಾರಣೆಯಲ್ಲಿ, ಕಮಿಶ್ನರ್ ಹಿಡುವಳೀದಾರನ ತಕ್ಸೀರ ಅಪಾದನೆ ಆದಮೇಲೆ, ನುಕ್ಸಾನಗಳ ಮೂಲಕ ಅಂತಾ ಯಾವದಾದರೂ ಜಾಸ್ತೀ ತಗಾದೇ ಮೊಬಲಗಿನ ಮೂರರಷ್ಟು ಮೊಬಲಗನ್ನು ವಸೂಲಮಾಡುವದಕ್ಕೆ ಅರ್ಹನಾಗಿರತಕ್ಕದ್ದು. ಮತ್ತು ಹಾಗೆ ಕಮಿಶ್ನರ್ ಹಿಡಿವಳೀದಾರನಿಂದ ಬರತಕ್ಕ ಮೊಬಲಗು, ಜಮೀನ ಕಂದಾಯದ ಬಾಕೀ ತರೀಕ ವಸೂಲಮಾಡಲ್ಪಡತಕ್ಕದ್ದು.

8ನೇ ಅಧ್ಯಾಯ.

ಸರ್ವೆ ಸೆಟಲಮೆಂಟಗಳು, ಸ್ವತ್ತುಗಳ ವಿಭಾಗವನ್ನು ಕುರಿತು.

ಮುಂ. ರೆ. ಕೋ. 95ನೇ ಸೆಕ್‍ಷನ.

ಮೈಸೂರು ಸೀಮೆಯ ಯಾವ ಭಾಗದಲ್ಲಾಗಲಿ ಗವರ್ನಮೆಂಟನಿಂದ ರೆವಿನ್ಯು ಸರ್ವೆಯು ಪ್ರವರ್ತಿಸಲ್ಪಡಬಹುದು.

112. ಗವರ್ನಮೆಂಟನವರು ತಮಗೆ ಯುಕ್ತ ತೋರಿದಾಗ ಜಮೀನ ಕಂದಾಯದಫೈಸಲಾತಿ, ಮತ್ತು ಅದಕ್ಕೆ ಸಂಬಂಧಿಸಿದ ಹಕ್ಕುದಾರಿಗಳ ರಿಕಾರ್ಡು ಮತ್ತು ಕಾಪಾಡುವಣಿದರ ವುದ್ದೇಶದಿಂದ, ಅಥವಾ ತತ್ಸಂಬಂಧದ ಇತರ ಯಾವದಾದರೂ ಕೆಲಸಕ್ಕೋಸ್ಕರ, ಮೈಸೂರು ಸೀಮೆಯ ಯಾವ ಭಾಗದಲ್ಲಾಗಲಿ, ಯಾವದಾದರೂ ಜಮೀನಿನ

ಸರ್ವೆಯನ್ನು ನಿಯಮಿಸುವದು ಅವರಿಗೆ ನ್ಯಾಯವಾಗಿರತಕ್ಕದ್ದು: ಅಂತಾ ಸರ್ವೆಯು ಸಾಮಾನ್ಯವಾಗಿ ಯಾವದಾದರೂ ಗ್ರಾಮದ ಜಮೀನುಗಳಿಗೆ, ಷಹರಿಗೆ ಅಥವಾ ಪಟ್ಟಣಕ್ಕೆ ಅಥವಾ ಗವರ್ನಮೆಂಟಿನವರು ನಿಯಮಿಸಬಹುದಾದ ಅಂತಾ ಜಮೀನಿಗೆ ಮಾತ್ರ ವ್ಯಾಪಿಸತಕ್ಕದ್ದು; ಮತ್ತು ಗವರ್ನಮೆಂಟಿನ ಹುಕುಂಗಳಿಗೆ ಒಳಪಟ್ಟು, ಅಂತಾ ಯಾವ ಸರ್ವೇಯನ್ನಾಗಲಿ, ನಡಿಸುವ ಯಾವ ಆಫೀಸರುಗಳಾಗಲಿ ಸೆಟಿಲ್‌ಮೆಂಟ್ ಲಗಾವಾಗತಕ್ಕದ್ದು ಜರೂರೆಂದು ಕಾಣಬೆ ಇರಬಹುದಾದ ಯಾವ ಜಮೀನನ್ನಾಗಲಿ ಸರ್ವೇ ಸೆಟಿಲ್‌ಮೆಂಟ್ ದೆಸೆಯಿಂದ ವಿನಾಯಿಸುವದು ನ್ಯಾಯವಾಗಿರತಕ್ಕದ್ದು.

ರೆವಿನ್ಯೂ ಸರ್ವೆಯ ಮೇಲ್ವಿಚಾರಣೆ.

ಅಂತಾ ಪ್ರತಿ ರೆವಿನ್ಯೂ ಸರ್ವೇಯ ಮೇಲ್ವಿಚಾರಣೆಯು ಗವರ್ನಮೆಂಟಿನಲ್ಲಿ ಉಂಟಾಗಿ ಮತ್ತು ಅವರಿಂದ ಚಲಾಯಿಸಲ್ಪಡತಕ್ಕದ್ದು.

ಮುಂ. ರೆ. ಕೋ. 96ನೇ ಸೆಕ್ಷನ್.

113. ಅಂತಾ ಯಾವ ಸರ್ವೆಯನ್ನಾಗಲಿ ನಡಿಸುವ ಬಗ್ಗೆ ಅಥವಾ ಅದರಲ್ಲಿ ಸಂಬಂಧಿಸುವ ಬಗ್ಗೆ ನಿಯಮಿಸಲಟ್ಟ ಸರ್ವೆಆಫೀಸರರು ಒಟ್ಟು ನೋಟೀಸ್ ಮೂಲಕವಾಗಲಿ ಸಮ್ಮನ್ಸ್‌ಗಳ ಮೂಲಕವಾಗಲಿ, ಜಮೀನುಗಳ ಹಿಡುವಳೀದಾರರು, ಮತ್ತು ಅದರಲ್ಲಿ ಸಂಬಂಧವುಳ್ಳ ತಮಾಂ ಜನಗಳೂ, ತಾವು ರೂಬರೂ ಆಗಲಿ, ಕಾನೂನುಪ್ರಕಾರ ಮೊಕರರ್ಮಾಡಲ್ಪಟ್ಟ ಮುಖ್ಯವಾದ ದರೋಬಸ್ತು ಸವಾಲುಗಳಿಗೂ ಜವಾಬ್ ಕೊಡಲಿಕ್ಕೆ ನಿಯಮಿಸಲ್ಪಟ್ಟು, ಮತ್ತು ಶಕ್ತನಾಗಿರುವ ಮುತಾಲೀಕನ ಹಾಜರಾತೀಯನ್ನು, ಮತ್ತು ಆಯಾ ಸ್ಥಳಗಳಲ್ಲಿಯೂ ಅಧಿಕಾರಗಳಲ್ಲಿಯೂ ತಮ್ಮ ಉದ್ಯೋಗ ಧರ್ಮ ಪ್ರಕಾರ ನೌಕರಿ ಮಾಡಲಿಕ್ಕೆ ಕಾನೂನು ಪ್ರಕಾರ, ಅಥವಾ ವಾಡಿಕೆಯ ಪ್ರಕಾರ ಬದ್ಧರಾಗಿರುವ ತಾಲ್ಲೂಕು ವ ಗ್ರಾಮ ನೌಕರರ ಹಾಜರಾತೀಯನ್ನು ಕೋರುವದಕ್ಕೂ ಮತ್ತು ಹೀಗೆ ಕೋರಲ್ಪಟ್ಟ ಯಾವ ಮನುಷ್ಯನದರ್ಜೆಗೆ, ಅವಗುಣವಾಗದ ಅಂತಾ ಸರ್ವೇ ಚಲಾವಣೆಯಲ್ಲಿ ಸಹಾಯವನ್ನು ಮತ್ತು ತತ್ಸಂಬಂಧದಲ್ಲಿ ನೌಕರಿಯನ್ನು ಮಾಡುವ ಬಗ್ಗೆ ಕೋರುವದಕ್ಕೂ ಯಖ್ತ್ಯಾರೀವುಳ್ಳವರಾಗಿರುವರು.

ಸರ್ವೇ ಆಫೀಸರು ಒಟ್ಟು ನೋಟೀಸ್ ಮೂಲಕ ಯಾ ಸಮ್ಮನ್ಸ್ ಮೂಲಕ ಜಮೀನ್ ಹಿಡುವಳೀದಾರವಗೈರೇರಿಂದ ತಕ್ಕ ನೌಕರಿಯನ್ನು ಖಾಯಿಷ್ ಮಾಡಬಹುದು.

ಮುಂ. ರೆ. ಕೋ. 97ನೇ ಸೆಕ್ಷನ್.

114. ಜಮೀನಿನ ತಮಾಂ ಹಿಡುವಳೀದಾರರನ್ನೂ ಅದರಲ್ಲಿ ಸಂಬಂಧವುಳ್ಳ ಇತರ ಮನುಷ್ಯರನ್ನೂ ಯಾವದಕ್ಕೆ ಸರ್ವೇ ವ್ಯಾಪಿಸುತದೋ ಅಂತಾ ಜಮೀನುಗಳ ಮೋಜಣೀಯಲ್ಲಿಯಾಗಲಿ, ತರಂ ವಿಂಗಡಿಸುವದರಲ್ಲಾಗಲಿ, ಝೂಂಡೆಗಳು ಹಿಡಿಯುವವರನ್ನು ಒದಗಿಸುವದರ ಮೂಲಕ ಕುಮ್ಮಕ್ ಮಾಡುವಂತೆ ಕೋರುವದು ಸರ್ವೇ ಆಫೀಸರಿಗೆ ನ್ಯಾಯವಾಗಿರತಕ್ಕದ್ದು; ಮತ್ತು ಸರ್ವೇ ಕೆಲಸಗಳಿಗೆ ಸಂಭವಿಸುವ ಈ ಮುದ್ದೇಶ ಕೋಸ್ಕರವಾಗಲಿ ಮಜೂರೀದಾರರನ್ನು ಇಟ್ಟುಕೊಳ್ಳುವದು ಆವಶ್ಯಕವಾದಸಂದರ್ಭದಲ್ಲಿ ಸದರೀ ಬಗ್ಗೆ, ಸರ್ವೇಯಾದ ಜಮೀನುಗಳ ಮೇಲೆ ಕರಾಯಿಸಿ, ಆಗುವ ಖರ್ಚನ್ನು ತಮಾಂ ಸಾದಿಲ್‌ವಾರ್ ಖರ್ಚುಗಳೊಡನೆ, ರೆವಿನ್ಯೂ ಬಾಕೀಯಂತೆ ವಸೂಲ್ಮಾಡುವದು ನ್ಯಾಯವಾಗಿರತಕ್ಕದ್ದು.

ಜಮೀನುಗಳ ಮೋಜಣೀಯಲ್ಲಾಗಲಿ ತರಂವಾರ್ ವಿಂಗಡಿಸುವದರಲ್ಲಾಗಲಿ ಹಿಡುವಳೀದಾರರಿಂದಲೂ ಇತರರಿಂದಲೂ ಕೊಡಲ್ಪಡತಕ್ಕ ಕುಮ್ಮಕ್.

ಮುಂ. ರೆ. ಕೋ. 98ನೇ ಸೆಕ್ಷ್ಷ.

ಸರ್ವೇನಂಬರ್‌ಗಳು ಫಲಾನೆ ವಿಸ್ತೀರ್ಣಕ್ಕಿಂತ ಕಮ್ಮಿಯಾಗಿ ರಕೂಡದು.

115. ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಪ್ರಕಾರ ಹೊರತು ಬೇಸಾಯದಕೆ ಲಸಗಳಿಗೆ ಮಾತ್ರ ಉಪಯೋಗಿಸಲ್ಪಡತಕ್ಕ ಜಮೀನ್ ಆಡಗಿರುವ ಯಾವ ಸರ್ವೇ ನಂಬರನ್ನೂ, ಗವರ್ನಮೆಂಟಿನಿಂದ ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಜಮೀನಿನ ಆಯಾ ತರಗತಿಗಳಿಗಾಗಿ, ಆಗಿಂದಾಗ್ಯೆ ಗೊತ್ತುಮಾಡಲ್ಪಡತಕ್ಕ, ಕನಿಷ್ಟಪಕ್ಷದ ವಿಸ್ತೀರ್ಣಕ್ಕಿಂತ ಕಮ್ಮಿಯಾಗಿ ಗೊತ್ತು ಮಾಡತಕ್ಕದ್ದಲ್ಲವು. ಹಾಗೆ ಗೊತ್ತುಮಾಡಲ್ಪಟ್ಟ ಕನಿಷ್ಟಪಕ್ಷದ ವಿಸ್ತೀರ್ಣಗಳ ಬಾಬತು ಒಂದು ರಿಕಾರ್ಡು ಪ್ರತಿ ತಾಲ್ಲೂಕಿನಲ್ಲಿಯೂ, ಅಮಲ್‌ದಾರರ ಕಚ್ಚೇರಿಯಲ್ಲಿಡಲ್ಪಟ್ಟು ಅದು ಯುಕ್ತಕಾಲಗಳಲ್ಲಿ ಯೆಲ್ಲಜನಗಳೂ ನೋಡಲಿಕ್ಕೆ ಖುಲ್ಲಾ ಇರತಕ್ಕದ್ದು.

ವಿನಾಯಿತಿ.

ಈ ನಿಯಮಗಳು ಹಾಗೆ ಗೊತ್ತುಮಾಡಲ್ಪಟ್ಟ ಕನಿಷ್ಟಪಕ್ಷಕ್ಕಿಂತ ಕಮ್ಮಿ ವಿಸ್ತೀರ್ಣವುಳ್ಳದ್ದಾಗಿ ಪೂರ್ವವೇ ಮಾಡಲ್ಪಟ್ಟಿರುವ ಅಥವಾ ಒಟ್ಟಾಗಿಯಾಗಲಿ, ಯಾವದಾದರೂ ವಿಶೇಷ ಸಂದರ್ಭದಲ್ಲಿಯಾಗಲಿ, ಇದಕ್ಕೋಸ್ಕರ ಅಂದರೆ ಕಮ್ಮಿವಿಸ್ತೀರ್ಣವುಳ್ಳದ್ದಾಗಿ ಮಾಡುವದಕ್ಕೆ ಕೊಡಲ್ಪಟ್ಟ ಗವರ್ನಮೆಂಟಿನ ಅಧಿಕಾರ ಅನುಸರಿಸಿ ಹಾಗೆ ಕಮ್ಮಿ ವಿಸ್ತೀರ್ಣವುಳ್ಳದ್ದಾಗಿ ಮಾಡಲ್ಪಡಬಹುದಾದ ಸರ್ವೇ ನಂಬರಿಗಳಿಗೆ ಲಗಾವಾಗತಕ್ಕದ್ದಲ್ಲವು ಮತ್ತು ಸರ್ವೇ ರಿಕಾರ್ಡುಗಳಲ್ಲಿ ಪ್ರತ್ಯೇಕವಾಗಿ ಅಂಗೀಕರಿಸಲ್ಪಟ್ಟ ಯಾವ ಸರ್ವೇ ನಂಬರಾಗಲಿ, ಅದರ ವಿಸ್ತೀರ್ಣ ಯೆಷ್ಟರದಾಗಿದ್ದಾಗ್ಯೂ ಅಧಿಕಾರ ಪೂರ್ವಕ ಮಾಡಲ್ಪಟ್ಟಿರುವದಾಗಿ ಭಾವಿಸಲ್ಪಡತಕ್ಕದ್ದು.

ಮುಂ. ರೆ. ಕೋ. 99ನೇ ಸೆಕ್ಷ್ಷ.

ಸರ್ವೇ ನಂಬರ್‌ಗಳ ಅಂಗೀಕರಿಸಲ್ಪಟ್ಟ ಹಿಸ್ಸೆಗಳು.

116. ಸರ್ವೇ ನಂಬರ್‌ಗಳ ಅಂಗೀಕರಿಸಲ್ಪಟ್ಟ ಹಿಸ್ಸೆಗಳು ಪೂರಾ ಸರ್ವೇ ನಂಬರ್‌ಗಳಿಗೆ ಲಗಾವಾಗತಕ್ಕ ಈ ರೆಗ್ಯುಲೇಷನಿನ ಬದಸ್ತೂರ್ ನಿಬಂಧನೆಗಳಿಗೆ ಒಳಪಡತಕ್ಕದ್ದು, ಇದಕ್ಕೆ ವಿನಾಯಿತಿ ಯಾವವೆಂದರೆ—

(*a*) ಅಂತಾ ಹಿಸ್ಸೆಗಳನ್ನು ಬೇರೆಬೇರೆಯಾಗಿ ನಿಷಾನೆಮಾಡುವದು ಅವಶ್ಯಕತ್ತವ್ಯವಾಗಿರತಕ್ಕದ್ದಲ್ಲವು; ಮತ್ತು

(*b*) 77ನೇ ಸೆಕ್ಷನ್ ನಿಬಂಧನೆಗಳನುಸರಿಸಿ ಅಂತಾ ಯಾವ ಹಿಸ್ಸೆಯಾಗಲಿ; ಹಿಡುವಳೀದಾರನಿಂದ ಶುದ್ಧಾಂಗವಾಗಿ ಬಿಡಲ್ಪಟ್ಟರೆ, ಆಯಾ ಹಿಸ್ಸೇದಾರರು ತಮ್ಮ ಹಿಸ್ಸೆಗಳಿಗಾಗಿ ಕೊಡತಕ್ಕ ಕಂದಾಯದ ಮೊಬಲಗಿನ ಆಧಿಕ್ಯವನ್ನು ಆನುಸರಿಸಿ ಅದೇ ಸರ್ವೇ ನಂಬರಿನಲ್ಲಿರುವ ಇತರ ಹಿಸ್ಸೇದಾರರಾದ ಹಿಡುವಳೀದಾರರನ್ನು, ಆ ಬಾಬತು ಜಮೀನ್ ಹಿಡುವಳೀಯನ್ನು ತೆಗೆದುಕೊಳ್ಳುತ್ತೀರಾಯೆಂದು ಕೇಳತಕ್ಕದ್ದು. ಸದರೀ ಹಿಸ್ಸೆಯ ಹಿಡುವಳೀಯನ್ನು ತೆಗೆದುಕೊಳ್ಳುವದಕ್ಕೆ ಅವರುಗಳಲ್ಲಿ ಯಲ್ಲರೂ ತಿರಸ್ಕರಿಸುವ ಪಕ್ಷದಲ್ಲಿ, ಅದರ ಮೇಲಣ ಕಂದಾಯವು ಪೂರಾ ನಂಬರು ಅವರುಗಳಿಂದ ಬಿಡಲ್ಪಡುವ ಕಾಲದವರಿಗೆ ಮೇಲೆ ಕಂಡಂತೆ ಅವರುಗಳಿಂದ ಸಲ್ಲತಕ್ಕ ಕಂದಾಯದ ಮೊಬಲಗುಗಳ ದಾಮಾಷಾಯಿ ಪ್ರಕಾರ ವಸೂಲ್ ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 100ನೇ ಸೆಕ್ಷನ್.

ಸರ್ವೇ ಇನ್‌ಚಾರ್ಜ್ ಆಫೀಸರು ಕಂದಾಯಗಳನ್ನು, ಠರಾವ ಮಾಡತಕ್ಕದ್ದು.

117. 241ನೇ ಸೆಕ್ಷನ್ ಅನುಸರಿಸಿ ಈ ಬಗ್ಯೆ ಮಾಡಲ್ಪಟ್ಟ ರೂಲ್‌ಗಳಿಗೆ ಅಥವಾ ಹುಕುಂಗಳಿಗೆ ಬಳಪಟ್ಟು ಒಂದು ಸರ್ವೆಯ ಇನ್‌ಚಾರ್ಜ್ ಆಫೀಸರರು, 112ನೇ ಸೆಕ್ಷನ್ನನುಸರಿಸಿ ಮಾಡಲ್ಪಟ್ಟ ಒಂದು ಹುಕುಮಿನ ಸ್ಥಳವ್ಯಾಪ್ತಿಯೊಳಗೆ ಇರುವ ಜಮೀನ್ ಕಂದಾಯದ ದೆಸೆಯಿಂದ ಪೂರಾ ವಿನಾಯಿಸಲ್ಪಡದ ದರೋಬಸ್ತು ಜಮೀನ್‌ಗಳಮೇಲೂ ತಮ್ಮ ಯಖ್ತ್ಯಾರೀ ಪ್ರಕಾರ ಜಮೀನ್ ಕಂದಾಯದಬಗ್ಯೆ ದರ ಠರಾವ್ ಮಾಡುವದಕ್ಕೆ ಅಧಿಕಾರ ವುಳ್ಳವರಾಗಿರತಕ್ಕದ್ದು. ಅಂತಾ ದರಪ್ರಕಾರ ಸಲ್ಲತಕ್ಕ ಮೊಬಲಗ್‌ಗಳು 119ನೇ ಸೆಕ್ಷನ್ ನಿಬಂಧನೆಗಳಿಗೆ ಬಳಪಟ್ಟು, ಅಂತಾ ತಮಾಂ ಜಮೀನ್‌ಗಳಿಂದಲೂ ವಸೂಲ್‌ಮಾಡಲ್ಪಡತಕ್ಕದ್ದು.

55ನೇ ಸೆಕ್ಷನ್ ನಿಯಮಕ್ಕೆ ನಿಗೇಕೊಡತಕ್ಕದ್ದು.

ಅಂತಾ ಕಂದಾಯ ಠರಾವ್ ಮಾಡುವಲ್ಲಿ 55ನೇ ಸೆಕ್ಷನಿನ ನಿಯಮದಿಂದ ವಿಹಿತಗಳಾದ ಅಂಶಗಳಿಗೆ ನಿಗೇಕೊಡತಕ್ಕದ್ದು.

ಆದರೆ ಜಮೀನ್ ಕಂದಾಯವನ್ನು ಪಾವತೀ ಮಾಡುವದರ ದೆಸೆಯಿಂದ ಸಂಪೂರ್ಣವಾಗಿ ವಿನಾಯಿಸಲ್ಪಟ್ಟ ಜಮೀನ್‌ಗಳ ಮೇಲೆಯಾಗಲಿ, ಸರ್ವೇ ಸೆಟಲಿಮೆಂಟ ದೆಸೆಯಿಂದ, ಅಥವಾ ಯಾವ ಜಮೀನ್‌ಗಳಿಗೆ ಸರ್ವೇ ವ್ಯಾಪಿಸುತ್ತದೋ ಅಂತಾ ತಮಾಂ ಜಮೀನ್‌ಗಳನ್ನೂ ಸರ್ವೇ ನಂಬರ್‌ಗಳಾಗಿ ವಿಭಾಗಿಸುವದರ ದೆಸೆಯಿಂದ, 112ನೇ ಸೆಕ್ಷನ್ ಅನುಸರಿಸಿ ಮುಖ್ಯವಾಗಿ ವಿನಾಯಿಸಲ್ಪಟ್ಟ ವಿಶಿಷ್ಟ ಜಮೀನ್‌ಗಳಮೇಲಾಗಲಿ, ಕ್ರಮವಾದ ಪೂರಾ ಕಂದಾಯವನ್ನು ನಿರ್ಣಯಿಸುವದಕ್ಕೂ, ರಿಜಿಸ್ಟರ್ ಮಾಡುವದಕ್ಕೂ, ಮೇಲೆ ಕಂಡ ಸರ್ವೇ ಆಫೀಸರನ್ನು ಈ ಸೆಕ್ಷನ್ನಲ್ಲಿ ಅಡಗಿರುವ ಯಾವ ಅಂಶವೂ ಅಡ್ಡಿಮಾಡುವ ಹಾಗೆ ಯೆಣಿಸಲ್ಪಡತಕ್ಕದ್ದಲ್ಲವು.

ಮುಂ. ರೆ. ಕೋ. 101ನೇ ಸೆಕ್ಷನ್.

ಹಾಗೆ ವಿಧಿಸಲ್ಪಟ್ಟ ಕಂದಾಯವು ಜಮೀನ್‌ಮೇಲಾಗಲಿ, ನೀರಾವರಿ ವಗ್ಯೆರೆಯ ಸಾಧನದ ಮೇಲಾಗಲಿ, ಇರಬಹುದು.

118. ಹಿಂದಿನ ಸೆಕ್ಷನ್ ಅನುಸರಿಸಿ, ಕಂದಾಯ ವಿಧಿಸಲಿಕ್ಕೆ ಉಂಟಾದ ಅಧಿಕಾರವು ವ್ಯವಸಾಯದ ಕೆಲಸಗಳಿಗೆ ಮಾತ್ರ ಉಪಯೋಗಿಸಲ್ಪಟ್ಟ ಜಮೀನ್‌ಗಳ ಸಂಗತಿಯಲ್ಲಿ ಜಮೀನಿನ ಮೇಲಾಗಲಿ, 58ನೇ ಸೆಕ್ಷನ್ ಅನುಸರಿಸಿ ಯಾವದರ ವಿಷಯದಲ್ಲಿ ಯಾವತೆರಿಗೆಯೂ ವಸೂಲ್‌ಮಾಡಲ್ಪಡುವದಿಲ್ಲವೋ ಅಂತಾ ನೀರಾವರಿಯ ಸಾಧನದಮೇಲೆ, ಒಂದು ತೆರಿಗೆಯ ಯೂ ಕಂದಾಯದ ರೂಪವಾಗಿ ಯಾಗಲಿ, ಗವರ್ನಮೆಂಟನಿಂದ ಮಂಜೂರ್‌ಮಾಡಲ್ಪಡಬಹುದಾದ ಇತರ ಯಾವ ವಿಧದಿಂದಲಾಗಲಿ, ಕಂದಾಯ ವಿಧಿಸಲಿಕ್ಕೆ ಉಂಟಾದ ಅಧಿಕಾರವನ್ನು ಅಡಗಿಸಿಕೊಂಡಿರುತ್ತದೆ.

ಮುಂ. ರೆ. ಕೋ. 102ನೇ ಸೆಕ್ಷನ್.

ಹಾಗೆ ವಿಧಿಸಲ್ಪಟ್ಟ ಕಂದಾಯವು ಗವರ್ನಮೆಂಟ ಮಂಜೂರಾತಿಯಿಲ್ಲದೆ ವಸೂಲ್ ಮಾಡಲ್ಪಡತಕ್ಕದ್ದಲ್ಲವು.

119. ಒಂದು ಸರ್ವೇ ಇನ್‌ಚಾರ್ಜ್ ಆಫೀಸರಿಂದ ಠರಾಯಿಸಲ್ಪಟ್ಟ ಕಂದಾಯವು ಗವರ್ನಮೆಂಟ ಮಂಜೂರಾತಿಯಿಲ್ಲದೆ ವಸೂಲ್‌ಮಾಡಲ್ಪಡತಕ್ಕದ್ದಲ್ಲವು. ಅಂತಾ ಕಂದಾಯಗಳನ್ನು ತಾವು ಜರೂರೆಂದು ಯೆಣಿಸಬಹುದಾದ ಯಾವದಾದರೂ ತಿದ್ದುಪಾಟಿನೊಡನೆ, ವ್ಯವಸಾಯದ ಕೆಲಸಗಳಿಗೆ ಮಾ

ಆದರೆ ಕೆಲವು ವರುಷಗಳ ವಾಯಿದೆಗೆ ಗವರ್ನಮೆಂಟಿನಿಂದ ತಿದ್ದುಪಾಟುನೀಯಾ ತಿದ್ದುಪಾಟಿಲ್ಲದೆ ಠರಾಯಿಸಲ್ಪಡಬಹುದು.

ತ್ರ ಉಪಯೋಗಿಸಲ್ಪಡುವ ಜಮೀನುಗಳ ವಿಷಯದಲ್ಲಿ ಮೂವ್ವತ್ತು ವರುಷಗಳಿಗೆ ಮೀರದ ಮತ್ತು ಇತರ ತಮಾಂ ಜಮೀನುಗಳ ವಿಷಯದಲ್ಲಿ ತೊಂಭತ್ತೊಂಭತ್ತು ವರುಷಗಳಿಗೆ ಮೀರದ ಬಂದು ವಾಯಿದೆಯನ್ನು ಗೊತ್ತುಮಾಡಿ ತಿಳಿಸುವದು ಗವರ್ನಮೆಂಟಿಗೆ ನ್ಯಾಯವಾಗಿರತಕ್ಕದ್ದು : ಪರಂತು, ಗವರ್ನಮೆಂಟಿನವರು ವಿಧಿಸಬಹುದಾದ ಅಂತಾ ಷರತ್ತುಗಳಿಗೆ ಒಳಪಟ್ಟು ಶಾಶ್ವಿತವಾಗಿ ಕಾಫೀಸಾಗುವಳೀಮಾಡಲ್ಪಟ್ಟ ಜಮೀನುಗಳಿಗೆ ಕಂದಾಯ ತವಾವ್ ಮಾಡುವದರಲ್ಲಿ ಈ ಸೆಕ್ಷನ್ನೊಳಗಿರುವ ಯಾವ ಅಂಶವೂ ಗವರ್ನಮೆಂಟಿನವರನ್ನು ನಿರೋಧಿಸತಕ್ಕದ್ದಲ್ಲವು.

ಮುಂ. ರೆ. ಕೋ. 103ನೇ ಸೆಕ್ಷನ್.

ಸರ್ವೇ ಸೆಟಲ್‌ಮೆಂಟ್ ಹ್ಯಾಗೆ ಪ್ರವರ್ತಿಸತಕ್ಕದ್ದು.

120. ವ್ಯವಸಾಯದ ಕೆಲಸಗಳಿಗೆಮಾತ್ರ ವುಪಯೋಗಿಸಲ್ಪಡುವ ಜಮೀನುಗಳ ವಿಷಯದಲ್ಲಿ ಗವರ್ನಮೆಂಟಿನವರು, ಸರ್ವೇ ಇನ್‌ಚಾರ್ಜ್ ಆಫೀಸರರಿಂದ ಠರಾಯಿಸಲ್ಪಟ್ಟ ಕಂದಾಯಗಳನ್ನು ಮಂಜೂರ ಮಾಡಿದಾಗ ಸದರೀ ಆಫೀಸರರು ಡೆಪ್ಯೂಟಿ ಕಮ್ಮಿಷನರು ಅಥವಾ ಅಸಿಸ್ಟೆಂಟ್ ಕಮ್ಮಿಷನರು ಅಂತಾ ಪ್ರತಿ ಸರ್ವೇ ನಂಬರಿಗೆ ಠರಾಯಿಸಲ್ಪಟ್ಟ ಕಂದಾಯವನ್ನು ಬಹಿರಂಗವಾಗಿ ಫಾಯಿಷ್ ಮಾಡತಕ್ಕದ್ದು, ಅಥವಾ ಫಾಯಿಷ್ ಮಾಡಿಸತಕ್ಕದ್ದು ಅವರ ಕೆಲಸವಾಗಿರತಕ್ಕದ್ದು.

ಸದರೀ ಆಫೀಸರಾಗಲೀ ಡೆಪ್ಯೂಟಿ ಕಮ್ಮಿಷನರಾಗಲೀ ಅಸಿಸ್ಟೆಂಟ್ ಕಮ್ಮಿಷನರಾಗಲೀ ಮೇಲೆ ಕಂಡಂತೆ ಕಂದಾಯದ ಮೊಕರರಾತಿಗಳು ಯಾವ ಕಾಲದಲ್ಲಿ ಅಥವಾ ಷುಮಾರು ಯಾವ ಕಾಲದಲ್ಲಿ ಫಾಯಿಷ್ ಮಾಡಲ್ಪಡುವವೋ, ಅಂತಾ ಕಾಲವನ್ನು ಕುರಿತು ತಮಗೆ ಯುಕ್ತ ತೋರುವ ರೀತಿಯಾಗಿ ಬಹಿರಂಗವಾದ ನೋಟೀಸನ್ನು ಮುಂದಾಗಿ ತಕ್ಕಕಾಲದಲ್ಲಿ ಕೊಡಿಸತಕ್ಕದ್ದು.

ಹಿಡುವಳೀದಾರನಾಗಲೀ ಯಾವ ಹಿಡುವಳಿಯೊಳಗಾದರೂ ಸಂಬಂಧವುಳ್ಳ ಇತರ ಮನುಷ್ಯನಾಗಲೀ ಖುದ್ದಾಗಿ ಅಥವಾ ಮುತಾಲೀಕರ ಮೂಲಕ ಹಾಜರಾಗದೆಯಿದ್ದರೆ, ಅವನು ಹಾಜರಾಗಿ ಯಿದ್ದರೆ ಹ್ಯಾಗೋ ಹಾಗೆ ಬದಸ್ತೂರ ಜವಾಬ್‌ದಾರೀಗಳಿಗೆ ಒಳಪಟ್ಟಿರತಕ್ಕದ್ದು.

ಕಂದಾಯಗಳು, ಈ ಸೆಕ್ಷನಿನ ಮೊದಲನೇ ಕ್ಲಾಜಿನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಫಾಯಿಷ್ ಮಾಡಲ್ಪಟ್ಟಾಗ ಸರ್ವೇ ಸೆಟಲ್‌ಮೆಂಟು ಪ್ರವರ್ತಿಸಿದಂತೆ ಯೆಣಿಸಲ್ಪಡತಕ್ಕದ್ದು.

ಮುಂ. ರೆ. ಕೋ. 104ನೇ ಸೆಕ್ಷನ್.

ಯಾವ ಸಾಲ್‌ನಲ್ಲಿ ಸರ್ವೇ ಸೆಟಲ್‌ಮೆಂಟ್ ಪ್ರವರ್ತಿಸಿದ್ದರು ತ್ತೋ ಆ ಸಾಲ್‌ನಲ್ಲಿ ಜಾಸ್ತೀ ಕಂದಾಯ ವಸೂಲ್ ಮಾಡಲ್ಪಡತಕ್ಕದ್ದಲ್ಲವು.

121. ಯಾವ ಸಾಲ್‌ನಲ್ಲಿ ಬಂದು ಸರ್ವೆ ಸೆಟಲ್‌ಮೆಂಟು ಅಸಲಾಗಿಯಾಗಲೀ ಪರಿಷ್ಕರಿಸಲ್ಪಟ್ಟಂತೆ ಆಗಲೀ ಹಿಂದಿನ ಕಡೇ ಸೆಕ್ಷನ್ ಅನುಸರಿಸಿ ಪ್ರವರ್ತಿಸಬಹುದೋ, ಆ ಸಾಲ್‌ನಲ್ಲಿ ಯಾವ ಜಮೀನುಗಳ ಮೇಲೆ, ಹೊಸ ಕಂದಾಯವು ಹಳೇ ಕಂದಾಯಕ್ಕಿಂತ ಜಾಸ್ತೀ ಯಿರುವದೋ ಅಂತಾ ತಮಾಂ ಜಮೀನುಗಳ ಹಳೇ ಕಂದಾಯಕ್ಕೂ ಹೊಸ ಕಂದಾಯಕ್ಕೂ ಯಿರುವ ವ್ಯತ್ಯಾಸವನ್ನು ವಜಾಮಾಡಿತಿ

ಪರಿಷ್ಕರಿಸಲ್ಪಟ್ಟ ಕಂದಾಯವನ್ನೇ ಮುಂದಿನ ಸಾಲ್ ಲಾಗಾಯತ್ ವಸೂಲ್ ಮಾಡತಕ್ಕದ್ದು.

ಯಾವ ಸಾಲ್‌ನಲ್ಲಿ ಯಾವದಾದರೂ ಪರಿಷ್ಕರಿಸಲ್ಪಟ್ಟ ಸರ್ವೇ ಸೆಟಲ್‌ಮೆಂಟ್ ಪ್ರವರ್ತಿತ ಯಿರುತ್ತೋ ಆ ಸಾಲಿನ ಮಾರನೇ ಸಾಲಿನಲ್ಲಿ ಯಾವಹಿಡುವಳೀದಾರನು ತನ್ನ ಹಿಡುವಳೀಯಲ್ಲಿ ಉಳ್ಳ ಸರ್ವೇ ನಂಬರ್‌ಗಳ ಪೈಕಿ ಯಾವದರ ಮೇಲಾಗಲೀ ಅಂತಾ ಹೊಸ ಕಂದಾಯದ ಮೂಲಕ ವಿಧಿಸಲ್ಪಟ್ಟ ಜಾಸ್ತೀದರದ ವಿಷಯದಲ್ಲಿ ಅತೃಪ್ತಿ ಪಡಬಹುದೋ ಅಂತಾ ಯಾವ ಹಿಡುವಳೀದಾರನಾಗಲೀ ಮಾರ್ಚಿ 31ರಲ್ಲಿ ಅಥವಾ ತತ್ಪೂರ್ವ 77 ಮತ್ತು 79ನೇ ಸೆಕ್ಷನ್‌ಗಳಿಂದ ವಿಧಿಸಲ್ಪಟ್ಟ ರೀತಿಯಾಗಿ ಅಂತಾ ನಂಬರಿಗೆ ರಾಜೀನಾಮೆ ಕೊಟ್ಟಮೇಲೆ, ಹಾಗೆ ವಿಧಿಸಲ್ಪಟ್ಟ ಜಾಸ್ತೀ ಅಂಶದ ವಜಾವನ್ನು ಪಡೆಯತಕ್ಕದ್ದು.

ನಂಬರಿಗೆ ಮುಂದಿನ ಸಾಲ್‌ನಲ್ಲಿ ರಾಜೀನಾಮೇ ಕೊಡಲ್ಪಟ್ಟರೆ ಆ ಸಾಲ್‌ನಲ್ಲಿಯೂ ವಸೂಲ್ ಮಾಡಲ್ಪಡತಕ್ಕದ್ದಲ್ಲವು.

ಮುಂ. ರೆ. ಕೋ. 105ನೇ ಸೆಕ್ಷನ್.

122. 119ನೇ ಸೆಕ್ಷನ್ ನಿಬಂಧನೆಗಳನುಸರಿಸಿ ಕಂದಾಯದ ಠರಾವಣೆಯು ಸಾಮಾನ್ಯವಾದ ಜಮೀನ್ ಕಂದಾಯದ ಠರಾವಣೆಗೆಮಾತ್ರವೇ ಖಂಡಿತವಾಗಿ ಹದ್ದುಪಡಿಸಲ್ಪಟ್ಟು ಪಾಠಶಾಲೆಗಳ ಕಟ್ಟಡ, ರಕ್ಷಣ ಮತ್ತು ಅಭಿವೃದ್ಧಿ, ಗ್ರಾಮ ವ ಡಿಸ್ಟ್ರಿಕ್ಟು ರಸ್ತೆಗಳು, ಸೇತುವೆಗಳು, ಕೆರೆಗಳು, ಬಾವಡಿಗಳು, ನೀರಾವರಿ ನಾಲಾಗಳು, ಮುಸಾಫರ್ ಬಂಗ್ಲೇಗಳು ಯಿನ್ನೂ ಇಂತಾ ಸ್ಥಿರವಾದ ಅಭಿವೃದ್ಧಿ ಕೆಲಸಗಳ ಬಗ್ಗೆಯಾಗಿ ತತ್ಕಾಲದಲ್ಲಿ ಜಾರೀಯಿರುವ ಯಾವದಾದರೂ ಕಾನೂನಿನ ನಿಬಂಧನೆಗಳನುಸರಿಸಿ ವಿಧಿಸುವದು ಗವರ್ನಮೆಂಟಿಗೆ ನ್ಯಾಯವಾಗಿರುವ ಯಾವ ತೆರಿಗೆಯನ್ನಾಗಲಿ 58ನೇ ಸೆಕ್ಷನ್ ನಿಬಂಧನೆಗಳನುಸರಿಸಿ ನೀರಿನ ಉಪಯೋಗದಬಗ್ಯೆ ವಿಧಿಸಲ್ಪಡಬಹುದಾದ ಯಾವ ತೀರ್ವೆಯನ್ನಾಗಲಿ ವಸೂಲ್ಮಾಡುವದಕ್ಕೆ ಅಡ್ಡಿಯಾಗಿರತಕ್ಕದ್ದಲ್ಲವು.

119ನೇ ಸೆಕ್ಷನ್ ಅನುಸಾರ ಕಂದಾಯದ ಠರಾವಣೆಯು ಸಾಮಾನ್ಯವಾದ ಜಮೀನ್ ಕಂದಾಯಕ್ಕೆ ಮಾತ್ರ ಲಗಾವಾಗತಕ್ಕದ್ದು.

ಮುಂ. ರೆ. ಕೋ. 106ನೇ ಸೆಕ್ಷನ್.

123. ಒಂದು ಹೊಸ ರೆವಿನ್ಯೂ ಸರ್ವೇಯನ್ನಾಗಲಿ, ಅದಕ್ಕೆ ಉತ್ತಾತಿಯಾಗಿರುವ ಯಾವ ಕೆಲಸವನ್ನಾಗಲಿ, ಯಾವಕಾಲದೊಳಗಾದರೂ ನಿಯಮಿಸುವದು ಗವರ್ನಮೆಂಟಿಗೆ ನ್ಯಾಯವಾಗಿರತಕ್ಕದ್ದು ; ಆದರೆ, 119ನೇ ಸೆಕ್ಷನ್ ನಿಬಂಧನೆಗಳನುಸರಿಸಿ ಮೊದಲೇ ನಿಶ್ಚಯಿಸಲ್ಪಟ್ಟ ವಾಯಿದೆಯು ಕಳೆಯುವತನಕ ಹೆಚ್ಚು ಕಂದಾಯದ ಠರಾವಣೆಯು ಜಾರೀಗೆ ಬರತಕ್ಕದ್ದಲ್ಲವು. ಈ ರೆಗ್ಯುಲೇಷನ್ ಅನುಸರಿಸಿಯಾಗಲಿ, 1865ನೇ ಇಸವಿಯ 1ನೇ ಮುಂಬೈ ಆಕ್ಟು ಅನುಸರಿಸಿ ಯಾಗಲಿ, ಮಾಡಲ್ಪಟ್ಟ ಯಾವದಾದರೂ ಸೆಟಲ್‌ಮೆಂಟಿನ ಚಲಾವಣೇಕಾಲದಲ್ಲಿ ಸ್ವಂತ ದ್ರವ್ಯದಿಂದಲೂ, ಇತರ ಸಾಧನಗಳಿಂದಲೂ ಮಾಡಲ್ಪಟ್ಟ ಅಭಿವೃದ್ಧಿಗಳ ವಿಚಾರದಲ್ಲಲ್ಲದೇ ಭೋಗುಣ, ಭೂಮಿ ಯಿರುವಸ್ಥಳ, ಹುಟ್ಟುವ

ಗವರ್ನಮೆಂಟಿನವರು ಒಂದು ಹೊಸ ರೆವಿನ್ಯೂ ಸರ್ವೇಯನ್ನೂ ಕಂದಾಯದ ವಿಮರ್ಶೆಯನ್ನೂ ವಿಧಿಸಬಹುದು.

ಆದರೆ ಸ್ವಂತ ದ್ರವ್ಯದಿಂದಲೂ, ಸಾಧನಗಳಿಂದಲೂ ಮಾಡಲ್ಪಟ್ಟ ಅಭಿವೃದ್ಧಿಗಳಿಗೆ ಕಂದಾಯ ವಿಧಿಸಕೂಡದು.

ಳಿಯ ದಾರಣೆಗಳು, ಅಥವಾ ಆಮದರಫ್ತಿನ ಸೌಕರ್ಯ ಇಂತಾ ವಿಷಯಗಳಮೂಲಕ ಜಮೀನಿನ ಬೆಲೆಯ ಸಾಮಾನ್ಯ ವಿಚಾರಗಳಿಂದ ಪರಿಷ್ಕರಿಸ್ಪಲ್ಪಟ್ಟ ಕಂದಾಯವನ್ನು ಠರಾಯಿಸತಕ್ಕದ್ದು.

ಮುಂ. ರೆ. ಕೋ. 107ನೇ ಸೆಕ್ಷರ್ನ.

ಪರಿಷ್ಕರಿಸಲ್ಪಟ್ಟ ಕಂದಾಯವನ್ನು ನಿಶ್ಚಯಿಸುವದರಲ್ಲಿ ಕೆಲವು ಅಭಿವೃದ್ಧಿಗಳನ್ನು ಕುರಿತು ಪರ್ಯಾಲೋಚಿಸಬಹುದು.

124. ಪರಿಷ್ಕರಿಸಲ್ಪಟ್ಟ ಕಂದಾಯವು ನಿಶ್ಚಯಿಸಲ್ಪಡುವವನ್ನು ನಿರೋಧಿಸತಕ್ಕದ್ದಾಗಿ ಹಿಂದಿನ ಕಡೇ ಸೆಕ್ಷರ್ನನಲ್ಲಿರುವ ಯಾವ ಅಂಶವೂ ಭಾವಿಸಲ್ಪಡತಕ್ಕದ್ದಲ್ಲವು :—

(a) ಸರ್ಕಾರ ಖರ್ಚಿನಿಂದ ನಡಿಸಲ್ಪಟ್ಟ, ಯಾವದಾದರೂ ಅಭಿವೃದ್ಧಿಯ ವಿಷಯದಲ್ಲಿ, ಅಥವಾ

(b) ಸ್ವಂತ ದ್ರವ್ಯದಿಂದಲೂ, ಯಿತರ ಸಾಧನಗಳಿಂದಲೂ, ಮಾಡಿಸಲ್ಪಟ್ಟ ಅಭಿವೃದ್ಧಿಯು, ಯಾವದಾದರೂ ಸ್ವಾಭಾವಿಕವಾದ ಪ್ರಯೋಜನವನ್ನು ಉಪಯೋಗಿಸಿಕೊಳ್ಳುವದರ ಸಾಧನವನ್ನುಂಟುಮಾಡಿ ಯಿರುವದರಲ್ಲಿ ಮಾತ್ರ ಅಡಗಿಯಿರುವ ಪಕ್ಷಕ್ಕೆ ಅಂತಾ ಯಾವದಾದರೂ ಪ್ರಯೋಜನದ ಯೋಗ್ಯತೆಯ ವಿಷಯದಲ್ಲಿ ; ಅಥವಾ

(c) ವ್ಯವಸಾಯದ ಸಾಧಾರಣ ಕೆಲಸಗಳಿಂದ ಫಲಿತವಾದ ಯಾವದಾದರೂ ಅಭಿವೃದ್ಧಿಯ ವಿಷಯದಲ್ಲಿ ಪರಿಷ್ಕೃತವಾದ ಹೊಸಕಂದಾಯವನ್ನು ಠರಾಯಿಸುವದಕ್ಕೆ ಹಿಂದಿನ ಸೆಕ್ಷರ್ನನಿನ ಯಾವ ಅಂಶವೂ ಅಡ್ಡಿಮಾಡತಕ್ಕದ್ದಾಗಿ ಯೆಣಿಸತಕ್ಕದ್ದಲ್ಲವು.

ಮುಂ. ರೆ. ಕೋ. 108ನೇ ಸೆಕ್ಷರ್ನ.

ಲೆಖ್ಖಗಳು ಮತ್ತು ಹುಟ್ಟುವಳಿಯುಬಾಬತು ರಿಕಾರ್ಡುಗಳನ್ನು ತಯಾರು ಮಾಡೋಣ.

125. ಜಮೀನ್ ಕಂದಾಯದ ಫೈಸಲಾತಿಯನ್ನು ಮಾಡುವ ಅಥವಾ ಪರಿಷ್ಕರಿಸುವ ಸಂದರ್ಭದಲ್ಲಿ ಪ್ರತಿ ಸರ್ವೇ ನಂಬರಿನ ಬೀಜವರಿ ವ ಕಂದಾಯವನ್ನೂ, ಅಂತಾ ಸರ್ವೇ ನಂಬರಿನ ರಿಜಿಸ್ಟರಾದ ಹಿಡುವಳೀದಾರನ ಹೆಸರು ಸಹಿತ, ಈ ಬಗ್ಗೆ ಗವರ್ನಮೆಂಟಿನಿಂದ ಆಗೀದಾಗ್ಯೆ ಮಾಡಲ್ಪಡಬಹುದಾದ ಹುಕ್ಕುಂಗಳ ಪ್ರಕಾರ ಇತರ ರಿಕಾರ್ಡ್‌ಗಳನ್ನೂ ಸಮೂದಿಸಿ "ಸೆಟಲ್‌ಮೆಂಟ ರಿಜಿಸ್ಟರ್" ಯೆಂದು ಕರೆಯಲ್ಪಡತಕ್ಕ ಒಂದು ರಿಜಿಸ್ಟರನ್ನು ತಯಾರ್‌ಮಾಡುವದು ಸರ್ವೇ ಆಫೀಸರನ ಕಾರ್ಯವಾಗಿರತಕ್ಕದ್ದು.

ಮುಂ. ರೆ. ಕೋ. 109ನೇ ಸೆಕ್ಷರ್ನ.

ಸೆಟಲ್‌ಮೆಂಟ ರಿಜಿಸ್ಟರ್‌ನಲ್ಲಿರತಕ್ಕ ಹಸ್ತದೋಷಗಳನ್ನೂ, ಒಪ್ಪಿಕೊಳಲ್ಪಟ್ಟ ತಪ್ಪುಗಳನ್ನೂ ಸರ್ವೇ ಆಫೀಸರಾಗಲಿ, ಡೆಪ್ಯುಟಿ ಕಮ್ಮಿಷನರ್ ಯಾ ಅಸಿ ಕಮ್ಮಿಷನರಾಗಲಿ ತಿದ್ದತಕ್ಕದ್ದು.

126. ಸರ್ವೇ ಆಫೀಸರಾಗಲಿ, 120ನೇ ಸೆಕ್ಷರ್ನ ನಿಯಮಗಳನ್ನು ಅನುಸರಿಸಿ ಡೆಪ್ಯುಟಿ ಕಮ್ಮಿಷನರಿಂದ ಅಥವಾ ಆಸಿಸ್ಟೆಂಟ ಕಮ್ಮಿಷರ್ನರಿಂದ ಸರ್ವೇ ಸೆಟಲ್‌ಮೆಂಟ ಜಾರೀಯಲ್ಲಿ ತರಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷರ್ನರಾಗಲಿ, ಅಸಿಸ್ಟೆಂಟ ಕಮ್ಮಿಷರ್ನರಾಗಲಿ ಸೆಟಲ್‌ಮೆಂಟ ರಿಜಿಸ್ಟರ್‌ನಲ್ಲಿ ಮಾಡಿರುವಂತೆ, ಸದರೀ ಸಂಗತಿಗೆ ಸಂಬಂಧಿಸಿದ ಕಕ್ಷಿದಾರರಿಂದ ಕಬೂಲ್‌ಪಡತಕ್ಕ ಯಾವ ಹಸ್ತದೋಷಗಳನ್ನೂ ಮತ್ತು ಯಾವ ತಪ್ಪುಗಳನ್ನೂ ಯಾವ ಕಾಲದಲ್ಲಿ ಯಾಗಲಿ ತಿದ್ದತಕ್ಕದ್ದು ಅಥವಾ ತಿದ್ದಿಸತಕ್ಕದ್ದು.

ಹೆಸರುಗಳನ್ನು ಬದಲಾಯಿಸುವಬಗ್ಯೆ ಬರತಕ್ಕ ಅರ್ಜೀಗಳ ಮೇಲೆ ವಿಚಾರಣೆ ಮಾಡಿ ಹುಕುಂ ಕೊಡುವಿಕೆ.

ಸರ್ವೆ ಸೂಪರ್ರಿಂಟೆಂಡೆಂಟರಾಗಲಿ, ಡೆಪ್ಯುಟಿ ಕಮ್ಮಿಷ್ನರರಾಗಲಿ, ಸರ್ವೇ ಸೆಟಲ್‌ಮೆಂಟ್ ಜಾರೀಯಲ್ಲಿ ಬಂದ ಎರಡು ವರುಷಗಳೊಳಗಾಗಿ ಯಾವಾಗಲಾದರೂ, ಸದರೀ ರಿಜಿಸ್ಟರ್‌ನಲ್ಲಿ ರಿಜಿಸ್ಟ್ರಾದ ಹಿಡುವಳೀದಾರನ ಹೆಸರು, ತಪ್ಪಾಗಿ ದಾಖಲಾಗಿದ್ದು ಅದನ್ನು ತಿದ್ದತಕ್ಕ ಬಗ್ಯೆ ಕೊಡಲ್ಪಡತಕ್ಕ ಅರ್ಜಿಗಳನ್ನೆಲ್ಲಾ ಅಂಗೀಕರಿಸಿ ವಿಚಾರಣೆ ಮಾಡತಕ್ಕದ್ದಲ್ಲದೆ, ಮೋಸದಿಂದಲಾಗಲಿ, ಕಳ್ಳಯೋಚನೆಯಿಂದಾಗಲಿ, ಅಶ್ರದ್ಧೆಯಿಂದಾಗಲಿ, ಇತರ ವಿಧದಿಂದಲಾಗಲಿ, ತಪ್ಪು ಮಾಡಲ್ಪಟ್ಟದೆಯೆಂದು ತೃಪ್ತಿಕರವಾಗಿ ತಿಳಿಯಬಂದರೆ, ಅಂತಾ ತಪ್ಪಿತವನ್ನು, ಅದಕ್ಕೆ ಸಂಬಂಧಿಸಿದ ಕಕ್ಷಿಗಾರರೆಲ್ಲರೂ ಕಬೂಲ್ ಮಾಡದಿದ್ದರೂ, ಅದನ್ನು ತಿದ್ದತಕ್ಕದ್ದು ಅಥವಾ ತಿದ್ದಿಸತಕ್ಕದು; ಆದರೆ ಅವರು ಸರ್ವೇ ಸೆಟಲ್‌ಮೆಂಟ್ ಜಾರೀಗೆ ಬಂದ ತಾರೀಖು ಮೊದಲು, ಯೆರಡು ವರುಷಗಳಮೇಲೆ ಯಾವಕಾಲದಲ್ಲಾಗಲಿ ಕೊಡಲ್ಪಡುವ ಅರ್ಜಿಯ ವಿಷಯದಲ್ಲಿ ಉಂಟಾದ ಸಾವಕಾಶಕ್ಕೆ ಒಳ್ಳೆಯ ಸಬಬು ತಮಗೆ ತೃಪ್ತಿಕರವಾಗಿ ತಿಳಿಸಲ್ಪಟ್ಟ ಹೊರತು ಅಂತಾ ಅರ್ಜೀಯನ್ನು ಅವರು ಅಂಗೀಕರಿಸಕೂಡದು. ಸದರೀ ಯೆರಡು ವರುಷಗಳ ತರುವಾಯ ಅರ್ಜೀ ಬರೆದು ಕೊಳ್ಳಲ್ಪಟ್ಟಪಕ್ಷಕ್ಕೆ, ಗವರ್ರ್ನಮೆಂಟಿನ ಮುಂಜೂರಾತಿ ಮುಂದಾಗಿ ಪಡಕೊಂಡ ಹೊರತು, ಮೇಲೆ ಕಂಡ ರಿಜಿಸ್ಟರ್‌ನಲ್ಲಿ ಅಂತಾ ಯಾವ ತಪ್ಪಿತವನ್ನೂ ತಿದ್ದಕೂಡದು.

ಮುಂ. ರೆ. ಕೋ. 110ನೇ ಸೆಕ್ಷರ್ಷ.

ಡೆಪ್ಯುಟಿ ಕಮ್ಮಿಷ್ನರು ಸರ್ವೇ ರಿಕಾರ್ಡುಗಳನ್ನು ಇಟ್ಟುಕೊಂಡು ಅದಕ್ಕೆ ಅನುಗುಣವಾಗಿ ಗ್ರಾಮಕ್ಕೆ ಸಂಬಂಧಿಸುವ ರಿಕಾರ್ಡುಗಳನ್ನೂ ಲೆಕ್ಕಗಳನ್ನೂ ತಯಾರ ಮಾಡತಕ್ಕದ್ದು.

127. ಡೆಪ್ಯುಟಿ ಕಮ್ಮಿಷ್ನರು ಸರ್ವೇ ಆಫೀಸರಿಂದ ತಯಾರ್ ಮಾಡಲ್ಪಟ್ಟ ಸೆಟಲ್‌ಮೆಂಟ್ ರಿಜಿಸ್ಟರನ್ನೂ ಮತ್ತು ಗವರ್ರ್ನಮೆಂಟಿನವರು ನಿಯಮಿಸತಕ್ಕಂಥಾ ಇತರ ರಿಕಾರ್ಡುಗಳನ್ನೂ ಇಡತಕ್ಕದು; ಮತ್ತು ತದನುಗುಣವಾಗಿ ಗ್ರಾಮ ರಿಕಾರ್ಡುಗಳನ್ನೂ ಲೆಕ್ಕಗಳನ್ನೂ ತಯಾರು ಮಾಡಿಸತಕ್ಕದು.

ಬದಲಾವಣೆಗಳು ವಗೈರೆಯನ್ನು ರಿಜಿಸ್ಟರ್ ಮಾಡತಕ್ಕದ್ದು.

ಸೆಟಲ್‌ಮೆಂಟ್ ರಿಜಿಸ್ಟರ್‌ನಲ್ಲಿ ಆತನು ಯಾವ ಬದಲಾವಣೆಗಳನ್ನಾಗಲಿ ತಿದ್ದುಪಾಡುಗಳನ್ನಾಗಲಿ ಮಾಡತಕ್ಕದ್ದಲ್ಲವು, ಆದರೆ, ಗ್ರಾಮ ರಿಕಾರ್ಡುಗಳಲ್ಲಿಯೂ ಲೆಕ್ಕಗಳೊಳಗೂ, ಉಂಟಾಗ ಬಹುದಾದ ಎಲ್ಲಾ ಬದಲಾವಣೆಗಳನ್ನಾಗಲೀ ಅದರಲ್ಲಿ ರಿಕಾರ್ಡ್ ಮಾಡಲ್ಪಟ್ಟ ಯಾವದಾದರು ಹಕ್ಕುಗಳಿಗೆ ಅಥವಾ ಸಂಬಂಧಗಳಿಗೆ ಬಾಧಕವಾಗಬಹುದಾದ ಯಾವ ಅಂಶವನ್ನಾಗಲಿ ಸದರೀ ಗ್ರಾಮ ರಿಕಾರ್ಡುಗಳಲ್ಲಿಯೂ ಲೆಕ್ಕಗಳೊಳಗೂ ರಿಜಿಸ್ಟರ್ ಮಾಡಿಸತಕ್ಕದ್ದು.

ಮುಂ. ರೆ. ಕೋ. 111ನೇ ಸೆಕ್ಷರ್ಷ.

ಗವರ್ರ್ನಮೆಂಟ್ ವಿಚಾರಣೆಯಲ್ಲಿ ಹಂಗಾಮಿಯಾಗಿ ಇರಬಹುದಾದ ಗವರ್ರ್ನಮೆಂಟಿಗೆ ಸಂಬಂಧಿಸದ ಗ್ರಾಮಗಳ ಅಥವಾ ಸ್ವತ್ತುಗಳ ರೆವಿನ್ಯು ವಿಚಾರಣೆ.

128. ಪರಭಾರೇಯಾದ ಯಾವ ಗ್ರಾಮವಾಗಲಿ, ಸ್ವತ್ತಾಗಲಿ, ಗವರ್ರ್ನಮೆಂಟ್ ಆಫೀಸರಗಳ ಹಂಗಾಮಿ ವಿಚಾರಣೆಯೊಳಗೆ ಬರುವ ಸಂದರ್ಭದಲ್ಲಿ, ಅದರ ಬಾಬತು ಜಮೀನ್ದಾರಗಳನ್ನು ಒಂದು ಸರ್ವೇ ಸೆಟಲ್‌ಮೆಂಟಿನ ಮೂಲಕ ನಿರ್ಣಯಿಸಲ್ಪಟ್ಟ ದರಗಳಪ್ರಕಾರ ಅಥವಾ ಡೆಪ್ಯುಟಿ

ಕಮ್ಮಿಶ್ನರರಿಗೆ ನ್ಯಾಯವೆಂದು ತೋರಬಹುದಾದ ನಿಶ್ಚಯಿಸಲ್ಪಟ್ಟ ಅಂತಾ ಇತರ ದರಗಳ ಪ್ರಕಾರ, ಅದರಬಾಬತು ಜಮೀನ್ಗಳನ್ನು ಗುತ್ತಿಗ್ಯೆ ಕೊಡುವದೂ, ಹಿಡುವಳೀಯಲ್ಲಿಲ್ಲದ ಜಮೀನ್ಗಳ ಹಿಡುವಳೀಯನ್ನು ಹರಾಜ್‌ಮೂಲಕ ವಿಕ್ರಯಿಸುವದೂ, ಪರಭಾರೇಯಾಗದ ಜಮೀನ್ಗಳ ವಿಚಾರಣೆಯಬಗ್ಯೆ ಯೇರ್ಪಟ್ಟ ರೂಲ್ಸ್ ಅನುಸರಿಸಿ ಅಂತಾ ರೂಲ್ಸ್ ಲಗಾವಾಗಬಹುದಾದ ಮಟ್ಟಿಗೂ, ಮತ್ತು ಸದರೀ ಗ್ರಾಮವಾಗಲೀ, ಸ್ವತ್ತಾಗಲಿ ಗವರ್ನಮೆಂಟ್ ಆಫೀಸರ್‌ಗಳ ವಿಚಾರಣೆಯಲ್ಲಿ ಇರುವವರಿವಿಗೂ, ಅದರ ಬಾಬತು ರೆವಿನ್ಯೂ ವಿಚಾರಣೆಯನ್ನು ನಡಿಸುವದು ಡೆಪ್ಯುಟಿ ಕಮ್ಮಿಶ್ನರರಿಗೆ ನ್ಯಾಯವಾಗಿರತಕ್ಕದ್ದು. ಪರಂತು, ಅಂತಾ ಗ್ರಾಮದ ಯಾ ಸ್ವತ್ತಿನ ಮೇಲೆ ಹಿಡುವಳೀದಾರನಿಂದ ಮಾಡಲ್ಪಟ್ಟ ಜಮೀನಿಗೆ ಸಂಬಂಧಿಸುವ ಯಾವಲಿಖಿತ ಮೂಲಕದ ಕರಾರಿಗೆ ಳೇಯಾಗಲೀ, ಸದರೀ ಜಮೀನಿನ ಮೇಲೆ ಗವರ್ನಮೆಂಟಿಗೆ ನ್ಯಾಯವಾಗಿ ವುಂಟಾಗಿರುವ ಹಕ್ಕುಗಳಿಗೆ ಬಾಧಕ ಆಗದಿದ್ದ ಪಕ್ಷಕ್ಕೆ ಈ ಸೆಕ್ಷನ್ನಲ್ಲಿ ಅಡಗಿರುವ ಯಾವ ನಡವಳಿತಗಳಿಂದಲೂ ಬಾಧಿಸಲ್ಪಡತಕ್ಕದ್ದಲ್ಲವು.

ಮುಂ. ರೆ. ಕೋ. 112ನೇ ಸೆಕ್ಷನ್.

ಜಮೀನ್ ಕಂದಾಯದ ವಿಷಯದಲ್ಲಿ ತಹಲ್ ಜಾರೀಲಿರುವ ಸೆಟಲ್ ಮೆಂಟ್‌ಗಳನ್ನು ಕಾಪಾಡುವಣಿ.

129. ಗವರ್ನಮೆಂಟಿನ ಅಧಿಕಾರ ಪ್ರಕಾರ ಮಾಡಲ್ಪಟ್ಟ, ಒಪ್ಪಲ್ಪಟ್ಟ ಮತ್ತು ಕಾಯಂಮಾಡಲ್ಪಟ್ಟ ಜಮೀನ್ ಕಂದಾಯದ ಜಾರೀ ಇರುವ ಸರ್ವೇ ಸೆಟಲ್‌ಮೆಂಟುಗಳು, ಈ ರೆಗ್ಯೂಲೇಷನಿನ ನಿಬಂಧನೆಗಳಿಗೆ ಒಳಪಟ್ಟು ಜಾರೀಯಲ್ಲಿರತಕ್ಕದ್ದೆಂದು ಇದರಿಂದ ತಿಳಸಲ್ಪಡುತ್ತೆ.

ಭಾಗ ಮಾಡುವಣಿ.

ಮುಂ. ರೆ. ಕೋ. 113ನೇ ಸೆಕ್ಷನ್.

ಗವರ್ನಮೆಂಟಿಗೆ ಕಂದಾಯ ಪಾವತೀ ಮಾಡುವ ಒಂದು ಯೆಸ್ಟೇಟಿನ ವಿಭಾಗದಬಗ್ಯೆ ರೂಲ್ಸ್.

130. ಗವರ್ನಮೆಂಟಿಗೆ ಕಂದಾಯ ತೆರತಕ್ಕ ಯಾವದಾದರೂ ಎಸ್ಟೇಟಿನ ವಿಭಾಗಕಾಲದಲ್ಲಿ ಇದರಡಿ ಬರುವ ರೂಲ್ಸ್ ಜಾರೀಲಿ ತರಲ್ಪಡತಕ್ಕದ್ದು; (ಅವುಗಳು ಯಾವವೆಂದರೆ) :—

(1) ಯೆಸ್ಟೇಟು, ಯಾವ ನಂಬರನ್ನಾಗಲಿ, ಒಳಭಾಗಮಾಡದೆ ಸಾಧ್ಯವಾದಮಟ್ಟಿಗೆ ಸರ್ವೇ ನಂಬರ್‌ಗಳಿಗೆ ಅನುಗುಣವಾಗಿ ವಿಭಾಗಿಸಲ್ಪಡತಕ್ಕದ್ದು; ಆದರೆ, ಒಂದು ನಂಬರನ್ನು ಒಳಭಾಗವಾಗಿ ಮಾಡದೆ ವಿಭಾಗವನ್ನು ಪೂರ್ಣವಾಗಿ ನೆರವೇರಿಸುವದಕ್ಕೆ ಆಗದೇ ಇದ್ದ ಪಕ್ಷಕ್ಕೆ ಅಂತಾ ಒಳಭಾಗವು, 115ನೇ ಸೆಕ್ಷನ್ ನಿಬಂಧನೆಗಳಿಗೆ ಒಳಪಟ್ಟು ಡೆಪ್ಯುಟಿ ಕಮ್ಮಿಶ್ನರರಿಂದ ಮಾಡಲ್ಪಡಬಹುದು.

(2) ಹಿಂದಿನ ರೂಲ್ ಪ್ರಕಾರ ಸಾಧ್ಯವಾದ ಮಟ್ಟಿಗೆ ಭಾಗ ನಡಿಸಲ್ಪಟ್ಟಮೇಲೆ ಬಾಕೀ ಇರಬಹುದಾದ, ಯಾವ ನಂಬರೇ ಯಾಗಲಿ, ಅಥವಾ ನಂಬರಿನ ಒಳಭಾಗವಾಗಲಿ, 115ನೇ ಸೆಕ್ಷನ್ನಿನ ನಿಬಂಧನೆಗಳಗಾಗಿ ಒಳವಿಭಾಗ ಅಥವಾ ಇನ್ನೂ ಒಳವಿಭಾಗ ಮಾಡಲಿಕ್ಕೆ ಆಗದಿರುವಲ್ಲಿ, ಸದರೀ ನಂಬರಿನಲ್ಲಿ ಇತರ ಹಿಸ್ಸೇದಾರರುಗಳಿಗೆ ತಮ್ಮ ತಮ್ಮ ಹಿಸ್ಸೆಗಳ ಬೆಲೆಯನ್ನು ಹಣದ ರೂಪವಾಗಿ ಪಾವತೀಮಾಡುವ ಹಿಸ್ಸೇದಾರರ ಪೈಕಿ ಒಬ್ಬನಿಗೆ ಒಪ್ಪಿಸಲ್ಪಡತಕ್ಕದ್ದು, ಅಥವಾ ಅದು ಹರಾಜುಹಾಕಲ್ಪಟ್ಟು ಆ ಹುಟ್ಟುವಳಿಯು ತಮಾಂ ಹಿಸ್ಸೇದಾರರಿಗೂ ವಿಭಾಗಿಸಲ್ಪಡತಕ್ಕದ್ದು, ಅಥವಾ ಡೆಪ್ಯುಟಿ ಕಮ್ಮಿಶ್ನರರು ಯುಕ್ತವೆಂದು ಭಾವಿಸುವ ಪ್ರಕಾರ ಅನ್ಯಥಾ ವಿಲಾಮಾಡಲ್ಪಡತಕ್ಕದ್ದು.

(3) ಅಂತಾ ವಿಭಾಗವನ್ನು ಮಾಡುವಲ್ಲಿ ಜರೂರಾಗಿಯೂ ಯುಕ್ತವಾಗಿಯೂ ತಗಲಿದ ಖರ್ಚುಗಳು, ಯಾರ ಖಾಯಿಷ್ನಿಂದ ಸದರೀ ವಿಭಾಗವು ಮಾಡಲ್ಪಟ್ಟಿತ್ತೋ ಅಂತಾ ಹಿಸ್ಸೇದಾರರಿಂದ ಅಥವಾ ಅಂತಾ ವಿಭಾಗ ಮಾಡುವದರಲ್ಲಿ ಸಂಬಂಧವುಳ್ಳ ಜನಗಳಿಂದ, ಡೆಪ್ಯುಟಿ ಕಮ್ಮಿಷ್ನರು ಯುಕ್ತವೆಂದು ಭಾವಿಸುವ ದಾವಾಷಾಯಿ ಪ್ರಕಾರ ಕಂದಾಯದ ಬಾಕೀ ತರೀಕ್ ವಸೂಲ್ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 114ನೇ ಸೆಕ್ಷನ್.

ಜಂಟೀ ಹಿಸ್ಸೇದಾರರಿಂದ ದರಖಾಸ್ತು ಮಾಡಲ್ಪಟ್ಟಲ್ಲಿ, ಡೆ॥ ಕಮ್ಮಿಷನರಿಂದ ಮಾಡಲ್ಪಡತಕ್ಕ ಪರಭಾರೇಯಾದ ಗ್ರಾಮದ ವಿಭಾಗವು.

131. ಯಾವ ಗ್ರಾಮದಲ್ಲಿ ರೆವಿನ್ಯೂ ಸರ್ವೆಯು ಜಾರೀಯಲ್ಲಿ ತರಲ್ಪಟ್ಟಿರುತ್ತೋ ಅಂತಾ ಪರಭಾರೇಯಾದ ಒಂದು ಗ್ರಾಮದಲ್ಲಿ ಒಬ್ಬ ಅಥವಾ ಹೆಚ್ಚು ಮಂದಿ ಜಂಟೀಹಿಸ್ಸೇದಾರರು, ಸದರೀ ಯೆಸ್ಟೇಟಿನ ವಿಭಾಗಕ್ಕೆ ಯಾವಾಗ ಸಮ್ಮತಿಸುತ್ತಾರೋ ಆಗ, ಹಿಂದಿನ ಕಡೇ ಸೆಕ್ಷನ್ನಲ್ಲಿ ಅಡಗಿರುವ ರೂಲ್ಸಿಗೆ ಒಳಪಟ್ಟು ಸದರೀ ಗ್ರಾಮವನ್ನು, ಜಂಟೀ ಹಿಸ್ಸೇದಾರರುಗಳ ಅವರವರ ಹಕ್ಕುಗಳಪ್ರಕಾರ ವಿಭಾಗಮಾಡಿ ಅಂತಾ ಹಿಸ್ಸೇಗಳನ್ನು ಜಂಟೀ ಹಿಸ್ಸೆದಾರರಿಗೆ ಹಂಚಿಕೊಡುವದು ಡೆಪ್ಯುಟಿ ಕಮ್ಮಿಷನರಿಗಾಗಲಿ ಈಬಗ್ಯೆ ಅವರಿಂದ ಕ್ರಮವಾಗಿ ಅಧಿಕಾರ ಕೊಡಲ್ಪಟ್ಟ ಇತರ ಯಾವ ಆಫೀಸರರಿಗಾಗಲಿ ನ್ಯಾಯವಾಗಿರತಕ್ಕದ್ದು.

ಪರಂತು—

(*a*) ಗ್ರಾಮದಲ್ಲಿ ಅವರವರ ಹಕ್ಕುದಾರೀಗಳ ವಿಸ್ತೀರ್ಣವನ್ನು ಕುರಿತು ತವೂಂ ಜಂಟೀ ಹಿಸ್ಸೇದಾರರೂ ಒಡಂಬಟ್ಟಿರುವ ಹೊರ್ತು, ಮತ್ತು

(*b*) ಅಂತಾ ವಿಭಾಗಕ್ಕೆ ಸಮ್ಮತಿಸುವ ಹಿಸ್ಸೇದಾರ್ ಯಾ ಹಿಸ್ಸೇದಾರರ ಹಿಸ್ಸೆಯ ಯಾ ಹಿಸ್ಸೇಗಳ ಕಂದಾಯವು, ಪೂರಾ ಯಸ್ಟೇಟಿನ ಕಂದಾಯದ ಅರವಾಸಿಗೆ ಮೀರಿದ ಹೊರ್ತು, ಅಂತಾ ವಿಭಾಗವೂ ಮಾಡಲ್ಪಡಕೂಡದು.

ಅಂತಾ ಸಂದರ್ಭಗಳಲ್ಲಿ ವಿಭಾಗದ ಖರ್ಚುಗಳು, ಹಿಂದಿನ ಕಡೇ ಸೆಕ್ಷನ್ನಿನ (3)ನೇ ರೂಲ್ ಅನುಸರಿಸಿ, ವಿಭಾಗಿಸಲ್ಪಟ್ಟ ಯಸ್ಟೇಟಿನಲ್ಲಿ ತವೂಂ ಜಂಟೀ ಹಿಸ್ಸೇದಾರರಿಂದಲೂ ವಸೂಲ್ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 115ನೇ ಸೆಕ್ಷನ್.

ಸರ್ವೆಯ ವಿಮರ್ಶೆಯ ಕಾಲದಲ್ಲಿ ನಂಬರ್‌ಗಳ ಒಳ ವಿಭಾಗಗಳು.

132. ಸರ್ವೆಯ ಒಂದು ಪುನರ್ವಿಮರ್ಶೆಯ ಕಾಲದಲ್ಲಿ, 115ನೇ ಸೆಕ್ಷನ್ನಿನ ನಿಬಂಧನೆಗಳಿಗೂ, ಈ ಬಗ್ಯೆ ತತ್ಕಾಲದಲ್ಲಿ ಜಾರೀ ಇರುವ ಯಾವಹಾದರು ಇಲಾಖಾರೂಲ್ಸ್ ಯಾ ಹುಕ್ಕುಂಗಳಿಗೂ ಒಳಪಟ್ಟು, ಯಾವ ಸರ್ವೇ ನಂಬರನ್ನಾಗಲೀ, ಯರಡು ಅಥವಾ ಹೆಚ್ಚು ಪ್ರತ್ಯೇಕ ನಂಬರ್‌ಗಳಾಗಿ ಒಳ ವಿಭಾಗ ಮಾಡುವದೂ, ಜನಗಳ ಹೆಸರುಗಳನ್ನೂ, ದೇಣೀಗಳನ್ನೂ ದಾಖಲ್ಮಾಡುವದೂ, ಸರ್ವೇ ಇನ್‌ಚಾರ್ಜ್ ಆಫಿಸರರ ಯಖ್ತ್ಯಾರಿಯಲ್ಲಿರತಕ್ಕದ್ದು. ಸದರೀ ಮನುಷ್ಯರನ್ನು ಸೆಟಿಲ್‌ಮೆಂಟ್ ರಿಜಿಸ್ಟರಿನಲ್ಲಿ ಪ್ರತ್ಯೇಕವಾಗಿ ಅಂತಾ ಒಳ ವಿಭಾಗಗಳ ರಿಜಿಸ್ಟರಾದ ಹಿಡುವಳೀದಾರರಾಗಿ ಮಂಜೂರ್ಮಾಡಲ್ಪಡಲಿಕ್ಕೆ ಅರ್ಹರಾಗಿ ಭಾವಿಸತಕ್ಕದ್ದು.

ಮುಂ. ರೆ. ಕೋ. 116ನೇ ಸೆಕ್ಷನ್.

ಸೆಕ್ಷನ್ 68 ಅಥವಾ 70 ಅನುಸರಿಸಿ ವಿನಿಯೋಗಿಸಲ್ಪಟ್ಟ ಜಮೀನಿನ ಪ್ರತ್ಯೇಕವಾದ ಡಿ. ಮಾರ್ಕೇಷನ್.

133. ಸಾಗುವಳೀ ಲಾಯಖ್ ಜಮೀನಿನ ಯಾವ ಭಾಗವಾಗಲಿ ಸಾಗುವಳೀ, ಲಾಯಖಿಲ್ಲದ ಯಾವ ಕೆಲಸಕ್ಕೋಸ್ಕರವಾಗಲೀ 68 ಯಾ 70ನೇ ಸೆಕ್ಷನ್ ನಿಬಂಧನೆಗಳನುಸರಿಸಿ ವಿನಿಯೋಗಿಸಿಕೊಳ್ಳಲ್ಪಟ್ಟರೆ, ಹಾಗೆ ವಿನಿಯೋಗಿಸಿ ಕೊಳ್ಳಲ್ಪಟ್ಟಭಾಗವು ಡೆಪ್ಯುಟಿ ಕಮಿಷ್ನರನ ಮಂಜೂರಾತೀ ನಿಶೀ ಡಿಮಾರ್ಕೇಟ್ ಯಾನೆ ಯೆಲ್ಲೇಗುರುತು ಮಾಡಲ್ಪಟ್ಟು 115ನೇ ಸೆಕ್ಷನ್ ನಿಬಂಧನೆಗಳ ಪ್ರಕಾರು ಯಿಡದೆ ಯಾವಾಗಲಾಗಲೀ ಪ್ರತ್ಯೇಕ ನಂಬರಾಗಿ ಯೇರ್ಪಡಿಸಲ್ಪಡತಕ್ಕದ್ದು.

9ನೇ ಅಧ್ಯಾಯ.

ಎಲ್ಲೆಗಳ ವ್ಯವಸ್ಥೆ, ಯೆಲ್ಲೇ ಗುರುತುಗಳನ್ನು ನಿರ್ಮಿಸುವಣ ಮತ್ತು ಕಾಪಾಡುವಣ.

ಮುಂ. ರೆ. ಕೋ. 118ನೇ ಸೆಕ್ಷನ್.

ಗ್ರಾಮದ ಯೆಲ್ಲೆಗಳ ನಿರ್ಣಯ.

134. ಮೈಸೂರು ಶಿಮೆಯಲ್ಲಿ ಇರುವ ಗ್ರಾಮಗಳ ಯೆಲ್ಲೆಗಳೂ, ಅದಕ್ಕೆ ಸಂಬಂಧಿಸಿದ ತವನಾಂ ತಕರಾರುಗಳೂ, ಸರ್ವೇ ಆಫೀಸರಗಳಿಂದಾಗಲಿ, ಈ ಬಗ್ಯೆ ಗವರ್ನವೆಂಟಿನಿಂದ ನಿಯಮಿಸಲ್ಪಡಬಹುದಾದ ಅಂತಾ ಇತರ ಆಫೀಸರರಿಂದಾಗಲಿ ನಿರ್ಣಯಿಸಲ್ಪಡತಕ್ಕದ್ದು, ಸದರೀ ಆಫೀಸರರು ಈ ಕೆಳಗೆ ಬರುವ ರೂಲ್ಸ್‌ಗಳ ಪ್ರಕಾರ ನಡಿಯತಕ್ಕದ್ದು.

ಗ್ರಾಮದ ಯಲ್ಲೇಗಳು ಒಡಂಬಡಿಕೇ ಮೂಲಕ ನಿರ್ಣಯಿಸಲ್ಪಡಬಹುದು.

ರೂಲ್ 1.—ಯಾವದಾದರೂ ಎರಡು ಅಥವಾ ಹೆಚ್ಚು ಆಸ್‌ಪಾಸ್ ಗ್ರಾಮಗಳ ಪಟೇಲ್‌ಗಳಾಗಲಿ ಇತರ ಗ್ರಾಮ ನೌಕರರುಗಳಾಗಲಿ ಮತ್ತು ಬಂದು ಪರಭಾರೇಯಾದ ಗ್ರಾಮದ ಹಿಡುವಳೀದಾರನಾಗಲಿ, ಅಥವಾ ಕ್ರಮವಾಗಿ ನಿಯಮಿಸಲ್ಪಟ್ಟ ಅವನ ಮುತಾಲೀಕನಾಗಲಿ, ಅವರವರ ಗ್ರಾಮಗಳಿಗೆ ಮುದ್ದಿಕವಾದ ಎಲ್ಲೆಯಾಗಿ ಗೊತ್ತಾದ ಯಾವ ಗುರುತನ್ನಾಗಲಿ ತಾವಾಗಿ ಒಪ್ಪಿದಲ್ಲಿ, ಎಲ್ಲೆಯನ್ನು ನಿರ್ಣಯಿಸುವ ಆಫೀಸರರು ಆ ಬಗ್ಯೆ ಬಂದು ಒಡಂಬಡಿಕೆಯನ್ನು ಬರೆದುಕೊಡುವಂತೆ ಸದರೀ ಆಸಾಮಿಗಳನ್ನು ನಿಯಮಿಸಿ ಒಪ್ಪಿಕ್ಕೊಳ್ಳಲ್ಪಟ್ಟ ರೀತಿಯಾಗಿ ಎಲ್ಲೆಯನ್ನು ನಿಷಾನೇ ಮಾಡತಕ್ಕದ್ದು; ಈ ರೀತಿಯಾಗಿ ನಿಶ್ಚಯಿಸಲ್ಪಟ್ಟ ಯಾವದಾದರೂ ಗ್ರಾಮದ ಎಲ್ಲೆಯು, ಮೋಸದಿಂದಲಾಗಲಿ ಹೆದರಿಕೆಯಿಂದಲಾಗಲಿ, ಯಾವದಾದರೂ ಯಿತರ ನ್ಯಾಯವಿರುದ್ಧವಾದ ಉಪಾಯಗಳಿಂದಾಗಲಿ ಸದರೀ ಒಡಂಬಡಿಕೆಯು ತೆಗೆದು | ಕೊಳ್ಳಲ್ಪಟ್ಟದ್ದೆಯೆಂದು ಸದರೀ ಆಫೀಸರಿಗೆ ಕಾಣಬಾರದೇಯಿದ್ದರೆ, ಅದು ಖಾಯಿಂಆಗಿ ವ್ಯವಸ್ಥೆಯಾದಂತೆ ಯೆಣಿಸಲ್ಪಡತಕ್ಕದ್ದು.

ಒಪ್ಪದಿರುವ ಅಥವಾ ತಕರಾರು ವಿಷಯದಲ್ಲಿ ನಡವಳಿತ.

ರೂಲ್ಸ್ 2.—ಪಟೇಲರಾಗಲಿ ಇತರ ಗ್ರಾಮ ನೌಕರರಾಗಲಿ ಮತ್ತು ಪರಭಾರೆಯಾದ ಗ್ರಾಮದಹಿಡುವಳೀದಾರನಾಗಲಿ, ಕ್ರಮ ಪ್ರಕಾರನಿಯಮಿಸಲ್ಪಟ್ಟ ಅವನ ಮುತಾಲೀಕನಾಗಲಿ, ಹಿಂದಿನ ಸೆಕ್ಷನ್‌ನಲ್ಲಿ ವಿಧಿಸಲ್ಪಟ್ಟ ಪ್ರಕಾರ ತಮ್ಮತಮ್ಮ ಗ್ರಾಮಗಳ ಯಲ್ಲೆಗಳನ್ನು ನಿಶ್ಚಯಿಸುವದಕ್ಕೆ ಒಡಂಬಡದೆ ಹೋದರೆ, ಅಥವಾ, ಒಡಂಬಡಿ

ಕೆಯು, ಮೋಸದಿಂದಲಾಗಲಿ, ಹೆದರಿಕೆಯಿಂದಲಾಗಲಿ, ಮತ್ತ್ಯಾವದಾದರು ಇತರ ನ್ಯಾಯವಿರುದ್ಧವಾದ ಸಾಧನಗಳಿಂದಾಗಲಿ, ಒಡಂಬಡಿಕೆ ಪಡಕೊಳ್ಳಲ್ಪಟ್ಟಂತೆ ಸದರೀ ಆಫಿಸರರಿಗೆ ಕಾಣಬಂದರೆ, ಅಥವಾ ಯಾವದಾದರೂ ತಕರಾರು ಫೈಸಲಾಗದೆ ಉಳಿದಿದ್ದರೆ ಸದರೀ ಆಫಿಸರರು, ತಕರಾರ್‌ನಲ್ಲಿರುವ ಜಮೀನನ್ನು ಸರ್ವೇಮಾಡಿ ನಕ್ಷೆ ಯೇರ್ಪಡಿಸತಕ್ಕದ್ದು. ಅಂತಾಪ್ಲ್ಯಾನ್‌ನಲ್ಲಿ ವ್ಯವಹಾರ ಮಾಡುವ ಕಕ್ಷಿಗಾರರು ಹಕ್ಕುದಾರೀಯಿಂದ ಕೇಳುವ ಜಮೀನನ್ನೂ, ಅದಕ್ಕೆ ಸಂಬಂಧಿಸಿದ ತಮಾಂ ತಪಶೀಲ್‌ಗಳನ್ನೂ ನಮೂದಿಸತಕ್ಕದ್ದು, ಮತ್ತು ಸದರೀ ಕಕ್ಷಿಗಾರರ ಹಕ್ಕುಗಳ ವಿಷಯದಲ್ಲಿ ಕ್ರಮವಾದ ವಿಚಾರಣೆಯನ್ನು ಮಾಡಿ ಬಳಿಕ ಮೊಕದ್ದಮೆಯಲ್ಲಿ ಫೈಸಲ್ ಕೊಡತಕ್ಕದ್ದು. ಇದಕ್ಕೆ ಸಂಬಧಿಸಿದ ಗ್ರಾಮಗಳಲ್ಲಿ ಯಾವದಾದರು ಪರಭಾರೇ ಮಾಡಲ್ಪಟ್ಟರೆ, ಸರ್ವೇ ಆಫಿಸರಿಂದ ಮಾಡಲ್ಪಟ್ಟ ಫೈಸಲು, ಹಾಗೆ ಫೈಸಲನ್ನು ಮಾಡುವ ಆಫಿಸರರು ಸರ್ವೇ ಸೂಪರಿಂಟೆಂಡೆಂಟರಾಗಿ ಇಲ್ಲದಿದ್ದರೆ, ಅವರಿಂದ ಕಾಯಂ ಮಾಡಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು.

ಮೈಂ. ರೆ. ಕೋ. 119ನೇ ಸೆಕ್ಷನ್.

ಹೊಲ ಗದ್ದೆಗಳ ಯಲ್ಲೆ ನಿರ್ಣಯ.

135. ಸರ್ವೆ ಕಾಲದಲ್ಲಿ ಒಂದು ಹೊಲಗದ್ದೆಯ ಅಥವಾ ಹಿಡುವಳಿಯ ಯಲ್ಲೆಯು, ಬಿನ್‌ತಕರಾರ್ ಆಗಿಇದ್ದ ಪಕ್ಷಕ್ಕೆ ಮತ್ತು ತತ್ಕಾಲದಲ್ಲಿ ಹಾಜರಿದ್ದ ಗ್ರಾಮ ನೌಕರರಿಂದ ಸದರೀ ಯಲ್ಲೆಯು ಸರಿಯಾಗಿ ಯಿಧೆ ಯೆಂದು ಹೇಳಲ್ಪಟ್ಟರೆ ಹಿಡುವಳೀದಾರನಿಂದಾಗಲಿ ಅನುಭವದಾರನಿಂದಲಾಗಲಿ ತೋರಿಸಲ್ಪಟ್ಟ ಪ್ರಕಾರ ವಿಧಿಸಲ್ಪಡಬಹುದು ; ತಕರಾರ್ ಇದ್ದಲ್ಲಿ ಅಥವಾ ಸದರೀ ಹಿಡುವಳೀದಾರನಾಗಲಿ, ಅನುಭವದಾರನಾಗಲಿ ಹಾಜರಿಲ್ಲದಿದ್ದರೆ ಗ್ರಾಮ ರಿಕಾರ್ಡ್‌ಗಳ ಪ್ರಕಾರವೂ, ಗ್ರಾಮನೌಕರರಿಂದಲೂ, ಆಸ್‌ಪಾಸ್ ಜಮೀನ್‌ಗಳ ಹಿಡುವಳೀ ದಾರರಿಂದಲೂ ನಿರ್ಣಯಿಸಲ್ಪಟ್ಟ ಮೋರೆ ಹಿಡುವಳೀ ಪ್ರಕಾರವೂ, ಅಥವಾ ಸರ್ವೇ ಆಫಿಸರರು ಒದಗಿಸಲಿಕ್ಕೆ ಶಕ್ತರಾಗಿರಬಹುದಾದ ಅಂತಾ ಯಿತರ ಸಾಕ್ಷ್ಯ ಅಥವಾ ವರ್ತಮಾನದ ಮೇರಿಗೆ ನಿಶ್ಚಯಿಸಲ್ಪಡತಕ್ಕದ್ದು.

ಸರ್ವೇ ಮಾಡಲ್ಪಡದೆ ಇರುವ ಒಂದು ಹೊಲದ ಅಥವಾ ಹಿಡುವಳಿಯ ಯಲ್ಲೆಯ ವಿಷಯದಲ್ಲಿ ಯಾವದಾದರೂ ತಕರಾರ್ ಹುಟ್ಟಿದರೆ, ಅಥವಾ ಸರ್ವೇ ರಿಕಾರ್ಡ್‌ಗಳು ಡೆಪ್ಯುಟಿ ಕಮಿಷ್ನರರಿಗೆ ಒಪ್ಪಿಸಲ್ಪಟ್ಟಮೇಲೆ, ಯಾವಕಾಲದಲ್ಲಾಗಲಿ, ಯಾವದಾದರು ಸರ್ವೇ ನಂಬರಿನ ಯೆಲ್ಲೆಯ ವಿಷಯದಲ್ಲಿ ಒಂದು ತಕರಾರ್ ಹುಟ್ಟಿದರೆ, ಸದರೀ ತಕರಾರು, ಡೆಪ್ಯುಟಿ ಕಮಿಷ್ನರರಿಂದ ನಿರ್ಣಯಿಸಲ್ಪಡತಕ್ಕದ್ದು, ಅವರು, ಸರ್ವೇ ನಂಬರ್‌ಗಳ ವಿಷಯದಲ್ಲಿ, ಸರ್ವೇ ರಿಕಾರ್ಡ್‌ಗಳು ಮೊದಲೇ ನಿಶ್ಚಯಿಸಲ್ಪಟ್ಟ ಎಲ್ಲೆಯ ಕುರಿತು ತೃಪ್ತಿಕರವಾದ ರುಜುವಾತನ್ನುಂಟುಮಾಡಿದ ಪಕ್ಷಕ್ಕೆ ಸರ್ವೇ ರಿಕಾರ್ಡ್‌ಗಳ ಮೇರಿಗೂ, ಹಾಗಿಲ್ಲದ ಪಕ್ಷಕ್ಕೆ, ಅವರು ಪಡಿಯಲು ಶಕ್ತರಾಗಿರಬಹುದಾದ ಇತರ ರುಜುವಾತು ಮೇರಿಗೂ, ನಡಿಯತಕ್ಕದ್ದು.

ಮೈಂ. ರೆ. ಕೋ. 120ನೇ ಸೆಕ್ಷನ್.

ಸರಹದ್ದು ತಕರಾರು ಮಧ್ಯಸ್ಥಿಗೆಯಿಂದ ಫೈಸಲಾಗುವಣ.

136. ಒಂದು ಎಲ್ಲೆ ತಕರಾರ್‌ನಲ್ಲಿ ಸಂಬಂಧಿಸದ ಆಯಾಯ ಕಕ್ಷಿಗಾರರು ಅದರ ಫೈಸಲಾತಿಯನ್ನು ಒಂದು ಮಧ್ಯಸ್ಥದ ಸಮಾಜಕ್ಕೆ ಒಪ್ಪಿಸಲಿಕ್ಕೆ ಒಡಂಬಟ್ಟು, ಆ ಬಗ್ಯೆ ಬರವಣಿಗೆಯಲ್ಲಿ ಅರ್ಜೀಬರೆದುಕೊಂಡಲ್ಲಿ, ಹೀಗೆ ಅರ್ಜಿ ಬರದು

ಕೊಳ್ಳದಿದ್ದರೆ ಎಲ್ಲೆಯನ್ನು ನಿರ್ಣಯಿಸುವದು ಯಾರ ಕೃತ್ಯವಾಗಿರುವದೋ ಅಂತಾ ಆಫೀಸರರು, ಸದರೀ ಕಕ್ಷಿಗಾರರನ್ನು ಮುಖರುಮುಂದಿಗೆ ಕಡಮೆಯಿಲ್ಲದ ಜನಗಳುಳ್ಳ ಒಂದು ಸಮಾಜವನ್ನು ನಿರ್ಣಯಿಸಲ್ಪಟ್ಟ ವಂದುಕಾಲದ ವಳಗಾಗಿ ಏರ್ಪಡಿಸುವಂತೆ ಸದರೀ ಕಕ್ಷಿಗಾರರಿಗೆ ನಿಯಮಿಸತಕ್ಕದ್ದು. ಮತ್ತು ಸದರೀ ಆಫೀಸರಿಂದ ಗೊತ್ತುಮಾಡಲ್ಪಡುವ ವಂದು ಕಾಲದೊಳಗೆ ಹಾಗೆ ನಿಯಮಿಸಲ್ಪಟ್ಟ ಕಮ್ಮಿಟೀಯವರಾಗಲಿ, ಸದರೀ ಕಮ್ಮಿಟಿಯ ಮೆಂಬರಗಳ ಪೈಕಿಹೆಚ್ಚು ಸಂಖೆಯುಳ್ಳವರಾಗಲಿ ವಂದು ಫೈಸಲ್‌ಮಾಡಿದರೆ, ಅಂತಾ ಫೈಸಲು, ಸದರೀಆಫೀಸರಿಂದ ಕಾಯಂ ಮಾಡಲ್ಪಟ್ಟಾಗ ಅಥವಾ ಸದರೀ ಆಫೀಸರರು, ಒಬ್ಬ ಸರ್ವೇಸೂಪರ್ರಿಂಟೆಂಡೆಂಟರಿಗಿಂತ ದರ್ಜೆಯಲ್ಲಿಕಡಮೆಯಾದ ಸರ್ವೇ ಆಫೀಸರರಾಗಿದ್ದರೆ, ಸರ್ವೇ ಸೂಪರ್ರಿಂಟೆಂಡೆಂಟರಿಂದ ಮಂಜೂರ್ ಮಾಡಲ್ಪಟ್ಟಾಗ ಆಖೈರಾದ್ದಾಗಿರತಕ್ಕದ್ದು.

ಫೈಸಲು ಪುನರಾಲೋಚನೆಯಬಗ್ಗೆ ಯಾವಾಗ ಕಳುಹಿಸಲ್ಪಡಬಹುದು.

ಪರಂತು, ಸದರೀ ಆಫೀಸರರಾಗಲಿ, ಸರ್ವೇ ಸೂಪರ್ರಿಂಟೆಂಡೆಂಟರಾಗಲಿ, ಸದರಿ ಫೈಸಲನ್ನಾಗಲಿ ಸಮಾಜಕ್ಕೆ ರಿಫರ್ ಮಾಡಲ್ಪಟ್ಟ ವಿಷಯಗಳ ಪೈಕಿ ಯಾವದನ್ನಾಗಲಿ, ಸಿವಿಲ್ ಪ್ರೊಸೀಡ್ಯೂರ್ ಕೋಡಿನ 520ನೇ ಸೆಕ್ಷನ್ನಲ್ಲಿ ವಿಧಿಸಲ್ಪಟ್ಟ ಕಾರಣಗಳ ಪೈಕಿ ಯಾವದಕ್ಕೋಸ್ಕರವಾಗಲಿ,ಅದೇ ಕಮ್ಮಿಟಿಯ ಪುನರಾಲೋಚನೆಗೆ ಕಳುಹಿಸತಕ್ಕದ್ದಕ್ಕೆ ಅಧಿಕಾರ ಉಂಟಾಗಿರತಕ್ಕದ್ದು.

ಮಧ್ಯಸ್ಥಿಗೆ ತಪ್ಪಿಹೋದರೆ ತಕರಾರನ್ನು ಸರ್ವೇ ಆಫೀಸರು ವ್ಯವಸ್ಥೆ ಮಾಡತಕ್ಕದ್ದು.

ಮೇಲೆ ಕಂಡ ರೀತಿಯಾಗಿ ಮೊಕರರ್ ಮಾಡಲ್ಪಟ್ಟ ಕಮ್ಮಿಟಿಯು ಗೊತ್ತು ಮಾಡಲ್ಪಟ್ಟ ಕಾಲದೊಳಗಾಗಿ ತಕರಾರನ್ನು ಫೈಸಲ್ ಮಾಡಲಿಕ್ಕೆ ತಪ್ಪಿದರೆ, ಮೇಲೆಕಂಡ ಆಫೀಸರರು, ಅಥವಾ ಸದರೀ ಆಫೀಸರರು ಸರ್ವೇ ಸೂಪರ್ರಿಂಟೆಂಡೆಂಟರ ದರ್ಜೆಗಿಂತ ಕಮ್ಮೀಯಾದ ಸರ್ವೇ ಆಫೀಸರರಾಗಿ ಯಿದ್ದರೆ, ಸರ್ವೇ ಸೂಪರ್ರಿಂಟೆಂಡೆಂಟರು, ಅದನ್ನು ವ್ಯವಸ್ಥೆ ಮಾಡುವದಕ್ಕೆ ಕಾಲವನ್ನು ಹೆಚ್ಚಿಸುವದು ಯುಕ್ತವೆಂದು ಭಾವಿಸಿದ ಹೊರ್ತು, ಈ ರೆಗ್ಯುಲೇಷನ್ನಲ್ಲಿ ಅನ್ಯಥಾ ವಿಧಿಸಲ್ಪಟ್ಟ ಮೇರೆ ಅದನ್ನು ವ್ಯವಸ್ಥೆ ಮಾಡುವದು ಮೇಲೆ ಕಂಡ ಆಫೀಸರರ ಕಾರ್ಯವಾಗಿರತಕ್ಕದ್ದು.

ಮುಂ. ರೆ. ಕೋ. 121ನೇ ಸೆಕ್ಷನ್.

ಒಂದು ಯೆಲ್ಲೆಯ ಫೈಸಲಾತಿಯ ಫಲಿತಾಂಶ.

137. ಈ ಅಧ್ಯಾಯದ ಮೇಲೆ ಕಂಡ ಯಾವದಾದರೂ ನಿಬಂಧನೆಗಳನುಸರಿಸಿ ಒಂದು ಯೆಲ್ಲೆಯ ಫೈಸಲು—

(*a*) ಯೆಲ್ಲೇಲೈನಿನ ಅಥವಾ ಯೆಲ್ಲೇ ಗುರುತುಗಳ ಕ್ರಮವಾದ ಜಾಗಾವನ್ನು ಕುರಿತು,

(*b*) ಜಮೀನು ಹಿಡುವಳೀದಾರರ ಹಿಡುವಳೀಗಳಿಗೆ ಸಂಬಂಧಿಸುವಂತೆಯಾಗಲಿ ಸಂಬಂಧಿಸದಂತೆಯಾಗಲಿ ಫೈಸಲ್ ಮಾಡಲ್ಪಟ್ಟ ಜಮೀನಿನ ವಿಷಯದಲ್ಲಿ ನಿಶ್ಚಯಿಸಲ್ಪಟ್ಟ ಯಲ್ಲೆಯ ಉಭಯ ಪಾರ್ಶ್ವಗಳ ಮೇಲೂ, ಜಮೀನು ಹಿಡುವಳೀದಾರರ ಹಕ್ಕುಗಳನ್ನು ಕುರಿತು ನಿರ್ಣೀತವಾಗಿರತಕ್ಕದ್ದು.

ಎಲ್ಲೇ ಗುರುತುಗಳು.

ಮುಂ. ರೆ. ಕೋ. 122ನೇ ಸೆಕ್ಷನ್.

ಸರ್ವೇ ನಂಬರಗಳ ಮತ್ತು ಗ್ರಾಮಗಳ ಯೆಲ್ಲೆ ಗುರುತುಗಳ ತಯಾರೀ ವ ದುರಸ್ತು.

138. ಗ್ರಾಮಗಳು ಅಥವಾ ಸರ್ವೇ ನಂಬರಗಳು, ಸಾಗುವಳಿ ಮಾಡಲ್ಪಡಲಿ ಮಾಡಲ್ಪಡದೆ ಯಿರಲಿ ಅವುಗಳ ಯೆಲ್ಲೆ ಗುರುತುಗಳನ್ನು ತಯಾರ್ ಮಾಡಿಸಿ ಅಥವಾ ದುರಸ್ತು ಮಾಡಿಸಿ ಆ ಬಾಬತು ತಮಾಂ ಲಾಗವಡುಗಳನ್ನೂ ಹಿಡುವಳೀದಾರರಿಗಾಗಲೀ ಸದರಿ ಯೆಲ್ಲೆ ಗುರ್ತುಗಳಲ್ಲಿ ಸಂಬಂಧವುಳ್ಳ ಯಿತರರಿಗಾಗಲಿ ವಿಧಿಸತಕ್ಕದ್ದು.

ಯೆಲ್ಲೆ ಗುರುತುಗಳನ್ನು ತಯಾರ್ ಮಾಡಲಿಕ್ಕಾಗಲಿ ದುರಸ್ತು ಮಾಡಲಿಕ್ಕಾಗಲಿ ಜಮೀನ್ ಹಿಡುವಳೀದಾರರಿಗೆ ತಾಕೀದ.

ಸರ್ವೇ ಸೂಪರಿಂಟೆಂಡೆಂಟರಿಂದಾಗಲಿ ಸೆಟಲ್‌ಮೆಂಟು ಆಫೀಸರಿಂದಾಗಲಿ ಅಧಿಕಾರ ಹೊಂದಿದ ಯಾವ ಸರ್ವೇ ಆಫೀಸರಿಗೆಯಾಗಲಿ ನ್ಯಾಯವಾಗಿರತಕ್ಕದ್ದು. ಅಂಥಾ ಆಫೀಸರರು, ಜಮೀನ್ ಹಿಡುವಳೀದಾರರು ತಮ್ಮಗಳ ಯೆಲ್ಲೆ ಗುರುತುಗಳನ್ನು ಯಾವದಕ್ಕೆ ಸರ್ವೇ ನಡಿಯುತ್ತಿರುವ ಜಮೀನ್‌ಗಳು ಶೇರಿ ಯಿರುತ್ತವೋ ಅಂಥಾ ಗ್ರಾಮದಲ್ಲಿ ಚಾವಡೀ ಅಥವಾ ಪ್ರಸಿದ್ಧವಾದ ಯಿತರ ಸ್ಥಳದಲ್ಲಿ ಅಂಟಿಸಲ್ಪಡತಕ್ಕ ಒಂದು ಇಸ್ತಿಹಾರ್‌ನಾಮೆ ಮೂಲಕ ತಮ್ಮ ತಮ್ಮ ಸರ್ವೇ ನಂಬರುಗಳ ಯೆಲ್ಲೆ ಗುರುತುಗಳನ್ನು ಒಂದು ಗೊತ್ತಾದ ಕಾಲದಲ್ಲಿ ತಯಾರ್ ಮಾಡಬೇಕೆಂದು ಅಥವಾ ದುರಸ್ತು ಮಾಡಬೇಕೆಂದು ತಾಕೀದ್ ಮಾಡಬಹುದು. ಹಾಗೆ ಮಾಡಲ್ಪಟ್ಟ ತಾಕೀದ್ ಪ್ರಕಾರ ನೆರವೇರಿಸಲಿಕ್ಕೆ ತಪ್ಪಿದರೆ, ಸರ್ವೇ ಆಫೀಸರರು, ಸದರೀ ಗುರುತುಗಳನ್ನು ತಯಾರ್ ಯಾ ದುರಸ್ತು ಮಾಡಿಸಿ ಆ ಬಾಬತು ಖರ್ಚುಗಳನ್ನೆಲ್ಲಾ ಯಿದರಲ್ಲಿ ಹಿಂದೆ ವಿಧಿಸಲ್ಪಟ್ಟ ಮೇರೆ ಠರಾಯಿಸತಕ್ಕದ್ದು.

ಒಂದು ಒಟ್ಟು ಇಸ್ತಿಹಾರ್ ನಾಮೆಯು ತಾಕೀದಿಗೆ ಯುಕ್ತವಾದ ಮತ್ತು ಸಾಕಾದ ನೋಟೀಸಾಗಿರತಕ್ಕದು.

ಮೇಲೆ ಕಂಡ ರೀತಿಯಾಗಿ ಘಾಯಿಷ ಮಾಡಲ್ಪಟ್ಟ ಒಂದು ಒಟ್ಟು ಇಸ್ತಿಹಾರ್ ನಾಮೆಯು, ಯಾವದಕ್ಕೆ ಸರ್ವೇ ವ್ಯಾಪಿಸುತ್ತದೊ ಅಂಥಾ ಜಮೀನ್‌ಗಳ ಹದ್ದುಗಳೊಳಗೆ ಇರುವ ಯಾವ ಸರ್ವೇ ನಂಬರಗಳಲ್ಲಿ ಯಾಗಲಿ ಯಾವ ಸಂಬಂಧವಾದರು ಉಳ್ಳ ಒಬ್ಬೊಬ್ಬನಿಗೆ ಮತ್ತು ಪ್ರತಿ ಮನುಷ್ಯನಿಗೆ ಯುಕ್ತವಾಗಿಯೂ ಸಾಕಾಗಿಯೂ ಇರುವ ನೋಟೀಸಾಗಿ ಭಾವಿಸಲ್ಪಡತಕ್ಕದು.

ಎಲ್ಲೇ ಗುರುತುಗಳ ತಪಶೀಲು.

ಎಲ್ಲೇ ಗುರುತುಗಳ ಪ್ರಮಾಣವು, ಸಾಮಾನು, ಮತ್ತು ವಿವರವು, ಗವರ್ನಮೆಂಟ ಹುಕುಂಗಳನ್ನನುಸರಿಸಿ, ಸರ್ವೇ ಸೂಪರಿಂಟೆಂಡೆಂಟರಿಂದ, ಭೂಗುಣದ ಮತ್ತು ಹವದ ಜರೂರಾತೀ ಪ್ರಕಾರ, ನಿಶ್ಚಯಿಸಲ್ಪಡಬಹುದಾದರೀತಿಯಾಗಿರತಕ್ಕದ್ದು.

ಮುಂ. ರೆ. ಕೋ. 123ನೇ ಸೆಕ್ಷನ್.

ಎಲ್ಲೇ ಗುರುತುಗಳನ್ನು ಕಾಪಾಡುವ ಬಗ್ಗೆ ಜವಾಬ್‌ದಾರಿ

139. ಪ್ರತಿ ಜಮೀನ್ ಹಿಡುವಳೀದಾರನೂ, ತನ್ನ ಹಿಡುವಳಿಯ ಎಲ್ಲೇ ಗುರುತುಗಳ ಸಂರಕ್ಷಣೆ, ಒಳ್ಳೇದುರಸ್ತೀ ಬಗ್ಗೆ, ಅದಕ್ಕಾಗಿ ಬದಲಾವಣೆ, ನಿವೃತ್ತಿ ಅಥವಾ ಶಿಕಸ್ತಿ ಇಂಥಾ ಸಂಗತಿಗಳಲ್ಲಿ, ರೆವಿನ್ಯೂ ಆಫೀಸರಗಳಿಂದ ನ್ಯಾ

ಯುವಾಗಿ ಮಾಡಲ್ಪಟ್ಟ ಖರ್ಚುಗಳಿಗಾಗಿಯೂ ಜವಾಬದಾರನಾಗಿರತಕ್ಕದ್ದು. ಗ್ರಾಮ ಉದ್ಯೋಗಸ್ಥರು, ನೌಕರರು, ಗ್ರಾಮದ ಎಲ್ಲೇ ಗುರುತುಗಳನ್ನು ನಾಶಪಡಿಸುವದನ್ನಾಗಲಿ, ಬಗರ ಹುಕ್ಕುಂ ಬದಲಾವಣಿಯನ್ನಾಗಲಿ ಅಡ್ಡಿಮಾಡತಕ್ಕದ್ದು ಅವರ ಕೃತ್ಯವಾಗಿರತಕ್ಕದ್ದು.

ಮುಂ. ರೆ. ಕೋ. 124ನೇ ಸೆಕ್ಷನ್.

ಸರ್ವೇ ಸೆಟಲಮೆಂಟಿನ ತರುವಾಯ ಎಲ್ಲೆ ಗುರುತುಗಳ ಚಾರ್ಜನ್ನು ಡೆಪ್ಯುಟಿ ಕಮಿಷ್ನರರು ವಹಿಸತಕ್ಕದ್ದು.

140. ಸರ್ವೇ ಸೆಟ್ಟಲಮೆಂಟ ಒಂದು ಡಿಸ್ಟ್ರಿಕ್ಟಿನಲ್ಲಿ ಪ್ರವರ್ತಿಸಿದಾಗ ಎಲ್ಲೆ ಗುರುತುಗಳ ಚಾರ್ಜು ಡೆಪ್ಯುಟಿ ಕಮಿಷ್ನರರಿಗೆ ಪ್ರಾಪ್ತವಾಗತಕ್ಕದ್ದಲ್ಲದೆ, ಸದರೀ ಗುರುತುಗಳನ್ನು ರಕ್ಷಿಸಿ ಮತ್ತು ದುರಸ್ತುಮಾಡುವ ಬಗ್ಗೆ ಏರ್ಪಾಡುಗಳನ್ನು ಮಾಡುವದು ಅವರ ಕೃತ್ಯವಾಗಿರತಕ್ಕದ್ದು. ಈ ಬಗ್ಯೆ 138ನೇ ಸೆಕ್ಷನಿನಿಂದ ಸರ್ವೇ ಆಫೀಸರಗಳಿಗೆ ಉಂಟುಮಾಡಲ್ಪಟ್ಟ ಅಧಿಕಾರಗಳು ಡೆಪ್ಯುಟಿ ಕಮಿಷ್ನರರಲ್ಲಿ ಉಂಟಾಗತಕ್ಕದ್ದು.

ಮುಂ. ರೆ. ಕೋ. 125ನೇ ಸೆಕ್ಷನ್.

ಎಲ್ಲೇ ಗುರುತುಗಳನ್ನು ಕೆಡಿಸುವ ಬಗ್ಯೆ ದಂಡನೆ.

141. ಡೆಪ್ಯುಟಿ ಕಮಿಷ್ನರರು, ಸರ್ವೇ ಆಫೀಸರರು, ಅಮಲ್ದಾರ್, ಅಥವಾ ಡೆ|ಅಮಲ್ದಾರ ಇಂತವರಮುಂದೆ, ಫೂಟ ವಿಚಾರಣೆ ಆದ್ದಮೇಲೆ, ಯಾವ ಮನುಷ್ಯನಾಗಲಿ ಒಂದು ಎಲ್ಲೇ ಗುರುತನ್ನು ಮನಃಪೂರ್ವಕವಾಗಿ ಅಳಿಸುವ, ತೆಗೆದುಹಾಕಿಬಿಡುವ ಅಥವಾ ಭಿನ್ನ ಪಡಿಸುವ ಅಪರಾಧಕ್ಕಾಗಿ ತಕಸೀರ್ ಆಪಾದಿಸಲ್ಪಡುವ ಯಾವ ಮನುಷ್ಯನಾಗಲಿ, ಹಾಗೆ ಅಳಿಸಲ್ಪಟ್ಟ, ತೆಗೆದುಹಾಕಲ್ಪಟ್ಟ ಅಥವಾ ಭಿನ್ನಪಡಿಸಲ್ಪಟ್ಟ ಪ್ರತಿ ಗುರುತಿಗೂ, ಐವತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಈ ಸೆಕ್ಷನ್ ಅನುಸರಿಸಿ ವಿಧಿಸಲ್ಪಟ್ಟ ಪ್ರತಿ ಜುರ್ಮಾನೆಯ ಅರ್ಧಭಾಗವನ್ನು, ಅದನ್ನು ವಿಧಿಸುವ ಆಫೀಸರರು, ಈ ಸಂಗತಿ ತಿಳಿಸಿದವನು ಯಾವನಾದರು ಇದ್ದರೆ ಅವನಿಗೆ ಕೊಡಿಸಬಹುದು. ಮಿಕ್ಕ ಅರ್ಧ ಭಾಗವನ್ನು ಎಲ್ಲೇ ಗುರುತನ್ನು ಕ್ರಮಪಡಿಸುವದರ ಲಾಗವಡಿಗಾಗಿ ಚಾರ್ಜಮಾಡತಕ್ಕದ್ದು.

10ನೇ ಅಧ್ಯಾಯ.

ಗ್ರಾಮಗಳ, ಷಹರಗಳ ವ ಪಟ್ಟಣಗಳ ನಿವೇಶನಗಳೊಳಗಣ ಜಮೀನ್ಗಳನ್ನು ಕುರಿತು.

ನಿವೇಶಗಳನ್ನು ನಿಶ್ಚಯಿಸುವಣ—

ಮುಂ. ರೆ. ಕೋ. 126ನೇ ಸೆಕ್ಷನ್.

ಗ್ರಾಮಗಳ, ಷಹರಗಳ ವ ಪಟ್ಟಣಗಳ ನಿವೇಶನಗಳ ಎಲ್ಲೆಗಳನ್ನು ಹ್ಯಾಗೆ ನಿಶ್ಚಯಿಸುವದು.

142. ಯಾವ ಜಮೀನ್ಗಳು, ಯಾವದಾದರೂ ಗ್ರಾಮ, ಷಹರ್ ಯಾ ಪಟ್ಟಣ ಇಂತಾದ್ದರ ನಿವೇಶನದಲ್ಲಿ ಅಡಗಿ ಯಿರುತ್ತವೋ ಅದನ್ನು ನಿಶ್ಚಯಿಸುವದೂ, ಜಮೀನ್ ಹಿಡುವಳೀದಾರರಿಗೆ ಉಂಟಾಗಿರುವ ತಮಾಂ ಹಕ್ಕುದಾರೀಗಳಿಗೂ ನಿಗೇಯೊಡನೆ ಸದರೀ ನಿವೇಶನದ ಸರಹದ್ದುಗಳನ್ನು ಗೊತ್ತುಮಾಡುವದೂ ಮತ್ತು ಆಗಾಗ್ಯೆ ಬದಲಾಯಿಸುವದೂ, ಗವರ್ನಮೆಂಟಿನ ಒಟ್ಟು ಅಥವಾ ವಿಶೇಷಹುಕ್ಕುಂ ಅನುಸರಿಸಿ ಕೆಲಸ ನಡಿಸುವ ಡೆಪ್ಯುಟಿ ಕಮಿಷ್ನರರಿಗಾಗಲಿ ಸರ್ವೇ ಆಫೀಸರರಿಗಾಗಲಿ, ನ್ಯಾಯವಾಗಿರತಕ್ಕದ್ದು.

ಜಮೀನ್ ಕಂದಾಯದ ದೆಸೆಯಿಂದ ವಿನಾಯತಿ—

ಮುಂ. ರೆ. ಕೋ. 128ನೇ ಸೆಕ್ಷನ್.

ಯಾವ ಷಹರ್ ಯಾ ಪಟ್ಟಣಗಳಲ್ಲಿ 1868ನೇ ಯಿಸವಿಯ 4ನೇ ಮುಂಬೈ ಆಕ್ಟು ಅಮಲಿನಲ್ಲಿದೆಯೋ ಅಂಥಾ ಷಹರ್ ಯಾ ಪಟ್ಟಣಗಳೊಳಗಣ ಕೆಲವು ಜಮೀನುಗಳ ವಿಷಯದಲ್ಲಿ ಹಾಲೀಯಿರುವ ವಿನಾಯತಿಯು ಯಾವಾಗ ಅನುಸರಿಸತಕ್ಕದ್ದು.

143. ಇದುವರಿಗೆ ಸಾಧಾರಣವಾಗಿ ವ್ಯವಸಾಯದ ಕೆಲಸಗಳಿಗೆಮಾತ್ರ ಉಪಯೋಗಿಸಲ್ಪಟ್ಟಿರುವ ಜಮೀನುಗಳಲ್ಲದೆ, 1868ನೇ ಇಸವಿಯ 4ನೇ ಮುಂಬೈ ಆಕ್ಟಿನ ನಿಬಂಧನೆಗಳನು ಸರಿಶಿ ಹಕ್ಕುದಾರಿಗಳ ವಿಷಯದೊಳಗೆ, ಯಾವಷಹರುಗಳಲ್ಲಿ ಮತ್ತು ಪಟ್ಟಣಗಳಲ್ಲಿ ವಿಚಾರಣೆ ಮಾಡಲ್ಪಟ್ಟಿರುತ್ತಿದೆಯೋ ಅಂತಾ ಷಹರ್ ವ ಪಟ್ಟಣಗಳ ನಿವೇಶನಗಳಲ್ಲಿನ ಜಮೀನುಗಳಿಗೆ ಕಂದಾಯ ಕೊಡುವವರ ದೆಸೆಯಿಂದ ತಹಲ್ ಇರುವ ವಿನಾಯತಿಯು ಈ ಕೆಳಗಿನ ಸಂದರ್ಭಗಳಲ್ಲಿ ನಡಿಸಲ್ಪಡುತ್ತ ಬರತಕ್ಕದ್ದು :—

(1ನೇ) ಅಂಥಾ ಜಮೀನುಗಳು ಹಿಂದಿನ ವರುಷಗಳೊಳಗೆ ಸರ್ವೆಯಾದಂಥಾ ಯಾವ ಷಹರ ಯಾ ಪಟ್ಣದೊಳಗಿದ್ದು, ಅಂಥಾ ಸರ್ವೆಯನ್ನು ಈ ಸೆಕ್ಷನ್ ಕಾರ್ಯಕ್ಕಾಗಿ ಗವರ್ನಮೆಂಟಿನವರು ಅಂಗೀಕರಿಸಿದ್ದು ಮತ್ತು ಅಂಥಾ ಜಮೀನುಗಳು ಜಮೀನ್ ಕಂದಾಯ ಕೊಡುವವರದೆಶೆಯಿಂದ ಪೂರಾ ಅಥವಾ ಕೆಲವುಮಟ್ಟಿಗೆ ವಿನಾಇಸಲ್ಪಟ್ಟಂತೆ ನಕ್ಷೆಗಳಲ್ಲಾಗಲಿ ಅಥವಾ ಅಂಥಾ ಸರ್ವೆಯ ಇತರ ರಿಕಾರ್ಡುಗಳಲ್ಲಾಗಲಿ ನಮೂದಿದ್ದಲ್ಲಿ ;

(2ನೇ) ಅಂಥಾ ಜಮೀನುಗಳು, ಸನ್ 1865ನೇ ಯಿಸವಿಯ 1ನೇ ನಂಬರ್ ಅಥವಾ 1868ನೇ ಯಿಸವಿ 4ನೇ ನಂಬರ್ ಮುಂಬೈ ಆಕ್ಟು ಅಂಥಾ ಷಹರ್ ಯಾ ಪಟ್ಟಣಕ್ಕೆ ಲಗಾವಾಗುವದಕ್ಕೆ ಪೂರ್ವ ಅಯಿದು ವರುಷಗಳಿಗೆ ಕಡಮೆ ಯಿಲ್ಲದ ಒಂದು ಕಾಲದ ಪರ್ಯಂತ ಕಂದಾಯ ಕೊಡುವವರ ದೆಸೆಯಿಂದ ಪೂರಾ ಅಥವಾ ಕೆಲವುಮಟ್ಟಿಗೆ ವಿನಾಯಿಸಲ್ಪಟ್ಟ ಹಿಡುವಳಿಯುಲ್ಲಿದ್ದರೆ ;

(3ನೇ) ಅಂಥಾ ಜಮೀನುಗಳು, ಯೆಷ್ಟುಕಾಲಕ್ಕೆ ವಹಿಸಲ್ಪಟ್ಟದ್ದಾಗ್ಯೂ, ದಾನ ಶಾಸನವನ್ನಾಗಲಿ, ಬಹಲ್ ಶಾಸನವನ್ನಾಗಲಿ ಸಾದರ್‌ಮಾಡುವದಕ್ಕೆ ಲಾಯಖ ಯೆಂದು ಗವರ್ನಮೆಂಟಿನವರು ಅಂಗೀಕರಿಸುವ ಒಬ್ಬ ಆಫಿಸರರಿಂದ ಸಾದರ್ ಮಾಡಲ್ಪಟ್ಟ ಅಂಥಾ ದಾನ ಶಾಸನ ಅಥವಾ ಬಹಲ್ ಶಾಸನ ಅನುಸರಿಸಿ ಜಮೀನ್ ಕಂದಾಯ ಕೊಡುವವರ ದೆಶೆಯಿಂದ ಪರಾ ಯಾ ಕೆಲವುಮಟ್ಟಿಗೆ ವಿನಾಯಿಸಲ್ಪಟ್ಟು ಹಿಡುವಳೀಯಲ್ಲಿ ಪಡೆದಿದ್ದರೆ.

ಮುಂ. ರೆ. ಕೋ. 129ನೇ ಸೆಕ್ಷನ್.

ವಿನಾಯತಿಗೆ ಹಕ್ಕುದಾರಿಯು ಡೆಪ್ಯುಟಿ ಕಮ್ಮಿಷನರಿಂದ ನಿರ್ಣಯಿಸಲ್ಪಡತಕ್ಕದ್ದು.

144. ಹಿಂದಿನ ಕಡೇ ಸೆಕ್ಷನ್ ಅನುಸರಿಸಿ ವಿನಾಯತಿಗೆ ಹಕ್ಕುಗಳು ಡೆಪ್ಯುಟಿ ಕಮ್ಮಿಷನರಿಂದ ಸ್ಪೋಟ ವಿಚಾರಣೆ ಮಾಡಿದಮೇಲೆ, ನಿರ್ಣಯಿಸಲ್ಪಡತಕ್ಕದ್ದು, ಅವರ ಫೈಸಲು ಆಖೈರಾದ್ದಾಗಿರತಕ್ಕದ್ದು.

ಮುಂ. ರೆ. ಕೋ. 130ನೇ ಸೆಕ್ಷನ್.

ಕೆಲವು ಸಂಗತಿಗಳಲ್ಲಿ ಕಂದಾಯದೊಡನೆ ಕೊಡತಕ್ಕ ಹಿಡುವಳಿಯ ಖರೀದಿ.

145. ಯಾವದಕ್ಕೆ 143ನೇ ಸೆಕ್ಷನ್ ಲಗಾವಾಗುತ್ತೋ ಅಂಥಾ ಷಹರ್ ಯಾ ಪಟ್ಟಣಗಳಲ್ಲಿ, ಇದುವರಿಗೆ ವ್ಯವಸಾಯದ ಕೆಲಸಗಳಿಗೆ ಮಾತ್ರ ಉಪಯೋಗಿಸಲ್ಪಟ್ಟಿರುವ ಜಮೀನುಗಳು ಅಲ್ಲದೆ, ಅಂತಾ ಷಹರ್ ಯಾ ಪಟ್ಟಣಕ್ಕೆ 1865ನೇ ಇಸವಿಯ 1ನೇ ಮುಂಬೈ ಆಕ್ಟಾಗಲಿ 1868ನೇ ಇಸ

ವಿಯ 4ನೇ ಆಕ್ಟ್ಯಾಗಲಿ ಲಗಾವಾದ್ದಕ್ಕೆ ಪೂರ್ವ, ಯೆರಡು ಸಂವತ್ಸರಗಳಿಗೆ ಕಡಮೇಯಾದ ಕಾಲದವರಿಗೆ, ಬಗರ ಹುಕುಂ ಪಡೆದಿದ್ದ ದರೋಬಸ್ತು ಜಮೀನುಗಳ ಹಿಡುವಳಿದಾರರೂ ಸದರೀ ಜಮೀನುಗಳಮೇಲೆ ವಿಧಿಸಲ್ಪಟ್ಟ ಜಮೀನು ಕಂದಾಯದೊಡನೆ ಸದರೀ ಜಮೀನುಗಳ ಹಿಡುವಳಿಯ ಖರೀದಿಯನ್ನು ಕೊಡುವದಕ್ಕೆ ಗುರಿಯಾಗತಕ್ಕದ್ದು. ಸದರಿಹಿಡುವಳೀ ಖರೀದಿಯೂ 65ನೇ ಸೆಕ್ಷನ್ ನಿಬಂಧನೆಗಳ ಪ್ರಕಾರ ನಿರ್ಣಯಿಸಲ್ಪಡತಕ್ಕದ್ದು.

ಚಿಲ್ಲರೆ ವಿಷಯ—

146. ಈ ರೆಗ್ಯುಲೇಷನಿನ 38ನೇ ಸೆಕ್ಷನಿಂದ ಆಕ್ರಮಿಸೋಣವನ್ನು ನಿಲ್ಲಿಸುವದಕ್ಕೆ ಡೆಪ್ಯುಟಿ ಕಮ್ಮಿಷನರಿಗುಂಟಾದ ಅಧಿಕಾರವನ್ನು, 143ನೇ ಸೆಕ್ಷನಿನ ಯಾವ ಅಂಶವೂ ಬಾಧಿಸುವಹಾಗೆ ಎಣಿಸಲ್ಪಡತಕ್ಕದ್ದಲ್ಲವು.

ಮುಂ. ರೆ. ಕೋ. 131ನೇ ಸೆಕ್ಷನ್.

ಅಂತಾ ನಿವೇಶನಗಳಲ್ಲಿ ಜಮೀನುಗಳ ಸರ್ವೆಯು ಹ್ಯಾಗೆ ನಡಿಸಲ್ಪಡತಕ್ಕದ್ದು.

147. 112ನೇ ಸೆಕ್ಷನ್ ನಿಬಂಧನೆಗಳನುಸರಿಸಿ ಯಾವದಾದರೂ ಗ್ರಾಮ, ಷಹರ್ ಯಾ ಪಟ್ಟಣ ಇಂತಾದ್ದರ ನಿವೇಶನದಲ್ಲಿ ಸಾಧಾರಣವಾಗಿ ವ್ಯವಸಾಯದ ಕೆಲಸಗಳಿಗೆಮಾತ್ರ ಉಪಯೋಗಿಸಲ್ಪಟ್ಟ ಜಮೀನುಗಳು ಶಿವಾಯಿ ಇತರ ಜಮೀನುಗಳ ಸರ್ವೇಯನ್ನಾಗಲಿ, 123ನೇ ಸೆಕ್ಷನ್ ನಿಬಂಧನೆಗಳನುಸರಿಸಿ ಅವುಗಳ ಹೊಸ ಸರ್ವೇಯನ್ನಾಗಲಿ ನಿಯಮಿಸುವದು ಆವಶ್ಯಕವೆಂದು ಗವರ್ನಮೆಂಟಿನವರು ಯಾವಕಾಲದಲ್ಲಾಗಲಿ ಭಾವಿಸುವಪಕ್ಷಕ್ಕೆ ಅಂತಾ ಸರ್ವೆಯು, ಈ ರೆಗ್ಯುಲೇಷನಿನ 8 ಮತ್ತು 9ನೇ ಅಧ್ಯಾಯಗಳ ನಿಬಂಧನೆಗಳ ಪ್ರಕಾರ ನಡಿಸಲ್ಪಟ್ಟು, ಅದರ ಅಮಲ್‌ಗಳೆಲ್ಲ ಕ್ರಮಪಡಿಸಲ್ಪಡತಕ್ಕದ್ದು.

ನಿಯಮ.

ಪರಂತು, ಸದರೀ ರೆಗ್ಯುಲೇಷನಿನ 113, 114, 118, 120, 121 ಅಥವಾ 134ನೇ ಸೆಕ್ಷನ್‌ಗಳಲ್ಲಿ ಅಡಗಿರುವ ಯಾವ ಅಂಶವೂ, ಯೆರಡು ಸಾವಿರಪ್ರಜೆಗಳಿಗಿಂತ ಹೆಚ್ಚಾಗಿ ಅಡಗಿಸಿಕೊಂಡಿರುವ ಯಾವ ಷಹರ್ ಯಾ ಪಟ್ಟಣದಲ್ಲಾಗಲಿ ಅಂತಾ ಯಾವ ಸರ್ವೇಗಾದರೂ ಲಗಾವಾಗತಕ್ಕದ್ದೆಂದು ಯೆಣಿಸಲ್ಪಡತಕ್ಕದ್ದಲ್ಲವು.

ಮುಂ. ರೆ. ಕೋ. 132ನೇ ಸೆಕ್ಷನ್.

ಕೆಲವು ಸಂಗತಿಗಳಲ್ಲಿ ಸರ್ವೆ ರುಸುಂ ಚಾರ್ಜ್ ಮಾಡಲ್ಪಡತಕ್ಕದ್ದು.

148. ಒಂದು ಸರ್ವೆಯು, ಹಿಂದಿನಕಡೇ ಸೆಕ್ಷನ್ ನಿಬಂಧನೆಗಳನುಸರಿಸಿ ಯೆರಡು ಸಾವಿರ ಪ್ರಜೆಗಳಿಗಿಂತ ಹೆಚ್ಚಾಗಿ ಅಡಗಿ ಇರುವ ಯಾವದಾದರು ಷಹರ್ ಯಾ ಪಟ್ಟಣದ ನಿವೇಶನಕ್ಕೆ ವ್ಯಾಪಿಸಿದರೆ, ಒಂದು ಕಟ್ಟಣದ ನಿವೇಶನದ ಪ್ರತಿ ಹಿಡುವಳೀದಾರನೂ, ಗವರ್ನಮೆಂಟಿನಿಂದ, ಈ ಬಗ್ಯೆ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಂತಾ ರೂಲ್ಸ್ ಅನುಸರಿಸಿ ಡೆಪ್ಯುಟಿ ಕಮ್ಮಿಷನರಿಂದ ವಿಧಿಸಲ್ಪಡತಕ್ಕ ಒಂದು ಸರ್ವೇ ರುಸುಂ ಕೊಡಲಿಕ್ಕೆ ಗುರಿಯಾಗತಕ್ಕದ್ದು. ಪರಂತು ಸದರೀ ಸರ್ವೇ ರುಸುಂ ಪ್ರತಿ ಸರ್ವೇ ನಂಬರಿಗೂ, ಯಾವ ಸಂಗತಿಯಲ್ಲಿಯೂ ಐದು ರೂಪಾಯಿಗೆ ಮೀರಕೂಡದು. ಸದರೀ ಸರ್ವೇ ರುಸುಂ, ಡೆಪ್ಯುಟಿ ಕಮ್ಮಿಷನರಿಂದ, ಈಬಗ್ಯೆ, ಷಹರ್ ಯಾ ಪಟ್ಟದ ನಿವೇಶನದ ಒಂದು ಪಬ್ಲಿಕ ನೋಟೀಸ್‌ನಲ್ಲಿ

763

ಕಾಣುವ ಸದರೀ ಷಹರ್ ಯಾ ಪಟ್ಟಣದ ಅಂತಾ ಭಾಗದ ಸರ್ವೇಯು ಪೂರೈಸಿದ ಬಳಿಕ ಕೊಡಲ್ಪಡತಕ್ಕ ಅಂತಾ ನೋಟೀಸಿನ ತಾರೀಖು ಲಾಗಾಯತ್ 6 ತಿಂಗಳೊಳಗಾಗಿ ಕೊಡಲ್ಪಡತಕ್ಕದ್ದು.

ಈ ರೆಗ್ಯುಲೇಷರ್ ಜಾರೀಗೆ ಬರುವದಕ್ಕೆ ಮುಂದೆ, 1868ನೇ ಇಸವಿಯ 4ನೇ ಮುಂಬೈ ಆಕ್ಟು ಜಾರಿಯಲ್ಲಿದ್ದ ಯಾವದಾದರೂ ಷಹರ್ ಯಾ ಪಟ್ಟಣದಲ್ಲಿ ಈ ರೆಗ್ಯುಲೇಷರ್ ಜಾರೀಗೆ ಬಂದ ಬಳಿಕ 6 ತಿಂಗಳೊಳಗಾಗಿ ಬದಸ್ತೂರ್ ಬಂದು ಪಬ್ಲಿಕ್ ನೋಟೀಸ್ ಡೆಪ್ಯುಟಿ ಕಮ್ಮಿಷನರಿಂದ ಸಾದರ್ ಮಾಡಲ್ಪಡತಕ್ಕದ್ದು; ಪರಂತು, ಅಂತಾ ಯಾವದಾದರು ಪಟ್ಟಣದಲ್ಲಿ ಯಾ ಷಹರಿನಲ್ಲಿ ಬಖ್ಳಿ ಜಮೀನ್ ಹಿಡುವಳೀದಾರನಿಂದ, ಸದರೀ ಆಕ್ಟಿನ 10ನೇ ಸೆಕ್ಷರ್ ಅನುಸರಿಸಿ ಅವನಿಂದ ಪಡಕೊಳ್ಳಲ್ಪಟ್ಟ ಬಂದು ಸನ್ನದಿಗಾಗಿ ಬಂದುರುಸುಂ ಮೊದಲೇ ಪಾವತೀ ಮಾಡಲ್ಪಟ್ಟಿದ್ದರೆ, ಸರ್ವೇ ರುಸುಂ ಯಾವದೂ ಅವನಿಂದ ವಸೂಲ್ ಮಾಡತಕ್ಕದ್ದಲ್ಲವು.

ಮುಂ. ರೆ. ಕೋ. 133ನೇ ಸೆಕ್ಷರ್.

ಬೇರೆ ಯಾವ ಖರ್ಚೂ ಇಲ್ಲದೆ ಸನ್ನದ್ ಕೊಡಲ್ಪಡತಕ್ಕದ್ದು.

149. ಬಂದು ಕಟ್ಟಡದ ನಿವೇಶನದ ಪ್ರತಿ ಹಿಡುವಳೀದಾರನೂ, ಸದರೀ ಸರ್ವೇ ರುಸುಮನ್ನು ಪಾವತೀಮಾಡಿದ ಬಳಿಕ, ಹೆಚ್ಚು ಖರ್ಚು ಇಲ್ಲದೆ, H ಗುರುತಿನ ಷೆಡ್ಯೂಲ್ ನಮೂನೆ ಮೇರಿಗೆ ನಕ್ಷೇಮೂಲಕವಾಗಿಯೂ, ವಿವರಣಾಮೂಲಕವಾಗಿಯೂ, ಅವನ ಹಿಡುವಳಿಯ ವಿಸ್ತೀರ್ಣವನ್ನೂ ಷರತ್ತುಗಳನ್ನೂ ನಮೂದಿಸಿರುವ ಬಂದು ಅಥವಾ ಹೆಚ್ಚು ಸನ್ನದ್‌ಗಳನ್ನು ಡೆಪ್ಯುಟಿ ಕಮ್ಮಿಷನರಿಂದ ಪಡೆಯಲಿಕ್ಕೆ ಅರ್ಹನಾಗಿರತಕ್ಕದ್ದು:

ನಿಯಮ.

ಪರಂತು, ಅಂತಾ ಹಿಡುವಳೀದಾರನು, ಸರ್ವೇ ರುಸುಮನ್ನು ಪಾವತಿಮಾಡುವ ಕಾಲದಲ್ಲಾಗಲಿ, ಆ ತರುವಾಯ ಹಿಂದಿನ ಕಡೇಸೆಕ್ಷರ್ ಅನುಸರಿಸಿ ಡೆಪ್ಯುಟಿ ಕಮ್ಮಿಷನರಿಂದ ಸಾದರ್ ಮಾಡಲ್ಪಟ್ಟ ಪಬ್ಲಿಕ್ ನೋಟೀಸಿನ ತಾರೀಖು ಲಾಗಾಯತ್ ಆರುತಿಂಗಳೊಳಗಾಗಲಿ ಅಂತಾ ಸನ್ನದ್ ಯಾ ಸನ್ನದ್‌ಗಳಿಗೆ ಖಾಯಿಷ್ ಮಾಡದಿದ್ದರೆ ಡೆಪ್ಯುಟಿ ಕಮ್ಮಿಷನರು, ಪ್ರತಿ ಸನ್ನದಿಗೂ ಬಂದು ರೂಪಾಯಿಗೆ ಮೀರದ ಬಂದು ಜಾಸ್ತೀ ರುಸುಮನ್ನು ಪಾವತೀ ಮಾಡುವಂತೆ ನಿಯಮಿಸಬಹುದು.

ಅಂತಾ ಪ್ರತಿ ಸನ್ನದೂ, ಗವರ್ನಮೆಂಟ್ ತರಫಿನಲ್ಲಿ, ಅವನ್ನು ಬರೆದು ಕೊಡಲಿಕ್ಕೆ ಆಗಿಂದಾಗ್ಯೆ ನ್ಯಾಯತಃ ಅಧಿಕಾರ ಕೊಡಲ್ಪಡಬಹುದಾದ ಅಂತಾ ಆಫಿಸರರಿಂದ ಬರೆದು ಕೊಡಲ್ಪಡತಕ್ಕದ್ದು.

ಮುಂ. ರೆ. ಕೋ. 134ನೇ ಸೆಕ್ಷರ್.

ಇದುವರಿಗೆ ವ್ಯವಸಾಯದ ಕೆಲಸಗಳಿಗೆ ಮಾತ್ರ ಉಪಯೋಗಿಸಲ್ಪಟ್ಟ ಜಮೀನುಗಳ ಕಂದಾಯವು ಇತರ ಕಾರ್ಯಗಳಿಗೆ ವುಪಯೊಗಿಸಲ್ಪಡೋಣವು.

150. ತತ್ಕಾಲದಲ್ಲಿ ಜಾರೀಯಿರುವ ಯಾವದಾದರೂ ಕಾನೂನಿನ ನಿಬಂಧನೆಗಳನುಸರಿಸಿ ಗವರ್ನಮೆಂಟಿಗೂ ಹಿಡುವಳೀದಾರನಿಗೂ, ಯಾವದರ ವಿಷಯದಲ್ಲಿ ಬಂದು ಫೂಟ್ ಫೈಸಲಾತಿಯು ಮಾಡಲ್ಪಟ್ಟಿರುತ್ತೋ, ಅಂತಾ ಇದುವರಿಗೆ ಸಾಧಾರಣವಾಗಿ ವ್ಯವಸಾಯದ ಕೆಲಸಗಳಿಗೆ ಮಾತ್ರ ಉಪಯೋಗಿಸಲ್ಪಟ್ಟ, ಯಾವದಾದರೂ ಗ್ರಾಮ, ಷಹರ್,

ಯಾ ಪಟ್ಟಣದ ನಿವೇಶನದಲ್ಲಿನ ಯಾವ ಜಮೀನಾಗಲಿ, ಮತ್ತ್ಯಾವ ಕೆಲಸಗಳಿಗಾಗಲಿ ವಿನಿಯೋಗಿಸಲ್ಪಟ್ಟರೆ, ಅದು ಅಂತಾ ಫ್ರೂಫ್‌ಫೈಸಲಾತಿಯ ಷರತ್ತುಗಳನುಸರಿಸಿ ಸಲ್ಲತಕ್ಕ ಕ್ವಿಟರೆಂಟಿನೊಡನೆ ಅದೇಸ್ಥಳದಲ್ಲಿ ಬದಸ್ತೂರ್ ಕೆಲಸಗಳಿಗೋಸ್ಕರ ಉಪಯೋಗಿಸಲ್ಪಟ್ಟ ಪರಭಾರೇಯಾಗದ ಜಮೀನಿಗೆ ನಿಶ್ಚಯಿಸಲ್ಪಟ್ಟ ತೀರ್ವೆಯಲ್ಲಿ ಬೇಳೆ ಪಾಲನ್ನು ತೆರಲಿಕ್ಕೆ ಗುರಿಯಾಗತಕ್ಕದ್ದು.

11ನೇ ಅಧ್ಯಾಯ.

ಜಮೀನ್ ಕಂದಾಯ ವ ಯಿತರ ರೆವಿನ್ಯೂ ಬಾಕೀಗಳನ್ನು ವಸೂಲ್ ಮಾಡುವದನ್ನು ಕುರಿತು.

ಜಮೀನ್ ಕಂದಾಯಕ್ಕೆ ಜವಾಬ್‌ದಾರಿ.

ಮುಂ. ರೆ. ಕೋ. 136ನೇ ಸೆಕ್ಷನ್.

ಪ್ರಥಮ ಜವಾಬ್‌ದಾರಿ.

151. ರಿಜಿಸ್ಟರಾದ ಹಿಡುವಳೀದಾರನು, ಪರಭಾರೇಯಾಗದ ಜಮೀನಿನ ಕಂದಾಯದಬಗ್ಗೆ ಗವರ್ನಮೇಂಟಿಗೆ ಪ್ರಥಮತಃ ಜವಾಬ್‌ದಾರನಾಗಿರತಕ್ಕದ್ದು. ಮತ್ತು ಮೇಲ್ಪಟ್ಟ ಹಿಡುವಳೀದಾರನು ಪರಭಾರೆಯಾದ ಜಮೀನಿನ ಜಮೀನ್ ಕಂದಾಯದಬಗ್ಗೆ ಗವರ್ನಮೆಂಟಿಗೆ ಪ್ರಥಮತಃ ಜವಾಬ್‌ದಾರನಾಗಿರತಕ್ಕದ್ದು.

ಪ್ರಥಮತಃ ಗವರ್ನಮೆಂಟಿಗೆ ಜವಾಬ್‌ದಾರನಾದ ಮನುಷ್ಯನು, ಜಮೀನು ಕಂದಾಯವನ್ನು ಕೊಡಲಿಕ್ಕೆ ತಪ್ಪಿದರೆ ಅಂತಾ ಜಮೀನ್ ಕಂದಾಯದ ವಸೂಲಾತಿ.

ಜಮೀನ್ ಕಂದಾಯದ ಬಗ್ಗೆ ಗವರ್ನಮೆಂಟಿಗೆ ಪ್ರಥಮತಃ ಜವಾಬ್‌ದಾರನಾದ ಮನುಷ್ಯನು, ಸದರೀ ಬಗ್ಗೆ ನ್ಯಾಯತಃ ವಿಧಿಸಲ್ಪಟ್ಟ ಕಾನೂನುಗಳ ಪ್ರಕಾರ ಅದನ್ನು ತೆರಲಿಕ್ಕೆ ತಪ್ಪಿದರೆ, ಪರಭಾರೇಯಾಗದ ಜಮೀನಿನ ಜಂಟೀ ಹಿಡುವಳೀದಾರನಿಂದಾಗಲಿ, ಪರಭಾರೆಯಾದ ಜಮೀನಿನ ಜಂಟೀಹಿಸ್ಸೇದಾರನಿಂದಾಗಲಿ, ಉಭಯಪಕ್ಷದಲ್ಲೂ ಕಮ್ಮೀ ಹಿಡುವಳೀದಾರನಿಂದಾಗಲಿ, ಜಮೀನ್ ಅನುಭವದಲ್ಲಿರುವ ಮನುಷ್ಯನಿಂದಾಗಲಿ ಸದರೀ ಕಂದಾಯವನ್ನು ವಸೂಲ್ ಮಾಡಬಹುದು.

ಕಮ್ಮೀ ಹಿಡುವಳೀದಾರನಿಂದ ವಸೂಲ್‌ಮಾಡಲ್ಪಟ್ಟ ಮೊಬಲಗಗಳನ್ನು ಅವನ ಹೆಸರಿಗೆ ಜಮೇ ಕಟ್ಟತಕ್ಕದ್ದು.

ಅಂತಾ ಯಾವನಾದರೂ ಜಂಟೀ ಹಿಡುವಳೀದಾರ, ಜಂಟೀ ಹಿಸ್ಸೇದಾರ, ಕಮ್ಮೀ ಹಿಡುವಳೀದಾರ ಅಥವಾ ಇತರ ಮನುಷ್ಯ ಇಂತಾವರಿಂದ ಜಮೀನ್ ಕಂದಾಯ ವಸೂಲ್ ಮಾಡಲ್ಪಟ್ಟರೆ ರಿಜಿಸ್ಟರಾದ ಹಿಡುವಳೀದಾರನಿಗಾಗಲಿ, ಮೇಲ್ಪಟ್ಟ ಹಿಡುವಳೀದಾರನಿಗಾಗಲಿ, ಅವನ ಜಮೀನ್‌ದಾರನಿಗಾಗಲಿ, ಅಂತಾ ಪಾವತೀಗಳ ಬಗ್ಗಾಗಿ ವಿಧಿಸಲ್ಪಟ್ಟ ಅಥವಾ ವಾಡಿಕೆಯಾದ ಕಾಲಗಳಲ್ಲಿ ಅಥವಾ ಆ ತರುವಾಯ ಮಾಡಲ್ಪಟ್ಟಿರಬಹುದಾದ ದರೋಬಸ್ತು ಪಾವತೀಗಳೂ, ಅವನ ಹೆಸರಿಗೆ ಜಮೇ ಕಟ್ಟಲ್ಪಡತಕ್ಕದ್ದು. ಮತ್ತು ಅವನಿಂದ ವಸೂಲ್ ಮಾಡಲ್ಪಟ್ಟ ಮೊಬಲಗು ರಿಜಿಸ್ಟರಾದ ಹಿಡುವಳೀದಾರ, ಮೇಲ್ಪಟ್ಟ ಹಿಡುವಳೀದಾರ, ಅಥವಾ ಅವನ ಜಮೀನ್‌ದಾರನಿಗಾಗಿ ಕೊಟ್ಟಂತೆ ಲೆಕ್ಕದಲ್ಲಿ ಜಮೇ ಕಟ್ಟಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

ಜಮೀನ ಕಂದಾಯಕ್ಕೆ ಗವರ್ನಮೆಂಟ ಹಕ್ಕುದಾರಿಯು ಮುಂದಾದದ್ದಾಗಿರುವಿಕೆ.

ಮುಂ. ರೆ. ಕೋ. 137ನೇ ಸೆಕ್ಷನ.

ಗವರ್ನಮೆಂಟ ಹಕ್ಕುಗಳು ಮಿಕ್ಕ ತಮಾಂ ಹಕ್ಕುಗಳಿಗಿಂತ ಲೂ ಪ್ರಾಧಾನ್ಯವಾಗಿರತಕ್ಕದ್ದು.

152. ಈ ಅಧ್ಯಾಯದ ನಿಬಂಧನೆಗಳನುಸರಿಸಿ, ವಸೂಲಾಗತಕ್ಕ ಯಾವ ಹಣಗಳಿಗಾಗಲಿ, ಗವರ್ನಮೆಂಟ ಹಕ್ಕುದಾರಿಯು, ಯಾವದಾದರೂ ಜಮೀನ ಯಾ ಅದರ ಹಿಡುವಳೀದಾರನ ಮೇಲೆ ಭೋಗ್ಯ, ಜಡ್ಜಮೆಂಟ ಡಿಕ್ರಿ, ಅಮಲ್‌ಜಾರೀ, ಅಥವಾ ಜಪ್ತೀ ಯಿಂತಾದ್ದರ ವಿಷಯದಲ್ಲಾಗಲೀ ಅನ್ಯಥಾ ಆಗಲಿ ಉಂಟಾಗಿರುವ ಇತರ ಯಾವ ಸಾಲದ ತಗಾದೆಯ ಹಕ್ಕಿನ ಮೇಲಾಗಲಿ ಪ್ರಾಧಾನ್ಯವನ್ನು ಪಡೆದಿರತಕ್ಕದ್ದು.

ಮುಂ. ರೆ. ಕೋ. 138ನೇ ಸೆಕ್ಷನ.

ಜಮೀನ ಕಂದಾಯದ ಬಗ್ಯೆ ಫಸಲಿನ ಜವಾಬ್‌ದಾರಿ.

153. ಯೆಲ್ಲ ಸಂಗತಿಗಳಲ್ಲೂ, ವ್ಯವಸಾಯದ ಕೆಲಸಗಳಿಗಾಗಿ ಉಪಯೋಗಿಸಲ್ಪಟ್ಟ ಜಮೀನಿನ ಸಾಲ್ ಮಜಕೂರ ಕಂದಾಯವು, ಅನ್ಯಥಾ ಪಾವತೀ ಮಾಡಲ್ಪಡದೆ ಯಿದ್ದರೆ, ಜಮೀನ ಕಂದಾಯಕ್ಕೆ ವಳಪಟ್ಟಿರುವ ಯಿತರ ತಮಾಂ ಹಕ್ಕುಗಳಿಗಿಂತ, ಮುಂದಾಗಿ ಜಮೀನಿನ ಫಸಲ್ ದೆಸೆಯಿಂದ ವಸೂಲ್‌ಮಾಡಲ್ಪಡತಕ್ಕದ್ದು.

ಜಮೀನ ಕಂದಾಯ ಯಾವಾಗ ವಸೂಲ್ ಆಗತಕ್ಕದ್ದು.

ಮುಂ. ರೆ. ಕೋ. 139ನೇ ಸೆಕ್ಷನ.

ಜಮೀನ ಕಂದಾಯವು ರವಿನ್ಯೂ ಯೆನೆ ಮುಲ್ಕೀ ಸಾಲಿನಲ್ಲಿ ಯಾವಾಗಲಾಗಲಿ ವಸೂಲ್ ಮಾಡಲ್ಪಡಬಹುದು.

154. ಯಾವಸಾಲಿಗೆ ಕಂದಾಯ ವಸೂಲ್ ಆಗತಕ್ಕದ್ದೋ ಅಂತಾ ರೆವಿನ್ಯೂ ಸಾಲಿನ ಮೊದಲನೇ ತಾರೀಖಿನಲ್ಲಾಗಲಿ ತರುವಾಯ ಯಾವಾಗಲಾಗಲಿ ಜಮೀನ ಕಂದಾಯವು ವಸೂಲ್ ಆಗತಕ್ಕದ್ದು; ಆದರೆ 155ರ ಮೊದಲು, 159ರ ವರಿಗಿನ ಸೆಕ್ಷನಗಳ ನಿಬಂಧನೆಗಳನುಸರಿಸಿ ಎಚ್ಚರಿಕೆಯ ಕ್ರಮಗಳು ಜರೂರೆಂದು ಭಾವಿಸಲ್ಪಟ್ಟಾಗ ಹೊರತು, ಇದರಲ್ಲಿ ಉತ್ತರೋತ್ತರ ಆಡಗಿರುವ ನಿಬಂಧನೆಗಳನುಸರಿಸಿ ನಿಶ್ಚಯಿಸಲ್ಪಡತಕ್ಕ ತಾರೀಖುಗಳಲ್ಲಿ ಮಾತ್ರ ಮೊಬಲಗ್ ಪಾವತೀ ಮಾಡಲ್ಪಡಬೇಕಾಗಿ ನಿಯಮಿಸಲ್ಪಡುವದು.

ಜಮೀನಕಂದಾಯದ ಬಂದೋಬಸ್ತಿಯ ಬಗ್ಯೆ ಎಚ್ಚರಿಕೆಯ ಕ್ರಮಗಳು.

ಮುಂ. ರೆ. ಕೋ. 140ನೇ ಸೆಕ್ಷನ.

ಮಾರಲ್ಪಟ್ಟಿರುವ ವಗೈರೇ ಫಸಲ್ ಸಾಗಿಸುವಣವನ್ನು ಕಂದಾಯ ಪಾವತೀ ಮಾಡುವತನಕ ಅಡ್ಡೀಮಾಡಬಹುದು.

155. ಯಾವದಾದರೂ ಜಮೀನಿನ ಅಥವಾ ಅದರ ಯಾವದಾದರೂ ಭಾಗದ ಫಸಲು, ಬಂದು ಸಿವಿಲ್ ಕೋರ್ಟು ಯಾ ಇತರ ಪಬ್ಲಿಕ್ ಅಧಿಕಾರಿಯ ಹುಕುಮಿನಿಂದಾಗಲಿ, ಸ್ವಂತ ಬಡಂಬಡಿಕೆಯ ಮೂಲಕವಾಗಲಿ, ವಿಕ್ರಯಿಸಲ್ಪಟ್ಟರೆ, ಅಡವು ಹಾಕಲ್ಪಟ್ಟರೆ, ಅಥವಾ ಅನ್ಯಥಾ ವಿಲೇವಾರಿ ಮಾಡಲ್ಪಟ್ಟರೆ, ಇದರಲ್ಲಿ ಮುಂದೆ ಬರುವ ಭಾಗದಲ್ಲಿರುವ ನಿಬಂಧನೆಗಳನುಸರಿಸಿ ಸದರೀ ಕಂದಾಯದ ಪಾವತೀ ಬಗ್ಯೆ ನಿಶ್ಚಯಿಸಲ್ಪಟ್ಟ ತಾರೀಖು ಪ್ರಾಪ್ತವಾಗಲಿ ಪ್ರಾಪ್ತವಾಗದೆಯಿರಲಿ, ಸದರೀ ಜಮೀನಿನ ಸಾಲ್‌ಮಜಕೂರ ಕಂದಾಯವು ಪಾವತೀ ಮಾಡಲ್ಪಡುವತನಕ, ಸದರೀ ಫಸಲು ಜಮೀನದೆಸೆಯಿಂದ ಸಾಗಿಸಲ್ಪಡುವದನ್ನು ಡೆಪ್ಯುಟಿ ಕಮ್ಮಿಷನರು ಅಡ್ಡೀ ಮಾಡಬಹುದು. ಪರಂತು, ಯಾವ

ಸಂಗತಿಯಲ್ಲಿಯೂ ವಿಕ್ರಯಿಸಲ್ಪಟ್ಟಿರುವ, ಅಡವು ಹಾಕಲ್ಪಟ್ಟಿರುವ, ಅನ್ಯಥಾ ವಿಲಾಮಾಡಲ್ಪಟ್ಟಿರುವ ಒಂದು ಫಸಲನ್ನಾಗಲಿ, ಅದರ ಯಾವ ಭಾಗವನ್ನಾಗಲಿ ಸಾಗಿಸಿಕೊಂಡು ಹೋಗುವ ವಿಷಯದಲ್ಲಿ ಒಂದು ಸಾಲ ಕಂದಾಯಕ್ಕಿಂತ ಜಾಸ್ತೀ ಬಗ್ಗೆ ಹರಕತ್ತು ಮಾಡಕೂಡದು.

ಮುಂ. ರೆ. ಕೋ. 141ನೇ ಸೆಕ್ಷನ.

ಜಮೀನ ಕಂದಾಯವನ್ನು ಭದ್ರ ಪಡಿಸಿಕೊಳ್ಳುವ ಬಗ್ಗೆ ಡೆಪ್ಯುಟಿ ಕಮ್ಮಿಷನರು.

156. ಫಸಲಿನ ಮೇಲೆ ಗವರ್ನಮೆಂಟ ಹಕ್ಕುದಾರೀಯನ್ನು ಜಾರೀ ಮಾಡೋಣವರ ಮೂಲಕ ಜಮೀನ ಕಂದಾಯದ ಪಾವತೀಯನ್ನು ಭದ್ರ ಪಡಿಸಿಕೊಳ್ಳುವಬಗ್ಗೆ ಡೆಪ್ಯುಟಿ ಕಮ್ಮಿಷನರಿಗೆ,

ಫಸಲ ಕಟಾವಮಾಡುವದನ್ನು ನಿರೋಧಿಸತಕ್ಕದ್ದು, ಅಥವಾ

(a) ಜಮೀನ ಕಂದಾಯ ಪಾವತೀಮಾಡಲಿಕ್ಕೆ ಗುರಿಯಾದ ಯಾವ ಜಮೀನಿನಲ್ಲಾಗಲಿ ಬೆಳೆಯುವ ಫಸಲನ್ನು ಬರವಣಿಗೆಯಲ್ಲಿ ಒಂದು ನೋಟೀಸ, ಅವರಿಗಾಗಲಿ, ಅವರಿಂದ ಈ ಬಗ್ಗೆ ನಮೂದಿಸಲ್ಪಡತಕ್ಕ ಯಾರಾದರು ಇತರ ಆಫೀಸರರಿಗಾಗಲಿ, ಕೊಡಲ್ಪಡುವತನಕ ಮತ್ತು ಅಂತಾ ನೋಟೀಸು ಪಾವತೀ ಯಾದ್ದಕ್ಕೆ ರಸೀದೀಷರಾಸಿಕೇ ವಾಪಸಮಾಡಲ್ಪಡುವತನಕ ಕಟಾವುಮಾಡಕೂಡದೆಂದು ನಿಯಮಿಸುವದಕ್ಕೂ,

ಸದರೀ ಫಸಲನ್ನು ಸಾಗಿಸಿಬಿಡುವಣ.

(b) ಯಾವ ಜಮೀನಿನಲ್ಲಿ ಸದರೀ ಫಸಲ ಕಟಾವಾಗಿರುತ್ತೋ ಅಂತಾ ಜಮೀನಿಂದ, ಅಥವಾ ಯಾವ ಜಮೀನಿನಲ್ಲಿ ಸದರೀ ಫಸಲು ಜಮಾಯಿಸಲ್ಪಟ್ಟಿರಬಹುದೋ ಅಂತಾ ಜಾಗಾದಿಂದ ತಂವು ಅಥವಾ ಮೇಲೆ ಕಂಡಂತೆ ಯಾರಾದರು ಇತರ ಆಫೀಸರರ ಬರವಣಿಗೆಯುಮೂಲಕವಾದ ಅಪ್ಪಣೆಯಿಲ್ಲದೆ, ಅಂತಾ ಫಸಲನ್ನು ಸಾಗಿಸಕೂಡದೆಂದು ನಿಯಮಿಸುವದಕ್ಕೂ,

ಸದರೀಫಸಲಮೇಲೆ ಕಾವಲುಗಾರರನ್ನು ಇಡತಕ್ಕದ್ದು.

(c) ಅಂತಾ ಯಾವ ಫಸಲನ್ನಾಗಲಿ ಅಕ್ರಮವಾಗಿ ಕಟಾವಮಾಡುವಣ ಅದನ್ನು ಸಾಗಿಸುವಣ ಇಂತಾದ್ದನ್ನು ಅಡ್ಡೀಮಾಡುವ ಬಗ್ಗೆ ಕಾವಲುಗಾರರನ್ನು ಇಡಿಸುವದಕ್ಕೂ ಮತ್ತು ಸದರೀ ಡೆಪ್ಯುಟಿ ಕಮ್ಮಿಷನರ ಶಿಬ್ಬಂದೀಗೆ ಸೇರಿದ ಜವಾನರಿಗೆ ಕೊಡಲ್ಪಡುವ ತಲಬ ದರಕ್ಕೆ ಜಾಸ್ತೀ ಇಲ್ಲದ ಅವರಿಗೆ ಯುಕ್ತ ತೋರಬಹುದಾದ ದರದಮೇರಿಗೆ ಸದರಿ ಕಾವಲುಗಾರರ ರುಸುಂಬಗ್ಗಾಗಿ ಬೇಕಾದ ಮೊಬಲಗನ್ನು ಅಂತಾ ಫಸಲ ಯಾವದಕ್ಕೆ ಸಂಬಂಧಿಸುತದೋ ಅಂತಾ ಜಮೀನ ವಿಷಯದಲ್ಲಿ ಜಮೀನಕಂದಾಯದ ಬಾಕೀತರೀಕ ವಸೂಲಮಾಡುವದಕ್ಕೂ, ಡೆಪ್ಯುಟಿ ಕಮ್ಮಿಷನರಿಗೆ ನ್ಯಾಯವಾಗಿರತಕ್ಕದ್ದು.

ಮುಂ. ರೆ. ಕೋ. 142ನೇ ಸೆಕ್ಷನ.

ಕಡೇ ಸೆಕ್ಷನ ಅನುಸರಿಸಿರುವ ಡೆಪ್ಯುಟಿ ಕಮ್ಮಿಷನರ ಹುಕ್ಕುಂಗಳು ಹ್ಯಾಗೆ ಜಾಯಿಷ ಆಗತಕ್ಕದ್ದು.

157. ಹಿಂದಿನ ಕಡೇ ಸೆಕ್ಷನಿನ (a) ಅಥವಾ (b) ಕ್ಲಾಜ ಅನುಸರಿಸಿ ಮಾಡಲ್ಪಡುವ ಡೆಪ್ಯುಟಿ ಕಮ್ಮಿಷನರ ಹುಕ್ಕುಂಗಳು, ಒಂದು ಗ್ರಾಮದಲ್ಲಿ, ಗವರ್ನಮೆಂಟಿಗೆ ಕಂದಾಯ ಕೊಡುವ ಜಮೀನಿನ ತಮಾಂ ಹಿಡುವಳೀದಾರರಿಗೆ ವಟ್ಟಾಗಿ ಆಗಲಿ ಹಿಡುವಳೀದಾರರಿಗೆ ಇಸಂವಾರಾಗಿ ಆಗಲೀ ಸಾದರಮಾಡಲ್ಪಡಬಹುದು.

ಹುಕ್ಕುಂ ಬಟ್ಟು ಹುಕ್ಕುಂ ಆದರೆ, ಗ್ರಾಮದಲ್ಲಿ ದಂಡೂರೇ ಹೊಯಿಸುವದರ ಮೂಲಕವಾಗಿಯೂ, ಚಾವಡೀಯಲ್ಲಾಗಲಿ, ಗ್ರಾಮದಲ್ಲಿ ಯಾವದಾದರೂ ಇತರ ಬಹಿರಂಗವಾದ ಕಟ್ಟದಲ್ಲಾಗಲಿ, ಹುಕ್ಕುಂ ನಕಲನ್ನು ಚಿಕಟಾಯಿಸುವದರ ಮೂಲಕವಾಗಿಯೂ, ಪ್ರಕಟಿಸಲ್ಪಡತಕ್ಕ ಬಹಿರಂಗವಾದ ಇಸ್ತಿಹಾರ್‌ನಾಮೇಮೂಲಕ ಫಾಯಿಷ್ ಮಾಡಲ್ಪಡತಕ್ಕದ್ದು. ಸದರೀ ಹುಕ್ಕುಂ ಇಸಂವಾರ್ ಹಿಡುವಳೀದಾರರಿಗಾಗಿದ್ದರೆ, ಅದರಲ್ಲಿ ಸಂಬಂಧವುಳ್ಳ ಪ್ರತಿ ಹಿಡುವಳೀದಾರನಮೇಲೂ ಸದರೀ ಹುಕುಮಿನ ನಕಲನ್ನು ಜಾರೀಮಾಡತಕ್ಕದ್ದು.

ಆಜ್ಞೋಲ್ಲಂಘನೆಯ ಬಗ್ಗೆ ದಂಡನೆ.

ಅಂಥಾ ಯಾವ ಹುಕುಮಾಗಲಿ, ಹಾಗೆ ಫಾಯಿಷ್ ಮಾಡಲ್ಪಟ್ಟ ಬಳಿಕ, ಅಥವಾ ಅದರ ಬಾಬತು ಒಂದು ನೋಟೀಸ್ ಅವನಿಗೆ ಸಾದರ್ ಮಾಡಲ್ಪಟ್ಟ ತರುವಾಯ ಅಂತಾ ಹುಕುಮನ್ನು ಉಲ್ಲಂಘಿಸುವ ಅಥವಾ ಇಂಡ್ಯನ್‌ಪಿನಲ್‌ಕೋಡ್ ಆರ್ಥರೀತ್ಯಾ ಅಂತಾ ಯಾವ ಹುಕ್ಕುಂ ಉಲ್ಲಂಘನೆಯನ್ನು ಮದ್ದತ್ ಮಾಡುವ ಯಾವ ಮನುಷ್ಯನಾಗಲಿ, ಡೆಪ್ಯುಟಿ ಕಮಿಷನರಿಂದ ಫ್ಲಾಟ್ ವಿಚಾರಣೆಮಾಡಲ್ಪಟ್ಟು ತಕಶೀರ್ ಆಪಾದಿಸಲ್ಪಟ್ಟ ಮೇಲೆ, ಯಾವದರ ವಿಷಯದಲ್ಲಿ ತಕಶೀರ್‌ನಡಿಸಲ್ಪಟ್ಟಿರುತ್ತೋ ಅಂತಾ ಫಸಲ್ ಯಾವದಕ್ಕೆ ಸಂಬಂಧಿಸಿರುತ್ತೋ ಅಂತಾ ಜಮೀನಿಗೆ ಸಲ್ಲತಕ್ಕ ಕಂದಾಯದ ಮೊಬಲಗಿನ ಯೆರಡರಷ್ಟಕ್ಕೆ ಹೆಚ್ಚದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಮುಂ. ರೆ. ಕೋ. 143ನೇ ಸೆಕ್‌ಷನ್.

ಕಟಾವ್ ವಗೈರೆಯನ್ನು ಅಕ್ರಮವಾಗಿ ನಿಲ್ಲಿಸಿ ಇಡಕೂಡದು.

158. ಡೆಪ್ಯುಟಿ ಕಮಿಷನರು, ಫಸಲಿನ ಕಟಾವನ್ನು ಸಾವಕಾಶಪಡಿಸಕೂಡದು ಅಥವಾ, ಫಸಲುಕೆಡುವಂತೆ ಅದರ ಮೆದೆಯನ್ನು ಅಕ್ರಮವಾಗಿ ಹೆಚ್ಚುಕಾಲ ಇಡಿಸಕೂಡದು; ಮತ್ತು ಫಸಲು ಮೆದೆಹಾಕಲ್ಪಟ್ಟ ತರುವಾಯ ಯೆರಡು ತಿಂಗಳೊಳಗಾಗಿ ಸಲ್ಲತಕ್ಕ ಕಂದಾಯ ವಸೂಲ್ ಆಗದಿದ್ದರೆ ಫಸಲನ್ನು ಖುಲಾಸೇಮಾಡಿ ಈ ಅಧ್ಯಾಯದಿಂದ ನಿಯಮಿಸಲ್ಪಟ್ಟ ಇತರ ಯಾವ ರೀತಿಯಾಗಿಯಾಗಲಿ, ಕಂದಾಯ ವಸೂಲ್‌ಮಾಡಲಿಕ್ಕೆ ಪ್ರವರ್ತಿಸತಕ್ಕದ್ದು ಅಥವಾ ಅದರ ಬಾಬತು, ಅವರಿಗೆ ಯುಕ್ತ ತೋರುವಷ್ಟು ಭಾಗವನ್ನು, ಬರತಕ್ಕ ಕಂದಾಯ ಮತ್ತು ನ್ಯಾಯವಾದ ತಮಾಂ ಖರ್ಚುಗಳನ್ನು ವಸೂಲ್‌ಮಾಡುವ ವಿಷಯದಲ್ಲಿ ಚರಸ್ವತ್ತಿನ ವಿಕ್ರಯದ ಬಗ್ಗೆ ಲಗಾವಾದ ಈ ಅಧ್ಯಾಯದ ನಿಬಂಧನೆಗಳನುಸರಿಸಿ, ಹರಾಜ್‌ಬಗ್ಗೆ ತೆಗೆದುಕೊಳ್ಳತಕ್ಕದ್ದು, ಮಿಕ್ಕ ಭಾಗವನ್ನು ಖುಲಾಸೇಮಾಡತಕ್ಕದ್ದು.

ಫಸಲನ್ನು ಯಾವಾಗ ಖುಲಾಸೇ ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 144ನೇ ಸೆಕ್‌ಷನ್.

ಒಂದು ಗ್ರಾಮದ ಅಥವಾ ಒಂದು ಗ್ರಾಮದ ಹಿಸ್ಸೆಯ ಹಂಗಾಮಿ ಜಫ್ತೀ ವ ವಿಚಾರಣೆ.

159. ಹಿಸ್ಸೇದಾರರಲ್ಲಿ ತಕರಾರುಗಳಿಗೋಸ್ಕರವಾಗಲಿ, ಇತರ ನಿಮಿತ್ತಕ್ಕಾಗಲಿ, ಒಂದು ಪೂರಾ ಗ್ರಾಮ ಅಥವಾ ಒಂದು ಗ್ರಾಮದ ಪೈಕಿ ಒಂದು ಹಿಸ್ಸೆ ಅಡಗಿರುವ ಯಾವ ಹಿಡುವಳಿಯ ವಿಷಯದಲ್ಲಾಗಲಿ, ಸಲ್ಲತಕ್ಕ ಜಮೀನ್ ಕಂದಾಯವು ಬಾಕೀಯಾದಾಗ ಪಾವತೀ ಮಾಡಲ್ಪಡಲಾರದೆಂದು ಶಂಕಿಸಲಿಕ್ಕೆ ಡೆಪ್ಯುಟಿ ಕಮಿಷನರಿಗೆ ಕಾರಣ ತೋರಬಂದರೆ ಗ್ರಾಮವನ್ನಾಗಲಿ, ಒಂದು ಗ್ರಾಮದ ಪೈಕಿ ಹಿಸ್ಸೆಯನ್ನಾಗಲಿ, ಜಫ್ತೀ ಮಾಡಿಸಿ ತಮ್ಮ ಸ್ವಂತ ವಿಚಾರಣೆ

ಬಳಗಾಗಲಿ, ಸದರೀ ಬಗ್ಯೆ ತಾನು ಮೊಕರರ್ ಮಾಡುವ ಯಾವನಾದರೂ ಮುತಾಲೀಕನ ವಿಚಾರಣೆಯೊಳಗಾಗಲಿ ಇಡಿಸಬಹುದು.

ವಿಚಾರಣೆಕರ್ತನ ಅಧಿಕಾರಗಳು ಮತ್ತು ಹೆಚ್ಚಿಗೆ ಹುಟ್ಟುವಳಿಯ ವಿಲಾವಾರಿ.

175ನೇ ಸೆಕ್ಷನಿನ ನಿಬಂಧನೆಗಳು, ಹಾಗೆ ಜಪ್ತಿಮಾಡಲ್ಪಟ್ಟ, ಯಾವದಾದರೂ ಗ್ರಾಮಕ್ಕೆ ಅಥವಾ ಒಂದು ಗ್ರಾಮದ ಹಿಸ್ಸೆಗೆ ಲಾಗಾವಾಗತಕ್ಕದ್ದು, ಮತ್ತು ಅಂಥಾ ಜಪ್ತಿಯ ಮತ್ತು ವಿಚಾರಣೆಯ ಖರ್ಚು, ಜಮೀನ್ ಕಂದಾಯದ ಬಗ್ಯಾಗಿ ಪಾವತೀಯಾಗತಕ್ಕಮೊಬಲಗು ಮತ್ತು 128ನೇ ಸೆಕ್ಷನಿನ ನಿಬಂಧನೆಗಳನುಸರಿಸಿ ರೆವಿನ್ಯೂ ಸರ್ವೆ ಜಾರೀಗೆ ಬಂದಿದ್ದರೆ ಅಂಥಾ ರೆವಿನ್ಯೂ ಸರ್ವೆಯ ಖರ್ಚುಸಹ ಜಾತಾ ವುಳದಿರುವ ಜಪ್ತಿಯಾದ ಜಮೀನಿನ ಆದಾಯವೆಲ್ಲವೂ ಅವುಗಳಿಗೆ ಹಕ್ಕುಳ್ಳ ಮನುಷ್ಯನ ಯಾ ಮನುಷ್ಯರ ಉತ್ತರೋತ್ತರ ಪ್ರಯೋಜನದ ಬಗ್ಯಾಗಿ ಅಮಾನಿಯಲ್ಲಿ ಇಡಿಸಲಪಟ್ಟು ಇರತಕ್ಕದ್ದು ಅಥವಾ ಗವರ್ನಮೆಂಟ ಹುಕುಮಿಗೆ ಬಳಪಟ್ಟು ಡೆಪ್ಯುಟಿ ಕಮ್ಮಿಷನರು ನಿಯಮಿಸಬಹುದಾದಂತೆ ಆಗಿಂದಾಗ್ಯೆ ಸದರೀ ಮನುಷ್ಯ ಯಾ ಮನುಷ್ಯರಿಗೆ ಪಾವತೀ ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 145ನೇ ಸೆಕ್ಷನ್.

ಜಾಮೀನ್ ಕೊಡಲ್ಪಟ್ಟಮೇಲೆ ಯಚ್ಚರಿಕೆಯ ಕ್ರಮಗಳನ್ನು ಬಿಟ್ಟುಬಿಡತಕ್ಕದ್ದು.

160. ಕಂದಾಯ ಕೊಡಲಿಕ್ಕೆ ಮುಖ್ಯವಾಗಿ ಜವಾಬ್ದಾರನಾದ ಮನುಷ್ಯನಾಗಲಿ, ಅಂಥಾವನು, ಕಂದಾಯ ಕೊಡಲಿಕ್ಕೆ ತಪ್ಪಿದರೆ, ಆಬಗ್ಯೆ ಜವಾಬ್ದಾರನಾಗತಕ್ಕ ಯಾವ ಮನುಷ್ಯನಾಗಲಿ ಅಂತಾ ಯೆಚ್ಚರಿಕೆಯ ಕ್ರಮಗಳನ್ನು ಬಿಟ್ಟುಬಿಡುವ ಕಾಲದವರಿಗೆ ಡೆಪ್ಯುಟಿ ಕಮ್ಮಿಷನರಿಗೆ ನ್ಯಾಯತಃ ಉಂಟಾದ ಖರ್ಚುಗಳು ಯಾವದಾದರೂ ಇದ್ದರೆ ಅದನ್ನು ಪಾವತೀಮಾಡಿ, ಇದರಲ್ಲಿ ಮುಂದೆ ಅಡಗಿರುವ ನಿಬಂಧನೆಗಳನುಸರಿಸಿ ಯಾವಕಾಲದಲ್ಲಿ ಅಥವಾ ಖಿಸ್ತು ಯಾವದಾದರೂ ಇದ್ದರೆ ಅಂತಾ ಖಿಸ್ತುಗಳ ಪ್ರಕಾರ ಪಾವತೀಯಾಗತಕ್ಕದ್ದಾಗಿರುವ ಅಂತಾ ಕಾಲದಲ್ಲಿ ಯಾ ಖಿಸ್ತುಗಳಲ್ಲಿ ಅದನ್ನು ಪಾವತೀ ಮಾಡುವಬಗ್ಯೆ ಡೆಪ್ಯುಟಿ ಕಮ್ಮಿಷನರಿಗೆ ತೃಪ್ತಿಕರವಾದ ಜಾಮೀನನ್ನು ಕೊಟ್ಟರೆ ಹಿಂದಿನಕಡೇ ಐದು ಸೆಕ್ಷನ್‌ಗಳಿಂದ ನಿಯಮಿಸಲ್ಪಟ್ಟ, ಮುಂಜಾಗ್ರತೆಯ ಬಾಬತು ಕ್ರಮಗಳನ್ನು ಬಿಟ್ಟುಬಿಡತಕ್ಕದ್ದು.

ಜಮೀನ್ ಕಂದಾಯದ ಪಾವತೀಯ ಏರ್ಪಾಡು.

ಮುಂ. ರೆ. ಕೋ. 146ನೇ ಸೆಕ್ಷನ್.

ಜಮೀನ್ ಕಂದಾಯವು ಯಾವ ತಾರೀಖ್ ವಗ್ಯೆರೇಗಳಲ್ಲಿ ಪಾವತೀ ಮಾಡಲ್ಪಡತಕ್ಕದ್ದೋ ಅದನ್ನು ಗವರ್ನಮೆಂಟನವರು ನಿರ್ಣಯಿಸತಕ್ಕದ್ದು.

161. ಜಮೀನ್ ಕಂದಾಯವು ಹಿಂದಿನ 155 ಮೊದಲು 159ರ ವರಿಗೆ ಇರುವ ಸೆಕ್ಷನ್‌ಗಳ ನಿಬಂಧನೆಗಳನುಸರಿಸಿ ವಸೂಲ್ ಮಾಡಲ್ಪಟ್ಟ ಹೊರತು, ಗವರ್ನಮೆಂಟ ಹುಕುಂಗಳಿಂದ ಆಗಿಂದಾಗ್ಯೆ ನಿರ್ಣಯಿಸಲ್ಪಡಬಹುದಾದ ಅಂಥಾ ಕಾಲಗಳಲ್ಲಿಯೂ, ಅಂತಾ ಖಿಸ್ತುಗಳ ಪ್ರಕಾರವೂ, ಅಂತಾ ಮನುಷ್ಯರಿಗೂ, ಅಂಥಾ ಸ್ಥಳಗಳಲ್ಲಿಯೂ, ಪಾವತೀಮಾಡಲ್ಪಡತಕ್ಕದ್ದು.

ಬಾಕೀದಾರರು.

ಮುಂ. ರೆ. ಕೋ. 147ನೇ ಸೆಕ್ಷನ್.

ಬಾಕೀ. ಕಂದಾಯದ ಬಾಕೀದಾರರು.

162. ಹಾಗೆ ಪಾವತೀಮಾಡಲ್ಪಡದ ಯಾವ ವೊಬಲಗಾಗಲಿ, ಬಳಿಕ ಜಮೀನ್ ಕಂದಾಯದ ಬಾಕೀಯಾಗಿ ಆಬಗ್ಗೆ ಜವಾಬುದಾರರಾದವರು, 151ನೇ ಸೆಕ್ಷನಿನ ಅಥವಾ ಮತ್ತಾವ ಇತರ ಸೆಕ್ಷನಿನ ನಿಬಂಧನೆಗಳನುಸರಿಸಿಯೇ ಯಾಗಲಿ, ಹಣ ಕೊಡಲಿಕ್ಕೆ ತಪ್ಪಿದ ಬಾಕೀದಾರರಾಗುತ್ತಾರೆ.

ಮುಂ. ರೆ. ಕೋ. 148ನೇ ಸೆಕ್ಷನ್.

ಹಣ ಕೊಡಲಿಕ್ಕೆ ತಪ್ಪುವದರಿಂದ ಉಂಟಾದ ಜವಾಬ್ದಾರಿ.

163. ಜಮೀನ್ ಕಂದಾಯದ ಯಾವ ಖಿಸ್ತಾಗಲಿ, ವಿಧಿಸಲ್ಪಟ್ಟಕಾಲದೊಳಗಾಗಿ ಪೂರಾ ಪಾವತೀಮಾಡಲ್ಪಡದೆ ಇದ್ದರೆ, ಗವರ್ನ್‌ಮೆಂಟ್ ಹುಕುಂ ಅನುಸರಿಸಿ ಆಗಿಂದಾಗ್ಯೆ ನಿಶ್ಚಯಿಸಲ್ಪಟ್ಟ, ಒಂದು ಸ್ಕೇಲ್ ಪಟ್ಟೀಪ್ರಕಾರ ನಿಯಮಿಸಲ್ಪಡಬಹುದಾದಂಥಾ ಜುರ್ಮಾನೇ ತರೀಕ್ ಅಥವಾ ಬಡ್ಡೀಮೂಲಕವಾದ ಖರ್ಚಿನೊಡನೆ, ಸಾಲ್‌ಮಜಕೂರಿಗೆ, ಬಾಕೀದಾರನಿಂದ ಸಲ್ಲತಕ್ಕ ಕಂದಾಯದ ಪೂರಾ ಬಾಕೀಯನ್ನು ಕೂಡ್ಲೆ ವಸೂಲ್ ಮಾಡಲಿಕ್ಕೆ ಪ್ರವರ್ತಿಸುವಣವು ಡೆಪ್ಯುಟಿ ಕಮ್ಮಿಷನರಿಗೆ ನ್ಯಾಯವಾಗಿರತಕ್ಕದ್ದು.

ಮುಂ. ರೆ. ಕೋ. 149ನೇ ಸೆಕ್ಷನ್.

ಸರ್ಟಿಫೈ ಮಾಡಲ್ಪಟ್ಟ ಲೆಕ್ಕವು ಬಾಕೀವಿಷಯದಲ್ಲಿ ಸಾಕ್ಷ್ಯವಾಗಿರತಕ್ಕದ್ದು.

164. ಡೆಪ್ಯುಟಿ ಕಮ್ಮಿಷನರಿಂದಾಗಲಿ, ಒಬ್ಬ ಅ|| ಕಮ್ಮಿಷನರಿಂದಾಗಲಿ, ಸರ್ಟಿಫೈ ಮಾಡಲ್ಪಟ್ಟ ಲೆಕ್ಕದ ಒಂದು ತಖ್ತೆಯು, ಈ ಅಧ್ಯಾಯದ ಕಾರ್ಯಗಳಿಗಾಗಿ ಪಾವತೀಯಾಗತಕ್ಕ ಜಮೀನ್ ಕಂದಾಯದ ವೊಬಲಗಿನ ಬಾಕಿಯು ಮತ್ತು ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನ ವಿಷಯದಲ್ಲೂ ತೀರ್ಗಡೆಯಾದ ಸಾಕ್ಷ್ಯವಾಗಿರತಕ್ಕದ್ದು.

ಡೆಪ್ಯುಟಿ ಕಮ್ಮಿಷನರುಗಳು ಪರಸ್ಪರ ಬಾಕೀಗಳನ್ನು ವಸೂಲ್‌ಮಾಡಬಹುದು.

ಅಂತಾ ಸರ್ಟಿಫೈ ಮಾಡಲ್ಪಟ್ಟ ತಖ್ತೆಯು ತಲಪಿದಮೇಲೆ ಒಂದು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರು, ಮತ್ತಾವುದಾದರೂ ಇತರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರ ಬಾಕೀಗಳನ್ನು, ಈ ಅಧ್ಯಾಯದ ನಿಬಂಧನೆಗಳನುಸರಿಸಿ, ತಮ್ಮ ಡಿಸ್ಟ್ರಿಕ್ಟಿನಲ್ಲಿಯೇ ಸದರೀ ತಗಾದೇ ಉಂಟಾದರೆ ಹ್ಯಾಗೋ ಹಾಗೆ, ವಸೂಲ್‌ಮಾಡಲಿಕ್ಕೆ ಪ್ರವರ್ತಿಸುವಣವು ಸದರೀ ಡೆಪ್ಯುಟಿ ಕಮ್ಮಿಷನರಿಗೆ ನ್ಯಾಯವಾಗಿರತಕ್ಕದ್ದು.

ಬಾಕೀವಸೂಲಿ.

ಮುಂ. ರೆ. ಕೋ. 150ನೇ ಸೆಕ್ಷನ್.

ಬಾಕೀಗಳನ್ನು ವಸೂಲ್ ಮಾಡುವಬಗ್ಯೆ ಕ್ರಮ.

165. ಜಮೀನ್‌ಕಂದಾಯದ ಬಾಕಿಯು ಇದರಡಿ ಬರುವ ಕ್ರಮಗಳ ಪ್ರಕಾರ ವಸೂಲ್ ಮಾಡಲ್ಪಡಬಹುದು :—

(a) ಹಣ ಕೊಡಲಿಕ್ಕೆ ತಪ್ಪಿದವನಮೇಲೆ 167ನೇ ಸೆಕ್ಷನ್ ಅನುಸರಿಸಿ ಬರವಣಿಗೆಯ ತಗಾದಾ ನೋಟೀಸ್ ಸಾದರ್‌ಮಾಡುವದರ ಮೂಲಕ ;

(b) ಯಾವದರ ವಿಷಯದಲ್ಲಿ ಬಾಕೀಸಲ್ಲಬೇಕಾಗಿರುತ್ತೋ ಅಂಥಾ ಹಿಡುವಳೀಯನ್ನು ಅಥವಾ ಪರಭಾರೇಯಾದ ಹಿಡುವಳೀಯನ್ನು 168ನೇ ಸೆಕ್ಷನ್ ಅನುಸರಿಸಿ ಸರಕಾರಕ್ಕೆ ತೆಗೆದುಕೊಳ್ಳುವದರ ಮೂಲಕ ;

(c) ಹಣಕೊಡಲಿಕ್ಕೆ ತಪ್ಪಿದವನ ಚರಸ್ವತ್ತನ್ನು 169ನೇ ಸೆಕ್ಷನ್ ಅನುಸರಿಸಿ ಜಪ್ತೀ ವ ಹರಾಜ್ ಮೂಲಕ;

(d) ಹಣಕೊಡಲಿಕ್ಕೆ ತಪ್ಪಿದವನ ಸ್ಥಿರಸ್ವತ್ತನ್ನು 170ನೇ ಸೆಕ್ಷನ್ ಅನುಸರಿಸಿ ಹರಾಜ್ ಮೂಲಕ;

(e) ಹಣಕೊಡಲಿಕ್ಕೆ ತಪ್ಪಿದವನ, 172 ಮತ್ತು 173ನೇ ಸೆಕ್ಷನ್‌ಗಳನು ಸರಿಸಿ, ದಸ್ತಗಿರೀ ವ ಖೈದ್ ಮೂಲಕ;

(f) ಪೂರಾ ಗ್ರಾಮಗಳಾಗಲಿ, ಗ್ರಾಮಗಳ ಹಿಸ್ಸೆಗಳಾಗಲಿ, ಅಡಗಿರುವ ಪರಭಾರೇಯಾದ ಹಿಡುವಳೀಗಳ ವಿಷಯದಲ್ಲಿ, 174ರ ಮೊದಲು 178ರವರಿಗೆ ಇರುವ ಸೆಕ್ಷನ್‌ಗಳನುಸರಿಸಿ ಸದರೀ ಗ್ರಾಮಗಳ ಅಥವಾ ಗ್ರಾಮಗಳ ಹಿಸ್ಸೆಗಳ ಜಪ್ತೀ ಮೂಲಕ.

ಮುಂ. ರೆ. ಕೋ. 151ನೇ ಸೆಕ್ಷನ್.

ಹಿಂದಿನ ಸಾಲ್‌ಗಳ ಕಂದಾಯದ ಬಾಕೀಗಳು ಹ್ಯಾಗೆ ವಸೂಲ್‌ಮಾಡಲ್ಪಡತಕ್ಕದ್ದು.

166. ಸಾಲ್ ಮಜಕೂರಿನಂತೆ ಹಿಂದಿನ ಸಾಲ್‌ಗಳ ಕಂದಾಯದ ಬಾಕೀವಸೂಲೀಬಗ್ಗೆ ಸದರೀ ಕ್ರಮಗಳು ಪ್ರಯೋಗಿಸಲ್ಪಡಬಹುದು, ಆದರೆ, 152 ಮತ್ತು 153 ಈ ಸೆಕ್ಷನ್‌ಗಳಿಂದ ಉಂಟುಮಾಡಲ್ಪಟ್ಟ ಪ್ರಾಧಾನ್ಯವಾದ ಹಕ್ಕುಗಳು, ಸಾಲ್ ಮಜಕೂರಿನ ಬಾಕೀಗಳ ವಿಷಯದಲ್ಲಿ ಮಾತ್ರ ಲಗಾವಾಗತಕ್ಕದ್ದು:

ನಿಯಮ.

ಪರಂತು, ಸಾಲ್ ಮಜಕೂರಿನಲ್ಲಿ ಆರಂಭಿಸಲ್ಪಟ್ಟ ಯಾವ ಜಾರಿ ಕ್ರಮವಾಗಲಿ, ಆ ಸಾಲಿನೊಳಗೆ ಪೂರಾ ಜಾರೀಮಾಡಲ್ಪಡದೆ ಇರಬಹುದಾದರೂ, ಸದರೀ ಪ್ರಾಧಾನ್ಯತೆಗಳಿಗೆ ಅರ್ಹವಾಗಿರತಕ್ಕದ್ದು.

ತಗಾದೇ ನೋಟೀಸ್.

ಮುಂ. ರೆ. ಕೋ. 152ನೇ ಸೆಕ್ಷನ್.

ತಗಾದೇ ನೋಟಿಸ್ ಯಾವಾಗ ಸಾದರ್ ಆಗತಕ್ಕದ್ದು.

167. ಯಾವ ತಾರೀಖಿನಲ್ಲಿ ಬಾಕಿ ಆಗುತ್ತೋ ಆ ತಾರೀಖಿನ ಮಾರನೆ ದಿನದಲ್ಲಾಗಲಿ, ಆ ಬಳಿಕಾಗಲಿ, ಒಂದು ತಗಾದ ನೋಟೀಸ್ ಸಾದರ್ ಮಾಡಲ್ಪಡಬಹುದು. ಗವರ್ನಮೆಂಟಿನವರು ಅಂಥಾ ನೋಟೀಸ್‌ಗಳ, ಸಾದರಾತೀಬಗ್ಗೆ, ಆಗಿಂದಾಗ್ಗೆ ನಿಬಂಧನೆಗಳನ್ನು ಏರ್ಪಡಿಸಿ ಕಂದಾಯದ ಬಾಕಿ ತರೀಕ್ ಹಣ ಕೊಡಲಿಕ್ಕೆ ತಪ್ಪಿದವನಿಂದ ವಸೂಲಾಗತಕ್ಕ ಖರ್ಚುಗಳನ್ನು ನಿಶ್ಚಯಿಸಿ, ಯಾವ ಆಫೀಸರರಿಂದ ಅಂಥಾ ನೋಟೀಸ್‌ಗಳು ಸಾದರ್‌ಮಾಡಲ್ಪಡತಕ್ಕವೋ ಅದನ್ನು ನಿಯಮಿಸತಕ್ಕದ್ದು.

ಹಿಡುವಳಿಯನ್ನು ಅಥವಾ ಪರಭಾರೆಯಾದ ಹಿಡುವಳಿಯನ್ನು ಸರಕಾರಕ್ಕೆ ಶೇರಿಸಿಕೊಳ್ಳೋಣ.

ಮುಂ. ರೆ. ಕೋ. 153ನೇ ಸೆಕ್ಷನ್.

ಯಾವಬಗ್ಗೆ ಬಾಕೀ ಕೊಡಬೇಕಾಗುತ್ತೋ ಅಂಥಾ ಹಿಡುವಳಿ ಅಥವಾ ಪರಭಾರೇಯಾದ

168. ಯಾವದರ ವಿಷಯದಲ್ಲಿ ಜಮೀನ್ ಕಂದಾಯದ ಬಾಕೀ ಬರಬೇಕಾಗಿರುತ್ತೋ ಅಂಥಾ ಹಿಡುವಳೀಯಾಗಲಿ, ಪರಭಾರೇಯಾದ ಹಿಡುವಳೀಯಾಗಲಿ, ಸರ್ಕಾರಕ್ಕೆ ಸೇರತಕ್ಕದ್ದೆಂದು ಡೆಪ್ಯುಟಿ ಕಮಿಷನರು ತಿಳಿಸಿ 59 ಮತ್ತು 60ನೇ ಸೆಕ್ಷನ್

ಹಿಡುವಳಿಯು ಸರಕಾರಕ್ಕೆ ಶೇರಿಸಿಕೊಳ್ಳಲ್ಪಡಬಹುದು.

ಗಳ ನಿಬಂಧನೆಗಳನುಸರಿಸಿ ಸದರೀ ಹಿಡುವಳಿಯನ್ನು ವಿಕ್ರಯಿಸಿ ಅಥವಾ ಅನ್ಯಥಾ ವಿನಿಯೋಗಿಸಿ ಮತ್ತು ಅದರ ಹುಟ್ಟುವಳೀ ಯೇನಾದರೂ ಇದ್ದರೆ ಅದನ್ನು ಹಣಕೊಡಲಿಕ್ಕೆ ತಪ್ಪಿದವನಲೆಖ್ಖಕ್ಕೆ ಜಮೆ ಕಟ್ಟತಕ್ಕದ್ದು.

ಹಣ ಸಲ್ಲಿಸುವದಕ್ಕೆ ತಪ್ಪಿದವನ ಸ್ವತ್ತಿನಹರಾಜು.

ಮುಂ. ರೆ. ಕೋ. 154ನೇ ಸೆಕ್ಷನ್.

ಹಣ ಪಾವತೀಮಾಡಲಿಕ್ಕೆ ತಪ್ಪಿದವನ ಚರಸ್ವತ್ತಿನ ಜಫ್ತೀ ವ ಹರಾಜ್.

ಯಾರಿಂದ ಮಾಡಿಸತಕ್ಕದ್ದು.

169. ಹಣ ಪಾವತೀಮಾಡಲಿಕ್ಕೆತಪ್ಪಿದವನ ಚರಸ್ವತ್ತನ್ನು ಡೆಪ್ಯುಟಿ ಕಮ್ಮಿಷನರು ಜಫ್ತೀ ಮತ್ತು ಹರಾಜಾ ಮಾಡಿಸಬಹುದು. ಅಂಥಾ ಜಫ್ತಿಯು, ಗವರ್ನಮೆಂಟಿನವರು ಆಗಿಂದಾಗ್ಯೆ ನಿಯಮಿಸ ಬಹುದಾದಂತಾ ಆಫೀಸರರಿಂದ ಅಥವಾ ಆಫೀಸರರ ತರಗತಿಯಿಂದ ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 155ನೇ ಸೆಕ್ಷನ್.

ಹಣ ಪಾವತೀಮಾಡಲಿಕ್ಕೆ ತಪ್ಪಿದವನ ಸ್ಥಿರಸ್ವತ್ತಿನ ಹರಾಜ್.

170. ಯಾವದರಮೇಲೆ ಬಾಕೀ ಸಲ್ಲಬೇಕಾಗಿರುತ್ತೋ ಅಂತಾ ಜಮೀನ ಅಲ್ಲದೇ ಯಾವದಾದರೂ ಸ್ಥಿರಸ್ವತ್ತಿನಲ್ಲಿ ಹಣ ಪಾವತೀ ಮಾಡಲಿಕ್ಕೆ ತಪ್ಪಿದವನ ಹಕ್ಕು ಬಾಧ್ಯತೆ ಸಂಬಂಧಗಳನ್ನು, ಡೆಪ್ಯುಟಿ ಕಮ್ಮಿಷನರು ಹರಾಜ್ ಮಾಡಿಸಲೂಬಹುದು.

ಮುಂ. ರೆ. ಕೋ. 156ನೇ ಸೆಕ್ಷನ್.

ಜಫ್ತೀ ಮತ್ತು ಹರಾಜ್ ದೆಸೆಯಿಂದ ವಿನಾಯಿತಿ.

171. ಒಂದು ಡಿಕ್ರೀ ಅಮಲ್‌ಜಾರೀಯಲ್ಲಿ ಜಫ್ತೀ ಯಾ ಹರಾಜ್ ದೆಸೆಯಿಂದ ಸಿವಿಲ್ ಪ್ರೊಸಿಡ್ಯೂರ್ ಕೋಡಿನಿಂದ ವಿನಾಯಿಸಲ್ಪಟ್ಟಿರುವಂತಾ ತಮಾಂ ಸ್ವತ್ತೂ ಸಹ ಹಿಂದಿನಕಡೇ ಯೆರಡು ಸೆಕ್ಷನ್‌ಗಳಲ್ಲಿ ಯಾವದನ್ನನುಸರಿಸಿಯಾಗಲಿ ನಡಿಸಲ್ಪಡುವ ಜಪ್ತೀದೆಸೆಯಿಂದಾಗಲಿ, ಹರಾಜ್ ದೆಸೆಯಿಂದಾಗಲಿ, ವಿನಾಯಿಸಲ್ಪಡತಕ್ಕದ್ದು.

ಯಾವ ಸ್ವತ್ತು ಹಾಗೆ ವಿನಾಯಿತಿಗೆ ಅರ್ಹವಾಗಿರುವ ಅಂಶವನ್ನು ಕುರಿತು ಡೆಪ್ಯುಟಿ ಕಮ್ಮಿಷನರ ತೀರ್ಮಾನವು ಆಖ್ಯೈರಾದ್ದಾಗಿರತಕ್ಕದ್ದು.

ದಸ್ತಗಿರಿ ವ ಖೈದು.

ಮುಂ. ರೆ. ಕೋ. 157ನೇ ಸೆಕ್ಷನ್.

ಹಣ ಕೊಡಲಿಕ್ಕೆ ತಪ್ಪಿದವನ ದಸ್ತಗಿರಿ ಮತ್ತು ಪಹರೇಯಲ್ಲಿಡಲ್ಪಡುವಣ.

172. ಕಂದಾಯ ಬಾಕೀಯಾದ ಮೇಲೆ, ಯಾವಕಾಲದಲ್ಲಾಗಲಿ, ದಂಡ ಅಥವಾ ಬಡ್ಡಿ ಮತ್ತು, ದಸ್ತಗಿರಿಯ, ಮತ್ತು ತಗಾದಾ ನೋಟೀಸ್ ಯಾವದಾದರೂ ಯಿದ್ದು ಸಾದರ್ ಮಾಡಲ್ಪಟ್ಟರೆ, ಅದರ ಬಾಬತು ಖರ್ಚುಗಳು ಮತ್ತು ಪಹರೇಯಲ್ಲಿಡಲ್ಪಟ್ಟದ್ದಾಗ ತನ್ನ ಪೋಷಣೆ ಖರ್ಚು ಇವುಗಳು ದೇಖೀಲ್ ಬರತಕ್ಕಕಂದಾಯ ತ್ವರೆಯಾಗಿ ಪಾವತೀಮಾಡಲ್ಪಟ್ಟಹೊರತು ಬಾಕೀದಾರನು ದಸ್ತಗಿರಿ ಮಾಡಲ್ಪಟ್ಟು ಡೆಪ್ಯುಟಿಕಮ್ಮಿಷನರ ಅಥವಾ ಒಬ್ಬ ಅಮಲ್‌ದಾರರ ಅಥವಾ ಡೆಪ್ಯುಟಿ ಅಮಲ್‌ದಾರರ ಕಛ್ಛೇರಿಯಲ್ಲಿ 10 ದಿನಗಳು ಪಹರೇಯಲ್ಲಿಡಲ್ಪಡಬಹುದು.

ಸೀವಿಲ್ ಜೆಯಿಲ್‌ನಲ್ಲಿ ಖೈದ್.

10 ದಿನಗಳು ಕಳೆದಮೇಲೆ ಬಾಕೀದಾರನಿಂದ ಸಲ್ಲತಕ್ಕ ಮೊಬಲಗು, ಪಾವತೀ ಮಾಡಲ್ಪಡದೆಯಿದ್ದರೆ, ಆಗ ಅಥವಾ, ಡೆಪ್ಯುಟಿ ಕಮ್ಮಿಷನರು ಯುಕ್ತವೆಂದು ಭಾವಿಸಿದರೆ, ಮುಂದಾಗಿ ಯಾವದಿನದಲ್ಲಾಗಲಿ, ಸದರೀ ಯವನು, D ಷೆಡ್ಯೂಲ್ ನಮೂನೇಯಲ್ಲಿ ಒಂದು

ವಾರಂಟನಿಶೀ ಡಿಸ್ಟ್ರಿಕ್ಟಿನ ಸಿವಿಲ್ ಜೆಯಿಲ್‌ನಲ್ಲಿ ಖೈದು ಮಾಡಲ್ಪಡುವಬಗ್ಗೆ ಡೆಪ್ಯುಟಿ ಕಮ್ಮಿಷನರಿಂದ ಕಳುಹಿಸಲ್ಪಡಬಹುದು :

ಪರಂತು ನಿಯಮಗಳೇನಂದರೆ :—

ಬಾಕೀದಾರನನ್ನು ಖೈದ್‌ನಲ್ಲಿ ಡತಕ್ಕ ಕಾಲ.

1ನೇದು.——ಅಂತಾ ಬಾಕೀದಾರನಿಂದ ಸಲ್ಲತಕ್ಕ ಕಂದಾಯದ ಬಾಕೀ ಮೊಬಲಗಿಗೆ ಸಮನಾದ ಒಂದು ಸಾಲಕ್ಕೋಸ್ಕರ ಒಂದು ಸಿವಿಲ್ ಕೋರ್ಟಿನ ಡಿಕ್ರೀ ಅಮಲ್‌ಜಾರೀ ಮೊಕದ್ದಮೆಯಲ್ಲಿ ಕಾನೂನಿಂದ ಹದ್ದು ಪಡಿಸಲ್ಪಟ್ಟ ಕಾಲಕ್ಕಿಂತ ಹೆಚ್ಚು ಕಾಲಕ್ಕೆ ಯಾವ ಬಾಕೀದಾರನೂ ಖೈದ್‌ನಲ್ಲಿಡಸಲ್ಪಡಕೂಡದು.

ಮೈನರು, ಹುಚ್ಚ, ಅಥವಾ ಆಜನ್ಮವಾಗಿ ಹುಚ್ಚ ಇಂತಾವನ ವಿನಾಯಿತಿ.

2ನೇದು.—ಈ ಸೆಕ್ಷನ್ ಅನುಸರಿಸಿ, ಯಾವ ಮೈನರಾಗಲಿ, ಹುಚ್ಚನಾಗಲಿ, ಜನ್ಮತಃ ಹುಚ್ಚನಾಗಲಿ ಜಪ್ತೀ ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದಲ್ಲವು.

ಗೊತ್ತಾದ ಸ್ಥಳಗಳನ್ನಾಗಲಿ, ಮನುಷ್ಯರನ್ನಾಗಲಿ, ವಿನಾಯಿಸ್ತಲಿಕ್ಕೆ ಗವರ್ನಮೆಂಟಿಗೆ ಅಧಿಕಾರಗಳು.

3ನೇದು.—ಗವರ್ನಮೆಂಟಿನವರು ವಿಶೇಷ ಅಥವಾ ವಟ್ಟು ಹುಕ್ಕುಂ ಮೂಲಕ, ಅಂತಾ ಹುಕ್ಕುಂನಲ್ಲಿ ಸಮೂದಿಸಲ್ಪಡಬಹುದಾದ ಅಂತಾ ಕಾಲದಲ್ಲಿ ಮುಖ್ಯವಾದ ಸ್ಥಳಗಳನ್ನಾಗಲಿ, ಮನುಷ್ಯರನ್ನಾಗಲಿ, ಈ ಸೆಕ್ಷನ್ ನಿಬಂಧನೆಗಳ ದೆಶೆಯಿಂದ ವಿನಾಯಿಸಬಹುದು, ಸದರೀ ಗವರ್ನಮೆಂಟಿನವರು ಅಂತಾ ಹುಕುಮನ್ನು ಆಗಿಂದಾಗ್ಯೆ ರದ್ದು ಮಾಡಬಹುದು.

ಮುಂ. ರೆ. ಕೋ. 158ನೇ ಸೆಕ್ಷನ್.

ದಸ್ತಗಿರೀ ಮಾಡುವ ಅಧಿಕಾರವು ಯಾರಿಂದ ಚಲಾಯಿಸಲ್ಪಡತಕ್ಕದ್ದು.

173. 172ನೇ ಸೆಕ್ಷನಿನಿಂದ ಉಂಟುಮಾಡಲ್ಪಟ್ಟ ದಸ್ತಗಿರೀ ಮಾಡುವ ಅಧಿಕಾರವು, ಯಾವ ಆಫೀಸರ್‌ಗಳಿಂದ ಅಥವಾ ಆಫೀಸರ್‌ಗಳ ತರಗತಿಯಿಂದ ಚಲಾಯಿಸಲ್ಪಡಬಹುದೋ, ಅದನ್ನು ಗವರ್ನಮೆಂಟಿನವರು, ಆಗಿಂದಾಗ್ಯೆ ಫಾಯಿಷ್ ಮಾಡಬಹುದಾದ್ದಲ್ಲದೆ, ದಸ್ತಗಿರೀ ಖರ್ಚುಗಳನ್ನು ಪಹರೇ ಯಾ ಖೈದಿನಲ್ಲಿರುವ ಬಾಕೀದಾರನಿಗೆ ಗವರ್ನಮೆಂಟಿನಿಂದ ಕೊಡಲ್ಪಡತಕ್ಕ ಜೀವನದ ಖರ್ಚು ಮೊಬಲಗನ್ನು ಸಹ ನಿಶ್ಚಯಿಸತಕ್ಕದ್ದು.

ಗ್ರಾಮಗಳ ಜಪ್ತೀ.

ಮುಂ. ರೆ. ಕೋ. 159ನೇ ಸೆಕ್ಷನ್.

ಬಾಕೀದಾರನ ಗ್ರಾಮವನ್ನು ಜಪ್ತೀಮಾಡಲಿಕ್ಕೂ, ವಿಚಾರಣೆ ಯೊಳಗೆ ತೆಗದುಕೊಳ್ಳಲಿಕ್ಕೂ ಅಧಿಕಾರ.

174. ಯಾವದಕ್ಕೆ ಬಾಕೀ ಬರಬೇಕಾಗುತ್ತೋ ಅಂತಾ ಹಿಡುವಳಿಯು ಒಂದು ಪೂರಾ ಗ್ರಾಮವನ್ನಾಗಲಿ, ಒಂದು ಗ್ರಾಮದ ಒಂದು ಹಿಸ್ಸೆಯನ್ನಾಗಲಿ, ಅಡಗಿಕೊಂಡು ಇದ್ದರೆ, ಮೇಲೆ ವಿವರಿಸಲ್ಪಟ್ಟ ಇತರ ಕ್ರಮಗಳಲ್ಲಿ ಯಾವದನ್ನಾದರೂ ಅವಲಂಬಿಸುವದು ಅಯುಕ್ತವೆಂದು ಭಾವಿಸಲ್ಪಟ್ಟರೆ, ಡೆಪ್ಯುಟಿ ಕಮ್ಮಿಷನರು, ಮುಂದಾಗಿ ಗವರ್ನಮೆಂಟಿನವರ ಮಂಜೂರಾತೀನಿಶೀ ಅಂತಾ ಗ್ರಾಮವನ್ನಾಗಲಿ, ಗ್ರಾಮದ ಪೈಕಿ ಹಿಸ್ಸೆಯನ್ನಾಗಲಿ, ಜಪ್ತೀ ಮಾಡಿಸಿ, ತನ್ನ ವಿಚಾರಣೆಯಲ್ಲಾಗಲಿ, ತಾನು ಆಬಗ್ಯೆ

ಮೊಕರರ್ ಮಾಡುವ ಯಾರಾದರೂ ಮುತಾಲೀಕ ಯಾ ಆಫೀಸರರ ವಿಚಾರಣೆಯೊಳಗಾಗಲಿ, ತೆಗೆದುಕೊಳ್ಳತಕ್ಕದ್ದು.

ಮುಂ. ರೆ. ಕೋ. 160ನೇ ಸೆಕ್ಷರ್.

ಅಂತಾ ಗ್ರಾಮದ ಜಮೀನ್ಗಳು ಇತರರ ಯಾವ ವಿಧವಾದ ಹಕ್ಕುದಾರಿಗಳೂ ಇಲ್ಲದೆ ಸರಕಾರಕ್ಕೆ ಸೇರತಕ್ಕದ್ದು.

175. ಹಾಗೆ ಜಪ್ತೀ ಮಾಡಲ್ಪಟ್ಟ ಯಾವದಾದರೂ ಗ್ರಾಮದ ಅಥವಾ ಒಂದು ಗ್ರಾಮದ ಪೈಕೀ ಹಿಸ್ಸೆಯು ಜಮೀನ್ಗಳು ಸರ್ಕಾರದ ಹಣ ಎಷ್ಟೋ ಅಷ್ಟರಮಟ್ಟಿಗೆ ಮೋಲ್ಪಟ್ಟ ಹಿಡುವಳೀದಾರನ ಅಥವಾ ಯಾರಾದರೂ ಹಿಸ್ಸೇದಾರರ ಕೃತ್ಯಗಳಿಂದ ಆಗಲಿ, ಅಂತಾ ಜಮೀನ್ಗಳ ಮೇಲೆ ಅಥವಾ ಅವುಗಳಲ್ಲಿ ಸಂಬಂಧವುಳ್ಳ ಅಂತಾ ಮೋಲ್ಪಟ್ಟ ಹಿಡುವಳೀದಾರನ ಅಥವಾ ಹಿಸ್ಸೇದಾರರ ಮೇಲೆ ಇರುವ ಯಾವ ಖರ್ಚುಗಳಿಂದಾಗಲಿ ಅಥವಾ ದೇಣೆಗಳಿಂದಾಗಲಿ, ಬಾಧಿಸಲ್ಪಡದೇನೂ ಪರಂತು ಜನಗಳ ಹಕ್ಕುಗಳಿಗೆ ಇತರ ವಿಷಯಗಳಲ್ಲಿ ಯಾವ ಬಾಧಕಗಳೂ ಇಲ್ಲದೇನೂ ಗವರ್ನಮೆಂಟಿಗೆ ವಾಪಸ್ ಸೇರತಕ್ಕದ್ದು.

ವಿಚಾರಣೆಕರ್ತರ ಅಧಿಕಾರಗಳು.

ಮತ್ತು, ಡೆಪ್ಯುಟಿ ಕಮ್ಮಿಷನರಾಗಲಿ, ಹಾಗೆ ಮೊಕರರ್ ಮಾಡಲ್ಪಟ್ಟ ಮುತಾಲೀಕ ಯಾ ಆಫೀಸರಾಗಲಿ, ಜಪ್ತೀ ಮಾಡಲ್ಪಟ್ಟ ಜಮೀನ್ಗಳ ವಿಚಾರಣೆಗೂ ಮತ್ತು ಡೆಪ್ಯುಟಿ ಕಮ್ಮಿಷನರು ಸದರೀ ವಿಚಾರಣೆಯನ್ನು ಸದರೀ ಮೋಲ್ಪಟ್ಟ ಹಿಡುವಳೀದಾರನಿಗೆ ವಾಪಸ್ ಕೊಡುವತನಕ, ಸದರೀ ಜಮೀನ್ಗಳ ಮೋಲ್ಪಟ್ಟ ಹಿಡುವಳೀದಾರ ಯಾ ಯಾವ ಹಿಸ್ಸೇದಾರ ಇವರನ್ನು ವಿನಾಯಿಸಿ ಸದರೀ ಜಮೀನ್ಗಳಲ್ಲುಂಟಾಗುವ ತಮಾಂ ಗುತ್ತಿಗೆ ಮತ್ತು ನಫೆಗಳ ವಸೂಲಾತೀಗೂ ಎಖ್ತ್ಯಾರಿಯುಳ್ಳವರಾಗಿರತಕ್ಕದ್ದು.

ಮುಂ. ರೆ. ಕೋ. 161ನೇ ಸೆಕ್ಷರ್.

ನಿವಳ ನಫೆಗಳ ವಿನಿಯೋಗ.

176. ಚಾಲ್ತೀ ಕಂದಾಯದ ಪಾವತೀ ಮತ್ತು ಒಂದು ರೆವಿನ್ಯು ಸರ್ವೆಯು ಈ ರೆಗ್ಯುಲೇಷನಿನ 128ನೇ ಸೆಕ್ಷರ್ ನಿಬಂಧನೆಗಳನುಸರಿಸಿ ಜಾರೀಯಲ್ಲಿ ತರಲ್ಪಟ್ಟರೆ ಅದರ ಲಾಗವಷು ಇವುಗಳು ದೇಖೀಲ್, ಅಂತಾ ಜಪ್ತೀ ವ ವಿಚಾರಣೆಯ ಖರ್ಚು ಇವುಗಳು ಜಾತಾ ಉಳಿಯುವ ತಮಾಂ ನಿವಳ ನಫೆಗಳೂ, ಸದರೀ ಬಾಕೀಯನ್ನು ಕೊಡುವದಕ್ಕೆ ವಿನಿಯೋಗಿಸಲ್ಪಡತಕ್ಕದ್ದು.

ಮುಂ. ರೆ. ಕೋ. 162ನೇ ಸೆಕ್ಷರ್.

ಹಾಗೆ ಜಪ್ತೀ ಮಾಡಲ್ಪಟ್ಟ ಒಂದು ಗ್ರಾಮವನ್ನು ಖುಲಾಸೇ ಮಾಡೋಣ.

177. ಹಾಗೆ ಜಪ್ತೀ ಮಾಡಲ್ಪಟ್ಟ ಗ್ರಾಮವಾಗಲಿ, ಒಂದು ಗ್ರಾಮದ ಹಿಸ್ಸೆಯಾಗಲಿ, ಜಪ್ತೀಗೆ ತರುವಾಯ ಬರುವ ಆಗಸ್ಟು 1ನೇ ತಾರೀಖು ಮೊದಲು 12 ವರುಷಗಳೊಳಗಾಗಿ ಯಾವಾಗಲಾಗಲಿ, ಖುಲಾಸೇ ಬಗ್ಗೆ ಡೆಪ್ಯುಟಿ ಕಮ್ಮಿಷನರಿಗೆ, ಸದರೀ ಮೋಲ್ಪಟ್ಟ ಹಿಡುವಳೀದಾರನು ದರಖಾಸ್ತು ಮಾಡಿ ಅಂತಾ ದರಖಾಸ್ತು ಕಾಲದಲ್ಲಿ ಬಾಕೀಯೂ ಫೈಸಲಾಗಿರುತ್ತೆಂದು ಕಾಣಬಂದರೆ ;

ಅಥವಾ ಸದರೀ ಮೋಲ್ಪಟ್ಟ ಹಿಡುವಳೀದಾರನು, ಬಾಕೀ ಯಾವದಾದರೂ ಅವನಿಂದ ಇನ್ನೂ ಬರಬೇಕಾಗಿ ಅದನ್ನ ಕೊಡಲಿಕ್ಕೆ ಇಷ್ಟವುಳ್ಳವನಾಗಿದ್ದರೆ ಮತ್ತು ಆಬಗ್ಗೆ ಡೆಪ್ಯುಟಿ ಕಮ್ಮಿಷನರು ವಿಧಿಸಬಹುದಾದ ಅಂತಾ ಕಾಲದೊಳಗೆ ಅದನ್ನು ಪಾವತೀ ಮಾಡಿದರೆ; ಸದರೀ ಗ್ರಾಮ ಯಾ ಗ್ರಾಮದ ಹಿಸ್ಸೆಯೂ ಜಪ್ತೀಯಿಂದ

ಖುಲಾಸೆ ಮಾಡಲ್ಪಟ್ಟು ಅದರ ವಿಚಾರಣೆಯು ಮೇಲ್ಪಟ್ಟ ಹಿಡುವಳೀದಾರನಿಗೆ ವಾಪಸ್ ಕೊಡಿಸಲ್ಪಡತಕ್ಕದ್ದು.

ನಪಾವತೀ ಜಮೀಗಳ ವಿಲೆವಾರಿ.

ತಮಾಂ ಬಾಕಿಗಳನ್ನೂ, ಖರ್ಚುಗಳನ್ನೂ, ಫೈಸಲ್ ಮಾಡಿದ ಮೇಲೆ, ಗ್ರಾಮವನ್ನಾಗಲಿ, ಗ್ರಾಮದ ಪೈಕೀ ಹಿಸ್ಸೆಯನ್ನಾಗಲಿ, ವಾಪಸ್ ಕೊಡಿಸುವಬಗ್ಯೆ, ಮೇಲ್ಪಟ್ಟ ಹಿಡುವಳೀದಾರನ ದರಖಾಸ್ತು, ಯಾವ ಸಾಲಿನಲ್ಲಿ ಮಾಡಲ್ಪಟ್ಟಿರುತ್ತೋ ಆ ಸಾಲಿನಲ್ಲಿ ಉಂಟಾದ ನಪಾವತೀ ಜಮೀಗಳು ಯಾವದಾದರೂ ಇದ್ದವುಗಳನ್ನು ಡೆಪ್ಯುಟಿ ಕಮಿಷನರು ಸದರೀಯವನಿಗೆ ಒಪ್ಪಿಸತಕ್ಕದ್ದು. ಪರಂತು ಹಿಂದಿನ ಸಾಲುಗಳ ಅಂತಾ ನಪಾವತೀ ಜಮೀಗಳುಯಾವದಾದರೂ ಇದ್ದರೆ ಅವುಗಳು ಗವರ್ನಮೆಂಟ ವಶದಲ್ಲಿ ಇರತಕ್ಕದ್ದು.

ಮುಂ. ರೆ. ಕೋ. 163ನೇ ಸೆಕ್ಷನ್.

ಗ್ರಾಮ ವಗೈರೆಗಳು, ಹನ್ನೆರಡು ವರುಷಗಳೊಳಗಾಗಿ ಬಿಡಿಸಿಕೊಳ್ಳಲ್ಪಡದೇ ಹೋದರೆ ಗವರ್ನಮೆಂಟ್ ಅಧೀನದಲ್ಲಿ ಇರತಕ್ಕದ್ದು.

178. ಹಾಗೆ ಜಪ್ತೀಮಾಡಲ್ಪಟ್ಟ ಒಂದು ಗ್ರಾಮವನ್ನಾಗಲಿ, ಒಂದು ಗ್ರಾಮದ ಭಾಗವನ್ನಾಗಲಿ, ವಾಪಸ್ ಕೊಡಿಸುವಬಗ್ಯೆ ಸದರೀ ಹನ್ನೆರಡು ವರುಷಗಳ ಕಾಲದೊಳಗೆ ದರಖಾಸ್ತು ಮಾಡದೇ ಯಿದ್ದರೆ, ಅಥವಾ ಅಂತಾ ದರಖಾಸ್ತು ಮಾಡಲ್ಪಟ್ಟ ಬಳಿಕ ಮೇಲ್ಪಟ್ಟ ಹಿಡುವಳೀದಾರನು ತನ್ನಿಂದ ಯಿನ್ನೂ ಬರಬೇಕಾಗಿರುವ ಬಾಕಿ ಯಾವದಾದರೂ ಯಿದ್ದಲ್ಲಿ ಅದನ್ನು, ಡೆಪ್ಯುಟಿ ಕಮಿಷನರು ಈಬಗ್ಯೆ ವಿಧಿಸುವ ಕಾಲದೊಳಗಾಗಿ ಪಾವತೀ ಮಾಡಲಿಕ್ಕೆ ತಪ್ಪಿದರೆ ಸದರೀ ಗ್ರಾಮವಾಗಲಿ, ಒಂದು ಗ್ರಾಮದ ಹಿಸ್ಸೆಯಾಗಲಿ, ಅದು ಮೊದಲು ಮುಂದೆ, ಮೇಲ್ಪಟ್ಟ ಹಿಡುವಳೀದಾರನಿಂದ ಅಥವಾ ಯಾರಾದರೂ ಹಿಸ್ಸೇದಾರರಿಂದ ಅಥವಾ ಬಾಧ್ಯತೆಯುಳ್ಳ ಅವನ ಯಾ ಅವರ ಪೂರ್ವೀಕರಿಂದ ಉಂಟುಮಾಡಲ್ಪಟ್ಟ, ಅಥವಾ ಯಾವವಿಧದಿಂದಲಾಗಲಿ, ಅಂತಾ ಮೇಲ್ಪಟ್ಟ ಹಿಡುವಳೀದಾರನ ಮೇಲೆ ಅಥವಾ ಯಾರಾದರೂ ಹಿಸ್ಸೇದಾರರ ಮೇಲೆ ನೆಲೆಗೊಂಡಿರುವ ತಮಾಂ ಭಗಾದೆಗಳಿಂದಲೂ ಖುಲಾಸೇಯಾಗಿ ಪರಂತು ಜಮೀನಿನ ಖುದ್ದ ಹಿಡುವಳೀದಾರರ ಹಕ್ಕುಗಳಿಗೆ ಬಾಧಕವೇನೂ ಯಿಲ್ಲದೆ ಗವರ್ನಮೆಂಟು ವಶದಲ್ಲಿರತಕ್ಕದ್ದು.

ಅಮಲ್‌ಜಾರಿಯನ್ನು ನಿಲ್ಲಿಸೋಣ.

ಮುಂ. ರೆ. ಕೋ. 164ನೇ ಸೆಕ್ಷನ್.

ಪರಂತು, ಜಾಮೀನ್ ಕೊಟ್ಟ ಮೇಲೆ ತಮಾಂ ಅಮಲ್‌ಜಾರಿಯನ್ನೂ ನಿಲ್ಲಿಸತಕ್ಕದ್ದು.

179. ಪಹರೇಯಲ್ಲಾಗಲಿ, ಕೈದಿನಲ್ಲಾಗಲಿ ಯಿಡಲ್ಪಟ್ಟ ಯಾವ ಬಾಕೀದಾರನಾಗಲಿ ಡೆಪ್ಯುಟಿ ಕಮಿಷನರ ಮುಂದೆ ಅಥವಾ ಈ ಬಗ್ಯೆ ಅವರಿಂದ ನಿಯಮಿಸಲ್ಪಡುವ ಇತರ ಮನುಷ್ಯನ ಮುಂದೆ, ಅಥವಾ ಸದರೀ ಬಾಕೀದಾರನು ಜೆಯಿಲ್‌ನಲ್ಲಿ ಯಿದ್ದರೆ ಅಂತಾ ಜೆಯಿಲ್ ಇನ್‌ಚಾರ್ಜ್ ಆಫೀಸರರ ಮುಂದೆ, E ಷೆಡ್ಯೂಲ್ ನಮೂನೇ ಪ್ರಕಾರ, ಡೆಪ್ಯುಟಿ ಕಮಿಷನರಿಗೆ ಅಥವಾ ಅಂತಾ ಯಿತರ ಮನುಷ್ಯನಿಗೆ ಅಥವಾ ಆಫೀಸರರಿಗೆ ತೃಪ್ತಿಕರವಾದ ಜಾಮೀನನ್ನು ಕೊಟ್ಟ ಮೇಲೆ ಕೂಡ್ಲೇ ಖುಲಾಸೇ ಮಾಡಲ್ಪಡತಕ್ಕದ್ದು. ಮತ್ತು ಅಮಲ್‌ಜಾರಿಯು ಹಾಗೆ ಜಾಮೀನ್ ಕೊಟ್ಟ ಯಾವಕಾಲದಲ್ಲಾಗಲಿ ನಿಲ್ಲಿಸಲ್ಪಡತಕ್ಕದ್ದು.

ಮತ್ತು, ಈ ಅಧ್ಯಾಯ ಅನುಸರಿಸಿ ಯಾವನ ಮೇಲೆ ಅಮಲ್‌ಜಾರೀ ನಡಿಸಲ್ಪಟ್ಟಿರುತ್ತೋ ಅಂಥಾ ಯಾವ ಮನುಷ್ಯನಾಗಲಿ, ತನ್ನಿಂದ ಕೇಳಲ್ಪಟ್ಟವೊಬಲಗನ್ನು (protest) ಪ್ರೊಟೆಸ್ಟ್ ಯಾನೆ ತಕರಾರುನಿಶಿ ಅಂಥಾ ಅಮಲ್‌ಜಾರೀ ನಡಿಸ್ಸುವ ಆಫೀಸರರಿಗೆ ಪಾವತೀಮಾಡಬಹುದು. ಹಾಗೆ ಪಾವತೀ ಮಾಡಿದಮೇಲೆ ಅಮಲ್‌ಜಾರೀಯನ್ನು ನಿಲ್ಲಿಸತಕ್ಕದ್ದು. ಮತ್ತು ಸದರೀ ಮನುಷ್ಯನು ಪಹರೇಯಲ್ಲಿ ಯಿಡಲ್ಪಟ್ಟಿದ್ದರೆ ಕೂಡ್ಲೇ ಖುಲಾಸೇ ಮಾಡಲ್ಪಡತಕ್ಕದ್ದು.

ಅಥವಾ ತಗಾದೇ ಹಣವನ್ನು (protest) ಪ್ರೋಟೆಸ್ಟ್ ಯಾನೆ ತಕರಾರುನಿಶೀ ಪಾವತೀ ಮಾಡಿದಮೇಲೆ.

ವಿಕ್ರಯಗಳ ವಿಷಯದಲ್ಲಿ ನಡವಳಿತ.

ಮುಂ. ರೆ. ಕೋ. 165ನೇ ಸೆಕ್‌ಷನ.

180. ಈ ಅಧ್ಯಾಯದ ನಿಬಂಧನೆಗಳನುಸರಿಸಿ ಚರ ಸ್ವತ್ತಿನ ಅಥವಾ ಸ್ಥಿರ ಸ್ವತ್ತಿನ ಯಾವ ವಿಕ್ರಯವಾಗಲಿ ನಿಯಮಿಸಲ್ಪಟ್ಟರೆ, ಡೆಪ್ಯುಟಿ ಕಮ್ಮಿಷನರು, ವಿಕ್ರಯದ ಕಾಲ ಮತ್ತು ಸ್ಥಳ ಚರಸ್ವತ್ತಿನ ವಿಷಯದಲ್ಲಿ ವಿಕ್ರಯ ಕಾಯಂಆಗಲಿಕ್ಕೆ ಒಳಪಟ್ಟಿರುತ್ತೆಯೋ ಯಿಲ್ಲವೋ ಯಂಬವದು, ಸರ್ಕಾರಕ್ಕೆ ಕಂದಾಯ ಕೊಡುವ ಜಮೀನನ್ನು ವಿಕ್ರಯಿಸಬೇಕಾದರೆ ಆ ಜಮೀನಿನ ಮೇಲೆ ಮೊಕರರಾದ ಕಂದಾಯ, ಯಿವುಗಳನ್ನು ಮತ್ತು ತಾವು ಜರೂರೆಂದು ಭಾವಿಸಬಹುದಾದ ಯಾವದಾದರೂ ಯಿತರ ತಪಶೀಲ್‌ಗಳೊಡನೆ ನಮೂದಿಸಿ, ಉದ್ದೇಶಿಸಲ್ಪಟ್ಟ ವಿಕ್ರಯವನ್ನು ಕುರಿತು ಕನ್ನಡದಲ್ಲಿ ಒಂದು ಇಸ್ತಿಹಾರ್ ನಾಮೆಯನ್ನು ಸಾದರ್ ಮಾಡತಕ್ಕದ್ದು.

ವಿಕ್ರಯಗಳು ನೆರವೇರಿಸುವ ವಿಷಯದಲ್ಲಿ ನಡವಳಿತ.

ವಿಕ್ರಯವು ಸ್ಥಿರಸ್ವತ್ತಿನದಾದರೆ, ಅಂಥಾ ಪ್ರಕಟನೆಯು, ತಾಲ್ಲೂಕು ಹೆಡ್‌ಕ್ವಾರ್ಟರ್‌ಗಳಲ್ಲಿಯೂ ಮತ್ತು ಸ್ಥಿರಸ್ವತ್ತು ಇರುವ ಗ್ರಾಮದಲ್ಲಿಯೂ ಡಂಡೋರೇ ಹೊಯಿಸುವದರ ಮೂಲಕ ಪ್ರಕಟ ಪಡಿಸಲ್ಪಡತಕ್ಕದ್ದು; ಹರಾಜು ಚರಸ್ವತ್ತಿನದಾದರೆ ಯಾವ ಗ್ರಾಮದಲ್ಲಿ ಅಂಥಾ ಸ್ವತ್ತು ಜಪ್ತೀಮಾಡಲ್ಪಟ್ಟಿತೋ ಆ ಗ್ರಾಮದಲ್ಲಿಯೂ, ಡೆಪ್ಯುಟಿ ಕಮ್ಮಿಷನರು ನಿಯಮಿಸಬಹುದಾದ ಇತರ ಸ್ಥಳಗಳೊಳಗೂ, ಪ್ರಕಟನೆ ಮಾಡತಕ್ಕದ್ದು.

ಹರಾಜ್ ಇಸ್ತಿಹಾರ್.

ಮುಂ. ರೆ. ಕೋ. 166ನೇ ಸೆಕ್‌ಷನ.

181. ಉದ್ದೇಶಿಸಲ್ಪಟ್ಟ ಸ್ಥಿರಸ್ವತ್ತಿನ ಹರಾಜನ್ನೂ ಅದರ ಬಾಬತು ಕಾಲವನ್ನೂ, ಸ್ಥಳವನ್ನೂ ಕುರಿತು ಒಂದು ಬರವಣಿಗೆಯ ನೋಟೀಸ್, ಇದರಡಿ ಕಂಡ ಪ್ರತಿ ಸ್ಥಳದೊಳಗೂ ಚಿಕಟಾಯಿಸಲ್ಪಡತಕ್ಕದ್ದು, ಅಂದರೆ, ಯಾವದರಲ್ಲಿ ಸ್ಥಿರಸ್ವತ್ತಿರುತ್ತೋ ಅಂಥಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರ ಆಫೀಸ್, ತಾಲ್ಲೂಕಿನ ಅಮಲ್‌ದಾರ್ ಯಾ ಡೆಪ್ಯುಟಿ ಅಮಲ್‌ದಾರರ ಆಫೀಸ್, ಯಾವದರಲ್ಲಿ ಸದರೀ ಸ್ವತ್ತಿರುತ್ತೋ ಅಂಥಾ ಗ್ರಾಮದಲ್ಲಿನ ಚಾವಡಿ ಅಥವಾ ಯಾವದಾದರೂ ಬಹಿರಂಗವಾದ ಇತರ ಕಟ್ಟಡ, ಮತ್ತು ಬಾಕೀದಾರನ ವಾಸಸ್ಥಳ ಯಿಂಥಾವುಗಳಲ್ಲಿ ಚಿಕಟಾಯಿಸಲ್ಪಡತಕ್ಕದ್ದು.

ಹರಾಜ್ ನೋಟೀಸ.

ಚರಸ್ವತ್ತಿನ ವಿಷಯದಲ್ಲಾದರೋ, ಬರವಣಿಗೆಯ ನೋಟೀಸ್ ಅಮಲ್‌ದಾರ್ ಯಾ ಡೆಪ್ಯುಟಿ ಅಮಲ್‌ದಾರರ ಆಫೀಸಿನಲ್ಲೂ ಮತ್ತು ಯಾವ ಗ್ರಾಮದಲ್ಲಿ ಅಂಥಾ ಸ್ವತ್ತು ಜಪ್ತಿ ಮಾಡಲ್ಪಟ್ಟಿತೋ ಅಂಥಾಗ್ರಾಮದ ಚಾವಡಿಯಲ್ಲಾಗಲಿ, ಯಾವದಾದರೂ ಯಿತರ ಬಹಿರಂಗವಾದ ಕಟ್ಟಡದಲ್ಲಾಗಲಿ, ಚಿಕಟಾಯಿಸಲ್ಪಡತಕ್ಕದ್ದು.

ಡೆಪ್ಯುಟಿ ಕಮ್ಮಿಷನರು, ಚರಸ್ವತ್ತಿನ ಅಥವಾ ಸ್ಥಿರಸ್ವತ್ತಿನ ಬಾಬತು ಯಾವದಾದರೂ ಹರಾಜಿನ ನೋಟೀಸನ್ನು ಅವರಿಗೆ ಯುಕ್ತ ತೋರುವ ಯಿತರ ಯಾವ ವಿಧದಿಂದಲಾಗಲಿ ಪ್ರಕಟಪಡಿಸಬಹುದು.

ಮುಂ. ರೆ. ಕೋ. 167ನೇ ಸೆಕ್ಷನ್.

ಯಾರಿಂದ ಹರಾಜ್ ಮಾಡಿಸಲ್ಪಡತಕ್ಕದ್ದು.

182. ವಿಕ್ರಯಗಳು, ಡೆಪ್ಯುಟಿ ಕಮ್ಮಿಷನರು ನಿಯಮಿಸಬಹುದಾದ ಅಂಥಾ ಮನುಷ್ಯರಿಂದ ಹರಾಜ್ ಮೂಲಕ ಮಾಡಿಸಲ್ಪಡತಕ್ಕವು.

ವಿಕ್ರಯಗಳು ಮಾಡಲ್ಪಡಬಹುದಾದ ಕಾಲ.

ಗವರ್ನಮೆಂಟಿನಿಂದ ಅಂಗೀಕರಿಸಲ್ಪಟ್ಟ ಒಂದು ಸರ್ವತ್ರ ರಜಾದಿನವಲ್ಲಾಗಲಿ, ಹಿಂದಿನ ಕಡೇ ಸೆಕ್ಷನ್‌ನಿಂದ ವಿಧಿಸಲ್ಪಟ್ಟ ಮೇರೆ ಸದರೀ ನೋಟೀಸ್‌ಗಳ ಪೈಕಿ ಯಾವದಾಗಲಿ ಯಾವ ತಾರೀಖಿನಲ್ಲಿ ಚಿಕಟಾಯಿಸಲ್ಪಟ್ಟಿರುತ್ತದೋ ಅಂಥಾ ಕೇವಲ ಸಮೀಪವಾದ ತಾರೀಖ್ ಆಗಾಯಿತು ಸ್ಥಿರಸ್ವತ್ತಿನ ವಿಷಯದಲ್ಲಾದರೆ, ಅಥವು ಪಕ್ಷ ಮೂವತ್ತು ದಿನಗಳು ಕಳೆದತನಕ ಆಗಲಿ, ಚರಸ್ವತ್ತಿನ ವಿಷಯದಲ್ಲಾದರೆ, ಯೇಳುದಿನಗಳು ಕಳೆದತನಕ ಆಗಲಿ, ಅಂಥಾ ವಿಕ್ರಯಗಳು ನಡೆಯತಕ್ಕದ್ದಲ್ಲವು.

ವಿಕ್ರಯವನ್ನು ಮುಂದಿನ ತಾರೀಖಿಗೆ ಇಡುವಣ.

ವಿಕ್ರಯವು, ಯಾವದಾದರೂ ತಕ್ಕ ಕಾರಣಕ್ಕೋಸ್ಕರ ಆಗಿಂದಾಗ್ಯೆ ಮುಂದಿನ ತಾರೀಖಿಗೆ ಯಿಡಿಸಲ್ಪಡಬಹುದು.

ಮುಂ. ರೆ. ಕೋ. 168ನೇ ಸೆಕ್ಷನ್.

ನಾಶವಾಗತಕ್ಕ ವಸ್ತುಗಳ ವಿಕ್ರಯ.

183. ಹಿಂದಿನ ಕಡೇ ಮೂರು ಸೆಕ್ಷನ್‌ಗಳಲ್ಲಿರುವ ಯಾವ ಅಂಶವೂ ನಾಶವಾಗತಕ್ಕ ವಸ್ತುಗಳ ವಿಕ್ರಯಕ್ಕೆ ಲಗಾವಾಗುವದಿಲ್ಲವು. ಅಂಥಾ ವಸ್ತುಗಳು, ಲೇಶವೂ ಸಾವಕಾಶವಿಲ್ಲದಂತೆ, ಆಬಗ್ಗೆ ಡೆಪ್ಯುಟಿ ಕಮ್ಮಿಷನರಿಂದ ವಟ್ಟಾಗಿಯಾಗಲಿ, ವಿಶೇಷತಃ ಆಗಲಿ, ಆಗಿಂದಾಗ್ಯೆ ಮಾಡಲ್ಪಡಬಹುದಾದ ಅಂಥಾ ಹುಕ್ಕುಂಗಳ ಪ್ರಕಾರ ಹರಾಜ್‌ಮೂಲಕ ವಿಕ್ರಯಿಸಲ್ಪಡತಕ್ಕದ್ದು.

ಮುಂ. ರೆ. ಕೋ. 169ನೇ ಸೆಕ್ಷನ್.

ವಿಕ್ರಯವು ಯಾವಾಗ ನಿಲ್ಲಿಸಲ್ಪಡಬಹುದು.

184. ಬಾಕೀದಾರ ಅಥವಾ ಅವನ ತರಫಿನಲ್ಲಿ ಯಾವ ಮನುಷ್ಯನಾದರೂ ಯಾವಬಗ್ಗೆ ಸ್ವತ್ತು ವಿಕ್ರಯಿಸಲ್ಪಡಬೇಕಾಗಿರುತ್ತೋ ಅಂಥಾ ಬಾಕೀಯನ್ನು ಮತ್ತು ಅವನಿಂದ ನ್ಯಾಯತಃ ಸಲ್ಲಬೇಕಾದ ತಮಾಂ ಖರ್ಚುಗಳನ್ನೂ, ಬರಬೇಕಾದ ಜಮೀನ್ದಾರಿಕಂದಾಯದ ಪಾವತೀಯನ್ನೂ ಒರವಮಾಡಿಕೊಳ್ಳಲಿಕ್ಕೆ 161ನೇ ಸೆಕ್ಷನ್ ಅನುಸರಿಸಿ ಮೊಕರರಾದ ಮನುಷ್ಯನಿಗಾಗಲಿ ಅಥವಾ ವಿಕ್ರಯವನ್ನು ನಡಿಸಲಿಕ್ಕೆ ಮೊಕರರಾದ ಆಫೀಸರರಿಗಾಗಲಿ ವಿಕ್ರಯದ ವಿಷಯದಲ್ಲಿ ನಿಶ್ಚಯಿಸಲ್ಪಟ್ಟ ದಿನಕ್ಕೆ ಮುಂಚೆ ಯಾವಾಗಲಾಗಲಿ ಪಾವತೀಮಾಡಿದರೆ, ಅಥವಾ 179ನೇ ಸೆಕ್ಷನ್ ಅನುಸರಿಸಿ ಜಾಮೀನ್ ಕೊಟ್ಟರೆ, ವಿಕ್ರಯವು ನಿಲ್ಲಿಸಲ್ಪಡತಕ್ಕದ್ದು.

ಮುಂ. ರೆ. ಕೋ. 170ನೇ ಸೆಕ್ಷನ್.

ಚರಸ್ವತ್ತಿನ ವಿಕ್ರಯಗಳು ಯಾವಾಗ ಕಾಯಮಾಗಲಿಕ್ಕೆ ಗುರಿಯಾಗತಕ್ಕದ್ದು.

185. ನಾಶವಾಗತಕ್ಕ ವಸ್ತುಗಳ ವಿಕ್ರಯಗಳು, ಅಂಥಾ ವಿಕ್ರಯಗಳನ್ನು ನಡಿಸುವ ಆಫೀಸರರಿಂದ ಕೂಡ್ಲೆ ಅಖೈರಾಗಿ ಖೈದಾಗತಕ್ಕವು. ಚರಸ್ವತ್ತಿನ ಇತರ ತಮಾಂ ವಿಕ್ರಯಗಳೂ ಅಂಥಾ ವಿಕ್ರಯಗಳನ್ನು ನಡಿಸುವ ಆಫೀಸರರಿಂದ ಅಖೈರಾಗಿ ಖೈದಾಗತಕ್ಕದ್ದು: ಅಥವಾ ಡೆಪ್ಯುಟಿ ಕಮ್ಮಿಷನ

ರಿಂದ ಸದರೀ ಬಗ್ಗೆ ಮಾಡಲ್ಪಡತಕ್ಕ ವಟ್ಟು ಅಥವಾ ವಿಶೇಷ ಹುಕ್ಕುಂಗಳಲ್ಲಿ ನಿಯಮಿಸಲ್ಪಡಬಹುದಾದ ಮೇರೆ ಕಾಯಂಮಾಡಲ್ಪಡಲಿಕ್ಕೆ ಬಿಳಪಟ್ಟಿರತಕ್ಕದ್ದು. ಕಾಯಮಾಗಲಿಕ್ಕೆ ಬಿಳಪಟ್ಟಿರುವ ವಿಕ್ರಯಗಳ ವಿಷಯದಲ್ಲಿ, ಅಂಥಾ ವಿಕ್ರಯಗಳು, ಯಾರಿಂದ ಕಾಯಂ ಮಾಡಲ್ಪಡಬಹುದೋ ಅದನ್ನು ಡೆಪ್ಯುಟಿ ಕಮ್ಮಿಷನರು ವಿಧಿಸತಕ್ಕದ್ದು.

ಮುಂ. ರೆ. ಕೋ. 171ನೇ ಸೆಕ್ಷನ್.

ವಿಕ್ರಯವು ಕೂಡ್ಲೆ ಪೂರೈಸಲ್ಪಟ್ಟರೆ, ಚರಸ್ವತ್ತಿಗಾಗಿ ಮೊಬಲಗ್ ಸಂದಾಯ ಮಾಡುವ ವಿಧ.

186. ವಿಕ್ರಯವು, ಅದನ್ನು ನಡಿಸುವ ಆಫೀಸರರಿಂದ ಆಖೈರಾಗಿ ಪೂರೈಸಲ್ಪಟ್ಟಾಗ ಪ್ರತಿ ಲಾಟಿನ ಕ್ರಯವೂ ವಿಕ್ರಯವೇಳೆಯಲ್ಲಾಗಲಿ, ಅಥವಾ ಅದರ ತರುವಾಯ ಸದರೀ ಆಫೀಸರರು ನಿಯಮಿಸುವಂಥಾ ಕ್ಷಿಪ್ರಕಾಲದಲ್ಲಾಗಲಿ, ಪಾವತಿ ಮಾಡಲ್ಪಡತಕ್ಕದ್ದು, ಹಾಗೆ ಕೊಡಲಿಕ್ಕೆ ತಪ್ಪಿದರೆ, ಸದರೀ ಸ್ವತ್ತು ಕೂಡ್ಲೆ ಪುನಃ ಹರಾಜ್ ಹಾಕಲ್ಪಟ್ಟು ವಿಕ್ರಯಿಸಲ್ಪಡತಕ್ಕದ್ದು. ಕ್ರಯದಮೊಬಲಗ್ ಪಾವತೀ ಮಾಡಿದಮೇಲೆ, ವಿಕ್ರಯವನ್ನು ನಡಿಸುವ ಆಫೀಸರರು ಸದರೀ ಬಗ್ಗೆ ಒಂದು ರಸೀದಿಯನ್ನು ಕೊಡತಕ್ಕದ್ದು. ಸದರೀವಿಕ್ರಯವು ತಮಾಂ ಜನಗಳ ವಿಷಯದಲ್ಲೂ ಕಾಯಂ ಯಾ ನಿರುಪಾಧಿಕವಾಗಿರತಕ್ಕದ್ದು.

ಮುಂ. ರೆ. ಕೋ. 172ನೇ ಸೆಕ್ಷನ್.

ವಿಕ್ರಯವು ಕಾಯಂಮಾಡಲ್ಪಡಲಿಕ್ಕೆ ಗುರಿಯಾಗಿರುವಾಗ ಪಾವತೀ ಮಾಡುವವಿಧ.

187. ಯಾವದಾದರೂ ಚರಸ್ವತ್ತಿನ ವಿಕ್ರಯವು ಕಾಯಂಮಾಡಲ್ಪಡಲಿಕ್ಕೆ ಗುರಿಯಾಗಿರುವಾಗ ಕ್ರಯದಾರನೆಂದು ತಿಳಿಸಲ್ಪಟ್ಟ ಆಸಾಮಿಯು ಅವನ ದರಖಾಸ್ತು ಮೊಬಲಗಿನ ಮೇಲೆ ಸೇಕಡಾ ಇಪ್ಪತ್ತೈದು ರೂಪಾಯಿಗಳನ್ನು ಕೂಡ್ಲೆ ಠೇವಣೀ ಕಟ್ಟತಕ್ಕದ್ದೆಂದು ನೇಮಿಸಲ್ಪಡತಕ್ಕದ್ದು. ಅಂಥಾ ಠೇವಣೀ ಕಟ್ಟಲಿಕ್ಕೆ ತಪ್ಪಿದರೆ, ಸ್ವತ್ತು ಪುನಃ ಕೂಡ್ಲೆ ಹರಾಜ್‌ಮೂಲಕ ವಿಕ್ರಯಿಸಲ್ಪಡತಕ್ಕದ್ದು. ವಿಕ್ರಯವು ಕಾಯಂಮಾಡಲ್ಪಟ್ಟಂತೆ, ಕ್ರಯದಾರನಿಗೆ ತಿಳಿಸಲ್ಪಟ್ಟ ಮಾರನೇ ದಿನದ ಸೂರ್ಯಾಸ್ತಮಯಕ್ಕೆ ಮುಂದಾಗಿ ಕ್ರಯದ ಹಣದ ಪೈಕೀ ಪೂರಾ ಮೊಬಲಗನ್ನು, ಸದರೀಯವನು ಪಾವತೀಮಾಡತಕ್ಕದ್ದು. ಅಥವಾ, ಸದರೀ ದಿನವು ಮಂಜೂರ್‌ಮಾಡಲ್ಪಟ್ಟ ರಜಾದಿನವಾಗಿದ್ದರೆ, ಅಂಥಾದಿನದ ತರುವಾಯದ ಕಚ್ಚೇರಿಯ ಮೊದಲನೇ ದಿನದ ಸೂರ್ಯಾಸ್ತಮಯಕ್ಕೆ ಮುಂದಾಗಿ ಪಾವತೀಮಾಡತಕ್ಕದ್ದು. ಕ್ರಯದ ಹಣದ ಪೈಕೀ ಪೂರಾ ಮೊಬಲಗನ್ನು ಕೊಟ್ಟಮೇಲೆ, ಅದಕ್ಕಾಗಿ ಕ್ರಯದಾರನಿಗೆ ಒಂದು ರಸೀದಿಕೊಡಲ್ಪಟ್ಟು ವಿಕ್ರಯವು ತಮಾಂ ಜನಗಳ ವಿಷಯದಲ್ಲೂ ನಿರುಪಾಧಿಕವಾಗಿರತಕ್ಕದ್ದು.

ಮುಂ. ರೆ. ಕೋ. 173ನೇ ಸೆಕ್ಷನ್.

ಸ್ಥಿರಸ್ವತ್ತಿನ ವಿಕ್ರಯದ ವಿಷಯದಲ್ಲಿ ಕ್ರಯದಾರನಿಂದ ಠೇವಣಿ.

188. ಸ್ಥಿರಸ್ವತ್ತಿನ ವಿಕ್ರಯದ ತಮಾಂ ಸಂಗತಿಗಳಲ್ಲೂ ಕ್ರಯದಾರನೆಂದು ತಿಳಿಸಲ್ಪಟ್ಟ ಆಸಾಮಿಯು, ಅವನ ದರಖಾಸ್ತು ಮೊಬಲಗುಪೈಕೀ ಸೇಕಡಾ ಇಪ್ಪತ್ತೈದರ ಪ್ರಕಾರ ಕೂಡ್ಲೆ ಠೇವಣೀ ಕಟ್ಟತಕ್ಕದ್ದೆಂದು ನೇಮಿಸಲ್ಪಡತಕ್ಕದ್ದು. ಅಂಥಾ ಡಿಪಾಜಿಟು ಕಟ್ಟಲಿಕ್ಕೆ ತಪ್ಪಿದರೆ, ಪುನಃ ಸ್ವತ್ತು ಕೂಡ್ಲೆ ಹರಾಜ್ ಹಾಕಲ್ಪಟ್ಟು ವಿಕ್ರಯಿಸಲ್ಪಡತಕ್ಕದ್ದು.

ಮುಂ. ರೆ. ಕೋ. 174ನೇ ಸೆಕ್ಷನ್.

ಕ್ರಯದ ಮೊಬಲಗನ್ನು ಯಾವಾಗ ಪಾವತೀಮಾಡತಕ್ಕದ್ದು.

189. ಕ್ರಯದ ಹಣದ ಪೂರಾ ಮೊಬಲಗು ಕ್ರಯದಾರನಿಂದ, ಯಾವ ತಾರೀಖಿನಲ್ಲಿ ಸ್ಥಿರಸ್ವತ್ತಿನ ವಿಕ್ರಯವು ನಡಿಸಲ್ಪಟ್ಟಿತೋ ಅದು ಮೊದಲು ಹದಿನೈದನೇಯ ದಿನದ ಸೂರ್ಯಾಸ್ತಮಯಕ್ಕೆ ಮುಂದಾಗಿ ಪಾವತೀಮಾಡಲ್ಪಡತಕ್ಕದ್ದು. ಅಥವಾ ಸದರೀ ಹದಿನೈದನೇಯ ದಿನವು ಮುಂಜೂರಾದ ರಜಾದಿನವಾಗಿದ್ದರೆ, ಅಂಥಾ ಹದಿನೈದನೇಯ ದಿನದ ತರುವಾಯದ ಮೊದಲನೇ ಕಚ್ಚೇರಿದಿನದ ಸೂರ್ಯಾಸ್ತಮಯಕ್ಕೆ ಮುಂದಾಗಿ ಪಾವತೀಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 175ನೇ ಸೆಕ್ಷನ್.

ಹಣಕೊಡಲಿಕ್ಕೆ ತಪ್ಪುವದರ ಫಲಿತಾಂಶ.

190. ಚರಸ್ವತ್ತಿನದಾಗಲಿ, ಸ್ಥಿರಸ್ವತ್ತಿನದಾಗಲಿ, ಕ್ರಯದ ಹಣದಪೈಕೀ ಪೂರಾ ಮೊಬಲಗನ್ನು ವಿಧಿಸಲ್ಪಟ್ಟ ಕಾಲದೊಳಗಾಗಿ ಪಾವತೀಮಾಡಲಿಕ್ಕೆ ತಪ್ಪುವಲ್ಲಿ, ವಿಕ್ರಯದ ಬಾಬತು ಖರ್ಚುಗಳನ್ನು ಸದರೀ ಮೊಬಲಗಿನಿಂದ ಕೊಟ್ಟಬಳಿಕ ಶೇಷನಾದ ಹಣದಲ್ಲಿ ಮೊಬಲಗು ಗವರ್ನಮೆಂಟಿಗೆ ಸೇರಿಹೋಗಿ ಸ್ವತ್ತು ಪುನಃ ವಿಕ್ರಯಿಸಲ್ಪಡತಕ್ಕದ್ದು. ಹಣಕೊಡಲಿಕ್ಕೆ ತಪ್ಪಿದ ಕ್ರಯದಾರನು ಸ್ವತ್ತಿಗಾಗಲಿ, ಯಾವಬಗ್ಗೆ ಸದರೀ ಸ್ವತ್ತು ಈಚಿಗೆ ವಿಕ್ರಯಿಸಲ್ಪಡಬಹುದೋ ಅಂಥಾ ಮೊಬಲಗಿನ ಯಾವದಾದರೂ ಭಾಗಕ್ಕಾಗಲಿ, ಇರತಕ್ಕ ವಿಶಿಷ್ಟಹಕ್ಕನ್ನು ಕಳಕೊಳ್ಳತಕ್ಕದ್ದು.

ಮುಂ. ರೆ. ಕೋ. 176ನೇ ಸೆಕ್ಷನ್.

ಪುನಃ ವಿಕ್ರಯಿಸುವಲ್ಲಿ ಉಂಟಾಗತಕ್ಕ ನುಕ್ಸಾನಿಗೆ ಕ್ರಯದಾರನ ಜವಾಬ್‌ದಾರಿ.

191. ತರುವಾಯ ಮಾಡಲ್ಪಟ್ಟ ವಿಕ್ರಯದ ಹುಟ್ಟುವಳಿಯು, ಹಣಕೊಡಲಿಕ್ಕೆ ತಪ್ಪಿದ ಕ್ರಯದಾರನು ದರಖಾಸ್ತು ಮಾಡಿದ ಮೊಬಲಗಿಗಿಂತ ಕಮ್ಮಿಯಾಗಿದ್ದರೆ, ವ್ಯತ್ಯಾಸವಾದ ಮೊಬಲಗು, ಜಮೀನ್ಕಂದಾಯದ ಬಾಕೀ ತರೀಕ್ ಡೆಪ್ಯುಟಿ ಕಮ್ಮಿಷನರಿಂದ ಸದರೀ ಕ್ರಯದಾರನ ದೆಸೆಯಿಂದ ವಸೂಲ್‌ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 177ನೇ ಸೆಕ್ಷನ್.

ಪುನರ್ವಿಕ್ರಯಕ್ಕೆ ಮುಂದಾಗಿ ಕೊಡತಕ್ಕ ನೋಟೀಸ್.

192. ಕ್ರಯದ ಹಣ ಪಾವತೀಮಾಡುವದಕ್ಕೆ ತಪ್ಪುವಲ್ಲಿ, ಅಥವಾ, ಮೊದಲನೆಯ ವಿಕ್ರಯವನ್ನು ನಿಲ್ಲಿಸಿ ಇಟ್ಟ ತರುವಾಯ, ಸ್ವತ್ತಿನ ಪ್ರತಿ ಪುನರ್ವಿಕ್ರಯವೂ ಕೂಡ್ಲೆ ನಡೆದಹೊರತು, ಅಸಲ್ ವಿಕ್ರಯಗಳಿಗಾಗಿ ವಿಧಿಸಲ್ಪಟ್ಟ ರೀತಿಯಲ್ಲಿ ಒಂದು ಹೊಸನೋಟೀಸನ್ನು ಸಾದರ್‌ಮಾಡಿದ ಬಳಿಕ ನಡಿಸಲ್ಪಡತಕ್ಕದ್ದು.

ಮುಂ. ರೆ. ಕೋ. 178ನೇ ಸೆಕ್ಷನ್.

ವಿಕ್ರಯವನ್ನು ವಜಾಮಾಡುವಬಗ್ಗೆ ದರಖಾಸ್ತು.

193. ಸ್ಥಿರಸ್ವತ್ತಿನ ವಿಕ್ರಯದ ತಾರೀಖ ಮೊದಲು ಮೂವತ್ತುದಿನಗಳೊಳಗೆ ಯಾವ ಕಾಲದಲ್ಲಾಗಲಿ, ಅದನ್ನು ಪ್ರಕಟಿಸುವದರಲ್ಲಿಯಾಗಲಿ, ನಡಿಸುವದರಲ್ಲಿಯಾಗಲಿ, ಯಾವದಾದರೂ ಮುಖ್ಯವಾದ ಅಕ್ರಮ ಯಾ ತಪ್ಪು ಯಾ ಮೋಸಯೆಂಥಾ ಸಬಬಿನಮೇಲೆ ವಿಕ್ರಯವನ್ನು ವಜಾ ಮಾಡುವ ಬಗ್ಗೆ ಡೆಪ್ಯುಟಿ ಕಮ್ಮಿಷನರಿಗೆ ದರಖಾಸ್ತು ಮಾಡಬಹುದು; ಆದರೆ, ಇದನ್ನು ಅನುವರ್ತಿಸಿಬರುವ ಯೆರಡನೇ ಸೆಕ್ಷನ್‌ನಲ್ಲಿ ಅನ್ಯಥಾ ವಿಧಿಸಲ್ಪಟ್ಟಿರುವ ರೀತಿಯಾಗಿಹೊರತು, ಸದರೀ ದರಖಾಸ್ತುದಾರನು ದೃಢವಾದ ನುಕ್ಸಾನಪಟ್ಟಿರುವದಾಗಿ, ಡೆಪ್ಯುಟಿಕಮ್ಮಿಷನರಿಗೆ

ತೃಪ್ತಿಕರವಾಗಿ ರುಜುಮಾಡಿದ ಹೊರತು ಸದರೀ ಅಕ್ರಮ ಯಾ ತಪ್ಪಿನ ಸಬಬಿಗೋಸ್ಕರವಾಗಿ ಯಾವ ವಿಕ್ರಯವೂ ವಜಾ ಮಾಡಲ್ಪಡಕೂಡದು.

ಇಂಥಾ ದರಖಾಸ್ತು ಅಂಗೀಕರಿಸಲ್ಪಟ್ಟರೆ ಡೆಪ್ಯುಟಿ ಕಮ್ಮಿಷನರು ವಿಕ್ರಯವನ್ನು ವಜಾಮಾಡಿ ಹೊಸ ವಿಕ್ರಯವನ್ನು ನಿಯಮಿಸತಕ್ಕದ್ದು.

ಮುಂ. ರೆ. ಕೋ. 179ನೇ ಸೆಕ್ಷನ್.

ವಿಕ್ರಯವನ್ನು ಕಾಯಂ ಮಾಡುವ ಯಾ ವಜಾಮಾಡುವ ಹುಕ್ಕುಂ.

194. ವಿಕ್ರಯದ ತಾರೀಖ ಲಾಗಾಯತ್ ಮೂವತ್ತು ದಿನಗಳು ಕಳೆದ ಮೇಲೆ ಹಿಂದಿನ ಕಡೇ ಸೆಕ್ಷನ್‌ನಲ್ಲಿ ನಮೂದಿರುವ ಪ್ರಕಾರ ಅಂಥಾ ದರಖಾಸ್ತು ಮಾಡಲ್ಪಡದೇ ಇದ್ದರೆ, ಅಥವಾ ಅಂಥಾ ದರಖಾಸ್ತು ಮಾಡಲ್ಪಟ್ಟು ತಿರಸ್ಕರಿಸಲ್ಪಟ್ಟರೆ, ಡೆಪ್ಯುಟಿ ಕಮ್ಮಿಷನರು ವಿಕ್ರಯವನ್ನು ಕಾಯಂಮಾಡಿ ಹುಕ್ಕುಂ ಕೊಡತಕ್ಕದ್ದು: ಪರಂತು, ಅಂಥಾ ದರಖಾಸ್ತು ಮಾಡಲ್ಪಡದೇ ಯಿದ್ದಾಗ್ಯೂ ಅಥವಾ, ಯಾವ ದರಖಾಸ್ತು ಮಾಡಲ್ಪಟ್ಟು ನಿರಾಕರಿಸಲ್ಪಟ್ಟಿರುತ್ತೋ ಅಂಥಾ ಯಾವ ದರಖಾಸ್ತಿನಲ್ಲಾಗಲಿ, ನಮೂದಿರುವ ಕಾರಣಗಳು ವಿನಾ ಇತರ ಕಾರಣಗಳಿಂದ ವಿಕ್ರಯವು ವಜಾಮಾಡಲ್ಪಡತಕ್ಕದ್ದೆಂದು ಯೆಣಿಸಲಿಕ್ಕೆ ಕಾರಣವಿದ್ದರೆ, ತಮ್ಮ ಕಾರಣಗಳನ್ನು ಬರವಣಿಗೆಯಲ್ಲಿ ರಿಕಾರ್ಡು ಮಾಡಿದ ತರುವಾಯ ವಿಕ್ರಯವನ್ನು ವಜಾಮಾಡಬಹುದು.

ಮುಂ. ರೆ. ಕೋ. 180ನೇ ಸೆಕ್ಷನ್.

ವಿಕ್ರಯವು ವಜಾಮಾಡಲ್ಪಟ್ಟಾಗ ಡಿಪಾಜಿಟ್ ಯಾ ಕ್ರಯದ ಮೊಬಲಗನ್ನು ವಾಪಸ್ ಕೊಡುವಣ.

195. ಯಾವದಾದರೂ ಸ್ವತ್ತಿನ ವಿಕ್ರಯವು, ಕಾಯಂ ಮಾಡಲ್ಪಡದೇ ಯಿದ್ದರೆ ಅಥವಾ ವಜಾ ಮಾಡಲ್ಪಟ್ಟರೆ ಕ್ರಯದಾರನು, ತನ್ನ ಡಿಪಾಜಿಟ್ಟನ್ನಾಗಲಿ, ಅವನ ಕ್ರಯದ ಹಣವನ್ನಾಗಲಿ, ಸಂದರ್ಭವಿದ್ದಂತೆ ವಾಪಸ್ ಪಡೆಯಲಿಕ್ಕೆ ಅರ್ಹನಾಗಿರತಕ್ಕದ್ದು.

ಮುಂ. ರೆ. ಕೋ. 181ನೇ ಸೆಕ್ಷನ್

ವಿಕ್ರಯವು ಕಾಯಂ ಮಾಡಲ್ಪಟ್ಟ ಮೇಲೆ, ಕ್ರಯದಾರನಿಗೆ ಸ್ವತ್ತು ವಶಪಡಿಸುವಣ. ಕ್ರಯದ ಸರಟಿಫಿಕೇಟ್.

196. ಯಾವದಾದರೂ ಅನುಭವದ ಅಥವಾ, ಪರಭಾರೆಯಾದ ಹಿಡುವಳಿಯ ವಿಕ್ರಯವು, ಮೇಲೆ ಕಂಡ ರೀತಿಯಾಗಿ ಕಾಯಂ ಮಾಡಲ್ಪಟ್ಟ ಬಳಿಕ, ಡೆಪ್ಯುಟಿ ಕಮ್ಮಿಷನರು, ಕ್ರಯದಾರನೆಂದು ತಿಳಿಸಲ್ಪಟ್ಟ ಮನುಷ್ಯನ ವಶದಲ್ಲಿ, ಅಂಥಾ ಅನುಭವದಲ್ಲಿ, ಅಥವಾ ಪರಭಾರೆಯಾದ ಹಿಡುವಳಿಯಲ್ಲಿ ಅಡಗಿರುವ ಜಮೀನನ್ನು ಬಿಡತಕ್ಕದ್ದಲ್ಲದೆ ಅವನ ಹೆಸರನ್ನು, ಹಣ ಕೊಡಲಿಕ್ಕೆ ತಪ್ಪಿದವನ ಹೆಸರಿಗೆ ಬದಲಾಗಿ ಅನುಭವದಾರ ಯಾ ಹಿಡುವಳಿದಾರನ ತರೀಕ್ ರೆವಿನ್ಯೂ ರಿಕಾರ್ಡ್‌ಗಳಲ್ಲಿ ದಾಖಲ್ಮಾಡಿಸಿ, ಯಾವದಕ್ಕೆ ಸರಟಿಫಿಕೇಟ್ ಸಂಬಂಧಿಸುತ್ತದೋ ಅಂಥಾ ಅನುಭವವನ್ನಾಗಲಿ, ಪರಭಾರೆಯಾದ ಹಿಡುವಳಿಯನ್ನಾಗಲಿ, ಕ್ರಯಕ್ಕೆ ತೆಗದುಕೊಂಡು ಯಿದ್ದಾನೆಂಬುವ ಬಗ್ಗೆ ಅವನಿಗೆ ಒಂದು ಸರಟಿಫಿಕೇಟನ್ನು ಕೊಡತಕ್ಕದ್ದು.

ಮುಂ. ರೆ. ಕೋ. 182ನೇ ಸೆಕ್ಷನ್.

ಸರಟಿಫಿಕೇಟ್ ಹೊಂದಿದ ಕ್ರಯದಾರನ ಮೇಲೆ ತರಲ್ಪಡುವ ವ್ಯಾಜ್ಯದ ನಿರ್ಬಂಧ.

197. ವಿಕ್ರಯ ಕಾಲದಲ್ಲಿ ಖರೆ ಕ್ರಯದಾರನೆಂದು ತಿಳಿಸಲ್ಪಟ್ಟ ಮನುಷ್ಯನ ಹೆಸರು ಸರ್ಟಿಫಿಕೇಟಿನಲ್ಲಿ ನಮೂದಿಸಲ್ಪಡತಕ್ಕದ್ದು, ಮತ್ತು ಕರಾರ್ ಪ್ರಕಾರ, ಸರ್ಟಿಫೈ ಮಾಡಲ್ಪಟ್ಟ ಕ್ರಯದಾರನ ಹೆಸರು ಉಪಯೋಗಿಸಲ್ಪಟ್ಟಾಗ್ಯೂ ಸದರೀ

ಕ್ರಯವು ಸರಟಿಫೈ ಮಾಡಲ್ಪಟ್ಟ ಕ್ರಯದಾರನಲ್ಲದೆ ಮತ್ತೊಬ್ಬ ಮನುಷ್ಯನ ತರಫಿನಲ್ಲಿ ಮಾಡಲ್ಪಟ್ಟಿತೆಂಬ ಸಬಬಿನಿಂದ ಸರಟಿಫೈಮಾಡಲ್ಪಟ್ಟ ಕ್ರಯದಾರನ ಮೇಲೆ ಬಂದು ಸಿವಿಲ್ ಕೋರ್ಟಿನಲ್ಲಿ ತರಲ್ಪಟ್ಟ ಯಾವ ವ್ಯಾಜ್ಯವಾದರೂ ಡಿಸ್ ಮಿಸ್ ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 183ನೇ ಸೆಕ್ಷನ್.

ವಿಕ್ರಯದ ಹುಟ್ಟುವಳಿಯ ವಿನಿಯೋಗ.

198. ಈ ಅಧ್ಯಾಯ ಅನುಸರಿಸಿ ಚರಸ್ವತ್ತಿನ ಯಾವ ವಿಕ್ರಯವಾಗಲಿ ನಿರುಪಾಧಿಕವಾದಾಗ ಮತ್ತು ಸ್ಥಿರಸ್ವತ್ತಿನ ಯಾವ ವಿಕ್ರಯವಾಗಲಿ ಕಾಯಂ ಮಾಡಲ್ಪಟ್ಟಾಗ, ವಿಕ್ರಯದ ಹುಟ್ಟುವಳಿಯು ವಿಕ್ರಯದ ಖರ್ಚುಗಳಬಗ್ಯೆ, ಬಾಕೀದಾರನಿಂದ ಅಂಥಾ ವಿಕ್ರಯವು ಕಾಯಂಮಾಡಲ್ಪಟ್ಟ ತಾರೀಖಿನಲ್ಲಿ ಸಲ್ಲತಕ್ಕ ಮತ್ತು ಜಮೀನ್ ಕಂದಾಯದ ಬಾಕೀ ತರೀಕ್ ವಸೂಲ್‌ಮಾಡಲ್ಪಡತಕ್ಕ ಯಾವ ಬಾಕಿಯ ಪಾವತೀಬಗ್ಯೆ ವಿನಿಯೋಗಿಸಲ್ಪಡತಕ್ಕದ್ದು;

ಮತ್ತು ಸಪಾವತೀ ಮೊಬಲಗು ಯಾವದಾದರೂ ಯಿದ್ದರೆ ಅದು ಯಾರ ಸ್ವತ್ತು ವಿಕ್ರಯಿಸಲ್ಪಟ್ಟಿರುತ್ತೋ ಆ ಮನುಷ್ಯನಿಗೆ, ಪಾವತೀ ಮಾಡಲ್ಪಡತಕ್ಕದ್ದು.

ವಿಕ್ರಯದ ಖರ್ಚುಗಳು ಹ್ಯಾಗೆ ಲೆಕ್ಕ ಮಾಡಲ್ಪಡತಕ್ಕದ್ದು.

ವಿಕ್ರಯದ ಖರ್ಚು ಗವರ್ನಮೆಂಟಿನಿಂದ ಆಗಿಂದಾಗ್ಯೆ ಮಂಜೂರ್ ಮಾಡಲ್ಪಡಬಹುದಾದ ದರಗಳ ಪ್ರಕಾರವಾಗಿಯೂ, ಅಂಥಾ ರೂಲ್ಸ್ ಅನುಸರಿಸಿಯೂ, ಅಂದಾಜ್ ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 184ನೇ ಸೆಕ್ಷನ್.

ಸಪಾವತೀಮೊಬಲಗು, ಕೋರ್ಟಿನಹುಕ್ಕುಂ ವಿನಾ ಲೇಣೇದಾರ್‌ರಿಗೆ ಪಾವತೀ ಮಾಡಲ್ಪಡತಕ್ಕದ್ದಲ್ಲ.

199. ಸದರೀ ಸಪಾವತೀ ಮೊಬಲಗು ಬಂದು ಸಿವಿಲ್ ಕೋರ್ಟಿನ ಹುಕ್ಕುಂ ವಿನಾ, ಯಾವನ ಸ್ವತ್ತು ವಿಕ್ರಯಿಸಲ್ಪಟ್ಟಿರುತ್ತೋ ಅಂಥಾ ಮನುಷ್ಯನ ಯಾವ ಲೇಣೇದಾರನಿಗಾಗಲಿ ಕೊಡಲ್ಪಡತಕ್ಕದ್ದಲ್ಲವು.

ಮುಂ. ರೆ. ಕೋ. 185ನೇ ಸೆಕ್ಷನ್.

ರೆವಿನ್ಯೂ ಬಗ್ಯೆ ಕ್ರಯದಾರನ ಜವಾಬ್‌ದಾರಿ.

200. ಯಾವದಾದರೂ ಜಮೀನಿನ ಕ್ರಯದಾರನಂತೆ, ಬಾಧ್ಯತೆಯ ಸರಟಿಫಿಕೇಟಿನಲ್ಲಿ ನಮೂದಿಸಲ್ಪಟ್ಟ ಮನುಷ್ಯನು ಅಂಥಾ ಜಮೀನ್ ವಿಷಯದಲ್ಲಿ ವಿಕ್ರಯದ ತಾರೀಖಿಗೆ ಈಚೆಗೆ, ಸಲ್ಲಬೇಕಾದ ಜಮೀನ್ ಕಂದಾಯದ ತಮಾಂ ಖಿಸ್ತುಗಳಿಗೂ ಜವಾಬ್ದಾರನಾಗತಕ್ಕದ್ದು.

ಮುಂ. ರೆ. ಕೋ. 186ನೇ ಸೆಕ್ಷನ್.

ಜಪ್ತೀ ಮಾಡಲ್ಪಟ್ಟ ಚರಸ್ವತ್ತಿಗೆ ಉಂಟಾಗತಕ್ಕ ಹಕ್ಕುಗಳು ಹ್ಯಾಗೆ ವ್ಯವಸ್ಥೆಯಾಗತಕ್ಕವು.

201. ಈ ಅಧ್ಯಾಯದ ನಿಬಂಧನೆಗಳನುಸರಿಸಿ ಜಪ್ತೀ ಮಾಡಲ್ಪಟ್ಟ ಚರಸ್ವತ್ತಿಗೆ, ಮೂರನೇಯವನಿಂದ ಯಾವದಾದರೂ ಹಕ್ಕು ತರಲ್ಪಟ್ಟರೆ, ಡೆಪ್ಯುಟಿ ಕಮ್ಮಿಷನರು, ಅವನ ಹಕ್ಕನ್ನು ಯುಕ್ತವಾದ ನೋಟೀಸ್ ಕೊಟ್ಟ ಮೇಲೆ ಫೌಜ್ ವಿಚಾರಣೆ ಮಾಡಿ ಅಂಗೀಕರಿಸತಕ್ಕದ್ದು, ಅಥವಾ ತಿರಸ್ಕರಿಸತಕ್ಕದ್ದು. ಹಕ್ಕು ಪೂರಾ ಆಗಲಿ, ಭಾಗಶಃ ಆಗಲಿ, ಅಂಗೀಕರಿಸಲ್ಪಟ್ಟರೆ, ಸ್ವತ್ತಿನ ವಿಷಯದಲ್ಲಿ ಅದಕ್ಕೆ ಅನುಗುಣವಾಗಿ ಅಮಲ್ ನಡಿಸತಕ್ಕದ್ದು, ಅಂಗೀಕರಿಸಲ್ಪಟ್ಟಿರುವಷ್ಟರಮಟ್ಟಿಗೆ ಹೊರ್ತು ಮಿಕ್ಕ ಸ್ವತ್ತು ವಿಕ್ರಯಿಸ

781

ಲ್ಪಟ್ಟು, ಕ್ರಯದಾರನ ಬಾಧ್ಯತೆಯು ಯೆಲ್ಲ ಕೆಲಸಗಳಿಗೂ ಅನುಕೂಲವಾಗಿರತಕ್ಕದ್ದಲ್ಲದೆ, ಹುಟ್ಟುವಳಿಯು ಇದರಲ್ಲಿ ಹಿಂದೆ ನಿಯಮಿಸಲ್ಪಟ್ಟಮೇರೆ ವಿನಿಯೋಗಿಸಲ್ಪಡತಕ್ಕದ್ದು.

ಈ ಅಧ್ಯಾಯದ ನಿಬಂಧನೆಗಳ ಲಗಾವಣೆ.

ಮುಂ. ರೆ. ಕೋ. 187ನೇ ಸೆಕ್ಷನ್.

ಈ ಅಧ್ಯಾಯದ ನಿಬಂಧನೆಗಳನುಸರಿಸಿ ಯಾವ ಹಣಗಳು ವಸೂಲ್ ಆಗತಕ್ಕದ್ದು.

202. ಈ ರೆಗ್ಯುಲೇಷನ್ ಅನುಸರಿಸಿ ಅಥವಾ ಯಿದರಿಂದ ರದ್ದು ಮಾಡಲ್ಪಟ್ಟ ಯಾವದಾದರೂ, ಆಕ್ಟು, ನಿಬಂಧನೆ ಅಥವಾ ಹುಕ್ಕುಂ, ಅಥವಾ ಜಮೀನ್‌ಕಂದಾಯದ ವಿಷಯದಲ್ಲಿ ತತ್ಕಾಲದಲ್ಲಿ ಜಾರೀಯಲ್ಲಿರುವ ಯಾವದಾದರೂ ಆಕ್ಟು, ಯಾ ರೆಗ್ಯುಲೇಷನ್ ಅನುಸರಿಸಿ, ತೆರಬೇಕಾದ ಅಥವಾ ವಸೂಲ್ ಮಾಡ ಬೇಕಾದ ಜಮೀನ್‌ಕಂದಾಯಕ್ಕಾಗಿ ಬರತಕ್ಕ ತಮಾಂ ಮೊಬಲಗುಗಳೂ, ತಮಾಂ ಕ್ವಿಟರೆಂಟುಗಳೂ, ಕಳಕೊಳ್ಳಲ್ಪಟ್ಟ ದಂಡಗಳು, ಮತ್ತು ತಮಾಂ ತೀರ್ವೆಗಳು, ಜಮೀನ್‌ದೆಸೆಯಿಂದ ಬರತಕ್ಕ ನಫೆಗಳು, ಆದಾಯಗಳು, ರುಸುಂಗಳು, ಖರ್ಚುಗಳು, ದಂಡಗಳು, ಜುರ್ಮಾನೆಗಳು ಮತ್ತು ಲಾಗವಡುಗಳು;

ಮತ್ತು ಸಾಯರ್ ತೀರ್ವೆಗಳ ಅಥವಾ ಯಾವದಾದರೂ ಯಿತರ ಸುಂಕ ಯಾ ತೀರ್ವೆಯು, ಅಥವಾ ರೆವಿನ್ಯೂ ಹುಟ್ಟುವಳಿಯ ಯಾವದಾದರೂ ಯಿತರ ಬಾಬಿನ ಯಿಜಾರೇ ಬಗ್ಯಾಗಿ ಯಾವ ಯಿಜಾರೇದಾರನಿಂದಾಗಲಿ ಬರಬೇಕಾದ ತಮಾಂ ಹಣಗಳು, ಮತ್ತು ಅಂಥಾ ಯಾವ ಯಿಜಾರೆದಾರನಾಗಲಿ, ತನ್ನ ಒಡಂಬಡಿಕೆಯ ಷರತ್‌ಗಳನುಸರಿಸಿ ತಾನು ಗುರಿಯಾಗತಕ್ಕ ಗೊತ್ತಾದ ಹಣದ ಬಾಬತು ತಮಾಂ ದಂಡಗಳು;

ಮತ್ತು ಕಂದಾಯದ ತರೀಕ್, ರೆವಿನ್ಯೂ ತಗಾದೆ ತರೀಕ್, ಅಥವಾ ಜಮೀನ್ ಕಂದಾಯದ ಬಾಕೀ ತರೀಕ್ ವಸೂಲಾಗತಕ್ಕದ್ದಾಗಿ ಈ ರೆಗ್ಯುಲೇಷನ್‌ನಿಂದಾಗಲಿ, ತತ್ಕಾಲದೊಳಗೆ ಜಾರೀ ಯಿರುವ ಯಾವದಾದರೂ ಯಿತರ ಕಾನೂನ್‌ನಿಂದಾಗಲಿ, ತಿಳಿಸಲ್ಪಟ್ಟ ದರೋಬಸ್ತು ಮೊಬಲಗ್‌ಗಳೂ, -ಈ ಅಧ್ಯಾಯದ ಹಿಂದಿನ ನಿಬಂಧನೆಗಳನುಸರಿಸಿ ವಸೂಲ್ಮಾಡಲ್ಪಡ ತಕ್ಕದ್ದು.

ಜಾಮೀನ್‌ದಾರರು, ಕಂದಾಯದ ಬಾಕೀದಾರರಂತೆ ಜವಾಬ್‌ದಾರರಾಗಿರತಕ್ಕದ್ದು.

ಮತ್ತು ಈ ರೆಗ್ಯುಲೇಷನಿನ ಅಥವಾ ಯಿದರಿಂದ ರದ್ದು ಮಾಡಲ್ಪಟ್ಟ ಯಾವದಾದರೂ ಆಕ್ಟು ಯಾ ಕಾನೂನಿನ ಯಾವದಾದರೂ ನಿಬಂಧನೆಗಳನುಸರಿಸಿ ಅಥವಾ ಮೇಲೆ ಕಂಡಂತೆ ಅಂಥಾ ಯಿಜಾರೇದಾರನಿಗೋಸ್ಕರ ಯಾವ ಹಣಕ್ಕಾಗಿಯಾಗಲಿ, ಜಾಮೀನ್‌ದಾರರಾಗಿ ಯಿರಬಹುದಾದ ತಮಾಂ ಜನಗಳೂ, ತಮ್ಮ ಜಾಮೀನ್ ಪತ್ರದ ಷರತ್‌ಗಳ ಪ್ರಕಾರ ಜವಾಬದಾರರಾಗಿರಬಹುದಾದ ಯಾವ ಮೊಬಲಗನ್ನಾಗಲಿ, ಆ ಪೈಕೀ ಯಾವಭಾಗವನ್ನಾಗಲಿ, ಕೊಡಲಿಕ್ಕೆ ತಪ್ಪಿದರೆ, ಕಂದಾಯ ಕೊಡಲಿಕ್ಕೆ ತಪ್ಪಿದವರ ತರೀಕ್ ಈ ಅಧ್ಯಾಯದ ನಿಬಂಧನೆಗಳನುಸರಿಸಿ ಅಮಲ್ ನಡಿಸಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

ಇಜಾರೇಯನ್ನು ವಾಪಸ್ ತೆಗದುಕೊಳ್ಳುವಲ್ಲಿ ಯಿಜಾರೇ

ಮತ್ತು ಮೇಲೆ ಕಂಡಿರುವಂತೆ, ಅಂಥಾ ಯಾವ ಇಜಾರೆಯನ್ನಾಗಲಿ, ವಾಪಸ್ ತೆಗದುಕೊಳ್ಳುವ ಸಂದರ್ಭದಲ್ಲಿ ಯಾವ ಮನುಷ್ಯನೂ ಇಜಾರೇದಾರನಿಗೆ ಮುಂದಾಗ್ಗಿ ಪಾವತೀ ಮಾಡಿ

ದಾರನಿಗೆ ಅಡ್ವಾನ್ಸಾಗಿ ಕೊಡ ಲ್ಪಟ್ಟ ಮೊಬಲಗು ಅಂಗೀಕರಿಸ ಲ್ಪಡತಕ್ಕದ್ದಲ್ಲ.

ಯಿರಬಹುದಾದ ಯಾವದಾದರೂ ಹಣವನ್ನು ಕೇಳು ವದಕ್ಕೆ ಅರ್ಹನಾಗಿರುವದಿಲ್ಲ.

ಕೊಡಲ್ಪಟ್ಟ ಅಡ್ವಾನ್ಸಗಳ ವಿಷಯದಲ್ಲಿ ನಿಬಂಧನೆ ಮಾಡಲಿಕ್ಕೆ ಗವರ್ನಮೆಂಟಗೆ ಅಧಿಕಾರ.

203. ಸನ್ 1871ನೇ ಯಿಸಿವಿಯ ಲ್ಯಾಂಡ ಇಂಪ್ರೂವಮೆಂಟ ಅಂದರೆ, ಜಮೀನ ಅಭಿವೃದ್ಧಿಯ ಅಕ್ಟಿನಲ್ಲಿ ವಿವರಿಸಲ್ಪಡದೆ, ಪರಂತು ವ್ಯವಸಾಯದ ಉದ್ದೇಶಗಳಿಗೆ ಸಂಬಂಧಿಸಿದ ಕಷ್ಟ ನಿವಾರಣಾರ್ಥವಾಗಿ, ಬೀಜ ಯಾ ದನಗಳನ್ನು ಕೊಳ್ಳುವ ಬಗ್ಯೆ ಅಥವಾ ಯಿತರ ಯಾವದಾದರೂ ಕೆಲಸಕ್ಕೆ, ಸಾಗುವಳೀ ಲಾಯಖ್ಖರ ಜಮೀನಿನ ಹಿಡುವಳೀ ದಾರರಿಗೆ ಕೊಡಲ್ಪಡತಕ್ಕ ಅಡ್ವಾನ್ಸಗಳನ್ನು ಕುರಿತು ಗವರ್ನಮೆಂಟನವರುಆಗಿಂದಾಗ್ಯೆ ನಿಬಂಧನೆಗಳನ್ನು ವಿಧಿಸಬಹುದು. ಅಂಥಾ ಪ್ರತಿ ಅಡ್ವಾನ್ಸೂ, ಪಾವತೀ ಮಾಡಬೇಕಾದಾಗ ಅದರ ಮೇಲೆ ಬಡ್ಡೀ ಯಾವದಾದರೂ ಯಿ ರ್ಪಟ್ಟರೆ, ಅದು ಸಹಿತ, ಯಾವ ಮನುಷ್ಯನಿಗೆ ಅಂಥಾ ಅಡ್ವಾನ್ಸ ಕೊಡಲ್ಪಟ್ಟಿತ್ತೋ ಆ ಮನುಷ್ಯನಿಂದಾಗಲಿ, ಅದರ ವಸೂಲೀ ಬಗ್ಯೆ ಜಾಮೀನ ಆಗಿದ್ದ ಯಾವ ಮನುಷ್ಯನಿಂದಾಗಲಿ, ಸದರೀ ಅಡ್ವಾನ್ಸ ಯಾವ ಮನುಷ್ಯನಿಗೆ ಮಾಡಲ್ಪಟ್ಟಿತೋ ಅವನಿಂದಾಗಲಿ, ಅವನ ಜಾಮೀನದಾರನಿಂದಾಗಲಿ, ಸಲ್ಲತಕ್ಕ ಕಂದಾಯದ ಬಾಕೀ ತರೀಕ್ಕ ವಸೂಲ್ಮಾಡಲ್ಪಡತಕ್ಕದ್ದು.

12ನೇ ಅಧ್ಯಾಯ.

ರೆವಿನ್ಯೂ ಆಫೀಸರಗಳು ಚಲಾಯಿಸ ತಕ್ಕ ನಡವರ್ತ.

ಮುಂ. ರೆ. ಕೋ. 188ನೇ ಸೆಕ್ಷನ.

ರೆವಿನ್ಯೂ ಆಫೀಸರಗಳ ತಾಬೇದಾರೀ.

204. ತಮಾಂ ಸರಕಾರೀ ಕೆಲಸಗಳೂ, ಮತ್ತು ನಡವಳಿಕಗಳೂ, ಯಿವುಗಳಲ್ಲಿ ವಿರುದ್ಧವಾಗಿ ಕಾನೂನಿನಲ್ಲಿ ವಿವರಿಸಲ್ಪಟ್ಟ ನಿಬಂಧನೆ ಯೇನೂ ಯಿಲ್ಲದಿದ್ದರೆ, ಒಬ್ಬ ರೆವಿನ್ಯೂ ಆಫೀಸರನು ತನ್ನ ಕೆಲಸಗಳನ್ನು ನಿರ್ವಹಿಸುವ ಸ್ಥಳ, ಕಾಲ, ಮತ್ತು ರೀತಿ ಯಿವುಗಳ ವಿಷಯದಲ್ಲಿ ಯಾವ ಆಫೀಸರರಿಗೆ ತಾಬೇದಾರನಾಗಿರುತ್ತಾನೋ ಅಂಥಾ ಆಫೀಸರರ ಅಪ್ಪಣೆ ಮತ್ತು ಅಧಿಕಾರಕ್ಕೆ ಒಳಪಟ್ಟಿರತಕ್ಕದ್ದು.

ಮುಂ. ರೆ. ಕೋ. 189ನೇ ಸೆಕ್ಷನ.

ಸಾಕ್ಷ್ಯ ಕೊಡುವದಕ್ಕೂ ದಸ್ತಾವೇಜುಗಳನ್ನು ಹಾಜರ ಮಾಡಲಿಕ್ಕೂ ಸಮ್ಮನ್ಸ ಮಾಡುವಬಗ್ಯೆ ಅಧಿಕಾರ.

205. (1) ಒಬ್ಬ ಡೆಪ್ಯುಟಿ ಅಮಲದಾರರ ಅಥವಾ ಸರ್ವೇ ಅಸಿಸ್ಟೆಂಟ ಸೂಪರಿಂಟೆಂಡೆಂಟರ ಹುದ್ದೇಗಿಂತ ಕಡಮೆಯಿಲ್ಲದ ಪ್ರತಿ ರೆವಿನ್ಯೂ ಆಫೀಸರರೂ, ತಮ್ಮತಮ್ಮ ಇಲಾಖೆಗಳಲ್ಲಿ, ಒಬ್ಬ ಕಕ್ಷಿಗಾರನಾಗಿ ವಿಚಾರಣೆ ಮಾಡಲ್ಪಡಲಿಕ್ಕಾಗಲಿ, ಒಬ್ಬ ಸಾಕ್ಷಿಯಾಗಿ ಸಾಕ್ಷ್ಯಕೊಡಲಿಕ್ಕಾಗಲಿ, ಅಂಥಾ ಆಫೀಸರರು ಯಾವ ವಿಚಾರಣೆಯನ್ನು ಮಾಡಲಿಕ್ಕೆ ನ್ಯಾಯತಃ ಅಧಿಕಾರವುಳ್ಳವರಾಗಿರುತ್ತಾರೋ ಅಂಥಾ ಯಾವದಾದರೂ ಕಾರ್ಯಗಳಿಗಾಗಿ ದಸ್ತಾವೇಜುಗಳನ್ನು ಹಾಜರ ಮಾಡಲಿಕ್ಕೆ ಯಾರ ಹಾಜರಾತಿಯು ಜರೂರೆಂದು ಅವರು ಭಾವಿಸುತ್ತಾರೋ, ಅಂಥಾ ಆಸಾಮಿಗೆ ಸಮ್ಮನ್ಸ ಸಾದರಮಾಡಲಿಕ್ಕೆ ಅಧಿಕಾರ ವುಂಟಾಗಿರತಕ್ಕದ್ದು. ದಸ್ತಾವೇಜುಗಳನ್ನು ಹಾಜರಮಾಡಲಿಕ್ಕೋಸ್ಕರ ಹುಟ್ಟುವ ಸಮ್ಮನ್ಸು, ಗೊತ್ತಾದ ಕೆಲವು

ದಸ್ತಾವೇಜುಗಳನ್ನು ಹಾಜರ್‌ಮಾಡುವಬಗ್ಗೆ ಅಥವಾ ಸಮ್ಮನ್ಸ್ ಮಾಡಲ್ಪಟ್ಟ ಮನುಷ್ಯನ ವಶದಲ್ಲಿರುವ ಒಂದುವಿಧದ ತವರ್ಹಿ ದಸ್ತಾವೇಜುಗಳನ್ನೂ ಹಾಜರ್ ಮಾಡುವಬಗ್ಗೆ ಇರಬಹುದು.

(2) ಹಾಗೆ ಸಮ್ಮನ್ಸ್ ಮಾಡಲ್ಪಟ್ಟ, ಯಾವಮನುಷ್ಯನಾಗಲಿ, ಖುದ್ದಾಗಿ ಅಥವಾ ಸಮ್ಮನ್ಸಿನಲ್ಲಿ ನಿಯಮಿಸಲ್ಪಟ್ಟಮೇರೆ ಅಧಿಕಾರ ಹೊಂದಿದ ಒಬ್ಬ ಮುಖ್ತಾಲೀಕನಮೂಲಕವಾಗಲಿ ಹಾಜರಾಗಲಿಕ್ಕೆ ಮತ್ತು ಒಂದು ದಸ್ತಾವೇಜನ್ನಾಗಲಿ, ವಸ್ತುವನ್ನಾಗಲಿ, ಹಾಜರ್‌ಮಾಡುವಂತೆ ಸಮ್ಮನ್ಸ್‌ವಿಧಿಸಿದರೆ, ಅದನ್ನು ಹಾಜರ್ ಮಾಡಿಸುವದಕ್ಕೆ ಬದ್ಧನಾಗಿರತಕ್ಕದ್ದು. ಒಂದು ದಸ್ತಾವೇಜನ್ನಾಗಲಿ ಇತರ ವಸ್ತುವನ್ನಾಗಲಿ ಮಾತ್ರ ಹಾಜರ್ಮಾಡುವಬಗ್ಗೆ ಸಮ್ಮನ್ಸ್‌ಮಾಡಲ್ಪಟ್ಟ ಯಾವಮನುಷ್ಯನಾಗಲಿ ಸದರೀ ದಸ್ತಾವೇಜು ಯಾವ ವಸ್ತುವನ್ನು ಹಾಜರ್ಮಾಡುವಬಗ್ಗೆ ಖುದ್ದು ಹಾಜರಾಗಲಿಕ್ಕೆ ಬದಲಾಗಿ ಅದನ್ನು ಹಾಜರ್ಮಾಡಿಸುವದರಿಂದ ಸಮ್ಮನ್ಸ್ ಪ್ರಕಾರ ನೆರವೇರಿಸಿದಂತೆ ಯೆಣಿಸಲ್ಪಡತಕ್ಕದ್ದು.

(3) ಹಾಜರಾಗಲಿಕ್ಕೆ ಸಮ್ಮನ್ಸ್‌ಮಾಡಲ್ಪಟ್ಟ ಯೆಲ್ಲಮನುಷ್ಯರೂ, ಯಾವದರ ವಿಷಯದಲ್ಲಿ ವಿಚಾರಣೆ ಮಾಡಲ್ಪಡುತ್ತಾರೋ ಅಥವಾ ಕೈಫೀಯತು ಕೊಡುತ್ತಾರೋ ಅಂಥಾ ಯಾವದಾದರೂ ವಿಷಯದಲ್ಲಿ ನಿಜವನ್ನು ತಿಳಿಸಲಿಕ್ಕೂ, ಬೇಕಾಗುವ ಅಂಥಾ ದಸ್ತಾವೇಜುಗಳನ್ನೂ ಇತರ ವಸ್ತುಗಳನ್ನೂ ಹಾಜರ್ಮಾಡಲಿಕ್ಕೂ, ಬದ್ಧರಾಗತಕ್ಕದ್ದು.

ಕೆಲವು ಸಂದರ್ಭಗಳಲ್ಲಿ ಸಾಕ್ಷಿಯು ಕಮ್ಮಿಷನ್ ಮೂಲಕವಾಗಿ ವಿಚಾರಣೆ ಮಾಡಲ್ಪಡತಕ್ಕದ್ದು.

206. ಯಾರಸಾಕ್ಷ್ಯವು ಬೇಕಾಗಬಹುದೋ ಅಂಥಾ ಮನುಷ್ಯನು ಕಾಯಿಲೇ ಸಬಬ್ ಅಥವಾ ಅಶಕ್ತತೆಯಿಂದ, ಸಮ್ಮನ್ಸ್ ಸಾದರ್ಮಾಡುವ ಆಫೀಸರಮುಂದೆ ಹಾಜರಾಗಲಿಕ್ಕೆ ಅಶಕ್ತನಾಗಿದ್ದರೆ, ಅಥವಾ ಯಾರನ್ನು ದರಜಾ ಯಾ ಸ್ತ್ರೀಜಾತಿಯ ಸಬಬಿನಿಂದ ಸಮ್ಮನ್ಸ್ ಮಾಡುವದು ಯುಕ್ತವಾಗಿರಲಾರದೋ ಅಂಥಾ ಆಸಾಮಿಯನ್ನು ಸಮ್ಮನ್ಸ್ ಸಾದರ್ಮಾಡುವ ಆಫೀಸರರು ತಮ್ಮ ಯಿಖ್ತ್ಯಾರೀಮೇಲೆಯಾಗಲಿ ಯಾರ ಸಾಕ್ಷ್ಯವು ಅಪೇಕ್ಷಿಸಲ್ಪಟ್ಟಿದೆಯೋ ಅಂಥಾ ಆಸಾಮಿಯ ದರಖಾಸ್ತಿನ ಮೇಲೆ ಸದರೀ ಆಸಾಮಿಯ ಹಾಜರಾತಿಯನ್ನು ತಪ್ಪಿಸಿ ಸದರೀ ಆಸಾಮಿಯನ್ನು ಸದರೀಬಗ್ಗೆ ಅಂಥಾ ಆಫೀಸರರಿಂದ ನೇಮಿಸಲ್ಪಟ್ಟ ಒಬ್ಬ ತಾಬೇದಾರನಿಂದ ದರ್ಯಾಫ್ತೀ ಮಾಡಲ್ಪಡುವಂತೆ ಹುಕ್ಕುಂ ಮಾಡಬಹುದು.

ಮುಂ. ರಿ. ಕೋ. 190ನೇ ಸೆಕ್ಷನ್.

ಸಮ್ಮನ್ಸು ಬರವಣಿಗೆಯಲ್ಲಿದ್ದು ಸೈನ್ ಮೊಹರ್ ಆಗಿರತಕ್ಕದ್ದು.

207. ಪ್ರತಿಸಮ್ಮನ್ಸೂ, ಬರವಣಿಗೆಯಲ್ಲಿ ಯೆರಡು ಪ್ರತಿಯಾಗಿರತಕ್ಕದ್ದಲ್ಲದೆ, ಯಾವಬಗ್ಗೆ ಸದರೀ ಸಮ್ಮನ್ಸು ಸಾದರಾಯಿತೋ ಅದನ್ನು ನಮೂದಿಸಿ, ಅದನ್ನು ಸಾದರ್‌ಮಾಡುವ ಆಫೀಸರರಿಂದ ಸೈನ್ ಮಾಡಲ್ಪಟ್ಟು ಅವರಿಗೆ ಮೊಹರು ಸಹ ಇದ್ದರೆ, ಅದಕ್ಕೆ ಮೊಹರು ಹಾಕತಕ್ಕದ್ದು ; ಸದರೀ ಸಮ್ಮನ್ಸಿನಲ್ಲಿ ಹಾಗೆ ಸಮ್ಮನ್ಸ್ ಮಾಡಲ್ಪಟ್ಟ ಮನುಷ್ಯನು, ಗೊತ್ತಾದ ಕಾಲದಲ್ಲಿಯೂ ಸ್ಥಳದೊಳಗೂ ಸದರೀ ಆಫೀಸರರಮುಂದೆ ಹಾಜರಾಗುವಂತೆಯೂ ನೇಮಿಸ

ತಕ್ಕದ್ದು, ಮತ್ತು ಸದರೀ ಮನುಷ್ಯನ ಹಾಜರಾತಿಯು ಸಾಕ್ಷ್ಯವನ್ನು ಕೊಡುವದಕ್ಕಾಗಿಯೋ ಅಥವಾ ಒಂದು ದಸ್ತಾವೇಜನ್ನು ಹಾಜರ್ ಮಾಡುವದಕ್ಕಾಗಿಯೋ ಅಥವಾ ಈ ಯೆರಡು ಕೆಲಸಗಳಗೋಸ್ಕರವಾಗಿಯೋ ಅದನ್ನು ವಿವರಿಸತಕ್ಕದ್ದು.

ಹ್ಯಾಗೆ ಜಾರೀಮಾಡಲ್ಪಡತಕ್ಕದ್ದು.

ಸದರೀ ಸಮ್ಮರ್ನ್ಸು ಅದರ ಬಾಬತ್ತು ಒಂದು ನಕಲನ್ನು, ಸಮ್ಮರ್ನ್ ಮಾಡಲ್ಪಟ್ಟ ಮನುಷ್ಯನಿಗೆ, ಅಥವಾ ಅವನು ಸಿಕ್ಕದಿದ್ದರೆ, ಅವನಸಂಗಡ ವಾಸಮಾಡುವ ಅವನ ಕುಟುಂಬಕ್ಕೆ ಶೇರಿದ ಪ್ರಾಪ್ತ ವಯಸ್ಸಿನ ಯಾರಲ್ಲಾಗಲಿ, ಒಪ್ಪಿಸುವದರ ಮೂಲಕವಾಗಲಿ, ಅವನ ವಾಡಿಕೆಯಾದ ವಾಸಸ್ಥಾನದ ಪ್ರಸಿದ್ಧವಾದ ಯಾವದಾದರೂ ಭಾಗಕ್ಕೆ ಅದನ್ನು ಚಿಕಟಾಯಿಸುವದರಮೂಲಕವಾಗಲಿ, ಸಾದರ್ಮಾಡಲ್ಪಡತಕ್ಕದ್ದು.

ಸಮ್ಮರ್ನ್ಸು ಹುಟ್ಟಿದ ಡಿಸ್ಟ್ರಿಕ್ಟಿನಲ್ಲಿ ಅಲ್ಲದೆ ಬೇರೆ ಡಿಸ್ಟ್ರಿಕ್ಟಿನಲ್ಲಿ ಜಾರಿ ಮಾಡುವಣ.

ಸದರೀಯುವನ ವಾಡಿಕೆಯಾದ ವಾಸಸ್ಥಾನವು ಮತ್ತೊಂದು ಡಿಸ್ಟ್ರಿಕ್ಟಿನಲ್ಲಿದ್ದರೆ, ಆಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರಿಗೆ ಟಪ್ಪಾಲ್ ಮೂಲಕ ಸಮ್ಮರ್ನ್ಸು ಕಳುಹಿಸಲ್ಪಡಬಹುದು, ಸದರೀಯುವರು, ಈ ಸೆಕ್ಷನಿನ ಹಿಂದಿನ ಕ್ಲಾಜ್ ಪ್ರಕಾರ ಜಾರೀಮಾಡಿಸತಕ್ಕದ್ದು.

ಮುಂ. ರೆ. ಕೋ. 191ನೇ ಸೆಕ್ಷರ್ನ.

ನೋಟೀಸನ್ನು ಜಾರೀ ಮಾಡುವವಿಧ.

208. ಈ ರೆಗ್ಯುಲೇಷರ್ನ ಅನುಸರಿಸಿ ಕೊಡಲ್ಪಟ್ಟ ಪ್ರತಿನೋಟೀಸೂ ಬೇರೆವಿಧವಾಗಿ ನಮೂದ್‌ನಿಶಿ ವಿಧಿಸಲ್ಪಟ್ಟಹೊರತು, ಅದರ ಬಾಬತು ಒಂದು ನಕಲನ್ನು ಯಾವಮನುಷ್ಯನಿಗೆ ಅದನ್ನು ಜಾರೀಮಾಡಬೇಕಾಗಿರುತ್ತೋ ಆ ಮನುಷ್ಯನಿಗಾಗಲಿ, ಅವನ ಮುಕ್ತಾಲೀಕಯೊರಾದರೂ ಯಿದ್ದರೆ ಅವನಿಗಾಗಲಿ, ಒಪ್ಪಿಸುವದರ ಮೂಲಕವಾಗಿಯಾಗಲಿ, ಸಾವತೀಮಾಡುವದರ ಮೂಲಕವಾಗಿಯಾಗಲಿ, ಸದರೀ ನೋಟೀಸ್ ಯಾವದನ್ನು ಕುರಿತದ್ದೋ ಅಂಥಾ ಜಮೀರ್ನ ಯಾವದಾದರೂ ಯಿದ್ದರೆ, ಅದರಲ್ಲಿ ಯಾವದಾದರೂ ಪ್ರಕಟವಾದ ಸ್ಥಳದೊಳಗೆ, ಚಿಕಟಾಯಿಸುವದರಮೂಲಕವಾಗಲಿ, ಜಾರೀಮಾಡಲ್ಪಡತಕ್ಕದ್ದು.

ಯಾವನೋಟೀಸ್‌ನಲ್ಲಿಯಾಗಲಿ ಸೂಚಿಸಲ್ಪಟ್ಟ ಯಾವನಾದರೂ ಮನುಷ್ಯನ ಹೆಸರಿನಲ್ಲಿಯಾಗಲಿ ಉದ್ಯೋಗದ ಹೆಸರಿನಲ್ಲಿಯಾಗಲಿ ಯಾವ ತಪ್ಪಿಗೋಸ್ಕರವಾದರೂ, ಅಂಥಾ ತಪ್ಪು ನೃಥವಾದ ಅನ್ಯಾಯವನ್ನು ಉಂಟುಮಾಡದೆಯಿದ್ದರೆ, ಅಂಥಾ ನೋಟೀಸು ರದ್ದಾದದ್ದಾಗಿ ಯೆಣಿಸಲ್ಪಡತಕ್ಕದ್ದಲ್ಲವು.

ಮುಂ. ರೆ. ಕೋ. 192ನೇ ಸೆಕ್ಷರ್ನ.

ಸಾಕ್ಷಿಗಳ ಹಾಜರ್‌ಮಾಡಿಸಿಕೊಳ್ಳುವಬಗ್ಯೆ ನಡವಳಿತ.

209. ಯಾವದಾದರೂ ಕ್ರಮವಾದ ಅಥವಾ ಫೂಟ್ ವಿಚಾರಣೆಯಲ್ಲಿ ಯಾವ ಕಕ್ಷಿಗಾರನಾಗಲಿ, ಸಾಕ್ಷಿಗಳ ಹಾಜರಾತಿಯನ್ನು ಅಪೇಕ್ಷಿಶಿದರೆ, ಆತನು ಶಿವಿಲ್ ಪ್ರೊಸೀಡ್ಯೂರ್ ಕೋಡಿನ 160ನೇ ಸೆಕ್ಷರ್ನನಿಂದ ವಿಧಿಸಲ್ಪಟ್ಟ ನಡವಳಿತವನ್ನು ಅನುಸರಿಸತಕ್ಕದ್ದು:

ಕ್ರಮವಾದ ವಿಚಾರಣೆ.

ಮುಂ. ರೆ. ಕೋ. 195ನೇ ಸೆಕ್ಷರ್ನ.

210. ಕ್ರಮವಾದ ಯೆಲ್ಲವಿಚಾರಣೆಗಳಲ್ಲಿಯೂ, ಸಾಕ್ಷ್ಯವು, ವಿಚಾರಣೆಯನ್ನಾಗಲಿ, ದರ್ಯಾಫ್ತಿಯನ್ನಾಗಲಿ, ಮಾಡುವ ಆಫೀಸರರಿಂದ, ಅಥವಾ ಆವರ ರೂಬರೂ

ಕ್ರಮವಾದ ದರ್ಯಾಫ್ತಿಗಳ ಮತ್ತು ಕೇಳುವಿಕೆಯಲ್ಲಿ ಮತ್ತು ಖುದ್ದು ಮೇಲ್ವಿಚಾರಣೆ ವಿಥ. ಲ್ಲಿ ಸಾಕ್ಷ್ಯ ತೆಗದುಕೊಳ್ಳುವ ಚಾರಣೆ ವ ಹುಕ್ಕುಮತು ಇವುಗಳಲ್ಲಿ ಸಂಪೂರ್ಣವಾಗಿ ಬರವಣಿಗೆಯಲ್ಲಿ ಕನ್ನಡದಲ್ಲಿ ತೆಗದು ಕೊಳ್ಳಲ್ಪಟ್ಟು ಅವರಿಂದ ದಸ್ತಖತ್ ಮಾಡಲ್ಪಡತಕ್ಕದ್ದು.

ಯಾವ ಸಂಗತಿಗಳಲ್ಲಿ ಸಾಕ್ಷ್ಯವು, ದರ್ಯಾಫ್ತಿಯನ್ನು ಮಾಡುವ ಆಫೀಸರರಿಂದ ಬರವಣಿಗೆಯಲ್ಲಿ ಪೂರ್ಣವಾಗಿ ತೆಗದುಕೊಳ್ಳಲ್ಪಡುವದಿಲ್ಲವೊ ಆಸಂಗತಿಗಳಲ್ಲಿ, ಸದರೀ ಆಫೀಸರರು, ಪ್ರತಿ ಸಾಕ್ಷಿಯ ವಿಚಾರಣೆಯು ನಡೆದಹಾಗೆಲ್ಲ ಅಂಥಾ ಸಾಕ್ಷಿಯ ಕೈಫಿಯತಿನ ಸಾರಾಂಶದ ಒಂದು ಯಾದಾಸ್ತನ್ನು ತಯಾರ್‌ಮಾಡತಕ್ಕದ್ದು; ಅಂಥಾ ಯಾದಾಸ್ತು ಅಂಥಾ ಆಫೀಸರರಿಂದ ಸ್ವದಸ್ತೂರ್ ಬರೆಯಲ್ಪಟ್ಟು, ದಸ್ತಖತ್ ಮಾಡಲ್ಪಡತಕ್ಕದ್ದಲ್ಲದೆ ರಿಕಾರ್ಡಿನ ಭಾಗವಾಗಿ ಯೇರ್ಪಡತಕ್ಕದ್ದು.

ಅಂಥಾ ಆಫೀಸರರು, ಮೇಲೆ ನಿಯಮಿಸಲ್ಪಟ್ಟಂತೆ ಒಂದು ಯಾದಾಸ್ತನ್ನು ತಯಾರ್‌ಮಾಡುವ ಅಂಶದಲ್ಲಿ ನಿರೋಧಿಸಲ್ಪಟ್ಟರೆ, ಹಾಗೆ ತಯಾರ್ ಮಾಡುವದಕ್ಕೆ ವುಂಟಾದ ತನ್ನ ಅಶಕ್ತತೆಯ ಕಾರಣವನ್ನು ರಿಕಾರ್ಡ್‌ ದಾಖಲ್ ಮಾಡತಕ್ಕದ್ದು.

ಇಂಗ್ಲೀಷಿನಲ್ಲಿ ಕೊಡಲ್ಪಟ್ಟ ಸಾಕ್ಷ್ಯವನ್ನು ತೆಗದುಕೊಳ್ಳುವಿಕೆ.

ತರ್ಜುಮೆಯು ರಿಕಾರ್ಡಾಗಿ ಯಿರತಕ್ಕದ್ದು.

ಸಾಕ್ಷ್ಯವು, ಇಂಗ್ಲಿಷನಲ್ಲಿ ಕೊಡಲ್ಪಟ್ಟರೆ, ಅಂಥಾ ಆಫೀಸರರು ಅದನ್ನು ಆಭಾಷೆಯಲ್ಲಿ ಸ್ವದಸ್ತೂರಾಗಿ ತೆಗದು ಕೊಳ್ಳಬಹುದು. ಕನ್ನಡದಲ್ಲಿ ಸದರೀ ಸಾಕ್ಷ್ಯದ ಕರಾರ್‌ವಾಕಾ ಆದ ತರ್ಜುಮೆಯು ಮಾಡಲ್ಪಟ್ಟು ಅದು ರಿಕಾರ್ಡಿನ ಭಾಗವಾಗಿ ಯೇರ್ಪಡತಕ್ಕದ್ದು.

ಮುಂ. ರೆ. ಕೋ. 194ನೇ ಸೆಕ್ಷರ್ನ.

ಫೈಸಲಗಳನ್ನು ಬರಿಯುವಣ ಮತ್ತು ಅರ್ಥ ವಿವರಣ.

211. ಕ್ರಮವಾದ ಒಂದು ವಿಚಾರಣೆ ಯಾದಮೇಲೆ ಪ್ರತಿ ಫೈಸಲೂ, ಸದರೀ ಫೈಸಲನ್ನು ಕೊಡುವ ಆಫೀಸರರಿಂದ ಸ್ವದಸ್ತೂರ್ ಬರೆಯಲ್ಪಟ್ಟು, ಯಾವ ಸಬಬುಗಳ ಮೇಲೆ ಸದರೀ ಫೈಸಲು ಕೊಡಲ್ಪಟ್ಟಿತೋ ಅವುಗಳ ಬಾಬತು ಸಂಪೂರ್ಣವಾದ ವಂದು ಸ್ಟೇಟಮೆಂಟನ್ನು ಅಡಗಿಸಿಕೊಂಡಿರತಕ್ಕದ್ದು.

ಫೂಟ ವಿಚಾರಣೆ.

ಮುಂ. ರೆ. ಕೋ. 195ನೇ ಸೆಕ್ಷರ್ನ.

ಫೂಟ ವಿಚಾರಣೆಗಳು, ಹ್ಯಾಗೆ ನಡಿಸಲ್ಪಡತಕ್ಕದ್ದು.

212. ಫೂಟ ವಿಚಾರಣೆಗಳಲ್ಲಿ ಮುಖ್ಯರಾದ ಆಫೀಸರರು, ಅಂಥಾ ಯಾವ ವಿಚಾರಣೆಯಾಗಲಿ, ಜರಿಗಿದ ಹಾಗೆಲ್ಲ, ಇದಕ್ಕೆ ಸಂಬಂಧಿಸಿದ ಕಕ್ಷಿಗಾರರಿಂದ ಕೊಡಲ್ಪಟ್ಟ ಮುಖ್ಯವಾದ ಕೈಫಿಯತನ್ನೂ, ಸಾಕ್ಷ್ಯದ ಮುಖ್ಯ ಅಂಶಗಳನ್ನೂ, ಫೈಸಲನ್ನೂ, ಆಬಗ್ಗೆ ಕಾರಣಗಳನ್ನೂ, ಶೆರಿಸಿಕೊಂಡಿರುವ ನಡವಳಿತಗಳ ಒಂದು ಅಭಿಪ್ರಾಯದ ಯಾದಾಸ್ತನ್ನು ಇಂಗ್ಲಿಷನಲ್ಲಾಗಲಿ ಕನ್ನಡದೊಳಗಾಗಲಿ ಸ್ವದಸ್ತೂರ್ ರಿಕಾರ್ಡ್ ಮಾಡತಕ್ಕದ್ದು.

ಪರಂತು, ಕ್ರಮವಾದ ಒಂದು ವಿಚಾರಣೆಗೆ, ಲಗಾವಾದ ವಿಶಿಷ್ಟ ಅಥವಾ ಯಾವ ರೂಲ್ಸ್ ಅನುಸರಿಸಿಯಾಗಲಿ, ಫೂಟಾಗಿರತಕ್ಕದ್ದೆಂದು ಈ ರೆಗ್ಯೂಲೇಶ್ನ ನಿಂದ ನಿಯಮಿಸಲ್ಪಟ್ಟ, ಒಂದು ವಿಚಾರಣೆಯನ್ನು ನಡಿಸುವದು ಅಂಥಾ ಆಫೀಸರರಿಗೆ ಯುಕ್ತವೆಂದು ತೋರಿದರೆ ಯಾವಕಾಲದಲ್ಲಾಗಲಿ, ನ್ಯಾಯ ಸಿದ್ಧವಾಗಿ ಯಿರತಕ್ಕದ್ದು.

ಮುಂ. ರೆ. ಕೋ. 196ನೇ ಸೆಕ್ಷನ್.

ಕ್ರಮವಾದ ಮತ್ತು ಫೂಟಾದ ವಿಚಾರಣೆಗಳು ಜುಡಿಷಿಯಲ್ ನಡವಳಿತಗಳೆಂದು ಯೆಣಿಸಲ್ಪಡತಕ್ಕದ್ದು.

213. ಈ ರೆಗ್ಯೋಲೇಷನ್ನ ಅನುಸರಿಸಿ ಮಾಡಲ್ಪಡುವ ಕ್ರಮವಾದ ಅಥವಾ ಫೂಟ ವಿಚಾರಣೆಯು ಇಂಡಿಯನ್ ಪಿನಲ್‌ಕೋಡಿನ 193, 219 ಮತ್ತು 228 ಈ ಸೆಕ್ಷನ್ನುಗಳ ಅರ್ಥರೀತ್ಯಾ "ಜುಡಿಷಿಯಲ್ ನಡವಳಿತ" ಯೆಂದು ಯೆಣಿಸಲ್ಪಡತಕ್ಕದ್ದು. ಮತ್ತು ಒಂದು ಕ್ರಮವಾದ ಅಥವಾ ಫೂಟಾದ ವಿಚಾರಣೆಯನ್ನು ನಡಿಸುವ ಯಾರಾದರೂ ಅಧಿಕಾರಿಯು ಕಚ್ಚೇರಿಯು, ಅಂಥಾ ವಿಚಾರಣೆಯ ಕಾರ್ಯಗಳಿಗಾಗಿ ಒಂದು ಸಿವಿಲ್‌ಕೋರ್ಟೆಂದು ಭಾವಿಸಲ್ಪಡತಕ್ಕದ್ದು.

ಹಿಯರಿಂಗ್ ವ ಫೈಸಲ್ ಕಕ್ಷಿಗಾರರಿಗೆ ನೋಟೀಸ್.

ಒಂದು ಕ್ರಮವಾದ ವಿಚಾರಣೆಯಲ್ಲೇ ಆಗಲಿ ಫೂಟ ವಿಚಾರಣೆಯಲ್ಲೇ ಆಗಲಿ ನಡಿಯುವ ಪ್ರತಿ ಹಿಯರಿಂಗ್ ಮತ್ತು ಕೊಡಲ್ಪಡುವ ಪ್ರತಿ ಫೈಸಲ್ ಸುದಾ ಬಹಿರಂಗವಾಗಿರತಕ್ಕದ್ದಲ್ಲದೆ ಕಕ್ಷಿಗಾರರು ಅಥವಾ ಅಧಿಕಾರಹೊಂದಿದ್ದ ಅವರ ಮುತಾಲೀಕರು ಹಾಜರಾಗಲಿಕ್ಕೆ ತಕ್ಕ ನೋಟೀಸನ್ನು ಪಡೆಯತಕ್ಕದ್ದು.

ಮುಂ. ರೆ. ಕೋ. 197ನೇ ಸೆಕ್ಷನ್.

ಸಾಧಾರಣ ವಿಚಾರಣೆಗಳು ಹ್ಯಾಗೆ ನಡಿಸಲ್ಪಡತಕ್ಕದ್ದು.

214. ಯಾವ ವಿಚಾರಣೆಯು ಈ ರೆಗ್ಯೂಲೇಷನ್ನ ಪ್ರಕಾರ ಕ್ರಮವಾಗಿಯಾಗಲಿ, ಫೂಟಾಗಿಯಾಗಲಿ, ಇರಬೇಕಾದ್ದಿಲ್ಲವೋ ಅಥವಾ ಯಾವದನ್ನು ಯಾವ ರೆವಿನ್ಯು ಆಫೀಸರರಾಗಲಿ ನ್ಯಾಯವಾದ ತಮ್ಮ ಕೆಲಸಗಳನ್ನು ಚಲಾಯಿಸುವಲ್ಲಿ ಅವಶ್ಯವಾಗಿ ಮಾಡಬೇಕೆಂದು ಯಾವ ಸಂದರ್ಭದಲ್ಲಾದರೂ ಭಾವಿಸುತ್ತಾರೋ ಅಂಥಾ ವಿಚಾರಣೆಯು ಗವರ್ನಮೆಂಟಿನಿಂದಾಗಲಿ, ಅಂಥಾ ವಿಚಾರಣೆಯನ್ನು ನಡಿಸುವ ಆಫೀಸರರಿಗೆ ಮೇಲ್ಪಟ್ಟ ಒಬ್ಬ ಅಧಿಕಾರಿಯಿಂದಾಗಲಿ, ವಿಧಿಸಲ್ಪಟ್ಟಿರಬಹುದಾದ ವಟ್ಟು ಅಥವಾ ವಿಶೇಷವಾದ ಅದಕ್ಕೆ ಲಗಾವಾದ ಅಂಥಾ ರೂಲ್ಸ್ ಪ್ರಕಾರ ನಡಿಸಲ್ಪಡತಕ್ಕದ್ದು. ಮತ್ತು ಸದರೀ ಆಫೀಸರರ ವಿತರಣೆಯ ಪ್ರಕಾರ ಅಂಥಾ ರೂಲ್ಸ್‌ಗಳಿಗೆ ಒಳಪಟ್ಟಷ್ಟು ಮಟ್ಟಿಗೆ ಹೊರ್ತಾಗಿ ಮುಖ್ಯಗಳಾದ ಯೆಲ್ಲ ನಿಜಸ್ಥಿತಿಗಳನ್ನೂ ಪ್ರಜೆಗಳ ಕ್ಷೇಮಾಭಿವೃದ್ಧಿಯನ್ನೂ, ನಿಶ್ಚಯಿಸುವ ಬಗ್ಗೆ ಉತ್ತಮವಾಗಿರಬಹುದಾದ ರೀತಿಯಾಗಿ ನಡಿಸಲ್ಪಡತಕ್ಕದ್ದು.

ಮುಂ. ರೆ. ಕೋ. 198ನೇ ಸೆಕ್ಷನ್.

ನಕ್ಕಲಗಳು ವ ತರ್ಜುಮೆಗಳು ವಗೈರೆ ಹ್ಯಾಗೆ ಪಡೆಯತಕ್ಕದ್ದು.

215. ಒಂದು ಕ್ರಮವಾದ ಅಥವಾ ಫೂಟ ವಿಚಾರಣೆ ಮಾಡಲ್ಪಡುವ ವಿಶಿಷ್ಟ ಮೊಕದ್ದಮೆಗಳಲ್ಲೂ, ಫೈಸಲ್‌ಗಳು, ಹುಕುಂಗಳು, ಆಬಗ್ಯೆ ಕಾರಣಗಳು ಮತ್ತು (exhibits) ಯೆಗ್ಜಿಬಿಟ್ಸ್ ಇವುಗಳ ಬಾಬತು ಸೈನ್ ಮೊಹರಾದ ನಕ್ಕಲಗಳನ್ನೂ ತರ್ಜುಮೆಗಳನ್ನೂ ಕಕ್ಷಿಗಾರರಿಗೆ ಕೊಡತಕ್ಕದ್ದು. ಸಾಕ್ಷ್ಯದ ತರೀಕ್ ಉಪಯೋಗಿಸಲ್ಪಟ್ಟ, ಅಸಲ್ ದಸ್ತಾವೇಜುಗಳು, ಅವುಗಳನ್ನು ಹಾಜರ್ ಮಾಡಿದ ಜನಗಳಿಗೆಯಾಗಲಿ ಅಥವಾ, ಗವರ್ನಮೆಂಟಿನಿಂದ ಆಗಿಂದಾಗ್ಯೆ ನಿಯಮಿಸಲ್ಪಡಬಹುದಾದ ನಕ್ಕಲ್ ಮಾಡುವದು ವಗೈರೇಬಗ್ಯೆ ಉಂಟಾದ ಅಂಥಾ ಖರ್ಚುಗಳಿಗೆ ಒಳಪಟ್ಟು; ಸದರೀ ಬಗ್ಯೆ ಯುಕ್ತವಾದ ದರಖಾಸ್ತಿನ ಮೇಲೆ ಕೇಳುವ ಸದರೀ ಮೇಲ್ಕಂಡ ಜನಗಳ ತರಫ್‌ನಿಂದ ಕೋರುವ ಜನಗಳಿಗೂ ಕೊಡಲ್ಪಡತಕ್ಕದ್ದು.

ಮುಂ. ರೆ. ಕೋ. 199ನೇ ಸೆಕ್‌ಷನ್.

ಒಬ್ಬ ಬಾಕೀದಾರನ ದಸ್ತಗಿರಿಯು, ವಾರಂಟಿನ ಮೂಲಕ ಮಾಡಲ್ಪಡತಕ್ಕದ್ದು.

216. ಒಬ್ಬ ಬಾಕೀದಾರನಾಗಲಿ, ಇತರ ಯಾವ ಮನುಷ್ಯನಾಗಲಿ, ದಸ್ತಗಿರೀ ಮಾಡಲ್ಪಡಬಹುದೆಂದು ಈ ರೆಗ್ಯುಲೇಷನ್‌ನಿಂದ ವಿಧಿಸಲ್ಪಟ್ಟಾಗ್ಗೆಲ್ಲಾ, ಅಂಥಾ ಮನುಷ್ಯನ ದಸ್ತಗಿರಿಯನ್ನು ನಿಯಮಿಸುವದಕ್ಕೆ ಲಾಯಖಾದ ಯಾವ ಆಫಿಸರರಿಂದಾಗಲಿ ಸಾದರ್ ಮಾಡಲ್ಪಟ್ಟ ವಾರಂಟ ಅನುಸರಿಸಿ ಅಂಥಾ ದಸ್ತಗಿರಿಯು ಮಾಡಲ್ಪಡತಕ್ಕದ್ದು.

ಮುಂ. ರೆ. ಕೋ. 200ನೇ ಸೆಕ್‌ಷನ್.

ಮೋಜಣೀ ವಗ್ಯೆರೇ ಬಗ್ಯೆ ಯಾವದಾದರೂ ಜಮೀನ್ ಯಾ ನಿವೇಶನಗಳಲ್ಲಿ ಪ್ರವೇಶಿಸಲಿಕ್ಕೆ ರೆವಿನ್ಯು ಆಫಿಸರರ ಅಧಿಕಾರ.

217. ಯಾವ ರೆವಿನ್ಯೂ ಆಫಿಸರಿಗೆಯಾಗಲಿ, ಯಾವಕಾಲದಲ್ಲಾದರು ಮತ್ತು ಆಗಿಂದಾಗ್ಯೆ ಜಮೀನಿನ ಮೋಜಣಿ, ಸರಹದ್ದು ನಿಷ್ಕರ್ಷೆ, ಮತ್ತು ತನಿಖೆ, ತರಂ ಏರ್ಪಾಡು, ಕಂದಾಯ ಮೊಕರರ್‌ಥಾತಿ, ಯಾ ಈ ರೆಗ್ಯುಲೇಷನಿನ ಅಥವಾ ಜಮೀನ್ ಕಂದಾಯಕ್ಕೆ ಸಂಬಂಧಿಸಿದ ತತ್ಕಾಲದಲ್ಲಿ ಜಾರಿ ಇರುವ ಇತರ ಇನ್ಯಾವ ಕಾನೂನಿನ ನಿಬಂಧನೆಗಳನುಸರಿಸಿ ದ ತನ್ನ ಉದ್ಯೋಗಕ್ಕೆ ಶೇರಿದ ನ್ಯಾಯುವಾದ ಅಮಲ್‌ಗಳ ಚಲಾವಣೆಗೆ ಸಂಬಂಧಿಸಿದ ಇತರ ಇನ್ಯಾವ ಕೆಲಸ ಇವುಗಳ ಬಗ್ಯಾಗಿ, ಗವರ್ನಮೆಂಟಿಗಾಗಲಿ ಅಥವಾ ಪ್ರೈವೆಟ ಜನಗಳಿಗಾಗಲಿ ಶೇರಿದ ಮತ್ತು ಜಮೀನ್ ಕಂದಾಯ ಪ್ರಕಾರ ಪೂರಾ ಕಂದಾಯ ಮೊಕರರು ಮಾಡಲ್ಪಟ್ಟ ಅಥವಾ ಕಂದಾಯುದ ದೆಶೆಯಿಂದ ಕೆಲವುಮಟ್ಟಿಗಾಗಲಿ ಪೂರಾ ಆಗಲಿ ವಿನಾಯಿಸಲ್ಪಟ್ಟ ಯಾವ ಜಮೀನು ಯಾ ನಿವೇಶನವನ್ನಾಗಲೀ ಅವಶ್ಯವಿದ್ದಾಗ ಪ್ರವೇಶಿಸುವದು ನ್ಯಾಯವಾಗಿರತಕ್ಕದ್ದು.

ನಿಯಮ.

ಪರಂತು, ಮನುಷ್ಯವಾಸಸ್ಥಾನವಾಗಿ ಉಪಯೋಗಿಸಲ್ಪಟ್ಟ ಯಾವ ಕಟ್ಟಣದಲ್ಲಿಯಾಗಲಿ, ಅದರ ವಾಸಸ್ಥನ ಅನುಮತಿವಿನಾ, ಸದರೀ ಕಟ್ಟಣದಲ್ಲಿ ಪ್ರವೇಶಿಸುವದಕ್ಕೆ ಮುಂದಾಗಿ ಯೇಳು ದಿನಗಳ ವಾಯಿದೆಗೆ ಕಡಮೆ ಇಲ್ಲದ ಒಂದು ನೋಟೀಸ್ ಜಾರೀಮಾಡದೆ ಅದರಲ್ಲಿ ಪ್ರವೇಶಿಸಕೂಡದು; ಮತ್ತು ಯಲ್ಲಬಗೆ ಕಟ್ಟಣಗಳ ವಿಷಯದಲ್ಲಿಯೂ, ವಾಸಸ್ಥರ ಕೋಮಿನ ಮತ್ತು ಮತಸಂಬಂಧದ ಅಭಿಮಾನಗಳನ್ನೂ ತಕ್ಕಂತೆ ಗೌರವಿಸತಕ್ಕದ್ದು.

ಮುಂ. ರೆ. ಕೋ. 202ನೇ ಸೆಕ್‌ಷನ್.

ಜಮೀನನ್ನು ಅಕ್ರಮವಾಗಿ ಸ್ವಾಧೀನದಲ್ಲಿಯುಳ್ಳ ಯಾವನಾದರೂ ಮನುಷ್ಯನ ವಶ ತಪ್ಪಿಸಲಿಕ್ಕೆ ಡೆಪ್ಯುಟಿ ಕಮ್ಮಿಷನರು ಹ್ಯಾಗೆಪ್ರವರ್ತಿಸತಕ್ಕದ್ದು.

218. ಈ ರೆಗ್ಯುಲೇಷನ್‌ನಿಂದಾಗಲಿ, ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಇತರ ಕಾನೂನ್‌ನಿಂದಾಗಲಿ, ಡೆಪ್ಯುಟಿ ಕಮ್ಮಿಷನರು ಅಕ್ರಮವಾಗಿ ಜಮೀನನ್ನು ಸ್ವಾಧೀನಲುಳ್ಳ ಯಾವ ಮನುಷ್ಯನನ್ನಾಗಲಿ, ವಶ ತಪ್ಪಿಸಬಹುದು. ಅಥವಾ ತಪ್ಪಿಸತಕ್ಕದ್ದೆಂದು ವಿಧಿಸುವ ಪಕ್ಷಕ್ಕೆ ಅಂಥಾ ತಪ್ಪಿಸುವಣವು ಇದರಡಿ ಕಂಡ ರೀತಿಯಾಗಿ ಮಾಡಲ್ಪಡತಕ್ಕದ್ದು, ಯಾವದಂದರೆ :—

ಒಂದು ನೋಟೀಸ್ ತಲಪಿದ ಬಳಿಕ ಯುಕ್ತವೆಂದು ಕಾಣಬಹುದಾದ ಅಂಥಾ ಕಾಲದೊಳಗಾಗಿ ಜಮೀನ್ ಖಾಲೀ ಮಾಡುವಂತೆ ನಿಯಮಿಸಿ ಆದರ ಸ್ವಾಧೀನತೆಯುಳ್ಳ ಮನುಷ್ಯನಿಗೆ ಅಥವಾ ಮನುಷ್ಯರಿಗೆ ಸದರೀ ನೋಟೀಸನ್ನು ಜಾರೀ ಮಾಡುವದರ ಮೂಲಕ ; ಮತ್ತು

ಅಂಥಾ ನೋಟೀಸಿನಂತೆ ನಡಿಯದಿದ್ದರೆ ಸದರೀ ಜಮೀನನ್ನು ಖಾಲೀ ಮಾಡುವದಕ್ಕೆ ನಿರಾಕರಿಸಬಹುದಾದ ಯಾವ ಮನುಷ್ಯನನ್ನಾಗಲಿ, ತೊಲಗಿಸಿ ಬಿಡುವದರ ಮೂಲಕ ಅಥವಾ ತೊಲಗಿಸಿ ಬಿಡುವದಕ್ಕೆ ಒಬ್ಬ ತಾಬೇದಾರನನ್ನು ನೇಮಿಸುವದರ ಮೂಲಕ ; ಮತ್ತು

ಅಂಥಾ ಯಾವ ಮನುಷ್ಯನನ್ನಾಗಲಿ ತೊಲಗಿಸಿ ಬಿಡುವ ಆಫೀಸರರನ್ನು ಯಾವ ಮನುಷ್ಯನಾಗಲಿ ಅಡ್ಡಿಮಾಡಿದರೆ ಅಥವಾ ಆತಂಕ ಪಡಿಸಿದರೆ, ಡೆಪ್ಯುಟಿ ಕಮ್ಮಿಷನರು ಮೊಕದ್ದಮೆಯ ಸಿಜವಾದ ಸಂಗತಿಗಳಲ್ಲಿ ಪೂರಾ ವಿಚಾರಣೆ ನಡಿಸತಕ್ಕದ್ದು; ಮತ್ತು ಅಂಥಾ ಅಡ್ಡಿಯು, ಆತಂಕವೂ ಯಾವದಾದರೂ ನ್ಯಾಯವಾದ ಕಾರಣವಿನಾ ಉಂಟಾಯಿತೆಂತಲೂ ಅಂಥಾ ಅಡ್ಡಿಯೂ ಆತಂಕವೂ ಇನ್ನು ಉಂಟಾಗುತ್ತಿದೆಯೆಂತಲೂ ಡೆಪ್ಯುಟಿ ಕಮ್ಮಿಷನರು ಸಮಾಧಾನಪಟ್ಟರೆ, ಅವರು ಅಂಥಾ ಅಡ್ಡಿಯ ಅಥವಾ ಆತಂಕದ ದಂಡನೆಯ ಬಗ್ಯೆ ತತ್ಕಾಲದಲ್ಲಿ ಜಾರೀಯಿರುವ ಯಾವದಾದರೂ ಕಾನೂನು ಅನುಸರಿಸಿ ಅಂಥಾ ಮನುಷ್ಯನು ಗುರಿಯಾಗಬಹುದಾದ ಯಾವ ನಡವಳಿತಕ್ಕಾಗಲಿ ಕುಂದಕವಿಲ್ಲದೆ, ಸದರೀ ಮನುಷ್ಯನ ದಸ್ತಗಿರೀಬಗ್ಯೆ ಒಂದು ವಾರಂಟ ಕೊಟ್ಟು ಅವನು ಹಾಜರಾದ ಮೇಲೆ ಡೆಪ್ಯುಟಿ ಕಮ್ಮಿಷನರ ಯಾರಾದರೂ ಅಮಲ್‌ದಾರರ ಅಥವಾ ಡೆಪ್ಯುಟಿ ಅಮಲ್‌ದಾರರ ಕಚ್ಚೇರಿಯಲ್ಲಿ ಸಖ್ತ ಅಂದರೆ ನಿರ್ಬಂಧಕವಾದ ಫಹರೇಯಲ್ಲಿಡಿಸಲ್ಪಡತಕ್ಕದ್ದು ಅಥವಾ ಅಂತಾ ಆತಂಕವಾಗಲಿ ಅಡ್ಡಿಯಾಗಲಿ ನಡಿಯುತ್ತಿರುವದನ್ನು ನಿಲ್ಲಿಸುವದಕ್ಕೆ ಜರೂರಾಗಬಹುದಾದ ಮೂವತ್ತು ದಿನಗಳಿಗೆ ಮೀರದ ಅಂಥಾ ವಾಯಿದೆ ಪರ್ಯಂತ ಡಿಸ್ಟ್ರಿಕ್ಟು ಸಿವಿಲ್ ಜೈಲಿನಲ್ಲಿ ಖೈದಿಬಗ್ಯೆ I ಷೆಡ್ಯೂಲ್ ನಮೂನೆಯಲ್ಲಿ ಒಂದು ವಾರಂಟನಿಶಿ ಅವನನ್ನು ಕಳುಹಿಸತಕ್ಕದ್ದು.

13ನೇ ಅಧ್ಯಾಯ.

ಅಪ್ಪೀಲ್‌ಗಳು ಮತ್ತು ಪುನರ್ವಿಮರ್ಶೆ.

ಮುಂ. ರೆ. ಕೋ. 203ನೇ ಸೆಕ್ಷನ್.

ಒಬ್ಬ ರೆವಿನ್ಯೂ ಆಫೀಸರ ಯಾನೆ ಮುಲ್ಕೀ ಅಧಿಕಾರಿಯಿಂದ ಕೊಡಲ್ಪಟ್ಟ ಹುಕ್ಕುಂನಿಂದ ಅವರ ಮೇಲ್ಪಟ್ಟ ಆಫೀಸರರಿಗೆ ಅಪ್ಪೀಲ್ ದಾಖಲ್ ಆಗತಕ್ಕದ್ದು.

219. ಈ ರೆಗ್ಯುಲೇಷನಿನಲ್ಲಿ ನಮೂದಿಸಲ್ಪಟ್ಟ ಯಾವದಾದರೂ ನಿಬಂಧನೆ ಯಿಲ್ಲದಿದ್ದಾಗ ಅಥವಾ ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಖಾನೂನಿನ ವಿರುದ್ಧವಾದ ನಿಬಂಧನೆಗಳು ಯಾವದೂ ಇಲ್ಲದಿದ್ದರೆ, ಈ ರೆಗ್ಯುಲೇಷನ್ ಅನುಸರಿಸಿಯಾಗಲಿ ತಕ್ಕಾಲದಲ್ಲಿ ಜಾರಿ ಯಿರುವ ಯಾವದಾದರೂ ಇತರ ಕಾನೂನು ಅನುಸರಿಸಿಯಾಗಲಿ ಒಬ್ಬ ರೆವಿನ್ಯೂ ಆಫೀಸರರಿಂದ ಕೊಡಲ್ಪಟ್ಟ ಯಾವದಾದರೂ ಫೈಸಲ್ ಯಾ ಹುಕ್ಕುಮಿನ ಮೇಲೆ, ಆ ಆಫೀಸರರ ಸಾಕ್ಷಾತ್ ಮೇಲ್ಪಟ್ಟ ಅಧಿಕಾರಿಗೆ ಅಪ್ಪೀಲ್ ದಾಖಲಾಗತಕ್ಕದ್ದು. ಅಂಥಾ ಫೈಸಲ್ ಯಾ ಹುಕ್ಕುಂ ಒಬ್ಬ ತಾಬೇದಾರೀ ಆಫೀಸರರ ಫೈಸಲ್ ಯಾ ಹುಕ್ಕುಮಿನ ಮೇಲೆ ಬಂದ ಅಪ್ಪೀಲಿನ ಮೇಲೆ ಕೊಡಲ್ಪಟ್ಟಾದರೂ ಇರಬಹುದು, ಇಲ್ಲದೆಯಾದರೂ ಇರಬಹುದು.

ಮುಂ. ರೆ. ಕೋ. 149ನೇ ಸೆಕ್ಷನ್.

ಯಾವ ವಾಯಿದೆಗಳೊಳಗೆ ಅಪ್ಪೀಲಗಳು ತರಲ್ಪಡತಕ್ಕವು.

220. ಅಪ್ಪೀಲ್ ಮಾಡಲ್ಪಟ್ಟ ಫೈಸಲಾಗಲಿ, ಹುಕ್ಕುಮಾಗಲಿ, ದರಜೆಯಲ್ಲಿ ಒಬ್ಬ ಡೆಪ್ಯುಟಿ ಕಮಿಷನರಿಗೆ ಅಥವಾ ಒಬ್ಬ ಸರ್ವೇ ಸೂಪರ್ಇಂಟೆಂಡೆಂಟರಿಗೆ ಕಡಮೆಯಾದ ಒಬ್ಬ ಆಫೀಸರರಿಂದ ತಮ್ಮ ತಮ್ಮ ಇಲಾಖೆಗಳಲ್ಲಿ ಕೊಡಲ್ಪಟ್ಟರೆ, ಮೂವತ್ತು ದಿನಗಳು ಕಳೆದ ತರುವಾಯ ಅಥವಾ ಮತ್ತ್ಯಾವದಾದರೂ ಇತರ ಸಂಗತಿಯಲ್ಲಿ ಅರವತ್ತು ದಿನಗಳು ಕಳೆದ ತರುವಾಯ ಅಪ್ಪೀಲ್ ಯಾವದೂ ತರಲ್ಪಡತಕ್ಕದ್ದಲ್ಲವು.

ಸದರೀ ವಾಯಿದೆಗಳನ್ನು ಗಣಿಸುವಲ್ಲಿ, ಅಪ್ಪೀಲ್ ಮಾಡಲ್ಪಟ್ಟ ಫೈಸಲ್ ಯಾ ಹುಕ್ಕುಮಿನ ಒಂದು ನಕ್ಕಲನ್ನು ತಯಾರ್‌ಮಾಡಲಿಕ್ಕೆ ಬೇಕಾದ ಕಾಲವನ್ನು ವಿನಾಯಿಸತಕ್ಕದ್ದು.

ಮುಂ. ರೆ. ಕೋ. 206ನೇ ಸೆಕ್ಷನ್.

ಲಿಮಿಟೇಷನ್, ವಾಯಿದೆಯ ತರುವಾಯ ಅಪ್ಪೀಲನ್ನು ಅಂಗೀಕರಿಸುವಣ.

221. ಈ ಅಧ್ಯಾಯ ಅನುಸರಿಸಿಬರುವ ಯಾವ ಅಪ್ಪೀಲನ್ನಾಗಲಿ, ಅಪ್ಪೀಲ್‌ವಾದಿಯು ಸದರೀ ಬಗ್ಯೆ ವಿಧಿಸಲ್ಪಟ್ಟ ಕಾಲದೊಳಗಾಗಿ ಅಪ್ಪೀಲನ್ನು ದಾಖಲ್‌ಮಾಡದೆ ಇರಲಿಕ್ಕೆ ತಕ್ಕನಿಮಿತ್ತವಿತ್ತೆಂದು, ತಾನು ಅಪ್ಪೀಲ್‌ಮಾಡುವ ಅಧಿಕಾರಿಯನ್ನು ಸಮಾಧಾನಪಡಿಸುವಲ್ಲಿ ಸದರೀ ಕಾಲಮೀರಿಹೋದಮೇಲೂ ಅಂಗೀಕರಿಸಬಹುದು.

ಈ ಸೆಕ್ಷನ್ ಅನುಸರಿಸಿ ಒಂದು ಅಪ್ಪೀಲನ್ನು ಅಂಗೀಕರಿಸಿ ಕೊಡಲ್ಪಟ್ಟ ಒಂದು ಹುಕ್ಕುಮಿನಮೇಲೆ ಯಾವ ಅಪ್ಪೀಲೂ ದಾಖಲಾಗತಕ್ಕದ್ದಲ್ಲವು.

ಮುಂ. ರೆ. ಕೋ. 207ನೇ ಸೆಕ್ಷನ್.

ಅಪ್ಪೀಲ್‌ಬಗ್ಯೆ ಕಡೇದಿನವು ರಜಾ ದಿನದಲ್ಲಿ ಪ್ರಾಪ್ತವಾದರೆ ಯೇರ್ಪಾಡು.

222. ಈ ಅಧ್ಯಾಯದಲ್ಲಿ, ಅಪ್ಪೀಲ್ ದಾಖಲ್‌ಮಾಡುವ ಬಗ್ಯೆ ವಿಧಿಸಲ್ಪಟ್ಟ ಯಾವದಾದರೂ ಕಾಲದ ಕಡೇದಿನವು ಗವರ್ನಮೆಂಟಿನಿಂದ ಮುಂಜೂರ್‌ಮಾಡಲ್ಪಟ್ಟ ಒಂದು ರಜಾದಿನದಲ್ಲಿ ಪ್ರಾಪ್ತವಾದರೆ, ರಜಾ ಆಖೈರು ದಿನದ ಮಾರನೆ ದಿನವು, ಅಂಥಾ ಆಖೈರ್‌ದಿನವಾಗಿ ಭಾವಿಸಲ್ಪಡತಕ್ಕದ್ದು.

ಮುಂ. ರೆ. ಕೋ. 208ನೇ ಸೆಕ್ಷನ್.

ಹುಕ್ಕುಂ ನಕ್ಕಲು, ಅಪ್ಪೀಲ್ ಅರ್ಜೀ ಸಂಗಡ ಕಳುಹಿಸಲ್ಪಡತಕ್ಕದ್ದು.

223. ಅಪ್ಪೀಲಿನ ಪ್ರತಿ ಅರ್ಜೀಯ ಸಂಗಡಲೂ, ಅಪ್ಪೀಲ್‌ಮಾಡಲ್ಪಟ್ಟ ಫೈಸಲ್ ಯಾ ಹುಕ್ಕುಂ, ಅಥವಾ ಅದರ ಬಾಬತು ಸೈನ್ ಮೊಹರ್‌ಮಾಡಲ್ಪಟ್ಟ ಒಂದು ನಕ್ಕಲು, ಇವುಗಳು ಕಳುಹಿಸಲ್ಪಡತಕ್ಕವು.

ಮುಂ. ರೆ. ಕೋ. 209ನೇ ಸೆಕ್ಷನ್.

ಅಪ್ಪೀಲ್ ಅಧಿಕಾರಿಯ ಅಧಿಕಾರಗಳು.

224. ಅಪ್ಪೀಲ್ ಅಧಿಕಾರಿಯು, ಅಪ್ಪೀಲ್‌ಮಾಡಲ್ಪಟ್ಟ ತಾಬೇದಾರೀ ಆಫೀಸರರ ಫೈಸಲನ್ನಾಗಲಿ, ಹುಕ್ಕುಮನ್ನಾಗಲೀ ರದ್ದು ಮಾಡಬಹುದು, ಬದಲಾಯಿಸಬಹುದು, ತಿದ್ದುಪಡಿ ಮಾಡಬಹುದು. ಅಥವಾ ಕಾಯಂಮಾಡಬಹುದು, ಅಥವಾ ತಮಗೆ ಜರೂರೆಂದು ತೋರುವ ಅಂಥಾ ಹೆಚ್ಚು ವಿಚಾರಣೆಯನ್ನು ಮಾಡುವಂತೆ, ಅಥವಾ ಅಂಥಾ ಜಾಸ್ತೀ ಸಾಕ್ಷ್ಯವನ್ನು ತೆಗೆದುಕೊಳ್ಳುವಂತೆ ತಾಬೇದಾರೀ ಆಫೀಸರರನ್ನು ನಿಯಮಿಸಬಹುದು. ಅಥವಾ ಅಂಥಾ ಹೆಚ್ಚಾದ ಸಾಕ್ಷ್ಯವನ್ನು ತಾವಾಗಿಯೇ ತೆಗೆದುಕೊಳ್ಳಬಹುದು.

ಮುಂ. ರೆ. ಕೋ. 210ನೇ ಸೆಕ್ಷರ್ಷ.

ತಾಬೇದಾರೀ ಆಫಿಸರರ ಹುಕುಮಿನ ಅಮಲ್‌ಜಾರೀಯನ್ನು ಸಸ್ಪೆಂಡ ಮಾಡುವದಕ್ಕೆ ಅಧಿಕಾರ.

225. ಅಪ್ಪೀಲ್ ದಾಖಿಲಾಗುವ ಯಾವ ಮೊಕದ್ದಮೆಯಲ್ಲಾಗಲಿ, ಅಪ್ಪೀಲ್ ಅಧಿಕಾರಿಯು, ಅಪ್ಪೀಲಿನ ಫೈಸಲ್ ಆಗುವವರಿಗೆ, ತಾಬೇದಾರೀ ಆಫೀಸರರ ಫೈಸಲ್ ಯಾ ಹುಕ್ಕುಂ ಅಮಲ್‌ಜಾರೀಯಾಗುವದನ್ನು ನಿಲ್ಲಿಸಿಯಿಡುವಂತೆ ನೇಮಿಸಬಹುದು.

ಮುಂ. ರೆ. ಕೋ. 211ನೇ ಸೆಕ್ಷರ್ಷ.

ತಾಬೇದಾರೀ ಆಫಿಸರರ ರೆಕಾರ್ಡಗಳನ್ನೂ ನಡವಳಿತಗಳನ್ನೂ ತರಿಸಿಕೊಳ್ಳುವದಕ್ಕೂ ತನಿಖೀಮಾಡುವದಕ್ಕೂ ಗವರ್ನಮೆಂಟಿನ ಅಥವಾ ಕೆಲವ ರೆವಿನ್ಯೂ ಆಫಿಸರ್‌ಗಳ ಅಧಿಕಾರ.

226. ಗವರ್ನಮೆಂಟನವರಾಗಲಿ, ಒಬ್ಬ ಡೆಪ್ಯುಟಿ ಕಮ್ಮಿಷನರಾಗಲಿ, ಒಬ್ಬ ಸರ್ವೇ ಸೂಪರ್ರಿಂಟೆಂಡೆಂಟರಾಗಲಿ, ತಮಗೆ ತಾಬೇದಾರನಾದ ಒಬ್ಬ ರೆವಿನ್ಯೂ ಆಫಿಸರರಿಂದ ಕೊಡಲ್ಪಟ್ಟ ಯಾವದಾದರೂ ಫೈಸಲ್ ಯಾ ಹುಕ್ಕುಮಿನ ನ್ಯಾಯಸಿದ್ಧತೆ, ಅಥವಾ ಯುಕ್ತತೆ ಮತ್ತು ಅಂಥಾ ಆಫಿಸರರ ನಡವಳತಗಳ ಕ್ರಮ, ಇಂಥಾದ್ದನ್ನು ಕುರಿತು, ಸಮಾಧಾನಪಡುವಬಗ್ಯೆ ಅವರಿಗೆ ಯಾ ಆತಗೆ ತಾಬೇದಾರರಾದ ಯಾರಾದರೂ ರೆವಿನ್ಯೂ ಆಫೀಸರರ ಯಾವದಾದರೂ ವಿಚಾರಣೆಯ ನಡವಳಿತದ ಒಂದು ರಿಕಾರ್ಡನ್ನು ತರಿಸಿ ತಮ್ಮ ತಮ್ಮ ಇಲಾಖೆಗಳಲ್ಲಿ ತನಖೀಮಾಡಬಹುದು.

ಇದರಡಿ ಕಂಡ ಆಫಿಸರ್‌ಗಳು ಒಂದು ಕ್ರಮವಾದ ವಿಚಾರಣೆಯಾಗಲಿ ಪ್ರೂಟ ವಿಚಾರಣೆಯಾಗಲಿ, ನಡೆಯದೇ ಇರುವ ಯಾವ ವಿಷಯದಲ್ಲಾಗಲಿ, ತಮಗೆ ತಾಬೇದಾರರಾದ ಯಾರಾದರೂ ಆಫಿಸರರ ನಡವಳತಗಳನ್ನು ಬದಸ್ತೂರ ತರಿಸಿಕೊಂಡು ತನಖೀಮಾಡಬಹುದು. ಸದರೀ ಆಫೀಸರ್‌ಗಳ್ಯಾರಂದರೆ—ಒಬ್ಬ ಅಸಿಸ್ಟೆಂಟ ಕಮ್ಮಿಷನರ್, ಒಬ್ಬ ಅಮಲ್‌ದಾರ್, ಒಬ್ಬ ಡೆಪ್ಯುಟಿ ಅಮಲ್‌ದಾರ್, ಒಬ್ಬ ಸರ್ವೇ ಅಸಿಸ್ಟೆಂಟ ಸೂಪರ್ರಿಂಟೆಂಡೆಂಟ್, ಮತ್ತು ಅಸಿಸ್ಟೆಂಟ ಸೆಟ್ಲ್‌ಮೆಂಟ ಆಫೀಸರ್—

ಮತ್ತು ಅದರ ಮೇಲೆ ಹುಕ್ಕುಂಗಳನ್ನು ಕೊಡತಕ್ಕದ್ದು.

ಯಾವ ಸಂಗತಿಯಲ್ಲಾಗಲಿ, ಹಾಗೆ ತರಿಸಿಕೊಳ್ಳಲ್ಪಟ್ಟ ಯಾವದಾದರೂ ಫೈಸಲ್ ಯಾ ಹುಕ್ಕುಂ ಯಾ ನಡವಳತಗಳನ್ನು ತಿದ್ದುಪಾಟು ಮಾಡತಕ್ಕದ್ದು ಅಥವಾ ರದ್ದುಮಾಡತಕ್ಕದ್ದು ಅಥವಾ ಬದಲಾಯಿಸತಕ್ಕದ್ದೆಂದು ಮೇಲೆಕಂಡ ಆಫೀಸರರಿಗೆ ಕಾಣಬಂದರೆ, ಸದರೀ ಆಫೀಸರರು ಅದರ ಮೇಲೆ ತಮಗೆ ಯುಕ್ತತೋರುವಂಥಾ ಹುಕ್ಕುಮನ್ನು ಕೊಡಬಹುದು.

ಮುಂ. ರೆ. ಕೋ. 212ನೇ ಸೆಕ್ಷರ್ಷ.

ಸ್ಪಷ್ಟವಾಗಿ ಆಖೈರಾದ ಫೈಸಲಗಳ ಅಥವಾ ಹುಕ್ಕುಂಗಳ ವಿಷಯದಲ್ಲಿ ರೂಲ್ಸ್.

227. ಈ ರೆಗ್ಯುಲೇಷನ್ನಲ್ಲಿ ಒಂದು ಫೈಸಲಾಗಲಿ, ಹುಕ್ಕುಮಾಗಲಿ, ಆಖೈರಾಗಿರತಕ್ಕದ್ದೆಂದು ತಿಳಿಸಲ್ಪಟ್ಟರೆ, ಅಂಥಾ ಫೈಸಲ್ ಯಾ ಹುಕ್ಕುಮಿನ ಮೇಲೆ ಯಾವ ಅಪ್ಪೀಲೂ ದಾಖಿಲಾಗುವದಿಲ್ಲವೆಂದು ಅರ್ಥವೆಂಬದಾಗಿ ಯೆಣಿಸತಕ್ಕದ್ದು.

ಹಿಂದಿನಕಡೇ ಸೆಕ್ಷರ್ಷ ನಿಬಂಧನೆಗಳನುಸರಿಸಿ ಅಂಥಾ ಯಾವ ಫೈಸಲನ್ನಾಗಲಿ; ಹುಕ್ಕುಮನ್ನಾಗಲಿ; ತಿದ್ದುಪಾಟು ಮಾಡುವದಕ್ಕೂ ರದ್ದುಮಾಡುವದಕ್ಕೂ ಯಾ ಬದಲಾಯಿಸಲಿಕ್ಕೂ ಗವರ್ನಮೆಂಟನವರು ಮಾತ್ರ ಯುಖ್ತಿಯಾರಿ ವುಳ್ಳವರಾಗಿ ಇರತಕ್ಕದ್ದು.

14ನೇ ಅಧ್ಯಾಯ.

ರೆವಿನ್ಯೂ ಅಧಿಕಾರ.

ಅರ್ಥ ವಿವರಣೆಯ ಕ್ಲಾಜ್.

228. ಈ ಅಧ್ಯಾಯದಲ್ಲಿ ವಿಷಯತಃ ಆಗಲಿ ಸಂದರ್ಭತಃ ಆಗಲಿ ಯಾವದಾದರೂ ವಿರುದ್ಧಾಂಶ ಇಲ್ಲದಿದ್ದರೆ—

"ಜಮೀನ್" ಎಂಬದು ಗ್ರಾಮಗಳ ನಿವೇಶನಗಳನ್ನೂ ಪಟ್ಟಣಗಳನ್ನೂ ಷಹರಿಗಳನ್ನೂ ಅಡಗಿಸಿಕೊಳ್ಳುತ್ತೆ; ಮತ್ತು ಸದರೀ ಶಬ್ದವು ಮರಗಳು, ಬೆಳೆಯುವ ಫಸಲ್, ಹುಲ್ಲು, ಮರಗಳಮೇಲಣ ಫಲಗಳು, ಮತ್ತು ಅವುಗಳಲ್ಲಿಯ ರಸ, ಮಾರ್ಗ, ಹರಿಗೋಲುಗಳು ಮತ್ತು ಮೀನುಹಿಡಿಯುವ ಸ್ಥಳಗಳು ಇವುಗಳನ್ನು ಸಹ ಅಡಗಿಸಿಕೊಳ್ಳುತ್ತೆ.

"ಜಮೀನ್ ಕಂದಾಯ" ಅಂದರೆ, ಗವರ್ನ್‌ಮೆಂಟಿನಿಂದ ಅಥವಾ ಗವರ್ನ್‌ಮೆಂಟ್ ತರಫಿನಲ್ಲಿ, ಯಾವ ಮನುಷ್ಯನಿಂದಾಗಲಿ, ಅವನ ಹಿಡುವಳೀಯಲ್ಲಿರುವುಳ್ಳ ಅಥವಾ ಅವನ ವಶಕ್ಕೆ ಕೊಡಲ್ಪಟ್ಟ ಜಮೀನಿಗಾಗಿ ಹೊಂದಿದ ಅಥವಾ ಬರತಕ್ಕದ್ದೆಂಬ ದರೋಬಸ್ತು ಮೊಬಲಗುಗಳೂ ನಗದಾದ ಅಥವಾ ಧಾನ್ಯರೂಪವಾದ ಪಾವತೀಗಳು ಮತ್ತು ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಕಾನೂನಿನ ನಿಬಂಧನೆಗಳನು ಸರಿಸಿ ಗವರ್ನ್‌ಮೆಂಟಿನಿಂದ ನೇಮಿಸಲ್ಪಟ್ಟ ಯಾವದಾದರೂ ತೀರ್ವೆ ಯಾ ದರ ಯೆಂಬದಾಗಿ ಅರ್ಥವಾಗುತ್ತದೆ.

ಪೆ೯ಷರ್ಷ ಆಕ್ಟಿನ ನಿಬಂಧನೆಗಳ ವಿನಾಯಿತಿ.

229. ಈ ಅಧ್ಯಾಯದಲ್ಲಿರುವ ಯಾವ ಅಂಶವೂ (ಪೆ೯ಷರ್ಷ ಆಕ್ಟು) ಎಂಬ ಸನ್ 1871ನೇ ಇಸವೀ 23ನೇ ಆಕ್ಟಿನ ನಿಬಂಧನೆಗಳ ಪೈಕೀ ಯಾವದಕ್ಕೂ ಬಾಧಕವಾಗತಕ್ಕದ್ದಲ್ಲವು.

ಕೆಲವು ವ್ಯಾಜ್ಯಗಳ ನಿರ್ಬಂಧ.

230. ಇದರಲ್ಲಿ ಮುಂದೇಕಾಣುವ ವಿನಾಯಿತಿಗಳಿಗೆ ಒಳಪಟ್ಟು ಇದರಲ್ಲಿ ಹಿಂದೆ ಸ್ಪಷ್ಟವಾಗಿ ವಿಧಿಸಲ್ಪಟ್ಟಂತೆ ವಿನಾ, ಇದರಡಿಕಂಡ ವಿಷಯಗಳ ಪೈಕಿ ಯಾವದನ್ನು ಕುರಿತಾಗಲಿ, ಅಧಿಕಾರವನ್ನು ಯಾವ ಸಿವಿಲ್ ಕೋರ್ಟಿನವರೂ ಚಲಾಯಿಸಕೂಡದು.

(a) ಗವರ್ನ್‌ಮೆಂಟಿನಿಂದ ಮೊಕರರ್ ಮಾಡಲ್ಪಟ್ಟ ಅಥವಾ ಮಂಜೂರ್ಮಾಡಲ್ಪಟ್ಟ, ವಂಶ ಪಾರಂಪರ್ಯದ ಯಾರಾದರೂ ಆಫೀಸರರ ಅಥವಾ ಯಾರಾದರೂ ಇತರ ಗ್ರಾಮಆಫೀಸರರ ಯಾ ನೌಕರರ ಉದ್ಯೋಗಕ್ಕೆ ಸಂಬಂಧಿಸಿದ ಯಾವದಾದರೂ ಸ್ವತ್ತನ್ನು ಕುರಿತು ಗವರ್ನ್‌ಮೆಂಟಿನವರಮೇಲೆ ದಾವೆ; ಅಥವಾ

ಅಂಥಾ ಯಾರಾದರೂ ಆಫೀಸರರ ಯಾ ನೌಕರನ ಕೆಲಸಗಳನ್ನು ನಿರ್ವಹಿಸಲಿಕ್ಕೆ ಅಥವಾ, ಅಂಥಾ ಉದ್ಯೋಗ ಅಥವಾ ನೌಕರಿಯ ದೆಸೆಯಿಂದ ವಿನಾಯಿಸಿದ್ದರಿಂದ ಉಂಟುಮಾಡಲ್ಪಟ್ಟ ಯಾವದಾದರೂ ನುಕ್ಸಾನ್ ವಿಷಯದಲ್ಲಿ ತರಲ್ಪಡುವ ದಾವೆಗಳು; ಅಥವಾ

ಗವರ್ನ್‌ಮೆಂಟಿನಿಂದಾಗಲಿ, ಆಬಗ್ಗೆ ಕ್ರಮಪ್ರಕಾರ ಅಧಿಕಾರ ಕೊಡಲ್ಪಟ್ಟ ಯಾರಾದರು ಆಫೀಸರಿಂದ ಕೊಡಲ್ಪಡಬಹುದಾದ, ಅಂಥಾ ಉದ್ಯೋಗ ಅಥವಾ

ನೌಕರೀ, ಅಥವಾ ಅಂಥಾ ಆಫೀಸರಿ ಯಾ ನೌಕರನಿಗೆ ಸಂಬಂಧಿಸಿದ ಯಾವ ಹುಕ್ಕು ಮನ್ನಾಗಲಿ, ವಜಾಮಾಡಿ ಅಥವಾ ತಪ್ಪಿಸಲಿಕ್ಕೆ ತರಲ್ಪಟ್ಟ ವ್ಯಾಜ್ಯಗಳು ; ಅಥವಾ

ಗವರ್ನ್‌ಮೆಂಟಿನವರಿಂದಾಗಲಿ ಅವರ ತರಫ್ ಕ್ರಮಪ್ರಕಾರ ಅಧಿಕಾರಹೊಂದಿದ ಯಾವ ಆಫೀಸರಿಂದಾಗಲಿ ಯಾವದಾದರೂ ಚಾಕರಿ ಬಗ್ಗೆ ವಹಿಸಲ್ಪಡತಕ್ಕದ್ದೆಂಬದಾಗಿ ಹೇಳಲ್ಪಟ್ಟ ಜಮೀನುಗಳ ವಿಷಯದಲ್ಲಿ ಗವರ್ನ್‌ಮೆಂಟಿನವರಮೇಲೆ ತರಲ್ಪಡುವ ದಾವೆಗಳು ;

(*b*) ಆಕ್ಷೇಪಣೆಗಳು—

ಗವರ್ನ್‌ಮೆಂಟಿನಿಂದ ನಿಯಮಿಸಲ್ಪಟ್ಟ ಜಮೀನು ಕಂದಾಯದಬಗ್ಗೆ ಠರಾಯಿಸಲ್ಪಟ್ಟ ಯಾವದಾದರೂ ಮೊಬಲಗಿಗೆ ಯಾ ಕಂದಾಯ ಹಾಕುವಣೆ ಅಥವಾ ಕಂದಾಯ ಮೊಕರರಾತಿಯವಿಧ ಅಥವಾ ಯಾವ ಶಿದ್ಧಾಂತದಮೇಲೆ ಅಂಥಾ ಕಂದಾಯ ನಿಶ್ಚಯಿಸಲ್ಪಟ್ಟಿತೋ ಅದು ; ಅಥವಾ

ಸರ್ವೇ ಅಥವಾ ಸೆಟಲ್‌ಮೆಂಟಿನ ಇಸ್ತಿಹಾರ್‌ನಾಮೆಯು, ಅಥವಾ ಸೆಟಲ್‌ಮೆಂಟಿನ ವಾಯಿದೆಯನ್ನು ನಿಶ್ಚಯಿಸತಕ್ಕ ಯಾವದಾದರೂ ಇಸ್ತಿಹಾರ್‌ನಾಮೆಯ ದೃಢತ್ವ ಅಥವಾ ಫಲಿತಾಂಶ ಈ ವಿಷಯಗಳಲ್ಲಿ ಆಕ್ಷೇಪಣೆಗಳು ; ಅಥವಾ

(*c*) ಜಮೀನು ಕಂದಾಯದ ವಸೂಲಾತೀಬಗ್ಗೆ, ಅಥವಾ ಗವರ್ನ್‌ಮೆಂಟಿನಿಂದಾಗಲಿ, ಆಬಗ್ಗೆ ಕ್ರಮವಾಗಿ ಅಧಿಕಾರ ಕೊಡಲ್ಪಟ್ಟ ಯಾವ ಆಫೀಸರರಿಂದಾಗಲಿ, ಮೇಲ್ಪಟ್ಟ ಹಿಡುವಳೀದಾರರಿಗೆ, ಕಮ್ಮಿ ಹಿಡುವಳೀದಾರರಿಂದ, ಅವರುಗಳ ಬಾಕೀಗಳನ್ನು ವಸೂಲ್‌ಮಾಡುವಬಗ್ಗೆ, ಕುಮ್ಮಕ್ ಮಾಡುವಬಗ್ಗೆ ಯಾವದಾದರೂ ನಡವಳಿತಗಳಿಗೆ ಸಂಬಂಧಿಸಿದ ಅಥವಾ ಅವುಗಳಿಂದ ವುಂಟಾಗುವ ದಾವೆಗಳು ; ಅಥವಾ

ದಗಾ ಹೊರ್ತು ಅಕ್ರಮ, ಗಲ್ಲತ್ ಅಥವಾ ಮತ್ಯಾವದಾದರೂ ಇತರ ಕಾರಣಕ್ಕಾಗಿ ಜಮೀನು ಕಂದಾಯದ ಬಾಕೀಗಳಿಗಾಗಿ ನಡಿಸಲ್ಪಡುವ ವಿಕ್ರಯಗಳನ್ನು ತಳ್ಳಿಹಾಕುವಬಗ್ಗೆ ದಾವೆಗಳು ;

(*d*) ಗವರ್ನ್‌ಮೆಂಟಿನವರಮೇಲೆ ದಾವೆಗಳು—

(1) ಜಮೀನು ಕಂದಾಯಕ್ಕೆ ಗುರಿಯಾಗಿರುವದಾಗಿ, ಅಥವಾ ಮೇಲ್ಪಟ್ಟ ಹಿಡುವಳೀದಾರನಂತೆ, ಕಮ್ಮಿ ಹಿಡುವಳೀದಾರ, ಅನುಭವದಾರ ಅಥವಾ ಷಿಕ್ಮೀದಾರನಂತೆ ರೆವಿನ್ಯೂ ಸರ್ವೇ ಅಥವಾ ಸೆಟಲ್‌ಮೆಂಟ್ ರಿಕಾರ್ಡುಗಳಲ್ಲಿಯಾಗಲಿ ಗ್ರಾಮದ ಕಾಗದ ಪತ್ರಗಳಲ್ಲಿಯಾಗಲಿ ದಾಖಲ್ಮಾಡಲಿಕ್ಕೆ ; ಅಥವಾ

(2) ರೆವಿನ್ಯೂಸರ್ವೆ ಅಥವಾ ಸೆಟಲ್‌ಮೆಂಟಿನ ಯಾವ ರಿಕಾರ್ಡಿನಲ್ಲಾಗಲಿ ಯಾವದಾದರೂ ಖಿತಾಯಿತಿಮಾಡಲ್ಪಡಲಿಕ್ಕೆ ; ಅಥವಾ

(3) ಅಂಥಾ ಯಾವ ಖಿತಾಯಿತಿಯನ್ನಾಗಲಿ ಬಿಡುವದಕ್ಕೆ ಅಥವಾ ತಿದ್ದುಪಾಡುಮಾಡಲಿಕ್ಕೆ ;

(*e*) ಸನ್ 1866ನೇ ಇಸವಿಯ 4ನೇ ಮುಂಬೈ ಆಕ್ಟನುಸರಿಸಿ ಅಥವಾ ಈ ರೆಗ್ಯುಲೇಷನ್ ಅನುಸರಿಸಿ ಅಥವಾ ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ

ಇತರ ಕಾನೂನ್ ಅನುಸರಿಸಿ ಯಾವದಾದರೂ ಎಸ್ಟೇಟಿನ ವಿಭಾಗದಲ್ಲಿ ಜಮೀನ್ ಹಂಚಿಕೆ ಅಥವಾ ಜಮೀನ್ ಕಂದಾಯದ ನಿರ್ಣಯು ;

(*f*) 92ನೇ ಸೆಕ್ಷನ್ ಅನುಸರಿಸಿ ಕಂದಾಯ ಜಾಸ್ತೀ ಮಾಡುವ ಬಗ್ಯೆ ಅಥವಾ ಕಮ್ಮಿ ಮಾಡುವಬಗ್ಯೆ ದಾವೆಗಳು, ಅಥವಾ, 100ನೇ ಮತ್ತು 101ನೇ ಸೆಕ್ಷನ್‌ಗಳನುಸರಿಸಿ ಗುತ್ತಿಗೆಯು ಬಗ್ಯೆ ಅಥವಾ ಪರಸ್ಪರ ಒಡಂಬಡಿಕೆಗಳ ಬಗ್ಯೆ ದಾವೆಗಳು ;

(*g*) ಜಮೀನ್ ಕಂದಾಯ ಪೂರಾ ಆಗಲಿ, ಕೆಲವುಮಟ್ಟಿಗಾಗಲಿ, ಕೊಡಬೇಕಾದ್ದಿಲ್ಲದೆ, ಜಮೀನನ್ನು ವಹಿಸಲಿಕ್ಕೆ ಗವರ್ನಮೆಂಟಿನ ಮೇಲೆ ದಾವೆಗಳು ; ಅಥವಾ

ಜಮೀನ್ ಕಂದಾಯದಮೇಲೆ ಹಾಕಲ್ಪಟ್ಟ ಅಥವಾ ಅದರ ದೆಸೆಯಿಂದ ಕೊಡಲ್ಪಡತಕ್ಕ ಮೊಬಲಗ್‌ಗಳನ್ನು ಪಡೆಯಲಿಕ್ಕೆ ; ಅಥವಾ

ತತ್ಕಾಲದಲ್ಲಿ ಜಾರೀ ಇರುವ ಅಥವಾ ಗವರ್ನಮೆಂಟಿಗೆ ಸೇರಿದ ಬಂಜರ್ ಯಾ ಖಾಲೀ ಜಮೀನಿನ ಅನುಭವವನ್ನು ಕುರಿತ ಯಾವದಾದರೂ ಕಾನೂನಿನ ನಿಬಂಧನೆಗಳನುಸರಿಸಿ ಗವರ್ನಮೆಂಟಿನಿಂದ ನಿಯಮಿಸಲ್ಪಟ್ಟ ಯಾವದಾದರೂ ತೆರಿಗೆ ಅಥವಾ ಕಂದಾಯವನ್ನು ವಜಾ ಮಾಡಲಿಕ್ಕೆ ತರಲ್ಪಟ್ಟ ದಾವೆಗಳು ;

(*h*) ಸನ್ 1865ನೇ ಇಸವಿಯ 1ನೇ ಮುಂಬೈ ಆಕ್ಟು ಅನುಸರಿಸಿ, ಅಥವಾ ಈ ರೆಗ್ಯೂಲೇಷನ್ ಅನುಸರಿಸಿ, ಅಥವಾ ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಇತರ ಕಾನೂನ್ ಅನುಸರಿಸಿ, ನಿಶ್ಚಯಿಸಲ್ಪಟ್ಟ ಸರಹದ್ದುಗಳನ್ನು ಕುರಿತು, ಅಥವಾ ಯಲ್ಲೇ ಗುರುತುಗಳ ವಿಷಯದಲ್ಲಿ ಅಂಥಾ ಯಾವ ಕಾನೂನ್ ಅನುಸರಿಸಿಯಾಗಲಿ, ಲಾಯಖಾದ ಒಬ್ಬ ಆಫೀಸರಿಂದ ಕೊಡಲ್ಪಟ್ಟ ಯಾವ ಹುಕ್ಕುಮುನ್ನಾಗಲಿ ತಳ್ಳಿಹಾಕಲಿಕ್ಕೆ ತರಲ್ಪಟ್ಟ ದಾವೆಗಳು ,

ನಿಯಮ.

ಪರಂತು, ಜಮೀನ್ ಕಂದಾಯ ಕೊಡುವದರ ದೆಸೆಯಿಂದ ಪೂರಾ ಆಗಲಿ ಕೆಲವುಮಟ್ಟಿಗಾಗಲಿ ವಿನಾಯಿಸಲ್ಪಟ್ಟ ಜಮೀನನ್ನು ಹಿಡುವಳೀಯಲ್ಲಿ ಪಡೆಯಲಿಕ್ಕೆ ಯಾವ ಮನುಷ್ಯನಾಗಲಿ ಈ ಕೆಳಗೆ ಬರುವ ಆಕ್ಟು ವಗೈರೇ ಅನುಸರಿಸಿ ದಾವೇ ಮಾಡಿದರೆ—

(*i*) ಒಂದು ವಿನಾಯಿತಿಯು ಪಬ್ಲಿಕ್ ರಿಕಾರ್ಡಿನಲ್ಲಿ ನಮೂದಿಸಲ್ಪಟ್ಟಿರುವ ಅಥವಾ ಸ್ಪಷ್ಟವಾಗಿ ವಿವರಿಸಲ್ಪಟ್ಟ ಕೆಲವು ವರುಷಗಳ ವಾಯಿದೆಯ ಪರ್ಯಂತ ನೆಲೆಗೊಂಡಿದ್ದ ಸಬಬಿನ ಮೇಲೆ, ಒಬ್ಬ ಮನುಷ್ಯನಪಕ್ಷದಲ್ಲಿಯಾಗಲಿ, ಜನಗಳ ಯಾವ ತರಗತಿಯಪಕ್ಷದಲ್ಲಾಗಲಿ, ಪೂರ್ವದಲ್ಲಿ ನೆಲಗೊಳ್ಳದೇ ಇದ್ದ ಒಂದು ವಿನಾಯಿತಿಯನ್ನು ವಿಶೇಷತಃ ಉಂಟು ಮಾಡುವ, ಅಥವಾ ಅಂಥಾ ವಿನಾಯಿತಿಯನ್ನು ವಿಶೇಷತಃ ಕಾಯಂ ಮಾಡುವ ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಆಕ್ಟು ; ಅಥವಾ

(*j*) ಗವರ್ನಮೆಂಟಿನಿಂದಾಗಲಿ, ಗವರ್ನಮೆಂಟಿನ ಅಪ್ಪಣೆಯ ಮೇರೆಯಾಗಲಿ, ಕೊಡಲ್ಪಟ್ಟ ಒಂದು ದಸ್ತಾವೇಜು ಅಥವಾ ಸನ್ನದು ;

ಅಂಥಾ ದಾವೆಯು ಸಿವಿಲ್ ಕೋರ್ಟುಗಳಲ್ಲಿ ಹಿಡಿಯಲ್ಪಡತಕ್ಕದ್ದು.

(*i*) ಗುರುತಿನ ವಿಷಯಕ್ಕೆ ಉದಾಹರಣೆಗಳು.

(1) ವಿಧಿಸಲ್ಪಡುವದೇನಂದರೆ, ಕಂದಾಯಕ್ಕೆ ಒಂದು ಗೊತ್ತಾದ ಹದ್ದು ಸ್ಥಾಪಿಸಲ್ಪಟ್ಟು ಕಾಪಾಡಲ್ಪಟ್ಟರೆ, ಕಂದಾಯವು ಅಂಥಾ ಹದ್ದಿಗೆ ಮೀರಕೂಡದು, ಮ

ಸಲಾ A ಯಂಬವನು 100 ರೂಪಾಯಿಗಳು ಕಂದಾಯವುಳ್ಳ ಜಮೀನಿನ ಸ್ವಂತಗಾರನಾಗಿರುತ್ತಾನೆ, ಅವನ ಮತ್ತು ಅವನ ಪೂರ್ವೀಕರ ಲೇವಾದೇವಿಯಲ್ಲಿ ಯಾವಾಗಲೂ 50 ರೂಪಾಯಿಗಳಿಗೆ ಹೆಚ್ಚಾಗಿ ಕಂದಾಯ ತರಾಯಿಸಲ್ಪಟ್ಟಿರಲಿಲ್ಲವೆಂಬ ಕಾರಣದಿಂದ ಸದರೀ 50 ರೂಪಾಯಿ ಕಂದಾಯವನ್ನೇ ತರಾಯಿಸಬೇಕೆಂದು ದಾವಾ ಮಾಡುತ್ತಾನೆ. ಪೂರ್ವದಲ್ಲಿಲ್ಲದ ವಿನಾಯಿತಿಯು ಆಕ್ಟಿನ ದೆಶೆಯಿಂದ ಉಂಟುಮಾಡಲ್ಪಡಲಿಲ್ಲವಾಗಿ A ಎಂಬವನ ದಾವೆ ಒಂದು ಸಿವಿಲ್ ಕೋರ್ಟಿನಲ್ಲಿ ಹಿಡಿಯಲ್ಪಡತಕ್ಕದ್ದಲ್ಲವು.

(2) ವಿಧಿಸಲ್ಪಡುವದೇನಂದರೆ, ಹಿಡುವಳೀಯಲ್ಲಿವುಳ್ಳ ಮತ್ತು ವಿನಾಯಿಸಲ್ಪಟ್ಟಂತೆ ಜಮ್ಮಾ ರಿಜಿಸ್ಟರಿನಲ್ಲಿ ದಾಖಲ್ಮಾಡಲ್ಪಟ್ಟ ಯಾವ ಜಮೀನಿನಿಂದಾಗಲಿ ಜಮ್ಮಾ ಕಂದಾಯವನ್ನು ವಸೂಲ್ಮಾಡತಕ್ಕದ್ದಲ್ಲವು. A ಎಂಬವನು ಒಂದು ಜಮೀನನ್ನು ಆ ಮೇರೆ ವಹಿಸಿ ಇರುವ ಮತ್ತು ಆ ಮೇರೆ ಜಮ್ಮಾ ರಿಜಿಸ್ಟರಿನಲ್ಲಿ ದಾಖಲ್ಮಾಡಲ್ಪಟ್ಟಿರುವ ಸಬಬಿನ ಮೇಲೆ ಒಂದಾನೊಂದು ಜಮೀನನ್ನು ವಿನಾಯಿಸಲ್ಪಟ್ಟಿರುವಂತೆ ಹಿಡುವಳೀಯಲ್ಲಿ ಪಡೆಯಲಿಕ್ಕೆ ದಾವಾ ಮಾಡುತ್ತಾನೆ, ಸದರೀ ವಿನಾಯಿತಿಯು ಒಂದು ಪಬ್ಲಿಕ್ ರಿಕಾರ್ಡಿನಲ್ಲಿ ತೋರಿಸಲ್ಪಟ್ಟಿರುವ ಸಬಬಿನ ಮೇಲೆ ಸ್ಪಷ್ಟವಾಗಿ ಕಾಯಂಮಾಡಲ್ಪಟ್ಟಿರುತ್ತೆ. A ಎಂಬವನ ದಾವೆಯು ಒಂದು ಶಿವಿಲ್ ಕೋರ್ಟಿನಲ್ಲಿ ಹಿಡಿಯಲ್ಪಡತಕ್ಕದ್ದು.

(3) ಕೆಲವು ಮ್ಯಾಪ್‌ಗಳಲ್ಲಿಯಾನೆ ಪಟಗಳಲ್ಲಿ ವಿನಾಯಿಸಲ್ಪಟ್ಟಿರುವಂತೆ ತೋರಿಸಲ್ಪಟ್ಟ ತಮಾಂ ಜಮ್ಮಾಗಳ ಹಾಲೀ ಜಾರೀಯಲ್ಲಿರುವ ವಿನಾಯಿತಿಗಳನ್ನೂ ಡೆಪ್ಯುಟಿ ಕಮ್ಮಿಷನರು ಕಾಯಂ ಮಾಡತಕ್ಕದ್ದೆಂದು ವಿಧಿಸಲ್ಪಟ್ಟಿರುತ್ತೆ. A ಎಂಬವನು ವಿನಾಯಿಸಲ್ಪಟ್ಟಿರುವದಾಗಿ ಮ್ಯಾಪ್‌ಗಳಲ್ಲಿ ತನ್ನ ಜಮೀನು ತೋರಿಸಲ್ಪಟ್ಟಿರುತ್ತೆಂದು ಹೇಳಿ ವಿನಾಯಿತೀ ಬಗ್ಗೆ ದಾವಾ ಮಾಡುತ್ತಾನೆ. A ಎಂಬವನ ದಾವೆಯು ಒಂದು ಸಿವಿಲ್ ಕೋರ್ಟಿನಲ್ಲಿ ಹಿಡಿಯಲ್ಪಡತಕ್ಕದ್ದಾಗಿರುತ್ತೆ.

(4) ವಿಧಿಸಲ್ಪಡುವದೇನಂದರೆ, ಕಂದಾಯವು ಕೆಲವು ಕಾರಣಗಳಿಂದ ನಿಶ್ಚಯಿಸಲ್ಪಡತಕ್ಕದ್ದೇ ಹೊರತು ಬೇರೇ ಕಾರಣಗಳಿಂದ ಅಲ್ಲವು. ಇದು, ಯಾವನಾದರೂ ಮನುಷ್ಯನಪರವಾಗಿ ಅಥವಾ ತರಗತಿಯಪರವಾಗಿ ಒಂದು ವಿನಾಯಿತಿಯನ್ನು ಉಂಟುಮಾಡುವ ಕಾನೂನಲ್ಲವು. ಅಂಥಾ ಕಾನೂನನ್ನನುಸರಿಸಿ ಒಂದು ಕಂದಾಯದ ವಿಷಯದಲ್ಲಿ ಆಕ್ಷೇಪಣೆಗಳು ಒಂದು ಸಿವಿಲ್‌ಕೋರ್ಟಿನಲ್ಲಿ ವಿಮರ್ಶಿಸಲ್ಪಡತಕ್ಕದ್ದಲ್ಲವು.

ಕೆಲವು ವ್ಯಾಜ್ಯಗಳ ವಿನಾಯಿತಿ.

231. ಹಿಂದಿನ ಸೆಕ್ಷನ್ನಲ್ಲಿಯು ಯಾವ ಅಂಶವೂ, ಇದರಡಿ ಕಂಡ ವ್ಯಾಜ್ಯಗಳನ್ನು ದಾಖಲ್ಮಾಡುವವರ ದೆಶೆಯಿಂದ ಸಿವಿಲ್ ಕೋರ್ಟಿನವರನ್ನು ಅಡ್ಡೀಮಾಡತಕ್ಕದ್ದಾಗಿ ಯೆಣಿಸತಕ್ಕದ್ದಲ್ಲವು:—

(a) ಗವರ್ನಮೆಂಟಿನವರಿಂದ ತಗಾದೆ ಮಾಡಲ್ಪಟ್ಟ ಮೊಬಲಗೇಯಾಗಲಿ ಅವರಿಂದ ವಸೂಲ್ಮಾಡಲ್ಪಟ್ಟ ಮೊಬಲಗೇಯಾಗಲಿ ಕಂದಾಯದಬಗ್ಯೆ ನಿಯಮಿಸಲ್ಪಟ್ಟ ಮೊಬಲಗಿಗೆ ಜಾಸ್ತೀ ಇರುತ್ತೆಂಬ ಅಥವಾ ಅಂಥಾ ಮೊಬಲಗು, ಅಂಥಾ ತಗಾದೆಗೆ ಪಾವತೀಗೆ, ಅಥವಾ ವಸೂಲಿಗೆ ಪೂರ್ವ, ಪೂರಾ ಆಗಲಿ, ಕೆಲವುಮಟ್ಟಿಗಾಗಲಿ, ಪಾವತೀ ಮಾಡಲ್ಪಟ್ಟಿರುತ್ತೆಂಬ, ಅಥವಾ ವಾದಿಯಾಗಲಿ ಅವನು ಯಾರಿಗೆ ಪ್ರತಿನಿಧಿಯಾಗಿರು

ತ್ತಾನೋ ಅ ಮನುಷ್ಯನಾಗಲಿ ಅಂಥಾ ಮೊಬಲಗಿಗೆ ಗುರಿಯಾದವನಲ್ಲವೆಂಬ ಸಬಬಿನಮೇಲೆ ಸದರೀ ತಗಾದೇ ಮೊಬಲಗಿನ ವಿಷಯದಲ್ಲೇಯಾಗಲಿ ತಕರಾರಿನಿಶಿ ಪಾವತೀ ಮಾಡಲ್ಪಟ್ಟ ಮೊಬಲಗಿನ ವಿಷಯದಲ್ಲೇಯಾಗಲಿ ಚರ್ಚಿಸುವಬಗ್ಯೆ ಗವರ್ನ್ಮೆಂಟಿನಮೇಲೆ ತರಲ್ಪಡುವ ದಾವೆಗಳು :—

(b) ರೆವಿನ್ಯು ಸರ್ವೇ ಅಥವಾ ಸೆಟಲ್‌ಮೆಂಟಿನ ಯಾವ ರಿಕಾರ್ಡಿನಲ್ಲಾಗಲಿ, ಗ್ರಾಮದ ಯಾವಕಾಗದ ಪತ್ರಗಳಲ್ಲಿಯಾಗಲಿ ಯಾವ ದಾಖಲೆಯಿಂದಾದರೂ ಪ್ರೈವೇಟ್ ಜನಗಳ ಹಕ್ಕು ಬಾಧಕವಾಗಬಹುದಾದಾಗ್ಯೂ ಅಂಥಾ ಯಾವ ಹಕ್ಕುದಾರಿಯನ್ನಾಗಲಿ, ಸ್ಥಾಪಿಸುವಬಗ್ಯೆ ಜನಗಳಲ್ಲಿ ಪರಸ್ಪರ ದಾವೆಗಳು ;

(c) ಈ ಸೆಕ್ಷನಿನ (a) ಕ್ಲಾಜಿನಲ್ಲಿ ವಿವರಿಸಲ್ಪಟ್ಟ ಸಬಬ್‌ಗಳ ಪೈಕೀ ಯಾವದರಿಂದಾಗಲಿ, ಕಮ್ಮಿ ಹಿಡುವಳೀದಾರರಿಂದ ಬರತಕ್ಕದ್ದಾಗಿ ತಗಾದೆ ಮಾಡಲ್ಪಟ್ಟ ಅಥವಾ ವಸೂಲ್ಮಾಡಲ್ಪಟ್ಟ ಬಾಕೀಗಳ ವಿಷಯದಲ್ಲಿ ಮೇಲ್ಪಟ್ಟ ಹಿಡುವಳೀದಾರರಿಗೂ ಕಮ್ಮಿ ಹಿಡುವಳೀದಾರರಿಗೂ ದಾವೆಗಳು ;

ಮತ್ತು, ಹಿಂದಿನ ಸೆಕ್ಷನಿನ (h) ಕ್ಲಾಜಿನಲ್ಲಿಯ ಯಾವ ಅಂಶವೂ, ಒಂದು ಪೂರಾ ಸರ್ವೇ ನಂಬರಾದ ಅಥವಾ ಒಂದು ಸರ್ವೇ ನಂಬರಿನ ಮಂಜೂರ್‌ಮಾಡಲ್ಪಟ್ಟ ಒಂದು ಹಿಸ್ಸೇಯಾದ ಯಾವದಾದರೂ ಜಮೀನಿನ ಸ್ವಾಧೀನತೆಯಬಗ್ಯೆ ಗವರ್ನ್ಮೆಂಟಿನ ಮೇಲೆ ತರಲ್ಪಟ್ಟ ದಾವೆಯಲ್ಲದೆ ಇತರ ದಾವೆಗಳನ್ನು ದಾಖಲ್‌ಮಾಡಿಕೊಳ್ಳುವದರಲ್ಲಿ ಸಿವಿಲ್ ಕೋರ್ಟುಗಳನ್ನು ಅಡ್ಡಿಪಡಿಸತಕ್ಕದ್ದಾಗಿ ಯೆಣಿಸತಕ್ಕದ್ದಲ್ಲವು.

ರೆವಿನ್ಯು ಆಫೀಸರ್‌ಗಳ ಮೇಲೆ ತರಲ್ಪಡುವ ಕೆಲವು ದಾವೆಗಳ ಆತಂಕ.

232. ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಕಾನೂನಿನ ನಿಬಂಧನೆಗಳನುಸರಿಸಿ ಯಥಾರ್ಥವಾಗಿ ಮಾಡಲ್ಪಟ್ಟ ಅಥವಾ ಆ ಮೇರೆ ಮಾಡತಕ್ಕದ್ದೆಂದು ಅವರಿಂದ ಹುಕ್ಕುಂಮಾಡಲ್ಪಟ್ಟ ಯಾವ ಕಾರ್ಯಕ್ಕೋಸ್ಕರವಾದರೂ ಯಾವ ಸಿವಿಲ್ ಕೋರ್ಟಿನಲ್ಲಾಗಲಿ ನುಕ್ಸಾನ್‌ಬಗ್ಯೆ ದಾವೇಮಾಡಲ್ಪಡಲಿಕ್ಕೆ ರೆವಿನ್ಯು ಆಫಿಸರ್‌ಗಳು ಗುರಿಯಾಗತಕ್ಕದ್ದಲ್ಲವು.

ಯಾವ ರೆವಿನ್ಯು ಆಫೀಸರರಾಗಲಿ, ಫರಾರಿಯಾದರೆ, ಅಥವಾ ಆತನ ಇಲಾಖಾ ಮೊಖ್ತೇಸರರು ನೇಮಿಸಿದಾಗ ಹಾಜರಾಗದೆ ಇದ್ದರೆ, ಮತ್ತು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರು ಈ ರೆಗ್ಯೂಲೇಷನಿನ ಅಥವಾ ತತ್ಕಾಲದೊಳಗೆ ಜಾರೀ ಇರುವ ಯಾವದಾದರೂ ಕಾನೂನಿನ ನಿಬಂಧನೆಗಳನುಸರಿಸಿ, ಸರ್ಕಾರ್ ಹಣಕ್ಕಾಗಿ, ಪತ್ರಗಳಿಗಾಗಿ ಅಥವಾ ಸ್ವತ್ತಿಗಾಗಿ ಸದರೀ ರೆವಿನ್ಯು ಆಫೀಸರರ ಮೇಲೆ ಅಥವಾ ಅವನ ಜಾಮೀನ್ದಾರರ ಮೇಲೆ ಫಿರ್ಯಾದುಮಾಡಿದರೆ, ಅಂಥಾ ಡೆಪ್ಯುಟಿ ಕಮ್ಮಿಷನರು, ಅಂಥಾ ಆಫೀಸರಿಂದ ಅಥವಾ ಜಾಮೀನ್ದಾರರಿಂದ ತಮ್ಮ ಮೇಲೆ ತರಲ್ಪಟ್ಟ ಯಾವದಾವೆಯಲ್ಲಾಗಲಿ, ತಗಾದೆ ಮಾಡಲ್ಪಟ್ಟ ಮೊಬಲಗ್ ಪೈಕೀ ಆಮೇರೆ ತಪ್ಪಿಸಿಕೊಂಡುಹೋದ, ಅಥವಾ ಹಾಜರಾಗಲಿಕ್ಕೆ ತಪ್ಪಿದ ಆಫಿಸರಿಂದ ಒಂದು ಭಾಗವಮಾತ್ರವೇ ಸಲ್ಲಬೇಕಾಗಿ ಇತ್ತೆಂದು, ಯಾವ ಭಾಗವೂ ಸಲ್ಲಬೇಕಾದ್ದಿಲ್ಲವೆಂದು ಅಥವಾ ಅವನಿಂದ ತಗಾದೇ ಮಾಡಲ್ಪಟ್ಟ, ಪತ್ರಗಳು ಅಥವಾ ಸ್ವತ್ತು ಆತನ ವಶದಲ್ಲಿಲ್ಲವೆಂದು ಕಾಣಬಂದಾಗ್ಯೂ, ನುಕ್ಸಾನ್‌ಗಳನ್ನಾಗಲಿ, ಖರ್ಚುಗಳನ್ನಾಗಲಿ, ಕೊಡಲಿಕ್ಕೆ ಗುರಿಯಾಗತಕ್ಕದ್ದಲ್ಲವು.

ರೆವಿನ್ಯೂ ಆಫೀಸರಗಳ ದಂಡನೆಯಾಗಲಿ, ಕ್ರಿಮಿನಲ್ ವಿಚಾರಣೆಯಾಗಲಿ, ಸಿವಿಲ್‌ತರಫ್‌ನಲ್ಲಿ ಅವರಮೇಲೆ ತರಲ್ಪಟ್ಟ ದಾವೆಗಳಿಗೆ ಆತಂಕವಲ್ಲವು.

233. ಯಾವ ತಕಸೀರ್‌ಗೋಸ್ಕರವಾಗಲಿ, ಕರ್ತವ್ಯದಉಲ್ಲಂಘನೆಗೋಸ್ಕರವಾಗಲಿ, ಇಲಾಖಾ ಮೂಲಕವಾದ ದಂಡನೆಯನ್ನು ಯಾರಾದರೂ ಒಬ್ಬ ರೆವಿನ್ಯೂ ಆಫೀಸರರಿಗೆ ವಿಧಿಸುವ ಅಥವಾ, ಅಂಥಾ ತಕಸೀರಿಗಾಗಿ ಯಾ ಉಲ್ಲಂಘನೆಗಾಗಿ ಕ್ರಿಮಿನಲ್‌ತರಫ್ ಫಿರ್ಯಾದ್‌ಮಾಡಲ್ಪಡತಕ್ಕದ್ದನ್ನು ಮಂಜೂರ್ ಮಾಡುವ ತತ್ಕಾಲದಲ್ಲಿ ಜಾರೀಯಿರುವ ಯಾವ ಕಾನೂನಿನಲ್ಲಿಯಾಗಲಿ, ಇರುವ ಯಾವಅಂಶವೂ, ಅಂಥಾ ಆಫೀಸರರಮೇಲೆ ಸಿವಿಲ್‌ಕೋರ್ಟಿನಲ್ಲಿ ಪಡೆಯಬಹುದಾದ ಯಾವ ಪರಿಹಾರವನ್ನಾಗಲಿ, ನಿರೋಧಿಸುವದಾಗಿ ಯೆಣಿಸತಕ್ಕದ್ದಲ್ಲವು.

ವಾದಿಯು ಅಪ್ಪೀಲ್ ಬಾಬತಿನ ಯತ್ನಗಳನ್ನೆಲ್ಲಾ ಮಾಡಿದ ಹೊರತು ದಾವೆಗಳು ದಾಖಲ್ ಮಾಡಲ್ಪಡತಕ್ಕದ್ದಲ್ಲವು.

234. ಒಬ್ಬ ರೆವಿನ್ಯೂ ಆಫೀಸರನಿಂದ ನಡಿಸಲ್ಪಟ್ಟ ಯಾವ ಕೃತ್ಯ ಯಾ ತಪ್ಪಿಹೋಗೋಣ ಯಿಂಥಾದ್ದಕ್ಕೋಸ್ಕರ ಗವರ್ನಮೆಂಟಿನವರ ಮೇಲೆ ತರಲ್ಪಡುವ ಯಾವ ದಾವೆಯಾಗಲಿ, ವಾದಿಯೂ ತನ್ನ ದಾವೆಯನ್ನು ತರುವದಕ್ಕೆ ಮೊದಲು ತತ್ಕಾಲದಲ್ಲಿ ಜಾರೀಯಿರುವ ಕಾನೂನಿನಿಂದ ಅಂಗೀಕರಿಸಲ್ಪಟ್ಟ ಮತ್ತು ಅಂಥಾ ದಾವೆಯನ್ನು ತರುವಬಗ್ಗೆ ಅವಕಾಶ ಕೊಡಲ್ಪಟ್ಟ ಕಾಲದೊಳಗೆ ದಾಖಲ್ಮಾಡಲಿಕ್ಕೆ ಸಾಧ್ಯವಾದ ಯೆಲ್ಲಾ ಅಪ್ಪೀಲುಗಳನ್ನೂ ದಾಖಲ್ಮಾಡಿದ್ದೇನೆಯೆಂದು ರುಜುವಾತ್ ಕೊಟ್ಟಹೊರ್ತು, ಸಿವಿಲ್‌ಕೋರ್ಟುಗಳಿಂದ ಹಿಡಿಯಲ್ಪಡತಕ್ಕದ್ದಲ್ಲವು.

ಚೀಫ್ ಕೋರ್ಟಿನ ಫೈಸಲ್‌ಬಗ್ಯೆ ಆಯಾ ಅಂಶಗಳನ್ನು ರಿಫರ್ ಮಾಡಲಿಕ್ಕೆ ಗವರ್ನಮೆಂಟಿನ ಅಧಿಕಾರ.

235. ಈ ಅಧ್ಯಾಯದ ನಿಬಂಧನೆಗಳಿಲ್ಲದೇ ಇದ್ದರೆ ಯಾವದಾವೆ, ಹಕ್ಕು ಯಾ ಆಕ್ಷೇಪಣೆಯೂ, ಒಂದು ಸಿವಿಲ್ ಕೋರ್ಟಿನಿಂದ ದರ್ಯಾಪ್ತಿ ಯಾ ತನಿಖೆ ಮಾಡಲ್ಪಟ್ಟಿರಬಹುದೋ ಅಂಥಾ ಯಾವದಾದರೂ ದಾವೆ, ಹಕ್ಕು ಯಾ ಆಕ್ಷೇಪಣೆ ಇಂಥಾದ್ದರ ದರ್ಯಾಪ್ತಿ ಯಾ ತನಿಖೆಯಲ್ಲಿ ಹುಟ್ಟುವ ಯಾವ ಅಂಶದಲ್ಲಾಗಲಿ ಗವರ್ನಮೆಂಟಿನವರು ಚೀಫ್ ಕೋರ್ಟಿನ ಫೈಸಲನ್ನು ಪಡಿಯಲಿಕ್ಕೆ ಅಪೇಕ್ಷಿಸಿದರೆ, ಗವರ್ನಮೆಂಟಿನವರು ಸದರೀ ಅಂಶದ ಒಂದು ತಪಸೀಲುಪಟ್ಟಿಯನ್ನು ತಯಾರ್ಮಾಡಿಸಿ ಅಂಥಾ ಅಂಶವನ್ನು ಚೀಫ್‌ಕೋರ್ಟಿನ ಫೈಸಲ್‌ಬಗ್ಯೆ ರಿಫರು ಮಾಡಬಹುದು.

ಚೀಫ್ ಕೋರ್ಟಿನವರು, ತಮಗೆ ರಿಫರಾದ ಅಂಶದ ವಿಚಾರಣೆಯಬಗ್ಯೆ ಒಂದು ಸಮೀಪದ ದಿನವನ್ನು ನಿಶ್ಚಯಿಸಿ ಅಂಥಾ ದಿನದ ನೋಟೀಸನ್ನು ಕೋರ್ಟು ಮಾಡುವಸ್ಥಳದಲ್ಲಿಡಿಸತಕ್ಕದ್ದು.

ಮೊಕದ್ದಮೆಯ ಕಕ್ಷಿಗಾರರು ರೂಬರೂ ಆಗಲಿ, ಅವರುಗಳ ಅಡ್ವೋಕೇಟ್ ಯಾ ಪ್ಲೀಡರ್‌ಗಳಮೂಲಕವಾಗಲಿ, ಚೀಫ್ ಕೋರ್ಟಿನಲ್ಲಿ ಹಾಜರಾಗಿ ವಿಚಾರಣೆ ಮಾಡಲ್ಪಡಬಹುದು.

ಚೀಫ್ ಕೋರ್ಟಿನವರು ಮೊಕದ್ದಮೆಯನ್ನು ಕೇಳಿ ವಿಮರ್ಶಿಸಿದಲ್ಲಿ ಸದರೀ ಕೋರ್ಟಿನ ಫೈಸಲ್‌ನಕಲನ್ನು ಅದರ ಕಾರಣಗಳು ಸಹಿತ ಕೋರ್ಟು ಮೊಹರ್

ನೊಡನೆ, ಮೊಕದ್ದಮೆ ರಿಫರ್ ಮಾಡಿದ ಗವರ್ನ್‌ಮೆಂಟಿಗೆ ಕಳುಹಿಸತಕ್ಕದ್ದು. ಮೊಕದ್ದಮೆಯು, ಅಂಥಾ ಫೈಸಲಿಗೆ ಅನುಗುಣವಾಗಿ ವ್ಯವಸ್ಥೆ ಮಾಡಲ್ಪಡತಕ್ಕದ್ದು.

ಅಂಥಾ ಯಾವ ತಪಸೀಲ್‌ಪಟ್ಟಿಯಾಗಲಿ ಸಾಕಾದ ತಪಸೀಲ್‌ನಿಶಿ ತಯಾರ್ ಮಾಡಲ್ಪಟ್ಟಿಲ್ಲವೆಂದು, ಚೀಫ್ ಕೋರ್ಟಿನವರು ಭಾವಿಸಿದರೆ, ಸದರೀ ಚೀಫ್ ಕೋರ್ಟಿನವರು ಸದರೀ ತಪಸೀಲ್‌ಪಟ್ಟಿಯನ್ನು ತಿದ್ದುಪಾಟುಬಗ್ಯೆ ವಾಪಸ್ ಮಾಡಬಹುದು.

ಅಂಥಾ ಯಾವ ರೆಫರೆನ್ಸಿಗೋಸ್ಕರವಾಗಲಿ, ಖರ್ಚು ಯೇನಾದರೂ ಉಂಟಾದರೆ, ಪ್ರತಿ ಮೊಕದ್ದಮೆಯಲ್ಲಿಯೂ, ಚೀಫ್ ಕೋರ್ಟಿನವರು ನಿಯಮಿಸುವ ಪ್ರಕಾರ ನಡಿಸಲ್ಪಡತಕ್ಕದ್ದು.

ಅಧಿಕಾರವನ್ನು ಕುರಿತ ಸಂಗತಿಗಳನ್ನು ಚೀಫ್ ಕೋರ್ಟಿಗೆ ರಿಫರ್‌ಮಾಡಲಿಕ್ಕೆ ಸಿವಿಲ್ ಜಡ್ಜೀಯವರ ಅಧಿಕಾರ.

236. ಒಂದು ಸಿವಿಲ್‌ಕೋರ್ಟಿನಲ್ಲಿ ದಾಖಲ್ಮಾಡಲ್ಪಟ್ಟ ಯಾವ ದಾವೆಯಲ್ಲಾಗಲಿ, ಯಾವ ಅಪ್ಪೀಲಿನಲ್ಲಾಗಲಿ, ಜಡ್ಜಿಯು, ತಾನು ಈ ಅಧ್ಯಾಯದಿಂದ, ಸದರೀ ದಾವೆಯನ್ನಾಗಲೀ ಅಪ್ಪೀಲನ್ನಾಗಲಿ, ವಿಮರ್ಶಿಸುವದರದೆಸೆಯಿಂದ ಅಡ್ಡೀ ಮಾಡಲ್ಪಟ್ಟಿರುತ್ತಾರೋ ಯೇನೋ ಯೆಂದು ಸಂದೇಹಪಟ್ಟರೆ, ಆ ಅಂಶವನ್ನು ಚೀಫ್ ಕೋರ್ಟಿಗೆ ರಿಫರ್ ಮಾಡಬಹುದು.

ಚೀಫ್ ಕೋರ್ಟಿನವರು, ರಿಫರ್‌ಮಾಡುವ ಜಡ್ಜಿಯನ್ನು ಮೊಕದ್ದಮೆಯನ್ನು ನಡಿಸುವಂತೆಯಾಗಲಿ, ದಾವಾ ಅರ್ಜೀಯನ್ನು ವಾಪಸ್‌ಮಾಡುವಂತೆಯಾಗಲೀ ಹುಕ್ಕುಂ ಮಾಡಬಹುದು.

ಅಂಥಾ ಯಾವ ರಿಫರೆನ್ಸಿನ ಮೇಲಾಗಲಿ, ಚೀಫ್ ಕೋರ್ಟಿನ ಹುಕ್ಕುಂ ಆಖೈರಾದ್ದಾಗಿರತಕ್ಕದ್ದು.

ಕೋರ್ಟಿನ ನ್ಯಾಯಾಧಿಪರ ಸೇರಿಕೆ.

237. ಚೀಫ್ ಕೋರ್ಟಿನಲ್ಲಿ ಮೂವರು ಅಥವಾ ಹೆಚ್ಚು ಮಂದಿ ಜಡ್ಜೀಗಳು ಯಿದ್ದಲ್ಲಿ 235ನೇ ಅಥವಾ 236ನೇ ಸೆಕ್ಷನ್ ಅನುಸರಿಸಿ ಮಾಡಲ್ಪಡುವ ಪ್ರತಿ ರಿಫರೆನ್ಸೂ ಅಂದರೆ ವಿಚಾರಣೆಗಾಗಿ ಕಳುಹಿಸಲ್ಪಡುವ ಪ್ರತಿ ಮೊಕದ್ದಮೆಯೂ, ಚೀಫ್ ಜಡ್ಜೀಯವರು ಆಗಿಂದಾಗ್ಯೆ ನಿಯಮಿಸುವಂತೆ ಮೂರು ಮಂದಿಗೆ ಕಡಮೆ ಯಿಲ್ಲದ ಜಡ್ಜೀಗಳುಳ್ಳ ಒಂದು ಕೋರ್ಟಿನಿಂದ ವಿಚಾರಿಸಲ್ಪಡ ತಕ್ಕದ್ದು.

ಗವರ್ನ್‌ಮೆಂಟ್ ವ್ಯಾಜ್ಯಗಳನ್ನು ಡಿಸ್ಟ್ರಿಕ್ಟ್ ಜಡ್ಜೀಯವರಿಗೆ ರಿಫರ್ ಮಾಡುವಣ.

238. ಗವರ್ನ್‌ಮೆಂಟಿನವರಾಗಲಿ, ಗವರ್ನ್‌ಮೆಂಟಿನ ಯಾವ ಆಫೀಸರರಾಗಲಿ, ತಮ್ಮ ಉದ್ಯೋಗ ಧರ್ಮದಲ್ಲಿ ಯಾವ ದಾವೇಯಲ್ಲಿ ಕಕ್ಷಿಗಾರರಾಗಿರುತ್ತಾರೋ ಅಂಥಾ ದಾವೇಯನ್ನು, ಮುನ್ಸಿಫ್ರಾಗಲಿ, ಸಬಾರ್ಡಿನೇಟ್ ಜಡ್ಜೀಯಾಗಲಿ, ಸ್ಮಾಲ್‌ಕಾಜ್ ಕೋರ್ಟಾಗಲಿ, ಹಿಡಿಯಲೂ ಕೂಡದು ರಿಜಿಸ್ಟರ್ ದಾಖಲ್ ಮಾಡಿಕೊಳ್ಳಲೂ ಕೂಡದು. ಆದರೆ, ಅಂಥಾ ಪ್ರತಿ ಮೊಕದ್ದಮೆಯಲ್ಲಿಯೂ ಅಂಥಾ ಮುನ್ಸಿಫರಾಗಲಿ, ಜಡ್ಜಿಯಾ ಕೋರ್ಟಾಗಲಿ, ವಾದಿಯನ್ನು ಡಿಸ್ಟ್ರಿಕ್ಟ್ ಜಡ್ಜಿಗೆ ರಿಫರ್ ಮಾಡತಕ್ಕದ್ದು. ಅಂಥಾ ಮೊಕದ್ದಮೆಯು ಸದರೀ ಡಿಸ್ಟ್ರಿಕ್ಟು ಜಡ್ಜಿಯ ಕೋರ್ಟಿನಲ್ಲಿಯೇ ದಾಖಲಾಗತಕ್ಕದ್ದು.

ಗವರ್ನಮೆಂಟನವರು ಪ್ರತಿವಾದ ಮಾಡಿದ ಮೊಕದ್ದಮೆಗಳಲ್ಲಿ ಅವರ ಸ್ವಾತಂತ್ರ್ಯ.

239. ಯಾವ ಡಿಸ್ಟ್ರಿಕ್ಟು ಕೋರ್ಟಿನಲ್ಲಾದರು, ಗವರ್ನಮೆಂಟನವರ ಮೇಲೆಅಂದರೆ,

ಯಾವ ರೆವಿನ್ಯೂ ಆಫೀಸರರ ಮೇಲೇಯಾಗಲಿ, ದಾವೇ ತರಲ್ಪಟ್ಟು, ಅದರ ಡಿರ್ಫೆನ್ಸ್ ಅಂದರೆ ಪ್ರತಿವಾದವನ್ನು ಗವರ್ನಮೆಂಟನವರು ವಹಿಸುವ ಪಕ್ಷಕ್ಕೆ,

ಸದರೀ ಗವರ್ನಮೆಂಟಿನ ಒಬ್ಬ ಸೆಕ್ರೆಟೇರಿಯಿಂದ ದಸ್ತಖತ್ ಮಾಡಲ್ಪಟ್ಟ, ಒಂದು ಸೆರ್ಟಿಫಿಕೇಟ ಮೂಲಕ ಅಂಥಾ ಯಾವದಾದರೂ ದಾವೆಯ ವಿಚಾರಣೆಯು, ಅಂಥಾ ಕೋರ್ಟಿನಲ್ಲಿ ಆಗ್ಯೆ ವಿಚಾರಣೆಯಲ್ಲಿದ್ದ ಯಾವದಾದರೂ ಯಿತರ ದಾವೆಯ ಅಥವಾ ಸಿವಿಲ್ ನಡವಳಿತದ ವಿಚಾರಣೆಗಿಂತ ಮುಂಚೆ ನಡಿಯತಕ್ಕದ್ದೆಂತ ಕೇಳುವದು ಗವರ್ನಮೆಂಟಿಗೆ ನ್ಯಾಯವಾಗಿರತಕ್ಕದ್ದು. ಮತ್ತು ಸದರೀ ಕೋರ್ಟು ಸದರೀ ವಿಷಯವನ್ನು ಜಾರೀಯಲ್ಲಿ ತರತಕ್ಕದ್ದು.

ಈ ಸೆಕ್ಷನಿಂದ ಗವರ್ನಮೆಂಟಿಗೆ ಉಂಟು ಮಾಡಲ್ಪಟ್ಟ ಸ್ವಾತಂತ್ರ್ಯವು, ಜರೂರೀಯಾತ್ ಬದಲಾವಣೆಗಳು ಮಾಡಲ್ಪಟ್ಟು, ಈ ಸೆಕ್ಷನಲ್ಲಿ ವಿಧಿಸಲ್ಪಟ್ಟ ಮೇರೆ ಅಂಥಾ ಯಾವ ದಾವೆಯಲ್ಲಾಗಲಿ ಯಾವಫೈಸಲಿನ ಮೇಲಾಗಲಿ ತರಲ್ಪಡುವ ಯಾವ ಅಪ್ಪೀಲಿಗಾಗಲಿ, ಯೆರಡನೆಯ ಅಪ್ಪೀಲಿಗಾಗಲಿ, ಲಗಾವಾಗತಕ್ಕದ್ದು.

15ನೇ ಅಧ್ಯಾಯ.

ಚಿಲ್ಲರೇ ವಿಷಯ.

ಮುಂ. ರೆ. ಕೋ. 213ನೇ ಸೆಕ್ಷನ.

ಮ್ಯಾಪಗಳು ಯಾನೇ ನಕ್ಷೆಗಳು, ಜಮೀನ್ ರಿಜಿಸ್ಟರಗಳು, ಗ್ರಾಮ ಲೆಖ್ಖಗಳು ವಗೈರೇ ತನಖೀ ಮಾಡಲ್ಪಡಲಿಕ್ಕೆ ಖುಲ್ಲಾ ಇರತಕ್ಕದ್ದು.

240. ಗವರ್ನಮೆಂಟನವರು ಈ ಬಗ್ಯೆ ಆಗಿಂದಾಗ್ಯೆ ವಿಧಿಸಬಹುದಾದ ಅಂಥಾ ರೂಲ್ಸಿಗೂ, ಅಂಥಾ ರುಸುಂಗಳ ಪಾವತೀಗೂ ಒಳಪಟ್ಟು, ತಮಾಂ ಮ್ಯಾಪ ಯಾನೆ ನಕ್ಷೆಗಳೂ, ಸರ್ವೇ ರಿಕಾರ್ಡಗಳೂ, ಗ್ರಾಮಲೆಖ್ಖಗಳೂ, ಜಮೀನ್ ರಿಜಿಸ್ಟರಗಳೂ, ಯುಕ್ತ ಕಾಲಗಳಲ್ಲಿ ಜನಗಳು ನೋಡಲಿಕ್ಕೆ ಖುಲ್ಲಾ ಇರತಕ್ಕದ್ದಲ್ಲದೆ ಅಂಥಾ ನಕ್ಷೆಗಳು, ರಿಜಿಸ್ಟರಗಳು, ಲೆಖ್ಖಗಳು, ಇವುಗಳ ಬಾಬತು ಸರಟಿಫೈ ಮಾಡಲ್ಪಟ್ಟ ಎಕಸ್ಟ್ರಾಕ್ಟುಗಳಾಗಲಿ, ಸರಟಿಫೈ ಮಾಡಲ್ಪಟ್ಟ ಅವುಗಳ ನಕ್ಕಲಗಳಾಗಲಿ, ಆ ಬಗ್ಯೆ ದರಖಾಸ್ತು ಮಾಡುವ ತಮಾಂ ಜನಗಳಿಗೂ ಕೊಡಲ್ಪಡತಕ್ಕದ್ದು.

ಮುಂ. ರೆ. ಕೋ. 214ನೇ ಸೆಕ್ಷನ.

ರೂಲ್ಸನ್ನು ಗವರ್ನಮೆಂಟನವರು ಯೇರ್ಪಾಡು ಮಾಡತಕ್ಕದ್ದು.

241. ಗವರ್ನಮೆಂಟನವರು ಈ ರೆಗ್ಯೂಲೇಷನಿಗೆ ವಿರುದ್ಧವಲ್ಲದ ರೂಲ್ಸನ್ನಾಗಲಿ, ಹುಕ್ಕುಂಗಳನ್ನಾಗಲಿ, ಆಗಿಂದಾಗ್ಯೆ ಮಾಡಬಹುದು, ಆಗಿಂದಾಗ್ಯೆ ಬದಲಾಯಿಸಬಹುದು, ಹೊಡದು ಹಾಕಲೂಬಹುದು, ಹ್ಯಾಗೆಂದರೆ:—

(a) 21ನೇ ಸೆಕ್ಷನ ಅನುಸರಿಸಿ ಮೊಕರರ ಮಾಡಲ್ಪಟ್ಟ ಸಿಬ್ಬಂದಿಗಳಿಗೆ ಶೇರಿದ ತಮಾಂ ಇಸಂಗಳ ಆವಶ್ಯಕಗಳಾದ ಯೋಗ್ಯತೆಗಳನ್ನು ನಿರ್ಣಯಿಸುವ ಬಗ್ಯೆ;

(b) 32ನೇ ಸೆಕ್ಷರ್ನ ಅನುಸರಿಸಿ ರೆವಿನ್ಯು ಆಫೀಸರಗಳಿಗೆ ಜುರ್ಮಾನೇ ವಿಧಿಸುವ, ಕಂಷರಾ ಮಾಡುವ, ಸಸ್‌ಪೆಂಡ್ ವ ತಗ್ಯೈರ‌ಮಾಡುವ ಅಧಿಕಾರವನ್ನು ಕ್ರಮ ಪಡಿಸುವಬಗ್ಯೆ;

(c) ಜಮೀನ್ ಕಂದಾಯಕೊಡಲಿಕ್ಕೆ ಗುರಿಯಾದ ಜಮೀನು ಯಾವ ಬಗ್ಯೆ 53ನೇ ಸೆಕ್ಷರ್ನ ಅನುಸರಿಸಿ ವಿನಿಯೋಗಿಸಲ್ಪಡಬಹುದೋ ಅವುಗಳನ್ನು ವಿಧಿಸುವ ಬಗ್ಯೆ;

(d) 55ನೇ ಮತ್ತು 117ನೇ ಸೆಕ್ಷರ್ನಗಳನುಸರಿಸಿ ಜಮೀನ್ ಕಂದಾಯದ ವಿಷಯದಲ್ಲಿ ಜಮೀನಿಗೆ ಕಂದಾಯ ವಿಧಿಸುವ ಪದ್ಧತಿಯನ್ನೂ ರೀತಿಯನ್ನೂ ಕ್ರಮ ಪಡಿಸುವಬಗ್ಯೆ;

(e) 59ನೇ ಸೆಕ್ಷರ್ನ ಅನುಸರಿಸಿ ಕಳಕೊಳ್ಳಲ್ಪಟ್ಟ ಅನುಭೋಗಗಳ ಅಥವಾ ಪರಭಾರೇಯಾದ ಹಿಡುವಳೀಗಳ ವಿಲಾವಾರೀಬಗ್ಯೆ;

(f) ಬಗರ್ ಹುಕ್ಕುಂ ಹಿಡುವಳೀಯಲ್ಲಿ ಪಡಕೊಳ್ಳಲ್ಪಟ್ಟಿರುವ ಜಮೀನು, ಬೇಸಾಯಕ್ಕೆ ಸಂಬಂಧಿಸದ ಯಾವದಾದರೂ ಕೆಲಸಕ್ಕೆ ವಿನಿಯೋಗಿಸಲ್ಪಟ್ಟರೆ, 64ನೇ ಸೆಕ್ಷರ್ನ ಅನುಸರಿಸಿ ವಸೂಲಾಗತಕ್ಕ ಜುರ್ಮಾನೆಯ ಹೆಚ್ಚು ಕಡಿಮೆ ಬಾಬಲಗನ್ನು ನಿಶ್ಚಯಿಸುವ ಬಗ್ಯೆ;

(g) ಯಾವದಾದರೂ ಸರ್ವೇ ಸೆಟಲ್‌ಮೆಂಟಿನ ವಿಚಾರಣೆಯಬಗ್ಯೆ;

(h) ಈ ರೆಗ್ಯೂಲೇಷರ್ನ 13ನೇ ಅಧ್ಯಾಯ ಅನುಸರಿಸಿ ಅಪ್ಪೀಲ್‌ಗಳು ಬರೆಯಲ್ಪಟ್ಟು ಹಾಜರ್ ಮಾಡಲ್ಪಡಬೇಕಾದ ನಮೂನೆ ವ ರೀತಿ ಇವುಗಳನ್ನು ವಿಧಿಸುವ ಬಗ್ಯೆ;

(i) ಈ ರೆಗ್ಯೂಲೇಷರ್ನ ಜಾರೀಗೆ ತರಲ್ಪಡುವದಕ್ಕೆ ಸಂಬಂಧಿಸದ ವಿಷಯಗಳಲ್ಲಿ ಅಥವಾ ಅದರಲ್ಲಿ ಸ್ಪಷ್ಟವಾಗಿ ವಿಧಿಸಲ್ಪಡದಸಂಗತಿಗಳಲ್ಲಿ ಸಾಧಾರಣವಾಗಿ ತಮಾಂ ಜನಗಳ ನಡವಡಿಕೆಬಗ್ಯೆ;

ಮೇಲ್ಕಂಡ (c), (d), (e), (f), ಅಥವಾ (i) ಈ ಕ್ಲಾಜ‌ಗಳಪೈಕಿ ಯಾವದನುಸರಿಸಿಯಾಗಲಿ ಮಾಡಲ್ಪಟ್ಟ ರೂಲ್ಸಾಗಲಿ, ಹುಕ್ಕುಂಗಳಾಗಲಿ, ಸಾಧಾರಣವಾಗಿ ಅಥವಾ ಯಾವದಾದರೂ ಒಂದು ವಿಶೇಷ ಸಂಗತಿಯಲ್ಲಿ ಮಾಡಲ್ಪಡಬಹುದು.

ಮುಂ ರೆ. ಕೋ. 215ನೇ ಸೆಕ್ಷರ್ನ

ಕೆಲವು ರೂಲ್ಸ್ ಪ್ರಕಟಿಸಲ್ಪಡತಕ್ಕದ್ದು.

242. ಹಿಂದಿನ ಕಡೇಸೆಕ್ಷರ್ನ ಅನುಸರಿಸಿ ಗವರ್ನಮೆಂಟಿನಿಂದ ಮಾಡಲ್ಪಟ್ಟ ತಮಾಂ ಒಟ್ಟುರೂಲ್ಸ್ ಯಾ ಹುಕ್ಕುಂಗಳು, ಪ್ರಕಟಿಸಲ್ಪಡತಕ್ಕದ್ದು, ಪ್ರಕಟಿಸಲ್ಪಟ್ಟಮೇಲೆ ರದ್ದು ಮಾಡಲ್ಪಡುವ ಅಥವಾ ತಿದ್ದುಪಡಿಮಾಡಲ್ಪಡುವತನಕ ಕಾನೂನಂತೆ ಜಾರೀಲಿ ಇರತಕ್ಕದ್ದು.

ದಂಡನೆಗಳಬಗ್ಯೆ ಏರ್ಪಾಟು ಮಾಡಲಿಕ್ಕೆ ಅಧಿಕಾರ.

243. ಇಂಥಾ ಯಾವದಾದರೂ ಒಟ್ಟು ರೂಲನ್ನು ಮಾಡುವದರಲ್ಲಿ ಅದರ ಉಲ್ಲಂಘನೆಗೆ ಸದರೀ ಉಲ್ಲಂಘನೆಯಿಂದ ಉಂಟಾಗುವ ಇತರ ಫಲಗಳಲ್ಲದೆ ಒಬ್ಬ ಮಾಜಿಸ್ಟ್ರೇಟು ಮುಂದೆ ತಪ್ಪಿತ ಅಪಾದಿಸಲ್ಪಟ್ಟ ಮೇಲೆ ಇಂಡಿಯನ್ ಪಿನಲ್ ಕೋಡಿನ ಅರ್ಥರೀತ್ಯ ಯೆರಡುಬಗೆಯ ಸಜಾದಲ್ಲಿ ಒಂದು ತಿಂಗಳಿಗೆ ಮೀರದ

ಯಾವಸಜಾವನ್ನಾಗಲಿ, 500 ರೂಪಾಯಿನ ಜುರ್ಮಾನೆಯನ್ನಾಗಲಿ, ಇವುಗಳೆರಡನ್ನಾಗಲಿ, ದಂಡನೆಯಂತೆ ಶೇರಿಸತಕ್ಕದ್ದು ಗವರ್ನಮೆಂಟಿಗೆ ನ್ಯಾಯವಾಗಿರತಕ್ಕದ್ದು.

ಮುಂ. ರೆ. ಕೋ. 216ನೇ ಸೆಕ್ಷನ್.

ಪರಭಾರೇಯಾದ ಗ್ರಾಮುಗಳ ವಿಷಯದಲ್ಲಿ ೮, ೯, ೧೦ನೇ ಅಧ್ಯಾಯಗಳು ಎಷ್ಟರಮಟ್ಟಿಗೆ ಲಗಾವಾಗತಕ್ಕವೆಂಬದು.

244. 128ನೇ ಸೆಕ್ಷನ್ನಲ್ಲಿಯೂ, ಈ ಸೆಕ್ಷನ್ನಲ್ಲಿ ಮುಂದೆಯೂ, ಅನ್ಯಥಾ ವಿಧಿಸಲ್ಪಟ್ಟಿರುವಂತೆ ವಿನಾ, ಈ ರೆಗ್ಯೂಲೇಷನಿನ 8ರ ಮೊದಲು 10ರವರಿಗಿನ ಅಧ್ಯಾಯಗಳ ನಿಬಂಧನೆಗಳು, ಅಂಥಾ ಯಾವದಾದರೂ ಗ್ರಾಮದ ಸರಹದ್ದುಗಳನ್ನಾಗಲಿ, ಅಂಥಾ ಗ್ರಾಮದಿಂದ ಸಲ್ಲತಕ್ಕ ಯಾವದಾದರೂ ಕ್ವಿಟೆರೆಂಟನ್ನಾಗಲಿ, ಯಾವದಾದರೂ ಲೋಕಲ್ ಯಾ ನೀರುಸರ್ದಿ ತೀರ್ವೆಗಳನ್ನಾಗಲಿ, ನಿಶ್ಚಯಿಸುವಬಗ್ಗಾಗಿಯೂ ಮತ್ತು ಇವುಗಳಿಗೆ ಸಂಬಂಧಪಟ್ಟ ಯಾವದಾದರೂ ತಕರಾರುಗಳನ್ನು ನಿರ್ಣಯಿಸುವಬಗ್ಗಾಗಿ ಹೊರ್ತು ಪರಭಾರೇಯಾದ ಯಾವ ಗ್ರಾಮಕ್ಕೂ ಲಗಾವ್ ಮಾಡಲ್ಪಡತಕ್ಕದ್ದಲ್ಲವು, ಆದರೆ ಸದರೀ ಅಧ್ಯಾಯಗಳ ನಿಬಂಧನೆಗಳು ಈ ಕೆಳಗೆ ಬರುವ ಸಂಗತಿಗಳಿಗೆ ಲಗಾವಾಗತಕ್ಕದ್ದು—

(*a*) ಪರಭಾರೇಯಾದ ಒಂದು ಗ್ರಾಮದ ಎಲ್ಲೆಗಳೊಳಗೆ ಇರುವ ಪರಭಾರೇಯಾಗದ ತಮಾಂ ಜಮೀನುಗಳು;

(*b*) ಯಾವ ಗ್ರಾಮುಗಳ ಗೊತ್ತಾದ ಭಾಗವು ಪರಭಾರೇ ಮಾಡಲ್ಪಟ್ಟು ಪರಂತು ಮಿಕ್ಕ ಭಾಗವು ಪರಭಾರೇ ಆಗದೇ ಇರುತ್ತೋ ಅಂಥಾ ಗ್ರಾಮುಗಳು ;

(*c*) ಯಾವ ಗ್ರಾಮುಗಳ ಹಿಡುವಳೀದಾರರು, ಕಂದಾಯದ ಪೈಕಿ ಒಂದು ಗೊತ್ತಾದ ಮೊಬಲಗಿಗೆ ಅರ್ಹರಾಗಿ ಪರಂತು ಯಾವ ಗ್ರಾಮುಗಳ ಬಾಬತು, ಅಂಥಾ ಮೊಬಲಗಿನ ಮೇಲೆ ಜಾಸ್ತೀ ಏನಾದರೂ ಇದ್ದರೆ ಅದು ಗವರ್ನಮೆಂಟಿಗೆ ಸಂಬಂಧಿಸಿ ಇರುತ್ತೋ ಅಂಥಾ ಪರಭಾರೇಯಾದ ಗ್ರಾಮುಗಳು.

ಆದರೆ, ಆಬಗ್ಯೆ ಅಂಥಾ ಯಾವದಾದರೂ ಗ್ರಾಮದ ಹಿಡುವಳೀದಾರನಿಂದ ಬರವಣಿಗೆಯಲ್ಲಿ ದರಖಾಸ್ತು ಮಾಡಲ್ಪಟ್ಟಲ್ಲಿ ಸದರೀ ಅಧ್ಯಾಯಗಳ ನಿಬಂಧನೆಗಳ ಪೈಕಿ ವಿಶಿಷ್ಟವನ್ನಾಗಲಿ, ಯಾವವನ್ನಾಗಲಿ, ಅಂಥಾ ಯಾವ ಗ್ರಾಮಕ್ಕಾಗಲಿ, ವ್ಯಾಪಿಸುವವನ್ನು ನಿಯಮಿಸುವದು ಗವರ್ನಮೆಂಟಿಗೆ ನ್ಯಾಯವಾಗಿರತಕ್ಕದ್ದು.

ಮುಂ. ರೆ. ಕೋ. 217ನೇ ಸೆಕ್ಷನ್.

ಪರಭಾರೇಯಾದ ಗ್ರಾಮುಗಳಲ್ಲಿ ಹಿಡುವಳೀದಾರರು.

245. ಒಂದು ಪರಭಾರೆಯಾದ ಗ್ರಾಮದಲ್ಲಿ ಇದರ ಕೆಳೇ ಸೆಕ್ಷನಿನ, ಅಥವಾ ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಕಾನೂನಿನ ನಿಬಂಧನೆಗಳನುಸರಿಸಿ ಒಂದು ಸರ್ವೇ ಸೆಟಲ್‌ಮೆಂಟ್ ಜಾರೀಯಲ್ಲಿ ತರಲ್ಪಟ್ಟರೆ, ಯಾವ ಜಮೀನುಗಳಿಗೆ ಅಂಥಾ ಸೆಟಲ್‌ಮೆಂಟು ವ್ಯಾಪಿಸುತ್ತೋ ಅಂಥಾ ತಮಾಂ ಜಮೀನುಗಳ ಹಿಡುವಳೀದಾರರೂ ಈ ರೆಗ್ಯೂಲೇಷನಿನ ನಿಬಂಧನೆಗಳನುಸರಿಸಿ, ಪರಭಾರೇಯಾಗದ ಗ್ರಾಮುಗಳ ಹಿಡುವಳೀದಾರರ ತರೀಕ, ತಮ್ಮ ಹಿಡುವಳೀಯಲ್ಲಿ ಇರುವ ಜಮೀನುಗಳ ವಿಷಯದ್ದೊಳಗೆ, ಬದಸ್ತೂರ್ ಹಕ್ಕುದಾರಿಗಳನ್ನು ಪಡೆದು ಬದಸ್ತೂರ್ ಜವಾಬ್‌ದಾರೀಗಳಿಗೆ ಗುರಿಯಾಗತಕ್ಕದ್ದು. ಮತ್ತು ಹಿಡುವಳೀದಾರರು ಮತ್ತು ರಿಜಿಸ್ಟರ್ ಮಾಡ

ಲ್ಪಟ್ಟ ಹಿಡುವಳೀದಾರರು ಇವರುಗಳಿಗೆ ಸಂಬಂಧಿಸುವ ಈ ರೆಗ್ಯೂಲೇಷನಿನ ನಿಬಂಧನೆಗಳೆಲ್ಲಾ ಸಾಧ್ಯವಾಗಿರುವಷ್ಟು ಮಟ್ಟಿಗೆ, ಅವರಿಗೆ, ಪರಭಾರೆಯಾದ ಗ್ರಾಮದ ಹಿಡುವಳೀದಾರರಿಗೆ ಲಗಾವಾಗತಕ್ಕದ್ದು.

ಮುಂ. ರೆ. ಕೋ. 218ನೇ ಸೆಕ್‌ಷನ.

ಈ ರೆಗ್ಯೂಲೇಷನಿನ ಏರ್ಪಾಡು.

246. ಪರಭಾರೇಯಾಗದ ಜಮೀನಿಗೆ ಅಥವಾ ಪರಭಾರೇಯಾಗದ ಜಮೀನಿನ ಹಿಡುವಳೀದಾರರಿಗೆ ಮಾತ್ರವೆ ಶಬ್ದತಃ ಲಗಾವಾಗತಕ್ಕ ಈ ರೆಗ್ಯೂಲೇಷನಿನಲ್ಲಿ ಕಂಡ ಯಾವ ಅಂಶವ್ರೂ, ಪರಭಾರೇಯಾದ ಜಮೀನನ್ನಾಗಲಿ, ಪರಭಾರೆಯಾದ ಜಮೀನಿನ ಹಿಡುವಳೀದಾರರ ಹಕ್ಕುಗಳನ್ನಾಗಲಿ, ಅಥವಾ ಅಂಥಾ ಯಾವ ಜಮೀನಿನ ವಿಷಯದಲ್ಲಾದರೂ ಗವರ್ನಮೆಂಟಿನ ಹಕ್ಕುಗಳನ್ನಾಗಲಿ, ಬಾಧಿಸತಕ್ಕದ್ದಾಗಿ ಯೆಣಿಸಲ್ಪಡತಕ್ಕದ್ದಲ್ಲವು. ಮತ್ತು, ಪರಭಾರೇಯಾಗದ ಜಮೀನಿಗೆ ಮಾತ್ರ ಶಬ್ದತಃ ಸಂಬಂಧಿಸುವ ಈ ರೆಗ್ಯೂಲೇಷನಿನ ಯಾವ ನಿಬಂಧನೆಯಿಂದಾಗಲಿ, ಪರಭಾರೇಯಾದ ಜಮೀನಿನ ಯಾವನಾದರೂ ಹಿಡುವಳೀದಾರನಿಗೆ ಅನುಕೂಲವಾದ ಯಾ ಬಾಧಕವಾದ ಊಹೆ ಯಾವದಾದರೂ ಉಂಟಾಗುವದೆಂದು ಭಾವಿಸತಕ್ಕದ್ದಲ್ಲವು.

ಕೆ. ಶೇಷಾದ್ರಿ ಅಯ್ಯರ್,
ಮೈಸೂರ್ ಸೀಮೆಯ ದಿವಾನರು.

A ಷೆಡ್ಯೂಲ್.

(2ನೇ ಸೆಕ್ಷನ್.)

1. ಮೈಸೂರು ಶೀಮೆಯಲ್ಲಿ, ಸನ್ 1865ನೇ ಇಸವಿಯ 1ನೇ, ಸನ್ 1868ನೇ ಇಸವಿಯ 4ನೇ, ಮುಂಬೈ ಆಕ್ಟುಗಳನ್ನು ಜಾರೀಗೆ ತರುವಬಗ್ಯೆ ಹುಟ್ಟಿದ ಸಿಂಲಾ, 1869ನೇ ಇಸವೀ ಏಪ್ರೈಲ್ 30ನೇ ಮರ್ಕುಂ 83ನೇ ನಂಬರ ಇಂಡ್ಯಗವರ್ನಮೆಂಟಿನ ಇಸ್ತಿಹಾರ್‌ನಾಮೆ.

2. ಸನ್ 1869ನೇ ಇಸವಿಯ 3ನೇ ಮದರಾಸ್ ಆಕ್ಟಿನ ನಿಬಂಧನೆಗಳನ್ನು ಮೈಸೂರು ಶೀಮೆಗೆ ಲಗಾವ್ ಮಾಡುವ 1869ನೇ ಇಸವಿ ಆಗಸ್ಟು 27ನೇ ಮರ್ಕುಂ 254ನೇ ನಂಬರ ಇಂಡ್ಯಗವರ್ನಮೆಂಟಿನ ಇಸ್ತಿಹಾರ್‌ನಾಮೆ.

3. ಜುಡಿಷಿಯಲ್ ಮೊಕದ್ದಮೆಗಳ ವಿಚಾರಣೆಯಲ್ಲಿ ರೆವಿನ್ಯೂಕೋರ್ಟುಗಳ ಅಧಿಕಾರಗಳನ್ನು ಕುರಿತ ಸನ್ 1872ನೇ ಇಸವೀ ಜೂನ್ 26ನೇ ಮರ್ಕುಂ 123ನೇ ನಂಬರ ಇಂಡ್ಯಗವರ್ನಮೆಂಟ್ ಇಸ್ತಿಹಾರ್‌ನಾಮೆ.

4. ಸನ್ 1871ನೇ ಆಗಸ್ಟು 3ನೇ ಮರ್ಕುಂ 180ನೇ ನಂಬರವುಳ್ಳ ಲೇಟ ಚೀಫ್ ಕಮ್ಮಿಷನರವರ ಇಸ್ತಿಹಾರ್‌ನಾಮೆಯಿಂದ ಬದಲಾಯಿಸಲ್ಪಟ್ಟ ಪ್ರಕಾರ ಸನ್ 1869ನೇ ಮೇ 1ನೇ ಮರ್ಕುಂ ಮೈಸೂರು ಗೆಜೆಟ 87ನೇ ಪುಟದಲ್ಲಿ ಲೇಟ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಯೊಡನೆ ಶಾಯಿಷ್ಯ ಮಾಡಲ್ಪಟ್ಟ, ಸರ್ವಮಾನ್ಯ, ಜೋಡಿ ಮತ್ತು ಕಾಯಂಗುತ್ತಾ ಗ್ರಾಮಗಳ ಸ್ವಂತಗಾರರಿಂದ ಕಂದಾಯ ವಸೂಲೀಯನ್ನು ಕುರಿತ ರೂಲ್ಸ್.

5. ಇನಾಂಗ್ರಾಮಗಳ ರೈತರ ಹಕ್ಕುಗಳನ್ನು ಕುರಿತ ಸನ್ 1843ನೇ ಇಸವಿ ಅಕ್ಟೋಬರ 25ನೇ ಮರ್ಕುಂ ಲೇಟ ಚೀಫ್ ಕಮ್ಮಿಷನರವರ ಇಸ್ತಿಹಾರ್‌ನಾಮೆ.

6. ಲೇಟ ಚೀಫ್ ಕಮ್ಮಿಷನರವರ ಸರ್ಕ್ಯುಲರ ಹುಕ್ಕುಂ ನಂ. 522—3, ತಾ॥ 8ನೇ ಜೂನ್ 1864ನೇ ಇಸವಿ.

B ಷೆಡ್ಯೂಲ್.

(4ನೇ ಸೆಕ್ಷನ್.)

__________________________________ ಈ ರೆಗ್ಯೂಲೇಷನಿನ

____

____

__________________________________ ನೇ ಸೆಕ್ಷನ್‌ಗಳು,

C ಷೆಡ್ಯೂಲ್.

23ನೇ ಸೆಕ್ಷನ್ ಅನುಸರಿಸಿ ಅಪೇಕ್ಷಿಸಲ್ಪಡತಕ್ಕ ಪತ್ರದ ನಮೂನೆ.

ನಿವಾಸಿಯಾದ

ಯೆಂಬನಾನು

ಉದ್ಯೋಗಕ್ಕೆ ಮೊಕರರ್ ಮಾಡಲ್ಪಟ್ಟಿರುವದರಿಂದಲೂ, ಸದರೀ ಉದ್ಯೋಗದ ಅಥವಾ, ಯಾವ ಉದ್ಯೋಗಕ್ಕೆ ನಾನು ಇಯಿಂದ ಮೊಕರರ್ ಮಾಡಲ್ಪಡಬಹುದೋ ಅಂಥಾ ಯಾವದಾದರೂ ಇತರ ಉದ್ಯೋಗದ ಸಂಬತಕ್ಕ ಕೆಲಸಗಳನ್ನು ಕ್ರಮವಾಗಿ ನಿರ್ವಹಿಸುವಬಗ್ಯೆ, ಅಂಥಾ ಯಾವದಾದರೂ ಹುಕುಂ ನಿಮಿತ್ತದಿಂದ ನನ್ನ ವಶಕ್ಕಾಗಲಿ, ಅಧೀನಕ್ಕಾಗಲಿ, ಬರತಕ್ಕ ತಮಾಂ ಹಣಗಳ, ಪತ್ರಗಳ ವ ಇತರ ಸ್ವತ್ತಿನ ಕ್ರಮವಾದ ಜವಾಬ್ದಾರಿಗೋಸ್ಕರವೂ, ಮೈಸೂರು-ಶೀಮೆಯ ಜಮೀನ್ ಕಂದಾಯದ ರೆಗ್ಯೂಲೇಷನಿನ 23ನೇ ಸೆಕ್ಷನ್ ನಿಬಂಧನೆಗಳನುಸರಿಸಿ ಜಾಮೀನ್ ಕೊಡತಕ್ಕದ್ದೆಂದು ನೇಮಿಸಲ್ಪಟ್ಟಿರುವದರಿಂದಲೂ, ನನ್ನ ಲೆಖ್ಖಗಳಲ್ಲಿ ಯಾವದಾದರೂ ನಷ್ಟದ ಬಾಬತು ಅಥವಾ ಕಮ್ಮಿಬಂದ ಬಾಬತು ಮೊಬಲಗನ್ನು ಮೈಸೂರು ಗವರ್ನಮೆಂಟಿಗೆ ಪಾವತೀ ಮಾಡಲಿಕ್ಕೂ ನಾನು ಯಾವ ಇಲಾಖೆಗೆ ಶೇರಿರುತ್ತೇನೋ ಆ ಇಲಾಖೆಯ ಮೊಖ್ತೇಸರನಿಂದ ತಗಾದೇ ಮಾಡಲ್ಪಡುವಂಥಾ ಕಾಲದೊಳಗೂ ಅಂಥಾ ಮನುಷ್ಯನಿಗೂ ಯಾವದಾದರೂ ಕಾಗದಗಳನ್ನು ಅಥವಾ ಇತರ ಸ್ವತ್ತನ್ನು

ಒಪ್ಪಿಸಲಿಕ್ಕೂ ಇದರಿಂದ ಬದ್ಧನಾಗಿದ್ದೇನೆ. ಅಂಥಾ ತಗಾದೆಯು ಬರವಣಿಗೆಯಲ್ಲಿದ್ದು ನನ್ನ ಇಲಾಖೆಯಲ್ಲಾಗಲಿ ವಾಸಸ್ಥಳದಲ್ಲಾಗಲಿ ಕೊಡಲ್ಪಟ್ಟಿರತಕ್ಕದ್ದು. ಸದರೀ ವಿಷಯಗಳಲ್ಲಿ ನಾನು ತಪ್ಪಿದರೆ ಮೈಸೂರು ಗವರ್ನಮೆಂಟಿಗೆ　　　ರೂಪಾಯಿಗಳ ಮೊಬಲಗನ್ನು ದಂಡವಾಗಿ ಕೊಡುವದಕ್ಕೆ ಬದ್ಧನಾಗಿರುತ್ತೇನೆ.

ತಾರೀಖು

(ದಸ್ತಖತ್ತು.)

ಪತ್ರದಾರರ ಪತ್ರಕ್ಕೆ ಜಂಟಿಸಲ್ಪಡತಕ್ಕ ಜಾಮೀನು ನಮೂನೆ.

ಎಂಬ ನಾವು

ಮೇಲ್ಕಂಡ　　　　ನು ಮೇಲ್ಕಂಡಂತೆ ಮಾಡಲಿಕ್ಕೂ ನೆರವೇರಿಸಲಿಕ್ಕೂ ವಹಿಸಿದ ತಮಾಂ ಅಂಶಗಳನ್ನೂ ಮಾಡಲಿಕ್ಕೂ ನೆರವೇರಿಸಲಿಕ್ಕೂ ಜಾಮೀನುದಾರರೆಂದು ಇದರಿಂದ ತಿಳಿಸುತ್ತೇವೆ. ಅದರಲ್ಲಿ ಸದರೀಯವನು ಯೇನಾದರೂ ತಪ್ಪಿದರೆ,　　　　ರಿಂದ ಅಂಥಾ ತಪ್ಪಿದ ಕಾರಣದಿಂದ ಮೈಸೂರು ಗವರ್ನಮೆಂಟಿಗೆ ಉಂಟಾಗಬಹುದಾದ ಯಾವದಾದರೂ ಹಾನಿ ಯಾ ನುಕ್ಸಾನಿಗೆ ಭರ್ತೀಮಾಡುವಬಗ್ಯೆ ಸಾಕೆಂದೆಣಿಸಲ್ಪಡತಕ್ಕ ಮೊಬಲಗನ್ನು ದಂಡವಾಗಿ ಕೊಡುವದಕ್ಕೆ ನಾವು ಇದರಿಂದ ಬದ್ಧರಾಗಿರುತ್ತೇವೆ.

ತಾರೀಖು

(ದಸ್ತಖತ್ತು.)

D ಷೆಡ್ಯೂಲ್.

25 ಅಥವಾ 172ನೇ ಸೆಕ್ಷನ್ ಅನುಸರಿಸಿ ಡೆಪ್ಯುಟಿ ಕಮ್ಮಿಷನರಿಂದ ಕೊಡಲ್ಪಡತಕ್ಕ ವಾರಂಟ್ ನಮೂನೆ.

(ಮೊಹರ್.)

ಲ್ಲಿ ಸಿವಿಲ್ ಜೆಯಿಲ್ ಇನ್‌ಚಾರ್ಜ್ ಆಫೀಸರರಿಗೆ.

ದ A. B. ಯೆಂಬವನು ಸನ್ 188　ನೇ ಇಸವಿ　　　ನೇ ತಾರೀಖಿನಲ್ಲಿ　　　　ಯವರಿಂದ (ತಗಾದೇ ಮಾಡಿದ್ದರ ಸಾರಾಂಶವನ್ನು ಈ ಬಳಿ ನಮೂದಿಸತಕ್ಕದ್ದು) ಕ್ಕೆ ಹುಕ್ಕುಂ ಮಾಡಲ್ಪಟ್ಟಿರುವದರಿಂದಲೂ, ಸದರೀ A. B. ಯೆಂಬವನು, ಸದರೀ ಹುಕ್ಕುಂ ಪ್ರಕಾರ ನೆರವೇರಿಸಲಿಕ್ಕೆ ಉಪೇಕ್ಷಿಸಿಯಿರುವದರಿಂದಲೂ, ಮತ್ತು ಸದರೀ ಯವನು ಸದರೀ ಹುಕುಮಿನ ಪ್ರಕಾರ ನಡಿಯುವವರಿವಿಗೂ ಅಥವಾ ಮೈಸೂರು ಲ್ಯಾಂಡ್ ರೆವಿನ್ಯೂ ರೆಗ್ಯೂಲೇಷನಿನ 25 ಅಥವಾ 28 (ಅಥವಾ ಸಂದರ್ಭಾನುಸಾರ 172 ಅಥವಾ 179)ನೇ ಸೆಕ್ಷನಿನ ನಿಬಂಧನೆಗಳನುಸರಿಸಿ ತನ್ನ ಬಿಡುಗಡೆಯನ್ನು ಪಡಿಯುವವರಿಗೂ ಸದರೀ ರೆಗ್ಯೂಲೇಷನಿನ　　　ನೇ ಸೆಕ್ಷನಿನ ನಿಬಂಧನೆಗಳನುಸರಿಸಿ ಸಿವಿಲ್ ಜೆಯಿಲ್‌ನಲ್ಲಿ ಇಡಿಸಲ್ಪಡತಕ್ಕದ್ದೆಂದು ನಿಯಮಿಸಲ್ಪಟ್ಟಿರುವದರಿಂದಲೂ ನೀವು ಸದರೀ A. B. ಯನ್ನು ನಿಮ್ಮ ಚಾರ್ಜಿನ ಜೆಯಿಲ್‌ನಲ್ಲಿ ಸೇರಿಸಿಕ್ಕೊಂಡು ಕಾನೂನ್ ಮೇರಿಗೆ ಮೇಲೆ ಹೇಳಿದ ಹುಕುಮನ್ನು ಜಾರೀಯಲ್ಲಿ ತರತಕ್ಕದ್ದೆಂದು ಇದರಿಂದ ವಿಧಿಸಿರುತ್ತೆ.

ಬತಾರೀಖು　　　ನೇ　　　188

(ದಸ್ತಖತ್ತು.)

E ಷೆಡ್ಯೂಲ್.

28 ಅಥವಾ 179ನೇ ಸೆಕ್ಷನ್ ಅನುಸರಿಸಿ ಜೇಕಾದ ಪತ್ರದ ನಮೂನೆಯು.

ಎಂಬನಾನು

ರಿಂದ

ಕ್ಕೆ (ಇಲ್ಲಿ ತಗಾದೆಯ ಸ್ವರೂಪವನ್ನು ನಮೂದಿಸತಕ್ಕದ್ದು)

ಹುಕ್ಕುಂ ಮಾಡಲ್ಪಟ್ಟಿರುವದರಿಂದಲೂ, ಸದರೀ ಹುಕ್ಕುಂ ಕೊಡಲಿಕ್ಕೆ　　　　ಯವರ ಹಕ್ಕುದಾರೀ

ವಿಷಯದಲ್ಲಿ ತಕರಾರ್ ಮಾಡುವದರಿಂದಲೂ, ತಗಾದೆಯ ನ್ಯಾಯವನ್ನು ಆಕ್ಷೇಪಿಸಲಿಕ್ಕೆ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ, ಈ ಪತ್ರದ ತಾರೀಖು ಲಾಗಾಯತು ಹದಿನೈದು ದಿನಗಳೊಳಗಾಗಿ ದಾವಾದಾಖಲ್ ಮಾಡಲಿಕ್ಕೆ ಇದರಿಂದ ಬದ್ಧನಾಗುತ್ತೇನೆ. ಮತ್ತು ನನಗೆ ಪ್ರತಿಕೂಲವಾಗಿ ಡಿಕ್ರಿ ಕೊಡಲ್ಪಟ್ಟ ಪಕ್ಷಕ್ಕೆ ಸದರೀ ಪತ್ರ ಪ್ರಕಾರ ನೆರವೇರಿಸುವದಲ್ಲದೆ, ನನ್ನಿಂದ ಸಲ್ಲಬಹುದಾದ, ಖರ್ಚುಗಳು ಬಡ್ಡಿಗಳು ದೇಖೀಲ್ ತಮಾಂ ಮೊಬಲಗುಗಳನ್ನೂ ಪಾವತೀ ಮಾಡಲಿಕ್ಕೆ ಸಮ್ಮತಿಸುತ್ತೇನೆ ಅಥವಾ ಮೇಲೆಕಂಡಂತೆ ಬಂದು ದಾವೇಯನ್ನು ದಾಖಲ್‌ಮಾಡಲಿಕ್ಕೆ ನಾನು ತಪ್ಪಿದರೆ, ನಾನು ನೇಮಿಸಲ್ಪಟ್ಟಾಗ ಮೇಲೆಕಂಡ ರೂಪಾಯಿಗಳ ಮೊಬಲಗನ್ನು ಪಾವತೀಮಾಡುತ್ತೇನೆ (ಅಥವಾ ಸಂದರ್ಭಾನುಸಾರ ಮೇಲೆಕಂಡ ಕಾಗದಗಳನ್ನಾಗಲಿ ಸ್ವತ್ತನ್ನಾಗಲಿ ಒಪ್ಪಿಸುತ್ತೇನೆ) ಅದರಲ್ಲಿ ನಾನುಯೇನಾದರೂ ತಪ್ಪಿದರೆ ರೂಪಾಯಿಗಳ ಮೊಬಲಗನ್ನು ಮೈಸೂರು ಗವರ್ನಮೆಂಟಿಗೆ ದಂಡವಾಗಿ ತೆತ್ತು ಬಿಡುವದಕ್ಕೆ ಇದರಿಂದ ಬದ್ಧನಾಗುತ್ತೇನೆ.

ತಾರೀಖು

(ದಸ್ತಖತ್ತು.)

ಪ್ರಿನ್ಸಿಪಲ್ ಅಂದರೆ ಪತ್ರದಾರನ ಪತ್ರಕ್ಕೆ ಜಂಟಿಸಲ್ಪಡತಕ್ಕ ಜಾಮೀನ್ ಪತ್ರದ ನಮೂನೆ.

ಎಂಬ್ಬನಾವು ಬಗ್ಯೆ ಮೇಲೆಕಂಡ ಜಾಮೀನ್‌ದಾರರಾಗಿ ಇದರಿಂದ ತಿಳಿಸುವದೇನಂದರೇ, ಅವನು ಮಾಡುವಂತೆಯೂ, ನೆರವೇರಿಸುವಂತೆಯೂ, ಅವನು ಮೇಲೆ ವಹಿಸಿ ಯಿರುವ ಯೆಲ್ಲಾ ಅಂಶಗಳನ್ನೂ, ಮಾಡತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು. ಮತ್ತು ಅದರಲ್ಲಿ ಅವನು ತಪ್ಪಿದರೆ, ಮೈಸೂರು ಗವರ್ನಮೆಂಟಿಗೆ ರೂಪಾಯಿಗಳನ್ನು ದಂಡವಾಗಿ ತೆರಲಿಕ್ಕೆ ನಾವು ಇದರಿಂದ ಬದ್ಧರಾಗುತ್ತೇವೆ.

ತಾರೀಖು

(ದಸ್ತಖತ್ತು.)

F ಷೆಡ್ಯೂಲ್.

(95ನೇ ಸೆಕ್ಷನ್ ನೋಡತಕ್ಕದ್ದು.)

I.—ಜಮೀನ್ ಬಿಡುವಂತೆ ಶಿಕ್ಮೀದಾರನಿಗೆ ಜಮೀನ್‌ದಾರನಿಂದ ಕೊಡಲ್ಪಡತಕ್ಕ ನೋಟೀಸಿನ ನಮೂನೆ.

A. B. ಗೆ

2. ಕಮ್ಮಿಟಿಯವರು, ತಮ್ಮ ರಿಪೋರ್ಟಿಗೆ ಮುಂದಾಗಿ ತಿಳಿಸುವದೇನಂದರೆ, ರೆಗ್ಯುಲೇಷನನ್ನು ಅವಗಾಹನಕ್ಕೆ ತರುವದಕ್ಕೆ ಮುಂಚೆ, ಮೈಸೂರು ದೇಶದ ಜುಡಿಷಿಯಲ್ ವ ರೆವಿನ್ಯು ಮುಖ್ಯ ಅಧಿಕಾರಿಗಳ ಅಭಿಪ್ರಾಯಗಳನ್ನೂ ಮತ್ತು ಅನೇಕ ಆಫೀಸರುಗಳ ವ ಇತರ ಮನುಷ್ಯರ ಸಲಹೆಗಳನ್ನೂ ಸಹ ಕಮ್ಮಿಟಿಯವರು ಪಡೆದಿರುತ್ತಾರೆ. ಸದರೀ ಅಭಿಪ್ರಾಯಗಳು ಯಾರಿಂದ ಕೊಡಲ್ಪಟ್ಟದ್ದಾಗಿದ್ದರೂ ಸರಿಯೆ ಅವುಗಳಿಗೆ ಸಂಪೂರ್ಣವಾದ ನಿಗೆ ಕೊಟ್ಟಿರುವದಲ್ಲದೆ ಅನೇಕ ಸಂದರ್ಭಗಳಲ್ಲಿ ಅಭಿಪ್ರಾಯಗಳು ಅಂಗೀಕರಿಸಲ್ಪಟ್ಟಿರುತ್ತವೆ, ಮತ್ತು ಕೊಡಲ್ಪಟ್ಟ ಅಭಿಪ್ರಾಯಗಳು ಸಾಧಾರಣವಾಗಿ ವಿಶೇಷ ವುಪಯೋಗವಾದವುಗಳಾಗಿ ತಿಳಿಯಲ್ಪಟ್ಟಿವೆ. ಈ ರೆಗ್ಯುಲೇಷನಿಗೆ ಆಧಾರವಾದ ನಂಬಿಕೆವುಳ್ಳ ಮತ್ತು ಅನುಭವವುಳ್ಳ ಮುಂಬೈ ರೆವಿನ್ಯು ಕೋಡಿನ ನಿಯಮಗಳು, ಮೈಸೂರು ದೇಶದ ವಿಶೇಷಸಂದರ್ಭಗಳು ಹಾಲೀ ಜಾರೀಯಲ್ಲಿರುವ ಕಾನೂನಿನಲ್ಲಿಯೂ ನಡವಳಿತದಲ್ಲಿಯೂ ಮತ್ತು ಹಿಡುವಳಿಪದ್ಧತಿಗಳಯಲ್ಲಿಯೂ ಅಡಗಿರುವದು ಎಷ್ಟರ ಮಟ್ಟಿಗೆ ಆವಶ್ಯಕವೋ ಅಷ್ಟರಮಟ್ಟಿಗೇನೆ ಬದಲಾಯಿಸಲ್ಪಟ್ಟಿರುತ್ತವೆ, ಅವುಗಳೂ ಪ್ರಾಯಶಃ ಮುಂಬೈ ಸೀಮೆಯ ಮಾಮೂಲ್ ಮುಂತಾದವುಗಳಿಗೆ ಸ್ವಲ್ಪಮಟ್ಟಿಗೇನೆ ವ್ಯತ್ಯಾಸವಾಗಿರುತ್ತವೆ. ಈ ರಿಪೋರ್ಟಿನೊಂದಿಗೆ ಕಳುಹಿಸಲ್ಪಡುವ ಮಸೂದಾ ಕೋಡಿನಲ್ಲಿ ಕಮ್ಮಿಟಿಯವರಿಂದ ಮಾಡೋಣಾದ ಬದಲಾವಣೆಗಳು "ಅಕ್ಷರಶಃ" ಅಡಗಿರುತ್ತವೆ, ಕಮ್ಮಿಟಿಯವರು ಸಾಧ್ಯವಾದ ಮಟ್ಟಿಗೆ ಸಂಕ್ಷೇಪವಾಗಿ ತಾವು ಅಭಿಪ್ರಾಯಪಡುವ ಜಾಸ್ತೀ ಅಂಶಗಳು ವ ಬದಲಾವಣೆಗಳನ್ನೂ ಇದರಡಿ ಕಾಣಿಸಿ ನಿದರ್ಶನ ಮಾಡುತ್ತಾರೆ.

1ನೇ ಅಧ್ಯಾಯ.

(ಅವತರಣಿಕೆ.)

3. ಅರ್ಥವಿವರಣೆಯ ಕಲಮಾದ 3ನೇ ಸೆಕ್ಷನಿನ 19ನೇ ಕ್ಲಾಜಿನ 4ನೇ ಪಙ್ಕ್ತಿಯಲ್ಲಿ "ಕೆಲವು ಮಟ್ಟಿಗೆ" ಯೆಂಬ ಮಾತಿನ ಆಚೆ "ಅಥವಾ ಕಾಯಂ ಕಂದಾಯಕ್ಕೆ" ಯೆಂಬ ಮಾತುಗಳನ್ನು ಸೇರಿಸುವದರಿಂದ ಸದರೀ ಕ್ಲಾಜು ಕಾಯಂಗುತ್ತಾ ಗ್ರಾಮಗಳಿಗೂ ಲಗಾವಾಗಬಹುದೆಂದು ಕಮ್ಮಿಟಿಯವರು ಅಭಿಪ್ರಾಯಪಡುತ್ತಾರೆ; ಇದರಿಂದ (20 ವ 21)ನೇ ಕ್ಲಾಜುಗಳು ಬಿಟ್ಟುಬಿಡಬಹುದು.

ಸೆಕ್ಷನ್ 3.

ಅದೇಸೆಕ್ಷನಿನ (23)ನೇ ಕ್ಲಾಜಿನಲ್ಲಿ ಜುಲೈ ಯಂಬ ಮಾತಿಗೆ ಬದಲಾಗಿ ಮಾರ್ಚಿಯಂಬದಾಗಿ ಬದಲಾಯಿಸಲ್ಪಟ್ಟಿರುತ್ತೆ. ಮತ್ತು (26)ನೇ ಕ್ಲಾಜಿನಲ್ಲಿ "ಗ್ರಾಮ ಮುತ್ಸದ್ದಿ" ಯಂಬದರ ಅರ್ಥವಿವರಣೆಯು ಅನಾವಶ್ಯಕವಾಗಿರುವದರಿಂದ ಬಿಡಲ್ಪಟ್ಟಿದೆ, ಯಿದಲ್ಲದೆ ಈ ಆಕ್ಟಿನ್ ಕಲಂ ಮುಂಬೈ ಲ್ಯಾಂಡ್ ರೆವಿನ್ಯು ಕೋಡಿನಲ್ಲಿ ನಮೂದಾಗಿರುವದಿಲ್ಲ.

IIನೇ ಅಧ್ಯಾಯ.

(ಮುಲ್ಕೀ ಆಫೀಸರರುಗಳ ನಿರ್ಮಾಣ ಮತ್ತು ಅಧಿಕಾರಗಳು.)

ಸೆಕ್ಷನ್ 4.

4. ಕಮ್ಮಿಷನರಿನ ಅಧಿಕಾರಗಳನ್ನು ಒಂದು ಷೆಡ್ಯೂಲಿನಲ್ಲಿ ನಮೂದಿಸಲ್ಪಡಬೇಕಾದ ತೊಂದರೆಯನ್ನು ತಪ್ಪಿಸುವಷ್ಟರ ಮಟ್ಟಿಗೆ 4ನೇ ಸೆಕ್ಷನನ್ನು ಕಮ್ಮಿಟಿಯವರು ಬದಲಾಯಿಸುತ್ತಾರೆ.

ಸೆಕ್ಷನ್‌ಗಳು 6, 7, 8 ವ 9.

ಮೈಸೂರು ದೇಶದಲ್ಲಿ ವಿಶೇಷತಃ ಉಂಟುಮಾಡಲ್ಪಟ್ಟಿರುವ ಸಬ್ ಡಿವಿಜನ್ನಿಗೂ ಮತ್ತು ಸಬ್ ಡಿವಿಜನ್ ಆಫೀಸರಿಗೂ ಲಗಾವಾಗುವಂತೆಯೂ, ಸಬ್ ಡಿವಿಜನ್ ಚಾರ್ಜಿನಲ್ಲಿರುವ ಒಬ್ಬ ಅಸಿಸ್ಟೆಂಟ್ ಕಮ್ಮಿಷನರಿಗು ಮತ್ತು ಡೆಪ್ಯುಟಿ ಕಮ್ಮಿಷನರಿಂದ ಗೊತ್ತಾದ ಕೆಲಸಗಳು ಹಂಗಾಮಿಯಾಗಿ ನೇಮಿಸಲ್ಪಟ್ಟಿರುವ ಸಾಧಾರಣವಾದ ಒಬ್ಬ ಅಸಿಸ್ಟೆಂಟ್ ಕಮ್ಮಿಷನರಿಗು ಇರುವ ವ್ಯತ್ಯಾಸವನ್ನು ತೋರಿಸುವದಕ್ಕೂ ಕೆಲವು ಅಂಶಗಳು 6, 7, 8 ವ 9ನೇ ಸೆಕ್ಷನ್‌ಗಳಿಗೆ ಶೇರಿಸಲ್ಪಡತಕ್ಕದ್ದೆಂದು ಸೂಚಿಸಲ್ಪಟ್ಟಿದೆ.

ಸೆಕ್ಷನ್ 17 (1.)

5. ಗವರ್ನಮೇಂಟಿನವರು, ಖಂಡಿತವಾಗಿ ಅವಶ್ಯಕವೆಂದು ಯೋಚಿಸುವಷ್ಟು ಸಂಖ್ಯೆವುಳ್ಳ ಲೆಖ್ಖಗಳು ಮಾತ್ರವೇ, ಪರಭಾರೆ ಮಾಡಲ್ಪಟ್ಟ ಗ್ರಾಮದ ಹಿಡುವಳಿದಾರನು ಇಡಬೇಕಾದ್ದನ್ನು ಹದ್ದು ಪಡಿಸುವದಕ್ಕೋಸ್ಕರ ಮುಖ್ಯವಾದ ಬದಲಾವಣೆಯು 17 (1)ನೇ ಸೆಕ್ಷನಿನಲ್ಲಿ ಸೂಚಿಸಲ್ಪಟ್ಟಿದೆ. ಸರ್ಕಾರ ಗ್ರಾಮಗಳಂತೆ ತಮಾಂ ಲೆಖ್ಖಗಳೂ ತಯಾರ್ಮಾಡಲ್ಪಡತಕ್ಕದ್ದೆಂದು ವಿಧಿಸುವದು ತಪ್ಪೆಂದು ಕಮ್ಮಿಟಿಯವರು ಭಾವಿಸುತ್ತಾರೆ ; ಮತ್ತು ಅಸಾಧಾರಣವಾದ ಸಂಗತಿಗಳಲ್ಲಿವಿನಾ, ಕೆಲವು ಫಾರಂಗಳಿಗೆ ಬೇಕಾದ ತಪಶೀಲ್‌ಗಳು ಪರಭಾರೆಯಾದ ಗ್ರಾಮಗಳಲ್ಲಿ ಇರುವದೇ ಇಲ್ಲವು. ಯಿದಲ್ಲದೆ ಮುಂಬೈ ಲ್ಯಾಂಡ್ ರೆವಿನ್ಯು ಕೋಡಿನಲ್ಲಿ ಈ ಸೆಕ್ಷನು ನಮೂದಿರುವದಿಲ್ಲ ; ಮತ್ತು ಮದರಾಸ್ ಶೀಮೆಯಲ್ಲಿ, ಕಮ್ಮಿಟಿಯವರಿಂದ ಈಗ ಸೂಚಿಸಲ್ಪಟ್ಟಿರುವ ಬದಲಾವಣೆಯಂತೆಯೇ ನಡವಳಿತ ಯಿರುವದಾಗಿ ನಂಬಲ್ಪಟ್ಟಿದೆ.

ಸೆಕ್ಷನ್ 21.

6. ಸೆಕ್ಷನ್ 21ಕ್ಕೆ "ಕಮ್ಮಿಷನರ್" ಯಂಬ ಮಾತು, ಅವರವರುಗಳ ಲವಾಜಮೆಯ ತಮಾಂ ಮೆಂಬರುಗಳ ನೌಕರರಾತಿ ವಿಷಯದಲ್ಲಿ ಅಧಿಕಾರ ಕೊಡಲ್ಪಟ್ಟ ಆಫೀಸರ್‌ಗಳೊಂದಿಗೆ ಶೇರಿಸಲ್ಪಟ್ಟಿರುತ್ತೆ, ಮತ್ತು "ಸರ್ವೆ ಡೆಪ್ಯುಟಿ ಸೂಪರಿಂಟೆಂಡೆಂಟರು ವ ಸರ್ವೆ ಸೆಟಲ್‌ಮೆಂಟ್ ಆಫೀಸರ್" ಯಂಬ ಮಾತುಗಳು ಬಿಡಲ್ಪಟ್ಟಿರುತ್ತವೆ. ಗವರ್ನಮೇಂಟಿನವರು, ಇತರ ಆಫೀಸರ್‌ಗಳಿಗೂ ಅವರುಗಳ ಲವಾಜಮೆಯ ಮೆಂಬರುಗಳ ನೌಕರರಾತಿಯ ಅಧಿಕಾರವನ್ನು ಕೊಡುವ ಬಗ್ಯೆ ಅವಕಾಶ ವುಂಟುಮಾಡುವದಕ್ಕೋಸ್ಕರ ಸದರೀ ಸೆಕ್ಷನಿಗೆ ಒಂದು ನಿಯಮವು ಶೇರಿಸಲ್ಪಟ್ಟಿರುತ್ತೆ. ಯಾತಕ್ಕೆಂದರೆ, ಸದರೀ ಸೆಕ್ಷನಿನಲ್ಲಿ ನಮೂದ್ಮಾಡಲ್ಪಡದಂಥಾ ಆಫೀಸರ್‌ಗಳ ಕುರಿತು, ಅಂಥಾ ಹಕ್ಕುದಾರಿಗಳು ಯಾ ಗೌರವವುಳ್ಳ ಅಧಿಕಾರ ಇವುಗಳ ವಿಷಯದಲ್ಲಿ ಶಿರ್ಮಾನಿಸುವಂತೆ ಗವರ್ನಮೆಂಟಿನವರು ಪ್ರಾಯಶಃ ಕೇಳಲ್ಪಡಬಹುದೆಂತ ಕಮ್ಮಿಟಿಯವರು ಊಹಿಸುತ್ತಾರೆ. 21ನೇ ಸೆಕ್ಷನಿನ ಯರಡನೇ ಭಾಗವು ವಿಶೇಷವಾಗಿ ಬದಲಾಯಿಸಲ್ಪಟ್ಟಿರುತ್ತೆ, ಯಾಕಂದರೆ ಶೇಕ್‌ದಾರ್‌ಗಳು ವ ಇತರ ತಾಪೇದಾರಿ ಉದ್ಯೋಗಸ್ಥರು ಹಾಲೀ ಸದರೀ ಸೆಕ್ಷನಿನಲ್ಲಿ ನಮೂದಿರುವದಿಲ್ಲವಾಗಿ ಅವರುಗಳಿಗೂ ಕಾನೂನ್ ವಿಧಿಸುವದಕ್ಕೋಸ್ಕರ ಕಮ್ಮಿಟಿಯವರು ಈ ರೀತಿ ಬದಲಾಯಿಸಿರುತ್ತಾರೆ.

IIIನೇ ಅಧ್ಯಾಯ.

(ಕೆಲವು ಮುಲ್ಕೀ ಆಫೀಸರ್‌ಗಳಿಂದ ಕೊಡಲ್ಪಡತಕ್ಕ ಜಾಮೀನನ್ನೂ ಮುಖ್ಯಸ್ಥರ ವ ಜಾಮೀನ್‌ದಾರರ ಜವಾಬ್‌ದಾರಿಯನ್ನೂ ಕುರಿತು.)

ಸೆಕ್ಷನ್ 23.

7. ಸೆಕ್ಷನ್ 23ರ 14ನೇ ಪಙ್ತಿಯಲ್ಲಿ "ಮುಚ್ಚಳಿಕೆ ಮೂಲಕ" ಯಂಬ ಮಾತು ಅರ್ಥ ಸ್ಪಷ್ಟ ಪಡಿಸುವದಕ್ಕೋಸ್ಕರ ಶೇರಿಸಲ್ಪಟ್ಟಿರುತ್ತೆ.

8. ಸೆಕ್ಷನ್ 24ರ ವಿಷಯದಲ್ಲಿ ಕಮ್ಮಿಟಿಯವರು ಅಭಿಪ್ರಾಯ ಪಡುವದೇನಂದರೆ, ಒಬ್ಬ ರೆವಿನ್ಯು ಆಫೀಸರನು ಹೊಸದಾದ ಅಥವಾ ಜಾಸ್ತೀ ಜಾಮೀನನ್ನು ಕೊಡಲಿಕ್ಕೆ ವಿಧಿಸಿರುವ ಒಂದು ತಿಂಗಳ ಕಾಲವು ಸಾಲದ್ದಾಗಿರುವದರಿಂದ ಸದರೀ ಒಂದು ತಿಂಗಳ ಕಾಲವು ಕೇವಲ ಕಮ್ಮಿ ವಾಯಿದೆಯಾಗಿ ಬದಲಾಯಿಸಲ್ಪಡತಕ್ಕದ್ದು. ಸದರೀ ವಾಯಿದೆಯನ್ನು ಜಾಸ್ತೀ ಮಾಡುವದು ಡೆಪ್ಯುಟಿ ಕಮ್ಮಿಷನರ್ ಯಾ ಸರ್ವೆ ಸೂಪರ್ರಿಂಟೆಂಡೆಂಟೆಯವರ ಯಖ್ತ್ಯಾರಿಗೆ ಬಿಡಲ್ಪಟ್ಟಿರುತ್ತೆ.

ಸೆಕ್ಷನ್ 24.

9. ಸೆಕ್ಷನ್ 25ರ ಯರಡನೇ ಪ್ಯಾರಾವಿನ 4ನೇ ಪಙ್ತಿಯಲ್ಲಿ "ವಪ್ಪಿಸದೆಯಾಗಲಿ ಇದ್ದರೆ" ಎಂಬ ಮಾತಿನ ಆಚೆ "ಅಥವಾ ಹಾಗೆ ಮಾಡಲು ತಪ್ಪಿದ್ದಕ್ಕೆ ಸಾಕಾದ ಕಾರಣವನ್ನು ತೋರಿಸದಿದ್ದರೆ" ಯಂಬ ಮಾತುಗಳು ಸೇರಿಸುವದರಿಂದ ಕಠಿಣತ್ವ ಕಮ್ಮಿಯಾಗುವದು.

ಸೆಕ್ಷನ್ 25.

10. ಸೆಕ್ಷನ್ 26ರಲ್ಲಿ ನಮೂದ್ಮಾಡಿದ ತರಹೇದ ಸ್ವತ್ತುಗಳು ಹಜಂ ಮಾಡಲ್ಪಟ್ಟ ಸ್ಥಳವನ್ನು ತಿಳಿದಿರುವ ಪ್ರತಿ ಮನುಷ್ಯನೂ, ಆ ಸಂಗತಿಯನ್ನು ಕುರಿತ ವರ್ತಮಾನವನ್ನು ಡೆಪ್ಯುಟಿ ಕಮ್ಮಿಷನರಿಗೆ ತಿಳಿಸಲಿಕ್ಕೆ ಬದ್ಧನಾಗಿರತಕ್ಕದ್ದು ಯಂದು ವಿಧಿಸುವದು ಅಸ್ಪಷ್ಟವಾಗಿಯೂ ಮತ್ತು ಸಾಧ್ಯವಾದ ಮಟ್ಟಿಗೆ ಕೆಡಕು ವುಂಟುಮಾಡುವದಕ್ಕೆ ಆಸ್ಪದವಾದದ್ದಾಗಿಯೂ ಇರುವದರಿಂದ, ಕಮ್ಮಿಟಿಯವರು ಅದನ್ನು ಅನಾವಶ್ಯಕವೆಂದು ಭಾವಿಸಿ ತದನುಸಾರವಾಗಿ ಸದರೀ ಸೆಕ್ಷನಿನ ಯರಡನೇ ಭಾಗವನ್ನು ಅಷ್ಟರ ಮಟ್ಟಿಗೆ ಬದಲಾಯಿಸಿರುತ್ತಾರೆ.

ಸೆಕ್ಷನ್ 26.

IVನೇ ಅಧ್ಯಾಯ.

(ಮುಲ್ಕೀ ಆಫೀಸರಿಗಳಿಗೆ ನಿಷೇಧಿಸಲ್ಪಟ್ಟ ಕೆಲವು ಕೃತ್ಯಗಳನ್ನೂ ಅವರುಗಳ ಕೆಟ್ಟ ನಡತೆಗಾಗಿ ದಂಡನೆಯನ್ನೂ ಕುರಿತು.)

11. ಕಮ್ಮಿಟಿಯವರು, 31ನೇ ಸೆಕ್ಷನ್ ಅನುಸರಿಸಿ ಕೊಡಲ್ಪಡಬೇಕಾದ ಅಪ್ಪಣೆಯು ಗವರ್ನಮೆಂಟಿನಿಂದ ಮಾತ್ರವೇ ಅಲ್ಲದೆ ಡೆಪ್ಯುಟಿ ಕಮ್ಮಿಷನರಿಂದಾಗಲಿ ಸರ್ವೇ ಸೂಪರ್ರಿಂಟೆಂಡೆಂಟರಿಂದಾಗಲಿ ಕೊಡಲ್ಪಡತಕ್ಕದ್ದಲ್ಲವೆಂದು ಭಾವಿಸುತ್ತಾರೆ.

ಸೆಕ್ಷನ್ 31.

ಸೆಕ್ಷನ್ 31ರ (1, 2)ನೇ ಕ್ಲಾಜುಗಳಲ್ಲಿ ವಿಧಿಸಿರುವ ನಿಷೇಧಗಳಿಂದ ಶೇಕ್‌ದಾರ್ ದರ್ಜೆಗೆ ಕೀಳ್ಪಟ್ಟ ಗ್ರಾಮ ನೌಕರ್‌ಗಳು ವ ರೆವಿನ್ಯು ಆಫೀಸರ್‌ಗಳನ್ನು ವಿನಾಯಿಸುವ ಒಂದು ನಿಯಮವು ಅವಶ್ಯಕವೆಂದು ಇರಾದಿಸಲ್ಪಟ್ಟಿರುತ್ತೆ; ಅಂಥಾ ಆಫೀಸರ್‌ಗಳು ವ್ಯಾಪಾರದಲ್ಲಿ ಪ್ರವರ್ತಿಸುವದನ್ನಾಗಲಿ ಹರಾಜಿನಲ್ಲಿ ವಾಸ್ತವ್ಯವಾಗಿ ದರಖಾಸ್ತು ಮಾಡುವದನ್ನಾಗಲಿ, ಅಂಥಾ ಆಫೀಸರೇ ಹರಾಜ್ ನಡಿಸುವ ಸಂದರ್ಭದಲ್ಲಿ ವಿನಾ, ಅನ್ಯಥಾ ನಿಷೇಧಿಸುವದು ಹಿಂಸೆಕರವಾಗಿರುವದು.

12. ಸೆಕ್ಷನ್ 35ರಲ್ಲಿ ಹೇಳುವ ಅಂಶಗಳಿಗೆ, ಅಪ್ಪೀಲ್‌ಗಳು ಕುರಿತ ಅಧ್ಯಾಯದಲ್ಲಿ ಹೇಳಿರುವದೇ ಸಾಕಾಗಿರುವದರಿಂದ ಸದರೀ ಸೆಕ್ಷನ್ ಅನಾವಶ್ಯಕವಾಗಿ ಕಾಣುತ್ತೆ.

ಸೆಕ್ಷನ್ 35.

Vನೇ ಅಧ್ಯಾಯ.

(ಜಮೀನ್ ಮತ್ತು ಜಮೀನ್ ಕಂದಾಯವನ್ನು ಕುರಿತು.)

13. ಸೆಕ್ಷನ್ 40, ಫರಭಾರೆ ಮಾಡಲ್ಪಡದ ಜಮೀನಿಗೆ ಮಾತ್ರ ಲಗಾವಾಗುವಂತೆ ವಿಧಿಸಿ ಬದಲಾಯಿಸಲ್ಪಟ್ಟಿರುತ್ತೆ. ಮುಂಬೈ ಲ್ಯಾಂಡ್ ರೆವಿನ್ಯು ಕೋಡಿನಲ್ಲಿ ಇದಕ್ಕಿಂತ ಹೆಚ್ಚಾಗಿ ವಿಧಿಸಿರುವದಿಲ್ಲ. ಕಮ್ಮಿಟಿಯವರು, ಗನಿಯಿಂದ ತೆಗಿಯುವ ಪದಾರ್ಥಗಳಿಗೆ ಗವರ್ನಮೆಂಟಿನವರು ತಮ್ಮ ಹಕ್ಕುದಾರಿಯನ್ನು ಸಮಯ ಬಂದಾಗ್ಯೆ ಸ್ಥಾಪಿಸುವ ಆವಶ್ಯಕತೆಯನ್ನು ಪೂರಾ ತಿಳಿದಿರುತ್ತಾರೆ, ಮತ್ತು ಅಂಥಾ ಹಕ್ಕು ಪರಭಾರೆ ಮಾಡಲ್ಪಡದಂಥಾ ಜಮೀನನಂತೆ ಪರಭಾರೆ ಮಾಡಲ್ಪಟ್ಟ ಜಮೀನಲ್ಲಿ ಸ್ಥಾಪಿಸುವದಕ್ಕೋಸ್ಕರ ಈಗಿನ ಸಮಯ ಅಷ್ಟು ಅನುಕೂಲವಾದ್ದಲ್ಲವೆಂದು ತೋರಿಸುವದು ಶ್ರಮ ಸಾಧ್ಯವೆಂದು ತಿಳಿಯುತ್ತಾರೆ. ಹ್ಯಾಗಾದಾಗ್ಯೂ ಗನಿಗಳು ಮತ್ತು ಗನಿಗಳಿಂದ ಹುಟ್ಟತಕ್ಕ ಪದಾರ್ಥಗಳ ಕುರಿತ ರಾಜ ಭಾಧ್ಯತೆಯು ಇಧಿಯೋ ಯಾ ಇಲ್ಲವೆ ಯಂಬ ವಿಷಯ, ಪರಭಾರೆ ಮಾಡಲ್ಪಟ್ಟ ಜಮೀನ್‌ಗಳಿಗೆ ಲಗಾವ್

ಸೆಕ್ಷನ್ 40.

ಮಾಡಿದಾಗ ಸದರೀ ಪ್ರಶ್ನೆಯು ಬಹಳ ದೊಡ್ಡದಾಗಿಯೂ ವಿಶೇಷ ಮುಖ್ಯವಾದ್ದಾಗಿಯೂ ಇರುತ್ತೆ; ಕಮ್ಮಿಟಿಯವರು ಈ ಪ್ರಶ್ನೆಯನ್ನು ಒಂದು ವಿಧವಾಗಿ ಆಗಲಿ ಅನ್ಯಥಾ ಆಗಲಿ ಕಾನೂನಿನಿಂದ ಉದಹರಿಸದೆ, ಹಾಲಿ ಇರುವಂತೆಯೆ ಬಿಟ್ಟುಬಿಡುವದಕ್ಕೆ ಇರಾದೆ ಪಡುತ್ತಾರೆ. ಹೀಗೆ ಪರಭಾರೆಮಾಡಲ್ಪಟ್ಟ ಜಮೀನುಗಳಲ್ಲಿ ಗನಿಯಿಂದ ತೆಗಿಯಲ್ಪಡುವ ಪದಾರ್ಥಗಳಿಗೆ ಸರ್ಕಾರದವರ ಹಕ್ಕುದಾರಿಯು ಪ್ರಶಂಸೆಗೆ ಬಂದಾಗ್ಯೆ ಮಾಮೂಲ್ ಮತ್ತು ಪ್ರಥಮ ಬಾಧ್ಯತೆ ವಿಷಯದಲ್ಲಿ ಇದುವರಿಗೆ ಮಾಡಲ್ಪಟ್ಟಿರುವದಕ್ಕಿಂತಲೂ ವಿಶೇಷ ಜಾಗರೂಕತೆಯಾದ ವಿಚಾರಣೇ ಮೇಲೆ ತೀರ್ಮಾನಿಸುವದಕ್ಕೆ ಅದೇಕಾಲವಾಗಿರುವದು. ಇಲ್ಲಿ ತಿಳಿಸಬೇಕಾದ್ದೇನಂದರೆ, ಗವರ್ನಮೆಂಟಿನವರಿಂದ ಕೊಡಲ್ಪಟ್ಟಿರುವ ಯಾವ ಸನ್ನದಿನಲ್ಲೇ ಆಗಲಿ, ಪರಭಾರೆ ಸಾಧನದಲ್ಲೇ ಆಗಲಿ ಗನಿಗಳ ಬಾಧ್ಯತೆಯನ್ನು ಕುರಿತ ಅಂಶವು ಪ್ರಾಯಶಃ ನಮೂದಿಸಿರುವದಿಲ್ಲ; ಆದ್ದರಿಂದಲೇ ಮುಂಬೈ ಲ್ಯಾಂಡ್ ರೆವಿನ್ಯೂ ಕೋಡಿನ 69ನೇ ಸೆಕ್ಷನು, ಮೈಸೂರು ಲ್ಯಾಂಡ್ ರೆವಿನ್ಯು ಕೋಡಿನ ನಿಯಮದ ಕಲಮುಗಳೊಂದಿಗೆ ಅಂಗೀಕರಿಸಲ್ಪಟ್ಟಿರುತ್ತೆ.

ಸೆಕ್ಷನ್ 42.

14. ಒಂದು ಗ್ರಾಮಕ್ಕೆ ಶೇರಿರುವ ಯಾ ವರ್ಗ ಮಾಡಲ್ಪಟ್ಟಿರುವ ಕಾವಲ್ ಜಮೀನುಗಳು, ಅದೇ ಗ್ರಾಮಸ್ಥರ ವುಪಯೋಗದಲ್ಲಿ ಮಾತ್ರವೇ ಇದ್ದರೆ, ಮೇಯಿಸುವ ವಿಷಯದಲ್ಲಿ ಗ್ರಾಮಸ್ಥರುಗಳೊಳಗೆ ವ್ಯಾಜ್ಯವು ಖಂಡಿತವಾಗಿ ವುಂಟಾಗುವವು, ಅಂಥಾ ವ್ಯಾಜ್ಯಗಳುಂಟಾಗದಂತೆ 42ನೇ ಸೆಕ್ಷನು ಬದಲಾಯಿಸಲ್ಪಟ್ಟಿರುತ್ತೆ. ಮೈಸೂರು ಶೀಮೆಯಲ್ಲಾದರೂ, ಧರ್ಮದ ಕಾವಲನ್ನುಪಯೋಗಿಸುವ ವಿಷಯದಲ್ಲಿ ಯಾವಾಗಲೂ "ಮಾಮೂಲ್" ಅನುಸರಿಸಿ ಯೇರ್ಪಡಾಗುವ ಕಾರಣ, ಆ ಪದ್ಧತಿಗೆ ವೆತಿರಿಕ್ತವಾಗಿ ನಡಿಸುವ ಅಂಶದಲ್ಲಿ ಕಮ್ಮಿಟಿಯವರು ಅಭಿಪ್ರಾಯ ಪಡುವದಿಲ್ಲ.

ಸೆಕ್ಷನ್ 45.

15. ಮಸೂದಾ ಕೋಡಿನ 45ನೇ ಸೆಕ್ಷನು ಮುಂಬೈ ಲ್ಯಾಂಡ್ ರೆವಿನ್ಯು ಕೋಡಿನ 40ನೇ ಸೆಕ್ಷನಿಗೋಸ್ಕರ, ತಖ್ತಪಡಿಮಾಡಲ್ಪಟ್ಟಿರುತ್ತೆ, ಯಾಕಂದರೆ 40ನೇ ಸೆಕ್ಷನು, ಮೈಸೂರು ದೇಶದಲ್ಲಿ ಹಾಲೀ ಜಾರೀಲಿರುವ ಕಾಯಿದೆಗೆ ಸರಿಯಾಗಿ ಅನುಸರಿಶಿರುತ್ತದೆ, ಹ್ಯಾಗಂದರೆ, ಮಸೂದಾ ಕೋಡಿನ 45ನೇ ಸೆಕ್ಷನಿನಲ್ಲಿ, ವುಳಿಸಿಕೊಳ್ಳಲ್ಪಟ್ಟ ಮರಗಳಿಗೆ ಇರತಕ್ಕ ಹಕ್ಕುದಾರೀಯನ್ನ ಸೆಟಲ್‌ಮೆಂಟ್ ಆದ ಯರಡು ವರುಷಗಳೊಳಗಾಗಿ ಚಲಾಯಿಸಬೇಕಾದ ವಿಷಯದಲ್ಲಿ ರದ್ದಾಗಿರುವ ನಿಬಂಧನೆಯನ್ನ ನಮೂದಿಶಿರುತ್ತೆ; ಆದರೆ ಪ್ರಕೃತದಲ್ಲಿ, ಚೀಫ್ ಕಮ್ಮಿಷನರವರಿಂದ ಕೊಡೋಣಾದ 1879ನೇ ಇಸವಿ ಆಗಸ್ಟು 6ನೇ ಮರ್ಕುಂ 1796—1810—345ನೇ ನಂಬರ್ ಹುಕುಮನ್ನನುಸರಿಸ್ಸಿ, ಸೆಟಲ್‌ಮೆಂಟ್ ಕಾಲದಲ್ಲಿಯೇ ಮರಗಳನ್ನ ವುಳಿಸಿಕೊಳ್ಳೋಣವು ಒಂದೇ ದಫಾ ಆಖೈರಾಗಿ ನಡಿಯುತ್ತದೆ. ಮುಂಬೈ ಲ್ಯಾಂಡ್ ರೆವಿನ್ಯು ಕೋಡಿನ 40ನೇ ಸೆಕ್ಷನೇ ಸಂಪೂರ್ತಿ ಯಾಗಿರುವಣದರಿಂದ, ಅದಕ್ಕೆ ಬದಲಾವಣೆಗಳನ್ನ ಶೇರಿಶಿದರೆ, ಮೈಸೂರು ಶೀಮೆಯ ಸ್ಥಿತಿಗೆ ಸರಿಯಾಗುವದು.

ಸೆಕ್ಷನ್‌ಗಳು 43 ವ 44.

ಮಸೂದಾ ಕೋಡಿನ 43 ವ 44ನೇ ಸೆಕ್ಷನ್‌ಗಳ ದೆಸೆಯಿಂದ, ಮುಂಬೈ ಲ್ಯಾಂಡ್ ರೆವಿನ್ಯುಕೋಡಿನ 41ನೇ ಸೆಕ್ಷನಿನ ವುದ್ದೇಶವು ನೆರವೇರುತ್ತದೆಯಾಗಿ, ಆ ಸೆಕ್ಷನ್‌ಗಳು ಕಾಯಂಮಾಡಲ್ಪಟ್ಟಿರುತ್ತವೆ; ಮತ್ತು ಉಳಿಸಿಕೊಳ್ಳಲ್ಪಟ್ಟ 9 ಬಗೆ ಮರಗಳ ತಪಶೀಲು ಮಸೂದಾ ಕೋಡಿನಲ್ಲಿರಕ್ಕದ್ದು ಅವಶ್ಯಕವೆಂದು ತೋರುತ್ತೆ, ಆದರೆ ಮುಂಬೈ ಲ್ಯಾಂಡ್ ರೆವಿನ್ಯು ಕೋಡಿನಲ್ಲಿ ಈ ತಪಶೀಲು ನಮೂದಿರುವದಿಲ್ಲವು.

16. ರಸ್ತೆಯ ಪಕ್ಕದಲ್ಲಿರುವ ಮರಗಳನ್ನು ಕುರಿತ 48ನೇ ಸೆಕ್ಷನಿನ 2ನೇ ವುಪನಿಬಂಧನೆಯ ದೆಸೆಯಿಂದ, ನಿಷ್ಕಾರಣವಾದ ಮತ್ತು ತೊಂದರೆ ವುಂಟುಮಾಡುವಂಥಾ ದರಖಾಸ್ತುಗಳು ಬರಲಿಕ್ಕೆ ಆಸ್ಪದವಾಗುತ್ತೆಯಾಗಿ, ಆ ವುಪನಿಬಂಧನೆಯು ಅನಾವಶ್ಯಕವೆಂದು ವಜಾಮಾಡಲ್ಪಟ್ಟಿರುತ್ತೆ.

ಸೆಕ್ಷನ್ 49.

17. ಬಗೆರಿ ಹುಕುಂ ವುಪಯೋಗಿಸಿಕೊಂಡದ್ದಕ್ಕೆ ಶಿಕ್ಷೆಯಾಗಿ, 49ನೇ ಸೆಕ್ಷನ್‌ನಲ್ಲಿ ವಿಧಿಸೋಣಾದಂತೆ ಜಮೀನವತ್ತುವರಿ ವಿಷಯವಲ್ಲದ ಸಂದರ್ಭನಲ್ಲಿ, ಮರದ ಖರೀದಿ ಮಾತ್ರ ವಸೂಲ್ ಮಾಡೋಣವು ಕೇವಲ ಕಮ್ಮಿಯಾದ ಶಿಕ್ಷೆಯಂಬು ಕಮ್ಮಿಟಿಯವರು ಅಭಿಪ್ರಾಯ ಪಡುತ್ತಾರೆ. ಆದ್ದರಿಂದ ಸದರೀ ಖರೀದಿ ಶಿವಾಯಿ 50 ರೂಪಾಯಿ ವರಿವಿಗೂ ಫೂಟಿನಲ್ಲಿ ಜುರ್ಮಾನೆ ವಿಧಿಸತಕ್ಕ ಅಧಿಕಾರವು ವಿಧಿಸಲ್ಪಟ್ಟಿರುತ್ತೆ.

ಸೆಕ್ಷನ್ 50.

18. 50ನೇ ಸೆಕ್ಷನ್‌ನಲ್ಲಿ ತಮಾಂ ಜಮೀನುಗಳ ಕಂದಾಯದ ವಸೂಲಾತಿಯು ಸಂಸ್ಥಾನದ ಆವಶ್ಯಕತೆಗಳಿಗೋಸ್ಕರ ಜರೂರಾದಾಗ ಮತ್ತು ಜರೂರಾಗಿರುವ ಪರ್ಯಂತ ಅಂಥಾ ವಸೂಲಾತಿಯನ್ನು ಕಾನೂನಿನಿಂದ ವಿಧಿಸಲಿಕ್ಕೆ ಗವರ್ನಮೆಂಟಿನವರು ವುಳಿಸಿಕೊಂಡಿರುವ ಅಧಿಕಾರ ನಮೂದಿಸಿರುವ ಭಾಗವನ್ನ ತಖ್ತಪಡಿ ಮಾಡಬೇಕೆಂಬುನ್ನೂ, ಗವರ್ನಮೆಂಟಿನ ಅಂಥಾ ಸ್ವಾತಂತ್ರ್ಯವನ್ನ ಹಾಲೀ ಕಾನೂನಿನಲ್ಲಿ ಉದಹರಿಸಲಿಕ್ಕೆ ಯಾವ ವುದ್ದೇಶವೂ ಯಿರುವದಿಲ್ಲವೆಂದುನ್ನೂ ಕಮ್ಮಿಟಿಯವರು ಅಭಿಪ್ರಾಯ ಪಡುತ್ತಾರೆ.

ಸೆಕ್ಷನ್ 59.

19. 1876ನೇ ಇಸವಿಯ 17ನೇ ನಂಬರುಳ್ಳ ಅಯೋಧ್ಯೆಯ ರೆವಿನ್ಯು ಆಕ್ಟಿನ 134ನೇ ಸೆಕ್ಷನಿನ ಆಧಾರದ ಮೇಲೆ, 59ನೇ ಸೆಕ್ಷನಿಗೆ ಒಂದು ನಿಯಮವನ್ನ ಕಮ್ಮಿಟಿಯವರು ಶೇರಿಸಿರುತ್ತಾರೆ, ಇದು ಮೈಸೂರು ಶೀಮೆಯಲ್ಲಿ ಹಾಲೀಜಾರೀಲಿಧೆಯಂದು ಹೇಳಬೇಕಾದ ಅವಶ್ಯಕವಿಲ್ಲ, ಸದರೀ ಸೆಕ್ಷನನುಸರಿಸಿ ಕೊಡಲ್ಪಟ್ಟ ಅಧಿಕಾರಗಳನ್ನ ದುರುಪಯೋಗಪಡಿಸದಂತೆ ಅಡ್ಡಿಪಡಿಸುವದೆಂದು ಕಮ್ಮಿಟಿಯವರು ಯೆಣಿಸುತ್ತಾರೆ.

ಸೆಕ್ಷನ್ 61.

20. ರಶೀದಿಗಳಿಗೆ ಗ್ರಾಮದ ಶಾನುಭಾಗನ ಅಡ್ಡರುಜು ಆಗಲೇಬೇಕೆಂದು ನಮೂದಿರುವ 2ನೇ ವುಪನಿಬಂಧನೆಯನ್ನ, 61ನೇ ಸೆಕ್ಷನ್ ದೆಶೆಯಿಂದ ಕಮ್ಮಿಟಿಯುವರು ಸ್ವಲ್ಪ ಸಂಶಯದಿಂದ ವಜಾ ಮಾಡಿರುತ್ತಾರೆ. ಪರಭಾರೆಯಾದ ಗ್ರಾಮಗಳ ಹಿಡುವಳಿದಾರರು, ಈ ನಿಯಮವು ಇರಲೇಕೂಡದೆಂದು ಸ್ಥಾಪಿಸುತ್ತಾರೆ, ಅದಕ್ಕೆ ಹೇಳುವ ಕಾರಣವೇನಂದರೆ, ಅಂಥಾ ಗ್ರಾಮಗಳಿಗೆ ಪ್ರಾಯೇಣ ಶಾನುಭಾಗನೇ ಇರುವದಿಲ್ಲ, ಒಂದು ವೇಳೆ ಯಾವದಾದರೊಂದು ಗ್ರಾಮಕ್ಕೆ ಶಾನುಭಾಗನಿದ್ದಲ್ಲಿ ಅಂಥವನ ಅಡ್ಡರುಜುವು ಆವಶ್ಯಕವೆಂದೆಂಬುವಣ ಮಾತ್ರದಿಂದಲೇ ಅವಶ್ಯಕ ವುಂಟುದಾಗಲೆಲ್ಲ ಅವನು ಪದೇಪದೇ ಗೈರ್‌ಹಾಜರಾಗುವಣದರಿಂದುಂಟಾಗುವ ಸಾಧಾರಣ ಅನಾನುಕೂಲ ಹಾಗಿರಲಿ, ಮುಖ್ಯ ಹಿಡುವಳಿದಾರನಿಗೆ ತೊಂದರೆ ವುಂಟು ಮಾಡಲಿಕ್ಕೆ ಇಲ್ಲದ ಅಧಿಕಾರವನ್ನ ಶಾನುಭಾಗನಿಗೆ ಕೊಟ್ಟಂತೆ ಆಗುತ್ತೆಯಂದು ಹೇಳುತ್ತಾರೆ. ಪರಭಾರೆಯಾದ ಗ್ರಾಮಗಳಿಗೆ ಶಾನುಭಾಗರಿರುವದು ವುಪಯೋಗವಾದ್ದೆಂಬ ಅಂಶವು ಕಮ್ಮಿಟಿಯವರು ಚನ್ನಾಗಿ ತಿಳಿದೇ ಇರುತ್ತಾರೆ, ಪರಂತು ಅನೇಕ ಗ್ರಾಮಗಳ ಹಿಡುವಳಿದಾರ್ರುಗಳಲ್ಲೇ ವಿಶೇಷವಾದ ವೆತ್ಯಾಸಗಳುಂಟು, ಮಸಲಾ ಒಬ್ಬ ಜಹಗೀರ್‌ದಾರನಿಗೂ ವೊಂದೇ ವೊಂದು ಸಂಣ ಗ್ರಾಮದ ಹಿಡುವಳಿದಾರನಿಗೂ ಬಹಳ ವೆತ್ಯಾಸವಿರುತ್ತೆ; ಜಹಗೀರ್‌ದಾರ್ರುಗಳು ತಮ್ಮ ತಮ್ಮ ಶಾನುಭಾಗರುಗಳನ್ನ ನೊಕರರ್ಮಾಡಿಕೊಂಡು ಅವರನ್ನೇ ನಂಬಬೇಕಾಗುತ್ತೆ, ಪರಂತು ಸಂಣ ಗ್ರಾಮಗಳ ಹಿಡುವಳಿದಾರರುಗಳು ತಮ್ಮ ತಮ್ಮ ಆಡಳಿತಗಳನ್ನ ತಾವೆ ನಿರ್ವಹಿಸಲಿಕ್ಕೆ ಅಪ್ಪಣೆ ಕೊಡಲ್ಪಡದ ಪಕ್ಷದಲ್ಲಿ ಕೇವಲ ಅನಾನುಕೂಲಕ್ಕೆ ವಳಪಡುವರು.

VIನೇ ಅಧ್ಯಾಯ.

(ಪರಭಾರೆಯಾಗದ ಜಮೀನಿನ ಅನುಭವ ವ ಅನುಭವದಾರರ ಬಾಧ್ಯತೆಗಳನ್ನು ಕುರಿತು.)

ಸೆಕ್ಷನ್ 72 ಮತ್ತು 75.

21. 75ನೇ ಸೆಕ್ಷನು, ಮುಂಬೈ ಲ್ಯಾಂಡ್ ರೆವಿನ್ಯು ಕೋಡಿನ 72ನೇ ಸೆಕ್ಷನಿನಂತೆಯೇ ಮಾಡಲ್ಪಟ್ಟು ಇಧೆ. ಸದರೀ ಸೆಕ್ಷನಿನಲ್ಲಿ ಹಿಂದೂ, ಮಹಮ್ಮದಿಯರ್ ವ ಬೌದ್ಧ ಯಂಬ ವಿವರಣೆಯು, ಬಾಧ್ಯತೆಯ ಆಕ್ಟಿನ ವುಪಯೋಗಕ್ಕಾಗಿ ಐದಂಪರ್ಯೇಣ ಮಾಡಲ್ಪಟ್ಟಿತು. ಮೈಸೂರು ಶೀಮೆಯೊಳಗೂ ಇದೇ ಕಾರಣವಿರುವದರಿಂದ ಅದೇ ಮೇರಿಗೆ ಈ ಸೆಕ್ಷನನ್ನ ಬದಲಾಯಿಸಿರುತ್ತೆ.

VIIನೇ ಅಧ್ಯಾಯ.

(ಮೇಲ್ಪಟ್ಟ ಮತ್ತು ಕೀಳ್ಪಟ್ಟ ಹಿಡುವಳೀದಾರರ ವಿಷಯ.)

22. ಈ ಅಧ್ಯಾಯದಲ್ಲಿ, ಬಹಳ ಮುಖ್ಯವಾದ ಬದಲಾವಣೆಗಳು ಸೂಚಿಸಲ್ಪಟ್ಟಿರುತ್ತವೆ, ಇದಕ್ಕೆ ಲಗ್ಗತ್ ಮಾಡಿರುವ ಮಸೂದಾಯಿಂದ ಆ ಬದಲಾವಣೆಗಳು ಚಂದಾಗಿ ತಿಳಿದುಬರುವದು ; ಕಮ್ಮಿಟಿಯವರು ಮಾಡಿರುವದೇನಂಪರೆ, "ಕಂದಾಯದ ಷಿಕ್ಮೀದಾರ" ಮತ್ತು "ಅನುಭವದ ಷಿಕ್ಮೀದಾರ್" ಯಂಬ ಭೇಧವನ್ನ ನಿವೃತ್ತಿಮಾಡಿ ಕಂದಾಯದ ಷಿಕ್ಮೀದಾರ್ರೆಂಬದಕ್ಕೆ ಬದಲಾಗಿ "ಕದೀಂ ಷಿಕ್ಮೀದಾರ್" ಯಂಬದನ್ನು ವುಪಯೋಗಿಸಿರುತ್ತಾರೆ. ಮಸೂದಾ ಕೋಡಿನಲ್ಲಿ "ಕಂದಾಯದ ಷಿಕ್ಮೀದಾರನ" ವಿಷಯದಲ್ಲಿ ವುಂಟಾಗಿರುವ ನಿಭಂಧನೆಗಳು ಕದೀಂ ಷಿಕಿ ೀದಾರನ ವಿಷಯವಾಗಿ ಬದಲಾಯಿಸಲ್ಪಟ್ಟಿರುವದಿಲ್ಲ.

ಸೆಕ್ಷನ್ 85.

23. "ಕದೀಂ ಷಿಕ್ಮೀದಾರನ" ಹಕ್ಕುಗಳಲ್ಲದೆ ಜವಾಬದಾರೀಗಳನ್ನೂ ವುದಹರಿಸುವದು ಅವಶ್ಯಕವಾದ್ದರಿಂದ 85ನೇ ಸೆಕ್ಷನಿನ 4ನೇ ಸಬ್ ಡಿವಿಜನ್‌ನಲ್ಲಿ ನಮೂದಿರತಕ್ಕ "ಕದೀಂ ಷಿಕ್ಮೀದಾರ್" ಯಂಬದರ ಅರ್ಥ ವಿವರಣೆಯು 245ನೇ ಸೆಕ್ಷನಿನಂತೆಯಿ ಮಾಡಿರುತ್ತೆ. ಈ ಸೆಕ್ಷನ್ ಅನುಸರಿಸಿ ಹಕ್ಕುಗಳು ಮತ್ತು ಜವಾಬ್‌ದಾರಿಗಳು ಡೆಪ್ಯುಟಿ ಕಮ್ಮಿಷನರವರಿಂದ ಮಾತ್ರ ಜಾರೀಗೆ ತರಲ್ಪಡತಕ್ಕದ್ದು ಯುಕ್ತವಾದ್ದೆಂತ ಕಮ್ಮಿಟಿಯವರು ಅಭಿಪ್ರಾಯ ಪಟ್ಟು ಸದರೀ ಸೆಕ್ಷನಿಗೆ ಅವಶ್ಯಕವಾದ ನಿಬಂಧನೆಯನ್ನು ಶೇರಿರುತ್ತಾರೆ.

"ಅನುಭವದ ಷಿಕ್ಮೀದಾರ್" ಯಂಬದು ಈ ಅಧ್ಯಾಯದಲ್ಲಿ ಪ್ರಸಕ್ತವಾಗಿಲ್ಲವಾದ್ದರಿಂದ ಷಿಕ್ಮೀದಾರನ ಹಕ್ಕುಗಳೆಂಬದಕ್ಕೆ ಸಾಮಾನ್ಯಾರ್ಥವಿವರಣೆಯು ಅತ್ಯಂತಾವಶ್ಯಕವಾದ್ದರಿಂದ ಮುಂಬೈ ಲ್ಯಾಂಡ್ ರೆವಿನ್ಯು ಕೋಡಿನ 83ನೇ ಸೆಕ್ಷನ್ ಸೇರಿಸಲ್ಪಟ್ಟಿರುತ್ತೆ. ಆ ಸೆಕ್ಷನಿನ ನಿಂಬಂಧನೆಗಳೊಳಗೆ ಜಮೀನ್ದಾರನಿಗನುಗುಣವಾಗಿ ಅನುಭವದ ಕಾಲ ಪರಿಮಿತಿಯ ಊಹೆಯ ಕಲಮು ನಮೂದಿರುತ್ತೆ. ಇದರ ಫಲಿತಾಂಶವೇನಂದರೆ ಏನಾದರೂ ತಕರಾರು ಸಂಭವಿಸಿದಾಗ "ರುಜುವಾತು ಮಾಡಿಕೊಡತಕ್ಕ ಭಾರ" ವಾಡಿಕೆಯಾಗಿ ಜಮೀನ್ದಾರನ ಮೇಲೆಯೇ ಹೊರುತ್ತದೆ. ಮತ್ತು ಸ್ಥಳ ಪದ್ಧತಿಯನ್ನನುಸರಿಸಿಯಾಗಲಿ, ಅನ್ಯಥಾ ಆಗಲಿ, ತೆರಿಗೆಯನ್ನ ಹೆಚ್ಚಿಸಲಿಕ್ಕೂ, ಅಥವಾ ತೆರಿಗೆ ಸಲ್ಲಿಸದಿದ್ದರೆ ಅನುಭವದಾರನ ಕೈ ತಪ್ಪಿಸಲಿಕ್ಕೂ ಜಮೀನ್ದಾರನಿಗಿರುವ ಸ್ವಾತಂತ್ರ್ಯ ಸಹ ಸದರೀ ಸೆಕ್ಷನು ವುದಹರಿಸುತ್ತದೆ. ಪರಂತು ಜಮೀನ್ದಾರನು ಅಂಥಾ ಸ್ವಾತಂತ್ರ್ಯವನ್ನ ನ್ಯಾಯವಾಗಿ ಪಡೆದವನಾಗಿರಬೇಕು.

24. "ಅನುಭವದಾರ್ ರೈತರುಗಳ" ಪ್ರಕರಣವನ್ನ ಈ ಕಾನೂನಿನಿಂದ ಶುದ್ಧಾಂಗ ತಳ್ಳುಪಡಿ ಮಾಡಬೇಕೆಂಬ ಅಭಿಪ್ರಾಯಕ್ಕೆ ಕಮ್ಮಿಟಿಯವರಿಗೆ ವುಂಟಾದ ಕಾರಣಗಳನ್ನ ಸಂಕ್ಷೇಪವಾಗಿ ಇದರಡಿ ನಮೂದಿಸಿಧೆ; ಏನಂದರೆ:—

ಮೊದಲಿನ ಮಸವಿದಾ ಕೋಡಿನಲ್ಲಿ ಅನುಭವದಾರ್ ರೈತನಿಗೆ ವುಂಟುಮಾಡುವ ಬಾಧ್ಯತೆಯು, ಗ್ರಾಮ ಸರಕಾರದಿಂದ ಪರಭಾರೆದಾರನ ಸುಪರ್ದಾಗುವ ಕಾಲದಲ್ಲಿ ಗ್ರಾಮದ ಸ್ಥಿತಿಗಳನುಸರಿಸಿ ವುಂಟಾದಂತೆಯೇ ಅಲ್ಲವು; ಈಮುಖ್ಯ ತತ್ವದ ಆಧಾರದಿಂದಲೇ ಜಮೀನಿನ ಯಜಮಾನನಿಗೂ ಷಿಕ್ಮಿದಾರನಿಗೂ ಇರುವ ಪರಸ್ಪರ ಸಂಬಂಧವನ್ನ ಕುರಿತು ಹಾಲಿ ಕಾನೂನನ್ನೇರ್ಪಡಿಸತಕ್ಕದ್ದಾಗಿ ಇಧೆಯೆಂದು ಕಮ್ಮಿಟಿಯವರು ಯೋಚಿಸುತ್ತಾರೆ. "ಅನುಭವ ಷಿಕ್ಮಿದಾರನ್ನ" ಕುರಿತ ಸೆಕ್ಷನ್‌ಗಳನ್ನ ಕಾಯಂ ಇಡಬೇಕೆಂಬದಾಗಿ ಕಮ್ಮಿಟಿಯವರು ಸೂಚಿಸಿದ್ದ ಪಕ್ಷದಲ್ಲಿ ಅವನ ಹಕ್ಕುದಾರಿಯು ಪಾರಂಪರ್ಯವಾಗಿರತಕ್ಕದ್ದೆಂತಲೂ ಸ್ವತ್ತು ಪರಭಾರೆ ಮಾಡಲಿಕ್ಕೆ ಯೋಗ್ಯವಾಗಿರತಕ್ಕದ್ದೆಂತಲೂ, ಪರಂತು ಪರಭಾರೆ ಆಗುವ ಸಂದರ್ಭದಲ್ಲಿ ಪ್ರಾಯೇಣ ಮುಖ್ಯ ಹಿಡುವಳೀದಾರನೇ ವಹಿಸಿಕೊಳ್ಳುವ ಬಾಧ್ಯತೆಗೆ ಒಳಪಟ್ಟಿರತಕ್ಕದ್ದೆಂತಲೂ ಸಹ ಸೂಚಿಸುತ್ತಿದ್ದರು. "ಕದಿಂ ಷಿಕ್ಮಿದಾರನು" ಇಷ್ಟರ ಮಟ್ಟಿಗೆ ಹಕ್ಕುದಾರಿವುಳ್ಳವನೆಂಬದಾಗಿಯೂ, ಅವನಿಗೆ ಕಾನೂನಿನ ಮೂಲಕ ಕಮ್ಮಿಟಿಯವರು ವುಂಟುಮಾಡಿಕೊಡಬೇಕೆಂಬ ಬಾಧ್ಯತೆ ಇಂಥಾದ್ದೆಂಬದು ಸಹ, ಮುಖ್ಯ ಹಿಡುವಳಿದಾರರು ಚನ್ನಾಗಿ ತಿಳಿದೇ ಇರುತ್ತಾರೆ. ಗ್ರಾಮಕ್ಕೆ ಸಾಗುವಳಿದಾರನ್ನ ತಾವೇ ತಂದವರೆಂದುನ್ನೂ ಮುಖ್ಯವಾಗಿ ಅವರು ತಮ್ಮ ಸ್ವಂತ ರೈತರುಗಳೆಂದುನ್ನೂ ಮುಖ್ಯ ಹಿಡುವಳಿದಾರರು ಹೇಳುತ್ತಾರಷ್ಟೆ, ಅಂಥಾಷಿಕ್ಮಿದಾರನ ವಿಷಯದಲ್ಲಿ ಈ ರೀತಿ ಧಾರಾಳವಾಗಿ ಮಾಡುವ ಬಲವಾದ ಆಕ್ಷೇಪಣೆಯು ದುರ್ಬಲವಾಗುತ್ತದೆ, ಆದರೆ ಮಸೂದಾಕೋಡಿನ 86ನೇ ಸೆಕ್ಷನನುಸರಿಸಿ ಷಿಕ್ಮಿದಾರನು ಪಡೆಯುವ ಅನುಭವದ ಬಾಧ್ಯತೆಗಳ ವಿಷಯದಲ್ಲಿ ತಥಾಪಿ ಅಂಥಾ ಬಾಧ್ಯತೆಗಳು ಪರಭಾರೆಯಾಗಬಹುದಾಗಿ ಮಾಡಲ್ಪಡುವದಾದರೆ, ಮುಖ್ಯ ಹಿಡುವಳಿದಾರರಿಗೆ ಅತ್ಯಂತ ಭೀತಿಯೂ ಅಸಮಾಧಾನ ಸಹ ವುಂಟಾಗುವದು. ಅನುಭವದ ಷಿಕ್ಮಿದಾರ್ರಗಳ ಪರವಾಗಿ ಯಾವ ಕಾನೂನು ಮಾಡಲಿಕ್ಕೂ ಮುಖ್ಯ ಹಿಡುವಳಿದಾರರು ತರುವ ಮುಖ್ಯವಾದ ಆಕ್ಷೇಪಣೆಯು

ಸೆಕ್ಷನ್ 86.

ಮೈಸೂರು ಸೀಮೆಯೊಳು, ವಿಜಾತೀಯವಾದ ಯಾವ ಷರತ್ತಗಳನುಸರಿಸಿ ಷಿಕ್ಮಿದಾರನು ಮುಖ್ಯ ಹಿಡುವಳಿದಾರನ ತರೀ ವ ಖುಷ್ಕಿ ಜಮೀನ್‌ಗಳನ್ನ ಸಾಗುವಳಿ ಮಾಡುತ್ತಾನೋ ಅಂಥಾ ಷರತ್ತಿನ ವಿಷಯದಲ್ಲೇ ಯಂಬದಾಗಿ ಕಮ್ಮಿಟಿಯವರು ನಂಬುತ್ತಾರೆ. ಷಿಕ್ಮಿದಾರನು, ಮುಖ್ಯ ಹಿಡುವಳಿದಾರನ ತರೀ ಜಮೀನನ್ನ ಸಾಗುವಳಿ ಮಾಡಿ ಫಸಲ್‌ನಲ್ಲಿ ವಂದು ಹಿಸ್ಸೆ ತೆಗದುಕೊಳ್ಳುವ ಷರತ್ತಿನ ಮೇಲಿಯೇ ಪ್ರಾಯೇಣ ಖುಷ್ಕಿ ಜಮೀನ್‌ಗಳನ್ನ ಕಮ್ಮೀ ಕಂದಾಯಕ್ಕೆ ಸಾಗುವಳೀಮಾಡುತ್ತಾನೆ; ಆದರೆ ಷಿಕ್ಮೀದಾರನು ತರೀ ಜಮೀನ್ ಸಾಗುವಳಿ ಮಾಡಲಿಕ್ಕೆ ತಕರಾರ್ ಮಾಡಿದ್ದಾದರೆ ಅವನು ಖುಷ್ಕೀ ಜಮೀನನ್ನ ಸುಲಭ ಕಂದಾಯಕ್ಕೆ ಮಾಡಿಕೊಂಡಿರುವ ವಿಷಯದಲ್ಲಿಯಾದರೂ ಮುಖ್ಯ ಹಿಡುವಳಿದಾರನು ಪ್ರಾಯಶಃ ತಕರಾರು ಮಾಡುತ್ತಾನೆ. ಈ ಮೇಲಿನ ಕಾರಣದಿಂದಲೇ ಷಿಕ್ಮೀದಾರನಿಗೆ ಅನುಭವದ ಹಕ್ಕುಂಟಾಗುವ ವಿಷಯದಲ್ಲಿ ಅವನು ತನ್ನ ಅಧೀನ ತಪ್ಪಿ ಹೋಗುವನೆಂತಲೂ ಅಥವಾ ಖುಷ್ಕೀ ಜಮೀನ್‌ಗಳ ವಿಷಯದಲ್ಲಿ ಯಾವ ರೀತಿಯಲ್ಲಾದರೂ ಸ್ವತಂತ್ರನಾಗುವನೆಂತಲೂ ಮುಖ್ಯ ಹಿಡುವಳಿದಾರನು ಭಯಪಡುತ್ತಾನೆ. ಹಳೇ ಷಿಕ್ಮಿದಾರನು ತನ್ನನ್ನೇ ಆಶ್ರಯಿಸಿಕೊಂಡಿರಬೇಕೆಂದು ಮುಖ್ಯ ಹಿಡುವಳಿದಾರ ಇಚ್ಛೈಸುವದರಲ್ಲಿ ಯೇನೂ ಸಂಶಯವಿಲ್ಲವು, ಪರಂತು, ಈಗ ವುದ್ದೇಸಿಶಿರುವ ಭಾಧ್ಯತೆಯನ್ನ ಷಿಕ್ಮೀದಾರನಿಗೆ ಕೊಡತಕ್ಕ ಬಗ್ಯೆ ಕಳೆದ ತಿಂಗಳ 21ನೇ ತಾರೀಖಿನಲ್ಲಿ ಬಹುಮಂದಿ ಇನಾಂದಾರರುಗಳನ್ನ ಸೇರಿಸಿ ಕೇಳಿದಾಗ "ಕದೀಂ ಷಿಕ್ಮಿದಾರ"ನ ಬಾಧ್ಯತೆಯು ಸ್ಪಷ್ಟವಾಗಿ ತಿಳಿಯಬಂದದ್ದರಿಂದ ಅದಕ್ಕೆ ಆಕ್ಷೇಪಣೆಯೇ ಬರಲಿಲ್ಲಾ, ಇನ್ನು ಮುಂದೆ ವುಂಟಾಗುವ "ಅನುಭವ ಷಿಕ್ಮಿದಾರನ" ವಿಷಯದಲ್ಲಾದರೋ ಈಗ ವುದ್ದೇಸಿಶಿರುವ ಕಾನೂನಿಗೆ ಬಲವಾದ ಮತ್ತು ನಿರೂಢವಾದ ಆಕ್ಷೇಪಣೆ ಬರುವಣದರಲ್ಲೇನೂ ಸಂಶಯವಿಲ್ಲವು.

25. ಪುರಾತನ ಷಿಕ್ಮೀದಾರನಿಗೂ, ನೂತನ ಷಿಕ್ಮೀದಾರನಿಗೂ ಇರತಕ್ಕ ವಿಶೇಷವಾದ ಮತ್ತು ಸಾಮಾನ್ಯವಾದ ಭೇದದ ವಿಷಯದಲ್ಲಿ ನಿಬಂಧನೆಗಳು ಏರ್ಪಡಿಸಲ್ಪಟ್ಟು, ಮಿಕ್ಕ ವಿಷಯಗಳನ್ನ ಸಾಧಾರಣ ಕೋರ್ಟುಗಳಿಗೆ ಬಿಡತಕ್ಕದ್ದೆಂದು ಮಾತ್ರವೇ ಕಮ್ಮಿಟಿಯವರು ಅಭಿಪ್ರಾಯ ಪಡುತ್ತಾರೆ; 1875ನೇ ಇಸವಿ ಜನವರೀ 28ನೇ ತಾರೀಖಿನಲ್ಲಿ ಬೊಂಬಾಯಿ ಲ್ಯಾಂಡ್ ರೆವಿನ್ಯೂ ಕೋಡ್ ಪ್ರಥಮತಃ ಜಾರೀಗೆ ತರಲ್ಪಟ್ಟಾಗ ಈಗ ಕಮ್ಮಿಟಿಯವರಿಂದ ಸೂಚಿಸಲ್ಪಟ್ಟ ಅಂಶವೇ ಸದರೀ ಕೋಡ್‌ನಲ್ಲಿ ನಮೂದಿತ್ತು, ಆದರೆ ಜಮೀನ್ದಾರನಿಗೂ ಷಿಕ್ಮೀದಾರನಿಗೂ ಇರತಕ್ಕ ಸಂಬಂಧಗಳು ತೊಡಕಾದ್ದೆಂದು ಯೋಚಿಸಲ್ಪಟ್ಟದ್ದರಿಂದ ಮೊದಲಿನ ಮಸೂದೆಯಲ್ಲಿ ಇದ್ದಷ್ಟು ಮಟ್ಟಿಗೆ ಈಗ ಜಾರೀಲಿರತಕ್ಕ ರೆವಿನ್ಯು ಕೋಡಿನಲ್ಲಿ ವಿಧಿಶಿರುವದಿಲ್ಲ. ಈ ಯರಡು ಬಗೆಯವರ ವಿಷಯದಲ್ಲಿ ನಿರ್ದಿಷ್ಟವಾದ ಅಂಶಗಳ ಕುರಿತು ಖಂಡಿತ

ವಾದ ನಿಬಂಧನೆ ಏರ್ಪಾಡಿಸುವಣ ಯುಕ್ತವೆಂತಲಾಗಲಿ ಅವಶ್ಯಕವೆಂತಾಲಾಗಲಿ ಕಮ್ಮಿಟಿಯವರು ಅಭಿಪ್ರಾಯ ಪಡುವದಿಲ್ಲ; ಮತ್ತು ಈ ವಿಷಯದಲ್ಲಿ ಬೊಂಬೈಯಲ್ಲಿಆಗಲಿ ಮದರಾಸಿನಲ್ಲಿಆಗಲಿ ನಿಬಂಧನೆಯೇ ಏರ್ಪಾಡು ಮಾಡಲ್ಪಟ್ಟಿರುವದಿಲ್ಲ.

26. ಪ್ಯಾರಾ 87ರ ವಿಷಯದಲ್ಲಿ, 85ನೇ ಸೆಕ್ಷನ್ನಲ್ಲಿ "ಕದೀಂ ಷಿಕ್ಮೀದಾರ" ಯೆಂಬದರ ಅರ್ಥ ವಿವರಣೆಯು ತಿದ್ದುಪಡಿ ಮಾಡಿರುವದರಿಂದಲೂ "ಅನುಭವದ ಷಿಕ್ಮೀದಾರ" ಯಂಬದನ್ನು ಬಿಟ್ಟಿರುವದರಿಂದಲೂ ಸದರೀ ಸೆಕ್ಷನ್ ಯಿಟ್ಟುಕೊಳ್ಳಬೇಕಾದ ಅವಶ್ಯಕವಿಲ್ಲವು.

ಸೆಕ್ಷನ್ 85.

27. ಸೆಕ್ಷನ್ 88ರಲ್ಲಿ "ಬಂಜರು ಕೆಡಹಲ್ಪಟ್ಟಿರಲಿ" ಯಂಬ ಮಾತುಗಳತರುವಾಯ "ಅಥವಾ ಷಿಕ್ಮೀ ಸಾಗುವಳಿ ಕಳಕೊಂಡು ಯಿರಲಿ" ಯಂಬಮಾತುಗಳು ಖಂದ ಸಂಭವಿಸಬಹುದಾದ ಅಂಥಾ ಸಂದರ್ಭಗಳಿಗೋಸ್ಕರ ಸೇರಿಸಲ್ಪಟ್ಟಿರುತ್ತೆ.

ಸೆಕ್ಷನ್ 88.

28. ಸೆಕ್ಷನ್ 89 ಕ್ಲಾಜ್ (*a*) ಕ್ಕೆ "ಅಥವಾ 123ನೇ ಸೆಕ್ಷನ್ ಅನುಸರಿಸಿ ಮಾಡಲ್ಪಟ್ಟ ಸರ್ವೆಯ ತಿದ್ದುಪಾಟಿಗೋಸ್ಕರ" ಯಂಬ ಮಾತುಗಳು ಸೇರಿಸಲ್ಪಟ್ಟಿದೆ.

ಸೆಕ್ಷನ್ 89.

29. "ಒಬ್ಬ ಕದೀಂ ರೈತನ ವಿಷಯದಲ್ಲಿ" ಡೆಪ್ಯುಟಿ ಕಮ್ಮಿಷನರಿಂದ ಕಂದಾಯ ಕಮ್ಮಿ ಯಾ ಜಾಸ್ತೀ ಮಾಡಲ್ಪಡಬಹುದು ಯಂಬ ಸಂಗತಿ ಕುರಿತ 92ನೇ ಸೆಕ್ಷನ್ನಲ್ಲಿ, ಅಂಥಾ ಫೈಸಲು ಚೀಫ್ ಜಡ್ಜೀಯವರಿಂದ ಒಪ್ಪಲ್ಪಟ್ಟು ಶಿಫಾರಸ್ ಮಾಡಲ್ಪಟ್ಟರೆ ಆಖೈರಾಗಿರತಕ್ಕದ್ದೆಂತ ಬದಲಾಯಿಸಲ್ಪಟ್ಟಿರುತ್ತೆ.

ಸೆಕ್ಷನ್ 92.

30. ಮೂಲ ವರ್ಗದಾರರು ವ ಮೂಲ ಗೇಣಿದಾರರು ಇವರುಗಳ ಬಂಧುಗಳಿಗೆ ವಿಲೇವಾರಿ ಮಾಡುವದಕ್ಕೋಸ್ಕರ ಸೆಕ್ಷನ್ 93ಕ್ಕೆ ಒಂದು ಮುಖ್ಯ ನಿಯಮವು ಸೇರಿಸಲ್ಪಟ್ಟಿರುತ್ತೆ. ಸದರೀ ನಿಯಮದಿಂದಲೇ ಅದರ ಉಪಯೋಗ ಸ್ಪಷ್ಟವಾಗಿರುತ್ತೆ; ಆದರೆ ಕಮ್ಮಿಟಿಯವರು ತಿಳಿಸುವದೇನಂದರೆ ಅಂಥಾ ಸಂದರ್ಭಗಳು ಮೈಸೂರು ದೇಶದಲ್ಲಿ ನೆಲಗೊಂಡಿರುವದಾಗಿ ತಿಳಿದಿರುತ್ತಾರೆ ಮತ್ತು ಮೂಲವರ್ಗದಾರರ ಕಷ್ಟ ನಿವಾರಣೆ ಉದ್ದಿಶ್ಯ ಕಾನೂನ್ ಮೂಲಕ ನಿಯಮಿಸುವದು ಅತ್ಯಾವಶ್ಯಕವೆಂದು ಮುಂಬೈ ಹೈ ಕೋರ್ಟಿನವರು ಸಂಪೂರ್ಣ ಅಭಿಪ್ರಾಯಪಟ್ಟಿರುತ್ತಾರೆ, (ಮುಂಬೈ ಇಂಡಿಯನ್ ಲಾ ರಿಪೋರ್ಟ್ಸ್ 4, ಪ್ಯಾರಾ 473 ನೋಡತಕ್ಕದ್ದು). ಇದೇವಿಷಯದಲ್ಲಿ ವಾಯವ್ಯ ಶೀಮೆಯ 1881ನೇ ಇಸವಿ XIIನೇ ನಂಬರವುಳ್ಳ ರೆಂಟ್ ಯಾನೆ ತೀರ್ವೆ ಆಕ್ಟಿನ 29ನೇ ಸೆಕ್ಷನ್ ಸುದಾ ನೋಡತಕ್ಕದ್ದು.

ಸೆಕ್ಷನ್ 93.

31. ಸೆಕ್ಷನ್ 101ಕ್ಕೆ ಅನೇಕ ಬದಲಾವಣೆಗಳು ಸೇರಿಸಲ್ಪಟ್ಟಿರುತ್ತೆ. ಅವುಗಳಫಲವು ಅವುಗಳಿಂದಲೇ ವ್ಯಕ್ತವಾಗುತ್ತೆ.

ಸೆಕ್ಷನ್ 101.

32. ಕಮ್ಮಿಟಿಯವರು 111ನೇ ಸೆಕ್ಷನಿನ ತರುವಾಯದಲ್ಲಿ ಸದರೀ VIIನೇ ಅಧ್ಯಾಯಕ್ಕೆ ಪೂರ್ತಿಯಾಗಿ ಅನ್ವಯಿಸುವ ಹಾಗೆ ಒಂದು ಸುರಕ್ಷಿತ ಕಲಮನ್ನು ಸೇರಿಸಿರುತ್ತಾರೆ.

ಸೆಕ್ಷನ್ 111.

33. ಸೆಕ್ಷನ್ 119 ಸ್ವಲ್ಪ ಮಟ್ಟಿಗೆ ಬದಲಾಯಿಸಲ್ಪಟ್ಟಿರುತ್ತೆ, ಏನಂದರೆ "ಕಾಫಿ ಸಾಗುವಳಿ ಮಾಡಲ್ಪಟ್ಟ" ಯಂಬ ಮಾತುಗಳಿಗೆ ಬದಲಾಗಿ "ಕಾಫಿ ಸಾಗುವಳಿ ಷರತ್ತಿನ ಮೇಲೆ ಪಡಕೊಂಡ" ಯಂಬ ಮಾತುಗಳು ಇಲಾಚಿ ಸಾಗುವಳಿ ಮಾಡಲ್ಪಟ್ಟ ಜಮೀನ್ಗಳಿಗೂ ಸದರೀ ಸೆಕ್ಷನಿನ ಅರ್ಥವು ಲಗಾವಾಗುವಂತೆ ತಿದ್ದುಪಡಿ ಮಾಡಿರುತ್ತಾರೆ.

ಸೆಕ್ಷನ್ 119.

34. ಕಮ್ಮಿಟಿಯವರು ಈ ಸೆಕ್ಷನಿನ ಮೊದಲನೇ ಉಪನಿಬಂಧನೆಯನ್ನು ವಜಾ ಮಾಡಲು ಇಷ್ಟವುಳ್ಳವರಾಗಿ ಇರುತ್ತಾರೆ, ಯಾತಕ್ಕಂದರೆ, ಇದರಿಂದ ಮೈಸೂರು ದೇಶದಲ್ಲಿ ಬಹುಕಾಲಕ್ಕೆ ಮುಂಚೆ ಉತ್ತಮ ಕಾರಣಗಳ ಮೇಲೆ ತಳ್ಳಿ ಹಾಕಲ್ಪಟ್ಟ ಒಂದು ನಡವಳಿತವು ಕಾಯಮಾಗಿ ಜಾರೀಗೆ ತರಲ್ಪಡತಕ್ಕಾಗುವದು. ಮೈಸೂರು ದೇಶದಲ್ಲಾದರೋ ತೀರ್ವೆಯ ದರವು ಠರಾಯಿಸಲ್ಪಟ್ಟ ತರುವಾಯದಲ್ಲೇ ಅದು ಯಾವಾಗಲೂ ಜಾರೀಗೆ ತರಲ್ಪಡುವದರಿಂದಲೂ ಹಿಡುವಳಿದಾರನು ತನ್ನ ಜಮೀನನ್ನು ಇಟ್ಟುಕೊಳ್ಳತಕ್ಕದ್ದೆ ಯಾ ಬಿಟ್ಟುಬಿಡತಕ್ಕದ್ದೆ ಯಂಬ ವಿಷಯ ಆಲೋಚಿಸುವದಕ್ಕೆ ಕಾಲವ್ಯವಧಾನ ವಿಶೇಷವಿರುವದರಿಂದಲೂ ಸದರೀ ಸೆಕ್ಷನಿನ ಯರಡನೇ ಭಾಗವು ಮೈಸೂರು ದೇಶಕ್ಕೆ ಅನವಶ್ಯಕವಾಗಿರುತ್ತೆ.

ಸೆಕ್ಷನ್ 121.

35. ಪರಿಷ್ಕರಿಸಲ್ಪಟ್ಟ ಕಂದಾಯವನ್ನೇ ಕುರಿತ 124ನೇ ಸೆಕ್ಷನ್ ವಿಷಯದಲ್ಲಿ ಕಮ್ಮಿಟಿಯವರು ಅಭಿಪ್ರಾಯ ಪಡುವದೇನಂದರೆ, (*b*) ಮತ್ತು (*c*) ಕ್ಲಾಜ್‌ಗಳು ವಜಾ ಮಾಡಲ್ಪಡತಕ್ಕವು. ಮುಂಬೈ ಗವರ್ನಮೆಂ ... ಕಾಲಕ್ಕೆ ಮುಂಚೆಯೇ ಸದರೀ ಕ್ಲಾಜ್‌ಗಳನ್ನು ಮುಂಬೈ ಲ್ಯಾಂಡ್ ... ಸೆಕ್ಷನ್ನಿಂದ ವಜಾ ಮಾಡಲುದ್ದೇಶ್ಯವಾದ ಒಂದು ರೆಜೊ

ಸೆಕ್ಷನ್ 124.

ಲ್ಯೂಷನ್ ಫಾಯಿಷ್ಟು ಮಾಡಲ್ಪಟ್ಟಿರುತ್ತೆ. ಕಮ್ಮಿಟಿಯವರು (c) ಕ್ಲಾಜನ್ನು ವಜಾ ಮಾಡಲು ನಿಸ್ಸಂದೇಹವಾಗಿ ಅಭಿಪ್ರಾಯಪಡುತ್ತಾರೆ; ಆದರೆ (b) ಕ್ಲಾಜ್ ವಿಷಯದಲ್ಲಿ ಅದನ್ನು ವಜಾ ಮಾಡುವದಕ್ಕೆ ಮೆಂಬರುಗಳು ಯೇಕವಾಕ್ಯತೆವುಳ್ಳವರಾಗಿ ಇದ್ದಾಗ್ಯೂ ಅವರುಗಳಿಗೆ ವುಂಟಾಗಿರುವ ಕಾರಣಗಳು ಪ್ರತ್ಯೇಕವಾಗಿರುತ್ತೆ, ಆ ಪೈಕೀ ಇಬ್ಬರು ಮೆಂಬರುಗಳು ಅಂಥಾ ತಮ್ಮ ಅಭಿಪ್ರಾಯಕ್ಕೆ ನ್ಯಾಯಸಂಮತವಾಗಿರುವಣಾವೇ ಕಾರಣವೆಂತಲೂ ಮೂರನೇಯವರು ಒಂದು ಗೊತ್ತಾದ ಸಂಗತಿಯಲ್ಲಿ ಪೂರ್ತಿಯಾಗಿ ಅನುಕೂಲ ಉಂಟಾಗತಕ್ಕ ಮತ್ತು ರಿಯಾಯಿತಿ ತೋರಿಸತಕ್ಕಂಥಾ ಅಂಶವೇ ಕಾರಣವೆಂತಲೂ ಅರಾದಿಸುತ್ತಾರೆ,

36. ಈ ಸೆಕ್ಷನಿನಲ್ಲಿ ಯಲ್ಲೇ ಗುರ್ತುಗಳನ್ನು ಕೆಡಿಸುವ ಮೊಕದ್ದಮೆಗಳಲ್ಲಿ ಫ್ರೂಟಿ ವಿಚಾರಣೆ ಮಾಡುವ ಆಫೀಸರ್‌ಗಳು ಡೆಪ್ಯುಟಿ ಕಮ್ಮಿಷನರು ಮತ್ತು ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ದರ್ಜೆಗೆ ಕಮ್ಮಿ ಅಲ್ಲದ ಸರ್ವೆ ಆಫೀಸರ್‌ಗಳೆಂದು ಹದ್ದುಪಡಿಸಲ್ಪಟ್ಟಿದೆ,

ಸೆಕ್ಷನ್ 141.

ಪರಂತು ಸದರೀ ಸೆಕ್ಷನಿನ 5ನೇ ಪಙ್ಕ್ತಿಯಲ್ಲಿ "ಭಿನ್ನ ಪಡಿಸುವ" ಯೆಂಬ ಮಾತಿನ ತರುವಾಯ "ಅಥವಾ ಬಗೆರ್ ಹುಕ್ಕುಂಯಲ್ಲೆ ಗುರುತನ್ನು ಹಾಕುವ" ಯೆಂಬ ಮಾತುಗಳು ಅಂಥಾ ಒಂದು ಸಂಗತಿ ವಾಸ್ತವ್ಯವಾಗಿ ನಡೆದಿರುವ ಪ್ರಯುಕ್ತ ಸೇರಿಸಲ್ಪಟ್ಟಿರುತ್ತೆ.

Xನೇ ಅಧ್ಯಾಯ.

(ಗ್ರಾಮಗಳ, ಷಹರ್‌ಗಳ ವ ಪಟ್ಣಗಳ ನಿವೇಶನಗಳೊಳಗಣ ಜಮೀನುಗಳನ್ನು ಕುರಿತು.)

37. ಈ ಅಧ್ಯಾಯವು 1868ನೇ ಇಸವಿ IVನೇ ನಂಬರ ಮುಂಬೈ ಆಕ್ಟನುಸರಿಸಿ ವಿಶೇಷವಾಗಿ ಬದಲಾಯಿಸಿ ಬರೆಯಲ್ಪಟ್ಟಿದೆ. ಅದನ್ನನುಸರಿಸಿ ತಿಳಿಸಬೇಕಾದ್ದೇನಂದರೆ ಯಾವದೊಂದು ಷಹರಿನ ಮೋಜಣಿಯಾಗಲೀ ವಿಚಾರಣೆಯಾಗಲೀ ಮೈಸೂರು ದೇಶದಲ್ಲಿ ಇದುವರಿಗೆ ನಡಿಸಲ್ಪಟ್ಟಿರುವದಿಲ್ಲ. ಷಹರ್‌ಗಳ ಮೋಜಣಿ ಕೆಲಸ ನಡಿಸಬೇಕೇಯುವದು ಇನ್ನೂ ಮುಂದಿನ ಕಾಲದ ಪ್ರಶ್ನೆಯಾಗಿರುತ್ತೆ. ಸದರೀ ಅಧ್ಯಾಯವು ಹಾಲೀ ಬದಲಾಯಿಸಲ್ಪಟ್ಟು ತಿದ್ದುಪಡಿಮಾಡಿದ ಪ್ರಕಾರ, ಷಹರ್ ಮೋಜಣಿ ಮತ್ತು ವಿಚಾರಣೆಯು ಗವರ್ನಮೆಂಟಿನವರು ಯುಕ್ತವೆಂದೆಣಿಸಿದಾಗ ನಡಿಸಲ್ಪಡುವದಕ್ಕೂ ಮತ್ತು ಸದರೀ ಕೆಲಸಗಳನ್ನು ಕ್ರಮಪಡಿಸುವದಕ್ಕೂ ಅವಕಾಶವನ್ನುಂಟು ಮಾಡುತ್ತದೆ. ಪುರಾತನ ಹಕ್ಕುದಾರಿ ಪಡೆಯುವ ಬಗ್ಯೆ ಸ್ವಾಧೀನತೆಯು ಕಾಲಕ್ಕೆ ಗೊತ್ತುಮಾಡಿರುವ ಐದು ವರುಷಗಳ ವಾಯಿದೆಯು ಕೇವಲ ಜಾಸ್ತೀ ಕಾಲವೆಂದು ಕಮ್ಮಿಟಿಯವರು ಅಭಿಪ್ರಾಯಪಡುವದಿಲ್ಲ.

XIನೇ ಅಧ್ಯಾಯ.

(ಜಮೀನ್ ಕಂದಾಯ ವ ಇತರ ರೆವಿನ್ಯೂ ಬಾಕಿಗಳನ್ನ ವಸೂಲ್ ಮಾಡುವದನ್ನು ಕುರಿತು.)

38. ಕೆಟ್ಟು ಹೋಗತಕ್ಕ ಪದಾರ್ಥಗಳನ್ನು ಕೂಡ್ಲೆ ವಿಕ್ರಯಿಸುವ ಬಗ್ಯೆ 158ನೇ ಸೆಕ್ಷನಿಗೆ ಒಂದು ನಿಯಮವು ಸೇರಿಸಲ್ಪಟ್ಟಿರುತ್ತೆ.

ಸೆಕ್ಷನ್ 158.

39. ಸೆಕ್ಷನ್ 172ರ ಮತಲಬು ವಿಶೇಷವಾಗಿಯೂ ಅದರ ಅರ್ಥ ಪೂರ್ತಿಯಾಗಿಯೂ ಬದಲಾಯಿಸಲ್ಪಟ್ಟಿರುತ್ತೆ. ಹೀಗೆ ಬದಲಾಯಿಸಲ್ಪಟ್ಟ ಸ್ಥಿತಿಯಲ್ಲಿ ಸದರೀ ಸೆಕ್ಷನಿಗೆ ಕಮ್ಮಿಟಿಯ ಪೈಕೀ ಇಬ್ಬರೇ ಜವಾಬ್‌ದಾರರಾಗಿರುತ್ತಾರೆ, ಖೈದುಮಾಡುವ ಕಲಂ ಕುರಿತು ಯಲ್ಲರೂ ತಿಳಿದು ಮೈಸೂರು ದೇಶದಲ್ಲಿ ಆಗಲೀ ಪ್ರಸ್ತಾಪ ನಡಿಯುವದರಿಂದ, ಮೆ॥ ಕೃಷ್ಣರಾಯರು ಷುರುಲಾಗಾಯತು ಸದರೀ ಕಲಮು ಯಾವ ರೀತಿಯಲ್ಲಾಗಲಿ ಇಡಲ್ಪಡುವದಕ್ಕೆ ಹಟಾತ್ತಾಗಿ ಆಕ್ಷೇಪಿಸುತ್ತಾರೆ, ಈ ಅಭಿಪ್ರಾಯವು, ಆಲೋಚಿಸಲ್ಪಟ್ಟ ಸ್ವಲ್ಪಹೆಚುಕಡಿಮೆ ತಮಾಂ ವಳದೇಶದ ಮತ್ತು ಇತರ ಆಫೀಸರ್‌ಗಳೂ ವಪ್ಪಿ ಇರುತ್ತಾರೆ, ಅಂದರೆ ಮಸೂದೆ ಕೋಡಿನಲ್ಲಿ ಈಗ ಇರತಕ್ಕ ಸೆಕ್ಷನಿಗೆ ಆಕ್ಷೇಪಿಸುವಷ್ಟರ ಮಟ್ಟಿಗೆ. ಮುಂಬೈ ಲ್ಯಾಂಡ್ ರೆವಿನ್ಯು ಕೋಡು ಜಾರಿಗೆ ಬಂದ ಲಾಗಾಯತು ಸದರೀ ಪ್ರೆಸಿಡೆನ್ಸಿಯ ದಕ್ಷಿಣಡಿವೀಜನ್ನಿನಲ್ಲಿ ಸದರೀ ಸೆಕ್ಷನು ಒಂದು ಸಲವಾದರೂ ಯಂದಿಗೂ ಜಾರಿಗೆ ತರಲ್ಪಡಲಿಲ್ಲವೆಂದು ಕಮ್ಮಿಟಿಯವರು ವರ್ತಮಾನ ಪಡೆದಿರುತ್ತಾರೆ. ಆದಕಾರಣ ಕಮ್ಮಿಟಿಯ ಪೈಕಿ ಇಬ್ಬರು ಮೆಂಬರುಗಳೇ ಈ ಅಭಿಪ್ರಾಯವುಳ್ಳವರಂತೆ ಭಾವಿಸಿದಾಗ್ಯೂ, ಸದರೀ ಸೆಕ್ಷನ್ನು ಈಗ ಇರುವಂತೆ, ಕಂದಾಯ ಕೊಡುವದಕ್ಕೆ ಮನಃಪೂರ್ವಕ ತಪ್ಪುವಂಥಾ ಯಾ ಮೋಸಗೊಳಿಸುವಂಥಾ ಬಾಕೀದಾರರಿಗೆ ಮಾತ್ರ ಅಲ್ಲದೆ ಅನ್ಯರಿಗೂ ಅನ್ವಯಿಸುವದಾದರೆ ಅದು ನಿಷ್ಪ್ರಯೋಜನವಾಗಿರುವದು. ಕಂದಾಯ ವಸ[illegible] ಇತರ ಮಾರ್ಗಗಳು ನಿಷ್ಫಲವಾದಾಗಲೇ ಸದರೀ ಸೆಕ್ಷನಿನ ಅಧಿಕಾರವನ್ನು ಪ್ರಾಮಾಣಿಕನಾದ ಒಬ್ಬ ಬಾಕೀದಾ[illegible] ಅಸಂಗತವಾಗಿರುವದು.

...ದರೀ ಸೆಕ್ಷನಿನಿಂದ ಉಂಟುಮಾಡಲ್ಪಟ್ಟ ಅಧಿಕಾರ ಮುಂಬೈಯಲ್ಲಿ ಉಪಯೋಗಿಸಲ್ಪಡಲಿಲ್ಲವೆಂಬುವದೇ ಅದರಿಂದ ಉಪಯೋಗ ...ವದಕ್ಕೂ, ಅದು ಪೂರ್ತಿಯಾಗಿ ಬಿಡಲ್ಪಡತಕ್ಕದ್ದೆಂಬುವದಕ್ಕೂ ನಿದರ್ಶನ ವಲ್ಲವು ; ಸದರೀ ಸೆಕ್ಷನನ್ನು ಯಾವತರಹೇ ಬಾಕೀದಾ ...ಸ್ಕರ ಈಗ ಕಾಯಂ ಮಾಡಬೇಕೆಂತ ಉದ್ದೇಶಿಸಲ್ಪಟ್ಟಿದೆಯೋ ಅಂಥಾವರುಕೂಡಾ ಸದರೀ ಅಧಿಕಾರ ವಿರಬಹುದೆಂತ ತಿಳಿದೇ ಹಿಂ ...ರ ಬಹುದು.

ಸೆಕ್ಷನ್ 179.

ಪ್ರಾಯಶಃ ಯಿಂಡ್ಯಾ ದೇಶದ ಯಲ್ಲ ಸೀಮೆಗಳಲ್ಲೂ ಅಂಥಾ ಖೈದ್ ಮಾಡುವ ಅಧಿಕಾರ ವಿಧಿಸಲ್ಪಟ್ಟಿರುತ್ತೆ, ಪಂಜಾಬ್ ದೇಶದಲ್ಲಿ ವಸೂಲೀಬಗ್ಯೆ ಯಿದೇ ಷುರು ನಡವಳಿತವಾಗಿ ವಿಧಿಸಲ್ಪಟ್ಟಿದೆ. ಸದರೀ ಸೆಕ್ಷನು ಈಗ ಬದಲಾಯಿಸಲ್ಪಟ್ಟ ಪ್ರಕಾರ ಮದರಾಸ್ ಕೋಡಿನಿಂದ ತೆಗದುಕೊಳ್ಳಲ್ಪಟ್ಟಿದೆ. ಕಮ್ಮಿಟಿಯ ಪೈಕೀ ಒಬ್ಬರು, ಅದು ಯಾವ ರೂಪದಲ್ಲಿ ಕಾಯಂ ಮಾಡಲ್ಪಟ್ಟಾಗ್ಯೂ ಕೆಡಕಿಗೆ ಬಹುಶಃ ಅವಕಾಶವಾಗುವದೆಂದು ಯೋಚಿಸುತ್ತಾರೆ. ಕಮ್ಮಿಟಿಯ ಪೈಕೀ ಮತ್ತಿಬ್ಬರು ಅಭಿಪ್ರಾಯ ಪಡುವದೇನಂದರೆ, ಸರ್ಕಾರದ ಮತ್ತು ಜನಗಳ ಆದಾಯಗಳ ಸಂರಕ್ಷಣೇಗೋಸ್ಕರ ಅವಲಂಬಿಸಬೇಕಾದ ಇತರ ಅನೇಕ ನಡವಳಿತಗಳಿಗಿಂತಲೂ ಇದರಿಂದ ಹೆಚ್ಚು ಕೆಡಕು ಪ್ರಾಯಶಃ ಉಂಟಾಗಲಾರದೆಂತಲೂ, ಬಾಕೀದಾರನು 179ನೇ ಸೆಕ್ಷನ್ ಅನುಸರಿಸಿ ನಡವಳಿತಗಳನ್ನು ಯಾವಾಗಲಾಗಲೀ ಅವು ಈ ರಗ್ಯುಲೇಷನ್ ಸಂಬಂಧಿಸಿರುವಷ್ಟರ ಮಟ್ಟಿಗೆ ಮನ್ನಾಮಾಡಿಸಿಕೊಳ್ಳಬಹುದೆಂತಲೂ ಯೋಚಿಸುತ್ತಾರೆ. ಈ ಪ್ರಶ್ನೆಯನ್ನು ಪರ ಪಕ್ಷವಾಗಿ ಆಲೋಚಿಸಿದರೆ, ಸ್ವಂತ ಬಾಕೀಬಗ್ಯಾಗಿ ಖೈದು ಮಾಡುವಣವು ಸಾಧ್ಯವಾದ ಮಟ್ಟಿಗೂ ಜಾಗ್ರತೆಯಾಗಿ ಮೌಕೂಫ್ ಆಗಬಹುದಾದದರಿಂದ ಸರ್ಕಾರದ ಬಾಕೀಗೋಸ್ಕರ ಈ ನಿಬಂಧನೆಯು ವಿಧಿಸುವದು ಕೇವಲ ಅಕಾಲವೆಂಬುದಾಗಿಯೂ ಹೇಳಲ್ಪಡಬಹುದು.

ಸೆಕ್ಷನ್ 172.

172ನೇ ಸೆಕ್ಷನಿನ 2ನೇ ನಿಯಮದ ಕಲಮಿನಲ್ಲಿ ಹೆಂಗಸರುಗಳನ್ನು ದಸ್ತಗಿರಿ ಮಾಡುವದು ನಿಷೇಧಿಸುವದನ್ನು ಹೊಸದಾಗಿ ವಿಧಿಸಲ್ಪಟ್ಟಿರುತ್ತೆ.

ಸೆಕ್ಷನ್ 177.

40. ಕಮ್ಮಿಟಿಯವರು, ಸಲಹೆ ಕೇಳಲ್ಪಟ್ಟ ಪ್ರಾಯಶಃ ಯಲ್ಲ ಅಫೀಸರುಗಳ ಅಂಗೀಕಾರದೊಡನೆ, 177ನೇ ಸೆಕ್ಷನಿನ 4ನೇ ಪ್ಯಾರಾವನ್ನು ಂಟು ಮಾಡಿ, ಅದರಿಂದ ಗ್ರಾಮದ ಮುಖ್ಯ ಹಿಡುವಳೀದಾರನಿಗೆ ಗ್ರಾಮವು ಜಫ್ತೀಯಿಂದ ಬಿಡುಗಡೆ ಮಾಡಲ್ಪಟ್ಟಾಗ ಗ್ರಾಮದ ಉತ್ಪತ್ತಿಯ ಪೈಕೀ ತಮಾಂ ಸರ್ಪ್ಲಸ್ ಯಾನೆ ಸಪಾವತೀ ಶಿಲ್ಕು ಮೊಬಲಗನ್ನೂ ಕೊಟ್ಟು ಬಿಡುವದಕ್ಕೆ ವಿಧಿಸಿರುತ್ತಾರೆ.

ಸೆಕ್ಷನ್ 184.

41. ಮೇಲ್ಕಂಡ ಪ್ರಕಾರವೇ ಅಂಗೀಕರಿಸಲ್ಪಟ್ಟ ಕಮ್ಮಿಟಿಯವರು, ಸ್ವತು ಹರಾಜಿನಲ್ಲಿ ಬಿಡಲ್ಪಡುವದಕ್ಕೆ ಮುಂಚೆ ಯಾವ ಕಾಲದಲ್ಲಾಗಲೀ ಕಂದಾಯ ಕೊಡಲಿಕ್ಕೆ ತಪ್ಪಿದ ಮನುಷ್ಯನು ಬಾಕೀಯನ್ನು ಪಾವತಿ ಮಾಡಿದರೂ ಅಥವಾ 179ನೇ ಸೆಕ್ಷನನುಸರಿಸಿ ಜಾಮೀನ್ ಕೊಟ್ಟರೂ ವಿಕ್ರಯವು ನಿಲ್ಲಿಸುವ ಬಗ್ಯೆ 184ನೇ ಸೆಕ್ಷನಿನಲ್ಲಿ ವಿಧಿಸಿರುತ್ತಾರೆ.

ಸೆಕ್ಷನ್ 192.

42. ಸೆಕ್ಷನ್ 192ರಲ್ಲಿ, ಪುನರ್ವಿಕ್ರಯದ ಬಗ್ಯೆ ಕೊಡಬೇಕಾದ ನೋಟೀಸು ಅಂಥಾ ಪುನರ್ವಿಕ್ರಯವು ಅಸಲ್ ವಿಕ್ರಯಕ್ಕೆ ಗೊತ್ತು ಮಾಡಿದ ತಾರೀಖಿನ ಏಳು ದಿವಸಗಳೊಳಗಾಗಿ ನಡಿಸಲ್ಪಟ್ಟರೆ ಅನಾವಶ್ಯಕವೆಂದು ಮಾಡಲ್ಪಟ್ಟಿರುತ್ತೆ. ಇದರಿಂದ ಅನಾವಶ್ಯಕವಾದ ಜಾಸ್ತೀ ಕೆಲಸಗಳು ಕೂಡಿ ಬರುವದೆಂದು ಕಮ್ಮಿಟಿಯವರು ಅಭಿಪ್ರಾಯ ಪಟ್ಟಿರುತ್ತಾರೆ.

XIVನೇ ಅಧ್ಯಾಯ.

(ರೆವಿನ್ಯೂ ಅಧಿಕಾರ.)

ಸೆಕ್ಷನ್ 230.

43. ಸೆಕ್ಷನ್ 230ರಲ್ಲಿ ಹೇಳುವ ಕೆಲವು ವ್ಯಾಜ್ಯಗಳ ನಿರ್ಬಂಧ ಮತ್ತು ಮುಖ್ಯವಾಗಿ (*i*) ಗುರ್ತಾಳ್ವ ನಿಯಮ ಮತ್ತು ಅದರ ವಿವರಣೆ ವಿಷಯದಲ್ಲಿ ಕಾನೂನ್ ಮಾಡುವದು ಕೇವಲ ಕಷ್ಟವಾದ್ದಾಗಿದೆ. ಆದರೆ ಕಮ್ಮಿಟಿಯವರು, ಸದರೀ ಸೆಕ್ಷನನ್ನು ಅದು ಈಗ ಯಿರುವಂತೆಯೆ ಪರಂತು ಈಗ ಮಸೂದೆ ಕೋಡಿನಲ್ಲಿ ಬಿಡಲ್ಪಟ್ಟಿರುವ ಮುಂಬೈ ಜ್ಯಾರಿಸ್ ಡಿಕ್ಷನ್ ಆಕ್ಟಿನ ಯಿದೇ ವಿಷಯಕವಾದ ಸೆಕ್ಷನಿನ ವಿವರಣೆಯೊಡನೆ ವಪ್ಪುತ್ತಾರೆ. (*j*) ಕಲಮು ಬದಲಾಯಿಸಲ್ಪಟ್ಟಿರುತ್ತೆ. "ಗವರ್ನಮೆಂಟಿನಿಂದಾಗಲೀ ಗವರ್ನಮೆಂಟಿನ ಅಪ್ಪಣೆ ಮೇರೆ ಯಾಗಲೀ ಕೊಡಲ್ಪಟ್ಟ ಒಂದು ದಸ್ತಾವೇಜು ಅಥವಾ ಸನ್ನದು" ಯಂಬ ಅರ್ಥ ವಿವರಣೆಯು ಕೇವಲ ಅಸ್ಪಷ್ಟವಾಗಿ ಯಿದೆ, ಮತ್ತು ಅದು ಮುಂಬೈ ಜ್ಯಾರಿಸ್‌ಡಿಕ್ಷನ್ ಆಕ್ಟಿನಲ್ಲಿರುವಂತೆ ಸಂಪೂರ್ಣವಾಗಿ ತೆಗದುಕೊಂಡಿಲ್ಲ. ಕಮ್ಮಿಟಿಯವರು ಅದಕ್ಕೆ

ಬದಲಾಗಿ "ಅಂಥಾ ವಿನಾಯಿತಿಯನ್ನು ಕಂಠೋಕ್ತವಾಗಿ ಉಂಟು ಮಾಡುವ ಯಾ ದೃಢಪಡಿಸುವ 1832ನೇ ಇಸವಿಗೆ ತರ
ಮೈಸೂರು ಗವರ್ನಮೆಂಟಿನವರಿಂದ ಕೊಡಲ್ಪಟ್ಟ ಬರವಣಿಗೆಯುಳ್ಳಿರುವ ಯಾವದಾದರೂ ಇತರ ಗ್ರ್ಯಾಂಟು" ಯೆಂಬ ಮಾತುಗಳ
ಸುವದು ಉತ್ತಮವೆಂದು ಭಾವಿಸುತ್ತಾರೆ. VIIನೇ ಅಧ್ಯಾಯಕ್ಕೆ ಸೇರಿಸಲ್ಪಟ್ಟ ಸುರಕ್ಷಿತ ಕಲಮಿನಿಂದಲೂ, 92 ವ 101ನೇ
ಗಳಲ್ಲಿ ಮಾಡಲ್ಪಟ್ಟ ಬದಲಾವಣೆಗಳಿಂದಲೂ, (*f*) ಕಲಮು ಬಿಡಲ್ಪಟ್ಟಿರುತ್ತೆ.

44. 231 ನೇ ಸೆಕ್ಷನಿನ (*a*) ಕಲಮು ಇಂಥಾ ಕಾನೂನಿನಲ್ಲಿ ಸೇರಿಸಲ್ಪಡಕೂಡದೆಂದು ಕಮ್ಮಿಟಿಯವರು ಅಭಿಪ್ರಾಯ
ತಳ್ಳುಪಡಿಮಾಡಿರುತ್ತಾರೆ. (*a*) ಕ್ಲಾಜಿನಲ್ಲಿ ವುದಹರಿಸಲ್ಪಟ್ಟಿರುವ ಸಂಗತಿಗಳ ವಿಷಯದಲ್ಲಿ ತಮಗೆ ತಿಳಿಯಬಂದ ಕೂಡ್ಲೆ ಅನೇಕ ಸಂದಭ
ಳಲ್ಲಿ ರೆವಿನ್ಯೂ ಇಲಾಖೆಯವರು ಪರಿಹಾರವನ್ನು ವುಂಟುಮಾಡುತ್ತಾರೆ. ಒಂದು ವ್ಯಾಳೆ ನಷ್ಟಹೊಂದಿದವನಿಗೆ ಪರಿಹಾರವು ವುಂ
ಗದೇ ಇದ್ದರೆ ಆಗ್ಯೆ ನುಕ್ಸಾನಪಟ್ಟವನು ಕೋರ್ಟಿಗೆ ಹೋಗಬಹುದು. ಸದರೀ ಕ್ಲಾಜನ್ನ ಇಟ್ಟರೆ ರೆವಿನ್ಯೂ ಇಲಾಖೆಯವರನ್ನ ತಿರಸ್ಕರಿಸಿ
ಲವುವ್ಯಾಳೆ ಬಹುಶಃ ಗವರ್ನಮೆಂಟ್ ಆಫೀಸರಗಳಿಗೆ ತೊಂದರೆ ಪಡಿಸುವ ಅಥವಾ ಕೆಡಕುಉಂಟುಮಾಡುವ ತಾತ್ಪರ್ಯದಿಂದ ಪ್ರತಿ ಜಾಜವಿ
ಮೊಕದ್ದಮೆಯನ್ನೂ ಸಿವಿಲ್ ಕೋರ್ಟುಗಳಿಗೆ ತೆಗದುಕೊಂಡು ಹೋಗುವದಕ್ಕೆ ರೈತರಿಗೆ ಪ್ರೋತ್ಸಾಹಪಡಿಸಿದಂತೆ ಆಗುತ್ತೆ.

ಸೆಕ್ಷನ್ 231. ಮೇಲೆ ಮತ್ತು ಹಿಂದಿನಪ್ಯಾರಾದಲ್ಲಿ ಹೇಳಲ್ಪಟ್ಟ ಕಾರಣಗಳಿಗೋಸ್ಕರ 231ನೇ ಸೆಕ್ಷನ್ ವಿಷ್ಟವೂ ತಳ್ಳುಪಡಿಮಾಡತಕ್ಕ
ದ್ದೆಂದು ಸಲಹೆ ಕೊಡಲ್ಪಟ್ಟಿಧೆ.

ಬಿಟ್ಟಿ ವಿಷಯ.

45. ಮುಜ್ಜೈ ಹಕ್ಕುದಾರಿ ವುದ್ಯೋಗಗಳ ಆಕ್ಟಿನ ಅನೇಕ ಭಾಗವನ್ನು ಈ ರೆಗ್ಯುಲೇಷನಿಗೆ ಸೇರಿಸತಕ್ಕದ್ದೆಂದು ಕಮ್ಮಿ
ಟಿಯವರು ಒಂದುಕಾಲದಲ್ಲಿ ಅಭಿಪ್ರಾಯಪಟ್ಟರು ; ಆದರೆ ವಿಶೇಷ ಸಾವಕಾಶವಿಲ್ಲದೆ ಈ ರೆಗ್ಯುಲೇಷನ್ ಜಾರೀಗೆ ತರುವದು ಯುಕ್ತ
ವೆಂದು ಭಾವಿಸಿರುವದಲ್ಲದೆ ಸದರೀ ಹಕ್ಕುದಾರಿ ವುದ್ಯೋಗಗಳ ಆಕ್ಟನ್ನ ಶ್ರದ್ಧೆಯಿಂದ ಅವಗಾಹನ ಮಾಡಿಕೊಳ್ಳಬೇಕಾದ್ದರಿಂದ ಅದನ್ನ
ಮುಂದಕ್ಕೆ ಪ್ರತ್ಯೇಕ ಆಕ್ಟಾಗಿ ಜಾರೀಗೆ ತರಬೇಕೆಂದು ಸಲಹೆ ಕೊಡಲೂ, ಕಮ್ಮಿಟಿಯವರು ನಿಶ್ಚಯಿಸಿರುತ್ತಾರೆ.

ಮೈಸೂರು,
ತಾರೀಖು 4ನೇ ಆಗಸ್ಟ್ 1884.

ಪಿ. ಕೃಷ್ಣರಾವ್.
ಜೆ. ಪಿ. ಗ್ರ್ಯಾಂಟ್.
ವೀ. ಪಿ. ಮಾಧವರಾವ್.

Mysore Government Press, Bangalore.—1884.

ಮೈಸೂರ ಗೆಜೆಟ್.

ನಂ. 42 ಸರ್ಕಾರದಿಂದ ಪ್ರಾಯಿಷ್ ಆದ್ದು. ಸನ್ 1884.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ॥ 18, ಸನ್ 1884.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೇಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್ಂಟೆಂಡೆಂಟರು, ಕಾಂಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮೈಸೂರು ಸ್ಟೇಟ್‌ರೇಯಿಲ್‌ವೆ, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡ್ ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ॥ ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್‌ಸೂಪರ್ಂಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟ್‌ಗಳು ; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಕಳೆದ ದಸರಾ ಸಭೆಯಲ್ಲಿ ದಿವಾನರವರಿಂದ ಮಾಡಲ್ಪಟ್ಟ ಉಪನ್ಯಾಸ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 13ನೇ ಅಕ್ಟೋಬರ್ 1884.

ನಂ. 146.—ಬೆಂಗಳೂರು ಡಿಸ್ಟ್ರಿಕ್ಟು ಫಾರೆಸ್ಟ್ ಅಸಿಸ್ಟೆಂಟ್ ಕನ್‌ಸರ್‌ವೇಟರ್ ಮ॥ ಸಿ. ನಾರಾಯಣರಾಯರು, ಮೈಸೂರು ಡಿಸ್ಟ್ರಿಕ್ಟಿಗೆ ವರ್ಗಮಾಡಲ್ಪಟ್ಟಿರುತ್ತಾರೆ. ಅವರು, ಮ॥ ಸಿ. ಇ. ಯಂ. ರಸ್ಸೆಲ್ ಯವರು ರಜಾದಮೇಲಿರುವಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಮೈಸೂರು ಡಿಸ್ಟ್ರಿಕ್ಟಿ ಫಾರೆಸ್ಟು ಸೂಪರ್ಂಟೆಂಡೆಂಟ್ ಕೆಲಸವನ್ನ ನೋಡತಕ್ಕದ್ದು,—ಕೂಡ್ಲೆ ಕೆಲಸದಮೇಲೆ ಹೋಗತಕ್ಕದ್ದು.

ಪ್ಲಾಂಟೇಷನ್ ಛಾರ್ಜಿನಲ್ಲಿರುವ ಬಾಪೂರಾಯರು, ಫಾರೆಸ್ಟ್ ಡಿಪಾರ್ಟುಮೆಂಟಿಗೆ ಅಪ್ರೆಂಟಿಸರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ. ಅವರು ತಮ್ಮ ಪ್ಲಾಂಟೇಷನ್ ಸಂಬಂಧ ಕೆಲಸಗಳೊಂದಿಗೆ ಬೆಂಗಳೂರು ಡಿಸ್ಟ್ರಿಕ್ಟು ಫಾರೆಸ್ಟುಗಳ ಛಾರ್ಜನ್ನೂ ವಹಿಸತಕ್ಕದ್ದು; ಮತ್ತು ಮ॥ ಸಿ. ನಾರಾಯಣರಾಯರು ಇತರ ಕೆಲಸದ ಮೇಲೆ ಇರುವಲ್ಲಿ, ಡೆಪ್ಯುಟಿ ಕಮಿಷನರ್ ಹುಕುಮಿಗೆ ಒಳಪಟ್ಟು ರೈಲ್‌ವೆ ಇಲಾಖೆಗೆ ಸೌದೆ ಸರಬರಾಯಿ ಮಾಡುವ ಕೆಲಸವನ್ನು ನಿರ್ವಹಿಸತಕ್ಕದ್ದು.

ನಂ. 147.—ತುಮಕೂರು ಡಿಸ್ಟ್ರಿಕ್ಟು ಚಿಕ್ಕನಾಯಿಕನಹಳ್ಳಿ, ತಾಲ್ಲೂಕು ಅಮಲ್ದಾರ್ ರಾಮಸ್ವಾಮಯ್ಯನವರು, 1884ನೆ ಇಸವಿ ಸೆಪ್ಟಂಬರ 17ನೇ ಮರ್ಕ್ಕುಮಿನ ಪೂರ್ವಾಹ್ನದಲ್ಲಿ ಮರಳಿ ಕೆಲಸದ ಮೇಲೆ ಹಾಜರಾದದರಿಂದ, ಅವರಿಗೆ 1884ನೇ ಇಸವಿ ಆಗಸ್ಟ 8ನೇ ಮರ್ಕ್ಕುಮಿನ 105ನೇ ನಂಬರ್‌ವುಳ್ಳ ಈ ಆಫೀಸ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟಿದ್ದ ಪ್ರಿವಿಲೀಜ್ ರಜಾ ಪೈಕೀ ಉಳಿದ ಭಾಗವು ರದ್ದುಮಾಡಲ್ಪಟ್ಟಿರುತ್ತೆ.

ಮೊಕ್ಕಾಂ ಮೈಸೂರು, ತಾರೀಖು 16ನೇ ಅಕ್ಟೋಬರ 1884.

ನಂ. 148.—ಇದರಿಂದ ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ದೇಶದ ಉತ್ಪತ್ತಿ ಬಾಬತು ಗಂಧದ ಮರದ ಸಾಲೀಯನಾ ಹರಾಜುಗಳು ಇದರಡೀಕಂಡ ತಾರೀಖು ವ ಸ್ಥಳಗಳಲ್ಲಿ ಆಯಾ ಡಿಸ್ಟ್ರಿಕ್ಟಿನ ಡೆ|| ಕಮ್ಮಿಷನರ ವ ಫಾರೆಸ್ಟು ಆಫೀಸರ ಗಳಿಂದ ನಡಿಸಲ್ಪಡುತ್ತೆ:—

		ಸಲ್ಪ ಹೆಚ್ಚು ಕಡಿಮೆಯಾಗಿರ್ತಗಳು.
ಶ್ರೀರಂಗಪಟ್ಣ ತಾರೀಖು 1ನೇ ಡಿಶಂಬರ 1884	..	500
ಹುಣಸೂರು ತಾರೀಖು 4ನೇ ಡಿಟೋ ,,		
ಬೆಂಗಳೂರು ತಾರೀಖು 8ನೇ ಡಿಟೋ ,,	..	280
ಸೊರಬ ತಾರೀಖು 13ನೇ ಡಿಟೋ ,,	..	200
ಅನಂತಪುರ ತಾರೀಖು 18ನೇ ಡಿಟೋ ,,	..	200
ಶಿವಮೊಗ್ಗಾ ತಾಖು 22ನೇ ಡಿಟೋ ,,	..	500
ತೀರ್ಥಹಳ್ಳಿ ತಾರೀಖು 7ನೇ ಜನವರೀ 1885	..	200
ಚಿಕ್ಕಮಗಳೂರು ತಾ|| 14ನೇ ಡಿಟೋ ,,	..	200
ಹಾಸನ ತಾರೀಖು 21ನೇ ಡಿಟೋ ,,	..	400

ಹರಾಜಿನ ಷರತ್ತುಗಳು.—ಸ್ನ 1874ನೇ ಇಸವಿ ಡಿಶಂಬರ 5ನೇ ಮರ್ಕ್ಕುಂ 48ನೇ ನಂಬರ ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷ್ಟಾ ಪಲ್ಪಟ್ಟ ಪ್ರಕಾರ ಇರತಕ್ಕವು, ಮತ್ತು ಹರಾಜ್ ಕಾಲದಲ್ಲಿ ಪ್ರೋದಲ್ಪಡುವವು. ತೀರ್ಥಹಳ್ಳಿ, ಚಿಕ್ಕಮಗಳೂರು ಮತ್ತು ಹಾಸನ ಈ ಸ್ಥಳಗಳಲ್ಲಿ ಕೊಂಡುಕೊಳ್ಳುವ ಗಂಧದ ಮರಗಳ ಕಿಮ್ಮತ್ ಪಾವತೀ ಬಗ್ಯೆ ವಾಯಿದೆಯು, 1885ನೇ ಇಸವೀ ಮಾರ್ಚೀ 25ನೇ ತಾರೀಖಿಗೆ ಅಖೈರಾಗುವದು.

ತಾರೀಖು 21ನೇ ಮಾರ್ಚೀ 1883

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಯೆ ಹಿಂದಿನ ದಿನ ಸೆಕ್ರೆಟೇರಿಯವರಿಗೆ ತಮ್ಮ ಕಾರ್ಡಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಬಮೋಜೇಬ್ ಹುಕ್ಕುಂ,
ಆರ್. ವಿಜಯೀಂದ್ರರಾವ್,
ಸೆಕ್ರೆಟೇರಿ.

ಮೈಸೂರ ಗೆಜೆಟ

ಸರ್ಕಾರದಿಂದ ಪ್ರಸಿದ್ಧ ಆದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ॥ 18, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರುವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ರೆಸಿಡೆಂಟರ ಇಲಾಖಾ.

ಇಸ್ತಿಹಾರ್ ನಾಮೆ.

ಫಿನಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡಿ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಏನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಏನ್‌ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಪೊಸ್ಟೇಜ್ ಲಿಫಾಫೆಗಳು ವಗೈರೇಯ ಪ್ಯಾಕೆಟ್ಟಿಯಾನೇ ವಂದು ಕಟ್ಟಿನ ಚಿಲ್ಲರೆ ಭಾಗವನ್ನು ವಿಕ್ರಯಿಸುವದನ್ನ ನಿಷೇಧಿಸುವದನ್ನು ಕುರಿತು.

ತಾಲ್ಲೂಕು ವ ಡಿಸ್ಟ್ರಿಕ್ಟು ಟ್ರೆಜರೀ ಆಫೀಸರಗಳಿಗೆ.

ಸರಕ್ಯೂಲರ ನಂಬರ 1598 ಮುಕ್ಕಾಂ 4ನೇ ಅಕ್ಟೋಬರ 1884.

ಬೆಂಗಳೂರಲ್ಲಿರತಕ್ಕ ರೆಸಿಡೆಂಟರ ಟ್ರೆಜರಿ ಇನ್‌ಛಾರ್ಜ ಆಫೀಸರವರು, ಬ್ರಿಟಿಷ್ ಪೋಸ್ಟೇಜ್ ಸ್ಟಾಂಪು ಲಿಫಾಫೇ ವಗೈರೆಗಳು ಅಮಲ್ ದಾರರುಗಳಿಂದ ಪದೆ ಪದೆ ರೂಲ್‌ಸಿಗೆ ವಿರೋಧವಾಗಿ ವಂದು ಕಟ್ಟಿಗಿಂತಲೂ ಚಿಲ್ಲರೇಯಾಗಿ ಮಾರಲ್ಪಡುತ್ತೆಂದು ಜಾಹಿರಾತಿಗೆ ತಂದಿರುತ್ತಾರಾದ್ದರಿಂದ, ಕಾಂಪ್‌ಟ್ರೋಲರಯವರು, ಯಚ್ಚರಿಸುವದೇನಂದರೆ, ತಾಲ್ಲೂಕು ವ ಡಿಸ್ಟ್ರಿಕ್ಟು ಟ್ರೆಜರೀ ಆಫೀಸರುಗಳು ಸಿವಿಲ ಅಕೌಂಟ ಕೋಡಿನ ವಂದನೇ ಭಾಗದ ಅಪೆಂಡಿಕ್ಸ E ಗುರ್ತಿನ Vನೇ ರೂಲ್ಸಿಗೆ ನಿಗೇ ಕೊಡತಕ್ಕದ್ದು. ಅದರಲ್ಲಿ ಅಂಥಾ ಲಿಫಾಫೆಗಳು 16 ಅಡಿಗಿರುವ ಕಟ್ಟಿನ ಪ್ರಕಾರವೇ ಮಾರತಕ್ಕದ್ದೇ ಹೊರ್ತು ಜಾಸ್ತೀ ಆಗಲಿ ಕಮ್ಮಿ ಆಗಲಿ ಚಿಲ್ಲರೇಯಾಗಿ ಮಾರಕೂಡದೆಂದು ಸ್ಪಷ್ಟವಾಗಿ ವಿಧಿಸಲ್ಪಟ್ಟಿರುತ್ತೆ, ಆದ ಪ್ರಯುಕ್ತಾ ಖಯಿಂದಾ ಸದರೀ ರೂಲನ್ನು ಖಂಡಿತವಾಗಿ ಜಾರೀಲಿ ತರತಕ್ಕದ್ದು.

ಹೆಚ್. ಹಡ್‌ಸನ್,
ಕಾಂಪ್‌ಟ್ರೋಲರ.

ಅಂಚೆ ಇಲಾಖಾ.

ನಂ. 331—188. ತಾರೀಖು 10ನೇ ಅಕ್ಟೋಬರ 1884 ಮುಕ್ಕಾಂ ಸೂಲಿಗ್ರಾಮ.

ಇದರಿಂದ ಸಕಲ ಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಸಲ್ಪಡುವದೇನಂದರೆ, ಮೈಸೂರು ಮಹಾರಾಜ ರಾಜಾಸಾಹೇಬ್ ಬಹದೂರವರ ದಿವಾನರವರ ಅಪ್ಪಣೆ ಅನುಸರಿಸಿ ಈ ಕೆಳಗೆ ಕಂಡ ಸ್ಥಳಗಳೊಳಗೆ ಹೋಬಳಿ ಅಂಚೇ ಆಫೀಸ್‌ಗಳು ಸ್ಥಾಪಿಸಲ್ಪಟ್ಟಿರುತವೆ:—

ತಾಲ್ಲೂಕು.	ಅಂಚೇ ಆಫೀಸ ಸ್ಥಾಪಿಸಲ್ಪಟ್ಟ ಸ್ಥಳಗಳ ಹೆಸರು.
ಮುಳಬಾಗಲು	ಎಲದೂರು, ನಂಗಲಿ, ತಾಯಲೂರು.
ಕಾನಕಾನಹಳ್ಳಿ	ಸಾತನೂರು.
ಬವರಿಂಗ ಪೇಟೆ	ಸೂಲಿಕುಂಟೆ.
ತಿರುಮಕೂಡ್ಲು ನರಸೀಪುರ	ಪೂರೆಗಾಲ.
ನೆಲಮಂಗಲ	ಗೊಲ್ಲಹಳ್ಳಿ.

ಬಿ. ಮರಿಗಂಗಯ್ಯ,
ಅಂಚೆ ಬಕ್ಷಿ.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್‌ಜಡ್ಜೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ 209.

ಮೃತಪಟ್ಟ ಮುತ್ತಣ್ಣನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರು ಶಿರಾ ತಾಲ್ಲೂಕು ಗೋಣಿಹಳ್ಳಿ ಶಾಂತಮ್ಮ, ಮೃತಪಟ್ಟ ಸದರೀ ಮುತ್ತಣ್ಣನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಶಿರಾ ತಾಲ್ಲೂಕು ಗೋಣಿಹಳ್ಳಿ ಸ್ಥಳದ ಶಾಂತಮ್ಮನವರು ಗೋಣಿಹಳ್ಳಿ ವಾಸಸ್ಥನಾಗಿ ಮೃತಪಟ್ಟ ಮುತ್ತಣ್ಣನವರ ಜಿಂದಗಿ ಬಗ್ಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರಳಾದ ಶಾಂತಮ್ಮನವರ ಅರ್ಜೀಯನ್ನು 1884ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 23ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುತ್ತಣ್ಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅಕ್ಟೋಬರ್ ತಿಂಗಳು 7ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1884ನೇ ಇಸವಿ ಅರ್ಜೀ ನಂಬರ್ 217.

ಮೃತಪಟ್ಟ ಶಿವಸಂದ್ರದ ಪುಟ್ಟಣ್ಣನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರು ಗುಬ್ಬಿ ತಾಲ್ಲೂಕು ನಿಟ್ಟೂರು ಸ|| ಶಿವಸಂದ್ರದ ಬೈರಪ್ಪನು, ಮೃತಪಟ್ಟ ಸದರೀ ಪುಟ್ಟಣ್ಣನವರಿಗೆ ಖಾಸಾ ಅವಿಭಕ್ತ ಸಹೋದರ ಆಗಬೇಕೆಂಬ ಹಕ್ಕುದಾರೀ ಮೇಲೆ ಗುಬ್ಬಿತಾಲ್ಲೂಕು ಶಿವಸಂದ್ರ ಸ್ಥಳದ ಬೈರಪ್ಪನವರು, ಶಿವಸಂದ್ರ ವಾಸಸ್ಥರಾಗಿ ಮೃತಪಟ್ಟ ಪುಟ್ಟಣ್ಣನವರ ಜಿಂದಗಿ ಬಗ್ಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗೆ ಈಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಬೈರಪ್ಪನವರ ಅರ್ಜೀಯನ್ನು 1884ನೇ ಇಸವೀ ನವೆಂಬರ್ ತಿಂಗಳು ತಾರೀಖು 6ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪುಟ್ಟಣ್ಣವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅಕ್ಟೋಬರ್ ತಿಂಗಳು 11ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಕ್ರೆಸ್,
ಸಬ್ ಜಡ್ಜ.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

ಸನ್ 1884ನೇ ಇಸವಿ ಅರ್ಜೀ ನಂಬರ್ 300.

ಮೃತಪಟ್ಟ ರಾಮಾನುಜಾಚಾರ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಶ್ರೀನಿವಾಸಯ್ಯಂಗಾರು, ಮೃತಪಟ್ಟ ಸದರೀ ರಾಮಾನುಜಾಚಾರ್ಯನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ನಂಜನಗೂಡು ತಾಲ್ಲೂಕು ಕಳಲೆ ಕಸಬಾ ಸ್ಥಳದ ಸದರೀ ಶ್ರೀನಿವಾಸಯ್ಯಂಗಾರು ಸದರೀ ವಾಸಸ್ಥರಾಗಿ ಮೃತಪಟ್ಟ ರಾಮಾನುಜಾಚಾರ್ಯನ ಜಿಂದಗಿ ಬಗ್ಗ್ಯಾಗಿ ಬರತಕ್ಕ 200 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರರಾದ ಶ್ರೀನಿವಾಸಯ್ಯಂಗಾರ, ಅರ್ಜೀಯನ್ನು 1884ನೇ ಇಸವೀ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಾನುಜಾಚಾರ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ್ 322.

ಮೃತಪಟ್ಟ ಸೂರ್ಯನಾರಾಯಣಭಟ್ಟರ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ಪುಟ್ಟಮ್ಮ, ಸುಬ್ಬಮ್ಮ, ಮೃತಪಟ್ಟ ಸದರೀ ಸೂರ್ಯನಾರಾಯಣಭಟ್ಟರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರೀ ಮೇಲೆ ಅತ್ತಿಕುಪ್ಪಾ ತಾಲ್ಲೂಕು ಕನ್ನಂಬಾಡಿ ಸ್ಥಳದ ಸದರೀ ಪುಟ್ಟಮ್ಮ, ಸುಬ್ಬಮ್ಮ, ಸದರೀ ವಾಸಸ್ಥನಾಗಿ ಮೃತಪಟ್ಟ ಸೂರ್ಯನಾರಾಯಣಭಟ್ಟರ ಜಿಂದಗಿ ಬಗ್ಗ್ಯಾಗಿ ಬರತಕ್ಕ 100 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ, ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪುಟ್ಟಮ್ಮ, ಸುಬ್ಬಮ್ಮನ ಅರ್ಜಿಯನ್ನು 1884ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೂರ್ಯನಾರಾಯಣಭಟ್ಟರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿಧೆ.

1884ನೇ ಇಸವಿ ಅರ್ಜೀ ನಂಬರ್ 340.

ಮೃತಪಟ್ಟ ವಳಹಟ್ಟಿ ಶಿದ್ದಲಿಂಗಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಗುರುಶಿದ್ದಯ್ಯ, ಮೃತಪಟ್ಟ ಸದರೀ ಶಿದ್ದಲಿಂಗಗೌಡನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಚಾಮರಾಜನಗರ ತಾಲ್ಲೂಕು ಸರ್ವಮಾನ್ಯ ಬಾಗಳಿ ಗ್ರಾಮ ಸ್ಥಳದ ಸದರೀ ಗುರುಶಿದ್ದಯ್ಯನು, ಸದರೀ ವಾಸಸ್ಥನಾಗಿ ಮೃತಪಟ್ಟ ಸದರೀ ಶಿದ್ದಲಿಂಗ ಗೌಡನ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಗುರುಶಿದ್ದಯ್ಯನ ಅರ್ಜೀಯನ್ನು 1884ನೇ ಇಸವಿ ಅಕ್ಟೋಬರ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿದ್ದಲಿಂಗಗೌಡನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 355.

ಮೃತಪಟ್ಟ ಪುಟ್ಟೇಗವುಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ನಂಜಪ್ಪ ಮೈನರ್, ಗಾರ್ಡಿಯನ್ ನಂಜಪ್ಪ, ಮೃತಪಟ್ಟ ಸದರೀ ಪುಟ್ಟೇಗವುಡನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಮಂಡೀ ಮೊಹಲಾ ಸ್ಥಳದ ಸದರೀ ನಂಜಪ್ಪ ಮೈನರ್, ಗಾರ್ಡಿಯನ್ ನಂಜಪ್ಪ ನಂಜನಗೂಡು ತಾಲ್ಲೂಕು ಕಲ್ಲಹಳ್ಳೀ ವಾಸಸ್ಥನಾಗಿ ಮೃತಪಟ್ಟ ಪುಟ್ಟೇಗವುಡನ ಜಿಂದಗಿ ಬಗ್ಯಾಗಿ ಬರತಕ್ಕ 800—900 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ನಂಜಪ್ಪ ಮೈನರ್, ಗಾರ್ಡಿಯನ್ ನಂಜಪ್ಪನ ಅರ್ಜೀಯನ್ನು 1884ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪುಟ್ಟೇಗವುಡನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 380.

ಮೃತಪಟ್ಟ ಅವಲಕ್ಕಿ ಶೇಷಮ್ಮನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಪುರುಷೋತ್ತಮಯ್ಯ, ವುರಫ್ ತಮ್ಮಯ್ಯ, ಮೃತಪಟ್ಟ ಸದರೀ ಶೇಷಮ್ಮನಿಗೆ ತಮ್ಮ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಕೃಷ್ಣರಾಜ ಮೊಹಲಾ ಸ್ಥಳದ ಸದರೀ ಪುರುಷೋತ್ತಮಯ್ಯ ವುರಫ್ ತಮ್ಮಯ್ಯ, ಸದರೀ ವಾಸಸ್ಥಳಾಗಿ ಮೃತಪಟ್ಟ ಶೇಷಮ್ಮನ ಜಿಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಪುರುಷೋತ್ತಮಯ್ಯ ವುರಫ್ ತಮ್ಮಯ್ಯನ ಅರ್ಜೀಯನ್ನು 1884ನೇ ಇಸವಿ ಅಕ್ಟೋಬರ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶೇಷಮ್ಮನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

1884ನೇ ಇಸವಿ ಅರ್ಜೀ ನಂಬರ್ 388.

ಮೃತಪಟ್ಟ ಪೆದ್ದ ಕುಟ್ಟಿಶೆಟ್ಟಿಯ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಚಿನ್ನ ಕುಟ್ಟಿಶೆಟ್ಟಿ, ಮೃತಪಟ್ಟ ಸದರೀ ಪೆದ್ದ ಕುಟ್ಟಿಶೆಟ್ಟಿಗೆ ತಮ್ಮ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಕಿಲ್ಲೇ ಸ್ಥಳದ ಸದರೀ ಚಿನ್ನ ಕುಟ್ಟಿಶೆಟ್ಟಿಯು ಸದರೀ ವಾಸಸ್ಥನಾಗಿ ಮೃತಪಟ್ಟ ಪೆದ್ದ ಕುಟ್ಟಿಶೆಟ್ಟಿಯ ಜಿಂದಗಿ ಬಗ್ಯಾಗಿ ಬರತಕ್ಕ 900 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಚಿನ್ನಕುಟ್ಟಿಶೆಟ್ಟಿಯ ಅರ್ಜೆಯನ್ನು 1884ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆದ್ದಕುಟ್ಟಿಶೆಟ್ಟಿಯ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಪೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅಕ್ಟೋಬರ್ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮದಸ್ತಖತ್ತೊಡನೆ ಕೊಡೋಣಾಗಿಧೆ.

1884ನೇ ಇಸವಿ ಅರ್ಜೀ ನಂಬರ್ 383.

ಮೃತಪಟ್ಟ ವೆಂಕಟರಾಜೇಅರಸಿನವರ ಅಸ್ತಿ ವಿಷಯದಲ್ಲಿ—

ಅರ್ಜೀದಾರ ನಂಜಪ್ಪ; ದೇವರಾಜೈಯ್ಯ; ಮೃತಪಟ್ಟ ಸದರೀ ವೆಂಕಟರಾಜೇಅರಸಿನವರಿಗೆ ತಮ್ಮ, ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಸ್ಥಳದ ಸದರೀ ಸಂಜಪ್ಪ, ದೇವರಾಜಯ್ಯ ಸಹಾ ಸದರೀ ವಾಸಸ್ಥರಾಗಿ ಮೃತಪಟ್ಟ ವೆಂಕಟರಾಜೇಅರಸಿನವರ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾರೆ.

ಸದರೀ ದರಖಾಸ್ತುದಾರರಾದ ಸಂಜಪ್ಪ, ದೇವರಾಜಯ್ಯ, ಇವರುಗಳ ಅರ್ಜೆಯನ್ನು 1884ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕರಾಜೇಅರಸಿನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಪೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ್ 308.

ಮೃತಪಟ್ಟ ಮರಿಯಂಣ ವುರಫ್ ಪುಟ್ಟಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಮಲ್ಲಯ್ಯ ಮೈನರ್ ಗಾರ್ಡಿಯನ್ ಮತ್ತು ಜನಕ ತಂದೆ ಕಂಠೀಲಿಂಗಂಣ, ಮೃತಪಟ್ಟ ಸದರೀ ಮರಿಯಂಣ ವುರಫ್ ಪುಟ್ಟಯ್ಯನಿಗೆ ದತ್ತುಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಸ್ಥಳದ ಸದರೀ ಮಲ್ಲಯ್ಯ ಮೈನರ್ ಗಾರ್ಡಿಯನ್ ಮತ್ತು ಜನಕ ತಂದೆ ಕಂಠೀಲಿಂಗಂಣನು, ಸದರೀ ವಾಸಸ್ಥನಾಗಿ ಮೃತಪಟ್ಟ ಮರಿಯಂಣ ವುರಫ್ ಪುಟ್ಟಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿಗಳ ಸಾಲವನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಮಲ್ಲಯ್ಯ ಮೈನರ್ ಗಾರ್ಡಿಯನ್ ಮತ್ತು ಜನಕ ತಂದೆ ಕಂಠೀಲಿಂಗಂಣನ ಅರ್ಜೀಯನ್ನು 1884ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮರಿಯಂಣ ವುರಫ್ ಪುಟ್ಟಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅಕ್ಟೋಬರ್ 9ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ವಿ. ಎನ್. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜಿ.

ಕಡೂರು ಡಿಸ್ಟ್ರಿಕ್ಟು.

ತಾರೀಖು 28ನೇ ಸೆಪ್ಟಂಬರ್ 1884.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದ್ರರೆ,—ಚಿಕ್ಕಮಗಳೂರು ತಾಲ್ಲೂಕು ಮುಗಳವಳ್ಳಿ ಗ್ರಾಮದಲ್ಲಿರುವ ಮೂಲೆಮನೆ ಸಂಜಪ್ಪಶೆಟ್ಟಿ ಮನೆಗೆ ಮಾಹೆ ಮಜಕೂರ್ ತಾರೀಖು 19ನೇ ರಾತ್ರೆ ಕನ್ನಾಹಾಕಿ ಷುಮಾರು 2,044—8—0 ಮಾಲು ಕಳವು ಮಾಡಿಕೊಂಡು ಹೋದ ಕಳ್ಳರ ದಸ್ತಗಿರಿ ಬಗ್ಯೆ ತಕ್ಕ ಬಾತ್ಮಿ ತಿಳಿಸತಕ್ಕವರಿಗೆ ಕುಂಪಣಿ 100 ರೂಪಾಯಿ ಇನಾಂ ಕೊಡಲ್ಪಟ್ಟೀತು. ಕಳವು ಆದ ಜಿಂದಗೀ ತಪಸೀಲನ್ನು ಯಿದರಡಿ ನಮೂದಿಸಿಯಿಧೆ:—

848

ಭಂಗಾರದ ನಗಗಳು.

ನಂಬರ್.		ರೂ.	ಆ.	ಪೈ.
1.	ಭಂಗಾರದ ರಾಗಟೆ 1ಕ್ಕೆ ಸುಮಾರು 6 ವರಹಾ ತೂಕ, ನಡೂಮಧ್ಯೆ 1 ಕೆಂಪು ಹಾಕಿತ್ತು ಚೊಕ್ಕ ಭಂಗಾರದ್ದು ವಳ್ಳೇ ಬೆಳ್ಳೀ ಬಿಲ್ಲೆ ಹಾಕಿತ್ತು ಶಿದ್ದಲಿಂಗಯ್ಯನ ಮಾರೀಫತ್ತು ತೆಗದುಕೊಂಡದ್ದು ಸ್ವಯಾರ್ಜಿತ	25	0	0
2.	ಭಂಗಾರದ ಅಡ್ಡಕ್ಯಾದಿಗೆ ಸುಮಾರು 2 ವರಹಾ ತೂಕ ಬೆಳ್ಳೀಬಿಲ್ಲೇ ಹಾಕಿತ್ತು ಅಕ್ಕಸಾಲೇ ಹಲಗಾಚಾರಿ ಮಾಡಿದ್ದು	10	0	0
3.	ವರಹಾ ಬಂಣದ ಬಾಬತು ಜಡೆಬುಬ್ಬೆ ಕುಚ್ಚು 3 ಸಹಾ ಬೆಳ್ಳಿಬಿಲ್ಲೇ ಹಾಕಿದ್ದು ಸುಮಾರು ತೂಕ 20 ವರಹಾ	80	0	0
4.	ಭಂಗಾರದ ಹರಡೀ ಗುಂಡು 8 ಹವಳ 8 ಟ್ವಿಸ್ಟ್‌ಧಾರದಲ್ಲಿ ಪೋಣಿಸಿದ್ದು ಜೊತೆ 1ಕ್ಕೆ ಸುಮಾರು ತೂಕ ವರಹಾ 10 ಕ್ರಯ ಹವಳಕ್ಕೆ ಸಹಾ	90	0	0
5.	ಭಂಗಾರದ ಗೀರುಬಳೆ ಜೊತೆ 1ಕ್ಕೆ ವರಹಾ ಬಂಣ ಸುಮಾರು 8 ವರಹಾ ತೂಕ ಜೊತೆ ಅಲ್ಲಾ ವಂದು ಹೋಗಿ ಇದೆ ಅದರ ಕ್ರಯ	28	0	0
6.	ಬಂದೀ ಸರಿಗೆ 1ಕ್ಕೆ ಸುಮಾರು 10 ವರಹಾ ತೂಕ ಅಂಣಾಜೀಹತ್ರ ತೆಗದುಕೊಂಡದ್ದು ..	50	0	0
7.	ಬುಗಡಿ ಜೊತೆ 1ಕ್ಕೆ 7 ಕಳಸದ ಬಾಬತು ಸುಮಾರು 4 ವರಹಾ ತೂಕ ಮುತ್ತು ಸುತ್ತಿ ಯಿತ್ತು ಜ್ಞಾಪಕ ವಿಲ್ಲಾ ಸುಮಾರು ಕ್ರಯ	50	0	0
8.	ಈಕ್ಕೇರಿ ವರಹಾ ಜಾಸರೀಬು 5 ಶೇರಿತ್ತು ಯಿಷ್ಟೇ ಯಿತೆಂಬುವದು ಜ್ಞಾಪಕ ವಿಲ್ಲಾ. ..	80	0	0
9.	ಮುತ್ತು ಹಾಕಿದ ಭಂಗಾರದ ವುಂಗ್ರ 1ಕ್ಕೆ 2 ಹೊನ್ನು ತೂಕದ್ದು 1ಕ್ಕೆ ಕ್ರಯ. ..	5	0	0
10.	ಗೆಜ್ಜೆ ಅಡ್ಡಿಕೆ 1ಕ್ಕೆ ಸುಮಾರು 15 ವರಹಾ ತೂಕದ್ದು ಅರಗು ಹಾಕಿದ್ದು	60	0	0
11.	ಯೇಕಾವಳಿ ಸರ 1ಕ್ಕೆ ಚಿನ್ನದ ಗುಂಡು 22 ಹವಳ 22 ರೇಷ್ಮೇ ಧಾರದಲ್ಲಿ ಪೋಣಿಸಿ ಯಿತ್ತು ಹರಳು ಮೆಟ್ಟಿದ ತಾಳಿ ಹಾಕಿದ್ದು ತೂಕ ಗೊತ್ತು ಯಿಲ್ಲಾ	75	0	0
12.	ಭಂಗಾರದ ಕಾಶೀತಾಳಿ ಗುಂಡು 8 ಹವಳ 8ಕ್ಕೆ ಸಹಾ ತೂಕ ಗೊತ್ತಿಲ್ಲಾ ಸುಮಾರು ಕ್ರಯ ..	50	0	0
13.	ಬಂಣದ ಸರ ಜೊತೆ 1ಕ್ಕೆ ಹವಳ 150 ಯಿದ್ದ ಬಾಬತು ಹವಳ ವಂದು ಕಡ್ಲೇಕಾಳು ಧಪ್ಪ ಇದದ್ದು.	25	0	0
14.	ಬೆಳ್ಳೀ ಬಾಬತು ಸೊಂಟಕ್ಕೆ ಹಾಕತಕ್ಕ ಡಾಬು 1ಕ್ಕೆ ಸುಮಾರು 30 ರೂಪಾಯಿ ತೂಕ ..	24	0	0
15.	ಬೆಳ್ಳೀ ನಡುವಿನ ಪಟ್ಟಿ 3ಕ್ಕೆ ತೂಕ ಸುಮಾರು 50 ರೂಪಾಯಿ.	40	0	0
16.	ಸುಣ್ಣದ ಕಾಯಿ 1ಕ್ಕೆ ತೂಕ ಗೊತ್ತಿಲ್ಲಾ ನಖಾಶಿ ಮಾಡಿದ್ದದ್ದು ಸರಪಣಿ ಸಹಾ ಸುಮಾರು ತೂಕ. 6	4	0	0
17.	ಬೆಳ್ಳೀ ಲ್ಯಾವಳಾ ಯರಡು ಯೆಳೆ ಬಾಬತು 1ಕ್ಕೆ ಸುಮಾರು 10 ರೂಪಾಯಿ ತೂಕ ..	18	0	0
18.	ಹೆಂಗಸರು ಕೊರಳಲ್ಲಿ ಹಾಕುವ ಸಾದಾ ಕರಡಿಗೆ ಸರಪಣಿ ಸಹಾ ಸುಮಾರು ತೂಕ 22 ರೂ. ..	18	0	0
19.	ಇತರರು ಅಡವು ಯಿಟ್ಟಿದ್ದ ಬಾಬತು, ಬೀಕನಹಳ್ಳೀ ಬೊಮ್ಮೇಗೌಡನು ಅಡವು ಯಿಟ್ಟಿದ್ದ ಚೌರಿಕೊಟ್ಟು 1ಕ್ಕೆ ಚೌರಿ ಕಾಯಿ ಇದರ ಬಾಬತು ಕ್ರಯ ನಲ್ಲೂರು ಮಲ್ಲಪ್ಪ ಅಡವಿಟ್ಟದ್ದು	25	0	0
20.	ಬೆಳ್ಳೀ ಕಾಲುಸರ ಜೊತೆ 1ಕ್ಕೆ 40 ರೂಪಾಯಿ ತೂಕ	40	0	0
21.	ಪಾಡಗದ ಜೊತೆ 1ಕ್ಕೆ ಸಹಾ ತೂಕ 20 ರೂಪಾಯಿ	20	0	0
22.	ಪಾಲಿಗೆ ಅಡವು ಯಿಟ್ಟದ್ದು ಭಂಗಾರದ ವಾಲೆ ಜೊತೆ 1ಕ್ಕೆ ಅದರಲ್ಲಿ ಯಿರುವ ಬೆಳ್ಳೀ ಮರಸುತ್ತು ಅರಗು ಸಮೇತ 21 ರೂಪಾಯಿ ತೂಕ	10	0	0
23.	ಅಂಬಳೆ ಶೀತಾರಾಮಯ್ಯ ಅಡವಿಟ್ಟದ್ದು ಭಂಗಾರದ ಚಾಪಿನ ವುಂಗರ 2ಕ್ಕೆ ತೂಕ 8 ವರಹಾ ..	25	0	0
24.	ಡಿಟೋ ಕೃಷ್ಣಶಾಸ್ತ್ರಿಗಳು ಅಡವು ಯಿಟ್ಟಿದ್ದ ಚಿನ್ನದ ಚೌರಿಕೊಟ್ಟು 1ಕ್ಕೆ ತೂಕ $1\frac{1}{2}$ ವರಹಾ ಅರಗು ಸಹಾ ಯಿದ್ದದ್ದು ಹಿರೇರ ಸ್ಥಿತಿ ಪೈಕಿ ನನ್ನ ಹಿಸ್ಸೆಗೆ ಬಂದದ್ದು	12	0	0
25.	ಭಂಗಾರದ ಹಿಂಬಳೆ ಜೊತೆ 1ಕ್ಕೆ ತೂಕ $16\frac{1}{2}$ ವರಹಾ	82	8	
26.	ಕೆಂಪು ಹರಳು ಹಾಕಿದ ಕಾಶೀ ಕ್ಯಾದಿಗೆ 1ಕ್ಕೆ ವಳಗೆ ರುದ್ರಾಕ್ಷಿ ಹಾಕಿತಾಯಿತಿ ಸಹಾ ಇದೆ 6 ವರಹ ತೂಕ	35	0	0
27.	ಚವುರಿಕೊಟ್ಟು 1ಕ್ಕೆ 5 ವರಹಾ ತೂಕ	23	8	0
28.	ಕಟ್ಟಾಣಿ ಯಳೆ 5ಕ್ಕೆ ತೂಕ 13 ವರಹಾ ಕ್ರಯ	61	12	0
29.	ಕೊಪ್ಪು ಜೊತೆ 1ಕ್ಕೆ ತೂಕ 4 ವರಹಾ	16	0	0

ನಂಬರ್.		ರೂ.	ಆ.	ಪೈ
30.	ವಾಲೆ ಜೊತೆ 1ಕ್ಕೆ ತೂಕ ಕುಸರಿ 26 ಇದಕ್ಕೆ ಹಾಕಿದ 6 ಚೆಳತುಂಬು ಸರಪಣಿ ಇದಕ್ಕೆ ಹಾಕಿದ ಮುತ್ತು ಸಹಾ ತೂಕ 16 ವರಹಾ	100	0	0
31.	ದೊಡ್ಡ ವಂಟೀ ಜೊತೆ 1ಕ್ಕೆ ಮುತ್ತು ಹಾಕಿದ್ದದ್ದು 1ಕ್ಕೆ ತೂಕ ಗೊತ್ತಿಲ್ಲಾ ..	50	0	0
32.	ಸಾದಾ ಕಾಶೀತಾಳಿ ಕಟ್ಟಿದ ಗುಂಡು 8 ಹವಳ ಸಂಣದು ಸಹಾ ತೂಕ ಗೊತ್ತಿಲ್ಲಾ	10	0	0
33.	ಬೆಳ್ಳೀಚಿಲ್ಲೀ ಹಾಕಿದ ಮೊಹರಿನ ವುಂಗ್ರ 1ಕ್ಕೆ ಭಂಗಾರದ ಬಾಬತು 3 ವರಹಾ ತೂಕ ಯಿಧೆ ಮಾ. ಸಿ. ಚನ್ನಬಸವಾ ಯಂತ ಕನ್ನಡದಲ್ಲಿ ಕೆತ್ತಿ ಯಿಧೆ	13	8	0
34.	ವಂಟಿ ಗೂಡಿನ ವುಂಗ್ರ 1ಕ್ಕೆ ತೂಕ 18 ಹಣ ಕ್ರಯ	12	0	0
35.	ಶಾವಂತಿಗೆ ಹುವ್ವಿನ ಮಾಟದ ಕೆಂಪು ಕೆತ್ತಿದ ವುಂಗ್ರ 1ಕ್ಕೆ 2 ವರಹಾ 1 ಹಣ	10	0	0
36.	ಚಳತುಂಬು ಜೊತೆ 1ಕ್ಕೆ 2 ವರಹಾ $3\frac{1}{2}$ ಹಣತೂಕ ಕ್ರಯ	8	0	0
37.	ಈಕ್ಕೇರಿ ವರಹಾ 1ಕ್ಕೆ	4	8	0
38.	ಭಂಗಾರದ ರ್‍ಯಾಗಟೆ 1ಕ್ಕೆ 6 ವರಹಾ $7\frac{1}{2}$ ಹಣ ತೂಕ ಲಿಂಗಣಾಚಾರಿ ಮಾಡಿದ್ದು. ..	34	8	0
39.	ಸದರೀಯವನು ಮಾಡಿದ ಅಡ್ಡಕ್ಯಾದಿಗೆ 1ಕ್ಕೆ 1 ವರಹ $2\frac{1}{4}$ ಹಣ ತೂಕ	8	4	0
40.	ಭಂಗಾರದ ಗುಂಡುಗಳು $8\frac{1}{2}$ ವರಹ ತೂಕ 1ಕ್ಕೆ	18	10	0
41.	ಹತ್ತುವಂಟಿ ಬಾಬತು ಮುತ್ತು 4ಕ್ಕೆ	6	0	0
42.	ಬಂಣದಸರ ವಂದಕ್ಕೆ ಹವಳದ ಮಣಿ 15ಕ್ಕೆ 20 ರೂಪಾಯಿ ಕ್ರಯ	20	0	0
43.	ಬೆಳ್ಳೀಕಾಲು ಕಡಗದ ಜೊತೆ 1ಕ್ಕೆ ತೂಕ $12\frac{1}{2}$ ರೂಪಾಯಿ.	12	8	0
44.	ಬಲದಕ್ಕೈ ಬಾಬತು ಬೆಳ್ಳೀ ದುಂಡು 1ಕ್ಕೆ	1	8	0
45.	ಕಾಲುಂಗರದ ಜೊತೆ 1ಕ್ಕೆ ತೂಕ 32 ರೂಪಾಯಿ	26	0	0
46.	ಪಾಡಗದ ಜೊತೆ 1ಕ್ಕೆ 15 ರೂಪಾಯಿ ನನ್ನ ತಮ್ಮ ಮಲ್ಲುಡಗನು ನನ್ನಮನೆಯಲ್ಲಿ ಯಿಟ್ಟಿದ್ದ ಬಾಬತು	12	8	0
47.	ಭಂಗಾರದ ಹಿಂಬಳೆ 1ಕ್ಕೆ ತೂಕ $13\frac{1}{2}$ ವರಹಾ ತೂಕ	58	8	0
48.	ಭಂಗಾರದ ಕಾಶೀ ಕುಪ್ಪಿಗೆ ಸಹಾ 10 ವರಹ್ಹಾ ತೂಕ	47	8	0
49.	ರಾಗಟೆ 1ಕ್ಕೆ ತೂಕ 7 ವರಹಾ	35	0	0
50.	ಭಂಗಾರದ ಕಡಗ 1ಕ್ಕೆ ತೂಕ 15 ವರಹಾ	69	0	0
51.	ಅತ್ತಿಕ	31	6	0
52.	ವಾಲೆ ಜೊತೆ 1ಕ್ಕೆ ಭಂಗಾರದ್ದು ತೂಕ ಗೊತ್ತಿಲ್ಲಾ	28	0	0
53.	ಹರಡಿಗುಂಡು 5 ಹವಳ 6ಕ್ಕೆ ಸಹಾ ಭಂಗಾರದ್ದು ಗುಂಡು ತೂಕ ಗೊತ್ತಿಲ್ಲಾ	18	0	0
54.	ಭಂಗಾರದ ಕೆತ್ತನೆ ಕಾಶೀಪಟ್ಟೆ 1 ಗುಂಡು 8 ಹವಳ 10ಕ್ಕೆ ಸಹ ತೂಕ ಗೊತ್ತಿಲ್ಲಾ ..	36	0	0
55.	ಚಿನ್ನದ ಗೋಲುಂಗ್ರ 2ಕ್ಕೆ ೧೯ ತೂಕಕ್ಕೆ :	8	8	0
56.	ಚಿನ್ನದ ಶಾವಂತಿಗೆ ಹುವ್ವಿನ ಮಾಟದ್ದು ತೂಕ ೬೯೧। ತೂಕ	40	0	0
57.	ಚಿನ್ನದ ವಾಲೆ ಸರಪಣಿ ಜೊತೆ 1 ಕೊಂಡಿ ಚಾವು 3 ವರಹಾ ತೂಕ	9	0	0
58.	ಹೊನ್ನುವ್ವ 1ಕ್ಕೆ	2	0	0
59.	ಲಿಂಗಣಾಚಾರಿ ಮಾಡಿದ ಅಡ್ಡಿಕಿ ಕ್ಯಾದಿಗೆ 1ಕ್ಕೆ ಭಂಗಾರದ್ದು ತೂಕ ೧'೭'।= ತೂಕ ..	8	4	0
60.	ಚಿನ್ನದ ಗುಂಡು 18ಕ್ಕೆ $4\frac{1}{2}$ ವರಹಾ ತೂಕ ಗುಂಡು ಯಿಷ್ಟೀ ಯನ್ನುವದು ಗೊತ್ತಿಲ್ಲಾ ..	18	10	0
61.	ಮುತ್ತಿನಸರ ವಂದಕ್ಕೆ ಯಿಷ್ಟೀ ಯಂಬುವದು ಗೊತ್ತಿಲ್ಲಾ	1	8	0
62.	ದೊಡ್ಡಬಂಣಸರ 1ಕ್ಕೆ ಹವಳದ ಮಣಿ 15 ಹವಳ ವಂದು ಗಜ್ಜುಗದ ಥಪ್ಪಾ ಯಿತ್ತು 62 ..	50	0	0
63.	ಬೆಳ್ಳೀ ವುಡಿಧಾರ 1ಕ್ಕೆ ತೂಕ 16–1–0 ಕಟ್ರಕತ್ರಿ ಮಾಡಿತ್ತು ಶಿಹ್ಮಲಲಾಟ ಯಿತ್ತು ..	16	0	0
64.	ಗುಂಡು 1ಕ್ಕೆ ತೂಕ ಗೊತ್ತಿಲ್ಲಾ	1	8	0
65.	ಕಾಲುಸರ ಜೊತೆ 1ಕ್ಕೆ 24 ರೂಪಾಯಿ ತೂಕ	19	8	0
66.	ಪಾಡಗದ ಜೊತೆ 1ಕ್ಕೆ ತೂಕ 14 ರೂಪಾಯಿ	7	0	0
67.	ಮುತ್ತು 4ಕ್ಕೆ ಸರಾ ಗೊತ್ತಿಲ್ಲಾ ಕ್ರಯ	4	0	0
68.	ಸ್ವಂತ ಬಾಬತು ನಗದು ರೂಪಾಯಿ	92	12	0

ನಂಬರ್.		ರೂ.	ಆ.	ಪೈ.
69.	ರಾಜಾ ರೂಪಾಯಿ	8	0	0
70.	ರಾಜಾ ಪಾವಲಿ ನಾಲ್ಕಕ್ಕೆ	1	0	0
71.	ರಾಜಾ ಹಣ 2ಕ್ಕೆ	0	4	0
72.	ಡಿಟ್ಟೋ ಸಣ್ಣ ಹಣ 2ಕ್ಕೆ ..	0	2	0
73.	ಸ್ವಂತ ಬಾಬತು ಮಾಲುಕಟ್ಟೆ ಯಿಟ್ಟಿದ್ದ ಕೆಂಪು ಬಿಳೀಯ ಗೀರು ಬಂದ ಹಸಬೆ ಪಟ್ಟೇ ಬಾಬತು ಹೊಟ್ಟೇ ಚೀಲ 2ಕ್ಕೆ	2	0	0
74.	ಈ ನಗಗಳು ಹಾಕಿದ್ದ ದೊಡ್ಡ ತಾಂಬ್ರದ ಭರಣಿ 1 ಸತವಿನ ಭರಣಿ1 ಮರದ ಭರಣಿ 2ಕ್ಕೆ ಸರಿ ಬಣ್ಣ ಹಾಕಿದ್ದು 1ಕ್ಕೆ ಸಹಾ	0	8	0
	ಜುಮ್ಲಾ	20,44	8	0

ಮಹಮ್ಮದಲ್ಲೀ, ಕೆ. ಬಿ.,
ಡೆಪ್ಯುಟಿ ಕಮಿಷ್ಮನರ್.

ಚೋರಿ ಆದ ಪೂರಾ ಕರ್ರೆನ್ಸಿ ನೋಟುಗಳು.

ನಂ.		ಸರ್ಕಲ್	ಕ್ರಯ ರೂಪಾಯಿ.	
B—64	46899	ಗೊತ್ತಿಲ್ಲಾ	20	ಹಕ್ಕುದಾರ—ತಿಪಟೂರು ತಾ|| ನೊಣವಿನಕೆರೆ, ವಾಸಸ್ಥಳಾದ ಅಮ್ಮಣ್ಣಿ ಅಮ್ಮಾಳ್ ಯಂಬುವರ ಮಗ ವೆಂಕಟರಾಮಯ್ಯಂಗಾರ್.
J—13	20635	,,	20	
	ನಂಬರ್	ಗೊತ್ತಿಲ್ಲ		
	29957	,,	50	ಹಕ್ಕುದಾರ—ಶಿವಮೊಗ್ಗ ಡಿ|| ತೀರ್ಥಹಳ್ಳಿ ರಮಣಯ್ಯ.
	30534	,,	50	
	30531	,,	50	
	30532	,,	50	
	30533	,,	50	

ಗವರ್ರ್ನಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಶೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡು ಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 4—8—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 8—8—0; ಒಂದು ಪೌಂಡು ಔಷಧವುಳ್ಳ ಡಬ್ಬಿಗೆ ರೂ. 168—0; ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿ ಒಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌಂಡು ವುಳ್ಳ ಡಬ್ಬಿಗೆ 20 ರೂಪಾಯಿ. ಈ ಔಷಧವು, ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯನ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬೀಗೆ ಎಂಟು ಆಣೆ ಟಪ್ಪಾಲ್ ಹಾಸಲೂ, ಒಂದು ಪೌಂಡು ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು

ಮೈಸೂರ ಗೆಜೆಟ್.

ಸರ್ಕಾರದಿಂದ ಫ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ॥ 18, ಸರ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೪ನೇ ಭಾಗ.

ಸರ್ಕಾರೀ ಕಾಗದ ಪತ್ರಗಳು.

ಮೈಸೂರು ದಿವಾನರವರಿಂದ,

ಸರ್ 1884ನೇ ಇಸವಿ ಅಕ್ಟೋಬರ್ 1ನೇ ತಾರೀಖಿನೊಳು, ಮೈಸೂರಿನಲ್ಲಿ ಸೇರಿದ ಪ್ರತಿನಿಧಿಗಳ ಸಭೆಯಲ್ಲಿ ಮಾಡಲ್ಪಟ್ಟ ಉಪನ್ಯಾಸ.

ದೊಡ್ಡ ಮನುಷ್ಯರುಗಳರ್ರಾ;—ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ಆಜ್ಞಾನುಸಾರವಾಗಿ ಕಳದ ಸಾಲಿನ ಜಮಾಖರ್ಚು ಲೆಖ್ಖಗಳನ್ನು ತಮಗಳಿಗೆ ತಿಳಿಯಪಡಿಸುತ್ತೇವೆ. ಸ್ಟೇಟ್ ರೈಲ್‌ವೆ ಇಲಾಖೆ ಹುಟ್ಟುವಳಿ ಶಿವಾಯಿ 1883—84ನೇ ಇಸವಿಯ ವಸೂಲಿಯು, ಕೆಳಗೆ ವಿವರಿಸಿರುವ ತಪಶೀಲು ಪ್ರಕಾರ 1,06,35,579 ರೂಪಾಯಿಗಳಾಗಿತ್ತು:—

	ರೂಪಾಯಿಗಳು.
ಲ್ಯಾಂಡ್ ರೆವಿನ್ಯು ಯಾನೆ ಜಮೀನು ಬಾಬು	73,34,476
ಆಬ್ಕಾರಿ	12,29,737
ಫಾರೆಸ್ಟ್	6,27,283
ಸ್ಟಾಂಪು	4,65,089
ಸಾಯರ್	2,83,426
ಮೊಹತ್ತರ್ಫಾ	2,81,442
ಲಾ ಅಂಡ್ ಜಸ್ಟಿಸ್ ಯಾನೆ ಜುಡಿಷಲ್ ಬಾಬು	60,959
ಅಂಚೆ	58,616
ರಿಜಿಸ್ಟ್ರೇಷನ್	46,962
ಅಮೃತ ಮಹಲ್	34,199
ವಿದ್ಯಾಭ್ಯಾಸದ ಇಲಾಖೆ	23,966
ಉಪ್ಪಿನ ಮೋಳೆ	26,455
ಪಬ್ಲಿಕ್ ವರ್ಕ್ಸ್ ಯಾನೆ ಮರಹಮ್ಮತ್ ಬಾಬು	9,366
ಚಲಾವಣೆ ತಪ್ಪಿದ ತಾಂಬ್ರದ ನಾಣ್ಯಗಳ ಕಿಮ್ಮತು	26,128
ಚಿಲ್ಲರೆ ಬಾಬುಗಳು	1,27,475
ಜುಮ್ಲಾ	1,06,35,579

ಕಳೆದ ಸಂವತ್ಸರದಲ್ಲಿ ರೈಲ್ವೆ ಇಲಾಖೆ ಖರ್ಚು ಶಿವಾಯಿ ಇತರ ಮಾಮೂಲ್ ಖರ್ಚು ಈ ಕೆಳಗೆ ನಮೂದಿಸಿರುವ ಮೇರಿಗೆ 1,01,39,513 ರೂಪಾಯಿಗಳಾಗಿತ್ತು:—

A

	ರೂಪಾಯಿಗಳು.
ಸಬ್‌ಸಿಡಿ ಯಾನೆ ಪಗದಿ	24,50,000
ಅರಮನೆ ಖರ್ಚು	10,00,000
ಸರ್ಕಾರಿ ಸಾಲದ ಬಡ್ಡಿ	4,91,237
ಜಹಗೀರಿಗೆ ಬದಲಾಗಿ ಕೊಡುವ ಅಲ್ಲೋಯನ್ಸ್ ಮತ್ತು ಪೊಲಿಟಿಕಲ್ ಪೆಂಷನುಗಳು	1,48,925
ಮಿಲಿಟೇರಿ ಇಲಾಖಾ	7,38,009
ಜುಮ್ಲಾ....	48,28,171

B

ಹುಜೂರು ಇಲಾಖೆ ಖರ್ಚು	1,95,890
ವಸೂಲಾತಿ ಖರ್ಚು ಬಾಬುಗಳು—	
ಡಿಪ್ಯುಟಿ ಕಮ್ಮಿಷನರುಗಳು ಮತ್ತು ಅವರ ಶಿಬ್ಬಂದಿ	1,73,949
ಅಸಿಸ್ಟೆಂಟ್ ಕಮ್ಮಿಷನರುಗಳು ಮತ್ತು ಅವರ ಶಿಬ್ಬಂದಿ ..	1,04,112
ತಾಲ್ಲೂಕು ಜಾತ್ ಶಿಬ್ಬಂದಿ	5,23,609
ರೆವಿನ್ಯು ಸರ್ವೆ ಇಲಾಖೆ	2,50,414
ಇನಾಂ ಇಲಾಖೆ	7,816
ಗ್ರಾಮ ನವುಕರರ ತಲಬು	2,14,210
ಯಿತರ ಬಾಬುಗಳು	34,476
ಅಬ್ಕಾರಿ	16,097
ಫಾರೆಸ್ಟ್	2,48,257
ಸ್ಟಾಂಪು	14,311
ಸಾಯರ್	15,274
ಸಾದಿಲ್ವಾರು ಮತ್ತು ಛಾಪಾಖಾನೆ	58,693
ಅಮೃತಮಹಲ್ ಇಲಾಖೆ	1,33,860
ಟೋಪೊ ಗ್ರಾಫಿಕಲ್ ಸರ್ವೆ	84,285
ಜುಮ್ಲಾ....	20,75,253

C

ಲಾ ಅಂಡ್ ಜಸ್ಟಿಸ್ ಯಾನೆ ಜುಡಿಷಲ್ ಬಾಬು ಮತ್ತು ಜೈಲುಗಳು ..	4,12,279
ಪೊಲೀಸ್	4,52,185
ವಿದ್ಯಾಭ್ಯಾಸದ ಇಲಾಖಾ	1,38,065
ಮುಜರಾಯಿ	2,79,657
ಮೆಡಿಕಲ್ ಇಲಾಖಾ	1,29,659
ಪೆಂಷನ್ ಮತ್ತು ಗ್ರಾಚ್ಯುಟಿಗಳು	2,45,600
ಪಬ್ಲಿಕ್ ವರ್ಕ್ಸ್ ಯಾನೆ ಮರಾಮತ್ ಬಾಬು ..	9,36,001
ಅಂಚೆ	1,27,535
ರಿಜಿಸ್ಟ್ರೇಷನ್	25,579
ಚಿಲ್ಲರೆ ಇಲಾಖೆಗಳು	17,173

	ರೂಪಾಯಿಗಳು.
ಬ್ರಿಟಿಷ ಆಫೀಸರುಗಳ ಫರ್ಲೊ ಅಲೋಯನ್ಸ್, ಗ್ರಾಚ್ಯೂಟಿ, ಕಂಪೆನ್ಸೇಷನ್, ಲೀವ ಮತ್ತು ಪೆನ್ಷನ ಸಂಬಂಧವಾದ ಖರ್ಚುಗಳು	1,15,622
ಚಿಲ್ಲರೆ ಬಾಬು ಮತ್ತು ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನ್ ಖರ್ಚು 1,67,791 ರೂಪಾಯಿಗಳು ಸಹ	3,56,734
ಜುಮ್ಲಾ ..	32,36,089
ಪಟ್ಟು ಜುಮ್ಲಾ	1,01,39,513

ಗುಜಸ್ತಾ ಸಾಲ್ ಹುಟ್ಟುವಳಿ ಪೈಕಿ ಮೇಲೆನಮೂದಾದ ಖರ್ಚು ವಜಾ ಜಾತ ಉಳಿದದ್ದು 4,96,066 ರೂಪಾಯಿಗಳು. ಇದರಲ್ಲಿ ಅಸ್ಸೈನೆಡ್ ಟ್ರ್ಯಾಕ್ಟ್ಸ ಅಂದರೆ ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ ಬಾಬತು ಸರ್ಪ್ಲಸಯಾನೆ ಹುಟ್ಟುವಳೀ ಪೈಕೀ ಖರ್ಚು ಜಾತ ಉಳಿದ ಶಿಲ್ಕು 1,64,534 ರೂಪಾಯಿಗಳು ಶೇರಿಇವೆ. 1882—83ನೇ ಇಸವಿ ಬಾಬತು ನಿವಳ ಶಿಲ್ಕು 1,18,896 ರೂಪಾಯಿಗಳಿಗಿಂತ 1883—84ನೇ ಇಸವಿಯಲ್ಲಿ ಉಳಿದ ಶಿಲ್ಕು ಜಾಸ್ತಿಯಾಗಿಧೆ ; ಇದು ಬಹಳ ತೃಪ್ತಿಕರವಾಗಿಧೆ. ಸಾಲ್ ಮಜಕೂರಿನಲ್ಲಿ ಮುಖ್ಯವಾಗಿ ಲ್ಯಾಂಡ್ ರೆವಿನ್ಯೂ ಯಾನೆ ಜಮೀನ್ ಬಾಬಿನಲ್ಲಿ ಜಾಸ್ತಿ ವಸೂಲಾದ್ದರಿಂದಲೇ ಮೇಲೆಕಂಡ ಮೇರೆ ನಿವಳ ಶಿಲ್ಕು ಜಾಸ್ತೀಯಾಗಿ ನಿಲ್ಲುವದಕ್ಕೆ ಕಾರಣವಾಯಿತು. ಜಮೀನ್ ಬಾಬಿನಲ್ಲಿ 1882—83ನೇ ಇಸವಿಯಲ್ಲಿ ವಸೂಲಾದ್ದು ರೂ. 70,21,777 ಗತಸಾಲಿನಲ್ಲಿ ವಸೂಲಾದ್ದು ರೂ. 73,34,476, ಜಾಸ್ತಿ ರೂ. 3,12,699. ಈ ಜಾಸ್ತಿ ಪೈಕಿ ಸುಮಾರು ಅರ್ಧಪಾಲು ಹಿಂದಿನ ಸಾಲ್‌ಗಳ ಬಾಕಿಗಳು ಬಹಳ ಮಟ್ಟಿಗೆ ವಸೂಲಾದ್ದರಿಂದಲೂ, ಬಾಕಿ ಅರ್ಧಪಾಲು ಜಮಾಬಂದಿ ಜಾಸ್ತಿಯಿಂದಲೂ ಉಂಟಾಗಿರುತ್ತದೆ. ಮುಖ್ಯವಾಗಿ ಹಾಲೀ ಮೈಸೂರು ಮತ್ತು ಕಡೂರು ಡಿಸ್ಟ್ರಿಕ್ಟುಗಳ ತಾಲ್ಲೂಕುಗಳಲ್ಲಿ ಕಾಲಸ್ಥಿತಿ ಅನುಕೂಲವಾಗಿದ್ದದ್ದರಿಂದ ಜಾಸ್ತಿ ಸಾಗುವಳಿ ಆಗಿ ಜಮಾಬಂದಿ ಜಾಸ್ತಿ ಉಂಟಾಯಿತು.

1882—83ನೇ ಮತ್ತು 1883—84 ಈ ಏರಡು ಸಾಲ್‌ಗಳಲ್ಲಿಯೂ ಅಬ್ಕಾರಿ, ಫಾರೆಸ್ಟು, ಮತ್ತು ಸ್ಟಾಂಪು ಬಾಬುಗಳ ಹುಟ್ಟುವಳಿಯು ಸ್ವಲ್ಪ ಹೆಚ್ಚುಕಡಮೆ ಸಮನಾಗಿತ್ತು. ಆದರೆ ಹಿಂದಿನ ವರುಷಗಳಲ್ಲಿ ವಿಶೇಷವಾಗಿ ಹುಟ್ಟುವಳಿ ಆಗುತ್ತಿದ್ದ ಸಾಯರ್ ಬಾಬಿನ ವಸೂಲಿಯು ಷ್ಠಾಮಕ್ಕೆ ಮುಂಚೆ 6 ಲಕ್ಷ ರೂಪಾಯಿಗಳಿಗಿದ್ದದ್ದು, 1882—83ನೇ ಇಸವಿಯಲ್ಲಿ 3½ ಲಕ್ಷ ರೂಪಾಯಿಗಳವರಿಗೆ ಇಳದು, ಗತಸಾಲಿನಲ್ಲಿ ಮಲನಾಡಿನಲ್ಲಿ ಅಡಿಕೆ ಮರಗಳಿಗೆ ಕೊಳೇ ರೋಗ ತಗಲಿದ್ದರ ದೆಶೆಯಿಂದ 2,83,426 ರೂಪಾಯಿ ಮಾತ್ರ ಹುಟ್ಟುವಳಿ ಆಯಿತು.

ಗತಸಾಲಿನಲ್ಲಿ ಮಾಮೂಲ್ ಖರ್ಚು 1,01,39,513 ರೂಪಾಯಿ ಆಗಿತ್ತು. ಇದು ಪೈವಸ್ತಾಸಾಲಿಗಿಂತ ಸುಮಾರು 1 ಲಕ್ಷ ರೂಪಾಯಿಗಳು ಕಮ್ಮಿಯಾಗಿಧೆ. ಈ ಮೊಬಲಗಿನಲ್ಲಿ ಮುಂದಿನ ವರುಷಗಳಲ್ಲಿ ಸಂಭವಿಸಲಾರದ ಕೆಲವು ವಿಶೇಷ ಖರ್ಚುಗಳು ಅಂದರೆ ಅಮೃತ ಮಹಲ್ ಇಲಾಖಾ ದನಗಳ ಖರೀದಿಗೋಸ್ಕರ ಮದ್ರಾಸ್ ಗವರ್ನಮೆಂಟಿಗೆ ಕೊಟ್ಟದ್ದು 1 ಲಕ್ಷ ರೂಪಾಯಿ, ಚಲಾವಣೆ ತಪ್ಪಿದ ಮತ್ತು ಕತ್ತರಿಸಲ್ಪಟ್ಟ ತಾಂಬ್ರದ ನಾಣ್ಯಗಳ ಬಾಬತು 70,053 ರೂಪಾಯಿ, ಈ ಮೊದಲಾದವುಗಳು 2 ಲಕ್ಷ ರೂಪಾಯಿಗಳವರಿಗೂ ಶೇರಿರುವದರಿಂದ ಸಾಧಾರಣವಾಗಿ ಸಾಲಿಯಾನಾ ಪಟ್ಟು ಖರ್ಚು 99½ ಲಕ್ಷ ರೂಪಾಯಿಗಳೆಂತ ಎಣಿಸ ಬಹುದು.

ಜೈಲ್, ಲಾ ಅಂಡ ಜಸ್ಟಿಸ್, ಈ ಬಾಬುಗಳಲ್ಲಿ ಖರ್ಚು ವಿಶೇಷ ಕಮ್ಮಿಯಾಗಿರುತ್ತೆ. ಸಿವಿಲ್ ಮತ್ತು ಸೆಷನ್ ಕೋರ್ಟುಗಳ ಶಿಬ್ಬಂದಿ ಖರ್ಚಿನಲ್ಲಿ ಯೂರೋಪಿಯನ್ ಜಡ್ಜೀರಿಗೆ ಬದಲಾಗಿ ಇಬ್ಬರು ನೇಟಿವ್ ಜಡ್ಜೀರನ್ನು ಮೊಕರರ ಮಾಡಿದ್ದರಿಂದ 28,587 ರೂಪಾಯಿಗಳೂ, 5 ಸಬ್ ಜಡ್ಜ್‌ಕೋರ್ಟುಗಳ ಮೌಕೂಫಿನಿಂದ 41,968 ರೂಪಾಯಿಗಳೂ, 4 ಮುನ್ಸಿಫ್ ಕೋರ್ಟುಗಳನ್ನು ಕಮ್ಮಿಮಾಡಿದ್ದರಿಂದ 13,487 ರೂಪಾಯಿಗಳೂ, ಈ ಮೇರೆ ಪಟ್ಟು 84,042 ರೂಪಾಯಿ ಕಮ್ಮಿಯಾಗಿರುತ್ತದೆ. ಜೈಲ್ ಬಾಬಿನಲ್ಲಿ, ಖೈದಿಗಳ ಆಹಾರ ಖರ್ಚಿನಲ್ಲಿ 12,424 ರೂಪಾಯಿ

ಗಳೂ, ಫ್ರೋರ್ಟು ಬ್ಲೈರ್‌ನಲ್ಲಿದ್ದ ಮೈಸೂರು ಶೀಮೆಯ ಕೈದಿಗಳಿಗಾಗಿ ಆಗುತ್ತಿದ್ದ ಖರ್ಚು 1,02,378 ರೂಪಾಯಿಗಳೂ ಕಮ್ಮಿಯಾಗಿರುತ್ತೆ. ಈ ಮೇರಿಗೆ ಲಾ ಅಂಡ್ ಜಸ್ಟಿಸ್ ಮತ್ತು ಜೈಲ್ ಬಾಬುಗಳಲ್ಲಿ ವಟ್ಟು ಸುಮಾರು 2 ಲಕ್ಷರೂಪಾಯಿಗಳ ವರಿವಿಗೂ ಕಮ್ಮಿಯಾಗಿರುತ್ತದೆ.

ಹೊಸದಾಗಿ ಏರ್ಪಡಿಸಿರುವ ಅಮೃತ ಮಹಲ್ ಇಲಾಖೆಯ ಖರ್ಚಿನಲ್ಲಿ, ದನಗಳ ಖರೀದಿಬಗ್ಗೆ ಮದ್ರಾಸ್ ಗವರ್ನಮೆಂಟಿಗೆ ಕೊಟ್ಟ 1 ಲಕ್ಷರೂಪಾಯಿಗಳನ್ನು ವಜಾಮಾಡಿದಲ್ಲಿ, ಆ ಇಲಾಖೆ ಹುಟ್ಟುವಳಿಯೂ ಖರ್ಚೂ ಸ್ವಲ್ಪ ಹೆಚ್ಚು ಕಡಮೆ ಸಮನಾಗಿದ್ದವು.

ಎಲ್ಲ ಇಲಾಖೆಗಳಲ್ಲಿಯೂ ಶಿಬ್ಬಂದಿ ಖರ್ಚನ್ನು ಕಮ್ಮಿಮಾಡತಕ್ಕ ಕೆಲಸವು ಪುರೈಸುತ್ತಾ ಬಂದಿಧೆ. ಹೋದ ವರುಷದಲ್ಲಿ ನಾವು ಹೇಳಿದ್ದ ಮೇರಿಗೆ ಮೂರುಜನ ಜಡ್ಜಿರುಳ್ಳ ಚೀಫ್ ಕೋರ್ಟನ್ನು ಏರ್ಪಾಡುಮಾಡಿಧೆ. ಈ ಕೋರ್ಟಿಗೋಸ್ಕರ ತಗಲಿದ ಹೆಚ್ಚು ಖರ್ಚು ಬೆಂಗಳೂರಲ್ಲಿದ್ದ ಡಿಸ್ಟ್ರಿಕ್ಟ ಕೋರ್ಟು ಮತ್ತು ಮೈಸೂರು, ಚಿಕ್ಕಮಗಳೂರು ಈ ಸ್ಥಳಗಳಲ್ಲಿದ್ದ ಸಬ್ ಜಡ್ಜಿ ಕೋರ್ಟುಗಳ ಮೌಕೂಫಿನಿಂದ ವಿಲೆ ಮಾಡಲ್ಪಟ್ಟಿಧೆ.

ಗ್ರಾಮ ನೌಕರರುಗಳಿಗೆ ಹಾಲೀ ಖಜಾನೆಯಿಂದ ನಗದು ಸಾವತಿಯಾಗತಕ್ಕ ಸಂಬಳಕ್ಕೆ ಬದಲಾಗಿ ನೌಕರಿ ಇನಾಂ ಜಮೀನುಗಳನ್ನು ಕೊಡತಕ್ಕ ಅಂಶದಲ್ಲಿ ಅಭಿಪ್ರಾಯಗಳು ಏಕರೀತಿಯಾಗಿ ಇಲ್ಲದಿರೋಣದರಿಂದ ಈ ವಿಷಯವು ಇನ್ನೂ ಚರ್ಚೆಯಲ್ಲಿಯೇಯಿಧೆ. ಇದು ಬಹಳ ಮುಖ್ಯವಿಷಯ. ಈ ವಿಷಯದಲ್ಲಿ ತಮ್ಮಗಳ ಅಭಿಪ್ರಾಯವನ್ನು ತಿಳಿಯಲು ಗವರ್ನಮೆಂಟಿನವರು ಅಪೇಕ್ಷಿಸುತ್ತಾರೆ.

ಮೇಲೆಕಂಡ ಮೇರೆ ವಿಶೇಷವಾದ ಬಾಬುಗಳು ಅಂದರೆ, ಹಿಂದಲ ವರುಷಗಳ ಜಮೀನುಬಾಬಿನ ಬಾಕೀಗೋಸ್ಕರ ಮಾಮೂಲಿಗಿಂತ ಜಾಸ್ತಿ ವಸೂಲಾದ 1½ ಲಕ್ಷ ರೂಪಾಯಿಗಳನ್ನೂ ಚಲಾವಣೆ ತಪ್ಪಿದ ತಾಂಬ್ರದ ನಾಣ್ಯಗಳ ಪುರೋಖ್ತು ಬಾಬತು ¼ ಲಕ್ಷ ರೂಪಾಯಿಗಳನ್ನೂ ಮತ್ತು ಈರೀತಿಯಾದ ಇತರ ವಿಶೇಷ ಬಾಬುಗಳನ್ನೂ ವಿನಾಯಿಸಿದಲ್ಲಿ, ಗತಸಾಲಿನ ಮಾಮೂಲ್ ಹುಟ್ಟುವಳಿಯು ಸುಮಾರು 104½ ಲಕ್ಷ ರೂಪಾಯಿಗಳಾಗಿಯೂ, ಖರ್ಚು 99½ ಲಕ್ಷ ರೂಪಾಯಿಗಳಾಗಿಯೂ ಇತ್ತು. ಮುಂದೆ ಕೆಲವು ವರುಷಗಳವರಿಗೂ ಖರ್ಚು ಮೇಲ್ಕಂಡ ಮೇರೆ 99½ ಲಕ್ಷ ರೂಪಾಯಿಗಳಾಗಿಯೇ ಪ್ರಾಯಶಃ ಇರಬಹುದು. ಆದರೆ ಹುಟ್ಟುವಳಿಯು 104½ ಲಕ್ಷ ರೂಪಾಯಿಗಳಾಗಿಯೇ ಇರಬೇಕಾದಲ್ಲಿ, ಗತಸಾಲಿನಲ್ಲಿ ಸಂಭವಿಸಿದ ಜಮೀನುಬಾಬಿನ ಜಾಸ್ತಿ ಹುಟ್ಟುವಳಿಯು ಶಾಶ್ವತವಾಗಿರಬೇಕಲ್ಲದೆ ಸಂದಲ್ ಬಾಬಿನ ಹುಟ್ಟುವಳಿಯು 4½ ಲಕ್ಷ ರೂಪಾಯಿಗಿಂತ ಕಮ್ಮಿಯಾಗದೆ ಇರಬೇಕು.

ಮೇಲೆಕಂಡ ಜಮಾಖರ್ಚು ಮೊಬಲಗುಗಳಲ್ಲಿ ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ ಬಾಬತು ಜಮಾ ಖರ್ಚು ಶೇರಿರುತ್ತೆ. ಸದರೀ ಸ್ಟೇಷನ್ ಹುಟ್ಟುವಳಿಯು 3,32,325 ರೂಪಾಯಿ; ಖರ್ಚು 1,67,791 ರೂಪಾಯಿ; ನಿವಳ ಶಿಲ್ಕು 1,64,534 ರೂಪಾಯಿ. ಸದರೀ ಸ್ಟೇಷನಿನ ರೆವಿನ್ಯು ಆಡಳಿತವು 1884ನೇ ಇಸವಿ ಏಪ್ರಿಲ್ ಗುರ್ರೇ ತಾರೀಖಿನಲ್ಲಿ ಇಂಡಿಯಾ ಗವರ್ನಮೆಂಟಿನವರ ಹುಕುಂ ಪ್ರಕಾರ ಬ್ರಿಟಿಷ್ ರೆಸಿಡೆಂಟರವರಿಗೆ ವರ್ಗಮಾಡಲ್ಪಟ್ಟಿತು. ಆ ಸ್ಟೇಷನಿನ 1881—82, 1882–83ನೇ ಇಸವಿಗಳ ಬಾಬತು ಸರ್ಪ್ಲಸ್ ಮೊಬಲಗನ್ನು ಮೈಸೂರು ಗವರ್ನಮೆಂಟಿನವರು ಇಟ್ಟುಕೊಂಡಿರುವಹಾಗೆ ಇಂಡ್ಯಾಗವರ್ನಮೆಂಟಿನವರು ತೀರ್ಮಾನಿಸಿರುತ್ತಾರೆ. 1883–84ನೇ ಇಸವಿ ಬಾಬತು ಮತ್ತು ಮುಂದಿನ ವರುಷಗಳ ಸರ್ಪ್ಲಸ್ ಮೊಬಲಗಿನ ವಿಲೇವಾರಿ ವಿಷಯವು ಘನವನ್ನು ಹೊಂದಿದ ವೈಸರಾಯಿ ಮತ್ತು ಗವರ್ನರ್ ಜನರಲ್‌ರವರ ಆಲೋಚನೆಯಲ್ಲಿ ಅದ್ಯಾಪಿ ಯಿರುತ್ತದೆ.

ಸ್ಟೇಟ್ ರೈಲ್ವೆ ಇಲಾಖೆಯಲ್ಲಿ, ಬೆಂಗಳೂರು ಲಾಗಾಯಿತು ಮೈಸೂರುವರಿಗಿನ 87 ಮೈಲಿ ಫಾಸಲೆಯುಳ್ಳ ಲೈನಿನಲ್ಲಿ 3,11,429 ರೂಪಾಯಿಗಳ ಹುಟ್ಟುವಳಿಯು, 1,90,625 ರೂಪಾಯಿಗಳ ಖರ್ಚಾಗಿರುತ್ತದೆ. ಖರ್ಚುಜಾತ ನಿವಳ ಹುಟ್ಟುವಳಿಯು 1,20,804 ರೂಪಾಯಿಗಳು; ಅಂದರೆ ಸದರಿ ಲೈನ್ ತಯಾರೀಗೋಸ್ಕರ ಖರ್ಚಾಗಿರುವ 44 ಲಕ್ಷ ರೂಪಾಯಿಗಳ ಮೇಲೆ ಸಾಲ್ 1ಕ್ಕೆ ಸೇಕಡಾ ಸುಮಾರು 2¾ ರೂಪಾಯಿನ ಮೇರಿಗೆ ಬಡ್ಡಿ ಯಾಗುತ್ತದೆ.

ಹೋದ ಸಂವತ್ಸರದಲ್ಲಿ ಸ್ಟೇಟ್ ರೈಲ್ವೆ ತಯಾರಿಗೋಸ್ಕರ ಕೆಳಗೆ ವಿವರಿಸಿರುವ ಮೇರೆ 7,55,464 ರೂಪಾಯಿಗಳು ಖರ್ಚಾಗಿರುತ್ತೆ:—

		ರೂ.
ಬೆಂಗಳೂರು—ಮೈಸೂರು ಲೈನ್‌ಬಗ್ಯೆ	.. ..	91,443
ಬೆಂಗಳೂರು—ತುಮಕೂರು ಲೈನ್‌ಬಗ್ಯೆ	.. ..	6,64,021
ಜುಮ್ಲಾ	.. ..	7,55,464

ಇದಲ್ಲದೆ ಸಾಲ್‌ಮಜಕೂರಿನಲ್ಲಿ ತುಮಕೂರು ಲೈನನ್ನು ಆಮದ್ ರಫ್ತ್‌ಗೋಸ್ಕರ ಪೂರ್ತಿಮಾಡಲು ಸುಮಾರು 1¼ಲಕ್ಷ ರೂಪಾಯಿಗಳು ಖರ್ಚಾಗಿರುತ್ತೆ. ಈ ಲೈನ್ ತಯಾರಿಗೋಸ್ಕರ ತಹಲ್‌ವರಿಗೆ 16,46,955 ರೂಪಾಯಿಗಳು ಖರ್ಚಾಗಿರುತ್ತವೆ. ಈ ಲೈನಿನಲ್ಲಿ ಆಮದ್ ರಫ್ತ್ ಪ್ರಾರಂಭಿಸಿದ 1884ನೇ ಇಸವಿ ಆಗಸ್ಟು 11ನೇ ತಾರೀಖು ಲಾಗಾಯಿತು ವಾರ ಒಂದಕ್ಕೆ ಸರಾಸರಿ 1,000 ರೂಪಾಯಿಗಳಗಿಂತ ಜಾಸ್ತಿ ನಿವಳ ಹುಟ್ಟುವಳಿಯಾಗಿ ತಯಾರೀ ಖರ್ಚಿನ ಮೇಲೆ ಸಾಲ್ 1ಕ್ಕೆ ಸೇಕಡಾ 3¼ ರೂಪಾಯಿ ಮೇರೆ ಬಡ್ಡಿ ಹುಟ್ಟುತ್ತಲಿರುವದರಿಂದ ಈ ಲೈನ್ ಬಹಳ ಫಾಯಿದೆಕರವಾಗಿರುವದೆಂದು ಹೇಳಬಹುದು. ಈ ಲೈನನ್ನು ದಕ್ಷಿಣ ಮಹಾರಾಷ್ಟ್ರದ ರೈಲ್ವೆಗೆ ಶೇರಿಸುವದಕ್ಕೋಸ್ಕರ ಹರಿಹರದವರಿವಿಗೆ ಸಾಧ್ಯವಾದಮಟ್ಟಿಗೆ ಜಾಗ್ರತೆಯಾಗಿ ತೆಗದುಕೊಂಡು ಹೋಗಬೇಕೆಂದು ಗವರ್ನ್‌ಮೆಂಟಿನವರು ಕುತೂಹಲವುಳ್ಳವರಾಗಿಧಾರೆ. ಜಾಸ್ತಿಯಾಗಿ ಹಾಜರೀಲಿದ್ದ ಅಜಬಾಬುಗಳನ್ನು ಉಪಯೋಗಿಸಿಕೊಂಡು 1¼ ಲಕ್ಷ ರೂಪಾಯಿ ನಗದು ಖರ್ಚುಮಾಡಿ ಸಾಲ್ ಮಜ್ಕೂರಿನಲ್ಲಿ ತುಮಕೂರಿಂದ 11 ಮೈಲಿ ಫಾಸಲೆಯುಳ್ಳ ವ್ಯಾಪಾರಕ್ಕೆ ಮಧ್ಯಸ್ಥಾನಾದ ಗುಬ್ಬಿವರಿವಿಗೆ ಲೈನ್ ಪೂರೈಸಲ್ಪಟ್ಟಿಧೆ. ಒಂದು ವರುಷದ ದುರಸ್ತೀಲಾಗವಡೂ ಶೇರಿ ತುಮಕೂರು ಲಾಗಾಯಿತು ಗುಬ್ಬಿವರಿಗಿನ ಲೈನ್ ಗೋಸ್ಕರ ವಟ್ಟು 2,94,924 ರೂಪಾಯಿಗಳು ಖರ್ಚಾಗಿರುತ್ತೆ.

ಈ ರೀತಿಯಾಗಿ 54 ಮೈಲಿ ಫಾಸಲೆಯುಳ್ಳ ಬೆಂಗಳೂರು ಲಾಗಾಯಿತು ಗುಬ್ಬಿವರಿಗಿನ ಲೈನ್‌ಗೋಸ್ಕರ ಮೈಲಿ 1ಕ್ಕೆ ಸರಾಸರಿ 36,000 ರೂಪಾಯಿ ಪ್ರಕಾರ ವಟ್ಟು 19,41,879 ರೂಪಾಯಿಗಳು ಖರ್ಚಾಗಿರುತ್ತೆ. ಸ್ವಲ್ಪ ಹೆಚ್ಚು ಕಡಮೆ ರೈಲ್ವೇ ಸಾಲದಲ್ಲಿ ಹುಟ್ಟಿದ 19,56,064 ರೂಪಾಯಿಗಳೂ ಈ ಲೈನ್ ಬಗ್ಯೆ ಖರ್ಚಾದಹಾಗೆ ಆಯಿತು.

ಸರಾಸರಿ ಮೈಲಿ 1ಕ್ಕೆ ಸ್ವಲ್ಪ ಹೆಚ್ಚು ಕಡಮೆ 45,000 ರೂಪಾಯಿ ಪ್ರಕಾರ 63½ ಲಕ್ಷ ರೂಪಾಯಿ ಲಾಗವಡಿನಿಂದ ಮೈಸೂರು ಲಾಗಾಯಿತು ಗುಬ್ಬೀವರಿವಿಗೆ ವಟ್ಟು 141 ಮೈಲಿ ರೈಲ್ವೆ ಲೈನ್ ತಯಾರಾಗಿರುತ್ತೆ. ಇಂಡಿಯಾ ದೇಶದಲ್ಲಿ ಈ ರೈಲ್ವೇಯಂತೆಯೇ ಇರತಕ್ಕ ಇತರ 7 ಮಿಾಟರ್ ಗೇಜ್ ಲೈನ್‌ಗಳ ತಯಾರೀ ಬಗ್ಯೆ ಮುಟ್ಟಿರುವ ಸರಾಸರಿ ಲಾಗವಡಿಗಿಂತ ಮೈಸೂರು ಶೀಮೆಯಲ್ಲಿ ತಗಲಿದ ಲಾಗವಡು ಮೈಲಿ 1ಕ್ಕೆ 25,000 ರೂಪಾಯಿಗಳು ಕಮ್ಮಿಯಾಗಿರುವದರಿಂದ ಈ ರೈಲ್ವೇ ತಯಾರಿಯು ಬಹಳ ತೃಪ್ತಿಕರವಾಗಿಧೆ.

ಷುರು ತಯಾರಿಯಲ್ಲಿ ಹೆಚ್ಚು ಖರ್ಚಿಗೆ ಅಸ್ಪದ ಕೊಡದದ್ದೆ ಇರೋಣದರಿಂದ ವಿಶೇಷ ಫಾಯಿದೆ ಬರುವದಕ್ಕೆ ಅವಕಾಶವಾಗಬಹುದೆಂತ ನಂಬಿಧೇವೆ, ಈ ಸಾಲ್ ಆಖೈರಾಗುವದರ ವಳಗಾಗಿ ಈ ರೈಲ್ವೇಯಲ್ಲಿ, ತಯಾರೀ ಖರ್ಚಿನ ಮೇಲೆ ಈಗ ಬರುತ್ತಲಿರುವ ಸಾಲ್ 1ಕ್ಕೆ ಸೇಕಡಾ 2⅓ ರೂಪಾಯಿಗೆ ಬದಲಾಗಿ 3 ರೂಪಾಯಿನವರಿಗೂ ಬಡ್ಡಿ ಹುಟ್ಟಬಹುದೆಂದು ತೋರುತ್ತೆ.

ಈ ಲೈನನ್ನು ಕೂಡ್ಲೆಯೇ ಗುಬ್ಬಿಯಿಂದ 33 ಮೈಲಿ ಫಾಸಲೆಯುಳ್ಳ ತಿಪಟೂರುವರಿವಿಗೆ ತೆಗದುಕೊಂಡು ಹೋಗಬೇಕೆಂದು ಯೋಚನೆಯಲ್ಲಿಧೆ. ಇದಕ್ಕೋಸ್ಕರ ಸಾಲ ಮಜಕೂರಿನಲ್ಲಿ 8½ ಲಕ್ಷ ರೂಪಾಯಿಗಳನ್ನು ಕೊಡಲು ಗವರ್ನ್‌ಮೆಂಟಿನವರಿಗೆ ಸಾಧ್ಯವಾಗಬಹುದು. ಈ ಲೈನ್ ಪೂರ್ತಿ ಮಾಡುವದಕ್ಕೆ ಮುಂದಿನವರುಷದಲ್ಲಿ ಇನ್ನೂ ಸುಮಾರು 6 ಲಕ್ಷ ರೂಪಾಯಿಗಳು ಪ್ರಾಯಶಃ ಬೇಕಾಗುತ್ತದೆ. ತಿಪಟೂರು ಲಾಗಾಯಿತು ಹರಿಹರದವರಿಗಿನ 125 ಮೈಲಿಗಳ ಲೈನ್ ಸರ್ವೇ ಆಗಿರುತ್ತೆ. ಈ ಲೈನ್ ತಯಾರಿಬಗ್ಯೆ ಷುಮಾರು 60ಲಕ್ಷ ರೂಪಾಯಿಗಳು ಬೇಕಾಗುವದು. ಈ ಮೊಬಲಗನ್ನು ಚಾಲತಿ ಹುಟ್ಟುವಳಿಯಿಂದ ಕೊಡುವದು ಅಸಾಧ್ಯವಾಗಿರುತ್ತೆ. ಇದುವರಿವಿಗೆ ತಯಾರಾಗಿರುವ

141 ಮೈಲುಗಳ ರೈಲ್ವೆಗೆ ಸಾಲ ಮಂಜೂರಿನಲ್ಲಿ ತಿಪಟೂರುವರಿಗೆ 33 ಮೈಲು ಶೇರಿಸಬೇಕೆಂದು ಯೋಚನೆಯಲ್ಲಿದೆ. ಇದು ಪೂರೈಸಿದ ಮೇಲೆ ಒಟ್ಟು ಚಾಲತಿ ಹುಟ್ಟುವಳಿ ಮತ್ತು ಜುಜವಿ 20 ಲಕ್ಷ ರೂಪಾಯಿ ಸಾಲ ಇವುಗಳಿಂದಲೇ ಒಟ್ಟು 174 ಮೈಲಿ ರೈಲ್ವೆಯು ತಯಾರಾದಹಾಗೆ ಆಗುವದು. ಈ 174 ಮೈಲಿ ರೈಲ್ವೆಯು 80 ಲಕ್ಷ ರೂಪಾಯಿಗಳಿಗಿಂತ ಜಾಸ್ತಿ ಮೌಲ್ಯವುಳ್ಳ ಅತ್ಯಂತ ಪ್ರಯೋಜನಕರವಾದ ಸರಕಾರದ ಆಸ್ತಿಯಾಗಿರುವದು.

ಆದರೆ ವಿಶೇಷ ಪ್ರಯೋಜನಕರವಾದ ಈ ಕೆಲಸವನ್ನು ಪೂರೈಸುವದಕ್ಕಾಗಿ ನಮ್ಮ ಶೀಮೆಯ ಹುಟ್ಟುವಳಿಗೆ ಆಧಾರಭೂತವಾದ ಎಲ್ಲ ಬಾಬುಗಳ ಆದಾಯಗಳನ್ನೂ ಉಪಯೋಗಪಡಿಸಿದ್ದಾಯಿತು. ಮೇಲೆಕಂಡ ಮೇಲೆ ಹರಿಹರದವರಿಗೆ ಲೈನ ಪೂರ್ತಿ ಮಾಡುವದಕ್ಕೆ ಬೇಕಾಗುವ ಹಣವನ್ನು ಹೊರಗಿನಿಂದ ವದಗಿಸಿಕೊಳ್ಳಬೇಕೇ ಶಿವಾಯಿ ಅನ್ಯಥಾ ಇಲ್ಲ. ಈ ರೀತಿಯಾಗಿ ಹಣವನ್ನು ವದಗಿಸುವ ವಿಷಯದಲ್ಲಿ ಗವರ್ನಮೆಂಟಿನವರು ಬಹಳವಾಗಿ ಪ್ರಯತ್ನಮಾಡುತ್ತಲಿದ್ದಾರೆಂದು ನಾವು ತಮಗಳಿಗೆ ತಿಳಿಸತಕ್ಕದ್ದು ಅನವಶ್ಯಕವಾಗಿದೆ. ಈ ರೈಲ್ವೆ ಲೈನ ಪೂರೈಸೋಣದರಿಂದ ಕ್ಷಾಮಕಾಲಕ್ಕೆ ಬಹಳ ಅನುಕೂಲವೆಂಬ ಮುಖ್ಯವಾದ ಅಂಶವನ್ನು ಸರಕಾರದವರು ಚನ್ನಾಗಿ ತಿಳಿದು ಇರುತ್ತಾರೆ; ಮತ್ತು ಈ ಸಂವತ್ಸರದಲ್ಲಿ ಇದುವರಿಗೆ ಮಳೆ ಸರಿಯಾಗಿ ನಡಿಸದೆ ಇರುವದರಿಂದ ಈ ಲೈನನ್ನು ಸಾಧ್ಯವಾದ ಮಟ್ಟಿಗೂ ಜಾಗ್ರತೆಯಾಗಿ ಪೂರೈಸಬೇಕಾದ್ದು ಅವಶ್ಯಕವೆಂದು ತೋರುತ್ತೆ.

ಈ ಸಂಧರ್ಭದಲ್ಲಿ ಸಾಲ ಮಂಜೂರಿನಲ್ಲಿ ಮಳೆಯು ಹಿಂತೆಗೆದಿರತಕ್ಕ ಅಂಶವನ್ನು ಕುರಿತು ಯೋಚಿಸತಕ್ಕದ್ದಾಗಿದೆ. ಸಾಲ ಮಂಜೂರಿನಲ್ಲಿ ಚಿತ್ರದುರ್ಗ, ತುಮಕೂರು, ಬೆಂಗಳೂರು, ಕೋಲಾರ ಮತ್ತು ಮೈಸೂರು, ಈ ಡಿಸ್ಟ್ರಿಕ್ಟುಗಳಲ್ಲಿ ಪ್ರಾಯಶಃ ಇದುವರಿಗೆ ಮಳೆಯು ಸರಿಯಾಗಿ ನಡಿಸಲಿಲ್ಲ. ಮೈಸೂರು ಡಿಸ್ಟ್ರಿಕ್ಟಿನಲ್ಲಿ ಕೆಲವು ತಾಲ್ಲೂಕುಗಳು ಶಿವಾಯಿ, ಬಾಕಿ ಎಲ್ಲ ತಾಲ್ಲೂಕುಗಳಲ್ಲೂ ಕಾಗು ಬೆಳೆಯು ಬಹುಶಃ ನಷ್ಟವಾಯಿತು. ಮೇಲ್ಕಂಡ ಪ್ರದೇಶಗಳಲ್ಲೆಲ್ಲಾ ಮುಖ್ಯ ಫಸಲಾದ ಹೈನು ಬೆಳೆಯೂ ಬಹಳ ಸಂಶಯವಾದ ಸ್ಥಿತಿಯಲ್ಲಿರುತ್ತೆ, ಅಲ್ಲದೆ ದನಗಳಿಗೆ ಮೇವು ಇಲ್ಲದೆ ಬಹಳ ಪ್ರಯಾಸವಾಗಿದೆ, ಮತ್ತು ಧಾರಣಿವಾಶಿಗಳೂ ಹೆಚ್ಚುತ್ತಲಿವೆ. ಈ ಸ್ಥಿತಿಯಲ್ಲಿ ಕ್ಷಿಪ್ರದಲ್ಲಿಯೇ ಮಳೆ ಆದರೆ ವಿಶೇಷ ಶ್ರಮವಿಲ್ಲದೆ ಶೀಮೆಯು ಪೂರ್ವದ ಸ್ಥಿತಿಗೆ ಬರಬಹುದು; ಇಲ್ಲದೆ ಕಾಲಸ್ಥಿತಿಯು ದುರದೃಷ್ಟ ದೆಶೆಯಿಂದ ಈಗಿರುವಂತೆಯೇ ಇದ್ದಲ್ಲಿ, ಸ್ವಲ್ಪದರಲ್ಲಿಯೇ ಶೀಮೆಯಲ್ಲೆಲ್ಲಾ ದುರ್ಭಿಕ್ಷವು ಪ್ರಾಪ್ತವಾಗಬಹುದೆಂದು ತೋರುತ್ತೆ. ಒಂದು ವೇಳೆ ಕ್ಷಾಮ ಪ್ರಾಪ್ತವಾದಲ್ಲಿ ಅದನ್ನು ನಿವಾರಣೆ ಮಾಡುವ ವಿಷಯದಲ್ಲಿ ಸರಕಾರದವರಿಗೆ 8 ವರ್ಷಗಳ ಹಿಂದೆ ಇದ್ದ ಉಪಪತ್ತಿಗಳಿಗಿಂತಲೂ ಈಗ ಇರತಕ್ಕದ್ದು ಹೆಚ್ಚೋ ಕಮ್ಮಿಯೋ ಎಂಬ ಅಂಶ ವಿಚಾರ ಮಾಡತಕ್ಕದ್ದಾಗಿದೆ.

ತರೀ ಸಾಗುವಳಿ ಆಗುವದಕ್ಕೆ ನೀರಿನ ಅನುಕೂಲತೆ ಮಾಡಿ ಕೊಟ್ಟಲ್ಲಿ ಕ್ಷಾಮಪ್ರಾಪ್ತವಾಗುವದಕ್ಕೆ ಅವಕಾಶ ತಪ್ಪುವದು. ಆದರೆ ಮೈಸೂರು ಶೀಮೆಯು ಇರತಕ್ಕ ಸ್ಥಿತಿಯಲ್ಲಿ ಈಗ ಹೊಸದಾಗಿ ಜಲಾಧಾರಗಳನ್ನು ಕಲ್ಪಿಸುವದಕ್ಕೆ ವಿಶೇಷ ಅವಕಾಶವಿಲ್ಲ. ಒಟ್ಟು ಸಾಗುವಳಿ ವಿಸ್ತೀರ್ಣದ ಪೈಕಿ ತರೀ ಸಾಗುವಳಿಯು ಶೇಕಡಾ 15ರ ಮಟ್ಟಿಗೆ ಇರುತ್ತೆ. ಯಾವಾಗಲೂ ನೀರು ಹರಿಯತಕ್ಕ ನದಿಗಳಿಂದ ಹೊರಟಿರುವ ನಾಲೆಗಳದೆಶೆಯಿಂದ ಸಾಗುವಳಿ ಆಗತಕ್ಕ ಸ್ವಲ್ಪ ಪ್ರದೇಶ ಹೊರ್ತು, ಇತರ ಪ್ರದೇಶಗಳಲ್ಲಿ ಆಗತಕ್ಕ ತರೀ ಸಾಗುವಳಿಗೆ ಮಳೇನೀರಿನಿಂದ ಭರ್ತಿಯಾಗತಕ್ಕ ಅನೇಕ ಕೆರೆಗಳೇ ಆಧಾರವಾಗಿರುವವು. ಈತರಹಾದ ಕೆರೆಗಳು ಚಿಕ್ಕದು ದೊಡ್ಡದು ಸಹ 38 ಸಾವಿರವಿದೆ. ನಮ್ಮ ಪೂರ್ವೀಕರು ಕೆರೆ ಕಟ್ಟುವದಕ್ಕೆ ಅನುಕೂಲವಾದ ಯಾವ ಸ್ಥಳವನ್ನೂ ಉಪಯೋಗಿಸದೆ ಬಿಟ್ಟಿರುವದಿಲ್ಲವಾದ್ದರಿಂದ ಈಗ ಹೊಸದಾಗಿ ಕೆರೆಯನ್ನು ಕಟ್ಟುವದಕ್ಕೆ ಪ್ರಶಸ್ತವಾದ ಸ್ಥಳವು ಸಿಕ್ಕುವದು ಪ್ರಯಾಸವಾಗಿದೆ. ಆದಕಾರಣ ಈಗ ಇರತಕ್ಕ ಹಳೇಕೆರೆಗಳನ್ನು ದುರಸು ಮಾಡಿಕೊಂಡು ಸರಿಯಾದ ಸ್ಥಿತಿಯಲ್ಲಿ ಇಟ್ಟುಕೊಳ್ಳುವದೇ ಸರಕಾರಕ್ಕೆ ಮುಖ್ಯ ಕೆಲಸವಾಗಿದೆ. ಇವುಗಳ ಪೈಕಿ ಬಹಳ ಕೆರೆಗಳು ಕೇವಲ ಹೀನಸ್ಥಿತಿಯಲ್ಲಿ ಇವೆ ಎಂಬ ಅಂಶವು ಎಲ್ಲರಿಗೂ ತಿಳಿದೇ ಇರಬಹುದು. ತರೀ ಸಾಗುವಳಿಗೆ ಮುಖ್ಯಾಧಾರವಾದ ಈ ಕೆರೆಗಳ ದುರಸ್ತೀ ವಿಷಯದಲ್ಲಿ ಸರಕಾರದವರೂ ರೈತರೂ ಸಹ ಬಾಧ್ಯಪಟ್ಟವರು ಎಂಬ ಮುಖ್ಯವಾದ ಅಂಶವನ್ನು ತಿಳಿದುಕೊಂಡು ಆಚರಣೆಗೆ ತರದೆ ಇದ್ದದ್ದರಿಂದ ಇದುವರಿಗೆ ಕೆರೆಗಳ ಆಡಳಿತವು ಸರಿಯಾಗಿ ನಡೆಯಲಿಲ್ಲ. ಕೆಲವು ಕಾಲ ಕೆರೆಗಳನ್ನು

ದುರಸ್ತಿನಲ್ಲಿ ಇಟ್ಟುಕೊಂಡಿರತಕ್ಕ ಜವಾಬುದಾರಿಯು ಸಂಪೂರ್ಣವಾಗಿ ಸರಕಾರಕ್ಕೆ ಸೇರಿದ್ದೆಂದು ಭಾವಿಸಿ ರೈತರ ಜವಾಬುದಾರಿಯನ್ನು ಶುದ್ಧಾಂಗವಾಗಿ ತಪ್ಪಿಸಿಯಿತ್ತು. ಈರೀತಿಯಾಗಿ ಆಚರಿಸಿದ್ದರಲ್ಲಿ ತಗಲಿದ ಖರ್ಚಿಗೆ ಸರಿಯಾದ ಫಾಯಿದೆ ಇಲ್ಲದೆ ವಿಶೇಷ ಖರ್ಚುಳ್ಳ ಸರಕಾರ ಶಿಬ್ಬಂದಿಮೂಲಕ ಎಲ್ಲ ಕೆರೆಗಳನ್ನೂ ದುರಸ್ತು ಮಾಡಲು ಅಸಾಧ್ಯವೆಂದು ತೋರಿದಅನಂತರ ಸರಕಾರದವರು ರೈತರಿಗೆ ಜವಾಬುದಾರಿ ವಹಿಸಿದರು. ಆದರೆ ಆ ಕಾಲದಲ್ಲಿ ರೈತರು ಒಟ್ಟಾಗಿ ಸೇರಿ ತಮಗಳಿಗೆ ಉಪಯೋಗವಾದ ಕೆಲಸಗಳನ್ನು ನಡಿಸತಕ್ಕ ಪರಂಪರೆಯಾಗಿ ಬಂದ ಪದ್ಧತಿಯು ತಪ್ಪಿಹೋಗಿತ್ತು. ಇದಲ್ಲದೆ ರೈತರು ಮಾಡಬೇಕಾದ ಕಾಮಗಾರಿಗಳನ್ನು ಅವರಿಂದ ಕ್ರಮವಾಗಿ ಸಿವಿಲ್ ಆಫೀಸರುಗಳು ಮಾಡಿಸತಕ್ಕ ಪದ್ಧತಿಯೂ ತಪ್ಪಿಹೋಗಿತ್ತು. ಮತ್ತು ರೈತರು ನಡಿಸತಕ್ಕ ಕಾಮಗಾರಿಗಳಿಗೋಸ್ಕರ ಕೊಡಲ್ಪಟ್ಟಿದ್ದ ಅನೇಕ ಇನಾಂಗಳು ಮತ್ತು ರಿಯಾಯತಿಗಳು ತಪ್ಪಿಸಲ್ಪಟ್ಟು ಎಲ್ಲ ವಿಧವಾದ ಕಾಮಗಾರಿಗಳೂ ಸರಕಾರದಿಂದಲೇ ನಡಿಸಲ್ಪಡುತ್ತೆಂಬ ಷರತ್ತಿನಮೇಲೆ ಪ್ರತ್ಯೇಕ ತೆರಿಗೆಗಳನ್ನು ಹಾಕಿದ್ದಾಯಿತು. ಈ ರೀತಿಯಾಗಿ ಕೆರೆಗಳ ದುರಸ್ತೀವಿಷಯದಲ್ಲಿ ಬಾಧ್ಯಪಟ್ಟಿರುವ ಸರಕಾರದವರು ಮತ್ತು ರೈತರು ಇವರ ಪೈಕಿ ಒಂದು ಕಾಲದಲ್ಲಿ ಪೂರಾ ಜವಾಬ್‌ದಾರಿ ಸರಕಾರದ್ದವರದೇ ಎಂದೂ, ಮತ್ತೊಂದು ವೇಳೆ ರೈತರದೇ ಸರ್ವ ಜವಾಬ್‌ದಾರಿ ಎಂದೂ, ಭಾವಿಸಿದ್ದರಿಂದ ದೇಶಕ್ಕೆ ಮುಖ್ಯಾಧಾರಗಳಾದ ಕೆರೆಗಳು ಹೀನ ಸ್ಥಿತಿಗೆ ಬರುವದಕ್ಕೆ ಕಾರಣವಾಯಿತು.

ಶೀಮೆಯಲ್ಲಿರತಕ್ಕ ಎಲ್ಲ ಕೆರೆಗಳನ್ನೂ ಸರಕಾರದ ಖರ್ಚಿನಿಂದ ದುರಸ್ತುಮಾಡಿಸಿ ಸರಿಯಾದ ಸ್ಥಿತಿಯಲ್ಲಿಟ್ಟುಕೊಂಡಿರುವದಕ್ಕೆ ಸರಕಾರದವರಿಂದ ಸಾಧ್ಯವಲ್ಲ ; ಇದರಿಂದ ಪರ್ಯವಸಾನದಲ್ಲಿ ಸರಕಾರದ ಹುಟ್ಟುವಳಿಗೆ ವಿಶೇಷ ಫಾಯಿದೆಯೂ ಆಗಲಾರದು. ಶಿವಾಯಿ ಗ್ರಾಮಗಳಲ್ಲಿ ರೈತರು ಐಕಮತ್ಯದಿಂದ ಕಾರ್ಯಗಳನ್ನು ನಿರ್ವಹಿಸತಕ್ಕಪದ್ಧತಿಯೇ ಮಲಿನವಾಗಿರುವದರಿಂದಲೂ ಕೆರೆಗಳ ಕಾಮಗಾರಿಗೋಸ್ಕರವಾಗಿಯೇ ಪ್ರತ್ಯೇಕ ತೆರಿಗೆಗಳನ್ನು ಹಾಕಿರುವದರ ಮೂಲಕ ರೈತರ ಜವಾಬ್‌ದಾರಿಯನ್ನೇ ತಪ್ಪಿಸಿ ಬಿಟ್ಟಿರುವದರಿಂದಲೂ, ಕೆರೆಗಳ ದುರಸ್ತೀವಿಷಯದ ಜವಾಬ್‌ದಾರಿಯನ್ನು ಸಂಪೂರ್ಣವಾಗಿ ರೈತರ ಮೇಲೆಯೇ ಹಾಕುವದು ನ್ಯಾಯವಾಗಿ ತೋರುವದಿಲ್ಲ. ಈ ಅಂಶಗಳು ಕೆರೆಗಳ ದುರಸ್ತೀ ವಿಷಯದಲ್ಲಿ ಮಾಡುವ ಹೊಸ ಏರ್ಪಾಡಿನಲ್ಲಿ ಮುಖ್ಯವಾಗಿ ಆಲೋಚಿಸತಕ್ಕವುಗಳಾಗಿವೆ.

ಇತ್ಯಾದಿ ಕಾರಣಗಳಿಂದ ಪಬ್ಲಿಕ್ ವರ್ಕ್ಸ್ ಯಾನೆ ಮರಹಮ್ಮತ್ ಇಲಾಖೆಯ ಮೂಲಕ ಸರಕಾರದವರು ಸ್ವಂತವಾದ ಆಡಳಿತದಲ್ಲಿ ಇಟ್ಟುಕೊಳ್ಳಬೇಕಾದ ಕೆರೆಗಳು ಫಲಾನಾವುಗಳೆಂದೂನೂ ಮುಲ್ಕಿ ಇಲಾಖೆ ಉದ್ಯೋಗಸ್ಥರ ಮೇಲ್ವಿಚಾರಣೆಗೆ ಒಳಪಟ್ಟು ರೈತರು ದುರಸ್ತಿನಲ್ಲಿ ಇಟ್ಟುಕೊಳ್ಳಬೇಕಾದ ಕೆರೆಗಳು ಫಲಾನಾವುಗಳೆಂದೂನೂ ವಿಂಗಡಿಸುವದು ಉತ್ತಮವೆಂದು ಯೋಚಿಸಿದೆ. ಬಹುಕಾಲದಿಂದ ಅಭ್ಯಾಸ ತಪ್ಪಿರೋಣದರಿಂದ ಕೆರೆಗಳ ಕಾಮಗಾರಿ ವಿಷಯದಲ್ಲಿ ಗ್ರಾಮಸ್ಥರಿಗೆ ಪೂರ್ವದಲ್ಲಿ ಇದ್ದಷ್ಟು ಕುಶಲತೆಯೂ ಶಕ್ತಿಯೂ ಈಗ ಇಲ್ಲದೆ ಇದ್ದಾಗ್ಯೂ ಈ ಕೆಳಗೆ ವಿವರಿಸುವ ಏರ್ಪಾಡಿನಮೇರೆ ಮುಲ್ಕಿ ಮತ್ತು ಮರಹಮ್ಮತ್ ಇಲಾಖೆ ಉದ್ಯೋಗಸ್ಥರು ಸಾಹೃದಯದಿಂದ ಸಮಾಲೋಚಿತವಾಗಿ ನಿರ್ದೇಶಿಸುವ ಉಪಾಯಗಳನ್ನು ಆಚರಿಸೋಣದರ ಮೂಲಕ ರೈತರು ತಮ್ಮ ಆಡಳಿತಕ್ಕೆ ಕೊಡಲ್ಪಡುವ ಕೆರೆಗಳನ್ನು ದುರಸ್ತು ಮಾಡಲು ಅನುಕೂಲವಾಗುವದೆಂದು ನಂಬಿ ಇದೆ. ಮೇಲೆ ಸೂಚಿಸಿದ ಏರ್ಪಾಡಿನ ಕ್ರಮವೇನೆಂದರೆ : 500 ರೂಪಾಯಿಗಳಿಗಿಂತ ಜಾಸ್ತಿಯಾದ ಹುಟ್ಟುವಳಿ ಇರತಕ್ಕ ದರೋಬಸ್ತು ಕೆರೆಗಳನ್ನೂ ಪಬ್ಲಿಕ್ ವರ್ಕ್ಸ್ ಇಲಾಖೆ ಆಡಳಿತದಲ್ಲಿ ಇಟ್ಟು ಕೊಳ್ಳತಕ್ಕದ್ದು. ಈ ತರಹಾದ ಕೆರೆಗಳು 790 ಮಾತ್ರ ಇವೆ. ಇವುಗಳ ಹುಟ್ಟುವಳಿ ಜಾಸ್ತಿಯಾಗಿರುವದರಿಂದಲೂ, ಇವುಗಳನ್ನು ದುರಸ್ತು ಮಾಡತಕ್ಕಬಗ್ಗೆ ಬಹಳ ಜಾಸ್ತಿ ಲಾಗವಡು ತಗಲುವದರಿಂದಲೂ, ಇವುಗಳು ಒಡದು ಹೋದಲ್ಲಿ ಪ್ರಬಲವಾದ ಅಪಾಯವು ಸಂಭವಿಸುವದರಿಂದಲೂ, ಇವುಗಳು ಶಾಸ್ತ್ರಪರಿಶ್ರಮವುಳ್ಳ ಸರಕಾರದ ಶಿಬ್ಬಂದಿಯ ಸುಫರ್ದಿನಲ್ಲಿಯೇ ಇರತಕ್ಕದ್ದು ಯುಕ್ತವಾಗಿದೆ. 500 ರೂಪಾಯಿಗಳಿಗಿಂತ ಕಮ್ಮಿ ಹುಟ್ಟುವಳಿ ಇರತಕ್ಕ ಕೆರೆಗಳನ್ನು ಮುಲ್ಕಿ ಆಫೀಸರುಗಳ ಮೇಲ್ವಿಚಾರಣೆಗೆ ಒಳಪಟ್ಟು ದುರಸ್ತು ಮಾಡತಕ್ಕಬಗ್ಗೆ ಆಯಾ ಗ್ರಾಮಗಳ ರೈತರ ಸುಫರ್ದು ಮಾಡಬೇಕೆಂದು ಯೋಚಿಸಿ ಇದೆ. ಆದರೆ ಈ ಭಾಗದಲ್ಲಿ ರೈತರ ಜವಾಬ್‌ದಾರಿ ವಿಷಯದಲ್ಲಿ ಖಂಡಿತವಾದ ನಿಬಂಧನೆಗಳನ್ನು ಏರ್ಪಾಡು ಮಾಡುವದರಿಂದ ಪ್ರಯೋಜನವಿಲ್ಲ.

ಆಯಾ ಸ್ಥಳಗಳಲ್ಲಿ ಇರತಕ್ಕ ಪೂರ್ವ ಪದ್ಧತಿ ವಗೈರೆ ವಿಷಯಗಳನ್ನು ವಿಚಾರ ಮಾಡದೆ ಎಲ್ಲ ಸ್ಥಳಗಳಿಗೂ ಒಂದೇ ನಿಬಂಧನೆಯನ್ನು ಮಾಡೋಣದರಿಂದ ಇದುವರಿಗೆ ಸರಕಾರದವರು ರೈತರ ಕ್ಷೇಮವನ್ನು ಅಭಿವೃದ್ಧಿ ಪಡಿಸುವದಕ್ಕೆ ಮಾಡಿರತಕ್ಕ ಪ್ರಯತ್ನಗಳೆಲ್ಲವೂ ಭಂಗವಾಗುತ್ತಲಿವೆ. ಅನೇಕ ಸಂದರ್ಭಗಳಲ್ಲಿ, ರೈತರಿಗೆ ಕೊಟ್ಟಿರುವ ರಿಯಾಯತ್‌ಗಳೊಡನೆ ವಿಶೇಷ ಷರತ್ತುಗಳನ್ನು ಸೇರಿಸಿರೋಣದರಿಂದಲೂ ಸದರೀ ರಿಯಾಯತ್‌ಗಳನ್ನು ಪಡೆಯಲಿಕ್ಕೆ ಅನೇಕ ವಿಧವಾದ ತೊಂದರೆಗಳು ಇರುವದರಿಂದಲೂ ಇದುವರಿಗೆ ನಡಿಸಿರುವ ಪ್ರಯತ್ನಗಳಿಂದ ಅತ್ಯಲ್ಪಪ್ರಯೋಜನ ಉಂಟಾಗಿರುವದು. ಇತಃಪರ ಜಾರಿಯಲ್ಲಿ ತರಬೇಕೆಂಬ ಏರ್ಪಾಟು ಮೈದಾನ್ ಸೀಮೆಗೂ ಮಲ್‌ನಾಡು ಸೀಮೆಗೂ ಸಹ ಅನುಕೂಲವಾಗಿ ಸುಲಭವಾಗಿ ಜಾರಿಯಲ್ಲಿ ತರಬಹುದಾದ್ದಾಗಿಯೂ, ದ್ರವ್ಯ ಮತ್ತು ಬುದ್ಧಿ ಕೌಶಲ್ಯವುಳ್ಳ ಜನಗಳು ಇರತಕ್ಕ ಸ್ಥಳಗಳಿಗೂ, ಸರಕಾರದ ಸಹಾಯವಿಲ್ಲದೆ ಯಾವ ಕೆಲಸವನ್ನು ಮಾಡುವದಕ್ಕೂ ಚೈತನ್ಯವಿಲ್ಲದ ರೈತರುಗಳು ಇರುವ ಸ್ಥಳಗಳಿಗೂ ಸಹ ಅನುಕೂಲವಾದ್ದಾಗಿರುವದು ಯೆಂದು ನಂಬುತ್ತೇವೆ ; ಹ್ಯಾಗಂದರೆ.

500 ರೂಪಾಯಿಗಳಿಗಿಂತ ಕಮ್ಮಿ ಹುಟ್ಟುವಳಿಯಾಗತಕ್ಕ ಕೆರೆಗಳ ಸಾಲಾಬಾದ್ ಕಾಮಗಾರಿಯನ್ನು ರೈತರು ಮಾಡಬೇಕೆಂಬ ಷರತ್ತಿನಮೇಲೆ ಸದರೀ ಕೆರೆಗಳ ಕೆಳಗಣ ತರೀ ಜಮೀನಿನ ಮೇಲೆ ರೂಪಾಯಿ 1ಕ್ಕೆ ಒಂದಾಣೆ ಮೇರೆ ಈಗ ವಸೂಲಾಗುತ್ತಿರುವ ಇರ್ರಿಗೇಷನ್‌ಸೆಸ್ ಯೆಂಬ ತೆರಿಗೆಯನ್ನು ಮೌಕೂಫ್ ಮಾಡಬೇಕೆಂದು ಉದ್ದೇಶಿಸಿ ಇಧೆ. ಸಾಲಾಬಾದ್ ಸಾಧಾರಣ ಕಾಮಗಾರಿಯಲ್ಲದೆ ಇತರ ಕಾಮಗಾರಿ ಆಗಬೇಕಾದ ಕೆರೆಗಳ ವಿಷಯದಲ್ಲಿ ಆವಶ್ಯಕವಾದ ಕಾಮಗಾರಿಗಳನ್ನು ತ್ವರ್ಯದಲ್ಲಿ ರೈತರು ನಡಿಸುವದಕ್ಕೋಸ್ಕರ ಸದರೀ ಕಾಮಗಾರಿಗಳಿಗೋಸ್ಕರ ತಗಲಬಹುದಾದ ಲಾಗವಡನ್ನು ತಿಳಿದುಕೊಂಡು ಮುನಾಸಬ್ ಕೆಲವು ವರುಷಗಳವರಿಗೆ ತರೀ ಕಂದಾಯವನ್ನು ಸಂಪೂರ್ಣವಾಗಿಯೇ ಆಗಲಿ ಕೆಲವು ಭಾಗವಾಗಲಿ ಮುಜರೆ ಕೊಡುತ್ತೆ. ಸಾಲಾಬಾದ್ ಕಾಮಗಾರಿಗಿಂತ ಜಾಸ್ತಿಯಾಗಿ ಮಟ್ಟೀಕಾಮಗಾರಿ ಆಗಬೇಕಾದ ಕೆರೆಗಳ ವಿಷಯದಲ್ಲಿ ಒಂದೆರಡು ವರುಷಗಳವರಿಗೆ ತರೀ ಕಂದಾಯವನ್ನು ಮಾಫ್ ಮಾಡಬೇಕಾಧೀತು. ಕಲ್ಲು ಮತ್ತು ಗಚ್ಚಿ ಕಾಮಗಾರಿ ಆಗಬೇಕಾಗಿದ್ದಲ್ಲಿ ಮೂರು ಅಥವಾ ನಾಲ್ಕು ವರುಷಗಳವರಿಗೂ ತರೀ ಕಂದಾಯ ಮಾಫ್ ಮಾಡಬೇಕಾಗ ಬಹುದು. ವಿಶೇಷ ಶಿಕಸ್ತಾಗಿರುವ ಕೆರೆಗಳ ವಿಷಯದಲ್ಲಿ ಮೇಲೆಕಂಡ ಮೇರೆ ಐದು ಅಥವಾ ಏಳು ವರುಷಗಳವರಿಗೆ ಮುಜರೇ ಕೊಟ್ಟಲ್ಲಿ ಪ್ರಾಯಶಃ ಸಾಕಾಗಬಹುದು. ಗ್ರಾಮಸ್ಥರಲ್ಲಿ ದ್ರವ್ಯ ಸಹಾಯ, ಸಾಹಸ, ಅಥವಾ ಐಕಮತ್ಯ ಇಲ್ಲದೇ ಇರುವ ಕಾರಣದಿಂದ ಕೆರೆ ಕಾಮಗಾರಿಯನ್ನು ರೈತರಿಂದ ಮಾಡಿಸುವದಕ್ಕೆ ಸಾಧ್ಯವಿಲ್ಲದೆ ಇದ್ದಲ್ಲಿ ಫಕ್ತು ಸರಕಾರದ ಲಾಗವಡಿನಿಂದಲೇ ಪಬ್ಲಿಕ್ ವರ್ಕ್ಸ್ ಇಲಾಖೇಯವರ ಸಲಹೆಯೊಡನೆ ಸದರಿ ಕಾಮಗಾರಿಯನ್ನು ಮಾಡಿಸುವದಕ್ಕೂ, ಕುಶಲತೆ ಬೇಕಾಗುವ ಅಥವಾ ವಿಶೇಷ ಲಾಗವಡು ಮುಟ್ಟತಕ್ಕ ಕೆಲಸಗಳನ್ನು ಸರಕಾರಿ ಖರ್ಚಿನಿಂದ ನಡಿಸಿ ಬಾಕಿ ಉಳಿಯುವ ಕೆಲಸ ಅಂದರೆ ಮಟ್ಟೀ ಕಾಮಗಾರಿಯನ್ನು ಮೇಲ್ಕಂಡ ರಿಯಾಯತ್‌ಗಳಿಗೆ ವಳಪಟ್ಟು ರೈತರಿಂದ ಮಾಡಿಸುವದಕೂ, ಡೆಪ್ಯುಟಿ ಕಮ್ಮಿಷನರವರಿಗೆ ಅಧಿಕಾರ ಕೊಡಲ್ಪಡುವದು. ಈ ರೀತಿಯಾಗಿ 500 ರೂಪಾಯಿಗಳಿಗಿಂತ ಕಮ್ಮಿ ಹುಟ್ಟುವಳಿ ಇರತಕ್ಕ ದುರಸ್ತು ಆಗಬೇಕಾದ ಕೆರೆಗಳ ವಿಷಯವಲ್ಲಿ ರೈತರುಗಳು ಮೇಲ್ಕಂಡ ಧಾರಾಳವಾದ ರಿಯಾಯತ್‌ಗಳನ್ನು ಪಡದು ತಾವೇ ಜಾಗ್ರತೆಯಾಗಿ ಆವಶ್ಯಕವಾದ ಕಾಮಗಾರಿಗಳನ್ನು ಮಾಡಿಕೊಳ್ಳಬಹುದು, ಅಥವಾ ಹಾಗೆ ಮಾಡದೆ ಇದ್ದಲ್ಲಿ ಸರ್ಕಾರದವರಿಗೆ ಅನುಕೂಲವಾದಾಗ ಕಾಮಗಾರಿ ಮಾಡಿಸುವವರಿಗೂ ನಿರೀಕ್ಷಿಸುತ್ತಿರಬೇಕಾಗುತ್ತೆ.

ರೈತರು ಮೇಲ್ಕಂಡಂತೆ ರಿಯಾಯತ್‌ಗಳನ್ನು ತಿಳಿದು ಸ್ವಪ್ರಯೋಜನದ ಆಶೆಯಿಂದ ಪ್ರಾಯಶಃ ಕಾಮಗಾರಿ ಮಾಡಬಹುದು. ಒಂದುವೇಳೆ ಹಾಗೆ ಮಾಡದೆ ಇದ್ದಲ್ಲಿ ಹಾಲಿ ನಾದುರಸ್ತಿನಲ್ಲಿರತಕ್ಕ ಭಾರಿ ಕೆರೆಗಳು ತಮಗಳಿಗೆ ಚನ್ನಾಗಿ ತಿಳಿದಿರುವ ಚೌಥಾಯಿ ಏರ್ಪಾಡಿನ ಮೇರೆ ಜನಗಳು ಸ್ವಂತಲಾಗವಡಿನಿಂದ ಮಾಡಿಸಿಕೊಳ್ಳುವದಕ್ಕೆ ಅಪ್ಪಣೆ ಕೊಡುವದರಮೂಲಕ ಆಬಾದು ಸ್ಥಿತಿಗೆ ತರಲ್ಪಟ್ಟೀತು. ಹಾಲೀ ಜಾರಿಯಲ್ಲಿರುವ ಚೌಥಾಯಿ ಏರ್ಪಾಡನ್ನು ಸುಲಭಪಡಿಸಿ, ಚೌಥಾಯಿ ಕಂದಾಯ ಮಾಫ್ ಮಾಡತಕ್ಕದ್ದು. 30 ವರುಷಗಳವರಿಗೆ ಅಥವಾ ಸರ್ವೆ ಸೆಟಲ್‌ಮೆಂಟ್ ಆಗುವವರಿಗೆ ಎಂಬ ನಿರ್ಬಂಧವನ್ನು ತಪ್ಪಿಸಿ, ಸದರೀ ಚೌಥಾಯಿ ಮಾಫೀಯು ಕಾಯಂ ಆಗಿರತಕ್ಕದ್ದೆಂದು ಗೊತ್ತು ಮಾಡಲ್ಪಡುವದು. ದುರಸ್ತು ಬಗ್ಯೆ ಭಾರೀ ಲಾಗವಡು ತಗಲಬಹುದಾದ ಕೆರೆಗಳ ವಿಷಯದಲ್ಲಿ ಇದಕ್ಕಿಂತಲೂ ಧಾರಾಳವಾದ ರಿಯಾಯಿತ್‌ಗಳನ್ನು ಕೊಡಲಾಧೀತು.

ಮೇಲಿಕಂಡ ಏರ್ಪಾಡುಗಳ್ಯಾವದರಿಂದಲೂ ಸರಕಾರದ ಫಾಯಿದೆಗೆ ಕುಂದಕ ಬಂಧೀತೆಂಬ ಭಯವೇನೂ ಇಲ್ಲ. ಯಾಕಂದರೆ, ಈಗಿರುವ ಏರ್ಪಾಡಿನ ಪ್ರಕಾರ ಒಂದು ಕೆರೆಯು ಒಡದು ಹೋದಲ್ಲಿ ಅದು ಪುನಹ ದುರಸ್ತಾಗಬೇಕಾದರೆ ಅನೇಕ ವರುಷಗಳಾಗಬೇಕಾಗುತ್ತೆ, ಈಗಿನ ರೂಲ್ಸ್ ಪ್ರಕಾರ ರೈತರಿಗೆ ಸ್ವಲ್ಪ ರಿಯಾಯತಾಗಿ ತರೀ ಕಂದಾಯದಪೈಕಿ ಅರ್ಧವನ್ನು ಮುಜರೆ ಕೊಡುತ್ತೆ, ಬಾಕಿ ಅರ್ಧಕಂದಾಯವನ್ನು ಕೆಲವು ಸಂವತ್ಸರಗಳವರಿಗೆ ತೆರುತ್ತಾ ಒಂದು ಕೆರೆ ಕಾಮಗಾರಿಯು ಶೀಘ್ರದಲ್ಲಿ ಆಗತಕ್ಕ ಸಂದರ್ಭ ಕಾಣದೆ ರೈತರು ತಮ್ಮ ಜಮೀನುಗಳನ್ನು ರಾಜೀನಾಮೆಮೂಲಕ ಸರಕಾರಕ್ಕೆ ಒಪ್ಪಿಸಿ ಬಿಡುತ್ತಾರೆ. ಇದರಿಂದ ಸದರೀ ಕೆರೆಯು ದುರಸ್ತಾಗುವವರಿಗೆ ಅದರ ಅಚ್ಚುಕಟ್ಟಿನ ಮೇಲಣ ಪೂರಾ ಕಂದಾಯ ಸರಕಾರಕ್ಕೆ ನಷ್ಟವಾಗುತ್ತೆ. ಮುಂದೆ ಜಾರಿಯಲ್ಲಿ ತರಬೇಕೆಂಬ ಏರ್ಪಾಡಿನ ಪ್ರಕಾರ ಹಂಗಾಮಿಯಾಗಿಯೂ ಮತ್ತು ಕಾಯಂಆಗಿಯೂ ಕೊಡಲ್ಪಡುವ ರಿಯಾಯತಿಗಳಿಂದ ಸರಕಾರಕ್ಕುಂಟಾಗುವ ನಷ್ಟವು, ಸರಕಾರದ ಶಿಬ್ಬಂದಿಮೂಲಕ ಸದರೀ ಕೆರೆಗಳನ್ನು ಕಾಮಗಾರಿ ಮಾಡತಕ್ಕದ್ದಕ್ಕೆ ತಗಲುವ ಲಾಗವಡಿಗಿಂತ ಬಹಳ ಕಮ್ಮಿಯಾಗಿರುವದು. ಶಿವಾಯಿ ಕೆರೆಗಳು ಜಾಗ್ರತೆಯಾಗಿ ದುರಸ್ತಾಗೋಣದರಿಂದ ಶೀಮೆಗೆ ಆಗತಕ್ಕ ಫಾಯಿದೆಯು ಅಮೌಲ್ಯವಾಗಿರುವದು.

ಕೆರೆಗಳ ವಿಷಯದಲ್ಲಿ ಮುಂದೆ ನಡಿಸತಕ್ಕ ಏರ್ಪಾಡನ್ನು ತಮಿಗೆ ವಿವರವಾಗಿ ಶ್ರುತಪಡಿಸಿಧೆ. ಪಬ್ಲಿಕ್ ವರ್ಕ್ಸ್ ಇಲಾಖೆಯವರು ಅಮಲ್‌ದಾರುಗಳಿಗೆ ಮರಹಂಮತ್ ಕೆಲಸಗಳ ವಿಷಯದಲ್ಲಿ ಎಷ್ಟರಮಟ್ಟಿಗೆ ಸಹಾಯ ಮಾಡತಕ್ಕದ್ದು ಮತ್ತು ಡೆಪ್ಯುಟಿ ಕಮ್ಮಿಷನರುಗಳು ಮೇಲ್ಕಂಡ ರಿಯಾಯತಿಗಳನ್ನು ಯಾವವಿಧವಾಗಿ ಜಾರಿಯಲ್ಲಿ ತರತಕ್ಕದ್ದು ಎಂಬ ಅಂಶಗಳನ್ನು ಕುರಿತು ಜವಾಬುದಾರಿಯುಳ್ಳ ಸರಕಾರದ ಆಫೀಸರರುಗಳೊಡನೆ ಆಲೋಚಿಸಿ ಏರ್ಪಾಡು ಮಾಡುತ್ತೆ. ಮೇಲ್ಕಂಡ ಏರ್ಪಾಡನ್ನು ಜಾರಿಯಲ್ಲಿ ತರುವದರಿಂದ ಶೀಮೆಯಲ್ಲಿರತಕ್ಕ ಎಲ್ಲ ಕೆರೆಗಳೂ ಬರುವ 10–15 ವರುಷಗಳೊಳಗಾಗಿ ಸರಿಯಾದ ಸ್ಥಿತಿಗೆ ತರಲ್ಪಡಬಹುದೆಂದು ಗವರ್ನ್‌ಮೆಂಟಿನವರು ಧೃಢವಾಗಿ ನಂಬುತ್ತಾರೆ. ಮುಂದೆ 10 ವರುಷಗಳ ವರಿಗೂ ಸರಕಾರದವರು ನಡಿಸತಕ್ಕ ಮುಖ್ಯವಾದಕಾಮಗಾರಿಗಳ ಪಟ್ಟಿಯು ತಯಾರಾಗುತ್ತಲಿದೆ.

ಕೆರೆಗಳ ದುರಸ್ತಿನಬಗ್ಯೆ ಇಷ್ಟೆಲ್ಲ ಏರ್ಪಾಡು ಮಾಡಿದಾಗ್ಯೂ ಕ್ಷಾಮಕಾಲದಲ್ಲಿ ಈ ಕೆರೆಗಳಿಂದ ನಮಗೆ ವಿಶೇಷ ಪ್ರಯೋಜನವಾಗುವದಿಲ್ಲ; ಹ್ಯಾಗಂದರೆ, ಒಟ್ಟು ಸಾಗುವಳಿ ವಿಸ್ತೀರ್ಣದಲ್ಲಿ ತರೀ ಸಾಗುವಳಿಯು ಸೇಕಡಾ 15ರಷ್ಟು ಮಾತ್ರ ಇರುತ್ತೆಂದು ಮೊದಲೇತಮಿಗೆ ತಿಳಿಸಿಇರುತ್ತೇನಷ್ಟೆ; ಈ ಸ್ವಲ್ಪ ವಿಸ್ತೀರ್ಣದಲ್ಲಿಯೂ ಹೆಚ್ಚಾದಭಾಗ ಕೆರೇನೀರಿನಿಂದ ಸಾಗುವಳಿಯಾಗತಕ್ಕದ್ದು, ಈ ಕೆರೆಗಳಾದರೋ ಮಳೇನೀರಿನಿಂದ ತುಂಬತಕ್ಕವುಗಳಾದ್ದರಿಂದ ಯಾವಕಾಲದಲ್ಲಿ ಬಹಳ ಆವಶ್ಯಕವೋ ಆ ಕಾಲದಲ್ಲಿ ನಿಷ್ಪ್ರಯೋಜಕಗಳಾಗುತ್ತವೆ. ಆದಕಾರಣ ಆಗಾಗ್ಯೆ ತಪ್ಪದೆ ಬರುವ ಕ್ಷಾಮಗಳಿಂದುಂಟಾಗುವ ಮುಖ್ಯವಾದ ಅಪಾಯಗಳ ನಿವಾರಣೆ ಬಗ್ಯೆ ರೈಲ್ವೆ ಹೊರ್ತು ಇನ್ನಾವ ಅನುಕೂಲವಾದ ಮತ್ತು ಭರವಸೆಯುಳ್ಳ ಆಧಾರವು ತೋರುವದಿಲ್ಲ. ರೈಲ್ವೆಗಳಿಂದ ಕ್ಷಾಮ ಕಾಲಗಳಲ್ಲಿ ಆಗತಕ್ಕ ಪ್ರಯೋಜನಗಳು ತಮಗಳಿಗೆಲ್ಲ ಚನ್ನಾಗಿ ವೇದ್ಯವಾಗಿ ಇಧೆ. ಕ್ಷಾಮಪ್ರಾಪ್ತವಾದ ಪ್ರದೇಶಗಳಿಗೆ ಆಹಾರ ಧಾನ್ಯಗಳನ್ನು ಬಹಳ ಸ್ವಲ್ಪ ಖರ್ಚಿನಿಂದಲೇ ಅಂದರೆ ಮೈಲಿ 1ಕ್ಕೆ ಮಣ 1ಕ್ಕೆ ¼ ಪೈ ಲಾಗಾಯಿತು ¼ ಪೈ ವರಿಗಿನ ಖರ್ಚಿನಿಂದ ರೈಲ್ವೆ ಮೂಲಕವಾಗಿ ತೆಗದುಕೊಂಡು ಹೋಗಬಹುದು. 1876ನೇ ಇಸವಿ ಲಾಗಾಯಿತು 1878ನೇ ಇಸವಿ ವರಿಗಿನ ಕ್ಷಾಮದಲ್ಲಿ ಬಹಳಕಷ್ಟಕ್ಕೆ ಗುರಿಯಾಗಿದ್ದ ಪ್ರದೇಶಗಳು ರೈಲ್ವೆಯಿಂದ 50ರಲಾಗಾಯಿತು 100ಮೈಲಿಗಳ ವರಿಗೆ ದೂರವಾಗಿದ್ದವು. ಬೆಂಗಳೂರಿಂದ ಹರಿಹರದವರಿಗೆ ಈಗ ಮಾಡಬೇಕೆಂದುದ್ದೇಶಿಸಿರುವ ರೈಲ್ವೆಯು ಸರಿಯಾಗಿ ಮೇಲೆ ನಮೂದಾದ ಪ್ರದೇಶಗಳ ಮಧ್ಯೆ ಹೋಗುವದು. ಇದು ತಯಾರಾದ ಮೇಲೆ ಲೈನಿನ ಉಭಯ ಪಾರ್ಶ್ವಗಳಲ್ಲಿಯೂ 25 ಮೈಲಿಗಳ ವರಿಗೂ ಅಂದರೆ ಒಟ್ಟು 50 ಮೈಲಿಗಳವರಿಗೂ ಆಹಾರಧಾನ್ಯಗಳನ್ನು ತೆಗದುಕೊಂಡು ಹೋಗಬಹುದು. ಆದ್ದರಿಂದ ಈ ರೈಲ್ವೆಯು 50 ಮೈಲಿ ಅಗಲ 212 ಮೈಲಿ ಉದ್ದವುಳ್ಳ 10,600 ಚದರ ಮೈಲುಗಳ ಪ್ರದೇಶಕ್ಕೆ ಅನುಕೂಲವಾಗುವದು, ಅಂದರೆ 1876—78ನೇ ಇಸವಿಯಲ್ಲಿ ವಿಶೇಷವಾಗಿ ಕ್ಷಾಮವನ್ನನುಭವಿಸಿದ ಪ್ರದೇಶಗಳ ಪೈಕಿ 3ರಲ್ಲಿ 2 ಭಾಗಕ್ಕೆ ಅನುಕೂಲವಾಗುವದು. ಈ

ಪ್ರಾಂತ್ಯದಲ್ಲಿ ವಿಶೇಷವಾಗಿ ಕಷ್ಟ ಸಂಭವಿಸದಂತೆ ಏರ್ಪಾಡು ಮಾಡತಕ್ಕದ್ದಕ್ಕೆ ಮೇಲೆ ಸೂಚಿಸಿರುವಮೇರೆ ತಿಪಟೂರುಲಾಗಾಯಿತು ಹರಿಹರದವರಿಗಿನ ಲೈನನ್ನು ಸ್ವಲ್ಪವೂ ಸಾವಕಾಶವಿಲ್ಲದೆ ಪೂರೈಸತಕ್ಕದ್ದು ಅತ್ಯಾವಶ್ಯಕವಾಗಿರುವದು. 1876ನೇ ಇಸವಿ ಲಾಗಾಯಿತು 78ನೇ ಇಸವಿ ವರಿಗಿನ ಕ್ಷಾಮದದೆಶೆಯಿಂದ ಸಂಭವಿಸಿದಕಷ್ಟ ಅದ್ಯಾಪಿನಮ್ಮಗಳ ಜ್ಞಾಪಕದಲ್ಲಿರುತ್ತಷ್ಟೆ. 160 ಲಕ್ಷ ರೂಪಾಯಿಗಳು ಖರ್ಚಾದಾಗ್ಯೂ, ಕ್ಷಾಮದಿಂದ ಜನಗಳಿಗೆ ಹಾನಿ ಬರಬಾರದೆಂದು ಎಷ್ಟು ತರದೂದು ಮಾಡಿದಾಗ್ಯೂ ಆ ಕ್ಷಾಮದಲ್ಲಿ 10 ಲಕ್ಷದವರಿಗೂ ಪ್ರಜೆ ಲಯವಾಯಿತು. ಆ ಅಘೋರವಾದ ಕ್ಷಾಮವು ಕಳದು ಇನ್ನೂ 6 ವರುಷಗಳು ಪೂರ್ತಿಯಾಗಿಲ್ಲ. ಹೀಗಿರುವಲ್ಲಿ ಈಗ ರಾಜ್ಯದ ಸ್ಥಿತಿಯು ಪುನಹಾ ಬಹಳವಾದ ಯೋಚನೆಗೆ ಕಾರಣವಾಗಿಧೆ. ಆದರೆ ಕ್ಷಾಮ ಬರುತ್ತೆಂಬ ಭೀತಿಗೆ ಇದುವರಿಗೆ ಕಾರಣವಿಲ್ಲದಿದ್ದಾಗ್ಯೂ ಮುಂದೆ ಬರಬಹುದಾದ ವಿಪತ್ತಿಗೆ ಜಾಗರೂಕತೆಯಿಂದ ಸನ್ನದ್ಧರಾಗಿರತಕ್ಕದ್ದು ಅವಶ್ಯಕವಾಗಿರುತ್ತೆ. ಮುಂದೆಯೂ ಮಳೆ ಆಗದೆ ಕೂಲಿಮಾಡತಕ್ಕ ಜನಗಳಿಗೆ ಕೆಲಸಸಿಕ್ಕದೇ ಹೋಗುವ ಪಕ್ಷದಲ್ಲಿ ಮಾಮೂಲಾಗಿ ನಡಿಯತಕ್ಕ ಪಬ್ಲಿಕ್ ವರ್ಕ್ಸ್ ಕಾಮಗಾರಿಗಳಲ್ಲದೆ ಜಾಸ್ತಿ ಕಾಮಗಾರಿಗಳನ್ನು ನಡಿಸುವದರ ಮೂಲಕ ಕಷ್ಟ ಪರಿಹಾರ ಮಾಡಲು ಅವಕಾಶವುಂಟು. ಜನಗಳ ಕಷ್ಟ ಇನ್ನೂ ಜಾಸ್ತಿಯಾದಲ್ಲಿ ಅನುಕೂಲವಾದ ಸ್ಥಳಗಳಲ್ಲಿ ಸರಿಯಾದ ರಿಲೀಫ್ ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗುವದಲ್ಲದೆ ಆಯಾ ಗ್ರಾಮದಲ್ಲಿಯೇ ಕ್ಷಾಮ ನಿವಾರಣೆಗೋಸ್ಕರ ಏರ್ಪಾಡುಮಾಡತಕ್ಕದ್ದು ಅವಶ್ಯಕವಾಗುವದು. ಈ ಪ್ರಕಾರ ಆಯಾ ಗ್ರಾಮದಲ್ಲಿಯೇ ಏರ್ಪಾಡು ಮಾಡೋಣದರಿಂದ ಗ್ರಾಮಸ್ಥರಲ್ಲಿರತಕ್ಕ ಅನ್ಯೋನ್ಯ ಸಂಬಂಧವು ತೊರೆಯದಂತೆಯೂ ಮತ್ತು ರಿಲೀಫ್ ಕಿಚ್ಚನ್‌ಗಳಲ್ಲಿ ಅನ್ನ ಹಾಕತಕ್ಕ ಏರ್ಪಾಡಿನಿಂದ ನಿಸ್ಸಂದೇಹವಾಗಿ ಸಂಭವಿಸುವ ಕೇಡುಗಳುಂಟಾಗದಂತೆಯೂ ಕೆಲಸ ಮಾಡಲಿಕ್ಕೆ ಅಶಕ್ತರಾಗಿರತಕ್ಕ ಜನಗಳಿಗೆ ಅನುಕೂಲವಾಗಿ ಸಹಾಯಮಾಡಬಹುದು.

ಕಳದ ಸಂವತ್ಸರ ತಾವು ಪ್ರಸ್ತಾಪಿಸಿದ ಕೆಲವು ಮುಖ್ಯ ಅಂಶಗಳ ವಿಷಯವಾಗಿ ಈಗ ತಮಗೆ ಶ್ರುತಪಡಿಸುವದೇನಂದರೆ—ಸರಕಾರಿ ಬಂಜರು ಜಮೀನುಗಳ ಹುಲ್ಲುಬನ್ನಿಯನ್ನ ಸಾಲೇಸಾಲ್ ಹರಾಜು ಹಾಕೋಣದರಿಂದ ಕೇವಲ ಕಷ್ಟವಾಗಿಧೆ ಯೆಂತಲೂ ಈ ಹುಲ್ಲುಬನ್ನಿಯ ಹಕ್ಕನ್ನು ಹರಾಜಿನಲ್ಲಿ ಕೊಂಡುಕೊಳ್ಳುವವನ ದೆಸೆಯಿಂದ ಬಹಳವಾಗಿ ಗ್ರಾಮಸ್ಥರಿಗೆ ನಷ್ಟ ಮತ್ತು ಹಿಂಸೆಯಾಗುತ್ತೆಂತಲೂ ಅನೇಕ ಡಿಸ್ಟ್ರಿಕ್ಟ್‌ಗಳ ಮೆಂಬರುಗಳು ಸೂಚಿಸಿದರಷ್ಟೆ; ಈ ಕಷ್ಟವನ್ನು ಪರಿಹರಿಸುವ ಬಗ್ಯೆ ಸಾಲೇಸಾಲ್ ಹರಾಜಿಗೆ ಬದಲಾಗಿ ಹಿಡುವಳಿ ಜಮೀನ್‌ಕಂದಾಯದ ಮೇಲೆ ರೂಪಾಯಿ 1ಕ್ಕೆ 3ಪೈ ಮೇರೆ ಯಾಗಲಿ, ರಾಸು 1ಕ್ಕೆ 6ಪೈ ಮೇರೆಯಾಗಲಿ ಸುಲಭವಾದ ತೆರಿಗೆಯನ್ನ ವಸೂಲ್ಮಾಡಬಹುದೆಂತ ಪ್ರಸ್ತಾಪ ನಡಿಯಿತು. ಆದರೆ ಮೇಲ್ಕಂಡ ಎರಡು ಏರ್ಪಾಡುಗಳೂ ನಿರಾಕ್ಷೇಪವಾಗಿಲ್ಲವು; ಹ್ಯಾಗಂದರೆ; ಜಮೀನ್ ಕಂದಾಯದ ಮೇಲೆ ರೂಪಾಯಿ 1ಕ್ಕೆ 3ಪೈ ಮೇರೆ ವಸೂಲ್ಮಾಡೋಣವು ಸುಲಭವಾಗಿದ್ದಾಗ್ಯೂ ಹಿಡುವಳೀ ಜಮೀನ್‌ಮೇಲೆ ಜಾಸ್ತಿ ಕಂದಾಯವನ್ನು ವಸೂಲ್ಮಾಡಿದಹಾಗೆ ಆಗುತ್ತೆ. ರಾಸು 1ಕ್ಕೆ ಅರ್ಧ ಆಣೆ ಪ್ರಕಾರ ವಸೂಲ್ಮಾಡೋಣವು ನ್ಯಾಯವಾಗಿದ್ದಾಗ್ಯೂ ಗ್ರಾಮದ ಶಾನುಭೋಗನಿಗೆ ವಿಶೇಷ ಅಧಿಕಾರವನ್ನು ಕೊಡುವದಲ್ಲದೆ ಅನೇಕ ಸಂದರ್ಭಗಳಲ್ಲಿ ಮೋಸ ನಡೆಯುವದಕ್ಕೂ ಕಾರಣವಾಗುತ್ತದೆ. ಆದಕಾರಣ ಸಾಲ್ ಮುಜಕೂರಿನಲ್ಲಿ ಗವರ್ನಮೆಂಟಿನವರು ಹಂಗಾಮಿ ತರೀಕ್ ಮಾಡತಕ್ಕ ಏರ್ಪಾಡಿನಲ್ಲಿ ಆಯಾ ಗ್ರಾಮಗಳಲ್ಲಿ ಕಳದ 2 ಸಾಲ್‌ಗಳಲ್ಲಿ ಉತ್ಪತ್ತಿಯಾದ ಸರಾಸರೀ ಹುಲ್ಲು ಬನ್ನೀ ಮೊಬಲಗನ್ನು ಕೊಟ್ಟು ಸದರೀ ಗ್ರಾಮಗಳ ಬಂಜರು ಜಮೀನುಗಳ ಹುಲ್ಲಿನ ಹಕ್ಕನ್ನು ಆಯಾ ಗ್ರಾಮಸ್ಥರೇ ಪಡೆಯಬಹುದೆಂದು ನೇಮಿಸಿಧೆ. ಈ ವಿಷಯದಲ್ಲಿ ತಮ್ಮ ಅಭಿಪ್ರಾಯಗಳನ್ನು ತಿಳಿಯಲಪೇಕ್ಷಿಸುತ್ತೇವೆ.

ಇನಾಂ ಗ್ರಾಮಗಳಲ್ಲಿರತಕ್ಕ ತರೀ ಜಮೀನಿನ ಮೇಲೆ ಇರ್ರಿಗೇಷನ್ ಸೆಸ್ಸ್ ಯೆಂಬ ತೆರಿಗೆಯನ್ನು ವಸೂಲ್ಮಾಡುವದು ಸರಿಯಾದ್ದಲ್ಲವೆಂದು ಕಳದ ಸಂವತ್ಸರದ ಸಭೆಯಲ್ಲಿ ಪ್ರಸ್ತಾಪ ಬಂದಿತ್ತಷ್ಟೆ; ಈ ತೆರಿಗೆಯನ್ನು ಮಾಕೂಫ್ ಮಾಡತಕ್ಕದ್ದು ಯುಕ್ತವೆಂದು ಸರಕಾರದವರಿಗೆ ತೋರಿಧೆ.

ಚಿಲ್ಲರೆ ಇನಾಂಗಳಲ್ಲಿ ಕಂಡುಬರುವ ಜಾಸ್ತಿ ಜಮೀನನ್ನು ಯಾವ ರೀತಿಯಾಗಿ ಫೈಸಲ್ಮಾಡಬೇಕೆಂಬ ಅಂಶವು ಗವರ್ನಮೆಂಟಿನವರ ಆಲೋಚನೆಯಲ್ಲಿತ್ತು. ಈ ವಿಷಯದಲ್ಲಿ ಈಗ ಜಾರಿಯಲ್ಲಿರುವ ರೂಲ್ಸ್ ಪ್ರಕಾರ ಸನ್ನದು

ವಗೈರೆ ದಾಖಲಾತುಗಳಲ್ಲಿ ನಮೂದಾಗಿರುವ ಇನಾಮಿನ ವಿಸ್ತೀರ್ಣವನ್ನು ತಿಳಿದುಕೊಂಡು, ಈ ವಿಸ್ತೀರ್ಣಕ್ಕೆ ಸೇಕಡ 10ರ ಮೇರೆ ಜಮೀನು ಜಾಸ್ತಿ ಶೇರಿಸಿ ವಟ್ಟಾದ ವಿಸ್ತೀರ್ಣವನ್ನು ಇನಾಮಾಗಿ ಕಾಯಂ ಇಟ್ಟು, ಇನಾಂದಾರನ ಅನುಭವದಲ್ಲಿ ಇದಕ್ಕಿಂತಲೂ ಜಾಸ್ತಿಯಾಗಿರತಕ್ಕ ಜಮೀನನ್ನು ಸರಕಾರಕ್ಕೆ ದಾಖಲ್ಮಾಡಿಕೊಂಡು ಪೂರಾ ಕಂದಾಯ ಹಾಕತಕ್ಕ ಪದ್ಧತಿ ಇರುತ್ತದೆ. ಇನಾಮು ಕೊಡುವ ಕಾಲದಲ್ಲಿ ವಾಸ್ತವವಾಗಿ ಕೊಡಲ್ಪಟ್ಟ ವಿಸ್ತೀರ್ಣವನ್ನು ಈಗ ನಿರ್ಧರಿಸುವದಕ್ಕೆ ಅನುಕೂಲವಿದ್ದಲ್ಲಿ ಮೇಲ್ಕಂಡ ಏರ್ಪಾಡು ಧಾರಾಳವಾದ್ದೆಂದು ನಿಸ್ಸಂದೇಹವಾಗಿ ಹೇಳಬಹುದು ; ಆದರೆ ಇನಾಂದಾರ್ರುಗಳು ಅನೇಕ ಸಂವತ್ಸರಗಳ ಅನುಭವದ ರುಜುವಾತು ಶಿವಾಯಿ ಇತರ ವಿಧವಾದ ದಾಖಲೆಗಳನ್ನು ಸಾಮಾನ್ಯವಾಗಿ ಕೊಡದೆ ಇರೋಣದರಿಂದಲೂ ಸನ್ನದಿನಲ್ಲಿ ನಮೂದಿರತಕ್ಕ ಸರಹದ್ದುಗಳನ್ನು ಈಗ ತಿಳಿಯಲು ಅಸಾಧ್ಯವಾದ್ದರಿಂದಲೂ ಇನಾಂ ಕೊಟ್ಟಕಾಲದಲ್ಲಿ ವಾಸ್ತವವಾಗಿ ಕೊಡಲ್ಪಟ್ಟ ವಿಸ್ತೀರ್ಣವು ಇಷ್ಟೇಯೆಂದು ನಿರ್ಧರಿಸುವದಕ್ಕಾಗುವದಿಲ್ಲ. ಅನೇಕಮಂದಿ ಚಿಲ್ಲರೆ ಇನಾಂದಾರರ ರಿಯಾಯತ್ ವೃದ್ಧಿಶ್ಯವಾಗಿ ಈಗ ಅನುಭವದಲ್ಲಿರತಕ್ಕ ಇನಾಮಿನ ಸರ್ವೇ ಆಕಾರ 5 ರೂಪಾಯಿಗಿಂತ ಜಾಸ್ತಿ ಇಲ್ಲದೆ ಇರುವ ಸಂದರ್ಭದಲ್ಲಿ ಅಂಥಾ ಇನಾಂಗಳನ್ನು ಪೂರಾ ಕಾಯಂ ಮಾಡಬೇಕೆಂತಲೂ, ಸರ್ವೇ ಆಕಾರ 5 ರೂಪಾಯಿಗಿಂತ ಜಾಸ್ತಿಯಾಗಿದ್ದಲ್ಲಿ, ಜಾಸ್ತಿ ಕಂಡು ಬರುವ ವಿಸ್ತೀರ್ಣದ ಪೈಕಿ ಅರವಾಶಿ ಇನಾಮಾಗಿ ಕಾಯಂ ಇಟ್ಟು, ಬಾಕೀ ಅರ್ಧ ಭಾಗಕ್ಕೆ ಪೂರಾ ಕಂದಾಯವನ್ನು ದಾಖಲ್ಮಾಡಬೇಕೆಂತಲೂ, ಮತ್ತು ಯಾವ ಸಂದರ್ಭದಲ್ಲಿಯೂ ಸರ್ವೇ ಆಕಾರಕ್ಕೆ 3ರಷ್ಟಕ್ಕಿಂತ ಜಾಸ್ತಿಯಾಗಿ ಇನಾಂ ಕಾಯಂ ಮಾಡಕೂಡದೆಂತಲೂ ವಿಧಿಸಬೇಕೆಂದು ಯೋಚಿಸಿಧೆ. ಈ ಏರ್ಪಾಡು ಜಮೀನ್ದಾರೀ ರೂಪವಾಗಿರತಕ್ಕ ಎಲ್ಲ ಇನಾಮುಗಳಿಗೂ ಅನ್ವಯಿಸುತ್ತದೆ ; ಆದರೆ ಸಾಧಾರಣವಾಗಿ ಮಲ್ನಾಡಿನಲ್ಲಿ ಇರುವ ರೀತ್ಯ ಇನಾಮಿಗೆ ಸ್ಥಳ ನಿರ್ದೇಶವಿಲ್ಲದೆ ವರ್ಗಗಳಲ್ಲಿ ಇಷ್ಟು ವೊಬಲಗು ಇನಾಂ ಎಂದು ಇರತಕ್ಕ ಸಂದರ್ಭಗಳಲ್ಲಿ ಮೇಲ್ಕಂಡ ರೂಲ್ಸ್ ಪ್ರಕಾರ ನಡಿಯಲಿಕ್ಕಾಗುವದಿಲ್ಲ. ಇಂಥಾ ಸಂದರ್ಭಗಳಲ್ಲಿ ಇನಾಮಿನ ಪೂರ್ವದ ಮೌಲ್ಯಕ್ಕೆ ಸೇಕಡ 10ರ ಮೇರೆ ಜಾಸ್ತಿ ಸೇರಿಸಿ ಆಗುವ ವಟ್ಟುವೊಬಲಗಿಗೆ ಸರಿಯಾದಷ್ಟು ಜಮೀನನ್ನು ವರ್ಗದ ಪೈಕಿ ಇನಾಮಾಗಿ ಕಾಯಂ ಇಡುವದಲ್ಲದೆ, ಇನಾಂದಾರನ ವರ್ಗದ ಜಮೀನಿನಲ್ಲಿ ಇನಾಂ ಕೊಡಲ್ಪಟ್ಟ ಅನಂತರ ಬಾಗಾಯತು ಸಾಗುವಳಿ ಆಗಿದ್ದ ಪಕ್ಷದಲ್ಲಿ ಅಂಥಾ ಜಮೀನಿಗೆ ಸರ್ವೇ ಆಕಾರವನ್ನು ಗೊತ್ತು ಮಾಡುವದರಲ್ಲಿ ಬಾಗಾಯತು ದರಕ್ಕೆ ಬದಲಾಗಿ ತರೀ ದರದ ಮೇರಿಗೆ ಲೆಖ್ಖಾಚಾರ ಮಾಡುವ ರಿಯಾಯತನ್ನೂ ಮಂಜೂರ್ಮಾಡಬೇಕೆಂದು ಆಲೋಚಿಸಿಧೆ.

ಕಳದ ಸಂವತ್ಸರದ ಸಭೆಯಲ್ಲಿ ಚರ್ಚಿಸಲ್ಪಟ್ಟ ಲ್ಯಾಂಡ್ ರೆವಿನ್ಯೂ ಮತ್ತು ಲೋಕಲ್ ಫಂಡು ರೆಗ್ಯುಲೇಷನಿನ ಮಸೂದಾಗಳು ಇನ್ನೂ ಕಾನೂನಾಗಿ ಮಂಜೂರಾಗಿಲ್ಲ. ಈ ಕಾನೂನುಗಳ ವಿಷಯವಾಗಿ ಎಲ್ಲ ರೆವಿನ್ಯೂ ಮತ್ತು ಜುಡಿಷಲ್ ಆಫೀಸರುಗಳ ಅಭಿಪ್ರಾಯಗಳನ್ನೂ ತರಿಸಿಕೊಂಡು ಅವ್ರಗಳ ಸಮೇತ ಎರಡು ಕಾನೂನು ಮಸೂದಾಗಳನ್ನು ಸಮರ್ಥರಾದ ಮತ್ತು ಅನುಭವಶಾಲಿಗಳಾದ ಕಮಿಟಿ ಆಫೀಸರುಗಳ ಅಭಿಪ್ರಾಯದ ಬಗ್ಗೆ ಕಳುಹಿಸಿಧೆ. ಲೋಕಲ್ ಫಂಡ್ ಕಾನೂನು ಕಮಿಟಿಯುವರ ಅಭಿಪ್ರಾಯಗಳು ಇನ್ನೂ ಬಂದಿಲ್ಲ ; ಆದಾಗ್ಯೂ ಫಾಯಿಷ್ ಮಾಡಿರತಕ್ಕ ಮಸೂದೆಯಲ್ಲಿ ವಿಶೇಷ ಬದಲಾವಣೆಯನ್ನು ಮಾಡಿಲ್ಲವೆಂದು ತಿಳಿಯುತ್ತೇವೆ. ಲ್ಯಾಂಡ್ ರೆವಿನ್ಯೂ ಕೋಡಿನ ಕಮಿಟಿಯುವರು ಎರಡು ಅಂಶಗಳಲ್ಲಿ ಹೊರ್ತು ಇತರ ವಿಷಯಗಳಲ್ಲಿ ವಿಶೇಷವಾಗಿ ಬದಲಾವಣೆಗಳನ್ನೇನೂ ಮಾಡಲಿಲ್ಲ. ಮೇಲ್ಕಂಡ ಎರಡು ಅಂಶಗಳು ಯಾವವಂದರೆ :—

೧ನೇದು.—ಮಸೂದಾ ಕಾನೂನಿನ 7ನೇ ಅಧ್ಯಾಯದಲ್ಲಿ ನಮೂದಾಗತಕ್ಕ ಇನಾಂದಾರರುಗಳಿಗೂ ಅವರ ಷಿಕ್ಮೀದಾರರುಗಳಿಗೂ ಇರತಕ್ಕ ಸಂಬಂಧದ ವಿಷಯುವು ಮಸೂದೆಯ 86ನೇ ಸೆಕ್ಷನಿನಲ್ಲಿ ವಿವರಿಸಲ್ಪಟ್ಟಿರುವ ಅನುಭವ ಷಿಕ್ಮೀದಾರಿ ಹಕ್ಕು ಎಂಬುವದು 12 ಅಥವಾ ಜಾಸ್ತೀ ವರುಷಗಳ ಸ್ವಾಧೀನ ಮಾತ್ರದಿಂದಲೇವೆ ಉಂಟಾಗಕೂಡದೆಂದು ಅಭಿಪ್ರಾಯಪಟ್ಟು ಧಾನ್ಯ ರೂಪಕವಾಗಿ ಆಗಲಿ ನಗದು ರೂಪಕವಾಗಿ ಆಗಲಿ ಗುತ್ತಿಗೆಯನ್ನು ಕೊಡತಕ್ಕ ಎಲ್ಲ ಕದೀಂ ಷಿಕ್ಮೀದಾರರುಗಳ ಹಕ್ಕಿನ ಬಚಾವಣೆ ವಿಷಯದಲ್ಲಿ ಏರ್ಪಾಡು ಮಾಡಿರುತ್ತಾರೆ.

೨ನೇದು.—ಮಸೂದಾ ಕಾನೂನಿನ 124ನೇ ಸೆಕ್ಷನಿನ (ಬಿ) ಮತ್ತು (ಸಿ) ಕ್ಲಾಜುಗಳನ್ನು ತೆಗದುಹಾಕಬೇಕೆಂದು ಕಮಿಟಿಯುವರು ಅಭಿಪ್ರಾಯ ಪಡುತ್ತಾರೆ. ಮಸೂದೆಯ 123–124ನೇ ಸೆಕ್ಷನ್ಗಳು ಮುಂಬೈ ರೆವಿನ್ಯೂ

ಕೋಡಿನ 106–107ನೇ ಸೆಕ್ಷನ್ನಗಳನ್ನು ಅನುಸರಿಸಿರುತ್ತವೆ. 123ನೇ ಸೆಕ್ಷನಿನಲ್ಲಿ ಹಾಲೀ ಜಾರಿಯಲ್ಲಿರುವ ಸೆಟಲ'ಮೆಂಟಿನ ವಾಯಿದೆ ಪೂರೈಸಿದ ಅನಂತರ ಹೊಸದಾಗಿ ಸೆಟಲ'ಮೆಂಟ ಠರಾವು ಮಾಡುವದರಲ್ಲಿ ಸ್ವಂತ ದ್ರವ್ಯದಿಂದಲಾಗಲಿ ಇತರ ಸ್ವಂತ ಸಾಧನಗಳ ದೆಸೆಯಿಂದಲಾಗಲಿ ಮಾಡಲ್ಪಟ್ಟ ಅಭಿವೃದ್ಧಿಗಳ ಮೇಲೆ ಹೆಚ್ಚು ಕಂದಾಯ ಹಾಕದೆ ಭೂಗುಣ, ಸ್ಥಳ ವಿಶೇಷ, ಜಿನಸಿ ಧಾರಣೆ, ಆಮದ ರಫ್ತಿನ ಸೌಲಭ್ಯ, ಈ ಸಾಮಾನ್ಯವಾದ ಅನುಕೂಲಗಳ ದೆಸೆಯಿಂದುಂಟಾಗುವ ಜಮೀನಿನ ಮೌಲ್ಯದಮೇಲೆ ಹೊಸ ಕಂದಾಯವನ್ನು ಠರಾಯಿಸಬೇಕೆಂದು ವಿಧಿಸಿಧೆ. 124ನೇ ಸೆಕ್ಷನಿನಲ್ಲಿ

(a) ಸರಕಾರ ಖರ್ಚಿನಿಂದ ಮಾಡಿಸಲ್ಪಟ್ಟ ಕಾಮಗಾರಿ ವಗೈರೆ ಆಧಾರದಿಂದ ಜಮೀನು ಅಭಿವೃದ್ಧಿಯಾಗಿದ್ದಲ್ಲಿ, ಅಥವಾ.—

(b) ಸ್ವಾಭಾವಿಕವಾದ ಅನುಕೂಲಗಳನ್ನು ಉಪಯೋಗಿಸಿಕೊಳ್ಳುವದಕ್ಕೆ ಬೇಕಾದ ಸಾಹಿತ್ಯಗಳನ್ನು ಸ್ವಂತ ಲಾಗವಡಿನಿಂದ ಮಾಡಿಕೊಂಡಿದ್ದಾಗ್ಯೂ ಸದರೀ ಸ್ವಾಭಾವಿಕವಾದ ಅನುಕೂಲಗಳನ್ನು ಉಪಯೋಗಿಸಿ ಕೊಳ್ಳುವದರ ಮೂಲಕ ಜಮೀನು ಅಭಿವೃದ್ಧಿಯಾಗಿದ್ದಲ್ಲಿ, ಅಥವಾ.—

(c) ವ್ಯವಸಾಯದ ಸಾಧಾರಣವಾದ ಕೆಲಸಗಳಿಂದ ಫಲಿತವಾದ ಯಾವದಾದರೂ ಅಭಿವೃದ್ಧಿ ಇದ್ದಲ್ಲಿ,—

ಹೊಸದಾಗಿ ಕಂದಾಯವನ್ನು ಠರಾಯಿಸತಕ್ಕದ್ದಕ್ಕೆ ಹಿಂದಿನ ಸೆಕ್ಷನಿನ ಯಾವ ಅಂಶವೂ ಅಡ್ಡಿಮಾಡುವದಿಲ್ಲವೆಂದು ಹೇಳಲ್ಪಟ್ಟಿಧೆ.

(ಯೆ) ಕ್ಲಾಜಿನಲ್ಲಿ ನಮೂದಿರುವದು ಬಹಳ ನ್ಯಾಯವಾಗಿರುತ್ತದೆ.

(ಬಿ) ಕ್ಲಾಜು ಈ ಶೀಮೆಯಲ್ಲಿ ಸಾಮಾನ್ಯವಾಗಿ ರೈತರು ಮಾಡತಕ್ಕ ಅಭಿವೃದ್ಧಿಯನ್ನಿಸಿಕೊಳ್ಳುವ ಸ್ವಂತ ಬಾವಡಿಗಳನ್ನು ಕಂದಾಯಕ್ಕೆ ವಳಪಡಿಸಲು ಅಧಿಕಾರವನ್ನುಂಟುಮಾಡುವಂತೆ ಅನ್ವಯಿಸುವಹಾಗೆ ಭಾವಿಸಲ್ಪಟ್ಟಿಧೆ. ಆದರೆ ಭೂಮಿಯೊಳಗಿರತಕ್ಕ ಜಲವು ಸ್ವಾಭಾವಿಕವಾದ ಅನುಕೂಲವೆಂದನ್ನಿಸಿಕೊಳ್ಳುತ್ತದೆ. ರೈತನು ಭೂಮಿಯನ್ನು ತೆಗೆದಲ್ಲಿ ಈ ಅನುಕೂಲವನ್ನು ಉಪಯೋಗಿಸಿಕೊಳ್ಳುವದಕ್ಕೆ ಮಾರ್ಗವನ್ನುಂಟುಮಾಡಿ ಕೊಂಡಹಾಗೆ ಆಗುತ್ತೆ. ಆದ್ದರಿಂದ ನ್ಯಾಯದ ಸೂಕ್ಷ್ಮಾಂಶವನ್ನು ಪರ್ಯಾಲೋಚಿಸಿದಲ್ಲಿ ಹಾತಲಾಗವಡು ಬಾವಡಿಗಳನ್ನು ಕಂದಾಯಕ್ಕೆ ವಳಪಡಿಸುವದು ಒಂದು ವೇಳೆ ನ್ಯಾಯವಾಗಿಧೆಯೆಂದು ಊಹಿಸಬಹುದಾದಾಗ್ಯೂ ರೈತನು ವಿಶೇಷ ಶ್ರಮಪಟ್ಟು ದ್ರವ್ಯ ವ್ರಯಮಾಡಿ ತಯಾರ್ಮಾಡಿಸಿದ ಇಂಥಾ ಉಪಯೋಗಕರವಾದ ಬಾವಡಿಗಳನ್ನು ಕಂದಾಯಕ್ಕೆ ವಳಪಡಿಸುವದು ಶುದ್ಧ ಅಸಂಗತವಾದ್ದೆಂಬುವದಕ್ಕೇನೂ ಸಂಶಯವಿಲ್ಲ. ಈ ಶೀಮೆಯ ಕೋಡಿನಿಂದ ಮೇಲ್ಕಂಡ ಅಂಶವನ್ನು ತೆಗೆದು ಹಾಕೋಣದರಿಂದ ಬ್ರಿಟಿಷ್ ಇಂಡಿಯಾದಲ್ಲಿ ಮುಂದೆ ಜಾರಿಗೆ ಬರಬಹುದಾದ ಏರ್ಪಾಡನ್ನು ನಮ್ಮ ಶೀಮೆಯಲ್ಲಿ ಸ್ವಲ್ಪ ಮುಂಚಿತವಾಗಿಯೇ ಮಾಡಿದಹಾಗೆ ಆಗುತ್ತೆ.

(ಸಿ) ಕ್ಲಾಜಿನಲ್ಲಿ ವ್ಯವಸಾಯದ ಸಾಧಾರಣ ಕೆಲಸಗಳಿಂದ ಫಲಿತವಾದ ಯಾವದಾದರೂ ಅಭಿವೃದ್ಧಿಮೇಲೆ ಹೊಸ ಕಂದಾಯ ಹಾಕಬಹುದೆಂದು ನಮೂದಿಸಿಧೆ. ಈ ಕ್ಲಾಜನ್ನು ಪ್ರಕಾರಾಂತರವಾಗಿ ಅರ್ಥಮಾಡಿ ವಿಧವಿಧವಾದ ಅಭಿಪ್ರಾಯಗಳಿರುವದರಿಂದ ಇದನ್ನೂ ತೆಗೆದುಹಾಕಬಹುದು.

ಈ ಮೇರೆ ಕಾನೂನನ್ನು ತಿದ್ದುಪಾಡು ಮಾಡಿದಲ್ಲಿ ಈಗಿನ ಸೆಟಲ'ಮೆಂಟಿನ ಪ್ರಕಾರ ರೈತನ ಹಿಡುವಳಿಗೆ ಹೆಚ್ಚಾದ ಭರವಸೆ ಮತ್ತು ಸ್ಥೈರ್ಯವನ್ನುಂಟುಮಾಡಿದಹಾಗೆ ಆಗುತ್ತೆ. ಶಿವಾಯಿ ಹೊಸದಾಗಿ ಸೆಟಲ'ಮೆಂಟ ಠರಾವು ಮಾಡುವ ಕಾಲದಲ್ಲಿ ಜಮೀನು ಇರತಕ್ಕ ಸ್ಥಳ, ಜಿನಸಿ ಧಾರಣೆ ಮತ್ತು ಆಮದ ರಫ್ತಿನ ಸೌಲಭ್ಯ ಈ ಸಾಮಾನ್ಯವಾದ ಅನುಕೂಲತೆಗಳನ್ನು ಮಟ್ಟಿಗೆ ಗಣನೆಗೆ ತೆಗೆದುಕೊಂಡು ಕಂದಾಯವನ್ನು ಠರಾವು ಮಾಡಬೇಕೆಂದು 123ನೇ ಸೆಕ್ಷನಿನಲ್ಲಿ ವಿಧಿಸುವದರಿಂದ ರೈತರಿಗೆ ಪ್ರಯೋಜನಕರವಾದ್ದೆಂದು ತೋರುತ್ತೆ. ಇದರಿಂದ ಹೊಸ ಸೆಟಲ'ಮೆಂಟಿನಲ್ಲಿ ಭೂಗುಣಾನುಸಾರ ಪುನಹ ತರಂ ವಿಂಗಡಿಸತಕ್ಕ ಆವಶ್ಯಕತೆಯು ತಪ್ಪುವದಲ್ಲದೆ ರೈತರ ಜಮೀನುಗಳನ್ನು ಎರಡನೇ ದಫಾ ಸರ್ವೇಮಾಡಿ ತರಂ ವಿಂಗಡಿಸುವದರಿಂದುಂಟಾಗುವ ಅನನುಕೂಲಗಳೂ ರೈತನಿಗೆ ತಪ್ಪುವವು.

ಲ್ಯಾಂಡ್ ರೆವಿನ್ಯೂ ಕೋಡಿಗೆ ಸಂಬಂಧಪಟ್ಟ ಮೇಲೆಕಂಡ ಮತ್ತು ಇತರ ಅಂಶಗಳ ವಿಷಯದಲ್ಲಿ ತಮ್ಮಗಳ ಅಭಿಪ್ರಾಯಗಳನ್ನು ತಿಳಿಯಲು ಗವರ್ನಮೆಂಟಿನವರು ಅಪೇಕ್ಷಿಸುತ್ತಾರೆ. ಈಚಿಗೆ ಘಾಯಿಷ್ ಮಾಡಲ್ಪಟ್ಟಿರುವ ಈವಿಷಯಕವಾದ ಕಾಗದಪತ್ರಗಳಲ್ಲಿ ಕಮಿಟಿಯವರು ಶಿಫಾರಸ್ ಮಾಡಿರುವ ತಿದ್ದುಪಾಟುಗಳು ವಿವರಿಸಲ್ಪಟ್ಟಿವೆ. ಈ ಕಾನೂನು ಬರುವ ಯಪ್ರಿಲ್ ಗುರ್ರೆ ಲಾಗಾಯತು ಜಾರಿಗೆ ಬರಬೇಕೆಂದು ಗವರ್ನಮೆಂಟಿನವರು ಪ್ರಯತ್ನಿಸುತ್ತಿಧಾರೆ.

ಮೆಡಿಕಲ್‌ಯಾನೆ ವೈದ್ಯದ ಮತ್ತು ವಿದ್ಯಾಭ್ಯಾಸದ ಇಲಾಖೆಗಳ ಲವಾಜಮೆ ವಿಷಯದಲ್ಲಿ ಈಚಿಗೆ ಮಾಡಿರುವ ಏರ್ಪಾಡಿನ ತಪಶೀಲು ತಮಗೆ ಚನ್ನಾಗಿ ತಿಳಿದೇ ಇರುತ್ತೆ. ಮೆಡಿಕಲ್ ತಾಬೇದಾರಿ ಉದ್ಯೋಗಸ್ಥರಲ್ಲಿ ಯೂರೋಪಿಯರ್ನರಿಗೆ ಬದಲಾಗಿ ದೇಶೀಯರನ್ನು ಮೊಕರರ್ ಮಾಡೋಣದರಿಂದ ಈ ಇಲಾಖೆಯು ನೇಟಿವ್ ಸಂಸ್ಥಾನದ ಅನುಕೂಲತೆಗೆ ಸರಿಯಾಗುವಂತೆ ಏರ್ಪಾಡು ಮಾಡಲ್ಪಡುವದು. ವಿದ್ಯಾಭ್ಯಾಸದ ಇಲಾಖೆ ವಿಷಯದಲ್ಲಿ ಮಾಡಿರುವ ಏರ್ಪಾಡು ಪ್ರಕಾರ ಈ ಇಲಾಖೆಯ ಎಲ್ಲ ತರಗತಿಯ ಆಫೀಸರುಗಳಿಗೂ ಕ್ಲುಪ್ತವಾದ ಕಾಲಗಳಲ್ಲಿ ಗೊತ್ತಾದ ಬಡತಿಗಳು ಇತರ ಇಲಾಖೆ ಆಫೀಸರುಗಳಿಗೆ ಇರತಕ್ಕ ಬಡತಿಗಳಿಗೆ ಕಮ್ಮಿಯಿಲ್ಲದ ಹಾಗೆ ಶಿಕ್ಕುವದರಿಂದ ಈ ಇಲಾಖೆಗೆ ಯೋಗ್ಯರಾದ ಟೀಚರರು ದೊರಕುವರು.

1883—84ನೇ ಇಸವಿಯಲ್ಲಿ ಕಲ್ಕತ್ತಾದಲ್ಲಿ ನಡದ ಎಗ್ಸಿಬಿಷನ್‌ಗೆ ಮೈಸೂರು ಶೀಮೆಯಿಂದ ಕೆಲವು ಸಾಮಾನುಗಳು ಕಳುಹಿಸಿಕೊಡಲ್ಪಟ್ಟಿದ್ದ ಅಂಶ ತಮಗಳಿಗೆಲ್ಲಾ ಗೊತ್ತಿರಬಹುದು. ಈ ಶೀಮೆಯಲ್ಲಿ ತಯಾರಾಗತಕ್ಕ ಶ್ಲಾಘ್ಯವಾದ ಎಲ್ಲ ತರಹೇದ ಸಾಮಾನುಗಳನ್ನೂ ವದಗಿಸುವದಕ್ಕೆ ಸಾಕಾದಷ್ಟು ವ್ಯವಧಾನವಿಲ್ಲದೆ ಇದ್ದದ್ದರಿಂದ ಅವುಗಳನ್ನು ಕಳುಹಿಸಲು ಅನುಕೂಲವಾಗಲಿಲ್ಲ. ಕಲ್ಕತ್ತಾ ಎಗ್ಸಿಬಿಷನ್‌ಗೋಸ್ಕರ ಇಲ್ಲಿಂದ ಶ್ಲಾಘ್ಯವಾದ ಸಾಮಾನುಗಳನ್ನು ವದಗಿಸುವದಕ್ಕೋಸ್ಕರ ನಿಯಾಮಕವಾಗಿದ್ದ ಕಮಿಟಿಯವರ ರಿಪೋರ್ಟ್ ಇನ್ನೂ ತಯಾರಾಗಿ ಬಂದಿಲ್ಲ. ಬಂದಕೂಡ್ಲೆ ಸದರೀ ರಿಪೋರ್ಟನ್ನು ಜನಗಳ ತಿಳುವಳಿಕೆಬಗ್ಗೆ ಎಲ್ಲ ಡಿಸ್ಟ್ರಿಕ್ಟುಗಳಿಗೂ ಕಳುಹಿಸಲ್ಪಡುತ್ತೆ.

ಎಗ್ಸಿಬಿಷನ್‌ನಿಂದ ಉಂಟಾಗುವ ಪ್ರಯೋಜನಗಳನ್ನು ಯೋಚಿಸಲಾಗಿ ಇದಕ್ಕೋಸ್ಕರ ಸರಕಾರಕ್ಕೆ ಖರ್ಚಾಗಿರುವ ನಿವಳ 6,000 ರೂಪಾಯಿಗಳು ಬಹಳ ಸ್ವಲ್ಪವೆಂದು ಹೇಳಬಹುದು.

ಮೈಸೂರು ಶೀಮೆಯಿಂದ ವಿಶೇಷ ಸಾಮಾನುಗಳು ಕಲ್ಕತ್ತಾಕ್ಕೆ ಕಳುಹಿಸಿಕೊಡಲ್ಪಡದೆ ಇದ್ದಾಗ್ಯೂ ಈ ಕೆಳಗೆ ವಿವರಿಸಿರುವಂತೆ ಇನಾಮುಗಳು ದೊರತಿರುವದು ನೋಡಿದರೆ ಬಹಳ ತೃಪ್ತಿಕರವಾಗಿಧೆ:—

ಭಂಗಾರದ ಮೆಡಲ್ ಯಾನೆ ಬಿರದು ಬಿಲ್ಲೆಗಳು	2
ಫಸ್ಟ್ ಕ್ಲಾಸ್ ಸರ್ಟಿಫಿಕೇಟಗಳು ಮತ್ತು ಬೆಳ್ಳಿ ಮೆಡಲ್ ಯಾನೆ ಬಿರದು ಬಿಲ್ಲೆಗಳು ..	9
ಸೆಕೆಂಡ್ ಕ್ಲಾಸ್ ಸರ್ಟಿಫಿಕೇಟಗಳು ಮತ್ತು ಹಿತ್ತಾಳೆ ಮೆಡಲ್ ಯಾನೆ ಬಿರದು ಬಿಲ್ಲೆಗಳು ..	11
ಥರ್ಡ್ ಕ್ಲಾಸ್ ಸರ್ಟಿಫಿಕೇಟಗಳು	8

ದಂತದ ಕೆತ್ತನೆ ಕೆಲಸ, ಗಂಧದ ಚಿತ್ರಕೆಲಸ ಸಹ ವಿಶೇಷವಾಗಿ ಶ್ಲಾಘಿಸಲ್ಪಟ್ಟವು. ಧಾನ್ಯವಿಶೇಷಗಳು, ರೇಷ್ಮೆ ಬಟ್ಟೆಗಳು, ಪರಿಮಳ ದ್ರವ್ಯಗಳು, ಔಷಧದ್ರವ್ಯಗಳು, ಜೇನುತುಪ್ಪಾ, ಕಾಫಿ ಮೊದಲಾದ ಪದಾರ್ಥಗಳು ಮೆ|| ರಂಗಸ್ವಾಮಿಪಿಳ್ಳೆಯವರಿಂದ ತಯಾರ್ಮಾಡಲ್ಪಟ್ಟ ತಸ್ವೀರುಗಳೂ, ಇಂಜಿನಿಯರಿಂಗ್ ಸ್ಕೂಲ್ ವಿದ್ಯಾರ್ಥಿಗಳಿಂದ ಬರಿಯಲ್ಪಟ್ಟ ಪ್ಲಾನುಗಳೂ ಶ್ಲಾಘನೆ ಮಾಡಲ್ಪಟ್ಟವು. ಅಪ್ಪಾವುಶೆಟ್ಟಿ ಅಂಡ್ ಸನ್ಸ್‌ಯವರು ಕಳುಹಿಸಿಕೊಟ್ಟಿದ್ದ ರೆಯಿಲ್ವೆಗಾಡಿ ನಮೂನೆಗಳು ಅತ್ಯಂತ ಶ್ಲಾಘನೀಯಗಳಾಗಿದ್ದವಾದಕಾರಣ ಇತರ ರೆಯಿಲ್ವೆಯವರು ಈ ಕಂಪೆನಿಯವರಿಂದ ಪ್ಯಾಸಂಜರ್ ಗಾಡಿಗಳನ್ನಪೇಕ್ಷಿಸಿಧಾರೆ. ಇದು ಅತ್ಯಂತ ತೃಪ್ತಿಕರವಾಗಿಧೆ. ಈ ಶೀಮೆಯ ಲೋಹದ ಸಾಮಾನುಗಳಿಗೂ ಕೊಂಬಿನ ಸಾಮಾನುಗಳಿಗೂ ಮತ್ತು ಚಿತ್ರಕೆಲಸದ ಸಾಮಾನುಗಳಿಗೂ ಕಲ್ಕತ್ತಾದಲ್ಲಿ ಬಹಳವಾಗಿ ಗಿರಾಕಿ ಇತ್ತು.

ಕೂಡ್ಲೆಯೇ ಲಂಡನ್ ಮತ್ತು ಮುಂಬೈ ಷಹರುಗಳಲ್ಲಿ ಎಗ್ಸಿಬಿಷನ್‌ಗಳು ನಡಿಯುವದಾದ್ದರಿಂದ ಈ ಸ್ಥಳಗಳಿಗೆ ಕಳುಹಿಸುವಬಗ್ಗೆ ಅತ್ಯುತ್ತಮವಾದ ತರಹೇದಾರೀ ಪದಾರ್ಥಗಳನ್ನು ಒದಗಿಸುವದಕ್ಕೋಸ್ಕರ ಏರ್ಪಾಡುಗಳನ್ನು ಮಾಡುವದಲ್ಲದೆ ಈ ಶೀಮೆಯಲ್ಲಿ ನಡಿಯತಕ್ಕ ಕೈಕೆಲಸಗಳನ್ನು ಜನಗಳಿಗೆ ಪ್ರಚುರಮಾಡುವ ಉದ್ದಿಶ್ಯವಾಗಿ ಈ ಶೀಮೆಯಲ್ಲಿ ತಯಾರಾಗತಕ್ಕ ವಿಧವಿಧವಾದ ಸಾಮಾನುಗಳನ್ನು ಬೆಂಗಳೂರಲ್ಲಿ ಜಮಾಯಿಸುತ್ತೆ.

ಶ್ರೀಮನ್ಮಹಾರಾಜ ರಾಜಾಸಾಹೇಬ ಬಹದೂರವರು, ಸಾಲ ಬಸಾಲ ಶೇರುವ ಈ ಸಭೆಯ ಅಭಿವೃದ್ಧಿಯ ವಿಷಯದಲ್ಲಿ ಅತ್ಯಾಸಕ್ತಿಯುಳ್ಳವರಾಗಿರುತ್ತಾರೆ. ಈ ಸಭೆಯು ವರ್ಷೇವರ್ಷೇ ಅಭಿವೃದ್ಧಿಯನ್ನು ಹೊಂದಿ ಪ್ರಜೆಗಳಿಗೆ ಬಹಳ ಕ್ಷೇಮವನ್ನುಂಟುಮಾಡಬೇಕೆಂಬುವದೇ ಅವರ ಮುಖ್ಯವಾದ ಅಭಿಲಾಷೆಯಾಗಿರುತ್ತದೆ. ಸಮಸ್ತ ಇಲಾಖೆಗಳಲ್ಲಿಯೂ ನಡಿಯತಕ್ಕ ಆಡಳಿತಗಳಲ್ಲಿ ನಿಗಾಯಿಟ್ಟು ಅವುಗಳಲ್ಲಿ ಕಂಡುಬರುವ ವ್ಯತ್ಯಾಸ ಮತ್ತು ಲೋಪ ಇವುಗಳನ್ನು ತಾವುಗಳು ಸರಕಾರದವರ ಅವಧಾನಕ್ಕೆ ತರುವದರ ಮೂಲಕವೂ, ಸಮಸ್ತ ಪ್ರಜೆಗಳ ಕ್ಷೇಮಾತಿಶಯಗಳನ್ನು ಅಭಿವೃದ್ಧಿ ಪಡಿಸುವದಕ್ಕೋಸ್ಕರ ಸಮೀಚೀನವಾದ ಸಲಹೆಗಳನ್ನು ಕೊಡುವದರ ಮೂಲಕವೂ, ರಾಜ್ಯಪರಿಪಾಲನೆಯು ಚನ್ನಾಗಿ ನಡೆಯುವಂತೆ ಸಹಾಯ ಮಾಡತಕ್ಕದ್ದಕ್ಕೆ ತಮಗಳಿಗೆ ಸಾಧ್ಯವಾಗಿದೆ. ತಾವುಗಳು ಪ್ರಜಾಕ್ಷೇಮ ಸಂಬಂಧವಾದ ವಿಷಯಗಳನ್ನು ಶ್ರದ್ಧೆಯಿಂದ ಚರ್ಚಿಸುವದೂ ಗವರ್ನಮೆಂಟಿನವರ ಉದ್ದೇಶ್ಯಗಳನ್ನು ವಿಚಕ್ಷಣೆಯಿಂದ ಗ್ರಹಿಸುವದೂ ಸಹ ರಾಜ್ಯ ಪರಿಪಾಲನೆ ಕಾರ್ಯಕ್ಕೆ ಅತ್ಯಂತ ಸಹಾಯಕಾರಿಯಾಗಿರುತ್ತೆ.

ತಾವುಗಳು ಈ ಸಭೆಗೆ ದಯಮಾಡಿಸಿದ್ದಕ್ಕಾಗಿ ನಾವು ಬಹಳ ಕೃತಜ್ಞರಾಗಿದ್ದೇವೆ.

Mysore Government Press, Bangalore.—1884.

865

ಮೈಸೂರ ಗೆಜೆಟ್.

ನಂ. 43 ಸರ್ಕಾರದಿಂದ ಪ್ರಾಯಿಷ್ ಆದ್ದು. ಸ್ಗ 1884.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ॥ 25, ಸ್ಗ 1884.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾ೯ರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್ರಿಟೆಂಡೆಂಟರು, ಕಾಂಟ್ರೋಲರವರು, ಪಬ್ಲಿಕ್ ವರ್ಕ್‌ಸ್ ಆಫೀಸರ್‌ಗಳು, ಮೈಸೂರು ಸ್ಟೇಟ್‌ರೇಯಿಲ್‌ವೆ, ರಿಜಿಸ್ಟ್ರೇಷ್ರ ಇನ್ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ ವ ಸೆಷ್ರ ಜಡ್ಜೀರು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್‌ಸೂಪರ್ರಿಟೆಂಡೆಂಟರು; ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮ೯ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್ರಗಳು—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ಮೊಕ್ಕಾಂ ಮೈಸೂರು, ತಾರೀಖು 16ನೇ ಅಕ್ಟೋಬರ್ 1884.

ನಂ. 148.—ಇದರಿಂದ ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ದೇಶದ ಉತ್ಪತ್ತಿ ಬಾಬತು ಗಂಧದ ಮರದ ಸಾಲೀಯನಾ ಹರಾಜುಗಳು ಇದರಡೀಕಂಡ ತಾರೀಖು ವ ಸ್ಥಳಗಳಲ್ಲಿ ಆಯಾ ಡಿಸ್ಟ್ರಿಕ್ಟಿನ ಡೆ॥ ಕಮ್ಮಿಷನರ್ ವ ಫಾರೆಸ್ಟು ಆಫೀಸರ್‌ಗಳಿಂದ ನಡಿಸಲ್ಪಡುತ್ತೆ;—

			ಸ್ವಲ್ಪ ಹೆಚ್ಚು ಕಡಿಮೆಯಾಗಿ ಟನ್‌ಗಳು.
ಶ್ರೀರಂಗಪಟ್ಣ ತಾರೀಖು 1ನೇ ಡಿಶಂಬರ್ 1884	}	..	500
ಹುಣಸೂರು ತಾರೀಖು 4ನೇ ಡಿಟೋ ,,	}		
ಬೆಂಗಳೂರು ತಾರೀಖು 8ನೇ ಡಿಟೋ ,,		..	280
ಸೊರಬ ತಾರೀಖು 13ನೇ ಡಿಟೋ ,,		..	200
ಅನಂತಪುರ ತಾರೀಖು 18ನೇ ಡಿಟೋ ,,		..	200
ಶಿವಮೊಗ್ಗಾ ತಾಖು 22ನೇ ಡಿಟೋ ,,		..	500
ತೀರ್ಥಹಳ್ಳಿ ತಾರೀಖು 7ನೇ ಜನವರೀ 1885		..	200
ಚಿಕ್ಕಮಗಳೂರು ತಾ॥ 14ನೇ ಡಿಟೋ ,,		..	200
ಹಾಸನ ತಾರೀಖು 21ನೇ ಡಿಟೋ ,,		..	400

866

ಹರಾಜಿನ ಷರತ್ತುಗಳು.—ಸ್ 1874ನೇ ಇಸವಿ ಡಿಸೆಂಬರ 5ನೇ ಮರ್ಸ್ಕೂಂ 48ನೇ ನಂಬರ ಮೈಸೂರು ಗೆಜೆಟ್ಟಿನಲ್ಲಿ ಘಾಯಿಷ್ಮಾ ಡಲ್ಪಟ್ಟ ಪ್ರಕಾರ ಇರತಕ್ಕವು, ಮತ್ತು ಹರಾಜ್ ಕಾಲದಲ್ಲಿ ಹೇಳಲ್ಪಡುವವು. ತೀರ್ಥಹಳ್ಳಿ, ಚಿಕ್ಕಮಗಳೂರು ಮತ್ತು ಹಾಸನ ಈ ಸ್ಥಳಗ ಳಲ್ಲಿ ಕೊಂಡುಕೊಳ್ಳುವ ಗಂಧದ ಮರಗಳ ಕಿಮ್ಮತ್ ಪಾವತೀ ಬಗ್ಗೆ ವಾಯಿದೆಯು, 1885ನೇ ಇಸವೀ ಮಾರ್ಚಿ 25ನೇ ತಾರೀಖಿಗೆ ಆಖೈರಾಗುವದು.

ಮೊಕ್ಕಾಂ ಮೈಸೂರು, ತಾರೀಖು 21ನೇ ಅಕ್ಟೋಬರ 1884.

ನಂ. 151.—ಹಾಸನದ ಅಮಲ್ದಾರ್ ಖಾದರಅಲ್ಲೀಯವರಿಗೆ ಗುಜಹ ಮಜಕೂರು 6ನೇ ಮರ್ಸ್ಕೂಂ 143ನೇ ನಂಬರ ಇಸ್ತಿಹಾರ ನಾಮೆಯಿಂದ ಕೊಡಲ್ಪಟ್ಟ ರಜಾಕ್ಕೆ ಜಾಸ್ತಿಯಾಗಿ 15 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮೊಕ್ಕಾಂ ಮೈಸೂರು, ತಾರೀಖು 24ನೇ ಅಕ್ಟೋಬರ 1884.

ನಂ. 152.—ಶ್ರೀಮರ್ ಮಹಾರಾಜ ರಾಜಾಸಾಹೇಬ್ ಬಹದ್ದೂರವರು ಇದರಡೀ ಕಂಡ ನೊಕರರಾತಿಗಳನ್ನು ಹುಕುಂ ಮಾಡಿ ರುತ್ತಾರೆ:—

ಅಮೃತಮಹಲ್ ಇಲಾಖಾ ಇನ್‌ಚಾರ್ಜ್ ಆಫೀಸರ ಕರ್ನಲ್ ಯ. ಸಿ. ಹೇ ಯವರು, ಶ್ರೀಮರ್ ಮಹಾರಾಜರವರ ಮಿಲಿಟರಿ ಸೆಕ್ರೆಟರಿ ಯರಾಗಿಯೂ ಮೈಸೂರು ಫೌಜಿನ ಕಮ್ಯಾಂಡೆಂಟರಾಗಿಯೂ ಇರತಕ್ಕದ್ದು.

ಫಸ್ಟ್ ಮದರಾಸ ಲೈಟ ಕ್ಯಾವೆಲ್ರೀಗೆ ಸೇರಿದ ಲೆಫ್ಟಿನೆಂಟ ಆರ. ಜಿ. ಜೋನ್ಸ ಯವರು, ಮೈಸೂರು ಫೌಜಿನ ಸ್ಟ್ಯಾಫ್ ಆಫೀಸರ ರಾಗಿರತಕ್ಕದ್ದು.

ನಂ. 153.—ನಾಲ್ಕನೇ ಗ್ರೇಡ ಅಮಲ್ದಾರ ಬಿ. ಗೋಪಾಲಯ್ಯಂಗಾರು, ಅಮೃತಮಹಲ್ ಇಲಾಖಾ ಇನ್‌ಚಾರ್ಜ್ ಆಫೀಸರರಿಗೆ ಅಸಿಸ್ಟೆಂಟರಾಗಿರತಕ್ಕದ್ದು.

ನಂ. 154.—ಇದರಡೀ ಕಂಡ ನೊಕರರಾತಿಗಳು ಹುಕುಂ ಮಾಡಲ್ಪಟ್ಟಿರುತ್ತೆ:—

ಮೆ|| ಪಿ. ಯಸ್. ಅಚ್ಯುತರಾವ, ಯಲ್. ಎಂ. ಯಸ್. ಯವರು, 1884ನೇ ಇಸವಿ ಏಪ್ರಲ್ 1ನೇ ಮರ್ಸ್ಕೂಂ ಲಾಗಾಯತು 3ನೇ ಗ್ರೇಡ ಅಸಿಸ್ಟೆಂಟ ಸರಜಿಯನ್‌ರಾಗಿರತಕ್ಕದ್ದು.

ಮೆ|| ಎ. ಆರ. ವೈದ್ಯನಾಥಶಾಸ್ತ್ರಿ ಬಿ. ಎ, ಯಂ. ಬಿ, ಸಿ. ಯಂ. ಯವರು, 1884ನೇ ಇಸವಿ ಸೆಪ್ಟಂಬರ 5ನೇ ಮರ್ಸ್ಕೂಂ ಲಾಗಾಯ ತು 3ನೇ ಗ್ರೇಡ ಅಸಿಸ್ಟೆಂಟ ಸರಜಿಯನ್‌ರಾಗಿರತಕ್ಕದ್ದು.

ಮೆ|| ಪಿ. ರಾಮಾನುಜಲುನಾಯಿಡು ಎಲ್. ಯಂ. ಎಸ್. ಯವರು, ಕೆಲಸದ ಮೇಲೆ ಬಂದ ಲಾಗಾಯತು 3ನೇ ಗ್ರೇಡ ಅಸಿಸ್ಟೆಂಟ ಸರಜಿಯನ್‌ರಾಗಿರತಕ್ಕದ್ದು.

ನಂ. 155.—ಬೆಂಗಳೂರು ಡಿಸ್ಟ್ರಿಕ್ಟು ಫಾರೆಸ್ಟ ಅಸಿಸ್ಟೆಂಟ ಕನ್‌ಸರವೇಟರ ಮೆ|| ಸಿ. ನಾರಾಯಣರಾಯರು, 1884ನೇ ಇಸವಿ ಅಕ್ಟೋಬರ 20ನೇ ಮರ್ಸ್ಕೂಮಿನ ಮಧ್ಯಾನ್ಹಾತ್ಪರದಲ್ಲಿ ಅಸಿಸ್ಟೆಂಟ ಕನ್‌ಸರವೇಟರ ಆಫೀಸ ಚಾರ್ಜನ್ನು ಫಾರೆಸ್ಟ ಅಪ್ರೆಂಟಿಸ ಮೆ|| ಎಸ್. ಪಿ. ಬಾಪೂರಾಯರಿಗೆ ಒಪ್ಪಿಸಿರುತ್ತಾರೆ.

ಬಮೋಜಿಬ್ ಹುಕುಂ,
ಆರ. ವಿಜಯಿಂದ್ರರಾವ,
ಸೆಕ್ರೆಟೇರಿ.

ಮಿಲಿಟೇರಿ ಇಲಾಖಾ.

ತಾರೀಖು 1ನೇ ಸೆಪ್ಟಂಬರ 1884.

ಮೈಸೂರು ಪೈದಲ್ ಫೌಜಿನಲ್ಲಿ ಇದರಡೀ ಕಂಡ ಬಡ್ತಿಗಳು ಮಾಹೆ ಮಜಕೂರು 1ನೇ ಮರ್ಸ್ಕೂಂ ಲಾಗಾಯತು ಮಾಡಲ್ಪಟ್ಟಿರುತವೆ:—

3ನೇ ಪಟಾಲಮಿನಲ್ಲಿ 2ನೇ ಕ್ಲಾಸ ಸುಬೇದಾರ ಮಹಮ್ಮದಗೌಸರು, ಅದೇ ಪಟಾಲಂ 1ನೇ ಕ್ಲಾಸ ಸುಬೇದಾರರಾಗಿರತಕ್ಕದ್ದು.

3ನೇ ಪಟಾಲಮಿನ 2ನೇ ಕ್ಲಾಸ ಸುಬೇದಾರ ಮಾಳಿಗೆ ನಾಯಕರು, ಅದೇ ಪಟಾಲಂ 1ನೇ ಕ್ಲಾಸ ಸುಬೇದಾರರಾಗಿರತಕ್ಕದ್ದು.

ಯ. ಸಿ. ಹೇ, ಕರ್ನಲ್,
ಅ|| ಮಿಲಿಟರಿ ಸೆಕ್ರೆಟೇರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ॥ 25, ಸ್ತ 1884.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರುವಗೈರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ರೆಸಿಡೆಂಟರ ಇಲಾಖಾ.

ಇಸ್ತಿಹಾರ್ ನಾಮೆ.

ಮೈಸೂರು ಚೀಫ್ ಕೋರ್ಟಿನಲ್ಲಿ.

ಕ್ರಿಮಿನಾಲ್ ತರಫ್.

1884ನೇ ಇಸವಿ ರೂಲಾಫ್ ಪ್ರಾಕ್ಟಿಸ್ ನಂಬರ 34.

ಪೊಲೀಸಿನವರಿಗೆ ಯಿಖ್ತ್ಯಾರಿ ಯಿಲ್ಲದೆ ಯಿರುವ ಒಂದು ಕೃತ್ಯದ ಫಿರಿಯಾದನ್ನ ಮಾಜಿಸ್ಟ್ರೇಟರು ಅಂಗೀಕರಿಸಿದಾಗ್ಯೆ ಒಂದು ಸರಿಯಾದ ಕಾಲದ ಒಳಗಾಗಿ ಪ್ರೊಸೆಸ್ ಫೀ ಕಟ್ಟಬೇಕೆಂದು ಅವರು ಗೊತ್ತು ಮಾಡಬೇಕು, ಆ ವಾಯಿದೆ ಒಳಗಾಗಿ ಫೀಜ್ ಕೊಡದೆ ಹೋದಲ್ಲಿ ಕ್ರಮವಾದ ಡಿಸ್‌ವಿಸಲ್ ಆರ್ಡರ್ ಬರಿಯುವದಕ್ಕೆ ಬಧಲಾಗಿ ಫಿರ್ಯಾದನ್ನ ವಜಾ ಮಾಡತಕ್ಕ ವಿಷಯದಲ್ಲಿ ಮಾಜಿಸ್ಟ್ರೇಟರು ತಮ್ಮ ಯುಕ್ತಾನುಸಾರ ನೆಡಿಸಬಹುದೆಂದು ಚೀಫ್ ಕೋರ್ಟಿನವರು ಹುಕುಂ ಮಾಡುತ್ತಾರೆ.

2. ಪ್ರೈವೇಟ್ ಜನ ಯಾನೆ ಕಕ್ಷಿಗಾರನ ಪ್ರಾರ್ಥನೆ ಯಿಲ್ಲದೇನೆ ಮಾಜಿಸ್ಟ್ರೇಟರು ತಾವಾಗಿ ಕೊಡುವ ಯಲ್ಲ ಪ್ರೊಸೆಸ್‌ಗಳನ್ನ ಚಾರ್ಜ್ ಯಿಲ್ಲದೇನೆ ಕೊಡಬೇಕು.

1884ನೇ ಇಸವಿ ಸೆಪ್ಟಂಬರ್ 13ನೇ ಮರಕುಂ ರೂಲ್ ಆಫ ಪ್ರಾಕ್ಟಿಸ್ ನಂಬರ್ 35.

1884ನೇ ಇಸವಿ ಏಪ್ರೆಲ್ 2ನೇ ಮರ್ಕುಂ 32ನೇ ನಂಬರ್ ಕ್ರಿಮಿನಲ್ ರೂಲ್ ಆಫ್ ಪ್ರಾಕ್ಟಿಸಿಗೆ ಜಂಟಿಸಿ ಯಿರುವ ಷೆಡ್ಯೂಲಿನ 1—2ನೇ ಕಲಂಗಳಲ್ಲಿ "ಆಜುಬಾಜು" ಯಂಬ ಮಾತುಗಳ ತರುವಾಯ "ಸುತ್ತಲು 5 ಮೈಲ್ ಫಾಸಲೆ ಒಳಗಿನ" ಯಂಬ ಮಾತುಗಳನ್ನು ಶೇರಿಸಬೇಕೆಂದು ಗವರ್ನಮೆಂಟಿನವರ ಸಾಂಕ್ಷನ್ ಮೇರೆ ಚೀಫ್ ಕೋರ್ಟಿನವರು ಹುಕುಂ ಮಾಡುತ್ತಾರೆ.

ಶಿವಿಲ್ ತರಫ್.

1884ನೇ ಇಸವಿ ಸೆಪ್ಟಂಬರ 15ನೇ ಮರಕುಂ ರೂಲ್ ಆಫ್ ಪ್ರಾಕ್ಟಿಸ್ ನಂಬರ 53.

1878ನೇ ಇಸವಿ ಮೇ 1ನೇ ಮರಕುಂ 1ನೇ ನಂಬರ ಸಿವಿಲ್ ರೂಲ್ ಆಫ್ ಪ್ರಾಕ್ಟಿಸ್‌ನಿಂದ ಕೊಡಲ್ಪಟ್ಟುಯಿರುವ ಅನುಜ್ಞೆ ನ್ನ ತಿದ್ದುಪಾಟು ಮಾಡಿ ಚೀಫ್ ಕೋರ್ಟಿನವರು ಹುಕುಂ ಮಾಡುವದೇನಂದರೆ, ಡಿಕ್ರೀ ಫೈಸಲಾಗುವವರಿಗೂ ನಡವಳಿಕೆಗಳನ್ನ ಯಿಸುವದಕ್ಕೂ ಮತ್ತು ಕೋರ್ಟಿನಿಂದ ಮೊಬಲಗನ್ನ ತೆಗದುಕೊಳ್ಳುವದಕ್ಕೂ ಸಹ ಅಡ್ವೋಕೇಟ್ ಯಾ ಪ್ಲೀಡರಿಗೆ ಅಧಿಕಾರ ಕೊಡ ಪವರ್ ಆಫ್ ಅಟ್ಟರ್ನೀ ಯಾನೆ ಮೊಖ್ತ್ಯಾರ್‌ನಾಮೆಗಳನ್ನ ರಿಕಾರ್ಡಿನಲಿ ಯಾಗುವಾಗ್ಯೆ A ಫೈಲ್ ಕಾಗದಗಳ ಜೊತೆಯಲ್ಲಿ ಕಾಪಾಡ

ಹುಕುಂ ಬಮೋಜೀಬ್,

ಎಸ್. ಹೇಮಾಜಿರಾವ್,

ರಿಜಿಸ್ಟ್ರಾರ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್‌ಜಡ್ಜೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ 235.

ಮೃತಪಟ್ಟ ಚನ್ನನರಸಪ್ಪನವರ ಆಸ್ತಿವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಅರಳೆಪ್ಯಾಟಿಗೆ ವಳಿತವಾದ ಮುದ್ವೀರಶೆಟ್ಟಿ ಪೇಟಿ ವೆಂಗಟಮ್ಮನು, ಮೃತಪಟ್ಟಸದರಿ ಚನ್ನನರಸಪ್ಪ ವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ಸ್ಥಳದ ವೆಂಗಟಮ್ಮನವರು ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಚನ್ನ ನರಸಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಗಟಮ್ಮನವರ ಅರ್ಜೀಯನ್ನು 1884ನೇ ಇಸವಿ ನವಂಬರ ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚನ್ನನರಸಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅಕ್ಟೋಬರ್ ತಿಂಗಳು 20ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತಿನೊಡನೆ ಕೊಡೋಣಾಗಿಧೆ.

1884ನೇ ಇಸವಿ ಅರ್ಜೀ ನಂಬರ 227.

ಮೃತಪಟ್ಟ ಶಾ॥ ವೆಂಕಟರಾಮಯ್ಯನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರು ಚಿಕ್ಕನಾಯಕನಹಳ್ಳಿ ಕಸಬಾದ ಗಂಡಶಿ ನರಸಪ್ಪನವರ ಮಗ ಹಿರಿಯಂಣಪ್ಪ, ಮೃತಪಟ್ಟ ಸದರೀ ಶಾ॥ ವೆಂ ಕಟರಾಮಯ್ಯನವರಿಗೆ ಅಳಿಯನಾಗಬೇಕೆಂಬ ಹಕ್ಕುದಾರೀ ಮೇಲೆ ಚಿಕ್ಕನಾಯಕನಹಳ್ಳಿ ಕಸಬಾ ಸ್ಥಳದ ಹಿರಿಯಂಣಪ್ಪ ನವರು ಚಿಕ್ಕ ನಾಯಕನಹಳ್ಳಿ ವಾಸಸ್ಥರಾಗಿ ಮೃತಪಟ್ಟ ಶಾ॥ ವೆಂಕಟರಾಮಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡು ವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹಿರಿಯಂಣಪ್ಪನವರ ಅರ್ಜಿಯನ್ನು 1884ನೇ ಇಸವಿ ನವಂಬರ್ ತಿಂಗಳು ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಾಮಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅಕ್ಟೋಬರ್ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮದಸ್ತಖತ್ತಿನೊಡನೆ ಕೊಡೋಣಾಗಿಧೆ.

ದಿವಾಳಿಯಾದ ಡಿಕ್ರಿ ದೇಣೇದಾರ ಗುಬ್ಬಿ ಸ್ಥಳದ ಸಂಜೀವಯ್ಯನ ವಿಷಯದಲ್ಲಿ.

ಸರ್ 1884ನೇ ಇಸವಿ ದಿವಾಳಿ ವ್ಯಾಜ್ಯ ನಂಬರ್ 42.

ಹುಕುಂ.

ಮೇಲ್ಕಂಡ ಸಂಜೀವಯ್ಯನು ಖುಲಾಸೆಯಾಗಬೇಕೆಂದು ಕೋರಿ ಬರದುಕೊಂಡ ಅರ್ಜಿಯು ಸಬ್ ಜಡ್ಜೀರಾದ ಸಿ. ಕ್ರೆಸ್ ಸಾಹೇಬರವರ ರೂಬರೂ ಅರ್ಜೀದಾರನ ಪರವಾಗಿ ಸಮಕ್ಷಮದಲ್ಲಿಯೂ ಮತ್ತು ಐರ್ಜ ಅರ್ಜೀದಾರನ ಲೇಣೇದಾರರಾದ 1ನೇ ಮದ್ದೋಡಪ್ಪನ ಕಡೆ ಪ್ಲೀಡರ್ ನರಸಿಹ್ಮಾಚಾರ್ರು ಯದುರಾಗಿಯೂ ದರ್ಯಾಫ್ತು ಮಾಡಲ್ಪಟ್ಟಿತು. ಈ ಕೆಳಗೆ ನಮೂದ್ಮಾಡಲ್ಪಡುವ ಲೇಣೇದಾರ್ರಿಗೆ ಈ ದರ್ಯಾಫ್ತು ನೋಟೀಸ್ ಜಾರಿಯಾಗಿದ್ದಾಗ್ಯೂ ತಾವೆ ಖುದ್ದಾಗಿಯಾಗಲಿ ಲಾಯರ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ, 2ನೇ ಕೆಂಪನಂಜಪ್ಪ, 3ನೇ ಲಿಂಗಶೆಟ್ಟಿ.

ಸದರೀ ಸಂಜೀವಯ್ಯನು ದಿವಾಳಿಯಾದವನೆಂದುನ್ನು ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದಲ್ಲಿನ ನಿರೂಪಣೆಗಳ ಫಲವನ್ನ ಹೊಂದುವದಕ್ಕೆ ಹಕ್ಕುದಾರನಾಗಿರುತ್ತಾನೆಂದು ಇದರಿಂದ ತೀರ್ಮಾನಿಸಲ್ಪಟ್ಟಿರುತದೆ. ಈ ಕೋರ್ಟಿನ ಹೆಡ್ ಮುನಷಿಯುನ್ನು ಜಾಮೀನು ಕೊಟ್ಟು ಕೂಡ್ಲೆ ಐರ್ಜ ದಿವಾಳಿಯಾದವನ ಜೆಂದಿಗಿಗೆ ರಿಸೀವರಾಗಿ ಮೊಕರರ್ಮಾಡಲ್ಪಡತಕ್ಕದ್ದೆಂದುನ್ನು ಸದರೀ ರಿಸೀವರಾದವನು ವಡನೇ ದಿವಾಳಿಯಾದವನ ಜೆಂದಗಿಗೆ ಜವಾಬ್ ಮಾಡತಕ್ಕ ಬಗ್ಯೂ ನಿಗೆವಾನಿ ಮಾಡತಕ್ಕ ಬಗ್ಯೂ ಸಹ ಕೋರ್ಟಿನವರಿಂದ ಮುಂದೆ ಆರಡರ್ ನಿರೀಕ್ಷಣೆಯಿಂದ ಮಂಜುರ್ಮಾಡಬಹುದಾದಂಥಾ ಇಬ್ಬರು ಅಥವಾ ಹೆಚ್ಚು ಸಂಖ್ಯಾಕವಾದ ಲಾಯಖ್ ಜಾಮೀನು ದಾರರೊಡನೆ ಸಾಕಾದಷ್ಟು ಈಡಿನಿಂದ ಪತ್ರವನ್ನ ಬರದುಕೊಟ್ಟು ತನ್ನ ರಿಸೀವರ ಕೆಲಸಗಳಿಗೆ ವುದ್ಯುಕ್ತ ಪಡತಕ್ಕದ್ದೆಂದುನ್ನೂ ಮತ್ತು ಸದರೀ ರಿಸೀವರನು ತಾನು ನಡಿಸಿದ ಕೆಲಸಗಳ ಪ್ರತಿಫಲಕ್ಕಾಗಿ ದಿವಾಳಿಯಾದವನ ಲೇಣೇದಾರರಿಗೆ ಬಟವಾಡೆ ಮಾಡಿದ ಮೊಬಲಗಿನ ಬಾಕಿ ಹಣದಲ್ಲಿ ದರ ಶೇಕಡಾ ರೂಪಾಯಿ ಮೇರೆ ಕಮ್ಮಿರ್ಷ ನಿಲ್ಲಿಸಿಕೊಳ್ಳತಕ್ಕದ್ದೆಂದುನ್ನೂ ಸಹ ಹುಕುಂ ಮಾಡಲ್ಪಟ್ಟಿಧೆ.

ಸರ್ 1884ನೇ ಇಸವಿ ಆಗಸ್ಟ್ 14ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ ನಮ್ಮ ದಸ್ತಖತನಿಸಿ ಕೊಡಲ್ಪಟ್ಟಿತು.

ದಿವಾಳಿಯಾದ ಡಿಕ್ರಿ ದೇಣೇದಾರ ದೇವನಹಳ್ಳಿ ಕಸಬಾದಲ್ಲಿ ಯಿರುವ ಸೈದು ಯಿಮಾಮಿನ ವಿಷಯದಲ್ಲಿ,

ಸರ್ 1884ನೇ ಇಸವಿ ದಿವಾಳಿ ಕೇಸ್ ನಂಬರು 84.

ಹುಕುಂ.

ಮೇಲ್ಕಂಡ ಸೈದ್ ಯಿಮಾಮನು ನಿರ್ಬಂಧದಿಂದ ಖುಲಾಸೆ ಆಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜಿ ಶಿ. ಕ್ರೆಸ್ ಸಾಹೇಬರವರ ರೂಬರೂ ಅರ್ಜೀದಾರನಾದ ಸೈದ್ ಯಿಮಾಮನನ್ನು ದರ್ಯಾಫ್ತು ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತಿ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ, ಕಲ್ಲಿಕೋಟೆ ಜೈತೂರುನಲ್ಲಿ ಯಿರುವ ಪೈರ್ಜ ಹುಸೇನ್ ಸಾಬಿ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಸೈದ್ ಯಿಮಾಮಸಾಬಿ ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸರ್ 1884ನೇ ಇಸವಿ ಆಗಸ್ಟ್ 28ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ನಮ್ಮ ದಸ್ತಖತನಿಸಿ ಕೊಡಲ್ಪತು.

ಸಾಲದ ಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರು ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಕೊಡಬೇಕಾದದ್ದು.	ದೆಣೇಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	ಕಲ್ಲಿಕೋಟೆ ಜೈತೂರುನಲ್ಲಿ ಯಿರುವ ಪೈರ್ಜ ಹುಸೇನ್ ಸಾಬಿ.	450—0—0	1883	ಜೈತೂರು ಮುನ್ಸಿಫ್ ಕೋರ್ಟು 1883ನೇ ಇಸವಿ ಅರಿಜಿನಲ್ 180ನೇ ನಂಬರ್ ಡಿಕ್ರಿ ಬಾಬತು.	

ದಿವಾಳಿಯಾದ ಡಿಕ್ರಿ ದೇಣೇದಾರ ಬೆಂಗಳೂರಲ್ಲಿ ಇರುವ ಗಂಗಾರಾಮನ ವಿಷಯದಲ್ಲಿ.

ಸರ್ 1884ನೇ ಇಸವಿ ದಿವಾಳಿ ಕೇಸ್ ನಂಬರು 103.

ಹುಕುಂ.

ಮೇಲ್ಕಂಡ ಗಂಗಾರಾಮನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್‌ಜಡ್ಜೀರಾದ ಸಿ. ಕ್ರೀಸ್ ಸಾಹೇಬರ ರೂಬರೂ ಅರ್ಜೀದಾರನಾದ ಗಂಗಾರಾಮನ ಪರವಾಗಿ ಮತ್ತು ಸದರೀಯವನ ಲೇಣೇದಾರ್ರಾದ 2ನೇ ಚೊಕ್ಕಲಿಂಗಾಚಾರಿಗೂ ದರ್ಯಾಫ್ತು ಮಾಡಲ್ಪಟ್ಟಿತು. ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತು ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ, ಬೆಂಗಳೂರು ಕಮ್ಮರ್ಷಿಯಲ್ ಬ್ಯಾಂಕ್

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಗಂಗಾರಾಮನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿ ಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸರ್ 1884ನೇ ಇಸವಿ ಆಗಸ್ಟ್ 14ನೇ ತಾರೀಖಿನಲ್ಲಿ ಕೋರ್ಟಿನ ಮೊಹರು ನಮ್ಮ ದಸ್ತಖತ್‌ನಿಸೀ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಕೊಟ್ಟದ್ದು?	ದೇಣೀಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ
1	ಬೆಂಗಳೂರು ಕಮರ್ಷಿಯಲ್ ಬ್ಯಾಂಕ್	49–12–0	1880	ಲೇಟ್ ಸ್ಮಾಲ್‌ಕಾಜ್ ಕೋರ್ಟಿನ 1880ನೇ ಇಸವಿ ನಂ. 28ನೇ ಡಿಕ್ರಿ	
2	ಬೆಂಗಳೂರಲ್ಲಿರುವ ಚೊಕ್ಕಲಿಂಗಾಚಾರಿ	75–0–0		ಡಿಟೋ	

ದಿವಾಳಿಯಾದ ಡಿಕ್ರಿ ದೇಣೇದಾರ ಬೆಂಗಳೂರಲ್ಲಿ ಇರುವ ಕರೂರು ಕೃಷ್ಣಶೆಟ್ಟಿ ವಿಷಯದಲ್ಲಿ.

ಸರ್ 1884ನೇ ಇಸವಿ ದಿವಾಳಿ ಕೇಸ್ ನಂಬರು 125.

ಹುಕುಂ.

ಮೇಲ್ಕಂಡ ಕರೂರು ಕೃಷ್ಣಶೆಟ್ಟಿಯು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ಸಬ್ ಜಡ್ಜ್ ಶಿ. ಕ್ರೀಸ್ ಸಾಹೇಬರ ರೂಬರೂ ಅರ್ಜಿದಾರನಾದ ಕೃಷ್ಣಶೆಟ್ಟಿ ಮತ್ತು ಸದರೀ ಯವನ ಲೇಣೇದಾರ್ರಾದ 1ನೇ ಮಹಮ್ಮದಲ್ಲೀಯವರ ತರಫ್ ಮೆ|| ರಾಮಾನುಜಯ್ಯಂಗಾರ್ರಿಗೂ ದರ್ಯಾಫ್ತು ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತು ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ, 2ನೇ ತಿಪ್ಪಯ್ಯ, 3ನೇ ಮುನಿಯಲ್ಲಪ್ಪ, 4ನೇ ಕಾಳಶೆಟ್ಟಿ, 5ನೇ ವೆಂಕಟರಾಮಶೆಟ್ಟಿ 6ನೇ ಪಾಕರ್ದಿ ಪಾಪಾಸಾಬಿ, 7ನೇ ಅಬ್ದುಲ್‌ರಹಿಮಾನ್, 8ನೇ ಮುನಿಯಪ್ಪ: 9ನೇ ಪುಟ್ಟಣ್ಣ 10ನೇ ಕೃಷ್ಣಪ್ಪ, 11ನೇ ಪಾಪಣ್ಣ, 12ನೇ ನಂಜುಂಡಶೆಟ್ಟಿ, 13ನೇ ಚನ್ನಪ್ಪ, 14ನೇ ಮರಿಶಾಮಣ್ಣ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಕೃಷ್ಣಶೆಟ್ಟಿಯು ಹೊಂದುವದಕ್ಕೆ ಹಕ್ಕುದಾರನಾಗುವದರಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿ ಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸರ್ 1884ನೇ ಇಸವಿ ಅಕ್ಟೋಬರ್ 13ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರು ನಮ್ಮ ದಸ್ತಖತ್‌ನಿಸೀ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು.	ಲೇಣೆದಾರರು ಅಥವಾ ದಾವಾದಾರರು ಮತ್ತು ಏವರ ಮತ್ತು ಹಾಲೀತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.			ಮೊಬಲಗಿಗೆ ಬಡ್ಡಿ ಬಡ್ಡಿ.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	ಹಜಾರೀ ಮಹಮ್ಮದಲ್ಲಿ ..	268	8	0	0	ಡಿಕ್ರಿ ಬಾ॥ ಮೊಬಲಗು.	
2	ಯಲಹಂಕದ ತಿಪ್ಪಯ್ಯ ..	273	11	11	0	ಡಿಟೋ	
3	ದೇವರಿಂಟಿ ಮುನಿಯಪ್ಪ ..	181	13	9	0	ಡಿಟೋ	
4	ಮಳವಳ್ಳಿ ಕಾಳಶೆಟ್ಟಿ ..	119	9	9	0	ಡಿಟೋ	
5	ಕರೂರು ವೆಂಕಟರಾಮಶೆಟ್ಟಿ ..	171	12	2	0	ಡಿಟೋ	
6	ಪಾಕರ್ದಿ ಪಾಪಾಸಾಬಿ ..	86	11	6	0	ಡಿಟೋ	
7	ಮುರ್ಷಿ ಅಬ್ದುಲ್‌ಖಾದರ್‌ಸಾಬಿ ..	14	0	0	0	ಡಿಟೋ	
8	ಗೊಟ್ಟಿಗೆರೆ ಮುನಿಯಪ್ಪ ..	26	0	0	0	ಡಿಟೋ	
9	ಚಿತ್ರದುರ್ಗದ ಪುಟ್ಟಣ್ಣ ..	55	0	0	0	ಸಾಲದ ಮೊಬಲಗು.	
10	ಜವುಳಿಅಂಗಡಿ ಕೃಷ್ಣಪ್ಪ	17	3	3	0	ಡಿಟೋ	
11	ಕಿತ್ತಕನೂರು ಪಾಪಣ್ಣ ..	40	0	0	0	ಡಿಟೋ	
12	ಕರೂರು ನಂಜುಂಡಶೆಟ್ಟಿ ..	100	0	0	0	ಡಿಟೋ	
13	ಅರಳೆಪ್ಯಾಟೆ ಚನ್ನಪ್ಪ ..	16	3	3	0	ಡಿಟೋ	
14	ಮಂಡಿ ಮರಿಅಮ್ಮಣ್ಣ	38	12	1	0	ಡಿಟೋ	
	ಜುಮ್ಲಾ ..	1,409	5	8	..	..	

ಸ್ಟ 1884ನೇ ಇಸವಿ ಮಿಸಲೇನಿಯಸ್ ನಂ. 128.

ದಿವಾಳಿಯಾದ ಡಿಕ್ರಿ ದೇಣೇದಾರಳಾದ ಕೋಲಾರದ ಡಿಸ್ಟ್ರಿಕ್ಟು, ಶಿಡ್ಲಘಟ್ಟದ ತಾ॥, ವಡಿಗೇನಹಳ್ಳಿಯಲ್ಲಿರುವ ನಟುವ ಲಕ್ಷ್ಮಿಯ ವಿಷಯದಲ್ಲಿ.

ಸ್ಟ 1884ನೇ ಇಸವಿ ದಿವಾಳಿ ಕೇಸ್ ನಂ. 128.

ಹುಕುಂ.

ಮೇಲ್ಕಂಡ ನಟುವ ಲಕ್ಷ್ಮಿಯು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ಬೆಂಗಳೂರು ಸಬ್ ಜಡ್ಜು ಸಿ. ಕ್ರೈಸ್ ಸಾಹೇಬರವರ ರೂಬರೂ ಅರ್ಜಿದಾರಳಾದ ನಟುವ ಲಕ್ಷ್ಮಿಯನ್ನು ಮತ್ತು ಸದರೀಯವಳ ಲೇಣೇದಾರರಾದ 1ನೇ ಚಿಕ್ಕಕೋನಪ್ಪ, 2ನೇ ಶಿದ್ದಮುನಿಯಪ್ಪ ಇವರುಗಳಿಗೂ ದರ್ಯಾಫ್ತು ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತು ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ, ಚಿಕ್ಕನಂಜುಂಡಪ್ಪ.

ಸಿವಿಲ್ ಪ್ರೊಸಿಡ್ಯೂರ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ನಟವ ಲಕ್ಷ್ಮಿಯು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವಳನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವಳನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ನ 1884ನೇ ಇಸವಿ ಅಕ್ಟೋಬರ 16ನೇ ತಾರೀಖಿನಲ್ಲಿ ಈ ಕೋರ್ಟು ಮೊಹರು ನಮ್ಮ ದಸ್ತಖತನಿಸಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರು ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಸಾಲ ಕೊಟ್ಟ ದಿವಸ ಯಾವಾಗ.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	ವಡಿಗೇನಹಳ್ಳಿಯಲ್ಲಿರುವ ಚಿಕ್ಕ ಕೋನಪ್ಪನವರಿಗೆ.	10-0-0	1881—82	ಪತ್ರದ ಬಾಬತು.	
2	ಡಿಟೋ ಊರು ಶಿದ್ದಮುನಿಯಪ್ಪನವರಿಗೆ.	12-0-0	1881—82	ಡಿಟೋ	
3	ಡಿಟೋ ನಂಜುಂಡಪ್ಪನವರಿಗೆ.	30-1-8	1883	ಚಿಕ್ಕಬಳ್ಳಾಪುರದ ಮುನಸಿಫ್ ಕೋರ್ಟು ಡಿಕ್ರಿ ಬಾಬತು. 1883ನೇ ಇಸವಿ ಅರಿಜಿನಲ್ ನಂಬರ 661ನೇ ನಂ. ಡಿಕರಿ.	

ದಿವಾಳಿಯಾದ ಡಿಕ್ರಿ ದೇಣೇದಾರ ಕೋಲಾರ ಕಸಬಾವಲ್ಲಿರುವ ಹರ್ಸಸಾಬಿ ಮಗ ಇಮಾಂಸಾಬನ ವಿಷಯದಲ್ಲಿ.

ಸ್ನ 1884ನೇ ಇಸವಿ ದಿವಾಳಿ ಕೇಸ್ ನಂಬರು 149.

ಹುಕುಂ.

ಮೇಲ್ಕಂಡ ಇಮಾಂಸಾಬನು ನಿರ್ಬಂಧದಿಂದ ಖುಲಾಸೆ ಆಗಬೇಕೆಂದು ಕೊಟ್ಟ ಅರ್ಜಿ ಅಂಶವು ಸಬ್ ಜಡ್ಜ್ ಸಿ. ಕ್ರೆಸ್ ಸಾಹೇಬರ ರೂಬರೂ ಅರ್ಜಿದಾರನಾದ ಇಮಾಂಸಾಬಿಯನ್ನು ಮತ್ತು ಸದರೀಯವನ ಲೇಣೇದಾರಾದ ಕೀಲಕೋಟೆ ರಾಮಣ್ಣನ ತರಫ್ ರಾಮಾನುಜ ಯ್ಯಾಂಗಾರ್ರಿಗೂ ದರ್ಯಾಫ್ತಿ ಮಾಡಲ್ಪಟ್ಟಿತು.

ಈ ಕಳಗೆ ನಮೂದು ಮಾಡಲ್ಪಡುವ ಲೇಣೇದಾರು ತಮಗೆ ಈ ದರ್ಯಾಫ್ತಿ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ—ಇಲ್ಲ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಇಮಾಂಸಾಬನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ನ 1884ನೇ ಇಸವಿ ಅಕ್ಟೋಬರ 9ನೇ ತಾರೀಖಿನಲ್ಲಿ ಈ ಕೋರ್ಟು ಮೊಹರು ನಮ್ಮ ದಸ್ತಖತನಿಸಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರು ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಸಾಲ ಕೊಟ್ಟ ದಿವಸ ಯಾವಾಗ.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	ಕೋಲಾರ ಕಸಬಾದಲ್ಲಿ ಇರುವ ಬ್ಯಾಂಕ್ ಯೇಜಂಟ್ ಕೀಲ್‌ಕೋಟೆ ರಾಮಣ್ಣ.	80	1878	ಕೋಲಾರ ಮುನಸಿಫ್ ಕೋರ್ಟು 1878ನೇ ಇಸವಿ ಶಿವಿಲ್ 197ನೇ ನಂ. ಡಿಕ್ರಿ ಬಾಬತು.	

ಸಿ. ಕ್ರೆಸ್,
ಸಬ್ ಜಡ್ಜ್.

ತಾರೀಖು 24ನೇ ಅಕ್ಟೋಬರ್ 1884.

ಕ್ಲೋಸ್‌ಪೇಟೆ ಮತ್ತು ಹೊಸಕೋಟೆ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸುಗಳಲ್ಲಿ ಬೇವಾರಸಾಗಿ ಯಿರತಕ್ಕ ಈ ಕೆಳಗೆ ವಿವರಿಸೋಣಾದ ದಸ್ತಾವೇಜುಗಳನ್ನು ಹಾಜರ್ ಮಾಡಿದವರೆ ಆಗಲಿ ಅಥವಾ ವಾಪಸ್‌ಪಡಿಯಲಿಕ್ಕೆ ಅವರಿಂದ ಕ್ರಮವಾದ ಅಧಿಕಾರಹೊಂದಿದ ಮುತಾಲೀಕರಾಗಲಿ ಈ ನೋಟೀಸ್ ತಾರೀಖು ಲಾಗಾಯತು ಬಂದು ತಿಂಗಳ ಒಳಗಾಗಿ ಡಿಟೋ ಸಬ್ ರಿಜಿಸ್ಟ್ರಾರ್ ಆಫೀಸಿಗಳಲ್ಲಿ ಹಾಜರಾಗಿ ವಾಪಸ್ ತೆಗೆದುಕೊಳ್ಳಬೇಕು, ತಪ್ಪಿದರೆ ಸರ್ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷರ್ ಆಕ್ಟು 85ನೇ ಸೆಕ್ಷರ್ ಅನುಸರಿಸಿ ನಾಶವಾಡಲ್ಪಡುತ್ತೆ:—

ತಾಲ್ಲೂಕು ಹೆಸರು.	ದಸ್ತಾವೇಜಿನ ನಂ.	ದಸ್ತಾವೇಜು ಬರೆದುಕೊಟ್ಟ ತಾರೀಖು.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರದುಕೊಂಡವರ ಹೆಸರು, ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
ಕ್ಲೋಸ್‌ಪೇಟೆ ತಾಲ್ಲೂಕು.	35 / 82—83	24 6 82	29 6 82	29 6 82	ಕ್ಲೋಸ್‌ಪೇಟೆ ಕಸಬಾ ಬಸ್ತಿಯಲ್ಲಿರುವ ಅಗಬರ್‌ಸಾಬರ ಮಮ್ಮಸಾಬರ ಮಗ ಮಹಮ್ಮದ್ ಹಿಸಿಹಾಕ್‌ಸಾಬ್	ಕ್ಲೋಸ್‌ಪೇಟೆ ಕಸಬಾ ಬಸ್ತಿಯಲ್ಲಿರುವ ಸೈಯದ್ ದಾವೂದ್‌ಸಾಬರ ಮಗ ಸೈಯದ್‌ಅಹಮ್ಮದ್‌ಸಾಬ್.	ಶೆಟ್ಟಹಳ್ಳಿ ಗ್ರಾಮದ 51ನೇ ನಂಬರ್ ಬಾಗಾಯಿತು ಜಮೀನ್ 130 ರೂಪಾಯಿಗಳಿಗೆ ಕ್ರಯಮಾಡಿ ಇರುವದಾಗಿ.
ಹೊಸಕೋಟೆ ತಾಲ್ಲೂಕು.	96 / 82—83	17 8 82	17 8 82	17 8 82	ಹೊಸಕೋಟೆ ತಾಲ್ಲೂಕು ನಂದಗುಡಿ ನಾಗಪ್ಪನವರ ಮಗ ವೆಂಕಟಕೃಷ್ಣಪ್ಪ.	ಕೊರಟಿಗೆರೆ ತಾಲ್ಲೂಕು ಹೊಳವನಹಳ್ಳಿ ಶೇಷಾಚಾರ್	ನಂದಗುಡಿ ಹೋಬಳಿ ಅಗ್ರಹಾರದ ವಡಹಳ್ಳಿ ಗ್ರಾಮದಲ್ಲಿ ತನ್ನ ಹಿಸ್ಸೆ ಗ್ರಾಮವನ್ನು 500 ರೂಪಾಯಿಗಳಿಗೆ ಕ್ರಯಮಾಡಿ ಇರುವದಾಗಿ.

ಇ. ಸಿ. ಷಣ್ಮುಗವೇಲುಪಿಳ್ಳೆ,
ಫಾರ್ ರಿಜಿಸ್ಟ್ರಾರ್.

ತುಮಕೂರು ಡಿಸ್ಟ್ರಿಕ್ಟು.

ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರ ಆಫೀಸಿನಿಂದ.

ಇಸ್ತಿಹಾರ್ ನಾಮೆ.

ತಾರೀಖು 16ನೇ ಅಕ್ಟೋಬರ್ 1884.

ಸರ್ 1884ನೇ ಇಸವಿ ನವೆಂಬರ್ ಗುರ್ರೇ ಲಾಗಾಯತು ಸರ್ 1885ನೇ ಇಸವಿ ಅಕ್ಟೋಬರ್ 31ನೇ ತಾರೀಖು ವರಿಗೆ ಬಂದು ಸಾಲ್ ವರಿಗೆ ದೇವರಾಯದುರ್ಗದ ಫಾರೆಸ್ಟಿನಿಂದ ತುಮಕೂರು ರೈಲ್ವೇ ಸ್ಟೇಷನಿಗೆ (ಫಾಸಲೆ 8ರ ಲಾಗಾಯತು 12 ಮೈಲ್) ಮಾಹೆಯಾನಾ 200ಟರ್ ಅಥವಾ ಜಾಸ್ತಿ ಸಾದೆ ಸರಬರಾಯಿ ಮಾಡುವ ಬಗ್ಯೆ ಸರ್ ಮಜಕೂರ್ ನವೆಂಬರ್ 15ನೇ ತಾರೀಖು ವರಿಗೆ ಈ ಆಫೀಸಿನಿಂದ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳು ತೆಗಿಯಲ್‌ಪಡುವವು.

2. ಕಂಟ್ರಾಕ್ಟದಾರನು ಪ್ರತಿತಿಂಗಳ ಗುರ್ರೇ ತಾರೀಖಿಗೆ ಮೇಲೆ ನಮೂದಿಸಿದ ಮೊತ್ತದ ಸಾದೆಯನ್ನ ತುಮಕೂರು ಸ್ಟೇಷರ್‌ಬಳಿ ಕೊಡಬೇಕು. ಈರೀತಿ ನಡಿಸತಕ್ಕ ಬಗ್ಯೆ ಕಂಟ್ರಾಕ್ಟದಾರನು ವೊಂದು ತಿಂಗಳಿಗೆ ಸಪ್ಲೈಮಾಡಬೇಕಾದ ಸಾದೆಯನ್ನ ಮುಂಚಿತವಾಗಿ ಸ್ಟೇಷರ್ ಬಳಿ ಜಮಾಯಿಸಿಕೊಂಡಿರಬಹುದು.

3. ಗಿಡಗಳು ಕತ್ರಾಯಿಸತಕ್ಕ ವಿಧ ಮತ್ತು ಸಾದೆ ಕತ್ರಾಯಿಸುವ ಜಾಗ ಸಹ ಫಾರೆಸ್ಟು ಇಲಾಖೆಯವರಿಂದ ಗೊತ್ತು ಮಾಡಲ್ಪಡುತ್ತೆ.

4. ಕಂಟ್ರಾಕ್ಟಿನ ಷರತ್ತುಗಳ ದೇಖೀಲ್ ಹೆಚ್ಚಿಗೆ ತಪಸೀಲ್‌ಗಳು ಈ ಆಫೀಸಿನಿಂದ ಮೊಖ್ತಾ ಆಗಲಿ ಅಥವಾ ಅರ್ಜೀ ಮೂಲಕವೇ ಆಗಲಿ ತಿಳಿದುಕೊಳ್ಳಬಹುದು.

5. ತುಮಕೂರು ಸ್ಟೇಷನಿಗೆ ಸಾದೆಯು ಯಾವ ಕಮ್ಮಿ ದರಕ್ಕೆ ಕಂಟ್ರಾಕ್ಟದಾರು ಸರಬರಾಯಿ ಮಾಡಲು ಒಪ್ಪುತ್ತಾರೋ ಅಂಥಾ ಕಮ್ಮಿ ದರವನ್ನ ಪ್ರತಿ ದರಖಾಸ್ತಿನಲ್ಲಿಯೂ ನಮೂದಿಸಲ್ಪಡಬೇಕು, ನಗದಾಗಿಯಾಗಲಿ ಕರೆನ್ಸಿನೋಟ್‌ಗಳ ಮೂಲಕವಾಗಿಯಾಗಲಿ

(50) ರೂಪಾಯಿಗಳ ಡಿಪಾಜಿಟ ದರಖಾಸ್ತು ವಡನೆ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತೂ ತೆಗದುಕೊಳ್ಳುವದಿಲ್ಲ. ಸಾದೆ ಕಡಿಯುವಣೆ, ಕುಯ್ಯುವಣೆ, ಸಾಗಿಸೋಣ, ರೈಲ್ವೇ ಸ್ಟೇಷನಬಳಿ ಶೇರಿಸೋಣ, ಯಿವುಗಳಿಗೆ ಸಂಬಂಧಪಟ್ಟ ತವಾಂ ಖರ್ಚುಗಳೂ ದರಗಳಲ್ಲಿ ಶೇರಿ ಯಿರತಕ್ಕದ್ದು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್ರಿಟೆಂಡೆಂಟರು, ಕಾಂಟ್ರೋಲರವರು, ಪಬ್ಲಿಕ ವರ್ಕಸ್ ಆಫೀಸರ್‌ಗಳು, ಮೈಸೂರು, ಸ್ಟೇಟ್‌ರೇಯಿಲ್‌ವೆ, ರಿಜಿಸ್ಟ್ರೇಷ ಇನ್ಸ್‌ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ಣ ಜಡ್ಜೀರು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್‌ಸೂಪರ್ರಿಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ಮೊಕ್ಕಾಂ ಮೈಸೂರು, ತಾರೀಖು 16ನೇ ಅಕ್ಟೋಬರ್ 1884.

ನಂ. 148.—ಇದರಿಂದ ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ದೇಶದ ಉತ್ಪತ್ತೀ ಬಾಬತು ಗಂಧದ ಮರದ ಸಾಲೀಯನಾ ಹರಾಜುಗಳು ಇದರಡೀಕಂಡ ತಾರೀಖು ವ ಸ್ಥಳಗಳಲ್ಲಿ ಆಯಾ ಡಿಸ್ಟ್ರಿಕ್ಟಿನ ಡೆ॥ ಕಮ್ಮಿಷನರ್ ವ ಫಾರೆಸ್ಟು ಆಫೀಸರ್‌ಗಳಿಂದ ನಡಿಸಲ್ಪಡುತ್ತೆ:—

ಸ್ವಲ್ಪ ಹೆಚ್ಚು ಕಡಿಮೆಯಾಗಿ ಟನ್‌ಗಳು.

* * *

* * *

* * *

ಅನಂತಪುರ, ತಾರೀಖು 18ನೇ ಡಿಶಂಬರ್ 1888.	..	200
ಶಿವಮೊಗ್ಗಾ, ತಾರೀಖು 22ನೇ ಡಿಟ್ಟೋ ,,	..	500

ತೀರ್ಥಹಳ್ಳಿ, ತಾರೀಖು 7ನೇ ಜನವರೀ 1885 . . 200.
ಚಿಕ್ಕ ಮಗಳೂರು, ತಾ|| 14ನೇ ಡಿಟೋ „ . . 200
ಹಾಸನ, ತಾರೀಖು 21ನೇ ಡಿಟೋ „ . . 400

ಹರಾಜಿನ ಷರತ್ತುಗಳು.—ಸ್ನ 1874ನೇ ಇಸವಿ ಡಿಶಂಬರ 5ನೇ ಮುಕ್ಕಾಂ 48ನೇ ನಂಬರ ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ ಮಾಡಲ್ಪಟ್ಟ ಪ್ರಕಾರ ಇರತಕ್ಕವು, ಮತ್ತು ಹರಾಜ್ ಕಾಲದಲ್ಲಿ ಪ್ರೋದಲ್ಪಡ ವವು. ತೀರ್ಥಹಳ್ಳಿ, ಚಿಕ್ಕ ಮಗಳೂರು ಮತ್ತು ಹಾಸನ ಕಾಸ್ಥಳ ಗಳಲ್ಲಿ ಕೊಂಡುಕೊಳ್ಳುವ ಗಂಧದ ಮರಗಳ ಕಿಮ್ಮತ್ ಪಾವತೀ ಬಗ್ಯೆ ಮಾಯಿದೆಯು, 1885ನೇ ಇಸವೀ ಮಾರ್ಚೀ 25ನೇ ತಾರೀಖಿಗೆ ಅಖೈರಾಗುವದು.

ಮೊಕ್ಕಾಂ ಮೈಸೂರು, ತಾರೀಖು 4ನೇ ಡಿಶಂಬರ 1884.

ನಂ. 281.—ಇದರಡಿ ಕಂಡ 3ನೇ ಕ್ಲಾಸ್ ಹಾಸ್ಪಿಟಲ್ ಅಸಿಸ್ಟೆಂಟರುಗಳು ಲಾಯಖೀ ಬಗ್ಯೆ ಕ್ಲಿಷ್ಟವಾದ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವಪ್ಪರಿಂದ, ಸ್ನ 1884ನೇ ನವಂಬರ 15ನೇ ಮುಕ್ಕಾಂ ಲಾಗಾಯತ ಹಾಸ್ಪಿಟಲ್ ಅಸಿಸ್ಟೆಂಟರುಗಳ 2ನೇ ಗ್ರೇಡಿಗೆ ಬಡ್ತೀ ಮಾಡಲ್ಪಟ್ಟಿರುತ್ತಾರೆ:—

1. ಎಸ್. ಏಬ್ರಾಹಿಂ
2. ಮಹಮ್ಮದ್ ಹುಸೇನ್
3. ಸ್ಟೀವರ್ಟ ಬಸಪ್ಪಚಟ್ಟಿ.
4. ಸಿ. ಕೃಷ್ಣಸಾಮಿ ಮೊದಲಿಯಾರ್.

ತಾರೀಖು 12ನೇ ಡಿಶಂಬರ 1884.

ನಂ. 187.—ಸ್ನ 1884ನೇ ಇಸವಿ ಮೈಸೂರು ಲೀಗಲ್ ಪ್ರಾಕ್ಟೀಷನರ್ಸ್ ರೆಗ್ಯೂಲೇಷನ್ನಿನ 10ನೇ ಸೆಕ್ಷನ್ ಅನುಸರಿಸಿ ಮೈಸೂರು ಚೀಫ್ ಕೋರ್ಟಿನವರಿಂದ ತಯಾರ್ಮಾಡಲ್ಪಟ್ಟ ಇದರಡಿ ಕಂಡ ರೂಲ್ಸ್, ಶ್ರೀಮನ್ಮಹಾರಾಜರಾಜಾ ಸಾಹೇಬಹದ್ದೂರವರ ಸರಕಾರದಿಂದ ಮಂಜೂರ್ಮಾಡಲ್ಪಟ್ಟು, ಸಮಸ್ತ ಜನಗಳ ತಿಳವಳಿಕೆ ಬಗ್ಯೆ ಫಾಯಿಷ್‌ಮಾಡಲ್ಪಟ್ಟಿರುತ್ತೆ:—

I. ಇದರಡಿ ಕಂಡಜನಗಳು ಮೈಸೂರು ಚೀಫ್ ಕೋರ್ಟಿನ ಅಡ್ವೋಕೇಟರಾಗಿ ದಾಖಲಾಗಲಿಕ್ಕೆ ಅರ್ಹರಾಗಿರುತ್ತಾರೆ:—

(a) ಸ್ನ 1879ನೇ ಇಸವಿ ಫಿಬ್ರುವರೀ 18ನೇ ಮುಕ್ಕಾಮಿನ ಅಡ್ವೋಕೇಟುಗಳ ಮತ್ತು ಪ್ಲೀಡರುಗಳ ರೂಲ್ಸ್ ಅನುಸರಿಸಿ ಅಡ್ವೋಕೇಟಾಗಿ ದಾಖಲ್ಮಾಡಲ್ಪಟ್ಟ ಯಾವ ಮನುಷ್ಯನಾದರೂ.

(b) ಇಂಗ್ಲಾಂಡ್ ಅಥವಾ ಐರ್‌ಲೆಂಡಿನಲ್ಲಿರುವ ಕೋರ್ಟುಗಳ ಯಾವದಾದರೂ ಇನ್ನಗಳ ಯಾವ ಬ್ಯಾರಿಸ್ಟರಾದರೂ; ಸ್ಕಾಟಲೆಂಡಿನಲ್ಲಿರುವ ಫಾಕಲ್ಟಿ ಆಫ್ ಅಡ್ವೋಕೇಟ್ಸ್ ಎಂಬ ಸಮಾಜದ ಒಬ್ಬ ಮೆಂಬರು.

(c) ಬ್ರಿಟಿಷ್ ಇಂಡ್ಯದೊಳಗಣ ಯಾವದಾದರೂ ಹೈ ಕೋರ್ಟ ಆಫ್ ಜ್ಯುಡಿಕೇಚರ್‌ಎಂಬ ಹೈಕೋರ್ಟಿನ ಒಬ್ಬ ಅಡ್ವೋಕೇಟ್, ವಕೀಲ್ ಯಾ ಅಟ್ಟಾರ್ನಿ ಮತ್ತು ಯಾವದಾದರೂ ಬ್ರಿಟಿಷ್ ಇಂಡಿಯಾ ಯೂನಿವರಸಿಟಿಯಲ್ಲಿ M. L. ಅಥವಾ B. L. ಡಿಗ್ರಿಯನ್ನು ಪಡೆದ ಯಾವ ಮನುಷ್ಯನಾದರೂ, ಅಥವಾ ಫಸ್ಟ್‌ಗ್ರೇಡ್ ಪ್ಲೀಡರುಗಳಿಗೋಸ್ಕರ ಮದ್ರಾಸ್ ಹೈ ಕೋರ್ಟನಿಂದ ವಿಧಿಸಲ್ಪಟ್ಟ ಪರೀಕ್ಷೆಯನ್ನು ಕೊಟ್ಟು, ಗೌರವದ ಬಗ್ಯೆ ಮತ್ತು ಒಳ್ಳೇ ನೀತಿಯುಳ್ಳ ನಡತೆಯ ಬಗ್ಯೆ ಸರ್ಟಿಫಿಕೇಟನ್ನು ಪಡೆದ ಯಾವನಾದರೂ.

II. ಇದರಡಿ ಕಂಡ ಜನಗಳು ಫಸ್ಟಗ್ರೇಡ್ ಪ್ಲೀಡರಾಗಿ ದಾಖಲಾಗುವದಕ್ಕೆ ಅರ್ಹರಾಗಿರುತ್ತಾರೆ:—

(a) ಸ್ನ 1879ನೇ ಇಸವಿ ಫಿಬ್ರುವರೀ 18ನೇ ಮುಕ್ಕಾಮಿನ ಅಡ್ವೋಕೇಟುಗಳ ಮತ್ತು ಪ್ಲೀಡರುಗಳ ರೂಲ್ಸ್ ಅನುಸರಿಸಿ ಫಸ್ಟ್ ಗ್ರೇಡ್ ಪ್ಲೀಡರಾಗಿ ದಾಖಲ್ಮಾಡಲ್ಪಟ್ಟ ಅಥವಾ ಆ ಗ್ರೇಡಿಗೆ ಬಡ್ತೀಮಾಡಲ್ಪಟ್ಟ ಯಾವ ಮನುಷ್ಯನಾದರೂ.

(b) ಫಸ್ಟ್ ಗ್ರೇಡ್ ಪ್ಲೀಡರುಗಳಿಗೋಸ್ಕರ ಆಗಿಂದ್ಯಾ ಚೀಫ್ ಕೋರ್ಟನಿಂದ ವಿಧಿಸಲ್ಪಟ್ಟ ಪರೀಕ್ಷೆಯಲ್ಲಿ ತೇರ್ಗಡೆಯಾದ ಯಾವ ಮನುಷ್ಯನಾದರೂ.

III. ಇದರಡಿ ಕಂಡ ಜನಗಳು ಸೆಕೆಂಡ್ ಗ್ರೇಡ್ ಪ್ಲೀಡರಾಗಿ ದಾಖಲಾಗಲಿಕ್ಕೆ ಅರ್ಹರಾಗಿರುತ್ತಾರೆ:—

(a) ಸ್ನ 1879ನೇ ಇಸವಿ ಫಿಬ್ರುವರೀ 18ನೇ ಮುಕ್ಕಾಮಿನ ಅಡ್ವೋಕೇಟುಗಳ ಮತ್ತು ಪ್ಲೀಡರುಗಳ ರೂಲ್ಸ್ ಅನುಸರಿಸಿ ಸೆಕೆಂಡ್ ಗ್ರೇಡ್ ಪ್ಲೀಡರುಗಳಾಗಿ ದಾಖಲ್ಮಾಡಲ್ಪಟ್ಟ ತಮಾಂ ಜನಗಳೂ.

(b) ಸರ್ಕೆಂಡ್ ಗ್ರೇಡ್ ಪ್ಲೀಡರುಗಳಿಗೋಸ್ಕರ ಈಗಿಂದಾಗ್ಯೆ ಚೀಫ್ ಕೋರ್ಟಿನಿಂದ ವಿಧಿಸಲ್ಪಟ್ಟ ಪರೀಕ್ಷೆಯನ್ನು ಕೊಟ್ಟಿರುವ ಯಾವ ಮನುಷ್ಯನಾದರೂ.

2ನೇ ರೂಲ್ (a) ಕ್ಲಾಜಿನ ಮತ್ತು 3ನೇ ರೂಲ್ (a) ಕ್ಲಾಜಿನ ನಿಬಂಧನೆಗಳು ಯಾವದಾದರೂ ಪರಿಕ್ಷೆಯಲ್ಲಿ ತೇರ್ಗಡೆ ಯಾವ ಮೇಲೆ ಷರತ್ತುಗಳಿಗೆ ಒಳಪಟ್ಟು ದಾಖಲ್ಮಾಡಲ್ಪಟ್ಟಂಥಾ ಯಾವ ಮನುಷ್ಯನಿಗೂ ಲಗಾವಾಗುವದಿಲ್ಲವು.

IV. ಪ್ಲೀಡರುಗಳ ಬಗ್ಗೆ ಒಂದು ಪರಿಕ್ಷೆಯು, ಬೆಂಗಳೂರಿನಲ್ಲಿ ಚೀಫ್ ಕೋರ್ಟಿನಿಂದ ಗೊತ್ತು ಮಾಡಲ್ಪಟ್ಟು ಗೆಜೆಟ್ಟಿನಲ್ಲಿ ಘಾಯಿಷ್ ಮಾಡಲ್ಪಡುವ ತಾರೀಖಿನಲ್ಲಿ ಸಾಲೀಯಾನಾ ಇಂಗ್ಲೀಷು ಭಾಷೆಯೊಳಗೆ ನಡಿಸಲ್ಪಡುವದು. ಸದರೀ ಪರಿಕ್ಷೆಯು ಚೀಫ್ ಕೋರ್ಟಿನ ಜಡ್ಜೀರುಗಳಿಂದಲಾಗಲಿ, ಅವರಿಂದ ನೌಕರರ್ಮಾಲ್ಪಡುವ ಪರೀಕ್ಷಕರುಗಳಿಂದಲಾಗಲಿ ನಡಿಸಲ್ಪಡುವದು.

ಸದರೀ ಪರಿಕ್ಷೆಯು, ಚೀಫ್ ಕೋರ್ಟಿನಿಂದ ಮತ್ತೊಂದು ಹುಕ್ಕುಂ ಕೊಡುವವರೆಗೂ, ಇದರಡಿ ಕಂಡ ವಿಷಯಗಳಲ್ಲಿ ನಡಿಸಲ್ಪಡತಕ್ಕದ್ದು:—

ವಿಷಯಗಳು.	ರೆಗ್ಯುಲೇಷನ್ಗಳು, ಆಕ್ಟುಗಳು, ಟೆಕ್ಸ್ಟ್‌ಬುಕ್ಕು ಯಾನೆ ನಿಯಮಿಸಲ್ಪಟ್ಟ ಪುಸ್ತಕಗಳು ವಗೈರೆ
ಮೈಸೂರು ಸೀಮೆಯಲ್ಲಿ ಜಾರೀಯಿರುವ ರೆವಿನ್ಯು ಮತ್ತು ಸ್ಟಾಂಪು ಆಕ್ಟುಗಳು ಮತ್ತು ರೂಲ್ಸ್.	ರೆವಿನ್ಯು ಮ್ಯಾನ್ಯುಯಲ್, 1879ನೇ ಇಸವಿಯ 1ನೇ ನಂಬರ್ ಜನರಲ್ ಸ್ಟಾಂಪ್ ಆಕ್ಟು, 1870ನೇ ಇಸವಿಯ 7ನೇ ನಂಬರ್ ಕೋರ್ಟು ಫೀಸ್ ಆಕ್ಟು ಮತ್ತು ಅದನ್ನನುಸರಿಸಿದ ರೂಲ್ಸ್.
ಅಡಮಾನ.	ಅಡಮಾನ ವಿಷಯದಲ್ಲಿ ಮೆಕ್‌ಫರ್ಸನ್ ಯೆವರಿಂದ ಮಾಡಲ್ಪಟ್ಟ—ಪುಸ್ತಕ ಮತ್ತು 1882ನೇ ಇಸವಿಯ 4ನೇ ನಂಬರ್ ಆಕ್ಟು.
ಹಿಂದೂ ಲಾ. ..	ಮೇನ್ಸ್ ಯವರ ಹಿಂದೂ ಲಾ ಮತ್ತು ಯೂಸೇಜ್ ಯಾನೆ ಪದ್ಧತಿ.
ಲಾ ಆಫ್ ಟಾರಟ್ಸ್. ..	ಕಾಲಿಟ್ ಆನ್ ಟಾರ್ಟ್ಸ್ ಎಂಬ ಪುಸ್ತಕ.
ಮಹಮ್ಮದೀಯರ ಲಾ.	ಶಠಗೋಪಾಚಾರ್ಯರ ಮ್ಯಾನ್ಯುಯಲ್.
ಲಾ ಆಫ್ ಕಂಟ್ರಾಕ್ಟ್ಸ. ..	1872ನೇ ಇಸವಿಯ 9ನೇ ನಂಬರ್ ಆಕ್ಟು.
ಸ್ಪೆಸಿಫಿಕ್ ರಿಲೀಫ್ ಆಕ್ಟು. ..	1877ನೇ ಇಸವಿಯ 1ನೇ ನಂಬರ್ ಆಕ್ಟು.
ಲಾ ಆಫ್ ಯವಿಡೆನ್ಸ್. ..	1872ನೇ ಇಸವಿಯ 1ನೇ ನಂಬರ್ ಯವಿಡೆನ್ಸ್ ಆಕ್ಟು.
ಲಾ ಆಫ್ ಲಿಮಿಟೇಷನ್. ..	1877ನೇ ಇಸವಿಯ 15ನೇ ನಂಬರ್ ಆಕ್ಟು, 1879ನೇ ಇಸವಿಯ 12ನೇ ನಂಬರ್ ಆಕ್ಟು, ಮತ್ತು 1880ನೇ ಇಸವಿಯ 8ನೇ ನಂಬರ್ ಆಕ್ಟು.

ರಿಜಿಸ್ಟ್ರೇಷನ್ ಆಕ್ಟು, ಇಂಡಿಯನ್ ಪಿನಲ್‌ಕೋಡ್, ಸಿವಿಲ್ ವ ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡುಗಳು.

ವಕಾಲತ್ ಮಾಡಲಿಕ್ಕೂ, ದಾವಾ ಅರ್ಜೀಗಳ ಮತ್ತು ಡಿಕ್ರೀಗಳ ಮಸವಿದಾ ತಯಾರ್ಮಾಡಲಿಕ್ಕೂ, ಇಷ್ಯು ವಗೈರೇಗಳನ್ನು ಗೊತ್ತು ಮಾಡಲಿಕ್ಕೂ ಉಮೇದ್ವಾರನಿಗೆ ಯಿರುವ ಸಾಮರ್ಥ್ಯವನ್ನು ಪರೀಕ್ಷೆ ಮಾಡುವ ಬಗ್ಗೆ ಕನ್ನಡ ಭಾಷೇಯಲ್ಲಿ ಒಂದು ಪ್ರಶ್ನೆ ಪತ್ರವು ಕೊಡಲ್ಪಡುವದು.

V. ಅರ್ಹತೆ.—

(a) ಫಸ್ಟ್ ಗ್ರೇಡ್ ಪ್ಲೀಡರಾಗಲಿಕ್ಕೆ, ಉಮೇದವಾರರು ಪ್ರತಿ ವಿಷಯಕ್ಕೂ ಗೊತ್ತು ಮಾಡಲ್ಪಟ್ಟ ಮಾರ್ಕುಗಳ ಪೈಕೀ ಮೂರರಲ್ಲಿ ವಂದು ಭಾಗಕ್ಕೆ ಕಡಿಮೆ ಯಿಲ್ಲದಂತೆ ಮಾರ್ಕುಗಳನ್ನು ಹೊಂದಬೇಕಲ್ಲದೆ, ಒಟ್ಟು ಮಾರ್ಕುಗಳ ಪೈಕೀ 5 ಭಾಗಗಳಲ್ಲಿ 2 ಭಾಗ ಮಾರ್ಕುಗಳನ್ನು ಪಡಿಯಬೇಕಾಗಿರುತ್ತೆ.

(b) ಸರ್ಕೆಂಡ್ ಗ್ರೇಡ್ ಪ್ಲೀಡರಾಗಲಿಕ್ಕೆ, ಉಮೇದವಾರರು, ಹಿಂದೂಲಾ, ಯವಿಡೆನ್ಸ್, ಪ್ರೊಸಿಡ್ಯೂರ್ ಕೋಡುಗಳು ಮತ್ತು ಪಿನಲ್ ಕೋಡು ಇವುಗಳಲ್ಲಿ ಪ್ರತಿ ವಿಷಯದಲ್ಲಿಯೂ ಗೊತ್ತು ಮಾಡಲ್ಪಟ್ಟ ಮಾರ್ಕುಗಳ ಪೈಕೀ ಮೂರರಲ್ಲಿ ವಂದು ಭಾಗ ಮಾರ್ಕುಗಳನ್ನು ಪಡಿಯಬೇಕಲ್ಲದೆ, ಇತರ ವಿಷಯಗಳಲ್ಲಿ ನಾಲ್ಕರಲ್ಲಿ ವಂದುಭಾಗ ಮಾರ್ಕುಗಳನ್ನೂ, ಒಟ್ಟು ಮಾರ್ಕುಗಳ ಪೈಕೀ ಮೂರರಲ್ಲಿ ವಂದುಭಾಗ ಮಾರ್ಕುಗಳನ್ನೂ ಪಡಿಯಬೇಕಾಗಿರುತ್ತೆ.

VI. ಇದರಡಿ ಕಂಡಂತೆ ಅರ್ಹತೆಯನ್ನು ಪಡೆದಿರುವ ಜನಗಳು ಫಸ್ಟ್ ಗ್ರೇಡ್ ಪ್ಲೀಡರ ಪರೀಕ್ಷೆಯನ್ನು ಕೊಡಲಿಕ್ಕೆ ಲಾಯಖಾಗಿರುತ್ತಾರೆ:—

(a) ಯಾವದಾದರೂ ಬ್ರಿಟಿಷ್ ಇಂಡಿಯನ್ ಯುನಿವರಸಿಟಿಗಳ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾದಂತೆ ಸರಟಿಫಿಕೇಟ್ ಹಾಜರ್ಮಾಡುವ ಯಾವ ಮನುಷ್ಯನಾದರೂ.

(b) ಚೀಫ್ ಕೋರ್ಟನಲ್ಲಾಗಲಿ, ಡಿಸ್ಟ್ರಿಕ್ಟು ಕೋರ್ಟನಲ್ಲಾಗಲಿ ಮಾಹೆಯೊನಾ 100 ರೂಪಾಯಿಗೆ ಕಮ್ಮೀ ಯಿಲ್ಲದ ತಲಬುಉಳ್ಳ ಯಾವದಾದರೂ ಒಂದು ನೌಕರೀಯನ್ನು 5 ವರ್ಷಗಳಿಗೆ ಕಮ್ಮೀ ಯಿಲ್ಲದ ಕಾಲದ ಪರಿಯಂತ ಲಾಯಖೀ ನಿಸಿ ವಹಿಸಿದ್ದನೆಂದು ಸದರೀ ಕೋರ್ಟುಗಳ ಜಡ್ಜೀಯವರುಗಳಿಂದ ಸರಟಿಫಿಕೇಟನ್ನು ತರುವ ಯಾವ ಮನುಷ್ಯನಾದರೂ.

VII. ಇದರಡೀ ಕಂಡಂತೆ ಅರ್ಹತೆಯನ್ನು ಪಡೆದಿರುವ ಜನಗಳು ಸರ್ಕಿಡ್ ಗ್ರೇಡ್ ಪ್ಲೀಡರ ಪರೀಕ್ಷೆ ಕೊಡುವದಕ್ಕೆ ಲಾಯಖಾ ರಾಗಿರುತ್ತಾರೆ:—

(a) ಮಿಡಿಲ್ ಸ್ಕೂಲ್ ಪರೀಕ್ಷೆಯಲ್ಲಿ ತೇರ್ಗಡೆಯಾದಂತೆ ಸರಟಿಫಿಕೇಟನ್ನು ಹಾಜರ್ಮಾಡುವ ಯಾವ ಮನುಷ್ಯನಾದರೂ.

(b) ಈ ಶೀಮೆಯ ಯಾವ ಕೋರ್ಟನಲ್ಲಾಗಲಿ ಮಾಹೆಯೊನಾ 25 ರೂಪಾಯಿಗೆ ಕಮ್ಮೀ ಯಿಲ್ಲದಂತೆ ತಲಬುವುಳ್ಳ ಯಾವದಾದರೂ ಒಂದು ನೌಕರೀಯನ್ನು ಲಾಯಖೀನಿಸಿ 5 ವರ್ಷಗಳಿಗೆ ಕಮ್ಮಿ ಯಿಲ್ಲದ ಕಾಲದ ಪರಿಯಂತ ವಹಿಸಿ ಯಿದ್ದನೆಂದು ಅಂಥಾ ಯಾವದಾದರೂ ಕೋರ್ಟುಗಳ ಜಡ್ಜೀಯವರಿಂದ ಸರಟಿಫಿಕೇಟನ್ನು ತರುವ ಯಾವ ಮನುಷ್ಯನಾದರೂ.

VIII. ಪ್ಲೀಡರುಗಳ ಪರೀಕ್ಷೆಗೆ ಬರುವ ಉಮೇದವಾರರು, ಸದರೀ ಪರೀಕ್ಷೆಗೆ ಪೂರ್ವ 2 ತಿಂಗಳಿಗೆ ಕಮ್ಮಿ ಯಿಲ್ಲದ ಕಾಲದೊಳಗಾಗಿ, ಬೆಂಗಳೂರಲ್ಲಿರುವ ಚೀಫ್ ಕೋರ್ಟು ರಿಜಿಸ್ಟ್ರಾರಿಗೆ ಸದರೀ ಪರೀಕ್ಷೆ ಕೊಡಲು ಅಪ್ಪಣೆ ಕೊಡುವಂತೆ ಅರ್ಜೀಯನ್ನು ಕಳುಹಿಸತಕ್ಕದ್ದು.

IX. ಅಂಥಾ ಪ್ರತಿ ಅರ್ಜೀಯ ಸಂಗಡಲೂ—

(a) 6 ಮತ್ತು 7ನೇ ರೂಲಗಳ ಪ್ರಕಾರ ಲಾಯಖೀ ಸರಟಿಫಿಕೇಟನ್ನೂ,

(b) ಗೌರವದ ಬಗ್ಯೆ ಮತ್ತು ಒಳ್ಳೇ ನೀತಿಯುಳ್ಳ ನಡತೆಯ ಬಗ್ಯೆ ಒಂದು ಸರಟಿಫಿಕೇಟನ್ನೂ,

(c) ಅರ್ಜೀದಾರನು 20 ವರ್ಷಗಳಿಗೆ ಮೇಲ್ಪಟ್ಟ ವಯಸ್ಸುಳ್ಳವನೆಂಬದಕ್ಕೆ ಸರಟಿಫಿಕೇಟನ್ನೂ,

ಕಳುಹಿಸತಕ್ಕದ್ದು.

ಅಂಥಾ ತಮಾಂ ಅರ್ಜೀಗಳೂ ಚೀಫ್ ಕೋರ್ಟು ಜಡ್ಜೀರುಗಳಲ್ಲಿ ಒಬ್ಬರಿಂದ ಕೊಡಲ್ಪಟ್ಟಹುಕ್ಕುಂ ಮೇರಿಗೆ ಅಂಗೀಕರಿಸಲ್ಪಡತಕ್ಕವು ಯಾ ತಿರಸ್ಕರಿಸಲ್ಪಡತಕ್ಕವು.

X. ಪರೀಕ್ಷೆ ಕೊಡಲು ಅಂಗೀಕರಿಸಲ್ಪಟ್ಟ ಪ್ರತಿ ಅರ್ಜೀದಾರನೂ, ಪರೀಕ್ಷೆಗೆ ಗೊತ್ತು ಮಾಡಲ್ಪಟ್ಟ ತಾರೀಖಿಗೆ 10 ದಿವಸಗಳ ಪೂರ್ವವೇ, ಚೀಫ್ ಕೋರ್ಟು ರಿಜಿಸ್ಟ್ರಾರಿಗೆ ಫಸ್ಟ್ ಗ್ರೇಡ್ ಪ್ಲೀಡರಗಳ ಬಗ್ಯೆ 25 ರೂಪಾಯಿಗಳ ಮತ್ತು ಸರ್ಕಿಡ್ ಗ್ರೇಡ್ ಪ್ಲೀಡರಗಳ ಬಗ್ಯೆ 15 ರೂಪಾಯಿಗಳ ಫೀಜನ್ನು ಪಾವತೀ ಮಾಡತಕ್ಕದ್ದು.

ವಿಧಿಸಲ್ಪಟ್ಟ ಫೀಜನ್ನು ತಾನು ಪಾವತೀ ಮಾಡಿದ್ದಕ್ಕೆ ಚೀಫ್ ಕೋರ್ಟು ರಿಜಿಸ್ಟ್ರಾರಿಂದ ಒಂದು ರಸೀದಿಯನ್ನು ಪರೀಕ್ಷಕರಲ್ಲಾಗಲಿ, ಪರೀಕ್ಷೆಯನ್ನು ಮೇಲ್‌ವಿಚಾರಣೆ ಮಾಡುವ ಆಫೀಸರರಲ್ಲಾಗಲಿ, ಪರೀಕ್ಷೆ ತಾರೀಖಿನಲ್ಲಿ ಹಾಜರ್ ಮಾಡದೆ ಯಿರುವ ಯಾವ ಉಮೇದವಾರನೂ ಪರೀಕ್ಷಿಸಲ್ಪಡುವದಿಲ್ಲವು.

XI. ಸದರೀ ರೆಗ್ಯೂಲೇಷನ್ಸಿನ 11 ಅಥವಾ 12ನೇ ಸೆಕ್ಷನ್ ಅನುಸರಿಸಿ ಕೊಡಲ್ಪಡುವ ತಮಾಂ ಸರಟಿಫಿಕೇಟುಗಳೂ, ಇದರಡಿ ನಮೂದು ಮಾಡಲ್ಪಟ್ಟ ಕಿಮ್ಮತುಳ್ಳ ಕೋರ್ಟು ಫೀಸ್ ಸ್ಟಾಂಪು ಕಾಗದಗಳ ಮೇಲೆ ಸ್ಫುಟವಾಗಿ ಬರಿಯಲ್ಪಡತಕ್ಕವು:—

		ರೂಪಾಯಿಗಳು.
(1)	ಅಡ್ವೋಕೇಟಿಗೆ	300
(2)	ಫಸ್ಟ್ ಗ್ರೇಡ್ ಪ್ಲೀಡರಿಗೆ	15
(3)	ಸರ್ಕಿಡ್ ಗ್ರೇಡ್ ಪ್ಲೀಡರಿಗೆ	10

ಪರಂತು, 1ನೇ ರೂಲ್ (a) ಕ್ಲಾಜ್ ಪ್ರಕಾರ ಅರ್ಹರಾದವರಿಗೆ ಕೊಡಲ್ಪಡುವ ಸರಟಿಫಿಕೇಟಿಗೆ ಸ್ಟಾಂಪು ಫೀ ಏನೂ ಅವಶ್ಯಕ ಯಿಲ್ಲವು.

ತಾರೀಖು 12ನೇ ಡಿಶಂಬರ 1884.

ನಂ. 188.—ಕ್ರಿಸ್ತಮಾಸ್ ರಜಾದಿನಗಳಿಗೋಸ್ಕರ ಈ ಕೆಳಗೆಯ ದರೋಬಸ್ತು ಪಬ್ಲಿಕ್ ಆಫೀಸಗಳೂ ಸರ್ 1884ನೇ ಇಸವಿ ಡಿಶಂಬರ 22ನೇ ಸೋಮವಾರದ ಲಾಗಾಯತು, ಸರ್ 1885ನೇ ಜನವರಿ 3ನೇ ಶನಿವಾರದ ವರಿವಿಗೂ ಯರಡು ದಿನಗಳೂ ಸೇರಿ ಬರ ಖಾಸ್ತು ಮಾಡಲ್ಪಡತಕ್ಕವು.

ಸದರೀ ರಜಾದಿವಸಗಳಲ್ಲಿ ಜರೂರಿಯಾತ್ ಕೆಲಸಗಳನ್ನು ಚಲಾಯಿಸುವದಕ್ಕೋಸ್ಕರ ಇಲಾಖೇ ಮೊಖ್ತೇಸರರುಗಳಿಂದ ಯೇರ್ಪಾಡು ಮಾಡಲ್ಪಡತಕ್ಕದ್ದು.

ಈ ಇಸ್ತಿಹಾರ್ನಾಮೆಯು ತಾಲ್ಲೂಕು ಸಿಬ್ಬಂದಿಗೂ ಅಥವಾ ಜಮಾಬಂದಿ ಫೈಸಲಾತಿ ಕೆಲಸದಲ್ಲಿ ಇರತಕ್ಕವರಗಳಿಗೂ ಲಗಾವಾಗುವದಿಲ್ಲವು.

ತಾರೀಖು 12ನೇ ಡಿಶಂಬರ 1884.

ನಂ. 189.—ಮೈಸೂರು ರೆವಿನ್ಯೂ ಸರ್ವೇ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಲೆಫ್ಟಿನೆಂಟ್ ಕರ್ನಲ್ ಜಿ. ಮೆಕ್ಕಂಜೀಯವರಿಗೆ ಸರ್ 1884ನೇ ಇಸವಿ ಆಗಸ್ಟ್ 15ನೇ ಮರ್ಕುಂ 120ನೇ ನಂಬರುಳ್ಳ ಈ ಆಫೀಸ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ ರಜಾಕ್ಕೆ ಜಾಸ್ತೀಯಾಗಿ ಒಂದು ದಿವಸದ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 18ನೇ ಡಿಸಂಬರ 1884.

ನಂ. 193.—ಸರ್ 1856ನೇ ಇಸವಿ ಶೆಪಟಂಬರ ಮಾಹೆಯಲ್ಲಿ ಮೊಜೇ ಜುಡಿಷಿಯಲ್ ಕಮ್ಮಿಷನರ ಕೋರ್ಟಿನಿಂದ ಮದ್ರಾಸ್ ಕೃಷ್ಣಾಬಾಯಿ ಯಂಬಾಕೆಗೋಸ್ಕರ ಹುಜೂರು ಖಜಾನೆಯಲ್ಲಿ ಠೇವಣೀ ಇಟ್ಟಿದ್ದ 5,400 ರೂಪಾಯಿ ಬಾಬತು 001295—27813ನೇ ನಂಬರುಳ್ಳ ಇಂಡ್ಯ ಗವರ್ನಮೆಂಟಿನ ಶೇಕಡಾ ನಾಲ್ಕು ರೂಪಾಯಿ ದರದ ಬಾಬತು ಪ್ರೋನೋಟು ಸದರೀ ಖಜಾನೆಯಲ್ಲಿ ತಹಲ್‌ವರಿವಿಗೂ ಇರುವದ್ದರಿಂದಲೂ, ಸರ್ 1877ನೇ ಇಸವಿ ಆಗಸ್ಟು ಗುರ್ರೇ ಲಾಗಾಯತು ಬಡ್ಡೀ ತೆಗದುಕೊಳ್ಳದೆ ಇರುವದ್ದರಿಂದಲೂ, ಇದರಿಂದ ನೋಟಿಸ್ ಕೊಡುವದೇನಂದರೆ, ಸದರೀ ಪ್ರೋನೋಟಿನ ಹಕ್ಕುದಾರರಾದ ಯಾವ ಮನುಷ್ಯ ಯಾ ಮನುಷ್ಯರೇ ಆಗಲಿ ಈ ನೋಟಿಸ ತಾರೀಖು ಲಾಗಾಯತು 3 ತಿಂಗಳ ವಳಗಾಗಿ ಬೆಂಗಳೂರು ಹುಜೂರು ಖಜಾನೆ ಚಾರ್ಜಿನಲ್ಲಿ ಇರುವ ಕಂಪ್ಟ್ರೋಲರ ರೂಬರೂ ಹಾಜರಾಗಿ ತಮ್ಮ ಹಕ್ಕನ್ನು ಹೇಳಿಕೊಳ್ಳತಕ್ಕದ್ದು: ಹಾಗಿಲ್ಲದ ಪಕ್ಷದಲ್ಲಿ ಸದರೀ ಪ್ರೋನೋಟು ವಿಕ್ರಯಿಸಲ್ಪಟ್ಟು ಅದರಿಂದ ಹುಟ್ಟುವಳಿ ಆದದ್ದನ್ನು ಬೇವಾರಸ್ ಠೇವಣೀ ತರೀಕ್ ಸರಕಾರಕ್ಕೆ ಜಮೇ ಕಟ್ಟಲ್ಪಡುವದು.

ಮೈಸೂರು ಶ್ರೀಮನ್ಮಹಾರಾಜರಾಜಾ ಸಾಹೆಬರವರ ದಿವಾನರವರ ಪ್ರೊಸೀಡಿಂಗಸ್, (ಜನರಲ್), ತಾ|| 6ನೇ ಡಿಶಂಬರ 1884.

ನಂ. 5063—107　　ತಾರೀಖು 6ನೇ ಡಿಶಂಬರ ಸರ್ 1884.

ಹುಕ್ಕುಂ.—ಸರ್ 1873ನೇ ಇಸವಿ ಮಾರ್ಚಿ 15ನೇ ಮರಕುಂ ಮೈಸೂರು ಗೆಜೆಟ್ಟಿನ 598ನೇ ಪುಟದಲ್ಲಿ ಫಾಯಿಷಾದ ಸರ್ 1873ನೇ ಇಸವಿ ಮಾರ್ಚೀ 11ನೇ ಮರ್ಕುಂ 12ನೇ ನಂಬರ ಜನರಲ್ ಸರಕಿಲರನ್ನು ತಿದ್ದುಪಾಡುಮಾಡಿ ಕ್ಯಾಜುಯಲ್ ರಜಾ ವಿಷಯದಲ್ಲಿ ಇದರಡೀ ಕಂಡ ರೂಲ್ಸ್ ಸಮಸ್ತ ಜನಗಳ ತಿಳವಳಿಕೆಯ ಬಗ್ಯೂ ನಡವಳಿಕೆಯ ಬಗ್ಯೂ ಫಾಯಿಷ್ ಮಾಡಲ್ಪಟ್ಟಿರುತ್ತೆ.

ರೂಲ್—ಆಫೀಸ್ ಮೊಖ್ತೇಸರರಿಂದ ಕೊಡಲ್ಪಡುವ ಕ್ಯಾಜುಯಲ್ ರಜಾ ಇದುವರಿಗಿನಂತೆಯೆ ಪ್ರತಿ ಕ್ಯಾಲಂಡರ್‌ಸಂವತ್ಸರದಲ್ಲಿಯೂ 15 ದಿವಸಗಳಿಗೆ ಕ್ಲುಪ್ತವಾಗಿರತಕ್ಕದ್ದು. ಪರಂತು ಒಬ್ಬ ಆಫೀಸರಿಗೆ ಪ್ರಿವಿಲೀಜ್ ರಜಾಕ್ಕೆ ಹಕ್ಕು ಇದ್ದು ಅಂತಾ ಆಫಿಸರು 3 ದಿವಸಗಳಿಗೆ ಜಾಸ್ತೀಯಾಗಿ ಕ್ಯಾಜುಯಲ್ ರಜಾವನ್ನ ಪಡಿಯಲು ಅಪೇಕ್ಷಿಸಿದರೆ, ಅದು ಸಾಧಾರಣ ಸಂದರ್ಭಗಳಲ್ಲಿ ಪ್ರಿವಿಲೀಜ್ ರಜಾದಂತೆ ಕೊಡಲ್ಪಟ್ಟು, ಅದನ್ನು ಅವನಿಗೆ ಕೊಡಬೇಕಾದ ಪ್ರಿವಿಲೀಜ್ ರಜಾದಲ್ಲಿ ವಜಾ ಮಾಡತಕ್ಕದ್ದು. ಪ್ರಿವಿಲೀಜ್ ರಜಾ ಯೇನಾದರೂ ಅವನಿಗೆ ಕೊಡಬೇಕಾದ್ದು ಬಾಕಿ ಇಲ್ಲದ ಪಕ್ಷದಲ್ಲಿ, ತಕ್ಕ ಕಾರಣಗಳು ತೋರಿಸಲ್ಪಟ್ಟರೆ, ಮೇಲೆ ಕಂಡಂತೆ 15 ದಿವಸಗಳಿಗೆ ಜಾಸ್ತಿಯಾಗದಂತೆ ಕ್ಯಾಜುಯಲ್ ರಜಾ ಕೊಡಲ್ಪಟ್ಟು, ಸದರೀ ಕ್ಯಾಜುಯಲ್ ರಜಾವನ್ನು ಅವನು ಉತ್ತರೋತ್ತರ ಸಂಪಾದಿಸಬಹುದಾದ ಪ್ರಿವಿಲೀಜ್ ರಜಾದಲ್ಲಿ ವಜಾ ಮಾಡತಕ್ಕದ್ದು.

2. ಸಾಲೀಯಾನಾ ವೆಕೇಷನ್ ಯಾನೇ ಪೊಕಳೇ ರಜಾಗಳನ್ನು ಅನುಭವಿಸುವ ಮತ್ತು ಆ ಸಬಬಿನ ಮೇಲೆ ಪ್ರಿವಿಲೀಜ್ ರಜಾಕ್ಕೆ ಹಕ್ಕು ಇಲ್ಲದೇ ಇರುವ ಆಫೀಸರಗಳ ವಿಷಯದಲ್ಲಿ ಪ್ರತಿ ಒಂದು ಕ್ಯಾಲಂಡರ್ ಸಂವತ್ಸರದಲ್ಲಿಯೂ ಕೊಡಬಹುದಾದ ಕ್ಯಾಜುಯಲ್ ರಜಾವಟ್ಟು ಸಂಖ್ಯೆಯು 10 ದಿವಸಗಳಾಗಿರತಕ್ಕದ್ದು.

3. ಸರಕಾರದ ಕೆಲಸಕ್ಕೆ ಕುಂದಕ ವಿಲ್ಲದೆ ಕೊಡಬಹುದಾದ ಕಾಲದಲ್ಲಿ ಮಾತ್ರ ಕ್ಯಾಜುಯಲ್ ರಜಾ ಕೊಡಲ್ಪಡತಕದ್ದು. ಪರಂತು ಅಂತಾ ಕ್ಯಾಜುಯಲ್ ರಜಾ ಇನ್ಯಾವ ವಿಧವಾದ ರಜಾವಿಗೂ ಶೇರಿದಂತೆ ಕೊಡಲ್ಪಡತಕ್ಕದ್ದಲ್ಲವು.

ಬಮೋಜೀಬ್ ಹುಕುಂ,

ಆರ್. ವಿಜಯೀಂದ್ರರಾವ್,

ಸೆಕ್ರಟೇರಿ.

ಮಿಲಿಟೆರಿ ಇಲಾಖಾ.

ನೋಟೀಸ್.

ತಾರೀಖು 10ನೇ ಡಿಸಂಬರ್ 1884.

ಬಾರ್ ಇಲಾಖಾ ಮಿನಾಹಿ, ಫಾತಿ, ಪರಾರಿ ಜನಗಳ ತಲಬು ಈ ಕೆಳಗೆ ನಮೂದಿಸುವ ಪ್ರಕಾರ ಕಮಾಂಡಿಂಗ್ ಆಫಿಸರ ಬಳಿಯೇ ಶಿಲ್ಕಿನಲ್ಲಿ ಇರುತ್ತದೆ, ಅವುಗಳನ್ನು ಅಯಾ ಜನಗಳೇ ಆಗಲಿ ಅವರ ವಾರಸ್‌ದಾರರುಗಳೇ ಆಗಲಿ ಕಮಾಂಡಿಂಗ್ ಆಫೀಸರ ಬಳಿ 1885ನೇ ಇಸವಿ ಮಾರ್ಚಿ ಆಖೈರ್ ವಳಗಾಗಿ ಹಾಜರಾಗಿ ಮೊಬಲಗು ತೆಗದುಕೊಳ್ಳಬೇಕು, ಹಾಗೆ ತೆಗದುಕೊಳ್ಳದೇ ತಪ್ಪಿದಲ್ಲಿ ಆ ಬಾಬತು ಮೊಬಲಗು ಸರಕಾರಕ್ಕೆ ದಾಖಲ್ಮಾಡಿಕೊಳ್ಳಲ್ಪಡುತ್ತೆ. ಅನಂತರ ಖಾಯಿಷ್ ಮಾಡಿದಲ್ಲಿ ದೊರಿಯಲಾರದು.

ಬೆಂಗಳೂರು 1ನೇ ಪಟಾಲಂ ಕಮಾಂಡಿಂಗರ ಬಳಿಯಲ್ಲಿರತಕ್ಕ ಮೊಬಲಗು.

ಪಟಾಲಂ.	ಕಂಪೆನಿ.	ಹುದ್ದಾ.	ಹೆಸರು.	ಮೊಬಲಗು.		
1	10	ಶಿಪಾಯಿ	ಗುಲಾಂಮೊಹದೀನ್	3	8	9
1	4	ನಾಯಿಕ್	ಚನ್ನಾ	2	10	8
1	10	ಪಕಾಲಿ	ಷೇಕ್‌ಹಸನ್	3	10	10
1	2	ಡಿಟೋ	ಡಿಟೋ	2	15	8
1	1	ಶಿಪಾಯಿ	ಮುದ್ದ	0	8	6
1	2	ಡಿಟೋ	ಮಹಮ್ಮದ್‌ಹುಶೇನ್	8	13	11
1	3	ಡಿಟೋ	ಸೈಢ್‌ಕರೀಂ	8	6	10
1	3	ಡಿಟೋ	ಅಂತೋಣಿ	2	9	3
1	6	ಡಿಟೋ	ಖಾಜಾಹುಶೇನ್	0	12	5
1	10	ಡಿಟೋ	ಸೈದ್‌ಹುಶೇನ್	1	13	0
1	6	ಡಿಟೋ	ಮಹಮದ್‌ಹುಶೇನ್	11	13	10
1	8	ಡಿಟೋ	ಅಬ್ದುಲ್‌ಖಾದರ್	2	1	8
1	8	ಡಿಟೋ	ಮಹಮ್ಮದ್‌ಹುಶೇನ್	4	2	3
1	4	ಹವಾಲ್‌ದಾರ್	ಮಹಮ್ಮದ್‌ಖಾಶಿಂ	0	12	2
1	2	ಶಿಪಾಯಿ	ಸೈದ್‌ಮುಸ್ತಾಫ್	0	6	0
4	2	ಡಿಟೋ	ಲಕ್ಷ್ಮಣರಾವ್	0	3	7
4	6	ಡಿಟೋ	ಸೈದ್ ಗಫೂರ್‌ಷಾಹಾ	2	8	10
4	3	ಡಿಟೋ	ಅಬ್ದುಲ್‌ಅಜೀಜ್	2	0	3
4	1	ನಾಯಿಕ್	ಸೈದ್‌ರಜಾ	4	4	0
4	2	ಶಿಪಾಯಿ	ಹುಶೇನ್‌ಷರಿಫ್	0	7	9
4	3	ಡಿಟೋ	ಸೈದ್‌ಅಹಮ್ಮದ್	3	10	4
4	8	ಡಿಟೋ	ಬೋರಾ	2	9	10
4	8	ಡಿಟೋ	ವೆಂಕಟನಾಯಿಕ	1	12	8
4	10	ಡಿಟೋ	ಕೆಂಪಾ	2	11	4
4	3	ಡಿಟೋ	ಗಿಡ್ಡ	3	0	6
4	5	ಡಿಟೋ	ಆಕ್ಕಾಜಿರಾವ್	5	13	11
4	4	ಡಿಟೋ	ಮಲ್ಲಾರ್ಜಿ	0	7	3
4	8	ಡಿಟೋ	ಅಬ್ದುಲ್‌ರಜಾಕ್	0	14	11

ಪಟಾಲಂ.	ಕಂಪನಿ.	ಹುದ್ದಾ.	ಹೆಸರು.	ಮೊಬಲಗು.		
4	8	ಶಿಪಾಯಿ	ಸೈಯದ್‌ಖಾಸಿಂ	0	7	11
4	9	ತೊಟ್ಟಿ ಶಿಪಾಯಿ	ಮುನಿಸಾಮಿ	3	0	6
4	1	ಶಿಪಾಯಿ	ಸೈದ್‌ರಹಿಮಾನ್	3	8	0
4	2	ಡಿಟೋ	ಮಹಮ್ಮದ್ ಹಯ್ಯಾತ್	2	7	4
4	2	ಡಿಟೋ	ಅಬದ್ದುಲ್‌ರಹೀಮ್	4	3	6
4	5	ಡಿಟೋ	ಮಹಂಮದ್ ಮಸ್ತಾನ್	1	5	0
4	8	ಡಿಟೋ	ವೆಂಕಟನಾಯಿಕ	3	11	1
4	8	ಡಿಟೋ	ರಾಣೋಜಿ	7	1	7
4	8	ಡಿಟೋ	ಮಹಮ್ಮದ್‌ಸಾಲಾರ್	5	12	0
4	8	ಧೋಬೀ	ದಾಸೀ	2	15	10
4	6	ಪಖಾಲಿ	ಷೇಕಪೀರ್	4	0	6
4	10	ಶಿಪಾಯಿ	ಸೈದ್‌ಅಹಮದ್	2	5	4
		ಪೆನ್ಷನ್ ಶಿಪಾಯಿ	ಸೈದಲ್ಲಿ	0	5	2
		ಪೆನ್ಷನ್ ಹವಾಲ್‌ದಾರ್	ವೆಂಕಟನಾಯಿಕ್	4	13	2
		ಪೆನ್ಷನ್ ಶಿಪಾಯಿ	ಸೈದ್‌ಖಾಸಿಂ	4	12	6
		ಡಿಟೋ	ಮಹಮ್ಮದ್‌ಮಸ್ತಾನ್	0	11	2
		ಡಿಟೋ	ಷೇಕ್‌ಬುಡನ್	3	13	11
		ಪೆನ್ಷನ್ ಹವಾಲ್‌ದಾರ್	ಷೇಕ್ ಸಿಲೇಮಾನ್	3	6	2
		ಪೆನ್ಷನ್ ಶಿಪಾಯಿ	ಅಕ್ಬರ್‌ಖಾನ್	1	8	6
		ಪೆನ್ಷನ್ ಹವಾಲ್‌ದಾರ್	ಷೇಕ್ ಅಹಮ್ಮದ್	16	2	1
		ಪೆನ್ಷನ್ ಶಿಪಾಯಿ	ಷೇಕ್‌ಹುಸೇನ್	0	6	0
		ಡಿಟೋ	ಮುಸಾಮಾನ್‌ಖಾನ್	4	8	10
		ಡಿಟೋ	ಷೇಕ್‌ಮೊಹದೀನ್	4	3	2
		ಡಿಟೋ	ಷೇಕ್ ಅಹಮ್ಮದ್	1	5	3
		ಡಿಟೋ	ಪೀರ್ ಮಹಮ್ಮದ್	0	12	10
		ಡಿಟೋ	ತಿಪ್ಪನಾಯಿಡು	12	8	0
		ಸ್ಟೋರ್ ಇಲಾಖಾ ಶಿಕಲ್‌ಗರ್	ಅಬ್ದುಲ್‌ಹಕೀಂ	3	5	8
			ಜುಮ್ಲಾ ರೂಪಾಯಿಗಳು.	189	3	11

ಶಿವಮೊಗ್ಗಾ ಹಾಜರಿ ಸೆಕೆಂಡ್‌ಪಟಾಲಂ ಕುರ್ಮೇದಾರರ ಬಳಿ ಇರತಕ್ಕ ಮೊಬಲಗು.

2	2	ಶಿಪಾಯಿ	ಮಹಂಮದ್ ಹಯಾತ್	3	11	5
2	6	ಡಿಟೋ	ಮುದ್ದಾ	7	3	2
2	9	ತೊಟ್ಟಿ ಶಿಪಾಯಿ	ಪೆರಮಾಳು	5	10	2

ಪಟಾಲಂ.	ಕಂಪೆನಿ.	ಹುದ್ದೆ.	ಹೆಸರು.	ಮೊಬಲಗು		
2	7	ಶಿಪಾಯಿ	ಚವರಪ್ಪಾ	5	1	1
2	10	ಡಿಟೋ	ವೇಲಾಯುದಂ	6	7	3
2	1	ನಾಯಕ್	ಹುಶೆನಿಬೇಗ್	1	4	5
2	2	ಶಿಪಾಯಿ	ಮಹಂಮದ್ ಗೌಸ್	2	7	5
2	1	ಡಿಟೋ	ಹುಶೇನ್ ಷರೀಫ್	2	9	0
2	5	ಡಿಟೋ	ಷೇಕ್‌ಹುಶೇನ್	5	10	10
2	0	ಕಲಾಶಿ	ಲಚ್ಮಾ	0	10	8
2	7	ಶಿಪಾಯಿ	ನರಸಿಹ್ಮಾನಾಯಿಕ್	15	15	5
2	6	ಡಿಟೋ	ಮಹಂಮದ್ ಹುಶೇನ್	4	8	6
2	1	ಡಿಟೋ	ಮುತ್ತೂರ್ ಜಾಖಾನ್	7	7	2
2	6	ಡಿಟೋ	ರಾಣೋಜಿ	1	9	10
2	4	ಡಿಟೋ	ಅಬ್ದುಲ್ ರಸೂಲ್	4	8	9
2	0	ಡಿಟೋ	ವೆಂಕಟೂ	3	15	3
2	1	ಡಿಟೋ	ರಂಗಾ	10	8	11
2	1	ಡಿಟೋ	ಷೇಕ್ ಯಿಬರಾಹಿಂ	2	11	5
			ಜುಮ್ಲಾ ರೂಪಾಯಿಗಳು.	92	0	8
			ಮೈಸೂರು ಹಾಜರೀ ಥರ್ಡ್‌ಪಟಾಲಂ ಕಮ್ಮೀದಾರ್‌ರ ಬಳಿ ಇರತಕ್ಕ ಮೊಬಲಗು.			
3	1	ಶಿಪಾಯಿ	ವೆಂಕಟಸಾಮಿ	0	11	4
3	10	ಡಿಟೋ	ಗೋಪಾಲಸಿಂಗ್	1	13	10
3	1	ಡಿಟೋ	ಲಚ್ಮನ ಸಿಂಗ್	3	4	3
3	0	ಕಲಾಶಿ	ಚಿಕ್ಕ ಪುಟ್ಟ	1	9	10
3	7	ಶಿಪಾಯಿ	ಮಹಮ್ಮದ್ ಖಾಸಿಂ	6	4	0
3	10	ಡಿಟೋ	ನೊವಾ	3	2	7
3	5	ಡಿಟೋ	ಶ್ಯಾಸಿಂಗ್	3	1	11
3	7	ಡಿಟೋ	ಸೈದ್ ಯಿಬರಾಹಿಂ	1	3	4
3	10	ಡಿಟೋ	ಬುರ್ಹಾನ್‌ಖಾನ್	1	1	2
3	3	ಡಿಟೋ	ಹಿರೋಜಿ	0	3	7
3	5	ತೋಟಿ ಶಿಪಾಯಿ	ತಿಮ್ಮಾ	7	3	7
3	6	ಶಿಪಾಯಿ	ಲಕ್ಷ್ಮಣನಾಯುಡು	3	0	11
3	7	ಡಿಟೋ	ಸಖಾಜಿರಾವ್	3	3	10
3	8	ಡಿಟೋ	ಮಹಮ್ಮದ್ ಹಯಾತ್	0	3	10
3	7	ಪಖಾಲಿ	ಷೇಕ್ ಮದಾರ್	1	8	0
3	10	ಶಿಪಾಯಿ	ಮಹಮ್ಮದ್ ಯಾತ್	1	13	10

ಪಟಾಲಂ.	ಕಂಪೆನಿ.	ಹುದ್ದಾ.	ಹೆಸರು.	ಮೊಬಲಗು.		
3	3	ಧೋಬಿ	ಅಂಣು	2	2	10
3	9	ಶಿಪಾಯಿ	ಸೈದ ಹುಶೇಣ	1	6	5
3	7	ಫೈಫರ	ಸೋಕೀ	5	1	3
3	4	ಶಿಪಾಯಿ	ಬುರ್ಡಖಾಣ	4	15	6
3	5	ಡಿಟೋ	ಮೊಕದುಂಖಾಣ	2	11	4
3	8	ಡಿಟೋ	ಸಿದ್ದೋಜಿ	13	10	10
3	5	ಡಿಟೋ	ಮುನಸಾಮಿ	5	13	7
3	5	ಡಿಟೋ	ಮುಹಂಮದ ಗಫಾರ	2	3	8
3	5	ಡಿಟೋ	ರಾಮಾ	6	12	10
3	10	ಡಿಟೋ	ಯಾಲಕ್ಕಿ	10	15	5
3	5	ಡಿಟೋ	ಮಿಾರರಜಾ ಹುಶೇಣ	3	13	2
3	2	ಡಿಟೋ	ವೆಂಕಟರಮಣ	6	15	11
3	0	ಚೆಂಬಾರ	ಹನುಮ	0	6	5
3	0	ಖಲಾಸಿ	ತಿಮ್ಮ	3	6	2
			ಜುಮ್ಲಾ ರೂಪಾಯಿಗಳ	110	1	2
			ಒಟ್ಟು ಜುಮ್ಲಾ ರೂಪಾಯಿಗಳು	391	5	9

ಯೆ. ಸಿ. ಹೇ. ಕರ್ನಲ,
ಆ। ಮಿಲಿಟೇರಿ ಸಿಕ್ರೆಟೇರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಛಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಡಿಶಂಬರ್ ತಾ॥ 20, ಸನ್ 1884.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ

ಇಂಡ್ಯಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರುವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಜ್ಯುಡಿಷಿಯಲ್ ಇಲಾಖಾ

ಇಸ್ತಿಹಾರ್ ನಾಮೆ.

ತಾರೀಖು 9ನೇ ಡಿಶಂಬರ್ 1884.

ಶ್ರೀಮನ್ಮಹಾರಾಜ ರಾಜಾಸಾಹೆಬರವರ ಮಂಜೂರಾತಿನಿಶೆ, ಇದರಡೀಕಂಡ ಸನ್ 1885ನೇ ಇಸವಿಯ ಕೋರ್ಟು ರಜಾಪಟ್ಟಿಯು ಸರ್ವರ ತಿಳುವಳಿಕೆಯ ಬಗ್ಗೆ ಛಾಯಿಷ್ ಮಾಡಲ್ಪಟ್ಟಿರುತ್ತೆ.

ಈ ಸೀಮೆಯ ದರೋಬಸ್ತು ಸಿವಿಲ್ ಕೋರ್ಟುಗಳಲ್ಲಿಯೂ ಸದರೀ ದಿವಸಗಳನ್ನು ಪೂರಾ ರಜಾದಂತೆ ಆಚರಿಸತಕ್ಕದ್ದು.

ರಜಾ ದಿವಸಗಳ ಪಟ್ಟಿ.

ಜನವರೀ 1ರ ಲಾಗಾಯತು 3ರ ವರಿಗೆ ಯರಡು ದಿವಸಗಳೂ ಸೇರಿ	ಕ್ರಿಸ್ಮಮಸ ರಜಾದಿನಗಳು
ಡಿಟೋ 12 ಮತ್ತು 13	ಪೊಂಗಲ್
ಫೆಬ್ರುವರಿ 13	ಶಿವರಾತ್ರಿ
ಡಿಟೋ 18	ಬೂದೀಬುಧವಾರ
ಡಿಟ್ಟೋ 19	ಮಹಾರಾಜ ರಾಜಾಸಾಹೇಬರವರ ವರ್ಷವರ್ಧಂತಿ
ಡಿಟೋ 28	ಹೋಳೀ ಹಬ್ಬ
ಮಾರ್ಚಿ 17	ಯುಗಾದಿ
ಡಿಟೋ 24	ಶ್ರೀರಾಮನವಮಿ
ಡಿಟೋ 25	ಮಹಾರಾಜ ರಾಜಾಸಾಹೇಬರ ಪಟ್ಟಾಭಿಷೇಕೋತ್ಸವ ದಿನ
ಏಪ್ರಿಲ್ 2ರ ಲಾಗಾಯತು 7ರ ವರಿಗೆ ಎರಡುದಿನಗಳೂ ಸೇರಿ	ಈಸ್ಟರ್ ರಜಾದಿನನಗಳು
ಡಿಟೋ 8ರ ಲಾಗಾಯತು ಮೇ 19ರ ವರಿಗೆ ಎರಡುದಿನಗಳೂ ಸೇರಿ	6 ವಾರಗಳ ಕೋರ್ಟು ಸಾಲೀಯಾನಾ ಮೋಕಳೇ ದಿವಸಗಳು
ಮೇ 25	ಚಕ್ರವರ್ತಿನೀಯವರ ವರ್ಷವರ್ಧಂತಿ
ಆಗಸ್ಟ್ 25	ಶ್ರಾವಣಿ

ಸೆಪ್ಟಂಬರ್ 11	.. .. ..	ಗೌರೀ ಹಬ್ಬ
ಡಿಟ್ಟೋ 12	.. .. ..	ಗಣೇಶನ ಹಬ್ಬ
ಡಿಟ್ಟೋ 23	.. .. ..	ಅನಂತ ಚತುರ್ದಶಿ
ಅಕ್ಟೋಬರ್ 8	.. .. ..	ಮಹಾಲಯ ಅಮಾವಾಸ್ಯೆ
ಡಿಟ್ಟೋ 9	.. .. ..	ದಸರಾ ಆರಂಭ
ಡಿಟ್ಟೋ 17	.. .. ..	ಮಹಾನವಮಿ
ನವಂಬರ್ 5	.. .. ..	ದೀಪಾವಳಿ
ಡಿಟ್ಟೋ 7	.. .. ..	ಬಲಿಪಾಡ್ಯ
ಡಿಟ್ಟೋ 9	.. .. ..	ಪ್ರಿನ್ಸ್ ಆಫ್ ವೇಲ್ಸ್‌ಯವರ ವರ್ಷವರ್ಧಂತಿ
ಡಿಶಂಬರ್ 23ರ ಲಾಗಾಯತು 31ರ ವರಿಗೆ ಎರಡುದಿನಗಳೂ ಸೇರಿ		ಕ್ರಿಸ್ಟಮಸ್ ರಜಾದಿನಗಳು

ಸಂವತ್ಸರದ ತವೂಂ ಭಾನುವಾರಗಳು.

ಷರಾ—ವಿಜಯ ದಶಮೀ ಹಬ್ಬವು ಭಾನುವಾರವಾದ್ದರಿಂದ ಇದರಲ್ಲಿ ಬಿಟ್ಟಿದೆ.

ಅನ್ಸೇರ್ಷ ದಿನವು ಸಾಲಿಯಾನಾ ಕೋರ್ಟು ಮೊಕಳೇ ದಿನಗಳಲ್ಲಿ ಬರುವದ್ದರಿಂದ ಅದನ್ನು ಸಹ ಯಿಲ್ಲಿ ಬಿಟ್ಟು ಯಿದೆ.

'ಹುಕ್ಕುಂ ಬಮೋಜೀಬ್'
ಎಸ್. ಹೇಮಾಜಿರಾವ್,
ರಿಜಿಸ್ಟ್ರಾರ್.

ಫಿನಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡಿ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್ ಕೋ ಯವರು ಬಡ್ಡಿಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡಿಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್‌ಟ್ರೋಲರ್.

ಮೈಸೂರು ಡಿಸ್ಟ್ರಿಕ್ಟು.

ತಾರೀಖು 16ನೇ ಡಿಶಂಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿನ ಕ್ರಿಮಿನಲ್ ಸೆಷನ್‌ಗಳು 1885ನೇ ಇಸವಿಯ ಇದರಡಿ ಕಂಡ ತಾರೀಖುಗಳಲ್ಲಿ ಮೈಸೂರಲ್ಲಿ ನಡೆಯುವವು:—

ಜನವರಿ	14ನೇ ಬುಧವಾರ	ಆಗಸ್ಟು	10ನೇ ಸೋಮವಾರ
ಫೆಬ್ರುವರಿ	9ನೇ ಸೋಮವಾರ	ಸೆಪ್ಟಂಬರ್	14ನೇ ಡಿಟ್ಟೋ
ಮಾರ್ಚಿ	9ನೇ ಡಿಟ್ಟೋ	ಅಕ್ಟೋಬರ್	12ನೇ ಡಿಟ್ಟೋ
ಮೇ	26ನೇ ಮಂಗಳವಾರ	ನವಂಬರ್	10ನೇ ಮಂಗಳವಾರ
ಜೂನ್	8ನೇ ಸೋಮವಾರ	ಡಿಶಂಬರ್	7ನೇ ಸೋಮವಾರ
ಜುಲೈ	13ನೇ ಡಿಟ್ಟೋ		

ಸೆಷ್ಟಗೆ ಕಮ್ಮಿಟ್ ಮಾಡಲು ಅಧಿಕಾರ ಹೊಂದಿರುವ ಮೈಸೂರು ಡಿಸ್ಟ್ರಿಕ್ಟಿನೊಳಗಣ ಮಾಜಿಸ್ಟ್ರೇಟರುಗಳು, ತಾವು ಕಮ್ಮಿಟ್ ಮಾ ವ ಮೊಕದ್ದಮೆಗಳಲ್ಲಿ ಕಕ್ಷಿಗಾರರನ್ನೂ, ಸಾಕ್ಷಿಗಳನ್ನೂ ಮೇಲೆ ಕಂಡ ತಾರೀಖುಗಳಲ್ಲಿ ಮೈಸೂರಿನಲ್ಲಿ ಸೆಷ್ಟ ಕೋರ್ಟು ರೂಬರೂ ಹಾಜರಾಗುವ ಬಗ್ಗೆ ಮುಚ್ಚಳಿಕೆ ತೆಗದುಕೊಳ್ಳತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

2. ಮೇಲ್ಕಂಡ ತಾರೀಖುಗಳಲ್ಲಿ ಮಾಮೂಲ್ ಮೇರೆಗೆ ಪೋಲೀಸ್ ಏಪಾರ್ಟು ಮಾಡುವಂತೆ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರು ಕೋರಲ್ಪಟ್ಟಿರುತ್ತಾರೆ.

ವಿ. ಯಸ್. ನರಸಿಹ್ಮಯ್ಯಂಗಾರ್,
ಸೆಷ್ಟ ಜಡ್ಜ.

ನಂ. 10 ತಾರೀಖು 27ನೇ ನವಂಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಅರಕಲ್‌ಗೂಡು ಸಬ್ ರಿಜಿಸ್ಟ್ರೀ ಆಫೀಸಿನಲ್ಲಿ ಬೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜುಗಳನ್ನು ಹಾಜರ್ ಮಾಡಿದವರೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕಯಾ ಹಕ್ಕುದಾರರಾಗಲಿ ಈ ನೋಟೀಸ್ ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅವುಗಳನ್ನು ವಾಪಸ್ ತೆಗದುಕೊಳ್ಳಬೇಕು. ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅವುಗಳು ನಾಶಪಡಿಸಲ್ಪಡುವವು.

ನಂಬರು.	ದಸ್ತಾವೇಜು ಬರೆದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರೆಸಿ ಕೊಂಡವನ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
74 / 1881—82	ಮರೂರು ಗ್ರಾಮದಲ್ಲಿರುವ ಶ್ರೀವೈಷ್ಣವ ಬ್ರಾಹ್ಮಣ ಶ್ರೀನಿವಾಸಯ್ಯನವರ ಮಗ ರಾಮಸ್ವಾಮಿ 1 ವೆಂಕಟಾಚಾರ್ರು 1	ಮರೂರು ಗ್ರಾಮದಲ್ಲಿ ಇರುವ ಸಾಂತರಾಜೆ ಅರಸಿನವರ ಮಗ ಚಿಕ್ಕ ಅರಸು	3—6—81	3—6—81	75 ರೂಪಾಯಿನ ಜಮೀನ್ ಸಂಬಂಧವಾದ ಭೋಗ್ಯ ಪತ್ರ.
75 / ಡಿಟ್ಟೋ	ರಾಮನಾಥಪುರದಲ್ಲಿರುವ ಸಂಕೇತಿಬ್ರಾಹ್ಮಣ ನರಸಿಂಹ್ಮವಧಾನಿಗಳ ಮಗ ರಾಮಾವಧಾನಿ	ಅರಕಲ್‌ಗೂಡು ತಾಲ್ಲೂಕು ಕಚೇರಿ	4—6—81	4—6—81	302 ರೂಪಾಯಿನ ಜಾಮೀನ್ ಮುಚ್ಚಳಿಕೆ ಮೊಬಲಗ್ಗೆ ಭೂಸ್ಥಿತಿ ಯೀಡು ಮಾಡಿರುವದಾಗಿ.
125 / ಡಿಟ್ಟೋ	ಸರ್ವ ಮಾನ್ಯ ಮಾಯಿ ಗೌಡನಹಳ್ಳಿಯಲ್ಲಿರುವ ಪಂಚಾಳದ ಜಾತಿ ಕೊಟ್ಟೂರಯ್ಯನ ಮಗ ಬಡಾಇ ಕಸಬಿನಿಂದ ಜೀವಿಸುವ ವೀರಾಚಾರಿ	ಹಾಡ್ಯ ಗ್ರಾಮದಲ್ಲಿರುವ ಶಿವಾಚಾರದ ದೊಡ್ಡ ಹಟ್ಟಿ ಚನ್ನವೀರಪ್ಪನ ಮಗ ಆರಂಬದ ಕಸಬ್ಬಿನ ವೀರಭದ್ರಯ್ಯ	9—7—81	9—7—81	95 ರೂಪಾಯಿನ ಭೂಸ್ಥಿತಿ ಕ್ರಯಪತ್ರ.

ನಂ. 11. ತಾರೀಖು 6ನೇ ಡಿಶಂಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಮೈಸೂರು ಸಬ್ ರಿಜಿಸ್ಟ್ರಿ ಆಫಿಸಿನಲ್ಲಿ ಬೇವಾರಸ್ಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತೈವಜುಗಳನ್ನು ಹಾಜರ್ಮಾಡಿದವರೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕಯಾ ಹಕ್ಕುದಾರರೇ ಆಗಲಿ ಈ ನೋಟಿಸ್ ತಾರೀಖು ಲಾಗಾಯತು 1 ತಿಂಗಳ ವೊಳಗಾಗಿ ಸಬ್ ರಿಜಿಸ್ಟ್ರಾರರು ರೂಬರೂ ಹಾಜರಾಗಿ ಅವುಗಳನ್ನು ವಾಪಸು ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಅನುಸರಿಸಿ ಅವುಗಳು ನಾಶಪಡಿಸಲ್ಪಡುವವು.

983

ನಂಬರು.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜನ್ನು ಬರಸಿಕೊಟ್ಟವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ವ ಕಿಮ್ಮತು.
114 / 82—83	ವೈಸೂರು ಮಂಡಿ ಮಹಲಾದಲ್ಲಿ ಇರುವ ದೇವಾಂಗದ ಜಾತಿ ಜವಳಿ ವ್ಯಾಪಾರದ ದುಂಡೈಯ್ಯನ ಮಗ ರಂಗಂಣ.	ವೈಸೂರು ಲಷ್ಕರ್ ನೊಹಲೇಲಿರುವ ದೇವಾಂಗದ ಜಾತಿ ಜವಳಿ ವ್ಯಾಪಾರದ ಚಿಕ್ಕತಿಂಮಯ್ಯನ ಮಗ ದಾಸಂಣ.	30—5—82	2—6—82	75 ರೂಪಾಯಿನ ಮನೆ ಅದಾರದ ಪತ್ರ
636 / 81—82	ವೈಸೂರು ಇಟ್ಟಿಗೆ ಗೂಡಿನಲ್ಲಿ ಇರುವ ಪಂಚಾಳದ ಜಾತಿ ಕಾತಮೇಸ್ತ್ರಿ; ಮಕ್ಕಳು ಚಾಮುಂಡಾಚಾರಿ, ಕಿರೀ ಮಗ ಲಕ್ಷ್ಮಣಾಚಾರಿ, ಮಧ್ಯಮಗ ನಾರಣಾಚಾರಿ.	ವೈಸೂರು ಇಟ್ಟಿಗೆ ಗೂಡಿನಲ್ಲಿ ಇರುವ ಪಂಚಾಳದ ಜಾತಿ ಕಾತಮೇಸ್ತ್ರಿ ಮಕ್ಕಳು ಚಾಮುಂಡಾಚಾರಿ ಕಿರಿಮಗ ಲಕ್ಷ್ಮಣಾಚಾರಿ ಮಧ್ಯ ಮಗ ನಾರಣಾಚಾರಿ.	20—1—82	23—1—82	90 ರೂಪಾಯಿನ ಸ್ಥಿತಿ ಹಂಚಿಕೊಂಡ ವಿಭಾಗ ಪತ್ರ.
738 / 81—82	ವೈಸೂರು ಹೊಸಅಗ್ರಹಾರದಲ್ಲಿ ಇರುವ ಶಿವಾಚಾರ ಜಾತಿ ನಶ್ಯದ ಚನ್ನಪ್ಪನ ಮಗ ಅರಮನೆ ಚಾಕರಿವುಳ್ಳ ನಂಜಪ್ಪ.	ಅಸಿಸ್ಟೆಂಟ್ ಕಮ್ಮಿಷನರ್ ಕೃಷ್ಣಸ್ವಾಮಯ್ಯಂಗಾರ್ರ ಮಕ್ಕಳು ಎಂ. ಬಿ. ರಾಮಸ್ವಾಮಯ್ಯಂಗಾರ್.	7—3—82	9—3—82	450 ರೂಪಾಯಿನ ಹೆಂಚಿನ ಅಂಗಡಿ ವಗೈರೆ ಕ್ರಯಪತ್ರ.
799 / 81—82	ವೈಸೂರು ಶ್ರೀರಾಂ ಪೇಟೇಲಿರುವ ವೆಂಕಟರಮಣಯ್ಯನ ಮಗ ಲೇಟ್ ಅಷ್ಟಗ್ರಾಂ ಡಿವಿಜನ್ ಸೆಷನ್ ಕೋರ್ಟು ಆಸಿಸ್ಟೆಂಟ್ ರಿಕಾರಡ್ ಕೀಪರ್ ಸಿ. ಸುಬ್ಬರಾವ್	ವೈಸೂರು ಶ್ರೀರಾಂ ಪೇಟೇಲಿರುವ ವೈಶ್ಯರ ನಾಭಾವೆಂಕಟೇಶಯ್ಯನ ಮಗ ಪಸಾರಿ ಅಂಗಡಿ ವೈಶ್ಯರ ನಾಭಾನಾರಣಶೆಟ್ಟಿ.	23—3—82	29—3—82	ತಿಂಗಳು 1ಕ್ಕೆ 3–12–0 ಮೇರಿಗೆ 4 ವರುಷಕ್ಕೆ ಹುಟ್ಟಿದ ಮನೆ ಭಾಡಾದಸ್ತೈವಜು.

ಅಬ್ದುಲ್‌ಖಾದರ್, ಕೆ. ಬಿ..
ರಿಜಿಸ್ಟ್ರಾರ್.

ನಗರ ಡಿವಿಜನ್.

ನಗರ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜಿ ನಂಬರ್ 131.

ವೃತಪಟ್ಟ ನಾರಾಯಣಯ್ಯ ಯಂಬವನ ಆಸ್ತಿ ವಿಷಯವಲ್ಲಿ—

ಅರ್ಜೀದಾರ ಕ್ರಿಷ್ಣಪ್ಪ, ವೃತಪಟ್ಟ ಸದರೀ ನಾರಾಯಣಯ್ಯ ಯಂಬವನಿಗೆ ಸಹೋದರನು ಆಗಬೇಕೆಂಬ ಹಕ್ಕುದಾರೀ ಮೇಲೆ ಮೂಡಗೆರೆ ತಾಲ್ಲೂಕು ಕಳಸದ ಮಾಗಣಿ ಮೇಲಂಗಡಿ ಸ್ಥಳದ ಕ್ರಿಷ್ಣಪ್ಪ ಯಂಬವನು ಸದರೀ ಮೇಲಂಗಡಿ ವಾಸಸ್ಥನಾಗಿ ವೃತಪಟ್ಟ ನಾರಾಯಣಯ್ಯ ಯಂಬವನ ಜೆಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್‌ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಕ್ರಿಷ್ಣಪ್ಪ ಯಂಬವನ ಅರ್ಜೀಯನ್ನು 1885ನೇ ಇಸವಿ ಜನವರಿ ತಿಂಗಳು ತಾರೀಖು 31ರಲ್ಲು ಕೇಳಿ ಸರಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವೃತಪಟ್ಟ ನಾರಾಯಣಯ್ಯ ಯಂಬವನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಡಿಶಂಬರ್ ತಿಂಗಳು 9ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತೊಡನೆ ಕೊಡೋಣಾಗಿದೆ.

1884ನೇ ಇಸವಿ ಅರ್ಜೀ ನಂಬರ್ 132.

ಮೃತಪಟ್ಟ ನಗರ ತಾ॥ ಅರ್‌ನಾಡು ಮಾಗಣಿ ಶಾನಭಾಗ ಮರಿಯಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಹೋತನಕಟ್ಟೆ ಸೇತು ಮಾಧವಾಚಾರ್ರು ಮೃತಪಟ್ಟ ಸದರೀ ಮರಿಯಪ್ಪನ ದತ್ತು ಮಗನಾದ ಮೈನರ್ ಗುಂಡನಿಗೆ ಜನಕ ತಂದೆ ಆಗಬೇಕೆಂಬ ಹಕ್ಕುದಾರೀ ಮೇಲೆ ತೀರ್ಥಹಳ್ಳಿ ಸ್ಥಳದ ಹೋತನಕಟ್ಟೆ **ಸೇತು ಮಾಧವಾಚಾರ್ಯನು** ನಗರ ತಾ॥ ಪರಶೆಟ್ಟಿ ವಾಸಸ್ಥನಾಗಿ ಮೃತಪಟ್ಟ ಶಾನಭಾಗ ಮರಿಯಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲಗಳನ್ನು ಮೃತಪಟ್ಟ ಮರಿಯಪ್ಪನ ದತ್ತುಮಗ ಮೈನರ್ ಗುಂಡನಿಗೆ ಗಾರ್ಡಿಯನ್ನಾಗಿ ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಸೇತು ಮಾಧವಾಚಾರ್ಯನ ಅರ್ಜೀಯನ್ನು 1885ನೇಇಸವಿ ಜನವರಿ ತಿಂಗಳು ತಾರೀಖು 31ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಾನಭಾಗ ಮರಿಯಪ್ಪನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಡಿಶಂಬರ್ ತಿಂಗಳು 11ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟು ಜಡ್ಜ್.

ತಾರೀಖು 10ನೇ ಡಿಶಂಬರ್ 1884.

ಹೊನ್ನಾಳಿ ತಾಲ್ಲೂಕು ಆಕ್ಟಿಂಗ್ ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟ್ ನಾಗೇಶರಾಯರಿಗೆ ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡ್ 23ನೇ ಸೆಕ್ಷನ್ (b) ಕ್ಲಾಜ್ ಅನುಸರಿಸಿ,

1. ವಿಚಾರಣೆ ಮಾಡುವದಕ್ಕೆ ಅಧಿಕಾರವುಳ್ಳ ಮೊಕದ್ದಮೆಗಳಲ್ಲಿ ಫಿರ್ಯಾದುಗಳನ್ನ ದಾಖಲ್ಮಾಡಿಕೊಳ್ಳಲಿಕ್ಕೂ.
2. ಲಾಷ್ ವಿಚಾರಣೆಬಗ್ಯೂ ಅಧಿಕಾರ ಕೊಡಲ್ಪಟ್ಟಿರುತ್ತೆ.

ಜಿ. ಯಫ್. ಮೆಕ್ಲಿಜಾರ್ಜ್,
ಡಿಸ್ಟ್ರಿಕ್ಟು ಮಾಜಿಸ್ಟ್ರೇಟ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್‌ಜಡ್ಜೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 309.

ಮೃತಪಟ್ಟ ಪೇಷ್ಕ ಅಮೃತ ಮಹಲ್ ಮುತ್ಸದಿ ವೆಂಕಟರಾಮಯ್ಯಂಗಾರ್ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ರು ಬಿ. ಕೃಷ್ಣಯ್ಯಂಗಾರ್ ಮೃತಪಟ್ಟ ಸದರೀ ವೆಂಕಟರಾಮಯ್ಯಂಗಾರ್ರಿಗೆ ಮಗನಾಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ಸ್ಥಳದ ಮ॥ ಬಿ. ಕೃಷ್ಣಯ್ಯಂಗಾರ್, ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ವೆಂಕಟರಾಮಯ್ಯಂಗಾರ್ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ನಂ. ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮ॥ ಬಿ. ಕೃಷ್ಣಯ್ಯಂಗಾರರ ಅರ್ಜೀಯನ್ನು 1885ನೇ ಇಸವಿ ಜನವರಿ ತಿಂಗಳು ತಾರೀಖು 15ರಲ್ಲು ಕೇಳಿ, ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಾಮಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಡಿಶಂಬರ್ ತಿಂಗಳು 15ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1884ನೇ ಇಸವಿ ಅರ್ಜೀ ನಂಬರ್ 310.

ಮೃತಪಟ್ಟ ಮದ್ದಗಿರಿ ತಾಲ್ಲೂಕು ಹೊಳವನಹಳ್ಳಿ ಸಂಮತು ರಾಂಪುರದ ಭದ್ರಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ರುದ್ರಪ್ಪನು, ಮೃತಪಟ್ಟ ಸದರೀ ಭದ್ರಪ್ಪನಿಗೆ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಸದರೀ ರಾಂಪುರದ ಸ್ಥಳದ ರುದ್ರಪ್ಪನೆಂಬವನು, ಸದರೀ ರಾಂಪುರರದ ವಾಸಸ್ಥರಾಗಿ ಮೃತಪಟ್ಟ ಭದ್ರಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರುದ್ರಪ್ಪನ ಅರ್ಜೀಯನ್ನು 1885ನೇ ಇಸವಿ ಜನವರಿ ತಿಂಗಳು ತಾರೀಖು 15ರಲ್ಲು ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಭದ್ರಪ್ಪನ ಆಸ್ತಿಗೆ ಹಕ್ಕು ರಾದ ವಿಶ್ವರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1844ನೇ ಇಸವಿ ಡಿಶಂಬರ್ ತಿಂಗಳು 16ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿ ನಮ್ಮ ದಸ್ತುಖತ್ತೂ ಡನೆ ಕೊಡೋಣಾಗಿದೆ.

ಸಿ. ಕ್ರೆಸ್,
ಸಬ್ ಜಡ್ಜ್.

ತಾರೀಖು 10ನೇ ಡಿಶಂಬರ್ 1884.

" 50 ರೂಪಾಯಿ ಇನಾಂ. "

ಸಕ್ 1884ನೇ ಇಸವಿ ನವಂಬರ್ 14ನೇ ಮಧ್ಯಾಂ ಯಾ ಆ ಸುಮಾರಿನಲ್ಲಿ ಬೆಂಗಳೂರು ಷಹರ್ ಸುಲತಾನ್ ಪೇಟೆಯಲ್ಲಿ ಇರುವ ಮೆ|| ಮುದ್ದಪ್ಪನವರ ಮನೆಯಲ್ಲಿ ಹಾಫ ಮತ್ತು ಟಿಲ್ಸಿಯವರಿಂದ ತಯಾರ್ಮಾಡಲ್ಪಟ್ಟ 23857ನೇ ನಂಬರುಳ್ಳ ಭಂಗಾರದ ಕ್ರಾನಾಮಿಟರ್ ವಾಚ್ ಯಾನೇ ಘಡಿಯಾರ ಮತ್ತು 9 ತೊಲೆ ತೂಕವುಳ್ಳ ಅದರ ಭಂಗಾರದ ಸರಪಣಿ ಸಹಾ ಚೋರಿಯಾಗಿರುವ ಸಬಬ್ ಅವುಗಳು ಪತ್ತೆ ಆಗುವಂತೆ ವರ್ತಮಾನ ಕೊಡುವ ಮತ್ತು ಅವುಗಳನ್ನು ಪತ್ತೆಮಾಡಿಕೊಡುವ ಮನುಷ್ಯ ಯಾ ಮನುಷ್ಯರಿಗೆ ಸದರೀ ಮುದ್ದಪ್ಪ ನವರಿಂದ 50 ರೂಪಾಯಿ ಇನಾಂ ಕೊಡಲ್ಪಡುತ್ತೆ.

ಕೃಷ್ಣಯ್ಯಂಗಾರ್, ಫಾರ್ ಡೆಪ್ಯುಟಿ ಕಮ್ಮಿಷನರ್.

ತಾರೀಖು 6ನೇ ಡಿಶಂಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಸಕ್ 1885ನೇ ಇಸವಿ ಫೆಬ್ರುವರಿ ಗುರ್ರೇ ತಾರೀಖು ಲಾಗಾಯಿತು ಜೂನ್ 30ನೇ|| ತಾರೀಖುವರಿಗೆ ಇದರಡಿ ಕಂಡ ಪ್ಲಾಂಟೇಷನ್‌ಗಳು ಬೇಟೆಗೇ ಕಾಲಕ್ಕೋಸ್ಕರ ಮುಚ್ಚಲ್ಪಡುತ್ತವೆ. ಬೇಟೆಗಾರರು ಪ್ಲಾಂಟೇಷನ್‌ಗಳ ಚಾರ್ಜಿನಲ್ಲಿ ರುವ ಫಾರೆಸ್ಟ್ ಅಪ್ರೆಂಟಿಸ್‌ಯವರ ವಿಶೇಷ ಅಪ್ಪಣೆವಿವಾಯಿ ಸದರೀ ಪ್ಲಾಂಟೇಷನ್‌ಗಳನ್ನು ಪ್ರವೇಶಮಾಡಲು ಅವಕಾಶ ಕೊಡಲ್ಪಡುವದಿಲ್ಲ

ಪ್ಲಾಂಟೇಷನ್‌ಗಳು.	ತಾಲ್ಲೂಕು.
ಕಾಡಗೋಡಿ	ಹೊಸಕೋಟೆ
ಜಡಿಗೇನಹಳ್ಳಿ (ಹಳೇದು ಮತ್ತು ಹೊಸದು)	ಡಿಟೋ
ನೆಲಾಲ್ (A. B. ವ C.)	ಡಿಟೋ
ತಟ್ನೂರು	ಡಿಟೋ
ತಿಂಡಲ್	ಹೊಸಕೋಟೆ ಮತ್ತು ಮಾಲೂರು
ಅಪ್ಪಸಂದ್ರ	ಡಿಟೋ
ದೊಡ್ಡ ಹರಡಿ	ಹೊಸಕೋಟೆ ಮತ್ತು ಡಿಡ್ಲಘಟ್ಟ
ಚಿಕ್ಕ ಹರಡಿ	ಡಿಟೋ
ರಾಮಚಂದ್ರಾಪುರ	ಮಾಲೂರು
ಮಾರಸಂದ್ರ	ಡಿಟೋ
ಕುರಂಡಹಳ್ಳಿ (ಹಳೇದು ಮತ್ತು ಹೊಸದು)	ಡಿಟೋ
ಜಂಗಮಕೋಟೆ	ಡಿಡ್ಲಘಟ್ಟ
ಈನೂರು	ಬೆಂಗಳೂರು

ಯಸ್. ಪಿ. ಬಾಪೂರಾವ್,
ಫಾರೆಸ್ಟ್ ಅಪ್ರೆಂಟಿಸ್ ಇನ್ ಚಾರ್ಜ್ ಪ್ಲಾಂಟೇಷನ್ಸ್.

ನೋಟೀಸ್.

ತಾರೀಖು 13ನೇ ಡಿಶಂಬರ್ 1884.

ಇದರಿಂದ ಪ್ರಕಟಿಸುವದೇನಂದರೆ,—ಸಕ್ 1885ನೇ ಇಸವಿ ಜನವರಿ 15 ಮತ್ತು 16ನೇ ಮಧ್ಯಾಂಗಳಲ್ಲಿ ಲಾಲ್‌ಬಾಗಿನೊಳಗೆ "ಹಾರ್ಟಿಕಲ್‌ಚುರಲ್‌ಷೋ" ಯಾನೆ ಫಲ ಪುಷ್ಪ ಪ್ರದರ್ಶನ ವಿನೋದವು ನಡೆಯುವದು.

ಇನಾಂ ಪಟ್ಟಿಗಳು ಇದರಡಿ ರುಜು ಮಾಡಿರುವವರಲ್ಲಿ ದೊರೆಯುವವು.

ಜೆ. ಕ್ಯಾಮರ್ನ,
ಸೂಪರಿಂಟೆಂಡೆಂಟ್, ಲಾಲ್‌ಬಾಗ್.

ಕೊಡಗು.

ನೋಟೀಸ್.

ಮಡಿಕೇರಿ ತಾರೀಖು 4ನೇ ಡಿಶಂಬರ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸರ್ 1885ನೇ ಜನವರಿ ತಾರೀಖು 1ರಿಂದ ಕೊಡಗು ಫಾರೆಸ್ಟುಗಳಲ್ಲಿ ಬಿದರುಗಳನ್ನು ಒಂದು ಸಾವಿರಕ್ಕೆ 7—8—0 ಮೇರೆ ಮಾರುತ್ತೇವೆ, ಕೊಂಡುಕೊಳ್ಳುವವರು ಬಿದರುಗಳನ್ನು ತಾವೇ ಕಡಿದುಕೊಳ್ಳಬೇಕು.

ಬಿದರುಗಳು ಬೇಕಾದವರು ಫ್ರೇಜರಪೇಟೆ, ಮಾಲ್ದಾರೆ, ಮತ್ತು ತಿತಿಮತಿಯಲ್ಲು ಯಿರುವ ಫಾರೆಸ್ಟರವರಿಗೆ ದರಖಾಸ್ತು ಮಾಡಿಕೊಳ್ಳತಕ್ಕದ್ದು.

ಎಫ್. ಬಿ. ಡಿರ್ಕಸ್ಸರ್,
ಡೆಪ್ಯೂಟಿ ಕನ್ಸರವೇಟರ ಆಫ್ ಫಾರೆಸ್ಟ್ಸ್.

ಸರ್ 1884ನೇ ಇಸವಿ ನವಂಬರ ತಿಂಗಳ ಕಾಲಸ್ಥಿತಿ ರಿಪೋರ್ಟುಗಳು.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಮಳೆ—ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಹೆಡ್ ಕ್ವಾಟರಗಳಲ್ಲಿ ಇದರಡಿ ಕಂಡಂತೆ ಮಳೆ ಅಳೆಯಲ್ಪಟ್ಟಿರುತ್ತೆ:—

	ಇಂ.	ಸೆಂ.		ಇಂ.	ಸೆಂ.
ಶಿವಮೊಗ್ಗಾ ..	1	55	ನಗರ ..	0	15
ಚನ್ನಗಿರಿ ..	0	18	ತೀರ್ಥಹಳ್ಳಿ ..	1	65
ಹೊನ್ನಾಳಿ ..	2	10	ದಾವಣಗೆರೆ ..	0	60
ಷಿಕಾರಿಪುರ ..	1	15			
ಸಾಗರ ..	0	15			

ಪೇರಾವಾದ ಬೀಜಗಳು.—ಕಡಲೆ, ಜವೀ, ಭತ್ತ, ಉದ್ದು, ಹೆಸರು, ಅರಳೆ. ಫಸಲ್ ಸ್ಥಿತಿ, ದಾವಣಗೆರೆ ಶಿವಾಯಿ ಡಿಸ್ಟ್ರಿಕ್ಟಿನ ಮಿಕ್ಕ ವರೋಬಸ್ತು ತಾಲ್ಲೂಕುಗಳಲ್ಲಿಯೂ ಫಸಲ್ ವಳ್ಳೇ ಸ್ಥಿತಿಯಲ್ಲಿರುವಂತೆ ರಿಪೋರ್ಟಾಗಿರುತ್ತೆ. ಆದರೆ ದಾವಣಗೆರೆಯಲ್ಲಿ ಕೆಲವು ಜವರೀ ಮತ್ತು ರಾಗಿ ಫಸಲ್ ಒಣಗುತಲಿದೆ.

ಕಟಾವಾದ ಫಸಲ್‌ಗಳು.—ಭತ್ತ, ರಾಗಿ, ಜವರಿ, ನವಣೆ, ಸಾವೆ, ಹುರಳಿ, ಅಡಿಕೆ, ಯಾಲಕ್ಕಿ.

ಜನಾರೋಗ್ಯ.—ಸಾಧಾರಣವಾಗಿ ಚನ್ನಾಗಿದೆ. ಉಖಾಲ್‌ಜುಲಾಬಿನಿಂದ ದಾವಣಗೆರೆ ತಾಲ್ಲೂಕಿನಲ್ಲಿ 11 ಮಂದಿ, ಹೊನ್ನಾಳಿ ತಾಲ್ಲೂಕಿನಲ್ಲಿ 8 ಮಂದಿ ಮೃತ ಫಟ್ಟಿರುವಂತೆ ರಿಪೋರ್ಟು ಬಂದಿರುತ್ತೆ.

ಜರ್ಮಾ.—ಈ ಮಾಹೆಯಲ್ಲಿ 668 ರೂಪಾಯಿ ಕಂದಾಯವುಳ್ಳ ಜರ್ಮಾ ಸಾಗುವಳೀ ಬಗ್ಯೆ ತೆಗದುಕೊಳ್ಳಲ್ಪಟ್ಟಿದೆ.

ಧಾರಣೆ.—ಯಥಾಸ್ಥಿತವಾಗಿದೆ.

ಪಿ. ಪಂಚನಾಥರಾವ್,
ಫಾರ್ ಡೆಪ್ಯೂಟಿ ಕಮಿಷನರ.

ಕಡೂರು ಡಿಸ್ಟ್ರಿಕ್ಟು.

ಮಳೆ.—ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಹೆಡ್ ಕ್ವಾಟರಗಳಲ್ಲಿ ಇದರಡೀ ಕಂಡಂತೆ ಮಳೆ ಅಳೆಯಲ್ಪಟ್ಟಿದೆ:

ತಾಲ್ಲೂಕುಗಳು.	ಇಂ॥	ಸೆಂ॥	ತಾಲ್ಲೂಕುಗಳು	ಇಂ॥	ಸೆಂ॥
ತರೀಕೆರೆ ..	2	25	ಹಾಸನ ..	1	52
ಕೊಪ್ಪ ..	0	90	ಮಂಜರಾಬಾದ್	1	71
ಚಿಕ್ಕಮಗಳೂರು ..	4	10	ಬೇಲೂರು ..	0	58
ಕಡೂರು ..	2	14	ಅರಸೀಕೆರೆ ..	3	15
ಮೂಡಗೆರೆ ..	0	10	ಎಡೆಹಳ್ಳಿ ..	1	40

ಬೇರಾವಾದ ಬೀಜಗಳು.—ತರೀಕೆರೆ, ಚಿಕ್ಕಮಗಳೂರು, ಕಡೂರು, ಹಾಸನ, ಬೇಲೂರು ಮತ್ತು ಅರಸೀಕೆರೆ ತಾಲ್ಲೂಕ ಚಿಕ್ಕಮಗಳೂರು ಮತ್ತು ಕಡೂರು ತಾಲ್ಲೂಕುಗಳಲ್ಲಿ ಬೆಳ್ಳುಳ್ಳಿ, ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಗನ್ನಾ, ಚಿಕ್ಕಮಗಳೂರು, ಕ ಬೇಲೂರು ಮತ್ತು ಅರಸೀಕೆರೆ ತಾಲ್ಲೂಕುಗಳಲ್ಲಿ ಗೋಧಿ, ಚಿಕ್ಕಮಗಳೂರು, ಕಡೂರು ಮತ್ತು ಅರಸೀಕೆರೆ ತಾಲ್ಲೂಕುಗಳಲ್ಲಿ ಕೊತ್ತಂಬ ಬೀಜ, ಕಡೂರು ತಾಲ್ಲೂಕಿನಲ್ಲಿ ಜವೆಗೋಧಿ, ಹಾಸನ ಮತ್ತು ಬೇಲೂರು ತಾಲ್ಲೂಕುಗಳಲ್ಲಿ ಮೆಂಥ್ಯಾ.

ಕಟಾವಾದ **ಪೈರುಗಳು.**—ಕೊಪ್ಪಾ ಮತ್ತು ಮೂಡಗೆರೆ ತಾಲ್ಲೂಕುಗಳಲ್ಲಿ ಯಾಲಕ್ಕಿ, ಕಾಫಿ, ಮತ್ತು ಅಡಿಕೆ, ಚಿಕ್ಕಮಗಳೂರು, ಕಡೂರು, ಮೂಡಗೆರೆ ಹಾಸನ, ಮಂಜರಾಬಾದ್ ಮತ್ತು ಬೇಲೂರು ತಾಲ್ಲೂಕುಗಳಲ್ಲಿ ಭತ್ತ, ಕಡೂರು ಮತ್ತು ಹಾಸನ ತಾಲ್ಲೂಕುಗಳಲ್ಲಿ ರಾಗಿ

ಪೈರುಗಳ ಸ್ಥಿತಿ ಸಾಧಾರಣವಾಗಿ ಚನ್ನಾಗಿದೆ.

ಕಾಲಸ್ಥಿತಿಯು ಚನ್ನಾಗಿಧೆ.

ಜನಾರೋಗ್ಯ.—ಸಾಧಾರಣವಾಗಿ ಚನ್ನಾಗಿದೆ, ಕೊಪ್ಪಾ, ತರೀಕೆರೆ ಮತ್ತು ಹಾಸನ ತಾಲ್ಲೂಕುಗಳಲ್ಲಿ ಜ್ವರ ವ್ಯಾಪಿಸಿ ಯಿಧೆ.

ಕಾಲ್ನಡೆ.—ವಳ್ಳೇ ಸ್ಥಿತಿಯಲ್ಲಿದೆ ಈ ತಿಂಗಳಲ್ಲಿ 975 ಕಾಲ್ನಡೆ ನಷ್ಟವಾದಂತೆ ರಿಪೋರ್ಟಾಗಿಧೆ, ಕಳೆದ ತಿಂಗಳಲ್ಲಿ 1022 ಕಾಲ್ನಡೆ ನಷ್ಟವಾಗಿರುತ್ತೆ.

ಜಮೀನ್.—**1,170—2—0** ರೂಪಾಯಿ ಕಂದಾಯವುಳ್ಳ ಜಮೀನ್ ಸಾಗುವಳೀಬಗ್ಗೆ ತೆಗದುಕೊಳ್ಳಲ್ಪಟ್ಟಿದೆ. ರಾಜೀನಾಮೆ ಯಾವದೂ ಬರಲಿಲ್ಲವು.

ಧಾರಣೆ.—ಯಥಾ ಸ್ಥಿತಿಯಾಗಿಧೆ.

ಮಹಮ್ಮದಲ್ಲೀ, ಕೆ. ಬಿ.,
ಅಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ.

ಗವರ್ನಮೆಂಟ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನಮೆಂಟ ಆಫೀಸರಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಶೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೀ ಕೊಂಡು ಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗಡದ ಡಬ್ಬೀ ಒಂದಕ್ಕೆ ರೂ. 4—8—0; ಎಂಟು ಔನ್ಸವುಳ್ಳ ಡಬ್ಬಿಗೆ ರೂ. 8—8—0; ಒಂದು ಪೌಂಡ್ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸವುಳ್ಳ ಡಬ್ಬಿ ಒಂದಕ್ಕೆ ರೂ. 5—8—0, ಎಂಟು ಔನ್ಸವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌಂಡವುಳ್ಳ ಡಬ್ಬಿಗೆ 20 ರೂಪಾಯಿ, ಈ ಔಷಧವು, ಕಲ್‌ಕತ್ತೆಯಲ್ಲಿ ಮುಖ್ಯ ಮುಖ ಯೂರೋಪಿಯನ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗಡದ ಡಬ್ಬೀಗೆ ಎಂಟು ಆಣೆ ಟಪ್ಪಾಲ್ ಹಾಸಲೂ, ಒಂದು ಪೌಂಡ್ ಡಬ್ಬಿಗೆ ಹನ್ನೆರಡ ಆಣೆ ಹಾಸಲೂ ಕೊಡಬೇಕು.

ಕ್ರಿಸ್ಟಲೈನ್ ಸಿಂಕೋನಾ ಫೆಬ್ರಿಫ್ಯೂಜ್.

ಗವರ್ನಮೆಂಟ ಕೋಠಿಯಲ್ಲಿ ಕೆಂಪುವರ್ಣದ ಸಿಂಕೋನಾ ಚಕ್ಕೆಯಿಂದ ತಯಾರ್ ಮಾಡಲ್ಪಟ್ಟ ಹೊಸದಾದ ಮತ್ತು ಅಭಿವೃದ್ಧಿಯಾದ ತಯಾರಿ—ಇದು ಸಾಧಾರಣವಾದ ಕ್ರಿಸ್ಟಲೈಸಡ್ ಅಲ್ಲದ ಫೆಬ್ರಿಫ್ಯೂಜಿನ ಕ್ವಿನೈನಿಗೆ ಸಂಪೂರ್ಣವಾದ ಪ್ರತಿನಿಧಿಯಾಗಿಧೆ, ಇದನ್ನು ಕಲ್‌ಕತ್ತೆಬಳಿ ಸೀಬ್‌ಪೂರ್ ಸಮೀಪದಲ್ಲಿ ರಾಯಲ್ ಬೊಟಾನಿಕ್ ಗಾರ್ಡನ್ ಸೂಪರಿಂಟೆಂಡೆಂಟರಿಂದ ಗವರ್ನಮೆಂಟ ಆಫಿಸರಗಳು ಸರ್ಕಾರಿಯಾದ ಮತ್ತು ಧರ್ಮಾರ್ಥವಾದ ಕೆಲಸಗಳಿಗಾಗಿ ಮತ್ತು ಒಂದು ಸಲಕ್ಕೆ ಇಪ್ಪತ್ತು ಪೌಂಡ್ ಮತ್ತು ಅದಕ್ಕೆ ಮೇಲ್ಪಟ್ಟು ತೆಗದುಕೊಳ್ಳುವರು ನಗದೀಗಾಗೆಯೇ ಪೌಂಡ್ ಒಂದಕ್ಕೆ 24 ರೂಪಾಯಿಗಳ ದರ ಪ್ರಕಾರ, ಕೊಂಡುಕೊಳ್ಳಬಹುದು. ರಾಯಲ್ ಬೊಟಾನಿಕ್ ಗಾರ್ಡನ್ ಸೂಪರಿಂಟೆಂಡೆಂಟರು ನಗದಿಗೇನೇ ಸಮುದಾಯವಾಗಿ ಪ್ರಜೆಗಳಿಗೆ ಮತ್ತು ಪೌಂಡ್ ಒಂದಕ್ಕೆ 32 ರೂಪಾಯಿಗಳ ಪ್ರಕಾರ ಮುಖ್ಯರಾದ ಯೂರೋಪಿಯನ್ ಮತ್ತು ನೇಟಿವ್ ಡ್ರಗ್ಗಿಸ್ಟಗಳು ಸರಬರಾಯಿ ಮಾಡತಕ್ಕದ್ದು. ಟಪ್ಪಾಲ್ ಹಾಸಲ್ ಹನ್ನೆರಡಾಣೆ ಜಾಸ್ತಿ.

Mysore Government Press, Bangalore.—1884.

ಜನಾರೋಗ್ಯ—ಛಂದಾಗಿದೆ; ಅಕ್ಟೋಬರ ತಿಂಗಳಲ್ಲಿ 596 ಮಂದಿಯೂ ಅದರ ಹಿಂದಿನ ತಿಂಗಳಲ್ಲಿ 644 ಮಂದಿಯೂ ಹೋಗಿರುತ್ತಾರೆ; ಮೊಕಾಬಿಲಾ 48 ಕಮ್ಮಿ. ಮುಖ್ಯವಾಗಿ ಜ್ವರದಿಂದಲೆ ಜನಗಳು ಸತ್ತಿರುತ್ತಾರೆ.

ಕಾಲ್ನಡೆ—ಆರೋಗ್ಯವಾಗಿವೆ, ಸದರೀ ಮಾಹೆಯಲ್ಲಿ 1795 ಕಾಲ್ನಡೆಗಳೂ ಅದರ ಹಿಂದಿನ ತಿಂಗಳಲ್ಲಿ 2465 ಕಾಲ್ನಡೆಗಳೂ ಹೋಗಿರುತ್ತವೆ; ಈ ಪೈಕೀ ದುಷ್ಟಮೃಗಗಳಿಂದ ಕೊಲ್ಲಲ್ಪಟ್ಟವು 225.

ಜಮೀನು—ಸಾಗುವಳೀ ಬಗ್ಯೆ 1367—0—8 ರೂ. ಕಂದಾಯ ಬಾಳುವ ಜಮೀನು ತೆಗದುಕೊಳ್ಳಲ್ಪಟ್ಟಿತು.

ಎ. ಹೆಚ್. ಮೆಕ್ಕಿಂಟ್ಯೈರ್,
ಡೆಪ್ಯುಟಿ ಕಮ್ಮಿಷನರ.

ಕೊಡಗು.

ನೋಟೀಸ್‌ಗಳು.

ತಾರೀಖು 4ನೇ ಡಿಸಂಬರ್ ಸ್ 1884.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ, ಸ್ 1885ನೇ ಜನವರೀ ತಾರೀಖು 1ರಿಂದ ಕೊಡಗು ಫಾರೆಸ್ಟುಗಳಲ್ಲಿ ಬಿದರುಗಳನ್ನು ವಂದುಸಾವಿರಕ್ಕೆ 7—8—0 ಮೇರೆ ಮಾರುತ್ತೇವೆ.

ಕೊಂಡುಕೊಳ್ಳುವವರು ಬಿದರುಗಳನ್ನು ತಾವೇ ಕಡಿದುಕೊಳ್ಳಬೇಕು.

ಬಿದರುಗಳು ಬೇಕಾದವರು ಫ್ರೇಜರಪೇಟೆ, ಮಾಲ್ದಾರೆ, ಮತ್ತು ತಿತಿಮತಿಯಲ್ಲಿ ಇರುವ ಫಾರೆಸ್ಟರವರಿಗೆ ದರಖಾಸ್ತು ಮಾಡಿಕೊಳ್ಳತಕ್ಕದಿಧೆ.

ತಾರೀಖು 14ನೇ ಜನವರೀ ಸ್ 1885.

ಕೊಡಗು ಫಾರೆಸ್ಟು ಇಲಾಖೆಯ ಬಾಬತು ಹುಣಸೂರು ಡಿಪೋದಲ್ಲಿರುವ ಈ ಕೆಳಗೆ ನಮೂದ್ ಮಾಡಿದ ನಾಟಾಗಳನ್ನು ಇದೇ ಇಸವಿ ಫಿಬ್ರವರೀ ತಾರೀಖು 10ನೇ ದಿನ ಹುಣಸೂರಲ್ಲಿ ಬಹಿರಂಗವಾದ ಹರಾಜು ಮಾಡುತ್ತೇವೆ.

ತ್ಯಾಗ	400 ನಾಟಾಗಳು.	ಹೊನ್ನೆ	200 ನಾಟಾಗಳು

ನಿಬಂಧನೆ—ಸ್ 1873ನೇ ಇಸವಿ ಮೈಸೂರು ಗೆಜೆಟ್ಟಿನಲ್ಲಿ ಪಾಯಿಷ್ ಮಾಡೋಣಾದ ಜೂನ್ ತಾರೀಖು 12ನೇ ನಂಬರು 20ನೇ ನೋಟಿಫಿಕೇಷನ್ ಮೇರೆ.

ಎಫ್. ಬಿ. ಡಿಕೆನ್ಸ್,
ಡೆಪ್ಯುಟೀ ಕನ್ಸರವೇಟರ್ ಆಫ್ ಫಾರೆಸ್ಟು.

ತಾರೀಖು 6ನೇ ಡಿಶಂಬರ 1884.

ಇದರಿಂದ ತಿಳಿಯಪಡಿಸುವದೇನಂದರೆ, ಸ್ 1885ನೇ ಇಸವಿ ಫೆಬ್ರುವರಿ ಗುರ್ರೆ ತಾರೀಖು ಲಾಗಾಯಿತು ಜೂನ್ 30ನೇ ತಾರೀಖುವರೆಗೆ ಇದರಡಿ ಕಂಡ ಪ್ಲಾಂಟೇಷನ್‌ಗಳು ಬೇಗೆ ಕಾಲಕ್ಕೋಸ್ಕರ ಮುಚ್ಚಲ್ಪಡುತವೆ ಬೇಟೆಗಾರರು ಪ್ಲಾಂಟೇಷನ್‌ಗಳ ಚಾರ್ಜಿನಲ್ಲಿರುವ ಫಾರೆಸ್ಟುಆಪ್ರೆಂಟಿಸ್‌ಯವರ ವಿಶೇಷ ಅಪ್ಪಣೆಇವಾಯಿ ಸದರೀ ಪ್ಲಾಂಟೇಷನ್‌ಗಳನ್ನು ಪ್ರವೇಶಮಾಡಲು ಅವಕಾಶ ಕೊಡಲ್ಪಡುವದಿಲ್ಲ.

ಪ್ಲಾಂಟೇಷನ್‌ಗಳು.		ತಾಲ್ಲೂಕು.
ಕಾಡಗೋಡಿ		ಹೊಸಕೋಟೆ
ಜಡಿಗೇನಹಳ್ಳಿ	(ಹಳೇದು ಮತ್ತು ಹೊಸದು)	ಡಿಟ್ಟೋ
ನೆಲಾಲ್	(A. B. ವ C.)	ಡಿಟ್ಟೋ
ತಟ್ನೂರು		ಡಿಟ್ಟೋ
ತಿಂಡಲ್		ಹೊಸಕೋಟೆ ಮತ್ತು ಮಾಲೂರು

19. ಹಾಲೀ ಶಿವಮೊಗ್ಗಾ ಜೈಲ್‌ನಲ್ಲಿ 225 ಮಂದಿ ಖೈದೀರಿದ್ದಾರೆ, ಈ ಸಾಲ್‌ನಲ್ಲಿ ಷುಮಾರ್ 250 ವರಿಗೆ ಜಾಸ್ತೀಯಾಗಬಹುದಾಗಿ ಅಂದಾಜು ಯಿರುತ್ತೆ.

20. ಆಹಾರ ದರದ ಪಟ್ಟಿಯನ್ನು 1880ನೇ ಇಸವಿ ಜನವರೀ 10ನೇ ಮುರ್ಕ್ಕುಮಿನ ಮೈಸೂರು ಗೆಜೆಟ್ಟಿನಿಂದಾಗಲಿ, ಶಿವಮೊಗ್ಗಾ ಜೈಲ್ ಸೂಪರಿಂಟೆಂಡೆಂಟರವರನ್ನ ಕೇಳಿ ಅಗಲಿ ತಿಳದುಕೊಳ್ಳಬಹುದು.

ಪಿ. ಪಂಚನಾಥರಾವ್,
ಜೈಲ್ ಸೂಪರಿಂಟೆಂಡೆಂಟ್.

ಕಡೂರು ಡಿಸ್ಟ್ರಿಕ್ಟು.

ತಾರೀಖು 15ನೇ ಜನವರೀ 1885.

ಇದರಿಂದ ಸರ್ವರತಿಳುವಳಿಕೆ ಬಗ್ಯೆ ಪ್ರಕಟಪಡಿಸುವದೇನಂದರೆ, ಕಡೂರು ಡಿಸ್ಟ್ರಿಕ್ಟು ತರೀಕೆರೆ ತಾಲ್ಲೂಕು ಕಾರ್ಮದುರ್ಗಕ್ಕೆ ಶೇರಿದ 180 ಯಕರೆ ವಿಸ್ತೀರ್ಣವುಳ್ಳ ಪೂರಾ 6ನೇ ಸರ್ವೇ ನಂಬರ್ ಬೀಳು ಜಮೀನಿಗೆ ಕಾಫಿ ಸಾಗುವಳೀ ಬಗ್ಯೆ ದರಖಾಸ್ತು ಬಂದಿರುವದರಿಂದ ಸದರೀ ಜಮೀನು 1885ನೇ ಇಸವಿ ಫಿಬ್ರುವರೀ 20ನೇ ಮುರ್ಕ್ಕುಮಿನಲ್ಲಿ ತರೀಕೆರೆ ತಾಲ್ಲೂಕು ಅಮಲ್ದಾರರ ರೂಬರೂ ತರೀಕೆರೆ ಮೊಕ್ಕಾಮಿನಲ್ಲಿ, ಐಯಿಂದ ಸದರೀ ಜಮೀನಿಗೆ ಮೊಕರರ್ ಮಾಡಲ್ಪಡುವ ಕಂದಾಯ ತೆರುವದಕ್ಕೂ, ಯಾವದಾದರೂ ನೀರು ವುಳಸಿಕೊಳ್ಳುವದರ ಮತ್ತು ಅವಶ್ಯಕವಾದ ಯಾವದಾದರೂ ಮಾರ್ಗದ ಹಕ್ಕುದಾರಿಗೂ ವಳಪಟ್ಟು, ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಕ್ರಯದಾರನು ಹರಾಜು ಖೈದಾದ ಕೂಡ್ಲೇ ಕ್ರಯದ ಮೊಬಲಗಿ ಪೈಕೀ ಶೇಕಡಾ 25ರಂತೆ ಆಗುವ ಮೊಬಲಗನ್ನು ಡಿಪಾಜಿಟ್ ಯಿಡತಕ್ಕದ್ದು. ಬಾಕಿ ಕ್ರಯದ ಮೊಬಲಗನ್ನು ಹರಾಜು ತಾರೀಖು ಲಾಗಾಯತು 15 ದಿವಸಗಳ ವಳಗಾಗಿ ಪಾವತೀ ಮಾಡದೆ ಯಿದ್ದಲ್ಲಿ ಮೊದಲು ಡಿಪಾಜಿಟ್ ಯಿಡಲ್ಪಟ್ಟ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡುವದು.

3. ಹಾಗೆ ಡಿಪಾಜಿಟ್ ಯಿಡಲ್ಪಡದೆ ಹೋದರೆ ಯಾ ಕ್ರಯದ ಬಾಕೀ ಮೊಬಲಗು ಪಾವತೀ ಮಾಡಲ್ಪಡದೆ ಯಿದ್ದರೆ, ಜಮೀನು ಅವ್ವಲ್ ಕ್ರಯದಾರನ ಖರ್ಚಿಗೂ ಲುಕ್ಸಾನಿಗೂ ವಳಪಟ್ಟು ಪುನಹಾ ಹರಾಜ್ ಹಾಕಲ್ಪಡುವದು.

4. ಜಮೀನಿನ ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಕಾಯಂ ಮಾಡಲ್ಪಡುವ ಪರಿಯಂತ ಆಖೈರಾದ್ದಾಗಿರತಕ್ಕದ್ದಲ್ಲವು.

5. ಸದರೀ ಜಮೀನಿನ ಚಕ್ಕುಬಂದಿಯು ಇದರ ಕೆಳಗೆ ಕಾಣಿಸಿರುತ್ತೆ; ಇನ್ನೂ ಜಾಸ್ತಿ ತಪಸೀಲ್‌ಗಳು ಹರಾಜ್ ಕಾಲದಲ್ಲಿ ಕೇಳಿ ತಿಳಿದುಕೊಳ್ಳಬಹುದು. ತಪಸೀಲ್‌ನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಯಿರುವ ಗಲ್ಲತ್‌ಗಳಿಗೆ ಸರಕಾರದವರು ಜವಾಬದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

ಉತ್ತರಕ್ಕೆ—ಸರ್ವೇ ನಂಬರ್ 21
ದಕ್ಷಿಣಕ್ಕೆ—ಅತ್ತಿಗೆರೆ ಗ್ರಾಮದ ಜಮೀನು
ಪೂರ್ವಕ್ಕೆ—ಸಂತವೇರಿಯಿಂದ ಚಿಕ್ಕಮಗಳೂರಿಗೆ ಹೋಗುವ ರಸ್ತೆ
ಪಶ್ಚಿಮಕ್ಕೆ—ಸರ್ವೇ ನಂಬರ್ 5

ಮಹಮ್ಮದ್ ಅಲ್ಲಿ, ಕೆ. ಬಿ.,
ಆಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್.

ಸನ್ 1884ನೇ ಇಸವಿ ನವಂಬರ್ ತಿಂಗಳ ಕಾಲಸ್ಥಿತಿ ರಿಪೋರ್ಟುಗಳು.

ಬೆಂಗಳೂರು ಡಿಸ್ಟ್ರಿಕ್ಟು.

ಮಳೆ—ಹೆಡ್ ಕ್ವಾರ್ಟರ್‌ನಲ್ಲಿ 3 ಅಂಗುಲ 47 ಸೆಂಟಸ್ ಮಳೆ ಆಳೆಯಲ್ಪಟ್ಟಿತು. ಡಿಸ್ಟ್ರಿಕ್ಟು ಮಳೆ ಸಾಧಾರಣವಾಗಿ ಅದ ಮಳೆಯಿಂದ ಬೆಳೆಯಲ್ಲಿರುವ ಫಸಲಿಗೆ ವಿಶೇಷ ಮೇಲು ಉಂಟಾಯಿತು.

ಬೆಳೆಯ ಸ್ಥಿತಿ—ತರೀ ಖುಷ್ಕಿ ಫಸಲುಗಳು ಛಂದಾಗಿವೆ, ರಾಗಿ ರೇಟಿ ಕೆಲಸವು ಕೆಲವು ಸ್ಥಳಗಳಲ್ಲಿ ಪ್ರಾರಂಭಿಸಲ್ಪಟ್ಟಿತು.

				ರೂ. ಆ. ಪೈ.
ನೇಟಿವ್ ಕೂಲಿಯವರಾದ ಗಂಡುಸರಿಗೆ A ಕ್ಲಾಸ್	..	..		
ಡಿಟೋ ಡಿಟೋ B ,,	..	..		
ಡಿಟೋ ಡಿಟೋ C ,,	..	..		
ಹುಡುಗರಾದ ಖೈದೀರು	..	..		
ನೇಟಿವ್ ಕೂಲೀ ಮಾಡದ ಗಂಡುಸರು, ಹೆಂಗಸರು, ವಿಚಾರಣೆಯಲ್ಲಿ ಇರತಕ್ಕವರು, D ಕ್ಲಾಸ್				
ಯೂರೋಪಿಯನ್‌ಗಳು ವ ಈಸ್ಟ್ ಇಂಡಿಯನ್‌ಗಳು	..	..		

7. ದರಖಾಸ್ತು ಮಾಡಲ್ಪಟ್ಟ ದರಗಳು ಆಹಾರ ಜಿನಸೀಗಳ ಸ್ಕೇಲ್ ಪಟ್ಟಿಯಲ್ಲಿ ನಮೂದಿರುವ ಪದಾರ್ಥಗಳು ಮಾತ್ರವಲ್ಲದೆ ಆಸ್ಪತ್ರಿ ಆಹಾರ ಪದಾರ್ಥಗಳು, ಕಾಹಿಲೇ ಮನುಷ್ಯರಿಗೆ ವಿಶೇಷ ಪದಾರ್ಥಗಳು, ನಷ್ಟವಾಗತಕ್ಕ ಪದಾರ್ಥಗಳು, ದೀಪದ ಯಣ್ಣೆ ಲಾಂದ್ರಗಳು, ಮತ್ತು ಅವುಗಳ ರಿಪೇರಿ ಮಾಡಿಸುವಣ, ಸ್ನಾನ ಮಾಡಲಿಕ್ಕೆ ಶೀಗೇಕಾಯಿ, ತವಾಂ ತಾಂಬ್ರ ಪಾತ್ರೆಗಳ ರಿಪೇರಿ ವ ಕಲಾಯಿ, ಪರಕೆಗಳು, ಗೋಡೆ ಚೂನೆ ಮಾಡಲಿಕ್ಕೆ ಬಿದುರು, ಮಡಿಕೆ ಸುಡುವದಕ್ಕೆ ಸಾದೆ, ಹೆಣ್ಣು ಖೈದೀರ ಮಕ್ಕಳಿಗೆ ಬೇಕಾದ ಹಾಲು, ರೊಟ್ಟಿ ಸಕ್ಕರೆ ವಗೈರೇ ಪದಾರ್ಥಗಳು, ಹೊಗೆ ಹಾಕುವದಕ್ಕೆ ಗಂಧಕ, ಚವಳುಮಣ್ಣು, ಮತ್ತು ಬಟ್ಟೆ ಶಿವಾಯಿ ಖೈದಿಗಳ ಉಪಯೋಗದ ಬಗ್ಗೆ ಕ್ರಮವಾಗಿ ಕೊಡಬೇಕಾದ ತವಾಂ ಚಿಲ್ಲರೇ ಪದಾರ್ಥಗಳೂ ಸಹ ಅಡಗಿರತಕ್ಕದ್ದು.

8. ಸೂಪರಿಂಟೆಂಡೆಂಟರವರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ, ಹೀಗೆ ತಿರಸ್ಕರಿಸಲಿಕ್ಕೆ ಯಾವ ನಿಮಿತ್ತವನ್ನೂ ಅವರು ತಿಳಿಸಬೇಕಾದ್ದಿಲ್ಲವು.

9. ಮಂಜೂರಾದ ದರಖಾಸ್ತುದಾರನ ಡಿಪಾಜಿಟ್ ಮೊಬಲಗು ನಿಲ್ಲಿಸಿಕೊಳ್ಳಲ್ಪಟ್ಟು, ಆತನು ಕಂಟ್ರಾಕ್ಟು ಮುಚ್ಚಳಿಕೆ ಬರದು ಕೊಡಲಿಕ್ಕಾಗಲಿ, ನಗದಾದರೂ ಗವರ್ನಮೆಂಟ್ ಪತ್ರಗಳ ಮೂಲಕವಾದರೂ 1,000 ರೂಪಾಯಿಗಳ ಮೊಬಲಗಿಗೆ ಜಾಮೀನನ್ನು ತನ್ನ ದರಖಾಸ್ತು ಮಂಜೂರಾದ ಸಂಗತಿ ತನಗೆ ತಿಳಿಸಲ್ಪಟ್ಟ ತಾರೀಖು ಮೊದಲು ಒಂದು ವಾರದ ವಳಗಾಗಿ, ಕೊಡಲಿಕ್ಕಾಗಲಿ ತಪ್ಪಿದರೆ, ಸರಕಾರಕ್ಕೆ ಶೇರಿಸಿ ಕೊಳ್ಳಲ್ಪಡುವದು.

10. ಕಂಟ್ರಾಕ್ಟುದಾರಗೆ ನಗದು ಅಡ್ವಾನ್ಸು ಯಾವದೂ ಕೊಡಲ್ಪಡಲಾರದು. ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳಿಗೆ ಪ್ರತಿ ತಿಂಗಳು 1ನೇ ತಾರೀಖಿಗೆ ತರುವಾಯ ಸಾಧ್ಯವಾದಷ್ಟು ತ್ವರೆಯಾಗಿ ಶಿವಮೊಗ್ಗಾ ಜೈಲ್ ಸೂಪರಿಂಟೆಂಡೆಂಟರವರಿಂದ ಮೊಬಲಗು ಕೊಡಲ್ಪಡುವದು.

11. ಕಂಟ್ರಾಕ್ಟುದಾರನಿಗೆ ಸಾಮಾನುಗಳ ಬಗ್ಗೆ ಒಂದು ಕೋಲಿಯು ಬಿಡಲ್ಪಡುವದು, ಅದರಲ್ಲಿ ಆತನು ನಷ್ಟವಾಗದ ದರೋಬಸ್ತು ಪದಾರ್ಥಗಳನ್ನೂ ಇಟ್ಟುಕೊಳ್ಳಬಹುದು. ಮಾಂಸ ವಗೈರೇ ನಷ್ಟವಾಗುವ ಪದಾರ್ಥಗಳು ಪ್ರತಿ ದಿನ ಬೆಳಿಗ್ಯೆ $7\frac{1}{4}$ ಘಂಟೆಗೆ ಜೈಲ್‌ನಲ್ಲಿ ಇರತಕ್ಕದ್ದು.

12. ಕಂಟ್ರಾಕ್ಟು ವಳ ಷಿಕ್ಮಿಗೆ ಕೊಡಲ್ಪಡಕೂಡದು.

13. ಕಂಟ್ರಾಕ್ಟುದಾರನಿಂದ ಸರಬರಾಯಿ ಮಾಡಲ್ಪಡುವ ಅಕ್ಕಿ, ರಾಗಿ, ತೊಗರೀಬೇಳೆ ಯಿವುಗಳು ಮಾಡಲ್ಪಟ್ಟು ಕಲ್ಲು ಮಣ್ಣು ಯಿಲ್ಲದೆಯು ಇರತಕ್ಕದ್ದು; ಮೆಣಸಿನಕಾಯಿಯ ತವಾಂ ತುಂಬುಗಳನ್ನು, ಹುಣಸೆ ಹಣ್ಣಿನ ನಾರು ಮತ್ತು ಬೀಜಗಳನ್ನು ಜೈಲಿಗೆ ಸರಬರಾಯಿ ಮಾಡುವದಕ್ಕೆ ಪೂರ್ವವೇ ತೆಗದು ಹಾಕತಕ್ಕದ್ದು.

14. ಕಂಟ್ರಾಕ್ಟಿನ ನಿಬಂಧನೆಗೆ ತಪ್ಪಿ ನಡೆಯುವ ಬಗ್ಯಾಗಲಿ, ಕಿರದು ತರದ ಯಾವ ಪದಾರ್ಥಗಳನ್ನು ಕೊಡುವ ಬಗ್ಯಾಗಲಿ, ಶಿವಮೊಗ್ಗಾ ಜೈಲ್ ಸೂಪರಿಂಟೆಂಡೆಂಟರವರ ಯಖ್ತ್ಯಾರೀಯಿಂದ 50 ರೂಪಾಯಿಗೆ ಮೀರದ ಒಂದು ಜುರ್ಮಾನೆಯು ಹಾಕಲ್ಪಡುವದು, ಬಾರ್ ಬಾರ್ ಆ ಮೇರೆ ತಪ್ಪಿದರೆ ಕಂಟ್ರಾಕ್ಟು ರದ್ದು ಮಾಡಲ್ಪಟ್ಟು ಜಾಮೀನ್ ಮೊಬಲಗು ಸರಕಾರಕ್ಕೆ ಶೇರಿಸಿಕೊಳ್ಳಲ್ಪಡುವದು.

15. ಕಂಟ್ರಾಕ್ಟು ತಪ್ಪಿ ನಡಿಯುವ ದರೋಬಸ್ತು ಸಂಗತಿಗಳೊಳಗೂ ಶಿವಮೊಗ್ಗಾ ಜೈಲ್ ಸೂಪರಿಂಟೆಂಡೆಂಟರವರ ನಿರ್ಣಯವೇ ಆಖೈರಾಗಿರತಕ್ಕದ್ದು.

16. ಕಂಟ್ರಾಕ್ಟುದಾರನು ಖೈದಿಗಳ ವುಪಯೋಗಾರ್ಥ ತರಕಾರೀಗಳನ್ನು ದರ ಪಾನಿಗೆ 4 ಕಾಸುಗಳ ಮೇರಿಗೆ ಖಾಯಂ ದರದ ಪ್ರಕಾರ ಜೈಲ್ ತೋಟದಿಂದಲೇ ಕೊಳ್ಳುವದಕ್ಕೆ ಬದ್ಧನಾಗಿರತಕ್ಕದ್ದು.

17. ಇನ್ಯಾವ ಸಂಗತಿಯನ್ನಾದರೂ ತಿಳಿಯಬೇಕಾದರೆ ಜೈಲ್ ಸೂಪರಿಂಟೆಂಡೆಂಟರವರನ್ನು ಕೇಳಿ ತಿಳದುಕೊಳ್ಳಬಹುದು.

18. ಅಡಿಗೆ ಮಾಡುವಲ್ಲಿ ಮಡಿಕೆಗಳು ವಡದು ಹೋಗುವದರಿಂದ ಆಹಾರವೇನಾದರೂ ಅಕಸ್ಮಾತ್ ನಷ್ಟವಾದರೆ ಅದರ ಲುಕ್ಸಾನ್ನು ಕಂಟ್ರಾಕ್ಟುದಾರನೇ ಕಟ್ಟಿಕೊಡತಕ್ಕದ್ದು.

ಬೆಳ್ಳೀ ಬಾಬತು ನಗಗಳು.

46.	ಕಾಲಸರ ಗೆಜ್ಜೆ ಸಮೇತ ಯಿದ್ದ ಜೊತೆ 2ಕ್ಕೆ	75	0	0
47.	ಪಾಡಗದ ಜೊತೆ	20	0	0
48.	ಹುಡಗರು ಹಾಕಿಕೊಳ್ಳುವ ಗೆಜ್ಜೆ ಪಾಡಗದ ಜೊತೆ 1 ಮುಂಪಾತಗ ಜೊತೆ 1 ಗೆಜ್ಜೆ ಸಹಾ ..	24	0	0
49.	ಗಂಡಸರು ಹಾಕುವ ಡಾಬು 2 ತೂಕ ಗೊತ್ತಿಲ್ಲಾ	72	0	0
50.	ಪುಡದಾರ 2, ಪೈಕಿ ಹದಿನಾರು ರೂಪಾಯಿ ತೂಕದ್ದು 1, ಹದಿನಾಲ್ಕು ರೂಪಾಯಿ ತೂಕದ್ದು 1, ಜೋಡು ಯಳೆ ಬಾಬತು.	30	0	0
51.	ಬೆಳ್ಳೀ ಮುಲಾಮು ಪಂಚಪಾತ್ರೆ 1 ದೊಂನೆ 1 ಪಂಚಪಾತ್ರೆ ತೂಕ 16, ದೊಂನೆ ತೂಕ 6 ..	22	0	0
52.	ಸಂಣ ಹುಡಗರಿಗೆ ಹಾಕುವ ಬೆಳ್ಳೀ ಸರಪಣಿ 1, ತೂಕ 24 ರೂಪಾಯಿ ಸಂಣ ಗಂಟೆ 2 ಸರಪಣಿಗೆ ಯಿದ್ದದ್ದು.	24	0	0
53.	? ಹ್ಡ ಕುಂಪಣಿ ರೂಪಾಯಿ ರಾಜಾ ರೂಪಾಯಿ ಕೂಡ 50	50	0	0
54.	ಸರಕಾರದ ಹಣವಿಗೋಸ್ಕರ ಕೆಂಪು ಗೀರಿನ ಪಂಚೆಯಲ್ಲಿ ಕಟ್ಟಿ ಹಿತ್ತಾಳೆ ತಪ್ಪಲೆಯಲ್ಲಿ ಯಿಟ್ಟಿದ್ದು ಪಂಚೆ ಹಿತ್ತಾಳೆ ತಪ್ಪಲೆ ಸಮೇತ.	500	0	0
55.	ಬೆಳ್ಳೀ ಜಡೆಹುವು ಜೊತೆ 2 ತೂಕ ಹುವು 14ಕ್ಕೆ ಮೇಲೆ ಭಂಗಾರದ ಕುಸರಿ ಹಚ್ಚಿದೆ ..	30	0	0

ಬಟ್ಟೆ ಮತ್ತು ಕಾಗದ ಪತ್ರಗಳು ಸುಟ್ಟು ಹೋದ ಬಾಬತು.

56. ಮಡಿ 2, ಸೀರೆ 2, ಪಟ್ಟು ಚವಕ 1, ಕೆಲವು ಕಾಗದ ಪತ್ರಗಳು ಈ ಸೀರಿಗೆ ಕಳ್ಳರು ಬಿಟ್ಟು ಬಿಟ್ಟಿದ್ದಾರೆಂತಲೂ, ಜ್ಞಾಪಕ ಯಿದ್ದ ಮಟ್ಟಿಗೆ ಮಾಲುಗಳು ಬರಸಿದೇನೆಂತಲೂ ಫಿರ್ಯಾದಿ ಸುಬ್ಬರಾಯ ಹೇಳುತ್ತಾನೆ.

ಜುಮ್ಲಾ 4,076 0 0

ನೋಟೀಸ್.

ಈ ಮೇಲ್ಕಂಡ ಮಾಲ್ ಯಾರ್ರು ಪತ್ತೆಗೆ ತರುತ್ತಾರೊ ಅವರಿಗೆ ಶೇಕಡಾ 100 ರೂಪಾಯಿ ಮಾಲಿಗೆ 10 ರೂಪಾಯಿನಂತೆ ಇನ್ಆಂ ಕೊಡುವದಾಗಿ ಫಿರ್ಯಾದಿ ಸುಬ್ಬರಾಯ ವಪ್ಪಿ ಅರ್ಜೀ ಬರದುಕೊಂಡಿದ್ದಾನೆ.

ಸೈದ್ ನಸಿರುದ್ದೀನ್,
ಫಾರ್ ಡೆಪ್ಯುಟಿ ಕಮ್ಮಿಷನರ್,

ತಾರೀಖು 1ನೇ ಜನವರೀ 1885.

ಇದರಿಂದ ತಿಳಿಸುವದೇನಂದರೆ, ಶಿವಮೊಗ್ಗಾ ಜೈಲ್‌ನಲ್ಲಿ ಖೈದು ಮಾಡಲ್ಪಟ್ಟಿರುವ ಖೈದಿಗಳ ವುಪಯೋಗದ ಬಗ್ಯೆ ಸ್ 1885ನೇ ಇಸವಿ ಏಪ್ರೈಲ್ ಗುರ್‍ರೇ ತಾರೀಖು ಮೊದಲು 1886ನೇ ಮಾರ್ಚೀ 31ನೇ ತಾರೀಖುವರಿಗೆ ಎರಡು ದಿನಗಳೂ ಸೇರಿ, ಬೇಕಾದ ಆಹಾರ ವಗೈರೇ ದರೋಬಸ್ತು ಜಿನಸುಗಳನ್ನೂ ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಬಾಬುವ ಬಂದು ಮಾಡಲ್ಪಟ್ಟ ದರಖಾಸ್ತುಗಳನ್ನು ಶಿವಮೊಗ್ಗಾ ಜೈಲ್ ಸೂಪರ್ರಿಟೆಂಡೆಂಟರವರು, ಜೈಲ್‌ಗಳ ಇನ್‌ಸ್ಪೆಕ್ಟರ್ ಜನರಲ್ಲವರಿಂದ ಕಾಯಂ ಮಾಡಲ್ಪಡಲಿಕ್ಕೆ ಗುರಿಯಾಗಿ ಸ್ 1885ನೇ ಇಸವಿ ಮಾರ್ಚೀ 1ನೇ ತಾರೀಖು ವರಿಗೆ ತೆಗದುಕೊಳ್ಳುವರು.

2. ಸದರೀ ತಾರೀಖು ತರುವಾಯ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡುವದಿಲ್ಲ.

3. "ಶಿವಮೊಗ್ಗಾ ಜೈಲ್‌ಗಾಗಿ ಆಹಾರ ಪದಾರ್ಥಗಳ ಸರಬರಾಯಿ ಬಗ್ಯೆ ದರಖಾಸ್ತುಗಳು" ಯೆಂಬದಾಗಿ ದರಖಾಸ್ತುಗಳ ಮೇಲೆ ಬರದು ಕಳುಹಿಸತಕ್ಕದ್ದು.

4. 500 ರೂಪಾಯಿಗಳು ನಗದಾಗಿ ಅಥವಾ ಕರ್ರೆನ್ಸೀ ನೋಟುಗಳ ಮೂಲಕ ಡಿಪಾಜಿಟ್‌ನಿಂ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಶಿವಮೊಗ್ಗಾ ಡಿಸ್ಟ್ರಿಕ್ಟು ಜೈಲ್ ಆಫೀಸಿನಲ್ಲಿ, ಹಾಜರಾಗಲಿಕ್ಕೆ ಇಷ್ಟಪಟ್ಟ ದರಖಾಸ್ತುದಾರರ ರೂಬರೂ ಮೇಲ್ಕಂಡ ತಾರೀಖಿನೊಳಗೆ ಶಿವಮೊಗ್ಗಾ ಡಿಸ್ಟ್ರಿಕ್ಟು ಜೈಲ್ ಸೂಪರ್ರಿಟೆಂಡೆಂಟರವರಿಂದ ಖುಲ್ಲಾ ಮಾಡಲ್ಪಡುವವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ, ಈ ಕೆಳಗೆ ನಮೂದಿಸುವ ತರಗತಿಯ ಪ್ರತಿ ಖೈದಿಗೂ ದಿನ ಒಂದಕ್ಕೆ ಆಗತಕ್ಕ ದರವು ನಮೂದಿಸಲ್ಪಡತಕ್ಕದ್ದು.

களும், இந்த உத்தரவை அனுசரித்து, அப்படியே தெரிவிக்கவேண்டியது. பின்
து என்னவென்றால், 1885ஆம் ஜனவரிமீ 1உக்குள்ளாக அப்படி செய்யாவிட்
செய்யாதவர்கள் கைக்குப்பெற்று அவர்களுடைய சமூசாரங்களுக்கு சம்பளத்தை
கொடுக்கப்படமாட்டாது.

GOVT. AGENT'S OFFICE,
Chepák, 11th October 1884.

(Signed) C. D. BAYNES, Li
In charge of the Govt. A

ಗವರ್ನಮೆಂಟ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿ ವಾಗಿ ಗವರ್ನಮೆಂಟ ಆಫೀಸರುಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡು ತೆಗದುಕೊಳ್ಳುವ ನಾದರೂ ಕಲಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ ಸೂಪರಿಂಟೆಂಡೆಂಟರ ವಶದಿಂದ ಇದರಡಿ ಕಂಡ ದರಗಳ ಪ್ರಕಾರ ಕೊಂಡು ಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 4—8—0; ಎಂಟು ರೂ. 8—8—0; ಒಂದು ಪೌಂಡ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ ಸೂಪರಿಂಟೆಂ ಕಂಡ ದರ ಪ್ರಕಾರ ನಗದಿನಲ್ಲೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸವುಳ್ಳ ಡಬ್ಬಿಒಂದಕ್ಕೆ ರೂ. 5— ಔನ್ಸವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌಂಡವುಳ್ಳ ಡಬ್ಬಿಗೆ 20 ರೂಪಾಯಿ. ಈ ಔಷಧವು, ಕಲಕತ್ತೆಯಲ್ಲಿ ಯೂರೋಪಿಯನ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸವರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ ಎಂಟು ಆಣೆ ಟಪ್ಪಾಲ್ ಹಾಸಲೂ, ಒಂದು ಪೌಂಡ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

ಕ್ರಿಸ್ಟಲೈಜ್ಡ ಸಿಂಕೋನಾ ಫೆಬ್ರಿಫ್ಯೂಜ.

ಗವರ್ನಮೆಂಟ ಕೋಠಿಯಲ್ಲಿ ಕೆಂಪುವರ್ಣದ ಸಿಂಕೋನಾ ಪಟ್ಟೆಯಿಂದ ತಯಾರ ಮಾಡಲ್ಪಟ್ಟ ಹೊಸದಾದ ಮತ್ತು ದ ತಯಾರಿ—ಇದು ಸಾಧಾರಣವಾದ ಕ್ರಿಸ್ಟಲೈಜ್ಡ ಅಲ್ಲದ ಫೆಬ್ರಿಫ್ಯೂಜಿಗಿಂತ ಕ್ವಿನೈನಿಗೆ ಸಂಪೂರ್ಣವಾದ ಪ್ರತಿನಿಧಿ ಕಲಕತ್ತೆಬಳಿ ಸಿಬಪೂರ ಗ್ರಾಮದಲ್ಲಿ ರಾಯಲ್ ಬೊಟಾನಿಕ ಗಾರ್ಡನ ಸೂಪರಿಂಟೆಂಡೆಂಟರಿಂದ ಗವರ್ನಮೆಂಟ ಆಫೀಸರ ದ ಮತ್ತು ಧರ್ಮಾರ್ಥವಾದ ಕೆಲಸಗಳಿಗಾಗಿ ಮತ್ತು ಒಂದು ಸಲಕ್ಕೆ ಇಪ್ಪತ್ತು ಪೌಂಡ ಮತ್ತು ಅದಕ್ಕೆ ಮೇಲ್ಪಟ್ಟ ವರು ನಗದೀಗಾಗಿಯೇ ಪೌಂಡ ಒಂದಕ್ಕೆ 24 ರೂಪಾಯಿಗಳ ದರ ಪ್ರಕಾರ ಕೊಂಡುಕೊಳ್ಳಬಹುದು. ರಾಯಲ್ ಬೊ ಸೂಪರಿಂಟೆಂಡೆಂಟರು ನಗದಿನೇ ಸಮುದಾಯವಾಗಿ ಪ್ರಜೆಗಳಿಗೆ ಮತ್ತು ಪೌಂಡ ಒಂದಕ್ಕೆ 32 ರೂಪಾಯಿಗಳ ಪ್ರ ಯೂರೋಪಿಯನ್ ಮತ್ತು ನೇಟಿವ ಡ್ರಗ್ಗಿಸ್ಟಗಳು ಸರಬರಾಯಿ ಮಾಡತಕ್ಕದ್ದು. ಟಪ್ಪಾಲ ಹಾಸಲ ಹನ್ನೆರಡಾಣೆ ಜಾಸ್ತಿ

Mysore Government Press, Ban 1885.

೭೬೩

ಅಪ್ಪಸಂದ್ರ	ಡಿಟೋ
ದೊಡ್ಡ ಹರಡಿ	ಹೊಸಕೋಟೆ ಮತ್ತು ಶಿಡ್ಲಘಟ್ಟ.
ಚಿಕ್ಕ ಹರಡಿ	ಡಿಟೋ
ರಾಮಚಂದ್ರಾಪುರ	ಮಾಲೂರು
ಮಾರಸಂದ್ರ	ಮಾಲೂರು
ಕುರಂಡಹಳ್ಳಿ (ಹಳೇದು ಮತ್ತು ಹೊಸದು)	ಡಿಟೋ
ಜಂಗಮಕೋಟೆ	ಶಿಡ್ಲಘಟ್ಟ
ಕನ್ನೂರು	ಬೆಂಗಳೂರು

ಯಸ್. ಏ. ಬಾಪೂರಾವ್,
ಫಾರೆಸ್ಟ್ ಆಫೀಸರ್ ಇನ್ ಚಾರ್ಜ್ ಪ್ಲಾಂಟೇಷನ್ಸ.

ಮೈಸೂರು ರೆವಿನ್ಯೂ ಸರ್ವೇ ಮತ್ತು ಸೆಟಲ್‌ಮೆಂಟ ಇಲಾಖಾ.

ಇಸ್ತಿಹಾರನಾಮೆ.

ನಂಬರ 709.—ತಾರೀಖು 30ನೇ ಜನವರೀ 1885.

...ರ ಆಗಸ್ಟ್ ತಿಂಗಳು 23ನೇ ತಾರೀಖಿನ ಮೈಸೂರು ಗವರ್ನಮೆಂಟ ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಟ್ಟ ಸರ್ವೆ ಸಂಬಂಧವಾದ ಕೆಲಸ ...ಟಿಕು ಪತ್ರಿಕಾನುಸಾರವಾಗಿ ಇದರಿಂದ ಸಕಲಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಿಸಲ್ಪಡುವದೇನಂದರೆ—ಈಚೆಗೆ ಏರ್ಪಡಿಸಲ್ಪ ...ಕಗಳ ಸಾಮಾನ್ಯ ವರ್ಗಾವರ್ಗೀ ತತ್ಪೂರ್ವ ಚನ್ನರಾಯಪಟ್ಟದ ತಾಲ್ಲೂಕಿಗೆ ಸೇರಿ ಯಿದ್ದ ಗ್ರಾಮಗಳ ರೆವಿನ್ಯೂ ಸರ್ವೇ ...ಟ್, ಯಾನೆ, ತರಮ ಜಮಾಬಂದಿಯು, ಸನ 1885ನೇ ಫೆಬ್ರುವರೀ ತಾರೀಖು 16 ಯಾ ಆ ಮುಮಾರಿಗೆ ಪ್ರಾರಂಭಿಸಲ್ಪಡುತ್ತೆ.

...ಪಿ. ಗ್ರ್ಯಾಂಟ್,
ಸೂಪರ್ಇಂಟೆಂಡೆಂಟ ರೆವಿನ್ಯೂ ಸರ್ವೆ ವ ಸೆಟಲ್ಮೆಂಟ್.

ಪ್ರಕಟನೆ.

...ರ್ಣಾಟಕ ಪೆಂಷನರಗಳೆಲ್ಲರಿಗೂ ಗವರ್ನಮೆಂಟಿನವರ ಹುಕ್ಕುಂ ಮೇರೆ ಇದರಿಂದ ತಿಳಿಯಪಡಿಸುವದೇನಂದರೆ, ಅವರು ತಮ್ಮ ...ವರು ನಿಕಾಹಾದರೂ ಸರಿ ಅಲ್ಲದೆ ಷಾದಿ ಯಾ ವಿವಾಹವಾದರೂ ಸರಿ, ಅಂತವರ ಹೆಸರುಗಳನ್ನು ಕೂಡಲೇ ಮದರಾಸ್ ಜೇಪಾ ...ದ ಗವರ್ನಮೆಂಟ ಆಫೀಸಿಗೆ ತಿಳಿಸತಕ್ಕದ್ದು. ಇನ್ನು ಮುಂದೆ ಈ ಹುಕುಂ ಅನುಸರಿಸಿ, ನಿಕಾ ಮಾಡಿಕೊಳ್ಳುವವರಾಗಲಿ, ಅಥವಾ ...ಮಾಡಿಕೊಳ್ಳುವವರಾಗಲಿ ಬದಸ್ತೂರ ತಿಳಿಸತಕ್ಕದ್ದು. ಮತ್ತೂ ತಿಳಿಸುವದೇನಂದರೆ, ಸನ 1885ನೇ ಇಸವಿ ಜನವರೀ ಗುರ್ರೇ ...ಳಿಗಾಗಿ ಹಾಗೆ ಮಾಡುವದಕ್ಕೆ ತಪ್ಪಿದಲ್ಲಿ, ಅಂತವರ ಕುಟುಂಬಗಳಿಗೆ ಕಂಪಾಷಿನೇಟ್ ಅಲೋವೆನ್ಸ ಕೊಡಲ್ಪಡಲಾರದು.

ಸಿ. ಡಿ. ಬೆರ್ಮಿಸ್, ಲೆಫ್ಟಿನೆಂಟ್ ಕರ್ನಲ್.
ಗವರ್ನಮೆಂಟ ಏಜನ್ಸೀ ಇನಚಾರ್ಜ ಆಫೀಸರ,
ಚೆಪಾಕ್.

அறிக்கை.

...ர்நாடக பென்ஷனர்களெ... ...ருக்கும் கவர்ன்மெண்டாருத்திரவுப்..., இதனால் அறிவிப் ...ன்னவென்றால், அவர்கள், ...டைய சமுசாரங்கள் நிக்காவாகு... ...ாதியாவது ... அந்த சம்சாரங்களின் பெ... ...டனே சேபாக் கவர்ன்மெண்... ...டு ஆபீசில், ...க்கவேண்டியது. நிக்காவா... ...ாதியாகவாவது, இனிமேல் ... ... செய்பவர்